ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೧


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೪೩
ವಿಚಾರ ಸಾಹಿತ್ಯಮಾಲೆ - ೫೬

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
## ಮತ್ತು
# ಭಾಷಣಗಳು
## ಸಂಪುಟ ೧೧

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರಹಗಳು

ಮತ್ತು

# ಭಾಷಣಗಳು

(ಸಂಪುಟ ೧೧)

ಪ್ರಾಚೀನ ಭಾರತದ ವಾಣಿಜ್ಯ; ಮಧ್ಯಕಾಲೀನ ಯುಗದಲ್ಲಿ;
ಭಾರತದ ವಾಣಿಜ್ಯ ಸಂಬಂಧಗಳು;
ಬ್ರಿಟಿಷ್ ಸರ್ಕಾರದ ಮುಂಚಿನ ಭಾರತ; ಅಸ್ಪೃಶ್ಯರು ಮತ್ತು ಬ್ರಿಟಿಷ್ ಆಳ್ವಿಕೆ;
ಬ್ರಿಟಿಷ್ ಸಂವಿಧಾನ ಕುರಿತ ಉಪನ್ಯಾಸಗಳು;
ಸಾರ್ವಭೌಮ ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿ ಭಾರತೀಯ
ಸಂಸ್ಥಾನಗಳ ಬೇಡಿಕೆಗಳು; ಸಾಮಾನ್ಯ ನ್ಯಾಯ ಮತ್ತು ಇತರ ವಿಚಾರಗಳು


**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ಮತ್ತು**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 11** — Kannada Translation of Collected Works of Baba Saheb Ambedkar, Published by **Kannada Mattu Samskruti Ilakhe**, **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition : 2015, Pp. xxiv + 793, Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxiv + ೭೯೩
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ|| ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ|| ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶಿ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ
ಸಚಿವರು ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ
ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟುಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ
ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು
ದಿನಾಂಕ: ೦೪.೬.೨೦೧೫

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

**(ಉಮಾಶ್ರೀ)**

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

# ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುವಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು–ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ-ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ-ಭಾಷಣಗಳ ಮೂಲಕ, ವೈಚಾರಿಕ ಚರ್ಚೆ-ಸಂವಾದಗಳ ಮೂಲಕ ಸಾಮಾಜಿಕ-ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್-III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ! ಸಂಘಟನೆ!! ಹೋರಾಟ!!! (Educate! Organize!! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮).

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧-೨)

೪. ಶ್ರೀ ಕೃಷ್ಣ ಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧–೨; ಸಂ. ೧೪ ಭಾಗ ೧(ಅ) ಮತ್ತು (ಆ)

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

# ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ॥ ಅಂಬೇಡ್ಕರ್ ಅವರು ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು, ದೀನ, ದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ. ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು, ಇವುಗಳಲ್ಲಿ 'ಜಾತಿ ನಿರ್ಮೂಲನೆ', 'ಶೂದ್ರರು ಯಾರು?', 'ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?', 'ರೂಪಾಯಿಯ ಸಮಸ್ಯೆ', 'ಪಾಕೀಸ್ತಾನ ಅಥವಾ ಭಾರತದ ವಿಭಜನೆ' ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಇದು ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ. ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ

ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ, ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರ ಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ. ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಿಂದಲೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೬ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ. ಡಾ. ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವೂ ಸಂಪೂರ್ಣವಾಗಿ ಅಳಿದುಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರದವರು ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ" ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ– "ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು, ಇದುವರೆಗೆ ಒಟ್ಟು ಹದಿನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟವಾದ ಹದಿನಾಲ್ಕು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ, ಭಾಷಾವಾರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು, ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ(೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ

ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ, ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ ಮನವಿಗಳೂ ಸೇರಿವೆ. ಮೂರನೆಯ ಸಂಪುಟ(೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂಧರ್ಮ ದರ್ಶನ; ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ; ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು: ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು, ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು, ಅವರ ಮಹಾಪ್ರಬಂಧ "ರೂಪಾಯಿಯ ಸಮಸ್ಯೆ" ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ "ಶೂದ್ರರು ಯಾರು...? ಅವರು ಹಿಂದೂ ಆರ್ಯ ಸಮಾಜದ ನಾಲ್ಕನೆಯ ವರ್ಣ ಹೇಗಾದರೂ ಮತ್ತು ಅಸ್ಪೃಶ್ಯರು ಯಾರು?– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು" ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ೧೯೯೦ರಲ್ಲಿ ಪರಕಟಿಸಲಾದ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕೀಸ್ತಾನ ಮತ್ತು ಭಾರತದ ವಿಭಜನೆ'ಯ ಪುನರ್ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೫೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ, (೯ನೆಯ ಸಂಪುಟ ೧೯೯೧) ಮುಂಬಯಿಯ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು; ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟದಲ್ಲಿ (೧೯೯೧) ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ', 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ', 'ಇಂಗ್ಲಿಷ್ ಸಂವಿಧಾನ ಕುರಿತು ಉಪನ್ಯಾಸಗಳು', 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು, ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್ ಅವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತದ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಪಾತ್ರದ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ನೀಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳನ್ನು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ. ಅಂಬೇಡ್ಕರ್ ಅವರು ನೀಡಿದ ವಿವರಣೆಗಳೂ ಸೇರಿವೆ. ೧೯೯೫ರಲ್ಲಿ ಪ್ರಕಟವಾಗಿರುವ ೧೪ನೆಯ ಸಂಪುಟವು ಎರಡು ಭಾಗಗಳಾಗಿದ್ದು, ಇವೆರಡೂ ಭಾಗಗಳಲ್ಲಿ ಡಾ. ಅಂಬೇಡ್ಕರ್ ಅವರು ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ

ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ. ಅಂಬೇಡ್ಕರ್ ಅವರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದಲ್ಲಿ ಎರಡೂ ಭಾಗಗಳಲ್ಲಿ ಲಭ್ಯವಿವೆ.

ಡಾ. ಅಂಬೇಡ್ಕರ್ ಅವರ ಅಮೂಲ್ಯ ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ, ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

೧. ಡಾ. ಎ. ಎಂ. ರಾಜಶೇಖರಯ್ಯ, ಸಂಪಾದಕರು

೨. ಡಾ. ಸಿದ್ದಲಿಂಗಯ್ಯ, ಸದಸ್ಯರು

೩. ಶ್ರೀ ದೇವನೂರ ಮಹಾದೇವ, ಸದಸ್ಯರು

೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸದಸ್ಯ-ಕಾರ್ಯದರ್ಶಿ, ಬೆಂಗಳೂರು.

ಸಮಿತಿಯ ಪ್ರಥಮ ಸಭೆ ೩೦-೮-೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸಕಾರದವರು ತಮ್ಮ ದಿನಾಂಕ ೨-೫-೧೯೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ

ನಂತರ ಭಾಷೆ, ಶೈಲಿ, ಪರಿಭಾಷಾ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

(೧) ಡಾ. ಆರ್. ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; (೨) ಡಾ. ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು (೩) ದಿ. ಶ್ರೀ ವೈ. ಎಂ. ಸಿ. ಶರ್ಮ, ಅಂದಿನ ಅಧ್ಯಕ್ಷರು ಕರ್ನಾಟಕ ರಾಜಭಾಷಾ ಆಯೋಗ, ಬೆಂಗಳೂರು, ನಂತರ ದಿ. ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮ ವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಈ ಸಂಪುಟದಲ್ಲಿ ಇದುವರೆಗೆ ಪ್ರಕಟವಾಗದೇ ಇದ್ದ ವಿವಿಧ ಸಮ್ಮಿಶ್ರ ಲೇಖನಗಳನ್ನು ಪ್ರಕಟಿಸಲಾಗಿದೆ. ಡಾ. ಅಂಬೇಡ್ಕರ್ ಅವರು ಏನನ್ನೇ ಬರೆಯಲಿ, ಏನನ್ನೇ ಹೇಳಲಿ ಅದರಲ್ಲೆಲ್ಲಾ ಸಮಾನತೆ ಮತ್ತು ಮಾನವೀಯತೆಯ ಬಗ್ಗೆ ಅವರ ಕಾಳಜಿ ಮತ್ತು ಆಧುನಿಕ ಸಮಾಜದಲ್ಲಿ ಪ್ರಜಾಸತ್ತಾತ್ಮಕ ಜೀವನದ ಸಮಸ್ಯೆಗಳ ವಿಶ್ಲೇಷಣೆ ಪ್ರಧಾನವಾಗಿದ್ದುದು ಗಮನಿಸಬೇಕಾದ ಒಂದು ವಿಶೇಷ ಸಂಗತಿ. ಈ ಸಂಪುಟದಲ್ಲಿ ಪ್ರಕಟವಾಗಿರುವ ಅವರ ಲೇಖನಗಳು ಏಕಕಾಲದಲ್ಲಿ ಬರೆಯದೆ ಲೇಖನದಲ್ಲಿರುವ ಪರಸ್ಪರ ಸಂಬಂಧ ಎದ್ದುಕಾಣುತ್ತದೆ. ಇವುಗಳು ಸಾಕ್ಷ್ಯದ ಕಾನೂನಿನಿಂದ ಹಿಡಿದು ಎ.ವಿ.ಡೈಸೆಯವರ ಇಂಗ್ಲಿಷ್ ಸಂವಿಧಾನ ಮತ್ತು ಪ್ರಾಚೀನ ಭಾರತದ ವಾಣಿಜ್ಯದಿಂದ ಇಂದಿನ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯವರೆಗೆ ವಿಸ್ತೃತವಾಗಿವೆ. ಇದರಲ್ಲಿ ಕಾನೂನಿನ ಮೂಲ ಸಿದ್ಧಾಂತಗಳನ್ನೂ ಅಲ್ಲದೆ, ಅದರ ಆಚರಣೆಯ ವಿವಿಧ ಆಯಾಮಗಳ ಪ್ರಸ್ತಾಪವಿದೆ.

ಡಾ. ಅಂಬೇಡ್ಕರರು ಅವರು ಒಬ್ಬ ಮೇಧಾವಿ ಸಂವಿಧಾನಾತ್ಮಕ ಕಾನೂನು ತಜ್ಞರಾಗಿದ್ದರು. ಅವರು ಮುಂಬಯಿ ಸರ್ಕಾರದ ಕಾನೂನು ಮಹಾವಿದ್ಯಾಲಯದಲ್ಲಿ ಕಾನೂನು ಪ್ರಾಧ್ಯಾಪಕರಾಗಿದ್ದರು. ಅಲ್ಲಿ ಅವರು ನ್ಯಾಯಶಾಸ್ತ್ರವನ್ನು ಬೋಧಿಸುತ್ತಿದ್ದಾಗ ಸಮಾಜದಲ್ಲಿ ಕಾನೂನಿನ ಅಧಿಪತ್ಯಕ್ಕೆ ಅವರು ನೀಡಿದ ಸಾಮಾಜಿಕ ಆಯಾಮ ಗಮನಾರ್ಹ ಸಂಗತಿ. ಈ ದೃಷ್ಟಿಯಿಂದ ಈ ಸಂಪುಟದಲ್ಲಿ ಪ್ರಕಟವಾಗಿರುವ ಅವರ ಎಲ್ಲಾ ಲೇಖನಗಳು ಇಂದಿಗೂ ಪ್ರಸ್ತುತವಾಗಿವೆ.

ಡಾ. ಅಂಬೇಡ್ಕರ್ ಅವರು ಯಾವಾಗಲೂ ಕಾನೂನಿಗೆ ಪ್ರಾಧಾನ್ಯತೆ ನೀಡಿದ್ದರು. ಅವರು ಬಯಸಿದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆ, ಕಾನೂನಿನ ಮೂಲಕವೇ ಆಗಬೇಕೆಂಬುದು ಅವರ ದೃಢ ನಂಬುಗೆಯಾಗಿತ್ತು; ಸಮಾಜದಲ್ಲಿ ಮಾನವನ ಬಗ್ಗೆ ಅರಿವು ಮತ್ತು ಮಾನವ–ಮಾನವರಲ್ಲಿ ಅಂತರ್‌ಸಂಬಂಧ ಹಾಗೂ ಅವುಗಳನ್ನು ಕ್ರಮಪಡಿಸುವುದು ಮುಂತಾದ ಸಮಸ್ಯೆಗಳನ್ನು ಕಾನೂನಿನ ಚೌಕಟ್ಟಿನಲ್ಲಿಯೇ ಬಗೆಹರಿಸುವುದು ಅವರ ಪ್ರತಿಪಾದನೆಯಾಗಿತ್ತು. ಕಾನೂನು ನಾಗರಿಕತೆಯ ಸಾಧನವಾದಾಗ ಮಾತ್ರ ಭಾರತೀಯ ಭೂಭಾಗದಲ್ಲಿ ಶಾಂತಿ ನೆಲೆಸುವುದು ಸಾಧ್ಯ ಎಂಬ ಅಭಿಪ್ರಾಯ ಅವರದಾಗಿತ್ತು.

ಈ ಸಂಪುಟದಲ್ಲಿರುವ ಅವರ ಬರೆಹಗಳು ಅವರ ಭಾವನಾತ್ಮಕ ವಿಶ್ಲೇಷಣೆ ಗುಪ್ತ ನಿಧಿಯಂತಿದ್ದು, ಕಾಲಾಂತರದಲ್ಲಿ ಅಪ್ರಸ್ತುತವಾಗದಂತಹ ಅಮೂಲ್ಯ ವಿಚಾರಗಳ ಭಂಡಾರವೇ ಆಗಿವೆ. ಇಲ್ಲಿ ಪ್ರಕಟವಾಗಿರುವ ಲೇಖನಗಳೆಲ್ಲವೂ ಪರಸ್ಪರ ಪೂರಕವಾಗಿವೆ. ವಿಷಯ ವಾಣಿಜ್ಯಕ್ಕೆ ಸಂಬಂಧಿಸಿರಲಿ, ಅಥವಾ ಸಾಮಾಜಿಕ, ಮಾನವ ಶಾಸ್ತ್ರವೇ ಆಗಿರಲಿ, ಆಂಗ್ಲ ಸಾಹಿತ್ಯವೇ ಆಗಿರಲಿ, ಇಂಗ್ಲಿಷ್ ಸಂವಿಧಾನವೇ ಆಗಲಿರಲಿ ಅವುಗಳ ವೈಚಾರಿಕತೆಯಲ್ಲಿ ಸಾಮಾಜಿಕ ನೆಲೆ ಪ್ರಧಾನವಾಗಿ ಕಾಣುತ್ತದೆ. ಈ ಸಂಪುಟದಲ್ಲಿ ಪ್ರಕಟಿಸಲಾಗುತ್ತಿರುವ ಕಾನೂನಿನ ಟಿಪ್ಪಣಿಗಳು ಡಾ. ಅಂಬೇಡ್ಕರರು ನ್ಯಾಯಶಾಸ್ತ್ರದಲ್ಲಿ ಹೊಂದಿದ್ದ ಪ್ರಾವೀಣ್ಯತೆಯ ದ್ಯೋತಕವಾಗಿದೆಯಲ್ಲದೆ, ಅವರು ಒಬ್ಬ ಪ್ರತಿಭಾಶಾಲಿ ಕಾನೂನು ತಜ್ಞರಾಗಿದ್ದರೆಂಬ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಅವರ ಈ ಬರಹಗಳು ಕೇವಲ ವಾದಗಳಾಗಿರದೆ, ಅಮೂಲ್ಯ ವಿಶ್ಲೇಷಣೆಗಳಾಗಿದ್ದು, ಅವು ಕೇವಲ ನ್ಯಾಯಾಲಯಗಳಲ್ಲಿ ವಾದ–ಪ್ರತಿವಾದಕ್ಕೆ ಮಾತ್ರ ಅನುಕೂಲಕರ ಆಗಿರದೆ, ಅವು ಪ್ರತಿಯೊಬ್ಬ ಪ್ರತಿಭಾಶಾಲಿ ವಿದ್ಯಾರ್ಥಿ ಅಥವಾ ಸಾರ್ವಜನಿಕ ಹಿತಾಸಕ್ತಿಯುಳ್ಳ ಎಲ್ಲಾ ನಾಗರಿಕರಿಗೆ ಇಂದಿಗೂ ಮಾರ್ಗದರ್ಶನ ನೀಡುವಂತಹ ವಿಚಾರಗಳಾಗಿವೆ.

ಈಗ ೧೨ನೆಯ ಸಂಪುಟದಲ್ಲಿ ಬರಹಗಳನ್ನು ಆರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಮಧ್ಯ–ಪೂರ್ವ ಮತ್ತು ಪಾಶ್ಚಿಮಾತ್ಯ ದೇಶಗಳೊಡನೆ ಕ್ರಿಸ್ತಶಕೆ ಆರಂಭವಾಗುವ ಮುಂಚಿನಿಂದಲೇ ಭಾರತ ಹೊಂದಿದ್ದ ವಾಣಿಜ್ಯ ಸಂಬಂಧಗಳನ್ನು ಕುರಿತ ಡಾ. ಅಂಬೇಡ್ಕರರ ಲೇಖನಗಳನ್ನು ಪ್ರಕಟಿಸಲಾಗಿದೆ. ಅವರು ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ತಮ್ಮ ಎಂ.ಎ., ಪದವಿಗಾಗಿ "ಪ್ರಾಚೀನ ಭಾರತದ ವಾಣಿಜ್ಯ" ಎಂಬ ವಿಷಯದ ಪ್ರೌಢ ಪ್ರಬಂಧ ಬರೆದು ಸಲ್ಲಿಸಿದ್ದರು.

ಈ ವಿಷಯದ ಮೇಲೆ ದೊರೆತ ಪ್ರಬಂಧಗಳನ್ನು ಅಧ್ಯಾಯ ೧, ೨ ಮತ್ತು ೫ರಲ್ಲಿ ಪ್ರಕಟಿಸಲಾಗಿದೆ. ನಂತರ ಅವರು ತಮ್ಮ ಪ್ರೌಢ ಪ್ರಬಂಧದ ವಿಷಯವನ್ನು ಬದಲಾಯಿಸಿಕೊಂಡರು. ಆದಾಗ್ಯೂ ಅವರ ಈ ವಿಷಯದ ಮೇಲಿನ ಬರೆಹಗಳು ಇತಿಹಾಸ ಮತ್ತು ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿವೆ. ಇದೂ ಅಲ್ಲದೆ, ಡಾ. ಅಂಬೇಡ್ಕರ್ ಅವರು ಕ್ರಿಸ್ತಪೂರ್ವ ಕಾಲದಿಂದ ಬ್ರಿಟಿಷ್ ಆಳ್ವಿಕೆಯ ಆರಂಭದವರೆಗೂ ಪ್ರಾಚೀನ ಭಾರತದ ಇತಿಹಾಸ ಮತ್ತು ವಾಣಿಜ್ಯದ ಬಗ್ಗೆ ಹೊಂದಿದ್ದ ಆಳವಾದ ಜ್ಞಾನ ಮತ್ತು ಸ್ಪಷ್ಟ ನಿಲುವು ವ್ಯಕ್ತವಾಗುತ್ತದೆ.

ಎರಡನೆಯ ಭಾಗದಲ್ಲಿರುವ ಡಾ. ಅಂಬೇಡ್ಕರರ ಪ್ರಬಂಧ ಬಹುಶಃ ೧೯೩೦–೩೫ರಲ್ಲಿ ಅವರು ದುಂಡುಮೇಜು ಸಮ್ಮೇಳನಕ್ಕಾಗಿ ಲಂಡನ್ನಿಗೆ ಹೋದಾಗ ಬರೆದಿದ್ದೆಂದು ತೋರುತ್ತದೆ. ಅದನ್ನು ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಸಾಮಾಜಿಕ ಕಾನೂನು ರಚನೆಗೆ ಒತ್ತಾಯಿಸಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾಗಿತ್ತು.

ಮೂರನೆಯ ಭಾಗದಲ್ಲಿ ಇಂಗ್ಲಿಷ್ ಸಂವಿಧಾನದ ಮೇಲಿನ ಉಪನ್ಯಾಸಗಳನ್ನು ಪ್ರಕಟಿಸಲಾಗಿದೆ. ಇವುಗಳನ್ನು ಡಾ. ಅಂಬೇಡ್ಕರ್ ಅವರು ೧೯೩೪–೩೫ರಲ್ಲಿ ತಾವು ಬೋಧಿಸುತ್ತಿದ್ದ ಸರ್ಕಾರಿ ಲಾ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿದ್ದರು. ಈ ಉಪನ್ಯಾಸಗಳಲ್ಲಿ ಇಂಗ್ಲಿಷ್ ಸಂವಿಧಾನದ ಮೂಲ ಸೂತ್ರಗಳು, ಸಂಸತ್ತಿನ ಅರ್ಥ ಮತ್ತು ರೂಪುರೇಷೆಗಳು, ರಾಜ್ಯಾಧಿಕಾರ (ರಾಜ ಮುಕುಟ), ಶ್ರೀಮಂತರ ಸದನ ಮತ್ತು ಶ್ರೀಮಂತರ (ಲಾರ್ಡ್ಸ್) ಮತ್ತು ಸಾಮಾನ್ಯರ (ಕಾಮನ್ಸ್) ಸದನಗಳ ಅಧಿಕಾರಗಳು ಮತ್ತು ವಿಶೇಷ ಸವಲತ್ತುಗಳನ್ನು ವಿವರಿಸಲಾಗಿದೆ. ಇವುಗಳೊಂದಿಗೆ ಪರಮಾಧಿಕಾರ ಮತ್ತು ಸ್ವತಂತ್ರವಾಗಿರಲು ಭಾರತೀಯ ರಾಜ್ಯಗಳ ಬೇಡಿಕೆ ಎಂಬ ವಿಷಯದ ಮೇಲೆ ೨೧ ಪುಟಗಳ ಹೇಳಿಕೆಯೂ ಪ್ರಕಟವಾಗಿದ್ದು, ಬಹುಶಃ ಇದನ್ನು ಪತ್ರಿಕೆಗಳಿಎ ಬಿಡುಗಡೆ ಮಾಡುವ ಉದ್ದೇಶದಿಂದ ಸಿದ್ಧಪಡಿಸಲಾಗಿರಬಹುದು.

ಸಂಪುಟದ ನಾಲ್ಕನೆಯ ಭಾಗವು ವಿವಿಧ ಕಾಯ್ದೆ ಕಾನೂನುಗಳ ಮೇಲೆ ತಯಾರಿಸಿದ ಟಿಪ್ಪಣಿಗಳಿಂದ ಕೂಡಿದ್ದು, ಇವುಗಳನ್ನು ೧೯೨೯–೩೦ರ ಅವಧಿಯಲ್ಲಿ ಸರ್ಕಾರಿ ಕಾನೂನು ಮಹಾವಿದ್ಯಾಲಯದಲ್ಲಿ ಬೋಧಿಸಲು

ಸಿದ್ಧಪಡಿಸಲಾಗಿತ್ತು. ಇವುಗಳಲ್ಲಿ ಸಾಮಾನ್ಯ (ವ್ಯವಹಾರದ) ಕಾನೂನು, ಡೊಮಿನಿಯನ್ ಸ್ಥಾನಮಾನ, ನಿರ್ದಿಷ್ಟ ಪರಿಹಾರದ ಕಾನೂನು, ಟ್ರಸ್ಟ್ (ನ್ಯಾಸ) ಕಾನೂನು, ದಂಡಪ್ರಕ್ರಿಯಾ ಸಂಹಿತೆ, ಸಾಕ್ಷ್ಯದ ಕಾನೂನು, ಆಸ್ತಿ ವರ್ಗಾವಣೆ ಕಾನೂನು ಮುಂತಾದ ಅನೇಕ ವಿಷಯಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ಸಂಪುಟದ ಐದನೆಯ ಭಾಗದಲ್ಲಿ ಡಾ. ಅಂಬೇಡ್ಕರರ ಆತ್ಮಕಥನಗಳನ್ನೊಳಗೊಂಡ ವಿಷಯವಾದ "ವೀಸಾ ನಿರೀಕ್ಷಣೆಯಲ್ಲಿ" ಎಂಬ ಟಿಪ್ಪಣಿ ಪ್ರಕಟಿಸಿದ್ದರು. ಇದನ್ನು ಮುಂಬಯಿಯ ಪೀಪಲ್ಸ್ ಎಜ್ಯುಕೇಷನ್ ಸೊಸಾಯಿಟಿಯವರು ೧೯೯೦ರಲ್ಲಿ ಪ್ರಕಟಿಸಿದ್ದರು. ಇದರಲ್ಲಿ ಅವರ ಮನೆತನದ ನೆನಪುಗಳು ಮತ್ತು ಅವರ ಜೀವನದ ಕೆಲವು ಸಂದರ್ಭಗಳ ನೆನಪುಗಳ ಚಿತ್ರಣವಿದೆ.

ಈ ಸಂಪುಟದ ಕೊನೆಯ, ಎಂದರೆ ಆರನೆಯ ಭಾಗದಲ್ಲಿ ಡಾ. ಅಂಬೇಡ್ಕರರ ವಿವಿಧ ಅಪ್ರಕಟಿತ ಸಮ್ಮಿಶ್ರ ಲೇಖನಗಳು, ಟಿಪ್ಪಣಿಗಳು ಮತ್ತು ಆಗಾಗ್ಗೆ ಗುರುತು ಹಾಕಿಕೊಂಡ ವಿಷಯಗಳು ಸೇರಿವೆ. ರೋಮನ್ ಚಕ್ರಾಧಿಪತ್ಯ ಮತ್ತು ಅಮೆರಿಕಾದಲ್ಲಿರುವ ಗುಲಾಮಗಿರಿಯ ಬಗ್ಗೆ ಒಂದು ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಡಾ॥ ಅಂಬೇಡ್ಕರ್ ಅವರು ವಿವಿಧ ವಿಷಯಗಳ ಮೇಲೆ ಬರೆದಿರುವ ಲೇಖನಗಳನ್ನು ವರ್ಗೀಕರಿಸುವುದು ಸುಲಭದ ಕೆಲಸವಲ್ಲ. ಅವರು ಯಾವುದೇ ವಿಷಯದ ಮೇಲೆ ಬರೆಯುವ ಮುನ್ನ ಅದಕ್ಕೆ ಸಂಬಂಧಪಟ್ಟ ಎಲ್ಲಾ ಬರಹಗಳನ್ನು ಆಳವಾದ ಅಧ್ಯಯನದೊಂದಿಗೆ ಮೆಕಾಲೆಯವರ ರೀತಿಯಲ್ಲಿ ಅವುಗಳ ಮೇಲೆ ಟಿಪ್ಪಣಿ ಮಾಡಿಕೊಂಡು ಪದಗಳು, ಅವುಗಳ ಜೋಡಣೆ ಮುಂತಾದವುಗಳನ್ನು ಎಷ್ಟರಮಟ್ಟಿಗೆ ಮನನ ಮಾಡುತ್ತಿದ್ದರೆಂದರೆ ಅವೆಲ್ಲವೂ ಅವರ ನೆನಪಿನಲ್ಲಿ ಅಚ್ಚಳಿಯದಂತೆ ಉಳಿದುಕೊಳ್ಳುತ್ತಿದ್ದವು. ಅವರ ಎಲ್ಲಾ ಬರವಣಿಗೆಗಳಲ್ಲಿ ಈ ಅಂಶವನ್ನು ಗಮನಿಸಬಹುದು.

ಈ ಆರನೆಯ ಭಾಗದಲ್ಲಿ ಪ್ರಕಟವಾಗಿರುವ ಸಮ್ಮಿಶ್ರ ಲೇಖನಗಳು ಅತ್ಯಂತ ಗಮನಾರ್ಹವಾಗಿವೆ. ಇವುಗಳಲ್ಲಿ ಬ್ರಿಟಿಷ್–ಭಾರತದ ಸಂವಿಧಾನ, ಭಾರತದ ಇತಿಹಾಸದ ಮೇಲೆ ಟಿಪ್ಪಣಿಗಳು, ಮನು ಮತ್ತು ಶೂದ್ರರು, ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆ, ಹಿಂದೂಗಳೊಡನೆ ಹತಾಶೆ, ರಾಜಕೀಯ ದಮನದ ಸಮಸ್ಯೆ, ಗುಲಾಮಗಿರಿ ಮತ್ತು ಅಸ್ಪೃಶ್ಯತೆ ಇವುಗಳಲ್ಲಿ ಯಾವುದು ಅತ್ಯಂತ ಕೀಳು? ಎಂಬ ಮುಂತಾದ ವಿಷಯಗಳು ಅತ್ಯಂತ ರೋಚಕವಾದವುಗಳಾಗಿದ್ದು, ಪ್ರತಿಯೊಬ್ಬರೂ ಓದಲೇಬೇಕಾದಂತಹ ಬರಹಗಳು. ಅದರಿಂದ ಅವರ ಬಹುಮುಖ ವ್ಯಕ್ತಿತ್ವದ ಪ್ರತಿಭೆಯನ್ನು ತಿಳಿದುಕೊಳ್ಳಲು ಅವರ ಈ ಬರಹಗಳೆಲ್ಲವೂ ಇಂದಿಗೂ ಪ್ರಸ್ತುತವಾಗಿವೆ.

ಇಂತಹ ಬಹುಮುಖ ಆಸಕ್ತಿಯ ಬರವಣಿಗೆಗಳನ್ನು ಮೂಲಕ್ಕೆ ಅಪಚಾರವಾಗದಂತೆ ಭಾಷಾಂತರ ಮಾಡುವುದು ಸುಲಭ ಸಾಧ್ಯವಲ್ಲ. ಆದರೂ ಈ ಸಂಪುಟದ ಭಾಷಾಂತರ ಮಾಡಿದ ವಿವಿಧ ವಿದ್ವಾಂಸರು ತಮ್ಮ ಅಮೂಲ್ಯ ವೇಳೆಯನ್ನು ಈ ಕೆಲಸಕ್ಕಾಗಿ ವಿನಿಯೋಗಿಸಿ, ಅತ್ಯಂತ ಸಮರ್ಪಕ ರೀತಿಯಲ್ಲಿ ತಮ್ಮ ಕಾರ್ಯನಿರ್ವಹಿಸಿ ಸಹಕರಿಸಿದ್ದಕ್ಕಾಗಿ ಅವರೆಲ್ಲರಿಗೂ ಸಂಪಾದಕ ಸಮಿತಿ ಋಣಿಯಾಗಿದೆ. ಈ ಸಂಪುಟದ ಭಾಷಾಂತರ ಮತ್ತು ಪ್ರಕಟಣಾ ಕಾರ್ಯಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಇಳಾ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಗುರುಮೂರ್ತಿ ಮತ್ತು ಸಿಬ್ಬಂದಿ ವರ್ಗದವರಿಗೆ ನಮ್ಮ ಧನ್ಯವಾದಗಳು.

**ಡಾ॥ ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ

ಸಂದೇಶಗಳು v
ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x
ಎರಡನೇ ಮುದ್ರಣಕ್ಕೆ ಮುನ್ನುಡಿ xiv
ಮೂರನೇ ಮುದ್ರಣಕ್ಕೆ ಮುನ್ನುಡಿ xv
ಸಂಪಾದಕೀಯ xvi

**ವಿಭಾಗ ಒಂದು**

ಅಧ್ಯಾಯ ೧ ಪ್ರಾಚೀನ ಭಾರತದ ವಾಣಿಜ್ಯ ೫
ಅಧ್ಯಾಯ ೨ ಮಧ್ಯಕಾಲೀನ ಭಾರತದ ವಾಣಿಜ್ಯ ಸಂಬಂಧಗಳು ಅಥವಾ ಇಸ್ಲಾಂ ಧರ್ಮದ ಉದಯ ಮತ್ತು ಪಾಶ್ಚಾತ್ಯ ಯೂರೋಪಿನ ವಿಸ್ತರಣೆ ೩೬
ಅಧ್ಯಾಯ ೩ ಪ್ರಭುತ್ವ ಸರ್ಕಾರದ ಮುಂಚಿನ ಭಾರತ ೬೦

**ವಿಭಾಗ ಎರಡು**

ಅಧ್ಯಾಯ ೧ ಅಸ್ಪೃಶ್ಯರು ಮತ್ತು ಬ್ರಿಟಿಷ್ ಆಳ್ವಿಕೆ ೮೫

**ವಿಭಾಗ ಮೂರು**

ಅಧ್ಯಾಯ ೧ ಬ್ರಿಟಿಷ್ ಸಂವಿಧಾನ ಕುರಿತ ಉಪನ್ಯಾಸಗಳು ೧೬೩
ಪೀಠಿಕೆ ೧೬೫
I. ಬ್ರಿಟಿಷ್ ಸಂವಿಧಾನ ಮೂಲತತ್ವಗಳು ೧೬೭
II. ಸಂಸತ್ತು ಎಂದರೇನು? ೧೭೫
III. ಅರಸೊತ್ತಿಗೆ (ರಾಜ್ಯಾಧಿಕಾರ) ೧೭೯
IV. ಹಿರಿಯರ ಸಭೆ ೧೮೭
V. ಹಿರಿಯರ ಮತ್ತು ಸಾಮಾನ್ಯರ ಅಧಿಕಾರ ಮತ್ತು ಹಕ್ಕು ಬಾಧ್ಯತೆಗಳು ೧೯೧
ಅಧ್ಯಾಯ ೨ ಸಾರ್ವಭೌಮ ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿ ಭಾರತೀಯ ಸಂಸ್ಥಾನಗಳ ಬೇಡಿಕೆ ೨೦೧

**ವಿಭಾಗ ನಾಲ್ಕು**

**ಕಾಯಿದೆಗಳು ಮತ್ತು ಕಾನೂನುಗಳ ಕುರಿತ ಟಿಪ್ಪಣಿಗಳು**


ಅಧ್ಯಾಯ ೧ ಸಾಮಾನ್ಯ ನ್ಯಾಯ ೨೧೧

ಅಧ್ಯಾಯ ೨. ಆಧಿಪತ್ಯ ರಾಜ್ಯದ ಸ್ಥಾನಮಾನ ಕುರಿತ ಟಿಪ್ಪಣಿಗಳು ೨೬೧

ಅಧ್ಯಾಯ ೩. ನಿರ್ದಿಷ್ಟ ಪರಿಹಾರದ ಕಾನೂನು ೨೭೭

ಅಧ್ಯಾಯ ೪. ನ್ಯಾಸದ ಕಾನೂನು ೩೧೯

ಅಧ್ಯಾಯ ೫. ಕಾಲ ಪರಿಮಿತಿಯ ಕಾನೂನು ೩೮೧

ಅಧ್ಯಾಯ ೬ ಬ್ರಿಟಿಷ್ ಭಾರತದಲ್ಲಿ ದಂಡಪ್ರಕ್ರಿಯಾ ಕಾನೂನು ೪೦೯

ಅಧ್ಯಾಯ ೭ ಆಸ್ತಿಯ ವರ್ಗಾವಣೆ ಕಾಯ್ದೆ ೪೮೫

ಅಧ್ಯಾಯ ೮ ಸಾಕ್ಷ್ಯದ ಕಾನೂನು ೫೪೧


**ವಿಭಾಗ ಐದು**


ವೀಸಾ ನಿರೀಕ್ಷಣೆಯಲ್ಲಿದ್ದಾಗ ೬೭೫


**ವಿಭಾಗ ಆರು**

ಸಂಕೀರ್ಣ ಟಿಪ್ಪಣಿಗಳು


೧. ಬ್ರಿಟಿಷ್ ಭಾರತದ ಸಂವಿಧಾನ ೭೧೧

೨. ಸಂಸತ್ತಿನ ಕಾರ್ಯಕಲಾಪಗಳ ಮೇಲಿನ ಟಿಪ್ಪಣಿಗಳು ೭೧೫

೩. ಭಾರತದ ಇತಿಹಾಸದ ಮೇಲೆ ಟಿಪ್ಪಣಿಗಳು ೭೨೫

೪. ಮನು ಮತ್ತು ಶೂದ್ರರು ೭೩೫

೫. ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆ ೭೪೧

೬. ಹಿಂದೂಗಳೊಡನೆ ೭೪೫

೭. ಆಶಾಭಂಗ (ಭ್ರಮನಿರಸನ) ೭೪೭

೮. ರಾಜಕೀಯ ದಮನದ ಸಮಸ್ಯೆ ೭೫೧

೯. ಯಾವುದು ಹೆಚ್ಚು ಕೆಟ್ಟದ್ದು? ಯಾವುದು ಅತಿ ಕೀಳು? ಗುಲಾಮಗಿರಿಯೋ ಅಸ್ಪೃಶ್ಯತೆಯೋ? ೭೫೫

ವಿಷಯಸೂಚಿ ೭೭೫

# ವಿಭಾಗ ಒಂದು

# ಪ್ರಾಚೀನ ಭಾರತದ ವಾಣಿಜ್ಯ

ಅಧ್ಯಾಯ ೧– ಮಧ್ಯಪ್ರಾಚ್ಯದಲ್ಲಿ ಭಾರತದ ವಾಣಿಜ್ಯ ಸಂಬಂಧಗಳು
ಅಧ್ಯಾಯ ೨– ಮಧ್ಯಕಾಲೀನ ಭಾರತದ ವಾಣಿಜ್ಯ ಸಂಬಂಧಗಳು
ಅಧ್ಯಾಯ ೩– (ಬ್ರಿಟಿಷ್) ಅರಸೊತ್ತಿಗೆಯ ಮುಂಚಿನ ಭಾರತ

[ಹಸ್ತಪ್ರತಿಯಲ್ಲಿ ಈ ಅಧ್ಯಾಯವನ್ನು ಅಧ್ಯಾಯ ೫ ಎಂದು ಕಾಣಿಸಲಾಗಿದೆ. ೩ ಮತ್ತು ೪ನೇ ಅಧ್ಯಾಯಗಳು ಕಳೆದುಹೋಗಿವೆಯೆಂದು ಕಾಣುತ್ತದೆ.]

[ಈ ಅಧ್ಯಾಯದ ವಿಚಾರಗಳು ಡಾ. ಅಂಬೇಡ್ಕರ್ ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಗೆ ೧೯೧೩–೧೫ರಲ್ಲಿ ಆಯ್ದುಕೊಂಡ ಪ್ರಾಚೀನ ಇಂಡಿಯಾದ ವಾಣಿಜ್ಯದ ಕುರಿತ ಪ್ರೌಢಪ್ರಬಂಧದ (ಮೊದಲು ೧, ೨ ಮತ್ತು ೫ ಎಂದು ಕಾಣಿಸಿದ) ೩ ಅಧ್ಯಾಯಗಳನ್ನು ಒಳಗೊಂಡಿದ್ದು ಮುಂದೆ ಅವರು ಈಗ 'ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಮತ್ತು ಅರ್ಥ ವ್ಯವಸ್ಥೆ' ಎಂದು ಕರೆಸಿಕೊಳ್ಳುವ ಮತ್ತು ಈ ಕೃತಿಮಾಲೆಯ ೬ನೇ ಸಂಪುಟದಲ್ಲಿ ಪ್ರಕಟವಾದ ಒಂದು ಹೊಸ ವಿಷಯವನ್ನು ಆಯ್ದುಕೊಂಡರು. ಕಿರಿಯ ತಲೆಮಾರು ಡಾ. ಅಂಬೇಡ್ಕರ್‌ರನ್ನು ಒಬ್ಬ ಸುಂದರ ಬರವಣಿಗೆಯ ನಿಪುಣರೆಂದು ಅನುಸರಿಸುವ ಸಲುವಾಗಿ ಅವರ (೧೯೧೩–೧೫ರ) ಕೈಬರೆಹದ ಪಡಿಯಚ್ಚನ್ನು ಇದರೊಂದಿಗೆ ಮುದ್ರಿಸಲಾಗಿದೆ. –ಸಂ.]

## ಅಧ್ಯಾಯ ೧

# ಪ್ರಾಚೀನ ಭಾರತದ ವಾಣಿಜ್ಯ

+ಸಾಮ್ರಾಟ ರೋಮನರು ಭಿನ್ನ ಪರಿಣಾಮಗಳೊಂದಿಗೆ ಪೂರ್ವ ಮತ್ತು ಪಶ್ಚಿಮಗಳೆರಡರಲ್ಲೂ ತಮ್ಮ ಖಡ್ಗವನ್ನು ಬೀಸಿದರು. ಪೂರ್ವದಲ್ಲಿ "ಅವರು ಜಗತ್ತನ್ನು ಜಯಿಸಿದ್ದು ಅದನ್ನು ನೀಡಲು"[೧] *(....) ಆದರೆ ಪಶ್ಚಿಮದಲ್ಲಿ "ಅವರು ಮೊದಲು ತಮ್ಮ ಪ್ರಜೆಗಳಾಗಿದ್ದ ಜನಾಂಗಗಳನ್ನು ರೋಮನ್ನರನ್ನಾಗಿಸಿದರು *(....) ಒಡೆಯರು, ಇಲ್ಲವೇ ಆ ಜನಾಂಗಗಳನ್ನು ತಮ್ಮದೇ ರೋಮನೀಕರಣದ ಸ್ವಯಂ ಒಪ್ಪಿಗೆಯ ದಲ್ಲಾಳಿಗಳನ್ನಾಗಿರಲು ಬಿಟ್ಟರು."[೨] ಈ ರೋಮನೀಕರಣದ ಪರಿಣಾಮವಾಗಿ ಪಶ್ಚಿಮವು ರೋಮನರ ಮೂಲಕ ಬಂದ ತನ್ನ ಪರಂಪರೆಯ ಕುರಿತು ಹೆಮ್ಮೆ ಪಡುತ್ತಿದೆ. ಈ ಸಮೃದ್ಧ ಪರಂಪರೆಯನ್ನು ತುಂಬಿಕೊಂಡಿದ್ದು ಹೇಗೆಂಬ ಬಗ್ಗೆ ವಿಚಾರಿಸಲು ಯಾರೂ ಪ್ರಯತ್ನಿಸಿಲ್ಲ.

ಪ್ರಸ್ತುತದಲ್ಲಿ ನಾವು ರೋಮನ್ನರ ಸೈನಿಕ ಸಂಘಟನೆಯ ಕಾರ್ಯ ಚಟುವಟಿಕೆ, ಅವರ ಕಾಯ್ದೆಗಳ ಸವಿಸ್ತಾರ ವಿವರಣೆ ಮತ್ತು ಅವರ ಯುದ್ಧದ ಪೂರ್ವದಲ್ಲಿ ಭರ್ತಿಮಾಡಿಕೊಂಡು ಯುದ್ಧದ ವಿಜಯದ ನಂತರ ಬಿಡುಗಡೆ ಮಾಡಲ್ಪಟ್ಟ ಅಲೆಮಾರಿ ಸೈನ್ಯದಳದ ಶಿಸ್ತನ್ನು ಗಮನಿಸಬೇಕಾಗುತ್ತದೆ. ಇವರು, ಉತ್ತರದಿಂದ ತಮ್ಮನ್ನು ಒತ್ತುತ್ತಿರುವ ಎಟ್ರುಸ್ಕಾನ(Etruscans)ರ ಒತ್ತಡದಿಂದ, ಪಶ್ಚಿಮದಿಂದ ಲೆಗುರಿಯನರ (Lygurians), ಪೂರ್ವದಿಂದ ಸೆಬಿಯನ್(Sabians)ರಿಂದ ಮತ್ತು ದಕ್ಷಿಣದಿಂದ ಗ್ರೀಕರ (Greeks) ಒತ್ತಡದಿಂದ ಹೀಗೆ ಎಲ್ಲಾ ಕಡೆಯಿಂದ ಒತ್ತಡಕ್ಕೊಳಪಟ್ಟ ಲ್ಯಾಟಿನ್ ಮಾತನಾಡುವ ರೋಮನ್‌ರು ತಮ್ಮ ಶಕ್ತಿಯನ್ನು ನಿರಾಶೆಯಿಂದಲೇ ಪಡೆದರು. ಇವರ ಸೈನ್ಯ ಸಣ್ಣ ಮಕ್ಕಳು ಮತ್ತು ಹೆಂಗಳೆಯರನ್ನು ಬಿಟ್ಟು ಉಳಿದ ಎಲ್ಲಾ ಪ್ರಜೆಗಳನ್ನೂ ಹೊಂದಿದ ಪ್ರಜಾ ಸೈನ್ಯವಾಗಿತ್ತು ಮತ್ತು ಅದು ಯುದ್ಧದ ಕಹಳೆಯ ಕರೆಗೆ ಓಗೊಡಲು ಸದಾ ಸಿದ್ಧವಾಗಿತ್ತು. ರೋಮನ್ ಸಾಮ್ರಾಜ್ಯ ಒಟ್ಟಿನಲ್ಲಿ ಎಷ್ಟೊಂದು ಬೃಹತ್‌ಗಾತ್ರದಲ್ಲಿ ತನ್ನ ಸೈನ್ಯಶಕ್ತಿಯನ್ನು ಸಂಗ್ರಹಿಸುತ್ತಿದ್ದಿತೆಂದರೆ, ಸೈನ್ಯವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗದೆ ಹೋಯಿತು ಮತ್ತು ಕೇಂದ್ರೀಕರಣವು ಆಸ್ಫೋಟನೆ ಮತ್ತು ವಿಸ್ತರಣೆಗೆ ಎಡೆಮಾಡಿಕೊಡುತ್ತದೆ ಎಂಬ ಸಿದ್ಧಾಂತಕ್ಕೆ ಒಂದು ಉದಾಹರಣೆಯಾಯಿತು. ರೋಮನ್ ಸಾಮ್ರಾಜ್ಯ ಇನ್ನಿತರ ಭೂ ಪ್ರದೇಶಗಳನ್ನು ಕಬಳಿಸುವ ದುರಾಸೆಯ ಅಮಲಿನಲ್ಲಿಯೋ ಅಥವಾ ಇನ್ನೊಂದು ದೇಶಕ್ಕೆ ಕಿರುಕುಳ ಕೊಡುವ ಹುಚ್ಚನ್ನು ಹೊಂದಿಯೋ, ಪ್ರಥಮದಲ್ಲಿ ಸಮಗ್ರ ಇಟಾಲಿಯನ್ ದ್ವೀಪಕಲ್ಪವನ್ನು ಕಬಳಿಸಲು ಪ್ರಾರಂಭಿಸಿತು. ಯಾವುದೇ ಒಂದು ಸಾಮ್ರಾಜ್ಯಶಾಹಿಯು ಅರಿತೋ ಅಥವಾ ಅರಿಯದೆಯೋ, ತನ್ನ ವಿಸ್ತರಣೆಗೆ (expansion) ಕೊನೆಯನ್ನೇ ಅರಿತಿರುವುದಿಲ್ಲ. ಆದುದರಿಂದ ರೋಮನ್

---

+ ಹಸ್ತಪ್ರತಿಯ ಮೊದಲ ಪುಟ ಕಳೆದುಹೋಗಿದೆ. ಇದು ಎರಡನೆಯ ಪುಟದಿಂದ ಪ್ರಾರಂಭವಾಗುತ್ತದೆ. –ಸಂ.

* ಗೆದ್ದಲು ತಿಂದ ಭಾಗವನ್ನು ನಕ್ಷತ್ರ ಚಿಹ್ನೆಯಿಂದ ಕಂಸದಲ್ಲಿ ತೋರಿಸಲಾಗಿದೆ. –ಸಂ.

೧. ಅರ್ಲ್ ಆಫ್ ಕ್ರೋಮರ್‌ರವರಿಂದ ಉಲ್ಲೇಖಿತ: "ಏನ್ಷಿಯಂಟ್ ಅಂಡ್ ಮಾಡರ್ನ್ ಇಂಪೀರಿಯಲಿಸಮ್', ಪುಟ ೭೨.

೨. ಅದೇ: ಪುಟ ೭೩

ಸಾಮ್ರಾಜ್ಯಶಾಹಿಯು ತನ್ನ ಶಸ್ತ್ರಾಸ್ತ್ರಗಳ ದರ್ಪದಿಂದ ದಿಗ್ವಿಜಯವನ್ನು ಸಾಧಿಸುತ್ತಾ ಹೋಯಿತು ಮತ್ತು ತನ್ನ ದಿಗ್ವಿಜಯದ ಜೀವನದಲ್ಲಿ 'ಯುದ್ಧವನ್ನು' ಒಂದು 'ಘನವೃತ್ತಿ'ಯನ್ನಾಗಿ ಮಾಡಿಕೊಂಡಿತು. ಆದರೆ 'ಪೈಪೋಟಿ'ಯಂತೆ ಯುದ್ಧವೂ ಸಹ ತನ್ನನ್ನು ತಾನೇ ಹಾಳುಮಾಡಿಕೊಳ್ಳುತ್ತದೆ ಎಂಬ ವಿಷಯ ರೋಮ್‌ಗೆ ತಿಳಿದಿರಲಿಲ್ಲ. ಇದು, ಒಂದೇ ಒಂದು ಬಲವಾದ ಪ್ರಯತ್ನದಿಂದ ಒಂದು ಅತ್ಯಂತ ವಿಶಾಲವಾದ ಭೂ ಪ್ರದೇಶವನ್ನು ತನ್ನ ನಿಯಂತ್ರಣದಲ್ಲಿ ತಂದಿತು. ಒಂದು ದಿಗ್ವಿಜಯದಲ್ಲಿ ಅದು ಅಪಾರ ಪ್ರದೇಶವನ್ನು ತನ್ನ ತೆಕ್ಕೆಗೆ ತಂದಿತಾದರೂ ಆಂತರಿಕ ಧಾರಣಾಶಕ್ತಿಯು ಬತ್ತಿಹೋಗುವ ಅನಿವಾರ್ಯದಲ್ಲಿ ತನ್ನ ವಿಸ್ತೃತ ಸಾಮ್ರಾಜ್ಯದ ಪರಿಧಿಯನ್ನು ಕೇಂದ್ರದೆಡೆಗೆ ಕುಗ್ಗಿಸಲು ಅನುವು ಮಾಡಿಕೊಟ್ಟಿತು.

ಅವರ ಯುದ್ಧತಂತ್ರ ಹಾಗೂ ಅಮಾನವೀಯ ಕತ್ತಿಕಾಳಗದ ಸಾಧನೆಗಳಲ್ಲದೆ, ರೋಮನರು ರಸ್ತೆ ನಿರ್ಮಾಣ ಮತ್ತು ಆಡಳಿತದ ಮೂಲಕ ಪ್ರಸಿದ್ಧಿ ಪಡೆದರು. ಈ ಕಲೆಗಳು ಸಾಮ್ರಾಜ್ಯಶಾಹಿಯ ಸಹಜ ಮತ್ತು ಅಗತ್ಯ ಸಂಬಂಧಿಗಳಾಗಿದ್ದವು. (ಇವಲ್ಲದೆ) ಶಾಂತಿಯುತ ರೋಮ್ ಎಂಬ ಉಕ್ತಿಯಲ್ಲಿ ಹೇಳಬಹುದಾದ ಕೊಡುಗೆಯು ರೋಮನರಿಂದ ನಾಗರಿಕತೆಗೆ ಸಂದಿಲ್ಲ.*

ರೋಮನ್ ಅರಸೊತ್ತಿಗೆಯ ಸೂರಿನಡಿ (ಪೂರ್ವದ) ಒಂದು ಸತತ ಮತ್ತು 'ಶಾಂತ ವಲಸೆ'ಯಿತ್ತು. ತತ್ವಶಾಸ್ತ್ರ, ಖಗೋಳಶಾಸ್ತ್ರ, ಗಣಿತ, ವೈದ್ಯಕೀಯ ಇವು ಅದು ಬಿಟ್ಟುಹೋದ ಆಸ್ತಿಗಳಾಗಿದ್ದವು. ವಾಸ್ತವ ಪ್ರತಿಭೆಯೊಂದಿಗೆ ಹೊಂದಿಕೊಳ್ಳದ ಪಾಂಡಿತ್ಯವು ಪೌರ್ವಾತ್ಯರ ವ್ಯವಹಾರವಾಗಿತ್ತು. ರೋಮನ್ ಆಸ್ಥಾನವು ಪೌರ್ವಾತ್ಯ ತಾರಾಗಣದಿಂದ ಶೋಭಿಸುತ್ತಿತ್ತು. ಇಡಿ ರೋಮನ್ ಕೋರ್ಟು ಪೂರ್ವದ (East) ನಕ್ಷತ್ರಗಳಿಂದ (Star) ಕಂಗೊಳಿಸುತ್ತಿತ್ತು. ರೋಮನ್ ಸಾಮ್ರಾಜ್ಯದ ಟಾಲೋಮಿ (Ptolemy) ಹಾಗೂ ಪ್ಲಾಟಿನಸ್ (Plotinus) ಎಂಬ ಮಹಾನ್ ವ್ಯಕ್ತಿಗಳು ಪೂರ್ವದ ಈಜಿಪ್ತನಿಂದ ಬಂದವರಾಗಿದ್ದರು. ಇದಲ್ಲದೆ, ಅಂದಿನ ಪ್ರಸಿದ್ಧ ಪುರುಷರಾದ ಪೋರ್‌ಫೆರಿ (Porphyry) ಮತ್ತು ಇಯಾಮ್‌ಬ್ಲಿಚಿಸ್ (Imablichus) ಸಿರಿಯಾ ದೇಶದವರಾಗಿದ್ದರು ಮತ್ತು ಡಿಯೊಸ್ಕೋರೈಡಸ್ (Dioscorides) ಹಾಗೂ ಗಾಲೆನ್(Galen)ರು ಏಶಿಯಾದಿಂದ ಬಂದವರಾಗಿದ್ದರು. ರೋಮನ್ ನಾಗರಿಕತೆಯು ಬಹುಪಾಲು ಪೌರ್ವಾತ್ಯದಿಂದ ಬಂದ ಗುಲಾಮರಿಂದ ನಿರ್ಮಿಸಲ್ಪಟ್ಟಿತ್ತು. ಇಷ್ಟೇ ಏಕೆ, ರೋಮನ್ ಆಧಿಪತ್ಯದಲ್ಲಿ ಸ್ಥಾಪಿಸಲ್ಪಟ್ಟ ಶಾಲೆಗಳಲ್ಲಿ ಏಶಿಯಾದ ಗುಲಾಮರೇ ಶಿಕ್ಷಕರಾಗಿ ರೋಮನ್ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ರೋಮನ್‌ರು ಸುಂದರವಾದುದಕ್ಕಿಂತಲೂ ಶಕ್ತಿಯುತವಾದುದನ್ನು ಬಹಳಷ್ಟು ಪ್ರೀತಿಸುತ್ತಿದ್ದರು. "ರೋಮ್ ಸ್ವತಃ ಕಲಾರಹಿತವಾಗಿದ್ದರಿಂದ ಪೂರ್ವದ ಕಲೆ ಮತ್ತು ಕಲೆಗಾರರನ್ನು ತನ್ನದೇ ಆದ ಉದ್ದೇಶಕ್ಕೆ ಬಳಸಿತು. ಉದಾಹರಣೆಗೆ, ಇವರು ಪೂರ್ವದ ಕಲೆಗಾರರಿಗೆ ಟ್ರೋಜನ್ (Trojan) ಸ್ತಂಭಕ್ಕೆ ಬಂಗಾರ ಮತ್ತು ಕೇಸರಿ ಬಣ್ಣಗಳಿಂದ ಅದನ್ನು ಹೊಳೆಯುವಂತೆ ಮಾಡಿ ಎಂದು ಹೇಳಿದುದು ಅವರ ಅನಾಗರಿಕ ಸಂತೋಷದ ದ್ಯೋತಕವಾಗಿರುತ್ತದೆ. ಇಷ್ಟೇ ಅಲ್ಲ, ರೋಮನ್‌ರ ವಾಸ್ತುಶಿಲ್ಪ ಪೂರ್ವದ ಗುಲಾಮರ ಬಳುವಳಿಯಾಗಿರುತ್ತದೆ."[೧] ರೋಮ್ ಸಾಮ್ರಾಜ್ಯದ ಎಲ್ಲಾ ಶಕ್ತಿ ಇತರ ದೇಶಗಳ ಮೇಲೆ ದಾಳಿ ಮಾಡುವಲ್ಲಿ ವ್ಯಯವಾಗುತ್ತಿತ್ತು ಮತ್ತು ಒಂದು ವೇಳೆ– ನಾವು ಈ ರೀತಿ ಹೇಳಲು ಇಷ್ಟಪಟ್ಟರೆ ಅದು ತನ್ನ ಎಲ್ಲಾ ಶಕ್ತಿಯನ್ನು ತನ್ನ ಅಸ್ತಿತ್ವದ ಉಳಿಯುವಿಕೆಗಾಗಿ ಹೋರಾಡುವುದರಲ್ಲಿ ವ್ಯಯಿಸಿತು. ತನ್ನ ಸಾಕಷ್ಟು ಹೋರಾಟದ

---

* ಕಂಸದಲ್ಲಿರುವ ಶಬ್ದಗಳನ್ನು ಗೆದ್ದಲು ತಿಂದು ಹಾಕಿವೆ. ಬೇರೆ ಶಬ್ದಗಳನ್ನು ಬರೆಯಲಾಗಿದೆ. –ಸಂ.

೧. ಡಬ್ಲ್ಯು.ಆರ್. ಪ್ಯಾಟರ್ಸನ್– ದಿ ನೆಮಿಸಿಸ್ ಆಫ್ ನೇಷನ್ಸ್, ಪು. ೩೦೭.

ನಂತರ ತನಗಿದ್ದ ಸಮಯವನ್ನು ಅದು ಆರಾಮದಿಂದ ಇರಲಿಕ್ಕೆ ಉಪಯೋಗಿಸಬಹುದಾಗಿತ್ತು ಮತ್ತು ತನ್ನ ವಶದಲ್ಲಿದ್ದ ವಿಶಾಲ ಸಾಮ್ರಾಜ್ಯದ ಪ್ರಜೆಗಳ ಅಸಾಧಾರಣ ವೈವಿಧ್ಯಮಯ ಪ್ರತಿಭೆಯನ್ನು ತನಗಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು. ದುರ್ದೈವವಶಾತ್ ರೋಮ್ ಈ ಸತ್ಯವನ್ನು ಎಂದೂ ಮನಗಾಣಲಿಲ್ಲ ಅಥವಾ (ಅದು)* 'ಯುದ್ಧ'ದಂತೆಯೇ 'ಶಾಂತಿ' ಸಹ ತನ್ನದೇ ಆದ ಗೆಲುವುಗಳನ್ನು ಹೊಂದಿರುತ್ತದೆ ಎಂಬ ಸತ್ಯವನ್ನು ಬಹಳ ತಡವಾಗಿ ಅರಿತುಕೊಂಡಿತು. "ರೋಮನ್ನರು ಶಾಂತಿ ಮೂರ್ತಿಯೊಂದನ್ನು ಸ್ಥಾಪಿಸಿದರು ಮತ್ತು ಅವರು ತಮ್ಮ ಮನೆಗಳ ನಾಲ್ಕು ಗೋಡೆಗಳ (.....)* ಹೊರಗೆ (.....)* ಹೆಚ್ಚಾಗಿ ಹೋಗುತ್ತಿರಲಿಲ್ಲ ಎಂಬುದನ್ನು ಗಮನಿಸಿದಾಗ ಅವರ ಪರಿಶುದ್ಧ ಮತ್ತು ಸಹಜ ಕ್ಷಾತ್ರವಾದಕ್ಕೆ (militarism) ಒಂದು ಸುದೀರ್ಘ ಪರಿಹಾರ ಉಂಟಾಯಿತು."+ ರೋಮ್ ಕೆಲವು ಉದ್ದಿಮೆಗಳನ್ನು ಹೊಂದಿದ್ದರೂ ಅದರ ಉತ್ಪಾದನಾ ಸಾಮರ್ಥ್ಯ ಬಹಳ ಕೆಳಮಟ್ಟದಲ್ಲಿತ್ತು. ಅದರ ಉತ್ಪಾದನೆ ಉಪಭೋಗ ಮಟ್ಟಕ್ಕಿಂತ ಕಡಿಮೆ ಇತ್ತು. ಇದರಿಂದಾಗಿ ಅದರ ಸಂಪತ್ತು ನಿರಂತರವಾಗಿ ಹೊರಹೋಗುತ್ತಿತ್ತು. ಅದರ ಲೇಟ್ ಫಂಡಿಯಾವು (Late fundia) ಕೃಷಿ ಕ್ಷೇತ್ರವನ್ನು ನಾಶಪಡಿಸಿ ರೈತರನ್ನು ಭಿಕ್ಷಾಟನೆಗೆ ನೂಕಿತು ಹಾಗೂ ರೋಮನ್ನರು ತಮ್ಮ ಆಹಾರ ಬೇಡಿಕೆಗಳಿಗಾಗಿ 'ಸಿಸಿಲಿ' ಮತ್ತು 'ಈಜಿಪ್ಟ್'ನ ಮೇಲೆ ಸಂಪೂರ್ಣವಾಗಿ ಅವಲಂಬಿಸುವಂತೆ ಮಾಡಿತು. ಉಳುವ ಭೂಮಿಯ ಮೇಲಿನ ವಿಪರೀತದ ಕೇಂದ್ರೀಕರಣ ಅವಲಂಬಿಸುವಂತೆ ಮಾಡಿತು. ಉಳುವ ಭೂಮಿಯ ಮೇಲಿನ ವಿಪರೀತದ ಕೇಂದ್ರೀಕರಣ ಅದನ್ನು ನಿರುಪಯೋಗಿಯನ್ನಾಗಿಸಿತು. ಹಾಗೂ ವಾಸ್ತವದಲ್ಲಿ ಇಟಾಲಿಯನ್ ಬೆಳೆ ಸುಗ್ಗಿಯನ್ನು ನಾಶಪಡಿಸಿತು. ರೋಮ್ ಹೆಚ್ಚು ಕಡಿಮೆ ತನ್ನ ಎಲ್ಲಾ ಆಹಾರ ಪದಾರ್ಥಗಳನ್ನು ಪೂರ್ವದಿಂದ ಕೊಳ್ಳುತ್ತಿತ್ತು ಮತ್ತು ಹಿಂತಿರುಗಿ ಪೂರ್ವಕ್ಕೆ ನೀಡಲು ಅದು ಯಾವ ಪದಾರ್ಥವನ್ನು ಹೊಂದಿರಲಿಲ್ಲ.

ರೋಮ್‌ದ ಕಾನ್‌ಸ್ಟಂಟೈನ್ (Constantine) ಒಂದು ರಾಜಕೀಯ ಶಕ್ತಿಯ ಕೇಂದ್ರವಾಗಿ ಹುಟ್ಟಿ ಬರುವ ಮುನ್ನವೇ ಪೂರ್ವದಲ್ಲಿ (Orient), ಅದರಲ್ಲೂ ವಿಶೇಷವಾಗಿ ಪ್ರಾಚೀನ ನಾಗರಿಕತೆಯನ್ನು ಹೊಂದಿದ ದೇಶಗಳಲ್ಲಿ, ನಾವು ಉದ್ದಿಮೆ, ತಾಂತ್ರಿಕ ಸಾಮರ್ಥ್ಯವನ್ನು ಹೊಂದುವ ಸಲುವಾಗಿನ ಶ್ರೀಮಂತಿಕೆ, ಕಲಾತ್ಮಕ ಉತ್ಪಾದನೆಗಳು ಮತ್ತು ಬುದ್ಧಿಮತ್ತೆ ಹಾಗೂ ವಿಜ್ಞಾನ ಮುಂತಾದವುಗಳನ್ನು ಕಾಣುತ್ತೇವೆ.[೧] ಇಷ್ಟೆ ಅಲ್ಲದೆ, ಜ್ಞಾನದ ಎಲ್ಲಾ ಶಾಖೆಗಳು ಪೂರ್ವ ದೇಶಗಳ ಸ್ಫೂರ್ತಿಯ ಪ್ರಭಾವಕ್ಕೆ ಒಳಗಾಗಿದ್ದವು."[೨] ಈ ದೇಶಗಳು, ರೋಮ್‌ಗಿಂತಲೂ ಉಚ್ಚಮಟ್ಟದ ತಾಂತ್ರಿಕ ಜ್ಞಾನ ಹಾಗೂ ಸಾಮರ್ಥ್ಯ ಮತ್ತು ಸಂಶೋಧನಾ ಪ್ರತಿಭೆ ಉಳ್ಳ ಕೆಲಸಗಾರರನ್ನು ಹೊಂದಿದ್ದವು."[೩] ಕೈಗಾರಿಕಾ ಕಲೆಗಳ ಉತ್ಪಾದನೆಗಳಿಂದ ಹಿಡಿದು ಒಂದು ಕಾರಖಾನೆಯವರೆಗೆ ರೋಮ್‌ನಲ್ಲಿ ಪೂರ್ವದೇಶದ ಹೆಚ್ಚುತ್ತಿರುವ ಪ್ರಭಾವವನ್ನು ಯಾರಾದರೂ ಗುರುತಿಸಬಹುದಾಗಿತ್ತು. ಪೂರ್ವದ ಬೃಹತ್ ಕೈಗಾರಿಕಾ ಕೇಂದ್ರಗಳ ಕಾರ್ಯ ಚಟುವಟಿಕೆಗಳಿಂದ ಯೂರೋಪಿನ ಭೌತಿಕ ನಾಗರಿಕತೆಯು ಯಾವ ರೀತಿ ಕ್ರಮೇಣ ಮಾರ್ಪಾಡಾಯಿತು ಎನ್ನುವುದನ್ನು ಯಾರಾದರೂ ತೋರಿಸಬಹುದು. ಪರದೇಶದ 'ಗಾವುಲ್' (Gaul of Exotic) ಉತ್ಪಾದನಾ

---

* ಕಂಸದಲ್ಲಿರುವ ಭಾಗಗಳನ್ನು ಗೆದ್ದಲು ತಿಂದುಹಾಕಿವೆ. ಶಬ್ದಗಳನ್ನು ಪೂರೈಸಲಾಗಿದೆ –ಸಂ.

\+ ಡಬ್ಲ್ಯು.ಆರ್. ಪ್ಯಾಟರ್ಸನ್, ದಿ ನೆಮಿಸಿಸ್ ಆಫ್ ನೇಷನ್ಸ್, ಪು. ೩೩೪.

೧. ಫ್ರಾಂಕ್ ಕ್ಯೂಮಾಂಟ್: ಓರಿಯೆಂಟ್ ರಿಲಿಜೆನ್ಸ್ ಇನ್ ರೋಮನ್ ಪೇಗ್ಯಾನಿಸಮ್, ಪು. ೨.

೨. ಅದೇ: ಪು. ೬.

೩. ಅದೇ: ಪು. ೮.

ವಿಧಾನ ಮತ್ತು ಪ್ರಕ್ರಿಯೆಗಳು ದೇಶೀಯ ಹಳೆಯ ಉದ್ದಿಮೆಯನ್ನು ಬದಲಾಯಿಸಿದವು ಮತ್ತು ಉತ್ಪನ್ನಗಳಿಗೆ (ಅವುಗಳ)* ಅದುವರೆಗೂ ಗೊತ್ತಿರದ ಜನಪ್ರಿಯತೆ ಹಾಗೂ ಪರಿಪೂರ್ಣತೆಯನ್ನು ಹೇಗೆ ತಂದುಕೊಂಡವು ಎಂಬ ವಿಷಯ ಇಲ್ಲಿಯವರೆಗೆ ಯಾರಿಗೂ ಗೊತ್ತಿಲ್ಲ."+ ಒಂದು ಕಲ್ಲನ್ನು ಹರಿತ ಮಾಡುವುದು ಮತ್ತು ಒಂದು ಕೈ ಕೊಡಲಿಯನ್ನು ತಯಾರಿಸುವುದೇ ಪಾಶ್ಚಿಮಾತ್ಯ ಜಗತ್ತು ತನ್ನ ನವಶಿಲಾಯುಗದಲ್ಲಿ ಅತಿ ಮಾನವ ಕೆಲಸವೆಂದು ತಿಳಿದಿದ್ದಾಗ, ಪೂರ್ವ ಜಗತ್ತು ವಿಸ್ಮಯಕಾರಿ ಹಾಗೂ ಬೃಹತ್ ಕಬ್ಬಿಣ ಕಂಬಿಗಳನ್ನು ಉತ್ಪಾದಿಸುವಲ್ಲಿ ನಿರತವಾಗಿರುವುದು ಇಲ್ಲಿ ಗಮನಾರ್ಹವಾಗಿರುತ್ತದೆ. ಅಷ್ಟೇ ಅಲ್ಲದೆ, ಇವೆಲ್ಲವುಗಳು ಆ ಕಾಲದಲ್ಲಿಯೇ ಪೂರ್ವ ಜಗತ್ತು ಸಾಧಿಸಿದ ಯಾಂತ್ರಿಕತೆ ಹಾಗೂ ತಾಂತ್ರಿಕತೆಗೆ ಒಂದು ನಿದರ್ಶನವಾಗಿದೆ. ಇಂತಹ ಉತ್ಪಾದನೆ ಅನಾದಿ ಕಾಲದಿಂದ ಪಶ್ಚಿಮದ ಔದ್ಯಮಿಕ ಕ್ರಾಂತಿಯವರೆಗೆ ಅವ್ಯಾಹತವಾಗಿ ಪೂರ್ವಜಗತ್ತಿನಲ್ಲಿ ಅಸ್ತಿತ್ವದಲ್ಲಿತ್ತು.

ಈ ರೀತಿಯಾಗಿ "ಪೂರ್ವಜಗತ್ತು ಪಶ್ಚಿಮದ ಜಗತ್ತಿಗೆ (ಚಾಲನೆ)*ಯನ್ನು ನೀಡಿತು"++ ನೈಲ್(Nile)ನ ಯುಫ್ರೆಟಸ್(The Euphrates)ನ ಯಾಂಗಟ್ಸೆ ಕಾಂಗ (The Yangtse Kang) ಮತ್ತು ದ ಇಂಡಸ್ (The Indus) ಕಣಿವೆ ಪ್ರದೇಶಗಳಲ್ಲಿ ನಾವು ಮೊಟ್ಟ ಮೊದಲಿಗೆ ನಾಗರಿಕತೆಯ ಅರುಣೋದಯವನ್ನು ನೋಡುತ್ತೇವೆ. ಇದನ್ನು ಪ್ರಗತಿಯ ಹಾಗೂ ಜ್ಞಾನದ ಪ್ರಾರಂಭವೆನ್ನಬಹುದು." ಗ್ರೀಸ್ ಮತ್ತು ರೋಮ್‌ಗಳು ಮಾಡಿದ ಒಂದೇ ಕೆಲಸವೆಂದರೆ ಈ ಬೆಳಕನ್ನು ಪೂರ್ವದಿಂದ ಪಡೆದು ಅದನ್ನು ಪಶ್ಚಿಮ ಜಗತ್ತಿನಲ್ಲಿ ಬಹುಮುಖ ವೈಭವದಿಂದ ಪ್ರತಿಬಿಂಬಿಸುವಂತೆ ಮಾಡಿದುದು."[೧]

ಈ ದೃಷ್ಟಿಕೋನದಿಂದ ನೋಡಿದಾಗ 'ಕತ್ತಲಿನ ಯುಗ'ದ ಮಹೋರಗವು ಚರಿತ್ರಕಾರನ ಕಲ್ಪನೆಯ ಸೃಷ್ಟಿಯೆಂದು ತೋರುತ್ತದೆ. ಇಂತಹ ಕರಾಳ ಯುಗಗಳು ಯುರೋಪಿನಲ್ಲಿದ್ದವೇ? ಇದ್ದಿದ್ದರೆ ಅಲ್ಲಿ ಯಾವತ್ತು ಬೆಳಕಿತ್ತು? ಚರಿತ್ರೆಯು ಇದನ್ನು ಬಿಚ್ಚಿಡುವುದಿಲ್ಲ. ಏನಾದರೂ ಬೆಳಕು ಅಥವಾ ನಾಗರಿಕತೆ ಇದ್ದರೆ ಅದು ಮೆಡಿಟರೇನಿಯನ್ ಸಮುದ್ರದ ಪೂರ್ವದ (Basin) ಹಡಗು ಕಟ್ಟೆಗೆ ಮೀಸಲಾಗಿತ್ತು. (ಅದು ನಿರಂತರವಾಗಿ ಪೂರ್ವ(Orient)ದಿಂದ ಪೋಷಿಸಲ್ಪಟ್ಟಿತ್ತು) ಮತ್ತು ಈ ಪ್ರದೇಶ ಬಿಟ್ಟರೆ ಉಳಿದ ಎಲ್ಲಾ ಯೂರೋಪ್ ಖಂಡ ಇತ್ತೀಚಿನವರೆಗೆ ಅನಾಗರಿಕ ಸ್ಥಿತಿಯಲ್ಲಿಯೇ ಇತ್ತು. ನಾಗರಿಕತೆಯ ರೇಖೆಯು (ಅದನ್ನು ಎಲ್ಲಿಂದ ಎಳೆಯಲಾಗಿದೆ ಎಂಬುದನ್ನು ಬದಿಗಿಟ್ಟು) ನಿರಂತರವಾಗಿ ಮೇಲೇರುತ್ತಿರುತ್ತದೆ ಮತ್ತು ಯಾವುದನ್ನು ಇತಿಹಾಸಕಾರ 'ಕರಾಳ ಯುಗ'ವೆಂದು ಕರೆಯುತ್ತಾನೋ ಅದು ಹಿಂದಿನ ಶತಮಾನಗಳ ನಾಗರಿಕತೆಯ ಮಟ್ಟಕ್ಕಿಂತ ಅಧಿಕ ಮಟ್ಟದ ನಾಗರಿಕತೆಯನ್ನು ಗುರುತಿಸುತ್ತದೆ. 'ಕರಾಳಯುಗ'ದ ಕಲ್ಪನೆಯು ಇಡಿ ಯೂರೋಪನ್ನು 'ರೋಮ್' ಎಂದು ತಿಳಿಯುವ ಸುಳ್ಳುಕತೆಯಿಂದ ಉದ್ಭವಿಸುತ್ತದೆ. ಆದರೆ ಇಡಿಯಾದ ಯೂರೋಪ್ ಖಂಡವನ್ನು, ಬಿಡಿ ಭಾಗವಾದ 'ರೋಮ್' ಎಂದು ತಿಳಿಯುವುದು ಅಸಂಬದ್ಧವಲ್ಲದೆ ಬೇರೆ ಏನೂ ಇಲ್ಲ.

ನಿಜವಾಗಿಯೂ 'ಕರಾಳ ಯುಗ'ದ ಪ್ರಶ್ನೆಯನ್ನು ಪೌರ್ವಾತ್ಯ ಇತಿಹಾಸಕಾರ ಕೇಳಬೇಕಾದದ್ದು ಸಹಜ. ಯೂರೋಪಿನ ಇತಿಹಾಸಕಾರನಲ್ಲ. ಆತ, ಉತ್ತುಂಗ ಶಿಖರ ಏರಿದ ನಂತರ ಈ ಮಹಾಪತನವೇಕೆ ಆಯಿತು? ಮುಂಜಾವಿನ ಆಶಾಕಿರಣದ ನಂತರ ಒಮ್ಮಿಂದೊಮ್ಮೆಲೆ ಈ ಕತ್ತಲೇಕೆ ಆಯಿತು? ಎಂಬ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ.

---

+ ಅದೇ: ಪು. ೯.

* ಕಂಸದಲ್ಲಿರುವ ಭಾಗಗಳನ್ನು ಗೆದ್ದಲು ತಿಂದು ಹಾಕಿವೆ. ಶಬ್ದಗಳನ್ನು ಪೂರೈಸಲಾಗಿದೆ. –ಸಂ.

++ ಬ್ರೂಕ್ ಆಡಮ್ಸ್: ಲಾ ಆಫ್ ಸಿವಿಲಿಜೇಷನ್ ಅಂಡ್ ಡಿಕೇ.

೧. ಆರ್. ಸಿ. ದತ್ತ

ಅತ್ಯಂತ ಪುರಾತನವಾದ ಮತ್ತು ಅಧಿಕ ಆಶಾದಾಯಕವಾದ ನಾಗರಿಕತೆಗಳು ಸ್ವಲ್ಪ ದೂರ ಮುಂದೆ ಹೋಗಿ ಆನಂತರ ಮುಂದೆ ದಾರಿ ಕಾಣದಾಗಿ ನಿಂತಿರುವುದನ್ನು ಮತ್ತು ಎಲ್ಲರೂ ಅವುಗಳಿಂದ ಪ್ರಗತಿಯನ್ನು ನಿರೀಕ್ಷಿಸುತ್ತಿರುವಾಗ ಏಕೆ ಅವುಗಳು ಸ್ಥಗಿತಗೊಂಡವು ಎಂಬುದನ್ನು ನೋಡುವುದು ಅತ್ಯಂತ ದುಃಖದಾಯಕ ಸಂಗತಿಯಾಗಿರುತ್ತದೆ. ಈ ಪುರಾತನ ಕಾಲದ ಕೆಲವು ನಾಗರಿಕತೆಗಳು ತಮ್ಮ ದಾಖಲೆಗಳನ್ನು ಇಟ್ಟಿಗೆ ಹಾಗೂ ಶಿಲಾಶಾಸನಗಳಲ್ಲಿ ಬಿಟ್ಟು ನಾಶವಾಗಿರುತ್ತವೆ. ಇನ್ನುಳಿದವುಗಳು ಕಾಲು ಎಳೆಯುತ್ತಾ ಮುಂದೆ ಸಾಗಿವೆ ಮತ್ತು ಪುನಶ್ಚೇತನದ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.

ಇಂಡಿಯಾದ ನಾಗರಿಕತೆಯು ಅತ್ಯಂತ ಪುರಾತನದವುಗಳಲ್ಲೊಂದಾಗಿದೆ. ಆದರೂ ಅದೀಗ ಪೂರ್ಣ ಸ್ಥಗಿತತೆಗೆ ತಲುಪಿದೆ. ಆದರೆ ಇದು ಪುನಶ್ಚೇತನಗೊಳ್ಳಲು ಬದುಕಿ ಉಳಿದಿದೆ ಮತ್ತು ಇದು ಎಂದೂ ಸಾಯುವುದಿಲ್ಲವೆಂದು ಹಾರೈಸೋಣ. ಪಶ್ಚಿಮದ ಸಂಪರ್ಕ ಈ ನಾಗರಿಕತೆಯ "ದೃಢತೆ"ಯನ್ನು ಅಲುಗಾಡಿಸಿ ಇದರ ಹಳೆಯ ಚೈತನ್ಯಶಕ್ತಿಯನ್ನು ಮರುಸ್ಥಾಪಿಸಿದೆ.

ನಾಗರಿಕತೆಯು ಒಂದು ನಿರ್ದಿಷ್ಟ ಜಾಗದಲ್ಲಿಯೇ ಏಕೆ ಆರಂಭವಾಗುತ್ತದೆ, ಇನ್ನೊಂದೆಡೆ ಏಕಲ್ಲ ಎಂಬ ಬಗ್ಗೆ ಚರಿತ್ರಕಾರರು ಬಹಳ ಸಲ ಅಚ್ಚರಿಪಟ್ಟಿದ್ದಾರೆ. ಅದು ಅಲ್ಲಿನ ನಿವಾಸಿಗಳ ಸಾಮರ್ಥ್ಯದಿಂದಲೇ? ಅಥವಾ ಅವರಿಗೆ ನಾಗರಿಕತೆಯು ದೈವದತ್ತವೇ? ನಮ್ಮ ಸ್ವಲ್ಪ ಆಲೋಚನೆಯಿಂದ ಈ ಎರಡೂ ಕಾರಣಗಳು ಅಷ್ಟೊಂದು ಮುಖ್ಯವಾಗಿಲ್ಲವೆಂದು ಕಂಡುಬರುತ್ತವೆ. ನಾಗರಿಕತೆಯ ಉಗಮದಲ್ಲಿ ಒಂದು ದೇಶದ ಪರಿಸರ ಅತಿ ಮುಖ್ಯವಾದ ಪಾತ್ರ ವಹಿಸುತ್ತದೆ. ಒಂದು ದೇಶದ ನಿಸರ್ಗದತ್ತವಾದ ಸಮೃದ್ಧಿಯ ವಾತಾವರಣ ಮತ್ತು ಈ ವಾತಾವರಣವನ್ನು ಸಂರಕ್ಷಣೆಯ ಅವಕಾಶಗಳು ಅದರ ಏಕಾಕಿತನ ಅಥವಾ ವಿದೇಶಿ ದಾಳಿಯಿಂದ ಅದರ ಸಂರಕ್ಷಣೆ ಮುಂತಾದವುಗಳು ಅಲ್ಲಿ ನಾಗರಿಕತೆ ಚಿಗುರೊಡೆಯಲು ನೆರವಿಗೆ ಬರುತ್ತವೆ.

ಇಂಡಿಯಾದ ಭೌಗೋಳಿಕ ಸ್ಥಿತಿಯು ಅದನ್ನು ನಾಗರಿಕತೆಯ ಮೊದಲ ತೊಟ್ಟಿಲಾಗಲು ಸೂಕ್ತವಾಗಿತ್ತು. ಜನರಿಗೆ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಹಾಗೂ ನಿಸರ್ಗದ ಎಲ್ಲಾ ಕೊಡುಗೆಗಳನ್ನು ಉಪಯೋಗಿಸಿಕೊಳ್ಳಲು ಸಹಾಯವಾಗಬಲ್ಲ ಮತ್ತು ಸದಾಕಾಲ ಒಂದು ಸುರಕ್ಷಿತ ನೆಲೆಯನ್ನು ಅರಸುತ್ತಿರುವ ಅದೆಷ್ಟೋ ಆದಿವಾಸಿ ಜನಾಂಗಗಳು ಅಸೂಯೆ ಪಡುವಂತಹ ಪ್ರತ್ಯೇಕತೆಯನ್ನು ಭಾರತಕ್ಕೆ ನಿಸರ್ಗ ದಯಪಾಲಿಸಿದೆ. ಅಂದು, ಭಾರತ ಉತ್ತರಕ್ಕೆ ಹಿಮಾಲಯ ಪರ್ವತಗಳಿಂದ, ಟಿಬೇಟಿನಿಂದ ಮತ್ತು ಚೈನಾದಿಂದ ಬೇರ್ಪಟ್ಟಿತ್ತು. ಪೂರ್ವಕ್ಕಿರುವ ಟೆನ್ನಸ್ಸರಿಮ್(Tenasserim)ನಿಂದ ಬರ್ಮಾ ಮತ್ತು ಆಸಾಮನಿಂದ ಬೇರ್ಪಟ್ಟಿತ್ತು. ಪಶ್ಚಿಮದ (ಕರಾಕೋರಮ್)* (ಹಿಂದುಕುಷ)* ಪ್ರದೇಶಗಳಿಂದ ಅಫಘಾನಿಸ್ತಾನದಿಂದ ಪ್ರತ್ಯೇಕವಾಗಿತ್ತು. ಈ ರೀತಿ ಒಂದು ಕಡೆ ಅಂದರೆ ನೈರುತ್ಯದಲ್ಲಿ ಗೋಡೆಯಂತಿರುವ ಪರ್ವತಗಳಿಂದ[೧] ಹಾಗೂ.... ಉಳಿದ ಎಲ್ಲಾ ದಿಕ್ಕಿನಲ್ಲಿ ಸಮುದ್ರದ ನೈಸರ್ಗಿಕ ರಕ್ಷಣೆಯನ್ನು (ಹೊಂದಿರುವ)* ಭಾರತ ಅಂದು ತನ್ನಷ್ಟಕ್ಕೆ ತಾನೇ ಒಂದು ಚಿಕ್ಕ ಜಗತ್ತೇ ಆಗಿತ್ತು.

ತಲೆಕೆಳಗಾದ ತ್ರಿಭುಜ ಪ್ರದೇಶ, ಅಂದರೆ, ಭಾರತ ವೈವಿಧ್ಯಮಯವಾದ ಹಾಗೂ ಅತ್ಯಂತ ಸಮೃದ್ಧವಾದ ನೈಸರ್ಗಿಕ ಸಂಪನ್ಮೂಲಗಳಿಂದ ಸಂರಕ್ಷಿತವಾಗಿದೆ. "ಬ್ರಿಟಿಷ್ ಭಾರತದಲ್ಲಿನ ಪ್ರಾಣಿಸಂಕುಲ ಸಮೃದ್ಧವಾಗಿರುವುದಲ್ಲದೆ ಅತ್ಯಂತ ವೈವಿಧ್ಯಮಯವೂ ಆಗಿದೆ. ಉದಾಹರಣೆಗಾಗಿ, ಯೂರೋಪ್ ಖಂಡದ ಭೂಪ್ರದೇಶ ಭಾರತ ಭೂಪ್ರದೇಶಕ್ಕಿಂತ ಸುಮಾರು ಒಂದೂವರೆ ಪಟ್ಟು ಹೆಚ್ಚಿದ್ದರೂ, ಇಡಿ

* ಕಂಸದಲ್ಲಿ ತೋರಿಸಿದ ಭಾಗಗಳನ್ನು ಗೆದ್ದಲು ತಿಂದುಹಾಕಿವೆ. ಶಬ್ದಗಳನ್ನು ಪೂರೈಸಲಾಗಿದೆ. –ಸಂ.

೧. ಥಾಮ್ಸನ್ ಇ. ಡಬ್ಲ್ಯು.: ಹಿಸ್ಟರಿ ಆಫ್ ಇಂಡಿಯಾ, ಪು. ೨.

ಯೂರೋಪ್ ಖಂಡದಲ್ಲಿ ದೊರಕುವ ಜೀವರಾಶಿಗಳಿಗಿಂತ ಭಾರತದಲ್ಲಿ ನೆಲೆಸಿದ ಪ್ರಾಣಿ ಪ್ರಕಾರಗಳು ಹಾಗೂ ಅವುಗಳ ಮೇಲೆ ಅವಲಂಬಿತ ಜೀವಿಗಳ ಸಂಖ್ಯೆ ಅತಿ ದೊಡ್ಡದಾಗಿದೆ."+ ಭಾರತದ ಸಸ್ಯವರ್ಗ ಮತ್ತು ಪ್ರಾಣಿವರ್ಗ ಸಹ ಅಷ್ಟೇ ಶ್ರೀಮಂತ ಹಾಗೂ ವೈವಿಧ್ಯಮಯವಾಗಿದೆ. ಇಲ್ಲಿನ ಹಿತಕರ ಹವಾಮಾನ ಇಂತಹ ವೈವಿಧ್ಯವರ್ಣದ ಪ್ರಾಣಿಗಳ ಅಸ್ತಿತ್ವವನ್ನು ಸಾಧ್ಯವಾಗಿಸಿದೆ. ತರಕಾರಿ ಸಸ್ಯಗಳ ಸಮೃದ್ಧಿಗಂತೂ ಮಿತಿಯೇ ಇಲ್ಲ. ಅನಾದಿ ಕಾಲದಿಂದಲೂ ಇಂತಹ ಎಲ್ಲಾ ಅಂಶಗಳು ಒಟ್ಟಿಗೆ ಸೇರಿ ಇಂದು ಭಾರತಕ್ಕೆ ಈ ಗ್ರಹದ (Planet) ಕೆಲವೇ ಕೆಲವು ಆರ್ಥಿಕ ಸ್ವಾವಲಂಬಿ ದೇಶದ ವಿಶೇಷ ಸವಲತ್ತನ್ನು ದಯಪಾಲಿಸಿವೆ.

ಮೇಲೆ ವಿವರಿಸಿದ ಎಲ್ಲಾ ಸಂಪನ್ಮೂಲಗಳು ಒಂದು ದೇಶದಲ್ಲಿ ಲಭ್ಯವಿರುವಾಗ ಆ ದೇಶದ ಮನುಷ್ಯ ಎಂದೂ ನಿಷ್ಕ್ರಿಯವಾಗಿ ಉಳಿಯಲಾರ. ಏಕೆಂದರೆ, ಎಲ್ಲಾ ಪ್ರೇರಣೆಗಿಂತಲೂ ಆರ್ಥಿಕ ಪ್ರೇರಣೆ ಅಥವಾ ಲಾಭದ ಆಶೆ ಒಂದು ಚೈತನ್ಯದಾಯಕ ಹಾಗೂ ಬಲವಂತವಾಗಿರುತ್ತದೆ. ಅವನು ಪರಿಸರವನ್ನು ತನ್ನ ಸೌಖ್ಯಕ್ಕಾಗಿ ಬಳಸಿಕೊಳ್ಳಲು ತಕ್ಷಣ ಕ್ರಿಯಾಶೀಲನಾಗುತ್ತಾನೆ ಮತ್ತು ಪ್ರಾಚೀನ ಕಾಲದ ಭಾರತದ ನಿವಾಸಿಗಳು ಈ ನಿಯಮಕ್ಕೆ ಒಂದು ಅಪವಾದವೇನಲ್ಲ. ಆಧುನಿಕ ಭಾರತದ ಒಬ್ಬ ಸಾಮಾನ್ಯ ಮನುಷ್ಯ ತನ್ನನ್ನು ಆ ದೇಶದ ಬಲಿಷ್ಠ ಪೂರ್ವಜರ ಪ್ರತಿರೂಪವೆಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ. ಆಧುನಿಕ ಭಾರತೀಯ ಮತ್ತು ಪ್ರಾಚೀನ ಭಾರತೀಯರ ನಡುವೆ ಇರುವ ಹೋಲಿಕೆ ಅಲ್ಲಿಗೆ ಮುಗಿಯುತ್ತದೆ. ಪ್ರಾಚೀನ ಭಾರತವು, ಇತರರೆಲ್ಲರೂ ಒಪ್ಪುವಂತಹ ನಾಯಕನ ಸ್ಥಾನದಲ್ಲಿ, ಅಂದು ತನಗಿತ್ತ ಸಮಯದಲ್ಲಿ, ಆದಿಕಾಲದ ಮಾನವರಿಂದ ನಿರೀಕ್ಷಿಸಬಹುದಾದ ಮಟ್ಟಕ್ಕಿಂತಲೂ ಹೆಚ್ಚಿನ ಸಾಧನೆಯನ್ನು ಮಾಡಿ ತೋರಿಸಿತು. ಆದರೆ ನಮ್ಮ ಹತ್ತಿರ ಇದರ ಬಗೆಗಿನ ದಾಖಲೆಗಳಿಲ್ಲ, ಮತ್ತು ಇದ್ದ ಕೆಲವು ದಾಖಲೆಗಳು ಹಾಗೂ ಕೆಳಗಿನ ನಿರೂಪಣೆ, ಪ್ರಾಚೀನ ಭಾರತದ ಸಾಧನೆಯನ್ನು ವಿವರವಾಗಿ ಸಾರುತ್ತದೆ.

ಪ್ರಾಚೀನ ಭಾರತದ ಬಹುಮುಖ ಸಾಧನೆಗಳನ್ನು, ಅವುಗಳು ಮಹತ್ವದ್ದಾಗಿದ್ದರೂ, ನಾವು ಗಮನಿಸಬೇಕಾಗಿಲ್ಲ. ನಾವು ನಮ್ಮ ಗಮನವನ್ನು ಅದರ ಆರ್ಥಿಕ ಚಟುವಟಿಕೆಗಳ ಮೇಲೆ ಮಾತ್ರ ಕೇಂದ್ರೀಕರಿಸಬೇಕು.

ಮೊದಲಿಗೆ ಸಮೀಕ್ಷೆಯಲ್ಲಿ ನಮಗೆ ನೆರವಾಗುವ ಮೂಲಕ ವಿಷಯಗಳ ಕುರಿತು ಗಮನಿಸುವುದು ಹೆಚ್ಚು ಒಳ್ಳೆಯದು. ಸಹಜತೆಯ ದೃಷ್ಟಿಯಿಂದ ಆತಂಕಪಡುವಷ್ಟು ಅಭಾವವಿದೆ. ಹಿಂದೂಗಳು ತಮ್ಮ ಬದುಕಿನ ಆರ್ಥಿಕ ಚಟುವಟಿಕೆಗಳ ಹೊರತು ಉಳಿದೆಲ್ಲದರಲ್ಲಿ ವಾಚಾಳಿಗಳಾಗಿದ್ದಾರೆ ಮತ್ತು ಇದಕ್ಕೆ ಕಾರಣವು ದೃಷ್ಟಿಗೆ ದೂರವಿಲ್ಲ. ಅದಕ್ಕೆ ಕಾರಣವನ್ನು ಹುಡುಕುವ ಅವಶ್ಯಕತೆ ಇಲ್ಲ. ಅಂದು ಶಿಕ್ಷಣ ಒಂದು ವರ್ಗದ ಜನರಿಗೆ ಮಾತ್ರ ಮೀಸಲಾಗಿತ್ತು. ಅಂತಹ ಜನ ಸಮಾಜಕ್ಕೆ ತಮ್ಮ ಯಾವುದೇ ಕೊಡುಗೆಯನ್ನು ಸಲ್ಲಿಸದೇ ಇದ್ದರು. ಅವರು "ಸವಿಜೇನನ್ನು ಗಬಗಬನೆ ನುಂಗುವ ಜೇನುಗೂಡಿನಲ್ಲಿನ ಗಂಡು ಜೇನುಹುಳುಗಳ ಹಾಗೆ ಇದ್ದರು." ಈ ಜನ, ಅಂದರೆ, ಬ್ರಾಹ್ಮಣರು ಅಥವಾ ಭಾರತದ ಬುದ್ಧಿವಂತ ಜಾತಿಯ ಜನ ಕಣ್ಣು ಕೋರೈಸುವಂತಹ ಸುಖ, ಸಂತೋಷವನ್ನು ಮತ್ತು ಕಣ್ಣಿಗೆ ಕುಕ್ಕುವ ಉಪಭೋಗವನ್ನು ಪ್ರಾತಿನಿಧಿಕವಾಗಿ ಅನುಭವಿಸುತ್ತಿದ್ದರು. ತತ್ಪರಿಣಾಮವಾಗಿ, ಜನಸಾಮಾನ್ಯ ಪ್ರಾಚೀನ ಹಿಂದುಗಳ ಬಗ್ಗೆ ಅಂದು ಬುದ್ಧಿವಂತ ಜಾತಿಯವರು ಬರೆದ ಪವಿತ್ರ ಸಾಹಿತ್ಯದಲ್ಲಿ ಯಾವ ರೀತಿಯ ವಿವರಣೆ ಇರಲಾರದೆ ಹೋಯಿತು. ಭಾರತವು, ಹಿಂದೆ, ಅರ್ಥವಿಜ್ಞಾನವನ್ನು ಕುರಿತ ಸಾಹಿತ್ಯವನ್ನು ಏಕೆ ರಚಿಸಲಿಲ್ಲವೆಂಬುದಕ್ಕೆ ಇದೊಂದು

---

\+ ಇಂಪೀರಿಯಲ್ ಗೆಝೆಟಿಯರ್ ಆಫ್ ಇಂಡಿಯಾ –ಸಂ. ೧, ಪು. ೨೧೫.

ವಿವರಣೆಯಾಗಿದೆ. ಆದುದರಿಂದ ಭಾರತದ ಅಂದಿನ ವಾಣಿಜ್ಯ ವ್ಯವಹಾರದ ಬಗೆಗೆ ತಿಳಿದುಕೊಳ್ಳುವಲ್ಲಿ ವಿದೇಶಿ ವಿದ್ವಾಂಸರು ಪುಸ್ತಕಗಳಲ್ಲಿನ ಅತಿ ಕಡಿಮೆ ವಿವರಣೆಯ ಮೇಲೆಯೇ ಬಲವಂತವಾಗಿ ಅವಲಂಬಿಸಬೇಕಾಗಿದೆ.

ಭಾರತದ ವಾಣಿಜ್ಯ ವಿಷಯವನ್ನು ಕುರಿತು ಕೂಲಂಕಶವಾಗಿ ವಿವೇಚಿಸುವ ಮುನ್ನ, ನಾವು ಪ್ರಾಚೀನ ಭಾರತದ ಆರ್ಥಿಕ ಅಭಿವೃದ್ಧಿಯನ್ನು ಕುರಿತು ಒಂದು ಕ್ಲಿಷ್ಟ ಸಮೀಕ್ಷೆಯನ್ನು ಕೈಕೊಂಡರೆ ಉತ್ತಮ. ಈ ವಿಷಯ ಕುರಿತಂತೆ ಬುದ್ಧಪೂರ್ವ (Pre-Buddha) ಯುಗಕ್ಕೆ ನಮ್ಮನ್ನು ಕೊಂಡೊಯ್ಯುವ ಪ್ರಮಾಣ ಗ್ರಂಥಗಳಾವುವೂ ಇಲ್ಲ. ಹೀಗಾಗಿ, ಬುದ್ಧನ ಜನನ ಕಥೆಗಳನ್ನು ನಿರೂಪಿಸುವ ಬುದ್ಧ ಜಾತಕಗಳೇ ಅಂದಿನ ಭಾರತದ ಆರ್ಥಿಕಾಭಿವೃದ್ಧಿ ಕುರಿತು ಏನನ್ನಾದರೂ ಹೇಳುವ ಮತ್ತು ಲಭ್ಯವಿರುವ ಮೊಟ್ಟ ಮೊದಲಿನ ಆಕರ–ಗ್ರಂಥಗಳಾಗಿವೆ. ಇವುಗಳು ತಮ್ಮ ಎಷ್ಟೋ ವರ್ಷಗಳ ಹಿಂದಿನ ಭಾರತೀಯ ಸಮಾಜದ ಆರ್ಥಿಕ ಸಂಘಟನೆ ಹೇಗಿತ್ತು ಎಂಬುದರ ಬಗೆಗೆ ಸಹ ಸಾಹಿತ್ಯ ಸಾಮಗ್ರಿಯನ್ನು ಒಳಗೊಂಡಿರುತ್ತವೆ.

## I. ಕೃಷಿ ಸಂಘಟನೆ (Agricultural Organisation)

ಆರಂಭದಲ್ಲೇ ನಾವು ಪುರಾತನ ಹಿಂದುಗಳು ಗ್ರಾಮೀಣ ಜೀವನವನ್ನು ಬದುಕಿದ್ದನ್ನು ಕಾಣುತ್ತೇವೆ. ಪ್ರತ್ಯೇಕ ಮನೆಗಳು ಇರಲಿಲ್ಲ ಮತ್ತು ಅವೆಲ್ಲ ಒಟ್ಟಾಗಿದ್ದವು. ಕೃಷಿಯು ಅತ್ಯುನ್ನತ ವೃತ್ತಿಯಾಗಿ ಪ್ರಸಿದ್ಧವಾಗಿತ್ತು ಮತ್ತು ಇಂಡಿಯಾದ ನಾಣ್ಣುಡಿಯ ಮೇರೆಗೆ ವ್ಯಾಪಾರಿಗಳು ರೈತನ ನಂತರ ದ್ವಿತೀಯ ಸ್ಥಾನದಲ್ಲಿಯೂ ಸೈನಿಕರು ಸಾಮಾಜಿಕ ಅಂತಸ್ತಿನಲ್ಲಿ ಕೊನೆಯ ಸ್ಥಾನದಲ್ಲಿಯೂ ಇದ್ದರು.

ಭೂಮಿಯನ್ನು ರೈತ ಮತ್ತು ಆತನ ಕುಟುಂಬಸ್ಥರು ಮತ್ತು ಕೆಲವು ಬಾರಿ ಸಂಬಳದ ಕಾರ್ಮಿಕರಿಂದ ಕೃಷಿ ಮಾಡುತ್ತಿದ್ದರು. "ಪಾರಂಪರಿಕ ಭಾವನೆಯು ಭೂ ಮಾರಾಟಕ್ಕೆ ವಿರುದ್ಧವಾಗಿತ್ತು." ಆದರೂ ಭೂಮಿಯನ್ನು ಕೃಷಿ ಗೇಣಿಗೆ ನೀಡಿದ್ದನ್ನು ನಾವು ಕಾಣುತ್ತೇವೆ. ಸ್ವತಂತ್ರ ಭೂಮಾಲಿಕನು ಗೌರವಕ್ಕೆ ಪಾತ್ರನಾಗಿದ್ದನು. ಆದರೆ ಬಂಡವಾಳ ಶಾಹಿಯ ತೋಟದಲ್ಲಿನ ಕೆಲಸಕ್ಕೆ ಭಾರಿ ಅನಾದರಣೆಯಿತ್ತು. ಗ್ರಾಮೀಣ ಸಮುದಾಯದಲ್ಲಿ ಊಳಿಗಮಾನ್ಯ ಪದ್ಧತಿ ಅಸ್ತಿತ್ವದಲ್ಲಿತ್ತೊ ಇಲ್ಲವೊ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಯಾವ ಪುರಾವೆಗಳಿಲ್ಲ.

ರಸ್ತೆ ಹಾಗೂ ಕೆರೆ ಮತ್ತು ಪುರಸಭಾ ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿಯಲ್ಲಿ ಗ್ರಾಮಸ್ಥರಲ್ಲಿ ಭಾರೀ ಸಹಕಾರವಿತ್ತು:

"ಸರಕಾರವು ಕಚ್ಚಾ ಉತ್ಪನ್ನಗಳ ಮೇಲೆ ವಾರ್ಷಿಕ ಕರವನ್ನು ಕೇಳಿತ್ತು. ಇದನ್ನು ವಿಧಿಸಲಾಗಿತ್ತು ಮತ್ತು, ವಸ್ತು ರೂಪದಲ್ಲಿ ೧/೬, ೧/೮, ೧/೧೦ ಅಥವಾ ೧/೧೨ರಷ್ಟಿತ್ತು." "ಧಾನ್ಯ, ಬೇಳೆ ಮತ್ತು ಕಬ್ಬು ಮುಖ್ಯ ಉತ್ಪನ್ನಗಳಾಗಿದ್ದವು: ತರಕಾರಿಗಳಲ್ಲದೆ ಪ್ರಾಯಶಃ ಹಣ್ಣು ಮತ್ತು ಹೂಗಳನ್ನೂ ಬೆಳೆಯಲಾಗುತ್ತಿತ್ತು. ಅಕ್ಕಿ ಆಹಾರದ ಮುಖ್ಯ ವಸ್ತುವೆಂದು ತಿಳಿಯಲಾಗಿತ್ತು."

ಕೃಷಿಯು ಸಾಮಾನ್ಯ ವೃತ್ತಿಯಾಗಿತ್ತು. ಏಕೆಂದರೆ ಬ್ರಾಹ್ಮಣನೂ ತನ್ನ ಜಾತಿಯನ್ನು ತ್ಯಜಿಸದೆ ಮೇಕೆ ಕಾಯುವವನಾಗಿ ಮತ್ತು ಚಿಕ್ಕ ಹಾಗೂ ದೊಡ್ಡ ಭೂಮಾಲಿಕನಾಗಿ ಕಾಣಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಕೃಷಿಯ ಕುರಿತು ಪ್ರಾಚೀನ ಮತ್ತು ಆ ವಿಚಾರದಲ್ಲಿ ಆಧುನಿಕ ಹಿಂದೂವಿಗೂ ಇದ್ದ ಮೋಹವು ಪುರಾತನ ಗ್ರೀಕರಿಗಿದ್ದುದ್ದಕ್ಕಿಂತಲೂ ಹೆಚ್ಚಾಗಿತ್ತು ಮತ್ತು ಅದು ಗೋಪೂಜೆಯಲ್ಲಿ ಅಭಿವ್ಯಕ್ತವಾಗಿತ್ತು.

ಆಕಳ ಬಗ್ಗೆ ಹಿಂದೂಗಳಿಗಿರುವ ಭಕ್ತಿ ಬಹುತೇಕ ವಿದೇಶಿಯರಿಗೆ ಒಂದು ಒಗಟಾಗಿದೆ. ಇದಲ್ಲದೆ, ಹಿಂದೂಗಳಿಗೆ ವಂಚಿಸುವ ಸಲುವಾಗಿ ಭಾರತಕ್ಕೆ ಬಂದು ಧಾರ್ಮಿಕ ಪ್ರಚಾರ ಕೈಗೊಳ್ಳುವ

ವಿದೇಶಿ ಅರೆಬೆಂದ ಮತಶಾಸ್ತ್ರಗಳ ವೈಫಲ್ಯತೆಯಲ್ಲಿ ಗೋ ಭಕ್ತಿ ಒಂದು ಪ್ರಭಾವಪೂರ್ಣ ತಾತ್ವಿಕ ನೆಲೆಗಟ್ಟಾಗಿದೆ.

ಭಾರತದಲ್ಲಿ ಗೋಪೂಜೆಯ ಮೂಲ ರೋಮ್‌ನಲ್ಲಿನ ಕತ್ತರಿಸಿದ ದ್ರಾಕ್ಷಿ ಬಳ್ಳಿಗಳಿಂದ ತಯಾರಿಸಿದ ಮದ್ಯವನ್ನು ದೇವತೆಗಳಿಗೆ ನೈವೇದ್ಯವಾಗಿ ಅರ್ಪಿಸದೇ ಇರುವ ಪದ್ಧತಿಯಷ್ಟೇ ಆರ್ಥಿಕ ನೆಲೆಗಟ್ಟನ್ನು ಹೊಂದಿದೆ. ಆಕಳು ಮತ್ತು ಎಲ್ಲಾ ಜಾನುವಾರುಗಳು ರೈತನ ಆತ್ಮವಾಗಿರುತ್ತವೆ. ಭೂ ಸಾಗುವಳಿಗೆ ಅತ್ಯವಶ್ಯಕವಾಗಿ ಬೇಕಾದ ಎತ್ತುಗಳಿಗೆ ಜನ್ಮ ನೀಡುವುದು ಆಕಳು. ನಾವು ಮಾಂಸಕ್ಕಾಗಿ ಆಕಳನ್ನು ಕೊಂದರೆ ನಾವು ನಮ್ಮ ಕೃಷಿಯ ಅಭ್ಯುದಯವನ್ನು ಗಂಡಾಂತರಕ್ಕೆ ಸಿಲುಕಿಸಿದಂತಾಗುತ್ತದೆ. ಆದುದರಿಂದಲೇ ಪ್ರಾಚೀನ ಹಿಂದುಗಳು ಸಂಪೂರ್ಣ ದೂರದೃಷ್ಟಿಯನ್ನು ಇಟ್ಟುಕೊಂಡು ಆಕಳನ್ನು ಪವಿತ್ರವೆಂದು ತಿಳಿದು ಅದರ ಮಾಂಸ ಭಕ್ಷಣೆಯನ್ನು ನಿಷೇಧಿಸಿದರು ಮತ್ತು ಅದರಿಂದ ಗೋಹತ್ಯೆಯನ್ನು ಪ್ರತಿಬಂಧಿಸಿದರು. ಆದರೆ ಮಾನವ ಇಂತಹ ಶುಷ್ಕ ಕಾಯಿದೆಗಳ ಕಡೆ ಎಂದೂ ಗಮನ ಹರಿಸಲಾರ, ಆತನಿಗೆ ಧಾರ್ಮಿಕ ಕಾಯಿದೆ ಕಟ್ಟಳೆಗಳೇ ಬೇಕು. ಆದುದರಿಂದಲೇ ಪ್ರಾಚೀನ ಹಿಂದೂ ಧಾರ್ಮಿಕ ಸಾಹಿತ್ಯದಲ್ಲಿ ಗೋವಿನ ಸುತ್ತ ಅನೇಕ ವಿಕಟ ಪುರಾಣಗಳು ಹೆಣೆದುಕೊಂಡಿದ್ದನ್ನು ನಾವು ನೋಡುತ್ತೇವೆ.

**II. ಕಾರ್ಮಿಕ, ಕೈಗಾರಿಕೆ ಮತ್ತು ವಾಣಿಜ್ಯ ಸಂಘಟನೆ:**

ಹಿಂದೂಗಳಲ್ಲಿ ಗುಲಾಮಗಿರಿಯ ಅವರ ಆರ್ಥಿಕ ಬದುಕಿನಲ್ಲಿ ಬಹುಗೌಣಪಾತ್ರವನ್ನು ವಹಿಸಿತ್ತೆಂಬುದು ಅವರ ಯೋಗ್ಯತೆಯನ್ನು ಸಾರುತ್ತದೆ. ಸೆರೆ ಸಿಕ್ಕುವುದು, ನ್ಯಾಯದಂಡನೆ, ಸ್ವಯಂಹೀನತೆ ಮತ್ತು ಸಾಲ ಇವು ವ್ಯಕ್ತಿಗಳು ಗುಲಾಮರಾಗುವುದಕ್ಕೆ ನಾಲ್ಕು ಮುಖ್ಯ ಕಾರಣಗಳು. ಆದರೆ ಗುಲಾಮರನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿತ್ತು ಎಂಬುದಕ್ಕೆ ಮತ್ತು ಅವರ ವಿಮೋಚನೆಗೊಳಿಸುವ ಎಲ್ಲಾ ಸಾಧ್ಯತೆಗಳಿದ್ದವು ಎಂಬುದಕ್ಕೆ ಸಾಕಷ್ಟು ಸಾಕ್ಷಿ ಆಧಾರಗಳಿರುತ್ತವೆ. ಕೆಲವು ಗುಲಾಮರಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ಸ್ವತಂತ್ರ ಕಾರ್ಮಿಕರಿದ್ದರು. ಅವರಿಗೆ ಹಣ ಅಥವಾ ಆಹಾರವನ್ನು ಕೊಟ್ಟು ದುಡಿಸಿಕೊಳ್ಳಲಾಗುತ್ತಿತ್ತು.

ಉದ್ದಿಮೆ ವರ್ಗಗಳಿಗೆ ಸಂಬಂಧಿಸಿದಂತೆ ಕೆಳಗಿನ ಮಾಹಿತಿಯನ್ನು ನೀಡಲಾಗಿದೆ:–

(ಅ) ವಧ್ಧಕಿ(Vaddhaki)ಯು ಮೊದಲನೆಯ ವರ್ಗವಾಗಿತ್ತು. ಈ ಪದ ಬಡಿಗ, ಹಡಗು ಕಟ್ಟುವವ, ಚಕ್ಕಡಿ ತಯಾರಿಸುವವ ಹಾಗೂ ವಾಸ್ತುಶಿಲ್ಪಿಗಳನ್ನು ಒಳಗೊಂಡಿತ್ತು.

(ಬ) ಕಮ್ಮಾರ (Kammara), ಈ ಪದ "ಕಬ್ಬಿಣದ ಸಾಧನ ಸಲಕರಣೆಯನ್ನು ಉತ್ಪಾದಿಸುವ ಲೋಹ ಕುಶಲಕರ್ಮಿಗೆ ಆತನ ಜಾತಿಯ ಸೂಚಕವಾಗಿ ಬಂದಿರುತ್ತದೆ. ಇವರು ನೇಗಿಲು ಬಿಡಿ ಭಾಗ, ಅಚ್ಚು ಕಬ್ಬಿಣದ ಮನೆಗಳಿಂದ ಹಿಡಿದು ಸಣ್ಣ ರೇಜರದ ವರೆಗಿನ ವಸ್ತುಗಳನ್ನು ಅಥವಾ ನೀರಿನಲ್ಲಿ ತೇಲುವ ಸೂಕ್ಷ್ಮ, ಅತಿ ಸೂಕ್ಷ್ಮ ಸೂಜಿಗಳನ್ನು ಅಥವಾ ಬೆಳ್ಳಿ ಬಂಗಾರದಿಂದ ತಯಾರಿಸುವ ಮೂರ್ತಿಗಳನ್ನು ತಯಾರಿಸುವವರು."

(ಕ) ಕೊನೆಯದಾಗಿ 'ಪಸನಕೊಟ್ಟಕ' (Pasanakottaka) ಎಂಬ ಪದ ಜಾತಿ ಸೂಚಕವಾಗಿ ಕಲ್ಲುಕುಟಕನಿಗೆ ಬಂದಿರುತ್ತದೆ. "ಇವರು ಭೂಮಿಯ ಒಳಗಿಂದ ಬಂಡೆಗಲ್ಲನ್ನು ತೆಗೆಯುವುದಲ್ಲದೆ ಸ್ಫಟಿಕದ ಹರಳುಗಳಲ್ಲಿ ರಂಧ್ರವನ್ನು ಕೊರೆಯುವ ಸಾಮರ್ಥ್ಯವನ್ನು ಹೊಂದಿದ್ದರು."

"ಎಲ್ಲಾ ವಾಣಿಜ್ಯೋದ್ದಿಮೆಗಳು ಹೆಚ್ಚು ಕಡಿಮೆ ಪೂರ್ತಿ ಸಂಘಟಿತವಾಗಿದ್ದವು. ಕೆಲವು ವ್ಯಾಪಾರಗಳು ಕೆಲವು ವಿಶೇಷ ಹಳ್ಳಿಗಳಲ್ಲಿ ಇಲ್ಲವೇ ಉಪನಗರಗಳಲ್ಲಿ ಮತ್ತು ದೊಡ್ಡ ನಗರಗಳ ಪೂರಕ ಬಡಾವಣೆಗಳಲ್ಲಿ ಕೇಂದ್ರೀಕೃತವಾಗಿದ್ದವು ಅಥವಾ ಇವುಗಳೇ ಸುತ್ತಮುತ್ತಲಿನ ಊರುಗಳಿಗೆ ಸಂಪರ್ಕವನ್ನು ಒದಗಿಸುತ್ತಿದ್ದವು. ಉದಾಹರಣೆಗೆ, ಕಟ್ಟಿಗೆ ಕೆಲಸ, ಲೋಹದ ಕೆಲಸ ಉದ್ದಿಮೆಗಳು ಹಾಗೂ ಪಾತ್ರೆ ತಯಾರಿಕೆಗಳೆಲ್ಲ ಅಲ್ಲಿಯೇ ಇರುತ್ತಿದ್ದವು... ನಗರಗಳ ಕೆಲವು ವಿಶೇಷ ಓಣಿಗಳಲ್ಲಿ ಹಸ್ತಿದಂತದ ಕೆತ್ತನೆಯ ಕೆಲಸಗಾರರು ಹಾಗೂ ಬಣ್ಣಗಾರರು ಸ್ಥಳೀಕರಣವಾಗಿದ್ದರು."

ವ್ಯಾಪಾರಗಳು ನಿಯಂತ್ರಣಕ್ಕೆ ಒಳಪಟ್ಟಿದ್ದವು. ಅಲ್ಲದೇ ಅದೇ ನಗರದ ಕೈಗಾರಿಕಾ ಸಂಘಟನೆಗಳು ಅಥವಾ ಪುರಸಭೆಗಳ ಮುಖ್ಯಸ್ಥರಾದ ಒಬ್ಬರು ಅಥವಾ ಇಬ್ಬರ ಅಧೀಕ್ಷಣೆಯಲ್ಲಿ ಈ ವ್ಯಾಪಾರ ನಡೆಯುತ್ತಿತ್ತು.

ಹಲವಾರು ವ್ಯಾಪಾರಿ ಸಂಘಗಳು (ಸೆನಿಯೋ – Seniyo) ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಅಧ್ಯಕ್ಷ (ಪ್ರಮುಖ – President) ಅಥವಾ ಹಿರಿಯ ಅಥವಾ ವೃದ್ಧ ವ್ಯಕ್ತಿಯ (ಜೇಥಕ) ಆಜ್ಞೆಯನ್ನು ಎಲ್ಲರೂ ಪಾಲಿಸುತ್ತಿದ್ದರು. ಬಡಿಗರು, ಕಮ್ಮಾರರು, ಚಮ್ಮಾರರು, ಚಿತ್ರ ಕಲಾವಿದರು ಮತ್ತು ಅನೇಕ ಕಲಾಕಾರರು ತಮ್ಮ ತಮ್ಮ ಸಂಘಗಳನ್ನು ರಚಿಸಿಕೊಂಡಿದ್ದರು. ಇದಲ್ಲದೆ ನಾವಿಕರು ಹೂಮಾಲೆ ತಯಾರಿಸುವವರು ಒಂಟೆಯ ವ್ಯಾಪಾರಿಗಳು ಸಹ ಇಂಥ ಸಂಘಗಳನ್ನು ಹೊಂದಿದ್ದರು.

ಜನರು ಆನುವಂಶಿಕ ವೃತ್ತಿಯ ಕಡೆಗೇ ಹೆಚ್ಚಿನ ಒಲವನ್ನು ತೋರಿಸುತ್ತಿದ್ದರು. ಆದರೆ, ಅಷ್ಟೊಂದು ಭಯಂಕರವಾದ ಕಟ್ಟುನಿಟ್ಟಿನ ಜಾತಿಪದ್ಧತಿಯು ಅಸ್ತಿತ್ವದಲ್ಲಿರಲಿಲ್ಲ ಮತ್ತು ಬ್ರಾಹ್ಮಣರು ಸಹ ಕೆಲವೊಂದು ಕೆಳಮಟ್ಟದ ವೃತ್ತಿಗಳಲ್ಲಿದ್ದರು.

ನದಿಮಾರ್ಗ ಪ್ರಯಾಣವು ಚಾಲ್ತಿಯಲ್ಲಿರಲಿಲ್ಲ. ಅದು ಹೆಚ್ಚಾಗಿ ಸಾರ್ಥದ ಮೂಲಕವಾಗಿತ್ತು. ಕೈಗಾರಿಕಾ ಕೇಂದ್ರಗಳು ಒಳ್ಳೆಯ ರಸ್ತೆಗಳಿಂದ ಜೋಡಣೆಯಾಗಿದ್ದವು ಮತ್ತು ಅದರಿಂದಾಗಿ ಪ್ರಯಾಣಕ್ಕೆ ತುಂಬಾ ಅನುಕೂಲವಾಗಿತ್ತು. ರಾಮಾಯಣವು ಇಂದಿನ ಔಧ್‌ನಿಂದ ಅಂದರೆ ರಾಜಾ ದಶರಥನ ರಾಜಧಾನಿ ಯಾಗಿದ್ದ ಅಯೋಧ್ಯೆಯಿಂದ ಹಿಮಾಲಯ ಪರ್ವತಗಳ ಸಮೀಪ ಬಿಯಾಸ್ ನದಿಯ ಬಳಿಯಿದ್ದ ರಾಜಗೃಹಕ್ಕೆ ಹೋಗುವ, ಗ್ರೀಕರಿಗೆ ಹೈಪಾಸಿಸ್ (Hyposis) ಎಂದು ಪರಿಚಿತವಾಗಿ ಕೇಕಯರ ರಾಜಧಾನಿ ಯಾಗಿದ್ದ ಪುರಾತನ ವಿಪಾಶಾ(Vipasa)ದಿಂದ ಕುರುರಾಜರ ರಾಜಧಾನಿ ಹಸ್ತಿನಾಪುರ(ದೆಹಲಿ)ಕ್ಕೆ ಹೋಗುವ ರಸ್ತೆಯನ್ನು ಉಲ್ಲೇಖಿಸುತ್ತದೆ. ಭಾರತೀಯ ರಸ್ತೆಗಳನ್ನು ಅಳೆದು ಸಮೀಕ್ಷೆ ಮಾಡಲು ನೇಮಕವಾದ ಸಮೀಕ್ಷಕರಿಗೆ ಪ್ರಾಚೀನ ಭಾರತದ ರಸ್ತೆಗಳ ಬಗೆಗೆ ಅಲೆಗ್ಸಾಂಡರನು ಒದಗಿಸಿದ ಮಾಹಿತಿ ಅತ್ಯಂತ ಸ್ಪಷ್ಟ ಹಾಗೂ ಅತಿ ಮುಖ್ಯವಾದ ಮೂಲವಾಗಿರುತ್ತದೆ. ಈ ಮೂಲದಿಂದಲೇ ಆಧುನಿಕ ಆಟ್ಟಾಕ್ (Attock) ಸಮೀಪವಿರುವ ಸ್ಥಳದಿಂದ ಒಂದು ಉತ್ತಮ ರಸ್ತೆಯು ಪಂಕೆಲಾವೊಟಿಸ್ (Ponkelaoties) (ಹಿಂದಿನ ಪುಷ್ಕಲಾವತಿ) (Old Pushkalavati)ನಿಂದ ತಕ್ಷಶಿಲಾದಿಂದ ಪಾಟಲಿಪುರ(ಪಾಟ್ನ)ದವರೆಗೆ ಅಸ್ತಿತ್ವದಲ್ಲಿತ್ತೆಂದು ಗುರುತಿಸಬಹುದು. ಇನ್ನೊಂದು ರಸ್ತೆಯು ಪುಷ್ಕಲಾವತಿ ಮತ್ತು ಇಂದ್ರಪ್ರಸ್ಥ(ದೆಹಲಿ)ಗಳನ್ನು ಬೆಸೆಯುತ್ತಿತ್ತು. ಇದು ಉಜ್ಜಯನಿಯನ್ನು ಸಂಪರ್ಕಿಸಿದ ನಂತರ ವಿಂಧ್ಯಾ ಪರ್ವತಾವಳಿಯಿಂದ ಕೆಳಗಿಳಿದು ಪ್ರತಿಸ್ಥಾನದ ಮೂಲಕ ನರ್ಮದಾ, ತಪತಿ ನದಿಗಳನ್ನು ದಾಟಿ ಕೊನೆಗೆ ಡೆಕನ್‌ವರೆಗೆ ಚಾಚಿತ್ತು. ಒಳನಾಡಿನ ವ್ಯಾಪಾರಕ್ಕಾಗಿ ಸಹ ಹೆದ್ದಾರಿಗಳು ಇದ್ದವು ಮತ್ತು ಒಂಟೆಯ ವ್ಯಾಪಾರಿಗಳು ಚುರುಕಾಗಿ ಕೆಲಸ ಮಾಡುತ್ತಿದ್ದರು. ಪ್ರಾಚೀನ

ಭಾರತದಲ್ಲಿ ಆಂತರಿಕ ಮತ್ತು ಬಾಹ್ಯ ವಾಣಿಜ್ಯ ಎಷ್ಟೊಂದು ಮಹತ್ವವಾಗಿತ್ತೆಂಬುದನ್ನು ಬುದ್ಧ ಜಾತಕದಲ್ಲಿನ ಒಂಟೆಯ ವ್ಯಾಪಾರಿ ಸಂಘಟನೆಯ ಪ್ರಸ್ತಾಪದಿಂದ ನಾವು ತಿಳಿದುಕೊಳ್ಳಬಹುದು. ಒಂಟೆ ವ್ಯಾಪಾರಿಗಳ ಮುಂದಾಳು ಅಥವಾ ಪಾಲಿಯಲ್ಲಿನ ಸತ್ರಾವಹಾ ಪ್ರವಾಹದಲ್ಲಿ ಒಂಟೆ ವ್ಯಾಪಾರಿಗಳಿಗೆ ಮುಖ್ಯಸ್ಥನಾಗಿರುತ್ತಾನೆ ಮತ್ತು ಆತ ಪ್ರಯಾಣದ ಮಾರ್ಗದಲ್ಲಿ "ದಾರಿಯಲ್ಲಿ ಅಲ್ಲಲ್ಲಿ ತಂಗಲು ಯೋಗ್ಯವಾದ ಸ್ಥಳ, ಒಂಟೆ ನೀರು ಕುಡಿಯುವ ಸ್ಥಳ, ದರೋಡೆಕಾರರಿಂದ ಮುನ್ನೆಚ್ಚರಿಕೆ" ಎಲ್ಲದರ ಬಗ್ಗೆ ನಿರ್ದೇಶನ ನೀಡುತ್ತಿದ್ದ. ಸಾಮಾನ್ಯವಾಗಿ, ಒಂಟೆ ಸವಾರಿಗಳು ರಾತ್ರಿ ಪ್ರಯಾಣ ಮಾಡುತ್ತಿದ್ದರು.

ಪ್ರಾಚೀನ ಇಂಡಿಯಾದಲ್ಲಿ ವ್ಯಾಪಾರವು ಪೂರ್ಣವಾಗಿ ವ್ಯಕ್ತಿಗತವಾಗಿರಲಿಲ್ಲ. ಸಾಮಾನ್ಯವಾಗಿ ಅಲ್ಲದಿದ್ದರೂ ಹೆಚ್ಚಾಗಿ ವ್ಯಾಪಾರದಲ್ಲಿ ಸಾಂಸ್ಥಿಕ ಹಣಕಾಸಿನ ಚಟುವಟಿಕೆ ಮತ್ತು ಪಾಲುಗಾರಿಕೆಯಿತ್ತೆಂದು ತೋರಿಸುವ ಸಾಕಷ್ಟು ಪುರಾವೆಗಳಿವೆ. ವ್ಯಾಪಾರದ ಮೇಲೆ ತೀರಾ ಕಡಿಮೆ ಸರಕಾರಿ ನಿಯಂತ್ರಣವಿತ್ತು, ಮತ್ತು ಅದೂ ಆಳರಸರ ಖರೀದಿಗಷ್ಟೇ ಸೀಮಿತವಾಗಿತ್ತು. ಆಳರಸರ ಖರೀದಿ ವಸ್ತುಗಳ ಬೆಲೆಯನ್ನು ರಾಜಮೌಲ್ಯಗಾರನು ನಿಶ್ಚಯಿಸುತ್ತಿದ್ದನು ಮತ್ತು ಆತನು "ಇಪ್ಪತ್ತರಲ್ಲೊಂದಂಶ ಸುಂಕವನ್ನು ವ್ಯಾಪಾರಿಗಳಿಗೆ ಪ್ರಾಯಃ ದಾಮಾಶಯವಾಗಿ ಮತ್ತು ವಿದೇಶದಿಂದ ಆಮದಾದ ಪ್ರತಿ ಸರಕಿಗೂ ಹತ್ತರಲ್ಲೊಂದಂಶ ಮತ್ತು ಮಾದರಿಯನ್ನು ವಿಧಿಸುತ್ತಿದ್ದನು. ಅಂತಿಮವಾಗಿ ಆತನು 'ರಾಜಕ್ಷಯ' ಅಂದರೆ ಮಾಸಿಕ ಒಂದು ಸರಕನ್ನು ಅರಸನಿಗೆ ನಿಗದಿತ ವಿನಾಯಿತಿಯಲ್ಲಿ ನಿರ್ದಿಷ್ಟ ವಿನಿಮಯದಲ್ಲಿ ಮಾರುವ ದರವನ್ನು ನಿರ್ಧರಿಸಬೇಕಿತ್ತು.

ಆದರೆ ಮುಂದೆ ದರವನ್ನು ನಿಗದಿಪಡಿಸಲಾಯಿತು. ಏಕೆಂದರೆ ಮನುವು ರಾಜನು ಪ್ರತಿ ೫ನೇ ಅಥವಾ ೯ನೇ ದಿನ ವಿಕ್ರಯದ ವಸ್ತುಗಳ ಖರೀದಿಯ ಮತ್ತು ಮಾರುವ ದರಗಳನ್ನು ನಿರ್ಧರಿಸುತ್ತಿದ್ದನು.

ಇಂಡಿಯಾದಲ್ಲಿ ಹಣಕಾಸಿನ ಪ್ರವೇಶವು ವಿದೇಶದಿಂದ ಆಮದಾಯಿತೇ ಅಥವಾ ಇಲ್ಲೇ ಸಂಶೋಧಿಸಲ್ಪಟ್ಟಿತೇ ಎಂಬುದು ದೊಡ್ಡ ವಿವಾದದ ವಿಷಯವಾಗಿದೆ. ಆದರೆ ಈ ಬಗ್ಗೆ ಏನೇ ಹೇಳಿದರೂ ಇಂಡಿಯಾದಲ್ಲಿ ಹಣದ ಬಳಕೆಯು ಮೊದಲಿನಿಂದಲೇ ತಿಳಿದಿತ್ತೆಂಬುದು ಸತ್ಯವಾಗಿದೆ. ಏಕೆಂದರೆ "ಬೌದ್ಧ ಸಾಹಿತ್ಯವಿಡೀ ಸರಳ ವಿನಿಮಯ, ಪಶುಗಳ ಬೆಲೆ ನಿಷ್ಕರ್ಷೆ ಅಥವಾ ಅಕ್ಕಿಯ ಅಳತೆಯನ್ನು ಸಾಮಾನ್ಯವಾಗಿ ಅರ್ಥವಾದ ಮತ್ತು ಒಪ್ಪಿತವಾದ ವಿನಿಮಯದರವನ್ನು ಹೊಂದಿದ್ದ ಲೋಹದ ನಾಣ್ಯಗಳು ಸ್ಥಾನಪಲ್ಲಟಗೊಳಿಸಿದವೆಂಬುದನ್ನು ಪ್ರಮಾಣೀಕರಿಸುತ್ತದೆ." ನಾಣ್ಯಗಳ ಗಣತಿಯಿಂದ ಹಣದ ಲೆಕ್ಕವಾಗುತ್ತಿತ್ತಾದರೂ ರಾಜಾಧಿಕಾರವು ನಿಯಂತ್ರಿಸುತ್ತಿರಲಿಲ್ಲ. ಬಹುಪಾಲು ಚಿನ್ನದ ನಾಣ್ಯಗಳಿದ್ದವು ಮತ್ತು "ಎಲ್ಲಾ ವಿಕ್ರಯದ ವಸ್ತುಗಳು ಮತ್ತು ಸೇವೆಗಳು ನಗದಿಯಲ್ಲಿ ಹೇಳಬಹುದಾದ ಬೆಲೆಯನ್ನು ಹೊಂದಿದ್ದವು." ಹಣಕಾಸಿನ ವ್ಯವಹಾರವು ತುಂಬಾ ವಿಕಾಸಗೊಂಡಿರಲಿಲ್ಲ. ಹಣವನ್ನು ಸಾಲ ನೀಡುವುದಕ್ಕೆ ನಿಷೇಧವಿರಲಿಲ್ಲ ಮತ್ತು ಗೌತಮನ ಹೇಳಿಕೆಯ ಆಧಾರದಲ್ಲಿ ಹೇಳುವುದಾದರೆ ಆರು ವಿಭಿನ್ನ ರೀತಿಗಳಲ್ಲಿ ಬಡ್ಡಿಯನ್ನು ಅಪೇಕ್ಷಿಸಲಾಗುತ್ತಿತ್ತು.[೧]

ಇಂತಹ ಉನ್ನತ ಮಟ್ಟದ ಆರ್ಥಿಕ ಬೆಳವಣಿಗೆಯೊಂದಿಗೆ ಪ್ರಾಚೀನ ಹಿಂದೂಗಳಿಗೆ ಸಾಮ್ರಾಜ್ಯಶಾಹಿಯ ಆರ್ಥಿಕ ವಿಕಾಸವನ್ನು ಹೊಂದುವುದು ಸಹಜವೇ ಆಗಿತ್ತು. ಆದರೆ ಚರಿತ್ರಕಾರರು ವಾಸ್ತವವನ್ನು ಸ್ವೀಕರಿಸಲು

---

೧. ಇಂಡಿಯಾದಲ್ಲಿ ಪ್ರಾಚೀನ ಆರ್ಥಿಕ ವ್ಯವಸ್ಥೆಯ ಕುರಿತ ಮಾಹಿತಿಯನ್ನು ಜರ್ನಲ್ ಆಫ್ ರಾಯಲ್ ಏಷ್ಯಾಟಿಕ್ ರಿಸರ್ಚ್ಸ್ ಫಾರ್ ೧೯೦೧ ಇದರಲ್ಲಿ ಕ್ಯಾರೊಲಿನ್ ಫಾಲಿ ರ್‍ಹೈಸ್ ಡೇವಿಡ್ಸ್ ಎಮ್.ಎ. ಇವರು ಬರೆದ ಲೇಖನ ಪುಟ ೮೫೯ರಿಂದ ಪಡೆಯಲಾಗಿದೆ.

ಒಲ್ಲದಾದರು. ಇತಿಹಾಸಕಾರರು ಈ ಸತ್ಯವನ್ನು ಅಂಗೀಕರಿಸಲು ಹಿಂದೆ ಮುಂದೆ ನೋಡುತ್ತಲೇ ಇದ್ದಾರೆ. ಅವರು ಇಡಿ ಹಿಂದೂ ಜನ ಸಮುದಾಯ ಒಂದು ಅಸಮರ್ಥ ಜನಾಂಗ ಎಂಬ ವರ್ತಮಾನ ನೈಜತೆಯಿಂದ ಆಗಿನ ಹಿಂದೂಗಳ ಸಾಧನೆಯನ್ನು ಅಳೆಯಲು ನೋಡುತ್ತಾರೆ ಅಥವಾ ಅವರು ತಮ್ಮ ಪೂರ್ವಾಗ್ರಹ ಪೀಡಿತ ಧೋರಣೆಯನ್ನು ವಿರೋಧಿಸುವ ಯಾವುದೇ ಪುರಾವೆಯನ್ನು ಅಳಿಸಲು ತಮ್ಮ ಎಲ್ಲಾ ಬುದ್ಧಿಮತ್ತೆಯನ್ನು ಉಪಯೋಗಿಸುತ್ತಾರೆ. ಭಾರತ ಏಕಾಂಗಿಯಾಗಿತ್ತು. ಆದುದರಿಂದ ಇಂಥಾ ಸಾಧನೆ ಅದಕ್ಕೆ ಸಾಧ್ಯವಾಯಿತು, ಇಲ್ಲದಿದ್ದಲ್ಲಿ ಇದು ಸಾಧ್ಯವಿರಲಿಲ್ಲ ಎಂಬ ವಾದ ಇವರ ಅಸ್ತ್ರ ಮತ್ತು ಈ ಅಸ್ತ್ರವನ್ನು ತಮ್ಮ ಕೈಯಲ್ಲಿನ ವಿಜಯಾಸ್ತ್ರದಂತೆ ಅವರು ಎಷ್ಟು ಬೇಕೋ ಅಷ್ಟು ಸಲ ಬಳಸುತ್ತಾರೆ. ಒಂದು ದೇಶದ ಪರಿಸರದ ಸ್ಥಿತಿ–ಗತಿಗಳು ಅಲ್ಲಿನ ಜನರ ಚಟುವಟಿಕೆಗಳ ಸೀಮೆಯನ್ನು ಮಿತಿಗೊಳಿಸುತ್ತವೆ. ಆದರೆ ಹಿರ್ದರ್ (Hirder) ಹೇಳಿದಂತೆ "ಇತಿಹಾಸವೆಂದರೆ ಚಲನೆಯಲ್ಲಿರುವ ಭೂಗೋಲ" ಎಂದು ಹೇಳುವುದು ಮೂರ್ಖತನವಾಗುತ್ತದೆ. ಭೌಗೋಲಿಕ ಸ್ಥಿತಿ–ಗತಿಗಳು ಭಾರತದ ಭಾಗ್ಯವನ್ನು ರೂಪಿಸಿವೆ ಎಂಬ ಸತ್ಯಾಂಶವನ್ನು ನಾವು ಅಪ್ಪಿಕೊಂಡರೂ, ಈ ಹೇಳಿಕೆಯಲ್ಲಿನ ಅತಿಶಯೋಕ್ತಿಯನ್ನು ನಾವು ಅಲ್ಲಗಳೆಯುತ್ತೇವೆ.

ಒಂದು ವೇಳೆ ನಾವು ಬಯಸುವುದಾದರೆ, ಪೌರ್ವಾತ್ಯ ಪದ್ಧತಿಗಳು, ರೂಢಿ–ಪರಂಪರೆಗಳು ಮತ್ತು ಧರ್ಮ ಅದರ ಉಷ್ಣ ಹವಾಮಾನದಿಂದ ನಿರ್ಧರಿಸಲ್ಪಟ್ಟಿದೆ ಎಂಬ ಮಾಂಟೆಸ್ಕ್ಯೂರವರ ಮಾತನ್ನು ಒಪ್ಪಬಹುದು. ಭಾರತದಲ್ಲಿ ಕಂಡು ಬರುವಂತೆ ಶಕ್ತಿಯುತ ಪರ್ವತಗಳು ಮತ್ತು ಅರಣ್ಯಗಳು ತಮ್ಮ ಬೆರಗುಗೊಳ್ಳುವ ಹೆಗ್ಗಳಿಕೆಯೊಂದಿಗೆ ಜನರ ಅಸಾಮಾನ್ಯ ಕಲ್ಪನೆ ಹಾಗೂ ಸಂಪ್ರದಾಯಗಳಿಗೆ ನೆರವಾಗುತ್ತವೆಂಬ ಬಕಲ್‌ನ ವಾದವನ್ನು ಸಹ ನಾವು ನಂಬಬಹುದು ಅಥವಾ ಭಾರತವು ತನ್ನ ಭೌಗೋಲಿಕ 'ನೆಲೆ'ಯಿಂದ ಏಕಾಂತಕ್ಕೆ ದೂಡಲ್ಪಟ್ಟಿದೆ ಎಂದು ಹೇಳುವ ವೈಜ್ಞಾನಿಕ ಭೂಗೋಲತಜ್ಞನನ್ನು ಅನುಸರಿಸಬಹುದು. ಭಾರತವು ಹಿಮಾಲಯ ಪರ್ವತದಿಂದಾಗಿ ಚೈನಾದಿಂದ ಮತ್ತು ಹಿಂದುಕುಷ್ ಪರ್ವತಗಳಿಂದ ಪರ್ಷಿಯಾ ಹಾಗೂ ಅಫಘಾನಿಸ್ಥಾನಗಳಿಂದ ಬೇರ್ಪಟ್ಟಿದೆ. ಭಾರತ ಒಂದು ದೀರ್ಘ ಜಲಾಂಚ(Water front)ವನ್ನು ಹೊಂದಿರುತ್ತದೆ. ಆದರೆ, ಇದರ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಕರಾವಳಿಯ ಅಂಚಿನಲ್ಲಿರುವವು ಮತ್ತು ಇವುಗಳು ಸಮುದ್ರದ ಮೂಲಕ ವ್ಯಾಪಾರಿ ಚಟುವಟಿಕೆಗಳಿಗೆ ಅಷ್ಟೇನು ಪ್ರೋತ್ಸಾಹವನ್ನು ನೀಡುವುದಿಲ್ಲ.

ಈ ಮೇಲಿನ ಎಲ್ಲಾ ಆರೋಪಗಳಲ್ಲಿಯೂ ಬಹುಶಃ ಅಲ್ಪಾಂಶ ಸತ್ಯವಿದೆ. ಆದರೆ ಇವುಗಳಿಂದ ಒಂದು ಬಲವಾದ ವಾದ ಮಾಡುವುದು ತಪ್ಪಾಗುತ್ತದೆ. ಅಡೆತಡೆಗಳು, ಎಷ್ಟೇ ಬಲವಾಗಿದ್ದರೂ, ಅವುಗಳು ಎಂದೂ ಮನುಷ್ಯನಿಗಿಂತ ಬಲಿಷ್ಠವಾಗಿರುವುದಿಲ್ಲ. ಅಡೆತಡೆಗಳನ್ನು ನಿಯಂತ್ರಿಸಲು ಎಲ್ಲಾ ಪ್ರಯತ್ನಗಳನ್ನು ಮಾನವ ಮಾಡಿದ್ದಾನೆ ಹಾಗೂ ತನ್ನ ಪ್ರಯತ್ನಗಳಲ್ಲಿ ಆತ ಸಫಲನಾಗಿದ್ದಾನೆ.

ಹೀಗೆ ಎಲ್ಲಾ ಕಡೆಗಳಿಂದ ಸುತ್ತುವರಿದು ನಿಂತ ಎಲ್ಲಾ ನೈಸರ್ಗಿಕ ಅಥವಾ ಇತರ ಎಲ್ಲಾ ಅಡೆತಡೆಗಳನ್ನು ಪ್ರಾಚೀನ ಭಾರತೀಯರು ಕಿತ್ತೆಸೆದರು. ಹಾಗೂ ಬಹು ಹಿಂದಿನಿಂದಲೇ ಹಿಂದೂ ಮಹಾಸಾಗರದಲ್ಲಿ ಪ್ರಯಾಣವನ್ನು ಪ್ರಾರಂಭಿಸಿದರು. ಹಿಂದೂ ಮಹಾಸಾಗರ ಮೆಡಿಟರೇನಿಯನ್ ಸಾಗರದೊಂದಿಗೆ ಒಂದು ಹೋಲಿಕೆಯನ್ನು ಹೊಂದಿರುತ್ತದೆ. "ಎಲ್ಲಾ ಕಡೆಗೂ ಭೂಮಿಯಿಂದ ಬಂಧಿಸಲ್ಪಟ್ಟ ಮೆಡಿಟರೇನಿಯನ್ ಸಮುದ್ರವು ಬೇಸಿಗೆಯಲ್ಲಿ ಒಂದು ಒಳನಾಡ ಸರೋವರದಂತೆ ಕಾಣುತ್ತದೆ. ನಿಜವಾಗಿಯೂ ಅದು ನಿಸರ್ಗದ ದ್ವಿರೂಪದ ಪ್ರಭಾವಕ್ಕೆ ಒಳಗಾಗಿರುತ್ತದೆ. ದೇವರುಗಳು ಕರುಣಾಮಯಿಗಳಾಗಿದ್ದಾಗ ಸರೋವರವಾಗಿರುತ್ತದೆ ಮತ್ತು ಅವರು ದ್ವೇಷಪೂರ್ಣವಾಗಿರುವಾಗ ಸಮುದ್ರವಾಗುತ್ತದೆ" ಎಂದು ಝಿಮ್ಮ್‌ನ್‌ರನ್

ಎಂಬಾತ ಅಭಿಪ್ರಾಯಪಟ್ಟಿರುತ್ತಾನೆ.[೧] ಹಿಂದೂ ಮಹಾಸಾಗರವು ವಿಸ್ತರಿಸಲ್ಪಟ್ಟ ಮೆಡಿಟರೇನಿಯನ್ ಸಮುದ್ರದಂತಿತ್ತು. ಆದರೆ ದಕ್ಷಿಣದ ಕರಾವಳಿಯನ್ನು ತೆಗೆದು ಹಾಕಿದರೆ ಅದು ಸಮುದ್ರವೂ ಅಲ್ಲ ಸರೋವರವೂ ಅಲ್ಲ. ಆದರೆ, ರಾಟಝೆಲ್(Ratzel)ರ ಪ್ರಕಾರ ಒಂದು ಅರ್ಧ ಸಮುದ್ರವಾಗಿರುತ್ತದೆ. ಏಕೆಂದರೆ ಅದರ ಉತ್ತರ ಭಾಗ ಮುಚ್ಚಲ್ಪಟ್ಟಿರುವ ಗುಣಧರ್ಮದಿಂದ ಅದು ನೈಜ ಸಮುದ್ರದ ಜಲಾವರಣ ಹಾಗೂ ವಾತಾವರಣದ ವಿಲಕ್ಷಣಗಳನ್ನು ಕಳೆದುಕೊಳ್ಳುತ್ತದೆ ಮತ್ತು ಅದು ಭೂಮಿಗೆ ಸಮೀಪವಾಗಿರುವುದರಿಂದ ಬಲವಾದ ಬಿರುಗಾಳಿ ಮತ್ತು ಸೆಳೆತಗಳು (Currents) ಅವ್ಯವಸ್ಥಿತ ರೀತಿಯಲ್ಲಿ ಓಡಾಡುತ್ತಿರುತ್ತವೆ. ಇದರಿಂದಾಗಿ ಈಶಾನ್ಯ ಮತ್ತು ಆಗ್ನೇಯ ಮಳೆ ಗಾಳಿಗಳು ವ್ಯಾಪಾರಿಗಳನ್ನು ಕರಾವಳಿಯನ್ನು ನೆಚ್ಚಿಕೊಂಡು ಕೂಡದೆ ಮಧ್ಯ ಸಮುದ್ರದತ್ತ ಎಳೆದೊಯ್ಯುತ್ತದೆ.

> "ಇತಿಹಾಸದ ಪ್ರಾರಂಭದಿಂದಲೂ ಉತ್ತರ ಹಿಂದೂ ಮಹಾಸಾಗರವು ಮುಕ್ತ ಪ್ರವೇಶ ದ್ವಾರವಾಗಿತ್ತು. ಅಲೆಗ್ಸಾಂಡರ್ ಮಹಾಶಯನ ಪೂರ್ವಜಗತ್ತಿನ ಹಳೆಯ ಸಮುದ್ರ ಮಾರ್ಗದ ಪುನರ್‌ಶೋಧನೆಯನ್ನು ಅದರ ಇತಿಹಾಸದ ಹಿನ್ನೆಲೆಯಲ್ಲಿ ಒಂದು ಆಧುನಿಕ ಘಟನೆಯೆಂದು ತಿಳಿದುಕೊಳ್ಳಲಾಗಿದೆ. ಈ ಮುಕ್ತ ವ್ಯಾಪಾರ ಮಾರ್ಗದಿಂದಲೇ ಭಾರತೀಯ ವಸಾಹತುಶಾಹಿ ಜನರು, ವ್ಯಾಪಾರಿಗಳು ಮತ್ತು ಪಾದ್ರಿಗಳು ಭಾರತೀಯ ನಾಗರಿಕತೆಯ ಹಲವಾರು ಅಂಶಗಳನ್ನು ಅತಿ ಪೂರ್ವದ ಸುಂದಾ ನಡುಗಡ್ಡೆಯವರೆಗೆ ಕೊಂಡೊಯ್ದರು ಮತ್ತು ಪೂರ್ವದ ಪಾತ್ರೆ–ಪಗಡಿಗಳು, ವಿಜ್ಞಾನ, ಧರ್ಮ ಮುಂತಾದವುಗಳು ಪಶ್ಚಿಮ ದಿಕ್ಕಿನ ಕಡೆ ಚಲಿಸುತ್ತಾ ಯೂರೋಪ್ ಹಾಗೂ ಆಫ್ರಿಕಾದ ಅಂಚಿನವರೆಗೂ ಹೋದವು. ಇದರಿಂದಾಗಿ ಹಿಂದೂ ಮಹಾಸಾಗರ ಜಾವಾದಿಂದ ಅಬಿಸೀನಿಯಾದವರೆಗೆ ಮತ್ತು ಮುಂದುವರಿದು, ಏಕೆಂದರೆ ಜನಾಂಗಗಳ ಹೆಚ್ಚಿನ ಭಿನ್ನತೆಯಿಂದಾಗಿ ಅಷ್ಟೊಂದು ಸ್ಪಷ್ಟವಾಗಿರದ ಅಬಿಸೀನಿಯದಿಂದ ಮೊಝೂಂಬಿಕ್‌ದವರೆಗಿನ ಅರ್ಧ–ಭೂಗೋಲಾಕಾರದ ಕ್ಷೇತ್ರದಲ್ಲಿ ತನ್ನ ವಿಶಿಷ್ಟವಾದ ನಾಗರಿಕತೆಯನ್ನು ಮೆರೆಯಿತು.[೨] ಹಿಂದೂಗಳು ಹಿಂದೂ ಮಹಾಸಾಗರದ ಪ್ರಧಾನ ವ್ಯಾಪಾರಿ ರಾಷ್ಟ್ರವಾಗಿ ಮೇಲೆ ಬಂದರು. ಇದು ಅರಬರ ಸಮುದ್ರ ಶಕ್ತಿಯ ಅಭಿವೃದ್ಧಿಗಿಂತ ಮುಂದೆ ಉಂಟಾಯಿತು ಮತ್ತು ಒಮಾನ್ ಹಾಗೂ ತನ್ನ ಯಮೆನ್ ವ್ಯಾಪಾರಿಗಳ ಮೂಲಕ ಅವರು ಪೂರ್ವ ಆಫ್ರಿಕಾದ ಕರಾವಳಿಯ ವ್ಯಾಪಾರವನ್ನು ಸಹ ಹಂಚಿಕೊಂಡರು. ಇಂದು ಅವರು ಮಸ್ಕಟ್, ಅಡೆನ್, ಝಂಝಿಬಾರ್, ಪೆಂಬಾ ಹಾಗೂ ನೆಟಾಲ್ ಮುಂತಾದ ಬಂದರುಗಳಲ್ಲಿನ ಒಂದು ಪ್ರಮುಖ ವ್ಯಾಪಾರೀವರ್ಗವೆಂದೆನಿಸಿಕೊಂಡಿದ್ದಾರೆ."[೩]

ಭಾರತದ ನೈಸರ್ಗಿಕ ಸಂಪನ್ಮೂಲಗಳು ಹಾಗೂ ಆರ್ಥಿಕಾಭಿವೃದ್ಧಿಯ ಪೂರ್ವಭಾವಿ ವ್ಯಾಖ್ಯಾನ ದೊಂದಿಗೆ ನಾವು ಅದು ಪ್ರಾಚೀನ ನಾಗರೀಕ ರಾಷ್ಟ್ರಗಳೊಂದಿಗೆ ಹೊಂದಿದ ವ್ಯಾಪಾರಿ ಸಂಬಂಧಗಳನ್ನು ಗುರುತಿಸೋಣ.

---

೧. ದಿ ಗ್ರೇಟ್ ಕಾಮನ್‌ವೆಲ್ತ್, ಪು. ೨೦.

೨. ಎಲನ್ ಚರ್ಚಿಲ್ ಸೆಂಪಲ್– "ಇನ್‌ಫ್ಲುಯನ್ಸ್ ಆಫ್ ಜಾಗ್ರಫಿಕ್ ಎನ್‌ವಿರೋನ್‌ಮೆಂಟ್", ಪು. ೩೦೯

೩. ಅದೇ: ಪು. ೨೬೮

ಇದನ್ನು ಈಜಿಪ್ಟಿನಿಂದ ಪ್ರಾರಂಭಿಸೋಣ. ಪ್ರಾರಂಭದಲ್ಲಿ ಪೀಠಿಕಾ ರೂಪದಲ್ಲಿ ಒಂದು ಮಾತನ್ನು ಹೇಳುವುದು ಉತ್ತಮ. ಅದೇನೆಂದರೆ ಇತಿಹಾಸದ ಮಸುಕಾದ ಅರುಣೋದಯದ ಕಾಲದಲ್ಲಿ ಭಾರತ ಮತ್ತು ಇತರ ರಾಷ್ಟ್ರಗಳ ನಡುವಿನ ವ್ಯಾಪಾರಿ ಸಂಬಂಧಗಳ ಬಗೆಗಿನ ಪುರಾವೆಗಳು ಅತ್ಯಂತ ದುರ್ಲಭವಾಗಿವೆ. ಇವುಗಳು ಕೆಲವೆಡೆ ಸಂಪ್ರದಾಯಗಳಲ್ಲಿ ಅಡಕವಾದರೆ ಇನ್ನು ಕೆಲವೆಡೆ ಪ್ರಾಚೀನ ಅವಶೇಷಗಳಿಂದ ಹೊರತೆಗೆದ ಸಾಹಿತ್ಯದಲ್ಲಿ ಕಂಡುಬರುತ್ತವೆ. ಕಾಲವು ಮುಂದುವರಿದಂತೆ ಈ ಪುರಾವೆಯು ಇತ್ಯಾತ್ಮಕವಾಗಿ ಪಕ್ವವಾಗುತ್ತದೆ.

ಜಗತ್ತಿನಲ್ಲಿಯೇ ಒಂದು ಅಪರೂಪದ ಭೌಗೋಲಿಕ ಸ್ಥಾನವನ್ನು ಹೊಂದಿದ ಇಜಿಪ್ಷಿಯನ್‌ರು ಉಳಿದ ಜನರಿಗಿಂತಲೂ ಆರ್ಥಿಕವಾಗಿ ಸ್ವತಂತ್ರರಾಗಿದ್ದರು. ಅವರು ತಮ್ಮ ಆರ್ಥಿಕ ಸ್ವಾವಲಂಬನೆಯ ಬಗ್ಗೆ ಎಷ್ಟೊಂದು ಅಭಿಮಾನವನ್ನಿಟ್ಟುಕೊಂಡಿದ್ದರೆಂದರೆ, ವಿದೇಶಿ ವಾಣಿಜ್ಯ ಸಂಬಂಧವನ್ನು ಅವರು ವಿರೋಧಿಸುತ್ತಿದ್ದರು ಎಂದು ಭಾವಿಸಲಾಗಿದೆ. ಈ ಭಾವನೆಯನ್ನು ಸುಳ್ಳೆಂದು ಸಾಧಿಸಲು ಯಾವ ದಾಖಲೆ ಇರುವುದಿಲ್ಲ. ಆದರೂ ಪುರಾತನ ಸ್ಥಳಗಳನ್ನು ಅಗೆದು ಅದರೊಳಗೆ ಏನಿದೆ ಎಂಬುದನ್ನು ನೋಡಿದಾಗ ಕೆಲವೊಂದು ವಿದೇಶಿ ವಸ್ತುಗಳು ಸಿಕ್ಕಿರುತ್ತವೆ ಮತ್ತು ಈ ನಿಜಸಂಗತಿ ಅವರ ಭಾವನೆ ಸುಳ್ಳೆಂಬುದನ್ನು ಸಾಧಿಸುತ್ತದೆ.

ಈಜಿಪ್ಷಿಯನ್ನರು ಭಾರತದೊಂದಿಗೆ ನೇರ ವ್ಯಾಪಾರ ಸಂಬಂಧವನ್ನು ಹೊಂದಿದ್ದರೋ ಅಥವಾ ಇಲ್ಲವೋ ಎಂಬುದು ಒಂದು ಬಹಳ ವಾದಗ್ರಸ್ತ ವಿಷಯವಾಗಿರುತ್ತದೆ. ಈ ವಾದದ ಎರಡೂ ಕಡೆ ತೀಕ್ಷ್ಣವಾದ ಟೀಕೆಯನ್ನು ನಾವು ಕಾಣುತ್ತೇವೆ. ಎರಡನೇ ರಾಮಸೆಸ್(Ramses II)ನ ಜೊತೆಗೆ ತನ್ನನ್ನು ಗುರುತಿಸುವ ಸೆಸೊಸ್ಟ್ರಿಸ್ ಹತ್ತಿರ ಬಲವಾದ ನೌಕಾ ಸೈನ್ಯವಿತ್ತು. ಅವನು ಹಿಂದೂ ಮಹಾಸಾಗರದಲ್ಲಿ ಬಹುದೂರದವರೆಗೆ ತೇಲಿ ಬಂದು ಕರಾವಳಿ ಇರುವ ಎಲ್ಲಾ ರಾಷ್ಟ್ರಗಳನ್ನು ಗೆದ್ದುಕೊಂಡನು. ಹಾಗೂ ಅವನ ಭೂಸೇನೆ ಗಂಗಾ ನದಿಯ ಬಯಲು ಪ್ರದೇಶದವರೆಗೆ ತನ್ನ ಖಡ್ಗವನ್ನು ಝಳಪಿಸಿದವು ಎಂದು ಹಿರೊಡೊಟಸ್ ಹೇಳಿರುತ್ತಾರೆ.[+]

ಈಜಿಪ್ಟಿನಿಂದ ಇಸ್ರೇಲಿಯರು ಹೊರಹೋಗುವುದಕ್ಕಿಂತ ಬಹಳ ಮೊದಲೇ ಭಾರತವು ಅದರೊಂದಿಗೆ ವ್ಯಾಪಾರಿ ಸಂಬಂಧಗಳನ್ನು ಹೊಂದಿತ್ತು ಮತ್ತು ಫಿಲೊಟರಸ್ (Philoteras) ಬಂದರು ಪ್ರಾರಂಭದ ವಾಣಿಜ್ಯ ಕೇಂದ್ರವಾಗಿತ್ತು.

"ಅಷ್ಟೇ ಪೂರ್ವ ಯುಗದಲ್ಲಿ ಈಜಿಪ್ಷಿಯನ್ನರು ಭಾರತದೊಂದಿಗೆ ವ್ಯಾಪಾರಿ ಸಂಪರ್ಕವನ್ನು ಹೊಂದಿದ್ದರೋ ಅಥವಾ ಅರೇಬಿಯಾದಿಂದ ಭಾರತದ ವಸ್ತುಗಳು ಈಜಿಪ್ಟನ್ನು ತಲುಪುತಿದ್ದವೋ ಎಂಬುದನ್ನು ಈಗ ನಿರ್ಧರಿಸುವುದು ಸಾಧ್ಯವಿಲ್ಲ. ಅದರೆ ಅಂದಿನ ಅಪ್ರತ್ಯಕ್ಷ ವ್ಯಾಪಾರ ಸಹಿತ ಇಜಿಪ್ಷಿಯನ್‌ರಿಗೆ ಅಪಾರ ಸಂಪತ್ತಿನ ಮೂಲ ಒಂದನ್ನು ದೊರಕಿಸಿಕೊಡುವ ಸಾಧ್ಯತೆ ಇತ್ತು. ಅಲ್ಲದೇ ಭಾರತದ ಹಲವಾರು ವಸ್ತುಗಳು ಈಜಿಪ್ಟಿನವರೆಗೆ ಹೋಗುತ್ತಿದ್ದವು ಎಂಬುದಕ್ಕೆ ಥೇಬ್ಸರ ಗೋರಿಗಳು ನಮಗೆ ನೇರ ಸಾಕ್ಷಿಗಳಾಗಿ ದೊರೆಯುತ್ತವೆ"[೧] ಜೋಸೆಫ್‌ರ ಅವಧಿ ಈಜಿಪ್ಟಿನಲ್ಲಿ ಪ್ರಾರಂಭವಾಗುವ ಮುನ್ನವೇ ಭಾರತೀಯ ಸರಕುಗಳು ಈಜಿಪ್ಟಿನಲ್ಲಿ ಮಾರಾಟವಾಗುತ್ತಿದ್ದವು. ಈ ವಿಷಯ ಇಶಾಮ್ಯಾಕ್ಲಿಟೀಸ್(Ishmaclities)ರು

---

\+ ವಿಲಿಯಮ್ ರಾಬರ್ಟ್ಸನ್: ಡಿಸ್ಕ್ವಿಸಿಷನ್ ಆಫ್ ಇಂಡಿಯಾ (೧೮೧೨), ಪು. ೬.

೧. ಗಾರ್ಡಿನರ್ ವಿಲ್ಕಿನ್ಸನ್. ದಿ ಏನ್ಷಿಯಂಟ್ ಇಜಿಪ್ಷಿಯನ್ಸ್ –ಸಂ. ೧, ಪು. ೧೬೧.

ಭಾರತದಿಂದ ಸಾಂಬಾರ ಪದಾರ್ಥಗಳನ್ನು ತಂದು ಈಜಿಪ್ತಿನಲ್ಲಿ ಮಾರಾಟ ಮಾಡುವುದರಲ್ಲಿ ಗೊತ್ತಾಗುತ್ತದೆ, ಮುಂದುವರಿದು ಮೂರನೆಯ ಥೊಥ್ಮಸ್(Third Thothmus)ನ ಕಾಲದಲ್ಲಿ ಥೇಬ್ಸ್‌ನಲ್ಲಿ ದೊರೆತ ನೀಲರತ್ನ, ವಜ್ರ, ವೈಢೂರ್ಯ ಮತ್ತು ಇತರ ಅಂತಹ ವಸ್ತುಗಳ ವ್ಯಾಪಾರ ಒಂದೇ ಸಮ ನಿರಂತರವಾಗಿತ್ತೆಂಬುದು ಮೂರನೆಯ ಥೋಥ್ಮಸ್ ಮತ್ತು ಅವನ ಅನುಯಾಯಿಗಳಿಂದ ಗೊತ್ತಾಗುತ್ತದೆ.[೧]

**ಇತಿಹಾಸದ ಎಲ್ಲ ಕಾಲಗಳಲ್ಲಿಯೂ ಸಂಸ್ಕೃತಿಯು ವಾಣಿಜ್ಯದ ಗತಿಯನ್ನು ಅನುಸರಿಸುತ್ತದೆ.** ಈ ಸಂಗತಿ ಆಧುನಿಕ ಕಾಲಕ್ಕಿಂತಲೂ ಪ್ರಾಚೀನ ಕಾಲಕ್ಕೆ ಹೆಚ್ಚು ಸಮಂಜಸವಾಗಿರುತ್ತದೆ. ಹಳೆಯ ಕಾಲದ ಒಂಟೆ ಸವಾರರು ಬರೇ ವಸ್ತುಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಒಯ್ಯುತ್ತಿರಲಿಲ್ಲ. ಅವುಗಳ ಜೊತೆಗೆ 'ನಾಗರಿಕತೆ'ಯನ್ನು ಸಹ ಒಯ್ಯುತ್ತಿದ್ದರು. ಅವರು ನಾಗರಿಕತೆಯನ್ನು ಹಬ್ಬಿಸಿದರು ಹಾಗೂ ಅದನ್ನು ಸಾರ್ವತ್ರಿಕಗೊಳಿಸಿದರು. ಭಾರತದೊಂದಿಗಿನ ಈ ವ್ಯಾಪಾರಿ ಸಂಬಂಧ ಈಜಿಪ್ಷರ ಶಿಲ್ಪಕಲೆಯ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ, ಜೇಮ್ಸ್ ಫರ್‌ಗ್ಯೂಸನ್ ತಮ್ಮ ಶಿಲ್ಪಕಲೆಯ ಇತಿಹಾಸ ೧, ಪು: ೧೪೨–೩ ಎಂಬ ಪುಸ್ತಕದಲ್ಲಿ ಎಕ್ಸಮ್‌ದಲ್ಲಿನ ಬೃಹತ್ ಏಕಶಿಲಾ ಕೃತಿಯು ಭಾರತದಿಂದ ಪ್ರೇರಣೆ ಪಡೆದಿದೆ ಎಂದು ಬರೆಯತ್ತಾರೆ. ಮುಂದುವರಿದು ಅವರು, "ವಿಚಾರ ಈಜಿಪ್ಷನವರದ್ದು, ಆದರೆ ವಿವರವು ಭಾರತದ್ದು. ಭಾರತೀಯ ಒಂಬತ್ತು ಅಂತಸ್ತುಗಳ ಪಗೋಡಾವು ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಈಜಿಪ್ತಿಗೆ ಭಾಷಾಂತರವಾಗಿದೆ. ಇದು ಏಕ ಶಿಲಾಕೃತಿ ಎಂದು ಹೇಳಿದ್ದಾರೆ. ಅವರು ಅದನ್ನು ಭಾರತದ ಬುದ್ಧ ಗಯಾ ಗುಡಿಗಳಿಗೆ ಹೋಲಿಸಿ ಅವುಗಳ ಸಾಮ್ಯತೆಯನ್ನು ಗುರುತಿಸಿರುತ್ತಾರೆ. ಭಾರತೀಯ ಹಾಗೂ ಈಜಿಪ್ತಿನ ಕಲೆಗಳ ಈ ವಿಶಿಷ್ಟ ಬೆಸುಗೆ ಅವರಿಬ್ಬರ ವ್ಯಾಪಾರಿ ಸಂಘಟನೆಯನ್ನು ಪ್ರತಿಬಿಂಬಿಸುತ್ತದೆ ಎಂದು ಸಹ ಅಭಿಪ್ರಾಯಪಟ್ಟಿದ್ದಾರೆ.[೨]

ಭಾರತದ ನೆಲದಲ್ಲಿ ಮೊಟ್ಟಮೊದಲು ವಾಸವಾಗಿದ್ದ ಆದರೆ ಯಾವುದೇ ರೀತಿಯಿಂದ ಪಶ್ಚಿಮ ಏಶಿಯಾದ ಮೂಲ ನಿವಾಸಿಗಳು ಆಗಿರದ ದ್ರಾವಿಡ ಜನರು ಈಜಿಪ್ಟಿಯನ್ನರೊಂದಿಗೆ (ಅಥವಾ ಪಶ್ಚಿಮ ಏಶಿಯಾದವರೊಂದಿಗೆ) ಹೊಂದಿದ ಸಂಬಂಧವನ್ನು ನೋಡುವುದು ಅಪ್ರಸ್ತುತವೇನಲ್ಲ. ಶ್ರೀ ಗುಸ್ತಾವ್ ಆಪರ್ಟ್ ಹೇಳುವಂತೆ "ತುರೇನಿಯನ್ ಸಾಮ್ರಾಟರು ನಿಸ್ಸಂದೇಹವಾಗಿ ಸಂಸ್ಕೃತಿಯ ಅತ್ಯುನ್ನತ ಮಟ್ಟಕ್ಕೆ ಬಂದಿದ್ದರು ಎಂದು ಕುನ್ನಿಫಾರ್ಮ್ (Cunciform) ಶಿಲಾಶಾಸನ ತಜ್ಞರಿಂದ ಸ್ಪಷ್ಟವಾಗಿ ಸಾಬೀತಾಗಿದೆ. ಈ ನಾಗರಿಕತೆಯು ಪರಕೀಯ ಭೌತಿಕವಾದದಿಂದ ಲೇಪಿತವಾಗಿದ್ದರೂ ಸಹ ಅದು ತನ್ನಷ್ಟಕ್ಕೆ ತಾನೇ ಕಲೆ ಮತ್ತು ವಿಜ್ಞಾನದ ಕೆಲವು ಶಾಖೆಗಳನ್ನು ಪರಿಪೂರ್ಣತೆಯ ಮಟ್ಟಕ್ಕೆ ಏರಿಸುವ ಸಾಮರ್ಥ್ಯವನ್ನು ಹೊಂದಿತ್ತು. ತುರೇನಿಯನ್‌ರು ತಮ್ಮ ತಮ್ಮಲ್ಲಿಯೇ ಸಾಕಷ್ಟು ವಿಚಾರ ವ್ಯತ್ಯಾಸಗಳನ್ನು ಹೊಂದಿದ್ದರೂ ಸಹ ಆ ಕಾಲದಲ್ಲಿ ಅರಿಯಾನಾ (Ariana) ಮತ್ತು ಪರ್ಷಿಯಾ(Persia)ವನ್ನು ಸ್ವಾಧೀನಪಡಿಸಿಕೊಂಡಿದ್ದ ಭಾರತೀಯ ದ್ರಾವಿಡ ಜನರಿಗೆ ಸಂಬಂಧಿಸಿದ್ದರು. ಯುರೋಪ ಖಂಡದಲ್ಲಿ, ಈ ತುರೇನಿಯನ್‌ರನ್ನು ಎಸ್ಟೋನಿಯನ್‌ರು (Esthonians) ಪ್ರತಿನಿಧಿಸಿದ್ದರು ಮತ್ತು ಪಶ್ಚಿಮ ಹಾಗೂ ಮಧ್ಯ ಏಶಿಯಾದಲ್ಲಿ ಅವರು ಅಲ್ಲಿನ ಜನಸಂಖ್ಯೆಯ ಕೆಳ ಸ್ತರಗಳಲ್ಲಿದ್ದರು ಮತ್ತು ಚೈನಾದಲ್ಲಿ ಅವರು ಅದರ ಸ್ವರ್ಗೀಯ ಸಾಮ್ರಾಜ್ಯ ನಾಗರಿಕತೆಯ ಅಡಿಪಾಯವನ್ನು ಹಾಕಿದರು." ಈ ತುರೇನಿಯನ್‌ರು "ಹಳೆ ಜಗತ್ತಿನಾದ್ಯಂತ ಸಾಮ್ರಾಜ್ಯಗಳನ್ನು

೧. ಗಾರ್ಡಿನರ್ ವಿಲ್ಕಿನ್ಸನ್. ದಿ ಏನ್ಷಿಯಂಟ್ ಇಜಿಪ್ಸಿಯನ್ಸ್, ಪು. ೨೫೦.

೨. "ದ ಪಾರಿಪ್ಲಸ್ ಆಫ್ ಇರಿಟ್ರಿಯನ್ ಸೀ" ಡಬ್ಲ್ಯೂ.ಹೆಚ್. ಸ್ಕ್ಯಾಫ್‌ದಿಂದ ಭಾಷಾಂತರಿಸಿದ್ದು ಮತ್ತು ತೆಗೆದುಕೊಳ್ಳಲಾಗಿದ್ದು, ಪು. ೬೬–೬೭.

ಸ್ಥಾಪಿಸಿದ್ದರು. ಅವರ ಸ್ವಂತ ಊರು ಅಥವಾ ನೆಲೆ ಆರಲ್ (Aral) ಸರೋವರದ ಸುತ್ತಮುತ್ತಲಿನ ಬಹುಭಾಗದಲ್ಲಿ ಪಸರಿಸಿದ್ದರು ಮತ್ತು ಅದನ್ನು ಕನಿಷ್ಟ ೧,೫೦೦ ವರ್ಷಗಳವರೆಗೆ ಆಳಿದರು." ಈಜಿಪ್ಷಿಯನ್ನರು, ಆಸ್ಸೇರಿಯನ್‌ರು, ಆಕ್ಕಾಡಿಯನ್‌ರು, ಸುಮೇರಿಯನ್ನರು ಮತ್ತು ಫೂನಿಸಿಯನ್‌ರು ಇವೆಲ್ಲವುಗಳು ತುರೇನಿಯನ್‌ರ ಜನಾಂಗದ ಶಾಖೆಗಳಾಗಿದ್ದವು. "ಈಜಿಪ್ಟ್ ಸಾಮ್ರಾಜ್ಯ ಸ್ಥಾಪನೆಯಾದ ೨೫೦ ವರ್ಷಗಳ ನಂತರ (ಅಂದರೆ ಕ್ರಿ.ಪೂ. ೨,೫೦೦ರಲ್ಲಿ) ಮತ್ತು ಆಕ್ಕಾಡಿಯನ್ ಅರಸರು ಬ್ಯಾಬಿಲೋನನ್ನು ದೀರ್ಘಕಾಲ ಆಳಿದ ನಂತರ ಆರ್ಯನ್‌ರು ಚಾಲ್ಡಿಯಾ(Chaldea)ವನ್ನು ಆಕ್ರಮಿಸಿದರು. ಇವರು ಪರ್ಷಿಯನ್ ಕೊಲ್ಲಿಯ ಕನ್ನನೈಟ್‌ಗಳ (Kannanites) ಮತ್ತು ಪರ್ಷಿಯಾದ ದ್ರಾವಿಡಿಯನ್‌ರ ಮೇಲೆ ಏಕಕಾಲದಲ್ಲಿ ಒತ್ತಡ ಹಾಕುತ್ತಾ ಕನ್ನನೈಟರನ್ನು ವಾಯುವ್ಯದ (North-West) ಕಡೆಗೆ ಹಾಗೂ ದ್ರಾವಿಡರನ್ನು ಆಗ್ನೇಯ ಭಾರತದ ಕಡೆಗೆ ಸರಿಸಿದರು." ಆರ್ಯರು ಭಾರತದ ಮೇಲೆ ದಂಡೆತ್ತಿ ಬಂದಾಗ ಈ ದ್ರಾವಿಡರಿಂದ ಸಾಕಷ್ಟು ಪ್ರತಿರೋಧವನ್ನು ಎದುರಿಸಬೇಕಾಯಿತು. ಏಕೆಂದರೆ ಇದರ ಸಲುವಾಗಿ ಅವರು ಕ್ರಿ.ಪೂ. ೧೫ನೆಯ ಶತಮಾನದವರೆಗೂ ಭಾರತದೊಳಗೆ ಪಂಜಾಬ ಗಡಿ ದಾಟಿ ಮುಂದೆ ಹೋಗಲಾಗಲಿಲ್ಲ."[೧] ಆನಂತರದ ಮಹತ್ತರವಾದ ಘಟನೆಯೆಂದರೆ ಇಂಡಿಯಾ ಮತ್ತು ಇಂಡಿಯಾ ಸಾಮ್ರಾಜ್ಯ ಸಂಬಂಧ. ಬೈಬಲ್‌ನಲ್ಲಿ ಪುರಾವೆ ದೊರೆತರೂ ಬರಹಗಾರರು ಅದನ್ನು ಚಾರಿತ್ರಿಕ ಉದ್ದೇಶಗಳಿಗೆ ಬಳಸಲು ಒಲ್ಲದಾದರು. "ಈ ಪುರಾವೆಯು ನಿರಾಕರಿಸಲಾಗದಷ್ಟು ಗಟ್ಟಿಯಾಗಿದೆ."[೨] ಆಗ ಜುಡೆಯಾ (Judea) ಒಂದು ಮುಖ್ಯ ಪ್ರದೇಶದಲ್ಲಿದ್ದು ಭಾರತದೊಂದಿಗೆ ನೇರ ವ್ಯಾಪಾರ ನಡೆಸಲು ಸಾಧ್ಯವಿರಲಿಲ್ಲ. ಅದಕ್ಕೆ ಸಮುದ್ರ ತೀರವಿರಲಿಲ್ಲ. ಬಂದರು ಇರಲಿಲ್ಲ. ಆದ ಕಾರಣ ಭಾರತದ ವ್ಯಾಪಾರಕ್ಕಾಗಿ ಅದು ಸಂಪೂರ್ಣವಾಗಿ ಈಜಿಪ್ತ್ ಮತ್ತು ಸಿರಿಯಾದ ಮೇಲೆ ಅವಲಂಬಿಸಬೇಕಾಗಿತ್ತು. ಈ ಎರಡೂ ದೇಶಗಳು ಸಮುದ್ರ ವ್ಯವಹಾರವನ್ನು ಮತ್ತು ಭಾರತದ ವ್ಯಾಪಾರಿ ಮಾರ್ಗಗಳನ್ನು ನಿಯಂತ್ರಿಸಿಕೊಂಡಿದ್ದವು. ಭಾರತೀಯರು ತಮ್ಮ ಸರಕುಗಳನ್ನು ಯಮೆನ್ ಅಥವಾ ಅರೇಬಿಯಾ ಫೆಲಿಕ್ಸ್‌ದೊಂದಿಗೆ ತರುತ್ತಿದ್ದರು. ಭಾರತೀಯ ಸರಕುಗಳಿಗೆ ಯಮೆನ್ ಒಂದು ದೊಡ್ಡ ಪೇಟೆಯಾಗಿತ್ತು. ಅಷ್ಟೇ ಅಲ್ಲ, ಅದು ಒಂದು ವಿತರಣಾ ಕೇಂದ್ರ ಸಹ ಆಗಿತ್ತು. ಅಲ್ಲಿಂದ ಭಾರತೀಯ ಸರಕುಗಳು ವ್ಯಾಪಾರಿಗಳಿಂದ ಸಿರಿಯಾಕ್ಕೊ ಅಥವಾ ಈಜಿಪ್ತದ ಹಡಗುಗಳ ಮೂಲಕ ಆ ದೇಶಕ್ಕೊ ಹೋಗುತ್ತಿದ್ದವು. ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತೀಯ ಶ್ರೀಮಂತ ಮಣ್ಣಿನಿಂದ ಸಾಂಬಾರು ದಿನಸಿಗಳು, ಸುಗಂಧ ಕಾಷ್ಟಗಳು, ರತ್ನಗಳು, ಹಸ್ತಿದಂತ ಮುಂತಾದ ಅಮೂಲ್ಯ ಸರಕುಗಳು, ವಿಪುಲ ಪ್ರಮಾಣದಲ್ಲಿ ಪರದೇಶಗಳಿಗೆ ಪೂರೈಕೆಯಾಗುತ್ತಿದ್ದವು."[೩]

ಈಜಿಪ್ಟಿನ ಬಲ ಕುಸಿಯುತ್ತಿರುವುದನ್ನು ಕಂಡ ಆತನು 'ಕೆಂಪು ಸಮುದ್ರ'ದ ದಂಡೆಯ ಮೇಲೆ ಇರುವ ಇಡುಮಿಯನ್ನು (Idumee) ಬಂದರಾಗಿ ಬಳಸುವ ಮಹತ್ವವನ್ನು ಮನಗೊಂಡು (ಈ ಬಂದರನ್ನು ಆತ ತನ್ನ ತಂದೆಯಿಂದ ಬಳುವಳಿಯಾಗಿ ಪಡೆದಿದ್ದ) ಭಾರತದೊಂದಿಗೆ ನೇರ ವ್ಯಾಪಾರಿ ಸಂಬಂಧಗಳನ್ನು

೧. Cf. Gustar oppent "On The Ancient Commerce of India" in "The Madras Journal of Literature & Science", 1878, pp. 189, 90-91, for parallels between Malbarian and Egyptian customs of "Primitive Civilizations", by E.J. Simcox, Vol. I, pp. 183, 550, 554, 569, 570, 574, Part II, p. 473.

೨. cf. W. Robertson "Disquisition", p. 9-10.

೩. ಜೆ. ಟಿಯೋರ್‌ಮೆಂಟ್ ಮತ್ತು ಇಷವೇಲಿಯರ್: 'ಏನ್ಷಿಯಂಟ್ ಹಿಸ್ಟರಿ ಆಫ್ ದಿ ಈಸ್ಟ್', ಸಂ. I, ಪು. ೧೪೪.

ಅನುಷ್ಠಾನದಲ್ಲಿ ತರಲು ಯೋಚಿಸಿದನು. ಆದರೆ ಜ್ಯೂ ಜನರಿಗೆ ನೌಕಾ ಸಾರಿಗೆಯಲ್ಲಿ ಅನುಭವವಿರಲಿಲ್ಲವಾದ್ದರಿಂದ ಆತನು ಫೋನಿಶಿಯನ್ ದೊರೆಯಾದ 'ಹಿರೈನ್'ನ (Hirain) ಸಹಕಾರ ಕೋರಬೇಕಾಯಿತು. ಆಗ ಫೋನಿಶಿಯನ್ನರು ನೌಕಾ ಸಾರಿಗೆಯಲ್ಲಿ ಅಗ್ರಗಣ್ಯ(Pioneer)ರಾಗಿದ್ದರು. ಆದರೆ ಫೊನಿಶಿಯನ್‌ರು ಭಾರತದೊಂದಿಗೆ ನೇರವಾಗಿ ವ್ಯಾಪಾರಿ ಸಂಬಂಧವನ್ನು ಹೊಂದಿದ್ದರೋ ಅಥವಾ ಇಲ್ಲವೋ ಎಂಬುದು ವಾದಗ್ರಸ್ಥವಾದ ವಿಷಯವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಬರ್ಟ್‌ಸನ್‌ರು ಅನುಕೂಲಕರವಾದ ನಿಲುವನ್ನು ತಾಳಿರುತ್ತಾರೆ. ಬಡತನವು ಫೊನಿಶಿಯನ್‌ರಿಗೆ ಹೇಗೆ ವ್ಯಾಪಾರದ ಮೇಲೆ ಅವಲಂಬಿಸಲು ಒತ್ತಾಯಿಸಿತು ಎಂಬುದನ್ನು ತೋರಿಸಿದ ನಂತರ ಅವರು ಈ ರೀತಿ ಹೇಳುತ್ತಾರೆ. "ಅವರ ವಿವಿಧ ವ್ಯಾಪಾರಿ ಶಾಖೆಗಳಲ್ಲಿ ಭಾರತದ ಜೊತೆಗಿನ ವ್ಯಾಪಾರ ಅತ್ಯಂತ ಗಮನಾರ್ಹವಾದದ್ದು ಹಾಗೂ ಹೆಚ್ಚು ಲಾಭದಾಯಕವಾದದ್ದು ಆಗಿತ್ತು. ಆದರೆ ಮೆಡಿಟರೇನಿಯನ್ ಸಮುದ್ರದಲ್ಲಿ ಅವರ ಸ್ಥಾನ ಮತ್ತು ಅವರ ನೌಕಾಸಾರಿಗೆಯ ಅಪರಿಪೂರ್ಣತೆಯಿಂದಾಗಿ ಅವರು ಭಾರತದೊಂದಿಗೆ ಸಮುದ್ರ ಸಾರಿಗೆಯ ನೇರ ಸಂಪರ್ಕ ಹೊಂದಲು ಪ್ರಯತ್ನ ಮಾಡಲಿಲ್ಲ. ಆದರೆ ಅವರ ವ್ಯಾಪಾರಿ ಸಾಹಸ ಪ್ರವೃತ್ತಿಯು ಅವರನ್ನು ಇಡುಮಿಯಿಂದ ಪಶ್ಚಿಮಕ್ಕೆ ಅರೇಬಿಯನ್ ಕೊಲ್ಲಿಯ ಅಡಿಯಲ್ಲಿರುವ ಕೆಲವು ಬಂದರುಗಳೊಂದಿಗೆ ವ್ಯಾಪಾರಿ ಸಂಪರ್ಕಗಳನ್ನು ಇಟ್ಟುಕೊಳ್ಳುವಂತೆ ಮಾಡಿತು. ಈ ಬಂದರುಗಳಿಂದ ಒಂದೆಡೆ ಅವರು ಭಾರತದೊಂದಿಗೆ ಮತ್ತು ಇನ್ನೊಂದೆಡೆ ಆಫ್ರಿಕಾದ ಪೂರ್ವ ಹಾಗೂ ದಕ್ಷಿಣ ಕೊಲ್ಲಿಗಳೊಂದಿಗೆ ವ್ಯಾಪಾರಿ ಸಂಪರ್ಕವನ್ನು ಬೆಳೆಸಿದರು. ಇದು ಏನೇ ಇರಲಿ, ಅರೇಬಿಯನ್ ಕೊಲ್ಲಿಯಿಂದ ಝೈರೆ(Zyre) ವರೆಗಿನ ದೂರ ಗಮನಾರ್ಹವಾಗಿತ್ತು. ಮತ್ತು ಅಲ್ಲಿಗೆ ಭೂಮಾರ್ಗದಲ್ಲಿ ಸರಕು ಸಾಮಗ್ರಿಗಳ ಸಾಗಾಟ ಅತ್ಯಂತ ಕಷ್ಟಕರ ಹಾಗೂ ವ್ಯಾಪಕವಾಗಿತ್ತು. ಆದುದರಿಂದಲೇ ಅವರು ಮೆಡಿಟರೇನಿಯನ್ ಸಮುದ್ರದಿಂದ ಅರೇಬಿಯನ್ ಕೊಲ್ಲಿಗೆ ಅತ್ಯಂತ ಸಮೀಪವಾಗಿರುವ ಫಿನೋಕೊಲರಾ (Phinocolura) ಬಂದರನ್ನು ವಶಪಡಿಸಿಕೊಳ್ಳಬೇಕಾಯಿತು. ಭಾರತದಿಂದ ಖರೀದಿಸಿದ ಎಲ್ಲಾ ಸರಕನ್ನು ಭೂಮಾರ್ಗವಾಗಿ ಅವರು ಈ ಬಂದರಿಗೆ ಕಳುಹಿಸುತ್ತಿದ್ದರು. ಏಕೆಂದರೆ, ಈ ಮಾರ್ಗ ಅರೇಬಿಯನ್ ಕೊಲ್ಲಿಯ ಎದುರಿನ ದಂಡೆಯಿಂದ ನೈಲ್ ನದಿಯವರೆಗೆ ಸರಕುಗಳನ್ನು ಕಳುಹಿಸುವ ಮಾರ್ಗಕ್ಕಿಂತಲೂ ಬಹಳ ಹತ್ತಿರವೂ ಹಾಗೂ ಅಧಿಕ ವ್ಯಾವಹಾರಿಕವೂ ಆಗಿತ್ತು. ರ್‍ಹಿನೋಕೋಲುರಾದಿಂದ ಸಾಮಗ್ರಿಗಳನ್ನು ಪುನಃ ಹಡಗಿಗೆ ತುಂಬಿ ಜಲಮಾರ್ಗದಿಂದ ಸರಳವಾಗಿ ಟೈರೆಗೆ (Tyre) ಕಳುಹಿಸಿ ಅಲ್ಲಿಂದ ಅವುಗಳನ್ನು ಜಗತ್ತಿನಾದ್ಯಂತ ಹಂಚಿದರು. ಈ ಮಾರ್ಗ ಭಾರತ ಸಂಪರ್ಕವಿಟ್ಟುಕೊಂಡ ಅಧಿಕೃತ ಮಾರ್ಗಗಳಲ್ಲಿಯೇ ಅತ್ಯಂತ ಹಳೆಯದಾಗಿದೆ ಮತ್ತು ಪೂರ್ವದಲ್ಲಿ ಆಧುನಿಕ ನೌಕಾ ಮಾರ್ಗಗಳ ಸಂಶೋಧನೆಯ ಮುಂಚೆ ಅಸ್ತಿತ್ವದಲ್ಲಿರುವ ಹಲವಾರು ಮಾರ್ಗಗಳಲ್ಲಿಯೇ ಇದು ಅತ್ಯಂತ ಹಳೆಯ ಮಾರ್ಗವಾಗಿತ್ತು ಮತ್ತು ಅನೇಕ ಲಾಭಗಳನ್ನು ಹೊಂದಿತ್ತು"[೧] ಫೊನಿಶಿಯನ್‌ರು ಭಾರತದೊಂದಿಗೆ ಸಂಬಂಧ ಇಟ್ಟುಕೊಂಡಿದ್ದಕ್ಕೆ ಸಾಕ್ಷಿಯಾಗಿ ಅವರು ತಮ್ಮ ಪತ್ರಗಳನ್ನು ಕೊಟ್ಟಿದ್ದು ರಾಬರ್ಟ್‌ಸನ್‌ನ ವಿಚಾರವನ್ನು ಸಮರ್ಥಿಸುವ ಮತ್ತೊಂದು ಪುರಾವೆಯಾಗಿದೆ. ನೆರೆಹೊರೆಯ ಫೊನಿಶಿಯನ್ಸ್‌ರಿಂದ ಪ್ರಚೋದಿಸಲ್ಪಟ್ಟೋ ಅಥವಾ ಇಲ್ಲದೆಯೋ ಸೊಲೊಮನ್ ರಾಜನು ಟೈರೆಯ ರಾಜನಾದ ಹಿರಾಮ(Hiram)ನ ಜೊತೆಗೂಡಿ ಎಲಾತ್ (Elath) ಹಾಗೂ ಎಜಾಯಿನ್‌ಗರ್ (Eziongeher)

---

೧. ಡಬ್ಲ್ಯೂ. ರಾಬರ್ಟ್‌ಸನ್ "ಡಿಸ್ಕ್ವಿಜಿಷನ್" ಪು. ೭–೮.
೨. ಜೆ. ಕಿಂಗ್ಸ್, ಪುಟ ೨೭.

ಎಂಬಲ್ಲಿ ಹಡಗುಗಳನ್ನು ನಿರ್ಮಿಸಿದನು. ಈ ನೌಕೆಗಳು ಫೊನಿಶಿಯನ್ನರ ನಾವಿಕರಿಂದ ಕಫಿರ್(Qphir)ಗೆ ಮುಟ್ಟಿದವು ಮತ್ತು ತಂದ ಸಂಪತ್ತನ್ನು ಇಬ್ಬರು ತಮ್ಮೊಳಗೆ ಹಂಚಿಕೊಂಡರು. 'ಕಫಿರ್' ನೆಲೆ ಯಾವುವು ಎಂಬುದು ಬಗೆಹರಿಯದ ವಿಷಯವಾಗಿದೆ. ಆದರೆ ಎಲ್ಲಾ ವ್ಯಾವಹಾರಿಕ ಉದ್ದೇಶಗಳಿಗಾಗಿ ಪ್ರೊ. ಲಾಸೆನ್ನರು ಭಾರತದ ಗುಜರಾತ್ ಪ್ರಾಂತ್ಯದಲ್ಲಿ ಈ ಊರು ಇತ್ತು ಎಂದು ಗುರುತಿಸಿ ಎಲ್ಲಾ ವಿವಾದಗಳಿಗೆ ತೆರೆ ಎಳೆದಿದ್ದಾರೆ. ಮೂರು ವರ್ಷಗಳ ಸಮಯದಲ್ಲಿ ಜಲಪರ್ಯಟನೆ ಪುನರಾವೃತ್ತಿಯಾಯಿತು. ಹಡಗುಗಳು ಎಲ್ಲಾ ಅಮೂಲ್ಯ ಸರಕುಗಳಿಂದ ತುಂಬಿಹೋದವು. ಇದರಿಂದಾಗಿ ಈ ದೇಶ ಎಷ್ಟು ಶ್ರೀಮಂತವಾಗಿತ್ತೆಂದರೆ "ಜೆರುಸಲೇಮ್‌ನಲ್ಲಿ ಬೆಳ್ಳಿಯನ್ನು ಕಲ್ಲಿನಂತೆ ಧಾರಾಳವಾಗಿ ಲಭ್ಯವಿರುವಂತೆ ರಾಜನು ಕಾರ್ಯ ಕೈಗೊಂಡನು ಮತ್ತು ಅಮೂಲ್ಯ ಸೈಕಾಮೋರ್ ಗಿಡಗಳನ್ನು ದೇವದಾರು ಗಿಡಗಳಂತೆ ಬಳಸಿಕೊಳ್ಳಲಾಯಿತು." ಹೀಗೆ ವ್ಯಾಪಾರದಿಂದಾಗುವ ಎಲ್ಲಾ ಅನುಕೂಲತೆಗಳನ್ನು ಜನರಿಗಾಗಿ ಪಡೆಯಲಾಯಿತು." ಮತ್ತು ಜೊತೆಗೆ ಅದರಿಂದಾಗಬಹುದಾದ ಅನಾಹುತಗಳ ಕಲ್ಪನೆಯನ್ನು ಅವರಿಗೆ ನೀಡಲಾಯಿತು. ಆದುದರಿಂದಲೇ ಡೀನ್ ಸ್ಟ್ಯಾನ್‌ಲಿಯವರು (ಸೆನಾಯಿ ಮತ್ತು ಪಾಲಿಸ್ಟಿನ್ ಪು. ೨೬೧) "ಎಲ್ಲಿಗೆ ಯುದ್ಧದ ಹಡಗುಗಳು ಹೋಗಲಾರವೋ ಮತ್ತು ಬೆಡಗು ಹಡಗುಗಳು ಆ ಪ್ರದೇಶವನ್ನು ದಾಟಲಾರವೋ ಅಂತಹ ಸ್ಥಳವೇ ರಾಜಧಾನಿ." (ಇಸೈಯಾ– xxxiii ೨೧) ಇದೊಂದು ಪಾಶ್ಚಿಮಾತ್ಯರು ಕಲ್ಪಿಸಿಕೊಂಡಂತೆ ಅದು ದೌರ್ಜನ್ಯ ಅಥವಾ ಅಪಾಯದ ಸೂಚನೆಯೇನಲ್ಲ. ಆದರೆ ಅದು ಸಮೃದ್ಧಿಯ ಮತ್ತು ಭದ್ರತೆಯ ದ್ಯೋತಕವಾಗಿದೆ" ಎಂದಿದ್ದಾರೆ.

ಭಾರತ ಮತ್ತು ಜುಡೋದ ವ್ಯಾಪಾರ (Judea) ವ್ಯಾಪಾರ ಸೊಲೋಮನ್ ದೊರೆಯ ಕಾಲದಲ್ಲಿ ಶುರುವಾಗದೆ ಅದರ ಹಿಂದಿನ ಪ್ರಾಚೀನ ಕಾಲದಲ್ಲಿ ಪ್ರಾರಂಭವಾಗಿರುತ್ತದೆ. ಉದಾಹರಣೆಗೆ 'ಫಿರ್' ವ್ಯಾಪಾರಿ ಸ್ಥಳದಲ್ಲಿ ಸೊಲೋಮನ್ ದೊರೆ ಬರುವುದಕ್ಕಿಂತಲು ಮುಂಚೆ ವ್ಯಾಪಾರ ನಡೆಯುತ್ತಿತ್ತೆಂಬ ಸಂಗತಿ ಕಂಡುಬರುತ್ತದೆ. (I Chronicles XXIX, 4, I kings XXII48, and in Isaiah, XIII 12.) ಮೇಲಾಗಿ ಬೈಬಲ್ ಸಹ ಈ ಪುರಾವೆಗಳಿಗೆ ಪೂರಕವಾಗಿದೆ. ಅನೇಕ ಭಾಷಾ ಶಾಸ್ತ್ರೀಯ ಪುರಾವೆಗಳನ್ನು ನೀಡಬಹುದು. ಉದಾಹರಣೆಗೆ, ಟುಕಿ (Tuki) ಎಂಬ ಹೆಬ್ರೂ ಶಬ್ದವು ನವಿಲು ಎಂಬ ಅರ್ಥದ ತಮಿಳು–ಮಲಯಾಳಂ ಟೋಕೆಯಿ(Tokei)ಯ ಸ್ವಲ್ಪ ಬದಲಾದ ರೂಪವೇ ಆಗಿದೆ. ಇದರಂತೆ ಅಫಿಲ್' ಎನ್ನುವ ಪದ ಹೆಬ್ರೂ ಪದ ಅಹಾಲಿಮ್ (Ahalim) ಅಥವಾ ಅಹೋಲೋತ (Aholoth) ಪದದ ಅಪಭ್ರಂಶವಾಗಿದೆ.+

ಬೆಬಿಲೋನಿಯಾದ ಉತ್ಥಾನ ಭಾರತದ ಪುರಾತನ ವಾಣಿಜ್ಯ ಚಟುವಟಿಕೆಗಳಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ. ಮೆಡಿಟರೇನಿಯನ್ ಸಮುದ್ರದಲ್ಲಿನ ಪರ್ಶಿಯನ್ ಕೊಲ್ಲಿಯಲ್ಲಿನ ನದಿಗಳಾದ ಯುಫರೇಟಸ್ ಮತ್ತು ಟೈಗ್ರಿಸ್ ನದಿಗಳ ಕೂಡುವಿಕೆಯಲ್ಲಿ ಏಶಿಯಾದ ಮೇಲಿನ ಹಾಗೂ ಕೆಳಗಿನ ಭಾಗ ಒಂದಾಗುವ ಸ್ಥಳವಿರುವ 'ಬೆಬಿಲೋನ್' ಪೂರ್ವಾತ್ಯ ಮತ್ತು ಪಾಶ್ಚಿಮಾತ್ಯ ವ್ಯಾಪಾರದ ಮಹಾ ವ್ಯಾಪಾರಿ ಮಳಿಗೆಯಾಗಿತ್ತು. ಪ್ರಾಚೀನ ಜಗತ್ತಿನ ಎಲ್ಲಾ ಭಾಗಗಳಿಂದ ಬರುವ ರಸ್ತೆಗಳ ಕೂಡು ಸ್ಥಳವಾಗಿತ್ತು. ಕ್ರಿ.ಪೂ. ಆರನೆಯ ಅಥವಾ ಏಳನೆಯ ಶತಮಾನದಲ್ಲಿ ಅದರಲ್ಲೂ ಮುಖ್ಯವಾಗಿ ಕ್ರಿ.ಪೂ. ೬ನೇ ಶತಮಾನದಲ್ಲಿ ಬಹು ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬ ನಂಬಿಕೆಯನ್ನು ನಾವು ಒಪ್ಪಿಕೊಳ್ಳುವಂತೆ ಮಾಡಲು ಸಾಕಷ್ಟು ಪುರಾವೆಗಳಿವೆ ಎಂದು ಮಿ. ಕೆನಡಿ ಹೇಳುತ್ತಾರೆ. ಆರ್ಯನ್‌ರ ಪಾಲು ಸ್ವಲ್ಪ ಇದ್ದರೂ ಅದು ಹೆಚ್ಚಾಗಿ ದ್ರಾವಿಡರ ಕೈಯಲ್ಲಿ ಇತ್ತು ಮತ್ತು

+. Cf. E.J.ಸಿಮ್‌ಕಾಕ್ಸ್– "ಪ್ರಿಮಿಟಿವ್ ಸಿವಿಲಿಝೇಷನ್ಸ್', ಸಂ. ೧, ಪು. ೫೪೫

ಭಾರತೀಯ ವ್ಯಾಪಾರಿಗಳು ಅರೇಬಿಯಾ, ಆಫ್ರಿಕಾದ ಪೂರ್ವ ಕರಾವಳಿ ಮತ್ತು ಚೈನಾದ ಕರಾವಳಿಯಲ್ಲಿ ನೆಲೆಸಿದಂತೆಲ್ಲಾ ಅವರು ಬೆಬಿಲೋನ್‌ಗೆ ನೆಲೆಸಲು ಹೋಗಲಿಲ್ಲವೆಂಬುದನ್ನು ನಂಬಲಾರರು. ಆದರೆ ೬ನೆಯ ಮತ್ತು ೭ನೆಯ ಶತಮಾನಗಳು ಬೆಬಿಲೋನದ ದೊಡ್ಡತನದ ಅವಧಿಯಾಗಿತ್ತು. ಮುಂದುವರಿದು, ಬೆಬಿಲಾನ್ 'ಸಂತಾಚೆರಿಬ್'ನವರಿಂದ ನಾಶ ಮಾಡಲ್ಪಟ್ಟಿತು ಹಾಗೂ ಎಸ್ರಾಹಡನ್(Esarhaddon)ದಿಂದ ಪುನರ್ ನಿರ್ಮಾಣಗೊಂಡಿತ್ತು. ಹಿಂದೆ ಬೆಬಿಲೋನ ತನ್ನ ದೇವಾಲಯಗಳಿಂದಾಗಿ ಪ್ರಸಿದ್ಧಿಯನ್ನು ಪಡೆಯಿತು. ಈಗ ಒಮ್ಮೆಲೆ ಅದು ಜಗತ್ತಿನ ಅತಿ ದೊಡ್ಡ ವ್ಯಾಪಾರಿ ಕೇಂದ್ರವಾಗಿ ಮುಂದೆ ಬಂದು ಹೆಸರನ್ನು ಪಡೆದಿದೆ. ಅದು ತನ್ನ ಪುರಾತನ ಶೋಷಿತ ಮತ್ತು ಪ್ರಾಚೀನ ವೈರಿಯಾದ ನೈನೆವಾ(Nineveh)ವನ್ನು ಸಂಪೂರ್ಣವಾಗಿ ಸೋಲಿಸಿತು ಮತ್ತು ಹಿಂದೆ ಹಾಕಿತು. ನೆಬುಛಾದ್ನೆಝಾರ (Nebuchadnezzar) ಅವರೊಂದಿಗೆ ಜಾಗತಿಕ ವಿಷಯವಾಯಿತು... ಪೌರ್ವಾತ್ಯದ ಸಂಪತ್ತನ್ನು ಹೊಂದಿರುವ ಏಕಸ್ವಾಮ್ಯತೆಯಲ್ಲಿ, ಅವರ ಚಾಲ್ಡಿಯನ್‌ರ ಒದರಾಟದಲ್ಲಿ ಮತ್ತು ತನ್ನ ದೇಶದ ದರಿದ್ರರನ್ನು ನಿಯಮಿತವಾಗಿ ಭೇಟಿ ಮಾಡಲು ಅವಕಾಶ ಮಾಡಿಕೊಡುವ ನೀಟಾದ ಪೌರಾತ್ಯ ಜನರಲ್ಲಿ ಬೆಬಿಲೋನದ ದೊಡ್ಡಸ್ಥಿಕೆ ಅಡಗಿತ್ತು. ಅದು ಹಲವಾರು ರಾಷ್ಟ್ರಗಳ ಹೊಟ್ಟೆಕಿಚ್ಚಿಗೆ ಗುರಿಯಾಯಿತು. ನೈಲ್ ನದಿಯಿಂದ ಕೆಂಪು ಸಮುದ್ರದವರೆಗೆ ಮೊದಲನೆಯ ಸೇಟಿ ನಿರ್ಮಿಸಿದ ಕಾಲುವೆಯನ್ನು ಪುನರಾಂಭಿಸಲು ಪಹರೋನಿಕೊ (೬೧೨–೫೯೬ ಕ್ರಿ.ಪೂ.) ತನ್ನ ಪ್ರಜೆಗಳನ್ನು ವ್ಯರ್ಥವಾಗಿ ಕಳೆದುಕೊಂಡನು. ಅವನು ವ್ಯಾಪಾರಕ್ಕಾಗಿ ಒಂದು ಹೊಸ ಜಗತ್ತನ್ನೇ ಹುಡುಕುವ ಸಲುವಾಗಿ ತನ್ನ ಫೊನಿಶಿಯನ್ ನೌಕಾಪಡೆಯನ್ನು ಆಫ್ರಿಕಾದ ಸುತ್ತ ಕಳುಹಿಸಿದನು. ಬಹಳ ಹಿಂದೆ ಭಾರತದ ಸಂಪತ್ತನ್ನು ದೋಚುವಲ್ಲಿ ಸ್ಪೇನ್ ಮತ್ತು ಪೋರ್ಚುಗೀಸರ ನಡುವಿನ ಪೈಪೋಟಿಯಂತೆ... ಬೆಬಿಲೋನ ಹಾಗೂ ಸ್ಪೇನದವರ ಮಧ್ಯ ಅದೇ ಉಂಟಾಯಿತು. ಆಗ ಜಗತ್ತು ಇನ್ನೂ ೨೧ ಶತಮಾನದಷ್ಟು ಯುವಕ(ಅಥವಾ ಕಡಿಮೆ ವಯಸ್ಸಿನ)ವಾಗಿತ್ತು.+ ದೇಶಗಳ ಈ ವ್ಯಾಪಾರ ವಿನಿಮಯ ಭಾರತೀಯ ಸಾಹಿತ್ಯದ ಮೇಲೆ ತನ್ನ ನಿರ್ಣಾಯಕ ಪ್ರಭಾವವನ್ನು ಬೀರಿತು. ಇಲ್ಲಿ ಸಮುದ್ರವು ಮಹತ್ವದ ಪಾತ್ರವನ್ನು ವಹಿಸಿತು ಮತ್ತು 'ಮೊಕರ' (Moker) ಎಂಬ ದೈತ್ಯ ಮೀನು ಸತತವಾಗಿ ಕೈಗೆ ಸಿಗಲಿಲ್ಲ. ವೇದಕಾಲದ ದೇವರುಗಳು ಈ ಹಿನ್ನೆಲೆಯಲ್ಲಿ ಪ್ರಸಿದ್ಧಿಗೆ ಬಂದಿವೆ. ಹಾಗೂ ಮನಸ್ಸು ವಿಶಿಷ್ಟವಾದ ವಿಶ್ವಸೃಷ್ಟಿಯನ್ನು ಹುಡುಕುವಲ್ಲಿ ಬಹಳ ಎತ್ತರದಲ್ಲಿ ತೇಲಾಡುತ್ತಿತ್ತು. ಉದಾಹರಣೆಗೆ, ವಿಷ್ಣುಪುರಾಣದಲ್ಲಿ "ಭಗವಂತನು ಭೂಮಿಯನ್ನು ಸಮುದ್ರದಿಂದ ಎತ್ತರ ಸ್ಥಾನದಲ್ಲಿ ಇಟ್ಟಿದ್ದಾನೆ, ಅದು ಬೃಹತ್ ಹಡಗಿನಂತೆ ಸಮುದ್ರದಲ್ಲಿ ತೇಲುತ್ತದೆ ಮತ್ತು ಅದು ತನ್ನ ವಿಶಾಲವಾದ ಸಮಪಾತಳಿಯ ನೀರಲ್ಲಿ ಮುಳುಗುವುದಿಲ್ಲ" ಎಂಬ ಕಲ್ಪನೆ ಭಾರತೀಯರಲ್ಲಿ ಇತ್ತು. ಈ ಕಲ್ಪನೆ ಅಂದಿನ ವಾಣಿಜ್ಯಶಾಹಿಗಂಧದಲ್ಲಿ ಇತ್ತು ಮತ್ತು ಅದು ಪ್ರಾಚೀನ ವೇದ ಸಾಹಿತ್ಯದಿಂದ ಮೂಲತಃ ಭಿನ್ನವಾಗಿತ್ತು. ಬ್ರಾಹ್ಮಣಗಳ ಇಡಿ ಅವಧಿಯಲ್ಲಿ ವೇದದ ಮೂಲ ಪದಗಳ ಉದ್ದೇಶ ಹೇಗೆ ಸಂಪೂರ್ಣವಾಗಿ ತಪ್ಪು ತಿಳಿಯಲ್ಪಟ್ಟಿದೆ ಎಂಬುದನ್ನು ಪ್ರೊ. ಮಾಕ್ಸ್ ಮುಲ್ಲರರು ತಮ್ಮ "ಪ್ರಾಚೀನ ಸಂಸ್ಕೃತ ಸಾಹಿತ್ಯದ ಇತಿಹಾಸ"ದಲ್ಲಿ ಹೇಳಿದ್ದಾರೆ. ಈ ಮನಸ್ಸು ಕೆಡಿಸಿಕೊಳ್ಳುವಿಕೆ ವಿದೇಶಿ ಪ್ರಭಾವದಿಂದ ಉಂಟಾಗಿದೆ ಎಂದು ಹೇಳಬಹುದು ಮತ್ತು ಅದನ್ನು ವ್ಯಾಪಾರದ ಹೆಜ್ಜೆಗಳ ಪ್ರಭಾವಕ್ಕೆ ಒಳಪಟ್ಟಿದೆ ಎನ್ನಬಹುದು. ಭಾರತದ ಮೇಲಿನ ಈ ವಿದೇಶಿ ಪ್ರಭಾವದ ಒತ್ತು ೬ನೇ, ೭ನೇ ಮತ್ತು ೮ನೇ ಶತಮಾನದಲ್ಲಿತ್ತು. ಆದರೆ ಅದು ನಿಸ್ಸಂಶಯವಾಗಿ ಬುದ್ಧನ ನಂತರದ ಕಾಲದಲ್ಲಿ ಇರಲಿಲ್ಲ."[1]

+. ಜೆ. ಕೆನಡಿ, ಜೆ.ಆರ್.ಎ.ಯಸ್, ೧೮೯೮, ಪು. ೨೭೦–೧.

ಏಕೆಂದರೆ ಈ ಮಹಾಗುರು ಇಡಿ ಭಾರತವು ಆತ್ಮದ ಪರಕಾಯ ಪ್ರವೇಶ ಜ್ಞಾನದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದಿತು ಮತ್ತು ಈ ಜ್ಞಾನ ವೇದದ ಸಿದ್ಧಾಂತವಾಗಿಲ್ಲವಾದುದರಿಂದ ಅದು ಪರದೇಶದ್ದಾಗಿರಬೇಕೆಂದು ಕಂಡರು. ಹಿಂದೂಗಳ ಸಮುದ್ರ ವ್ಯಾಪಾರಿ ಚಟುವಟಿಕೆಗಳು ಅದೇ ಕಾಲದಿಂದ ಪ್ರಾರಂಭವಾದವು ಎಂದು ಗ್ರಹಿಸುವುದು ತಪ್ಪು. ಸಮುದ್ರ ಕೃಷಿ ಆಗಲೇ ಭಾರತೀಯರ ಒಂದು ಚಟವಾಗಿತ್ತು. ಬುದ್ಧನು ತನ್ನ (ಕ್ರಿ.ಪೂ. ೫ನೇ ಶತಮಾನದ) 'ಕೊವದ್ದು ಸುತ್ತಾ ಆಫ್ ದ ಢಿಗಾ'(Kovaddu Sutta of The Digha)ದಲ್ಲಿ ಉದಾಹರಣಾರ್ಥವಾಗಿ ಹೀಗೆ ಹೇಳಿದ್ದಾನೆ. "ಬಹಳ ಹಿಂದಿನ ಕಾಲದಿಂದಲೂ ಸಮುದ್ರ ಪ್ರಯಾಣ ಮಾಡುವ ವ್ಯಾಪಾರಿಗಳು ಸಮುದ್ರದಲ್ಲಿ ಇಳಿಯುವುದಕ್ಕಿಂತ ಮುಂಚೆ ಅವರು ತಮ್ಮ ಜೊತೆಯಲ್ಲಿ ಕರಾವಳಿ ಜೇಪಿ ಪಕ್ಷಿಯನ್ನು ಒಯ್ಯುವ ರೂಢಿಯನ್ನಿಟ್ಟುಕೊಂಡಿದ್ದರು. ಹಡಗು ನೀರಿನಲ್ಲಿ ಇಳಿದ ಕೂಡಲೇ ಈ ಪಕ್ಷಿಯನ್ನು ಸ್ವತಂತ್ರವಾಗಿ ಹಾರಲು ಬಿಡುತ್ತಿದ್ದರು. ಅದು ಪೂರ್ವಕ್ಕೆ, ದಕ್ಷಿಣಕ್ಕೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಹಾಗೂ ಮಧ್ಯಾಂತರ ದಿಕ್ಕುಗಳಿಗೆ ಹೋಗುತ್ತಿತ್ತು ಮತ್ತು ತಾನೇ ಮೇಲಕ್ಕೆ ಸಹ ಹೋಗುತ್ತಿತ್ತು. ಅದು ದಿಗಂತದಲ್ಲಿ ಹಾರುವಾಗ ಭೂಮಿಯನ್ನು ಕಂಡರೆ ಮತ್ತೆ ಅದು ಹಡಗಿನ ಕಡೆಗೇ ಬರುತ್ತಿತ್ತು. ಸಹೋದರನೇ ಹೀಗೆ..." ಸಾಮಾನ್ಯ ಮಾತಿನಲ್ಲಿ ಇಂತಹ ಉಪಮೆಯನ್ನು ಯಾರೂ ಉಪಯೋಗಿಸುವುದಿಲ್ಲ. ಒಂದು ವೇಳೆ ಇಂತಹ ಉಪಮೆಗಳನ್ನು ಮನುಷ್ಯನ ಯಾವುದಾದರೂ ನಿಲುವನ್ನು ಹಾಗೂ ಪ್ರಾಪಂಚಿಕ ಜ್ಞಾನವನ್ನು ಹೇಳಲು ಈ ರೀತಿ ಮಾತಾಡಬಹುದು" ಎಂದು ರೈಸ್ ಡೇವಿಡರು ಅಭಿಪ್ರಾಯಪಟ್ಟಿರುತ್ತಾರೆ.[೨]

ಮೇಲಿನ ವಿಷಯ ಏನೇ ಇರಲಿ, ಬ್ಯಾಬಿಲೋನದ ಅವನತಿ ಅದರ ಆರೋಹಣದಷ್ಟೇ ಕ್ಷಿಪ್ರವಾಗಿತ್ತು ಹಾಗೂ ದರಿಯಸ್ (Darius) ರಾಜ(೫೨೮–೪೮೪ ಕ್ರಿ.ಪೂ.)ನ ಆಳ್ವಿಕೆಯಲ್ಲಿ ಉಂಟಾಯಿತು. ಐದನೆಯ ಶತಮಾನದ ನಂತರ ಪ್ರಾಚೀನ ಕಾಲದಲ್ಲಿದ್ದಂತೆ ವ್ಯಾಪಾರಿ ಶಾಸನ ಘಟಕಗಳನ್ನು ಮತ್ತೆ ನಾವು ಕಾಣುವುದಿಲ್ಲ. ಪರ್ಷಿಯಾದ ವಿಜಯವು ಕೇವಲ ಬ್ಯಾಬಿಲೋನ್‌ನ್ನು ನಾಶಪಡಿಸದೆ ಈಜಿಪ್ತನ್ನು ಸಹ ಹಾಳುಮಾಡಿತು. ನದಿ ಜಲಮಾರ್ಗಗಳಿಗಾಗಿ ಕಟ್ಟಲ್ಪಟ್ಟ ಕಾಲುವೆಗಳು ನಿರ್ನಾಮವಾದವು ಮತ್ತು ಅಣೆಕಟ್ಟಿನ ನಿರ್ಮಾಣದಿಂದಾಗಿ ನದಿಯ ನೀರಿನ ಹರಿತವನ್ನು ನಿಲ್ಲಿಸಲಾಯಿತು. ಇದರ ಪರಿಣಾಮವಾಗಿ ಅರಬರು ವ್ಯಾಪಾರದ ವಾಹಕರಾದರು ಮತ್ತು ಯಮೆನ್, ಬ್ಯಾಬಿಲೋನ ಮತ್ತು ಪಾಲ್ಮೈರ್ಸ್(Palmyrs)ಗಳ ವೈಭವದಲ್ಲಿ ಆಸಕ್ತಿ ವಹಿಸಿತು. ದರಿಯಸ್ (Darius) ದೊರೆಯ ಧಾಳಿಗಳು ಜಾರಿಯಲ್ಲಿದ್ದರೂ ಚಾಲ್ಡಿಯನ್‌ರು (Chaldeans) ಗೆರಾ ಹಾಗೂ ಇನ್ನಿತರ ಸ್ಥಳಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿ ತಮ್ಮ ವ್ಯಾಪಾರವನ್ನು ಮುಂದುವರಿಸಿದರು.

ದರಿಯಸ್‌ನ ವಿಜಯಗಳು ಅವನಿಗೆ ತಂದುಕೊಟ್ಟ ದೊಡ್ಡ ಸಾಮ್ರಾಜ್ಯವು ಅಲೆಕ್ಸಾಂಡರ್ ದೊರೆಯ ಸಾಮ್ರಾಜ್ಯದ ಪಕ್ಕದಲ್ಲಿಯೇ ಇತ್ತು. ಇಡಿ ಭೂಮಂಡಲವನ್ನೇ ಆಳಬೇಕೆಂಬ ದಾಹವಿದ್ದ ಈ ಎರಡೂ ಸಾಮ್ರಾಟರು ಒಳ್ಳೆಯ ನೆರೆಹೊರೆಯವರಂತೆ ಇರಲು ಸಾಧ್ಯವಿರಲಿಲ್ಲ. ಘರ್ಷಣೆ ಉದ್ಭವಿಸಲೇಬೇಕಾಗಿತ್ತು ಮತ್ತು ಅಲೆಕ್ಸಾಂಡರ್‌ನು ಅಂಥ ಒಂದು ಅವಕಾಶಕ್ಕಾಗಿ ಕಾಯುತ್ತಿದ್ದನು. ಕೊನೆಗೆ ಒಂದೇ ಹೊಡೆತಕ್ಕೆ ಆತ ದರಿಯಸ್‌ನ ಸಾಮ್ರಾಜ್ಯವನ್ನು ಧೂಳಿಪಟ ಮಾಡಿದನು ಹಾಗೂ ತನ್ನ ಸಾಮ್ರಾಜ್ಯವನ್ನು ಮಧ್ಯ ಏಶಿಯಾ ಹಾಗೂ ಉತ್ತರ ಇಂಡಿಯಾದವರೆಗೆ ವಿಸ್ತರಿಸಿದನು.

ಅಲೆಕ್ಸಾಂಡರನ ದೈತ್ಯ ದಾಳಿಯ ಹಿಂದಿನ ಪ್ರೇರಣೆಗಳೇನಿದ್ದವು ಎಂಬುದು ಊಹೆ ಮಾಡುವಂತಹ

---

೧. ರೆವರೆಂಡ್ ಜೋಸೆಫ್ ಎಡ್‌ಕಿನ್ಸ್ ಜೆ.ಆರ್.ಎ.ಎಸ್. ೧೮೮೬, ಪು.೬

೨. ಜೆ.ಆರ್.ಎ.ಎಸ್. ಸಂ. ೩೧, ಪು. ೪೩೨.

ವಿಷಯವಾಗಿದೆ. ದರಿಯಸ್‌ನಿಂದ ಹಿಂದೆ ತಾನು ಅನುಭವಿಸಿದ ಅವಮಾನದ ಸೇಡನ್ನು ತೀರಿಸಿಕೊಳ್ಳುವುದು ಒಂದು ಕಾರಣವಾಗಿತ್ತು. ಪ್ರೊ. ಲಾಸ್ಸೆನ್‌ರು (ಅವರ ವಾದ ಆಮೂಲಾಗ್ರ ಅಥವಾ ಸುಧಾರಣಾತ್ಮಕವಾಗಿದ್ದರೂ) ಬಂಗಾರ ಹೊಂದುವ ದುರಾಸೆಯೇ ಅವನ ದಾಳಿಯ ಉದ್ದೇಶವಾಗಿತ್ತು ಮತ್ತು ಈ ದುರಾಸೆ ಗ್ರೀಸ್‌ನಲ್ಲಿದ್ದ ಭಾರತೀಯ ಸರಕುಗಳ ಇರುವಿಕೆಯಿಂದ ಈಡೇರಿತೆಂದು ಹೇಳುತ್ತಾರೆ. ಗ್ರೀಸ್ ಹಾಗೂ 'ಜುಡೆ ಆ' (Judea) ಜೊತೆಗಿನ ವಾಣಿಜ್ಯ ಇವರಾಡುವ ಭಾಷೆಯ ಮೇಲೆ ಪ್ರಭಾವವನ್ನು ಬೀರಿತು. ಉದಾಹರಣೆಗೆ ಭತ್ತಕ್ಕೆ 'ಒರಿಜಾ', ಶುಂಠಿಗೆ 'ಜಿಂಗಿಬೇರ್' (Zingiber) ಮತ್ತು ದಾಲಚಿನ್ನಿಗೆ 'ಕಾರ್‌ಪಿಯೊನ್' (Karpion) ಎನ್ನುವ ಗ್ರೀಕ್ ಶಬ್ದಗಳು ಕ್ರಮವಾಗಿ ತಮಿಳು ಶಬ್ದಗಳಾದ 'ಅರಿಸಿ' (arisi), 'ಇಂಚಿವರ್' (inchiver) ಮತ್ತು 'ಕರವಾ' (Karava) ಎಂಬ ಶಬ್ದಗಳಿಗೆ ಸಮನಾಗಿವೆ. ಗ್ರೀಕ್ ಮತ್ತು ತಮಿಳು ಶಬ್ದಗಳ ನಡುವಿನ ಸಾಮ್ಯತೆ, ಗ್ರೀಕ್ ವ್ಯಾಪಾರಿಗಳು ತಮಿಳುನಾಡಿನಿಂದ ಈ ವಸ್ತುಗಳನ್ನು ಹಾಗೂ ಅವರ ಹೆಸರುಗಳನ್ನು ಯೂರೋಪಿಗೆ ಕೊಂಡೊಯ್ದರು ಎಂಬುದನ್ನು ಸೂಚಿಸುತ್ತದೆ. ಇದಲ್ಲದೆ ಪಾಶ್ಚಿಮಾತ್ಯ ವ್ಯಾಪಾರಸ್ಥರು ಅಂದು 'ಯವನ'ರೆಂದು ಪ್ರಸಿದ್ಧರಾಗಿದ್ದರು. ಈ ಶಬ್ದ ಗ್ರೀಕರಿಗೆ ಅನ್ವಯವಾಗುತ್ತಿತ್ತು ಎಂಬುದು ಹಳೇ ಸಂಸ್ಕೃತ ಕಾವ್ಯಗಳಿಂದ ಗೊತ್ತಾಗುತ್ತದೆ ಮತ್ತು ಈ ಶಬ್ದ ಗ್ರೀಕ್ ಶಬ್ದ 'ಜವೊನಿಸ್'ದಿಂದ ಬಂದಿರುತ್ತದೆ ಹಾಗೂ ಗ್ರೀಕ್ ಭಾಷೆಯಲ್ಲಿ 'ಜವೊನಿಸ್' ಎಂದರೆ 'ಗ್ರೀಕ್' ಎಂದರ್ಥವಾಗುತ್ತದೆ.[೧] ಒಂದೇ ಮೂಲದಿಂದ ಉತ್ಪತ್ತಿಯಾದ ಶಬ್ದಗಳಿಗೆ ಇನ್ನೊಂದು ಒಂದೇ ಮೂಲದಿಂದ ಬಂದ ಶಬ್ದಗಳನ್ನು ನಾವು ಸೇರಿಸಬಹುದು. ಉದಾಹರಣೆಗೆ ಇಂಗ್ಲಿಷಿನ 'ಹಸ್ತಿ' (Ivory) ಅಥವಾ 'ಆನೆ'(elephant)ಗೆ ಗ್ರೀಕ್ ಭಾಷೆಯಲ್ಲಿ "ಎಲಿಫೆಸ್", ಈಜಿಪ್ಟಿಯನ್ ಭಾಷೆಯಲ್ಲಿ "ಎಬು" ಮತ್ತು ಸಂಸ್ಕೃತದಲ್ಲಿನ "ಎಬಾ" ಶಬ್ದಗಳು ಸಮಾನವಾಗಿವೆ ಮತ್ತು ಇವೆಲ್ಲವುಗಳು ಸಂಸ್ಕೃತ ಮೂಲದಿಂದ ಹುಟ್ಟಿದ ಶಬ್ದಗಳು ಎಂದು ಪ್ರೊ. ಲಾಸೆನ್‌ರು ಅಭಿಪ್ರಾಯ ಪಟ್ಟಿದ್ದಾರೆ.

ಭಾರತದ ಮೇಲಿನ ಅಲೆಗ್ಝಾಂಡರನ ಧಾಳಿಗೆ ಯಾವುದೇ ಪ್ರೇರಣೆಗಳಿದ್ದರೂ, ಭಾರತವನ್ನು ಆತ್ಮೀಯವಾಗಿ ಬಲ್ಲ ಆತನು, ತನ್ನ ದೇಶ ಮತ್ತು ಭಾರತದ (ಅಂದರೆ ಎರಡೂ ರಾಷ್ಟ್ರಗಳ) ನಡುವೆ ನಿಕಟ ವ್ಯಾಪಾರಿ ಸಂಬಂಧವನ್ನು ಬೆಳೆಸುವ ವಿಚಾರವನ್ನು ಹೊಂದಿದ್ದನು. ಭಾರತದ ಶ್ರೀಮಂತ ವ್ಯಾಪಾರವನ್ನು ಝೈರೆ (Zyre)ಯ ಫೊನಿಶಿಯನ್‌ರು ಗುತ್ತಿಗೆ ತೆಗೆದುಕೊಂಡು ಭಾರತದ ಸರಕುಗಳನ್ನು ಇಡಿ ಜಗತ್ತಿಗೆ ಪೂರೈಕೆ ಮಾಡುತ್ತಿರುವುದನ್ನು ಮನಗಂಡನು. ಭಾರತದ ಐಶ್ವರ್ಯದ ಬಗೆಗಿನ ಅವನ ವೈಯಕ್ತಿಕ ಜ್ಞಾನ ಅವನ ಫೊನಿಶಿಯನ್‌ರ ಮೇಲಿನ ದ್ವೇಷವನ್ನು ಮತ್ತಷ್ಟು ಹೆಚ್ಚಿಸಿತು. "ಭಾರತದ ಯಾವ ಭಾಗದಲ್ಲಿ ಅವನು ತನ್ನ ಸೈನ್ಯವನ್ನು ಬಿಟ್ಟಿದ್ದನೋ ಆ ಭಾಗವನ್ನು ಅವನು ನೋಡಿದಾಗ ಭಾರತ ತಾನು ಅದುವರೆಗೆ ನೋಡಿದ ರಾಷ್ಟ್ರಗಳಲ್ಲಿಯೇ ಅತ್ಯಂತ ಜನಸಾಂದ್ರತೆಯಿಂದ ಕೂಡಿದ, ಸರಿಯಾಗಿ ಸಾಗುವಳಿಗೆ ಒಳಪಟ್ಟ ಭೂಮಿಯನ್ನುಳ್ಳ ಪ್ರಾಕೃತಿಕ ಮತ್ತು ಕಲಾತ್ಮಕ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ ಅತ್ಯಂತ ಸಮೃದ್ಧಿಯನ್ನು ಹೊಂದಿದ ರಾಷ್ಟ್ರವಾಗಿ ಕಂಡಿತು. ಭಾರತ ಗಂಗಾ ನದಿಯಿಂದಾಚೆ ಬಹಳಷ್ಟು ಒಳಗಿದೆ ಮತ್ತು ಆ ಪ್ರದೇಶಗಳು ಸಹ ಸಮೃದ್ಧಿಯನ್ನು ಹೊಂದಿವೆ ಎಂಬ ಅತಿಶಯೋಕ್ತಿಯ ವರ್ಣನೆಯನ್ನು ಜನರಿಂದ ಕೇಳಿದ್ದನು. ಆದುದರಿಂದ ಈ ಪ್ರದೇಶಗಳೆಲ್ಲವನ್ನೂ ನೋಡಬೇಕು ಮತ್ತು ಕಬಳಿಸಬೇಕೆಂಬ ಅವನ ಆಶೆ ಅವನಿಗೆ ತನ್ನ ಸೈನ್ಯವನ್ನೆಲ್ಲಾ ಜಮಾಯಿಸುವಂತೆ ಮತ್ತೆ ಯಾವ ಭಾಗಗಳಲ್ಲಿ ಸಂಪತ್ತು, ದರ್ಪ ಹಾಗೂ

೧. ಆರ್.ಕೆ. ಮುಖರ್ಜಿ "ಇಂಡಿಯನ್ ಶಿಪ್ಪಿಂಗ್', ಪು. ೧೨೬.

ಖ್ಯಾತಿ ತನಗೋಸ್ಕರ ದಾರಿ ಕಾಯುತ್ತದೆಯೋ ಅಂತಹ ಪ್ರದೇಶಗಳಿಗೆ ಅದನ್ನು ಕಳುಹಿಸುವಂತೆ ಕಾರ್ಯ ಕೈಕೊಂಡದುದು ಆಶ್ಚರ್ಯವೇನಲ್ಲ."[೧]

ಅಲೆಗ್ಸಾಂಡರನು ತಾನು ವಶಪಡಿಸಿಕೊಂಡ ಉತ್ತರ ಭಾರತವನ್ನು ತನ್ನ ಮಿತ್ರ ರಾಜನಾದ ಪೋರಸ್‌ನಿಗೆ ನೀಡಿದನು. ಇದು "ನಾಲ್ಕು" ಸಾವಿರ ಜನರಿಗಿಂತ ಕಡಿಮೆ ಇರದ ಭೂ ಪ್ರದೇಶವಾಗಿತ್ತು. ಇದು ಅಂದಿನ ರಾಷ್ಟ್ರಗಳ ಮತ್ತು ನಗರಗಳ ಅತಿ ಹೆಚ್ಚಿನ ಜನಸಂಖ್ಯೆಯ ಬಗ್ಗೆ, ಅತ್ಯಂತ ಸಂಕುಚಿತ ಅರ್ಥದಲ್ಲಿ, ಸತ್ಯವನ್ನು ಸಾರುತ್ತದೆಂದು ರಾಬರ್ಟ್‌ಸನ್ ಟಿಪ್ಪಣಿ ಮಾಡಿದ್ದಾನೆ. ಅಲೆಗ್ಸಾಂಡರನ ಯುದ್ಧ ನೌಕೆಗಳು ಸಿಂಧೂ ನದಿಯ ಕೆಳಗಡೆ ಹೋದಂತೆ, ನದಿಯ ಎರಡೂ ದಂಡೆಗಳ ಭೂ ಪ್ರದೇಶ ಅಲೆಗ್ಸಾಂಡರನು ತಾನು ಪೋರಸ್‌ನಿಗೆ ಒಪ್ಪಿಸಿರುವ ಪ್ರದೇಶಕ್ಕಿಂತಲೂ ಯಾವ ರೀತಿಯಲ್ಲಿ ಕೀಳಾಗಿರಲಿಲ್ಲ."[೨]

ಅಲೆಗ್ಸಾಂಡರನ ಸೈನ್ಯಾಧಿಕಾರಿಗಳಾದ ಟೊಲಿಮಿ, ಅರಿಸ್ಟೊಬುಲಸ್ ಮತ್ತು ನಿಯರಟಿಸ್ ನೆನಪುಗಳು (memories) ಇಲ್ಲವೆ ಪ್ರಕಟಣೆಗಳು ಇಂಡಿಯಾದ ಬಗೆಗಿನ ಜ್ಞಾನವನ್ನು ಗ್ರೀಸ್‌ಗೆ ಮತ್ತು ಯುರೋಪಿಗೆ ತೆರೆದವು. ಈಜಿಪ್ತನ್ನು ಗೆದ್ದ ನಂತರ, ಅಲೆಗ್ಸಾಂಡರನು ಭಾರತ ಮತ್ತು ಗ್ರೀಸ್ ನಡುವಿನ ನೇರ ವ್ಯಾಪಾರದ ಬಗೆಗೆ ಯೋಚಿಸಿದನು. ಈ ಉದ್ದೇಶದಿಂದಲೇ ಆತ ತನ್ನದೇ ಆದ ಹೆಸರಿನ ಅಲೆಗ್ಸಾಂಡ್ರಿಯಾ ಎಂಬ ನಗರವನ್ನು ಸ್ಥಾಪಿಸಿದನು. ಇದು, ಪ್ರಾಚೀನ ಕಾಲದಲ್ಲಿ ಅತಿ ದೊಡ್ಡ ವ್ಯಾಪಾರದ ಮಳಿಗೆಯಾಗಿತ್ತು. ನಂತರ ಹಲವಾರು ಏರುಪೇರುಗಳು ಉಂಟಾದರೂ ಅದು ಹಾಗೇ ಪ್ರಮುಖ ನಗರವಾಗಿ ಮುಂದುವರಿಯುತ್ತಾ ಹೋಯಿತು. ಅಲೆಗ್ಸಾಂಡರ್ ಭಾರತವನ್ನು ತನ್ನ ಸಾಮ್ರಾಜ್ಯದೊಂದಿಗೆ ಕೂಡಿಸಿಕೊಳ್ಳುವ ಕನಸನ್ನು ನೋಡುತ್ತಿದ್ದನು. ಒಂದು ವೇಳೆ, ಆತ ಹೆಚ್ಚು ಕಾಲ ಜೀವಂತವಿದ್ದಿದ್ದರೆ ಆತನ ಹಲವಾರು ಕನಸುಗಳಲ್ಲಿ ಕೆಲವೊಂದು ನನಸಾಗಬಹುದಾಗಿತ್ತು. ಈತ ತೀರಿಹೋದ ಮೇಲೆ ಇವನ ಗವರ್‌ನರ್‌ಗಳು ಇವನ ಬೃಹತ್ ಸಾಮ್ರಾಜ್ಯವನ್ನು ತುಂಡಾಗಿಸಿದರು ಮತ್ತು ಅದನ್ನು ತಮ್ಮಲ್ಲಿಯೇ ಇಟ್ಟುಕೊಂಡರು. ಇವರುಗಳು ಮಹತ್ವಾಕಾಂಕ್ಷಿಗಳಾಗಿದ್ದರಿಂದ ಇನ್ನೊಬ್ಬರು ಮಾಡಿದ್ದನ್ನು ನೋಡಿ ತಾವು ಮಾಡುವ ಇಚ್ಛೆಯಿಂದ ವೈಯಕ್ತಿಕ ಆಸಕ್ತಿ/ವೈರತ್ವದಿಂದ ತಮ್ಮ ತಮ್ಮೊಳಗೆ ಪ್ರಾಧಾನ್ಯತೆಗಾಗಿ ಗುದ್ದಾಡಿದರು. ಅಲೆಗ್ಸಾಂಡರನ ಸಾಮ್ರಾಜ್ಯ ನಾಶ ಹೊಂದಿದ್ದರಿಂದಲೇ ಭಾರತ ಮತ್ತು ಗ್ರೀಸ್ ನಡುವಿನ ವಾಣಿಜ್ಯ ಸಂಬಂಧಗಳು ನಿಂತುಹೋದವು ಎಂದು ಭಾವಿಸುವುದು ತಪ್ಪಾಗುತ್ತದೆ. ಈ ಭಾವನೆಯ ವಿರುದ್ಧವಾಗಿ ಈ ಸಾಮ್ರಾಜ್ಯ ಪತನ ಹೊಂದಿದ ನಂತರ ಎರಡೂ ದೇಶಗಳ ವಾಣಿಜ್ಯ ಸಂಬಂಧಗಳು ಮತ್ತಷ್ಟು ಬಲಗೊಂಡವು. ಸೆಲ್ಯೂಕಸ್ ಎಂಬ ಅಲೆಗ್ಸಾಂಡರನ ಅತ್ಯಂತ ಮಹತ್ವಾಕಾಂಕ್ಷಿಯ ಮತ್ತು ಉದ್ಯಮಶೀಲ ಸೈನ್ಯಾಧಿಕಾರಿ ಪರ್ಶಿಯಾದ ಸಾಮ್ರಾಜ್ಯವನ್ನು ತನಗಾಗಿ ಗೆದ್ದ ನಂತರ, ಅಲೆಗ್ಸಾಂಡರ್ ಭಾರತದ ಮೇಲೆ ಧಾಳಿ ಮಾಡಿ ಗೆದ್ದುಕೊಂಡ ಕೆಲವು ಪ್ರದೇಶಗಳನ್ನು ತನ್ನ ಪ್ರದೇಶಗಳೊಂದಿಗೆ ಕೂಡಿಸಿಕೊಳ್ಳಲು ಯತ್ನಿಸಿದನು. ಮೇಲಾಗಿ ಇಂತಹ ಪ್ರಯತ್ನ ತರುವ ವಾಣಿಜ್ಯ ಲಾಭಗಳನ್ನು ಪಡೆಯಲು ಆತ ಜೀವಂತವಾಗಿದ್ದ ಮತ್ತು ತನ್ನ ಯೋಜನೆಗಳನ್ನು ಅಪಾರ ಸೈನ್ಯದ ನೆರವಿನಿಂದ ಅನುಷ್ಠಾನಕ್ಕೆ ತರಲು ನಿರ್ಧರಿಸಿದ್ದ. ಆದರೆ ಆತನ ವಿರೋಧಿಯು ಅವನಿಗಿಂತ ಬಲಶಾಲಿಯಾಗಿದ್ದನು ಮತ್ತು ಯೋಜನೆಗಳು ಯಶಸ್ವಿಯಾಗದಂತೆ ಅಡ್ಡ ಬಂದನು. ಚಂದ್ರಗುಪ್ತನು ಭಾರತವನ್ನು ಒಬ್ಬ ದಯಾಳು ನಿರಂಕುಶ ದೊರೆಯಂತೆ ಆಳುತ್ತಿದ್ದನು. ಅಂದಿನ ಕಾಲದಲ್ಲಿ, ಅಂದರೆ

---

೧. ಡಬ್ಲ್ಯೂ. ರಾಬರ್ಟ್‌ಸನ್, "ಡಿಸ್ಕ್ರಿಪ್ಷನ್", ಪು. ೧೬–೧೭.
೨. ಅದೇ, ಪು. ೨೨.

ಮಧ್ಯಕಾಲಪಂಥ(medievalism)ದ ಆತ ನಡುವೆಯೇ ಬುದ್ಧಿ ಹಾಗೂ ತೋಳ್ಬಲಗಳೆರಡರನ್ನು ಉಳ್ಳ ಒಬ್ಬ ಆಧುನಿಕ ಮಾನವನಾಗಿದ್ದ. ಸೆಲ್ಯುಕಸ್‌ನು, ಚಂದ್ರಗುಪ್ತ ತನಗಿಂತಲೂ ಹೆಚ್ಚು ಶೌರ್ಯವಂತ ಎನ್ನುವುದನ್ನು ಮನಗೊಂಡು, ಆತನೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಂಡನು ಹಾಗೂ ತಮ್ಮಿಬ್ಬರ ಸ್ನೇಹ ಬಾಂಧವ್ಯಗಳನ್ನು ಹೆಚ್ಚಿಸಲು ಚಂದ್ರಗುಪ್ತನ ಆಸ್ಥಾನಕ್ಕೆ ಮೆಗಸ್ಥನಿಸ್ ಎಂಬ ರಾಯಭಾರಿಯನ್ನು ಕಳುಹಿಸಿದನು. ಇವನ ನಂತರ ಈ ಎರಡೂ ದೇಶಗಳ ನಡುವಿನ ಸ್ನೇಹ ಬಾಂಧವ್ಯಗಳನ್ನು ಮುಂದುವರಿಸಲು ಡಾಯ್‌ಮಚುಸ್ (Daimachus) ಎಂಬ ರಾಯಭಾರಿ ಭಾರತಕ್ಕೆ ಬಂದನು. ಒಟ್ಟಿನಲ್ಲಿ, ಗ್ರೀಕರು ಭಾರತದೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬಹುಕಾಲದವರೆಗೆ ಗ್ರಾಸಿಯೊ–ಬ್ಯಾಕ್ಟ್ರಿಯನ್ ರಾಜಮನೆತನದ (Graceo-Bactrian Kingdom) ಮುಖಾಂತರ ಮುಂದುವರಿಸಿಕೊಂಡು ಬಂದರು. ಆದರೆ, ಈ ವಾಣಿಜ್ಯ ಸಂಬಂಧಗಳ ವೈಶಾಲ್ಯತೆ ಮತ್ತು ಶಾಸನಾಧಿಕಾರಗಳನ್ನು ನಿರ್ಧರಿಸಲು ನಮ್ಮ ಹತ್ತಿರ ಸಾಕಷ್ಟು ಪುರಾವೆಗಳು ಸಿಕ್ಕಿಲ್ಲ. "ಕ್ರಿಶ್ಚಿಯನ್ ಶಕೆ ಪ್ರಾರಂಭವಾಗುವ ೧೩೬ ವರ್ಷಗಳ ಮುನ್ನ 'ಟಾರ್ಟಾರರ' (Tartars) ಒಂದು ತಂಡ ತಮ್ಮ ಹುಟ್ಟೂರಿನಿಂದ ಚೈನಾಕ್ಕೆ ಬಂದರು ಮತ್ತು ಇನ್ನೊಂದು ತಂಡದಿಂದ ಅವರು ಪಶ್ಚಿಮದ ಕಡೆ ನೂಕಲ್ಪಟ್ಟರು, ಹಾಗೂ ಹೀಗೂ ಮಾಡಿ ಅವರು ಟ್ಯಾರ್ಟ್ಸ್(Taartes)ನ್ನು ದಾಟಿ ಮುಂದೆ ಹೋಗಿ ಬ್ಯಾಕ್ಟ್ರಿಯಾ (Bactria) ಪ್ರದೇಶವನ್ನು ಪ್ರಬಲ ಜಲಪಾತದಂತೆ ನುಗ್ಗಿದ್ದರು ಹಾಗೂ ಗ್ರೀಕರ ಪ್ರಭುತ್ವಕ್ಕೆ ಕೊನೆಯ ತಡೆ ಹಾಕಿದರು. ಗ್ರೀಕರು ಇಲ್ಲಿಗೆ ಬಂದು ಸುಮಾರು ೧೩೦ ವರ್ಷಗಳಾಗಿದ್ದಿತು"[೧] ಎಂದು ಚೀನಾದ ಇತಿಹಾಸಕಾರರು ಹೇಳಿದ್ದಾರೆ. ಈ ರೀತಿ ಭೂಸಂಪರ್ಕಕ್ಕೆ ಬಾಧೆ ಉಂಟಾಗಿದ್ದರೂ ಅಲೆಗ್ಸಾಂಡ್ರಿಯಾ ಗ್ರೀಸ್ ಮತ್ತು ಭಾರತದ ನಡುವಿನ ಸಮುದ್ರ ವ್ಯಾಪಾರದ ಮಳಿಗೆಯಾಗಿ ಮುಂದುವರಿಯಿತು. ಲಾಗಸ್‌ನ ಮಗನಾದ ಟೋಲಮಿಯು ತನ್ನ ಆಡಳಿತಾವಧಿಯಲ್ಲಿ ಭಾರತೀಯ ವ್ಯಾಪಾರಕ್ಕೆ ಬಹಳಷ್ಟು ಉತ್ತೇಜನ ನೀಡಿದನು. ಇವನು, ಭಾರತದ ವಸ್ತುಗಳನ್ನು ಅಲೆಗ್ಸಾಂಡ್ರಿಯಾಕ್ಕೆ ನೇರವಾಗಿ ಕೊಂಡೊಯ್ಯಲು ಕೆಂಪು ಸಮುದ್ರ ಮತ್ತು ನೈಲ್ ನದಿಗಳನ್ನು ಒಂದುಗೂಡಿಸುವ ಒಂದು ಕಾಲುವೆಯನ್ನು ಕಟ್ಟಲು ಪ್ರಾರಂಭಿಸಿದನು. ಆದರೆ ಇದೊಂದು ಅತಿ ದೊಡ್ಡ ಯೋಜನೆಯಾದುದ್ದರಿಂದ ಅದನ್ನು ಕೈ ಬಿಡಬೇಕಾಯಿತು. ಈ ವಿಷಯ ಏನೇ ಇರಲಿ, ಈತ ಕೆಂಪು ಸಮುದ್ರದ ಪಶ್ಚಿಮ ಕರಾವಳಿಯಲ್ಲಿ ಒಂದು ನಗರವನ್ನು ನಿರ್ಮಿಸಿ ಅದಕ್ಕೆ ಬೈರಿನೈಸ್ (Berenice) ಎಂಬ ಹೆಸರಿಟ್ಟನು ಮತ್ತು ಇದು ಭಾರತೀಯ ವ್ಯಾಪಾರದ ಪ್ರಮುಖ ನಗರವಾಗಿ ಮುಂದುವರೆಯಿತು.

"ಈಜಿಪ್ಟ್ ಮತ್ತು ಸಿರಿಯಾಗಳ ಅರಸರು ಇಂಡಿಯಾದ ವ್ಯಾಪಾರದ ಪ್ರಯೋಜನಗಳನ್ನು ತಮ್ಮ ಪ್ರಜೆಗಳಿಗೆ ಒದಗಿಸಲು ಪರಸ್ಪರ ಸ್ಪರ್ಧಾತ್ಮಕವಾಗಿ ಶ್ರಮಿಸುತ್ತಿದ್ದಾಗ ಇವೆರಡಕ್ಕೂ ಘಾತಕವಾಗಿ ಪರಿಣಮಿಸಿದ ಒಂದು ಶಕ್ತಿಯು ಪಶ್ಚಿಮದಲ್ಲಿ ಉದಿಸಿತು. ರೋಮನರು ತಮ್ಮ ಸೈನ್ಯಶಕ್ತಿಯ ಬಲದಿಂದ ಹಾಗೂ ರಾಜನೀತಿಯ ಚಾತುರ್ಯದಿಂದ, ಇಟಲಿ ಮತ್ತು ಸಿಸಿಲಿಯನ್ನು ವಶಪಡಿಸಿಕೊಂಡು, ಶೀರದಲ್ಲೇ ಕಾರ್ಥೇಜಿನ ಗಣರಾಜ್ಯವನ್ನು ಬುಡಮೇಲು ಮಾಡಿದರು. ಮತ್ತು ಕ್ರಿ.ಶ. ೫೫೮ರಲ್ಲಿ ಮ್ಯಾಸಿಡೋನಿಯಾ ಮತ್ತು ಗ್ರೀಸನ್ನು ಸ್ವಾಧೀನಪಡಿಸಿ, ತಮ್ಮ ಪ್ರಭುತ್ವವನ್ನು ಸಿರಿಯಾಕ್ಕೆ ವಿಸ್ತರಿಸಿದರು, ಮತ್ತು ಕೊನೆಗೆ ತಮ್ಮ ವಿಜೇತ ಸೇನೆಯನ್ನು ಮಹಾನ್ ಅಲೆಗ್ಸಾಂಡರ್‌ನ ವಾರಸುದಾರನು ಸ್ಥಾಪಿಸಿದವುಗಳಲ್ಲಿ ಉಳಿದ ಒಂದೇ ಒಂದು ರಾಜ್ಯವಾದ ಈಜಿಪ್ಟಿನ ವಿರುದ್ಧ ಒಡ್ಡಿದರು."

---

೧. ಡಬ್ಲ್ಯೂ. ರಾಬರ್ಟ್‌ಸನ್, "ಡಿಸ್ಕ್ವಿಜಿಷನ್", ಪು. ೩೭.

ಈಜಿಪ್ಟಿನ ಸೋಲಿನ ನಂತರ ಇಂಡಿಯಾದ ಲಾಭದಾಯಕ ವಾಣಿಜ್ಯವು ರೋಮಿನ ಕಡೆಗೆ ಹರಿಯಿತು. ಆದರೆ ಇದೊಂದೇ ದಾರಿಯಾಗಿರಲಿಲ್ಲ. ಇಂಡಿಯಾದ ಸರಕುಗಳಿಗೆ ಪಶ್ಚಿಮಕ್ಕೆ ಹೋಗಲು ಇನ್ನೊಂದು ವ್ಯಾಪಾರಿ ಹಾದಿಯಿತ್ತು. ಅದು ನೆಲಮಾರ್ಗವಾಗಿತ್ತು ಮತ್ತು ಇಂಡಿಯಾದ ವ್ಯಾಪಾರವು ಜುಡೆಯಾಕ್ಕೆ ಕೇಂದ್ರೀಕರಿಸಲು ಸೊಲೊಮನ್ ಅಪೇಕ್ಷಿಸಿದ್ದಾಗಿತ್ತು. ಈ ಮಾರ್ಗ ಮೆಡಿಟರೇನಿಯನ್ ಸಮುದ್ರ ಮತ್ತು ಯುಫರಟಿಸ್ ನಡುವಿನ ಟಾಡ್‌ಮೋರ್ (Tadmore) ಅಥವಾ ಡಾಲ್ಮೈರಾ (Dalmyra) ನಗರದ ಮೂಲಕ ಹಾದು ಹೋಗುತ್ತಿತ್ತು. ರೋಮನ್‌ರು ಸಿರಿಯಾವನ್ನು ವಶಪಡಿಸಿಕೊಂಡ ನಂತರ ಪಾಲ್ಮೆರಾ ಸ್ವತಂತ್ರವಾಯಿತು ಮತ್ತು ಅದು ಒಂದು ಊರ್ಜಿತಗೊಳ್ಳುವ ಹಾಗೂ ಜನನಿಬಿಡ ನಗರವಾಗಿ ಬೆಳೆಯಿತು. ಅನಂತರ ಇದೊಂದು ವಿತರಣಾ ಕೇಂದ್ರವಾಯಿತು. ಆದರೆ ರೋಮನ್‌ರ ದುರಾಸೆಗೆ ಮಿತಿ ಎಂಬುದಿರಲಿಲ್ಲ. ಪಾಲ್ಮೆರಾದ ರಾಣಿಯಾದ ಜೆನೋಬಿಯಾಳು ತಮ್ಮ ಬಗ್ಗೆ ಅತ್ಯಂತ ಕೆಟ್ಟ ಭಾವನೆಯನ್ನು ಹೊಂದಿದ್ದರೂ ಅಷ್ಟೇ ಕ್ಷುಲ್ಲಕ ಕಾರಣದ ಮೇಲೆ ಅವಳ ನಗರಕ್ಕೆ ಮುತ್ತಿಗೆ ಹಾಕಿ ಅದನ್ನು ಗೆದ್ದುಕೊಂಡು ತಮ್ಮ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡರು.

ಪಾಲ್ಮೈರಾದ ಸೇರಿಸುವಿಕೆಯು ರೋಮನರಿಗೆ ಇಂಡಿಯಾದ ವ್ಯಾಪಾರವನ್ನು ಪೂರ್ಣಸ್ವಾಮ್ಯ ಮಾಡಲು ಸಾಕಾಗಲಿಲ್ಲ. ಏಕೆಂದರೆ ಅಷ್ಟೇ ಸಮರ್ಥ ಶಕ್ತಿಯು ಪೂರ್ವದಲ್ಲೂ ಉದಿಸುತ್ತಿತ್ತು. ಪಾರ್ಥಿಯನರು ಕೇಂದ್ರ ಏಷ್ಯಾದಲ್ಲಿ ತಮ್ಮ ಬಲವನ್ನೂರಿದ್ದರು ಮತ್ತು ತಮ್ಮ ಸರಹದ್ದುಗಳನ್ನು ರೋಮನರೊಂದಿಗೆ ಹೊಂದಿಕೊಂಡಿದ್ದರು. ಪಾರ್ಥಿಯರ ಮತ್ತು ರೋಮನರ ನಡುವಣ ಕಲಹವು ಕ್ರಿ.ಪೂ. ೫೫ರಿಂದ ೨೦ರವರೆಗೆ ವಿಸ್ತರಿಸಿತಾದರೂ, ಪ್ರಭುತ್ವಕ್ಕೆ ನಡೆದ ಹೋರಾಟವು ಮುಗಿವನ್ನು ಕಾಣದಾಯಿತು. "ಕ್ರಿ.ಪೂ. ೫೫ರಿಂದ ೨೦ರವರೆಗೆ ನಡೆದ ಹೋರಾಟವು ಎರಡೂ ಸಾಮ್ರಾಜ್ಯಗಳಿಗೆ ಪರಸ್ಪರ ಪೂರ್ಣ ಗೌರವವನ್ನು ನೀಡುವುದನ್ನು ಅನಿವಾರ್ಯವಾಗಿಸಿತು ಮತ್ತು ಅಗಸ್ಟಸನು ಯೂಫ್ರೆಟಿಸ್‌ನ ಪಶ್ಚಿಮ ದಂಡೆಯು ರೋಮನ್ ಸಾಮ್ರಾಜ್ಯದ ಸರಿಯಾದ ಮಿತಿಯೆಂಬ ಮತ್ತು ಅದಕ್ಕಿಂತ ಆಚೆಗೆ ರೋಮಿನ ಅಧಿಕಾರವು ಅನುಕೂಲಕರವಾಗಿ ವಿಸ್ತರಿಸದೆಂಬ ವಿಷಯವನ್ನು ಸಾಮ್ರಾಜ್ಯದ ನೀತಿಯಾಗಿ ಉಳಿಸಿಕೊಂಡನು."[೧] "ಕ್ರಿಶ್ಚಿಯನ್ ಯುಗದ ಮೊದಲ ಎರಡು ಶತಮಾನಗಳ ಅವಧಿಯಲ್ಲಿ ಪಾರ್ಥಿಯಾದಿಂದ ಸಾಗುವ ಮತ್ತು ಹೆಚ್ಚಾಗಿ ಉಪಯೋಗವಾಗುವ ಎಲ್ಲಾ ಮಾರ್ಗಗಳನ್ನು ಕತ್ತರಿಸಿ ಭಾರತದೊಂದಿಗೆ ನೇರ ಸಮುದ್ರವನ್ನು ಹೊಂದಿಸಲು ಹಾಗೂ ಈ ಕಾರ್ಯದಿಂದ ಸತತವಾಗಿ ವೈರಿಯಾಗುವ ರೋಮನ್‌ರ ಮೇಲಿನ ವಿತ್ತೀಯ (fiscal) ಅವಲಂಬನೆಯ ನೋವನ್ನು ತಪ್ಪಿಸಿಕೊಳ್ಳಬಹುದಾಗಿತ್ತು."[೨] ಭಾರತದ ಹಾಗೂ ರೋಮನ್‌ರ ನಡುವಿನ ವ್ಯಾಪಾರವನ್ನು ಅಧಿಕವಾಗಿ ಪ್ರಸ್ಥಾಪಿಸಲಾಯಿತು ಮತ್ತು ಇದೆಷ್ಟರ ಮಟ್ಟಿಗೆ ವೃದ್ಧಿಯಾಯಿತೆಂದರೆ ಆಗಿನ ಕಾಲದ ಲೇಖಕರು ವ್ಯಾಪಾರಸ್ಥರ ಅನುಕೂಲಕ್ಕಾಗಿ ಭಾರತದ ಬಂದರುಗಳ ಬಗೆಗೆ ಮತ್ತು ಭೂ–ಸಾರಿಗೆ ಹಾಗೂ ಒಂಟೆ ಸಾರಿಗೆಗೆ ಸಂಬಂಧಪಟ್ಟಂತೆ ವೇಳಾಪಟ್ಟಿಯನ್ನು ಬರೆಯಲು ಪ್ರಾರಂಭಿಸಿದರು. ಕ್ರಿ.ಶ. ಮೊದಲನೆಯ ಶತಮಾನದ ಮಧ್ಯದಲ್ಲಿ ಹಿಪೊಲಸ್ ಎಂಬ ಗ್ರೀಕ್–ಈಜಿಪ್ಟ್ ನಾಗರಿಕನು ಭಾರತೀಯ ಮಳೆಗಾಲದ ನಿರಂತರತೆಯ ಬಗ್ಗೆ ಮಾಹಿತಿ ತೆಗೆದನು. ಈ ರೀತಿಯಾಗಿ, ಎರಡು ದೇಶಗಳ ವ್ಯಾಪಾರಿಗಳ ಪ್ರಯಾಣಕ್ಕೆ ಅತಿ ಅನುಕೂಲ ಮಾಡಿಕೊಟ್ಟನು. ಸುಮಾರು ಈ ವರ್ಷಗಳಲ್ಲಿಯೇ ಒಬ್ಬ ಗ್ರೀಕ್ ವ್ಯಾಪಾರಿ "ಹಿಂದೂ ಮಹಾಸಾಗರದ

---

೧. ಇಸಿಡೋರ ಆಫ್ ಚರಕ್ಸ್ "ಪಾರ್ಥಿಯನ್ ಸ್ಟೇಷನ್ಸ್", ಸಂ. ಡಬ್ಲ್ಯೂ.ಹೆಚ್. ಸ್ಕಾಫ್, ಪುಟ ೨೧

೨. ಅದೇ. ಪುಟ ೧೯

ಕೈಪಿಡಿ'' ಅಥವಾ *"The periphlus of the Erythrian Sea"* ಎಂಬ ಗ್ರಂಥ ಬರೆದ. ಈ ಗ್ರಂಥವು ಭಾರತೀಯ ವಾಣಿಜ್ಯ ಚಟುವಟಿಕೆಗಳ ಅಧ್ಯಯನಕ್ಕಾಗಿರುವ ಒಂದು ಅತ್ಯಂತ ನಂಬಲರ್ಹವಾದ ವಿಷಯ ವಸ್ತುವನ್ನು ಒಳಗೊಂಡಿರುತ್ತದೆ. ಇಸಿಡೋರಿನ ಚೆರಾಕ್ಸ ಎಂಬ ಗ್ರೀಕ್ ಸಾಹಸಿ ಪಾರ್ಥಿಯನ್ ಸಾಮ್ರಾಜ್ಯದ ಸುತ್ತ ಪ್ರವಾಸ ಕೈಗೊಂಡು ಅಲ್ಲಿನ ಭೂಸಾರಿಗೆಗೆ ಸಂಬಂಧಿಸಿದ ಒಂಟೆ ವ್ಯಾಪಾರದ ಬಗೆಗೆ ಸಂಪೂರ್ಣ ಮಾಹಿತಿ ನೀಡಿದ್ದಾನೆ. ಇದಕ್ಕಿಂತ ಮುಂಚೆ ಪೌರ್ವಾತ್ಯದ ಅಂದರೆ ಭಾರತದ ವಸ್ತುಗಳನ್ನು ಇತರ ಕಡೆಯಿಂದ ಗ್ರೀಕರು ಪಡೆಯುತ್ತಿದ್ದರು. ಅರಬರು ಭಾರತದ ಮೇಲಿನ ತಮ್ಮ ನಿಯಂತ್ರಣವನ್ನು ನಿರಂತರವಾಗಿ ಇಟ್ಟುಕೊಳ್ಳುವುದಕ್ಕಾಗಿ ಈ ದೇಶದ ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಗೌಪ್ಯವಾಗಿಟ್ಟಿದ್ದರು ಮತ್ತು ಪಾರ್ಥಿಯಾದ ಸುಂಕಗಳು ಭಾರತೀಯ ವಸ್ತುಗಳ ಮೌಲ್ಯಗಳನ್ನು ಬಹಳವಾಗಿ ಹೆಚ್ಚಿಸಿದವು. "ಭಾರತದ ಎಲ್ಲಾ ಶ್ರೀಮಂತ ವ್ಯಾಪಾರ ರೋಮ್‌ಗೆ ಹರಿದುಹೋಗುತ್ತಿತ್ತು ಮತ್ತು ಇದರ ಮೇಲಿನ ಸುಂಕಗಳು ಪಾರ್ಥಿಯಾ ಹಾಗೂ ಅರಬ್ ಸಾಮ್ರಾಜ್ಯಕ್ಕೆ ಸಂದಾಯವಾಗುತ್ತಿದ್ದವು. ಭಾರತದ ಶ್ರೀಮಂತ ವ್ಯಾಪಾರವೆಲ್ಲಾ ರೋಮಿಗೆ ಹರಿದುಹೋಗಿ ಅದು ಪಾರ್ಥಿಯಾ ಮತ್ತು ಅರಬ್ ಸಾಮ್ರಾಜ್ಯಗಳಿಗೆ ಸುಂಕಗಳನ್ನು ತೆತ್ತಿತ್ತು. ಪಾರ್ಥಿಯಾದ ಸುಂಕಗಳು ಭಾರತೀಯ ವಸ್ತುಗಳ ಮೌಲ್ಯವನ್ನು ಈ ರೀತಿ ಬಹಳವಾಗಿ ಹೆಚ್ಚಿಸಿದವು. ಒಂದು ವೇಳೆ ಭಾರತದೊಂದಿಗಿನ ಸಮುದ್ರ ವ್ಯಾಪಾರವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದರೆ, ಇದು ಸಾಧ್ಯವಾಗುತ್ತಿರಲಿಲ್ಲ."[೧] ಆದರೆ, ಆಧುನಿಕ ಯುಗದ ಕೊಲಂಬಸ್ ಎನಿಸಿಕೊಂಡ ಹಿಪೊಲಸ್‌ನ (Hippolus) ಮಳೆ ಗಾಳಿ ಬಗೆಗಿನ ಸಂಶೋಧನೆ ರೋಮನ್‌ರಿಗೆ ಅವಶ್ಯಕವಿದ್ದುದ್ದನ್ನು ಅವರಿಗೆ ತಂದುಕೊಟ್ಟಿತು. ಇದು, ಹಿಂದೂ ಮಹಾಸಾಗರದಲ್ಲಿ ರೋಮನ್‌ರ ಹಡಗುಗಳು ಬರುವಂತೆ ಮಾಡಿ ಅಂದಿನ ವ್ಯಾಪಾರದ ಗತಿಯನ್ನು ಬದಲಾಯಿಸಿತು. ಒಂದಾದ ಮೇಲೆ ಒಂದರಂತೆ ಪೆಟಿಯಾ (Petia) ಮತ್ತು ಗೆರ್‍ರಾಹ (Gerrha), ಪಾಲ್ಮೈರಾ (Palmyra) ಹಾಗೂ ಪಾರ್ಥಿಯಾ (Parthia) ದೇಶಗಳ ವ್ಯಾಪಾರಿ ಲಾಭಗಳು ಕಡಿಮೆಯಾದವು ಮತ್ತು ಈ ಆದಾಯಗಳು ವ್ಯಾಪಾರದ ಗತಿಯ ಬದಲಾವಣೆಯಿಂದಾಗಿ ರೋಮನ್‌ರ ಕೈ ಸೇರಿದವು. ದಕ್ಷಿಣ ಅರೇಬಿಯಾದ, 'ಹೋಮೆರೈಟ ಸಾಮ್ರಾಜ್ಯ'ದ (Homerite Kingdom) ಮೇಲೆ ಕೆಟ್ಟ ದಿನಗಳ ಕರಾಳ ಛಾಯೆ ಮುಸುಗಿತು ಹಾಗೂ ಅದರ ರಾಜಧಾನಿ ನಾಶವಾಯಿತು. ಆ ದೇಶದ ಕೆಲವು ಉತ್ತಮ ಜನರು ಉತ್ತರದ ಕಡೆಗೆ ವಲಸೆ ಹೋದರು. ಘಸನೈಡ್‌ರು (Ghassanids) ರೋಮನ್‌ರಿಗೆ ಶರಣಾಗತರಾದರು. ಅಬಿಸೀನಿಯಾ (Abssinia) ರಾಜ್ಯ, ತನ್ನ ವೈರಿಗಳ ಶಕ್ತಿ ಕುಂದಿದಂತೆ, ಊರ್ಜಿತಾವಸ್ಥೆಗೆ ಬಂದಿತು. ಅರಬ್ ದೇಶಗಳ ಈ ರೀತಿಯ ಬಲಗುಂದುವಿಕೆ ಒಂದು ವೇಳೆ ಮುಂದುವರಿದಿದ್ದರೆ ಮುಂಬರುವ ಘಟನೆಗಳ ಗತಿ ಇಡಿಯಾಗಿ ಬದಲಾಗಬಹುದಾಗಿತ್ತು. ಇಸ್ಲಾಂ ಧರ್ಮ ಈ ಜಗತ್ತಿಗೆ ಬರದೇ ಇರಬಹುದಾಗಿತ್ತು ಮತ್ತು ಥೇಮ್ಸ್‌ನಿಂದ ಗಂಗೆಯವರೆಗಿನ ಪ್ರದೇಶದಲ್ಲಿ ಬೃಹತ್ ರೋಮನ್ ಸರಕಾರ ಒಂದೇ ಅಸ್ತಿತ್ವದಲ್ಲಿ ಇರಬಹುದಾಗಿತ್ತು. ಆದರೆ ಇತಿಹಾಸದ ತರ್ಕ ಬಹಳ ಪ್ರಬಲವಾಗಿತ್ತು. ಕ್ರಮೇಣವಾಗಿ, ರೋಮನ್‌ರಿಗೆ ದೊರಕಿದ ಸಂಪತ್ತು ಅವರು ತಮ್ಮೊಳಗಿನ ಆಂತರಿಕ ಕಲಹ ಮತ್ತು ತಾವು ಗೆದ್ದ ಪ್ರದೇಶಗಳಲ್ಲಿನ ದಂಗೆ ಹತ್ತಿಕ್ಕುವುದರಲ್ಲಿಯೇ ಕರಗಿಹೋಯಿತು. ಮತ್ತು ಅದರ ಪೂರ್ವದ ರಾಷ್ಟ್ರಗಳ ಜೊತೆಗಿನ ಪ್ರತಿಕೂಲ ಸಂದಾಯ ಬಾಕಿಯನ್ನು ಸರಿಪಡಿಸುವಲ್ಲಿಯೇ ಕರಗಿ ಹೋಯಿತಲ್ಲದೆ ಆರ್ಥಿಕ ವ್ಯವಸ್ಥೆಯಲ್ಲಿ ಹೊಸ ಸಂಪತ್ತನ್ನು ಉತ್ಪತ್ತಿಸುವ ಉದ್ದಿಮೆಗಳ ಬೆಳವಣಿಗೆಗಲ್ಲ."

---

೧. ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ, ಡಬ್ಲ್ಯು.ಹೆಚ್. ಸ್ಕಾಫ್, ಪುಟ ೫

ಇಂಡಿಯಾದೊಂದಿಗಿನ ರೋಮನ್ ವ್ಯಾಪಾರದ ಕುರಿತಂತೆ ಪ್ರಶ್ನಾತೀತವಲ್ಲದಿದ್ದರೂ ಮಾಹಿತಿಯ ಭಂಡಾರವೇ ಇದೆ.

ಇದರ ಮೊದಲ ಪುರಾವೆಯು ಇಂಡಿಯಾ ಮತ್ತು ಸಿಲೋನ್‌ಗಳಿಂದ ರೋಮ್‌ಗೆ ಕಳುಹಿಸಿದ ರಾಯಭಾರಿಗಳ ಸಂಖ್ಯೆಯಲ್ಲಿದೆ.

ಮೊದಲ ರಾಜಪ್ರತಿನಿಧಿಯು ಸಿಲೋನಿನಿಂದ ಬಂದಿದ್ದು ಅದನ್ನು ಪ್ಲೈನಿಯು ದಾಖಲಿಸಿದ್ದಾನೆ. ಅದರ ನಿಖರ ಕಾಲವನ್ನು ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಕೆಲವು ಸಾಂದರ್ಭಿಕ ಪುರಾವೆಗಳು ಇದು ಕ್ರಿ.ಶ. ೪೧ರಿಂದ ೫೪ರ ನಡುವೆ ಇರಬಹುದೆಂಬ ನಿರ್ಧಾರಕ್ಕೆ ನಮ್ಮನ್ನು ಒತ್ತಾಯಿಸುತ್ತವೆ. ಅದನ್ನು ಕ್ಲಾಡಿಯಸ್‌ನಿಗೆ ಕಳುಹಿಸಲಾಗಿತ್ತು ಮತ್ತು ಅದು ತಲುಪಿದ ಸಮಯದಲ್ಲಿ ಅಗ್ರಿಪಿನಾ ಮತ್ತು ಮೆಸ್ಸಲಿನಾರ ಕ್ರೂರ ಮರಣದ ದುರಂತದಂತಹ ಹೆಚ್ಚು ಗಂಭೀರ ಸಂಗತಿಗಳು ರೋಮನ್ ಇತಿಹಾಸಕಾರನ ಮನಸ್ಸನ್ನು ವ್ಯಾಪಿಸಿದ್ದರಿಂದ ಈ ಕುರಿತು ಹೆಚ್ಚು ಉಲ್ಲೇಖಕ್ಕೆ ಅವಕಾಶವಿರಲಿಲ್ಲ. ಸಿಲೋನನ್ನು ಕ್ರಿ.ಶ. ೪೪ರಿಂದ ೫೨ರವರೆಗೆ ಆಳಿದ ಚಂದ್ರಮುಖ ಶಿವನೆಂಬ ರಾಜನು ಈ ಪ್ರತಿನಿಧಿಯನ್ನು ಕಳುಹಿಸಿದ್ದನು.[೧]

ನಂತರ ಅನೇಕ ರಾಯಭಾರಗಳು ಮುಂದುವರಿದುವು. ಎರಡನೆಯ ಇಂತಹ ರಾಯಭಾರವು ಕ್ರಿ.ಶ. ೧೦೭ರಲ್ಲಿ ಟ್ರೋಜನ್, ಮೂರನೆಯದು ಕ್ರಿ.ಶ. ೧೩೮ರಲ್ಲಿ ಆಂಟೊನಿಯಸ್ ಪಿಯುಸ್, ನಾಲ್ಕನೆಯದು ಕ್ರಿ.ಶ. ೩೬೧ರಲ್ಲಿ ಜುಲಿಯನ್ ಹಾಗೂ ಐದನೆಯದು ಕ್ರಿ.ಶ. ೫೩೦ರ ಜಸ್ಟಿನಿಯನ್‌ನಿಂದ ಕಳುಹಿಸಲಾಗಿದೆ. ಭಾರತೀಯ ಸ್ಥಳೀಯರು ರಾಯಭಾರಿ ಕಛೇರಿಗಳ ಜನರ ಬಗ್ಗೆ ಉಲ್ಲೇಖಿಸುವುದಿಲ್ಲ. ಈ ಮಾಹಿತಿಗಳನ್ನು ರೋಮ್‌ನ ಇತಿಹಾಸಕಾರರು ದಾಖಲಾತಿ ಮಾಡಿರುವುದರಿಂದ ಈ ರಾಯಭಾರವನ್ನು ಯಾವ ಉದ್ದೇಶದಿಂದ ಮಾಡಿದವು ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾಗಿದೆ. ಏನೇ ಇರಲಿ, ಈ ವಿಚಾರವು ಭಾರತ ಮತ್ತು ರೋಮ್ ನಡುವೆ ನಿರಂತರ ಜೀವಂತ ವ್ಯಾಪಾರ ಸಂಬಂಧವಿತ್ತು ಎಂಬುದನ್ನು ತೋರಿಸುತ್ತದೆ ಹಾಗೂ "ಸರ್ವಿಯಸ್, ಅವನ ಮಗನಾದ ಕೊಮೋಡಸ್ ಮತ್ತು ಕಲ್ಪಿತ ಆಂಟೋನಿನ್‌ರ ಆಳ್ವಿಕೆಯಲ್ಲಿ" ರೋಮಿನ ಅಲೆಗ್ಸಾಂಡ್ರಿಯಾ ಮತ್ತು ಪಾಲ್ಮೈರಾ ರಾಜ್ಯಗಳು ಭಾರತದೊಂದಿಗೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದವು ಹಾಗೂ ಅವುಗಳು ಸಮೃದ್ಧಿಯನ್ನು ಹೊಂದಿದ್ದವು ಎಂದು ವಿವರಿಸುತ್ತದೆ. ಆಗ, ಭಾರತದೊಂದಿಗಿನ ರೋಮನ್ ಪರಸ್ಪರ ವ್ಯವಹಾರ ಸಂಬಂಧ ಅತ್ಯುತ್ತಮವಾಗಿತ್ತು. ಆಗ, ರೋಮನ್ ಸಾಹಿತ್ಯ ಭಾರತದ ವಿಷಯಗಳಿಗೆ ತನ್ನ ಹೆಚ್ಚಿನ ಗಮನವನ್ನು ತೋರಿಸಿತು ಮತ್ತು ಹಿಂದಿನಂತೆ ಭಾರತದ ಅಲೆಗ್ಸಾಂಡರ್ ಕಾಲದ ಇತಿಹಾಸ ತಜ್ಞರ ಹೇಳಿಕೆಗಳನ್ನು ಅಥವಾ ಸಲುಸಿಡಿಯನ್ ರಾಯಭಾರಿಗಳ ಕಥೆಗಳನ್ನು ನಂಬದೆ, ಆ ದೇಶದ ವಿಷಯಗಳನ್ನು ಇತರ ಹಾಗೂ ಸ್ವತಂತ್ರ ಮೂಲಗಳಿಂದ ಹೊಂದಿಕೊಂಡಿತು."[೨]

ಸಾಹಿತ್ಯದ ಲಕ್ಷಣಗಳನ್ನು ಹೊಂದಿದ ಬಹುಪಾಲು ಇತರ ಸಾಕ್ಷ್ಯಗಳೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಇವುಗಳು ಸಹ ನಮ್ಮ ಮೇಲಿನ ನಿರ್ಣಯವನ್ನು ಪುಷ್ಟೀಕರಿಸುತ್ತವೆ. ಡಾ. ಹಿರ್ತರು ತಮ್ಮ "ಚೈನಾ ಹಾಗೂ ರೋಮನ್ ಪೂರ್ವಖಂಡ" ಎಂಬ ಗ್ರಂಥದಲ್ಲಿ ಕ್ರಿ.ಶ. ೫೦೦ರಲ್ಲಿ ಬದುಕಿದ್ದು, ಕ್ರಿ.ಶ. ೪೨೦–೪೭೮ರವರೆಗಿನ ಇತಿಹಾಸ ಬರೆದ 'ಸುಂಗ್‌ಶೂ' ಎಂಬ ಚೈನಾ ದೇಶದಲ್ಲಿ ಇತಿಹಾಸಕಾರನು

೧. cf. J.R.A.S., ೧೮೬೦, ಸಂ. XVIII ಪುಟ ೩೪೯–೫೦
೨. cf. J.R.A.S., ಸಂ. XIX, ಪುಟ ೨೭೬

ಹೇಳಿದ್ದನ್ನು ಈ ರೀತಿ ಉಲ್ಲೇಖಿಸಿದ್ದಾರೆ. "ಪಶ್ಚಿಮ ಸಮುದ್ರದ ಮೇಲಿನ ತತ್‌ಸಿನ್ (Ta-ts'n) (ಅಂದರೆ ಸಿರಿಯ) ಮತ್ತು ಐ'ಯಿನ್‌ಚೂ (ಅಂದರೆ ಇಂಡಿಯಾ) ಎಂಬ ದೇಶಗಳ ವ್ಯಾಪಾರದ ಬಗೆಗೆ ಹೇಳುವುದಾದರೆ, ರಸ್ತೆ ಸಾರಿಗೆಯಲ್ಲಿ ಅವುಗಳು ವಿಶೇಷ ತೊಂದರೆಗಳನ್ನು ಅನುಭವಿಸುತ್ತಿದ್ದವು. ಆದರೂ ಅವುಗಳ ನಡುವೆ ವ್ಯಾಪಾರವಿತ್ತು, ಅವುಗಳು ವಿದೇಶಿ ಬುಡಕಟ್ಟುಗಳಿಗೆ ವಸ್ತುಗಳನ್ನು ಕಳುಹಿಸುತ್ತಿದ್ದವು. ನಮಗೆ ಗೊತ್ತಿದ್ದ ಪರ್ವತ ಶ್ರೇಣಿಗಳಿಗಿಂತ ವಿಭಿನ್ನವಾದ ಬಹಳ (lofty) ಎತ್ತರಕ್ಕೆ ಹೋಗುವ ಪರ್ವತ ಶ್ರೇಣಿಗಳು ಮತ್ತು ವಿವಿಧ ಹೆಸರುಗಳುಳ್ಳ ಹಾಗು ಅಸಾಮಾನ್ಯ ವೈವಿಧ್ಯತೆ ಹೊಂದಿರುವ ಬುಡಕಟ್ಟು ಜನರು ಅಲ್ಲಿದ್ದರು. ಇವೆಲ್ಲವುಗಳು ನಾವು ಅಂದುಕೊಂಡದ್ದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿವೆ. ಭೂಮಿ ಹಾಗೂ ನೀರಿನೊಳಗಿಂದ ಬರುವ ಎಲ್ಲಾ ಮೂಲ್ಯ ವಸ್ತುಗಳನ್ನು ಮತ್ತು ಘೇಂಡಾಮೃಗದ ಕೊಂಬಿನಿಂದ ಮಾಡಲ್ಪಟ್ಟ ರತ್ನ (germs), ಪಚ್ಚೆಗಳು, ನಾಗಮಣಿ ಮತ್ತು ಕಲ್ನಾರು ಬಟ್ಟೆ ಮುಂತಾದ ಅಸಂಖ್ಯಾತ ಅಚ್ಚರಿಗೊಳಿಸುವ ವಸ್ತುಗಳು ಅಲ್ಲಿ ಸಿಗುತ್ತವೆ. ಇದಲ್ಲದೆ ಜಗದೊಡೆಯನಿಗೆ (ಬುದ್ಧ) ಭಕ್ತಿ ತೋರಿಸುವ ಸಿದ್ಧಾಂತವನ್ನು ಹೊಂದಿರುತ್ತದೆ. ಇವೆಲ್ಲವುಗಳು ಬೇರೆ ದೇಶದವರು ಭಾರತದೊಂದಿಗೆ ಸಮುದ್ರದ ಮೂಲಕ ವ್ಯಾಪಾರ ನಡೆಸಲು ಕಾರಣವಾಗಿದ್ದವು."

ಚೀನಾದ ಇನ್ನೊಬ್ಬ ಇತಿಹಾಸಕಾರ ಮಾ–ತಾನ್‌ಲಿನ್(Ma-Touanlin)ನು ತನ್ನ ಪ್ರಾಚೀನ ಇತಿಹಾಸ ಸಂಶೋಧನೆಗಳಲ್ಲಿ "ಭಾರತ (ಕ್ರಿ.ಶ. ೫೦೦–೧೬) ತನ್ನ ಸಾಕಷ್ಟು ಪ್ರಮಾಣದ ವಾಣಿಜ್ಯವನ್ನು ಸಮುದ್ರ ಮಾರ್ಗವಾಗಿ ತ–ತ್ಸಿನ್ (Ta-Tsin), ರೋಮನ್ ಸಾಮ್ರಾಜ್ಯ ಹಾಗು ಅನ್ಸಿ (Ansi) ಅಥವಾ ಎ.ಎಸ್.ಇ.(ASE)"ಗಳೊಂದಿಗೆ ಹೊಂದಿತ್ತು[೧] ಎಂದು ಹೇಳಿದ್ದಾನೆ.

ಸಾಕಷ್ಟು ಬುದ್ಧಿವಂತ ಲೇಖಕನೊಬ್ಬನು 'ಪಾಮೀರಾ' ದೇಶ ನಾಶಹೊಂದಿದ ನಂತರ ಭಾರತ ಮತ್ತು ರೋಮ್ ನಡುವಣ ನೇರ ವ್ಯಾಪಾರ ನಿಂತುಹೋಯಿತು ಎಂದು ಧೈರ್ಯವಾಗಿ ಹೇಳಿದ್ದಾನೆ. ಈತನೇ ಹೇಳಿದಂತೆ ರೋಮನ್‌ರು ಇಥಿಯೋಪಿಯಾದ ಪ್ರಮುಖ ಬಂದರು ಆದ ಅಡುಲೆ (Adule) ಎಂಬುದನ್ನು ತಮ್ಮ ವ್ಯಾಪಾರಿ ಕೇಂದ್ರವನ್ನಾಗಿರಿಸಿಕೊಂಡಿದ್ದರು ಮತ್ತು "ಕಾನ್‌ಸ್ಟಂಟೈನ ಪ್ರದೇಶದಲ್ಲಿ ಹೆಚ್ಚಿನ ಆರ್ಥಿಕ ಸಮೃದ್ಧಿ ಹೊಂದಿದ್ದರೂ, ಅವರ ವ್ಯಾಪಾರಿ ಚಟುವಟಿಕೆಗಳು 'ಅಡುಲೆ'ಗಿಂತ ಮುಂದೆ ವಿಸ್ತಾರವಾಗಲೇ ಇಲ್ಲ.

ಆದರೆ, ಪುರಾತನ ವಸ್ತು ಶಾಸ್ತ್ರದ ಸಂಶೋಧನೆ ಮತ್ತು ಐತಿಹಾಸಿಕ ದಾಖಲೆಗಳು ಮೇಲೆ ವಿವರಿಸಿದುದಕ್ಕೆ ವಿರುದ್ಧವಾಗಿರುವ ಸಂಗತಿಗಳನ್ನು ಸಾರುತ್ತವೆ. ಇವುಗಳ ಪ್ರಕಾರ, ಮಿಸ್ಟರ್ ವಿನ್‌ಸೆಂಟ್ ಸ್ಮಿತ್ ಹೀಗೆ ಅಭಿಪ್ರಾಯ ಪಡುತ್ತಾರೆ. "ವ್ಯಾಪಾರದಲ್ಲಿ ತೊಡಗಿರುವ ಹಲವಾರು ರೋಮನ್ ವಸಾಹತುಗಳ ಪ್ರಜೆಗಳು ನಮ್ಮ ಯುಗದ ಮೊದಲ ಎರಡು ಶತಮಾನಗಳ ಅವಧಿಯಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ನೆಲೆಸಿದ್ದರು. ಇವರಲ್ಲಿ ಕೆಲವರು ಬಲಶಾಲಿ ಯುವಕರೆಂದು ವರ್ಣಿಸಲ್ಪಟ್ಟು (ಕವಚಧಾರಿ ದೇಹದ ಹಾಗೂ ಮೂಕರಾದ ಮ್ಲೇಚ್ಛರೆಂದು ಹೆಸರನ್ನು ಉಳ್ಳ) ತಮಿಳು ರಾಜರುಗಳಿಗೆ ಅಂಗರಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಇನ್ನುಳಿದ ಕೆಲವರು ವ್ಯಾಪಾರಿಗಳಾಗಿದ್ದರು ಮತ್ತು ಇವರು ಬಂಗಾರ ನೀಡಿ ನೀಡಿ ಭಾರತದ ಮೆಣಸನ್ನು ಮಜಲಿಸ್ ಬಂದರಲ್ಲಿ

---

೧. ಜೆ. ಆರ್. ಎ. ಎಸ್. ಪು. ೧೪, ಪು. ೩೦೭ರಲ್ಲಿ ದೊರಕುವುದು. Quoted in J. R. A. S., Vol XIX, p. ೩೦೭.

ಸ್ವೀಕರಿಸುತ್ತಿದ್ದರು.[೧] ಒಟ್ಟಿನಲ್ಲಿ, ಅಂದು ಯವನರು ವ್ಯಾಪಾರಿಗಳಂತೆ ಪಾಂಡ್ಯರ ಹಾಗೂ ಇನ್ನಿತರ ತಮಿಳು ರಾಜರುಗಳ ಸೇವಕರಂತೆ ಭಾರತದಲ್ಲಿ ನೆಲೆಸಿದ್ದರು.[೨] ಮುಂದುವರಿದು, "ಪಾಂಡ್ಯ ಆರ್ಯಪಡೆ– ಕಾಡರೇಥಾ– ನೆಡುಂಜ– ಚೆಲಿಯನ್‌ರ ಆಳ್ವಿಕೆಯಲ್ಲಿ ರೋಮನ್ ಸೈನಿಕರನ್ನು (ಯವನರನ್ನು) 'ಮಧುರ' ಕೋಟೆಯ ಕಾವಲಿಗಾಗಿ ಸಹ ನೇಮಕ ಮಾಡಿಕೊಳ್ಳಲಾಗಿತ್ತು.[೩] ಈ ಮೂಲಗಳಲ್ಲದೆ ನಾಣ್ಯ ವಿಷಯದ ಮೂಲ ಸಹ ರೋಮ್ ಮತ್ತು ಭಾರತದ ನಿಕಟ ವ್ಯಾಪಾರಿ ಸಂಬಂಧಗಳಿಗೆ ಆಧಾರಗಳನ್ನು ಒದಗಿಸುತ್ತವೆ."

(ಹಸ್ತಪ್ರತಿಯ ಅರ್ಧ ಹಾಳೆಯಲ್ಲಿ ಏನೂ ಬರೆದಿಲ್ಲ. –ಸಂ)

"ಮಾರ್ಕ್ ಆಂಟೋನಿಯ ಕಾಲದಿಂದ ಜಸ್ಟಿನಿಯನ್ ಕಾಲದವರೆಗೆ ಅಂದರೆ ಕ್ರಿ.ಪೂ. ೩೦ರಿಂದ ಕ್ರಿ.ಶ. ೫೫೦ರವರೆಗೆ ಪಾರ್ಥಿಯಾ ಮತ್ತು ಸಸ್ಸಾನಿಯವರ ವಿರುದ್ಧ, ರೋಮ್ ಮತ್ತು ಭಾರತದ ಮೈತ್ರಿ ಒಂದು ರಾಜಕೀಯ ಪ್ರಾಮುಖ್ಯತೆಯನ್ನು ಪಡೆದಿತ್ತು. ರೋಮ್ ಇಂಡಸ್ ಕಣಿವೆ ಮತ್ತು ಬ್ಯಾಕ್ಟ್ರಿಯಾ ಪ್ರದೇಶಗಳನ್ನು ವಶಪಡಿಸಿಕೊಂಡ ಕುಸಾನ್ ಅಥವಾ ಸಾತಾರೊದೊಂದಿಗೆ ಗೆಳೆತನ ಬೆಳೆಸಿ ಪೂರ್ವ ಮತ್ತು ಪಶ್ಚಿಮಗಳ ಮಧ್ಯದಲ್ಲಿರುವ ಒಂದು ಅತ್ಯಂತ ಮಹತ್ವದ ವ್ಯಾಪಾರಿ ಮಾರ್ಗವನ್ನು ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡಿತ್ತು. ಇದು ವಾಣಿಜ್ಯ ಪ್ರಾಮುಖ್ಯತೆಯನ್ನು ಹೊಂದಿತ್ತು ಎಂಬುದು ರೋಮ್ ಮತ್ತು ಇಂಡಿಯಾಗಳ ನಡುವಿನ ನಿಕಟವಾದ ಸಂಬಂಧವನ್ನು ಮುಕ್ತವಾಗಿ ಪರಿಗಣಿಸಿದೆ.

ಹೀಗೆ ಪರರಾಷ್ಟ್ರಗಳೊಂದಿಗೆ ಭಾರತದ ವ್ಯಾಪಾರಿ ಸಂಬಂಧದ ಒಂದು ಸಂಕ್ಷಿಪ್ತ ವಿವರಣೆಯನ್ನು ಇತ್ತ ನಂತರ, ಈಗ ನಾವು ವ್ಯಾಪಾರದ ವಸ್ತುಗಳ ಮತ್ತು ಮಾರ್ಗಗಳ ಹಾಗೂ ಭಾರತದ ಪ್ರಮುಖ ಬಂದರುಗಳ ಬಗ್ಗೆ ಆಲೋಚಿಸೋಣ.

ಗ್ರೀಕ್ ದಾಖಲೆಗಳು ಮತ್ತು ಟಾಲೆಮಿಯವರ ಭೂಗೋಳ ಮತ್ತು ಕ್ರೈಸ್ತರ ಭೂ ಲಕ್ಷಣದ ವಿವರಣೆಗಳಿಂದ ಭಾರತದ ಬಂದರುಗಳಿಂದ ರಫ್ತು ಮಾಡಲಾಗುತ್ತಿದ್ದ ವಾಣಿಜ್ಯ ಸರಕುಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಈ ಕೆಳಗಿನ ವಸ್ತುಗಳನ್ನು ಭಾರತ ರಫ್ತು ಮಾಡುತ್ತಿತ್ತು ಎಂದು ಪೆರಿಪ್ಲಸ್ ಹೇಳುತ್ತದೆ:

(೧) ಸುಗಂಧದ ಗಿಡ (Spikenard), (೨) ಕರ್ಟಸ್ (Cortus), (೩) ಸುಗಂಧದ ಅಂಟು (Bdellum), (೪) ಹಸ್ತಿದಂತ (Ivory), (೫) ಕುಗೇಟ್ (Qugate), (೬) ಲಿಸಿರೆಮ್ (Lycirem), (೭) ಎಲ್ಲಾ ವಿಧದ ಹತ್ತಿ ಬಟ್ಟೆ, (೮) ರೇಷ್ಮೆ ಬಟ್ಟೆ, (೯) ಕಾಡು ಹೂವಿನ ಬಟ್ಟೆ (Mallow Cloth), (೧೦) ನೂಲು (Yarn), (೧೧) ಉದ್ದನೆಯ ಮೆಣಸು, (೧೨) ವಜ್ರಗಳು, (೧೩) ನೀಲಮಣಿಗಳು (Sapphiris), (೧೪) ಆಮೆ ಚಿಪ್ಪು (Tortoise), (೧೫) ಎಲ್ಲಾ ತರಹದ ಪಾರದರ್ಶಕ ಕಲ್ಲುಗಳು, (೧೬) ಮುತ್ತುಗಳು, (೧೭) ಪರಿಮಳ ಸೊಪ್ಪು (Malabathrum), (೧೮) ಧೂಪ (Incense), (೧೯) ನೀಲಿ (Indigo).

ಆಮದು ವಸ್ತುಗಳಲ್ಲಿ ಈ ಕೆಳಗಿನ ಪದಾರ್ಥಗಳ ಹೆಸರನ್ನು ಹೇಳಲಾಗಿದೆ: (೧) ಮದ್ಯ, (೨) ತಾಮ್ರ, (೩) ಟಿನ್, (೪) ಸೀಸ, (೫) ಹವಳ (Coral), (೬) ತೆಳ್ಳನೆಯ ಬಟ್ಟೆ ಹಾಸು, ಸರ್ವ ರೀತಿಯ ಕಡಿಮೆ ಗುಣಮಟ್ಟದ ಬಟ್ಟೆ, (೭) ಸಿಹಿಯಾದ ಲವಂಗ, (೮) ಶುದ್ಧ ಹಾಗೂ ಕಚ್ಚಾ ಗಾಜು

---

೧. ಅರ್ಲಿ ಹಿಸ್ಟರಿ ಆಫ್ ಇಂಡಿಯಾ ಪು. ೪೦೦–೧

೨. ಮುಖರ್ಜಿ "ಇಂಡಿಯನ್ ಶಿಪ್ಪಿಂಗ್‌ದಲ್ಲಿ ದೊರಕುವ ವಿಷಯ, ಪು., ೧೨೮

೩. ಅದೇ, ದೊರಕುವ ವಿಷಯ, ಪು. ೧೨೮

(೮) ಪದರ ಪದರವಾಗಿರುವ ಒಂದು ಲೋಹ (೧೦) ಅನುಕೂಲಕರ ವ್ಯಾಪಾರ ಶಿಲ್ಕಿನಿಂದ ಒದಗಿಬಂದ ಚಿನ್ನ ಹಾಗೂ ಬೆಳ್ಳಿ.

ಹಿಂದೂ ಮಹಾಸಾಗರದ ಸಮುದ್ರ ವ್ಯಾಪಾರದ ಕೈಪಿಡಿ ಅಥವಾ ಪೆರಿಪ್ಲಸ್ ಈ ಕೆಳಗೆ ನೀಡಿದ ವ್ಯಾಪಾರಿ ಬಂದರುಗಳ ಬಗ್ಗೆ ಮಾಹಿತಿ ನೀಡುತ್ತದೆ.

(೧) ಬರ್ಯೆಗಾಜಾ (Barygaza) ಅಥವಾ ಆಧುನಿಕ ಬರೋಚ್. ಇದೊಂದು ಪಶ್ಚಿಮ ಹಿಂದುಸ್ಥಾನದ ವ್ಯಾಪಾರಿ ಕೇಂದ್ರ. ಮುಂದುವರೆದು, ಅದು ಬರೋಚ ಮೈಥಾನ ಮತ್ತು ಟಗರಾ ಬಂದರುಗಳೊಂದಿಗೆ ಸಂಬಂಧಿಸಿದ ಎರಡು ಒಳನಾಡ ಪಟ್ಟಣಗಳ ಬಗ್ಗೆ ಸಹ ಹೇಳುತ್ತದೆ.

(೨) ಸೌಪ್ಪೆರಾ – ಬಸ್ಸಿಯನ್‌ಗೆ ಸಮೀಪದ ಆಧುನಿಕ ಸುಪಾರಾ

(೩) ಕಲ್ಲಿಯನ್ – ಇಂದಿನ ಕಲ್ಯಾಣ

(೪) ಸೆಮುಲ್ಲಾ – ಆಧುನಿಕ ಚೆಂಬೂರ್ ಎಂದು ಊಹಿಸಬಹುದು

(೫) ಮಂಡಗೋರಾ

(೬) ಪಲಾಯಿಪಟಮಿ

(೭) ಮೆಕ್‌ಲಿಜಿಗರಾ

(೮) ಟೈಂಡಿಸ್

(೯) ಮುಜಿರಿಸ್

(೧೦) ನೆಲ್‌ಕಿಂಡಾ

"ಟೋಲೆಮಿಯ ಭೂಗೋಳಶಾಸ್ತ್ರ" ಎಂಬ ಗ್ರಂಥವು, 'ಇಂಡಸ್'ನ ಮುಖಜದಿಂದ ಗಂಗಾನದಿಯ ಮುಖಜದವರೆಗಿನ ಸಂಪೂರ್ಣ ಸಮುದ್ರ ತೀರವನ್ನು ವರ್ಣಿಸುತ್ತಾ ವಾಣಿಜ್ಯ ಪ್ರಾಮುಖ್ಯತೆಯನ್ನು ಹೊಂದಿರುವ ಹಲವು ಬಂದರುಗಳ ಹಾಗೂ ನಗರಗಳನ್ನು ನಮೂದಿಸುತ್ತದೆ. ಅವುಗಳೆಂದರೆ ಸೈರಾಷ್ಟ್ರ (Syrastra) (ಸೂರತ್), ಗುಜರಾತಿನಲ್ಲಿರುವ ಮೊನೊಗ್ಲೊಸೋನ್ (Mangrol), ಆರ್ೈಕೆ (ಮಹಾರಾಷ್ಟ್ರ), ಸೌಪಾರಾ, ಮಜಿರಿಸ್, ಬಕರೆಯಿ, ಮೈಸೋಲಿ (ಮಸಲಿಪಟ್ಟಣಮ್), ಕೌನಗಾರಾ (ಕೊನಾರ್ಕ) ಹಾಗೂ ಇತರ ಸ್ಥಳಗಳು.[೧]

ದಕ್ಷಿಣ ಭಾರತದ ಕೆಲವು ವಾಣಿಜ್ಯ ಬಂದರು ಮತ್ತು ಪಟ್ಟಣಗಳನ್ನು ಹಲವು ತಮಿಳು ಕವಿಗಳು ಸುಂದರವಾಗಿ ವರ್ಣಿಸಿದ್ದಾರೆ. ಇವರಲ್ಲಿ ಒಬ್ಬ ಕವಿ, "ಆರ್ಥಿಕವಾಗಿ ವೃದ್ಧಿಯಾಗುತ್ತಿರುವ ಮಚಲಿ ಪಟ್ಟಣದಲ್ಲಿ ಚೆರಿಲಾ ಪ್ರದೇಶಕ್ಕೆ ಸಂಬಂಧಿಸಿದ ಪೆರಿಪ್ಲಸ್ ನದಿಯಲ್ಲಿ ಸುಂದರ ಹಾಗೂ ದೊಡ್ಡದಾದ ಯವನರ ಹಡಗುಗಳು ಬಂಗಾರವನ್ನು ಕೊಟ್ಟು ಭಾರತದ ಮೆಣಸನ್ನು ಅವುಗಳಲ್ಲಿ ತುಂಬಿಕೊಂಡು ಹೋಗುತ್ತವೆ." ಇನ್ನೊಬ್ಬ ಕವಿ, "ಮನೆಗಳಿಗೆ ತಂದ ಮೀನಿನ ಬುಟ್ಟಿಗಳನ್ನು ಭತ್ತಕ್ಕಾಗಿ ವಿನಿಮಯ ಮಾಡಿಕೊಳ್ಳಲಾಗುತ್ತಿತ್ತು" ಎಂದಿದ್ದಾನೆ. ಮನೆಗಳಿಂದ ಮೆಣಸಿನ ಚೀಲಗಳನ್ನು ಮಾರುಕಟ್ಟೆಗೆ ತರಲಾಗುತ್ತಿತ್ತು. ವಸ್ತುಗಳ ಮಾರಾಟಕ್ಕೆ ವಿನಿಮಯವಾಗಿ ಈ ಬಂಗಾರವನ್ನು ಚೀಲಗಳಲ್ಲಿ ತುಂಬಿ ಬಂಗಾರವನ್ನು ತೆಗೆದುಕೊಳ್ಳಲಾಗುತ್ತಿತ್ತು. ಎಲ್ಲಿ ಭೋರ್ಗರೆಯುವ ಸಮುದ್ರದ ಸಂಗೀತ ಶಾಶ್ವತವಾಗಿತ್ತೊ; ಮತ್ತು ಎಲ್ಲಿ 'ಕುಡ್ಡುವನ್' (ಚೇರಾ ರಾಜ) ತನ್ನನ್ನು ಭೆಟ್ಟಿಯಾಗಲು ಬಂದ ಜನರಿಗೆ ಸಮುದ್ರಗಳ ಹಾಗೂ ಬೆಟ್ಟಗಳಲ್ಲಿನ ಅಪರೂಪದ ವಸ್ತುಗಳನ್ನು

---

೧. ಆರ್. ಕೆ. ಮುಖರ್ಜಿ, "ಇಂಡಿಯನ್ ಶಿಪ್ಪಿಂಗ್", ಪು. ೧೩೪.

ಬಹುಮಾನವಾಗಿ ನೋಡುತ್ತಿದ್ದನೋ ಅಂಥಾ ಪ್ರದೇಶವಾದ ಮುಚುರಿಯಲ್ಲಿ ಮನೆಗಳಿಂದ ಮೆಣಸಿನ ಚೀಲಗಳನ್ನು ಮಾರುಕಟ್ಟೆಗೆ ತಂದು ಅದನ್ನು ಬಂಗಾರಕ್ಕಾಗಿ ವಿನಿಮಯ ಮಾಡಲಾಗುತ್ತಿತ್ತು.[೧] ಕವಿರಿ ಪದ್ದಿನಮ್‌ದ (Kaviripaddinam) (ಅಂದರೆ ಪೆರಿಪ್ಲಸ್‌ನ ಕೈಮಾರಾ ಮತ್ತು ಟೋಲಮಿಯ ಖಬೇರಿಸ್) ಅಥವಾ 'ಪುಕಾರ'ದಲ್ಲಿರುವ ಅಂದಿನ ವ್ಯಾಪಾರದ ವರ್ಣನೆಯು ಸಹ ಕವಿಗಳ ವರ್ಣನೆಯಂತೆ ಪ್ರಮುಖ ಹಾಗೂ ಸ್ಫೂರ್ತಿ ನೀಡುವಂತಹದಾಗಿರುತ್ತದೆ. ಮಚುರಿ ಪಟ್ಟಣವನ್ನು ಕಾವೇರಿ ನದಿಯ ಉತ್ತರದ ದಂಡೆಯ ಮೇಲೆ ಕಟ್ಟಲಾಗಿತ್ತು; ಈ ಬಂದರು, ಅಗಲ ಹಾಗು ಆಳವಾದ ನೀರಿನ ಪ್ರದೇಶವನ್ನು ಹೊಂದಿದ್ದರಿಂದ ಸಮುದ್ರದಿಂದ ಬಂದ ಹಡಗುಗಳನ್ನು ಯಾವ ತೊಂದರೆ ಇಲ್ಲದೆ ತನ್ನಲ್ಲಿಗೆ ಬರಮಾಡಿ ಕೊಳ್ಳುತ್ತಿತ್ತು. ಈ ಪಟ್ಟಣವನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿತ್ತು; ಮರುವರ್–ಪಕ್ಕಮ್ ಎನ್ನುವ ಒಂದು ಭಾಗ ಸಮುದ್ರ ಕೊಲ್ಲಿಗೆ ಅಂಟಿಕೊಂಡಿತ್ತು. ಮರುವರ್–ಪಕ್ಕಮ್ ಸಮುದ್ರದ ದಂಡೆಯ ಹತ್ತಿರ ಹಡಗುಗಳು ತಂದ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಎತ್ತರದ ಕಟ್ಟೆ ಮತ್ತು ಗೋದಾಮುಗಳು ಅಸ್ತಿತ್ವದಲ್ಲಿದ್ದವು. ಇಲ್ಲಿ ವಸ್ತುಗಳಿಗೆ ಚೋಳ ರಾಜರುಗಳ ಚಿನ್ಹೆಯಾದ 'ಚಿರತೆ'ಯ ಮೊಹರನ್ನು ಹಾಕಲಾಗುತ್ತಿತ್ತು; ಇವುಗಳ ಮೇಲಿನ ಸುಂಕ ಸಂದಾಯವಾದ ನಂತರ ವ್ಯಾಪಾರಿಗಳ ಗೋದಾಮುಗಳಿಗೆ ಇವುಗಳನ್ನು ಸಾಗಿಸಲಾಗುತ್ತಿತ್ತು. ಈ ಸ್ಥಳದ ಹತ್ತಿರದಲ್ಲಿಯ ಯವನರ (ವಿದೇಶಿ) ವ್ಯಾಪಾರಸ್ತರುಗಳ ವಸತಿಗಳು ಇದ್ದವು ಮತ್ತು ಇಲ್ಲಿ ಯಾವಾಗಲೂ ಹಲವಾರು ವಸ್ತುಗಳನ್ನು ಮಾರಾಟಕ್ಕಾಗಿ ಪ್ರದರ್ಶಿಸಲಾಗುತ್ತಿತ್ತು. ಇದಲ್ಲದೆ, ಈ ಸ್ಥಳದಲ್ಲಿ ಸಮುದ್ರದಾಚೆಯಿಂದ ಬಂದ ಬೇರೆ ಬೇರೆ ಭಾಷೆಯನ್ನು ಮಾತನಾಡುವ ವಿದೇಶಿ ವ್ಯಾಪಾರಿಗಳ ಮುಖ್ಯ ಕಚೇರಿಯೂ ಇತ್ತು. ಒಟ್ಟಿನಲ್ಲಿ 'ಮರಾವರ್–ಪಕ್ಕಮ್'ದಲ್ಲಿ ಸುಹಾಸನೆಯುಳ್ಳ ಪೌಡರು, ಹೂಗಳನ್ನು ಮತ್ತು ಊದುಬತ್ತಿಗಳನ್ನು ಮಾರುವವರು, ರೇಷ್ಮೆ ಬಟ್ಟೆಯ ಮೇಲೆ, ಉಣ್ಣೆ ಅಥವಾ ಹತ್ತಿ ಬಟ್ಟೆಯ ಮೇಲೆ ಕೆಲಸ ಮಾಡುವ ದರ್ಜಿಗಳು, ಶ್ರೀಗಂಧ (sandal), ಅಘಿಲ್ (aghil), ಹವಳ (coral), ಮುತ್ತು, ಚಿನ್ನ ಮತ್ತು ಅಮೂಲ್ಯ ವಜ್ರಗಳ ವ್ಯಾಪಾರಿಗಳು, ಆಹಾರ ಧಾನ್ಯಗಳ ವ್ಯಾಪಾರಿಗಳು, ಅಗಸರು, ಮೀನಿನ ಬಲೆಯನ್ನು ಮಾರುವವರು, ಕಟುಕರು, ಕಮ್ಮಾರರು, ಕಂಚುಗಾರರು, ಬಡಿಗರು, ತಾಮ್ರ ಕೆಲಸಗಾರರು, ಬಣ್ಣ ಬಳೆಯುವವರು, ಶಿಲ್ಪಿಗಳು, ಅಕ್ಕಸಾಲಿಗರು, ಚಮ್ಮಾರರು ಹಾಗೂ ಗೊಂಬೆಗಳನ್ನು ಮಾಡುವವರು ವಾಸವಾಗಿದ್ದರು."[೨]

ಭಾರತದ ವ್ಯಾಪಾರಿ ಮಾರ್ಗಗಳನ್ನು ಅನುಕೂಲಕರವಾಗಿ (೧) ಭೂ ಮಾರ್ಗ ಮತ್ತು (೨) ಸಮುದ್ರ ಮಾರ್ಗಗಳೆಂದು ಎರಡು ವಿಭಾಗಗಳಲ್ಲಿ ಸೂಚಿಸಬಹುದು.

ವೈಯಕ್ತಿಕ ವಲಸೆ ಹೋಗುವಿಕೆಯು ನಾಗರಿಕ ಮಾನವನ ಒಂದು ಹವ್ಯಾಸವೆಂದು ನೈಜ ರೀತಿಯಲ್ಲಿ ಹೇಳಲಾಗಿದೆ. ಪ್ರಾಚೀನ ಜನರು ಬಲವಾದ ಸಾಂಘಿಕ ಜೀವನದ ಪ್ರವೃತ್ತಿ ಹೊಂದಿದ್ದರಿಂದ ಅಥವಾ ಅವರಿಗೆ ಭದ್ರತೆ ಸಿಗದೇ ಇದ್ದುದರಿಂದ ಗುಂಪು ಗುಂಪಾಗಿ ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದರು. ಇವರ ಈ ಪ್ರವೃತ್ತಿ ಇವರ ವ್ಯಾಪಾರಿ ಪದ್ಧತಿಗಳಲ್ಲಿ ಎದ್ದು ಕಂಡುಬರುತ್ತದೆ. ತಮ್ಮ ವಸ್ತುಗಳನ್ನು ಮಾರಾಟಕ್ಕಾಗಿ ಇವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುವುದು ಅವಶ್ಯಕವಾಗಿದ್ದುದರಿಂದ ಇವರಲ್ಲಿ ಪೈಪೋಟಿ ಯಾವಾಗಲೂ ಪ್ರಬಲವಾಗಿರಲಿಲ್ಲ. ಅಂದು, ಪ್ರತಿಕೂಲ

---

೧. ಮುಖರ್ಜಿ ಆರ್. ಕೆ. "ಇಂಡಿಯನ್ ಶಿಪ್ಪಿಂಗ್", ಪು. ೧೩೫

೨. ಅದೇ. ಪು. ೧೩೫–೧೩೬.

ಪರಿಸ್ಥಿತಿಯಲ್ಲಿ ವ್ಯಾಪಾರಸ್ಥರು ವಸ್ತುಗಳನ್ನು ಮಾರಲು ಅವುಗಳನ್ನು ಒಂಟೆಗಳ ಮೇಲೆ ಹೇರಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುವುದನ್ನು ನೋಡಿದಾಗ ಯಾವಾಗಲೂ ಸಲೀಸಾಗಿ ಹೋಗುವ ಆಧುನಿಕ ವ್ಯಾಪಾರಿ, ತೀಕ್ಷ್ಣ ವ್ಯಾಪಾರಿ ಮನೋಭಾವ ಹೊಂದಿದ್ದರೂ, ಒಂಟೆ ಸವಾರರಂತೆ ವ್ಯಾಪಾರದಲ್ಲಿ ತನ್ನನ್ನು ತಾನು ತೊಡಗಿಸಲಾರ. ಏಕೆಂದರೆ, ಒಂಟೆ ಸವಾರಿ ವ್ಯಾಪಾರದಲ್ಲಿ ಉಂಟಾಗುವ ಅಡೆತಡೆಗಳಿಗೆ ಸಂಪೂರ್ಣ ಪರಿಹಾರ ಒದಗಿಸುವಷ್ಟು ಲಾಭ ದೊಡ್ಡ ಮೊತ್ತದ್ದಾಗಿರುವುದಿಲ್ಲ. ಆದುದರಿಂದ, ಆತ ಅಂತಹ ವ್ಯಾಪಾರದಿಂದ ಬರುವ ಭೌತಿಕ ಸಂಪತ್ತಿಗೆ ಮಾರುಹೋಗದೆ ವ್ಯಾಪಾರವನ್ನೇ ಕೈಬಿಡುತ್ತಾನೆ. ಒಂಟೆ ಸವಾರಿ ವರ್ತಕರನ್ನು ಕುರಿತು ಮಿ. ಹಾರ್‌ಬರ್ ಎನ್ನುವವರು, "ಒಂಟೆ ಸವಾರಿ ವ್ಯಾಪಾರ ಮಾರ್ಗವನ್ನು ಈಗಾಗಲೇ ಸ್ಥಾಪಿತವಾದ ರೂಢಿ ನಿರ್ಧರಿಸುತ್ತದೆಯೇ ಹೊರತು ಇದರಲ್ಲಿ ವ್ಯಾಪಾರಸ್ಥನಿಗೆ ಬೇರೆಬೇರೆ ಮಾರ್ಗಗಳಲ್ಲಿ ಹೋಗಲು ಆಸ್ಪದವಿರುವುದಿಲ್ಲ. ಅಂದು ಅವರು ವಿಶಾಲವಾದ ಉಸುಕಿನ ಮರುಭೂಮಿಯಲ್ಲಿ ವ್ಯಾಪಾರಕ್ಕಾಗಿ ಪ್ರವಾಸ ಕೈಗೊಳ್ಳಬೇಕಾಗಿತ್ತು. ಅವರಿಗೆ ವಿಶ್ರಾಂತಿಗಾಗಿ ಕೆಲವೇ ಕೆಲವು ತಾಣಗಳು ಮಾತ್ರ ಇದ್ದರೂ, ಅವರು ತಾಳೆಗಿಡದ ನೆರಳಲ್ಲಿ ತಮ್ಮ ಭಾರವಾದ ಸಾಮಾನುಗಳನ್ನು ಜೊತೆಗೆ ಇಟ್ಟುಕೊಂಡು ಕೆಲಕಾಲ ಮಾತ್ರ ವಿಶ್ರಾಂತಿ ತೆಗೆದುಕೊಳ್ಳಬಹುದಾಗಿತ್ತು ಮತ್ತು ಇದು ಅವರು ಪಟ್ಟ ಶ್ರಮಕ್ಕೆ ಯಾವ ರೀತಿಯಲ್ಲಿಯೂ ಸಮನಾಗಿರಲಿಲ್ಲ. ಒಟ್ಟಿನಲ್ಲಿ ತಾಳೆಗಿಡದ ನೆರಳಿನಂತಹ ವಿಶ್ರಾಮ ಸ್ಥಳಗಳು ವಾಣಿಜ್ಯ ಕೇಂದ್ರಗಳಾದವಲ್ಲದೇ, ಯಾವ ದೇವಾಲಯ ಅಥವಾ ಅವುಗಳಂತಹ ಪವಿತ್ರ ಸ್ಥಳಗಳ ರಕ್ಷಣೆಯಲ್ಲಿ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ನಡೆಸುತ್ತಿದ್ದರೋ ಮತ್ತು ಯಾತ್ರಿಕರು ಯಾವ ಸ್ಥಳಕ್ಕೆ ಹೆಚ್ಚಾಗಿ ಹೋಗುತ್ತಿದ್ದರೋ ಅಂತಹ ಸ್ಥಳಗಳು ವ್ಯಾಪಾರಿ ಕೇಂದ್ರಗಳಾಗಲಿಲ್ಲ."[೧] ಯಾವಾಗಲೂ ಒಂಟೆ ಸವಾರಿ ಮಾರ್ಗ ಎಂದೂ ನೇರವಾಗಿರುವುದಿಲ್ಲ. ಅಂಕುಡೊಂಕುಗಳಿಂದ ಕೂಡಿದ ಈ ಮಾರ್ಗವನ್ನು ನಾವು ಪ್ರಾಚೀನ ಕಾಲದ ವ್ಯಾಪಾರಿ ನಕ್ಷೆಗಳಲ್ಲಿ ಕಾಣಬಹುದು. ಒಟ್ಟಾರೆ ಇದೊಂದು, ಒಂದಕ್ಕೊಂದು ಸಂಧಿಸುವ ಮತ್ತು ಛೇದಿಸುವ ಮಾರ್ಗಗಳ ಒಂದು ಜಾಲವಾಗಿತ್ತು ಎಂಬುದನ್ನು ಕಂಡುಕೊಳ್ಳುತ್ತೇವೆ. ಈ ವಿಷಯ ಏನೇ ಇರಲಿ, ಭಾರತದಿಂದ ಮೆಡಿಟರೇನಿಯನ್ ಸಮುದ್ರಕ್ಕೆ ಬರಲು ಅಂದು, ಎರಡು ಪ್ರಮುಖ ವ್ಯಾಪಾರಿ ಮಾರ್ಗಗಳು ಇದ್ದವು ಎಂಬುದನ್ನು ನಾವು ಕಂಡುಕೊಳ್ಳಬಹುದು. ಮೊದಲನೆಯದು, ಉತ್ತರ ದಿಕ್ಕಿನ ಮಾರ್ಗ. ಇದು ಒಕ್ಸಸ್ (Oxus) ನದಿಯಿಂದ ಕ್ಯಾಸ್ಪಿಯನ್ ಸಮುದ್ರದ ಉತ್ತರ ತಾಂಬಾಣ(Basin)ದವರೆಗೆ ಹೋಗಿ ಕಪ್ಪು ಸಮುದ್ರವನ್ನು ಸೇರುತ್ತದೆ. ಅನಂತರ ಅದು ಕಾನ್‌ಸ್ಟಂಟಿನೋಪಲ್‌ಗೆ ಸಾಗುತ್ತದೆ. ಎರಡನೆಯದು ಮಧ್ಯಮ ಮಾರ್ಗವೆನಿಸುತ್ತದೆ ಮತ್ತು ಇದು ನೇರವಾಗಿದ್ದು ತನ್ನ ಹಲವಾರು ಕವಲುಗಳೊಂದಿಗೆ ಮಾರುಕಟ್ಟೆಯಲ್ಲಿ ಸಂಧಿಸುತ್ತದೆ. ಈ ಮಾರ್ಗ ಕ್ಯಾಸ್ಪಿಯನ್ ಸಮುದ್ರದ ದಕ್ಷಿಣ ತಾಂಬಣದಿಂದ ಪ್ರಾರಂಭವಾಗಿ, ಟೆಬರಿಜ್ (Tebriz), ಎರುಝುವಮ್ ಟ್ರೆಬಿಜಾಂಡ್ (Erzewm Trebizond) ಮತ್ತು ಕಪ್ಪು ಸಮುದ್ರದ ಮುಖಾಂತರ ಕಾನ್‌ಸ್ಟಂಟಿನೋಪಲ್(Constantinople)ನ್ನು ಸೇರುತ್ತದೆ. ಇವೆರಡೇ ಭಾರತ ಮತ್ತು ಪಶ್ಚಿಮ ಜಗತ್ತಿನ ರಾಷ್ಟ್ರಗಳ ನಡುವೆ ಅಂದು ಅಸ್ತಿತ್ವದಲ್ಲಿದ್ದ ಪ್ರಮುಖ ವ್ಯಾಪಾರಿ ಭೂಮಾರ್ಗಗಳಾಗಿದ್ದವು.

ಅಂದು, ಭೂಮಾರ್ಗಗಳಂತೆ ವ್ಯಾಪಾರಕ್ಕಾಗಿ ಎರಡು ಸಮುದ್ರ ಮಾರ್ಗಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಒಂದು ಅರ್ಧ ಮಾತ್ರ ಸಮುದ್ರ ಮಾರ್ಗ (half-way) ಆಗಿತ್ತು ಹಾಗೂ ಇವುಗಳಲ್ಲಿನ ಒಂದು ಮಾರ್ಗ ಕೆಂಪು ಸಮುದ್ರಕ್ಕೆ ಸಂಬಂಧಿಸಿತ್ತು. ಭಾರತೀಯ ಬಂದರುಗಳಿಂದ ಹಡಗುಗಳು ಹಿಂದು

---

೧. 'ಕಲ್ಕತ್ತಾ ರಿವ್ಯೂ'ನಲ್ಲಿ ಉಲ್ಲೇಖ, ಸಂ. ೧೯, ಪು. ೩೪೫.

ಮಹಾಸಾಗರವನ್ನು ದಾಟಿ ಒಂದೆಡೆ ದಕ್ಷಿಣ ಆಫ್ರಿಕಾಕ್ಕೊ ಅಥವಾ ಇನ್ನೊಂದೆಡೆ ಮೇಲ್ಗಡೆಯೋ ಸಾಗಿ ದಕ್ಷಿಣ ಅರೇಬಿಯಾದ 'ಸೇಂಟ್ ಆಫ್ ಬಾಬೆಲ್–ಮಂಡೆಬ್'ನ ಮುಖಾಂತರ (ಟಿಯರುಗಳ ದ್ವಾರ) ಕೆಂಪು ಸಮುದ್ರಕ್ಕೆ ಬರುತ್ತಿದ್ದವು. ಇವುಗಳು ಇತ್ತ ಅರೇಬಿಯಾ ಕೊಲ್ಲಿಯ 'ಜೆಡ್ಡಾ'ವನ್ನು ಅತ್ತ ಇಜಿಪ್ಷಿಯನ್ ಕೊಲ್ಲಿಯ 'ಬೆರನೈಸ್'ನ್ನು ಸಹ ಮುಟ್ಟುತ್ತಿದ್ದವು. 'ಬೈರನೈಸ್'ನಿಂದ ವಸ್ತುಗಳನ್ನು ಒಂಟೆಯ ಮೇಲೆ 'ಥೇಬ್ಸ್'ಗೆ ಮತ್ತು "ಕೋಸ್"ಗೆ ಸಾಗಿಸಲಾಗುತ್ತಿತ್ತು. ಇಲ್ಲಿಂದ ನೈಲ್ ನದಿಯ ಮುಖಾಂತರ ಸಮುದ್ರ ಪ್ರಯಾಣ ಕೈಗೊಂಡು 'ಮಸ್ಕಟ್' ಮತ್ತು 'ಒರ್‌ಮರುಖ'ದ ಸಮೀಪವಿರುವ ಭೂಮಿಯನ್ನು ವಸ್ತುಗಳು ಸೇರುತ್ತಿದ್ದವು. ಇನ್ನೊಂದು ಸಮುದ್ರಮಾರ್ಗ ಪರ್ಷಿಯನ್ ಕೊಲ್ಲಿಯನ್ನು ಹಾದು ಹೋಗುತ್ತಿತ್ತು. ಇಲ್ಲಿ ಹಡಗುಗಳು 'ಬರೋಚ್' ಮುಖಾಂತರ ಸಮುದ್ರಯಾನ ಮಾಡಿ 'ಮಸ್ಕಟ್' ಹಾಗೂ 'ಒರಮರುಖ' ಎಂಬಲ್ಲಿ ಭೂಮಿಯನ್ನು ಮುಟ್ಟುತ್ತಿದ್ದವು ಮತ್ತು 'ಒಮ್ಮಾನ ಕೊಲ್ಲಿ'ಯ ಮುಖಾಂತರ 'ಬಸ್ಸೊರಾ'ವನ್ನು ಸೇರುತ್ತಿದ್ದವು. 'ಬಸ್ಸೊರಾ'ದಿಂದ (ಪರ್ಷಿಯನ್ ಕೊಲ್ಲಿಯ ಬಾಯಿ ಅಥವಾ ಮೊಟ್ಟ ಮೊದಲ ಪ್ರದೇಶ) ಮೂಲಕ 'ಯುಫರೇಟಸ್' ಮತ್ತು 'ಟೈಗ್ರಿಸ್'ಗಳ ದಂಡೆಗಳ ಮೂಲಕ ವಸ್ತು ಮತ್ತು ಒಂಟೆಗಳನ್ನು 'ಬ್ಯಾಬಿಲೋನಿಯಾ'ಕ್ಕೆ ತರಲಾಗುತ್ತಿತ್ತು. ಅಲ್ಲಿಂದ ಅವುಗಳನ್ನು ಮೆಡಿಟರೇನಿಯನ್‌ನ 'ಆ್ಯಂಟಿಯೋಕ'ಗೆ ಒಯ್ಯಲಾಗುತ್ತಿತ್ತು.

ಮೇಲೆ ವಿವರಿಸಲಾದ ಹಿಂದಿನ ಎರಡು ಸಮುದ್ರ ವ್ಯಾಪಾರಿ ಮಾರ್ಗಗಳು ಇಂದಿನವರೆಗೂ ಉಪಯೋಗದಲ್ಲಿದ್ದವು. ಆದರೆ ಭೂ ವ್ಯಾಪಾರ ಮಾರ್ಗಗಳ ಕತೆಯೇ ಬೇರೆಯಾಗಿರುತ್ತದೆ. ಈ ಮಾರ್ಗಗಳನ್ನು ಶಾಶ್ವತವಾಗಿ ಮುಚ್ಚಲಾಗಿದೆ ಮತ್ತು ಇವುಗಳ ಮುಚ್ಚುವಿಕೆ ಬಹುಶಃ ಯೂರೋಪಿನ ಇತಿಹಾಸದ ಮೇಲೆ ಗಾಢವಾದ ಪರಿಣಾಮ ಬೀರಿರುತ್ತದೆ ಎಂದು ಹೇಳಬಹುದು.

## ಅಧ್ಯಾಯ ೨

# ಮಧ್ಯಕಾಲೀನ ಭಾರತದ ವಾಣಿಜ್ಯ ಸಂಬಂಧಗಳು
## ಅಥವಾ
# ಇಸ್ಲಾಂ ಧರ್ಮದ ಉದಯ ಮತ್ತು ಪಶ್ಚಿಮ ಯೂರೋಪಿನ ವಿಸ್ತರಣೆ

ಇಸ್ಲಾಂ ಧರ್ಮದ ಜನನ ಮತ್ತು ಗ್ರೆಗರಿ ಚಕ್ರವರ್ತಿಯ ಆಳ್ವಿಕೆಯಲ್ಲಿ ರೋಮ್‌ನಲ್ಲಿ ಕ್ರೈಸ್ತ ಧರ್ಮದ ಬಲ ಸಂವರ್ಧನೆ ಏಕಕಾಲದಲ್ಲಿ ಉಂಟಾಯಿತು. ಇದು ದೈವಾಧಿಪತ್ಯದ ಭಾವನೆಯ ಕಾಲವಾಗಿತ್ತು ಮತ್ತು ಪೂರ್ವವು ಮತ್ತೊಮ್ಮೆ ಧಾರ್ಮಿಕ ಅಲೆಗಳನ್ನು ಹಬ್ಬಿಸಿ ಅದು ಇಡಿ ಯುರೋಪ್ ಖಂಡವನ್ನು ಮಹಮದೀಕರಿಸಲು ಬಹುತೇಕ ಯಶಸ್ವಿಯಾಗಿತ್ತು. ಆದರೆ, ಇದು ತನ್ನ ಧರ್ಮಪ್ರಚಾರ ಕಾರ್ಯಕ್ಕಾಗಿ ಜಗತ್ತಿನ ದೊಡ್ಡ ಭೂ ಖಂಡಗಳಾದ ಆಫ್ರಿಕಾ ಮತ್ತು ಏಶಿಯಾಗಳನ್ನು ಆರಿಸಿಕೊಳ್ಳದೆ ಚಿಕ್ಕದಾದ ಯೂರೋಪನ್ನು ಆರಿಸಿಕೊಂಡಿತು.

ಪ್ರವಾದಿ ಮೊಹಮದ್‌ರ ಜನನಕ್ಕಿಂತ ಬಹಳ ಹಿಂದೆ ಅರೇಬಿಯಾವು[೧] ಹಲವಾರು ಬುಡಕಟ್ಟು ಜನಾಂಗಗಳಿಂದ ವಾಸಿಸಲ್ಪಟ್ಟಿತ್ತು ಮತ್ತು ಇದು ಪೂರ್ವ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳ ಮಧ್ಯದ ವ್ಯಾಪಾರಿ ಸಮೃದ್ಧಿಯನ್ನು ಹೊಂದಿತ್ತು. ಅರಬರ ಈ ಆದಿಮ ಆಮದಿನ ಸಮೃದ್ಧಿಯು ಪೆಟ್ರಾದಿಂದ ಡಮಾಸ್ಕಸ್‌ವರೆಗಿನ ಹಲವಾರು ಶ್ರೀಮಂತ ಹಾಗೂ ಭವ್ಯ ನಗರಗಳ ವಿನಾಶದ ಕುರುಹಿನಿಂದ ಸಾಬೀತಾಗುತ್ತದೆ. ಆದರೆ ರೋಮನ್‌ರು ಭಾರತದೊಂದಿಗೆ ನೇರ ವ್ಯಾಪಾರವನ್ನು ಆರಂಭಿಸಿದಾಗ ಅರಬರಿಗೆ ಸಂಪನ್ಮೂಲವು ಬತ್ತಿತು ಎಂಬುದು ಸ್ಟ್ರಾಬೋನ ವಾದವಾಗಿತ್ತು. ಭಾರತ ಮತ್ತು ಅರೇಬಿಯಾದ ಸರಕುಗಳು ಕೆಂಪು ಸಮುದ್ರದ ಪಶ್ಚಿಮ ದಂಡೆಯ ಮೇಲಿನ ಮಿಯೋಸ್ ಹೊರ್ಮಾ ಎಂಬ ಪ್ರದೇಶವನ್ನು ಮತ್ತು ನಂತರ ಒಂಟೆಗಳ ಮೂಲಕ ಥೇಬ್ಸ್ ನಗರಕ್ಕೆ ಮತ್ತು ಆನಂತರ ನೈಲ್ ನದಿಯ ಮೂಲಕ ಅಲೆಗ್ಸಾಂಡ್ರಿಯಾಕ್ಕೆ ಸಾಗಾಣಿಕೆಯಾಗುತ್ತಿದ್ದವು. ಇದರ ಪರಿಣಾಮವಾಗಿ "ಆರ್ಥಿಕವಾಗಿ ಅರಬರು ನಿಜವಾಗಿ ಮರುಭೂಮಿಯ ಮಕ್ಕಳ ಮಟ್ಟಕ್ಕೆ ಇಳಿದಿದ್ದರು."

ಆರ್ಥಿಕವಾಗಿ ಅರೇಬಿಯಾದಷ್ಟು ಬಡದೇಶ ಬೇರೆ ಇರಲಿಲ್ಲ. ಗಿಬ್ಬನ್ ಹೇಳಿದಂತೆ ಇದೊಂದು ಬರೇ ಕಲ್ಲು ಮತ್ತು ಮರಳಿನ ಒಂದು ಸಂತೋಷದ ದೇಶವಾಗಿತ್ತು. ಕೃಷಿಯೋಗ್ಯ ಭೂಮಿಯ ಮತ್ತು ನೀರಾವರಿ ಸವಲತ್ತಿನ ಅಭಾವ ಅರಬರಿಗೆ ಒಂದೆಡೆ ನೆಲೆಸದಂತೆ ಮಾಡಿದ್ದವು. ಅವರು ಅಲೆಮಾರಿ ಮತ್ತು ಆದಿವಾಸಿ ಗಳಾಗಿಯೇ ಉಳಿದರು ಹಾಗೂ ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಒಗ್ಗಟ್ಟಾಗಿರಲಿಲ್ಲ.

---

೧. ಅರೇಬಿಯವು ವಾಯುವ್ಯ ಏಶಿಯಾ ಖಂಡದ ಒಂದು ದ್ವೀಪ ಕಲ್ಪ. ಇದು ಸೌದಿ ಅರೇಬಿಯಾ, ಯಮನ್, ಒಮಾನ್ ಮತ್ತು ದಕ್ಷಿಣ ಯಮನ್ ದೇಶಗಳನ್ನು ಒಳಗೊಂಡಿರುತ್ತದೆ.

ಅವರಲ್ಲಿ ಪರಸ್ಪರ ಒಗ್ಗಟ್ಟಿರದ ಕಾರಣ ಅವರು ಬಹಳ ಸಲ ಪರಕೀಯರ ದಾಳಿಗೆ ಒಳಪಟ್ಟರು. ಒಬ್ಬರಾದ ಮೇಲೆ ಒಬ್ಬರಂತೆ ಅಂದರೆ ಅಬಿಸೀನಿಯಾದವರು, ಪರ್ಶಿಯನ್ನರು, ಈಜಿಪ್ತಿನ ಸುಲ್ತಾನರು ಮತ್ತು ತುರ್ಕಿಗಳು ಅರೇಬಿಯಾದ ಯಮನ್ ರಾಜ್ಯವನ್ನು ಆಳಿದರು. ಹಲವಾರು ಸಿಥಿಯಾದ ಪ್ರಜಾಹಿಂಸಕರು ಪವಿತ್ರ ನಗರಗಳಾದ ಮೆಕ್ಕಾ ಹಾಗೂ ಮದಿನಾಗಳು ತಮ್ಮ ಅಧೀನದಲ್ಲಿರಬೇಕೆಂದು ಬಯಸಿದ್ದರು. ಇದಲ್ಲದೆ ಸ್ವತಃ ಅರೇಬಿಯಾವು ಭಾಗಶಃ ರೋಮ್ ಚಕ್ರಾಧಿಪತ್ಯದ ಒಂದು ಸಂಸ್ಥಾನವಾಗಿತ್ತು. ಆದರೆ ಇವರೆಲ್ಲರಿಗೆ ಅರೇಬಿಯಾವನ್ನು ಶಾಶ್ವತವಾಗಿ ತಮ್ಮ ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಅರೇಬಿಯಾದ ಶಕ್ತಿಶಾಲಿ ರಾಜರುಗಳಾದ ಶಿಶೋಟ್ರಿಸ್, ಸೈರಸ್, ಪಾಂಪೇ ಹಾಗೂ ಟ್ರೋಜನ್ ಮುಂತಾದವರು ಇವರೆಲ್ಲರನ್ನು ಹೊರಹಾಕಿದರು. ಅರಬರ ಈ ಸ್ವಾತಂತ್ರ್ಯ ಪರವಾದ ಪ್ರವೃತ್ತಿಯನ್ನು ಅವರು ವಾಸವಾಗಿರುವ ಮಣ್ಣಿನಿಂದ ಪಡೆದರು ಎನ್ನಬಹುದು.

ಅರಬರ ಧಾರ್ಮಿಕ ಆಡಂಬರ ಮತ್ತು ವಿಗ್ರಹ ಪೂಜೆ ಅನಾಗರಿಕವಾಗಿತ್ತು ಮತ್ತು ಕಲಾತ್ಮಕವಾಗಿರಲಿಲ್ಲ. ಇವರ ಧರ್ಮದಲ್ಲಿ ಸವಿಸ್ತಾರವಾದ ಪುರಾಣ ಕಥೆ ಅಥವಾ ಉನ್ನತವಾದ ತತ್ವಜ್ಞಾನದ ವಿಚಾರಗಳ ಊಹೆಗೆ ಸ್ಥಾನವಿರಲಿಲ್ಲ. "ಅರಬರ ಮತ್ತು ಭಾರತೀಯರ ಧರ್ಮವು, ಸೂರ್ಯ, ಚಂದ್ರ ಮತ್ತು ನಿಶ್ಚಲ ನಕ್ಷತ್ರಗಳ ಪೂಜೆಯನ್ನು ಒಳಗೊಂಡಿತ್ತು."[೧] "ಪ್ರತಿಯೊಂದು ಬುಡಕಟ್ಟು, ಕುಟುಂಬ, ಪ್ರತಿಯೊಬ್ಬ ಸ್ವತಂತ್ರ ಯೋಧ ಧಾರ್ಮಿಕ ಸಂಸ್ಕಾರಗಳನ್ನು ಹಾಗೂ ತನ್ನ ಮತದ ಪೂಜೆಯ ಮೂರ್ತಿಯನ್ನು ಸೃಷ್ಟಿಸುತ್ತಿದ್ದ ಮತ್ತು ಬದಲಾಯಿಸುತ್ತಿದ್ದ. ಅರೇಬಿಯಾ ಯಾವಾಗಲೂ ಇಸ್ಲಾಂ ಧರ್ಮಕ್ಕೆ ಹಾಗೂ ಮೆಕ್ಕಾದ ಭಾಷೆಗೆ ತಲೆ ಬಾಗುತ್ತಿತ್ತು."[೨] ಮೂರ್ತಿಪೂಜಕ ಒಬ್ಬನನ್ನು ಹೊಸಧರ್ಮಕ್ಕೆ ಮತಾಂತರಗೊಳಿಸುವುದು ಕಷ್ಟದ ಕೆಲಸವಲ್ಲ. ಏಕೆಂದರೆ ಅವರು ಮತ್ತೊಂದು ಧರ್ಮದ ಬಗ್ಗೆ ಹೆಚ್ಚಿನ ತಾಳ್ಮೆಯನ್ನು ಹೊಂದಿದವರಾಗಿರುತ್ತಾರೆ. ಆದುದರಿಂದ ಮೂರ್ತಿ ಪೂಜಕರಾದ ಅರಬರು ಉತ್ತರ ಮತ್ತು ದಕ್ಷಿಣದಲ್ಲಿರುವ ನಿಜರಾನ ಪ್ರದೇಶಗಳಲ್ಲಿ ಕ್ರಿಶ್ಚಿಯನ್‌ರೊಂದಿಗೆ, ಈಶಾನ್ಯದಲ್ಲಿರುವ ಜ್ಯೂಗಳೊಂದಿಗೆ ಮತ್ತು ಪರ್ಶಿಯನ್ ಕೊಲ್ಲಿಯ ಅತಿ ಸಮೀಪದಲ್ಲಿರುವ ಜೊರಾಸ್ಟಾನ್‌ರೊಂದಿಗೆ ಶಾಂತಿಯುತ ಬಾಳ್ವೆ ನಡೆಸುತ್ತಿದ್ದರು. ಇಂತಹ ರಕ್ತಸಂಬಂಧ ಅವರಲ್ಲಿ ಇದ್ದ ಪರಿಣಾಮವಾಗಿ ಮುಸ್ಲಿಂ, ಜ್ಯೂ ಮತ್ತು ಜೊರೋಸ್ಟ್ರಿಯನ್‌ರ ಧರ್ಮಗಳ ನಡುವೆ ಪರಸ್ಪರ ವಿಚಾರ ವಿನಿಮಯ ಸಾಧ್ಯವಾಯಿತು. ಈ ವಿಚಾರ ವಿನಿಮಯ ಅರಬರಲ್ಲಿ ಪ್ರವಾದಿ ಮೊಹಮದ್‌ರ ಜನನದ ಮುಂಚೆಯೇ 'ದೇವನು ಒಬ್ಬ' ಎನ್ನುವ ವಾದಕ್ಕೆ ಮಹತ್ವ ಸಿಕ್ಕುವಂತೆ ಮಾಡಿತು. ಮೇಲಾಗಿ ಇಂತಹ ವಾದ ಅರಬರ ಹನೀಫರ ಧಾರ್ಮಿಕ ಚಳವಳಿಯಲ್ಲಿ ಸೂಚಿತವಾಗಿತ್ತು.

ಸ್ವತಂತ್ರವಾಗಿ ಅಥವಾ ಹನೀಫರ ಚಳುವಳಿಯ ಪ್ರೇರಣೆಯಿಂದ ಒಬ್ಬ ಒಂಟೆ ಸವಾರರಾದ ಪ್ರವಾದಿ ಮೊಹಮದ್‌ರು ತಮ್ಮ ತಮ್ಮೊಳಗೆ ನಿರಂತರವಾಗಿ ಜಗಳವಾಡುತ್ತಿರುವ ಹಾಗೂ ಕಾಬಾದ ಹಲವಾರು ಮೂರ್ತಿಗಳಿಗೆ ನರಬಲಿ ನೀಡುವ ಅರಬರನ್ನು ಸುಧಾರಿಸಲು ಯೋಚಿಸಿದರು. ಇಷ್ಟು ಕಡಿಮೆ ಸಾಧನಗಳಿಂದ ಯಾವನೇ ವ್ಯಕ್ತಿಯು ಪ್ರವಾದಿಯ ಗುಣಗಳನ್ನು ತನ್ನಲ್ಲಿ ಆರೋಪಿಸಿಕೊಂಡಿರಲಿಲ್ಲವಾದರೂ ಆತನು ಇಸ್ಲಾಮಿನ ಹೆಸರಿನಲ್ಲಿ ತನ್ನ ಕುಟುಂಬ ಮತ್ತು ರಾಷ್ಟ್ರಕ್ಕೆ ಮಾಡಿದ ಬೋಧನೆಗಳು ಒಂದು ಶಾಶ್ವತ ಸತ್ಯ ಮತ್ತು ಅಗತ್ಯ ಕಲ್ಪನೆಗಳ ಛಾಪನ್ನೊತ್ತಿದವು.

---

೧. ಗಿಬ್ಬನ್‌ನ "ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್", ಸಂ. V., ಪು. ೩೨೭

೨. ಅದೇ, ಸಂ. V., ಪು. ೩೨೭–೮

"ದೇವನೊಬ್ಬನೇ ಮತ್ತು ಮಹಮದನು ದೇವರ ದೂತನು."[೧] ಎಂದು ಸಾರಿದ. ಅವನ ಜನನ ಕಾಲದ ಸನ್ನಿವೇಶಗಳು ಮಹಮದ್‌ನನ್ನು ತಾನು ಒಬ್ಬ ಪ್ರವಾದಿ ಎಂದು ಸಾರಲು ಆತನ ನೆರವಿಗೆ ಬಂದವು.

ಅರೇಬಿಯಾವು ಸಮಾನ ಸ್ವಾತಂತ್ರ್ಯವನ್ನು ಹೊಂದಿದ ಹಲವು ಬುಡಕಟ್ಟು ಜನಾಂಗಗಳಿಂದ ತುಂಬಿತ್ತೆಂಬುದನ್ನು ನೆನಪಿಡಬೇಕು. ಆದರೂ ಈ ಎಲ್ಲ ಬುಡಕಟ್ಟಿನ ಜನರು ಸರಿಯಾದ ಮತ್ತು ಮೋಸದ ಹಾದಿಗಳಿಂದ ಕಾಬಾದ ದೇಗುಲದ ಹತೋಟಿಯನ್ನು ಹೊಂದಿತ್ತೋ ಮತ್ತು ಕಾಬಾದ ಆರಾಧನೆಯ ಪವಿತ್ರ ಸ್ಥಾನವು ಹಾಸಮೈಟಿಸ್‌ನ ಕುಟುಂಬದ ಅದರಲ್ಲೂ ಮುಖ್ಯವಾಗಿ ಮಹಮದ್‌ನ ತಾತನ ಮೇಲೆ ಬಿದ್ದಿತ್ತೊ ಅಂತಹ ಕೋರೆಶ್‌ನ ಜನಾಂಗವನ್ನು ಗೌರವಿಸುವುದಕ್ಕಾಗಿ ಒಟ್ಟಾದರು. ಕಾಬಾದ ದೇವಾಲಯ ಇವರ ಕೈಯಲ್ಲಿತ್ತು ಮತ್ತು ಇದರ ಪೂಜೆಯ ಜವಾಬ್ದಾರಿ ಹಾಶಮೈಟ್ ಕುಟುಂಬಕ್ಕೆ ವಹಿಸಲಾಗಿತ್ತು. ಇವರು ಮೊಹಮದ್‌ನ ತಾತ. ಅರಬರ ನಡುವೆ ತನ್ನ ಇಂತಹ ಉನ್ನತ ಸ್ಥಾನದ ಲಾಭ ಪಡೆದು ಮೊಹಮದ್‌ರು ಅರಬರ ಮುಖಂಡರಾದರು. ಮತ್ತು 'ದೇವನೊಬ್ಬ' ಎಂಬ ಉಪದೇಶ ಪ್ರಾರಂಭಿಸಿದರು. ಇವರು ನಿಜವಾದ ಅರ್ಥದಲ್ಲಿ ಮೂಲ ಪ್ರವಾದಿಗಳಾಗಿರಲಿಲ್ಲ; ಆದುದರಿಂದ ಅವರ ಉಪದೇಶದಲ್ಲಿ ಹೊಸತೇನು ಇರಲಿಲ್ಲ. ಇವರ ಖುರಾನ್ ಕ್ರೈಸ್ತ ಮತ್ತು ಜುಡಾ ಪಂಥದ ನಡುವಿನ ಒಂದು ಒಪ್ಪಂದವಾಗಿತ್ತು. ಮೊಹಮದ್‌ರ ಬೋಧನೆಯ ಮೌಲ್ಯ ಏನಾದರೂ ಇರಲಿ, ಅರಬರು ಇವರನ್ನು ಕಡುವೈರಿಯಾಗಿ ಕಂಡರು. ಈ ವೈರತ್ವ ಎಷ್ಟರಮಟ್ಟಿಗೆ ಪ್ರಬಲವಾಗಿತ್ತೆಂದರೆ ಅರಬರು ಇವರನ್ನು ಅಷ್ಟೇ ಅಲ್ಲ ಇವರ ಪಂಗಡದವರಾದ ಹಾಸಮೈಟ್‌ರನ್ನೂ ಕೀಳಾಗಿ ಕಾಣಲು ಪ್ರಾರಂಭಿಸಿದರು. ಅರಬರ ಈ ಮೊಂಡುತನ ಮೊಹಮದ್‌ನ ಧರ್ಮಪ್ರಚಾರದ ಉತ್ಸಾಹ ಹೆಚ್ಚಿದಂತೆ ವೃದ್ಧಿಯಾಗುತ್ತಾ ಹೋಯಿತು. ಇದು ಇಂದಿನ ಹಿಂದೂಗಳಲ್ಲಿನ ಮೂಲಭೂತವಾದದಂತೆ ಇರುತ್ತದೆ. ಅರಬರ ತಾಳ್ಮೆ ಮೀರಿದಾಗ ಅವರು ಹಾಸ್‌ಮೈಟರಿಗೆ ಮೊಹಮದ್‌ರನ್ನು ಮೆಕ್ಕಾದಿಂದ ಗಡಿಪಾರು ಮಾಡಲು ಒತ್ತಾಯಿಸಿದರು. (ಅವರ ಜೀವನಕ್ಕೆ ಅಪಾಯ ಒದಗಿ ಬಂದಿತ್ತು) ಸ್ವತಃ ಮೊಹಮದ್‌ರು ಮದಿನಾಕ್ಕೆ ಹೋಗುವ ವಿಚಾರವನ್ನು ಹೊಂದಿದ್ದರೂ ಅಲ್ಲಿನ ಜನರು ತನ್ನನ್ನು ಸ್ವಾಗತಿಸುತ್ತಾರೋ ಇಲ್ಲವೊ ಎಂಬ ಯೋಚನೆಯಲ್ಲಿ ಮುಳುಗಿದ್ದರು. ಆದುದರಿಂದ ಮದಿನಾಕ್ಕೆ ಪ್ರಯಾಣ ಮಾಡುವ ಮೊದಲು ಮೊಹಮದ್‌ರು ತಮ್ಮ ಕೆಲವು ಮೆಕ್ಕಾದ ಶಿಷ್ಯರನ್ನು ಸಂಧಾನಕ್ಕಾಗಿ ಮದಿನಾಕ್ಕೆ ಕಳುಹಿಸಿದರು. ಮದಿನಾದವರ ದಯಾಳುತನ ಮನವರಿಕೆಯಾದ ಮೇಲೆ ಅವರು ಅಲ್ಲಿಗೆ ಹೋಗಿ ತಳವೂರಿದರು ಹಾಗೂ ಬಾಲ್ಯಾವಸ್ಥೆಯಲ್ಲಿರುವ ಅವರದೇ ಆದ ಇಸ್ಲಾಂ ಧರ್ಮವನ್ನು ಹಾಳಾಗದಂತೆ ರಕ್ಷಿಸಿದರು. ಮೆಕ್ಕಾದಿಂದ ಹೊರಹಾಕಲ್ಪಟ್ಟ ಧಾರ್ಮಿಕ ಜನರನ್ನು ಮದಿನಾದವರು ಈ ರೀತಿ ನಂಬಿಕೆ ಮತ್ತು ಗೌರವಾದರಗಳಿಂದ ಅಪ್ಪಿಕೊಳ್ಳದಿದ್ದಲ್ಲಿ ಇಸ್ಲಾಂ ಧರ್ಮವು ತೊಟ್ಟಿಲಲ್ಲಿಯೇ ಕೊನೆಯುಸಿರು ಎಳೆಯುತ್ತಿತ್ತು.[೨] ಮೊಹಮದ್‌ರ ಮೆಕ್ಕಾದಲ್ಲಿ ತಂಗುವಿಕೆ ಅವರಿಗೆ ಸಾಕಷ್ಟು ಲಾಭವನ್ನು ತಂದುಕೊಟ್ಟಿತು. ಅವರ ಮೆಕ್ಕಾದ ಕಛೇರಿಯು ರಾಜಕೀಯ, ನ್ಯಾಯಾಂಗ ಹಾಗೂ ಕಾರ್ಯಾಂಗದ ಸಮನ್ವಯದ ಕೇಂದ್ರವಾಗಿ ಪರಿಗಣಿಸಿತು. ಮೊಹಮದ್‌ರು ಒಬ್ಬ ಧಾರ್ಮಿಕ ದೊರೆಯಾದರು ಮತ್ತು ತಮ್ಮ ಧರ್ಮಪ್ರಚಾರವನ್ನು ಬಂದೂಕಿನ ಬೆಂಬಲದಿಂದ ನಡೆಸುವಷ್ಟು ಪ್ರಬಲ ಧಾರ್ಮಿಕ ದೊರೆಯಾದರು. "ಮೆಕ್ಕಾದಿಂದ ಓಡಿ ಬಂದ ಒಬ್ಬ ನಿರಾಶ್ರಿತನಿಗೆ ಮದಿನಾದ ಸ್ವತಂತ್ರ ಜನ ಒಬ್ಬ ರಾಜನ ಸ್ಥಾನಕ್ಕೆ ಮೇಲೇರಿಸಿದರು ಮತ್ತು ಆತನಿಗೆ ಯಾರೊಂದಿಗಾಗಲಿ ಧಾರ್ಮಿಕ ಸಂಬಂಧವನ್ನು ಬೆಳೆಸುವ ಹಾಗೂ ತನ್ನ ಧರ್ಮಪ್ರಚಾರಕ್ಕಾಗಿ

೧. ಗಿಬ್ಬನ್‌ನ "ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್", ಸಂ. V., ಪು. ೩೩೭

೨. ಅದೇ, ಸಂ. V., ಪು. ೩೫೬

ರಕ್ಷಣಾತ್ಮಕ ಮತ್ತು ಕೆಣಕುವ ದಾಳಿಗಳನ್ನು ಪ್ರಾರಂಭಿಸಲು ಅಧಿಕಾರವನ್ನಿತ್ತರು." ಈ ರೀತಿ, ಮಾನವೀಯ ಹಕ್ಕುಗಳ ಅಪರಿಪೂರ್ಣತೆಯನ್ನು ದೈವೀಶಕ್ತಿಯ ವಿಪುಲತೆಯಿಂದ ಶಕ್ತಪಡಿಸಲಾಯಿತು. ಮೊಹಮದ್ ಇತರ ಧರ್ಮದವರಿಗೆ ಖಡ್ಗ ತೋರಿಸಿ ತನ್ನ ಧರ್ಮವನ್ನು ಪ್ರಚಾರ ಮಾಡಲು ಪ್ರಾರಂಭಿಸಿದ. ಮದಿನಾದ ಪ್ರವಾದಿಯು ತನ್ನ ಹೊಸ ಅವತಾರದಲ್ಲಿ ನೀಡಿದ ಹೆಚ್ಚು ಕ್ರೂರವಾದ ಮತ್ತು ಹಿಂಸ್ರ ಧಾಟಿಯಲ್ಲಿ ಭರವಸೆಗಳು ಆತನ ಆ ಹಿಂದಿನ ಸಾತ್ವಿಕತೆಯು ದೌರ್ಬಲ್ಯದ ಪರಿಣಾಮವಾಗಿತ್ತೆಂದು ಸಾಬೀತುಪಡಿಸಿತು. ಒಲಿಸುವ ದಾರಿಯನ್ನು ಪ್ರಯತ್ನಿಸಲಾಗಿತ್ತು. ಸಹಿಷ್ಣುತೆಯ ಋತುವು ಮುಗಿದಿತ್ತು ಮತ್ತು ಆತನು ಈಗ ಕತ್ತಿಯ ಮೂಲಕ ತನ್ನ ಮತವನ್ನು ಪ್ರಸಾರ ಮಾಡಲು, ವಿಗ್ರಹಾರಾಧನೆಯ ಸ್ಮಾರಕಗಳನ್ನು ನಾಶ ಮಾಡಲು ಮತ್ತು ದಿನಗಳ, ತಿಂಗಳುಗಳ ಪಾವಿತ್ರ್ಯಗಳನ್ನು ತೊರೆದು ಭೂಮಿಯಲ್ಲಿರುವ ನಂಬದಿರುವ ರಾಷ್ಟ್ರಗಳನ್ನು ಧಿಕ್ಕರಿಸಲು ಆದೇಶಿತನಾಗಿದ್ದನು. ಪ್ರಥಮದಲ್ಲಿ, ಮೊಹಮದ್ ಜನರ ಮನ ಒಲಿಸಿ ಮತಾಂತರ ಮಾಡುವ ಪ್ರಯತ್ನ ಫಲಕಾರಿಯಾಗಲಿಲ್ಲ. ನಂತರ ಜನರು ತಮ್ಮಷ್ಟಕ್ಕೆ ತಾವೇ ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತಾರೆಂದು ಭಾವಿಸಿ ಸೋತ. ಕೊನೆಗೆ ಈತ ಇತರ ಧರ್ಮದವರಿಗೆ ಖಡ್ಗ ತೋರಿಸಿ ತನ್ನ ಧರ್ಮ ಪ್ರಚಾರಕ್ಕೆ ಅನುವಾದ ಹಾಗೂ ಇಸ್ಲಾಂ ಧರ್ಮವನ್ನು ನಂಬದ ಈ ಜಗತ್ತಿನ ಹಲವಾರು ರಾಷ್ಟ್ರಗಳ ದೇವರುಗಳ ಮೂರ್ತಿಗಳನ್ನು ಹಲವಾರು ದಿನ ಅಥವಾ ತಿಂಗಳುಗಳ ಅವಧಿಯಲ್ಲಿ ನಾಶ ಮಾಡಿದ.[೧] ಮದಿನಾದಲ್ಲಿ ಬಂದು ನೆಲೆಯೂರಿದ ಮೊಹಮದ್ ತನ್ನ ಪಂಥ ಮತ್ತು ಧಾರ್ಮಿಕ ರಾಜ್ಯವನ್ನು ವಿಸ್ತಾರಗೊಳಿಸಲು ಮೆಕ್ಕಾದ ಖೋರಿಷ್ ಜನರನ್ನು ಸೋಲಿಸಿ ತನ್ನ ಗುಲಾಮರನ್ನಾಗಿ ಮಾಡಿಕೊಳ್ಳುವುದರಿಂದ ಪ್ರಾರಂಭಿಸಿದನು. ಅರಬರು ಏಕಕಾಲದಲ್ಲಿ ವ್ಯಾಪಾರಸ್ಥರು ಹಾಗೂ ಕಳ್ಳರೂ ಆಗಿದ್ದುದರಿಂದ ಮದಿನಾದಲ್ಲಿರುವ ಮೊಹಮದ್‌ನ ಶಿಷ್ಯರು ಅಲ್ಲಿಂದ ಹಾದು ಹೋಗುವ ಖೋರಿಷ್‌ರ ವ್ಯಾಪಾರಕ್ಕೆ ತೊಂದರೆ ಕೊಡಲು ಪ್ರಾರಂಭಿಸಿದರು. ಇವರ ಈ ಕಾರ್ಯದಿಂದ ಖೋರಿಷ್ ಜನರು ರೇಗಿ ಮದಿನಾದ ವಿರುದ್ಧ ಯುದ್ಧ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಮೊಹಮದ್ ಒಂದಿಷ್ಟು ದಿನ ರಕ್ಷಣಾತ್ಮಕ ನಿಲುವನ್ನು ತಾಳಿದ್ದರೂ ಬಹಳ ಸಮಯ ತೆಗೆದುಕೊಳ್ಳದೆ ಮೆಕ್ಕಾದ ಮೇಲೆ ದಾಳಿಯನ್ನು ಮಾಡಿ ತಾನು ಹುಟ್ಟಿ ಬೆಳೆದ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಈ ರೀತಿ ಮೊಹಮದ್ ಏಕಕಾಲದಲ್ಲಿ ಸಂಪನ್ಮೂಲ ಮತ್ತು ಸೈನಿಕರನ್ನು ಹೆಚ್ಚಿಸಿಕೊಂಡನು. ಮೊಹಮದ್‌ನು "ತನ್ನ ವೈರಿಗಳ ಮುಂದೆ ಗೆಳೆತನ, ಯುದ್ಧ ಅಥವಾ ಶರಣಾಗತಿ ಎಂಬ ನ್ಯಾಯಯುತ ಆಯ್ಕೆಗಳನ್ನು ಇಟ್ಟನು. ಅವರು ತಾನು ನಂಬಿರುವ ಇಸ್ಲಾಂ ಪಂಥದವರಾಗಿದ್ದರೆ ಅವರಿಗೆ ತನ್ನ ಹಳೆಯ ಶಿಷ್ಯರು ಅನುಭವಿಸುತ್ತಿರುವ ಎಲ್ಲ ಲೌಕಿಕ ಹಾಗೂ ಧಾರ್ಮಿಕ ಸವಲತ್ತುಗಳನ್ನು ನೀಡಿದನು."[೨] ಈ ರೀತಿ ತನ್ನ ಅನುಯಾಯಿಗಳ ಗುಂಪನ್ನು ಕಟ್ಟಿದನು. ಈ ಗುಂಪಿನ ಜನರಿಗೆ ಖಲೀಫರೆಂದು ಕರೆಯಲಾಯಿತು. ಈ ರೀತಿಯಾಗಿ ಆತ ತನ್ನ ಹಿಂಬಾಲಕರಿಗೆ ಒಂದು ಗೆಲ್ಲುವ ಜೀವನ ಮಾರ್ಗವನ್ನು ತೋರಿಸಿ ಧರ್ಮದ ಪ್ರಚಾರವನ್ನು ಅವರಿಗೆ ವಹಿಸಿದನು. "ಶೂರನಿಗೊಪ್ಪುವ ಅಲಿಯ ಧೈರ್ಯ, ಮೊವಾಯನ್‌ನ ಅತ್ಯಂತ ಶ್ರೇಷ್ಠ ಮಟ್ಟದ ಜಾಣ್ಮೆ ಇತ್ತೀಚೆಗೆ ಗುಂಪನ್ನು ಸೇರಿದ ಹೊಸ ಶಿಷ್ಯರಲ್ಲಿ ಇಂತಹ ಒಳ್ಳೆಯ ಗುಣಗಳನ್ನು ಹೊಂದಬೇಕೆನ್ನುವ ಹಂಬಲವನ್ನು ಅವರ ಮನದಲ್ಲಿ ಹೆಚ್ಚಿಸಿದವು ಮತ್ತು ಇವರು ಈಗಾಗಲೇ ಕಲಿತಿರುವ ನಾಗರಿಕ ಅಸಹಕಾರವನ್ನು ಮತ್ತೊಮ್ಮೆ ತಮ್ಮ ಗುರು ಪ್ರವಾದಿಯ ಧರ್ಮದ ಪ್ರಸಾರಕ್ಕೆ ಉಪಯೋಗಿಸಿಕೊಂಡರು. ಈ ಕಾಲದಲ್ಲಿಯೇ ಒಮಿಯ್ಯಾ ಮನೆತನದಿಂದ ಬಂದ ಡಮಾಸ್ಕಸ್ ಅರಮನೆಯನ್ನು

೧. ಗಿಬ್ಬನ್‌ನ "ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್", ಸಂ. V., ಪು. ೩೩೯

೨. ಅದೇ, ಸಂ. V., ಪು. ೩೪೯

ಆಳುವ ರಾಜರುಗಳೆಲ್ಲ ಆಲಸಿ ಹಾಗೂ ಒಣಾಡಂಬರಗಳನ್ನು ಹೊಂದಿದ್ದರೇ ಹೊರತು ಸನ್ಯಾಸಿ ಮತ್ತು ಮುತ್ಸದ್ದಿಗಳು ಹೊಂದಿರುವ ಗುಣಗಳನ್ನಲ್ಲ. ಇಂಥವರನ್ನು ಸೋಲಿಸುವುದು ಖಲೀಫರಿಗೆ ಕಷ್ಟಕರವಾಗಲಿಲ್ಲ. ಒಬ್ಬರಾದ ಮೇಲೆ ಇನ್ನೊಬ್ಬರಂತೆ ಇವರೆಲ್ಲರೂ ಖಲೀಫರಿಗೆ ಶರಣಾಗತರಾದರು. ಆದರೂ ಅರಬರ ಯಶಸ್ಸು ಖಲೀಫರ ಶೌರ್ಯಕ್ಕಿಂತ ಹೆಚ್ಚಾಗಿ ಅವರ ವೈರಿಗಳ ದೌರ್ಬಲ್ಯದಿಂದಾಗಿತ್ತು. ಇದು ಇಸ್ಲಾಂ ಧರ್ಮವನ್ನು ಪ್ರಚಾರ ಮಾಡುವಲ್ಲಿ ಮೊಹಮದ್‌ರಿಗೆ ಅವರು ಜೀವಿಸಿದ್ದಷ್ಟೂ ಕಾಲ ನೆರವಿಗೆ ಬಂದಿತು. ಮೊಹಮದ್‌ರ ಜನನ ಪರ್ಶಿಯನ್, ರೋಮನ್ ಮತ್ತು ಯೂರೋಪದ ಅನಾಗರಿಕರ ಮತ್ತು ನೈತಿಕವಾಗಿ ಅಧಃಪತನಗೊಂಡ ಹಾಗೂ ಅಸ್ತವ್ಯಸ್ಥ ಪರಿಸ್ಥಿತಿಯ ಅವಧಿಯಲ್ಲಿ ಉಂಟಾಯಿತು. ಟ್ರೋಜನ್ ಸಾಮ್ರಾಜ್ಯ, ಅಥವಾ ಕಾನ್‌ಸ್ಟನ್‌ಟೈನ್ ಅಥವಾ ಚಾರ್ಲಮೆನ್ ಸಾಮ್ರಾಜ್ಯಗಳು ಸಹ ಮೊಹಮದ್‌ನ ಅನುಯಾಯಿಗಳಾದ ಸಾರ್ಕನ್‌ರ ಧಾಳಿಯನ್ನು ಹಿಮ್ಮೆಟ್ಟಿಸಬಹುದಾಗಿತ್ತು. ಹಾಗೆ ಮಾಡಿದ್ದಲ್ಲಿ ಈ ಮೊಹಮದ್‌ರ ಮತಾಂಧತೆಯ ಬಿರುಗಾಳಿ ಅರೇಬಿಯಾದ ಮರಳು ಪ್ರದೇಶದಲ್ಲಿ ಯಾರಿಗೂ ಗೊತ್ತಾಗದ ಹಾಗೆ ಮಾಯವಾಗಬಹುದಾಗಿತ್ತು."[೧] ಆದರೆ ಹೀಗಾಗಲಿಲ್ಲ. ಮುಂದುವರಿದು "ಇವರೇ ಟ್ರೋಜನ್ ಮತ್ತಿತರ ಸಾಮ್ರಾಜ್ಯಗಳನ್ನು ಗೆದ್ದ ಶೈಲಿಯಲ್ಲಿಯೇ ಪರಸ್ಪರ ವಿರೋಧಿಗಳಾಗಿರುವ ಅಗಸ್ಟಸ್ ಮತ್ತು ಆರ್ಟಾಕ್ಸರಟ್ಕ್ಸ್ ಉತ್ತರಾಧಿಕಾರಿಗಳ ಮೇಲೆ ದಾಳಿ ಮಾಡಿ ಗೆದ್ದರು. ಮೊಹಮದ್‌ನ ಉತ್ತರಾಧಿಕಾರಿಯಾದ ಒಮರನು ಹತ್ತು ವರ್ಷದ ಅವಧಿಯ ತನ್ನ ಆಡಳಿತದಲ್ಲಿ ಸಾರ್ಕನ್‌ರಾದ ಇವರು ಒಟ್ಟಿನಲ್ಲಿ ೩೬,೦೦೦ ನಗರ ಹಾಗೂ ಅರಮನೆಗಳನ್ನು ತಮ್ಮ ವಶಪಡಿಸಿಕೊಂಡರು. ಇಸ್ಲಾಂ ಧರ್ಮದಲ್ಲಿ ನಂಬಿಕೆ ಇಟ್ಟಿರದ ಜನರ ೧೪,೦೦೦ ಚರ್ಚು ಅಥವಾ ದೇವಾಲಯಗಳನ್ನು ನಾಶಮಾಡಿದರು ಹಾಗೂ ಮೊಹಮದ್‌ರ ಧರ್ಮದ ಪ್ರಚಾರಕ್ಕಾಗಿ ೧೪,೦೦೦ ಮಸೀದಿಯನ್ನು ಕಟ್ಟಿಸಿದರು. ಒಟ್ಟಿನಲ್ಲಿ ಮೊಹಮದ್ ಮೆಕ್ಕಾದಿಂದ ಓಡಿಹೋದ ಒಂದು ನೂರು ವರ್ಷಗಳಲ್ಲಿಯೇ ಇವನ ಉತ್ತರಾಧಿಕಾರಿಗಳು ತಮ್ಮ ಆಳ್ವಿಕೆಯನ್ನು ಒಂದೆಡೆ ಭಾರತದಿಂದ ಇನ್ನೊಂದೆಡೆ ಅಟ್ಲಾಂಟಿಕ್ ಸಮುದ್ರದವರೆಗೆ ಹಬ್ಬಿಸಿದರು. ಈ ಸಾಮ್ರಾಜ್ಯವು ದೂರದೂರವಿರುವ (೧) ಪರ್ಷಿಯಾ, (೨) ಸಿರಿಯಾ, (೩) ಈಜಿಪ್ಟ್, (೪) ಆಫ್ರಿಕಾ ಮತ್ತು (೫) ಸ್ಪೈನ್ ಮುಂತಾದ ಪ್ರಾಂತಗಳವರೆಗೆ ಹಬ್ಬಿತ್ತು. ಮೊಹಮದ್‌ನ ಈ ವಿಶಾಲ ಸಾಮ್ರಾಜ್ಯದಲ್ಲಿ ಅಗಸ್ಟಸ್ ಮತ್ತು ಅಂಟೋನಿಸಿಸ್ ಸರಕಾರದಲ್ಲಿ ಕಂಡುಬರುವ ಒಡೆಯಲಾರದ ಒಗ್ಗಟ್ಟನ್ನು ಮತ್ತು ಪ್ರಶ್ನಿಸಲಾರದ ಆಜ್ಞಾಧಾರಕತ್ವವನ್ನು ಕಾಣುವುದು ಸಾಧ್ಯವಿದ್ದಿಲ್ಲ. ಆದರೂ ಇವರ ಧಾರ್ಮಿಕ ಸಾಮ್ರಾಜ್ಯ ಜನರ ನಡವಳಿಕೆಗಳ ಹಾಗೂ ಅಭಿಪ್ರಾಯಗಳ ಸಾಮಾನ್ಯ ಹೊಂದಾಣಿಕೆಯನ್ನು ಒಳಗೊಂಡಿತ್ತು. ಇಲ್ಲಿನ ಹಲವೆಡೆ ಹಬ್ಬಿರುವ ವಿವಿಧ ಪ್ರದೇಶಗಳಲ್ಲಿ ಖುರಾನಿನ ಭಾಷೆ ಮತ್ತು ಇಸ್ಲಾಂ ಧರ್ಮದ ಕಾಯಿದೆಗಳನ್ನು ಎಲ್ಲೆಡೆಯಲ್ಲಿಯೂ ಅಂದರೆ, ಇತ್ತ ಸಮರಖಂಡ್‌ದಿಂದ ಅತ್ತ ಸೆವಿಲ್ಲೆಯಲ್ಲಿ ಸಮಾನ ಭಕ್ತಿಯಿಂದ ಅಭ್ಯಸಿಸಲ್ಪಡುತ್ತಿತ್ತು. ಮುಂದುವರಿದು, ಆಫ್ರಿಕಾದ ವಾಯವ್ಯ ದಿಕ್ಕಿನಲ್ಲಿರುವ ಮೂರರು ಮತ್ತು ಭಾರತೀಯ ಇವರೆಲ್ಲರೂ ಇಸ್ಲಾಂ ಧರ್ಮವನ್ನೂ ಸೇರಿ ಮೆಕ್ಕಾದ ಪವಿತ್ರ ಸ್ಥಳದಲ್ಲಿ ತಮ್ಮಲ್ಲಿರುವ ಭೇದ-ಭಾವಗಳನ್ನು ಮರೆತು ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರು ಹಾಗೂ ಟೈಗ್ರಿಸ್‌ಗೆ ಪಶ್ಚಿಮದಲ್ಲಿರುವ ಎಲ್ಲಾ ಸಂಸ್ಥಾನಗಳಲ್ಲಿ ಅರಬಿ ಭಾಷೆಯನ್ನು ಒಂದು ಜನಪ್ರಿಯ ನಾಣ್ಣುಡಿಯಂತೆ ಸಂತೋಷದಿಂದ ಸ್ವೀಕರಿಸಿದ್ದರು.[೨]

---

೧. ಗಿಬ್ಬನ್‌ನ "ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್", ಸಂ. V., ಪು. ೪೦೦-೧

೨. ಅದೇ, ಸಂ. V., ಪು. ೪೯೩

ಚರಿತ್ರೆಯ ಪೂರ್ಣ ವ್ಯವಹಾರವು ಮತದ ಮೂಲಕವೇ ಪೂರ್ತ ಸರಳವಾಗಿ ಆತನ ಏಳಿಗೆಯ ವಿಸ್ತಾರದ ಲೆಕ್ಕಾಚಾರವಾಗಿದೆ. ಆದರೆ ಈ ಪ್ರಕ್ರಿಯೆಯ ಆರ್ಥಿಕ ವಿಶ್ಲೇಷಣೆಯು ಕೂಡಾ ನಿಕಷಕ್ಕೆ ಒಳಪಡುವಂತಹದ್ದಾಗಿದೆ. ಒಬ್ಬ ಜನಪ್ರಿಯ ಲೇಖಕ ಹೇಳಿದಂತೆ "ಒಮ್ಮಿಂದೊಮ್ಮೆಲೆ ಇನ್ನೊಂದು ದೇಶಕ್ಕೆ ವಲಸೆ ಹೋಗುವ ಅರಬರ ಪ್ರವೃತ್ತಿ ಕೇವಲ ಹೊರನೋಟಕ್ಕೆ ಮಾತ್ರ ಆಕಸ್ಮಿಕವಾಗಿತ್ತು. ಈ ಹಿಂದೆ ಶತಮಾನಗಳವರೆಗೆ ಅರಬರ ವಲಸೆ ಹೋಗುವ ಯೋಜನೆ ತಯಾರಿ ಸ್ಥಿತಿಯಲ್ಲಿತ್ತು. ಅವರ ಆರ್ಥಿಕ ಅವನತಿಯೇ ಈ ಹಿಂದಿನ ಒಂದು ಬೃಹತ್ ಪ್ರಮಾಣದ ವಲಸೆ ಸಿಮೆಟಿಕ್ ಜನರ ವಲಸೆಗೆ ಸಂಬಂಧಿಸಿತ್ತು. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಮೊಹಮದ್‌ರು ಹುಟ್ಟುವುದಕ್ಕಿಂತ ಪೂರ್ವದಲ್ಲಿಯೇ ಅರೇಬಿಯಾವು ಗೊಂದಲಮಯ ಪರಿಸ್ಥಿತಿಗೊಳಗಾಗಿತ್ತು ಮತ್ತು ಅರೇಬಿಯಾ ಅನಾಗರಿಕ ಬುಡಕಟ್ಟು ಜನಾಂಗದವರು ಹಾಗೂ ಇವರ ಸಂಬಂಧಿಗಳು ನಿಧಾನವಾಗಿಯಾದರೂ ಸತತವಾಗಿ ಸಮೀಪದ ರೋಮನ್ ಪ್ರದೇಶ ಮತ್ತು ಪರ್ಶಿಯಾದ ಸುಧಾರಿತ ನಾಗರಿಕರೊಂದಿಗೆ ಸಂಪರ್ಕ ಹೊಂದಲು ಪ್ರಯತ್ನಿಸಿ ಯಶಸ್ಸನ್ನು ಸಾಧಿಸಿದ್ದರು. ಇವರು ಇಲ್ಲಿಗೆ ಈಗಾಗಲೇ ಬಂದು ನೆಲೆಸಿರುವ ತಮ್ಮ ಪೂರ್ವಜರಾದ ಆರ್ಮೇನಿಯಾದವರನ್ನು ಭೆಟ್ಟಿಯಾದರು.

ಹಸಿವು ಮತ್ತು ದುರಾಸೆಗಳು ಮಾನವನನ್ನು ಮುಂದಕ್ಕೆ ಬರಲು ಹುರಿದುಂಬಿಸುತ್ತವೆಯೇ ಹೊರತು ಅವನ ಧರ್ಮವಲ್ಲ. ಆದರೆ ಧರ್ಮವು ಅವಶ್ಯವಿರುವ ಐಕ್ಯತೆ ಮತ್ತು ಕೇಂದ್ರೀಕೃತ ಶಕ್ತಿಯನ್ನು ಪೂರೈಸಿತು. ಉದಾಹರಣೆಗೆ ಸಾರ್ಕನ್‌ರ ಧರ್ಮದ ವಿಸ್ತರಣೆ ತನ್ನಲ್ಲಿ ಮತ್ತು ಆಗಿನ ಕಾಲದಲ್ಲಿ ಒಂದು ಮಹತ್ವವಲ್ಲದ ಅಮುದುವೆಂದರೂ ಅದು ಒಂದು ರಾಜಕೀಯ ಅವಶ್ಯಕತೆಯಾಗಿತ್ತೆಂದು ಹೇಳಬಹುದು. ಸಾರ್ಕನರ ಈ ಧಾರ್ಮಿಕ ಚಳವಳಿ ಮುಂದೆ ಸಾಗುವ ಮುನ್ನ ಇಸ್ಲಾಂ ಇದಕ್ಕೆ ಒಂದು ಪಕ್ಷ ಹಾಗೂ ಒಂದು ಸಂಘಟನೆಯ ರೂಪವನ್ನು ನೀಡಿತು."[೧]

ತಮ್ಮ ಹೊಸ ಧರ್ಮವನ್ನು ಪ್ರಚಾರ ಮಾಡುವ ಉತ್ಸಾಹದಿಂದ ಹಾಗೂ ಅಂದಿನ ಪ್ರಚಲಿತ ಆರ್ಥಿಕ ಶಕ್ತಿಗಳಿಂದ ಪ್ರಭಾವಿತರಾಗಿ ಇತ್ತೀಚೆಗೆ ಮೊಹಮದ್‌ರ ಧರ್ಮಕ್ಕೆ ಒತ್ತಾಯದಿಂದ ಸೇರಿಸಲಾದ ಜನರು ಕಾನ್‌ಸ್ಟಂಟಿನೋಪಲ್‌ಗೆ ಕ್ರಿ.ಶ. ೬೬೮-೬೭೫ ಇಸವಿಯಲ್ಲಿ ಮುತ್ತಿಗೆ ಹಾಕಿದರು. ಈ ಧಾಳಿ ಏಳು ವರ್ಷಗಳ ಕಾಲ ನಡೆಯಿತು. ಇದರಿಂದ ಯಾವ ನಿರ್ಣಾಯಕ ಪರಿಣಾಮಗಳೂ ಉಂಟಾಗಲಿಲ್ಲ. ಈ ಮಧ್ಯೆ ಕಾನ್‌ಸ್ಟಂಟಿನೋಪಲ್‌ದ ಬಲ ಹಾಗೂ ಸಂಪನ್ಮೂಲಗಳು ಕಡಿಮೆಯಾದವು. ಮೇಲಾಗಿ ರೋಮನ್‌ರು ಸಾರ್ಕನ್‌ರಿಂದ ತಮ್ಮ ಧರ್ಮಕ್ಕೆ ಒದಗಿ ಬಂದ ಗಂಡಾಂತರವನ್ನು ಹತ್ತಿಕ್ಕಲು ಶೌರ್ಯದಿಂದ ಹೋರಾಡಿದರು. ಸನ್ನಿವೇಶ ಎಷ್ಟು ಗಂಭೀರವಾಗಿತ್ತೆಂದರೆ ರೋಮನ್‌ರು ತಮ್ಮ ಪೂರ್ವ ಮತ್ತು ಪಶ್ಚಿಮದ ಸಂಸ್ಥಾನಗಳಲ್ಲಿ ಯುದ್ಧಕ್ಕಾಗಿ ಜನಸಂಖ್ಯೆಯನ್ನು ಹೆಚ್ಚಿಸಿದರು ಮತ್ತು ಈ ರೀತಿ ಸಾರ್ಕನ್‌ರ ಜಯಭೇರಿಗೆ ಅಡೆತಡೆಯನ್ನು ಉಂಟುಮಾಡಿದರು. ಈ ರೀತಿ ಮಾಡದಿದ್ದಲ್ಲಿ ಕಾನ್‌ಸ್ಟಂಟಿನೋಪಲ್ ವೈರಿಗಳ ವಶಕ್ಕೆ ಹೋಗುತ್ತಿತ್ತು ಮತ್ತು ಕ್ರಿಶ್ಚಿಯನ್ ಧರ್ಮದ ಭವಿಷ್ಯಕ್ಕೆ ಗಂಡಾಂತರ ಒದಗಿಬರಬಹುದಾಗಿತ್ತು.

ಸಾರ್ಕನ್‌ರು ಎರಡನೆಯ ಬಾರಿ ಕಾನ್‌ಸ್ಟಂಟಿನೋಪಲ್‌ನ ಮೇಲೆ ಕ್ರಿ.ಶ. ೭೧೬-೭೧೮ರಲ್ಲಿ ದಾಳಿ ಮಾಡಿ ಗೆದ್ದರು. ಈ ಎಲ್ಲಾ ಧಾಳಿಗಳ ನಡುವೆ ಶೆಲ್‌ಜೂಕರಿಂದ ಅರಬರು ಮರೆಮಾಡಲ್ಪಟ್ಟರು. ಉದಾಹರಣೆಗಾಗಿ ಶೆಲ್‌ಜೂಕರು ಮುಂಚೂಣಿಯ ಸ್ಥಾನದಲ್ಲಿದ್ದಾಗ, ಮೊದಲು ಶಿಯಾ ರಾಜಮನೆತನದ

---

೧. ಕೇಂಬ್ರಿಡ್ಜ್ ಮೆಡಿಕಲ್ ಹಿಸ್ಟರಿ, ಸಂ. II, ಪು. ೩೩೧-೨

ಬುಯದ್‌ರಿಂದ ನಂತರ ತೌಲನಿಕವಾಗಿ ಹೆಚ್ಚಿನ ಬಲಶಾಲಿಯಾಗಿದ್ದ ಫಾತಿಮಾರ ವೈರಿಗಳಿಂದ ಬಾಗ್‌ದಾದ್‌ನ ಖಲೀಫರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಇಂತಹ ಪ್ರಸಂಗಗಳಲ್ಲಿ ಶೆಲ್‌ಜೂಕ್ ಟರ್ಕರ ಏಳಿಗೆಯನ್ನು ಸ್ವಾಗತಿಸುವುದನ್ನು ಬಿಟ್ಟರೆ ಖಲೀಫರಿಗೆ ಬೇರೆ ಯಾವ ದಾರಿಯೂ ಇರಲಿಲ್ಲ. ಮೇಲಾಗಿ, ಇವರೇ ಸಂಪ್ರದಾಯಬದ್ಧ ಇಸ್ಲಾಂ ಅನ್ನು ಮೇಲೆ ಎತ್ತುವವರಾಗಿದ್ದರು ಹಾಗೂ ತಮ್ಮ ಎಲ್ಲಾ ಶಕ್ತಿ ಮತ್ತು ಗತವೈಭವವನ್ನು ಧರ್ಮಕ್ಕಾಗಿ ತ್ಯಾಗ ಮಾಡಲು ಹಿಂದೆ–ಮುಂದೆ ನೋಡದವರಾಗಿದ್ದರು. "ಒಬ್ಬ ಮೊಹಮದ್‌ನ ಅನುಯಾಯಿಯ ದೃಷ್ಟಿಯಿಂದ ಶೆಲಜೂಕ್ ಟರ್ಕರು ಸಂಪ್ರದಾಯಬದ್ಧ ಇಸ್ಲಾಂ ಧರ್ಮವನ್ನು ಮರುಸ್ಥಾಪನೆ ಮಾಡಿದುದು ಮತ್ತು ಅವರು ಅಲೆಗಾಮಿತತ್ವಕ್ಕೆ ಒತ್ತು ನೀಡುವ 'ಶಿಯಾ' ಮುಸ್ಲಿಮರ ವಿಧ್ವಂಸಕ ಕೃತ್ಯವನ್ನೂ ತಡೆಗಟ್ಟುತ್ತಿದ್ದರು. 'ಶಿಯಾ' ಮುಸ್ಲಿಮರ ವಿಚಾರಗಳು ಇಸ್ಲಾಂ ಧರ್ಮದ ಉಳಿಯುವಿಕೆಗೆ ಗಂಡಾಂತರವನ್ನು ಒಡ್ಡಿದ್ದವು. ಮುಂದುವರಿದು, ಶೆಲಜೂಕ್ ಟರ್ಕರಿಂದ ನಾಗರಿಕತೆಗೆ ಏನೂ ತೊಂದರೆ ಉಂಟಾಗುತ್ತಿರಲಿಲ್ಲ. ಏಕೆಂದರೆ ಇವರು ಪರ್ಶಿಯಾ ಮತ್ತು ಅರೇಬಿಯಾ ಎರಡೂ ದೇಶಗಳೊಂದಿಗೆ ಒಂದು 'ತಟಸ್ಥ ಶಕ್ತಿ'ಯಾಗಿದ್ದರು. ಈ ಒಗ್ಗಟ್ಟನ್ನು ಟರ್ಕರ ಸಾಹಿತ್ಯಿಕ ಚಳವಳಿಗಳಲ್ಲಿ ಯಾರಾದರೂ ನೋಡಬಹುದು."[೧] ಶೆಲ್‌ಜೂಕ್ ಟರ್ಕರು ಅಸಂಖ್ಯಾತ ಬುಡಕಟ್ಟು ಅಥವಾ ಕುಟುಂಬಗಳನ್ನು ಹೊಂದಿದ್ದರು. ಈ ಕುಟುಂಬಗಳು ಅಧಿಕಾರಕ್ಕಾಗಿ ಯಾವಾಗಲೂ ಕಚ್ಚಾಡುತ್ತಿದ್ದವು. ಇಂತಹ ಕಚ್ಚಾಡುವ ಅಸಂಖ್ಯಾತ ಕುಟುಂಬಗಳಲ್ಲಿ 'ಗಜ್' ಮನೆತನದವರು ಒಬ್ಬರಾಗಿದ್ದರು. (ಈ ಮನೆತನ ಉಳಿದವುಗಳೊಂದಿಗೆ ಎಳ್ಳಷ್ಟೂ ಹೊಂದಿಕೊಂಡಿರಲಿಲ್ಲ.) ಈ ಮನೆತನ ಅಧಿಕಾರಕ್ಕೆ ಬಂದ ಮೇಲೆ ನೆರೆಹೊರೆಯ ಮೊಹಮದ್‌ರ ಸಂಸ್ಥಾನಗಳಿಗೆ ಕಷ್ಟ ಕೊಡಲು ಪ್ರಾರಂಭಿಸಿತು. ಇದು ತನ್ನ ನಾಯಕನಾದ 'ಪಿಗು ಅರ್ಸ್ಲನ್ ಇಸರೇಲ್'ನ ಹಿರಿತನದಲ್ಲಿ ಆಕ್ಸಸ್ ನದಿ ದಾಟಿ ಪರ್ಶಿಯಾ ಪೂರ್ವ ಸಂಸ್ಥಾನಗಳಿಗೆ ಹಬ್ಬಿತು. ೧೦೪೦ ಇಸವಿಯಲ್ಲಿ ನಡೆದ ಮೆರೊ ಯುದ್ಧದಲ್ಲಿ ಗಜ್ ಮನೆತನದವರು ಗಜನಿ ಮನೆತನಕ್ಕೆ ಸೇರಿದ ರಾಜನಾದ ಮೊಹಮದ್‌ನನ್ನು ಸೋಲಿಸಿ ತಾವು ಸ್ವತಂತ್ರರೆಂದು ಸಾರಿದರು. ಹೀಗೆ, ಶೆಲ್‌ಜೂಕ ಟರ್ಕರು ಅತ್ಯಲ್ಪ ಸಮಯದಲ್ಲಿಯೇ ಮಧ್ಯ ಏಷಿಯಾದಲ್ಲಿನ ಹೆಲೆಸ್‌ಪಾಂಟ್ ನಗರದವರೆಗೆ ತಮ್ಮ ನಿಯಂತ್ರಣ ಪಡೆದರು. ಗಜ್‌ರ ಆಡಳಿತದಲ್ಲಿ ಬರುವ ಪ್ರದೇಶ ಶೆಲ್‌ಜೂಕ ತುರ್ಕರ ಇತರ ಎಲ್ಲಾ ರಾಜರುಗಳ ಪ್ರದೇಶಕ್ಕಿಂತ ಅಧಿಕವಾಗಿತ್ತು. "೧೦೭೧ನೇ ಇಸವಿಯಲ್ಲಿ ಆಲ್ಪ ಅರಸ್‌ಲಾದಲ್ಲಿನ ಯುದ್ಧದಲ್ಲಿ ಟರ್ಕರು ಗೆದ್ದರು. (ಈ ಯುದ್ಧದಲ್ಲಿ ಗ್ರೀಕ್ ಚಕ್ರವರ್ತಿಯನ್ನು ಸೆರೆಯಾಳನ್ನಾಗಿ ಮಾಡಲಾಯಿತು). ಅನಂತರ ಏಶಿಯಾ ಮೈನರ್[೨] ಭೂಭಾಗ ಈ ಟರ್ಕರ ದಾಳಿಗೆ ತೆರೆದಿತ್ತು. ಆದುದರಿಂದ ಕಥಲಮಿಷ್ ದೊರೆಯ ಮಗನಾದ ಸುಲೇಮಾನನಿಗೆ ಹೆಲಿಸ್‌ಪಾಂಟವರೆಗೆ ಒಳಗೆ ನುಗ್ಗುವುದು ವಿಶೇಷವಾಗಿ ಒಬ್ಬರನ್ನೊಬ್ಬರು ದ್ವೇಷಿಸುತ್ತಿರುವ ಇಬ್ಬರು ರೋಮನ್ ರಾಜರುಗಳನ್ನು ಸೆರೆಹಿಡಿದ ನಂತರ ಸುಲಭವಾಯಿತು. ಇವರಲ್ಲಿ ಒಬ್ಬ ನಿಶಿಫೊರಸ್ ಬ್ರೈಯನ್ನಿಯಾಸ್ ಎನ್ನುವಾತ ಏಶಿಯಾದಲ್ಲಿ ಹಾಗೂ ನಿಶಿಫೊರಸ ಬೊಟಾನಿಕೇಟಸ್ ಎನ್ನುವವ ಯೂರೋಪಿನಲ್ಲಿದ್ದ, ಇವರಿಬ್ಬರು ಸಿಂಹಾಸನಕ್ಕೆ ಜಗಳವಾಡುತ್ತಿದ್ದರು. ನಿಶಿಫೊರಸ್ ಬ್ರೆಯನ್ನಿಯಾಸ್‌ನು ಸುಲೆಮಾನನ ನೆರವು ಕೋರಿದ ಹಾಗೂ ಈತನ ಸಹಾಯದಿಂದ ಕಾನ್‌ಸ್ಟೆಂಟಿನೋಪಲ್‌ಗೆ ಬಂದು ಅಲ್ಲಿನ ಗದ್ದುಗೆಯ ಮೇಲೆ ಕುಳಿತ"[೩] ಇವರಿಬ್ಬರೂ ಸೇರಿ ಸಿರಿಯ ದೇಶದ ತಮ್ಮ ರಾಜಮನೆತನಕ್ಕೆ ಒಂದು ಶಾಶ್ವತ ನೆಲೆ ನೀಡಲು ಆಂಟಿಯೋಕ ಎಂಬ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡರು

೧. Enc. Brit. 11th Ed. Art., "Seljuks".

೨. ಕಪ್ಪು ಮತ್ತು ಮೆಡಿಟರೇನಿಯನ್ ಸಮುದ್ರದ ನಡುವಿನ ಪಶ್ಚಿಮ ಏಶಿಯಾದ ಒಂದು ದ್ವೀಪಕಲ್ಪ.

೩. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ, IIನೇ ಮುದ್ರಣ (ಶೆಲ್‌ಜೂಕರು)

ಹಾಗೂ ಇತರ ಪ್ರದೇಶಗಳ ಮೇಲೆ ಯಶಸ್ವಿಯಾಗಿ ಧಾಳಿ ಮಾಡಿ ಅವುಗಳನ್ನು ವಶಿಪಡಿಸಿಕೊಂಡು ಕ್ರಿ.ಶ. ೧೨೩೪ರ ಹೊತ್ತಿಗೆ ಶೆಲ್‌ಜೂಕರ ಸಾಮ್ರಾಜ್ಯ ಹೆಚ್ಚು ಕಡಿಮೆ ಇಡಿ ಏಶಿಯಾ ಮೈನರ್ ಪ್ರದೇಶಕ್ಕೆ ಹಬ್ಬುವಂತೆ ಮಾಡಿದರು.

ಆದರೆ ಶೆಲ್‌ಜೂಕರ ಸಾಮ್ರಾಜ್ಯ, ಅವರಲ್ಲಿನ ಆಂತರಿಕ ಜಗಳಗಳಿಂದಾಗಿ ಮತ್ತು ಅವರ ಮೇಲಿನ ಪರಕೀಯರ ಧಾಳಿಯಿಂದಾಗಿ ಅಲ್ಪಾಯುಷಿಯಾಗುವುದು ಅನಿವಾರ್ಯವಾಗಿತ್ತು. ಶೆಲ್‌ಜೂಕ್ ಸಾಮ್ರಾಜ್ಯದ ಮೇಲಿನ ಪರಕೀಯರ ಧಾಳಿ ಮಂಗೋಲರಿಂದ ಆಯಿತು. ಮಂಗೋಲ ಸಾಮ್ರಾಜ್ಯದ ಆರಂಭದ ಇತಿಹಾಸ ಅಸ್ಪಷ್ಟತೆಯಿಂದ ಕೂಡಿತ್ತು ಹಾಗೂ ಒಂದು ದಂತಕಥೆಯ ಹಾಗೆ ಇತ್ತು. ಮಂಗೋಲರ ನಾಯಕ ಚಂಗೇಜಖಾನ್ ಕ್ರಿ.ಶ. ೧೨೨೭ರಲ್ಲಿ ತಾನು ಕಿಲೆನ್ ಕಣಿವೆಯಲ್ಲಿ ಮರಣಹೊಂದುವ ಸಮಯದಲ್ಲಿ "ಒಂದೆಡೆಯಿಂದ ಚೈನಾ ಸಮುದ್ರದಿಂದ ಮತ್ತೊಂದೆಡೆ ಡ್ನೈಪರ್ ನದಿಯ ದಂಡೆಯವರೆಗಿನ ವಿಶಾಲ ಸಾಮ್ರಾಜ್ಯವನ್ನು ತನ್ನ ಮಕ್ಕಳಿಗೆ ಬಿಟ್ಟುಕೊಟ್ಟನು."[೧] ಆತನು ಒಗದಾಯಿ ಎಂಬುವವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದನು ಹಾಗೂ ಇತರ ವಾರಸುದಾರರಿಗೆ ಸಹ ತನ್ನ ಚಕ್ರಾಧಿಪತ್ಯದ ವಿಶಾಲವಾದ ಅನೇಕ ಪ್ರದೇಶಗಳನ್ನು ನೀಡಿದನು. ಒಗದಾಯಿಯು ತನ್ನ ಚಕ್ರಾಧಿಪತ್ಯದ ವಿಸ್ತರಣೆಗೆ ಪ್ರಯತ್ನಿಸಿದ. ಉದಾಹರಣೆಗೆ, "ತನ್ನ ಬೃಹತ್ ಸೈನ್ಯದೊಂದಿಗೆ ಈಗಾಗಲೇ ಬಹಳ ಕೆಟ್ಟ ರೀತಿಯಲ್ಲಿ ನಡುಗಿಸಲ್ಪಟ್ಟ ಚೈನಾದ ಕಿಯೂ ರಾಜನ ಮನೆತನವನ್ನು ಉರುಳಿಸಲು ದಕ್ಷಿಣ ದಿಕ್ಕಿನಿಂದ ಚೈನಾಕ್ಕೆ ಬಂದು ಆ ಮನೆತನವನ್ನು ಸಂಪೂರ್ಣವಾಗಿ ನಾಶ ಮಾಡಿದ. ಇದೇ ಕಾಲದಲ್ಲಿ ಇವನ ಒಬ್ಬ ತುಲಿ ಎಂಬ ಅನುಯಾಯಿ, ಇಂತಹದೇ ಉದ್ದೇಶದಿಂದ ಶೆನ್ಸಿ ಎಂಬಲ್ಲಿಂದ ಚೈನಾದ ಹೊನೆನ್ ಪ್ರದೇಶಕ್ಕೆ ನುಗ್ಗಿದ. ಇವರಿಬ್ಬರ ಸಾಮೂಹಿಕ ಧಾಳಿಯ ವಿರುದ್ಧ ಕಿಯೂ ರಾಜನ ಸೈನ್ಯ ಯಶಸ್ವಿಯಾಗಿ ನಿಂತರೂ, ಕೊನೆಗೆ, ತಮ್ಮ ಕುಶಲತೆ ಮತ್ತು ಧೈರ್ಯದಿಂದ ಮಂಗೋಲರು 'ಕಿಯೂ' ರಾಜನ ಸೈನ್ಯವನ್ನು ಸೋಲಿಸಿ ಆತನ ರಾಜಧಾನಿಯಾದ ಕೈ–ಫೆಂಗ್–ಫೂ (Kai-Feng Fu) ಪಟ್ಟಣವನ್ನು ವಶಪಡಿಸಿಕೊಂಡರು. ಕಿಯೂ (Kiu) ಚಕ್ರವರ್ತಿಯು ಕೈ–ಫೆಂಗ್–ಫೂ ದಿಂದ ಜೂನಿಂಗ್ ಫೂ(Junning Fu)ಕ್ಕೆ ಓಡಿಹೋದನು. ಅವನನ್ನು ಮಂಗೋಲರು ಹಿಂಬಾಲಿಸಿದರು. ಕಿಯೂ ಚಕ್ರವರ್ತಿಯ ಸೈನ್ಯವು ಅರೆಹೊಟ್ಟೆ ಊಟದ ಎಲ್ಲ ದಿಗಿಲುಗಳನ್ನು ಸಹಿಸಿ, ಕೆಲವು ವಾರಗಳ ನಂತರ ಮಂಗೋಲರಿಗೆ ಶರಣಾಗತವಾಯಿತು ಮತ್ತು ಅದೇ ಸಮಯದಲ್ಲಿ ಕಿಯು ಚಕ್ರವರ್ತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು."[೨] ಕಿಯೂ ಸಾಮ್ರಾಜ್ಯವನ್ನು ವಶಪಡಿಸಿಕೊಂಡ ಮೇಲೆಯೂ ಸಮಾಧಾನ ಹೊಂದದೆ, ಓಗಾದಿಯು (Ogadi) ೧೨೩೫ರಲ್ಲಿ ಚೈನಾದ ಸುಂಗ್ ರಾಜಮನೆತನದ ಮೇಲೆ ಧಾಳಿ ಮಾಡಲು ತನ್ನ ಸೈನ್ಯವನ್ನು ಕಳುಹಿಸಿದನು. ಈ ಮನೆತನದ ಭೂಪ್ರದೇಶ ಇಂದಿನ ಕೊರಿಯ (Korea) ದೇಶದಲ್ಲಿ ಯಾಂಗ್–ಸೆ–ಕೆಯಾಂಗ್(Yang-se-Kiang)ದ ದಕ್ಷಿಣದಲ್ಲಿದೆ.

ಓಗಾದಿಯು ಈ ರೀತಿಯಾಗಿ ತನ್ನ ಪೂರ್ವ ಏಶಿಯಾ(Eastern Asia)ದ ಧಾಳಿಯನ್ನು ಮುಗಿಸಿದ ಮೇಲೆ ತನ್ನ ಲಕ್ಷ್ಯವನ್ನು ಪಶ್ಚಿಮ ಏಶಿಯಾದ ಕಡೆಗೆ ತಿರುಗಿಸಿದನು. ಕ್ರಿ.ಶ. ೧೨೩೬ರಲ್ಲಿ ಇವನು ಟಿಫ್ಲಿಸ್ (Tiflis) ಮತ್ತು ಕಾರ್ಸ್ (Kars) ಪಟ್ಟಣಗಳ ಮೇಲೆ ಧಾಳಿಗೈದು ಜಾರ್ಜಿಯಾ (Georgia) ಹಾಗೂ ಗ್ರೇಟ್ ಆರ್ಮೇನಿಯಾ (Great Armenia) ರಾಜ್ಯಗಳನ್ನು ವಶಪಡಿಸಿಕೊಂಡನು ಹಾಗೂ ಪೂರ್ವ ಯೂರೋಪಿನಲ್ಲಿರುವ

೧. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ, ೧೧ನೇ ಮುದ್ರಣ, ಸಂ. XVIII, ಪು. ೭೧೨, "ಮಂಗೋಲರು"
೨. ಅದೇ, ಪು. ೭೧೨, ಮಂಗೋಲರು.

ತನ್ನ ಸೋರಿಯ ಮಗನಾದ ಬಾಟು (Batu) ಎಂಬುವವನ ನೇತೃತ್ವದಲ್ಲಿ ಇತರ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಬೃಹತ್ ಪ್ರಮಾಣದ ಸೈನ್ಯವನ್ನು ಕಳುಹಿಸಿದನು. ಬಾಟು ಬಲ್‌ಗೇರ್ (Bulgar) ಎಂಬ ರಾಜ್ಯದ ರಾಜಧಾನಿಯಾದ ಬೊಲ್‌ಗರಿ(Bolgari)ಯನ್ನು ವಶಪಡಿಸಿಕೊಂಡನು. ಮುಂದುವರಿದು, ಈತ ಓಲ್ಗಾ (Volga) ನದಿಯನ್ನು ದಾಟಿ ಮಾಸ್ಕೋದ ಈಶಾನ್ಯಕ್ಕೆ ಇರುವ ರಿಜಾನ್ (Ryazan) ಪಟ್ಟಣದ ಮೇಲೆ ಧಾಳಿ ಮಾಡಿ ಅದನ್ನು ೨೧ನೆಯ ಡಿಸೆಂಬರ್ ೧೨೩೭ರಂದು ಗೆದ್ದನು. ಈತ ಈ ದಾಳಿಯಲ್ಲಿ ವೈರಿಗಳಿಗೆ ಕೊಡಲಾರದ ಕಷ್ಟ ಕೊಟ್ಟನು. ಈ ಕಷ್ಟ ಎಷ್ಟರಮಟ್ಟಿಗೆ ತೀಕ್ಷ್ಣವಾಗಿತ್ತೆಂದರೆ “ಆ ಪ್ರದೇಶದಲ್ಲಿ ಸತ್ತ ಜನರಿಗಾಗಿ ಅಳುವ ಒಂದು ಕಣ್ಣನ್ನು ಸಹ ಅವನು ಉಳಿಸಿರಲಿಲ್ಲ.” ನಂತರ ಈತ, ಮಾಸ್ಕೊ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡ. ಕೊನೆಗೆ ವ್ಲಾಡಿಮೀರ್ (Vladimir) ಹಾಗೂ ಕೊಜೆಲ್ಸ್ಕ (Kozelsk) ನಗರಗಳೂ ಈತನ ವಶವಾದವು. ಮಾಸ್ಕೊ ಮತ್ತಿತರ ನಗರಗಳಂತೆ, ಪೋಲೆಂಡ್ ಹಾಗೂ ಹಂಗರಿ ನಗರಗಳು ಸಹ ಇವನ ವಶವಾದವು.

ಮಂಗೋಲರಂತೆ ಒಟೊಮಾನರೆಂದು (Ottomans) ಪ್ರಸಿದ್ಧರಾದ ಟರ್ಕಿಗಳು ಒಂದೇ ಕಾಲದಲ್ಲಿ ಬಲಶಾಲಿಗಳಾಗಿ ಮುಂದೆ ಬಂದರು. ಇವರು ಹಿಂದಿನ ಗೋಬಿ ಮರಳುಗಾಡು ಮತ್ತು ಸುಂಗಾರಿಯಾ ಮೈದಾನದ ಮಧ್ಯದಲ್ಲಿ ಅಲೆಮಾರಿ ಜೀವನವನ್ನು ನಡೆಸುವ ಬುಡಕಟ್ಟಿನವರಾಗಿದ್ದರು. “ಕಾರಖಾನನ ಪುತ್ರ ಒಘುಜ್(Oghuz)ನ ತುರ್ಕರ ಪಿತಾಮಹನೆಂದು ಇತಿಹಾಸ ಸಾರುತ್ತದೆ. ಇವರುಗಳು ಮೊದಲನೆಯ ಬಾರಿ ಕ್ರಿ.ಶ. ೧೨೨೭ರಲ್ಲಿ ಇತಿಹಾಸದಲ್ಲಿ ಕಾಣಿಸಿಕೊಂಡರು. ಆ ವರ್ಷ ೨೦೦೦ದಿಂದ ೪೦೦೦ ಸಂಖ್ಯೆಯ ಟರ್ಕರ ಅಲೆಮಾರಿ ಗುಂಪೊಂದು ತಮ್ಮ ಗುಲಾಮರೊಂದಿಗೆ ಮಂಗೋಲರ ಧಾಳಿಯ ಒತ್ತಡ ತಾಳಲಾರದೆ ಮಧ್ಯ ಏಶಿಯಾದಿಂದ ತಮ್ಮ ನಾಯಕನೊಂದಿಗೆ ಊರು ಬಿಟ್ಟಿತು. ಹೊರಬೀಳುವ ಮುನ್ನ ಇವರು ಶೆಲ್ಜೂಕ ದೊರೆಯಾದ ಕೊನಿಯಾದ ಅಲ್ಲಾವುದ್ದೀನ್ ಕೈಕೋಬಾ ಎಂಬ ಸುಲ್ತಾನನ ಆಶ್ರಯವನ್ನು ಕೇಳಿ ವಿಫಲರಾಗಿದ್ದರು. ಈ ವಿಷಯ ಏನೇ ಇರಲಿ, ಇವರು ತಮ್ಮ ಮುಖ್ಯಸ್ಥನಾದ ಸುಲೇಮಾನ್ ಶಾ ಎಂಬುವವನ ನೇತೃತ್ವದಲ್ಲಿ ತಮ್ಮ ಸ್ವಂತ ಊರಿಗೆ ಹಿಂತಿರುಗಿದರು. ದಾರಿಯಲ್ಲಿ ಜಬರ್ ಎಂಬ ಅರಮನೆಯ ಸಮೀಪದಲ್ಲಿರುವ ಯುಫ್ರೇಟಸ್ (Euphrates) ನದಿಯನ್ನು ದಾಟುವಾಗ ಅವರ ನಾಯಕ ನೀರಿನಲ್ಲಿ ಮುಳುಗಿ ಸತ್ತುಹೋದ. ಮತ್ತು ಇದರಿಂದಾಗಿ ಅವರುಗಳ ಅಂತಸ್ತಿನಲ್ಲಿ (Ranks) ಈಗ ಯಾರು ತಮ್ಮ ನಾಯಕನೆಂಬ ಸಂಶಯ ಪ್ರಾರಂಭವಾಯಿತು. ಇಂತಹ ಕೆಟ್ಟಗಳಿಗೆಯಲ್ಲಿ ಯಾರು ನದಿಯನ್ನು ದಾಟಿರಲಿಲ್ಲವೋ ಅಂಥವರು ಉಳಿದ ಯಾವುದೇ ವ್ಯಕ್ತಿಯನ್ನು ತಮ್ಮ ನಾಯಕರೆಂದು “ಭಾವಿಸಲು” ಒಪ್ಪಲಿಲ್ಲ. ಸಂಖ್ಯೆಯಲ್ಲಿ ೪೦೦ ಜನ ಇರುವ ಈ ಸೈನಿಕರು ನೀರಿನಲ್ಲಿ ಮುಳುಗಿ ಹೋದ ನಾಯಕನ ಮಗನಾದ ಎರ್ಟೊಗ್ರುಲ್(Ertoghrul)ನನ್ನೇ ತಮ್ಮ ನಾಯಕನೆಂದು ತಿಳಿದರು. ಈತ ಮೊಟ್ಟಮೊದಲು ಎರ್‌ಜರುಮ್ (Erzerum) ಪೂರ್ವದಲ್ಲಿ ಜೆಸಿಲ್ ಎಂಬ ಪ್ರದೇಶದಲ್ಲಿ ತಳ ಊರಿದ. ಮರಳಿ ಬರಲು ಎರಡನೆಯ ಬಾರಿ ಕೇಳಿಕೊಂಡ. ಇದು ಯಶಸ್ವಿಯಾಯಿತು ಮತ್ತು ಅಪಾಯದ ಒಂದು ವಿಧದಂತೆ ವಲಸೆ ಹೋಗುವವರಿಗೆ ಕಂಡುಬರಲಿಲ್ಲ. ಈ ಹೊಸ ವಲಸೆಗಾರರಿಗೆ ಅಂಗೋರ(Angora)ದ ಸಮೀಪವಿರುವ ‘ಕಾರಜಾ ಬಾಗ್’(Karaja bagh)ನ ಭೂಮಿಯನ್ನು ನೀಡಲಾಗಿತ್ತು. ಇಲ್ಲಿ, ಉತ್ತಮ ಹುಲ್ಲುಗಾವಲು ಹಾಗೂ ಚಳಿಗಾಲದ ವಸತಿಗೃಹಗಳನ್ನು ವಲಸೆಗಾರರಿಗೆ ನೀಡಲಾಯಿತು. ಎರಟೊಘಲ್ ಸುಜುಕಿಯನ್ ರಾಜನಾದ ಅಲ್ಲಾವುದ್ದೀನನಿಗೆ ಕಷ್ಟಕಾಲದಲ್ಲಿ ನೆರವಿಗೆ ಬಂದದ್ದರಿಂದ ಅವರು ಇವನಿಗೆ ಸುಗೂತ್ ಎಂಬ ಪ್ರದೇಶವನ್ನು ಉಂಬಳಿಯಾಗಿ ಕೊಟ್ಟರು. ಇಲ್ಲಿಯೇ ಅವನು ತನ್ನ ೯೦ನೆಯ ವಯಸ್ಸಿನಲ್ಲಿ, ಅಂದರೆ ಕ್ರಿ.ಶ. ೧೨೮೮ರಲ್ಲಿ

ಸತ್ತನು. ಇವನ ನಂತರ ಇವನ ಮಗ ಒಸ್ಮಾನನು ಪಟ್ಟಕ್ಕೆ ಬಂದನು. ಚಂಗೇಜಖಾನನ ಅಧಿಕಾರಿಗಳಲ್ಲಿ (lieutenants) ಒಬ್ಬನಾದ ಹಾಗೂ ತಬ್‌ರಿಜ್ ದೊರೆಯಾದ ಗಜನ್ ಮೊಹಮದ್ ಖಾನನ ಸತತ ಧಾಳಿಯಿಂದ ಶಕ್ತಿಗುಂದಿದ ಸೆಲಜುಕಿಯನ್ ಸಾಮ್ರಾಜ್ಯ ಚೂರು ಚೂರಾಗುವ ಮಟ್ಟಕ್ಕೆ ಬಂದಿತು. ಇದರ ಸಾಮಂತ ರಾಜರುಗಳೂ ಇದರ ಅಧಃಪತನವನ್ನು ತಡೆಯಲಿಲ್ಲ. ಆದರೆ ಈ ಕಾರ್ಯಾಚರಣೆಗೆ ನೆರವಾದರು. ಸಾಮ್ರಾಜ್ಯ ಹಾಳಾದರೆ ತಮಗೆ ತಮ್ಮ ಉಂಬಳಿಗಳು ವಾಪಸ್ಸು ದೊರೆಯುತ್ತವೆ ಹಾಗೂ ತಾವು ಸ್ವತಂತ್ರರಾಗಬಹುದು ಎನ್ನುವ ಆಶಯ ಅವರನ್ನು ಹೀಗೆ ಮಾಡುವಂತೆ ಮಾಡಿತು. ಇಷ್ಟಾದರೂ ಒಸ್ಮಾನ ದೊರೆಯು ವೈರಿಗಳ ದಾಳಿಗೆ ಎದುರಾಗಿ ನಿಂತನು ಮತ್ತು ಗ್ರೀಕರ ಮೇಲೆ ಹಲವಾರು ಸಲ ವಿಜಯ ಸಾಧಿಸಿದನು ಹಾಗೂ ಬಲಹೀನವಾಗಿರುವ ಸೆಲ್ಜೂಕ್ ಸಾಮ್ರಾಜ್ಯವನ್ನು ಮತ್ತೆ ಶಕ್ತಿಯುತಗೊಳಿಸಿದನು. ಇವನ ಮೊಟ್ಟಮೊದಲನೆಯ ವಿಜಯ ಕ್ರಿ.ಶ. ೧೨೯೫ರಲ್ಲಿ ಕರೋಜಾ ಹಿಸ್ಸಾರ ಎಂಬ ಪಟ್ಟಣದ ಮೇಲೆ ಆಯಿತು. ಅಲ್ಲಿನ ಜನರು ತಮ್ಮ ಶುಕ್ರವಾರದ ಪ್ರಾರ್ಥನೆಯಲ್ಲಿ ಯುದ್ಧದಲ್ಲಿ ಸೋತ ತಮ್ಮ ಸುಲ್ತಾನನ ಹೆಸರನ್ನು ಬಿಟ್ಟು ಇವನ ಹೆಸರು ಹೇಳಲು ಆರಂಭಿಸಿದರು. ಇದೇ ವರ್ಷದಲ್ಲಿ ಎರಡನೆಯ ಅಲ್ಲಾವುದ್ದೀನ ಕೈಕೋಬಾದ ದೊರೆಯು ಒಸ್ಮಾನನಿಗೆ ತನ್ನ ಶೌರ್ಯದಿಂದ ಗೆದ್ದ ಭೂಪ್ರದೇಶದ ಮಾಲಿಕತ್ವವನ್ನು ಮತ್ತು ಕುದುರೆಯ ಬಾಲ, ನಗಾರಿ ಹಾಗೂ ಲಾಂಛನ ಮುಂತಾದವುಗಳನ್ನು ಇವನ ಸೈನ್ಯದ ತುಕಡಿಗಳಿಗೆ ಲಾಂಛನವನ್ನಾಗಿ ನೀಡಿದನು. ಈ ರೀತಿ, ಒಸ್ಮಾನನು ಗ್ರೀಕ್ ದೊರೆಗಳ ವಿರುದ್ಧ ತನ್ನ ಜಯಪರವಾದ ಜೀವನವನ್ನು ಮುಂದುವರೆಸಿದನು. ಇವನು ತನ್ನ ಸಾಹಸ ಮತ್ತು ಕಿನ್‌ಸೀ ಮತ್ತು ಹರ್‌ಮಾನಕಾಯಾ(Harmankaya)ನಂತಹ ದಣಿಗಳ ಗೆಳೆತನದಿಂದ ಅಯಿನೆಕ್ವಲ್ (Ainequel), ಬಿಲೇಜಿಕ್ (Bilejik) ಮತ್ತು ಯಾರ್‌ಹಿಸ್ಸಾರ್ (Yar Hissar) ಪಟ್ಟಣಗಳ ಒಡೆಯನಾದನು. ಕ್ರಿ.ಶ. ೧೩೦೦ನೆಯ ಇಸವಿಯಲ್ಲಿ ಸೆಲ್‌ಜೂಕ ಸಾಮ್ರಾಜ್ಯ ಕುಸಿಯಿತು ಹಾಗೂ ಇದರ ನಾಶದ ಮೇಲೆ ಸಣ್ಣಸಣ್ಣ ರಾಜ್ಯಗಳು ಹುಟ್ಟಿಕೊಂಡವು. ತನ್ನ ರಕ್ಷಕ ಹಾಗೂ ಆಶ್ರಯದಾತ ಎರಡನೆಯ ಸುಲ್ತಾನ ಅಲ್ಲಾವುದ್ದೀನನು ಮರಣ ಹೊಂದಿದ ಮೇಲೆ ಒಸ್ಮಾನ ತಾನು ಸ್ವತಂತ್ರನೆಂದು ಸಾರಿದನು. ಇದರಂತೆ ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.[೧] ಈ ವಿಷಯ ಏನೇ ಇರಲಿ, ಟರ್ಕರ ಸಾಮ್ರಾಜ್ಯ ಬಹು ವಿಶಾಲವಾಗಿತ್ತು. "ಟರ್ಕರು ಏಷಿಯ ಮೈನರನ್ನು ಆಳಿದರು. ಜೊತೆಗೆ ಈಜಿಪ್ತನ್ನು ಸಹ ಆಳಿದರು. ಸಿರಿಯಾದಲ್ಲಿನ ಮಂಗೋಲರ ಮೇಲೆ ಮತ್ತು ಮೆಸೊಪೊಟಮಿಯಾದ ಮೇಲೆ ಅವರ ಅಧಿಕಾರವಿತ್ತು. ಚಂಗೇಜಖಾನನ ವಂಶಸ್ಥರು ಪರ್ಶಿಯಾದ ಖಲೀಫರ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಿದರೆ, ತುರ್ಕಿಗಳು ಓಲ್ಗಾ (Volga)ನದಿಯ ಇನ್ನೂ ಕೃಷಿಗೆ ಒಳಪಡಿಸದ ಪ್ರದೇಶ ಹಾಗೂ ಯೂರಲ್ (Ural) ಬೆಟ್ಟಗಳ ಮೇಲೆ ಮತ್ತು ಓಕ್ಸಸ್ (Oxus) ಭೂ ಪ್ರದೇಶಗಳಲ್ಲಿ ಹಾಗು ಟಾರ್ಟರಿ(Tartary)ಯ ಮರುಭೂಮಿಗಳಲ್ಲಿ ತಮ್ಮ ಪ್ರಭುತ್ವವನ್ನು ಸಾಧಿಸಿದ್ದರು. ಇಷ್ಟಲ್ಲದೆ ಇವರು ಮಧ್ಯ ಏಶಿಯಾದಲ್ಲೆಲ್ಲಾ ಪ್ರಸರಿಸಿದ್ದರು. ಚೈನಾದಲ್ಲಿ ಒಂದು ಸಾಮ್ರಾಜ್ಯ ಕಟ್ಟಿದರು ಹಾಗೂ ಹಿಂದೂಸ್ಥಾನದಲ್ಲಿ ಸ್ಥಾಪಿಸಲು ಮಂಗೋಲ ಚಕ್ರವರ್ತಿಗಳ ಒಂದು ಉದ್ದವಾದ ಪಟ್ಟಿಯನ್ನು ತಯಾರಿಸಲು ಸಿದ್ಧತೆಯನ್ನು ನಡೆಸುತ್ತಿದ್ದರು ಹಾಗು ಈ ಚಕ್ರವರ್ತಿಗಳೇ ಮುಂದೆ ಗ್ರೇಟ್ ಮೊಗಲರು ಎಂದು ಪ್ರಸಿದ್ಧಿಯನ್ನು ಹೊಂದಿದರು ಎಂದು ಬೇರೆ ಹೇಳಬೇಕಾಗಿಲ್ಲ."[೨] ಆದರೆ ಈ

---

೧. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ, ೧೧ನೇ ಮುದ್ರಣ, ಸಂ. XVIII, ಪು. ೪೪೧–೩

೨. ಸ್ಟ್ಯಾನ್ಲೇ ಪೂಲ್–ಲೇನ್ : "ಟರ್ಕಿ" (ನ್ಯೂಯಾರ್ಕ್, ೧೮೮೯) ಪು. ೭

ಟರ್ಕರ ಬಲ ಒಂದು ಸಮಯದಲ್ಲಿ ಕಡಿಮೆಯಾಯಿತು ಮತ್ತು ಇನ್ನೇನು ಇವರು ಮತ್ತೊಮ್ಮೆ ಪ್ರಬಲರಾಗುವುದು ಸಾಧ್ಯವಿಲ್ಲವೆಂಬ ಭಾವನೆ ಜನರಲ್ಲಿ ಮೂಡಿತು. "ಯಾವ ಕಾಲದಲ್ಲಿ ಟರ್ಕಿಯ ಸುಲ್ತಾನನು ತನ್ನ ಆಶೆಯ ತುತ್ತತುದಿಗೆ ಮುಟ್ಟಿದ್ದನೋ ಮತ್ತು ಯಾವಾಗ ಅವನ ಅಧಿಕಾರವನ್ನು ಯೂರೋಪ್ ಹಾಗೂ ಏಶಿಯಾ ಖಂಡಗಳಲ್ಲಿದ್ದ ಬೈಜಂಟೈನ್ (Byzantine) ಸಾಮ್ರಾಜ್ಯದಲ್ಲೆಲ್ಲಾ ಜನರು ಚಾಚುತಪ್ಪದೆ ಪಾಲಿಸುತ್ತಿದ್ದರೋ ಮತ್ತು ಯಾವ ಕಾಲದಲ್ಲಿ ಕ್ರಿಶ್ಚಿಯನ್ ರಾಜರುಗಳು ಇವನನ್ನು ಒಬ್ಬ ದೈತ್ಯ ಹಾಗೂ ಇಡಿ ಜಗತ್ತಿನ ವಿಪತ್ತು ಎಂದು ಭಾವಿಸಿದ್ದರೋ ಅದೇ ಸಮಯದಲ್ಲಿ ತೈಮೂರು ಚಕ್ರವರ್ತಿ ಇವನಿಗಿಂತ ಅಧಿಕ ವಿಪತ್ತಾಗಿ ಅಂದು ಕಾಣಿಸಿಕೊಂಡ. ಈತ ಬಾಯೆಜಿದ್(Bayezid)ರು ಸ್ಥಾಪಿಸಿದ ಮತ್ತು ಬೆಳೆಸಿದ ಬೈಜಂಟೈನ ಸಾಮ್ರಾಜ್ಯವನ್ನು ನೆಲಸಮ ಮಾಡಿದ. ಇವನಿಗೆ ಟಾರ್ಟರ್ ಅಥವಾ ತಮುರಲೇನ (Tarter or "Tamurlane") ಎಂಬ ಇನ್ನೆರಡು ಹೆಸರುಗಳೂ ಸಹ ಇವೆ. ಈತ ಚಂಗೇಜುಖಾನನ ವಿಶಾಲ ಸಾಮ್ರಾಜ್ಯ ಅಳಿದನಂತರ ಅದರಿಂದ ಹೊರಹೊಮ್ಮಿದ ಸಣ್ಣಪುಟ್ಟ ನಾಯಕರುಗಳ ಮೇಲೆ ತನ್ನ ಶ್ರೇಷ್ಠತೆಯನ್ನು ಸ್ಥಾಪಿಸಿದ. ಬಾಯೆಜಿದ್ (Bayezid) ಎಂಬ ಟರ್ಕರಾಜನ ಆಶ್ರಯದಲ್ಲಿ ಬರುವ ಎಲ್ಲಾ ಸಂಸ್ಥಾನಗಳನ್ನು ತನ್ನ ಖಡ್ಗದ ಬಲದಿಂದ ಸೋಲಿಸಿದ. ಕೊನೆಗೆ ಕ್ರಿ.ಶ. ೧೪೦೨ರಲ್ಲಿ ಟರ್ಕರು (ಅಂದರೆ ಬಯಜಿನ್ ಮನೆತನದ ಸುಲ್ತಾನ) ಮತ್ತು ತೈಮೂರನಿಗೆ ಕದನವಾಯಿತು. ಯಾವಾಗ ಟರ್ಕರು ಕಾನ್‌ಸ್ಟೆಂಟಿನೋಪಲ್ ಮೇಲೆ ಧಾಳಿ ಮಾಡಲು ತೊಡಗಿದ್ದರೋ ಆಗ ಅವರು ತೈಮೂರನು ಶಿವಾಸ್ (Shiwas) ಎಂಬ ಪ್ರದೇಶದಲ್ಲಿ ತನ್ನ ಸೈನ್ಯದೊಂದಿಗೆ ಯುದ್ಧ ಹೂಡಿ ಟರ್ಕರ ಪ್ರದೇಶವನ್ನು ಗೆದ್ದಿದಾನೆ ಎಂಬ ಸುದ್ದಿಯನ್ನು ಸುಲ್ತಾನನು ಕೇಳಿದನು. ತಕ್ಷಣ ಆತ ತನ್ನ ಎಲ್ಲಾ ಸೈನ್ಯವನ್ನು ಕೂಡಿಸಿಕೊಂಡು ತೈಮೂರನಿಗೆ ಎದಿರಾದ ಮತ್ತು ಯುದ್ಧದಲ್ಲಿ ಆಂಗೋರಾ(Angora) ಎಂಬಲ್ಲಿ ಸೋತನು. ಇದರೊಂದಿಗೆ ಟರ್ಕಿ ಸಾಮ್ರಾಜ್ಯದ ಕಟ್ಟಡ ಚೂರು ಚೂರಾಯಿತು.[೧] ಅತ್ಯಂತ ನೈಪುಣ್ಯ ಮತ್ತು ಅತಿ ಹೆಚ್ಚಿನ ಶೌರ್ಯದಿಂದ ಕಟ್ಟಲ್ಪಟ್ಟ ತುರ್ಕಿ ಸಾಮ್ರಾಜ್ಯ ಏಶಿಯಾ ಖಂಡದ ನಿರಂಕುಶ ಪ್ರಭುವಾಗಿದ್ದ ಹಾಗೂ "ದೇವರ ಸಿಟ್ಟಿನ ಪ್ರತಿಫಲದ ಅವತಾರ ಎಂಬ ಕ್ರೂರ ರಾಜ ತೈಮೂರನಿಗೆ ಶರಣಾಗತವಾಯಿತು." "ಒಟ್ಟೊಮಾನರ (Ottomans) ಇತಿಹಾಸ ಇನ್ನೇನು ಒಮ್ಮಿಂದೊಮ್ಮೆಲೆ ಮುಗಿದು ಹೋಯಿತೆಂಬ ಭಾವನೆ ಜನರಲ್ಲಿ ಮೂಡಿತು. ಬಾಯಿಜಿದ್ ರಾಜ (Bayezid) ಮನೆತನ, ತನ್ನ ಶೌರ್ಯದ ತುತ್ತತುದಿಯಿಂದ ಒಬ್ಬ ಕೈಕಾಲು ಕಟ್ಟಲ್ಪಟ್ಟ ಯುದ್ಧದ ಆಳಿನ ಮರುಕಸ್ಥಿತಿಗೆ ನಾಟಕೀಯವಾಗಿ ಬಿದ್ದು ಪರ್ಯಾವಸಾನಗೊಂಡಿತು. ಜಗತ್ತು ಇಂತಹ ಸನ್ನಿವೇಶ ನೋಡಿದ್ದು ಕೆಲವೇ ಕೆಲವು ಬಾರಿ ಮಾತ್ರ."[೨]

ದುರ್ದೈವವಶಾತ್ 'ತಮೂರಲೇನ' ತನ್ನ ಜಯದ ಫಲಗಳನ್ನು ಉಣ್ಣಲು ಬಹುಕಾಲ ಬಾಳಲಿಲ್ಲ ಮತ್ತು ಅವನು ಒಟ್ಟೊಮಾನ (Ottoman) ಸಾಮ್ರಾಜ್ಯದ ಮೇಲೆ ಹಾಕಿದ ಪೆಟ್ಟು ಕೊನೆಯದಾಗಿರಲಿಲ್ಲ. ಮಿ. ಲ್ಯಾನ್ ಪೂಲ್ ಹೇಳುತ್ತಾನೆ, "ಟರ್ಕರ ಆಳ್ವಿಕೆಯ ಅತ್ಯಂತ ಅಚ್ಚರಿಯ ಲಕ್ಷಣವೆಂದರೆ, ಅದರ ಚೈತನ್ಯ ಮತ್ತೆ ಮತ್ತೆ ಅದರ ಅವನತಿಯನ್ನು ಬಲ್ಲ ಭವಿಷ್ಯಕಾರರು ಸಾರಿದರೂ ಅದಿನ್ನೂ ಉಳಿದಿದೆ. ಮೇಲಾಗಿ ಈ ಸಾಮ್ರಾಜ್ಯದ ಸಂಸ್ಥಾನಗಳು ಒಂದಾದ ನಂತರ ಒಂದು ವೈರಿಗಳ ಕೈ ಸೇರಿದರೂ ಬಾಯಿಜಿದ್ ಸುಲ್ತಾನನ ಇವುಗಳ ಮೇಲಿನ ಹಿಡಿತ ಅಷ್ಟೇನು ಸಡಿಲಾಗಲಿಲ್ಲ. ಈ ಸಾಮ್ರಾಜ್ಯವನ್ನು ಹಲವಾರು ಜನಾಂಗಗಳು ಪೂಜ್ಯಭಾವನೆಯಿಂದಲೋ ಅಥವಾ ಅಂಜಿಕೆಯ ಕಣ್ಣುಗಳಿಂದಲೋ ವೀಕ್ಷಿಸುತ್ತಿದ್ದರು. ಈ ಟರ್ಕಿ ಸುಲ್ತಾನ

---

೧. ಸ್ಟ್ಯಾನ್ಲೇ ಲೇನ್–ಪೂಲ್ "ಟರ್ಕಿ" (ನ್ಯೂಯಾರ್ಕ್, ೧೮೮೮), ಪು. ೭

೨. ಅದೇ, ಪು. ೭೩.

ಹೇಳಿಕೊಳ್ಳುವಂತಹ ಸದ್ಗುಣಗಳನ್ನು ಹೊಂದಿರದಿದ್ದರೂ, ಯುದ್ಧ ಒಂದರಿಂದ ಅಲ್ಲದೆ ಒಪ್ಪಂದದ ಮೂಲಕ ಪ್ರಜೆಗಳಿಗೆ ಸಹಾಯ ಮಾಡುವುದು ಅವನಿಗೆ ಗೊತ್ತಿಲ್ಲದಿದ್ದರೂ, ಆತ ಜನರ ಮೇಲೆ ತನ್ನ ಬಲವಾದ ಅಧಿಕಾರವನ್ನು ಹೇಗೆ ಉಳಿಸಿಕೊಂಡಿದ್ದನು? ಆತನ ಶಕ್ತಿ ಎಷ್ಟರಮಟ್ಟಿಗೆ ಅವರ ಮೇಲೆ ಪ್ರಭಾವ ಬೀರಿತ್ತು? ಎಂಬ ಸತ್ಯ ಒಂದು ಅಚ್ಚರಿಯ ಸಂಗತಿಯಾಗಿರುತ್ತದೆ. ಆದುದರಿಂದಲೇ ಟರ್ಕಿಗಳು ತಮ್ಮ ಬಲಿಷ್ಠ ಹಾಗೂ ದಕ್ಷ ದೊರೆಯಾದ ಮೊದಲನೆ ಮೊಹಮದ್‌ನ ಆಡಳಿತದಲ್ಲಿ ತಮ್ಮ ಒಟೊಮಾನ ಸಾಮ್ರಾಜ್ಯ(Ottoman Empire)ವನ್ನು ಕ್ರಿ.ಶ. ೧೪೦೨ರ ಸರ್ವನಾಶವಾದ ಹನ್ನೆರಡು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿಯೇ, ತಮ್ಮ ಕಳೆದುಹೋದ ಸಂಸ್ಥಾನಗಳನ್ನು ಮರಳಿ ಕೂಡಿಸುವುದರ ಮೂಲಕ, ಮತ್ತೊಮ್ಮೆ ಕಟ್ಟಿದರು. ಹೀಗಾಗಿ ಸಾಮ್ರಾಜ್ಯ ನಶಿಸಿ ಹೋಗದೆ ಪುನಃ ಹೆಚ್ಚಿನ ಬಲದಿಂದ ಮತ್ತು ಶೌರ್ಯದಿಂದ ಮೊದಲನೆಯ ಮೊಹಮದ್‌ನ ಆಳ್ವಿಕೆಯಲ್ಲಿ ಹೊಸ ಸಂಸ್ಥಾನಗಳನ್ನು ಆಕ್ರಮಿಸಲು ತಯಾರಿಮಾಡಿತು."[೧] ಮುಂಬರುವ ಒಳ್ಳೆಯ ದಿನಗಳ ಯೋಚನೆಯಿಂದ ಉತ್ಸಾಹಿತನಾಗಿ ಮೊಹಮದ್‌ನು ತನ್ನ ರಾಜಧಾನಿಯನ್ನು ಏಶಿಯಾ ಖಂಡದ ಬ್ರೂಸಾ (Brusa) ಎಂಬ ಸ್ಥಳದಿಂದ ಯೂರೋಪಿನಲ್ಲಿರುವ ಆಡ್ರಿನೋಪಲ್ (Adrianople)ಗೆ ಸ್ಥಳಾಂತರಗೊಳಿಸಿದ. ಹಿಂದೆ ಶೆಲಜೂಕ್ ಟರ್ಕರು ಹೆಲಿಸ್‌ಪಾಂಟ್(Hellespont)ನವರೆಗೆ ಬಂದಿದ್ದರು. ಆದರೆ ಇದನ್ನು ದಾಟಲಿಲ್ಲ; ಇದರ ದಾಟುವಿಕೆಯು ಒಟಮಾನ್‌ರಿಗೆ ಬಿಟ್ಟ ವಿಷಯವಾಗಿತ್ತು. ಕಾನ್‌ಸ್ಟೆಂಟಿನೋಪಲ್(Constantinople)ನ ವಶ ಮಾಡಿಕೊಳ್ಳುವುದು ಹಲವಾರು ಟರ್ಕಿ ರಾಜರುಗಳ ಕನಸಾಗಿತ್ತು. ಟರ್ಕಿ ಸಾಮ್ರಾಜ್ಯದ ಸಂಸ್ಥಾಪಕನಾದ ಒಟ್ಟೊಮಾನನು ಮೊಟ್ಟಮೊದಲು ಕಾನ್‌ಸ್ಟೆಂಟಿನೋಪಲ್‌ನ್ನು 'ನಾನು ನನ್ನ ಕೈಯಲ್ಲಿ ಹಿಡಿದಿದ್ದೇನೆ' ಎಂದು ಕನಸು ಕಂಡನು. ಇವನ ನಂತರ ಎಲ್ಲ ರಾಜರುಗಳು ಇಂತಹದೇ ಕನಸನ್ನು ಕಂಡರು. "ಸಿಡಿಲಿನಂತಹ ಬಯೇಜಿದ್ (Bayezid) ರಾಜ ಇದನ್ನು ಮುತ್ತಿಗೆ ಹಾಕಿದ್ದನು. ಮೂಸಾ ದೊರೆಯು ಈ ರಾಜಧಾನಿಗಾಗಿ ಬಹಳಷ್ಟು ಬಲಪ್ರಯೋಗ ಮಾಡಿದನು. ಎಂಟನೆಯ ಮೊಹಮ್ಮದನು ಕಾನ್‌ಸ್ಟೆಂಟಿನೋಪಲ್ ಗೆಲ್ಲುವುದಕ್ಕೆ ತಾಳ್ಮೆಯಿಂದ ಯೋಜನೆಯನ್ನು ತಯಾರಿಸಿದನು. ಇವರಿಗೆ ಈ ನಗರವನ್ನಷ್ಟೆ ಗೆಲ್ಲುವ ಯೋಜನೆ ಇತ್ತು. ಇದರ ಸುತ್ತಮುತ್ತ ಇರುವ ಎಲ್ಲಾ ಸಂಸ್ಥಾನಗಳನ್ನು ಅವರು ಈಗಾಗಲೇ ಗೆದ್ದಿದ್ದರು ಮತ್ತು ಈ ನಗರದ ಮೇಲಿನ ಜಯ ಅವರ ಎಲ್ಲಾ ಸಾಧನೆಗಳಿಗೆ ಕಳಶಪ್ರಾಯ ಎಂಬ ಅಭಿಪ್ರಾಯವನ್ನು ಹೊಂದಿದ್ದರು."[೨] ಒಟಮಾನ್ ಚಕ್ರವರ್ತಿಗಳಲ್ಲಿ ಆರನೆಯವನಾದ ಮತ್ತು ಎರಡನೆಯ ಮೊಹಮದ್ ಎನಿಸಿಕೊಂಡ ರಾಜ ಈ ನಗರವನ್ನು ವಶಪಡಿಸಿಕೊಳ್ಳುವ ನೆವವೊಂದಕ್ಕಾಗಿ ಕಾದು ಕುಳಿತಿದ್ದನು. ಟುರ್ಕರು ೨೯ ಮೇ ೧೪೫೩ರಂದು ಕಾನ್‌ಸ್ಟೆಂಟಿನೋಪಲ್‌ನ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡರು. ಈ ನಗರ ೨೯ನೇ ಮೇ ೧೪೫೩ಕ್ಕಿಂತ ಮೊದಲು ವೈರಿಗಳ ವಶ ಏಕೆ ಆಗಲಿಲ್ಲವೆಂಬುದು – "ಇಲ್ಲಿಯವರೆಗೆ ಈ ನಗರ ಟರ್ಕಿಗಳ ವಶದಲ್ಲಿ ಬಾರದಿರುವುದು – ನಮಗೆ ಆಶ್ಚರ್ಯಕರವಾಗಿ ಕಂಡುಬರುತ್ತದೆ. ಈ ನಗರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿರದ ಬೈಜಂಟೈನ್ (Byzontine) ಸಾಮ್ರಾಜ್ಯದವರು ಸಬಲರಾಗಿದ್ದರು. ಆದುದರಿಂದ ಈ ನಗರ ಟರ್ಕಿಗಳ ವಶವಾಗಲಿಲ್ಲವೆಂದಲ್ಲ; ಇಲ್ಲಿಯವರೆಗೆ (೨೯ ಮೇ ೧೪೫೩ಕ್ಕಿಂತ ಮುಂಚೆ) ಈ ನಗರವನ್ನು ವಶಪಡಿಸಿಕೊಳ್ಳಲು ಧಾಳಿಗೈದ

---

೧. ಸ್ಟ್ಯಾನ್ಲೆ ಲೇನ್–ಪೂಲ್ "ಟರ್ಕಿ", ಪು. ೭೪–೭೫.
೨. ಅದೇ, ಪು. ೧೦೭–೧೦೮.

ಟರ್ಕಿಯರಲ್ಲಿ ಇದನ್ನು ಪಡೆಯುವ ಪರಿಣಾಮಕಾರಿ ಉಪಾಯವನ್ನು ವೈರಿಗಳಿಂದ ಕಾಪಾಡಿದರು ಎಂದಲ್ಲ."[೧] ಕಾನ್‌ಸ್ಟೆಂಟಿನೋಪಲ್ ನಗರಕ್ಕಿಂತ ಆಯಕಟ್ಟಿನ ಸ್ಥಳದಲ್ಲಿ ವಿಶ್ವದ ಇನ್ನಾವ ನಗರವೂ ಇರುವುದಿಲ್ಲ. ಇದು ಏಶಿಯಾ, ಯೂರೋಪ್ ಮತ್ತು ಆಫ್ರಿಕಾ ಖಂಡಗಳ ಮೇಲೆ ಸರಿಯಾದ ನಿಯಂತ್ರಣವನ್ನು ಇಟ್ಟುಕೊಳ್ಳಲು ರಾಜರಿಗೆ ನೆರವಾಗುತ್ತದೆ ಮತ್ತು ಯಾವ ರಾಜನು ಈ ನಗರವನ್ನು ತನ್ನ ವಶದಲ್ಲಿಟ್ಟುಕೊಂಡಿರುವನೋ ಅವನೇ ಈ ಮೂರು ಖಂಡಗಳ ಸಾರ್ವಭೌಮತ್ವವನ್ನು ಹೊಂದಿರುತ್ತಾನೆ. ಕಾನ್‌ಸ್ಟೆಂಟಿನೋಪಲ್‌ನ ಭೌತಿಕ ಶಕ್ತಿ ಮತ್ತು ಇದು ಯಶಸ್ವಿಯಾಗಿ ಎದುರಿಸಿದ ಧಾಳಿಗಳ ಬಗ್ಗೆ ಹೇಳುತ್ತಾ ಡಾ. ಕನ್ನಿಂಗ್‌ಹ್ಯಾಮರು, "ಶತಮಾನಗಳು ಒಂದಾದ ಮೇಲೆ ಒಂದರಂತೆ ಉರುಳುತ್ತಾ ಹೋಗುತ್ತಿವೆ. ಇವುಗಳು ಉರುಳಿದಂತೆಲ್ಲಾ ನಗರದ ಮೇಲೆ ಹಲವಾರು ಹೊಸ ಹೊಸ ರಾಜರುಗಳು ಆಕ್ರಮಣ ಮಾಡಿದ್ದಾರೆ. ಈ ನಗರವನ್ನು ನಾಲ್ಕನೆಯ ಶತಮಾನದಲ್ಲಿ ಕಟ್ಟಲಾಯಿತು. ಇದು ಕಟ್ಟಿದ ಕೆಲವು ವರ್ಷಗಳಲ್ಲಿಯೇ ಗೋಥರು (Goth) ಇದರ ಮೇಲೆ ಧಾಳಿ ಮಾಡಿ ಇದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಐದನೆಯ ಶತಮಾನದಲ್ಲಿ ವಂಡಲರು (Vandals) ಹಾಗೂ ಹನ್ಸರು (Hans), ಆರನೆಯ ಶತಮಾನದಲ್ಲಿ ಸ್ಲಾವರ (Slavs) ಧಾಳಿಯಿಂದ ಇದು ಅಂಜಿತ್ತು; ಅರಬರು ಮತ್ತು ಪರ್ಶಿಯನ್‌ರು ಏಳನೆಯ ಶತಮಾನದಲ್ಲಿ ಮತ್ತು ಮಗಯಾರ್‌ಗಳು (Magyars), ಬಲ್ಗರು (Balgars) ಹಾಗೂ ರಶಿಯನ್‌ರು (Russians) ಇದನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದರು. ವೆನಿಸ್ ಮತ್ತು ನಾಲ್ಕನೆಯ ಧರ್ಮಯುದ್ಧ(Fourth Crusade)ದ ಜಯ ಮತ್ತು ಲ್ಯಾಟಿನ್ ಸಾಮ್ರಾಜ್ಯ(Latin Kingdom)ದ ಸ್ಥಾಪನೆಯಿಂದ ಕಾನ್‌ಸ್ಟೆಂಟಿನೋಪಲ್‌ನ ಮರ್ಯಾದೆಗೆ ಧಕ್ಕೆ ಬಂದರೂ ಈ ನಗರ ಟರ್ಕರ ವಿರುದ್ಧ ಸೆಟೆದು ನಿಂತಿತು. ಬಹಳ ಸಲ ಅಲುಗಾಡಿ ಕೊನೆಗೆ ೧೪೫೩ರಲ್ಲಿ ವೈರಿಗಳ ಧಾಳಿಗೆ ತುತ್ತಾಯಿತು" ಎಂದು ಡಾ. ಕನ್ನಿಂಗ್ ಹ್ಯಾಮರು ಈ ನಗರದ ಮಹತ್ವವನ್ನು ಹೇಳುವಾಗ ಉದ್ಗಾರ ಮಾಡಿದ್ದಾರೆ.[೨]

ಈ ಸಾಮ್ರಾಜ್ಯಶಾಹಿ ನಗರ ವೈರಿಗಳ ಸತತ ಧಾಳಿಯನ್ನು ತಡೆದದ್ದು ಮತ್ತು ತನ್ನ ನಾಗರಿಕತೆ ನಾಶವಾಗದಂತೆ ಸಂರಕ್ಷಿಸುವುದು ಜಾಗತಿಕವಾಗಿ ಬಹಳ ಅದೃಷ್ಟದ ಸಂಗತಿಯಾಗಿದೆ. ಮೊಹಮದ್‌ನ ಧರ್ಮದ ಯೂರೋಪಿನ ತರಂಗಗಳನ್ನು ಕ್ರಿಶ್ಚಿಯನ್ ಧರ್ಮ ತಡೆಹಿಡಿದದ್ದು ಅದೃಷ್ಟವೇ ಸರಿ. ಮುಂದುವರಿದು, ಕ್ರಿಶ್ಚಿಯನ್ ಧರ್ಮ, ಇಸ್ಲಾಂ ಧರ್ಮ ಪ್ರಚಾರದ ಬರ್ಬರತೆಯ ಹೊಡೆತವನ್ನು ಸಹಿಸಿ ಸನಾತನ ನಾಗರಿಕತೆಯ ಬೆಳವಣಿಗೆಗೆ ಪ್ರೋತ್ಸಾಹಿಸಿತು. ಯಾವ ರೀತಿ ಕಾನ್‌ಸ್ಟೆಂಟಿನೋಪಲ್, ಪೂರ್ವದ ಕಡೆಯಿಂದ ಇಸ್ಲಾಂ ಧರ್ಮದ ಪ್ರಚಾರವನ್ನು ತಡೆಗಟ್ಟಿತೋ ಅದೇ ರೀತಿ ಟೂರ್ಸ್ ನಗರ ಇದರ ಪ್ರಚಾರವನ್ನು ಪಶ್ಚಿಮದೆಡೆಯಿಂದ ತಡೆಗಟ್ಟಿತು. ಇದು ಸ್ವಲ್ಪ ತಡವಾಗಿ ಮತ್ತು ನಿಧಾನವಾಗಿ ಆಯಿತು. ಟರ್ಕಿಗಳಿಗಿಂತ ಮುಂಚೆ ಅರಬರು ಕಾನ್‌ಸ್ಟೆಂಟಿನೋಪಲ್ ನಗರವನ್ನು ತಮ್ಮ ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಗಿ ತಮ್ಮ ಧರ್ಮ ಪ್ರಚಾರವನ್ನು ದಕ್ಷಿಣ ದಿಕ್ಕಿನಿಂದ ಆಫ್ರಿಕಾ ಖಂಡದಲ್ಲಿ ಮಾಡಿದರು ಮತ್ತು ಇಸ್ಲಾಂ ಧರ್ಮಕ್ಕೆ ಒಂದು ನೆಲೆಯನ್ನು ನೀಡುವಲ್ಲಿ ಯಶಸ್ವಿಯಾದರು. ನಂತರ ಜಿಬ್ರಾಲ್ಟರ(Gibralter)ನ ಮುಖಾಂತರ ಯೂರೋಪಿನ ಪಶ್ಚಿಮ ಪ್ರದೇಶಕ್ಕೆ ಬಂದರು. ಇವರು ಪಶ್ಚಿಮದ ಸಾಮ್ರಾಜ್ಯಗಳಿಂದ ಯಾವ ರೀತಿಯ ವಿರೋಧವನ್ನೂ ಎದುರಿಸಲಿಲ್ಲ. ಹೀಗಾಗಿ ೭೧೧ನೇ ಇಸವಿಯ ಹೊತ್ತಿಗೆ ಸ್ಪೇನ್ ದೇಶ ಇವರ ವಶವಾಯಿತು. ಯೂರೋಪಿನ

---

೧. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಸಂ. XVIII, ಪು. ೪೪೩

೨. ಡಬ್ಲ್ಯು. ಕನ್ನಿಂಗ್‌ಹ್ಯಾಮ್ : "ವೆಸ್ಟ್ರನ್ ಸಿವಿಲಿಜೇಶನ್–ಏನ್ಷಿಯಂಟ್ ಟೈಮ್ಸ್", ಪು. ೧೯೭–೧೯೮.

ಜೆಬರ್ಸ್ ಪ್ರದೇಶ ಸಹ ಇದೇ ಸಮಯದಲ್ಲಿ ಮೂರಿಷ್ ವಲಸೆಗಾರರಿಂದ ತುಂಬಿಹೋಗಿತ್ತು. ಈ ತಮ್ಮ ಯಶಸ್ಸಿನಿಂದ ಅರಬರು ಪ್ರೋತ್ಸಾಹಿತಗೊಂಡು ಯೂರೋಪಿನ ಗೌಲ್ (Goul) ಪ್ರದೇಶವನ್ನು ದಾಟಲು ಯೋಜಿಸಿದ್ದರು. ಅದರ ಆಕ್ವಿಲಿಯೇನ್(Aquilaine)ದ ದೊರೆ ಇವರನ್ನು ತಡೆಹಿಡಿದಿದ್ದನು. ಅರಬರು ಈತನನ್ನು ೭೩೨ರಲ್ಲಿ ಬೊರ್ಡ್ಕ್ಸ್ (Bordeaux) ಎಂಬ ನಗರದ ಸಮೀಪದಲ್ಲಿ ಸೋಲಿಸಿದರು. ತಮ್ಮ ದ್ವಿಗುಣಿತವಾದ ಶಕ್ತಿಯಿಂದ ಅರಬರು ಪೊಯಿಟೂರ್ಸ್(Poiturs)ವರೆಗೆ ಮುಂದುವರಿಸಿದರು. ಮತ್ತು ಅಲ್ಲಿಂದ ಮುಂದೆ ಟೂರ್ಸ್(Tours)ವರೆಗೆ ದಾಪುಗಾಲು ಹಾಕಿದರು. ಆದರೆ ಇವರು ಇಲ್ಲಿ ತಮಗಿಂತ ಪ್ರಬಲರಾಗಿರುವ ವೈರಿಗಳೊಂದಿಗೆ ಯುದ್ಧ ಮಾಡುವ ಸಂದರ್ಭ ಒದಗಿ ಬಂದಿತು. ಆದರೆ, ಚಾರ್ಲ್ಸ್(Charles)ನ ಆಧಿಪತ್ಯದಲ್ಲಿರುವ ಫ್ರ್ಯಾಂಕ್ಸ್ (Franks) ಮತ್ತು ಹ್ಯಾಮರ್(Hammer)ರೊಂದಿಗೆ ಅರಬರು ಸೆಣಸಾಡಬೇಕಾಯಿತು. ಇವರಿಬ್ಬರು ಅರಬರನ್ನು ಟೂರ್ಸ್ (Tours) ಎಂಬ ಪ್ರದೇಶದಲ್ಲಿ ಸೋಲಿಸಿದರು ಮತ್ತು ಈ ರೀತಿಯಾಗಿ ಅರಬರ ಮುಂದುವರಿಕೆಗೆ ಶಾಶ್ವತವಾದ ತಡೆಯನ್ನು ಅವರು ಒಡ್ಡಿದರು. ಈ ಕದನದ ನಂತರ ಅರಬರು ಪೈರಿನೀಸ್ (Pyrenees) ನದಿಯನ್ನು ದಾಟುವ ಪ್ರಯತ್ನ ಎಂದೂ ಮಾಡಲಿಲ್ಲ. ಒಂದು ವೇಳೆ ಅರಬರು ಯೂರೋಪಿಯನ್ನರ ನಾಗರಿಕತೆಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದರೆ, ಈ ನಾಗರಿಕತೆಯ ವಿಧಿ ಏನಾಗುತ್ತಿತ್ತೊ ಎಂಬುದು ಊಹಿಸುವುದು ಕಠಿಣ. ಆದರೆ ಇಷ್ಟು ಮಾತ್ರ ನಿಜ. ಫ್ರ್ಯಾಂಕರಿಗಿಂತ (Franks) ಅರಬ್ ಅನಾಗರಿಕರು (Moors) ಬಹಳ ಮುಂದುವರಿದಿದ್ದರು. "ಚಾರ್ಲ್ಸ್ ಮತ್ತು ಹ್ಯಾಮರರು ಹಾಗೂ ಅವರ ಅನಾಗರಿಕ ಸೈನಿಕರು ಟೂರ್ಸ್ (Tours) ಎಂಬ ಪ್ರದೇಶದಲ್ಲಿ ಮೊಹಮದ್‌ನ ಅನುಯಾಯಿಗಳನ್ನು ಸೋಲಿಸಿ ಹಿಮ್ಮೆಟ್ಟಿಸಿದುದು ಯೂರೋಪಿಯನ್ನರ ಬಹುದೊಡ್ಡ ಸುದೈವವೆಂದು ಇತಿಹಾಸಕಾರರು ಸಾಮಾನ್ಯವಾಗಿ ನಂಬಿರುತ್ತಾರೆ. ಆದರೆ ಒಂದು ವೇಳೆ ಮೊಹಮ್ಮದಿಯರಿಗೆ ದಕ್ಷಿಣ ಫ್ರಾನ್ಸ್ ಪ್ರದೇಶದಲ್ಲಿ ನೆಲೆಸಲು ಪರವಾನಿಗೆ ನೀಡಿದ್ದರೆ ಅವರು ಫ್ರಾಂಕರಿಗಿಂತಲೂ ಅಧಿಕ ಉತ್ಸಾಹದಿಂದ ವಿಜ್ಞಾನ ಮತ್ತು ಕಲೆಗಳನ್ನು ತ್ವರಿತವಾಗಿ ಅಭಿವೃದ್ಧಿಗೊಳಿಸಬಹುದಾಗಿತ್ತು" ಎಂದು ಪ್ರೊ. ರಾಬಿನ್‌ಸನ್ ಹೇಳುತ್ತಾರೆ.[೧]

ಏಷ್ಯಾದ ಅಲೆಮಾರಿಗಳ ಕ್ಷಿಪ್ರ ಚಲನೆಗಳು ಕೇಂದ್ರ ಏಷ್ಯಾದ ಎಲ್ಲಾ ಶಾಂತಿಯುತ ಚಟುವಟಿಕೆಗಳನ್ನು ಪಲ್ಲಟಗೊಳಿಸುತ್ತಿರುವಾಗ ರೋಮನ್ ಸಾಮ್ರಾಜ್ಯವು ವೇಗವಾಗಿ ಕುಸಿಯುತ್ತಿತ್ತು ಮತ್ತು ಯುರೋಪ್ ಜರ್ಮನರ ಸತತ ಯುದ್ಧಕ್ರಿಯೆಗಳು ಮಾತ್ರ ಭಂಗಗೊಳಿಸುತ್ತಿದ್ದ ನೀರವತೆಯತ್ತ ಮರಳಿತು.

ಮೇಲೆ ವಿವರಿಸಿದ ಸಂದರ್ಭಗಳಲ್ಲಿ ವ್ಯಾಪಾರ ಕಡಿಮೆಯಾಗದೆ ಗತ್ಯಂತರವಿರಲಿಲ್ಲ. ವಾಸ್ತವದಲ್ಲಿ ಮಧ್ಯಯುಗದ ವ್ಯಾಪಾರಕ್ಕೆ ಅಸಂಖ್ಯಾತ ಅಡೆತಡೆಗಳು ಅಸ್ತಿತ್ವದಲ್ಲಿದ್ದವು. ಮೊದಲನೆಯದಾಗಿ, ಯೂರೋಪಿನ ಹಣದ ಕೊರತೆ ವೇಗದ ವಸ್ತು ವಿನಿಮಯಕ್ಕೆ ಅಡೆತಡೆಯನ್ನು ಉಂಟುಮಾಡಿತ್ತು. ಎರಡನೆಯದಾಗಿ, ಕ್ರೈಸ್ತ ಧರ್ಮ ಒಂದು ಆಶಾವಾದಿ ಧರ್ಮವಾಗಿದ್ದರೂ, ಅದು ಮಾನವನ ಭೌತಿಕ ಸುಖಕ್ಕೆ ಅನುವು ಮಾಡಿ ಕೊಟ್ಟಿರಲಿಲ್ಲ. ಧರ್ಮವು ಅರ್ಥಶಾಸ್ತ್ರವನ್ನು ಬಿಗಿಯಾಗಿ ಹಿಡಿದಿತ್ತು. ಈ ಹಿಡಿತವನ್ನು ಅಂದಿನ 'ನ್ಯಾಯಯುತ ಬೆಲೆಯ ಸಿದ್ಧಾಂತ' ಮತ್ತು 'ಸಗಟು ವ್ಯಾಪಾರದ ನಿಷೇಧ' ಮುಂತಾದವುಗಳಲ್ಲಿ ಕಾಣಬಹುದು. ಇವುಗಳು ಅಂದಿನ ಜಾಗತಿಕ ವ್ಯಾಪಾರದ ಪ್ರಮಾಣವನ್ನು ಬಹಳಷ್ಟು ಕಡಿಮೆ ಮಾಡಿದ್ದವು. ಇವುಗಳಲ್ಲದೆ, ಕ್ರಿಶ್ಚಿಯನ್‌ರ

---

೧. ಬ್ರ್ಯಾಸ್ಟಲೀ ಮತ್ತು ರಾಬಿನ್‌ಸನ್– "ಔಟ್‌ಲೈನ್ಸ್ ಆಫ್ ಯೂರೋಪಿಯನ್ ಹಿಸ್ಟರಿ" ಭಾಗ I, (ಎನ್.ವೈ.) ೧೯೧೪, ಪು. ೩೬೮.

ಬಡ್ಡಿ ಸಿದ್ಧಾಂತ ಅಂದಿನ ವ್ಯಾಪಾರಿ ಚಟುವಟಿಕೆಗಳಿಗೆ ಒಂದು ಬಹು ದೊಡ್ಡ ಆತಂಕವನ್ನು ತಂದೊಡ್ಡಿತು. ಈ ಸಿದ್ಧಾಂತ ಇಡಿ ಕ್ರಿಶ್ಚಿಯನ್ ಜನಾಂಗದ ಬಡ್ಡಿ ವ್ಯವಹಾರವನ್ನು ಒಟ್ಟಾರೆ ನಿಷೇಧಿಸಿತ್ತು. ಈ ನಿಷೇಧ ಹಣದ ಕೊರತೆಯೊಂದಿಗೆ ಸೇರಿದರೆ ವ್ಯಾಪಾರಕ್ಕೆ ಎಂತಹ ಹಿಂಜರಿತ ಉಂಟಾಗಬಹುದೆಂಬುದನ್ನು ಯಾರಾದರೂ ಸುಲಭವಾಗಿ ಊಹಿಸಬಹುದಾಗಿದೆ. ಕ್ರಿಸ್ತ ಧರ್ಮದ ಪರಿಧಿಯಲ್ಲಿ ಬರದ ಜ್ಯೂ ಜನ ಮಾತ್ರ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಮತ್ತು ಅರ್ಥಶಾಸ್ತ್ರಕ್ಕೆ ಅವರು ಸಲ್ಲಿಸಿದ ಸೇವೆ ಅಗಣಿತವಾಗಿದೆ. "ಈ ದುರ್ದೈವಿ ಜನರು ಯೂರೋಪಿನ ಆರ್ಥಿಕ ಬೆಳವಣಿಗೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸಿದರು. ಆದರೆ ಕ್ರಿಶ್ಚಿಯನ್‌ರಿಂದ ಅವರು ಬಹಳ ಕ್ರೂರವಾಗಿ ಪೀಡಿಸಲ್ಪಟ್ಟರು. ಕ್ರೈಸ್ತನನ್ನು ಸಾಯಿಸಿದ ಅತಿ ಬರ್ಬರ ಅಪರಾಧ. ಇವರೇ ಮಾಡಿದ್ದಾರೆಂದು ಕ್ರಿಶ್ಚಿಯನ್‌ರು ಇವರನ್ನೂ ದೂಷಿಸುತ್ತಿದ್ದರು."[೧] ಮೂರನೆಯದಾಗಿ, ವ್ಯಾಪಾರದ ಪ್ರಗತಿಗೆ ಅಡ್ಡಿ ಉಂಟುಮಾಡಲು ಮೇಲಿನವು ಸಾಲದೆಂಬಂತೆ ವಸ್ತುಗಳ ಮೇಲೆ ಸಾಗಾಟ ತೆರಿಗೆಯನ್ನು ಮನಬಂದಂತೆ ಹೇರಲಾಗಿತ್ತು. ನಾಲ್ಕನೆಯದಾಗಿ, ಆ ಸಮಯದಲ್ಲಿ ವ್ಯಾಪಾರಸ್ಥರಲ್ಲಿ ಜಾಗತಿಕ ಭೌಗೋಳಿಕ ಜ್ಞಾನ ಸಹ ಆಶ್ಚರ್ಯಪಡುವಂತಹ ಕಡಿಮೆ ಪ್ರಮಾಣದಲ್ಲಿ ಇತ್ತು. ಐದನೆಯದಾಗಿ, ವ್ಯಾಪಾರಿಗಳಿಗೆ ಸಮುದ್ರಗಳ್ಳರ ಅಂಜಿಕೆ ಸದಾಕಾಲ ಇರುತ್ತಿತ್ತು ಹಾಗೂ ಇವರ ಅಂಜಿಕೆಯನ್ನು ವ್ಯಾಪಾರಸ್ಥರು ಲಘುವಾಗಿ ಪರಿಗಣಿಸುವಂತಿರಲಿಲ್ಲ. ಕೊನೆಯದಾಗಿ, ಇಲ್ಲಿಯವರೆಗೆ ವಿವರಿಸಿದ ವ್ಯಾಪಾರದ ಅಡೆತಡೆಗಳಿಗೆ ಕಳಸಪ್ರಾಯವಾಗಿ ರೋಮನ್ ರಸ್ತೆಗಳ ದುರವಸ್ಥೆಯಿತ್ತು.

ಮೇಲೆ ವಿವರಿಸಿದ ಆರ್ಥಿಕ ಅಹಿತಕರ ಸನ್ನಿವೇಶ ಪಶ್ಚಿಮ ಯೂರೋಪಿನಲ್ಲಿ (ರೋಮನ್ ಸಾಮ್ರಾಜ್ಯ ಬಿದ್ದ ಮೇಲೆ) ಒಂದು ರೀತಿಯ ಬೇಸರದ ಹಾಗೂ ದೀರ್ಘಕಾಲೀನ ನೀರಸ ವಾತಾವರಣವನ್ನು ಉಂಟುಮಾಡಿದ್ದು ಆಶ್ಚರ್ಯಕರವಾಗಿರುವುದಿಲ್ಲ.

ಕಾನ್‌ಸ್ಟಂಟಿನೋಪಲ್ ವ್ಯಾಪಾರದ ಕಡೆ ಅಷ್ಟೊಂದು ಗಮನ ಹರಿಸಲಿಲ್ಲ. ಅದರ ನೀತಿ ಜನರ 'ಸುಲಿಗೆ'ಯಾಗಿತ್ತೇ ಹೊರತು ವ್ಯಾಪಾರದ ಉತ್ಕರ್ಷವಲ್ಲ. ಬೊಸ್‌ಫೊರಸ್ ಜಲಮಾರ್ಗದಲ್ಲಿನ (Bosphorus) ಅನುಕೂಲ ಪರಿಸ್ಥಿತಿಯಿಂದ ವ್ಯಾಪಾರದಿಂದ ಸಂಪೂರ್ಣ ಲಾಭ ಪಡೆಯಲು ಕಾನ್‌ಸ್ಟಂಟಿನೋಪಲ್‌ಗೆ ಆಗಲೇ ಇಲ್ಲ. ಹೀಗಾಗಿ ಪಾಶ್ಚಾತ್ಯ ದೇಶ ಮತ್ತು ಕಾನ್‌ಸ್ಟಂಟಿನೋಪಲ್‌ಗಳ ನಡುವೆ ವ್ಯಾಪಾರ ಇರಲಿಲ್ಲ ಮತ್ತು ಇವರ ನಡುವೆ ಸೈನಿಕ ಕಾರ್ಯಾಚರಣೆಗಳೇ ವ್ಯಾಪಾರಿ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗಿದ್ದವು.

[ಸ್ಥಳವನ್ನು ಖಾಲಿ ಬಿಡಲಾಗಿದೆ –ಸಂ]

* * *

ಕಾನ್‌ಸ್ಟಂಟಿನೋಪಲ್‌ನಂತೆ ಸಿರಿಯಾ ಮತ್ತು ಈಜಿಪ್ಟ್‌ಗಳಲ್ಲಿನ ಸಾರಕನ್ನರು (Saracens) ಮತ್ತು ಇವರ ಸಮಕಾಲೀನರಾದ ಬೈಜಾಂಟೈನ್ ಚಕ್ರವರ್ತಿಗಳು ಸಹ ವ್ಯಾಪಾರಕ್ಕೆ ಪ್ರೋತ್ಸಾಹ ನೀಡುವ ಗೊಡವೆಗೆ ಹೋಗಲಿಲ್ಲ.

ಯೂರೋಪಿನ ಈ ವ್ಯಾಪಾರಿ ಚಟುವಟಿಕೆಗಳ ನಾಶದ ಮಧ್ಯೆ ಇಟಲಿಯ ಮಧ್ಯಯುಗದ (Middle Ages) ವ್ಯಾಪಾರಿ ಮತ್ತು ಬೌದ್ಧಿಕ ಶಕ್ತಿಗಳನ್ನು ಸಂರಕ್ಷಿಸಿತು. ಕ್ರಿ.ಶ. ಒಂಬತ್ತನೆಯ ಶತಮಾನ ಇಟಲಿಯ ಈಶಾನ್ಯ (North East) ಮತ್ತು ನೈರುತ್ಯ (South-West) ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳ ಹೆಚ್ಚಳವನ್ನು ತೋರಿಸುತ್ತದೆ. ಇದು ಇಟಲಿ ನಗರ ಗಣರಾಜ್ಯಗಳ ಉಚ್ಛ್ರಾಯಸ್ಥಿತಿಯ ಒಂದು ಯುಗ

---

೧. ಅದೇ ಭಾಗ I, ಪು. ೫೦೬.

ಮತ್ತು ಪೌರ್ವಾತ್ಯ ವಾಣಿಜ್ಯ ಇಟಲಿಯ ಪ್ರಜೆಗಳಿಗೆ ಹೆಚ್ಚು ಸಮೃದ್ಧಿಯನ್ನು ತಂದು ಅವರನ್ನು ಧಾಂಡಿಗರಾಗುವಂತೆ ಮಾಡಿತು. ಇಲ್ಲಿನ ಎಲ್ಲಾ ನಗರ ರಾಜ್ಯಗಳು "ಭವ್ಯವಾದ ಪೌರ್ವಾತ್ಯ ಜಗತ್ತಿನ ವಿವಿಧ ರಾಜ್ಯಗಳನ್ನು ತಮ್ಮ ತಮ್ಮ ಉಂಬಳಿಗಳಂತೆ ಹೊಂದಲು ಮುಂದೆ ಬಂದರು."

ವ್ಯಾಪಾರದಿಂದ ಮುಂದೆ ಬಂದ ಇಟಲಿಯ ಮೊದಲನೆಯ ಹಾಗೂ ಅಗ್ರಗಣ್ಯ ನಗರರಾಜ್ಯ (City-State)ವೆಂದರೆ ಅಮಾಲ್‌ಫಿ (Amalfi). ಪೌರ್ವಾತ್ಯ ಸಾಮ್ರಾಜ್ಯದಿಂದ ಈ ನಗರರಾಜ್ಯವು ೮೨೦ನೇ ಇಸವಿಯಲ್ಲಿಯೇ ಸ್ವಾತಂತ್ರ್ಯವನ್ನು ಪಡೆಯಿತು. ಇದರ ನೌಕಾ ಚಟುವಟಿಕೆ ಇಪ್ಪತ್ತು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಎಷ್ಟು ಬಲಶಾಲಿಯಾಗಿ ಪರಿಣಮಿಸಿತು ಎಂದರೆ ಸಾರ್ಕನ್‌ರ (Saracens) ರೋಮ್ ಸಾಮ್ರಾಜ್ಯದ ಮೇಲಿನ ಧಾಳಿಯನ್ನು ಇದು ಬೆಂಬಲಿಸಿತು. ಇದರ ಕಾರಖಾನೆಗಳು ಪಾಲಿಮೊ (Palemo), ಸೈರಾಕ್ಯೂಸ್ (Syracuse), ಮಸ್ಸಿನಾ (Messina), ಡುರಾಜೂ (Durazzo) ಮತ್ತು ಕಾನ್‌ಸ್ಟಂಟಿನೋಪಲ್ (Constantinople)ಗಳ ಕಡೆ ಹರಡಿದ್ದವು ಹಾಗೂ ಇದು ಒಂದು ವಾಣಿಜ್ಯ ರಾಜ್ಯವಾಗಿ ಬಹಳ ಪ್ರಸಿದ್ಧಿಯನ್ನು ಪಡೆಯಿತು. ಇದರ ಪ್ರಸಿದ್ಧಿ ಎಷ್ಟರಮಟ್ಟಿಗೆ ವ್ಯಾಪಿಸಿತ್ತೆಂದರೆ "ಒಳ ಸಮುದ್ರ(Inland Sea)ದ ಪ್ರತಿಯೊಂದು ಕರಾವಳಿ ಪ್ರದೇಶದಲ್ಲಿ ವ್ಯಾಪಾರಸ್ಥರು ಅಮಲಾಫಿಯಾದ ನೌಕಾ ಸಂಬಂಧದ ಕಾಯಿದೆ 'ಟ್ಯಾಬುಲ ಅಮಲ್‌ಫಿತಾನಾ' (Tabula Amalfitana)ಗಳನ್ನು ಪಾಲಿಸುತ್ತಿದ್ದರು. ಮತ್ತು ಈ ದೇಶದ ನಾಣ್ಯವೇ 'ಲ್ಯಾಟಿನ್ ಯುರೋಪ' ಹಾಗೂ 'ಲೆವೊಟ್' (Levout) ನಡುವಿನ ಒಂದು ಪ್ರಮುಖ ವಿನಿಮಯ ಸಾಧನವಾಗಿತ್ತು."[೧]

ಅಮಾಲ್‌ಫಿ (Amalfi) ದೇಶದ ಚಿಕ್ಕ ಬಂದರು. ಅದನ್ನು ಬಹುದೊಡ್ಡ ವಾಣಿಜ್ಯ ಕೇಂದ್ರವಾಗದಂತೆ (Emporium) ತಡೆಹಿಡಿಯಿತು. ಆದುದರಿಂದ, 'ಅಮಾಲ್‌ಫಿ' ತನ್ನ ವೈರಿಗಳಿಗೆ ತಮ್ಮ ತಮ್ಮ ಸಾಮ್ರಾಜ್ಯಗಳನ್ನು ಬೆಳೆಸಿಕೊಳ್ಳಲು ದಾರಿಮಾಡಿಕೊಟ್ಟಿತು. ಕೊನೆಗೆ ಇದು ನಾರ್ಮನ್ನರ (Normans) ಶಕ್ತಿಗೆ ವಶವಾಯಿತು. ಈ ನಾರ್ಮನ್ನರು ಈಗಾಗಲೆ ನೇಪಲ್ಸ್ (Naples) ಸಾಲೆರ್‌ನೋ (Salerno) ಅಥವಾ ಬ್ರಿಂದಿಸಿ (Brindisi)ರವರನ್ನು ಸೋಲಿಸಿದ್ದರು. ಮೇಲಾಗಿ ಅಮೂಲ್‌ಫಿಯ ನೌಕಾಬಲ ಸಹ ಕುಗ್ಗಿತ್ತು. ಹಾಗೂ ಇದಕ್ಕಿಂತ ಉತ್ತಮ ಸ್ಥಾನದಲ್ಲಿ ವಾಸವಾಗಿರುವ ನಗರ–ರಾಜ್ಯಗಳ ನೌಕಾಬಲ ದಿನೇದಿನೇ ಹೆಚ್ಚಾಗುತ್ತಾ ಹೋಯಿತು.

ಅಮಾಲ್‌ಫಿ(Amalfi)ಯ ಶಕ್ತಿ ಕುಂದಿದಂತೆ 'ವೆನಿಸ್' (Venice) ನಗರದ ಶಕ್ತಿ ವೃದ್ಧಿಯಾಗುತ್ತಾ ಹೋಯಿತು. ಪೂಜನೀಯ ರೋಮನ್ ಚಕ್ರವರ್ತಿ ಮೊದಲನೆಯ ಚಾರ್ಲ್ಸ್‌ನ ಕಾಲದಿಂದಲೂ ಅಡ್ರಿಯಾಟಿಕ್ (Adriatic) ಪ್ರದೇಶದ ರಾಣಿ ಎನಿಸಿಕೊಂಡ 'ವೆನಿಸ್' ಲ್ಯಾಟಿನ್ ಜಗತ್ತಿನ ವಾಣಿಜ್ಯ ಹಾಗು ರಾಜಕೀಯ ಕ್ಷೇತ್ರಗಳಲ್ಲಿ ಮೊದಲಿನಿಂದಲೇ ಭಾಗವಹಿಸುವುದಕ್ಕೆ ಪ್ರಾರಂಭಿಸಿತು. ಇದು ಇಟಲಿಯ ಉಳಿದ ಎಲ್ಲಾ ಬಂದರು ಪಟ್ಟಣಗಳಿಗಿಂತ ಹೆಚ್ಚಿನ ಅನುಕೂಲಗಳನ್ನು ಹೊಂದಿತ್ತು. ಮುಖ್ಯ ಭೂಪ್ರದೇಶದಿಂದ ಈ ಪಟ್ಟಣ ಸಮುದ್ರದಿಂದಾಗಿ ಬೇರ್ಪಟ್ಟಿತ್ತು. ಮತ್ತು ಇದರ ಸುತ್ತಮುತ್ತ ಆಳವಿಲ್ಲದ ನೀರಿನ ಪ್ರದೇಶವನ್ನು ಹೊಂದಿತ್ತು ಹಾಗೂ ಕೆಲವೇ ಆಳವಾದ ನೀರಿನ ಮಾರ್ಗಗಳಿಂದ ಸುತ್ತುವರಿಯಲ್ಪಟ್ಟ ಪ್ರದೇಶವಾಗಿತ್ತು. ಮುಂದುವರಿದು, ಈ ನಗರ ತನ್ನ ನಾಗರಿಕರಿಂದ ಹಾಗೂ ವಿದೇಶಿಯರಿಂದ ಅಭೇದ್ಯವಾದ ಕೋಟೆ ಎನಿಸಿಕೊಂಡಿತ್ತು. ಅಟ್ಟಿಲ್ಲಾ(Attila)ನ ಕಾಲದಿಂದಲೂ ಈ ಖಂಡದ ರಾಜಕೀಯ ನಿರಾಶ್ರಿತರಿಗೆ ಆಶ್ರಯವನ್ನು ಈ ನಗರ ನೀಡುತ್ತಾ ಬಂದಿತ್ತು ಮತ್ತು ತನ್ನ ಸುತ್ತಮುತ್ತ ಯಾವುದೇ ನೌಕಾ ವೈರಿ ದೇಶವನ್ನು ಅದು ಹೊಂದಿಲ್ಲದೆ

---

೧. ರೇಮಂಡ್ ಬೀಜ್‌ಲೀ– "ದಿ ಡಾನ್ ಆಫ್ ಮಾಡರ್ನ್ ಜಿಯಾಗ್ರಫಿ", ಸಂ. II.

ಇದ್ದುದರಿಂದ ಅಡ್ರಿಯಾಟಕ್ ಪ್ರದೇಶದಲ್ಲಿ ವ್ಯಾಪಾರಿ ಕಾರ್ಯಾಚರಣೆಗಳಿಗೆ, ಪರದೇಶಗಳ ವಸಾಹತುಕರಣಕ್ಕೆ ಮತ್ತು ಇಷ್ಟೇ ಅಲ್ಲ, ಪರದೇಶಗಳ ಮೇಲೆ ಧಾಳಿಗಾಗಿ ಉಪಯೋಗ ಮಾಡುವಂತಹ ವಿಶಾಲವಾದ ಭೂ ಪ್ರದೇಶವನ್ನು ಈ ನಗರ ಹೊಂದಿತ್ತು.[೧] ಈ ನಗರದ ದಯಾಪರ ನೀತಿ ಮತ್ತು ಬೈಜಾಂಟಿನ್‌ರೊಂದಿಗಿರುವ (Byzantine) ಸಂಬಂಧ ಇದರ ಸಮೃದ್ಧತೆಯನ್ನು ಬಹುವಾಗಿ ಹೆಚ್ಚಿಸಿತು. ಇದಲ್ಲದೆ, ಪೂರ್ವ ಯೂರೋಪಿನ ಅವನತಿಯಿಂದಾಗಿ ಇಡಿ ಅಡ್ರಿಯಾಕ್ ಕರಾವಳಿ ಇದರ ಪ್ರಭಾವಕ್ಕೆ ಒಳಗಾಯಿತು ಮತ್ತು ಬೈಜಾಂಟಿನ್ ಕರಾವಳಿಯ ಪ್ರಮುಖ ಮಾರುಕಟ್ಟೆಗಳಾದ, ಆಂಟಿಚ್ (Antioch), ಇನೋಪ್‌ಸ್ಟಿಯಾ (Inopuestia), ಆಡಾನಾ (Adana), ಟಾರ್‌ಸಸ್ (Tarsus), ಅಟಲ್ಲಿಯಾ (Attalia), ಸ್ಟೊಬಿಲೋಸ್ ಚೆಯೋಸ್ (Strobilos Chios), ಇಫಿಸಸ್ (Ephisus) ಮತ್ತು ಪೊಯಕಿಯಾ ಹಿರಾಕ್ಲಿಯಾ (Phoeacea Hiraclea) ಹಾಗೂ ಸೆಲಿಂಬ್ರಿಯಾ (Selymbria), ಕ್ರಿಸೊಪೊಲಿಸ್ (Chrysopolis), ಡಿಮಿಟ್ರಿಯಾಸ್ (Demetrias), ಅಡ್ರಿಯಾನೊಪಲ್ (Adrianople), ಅಥೆನ್ಸ್ (Athens), ಥೇಬ್ಸ್ (Thebes), ಥಿಸಲ್‌ನೋಕಿಯಾ (Thissalonica), ನಿಗ್ರೊಪಾಂಟ್ (Negropont), ಕೊರೀಂಥ (Corinth), ಕೋರ್‌ಫಸ್ (Corfus), ಡುರಾಜ್ಜೊ (Durazzo) ಮುಂತಾದವುಗಳು ವೆನಿಸ್ ನಗರದ (Venician) ವ್ಯಾಪಾರಕ್ಕೆ ತೆರೆದವು. ಇದರ ವಾಣಿಜ್ಯ ನೀತಿಯು ಜಾಣತನ ಮತ್ತು ದೂರದೃಷ್ಟಿಯನ್ನು ಹೊಂದಿತ್ತು. ಇದು ಯಾವಾಗಲೂ ಬಲಶಾಲಿಯೊಂದಿಗೆ ಗೆಳೆತನ ಬೆಳೆಸುವ (ವಿಶೇಷವಾಗಿ ಸಮುದ್ರದಲ್ಲಿ ಹೋರಾಡುವ ಪ್ರಸಂಗ ಬಂದಾಗ) ಕಾಯಿದೆಯನ್ನು ಹೊಂದಿತ್ತು. ಮತ್ತು ತನ್ನ ಈ ಕಾಯಿದೆಯನ್ನು ಹಲವಾರು ಸಲ "ಬಲಶಾಲಿ ರಾಷ್ಟ್ರದೊಂದಿಗೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕ" ತನ್ನ ಎಲ್ಲ ವಿರೋಧಿಗಳನ್ನು ಹತ್ತಿಕ್ಕಿ ಇದರಿಂದ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಅನುಷ್ಠಾನದಲ್ಲಿ ತಂದಿತ್ತು.

ಜಿನೊವ (Genoa) ಎಂಬ ಮತ್ತೊಂದು ನಗರ ರಾಜ್ಯ ಈ ಪೂರ್ವ ಜಗತ್ತಿನ ವ್ಯಾಪಾರದಲ್ಲಿ ತಡವಾಗಿ ಪಾಲುಗೊಳ್ಳಲು ಸಿದ್ಧವಾಯಿತು. ಕ್ರಿ.ಶ. ೧೯೭೭ನೇ ಇಸವಿ ಈ ನಗರದ ಉಚ್ಛ್ರಾಯ ಸ್ಥಿತಿಯನ್ನು ನಮಗೆ ತಿಳಿಸುತ್ತದೆ. ಇದರ ಮೂಲವನ್ನು ೧೧ನೆಯ ಶತಮಾನದ ಕೊನೆಯಲ್ಲಿ ಬರುವ ದೇವರಿಂದ ಬೆಂಬಲಿಸಲ್ಪಟ್ಟ ನಾವು ಕಾಂಪಾಜ್ಞ (Campagna) ಅಥವಾ ರಾಜಕೀಯ ಸಂಸ್ಥೆಯಲ್ಲಿ ಕಾಣಬಹುದು. ಮುಂದುವರಿದು, ಇವುಗಳ ಪದಾಧಿಕಾರಿಗಳು ಚುನಾವಣೆಯ ಮೂಲಕ ಆರಿಸಿ ಬರುತ್ತಿದ್ದರು. ಮೇಲಾಗಿ, ಒಬರ್ಟಿ(Oberti)ಯಂಥ ಜಾತ್ಯತೀತ ಯಜಮಾನರು ಇದನ್ನು ನಿಯಂತ್ರಿಸುತ್ತಿದ್ದರು.[೨]

ಕ್ರಿ.ಶ. ೧೯೭೭ರಿಂದ ೧೧೨೨ರವರೆಗೆ ಜಿನೋಅ ರಾಜ್ಯ ಪ್ರಮುಖ ವ್ಯಾಪಾರಿ ರಿಯಾಯಿತಿಗಳನ್ನು ಪಡೆಯಿತು. ಇಷ್ಟಲ್ಲದೆ ಅದು ಲ್ಯಾವೆಂಟೇನ್ ಕರಾವಳಿ ಅಲ್ಲದೆ, ಆಫ್ರಿಕಾದ ಭೂಪ್ರದೇಶದ ಮೇಲೆ ತನ್ನ ಕಾರ್ಖಾನೆಯನ್ನು ಸ್ಥಾಪಿಸಿತು. ಇದರ ವ್ಯಾಪಾರ ಈಜಿಪ್ಟ್‌ವರೆಗೆ ಹಬ್ಬಿತು. ಇಷ್ಟಲ್ಲದೆ ಅಲೆಕ್ಸಾಂಡ್ರಿಯಾ (Alexandria)ದ ಮೂಲಕ ಟುನಿಸ್ (Tunis) ಹಾಗೂ ದಕ್ಷಿಣ ಕರಾವಳಿ ಪಟ್ಟಣಗಳಾದ ಫ್ರಾನ್ಸ್ (France) ಮತ್ತು ಸ್ಪೇನ್(Spain)ಗಳಿಗೂ ಹರಡಿತು.

ಕ್ರಿ.ಶ. ೧೦೮೫ರ ಪೀಸಾ (Pisa) ಎಂಬ ನಗರ ರಾಜ್ಯದ ಉಗಮ ಜಿನೋವ (Genoa) ನಗರ ರಾಜ್ಯದಂತಿದೆ. ತನ್ನ ಖಡ್ಗದ ಬಲದಿಂದ ಇದು ಮುಸ್ಲಿಂರಿಂದ ಮತ್ತು ಬೈಜಾಂಟಿನ್ ಸಾಮ್ರಾಜ್ಯದಿಂದ

---

೧. ರೇಮಂಡ್ ಬೀಜ್‌ಲೀ– "ದಿ ಡಾನ್ ಆಫ್ ಮಾಡರ್ನ್ ಜಿಯಾಗ್ರಫಿ", ಸಂ. II, ಪು. ೪೦೯.

೨. ಅದೇ, ಸಂ. II, ಪು. ೪೧೯

ವಾಣಿಜ್ಯದ ವಿಶೇಷ ಅಧಿಕಾರಗಳನ್ನು ಪಡೆಯಿತು. ಪೀಸಾ ನಗರ ರಾಜ್ಯವು ಇತರ ತನ್ನ ಸಮಕಾಲೀನ ಗಣರಾಜ್ಯಗಳಿಗಿಂತ ವಾಣಿಜ್ಯ ಕ್ಷೇತ್ರದಲ್ಲಿ ಮೆರೆಯಿತು. "ಉದಾಹರಣೆಗೆ ಅಂದಿನ ಇತರ ಗಣರಾಜ್ಯಗಳಾದ ಪೇಗನ್‌ರು (Pagans), ತುರ್ಕಿಗಳು (Turkes), ಲಿಬಿಯನ್‌ರು (Libyans), ಪಾರ್ಥಿಯನ್‌ರು (Parthians) ಮತ್ತು ಚಾಲ್ಡಿಯನ್ (Chaldeans) (ಚಾಲ್ಡಿಯನ್‌ರಂತೂ ಪೀಸಾದೊಂದಿಗೆ ಸ್ಪರ್ಧಿಸದೆ ತಮ್ಮ ತಮ್ಮ ಮನೆಯ ಗೋಡೆಗಳಿಗೆ ಕಪ್ಪು ಬಣ್ಣ ಬಳಿದು ತಮ್ಮ ಊರು ಬಿಟ್ಟು ಬೇರೆಕಡೆ ಹೋದರು)ರಿಗಿಂತಲೂ ಜನಾಂಗ, ಧರ್ಮ ಮತ್ತು ಭಾಷೆಗಳ ಎಲ್ಲೆ ಮೀರಿ ವ್ಯಾಪಾರ ಮಾಡಿದರು."[೧] ಪಾಶ್ಚಾತ್ಯರು ಪೇಗನ್, ತುರ್ಕಿ, ಲಿಬಿಯನ್, ಪಾರ್ಥಿಯನ್ ಮತ್ತು ಚಾಲ್ಡಿಯನ್‌ರಿಗೆ ವ್ಯಾಪಾರ ಮಾಡುವುದರಲ್ಲಿ ಪರಿಣತರೆಂದು ತಿಳಿದಿದ್ದರು. ಆದುದರಿಂದ ಅವರಿಗೆ ಪಾಶ್ಚಾತ್ಯರು 'ಸಮುದ್ರಗಳ್ಳರು' ಎಂಬ ಬಿರುದನ್ನು ಇತ್ತಿದ್ದರು. ಈ ಬಿರುದನ್ನು ಹೊತ್ತ ದೇಶಗಳಿಗಿಂತಲೂ ಪೀಸಾದವರು ವಾಣಿಜ್ಯ ಕ್ಷೇತ್ರದಲ್ಲಿ ಪರರಿಂದ ಸವಲತ್ತು ಹಾಗೂ ವಿಶೇಷಾಧಿಕಾರಗಳನ್ನು ಪಡೆಯುವಲ್ಲಿ ಯಶಸ್ವಿಯಾದರು ಮತ್ತು ಇವರ ಸಮುದ್ರ ವ್ಯಾಪಾರದ ಚಟುವಟಿಕೆ ಅಲ್ಪಾವಧಿಯದಾಗಿದ್ದರೂ ಪ್ರಕಾಶಮಾನವಾಗಿತ್ತು.

ಮೇಲೆ ವಿವರಿಸಿದ ಗಣರಾಜ್ಯಗಳ ವ್ಯಾಪಾರಿ ಚಟುವಟಿಕೆಗಳು ಅವುಗಳ ಶೈಶವಾವಸ್ಥೆಯಲ್ಲಿದ್ದರೂ ಅವುಗಳು ಅಂದಿನ ಧರ್ಮಯುದ್ಧಗಳಿಂದ ಬೆಂಬಲಿತವಾಗಿದ್ದವು. ಮಧ್ಯಯುಗದ ಈ ಧರ್ಮ ಯುದ್ಧಗಳು ಅಂದಿನ ಸೈನಿಕ ಕಾಲದಲ್ಲಿನ ಅತಿ ದೊಡ್ಡ ಕಾರ್ಯಾಚರಣೆಗಳಾದರೂ, ನಮಗೆ ಅವುಗಳ ವಿವರ ತೆಗೆದುಕೊಳ್ಳುವುದಕ್ಕೆ ಮನಸ್ಸಿಲ್ಲ. ಆದರೆ ಅವುಗಳ ವ್ಯಾಪಾರಿ ಅಂಶಗಳನ್ನು ವಿಸ್ತಾರವಾಗಿ ತಿಳಿದುಕೊಳ್ಳಬೇಕಾಗಿದೆ.

ಸಮುದ್ರ ತನ್ನ ಭಯ ಮತ್ತು ಅಪಾಯಗಳನ್ನು ಹೊಂದಿದೆ.[೨] ಆದುದರಿಂದ ಸಮುದ್ರದೊಂದಿಗೆ ಹೋರಾಡಲು ಸಿದ್ಧರಿರುವುದಿಲ್ಲ. ಏನೇ ಇರಲಿ, ಅಂದು "ಆಗಿನ ಕಾಲದಲ್ಲಿ ಅವಶ್ಯಕತೆ ಇಲ್ಲದೆ ಭೂಭಾಗದ ಮೇಲೆ ವ್ಯಾಪಾರ ಮಾಡುವವರು ಯಾರೂ ಸಮುದ್ರದ ವ್ಯಾಪಾರಕ್ಕೆ ಇಳಿಯುತ್ತಿರಲಿಲ್ಲ. ಏಕೆಂದರೆ ಸಮುದ್ರ ಪ್ರಯಾಣವೊಂದು ಸೆರೆಮನೆಯಾಗಿತ್ತು ಮತ್ತು ಮುಳುಗಿಸಿಬಿಡುವ ಹೆಚ್ಚು ಅಪಾಯವನ್ನು ಒಳಗೊಂಡಿತ್ತು.[೩] ಇಷ್ಟಾದರೂ ಮೊದಲನೆಯ ಭೂಮಿಯ ಮೇಲೆ ಉಂಟಾದ ಧರ್ಮಯುದ್ಧ (Crusade) ಕ್ರಿ.ಶ. ೧೦೯೬–೯೯ ಜನರಿಗೆ ಉಂಟಾದ ಕಷ್ಟ ಕಾರ್ಪಣ್ಯಗಳನ್ನು ಜನರಿಗೆ ನೆನಪಿಸಿಕೊಟ್ಟು ಜನರನ್ನು ಸಮುದ್ರದ ವಸ್ತು ಸಾಗಾಣಿಕೆ ಹಾಗು ವೈರಿಯನ್ನು ಸೆದೆಬಡಿಯುವ ಚಟುವಟಿಕೆಗೆ ಹುರಿದುಂಬಿಸಲಾಗುತ್ತಿತ್ತು. ಮೇಲಾಗಿ ಸಮುದ್ರ ಸಾಗಾಣಿಕೆ ಇಟಾಲಿಯನ್‌ರ ಕೈಯಲ್ಲಿ ಇತ್ತು. ಆದುದರಿಂದ ಧರ್ಮಯುದ್ಧದಲ್ಲಿ ನಂಬಿದ ಜನ ಈ ಗಣರಾಜ್ಯಗಳ ಹೆಚ್ಚುತ್ತಿರುವ ಸಮುದ್ರದ ವಾಣಿಜ್ಯದ ಮೇಲೆ ಒತ್ತು ನೀಡಿದರು."

"ಈ ಗಣರಾಜ್ಯಗಳು ಕ್ರೈಸ್ತ ಧರ್ಮ ಪ್ರಚಾರದ ಸ್ವಾಮಿ ಕಾರ್ಯದ ಜೊತೆಗೆ ತಮ್ಮ ಸ್ವಂತ ಉದ್ದೇಶಗಳನ್ನು ಸಹ ಸಾಧಿಸಿದವು. ಉದಾಹರಣೆಗೆ ತಮ್ಮ ವ್ಯಾಪಾರದ ಮೊತ್ತವನ್ನು ಬಹುವಾಗಿ ವೃದ್ಧಿಸಿದವು. ಅಂದರೆ ಅವುಗಳ ರಫ್ತು ಮತ್ತು ಆಮದು ವ್ಯಾಪಾರ ಹೆಚ್ಚಾಯಿತು. ಇವೆಲ್ಲವುಗಳಿಗಿಂತ ಮಿಗಿಲಾಗಿ, ವರ್ಷಗಳು ಉರುಳಿದಂತೆಲ್ಲಾ ಈ ಗಣರಾಜ್ಯಗಳು ಲೀವೆಂಟ್ ಕರಾವಳಿಯ ಪ್ರದೇಶದ ಅರ್ಧಕ್ಕಿಂತಲೂ ಹೆಚ್ಚಿನ ಭೂಭಾಗವನ್ನು ತಮ್ಮ ವಶದಲ್ಲಿ ತೆಗೆದುಕೊಂಡವು. ಬರುಬರುತ್ತಾ ಇವುಗಳು ಅಂದಿನ ಧರ್ಮಪ್ರಚಾರ ಮಾಡುವ ರಾಜರುಗಳಿಗೆ ಅತಿ ಆವಶ್ಯಕವೆನಿಸಿದವು ಮತ್ತು ಇವರು ಈ ರಾಜರುಗಳ ಮೇಲೆ ಹೆಚ್ಚಿನ

೧. ರೇಮಂಡ್ ಬೀಜ್‌ಲೀ– "ದಿ ಡಾನ್ ಆಫ್ ಮಾಡರ್ನ್ ಜಿಯಾಗ್ರಫಿ", ಸಂ. II, ಪು. ೪೨೭–೪೨೮

೨. Cf. "Nemesis of Nations", ಪು. ೨೧೯–೨೨೦

೩. Brascly ಸಂ. II, ಪು. ೪೦೭

ಷರತ್ತುಗಳನ್ನು ಹೇರುವಂತಾದರು."[೧] ಧರ್ಮಯುದ್ಧಗಳನ್ನು ವಿವಿಧ ದೃಷ್ಟಿಗಳಿಂದ ನೋಡಲಾಗಿದೆ. ಉದಾಹರಣೆಗೆ ಕ್ಯಾಥೋಲಿಕ್ ಚರ್ಚ್ ತನ್ನ ಧರ್ಮಯುದ್ಧದಲ್ಲಿ ಎರಡು ಉದ್ದೇಶಗಳನ್ನು ಹೊಂದಿತ್ತು ಎನ್ನಬಹುದಾಗಿದೆ. ಸೇಂಟ್ ಬರ್ನಾರ್ಡ್ ಎರಡನೆಯ ಧರ್ಮಯುದ್ಧದ ಸೈನಿಕರಿಗೆ ಗೌರವ ತೋರಿಸುತ್ತಾ ಹೀಗೆ ಹೇಳುತ್ತಾನೆ. "ಕೆಲವೇ ಕೆಲವು ಜನರನ್ನು ಬಿಟ್ಟರೆ, ಲೆಕ್ಕವಿಲ್ಲದಷ್ಟು ಜನ ಸಂಪೂರ್ಣ ದುಷ್ಟರು, ಕೊಲೆಪಾತಕಿಗಳು, ಧರ್ಮಲಂಡರು, ಸುಳ್ಳು ಆಣೆ ತಿನ್ನುವವರು ಹಾಗೂ ನರಬಲಿ ನೀಡುವವರು ಆಗಿರುವುದರಿಂದ ಇಂಥಾ ಪ್ರಜೆಗಳನ್ನು ಯೂರೋಪಿನಿಂದ ಹೊರ ಹಾಕುವಿಕೆಯು ಎರಡು ಲಾಭಗಳನ್ನು ಹೊಂದಿರುತ್ತದೆ. ಮೊದಲನೆಯದಾಗಿ, ಇವರನ್ನು ಕಳೆದುಕೊಳ್ಳುವಲ್ಲಿ ಯೂರೋಪ್ ಸಂತೋಷಪಡುತ್ತದೆ. ಎರಡನೆಯದಾಗಿ ಪ್ಯಾಲೆಸ್ಟೈನರು ಅವರನ್ನು ಬರಮಾಡಿಕೊಂಡು ಆನಂದಿಸುತ್ತಾರೆ. ಇವರು ಎರಡು ರೀತಿಯಲ್ಲಿ ಅಂದರೆ, ಮೊದಲನೆಯದಾಗಿ, ದುಷ್ಟರು ಇಲ್ಲಿಂದ ಹೋಗುವರು ಮತ್ತು ಎರಡನೆಯದಾಗಿ ಒಳ್ಳೆಯವರು ಇಲ್ಲಿಯೇ ಇರುವುದು."[೨] ಅಸಂತೋಷಗೊಂಡ ರಾಜಮಾನ್ಯ ವ್ಯಕ್ತಿ, ತನ್ನ ಜವಾಬ್ದಾರಿಗಳನ್ನು ಗಾಳಿಗೆ ತೂರಲು ತವಕಗೊಂಡಿರುವ ಒಬ್ಬ ಚಂಚಲ ವ್ಯಕ್ತಿ, ಕೊಲೆಗಡುಕ ಮತ್ತು ಪಾಪಿ ಇವರೆಲ್ಲರೂ ಧರ್ಮಯುದ್ಧಗಳ ಬಗ್ಗೆ ತಮ್ಮದೇ ಆದ ಗಂಭೀರ ಅಭಿಪ್ರಾಯಗಳನ್ನು ಹೊಂದಿದ್ದರು ಹಾಗೂ ಇವುಗಳು ಧಾರ್ಮಿಕವಲ್ಲದಿದ್ದರೂ ಸ್ವಾಭಾವಿಕವಾಗಿ ರೋಮಾಂಚನಕಾರಿಯಾಗಿದ್ದವು. ಆದರೆ "ಮೋಸ ಮಾಡುವ ವ್ಯಾಪಾರಿಗಳು ಮತ್ತು ಈ ವಾಣಿಜ್ಯ ಗಣರಾಜ್ಯಗಳ ಸಮುದ್ರ ಜನರು ಧರ್ಮವನ್ನು ನೋಡುವ ರೀತಿ' ಕ್ಯಾಥೋಲಿಕ್ ಒಡೆಯ ಮತ್ತು ಒಳನಾಡಿನ ಜಿಲ್ಲೆಗಳಲ್ಲಿನ ಕಾರ್ಮಿಕರು ನೋಡುವ ರೀತಿಗಿಂತ ವಿಭಿನ್ನವಾಗಿತ್ತು. ವ್ಯಾಪಾರಿಗಳು ಹಾಗೂ ಸಮುದ್ರದ ಜನರ ನೋಟದಲ್ಲಿ ಬೇಕಾದ ಧಾರ್ಮಿಕ ಉತ್ಸಾಹವಿರಲಿಲ್ಲವೆಂದಲ್ಲ. ಆದರೆ ಧರ್ಮವನ್ನೂ ಒಂದು ಅತ್ಯವಶ್ಯಕವಾದ ಭಾವನೆಯೆಂದು ತಿಳಿಯದೆ ಒಂದು ಉಪಯುಕ್ತ ವಸ್ತುವೆಂದು ಭಾವಿಸಿದರು. ತತ್ಪರಿಣಾಮವಾಗಿ ಅವರು ಇಸ್ಲಾಂ ಧರ್ಮವನ್ನು ವಿನಾಕಾರಣ ಕಟುವಾಗಿ ಟೀಕಿಸಲಿಲ್ಲ. ಹಾಗೂ ಅವರು ಕ್ರೈಸ್ತನ ಅನುಯಾಯಿಗಳ ಆಕಾಶವಾಣಿಯ ಬಗೆಗೂ ಅಷ್ಟೇನೂ ಗೌರವ ಸೂಚಿಸಲಿಲ್ಲ. ವೆನಿಸ್ ಮತ್ತು ಪೀಸಾ ಜಿನೋವ ಹಾಗೂ ಅಮಾಲ್ಫಿಯನ್ನು ಆಳುವವರಿಗೆ, ಇಲ್ಲಿನ ವಸ್ತುಗಳನ್ನು ಕೊಳ್ಳುವವರಿಗೆ ಮಾರುವವರಿಗೆ ವ್ಯಾಪಾರಿ ಮನೋಪ್ರವೃತ್ತಿ ಇದ್ದೇ ಇತ್ತು."[೩] ಆದರೆ ಧರ್ಮಯುದ್ಧಗಳ ಪರಿಣಾಮಗಳು ನಿರೀಕ್ಷೆಗೆ ವಿರುದ್ಧವಾಗಿದ್ದವು ಮತ್ತು ಅವುಗಳು ಗುರಿಯನ್ನಾಗಿ ಇಟ್ಟುಕೊಳ್ಳದಿದ್ದನ್ನು ಸಾಧಿಸಿದರು ಮತ್ತು ಇದರಿಂದ ಬಂದ ಲಾಭ ಕಡಿಮೆ ಪ್ರಮಾಣದ್ದಾಗಿರಲಿಲ್ಲ. "ಭೂಮಿಯ ಮೇಲಿನ ಧರ್ಮಯುದ್ಧದ ಉನ್ನತಿಯ ಕಾಲ ಪಾಶ್ಚಾತ್ಯ ನಗರಗಳ ನೌಕಾಬಲದ ಸಮೃದ್ಧಿಯ ಉನ್ನತಿಯ ಕಾಲ ಸಹ ಆಗಿತ್ತು ಮತ್ತು ಈ ಧರ್ಮಯುದ್ಧಗಳ ಕೊನೆಯಲ್ಲಿ ಕ್ರಿಶ್ಚಿಯನ್ ವ್ಯಾಪಾರದ ವಿಸ್ತರಣೆ ಹಾಗೂ ಪೌರ್ವಾತ್ಯ ಹಾಗೂ ಮೂರರ ನಾಗರಿಕತೆಯ ಸಜಾತೀಕರಣದ ನಡುವೆ ಸಂಘರ್ಷ ಉಂಟಾಯಿತು. ಪೂರ್ವ ಮತ್ತು ಪಶ್ಚಿಮದ ಈ ಸಂಘರ್ಷಯುಕ್ತ ಮಿಲನವು ರಾಜಕೀಯ ದೃಷ್ಟಿಯಿಂದ ಯೂರೋಪ ಮತ್ತು ಕ್ಯಾಥೋಲಿಕ್ ಜಗತ್ತಿಗೆ ಯಾವ ಶಾಶ್ವತ ಲಾಭವನ್ನೂ ಉಂಟುಮಾಡಲಿಲ್ಲ. ಇದಲ್ಲದೆ, ವ್ಯಾಪಾರಿ ಮಾಧ್ಯಮದಿಂದ, ಇದು ಈ ಜಗತ್ತಿಗೆ ತಮ್ಮ ಶಕ್ತಿಯನ್ನು ಭವಿಷ್ಯ ನಿರ್ಮಾಣಕ್ಕಾಗಿ ಉಪಯೋಗಿಸುವಂತೆ ಮಾಡಿತು. ಧರ್ಮಯುದ್ಧವಾದಿಗಳ ಮೊದಮೊದಲ ಧಾಳಿಗಳು ಅಯಶಸ್ವಿಯಾಗಿದ್ದರೂ, ನಂತರ, ವರ್ಷಗಳು

೧. Brascly ಸಂ. II, ಪು. ೪೦೭.

೨. ಉಲ್ಲೇಖ: ಬ್ರಾಸ್‌ಲೀ ಮತ್ತು ರಾಬಿನ್‌ಸನ್ "ಔಟ್ ಲೈನ್ಸ್ ಆಫ್ ಯೂರೋಪಿಯನ್ ಹಿಸ್ಟರಿ", ಭಾಗ I, ಪು. ೪೭೧.

೩. ಬ್ರಾಸ್‌ಲೀ, ಸಂ. II, ಪು. ೪೦೮.

ಉರುಳಿದಂತೆ, ಇವುಗಳು ಪಾಶ್ಚಾತ್ಯ ದೇಶಗಳೊಳಗೆ ಒಂದು ಹೊಸ ಸಂಸ್ಕಾರ ಹಾಗೂ ಭೌತಿಕ ಸಮೃದ್ಧತೆಯನ್ನು ತರುವಲ್ಲಿ, ಹೆಚ್ಚಿನ ಜ್ಞಾನ ನೀಡುವಲ್ಲಿ ಅಧಿಕ ಮೊತ್ತದ ಹಣ ಪಡೆಯುವಲ್ಲಿ, ಜನರಲ್ಲಿ ಚಂಚಲ ಆದರೆ ಅವಿಧೇಯ ಗುರಿಯನ್ನು ಹೊಂದುವುದರಲ್ಲಿ ಪರ್ಯವಸಾನಗೊಂಡಿತು. ಇಂತಹ ಬದಲಾವಣೆಯನ್ನು ಉಂಟುಮಾಡುವ ಪರಿಣಾಮಗಳನ್ನು ೧೫ ಮತ್ತು ೧೬ನೆಯ ಶತಮಾನದಲ್ಲಿ ಭೂಗೋಳ ಮತ್ತು ಪ್ರಕೃತಿ ವಿಜ್ಞಾನಿಗಳ ಸಂಶೋಧನೆಗಳಲ್ಲಿ ಮತ್ತು ಇಡಿ ಯೂರೋಪ್ ದೇಶಗಳನ್ನು ಉದ್ದಿಮೆ ಹಾಗೂ ಯುದ್ಧ ಸಾಮಗ್ರಿಗಳ ಉತ್ಪಾದನೆಯಲ್ಲಿ ಅಗ್ರಗಣ್ಯವಾಗುವಂತೆ ಮಾಡಿತು. ಇದನ್ನೇ ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಉಂಟಾದ ಕಲೆ ಹಾಗೂ ಸಾಹಿತ್ಯದ ಪುನರುಜ್ಜೀವನವೆಂದು ಕೆಲವರು ಅಭಿಪ್ರಾಯಪಡುತ್ತಾರೆ."[೧] ಧರ್ಮ ಯುದ್ಧಗಳಿಂದ ಯೂರೋಪಿನ ಇಂತಹ ಬದಲಾವಣೆ ಸಾಧ್ಯವಾಯಿತು ಎಂಬ ಹೇಳಿಕೆ ಧರ್ಮಯುದ್ಧಗಳ ಲಾಭಗಳನ್ನು ಅತಿಶಯೋಕ್ತಿಗೆ ಗುರಿಮಾಡಿದಂತೆ ಆದರೂ, ಇವುಗಳು ಯೂರೋಪಿಯನ್ನರಿಗೆ, ಮುಕ್ತ ಶಿಕ್ಷಣ ನೀಡಿದವು ಹಾಗೂ ಅವುಗಳ ವ್ಯಾಪಾರವನ್ನು ಪೋಷಿಸಿದವು ಮತ್ತು ಯಾವ ಸಂಸ್ಥಾನಗಳಲ್ಲಿ ಕ್ರಿಶ್ಚಿಯನ್ ರಾಜರುಗಳನ್ನು ನಾಶಪಡಿಸಲಾಗಿತ್ತೋ ಅಂತಹ ಸಂಸ್ಥಾನಗಳಲ್ಲಿ ಮಾರುಕಟ್ಟೆ ನಡುಗಡ್ಡೆಗಳನ್ನು ಒದಗಿಸಲಾಯಿತು ಎಂದು ನಿಸ್ಸಂದೇಹವಾಗಿ ಹೇಳಬಹುದು.

ಧರ್ಮಯುದ್ಧದಲ್ಲಿ ತೊಡಗಿದವರಿಗೆ ನೆರವು ನೀಡಿದ್ದಕ್ಕಾಗಿ, ಇಟಾಲಿಯನ್ ಗಣರಾಜ್ಯಗಳು ಅವರಿಂದ ಬಹಳಷ್ಟು ಬಹುಮಾನಗಳನ್ನು ಪಡೆದರು. ಇವುಗಳು ಹಲವಾರು ವಿಶೇಷಾಧಿಕಾರಗಳೊಂದಿಗೆ ಆಧುನಿಕ ಚೈನಾದೊಳಗಿರುವಂತಹ 'ಪ್ರಭಾವಿ ಕಾರ್ಯಕ್ಷೇತ್ರವನ್ನು' ತಲಾ ಒಂದರಂತೆ ಪಡೆದವು. ಆದರೆ ಈ ಗಣರಾಜ್ಯಗಳು ಮೆಡಿಟರೇನಿಯನ್ ಸಮುದ್ರದ ಪೂರ್ವದ ದಂಡೆಯಲ್ಲಿರುವ ಪ್ರಸಿದ್ಧ ಮಾರುಕಟ್ಟೆ ಅಥವಾ ಲೆವಾಂಟ್ಸ್ (Lavants) ಪ್ರದೇಶದ ಹಿಂದೆ ಇದ್ದ ವ್ಯಾಪಾರಿ ಸ್ಥಳ(Marts)ಗಳ ಮೇಲಿನ ನಿಯಂತ್ರಣಕ್ಕಾಗಿ ಒಂದಕ್ಕೊಂದು ಸೆಣಸಾಡಹತ್ತಿದವು. ಉದಾಹರಣೆಗೆ, ಧರ್ಮಯುದ್ಧದಲ್ಲಿ ತೊಡಗಿರುವ ಸಿರಿಯಾ ದೇಶವು ನಾಲ್ಕು ಪ್ರಮುಖ ಮಾರುಕಟ್ಟೆಗಳನ್ನು ಅಂದರೆ, ಆಲಿಪ್ಪೋ (Aleppo), ಡಮಾಸ್ಕಸ್ (Damasaus), ಹೆಮ್ಸ್ ಅಥವಾ ಎಮಿಸಾ (Hems or Emesa) ಮತ್ತು ಹವಾತ್(Hawath)ಗಳನ್ನು ಹೊಂದಿತ್ತು. ಇವುಗಳ ಸಮೀಪದಲ್ಲಿಯೇ ಇನ್ನೂ ದೊಡ್ಡ ಗಾತ್ರದ ವ್ಯಾಪಾರಿ ಅಂಗಡಿಗಳೂ ಮತ್ತು ಸ್ವಲ್ಪ ಸಣ್ಣದಾದ ಮೊಸುಲರ ಅಂಗಡಿಗಳು ಬಸ್ರಾ ಅಥವಾ ಬಾಸೋರ್(Basra or Bassora)ದಲ್ಲಿ ಇದ್ದವು. ಇವುಗಳು ಟಿಗ್ರಿಸ್‌ಗೆ (Tigirs) ಸಮೀಪದಲ್ಲಿ ಇದ್ದವು ಮತ್ತು ಟಿಗ್ರಿಸ್ ಇವುಗಳಿಗೆ ಕೇಂದ್ರ ಸ್ಥಳವಾಗಿತ್ತು. ಆಲಿಪ್ಪೊ (Aleppo) ಮಾರುಕಟ್ಟೆ ಒಂದೆಡೆ ಅಬಾಸೈಡ್ ಖಲೀಫರ (Abbasside Caliph's) ಮಹಾನಗರದಿಂದ ಇನ್ನೊಂದೆಡೆ ಪಶ್ಚಿಮದ ಆಂಟಿಯಾಕ್ (Antioch) ಮತ್ತು ಲಾವೊಡಿಕಾ (Laodicea) ಪಟ್ಟಣಗಳವರೆಗೆ ಹಬ್ಬಿತ್ತು. 'ಆಲಿಪ್ಪೊ'ದಿಂದ 'ಮಾಂಟಿಕೊ'ದ ವ್ಯಾಪಾರಿ ಮಾರ್ಗವನ್ನೂ ಇರಾಕ್ (Iraq), ಪರ್ಷಿಯಾ (Persia) ಮತ್ತು ಖೊರೊಸಾನ್(Khorasan)ಗಳ ಒಂದು ದೊಡ್ಡ ವ್ಯಾಪಾರಿ ಸ್ಥಳ ಎಂದು ಇದರಿಸಿ (Edrisi) ಹೇಳಿದ್ದಾರೆ. ಇಂತಹ ಪ್ರಮುಖ ರೇಷ್ಮೆ ವ್ಯಾಪಾರ ಸ್ಥಳ ದೂರದ ಪೂರ್ವಾತ್ಯ ದೇಶಗಳ ಜೊತೆಗೆ ತನ್ನ ವ್ಯಾಪಾರಿ ಸಂಬಂಧವನ್ನು ಹೊಂದಿತ್ತು. ಹದಿಮೂರನೆಯ ಶತಮಾನದ ಕೊನೆಯಲ್ಲಿಯೂ ಹಲವಾರು ವೆನಿಸಿನ (Venetian) ವ್ಯಾಪಾರಸ್ಥರು ಖೊರೊಸಾನ್(Khorasan)ನಲ್ಲಿ ಆಲಮ್ (Alum) ಮತ್ತು ರೇಶ್ಮೆ (Seric) ವಸ್ತುಗಳ ವ್ಯಾಪಾರಕ್ಕಾಗಿ ನೆಲೆಸಿದ್ದರು. ಆಂಟಿಯೋಕ್ (Antioch) ನಗರವನ್ನು ಮುತ್ತಿದಾಗ ಧರ್ಮಯೋಧರು ಅಲ್ಲಿ ಮೆಣಸು

---

೧. ಬ್ರಾಸ್‌ಲೀ, ಸಂ. II, ಪು. ೩೬೫.

ಹಾಗೂ ಕೇಸರಗಳ (Pepper & Figments) ವ್ಯಾಪಾರ ಮಾಡುತ್ತಿರುವುದನ್ನು ಕಂಡುಕೊಂಡರು ಮತ್ತು ಮೆಡಿಟರೇನಿಯನ್ ಸಮುದ್ರದ ಮುಖಾಂತರ ಭಾರತ ಸಹ ಇಲ್ಲಿ ವ್ಯಾಪಾರ ನಡೆಸುತ್ತಿತ್ತು ಎಂಬುದನ್ನು ಮನಗಂಡರು. ವಯೋವೃದ್ಧ ಸನುಟೊ (Sanuto) ಎಂಬ ಪ್ರವಾಸಿ ೧೪ನೆಯ ಶತಮಾನದ ಆದಿಯಲ್ಲಿ ಇದನ್ನೇ ಸಾರ್ಕನ್‌ರ (Saracens) ಮತ್ತು ಕ್ರಿಶ್ಚಿಯನ್‌ರ ಅಂದಿನ ಸೈನಿಕ ಕಾರ್ಯಾಚರಣೆಗಳು ಕೆಂಪು ಸಮುದ್ರ ಮತ್ತು ಭಾರತದ ನಡುವಿನ ವ್ಯಾಪಾರಕ್ಕೆ ಏನೂ ಅಡ್ಡಿ ಉಂಟುಮಾಡಲಿಲ್ಲ ಹಾಗೂ ಅಲೆಕ್ಸಾಂಡ್ರಿಯಾವು (Alexandria) "ಎರಡು ಜಾಗತಿಕ (ಅಂದರೆ ಪೂರ್ವ ಮತ್ತು ಪಶ್ಚಿಮ ಜಗತ್ತುಗಳ) ಮಾರುಕಟ್ಟೆಯಾಗಿ" ಮುಂದುವರಿಯಿತು.

ಇಟಲಿಯ ಗಣರಾಜ್ಯಗಳು ಪೂರ್ವದ ವಸ್ತುಗಳನ್ನು ಕೊಂಡುಕೊಂಡು ತಮ್ಮ ಖಂಡದ ಉತ್ತರದ ಅಂತ್ಯದ ಗುಡ್ಡಗಾಡಿನ ಭೂ ಪ್ರದೇಶದಲ್ಲಿ ಮಾರಿದರು ಮತ್ತು ಇವರುಗಳು "ಯೂರೋಪಿನ ಹೊರವಲಯವಾದ ಮೆಡಿಟರೇನಿಯನ್ ಸಮುದ್ರದ ದಾರಿಯಂತೆ ಕಾರ್ಯ ನಿರ್ವಹಿಸಿದರು." ಉತ್ತರ ಭೂಖಂಡವು ವಾಸ್ತವಿಕವಾಗಿ ಅರೆ ಅನಾಗರಿಕ ಸ್ಥಿತಿಯಲ್ಲಿತ್ತು. ಈ ಪ್ರದೇಶದ ಬಾಲ್‌ಟಿಕ್‌ನಲ್ಲಿ ವ್ಯಾಪಾರಿ ಚಟುವಟಿಕೆಗಳು ಬಹಳ ಸಣ್ಣ ಪ್ರಮಾಣದ್ದಾಗಿದ್ದವು. ಇಲ್ಲಿನ ರಾಜ ಒಬ್ಬ "ಅರೆ ವ್ಯಾಪಾರಿ ಹಾಗೂ ಅರೆಸಮುದ್ರಗಳ್ಳನಾಗಿದ್ದನು". "ನಮಗೆ ಮಾಹಿತಿ ದೊರೆತಂತೆ ಉತ್ತರ ಭೂಖಂಡದ ವಾಣಿಜ್ಯ ಚಟುವಟಿಕೆಗಳು ಮುಂದುವರಿದ ಫೊಯಿನಿಶಿಯನ್‌ರ (Phoenicians) ಮತ್ತು ಅವರ ಗ್ರೀಕ್ ಪೂರ್ವಜರ ವಾಣಿಜ್ಯ ಚಟುವಟಿಕೆಗಳಿಗಿಂತ ಎರಡು ಪ್ರಮುಖ ವಿಷಯಗಳಲ್ಲಿ ಭಿನ್ನತೆಯನ್ನು ಹೊಂದಿದ್ದವು. ಮೊದಲನೆಯದಾಗಿ, ಇವರ ವ್ಯಾಪಾರ ಸುಸಂಘಟಿತವಾಗಿರಲಿಲ್ಲ. ಎರಡನೆಯದಾಗಿ, ಅವರು ವ್ಯಾಪಾರಕ್ಕೆ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸದೆ ಕೃಷಿ ಕಾರ್ಯವನ್ನೂ ಸಹ ಮಾಡುತ್ತಿದ್ದರು. ಆದರೆ ಫೊಯಿನಿಶಿಯನ್‌ರು ತಮ್ಮ ನಾಡಿನಲ್ಲಿ ವಿಶೇಷ ಸ್ಥಳಗಳಲ್ಲಿ ಕಾರಖಾನೆಗಳನ್ನು ಹೊಂದಿದ್ದರು ಮತ್ತು ತಾಯಿನಗರದ (Mother-City) ಕಾರಖಾನೆಯ ಶಾಖೆಗಳನ್ನು (ಅಥವಾ ಮಕ್ಕಳು) ದೂರದ ಸ್ಥಳಗಳಲ್ಲಿ ಶಾಶ್ವತವಾಗಿ ಹೊಂದಿದ್ದರು. ಇಲ್ಲಿನ ಜನರು ತಮ್ಮ ಹಕ್ಕು ಬಾಧ್ಯತೆಗಳನ್ನು ಅರಿತುಕೊಂಡಿದ್ದರು. ಆದರೆ ಇಲ್ಲಿನ ಪಟ್ಟಣ ಹಾಗೂ ವಸಾಹತುಗಳ ನಡುವೆ ಕುದುರೆಯ ವ್ಯಾಪಾರ ಅಸ್ತಿತ್ವದಲ್ಲಿ ಇರಲಿಲ್ಲ. ಇಲ್ಲಿನ ಸರದಾರನು (Viking) ಬಹು ಶೂರನಾಗಿದ್ದ ಮತ್ತು ಸಾಹಸಿಯಾಗಿದ್ದ. ತನ್ನ ದೈವವನ್ನು ಸುಧಾರಿಸಿಕೊಳ್ಳಲು ಪರದೇಶಕ್ಕೆ ಪ್ರಯಾಣ ಬೆಳೆಸಿದ ಮತ್ತು ಆತ ಒಂದು ಅನುಕೂಲಕರ ಸಮಯದಲ್ಲಿ ಬೃಹತ್ ಆಸ್ತಿ(Estate)ಯನ್ನು ಕೊನೆಗೆ ಪಡೆದ. ಅಂದಿನ ಕುದುರೆ ಸವಾರರು (Horsemen) ಟ್ಯುಟನ್‌ರಿಗಿಂತಲೂ (Teutons) ಪಟ್ಟಣದ ಜೀವನಕ್ಕೆ (Town life) ಒಲವನ್ನು ಹೊಂದಿದ್ದರು. ಆದುದರಿಂದ ಅವರು ರೈತರಾಗಲು ಮತ್ತು ಒಂದೆಡೆ ನೆಲೆಸಲು (colonists) ಬಯಸಿದ್ದರೆ ಹೊರತು ತಮ್ಮ ಎಲ್ಲಾ ಶಕ್ತಿಯನ್ನು ವ್ಯಾಪಾರಕ್ಕೆ ಮೀಸಲಾಗಿಡಲಿಲ್ಲ."[೨] ಇದಲ್ಲದೆ, ಕುದುರೆಸವಾರರು ತಾವು ಕ್ರಿಶ್ಚಿಯನ್ ಧರ್ಮಕ್ಕೆ ಸೇರುವ ಮುನ್ನ ಶಾಂತಿಯುತ ವ್ಯಾಪಾರಕ್ಕೆ ಒಂದು ದೊಡ್ಡ ಕಂಟಕವಾಗಿದ್ದರು. ಇವರ ಕ್ರಿಶ್ಚಿಯನ್ ಧರ್ಮ ಸ್ವೀಕಾರದ ಹಲವಾರು ತಿಂಗಳುಗಳ ನಂತರ ಫ್ಲೆಮಿಷ್ ಭಾಷೆ ಮಾತನಾಡುವ ಜರ್ಮನ್ ಪಟ್ಟಣಗಳಲ್ಲಿ ಶಾಂತಿಯುತ ವ್ಯಾಪಾರಿ ಚಟುವಟಿಕೆಗಳು ಪ್ರಾರಂಭವಾದವು. ಈ ಚಟುವಟಿಕೆಗಳು ಇಂಗ್ಲೆಂಡಿನ ಉಣ್ಣೆ ಉತ್ಪಾದನೆಯನ್ನು ಪ್ರೋತ್ಸಾಹಿಸಿದವು. ಇದರಿಂದಾಗಿ, ಇಂಗ್ಲೆಂಡಿನ ಉಣ್ಣೆಯ ಬಟ್ಟೆಗಳು ಫ್ಲೆಮಿಷ್ ಬಟ್ಟೆಗಳಿಗಾಗಿ

---

೧. ಬ್ರಾಸ್‌ಲೀ, ಸಂ. II, ಪು. ೪೪೧.

೨. ವಿಲಿಯಂ ಕನ್ನಿಂಗ್ ಹ್ಯಾಮ್– "ವೆಸ್ಟರ್ನ್ ಸಿವಿಲಿಜೇಷನ್", (ಮಾಡರ್ನ್ ಟೈಮ್ಸ್) ಪು. ೧೧೦.

ವಿನಿಮಯಗೊಂಡವು. ಫ್ಲೆಮಿಷ್ ವ್ಯಾಪಾರಸ್ಥರು ತಮ್ಮ ತಮ್ಮೊಳಗೆ "ಫ್ಲೆಮಿಷ್ ಹೌಸ್ ಆಫ್ ಲಂಡನ್" ಎಂಬುದನ್ನು ರಚಿಸಿಕೊಂಡರು ಮತ್ತು ವ್ಯಾಪಾರವನ್ನು ಕಚ್ಚಾವಸ್ತು ಪಟ್ಟಣ(Staple towns)ಗಳ ಮೂಲಕ ನಿಯಂತ್ರಿಸಿದರು. ಫ್ಲ್ಯಾಂಡರ್ಸ್ (Flanders) ಪ್ರದೇಶದ ನಂತರ ಜರ್ಮನ್ ವ್ಯಾಪಾರ, 'ಜರ್ಮನ್ ಮನೆ'(German House)ಯವರಿಂದಲೇ ನಿಯಂತ್ರಿತವಾಗಿತ್ತು. 'ಜರ್ಮನ್ ಮನೆಯು' ಉತ್ತರ ಜರ್ಮನಿಯ ಹಲವಾರು ಪಟ್ಟಣಗಳ ಒಂದು ನಿಕಟ ಒಕ್ಕೂಟವಾಗಿತ್ತು. ಇದಲ್ಲದೆ, ಜರ್ಮನ್ ಹನ್‌ಸಿಯಾಟಿಕ್ ಒಕ್ಕೂಟ ಎಂಬ ಸಂಸ್ಥೆ ಅಂದಿನ ಅಂದರೆ ಮಧ್ಯಯುಗದ, ಒಂದು ಅತಿ ವ್ಯಾಪಕವಾದ ವ್ಯಾಪಾರಿ ಸಂಘಟನೆಯಾಗಿತ್ತು. ಇದು, ಬಾಲ್ಟಿಕ ಪ್ರದೇಶಗಳ ಸಾಮಾನುಗಳಾದ ಮರದ ದಿಮ್ಮಿ, ಡಾಮರು, ಉಪ್ಪು, ಕಬ್ಬಿಣ, ಬೆಳ್ಳಿ, ಉಪ್ಪು ಹಾಕಿದ ಹಾಗೂ ಸುಟ್ಟ ಮೀನು, ಪ್ರಾಣಿಗಳ ಗರಿಗಳು, ಶಿಲಾರಾಳ ಮತ್ತಿತರ ಕೆಳಮಟ್ಟದ ವಸ್ತುಗಳನ್ನು ಪಡೆದು ಅವುಗಳನ್ನು ಇಟಲಿಯ ವಾಣಿಜ್ಯ ನಗರಗಳಲ್ಲಿ ಹಾಗೂ ದೂರದ ನಾಡಿನಲ್ಲಿ ಮಾರುತ್ತಿತ್ತು. ಈ ರೀತಿಯಾಗಿ, ಇಟಲಿಯ ಗಣರಾಜ್ಯಗಳ ವಾಣಿಜ್ಯ ಸಂಸ್ಥೆಗಳ ಮೂಲಕ, "ಅರೇಬಿಯಾ ಮತ್ತು ಪರ್ಷಿಯಾದ, ಭಾರತ ಮತ್ತು ಪೂರ್ವ ಭಾರತದ ನಡುಗಡ್ಡೆಗಳ ಹಾಗೂ ಚೈನಾದ ವಸ್ತುಗಳ ಸಹ ಪುರಾತನ ಕಾಲದಲ್ಲಿ ಇದ್ದಂತೆ ಮಧ್ಯಯುಗದ ಎಲ್ಲಾ ವರ್ಷಗಳಲ್ಲಿಯೂ ಪಾಶ್ಚಿಮಾತ್ಯ ಯೂರೋಪಿಗೆ, ದೂರದ ಮತ್ತು ಕಠಿಣವಾಗಿರುವ ದಾರಿಗಳಲ್ಲಿ, ಬರುತ್ತಿದ್ದವು. ಅಂದಿನ ವ್ಯಾಪಾರ ಹತ್ತಿ ಮತ್ತು ರೇಶ್ಮೆ ಬಟ್ಟೆ (ಹತ್ತಿ ಮತ್ತು ರೇಶ್ಮೆ ಕಚ್ಚಾವಸ್ತುಗಳನ್ನು ಸಹ ಇದು ಒಳಗೊಂಡಿತ್ತು), ಇಂಡಿಗೊ ಮತ್ತು ಇತರ ಬಣ್ಣ ಹಾಕುವ ಸಾಮಾನುಗಳು, ಸುಗಂಧದ ಕಟ್ಟಿಗೆಗಳು ಮತ್ತು ಅಂಟುಗಳು (Gums), ನಶೆ ಏರಿಸುವ ವಸ್ತುಗಳು ಮತ್ತು ಇತರ ಔಷಧಿಗಳು, ಮುತ್ತುಗಳು, ಮಾಣಿಕ್ಯಗಳು, ವಜ್ರಗಳು, ಸ್ಫಟಿಕ ಹರಳುಗಳು, ಹವಳಗಳು ಮತ್ತಿತರ ಬಹುಮೌಲ್ಯ ಕಲ್ಲುಗಳು, ಬಂಗಾರ ಮತ್ತು ಬೆಳ್ಳಿ ಮತ್ತು ಏಶಿಯಾದಲ್ಲಿ ಮಾತ್ರ ಸಿಗುವ ಮೆಣಸು, ಶುಂಠಿ, ಯಾಲಕ್ಕಿ, ಲವಂಗ ಮುಂತಾದ ಮಸಾಲೆ ಸಾಮಾನುಗಳನ್ನು ಹೊಂದಿತ್ತು.[೧]

ಆದರೆ ಮೇಲೆ ವಿವರಿಸಿದ ವ್ಯಾಪಾರದ ವ್ಯವಸ್ಥೆ, ಇಸ್ಲಾಂ ಧರ್ಮದ ಬೆಳವಣಿಗೆಯಿಂದ ಗೊಂದಲಕ್ಕೆ ಈಡಾಯಿತು. ಅಂದು, ವ್ಯಾಪಾರಸ್ಥರು ವ್ಯಾಪಾರಕ್ಕಾಗಿ ವಸ್ತುಗಳನ್ನು ಎಲ್ಲಾ ಅನಾನುಕೂಲತೆಗಳನ್ನು ಸಹಿಸಿಕೊಂಡು ಒಂಟೆಯ ಮೇಲೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಒಯ್ಯುತ್ತಿದ್ದರು ಎನ್ನುವುದನ್ನು ನೆನಪಿಸಿಕೊಂಡಾಗ ಸಾರಕನ್‌ರ (Saracens) ಕ್ಷಿಪ್ರ ಸೈನಿಕ ಓಡಾಟಗಳಿಂದ ಇಂಥ ವ್ಯಾಪಾರ ಎಷ್ಟರಮಟ್ಟಿಗೆ ಕಷ್ಟಕ್ಕೆ ಗುರಿಯಾಯಿತು ಎನ್ನುವುದು ಮನವರಿಕೆಯಾಗುತ್ತದೆ. ಮೇಲಾಗಿ, ಏಶಿಯಾದಿಂದ ಯೂರೋಪಿಗೆ ನಾಲ್ಕು ಪ್ರಮುಖ ವ್ಯಾಪಾರಿ ಮಾರ್ಗಗಳಿದ್ದವು ಮತ್ತು ಅವುಗಳು ಸಾರ್ಕನ್‌ರ (Saracens) ಸಂಸ್ಥಾನಗಳಲ್ಲಿಯೇ ಇದ್ದವು ಎಂಬುದನ್ನು ನಾವು ನೆನೆಯಲೇಬೇಕು. "ಎಲ್ಲಿಯವರೆಗೆ ಈ ಪರ್ಶಿಯನ್ ಕೊಲ್ಲಿ ಮತ್ತು ಕೆಂಪು ಸಮುದ್ರದ ವ್ಯಾಪಾರಿ ಮಾರ್ಗಗಳನ್ನು ಮೊಹಮ್ಮದನ ವಿರುದ್ಧದ ಶಕ್ತಿಗಳು ನಿಯಂತ್ರಿಸುತ್ತಿದ್ದವೊ ಅಲ್ಲಿಯವರೆಗೆ ವ್ಯಾಪಾರ ಹೆಚ್ಚಿನ ಸಾಗಾಣಿಕೆ ವೆಚ್ಚದ ಮತ್ತು ಸುತ್ತುಬಳಸುವ ಮಾರ್ಗವನ್ನು ಅನುಸರಿಸಬೇಕಾಯಿತು ಮತ್ತು ವಸ್ತುಗಳು ಗುರಿಮುಟ್ಟುವ ಮುನ್ನ ಹಲವಾರು ಕಡೆ ತಮ್ಮ ಗಾಡಿಗಳನ್ನು ಬದಲಾಯಿಸಬೇಕಾಗುತ್ತಿತ್ತು. ಈ ವ್ಯಾಪಾರಿ ಮಾರ್ಗಗಳಲ್ಲಿ ವಸ್ತುಗಳನ್ನು ಪರ್ವತದ ಮುಖಾಂತರ ಹೇಸರಗತ್ತೆಯ ಮೇಲೆ ಇಂಡಸ್ (Indus) ಪ್ರದೇಶಕ್ಕೆ ಆನಂತರ ಒಕ್ಸಸ್(Oxus)ಗೆ, ತದನಂತರ ಕ್ಯಾಸ್ಪಿಯನ್ ಸಮುದ್ರ(Caspian Sea)ಕ್ಕೆ ಒಯ್ಯಲಾಗುತ್ತಿತ್ತು. ಇದು ಒಂದು ಪ್ರಾಚೀನ ಕಾಲದ ವ್ಯಾಪಾರಿ ಮಾರ್ಗವಾಗಿತ್ತು. ಇದನ್ನು ವೆನಿಸ್

---

೧. ಎಡ್ವರ್ಡ್ ಸ್ಲೊ ಪಿ. ಚೆನ್ನಿ, 'ಸೋಷಿಯಲ್' ಇಂಡಸ್ಟ್ರಿಯಲ್ ಹಿಸ್ಟರಿ ಆಫ್ ಇಂಗ್ಲೆಂಡ್, ಪು. ೮೬

(Venice) ಮತ್ತು ಜಿನೊವ (Genoa) ಪಟ್ಟಣಗಳು ತಮ್ಮದಾಗಿಸಿಕೊಂಡವು. ವ್ಯಾಪಾರದ ಗತಿ ಕ್ಯಾಸ್ಪಿಯನ್ ಸಮುದ್ರದಿಂದ ವಿಶೇಷವಾಗಿ ಓಲ್ಗಾ ನದಿಯ ಕಡೆಗಿನ ಜರ್ಜಿನ್ (Zarizan) ಎಂಬ ಪ್ರದೇಶಕ್ಕೆ ಸಾಗುತ್ತಿತ್ತು. ಇಲ್ಲಿಂದ ಹಳ್ಳಿಗಾಡಿನ ಮುಖಾಂತರ ಡಾನ್(Don)ಗೆ ಹೋಗುತ್ತಿತ್ತು. ಡಾನ್ ಪ್ರದೇಶದಿಂದ ಹತ್ತಿರವಿದ್ದ ನದಿಯ ಬಾಯಿಯಂತಿರುವ 'ತಾನಾ' ಎಂಬ ಪಟ್ಟಣಕ್ಕೆ ವಸ್ತುಗಳು ಬರುತ್ತಿದ್ದವು. ಪಟ್ಟಣದ ಇತ್ತೀಚಿನ ಹೆಸರು ಅಜರ್ (Azar) ಆಗಿರುತ್ತದೆ. ಇಲ್ಲಿ ವೆನಿಸ್ ಮತ್ತು ಜಿನೋವ ಎರಡೂ ನಗರಗಳು ವಾಣಿಜ್ಯದ ವಿಶೇಷಾಧಿಕಾರವನ್ನು ಹೊಂದಿದ್ದವು. ಅಲ್ಲದೆ, ವೆನಿಸ್ ನಗರ ಇಲ್ಲಿ ೧೨ನೇ ಶತಮಾನದ ಅಂತ್ಯದವರೆಗೆ ತನ್ನ ವ್ಯಾಪಾರಾಭಿವೃದ್ಧಿಗಾಗಿ ಒಂದು ಕಚೇರಿಯನ್ನು ಸಹ ಹೊಂದಿತ್ತು. ಇದಾದನಂತರ ಜಿನೋವದ ಪ್ರಮುಖ ವಸ್ತುಗಳ ವಿತರಣೆಯ ಕೇಂದ್ರ ಥಿಯೋಡೇಶಿಯಾ (theodosia) ಆಗಿತ್ತು. ಇದನ್ನು ಈಗ 'ಜಟ್ಟಾ' (Jatta) ಎಂದು ಕರೆಯುತ್ತಾರೆ ಮತ್ತು ಇದು ಕ್ರಿಮಿಯಾದಲ್ಲಿದೆ."[೧]

"ಇಸ್ಲಾಂ ಧರ್ಮ ಕ್ರಿಶ್ಚಿಯನ್ ಧರ್ಮವನ್ನು ಎಲ್ಲಾ ಕಡೆಯಿಂದಲೂ ಹಿಡಿದಿಟ್ಟಿತ್ತು. ಪೂರ್ವ ಹಾಗೂ ದಕ್ಷಿಣದಿಂದ ಈ ರೀತಿ ಎಲ್ಲಾ ದಿಕ್ಕುಗಳಿಂದ 'ಶಿಲುಬೆ' ಮುಂದೆ ಹೋಗದಂತೆ ಒಂದು ಅಡೆತಡೆಯನ್ನು ಉಂಟುಮಾಡಿತ್ತು."[೨] ಇಸ್ಲಾಂ ಧರ್ಮದ 'ಚಂದ್ರ' ಮತ್ತು ಕ್ರಿಶ್ಚಿಯನ್‌ರ 'ಶಿಲುಬೆ' ಅವುಗಳ ಭಾರಿ ಕಾಳಗದಲ್ಲಿ ವಾಣಿಜ್ಯ ಬಹಳಷ್ಟು ತೊಂದರೆಗೀಡಾಯಿತು. "ಒಟಮಾನರ (Ottoman) ಗ್ರಹಣ ಅಥವಾ ಭಾರತದ ವ್ಯಾಪಾರಿ ಮಾರ್ಗಗಳ ಕಡೆ ಮೆಡಿಟರೇನಿಯಾದ (Mediterranean) ಗಣರಾಜ್ಯಗಳಿಗಷ್ಟೆ ಅಲ್ಲ, ಇತರರಿಗೂ ಆಪತ್ತನ್ನು ಉಂಟುಮಾಡಿತು. ಇದರ ಹೊಡೆತ ಮೊದಲಿಗೆ ಜಿನೊವ (Genoa) ಮತ್ತು ವೆನಿಸ್ ಮೇಲಾಯಿತು. ಇಷ್ಟಲ್ಲದೆ, ಇಡಿ ಯೂರೋಪಿನ ವಾಣಿಜ್ಯ ಪದ್ಧತಿಗೆ ದಿಗಿಲುಪಡಿಸಿತು. ಏಶಿಯಾದ ವಸ್ತುಗಳ ಮಧ್ಯ ಮತ್ತು ಉತ್ತರದ ಕ್ರಿಶ್ಚಿಯನ್ ರಾಷ್ಟ್ರಗಳಿಗೆ ಹೋಗುವ ಮಾರ್ಗ ಪಶ್ಚಿಮ ಜರ್ಮನಿಯ ನಗರಗಳ ಒಕ್ಕೂಟದ (Hanseatic) ಒಡಂಬಡಿಕೆಯಾಗಿತ್ತು.[೨] ಈ ಒಕ್ಕೂಟ (Hanseatic) ಮುಖ್ಯವಾಗಿ ಇಟಲಿಯ ಗಣರಾಜ್ಯಗಳ ಮೂಲಕ ಬರುತ್ತಿರುವ ಪೂರ್ವದ (Oriental) ವಸ್ತುಗಳ ಮೇಲಿನ ನಿಯಂತ್ರಣದಿಂದ ಲಾಭ ತರುತ್ತಿತ್ತು. ಅನಾದಿ ಕಾಲದಿಂದಲೂ ಜರ್ಮನಿ ಮತ್ತು ಉತ್ತರ ಇಟಲಿಯ ಒಳಪ್ರದೇಶಗಳು ಪೂರ್ವದಿಂದ ಬರುವ ಮಸಾಲೆ ವಸ್ತುಗಳಿಗಾಗಿ ವೆನಿಸ್ ಅನ್ನು ಅವಲಂಬಿಸಿದ್ದವು ಮತ್ತು ಎಂದು ೧೦೧೦ರಲ್ಲಿ ಈ ಮಸಾಲೆ ವಸ್ತುಗಳನ್ನು ತುಂಬಿಕೊಂಡು ಬರುತ್ತಿರುತ್ತಿರುವ ಹಡಗುಗಳು ಒಡೆದು ಹೋದವೋ, ಈ ವೃತ್ತಾಂತವನ್ನು ಇತಿಹಾಸಕಾರ (Chronicler) ಒಂದು ಗಂಭೀರ ದುರ್ದೈವವೆಂದು ಟಿಪ್ಪಣಿ ಮಾಡಿರುತ್ತಾನೆ[೩]". ಜರ್ಮನ್ ನಗರಗಳ ಒಕ್ಕೂಟ (Hanseatic) ವ್ಯಾಪಾರಕ್ಕೆ ಭಾರತದ ವ್ಯಾಪಾರ ಕೊಡುಗೆ ಪ್ರಮುಖವಾಗಿತ್ತು. ಯಾವಾಗ ಈ ಸರಕು ಸಾಗಾಣಿಕೆಗಳ ಪ್ರಮಾಣ ಕಡಿಮೆಯಾಗಲು ಪ್ರಾರಂಭಿಸಿತೋ, ಆಗ ಯೂರೋಪಿನ ವ್ಯಾಪಾರಿ ಮಳಿಗೆಗಳು ಕ್ಷೀಣಿಸಹತ್ತಿದ್ದವು.[೪] ಹಳೆಯ ವ್ಯಾಪಾರಿ ಮಾರ್ಗಗಳ ತಡೆಯಲ್ಲಿಯೇ ಪಶ್ಚಿಮ ಯೂರೋಪಿನ ವ್ಯಾಪಾರ ಮಾರ್ಗಗಳ ವಿಸ್ತರಣೆ ಅಡಗಿರುತ್ತದೆ. ಅಮೆರಿಕೆಯನ್ನು ೧೫ನೆಯ ಶತಮಾನದ ಕೊನೆಗೆ ಏಕೆ ಕಂಡುಹಿಡಿಯಲಾಯಿತು ಎಂಬುದನ್ನು ಈ ರೀತಿ ಪ್ರೊ. ಎ.ಎಫ್. ಪೋಲಂಡರು ಸಂಕ್ಷಿಪ್ತದಲ್ಲಿ ಹೇಳಿದ್ದಾರೆ.

---

೧. ಜರ್ನಲ್ ಆಫ್ ಆರ್ಮ್. ಒ. ಎಸ್.

೨. ಡಬ್ಲ್ಯು. ಡಬ್ಲ್ಯು. ಹಂಟರ್ 'ಎ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ', ಸಂ. I, ಪು. ೫೨

೩. ಬ್ರೀಸ್ಲೆ, ಸಂ. II, ಪು. ೪೦೫

೪. W. W. Hunter, op.cit., ಸಂ. I, ಪು. ೫೩.

ಅವರ ಪ್ರಕಾರ ಕೊಲಂಬಸ್‌ನಿಂದ ೧೪೯೨ರಲ್ಲಿ ಅಥವಾ ಒಂದಿಷ್ಟು ಹಿಂದುಮುಂದು ಅಮೆರಿಕೆಯನ್ನು ಕಂಡುಹಿಡಿಯಲಾಯಿತು. ಏಕೆಂದರೆ, ಟರ್ಕಿಗಳು ಇನ್ನೊಬ್ಬರಿಗೆ ಅಡೆತಡೆ ತಂದೊಡ್ಡುವ ಜನರಾಗಿದ್ದರು. ಆದುದರಿಂದ ೧೪೯೨ಕ್ಕಿಂತ ಮುಂಚೆ ಅಮೆರಿಕಾವನ್ನು ಸಂಶೋಧಿಸಲಾಗಲಿಲ್ಲ. ಈ ಹೇಳಿಕೆ ಒಂದು ವಿರೋಧಾಭಾಸದ ಹೇಳಿಕೆಯಾಗಬಹುದು. ಅಮೆರಿಕೆಯನ್ನು ಕಂಡು ಹಿಡಿಯುವುದರಲ್ಲಿ ತಡವಾಗಿರುವುದು ಮತ್ತು ಟರ್ಕಿಗಳ ಇನ್ನೊಬ್ಬರಿಗೆ ಅಡೆತಡೆ ಉಂಟುಮಾಡುವ ಪ್ರವೃತ್ತಿ ಇವೆರಡರ ನಡುವೆ ನಂಬಬಹುದಾದಂತಹ ಸರಳ ಸಂಬಂಧವಿರುವುದಿಲ್ಲ. ಆದರೆ ಸರಳ ಸಂಬಂಧಗಳು ಯಾವಾಗಲೂ ಹುರುಳಿಲ್ಲದ ಪೊಳ್ಳು ಸಂಬಂಧವಾಗಿರುತ್ತವೆ. ಆದರೆ ಟರ್ಕಿಗಳ ಪ್ರವೃತ್ತಿ ಮತ್ತು ಅಮೆರಿಕೆಯ ಕಂಡುಹಿಡಿಯುವಿಕೆಯ ಸಂಬಂಧ ಪೊಳ್ಳಾಗಿರದೆ ಗಾಢವಾಗಿರುತ್ತದೆ. 'ಮನುಷ್ಯ ಅವನು ಏನು ಊಟ ಮಾಡುತ್ತಾನೋ ಹಾಗೆ ಇರುತ್ತಾನೆ' ಎಂಬ ಗಾದೆಯನ್ನು ಜರ್ಮನ್ನರು ಹೊಂದಿರುತ್ತಾರೆ. ಇದೊಂದು ಅಂತಹ ಜನರೇ ನೀಡಿದ ಧ್ಯೇಯವಾಗಿರಬಹುದು (ಇದು ಅಪೂರ್ಣವೆಂದು ಕಾಣುತ್ತದೆ –ಸಂಪಾದಕರು).

## ಅಧ್ಯಾಯ ೩*

# ಪ್ರಭುತ್ವ ಸರಕಾರದ ಮುಂಚಿನ ಭಾರತ

ಸಾಮ್ರಾಜ್ಯಶಾಹಿಗೆ ಜಗತ್ತಿನ ಇನ್ನಾವುದೇ ವಿಷಯಕ್ಕಿಂತಲೂ ಹೆಚ್ಚಾಗಿ, ತನ್ನನ್ನು ಸಮರ್ಥಿಸಿಕೊಳ್ಳಬೇಕಾದ ಅಗತ್ಯವಿದೆ ಮತ್ತು ಸಾಮ್ರಾಜ್ಯಶಾಹಿಗಳು ತಮ್ಮ ಕರ್ತವ್ಯದಲ್ಲಿ ಹಿಂದೆಬಿದ್ದಿಲ್ಲ.

ತಮ್ಮಲ್ಲಿ ಸಾಮ್ರಾಜ್ಯಶಾಹಿ ಎಂಬ ಒಂದು ಪದವೂ ಇಲ್ಲದ ಮತ್ತು ನಗರ ರಾಷ್ಟ್ರ ಒಕ್ಕೂಟದ ಯೋಜನೆಯನ್ನು ಅರಿಯದ ಗ್ರೀಕ್‌ರಂತಲ್ಲದೆ ರೋಮನರು ವಿಶ್ವದ ಮೊದಲ ಮತ್ತು ಅತಿ ದೊಡ್ಡ ಸಾಮ್ರಾಜ್ಯಶಾಹಿ ಜನರಾಗಿದ್ದರು ಮತ್ತು ಅವರು ಸಾಮ್ರಾಜ್ಯಶಾಹಿಗೆ ಸಮರ್ಥನೆಯನ್ನು ಹುಟ್ಟುಹಾಕಿದರು ಮತ್ತು ಅದು ಅವರ ವಾರಸುದಾರರ ಪರಂಪರೆಯಾಯಿತು.

ರೋಮನ್‌ರು ತಾವೇ ಒಂದು ಉತ್ತಮ ಜನಾಂಗದ ಪ್ರಜೆಗಳೆಂದು ಹೇಳಿಕೊಂಡರು. ತಮ್ಮ ಸಂಸ್ಕೃತಿ ಇತರ ಯಾವುದೇ ಜನಾಂಗದ ಸಂಸ್ಕೃತಿಗಿಂತಲೂ ಅತಿ ಉತ್ಕೃಷ್ಟವಾಗಿದೆ, ತಮ್ಮ ಆಡಳಿತ ಪದ್ಧತಿ ದಕ್ಷವಾಗಿದೆ ಹಾಗೂ ಜೀವನದ ಕಲೆಗಳಲ್ಲಿ ತಾವು ಪರಿಣಿತರಾಗಿದ್ದೇವೆ ಎಂದು ಅವರು ಭಾವಿಸಿದ್ದರು. ತಮ್ಮನ್ನು ಬಿಟ್ಟು ಈ ಜಗತ್ತಿನ ಇನ್ನಿತರ ಯಾವುದೇ ಜನಾಂಗದ ಜನರು ಕೀಳು ಮಟ್ಟದ ಸಂಸ್ಕೃತಿ ಹೊಂದಿರುವುದರಿಂದ, ಜೀವನದ ಕಲೆಗಳನ್ನು ಹೊಂದದೆ ಇರುವುದರಿಂದ ಮತ್ತು ಹಿಂಸಾ ಪೂರ್ಣ ಆಡಳಿತ ಪದ್ಧತಿಯನ್ನು ಹೊಂದಿರುವುದರಿಂದ ಅವರೆಲ್ಲರೂ ಕೀಳುಮಟ್ಟದ ಜನಾಂಗವೆಂದು ಸಹ ಸಾರಿದರು. ರೋಮನ್‌ರ ಈ ತರ್ಕಬದ್ಧ ತಿಳಿವಳಿಕೆಯ ಪರಿಣಾಮವೆಂದರೆ ಅವರು ತಮ್ಮೊಂದಿಗಿನ ಇತರ ಕೀಳು ಜನಾಂಗದ ಅಣ್ಣತಮ್ಮಂದಿರನ್ನು ಅವರ ಮೇಲೆ ಆಕ್ರಮಣ ಮಾಡದೆ ತಮ್ಮ ಸಂಸ್ಕೃತಿಯನ್ನು ಅವರ ಮೇಲೆ ಮಾನವ ಜನಾಂಗದ ಹೆಸರಿನಲ್ಲಿ ಹೇರಿ ಅವರನ್ನು ನಾಗರೀಕರಣಗೊಳಿಸಬೇಕು ಮತ್ತು ಇದೊಂದು ದೇವರು ತಮಗೆ ನೀಡಿರುವ ಕರ್ತವ್ಯವೆಂದು ವಾದಿಸಿದರು.

ಬ್ರಿಟಿಷರು ಭಾರತಕ್ಕೆ ಸಂಬಂಧಿಸಿದ ತಮ್ಮ ಸಾಮ್ರಾಜ್ಯಶಾಹಿ ನೀತಿಯನ್ನು ಇಂತಹದೇ ಕಾರಣಗಳಿಂದ ಸಮರ್ಥಿಸಿಕೊಂಡಿದ್ದಾರೆ. ಭಾರತದ ಬ್ರಿಟಿಷ್ ಇತಿಹಾಸಕಾರರು ಒಂದು ತರಹದ ಹೊಗಳಿಕೆಯ ರೋಗಕ್ಕೆ (Leues Boswelliyana) ಬಲಿಯಾಗಿದ್ದಾರೆ. ಇವರು ಹೇಗೋ, ಏನೋ ಬ್ರಿಟಿಷರು ಭಾರತದಲ್ಲಿ ಬಂದು ಆಳುವ ಮುನ್ನ ಇದ್ದ ರಾಜರುಗಳ ಸದ್ಗುಣಗಳ ಬದಲಾಗಿ ದುರ್ಗುಣಗಳನ್ನು ಮಾತ್ರ ವೈಭವೀಕರಿಸಿದ್ದಾರೆ. ಬ್ರಿಟಿಷರು ಭಾರತಕ್ಕೆ ಬರುವ ಮುನ್ನ ಆ ದೇಶವನ್ನು ಆಳಿದ ಮೊಗಲ್ ಮತ್ತು ಮರಾಠಾ ರಾಜರುಗಳನ್ನು ಲೂಟಿಗಾರರೆಂದು ಅಥವಾ ಕ್ರೂರಿಗಳೆಂದು ಬಹಳವಾಗಿ ಹಿಯಾಳಿಸುವುದಲ್ಲದೆ ಭಾರತದ ನಾಗರಿಕತೆ ಮತ್ತು ಅಲ್ಲಿನ ಜನರ ನೈತಿಕತೆಗೆ ಕಳಂಕವನ್ನು ಸಹ ತಂದಿದ್ದಾರೆ. ಒಬ್ಬ ವ್ಯಕ್ತಿ ಅಥವಾ ದೇಶ ಇನ್ನೊಬ್ಬರ ಒಳ್ಳೆಯ ಗುಣಗಳನ್ನು ಕೀಳುಮಟ್ಟಕ್ಕೆ ಇಳಿಸಿ ತಾವು ಅವರಿಗಿಂತ ಮೇಲು ಎಂದು ಸಾರುವುದು ಸಹಜವಾಗಿರುತ್ತದೆ.

---

* ಹಸ್ತಪ್ರತಿಯಲ್ಲಿ ಇದು ೫ನೆಯ ಅಧ್ಯಾಯವಾಗಿದೆ. ಮೂರನೆಯ ಹಾಗೂ ನಾಲ್ಕನೆಯ ಅಧ್ಯಾಯ ದೊರಕುತ್ತಿಲ್ಲ. –ಸಂ.

ಬ್ರಿಟಿಷ್ ಇಂಡಿಯಾದ ಇತಿಹಾಸಕಾರರು, ಭಾರತದ ಮೇಲಿನ ಬ್ರಿಟಿಷ್‌ರ ಆಡಳಿತವನ್ನು ಅವರ ಹಿಂದಿನ ಅತಿ ಸಮೀಪದ ಅಥವಾ ಅತಿ ದೂರದ ರಾಜರ ಆಡಳಿತದೊಂದಿಗೆ ಹೋಲಿಸುವ ತಪ್ಪನ್ನು ಹಲವಾರು ಬಾರಿ ಮಾಡಿದ್ದಾರೆ. ಇತಿಹಾಸ ಬರೆಯುವ ಪದ್ಧತಿಗೆ ಗೌರವ ಸೂಚಕವಾಗಿ ಇವರು ಭಾರತದ ರಾಜರುಗಳನ್ನು ಅವರ ಸಮಕಾಲೀನರಾದ ಇಂಗ್ಲೆಂಡಿನ ದೊರೆಗಳೊಂದಿಗೆ ಹೋಲಿಸಬೇಕಾಗಿತ್ತು. ಇಂತಹ ಅವರ ಯೋಜನೆ ಅವರ ಐತಿಹಾಸಿಕ ತಪ್ಪುಗಳನ್ನು ಮಾಯವಾಗಿಸಬಹುದಾಗಿತ್ತು. ಆದರೆ ಅವರು ಅಂತಹ ಯೋಜನೆಯನ್ನು ಅನುಸರಿಸಲಿಲ್ಲ. ನಾರ್ಮನ್ (ಅಥವಾ ಫ್ರೆಂಚ್) ದೊರೆಗಳ ಆಳ್ವಿಕೆಯಲ್ಲಿ ಆಂಗ್ಲೋ ಸ್ಯಾಕ್ಸನರಿಗೆ (ಅಥವಾ ಇಂಗ್ಲಿಷರಿಗೆ) ಉಂಟಾದ ಕರುಣಾಜನಕ ಸ್ಥಿತಿಯನ್ನು ನೆನಪಿಗೆ ತಂದುಕೊಂಡಾಗ, ಮುಸ್ಲಿಮರ ಧಾಳಿಗಳಿಂದಾಗಿ ಹಿಂದೂಗಳಿಗೆ ಉಂಟಾದ ಹೀನಸ್ಥಿತಿಯ ಬಗ್ಗೆ ಓದುಗನಲ್ಲಿ ಅಷ್ಟೊಂದು ಮರುಕ ಉಂಟಾಗಲಿಲ್ಲ. ಅಂದು "ಇಂಗ್ಲಿಷರನ್ನು ಯಾರಾದರೂ ಇವರು ಇಂಗ್ಲೆಂಡಿನವರು ಎಂದು ಕರೆದರೆ ಅವರಿಗೆ ನಿಂದಿಸಿದಂತೆ ಭಾಸವಾಗುತ್ತಿತ್ತು. ಅಂದು ಯಾರನ್ನು ಇಂಗ್ಲಿಷ್ ಜನರಿಗೆ ನ್ಯಾಯ ದೊರಕಿಸಲು ನಾರ್ಮನ್ ದೊರೆಗಳು ನೇಮಿಸಿದ್ದರೋ, ಅವರೆಲ್ಲರೂ ಸರ್ವ ರೀತಿಯಿಂದ ಅನ್ಯಾಯದ ಚಿಲುಮೆಯಾಗಿದ್ದರು. ಯಾವ ನ್ಯಾಯಾಧೀಶರಿಗೆ ತಮ್ಮ ಪ್ರಾಮಾಣಿಕ ತೀರ್ಪುಗಳನ್ನು ನೀಡುವುದು ಅವರ ಕರ್ತವ್ಯವಾಗಿತ್ತೋ ಅವರೇ ಕಳ್ಳರಾಗಿದ್ದರು ಮತ್ತು ಪ್ರಜಾಹಿಂಸಕರಾಗಿದ್ದರು. ಇದಲ್ಲದೆ ಅಂದು ಅವರು ಸಾಮಾನ್ಯ ಕಳ್ಳ ಹಾಗೂ ದರೋಡೆಗಾರರಿಗಿಂತಲು ಅಧಿಕವಾದ ದೊಡ್ಡ ಸುಲಿಗೆಗಾರರಾಗಿ ವ್ಯವಹರಿಸಹತ್ತಿದ್ದರು. ಅಂದು ದೊಡ್ಡ ಮನುಷ್ಯರೆನಿಸಿಕೊಂಡವರೂ ಸಹ ಹೇಗಾದರೂ ಮಾಡಿ ಹಣ ಗಳಿಸುವ ತವಕವನ್ನು ಹೊಂದಿದ್ದರು. ಆಗ ಪುರುಷರಲ್ಲಿ ಕಾಮುಕತನ ಎಷ್ಟು ಹೆಚ್ಚಾಗಿತ್ತೆಂದರೆ ಸ್ವತಃ ಸ್ಕಾಟ್‌ಲ್ಯಾಂಡದ ರಾಜಕುಮಾರಿ ಸಹ ಇವರ ಕಾಟದಿಂದ ತಪ್ಪಿಸಿಕೊಳ್ಳಲು ಧಾರ್ಮಿಕ ಉಡುಪುಗಳನ್ನು ಧರಿಸುವುದು ಅವಶ್ಯಕವಾಗಿತ್ತು."

ಜನಜನಿತವಾಗಿ ಹಿಂದೂಗಳ ಮೇಲೆ ಮುಸ್ಲಿಮರು ಎಸಗಿರುವ ಕ್ರೌರ್ಯವು ಜೆರೂಸಲೆಮ್ ಮೇಲೆ ಧಾಳಿ ಮಾಡಿದಾಗ ಮೊದಲ ಧರ್ಮ ಸುಧಾರಕರಿಂದ ಅಲ್ಲಿನ ಜನರ ಮೇಲೆ ಎಸಗಿದ ಕ್ರೌರ್ಯಕ್ಕಿಂತ ಹೆಚ್ಚಿನದೇನಲ್ಲ. ಅಂದು ಅವರು "೪೦,೦೦೦ ಸೈನಿಕರ ಕತ್ತನ್ನು ಯಾವ ಭೇದಭಾವ ತೋರಿಸದೆ ಕತ್ತರಿಸಿದರು. ಅವರು ಒಂದೇ ಕತ್ತಿಯಿಂದ ಒಂದೆಡೆ ಚಿಕ್ಕಮಕ್ಕಳನ್ನು ಮತ್ತೊಂದೆಡೆ ಅವರ ತಾಯಂದಿರನ್ನು ನಿರ್ದಾಕ್ಷಿಣ್ಯವಾಗಿ ಕೊಂದರು. ಮುದುಕರ ಹಾಗೂ ಹೆಂಗಳೆಯರ ಮೇಲೆ ಸಹ ಯಾವ ರೀತಿಯ ದಯೆ ತೋರಿಸಲಿಲ್ಲ. ಹೀಗಾಗಿ ಜೆರೂಸಲೆಮ್ ಪಟ್ಟಣ ಎಲ್ಲೆಡೆಯಲ್ಲಿಯೂ ಹೆಣಗಳ ರಾಶಿಯನ್ನು ಹೊಂದಿತ್ತು. ಇಲ್ಲಿನ ಮನೆ ಮನೆಯಲ್ಲಿ ಜನರು ಯಮಯಾತನೆಯಿಂದ ಕಿರುಚುವ ನೋವು ಕೇಳಿಬರುತ್ತಿತ್ತು."

ಮೇಲಿನ ವಿವರಣೆಯನ್ನು ಮನದಲ್ಲಿಟ್ಟುಕೊಂಡು ನಾವು ಭಾರತದ ಮೇಲೆ ಇಂಗ್ಲೆಂಡಿನ ಇತಿಹಾಸದೆಡೆಗೆ ಕಣ್ಣು ಹಾಯಿಸಿದಾಗ, ಇವೆರಡೂ ದೇಶಗಳಲ್ಲಿ ಪರಕೀಯರು ಪ್ರಜೆಗಳಿಗೆ ಹಿಂಸೆ ನೀಡಿದ ಹಲವಾರು ಸಮಕಾಲೀನ ಸಂಗತಿಗಳು ನಮಗೆ ತಿಳಿದುಬರುತ್ತವೆ. ಆದುದರಿಂದ, ನಾವು ಪ್ರತಿಯೊಬ್ಬ ಸ್ಥಾನೀಯ ರೋಲ್ಯಾಂಡರಿಗೆ (Native Rowland) ಓರ್ವ ಇಂಗ್ಲಿಷ್ ಆಲಿವರ್ (English Oliver) ಇರುತ್ತಾನೆ ಎನ್ನಬಹುದು. ಆದುದರಿಂದ, ಸರ್ ಥಾಮಸ್ ಮುನ್ರೊರವರು ಭಾರತದ ಬ್ರಿಟಿಷ್ ಇತಿಹಾಸಕಾರರಿಗೆ ನೀಡಿದ ಎಚ್ಚರಿಕೆಯನ್ನು ಇಲ್ಲಿ ಮತ್ತೊಮ್ಮೆ ಉಚ್ಚರಿಸಲೇಬೇಕಾಗುತ್ತದೆ. ಮುನ್ರೊರವರು ಹೀಗೆ ಹೇಳಿದ್ದರು; "ನಾವು ಇತರ ದೇಶಗಳನ್ನು ಇಂಗ್ಲೆಂಡಿನೊಂದಿಗೆ ಹೋಲಿಸುವಾಗ ಸುಧಾರಣೆ ಯುಗ(Reformation Era)ಕ್ಕಿಂತ ಹಿಂದೆ ಹೋಗಲಾರದೆ, ಈಗ ಇಂಗ್ಲೆಂಡು ಹೇಗಿದೆ ಎಂಬುದರ ಬಗ್ಗೆ ಹೇಳುತ್ತೇವೆ ಮತ್ತು ಪ್ರತಿಯೊಂದು ಪರದೇಶ ಅನಾಗರಿಕ ಮತ್ತು ಏನೂ ಗೊತ್ತಿಲ್ಲದ ದೇಶವೆಂದು ಭಾವಿಸುತ್ತೇವೆ. ವಾಸ್ತವದಲ್ಲಿ

ಈ ದೇಶಗಳ ಸುಧಾರಣೆ ಇಂಗ್ಲೆಂಡಿಗಿಂತಲೂ ಯಾವುದೇ ಕಾಲದಲ್ಲಿ ಹೆಚ್ಚಾಗಿರಬಹುದು. ಆದರೂ ಅವುಗಳ ಸುಧಾರಣೆ ನಮ್ಮ ದೇಶದ (ಅಂದರೆ ಇಂಗ್ಲೆಂಡಿನ) ಸುಧಾರಣೆಗೆ ಯಾವ ರೀತಿಯಲ್ಲಿಯೂ ಸಮನಾಗಿರುವುದಿಲ್ಲವೆಂದು ಭಾವಿಸುತ್ತೇವೆ" ಎಂದಿದ್ದರು.

ಆದುದರಿಂದ, ನಾವು ಈಗ ಬ್ರಿಟಿಷರು ಭಾರತಕ್ಕೆ ಕಾಲಿಡುವ ಮುನ್ನ ಈ ದೇಶವನ್ನು ಆಳಿದ "ಕ್ರೂರಿ ಮತ್ತು ಕಳ್ಳರಾದ" ರಾಜರುಗಳ ಕರ್ಮಗಳ ಪುನರ್ ಪರಿಶೀಲನೆ ಮತ್ತು ಅಂದಿನ ಪ್ರತಿಯೊಬ್ಬ ರಾಜನ ಅವಧಿಯಲ್ಲಿನ ಜನರ ಸ್ಥಿತಿಗತಿಗಳ ಬಗ್ಗೆ ವಿಚಾರಿಸೋಣ. ಇಂತಹ ಜ್ಞಾನ, ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಇದ್ದ ಭಾರತದ ಜನರ ಆರ್ಥಿಕ ಪರಿಸ್ಥಿತಿಯ ಸರಿಯಾದ ಅಂದಾಜು ಮಾಡುವಲ್ಲಿ ಅತಿ ಅವಶ್ಯಕವಾಗಿರುತ್ತದೆ.

ಈಗಾಗಲೇ 'ಪ್ರಾಚೀನ ಕಾಲ'ಗಳಲ್ಲಿನ ಭಾರತದ ಆರ್ಥಿಕ ಸಮೃದ್ಧಿಯನ್ನು ಈಗಾಗಲೇ ವಿವರಿಸಿದ್ದರಿಂದ, ಇದರ ಬಗ್ಗೆ ಇಲ್ಲಿ ನಾವು ಹೆಚ್ಚಿಗೆ ವಿವರಣೆ ನೀಡಬೇಕಾಗಿಲ್ಲ.

ಮುಸ್ಲಿಮರು ಭಾರತದ ಮೇಲೆ ಧಾಳಿ ಮಾಡುವ ಮುನ್ನ ಇದೊಂದು ಸಮೃದ್ಧಿಯ ದೇಶವಾಗಿತ್ತು ಎಂಬ ನಿಜಸಂಗತಿಯನ್ನು ಹಿಂದೂ ಮುಸ್ಲಿಮರಿಬ್ಬರೂ ಒಮ್ಮತದಿಂದ ಒಪ್ಪುತ್ತಾರೆ. ಅಂದು, ಸೋಮನಾಥ ದೇವಾಲಯದ ಸಂಪತ್ತು ಹಾಗೂ ಕನೋಜದ ವೈಭವ, ಭಾರತ ದೇಶದ ಸಮೃದ್ಧಿಯ ದ್ಯೋತಕವಾಗಿದ್ದವು. ಭಾರತವನ್ನು ಆಳಿದ ಎಲ್ಲಾ ಮುಸ್ಲಿಂ ದೊರೆಗಳು ಅನಾಗರಿಕ ಹಾಗೂ ಕ್ರೂರಿಗಳಾಗಿದ್ದರು ಎಂದು ಭಾವಿಸುವುದು ತಪ್ಪಾಗುತ್ತದೆ. ಈ ಭಾವನೆಗೆ ವ್ಯತಿರಿಕ್ತವಾಗಿ ಹೆಚ್ಚಿನ ಮುಸ್ಲಿಂ ದೊರೆಗಳು ಅಸಾಮಾನ್ಯ ಗುಣಗಳನ್ನು ಹೊಂದಿದ್ದರು. ಉದಾಹರಣೆಗೆ, "ಮೊಹಮ್ಮದ್ ಗಝುನಿಯು ಹಿಂದೂಗಳನಲ್ಲಿನ ಶ್ರೇಷ್ಠ ವ್ಯಕ್ತಿಗಳ ಮೇಲೆ ಎಷ್ಟು ಔದಾರ್ಯ ತೋರಿಸಿದ್ದನೆಂದರೆ, ಅವನಂತೆ ಏಶಿಯಾದ ಇನ್ನಾವ ರಾಜನೂ ಅವರಿಗೆ ಆಶ್ರಯ ನೀಡಿರಲಿಲ್ಲ ಮತ್ತು ಏಶಿಯಾದಲ್ಲಿ ಬೇರೆ ಎಲ್ಲಿಯೂ, ಇವನ ರಾಜಧಾನಿಯಲ್ಲಿದ್ದಂತೆ, ಸಾಹಿತ್ಯದ ದಿಗ್ಗಜವೆನಿಸಿಕೊಂಡಿರುವ ಸಮೂಹವಿರಲಿಲ್ಲ. ಇವನು ಭಾರತದ ಸಂಪತ್ತನ್ನು ದೋಚಿಕೊಳ್ಳುವ ಒಬ್ಬ ಕಳ್ಳನ ದುರಾಸೆಯನ್ನು ಉಳ್ಳವನಾಗಿದ್ದ ನಿಜ. ಹಾಗೆಯೇ ಅದನ್ನು ಭವ್ಯವಾದ ಶೈಲಿಯಲ್ಲಿ ಭಾರತೀಯರ ಮೇಲೆ ಖರ್ಚು ಮಾಡುವಲ್ಲಿ ಮತ್ತು ಭಾರತೀಯರಿಗೆ ನ್ಯಾಯದ ತೀರ್ಮಾನಗಳನ್ನು ಕೊಡುವುದರಲ್ಲಿ ಇವನನ್ನು ಮೀರಿಸುವ ಮುಸ್ಲಿಂ ದೊರೆ ಬೇರೆ ಯಾರೂ ಸಿಗುವುದಿಲ್ಲ."

ಗಝುನಿಯ ಎಲ್ಲಾ ಉತ್ತರಾಧಿಕಾರಿಗಳಲ್ಲಿ ತನ್ನ ಚೊಕ್ಕ ಆಡಳಿತಕ್ಕಾಗಿ ಸುಲ್ತಾನ ರಝಿಯಾ ಎಂಬ ಪ್ರಸಿದ್ಧ ಮಹಿಳೆಯ ಉದಾಹರಣೆ ನಮಗೆ ಇತಿಹಾಸ ನೀಡುತ್ತದೆ. ಇವಳ ಇನ್ನೊಬ್ಬ ಉತ್ತರಾಧಿಕಾರಿ ಫಿರೋಜಶಹ ತನ್ನ ಆಡಳಿತಕ್ಕೆ ಪ್ರಸಿದ್ಧಿ ಹೊಂದಿದ ವ್ಯಕ್ತಿಯಾಗಿದ್ದಾನೆ. ಇವನ ಸಾರ್ವಜನಿಕ ಕೆಲಸಗಳಲ್ಲಿ ಮುಖ್ಯವಾದವುಗಳು: ನೀರಾವರಿಗಾಗಿ ನದಿಗೆ ಅಡ್ಡವಾಗಿ ಕಟ್ಟಲಾದ ೫೦ ಅಣೆಕಟ್ಟುಗಳು, ಪ್ರಾರ್ಥನೆಗಾಗಿ ೪೦ ಮಸೀದಿಗಳು, ಬಡವರಿಗಾಗಿ ೧೦೦ ಆಸ್ಪತ್ರೆಗಳು ಹಾಗೂ ೧೦೦ ಸಾರ್ವಜನಿಕ ಸ್ನಾನ ಗೃಹಗಳು, ವಸ್ತುಗಳ ಮತ್ತು ಜನರ ಸಾಗಾಣಿಕೆಗೆ ಅನುಕೂಲವಾಗುವ ೧೫೦ ಸೇತುವೆಗಳನ್ನು ಮತ್ತಿತರ ಅಲಂಕಾರಿಕ ಹಾಗೂ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಅನೇಕ ಭವನ ಮುಂತಾದವುಗಳು ಹಾಗೂ ಇವೆಲ್ಲವುಗಳಿಗಿಂತಲೂ ಹೆಚ್ಚಾಗಿ ಜಮುನಾ ನದಿಯ ಕರ್‌ನಾಲ್ ಎಂಬ ಬೆಟ್ಟ ಪ್ರದೇಶದಿಂದ ಹೌಸಿಯವರೆಗೂ ನಂತರ ಹಿಸ್ಸಾರದವರೆಗಿನ ಕಾಲುವೆಯ ನಿರ್ಮಾಣ(ಈ ಕಾಲುವೆಯನ್ನು ಬ್ರಿಟಿಷ್ ಸರಕಾರ ನಂತರ ಭಾಗಶಃ ರಿಪೇರಿ ಮಾಡಲಾಯಿತು)ಗಳನ್ನು ಒಳಗೊಂಡಿರುತ್ತವೆ. ಈ ದೊರೆಯ ಕಾಲದ ಇತಿಹಾಸಕಾರ, ಈತನ ಸರಕಾರದಲ್ಲಿ ರೈತರು ಅನುಭವಿಸಿದ ಸಂತೋಷದ ವಾತಾವರಣವನ್ನು ಅವರ ಮನೆಗಳ ಮತ್ತು

ಅವುಗಳಲ್ಲಿನ ಪೀಠೋಪಕರಣಗಳ ಒಳ್ಳೆಯ ಗುಣಮಟ್ಟವನ್ನು ಹಾಗೂ ಇವನ ರಾಜ್ಯದಲ್ಲಿನ ಮಹಿಳೆಯರು ಸಾಮಾನ್ಯವಾಗಿ ಉಪಯೋಗಿಸುತ್ತಿರುವ ಬಂಗಾರ ಮತ್ತು ಬೆಳ್ಳಿ ಆಭರಣಗಳ ಉತ್ಕೃಷ್ಟ ಗುಣಮಟ್ಟವನ್ನು ಸವಿಸ್ತಾರವಾಗಿ ವಿವರಿಸಿದ್ದಾನೆ... ೧೪೨೦ರಲ್ಲಿ ಭಾರತಕ್ಕೆ ಬಂದ ಮಿಲೊ–ಡಿಕೊಂಟಿ (Milo-deconti) ಎಂಬ ಇಟಲಿಯ ಪ್ರವಾಸಿ ಗುಜರಾತಿನಲ್ಲಿ ತಾನು ನೋಡಿದ ಸನ್ನಿವೇಶಗಳ ಬಗೆಗೆ ಬಹಳಷ್ಟು ಹೊಗಳಿದ್ದಾನೆ, ಗಂಗಾ ನದಿಯ ದಂಡೆ ಸುಂದರ ಹೂದೋಟ ಮತ್ತು ಹಣ್ಣಿನ ತೋಟಗಳನ್ನು ಒಳಗೊಂಡ ನಗರಗಳನ್ನು ಹೊಂದಿರುವುದನ್ನು ಆತ ಅಂದು ಕಂಡುಕೊಂಡಿದ್ದಾನೆ. ಮಾರಾಝಿಯಾ (Maarazia) (ಇಂದಿನ ಗುಜರಾತ) ಮುಟ್ಟುವ ಮುನ್ನ ಈತ ನಾಲ್ಕು ಹೆಸರಾಂತ ನಗರಗಳನ್ನು ನೋಡಿದ್ದ; ಮರಾಝಿಯಾಕ್ಕೆ ಬಂದ ಮೇಲೆ ಈ ನಗರವನ್ನು ಬಂಗಾರ, ಬೆಳ್ಳಿ, ಮತ್ತು ವಜ್ರ ವೈಢೂರ್ಯಗಳಿಂದ ತುಂಬಿ ತುಳುಕಾಡುವ ನಗರವೆಂದು ವರ್ಣಿಸಿದ್ದಾನೆ. ಭಾರತದ ಆರ್ಥಿಕ ಉಚ್ಛ್ರಾಯ ಸ್ಥಿತಿಯೇ ಈ ಪ್ರವಾಸಿಗೆ ಭಾರತದ ಬಗ್ಗೆ ಹೊಗಳುವಂತೆ ಮಾಡಿತ್ತು.

ಇವನು ಹೇಳಿದ ಮಾತನ್ನೇ ೧೬ನೆಯ ಶತಮಾನದ ಮೊದಲಲ್ಲಿ ಭಾರತದ ಪ್ರವಾಸವನ್ನು ಕೈಕೊಂಡ ಬಾರ್‌ಬೊರಾ (Barbora) ಮತ್ತು ಬಾರ್‌ಟೆಮಾ (Bartema) ಎನ್ನುವ ಪ್ರವಾಸಿಗರು ಪುನಃ ಪುಷ್ಟೀಕರಿಸಿದ್ದಾರೆ. ವಿಶೇಷವಾಗಿ ಬಾರ್‌ಬೋರಾ ಎನ್ನುವವ ತಾನು ನೋಡಿದ ಕಾಂಬೇ (Cambay) [ಇಂದಿನ ಗುಜರಾತ] ಪ್ರದೇಶವನ್ನು ಬೇರೆ ಬೇರೆ ದೇಶಗಳಿಂದ ಬಂದ ವ್ಯಾಪಾರಿ ಮತ್ತು ಕುಶಲಕಾರ್ಮಿಕರಿಂದ ಸೇರಿದ ಒಂದು ನಗರವೆಂದು ಹಾಗೂ ಫ್ಲ್ಯಾಂಡರ್ಸ್(Flanders)ನಲ್ಲಿದ್ದಂತೆ ಇಲ್ಲಿಯೂ ಕುಶಲಕರ್ಮಿಗಳೂ ಮತ್ತು ಉತ್ಪಾದಕರು ಬಹುಸಂಖ್ಯೆಯಲ್ಲಿದ್ದರೆಂದು ಹೇಳಿದ್ದಾನೆ. ಮೇಲಾಗಿ ಈ ನಗರವನ್ನು ಒಂದು ಸುಂದರ ಪ್ರದೇಶದಲ್ಲಿ ಅತಿ ಅಚ್ಚುಕಟ್ಟಾಗಿ ಕಟ್ಟಿಸಲಾದ ಒಂದು ಭವ್ಯನಗರವೆಂದು ವರ್ಣಿಸಿದ್ದಾನೆ. ಸೀಝರ್ ಫ್ರೆಡ್‌ರಿಕ್(Caser Frederic)ನು ಸಹ ಗುಜರಾತಿನ ಇಂತಹ ಚಿತ್ರಣವನ್ನೇ ನೀಡಿದ್ದಾನೆ. ಯಾವಾಗ ಮೊಹಮದ್ ತುಗಲಖ್‌ನ ಆಡಳಿತ ಜಾರಿಯಲ್ಲಿದ್ದ (೧೫ನೆಯ ಶತಮಾನದ ಮಧ್ಯಭಾಗದಲ್ಲಿ) ಸಮಯದಲ್ಲಿ ಅರಾಜಕತೆ ಮತ್ತು ಶೋಷಣೆ ಹೆಚ್ಚಾಗಿತ್ತೊ ಮತ್ತು ಯಾವಾಗ ದಂಗೆಗಳು ಎದ್ದಿದ್ದವೋ ಆಗ ಭಾರತದ ಪ್ರವಾಸವನ್ನು ಕೈಗೊಂಡ ಇಬ್ನೆ ಬಟುಟಾ (Ibne Batuta) ಎಂಬ ಪ್ರವಾಸಿಗನು ಭಾರತದ ಹಲವಾರು ನಗರ ಮತ್ತು ಪಟ್ಟಣಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ನೀಡಿದ್ದಾನೆ.

ಮೊಗಲ್ ಸಾಮ್ರಾಜ್ಯದ ಸ್ಥಾಪಕನಾದ ಬಾಬರನು ಭಾರತದ ಸಮೃದ್ಧಿಯ ಸ್ಥಿತಿಯಲ್ಲಿ ಕಂಡು, ಇದರ ಜನಸಂಖ್ಯಾ ಬಾಹುಳ್ಯ ಮತ್ತು ಎಲ್ಲೆಡೆಯಲ್ಲಿಯೂ ಕಾಣುವ ಕುಶಲಕರ್ಮಿಗಳನ್ನು ನೋಡಿ ತನ್ನ ಅಚ್ಚರಿಯನ್ನು ವ್ಯಕ್ತಪಡಿಸಿದನು. ಈತನೊಬ್ಬ ದಯಾಳು ರಾಜನಾಗಿದ್ದ ಮತ್ತು ಇವನ ಸಾರ್ವಜನಿಕ ಕೆಲಸಗಳು ಈತನ ಮುತ್ಸದ್ದಿತನಕ್ಕೆ ಹೆಸರಾಗಿದ್ದವು. ಮೊಗಲರಿಂದ ತಾತ್ಕಾಲಿಕವಾಗಿ ಸಿಂಹಾಸನವನ್ನು ಕಸಿದ ಶೇರ್‌ಶಾಹ್‌ನು ಅಕ್ಬರನನ್ನು ಹೊರತುಪಡಿಸಿದರೆ, ಅತ್ಯಂತ ಶ್ರೇಷ್ಠ ಮಹಮದೀಯ ಅರಸನಾಗಿದ್ದನು ಮತ್ತು ಬಾಬರನಂತೆ ಅನೇಕ ಸಾರ್ವಜನಿಕ ಕೆಲಸಗಳನ್ನು ಪೂರೈಸಿದನು.

ಅಕ್ಬರನು ದಯಾಪರ ಆಳ್ವಿಕೆಯು ಎಷ್ಟು ಜನಪ್ರಿಯವೆಂದರೆ ಅದರ ಬಗ್ಗೆ ಉಲ್ಲೇಖ ಬೇಕಿಲ್ಲ.

"ಪ್ರಜೆಗಳನ್ನು ಒಬ್ಬ ರಾಜನಾಗಿ ಆಳದೆ ಅವರಿಗೆ ತಂದೆ ಎಂಬ ಭಾವನೆಯಿಂದ ನೋಡಿಕೊಂಡ" ಶಹಜಹಾನನ ಕಾಲ ಅತ್ಯಂತ ಸಮೃದ್ಧಿಯ ಕಾಲವಾಗಿತ್ತು. ಅವನ ಆಡಳಿತ ಅವಧಿ ಸಹ ಅಪ್ಪಟ ಶಾಂತಿಯ ಕಾಲವಾಗಿತ್ತು.

ಅನಂತರದ ಮೊಗಲ ದೊರೆಗಳ ಸಮಕಾಲೀನರಾದ ಮರಾಠರ ಸಂಸ್ಥಾನಗಳಲ್ಲಿನ ಪರಿಸ್ಥಿತಿಯ

ಬಗ್ಗೆ ಹೇಳುತ್ತಾ ಒಬ್ಬ ಪ್ರವಾಸಿಗ "ನಾನು ಸೂರತ್‌ನಿಂದ ಗುಡ್ಡಗಾಡಿನ ಪ್ರದೇಶ ದಾಟಿ ಮತ್ತೆ ಮರಾಠರು ಆಳುತ್ತಿರುವ ಪ್ರದೇಶವನ್ನು ಪ್ರವೇಶಿಸಿದಾಗ ನನ್ನಷ್ಟಕ್ಕೆ ನಾನು ಸಹಜತೆಯ (Simplicity) ಮಧ್ಯೆ ಇದ್ದೇನೆ ಮತ್ತು ಬಂಗಾರದ ಯುಗದ ಸಂತೋಷವನ್ನು ಅನುಭವಿಸುತ್ತಿದ್ದೇನೆ. ಇಲ್ಲಿ ಪ್ರಕೃತಿ ಬದಲಾವಣೆಗೆ ಒಳಗಾಗಿಲ್ಲ ಹಾಗೂ ಯುದ್ಧ ಮತ್ತು ಕಷ್ಟ ಕಾರ್ಪಣ್ಯಗಳು ಇಲ್ಲಿ ಜನರಿಗೆ ಗೊತ್ತಿಲ್ಲ. ಇಲ್ಲಿನ ಜನ ಹಸನ್ಮುಖಿಗಳು, ತುಂಬಾ ಆರೋಗ್ಯವಂತರು. ಇವರು ಅತಿಥಿ ಸತ್ಕಾರವನ್ನು ಸಾರ್ವತ್ರಿಕ ಸದ್ಗುಣವೆಂದು ತಿಳಿದವರು ಮತ್ತು ಇವರ ಅತಿಥಿ ಸತ್ಕಾರಕ್ಕೆ ಯಾವ ಮಿತಿಯೂ ಇಲ್ಲ. ಇಲ್ಲಿನ ಮನೆಬಾಗಿಲುಗಳಿಗೆ ಯಾರೂ ಬೀಗ ಹಾಕುವವರಲ್ಲ. ಜನರನ್ನು ಇವರು ಗೆಳೆಯರು, ಇವರು ನೆರೆಹೊರೆಯವರು ಮತ್ತು ಇವರು ಆಗಂತುಕರು ಎನ್ನುವ ಭೇದಭಾವವಿಲ್ಲದೆ ಸ್ವಾಗತಿಸುವ ಪ್ರವೃತ್ತಿಯನ್ನು ಹೊಂದಿದವರು ಇವರು" ಎಂದು ಹೇಳಿದ್ದಾನೆ.

ಟಿಪ್ಪು ಸುಲ್ತಾನ ಆಳುತ್ತಿರುವ ದಕ್ಷಿಣ ಭಾರತದ ಜನರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಬ್ಬ ಇತಿಹಾಸಕಾರ ಹೀಗೆ ಅಭಿಪ್ರಾಯಪಡುತ್ತಾನೆ. "ಯಾವಾಗ ಒಬ್ಬ ವ್ಯಕ್ತಿ ತನಗೆ ಏನೂ ಗೊತ್ತಿಲ್ಲದ ದೇಶದಲ್ಲಿ ಪ್ರವಾಸ ಮಾಡುತ್ತಿರುವಾಗ ಅಲ್ಲಿನ ಭೂಮಿ ಒಳ್ಳೆಯ ರೀತಿಯಿಂದ ಉಳುತ್ತಿರುವುದನ್ನು ಆತನು ಕಂಡರೆ ಔದ್ಯಮಿಕ ವಸತಿಗಳ ಸಮೂಹವನ್ನು ನೋಡಿದರೆ, ಹೊಸದಾಗಿ ನಿರ್ಮಿಸಿದ ನಗರಗಳನ್ನು ವೀಕ್ಷಿಸಿದರೆ, ಅಲ್ಲಿನ ವ್ಯಾಪಾರದ ಮೊತ್ತ ಹೆಚ್ಚುತ್ತಿರುವುದನ್ನು ನೋಡಿದರೆ, ಪಟ್ಟಣಗಳ ಸಂಖ್ಯೆ ಹೆಚ್ಚಾಗುತ್ತಿದ್ದರೆ ಮತ್ತು ಎಲ್ಲವೂ ಊರ್ಜಿತವಾಗುತ್ತಿದ್ದರೆ, ಇದು ಒಂದು ಜನರಿಗೆ ಹಿತ ನೀಡುವ ಸರಕಾರದಲ್ಲಿ ಮಾತ್ರ ಸಾಧ್ಯ ಎಂದಿದ್ದಾನೆ. ಇದೀಗ ಇಲ್ಲಿ ವಿವರಿಸಿದ ಪ್ರದೇಶ ಟಿಪ್ಪುವಿನ ದೇಶವಾಗಿತ್ತು. ಆತನ ಸರಕಾರ ಹೀಗಿತ್ತು ಎಂದು ಗೌರವಯುತ ನಿರ್ಣಯಕ್ಕೆ ನಾವು ಬರುತ್ತೇವೆ." "ಇವನಾಳುವ ದೇಶದಲ್ಲಿ ಎಲ್ಲೆಡೆಯಲ್ಲಿಯೂ ಜನರು ವಾಸವಾಗಿದ್ದರು ಮತ್ತು ಉಳಲು ಯೋಗ್ಯವಾಗಿರುವ ಭೂಮಿ ಎಲ್ಲವನ್ನು ಇವರು ಬೆಳೆಗಳನ್ನು ತೆಗೆಯಲು ಉಪಯೋಗ ಮಾಡುತ್ತಿದ್ದರು" ಎಂದು ಇತಿಹಾಸಕಾರ ಹೇಳಿದ್ದಾನೆ... ಈತನ ಸರಕಾರ ಮನಸ್ವೇಚ್ಛೆಯ ಹಾಗೂ ಕಟ್ಟುನಿಟ್ಟಾದ ಕಾಯ್ದೆಗಳನ್ನು ಒಳಗೊಂಡಿದ್ದರೂ ಇದೊಂದು ಸಮರ್ಥ ನಿರಂಕುಶ ಪ್ರಭುತ್ವವಾಗಿತ್ತು. ಇದು ತನ್ನ ಭವಿಷ್ಯದ ಹೆಗ್ಗಳಿಕೆಗೆ ಕಾರಣವಾಗುವ ಪ್ರಜೆಗಳಿಗೆ ಸಂರಕ್ಷಿಸುತ್ತಿತ್ತೇ ಹೊರತು ಶೋಷಿಸುತ್ತಿರಲಿಲ್ಲ ಹಾಗೂ ತನ್ನ ವೈರಿಗಳನ್ನು ಮಾತ್ರ ಕ್ರೂರ ರೀತಿಯಿಂದ ನಡೆಸಿಕೊಳ್ಳುತ್ತಿತ್ತು.

ಕ್ಲೈವ್ ಬಂಗಾಳವನ್ನು 'ಕರಗದ ಶ್ರೀಮಂತಿಕೆ'ಯ ದೇಶವೆಂದು ವಿವರಿಸಿದ್ದಾನೆ. ಮೆಕಾಲೆಯು "ಮುಸಲ್ಮಾನ ಕ್ರೌರ್ಯ ಮತ್ತು ಮರಾಠಾ ಸುಲಿಗೆಕೋರರ ಹೊರತಾಗಿಯೂ ಬಂಗಾಳವು ಪೂರ್ವದುದ್ದಕ್ಕೂ ಈಡನ್ ಗಾರ್ಡನ್– ಶ್ರೀಮಂತ ಸಾಮ್ರಾಜ್ಯವೆಂದು ಪ್ರಸಿದ್ಧಿ ಪಡೆದಿತ್ತು" ಎಂದನು. ಇದರ ಜನಸಂಖ್ಯೆ ಅಪಾರವಾಗಿ ಬೆಳೆಯಿತು; ಇಲ್ಲಿನ ಆಹಾರ ಕಣಜಗಳಿಂದಲೇ ದೂರದ ಪ್ರದೇಶಗಳಿಗೆ ಆಹಾರದ ಪೂರೈಕೆಯಾಗುತ್ತಿತ್ತು ಮತ್ತು ಇಲ್ಲಿನ ಕೈಮಗ್ಗಗಳು ಲಂಡನ್ ಮತ್ತು ಪ್ಯಾರಿಸ್‌ನಲ್ಲಿನ ಕುಲೀನ ಸ್ತ್ರೀಯರಿಗೆ ಉಡುಪನ್ನು ಒದಗಿಸುತ್ತಿದ್ದವು ಎಂದು ಸಹ ಹೇಳಿರುತ್ತಾರೆ.

ಆದರೆ ಆಂಗ್ಲರು ಭಾರತಕ್ಕೆ ಬಂದ ಮೇಲೆ ಪರಿಸ್ಥಿತಿ ಬದಲಾಯಿಸಹತ್ತಿತು. ಆರ್ಥಿಕ ಸಮೃದ್ಧಿಯು ಭಾರತಕ್ಕೆ ವಿದಾಯ ಹೇಳಿತು ಮತ್ತು ಯೂನಿಯನ್ ಜ್ಯಾಕ್ ಮೇಲೆ ಹಾರಿ ಕುಳಿತುಕೊಂಡಿತು.

ಸಂಸತ್ತು ಹಾಗೂ ಈಸ್ಟ್ ಇಂಡಿಯಾ ಕಂಪನಿಯ ಎರಡೂ ಕಡೆಗಳಿಂದ ಭಾರತಕ್ಕೆ ಅನಿಷ್ಟಕಾರಿ ಶಕ್ತಿಗಳು ಬಂದವು.

ಕಂಪನಿಯ ಆಡಳಿತ ಏನೇ ಆಗಿರಲಿ, ಜಾಣತನವನ್ನು ಮಾತ್ರ ಅದು ಹೊಂದಿರಲಿಲ್ಲ, ಅದು ನಿಷ್ಠುರವಾಗಿತ್ತು, ಜನತೆಗೆ ಅವರ ಆಸ್ತಿಯನ್ನು ಹಾಳು ಮಾಡಿ ಭದ್ರತೆಯನ್ನು ನೀಡಿತು. ಇದರ ಆಡಳಿತ ವೈಖರಿ ಬಹಳ ದೋಷಯುಕ್ತ. ಆ್ಯಡಂಸ್ಮಿತ್‌ರ ಪ್ರಕಾರ "ಇದೊಂದು ವ್ಯಾಪಾರಸ್ಥರ ಕಂಪನಿಯಾಗಿತ್ತು" ಮತ್ತು ಅದು ತನ್ನಷ್ಟಕ್ಕೆ ತಾನೇ ಸಾರ್ವಭೌಮ ಎಂದು ಪರಿಗಣಿಸುವುದಕ್ಕೆ ಯಾವ ಸಾಮರ್ಥ್ಯವನ್ನು ಹೊಂದಿರಲಿಲ್ಲ ಮತ್ತು "ವ್ಯಾಪಾರ ಅಥವಾ ವಸ್ತುಗಳನ್ನು ಕೊಂಡುಕೊಳ್ಳುವುದೇ ತಮ್ಮ ಪ್ರಮುಖ ಚಟುವಟಿಕೆಯೆಂದು ಅವರು ಪರಿಗಣಿಸಿದ್ದರು ಹಾಗೂ ವಸ್ತುಗಳ ವ್ಯಾಪಾರದ ಚಟುವಟಿಕೆಗಳನ್ನು ರಾಜರ ಕಾರ್ಯಗಳ ಒಂದು ಅನುಬಂಧ ಎನ್ನುವ ವಿಚಾರ ಮತ್ತು ಅಸಂಗತೆಯನ್ನು ಹೊಂದಿತ್ತು... ರಾಜರಂತೆ ಅವರು ಭಾರತದ ಹಿತಾಸಕ್ತಿಗಳನ್ನು ಕಾಪಾಡಬೇಕಾಗಿತ್ತು. ಆದರೆ ವ್ಯಾಪಾರಸ್ಥರಂತೆ ಅವರ ಸ್ವಂತ ಹಿತಾಸಕ್ತಿ ದೇಶದ ಹಿತಾಸಕ್ತಿಗೆ ನೇರವಾಗಿ ವಿರೋಧವಾಗಿತ್ತು." ಕಂಪನಿಯ ಬಗ್ಗೆ ಆ್ಯಡಂ ಸ್ಮಿತ್‌ರ ಅಭಿಪ್ರಾಯವನ್ನು ಪರಿಶೀಲಿಸುತ್ತಿರುವಾಗ, ಅವರ 'ವೆಲ್ತ್ ಆಫ್ ನೇಷನ್ಸ್' ಪುಸ್ತಕದ ಕೊನೆಯ ಅಧ್ಯಾಯದಲ್ಲಿ ವರ್ಣಿತರಾಗಿರುವ ನಿರ್ದೇಶಕರು ಮತ್ತು ಮಾಲಿಕರುಗಳ ಕೋರ್ಟ್‌ಗಳ ಬಗೆಗಿನ ಟೀಕೆ ಸಹ ಬಹು ಅಮೂಲ್ಯವಾಗಿರುತ್ತದೆ. ಭಾರತದ ಸ್ಟಾಕ್ (Stock) ಹೊಂದಿರುವ ಪ್ರತಿಯೊಬ್ಬ ಒಡೆಯನ ಇಚ್ಛೆ ಆತ ನೆಲೆಸಿರುವ ಮತ್ತು ಎಲ್ಲಿ ತನ್ನ ಓಟು ಸ್ವಲ್ಪ ಪ್ರಮಾಣದ ಪ್ರಭಾವವನ್ನು ಆತನಿಗೆ ನೀಡುತ್ತದೆಯೋ ಅಂತಹ ದೇಶದ ಉದ್ದೇಶಕ್ಕಿಂತ ಭಿನ್ನವಾಗಿರಬಹುದು ಎಂದು ವಾದಿಸುತ್ತಾ ಆ್ಯಡಂ ಸ್ಮಿತ್‌ನು ಹೀಗೆ ಹೇಳುತ್ತಾನೆ. "ಭಾರತದ ಸ್ಟಾಕ್ (stock) ಹೊಂದಿರುವವರೆಲ್ಲಾ ಭಾರತದ ಬೆಳವಣಿಗೆಯಲ್ಲಿ ಮಾತ್ರ ಆಸಕ್ತಿ ತೋರಿಸುತ್ತಿದ್ದರೆ ವಿಷಯ ಬೇರೆ ಆಗುತ್ತಿತ್ತು. ಆದರೆ ಬಹಳ ಸಲ ಇವರು ಭಾರತದ ಬೆಳವಣಿಗೆಗಲ್ಲದೆ ಮತ್ತಾವುದಕ್ಕೋ ಪ್ರಾಮುಖ್ಯತೆ ನೀಡುತ್ತಿದ್ದರು. ಅನೇಕ ಸಲ ಅತಿ ಮತ್ತು ಕೆಲವೊಮ್ಮೆ ಸೌಮ್ಯವಾದಿ ಶ್ರೀಮಂತಿಕೆಯನ್ನು ಹೊಂದಿದವ, ಮಾಲೀಕರುಗಳ ಕೋರ್ಟಿನಲ್ಲಿ ಒಂದು ಮತ ನೀಡುವ ಸೌಭಾಗ್ಯಕ್ಕಾಗಿ ಹದಿಮೂರುನೂರು ಅಥವಾ ಹದಿನಾಲ್ಕು ನೂರು ಪೌಂಡ್‌ಗಳನ್ನು ಕೊಡಲು ಸಿದ್ಧನಾಗಿದ್ದ. ಇದು ಭಾರತ ದೇಶದ ಲೂಟಿ ಮಾಡುವಲ್ಲಿ ಅನುವಾಗದಿದ್ದರೂ, ಭಾರತ ದೇಶದ ಲೂಟಿಗಾರರ ನೇಮಕಾತಿಯಲ್ಲಿ ನೆರವಿಗೆ ಬರುತ್ತಿತ್ತು. ಕಂಪನಿಯ ನಿರ್ದೇಶಕರು ಇಂಥವರನ್ನು ತಮ್ಮನ್ನು ಚುನಾಯಿಸುವ ಹಾಗೂ ತಮ್ಮ ನೇಮಕಾತಿಯನ್ನು ಸುಳ್ಳಾಗಿಸುವ ಮಾಲೀಕರ ಕೋರ್ಟುಗಳ ಪ್ರಭಾವಕ್ಕೆ ಒಳಗಾಗಿ ಇಂತಹ ನೇಮಕಾತಿಗಳನ್ನು ಮಾಡುತ್ತಿದ್ದರು. ಅತಿ ಶ್ರೀಮಂತಿಕೆಯ ಅಥವಾ ಸಾಧಾರಣ ಶ್ರೀಮಂತನಾಗಿರುವ ಒಬ್ಬ ವ್ಯಕ್ತಿ ಒಂದು ವೇಳೆ, ಕೆಲವು ವರ್ಷಗಳಲ್ಲಿ, ತನ್ನ ಪ್ರಭಾವವನ್ನು ಉಪಯೋಗಿಸಿ ತನ್ನ ಕೆಲ ಮಿತ್ರರಿಗೆ ಭಾರತದಲ್ಲಿ ನೌಕರಿಯನ್ನು ದೊರಕಿಸಿಕೊಡಬಲ್ಲ. ಆದರೆ ಈತ ತನ್ನ ಕಡಿಮೆ ಪ್ರಮಾಣದ ಬಂಡವಾಳ ನಿಡುವ ಅಲ್ಪ ಲಾಭಕ್ಕೆ ಆಶೆಪಡುತ್ತಿರಲಿಲ್ಲ ಅಥವಾ ತನಗೆ ಓಟಿನ ಅಧಿಕಾರವನ್ನು ನೀಡಿದ ಬಂಡವಾಳದ ಮೊತ್ತದಲ್ಲಿನ ಹೆಚ್ಚಳ ಅಥವಾ ಹಾನಿಗೆ ಚಿಂತಿಸುತ್ತಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯು ಭಾರತವನ್ನು ಆಳುತ್ತಿತ್ತು. ಇದರ ಶೇರುಗಳನ್ನು ಹೊಂದಿರುವ ಈ ಕಂಪನಿ ಇದರ ಸಮೃದ್ಧಿ ಅಥವಾ ನಾಶದ ಬಗ್ಗೆ ಎಳ್ಳಷ್ಟು ಕಾಳಜಿ ಇರಲಿಲ್ಲ. ಇತರ ಯಾವ ಸಾಮ್ರಾಜ್ಯಗಳೂ ಬ್ರಿಟಿಷ್ ಸಾಮ್ರಾಜ್ಯದಷ್ಟು ತಾನು ಆಳುತ್ತಿರುವ ಪ್ರಜೆಗಳ ಕಷ್ಟಸುಖಗಳ ಬಗ್ಗೆ, ತನ್ನ ಸಂಸ್ಥಾನಗಳ ಸುಧಾರಣೆ ಅಥವಾ ಅಧೋಗತಿಯ ಬಗ್ಗೆ, ತನ್ನ ಆಡಳಿತದ ಹೊಗಳಿಕೆ ಅಥವಾ ತೆಗಳಿಕೆಯ ಬಗೆಗೆ, ಇತರ ಎಲ್ಲಾ ಸಾಮ್ರಾಜ್ಯಗಳು ಪಾಲಿಸುವ ನೀತಿ-ನಿಯಮಗಳ ಬಗೆಗೆ ಸಂಪೂರ್ಣವಾಗಿ ನಿಷ್ಕಾಳಜಿ ತೋರಿಸಲಿಲ್ಲ. ಒಟ್ಟಿನಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಯಾವ ರೀತಿಯಲ್ಲಿಯೂ ಭಾರತದ

ಆರ್ಥಿಕ ವ್ಯವಸ್ಥೆ ಪ್ರಗತಿಗೆ ಪೂರಕವಾಗಿರಲಿಲ್ಲ.[೧]

ಬಹುಶಃ ಮೇಲೆ ಹೇಳಿದುದು ಇಡೀ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಮೇಲೆ ಒಂದು ಬೀಸು ಆಪಾದನೆಯಾಗಿದೆ. ಇದು ಏನೇ ಇರಲಿ, ಕಂಪನಿಯ ಆಡಳಿತದ ಮೊದಲನೆಯ ವರ್ಷಗಳಲ್ಲಿ ಅದರಲ್ಲಿನ ಹೆಚ್ಚಿನ ಪ್ರಮಾಣದ ಭ್ರಷ್ಟಾಚಾರದಿಂದಾಗಿ ಈ ಆಪಾದನೆ ನಿಜವಾಗಿತ್ತು. ಆದರೆ ಅನಂತರದ ವರ್ಷಗಳಲ್ಲಿ ಇದು ಕ್ರಮೇಣವಾಗಿ ಕಡಿಮೆಯಾಗುತ್ತಾ ಹೋಯಿತು.

ಸ್ಥಳೀಯ ಜನರಿಗೆ ಭಾರತದ ಸ್ಥಾನೀಯ ಅಥವಾ ಉಚ್ಚಮಟ್ಟದ ಆಡಳಿತದಲ್ಲಿ ತಮ್ಮ ಅಭಿಪ್ರಾಯ ನೀಡಲು ಕಂಪನಿ ಸರಕಾರ ಯಾವ ಆಸ್ಪದ ನೀಡಿರಲಿಲ್ಲ. ಸ್ಥಳೀಯರಿಗೆ ಹೆಚ್ಚು ಸಂಬಳವಿರುವ ಆಫೀಸುಗಳಲ್ಲಿ ಒಳಹೋಗಲು ನಿಷೇಧವಿತ್ತು. ಆದುದರಿಂದ ಇವರಿಗೆ ಕಚೇರಿ ಕಾರಕೂನನ ಸ್ಥಾನಕ್ಕಿಂತ ಮೇಲೇರಲು ಆಸ್ಪದವಿರಲಿಲ್ಲ.

ಕಂಪನಿಯು ತನ್ನ ಎಲ್ಲಾ ಆಡಳಿತ ವರ್ಗವನ್ನು ರಾಜ್ಯಪಾಲ ಮತ್ತು ಅವರ ಅಧಿಕಾರಿಗಳನ್ನು ಭಾರತೀಯರ ಒಳಿತಿಗಾಗಿ ವಿಚಾರ ಮಾಡುವಂತೆ ತನ್ನ ಆಂತರಿಕ ಆಡಳಿತವನ್ನೂ ಬದಲಾಯಿಸಿತು. ಮಹಾನ್ ಕಾದಂಬರಿಕಾರ ಚಾರ್ಲ್ಸ್ ಡಿಕನ್ಸ್ ರಚಿಸಿರುವ "ಬಡವನ ಗೆಳೆಯ" ಅಥವಾ ಸರ್ ಜಾನ್ ಬೌಲಿ (Sir John Bowley)ಯ ಪಾತ್ರವನ್ನು ಈ ಅಧಿಕಾರಿಗಳು ಅಕ್ಷರಶಃ ಭಾರತದಲ್ಲಿ ವಾಸಿಸುವ ಪ್ರಜೆಗಳಿಗಾಗಿ, ಮತ್ತೊಮ್ಮೆ ವಹಿಸಿದರು. ಇವರುಗಳು, ಭಾರತೀಯನಿಗೆ "ನನ್ನ ಒಳ್ಳೆಯ ಸಂಗಾತಿಯೇ, ನಾನು ಹೇಳುವುದನ್ನು ಕೇಳು. ನಿನ್ನ ಸ್ವಂತದ ವ್ಯವಹಾರ ನನ್ನ ಜೊತೆಗೆ ಇದೆ, ನೀನು ನಿನ್ನ ಯಾವ ಸಮಸ್ಯೆಯ ಬಗೆಗೂ ವಿಚಾರ ಮಾಡುವ ತೊಂದರೆ ತೆಗೆದುಕೊಳ್ಳಬೇಡ. ನಾನು ನಿನ್ನ ಸಲುವಾಗಿ ವಿಚಾರ ಮಾಡುತ್ತೇನೆ, ನಿನಗೇನು ಒಳ್ಳೆಯದು ಎಂಬುದು ನನಗೆ ಗೊತ್ತಿದೆ. ನಿನ್ನ ಶಾಶ್ವತ ಪಾಲಕನಾಗಿದ್ದೇನೆ. ನಮ್ಮೆಲ್ಲರಿಗಿಂತ ಜಾಣನಾದ ಆ ದೇವನು ಈ ನನ್ನ ಹಾಗೂ ನಿನ್ನ ಬಾಂಧವ್ಯವನ್ನು ಏರ್ಪಡಿಸಿದ್ದಾನೆ. ನಾನೇನು ನಿನಗೆ ಮಾಡಬೇಕೋ ಅದನ್ನು ಮಾಡೇ ಮಾಡುತ್ತೇನೆ. ಬಡ ಮಾನವನ ಗೆಳೆಯನಂತೆ ಮತ್ತು ಅವನ ಪಾಲಕನಂತೆ ಎಲ್ಲಾ ಸಂದರ್ಭಗಳಲ್ಲಿ ನನ್ನ ಮೇಲೆಯೇ ನೀನು ಸಂಪೂರ್ಣವಾಗಿ ಅವಲಂಬಿಸಬೇಕೆಂಬ ಮಹತ್ತರ ಪಾಠವೊಂದನ್ನು ಪದೇ ಪದೇ ನಿನಗೆ ಮನದಟ್ಟಾಗುವಂತೆ ಕಲಿಸಿ ಅವನ ಮನಸ್ಸನ್ನು ಸುಶಿಕ್ಷಿತಗೊಳಿಸಲು ಪ್ರಯತ್ನಿಸುತ್ತೇನೆ. ಭಾರತೀಯರು ತಮ್ಮ ಬೇಕು–ಬೇಡಗಳ ಬಗ್ಗೆ ಯಾವ ಚಿಂತನೆಯನ್ನು ಮಾಡಬೇಕಾದ ಪ್ರಮೇಯವಿರುವುದಿಲ್ಲ."

ಬೌಲೇ(Bowleys)ಯಂಥವರು ನಿಸ್ಸಂದೇಹವಾಗಿ ಮೇಲೆ ವಿವರಿಸಿದ ವಿಚಾರವನ್ನು ಒಂದು ದೇವರ ಆಜ್ಞೆಯಂತೆ ಅನುಷ್ಠಾನದಲ್ಲಿ ತಂದರು. ಆದರೆ ದುರ್ದೈವ ಅವರ ವಿಚಾರ ಮತ್ತು ಕಾರ್ಯತತ್ಪರತೆ ನಿಸ್ಸಂದೇಹವಾಗಿ ಇಂಗ್ಲೆಂಡಿಗೆ ಅನುಕೂಲಿಸಿತು ಮತ್ತು ಭಾರತಕ್ಕೆ ವಿನಾಶಕಾರಿಯಾಯಿತು.

ಇಂಗ್ಲೆಂಡಿನ ೧೬೦೦ನೇ ಇಸವಿಯ ಪೂರ್ವ ಹಾಗೂ ನಂತರದ ಆರ್ಥಿಕ ಪರಿಸ್ಥಿತಿಯನ್ನು ಸ್ಮರಿಸಿದಲ್ಲಿ ಭಾರತ ಅಧಃಪತನ ಹೊಂದುತ್ತಿರುವಾಗ ಇಂಗ್ಲೆಂಡ್ ಹೇಗೆ ಆರ್ಥಿಕವಾಗಿ ಮುಂದೆ ಬಂದಿತು ಎನ್ನುವ ಸನ್ನಿವೇಶ ನಮ್ಮ ಮುಂದೆ ಬಂದು ನಿಲ್ಲುತ್ತದೆ ಮತ್ತು ಆ ದೇಶದ ಪ್ರಗತಿಗೆ ಭಾರತದ ಕೊಡುಗೆಯ ಸ್ವರೂಪ ಸಹ ನಮಗೆ ಮನವರಿಕೆಯಾಗುತ್ತದೆ.

ಸರ್ ಜೊಸಿಯಾ ಚೈಲ್ಡ್ (Sir Josiah child) ೧೫೪೫ರ ನಂತರದ ಇಂಗ್ಲೆಂಡಿನ ಹೆಚ್ಚುತ್ತಿರುವ

---

೧. "Wealth of Nations" (Cancer's Ed.) Vol. II, P. 139.

ಸಮೃದ್ಧಿಯ ಸ್ವಾರಸ್ಯಕರ ತುಲನಾತ್ಮಕ ವರ್ಣನೆಯನ್ನು ನೀಡಿದ್ದಾರೆ. ಅವರ ಪ್ರಕಾರ "೧೫೪೫ರಲ್ಲಿ ಇಂಗ್ಲೆಂಡಿನ ವ್ಯಾಪಾರ ಅಷ್ಟೇನೂ ಹೆಚ್ಚಿನ ಪ್ರಮಾಣದ್ದಾಗಿರಲಿಲ್ಲ ಮತ್ತು ಈ ದೇಶದ ವ್ಯಾಪಾರಿಗಳು ಸಂಕುಚಿತ ಮನೋಭಾವನೆಯನ್ನು ಉಳ್ಳವರಾಗಿದ್ದರು ಹಾಗೂ ಅವರ ಸಂಖ್ಯೆಯೂ ಸಹ ಹೆಚ್ಚಾಗಿರಲಿಲ್ಲ..." ಈ ಹಿಂದೆ ೧೦೦೦ ಪೌಂಡು ಹಣದಿಂದ ವ್ಯಾಪಾರ ಮಾಡುತ್ತಿದ್ದರು; ಆದರೆ ಇಂದು ೧೦,೦೦೦ ಪೌಂಡ್ ಹಣದಿಂದ ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಈ ಹೆಚ್ಚಳದ ಬಗ್ಗೆ ಯಾರಾದರೂ ಸಂಶಯಪಟ್ಟರೆ, ನಮ್ಮೊಂದಿಗಿರುವ ವಯಸ್ಸಾದ ವ್ಯಕ್ತಿಗೆ ೬೦ ವರ್ಷಗಳ ಹಿಂದೆ ತಾನು ತನ್ನ ಮಗಳಿಗೆ ೫೦೦ ಪೌಂಡ್ ಆಸ್ತಿಯನ್ನು ನೀಡಿದ್ದು ಹೆಚ್ಚೋ ಅಥವಾ ಇಂದು ನೀಡಿದ ೨೦೦೦ ಪೌಂಡ್ ಆಸ್ತಿ ಅಧಿಕ ಮೌಲ್ಯದ್ದೋ ಎಂದು ವಿಚಾರಿಸೋಣ ಮತ್ತು ಅಂದು ಒಬ್ಬ ಸಭ್ಯ ಮಹಿಳೆ ಕೇವಲ ಹತ್ತಿ ಬಟ್ಟೆಯ ಗೌನಿನಲ್ಲಿ ತಾವು ಒಳ್ಳೆಯ ಉಡುಪನ್ನು ಧರಿಸಿದ್ದೇವೆ ಎಂದು ಭಾವಿಸುತ್ತಿದ್ದಳು. ಆದರೆ ಇಂದು ಇಂತಹ ಉಡುಪನ್ನು ಮನೆಯ ಕೆಲಸದಾಳು ಸಹ ತೊಡಲು ನಾಚಿಕೆ ಪಡುತ್ತಾಳೆ. ಅಂದು ಒಂದು ಕೋಚ್ ಗಾಡಿ ಇತ್ತು. ಇಂದು ಇವುಗಳ ಸಂಖ್ಯೆ ೧೦೦ ಆಗಿದೆ. ನಮ್ಮ ಪೂರ್ವಜರು ೨೦ ವರ್ಷಗಳಲ್ಲಿ ಸರಕಾರಕ್ಕೆ ನೀಡುವ ತೆರಿಗೆಯ ಮೊತ್ತಕ್ಕಿಂತ ಅಧಿಕ ಮೊತ್ತದ ಹಣವನ್ನು ತೆರಿಗೆಯಾಗಿ ಒಂದು ವರ್ಷದಲ್ಲಿ ನಾವು ಸರಕಾರಕ್ಕೆ ನೀಡುತ್ತೇವೆ. ನಮ್ಮ ಸುಂಕದವರು ಬಹಳಷ್ಟು ಸುಧಾರಿಸಿದ್ದಾರೆ. ಅಂದರೆ ಈ ಹಿಂದೆ ಇದ್ದ ಒಬ್ಬ ಅಧಿಕಾರಿಗೆ ಈಗ ಆರು ಜನ ಅಧಿಕಾರಿಗಳಿದ್ದಾರೆ. ಆದರೂ ವ್ಯಾಪಾರದ ಮೊತ್ತ ಹಾಗೂ ವಸ್ತುಗಳ ದರಗಳ ಹೆಚ್ಚಳದ ಮುನ್ನ ಈ ಸುಧಾರಣೆ ಇನ್ನೂ ಕಡಿಮೆಯಾಗಿಯೇ ಇದೆ."[೧] ಒಟ್ಟಿನಲ್ಲಿ ೧೬೦೦ನೆಯ ಇಸವಿಯ ಹೊತ್ತಿಗೆ ಇಂಗ್ಲೆಂಡಿನ ವ್ಯಾಪಾರಿ ವರ್ಗ ಎಷ್ಟರಮಟ್ಟಿಗೆ ಶಕ್ತಿಯುತವಾಗಿತ್ತೆಂದರೆ "ಇವರನ್ನು ಎದುರು ಹಾಕಿಕೊಳ್ಳದಿದ್ದರೆ ಮೊದಲನೆಯ ಚಾರ್ಲ್ಸ್ ದೊರೆ ನಿರ್ನಾಮ ಹೊಂದುತ್ತಿರಲಿಲ್ಲ ಮತ್ತು ಇವರ ನೆರವಿಲ್ಲದೆ ಎರಡನೆಯ ಚಾರ್ಲ್ಸ್ ದೊರೆ ರಾಜ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ."[೨]

ಇಂಗ್ಲೆಂಡಿನ ಸಮೃದ್ಧಿಗೆ ಭಾರತ ಹಲವಾರು ವಿಧಗಳಲ್ಲಿ ತನ್ನ ಕೊಡುಗೆಯನ್ನು ನೀಡಿತು ಅಥವಾ ಭಾರತವನ್ನು (ಹಾಗೆ ಮಾಡುವಂತೆ) ಒತ್ತಾಯಿಸಲಾಯಿತು.

ಸಂಪನ್ಮೂಲವಾಗಿ ವ್ಯಾಪಾರವನ್ನು ಮೊದಲ ಸ್ಥಾನದಲ್ಲಿಡಬೇಕು. ಒಂದು ದೇಶದ ವ್ಯಾಪಾರ ಅನುಕೂಲಕರವಾಗಿಯೋ ಇಲ್ಲವೋ ಎಂಬುದು ಆ ದೇಶದ ಕಂಪನಿಗಳ ಶೇರು ಬೆಲೆಗಳು ನಿರ್ಧರಿಸುತ್ತವೆ. ಈ ಬೆಲೆಗಳನ್ನು ನಾನು ಇಂಗ್ಲೆಂಡಿನ ವ್ಯಾಪಾರದ ಮೌಲ್ಯಮಾಪಕಗಳೆಂದು ತೆಗೆದುಕೊಂಡರೆ ಅಂದು ಭಾರತದ ವ್ಯಾಪಾರವನ್ನು ಬಹು ಮೌಲ್ಯವೆಂದು ಆ ದೇಶ ಪರಿಗಣಿಸಿತ್ತು ಎನ್ನುವುದು ಮನದಟ್ಟಾಗುತ್ತದೆ. ಮೇಲಾಗಿ ಈಸ್ಟ್ ಇಂಡಿಯಾ ಕಂಪನಿಯ ಷೇರುಗಳ ಮೌಲ್ಯ ಭಾರತದ ವ್ಯಾಪಾರದ ಮೇಲೆ ಅವಲಂಬಿತವಾಗಿತ್ತು. ಮುಂದುವರಿದು, "ಇಡಿ ೧೮ನೆಯ ಶತಮಾನಾದ್ಯಂತ ಈ ಕಂಪನಿಯ ಷೇರುಗಳ ಬೆಲೆ ಯಾವಾಗಲೂ ಅದರ ನಿಜವಾದ ಮೌಲ್ಯಕ್ಕಿಂತ ಅಧಿಕವಾಗಿತ್ತು. (ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಇಂಗ್ಲೆಂಡಿನ ವ್ಯಾಪಾರ ಅಂದು ಅನುಕೂಲಕರವಾಗಿತ್ತು. ಹಾಗೂ ಇದಕ್ಕೆ ಭಾರತದ ವ್ಯಾಪಾರಿ ಸಂಬಂಧಗಳೇ ಕಾರಣವಾಗಿದ್ದವು) ಉದಾಹರಣೆಗೆ, ೧೭೨೦ರಲ್ಲಿ ಕಂಪನಿಯ ಷೇರಿನ ಬೆಲೆ ಎಷ್ಟು ಹೆಚ್ಚಾಗಿತ್ತೆಂದರೆ ಅದು ೪೫೦ ಪೌಂಡ್‌ಗಳಾಗಿತ್ತು. ಆದರೆ ೧೭೫೫ರ ಹೊತ್ತಿಗೆ ೧೪೮ ಪೌಂಡಿಗೆ ಇಳಿಯಿತು ಮತ್ತು ಈ ಇಳಿಕೆ

---

೧. "ಡಿಸ್ಕವರೀಸ್ ಆಫ್ ಟ್ರೇಡ್" (೧೭೭೫), ಪು. ೮, ೯, ೧೦.

೨. ಟಿ. ಬಿ. ಮೆಕಾಲೆ, ಹಿಸ್ಟರಿ ಆಫ್ ಇಂಗ್ಲೆಂಡ್, ಅಧ್ಯಾಯ III.

ಷೇರುಗಳ ಚಾಲ್ತಿ ಬೆಲೆಯನ್ನು ಅವುಗಳ ನಿಜವಾದ ಬೆಲೆಯ ಅತಿ ಸಮೀಪಕ್ಕೆ ಕೊಂಡೊಯ್ದಿತು. ಕಂಪನಿಯು ಷೇರುದಾರನಿಗೆ ನೀಡಿದ ಲಾಭ ಶೇಕಡಾ ೧೦ ಎಂದು ಪ್ರತಿ ಷೇರಿಗೆ ಶೇಕಡಾ ಐದೂವರೆ ಬಡ್ಡಿ ನೀಡಿದಂತಾಗುತ್ತದೆ. ಪ್ರತಿ ಷೇರಿನ ಬೆಲೆ ೧೭೬೬ರವರೆಗೆ ಇಳಿಯುತ್ತಾ ಹೋಯಿತು. ೧೭೬೬ರಲ್ಲಿ ಕಂಪನಿಗೆ ಬಂಗಾಲದಿಂದ ಬರುವ ಆದಾಯದಲ್ಲಿ ಹೆಚ್ಚಳ ಕಂಡುಬಂದು ಷೇರಿನ ಬೆಲೆಯು ಮತ್ತೆ ೨೩೩ ಪೌಂಡುಗಳಿಗೆ ಏರಿತು. ಮುಂದೆ ಕಂಪನಿಯು ಮಾಡಿದ ಕರ್ನಾಟಕದೊಂದಿಗೆ (Carnatic) ಯುದ್ಧದ ಪರಿಣಾಮವಾಗಿ, ಷೇರಿನ ಬೆಲೆ ೬೦% ಇಳಿಯಿತು. ೧೭೭೯ರಿಂದ ೧೭೮೮ರವರೆಗೆ ಷೇರಿನ ಬೆಲೆ ಯುಕ್ತವಾಗಿತ್ತು. ೧೭೮೪ರ ಮುಗ್ಗಟ್ಟಿನಲ್ಲಿ ಬೆಲೆ £ ೧೧೮.೧೦ od.,ಗೆ ಇಳಿದರೂ ಈ ವರ್ಷಗಳ ಅವಧಿಯಲ್ಲಿ ಅದರ ಸರಾಸರಿ ೧೫೦ ಪೌಂಡಾಗಿತ್ತು. ಪಿಟ್ಸ್ ಕಾಯಿದೆ (Pitt's Act) ಜಾರಿಯಲ್ಲಿ ಬಂದ ನಂತರ ಬೆಲೆಯಲ್ಲಿ ಸುಧಾರಣೆ ಕಂಡುಬಂದಿತು ಮತ್ತು ೧೭೮೭ರ ಹೊತ್ತಿಗೆ ಅದು £ ೧೮೫.೧೦S od., ಎಂದು ಸಾರಲಾಯಿತು. ಆನಂತರದ ವರ್ಷಗಳಲ್ಲಿ ಷೇರಿನ ಬೆಲೆಯ ಏರಿಳಿತಗಳು ಬಹಳಷ್ಟು ಕಡಿಮೆಯಾದವು. ಈ ಸಮಯದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಬರೀ ಒಂದು ವ್ಯಾಪಾರಿ ಸಂಸ್ಥೆಯಾಗಿರದೆ ಒಂದು ಸಾರ್ವಭೌಮ ಆಡಳಿತ ಶಕ್ತಿಯಾಗಿ ಬೆಳೆಯಿತು. ಇದು ತನ್ನ ಷೇರುದಾರರಿಗೆ ಯೋಗ್ಯ ದರದ ಬಡ್ಡಿಯನ್ನು ನೀಡುತ್ತಿತ್ತು ಮತ್ತು ಇದರ ಸ್ಟಾಕಿನ (Stock) ಬೆಲೆ ಇದರ ಲಾಭಗಳ ಬಂಡವಾಳೀಕರಣ ಮೌಲ್ಯಕ್ಕೆ ಸಮನಾಗಿತ್ತು. ಕಂಪನಿಯ ಷೇರಿನ ಬೆಲೆ ಇನ್ನೂ ಹೆಚ್ಚಾಗಬಹುದೆಂಬ ಊಹೆಗೆ ಯಾವ ಅವಕಾಶವಿರಲಿಲ್ಲ. ಇದರ ಆಯವ್ಯಯ ಪತ್ರ ಮುಂಬರುವ ವರ್ಷಗಳ ಭಾರತದ ಆಯವ್ಯಯ ಪತ್ರವನ್ನು ಹೋಲುತ್ತಿತ್ತು."[೧] ಕಂಪನಿಯು ತನ್ನ ಭಾರತೀಯ ಷೇರುದಾರರಿಗೆ ನೀಡಿದ ಲಾಭಗಳು ಸಹ, ಭಾರತ ಎಷ್ಟರ ಮಟ್ಟಿಗೆ, ಇಂಗ್ಲೆಂಡಿನ ಸಂಪತ್ತನ್ನು ಹೆಚ್ಚಿಸಿತು ಎಂಬುದನ್ನು ಸೂಚಿಸುತ್ತವೆ. "೧೭೦೯ರ ಕಂಪನಿಯ ಸಂಘಟನೆಯ ಪೂರ್ವದಲ್ಲಿ ಇಂಗ್ಲೆಂಡಿನ ಭಾರತದೊಂದಿಗಿನ ವ್ಯಾಪಾರ ಹೆಚ್ಚಿನ ಏರುಪೇರುಗಳಿಗೆ ತುತ್ತಾದರೂ ಸಹ ಯಾವಾಗಲೂ ಅದು ಇಂಗ್ಲೆಂಡಿಗೆ ಅಧಿಕ ಮೊತ್ತದ ಲಾಭವನ್ನು ನೀಡಿತು. ಉದಾಹರಣೆಗೆ, ೧೬೮೨ರಲ್ಲಿ ಈ ಲಾಭ ೧೬೦%ರಷ್ಟು ದೊಡ್ಡ ಪ್ರಮಾಣವನ್ನು ಮುಟ್ಟಿತು. ಆದರೆ ೧೭ನೆಯ ಶತಮಾನದ ಅಂತ್ಯದವರೆಗೆ ವಸ್ತುಸ್ಥಿತಿ ಬಹಳ ಭಿನ್ನವಾಗಿತ್ತು. ೧೭೦೯ರಲ್ಲಿ, ಕಂಪನಿಯ ಸಂಘಟನೆ ನಂತರ, ಲಾಭ ಕೇವಲ ೮%ರಷ್ಟು ವೃದ್ಧಿಯಾಯಿತು. ೧೭೧೦ರಲ್ಲಿ ಇದು ೯% ಆಗಿತ್ತು ಮತ್ತು ೧೭೬೮ರಿಂದ ೧೭೭೧ರ ಅವಧಿಯಲ್ಲಿ ಇದರ ಮೊತ್ತ ೯%ಕ್ಕಿಂತಲೂ ಹೆಚ್ಚಾಯಿತು. ೧೭೨೩ರಲ್ಲಿ ಫ್ರೆಂಚರ ಪೈಪೋಟಿಯಿಂದಾಗಿ ಲಾಭ ಮೊತ್ತದಲ್ಲಿ ಸ್ವಲ್ಪ ಇಳಿತ ಉಂಟಾಯಿತು ಮತ್ತು ತನ್ನ ಬಂಡವಾಳ ಮೊತ್ತದ ಹೆಚ್ಚಳದಿಂದಾಗಿ ಹಾಗೂ ೧೭೩೨ರಲ್ಲಿ ಸ್ವೀಡಿಷ್ ಕಂಪನಿಯ ಸ್ಥಾಪನೆಯಿಂದಾಗಿ ಲಾಭ ಇನ್ನೂ ೧% ಕಡಿಮೆಯಾಯಿತು. ೧೭೪೪ರಲ್ಲಿ ಲಾಭದ ಮೊತ್ತ ಪುನಃ ೮%ಕ್ಕೆ ಏರಿತು ಮತ್ತು ನಂತರದ ೧೧ ವರ್ಷಗಳ ಕಾಲ, ಕಂಪನಿಯು ಯೂರೋಪ್ ಹಾಗೂ ಕರ್ನಾಟಕ ಯುದ್ಧಗಳಲ್ಲಿ ತೊಡಗಿದ್ದರೂ, ಇದು ಏರುಪೇರಿಗೆ ಒಳಗಾಗಲಿಲ್ಲ. ೧೭೫೫ರಲ್ಲಿ ಕಂಪನಿಯ ವ್ಯವಹಾರಗಳಲ್ಲಿ ಉಂಟಾದ ಅಸ್ಥಿರ ಪರಿಸ್ಥಿತಿಗಳಿಂದಾಗಿ ಷೇರಿನ ಬೆಲೆ ೨% ಕೆಳಗಿಳಿಯಿತು. ೧೭೬೦ರಲ್ಲಿ ಬರ್ದವಾನ ಮತ್ತಿತರ ಭಾರತದ ಸಂಸ್ಥಾನಗಳು ಕಂಪನಿಯಲ್ಲಿ ಸೇರಿದವು ಮತ್ತು ಇದು ಕಂಪನಿಯ ಕಾರ್ಯಕಾರಿ ವೆಚ್ಚಗಳನ್ನು ಹೆಚ್ಚಿಸಿತು. ಇದರಿಂದಾಗಿ ಲಾಭದ ದರವನ್ನು ೬%ಗೆ ನಿಗದಿಪಡಿಸಲಾಯಿತು. ಲಾಭ ೬% ಇದ್ದಾಗ ಕಂಪನಿಯು ಪ್ರತಿ ವರ್ಷ ೧,೯೧,೬೪೪ ಪೌಂಡುಗಳ ಲಾಭವನ್ನು ಷೇರುದಾರರಲ್ಲಿ

೧. ಎಫ್. ಬಿ. ರಾಬಿನ್‌ಸನ್– "ಈಸ್ಟ್ ಇಂಡಿಯಾ ಕಂಪೆನಿ" ಪು. ೧೬೧

ವಿತರಿಸಿತು. ೧೭೬೭ರಲ್ಲಿ ಬಂಗಾಳದ ಕ್ಷೇತ್ರಿಯ ಸಾರ್ವಭೌಮತ್ವವನ್ನು ಕಂಪನಿಯು ಒಪ್ಪಿದ ಪರಿಣಾಮವಾಗಿ ಲಾಭದ ಪ್ರಮಾಣ ೧೦%ಗೆ ಏರಿಸಲಾಯಿತು ಮತ್ತು ವಿತರಿಸುವ ಲಾಭದ ಮೊತ್ತ ೩,೧೯,೪೦೮ ಪೌಂಡುಗಳಿಗೆ ಏರಿತು. ಲಾಭದಲ್ಲಿನ ಈ ಹೆಚ್ಚಳ ನ್ಯಾಯಯುತವಾಗಿರಲಿಲ್ಲ ಹಾಗೂ ಇದು ಭಾರತದ ಸಮೃದ್ಧಿಯ ಅತಿಶಯೋಕ್ತಿಯ ಮೌಲ್ಯದಿಂದಾಗಿ ಉಂಟಾಗಿತ್ತು. ಮುಂದೆ ಲಾಭ ಬರುತ್ತದೆ ಎಂಬ ಅನಿಸಿಕೆಯಿಂದ (ಈ ಕನಸು ನನಸಾಗಲಿಲ್ಲ) ಕಂಪನಿಯು ಹೆಚ್ಚಿನ ಲಾಭವನ್ನು ಸಾರಿತು ಮತ್ತು ಚಕ್ರಬಡ್ಡಿಯಿಂದ ತಂದ ಸಾಲದ ಹಣದಿಂದ ಲಾಭವನ್ನು ಷೇರುದಾರರಿಗೆ ನೀಡಿತು. ೧೭೬೭ರಿಂದ ೧೭೭೨ರ ಐದು ವರ್ಷಗಳ ಅವಧಿಯಲ್ಲಿ ಕಂಪನಿಯೂ ಒಳ್ಳೆಯ ದಿನಗಳು ಬಂದಾವು ಎನ್ನುವ ಆಶೆಗೆ ಅಂಟಿಕೊಂಡಿತ್ತು. ಆದರೆ ಅದು ನಿಜವಾಗಲಿಲ್ಲ ಮತ್ತು ೧೭೭೨ರಲ್ಲಿ ಕಂಪನಿಯು ಕುಸಿಯಿತು ಹಾಗೂ ಅದರ ಲಾಭ ೧೨ವರೆಯಷ್ಟರಿಂದ ೬%ಗೆ ಕೆಳಗಿಳಿಯಿತು. ಆಗ ಲಾರ್ಡ್ ನಾರ್ಥ್ ಕಂಪನಿಯ ವ್ಯವಹಾರದಲ್ಲಿ ಕೈಹಾಕಿದ. ಇದರಿಂದಾಗಿ ಕಂಪನಿಯು ತಾನು ಭವಿಷ್ಯದಲ್ಲಿ ಷೇರುದಾರರಿಗೆ ಕೊಡಬೇಕಾದ ಲಾಭ ಮಂತ್ರಿಗಳ ನಿಯಂತ್ರಣಕ್ಕೆ ಒಳಗಾಯಿತು. ಇದರಿಂದಾಗಿ ಕಂಪನಿಯ ಆದಾಯದಲ್ಲಿ ಹೆಚ್ಚಳ ಉಂಟಾಯಿತು ಮತ್ತು ಲಾಭ ವಿತರಣೆಯ ನಿಯಂತ್ರಣದ ಕಾಯಿದೆ (Regulating Act) ಜಾರಿಯಲ್ಲಿ ಬಂದಿತು ಹಾಗೂ ಲಾಭ ನಿಧಾನವಾಗಿ ಏರಲು ಆರಂಭಿಸಿತು. ೧೭೯೨ರಲ್ಲಿ ಕಂಪನಿಯು ಟಿಪ್ಪುವಿನ ಜೊತೆಗೆ ಒಂದು ಶಾಂತಿ ಒಪ್ಪಂದ ಮಾಡಿಕೊಂಡಿತು. ಇದರಿಂದಾಗಿ, ಕಂಪನಿಯು ೨,೪೦,೦೦೦ ಪೌಂಡುಗಳ ಆದಾಯವನ್ನು ಮತ್ತು ೧,೬೦೦,೦೦೦ ಪೌಂಡುಗಳ ನಷ್ಟ ಭರ್ತಿ(Indemnity)ಯನ್ನು ಪಡೆಯಿತು. ಕಂಪನಿಯ ಲಾಭದ ಮೊತ್ತ ೨% ಮತ್ತೆ ಏರಿತು. ಇದರಿಂದಾಗಿ ೧೮೦೨ರಲ್ಲಿ ಅದು ೧೧%ಗೆ ಏರಿತು."[೧] ಇದಲ್ಲದೆ "ಪೂರ್ವ ಇಂಡಿಸ್‌ನ (East Indies) ಜೊತೆಗೆ ವ್ಯಾಪಾರ ಮಾಡುತ್ತಿರುವ ಯುನೈಟೆಡ್ ಕಂಪೆನಿ ಆಫ್ ಮರ್ಚೆಂಟ್ಸ್(United Company of Merchants) ದಿಂದ ಹಣದ ಮೊತ್ತವನ್ನು ಇಂಗ್ಲಿಷ್ ಪ್ರಜೆಗಳಿಗೆ ನೀಡಲಾಯಿತು. ಈ ಮೊತ್ತ ೧೭೯೮ರಿಂದ ೧೮೦೩ರ ಅವಧಿಯಲ್ಲಿ ೨೩, ೩೪೫, ೨೧೫ ಪೌಂಡುಗಳಾಗಿತ್ತೆಂದು ಮಿ. ಮ್ಯಾಕ್‌ಫರಸನ್ ಅಂದಾಜಿಸಿದ್ದಾನೆ."[೨] ಭಾರತ, ಇಂಗ್ಲೆಂಡಿಗೆ ಅದು ಅಮೆರಿಕೆಯೊಂದಿಗೆ ಮಾಡಿದ ಯುದ್ಧದ ವೆಚ್ಚದ ಭಾರವನ್ನು ಅಂದರೆ, ೩,೮೫೮,೬೬೦ ಪೌಂಡುಗಳ ವೆಚ್ಚವನ್ನು, ಹೊರುವುದಲ್ಲದೆ, ಅಮೆರಿಕೆಯ ಶಿಕ್ಷಣದ ಕಾರ್ಯಕ್ರಮಗಳನ್ನು ಮುಂದುವರಿಸುವುದರ ಮೂಲಕ ನೆರವಿಗೆ ಬಂದಿತು. ಏಕೆಂದರೆ ಮಿ. ಯೇಲ್ ಕಾಲೇಜನ್ನು (Yale College) ಭಾರತದ ವ್ಯಾಪಾರದಿಂದ ಗಳಿಸಿದ ದುಡ್ಡಿನಲ್ಲಿ ತನ್ನ ಹೆಸರಿನಲ್ಲಿ ಸ್ಥಾಪಿಸಿದನು.

ಮೇಲಿನವುಗಳಲ್ಲದೆ, ಭಾರತದ ಇಂಗ್ಲೆಂಡಿಗೆ ಇತರ ನೇರ ಮತ್ತು ಪರೋಕ್ಷ ಲಾಭಗಳನ್ನು ಸೇಂಟ್ ಜಾರ್ಜ್ ಟಕ್ಕರ್‌ರು ಈ ಕೆಳಗೆ ವಿವರಿಸಿದ್ದಾರೆ.

(೧) "ಈಸ್ಟ್ ಇಂಡಿಯಾ ಕಂಪನಿಯು ಬೇರೆ ಬೇರೆ ಅವಧಿಗಳಲ್ಲಿ ತನ್ನ ವಸಾಹತು ದೇಶಗಳಿಂದ ಪಡೆದ ಸಾಲದ ಬಡ್ಡಿಯನ್ನು ಕೊಟ್ಟ ನಂತರ, ಪ್ರತಿವರ್ಷ ಒಂದೂವರೆ ದಶಲಕ್ಷ ಪೌಂಡ್ ಹೆಚ್ಚಿನ ಹಣವನ್ನು ಪಡೆಯಿತು ಮತ್ತು ಈ ಹಣದ ಆಧಿಕ್ಯ ಇಂಗ್ಲೆಂಡಿಗೆ ಭಾರತ ನೀಡಿದ ನೇರ ಕಾಣಿಕೆಯಾಗಿತ್ತು."

(೨) "ಯೂರೋಪಿನ ಬ್ರಿಟಿಷ್ ಪ್ರಜೆಗಳ ೪/೫ ಭಾಗದ ಪ್ರಾದೇಶಿಕ ಸಾಲ (ಇದು ೨ ದಶಲಕ್ಷ

---

೧. ಎಫ್.ಪಿ. ರಾಬಿನ್‌ಸನ್ "ಈಸ್ಟ್ ಇಂಡಿಯಾ ಕಂಪನಿ", ಪುಟ ೧೪೫, ೧೬೦, ೧೬೧–೨ cf.
೨. Cf"ಯೂರೋಪಿಯನ್ ಕಾಮರ್ಸ್ ವಿತ್ ಇಂಡಿಯಾ" (೧೮೧೨) ಅನುಬಂಧ ಸಂಖ್ಯೆ ೨.

ಪೌಂಡಿಗೆ ಸಮೀಪವಾಗಿತ್ತು) ಮತ್ತು ಸಾಲದ ವಾರ್ಷಿಕಬಡ್ಡಿಯ ದೊಡ್ಡ ಪ್ರಮಾಣ ಭಾರತವು ತಾಯಿನಾಡಿಗೆ ನೀಡಿದ ಪರೋಕ್ಷ ಕಾಣಿಕೆ ಎಂದು ತಿಳಿದುಕೊಳ್ಳಬಹುದು." "ಜನರ ಉಳಿತಾಯ ಮತ್ತು ವ್ಯಾಪಾರದಿಂದ ಬಂದ ಲಾಭ ಮುಂತಾದವುಗಳನ್ನು ಒಳಗೊಂಡ ಈ ಪರೋಕ್ಷ ಅಥವಾ ಖಾಸಗಿ ಕಾಣಿಕೆಯು ಅಂದಿನ ಅವಧಿಯಲ್ಲಿ (ಅಂದರೆ ೧೮೨೧ರಲ್ಲಿ) ಒಂದು ವರ್ಷಕ್ಕೆ ೩ ದಶಲಕ್ಷ ಪೌಂಡ್ ಆಗಿತ್ತೆಂದು ಟಕ್ಕರರು ಅಂದಾಜು ಮಾಡಿದ್ದಾರೆ."

(೩) "ಭಾರತದ ಹಡಗುಗಳಿಂದ (ಅಂದರೆ ಭಾರತದಲ್ಲಿ ತಯಾರಿಸಲಾದ ಆದರೆ ಪೂರ್ವದ ಸಮುದ್ರದ (Eastern Seas)ಒಂದು ಬಂದರಿನಿಂದ ಇನ್ನೊಂದು ಬಂದರಿಗೆ ವಸ್ತುಗಳನ್ನು ಸಾಗಿಸಲು ಉಪಯೋಗಿಸಲಾದ ಹಡಗುಗಳು) ಗ್ರೇಟ್ ಬ್ರಿಟನ್ನಿಗೆ ಮುಟ್ಟಿದ ಹಣದ ಮೊತ್ತವೇನು ಕಡಿಮೆ ಪ್ರಮಾಣದ್ದಾಗಿದ್ದಿಲ್ಲ.

(೪) "ಇಂಗ್ಲೆಂಡ್ ಭಾರತವನ್ನು ತನ್ನ ವಸಾಹತನ್ನಾಗಿ ಹೊಂದಿರುವುದು ಅದರ ಒಂದು ವರ್ಗಕ್ಕೆ, ಒಂದು ಸಮಾಜಕ್ಕೆ, ಅಂದರೆ ಅಲ್ಲಿನ ಅಧಿಕಾರಿಗಳಿಗೆ ಒಂದು ಬಹಳಷ್ಟು ಅನುಕೂಲಕರ ಹಾದಿಯನ್ನು ಮಾಡಿಕೊಟ್ಟಿತು. (ಇವರು ಬೇರೆ ಯಾವ ದೇಶಕ್ಕೂ ಹೋಗುವುದು ಒಂದು ಕಠಿಣವಾದ ಕೆಲಸವಾಗಿತ್ತು ಮತ್ತು ತಮ್ಮ ದೇಶದಲ್ಲಿ ಅವರಿಗೆ ಸರಿಯಾದ ಕೆಲಸಗಳು ಸಿಕ್ಕಿರಲಿಲ್ಲ)... ಇವರೆಲ್ಲರಿಗೆ ಭಾರತದ ವಿವಿಧ ರಂಗಗಳಲ್ಲಿ ತಮಗೆ ಮತ್ತು ತಮ್ಮ ತಾಯಿನಾಡಿಗೆ ಲಾಭ ತರುವಂತೆ, ಉದ್ಯೋಗಾವಕಾಶಗಳನ್ನು ನೀಡುವುದು ಇಂಗ್ಲೆಂಡಿಗೆ ಸುಲಭವಾಯಿತು."

ಮೇಲೆ ವಿವರಿಸಿದ ನಾಲ್ಕು ವಿಧಗಳಿಂದ ಮಾತ್ರ ಇಂಗ್ಲೆಂಡಿನ ಸಮೃದ್ಧಿಗೆ ಭಾರತ ತನ್ನ ಕೊಡುಗೆಯನ್ನು ನೀಡಿತು ಎನ್ನಲು ಬರುವಂತಿಲ್ಲ.

ಇವುಗಳಲ್ಲದೆ ಇನ್ನಿತರ ಹಲವಾರು ರೀತಿಯಲ್ಲಿ ಭಾರತ ಇಂಗ್ಲೆಂಡಿನ ಸಮೃದ್ಧತೆಗೆ ತನ್ನ ಕೊಡುಗೆಯನ್ನು ನೀಡಿತು. ಆದರೆ ಇವೆಲ್ಲವುಗಳು ಪರೋಕ್ಷ ವಿಧಾನಗಳಾಗಿದ್ದವು. ಪರೋಕ್ಷ ವಿಧಾನಗಳಿಂದಲ್ಲದೆ, ಇಂಗ್ಲೆಂಡ್ ಭಾರತಕ್ಕೆ ಹಾನಿ ಉಂಟುಮಾಡಲು ಕೆಲವು ಅಧಿಕ ನೇರ ಹಾಗೂ ತೀಕ್ಷ್ಣ ಹಾದಿಗಳನ್ನು ಅನುಸರಿಸಿತು. ಇವುಗಳನ್ನು ಇಂಗ್ಲೆಂಡ್ ತನ್ನ ರಕ್ಷಣಾತ್ಮಕ ವ್ಯಾಪಾರಿ ನೀತಿ(Protective Trade System)ಯ ಮುಖಾಂತರ ಅನುಷ್ಠಾನದಲ್ಲಿ ತಂದಿತು. ಇಂಗ್ಲೆಂಡ್, ಒಂದು ಸಿದ್ಧವಸ್ತುಗಳನ್ನು ಉತ್ಪಾದಿಸುವ ದೇಶದಂತೆ, ಭಾರತದ ವಸ್ತುಗಳೊಂದಿಗೆ ಯಾವ ವಿಧದಲ್ಲಿಯೂ ಪೈಪೋಟಿ ಮಾಡಲು ಸಮರ್ಥವಾಗಿರಲಿಲ್ಲ. ಇಲ್ಲಿ, ಭಾರತ ಇಂಗ್ಲೆಂಡಿಗಿಂತ ಶ್ರೇಷ್ಠವಾಗಿತ್ತು. ಭಾರತದ ವಸ್ತು (ಪೈಪೋಟಿಯಿಂದ ತನ್ನ ವಸ್ತುಗಳನ್ನು)ಗಳು ಸಾಗಾಣಿಕೆ ವೆಚ್ಚವನ್ನು ಹೊಂದಿದ್ದರೂ ಇಂಗ್ಲೆಂಡಿನ ಮಾರುಕಟ್ಟೆಯಲ್ಲಿ ಇಂಗ್ಲಿಷ್ ವಸ್ತುಗಳನ್ನು ಓಡಿಸಿದ್ದವು. ಇಂತಹ ಭಾರತೀಯ ವಸ್ತುಗಳ ಪೈಪೋಟಿಯನ್ನು ತೊಡೆದು ಹಾಕಲು ಇಂಗ್ಲೆಂಡ್ ಒಂದು ಪ್ರಬಲ ರಕ್ಷಣಾತ್ಮಕ ನೀತಿ(Protectionist Policy)ಯನ್ನು ಅನುಸರಿಸಿತು.

ಈ ಕೆಳಗಿನ ಅಂಕಿಸಂಖ್ಯೆಗಳು ಭಾರತೀಯ ವಸ್ತುಗಳ ಮೇಲೆ ಎಷ್ಟು ಹೆಚ್ಚಿನ ಸುಂಕವನ್ನು ಹೇರಲಾಗಿತ್ತು ಎಂಬುದನ್ನು ಸೂಚಿಸುತ್ತವೆ.

| | | |
|---|---|---|
| ೧. | ಆಬೋಕ್ ಸುಂಕ ಶೇಕಡ | ೨೮೦ |
| ೨. | ಇಂಗು | ೬೨೨ |
| ೩. | ಬೆಂಜಾಮಿನ್ | ೩೭೩ |
| ೪. | ಬೋರ್‍ಯಾಕ್ಸ್ | ೧೦೨ |
| ೫. | ಏಲಕ್ಕಿ | ೨೬೬ |
| ೬. | ಕ್ಯಾಸಿಬಡ್ | ೧೪೦ |
| ೭. | ಲವಂಗ | ೨೪೦ |
| ೮. | ಕೊಲಕ್ಯೂಲಸ್ ಇಂಡಿಕಸ್ | ೧,೪೦೦ |
| ೯. | ಕಾಫಿ | ೩೭೩ |
| ೧೦. | ಕ್ಯೂಬೆಟ್ಸ್ | ೩೨೦ |
| ೧೧. | ಡ್ರ್ಯಾಗನ್ ಬ್ಲಡ್ | ೪೬೫ |
| ೧೨. | ಗ್ಯಾಂಬೇಜ್ | ೧೮೭ |
| ೧೩. | ಅಮೋನಿಯಾಕ್ ಗೋಂದು | ೪೦೬ |
| ೧೪. | ಮಿರ್ಘ್ | ೧೮೭ |
| ೧೫. | ನ್ಯಾಕ್ಸ್ ವೋಮಿಕಾ | ೨೬೬ |
| ೧೬. | ಕ್ಯಾಸಿಯಾ ಎಣ್ಣೆ | ೩೪೩ |
| ೧೭. | ಸಿನ್ನಾಮನ್ ಎಣ್ಣೆ | ೪೦೦ |
| ೧೮. | ಮೇಸ್ | ೩,೦೦೦ |
| ೧೯. | ನಟ್‌ಮೆಗ್ | ೨೫೦ |
| ೨೦. | ಬಿಳಿ ಮೆಣಸು | ೪೦೦ |
| ೨೧. | ಸಾಮಾನ್ಯ ರುಬಾರ್ಬ್ | ೫೦೦ |
| ೨೨. | ಜಾವಾ ಅಕ್ಕಿ | ೧೫೦ |
| ೨೩. | ರಮ್ (ಬಂಗಾಲ್) | ೧,೧೪೨ |
| ೨೪. | ಸ್ಯಾಗೋ ಪೆರ್ಲ್ | ೧೦೦ |
| ೨೫. | ಬಂಗಾಳದ ಬಿಳಿ ಸಕ್ಕರೆ | ೧೧೮ |
| ೨೬. | ಬಿಳಿ ಡಿಟೊ | ೧೨೮ |
| ೨೭. | ಕಂದು ಡಿಟೊ | ೧೫೨ |

ಆದರೆ ಇಂಗ್ಲೆಂಡ್ ಈ ಅಧಿಕ ಸುಂಕದಿಂದ ತೃಪ್ತವಾಗಲಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅದು ಭಾರತದ ವಸ್ತುಗಳನ್ನು (ಅಂತಹದೇ ಜಗತ್ತಿನ ಇತರ ಭಾಗಗಳ ವಸ್ತುಗಳಿಗಿಂತ) ಹೆಚ್ಚಿನ ಆಮದು ಸುಂಕವನ್ನು ಭರಿಸುವಂತೆ ವೈರತ್ವದ (invidivious) ತಾರತಮ್ಯತೆಗೆ ಗುರಿಮಾಡಿತು. ಮಾಕ್ಲೋಚ್‌ರು (M'Aclloch's) ನೀಡಿದ ವಾಣಿಜ್ಯ ಭಾಷಾಂತರ ಕೋಶದಲ್ಲಿ ಈಸ್ಟ್ ಇಂಡೀಸ್ ಮತ್ತು ವೆಸ್ಟ್ ಇಂಡೀಸ್ ಹಾಗೂ ಇನ್ನಿತರ ವಸಾಹತುಗಳ ಮೇಲಿನ ಆಮದು ಸುಂಕದ ಅಂಕಿಸಂಖ್ಯೆಗಳು ಇಂತಹ ತಾರತಮ್ಯವನ್ನು ಸೂಚಿಸುತ್ತವೆ.

| ವಸ್ತುಗಳು | ಪೂರ್ವ ಇಂಡೀಸ್ | | | ಪಶ್ಚಿಮ ಇಂಡೀಸ್ ಮುಂತಾದವು | | |
|---|---|---|---|---|---|---|
| | ಪೌ | ಷಿ | ಪೆ | ಪೌ | ಷಿ | ಪೆ |
| ೧. ಸಕ್ಕರೆ ಒಂದು ಕ್ವಿಂಟಾಲ್‌ಗೆ | ೧ | ೧೨ | ೦ | ೧ | ೪ | ೦ |
| ೨. ಕಾಫಿ ಪೌಂಡ್‌ಗೆ | ೦ | ೦ | ೯ | ೦ | ೦ | ೪ |
| ೩. ಸಿಹಿಗೊಳಿಸಿದ ಸ್ಪಿರಿಟ್ ಗ್ಯಾಲನ್ನಿಗೆ | ೧ | ೧೦ | ೦ | ೧ | ೦ | ೦ |
| ೪. ಸಿಹಿಗೊಳಿಸದ ಸ್ಪಿರಿಟ್ ಗ್ಯಾಲನ್ನಿಗೆ | ೦ | ೧೫ | ೦ | ೦ | ೮ | ೬ |
| ೫. ಹುಣಿಸೆ ಹಣ್ಣು ಪೌಂಡಿಗೆ | ೦ | ೦ | ೬ | ೦ | ೦ | ೨ |
| ೬. ಸಕ್ಸೇಡ್ಸ್ ಪೌಂಡಿಗೆ | ೦ | ೦ | ೬ | ೦ | ೦ | ೩ |
| ೭. ತಂಬಾಕು ಪೌಂಡಿಗೆ | ೦ | ೩ | ೦ | ೦ | ೨ | ೯ |
| ೮. ತೇಗದ ಮರ (೮" ಇಂಚಿಗೆ ಕಡಿಮೆ) ಒಂದು ಲೋಡಿಗೆ | ೧ | ೧೦ | ೦ | ೦ | ೧೦ | ೦ |
| ೯. ಮರ– ನಿಗದಿತವಲ್ಲದ ಆಡ್‌ವ್ಯಾಲೋರಮ್ | ೨೦ ಪರ್ಸೆಂಟ್ | | | ೫ ಪರ್ಸೆಂಟ್ | | |

ಭಾರತೀಯ ವಸ್ತುಗಳ ಮೇಲಿನ ಇಂಗ್ಲಿಷ್ ಸುಂಕ ತಾರತಮ್ಯದಿಂದ ಕೂಡಿತ್ತಲ್ಲದೆ ಅವುಗಳನ್ನು ಇಂಗ್ಲೆಂಡಿನಲ್ಲಿ ಯಾವ ಉಪಯೋಗಕ್ಕಾಗಿ ಬಳಸುತ್ತಿದ್ದರು ಎನ್ನುವುದರ ಮೇಲೆ ಸಹ ಬೇರೆ ಬೇರೆಯಾಗಿತ್ತು. ಈ ವಿಷಯ ೧೮೧೩ರಲ್ಲಿ ಹೌಸ್ ಆಫ್ ಕಾಮನ್ಸ್‌ದಲ್ಲಿ ಮಿ. ಜಾನ್ ರ್‍ಯಾಂಕಿಂಗ್‌ರ ಪ್ರಶ್ನೆಗಳಿಗೆ ನೀಡಲಾದ ಈ ಉತ್ತರಗಳಿಂದ ಗೊತ್ತಾಗುತ್ತದೆ.

ಪ್ರ. "ಈಸ್ಟ್ ಇಂಡಿಯಾ ಹೌಸ್‌ನಲ್ಲಿ ಮಾರಲಾದ ತುಕಡಿ ವಸ್ತುಗಳ ಮೇಲೆ ಹಾಕಿರುವ ಬೆಲೆಗೆ ತಕ್ಕಂತೆ (ad valorem) ಸುಂಕ ಎಷ್ಟಿದೆ ಎಂದು ಹೇಳುವಿರಾ?"

ಉತ್ತರ: "ಕ್ಯಾಲಿಕೊಸ್ (Calicoes) ಎಂಬ ವರ್ಗದ ವಸ್ತುವಿನ ಮೇಲಿನ ಆಮದು ಸುಂಕ ಶೇಕಡಾ £ ೩.೬S. ೮d ಮತ್ತು ಒಂದು ವೇಳೆ ಈ ವಸ್ತುವನ್ನು ಇಂಗ್ಲಿಷರು ಉಪಭೋಗಕ್ಕೆ ಉಪಯೋಗಿಸಿದ್ದಲ್ಲಿ ಈ ವಸ್ತು ಶೇಕಡಾ £೬೮.೬S ೮d% ಹೆಚ್ಚಿನ ಸುಂಕಕ್ಕೆ ಒಳಗಾಗುತ್ತದೆ."

"ಮಸ್ಲಿನ್ ಬಟ್ಟೆಯ ಆಮದು ೧೦% ಸುಂಕವನ್ನು ಕೊಡಬೇಕಾಗುತ್ತದೆ. ಒಂದು ವೇಳೆ ಈ ವಸ್ತುವನ್ನು ಇಂಗ್ಲಿಷರು ಉಪಭೋಗಿಸಿದ್ದಲ್ಲಿ ಇದು £೩೬S ೮d% ಕೊಡ ಬೇಕಾಗುತ್ತದೆ. ಇವೆರಡು ವಸ್ತುಗಳು ಕೇವಲ ರಫ್ತಿಗಾಗಿರುತ್ತವೆ."

"ಪಾರ್ಲಿಮೆಂಟಿನ ಈ ಅಧಿವೇಶನದಲ್ಲಿ ಒಟ್ಟಿಗೆ (consolidated) ಸುಂಕಗಳ ಮೇಲೆ ಮತ್ತೆ ೨೦% ಹೊಸ ಸುಂಕವನ್ನು ಹೇರಲಾಗುವುದು; ಇದರಿಂದಾಗಿ ಇಂಗ್ಲಿಷರ ಉಪಭೋಗಕ್ಕಾಗಿ ಇರುವ ಕ್ಯಾಲಿಕೊ ಬಟ್ಟೆಯ ಮೇಲಿನ ಸುಂಕ ಮತ್ತು £ ೭೮,೬s, ೩d% ಉಪಭೋಗಕ್ಕಾಗಿರುವ ಮಸ್ಲಿನ್ ಬಟ್ಟೆಯ ಮೇಲಿನ ಸುಂಕ £ ೩೧,೬s, ೮d% ಆಗಲಿದೆ.

ಮೇಲೆ ವಿವರಿಸಿದ ಭಾರತೀಯ ವಸ್ತುಗಳ ಮೇಲಿನ ಸುಂಕಗಳು ಇಂಗ್ಲಿಷ್ ಪಾರ್ಲಿಮೆಂಟ್ ಹಾಕಿದ ನೇರ ಹಾಗು ಪರೋಕ್ಷ ಸುಂಕಗಳಾಗಿದ್ದವು. ಇದರ ಜೊತೆಗೆ ಬ್ರಿಟಿಷ್ ರಾಜ್ಯಪಾಲರು ಹಾಗೂ ಚಕ್ರಾಧಿಪತಿಗಳು (Governor Generals) ಸಹ ಭಾರತೀಯ ವಸ್ತುಗಳ ಮೇಲೆ ಹೆಚ್ಚಿನ ಸುಂಕ ಹೇರುವುದರಲ್ಲಿ ಪಾರ್ಲಿಮೆಂಟಿಗಿಂತ ಯಾವ ರೀತಿಯಲ್ಲಿಯೂ ಹಿಂದೆ ಬೀಳಲಿಲ್ಲ. ಈ ವಿವಿಧ ರೀತಿಯ ಶೋಷಣೆಯ ಸ್ವರೂಪವನ್ನು ಅರಿಯಲು ನಾವು ಸರ್ W.W. ಹಂಟರರು ಯೂರೋಪಿನ ಜನರ ನೀತಿಯ ಬಗ್ಗೆ ಹೇಳಿದ ಮಾತನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕಾಗುತ್ತದೆ. "ಯಾವಾಗ ಯೂರೋಪಿನ ಜನರು ಭಾರತದವರ ಜೊತೆಗೆ ಸಂಪರ್ಕದಲ್ಲಿ ಬಂದರೋ ಆಗ ತಾನೇ ಅವರು ಮಧ್ಯಕಾಲೀನ ಶೋಷಣೆಯ ಪಂಥದಿಂದ ಹೊರಬಂದಿದ್ದರು ಮತ್ತು ಮಧ್ಯಕಾಲೀನ ಪರಿಭಾವನೆಗಳನ್ನು ತಾವು ಆಳುವ ಏಶಿಯಾದಲ್ಲಿ ಮೊದಲಬಾರಿಗೆ ಪ್ರಯೋಗ ಮಾಡಿದರು. ಯೂರೋಪಿಯನ್ನರು ತಾವು ಗೆದ್ದ ಪೂರ್ವದ ಜಗತ್ತಿನ ಮೇಲೆ ಮಧ್ಯಯುಗದ ಶೋಷಣೆಯನ್ನು ಹೇರಿದರು. ಆದುದರಿಂದಲೇ ಅವರು ಭಾರತದ ವ್ಯಾಪಾರದಲ್ಲಿ ನೆರೆಯವನನ್ನೂ ಭಿಕ್ಷುಕನನ್ನಾಗಿ ಮಾಡುವ ಮಧ್ಯಯುಗದ ವ್ಯಾಪಾರಿ ಪದ್ಧತಿಯನ್ನು ಬೆಳೆಸಿದರು. ಈ ವ್ಯಾಪಾರಿ ಪದ್ಧತಿಗಳು ಮತ್ತು ವಿಧಗಳು ಜನಪ್ರಿಯವಾಗಿದ್ದಾಗ ಪೋರ್ಚುಗಲ್, ಸ್ಪೇನ್ ಮತ್ತು ಹಾಲೆಂಡ್ ದೇಶಗಳು ಏಶಿಯಾ ಖಂಡದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಭಾರತದಲ್ಲಿನ ಇಂಗ್ಲಿಷ್ ಸಾಮ್ರಾಜ್ಯದ ಏರಿಕೆ ಇವರ ನಂತರ ಬಂದಿತು ಮತ್ತು ಆಗ ಅದು ಯೂರೋಪಿನ ೧೬ನೆಯ ಶತಮಾನದ ಆದರ್ಶಗಳನ್ನು ಹೊಂದದೆ ಇವುಗಳ ಸ್ಥಳದಲ್ಲಿ ೧೮ನೆಯ ಶತಮಾನದ ಆದರ್ಶಗಳನ್ನು ಹೊಂದಿತ್ತು. ಇಂಗ್ಲಿಷರ ಈ ಆದರ್ಶಗಳು ಅದರ ಅರೆಮಧ್ಯಕಾಲೀನ ಕ್ರಿಶ್ಚಿಯನ್ ರಾಜ್ಯಕ್ಕೆ ಹೋಲುವ ಬದಲು ಆಧುನಿಕ ಕ್ರಿಶ್ಚಿಯನ್ ರಾಜ್ಯಕ್ಕೆ ಸಂಬಂಧಿಸಿದ್ದವು.

ಇಂಗ್ಲೆಂಡಿಗೂ ಸಹ... ಭಾರತೀಯ ವ್ಯಾಪಾರದಲ್ಲಿನ ತನ್ನ ಏಕಸ್ವಾಮ್ಯತೆ ಆಳುವವರ ಲಾಭಕ್ಕಾಗಿ ಭಾರತ ಸರಕಾರವನ್ನು ಉಪಯೋಗಿಸುವಿಕೆ... ಮುಂತಾದ ಪರಂಪರೆಗಳನ್ನು ತೊಡೆದುಹಾಕುವುದು ಕಷ್ಟಕರವಾಗಿತ್ತು."[೧] "ಭ್ರಷ್ಟ ಮತ್ತು ಕೆಲವೇ ಕೆಲವು ದುಷ್ಟರ ಕೈಯಲ್ಲಿರುವ ನ್ಯಾಯಾಂಗದಲ್ಲಿ ಸ್ವಾರ್ಥವೇ ಮುಖ್ಯವಾಗಿತ್ತು ಮತ್ತು ನೀತಿ ನಿಯಮಗಳನ್ನು ಬಿಟ್ಟೇ ರಾಜಕೀಯವನ್ನು ಅನುಷ್ಠಾನದಲ್ಲಿ ತರಲಾಗುತ್ತಿತ್ತು... ಅಂದು ಮನುಷ್ಯರು ಕೇವಲ ಭೌತಿಕ ಉದ್ದೇಶಗಳ ಸಾಧನೆಗಾಗಿಯೇ ತಮ್ಮ ತಮ್ಮಲ್ಲಿ ಕಚ್ಚಾಡುತ್ತಿದ್ದರು. ಬಂಗಾಳ ಅತಿ ದೊಡ್ಡ ವ್ಯಕ್ತಿ ಆಶೋತ್ತರಗಳನ್ನು ಆಳಿತು, ಮತ್ತು ಭಾರತ ಅಂದು ಈ ಬಂಗಾಳದ ದುಷ್ಟ ಶಕ್ತಿಯ ಹಲವಾರು ನಿದರ್ಶನಗಳನ್ನು ನೀಡಿತು."[೨]

೧೭೫೭ರ ಪ್ಲಾಸಿಯ ಕದನ ಮತ್ತು ೧೭೬೧ರ ವಾಂಡೆವಾಷ್ ಕದನಗಳು ಇಂಗ್ಲಿಷರಿಗೆ ಕ್ರಮವಾಗಿ ಬಂಗಾಳ ಹಾಗೂ ಮದ್ರಾಸ್ ಪ್ರದೇಶಗಳ ಮೇಲೆ ತಮ್ಮ ಸಾರ್ವಭೌಮತ್ವವನ್ನು ನೀಡಿದವು ಮತ್ತು ಇವೆರಡೂ ಜಯಗಳನ್ನು ಅವರು ತಮ್ಮ ಖಾತೆಗೆ ತಿರುಗಿಸಿದರು. ಪ್ಲಾಸಿ ಕದನದಲ್ಲಿ ಜಯಕ್ಕೆ ಕಾರಣನಾದ ಕ್ಲೈವ್ ನಿಜವಾಗಿಯೂ ಒಬ್ಬ ರಾಜನನ್ನು ತಯಾರಿ ಮಾಡುವವನಾದ (King-maker). ಈತ ತನಗೆ ಹೆಚ್ಚಿನ ಸವಲತ್ತುಗಳನ್ನು ನೀಡುವ ನವಾಬರಿಗೆ ತನ್ನ ಬೆಂಬಲವನ್ನು ಸೂಚಿಸಿದ. ಅವನು ನವಾಬರಿಂದ ಅಧಿಕ ಪ್ರಮಾಣದ ಲಂಚವನ್ನು ಮತ್ತು ಜಹಗೀರುಗಳನ್ನು ತೆಗೆದುಕೊಂಡಿದ್ದಲ್ಲದೆ ಗೃಹ (Home) ಅಧಿಕಾರಿಗಳ

---

೧. ಡಬ್ಲ್ಯು. ಡಬ್ಲ್ಯು. ಹಂಟರ್ "ಎ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ" ಸಂ. ೧, ಪು. ೬.
೨. ಜಿ.ಬಿ. ಹರ್ಟ್ಜ್ "ದ ಓಲ್ಡ್ ಕಲೋನಿಯಲ್ ಸಿಸ್ಟಮ್" ಪು. ೪.

ಆಸೆಗೆ ವಿರುದ್ಧವಾಗಿ ಉಪ್ಪಿನ ಏಕಸ್ವಾಮ್ಯತೆಯನ್ನು ನಿಯಂತ್ರಿಸಿದ, ಆದರೆ ಸರಕಾರಿ ನೌಕರರಿಗೆ ಅಂದರೆ ಬರ್ಕ್‌ರೆ ಹೇಳಿದಂತೆ "ಮುಂದೆ ಸಾಗುವ ಮತ್ತು ಬೇಟೆಗೆ ಆಹಾರವಾಗುವ ಹಕ್ಕಿಗಳಿಗೆ" ("birds of prey & passage") ಸ್ಥಳೀಯ ಜನರಿಗೆ ಕೆಲವೊಂದು ವ್ಯಾಪಾರಗಳನ್ನು ಬಿಟ್ಟು ಇನ್ನೂ ಕೆಲವು ವ್ಯಾಪಾರಗಳಲ್ಲಿ ಏಕಸ್ವಾಮ್ಯತೆಯನ್ನು ಪಡೆಯಲು ಅನುಕೂಲವಾಗುವಂತೆ ಸರ್ಕಾರಿ ನೌಕರರಿಗೆ ವ್ಯಾಪಾರ ಮಾಡುವ ಸಂಪೂರ್ಣ ಸ್ವಾತಂತ್ರ್ಯ ನೀಡಿದ. ಅಂದಿನ ಜನರ ಬಡತನ ಮತ್ತು ಕ್ಲೈವನ ಸಂಪತ್ತನ್ನು ಮೆಕಾಲೆಯು ಈ ರೀತಿ ವರ್ಣಿಸಿದಾನೆ. ಇವನು, "ಕ್ಲೈವ್‌ನಿಗೆ ಸಂಪತ್ತು ಕೂಡಿಸುವಲ್ಲಿ ಯಾವ ಇತಿಮಿತಿ ಇರಲಿಲ್ಲ. ತನಗೆ ಬೇಜಾರಾದರೆ ಮಾತ್ರ ಆತ ತನ್ನ ಸಂಪತ್ತನ್ನು ಗಳಿಸುವುದು ನಿಲ್ಲಿಸಬಹುದಾಗಿತ್ತು. ಬಂಗಾಳದ ಖಜಾನೆ ಆತನಿಗೋಸ್ಕರ ಯಾವಾಗಲೂ ತೆರೆದಿಡಲಾಗಿತ್ತು. ಅದರಲ್ಲಿ, ಈಗಾಗಲೇ ಭಾರತೀಯ ರಾಜರುಗಳು ಉಪಯೋಗಿಸಿದ ವಿಪುಲ ಹಣದ ರಾಶಿಯನ್ನು ನೋಡಬಹುದಾಗಿತ್ತು. ಕೇಪ್ ಆಫ್ ಗುಡ್ ಹೋಪ್ ಕಡೆ ಯೂರೋಪಿನ ಹಡಗನ್ನು ತಿರುಗಿಸಲು ಆಕರ್ಷಿಸಿದ ಬಂಗಾಳದ ನಾಣ್ಯ (florin) ಮತ್ತು ಬೈಂಜಾಂಟ(byzants)ಗಳು ಅದರಲ್ಲಿ ಇದ್ದವು. ಆಗ ವೆನಿಸ್‌ನ ಜನರು ಬಂಗಾರವನ್ನು ಕೊಟ್ಟು ಪೂರ್ವದ ಮಸಾಲೆ ಸಾಮಾನುಗಳನ್ನು ಖರೀದಿಸುತ್ತಿದ್ದರು. ಕ್ಲೈವನು ಬಂಗಾರ ಬೆಳ್ಳಿ ಮತ್ತು ವಜ್ರ ಹಾಗೂ ಕಿರೀಟದಲ್ಲಿಡುವ ಮಾಣಿಕ್ಯಗಳ (Crown rubies) ರಾಶಿಯಲ್ಲಿ ನಡೆದಾಡುತ್ತಿದ್ದ ಮತ್ತು ಬೇಕೆನ್ನುವಷ್ಟು ಸಂಪತ್ತನ್ನು ಈ ರಾಶಿಯಿಂದ ತೆಗೆದುಕೊಳ್ಳುವ ಸಾಮರ್ಥ್ಯವನ್ನೂ ಹೊಂದಿದ್ದ... ಈ ರೀತಿಯಾಗಿ ಒಂದು ಕಡೆ ಕಲ್ಕತ್ತಾದಲ್ಲಿ ಯಾವ ೩೦ ದಶಲಕ್ಷ ಜನರು ಬಡತನದ ಅತಿ ಕೆಳಮಟ್ಟಕ್ಕೆ ಇಳಿಸಲ್ಪಟ್ಟರೋ ಅದೇ ಸಮಯದಲ್ಲಿ ಇನ್ನೊಂದೆಡೆ ಬ್ರಿಟಿಷ್ ಅಧಿಕಾರಿಗಳು ಬಹಳ ಕಡಿಮೆ ಸಮಯದಲ್ಲಿ ಅಪಾರ ಸಂಪತ್ತನ್ನು ಕೂಡಿಸಿದರು... ಇಂಗ್ಲಿಷ್ ದುರಾಡಳಿತ ಒಂದು ಸಭ್ಯ ಸಮಾಜದ ಅಸ್ತಿತ್ವಕ್ಕೆ ಸರಿಹೊಂದದ ಮಟ್ಟಕ್ಕೆ ಕೆಳಗಿಳಿದು ಹೋಯಿತು. ಮುಂದುವರಿದು, ಬ್ರಿಟಿಷ್ ಅಧಿಕಾರಿಗಳು, ಕೇವಲ ಒಂದೆರಡು ವರ್ಷಗಳ ಅವಧಿಯಲ್ಲಿಯೇ ಯಾವ ರೋಮನ್ ಗವರ್ನರ್‌ರು ತಮ್ಮ ಸುದೀರ್ಘ ಆಡಳಿತ ಕಾಲದಲ್ಲಿ ಸಂಗಮರ ಮರಿಗಲ್ಲುಗಳಿಂದ ಅಲಂಕೃತ ಅರಮನೆಯಲ್ಲಿ ಆರಾಮವಾಗಿರುವಷ್ಟು ಬೆಲೆ ಬಾಳುವ ಆ್ಯಂಬರ್(Amber)ನಿಂದ ಸುರಾಪಾನ ಮಾಡುವಷ್ಟು ಪ್ರಸಿದ್ಧ ಕಾಮ್‌ಪೋಮಿಯಾ ನದಿ ತೀರದಲ್ಲಿ ಸ್ನಾನ ಮಾಡುವಷ್ಟು ಹಣ ಗಳಿಸಿದರೋ ಮತ್ತು ಯಾರು ಹಾಡುವ ಹಕ್ಕಿಗಳಿಂದ ಆನಂದ ಪಡೆಯುವಷ್ಟು ಸಮಯವನ್ನು ಹೊಂದಿರುವಷ್ಟು ಹಣವನ್ನು ಗಳಿಸಿದ್ದರೋ ಮತ್ತು ಒಡೆಯನ ಸಂತೋಷಕ್ಕಾಗಿ ಇನ್ನೊಬ್ಬನನ್ನು ಕೊಲ್ಲುವ ಗುಲಾಮರನ್ನು ಹೊಂದಿದ್ದರೋ ಹಾಗೂ ಬೆಲೆಬಾಳುವ ಜಿರಾಫೆಗಳ ಗುಂಪಿನ ಮಾಲಿಕತ್ವವನ್ನು ಹೊಂದಿದ್ದರೋ ಅಂಥವರನ್ನು ಮೀರಿ ಮತ್ತು ಮೆಕ್ಸಿಕೊ ಅಥವಾ ಲೀಮದಲ್ಲಿ ತಾನು ಮಾಡಿದ ಪಾಪಕೃತ್ಯಗಳನ್ನು ಯಶಸ್ವಿಯಾಗಿ ಮುಚ್ಚಿಹಾಕಿ, ಬೆಳ್ಳಿಯಿಂದ ಅಲಂಕೃತವಾಗಿರುವ ಹೇಸರಗತ್ತೆಯಿಂದ ಎಳೆಯಲ್ಪಟ್ಟ ಬಂಗಾರದ ಕವಚವನ್ನು ಹೊಂದಿದ ಕೋಚುಗಾಡಿಯ ಮೇಲೆ ಮ್ಯಾಡ್ರಿಡ್‌ನ್ನು ಸೇರಿ ಮೆರೆಯುವ ಸ್ಪ್ಯಾನಿಷ್ ಆಡಳಿತಾಧಿಕಾರಿಯನ್ನು ಸಹ ಮೀರಿ ಕ್ರೂರ ರೀತಿಯಿಂದ ಆಳಿದರು".

ಬಂಗಾಳದ ಜನರನ್ನು ಕ್ಲೈವ್ ನಾಶ ಮಾಡಿದನು. ಮೊದಲನೆಯ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸನು ಅಂದಿನ ರಾಜ ಮತ್ತು ಬೇಗಮರನ್ನು ಬಲಹೀನರನ್ನಾಗಿ ಮಾಡಿದನು. ಉದಾಹರಣೆಗೆ, ಇವನು ಕೈಕೊಂಡ ಬೆನಾರಸ್ ರಾಜ ಹಾಗೂ ಔಂಧದ ಬೇಗಮ್ಮಳ ಸುಲಿಗೆ ಮತ್ತು ಅವರ ಜೊತೆಗಿನ ದುರ್ನಡತೆ ಹಾಗೂ ರೊಹಿಲ್ಲಾಗಳ ಕಗ್ಗೊಲೆ, ೧೮ನೆಯ ಶತಮಾನದ ರಾಜಕೀಯ ತತ್ತ್ವಜ್ಞಾನಿಯಾದ ಎಡ್ಮಂಡ್ ಬರ್ಕನನ್ನು ಒಳಗೊಂಡು ಇಡಿ ಕ್ಯಾಥೋಲಿಕ ಪಂಗಡದವರ ಮರುಕವನ್ನು ಗಳಿಸಿತು. ಇವರೆಲ್ಲರೂ

ವಾರನ್ ಹೇಸ್ಟಿಂಗ್ಸ್‌ನನ್ನು ಕ್ರೂರಿ ಎಂದು ಸಾರ್ವಜನಿಕವಾಗಿ ದೂರಿದರು ಮತ್ತು ಇವರನ್ನು ಹಿಂತಿರುಗಿ ಇಂಗ್ಲೆಂಡಿಗೆ ಕರೆಸಿಕೊಳ್ಳುವ ಪ್ರಸ್ತಾವನೆಯನ್ನು ಕಂಪನಿಯ ಮುಂದೆ ಇಟ್ಟರು. ಈ ಸಂಗತಿ ರೋಮನ್ ಜನರು ಇಂತಹದೇ ಕಾರಣಗಳಿಂದಾಗಿ ಸಿಸಿರೋ(Cicero)ನನ್ನು ಸಾರ್ವಜನಿಕವಾಗಿ ದೂರಿದುದು ನಮ್ಮ ನೆನಪಿಗೆ ತರುತ್ತದೆ. ಬರ್ಕರು ಶೋಷಿತರ ಉದ್ಧಾರಕ್ಕಾಗಿ ದುಡಿಯುವ ಪಣ ತೊಟ್ಟರು ಮತ್ತು ಶೋಷಣೆ ಮಾಡುವವರ ತಪ್ಪುಗಳನ್ನು ಸರಿಪಡಿಸಲು ಹಾಗೂ ಅವರನ್ನು ಶಿಕ್ಷೆಗೆ ಗುರಿಮಾಡಲು ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದರು. ಹೇಸ್ಟಿಂಗ್ಸ್ 'ಕ್ರೂರಿ' ಎಂದು ದೂರುವಲ್ಲಿ ಆಂತರಿಕ ಬ್ರಿಟಿಷ್ ಒಕ್ಕೂಟದ ಯುದ್ಧದ (Civil War) ಜನರಲ್ ಆದ ಶೆರಿಡಾನರವರ ಶಕ್ತಿಯುತ ಹಾಗೂ ಸಕ್ರಿಯ ಪಾತ್ರವಿದ್ದರೂ ಅದು ಫಲಕಾರಿಯಾಗಲಿಲ್ಲ. ಆದರೆ ಈ ಸೋಲು ತನ್ನದೇ ಆದ ಹಿತಕರ ಪರಿಣಾಮಗಳನ್ನು ಅಂದಿನ ಪರಿಸರದ ಮೇಲೆ ಬೀರಿತು. ಕ್ಲೈವನನ್ನು ದೂರುವಲ್ಲಿ ಆದ ಅಯಶಸ್ವಿ ಕಾರ್ಯ, ನಿಜವಾಗಿಯೂ ನೂರು ಜಯಗಳಿಗೆ ಸಮನಾಗಿತ್ತು. ಲಾರ್ಡ್ ಮೊರ್ಲೆಯವರು ತಮ್ಮ "ಬರ್ಕರ ಜೀವನ" ಎಂಬ ಗ್ರಂಥದಲ್ಲಿ, "ಹೇಸ್ಟಿಂಗ್ಸ್‌ರು ಏನೂ ತಪ್ಪು ಮಾಡಿಲ್ಲವೆಂದು ಭಾವಿಸಿ ಅವರನ್ನು ಬಿಡುಗಡೆ ಮಾಡಿದ ವಿಷಯ ಅಷ್ಟೇನೂ ಮಹತ್ವದ್ದಲ್ಲ. ಅವರನ್ನು 'ದೂರುವ' ಪ್ರಸಂಗ ಏಶಿಯಾ ಖಂಡದ ಜನರಿಗೆ ಬಂದು ತಮ್ಮದೇ ಆದ ಹಕ್ಕುಗಳಿವೆ ಎಂದು ಮತ್ತು ಇವರನ್ನಾಳುವ ಯೂರೋಪಿಯನ್ನರಿಗೆ ಪಾಲಿಸಬೇಕಾಗಿರುವ ಕೆಲವು ಕರ್ತವ್ಯಗಳಿವೆ ಎಂಬ ಪಾಠವನ್ನು ಕಲಿಸಿತು. ಗುಲಾಮ ಜನಾಂಗದೊಂದಿಗೆ ವ್ಯವಹರಿಸುತ್ತಿರುವಾಗ ಇವರನ್ನು ಆಳುವ ಉತ್ತಮ ಜನಾಂಗ ಪ್ರಚಲಿತವಿರುವ ಅತಿ ಉತ್ತಮ ನೀತಿಯನ್ನು ಪಾಲಿಸಬೇಕಾಗುತ್ತದೆಂಬ ಸತ್ಯವನ್ನು ಇದು ಬ್ರಿಟಿಷರಿಗೆ ಅರುಹಿತು. ಒಂದು ದೇಶವನ್ನು ಆಳುವವರ ಮತ್ತು ಅವರಿಂದ ಆಳಲ್ಪಟ್ಟ ಬಡ ಆಶ್ರಿತರ ನಡುವೆ ದಯಾಪರ, ಗೌರವದ, ಸರಳತೆಯ ಹಾಗೂ ಪ್ರಾಮಾಣಿಕತೆಯ ಸಂಬಂಧವಿರಲೇಬೇಕು ಎಂದು ವಾದಿಸಿರುವ ಬರ್ಕನು ನಮ್ಮೆಲ್ಲರ ಶಾಶ್ವತ ಪೂಜ್ಯ ಭಾವನೆಗೆ ಪಾತ್ರನಾಗಿರುತ್ತಾನೆ."

ಹೇಸ್ಟಿಂಗ್ಸ್‌ರ ಪ್ರಸಂಗದ ಪರಿಣಾಮವೆಂದರೆ, ಬ್ರಿಟಿಷರು ಭಾರತೀಯರ ಮೇಲಿನ ನೇರ ಆಡಳಿತಾತ್ಮಕ ಶೋಷಣೆಯನ್ನು ಅದರ ಶೈಶವಾಸ್ಥೆಯಲ್ಲಿಯೇ ಮೊಟಕುಗೊಳಿಸಲಾಯಿತು. ಆದರೆ ಇದೇ ಆಡಳಿತ ವ್ಯವಸ್ಥೆಯಲ್ಲಿ ಕೆಲವು ಇತರ ಪರೋಕ್ಷ ಶೋಷಣೆಗಳ ಯೋಜನೆಗಳನ್ನು ಪ್ರಜೆಗಳ ಮೇಲೆ ಹೇರಲಾಯಿತು ಅಥವಾ ಅದರಿಂದ ಅವರು ನರಳುವುದು ಮುಂದುವರಿಯಿತು. ಒಳನಾಡಿನ ವಸ್ತು ಸಾಗಾಣಿಕೆಯ ಮೇಲಿನ ಸುಂಕಗಳೇ ಅಂದಿನ ಪರೋಕ್ಷ ಶೋಷಣೆಯ ಮಾದರಿಗಳಾಗಿದ್ದವು. ಖಾಸಗಿ ವ್ಯಾಪಾರಸ್ಥರು, ಈಸ್ಟ್ ಇಂಡಿಯಾ ಕಂಪನಿಯ ಸೇವಕರಂತೆ, ಈ ಸುಂಕಗಳಿಂದ ತೊಂದರೆಗಳಿಗೆ ಒಳಗಾಗದೇ ಹೋದರು. ಆದರೆ ಇವುಗಳನ್ನು ಸ್ಥಳೀಯ ವ್ಯಾಪಾರಸ್ಥರ ಮೇಲೆ ಅತಿ ಬಿಗಿಯಾಗಿ ಹೇರಲಾಯಿತು. ಇದರಿಂದಾಗಿ ಇವರ ಆರ್ಥಿಕ ಯೋಗಕ್ಷೇಮ ಬಹುವಾಗಿ ಕಡಿಮೆಯಾಯಿತು.

ಮಿ. ಹೋಲ್ಟ್ ಮ್ಯಾಕೆಂಜಿ ಈ ಸುಂಕಗಳ ಬಗ್ಗೆ ಈ ಅಭಿಪ್ರಾಯವನ್ನು ಹೊಂದಿದ್ದಾರೆ:

> ಈ ಸುಂಕಗಳ ಹೇರುವಿಕೆಯಿಂದಾಗಿ "ಕೆಲವು ವಸ್ತುಗಳು ತಮ್ಮ ಪ್ರದೇಶಕ್ಕೆ ಮುಟ್ಟುವ ಮುನ್ನ ಹತ್ತು ಸುಂಕ ಮನೆಗಳನ್ನು ಹಾದು ಹೋಗುವ ಕಠಿಣ ಪರೀಕ್ಷೆಗೆ ಒಳಗಾಗಿದ್ದವು. ಹೀಗಾಗಿ ಯಾವ ಪ್ರಮುಖ ವಸ್ತುಗಳಿಗೂ ಪದೇಪದೇ ಒದಗುವ ಈ ತಡೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ."
>
> "ಈ ಚೌಕಿಗಳಿಂದ ವಸ್ತುಗಳ ಸಾಗಾಣಿಕೆಗೆ ವಿಳಂಬವಾಗುತ್ತಿರಲಿಲ್ಲ ಮತ್ತು ಇವುಗಳು ಸ್ಥಳೀಯ ವ್ಯಾಪಾರಿಗಳನ್ನು ಯಾವ ರೀತಿಯ ಶೋಷಣೆಗೆ ಒಳಪಡಿಸಿರಲಿಲ್ಲವೆಂದು

ಊಹಿಸಿದರೂ, ಈ ಸುಂಕಗಳು ದೇಶದೊಳಗಿನ (ಅಥವಾ ಆಂತರಿಕ) ವಾಣಿಜ್ಯಕ್ಕೆ ಸಾಕಷ್ಟು ಅಡೆತಡೆ ಉಂಟುಮಾಡಬಹುದಾಗಿತ್ತು. ವ್ಯಾಪಾರಿ ವಸ್ತುಗಳ ಬೆಲೆಯಲ್ಲಿನ ಅಂತರ ಸಾಗಾಣಿಕೆ ಮತ್ತು ಇತರ ವೆಚ್ಚಗಳನ್ನಲ್ಲದೆ ಸರಕಾರ ಹೇರಿದ ಶೇಕಡಾ ಐದು ಅಥವಾ ಏಳೂವರೆ ಸುಂಕವನ್ನು ಒಳಗೊಂಡಿರದಿದ್ದಲ್ಲಿ ಚೌಕಿಗಳಿಂದ ಬೇರೆಯಾಗಿಸಲ್ಪಟ್ಟ ಬೇರೆಬೇರೆ ಜಿಲ್ಲೆಗಳ ನಡುವೆ ವ್ಯಾಪಾರ ಸಾಧ್ಯವಿರಲಿಲ್ಲ. ಈ ರೀತಿಯಾಗಿ ವಸ್ತುಗಳ ಬೆಲೆಯಲ್ಲಿನ ಸ್ವಾಭಾವಿಕ ಅಸಮಾನತೆ ಮತ್ತಷ್ಟು ಹದಗೆಟ್ಟಿತು ಮತ್ತು ಒಂದು ಉಪಭೋಗದ ತೆರಿಗೆಯ ಭಾರ (Consumption tax) ನ್ಯಾಯವಾಗಿ ಉಪಭೋಗಿಯ ಮೇಲೆ ಬೀಳುವ ತತ್ತ್ವದ ವಿರುದ್ಧವಾಗಿ ವಸ್ತುವನ್ನು ಉಪಭೋಗಿಸಿದವರ ಮೇಲೆ ಬೀಳುತ್ತಿತ್ತು."

"ಸುಂಕದಕಟ್ಟೆಯ ಅಧಿಕಾರಿಗಳಲ್ಲದೆ ಸರಕಾರವು ವಸ್ತುಗಳ ಮೇಲೆ ಇತರ ತೆರಿಗೆಯನ್ನು ಹೇರಿದಾಗ ಸ್ವಲ್ಪ ಪ್ರಮಾಣದ ಬಂಡವಾಳವನ್ನು ಹೂಡಿ ವ್ಯಾಪಾರ ಪ್ರಾರಂಭಿಸಿದವರು ಅದನ್ನು ಮುಂದುವರಿಸುವುದು ಸಾಧ್ಯವಾಗಲಿಕ್ಕಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಶ್ರೀಮಂತ ವ್ಯಾಪಾರಿ ತನ್ನ ಮೇಲೆ ಹಾಕಿರುವ ಅತ್ಯಂತ ಹೆಚ್ಚಿನ ಸುಂಕವನ್ನು ಸಹ ಕೊಡಬಲ್ಲ. ಯಾಕೆಂದರೆ ಇದು ಅವನ ದೊಡ್ಡ ಪ್ರಮಾಣದ ಹೂಡಿಕೆಯ ಮೇಲೆ ಹೆಚ್ಚಿನ ಲಂಚದ ಭಾರ ಬೀಳುವುದಿಲ್ಲ ಮತ್ತು ಸಂಪತ್ತು ಹಾಗೂ ಶ್ರೇಣಿ ಅವನನ್ನು ಸರಕಾರದ ಘೋರ ಸುಲಿಗೆಯಿಂದ ಕಾಪಾಡುತ್ತದೆ. ಆದರೆ ಒಬ್ಬ ಸಣ್ಣವ್ಯಾಪಾರಿಗೆ ಮಿತವಾದ ಶುಲ್ಕ ಸಹ ಅವನ ಸಾಹಸದಿಂದ ಉಂಟಾಗಬಹುದಾದ ಲಾಭವನ್ನು ತಿಂದುಹಾಕುತ್ತದೆ ಮತ್ತು ಅವನಿಗೆ ಈ ಪೆಟ್ಟಿನಿಂದ ಚೇತರಿಸಿಕೊಳ್ಳಲು ಯಾವ ಸಹಾಯವನ್ನು ಮಾಡುವುದಿಲ್ಲ."

"ಇಲ್ಲಿಯವರೆಗೆ ಬ್ರಿಟನ್ನಿನ ಒಳಾಡಳಿತ ಅಧಿಕಾರಿಗಳು ಮತ್ತು ಇಂಗ್ಲೆಂಡಿನಲ್ಲಿರುವ ವ್ಯಾಪಾರಸ್ಥರು ಯುನೈಟೆಡ್ ಕಿಂಗ್‌ಡಮ್‌ನ ಸಿದ್ಧವಸ್ತುಗಳಿಗೆ ಭಾರತದಲ್ಲಿ ಮಾರುಕಟ್ಟೆಯನ್ನು ಹುಡುಕುವ ಪ್ರಮುಖ ಉದ್ದೇಶ ಹೊಂದಿದ್ದರು ಎನ್ನುವ ಕಲ್ಪನೆ ಬರುತ್ತದೆ. ತತ್ಪರಿಣಾಮವಾಗಿ, ಇವರು ಭಾರತದ ರಫ್ತು ವ್ಯಾಪಾರಕ್ಕೆ ಗಮನ ಕೊಡದೆ ಆಮದು ವ್ಯಾಪಾರಕ್ಕೆ ಒತ್ತು ನೀಡಿರುತ್ತಾರೆ. ೧೮೧೦ರಲ್ಲಿ ಪಾಸು ಮಾಡಲಾದ ಒಂಭತ್ತನೆಯ ಕಾಯಿದೆಯು ಶಿಫಾರಸು ಮಾಡಿದ ಹಲವಾರು ಸುಂಕಗಳನ್ನು ಹಲವಾರು ಬ್ರಿಟಿಷ್ ವಸ್ತುಗಳ ಮೇಲಿಂದ ತೆಗೆದುಹಾಕಲಾಗಿದೆ. ನೀಲಿ, ಹತ್ತಿ, ಉಣ್ಣೆ ಮತ್ತು ಸೆಣಬುಗಳ ರಫ್ತನ್ನು ಭಾರತೀಯರ ಗುರಿಗಳನ್ನಲ್ಲದೆ ಇಂಗ್ಲಿಷರ ಗುರಿಗಳನ್ನು ಮುಟ್ಟಲು ಸುಂಕಗಳಿಂದ ಮುಕ್ತಗೊಳಿಸಲಾಗಿದೆ ಎಂಬುದು ನನ್ನ ಗ್ರಹಿಕೆಯಾಗಿದೆ."

ಒಳನಾಡಿನ ಸಾಗಾಣಿಕೆಯ ಸುಂಕಗಳ ಬಗ್ಗೆ ಲಾರ್ಡ್ ಎಲೆನ್‌ಬರೋ ಏನು ಹೇಳುತ್ತಾನೆಂಬುದನ್ನು ತಿಳಿಯುವುದು ಉಪಯುಕ್ತವಾಗಿರುತ್ತದೆ:

"ಯಾವಾಗ ಇಂಗ್ಲೆಂಡಿನಲ್ಲಿ ತಯಾರಾದ ಹತ್ತಿ ಬಟ್ಟೆಗಳನ್ನು ಎರಡೂವರೆಯಷ್ಟು ಸುಂಕದ ಮೇಲೆ ಆಮದು ಮಾಡಿಕೊಳ್ಳಲಿಕ್ಕೆ ಬರುತ್ತಿತ್ತೋ ಆಗ ಭಾರತದಲ್ಲಿ ತಯಾರಾಗಿ ಅಲ್ಲಿಯೇ ಉಪಭೋಗ ಮಾಡಲಾದ ಹತ್ತಿಬಟ್ಟೆಯ ಮೇಲಿನ ಒಟ್ಟು ಸುಂಕ ಹದಿನೇಳುವರೆಯಷ್ಟು ಆಗಿತ್ತು. ಈ ಹದಿನೇಳುವರೆಯಷ್ಟು ಸುಂಕದ ವಿವರ ಹೀಗಿತ್ತು;

ನೂಲಿನ ಮೇಲಿನ ಏಳೂವರೆಯಷ್ಟು ಹೆಚ್ಚಿನ ಸುಂಕ; ಸಿದ್ಧವಸ್ತುವಿನ ಮೇಲಿನ ಎರಡೂವರೆಯಷ್ಟು ಸುಂಕ; ಬಣ್ಣ ಹಾಕಿದಾಗ ಎರಡೂವರೆಯಷ್ಟು ಸುಂಕ; ಮತ್ತೊಂದು ಎರಡೂವರೆಯಷ್ಟು ಸುಂಕ– ಹೀಗೆ ಒಟ್ಟಿನಲ್ಲಿ ಹದಿನೇಳುವರೆಯಷ್ಟು ಸುಂಕ ತೆತ್ತಬೇಕಾಗುತ್ತಿತ್ತು."

"ಕಚ್ಚಾ ಚರ್ಮ ೫% ಸುಂಕ ಕೊಡುತ್ತಿತ್ತು; ಅದು ಸಿದ್ಧವಸ್ತುವಾದ ಮೇಲೆ ಇನ್ನು ೫% ಹೆಚ್ಚಿನ ಸುಂಕ ಕೊಡಬೇಕಾಗಿತ್ತು; ಮತ್ತು ಚರ್ಮದಿಂದ ಚಪ್ಪಲಿಯನ್ನು ಅಥವಾ ಬೂಟುಗಳನ್ನು ಮಾಡಿದ ಮೇಲೆ ಮತ್ತೆ ೫% ಸುಂಕ ಹೇರಲಾಗುತ್ತಿತ್ತು. ಈ ರೀತಿ (ಭಾರತದಲ್ಲಿ ತಯಾರಿಸಿ ಅಲ್ಲಿಯೇ ಉಪಯೋಗ ಮಾಡಿದ) ಚರ್ಮದ ವಸ್ತುಗಳ ಮೇಲೆ ೧೫% ಸುಂಕ ಹೇರಲಾಗಿತ್ತು.

ನಮ್ಮ ಸಕ್ಕರೆಯ ಮೇಲೆ ನಾವು ಯಾವ ದರದ ಸುಂಕದ ಹೇರುವಿಕೆಯನ್ನು ಮುಂದುವರಿಸಬಹುದು? ಇದು ಒಂದು ಪಟ್ಟಣದಲ್ಲಿ ಆಮದಾದರೆ ೫% ಆಮದು ಸುಂಕ ಮತ್ತು ೫% ಪಟ್ಟಣ ಸುಂಕವನ್ನು ತೆತ್ತಬೇಕಾಗುತ್ತಿತ್ತು ಮತ್ತು ಸಿದ್ಧವಸ್ತುವಾಗಿ ಇದು ಮಾರ್ಪಾಡಾಗಿ ಅಲ್ಲಿಂದ ಬೇರೆ ಪಟ್ಟಣಕ್ಕೆ ರಫ್ತಾದರೆ ಮತ್ತೊಂದು ೫% ಸುಂಕ ಕೊಡಬೇಕಾಗುತ್ತಿತ್ತು. ಒಟ್ಟಿನಲ್ಲಿ (ಭಾರತದಲ್ಲಿ ತಯಾರಾಗಿ ಭಾರತದಲ್ಲಿ ಉಪಭೋಗಿಸಲಾದ) ಸಕ್ಕರೆಯ ಮೇಲಿನ ಸುಂಕ ೧೫% ಆಗಿತ್ತು."

"ಕಡಿಮೆ ಕಡಿಮೆ ಎಂದರೆ ೨೩೫ ಬೇರೆ ಬೇರೆ ವಸ್ತುಗಳನ್ನು ಒಳನಾಡಿನ ಸುಂಕ(Inland Duties)ಕ್ಕೆ ಗುರಿ ಮಾಡಲಾಗಿತ್ತು. ವಸ್ತುವಿನ ವೈಯಕ್ತಿಕ ಅಥವಾ ಆಂತರಿಕ ಉಪಯೋಗದ ಮೇಲೂ ಸುಂಕ ಹೇರಲಾಗಿತ್ತು. ಸುಂಕ ಹೇರುವಿಕೆಯ ಕಾರ್ಯಾಚರಣೆಯು ಅಧಿಕಾರಿಗಳಿಂದ ತಪಾಸಣೆಯ ವಿಧಾನವನ್ನು ಒಳಗೊಂಡಿತ್ತು. ಸುಂಕ ಹೇರುವಿಕೆಯಿಂದ ಅದು ಬರುವ ಆದಾಯವನ್ನು ಹೆಚ್ಚಿಸದೆ ವಸ್ತುವಿನ ಉತ್ಪಾದಕರನ್ನು ತುಂಬಾ ಘಾತಕ ಮತ್ತು ತೊಂದರೆಪಡಿಸುವ ರೀತಿಯದ್ದಾಗಿತ್ತು. ಪ್ರತಿಯೊಬ್ಬ ಸುಂಕದ ಮನೆಯ ಅಧಿಕಾರಿ ಒಂದು ವೇಳೆ ತನ್ನ ತಪಾಸಣೆಯ ಅಧಿಕಾರವನ್ನು ನಿಜವಾಗಿ ಉಪಯೋಗಿಸಿದ್ದಲ್ಲಿ ಅದು ಆಂತರಿಕ ವ್ಯಾಪಾರಕ್ಕೆ ಅಡ್ಡಿ ಉಂಟುಮಾಡುತ್ತಿತ್ತು. ಈ ಅಧಿಕಾರವನ್ನು ಜನರ ಸುಲಿಗೆಗಾಗಿ ಮಾತ್ರ ಉಪಯೋಗಿಸಲಾಗುತ್ತಿತ್ತು."

ಇದಕ್ಕೆ ಸೇರಿದಂತೆ ಇಂಡಿಯಾದಲ್ಲಿ ಏಕರೂಪ ಚಲಾವಣೆಯ ಹಣವಿರಲಿಲ್ಲ.

ಇವೆಲ್ಲವು ಇಂಡಿಯಾದ ಕೈಗಾರಿಕೆಗಳನ್ನು ಕೊಲ್ಲುವ ಸಾಧನಗಳಾಗಿದ್ದವು.

"ಒಂದು ವೇಳೆ ಬ್ರಿಟಿಷರು, ಭಾರತೀಯ ಹತ್ತಿ ಮತ್ತು ರೇಷ್ಮೆ ವಸ್ತುಗಳನ್ನು ಅವುಗಳ ಮೇಲೆ ಸುಂಕ ಹೇರದೆಯೇ ಆಮದಿಸಿಕೊಂಡಿದ್ದರೆ, ಇಂಗ್ಲಿಷ್ ಹತ್ತಿ ಹಾಗೂ ರೇಷ್ಮೆ ತಯಾರಕರು ತಮ್ಮ ಉತ್ಪಾದನಾ ಕಾರ್ಯವನ್ನೇ ನಿಲ್ಲಿಸುವ ಪರಿಸ್ಥಿತಿ ಒದಗಿ ಬರುತ್ತಿತ್ತು. ಭಾರತ ಕೇವಲ ಕಡಿಮೆ ವೆಚ್ಚದ ಶ್ರಮ ಮತ್ತು ಕಚ್ಚಾ ವಸ್ತುಗಳನ್ನು ಹೊಂದುವ ಸೌಕರ್ಯವನ್ನು ಹೊಂದುವುದಲ್ಲದೆ, ಅವುಗಳನ್ನು ತಯಾರಿಸುವಲ್ಲಿ ಹಲವಾರು ಶತಮಾನಗಳ ಕೌಶಲ್ಯ ಮತ್ತು ಅನುಭವವನ್ನು ಹೊಂದಿತ್ತು" ಎಂದು ಫ್ರೆಡರಿಕ್ ಲಿಸ್ಟ್ ಹೇಳುತ್ತಾನೆ.

ಭಾರತದ ಇತಿಹಾಸಕಾರನಾದ ಮಿ. ಹೆಚ್. ಹೆಚ್. ವಿಲ್ಸನ್‌ನ ಅಭಿಪ್ರಾಯ ಇನ್ನೂ ಹೆಚ್ಚು ಸ್ಪಷ್ಟವಾಗಿದೆ. ಅವರು "ಇದೊಂದು ಸಹ ವಿಷಾದನೀಯ ದೃಷ್ಟಾಂತ" ಎಂದು ಒಪ್ಪಿಕೊಂಡು ಈ ರೀತಿಯ ಹೆಚ್ಚಿನ ವಿವರಣೆಯನ್ನು ಕೊಟ್ಟಿದ್ದಾರೆ.

> "ತಾನು ಅವಲಂಬಿಸಿದ ದೇಶವಾದ ಭಾರತಕ್ಕೆ ಇಂಗ್ಲೆಂಡ್ ಅನ್ಯಾಯವೆಸಗಿತು. ೧೮೧೩ರವರೆಗೆ ಭಾರತದ ಹತ್ತಿ ಮತ್ತು ರೇಷ್ಮೆ ವಸ್ತುಗಳನ್ನು, ಇಂಗ್ಲೆಂಡಿನ ಹತ್ತಿ ಹಾಗೂ ರೇಷ್ಮೆ ವಸ್ತುಗಳಿಗಿಂತ ೫೦ ಮತ್ತು ೬೦% ಕಡಿಮೆ ಬೆಲೆಯಲ್ಲಿ ಲಾಭಕ್ಕಾಗಿ ಮಾರಾಟ ಮಾಡಲಾಗುತ್ತಿತ್ತೆಂದು ಸಾಕ್ಷಿಪೂರ್ವಕ ಹೇಳಲಾಗುತ್ತಿತ್ತು. ನಂತರ ಭಾರತೀಯ ವಸ್ತುಗಳನ್ನು ನಿರ್ದಿಷ್ಟವಾಗಿ ತಡೆಯುವ ಮೂಲಕ ಅಥವಾ ಅವುಗಳ ಮೇಲೆ ೭೦% ಮತ್ತು ೮೦% ಆಮದು ಸುಂಕ ಹೇರುವುದರ ಮೂಲಕ ಇಂಗ್ಲೆಂಡಿನ ಹತ್ತಿ ಹಾಗೂ ರೇಷ್ಮೆ ವಸ್ತುಗಳಿಗೆ ರಕ್ಷಣೆ ನೀಡುವುದು ಅವಶ್ಯಕವಾಯಿತು. ಪರಿಸ್ಥಿತಿ ಹೀಗೆ ಮಾರ್ಪಾಡಾಗದಿದ್ದಲ್ಲಿ ಮತ್ತು ಅಂತಹ ಅಡೆತಡೆ ಉಂಟುಮಾಡುವ ಕಾಯಿದೆ ಮತ್ತು ನಿಷೇಧಕ ಸುಂಕಗಳನ್ನು ಹೇರದಿದ್ದಲ್ಲಿ, ಪೈಸ್‌ಲೇ ಮತ್ತು ಮ್ಯಾಂಚೆಸ್ಟರ್‌ದ ಮಿಲ್ಲುಗಳನ್ನು ಆರಂಭದಲ್ಲಿಯೇ ಮುಚ್ಚಬೇಕಾಗಿ ಬರುತ್ತಿತ್ತು ಮತ್ತು ಕಲ್ಲಿದ್ದಲು ಶಕ್ತಿಯಿಂದಲ್ಲದೆ, ಆವಿ ಶಕ್ತಿಯಿಂದಲೂ ಅವುಗಳನ್ನು ಪುನಃ ಪ್ರಾರಂಭಿಸಬಹುದಾಗಿತ್ತು. ಭಾರತೀಯ ಸಿದ್ಧವಸ್ತುಗಳ ತಯಾರಿಕೆಯ ತ್ಯಾಗದ ಮೇಲೆಯೇ ಇಂಗ್ಲೆಂಡಿನ ವಸ್ತುಗಳು ಉತ್ಪತ್ತಿಯಾಗಿದ್ದವು. ಒಂದು ವೇಳೆ ಆಗ ಭಾರತ ಸ್ವತಂತ್ರ ದೇಶವಾಗಿದ್ದಲ್ಲಿ, ಇಂಗ್ಲೆಂಡಿನ ಸುಂಕ ಹೇರುವಿಕೆಗೆ ಪ್ರತೀಕಾರ ಮಾಡಬಹುದಾಗಿತ್ತು ಅದು ಬ್ರಿಟಿಷ್ ವಸ್ತುಗಳ ಮೇಲೆ ನಿಷೇಧಕ ಸುಂಕಗಳನ್ನು ಹೇರಬಹುದಾಗಿತ್ತು, ಮತ್ತು ಈ ರೀತಿಯಾಗಿ, ತನ್ನ ಸ್ವಂತದ ಉತ್ಪನ್ನಕಾರಕ ಉದ್ದಿಮೆಯನ್ನು ನಾಶ ಹೊಂದದ ಹಾಗೆ ರಕ್ಷಿಸಬಹುದಾಗಿತ್ತು. ಆದರೆ ಈ ಆತ್ಮರಕ್ಷಣೆಯ ಕಾರ್ಯವನ್ನೂ ಅನುಷ್ಠಾನದಲ್ಲಿ ತರಲು ಅದಕ್ಕೆ ಪರವಾನಗಿ ಇರಲಿಲ್ಲ. ಅದು ಪರಕೀಯರ ಮರ್ಜಿ ಕಾಯಬೇಕಾಗಿತ್ತು, ಭಾರತದ ಮೇಲೆ ಸುಂಕವನ್ನು ಸಂದಾಯ ಮಾಡದೆ ಬ್ರಿಟಿಷ್ ವಸ್ತುಗಳನ್ನು ಹೇರಲಾಗಿತ್ತು, ಮತ್ತು ಬ್ರಿಟನ್ ತನ್ನ ಪ್ರತಿಸ್ಪರ್ಧಿಯನ್ನು ಹತೋಟಿಯಲ್ಲಿಡಲು ಮತ್ತು ಕೊನೆಯಲ್ಲಿ ಉಸಿರುಗಟ್ಟುವಂತೆ ಮಾಡಲು ರಾಜಕೀಯ ಅನ್ಯಾಯದ ತೋಳ್ಬಲವನ್ನು ಉಪಯೋಗ ಮಾಡಿತು. ಏಕೆಂದರೆ ಅದರೊಂದಿಗೆ ಸಮನಾಗಿ ಸೆಣಸಾಡುವ ಶಕ್ತಿಯನ್ನು ಬ್ರಿಟನ್ ಹೊಂದಿರಲಿಲ್ಲ": ತತ್ಪರಿಣಾಮವಾಗಿ ಮಿ. ಚಾಪ್ಲಿನ್‌ನ ಶಬ್ದಗಳಲ್ಲಿ ಹೇಳುವುದಾದರೆ, ಬ್ರಿಟನ್ ಹಾಗೆ ಮಾಡದಿದ್ದಲ್ಲಿ "ಅದರ ಉದ್ದಿಮೆದಾರರು ತಮ್ಮ ಪೋಷಣೆಗಾಗಿ ಕೃಷಿಯನ್ನು ಅವಲಂಬಿಸಬೇಕಾಗುತ್ತಿತ್ತು. ಮತ್ತು ಆಗಲೇ ಕೃಷಿ ತನ್ನ ಮೇಲಿನ ಬಹಳ ಜನರ ಅವಲಂಬನದ ಭಾರದಿಂದ ಬಳಲಿತ್ತು."

ಈ ರೀತಿಯಾಗಿ ಬ್ರಿಟಿಷರ ಭೂ ಕಂದಾಯ ನೀತಿ ಭಾರತದ ಕೃಷಿಯನ್ನು ಹಾಳು ಮಾಡಿತು ಮತ್ತು ಅವರ ನಿಷೇಧದ ರಕ್ಷಣಾತ್ಮಕ ನೀತಿ ಉದ್ದಿಮೆಯನ್ನು ನಾಶಪಡಿಸಿತು. ಯಾವ ಉದ್ದಿಮೆಗಳು ತಮ್ಮ ಸಂಪತ್ತಿನಿಂದ ಬೇರೆಯವರನ್ನು ಆಕರ್ಷಿಸಿದ್ದವೋ ಆ ಉದ್ದಿಮೆಗಳ ಸತ್ವವನ್ನು ಅವರು ಕೊನೆಯ ಗುಟುಕಿನವರೆಗೆ ಹೀರಿದರು.

ಬ್ರಿಟಿಷರ ಭಾರತದ ಬಗೆಗಿನ ನೀತಿಯ ಪರಿಣಾಮವಾಗಿ ಜನರ ಬಡತನ ಮತ್ತು ಕಷ್ಟಕಾರ್ಪಣ್ಯಗಳಿಗೆ ಯಾವ ಮಿತಿಯೂ ಇರಲಿಲ್ಲ ಮತ್ತು ಈ ವಿಷಯವನ್ನು ಹಲವಾರು ವಿದೇಶಿ ಪ್ರವಾಸಿಗರು ಮತ್ತು ರಾಜ್ಯಪಾಲರುಗಳು ನಮ್ಮ ಮನಮುಟ್ಟುವಂತೆ ವರ್ಣಿಸಿದ್ದಾರೆ. ೧೮೩೦ರ ಸುಮಾರಿಗೆ ಭಾರತದ ಪ್ರವಾಸ ಕೈಕೊಂಡ ಬಿಷಪ್ ಹೆಬರ್‌ರು "ಯೂರೋಪಿನ ಅಥವಾ ಸ್ಥಳೀಯ (ಭಾರತೀಯ) ರೈತರಿಗೆ ಅಂದು

ಪ್ರಚಲಿತವಿದ್ದ ತೆರಿಗೆಗಳನ್ನು ಸರಕಾರಕ್ಕೆ ಸಲ್ಲಿಸಿ ಲಾಭ ಗಳಿಸುವ ಸ್ಥಿತಿಯಲ್ಲಿ ಇರಲಿಲ್ಲ. ಸರಕಾರವು ಎಲ್ಲೆಲ್ಲಿ ಶಾಶ್ವತ ಮೌಲ್ಯಕಟ್ಟುವಿಕೆ ಇಲ್ಲವೋ ಅಲ್ಲಲ್ಲಿ ಒಟ್ಟು ಉತ್ಪಾದನೆಯ ಅರ್ಧ ಭಾಗವನ್ನು ಭೂಕಂದಾಯವಾಗಿ ಬೇಡುತ್ತಿತ್ತು. ಮತ್ತು ಇದು ಮಿತವ್ಯಯದ ಅಭ್ಯಾಸವುಳ್ಳ ಮತ್ತು ಸಹಜವಾಗಿ ಕಡಿಮೆ ವೆಚ್ಚದಲ್ಲಿ ಭೂಮಿಯನ್ನು ಉಳುತ್ತಿರುವ ಭಾರತೀಯರಿಗೆ ಸಹ 'ಭಾರ'ವಾಗಿತ್ತು. ಮುಂದುವರಿದು, ಇದು ಕೃಷಿಯ ಸುಧಾರಣೆಯಲ್ಲಿಯೂ ಅಡ್ಡಬರುತ್ತಿತ್ತು; ಅನುಕೂಲಕರ ವರ್ಷಗಳಲ್ಲಿಯೂ ಇದು ಜನರನ್ನು ಕಡುಬಡತನದ ಸನ್ನಿವೇಶದಲ್ಲಿಡುತ್ತಿತ್ತು; ಬೆಳೆಗಳು ಸ್ವಲ್ಪಮಟ್ಟಿಗೆ ನಾಶವಾದರೂ ಸರಕಾರ ತನ್ನ ಕಡೆಯಿಂದ ಅಪಾರ ಹಣವನ್ನೂ ವಿತರಿಸುವ ಮತ್ತು ಹಿಂತಿರುಗಿಸುವ ಕೆಲಸ ಮಾಡಬೇಕಾಗಿತ್ತು; ಇವೆಲ್ಲಾ ಸರಕಾರಿ ಕ್ರಮಗಳು ಮಹಿಳೆ ಮತ್ತು ಮಕ್ಕಳನ್ನು ಗುಂಪಾಗಿ ಸಾಯಲು ಮತ್ತು ರಸ್ತೆಗಳು ಹೆಣಗಳ ರಾಶಿಯಿಂದ ತುಂಬುವುದನ್ನು ತಡೆಯಲಾರದೆ ಹೋದವು. ಬಂಗಾಳದಲ್ಲಿ ಉಳುವ ಭೂಮಿಯ ಶಾಶ್ವತ ಮೌಲ್ಯ ಕಟ್ಟುವಿಕೆ ಜಾರಿಯಲ್ಲಿ ಇತ್ತು ಮತ್ತು ಈ ಪ್ರದೇಶ ಕ್ಷಾಮದಿಂದ ದೂರವಿತ್ತು. ಉತ್ತರ ಹಿಂದುಸ್ತಾನದಲ್ಲಿ ಒಂದು ಕಡೆ ನಾನು ಮತ್ತು ರಾಜ್ಯದ ಅಧಿಕಾರಿಗಳು ಜನರ ಹೇಳಿಕೆಗೆ ಒಪ್ಪುವ ಸಂದರ್ಭ ಬಂತು; ಇಲ್ಲಿನ ರೈತಾಪಿ ಜನರೆಲ್ಲರೂ ಸರಕಾರದ ಶೋಷಣೆಯ ಭೂಕಂದಾಯ ನೀತಿಯಿಂದಾಗಿ ಸ್ಥಳೀಯ ರಾಜರುಗಳ ಅಧೀನದಲ್ಲಿರುವ ರೈತರು ಹಿಂದಿನ ವರ್ಷಗಳಿಗಿಂತಲೂ ಈಗ ಹೆಚ್ಚು ಬಡವರಾಗಿದ್ದಾರೆ ಮತ್ತು ಹೆಚ್ಚು ನಿರುತ್ಸಾಹಿಗಳಾಗಿದ್ದಾರೆ ಎನ್ನುವ ಸಂದರ್ಭ ಬಂದಿತು; ಹಾಗೂ ಎಲ್ಲಿ ಭೂಮಿಯ ಗುಣಮಟ್ಟ ಕಡಿಮೆಯಾಗಿರುವುದರಿಂದ ಸ್ಥಳೀಯ ರಾಜರುಗಳ ಅಧೀನ ರೈತರ ಮತ್ತು ಇನ್ನಿತರರ ನಡುವೆ ಅಂತರ ಬಹಳವಿದೆ ಎನ್ನಬಹುದಾಗಿದೆ. ನಿಜ ಸಂಗತಿ ಏನೆಂದರೆ ಬ್ರಿಟಿಷ್ ಸರಕಾರ ಬೇಡಿದಷ್ಟು ಸ್ಥಳೀಯ ರಾಜ್ಯಗಳು ಭೂಕಂದಾಯ ಬೇಡುತ್ತಿಲ್ಲ. ನನ್ನನ್ನು ಭೇಟಿ ಮಾಡಿದವರೆಲ್ಲರೂ ಬ್ರಿಟಿಷ್ ಜನರ ಮೇಲೆ ಹೆಚ್ಚಿನ ತೆರಿಗೆ ಹೇರಿದ್ದಾರೆ ಮತ್ತು ದೇಶ ಕ್ರಮೇಣ ಬಡಸ್ಥಿತಿಗೆ ಬರುತ್ತಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ; ದೇಶ ಹೀಗಾಗುತ್ತಿದೆ ಎಂದು ಸರಕಾರದ ಯಾವ ಕಲೆಕ್ಟರುಗಳೂ ಆಣೆ ಮಾಡುತ್ತಿಲ್ಲ. ಯಾವಾಗಲಾದರೂ ಒಮ್ಮೆ ಒಬ್ಬ ಸಮರ್ಥ ಕಲೆಕ್ಟರ್ ಭೂಕಂದಾಯದ ದರಗಳನ್ನು ಜನರಿಗಾಗಿ ಇಳಿಸುತ್ತಾನೆ ಮತ್ತು ತನ್ನ ನೈಪುಣ್ಯತೆಯಿಂದ ಆತ ಸರಕಾರಕ್ಕೆ ಅದನ್ನು ಏರಿಸುತ್ತಾನೆ. ಆದರೆ, ಎಲ್ಲಾ ನೀರಸ ಚಿತ್ರಗಳನ್ನು ತಮ್ಮನ್ನೇ ಅವು ಪ್ರತಿಫಲಿಸುತ್ತವೆ ಎಂದು ಭಾವಿಸಿ ಅವುಗಳನ್ನು ದೂರ ಸರಿಸಲಾಗುತ್ತದೆ ಮತ್ತು ಅವುಗಳನ್ನು ಚಿತ್ರಿಸಿದರೆ ಅವರು ಮದ್ರಾಸ್ ಅಥವಾ ಕಲ್ಕತ್ತಾದ ಕಛೇರಿಗಳಿಂದ ಬೈಗಳ ಸುರಿಮಳೆಯಾಗುತ್ತಿತ್ತು. ಪ್ರತಿಯಾಗಿ ಗೃಹ ನಿರ್ದೇಶಕರಿಗೆ ಅಧಿಕ ಮೊತ್ತದ ಹಣವನ್ನು ನೀಡಲು ಪ್ರಾಮಾಣಿಕವಾಗಿ ವಾದಿಸುತ್ತಿದ್ದರು." ವ್ಯಾಪಾರ ಮತ್ತು ಉದ್ದಿಮೆಗಳ ಬಗ್ಗೆ ಹೇಳುತ್ತಾ, "ಸೂರತದ ವ್ಯಾಪಾರ ಈಗ ಎಳ್ಳಷ್ಟು ಪ್ರಭಾವ ಬೀರುವ ಪರಿಣಾಮದ್ದಾಗಿರುತ್ತದೆ; ಇದು ಸೂರತನಿಂದ ಬಹಳ ಕಡಿಮೆ ಪ್ರಮಾಣದ ಹತ್ತಿಯನ್ನು ಬೊಂಬಾಯಿಗೆ ಹಡಗಿನ ಮೂಲಕ ಕಳುಹಿಸುವ ಕಾರ್ಯವಷ್ಟೆ ಇದ್ದುದರಿಂದ ಹೀಗಾಗಿದೆ. ಎಲ್ಲಾ ದೇಶೀಯ ಸಿದ್ಧವಸ್ತುಗಳನ್ನು ಇಂಗ್ಲಿಷರು ಕಡಿಮೆ ಬೆಲೆ ಮಾರಾಟ ಮಾಡಿರುವುದರಿಂದ ಸ್ಥಳೀಯ ವ್ಯಾಪಾರಿಗಳು ಅಂದು ಅಪಾಯಕಾರಿಯಾಗಿ ಹಾಳಾಗುತ್ತಿರುವ ಸನ್ನಿವೇಶದಲ್ಲಿ ತೊಳಲಾಡುತ್ತಿದ್ದರು." ಡಾಕ್ಕಾ ನಗರದ ನಾಶದ ಬಗ್ಗೆ ಹೆಬರ್‌ರವರು "ಇದರ ವ್ಯಾಪಾರ ಈ ಹಿಂದೆ ಇದ್ದ ೧/೬೦ ಭಾಗದಷ್ಟು ಕಡಿಮೆಯಾಗಿತ್ತು. ನಗರದ ಎಲ್ಲಾ ಭವ್ಯ ಕಟ್ಟಡಗಳಲ್ಲಿ... ಕಾರಖಾನೆಗಳಲ್ಲಿ ಮತ್ತು ಫ್ರೆಂಚ್ ಮತ್ತು ಡಚ್‌ರ ಚರ್ಚುಗಳಲ್ಲಿ ಹಾಗೂ ಪೋರ್ಚುಗೀಸ್ ರಾಷ್ಟ್ರಗಳಲ್ಲಿ ಕಾಡಿನಂತೆ ಗಿಡಗಂಟೆಗಳು ಬೆಳೆದಿದ್ದವು ಮತ್ತು ಎಲ್ಲವೂ ಹಾಳಾಗಿತ್ತು" ಎಂದಿದ್ದಾರೆ.

ಸ್ಥಳೀಯ ವ್ಯಾಪಾರಿಗಳ ಕಷ್ಟ ಕಾರ್ಪಣ್ಯಗಳನ್ನು ಕಡಿಮೆ ಮಾಡಲು ಭಾರತೀಯರು ಬ್ರಿಟಿಷ್ ಪಾರ್ಲಿಮೆಂಟಿನ

ಮೊರೆ ಹೋದರು. ಪ್ರತಿಯೊಂದು ವಿದೇಶಿ ವಸ್ತುವನ್ನು ಮತ್ತು ಇಂಗ್ಲಿಷ್ ಉದ್ದಿಮೆಯ ವಸ್ತುಗಳನ್ನು ಭಾರತಕ್ಕೆ ರಫ್ತು ಮಾಡುವ ಹಲವಾರು ಸಾವಿರ ಭಾರತದ ಸ್ಥಳೀಯರು ಈ ಹಿಂದೆ ಹತ್ತಿ ಬೆಳೆಯಿಂದ ಮತ್ತು ಅದರ ಸಿದ್ಧವಸ್ತುವಿನಿಂದ ಉಪಜೀವನ ನಡೆಸುತ್ತಿದ್ದರು. ಸರಕಾರ ಈಗ ಪ್ರತಿಯೊಂದು ವಿದೇಶಿ ವಸ್ತುವನ್ನು ಮತ್ತು ಇಂಗ್ಲಿಷ್ ಉದ್ದಿಮೆಯ ವಸ್ತುಗಳನ್ನು ಭಾರತಕ್ಕೆ ರಫ್ತು ಮಾಡುವಲ್ಲಿ ನೀಡಿದ ಎಲ್ಲಾ ಪ್ರೋತ್ಸಾಹಗಳು ಇವರಿಗೆ ಹೊಟ್ಟೆಗೆ ಇಲ್ಲದಂತೆ ಮಾಡಿದವು. ಪರಿಣಾಮವಾಗಿ ಸ್ಥಳೀಯರು ಸರಕಾರಕ್ಕೆ ನೀವು ಅಮೆರಿಕಾದ ಪದಾರ್ಥಗಳಿಗೆ ಹಾಗೂ ಇಂಗ್ಲೆಂಡಿನ ಉದ್ದಿಮೆಗಳನ್ನು ಪ್ರೋತ್ಸಾಹಿಸುತ್ತೀರಿ, ಭಾರತದ ಪದಾರ್ಥ ಮತ್ತು ಉದ್ದಿಮೆಗಳಿಗಲ್ಲ ಎಂದು ಹೇಳಿ ಇನ್ನು ಮುಂದೆ ಇದನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಂಡರು. ಆದರೆ ಈ ಮೊರೆ ವ್ಯರ್ಥವಾಗಿಹೋಯಿತು. ಏಕೆಂದರೆ ಇಂಗ್ಲೆಂಡಿನ ಹಿತಾಸಕ್ತಿಗಳು ಯಾವಾಗಲೂ ಭಾರತವನ್ನು ಆಳುವ ಅಧಿಕಾರಿಗಳೆಲ್ಲರ ಪ್ರಥಮ ಸ್ಥಾನ ಪಡೆದಿದ್ದವು.

ಕಂಪನಿಯ ಅಧಿಕಾರಿಗಳು ಭಾರತೀಯರ ಕಷ್ಟ ಕಾರ್ಪಣ್ಯಗಳನ್ನು ಹೊರಹಾಕುವ "ಎಲ್ಲಾ ವಿಷಣ್ಣ" ಚಿತ್ರಗಳನ್ನು ಬೇಕಂತಲೇ ಮರೆಮಾಡುತ್ತಿದ್ದವು ಎಂಬುದನ್ನು ಬಿಷಪ್ ಹೆಬರ್‌ರವರು ಸರಿಯಾಗಿಯೇ ಹೇಳಿದರೂ, ಇನ್ನು ಕೆಲವರು ಅಸ್ತಿತ್ವದಲ್ಲಿರುವ ಭಾರತೀಯರ ಕಷ್ಟಕಾರ್ಪಣ್ಯಗಳನ್ನು ತೋರಿಸುವುದರಲ್ಲಿ ತಪ್ಪೇನಿಲ್ಲವೆಂಬ ಸ್ವತಂತ್ರ ಅಭಿಪ್ರಾಯವನ್ನು ಹೊಂದಿರುತ್ತಾರೆ.

೧೭೬೬ರ ಇಸವಿಯಲ್ಲಿ ಮೇ ತಿಂಗಳಿನ ಏಳನೆಯ ದಿನಾಂಕದಂದು ನಿರ್ದೇಶಕ ಮಂಡಳಿ (Court of Directors) ಈ ರೀತಿ ಬರೆದರು:

> "...ಕಂಪನಿಯ ಆಡಳಿತದ ಲಂಚಗುಳಿತನ ಮತ್ತು ಅಧಿಕಾರಿಗಳ ಸುಲಿಗೆ ಪ್ರವೃತ್ತಿಯನ್ನು ನೋಡಿದಾಗ, ಎಲ್ಲೆಡೆಯಲ್ಲಿಯೂ ಕಂಡುಬರುವ ಒಳ್ಳೆಯ ಗುಣಗಳ ಅತಿಯಾದ ಕೊರತೆಯನ್ನು ನೋಡಿದಾಗ, ಪ್ರಚಲಿತ ಶೋಚನೀಯ ಪರಿಸ್ಥಿತಿಯ ಅರಿವು ನಮಗಾಗುತ್ತದೆ. ಕಂಪನಿಯು ಭಾರತದಲ್ಲಿ ತನ್ನ ದುರ್ಭರ ನಡವಳಿಕೆ ಮತ್ತು ಅತಿ ದಬ್ಬಾಳಿಕೆಯಿಂದ ಅಪಾರ ಸಂಪತ್ತನ್ನು ದೋಚಿದ ದೃಶ್ಯ ಭಾರತದಲ್ಲಿ ಅಲ್ಲದೆ, ಜಗತ್ತಿನ ಇತರ ಯಾವ ದೇಶ ಮತ್ತು ಕಾಲದಲ್ಲಿ ನಮಗೆ ಕಂಡುಬರುವುದಿಲ್ಲ."

ಕ್ಲೈವ್, ಸ್ವತಃ ಅಪರಾಧಿಯಾದರೂ, ಭಾರತದ ಮೇಲಿನ ದಬ್ಬಾಳಿಕೆಯ ಪರಿಜ್ಞಾನ ಅವನಿಗೆ ಇತ್ತು. ಇದರಿಂದಾಗಿ ಅತ ೮ನೆಯ ಸೆಪ್ಟೆಂಬರ್ ೧೭೬೬ರಂದು ಜಾರ್ಜ್ ಡೆಡ್ಲೆಗೆ ಈ ರೀತಿ ಬರೆದ:

> "ಹಲವಾರು ವರ್ಷಗಳ ಹಿಂದೆ ಭಾರತದಲ್ಲಿ ಕೈಗೊಂಡ ಮತ್ತು ಈಗಾಗಲೇ ಮರೆವೆಯಲ್ಲಿ ಹೂತಿಟ್ಟ ನಮ್ಮ ಕೃತ್ಯಗಳ ಸಿಂಹಾವಲೋಕನ ಮಾಡಿದ್ದರೆ ಅವುಗಳ ಬಗ್ಗೆ ತಪಾಸಣೆ ಮಾಡಿದ್ದಲ್ಲಿ, ಬೆಳಕಿಗೆ ನಿಲ್ಲಲಾರದಂತಹ ಕೆಲವು ಶೋಧಗಳನ್ನು ಅವು ಹೊರತರಬಹುದಾಗಿದೆ... ನಮ್ಮ ದೇಶಕ್ಕೆ ಅವಮಾನವನ್ನು ತರಬಹುದು ಮತ್ತು ನಮ್ಮ ದೊಡ್ಡ ಹಾಗೂ ಒಳ್ಳೆಯ ಕುಟುಂಬಗಳ ಮರ್ಯಾದೆಯನ್ನು ಗಾಳಿಗೆ ತೂರಬಹುದಾಗಿದೆ."

ಸರ್ ಥಾಮಸ್ ಮನ್ರೋರವರು ಈಸ್ಟ್ ಇಂಡಿಯಾ ಕಂಪನಿಯ ದುರಾಡಳಿತದ ಬಗ್ಗೆ ಎಷ್ಟು ಕೋಪಗೊಂಡಿದ್ದರೆಂದರೆ "ನಮ್ಮ ದುರಾಡಳಿತದ ಸರಕಾರ ಭಾರತದ ಎಲ್ಲಾ ಜನರನ್ನು ಅವಮಾನಗೊಳಿಸುವ ಮುನ್ನ ಈ ದೇಶವನ್ನು ನಾವು ಬಿಟ್ಟು ಹೋಗುವುದು ಕ್ಷೇಮಕರ" ಎಂದಿದ್ದಾನೆ.

ಮಿ. ಮಾರ್ಟಿನ್‌ರು ತಮ್ಮ "೧೮೩೮ರ ಪೂರ್ವಾತ್ಯ ಭಾರತ"ದಲ್ಲಿ ಈ ರೀತಿ ಹೇಳುತ್ತಾರೆ. "ಭಾರತದಿಂದ ಪ್ರತಿವರ್ಷ ಇಂಗ್ಲೆಂಡಿಗೆ £ ೩,೦೦೦,೦೦೦ ಹಣ ಹೋಗುತ್ತಿತ್ತು. ಭಾರತದಲ್ಲಿ ಪ್ರಚಲಿತವಿದ್ದ ೧೨% ಚಕ್ರಬಡ್ಡಿಯಂತೆ ಮುವತ್ತು ವರ್ಷಕ್ಕೆ ಈ ಮೊತ್ತ ಬೃಹದಾಕಾರದ £ ೭೨೩,೯೦೦,೦೦೦ ಪೌಂಡಿಗೆ ಬರುತ್ತಿತ್ತು. ಇಂತಹ ಸತತ ಮತ್ತು ಸಂಚಯದ ಹಾಗೆ ಇಂಗ್ಲೆಂಡ್‌ನಂತಹ ರಾಷ್ಟ್ರವನ್ನು ಸಹ ಬೇಗನೆ ಬಡದೇಶವನ್ನಾಗಿ ಮಾಡಬಹುದಾಗಿತ್ತು. ವಿಷಯ ಹೀಗಿರುವಾಗ, ಒಬ್ಬ ಕೂಲಿಕಾರನ ದಿನಗೂಲಿ ೨ರಿಂದ ೩ ಪೆನ್ಸ್‌ನಷ್ಟು ಕಡಿಮೆ ಇರುವ ಭಾರತದಲ್ಲಿ ಈ ಅಪಾರ ಹಾನಿ ಎಷ್ಟು ಕಠೋರ ಪರಿಣಾಮಗಳನ್ನು ಬೀರಲಿಕ್ಕಿಲ್ಲ! ಅಂದಿನ ಭಾರತದಲ್ಲಿರುವ ೧೦೦ ಮಿಲಿಯನ್ ಬ್ರಿಟಿಷ್ ಪ್ರಜೆಗಳು ಉಪಭೋಗದ ಜನತೆ ಆಗಿದ್ದರು. ಇವರು ಬ್ರಿಟಿಷ್ ಬಂಡವಾಳ ಕುಶಲತೆ ಮತ್ತು ಉದ್ದಿಮೆಗೆ ಎಂತಹ ಮಾರುಕಟ್ಟೆಯನ್ನು ಒದಗಿಸಿದ್ದರು" ಎಂದಿದ್ದಾರೆ.

ಬೆಂಗಾಲ್ ಸಿವಿಲ್ ಸರ್ವಿಸ್‌ನ ಮಿ. ಫೆಡ್ರಿಕ್ ಜಾನ್‌ಶೋರರು ಈ ರೀತಿ ಕರುಣಾಜನಕವಾಗಿ ಹೇಳಿರುತ್ತಾರೆ.

> "ಆದರೆ, ಭಾರತದ ಒಳ್ಳೆಯ ದಿನಗಳು ಮುಗಿದಿವೆ. ಒಂದಾನೊಂದು ಕಾಲದಲ್ಲಿ ತಾನು ಹೊಂದಿದ್ದ ಸಂಪತ್ತಿನ ದೊಡ್ಡ ಪಾಲು ಈಗಾಗಲೆ ನಾಶವಾಗಿ ಹೋಗಿದೆ, ಕೆಲವೇ ಜನರಿಗಾಗಿ ಅಸಂಖ್ಯಾತ ಜನರ ಹಿತಾಸಕ್ತಿಗಳನ್ನು ಬಲಿಕೊಟ್ಟ ಕೀಳುಮಟ್ಟದ ದುರಾಡಳಿತ ಪದ್ಧತಿಯಿಂದ ಈ ದೇಶದ ಶಕ್ತಿ ಕಡಿಮೆಯಾಗಿದೆ. ಇಂಗ್ಲಿಷ್ ಸರಕಾರದ ಆಡಳಿತ ಪದ್ಧತಿಯಲ್ಲಿನ... ಅದರ ಅತಿಯಾದ ಸುಲಿಗೆಗಳು ದೇಶವನ್ನು ಮತ್ತು ಜನರನ್ನು ಬೇರಾವ ದೇಶಗಳಲ್ಲಿ ಆಗಿರದಂತೆ, ಬಡವರನ್ನಾಗಿ ಮಾಡಿರುತ್ತವೆ..."
>
> "ಮೂಲತಃ ಇಂಗ್ಲಿಷರ ಉದ್ದೇಶ ಇಡಿ ಭಾರತ ದೇಶವನ್ನು ತಮ್ಮ ಹಿತಾಸಕ್ತಿ ಪ್ರೋತ್ಸಾಹಕ್ಕಾಗಿ ಲಾಭದ ಹೆಚ್ಚಳಕ್ಕಾಗಿ ಉಪಯೋಗಿಸಿಕೊಂಡರು... ಒಂದು ವೇಳೆ ನಮ್ಮ ಉದ್ದೇಶ ಭಾರತಕ್ಕೆ ಒಳ್ಳೆಯದನ್ನು ಮಾಡುವುದಿದ್ದಲ್ಲಿ ಒಂದು ವಿಭಿನ್ನ ಮಾರ್ಗವನ್ನು ನಾವು ಸ್ವೀಕರಿಸುತ್ತಿದ್ದೆವು ಹಾಗೂ ಅದರ ಪರಿಣಾಮವೇ ಬೇರೆಯ ದಾಗಿರುತ್ತಿತ್ತು."

ಆದರೆ ಹೀಗಾಗಲಿಲ್ಲ. ಇಲ್ಲ, ಹಾಗೆ ಆಗುವುದು ಅಸಹಜವಾಗುತ್ತಿತ್ತು. ಮಿಲ್ ಹೇಳಿದಂತೆ "ಒಂದು ದೇಶದ ಜನ ತಾವೇ ಸರಕಾರವನ್ನು ರಚಿಸಿದಾಗ ಅದಕ್ಕೊಂದು ಅಸ್ತಿತ್ವವಿರುತ್ತದೆ ಹಾಗೂ ಅರ್ಥವಿರುತ್ತದೆ. ಆದರೆ ಒಂದು ದೇಶದ ಜನರ ಮೇಲೆ ಇನ್ನೊಂದು ದೇಶದವರ ಸರಕಾರವಿದ್ದರೆ ಇಂತಹ ಸರಕಾರಕ್ಕೆ ಅರ್ಥವಿರುವುದಿಲ್ಲ. ಒಂದು ಗುಂಪಿನ ಜನ ಇನ್ನೊಂದು ಜನಾಂಗವನ್ನು ತನ್ನ ಸ್ವಂತದ ಉಪಯೋಗಕ್ಕೆ ಮಾತ್ರ ಸಹಾಯ ಮಾಡಬಹುದು. ಆಳುವವರಿಗೆ ಗುಲಾಮ ದೇಶ ಹಣ ಗಳಿಸುವ ಒಂದು ಕೇಂದ್ರವಾಗಿರುತ್ತದೆ ಮತ್ತು ಅದು ತಮಗೆ ಲಾಭವನ್ನು ಒದಗಿಸುವ ಒಂದು ಮಾನವ ದನದಕೊಟ್ಟಿಗೆ. ಹೀಗಿತ್ತು ಭಾರತ.

ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ರೋಮನ್ ಸಾಮ್ರಾಜ್ಯದ ಸ್ಥಾನೀಯ ಆಡಳಿತದಂತೆ ಇತ್ತು. ಆದರೂ ಅದರಲ್ಲಿ ಸ್ಥಾನೀಯ ಸ್ವಾತಂತ್ರತೆಗಳು ಇದ್ದವು. ಮೊನೆಸಿಯಾ ಹೇಳಿದಂತೆ, "ವಾಸ್ತವದಲ್ಲಿ, ರೋಮನ್ ಸ್ಥಾನೀಯ ಸಂವಿಧಾನ, ಕೇವಲ ರೋಮನ್ ರಾಜ್ಯದ ಕೈಯಲ್ಲಿ ಕೇಂದ್ರೀಕೃತ ಮಿಲಿಟರಿ ಶಕ್ತಿಯನ್ನು ನೀಡುತ್ತಿತ್ತು.

ಆಡಳಿತವೆಲ್ಲಾ ಸ್ಥಾನೀಯರೇ ಮಾಡುತ್ತಿದ್ದರು. ಇದರಿಂದಾಗಿ ಸಾಮಾನ್ಯ ಪ್ರಜೆಯ ಸ್ವಾತಂತ್ರ್ಯ ಹಾಗೂ ಹಳೆ ರಾಜಕೀಯ ಸ್ವಾತಂತ್ರ್ಯಗಳು ಅವರ ಕೈಯಲ್ಲಿಯೇ ಇದ್ದವು. ಹಾಗೂ ಅವುಗಳ ಸ್ಥಾನೀಯರ ಕೈಯಲ್ಲಿಯೇ ರಕ್ಷಿತವಾಗಿದ್ದವು."

ಆದರೆ, ಎಲ್ಲಾ ಬಗೆಯ ಸ್ವಾತಂತ್ರ್ಯಗಳನ್ನು ಬ್ರಿಟಿಷರು ಹತ್ತಿಕ್ಕಿದರು. ಇದಲ್ಲದೆ ಮಿ. ಪರೆರೊರವರು "ರೋಮನ್ನರು ಬಹಳ ವಿಶಾಲ ಮನೋಭಾವದ ಅಂತಃಕರಣದ ಮನಸ್ಸಿನಿಂದ ಪ್ರಜೆಗಳೆಲ್ಲರ ಮನಸ್ಸನ್ನು ಅರಿತು ಮತ್ತು ಅವರಿಗೆ ಹೊಂದಿಕೊಂಡ ಹಾಗೂ ಅವರಿಗೆ ಒಳ್ಳೆಯದಾಗುವಂತಹ ಸರಕಾರಿ ನೀತಿಗಳನ್ನು ಸ್ವೀಕರಿಸಿ ತಮ್ಮ ಅಧೀನದಲ್ಲಿದ್ದ ಸಂಸ್ಥಾನಗಳನ್ನು ಆಳಿದರು" ಎನ್ನುವ ಬಹುವ್ಯಾಪಿ ತಪ್ಪು ಕಲ್ಪನೆಗಳನ್ನು ಮನಸ್ಸಿನಿಂದ ತೆಗೆದು ಒಗೆಯಬೇಕು ಎನ್ನುವುದರ ಜೊತೆಗೆ ಈಸ್ಟ್ ಇಂಡಿಯಾ ಕಂಪನಿಯು ಭಾರತದ ಆಡಳಿತ ಭಾರತೀಯರಿಗೆ ಒಳ್ಳೆಯದನ್ನು ತಂದಿತು. ರೋಮನ್‌ರ ಆಡಳಿತ ಕೊನೆಗೊಂಡ ೧೭೦೦ ವರ್ಷಗಳ ನಂತರ ಭಾರತವನ್ನು ಆಳಿದ ಬ್ರಿಟಿಷರ ಮಾನವನ ನೈತಿಕ ಮಟ್ಟ ಬಹಳ ಎತ್ತರದ್ದಾಗಿತ್ತು ಎನ್ನುವ ಸಂತೃಪ್ತಿಯ ಮನೋಭಾವವನ್ನು ಸಹ ಮನದಲ್ಲಿ ತರಬಾರದು.

ಪ್ರಸ್ತುತ ಅಧ್ಯಾಯ ಈಸ್ಟ್ ಇಂಡಿಯಾ ಕಂಪನಿಯ ಹಿಂದಿನ ದಿನಗಳ ಸನ್ನಿವೇಶದ ಬಗ್ಗೆ ಹೆಚ್ಚಿನ ವಿವರಣೆ ನೀಡದಿದ್ದರೂ, ಈ ಅಧ್ಯಾಯದಲ್ಲಿ ದೊರಕುವ ಸ್ವಲ್ಪವೇ ವಿವರಣೆ ಮೊಗಲರು ಮತ್ತು ಮರಾಠ ದೊರೆಗಳ ಆಡಳಿತದ ನಂತರ ಭಾರತವನ್ನು ಆಳಿದ ಈಸ್ಟ್ ಇಂಡಿಯಾ ಕಂಪನಿಯವರು ತಮ್ಮಷ್ಟಕ್ಕೆ ತಾವೇ ಸುಧಾರಿತ ಸಂಸ್ಕೃತಿಯ ಜನ ಎಂದು ಕರೆದುಕೊಂಡ ಬ್ರಿಟಿಷ್‌ರ ಆಡಳಿತ ಸ್ಥಾನೀಯ ಡಕಾಯಿತರ ಮತ್ತು ಕ್ರೂರ ದೊರೆಗಳ ಆಡಳಿತಕ್ಕಿಂತ ಯಾವ ರೀತಿಯಲ್ಲಿಯೂ ಸುಧಾರಿತವಾಗಿರಲಿಲ್ಲ.

ಅಂತೂ–ಇಂತೂ, ತಮ್ಮ ಹಾಳಾದ ಉದ್ದಿಮೆಗಳೊಂದಿಗೆ ತಮ್ಮ ಅತಿಕ್ರಮಿಸಲಾದ ಮತ್ತು ಹೆಚ್ಚಿನ ತೆರಿಗೆಗಳನ್ನು ಭರಿಸಲಾರದಂಥಾ ಕಡಿಮೆ ಉತ್ಪಾದಕತ್ವ ಹೊಂದಿ ಅಧಿಕ ತೆರಿಗೆಗೆ ಒಳಗಾದ ಕೃಷಿಯೊಂದಿಗೆ ತಮ್ಮ ಸಾಮರ್ಥ್ಯವನ್ನು ತೋರುವ ಕೆಲವೇ ಕೆಲವು ಹಾದಿಗಳೊಂದಿಗೆ, ಭಾರತದ ಜನರು ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಿಂದ ಪ್ರಭುತ್ವದ ಆಡಳಿತಕ್ಕೆ ಸಾಗಿದರು.

# ವಿಭಾಗ ಎರಡು

## ಅಧ್ಯಾಯ–೧

# ಅಸ್ಪೃಶ್ಯರು ಮತ್ತು ಬ್ರಿಟಿಷ್ ಆಳ್ವಿಕೆ

[ಇದು ನಿಮ್ನ ವರ್ಗಗಳವರನ್ನು ದೇಶದ ಸೈನಿಕ ಪಡೆಗಳಲ್ಲಿ ಸೇರಿಸಿಕೊಳ್ಳದೆ ಅವರನ್ನು ಕಡೆಗಣಿಸಿದ ಬ್ರಿಟಿಷ್ ಸರ್ಕಾರದ ಧೋರಣೆಯನ್ನು ಕುರಿತು ೧೨೩ ಪುಟಗಳ ಬೆರಳಚ್ಚು ಮಾಡಿದ ಹಸ್ತಪ್ರತಿ. ಇದರ ಮೊದಲನೆಯ ಪುಟ ಲಭ್ಯವಿಲ್ಲ. ಇದನ್ನು ಡಾ. ಅಂಬೇಡ್ಕರ್‌ರವರು ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿನಲ್ಲಿದ್ದಾಗ ಸಿದ್ಧಪಡಿಸಿದ್ದರೆಂದು ಅವರ ಜೀವನಚರಿತ್ರೆಯನ್ನು ಮರಾಠಿಯಲ್ಲಿ ಬರೆದಿರುವ ಶ್ರೀಯುತ ಸಿ. ಬಿ. ಖೈರಮೋಡೆಯವರ ಅಭಿಪ್ರಾಯವಾಗಿದೆ. ಈ ಲೇಖನದ ಹಸ್ತಪ್ರತಿಯನ್ನು ಯಥಾವತ್ತಾಗಿ ಇಲ್ಲಿ ಮುದ್ರಿಸಲಾಗಿದೆ. –ಸಂ.]

.......... ಅಮೇರಿಕಾ ಖಂಡದ .......... ಆತನ ಸಮುದ್ರ ಪ್ರಯಾಣದ ಉದ್ದೇಶವು ಭಾರತವನ್ನು ತಲುಪುವುದಾಗಿತ್ತು. ಕೊಲಂಬಸನ ಈ ಪ್ರಯಾಣವೂ ದಿಢೀರ್ ಪ್ರಯತ್ನವಾಗಿರಲಿಲ್ಲ.... ಅದು.... ಪೋರ್ಚುಗಲ್‌ನ ರಾಜಕುಮಾರನಾದ ಹೆನ್ರಿಯ ಭಾರತಕ್ಕೆ ಸಮುದ್ರದ ಮೂಲಕ ಹೋಗುವ ದಾರಿಯನ್ನು ಕಂಡುಕೊಳ್ಳುವ ಅಭಿಲಾಷೆಯು ೪೨ (೧೪೧೮–೧೪೬೦) ವರ್ಷಗಳ ಸತತ ಯೋಜನೆಯಿಂದ ಸ್ಫೂರ್ತಿ ಪಡೆಯಿತು.

ಯೂರೋಪಿನಿಂದ ಇಂಡಿಯಾಕ್ಕೆ ನೇರವಾದ ಸಮುದ್ರಯಾನದ ದಾರಿಯನ್ನು ಕಂಡುಹಿಡಿದು ಆ ಮೂಲಕ ಪೋರ್ಚುಗೀಸರು, ಡಚ್, ಫ್ರೆಂಚ್ ಮತ್ತು ಆಂಗ್ಲರು ಸ್ವಯಂ ನಿರ್ಮಿತ ಗೂಡುಗಳಿಂದ ಹೊರಬರಲು ಸಾಧ್ಯವೆಂದು ನಂಬಲಾಗಿತ್ತು. ಆಂಗ್ಲರು ಭಾರತಕ್ಕೆ ತಲುಪುವ ಸಾಹಸಿ ಪ್ರಯತ್ನವು ಕೇವಲ ಒಂದು ಜನಾಂಗದ್ದಾಗಿರದೆ ಯೂರೋಪಿನ ಅನೇಕ ರಾಷ್ಟ್ರಗಳ ಸತತ ಪ್ರಯತ್ನದ ಹಾಗೂ ಸ್ಪರ್ಧೆಯ ವಿಷಯವಾಗಿತ್ತು. ಮೊದಲು ಭಾರತಕ್ಕೆ ಸಮುದ್ರದ ಮೂಲಕ ತಲುಪುವ ಸಲುವಾಗಿ ಸ್ಪರ್ಧೆಯೇ ಏರ್ಪಟ್ಟಿತ್ತು. ಪೋರ್ಚುಗೀಸರು ಪ್ರಥಮವಾಗಿ ಭಾರತಕ್ಕೆ ತಲುಪಿದರು. ಉಳಿದ ರಾಷ್ಟ್ರಗಳು ಈ ವಿಷಯಕ್ಕೆ ಸಂಬಂಧಿಸಿದ ಹಾಗೆ ತೆಪ್ಪಗಿದ್ದರು ಎಂದು ಇದರ ಅರ್ಥವಲ್ಲ. ಆಂಗ್ಲರು ಮತ್ತು ಡಚ್ಚರು ಭಾರತಕ್ಕೆ ತಲುಪುವ ಸಮುದ್ರ ಮಾರ್ಗವು ಕೇಪ್ ಆಫ್ ಗುಡ್‌ಹೋಪ್ ಮಾರ್ಗಕ್ಕಿಂತ ಮತ್ತೊಂದು ಸಮೀಪದ ದಾರಿಯಿದೆ ಎಂದು ಭಾವಿಸಿದ್ದರು. ಈ ಮಾರ್ಗದ ಅನ್ವೇಷಣೆಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರಿಂದಲೇ ಅವರಿಗೆ ಭಾರತವನ್ನು ತಲುಪಲು ತಡವಾಯಿತು. ಫ್ರೆಂಚರು ಭಾರತವನ್ನು ತಲುಪುವುದರಲ್ಲಿ ಕೊನೆಯವರಾದರೂ ಕೂಡ ಅವರು ಸುಮಾತ್ರಾದ ದಾರಿ ಕಂಡುಹಿಡಿದು ಅದನ್ನು ತಲುಪಿದವರಲ್ಲಿ ದ್ವಿತೀಯ ರಾಷ್ಟ್ರದವರಾದರು. ೧೫೨೯ರಲ್ಲಿ ಅವರು ಸುಮಾತ್ರಾಕ್ಕೆ ಮಾಡಿದ ಪ್ರಥಮ ಯಾನವಾಗಿತ್ತು.

ಭಾರತವನ್ನು ತಲುಪಲು ಅವರಲ್ಲಿದ್ದ ಕುತೂಹಲದ ಮೂಲವಾದರೂ ಏನು? ಪೋರ್ಚುಗೀಸರು, ಸ್ಪೇನ್ ರಾಷ್ಟ್ರದವರು, ಆಂಗ್ಲರು, ಫ್ರೆಂಚರು, ಡಚ್ಚರು ಭಾರತಕ್ಕೆ ಬರುವ ಕಷ್ಟದ ಸಮುದ್ರ ಮಾರ್ಗದ ಅನ್ವೇಷಣೆಗೆ ಅನೇಕ ಶತಮಾನಗಳ ಪೈಪೋಟಿಗಳಿದದ್ದು ಏತಕ್ಕೆ? ಈ ಪ್ರಯತ್ನಗಳ ಮುಖ್ಯ ಉದ್ದೇಶವು ಐಷಾರಾಮಿ ವಸ್ತುಗಳನ್ನು, ಅದರಲ್ಲೂ ವಿಶೇಷವಾಗಿ ಮೆಣಸು, ಲವಂಗ, ಒಣಗಿದ ಹಣ್ಣುಗಳನ್ನು ಭಾರತ ಮತ್ತು ಇತರ ಪೌರ್ವಾತ್ಯ ರಾಷ್ಟ್ರಗಳಿಂದ ಪಡೆಯುವುದಾಗಿತ್ತು.

ಈ ಎಲ್ಲ ತೊಳಲಾಟಗಳು ಕೇವಲ ಮಸಾಲೆ ಪದಾರ್ಥಗಳಿಗಾಗಿ ಎಂಬುದು ತುಂಬಾ ವಿಚಿತ್ರವಾದುದು. ಯೂರೋಪಿನ ವಿಸ್ತಾರಕ್ಕೆ ಮಸಾಲೆ ಪದಾರ್ಥಗಳು ಮಹತ್ವದ ಕೊಡುಗೆ ನೀಡಿದ್ದು ವಾಸ್ತವ. ೧೫ನೇ ಮತ್ತು ೧೬ನೇ ಶತಮಾನಗಳಲ್ಲಿ ಯೂರೋಪಿನ ಜನರು ಉಪಯೋಗಿಸುತ್ತಿದ್ದ ಮಸಾಲೆಯ ಪ್ರಮಾಣವನ್ನು ಪ್ರೊ. ಚೈನೆ ಅವರು ಸಂಗ್ರಹಿಸಿದ ಅಂಕಿ–ಅಂಶಗಳಿಂದ ಕಾಣಬಹುದು:

> "ಪ್ರಮುಖ ಐಷಾರಾಮಗಳಲ್ಲಿ ಮಸಾಲೆ ಪದಾರ್ಥಗಳೂ ಸೇರಿದ್ದವು. ಮಾದಕ ಪೇಯಗಳು ಮತ್ತು ತಿಂಡಿಗಳನ್ನು ವಿವಿಧ ಸಾಂಬಾರು ಜಿನಸುಗಳಿಂದ ಪರಿಮಳಯುಕ್ತ ಮಾಡಲಾಗುತ್ತಿತ್ತು. ಮಾನ್ಯ ತೋಪಾ ಅವರ ತೋಟದಲ್ಲಿ ವಿವಿಧ ಮಸಾಲೆಯ ವಸ್ತುಗಳನ್ನು ಬೆಳೆಯಲಾಗುತ್ತಿತ್ತು."
>
> "ಫ್ರಾಯಿಸಾರ್ಟದ ರಾಜನ ಅರಮನೆಯಲ್ಲಿ ಅತಿಥಿಗಳೆದುರು ಮಾದಕ ಪೇಯಗಳನ್ನು ಮತ್ತು ಪರಿಮಳದ ಸಾಂಬಾರು ಪದಾರ್ಥಗಳನ್ನಿಡಲಾಗುತ್ತಿತ್ತು. ೧೨೨೪ರಲ್ಲಿ ಮಾರ್ಸೇಲೀಸ್‌ನಲ್ಲಿ ಕುವರಿಯೋರ್ವಳ ವರದಕ್ಷಿಣೆಯಾಗಿ ಶುಂಠಿ, ಲವಂಗ, ಜಾಪತ್ರೆ ಮುಂತಾದವುಗಳನ್ನು ನೀಡಿದ ಉಲ್ಲೇಖವಿದೆ."

"ಜಾನ್‌ಬಾಲ್‌ನು ಬಡರೈತರ ಮತ್ತು ದೊರೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತ ಶ್ರೀಮಂತ ದೊರೆಗಳು ಮಾದಕಪೇಯ, ಮಸಾಲೆಗಳು ಮತ್ತು ಉತ್ತಮವಾದ ರೊಟ್ಟಿ ಹೊಂದಿರುತ್ತಾರೆ. ಆದರೆ ಬಡರೈತರಾದ ನಾವು ಕಳಪೆ ಗೋಧಿಯ ಮತ್ತು ಹುಲ್ಲಿನ ತೊಪ್ಪೆ ಮಾತ್ರ ಪಡೆಯುತ್ತೇವೆ. ಮುದುಕ ಲಾಟಿನರ್‌ನು ಜೂಜಾಟದಲ್ಲಿ ಸೋತಾಗ ಒಣಗಿದ ಹಣ್ಣುಗಳನ್ನು ಒತ್ತೆಯಾಗಿಟ್ಟನು."

"ಕರಿಮೆಣಸು ಮಸಾಲೆ ಪದಾರ್ಥಗಳಲ್ಲಿಯೇ ತುಂಬಾ ಮಹತ್ವದ್ದಾಗಿದ್ದು, ಕೊಡುಗೆ ನೀಡುವಾಗ ಹಣಕ್ಕೆ ಬದಲಾಗಿ ಅದನ್ನೇ ನೀಡಲು ಮತ್ತು ಪಡೆಯಲು ಬಳಸಲಾಗುತ್ತಿತ್ತು."

ಪುರಾತನ ಕಾಲದ ಬ್ರಿಟಿಷ್ ಶಾಸನವೊಂದರಲ್ಲಿ "ಮಾಟಲ್ಡಾ ಡಿ ಚಾಸರಳು ರಾಜನಿಂದ ಉಂಬಳಿ ಪಡೆದಳು. ಆಕೆ ಪಡೆದ ಜಮೀನಿನ ಬೆಲೆಯು ೮ ಪೌಂಡು ೨ ಷಿಲ್ಲಿಂಗು ಮತ್ತು ಒಂದು ಪೌಂಡಿನ ತೂಕದ ಕರಿಮೆಣಸು ಮತ್ತು ಒಂದು ಪೌಂಡಿನ ತೂಕದ ಸಿನ್ನಾಮಾನ್, ಒಂದು ಔನ್ಸ್ ಅಳತೆಯ ರೇಷ್ಮೆ. ಆ ಕಾಲದಲ್ಲಿ ಮಸಾಲೆ ಪದಾರ್ಥಗಳ ಬೇಡಿಕೆ ಹಾಗೂ ಉಪಭೋಗದ ಪ್ರಮಾಣವು ಆಶ್ಚರ್ಯಗೊಳಿಸುವಂತಹದು. ಮೆಡಿಟರೇನಿಯನ್‌ದ ಸರಕು ಹಡಗುಗಳಾದ ವೆನೇಷಿಯನ್ ಗ್ಯಾಲಿ ಮತ್ತು ಜಿನೋಯಿಸ್ ವರಾಕ್ಸ್‌ಗಳು ಪಾಶ್ಚಿಮಾತ್ಯ ರಾಷ್ಟ್ರಗಳ ಎಲ್ಲ ಸಂತೆಗಳಲ್ಲಿಯೂ ಮಸಾಲೆಯ ಸರಕನ್ನು ಯಥೇಚ್ಛವಾಗಿ ಸಾಗಿಸಿ ಮಾರಾಟ ಮಾಡಲಾಗುತ್ತಿತ್ತು. ಜರ್ಮನಿಯ ಸಮುದ್ರ ಕಳ್ಳರು ರೈನದ ಮೂಲಕ ಹಡಗುಗಳನ್ನು ದೋಚುವಾಗ ಇಷ್ಟವಿಲ್ಲದೆ ಇದ್ದರೂ ಹಣ ತರುವ ಪದಾರ್ಥವಾದ ಮೆಣಸಿನ ಮೂಟೆಗಳನ್ನು ಹಡಗುಗಳಿಂದ ಲಪಟಾಯಿಸಿ ವ್ಯಾಪಾರಿಗಳಿಗೆ ತಲುಪಿಸುತ್ತಿದ್ದರು. ಅನೇಕ ವರ್ಷಗಳವರೆಗೆ ವೆನೇಷಿಯನ್ನರು ಪ್ರತಿವರ್ಷ ೪೨೦,೦೦೦ ಪೌಂಡುಗಳಷ್ಟು ಕರಿಮೆಣಸನ್ನು ಇಜಿಪ್ತಿನ ಸುಲ್ತಾನನಿಂದ ಖರೀದಿಸುವ ಒಪ್ಪಂದವನ್ನು ಮಾಡಿಕೊಂಡಿದ್ದರು. ಅವುಗಳಲ್ಲಿ ಪ್ರಾರಂಭದ ಹಡಗೊಂದು ಭಾರತಕ್ಕೆ ತೆರಳುವಾಗ ೨೧೦,೦೦೦ ಪೌಂಡುಗಳಷ್ಟು ಕರಿಮೆಣಸನ್ನು ಸಾಗಿಸಿತು. ೧೫೨೦ರಲ್ಲಿ ಪೋರ್ಚುಗೀಜರು ಒಬ್ಬ ರಾಜಕುಮಾರನಿಗೆ ೨೦೦,೦೦೦ ಪೌಂಡುಗಳ ಕರಿಮೆಣಸಿನ ಜುಲ್ಮಾನೆಯನ್ನು ವಿಧಿಸಿತು. ಇತಿಹಾಸದ ಪುಟಗಳಲ್ಲಿ, ಅಡಿಗೆ ಮನೆಯ ಪುಸ್ತಕದಲ್ಲಿ, ಖಾಸಗಿ ಪತ್ರವ್ಯವಹಾರದಲ್ಲಿ, ವ್ಯಾಪಾರದ ದಾಖಲಾತಿಗಳಲ್ಲಿ, ಸುಂಕದ ವಿವರಗಳಲ್ಲಿ ಈ ಮಸಾಲೆ ಪದಾರ್ಥಗಳ ಉಲ್ಲೇಖ ಮೇಲಿಂದ ಮೇಲೆ ಕಂಡುಬರುತ್ತದೆ."

ಯೂರೋಪಿಯನ್ನರಲ್ಲಿ ಮಸಾಲೆ ಪದಾರ್ಥಗಳು ಅಷ್ಟೊಂದು ಮಹತ್ವವನ್ನು ಪಡೆದಿದ್ದು ಏಕೆ ಎಂಬ ಪ್ರಶ್ನೆಗೆ ಪ್ರಥಮ ಉತ್ತರ 'ಸ್ವಾದ', "ಒಂದೇ ತೆರನಾದ ಆಹಾರ, ಒರಟಾದ ಅಡುಗೆ, ಪಾಕಶಾಸ್ತ್ರದ ನೈಪುಣ್ಯತೆ ಇಲ್ಲದ ಬಾಣಸಿಗರು, ಊಟದ ವಿಷಯಕ್ಕೆ ಕೊರತೆಯ ನಿರಾಸಕ್ತಿಯನ್ನು ನೀಡಿದ್ದರು. ಈ ನಿರಾಸಕ್ತಿಯನ್ನು ಪೌರ್ವಾತ್ಯ ಕೊಡುಗೆಯ ಮೂಲಕ ನೀಗಿಸಲು ಪ್ರಯತ್ನಿಸಲಾಗುತ್ತಿತ್ತು."

ಜನಸಾಮಾನ್ಯನಿಗೆ ಮಸಾಲೆ ಪದಾರ್ಥಗಳು ಸ್ವಾದದ ಮೂಲಗಳಾಗಿದ್ದರೆ, ಬಡವರಿಗೆ ಅದು ಅವಶ್ಯಕತೆಯ ವಸ್ತುವಾಗಿತ್ತು. ಬಡವರಿಗೂ ಮಸಾಲೆ ಪದಾರ್ಥಗಳು ಬೇಕಾಗಿದ್ದವು. ಪ್ರಾಚೀನ ಕಾಲದಲ್ಲಿ ಯಂತ್ರಗಳ ಬಳಕೆಯಿಲ್ಲದಾಗ ಆಹಾರ ಪೂರೈಕೆಯು ತುಂಬಾ ಕಡಿಮೆಯಿತ್ತು. ಆಗ ಮನುಷ್ಯನು ಆಹಾರವನ್ನು ಹಳಸಿತೆಂದು ಎಸೆಯಲು ಇಷ್ಟಪಡುತ್ತಿರಲಿಲ್ಲ. ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಕೂಡಲೇ ಬಳಸಲಾಗದಿದ್ದರೆ ಅದನ್ನು

ಮುಂದೆ ಉಪಯೋಗಿಸಲು ಕೂಡಿಸಿ ಇಡುತ್ತಿದ್ದರು. ಮಸಾಲೆ ಪದಾರ್ಥಗಳ ಆಹಾರವನ್ನು ಹೆಚ್ಚು ಸಮಯ ಬಳಕೆಗೆ ಉಪಯೋಗಿಸುತ್ತಿದ್ದರು. ಇವು ಆಹಾರ ಬಾಳಿಕೆಗೆ ಉತ್ತಮ ಸಹಕಾರಿಗಳಾಗಿದ್ದವು. ಆದುದರಿಂದ ಯೂರೋಪಿನಲ್ಲಿ ಆಹಾರದ ಸ್ವಾದ ಮತ್ತು ಅದನ್ನು ಬಹಳ ದಿನಗಳವರೆಗೆ ಕೆಡದಂತೆ ಇಡಲು ಮಸಾಲೆ ಪದಾರ್ಥಗಳ ಬಳಕೆ ಸಾರ್ವತ್ರಿಕವಾಗಿತ್ತು.

ಯೂರೋಪಿನ ರಾಷ್ಟ್ರಗಳ ಮಸಾಲೆ ಪದಾರ್ಥಗಳಿಗಾಗಿ ಭಾರತವನ್ನು ತಲುಪಲು ನೇರ ಸಮುದ್ರ ಯಾನದ ಮಾರ್ಗವನ್ನೇ ಏಕೆ ಅಪೇಕ್ಷಿಸಿದರು ಎಂಬುದು ಎರಡನೆಯ ಪ್ರಶ್ನೆ. ಯೂರೋಪಿನ ರಾಷ್ಟ್ರಗಳು ಭಾರತಕ್ಕೆ ತಲಪಲು 'ಕೇಪ್ ಆಫ್ ಗುಡ್ ಹೋಪ್'ನ ಮೂಲಕ ಸಾಗುವ ಮಾರ್ಗ ಕಂಡುಹಿಡಿಯುವುದಕ್ಕೂ ಮುಂಚೆ ತುಂಬಾ ಪರಿಚಿತವಾದ ಮೂರು ಭೂ ಮಾರ್ಗಗಳನ್ನು ವಿಲಾಸಿ ವಸ್ತು ಮತ್ತು ಮಸಾಲೆ ಪದಾರ್ಥಗಳನ್ನು ಯೂರೋಪಿಗೆ ಸಾಗಿಸುವಲ್ಲಿ ಉಪಯೋಗಿಸಲಾಗುತ್ತಿತ್ತು. ಅವುಗಳೆಂದರೆ ಉತ್ತರ, ಮಧ್ಯ ಮತ್ತು ದಕ್ಷಿಣ ಮಾರ್ಗಗಳು.

ಉತ್ತರದ ಮಾರ್ಗವು ದೂರ ಪ್ರಾಚ್ಯ ಮತ್ತು ಪಶ್ಚಿಮದ ಮಧ್ಯದಲ್ಲಿತ್ತು. ಇದು ಚೀನಾದ ಪಶ್ಚಿಮಕ್ಕೆ ಗೋಬಿ ಮಹಾಮರುಭೂಮಿಯ ಮುಖಾಂತರ, ಮುಗಿಲೆತ್ತರದ ಪರ್ವತಗಳ ದಕ್ಷಿಣ ಭಾಗದ ಲೋಪ್ ಸರೋವರಕ್ಕೆ, ನಂತರ ಪ್ರಾಚೀನ ನಗರಗಳ ಸರಮಾಲೆಗಳಾದ ಖೋತಾನ್, ಮಾರ್ಕಂಡ್, ಕಷ್ಗರ್, ಸಮಾರೋ ಮತ್ತು ಭೋಖಾರಾಗಳ ಮೂಲಕ ಹಾಯ್ದು ಕೊನೆಗೆ ಕ್ಯಾಸ್ಪಿಯನ್ ಸಮುದ್ರ ಪ್ರದೇಶವನ್ನು ತಲುಪಿದೆ. ಈ ಮುಖ್ಯ ಉತ್ತರದ ಮಾರ್ಗಕ್ಕೆ ಹಿಮಾಲಯ ಮತ್ತು ಹಿಂದೂಖುಷ್ ಕಣಿವೆಗಳ ಮೂಲಕ ಹಾಯ್ದುಹೋದ ಇತರ ಮಾರ್ಗಗಳನ್ನು ಕೂಡಿಸುವ ಮೂಲಕ ಭಾರತ ಮತ್ತು ಚೀನಾದ ಉತ್ಪಾದನೆಗಳನ್ನು ಒಂದೇ ಸಮ್ಮಿಳಿತ ಮಾರ್ಗದಲ್ಲಿ ಸೇರಿಸಿತು. ಚೈನಾ ಗೋಡೆ ಮತ್ತು ಕ್ಯಾಸ್ಪಿಯನ್ ನಡುವಿನ ಮರುಭೂಮಿ, ಗುಡ್ಡಗಳು ಮತ್ತು ಬೆಂಗಾಡುಗಳ ಮೂಲಕ ಹಾಯ್ದುಹೋಗುವ ಎಂಭತ್ತು ಅಥವಾ ಒಂದು ನೂರು ದಿನಗಳ ಪ್ರಯಾಣದ ಮಾರ್ಗ ಇದಾಗಿತ್ತು. ಚೀನಾದ ಇನ್ನೂ ಉತ್ತರದಿಂದ ಇದಕ್ಕೆ ಸಮಾನಾಂತರ ರಸ್ತೆಯೊಂದಿತ್ತು. ಅದು ಮರುಭೂಮಿ ಮತ್ತು ಗುಡ್ಡಗಾಡಿನ ಉತ್ತರದಲ್ಲಿದ್ದು ಬಾಲ್ಖಾಷ್ ಸರೋವರದ ಮೂಲಕ ಕ್ಯಾಸ್ಪಿಯನ್ ಸಮುದ್ರದ ಪೂರ್ವಕ್ಕಿದ್ದ ಅದೇ ಪ್ರಾಚೀನ ಮತ್ತು ಜನಭರಿತ ಪ್ರದೇಶವನ್ನು ಸೇರುತ್ತಿತ್ತು. ಇಲ್ಲಿ ಪ್ರಯಾಣ ಮಾರ್ಗವು ಮತ್ತೆ ಬೇರೆಯಾಗುತ್ತಿತ್ತು. ಕೆಲವು ಮಾರ್ಗಗಳು ನೈರುತ್ಯಕ್ಕೆ ಹೋಗಿ ಮೇಲೆ ವಿವರಿಸಲಾದ ಕೇಂದ್ರ ಮಾರ್ಗಗಳನ್ನು ಸಂಧಿಸಿ ನಂತರ ಏಷಿಯಾ ಮೈನರ್ ಮತ್ತು ಸಿರಿಯಾ ಮೂಲಕ ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರಗಳನ್ನು ಸೇರುತ್ತಿದ್ದವು. ಇತರ ಮಾರ್ಗಗಳು ಕ್ಯಾಸ್ಪಿಯನ್ ಸಮುದ್ರದ ಉತ್ತರ ಕರಾವಳಿಯನ್ನು ಸುತ್ತಿರುವ ಭೂಮಾರ್ಗದ ಮೂಲಕ, ಇಲ್ಲವೆ ಅದನ್ನು ದಾಟಿ ಮುಂದೆ ಅಸ್ತ್ರಾಖಾನ್ ಅನ್ನು ಸೇರುತ್ತಿದ್ದವು. ಅಸ್ತ್ರಾಖಾನ್‌ದಿಂದ ವೋಲ್ಗಾ ಮತ್ತು ಇತರ ನದಿಗಳನ್ನು ದಾಟಿ, ಕಪ್ಪು ಸಮುದ್ರದಲ್ಲಿ ಡಾನ್ ನದಿಯ ಮುಖಜ ಭೂಮಿಯಲ್ಲಿ ಅಥವಾ ಕ್ರಿಮಿಯಾದ ಕಫ್ಫಾ(Kaffa)ದ ಸಮೀಪದ ತಾನಾದಲ್ಲಿ ಕೊನೆಗೊಳ್ಳುತ್ತಿದ್ದವು.

ಮಧ್ಯದ ಮಾರ್ಗವು ಮೆಸೆಪೊಟೇಮಿಯಾ ಮತ್ತು ಸಿರಿಯಾದ ಮೂಲಕ ಲೇಪಾಂಟ್‌ವರೆಗೆ ಇತ್ತು. ಭಾರತದಿಂದ ಹೋಗುವ ಹಡಗುಗಳು ಏಷ್ಯಾಟಿಕ್ ಕರಾವಳಿಯ ಮೂಲಕ ಸಾಗಿ ಪರ್ಶಿಯನ್ ಕೊಲ್ಲಿಯನ್ನು ತಲುಪಿ ತಮ್ಮ ಬೆಲೆಬಾಳುವ ವಸ್ತುಗಳನ್ನು ಛಾಲ್ಡಿಯಾ ಅಥವಾ ಕೆಳ ಯೂಫ್ರೆಟಿಸ್‌ನಲ್ಲಿ ಮಾರಾಟ ಮಾಡುತ್ತಿದ್ದವು. ಈ ಸರಕುಗಳನ್ನು ಹೊತ್ತ ಹಡಗುಗಳು ಕೊಲ್ಲಿಯ ಮುಖಜ ಭೂಮಿಯಲ್ಲಿನ ಬಾಸೋರಾದವರೆಗೆ ಓರ್ಮುರ್ಝ್‌ನಿಂದ ಹೋಗುವ ಹಡಗುಗಳಿಗೆ ತಂಗು ಬಂದರುಗಳಾಗಿದ್ದವು. ಕರಾವಳಿಯ

ಅನೇಕ ನಗರಗಳು ಪೂರ್ವದಿಂದ ಪ್ರವೇಶಿಸುವ ಅನೇಕ ಹಡಗುಗಳಿಗೆ ತಮ್ಮ ಪ್ರಯಾಣದ ಕೊನೆಯ ನಿಲುಗಡೆಯ ತಾಣಗಳಾಗಿದ್ದವು. ಇವುಗಳ ಮೂಲಕ ಪರ್ಷಿಯಾದ ವಿವಿಧ ಪ್ರಾಂತ್ಯಗಳನ್ನು ಒಂದುಗೂಡಿಸಿ ಆಫ್ಘಾನಿಸ್ತಾನದ ಮುಖಾಂತರ ಉತ್ತರ ಹಿಂದೂಸ್ತಾನದೊಂದಿಗೆ ಸಂಪರ್ಕ ಕಲ್ಪಿಸುತ್ತಿದ್ದವು. ಪರ್ಷಿಯನ್ ಕೊಲ್ಲಿಯಲ್ಲಿ ಆರಂಭಗೊಂಡ ಈ ಮಾರ್ಗದ ಒಂದು ಶಾಖೆ ಟೈಗ್ರಿಸ್‌ನಿಂದ ಬಾಗ್ದಾದ್‌ವರೆಗೆ ಹೋಗುತ್ತಿತ್ತು. ಈ ನೆಲೆಯಿಂದ ಸರಕುಗಳನ್ನು ಪರ್ಶಿಯಾದ ಉತ್ತರದ ಮಹಾರಾಜಧಾನಿಯಾಗಿದ್ದ ತಾಬ್ರಿಜ್‌ಗೆ ಕುರ್ದಿಸ್ತಾನದ ಮೂಲಕ ಗಾಡಿಗಳಲ್ಲಿ ತೆಗೆದುಕೊಂಡು ಹೋಗಲಾಗುತ್ತಿತ್ತು ಮತ್ತು ಅಲ್ಲಿಂದ ಮುಂದಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಕಪ್ಪು ಸಮುದ್ರಕ್ಕೆ ಅಥವಾ ಮೆಡಿಟರೇನಿಯನ್ನಿನ ಟಾಯಾಸ್‌ಗೆ ತೆಗೆದುಕೊಂಡು ಹೋಗಲಾಗುತ್ತಿತ್ತು. ಇನ್ನೊಂದು ಶಾಖೆಯನ್ನು ಒಂಟೆಗಳ ಸಾಲು ಬಾಸ್ರೋವಾದಿಂದ ಮರುಭೂಮಿಯ ಮುಖಾಂತರ ಪಶ್ಚಿಮಕ್ಕೆ ಸಿರಿಯಾದ ಪಟ್ಟಣಗಳಾದ ಅಲೆಪ್ಪೋ, ಆಂಟಿಯೋಕ್ ಮತ್ತು ಡಮಾಸ್ಕಸ್‌ವರೆಗೆ ಪಂಖದೋಪಾದಿಯಲ್ಲಿ ಹರಡಿದ್ದಿತು. ಅವು ಕೊನೆಗೆ ಮೆಡಿಟರೇನಿಯನ್ ಕರಾವಳಿಯನ್ನು ಲಾವೋದಿಸಿಯಾ, ಟ್ರಿಪೋಲಿ, ಬೇರೂಟ್, ಇಲ್ಲವೇ ಜಾಫ್ನಾವನ್ನು ತಲುಪುತ್ತಿದ್ದು, ಇತರ ಕೆಲವು ಸರಕುಗಳನ್ನು ಅಲೆಗ್ಸಾಂಡ್ರಿಯಾದ ದಕ್ಷಿಣ ಭಾಗದವರೆಗೆ ಕೊಂಡೊಯ್ಯಲಾಗುತ್ತಿತ್ತು.

ದಕ್ಷಿಣ ಮಾರ್ಗವು ಆರಂಭದ ಘಟ್ಟವೊಂದನ್ನು ಬಿಟ್ಟು ಸಮುದ್ರ ಮಾರ್ಗವೇ ಆಗಿತ್ತು. ಈ ಮಾರ್ಗವು ಕೆಂಪು ಸಮುದ್ರದ ಮೂಲಕ ಇಂಡಿಯಾ ಮತ್ತು ಇತರ ಪೌರ್ವಾತ್ಯ ರಾಷ್ಟ್ರಗಳಿಂದ ಸರಕನ್ನು ಈಜಿಪ್ತಿನವರೆಗೂ, ತದನಂತರದ ನೈಲ್‌ನದಿಯ ಮುಖ ಪ್ರದೇಶದಿಂದ ಯೂರೋಪಿನ ಕಡೆಗೂ ಸಾಗುತ್ತಿತ್ತು.

ಭೂಮಾರ್ಗಗಳು ಸುತ್ತಿ ಬಳಸುವ ಅಪಾಯಕಾರಿ ಮಾರ್ಗಗಳಾಗಿದ್ದವು. ಈ ಮಾರ್ಗದಲ್ಲಿನ ಪ್ರವಾಸವು ರಕ್ಷಣೆ ಇಲ್ಲದ, ಕಷ್ಟಕರವಾದ, ದುಬಾರಿಯ ಯಾತ್ರೆಯಾಗುತ್ತಿತ್ತು. ಕಳ್ಳಕಾಕರು ಸುಲಿಗೆಯಿಂದಲೂ, ಸರಕಾರವು ಸುಂಕದಿಂದಲೂ ವ್ಯಾಪಾರಿಗಳಿಗೆ ತೊಂದರೆ ಕೊಡುತ್ತಿದ್ದರು. ಎರಡು ಭೂಮಾರ್ಗಗಳಲ್ಲಿನ ಉತ್ತರದ ಮಾರ್ಗವು ಮಧ್ಯದ ಮಾರ್ಗದೊಂದಿಗೆ ಹೋಲಿಸಿದಾಗ ಅದು ಹೆದ್ದಾರಿಯೇನೂ ಆಗಿರಲಿಲ್ಲ. ಅತೀ ಪ್ರಯಾಸದ ಒಂಟೆಯ ಮೇಲಿನ ಪ್ರಯಾಣ ಮತ್ತು ಉಷ್ಣ ಹವೆಯ ಪ್ರಹಾರವು ಕಡಿಮೆ ಪ್ರಮಾಣದ ಸರಕನ್ನು ಸಾಗಿಸಲು ಮಾತ್ರ ಯೋಗ್ಯವಾದ ಮಾರ್ಗವಾಗಿತ್ತು. ಈ ಮಾರ್ಗವು ಮಧ್ಯದ ಮಾರ್ಗದಷ್ಟು ಪ್ರಸಿದ್ಧಿಯನ್ನೇನೂ ಪಡೆದಿರಲಿಲ್ಲ. ಹಾಗಿದ್ದಾಗ್ಯೂ ಕೂಡಾ ಮಧ್ಯದ ಭೂಮಾರ್ಗ ಅಥವಾ ಇಂಡೋಸಿರಿಯನ್ ಮಾರ್ಗವು ಸದಾಕಾಲ ಪ್ರಯಾಣ ಯೋಗ್ಯವಾಗಿರುತ್ತಿರಲಿಲ್ಲ. ಈ ಮಾರ್ಗವು ಎರಡು ಸಲ ಮುಚ್ಚಲ್ಪಟ್ಟಿತ್ತು. ೬೩೨–೬೫೧ ಕ್ರಿಸ್ತಶಕೆಯ ಅವಧಿಯಲ್ಲಿ ಇಸ್ಲಾಂ ಮತಾಭಿಮಾನಿಗಳು ಈ ಭಾಗದ ರಾಜ್ಯಗಳನ್ನು ತಮ್ಮ ವಶದಲ್ಲಿಟ್ಟುಕೊಂಡಾಗೊಮ್ಮೆ ಹಾಗೂ ಎರಡನೇ ಸಲ ಅಂದರೆ ೧೧ನೇ ಶತಮಾನದಲ್ಲಿ ಜರುಗಿದ 'ಧರ್ಮಯುದ್ಧದ' ಸಂದರ್ಭದಲ್ಲಿ ದಕ್ಷಿಣದ ಮಾರ್ಗವು ಬಹುತೇಕ ಸಮುದ್ರ ಮಾರ್ಗವಾಗಿದ್ದರೂ ಕೂಡ ಅಲ್ಲಿಯೂ ಅನೇಕ ಅಪಾಯಗಳು ಪ್ರಯಾಣಿಕರಿಗೆ ಎದುರಾಗುತ್ತಿದ್ದವು. ಅವುಗಳಲ್ಲಿ ಇಂಡಿಯಾದ ಸಮುದ್ರದಲ್ಲಿನ ಮತ್ತು ಸುತ್ತಲೂ ಜಲರಾಶಿಯಲ್ಲಿನ ಚಂಡಮಾರುತದ ಹೊಡೆತಕ್ಕೆ ಪೌರ್ವಾತ್ಯದ ಕೋಮಲ ಹಡಗುಗಳು ನುಚ್ಚು ನೂರಾಗುತ್ತಿದ್ದವು. ಸಮುದ್ರಗಳ್ಳರ ಹಾವಳಿ, ಎಲ್ಲೆಯಿಲ್ಲದ ಬಂದರುಗಳು, ಸುಂಕ, ಇಂತಹ ಪರಿಸ್ಥಿತಿಯಲ್ಲಿ, ಪ್ರೊಫೆಸರ್ ಚೈನೇ ಅವರು "ಇಷ್ಟೊಂದು ಅಡೆತಡೆಗಳು ಇದ್ದರೂ ಕೂಡ ಪೌರ್ವಾತ್ಯ ರಾಷ್ಟ್ರಗಳಿಂದ ಸರಕು ಮೆಡಿಟರೇನಿಯನ್ ಪ್ರದೇಶಕ್ಕೆ ಸಾಕಷ್ಟು ಸರಬರಾಜು ಆಗುತ್ತಿತ್ತು ಮತ್ತು ಯೂರೋಪಿನ ಮಾರುಕಟ್ಟೆಯಲ್ಲಿ ಅದನ್ನು ಕಾಣಬಹುದಾಗಿತ್ತು" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಭೂಪ್ರದೇಶಗಳಿದ್ದರೂ ಕೂಡ ಸಮುದ್ರ ಮಾರ್ಗಗಳ ಅವಶ್ಯಕತೆ ಏಕೆ ಉಂಟಾಯಿತು? ಈ ಪ್ರಶ್ನೆಗೆ ಉತ್ತರ: ಸಾರ್ಸನಿಕ್ ಸಂಸ್ಕೃತಿಯ ಸರ್ವನಾಶ ಮಾಡಿ ಯೂರೋಪಿನೊಂದಿಗೆ ಈ ಮೊದಲು ನಡೆಯುತ್ತಿದ್ದ ವ್ಯಾಪಾರವನ್ನು ಸ್ಥಗಿತಗೊಳಿಸಲಿಕ್ಕೆ ಕಾರಣವಾದ ಏಶಿಯಾದ ತುರ್ಕ ಮತ್ತು ಮಂಗೋಲರ ದಂಗೆ ಎಂದು ಹೇಳಬಹುದು. ಈ ದಂಗೆಯು ಹೊಸ ಶಕ್ತಿಯಾಗಿ ಹೊರ ಹೊಮ್ಮಿತು. ಇದು ಪ್ರಾರಂಭದ ಸ್ವಯಂ ಸ್ಫೂರ್ತಿ ಪಡೆದ ಕೆಲವು ತುರ್ಕರು ೧೦೩೮ರಲ್ಲಿ ಪರ್ಶಿಯಾದ ಮೇಲೆ ದಂಗೆಯೆದ್ದಾಗ ತನ್ನ ಸ್ವರೂಪವನ್ನು ಪ್ರಕಟಿಸಿತು. ಇದಾದನಂತರ ಎರಡು ಶತಮಾನಗಳಾದ ಮೇಲೆ ಮಂಗೋಲರು ಬಾಗ್‌ದಾದ್ ಪಟ್ಟಣವನ್ನು ವಶಪಡಿಸಿಕೊಂಡರು. ೧೪೫೩ರಲ್ಲಿ ಕಾನ್‌ಸ್ಟಾಂಟಿನೋಪಲ್ ತುರ್ಕರ ವಶವಾಯಿತು. ಈ ವಿಧದ ತುರ್ಕ ಮತ್ತು ಮಂಗೋಲರ ಹಾವಳಿಯು ಎರಡೂ ಮಾರ್ಗಗಳನ್ನು ಮುಚ್ಚಿಸಲು ಕಾರಣವಾಯಿತು. ಉಳಿದಿರುವ ದಕ್ಷಿಣ ಮಾರ್ಗವೊಂದನ್ನೇ ಕೆಲಕಾಲ ಉಪಯೋಗಿಸಲಾಯಿತು. ದಕ್ಷಿಣ ಮಾರ್ಗವನ್ನು ಕೂಡಾ ೧೫೧೬ರಲ್ಲಿ ತುರ್ಕರು ಇಜಿಪ್ತನ್ನು ವಶಪಡಿಸಿಕೊಂಡ ನಂತರ ಮುಚ್ಚಲಾಯಿತು.

ಯೂರೋಪಿನ ರಾಷ್ಟ್ರಗಳು ಇಂಡಿಯಾ ದೇಶಕ್ಕೆ ಬರಲು ಎರಡು ಪ್ರಮುಖ ಕಾರಣಗಳಿದ್ದವೆಂದು ಹೇಳಬಹುದು. ಮೊದಲನೆಯ ಕಾರಣ ಮಸಾಲೆ ಪದಾರ್ಥಗಳು. ಎರಡನೆಯದು ಭೂಮಾರ್ಗದಲ್ಲಿನ ಪ್ರದೇಶಗಳನ್ನು ಮಂಗೋಲ ಮತ್ತು ತುರ್ಕರಿಂದ ವಶಪಡಿಸಿಕೊಂಡ ನಂತರ ದಾರಿಯು ಮುಚ್ಚಿದ್ದು, ಈ ಕಾರಣಗಳು ಯೂರೋಪಿನ ರಾಷ್ಟ್ರಗಳು ಇಂಡಿಯಾಕ್ಕೆ ತಲುಪುವ ಸಮುದ್ರ ಮಾರ್ಗವನ್ನು ಕಂಡುಹಿಡಿಯಲು ಪ್ರೇರಕಗಳಾಗಿ ಕೊನೆಗೂ ಅವರು ಅನ್ವೇಷಣೆಯಲ್ಲಿ ಯಶಸ್ವಿಯಾದರು.

ಪೌರ್ವಾತ್ಯ-ಇಂಡಿಯಾದಲ್ಲಿ ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರು ಅದರ ಮೇಲೆ ಏಕಸ್ವಾಮ್ಯ ಪಡೆಯಲು ಪ್ರಯತ್ನಿಸತೊಡಗಿದರು. ಅದಕ್ಕಾಗಿ ಸಂಘರ್ಷವೇ ಏರ್ಪಟ್ಟಿತ್ತು. ಆಂಗ್ಲರು ಮತ್ತು ಪೋರ್ಚುಗೀಸರು ಡಚ್ಚರ ನಡುವಿನ ಪೈಪೋಟಿಯು ವಾಣಿಜ್ಯ ವಿಷಯದಲ್ಲಿ ಪ್ರಾಬಲ್ಯಕ್ಕಾಗಿ ಹೋರಾಟ ನಡೆಯಿತು. ಇಂಡಿಯಾ ಮತ್ತು ಪರ್ಶಿಯಾದ ಕೊಲ್ಲಿಯು ಆಂಗ್ಲ ಮತ್ತು ಡಚ್ಚರ ಪ್ರಾಬಲ್ಯ ಹೋರಾಟದ ರಣರಂಗವಾದವು. ಆಂಗ್ಲ ಪ್ರಾಬಲ್ಯವು ಭಾರತದಲ್ಲಿ ೧೬೧೨ರಲ್ಲಿ ಮತ್ತು ಪರ್ಶಿಯಾದಲ್ಲಿ ೧೬೨೨ರಲ್ಲಿ ಸ್ಥಾಪಿತವಾಯಿತು. ೧೬೨೨ರಲ್ಲಿ ನಂತರ ಪರ್ಶಿಯಾದ ಕೊಲ್ಲಿಯು ಪೋರ್ಚುಗೀಸರ ಹಾವಳಿಯಿಲ್ಲದೆ ಬ್ರಿಟಿಷರ ವಾಣಿಜ್ಯ ಅಭಿವೃದ್ಧಿಗೆ ಸಹಕಾರಿಯಾಯಿತು. ಬ್ರಿಟಿಷ್ ಮತ್ತು ಡಚ್ಚರ ಹೋರಾಟದ ಭೂಮಿಯಾಗಿ ಮಲಯ ದ್ವೀಪ ಮಾರ್ಪಟ್ಟಿತು. ೧೬೨೨ರಿಂದ ಇಂಡಿಯಾ ಮತ್ತು ಪರ್ಶಿಯಾ ಕೊಲ್ಲಿ ಇಂಗ್ಲೆಂಡ್‌ಗೆ ಅವಕಾಶ ನೀಡಿದುದರಿಂದ ಇಂಗ್ಲಿಷ್ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಗೆ ಪೋರ್ಚುಗಲ್ ಅಡಚಣೆ ಉಂಟುಮಾಡಲಿಲ್ಲ. ೧೮೨೩ರಲ್ಲಿ 'ಮಾಸ್ಕೃರೆ ಆಫ್ ಅಬೋಯ'ನದಲ್ಲಿ ತೀರ್ಮಾನಕ್ಕೆ ಬಂದ ಒಪ್ಪಂದದ ಪ್ರಕಾರ ಬ್ರಿಟಿಷರು ಇಂಡಿಯಾಕ್ಕೆ ಸೀಮಿತವಾಗಿ ವಾಣಿಜ್ಯ ವ್ಯವಹಾರ ನಡೆಸಲು ಮತ್ತು ಡಚ್ಚರು ಮಲಯ ದ್ವೀಪದ ವಾಣಿಜ್ಯ ಹಕ್ಕನ್ನು ಪಡೆದರು. ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಹೋರಾಟವು ತುಂಬ ಬಿರುಸಿನದಾಗಿತ್ತು. ಇವರ ಹೋರಾಟದ ರಣಾಂಗಣವೂ ಇಂಡಿಯಾವೇ ಆಗಿತ್ತು. ಆದರೆ ಇವರ ಹೋರಾಟದ ಉದ್ದೇಶವು ರಾಜಕೀಯ ಸ್ವಾಮ್ಯತೆಯ ಹೊರತಾಗಿ ವಾಣಿಜ್ಯವಾಗಿರಲಿಲ್ಲ. ಫ್ರೆಂಚರು ಇಂಡಿಯಾದ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಪ್ರಬಲರಾಗಿದ್ದರು. ದಕ್ಷಿಣ ಭಾರತದಲ್ಲಿ ನಡೆದ ಸಂಘರ್ಷವು ೧೭೪೪ರಲ್ಲಿ ಪ್ರಾರಂಭವಾಗಿ ೧೭೬೦ರಲ್ಲಿ ಮುಕ್ತಾಯವಾಯಿತು. ಈ ಘರ್ಷಣೆಯು ವಾಂಡಿವಾಶ್‌ನಲ್ಲಿ ನಡೆದ ಯುದ್ಧದ ಮೂಲಕ ಫ್ರೆಂಚರ ಸಂಪೂರ್ಣ ಮೂಲೆಗುಂಪಿನೊಂದಿಗೆ ಮುಕ್ತಾಯವಾಯಿತು. ಪೂರ್ವ ಭಾಗದ ಇಂಡಿಯಾದ ವಿಷಯದಲ್ಲಿ ೧೭೫೭ರಲ್ಲಿ ಪ್ಲಾಸಿ ಕದನದೊಂದಿಗೆ ಫ್ರೆಂಚರು ತಮ್ಮ ಜೊತೆಗಾರ ನವಾಬನೊಂದಿಗೆ ಸೋಲನ್ನು ಅನುಭವಿಸಿದರು.

ಫ್ರೆಂಚರನ್ನು ಗತಿಗಾಣಿಸಿದ ಬ್ರಿಟಿಷರು ಇಂಡಿಯಾದ ಏಕೈಕ ಅಧಿಪತಿಯಾಗಿ ಸ್ಥಾಪನೆಗೊಂಡರು.

* * *

ಆದರೆ ಇಂಡಿಯಾದ ಜನರು ಈ ಇಂಡಿಯಾ ದಿಗ್ವಿಜಯವನ್ನು ಹೇಗೆ ಸ್ವೀಕರಿಸಿದರು?

* * *

ಒಂದರ್ಥದಲ್ಲಿ ಬ್ರಿಟಿಷರು ಇಂಡಿಯಾದ ಮೇಲೆ ಪಡೆದ ಜಯವನ್ನು ಆಕಸ್ಮಿಕವೆಂದೇ ಹೇಳಬಹುದು. ಆಕಸ್ಮಿಕವೆಂಬುದು ವಿಧಿಯ ಯಾವುದೋ ಯೋಜನೆಯ ಪ್ರಕಾರ ನಡೆಯಿತು. ಲಾರ್ಡ್ ಕರ್ಜನ್ ಈ ಸಂದರ್ಭವನ್ನು ಒಪ್ಪಿಕೊಳ್ಳುತ್ತಾ ಹೀಗೆ ಹೇಳುತ್ತಾನೆ.

(ಹಸ್ತಪ್ರತಿಯಲ್ಲಿ ಹೇಳಿಕೆ ಕೊಟ್ಟಿಲ್ಲ –ಸಂಪಾದಕರು)

ಅವರು ಇಂಡಿಯಾದ ಜನರಿಗೆ ಮಾಡಿದ್ದಾದರೂ ಏನು? ಈ ಪ್ರಶ್ನೆಯು ತುಂಬ ಗಹನವಾದುದು. ಇದಕ್ಕೆ ವಿವರಣೆ ನೀಡಿ ಗ್ರಂಥಗಳನ್ನೇ ಬರೆಯಲಾಗಿರುವುದರಿಂದ ಅದನ್ನೆಲ್ಲವನ್ನು ಪುನರಾವರ್ತಿಸುವುದು ಇಲ್ಲಿ ಅನಾವಶ್ಯಕ. ಅದೇ ಪ್ರಶ್ನೆಯೊಂದನ್ನು ನಾವು ಇನ್ನೂ ಕೆಳಸ್ತರಕ್ಕೆ ಇಳಿಸಿ ಬ್ರಿಟಿಷರು ಅಸ್ಪೃಶ್ಯರಿಗಾಗಿ ಏನು ಮಾಡಿದರು? ಎಂದು ಪ್ರಶ್ನಿಸುತ್ತೇನೆ. ಅಸ್ಪೃಶ್ಯರ ಉದ್ಧಾರ ಮತ್ತು ವಿಮೋಚನೆ ಮಾಡಲು ಆಳ್ವಿಕೆಗೆ ಬಂದಾಗ ಬ್ರಿಟಿಷರು ಮಾಡಿದ್ದಾದರೂ ಏನು? ಈ ಪ್ರಶ್ನೆಯು ಅನೇಕ ಸಂದರ್ಭಗಳ ಸಂಬಂಧದಲ್ಲಿ ಏಳುತ್ತದೆ. ಆದರೆ ಪ್ರಸ್ತುತ ಅದನ್ನು ಸಾರ್ವಜನಿಕ ಸೇವೆ, ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಯ ವಿಷಯಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ.

## II

ದೇಶದ ಸರಕಾರಿ ಸೇವೆಯಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯ ನೀಡುವ ದಿಶೆಯಲ್ಲಿ ಬ್ರಿಟಿಷ್ ಸರಕಾರವು ಯಾವ ಕ್ರಮ ಕೈಗೊಂಡಿತು?

ಪ್ರಥಮವಾಗಿ ಸೈನ್ಯದ ವಿಷಯದಲ್ಲಿ ಚರ್ಚಿಸುವುದು ಒಳಿತು. ಅಸ್ಪೃಶ್ಯರ ಸ್ಥಿತಿಗತಿಗಳನ್ನು ಅರಿಯಲು 'ಬ್ರಿಟಿಷರು ಭಾರತವನ್ನು ಗೆಲ್ಲಲು ಸಹಾಯ ನೀಡಿದ ಅಂಶ ಯಾವುದು' ಎಂಬ ಪ್ರಶ್ನೆಗೆ ಉತ್ತರ ಪಡೆಯುವುದು ಅತ್ಯವಶ್ಯಕ.

ಭಾರತವನ್ನು ಜಯಿಸಿದ ಘಟನೆಯು ಅಪೂರ್ವವಾದುದು. ಈ ಜಯವು ಪ್ರಮುಖವಾದ ಎರಡು ಕಾರಣಗಳಿಂದ ಸಾಧ್ಯವಾಯಿತು.

ಹದಿನೈದನೆಯ ಶತಮಾನದಲ್ಲಿ ಯೂರೋಪಿನ ರಾಷ್ಟ್ರಗಳಿಗೆ ಬಲಿಯಾದ ರಾಷ್ಟ್ರಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು. ವಾಸ್ಕೋಡ–ಗಾಮ ಅನ್ವೇಷಿಸಿದ ಭೂಪ್ರದೇಶಗಳು ಬಹುತೇಕ ಹೆಚ್ಚಿನ ಜನಸಾಂದ್ರತೆಯಿಂದ ಕೂಡಿದ್ದು ಪ್ರಾಚೀನ ಕಾಲದ ವ್ಯವಸ್ಥಿತವಾದ ಸರಕಾರದಿಂದ ರಾಜ್ಯಭಾರ ಹೊಂದಿದ್ದ ರಾಷ್ಟ್ರಗಳಾಗಿದ್ದವು. ಕೊಲಂಬಸ್‌ನು ಕಂಡುಹಿಡಿದ ರಾಷ್ಟ್ರಗಳು ಎರಡನೆಯ ವಿಧದವು. ಅಲ್ಲಿ ಕಡಿಮೆ ಜನಸಂಖ್ಯೆ ಇದ್ದು ಅಲ್ಲಿಯ ರಾಷ್ಟ್ರೀಯತೆಯು ಇನ್ನು ಪ್ರಾರಂಭದ ಹಂತದಲ್ಲಿತ್ತು. ಮೂರನೆಯ ವಿಧದ ಭೂಪ್ರದೇಶಗಳು... ಅವರಿಂದ ಅನ್ವೇಷಣೆಗೊಂಡು ಅಲ್ಲಿ ಜನಸಂಖ್ಯೆಯಿಲ್ಲದ ಖಾಲಿ ಪ್ರದೇಶವಿತ್ತು. ಭಾರತವನ್ನು ಮೂರರಲ್ಲಿ ಮೊದಲನೆಯ ವಿಧಗಳಲ್ಲಿ ವಿಂಗಡಿಸಲಾಗಿದೆ. ಆದುದರಿಂದಲೇ ಭಾರತದ ಮೇಲಿನ ಜಯವು ಒಂದು ವಿಶಿಷ್ಟವಾದ ಘಟನೆ ಎಂದು ಹೇಳಲಾಗುವುದು.

ಇದೊಂದು ವಿಶಿಷ್ಟವೆಂದು ಹೇಳಲು ಎರಡನೆಯ ಕಾರಣವೂ ಇದೆ. ಅದೆಂದರೆ ಆಕ್ರಮಣ ಕಾಲ.

ಇಂಡಿಯಾವನ್ನು ೧೭೫೭ ಮತ್ತು ಮತ್ತು ೧೮೧೮ರ ನಡುವೆ ಜಯಿಸಲಾಯಿತು.

೧೭೫೭ರ ಸಾಲಿನಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮತ್ತು ಬಂಗಾಳದ ನವಾಬನಾದ ಸಿರಾಜುದ್ದೌಲ್‌ನ ಸೈನ್ಯಗಳ ನಡುವೆ ಯುದ್ಧವಾಯಿತು. ಬ್ರಿಟಿಷ್ ಸೈನ್ಯವು ಜಯಶಾಲಿಯಾಯಿತು. ಈ ಯುದ್ಧವು 'ಪ್ಲಾಸಿಯ ಕಾಳಗವೆಂದು' ಇತಿಹಾಸ ಪ್ರಸಿದ್ಧವಾಯಿತು. ಹಾಗೂ ಇದರ ಫಲವಾಗಿ ಬ್ರಿಟಿಷರು ಪ್ರಥಮವಾಗಿ ಭಾರತದ ಭೂಪ್ರದೇಶವನ್ನು ಪಡೆಯುವಂತಾಯಿತು. ಭೂಪ್ರದೇಶದ ಮೇಲೆ ಹಕ್ಕು ಸ್ಥಾಪನೆಯ ಕೊನೆಯ ಯುದ್ಧವು ೧೮೧೮ರಲ್ಲಿ ನಡೆಯಿತು. ಇದನ್ನು 'ಕೊರೆಗಾಂವ ಕಾಳಗ'ವೆಂದು ಕರೆಯಲಾಗುತ್ತಿದೆ. ಈ ಯುದ್ಧದ ಮೂಲಕ ಮರಾಠಾ ಸಾಮ್ರಾಜ್ಯ ಕೊನೆಗೊಂಡು ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಯಿತು. ಹೀಗಾಗಿ ಭಾರತದ ಮೇಲಿನ ಬ್ರಿಟಿಷ್ ವಿಜಯವು ೧೭೫೭ ಮತ್ತು ೧೮೧೮ರ ನಡುವೆ ನಡೆಯಿತು. ಈ ಸಂದರ್ಭದಲ್ಲಿ ಯೂರೋಪಿನ ಪರಿಸ್ಥಿತಿ ಹೇಗಿತ್ತು? ಬ್ರಿಟಿಷರ ಸ್ಥಾನಮಾನಗಳೇನಿದ್ದವು? ಎಂಬ ಪ್ರಶ್ನೆಗಳು ಏಳುತ್ತವೆ. ಈ ಅವಧಿ ನೆಪೋಲಿಯನ್ನನ ಸಮರಗಳ ಕಾಲವಾಗಿತ್ತು. ೧೮೧೫ರ ವಾಟರ್ಲೂ ಕದನವು ನಡೆಯಿತು. ಈ ಅವಧಿಯಲ್ಲಿ ಇಂಗ್ಲೆಂಡ್ ಮೂಲಪ್ರೇಕ್ಷಕನಾಗಿರಲಿಲ್ಲ. ಅದು ಈ ಯುದ್ಧಗಳಲ್ಲಿ ಬಹು ಹುಮ್ಮಸ್ಸಿನಿಂದ ಭಾಗವಹಿಸಿತು. ನೆಪೋಲಿಯನ್ ಮತ್ತು ಫ್ರೆಂಚ್ ಕ್ರಾಂತಿಯ ಪ್ರಭಾವವನ್ನು ಎದುರಿಸಲು ಹುಟ್ಟಿಕೊಂಡ ಯೂರೋಪಿನ ರಾಷ್ಟ್ರಗಳ ಒಕ್ಕೂಟದ ನಾಯಕನ ಪಾತ್ರವನ್ನು ಅದು ವಹಿಸಿತು. ಇಂತಹ ಘೋರ ಯುದ್ಧದ ಸಂದರ್ಭದಲ್ಲಿ ತನ್ನಲ್ಲಿರುವ ಸಕಲ ಸಂಪತ್ತು, ಯುದ್ಧ ನೌಕೆ, ತುಪಾಕಿಗಳನ್ನು ತನ್ನ ರಕ್ಷಣೆಗಾಗಿ ಮುತುವರ್ಜಿಯಿಂದ ಕಾಯ್ದುಕೊಳ್ಳಬೇಕಿತ್ತು. ಇಂಗ್ಲೆಂಡ್ ಈಸ್ಟ್ ಇಂಡಿಯಾ ಕಂಪನಿಯ ಬಹುದೂರದಲ್ಲಿನ ಯುದ್ಧಕಾಂಡದಲ್ಲಿ ಭಾಗವಹಿಸಿದ್ದಾಗ ಏನನ್ನೂ ನೀಡಲು ಮುಂದಾಗಲಿಲ್ಲ. ಈಸ್ಟ್ ಇಂಡಿಯಾ ಕಂಪೆನಿಗೆ ಸಹಾಯ ಮಾಡುವುದಿರಲಿ, ಇಂಗ್ಲೆಂಡೇ ಈ ಕಂಪೆನಿಯಿಂದ ಹಣ ಸಹಾಯ, ಸೈನಿಕರನ್ನು ಹಾಗೂ ನೌಕೆಗಳನ್ನು ಸಾಲವಾಗಿ ಪಡೆದು ಯೂರೋಪಿನಲ್ಲಿ ನೆಪೋಲಿಯನ್ನನ ವಿರುದ್ಧದ ಯುದ್ಧದಲ್ಲಿ ಬಳಸಿತು. ಮೆಕ್‌ಫೆರಸನ್‌ರವರು ಈಸ್ಟ್ ಇಂಡಿಯಾ ಕಂಪೆನಿಯು ಇಂಗ್ಲೆಂಡಿನ ಯೂರೋಪ್ ಸಮರಕ್ಕಾಗಿ ಎಷ್ಟು ಪ್ರಮಾಣದಲ್ಲಿ ತನ್ನ ಕೊಡುಗೆ ನೀಡಬೇಕಾಯಿತು ಎಂಬುದನ್ನು ಈ ಕೆಳಗಿನ ಉಲ್ಲೇಖದಲ್ಲಿ ತಿಳಿಸಿದ್ದಾರೆ.

"ಈ ಅವಧಿಯಲ್ಲಿ ಇಂಗ್ಲೆಂಡಿನ ಜನತೆಯು ಯೂರೋಪಿನಲ್ಲಿ ನೆಪೋಲಿಯನ್ನನ ವಿರುದ್ಧ ನಡೆದ ಘೋರ ಯುದ್ಧದಲ್ಲಿ ತಲ್ಲೀನವಾಗಿತ್ತು. ಅವರು ಭಾರತವನ್ನು ಆಕ್ರಮಿಸಿದ ಈಸ್ಟ್ ಇಂಡಿಯಾ ಕಂಪೆನಿಯ ಸಹಾಯಕ್ಕೆ ಯಾವ ವಿಧದಲ್ಲಿಯೂ ಮುಂದಾಗಲಿಲ್ಲ. ಈ ದೃಷ್ಟಿಯಲ್ಲಿ ಭಾರತದ ಸ್ವಾಧೀನತೆಯು ಮಹತ್ವವನ್ನು ಪಡೆಯುತ್ತದೆ. ಇಂತಹ ವಿಶಿಷ್ಟ ಘಟನೆ ನಡೆದದ್ದು ಹೇಗೆ? ಅದಕ್ಕೆ ಕಾರಣಗಳು ಯಾವುವು?

ಮೆಕಾಲೆ ತನ್ನ ವಿವರಣೆಯನ್ನು ನೀಡಿದ್ದಾನೆ:

(ಹಸ್ತಪ್ರತಿಯಲ್ಲಿ ಉಲ್ಲೇಖವನ್ನು ನೀಡಿಲ್ಲ)

ಮೆಕಾಲೆ ಅವರ ವಿವರಣೆಯನ್ನು ಬ್ರಿಟಿಷರು ಒಪ್ಪಿಕೊಳ್ಳುತ್ತಾರೆ ಅಥವಾ ಒಪ್ಪಿಕೊಳ್ಳಬಹುದು. ಮೆಕಾಲೆಯವರ ಸಿದ್ಧಾಂತವು ಅನೇಕ ವರ್ಷಗಳಿಂದ ಬ್ರಿಟಿಷ್ ಹಾಗೂ ಎಲ್ಲ ಯೂರೋಪಿನ ಮತ್ತು ಅಮೆರಿಕಾದ ಜನರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದೆ. ಈ ವಿಚಾರಗಳನ್ನು ಬ್ರಿಟನ್ನಿನ ತರುಣ ಪೀಳಿಗೆಯ ಮನಸ್ಸಿನಲ್ಲಿ ಬೇರೂರಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಇದು ಸಹಜವಾದುದು. ಏಕೆಂದರೆ ಯಾವುದೇ ಸಾಮ್ರಾಜ್ಯಶಾಹಿ ಜನಾಂಗದ ಮಾನಸಿಕ ಸ್ಥಿತಿಯಲ್ಲಿ ತಾನೇ ಶ್ರೇಷ್ಠನೆಂಬ ಅಹಂ ಪ್ರಮುಖವಾದ ಅಂಶ. ಮೆಕಾಲೆಯ ವಾದವು ಈ ಅಂಶವನ್ನಷ್ಟೇ ದೃಢೀಕರಿಸುವುದು.

ಮೆಕಾಲೆ ವಾದದಲ್ಲಿ ಹುರುಳಿದೆಯೇ? ಚಾರಿತ್ರಿಕ ಅಂಶಗಳು ಅದಕ್ಕೆ ಪುಷ್ಟಿ ನೀಡುವುದೇ? ಪ್ರೊಫೆಸರ್ ಸೀಲಿ ಅವರು ಈ ವಿಚಾರದ ಬಗ್ಗೆ ಕೂಲಂಕಷವಾಗಿ ಅಭ್ಯಸಿಸಿ ಈ ಕೆಳಗಿನಂತೆ ಅಭಿಪ್ರಾಯ ಪಡುತ್ತಾರೆ.

"ಆರ್ಕಾಟಿನ ಪತನ, ಪ್ಲಾಸಿಯ, ಬಕ್ಸರಿನ ಮುಂತಾದ ಕಂಪೆನಿಯ ಶಕ್ತಿಯನ್ನು ನಿರ್ಣಾಯಕವಾಗಿ ಸ್ಥಾಪಿಸಿದ ಮೊದಲ ಯುದ್ಧಗಳಲ್ಲಿ ಕಂಪೆನಿಯ ಪರವಾಗಿ ಐರೋಪ್ಯರಿಗಿಂತ ಹೆಚ್ಚು ಸಂಖ್ಯೆಯ ಸಿಪಾಯಿಗಳಿದ್ದರು. ಸಿಪಾಯಿಗಳು ಅಧೈರ್ಯ ತೋರಿದರು ಅಥವಾ ಆಂಗ್ಲರು ಹೋರಾಟದ ಪೂರ್ಣ ಹೊರೆಯನ್ನು ಹೊತ್ತರು ಎಂಬ ಬಗ್ಗೆ ಕೇಳಿಬರುವುದಿಲ್ಲ ವೆಂಬುದನ್ನು ನಾವು ಕಾಣುತ್ತೇವೆ. ಇತಿಹಾಸಕಾರರು ತಮ್ಮ ದೇಶಾಭಿಮಾನವನ್ನು ಪ್ರದರ್ಶಿಸುವ ಬಾಲಿಶ ಅವಸರದ ಕುರಿತು ಟೀಕಿಸಿದವರ್‍ಯಾರೂ ನಮ್ಮ ಆಂಗ್ಲ ಬರೆಹಗಾರರು ಈ ಯುದ್ಧಗಳನ್ನು ವಿವರಿಸುವಾಗ ಸಿಪಾಯಿಗಳನ್ನು ಗೌಣವಾಗಿಸುವುದನ್ನು ಕಂಡು ಅಚ್ಚರಿ ಪಡಲಾರರು. ಕ್ಲೈವ್ ಕುರಿತ ಮೆಕಾಲೆಯ ಪ್ರಬಂಧವನ್ನೋದಿ. ಎಲ್ಲೆಲ್ಲೂ 'ದೊರೆಯ ಜನರು', 'ಸಮುದ್ರದ ಶಕ್ತ ಮಕ್ಕಳು', 'ಯಾರೂ ಕ್ಲೈವ್ ಮತ್ತು ಆತನ ಆಂಗ್ಲ ಜನರನ್ನೆದುರಿಸ ದಾದರು.' ಆದರೆ ಸಿಪಾಯಿಗಳ ಸಂಖ್ಯೆಯು ಆಂಗ್ಲರಿಗಿಂತ ಹೆಚ್ಚಿತ್ತೆಂದು ಮತ್ತು ಅವರು ಸೈನಿಕರಾಗಿ ಆಂಗ್ಲರೊಂದಿಗೆ ಸಾಮರ್ಥ್ಯದಲ್ಲಿ ಪೈಪೋಟಿ ನಡೆಸಿದರೆಂದು, ಒಪ್ಪಿಕೊಂಡರೆ ನಮ್ಮ ಗೆಲುವುಗಳನ್ನು ಅಸಾಮಾನ್ಯ ಪ್ರಾಕೃತಿಕ ಮೇಲ್ಮೆಗೆ ಮುಡಿಪಾಗಿಡುವ ಪ್ರಮೇಯವು ಮಣ್ಣುಪಾಲಾಗುತ್ತದೆ. ಯುದ್ಧಗಳಲ್ಲಿ ನಮ್ಮ ಸೈನ್ಯ ಒಂದಕ್ಕೆ ಹತ್ತರಷ್ಟಿದ್ದಾಗ್ಯೂ ನಾವು ಜಯಶಾಲಿಯಾಗಿದ್ದಕ್ಕೆ ಬ್ರಿಟನ್ನಿನ ಒಬ್ಬನು ವೈರಿಗಳ ಹತ್ತರಷ್ಟು ಶಕ್ತಿಶಾಲಿಯೆಂಬುದು ಹೇಗೆ ಸಾಬೀತಾಗುವುದೋ ಹಾಗೆಯೇ ನಮ್ಮ ಸೈನ್ಯದಲ್ಲಿದ್ದ ಒಬ್ಬ ಸಿಪಾಯಿಯು ವೈರಿಗಳ ಹತ್ತರಷ್ಟು ಪರಾಕ್ರಮಿ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಅರ್ಥವಿಷ್ಟೇ. ಸಮರದ ಕಲೆಯಲ್ಲಿನ ಪರಿಣಿತಿ ಮತ್ತು ನಾಯಕತ್ವ ಎಲ್ಲ ವ್ಯತ್ಯಾಸವನ್ನುಂಟುಮಾಡಿತೇ ಹೊರತಾಗಿ ಜನಾಂಗೀಯ ಅಂಶಗಳಲ್ಲ."

ಮಿಲ್‌ರವರು ಭಾರತದ ಮೇಲಿನ ಪ್ರಭುತ್ವ ಸಾಧನೆಯ ಬಗ್ಗೆ ನೀಡಿದ ಸಂಕ್ಷಿಪ್ತವಾದ ವಿವರಣೆಯನ್ನು ಗಮನಿಸಬೇಕು. ಅವರ ಅಭಿಪ್ರಾಯದಲ್ಲಿ ಬ್ರಿಟಿಷರ ನೈಸರ್ಗಿಕ ಉತ್ಕೃಷ್ಟ ಜನಾಂಗೀಯ ಅಂಶಗಳ ಪಾತ್ರವೇನೂ ಅದರಲ್ಲಿ ಇಲ್ಲ. 'ಇಂಡಿಯಾವನ್ನು ಜಯಿಸಲು ಕಾರಣವಾದ ಎರಡು ಸಂಶೋಧನೆಗಳೆಂದರೆ, ಮೊದಲನೆಯದು, ಐರೋಪ್ಯ ಶಿಸ್ತಿನ ವಿರುದ್ಧ ದೇಶೀ ಸೈನ್ಯದ ದೌರ್ಬಲ್ಯ. ಎರಡನೆಯದು, ಈ ಶಿಸ್ತನ್ನು ಐರೋಪ್ಯ ಸೇವೆಯ ದೇಶೀಯರಿಗೆ ನೀಡಲು ಇದ್ದ ಸೌಕರ್ಯ.'

ಮತ್ತು ಆಂಗ್ಲರೇ ಸಿಪಾಯಿಗಳಿಗಿಂತ ಚೆನ್ನಾಗಿ ಹೋರಾಡಿದರೆಂದು ಮತ್ತು ಜೊತೆಯಾಗಿ ಹೋರಾಡಿದ ಆ ಸಾಧನೆಗಳಲ್ಲಿ ತಮ್ಮ ಪಾಲಿಗಿಂತ ಹೆಚ್ಚು ಮಾನ್ಯತೆಯನ್ನು ಪಡೆದರೆಂದು ಒಪ್ಪಿಕೊಂಡರೂ, ಇಂಡಿಯಾದ ರಾಷ್ಟ್ರಗಳನ್ನು ಆಂಗ್ಲ ರಾಷ್ಟ್ರವು ಸೋಲಿಸಿತೆಂದು ಹೇಳುವುದು ತಪ್ಪಾಗುತ್ತದೆ. ಇಂಡಿಯಾದ ರಾಷ್ಟ್ರಗಳನ್ನು ಸೋಲಿಸಿದ ಸೈನ್ಯದಲ್ಲಿ ಸರಾಸರಿ ಐದರಲ್ಲೊಂದಂಶ ಮಾತ್ರ ಆಂಗ್ಲರದ್ದಿತ್ತು. ಆದರೆ ನಾವು ನಮ್ಮ ಈ ಸಾಧನೆಯಲ್ಲಿ ನಮ್ಮ ಪಾಲನ್ನು ಉತ್ಪ್ರೇಕ್ಷೆ ಗೊಳಿಸುತ್ತೇವೆ ಮಾತ್ರವಲ್ಲ, ನಾವು ಈ ಸಾಧನೆಯನ್ನೇ ತಪ್ಪಾಗಿ ಕಲ್ಪಿಸುತ್ತೇವೆ ಮತ್ತು ವಿವರಿಸುತ್ತೇವೆ. ೫ರಲ್ಲಿ ೪ರಷ್ಟಿದ್ದ ಸೈನಿಕರು ಯಾವ ಜನಾಂಗದವರಾಗಿದ್ದರು? ಅವರು

> ಸ್ಥಳೀಯ ಇಂಡಿಯಾದ ಜನರಾಗಿದ್ದರು. ಇಂಡಿಯಾವನ್ನು ಪರಕೀಯರು ಸೋಲಿಸಿ ಅಧೀನಗೊಳಿಸಲಿಲ್ಲ, ಇಂಡಿಯಾ ತನ್ನನ್ನು ತಾನೇ ಸೋಲಿಸಿಕೊಂಡಿತಷ್ಟೆ.

ಪ್ರೊ. ಶೀಲಿ ಅವರ ವಿವರಣೆಯು ಮೇಲ್ನೋಟಕ್ಕೆ ಸರಿಯಾದುದೆಂದು ತೋರುತ್ತದೆ. ಆದರೆ ಅದು ಆಳವಾದ ವಿಶ್ಲೇಷಣೆಗೆ ಒಡ್ಡುವುದಿಲ್ಲ. ಬ್ರಿಟಿಷರು ಇಂಡಿಯಾವನ್ನು ಆ ದೇಶದ ಸಿಪಾಯಿಗಳನ್ನೊಳಗೊಂಡ ಸೈನ್ಯದ ಸಹಾಯದಿಂದ ಸೋಲಿಸಿದರು. ಈ ವಿಷಯವನ್ನು ಬ್ರಿಟಿಷರು ಹಾಗೂ ಇಂಡಿಯಾದ ಜನರು ಮರೆಯದಿದ್ದರೆ ಲೇಸು. ವಿದೇಶೀಯ ಸೈನ್ಯವನ್ನು ಸೇರಿದ ಈ ಭಾರತೀಯರು ಯಾರು? ಎಂಬ ಪ್ರಶ್ನೆಯನ್ನು ಪ್ರೊ. ಶೀಲಿ ಅವರು ಎತ್ತುವುದಿಲ್ಲ. ಈ ಪ್ರಶ್ನೆಯು ಬಹು ಮುಖ್ಯವಾದುದು. ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯದಲ್ಲಿ ಸೇರಿಕೊಂಡು ಬ್ರಿಟಿಷರಿಗೆ ಭಾರತವನ್ನು ಜಯಿಸಲು ಸಹಾಯ ಮಾಡಿದ ಜನರು ಯಾರು? ನಾನು ಈ ವಿಷಯದ ಬಗ್ಗೆ ಆಳವಾದ ಅಧ್ಯಯನ ನಡೆಸಿದ ನಂತರ ಉತ್ತರ ನೀಡುವುದಿಷ್ಟೇ. ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯ ಸೇರಿದ ಭಾರತೀಯರು ಇಲ್ಲಿನ ಅಸ್ಪೃಶ್ಯರೇ ಆಗಿದ್ದರು. ಕ್ಲೈವ್‌ನ ಜೊತೆಗೆ ಪ್ಲಾಸಿ ಕದನದಲ್ಲಿ ಹೋರಾಟ ಮಾಡಿದ ಜನರು 'ದುಸದರು', ಅವರು ಅಸ್ಪೃಶ್ಯರಾಗಿದ್ದರು. ಕೋರೆಗಾಂವದ ಯುದ್ಧದಲ್ಲಿ ಹೋರಾಡಿದವರು ಮಹಾರ್ ಜನಾಂಗದವರು. ಮಹಾರರು ಅಸ್ಪೃಶ್ಯರು. ಮೊದಲ ಮತ್ತು ಅಂತಿಮ ಯುದ್ಧಗಳಲ್ಲಿ ಬ್ರಿಟಿಷರ ಪರವಾಗಿ ಹೋರಾಡಿ ಅವರಿಗೆ ಜಯ ಗಳಿಸಲು ಸಹಾಯ ಮಾಡಿದವರು ಅಸ್ಪೃಶ್ಯರು. ಈ ಸತ್ಯ ಸಂಗತಿಯನ್ನು ೧೮೫೯ರಲ್ಲಿ ನೇಮಕವಾದ ಪೀಲ್ ಕಮೀಷನ್ ವರದಿಯಲ್ಲಿ ಮಾರ್ಕೆಸ್ ಟ್ವೀಡ್ ಡೇಲ್ ಅವರು ಭಾರತದ ಸೈನ್ಯದ ಪುನರ್ ರಚನೆಯ ಸಂದರ್ಭದಲ್ಲಿ ತಮ್ಮ ಅಭಿಪ್ರಾಯ ನೀಡುವಾಗ ಹೀಗೆ ಹೇಳುತ್ತಾರೆ.

(ಉಲ್ಲೇಖವನ್ನು ಹಸ್ತಪ್ರತಿಯಲ್ಲಿ ನೀಡಿಲ್ಲ –ಸಂಪಾದಕರು)

ಅನೇಕ ಅಸ್ಪೃಶ್ಯರು ಬ್ರಿಟಿಷ್ ಸೇರಿಕೊಂಡ ಘಟನೆಯನ್ನು ದೇಶದ್ರೋಹದ ಕಾರ್ಯವೆಂದು ಟೀಕಿಸುತ್ತಾರೆ. ಅಸ್ಪೃಶ್ಯರ ವರ್ತನೆಯು ದೇಶದ್ರೋಹವಾಗಿತ್ತೋ ಅಥವಾ ಇಲ್ಲವೋ ಎಂಬುದು ಜಿಜ್ಞಾಸೆಯ ವಿಷಯ. ಆದರೆ ಅವರ ವರ್ತನೆಯು ಸಹಜವಾದುದಾಗಿತ್ತು. ವಿವಿಧ ದೇಶಗಳ ಸಮಾಜಗಳ ಕೆಲವೊಂದು ಸಮುದಾಯಗಳು ತಮ್ಮ ದೇಶದವರಿಂದಲೇ ಶೋಷಣೆಗೊಳಗಾಗಿದ್ದ ಸಂದರ್ಭದಲ್ಲಿ ತಮ್ಮ ಶೋಷಣೆಯಿಂದ ವಿಮೋಚನೆಗಾಗಿ ಧಾಳಿಕೋರ ಅನ್ಯರೊಂದಿಗೆ ಶಾಮೀಲಾದ ಅನೇಕ ಉದಾಹರಣೆಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಅಸ್ಪೃಶ್ಯರನ್ನು ದೂಷಿಸುವವರು ಇಂಗ್ಲಿಷ್ ಲೇಬರಿಂಗ್ ಕ್ಲಾಸೆಸ್ ೧೭.........ರಲ್ಲಿ ಹೊರಡಿಸಿದ ಪ್ರಣಾಳಿಕೆಯನ್ನು ಓದಲಿ (ಅಪೂರ್ಣವಾಗಿದೆ).

ಅಸ್ಪೃಶ್ಯರ ಅಭಿಪ್ರಾಯ ಇದಕ್ಕೆ ವ್ಯತಿರಿಕ್ತವಾಗಿತ್ತೆ? ಇಂಗ್ಲೆಂಡಿನ ಕಾರ್ಮಿಕರು ಎದುರಿಸಿದ ದೌರ್ಜನ್ಯದ ಪ್ರಮಾಣವು ಭಾರತದ ಅಸ್ಪೃಶ್ಯರು ಅನುಭವಿಸಿದ ದೌರ್ಜನ್ಯಕ್ಕೆ ಹೋಲಿಸಿದರೆ ನಗಣ್ಯವಾದುದು. ಇಂಗ್ಲೆಂಡಿನ ಕಾರ್ಮಿಕರು ವಿದೇಶಿಯ ಧಾಳಿಕೋರರನ್ನು ಸ್ವಾಗತಿಸಲು ಒಂದು ಕಾರಣವಿದ್ದರೆ, ಭಾರತದ ಅಸ್ಪೃಶ್ಯರು ವಿದೇಶಿಯ ಧಾಳಿಕೋರರನ್ನು ಸ್ವಾಗತಿಸಲು ನೂರು ಕಾರಣಗಳಿದ್ದವು.

* * *

ಅಸ್ಪೃಶ್ಯರು ಬ್ರಿಟಿಷರಿಗೆ ಜಯವನ್ನು ಪಡೆಯಲು ಮಾತ್ರ ಸಹಾಯ ಮಾಡಲಿಲ್ಲ. ಅದನ್ನು ಉಳಿಸಿಕೊಳ್ಳಲು ಕೂಡ ಸಹಾಯ ಮಾಡಿದರು. ೧೮೫೭ರ ದಂಗೆಯ ಉದ್ದೇಶವು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಕೊನೆಗಾಣಿಸುವುದಾಗಿತ್ತು. ಬ್ರಿಟಿಷರನ್ನು ಹೊರದಬ್ಬಿ ಭಾರತದ ಮೇಲೆ ಅಧಿಕಾರದ ಪುನರ್ ಪ್ರತಿಷ್ಠಾನಗೊಳ್ಳುವ

ಪ್ರಯತ್ನವು ಅದಾಗಿತ್ತು. ಈ ದಂಗೆಯ ನಾಯಕತ್ವ ವಹಿಸಿದ ಸೈನ್ಯವು ಬಂಗಾಳಿ ಸೈನ್ಯದ ತುಕ್ಕಡಿ. (೧) ಬಂಗಾಲಿ ಸೈನ್ಯವೆಂದು ಕರೆಯಲು ಮುಖ್ಯ ಕಾರಣವೆಂದರೆ ಅದು ಬಂಗಾಲ ಸರಕಾರದ ಅಧೀನದಲ್ಲಿದ್ದು ಅದರಲ್ಲಿ ಬಂಗಾಳಿ ಸೈನಿಕರು ಇರಲಿಲ್ಲ. ನಿಜವಾದ ಅರ್ಥದಲ್ಲಿ ಅದರಲ್ಲಿ ಸುತ್ತಲಿನ ಹಳ್ಳಿಗಾಡುಗಳ ಹಿನ್ನೆಲೆಯ ಸೈನಿಕರು ಹೆಚ್ಚಿನ ಪ್ರಮಾಣದಲ್ಲಿದ್ದರು.

ಮುಂಬಯಿ ಮತ್ತು ಮದ್ರಾಸ್ ಸೈನ್ಯಗಳು ಬ್ರಿಟಿಷರಿಗೆ ವಿಧೇಯವಾಗಿದ್ದು ಈ ಎರಡು ಸೈನ್ಯಗಳ ಸಹಾಯದಿಂದಲೇ ಸಿಪಾಯಿ ದಂಗೆಯನ್ನು ಹತ್ತಿಕ್ಕಲಾಯಿತು. ಬಾಂಬೆ ಮತ್ತು ಮದ್ರಾಸ್ ಸೈನ್ಯಗಳ ಸೈನಿಕರು ಯಾವ ಹಿನ್ನೆಲೆಯಿಂದ ಬಂದಿದ್ದವರು? ಅವರಲ್ಲಿ ಬಹುಪಾಲು ಅಸ್ಪೃಶ್ಯರಾಗಿದ್ದರು. ಬಾಂಬೆ ಸೈನ್ಯದಲ್ಲಿ ಮಹಾರ್‌ರು ಮತ್ತು ಮದ್ರಾಸ್ ಸೈನ್ಯದಲ್ಲಿ 'ಪರೈಯ' ಸೈನಿಕರಿದ್ದರು. ಆದುದರಿಂದ ಅಸ್ಪೃಶ್ಯರು ಬ್ರಿಟಿಷರಿಗೆ ಭಾರತವನ್ನು ಜಯಿಸಲು ಮತ್ತು ಅದನ್ನು ಉಳಿಸಿಕೊಳ್ಳಲು ಸಹಾಯ ಮಾಡಿದರೆಂಬ ಮಾತು ಸತ್ಯವಾದುದು. ಸೈನ್ಯದ ನೇಮಕಾತಿ ವಿಷಯದಲ್ಲಿ ಅಸ್ಪೃಶ್ಯರೊಂದಿಗೆ ಬ್ರಿಟಿಷರು ನಡೆದುಕೊಂಡ ಬಗೆ ಯಾವುದು? ಆಶ್ಚರ್ಯವೆನಿಸುವ ಸತ್ಯವೇನೆಂದರೆ, ೧೮೯೦ರಿಂದ ಬ್ರಿಟಿಷರು ಸೈನ್ಯದಲ್ಲಿ ಅಸ್ಪೃಶ್ಯರ ಸೇರ್ಪಡೆಯನ್ನು ನಿಷೇಧಗೊಳಿಸಿದರು. ಇದರಿಂದ ಈ ಮೊದಲು ಸೈನ್ಯದಲ್ಲಿದ್ದವರು ಮುಂದುವರೆಯಬಹುದಾಗಿತ್ತು. ಅವರನ್ನು ಸೈನ್ಯದಿಂದ ಹೊರಹಾಕಲಿಲ್ಲ. ಅದೊಂದೇ ಅವರು ಮಾಡಿದ ಉಪಕಾರ. ಆದರೆ ಕಾಲಾನುಕ್ರಮೇಣ ಈ ಮೊದಲ ಸೈನ್ಯದಲ್ಲಿದ್ದ ಅಸ್ಪೃಶ್ಯರಲ್ಲಿ ಕೆಲವರು ಮರಣವನ್ನಪ್ಪಿದರು, ಇನ್ನು ಕೆಲವರು ಪಿಂಚಣಿ ಪಡೆದು ನಿವೃತ್ತರಾದರು. ಕೊನೆಗೆ ೧೯೧೦ರಲ್ಲಿ ಸೈನ್ಯದಿಂದ ಅವರೆಲ್ಲ ಹೇಳಹೆಸರಿಲ್ಲದಂತಾದರು. ಬ್ರಿಟಿಷ್ ಸೈನ್ಯದಿಂದ ಅಸ್ಪೃಶ್ಯರನ್ನು ಸಂಪೂರ್ಣವಾಗಿ ಹೊರ ಅಟ್ಟಿದ ಈ ಕಾರ್ಯದಷ್ಟು ಕೃತಘ್ನ ಮನಸ್ಸು ಬೇರೆಲ್ಲೂ ಕಾಣ ಸಿಗುವುದಿಲ್ಲ.

ಮೇಲ್ನೋಟಕ್ಕೆ ಮೋಸ ಹಾಗೂ ವಿಶ್ವಾಸದ್ರೋಹವೆಂದು ಕಂಡುಬರುವ ಈ ಕಾರ್ಯವನ್ನು ಬ್ರಿಟಿಷರು ಮಾಡಿದ್ದೇಕೆ? ಸೈನ್ಯದಲ್ಲಿ ಅಸ್ಪೃಶ್ಯರ ನೇಮಕಾತಿಯನ್ನು ನಿಷೇಧಗೊಳಿಸಿದ್ದಕ್ಕೆ ಬ್ರಿಟಿಷರು ಯಾವುದೇ ಕಾರಣವನ್ನು ಮುಂದೆ ಮಾಡಿ ವಿವರಣೆ ನೀಡಿಲ್ಲ. ೧೮೯೦ರಲ್ಲಿ ಸೈನ್ಯದ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ರೂಪಿಸಿದ ಹೊಸ ಧೋರಣೆಯ ಫಲವಾಗಿ ಈ ಬೆಳವಣಿಗೆಯಾಯಿತೇ ಹೊರತಾಗಿ ಉದ್ದೇಶಪೂರ್ವಕವಾಗಿ ಅವರನ್ನು ಸೈನ್ಯದಿಂದ ನಿಷೇಧ ಮಾಡಲಿಲ್ಲವೆಂಬ ಮಾತು ಕೇಳಿಬರುತ್ತದೆ. ಈ ಮಾತು ಎಷ್ಟರಮಟ್ಟಿಗೆ ಸತ್ಯ?

ಈ ಧೋರಣೆಯು ಎರಡು ನಿಯಮಗಳನ್ನು ಆಧರಿಸಿದೆ. ಮೊದಲನೆಯದು ಸಂಘಟನಾತ್ಮಕ ಅಂಶಕ್ಕೆ ಸಂಬಂಧಪಟ್ಟಿದ್ದರೆ, ಎರಡನೆಯದು ನೇಮಕಾತಿ ವಿಷಯಕ್ಕೆ ಸಂಬಂಧಿಸಿದುದು.

೧೮೯೦ರಲ್ಲಿ ಜಾರಿಗೊಳಿಸಿದ ಸಂಘಟನಾ ನಿಯಮಾವಳಿಯು ಪೂರ್ವದ ಸಮ್ಮಿಶ್ರ ಸೈನ್ಯ ವ್ಯವಸ್ಥೆಯ ಬದಲಿಗೆ ವರ್ಗ ವ್ಯವಸ್ಥೆಯ ವಿಧಾನವನ್ನೊಳಗೊಂಡಿತ್ತು. ಹೊಸ ನಿಯಮಗಳಿಗನುಸಾರವಾಗಿ ಭಾರತದ ಸೈನ್ಯವು ವರ್ಗ ಆಧಾರಿತ ಸೈನ್ಯ, ಕ್ಲಾಸ್ ಸ್ಕ್ವಾಡ್ರನ್ ಅಥವಾ ಸಮೂಹ ವ್ಯವಸ್ಥೆಯಾಗಿ ಸಂಘಟನೆಗೊಂಡಿತು. ಒಂದರ್ಥದಲ್ಲಿ ಇಡಿ ಒಂದು ಸೈನ್ಯದ ತುಕಡಿಯು ಒಂದೇ ವರ್ಗದವರಿಂದಲೇ (ಜಾತಿ) ಕೂಡಿತ್ತು. ಹಿಂದಿನ ಧೋರಣೆಯ ಪ್ರಕಾರ ವ್ಯಕ್ತಿಯ ಯೋಗ್ಯತೆಯನ್ನಷ್ಟೇ ಪರಿಗಣಿಸಲಾಗುತ್ತಿತ್ತೇ ಹೊರತಾಗಿ ಆತನ ಜನಾಂಗೀಯ ಅಂಶ, ಧರ್ಮಗಳನ್ನಲ್ಲ. ಹೊಸ ಧೋರಣೆಯ ಪ್ರಕಾರ ಒಬ್ಬ ವ್ಯಕ್ತಿಯ ಜೈವಿಕ (ಜನಾಂಗೀಯ) ಅಂಶವೇ ಪ್ರಮುಖವಾಯಿತೇ ಹೊರತಾಗಿ ಆತನ ದೇಹದಾರ್ಢ್ಯ ಅಥವಾ ಬುದ್ಧಿವಂತಿಕೆಗಳನ್ನು ನಿರ್ಲಕ್ಷಿಸಲಾಯಿತು. ನೇಮಕಾತಿಗಾಗಿ ಭಾರತದ ಜನಸಂಖ್ಯೆಯನ್ನು ಜಾತಿ–ಸಮುದಾಯಗಳ ಆಧಾರದ ಮೇಲೆ ಅನೇಕ ಗುಂಪುಗಳಾಗಿ ವಿಂಗಡಿಸಲಾಯಿತು. ಯುದ್ಧಕಲೆಯನ್ನು ಹೊಂದಿದ್ದ ಸಮುದಾಯಗಳು

ಮತ್ತು ಈ ಕಲೆಯಿಂದ ದೂರವಿದ್ದ ಇನ್ನೊಂದು ಸಮುದಾಯಗಳು. ಸಾಮಾನ್ಯವಾಗಿ ಯುದ್ಧಕಲೆಗೆ ಸಂಬಂಧಪಡದ ಜನಾಂಗೀಯ ಸಮುದಾಯಗಳನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಲಾಗುತ್ತಿರಲಿಲ್ಲ. ಆಗಿನ ಸಂದರ್ಭಗಳಲ್ಲಿ ಕೇವಲ ಯುದ್ಧಕಲೆಯ ಹಿನ್ನೆಲೆಯಿರುವ ಜನಾಂಗಗಳನ್ನು ಮಾತ್ರ ಸೈನ್ಯದಲ್ಲಿ ಸೇರಿಸಿಕೊಳ್ಳುವ ನಿಯಮ ಜಾರಿಗೆ ಬಂದಿತು.

ಈ ಎರಡು ನಿಯಮಗಳನ್ನು ಅಂಗೀಕರಿಸುವುದು ಕಷ್ಟವಾಗುತ್ತದೆ. ವರ್ಗದ ಆಧಾರದ ಮೇಲೆ ನಿರ್ಧರಿಸುವ ನಿಯಮದ ಬಗ್ಗೆ ಹೇಳುವುದಾದರೆ, ಈ ವ್ಯವಸ್ಥೆಯು ರಾಜಕೀಯವಾಗಿ ಒಂದು ಬಲಿಷ್ಠ ವರ್ಗವನ್ನು ಸೃಷ್ಟಿ ಮಾಡಿ ಸಿಪಾಯಿ ದಂಗೆಯ ಸಂದರ್ಭದಲ್ಲಿ ಏರ್ಪಟ್ಟ ಪರಿಸ್ಥಿತಿಯೊದಗಿ ಬ್ರಿಟಿಷರ ವಿರುದ್ಧವೇ ತಿರುಗಿ ಬೀಳುವ ಸಾಧ್ಯತೆಯುಂಟಾಗುವುದು. ನನ್ನ ಅಭಿಪ್ರಾಯದಲ್ಲಿ ಹಿಂದಿನ ಸಮ್ಮಿಶ್ರ ಸೈನ್ಯ ವ್ಯವಸ್ಥೆಯೇ ಒಳ್ಳೆಯದು.[೧]

ಒಂದು ವೇಳೆ ಹೊಸ ನಿಯಮವೇ ಸರಿಯೆಂದು ಪರಿಗಣಿಸುವುದಾದರೆ ಅಸ್ಪೃಶ್ಯರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲು ಇರುವ ಅಡ್ಡಿಗಳಾವುವು? ವರ್ಗ ಆಧಾರಿತ ಸೈನ್ಯದಲ್ಲಿ ಸಿಕ್ಖ್, ಡೋಗ್ರಾ, ಗೋರ್ಖಾ, ರಾಜಪುತ ಸೈನ್ಯ ತುಕಡಿಗಳಿರುವಾಗ ಅಸ್ಪೃಶ್ಯರ ತುಕಡಿಗಳೇಕೆ ಇರಬಾರದು? ಒಂದು ವೇಳೆ ಸೈನ್ಯದಲ್ಲಿ ನೇಮಕಾತಿಯು ಕೇವಲ ಸೈನಿಕ ಹಿನ್ನೆಲೆಯ ಜನಾಂಗಕ್ಕೆ ಸೀಮಿತವಾದ ನಿಯಮವನ್ನೇ ಆಧರಿಸಿದರೆ, ಅದು ಅಸ್ಪೃಶ್ಯರ ನೇಮಕಾತಿಗೆ ತೊಡಕಾದುದ್ದು ಅವರು ಸೈನಿಕ ಹಿನ್ನೆಲೆಯವರಲ್ಲವೆಂಬ ವರ್ಗೀಕರಣವೇ ಕಾರಣವೇ? ೧೫೦ ವರ್ಷಗಳವರೆಗೆ ಭಾರತ ಸೈನ್ಯದಲ್ಲಿ ಶೂರ ಸೈನಿಕರೆಂದು ಪರಿಗಣಿಸಲ್ಪಟ್ಟ ಸೈನ್ಯದ ಬೆನ್ನೆಲುಬು ಆಗಿದ್ದ ಅಸ್ಪೃಶ್ಯರನ್ನು ಸೈನಿಕ ಕಲೆಯ ಅರಿವಿಲ್ಲದ ಜನಾಂಗವೆಂದು ವರ್ಗೀಕರಿಸಿದ ಔಚಿತ್ಯವೇನು? ಬ್ರಿಟಿಷರು ಅಸ್ಪೃಶ್ಯರನ್ನು ಸೈನಿಕಕಲೆ ರಹಿತ ಜನಾಂಗವೆಂದು ಪರಿಗಣಿಸಲಿಲ್ಲವೆಂಬ ಅಂಶವು ಮಹಾಯುದ್ಧದ ಸಂದರ್ಭದಲ್ಲಿ ಸೈನ್ಯಕ್ಕೆ ಹೆಚ್ಚು ಜನರ ಸೇರ್ಪಡೆ ಆವಶ್ಯಕವೆಂದು ಪರಿಗಣಿಸಿ ಅಸ್ಪೃಶ್ಯರ ನೇಮಕಾತಿ ನಿಷೇಧವನ್ನು ಹಿಂತೆಗೆದುಕೊಂಡು ಇಡಿ ಸೈನಿಕ ದಳವನ್ನೇ ಸಂಘಟಿಸಿ ಅದರ ಹೆಸರನ್ನು ಮಹಾರ್– ೧೧೧' ಎಂದು ಗುರುತಿಸುವುದರ ಮೂಲಕ ಖಚಿತಪಡಿಸಲಾಗಿದೆ. ಈ ಸೈನ್ಯದ ದಕ್ಷತೆಯ ಬಗ್ಗೆ ಶ್ರೀಯುತ.......ರವರೇ ಸಾಕ್ಷಿಯಾಗಿ ಬರೆದಿದ್ದಾರೆ. ಯುದ್ಧ ಮುಗಿದು ತಮ್ಮ ಅವಶ್ಯಕತೆ ಪೂರೈಸಿದ ಮೇಲೆ ಅಸ್ಪೃಶ್ಯರಿಗೆ ನಿರಾಶೆಯಾಗುವಂತೆ ಆಶ್ಚರ್ಯಕರವಾಗಿ ಆ ಸೈನಿಕ ದಳವನ್ನೇ ಬರ್ಖಾಸ್ತುಗೊಳಿಸಲಾಯಿತು.

ಮಾನ್ಯರೇ..... ಹೀಗೆ ಹೇಳುತ್ತಾ:

(ಹಸ್ತಪ್ರತಿಯಲ್ಲಿ ಈ ಹೇಳಿಕೆಯನ್ನು ಕೊಟ್ಟಿಲ್ಲ. –ಸಂ)

ಈ ಮೇಲಿನ ಸಾಕ್ಷಿಯ ಆಧಾರದ ಮೇಲೆ ಅಸ್ಪೃಶ್ಯರು ಆ ಸೈನಿಕ ಹಿನ್ನೆಲೆಯ ಜನಾಂಗ ಅಲ್ಲ ಎಂದು ಹೇಳಲು ಯಾರಿಗೆ ಸಾಧ್ಯ?

ಆದುದರಿಂದ ಅಸ್ಪೃಶ್ಯರು ಯಾವುದೇ ಕಾರಣಕ್ಕೆ ಸೈನ್ಯದಲ್ಲಿ ಸೇರಲು ಅಯೋಗ್ಯರು ಎಂಬುದು ಸಿದ್ಧವಾಗುವುದಿಲ್ಲ. ಆದರೂ ಯಾವ ಕಾರಣಕ್ಕೆ ಹೀಗೆ ಆಯಿತು? ನನ್ನ ಅಭಿಪ್ರಾಯದಲ್ಲಿ ಅಸ್ಪೃಶ್ಯರು ಸೈನ್ಯ ಸೇರದಂತೆ ನಿಷೇಧಕ್ಕೆ ಮುಖ್ಯ ಕಾರಣ ಅವರು ಅಸ್ಪೃಶ್ಯರಾಗಿದ್ದುದು. ಅಸ್ಪೃಶ್ಯರ ಪ್ರವೇಶವು ಸಮಸ್ಯೆಯನ್ನು ಸೃಷ್ಟಿಸದವರೆಗೆ ಅವರಿಗೆ ಸೇನೆಯಲ್ಲಿ ಸ್ವಾಗತವಿತ್ತು. ಏಕೆಂದರೆ ಸವರ್ಣೀಯರು ಬ್ರಿಟಿಷ್ ಸೈನ್ಯದಲ್ಲಿರಲಿಲ್ಲ.

---

೧. See also the opinion of General Wilcox in his "With Indians in France" P (Page Mo. not mentioned in MS).

ರಾಜರು ಇರುವವರೆಗೆ ಅವರು ಬ್ರಿಟಿಷ್ ಸೈನ್ಯದಿಂದ ಇಂಡಿಯಾದ ಹೊರಗೆ ಉಳಿದರು. ಸಿಪಾಯಿ ದಂಗೆಯ ನಂತರ ರಾಜರ ವಂಶಾವಳಿಯು ನಲುಗಿ ಹೋಗುತ್ತಿರುವಾಗ ಸವರ್ಣೀಯರು ಮೊದಲೇ ಅಸ್ಪೃಶ್ಯರಿಂದ ತುಂಬಿಕೊಂಡಿದ್ದ ಬ್ರಿಟಿಷ್ ಸೈನ್ಯವನ್ನು ಸೇರಲು ಪ್ರಾರಂಭಿಸಿದರು. ಆಗಲೇ ನಿಜವಾದ ಸಮಸ್ಯೆ ಪ್ರಾರಂಭವಾದುದು. ಸ್ಪೃಶ್ಯರು ಅಸ್ಪೃಶ್ಯರು ಹೊಂದಿರುವ ಹುದ್ದೆಗಳ ಮತ್ತು ಅವರಿಬ್ಬರ ನಡುವಿನ ಹೊಂದಾಣಿಕೆಯ ವಿಷಯದ ಬಗ್ಗೆ ಬ್ರಿಟಿಷರಿಗೆ ಸಮಸ್ಯೆ ಕಾಡತೊಡಗಿತ್ತು. ಇಂತಹ ಸಂಘರ್ಷದ ಸಂದರ್ಭದಲ್ಲಿ ಬ್ರಿಟಿಷರು ತೆಗೆದುಕೊಂಡ ನಿಲುವು ನ್ಯಾಯ ಮತ್ತು ಅನುಕೂಲಗಳಲ್ಲಿ ಅವರು ಆರಿಸಿಕೊಂಡಿರುವ ತಮ್ಮ 'ಅನುಕೂಲತೆಯೇ' ಹೊರತಾಗಿ ನ್ಯಾಯಪರತೆ ಅಲ್ಲ. ಹೀಗಾಗಿ ಅವರು ಈ ರೀತಿ ಮಾಡುವಾಗ ಸೈನ್ಯದಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಅಸ್ಪೃಶ್ಯರ ಬಗ್ಗೆ ಯಾವುದೇ ಕೃತಜ್ಞತೆಯ ಭಾವ ಅವರಲ್ಲಿ ಸುಳಿಯಲಿಲ್ಲ.

ಅಸ್ಪೃಶ್ಯರನ್ನು ಸೈನ್ಯದಿಂದ ಹೊರಗಿಡುವ ಕಾರಣಗಳೇನೇ ಇರಲಿ, ನ್ಯಾಯದ ಜಿಜ್ಞಾಸೆಯೇನೇ ಇರಲಿ, ಅಸ್ಪೃಶ್ಯರಿಗಂತೂ ಈ ಧೋರಣೆಯಿಂದ ಸಾಮಾಜಿಕವಾಗಿ ಅವರ ಜೀವನದ ಮೇಲೆ ಘೋರ ಪರಿಣಾಮಗಳಾದವು. ಸೈನ್ಯದಲ್ಲಿ ಸೇವೆಯ ಏಕೈಕ ಅವಕಾಶ ಹೊಂದಿದ್ದ ಅಸ್ಪೃಶ್ಯರು ತಮ್ಮ ಜೀವನೋಪಾಯ ಹಾಗೂ ವೃತ್ತಿ ಜೀವನದಿಂದ ವಿಮುಖರಾಗಬೇಕಾಯಿತು. ಸೈನ್ಯದಲ್ಲಿನ ಸೇವೆಯು ಅಸ್ಪೃಶ್ಯರಿಗೆ ಇದ್ದ ಏಕಮಾತ್ರ ಉಪಜೀವನದ ಸಾಧನವಾಗಿದ್ದಲ್ಲದೆ, ಅವರು ಅದನ್ನು ಒಂದು ವೃತ್ತಿಯನ್ನಾಗಿಯೂ ಸ್ವೀಕರಿಸಿದರು. ಅಸ್ಪೃಶ್ಯರು ಯುದ್ಧ ಭೂಮಿಯಲ್ಲಿ ದಕ್ಷತೆಯಿಂದ ಹೋರಾಡಿ ಸೈನ್ಯದ ಉನ್ನತ ಹುದ್ದೆಗಳಾದ ಜಮಾದಾರ್, ಸುಬೇದಾರ್, ಸುಬೇದಾರ್ ಮೇಜರ್ ಮಟ್ಟದವರೆಗೂ ತಲುಪಿದ್ದನ್ನು ಇತಿಹಾಸದಿಂದ ಗಮನಿಸಬಹುದಾಗಿದೆ. ಸೈನ್ಯವೃತ್ತಿಯು ಅಸ್ಪೃಶ್ಯರಿಗೆ ಗೌರವ ನೀಡುವುದರೊಂದಿಗೆ ಹಿಂದೂಗಳ ದೃಷ್ಟಿಯಲ್ಲಿ, ಅವರು ಮಹತ್ವದ ವ್ಯಕ್ತಿಗಳಾಗಿ ಬೆಳೆಯುವಂತಾಗಿತ್ತು. ಸುಮಾರು ೧೫೦ ವರ್ಷಗಳ ಸತತ ಸೇನೆಯ ಸೇವೆಯಲ್ಲಿದ್ದ ಅಸ್ಪೃಶ್ಯರು ಅದೊಂದು ವಂಶಪರಂಪರೆಯ ಕಸಬು ಎನ್ನುವಂತೆ ತಮ್ಮ ರಕ್ತಗತ ಮಾಡಿಕೊಂಡು ಇತರ ಯಾವುದೇ ಉದ್ಯೋಗ ಪಡೆಯಲು ಅವಶ್ಯಕವಾದ ಕೌಶಲ್ಯವನ್ನು ಅವರು ಗಳಿಸಿಕೊಳ್ಳಲಿಲ್ಲ. ೧೮೯೦ರಲ್ಲಿ ಅಸ್ಪೃಶ್ಯರಿಗೆ ಸೈನ್ಯದಲ್ಲಿ ಅವರ ಸೇವೆಯ ಅವಶ್ಯಕತೆಯಿಲ್ಲವೆಂದೂ ಯಾವುದೇ ಸಮಯಾವಕಾಶ ನೀಡದೆ ಹೊಸ ದಾರಿಯನ್ನು ಹುಡುಕಿಕೊಳ್ಳುವುದಕ್ಕೆ ಅವಕಾಶ ನೀಡದೆ, ಮುಂದೆ ೧೯೩೫ರಲ್ಲಿ ಆಂಗ್ಲೋ–ಇಂಡಿಯನ್‌ರಿಗೆ ಮಾಡಿದ ಹಾಗೆ ಅವರನ್ನು ಹೊರದೂಡಲಾಯಿತು. ಇದರಿಂದ ಅಸ್ಪೃಶ್ಯರಿಗೆ ಮರಣಾಂತಿಕ ಹೊಡೆತ ಬಿದ್ದಂತಾಯಿತು. ದೇಶೀಯ ರಾಜರ ಗುಲಾಮಗಿರಿ ಹಂತಕ್ಕೆ ಅವರು ಮತ್ತೆ ಬಿದ್ದಂತಾಯಿತು.

ಇವೆಲ್ಲವೂ ಅಸ್ಪೃಶ್ಯರ ಸೈನ್ಯದ ಸೇವೆಯ ಕತೆಯಾದರೆ ಅವರ ಸರಕಾರಿ ಸೇವೆಯ ನೇಮಕಾತಿಯ ಬಗೆಗಿನ ಕತೆಯೆಂತಹದು?

ಸರಕಾರಿ ಸೇವೆಯಲ್ಲಿ ನೇಮಕಾತಿ ಹೊಂದಬೇಕಾದರೆ ಆಯಾ ವ್ಯಕ್ತಿಯು ಉನ್ನತ ಶಿಕ್ಷಣ ಪಡೆದಿರಬೇಕು. ವಿಶ್ವವಿದ್ಯಾಲಯಗಳ ಪದವಿ ಪಡೆದವರು ಮಾತ್ರ ಅಲ್ಲಿ ನೇಮಕಗೊಳ್ಳಬಹುದು. ಭಾರತದ ಜನಸಂಖ್ಯೆಯಲ್ಲಿ ಅಸ್ಪೃಶ್ಯರು ಶೈಕ್ಷಣಿಕವಾಗಿ ಅತೀ ಹಿಂದುಳಿದ ಭಾಗದವರಾಗಿದ್ದಾರೆ. ಸರಕಾರಿ ಸೇವೆಯು ಅವರಿಗೆ ಹೆಚ್ಚು ಕಡಿಮೆ ಮನೆ–ಮನೆಯ ಬಾಗಿಲಿಗೆ ಹೋಗಿ ಭಿಕ್ಷೆ ಬೇಡುವ ಪರಿಸ್ಥಿತಿಯನ್ನು ಉಂಟುಮಾಡಿದೆ. ಅವರು ಸರಕಾರಿ ಸೇವೆಯಲ್ಲಿ ಸೇರುವುದಕ್ಕೆ ಅಡ್ಡಿಯನ್ನುಂಟುಮಾಡುವ ಎರಡು ಅಂಶಗಳಿವೆ. ಮೊದಲನೆಯದಾಗಿ ಬ್ರಿಟಿಷ್ ಸರಕಾರವು ಅವರಿಗೆ ಯಾವುದೇ ಆದ್ಯತೆ ನೀಡುತ್ತಿಲ್ಲ. ಬ್ರಿಟಿಷರು ಸರಕಾರಿ ಸೇವೆಯಲ್ಲಿ ಯೋಗ್ಯ ಪ್ರಾತಿನಿಧ್ಯವಿಲ್ಲದ ಸಮುದಾಯಗಳಿಗೆ ಆದ್ಯತೆ ನೀಡುವ ಧೋರಣೆಯನ್ನು ಅರಿಯದವರೇನಲ್ಲ.

ಮಹಮ್ಮದೀಯರಲ್ಲಿ ಕನಿಷ್ಠ ಯೋಗ್ಯತೆ ಹೊಂದಿದ್ದರೆ ಅವರಿಗೆ ಆದ್ಯತೆಯ ಮೇರೆಗೆ ನೇಮಕಾತಿ ಮಾಡುವ ನಿರ್ಧಾರವನ್ನು ಖಂಡಿತವಾಗಿ ಬ್ರಿಟಿಷ್ ಸರಕಾರವು ತೆಗೆದುಕೊಂಡಿದೆ. ಈ ನಿಯಮವನ್ನು ಸರಕಾರವು ಐಸಿಎಸ್ (ICS) ಹುದ್ದೆಗಳ ಭರ್ತಿ ಮಾಡುವ ಅಧಿಕಾರ ಪಡೆದಾಗಿನಿಂದಲೂ ಮಹಮ್ಮದೀಯರನ್ನು ನೇಮಕ ಮಾಡಿರುವುದೇ ಸಾಕ್ಷಿಯಾಗಿದೆ.

ಆದರೆ ಬ್ರಿಟಿಷ್ ಸರಕಾರವು ಒಬ್ಬನಾದರೂ ಅಸ್ಪೃಶ್ಯ ಹಿನ್ನೆಲೆಯ ವ್ಯಕ್ತಿಯನ್ನು, ಈ ನಿಯಮದ ಪ್ರಕಾರ ಕನಿಷ್ಠ ಅರ್ಹತೆ ಪಡೆದವರು ಅನೇಕರಿದ್ದರೂ ಕೂಡಾ, ನೇಮಕಾತಿ ಮಾಡಲಿಲ್ಲ.

ಎರಡನೆಯ ಕಾರಣವೆಂದರೆ: ಯೋಗ್ಯ ಅರ್ಹತೆಗಳಿದ್ದರೂ ಅಸ್ಪೃಶ್ಯರಲ್ಲಿ ಒಬ್ಬರೂ ನೇಮಕವಾಗದಿರುವುದು. ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಆಯಾ ವಿಭಾಗದ ಮುಖ್ಯಸ್ಥರಿಗೆ ವಹಿಸಿಕೊಟ್ಟಿದ್ದೇ ಆಗಿದೆ. ವಿಭಾಗಗಳ ಮುಖ್ಯಸ್ಥರು ಸಾಮಾನ್ಯವಾಗಿ ಈಗಿರುವವರು ಮತ್ತು ಮುಂದೆಯೂ ಆ ಸ್ಥಾನ ಹೊಂದುವವರು ಸವರ್ಣೀಯ ಹಿಂದೂಗಳು. ಸವರ್ಣೀಯ ಹಿಂದೂ ತನ್ನ ಹುಟ್ಟುಗುಣಗಳ ಪರಿಣಾಮದಿಂದ ಅಸ್ಪೃಶ್ಯರಿಗೆ ಯಾವುದೇ ರಿಯಾಯಿತಿ ಅಥವಾ ವಿಶೇಷ ಆದ್ಯತೆ ನೀಡುವ ಮನಸ್ಥಿತಿ ಹೊಂದಿರುವುದಿಲ್ಲ. ಆತ ತನ್ನದೇ ಆದ ವಿಶೇಷ 'ದ್ವೇಷ–ಮೆಚ್ಚುಗೆಯ' ಕಲ್ಪನೆಗಳನ್ನು ಹೊಂದಿರುತ್ತಾನೆ. ಆತನ ಮೆಚ್ಚುಗೆಯು ಮೊದಲು ತನ್ನದೇ ಕುಟುಂಬ, ಆಮೇಲೆ ಸಂಬಂಧಿಗಳೂ, ಅದಾದ ನಂತರ ಸ್ನೇಹಿತರು ಹಾಗೂ ತನ್ನ ಜಾತಿ–ಬಾಂಧವರ ಬಗ್ಗೆ ಹರಿಯುತ್ತದೆ. ಈ ವಿಶಾಲವಾದ ಪರಿಧಿಯಲ್ಲಿ ಆತನ ಮೆಚ್ಚುಗೆಯ ಅಭ್ಯರ್ಥಿಯು ಸಿಕ್ಕೇ ಸಿಗುತ್ತಾನೆ. ತನ್ನ ಜಾತಿಯ ಎಲ್ಲೆ ಮೀರಿ ನೇಮಕಾತಿಗಾಗಿ ಅಭ್ಯರ್ಥಿಯ ಹುಡುಕಾಟದತ್ತ ಆತ ಪ್ರಯತ್ನಿಸಲಾರ. ಒಂದು ವೇಳೆ ಆತನು ಪ್ರಯತ್ನವನ್ನೇನಾದರೂ ಮಾಡಿದರೆ ಒಬ್ಬ ಅಸ್ಪೃಶ್ಯನೊಂದಿಗೆ ಇತರ ಸವರ್ಣೀಯ ಹಿಂದೂ ಒಬ್ಬನೂ ಕೂಡ ಸ್ಪರ್ಧಿಸಿರದಿದ್ದರೆ ಮಾತ್ರ ಅಸ್ಪೃಶ್ಯ ಅಭ್ಯರ್ಥಿಯು ನೇಮಕವಾಗುವ ಸಾಧ್ಯತೆಯಿರುವುದು. ಸರಕಾರಿ ಸೇವೆಯಲ್ಲಿ ಅಸ್ಪೃಶ್ಯರಿಗೆ ಯಾರೂ ಸ್ಪರ್ಧಿಗಳಿಲ್ಲದಿದ್ದಾಗ ಕೊನೆಯವನಾಗಿ ಅವರಿಗೆ ಅವಕಾಶವಿದೆ. ಇಂತಹ ಪರಿಸ್ಥಿತಿಯಲ್ಲಿ ಆತನ ನೇಮಕಾತಿಯು ಸಾಧ್ಯವಾಗುವುದಿಲ್ಲ.

ಅಸ್ಪೃಶ್ಯರು ಸರಕಾರದ ಎರಡು ವಿಧದ ಸೇವೆಗಳಿಗೆ ಅತಿ ಯೋಗ್ಯರೆಂದು ಪರಿಗಣಿಸಲಾಗಿದೆ. ಮೊದಲನೆಯದು ಪೊಲೀಸು ವಿಭಾಗ, ಎರಡನೆಯದು ತಳ ದರ್ಜೆಯ ಸರಕಾರಿ ಸೇವೆಗಳಲ್ಲಿ. ಪೊಲೀಸು ವಿಭಾಗದಲ್ಲಿ ಅಸ್ಪೃಶ್ಯರ ನೇಮಕಾತಿಯ ಪರಿಸ್ಥಿತಿ ಹೇಗಿದೆ?

ಈ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ, ಅಸ್ಪೃಶ್ಯರಿಗೆ ಪೊಲೀಸ್ ವಿಭಾಗವು ಬಾಗಿಲು ಮುಚ್ಚಿಟ್ಟಿದೆ.

ಡಿಸೆಂಬರ್ ೧೭, ೧೯೨೫ರಲ್ಲಿ ಸಂಯುಕ್ತ ಪ್ರಾಂತ್ಯದ ಶಾಸನಸಭೆಯಲ್ಲಿ ಒಂದು ಮಸೂದೆಯನ್ನು ಮಂಡಿಸಲಾಯಿತು. ಅದರ ಉದ್ದೇಶವು ಅಸ್ಪೃಶ್ಯರಿಗೆ ಸರಕಾರಿ ಸೇವೆಯಲ್ಲಿ, ವಿಶೇಷವಾಗಿ ಪೊಲೀಸ್ ವಿಭಾಗದಲ್ಲಿ ನೇಮಕಾತಿಗಾಗಿ ಇರುವ ನಿರ್ಬಂಧಗಳನ್ನು ತೆಗೆದುಹಾಕುವುದಾಗಿತ್ತು. ಈ ವಿಭಾಗವನ್ನು ಪ್ರತಿನಿಧಿಸುವ ಸರಕಾರಿ ಸದಸ್ಯರು ಸರಕಾರದ ಪರವಾಗಿ ಹೀಗೆ ವಾದಿಸಿದರು:

> "…..ಇಲ್ಲ. ಒಂದು ವೇಳೆ ಸನ್ಮಾನ್ಯ ಸದಸ್ಯರು ಎಲ್ಲರಿಗೂ ಅವಕಾಶ ನೀಡಬೇಕೆಂದು ಇಚ್ಛಿಸಿದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಸರಕಾರಿ ಸೇವೆಯಲ್ಲಿ ಕ್ರಿಮಿನಲ್ ಬುಡಕಟ್ಟು ಜನಾಂಗದ ಅಥವಾ ಚಮ್ಮಾರರಂತಹ ಕೀಳು ಹಿನ್ನೆಲೆಯ ಅಭ್ಯರ್ಥಿಗಳಿಗೆ ನೇಮಕಾತಿ ವಿಷಯ ಬಂದಾಗ ನಾನು ಖಂಡಿತವಾಗಿ ವಿರೋಧಿಸುತ್ತೇನೆ."

**ಲಾಲಾ ಮೋಹನ್ ಲಾಲ್** ಅವರು ಪಂಜಾಬ ಶಾಸನ ಸಭೆಯಲ್ಲಿ ೧೯೨೭ರ ಜುಲೈ ೨೨ರಲ್ಲಿ ಈ ಕೆಳಗಿನಂತೆ ಒಂದು ಪ್ರಶ್ನೆಯನ್ನು ಎತ್ತಿದರು.

> **ಲಾಲಾ ಮೋಹನ್ ಲಾಲ್:** ಪೊಲೀಸ್ ವಿಭಾಗದಲ್ಲಿ ತಳವರ್ಗದ ಅಭ್ಯರ್ಥಿಗಳಿಗೆ ನೇಮಕಾತಿಗೆ ಅವಕಾಶವಿದೆಯೆ? ಎಂಬುದರ ಬಗ್ಗೆ ಹಣಕಾಸು ವಿಭಾಗದ ಸನ್ಮಾನ್ಯ ಸದಸ್ಯರು ದಯಮಾಡಿ ತಿಳಿಸಬೇಕು. ಒಂದು ವೇಳೆ ಇಲ್ಲವಾದರೆ ಅವರನ್ನು ಕೂಡ ಪೊಲೀಸು ಪೇದೆಗಳ ನೇಮಕಾತಿಗಾಗಿ ಪರಿಗಣಿಸುವ ಬಗ್ಗೆ ಸರಕಾರ ವಿಚಾರ ಮಾಡುತ್ತಿದೆಯೇ?
>
> **ಸನ್ಮಾನ್ಯ ಸರ್ ಜಫ್ರಿ–ಡಿ–ಮೊಂಟ ಮೊರೆನ್ಸಿ:** ತಳಜಾತಿಯ ಅಭ್ಯರ್ಥಿಗಳನ್ನು ಪೊಲೀಸು ವಿಭಾಗದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತಿಲ್ಲ. ಸಮಾಜದ ಎಲ್ಲ ವರ್ಗಗಳಲ್ಲಿ ಸಮಾನತೆ ಬಂದಾಗ (ಇದು ಅಸಾಧ್ಯವಾದುದು) ಅಥವಾ ಈ ಸಮುದಾಯದ ಜನರು ಪೊಲೀಸು ವಿಭಾಗಕ್ಕೆ ಸೇರುವುದರಿಂದ ವಿಭಾಗದ ಅವಶ್ಯಕ ದಕ್ಷತೆ ಹೆಚ್ಚುವ ಭರವಸೆ ಉಂಟಾದಾಗ ಸರಕಾರವು ಅವರಿಗೂ ಮುಕ್ತವಾದ ಅವಕಾಶ ನೀಡಲು ಸಾಧ್ಯವಾಗುವುದು. ಆದರೆ ಈ ಜನರು ನೇಮಕಾತಿಗಾಗಿ ಅವಶ್ಯಕವಿರುವ ಭೌತಿಕ ಮತ್ತು ಇತರ ಯೋಗ್ಯತೆಗಳನ್ನು ಹೊಂದಿರಬೇಕಾಗುತ್ತದೆ.

ಮುಂಬೈ ಸರಕಾರವು ೧೯೨೮ರಲ್ಲಿ ನೇಮಿಸಿದ ಆಯೋಗವು ಇದೇ ವಿಷಯದ ಬಗ್ಗೆ ಈ ಕೆಳಗಿನ ವರದಿಯನ್ನು ನೀಡಿತು.

(ಉಲ್ಲೇಖವು ಹಸ್ತಪ್ರತಿಯಲ್ಲಿ ಲಭ್ಯವಿಲ್ಲ.)

ಸರಕಾರದ ಸೇವೆಯಲ್ಲಿ ಕನಿಷ್ಟ ದುಡಿಮೆಯ ಅವಕಾಶವು ಅವರಿಗೆ ಲಭ್ಯವಿಲ್ಲ. ಈ ಮಾತನ್ನು ಬಹಳಷ್ಟು ಜನ ನಂಬುವುದಿಲ್ಲ. ಆದರೆ ವಸ್ತು ಸ್ಥಿತಿ ಹಾಗಿದೆ. ಕಾರಣವನ್ನು ತುಂಬ ಸರಳವಾಗಿ ಊಹಿಸಲು ಸಾಧ್ಯವಿದೆ. ಸಾಮಾನ್ಯ ದುಡಿಮೆಯ ಅವಕಾಶ ಅವರಿಗೆ ನಿಲುಕದಿರುವುದಕ್ಕೆ, ಪೊಲೀಸು ವಿಭಾಗದಲ್ಲಿ ದೂರವಿಟ್ಟ ಕಾರಣವೇ ಇಲ್ಲಿ ಪ್ರಮುಖ ಪಾತ್ರ ವಹಿಸಿತು. ಅದುವೇ ಅಸ್ಪೃಶ್ಯತೆ. ಪೊಲೀಸ್ ಪೇದೆಯು ತನ್ನ ಕರ್ತವ್ಯದ ಅಂಗವಾಗಿ ವ್ಯಕ್ತಿಯನ್ನು ಸೆರೆ ಹಿಡಿಯಬೇಕಾಗುತ್ತದೆ. ತನ್ನ ಕರ್ತವ್ಯ ನಿಮಿತ್ತ ಶೋಧನಾ ವಾರಂಟನ್ನು ಜಾರಿಗೊಳಿಸಲು ಮನೆಯನ್ನು ಶೋಧಿಸುವ ಕಾರ್ಯ ಮಾಡಬೇಕಾಗುವುದು. ಬಂಧಿಸುವ ಪೊಲೀಸ್ ಪೇದೆಯು ಅಸ್ಪೃಶ್ಯನಾಗಿದ್ದು, ಬಂಧಿತನು ಸವರ್ಣೀಯನಾಗಿದ್ದರೆ, ಎಂತಹ ಪರಿಸ್ಥಿತಿ ಉಂಟಾಗಬಹುದು? ಪೊಲೀಸ್ ಪೇದೆಗಳು ಅವರಿಗಾಗಿಯೇ ಕಟ್ಟಿದ ಸರಕಾರಿ ವಸತಿನಿಲಯಗಳ ಸಮುಚ್ಚಯದಲ್ಲಿ ವಾಸಿಸುತ್ತ ಅಲ್ಲಿರುವ ನೀರಿನ ನಲ್ಲಿಗಳನ್ನು ಉಪಯೋಗಿಸಲಾಗುತ್ತದೆ. ಸವರ್ಣೀಯ ಪೊಲೀಸ್ ಪೇದೆಯು ತನ್ನ ನೆರೆ ಹೊರೆಯವನಾಗಿ ಅಸ್ಪೃಶ್ಯ ಬಂದರೆ ಆತನ ಪ್ರತಿಕ್ರಿಯೆ ಹೇಗಿರುವುದು? ಈ ಎಲ್ಲ ಅಂಶಗಳು ಒಟ್ಟಾರೆಯಾಗಿ ಅಸ್ಪೃಶ್ಯರಿಗೆ ಪೊಲೀಸ್ ವಿಭಾಗದಲ್ಲಿ ನೇಮಕಾತಿಗೆ ತೊಡಕಾಗುವುವು. ಇದೇ ಕಾರಣಗಳು ಅಸ್ಪೃಶ್ಯರು ಸರಕಾರದ ಸೇವೆಯಲ್ಲಿ ನೇಮಕಾತಿ ಪಡೆಯುವಲ್ಲಿ ಅಡ್ಡಗಾಲು ಹಾಕಿದವು. ಸರಕಾರಿ ಸೇವೆಯಲ್ಲಿ ತಳದರ್ಜೆಯ ಸಹಾಯಕರ ಸೇವೆಯ ಪ್ರಕಾರ ಕಛೇರಿಯಲ್ಲಿ ಕಾರ್ಯ ನಿರ್ವಹಿಸಬೇಕು. ಆತನು ಸೇವೆ ಸಲ್ಲಿಸುವಾಗ ಸವರ್ಣೀಯರ ಸಂಪರ್ಕಕ್ಕೆ ಸಹಜವಾಗಿ ಬರಬೇಕಾಗುವುದು. ಅಷ್ಟೇ ಅಲ್ಲದೆ,

ಕಛೇರಿಯ ಜವಾನನು ಸಂಪ್ರದಾಯದ ಪ್ರಕಾರ ಕಛೇರಿಯ ಮುಖ್ಯಸ್ಥನ ಸೇವೆಯೊಂದಿಗೆ ಆತನ ಮನೆಯ ಸೇವೆಯನ್ನು ಮಾಡಬೇಕಾಗುವುದು. ಆತ ತನ್ನ ಕಛೇರಿಯ ಮುಖ್ಯ ಅಧಿಕಾರಿಗಾಗಿ ಚಹಾ ತಂದು ಕೊಡಬೇಕು, ಅಧಿಕಾರಿಯ ಹೆಂಡತಿ ಖರೀದಿಗಾಗಿ ಮಾರುಕಟ್ಟೆಗೆ ಹೋದರೆ ಅವಳೊಂದಿಗಿರಬೇಕು. ಅವರ ಮಕ್ಕಳನ್ನು ನೋಡಿಕೊಳ್ಳಬೇಕು. ಅಸ್ಪೃಶ್ಯರೇನಾದರೂ ಇಂತಹ ಸೇವೆಯಲ್ಲಿ ನೇಮಕಾತಿಗೊಂಡರೆ, ವಿಭಾಗದ ಮುಖ್ಯಸ್ಥನು ಆತನ ಇತರ ಸೇವೆಯನ್ನು ಪಡೆಯುವಂತಿಲ್ಲ. ಹೀಗಾಗಿ ಅಸ್ಪೃಶ್ಯರು ತಳವರ್ಗದ ಸೇವೆಯಲ್ಲಿ ಸೇರುವ ಅಧಿಕಾರದಿಂದಲೂ ವಿಮುಖರಾದರು. ಅಸ್ಪೃಶ್ಯರನ್ನು ಸೇವೆಯಿಂದ ಸಂಪೂರ್ಣ ಹೊರಗಿಡುವ ದಿಶೆಯಲ್ಲಿ ಮುಂಬೈ ಆಯೋಗವು ವಿಶೇಷ ಶಿಫಾರಸ್ಸು ಮಾಡಿತು.

## III

ಅಸ್ಪೃಶ್ಯರ ಶಿಕ್ಷಣದ ಬಗ್ಗೆ ಬ್ರಿಟಿಷ್ ಸರಕಾರವು ಯಾವ ಕ್ರಮವನ್ನು ಕೈಗೊಂಡಿತು? ಮುಂಬೈ ಪ್ರಾಂತ್ಯವನ್ನು ಉದಾಹರಣೆಯಾಗಿ ನಾನು ಇಲ್ಲಿ ವಿವರಿಸಬಯಸುತ್ತೇನೆ. ಬ್ರಿಟಿಷ್ ಆಳ್ವಿಕೆಯನ್ನು ಶಿಕ್ಷಣದ ವಿಷಯದ ಅನುಸಾರವಾಗಿ ಮೂರು ಹಂತಗಳಾಗಿ ವಿಂಗಡಿಸಬಹುದಾಗಿದೆ.

### I. ೧೮೧೩ರಿಂದ ೧೮೫೪ರವರೆಗೆ:

೧. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಮುಂಬಯಿ ಪ್ರಾಂತ್ಯದಲ್ಲಿ ಶಿಕ್ಷಣ ಪ್ರಾರಂಭವಾದುದು ೧೮೧೫ರಲ್ಲಿ ಮುಂಬಯಿ ಎಜುಕೇಷನ್ ಸೊಸೈಟಿಯ ಸ್ಥಾಪನೆಯೊಂದಿಗೆ. ಈ ಸಂಸ್ಥೆಯು ಯೂರೋಪಿಯನ್ ಮಕ್ಕಳ ಶಿಕ್ಷಣಕ್ಕಾಗಿ ಸೀಮಿತವಾಗಿರುವುದಿಲ್ಲ. ದೇಶಿಯ ಮಕ್ಕಳಿಗೂ ಸೂರತ್ ಮತ್ತು ಥಾನೆಗಳಲ್ಲಿನ ಶಾಲೆಗಳಲ್ಲಿ ವಿದ್ಯಾರ್ಜನೆಗೆ ೧೮೨೦ರಲ್ಲಿಯೇ ಪ್ರೋತ್ಸಾಹ ನೀಡಲಾಗುತ್ತಿತ್ತು. ಮುಂಬೈನಲ್ಲಿ ನಾಲ್ಕು ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಸುಮಾರು ೨೫೦ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ದೇಶೀಯ ಲಕ್ಷಣಕ್ಕಾಗಿ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಒಂದು ವಿಶೇಷ ಸಮಿತಿಯನ್ನು ರಚಿಸಿ ಪ್ರಾಂತೀಯ ಭಾಷೆಗಳಲ್ಲಿ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸುವ ಮತ್ತು ದೇಶೀಯ ಶಾಲೆಗಳ ಸ್ಥಾಪನೆಗೆ ಈ ಸೊಸೈಟಿಯು ಸಹಾಯ ಮಾಡಿತು. ಈ ಸಮಿತಿಯ ಕಾರ್ಯವ್ಯಾಪ್ತಿ ಹೆಚ್ಚುತ್ತಾ ಹೋಗಿ ಬಡ ಮಕ್ಕಳಿಗೂ ಶಿಕ್ಷಣ ಅವಕಾಶ ನೀಡುವತ್ತ ಪ್ರಯತ್ನ ಮಾಡಬೇಕಾಯಿತು. ಆಗ ಅದರ ಹೆಸರು "ಬಾಂಬೆ ನೇಟಿವ್ ಸ್ಕೂಲ್ ಬುಕ್ ಅಂಡ್ ಸ್ಕೂಲ್ ಸೊಸೈಟಿ" ಎಂದಾಗಿತ್ತು. ಈ ಹೆಸರನ್ನು ೧೮೨೭ರಲ್ಲಿ ಮಾರ್ಪಾಡು ಮಾಡಿ "ಬಾಂಬೆ ನೇಟಿವ್ ಎಜುಕೇಶನ್ ಸೊಸೈಟಿ" ಎಂಬ ಹೊಸ ಹೆಸರು ಅದು ಪಡೆಯಿತು. ಈ ಹೊಸ ಸಂಸ್ಥೆಯ ಪ್ರಥಮ ಅಧ್ಯಕ್ಷರು ಸನ್ಮಾನ್ಯ ಮೌಂಟ್ ಸ್ಟುವರ್ಟ್ ಎಲ್ಫಿನ್‌ಸ್ಟನ್ ಅವರು ಆಗಿದ್ದರು. ಮುಖ್ಯ ನ್ಯಾಯಾಧೀಶರು ಹಾಗೂ ಮುಂಬೈ ಸರಕಾರದ ಕಾರ್ಯಕಾರಿ ಮಂಡಳಿಯ ಮೂವರು ಸದಸ್ಯರು ಉಪಾಧ್ಯಕ್ಷರಾಗಿದ್ದರು. ವ್ಯವಸ್ಥಾಪಕ ಮಂಡಳಿಯಲ್ಲಿ ಹನ್ನೆರಡು ಯೂರೋಪಿಯನ್ ಸದಸ್ಯರು ಮತ್ತು ದೇಶೀಯ ಹನ್ನೆರಡು ಸದಸ್ಯರಿದ್ದರು. ಕ್ಯಾಪ್ಟನ್ ಜಾರ್ಜ್ ಜರ್ವಿಸ್ ಆರ್. ಈ. ಮತ್ತು ಶ್ರೀಯುತ ಸದಾಶಿವ ಕಾಶಿನಾಥ ಛತ್ರೆ ಅವರು ಕಾರ್ಯದರ್ಶಿಗಳಾಗಿದ್ದರು. ಈ ಸಂಸ್ಥೆಯು ಸರಕಾರದಿಂದ ಪ್ರತಿ ತಿಂಗಳು ೬೦೦ ರೂಪಾಯಿಗಳ ಧನ ಸಹಾಯದೊಂದಿಗೆ ತನ್ನ ಕಾರ್ಯವನ್ನು ಪ್ರಾರಂಭಿಸಿತು. ೧೮೨೫ರಲ್ಲಿಯೇ ಮುಂಬೈ ಸರಕಾರವು ತನ್ನ ಧನ ಸಹಾಯದಿಂದ ಜಿಲ್ಲಾ ಕೇಂದ್ರ ಮತ್ತು ಇತರ ಪಟ್ಟಣಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿತು. ಹಾಗೂ ಅವುಗಳ ಉಸ್ತುವಾರಿಯನ್ನು ಕಲೆಕ್ಟರರಿಗೆ

ಒಪ್ಪಿಸಲಾಯಿತು. ಈ ಎರಡು ಸ್ವತಂತ್ರ ಸಂಘಟನೆಗಳ ಕಾರ್ಯಕ್ರಮಗಳನ್ನು ಸಂಯೋಜಿಸುವ ಸಲುವಾಗಿ ೧೮೪೦ರಲ್ಲಿ ಶಿಕ್ಷಣ ಮಂಡಳಿಯ ಸ್ಥಾಪನೆಯಾಯಿತು. ಶಿಕ್ಷಣ ಮಂಡಳಿಯಲ್ಲಿ ಒಟ್ಟು ೬ ಸದಸ್ಯರಿದ್ದು, ೩ ಸದಸ್ಯರು ಸರಕಾರದಿಂದ ನಾಮಕರಣಗೊಂಡರೆ, ಇನ್ನು ಮೂರು ಸದಸ್ಯರು ನೇಟಿವ್ ಎಜುಕೇಶನ್ ಸೊಸೈಟಿಯಿಂದ ನೇಮಕಗೊಳ್ಳುತ್ತಿದ್ದರು. ಈ ಮಂಡಳಿಯು ನಿರ್ದೇಶಕ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರನ್ನು ೧೮೫೫ರಲ್ಲಿ ನೇಮಕ ಮಾಡುವುದಕ್ಕಿಂತ ಮೊದಲು ಶಿಕ್ಷಣದ ಎಲ್ಲಾ ವಿಷಯಗಳ ಜವಾಬ್ದಾರಿಯನ್ನು ಹೊಂದಿತ್ತು.

೨. ೧೮೫೫ರ ಮಾರ್ಚ್ ೧ರಲ್ಲಿ ಮಂಡಳಿಯು ವಿಸರ್ಜನೆಯಾಯಿತು. ಆ ಸಂದರ್ಭದಲ್ಲಿ ಮುಂಬೈ ಪ್ರಾಂತ್ಯದಲ್ಲಿ ಮಂಡಳಿ ಅಧೀನದಲ್ಲಿ ೧೫ ಆಂಗ್ಲಶಾಲೆ–ಕಾಲೇಜುಗಳಿದ್ದವು. ಒಟ್ಟು ೨,೮೫೦ ವಿದ್ಯಾರ್ಥಿಗಳು ಅವುಗಳಲ್ಲಿ ಸೇರ್ಪಡೆಯಾಗಿದ್ದರು. ೨೫೬ ದೇಶೀಯ ಶಾಲೆಗಳಿದ್ದು ಆಗ ೧೮,೮೮೩ ವಿದ್ಯಾರ್ಥಿಗಳು ನೋಂದಾವಣಿ ಹೊಂದಿದ್ದರು. ಅದೇ ವರದಿಯಲ್ಲಿ ಈ ಕೆಳಗೆ ಕಾಣಿಸುವ ಉಲ್ಲೇಖವಿದೆ.

> "೨೪. ಅಹಮದನಗರ ನಿವಾಸಿಗಳು ತಳವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಲು ಸರಕಾರಕ್ಕೆ ಆಗಸ್ಟ್(೧೮೫೫)ರಲ್ಲಿ ಮನವಿ ಸಲ್ಲಿಸಿದರು. ನಿಯಮದ ಪ್ರಕಾರ ಶಿಕ್ಷಕರ ಸಂಬಳದ ಅರ್ಧ ಭಾಗವನ್ನು ಸಂದಾಯ ಗಳಿಸುವುದಕ್ಕೆ ಒಪ್ಪಿಗೆ ಇರುವ ಬಗ್ಗೆಯೂ ತಿಳಿಸಿದರು. ಅವರು ಶಾಲೆಯ ಕಟ್ಟಡವನ್ನು ಕಟ್ಟಿದ್ದಾರೆ ಮತ್ತು ೩೦ ವಿದ್ಯಾರ್ಥಿಗಳು ಶಾಲೆಗೆ ಈಗಾಗಲೇ ಬರುತ್ತಿದ್ದಾರೆಂದು ತಿಳಿಸಿದ್ದಾರೆ. ಇಂತಹ ಶಾಲೆಯ ಸ್ಥಾಪನೆಗೆ ಸವರ್ಣೀಯರು ಮತ್ಸರದಿಂದ ವಿರೋಧಿಸುತ್ತಿದ್ದಾರೆ. ಶಾಲೆಗಾಗಿ ಶಿಕ್ಷಕರ ನೇಮಕಾತಿಯ ಸಂದರ್ಭದಲ್ಲಿಯೂ ಕೆಲವು ತೊಡಕುಗಳುಂಟಾದವು. ಏಕೆಂದರೆ ನೀಡುವ ಸಂಬಳದ ಪ್ರಮಾಣಕ್ಕೆ ಯಾವ ಶಿಕ್ಷಕರೂ ಇಲ್ಲಿ ಸೇರಬಯಸುತ್ತಿಲ್ಲ. ಆದರೆ ಅರ್ಜಿದಾರರು ಸರಕಾರದ ನಿಯಮ ಮತ್ತು ಶರತ್ತುಗಳಿಗೆ ಅನುಗುಣವಾಗಿ ತಮ್ಮ ಬೇಡಿಕೆಯನ್ನು ಸಲ್ಲಿಸಿರುವುದರಿಂದ ಅವರ ಬೇಡಿಕೆಯನ್ನು ಮನ್ನಿಸಿ ಶಾಲೆಯನ್ನು ನವೆಂಬರ್ ತಿಂಗಳಲ್ಲಿ ಪ್ರಾರಂಭಿಸಲಾಯಿತು. ತಳವರ್ಗದ ಜಾತಿಗೆ ಸಂಬಂಧಪಟ್ಟ ಶಾಲೆಯ ಬೇಡಿಕೆಯು ವಿಶಿಷ್ಟವಾದುದರಿಂದ ಇದು ಪ್ರಥಮ ಘಟನೆಯೂ ಆಗಿರುವುದರಿಂದ ಅದನ್ನು ಇಲ್ಲಿ ಉಲ್ಲೇಖಿಸಲಾಗಿದೆ."

೩. ಮಂಡಳಿಯ ಹೇಳಿಕೆಯ ಪ್ರಕಾರ ಮುಂಬೈ ಪ್ರಾಂತ್ಯದಲ್ಲಿ ತಳಜಾತಿಯ ಮಕ್ಕಳಿಗಾಗಿ ಮೊದಲ ಬಾರಿಗೆ ಶಾಲೆಯನ್ನು ಪ್ರಾರಂಭಿಸಲಾಯಿತೆಂಬುದು ತಿಳಿದು ಬರುವುದು. ಇದರಿಂದ ಸ್ವಾಭಾವಿಕವಾಗಿ ಕೆಲವು ಪ್ರಶ್ನೆಗಳು ಏಳುತ್ತವೆ. ೧೮೫೫ಕ್ಕಿಂತ ಮಂಚೆ ಬ್ರಿಟಿಷ್ ಸರಕಾರವು ತಳಜಾತಿಯ ಹಿಂದುಳಿದ ವರ್ಗಗಳ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಯಾವ ಧೋರಣೆಯನ್ನು ಹೊಂದಿದ್ದರು? ಈ ಪ್ರಶ್ನೆಗೆ ಉತ್ತರ ಪಡೆಯಬೇಕಾದರೆ ನಾವು ೧೮೧೩ರಿಂದ ೧೮೫೫ರವರೆಗಿನ ಬ್ರಿಟಿಷ್ ಸರಕಾರದ ಶಿಕ್ಷಣದ ಇತಿಹಾಸವನ್ನು ಈ ಪ್ರಾಂತಕ್ಕೆ ಸೀಮಿತಗೊಳಿಸಿ ಗಮನಿಸಬೇಕಾಗುವುದು. ಪೇಶ್ವೆ ಆಳ್ವಿಕೆಯ ಸಂದರ್ಭದಲ್ಲಿ ಹಿಂದುಳಿದ ಜಾತಿ ವರ್ಗಗಳ ಶಿಕ್ಷಣದಿಂದ ಪೂರ್ತಿಯಾಗಿ ನಿರ್ಲಕ್ಷಿಸಲ್ಪಟ್ಟಿದ್ದರು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸರಕಾರವು ನೀಡುವ ಶಿಕ್ಷಣದ ಬಗ್ಗೆ ಈ ವರ್ಗಗಳಿಗೆ ಯಾವುದೇ ತಿಳುವಳಿಕೆ ಇರಲಿಲ್ಲ. ಏಕೆಂದರೆ ಪೇಶ್ವೆ ಆಳ್ವಿಕೆಯು ಮೂಲಭೂತವಾಗಿ ಧಾರ್ಮಿಕ ರಾಜ್ಯಭಾರ ವ್ಯವಸ್ಥೆಯಾಗಿದ್ದು, ಅದು ಮನುಸ್ಮೃತಿಯ ತತ್ವಗಳನ್ನು ಪಾಲಿಸುತ್ತಿತ್ತು. ಮನು ವಾದದ ಪ್ರಕಾರ ಶೂದ್ರರು ಮತ್ತು ಅತಿಶೂದ್ರರಿಗೆ (ಶಿಕ್ಷಣ ಇಲಾಖೆ ಗುರುತಿಸಿರುವ ಹಿಂದುಳಿದ ವರ್ಗ–ಜಾತಿ) ಬದುಕಿನ ಸ್ವಾತಂತ್ರ್ಯದ ಮತ್ತು ಆಸ್ತಿಯ ಅಲ್ಪಸ್ವಲ್ಪ ಅಧಿಕಾರವೇನೋ ಇತ್ತು.

ಆದರೆ ಶಿಕ್ಷಣ ಪಡೆಯಲು ಖಂಡಿತ ಅವರಿಗೆ ಅವಕಾಶವಿರಲಿಲ್ಲ. ಇಂತಹ ಉಸಿರುಗಟ್ಟುವ ಆಳ್ವಿಕೆಯಲ್ಲಿ ನೊಂದುಹೋದ ಸಮುದಾಯಗಳ ಧರ್ಮದ ಆಧಾರದ ಮೇಲೆ ಆಳ್ವಿಕೆಯು ಬಿದ್ದುಹೋದ ಮೇಲೆ ಸಮಾಧಾನಪಟ್ಟರು. ಬ್ರಿಟಿಷ್‌ರ ಆಳ್ವಿಕೆಯು ಹೊಸ ಆಶೆಗಳನ್ನು ಅವರ ಮನಸ್ಸಿನಲ್ಲಿ ಮೂಡಿಸಿತು. ಮೊದಲನೆಯದಾಗಿ ಈ ಆಳ್ವಿಕೆಯು ಪ್ರಜಾಪ್ರಭುತ್ವ ತತ್ವದ ಮೇಲೆ ನಿಂತು ಪ್ರತಿಯೊಬ್ಬ ವ್ಯಕ್ತಿಗೂ ಮಾನ್ಯತೆ ಸಿಗುವ ತಾರತಮ್ಯವಿಲ್ಲದ್ದು ಎಂಬುದನ್ನು ಅವರು ಊಹಿಸಿಕೊಂಡರು. ಅವರ ಊಹೆಯ ಮೇರೆಗೆ ಇಂತಹ ಪ್ರಜಾಪ್ರಭುತ್ವವೇನಾದರೂ ಜಾರಿಗೆ ಬಂದಿದ್ದರೆ, ಅಂತಹ ಆಳ್ವಿಕೆಯು ಪೇಶ್ವೆ ಆಳ್ವಿಕೆಯ ಸಂಪೂರ್ಣ ವಿರುದ್ಧದ ಆಳ್ವಿಕೆಯಾಗಿರುತ್ತಿತ್ತು. ಎರಡನೆಯದಾಗಿ ಬ್ರಿಟಿಷ್ ಆಳ್ವಿಕೆಯು ಸ್ಥಾಪನೆಯಾಗಲು ಹಿಂದುಳಿದ ವರ್ಗಗಳು ಸಹಾಯ ಮಾಡಿದ್ದರಿಂದ ಸ್ವಾಭಾವಿಕವಾಗಿ ಬ್ರಿಟಿಷರು ತಮಗೆ ವಿಶೇಷ ರೀತಿಯಿಂದ ಅಲ್ಪವಾದರೂ ಸಮಾನತೆಯ ತಳಹದಿಯ ಮೇಲೆ ತಮಗೂ ಏನಾದರೂ ಸಹಾಯ ಮಾಡಬಹುದೆಂದು ನಂಬಿದ್ದವು.

೪. ದೇಶೀಯ ಜನರ ಶಿಕ್ಷಣದ ಬಗ್ಗೆ ಬ್ರಿಟಿಷರು ಬಹುಕಾಲ ಮೌನ ವಹಿಸಿದರು. ಆಡಳಿತದಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳು ಭಾರತದ ಜನರಲ್ಲಿ ಶಿಕ್ಷಣದ ಪ್ರಸಾರ ಮಾಡುವುದು ಆಳುವ ವರ್ಗದ ನೈತಿಕ ಜವಾಬ್ದಾರಿ ಎಂಬುದನ್ನು ಅರಿತಿದ್ದರೂ ಸಹ ೧೮೧೩ರವರೆಗೆ ಸರಕಾರವು ಯಾವುದೇ ಸಾರ್ವಜನಿಕ ಹೇಳಿಕೆಯನ್ನು ಜನಸಾಮಾನ್ಯರ ಬಗ್ಗೆ ನೀಡಲಿಲ್ಲ. ೧೮೧೩ರಲ್ಲಿ ೫೩ರ ವಿಧಿಯ ೪೩ನೇ ಅಧಿನಿಯಮದ ಪ್ರಕಾರ ಜಾರ್ಜ್ IV, ವಿಭಾಗ ೧೫೫, ಪಾರ್ಲಿಮೆಂಟ್ ಈ ಕೆಳಗಿನ ಹೇಳಿಕೆ ನೀಡಿತು. "ಬ್ರಿಟಿಷ್ ಆಳ್ವಿಕೆಗೊಳಪಟ್ಟ ಇಂಡಿಯಾದ ಪ್ರದೇಶಗಳಲ್ಲಿ ಸರಕಾರಕ್ಕೆ ಸಂದಾಯವಾದ ಹೆಚ್ಚುವರಿ ಕಾಸಿನಲ್ಲಿ ಪ್ರತಿ ವರ್ಷಕ್ಕೆ ಒಂದು ಲಕ್ಷದಷ್ಟು ಹಣವನ್ನು ಸಾಹಿತ್ಯದ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ ಇಂಡಿಯಾದ ಶಿಕ್ಷಣ ಪಡೆದವರಿಗೆ ಪ್ರೋತ್ಸಾಹ ಹಾಗೂ ವಿಜ್ಞಾನದ ಮಾಹಿತಿಯ ಪರಿಚಯ ಅಭಿವೃದ್ಧಿಗಾಗಿ ಅದನ್ನು ಉಪಯೋಗಿಸ ತಕ್ಕದ್ದು." ಈ ಶಾಸನಬದ್ಧ ವ್ಯವಸ್ಥೆಯಿಂದ ಶಿಕ್ಷಣ ರಂಗದಲ್ಲಿ ಯಾವುದೇ ವ್ಯವಸ್ಥಿತ ಪ್ರಯತ್ನವನ್ನಾಗಲೀ, ಸಂಘಟಿತ ಕಾರ್ಯಕ್ರಮವನ್ನಾಗಲಿ ೧೮೨೩ರವರೆಗೆ ಹಮ್ಮಿಕೊಳ್ಳಲಾಗಲಿಲ್ಲ. ಕೋರ್ಟ್ ಆಫ್ ಡೈರೆಕ್ಟರ್ಸ್ ಅವರು ೧೮೫೩ರ ಜೂನ್ ೩ರಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್‌ನವರಿಗೆ ಒಂದು ಮಾಹಿತಿಯನ್ನು ಒದಗಿಸಿದರು. ಪಾರ್ಲಿಮೆಂಟಿನ ೧೮೧೩ರ ೫೩ರ ವಿಧಿಯ ೪೩ನೇ ಅಧಿನಿಯಮದ ಸತ್ವವನ್ನು ಜಾರಿಗೆ ತರಲು ಹಿಂದೂಗಳಲ್ಲಿ ಸಂಸ್ಕೃತವನ್ನು ಪ್ರಚಾರ ಹಾಗೂ ಅಭಿವೃದ್ಧಿಗೊಳಿಸುವುದು ಅವಶ್ಯವೆಂದು ಶಿಫಾರಸ್ಸು ಮಾಡಲಾಯಿತು. ಆದರೆ ತಳವರ್ಗದ ಜನರಿಗೆ ಶಿಕ್ಷಣ ನೀಡುವ ವ್ಯವಸ್ಥಿತ ಪ್ರಯತ್ನವಿಲ್ಲದೆ ನಿರಾಶೆಯನ್ನುಂಟು ಮಾಡಲಾಯಿತು. ಬ್ರಿಟಿಷ್ ಸರಕಾರವು ಶಿಕ್ಷಣ ಪಡೆಯುವುದು ಕೇವಲ ಉನ್ನತ ವರ್ಗದವರಿಗೇ ಮೀಸಲು ಇರುವುದೆಂದು ಬೇಕೆಂದೇ ಇಂತಹ ಕ್ರಮ ಕೈಗೊಂಡಿತು. ಇದನ್ನು ಕಾಲ್ಪನಿಕ ಕಟ್ಟುಕತೆಯೆಂದು ನಂಬುವವರು ಮುಂಬೈ ಪ್ರಾಂತದ ಶಿಕ್ಷಣ ಮಂಡಳಿಯ ೧೮೫೦-೫೧ ವರ್ಷದ ವರದಿಯನ್ನು ಗಮನಿಸಬೇಕು.

> **"ಪ್ಯಾರಾ ೫- ಮಂಡಳಿಯ ಕೋರ್ಟ್ ಆಫ್ ಡೈರೆಕ್ಟರ್ಸ್ ಅಭಿಪ್ರಾಯದ ಮೇರೆಗೆ ಅಳವಡಿಸಿ ಕೊಂಡಿರುವ ವ್ಯವಸ್ಥೆ:**
>
> ಸನ್ಮಾನ್ಯ ಕೋರ್ಟು ಕಾಲಕಾಲಕ್ಕೆ ನೀಡುವ ನಿರ್ದೇಶನಗಳ ಆಧಾರದ ಮೇಲೆ ಈ ಪ್ರಾಂತದ ಶಿಕ್ಷಣ ಮಂಡಳಿಯು ಶಿಕ್ಷಣ ವ್ಯವಸ್ಥೆಯ ರೂಪರೇಷೆಯನ್ನು ಸಿದ್ಧಪಡಿಸಿಯೇ ಹೊರತಾಗಿ ಇಲ್ಲಿನ ಜನರ ಶಿಕ್ಷಣದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ ವ್ಯಕ್ತಿಗಳ, ಅರ್ಲ್ ಆಫ್ ಆಕ್ಲಂಡ್, ಮೇಜರ್ ಕ್ಯಾಂಡಿ, ಮುಂತಾದವರ ಅಭಿಪ್ರಾಯಗಳನ್ನಾಗಲೀ ದೇಶೀಯ

ಜನರಲ್ಲಿಯೇ ಶಿಕ್ಷಣ ಪಡೆದ ವಿದ್ವಾಂಸರು ಇಲ್ಲಿನ ಜನರಿಗೆ ಎಂತಹ ಶಿಕ್ಷಣ ಬೇಕು ಎನ್ನುವ ಬೇಡಿಕೆಯನ್ನು ಗಮನಿಸಲಾಗಲಿಲ್ಲ. ಈ ಮಂಡಳಿಯು ಕೌನ್ಸಿಲ್‌ನ ಈ ಮೊದಲಿನ ಸನ್ಮಾನ್ಯ ಸದಸ್ಯರು ಇಡಿ ಪ್ರಕ್ರಿಯೆಯನ್ನು ತಿರುಗುಮುರುಗು ಮಾಡಲು ಸೂಚಿಸಿರುವುದನ್ನು ತಮಗೆ ಮತ್ತೆ ಮನವರಿಕೆ ಮಾಡುತ್ತಿದ್ದೇವೆ."

**"ಪ್ಯಾರಾ ೮– ಉನ್ನತ ವರ್ಗಗಳ ಶಿಕ್ಷಣದ ಬಗ್ಗೆ ಕೋರ್ಟ್‌ನ ಅಭಿಪ್ರಾಯಗಳು:**

ಕೋರ್ಟ್ ಶಿಕ್ಷಣದ ಮುಖ್ಯ ಫಲಾನುಭವಿಗಳನ್ನು ಸೂಚಿಸಿರುವುದು ಮತ್ತು ಅದಕ್ಕಾಗಿ ತುಂಬಾ ಕಡಿಮೆ ಧನಸಹಾಯ ನಿಗದಿಪಡಿಸಿರುವುದನ್ನು ಗಮನಿಸಿದರೆ ಅದು 'ಜಾಣತನದ' ಸೂಚನೆ ನೀಡಿದೆಯೆಂಬುದು ಖಚಿತವಾಗುತ್ತದೆ. ಸನ್ಮಾನ್ಯ ಕೋರ್ಟು ಮದ್ರಾಸ್ ಪ್ರಾಂತಕ್ಕೆ ೧೮೩೦ರಲ್ಲಿ ಬರೆದ ಪತ್ರದ ಒಕ್ಕಣೆ ಹೀಗಿದೆ: ಶಿಕ್ಷಣದಲ್ಲಿ ಉನ್ನತಿಯು ಜನರ ನೈತಿಕ ಮತ್ತು ಬೌದ್ಧಿಕ ಅಂಶಗಳನ್ನು ಹೆಚ್ಚಿಸುವುದರಿಂದ ಸಾಧ್ಯವಾಗುತ್ತದೆ. ಆದುದರಿಂದ ಶಿಕ್ಷಣವನ್ನು ಸಾಕಷ್ಟು ಬಿಡುವಿನ ಸಮಯ ಹೊಂದಿರುವ, ಜನಸಾಮಾನ್ಯರ ಮೇಲೆ ಪ್ರಭಾವಿಯಾಗಿರುವ ಉಚ್ಚವರ್ಗದ ಮೇಲೆ ಕೇಂದ್ರೀಕರಿಸಬೇಕು. ಈ ವರ್ಗಗಳಿಗೆ ಶಿಕ್ಷಣ ನೀಡಿ ಹೆಚ್ಚಿನ ಫಲಕಾರಿಯಾದ ವೈಚಾರಿಕ ಬದಲಾವಣೆ ತರಲು ಸಾಧ್ಯವೇ ಹೊರತು ಅದನ್ನು ಹೆಚ್ಚಿನ ಜನಸಂಖ್ಯೆಗೆ ನೀಡುವುದರ ಮೂಲಕ ಅಲ್ಲ. ದೇಶೀಯ ಜನರು ಹೆಚ್ಚಿನ ಯೋಗ್ಯತೆ ಮತ್ತು ಅಭ್ಯಾಸಗಳನ್ನು ರೂಢಿಸಿಕೊಂಡು ನಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಆಡಳಿತದಲ್ಲಿ ಉನ್ನತ ಹುದ್ದೆಗಳಿಗೆ ಯೋಗ್ಯರಾಗಬೇಕೆಂಬ ನಮ್ಮ ಉತ್ಕಟ ಅಭಿಲಾಷೆಗಳು ನಿಮಗೆ ತಿಳಿದೇ ಇವೆ. ಹಾಗಿದ್ದರೂ ಕೂಡ ಅನೇಕ ಜನರು ಶಿಕ್ಷಣವನ್ನು ಎಲ್ಲರಿಗೂ ನೀಡಬೇಕೆಂದು ತಮ್ಮ ಅಭಿಪ್ರಾಯಗಳನ್ನು ಹರಡುತ್ತಿದ್ದಾರೆ. ಅವರಲ್ಲಿ ಅನೇಕರು ತಿಳುವಳಿಕೆ ಪಡೆದವರೂ ಇದ್ದಾರೆ. ಯೂರೋಪಿನ ಕಲೆ ಮತ್ತು ವಿಜ್ಞಾನವನ್ನು ನೂರು ಅಥವಾ ನೂರಾ ನಲವತ್ತು ಮಿಲಿಯನ್ (ಅಂಕಿಯಲ್ಲಿ ಅಂತಹದೇನು ಮಹತ್ವವಿದೆ?) ಜನಸಾಮಾನ್ಯರಿಗೆ ಹರಡಲು ಅದೂ ಮೇಲ್ಪದರಿನ ಜ್ಞಾನ ನೀಡುವ ಶಿಕ್ಷಣ ಮಂಡಳಿಗೆ ಇಡೀ ರಾಷ್ಟ್ರದ ಆದಾಯವನ್ನೇ ಮೀಸಲಾಗಿಡಬೇಕಾಗುವುದು. ಈಗಿನ ವ್ಯವಸ್ಥೆಯಿಂದ ಇಂಗ್ಲೆಂಡಿನ ಒಂದು ವಿಭಾಗಕ್ಕೆ ಬೇಕಾಗುವ ಅತೀ ಕಡಿಮೆ ವೆಚ್ಚವೇ ಸಾಕಾಗುವುದು."

**"ಪ್ಯಾರಾ ೯– ಹತ್ತು ವರ್ಷಗಳ ಅವಧಿಯಲ್ಲಿನ ಪ್ರಮುಖ ಶೈಕ್ಷಣಿಕ ಸಂಗತಿಯ ಪುನರ್ ವಿಮರ್ಶೆಯ ಅವಶ್ಯಕತೆ:**

ಈ ಹಿಂದಿನ ಪ್ಯಾರಾಗಳಲ್ಲಿ ಚರ್ಚಿಸಲ್ಪಟ್ಟ ವಿಷಯಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿದರೆ ಈ ವರದಿಗಳು ವಿವಿಧ ಪ್ರಾಂತಗಳಲ್ಲಿ ಶಿಕ್ಷಣದ ಬಗ್ಗೆ ವಿಶಿಷ್ಟ ನಿಲುವನ್ನು ಹೊಂದಿರುವುದನ್ನು ಗುರುತಿಸಲು ಸಾಧ್ಯವಾಗುವುದು. ೧೮೫೦ರಲ್ಲಿ ಎರಡನೆಯ ದಶವಾರ್ಷಿಕ ಪ್ರಾರಂಭವಾಯಿತು. ಈ ಅವಧಿಯಲ್ಲಿ ಪ್ರಾಂತಗಳಲ್ಲಿನ ಶಾಲೆಗಳು ಸರಕಾರದ ಮಂಡಳಿಯ ಅಧೀನಗೊಂಡವು. ಸ್ವಾಭಾವಿಕವಾಗಿ ಈ ಅವಧಿಯಲ್ಲಿ ಶಿಕ್ಷಣದ ಬಗ್ಗೆ ಹೆಚ್ಚಿನ ಮಾಹಿತಿಗಳು ಕ್ರೋಢೀಕರಣಗೊಂಡವು. ಆಗ ಅಧಿಕ ಸಂಖ್ಯೆಯಲ್ಲಿ ಸದಸ್ಯರು ಈ ಮಂಡಳಿಯಲ್ಲಿ

ಪಾಲ್ಗೊಂಡಿದ್ದರು. ಅವರು ತಮ್ಮ ಅನುಭವಗಳನ್ನು ನಮೂದಿಸುವ ಮೂಲಕ ಅನೇಕ ಮಹತ್ವದ ಅಂಶಗಳ ಮೇಲೆ ಬೆಳಕು ಚೆಲ್ಲಬಹುದಾಗಿದೆ. ಅದರ ಮೂಲಕ ಮಂಡಳಿಯ ಭವಿಷ್ಯತ್ತಿನ ಸದಸ್ಯರು ಹೊಸ ಪ್ರಶ್ನೆಗಳನ್ನು ಎತ್ತಬಹುದಾಗಿದೆ."

**"ಪ್ಯಾರಾ ೧೦– ಬಂಗಾಳ ಮತ್ತು ಬಾಂಬೇ ಪ್ರಾಂತಗಳಲ್ಲಿ ಏಕಕಾಲಕ್ಕೆ ಸಮಾನ ವ್ಯವಸ್ಥೆ ಏರ್ಪಟ್ಟ ಬಗ್ಗೆ:**

ನಮ್ಮ ಮಿತಿಯಲ್ಲಿಯೇ ನಮ್ಮ ಗಮನ ಸೆಳೆದ ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರಮುಖ ಸಂಗತಿಗಳನ್ನು ಯಾವುದೇ ವಿವಾದಗಳಿಗೆ ಎಡೆ ನೀಡದೆ ವಿವರವಾಗಿ ನೀಡುವ ಪ್ರಯತ್ನ ಮಾಡೋಣ. ಶಿಕ್ಷಣ ರಂಗದಲ್ಲಿ ಬೊಂಬಾಯಿ ಪ್ರಾಂತದಲ್ಲಿಯೇ ಇತರ ಪ್ರಾಂತಗಳಲ್ಲಿಯೂ ಕೂಡ ಒಂದು ವಿಶಿಷ್ಟ ರೀತಿಯಲ್ಲಿ ತನ್ನಿಂದ ತಾನೆ ಹುಟ್ಟಿಕೊಂಡು ಹರಡತೊಡಗಿತು. ಈ ಶಿಕ್ಷಣ ವ್ಯವಸ್ಥೆಯು ಖಚಿತವಾದ ಉದ್ದೇಶದಿಂದ ಉದ್ಭವಿಸಿತು ಎಂದು ಹೇಳಬೇಕಾಗಿದೆ."

**"ಪ್ಯಾರಾ ೧೧– ಬಾಂಬೆ ಪ್ರಾಂತದ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು:**

೧೮೪೦ ಮತ್ತು ೧೮೫೦ರ ಏಪ್ರಿಲ್ ಅವಧಿಯಲ್ಲಿ ಶಾಲೆಗಳು ಸರಕಾರದ ಅಧೀನದಲ್ಲಿ ಬಂದಾಗ ಶಾಲೆಗಳು ಮತ್ತು ಅವುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು ತುಲನಾತ್ಮಕವಾಗಿ ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಮುಂದಿನ ಅವಧಿಯಲ್ಲಿ ನಾಲ್ಕು ಆಂಗ್ಲ ಶಾಲೆಗಳು ಮತ್ತು ೮೩ ದೇಶೀಯ ಶಾಲೆಗಳು ಸೇರ್ಪಡೆಯಾಗಿ ನೂರು ಪ್ರತಿ ಶತದಷ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಯಿತು. ಈ ಕೆಳಗೆ ಕಾಣಿಸಿದ ಪ್ರಮಾಣದಲ್ಲಿ ಸಧ್ಯದಲ್ಲಿ ಸರಕಾರದಿಂದ ಶಿಕ್ಷಣ ಪಡೆಯುವವರ ಸಂಖ್ಯೆಯು ಹೀಗಿದೆ:

| | | |
|---|---|---|
| ಆಂಗ್ಲ ಶಿಕ್ಷಣ | – | ೧,೬೯೯ |
| ದೇಶೀಯ ಭಾಷೆಯಲ್ಲಿ ಶಿಕ್ಷಣ | – | ೧೦,೭೩೦ |
| ಸಂಸ್ಕೃತ ಶಿಕ್ಷಣ | – | ೨೮೪ |

(ಕೋಷ್ಟಕದ ಹೋಲಿಕೆಯ ಪ್ರಕಾರ: ೧೮೪೦ರಲ್ಲಿ ೯೭ ಶಾಲೆಗಳಲ್ಲಿ ೫,೪೯೧ ವಿದ್ಯಾರ್ಥಿಗಳು: ಶಾಲೆಗಳ ಸಂಖ್ಯೆ: ೧೮೫, ವಿದ್ಯಾರ್ಥಿಗಳ ಸಂಖ್ಯೆ – ೧೨,೭೧೨)."

**"ಪ್ಯಾರಾ ೧೨– ಅದೇ ವಿಷಯ–**

ಆದರೆ ಅಧಿಕೃತವಾಗಿ ಬೊಂಬಾಯಿ ಪ್ರಾಂತದ ಸದ್ಯದ ಜನಸಂಖ್ಯೆಯು ಹತ್ತು ಮಿಲಿಯನ್ ಎಂದು ಗಣಿಸಲಾಗಿದೆ. ಪ್ರಷ್ಯಾದ ಜನಗಣತಿಯ ನಿಯಮವನ್ನು ಈ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ಹಿಂದಿನ ವರದಿ (೧೮೪೨–೪೩ ಪುಟ ೨೬) ಇಷ್ಟೊಂದು ಪ್ರಮಾಣದ ಜನಸಂಖ್ಯೆಯಲ್ಲಿ ಕನಿಷ್ಟ ೯೦೦,೦೦೦ ಬಾಲಕರು ೭ ಮತ್ತು ೧೪ ವರ್ಷದ ವಯೋಮಿತಿಯಲ್ಲಿರುವವರು. ಅವರು ಶಾಲೆಗೆ ಹೋಗಬೇಕಾದವರು.

ಇದರ ಸಾರಾಂಶವೇನೆಂದರೆ, ಈ ಪ್ರಾಂತದ ಸರಕಾರವು ಪ್ರತಿ ೬೯ ಬಾಲಕರಲ್ಲಿ ಒಬ್ಬನಿಗೂ ಕೂಡ ಶಿಕ್ಷಣದ ಕನಿಷ್ಟ ಸೌಲಭ್ಯ ನೀಡಲಿಲ್ಲ."

**"ಪ್ಯಾರಾ ೧೩– ಅದೇ ವಿಷಯ:**

ಮುಂದುವರೆದು ಹೇಳುವುದಾದರೆ, ದೇಶೀಯ ಶಾಲೆಗಳಲ್ಲಿ ಶಿಕ್ಷಣವು ಕಳಪೆಯಾದುದಾಗಿದೆ. ಮಾನ್ಯ ವಿಲ್ಲೋಬಿ ಅವರ ವರದಿಯಲ್ಲಿ ಈ ಶಾಲೆಗಳು ದೋಷಪೂರಿತವಾಗಿದ್ದು, ಫಲಿತಾಂಶವು ನಗಣ್ಯವೆಂದು ತೆಗಳಲಾಗಿದೆ. ಈ ವರದಿಯನ್ನು ಶಿಕ್ಷಣ ಮಂಡಳಿಯು ಒಪ್ಪಿಕೊಂಡಿದೆ. ದೇಶೀಯ ಭಾಷೆಯ ಶಾಲೆಗಳ ಗುಣಮಟ್ಟದ ಬಗ್ಗೆ ಅಧಿಕೃತ ಸಂಸ್ಥೆಗಳು ಟೀಕೆಯನ್ನು ಅನೇಕ ವರ್ಷಗಳಿಂದ ಗಮನವಿಡುತ್ತಿದೆ. ಆದರೂ ಕೂಡಾ ಧನಸಹಾಯದ ಹೆಚ್ಚಳಕ್ಕೆ ಯಾವುದೇ ಕ್ರಮ ಕೈಗೊಳ್ಳಲಾಗಲಿಲ್ಲ. ಸನ್ಮಾನ್ಯರು ಕೌನ್ಸಿಲ್‌ಗೆ ಪತ್ರ ಬರೆದು ತಿಳಿಸಿದ ಪ್ರಕಾರ ಸರಕಾರಕ್ಕೆ ಮುಂಬರುವ ಅನೇಕ ವರ್ಷಗಳವರೆಗೆ ಶಿಕ್ಷಣ ಮಂಡಳಿಗೆ ಧನಸಹಾಯ ಹೆಚ್ಚಿಸುವ ಅಧಿಕಾರವಿಲ್ಲ."

**"ಪ್ಯಾರಾ ೧೪– ಜನಸಮುದಾಯದ ಶಿಕ್ಷಣಕ್ಕೆ ಸಾಧನಗಳಿಲ್ಲವೆಂಬ ತೀರ್ಮಾನ:**

ಸಂಗತಿಗಳನ್ನು ಗಮನಿಸಿದಾಗ ಕಂಡುಬರುವ ಅಂಶವೇನೆಂದರೆ ಸಾಕಷ್ಟು ಧನಸಹಾಯ ಇಲ್ಲದಿದ್ದರೆ ೧೭೫ ದೇಶೀಯ ಶಾಲೆಗಳು ಸುಸಂಘಟಿತಗೊಳಿಸದೆ ಇರುವುದರಿಂದ ೧೦,೭೩೦ ಬಾಲಕರು ಯೋಗ್ಯ ಮೂಲಭೂತ ಶಿಕ್ಷಣದಿಂದ ವಂಚಿತರಾಗಬೇಕಾಗುವುದು. ಜನಸಮುದಾಯಕ್ಕೆ ಶಿಕ್ಷಣ ನೀಡುವ ನೂರಾ ನಲವತ್ತು ಮಿಲಿಯನ್ ಜನರನ್ನು ಶಿಕ್ಷಿತರನ್ನಾಗಿಸುವ ಬೊಂಬಾಯಿ ಪ್ರಾಂತದ ೯೦೦,೦೦೦ ಬಾಲಕರಿಗೆ ಶಿಕ್ಷಣ ನೀಡುವ ಪ್ರಶ್ನೆಯೇ ಅಪ್ರಸ್ತುತವಾಗುವುದು. ಈ ಉದ್ದೇಶವನ್ನು ಸರಕಾರದಿಂದ ಈಡೇರಿಸುವ, ಸಮೀಕರಿಸುವ ಸಾಧ್ಯತೆ ಇಲ್ಲ. ಶಿಕ್ಷಣ ಮಂಡಳಿಯು ತನ್ನ ಸೀಮಿತ ಫಲಾನುಭವಿಗಳ ಹೊರತಾಗಿ ಬೇರೆಡೆ ತಿರುಗುವ ಸಾಹಸ ಮಾಡಲಾರದು."

**ಪ್ಯಾರಾ ೧೫– ಸೀಮಿತ ಪ್ರಮಾಣದ ಸಂಪನ್ಮೂಲ ಬಳಸಿ ಅತ್ಯುತ್ತಮ ಕಾರ್ಯ ನಿರ್ವಹಣೆಯ ಬಗ್ಗೆ ಕೋರ್ಟ್ ಆಫ್ ಡೈರೆಕ್ಟರ್ಸ್ ಅಭಿಪ್ರಾಯ:**

ಈ ಮೊದಲಿನ ಪ್ಯಾರಾದಲ್ಲಿ ಉಲ್ಲೇಖಿಸಿದ ಅಭಿಪ್ರಾಯವನ್ನೇ ಸದಾಕಾಲ ಕೋರ್ಟ್ ಆಫ್ ಡೈರೆಕ್ಟರ್ಸ್‌ಗಳು ಹೊಂದಿದ್ದರು. ಕಡಿಮೆ ಪ್ರಮಾಣದ ಜನರಿಗೆ ಶಿಕ್ಷಣ ನೀಡುವುದರ ಮೂಲಕವೇ ಶೈಕ್ಷಣಿಕ ಪ್ರಸಾರ ಮಾಡುವುದು ಸಾಧ್ಯವೆಂಬ ಮತ್ತು ಅದೊಂದೇ ಮಾರ್ಗವೆಂದು ವಿವಿಧ ಪ್ರಾಂತಗಳ ಸರಕಾರಗಳಿಗೆ, ಅದೂ ಕಡಿಮೆ ಸಂಪನ್ಮೂಲ ಸಾಕು ಎನ್ನುವ ಶಿಫಾರಸ್ಸುಗಳನ್ನು ಮಾಡಿದರು. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅವರು ಮದ್ರಾಸ್ ಪ್ರಾಂತಕ್ಕೆ ಕಳುಹಿಸಿದ ವರದಿಯನ್ನು ಉಲ್ಲೇಖ ಮಾಡಲಾಗಿದೆ. (ಪ್ಯಾರಾ ೭) ಅದೇ ದಿನಾಂಕ ಹೊಂದಿದ ಇನ್ನೊಂದು ಪತ್ರದಲ್ಲಿ ಈ ಭಾವನೆಯು ಸ್ಪಷ್ಟವಾಗುತ್ತದೆ. "ದೇಶೀಯ ಉನ್ನತ ವರ್ಗದ ಜನರಿಗೆ ನಾಗರೀಕರಣಗೊಂಡ ಯೂರೋಪಿನ ವಿಜ್ಞಾನ ಮತ್ತು

ಸಾಹಿತ್ಯವನ್ನು ಪರಿಚಯಿಸಿ ಕಲಿಸುವುದರ ಬಗ್ಗೆ ನಾವು ಅತ್ಯಂತ ಉತ್ಸುಕರಾಗಿದ್ದೇವೆ. ಇಂತಹ ಉನ್ನತ ವರ್ಗಕ್ಕೆ ಕೆಲವು ವಿಶಿಷ್ಟ ಗುಣಗಳಿರಬೇಕು. ಅವುಗಳೆಂದರೆ ಅವರು ಸಾಕಷ್ಟು ಬಿಡುವು ಪಡೆದಿದ್ದವರಾಗಿರಬೇಕು ಮತ್ತು ಸ್ವಾಭಾವಿಕವಾಗಿ ಅವರು ಇತರ ಎಲ್ಲ ಸಮುದಾಯಗಳ ಮೇಲೆ ಪ್ರಾಬಲ್ಯ ಹೊಂದಿದವರಾಗಿರಬೇಕು."

**ಪ್ಯಾರಾ ೧೬– ಇಂಡಿಯಾದ ಉನ್ನತ ವರ್ಗದ ಬಗ್ಗೆ ಪ್ರಶ್ನೆಗಳು**

ಇಂಡಿಯಾದಲ್ಲಿ ಸರಕಾರಿ ಶಿಕ್ಷಣವನ್ನು ಕೇವಲ ಕೆಲವೇ ಜನರಿಗೆ ಸೀಮಿತಗೊಳಿಸುವುದರ ಬಗ್ಗೆ ಖಚಿತವಾದ ಧೋರಣೆ ರೂಪಿಸಿದ ಮೇಲೆ ಸನ್ಮಾನ್ಯ ಕೋರ್ಟು ಈ ಸೀಮಿತಗೊಂಡ ಜನರು ಯಾರು ಎನ್ನುವುದರ ಬಗ್ಗೆ ಅಂದರೆ 'ಉನ್ನತವರ್ಗ'ದಲ್ಲಿ ಯಾರನ್ನು ಸೇರಿಸಬೇಕು ಎನ್ನುವುದರ ಬಗ್ಗೆ ವ್ಯಾಖ್ಯಾನಿಸಲು ಪ್ರಯತ್ನಿಸಿತು. ಯೂರೋಪಿನ ಮೂಲಕ ವ್ಯಕ್ತಿಯು ತನ್ನದೇ ಪೂರ್ವಾಗ್ರಹಪೀಡಿತ ವಿಚಾರ ಕ್ರಮವನ್ನು ದೂರವಿಟ್ಟು ಯೂರೋಪಿನ ಹೋಲಿಕೆಗಳನ್ನು ಈ ಸಂದರ್ಭದಲ್ಲಿ ಬಳಸದಿರುವುದು ಒಳ್ಳೆಯದಿತ್ತು. ಆದರೆ ಅವರ ಆಂಗ್ಲೋ–ಇಂಡಿಯನ್ ವಿಚಾರ ಕ್ರಮವು ತಾನಾಗಿಯೇ ಅವರನ್ನು ಕುರುಡರನ್ನಾಗಿಸಿತು. ಯೂರೋಪಿನ ಸಂದರ್ಭದಲ್ಲಿ ಉನ್ನತ ವರ್ಗದ ಮತ್ತು ತಳವರ್ಗಗಳ ಜನರ ನಡುವೆ ಸ್ಪಷ್ಟವಾದ ರೇಖೆ ಏರ್ಪಟ್ಟಿದೆ. ಭಿನ್ನವಾದ ವರ್ತನಾ ಮಾದರಿಗಳು, ಸಂಪತ್ತು ರಾಜಕಿಯ ಮತ್ತು ಸಾಮಾಜಿಕ ಪ್ರಭಾವ ಇತ್ಯಾದಿಗಳು ಈ ವರ್ಗಗಳನ್ನು ಸ್ಪಷ್ಟವಾಗಿ ಬೇರ್ಪಡಿಸಿವೆ. ಇಂತಹ ಸ್ಪಷ್ಟ ಬೇರ್ಪಡಿಸುವಿಕೆ ಇಂಡಿಯಾದಲ್ಲಿ ಕಾಣಸಿಗುವುದಿಲ್ಲ. ಇಲ್ಲಿ ಎಲ್ಲ ತಡೆಗಳ ಮಧ್ಯದಲ್ಲಿಯೂ ಪ್ರಯತ್ನಪಟ್ಟು ಕೀಳುಮಟ್ಟದಲ್ಲಿರುವ ವ್ಯಕ್ತಿ ಉನ್ನತ ಸ್ಥಾನ ಪಡೆಯುವುದಾಗಲಿ, ಸಮಾನ ವರ್ತನಾ ಮಾದರಿಗಳನ್ನು ಹೊಂದುವುದಾಗಲಿ ಇಂಡಿಯಾದಲ್ಲಿ ಸಾಧ್ಯವಿಲ್ಲ. ಆಂಗ್ಲ ಯೋಚನೆಯ ಪ್ರಕಾರ ಭಿಕ್ಷುಕನು ಸೆರೆವಾಸ ಅಥವಾ ಕಾರ್ಯಾಗಾರದಲ್ಲಿ ಕಡ್ಡಾಯ ಕೆಲಸಕ್ಕೆ ಮಾತ್ರ ಅರ್ಹನು. ಆದರೆ ಇಂಡಿಯದಲ್ಲಿ ಭಿಕ್ಷುಕ ವೃತ್ತಿಯು ಮಾರ್ಯಾದಸ್ತ ವೃತ್ತಿ. ಬ್ರಾಹ್ಮಣೀಯ ಸಿದ್ಧಾಂತದ ಪ್ರಕಾರ ಭಿಕ್ಷುಕನು ಇಹಲೋಕದ ಎಲ್ಲ ಆಶೆ ಆಮಿಷಗಳನ್ನು ತೊರೆದು ಕೇವಲ ದೇವರ ಧ್ಯಾನದಲ್ಲಿ ತಲ್ಲೀನನಾದ ಪೂಜನೀಯ ವ್ಯಕ್ತಿ.

**ಪ್ಯಾರಾ ೧೭– ಇಂಡಿಯಾದ ಉನ್ನತ ವರ್ಗಗಳು**

ಇಂಡಿಯಾದಲ್ಲಿ ಇತರ ಜನರ ಮೇಲೆ ಪ್ರಭಾವ ಹೊಂದಿರುವ ಉನ್ನತ ವರ್ಗಗಳನ್ನು ಈ ಕೆಳಗಿನಂತೆ ಶ್ರೇಣೀಕರಿಸಲಾಗಿದೆ:

ಮೊದಲನೆಯದಾಗಿ– ಭೂಮಾಲಿಕರು ಮತ್ತು ಜಾಗೀರುದಾರರು, ಹಿಂದಿನ ಪಾಳೆಯಗಾರರ ಪ್ರತಿನಿಧಿಗಳು, ದೇಶೀಯ ಆಳರಸರ ಅಧಿಕಾರಿಗಳು. ಇವರನ್ನು ಕ್ಷತ್ರಿಯ ವರ್ಗವೆಂದು ಗುರುತಿಸಬಹುದು.

ಎರಡನೆಯದಾಗಿ– ವ್ಯಾಪಾರ, ವಾಣಿಜ್ಯ, ಉದ್ದಿಮೆಗಳಿಂದ ಸಂಪತ್ತು ಕ್ರೋಡೀಕರಿಸಿದ ವರ್ಗ. ಇವರನ್ನು ವ್ಯಾಪಾರಿ ವರ್ಗವೆಂದು ಗುರುತಿಸಬಹುದು.

ಮೂರನೆಯದಾಗಿ– ಸರಕಾರಿ ಸೇವೆಯಲ್ಲಿರುವ ಉನ್ನತ ಅಧಿಕಾರಿ ವರ್ಗ.

ನಾಲ್ಕನೆಯದಾಗಿ– ಬ್ರಾಹ್ಮಣರು, ಇವರು ಅನೇಕ ವರ್ಷಗಳಿಂದ ಉನ್ನತವರ್ಗದ ಓದು ಬರಹ ಬಲ್ಲ ಸಮುದಾಯದವರು, ಇವರು ಬರವಣಿಗೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡವರು. ಇವರಲ್ಲಿ ಉದಾಹರಣೆಗಾಗಿ ಪ್ರಭು ಮತ್ತು ಶೆಣೈಗಳು ಮುಂಬೈಯಲ್ಲಿ, ಬಂಗಾಳದಲ್ಲಿ ಕಾಯಸ್ಥರು ಜ್ಞಾನ ಮತ್ತು ಹುದ್ದೆಗಳಲ್ಲಿ ಉನ್ನತ ಪ್ರತಿಷ್ಠೆ ಪಡೆದವರು ಎಂದು ಗುರುತಿಸಬಹುದು.

**ಪ್ಯಾರಾ ೧೮– ಬ್ರಾಹ್ಮಣರು ಅತ್ಯಂತ ಪ್ರಭಾವಿಗಳು**

ಈ ಮೇಲೆ ತಿಳಿಸಿದ ನಾಲ್ಕು ವರ್ಗಗಳಲ್ಲಿ ಬ್ರಾಹ್ಮಣರು ಯಾವ ಹೋಲಿಕೆ ಇಲ್ಲದಷ್ಟು ಪ್ರಭಾವಶಾಲಿಗಳು, ಸಂಖ್ಯೆಯಲ್ಲೂ ಹೆಚ್ಚಿನವರು, ಸರಕಾರದ ಉದ್ದೇಶಕ್ಕೆ ಇವರು ಅತ್ಯುತ್ತಮರು. ಪ್ರಸ್ತುತ ಆಳ್ವಿಕೆಯ ಒತ್ತಡದಿಂದ ಪ್ರಾಚೀನ ಕಾಲದ ಜಾಗೀದಾರರು ಮತ್ತು ಯುದ್ಧಕಲೆಯ ಪರಿಣಿತ ವರ್ಗವು ಕುಗ್ಗಿ ಹೋಗುತ್ತಿರುವುದನ್ನು ಭಾರತದ ಎಲ್ಲೆಡೆಯೂ ಗುರುತಿಸಿದ ಅಂಶವಾಗಿದೆ. ಅವರ ಮೊದಲಿನ ಉದ್ಯೋಗ ನಾಶಗೊಂಡಿದೆ. ಅವರಲ್ಲಿ ಹೊಸದನ್ನು ಅಳವಡಿಸಿಕೊಳ್ಳುವ ಶಕ್ತಿ ತಾಳ್ಮೆಗಳು ಇಲ್ಲ. ಶಾಂತಿಕಾಲದ ಜೀವನವನ್ನು ನಡೆಸಲು ಅವರು ಆಸಕ್ತರು. ಈ ಪ್ರಾಂತದಲ್ಲಿ ಭೂಮಾಲೀಕರ ಪುನಶ್ಚೇತನಕ್ಕಾಗಿ ಶ್ರೀಮಾನ್ ಎಲ್ಫಿನ್‌ಸ್ಟನ್ ಅವರ ಪ್ರಯತ್ನಗಳೂ ವಿಫಲವಾದವು. ಅವರನ್ನು ವಿಶೇಷ ರಾಜಮರ್ಯಾದೆಗಳನ್ನು, ಬಿರುದುಗಳನ್ನು ನೀಡಿ ಕೇವಲ ಹುಸಿ ಪ್ರತಿಷ್ಠೆ ಪಡೆಯುವಂತಾಯಿತು. ತಮ್ಮ ಪೂರ್ವಿಕರು, ಇಂಡಿಯಾದ ವಿವಿಧ ಭಾಗಗಳ ಮೇಲೆ ಧಾಳಿ ಮಾಡಿ ಜಯ ಗಳಿಸಿದ ಕತೆಗಳಿಂದ ರೋಮಾಂಚನಗೊಂಡಿದ್ದಷ್ಟೆ ಅವರಿಗೆ ದಕ್ಕಿತು. ವಾಣಿಜ್ಯ ಉದ್ದಿಮೆಗಳನ್ನು ನೋಡಿಕೊಳ್ಳುವ ವರ್ಗದವರಲ್ಲಿ ಕೆಲವರನ್ನು ಬಿಟ್ಟರೆ ಹೆಚ್ಚಾಗಿ ಉತ್ತಮ ಶಿಕ್ಷಣದ ಪ್ರಭಾವ ಹೊಂದಲಾಗಲಿಲ್ಲ. ವಿಶ್ವದ ಯೂರೋಪ್ ಮತ್ತು ಇತರ ಕಡೆಯಲ್ಲಿನ ಹಾಗೆ ಭಾರತದಲ್ಲಿ ಇನ್ನೂ ವಿಶಿಷ್ಟವಾಗಿ ಯುವಕ ವ್ಯಾಪಾರಿಯು ಶಾಲೆಯನ್ನು ಅರ್ಧದಲ್ಲಿಯೇ ಬಿಟ್ಟು, ಕಸುಬನ್ನು ಮಾರುಕಟ್ಟೆಯಲ್ಲಿದ್ದುಕೊಂಡು ಅಥವಾ ತನ್ನ ಮನೆಯಲ್ಲಿಯೇ ವಿಶೇಷ ತರಬೇತಿ ಪಡೆಯಲು ಪ್ರಾರಂಭಿಸುತ್ತಾನೆ. ಕೊನೆಯದಾಗಿ ಸರಕಾರಿ ಸೇವೆಯಲ್ಲಿರುವ ಅಧಿಕಾರಿಗಳೇನೋ ಅಧಿಕ ಜನಸಂಖ್ಯೆಯ ಮೇಲೆ ಪ್ರಭಾವವನ್ನು ಹೊಂದಿರುತ್ತಾರೆ. ಅವರ ಪ್ರಭಾವವು ಸರಕಾರದೊಂದಿಗೆ ಸಂಪರ್ಕ ಹೊಂದುವ ಜನರಿಗೆ ಸೀಮಿತವಾಗಿದ್ದು ಇತರರ ಮೇಲೆ ಪ್ರಭಾವವಿರುವುದಿಲ್ಲ. ಇಂಗ್ಲೆಂಡಿನ ಸರಕಾರಿ ಸೇವಕರು ಜನಸಾಮಾನ್ಯರಿಂದ ಹೇಗೆ ನಾಚಿಕೆಗೆ ಅರ್ಹರಲ್ಲವೆಂಬ ಭಾವನೆ ಹೊಂದಿದ್ದಾರೆಯೋ ಅಂತಹದೇ ಭಾವನೆ ಅಸಹ್ಯ ಹುಟ್ಟಿಸುವ ಸರಕಾರಿ ಗುಲಾಮರೆಂದು ಹೀಗಳೆಯಲ್ಪಡುವರು.

**ಪ್ಯಾರಾ ೧೯– ಬ್ರಾಹ್ಮಣರ ಬಡತನ**

ಈ ಮೇಲಿನ ವಿಶ್ಲೇಷಣೆಯು ದೀರ್ಘವಾಯಿತೆಂದು ಕಾಣಿಸುತ್ತದೆ. ಈ ವಿಶ್ಲೇಷಣೆಯಿಂದ ಕೆಲವು ತೀರ್ಮಾನಗಳಿಗೆ ಬರುವುದು ಸಾಧ್ಯವಾಗುತ್ತದೆ. ಮೊದಲನೆಯದಾಗಿ, ಪ್ರಭಾವಿ ವರ್ಗವಾಗಿ ಸರಕಾರವು ಬ್ರಾಹ್ಮಣರನ್ನು ಉಪಯೋಗಿಸಿಕೊಂಡು ಶಿಕ್ಷಣದ ಬೀಜವನ್ನು

ಅವರ ಮೂಲಕ ಹರಡಲು ಸಾಧ್ಯವೆಂಬುದನ್ನು ಅದು ಸಿದ್ಧಪಡಿಸುತ್ತದೆ. ಇತರ ಉಚ್ಛ ವರ್ಗಗಳು ಬ್ರಾಹ್ಮಣರ ಅನುಯಾಯಿಗಳಷ್ಟೇ. ಆದರೆ ಸಾಮಾನ್ಯವಾಗಿ ಬ್ರಾಹ್ಮಣರು ಶೋಚನೀಯ ಬಡತನದಲ್ಲಿದ್ದಾರೆ. ಇಂಡಿಯಾ ದೇಶದ ಕೆಲವೆಡೆಯಲ್ಲಿ ಬ್ರಾಹ್ಮಣ ಎಂಬ ಪದವು 'ಭಿಕ್ಷುಕ' ಎಂಬುದಕ್ಕೆ ಸಮಾನವಾಗಿದೆ.

**ಪ್ಯಾರಾ ೨೦– ಶ್ರೀಮಂತ ವರ್ಗಗಳು ಸದ್ಯ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸುವುದಿಲ್ಲ**

ಸನ್ಮಾನ್ಯರು ೧೮೫೦ರ ಏಪ್ರಿಲ್ ೨೪ಲ್ಲಿ ಬರೆದ ಪತ್ರದಲ್ಲಿ ಸೂಚಿಸಿರುವ ಅಂಶಗಳನ್ನು ಜಾರಿಗೆ ತರುವುದು ವ್ಯರ್ಥವೆನ್ನುವುದು ಮೇಲ್ನೋಟಕ್ಕೆ ಸಿದ್ಧವಾಗುತ್ತದೆ. ಮಂಡಳಿಯು ಕೂಡಾ ಯೋಗ್ಯವಾದ ಸಲಹೆಗಳನ್ನು ಜಾರಿಗೆ ತರಲು ಸಾಕಷ್ಟು ಪ್ರಯತ್ನ ಮಾಡಿದೆ. ಆ ಪ್ರಯತ್ನವು ಉತ್ಕೃಷ್ಟವಾದ ಶಿಕ್ಷಣವನ್ನು ಜಾಣರಾದ ಶ್ರೀಮಂತರಿಗೆ ಅದರ ತತ್ವವನ್ನು ಭರಿಸುವವರಿಗೆ ಸೀಮಿತವಾಗಿತ್ತು. ಅಂತಹ ಸಂದರ್ಭದಲ್ಲಿ ಮಂಡಳಿಯು ಎದುರಿಸಿದ ಸಮಸ್ಯೆ ಎಂದರೆ ಶ್ರೀಮಂತ ವರ್ಗವು ಇಂತಹ ಶಿಕ್ಷಣದ ಬಗ್ಗೆ ತಾತ್ಸಾರದ ಮನೋಭಾವನೆಯನ್ನು ವ್ಯಕ್ತಪಡಿಸಿದ್ದು, ಹಾಗೂ ಬಡಜನರಲ್ಲಿನ ವಿಶಿಷ್ಟ ಜಾಣ್ಮೆಯ ಪರೀಕ್ಷೆಯನ್ನು ಹಮ್ಮಿಕೊಳ್ಳಲು ಶಾಲೆಯಲ್ಲಿ ನೀಡಬೇಕಾದ ತರಬೇತಿಯ ಕೊರತೆ. ಆದಾಗ್ಯೂ ಕೂಡ ಶ್ರೀಮಂತ ವರ್ಗದ ಕೆಲವು ಸದಸ್ಯರು ಇಂತಹ ಶಿಕ್ಷಣದತ್ತ ಒಲವು ತೋರಿಸುತ್ತಿರುವುದು ಇತ್ತೀಚೆಗೆ ಕಂಡುಬರುತ್ತಿದೆ. ಬಂಗಾಳದಲ್ಲಿ ವಿಶೇಷವಾಗಿ ಹಿಂದೆ ಸರಕಾರವು ಶಿಕ್ಷಣ ನೀಡಿದ್ದರಿಂದ ಇಂದು ಅಲ್ಲಿ ಶಿಕ್ಷಣದ ಬಗ್ಗೆ ಹೆಚ್ಚಿನ ಒಲವು ಕಂಡುಬರುತ್ತಿರುವುದು ಸಹಜವಾಗಿದೆ. ಇಂತಹ ಪರಿಸ್ಥಿತಿಯು ಮುಂಬೈ ಪ್ರಾಂತದಲ್ಲಿ ಇಲ್ಲ. ಉನ್ನತ ಶಿಕ್ಷಣದಿಂದ ಉನ್ನತ ಹುದ್ದೆಗಳು ಸಿಗುವುದೆಂಬ ಭಾವನೆ ಬೆಳೆಯುತ್ತಿರುವುದು ಒಳ್ಳೆಯದೇ. ಶಿಕ್ಷಣ ಪಡೆದವರು ಯೂರೋಪಿಯನ್ನರೊಂದಿಗೆ ಸಂಪರ್ಕ ಸಾಧಿಸಿ ಸಾಮಾಜಿಕ ಸಮಾನತೆ ಸಾಧ್ಯವಾಗುವುದು. ಆದರೆ ಇಂದಿನ ವಸ್ತುಸ್ಥಿತಿಯ ಆಧಾರದ ಮೇಲೆ ಹೇಳುವುದಾದರೆ ಶೈಕ್ಷಣಿಕವಾಗಿ ಯೂರೋಪಿಯನ್ ಕಲೆ ಮತ್ತು ವಿಜ್ಞಾನದ ಕಲಿಸುವಿಕೆಯ ಬಗ್ಗೆ ಇಂಡಿಯಾದ ಶ್ರೀಮಂತ ವರ್ಗವು ಅಷ್ಟೇನೂ ಉತ್ಸುಕತೆ ತೋರಿಸುತ್ತಿಲ್ಲವೆಂಬುದನ್ನು ಖಚಿತವಾಗಿ ಹೇಳಬಹುದಾಗಿದೆ.

**ಪ್ಯಾರಾ ೨೧– ಕೆಳವರ್ಗದ ಜನರ ಶಿಕ್ಷಣದ ಪ್ರಶ್ನೆ**

ಇಂದಿನವರೆಗಿನ ನಮ್ಮ ಅನುಭವದ ಆಧಾರದ ಮೇಲೆ ಮತ್ತು ವಸ್ತುಸ್ಥಿತಿಯನ್ನು ಅನುಸರಿಸಿ ನಾವು ಉನ್ನತ ಜಾತಿಯ ಬಡವರ ಮಕ್ಕಳಿಗಾಗಿ ಶಿಕ್ಷಣದ ಬಾಗಿಲನ್ನು ಧಾರಾಳವಾಗಿ ತೆರೆದಿಡುವುದು ಆವಶ್ಯಕವೆನಿಸುತ್ತದೆ. ಅವರು ನಮ್ಮಿಂದ ಶಿಕ್ಷಣ ಪಡೆಯಲು ಉತ್ಸುಕರಾಗಿರಬೇಕು. ಒಂದು ವೇಳೆ ಬಡವರಿಗಾಗಿ ಸರಕಾರ ಶಿಕ್ಷಣ ನೀಡುವುದೆಂದು ನಿರ್ಧರಿಸಿದರೆ ಇಲ್ಲಿಯವರೆಗೆ ನಿಕೃಷ್ಟವೆಂದು ಪರಿಗಣಿಸಲ್ಪಟ್ಟ ಅಂದರೆ– ಢೇಡ್, ಮಹಾರ್‌ರ ಮಕ್ಕಳು ನಮಗೂ ಶಿಕ್ಷಣ ನೀಡಿ ಎಂದು ಕೇಳಿದರೆ ಅವರನ್ನು ನಿರ್ಲಕ್ಷಿಸುವುದು ಹೇಗೆ ಸಾಧ್ಯ?

**ಪ್ಯಾರಾ ೨೨– ಹಿಂದೂಗಳ ಸಾಮಾಜಿಕ ಪೂರ್ವಾಗ್ರಹ**

ತಳಜಾತಿಯ ಜನರ ಮಕ್ಕಳು ಒಂದು ವರ್ಗವಾಗಿ ಏರ್ಪಟ್ಟು ಅವರು ಶ್ರೇಷ್ಠ ಶಿಕ್ಷಕರ, ಪ್ರೊಫೆಸರ್‌ಗಳ ಮಾರ್ಗದರ್ಶನದಲ್ಲಿ ಉಳಿದ ಸಮುದಾಯಗಳ ಮಕ್ಕಳಂತೆ ತರಬೇತಿ ಪಡೆದು ಜಾಣ್ಮೆಯನ್ನು ಹೊಂದಿ, ಯೋಗ್ಯತೆಯನ್ನು ಪಡೆದು ಉನ್ನತ ಹುದ್ದೆಗಳ ಆಕಾಂಕ್ಷೆಗಳಾಗಬಹುದು. ಇಂತಹವರು ಉನ್ನತ ನ್ಯಾಯಮೂರ್ತಿ, ಮಹಾರಾಣಿಯವರ ಶಾಂತಿ ಮಂಡಲದ ಸದಸ್ಯರು ಆಗಲು ಯಾವ ಅಡ್ಡಿಯೂ ಇರುವುದಿಲ್ಲ. ಅನೇಕ ತಿಳುವಳಿಕೆಯುಳ್ಳ ಜನರ ಅಭಿಪ್ರಾಯದಲ್ಲಿ ಸರಕಾರವು ಉನ್ನತ ಜಾತಿಯ ಜನರ ಕೀಳು ಕಲ್ಪನೆಗೆ ಬ್ರಿಟಿಷ್ ಸರಕಾರವು ಒಳಗಾಗಿ ತನ್ನ ಅಸಮಾನತೆಯ ಧೋರಣೆ ಹಾಗೂ ಅದಕ್ಷತೆಯನ್ನು ತೋರಿಸುವುದು ಸರಿಯಲ್ಲ. ಉನ್ನತ ಹುದ್ದೆಗಳು ಕೇವಲ ಉನ್ನತ ಜಾತಿಯವರಿಗೆ ದಕ್ಕುವಂತಾಗುವುದರಿಂದ ಜಾತಿಯ ಅಡೆತಡೆಯನ್ನು ಹೋಗಲಾಡಿಸಬೇಕು.

**ಪ್ಯಾರಾ ೨೩: ಸನ್ಮಾನ್ಯ ಮೌಂಟ್ ಸ್ಟುಅರ್ಟ್ ಎಲ್ಫಿನ್‌ಸ್ಟನ್‌ರವರ ವಿಶಿಷ್ಟ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದೆ.**

ಮಾನ್ಯ ಎಲ್ಫಿನ್‌ಸ್ಟನ್‌ರವರು ಭಾರತದಲ್ಲಿನ ಉದಾರ ಮತ್ತು ವಿಶಾಲ ಮನೋವೃತ್ತಿಯ ಆಡಳಿತಗಾರರಾಗಿದ್ದರು. ಅವರು ಈ ವಿಷಯದ ಬಗ್ಗೆ ಒಂದು ನಿಜವಾದ ಕಾರ್ಯಸೂಚಿಯನ್ನು ವಿವರಿಸಿದ್ದಾರೆ. ಕ್ರೈಸ್ತ ಮಿಷನರಿಗಳು ಅತೀ ಕೆಳಜಾತಿಗಳ ಉತ್ತಮ ಶಿಕ್ಷಣಾಕಾಂಕ್ಷಿಗಳನ್ನು ಗುರುತಿಸುವರು. ಆದರೆ ಅಂತಹ ಜನರಿಗೆ ವಿಶೇಷ ಪ್ರೋತ್ಸಾಹ ನೀಡುವ ಬಗ್ಗೆ ಎಚ್ಚರಿಕೆಯಿಂದಿರಬೇಕಾಗುವುದು. ಅವರು ಇಡಿ ಸಮಾಜದಲ್ಲಿ ಅತಿಯಾದ ದ್ವೇಷಕ್ಕೊಳಗಾದವರು ಮತ್ತು ಅವರ ಸಂಖ್ಯೆಯು ಕಡಿಮೆ ಪ್ರಮಾಣದಲ್ಲಿರುವುದು. ಒಂದು ವೇಳೆ ನಮ್ಮ ಶಿಕ್ಷಣ ವ್ಯವಸ್ಥೆಯು ಅವರ ಮೇಲೆ ಕೇಂದ್ರೀಕೃತವಾದರೆ ಅದು ಹರಡುವ ಸಾಧ್ಯತೆ ಕಳೆದುಕೊಳ್ಳುವುದು ಮತ್ತು ಎಲ್ಲರಿಂದ ದ್ವೇಷಿಸಲ್ಪಟ್ಟ ಜನಾಂಗವು ಶಿಕ್ಷಣ ಪಡೆದು ಶ್ರೇಷ್ಠ ಜ್ಞಾನವಂತರಾದರೆ ನಾವು ನಮ್ಮ ಸೈನ್ಯ ಹಾಗೂ ರಾಜಕೀಯ ಶಕ್ತಿಯ ದೃಷ್ಟಿಯಿಂದ ಸರಿಯಾಗಲಾರದು. ಅದಕ್ಕೆ ಬದಲಾಗಿ ಹೆಚ್ಚು ಪ್ರಮಾಣದಲ್ಲಿ ಹರಡುವ ಧೋರಣೆಯೇ ಒಳ್ಳೆಯದು.

೫. ೧೮೫೫ಕ್ಕಿಂತ ಮೊದಲು ಮುಂಬೈ ಪ್ರಾಂತದಲ್ಲಿ ಹಿಂದುಳಿದ ವರ್ಗಗಳ ಸಲುವಾಗಿ ಶಾಲೆಗಳು ಪ್ರಾರಂಭವಾಗದಿರುವುದರಲ್ಲೂ ಬ್ರಾಹ್ಮಣರಿಗೆ ಮಾತ್ರ ಶಿಕ್ಷಣವೆಂಬ ಧೋರಣೆಯೇ ಕಾರಣ. ಈ ಧೋರಣೆಯು ಸರಿಯೋ ತಪ್ಪೋ ಎನ್ನುವ ವಿಚಾರ ಇಲ್ಲಿ ಅಪ್ರಸ್ತುತ. ವಾಸ್ತವವಾಗಿ ಈ ಅವಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಫಲ ಸಿಗದಂತೆ ಸರಕಾರವೇ ಕಾರಣವಾಯಿತು.

## II. ೧೮೫೪ರಿಂದ ೧೮೮೨ರವರೆಗೆ

೬. ನಿರ್ದೇಶಕ ನ್ಯಾಯಾಲಯವು ೧೮೫೪ರ ಜುಲೈ ೧೯ರ ನಿರ್ಣಯದಲ್ಲಿ ಹೀಗೆ ಅಭಿಪ್ರಾಯಪಟ್ಟಿತು:

"ಶಿಕ್ಷಣ ಪಡೆಯಲು ಇಲ್ಲಿಯವರೆಗೆ ಸಾಧ್ಯವಾಗದ ಬಹುಪಾಲು ಜನರಿಗೆ ಅದನ್ನು ನೀಡುವ ಬಗೆ ಹೇಗೆ ಎಂಬುದನ್ನು ತುರ್ತಾಗಿ ನಾವು ಖಚಿತವಾದ ನಿರ್ಧಾರಕ್ಕೆ ಬರುವುದು ಅತೀ ಜರೂರಿನದಾಗಿದೆ. ಅಂತಹವರಿಗೆ ಶಿಕ್ಷಣ ನೀಡಿದರೆ ಅದರಿಂದ ಅವರ ಜೀವನ ಎಲ್ಲ ಹಂತಗಳಲ್ಲಿ ಪ್ರಾಯೋಗಿಕ ಮತ್ತು ಅದರ ಉಪಯೋಗದ ಬಗ್ಗೆಯೂ ಯೋಚಿಸಬೇಕಾಗುವುದು. ಈ ಉದ್ದೇಶವನ್ನು ಈಡೇರಿಸಲು ಸರಕಾರದ ಇನ್ನೂ ಹೆಚ್ಚಿನ ಪ್ರಯತ್ನದ ಅವಶ್ಯಕತೆ ಭವಿಷ್ಯತ್ತಿನಲ್ಲಿ ಕಂಡುಬರುವುದು. ಇದಕ್ಕಾಗಿ ತಗಲುವ ವೆಚ್ಚದಲ್ಲಿ ಹೆಚ್ಚಳ ಮಾಡಲು ನಾವು ಸಿದ್ಧರಿದ್ದೇವೆ."

ಈ ನಿರ್ಣಯವು ನಿಜವಾದ ಅರ್ಥದಲ್ಲಿ ದೇಶದಲ್ಲಿ ಜನಸಾಮಾನ್ಯರ ಶಿಕ್ಷಣಕ್ಕಾಗಿ ತಳಪಾಯ ಹಾಕಿದೆ ಎನ್ನಬಹುದು. ಈ ಧೋರಣೆಯ ಪ್ರಭಾವವನ್ನು ಪ್ರಥಮವಾಗಿ ಇಂಡಿಯಾದ ಶಿಕ್ಷಣದ ಬಗೆಗಿನ ಹಂಟರ್ ಆಯೋಗವು ಪರಿಶೀಲಿಸಿದೆ. ೨೮ ವರ್ಷಗಳ ಅವಧಿಯಲ್ಲಿನ ಸಾಧನೆಯನ್ನು ವಿವರಿಸುವ ಅಂಕಿ ಅಂಶಗಳು ಈ ಕೆಳಗಿನಂತಿವೆ:

**ಪ್ರಾಥಮಿಕ ಶಿಕ್ಷಣ**
**೧೮೮೧–೮೨**

| | ಶಾಲೆಗಳಲ್ಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಸಂಖ್ಯೆಯ ಪ್ರತಿಶತ |
|---|---|---|
| ಕ್ರೈಸ್ತರು | ೧,೫೨೧ | .೪೯ |
| ಬ್ರಾಹ್ಮಣರು | ೬೩,೦೭೧ | ೨೦.೧೭ |
| ಇತರ ಹಿಂದುಗಳು | ೨೦೨,೩೪೫ | ೬೪.೬೯ |
| ಮಹಮ್ಮದೀಯರು | ೩೯,೨೩೧ | ೧೨.೫೪ |
| ಪಾರ್ಸಿಗಳು | ೩,೫೧೭ | ೧.೧೨ |
| ಮೂಲ ನಿವಾಸಿಗಳು ಮತ್ತು ಬುಡಕಟ್ಟುಗಳವರು | ೨,೭೧೩ | .೮೭ |
| ತಳ ಜಾತಿಯ ಹಿಂದುಗಳು | ೨,೮೬೨ | .೮೭ |
| ಜ್ಯೂ ಮತ್ತು ಇತರೆ | ೩೭೩ | .೧೨ |

**ಮಾಧ್ಯಮಿಕ ಶಿಕ್ಷಣ**
**೧೮೮೧–೮೨**

| | ಮಾಧ್ಯಮಿಕ ಶಾಲೆಗಳು | | ಪ್ರೌಢಶಾಲೆಗಳು | |
|---|---|---|---|---|
| | ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಸಂಖ್ಯೆಯ ಪ್ರತಿಶತ | ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಸಂಖ್ಯೆಯ ಪ್ರತಿಶತ |
| ಕ್ರೈಸ್ತರು | ೧,೪೨೯ | ೧೨.೦೬ | ೧೧೧ | ೨.೨೬ |
| ಬ್ರಾಹ್ಮಣರು | ೩,೬೩೯ | ೩೦.೭೦ | ೧,೯೭೮ | ೪೦.೨೯ |
| ಇತರ ಹಿಂದುಗಳು (ಕೆಳಜಾತಿಯವರು, | ೧೭, | .೧೪ | ... | ... |
| ವ್ಯವಸಾಯಗಾರರು, | ೬೨೪ | ೫.೨೬ | ೧೪೦ | ೨.೮೫ |
| ಇತರ ಜಾತಿಯವರು) | ೩,೮೨೩ | ೩೨.೨೫ | ೧,೫೭೩ | ೩೨.೦೪ |
| ಮಹಮ್ಮದೀಯರು | ೬೮೭ | ೫.೮೦ | ೧೦೦ | ೨.೦೪ |
| ಪಾರ್ಸಿಗಳು | ೧,೫೨೬ | ೧೨.೮೭ | ೯೬೫ | ೧೯.೬೬ |
| ಮೂಲನಿವಾಸಿಗಳು ಮತ್ತು ಬುಡಕಟ್ಟು ಜನಾಂಗ | ೬ | .೦೫ | ... | ... |
| ಇತರರು (ಜ್ಯೂಗಳನ್ನು ಸೇರಿಸಿ) | ೧೦೩ | .೮೭ | ೯೨ | .೮೬ |

**ಕಾಲೇಜು ಶಿಕ್ಷಣ**
**೧೮೮೧–೮೨**

| | ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|
| ಕ್ರಿಶ್ಚಿಯನ್ನರು | ೧೪ | ೩ |
| ಬ್ರಾಹ್ಮಣರು | ೨೪೧ | ೫೦ |
| ಇತರ ಹಿಂದೂಗಳು–ವ್ಯವಸಾಯಗಾರರು | ೫ | ೧ |
| ಕೆಳವರ್ಗಗಳವರು | ೦ | ೦ |
| ಇತರ ಜಾತಿಗಳವರು | ೧೦೩ | ೨೧.೩ |
| ಮಹಮ್ಮದೀಯರು | ೭ | ೧.೫ |
| ಪಾರ್ಸಿಗಳು | ೧೦೮ | ೨೧.೫ |
| ಮೂಲನಿವಾಸಿಗಳು ಮತ್ತು ಗಿರಿಜನರು | ೦ | ೦ |
| ಇತರರು (ಜ್ಯೂಗಳೂ ಸೇರಿ) | ೨ | ೦.೪ |

೭. ಈ ಅಂಕಿ–ಅಂಶಗಳು ಏನನ್ನು ತೋರುತ್ತದೆ? ಸಾರ್ವಜನಿಕ ಶಿಕ್ಷಣವನ್ನು ತಮ್ಮ ಧೋರಣೆಯೆಂದು ಸರಕಾರವು ಹೇಳಿಕೊಂಡರೂ ಕೂಡ ೧೮೫೪ಕ್ಕಿಂತ ಮುಂಚೆ ಜನಸಮುದಾಯದ ಬಹುತೇಕ ಭಾಗವು ಅದರಲ್ಲೂ ವಿಶೇಷವಾಗಿ ತಳಜಾತಿಯ ಮತ್ತು ಬುಡಕಟ್ಟು ಜನಾಂಗವು ಸರಕಾರಿ ಶಿಕ್ಷಣದ ಪರಿಧಿಯ ಹೊರಗೆ ಉಳಿದಿತ್ತು. ೧೮೮೧–೮೨ರಲ್ಲಿ ಇಡಿ ಪ್ರಾಂತದಲ್ಲಿ ಈ ಸಮುದಾಯಗಳ ಒಬ್ಬ ವಿದ್ಯಾರ್ಥಿಯಾಗಿ ಕಾಲೇಜು ಮಟ್ಟದ ಶಿಕ್ಷಣವನ್ನು ಪಡೆಯುತ್ತಿರಲಿಲ್ಲ. ತಳವರ್ಗದ ಜನರು ಉಳಿದವರಿಗಿಂತ ಇಷ್ಟೊಂದು ಶಿಕ್ಷಣದಲ್ಲಿ ಹಿಂಬೀಳುವಿಕೆಗೆ ಕಾರಣವೇನು? ಈ ಪ್ರಶ್ನೆಗೆ ಉತ್ತರ ಪಡೆಯಬೇಕಾದರೆ ನಾವು ಇಡೀ ಪ್ರಾಂತದ ಶೈಕ್ಷಣಿಕ ಧೋರಣೆ ಮತ್ತು ಶೈಕ್ಷಣಿಕ ಇತಿಹಾಸವನ್ನು ಅಭ್ಯಸಿಸಬೇಕಾಗುವುದು.

೮. ಜನಸಾಮಾನ್ಯರಿಗೆ ಶಿಕ್ಷಣ ನೀಡುವ ಜವಾಬ್ದಾರಿಯು ಸರಕಾರದ್ದು ಎಂದು ಕೋರ್ಟ್ ಆಫ್ ಡೈರೆಕ್ಟರ್ಸ್ ೧೮೫೪ರಲ್ಲಿ ಅಧಿಕೃತವಾಗಿ ಒಪ್ಪಿಕೊಂಡಿತು. ಇದನ್ನು ಗುರುತಿಸಲು ೪೦ ವರ್ಷಗಳೇ ಬೇಕಾದವು. ಹೀಗಾದರೂ ಕೂಡಾ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಬದಲಾದ ಧೋರಣೆಯನ್ನು ವಿರೋಧಿಸ ತೊಡಗಿದವು. ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ತಳವರ್ಗದ ಜನರಿಗೆ ಶಿಕ್ಷಣದ ಮೂಲಕ ಬರಬಹುದಾದ ಬದಲಾವಣೆಗಳು ಲಾರ್ಡ್ ಎಡಿನ್‌ಬರೋರಂತಹ ವ್ಯಕ್ತಿಗಳನ್ನು ಚಿಂತಿಸುವಂತೆ ಮಾಡಿದವು. ಅವರು ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿದ್ದಾಗ ೧೮೫೮ರ ಏಪ್ರಿಲ್ ೨೮ರಲ್ಲಿ ಬೋರ್ಡ್ ಆಫ್ ಡೈರೆಕ್ಟರುಗಳಿಗೆ ಬರೆದ ಪತ್ರದಲ್ಲಿ ಈ ಕೆಳಗಿನಂತೆ ಎಚ್ಚರಿಕೆ ನೀಡಿದ್ದರು:

> "ಮಾನ್ಯರೆ: ೧೮೫೪ರಲ್ಲಿ ಬೋರ್ಡ್ ಆಫ್ ಡೈರೆಕ್ಟರುಗಳು ಭಾರತದ ವಿವಿಧ ಭಾಗಗಳಲ್ಲಿ ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಮಾರ್ಗದರ್ಶಿ ಸೂಚನೆಗಳ ಬಗ್ಗೆ ಪುನರ್ ವಿಮರ್ಶೆ ಮಾಡಲು ಕೋರಿದ ಅನೇಕ ಪತ್ರಗಳು ನನ್ನೆದುರಿಗೆ ಇವೆ. ಹಿಂದಿನ ಶಿಕ್ಷಣದ ಧೋರಣೆಯ ಬಗ್ಗೆ ಸಾಧಿಸಿದ ಅಪೇಕ್ಷಿತ ಫಲಿತಾಂಶಗಳ ಬಗ್ಗೆ ಏನನ್ನೂ ಅವು ಹೇಳುವುದಿಲ್ಲ. ಮುಂಬರುವ ದಿನಗಳಲ್ಲಿ ಬದಲಾದ ಶಿಕ್ಷಣ ಧೋರಣೆಯಿಂದ ಆಗಬಹುದಾದ ಅನಾಹುತಗಳ ಬಗ್ಗೆ ಮಾತ್ರ ದೂರುಗಳು ಕೇಳಿಬರುತ್ತಿವೆ."
>
> * * *
>
> **ಪ್ಯಾರಾ ೧೧:** "ನನ್ನ ಅಭಿಪ್ರಾಯದಲ್ಲಿ ತಳವರ್ಗದ ಮೇಲಿರುವ ಪೋಷಕರಿಗೆ ತಮ್ಮ ಶಾಲೆಗೆ ಮಕ್ಕಳನ್ನು ಕಳುಹಿಸಲು ಪ್ರೋತ್ಸಾಹಿಸಿದಂತೆ ದುಡಿಯುವ ವರ್ಗದ ಮಕ್ಕಳಿಗೂ ಹೆಚ್ಚಿನ ಶಿಕ್ಷಣ ನೀಡುವುದರ ಮೂಲಕ ಅವರ ಬೌದ್ಧಿಕ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಿದಾಗ ಶಿಕ್ಷಣವು ನಮ್ಮ ಅಪೇಕ್ಷಿತ ಫಲಿತಾಂಶವನ್ನು ನೀಡಬಲ್ಲದು. ಹಾಗೆಯೇ ಶ್ರೀಮಂತ ವರ್ಗವನ್ನು ಕೂಡಾ ಅಲಕ್ಷಿಸುವುದು ಸರಿಯಲ್ಲ."
>
> **ಪ್ಯಾರಾ ೧೨:** "ಇದರಿಂದುಂಟಾಗುವ ಪರಿಣಾಮವು ಸಮಾಜಕ್ಕೆ ಒಳ್ಳೆಯದಲ್ಲ. ತಳವರ್ಗದ ಸುಶಿಕ್ಷಿತ ಜನರಿಗೆ ಸರಕಾರವೇ ಪ್ರಚೋದಿಸಿದ ಜೀವನಾಂಶಗಳನ್ನು ನೀಡಲು ವಿಫಲವಾಗುವುದು.
>
> **ಪ್ಯಾರಾ ೧೩:** ಸಾರ್ವಜನಿಕರೆಲ್ಲರಿಗೂ ಶಿಕ್ಷಣ ನೀಡುವುದರ ಮೂಲಕ ಉತ್ತಮ ಶಿಕ್ಷಣ ಪಡೆದ ಅತೃಪ್ತ ಜನರನ್ನು ಸೃಷ್ಟಿಸಿ ಜನಸಾಮಾನ್ಯರಿಗೆ ಅಪರಿಮಿತ ಶಕ್ತಿ ನೀಡಿದಂತಾಗುವುದು.

**ಪ್ಯಾರಾ ೧೪:** ಶಿಕ್ಷಣ ಮತ್ತು ನಾಗರಿಕತೆಗಳು ಮೇಲ್ವರ್ಗದ ಜನರಿಂದ ತಳವರ್ಗದತ್ತ ಇಳಿದುಬರಬಹುದು. ಹೀಗಾದಾಗ ಸಮುದಾಯಗಳಿಗೆ ಹೊಸ ಹುಮ್ಮಸ್ಸು ನೀಡಬಹುದು. ಆದರೆ ತಳವರ್ಗದವರನ್ನು ಮೇಲ್ವರ್ಗಕ್ಕೆ ಏರಿಸಲು ಸಾಧ್ಯವಾಗುವುದಿಲ್ಲ. ತಳವರ್ಗದವರಿಗೆ ಮಾತ್ರ ಶಿಕ್ಷಣ ನೀಡುವುದರಿಂದ ಹಾಗಾಗಬಹುದೇನೋ. ಆದರೆ ಇದರಿಂದ ಅಲ್ಲೋಲ ಕಲ್ಲೋಲ ಉಂಟಾಗಿ ಅಶಾಂತಿಗೆ ವಿದೇಶಿಯರು ಮೊದಲ ಬಲಿಪಶುಗಳು ಆಗಬೇಕಾಗುವುದು.

**ಪ್ಯಾರಾ ೧೫:** ಶಿಕ್ಷಣದ ಪ್ರಸಾರವೇ ನಮ್ಮ ಉದ್ದೇಶವಾಗಿದ್ದರೆ ಅದನ್ನು ಉನ್ನತ ವರ್ಗದವರಿಗೆ ಮೊದಲು ನೀಡೋಣ.

**ಪ್ಯಾರಾ ೧೬:** ಇದನ್ನು ಎರಡು ಬಗೆಯಲ್ಲಿ ಸಾಧಿಸಬಹುದಾಗಿದೆ. ಕೇವಲ ಉನ್ನತ ವರ್ಗದವರು ಮಾತ್ರ ಪ್ರವೇಶ ಪಡೆಯುವಂತಹ ಕಾಲೇಜುಗಳನ್ನು ಸ್ಥಾಪಿಸುವುದು ಹಾಗೂ ಸೈನ್ಯ ಮತ್ತು ಸರಕಾರಿ ಸೇವೆಗಳನ್ನು ಪುನರ್ ರಚಿಸಿ ಉನ್ನತ ಶಿಕ್ಷಣ ಪಡೆದ ಕುಲೀನರ ಮಕ್ಕಳಿಗೆ ಅವುಗಳಲ್ಲಿ ಅವಕಾಶ ಮಾಡಿಕೊಡುವುದರ ಮೂಲಕ.

೯. ಯೂರೋಪಿಯನ್ ಅಧಿಕಾರಿಗಳು ಅಸ್ಪೃಶ್ಯರ ಬಗ್ಗೆ ಹೊಂದಿರುವ ದ್ವೇಷದ ಮನೋಭಾವನೆಯನ್ನು ಸರಕಾರದ ಕಾರ್ಯದರ್ಶಿಗಳು ೧೮೫೪ರಲ್ಲಿ ತಾವು ನೀಡಿದ ಟಿಪ್ಪಣಿಯ ಮೂಲಕ ಸರಿಪಡಿಸಿದರು. ಅವರ ಟಿಪ್ಪಣಿಯಲ್ಲಿ ಸಾರ್ವಜನಿಕ ಶಿಕ್ಷಣವು ಸರಕಾರದ ಕರ್ತವ್ಯ ಎಂಬ ಅಭಿಪ್ರಾಯಕ್ಕೆ ಮತ್ತೊಮ್ಮೆ ಅಂಗೀಕಾರ ನೀಡಲಾಯಿತು.

೧೦. ಸಾರ್ವಜನಿಕ ಶಿಕ್ಷಣದ ಜವಾಬ್ದಾರಿಯು ಸರಕಾರದ್ದೆಂದು ಗುರುತಿಸಿದರೂ ಕೂಡಾ ಆಶ್ಚರ್ಯಕರವಾಗಿ ಅದರಿಂದ ತಳವರ್ಗದ ಜನರಿಗೆ ಯಾವ ಉಪಯೋಗವೂ ಆಗಲಿಲ್ಲ. ಜನಸಾಮಾನ್ಯರಿಗಾಗಿ ಅನೇಕ ಶಾಲೆಗಳು ವಿವಿಧ ಜಿಲ್ಲೆಗಳಲ್ಲಿ ಸ್ಥಾಪನೆಯಾದವು. ಆದರೆ ಶಾಲೆಗಳಲ್ಲಿ ತಳವರ್ಗದ ಜನರಿಗೆ ಪ್ರವೇಶಾತಿ ವಿಷಯದ ಬಗ್ಗೆ ಇರುವ ಸಮಸ್ಯೆಯನ್ನು ಬಗೆಹರಿಸಲಾಗಲಿಲ್ಲ. ಇಂತಹದೊಂದು ಸಮಸ್ಯೆಯು ೧೮೫೬ರಲ್ಲಿ ತಲೆದೋರಿತು. ಆದರೆ ಸರಕಾರದ ನಿರ್ಧಾರವು ತಳವರ್ಗದ ಜನರ ಪರವಾಗಿರಲಿಲ್ಲವೆಂಬುದನ್ನು ಮುಂಬೈ ಪ್ರಾಂತದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸಿದ್ಧಪಡಿಸಿದ ೧೮೫೬–೫೭ನೇ ವರದಿಯ ಕೆಲವು ಭಾಗಗಳನ್ನು ಗಮನಿಸಿದಾಗ ಕಂಡುಬರುವುದು:–

**ಪ್ಯಾರಾ ೧೧೭– ಕೆಳಜಾತಿ ಮತ್ತು ಕಾಡು ಬುಡಕಟ್ಟುಗಳ ಶಾಲೆಗಳು:** ಕೀಳು ಜಾತಿಯ ಜನರಿಗಾಗಿ ಸರಕಾರವು ಯಾವುದೇ ಶಾಲೆಯನ್ನು ಸ್ಥಾಪಿಸಿಲ್ಲ ಮತ್ತು ಸರ್ವೋಚ್ಚ ಸರಕಾರವು ಇಂತಹ ಶಾಲೆಗಳಿಗೆ ಮಾನ್ಯತೆ ನೀಡಿರುವುದಿಲ್ಲ. ಸೈದ್ಧಾಂತಿಕವಾಗಿ ಸರಕಾರದ ಸಾಮಾನ್ಯ ಶಾಲೆಗಳಿಗೆ ಎಲ್ಲ ಜಾತಿಯ ಜನರಿಗೆ ಪ್ರವೇಶದ ಅವಕಾಶವಿದೆ. ನಾನು ಸಲ್ಲಿಸಿದ ೧೮೫೫–೫೬ರ ವರದಿಯನ್ನು ಗಮನಿಸಿ ಸರಕಾರವು ಈ ಕೆಳಗೆ ಕಾಣಿಸಿದ ಆಜ್ಞೆಯನ್ನು ಹೊರಡಿಸಿದೆ. ಇಲ್ಲಿಯ ವರೆಗೆ ಸರಕಾರದ ಶಾಲೆಯಲ್ಲಿ ಅತಿ ಕೀಳುಜಾತಿಯ ವಿದ್ಯಾರ್ಥಿಯು ಪ್ರವೇಶಾತಿ ಕೋರಿದಾಗ ಉಂಟಾದ ಸಮಸ್ಯೆಯ ಬಗ್ಗೆ ಕೇವಲ ಒಂದು ಘಟನೆ ನಡೆದಿದೆ. ೧೮೫೬ ಜೂನ್‌ನಲ್ಲಿ ಧಾರವಾಡದ ಸರಕಾರಿ ಶಾಲೆಯಲ್ಲಿ ತನಗೆ ಪ್ರವೇಶಾತಿ ನೀಡಬೇಕೆಂದು ಮಹಾರ್ ಜಾತಿಯ

> ವಿದ್ಯಾರ್ಥಿಯೋರ್ವರು ಒಂದು ಮನವಿ ಸಲ್ಲಿಸಿದ್ದ. ಆತ ನಿಯಮದ ಪ್ರಕಾರ ಶಾಲೆಗೆ ನೀಡ ಬೇಕಾದ ಫೀಯನ್ನು ಕೊಡಲು ಸಿದ್ಧನಿದ್ದು ತನಗೆ ಪ್ರವೇಶಾತಿ ನೀಡಲು ಕೋರಿದ್ದನು.
>
> ಈ ಸಂದರ್ಭದಲ್ಲಿ ಸರಕಾರವು ಆ ವಿದ್ಯಾರ್ಥಿಗೆ ಇರುವ ಸಹಜ ಹಕ್ಕಿನ ಬಗ್ಗೆ ವಿಚಾರ ಮಾಡಿದಾಗ ಆತನ ಸಹಜ ಹಕ್ಕು ಇತರ ಜಾತಿಯ ಬಹುಸಂಖ್ಯಾತರ ಮನಸ್ಸಿಗೆ ನೋವುಂಟಾಗಬಹುದೆಂಬುದನ್ನು ಗುರುತಿಸಿ ಸರಕಾರ ೧೮೫೬ನೇ ಜುಲೈ ೨೧ರಲ್ಲಿ ಅಂಗೀಕರಿಸಿದ ಗೊತ್ತುವಳಿಯನ್ನು* ತುಂಬ ಮುಜುಗರದಿಂದಲೇ ಪಾಸು ಮಾಡಿತು. ಅದರ ಪ್ರಕಾರ ಕೇವಲ ಒಬ್ಬ ಮಹಾರ್ ವಿದ್ಯಾರ್ಥಿಯ ಪ್ರವೇಶಾತಿಯಿಂದ ಇತರ ಜಾತಿಯ ವಿದ್ಯಾರ್ಥಿಗಳ ಒಡನಾಟ ಉಂಟಾಗುವ ಭಯದಿಂದ ಶಾಲೆಯು ಉಪಯೋಗ ವಿಲ್ಲದಂತಾಗುವ ಭಯವಿರುವುದರಿಂದ ಆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಉಚಿತವಲ್ಲ.

ಮುಂಬೈ ಸರಕಾರದ ನಿಲುವಳಿಗಳನ್ನು ಗಮನಿಸಿದ ಭಾರತ ಸರಕಾರವು ತನ್ನ ಅಭಿಪ್ರಾಯವನ್ನು ೧೮೫೭ರ ಜನವರಿ ೨೯ರಲ್ಲಿ ಬರೆದ ಪತ್ರ ಸಂಖ್ಯೆ ೧೧೧ರಲ್ಲಿ ಹೀಗೆ ತಿಳಿಸಿತು:

> "ಮುಂಬೈ ಸರಕಾರವು ಈ ವಿಷಯದ ಬಗ್ಗೆ ತುಂಬ ಜಾಣತನವನ್ನು ಪ್ರದರ್ಶಿಸಿತು ಎಂದು ಗವರ್ನರ್ ಜನರಲ್‌ರವರ ಅಭಿಪ್ರಾಯ. ಆದರೆ ಅವರು ಭಾರತ ಸರಕಾರದ ಕಾರ್ಯದರ್ಶಿಯಾದ ನನಗೆ ಈ ಮೂಲಕ ತಮಗೆ ತಿಳಿಸಲು ಹೇಳಿದ್ದೇನೆಂದರೆ ಆ ವಿದ್ಯಾರ್ಥಿಯು ಬಂಗಾಳ ಪ್ರಾಂತದ ಯಾವ ಶಾಲೆಯಲ್ಲೇ ಆಗಲಿ ಆತನಿಗೆ ಪ್ರವೇಶ ನಿರಾಕರಿಸಲಾಗುತ್ತಿರಲಿಲ್ಲ."

---

* **ಸರಕಾರವು ೨೧ನೇ ಜುಲೈ ೧೮೫೬ರಲ್ಲಿ ಅಂಗೀಕರಿಸಿದ ಗೊತ್ತುವಳಿಯ ವಿವರ:–**

೧. ಪತ್ರ ವ್ಯವಹಾರದಲ್ಲಿ ವ್ಯಕ್ತವಾಗುವ ಸಮಸ್ಯೆಯನ್ನು ಬಗೆಹರಿಸುವಲ್ಲಿ ನಿಜವಾಗಿಯೂ ಸಮಸ್ಯೆಗಳಿವೆ.

೨. ಮಹಾರ ಜಾತಿಯ ವ್ಯಕ್ತಿಗಳಿಗೂ ಹಕ್ಕುಗಳಿವೆ ಎಂಬುದರಲ್ಲಿ ಯಾವ ಸಂಶಯವಿಲ್ಲ. ಪ್ರಸ್ತುತದಲ್ಲಿ ಲಭ್ಯವಿರುವ ಶಿಕ್ಷಣದ ಅವಕಾಶಗಳು ಧಾರವಾಡದಲ್ಲಿನ ಇಂತಹ ವ್ಯಕ್ತಿಗಳಿಗೆ ನಿಲುಕಲು ಅವನ ಬಗ್ಗೆ ಇರುವ ಕೆಟ್ಟ ಭಾವನೆಯೇ ಕಾರಣವೆಂಬ ಭಾವನೆಯನ್ನು ತೊಡೆದುಹಾಕುವತ್ತ ಸರಕಾರ ಪ್ರಯತ್ನಿಸಿದೆ.

೩. ಸರಕಾರ ಅತೀ ಪ್ರಾಚೀನ ಕಾಲದಿಂದಲೂ ಮುಂದುವರಿಸಿಕೊಂಡು ಬಂದ ಜನಸಾಮಾನ್ಯನ ಭಾವನೆಗಳನ್ನು ಒಟ್ಟಾರೆಯಾಗಿ ಅರ್ಥೈಸಿಕೊಂಡು ಒಬ್ಬ ವ್ಯಕ್ತಿಯ ಸಲುವಾಗಿ ಇಡಿ ಶಿಕ್ಷಣ ವ್ಯವಸ್ಥೆ ಹಾಳಾಗುವ ಸಾಧ್ಯತೆಯನ್ನು ಗುರುತಿಸಿದೆ. ಮನವಿ ನೀಡಿದ ವ್ಯಕ್ತಿ ಎದುರಿಸುತ್ತಿರುವ ಸಮಸ್ಯೆಯು ಸರಕಾರದಿಂದ ಪ್ರೇರಿತವಾದುದಲ್ಲ ಹಾಗೂ ಆತ ಆ ವಿಷಯದ ಬಗ್ಗೆ ಸರಕಾರಕ್ಕೆ ಕೋರಿಕೊಂಡರೆ ಅವನ ಸಲುವಾಗಿ ಎಲ್ಲ ಅಡೆತಡೆಗಳನ್ನು ತೆಗೆದುಹಾಕಲು ಸಿದ್ಧವಿದೆ.

**೧೮೫೮ರ ಏಪ್ರಿಲ್ ೨೮ರ ಪತ್ರದಲ್ಲಿ ನಿರ್ದೇಶಕ ನ್ಯಾಯಮಂಡಳಿಯು ಈ ವಿಚಾರದ ಮೇಲೆ ಈ ಕೆಳಗಿನ ಆದೇಶವನ್ನು ನೀಡಿತು:–**

"ನಮ್ಮ ಉದ್ದೇಶದಲ್ಲಿ ಸರಕಾರದ ಶಿಕ್ಷಣ ಸಂಸ್ಥೆಗಳು ಎಲ್ಲ ವರ್ಗಗಳಿಗೆ ತೆರೆದಿರಬೇಕು ಮತ್ತು ನಾವು ಯಥೋಚಿತವಾಗಿರುವ ತತ್ವದಿಂದ ದೂರವಾಗಲಾರೆವು, ಮತ್ತು ಅದರ ಪಾಲನೆಯು ಮೊದಲ ಆದ್ಯತೆಯಾಗಿದೆ. ಕೆಲವು ಸಂದರ್ಭಗಳಲ್ಲಿ ಈ ತತ್ವದ ಅನುಷ್ಠಾನವು ಪರಿಣತರ ಒಂದು ಅಂಶವನ್ನು ದೂರ ಮಾಡುವುದು ಅಸಾಧ್ಯವೇನಲ್ಲ. ಆದರೆ ಯಾರು ಇದರ ಪ್ರಾಯೋಗಿಕ ಅನುಷ್ಠಾನವನ್ನು ಆಕ್ಷೇಪಿಸುತ್ತಾರೋ ಅವರು ತಮ್ಮ ಕೊಡುಗೆಗಳನ್ನು ಹಿಡಿದಿಟ್ಟು ತಮ್ಮ ಸಂಪನ್ಮೂಲಗಳನ್ನು ಭಿನ್ನತಳಹದಿಯ ಶಾಲೆಗಳ ರಚನೆಗೆ ಸ್ವತಂತ್ರರಿದ್ದಾರೆಂದು ಹೇಳಿದರೆ ಸಾಕಾಗಬಹುದು."

ಈ ಪತ್ರದ ನಂತರ ಭಾರತ ಸರಕಾರವು ದೇಶದಲ್ಲಿನ ಎಲ್ಲ ಶಾಲೆಗಳು ಯಾವುದೇ ಜಾತಿಗೆ ಸೀಮಿತಗೊಳಿಸದೇ ಸರಕಾರಿ ಶಾಲೆಗಳ ಘನತೆಗೆ ಕುಂದು ತಾರದ ರೀತಿಯಲ್ಲಿ ತನ್ನ ಉದ್ದೇಶ ಸಾಧನೆಗೆ ತಕ್ಕಂತೆ ಎಲ್ಲರಿಗೂ ಅವಕಾಶ ನೀಡಬೇಕೆಂದು ನಿರ್ಧರಿಸಿತು. ಬಂಗಾಳ ಪ್ರಾಂತದಲ್ಲಿನ ಸರಕಾರಿ ಶಾಲೆಗಳು ಸಾಮಾನ್ಯವಾಗಿ ಎಲ್ಲರಿಗೂ ಉಪಯೋಗವಾಗುವಂತೆ ಕಾರ್ಯ ನಿರ್ವಹಿಸುತ್ತಿರುವ ಹಿನ್ನೆಲೆಯನ್ನು ಅರಿಯಲು ಒಂದು ವಿಚಾರಣೆಯನ್ನು ಆರಂಭಿಸಲು ನಿರ್ಧರಿಸಲಾಯಿತು.

೧೧. ಬಂಗಾಳ ಪ್ರಾಂತದಲ್ಲಿನ ವಸ್ತುಸ್ಥಿತಿಯು ಭಾರತ ಸರಕಾರದ ಊಹೆಗಿಂತ ಭಿನ್ನವಾಗಿತ್ತೆಂಬುದು ವಿಚಾರಣೆಯಿಂದ ಕಂಡುಬಂದಿತು. ಕೆಳಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಉಳಿದವರ ಭಾವನೆಯನ್ನು ಗಮನಿಸಿ ನೀಡುವ ನಿರ್ಧಾರವನ್ನು ಶಿಕ್ಷಣ ಇಲಾಖೆಯ ಜಿಲ್ಲಾವಾರು ಸಮಿತಿಗೆ ಬಿಡಲಾಗಿತ್ತು. ಇದರ ಫಲವಾಗಿ ಹಿಂದುಳಿದ ವರ್ಗಗಳು ಕಷ್ಟವನ್ನೆದುರಿಸಬೇಕಾಯಿತು. ಸರಕಾರವು ಸಾರ್ವಜನಿಕರಿಗೆ ಸಹಾಯವಾಗುವಂತೆ ಜ್ಞಾನದ ದೀಪ ಹಚ್ಚಿದಾಗ ಅದರ ಸಮೀಪವೂ ಸುಳಿಯದಂತೆ ಅಸ್ಪೃಶ್ಯರಿಗೆ ದೂರ ಇರುವಂತಹ ಸನ್ನಿವೇಶದಲ್ಲಿ ಅವರು ಶಿಕ್ಷಣದಿಂದ ವಿಮುಖರಾಗಬೇಕಾಯಿತು.

೧೨. ಇಂತಹ ಸಂದರ್ಭದಲ್ಲಿ ೧೮೫೪ರ ಸಲಹೆಯಿಂದ ಸರ್ವರಿಗೆ ಶಿಕ್ಷಣವು ದುರ್ಬಲ ವರ್ಗದ ಜನರಿಗೆ ಹೊರತಾಗಿ ಉಳಿದವರಿಗೆ ದೊರಕಿತು. ೧೮೫೪ರಲ್ಲಿ ದುರ್ಬಲ ವರ್ಗದ ಜನರ ಶಿಕ್ಷಣದ ನಿಷೇಧವನ್ನು ತೆಗೆದುಹಾಕಿದ್ದು, ಕೇವಲ ಆ ವರ್ಗಗಳನ್ನು ದೂರವಿಡುವ ಧೋರಣೆಯಿಂದ ದೂರಾಗಿದ್ದನ್ನು ತಾತ್ವಿಕವಾಗಿ ಒಪ್ಪಿಕೊಂಡರೂ ಪ್ರಾತ್ಯಕ್ಷಿಕವಾಗಿ ಅದೇ ಧೋರಣೆಯನ್ನು ಮುಂದುವರಿಸಿಕೊಳ್ಳಲಾಯಿತು.

ತಳವರ್ಗದ ಜನರ ಶಿಕ್ಷಣಕ್ಕಾಗಿ ವ್ಯವಸ್ಥೆ ಮಾಡಿದವರೆಂದರೆ ಕ್ರೈಸ್ತ ಮಿಷನರಿಗಳು. ಮೌಂಟ್ ಸ್ಟುಅರ್ಡ್ ಎಲ್ಫಿನ್‌ಸ್ಟನ್‌ರವರ ಶಬ್ದಗಳಲ್ಲಿ ಹೇಳುವುದಾದರೆ ಅವರು "ದುರ್ಬಲವರ್ಗದ ಜನರಲ್ಲಿನ ಉತ್ತಮ ವಿದ್ಯಾರ್ಥಿಗಳನ್ನು ಗುರುತಿಸಿದರು." ಆದರೆ ಧರ್ಮ ನಿರಪೇಕ್ಷ ಧೋರಣೆಯನ್ನು ಅನುಸರಿಸಿದ ಸರಕಾರವು ಇಡೀ ಪ್ರಾಂತದಲ್ಲಿ ೧೮೫೪ರವರೆಗೂ ಯಾವುದೇ ಮಿಷನರಿ ಶಾಲೆಗಳಿಗೆ ಯಾವುದೇ ಧನಸಹಾಯ ನೀಡುತ್ತಿರಲಿಲ್ಲ. ಶೈಕ್ಷಣಿಕವಾಗಿ ಸಲಹಾ ವರದಿ(೧೮೫೪)ಯು ಮಿಷನರಿ ಶಾಲೆಗಳಿಗೆ ಧನಸಹಾಯ ನೀಡಬಾರದೆಂಬ ಸಲಹೆಯನ್ನು ಮಾಡಿರಲಿಲ್ಲ.

೧೩. ಇಂತಹ ಬಿಕ್ಕಟ್ಟಿನ ಪರಿಹಾರಕ್ಕೆ ಸರಕಾರವು ಎರಡು ಮಾರ್ಗಗಳನ್ನು ಅನುಸರಿಸಿತು. (೧) ತಳಜಾತಿಯ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳ ಸ್ಥಾಪನೆ, (೨) ಮಿಷನರಿ ಸಂಸ್ಥೆಗಳಿಗೆ ಧನಸಹಾಯ. ನಿಯಮಗಳಲ್ಲಿ ರಿಯಾಯಿತಿ ತೋರಿಸಿ ಅವರ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದು. ಈ ಎರಡು ಮಾರ್ಗಗಳನ್ನು ಅನುಸರಿಸದೇ ಹೋದರೆ ದುರ್ಬಲ ವರ್ಗದವರ ಶಿಕ್ಷಣದಲ್ಲಿ ೧೮೮೨ರಲ್ಲಿ ಹಂಟರ್ ಆಯೋಗ ಗುರುತಿಸಿದ ಅಲ್ಪಸ್ವಲ್ಪ ಪ್ರಗತಿಯೂ ಆಗುತ್ತಿರಲಿಲ್ಲ.

## III. ೧೮೮೨ರಿಂದ ೧೯೨೩ರವರೆಗೆ

೧೪. ಬಾಂಬೆ ಪ್ರಾಂತದ ಶೈಕ್ಷಣಿಕ ಇತಿಹಾಸದಲ್ಲಿ ೧೮೮೨ನೇ ವರ್ಷದ ನಂತರ ೧೯೨೩ನೇ ವರ್ಷವು ಇನ್ನೊಂದು ಮೈಲಿಗಲ್ಲು ಎಂದು ಗುರುತಿಸಲ್ಪಡುತ್ತದೆ. ಆ ವರ್ಷ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿ ಪ್ರಾಂತೀಯ ಸರಕಾರದಿಂದ ಸ್ಥಾನೀಯ ಸರಕಾರದ ಕೈಗೆ ವರ್ಗಾವಣೆಯಾಯಿತು. ಆದುದರಿಂದ ೧೯೨೩ರವರೆಗೆ ಶಿಕ್ಷಣದ ನೀತಿ ಏನಿತ್ತು ಎಂಬುದನ್ನು ಅರಿತುಕೊಳ್ಳುವುದು ಆವಶ್ಯಕವಾಗುತ್ತದೆ. ಬಾಂಬೆ ಪ್ರಾಂತದಲ್ಲಿ ವಿವಿಧ ಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿಯ ಸಾರಾಂಶವನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

| ಪ್ರಾಂತದ ವರ್ಗಗಳ ಜನಸಂಖ್ಯೆ | ಜನಸಂಖ್ಯೆಯ ಆಧಾರದ ಸ್ಥಾನ | ಶಿಕ್ಷಣದ ಆಧಾರದ ಮೇಲೆ ಸ್ಥಾನ | | |
|---|---|---|---|---|
| | | ಪ್ರಾಥಮಿಕ | ಮಾಧ್ಯಮಿಕ | ಕಾಲೇಜು ಮಟ್ಟ |
| ಮುಂದುವರಿದ ಹಿಂದೂಗಳು | ೪ನೆಯ | ಮೊದಲನೆಯ | ಮೊದಲನೆಯ | ಮೊದಲನೆಯ |
| ಮಧ್ಯಮ ಸ್ತರದ ಹಿಂದೂಗಳು | ೧ನೆಯ | ಮೂರನೆಯ | ಮೂರನೆಯ | ಮೂರನೆಯ |
| ಹಿಂದುಳಿದ ಹಿಂದೂಗಳು | ೨ನೆಯ | ನಾಲ್ಕನೆಯ | ನಾಲ್ಕನೆಯ | ನಾಲ್ಕನೆಯ |
| ಮಹಮ್ಮದೀಯರು | ೩ನೆಯ | ಎರಡನೆಯ | ಎರಡನೆಯ | ಎರಡನೆಯ |

೧೫. ಈ ಮೇಲಿನ ಪಟ್ಟಿಯು ವಿವಿಧ ಸಮುದಾಯಗಳ ಶೈಕ್ಷಣಿಕ ಪ್ರಗತಿಗೆ ಹೋಲಿಸಿದಾಗ ಗಣನೀಯವಾದ ವ್ಯತ್ಯಾಸ ಕಾಣುತ್ತದೆ. ಮಧ್ಯಮ ವರ್ಗದ ಹಿಂದುಗಳು ತಮ್ಮ ಜನಸಂಖ್ಯೆಯ ಆಧಾರದ ಸ್ಥಾನ ಮತ್ತು ಅವರು ಶೈಕ್ಷಣಿಕವಾಗಿ ಹೊಂದಿರುವ ಸ್ಥಾನಗಳ ನಡುವೆ ಅಗಾಧವಾದ ಅಂತರವಿದೆ. ಜನಸಂಖ್ಯೆಯ ದೃಷ್ಟಿಯಿಂದ ಅದು ಪ್ರಥಮ ಸ್ಥಾನ ಹೊಂದಿದ್ದರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಮಟ್ಟದ ಶಿಕ್ಷಣದಲ್ಲಿ ತೃತೀಯ ಸ್ಥಾನ ಹೊಂದಿದೆ. ಹಿಂದುಳಿದ ವರ್ಗಗಳು ಜನಸಂಖ್ಯಾ ಆಧಾರದ ಮೇಲೆ ಎರಡನೆಯ ಸ್ಥಾನ ಹೊಂದಿದ್ದು ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ನಾಲ್ಕನೆಯ ಅಂದರೆ ಕೊನೆಯ ಸ್ಥಾನ ಪಡೆದಿದೆ. ಆದರೆ ಮೇಲ್ವರ್ಗದ ಹಿಂದುಗಳು ಜನಸಂಖ್ಯೆಯಲ್ಲಿ ನಾಲ್ಕನೆಯ ಸ್ಥಾನ ಪಡೆದು ಪ್ರಾಥಮಿಕ, ಮಾಧ್ಯಮಿಕ, ಕಾಲೇಜು ಮಟ್ಟದ ಶಿಕ್ಷಣದಲ್ಲಿ ಪ್ರಥಮ ಸ್ಥಾನದಲ್ಲಿದೆ. ೧೮೮೨ರಿಂದ ಇಲ್ಲಿಯವರೆಗೆ ಶಿಕ್ಷಣದ ಪ್ರಗತಿಯ ದೃಷ್ಟಿಯಲ್ಲಿ ಹೇಳುವುದಾದರೆ, ತುಲನಾತ್ಮಕವಾಗಿ ಗಣನೀಯವಾದ ಪ್ರಗತಿಯಾಗಿಲ್ಲ.

೧೬. ಈ ಮೇಲಿನ ಹೇಳಿಕೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಬಾಂಬೆ ಪ್ರಾಂತ ಅವರ ೧೯–೨೩–೨೪ರ ಸಾಲಿನ ವರದಿಯ ಮೇಲೆ ಆಧಾರ ಹೊಂದಿದೆ. ಈ ವರದಿಯು ಸಮುದಾಯಗಳ ಶೈಕ್ಷಣಿಕ ಮಟ್ಟದಲ್ಲಿನ ತಾರತಮ್ಯವನ್ನು ಗುರುತಿಸಿದೆ. ಈ ತಾರತಮ್ಯ ಹೆಚ್ಚು ಕಡಿಮೆಯಾಗಬಹುದು. ಆದರೆ ತಾರತಮ್ಯದಲ್ಲಿನ ಪ್ರಮಾಣವನ್ನು ಗುರುತಿಸಿದರೆ ಕೆಲವು ತೀರ್ಮಾನಗಳನ್ನು ಕೈಗೊಳ್ಳಬಹುದು. ಈ ಉದ್ದೇಶವನ್ನು ಮನಗಂಡು ಇನ್ನೂ ಸ್ಪಷ್ಟಪಡಿಸಲು ಮುಂದಿನ ಪಟ್ಟಿಯನ್ನು ಸಿದ್ಧಪಡಿಸಿದೆ.

---

* ಮುಂಬಯಿ ಸರಕಾರದ ಶಿಕ್ಷಣ ಇಲಾಖೆಯು ಈ ಪ್ರಾಂತದ ಜನಸಂಖ್ಯೆಯನ್ನು ಇಲಾಖಾ ಉದ್ದೇಶಗಳಿಗಾಗಿ ನಾಲ್ಕು ಭಿನ್ನ ವರ್ಗಗಳಾಗಿ ವಿಂಗಡಿಸಿದೆ. ಅವುಗಳಲ್ಲೊಂದರಲ್ಲಿ ಒಟ್ಟಾಗಿ "ಮುಂದುವರಿದ ಹಿಂದುಗಳು" ಎಂದು ಕರೆಸಿಕೊಳ್ಳುವ ಬ್ರಾಹ್ಮಣರು ಮತ್ತು ಸಂಬಂಧಿತ ಜಾತಿಗಳು ಇವೆ. ಮರಾಠರು ಮತ್ತು ಸಂಬಂಧಿತ ಜಾತಿಗಳನ್ನು "ಮಧ್ಯಮ ಹಿಂದುಗಳು" ಎಂದು ಕರೆಯುವ ಪ್ರತ್ಯೇಕ ವರ್ಗದಲ್ಲಿಡಲಾಗಿದೆ. ಜನಸಂಖ್ಯೆಯ ಉಳಿದ ಭಾಗವು ದುರ್ಬಲ ವರ್ಗಗಳನ್ನೊಳಗೊಂಡಿದೆ. ಗಿರಿಜನರು ಮತ್ತು ಕಾಡುಜನರು ಅವರದ್ದೇ ಆದ ಪ್ರತ್ಯೇಕ ವರ್ಗದಲ್ಲಿದ್ದು "ಹಿಂದುಳಿದ ವರ್ಗ"ವೆಂದು ನಾಮಾಂಕಿತರಾಗಿದ್ದಾರೆ. ಈ ಮೂರು ವರ್ಗಗಳಿಗೆ ಪ್ರಾಂತ ಮತ್ತು ಸಿಂಧ್‌ನ ಮಹಮ್ಮದೀಯರನ್ನೊಳಗೊಂಡ ನಾಲ್ಕನೆಯ ವರ್ಗವನ್ನು ಸೇರಿಸಬೇಕಾಗಿದೆ.

| ಪಟ್ಟಿ | | | |
|---|---|---|---|
| ಜನಸಂಖ್ಯೆಯ ವರ್ಗಗಳು | ಪ್ರಾಥಮಿಕ ಶಿಕ್ಷಣ ೧೦೦೦ಕ್ಕೆ ಅ ವರ್ಗದ ವಿದ್ಯಾರ್ಥಿಗಳ ಪ್ರಮಾಣ | ಮಾಧ್ಯಮಿಕ ಶಿಕ್ಷಣ ೧೦೦,೦೦೦ಕ್ಕೆ ಅ ವರ್ಗದ ವಿದ್ಯಾರ್ಥಿಗಳು | ಕಾಲೇಜು ಮಟ್ಟದ ಶಿಕ್ಷಣ ಜನಸಂಖ್ಯೆ ೨೦೦,೦೦೦ಕ್ಕೆ ಅ ವರ್ಗದ ವಿದ್ಯಾರ್ಥಿಗಳು |
| ಮೇಲ್ವರ್ಗದ ಹಿಂದೂಗಳು | ೧೧೯ | ೩,೦೦೦ | ೧೦೦೦ |
| ಮಹಮ್ಮದೀಯರು | ೯೨ | ೫೦೦ | ೫೨ |
| ಮಧ್ಯಮ ವರ್ಗದ ಹಿಂದೂಗಳು | ೩೮ | ೧೪೦ | ೨೪ |
| ಹಿಂದುಳಿದ ವರ್ಗಗಳು | ೧೮ | ೧೪ | ಇಲ್ಲ (ಒಬ್ಬನೇ ಇದ್ದರೂ ಇರಬಹುದು) |

೧೭. ಮೇಲಿನ ಪಟ್ಟಿಯಲ್ಲಿನ ಅಂಕಿಗಳು ಒಂದು ಸಮುದಾಯವು ಇನ್ನೊಂದು ಸಮುದಾಯಕ್ಕಿಂತ ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಮಟ್ಟದ ಶಿಕ್ಷಣದಲ್ಲಿ ಎಷ್ಟು ಅಂತರದ ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ತೋರಿಸುತ್ತದೆ. ಇಡಿ ಪ್ರಾಂತದಲ್ಲಿ ವಿವಿಧ ಸಮುದಾಯಗಳು ಪಡೆದಿರುವ ಶಿಕ್ಷಣದ ಪ್ರಮಾಣದಲ್ಲಿನ ವೈಪರೀತ್ಯಗಳು ದಿಗ್ಭ್ರಮೆಗೊಳಿಸುತ್ತದೆ. ಈ ಅಂಕಿ ಅಂಶಗಳು ನಿಸ್ಸಂಕೋಚವಾಗಿ ಎರಡು ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತವೆ. (೧) ಇಡಿ ಪ್ರಾಂತದಲ್ಲಿ ಹಿಂದುಳಿದ ವರ್ಗಗಳ ಶಿಕ್ಷಣ ಮಟ್ಟವು ಶೋಚನೀಯ ಮಟ್ಟದಲ್ಲಿದೆ. ಜನಸಂಖ್ಯೆಯ ಆಧಾರದ ಮೇಲೆ ಎರಡನೆಯ ಸ್ಥಾನದಷ್ಟು ಮೇಲಿದ್ದರೆ ಶಿಕ್ಷಣದ ಮಟ್ಟದಲ್ಲಿ ಅತಿ ಕೆಳಗಿನ ಅಂದರೆ ನಾಲ್ಕನೆಯ ಸ್ಥಾನದಲ್ಲಿದ್ದು ಅದರಲ್ಲೂ ಅವರ ಪ್ರಮಾಣ ತುಂಬ ಕಡಿಮೆ ಇದೆ. (೨) ಪ್ರಾಂತದಲ್ಲಿ ಮಹಮ್ಮದೀಯರು ಶೈಕ್ಷಣಿಕವಾಗಿ ಗಣನೀಯ ಪ್ರಗತಿ ಸಾಧಿಸಿದ್ದಾರೆ. ಕೇವಲ ೨೦ ವರ್ಷಗಳ ಅವಧಿಯಲ್ಲಿ ಮಧ್ಯಮ ವರ್ಗದವರ ಸ್ಥಾನವನ್ನು ಮೀರಿ ಹಿಂದುಳಿದ ವರ್ಗದವರನ್ನು ಮೀರಿ ಹೆಚ್ಚು ಕಡಿಮೆ ಬ್ರಾಹ್ಮಣರು ಮತ್ತು ಅವರ ಸಹವರ್ತಿ ಜಾತಿಗಳ ಶಿಕ್ಷಣ ಮಟ್ಟದ ಸಮೀಪ ತಲುಪಿದ್ದಾರೆ.

೧೮. ಇದಕ್ಕೆ ಕಾರಣವೇನಿರಬಹುದು? ಸರಕಾರದ ತಾರತಮ್ಯ ನೀತಿಯೇ ಇದಕ್ಕೆ ಕಾರಣವೆಂದು ಹೇಳಬಹುದು. ಎರಡು ವರ್ಗಗಳ ಬಗ್ಗೆ ಸರಕಾರವು ಯಾವ ರೀತಿಯಾದ ತಾರತಮ್ಯ ನೀತಿಯನ್ನು ಹೊಂದಿತ್ತು ಎಂಬುದನ್ನು ಗುರುತಿಸಲು ಶಿಕ್ಷಣದ ಬಗೆಗಿನ ನಾಲ್ಕು ವರ್ಷಗಳ ವರದಿಗಳನ್ನು ಗಮನಿಸಬೇಕು. ಮಹಮ್ಮದೀಯರ ಶಿಕ್ಷಣದ ಬಗ್ಗೆ ಯಾವ ರೀತಿಯಾದ ಕ್ರಮ ಕೈಗೊಳ್ಳಬೇಕು ಎಂಬುದನ್ನು ಮೂರನೆಯ ಪಂಚವಾರ್ಷಿಕ ವರದಿ(೧೮೯೨–೯೭)ಯು ಮಹತ್ವದ ಬೆಳಕು ಚೆಲ್ಲುತ್ತದೆ.

> “ಮಹಮ್ಮದೀಯರ ಶಿಕ್ಷಣವು ಮುಂಬೈ ಪ್ರಾಂತದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ನಿರ್ದೇಶಕರು ಉಲ್ಲೇಖಿಸುತ್ತ ಅದು ಪ್ರತಿಕೂಲ ಸನ್ನಿವೇಶದಲ್ಲಿ ಉಂಟಾಯಿತು ಎಂದು ಬಣ್ಣಿಸುತ್ತಾರೆ. ಅನೇಕ ವರ್ಷಗಳಿಂದಲೂ ಕಂಡುಕೊಂಡ ವಿಷಯ ವೇನೆಂದರೆ ಮಹಮ್ಮದೀಯರು ಇತರೆ ಸಮುದಾಯಗಳಿಗಿಂತ ಸಾರ್ವಜನಿಕ ಸಂಸ್ಥೆಗಳ ಬಳಕೆಯನ್ನು ಹೆಚ್ಚಿಗೆ ಪಡೆಯುತ್ತಾರೆ. ಅವರಲ್ಲಿ ಹೆಚ್ಚಿನ ಶಿಕ್ಷಣದ ಪ್ರಗತಿಯ ಕಾರಣಗಳನ್ನು ವಿವರಿಸುತ್ತ ನಿರ್ದೇಶಕರು ಹೀಗೆ ಬರೆಯುತ್ತಾರೆ:–

"ಮೊದಲನೆಯದಾಗಿ ಪ್ರತಿಯೊಂದು ಜಿಲ್ಲೆಗೆ ಒಬ್ಬನಾದರೂ ಮಹಮ್ಮದೀಯ ಅಧಿಕಾರಿಯನ್ನು ಉಪತನಿಖಾಧಿಕಾರಿ ಅಥವಾ ಸಹಾಯ ತನಿಖಾಧಿಕಾರಿಯಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ. ನಮ್ಮ ಮೂರು ಜನ ಪದವೀಧರ ಮಹಮ್ಮದೀಯ ಅಧಿಕಾರಿಗಳು ಉಪತನಿಖಾಧಿಕಾರಿಗಳಿದ್ದಾರೆ. ಕೈರಾ, ಸೋಲಾಪೂರ ಮತ್ತು ಹೈದರಾಬಾದ್‌ನಲ್ಲಿ ಒಬ್ಬೊಬ್ಬರ ನೇಮಕವಾಗಿದೆ. ನಾಲ್ಕನೆಯವರನ್ನು ಉನ್ನತ ಶ್ರೇಣಿಯ ಭೂಕಂದಾಯ ಇಲಾಖೆಯಿಂದ ತರಿಸಿ ಭರ್ತಿ ಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಮುಸ್ಲಿಂ ಅಧಿಕಾರಿಗಳು ಕಂಡುಬರುತ್ತಾರೆ. ಹಾಗೆಯೇ ಮುಂಬೈ, ಕರಾಚಿ ಮತ್ತು ಜುನಾಗಡ್‌ಗಳಲ್ಲಿಯೂ ಅದೇ ಪರಿಸ್ಥಿತಿ ಇದೆ. ಮಹಮ್ಮದೀಯರ ಸಲುವಾಗಿ ಪ್ರೌಢಶಾಲೆಗಳನ್ನು ಸ್ಥಾಪಿಸಿ ಕಡಿಮೆ ಫೀಸನ್ನು ನಿಗದಿಪಡಿಸಿ ಅವರ ಶಿಕ್ಷಣಕ್ಕಾಗಿ ಪ್ರೋತ್ಸಾಹ ನೀಡುವ ಪ್ರಯತ್ನಗಳು ನಡೆದವು. ಹಾಗೆಯೇ ಅಂಜುಮನ್ (ಮಹಮ್ಮದೀಯರ ಸಂಘಗಳು) ಸಣ್ಣ ಪ್ರಮಾಣದ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಿದವು. ಶಿಕ್ಷಣ ಇಲಾಖೆಯೂ ಅವರ ಶಿಕ್ಷಣಕ್ಕಾಗಿ ವಿಶೇಷ ಮುತುವರ್ಜಿ ವಹಿಸಿ, ವಿಶೇಷ ಶಾಲೆಗಳನ್ನು ವಿಶಿಷ್ಟ ಪ್ರದೇಶಗಳಲ್ಲಿ ಸ್ಥಾಪಿಸಿ, ಪ್ರಾಂತೀಯ ಮತ್ತು ಸ್ಥಾನೀಯ ಮಟ್ಟದ ಒಟ್ಟು ೨/೩ರಷ್ಟು ಶಿಷ್ಯವೇತನವನ್ನು ಅವರಿಗಾಗಿಯೇ ಮೀಸಲಾಗಿಡುವ ವ್ಯವಸ್ಥೆ ಇದೆ. ಖಾನ್ ಬಹದ್ದೂರ್ ಕಾಜಿ ಶಹಬುದ್ದೀನ್ (ಒಂದು ಕಾಲದಲ್ಲಿ ಬರೋಡಾದ ದಿವಾನ) ಅವರು ಸ್ಥಾಪಿಸಿದ ಕೆಲವು ಶಿಷ್ಯವೇತನಗಳನ್ನು ಅವರಿಗೆ ನೀಡಲಾಗುತ್ತದೆ. ಸಿಂಧ್ ಪ್ರಾಂತದಲ್ಲಿಯೂ ಖೈರಾಪೂರ ಸಂಸ್ಥಾನದ ವಿದ್ಯಾರ್ಥಿಗಳು ಕಲಾ ಕಾಲೇಜುಗಳಿಗೆ ಪ್ರವೇಶ ಪಡೆದರೆ ಅವರಿಗೂ ಶಿಷ್ಯವೇತನ ನೀಡುವ ವ್ಯವಸ್ಥೆ ಇದೆ. (ಹೋದ ವರ್ಷ ಇವುಗಳನ್ನು ಭರ್ತಿ ಮಾಡಲು ನಾನು ಸಾಕಷ್ಟು ಪ್ರಯತ್ನ ಮಾಡಿದೆ. ಈ ಶಿಷ್ಯವೇತನದ ಪ್ರಮಾಣ ಪ್ರತಿ ತಿಂಗಳು ರೂಪಾಯಿ ೨೦ ಇದ್ದಾಗ್ಯೂ ಈ ಕಷ್ಟ).

ಪ್ರಾಥಮಿಕ ಮಟ್ಟದಲ್ಲಿ ಮಹಮ್ಮದೀಯರಿಗೆ ಫೀಸಿನ ವಿಷಯಕ್ಕೆ ತುಂಬಾ ಉದಾರತೆಯನ್ನು ತೋರಲಾಗುತ್ತದೆ. ಮಹಮ್ಮದೀಯರಿಗೆ ಹಿಂದೂಗಳಿಗಿಂತಲೂ ಕಡಿಮೆ ಮಟ್ಟದ ಪರೀಕ್ಷೆಗಳನ್ನು ಗೊತ್ತುಪಡಿಸುವ ವಿಶೇಷ ಸವಲತ್ತಿನ ಕಾಯಿದೆಗಳ ಮುಖಾಂತರ ಮಹಮ್ಮದೀಯರು ತರಬೇತಿಯ ಮಹಾವಿದ್ಯಾಲಯಗಳಿಗೆ ಬರಲು ಪ್ರೋತ್ಸಾಹಿಸಲಾಯಿತು. ಮುಂಬಯಿಯ ಜಂಟಿ ಶಾಲಾ ಸಮಿತಿಯು ಇತ್ತೀಚೆಗೆ ಮಹಮ್ಮದೀಯ ಉಪ ತಪಾಸಣಾಧಿಕಾರಿಯನ್ನು ನೇಮಿಸುವ ಮೂಲಕ ಮಹಮ್ಮದೀಯರ ಶಿಕ್ಷಣವನ್ನು ಪ್ರೋತ್ಸಾಹಿಸಲು ವಿಶೇಷ ಪ್ರಯತ್ನ ಮಾಡಿರುತ್ತದೆ..."

೧೯. ಐದನೆಯ ಪಂಚವಾರ್ಷಿಕ ವರದಿ (೧೯೦೨–೧೯೦೭)ಯಲ್ಲಿ ನತದೃಷ್ಟ ವರ್ಗದವರ ಶಿಕ್ಷಣದ ಬಗೆಗೆ ಹೇಳಿದುದನ್ನು ಇದರೊಂದಿಗೆ ಹೋಲಿಸಿ:

"೬೫೫. ಮುಂಬಯಿ–ಮಧ್ಯ ಮುಂಬಯಿ ವಿಭಾಗದಲ್ಲಿ ಕೆಳವರ್ಗದ ಮಕ್ಕಳಿಗೆ ಶುಲ್ಕ ಇಲ್ಲದೆಯೇ ಶಾಲೆಯಲ್ಲಿ ಪ್ರವೇಶ ನೀಡಲಾಗುತ್ತಿದೆ ಮತ್ತು ಅವರು ಪುಸ್ತಕ, ಪಾಟಿಗಳು ಮುಂತಾದವುಗಳ ರೂಪದಲ್ಲಿ ಕಾಣಿಕೆಗಳನ್ನು ಪಡೆಯುತ್ತಾರೆ...

ಕಾಠೇವಾಡದಲ್ಲಿ ಕೆಳವರ್ಗದ ಮೂರೇ ಮೂರು ಮಕ್ಕಳು ಶಿಕ್ಷಣ ಪಡೆಯುತ್ತಾರೆ.

ದಕ್ಷಿಣ ಭಾಗದಲ್ಲಿ ೭೨ ವಿಶೇಷ ಶಾಲೆಗಳನ್ನು ತೆರೆಯಲಾಗಿದ್ದು, ಅಲ್ಲಿ ಕಡಿಮೆ ಅರ್ಹತೆಯ ಶಿಕ್ಷಕರು ಪಾಠ ಮಾಡುತ್ತಿದ್ದಾರೆ.

೨೦. ಈ ಅಸಮಾನತೆಗೆ ಮೂಲ ಕಾರಣ ಹಂಟರ್ ಕಮೀಶನ್‌ದ ಶಿಫಾರಸುಗಳು. ಅದು ಮಹಮ್ಮದೀಯರ ಬಗೆಗೆ ಮಾಡಿದ ಶಿಫಾರಸುಗಳನ್ನು ಕೆಳವರ್ಗದವರ ಹಿತಾಸಕ್ತಿಗಳ ಬಗೆಗೆ ಮಾಡಿದ ಶಿಫಾರಸುಗಳೊಂದಿಗೆ ಹೋಲಿಸಿದರೆ ಹಂಟರ್ ಕಮಿಷನ್ ಮಹಮ್ಮದೀಯರ ಬಗೆಗೆ ಅದೆಷ್ಟು ಪಕ್ಷಪಾತ ವಹಿಸಿತ್ತೆಂಬುದು ತಿಳಿದು ಬರುತ್ತದೆ. ಮಹಮ್ಮದೀಯರ ಬಗೆಗೆ ಹಂಟರ್ ಕಮಿಷನ್ ಹದಿನೇಳು ಶಿಫಾರಸುಗಳನ್ನು ಮಾಡಿದೆ. ಅವುಗಳಲ್ಲಿ ಕೆಳಗಿನವು ಮಾತ್ರ ಗಮನಾರ್ಹವಿರುತ್ತವೆ.

(1) ಮಹಮ್ಮದೀಯರ ಶೈಕ್ಷಣಿಕ ಪ್ರೋತ್ಸಾಹಕ್ಕಾಗಿ ಮುನಿಸಿಪಲ್ ಮತ್ತು ಪ್ರಾಂತೀಯ ಹಣವನ್ನು ವ್ಯಯ ಮಾಡುವುದು ಕಡ್ಡಾಯವಾಗಿರಬೇಕು.

(7) ಶಿಕ್ಷಣಗಳಲ್ಲಿ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲ್ಪಡುವ ಇಂಗ್ಲಿಷ್ ಶಿಕ್ಷಣ ಮಹಮ್ಮದೀಯರಿಗೆ ಅವಶ್ಯವಿರುವುದರಿಂದ ಅದನ್ನು ದೊರಕಿಸುವಲ್ಲಿ ಉದಾರ ಪ್ರೋತ್ಸಾಹ ನೀಡಬೇಕು.

(8) ಅವಶ್ಯವಿದ್ದಲ್ಲಿ ಮಹಮ್ಮದೀಯರಿಗೆ ಕ್ರಮೇಣ ಏರಿಕೆಯ ಶಿಷ್ಯವೇತನಗಳನ್ನು ಸ್ಥಾಪಿಸಬೇಕು:

1. ಪ್ರಾಥಮಿಕ ಹಂತದಿಂದ ಪ್ರಾರಂಭವಾಗಿ ಮಾಧ್ಯಮಿಕ ಶಿಕ್ಷಣ ಮುಗಿಯುವವರೆಗೆ
2. ಮಾಧ್ಯಮಿಕ ಹಂತದಿಂದ ಪ್ರಾರಂಭವಾಗಿ ಹೈಸ್ಕೂಲ್ ಶಿಕ್ಷಣ ಮುಗಿಯುವವರೆಗೆ,
3. ಅಲ್ಲದೆ ಮ್ಯಾಟ್ರಿಕ್ ಪರೀಕ್ಷೆಯ ಪರಿಣಾಮವನ್ನಾಧರಿಸಿ ಕೊಟ್ಟ ಶಿಷ್ಯವೇತನಗಳು ಉನ್ನತ ಶಿಕ್ಷಣ ಮುಗಿಯುವವರೆಗೆ.

(9) ಸಾರ್ವಜನಿಕ ಹಣದಿಂದ ನಡೆಸುತ್ತಿರುವ ಯಾವುದೇ ಶಾಲೆಯಲ್ಲಿ ಮಹಮ್ಮದೀಯರಿಗಾಗಿ ಕೆಲವು ಉಚಿತ ಶಿಷ್ಯವೇತನಗಳನ್ನು ತುರ್ತಾಗಿ ಕಾಯ್ದಿರಿಸಬೇಕು.

(10) ಎಲ್ಲೆಲ್ಲಿ ಮಹಮ್ಮದೀಯರ ಉಪಯೋಗಕ್ಕಾಗಿ ಸ್ಥಾಪಿಸಿದ ದತ್ತಿನಿಧಿಗಳು ಸರಕಾರಿ ಆಡಳಿತ ಕ್ಕೊಳಪಟ್ಟಿರುವವೊ, ಅವುಗಳಿಂದ ಬಂದ ಹಣವನ್ನು ಸಂಪೂರ್ಣ ಮಹಮ್ಮದೀಯರ ಶಿಕ್ಷಣಕ್ಕಾಗಿ ವಿನಿಯೋಗಿಸತಕ್ಕದ್ದು.

(11) ಮಹಮ್ಮದೀಯರು ವಾಸಿಸುತ್ತಿರುವಲ್ಲಿ ಖಾಸಗಿ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳು ಶಿಕ್ಷಣದ ವ್ಯವಸ್ಥೆ ಮಾಡುತ್ತಿದ್ದರೆ, ಗ್ರಾಂಟ್–ಇನ್–ಏಡ್ ವ್ಯವಸ್ಥೆಯ ಆಧಾರದ ಮೇಲೆ ಅವರಿಗೆ ಉದಾರ ಅನುದಾನ ರೂಪದಲ್ಲಿ ಪ್ರೋತ್ಸಾಹ ನೀಡಬೇಕು.

(12) ಅವಶ್ಯವಿದ್ದಲ್ಲೆಲ್ಲ ಮಹಮ್ಮದೀಯರ ತರಬೇತಿಗಾಗಿ ಸಾಮಾನ್ಯ ಶಾಲೆ ಇಲ್ಲವೆ ವರ್ಗಗಳನ್ನು ತೆರೆಯತಕ್ಕದ್ದು.

(16) ಮಹಮ್ಮದೀಯರ ಸಲುವಾಗಿ ಇರುವ ಪ್ರಾಥಮಿಕ ಶಾಲೆಗಳ ತಪಾಸಣೆಗಾಗಿ ಈಗಿರುವುದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಮೇಲಾಧಿಕಾರಿಗಳನ್ನು ನೇಮಿಸತಕ್ಕದ್ದು.

(17) ವಿದ್ಯಾವಂತ ಮತ್ತು ಉಳಿದ ಮಹಮ್ಮದೀಯರ ನಡುವೆ ಪೋಷಣೆಗೆ ಸಹಾಯ ಧನವನ್ನು ವಿತರಿಸುವ ಪ್ರಮಾಣದ ಪ್ರಶ್ನೆಯನ್ನು ಸ್ಥಾನಿಕ ಸರಕಾರಗಳ ಗಮನಕ್ಕೆ ತರಬೇಕು.

೨೧. ಮಹಮ್ಮದೀಯರ ಹಿತರಕ್ಷಣೆಗಾಗಿ ಹಂಟರ್ ಕಮಿಷನ್ ಮಾಡಿದ ಪ್ರತಿಯೊಂದು ಶಿಫಾರಸು ದಲಿತರ ಹಿತರಕ್ಷಣೆಗೆ ಅವಶ್ಯವಿದ್ದಿತು. ಆದರೆ ಹಿಂದುಳಿದ ವರ್ಗಗಳಿಗಾಗಿ ಮಾಡಿದ ಹಂಟರ್ ಕಮಿಶನ್‌ದ

ಶಿಫಾರಸುಗಳನ್ನು ವಿಶ್ಲೇಷಿಸಿದರೆ, ಹಿಂದುಳಿದ ವರ್ಗಗಳ ಶಿಕ್ಷಣ ವ್ಯವಸ್ಥೆ ನ್ಯಾಯಯುತವಾಗಿ ಸರಕಾರಿ ಬೊಕ್ಕಸದಿಂದಾಗಬೇಕೆಂಬ ನಿರ್ದೇಶನ, ಶಿಷ್ಯವೇತನಗಳನ್ನು ಮತ್ತು ದತ್ತನಿಧಿಗಳ ಉತ್ಪನ್ನಗಳನ್ನು ಹಿಂದುಳಿದವರಿಗಾಗಿ ಕಾಯ್ದಿರಿಸಬೇಕೆಂಬ, ಹಿಂದುಳಿದವರ ಶೈಕ್ಷಣಿಕ ಅವಶ್ಯಕತೆಗಳನ್ನು ನೋಡಿಕೊಳ್ಳಲು ವಿಶೇಷ ತಪಾಸಣಾ ಅಧಿಕಾರಿಗಳನ್ನು ನಿಯಮಿಸಬೇಕೆಂಬ ಅಥವಾ ಶಿಕ್ಷಣ ಪ್ರಸಾರದ ಮೂಲಕ ಹಿಂದುಳಿದವರಿಗೆ ಸಾರ್ವಜನಿಕ ಪೋಷಣೆ ದೊರೆಯಬೇಕೆಂಬ ನಿರ್ದೇಶನಗಳು ಅದರಲ್ಲಿ ಕಾಣುವುದಿಲ್ಲ. ಹಂಟರ್ ಕಮಿಶನ್ ಹೇಳುವುದಿಷ್ಟೇ– 'ಯಾವುದೇ ಸರಕಾರಿ ಮಹಾವಿದ್ಯಾಲಯ ಇಲ್ಲವೆ ಶಾಲೆಯಲ್ಲಿ ಜಾತಿಯ ಆಧಾರದ ಮೇಲೆ ಯಾರಿಗೂ ಪ್ರವೇಶ ನಿರಾಕರಿಸಲಾಗದು ಎಂಬ ನಿಯಮವನ್ನು ಪುನಃ ಹೇಳಲಾಗಿದೆ ಮತ್ತು ಸಾರ್ವಜನಿಕ ಹಣದಿಂದ ನಡೆಸುವ ಯಾವುದೇ ಪ್ರಾಂತೀಯ, ಮುನಿಸಿಪಲ್ ಇಲ್ಲವೆ ಸ್ಥಾನಿಕ, ಯಾವುದೇ ವಿಶೇಷ ಜನಾಂಗಗಳಿಗಾಗಿ ಮೀಸಲಿರದ, ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚು ಎಚ್ಚರಿಕೆಯಿಂದ ಆ ನಿಯಮವನ್ನು ಅನ್ವಯಿಸಬೇಕು.

(2) ಈಗಾಗಲೇ ಸಾರ್ವಜನಿಕ ನಿಧಿಯಿಂದ ಶಾಲೆಗಳನ್ನು ನಡೆಸುತ್ತಿದ್ದಲ್ಲಿ, ಹಿಂದುಳಿದ ವರ್ಗಗಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗದಿದ್ದಲ್ಲಿ, ಸಾಕಷ್ಟು ಸಂಖ್ಯೆಯಲ್ಲಿ ಹಿಂದುಳಿದವರಿದ್ದಲ್ಲಿ, ಅವರಿಗಾಗಿಯೇ ಪ್ರತ್ಯೇಕ ಶಾಲೆ ಇಲ್ಲವೆ ವರ್ಗಗಳನ್ನು ತೆರೆಯಬೇಕು. "ವಾಸ್ತವಿಕವಾಗಿ, ಮಹಮ್ಮದೀಯರಿಗಾಗಿ ಮಾಡಿದ ಶಿಫಾರಸುಗಳು ಮಹಮ್ಮದೀಯರಿಗಿಂತ ಹಿಂದುಳಿದವರ ಹಿತರಕ್ಷಣೆಗಾಗಿ ಹೆಚ್ಚು ಅವಶ್ಯವಿದ್ದವು. ಏಕೆಂದರೆ, ಮಹಮ್ಮದೀಯರ ಬಗೆಗೆ ಸ್ಪಷ್ಟ ಅನುಕಂಪವಿರುವ ಅಧ್ಯಕ್ಷರನ್ನು ಹೊಂದಿದ ಹಂಟರ್ ಕಮಿಶನ್ ಒಪ್ಪಿರುವಂತೆ–

"೧೮೭೧–೭೩ರಲ್ಲಿ ಮಾಡಿದ ವಿಚಾರಣೆ ಸಿದ್ಧಮಾಡಿದುದೆಂದರೆ– ಉಚ್ಚ ಶಿಕ್ಷಣ ವಿಷಯವನ್ನು ಬಿಟ್ಟರೆ, ಉಳಿದೆಲ್ಲ ವಿಷಯಗಳಲ್ಲಿ ಮಹಮ್ಮದೀಯರು ಹಿಂದುಳಿದಿರುವುದನ್ನು ಅತಿರಂಜಕವಾಗಿ ಹೇಳುವುದೇ ಒಂದು ಪ್ರವೃತ್ತಿಯಾಗಿತ್ತು."

ಆದಾಗ್ಯೂ ಹಂಟರ್ ಕಮಿಷನ್ ಮಾಡಿದ, ಮೇಲೆ ಹೇಳಿದ ಎರಡೇ ಎರಡು ಶಿಫಾರಸುಗಳು ಹಿಂದುಳಿದವರ ಬಗೆಗೆ ಮಾಡಿದ್ದುವಾಗಿದ್ದವು. ಆ ಎರಡು ಶಿಫಾರಸುಗಳು ಹಿಂದುಳಿದವರಿಗೆ ಹೆಚ್ಚು ಒಳ್ಳೆಯದಾಗಲೆಂದು ಯೋಜಿಸಿದವು ಆಗಿರಲಿಲ್ಲ. ಅವು ನಿಷ್ಪ್ರಯೋಜಕ ಆಗುವುದು ನಿಶ್ಚಯವಾಗಿತ್ತು. ನಿರುಪಯುಕ್ತ ತತ್ವ ಒಮ್ಮೆ ಏಕೆ ಐದಾರು ಸಲ ಒತ್ತಿ ಹೇಳಿದರೂ ನಿರುಪಯುಕ್ತವೇ ಆಗಿತ್ತು. ಏಕೆಂದರೆ ಕಮಿಷನ್ ಸೇರಿಸಲಾದ ನಿಬಂಧನೆಯ ಪ್ರಕಾರ ಆ ತತ್ವ ಕಾರ್ಯರೂಪಕ್ಕಿಳಿಯುವುದನ್ನು ತಪ್ಪಿಸುವುದೇ ಆಗಿತ್ತು. ಹಾಗೆ ಹಿಂದುಳಿದವರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು ಅಸಾಧ್ಯವಾಗಿತ್ತು. ಅದಕ್ಕಾಗಿ ಆ ಶಿಫಾರಸು ಕೂಡ ಪರಿಣಾಮ ಶೂನ್ಯ ಆಗುವುದು ನಿಶ್ಚಯವಾಗಿತ್ತು. ಪ್ರಾಥಮಿಕ ಶಿಕ್ಷಣವೇ ಪ್ರಯಾಸದ ಕಾರ್ಯವಾದ ಸರಕಾರಕ್ಕೆ ಹೆಚ್ಚುವರಿ ವೆಚ್ಚ ತರುವ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು ಒಪ್ಪಿತವಾಗಿರಲಿಲ್ಲ. ಅಲ್ಲದೆ, ಅಧಿಕ ಸಂಖ್ಯೆಯಲ್ಲಿ ಹಿಂದುಳಿದವರಿದ್ದಲ್ಲಿ ಪ್ರತ್ಯೇಕ ಶಾಲೆಗಳನ್ನು ತೆರೆಯಬೇಕೆಂಬ ನಿಬಂಧನೆಯಷ್ಟೇ ಆ ಶಿಫಾರಸನ್ನು ನಿಷ್ಕ್ರಿಯಗೊಳಿಸಲು ಸಾಕಾಯಿತು. ಏಕೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳು ಒಂದೇ ಕಡೆಗೆ ಅಧಿಕ ಸಂಖ್ಯೆಯಲ್ಲಿ ದೊರೆಯುವುದು ಅಸಾಧ್ಯ.

೨೨. ಹಂಟರ್ ಕಮಿಷನ್ ಹಿಂದುಳಿದ ವರ್ಗಗಳ ಶೈಕ್ಷಣಿಕ ಅವಶ್ಯಕತೆಗಳ ಕಡೆಗೆ ಇಷ್ಟೊಂದು ನಿರ್ಲಕ್ಷ್ಯ ವಹಿಸಿದುದಕ್ಕೆ ಕಾರಣ ತಿಳಿಯುವುದು ಕಠಿಣ. ಮಹಮ್ಮದೀಯರ ಬಗೆಗೆ ಉದಾರ ಮನೋಭಾವ ತಾಳುವುದು ಕಮಿಷನ್‌ಗೆ ಅವಶ್ಯವೆನಿಸಿದರೆ, ಮಹಮ್ಮದೀಯರಿಗಿಂತಲೂ ಶಿಕ್ಷಣ, ಹಣ ಮತ್ತು ಸಾಮಾಜಿಕ

ಸ್ಥಾನ ಮುಂತಾದವುಗಳಲ್ಲಿ ಬಹಳ ಹಿಂದುಳಿದ ಹಿಂದುಳಿದವರೊಂದಿಗೆ ಉದಾರ ಮನೋಭಾವದಿಂದ ವರ್ತಿಸುವುದು ನ್ಯಾಯಯುತವೆಂಬುದು ತೋರಬೇಕಾಗಿತ್ತು. ಹಂಟರ್ ಕಮೀಶನ್ ಹಿಂದುಳಿದವರನ್ನು ಒಮ್ಮೆ ಹಿಂದೆ ಸರಿಸಿದ ಬಳಿಕ ಅವರು ಅಲ್ಲೇ ಉಳಿದುಬಿಟ್ಟರು ಮತ್ತು ಸರಕಾರ ಅವರ ಕಡೆಗೆ ಗಮನ ಹರಿಸಲೇ ಇಲ್ಲ. ಸರಕಾರದ ಈ ನಿರ್ಲಕ್ಷ್ಯದ ಒಂದು ಉದಾಹರಣೆಗಾಗಿ ೧೯೨೩ರ ಫೆಬ್ರುವರಿ ೨೧ರಂದು ದೆಹಲಿಯಲ್ಲಿ ಭಾರತ ಸರಕಾರದ ಶಿಕ್ಷಣ ಇಲಾಖೆ ಮಾಡಿದ ಗೊತ್ತುವಳಿಯ ಕಡೆಗೆ ಗಮನ ಸೆಳೆಯಬಹುದು. ಅದು ಭಾರತ ಸರಕಾರ ಹೊರಡಿಸಿದ ಅತ್ಯಂತ ಮಹತ್ವದ ಗೊತ್ತುವಳಿಗಳಲ್ಲಿ ಒಂದಾಗಿತ್ತು. ಹಣ ಲಭ್ಯವಾದಂತೆ, ಸಾಮ್ರಾಜ್ಯದ ಹಣಕಾಸಿನಿಂದ ಸ್ಥಾನಿಕ ಸರಕಾರಗಳಿಗೆ ಅಧಿಕ ಅನುದಾನ ಕೊಡುವುದರ ಮೂಲಕ ಅನೇಕ ಪ್ರಾಂತಗಳಿಗೆ ಸಮಗ್ರ ಶೈಕ್ಷಣಿಕ ಸೌಲಭ್ಯವನ್ನು ವಿಸ್ತರಿಸಲು ಆ ಗೊತ್ತುವಳಿ ನಿರ್ಧರಿಸಿತು. ಆ ಗೊತ್ತುವಳಿಯಲ್ಲಿ ಭಾರತದಲ್ಲಿ ನೆಲೆಸಿದ ಸಮುದಾಯ ಮತ್ತು ಮಹಮ್ಮದೀಯ ಸಮುದಾಯಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪ್ರಾಂತೀಯ ಸರಕಾರಗಳಿಗೆ ಸೂಚಿಸುವಲ್ಲಿ ಭಾರತ ಸರಕಾರ ವಿಶೇಷ ಆಸ್ಥೆ ವಹಿಸಿತ್ತು. ಆದರೆ ಹಿಂದುಳಿದ ವರ್ಗಗಳ ವಿಷಯಕ್ಕೆ ಇಡಿ ಗೊತ್ತುವಳಿಯಲ್ಲಿ ಒಂದು ಶಬ್ದವೂ ಇದ್ದಿರಲಿಲ್ಲ. ಆ ಸೂಚನೆಯನ್ನು ಮುಂಬಯಿ ಸರಕಾರ ಕೂಡಲೇ ಒಪ್ಪಿಕೊಂಡು ಮಹಮ್ಮದೀಯರಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ೧೯೧೩ರಲ್ಲಿ ಶಿಕ್ಷಣ ಸಮಿತಿಯಲ್ಲಿ ಒಬ್ಬ ಮಹಮ್ಮದೀಯನನ್ನು ನೇಮಿಸಿತು. ಸರಕಾರ ಹಿಂದುಳಿದ ವರ್ಗಗಳ ವಿಷಯಕ್ಕೆ ತೋರಿದ ಅಪರಾಧ ಸದೃಶ ತಾತ್ಸಾರದ ವಿರುದ್ಧ ರೊಚ್ಚಿಗೇಳುವುದು ಸರಿ ಎನಿಸುತ್ತದೆ. ಅದರಲ್ಲಿಯೂ ೧೯೧೩ರ ನಂತರ ಭಾರತ ಸರಕಾರ ಕೊಟ್ಟ ಬಹುಪಾಲು ಅನುದಾನ, ಜನವರಿ ೬ರಂದು ಕಲಕತ್ತಾ ವಿಶ್ವವಿದ್ಯಾಲಯದ ಬಿನ್ನವತ್ತಳೆಗೆ ಉತ್ತರ ರೂಪವಾಗಿ ಘನ ಚಕ್ರವರ್ತಿಗಳು ಮಾಡಿದ ಘೋಷಣೆಯನ್ನು ಈಡೇರಿಸುವುದಕ್ಕಾಗಿ ಕೊಟ್ಟದ್ದು ಎಂದಾಗ ರೊಚ್ಚಿಗೇಳುವುದು ಸರಿ ಎನಿಸುತ್ತದೆ:

> "ದೇಶದ ತುಂಬ ಶಾಲೆ ಕಾಲೇಜುಗಳ ಜಾಲ ಹರಡಲೆಂಬುದು ನನ್ನ ಆಶೆ. ಆ ಶಾಲೆ ಕಾಲೇಜುಗಳಿಂದ ತಮ್ಮ ಔದ್ಯೋಗಿಕ ಸ್ಥಾವರಗಳನ್ನು, ಒಕ್ಕಲುತನವನ್ನು, ಉದ್ಯೋಗಗಳನ್ನು ನೋಡಿಕೊಳ್ಳಬಲ್ಲ ವಿಧೇಯ, ಸಬಲ ಮತ್ತು ಉಪಯುಕ್ತ ನಾಗರಿಕರು ಹೊರಬರಬೇಕೆಂದು ನನ್ನ ಅಭೀಪ್ಸೆ. ಜ್ಞಾನ ಪ್ರಸಾರದಿಂದ ಮತ್ತು ಅದರಿಂದ ಲಭಿಸುವ ಉಚ್ಚ ಮಟ್ಟದ ವಿಚಾರ, ಬಿಡುವು ಮತ್ತು ಆರೋಗ್ಯಗಳಿಂದ ನನ್ನ ಭಾರತೀಯ ಪ್ರಜೆಗಳೆಲ್ಲರ ಮನೆ ಬೆಳಗಲಿ ಮತ್ತು ಶ್ರಮ ಸುಖದಾಯಿ ಆಗಲೆಂದೂ ನನ್ನ ಅಭೀಪ್ಸೆ. ಶಿಕ್ಷಣದ ಮುಖಾಂತರವೇ ನನ್ನ ಆಶೆ ಈಡೇರುವುದು ಮತ್ತು ಭಾರತದಲ್ಲಿ ಶಿಕ್ಷಣದ ವಿಷಯ ಯಾವಾಗಲೂ ನನ್ನ ಹೃದಯಕ್ಕೆ ಹತ್ತಿರವಾಗಿರುತ್ತದೆ."

## IV

ಬ್ರಿಟಿಷ್ ಸರಕಾರದಿಂದ ಅವಧಿಯಲ್ಲಾದ ಸಮಾಜ ಸುಧಾರಣೆಯ ಬಗೆಗೆ ಏನು ಹೇಳುವುದು?

ರಾಜಾ ಸರ್ ಮಾಧವರಾವ್ ಎಂಬ ಕಳೆದ ತಲೆಮಾರಿನ ಪ್ರಮುಖ ಹಾಗೂ ಪ್ರಗತಿಪರ ಹಿಂದೂ ಹೇಳಿದ್ದೇನೆಂದರೆ:

> "ದೀರ್ಘ ಅವಧಿ ಬದುಕಿದಷ್ಟು, ಹೆಚ್ಚು ನಿರೀಕ್ಷೆ ಮಾಡಿದಷ್ಟು, ಹೆಚ್ಚು ವಿಚಾರ ಮಾಡಿದಷ್ಟು, ರಾಜಕೀಯ ಕೆಡುಕುಗಳಿಗಿಂತಲೂ ತಪ್ಪಿಸಬಹುದಾದಂಥ, ಹೆಚ್ಚಾಗಿ ಸ್ವತಃ ಸೃಷ್ಟಿಸಿದಂಥ, ಸ್ವತಃ ಆಹ್ವಾನಿಸಿದ, ಕೆಡುಕುಗಳಿಂದ ನರಳುವ ಸಮಾಜ ಈ ಭೂಮಿಯ ಮೇಲೆ ಹಿಂದೂ ಸಮಾಜಕ್ಕಿಂತ ಬೇರೊಂದಿಲ್ಲ ಎಂದು ತೀವ್ರವಾಗಿ ಅನಿಸುತ್ತದೆ."

ಈ ಹೇಳಿಕೆಯ ತುಲನಾತ್ಮಕ ಬೆಲೆಯನ್ನು ಲಕ್ಷಿಸದಿದ್ದರೂ, ಸ್ಪಷ್ಟ ತಿಳಿಯುವ ವಿಷಯವೆಂದರೆ, ಸಾಮಾಜಿಕ ಕೆಡಕುಗಳಿಂದ ಹಿಂದೂ ಸಮಾಜ ಬಾಧಿಸಲ್ಪಟ್ಟಷ್ಟು ಬೇರಾವ ಸಮಾಜವೂ ಬಾಧಿಸಲ್ಪಟ್ಟಿಲ್ಲ.

ಮೊದಲಿನ ಸಮಾಜ ಸುಧಾರಕರಲ್ಲಿ ಮತ್ತೊಬ್ಬ ಪೂಜ್ಯ ವ್ಯಕ್ತಿ ಎಂದರೆ ಮಹಾದೇವ ಗೋವಿಂದ ರಾನಡೆ ಅವರು ಒಂದು ಮಹತ್ವದ ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆ ಹಿಂದೂ ಸಮುದಾಯದ ಮತ್ತೊಂದು ಮುಖವನ್ನು ಕುರಿತು ಒತ್ತಿ ಹೇಳುತ್ತದೆ:

> "ಕೇವಲ ತುರ್ತು ಅವಶ್ಯಕತೆಯ ಇಲ್ಲವೆ ಆರ್ಥಿಕ ಲಾಭ ಇಲ್ಲವೆ ಹಾನಿಯ ಲೆಕ್ಕಾಚಾರ ಯಾವುದೇ ಸಮುದಾಯವನ್ನು, ವಿಶೇಷವಾಗಿ ಸಂಪ್ರದಾಯ ಮತ್ತು ಪ್ರಭುಶಕ್ತಿಯ ಬಂಧನದಲ್ಲಿರುವ ನಮ್ಮಂಥ ಸಮುದಾಯವನ್ನು ಸಮಾಜ ಸುಧಾರಣೆಗಳನ್ನು ಕೈಗೆತ್ತಿಕೊಳ್ಳಲು ಮತ್ತು ಅವುಗಳನ್ನು ಪೂರ್ತಿಮಾಡಲು ಎಂದೂ ಪ್ರೇರೇಪಿಸುವುದಿಲ್ಲ. ನಮ್ಮ ಕೆಲವು ಸಾಮಾಜಿಕ ಸಂಪ್ರದಾಯಗಳು ಕೆಡುಕಿನಿಂದ ತುಂಬಿವೆ ಎಂದು ನಮ್ಮ ಜನರ ಪ್ರಾಮಾಣಿಕ ಅನಿಸಿಕೆ. ಆದರೆ ಈ ಕೆಡುಕು ತಾತ್ಪೂರ್ತಿಕ ಸ್ವರೂಪದ್ದಾಗಿರುವುದರಿಂದ ಅದನ್ನು ತೊಡೆದು ಹಾಕಲು ದೈವೀ ಆದೇಶಗಳನ್ನು ಉಲ್ಲಂಘಿಸುವುದು ಸಮರ್ಥನೀಯ ಅಲ್ಲವೆಂದೂ, ಅದರಿಂದ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದೂ ಅವರು ಯೋಚಿಸುತ್ತಾರೆ. ಸತ್ಯವೇನೆಂದರೆ ಸಂಪ್ರದಾಯಬದ್ಧ ಸಮಾಜ ತನ್ನ ಜೀವಶಕ್ತಿಯನ್ನು ಕಳೆದುಕೊಂಡಿರುತ್ತದೆ. ಅದು ಯಾವ ಸುಧಾರಣೆಗೂ ಮುಂದಾಗದು, ಇಲ್ಲವೆ ಯಾವುದೇ ಸುಧಾರಣೆಯ ಬಗೆಗೆ ಸಹಾನುಭೂತಿ ತೋರಲಾರದು."

ಬೇರೆ ಮಾತಿನಲ್ಲಿ ಹೇಳುವುದಾದರೆ, ಎಲ್ಲ ಸಾಮಾಜಿಕ ಕೆಡುಕುಗಳು ಧರ್ಮಾಧಾರಿತವಾಗಿ ಏನೇ ಮಾಡಿದರೂ ಹಿಂದೂ ಪುರುಷ ಇಲ್ಲವೆ ಸ್ತ್ರೀ ಅದೊಂದು ಧಾರ್ಮಿಕ ವಿಧಿಯೆಂದೇ ಮಾಡುವನು. ಹಿಂದೂವಿಗೆ ಉಣ್ಣುವುದು, ಕುಡಿಯುವುದು, ಸ್ನಾನ ಮಾಡುವುದು, ಬಟ್ಟೆ ತೊಡುವುದು, ಹುಟ್ಟುವುದು, ಮದುವೆಯಾಗುವುದು, ಸಾಯುವುದು ಮತ್ತು ಚಿತೆಗೆ ಅಗ್ನಿಸ್ಪರ್ಶ ಮಾಡುವುದು ಎಲ್ಲವೂ ಧಾರ್ಮಿಕ ಕ್ರಿಯೆಯೇ ಆಗಿರುತ್ತದೆ. ಅವನು ಮಾಡುವುದೆಲ್ಲವೂ ಪವಿತ್ರ. ಜಾತ್ಯತೀತ ದೃಷ್ಟಿಗೆ ಅವು ಎಷ್ಟೇ ಕೆಡುಕಾಗಿ ಕಂಡರೂ ಅವನಿಗೆ ಅವು ಪಾಪಗಳಲ್ಲ. ಏಕೆಂದರೆ ಅವುಗಳಿಗೆ ತನ್ನ ಧರ್ಮದ ಒಪ್ಪಿಗೆ ಮತ್ತು ನಿಬಂಧನೆ ಇರುತ್ತವೆ. ಯಾರಾದರೂ ಹಿಂದೂವಿಗೆ ನೀನು ಪಾಪ ಮಾಡುತ್ತೀ ಎಂದರೆ, ಅವನ ಉತ್ತರ, 'ನಾನು ಪಾಪ ಮಾಡಿದರೆ ಧರ್ಮಾನುಸಾರಿಯಾಗಿ ಪಾಪ ಮಾಡುತ್ತೇನೆ' ಎಂದಿರುತ್ತದೆ.

ಸಮಾಜ ಯಾವಾಗಲೂ ಸಂಪ್ರದಾಯಬದ್ಧವಿರುತ್ತದೆ. ಬದಲಾಗಲು ಒತ್ತಾಯಿಸದ ಹೊರತು ಅದು ಬದಲಾಗುವುದಿಲ್ಲ. ಬದಲಾದರೂ ಬಹಳ ನಿಧಾನವಾಗಿ ಬದಲಾಗುತ್ತದೆ. ಬದಲಾವಣೆ ನಡೆದಾಗ ಹಳೆಯ ಮತ್ತು ಹೊಸದರ ನಡುವೆ ಘರ್ಷಣೆ ಇದ್ದೇ ಇರುತ್ತದೆ. ಹೊಸದಕ್ಕೆ ನೆರವು ದೊರೆಯದಿದ್ದರೆ, ಅಸ್ತಿತ್ವದ ಹೋರಾಟದಲ್ಲಿ ಅದು ಅಳಿಸಿಹೋಗುವ ಸಂಭವವಿರುತ್ತದೆ. ಬದಲಾವಣೆ ಯಶ ಕಾಣಬೇಕಾದ ಭರವಸೆಯ ಮಾರ್ಗವೆಂದರೆ ಅದಕ್ಕೆ ಕಾಯಿದೆಯ ನೆರವು ಪಡೆಯುವುದು. ಕಾಯಿದೆಯ ಸಹಾಯವಿಲ್ಲದೆ ಯಾವ ಕೆಡುಕನ್ನೂ ಸುಧಾರಿಸಲು ಸಾಧ್ಯವಿಲ್ಲ. ಕೆಡುಕಿಗೆ ಧರ್ಮದ ಆಧಾರವಿದ್ದಾಗ ಕಾಯಿದೆಯ ಸಹಾಯದ ಅವಶ್ಯಕತೆ ಸಾಧ್ಯವಿಲ್ಲ. ಕೆಡುಕಿಗೆ ಧರ್ಮದ ಆಧಾರವಿದ್ದಾಗ ಕಾಯಿದೆಯ ಸಹಾಯದ ಅವಶ್ಯಕತೆ ಹೆಚ್ಚಿರುತ್ತದೆ. ಒಟ್ಟಿನಲ್ಲಿ ಬ್ರಿಟಿಷ್ ಸರಕಾರದಲ್ಲಿ ಸಮಾಜ ಸುಧಾರಣೆಯ ಪರವಾಗಿದ್ದ ಕಾಯಿದೆಗಳಾವುವು? ಸಮಾಜ

ಸುಧಾರಣೆಯ ವಿಷಯದಲ್ಲಿ ಬ್ರಿಟಿಷ್ ಸರಕಾರದ ದಾಖಲೆ ನಿಧಾನಗತಿಯದು ಮತ್ತು ನಿರಾಶಾದಾಯಕವೂ ಆಗಿರುತ್ತದೆ. ೧೫೦ ವರ್ಷಗಳ ಅವಧಿಯಲ್ಲಿ ಆರೇ ಆರು ಸಾಮಾಜಿಕ ಕೆಡುಕುಗಳು ಕಾಯಿದೆಯ ಅಡಿಯಲ್ಲಿ ಬಂದಿರುತ್ತವೆ. ಬ್ರಿಟಿಷರು ಮೊಟ್ಟಮೊದಲು ಕೈಕೊಂಡ ಸಾಮಾಜಿಕ ಕಾಯಿದೆ ಬಂಗಾಳದ ೧೭೯೫ರ XXIರ ಕಾಯಿದೆಯಲ್ಲಿ ಸೇರ್ಪಡೆಯಾಗಿರುತ್ತದೆ. ಈ ಕಾಯಿದೆ ಬನಾರಸ ಪ್ರಾಂತದಲ್ಲಿ ಬ್ರಾಹ್ಮಣರು ಕೂರ್ಹಸ್(Koorhas)ನ್ನು ಸ್ಥಾಪಿಸುವುದನ್ನು ತಡೆಯುತ್ತದೆ. ಕೂರ್ಹಸ್ ಕೆಳಗೆ ತಮ್ಮ ಸಂಬಂಧಿ ಸ್ತ್ರೀಯರನ್ನು ಇಲ್ಲವೆ ಹೆಣ್ಣುಕೂಸುಗಳನ್ನು ಗಾಯಗೊಳಿಸುವುದು ಇಲ್ಲವೆ ಕೊಲ್ಲುವುದು, ಇಲ್ಲವೆ ಧರಣಿ ಕೂಡುವುದು ಬರುತ್ತದೆ. ಅದು ಆ ಪ್ರಾಂತದ ರಾಜಕುಮಾರರ ಪಂಗಡವು ತಮ್ಮ ಹೆಣ್ಣುಕೂಸುಗಳನ್ನು ಕೊಲ್ಲುವುದನ್ನು ತಡೆಯುತ್ತದೆ. ಅದು ಈ ಕೆಳಗಿನಂತೆ ಕಾಯಿದೆ ರೂಪ ತಾಳಿರುತ್ತದೆ.

## ಪ್ರಸ್ತಾವನೆ

I. ಬ್ರಾಹ್ಮಣರಿಗೆ ಹಿಂದೂಗಳು ತೋರಿದ ಗೌರವ, ಬ್ರಾಹ್ಮಣರ ಪಾವಿತ್ರ್ಯದ ಪ್ರಶ್ನಾತೀತತೆ, ಸಾವಿನಿಂದುಂಟಾಗುವ ಪಾವಿತ್ರ್ಯ ಹಾನಿ ಇಲ್ಲವೆ ಜಾತಿಯ ಬಗೆಗಿದ್ದ ಪೂರ್ವಗ್ರಹಿಕೆ ಇವೆಲ್ಲ, ಬನಾರಸ ಪ್ರಾಂತದ ಕೆಲವು ಸ್ಥಳಗಳಲ್ಲಿ, ವಿಶೇಷವಾಗಿ ಕುಂತಿತ್ ಮತ್ತು ಬುದ್ದೊ ಪರಗಣಗಳಲ್ಲಿಯ ಹೆಚ್ಚು ಅಶಿಕ್ಷಿತ ಭಾಗಗಳಿಂದ, ಯಾರ ಬಳಿಗೆ ಕೆಲಸಕ್ಕೆ, ಸೇರಬೇಕಾದ ದುರ್ಭಾಗ್ಯವಿರುವುದೋ ಅಂಥವರ ಭೀತಿಯಿಂದ, ಕಾಯಿದೆಯನ್ನು ಧಿಕ್ಕರಿಸುವ ಸಾಧನಗಳಾಗಿ ಪರಿವರ್ತನೆಗೊಂಡಿರುತ್ತವೆ. ಅಂಥ ಸಂದರ್ಭಗಳಲ್ಲಿ ಆಗಾಗ ಬಳಸಲಾದ ವಿಧಾನಗಳು ಹೀಗಿರುತ್ತವೆ: ಚಾಕು ಚೂರಿಗಳಿಂದ ಮೈಗೆ ಇರಿದು ರಕ್ತ ಬರಿಸುವುದು, ವಿಷಕಾರಿ ಪುಡಿ ಸೇವಿಸುವುದಾಗಿ, ಒಮ್ಮೊಮ್ಮೆ ವಿಷವನ್ನೂ ಸೇವಿಸಿ, ಬೆದರಿಸುವುದು. ಕೂರ್ಹ್ (Koorh) ಎಂಬ ವರ್ತುಲಾಕಾರದ ಬೇಲಿ ನಿರ್ಮಿಸಿ ಅದರಲ್ಲಿ ಕಟ್ಟಿಗೆ ಇಲ್ಲವೆ ಇತರ ಉರುವಲು ಒಟ್ಟುವುದು ಮತ್ತು ನಿಜವಾಗಿ ಅಥವಾ ಸುಳ್ಳು ಉಪವಾಸ ಮಾಡುವುದು, ಸರಕಾರದ ಪರವಾಗಿ ಬಲಾತ್ಕಾರ ಮಾಡಲು ಅದರ ಪ್ರತಿನಿಧಿಗಳಾರಾದರೂ ಬಂದ ಸಂದರ್ಭದಲ್ಲಿ ಕೂರ್ಹ್‌ಕ್ಕೆ ಬೆಂಕಿ ಇಟ್ಟು ಬಲಿ ಕೊಡುವ ಉದ್ದೇಶದಿಂದ ಒಬ್ಬ ಮುದುಕಿಯನ್ನೆ ಅದರಲ್ಲಿ ಕೂಡಿಸುವುದು. ಅದೇ ರೀತಿ ಈ ಬ್ರಾಹ್ಮಣರು, ನ್ಯಾಯಯುತವಾಗಿ ಇಲ್ಲವೆ ಅನ್ಯಾಯವಾಗಿ ತಾವು ಅನುಭವಿಸಿದ ಹಾನಿಗೆ ನಿಗದಿತ ಅವಧಿಯೊಳಗೆ ಪರಿಹಾರ ದೊರೆಯದಿದ್ದಾಗ ಕೂಡ ಒಮ್ಮೊಮ್ಮೆ ತಮ್ಮ ಹೆಂಗಸರು ಮತ್ತು ಮಕ್ಕಳನ್ನು ಮನೆಯ ಹೊರಗೆ ಕರೆತಂದು, ಸರಕಾರದ ಪರವಾಗಿ ಬಂದ ಜವಾನನ ಅಥವಾ ಪ್ರತಿನಿಧಿಗಳ ಎದುರು ಕೂಡಿಸಿ, ಖಡ್ಗವನ್ನು ಝಳಪಿಸಿ, ಅವರ ಸಹಾಯಕ್ಕೆಂದು ಜವಾನ ಬಂದಾಗ ಅವರ ರುಂಡ ಕತ್ತರಿಸುವ ಇಲ್ಲವೆ ಕೊಲ್ಲುವ ಬೆದರಿಕೆ ಹಾಕುವುದು, ಇಲ್ಲವೆ ಪ್ರತ್ಯಕ್ಷ ಕೊಲ್ಲುವುದು. ಬಂಧನಕ್ಕೊಳಪಡುವುದಕ್ಕೆ ಇಷ್ಟಪಡದೆ, ಅವರು ಪ್ರತ್ಯಕ್ಷ ತಮ್ಮ ದೇಹಕ್ಕೆ ಗಾಯಮಾಡಿಕೊಂಡಿರುವುದಷ್ಟೇ ಅಲ್ಲ, ತಮ್ಮ ಮನೆಯ ಹೆಂಗಸರನ್ನು ಇಲ್ಲವೇ ಹೆಂಗಸರನ್ನು ಸ್ವತಃ ತಮ್ಮ ಕತ್ತಿಯಿಂದ ಕೊಂದ ಉದಾಹರಣೆಗಳಿರುತ್ತವೆ. ಹೆಂಗಸರು ಕೂಡ ಇಂಥ ಶಿಕ್ಷೆಗೆ ಬಲಿಯಾಗಲು ಯಾವಾಗಲೂ ಒಪ್ಪದೆ ಇರುವುದಿಲ್ಲ. ತದ್ವಿರುದ್ಧ, ಪ್ರತಿಕೂಲ ವಾತಾವರಣದಲ್ಲಿ ಬೆಳೆಸಲ್ಪಟ್ಟಿರುವುದರಿಂದ, ಸಂತೋಷದಿಂದ ತಮ್ಮನ್ನು ಅರ್ಪಿಸುವುದು ಕಡ್ಡಾಯವೆಂದು ಅವರು ಭಾವಿಸುತ್ತಾರೆ. ಅದಕ್ಕೆ ಕಾರಣ, ಹೀಗೆ ವರ್ತಿಸುವುದರಿಂದ ಗೌರವ ಸಿಗುವುದೆಂಬ ತಪ್ಪು ಗ್ರಹಿಕೆ, ಇಲ್ಲವೆ ತಿರಸ್ಕಾರ, ಇಲ್ಲವೇ ಸೇಡಿನ ಉದ್ದೇಶ. ಏಕೆಂದರೆ, ತಾವು ಸತ್ತ ಬಳಿಕ ತಮ್ಮನ್ನು ಬಲಿ

ತೆಗೆದುಕೊಂಡವರ ಪೀಡಕರಾಗುವ ಉದ್ದೇಶ. ಅದೇ ತರಹದ ತತ್ವವನ್ನು ಆಧರಿಸಿ ಈ ಬ್ರಾಹ್ಮಣರು ತಮಗೆ ಸಂದಬೇಕಾದುದನ್ನು ನ್ಯಾಯಯುತವಾಗಿ ಮರಳಿ ಪಡೆಯುವ ಇಲ್ಲವೆ ಉದಾರ ದಾನ ಪಡೆಯುವ ಉದ್ದೇಶದಿಂದ, ಪುನಃ ಪುನಃ ಹರಿತವಾದ ಆಯುಧ ಹಿಡಿದು ಇಲ್ಲವೆ ವಿಷ ಹಿಡಿದು, ಅದೇ ನಗರ ಇಲ್ಲವೆ ಹಳ್ಳಿಯ ಬೇರೊಬ್ಬ ನಿವಾಸಿಯ ಮನೆಯ ಬಾಗಿಲಿಗೆ ಹೋಗುತ್ತಾರೆ ಮತ್ತು ಅಲ್ಲಿ ಧರಣಿ ಕೂಡುತ್ತಾರೆ. ಈ ವಿಷಯದ ಬಗೆಗೆ ತಿಳಿದುಬರುವ ಗ್ರಹಿತ ಅಭಿಪ್ರಾಯದ ಪ್ರಕಾರ, ಅವರು ತಮ್ಮ ಉದ್ದೇಶ ಈಡೇರುವವರೆಗೆ ಉಪವಾಸ ಕೂಡುತ್ತಾರೆ. ಅದೇ ರೀತಿ ಈ ಪರಿಸ್ಥಿತಿಗೆ ಕಾರಣರಾದವರು (ಸಾಲಗಾರರು ಇಲ್ಲವೆ ವಾಗ್ದಾನ ಮಾಡಿದವರು) ಕೂಡ ಋಣಮುಕ್ತರಾಗುವವರೆಗೆ ಆಹಾರ ಸೇವಿಸದಿರುವುದು ಅಷ್ಟೇ ಅವಶ್ಯ. ಉದ್ದೇಶಿತ ಕಾರ್ಯ ಕೈಗೂಡುವವರೆಗೆ, ಹೊರಗಿನವರು ಆ ಮನೆಯೊಳಗೆ ಹೋಗುವುದನ್ನಾಗಲಿ ಮನೆಯ ಒಳಗಿನವರು ಹೊರಗೆ ಬರುವುದನ್ನಾಗಲಿ ತಡೆಯಲಾಗುವುದು. ಗ್ರಹಿತ ತಿಳುವಳಿಕೆಯ ಪ್ರಕಾರ ಯಾವುದನ್ನೂ ಯತ್ನಿಸುವಂತಿಲ್ಲ. ಹಾಗೆ ಮಾಡಿದ್ದಾದರೆ ಬ್ರಾಹ್ಮಣನು ತನ್ನನ್ನು ತಾನು ಇರಿದುಕೊಳ್ಳುತ್ತಾನೆ ಇಲ್ಲವೆ ತನ್ನಲ್ಲಿದ್ದ ವಿಷವನ್ನು ಬಳಸಿ ಸೇವಿಸುತ್ತಾನೆ. ಈ ಬ್ರಾಹ್ಮಣರು ಧರಣಿ ಕೂಡುವುದನ್ನು ಹೆಚ್ಚಾಗಿ ನ್ಯಾಯಾಲಯದ ಅಧಿಕಾರಿಗಳಿಂದ ತಪ್ಪಿಸಲಾಗುವುದು. ಸರಕಾರದ ರಕ್ಷಣೆಯಲ್ಲಿದ್ದಾಗ ಬ್ರಾಹ್ಮಣರು ಆತ್ಮಹತ್ಯೆಗೆ ಯತ್ನಿಸುವುದಾಗಲಿ, ತಮ್ಮನ್ನು ಇಲ್ಲವೆ ಅನ್ಯರನ್ನು ಗಾಯಗೊಳಿಸುವುದಾಗಲಿ ಮಾಡುವುದಿಲ್ಲವೆಂದು ಅನುಭವದಿಂದ ತಿಳಿದ ವಿಷಯವಾಗಿರುತ್ತದೆ. ಈ ದುರುಪಯೋಗಗಳಿಗೆ ಪೂರ್ಣವಿರಾಮ ಹೇಳುವುದಕ್ಕಾಗಿ ಮತ್ತು ಅದಕ್ಕಿಂತ ಅನಾಗರಿಕ ಅನಿಷ್ಟ ಪದ್ಧತಿಯನ್ನು– ತೀರ ಇತ್ತೀಚಿನವರೆಗೆ ಜುನಾಪುರ ಪ್ರಾಂತದ ಗಡಿಯಲ್ಲಿ ವಾಸಿಸುತ್ತಿದ್ದ ರಾಜಕುಮಾರರ ಪಂಗಡದಲ್ಲಿ ಪ್ರಚಲಿತವಿದ್ದು, ಆಹಾರವನ್ನು ಕೊಡದೆ ಹಸಿವೆಯಿಂದ ಹಿಂಸಿಸಿ ತಮ್ಮ ಹೆಂಗೂಸುಗಳನ್ನು ಕೊಲ್ಲುವ ನಾಗರಿಕ ಪದ್ಧತಿಯ ಮರುಹುಟ್ಟನ್ನು ತಪ್ಪಿಸುವುದಕ್ಕಾಗಿ ರೂಪಿಸಿದ ನಿಯಮ ಮತ್ತು ಕ್ರಮಗಳಿಗೆ, ಸ್ವಲ್ಪ ಬದಲಾವಣೆಯೊಂದಿಗೆ ಕಾಯಿದೆಯ ರೂಪ ಕೊಡಲಾಗಿದೆ.

**ಬ್ರಾಹ್ಮಣರು ಕೂರ್ಹ್(Koorh)ನ್ನು ನಿರ್ಮಿಸುವುದು, ಅಂಗವಿಕಲರನ್ನಾಗಿ ಮಾಡುವುದು, ಗಾಯಗೊಳಿಸುವುದು ಇಲ್ಲವೆ ತಮ್ಮ ಹೆಂಗಸರನ್ನು ಇಲ್ಲವೆ ಮಕ್ಕಳನ್ನು ಕೊಲ್ಲುವುದರ ವಿರುದ್ಧ ಕಾಯಿದೆ:**

II. ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರು ಪ್ರಸ್ತಾವನೆಯಲ್ಲಿ ವಿವರಿಸಿದ ರೀತಿಯಲ್ಲಿ ಕೂರ್ಹ್ ನಿರ್ಮಿಸುವ, ತಮ್ಮ ಹೆಂಗಸರು ಇಲ್ಲವೆ ಮಕ್ಕಳನ್ನು ಅಂಗಹೀನಗೊಳಿಸುವ ಇಲ್ಲವೆ ಕೊಲ್ಲುವ ತಯಾರಿಯಲ್ಲಿರುವುದರ ಬಗೆಗೆ ಇಲ್ಲವೆ ಅದನ್ನು ಹೋಲುವ ಬೇರೆ ಯಾವುದಾದರೂ ವ್ಯಾಜ್ಯದ ಘಟನೆಯ ಬಗೆಗೆ ನಗರ ಇಲ್ಲವೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಲಿಖಿತ ಮಾಹಿತಿ ದೊರಕಲು, ಆ ಮಾಹಿತಿಯನ್ನು ಪ್ರತಿಜ್ಞಾ ವಿಧಿಯ ಮೂಲಕ ಖಚಿತಪಡಿಸಿಕೊಂಡು ಮ್ಯಾಜಿಸ್ಟ್ರೇಟರು ಕೂಡಲೇ ಈ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರಿಗೆ ಪರ್ಷಿಯನ್ ಲಿಪಿಯಲ್ಲಿ ಇಲ್ಲವೆ ಹಿಂದುಸ್ತಾನಿ ಭಾಷೆ ಮತ್ತು ಲಿಪಿಯಲ್ಲಿ ತನ್ನ ಮುದ್ರೆಯಡಿಯಲ್ಲಿ ಲಿಖಿತ ನೋಟೀಸನ್ನು ಕೊಡತಕ್ಕದ್ದು. ಆ ನೋಟೀಸನ್ನು, ಅವರ ಸಂಬಂಧಿಕರ, ಸ್ನೇಹಿತರ ಇಲ್ಲವೆ ಅವರೊಂದಿಗೆ ಸಂಪರ್ಕವಿಟ್ಟುಕೊಂಡವರ, ಮ್ಯಾಜಿಸ್ಟ್ರೇಟರು ತಮಗೆ ಸರಿ ಕಂಡವರ ಮುಖಾಂತರ, ಅಂಥವರಾರೂ ದೊರೆಯದ ಪಕ್ಷ, ಅವರ ಧರ್ಮದವನೇ ಆದ ಜವಾನನೊಬ್ಬನ ಮುಖಾಂತರ ನೋಟೀಸು ಜಾರಿಗೊಳಿಸತಕ್ಕದ್ದು. ಆ ನೋಟೀಸಿನ ಆದೇಶದ ಪ್ರಕಾರ ಆ ಬ್ರಾಹ್ಮಣ

ಇಲ್ಲವೆ ಬ್ರಾಹ್ಮಣರು ಕೂರ್ಪ್‌ನ್ನು ತೆಗೆದುಹಾಕತಕ್ಕದ್ದು. ಇಲ್ಲವೆ ಹೆಂಗಸರನ್ನು ಇಲ್ಲವೆ ಮಕ್ಕಳನ್ನು ಗಾಯಗೊಳಿಸುವ ಇಲ್ಲವೆ ಕೊಲ್ಲುವ ತಯಾರಿ ಮಾಡದಂತೆ ನಿರ್ಬಂಧಿಸತಕ್ಕದ್ದು. ಕೂರ್ಪ್‌ನ್ನು ತೆಗೆದುಹಾಕಿ, ಅದರಲ್ಲಿದ್ದವರನ್ನು ಹೊರಹಾಕಿ, ಸ್ತ್ರೀಯರನ್ನು ಇಲ್ಲವೆ ಮಕ್ಕಳನ್ನು ಗಾಯಗೊಳಿಸುವ ಇಲ್ಲವೆ ಕೊಲ್ಲುವ ಸಿದ್ಧತೆಯನ್ನು ನಿಲ್ಲಿಸಿ, ಪ್ರಧಾನ ಶರತ್ತನ್ನು ಒಪ್ಪಿಕೊಂಡರೆ, ಆ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರಿಗೆ ಸ್ವತಃ ಇಲ್ಲವೆ ವಕೀಲರ ಮುಖಾಂತರ ಈ ಪರಿಸ್ಥಿತಿಗೆ ಕಾರಣವಾದ ವ್ಯಾಜ್ಯದ ಬಗೆಗೆ ನಗರ ಇಲ್ಲವೆ ಜಿಲ್ಲಾ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸುವ ಭರವಸೆಯನ್ನು ಕೂಡ ಆ ನೋಟೀಸು ಒಳಗೊಂಡಿರತಕ್ಕದ್ದು. ಆದರೆ ಆ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರನ್ನು ಶರತ್ತಿಗೆ ಒಪ್ಪಿಸಲು ಆ ನೋಟೀಸು ವಿಫಲವಾದರೆ, ಅವರು ನೋಟೀಸನ್ನು ನಿರಾಕರಿಸುವುದನ್ನು ಲಿಖಿತ ರೂಪದಲ್ಲಿ ಪಡೆದು ಅದನ್ನು ದೃಢಪಡಿಸತಕ್ಕದ್ದು ಮತ್ತು ಆ ಬ್ರಾಹ್ಮಣರಿಗೆ ಅವರ ಅಪರಾಧವನ್ನು ದಾಖಲಿಸುತ್ತ ಅವರು ಎದುರಿಸಬೇಕಾದ ಸ್ಥಿತಿಯ ಬಗೆಗೆ ಮ್ಯಾಜಿಸ್ಟ್ರೇಟರು ತಮ್ಮ ಮುದ್ರೆ ಮತ್ತು ಸಹಿಯೊಂದಿಗೆ ಎಚ್ಚರಿಕೆಯ ವಾರೆಂಟನ್ನು ಕಳಿಸಿಕೊಡಬೇಕು. ಆ ವಾರಂಟನ್ನು ಮಹಮ್ಮದೀಯ ಜವಾನನ ಮುಖಾಂತರ ಕಳಿಸಿಕೊಡಬೇಕು. ಈ ಕೆಲಸಕ್ಕಾಗಿ ಯಾವುದೇ ಹಿಂದೂವನ್ನು ಕಳಿಸತಕ್ಕದ್ದಲ್ಲ. ಯಾರ ಮೇಲೆ ವಾರಂಟ್ ಜಾರಿ ಆಗಿರುತ್ತದೆಯೋ ಅವನನ್ನು ಇಲ್ಲವೆ ಅವರನ್ನು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟರು ೧೭೯೩ರ ಕಾಯಿದೆ IXರ ಸೆಕ್ಷನ್ ೫ರಲ್ಲಿ ಅವನ/ಅವರ ವಿಚಾರಣೆ ನಡೆಸತಕ್ಕದ್ದು. (ಅಪರಾಧಿಗಳನ್ನು ನೋಡಿಕೊಳ್ಳಲು ವಿಧಿಸಿದ ರೀತಿಯಲ್ಲಿ ಅವರನ್ನು ನೋಡಿಕೊಳ್ಳತಕ್ಕದ್ದು.) ಅದೇ ಸೆಕ್ಷನ್ ಪ್ರಕಾರ ಮಾಡಿದ ಹಿಂದಿನ ವಿಚಾರಣೆಯಿಂದ ಅಪರಾಧದ ಆರೋಪ ಸಿದ್ಧಮಾಡಿದ, ಕೂರ್ಪ್‌ನ್ನು ನಿರ್ಮಿಸಿದ, ಹೆಂಗಸರು ಇಲ್ಲವೆ ಮಕ್ಕಳನ್ನು ಗಾಯಗೊಳಿಸಿದ ಇಲ್ಲವೇ ಕೊಂದ, ಇವುಗಳಲ್ಲಿ ಯಾವುದಾರೂ ಒಂದು ಇಲ್ಲವೆ ಎರಡೂ ಅಪರಾಧಗಳನ್ನು ನಿಜವಾಗಿಯೂ ಎಸಗಿದ್ದು, ಕೈದಿ/ಕೈದಿಗಳು ಘಟನೆಯೊಂದಿಗೆ ಸಂಬಂಧ ಹೊಂದಿದ್ದು, ಮುಖ್ಯ ಅಪರಾಧಿಯಾಗಿ ಇಲ್ಲವೆ ಸಹಾಯಕರಾಗಿದ್ದಾರೆಂದು ಆರೋಪಿಸಲು ಅನುಮಾನಕ್ಕೆ ಆಧಾರ ದೊರೆತರೆ, ಮ್ಯಾಜಿಸ್ಟ್ರೇಟ್‌ರು ಅವರನ್ನು ಜೈಲಿಗೆ ಕಳಿಸತಕ್ಕದ್ದು ಮತ್ತು ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡತಕ್ಕದ್ದು. ಮುಖ್ಯ ಅಪರಾಧಿಯಾಗಿಯೋ ಅಥವಾ ಸಹಾಯಕ ಅಪರಾಧಿಯಾಗಿಯೋ ನ್ಯಾಯಾಲಯದ ಇಲ್ಲವೆ ಸಂಚಾರಿ ನ್ಯಾಯಾಲಯದ ಮುಂದಿನ ಅಧಿವೇಶನದಲ್ಲಿ ಅವರನ್ನು ವಿಚಾರಣೆಗೆ ಒಳಪಡಿಸತಕ್ಕದ್ದು ಮತ್ತು ಫಿರ್ಯಾದುದಾರನು ಮೇಲೆ ಹೇಳಿದ ಸೆಕ್ಷನ್‌ದಲ್ಲಿ ಹೇಳಿದ ರೀತಿಯಲ್ಲಿ ವಿಚಾರಣೆಯ ಸಮಯಕ್ಕೆ ಸಾಕ್ಷಿದಾರನಾಗಿ ನ್ಯಾಯಾಲಯದಲ್ಲಿ ಹಾಜರಿರುವಂತೆ ಆದೇಶಿಸತಕ್ಕದ್ದು.

**ಮೇಲೆ ಹೇಳಿದ ಅಪರಾಧಗಳನ್ನು ಎಸಗಿದುದಕ್ಕೆ ವಿಚಾರಣೆ ನಡೆಸುವ ಮತ್ತು ಶಿಕ್ಷೆ ವಿಧಿಸುವ ಕ್ರಮ:**

III. ಬೇರೆ ಅಪರಾಧಗಳಿಗೆ ಸಂಬಂಧಿಸಿದಂತೆ ನಿಬಂಧನೆ IX, ೧೭೯೩ ಮತ್ತು ನಿಬಂಧನೆ XVI, ೧೭೯೫ರಲ್ಲಿ ವಿಧಿಸಿದ ಕ್ರಮದ ಪ್ರಕಾರ, ಮೇಲಿನ ಅಪರಾಧಗಳ ಆರೋಪ ಹೊಂದಿದ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರ ವಿಚಾರಣೆಯನ್ನು ಸಂಚಾರಿ ನ್ಯಾಯಾಲಯ ನಡೆಸತಕ್ಕದ್ದು. ಆದರೆ ಈ ತರಹದ ಅಪರಾಧಗಳಿಗೆ ಮಹಮ್ಮದೀಯ ಕಾಯಿದೆಯನ್ನು ಸಂಪೂರ್ಣ ಅನ್ವಯಿಸಲಿಕ್ಕಾಗದು. ಆದುದರಿಂದ ಈ ಮೂಲಕ (ಬೇರೆ) ಕಾಯಿದೆ ಮಾಡಿ ಹೀಗೆ ಆದೇಶಿಸಲಾಗಿದೆ:

ಕೂರ್ಪ್ ನಿರ್ಮಿಸಿದ ಇಲ್ಲವೆ ಹೆಂಗಸರನ್ನು ಇಲ್ಲವೇ ಚಿಕ್ಕ ಮಕ್ಕಳನ್ನು ಗಾಯಗೊಳಿಸುವ ಇಲ್ಲವೆ

ಕೊಲ್ಲಲು ತಯಾರಿ ಮಾಡಿದ ಅಪರಾಧದಲ್ಲಿ ಮುಖ್ಯ ಅಪರಾಧಿಯೆಂದು ಸಂಚಾರಿ ನ್ಯಾಯಾಲಯದ ಅಭಿಪ್ರಾಯದಲ್ಲಿ ಸಾಬೀತಾದಲ್ಲಿ, ಆ ನ್ಯಾಯಾಲಯವು ಆ ಅಪರಾಧಿಗೆ ಅವನ ವಾರ್ಷಿಕ ಆದಾಯಕ್ಕೆ ಸಮಾನ ದಂಡ ವಿಧಿಸತಕ್ಕದ್ದು. ದೊರಕಿಸಲು ಸಾಧ್ಯವಿರುವ ಎಲ್ಲ ಮಾಹಿತಿಯ ಆಧಾರದ ಮೇಲೆ ವಾರ್ಷಿಕ ಆದಾಯವನ್ನು ಲೆಕ್ಕ ಮಾಡತಕ್ಕದ್ದು ಮತ್ತು ನ್ಯಾಯಾಲಯದಲ್ಲಿ ತೃಪ್ತಿಕರ ಸಾಕ್ಷ್ಯಾಧಾರಗಳ ಮೇಲೆ ಕೈದಿ ಕೇವಲ ಸಹಾಯಕ ಅಪರಾಧಿಯೆಂದು ಸಾಬೀತಾದಲ್ಲಿ, ಅವನ ಅಂದಾಜು ವಾರ್ಷಿಕ ಆದಾಯದ ನಾಲ್ಕರಲ್ಲಿ ಒಂದು ಭಾಗ ದಂಡ ವಿಧಿಸತಕ್ಕದ್ದು. ದಂಡ ವಿಧಿಸಿದ ಎಲ್ಲ ಸಂದರ್ಭಗಳಲ್ಲಿ ದಂಡ ಪಾವತಿ ಮಾಡುವವರೆಗೆ, ಅಥವಾ ಸಂಚಾರಿ ನ್ಯಾಯಾಲಯಕ್ಕೆ ಅಥವಾ (ಅದು ತೆರಳಿದ ಬಳಿಕ) ಮ್ಯಾಜಿಸ್ಟ್ರೇಟರಿಗೆ, ಬಿಡುಗಡೆಯಾದ ಆರು ತಿಂಗಳೊಳಗಾಗಿ ದಂಡ ಪಾವತಿ ಮಾಡುವುದಾಗಿ, ಸಾಕಷ್ಟು ಸುರಕ್ಷಿತಾ ಠೇವಣಿಯನ್ನು ಕೊಡುವವರೆಗೆ ಅಪರಾಧಿಗಳನ್ನು ಜೈಲಿನಲ್ಲಿರಿಸತಕ್ಕದ್ದು. ಅಂಥ ವ್ಯಕ್ತಿಗಳು, ದಂಡ ಪಾವತಿ ಮಾಡಿ ಅಥವಾ ವಿಧಿಸಿದ ದಂಡವನ್ನು ತೆರವುದಾಗಿ ಭದ್ರತೆಯನ್ನು ಒದಗಿಸಿ ಬಿಡುಗಡೆ ಹೊಂದುವ ಪೂರ್ವ, ಸಂಚಾರಿ ನ್ಯಾಯಾಲಯದಲ್ಲಿ ಅಥವಾ ಅದರ ಅನುಪಸ್ಥಿತಿಯಲ್ಲಿ ಮ್ಯಾಜಿಸ್ಟ್ರೇಟರಿಗೆ ಭವಿಷ್ಯತ್ತಿನಲ್ಲಿ ಮತ್ತೊಮ್ಮೆ ಇಂಥ ಅಪರಾಧವೆಸಗುವುದಿಲ್ಲವೆಂದು ಒಬ್ಬಿಬ್ಬರು ವಿಶ್ವಾಸಾರ್ಹ ವ್ಯಕ್ತಿಗಳಿಂದ ಭರವಸೆಯನ್ನು ಕೊಡತಕ್ಕದ್ದು.

**ನಿಝಾಮತ್ ಅದಾಲತ್‌ಕ್ಕೆ ಅಂಥ ದಂಡವನ್ನು ಕಡಿಮೆ ಮಾಡುವ ಅಧಿಕಾರ:**

IV. ಸೆಕ್ಷನ್ ೩ರ ಅಧೀನ ಸಂಚಾರಿ ನ್ಯಾಯಾಲಯವು ವಿಧಿಸಿದ ದಂಡಗಳನ್ನೆಲ್ಲ, ಅವುಗಳ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸದೆ, ದಂಡ ವಿಧಿಸಿದ ಹತ್ತು ದಿವಸದೊಳಗಾಗಿ ಆ ಪ್ರಕರಣವನ್ನು ನಿಝಾಮತ್ ಅದಾಲತ್‌ಕ್ಕೆ ವರ್ಗಾಯಿಸತಕ್ಕದ್ದು. ಆ ಅದಾಲತ್ ತನಗೆ ಸರಿ ಕಂಡಷ್ಟು ದಂಡ ಕಡಿತಕ್ಕೆ ಆದೇಶ ನೀಡಬಹುದು. ಆದರೆ ನಿಝಾಮತ್ ಅದಾಲತ್ ಆದೇಶ ಹೊರಡಿಸುವವರೆಗೆ ಸಂಚಾರಿ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಊರ್ಜಿತವಿರುತ್ತದೆ ಮತ್ತು ಅದನ್ನು ಕಾರ್ಯರೂಪಕ್ಕಿಳಿಸಲೂ ಬರುತ್ತದೆ.

**ಯಾವ ಬ್ರಾಹ್ಮಣರ ಬಂಧನಕ್ಕಾಗಿ ವಾರಂಟ್ ಹೊರಡಿಸಿರುತ್ತಾರೋ ಅವರು ತಪ್ಪಿಸಿಕೊಂಡು ಓಡಿಹೋದಲ್ಲಿ ಅವರಿಗೆ ವಿಧಿಸುವ ದಂಡ:**

V. ಯಾವುದೇ ಬ್ರಾಹ್ಮಣ/ಬ್ರಾಹ್ಮಣರ ಬಂಧನಕ್ಕೆ ನಗರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ಸೆಕ್ಷನ್ ೨ರಲ್ಲಿ ಬರುವ ವಾರಂಟ್ ಹೊರಡಿಸಿದ ಸಂದರ್ಭದಲ್ಲಿ ಅವನು/ಅವರು ವಾರಂಟ್‌ನ್ನು ಮನ್ನಿಸಲು ನಿರಾಕರಿಸಿದಲ್ಲಿ, ಅಥವಾ ಅದಕ್ಕೆ ಪ್ರತಿರೋಧ ಒಡ್ಡಿದಲ್ಲಿ, ವಾರಂಟ್‌ನ್ನು ಕೊಡಲು ಹೋದ ಜವಾನನಿಗೆ ಅಡ್ಡಿ ಮಾಡಿದಲ್ಲಿ ಅಥವಾ ಬಂಧನದಿಂದ ತಪ್ಪಿಸಿಕೊಂಡು ಓಡಿಹೋದಲ್ಲಿ ಅಥವಾ ವಾರಂಟ್ ಕೊಡಲು ಸಾಧ್ಯವಾಗದಂತೆ ಯಾವುದೋ ಗೃಹ ಇಲ್ಲವೆ ಕಟ್ಟಡದಲ್ಲಿ ಅಡಗಿಕೊಂಡಿದ್ದಲ್ಲಿ, ಅಥವಾ ದೂರ ಸ್ಥಳಕ್ಕೆ ಹೋದಲ್ಲಿ, ಮ್ಯಾಜಿಸ್ಟ್ರೇಟ್ ಸಂಬಂಧಿಸಿದ ಕಲೆಕ್ಟರ್‌ಗೆ ಅಥವಾ ಸಮೀಪದ ತಹಶಿಲ್ದಾರ್‌ಗೆ ಬ್ರಾಹ್ಮಣ/ಬ್ರಾಹ್ಮಣರು ಹೊಂದಿರಬಹುದಾದ ಅಥವಾ ಒತ್ತೆ ತೆಗೆದುಕೊಂಡಿರಬಹುದಾದ ಅಥವಾ ಲಾಖರ್ಜೆ(Lakharjje)ದಲ್ಲಿ ಪಡೆದಿರಬಹುದಾದ, ಹೊಲಗಳನ್ನು ವಶಕ್ಕೆ ತೆಗೆದುಕೊಳ್ಳುವಂತೆ ಆದೇಶ ನೀಡತಕ್ಕದ್ದು. ಅವನು/ಅವರು ತನ್ನನ್ನು/ತಮ್ಮನ್ನು ನ್ಯಾಯಲಯದ ವಶಕ್ಕೆ ಒಪ್ಪಿಕೊಳ್ಳುವವರೆಗೆ ಅವನ/ಅವರ ಹೊಲಗಳು ಸರಕಾರದ ವಶದಲ್ಲಿರತಕ್ಕದ್ದು. ಆ ಹೊಲಗಳು ಸರಕಾರದ ವಶದಲ್ಲಿದ್ದ

ಅವಧಿಯಲ್ಲಿ ಬಂದ ಹಣವನ್ನು (ಉತ್ಪನ್ನವನ್ನು) ಸರಕಾರ ವೆಚ್ಚ ಮಾಡಿದ ಹಣವನ್ನು ಬಿಟ್ಟು ಉಳಿದುದನ್ನು ಅತ್ಯಾಚಾರಕ್ಕೊಳಪಟ್ಟ ವ್ಯಕ್ತಿಗಳಿಗೆ– ಯಾರ ಸಲುವಾಗಿ ಕೂರ್ಢ್ ನಿರ್ಮಿಸಲ್ಪಟ್ಟಿತ್ತೋ, ಯಾವ ಹೆಂಗಸರು ಅಥವಾ ಚಿಕ್ಕ ಮಕ್ಕಳನ್ನು ಗಾಯಗೊಳಿಸಲು ಅಥವಾ ಕೊಲ್ಲಲು ಯತ್ನಿಸಲಾಗಿತ್ತೋ ಅವರಿಗೆ ಕೊಡತಕ್ಕದ್ದು. ಕೂರ್ಢ್ ನಿರ್ಮಿಸಿದ ಅಥವಾ ತಮ್ಮ ಹೆಂಗಸರನ್ನು ಅಥವಾ ಚಿಕ್ಕ ಮಕ್ಕಳನ್ನು ಗಾಯಗೊಳಿಸುವ ಅಥವಾ ಕೊಲ್ಲಲು ಯತ್ನಿಸಿದ ಬ್ರಾಹ್ಮಣ ಅಥವಾ ಬ್ರಾಹ್ಮಣರು ನ್ಯಾಯಾಲಯಕ್ಕೆ ಆತ್ಮಾರ್ಪಣೆ ಮಾಡಿದ ಬಳಿಕ ಅವನ ಅಥವಾ ಅವರ ಹೊಲಗಳನ್ನು ಅವನಿಗೆ/ಅವರಿಗೆ ಬಿಟ್ಟುಕೊಡತಕ್ಕದ್ದು. ಆದರೆ ಅವನ/ಅವರ ಮೂಲ ಅಪರಾಧಕ್ಕಾಗಿ ಸೆಕ್ಷನ್ ೩ ಮತ್ತು ೪ರ ಪ್ರಕಾರ, ವಿಚಾರಣೆ ನಡೆಯತಕ್ಕದ್ದು.

**ಕೂರ್ಢ್ ನಿರ್ಮಿಸಿದ, ಹೆಂಗಸರನ್ನು ಅಥವಾ ಚಿಕ್ಕಮಕ್ಕಳನ್ನು ಗಾಯಗೊಳಿಸಲು ಅಥವಾ ಕೊಲ್ಲಲು ತಯಾರಿ ನಡೆಸಿದ ಬ್ರಾಹ್ಮಣರ ವಿಷಯಕ್ಕೆ ಕಲೆಕ್ಟರ್ ಮ್ಯಾಜಿಸ್ಟ್ರೇಟ್‌ಗೆ ವಿನಂತಿಸಿಕೊಳ್ಳಬೇಕಾದ ಸಂದರ್ಭದಲ್ಲಿ ರೆವೆನ್ಯೂ ಇಲಾಖೆ ತೆಗೆದುಕೊಳ್ಳಬೇಕಾದ ಕ್ರಮ:**

VI. ಕೂರ್ಢ್ ನಿರ್ಮಿಸಿದ ಅಥವಾ ತಮ್ಮ ಹೆಂಗಸರನ್ನು ಅಥವಾ ಚಿಕ್ಕ ಮಕ್ಕಳನ್ನು ಗಾಯಗೊಳಿಸುವ ಅಥವಾ ಕೊಲ್ಲುವ ತಯಾರಿಯಲ್ಲಿ ಯಾವನೇ/ಯಾರೇ ಬ್ರಾಹ್ಮಣ/ಬ್ರಾಹ್ಮಣರು ತೊಡಗಿದ್ದ ಸಂದರ್ಭದಲ್ಲಿ ವಿಧಿಸಿದ್ದ ದಂಡ ಬಾಕಿ ವಸೂಲಿಗಾಗಿ, ೧೭೯೫ರ ನಿಬಂಧನೆ VIರ ಪ್ರಕಾರ ನೋಟೀಸು ಜಾರಿಗೊಳಿಸುವುದಕ್ಕೆ ಅಡ್ಡಿ ಮಾಡಿದ ಸಂದರ್ಭದಲ್ಲಿ, ಸ್ಥಾನಿಕ ತಹಶೀಲ್ದಾರ ಅಥವಾ ಬನಾರಸ್‌ನ ಕಲೆಕ್ಟರ್ 'ದಸ್ತಕ್' (Dustuck) ಜಾರಿಗೊಳಿಸುವ ಅಧಿಕಾರ ಹೊಂದಿದ್ದಾರೆ. ತಹಶೀಲ್ದಾರ ಜಾರಿಗೊಳಿಸಿದ ದಸ್ತಕ್‌ಕ್ಕೆ ಅವರು ಅಡ್ಡಿ ಮಾಡಿದರೆ ಅದನ್ನು ಪುನಃ ಜಾರಿಗೊಳಿಸುವಂತಿಲ್ಲ. ಆದರೆ ಆ ಪ್ರಕರಣವನ್ನು 'ದಸ್ತಕ್' ಜಾರಿಗೊಳಿಸಲು ಕಳಿಸಿದ ಜವಾನನ ಲಿಖಿತ ಪುರಾವೆ ಸಹಿತ ಕಲೆಕ್ಟರ್‌ಗೆ ವರದಿ ಸಲ್ಲಿಸತಕ್ಕದ್ದು. ಆ ಮಾಹಿತಿ ದೊರೆತ ತಕ್ಷಣ ಅಥವಾ ತಮ್ಮ ಮೂಲಕ್ರಮಕ್ಕೆ ಅದೇ ರೀತಿ ಅಡ್ಡಿಪಡಿಸಿದಲ್ಲಿ, ಕಲೆಕ್ಟರ್ ಸರಕಾರಿ ವಕೀಲರ ಮುಖಾಂತರ ಆ ಬ್ರಾಹ್ಮಣರಿಂದ ಬರಬೇಕಾದ ದಂಡ ಬಾಕಿಯ ವಿಷಯವನ್ನು ಯಾರ ಅಧಿಕಾರ ವ್ಯಾಪ್ತಿಯಲ್ಲಿ ಅವರ ಹೊಲಗಳಿರುವುವೊ ಆ ನಗರ ಅಥವಾ ಜಿಲ್ಲಾ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್‌ಗೆ, ಬಾಕಿ ಹಣ ವಸೂಲಿಗಾಗಿ ಕ್ರಮ ತೆಗೆದುಕೊಳ್ಳಲು ಉದ್ಭವಿಸಿದ ಸಂದರ್ಭದ ವಿವರಣೆ ಸಹಿತ ತಿಳಿಸತಕ್ಕದ್ದು. ತಹಶೀಲ್ದಾರ ಅಥವಾ ಕಲೆಕ್ಟರ್‌ರ 'ದಸ್ತಕ್'ದೊಂದಿಗೆ ಜವಾನ ಅಥವಾ ಬೇರಾವ ನ್ಯಾಯಾಲಯದದಲ್ಲಿರುವ ವಿಶ್ವಾಸಾರ್ಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಪ್ರತಿನಿಧಿಯಾಗಿ ಕಳುಹಿಸಿದ ಬಳಿಕ, ಕಲೆಕ್ಟರ್‌ರು ನಿರೂಪಣೆಯಲ್ಲಿ ವಿವರಿಸಿದ ಪ್ರಸಂಗದ– ಬ್ರಾಹ್ಮಣ ಕೂರ್ಢ್ ನಿರ್ಮಿಸಿದ, ಅಥವಾ ಹೆಂಗಸರನ್ನು ಅಥವಾ ಚಿಕ್ಕ ಮಕ್ಕಳನ್ನು ಗಾಯಗೊಳಿಸಲು ಅಥವಾ ಕೊಲ್ಲಲು ತಯಾರಿಸಿದ, ಯಾವುದಾದರೂ ಒಂದು ಇಲ್ಲವೆ ಎರಡೂ ಅಪರಾಧ ಎಸಗಿದ ಪ್ರಸಂಗದ ಸತ್ಯತೆಯ ಬಗೆಗೆ ಪ್ರತಿಜ್ಞೆ ಮಾಡಲಾಗಿ, ಮ್ಯಾಜಿಸ್ಟ್ರೇಟರು ಅಂಥ ಬ್ರಾಹ್ಮಣರಿಗೆ ಪರ್ಷಿಯನ್ ಭಾಷೆ ಮತ್ತು ಲಿಪಿಯಲ್ಲಿ ಅಥವಾ ಹಿಂದುಸ್ತಾನಿ ಭಾಷೆ ಮತ್ತು ನಾಗರಿ ಲಿಪಿಯಲ್ಲಿ ತಮ್ಮ ಸಹಿ ಮತ್ತು ಮುದ್ರೆಯೊಂದಿಗೆ ನೋಟೀಸು ಹೊರಡಿಸತಕ್ಕದ್ದು ಮತ್ತು ಆ ನೋಟೀಸು ಜಾರಿಗೊಳಿಸುವಲ್ಲಿ ಬ್ರಾಹ್ಮಣರ ಸಂಬಂಧಿಕರ ಅಥವಾ ಸ್ನೇಹಿತರ ಅಥವಾ ಅವರೊಂದಿಗೆ ಸಂಪರ್ಕ ಇಟ್ಟುಕೊಂಡವರ ಸೇವೆಯನ್ನು ಪಡೆಯತಕ್ಕದ್ದು. ಅಂಥ ಸಂಬಂಧಿಕರು, ಸ್ನೇಹಿತರು ಅಥವಾ ಅವರೊಂದಿಗೆ ಸಂಪರ್ಕ ಹೊಂದಿದವರು ದೊರೆಯದಿದ್ದಲ್ಲಿ,

ಅದೇ ಜಾತಿಯ ಬೇರೊಬ್ಬನ ಮುಖಾಂತರ ಆ ನೋಟಿಸನ್ನು ಮುಟ್ಟಿಸತಕ್ಕದ್ದು. ಆ ನೋಟೀಸಿನ ತಾತ್ಪರ್ಯ ಇಷ್ಟು:

ಆ ಬ್ರಾಹ್ಮಣ/ಬ್ರಾಹ್ಮಣರು ಕೂರ್ಸ್ಗ ತೆಗೆಯಬೇಕು, ಅದರಲ್ಲಿ ಇರಿಸಿರಬಹುದಾದ ಹೆಂಗಸರನ್ನು ಅಥವಾ ಚಿಕ್ಕಮಕ್ಕಳನ್ನು ಗಾಯಗೊಳಿಸುವ ಇಲ್ಲವೆ ಕೊಲ್ಲುವ ತಯಾರಿಯನ್ನು ನಿಲ್ಲಿಸಬೇಕು. (ಅಪರಾಧ ಯಾವುದಾದರೂ ಒಂದು ಅಥವಾ ಎರಡೂ ಆಗಿರಬಹುದು); ಅದೇ ರೀತಿ ಅವನು ತೆರಬೇಕಾದ ದಂಡ ಬಾಕಿ ಹಣವನ್ನು ಪಾವತಿ ಮಾಡಬೇಕು ಅಥವಾ ದಂಡದ ಎಷ್ಟು ಭಾಗವನ್ನು ಕೊಡುವುದಕ್ಕೆ ಅವನ/ಅವರ ತಕರಾರು ಇರುತ್ತದೆಯೋ ಮತ್ತು ಯಾವುದರ ವಿಷಯಕ್ಕೆ ಭದ್ರತಾ ಕರಾರನ್ನು ಮಾಡಿಕೊಂಡಿರುವನೊ/ಮಾಡಿಕೊಂಡಿರುವರೋ, ಅದರ ಬಗೆಗೆ ನಗರ ಇಲ್ಲವೆ ಜಿಲ್ಲಾ ನ್ಯಾಯಾಲಯದಲ್ಲಿ ತಕರಾರು ನೋಂದಾಯಿಸತಕ್ಕದ್ದು. ಇನ್ನುಳಿದ ಹಣಕಾಸಿನ ವ್ಯಾಜ್ಯಗಳಿಗೆ ಸಂಬಂಧಿಸಿದ ೧೭೯೩ರ ನಿಬಂಧನೆ VIರ ನಿಯಮಗಳ ಪ್ರಕಾರ ಪ್ರಕರಣದ ಗುಣದೋಷಗಳ ವಿಚಾರಣೆ ಮಾಡಿ ನಿರ್ಣಯಿಸಲು ಆದೇಶಿಸತಕ್ಕದ್ದು. ಮತ್ತು ಆ ನೋಟೀಸಿನಲ್ಲಿ ಸಂಬಂಧಿಸಿದ ಬ್ರಾಹ್ಮಣ/ಬ್ರಾಹ್ಮಣರಿಗೆ, ಅವನು/ಅವರು ಕೂರ್‌ನ್ನು ತೆಗೆದು ಹಾಕಿ, ಅದರಲ್ಲಿರುವ ಹೆಂಗಸರು ಮತ್ತು ಚಿಕ್ಕ ಮಕ್ಕಳನ್ನು ಹೊರಗೆ ಹಾಕಿ ಅಥವಾ ಹೆಂಗಸರನ್ನು ಅಥವಾ ಚಿಕ್ಕಮಕ್ಕಳನ್ನು ಗಾಯಗೊಳಿಸುವ ಅಥವಾ ಕೊಲ್ಲುವ ತಯಾರಿಯನ್ನು ನಿಲ್ಲಿಸಿ ನೋಟೀಸನ್ನು ಮನ್ನಿಸಿದ ಕೂಡಲೇ ಅಥವಾ ಕೊಡಬೇಕಾದ ದಂಡ ಬಾಕಿಯನ್ನು ಕೊಟ್ಟ ಕೂಡಲೇ ಅಥವಾ ಸ್ವತಃ ಅಥವಾ ವಕೀಲರನ್ನು ಕಳುಹಿಸಿ ನಗರ ಇಲ್ಲವೆ ಜಿಲ್ಲಾ ನ್ಯಾಯಾಲಯದಲ್ಲಿ ಭದ್ರತಾ ಕರಾರನ್ನು ಮಾಡಿಕೊಂಡ ಕೂಡಲೇ ದಂಡ ವಿಧಿಸಿದ ತೀರ್ಪಿನ ವಿರುದ್ಧ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಮಾಡತಕ್ಕದ್ದೆಂಬ ಭರವಸೆಯನ್ನು ಆ ನೋಟೀಸು ಒಳಗೊಂಡಿರಬೇಕು. ನೋಟೀಸು ಜಾರಿಗೊಳಿಸಿದ ಬಳಿಕ ಅದರ ಆದೇಶ ಪಾಲಿಸುವಂತೆ ಬ್ರಾಹ್ಮಣ/ಬ್ರಾಹ್ಮಣರನ್ನು ಪ್ರೇರೇಪಿಸಲು ತಪ್ಪಿದಲ್ಲಿ, ಹಾಗೆಂದು ನೋಟೀಸನ್ನು ಕೊಡಲು ಕಳಿಸಿದ ವ್ಯಕ್ತಿಗಳ ದೃಢೀಕರಣದೊಂದಿಗೆ ಲಿಖಿತ ವರದಿಯನ್ನು ಸಲ್ಲಿಸತಕ್ಕದ್ದು. ಮತ್ತು ಮ್ಯಾಜಿಸ್ಟ್ರೇಟ್ ಕೂಡಲೇ ತಮ್ಮ ಮುದ್ರೆ ಮತ್ತು ಸಹಿಯೊಂದಿಗೆ ಆ ಬ್ರಾಹ್ಮಣ/ಬ್ರಾಹ್ಮಣರನ್ನು ಬಂಧಿಸಲು ವಾರಂಟ್ ಹೊರಡಿಸತಕ್ಕದ್ದು. ಆ ವಾರಂಟಿನಲ್ಲಿ ಅವನ/ಅವರ ದುರ್ನಡತೆಯ ಅಥವಾ ದಂಡ ಬಾಕಿಯ ಆರೋಪದ ಉಲ್ಲೇಖ ಇರಬೇಕು ಅಥವಾ ಆ ವಾರಂಟನ್ನು ಸೆಕ್ಷನ್ ೨ರಲ್ಲಿ ನಮೂದಿಸಿದಂತೆ, ಮಹಮ್ಮದೀಯ ಜವಾನನ ಮುಖಾಂತರ ಜಾರಿಗೊಳಿಸತಕ್ಕದ್ದು. ಆ ಬ್ರಾಹ್ಮಣ/ಬ್ರಾಹ್ಮಣರು ದಸ್ತಗಿರಿಯ ಆಜ್ಞಾಪತ್ರ(ವಾರಂಟ್)ವನ್ನು ಸ್ವೀಕರಿಸಲು ನಿರಾಕರಿಸಿದರೆ, ಆಜ್ಞಾಪತ್ರಕ್ಕೆ ಪ್ರತಿರೋಧ ಒಡ್ಡಿದರೆ, ಅದನ್ನು ನೀಡಲು ನಿಯುಕ್ತರಾದ ಜವಾನರಿಗೆ ಸಿಗದೆ ಹೋದರೆ, ವಶಕ್ಕೆ ತೆಗೆದುಕೊಂಡ ಬಳಿಕ ತಪ್ಪಿಸಿಕೊಂಡು ಹೋದರೆ, ಅಥವಾ ಯಾವುದೇ ಮನೆ ಅಥವಾ ಕಟ್ಟಡದಲ್ಲಿ ದಸ್ತಗಿರಿ ಆಜ್ಞಾಪತ್ರವನ್ನು ಕೊಡಲು ಸಾಧ್ಯವಾಗದಂತೆ ಅಡಗಿ ಕುಳಿತಿದ್ದರೆ, ಈ ವಿಷಯ ತಿಳಿದ ತಕ್ಷಣ ಮ್ಯಾಜಿಸ್ಟ್ರೇಟ್ ಸಮೀಪದ ತಹಶೀಲ್ದಾರರಿಗೆ ಆ ಬ್ರಾಹ್ಮಣ/ಬ್ರಾಹ್ಮಣರ, ಒಡೆತನದಲ್ಲಿರಬಹುದಾದ, ಎತ್ತಿ ಹಾಕಿಕೊಂಡ ಅಥವಾ 'ಲಾಖರೇಜ್' ರೂಪದಲ್ಲಿ ಹೊಂದಿರಬಹುದಾದ ಹೊಲಗಳನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲು ಆದೇಶ ನೀಡತಕ್ಕದ್ದು ಮತ್ತು ಆ ಹೊಲಗಳು ಸರಕಾರದ ಒಡೆತನದಲ್ಲಿ ಉಳಿಯತಕ್ಕದ್ದು ಮತ್ತು ಅವುಗಳ ಉತ್ಪನ್ನವನ್ನು ಅವನ/ಅವರ ದಂಡ ಬಾಕಿ ತೀರುವವರೆಗೆ ಅಥವಾ ಬೇರೆ ಮೂಲದಿಂದ ದಂಡ ಬಾಕಿ ಪಾವತಿ ಮಾಡುವವರೆಗೆ ಸರಕಾರವೇ ತೆಗೆದುಕೊಳ್ಳತಕ್ಕದ್ದು. ಮತ್ತು ಆ ಬ್ರಾಹ್ಮಣ/ಬ್ರಾಹ್ಮಣರು ನ್ಯಾಯಾಲಯದಲ್ಲಿ

ಹಾಜರಾಗುವವರೆಗೆ, ಅವನು/ಅವರು ಕೂರ್ಷ್ ನಿರ್ಮಿಸಿದ ಹೆಂಗಸರನ್ನು ಅಥವಾ ಚಿಕ್ಕ ಮಕ್ಕಳನ್ನು ಗಾಯಗೊಳಿಸುವ ಅಥವಾ ಕೊಲ್ಲುವ ತಯಾರಿ ನಡೆಸಿದ ಕೃತ್ಯದಲ್ಲಿ ಮುಖ್ಯ ಅಪರಾಧಿಯೆಂದೋ ಅಥವಾ ಸಹ ಅಪರಾಧಿಯೆಂದೋ ವಿಚಾರಣೆ ನಡೆಯತಕ್ಕದ್ದು ಮತ್ತು ಸೆಕ್ಷನ್ ೨, ೩ ಮತ್ತು ೪ರಲ್ಲಿ ನಿರ್ದಿಷ್ಟಪಡಿಸಿದಂತೆ ಶಿಕ್ಷೆಯ ಕಡಿತಕ್ಕೆ ಅವಕಾಶ ಕಲ್ಪಿಸತಕ್ಕದ್ದು.

**ಕೂರ್ಷ್‌ನ್ನು ನಿರ್ಮಿಸಲು ಕಾರಣರಾದ ಬ್ರಾಹ್ಮಣರನ್ನು ಮತ್ತು ಅದಕ್ಕೆ ಅಗ್ನಿಸ್ಪರ್ಶ ಮಾಡಿದವರನ್ನು ಅದರಲ್ಲಿರಿಸಿದ ವ್ಯಕ್ತಿ/ವ್ಯಕ್ತಿಗಳ ಕೊಲೆಯ ಆಪಾದನೆಯ ನಿಮಿತ್ತ ವಿಚಾರಣೆಗೆ ಗುರಿಪಡಿಸುವುದು:**

VII. ಸರಕಾರದೊಂದಿಗೆ ಅಥವಾ ಅದರ ಅಧಿಕಾರಿಗಳು ಅಥವಾ ಸೇವಕರೊಂದಿಗೆ ಅಸಂತುಷ್ಟತೆಯಿಂದ ಅಥವಾ ಅವರ ಸಾಧಾರ ಅಥವಾ ನಿರಾಧಾರ ಭೀತಿಯಿಂದ ಯಾವುದೇ ಬ್ರಾಹ್ಮಣ ಅಥವಾ ಬ್ರಾಹ್ಮಣರು ಕೂರ್ಷ್‌ನ್ನು ನಿರ್ಮಿಸಲಾಗಿ ಅದನ್ನು ತೆಗೆದುಹಾಕುವುದರೊಳಗಾಗಿ ಅದಕ್ಕೆ ಯಾರಾರದೂ ಅಗ್ನಿಸ್ಪರ್ಶ ಮಾಡಿದುದರಿಂದ ಯಾರಾದರೂ ಸುಟ್ಟು ಸಾಯಿಸಲ್ಪಟ್ಟಿದ್ದರೆ ಅಥವಾ ಬೇರೆ ರೀತಿ ಪ್ರಾಣ ಕಳೆದುಕೊಂಡಿದ್ದರೆ, ಆ ಕೂರ್ಷ್‌ನ್ನು ನಿರ್ಮಿಸಲು ಕಾರಣ ಬ್ರಾಹ್ಮಣ ಅಥವಾ ಬ್ರಾಹ್ಮಣರನ್ನು ಕೊಲೆಯ ಆಪಾದನೆಗೆ ಗುರಿಪಡಿಸತಕ್ಕದ್ದು. ಅದೇ ರೀತಿ ಕಟ್ಟಿಗೆ ಅಥವಾ ಅಲ್ಲಿ ಒಟ್ಟಿದ ಉರುವಲಕ್ಕೆ ಅಗ್ನಿಸ್ಪರ್ಶ ಮಾಡುವ ಕೆಲಸಕ್ಕೆ ನೇಮಕಗೊಂಡ ಅಥವಾ ಸಹಾಯ ಮಾಡಿದ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಕೊಲೆಯ ಆಪಾದನೆಗೆ ಗುರಿಪಡಿಸತಕ್ಕದ್ದು. ಸಂಚಾರಿ ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ಪುರಾವೆಗಳು ದೊರೆತ ಕೂಡಲೇ, ಅಂಥ ಬ್ರಾಹ್ಮಣ ಅಥವಾ ಬ್ರಾಹ್ಮಣರನ್ನು ಮತ್ತು ಕೂರ್ಷ್‌ಕ್ಕೆ ಅಗ್ನಿಸ್ಪರ್ಶ ಮಾಡಿದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಮೇಲೆ ಹೇಳಿದ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ, ಅವರು ಯಾವ ರೀತಿ ಪೂರ್ವ ನಿಯೋಜಿತ ಕೊಲೆ ಮಾಡಿರುವರೋ ಅದೇ ತರಹದ ಮರಣ ದಂಡನೆಯನ್ನು, ಮಹಮ್ಮದೀಯ ಕಾಯಿದೆಯ ನಿಯಮಗಳ ಪ್ರಕಾರ ವಿಧಿಸತಕ್ಕದ್ದು ಮತ್ತು ಆ ಉದಾಹರಣೆಗೆ ಸಾಧ್ಯವಿದ್ದಷ್ಟು ಹೆಚ್ಚು ಪ್ರಚಾರ ಕೊಡುವ ಉದ್ದೇಶದಿಂದ (ಅದು ಮಹಮ್ಮದೀಯ ನ್ಯಾಯಾಧಿಕಾರಿಗಳ ನಿರ್ಣಯಕ್ಕನುಗುಣವಾಗಿ ಇರುತ್ತದೆಯೋ ಇಲ್ಲವೊ) ಆ ಶಿಕ್ಷೆಯನ್ನು ಅಪರಾಧಕ್ಕೊಳಗಾದ ಮತ್ತು ದೃಢಪಟ್ಟ ಬ್ರಾಹ್ಮಣ ಅಥವಾ ಬ್ರಾಹ್ಮಣರಿಗೆ ಸಂಚಾರಿ ನ್ಯಾಯಾಲಯ ಔಪಚಾರಕ್ಕಾಗಿ ಪುನಃ ಶಿಕ್ಷೆ ವಿಧಿಸತಕ್ಕದ್ದು. ಆದರೆ ಅದೇ ಸಮಯಕ್ಕೆ ಮರಣದಂಡನೆಗೊಳಗಾದ ವ್ಯಕ್ತಿ/ವ್ಯಕ್ತಿಗಳಿಗೆ, ಕಾಯಿದೆಯಲ್ಲಿ ಸ್ಪಷ್ಟವಾಗಿ ಅವಕಾಶ ಕಲ್ಪಿಸಿರುವಂತೆ, ಸಂಚಾರಿ ನ್ಯಾಯಾಲಯ ಕೈಕೊಂಡ ಎಲ್ಲ ವಿಚಾರಣೆಗಳನ್ನು ಮತ್ತು ಅದು ವಿಧಿಸಿದ ಶಿಕ್ಷೆಗಳನ್ನು (ನಿಬಂಧನೆ IXರ ಸೆಕ್ಷನ್ ೪೭ರಲ್ಲಿ ವಿಧಿಸಿರುವಂತೆ) ನಿಝಾಮತ್ ಅದಾಲತ್‌ಕ್ಕೆ ಒಪ್ಪಿಸಲಾಗುವುದು ಎಂದು ತಿಳುವಳಿಕೆ ಕೊಡತಕ್ಕದ್ದು. ಈ ಸೆಕ್ಷನ್ ಪ್ರಕಾರ ಶಿಕ್ಷೆಗೊಳಗಾದ ವ್ಯಕ್ತಿ ಇಲ್ಲವೆ ವ್ಯಕ್ತಿಗಳು ನಿಝಾಮತ್ ಅದಾಲತ್‌ದ ತೀರ್ಪು ಬರುವವರೆಗೆ ಜೈಲಿನಲ್ಲಿರತಕ್ಕದ್ದು. ನಿಝಾಮತ್ ಅದಾಲತ್ ಮರಣದಂಡನೆಯನ್ನು ದೃಢಪಡಿಸಿದರೆ ಸಂಬಂಧಿಸಿದ ಬ್ರಾಹ್ಮಣ ಅಥವಾ ಬ್ರಾಹ್ಮಣರನ್ನು ಕಲಕತ್ತೆಗೆ ಕೊಂಡೊಯ್ಯಲಾಗುವುದು ಮತ್ತು ಅಲ್ಲಿಂದ ೧೭೯೫ರ ನಿಬಂಧನೆ XVI, ೧೭೯೫ರ ಸೆಕ್ಷನ್ ೨೩ರ ಪ್ರಕಾರ ಅವರನ್ನು ಗಡಿಪಾರು ಮಾಡತಕ್ಕದ್ದು. ಈ ಸೆಕ್ಷನ್ ಬನಾರಸ ಪ್ರಾಂತದಲ್ಲಿರುವ ಬ್ರಾಹ್ಮಣ ಅಥವಾ ಬ್ರಾಹ್ಮಣರು ಮಾಡಿದ ಕೊಲೆಯ ಅಪರಾಧಕ್ಕಾಗಿ ವಿಧಿಸಲಾಗುವ ಮರಣದಂಡನೆಯ ಪರಿವರ್ತನೆಗೆ ಅವಕಾಶ ಮಾಡಿಕೊಡುತ್ತದೆ. ಅಥವಾ ಕೂರ್ಷ್ ನಿರ್ಮಿಸಿದ ಬ್ರಾಹ್ಮಣ/ಬ್ರಾಹ್ಮಣರಿಗೆ, ಅದಕ್ಕೆ ಅಗ್ನಿಸ್ಪರ್ಶ ಮಾಡುವ ಕಾರ್ಯದಲ್ಲಿ ನೆರವಾದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಚಾರಿ ನ್ಯಾಯಾಲಯ ವಿಧಿಸಿದ ಶಿಕ್ಷೆಯನ್ನು

ಊರ್ಜಿತಗೊಳಿಸುವ ಕ್ರಮ ಕೈಕೊಳ್ಳಲು ನಿಝಾಮತ್ ಅದಾಲತ್‌ಗೆ ಕಾರಣ ತೋರದಿದ್ದಲ್ಲಿ, ಅವರು ಗವರ್ನರ್–ಜನರಲ್–ಇನ್–ಕೌನ್ಸಿಲ್‌ಗೆ ಪ್ರಕರಣ ಅಥವಾ ಪ್ರಕರಣಗಳನ್ನು ಒಪ್ಪಿಸತಕ್ಕದ್ದು, ಮತ್ತು ನಿಝಾಮತ್ ಅದಾಲತ್ ಕ್ಷಮೆಯನ್ನು ಶಿಫಾರಸು ಮಾಡಬಹುದು ಅಥವಾ ತನಗೆ ಸರಿಕಂಡಂತೆ ಶಿಕ್ಷೆ ಕಡಿತ ಮಾಡಿ ಶಿಕ್ಷೆಯ ಪರಿವರ್ತನಕ್ಕೆ ಶಿಫಾರಸು ಮಾಡಬಹುದು.

**ಹೆಂಗಸರು ಮತ್ತು ಚಿಕ್ಕಮಕ್ಕಳನ್ನು ಗಾಯಗೊಳಿಸುವ ಬ್ರಾಹ್ಮಣರಿಗೆ ಶಿಕ್ಷೆ:**

VIII. ಪ್ರಸ್ತಾವನೆಯಲ್ಲಿ ಅಥವಾ ಈ ನಿಬಂಧನೆಯ ಸೆಕ್ಷನ್‌ಗಳಲ್ಲಿ ವಿವರಿಸಿದ ಸಂದರ್ಭ ಮತ್ತು ರೀತಿಯಲ್ಲಿ ಖಡ್ಗ ಅಥವಾ ಬೇರೆ ಅಪಾಯಕಾರಿ ಆಯುಧ ಅಥವಾ ಇನ್ನಾವುದರಿಂದ ತನ್ನ ಅಥವಾ ತಮ್ಮ ಹೆಂಗಸರನ್ನು ಅಥವಾ ಮಕ್ಕಳನ್ನು, ಅಥವಾ ಬೇರೆಯವರ ಹೆಂಗಸರನ್ನು ಅಥವಾ ಮಕ್ಕಳನ್ನು, ಯಾರಾದರೊಬ್ಬರನ್ನು ಅಥವಾ ಇಬ್ಬರನ್ನೂ ಯಾವುದೇ ಬ್ರಾಹ್ಮಣ ಅಥವಾ ಬ್ರಾಹ್ಮಣರು ನಿಜವಾಗಿಯೂ ಗಾಯಗೊಳಿಸಿದಲ್ಲಿ, ಅವರಿಗೆ ಮಾಡಿದ ನಿಜವಾದ ಅಥವಾ ಕಲ್ಪಿತ ಗಾಯದಿಂದ ಅವರು ಅಸಂತುಷ್ಟರಾಗಿದ್ದಲ್ಲಿ, ತಹಶೀಲ್ದಾರ ಅಥವಾ ರೆವೆನ್ಯೂ ಅಥವಾ ಕಾನೂನು ಇಲಾಖೆಯ ಅಧಿಕಾರಿಗಳು ಅಥವಾ ಸೇವಕರೊಂದಿಗೆ ಉಂಟಾದ ಅಸಮಾಧಾನದ ಕಾರಣ, ಅಥವಾ ಬೇರೆಯವರೊಂದಿಗಿದ್ದ ತನ್ನ ಅಥವಾ ಅವರ ಭಿನ್ನಾಭಿಪ್ರಾಯದ ಕಾರಣ, ತನ್ನ ಅಥವಾ ತಮ್ಮ ಹೆಂಗಸರನ್ನು ಅಥವಾ ಮಕ್ಕಳನ್ನು ಅಥವಾ ಬೇರೆಯವರ ಹೆಂಗಸರನ್ನು ಅಥವಾ ಮಕ್ಕಳನ್ನು ಗಾಯಗೊಳಿಸಿದಲ್ಲಿ, ಇಂಥ ಕೃತಿ ಅಥವಾ ಕೃತಿಗಳಿಗಾಗಿ ಸಂಚಾರಿ ನ್ಯಾಯಾಲಯ ಜೀವಾವಧಿ ಗಡಿಪಾರು ಶಿಕ್ಷೆಯನ್ನು ವಿಧಿಸತಕ್ಕದ್ದು. ಈ ತೀರ್ಪು ಈ ಪ್ರಕರಣವನ್ನು ಸೆಕ್ಷನ್ ೭ರಲ್ಲಿ ವಿವರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಶಿಕ್ಷಾ ಪರಿವರ್ತನೆಗಾಗಿ ಅಥವಾ ನಿಝಾಮತ್ ಅದಾಲತ್‌ಗೆ ಒಪ್ಪಿಸುವ ಅವಕಾಶಕ್ಕೊಳಪಟ್ಟಿರುತ್ತದೆ.

**ಹೆಂಗಸರನ್ನು ಅಥವಾ ಚಿಕ್ಕಮಕ್ಕಳನ್ನು ಕೊಲ್ಲುವ ಬ್ರಾಹ್ಮಣರಿಗೆ ಶಿಕ್ಷೆ:**

IX. ಪ್ರಸ್ತಾವನೆಯಲ್ಲಿ ಅಥವಾ ನಿಬಂಧನೆಯ ಸೆಕ್ಷನ್‌ಗಳಲ್ಲಿ ವಿವರಿಸಿದ ಸಂದರ್ಭ ಮತ್ತು ರೀತಿಯಲ್ಲಿ ಅಥವಾ ಅದೇ ತರಹದ ಸಂದರ್ಭ ಅಥವಾ ರೀತಿಯಲ್ಲಿ ಯಾವುದೇ ಬ್ರಾಹ್ಮಣ ಅಥವಾ ಬ್ರಾಹ್ಮಣರು ತನ್ನ ಹೆಂಗಸರನ್ನು ಅಥವಾ ಮಕ್ಕಳನ್ನು ಅಥವಾ ಅನ್ಯರ ಹೆಂಗಸರನ್ನು ಅಥವಾ ಮಕ್ಕಳನ್ನು ಯಾರಾದರೂ ಒಬ್ಬರನ್ನು ಅಥವಾ ಇಬ್ಬರನ್ನೂ ಪ್ರತ್ಯಕ್ಷ ಕೊಂದಲ್ಲಿ, ತಹಶೀಲ್ದಾರ ಅಥವಾ ರೆವೆನ್ಯೂ ಇಲಾಖೆಯ ಅಧಿಕಾರಿಗಳೊಂದಿಗೆ ಅಥವಾ ಸೇವಕರೊಂದಿಗೆ ಉಂಟಾದ ಅಸಮಾಧಾನಕ್ಕಾಗಿ, ಅಥವಾ ತನ್ನ ಅಥವಾ ಬೇರೆಯವರ ನಡುವಿನ ತನ್ನ ಅಥವಾ ಅನ್ಯರ ಭಿನ್ನಾಭಿಪ್ರಾಯಕ್ಕಾಗಿ, ಅವನು ಅಥವಾ ಅವರು ನರಹತ್ಯೆ ಎಸಗಿದುದಕ್ಕಾಗಿ ವಿಚಾರಣೆಗೆ ಗುರಿಪಡಿಸತಕ್ಕದ್ದು, ಮತ್ತು ವಸ್ತು ಸಂಗತಿ ಮತ್ತು ವಸ್ತು ಸಂಗತಿಗಳ ದೃಢೀಕರಣದ ಆಧಾರದ ಮೇಲೆ ಸಂಚಾರಿ ನ್ಯಾಯಾಲಯ ಮರಣದಂಡನೆ ವಿಧಿಸತಕ್ಕದ್ದು ಮತ್ತು ಈ ತೀರ್ಪು ಈ ಪ್ರಕರಣವನ್ನು ಸೆಕ್ಷನ್ ೭ರಲ್ಲಿ ವಿವರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಾ ಪರಿವರ್ತನೆ ಅಥವಾ ಕ್ಷಮೆಗಾಗಿ ನಿಝಾಮತ್ ಅದಾಲತ್‌ಗೆ ಒಪ್ಪಿಸುವ ಅವಕಾಶಕ್ಕೊಳಪಟ್ಟಿರುತ್ತದೆ. ಈ ಸೆಕ್ಷನ್‌ನಡಿಯಲ್ಲಿ ಕೊಲೆಗಾರ/ಕೊಲೆಗಾರರೆಂದು ಕಂಡುಬಂದ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣರ ಕುಟುಂಬ ಅಥವಾ ಕುಟುಂಬಗಳನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ ೧೭೮೯ರ ಜೂನ್ ೧೭ರಂದು ಹೊರಡಿಸಿದ, ಅದೇ ವರ್ಷ ರೆಸಿಡೆಂಟ್ ಜುಲೈ ೭ರಂದು

ಬನಾರಸದಲ್ಲಿ ಪ್ರಕಟಿಸಿದ ಆದೇಶದ ಪ್ರಕಾರ, ಬನಾರಸ್ ಪ್ರಾಂತ್ಯ ಮತ್ತು ಕಂಪನಿಯ ಪ್ರದೇಶಗಳಿಂದ ಗಡಿಪಾರು ಮಾಡಬೇಕು. ಅವನ ಅಥವಾ ಅವರ ಭೂಮಿರೂಪದ ಆಸ್ತಿಯನ್ನು ಸರಕಾರ ವಶಕ್ಕೆ ತೆಗೆದುಕೊಂಡು, ತನಗೆ ಸರಿಕಂಡಂತೆ ಅದರ ವ್ಯವಸ್ಥೆ ಮಾಡತಕ್ಕದ್ದು. ಮತ್ತು ಅದರಂತೆ ಸಂಚಾರಿ ನ್ಯಾಯಾಲಯ ಈ ಸೆಕ್ಷನ್‌ದ ಅಡಿಯಲ್ಲಿ ಕೊಲೆಯ ಆಪಾದನೆಗಾಗಿ ಬ್ರಾಹ್ಮಣರಿಗೆ ವಿಧಿಸಿರಬಹುದಾದ ಎಲ್ಲ ಶಿಕ್ಷೆಗಳಿಗೆ ಇದನ್ನು ಜೋಡಿಸತಕ್ಕದ್ದು. ಅದೇ ಸಮಯಕ್ಕೆ ಅಂಥ ತೀರ್ಪು ಮತ್ತು ಆದೇಶಗಳನ್ನು ಆ ಬ್ರಾಹ್ಮಣ ಅಥವಾ ಬ್ರಾಹ್ಮಣರ ಕುಟುಂಬದಲ್ಲಿದ್ದವರ ಸಂಖ್ಯೆ, ಲಿಂಗ ಮತ್ತು ವಯಸ್ಸಿನ ಬಗೆಗೆ ಸಾಧ್ಯವಿದ್ದಷ್ಟು ಸರಿಯಾದ ಮಾಹಿತಿಯೊಂದಿಗೆ, ನಿಝಾಮತ್ ಅದಾಲತ್‌ಕ್ಕೆ ತಿಳಿಸತಕ್ಕದ್ದು ಮತ್ತು ಅದರೊಂದಿಗೆ ಶಿಕ್ಷೆಗೊಳಗಾದ ಬ್ರಾಹ್ಮಣ ಅಥವಾ ಬ್ರಾಹ್ಮಣರ ಕುಟುಂಬಗಳನ್ನು ಗಡಿಪಾರು ಮಾಡುವ ಆಜ್ಞೆಯನ್ನು ಚಾಚೂ ತಪ್ಪದಂತೆ ಪಾಲಿಸುವುದು ಎಷ್ಟರಮಟ್ಟಿಗೆ ಸರಿ ಅಥವಾ ತಪ್ಪು ಎಂಬುದನ್ನು ಅಥವಾ ಆಸ್ತಿಯನ್ನು ಜಪ್ತುಮಾಡುವ ಶಿಕ್ಷೆಯನ್ನು ದೃಢಪಡಿಸುವುದರ ಅಥವಾ ಕಡಿತ ಮಾಡುವುದರ ಅಥವಾ ಪೂರ್ಣ ತೆಗೆದುಹಾಕುವುದರ ಬಗೆಗೆ ತನ್ನ ಅಭಿಪ್ರಾಯವನ್ನು ಲಗತ್ತಿಸತಕ್ಕದ್ದು ಮತ್ತು ನಿಝಾಮತ್ ಅದಾಲತ್ ಸಂಚಾರಿ ನ್ಯಾಯಾಲಯ ವಿಧಿಸಿದ ಈ ಶಿಕ್ಷೆ ಮತ್ತು ಆದೇಶವನ್ನು ಮತ್ತು ಸಂಚಾರಿ ನ್ಯಾಯಾಲಯದ ಅಭಿಪ್ರಾಯವನ್ನು ಪರಿಶೀಲಿಸಿ, ಆ ಶಿಕ್ಷೆಯನ್ನು ಪೂರ್ಣ ದೃಢಪಡಿಸತಕ್ಕದ್ದು ಅಥವಾ ತನಗೆ ಸರಿಕಂಡಂತೆ ಆ ಶಿಕ್ಷೆ ಮತ್ತು ಆದೇಶದ ಪರಿವರ್ತನೆಗೆ ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಗೆ ಶಿಫಾರಸು ಮಾಡತಕ್ಕದ್ದು, ಮತ್ತು ಎಲ್ಲ ಪ್ರಕರಣಗಳಲ್ಲಿ ಕೊಲೆ ಆಪಾದಿತ ಬ್ರಾಹ್ಮಣ ಅಥವಾ ಬ್ರಾಹ್ಮಣರ ಅಥವಾ ಅವನ ಅಥವಾ ಅವರ ಕುಟುಂಬದ ಭೂ ಆಸ್ತಿಯನ್ನು ವಶಪಡಿಸಿಕೊಳ್ಳುವ ಆಜ್ಞೆಯನ್ನು ನಿಝಾಮತ್ ಅದಾಲತ್ ದೃಢಪಡಿಸತಕ್ಕದ್ದು ಮತ್ತು ಅದರ ವಿಷಯಕ್ಕೆ ಅದೇ ನ್ಯಾಯಾಲಯ ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಂದ ಆ ಶಿಕ್ಷೆಯನ್ನು ದೃಢಪಡಿಸುವ ಮತ್ತು ಯಾವ ರೀತಿಯಲ್ಲಿ ಆ ಭೂ ಆಸ್ತಿಯ ವಿಲೇವಾರಿ ಮಾಡತಕ್ಕುದೆಂದು ಆದೇಶವಿರದೆ ಆ ಶಿಕ್ಷೆಯನ್ನು ಕಾರ್ಯಗತಗೊಳಿಸಲಾಗದು.

**ಘಾತುಕರ ಕುಟುಂಬದ ಭೂಮಿಯನ್ನು ಜಪ್ತು ಮಾಡುವುದಕ್ಕೆ ಇದ್ದ ಇತಿಮಿತಿ:**

X. ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಗೆ ಸೆಕ್ಷನ್ ೯ರ ಅಡಿಯಲ್ಲಿ ಸಂಚಾರಿ ನ್ಯಾಯಾಲಯ ಕೊಟ್ಟ ಶಿಕ್ಷೆ ಮತ್ತು ಆದೇಶದ ಕಡಿತಕ್ಕಾಗಿ ತನ್ನ ಸ್ವಂತ ವಿವೇಚನಾ ನಿರ್ಣಯದ ಅಧಿಕಾರವನ್ನು ಚಲಾಯಿಸಿ ನಿಝಾಮತ್ ಅದಾಲತ್ ಶಿಫಾರಸು ಮಾಡುವುದರ ಪರಿಣಾಮವಾಗಿ ಗಡಿಪಾರು ಮಾಡುವುದು ಕೊಲೆ ಮಾಡಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅಥವಾ ಅವನ ಅಥವಾ ಅವರ ಕುಟುಂಬದ ಕೆಲವೇ ಜನರಿಗೆ ಸೀಮಿತಗೊಳಿಸುವುದು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಗೆ ಸರಿ ಎನಿಸಿದಾಗ ಭೂ ಆಸ್ತಿಗೆ ಮುಟ್ಟುಗೋಲು ಹಾಕುವಂತಿಲ್ಲ. ಆದರೆ ಆ ಎಲ್ಲ ಆಸ್ತಿಯನ್ನು ಗಡಿಪಾರು ಆಜ್ಞೆಯಿಂದ ಮುಕ್ತವಿರುವ ಸದಸ್ಯರ ವಶಕ್ಕೆ ಬಿಟ್ಟುಕೊಡಬೇಕು.

**ಬ್ರಾಹ್ಮಣರು ಧರಣಾ ಕೂಡುವುದಕ್ಕೆ ಸಂಬಂಧಿಸಿದ ನಿಬಂಧನೆಗಳು:**

XI. ಮೊದಲನೆಯ ನಿಬಂಧನೆ: ಗವರ್ನರ್–ಜನರಲ್–ಇನ್–ಕೌನ್ಸಿಲ್ ೧೭೯೨ರ ನವೆಂಬರ್ ೨ರಂದು ಹೊರಡಿಸಿದ ಮತ್ತು ಅನಂತರ ಅದೇ ವರ್ಷ ಡಿಸೆಂಬರ್ ೨೨ರಂದು ಬನಾರಸದಲ್ಲಿ ಪ್ರಕಟವಾದ

ಆದೇಶ ಮತ್ತು ೧೭೯೪ರ ನವೆಂಬರ್ ೭ರಂದು ಗವರ್ನರ್–ಜನರಲ್–ಇನ್–ಕೌನ್ಸಿಲ್ ಹೊರಡಿಸಿದ ಆದೇಶಕ್ಕನುಗುಣವಾಗಿ ಧರಣಾ ತಡೆಯಲು ಮತ್ತು ಈ ಅಪರಾಧವೆಸಗಿದ ಬ್ರಾಹ್ಮಣರ ವಿಚಾರಣೆ ಮತ್ತು ಶಿಕ್ಷೆಗಾಗಿ ಧರಣಾ ಕೂಡುವ ಬ್ರಾಹ್ಮಣರನ್ನು ಬಂಧಿಸಲು ಮ್ಯಾಜಿಸ್ಟ್ರೇಟ್ ಆದೇಶಿಸುವುದಕ್ಕೆ ಸಂಬಂಧಿಸಿದ ಕೆಳಗಿನ ನಿಯಮಗಳಿಗೆ ಕಾಯಿದೆ ರೂಪ ಕೊಡಲಾಗಿರುತ್ತದೆ.

**ಧರಣಾ ಕೂಡುವ ಬ್ರಾಹ್ಮಣರನ್ನು ಬಂಧಿಸಲು ಮ್ಯಾಜಿಸ್ಟ್ರೇಟ್ ಆದೇಶಿಸುವುದು:**

ಎರಡನೆಯ ನಿಬಂಧನೆ: ಮ್ಯಾಜಿಸ್ಟ್ರೇಟ್‌ರಿಗೆ ಯಾವುದೇ ಬ್ರಾಹ್ಮಣ ಅಥವಾ ಬ್ರಾಹ್ಮಣರು ಧರಣಾ ಕೂಡುವುದರ ವಿರುದ್ಧ ಲಿಖಿತ ದೂರು ಮುಟ್ಟಿದ ಕೂಡಲೇ ಆ ಸಮಾಚಾರದ ಸತ್ಯಾಸತ್ಯತೆಯ ಪ್ರಮಾಣ ದೊರೆತ ತಕ್ಷಣ ಮ್ಯಾಜಿಸ್ಟ್ರೇಟರು ತಮ್ಮ ಮುದ್ರೆ ಮತ್ತು ಸಹಿಯೊಂದಿಗೆ, ಯಾರ ವಿರುದ್ಧ ದೂರು ಕೊಡಲಾಗಿರುವುದೋ ಆ ವ್ಯಕ್ತಿ ಅಥವಾ ವ್ಯಕ್ತಿಗಳ ಬಂಧನಕ್ಕೆ ಗಿರಫ್ತದಾರಿ ಆಜ್ಞೆಯನ್ನು ಹೊರಡಿಸತಕ್ಕದ್ದು ಮತ್ತು ಬಂಧಿತ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಮ್ಯಾಜಿಸ್ಟ್ರೇಟ್‌ರ ಎದುರು ಹಾಜರುಪಡಿಸಲಾಗಿ ಆ ದೂರಿಗೆ ಸಂಬಂಧಿಸಿದ ಸಂದರ್ಭಗಳ ಬಗೆಗೆ ವಿಚಾರಣೆ ನಡೆಸತಕ್ಕದ್ದು ಮತ್ತು ಬಂಧಿತ ವ್ಯಕ್ತಿ ಅಥವಾ ವ್ಯಕ್ತಿಗಳ ಮತ್ತು ಫಿರಿಯಾದಿದಾರನ ತನಿಖೆ ನಡೆಸತಕ್ಕದ್ದು. ಬಂಧಿತನ ಅಥವಾ ಬಂಧಿತರ ದುರ್ನಡತೆಯ ಬಗೆಗೆ ಗೊತ್ತಿದೆ ಎಂದು ಹೇಳಲಾದ ಇನ್ನುಳಿದ ವ್ಯಕ್ತಿಗಳ ತನಿಖೆ ನಡೆಯಿಸತಕ್ಕದ್ದು ಮತ್ತು ಅವರ ಹೇಳಿಕೆಗಳನ್ನು ದಾಖಲಿಸತಕ್ಕದ್ದು. ಈ ತನಿಖೆಯಾದ ನಂತರ, ಬಂಧಿತನ ಅಥವಾ ಬಂಧಿತರ ವಿರುದ್ಧ ಮಾಡಲಾದ ಅಪರಾಧ ಅವನಿಂದ ಅಥವಾ ಅವರಿಂದ ಎಂದೂ ಜರುಗಿಲ್ಲವೆಂದು ಅಥವಾ ಅವನು ಅಥವಾ ಅವರು ಆ ಅಪರಾಧ ಎಸಗಿರುವರೆಂದು ಸಂಶಯಪಡಲು ಯಾವುದೇ ಆಧಾರ ಇಲ್ಲವೆಂದು ಕಂಡುಬಂದಲ್ಲಿ, ಮ್ಯಾಜಿಸ್ಟ್ರೇಟ್‌ರು ಅಂಥ ಬ್ರಾಹ್ಮಣ ಅಥವಾ ಬ್ರಾಹ್ಮಣರ ಬಿಡುಗಡೆಗೆ ಆದೇಶ ನೀಡತಕ್ಕದ್ದು. ಹಾಗೆ ನಿಬಂಧನೆ IX, ೧೭೯೩ರ ಸೆಕ್ಷನ್ ೧೭ರಲ್ಲಿ ವಿಧಿಸಿದ ರೀತಿಯಲ್ಲಿ ಸಂಚಾರಿ ನ್ಯಾಯಾಲಯ ಸಲ್ಲಿಸಿದ ಸುದ್ದಿಯ ಕಾರಣಗಳನ್ನು ದಾಖಲಿಸತಕ್ಕದ್ದು. ತದ್ವಿರುದ್ಧ, ಅಪರಾಧ ಅಥವಾ ದುರ್ನಡತೆ ನಿಜವಾಗಿಯೂ ನಡೆದಿದೆ ಎಂದು ಮತ್ತು ಬಂಧಿತ ಅಥವಾ ಬಂಧಿತರು ಪ್ರಮುಖ ಅಥವಾ ಸಹಾಯಕ ಅಪರಾಧಿಗಳಿರುವರೆಂದು ಸಂಶಯ ಪಡುವುದಕ್ಕೆ ಆಧಾರಗಳಿರುತ್ತವೆಂದು ಮ್ಯಾಜಿಸ್ಟ್ರೇಟ್‌ರಿಗೆ ಕಂಡುಬಂದಲ್ಲಿ, ಮ್ಯಾಜಿಸ್ಟ್ರೇಟ್‌ರು ಅವನ ಅಥವಾ ಅವರ ಬಂಧನಕ್ಕೆ ಅಥವಾ ಜಾಮೀನಿನ ಮೇಲೆ ಬಿಡುಗಡೆಗೆ ತಮ್ಮ ವಿವೇಚನೆಗೆ ತಕ್ಕಂತೆ ಆದೇಶಿಸತಕ್ಕದ್ದು. ಅವನ ಅಥವಾ ಅವರ ಪ್ರಕರಣದ ವಿಚಾರಣೆಯನ್ನು ಸಂಚಾರಿ ನ್ಯಾಯಾಲಯದ ಮುಂಬರುವ ಅಧಿವೇಶನದಲ್ಲಿ ಎತ್ತಿಕೊಳ್ಳುವ ನಿರ್ಣಯ ತೆಗೆದುಕೊಳ್ಳತಕ್ಕದ್ದು. ಮತ್ತು ಆಪಾದಿತ ಹಾಜರಾಗಿ ವಿಚಾರಣೆಯನ್ನು ನಡೆಸಿಕೊಡಬೇಕೆಂದು ಮತ್ತು ಸಾಕ್ಷಿದಾರರು ಹಾಜರಾಗಿ ೧೭೯೩ರ ನಿಬಂಧನೆ IXರ ಸೆಕ್ಷನ್ ೫ರಲ್ಲಿ ಹೇಳಿರುವ ರೀತಿಯಲ್ಲಿ ನಿರ್ಬಂಧ ಹೇರಬೇಕು. ಆ ವಿಚಾರಣೆ ಸಂಚಾರಿ ನ್ಯಾಯಾಲಯಗಳೆದುರು ಈ ಮೊದಲು ಹೇಳಿದ ನಿಬಂಧನೆಯಲ್ಲಿ ೧೭೯೫ರ ನಿಬಂಧನೆ XVIರಲ್ಲಿ ವಿವರಿಸಿದ ರೀತಿಯಲ್ಲಿ ನಡೆಸತಕ್ಕದ್ದು. ಸಾಕ್ಷಿ ಮುಗಿದ ಬಳಿಕ, ಸಾಕ್ಷಿಯ ಸಂಗತಿಗಳು ಬಂಧಿತನು ಅಥವಾ ಬಂಧಿತರು ಧರಣಿ ನಡೆಸಿದ್ದಾರೆಂಬುದಕ್ಕೆ ಆಧಾರ ಒದಗಿಸುತ್ತವೆ ಎಂಬುದರ ಲಿಖಿತ ವ್ಯೂವುಸ್ಥಾ (Vyuvastha) ಕೊಡುವುದನ್ನು ನ್ಯಾಯಾಲಯದ ಪಂಡಿತನಿಗೆ ಒಪ್ಪಿಸತಕ್ಕದ್ದು ಮತ್ತು ವ್ಯೂವುಸ್ಥಾ (Vyuvastha) ಧರಣಿ ನಡೆಸಿದ ಆಪಾದನೆಯನ್ನು

ದೃಢೀಕರಿಸುತ್ತಿದ್ದರೆ, ಸಂಚಾರಿ ನ್ಯಾಯಾಲಯವು ಬಂಧಿತನನ್ನು ಅಥವಾ ಬಂಧಿತರನ್ನು ಬನಾರಸ ಪ್ರಾಂತದಿಂದ ಹೊರಹಾಕಲು ತೀರ್ಪು ನೀಡುತ್ತದೆ ಮತ್ತು ಯಾವುದನ್ನು ಪಡೆಯುವುದಕ್ಕಾಗಿ ದುರ್ವರ್ತನೆ (ಧರಣಿ) ನಡೆದಿರಬಹುದೋ ಅದರ ಮೇಲೆ ಅವನಿಗೆ ಅಥವಾ ಅವರಿಗೆ ಇರುವ ಎಲ್ಲ ಹಕ್ಕುಗಳನ್ನು ಕಿತ್ತುಕೊಳ್ಳಲಾಗುವುದು. ಆದರೆ ನಿಝಾಮತ್ ಅದಾಲತ್‌ಕ್ಕೆ ವರದಿಯನ್ನು ಸಲ್ಲಿಸುವವರೆಗೆ, ನಿಝಾಮತ್ ಅದಾಲತ್ ಆ ತೀರ್ಪನ್ನು ಸಂಪೂರ್ಣ ದೃಢೀಕರಿಸುವ ಅಥವಾ ಆ ತೀರ್ಪನ್ನು ಪರಿವರ್ತಿಸಿ ಬ್ರಾಹ್ಮಣ ಅಥವಾ ಬ್ರಾಹ್ಮಣರನ್ನು ಆ ಪ್ರಾಂತದಿಂದ ಹೊರಹಾಕುವ ಅಥವಾ ಯಾವುದನ್ನು ದೊರಕಿಸಿಕೊಳ್ಳಲು ಅವನು ಅಥವಾ ಅವರು ಧರಣಿ ಕೂತಿರುವರೊ ಅದರ ಮೇಲಿನ ಅವನ ಅಥವಾ ಅವರ ಹಕ್ಕನ್ನು ಕಿತ್ತುಕೊಳ್ಳುವಂತೆ ನ್ಯಾಯಾಲಯ ಸರಿಕಂಡಂತೆ, ನಿರ್ದೇಶನ ನೀಡುವವರೆಗೆ, ಈ ತೀರ್ಪನ್ನು ಕಾರ್ಯಾಚರಣೆಯಲ್ಲಿ ತರುವಂತಿಲ್ಲ.

**ಧರಣಾ ಕೂಡುವ ಅಪರಾಧವನ್ನು ನಿಜವಾಗಿಯೂ ಎಸಗಿದ್ದರೂ ಧರಣಾ ನಡೆದಿದೆ ಎಂಬುದಕ್ಕೆ ಕಾಯಿದೆಯ ಅವಶ್ಯಕತೆಗಳು ದೊರೆಯದಿದ್ದಾಗ ಸಂಚಾರಿ ನ್ಯಾಯಾಲಯ ಯಾವ ಕ್ರಮ ಕೈಕೊಳ್ಳಬೇಕು?**

ಸೆಕ್ಷನ್ IIರಲ್ಲಿ ಹೇಳಿರುವಂತೆ ಪಂಡಿತನು ಕೊಡಬೇಕಾದ ವ್ಯೂವುಸ್ಥಾದಲ್ಲಿ ಧರಣಾ ಅಪರಾಧಕ್ಕೆ ಸಂಬಂಧಿಸಿದ ಹಾಗೂ ಸಾಕ್ಷಿಯಲ್ಲಿ ಪ್ರಮಾಣೀಕರಿಸಿದ ಸಂದರ್ಭಗಳ ಉಲ್ಲೇಖವಿರದಿದ್ದಲ್ಲಿ, ಮತ್ತು ತನ್ನೆದುರಿನ ಸಾಕ್ಷ್ಯಾಧಾರದ ಮೇಲೆ ಸಂಚಾರಿ ನ್ಯಾಯಾಲಯ, ಧರಣಾದ ಸಾಮಾನ್ಯ ನಿರ್ಮಾಣದ ಮತ್ತು ಅದರ ಪ್ರಚಲಿತ ಅರ್ಥದ ಪ್ರಕಾರ, ಹಿಂದೂ ಪುಸ್ತಕಗಳಲ್ಲಿಯ ವರ್ಣನೆಯ ಪ್ರಕಾರ ಧರಣಾ ನಡೆಸಲು ಇರಬೇಕಾದ ಕಾಯಿದೆ ಬಿದ್ದ ಸಂದರ್ಭಗಳಿರದಿದ್ದರೂ, ಧರಣಾ ನಡೆಯದಿದ್ದರೂ ಧರಣಾ ನಡೆದಿದೆ ಎಂದು ಅಭಿಪ್ರಾಯಪಟ್ಟರೆ, ಮೇಲೆ ಹೇಳಿದ ನ್ಯಾಯಾಲಯ, ಅಂಥ ಸಂದರ್ಭದಲ್ಲಿ ಗವರ್ನರ್–ಜನರಲ್–ಇನ್–ಕೌನ್ಸಿಲ್ ಹೊರಡಿಸಿದ ೧೭೯೪ರ ನವೆಂಬರ ಆದೇಶದ ನಿರ್ದೇಶನದಂತೆ, ಕೈದಿ ಅಥವಾ ಕೈದಿಗಳಿಂದ ಹೀಗೆ ಮುಚ್ಚಳಿಕೆ ತೆಗೆದುಕೊಳ್ಳತಕ್ಕದ್ದು– ಮತ್ತೊಮ್ಮೆ ಧರಣಿ ಕೂತರೆ ಅಥವಾ ಧರಣಿ ಹೋಲುವ ಯಾವುದೇ ಅಪರಾಧವೆಸಗಿ, ಅದಕ್ಕಾಗಿ ಸಂಚಾರಿ ನ್ಯಾಯಾಲಯದೆದುರು ವಿಚಾರಣೆಗೊಳಪಟ್ಟು, ವಿಚಾರಣೆ ನಡೆಸಿದ ನ್ಯಾಯಾಧೀಶರ ಅಥವಾ ಬಹುಸಂಖ್ಯಾ ನ್ಯಾಯಾಧೀಶರ ಪ್ರಕಾರ, ಧರಣಿ ಅಥವಾ ಅದರ ಸಮಾನ ಅಪರಾಧ ಎಸಗಿದ್ದು ಕಂಡುಬಂದರೆ, ಆ ಕೈದಿ ಅಥವಾ ಕೈದಿಗಳು ಎರಡನೆಯ ಅಪರಾಧಕ್ಕಾಗಿ ಗವರ್ನರ್–ಜನರಲ್–ಇನ್–ಕೌನ್ಸಿಲ್‌ರ ಆದೇಶದಂತೆ ಪೂರ್ಣ ಶಿಕ್ಷೆ ಅನುಭವಿಸುವರು ಪ್ರಾಂತದಿಂದ ಹೊರ ಹಾಕಲ್ಪಡುವವರು ಮತ್ತು ಯಾವುದನ್ನು ದೊರಕಿಸಬೇಕೆಂದು ಧರಣಿ ನಡೆಸಿದ್ದರೋ ಅದರ ಮೇಲಿನ ಹಕ್ಕನ್ನು ಕಳೆದುಕೊಳ್ಳುವರು.

**ತಮ್ಮ ಹೆಣ್ಣು ಕೂಸುಗಳನ್ನು ತೊರೆಯುವ ಅಥವಾ ಆಹಾರ ಕೊರತೆಯಿಂದ ಅವರನ್ನು ಸಾಯುವಂತೆ ಮಾಡುವ ಅಪರಾಧಕ್ಕಾಗಿ ರಾಜಕುಮಾರ(Rajakumar)ರನ್ನು ವಿಚಾರಣೆಗೊಳಪಡಿಸುವ ಕ್ರಮ:**

XIII. ೧೭೮೯ರ ಡಿಸೆಂಬರ್ ತಿಂಗಳಲ್ಲಿ, ರಾಜಕುಮಾರರ ಪಂಗಡ ತಮ್ಮ ಹೆಂಗಸರನ್ನು ಉಪವಾಸ ಸಾಯಿಸುವ ಪದ್ಧತಿಯನ್ನು ಬಿಟ್ಟುಬಿಡುವುದಕ್ಕೆ ಬದ್ಧರಾಗಿದ್ದು, ಬನಾರಸದಲ್ಲಿ ನಗರ, ಜಿಲ್ಲಾ ಮತ್ತು ಸಂಚಾರಿ ನ್ಯಾಯಾಲಯಗಳ ಸ್ಥಾಪನೆ ಮತ್ತು ಪ್ರಾರಂಭ ಆದಾಗಿನಿಂದ, ಯಾವನೆ ರಾಜಕುಮಾರನು ತನ್ನ ಹೆಂಗಸನ್ನು ಉದ್ದೇಶಪೂರ್ವಕ, ಅದು ಆಹಾರ ಸೇವಿಸುವುದಕ್ಕೆ ಅಡ್ಡಿ ಮಾಡಿ ಈ ನಿಬಂಧನೆಯ

> ಪ್ರಸ್ತಾವನೆಯಲ್ಲಿ ಹೇಳಿದ ರೀತಿಯಲ್ಲಿ ಇಲ್ಲವೆ ಬೇರಾವ ರೀತಿಯಲ್ಲಿ ಸಾಯಿಸಿದ್ದು ಸಾಬೀತಾದರೆ, ಅದರ ವಿಷಯಕ್ಕೆ ಸಪ್ರಮಾಣ ಸಮಾಚಾರ ಅಥವಾ ಆಪಾದನೆಯು ಸಂಭವನೀಯ ಎನಿಸಲು ಸಾಕಾಗುವಷ್ಟು ಬೇರೇನಾದರೂ ಸಮಾಚಾರ ಅಥವಾ ಪ್ರಮಾಣ ಸ್ವೀಕರಿಸಿದೊಡನೆ, ನ್ಯಾಯಾಧೀಶರು ವಿದ್ಯುಕ್ತ ರೀತಿಯಲ್ಲಿ ಅಂಥ ರಾಜಕುಮಾರನ ಬಂಧನಕ್ಕೆ ಆದೇಶ ಹೊರಡಿಸತಕ್ಕದ್ದು, ಮತ್ತು ೧೭೯೩ರ ನಿಬಂಧನೆ IX, ಸೆಕ್ಷನ್ ೫ರ ಆದೇಶದಂತೆ ವಿಚಾರಣೆಯನ್ನು ನಡೆಸತಕ್ಕದ್ದು. ಆ ಅಪರಾಧ ನಿಜವಾಗಿಯೂ ಎಸಗಲಾಗಿದೆ ಎಂದೂ, ಬಂಧಿತ ಆ ಅಪರಾಧವನ್ನೆಸಗಿರುವನೆಂದು ಸಂಶಯಪಡಲು ಆಧಾರಗಳು ಕಂಡುಬಂದಲ್ಲಿ ನ್ಯಾಯಾಧೀಶ ಅವನನ್ನು ಜೈಲಿನಲ್ಲಿರಿಸಿ ಸಂಚಾರಿ ನ್ಯಾಯಾಲಯದೆದುರು ವಿಚಾರಣೆಗೊಳಪಡಿಸುವ ಆದೇಶ ಹೊರಡಿಸತಕ್ಕದ್ದು. ಅದೇ ಸಮಯಕ್ಕೆ ಹಿಂದೆ ಉಲ್ಲೇಖಿಸಿದ ನಿಬಂಧನೆ ಮತ್ತು ಸೆಕ್ಷನ್‌ದಲ್ಲಿರುವ ಎಲ್ಲ ಮೂಲ ಆಪಾದಕ ಅಥವಾ ಸಮಾಚಾರಕ ಅಥವಾ ಸಾಕ್ಷಿದಾರರನ್ನು ಹಾಜರುಪಡಿಸುವ ಎಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು. ಹಾಗೆ ೧೭೯೩ ನಿಬಂಧನೆ IX, ಮತ್ತು ೧೭೯೫ ನಿಬಂಧನೆ XVIರಲ್ಲಿ ಉಳಿದ ಕೊಲೆ ಪ್ರಕರಣಗಳ ಸಂಬಂಧ ಹೇಳಿರುವ ರೀತಿಯಲ್ಲಿ ಬಂಧಿತನ ವಿಚಾರಣೆ ನಡೆಯತಕ್ಕದ್ದು.

ಬ್ರಿಟಿಷರು ಕೈಕೊಂಡ ಸಾಮಾಜಿಕ ಕಾಯಿದೆಯ ಎರಡನೆಯ ಭಾಗವು ೧೮೦೨ರ ಬಂಗಾಲ ನಿಬಂಧನೆ VIರಲ್ಲಿ ಸೇರಿರುತ್ತದೆ. ಅದು ಸೌಗರ ಮತ್ತು ಉಳಿದ ಪ್ರದೇಶಗಳಲ್ಲಿ ಜರುಗುವ ಶಿಶುಬಲಿಯನ್ನು ತಡೆಯುವ ನಿಬಂಧನೆ ಆಗಿರುತ್ತದೆ. ಅದು ಕೆಳಗಿನಂತೆ ಕಾಯಿದೆ ರೂಪ ತಾಳಿದೆ:

### ನಿಬಂಧನೆ VI
### ಕ್ರಿ.ಶ. ೧೮೦೨

ಸೌಗರ ಮತ್ತು ಉಳಿದ ಪ್ರದೇಶಗಳಲ್ಲಿ ಜರುಗುವ ಶಿಶುಬಲಿಯನ್ನು ತಡೆಯುವ ನಿಬಂಧನೆ. ೧೮೦೨ರ ಆಗಸ್ಟ್ ೨೦ರಂದು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಂದ ಒಪ್ಪಿಗೆ ಪಡೆದಿರುತ್ತದೆ.

I. ಪಾತಕ ಮತ್ತು ಅಮಾನುಷ ಶಿಶುಬಲಿ, ಶಿಶುಗಳನ್ನು ನೀರಲ್ಲಿ ಮುಳುಗಿಸುವುದು ಅಥವಾ ಶಾರ್ಕ್ ಮೀನುಗಳು ನುಂಗುವಂತೆ ಮಾಡುವುದು ಸಾಗರ ನಡುಗಡ್ಡೆಗಳಲ್ಲಿ ಮತ್ತು ಬನ್ಸಬರ್ಯಹ (Bansbaryah), ಚೌಗಢ ಮತ್ತು ಗಂಗಾನದಿ ದಂಡೆಯು ಇನ್ನುಳಿದ ಪ್ರದೇಶಗಳಲ್ಲಿ ರೂಢಿಯಲ್ಲಿರುವುದೆಂದು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಗೆ ವರದಿ ಮಾಡಲಾಗಿದೆ. ಅದರಲ್ಲಿಯೂ ವಿಶೇಷವಾಗಿ ಸಾಗರದಲ್ಲಿ ಅಂಥ ಬಲಿಗಳು ನಿಯಮಿತ ಅವಧಿಯಲ್ಲಿ, ಅಂದರೆ ನವೆಂಬರ್ ಮತ್ತು ಜನವರಿಯ ಹುಣ್ಣಿಮೆ ದಿನದಂದು, ಆ ಸಮಯಕ್ಕೆ ಪ್ರೌಢವ್ಯಕ್ತಿಗಳು ಕೂಡ ತಮ್ಮನ್ನು ಬಲಿಯಾಗಿ ಅರ್ಪಿಸಿಕೊಳ್ಳುತ್ತಾರೆ. ಉಳಿದ ಸ್ಥಳಗಳಲ್ಲಿ ರೂಢಿಯಲ್ಲಿರುವುದೆಂದು ಹೇಳಿರುವಂತೆ, ಸೌಗರದಲ್ಲಿ ಸಮುದ್ರಕ್ಕೆಸೆದ ಮಕ್ಕಳನ್ನು ಬದುಕಿಸಲಾಗುವುದಿಲ್ಲ. ಆದರೆ ತದ್ವಿರುದ್ಧ ವಿಶಿಷ್ಟ ಕ್ರೂರ ಸಂದರ್ಭಗಳೊಂದಿಗೆ ಬಲಿಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಮೂಢನಂಬಿಕೆಯಿಂದ ಉದ್ಭವಿಸಿದ ಈ ವ್ರತಕ್ಕೆ ಹಿಂದೂ ಕಾಯಿದೆಯ ಒಪ್ಪಿಗೆ ಇರುವುದಿಲ್ಲ. ಧಾರ್ಮಿಕ ವರ್ಗಗಳಿಂದ ಅಥವಾ ಸಾಮಾನ್ಯ ಜನರಿಂದಲೂ ಇದಕ್ಕೆ ಅನುಮೋದನೆ ಇರುವುದಿಲ್ಲ. ಭಾರತೀಯ ಹಿಂದೂ ಅಥವಾ ಮಹಮ್ಮದೀಯ ಸರಕಾರಗಳೂ ಇದನ್ನು ಎಂದೂ ಅಧಿಕೃತಗೊಳಿಸುವುದಿಲ್ಲ. ಆದ್ದರಿಂದ

ಈ ಅಪರಾಧದಲ್ಲಿ ತೊಡಗಿರುವ ವ್ಯಕ್ತಿಗಳು ಶಿಕ್ಷಾರ್ಹರಿರುತ್ತಾರೆ. ಈ ಅಪರಾಧಕ್ಕೆ ರೂಢಿಯ ನೆಪ ಇರುವುದಿಲ್ಲ. ಆದರೆ ಇಷ್ಟೊಂದು ಅಮಾನುಷ ರೂಢಿಯ ಹೆಚ್ಚು ಪರಿಣಾಮಕಾರಿ ತಡೆಗೆ ಗವರ್ನರ್–ಜನರಲ್–ಇನ್–ಕೌನ್ಸಿಲ್ ಬಂಗಾಲ, ಓರಿಸ್ಸಾ ಮತ್ತು ಬನಾರಸ್ ಪ್ರಾಂತಗಳಲ್ಲಿ ಕೆಳಗಿನ ನಿಬಂಧನೆಯನ್ನು ಅದರ ಘೋಷಣೆ ಆದಂದಿನಿಂದ ಜಾರಿಗೆ ಬರುವಂತೆ ಮಾಡಲಾಗಿದೆ.

II. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಪ್ರಾಣಹರಣ ಮಾಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಯಾವುದೇ ಶಿಶುವನ್ನು ಅಥವಾ ಅಪ್ರಬುದ್ಧ ವ್ಯಕ್ತಿಯನ್ನು ಅವನ ಒಪ್ಪಿಗೆಯಿಂದ ಅಥವಾ ಒಪ್ಪಿಗೆ ಇರದೆ ಸಮುದ್ರದಲ್ಲಿ ಅಥವಾ ಗಂಗಾನದಿಯಲ್ಲಿ ಅಥವಾ ಬೇರಾವುದೇ ನದಿಯಲ್ಲಿ ಅಥವಾ ನೀರಿನಲ್ಲಿ ಎಸೆದರೆ ಅಥವಾ ಎಸೆಯುವಂತೆ ಮಾಡಿದರೆ, ಅದರ ಪರಿಣಾಮವಾಗಿ ಆ ಶಿಶು ಅಥವಾ ವ್ಯಕ್ತಿ ಮುಳುಗಿದರೆ ಅಥವಾ ಶಾರ್ಕ್ ಮೀನು ಅಥವಾ ಮೊಸಳೆಗಳಿಂದ ಸಾಯಿಸಲ್ಪಟ್ಟರೆ ಅಥವಾ ಬೇರಾವುದೇ ರೀತಿಯಲ್ಲಿ ಸತ್ತರೆ, ಹೀಗೆ ಅಪರಾಧ ಎಸಗುವ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಉದ್ದೇಶಪೂರ್ವಕ ಕೊಲೆಗೈದ ಅಪರಾಧಿಗಳೆಂದು ತಿಳಿಯಲಾಗುವುದು, ಮತ್ತು ಅಪರಾಧ ದೃಢಪಟ್ಟ ಕೂಡಲೇ ಅವರು ಮರಣದಂಡನೆಗೆ ಅರ್ಹರಾಗುತ್ತಾರೆ. ಮತ್ತು ಅಂಥ ದುಷ್ಟ ಕೃತ್ಯ ಎಸಗುವುದರಲ್ಲಿ ನೆರವಾದ ಎಲ್ಲ ವ್ಯಕ್ತಿಗಳನ್ನು ಗ್ರಹಿಸಲಾಗುವುದು. ಹಾಗೆ ಅವರು ಶಿಕ್ಷೆಗೆ ಗುರಿಯಾಗುವರು. ಈ ಸೆಕ್ಷನ್‌ದಲ್ಲಿ ನಮೂದಿಸಿದಂತೆ ಪ್ರಮುಖ ಇಲ್ಲವೆ ಸಹಾಯಕ ಅಪರಾಧಿಗಳೆಂದು ನಿರ್ಣಯಿಸಲಾದ ಕೈದಿಗಳ ವಿಚಾರಣೆಯನ್ನು ನಿಝಾಮತ್ ಅದಾಲತ್‌ಕ್ಕೆ ಒಪ್ಪಿಸತಕ್ಕದ್ದು. ಆ ನ್ಯಾಯಾಲಯದ ಫತ್ವಾ (Futwah) ಏನೇ ಇದ್ದರೂ, ಆ ನ್ಯಾಯಾಲಯ ೧೭೯೩ರ ಸೆಕ್ಷನ್ LXXರ ನಿಬಂಧನೆ IX, ಪ್ರಕಾರ ತೀರ್ಪು (ಶಿಕ್ಷೆ) ಕೊಡತಕ್ಕದ್ದು. (ಅಥವಾ ಯಾವುದೇ ಕೈದಿಯು ಆ ನ್ಯಾಯಾಲಯಕ್ಕೆ ಅವಕೃಪೆಗೆ ತಕ್ಕ ವ್ಯಕ್ತಿ ಎಂದು ಕಂಡುಬಂದಲ್ಲಿ ಅಂಥವರ ಪ್ರಕರಣವನ್ನು IX ಸೆಕ್ಷನ್ LXX12 ನಿಬಂಧನೆ ಪ್ರಕಾರ ಗವರ್ನರ್–ಜನರಲ್–ಇನ್–ಕೌನ್ಸಿಲ್‌ಗೆ ಒಪ್ಪಿಸತಕ್ಕದ್ದು.)

III. ಹಿಂದಿನ ಭಾಗದಲ್ಲಿ ಹೇಳಿದಂತೆ ಯಾವುದೇ ಶಿಶು ಅಥವಾ ಅಪ್ರಬುದ್ಧ ವ್ಯಕ್ತಿ ನೀರಲ್ಲಿ ಎಸೆಯಲ್ಪಟ್ಟು ಸಾವಿನಿಂದ ಉಳಿಸಲ್ಪಟ್ಟಿದ್ದರೆ ಅಥವಾ ಯಾವುದೇ ರೀತಿ ಸಾವಿನಿಂದ ಪಾರಾದರೆ, ಅವನನ್ನು ಜೀವಾಪಾಯಕ್ಕೆ ಗುರಿ ಮಾಡಿದವರು ಘೋರ ದುಷ್ಕೃತ್ಯದ ಅಪರಾಧಿಗಳೆಂದು ಗ್ರಹಿಸತಕ್ಕದ್ದು ಮತ್ತು ಆಪಾದನೆ ದೃಢಪಟ್ಟ ಕೂಡಲೇ ಸಂಚಾರಿ ನ್ಯಾಯಾಲಯಗಳು ತಮ್ಮ ನ್ಯಾಯಾಧಿಕಾರಿಗಳ ಫತ್ವಾದಡಿಯಲ್ಲಿ ಪ್ರಕರಣದ ಸ್ವರೂಪ ತಮ್ಮ ಸಂಬಂಧಕ್ಕೆ ಅನುಗುಣವಾಗಿ ನಿರ್ಣಯಿಸಿದ ದಂಡಕ್ಕೆ ಅರ್ಹರಾಗುತ್ತಾರೆ.

IV. ಇದುವರೆಗೆ ಶಿಶುಬಲಿ ಪ್ರಚಲಿತವಿದ್ದ ಜಿಲ್ಲೆಯ ಮ್ಯಾಜಿಸ್ಟ್ರೇಟರು ಅದು ಮುಂದುವರಿಯುವುದನ್ನು ತಡೆಯಲು ಎಚ್ಚರಿಕೆ ವಹಿಸತಕ್ಕದ್ದು, ಮತ್ತು ಈ ಅಧಿನಿಯಮದ ನಿಯಮ ನಿಬಂಧನೆಗಳನ್ನು ಶಿಶುಬಲಿ ಇದುವರೆಗೆ ಪ್ರಚಲಿತವಿದ್ದ ಸ್ಥಳ ಮತ್ತು ಸಮಯಗಳಲ್ಲಿ ಘೋಷಿಸಲ್ಪಡಬೇಕು.

ಸಾಮಾಜಿಕ ನಿಬಂಧನೆಯ ದ್ವಿತೀಯ ಭಾಗವು ಸತಿ ಪದ್ಧತಿ ಕುರಿತು ಇರುತ್ತದೆ. ಅದು ೧೮೨೯ರ ಬಂಗಾಲ ನಿಬಂಧನೆ XVII ಆಗಿರುತ್ತದೆ. ಅದು ಈ ಕೆಳಗಿನಂತೆ ಕಾಯಿದೆ ರೂಪ ತಾಳಿರುತ್ತದೆ:

## ನಿಬಂಧನೆ XVII

## ಕ್ರಿ.ಶ. ೧೮೨೯

ಸತಿ ಪದ್ಧತಿ ಅಥವಾ ಹಿಂದೂ ವಿಧವೆಯರನ್ನು ಸಜೀವ ಸುಡುವುದು ಅಥವಾ ಹುಗಿಯುವುದು ನ್ಯಾಯ ವಿರುದ್ಧವೂ, ಅಪರಾಧ ತನಿಖೆಯ ನ್ಯಾಯಾಲಯಗಳಿಂದ ಶಿಕ್ಷಾರ್ಹವೂ ಎಂದು ಘೋಷಿಸುವ ನಿಬಂಧನೆ ಇದಾಗಿದ್ದು, ಅದಕ್ಕೆ ೧೮೨೯ರ ಡಿಸೆಂಬರ್ ೪ರಂದು ಗವ್ವರ್ನರ್–ಜನರಲ್–ಇನ್–ಕೌನ್ಸಿಲ್‌ರಿಂದ ಒಪ್ಪಿಗೆ ದೊರೆತಿರುತ್ತದೆ.

### ಪ್ರಸ್ತಾವನೆ

I. ಸತಿ ಪದ್ಧತಿ ಹಿಂದೂ ವಿಧವೆಯರನ್ನು ಸಜೀವ ಸುಡುವುದು ಅಥವಾ ಹುಗಿಯುವುದು ಮಾನವನ ಸ್ವಾಭಾವಿಕ ಭಾವನೆಗಳಿಗೆ ಓಕರಿಕೆ ಬರಿಸುವಂತಿದೆ. ಅದನ್ನು ಹಿಂದೂ ಧರ್ಮ ಎಲ್ಲಿಯೂ ಕಡ್ಡಾಯ ಗೊಳಿಸಿರುವುದಿಲ್ಲ. ತದ್ವಿರುದ್ಧ ವಿಧವೆ ಪವಿತ್ರ ಮತ್ತು ವಿಶ್ರಾಂತ ಜೀವನ ನಡೆಸುವುದು ಅಪೇಕ್ಷಣೀಯವೆಂಬ ನಂಬಿಕೆ ಮನದಾಳಕ್ಕಿಳಿದಿರುತ್ತದೆ. ಬಹುಪಾಲು ಭಾರತೀಯರು ಈ ಪದ್ಧತಿಯನ್ನು ಅನುಸರಿಸಿಲ್ಲ. ಅದನ್ನು ಉಳಿಸಿರುವುದಿಲ್ಲ. ಅನೇಕ ವಿಶಾಲ ಜಿಲ್ಲೆಗಳಲ್ಲಿ ಈ ಪದ್ಧತಿ ಇರುವುದಿಲ್ಲ. ಅದು ಎಲ್ಲೆಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವುದೋ ಅಲ್ಲಲ್ಲಿ ಅದು ಹೆಚ್ಚು ಕುಪ್ರಸಿದ್ಧವಿರುತ್ತದೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಅತಿ ಕ್ರೂರ ಕೃತ್ಯಗಳು ಎಸಗಲ್ಪಟ್ಟಿರುತ್ತವೆ. ಅವು ಹಿಂದೂಗಳಿಗೇ ಆಘಾತ ಉಂಟುಮಾಡಿರುತ್ತವೆ. ಮತ್ತು ಹಿಂದೂಗಳ ದೃಷ್ಟಿಯಲ್ಲೇ ಅದು ನ್ಯಾಯಬಾಹಿರ ಕುಕೃತ್ಯಗಳಾಗಿರುತ್ತವೆ. ಅಂಥ ಕೃತ್ಯಗಳನ್ನು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರಿಗೆ ತುಂಬ ಮನವರಿಕೆ ಆಗಿರುವುದೆಂದರೆ– ಈ ಪದ್ಧತಿಯನ್ನು ಸಂಪೂರ್ಣ ತೊಡೆದುಹಾಕದ ಹೊರತು ಅದನ್ನು ಯಶಸ್ವಿಯಾಗಿ ತಡೆಯುವುದು ಅಸಾಧ್ಯ. ಈ ವಿಚಾರಗಳಿಂದ ಪ್ರೇರಿತರಾಗಿ ಗವರ್ನರ್–ಜನರಲ್–ಇನ್–ಕೌನ್ಸಿಲ್‌ರು ಭಾರತದಲ್ಲಿಯ ಬ್ರಿಟಿಷ್ ಸರಕಾರದ ವ್ಯವಸ್ಥೆಯ ಪ್ರಪ್ರಥಮ ನಿಯಮಗಳಲ್ಲೊಂದಾದ, ಎಲ್ಲಿಯವರೆಗೆ ನ್ಯಾಯ ಮತ್ತು ಶ್ರೇಷ್ಠ ಮಾನವತೆಯ ಆದೇಶಗಳ ಉಲ್ಲಂಘನೆ ಮಾಡದೆ, ಎಲ್ಲ ವರ್ಗಗಳ ಜನರು ಸುರಕ್ಷಿತವಾಗಿ ತಮ್ಮ ತಮ್ಮ ಧರ್ಮಪಾಲನೆ ಮಾಡುತ್ತಾರೋ ಅಲ್ಲಿಯವರೆಗೆ ನಿಯಮದಿಂದ ದೂರ ಸರಿಯಬಾರದೆಂದು ಉದ್ದೇಶಿಸಿ, ಈ ಕೆಳಗಿನ ನಿಯಮಗಳನ್ನು ರೂಪಿಸಬಯಸಿದ್ದಾರೆ. ಆ ನಿಯಮಗಳು ಫೋರ್ಟ್ ಎಲಿಯಮ್‌ರ ಪ್ರಾಂತಕ್ಕಾಧೀನವಾಗಿರುವ ಪ್ರದೇಶಗಳಲ್ಲೆಲ್ಲ ಅವು ಘೋಷಿತವಾದಂದಿನಿಂದ ಜಾರಿಗೆ ಬರುತ್ತವೆ.

II. ಸತಿ ಪದ್ಧತಿ ಅಥವಾ ಹಿಂದೂ ವಿಧವೆಯರನ್ನು ಸಜೀವ ಸುಡುವುದು ಅಥವಾ ಹುಗಿಯುವುದು ನ್ಯಾಯಬಾಹಿರವೆಂದು ಮತ್ತು ಅಪರಾಧ ವಿಚಾರಣೆಯ ನ್ಯಾಯಾಲಯಗಳಿಂದ ದಂಡನಾರ್ಹವೆಂದೂ ಈ ಮೂಲಕ ಘೋಷಿಸಲಾಗಿದೆ.

**III. ಮೊದಲನೆಯ ನಿಯಮ:**

ಎಲ್ಲ ಜಮೀನುದಾರರು, ತಾಲೂಕದಾರರು ಅಥವಾ ಉಳಿದ ಪ್ರಕಾರದ ಹೊಲದೊಡೆಯರು ಮಾಲಗುಜರಿ ಅಥವಾ ಲಖಿರಜರು, ಎಲ್ಲ ಸಡ್ಡರು (sudder) ಒಕ್ಕಲಿಗರು ಮತ್ತು ಗೇಣಿದಾರರು, ಎಲ್ಲ ಪರಾವಲಂಬಿ ತಾಲೂಕದಾರರು, ಎಲ್ಲ ನಾಯಿಬರು ಮತ್ತು ಸ್ಥಾನಿಕ ಏಜೆಂಟರು ಗೇಣಿ ಸಂಗ್ರಹದಲ್ಲಿ ತೊಡಗಿದ ಎಲ್ಲ ಮಂಡಲಗಳ ಅಥವಾ ಗ್ರಾಮಗಳ ಮುಖ್ಯಸ್ಥರು, ಮೇಲಿನ ಭಾಗದಲ್ಲಿ ವಿವರಿಸಿದ ಬಲಿಯ ಬಗೆಗೆ ಸಮೀಪದ ಠಾಣೆಯ ಪೋಲೀಸರಿಗೆ ತಿಳಿಸಲು ವಿಶೇಷ

ಜವಾಬುದಾರರಾಗಿರುತ್ತಾರೆಂದು ಈ ಮೂಲಕ ಘೋಷಿಸಲಾಗಿದೆ. ಮತ್ತು ಈ ಜವಾಬುದಾರಿಯನ್ನು ಹೊರಿಸಿದ ಯಾವುದೇ ಜಮೀನುದಾರ ಅಥವಾ ಮೇಲೆ ವಿವರಿಸಿದ ಯಾವುದೇ ವ್ಯಕ್ತಿ ಮೇಲೆ ವಿವರಿಸಿದ ಸಮಾಚಾರವನ್ನು ಉದ್ದೇಶಪೂರ್ವಕ ಸಲ್ಲಿಸದಿರುವ ಅಪರಾಧ ದೃಢಪಟ್ಟಲ್ಲಿ ಮ್ಯಾಜಿಸ್ಟ್ರೇಟ್ ಅಥವಾ ಜಂಟಿ–ಮ್ಯಾಜಿಸ್ಟ್ರೇಟ್ ರಿಂದ ಎರಡು ನೂರು ರೂಪಾಯಿಗಳಿಗೆ ಮಿಕ್ಕದಷ್ಟು ದಂಡಕ್ಕೆ ಅರ್ಹರಾಗುತ್ತಾರೆ, ಮತ್ತು ಅದನ್ನು ಕೊಡಲು ತಪ್ಪಿದಲ್ಲಿ ಆರು ತಿಂಗಳಿಗೆ ಮೀರದಷ್ಟು ಸೆರೆವಾಸದ ಶಿಕ್ಷೆಗೆ ಅರ್ಹರಾಗುತ್ತಾರೆ.

**ಉದ್ದೇಶಿತ ಬಲಿಯ ಬಗೆಗೆ ಪೊಲೀಸು ದರೋಗಾಗಳಿಗೆ ಗುಪ್ತ ಸಮಾಚಾರ ತಿಳಿದೊಡನೆ ಅವರು ಹೇಗೆ ವರ್ತಿಸಬೇಕು?**

**ಎರಡನೆಯ ನಿಯಮ:**

ಈ ನಿಬಂಧನೆಯಿಂದ ನ್ಯಾಯಬಾಹಿರವೆಂದು ಸಾರಲ್ಪಟ್ಟ ಸಂಭವನೀಯ ಬಲಿಕೃತ್ಯದ ಬಗೆಗೆ ಗುಪ್ತ ಸಮಾಚಾರ ದೊರೆತೊಡನೆ ಪೊಲೀಸು ದರೋಗಾ ಸ್ವತಃ ಆ ಸ್ಥಳಕ್ಕೆ ಹೋಗಬೇಕು ಅಥವಾ ತನ್ನ ಮೊಹರಿರ್ (mohurrir) ಅಥವಾ ಜಮಾದಾರನನ್ನು ಹಿಂದೂ ಧರ್ಮದ ಒಬ್ಬಿಬ್ಬರು ಬುರ್ಕುಂದಾಜ ಗಳೊಂದಿಗೆ ಕಳಿಸಬೇಕು. ಮತ್ತು ಅಲ್ಲಿ ಬಲಿ ಕೊಡಲು ನೆರೆದ ಜನರಿಗೆ ಅದು ನ್ಯಾಯಬಾಹಿರ ಕೃತ್ಯವೆಂದು ಸಾರಿ ಹೇಳುವುದು ಮತ್ತು ಅವರು ಅಪರಾಧ ವಿಚಾರಣೆಯ ನ್ಯಾಯಾಲಯಗಳಿಂದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದು ತಿಳಿಹೇಳಿ ಅಲ್ಲಿಂದ ಚದುರಲು ಹೇಳುವುದು ಪೊಲೀಸ ಅಧಿಕಾರಿಗಳ ಕರ್ತವ್ಯ ಆಗಿರುತ್ತದೆ. ಬಲಿ ಕೊಡುವುದಕ್ಕೆ ಮಾಡಿದ ಆಕ್ಷೇಪವನ್ನು ಧಿಕ್ಕರಿಸಿ, ನೆರೆದ ಸಮೂಹ ಅದನ್ನು ನೆರವೇರಿಸಲು ಮುಂದುವರೆದರೆ, ತಮ್ಮ ಅಧಿಕಾರದ ಪರಿಧಿಯಲ್ಲಿರುವ ಎಲ್ಲ ನ್ಯಾಯಬದ್ಧ ಸಾಧನ/ವಿಧಾನಗಳನ್ನು ಉಪಯೋಗಿಸಿ ಅದನ್ನು ತಡೆಯುವುದು ಮತ್ತು ಮುಖ್ಯ ಅಪರಾಧಿಯನ್ನು ಬಂಧಿಸುವುದು ಮತ್ತು ಆ ಬಲಿ ನೆರವೇರಲು ಸಹಾಯ ಮತ್ತು ಅನುವು ಮಾಡಿದ ಪ್ರಮುಖ ವ್ಯಕ್ತಿಯನ್ನು ಬಂಧಿಸುವುದು ಆ ಪೊಲೀಸ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಪೊಲೀಸು ಅಧಿಕಾರಿಗಳು ಅವರನ್ನು ಬಂಧಿಸಲು ಅಸಮರ್ಥರಾದಲ್ಲಿ ಅವರ ಹೆಸರು ಮತ್ತು ವಾಸಸ್ಥಳಗಳನ್ನು ಗೊತ್ತುಪಡಿಸತಕ್ಕದ್ದು ಮತ್ತು ಕೂಡಲೇ ಎಲ್ಲ ವಿವರಗಳನ್ನು ಮ್ಯಾಜಿಸ್ಟ್ರೇಟ್ ಇಲ್ಲವೆ ಜಂಟಿ ಮ್ಯಾಜಿಸ್ಟ್ರೇಟರಿಗೆ ಮುಟ್ಟಿಸಿ ಆದೇಶಕ್ಕಾಗಿ ಕಾಯತಕ್ಕದ್ದು.

**ಬಲಿಕೃತ್ಯ ನಿಜವಾಗಿಯೂ ಜರುಗುವವರೆಗೆ ಅದರ ಬಗೆಗೆ ಗುಪ್ತ ಸಮಾಚಾರ ಮುಟ್ಟದಿದ್ದಾಗ ಯಾವ ಕ್ರಮ ಕೈಕೊಳ್ಳಬೇಕು?**

**ಮೂರನೆಯ ನಿಯಮ:**

ಈ ನಿಬಂಧನೆಯಿಂದ ನ್ಯಾಯಬಾಹಿರವೆಂದು ಘೋಷಿಸಲಾಗಿದ್ದ ಬಲಿಕೃತ್ಯ ನಿಜವಾಗಿಯೂ (ಪ್ರತ್ಯಕ್ಷ) ಜರುಗುವವರೆಗೂ ಪೊಲೀಸ್ ಅಧಿಕಾರಿಗಳಿಗೆ ಅದರ ಬಗೆಗೆ ಗುಪ್ತ ಸಮಾಚಾರ ಮುಟ್ಟದಿದ್ದಾಗ ಅಥವಾ ಪೊಲೀಸರು ಆ ಸ್ಥಳಕ್ಕೆ ಧಾವಿಸುವುದಕ್ಕಿಂತ ಮುಂಚೆ ಆ ಕೃತ್ಯ ಜರುಗಿಬಿಟ್ಟಿದ್ದರೆ, ಅವರು ಅಸ್ವಾಭಾವಿಕ (ಅಸಹಜ) ಸಾವುಗಳ ವಿಷಯದಲ್ಲಿ ಜರುಗಿಸುವಂತೆ, ಆ ಪ್ರಕರಣದ ಸಂದರ್ಭಗಳ ಪೂರ್ಣ ತನಿಖೆ ನಡೆಸತಕ್ಕದ್ದು ಮತ್ತು ತಾವು ಯಾರ ಅಧೀನ ಇರುವರೋ ಆ ಮ್ಯಾಜಿಸ್ಟ್ರೇಟ್

ಇಲ್ಲವೆ ಜಂಟಿ ಮ್ಯಾಜಿಸ್ಟ್ರೇಟ್‌ರಿಗೆ ಅವರ ಮಾಹಿತಿಗಾಗಿ ವರದಿ ಸಲ್ಲಿಸಿ ಅವರ ಆದೇಶಕ್ಕಾಗಿ ಕಾಯತಕ್ಕದ್ದು.

**IV. ಮೊದಲನೆಯ ನಿಯಮ:**

ಪೊಲೀಸ ದರೋಗಾಗಳಿಂದ ಬರಬೇಕಾದ ವರದಿ ಬಂದ ಕೂಡಲೇ ಹಿಂದಿನ ಭಾಗದಲ್ಲಿ ಅವಕಾಶ ಮಾಡಿರುವಂತೆ, ಯಾವ ಆಡಳಿತ ಪ್ರಾಧಿಕಾರದೊಳಗೆ ಆ ಬಲಿಕೃತ್ಯ ಜರುಗಿರುತ್ತದೆಯೋ ಅದರ ಮ್ಯಾಜಿಸ್ಟ್ರೇಟ್ ಅಥವಾ ಜಂಟಿ ಮ್ಯಾಜಿಸ್ಟ್ರೇಟ್‌ರು ಆ ಪ್ರಕರಣದ ಸಂದರ್ಭದ ವಿಚಾರಣೆ ನಡೆಸತಕ್ಕದ್ದು ಮತ್ತು ಆ ಕೃತ್ಯ ಜರುಗುವಂತೆ ನೆರವು ನೀಡಿದ ವ್ಯಕ್ತಿಗಳನ್ನು ಸಂಚಾರಿ ನ್ಯಾಯಾಲಯದ ಎದುರು ವಿಚಾರಣೆಗೆ ಒಳಪಡಿಸಲು ಅವಶ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**ಹಿಂದೂ ವಿಧವೆಯನ್ನು ಬಲಿಕೊಡುವ ಕಾರ್ಯದಲ್ಲಿ ನೆರವು ಮತ್ತು ಪ್ರೋತ್ಸಾಹ ನೀಡಿದ ಅಪರಾಧ ದೃಢಪಟ್ಟ ವ್ಯಕ್ತಿಗಳು ಎಂದು ನಿರ್ಣಯವಾದ ಕೈದಿಗಳನ್ನು ನರಹತ್ಯೆಯ ಅಪರಾಧಿ ಎಂದು ತಿಳಿಸತಕ್ಕದ್ದು ಮತ್ತು ಅವರನ್ನು ಶಿಕ್ಷಾರ್ಹರೆಂದೂ ತಿಳಿಯತಕ್ಕದ್ದು.**

**ಎರಡನೆಯ ನಿಯಮ:**

ಈ ಮೂಲಕ ಸಾರುವುದೇನೆಂದರೆ:

ಈ ನಿಬಂಧನೆಯ ಘೋಷಣೆಯಾದ ಬಳಿಕ ಸಜೀವ ದಹನ ಮಾಡಿ ಅಥವಾ ಸಜೀವ ಹುಗಿದು (ಅದು ಸ್ವೇಚ್ಛೆಯಿಂದ ಆಗಿರಲಿ ಅಥವಾ ಬಿಡಲಿ) ಬಲಿಕೊಡುವ ಕೃತ್ಯದಲ್ಲಿ ನೆರವಾದ ಅಥವಾ ಪ್ರೋತ್ಸಾಹ ನೀಡಿದ ಅಪರಾಧ ನಿಜವೆಂದು ನಿರ್ಣಯವಾದ ಎಲ್ಲ ವ್ಯಕ್ತಿಗಳನ್ನು ನರಹತ್ಯೆ ಅಪರಾಧಿಗಳೆಂದು ತಿಳಿಯತಕ್ಕದ್ದು. ಮತ್ತು ಅವರು ದಂಡನಾರ್ಹರು ಅಥವಾ ಸೆರೆವಾಸದ ಶಿಕ್ಷೆಗೆ, ಅಥವಾ ಎರಡಕ್ಕೂ ಅರ್ಹರೆಂದು ತಿಳಿಯತಕ್ಕದ್ದು. ಅದನ್ನು ಪ್ರಕರಣದ ಸ್ವರೂಪ ಮತ್ತು ಸಂದರ್ಭ ಮತ್ತು ನಿರ್ಣಯಿಸಲಾದ ಅಪರಾಧದ ಮಟ್ಟಕ್ಕನುಗುಣವಾಗಿ ಸಂಚಾರಿ ನ್ಯಾಯಾಲಯವು ತನ್ನ ವಿವೇಚನೆಗೆ ತಕ್ಕಂತೆ ನಿರ್ಣಯಿಸತಕ್ಕದ್ದು. ಅವನು ಅಥವಾ ಅವಳು ತನ್ನನ್ನು ಸಾಯಿಸುವಲ್ಲಿ ಸಹಾಯ ಮಾಡಬೇಕೆಂಬುದು ಬಲಿ ಕೊಡಲ್ಪಟ್ಟ ವ್ಯಕ್ತಿಯ ಇಚ್ಛೆಯಾಗಿತ್ತೆಂದು ಹೇಳುವುದು ಸಮರ್ಥನೆಯಾಗಲಾರದು.

**ಮೂರನೆಯ ನಿಯಮ:**

ಮೇಲೆ ಹೇಳಲಾದ ಅಪರಾಧಕ್ಕಾಗಿ ಸಂಚಾರಿ ನ್ಯಾಯಾಲಯದೆದುರು ವಿಚಾರಣೆಗೊಳಪಟ್ಟ ವ್ಯಕ್ತಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದೂ, ಬಿಡುವುದೂ, ಜಾಮೀನು ಬಿಡುಗಡೆಗೆ ಸಂಬಂಧಿಸಿದ ನಿಯಮಗಳಿಗೊಳಪಟ್ಟು, ಮ್ಯಾಜಿಸ್ಟ್ರೇಟ್ ಅಥವಾ ಜಂಟಿ ಮ್ಯಾಜಿಸ್ಟ್ರೇಟ್‌ರ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ.

**ನಿಝಾಮತ್ ಅದಾಲತ್ ಕೆಲವು ಪ್ರಕರಣಗಳಲ್ಲಿ ಮರಣ ದಂಡನೆಯ ತೀರ್ಪು ನೀಡುವುದಕ್ಕೆ ನಿರ್ಬಂಧ ಇಲ್ಲದಿರುವುದು:**

ಮುಂದುವರಿದು ಈ ಘೋಷಣೆ ಮಾಡುವುದು ಅವಶ್ಯವೆಂದು ತಿಳಿಯಲಾಗಿರುತ್ತದೆ. ಈ ನಿಬಂಧನೆಯಲ್ಲಿ ಹೇಳಿರದ ಯಾವುದೇ ನಿಯಮವು, ಹಿಂಸೆ ಅಥವಾ ಬಲಾತ್ಕಾರ ಪ್ರಯೋಗಿಸಿ, ಹಿಂದೂ ವಿಧವೆಯನ್ನು ಸಜೀವ ದಹನ ಮಾಡಿದಲ್ಲಿ ಅಥವಾ ಸಜೀವ ಹುಗಿಯುವಲ್ಲಿ ನೆರವಾದ ಅಪರಾಧದ ಆಪಾದನೆ

ದೃಢಪಟ್ಟ ವ್ಯಕ್ತಿಗೆ ನಿಝಾಮತ್ ಅದಾಲತ್ ಮರಣದಂಡನೆಯನ್ನು ವಿಧಿಸಲು ಪ್ರತಿಬಂಧ ಹೇರಲಾರದು (ಅರೆಪ್ರಜ್ಞ ಸ್ಥಿತಿಯಲ್ಲಿ ಅಥವಾ ದಿಙ್ಮೂಢ ಸ್ಥಿತಿಯಲ್ಲಿ ಅಥವಾ ತನ್ನ ಸ್ವಂತ ಇಚ್ಛೆಗೆ ಅಡ್ಡಿ ಮಾಡುವ ಯಾವುದೇ ಕಾರಣಕ್ಕಾಗಿ, ವಿಲಿವಿಲಿ ಒದ್ದಾಡುತ್ತಿದ್ದ ವಿಧವೆಯ ಸಜೀವ ದಹನದಲ್ಲಿ ಅಥವಾ ಸಜೀವ ಹುಗಿಯುವಲ್ಲಿ ನೆರವಾದ ಅಪರಾಧ ಸಾಬೀತಾದ ವ್ಯಕ್ತಿಗೆ). ಆದರೆ ಕೈದಿಯ ವಿರುದ್ಧ ಮಾಡಿದ ಆಪಾದನೆಯ ಸ್ವರೂಪ ನಿಜವಾಗಿ ಇದ್ದುದಕ್ಕಿಂತ ಹೆಚ್ಚಾಗಿದ್ದೆಂದು ಸಂದರ್ಭಗಳು ಸೂಚಿಸುತ್ತಿದ್ದರೆ, ನ್ಯಾಯಾಲಯ ಅವನನ್ನು ದಯೆಗೆ ತಕ್ಕ ವ್ಯಕ್ತಿಯೆಂದು ತಿಳಿಯಬಹುದು.

## ಜಾತಿ ಆಧಾರದ ಅನರ್ಹತೆಗಳ ನಿರ್ಮೂಲನ ಕಾಯಿದೆ
## (೧೮೫೦ರ XXI)

*ಬಂಗಾಲ ಕಾನೂನಿನ ನಿಯಮಾವಳಿ ೧೮೩೨ರ ನಿಬಂಧನೆಯ VIIರ ೯ನೆಯ ಸೆಕ್ಷನ್‌ದ ತತ್ವವನ್ನು ಈಸ್ಟ್ ಇಂಡಿಯಾ ಕಂಪನಿ ಸರಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ವಿಸ್ತರಿಸಲು ಮಾಡಿದ ಕಾಯಿದೆ:*

### ಪ್ರಸ್ತಾವನೆ

ಬಂಗಾಲ ಕಾನೂನಿನ ನಿಯಮಾವಳಿ ೧೮೩೨ರ ನಿಬಂಧನೆಯ VIIರ ೯ನೆಯ ಸೆಕ್ಷನ್‌ದ ಮೂಲಕ ವಿಧಿಸುವುದೇನೆಂದರೆ–

ಯಾವುದೇ ಸಿವಿಲ್ ಮೊಕದ್ದಮೆಯಲ್ಲಿ ಭಿನ್ನ ಭಿನ್ನ ಧರ್ಮದ ವ್ಯಕ್ತಿಗಳು ಕೂಡಿದ್ದು, ಒಬ್ಬರು ಹಿಂದೂ, ಇನ್ನೊಬ್ಬ ಮಹಮ್ಮದೀಯ ಧರ್ಮದವನಾಗಿದ್ದರೆ, ಅಥವಾ ಮೊಕದ್ದಮೆಗೆ ಸಂಬಂಧಿಸಿದ ವ್ಯಕ್ತಿಗಳಲ್ಲಿ ಒಬ್ಬಿಬ್ಬರು ಮಹಮ್ಮದೀಯ ಅಥವಾ ಹಿಂದೂ ಧರ್ಮ, ಯಾವುದಕ್ಕೂ ಸೇರಿರದಿದ್ದಲ್ಲಿ, ಆ ಧರ್ಮಗಳ ಕಾಯಿದೆಗಳನ್ನು ಉಪಯೋಗಿಸಿ ಆ ವ್ಯಕ್ತಿ ಇಲ್ಲವೆ ವ್ಯಕ್ತಿಯ ಆಸ್ತಿಗೆ ಮುಟ್ಟುಗೋಲು ಹಾಕಲು ಪರವಾನಗಿ ಕೊಡುವುದಿಲ್ಲ. ಆ ಕಾಯಿದೆಗಳನ್ನು ಉಪಯೋಗಿಸದಿದ್ದ ಪಕ್ಷದಲ್ಲಿ ಆ ಆಸ್ತಿಯ ಒಡೆತನದ ಹಕ್ಕು ಅವನಿಗೆ ಅಥವಾ ಅವರಿಗೆ ಇರುವ ಸಂದರ್ಭದಲ್ಲಿ, ಈಸ್ಟ್ ಇಂಡಿಯಾ ಕಂಪನಿಯ ಸರಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ಈ ಶಾಸನವನ್ನು ವಿಸ್ತರಿಸುವುದು ಲಾಭದಾಯಕವಿರುವುದರಿಂದ ಕೆಳಗಿನಂತೆ ಶಾಸನ ಮಾಡಲಾಗಿದೆ.

ಮತಾಂತರಗೊಳ್ಳುವ ಹಕ್ಕನ್ನು ಕಸಿದುಕೊಳ್ಳುವ ಅಥವಾ ಮತಹೀನನನ್ನಾಗಿ ಮಾಡುವ ಕಾಯಿದೆ ಅಥವಾ ರೂಢಿಯನ್ನು ಕಾರ್ಯರೂಪಕ್ಕಿಳಿಸುವುದನ್ನು ನಿಲ್ಲಿಸುವುದಕ್ಕೆ:

೧. ಈಸ್ಟ್ ಇಂಡಿಯಾ ಕಂಪನಿಯ ಸರಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ಯಾವುದೇ ವ್ಯಕ್ತಿಯ ಹಕ್ಕು ಇಲ್ಲವೆ ಆಸ್ತಿಗೆ ಮುಟ್ಟುಗೋಲು ಹಾಕುವ ಅಥವಾ ಅವನು ಅಥವಾ ಅವಳು ತನ್ನ ಧರ್ಮದ ಸಮುದಾಯವನ್ನು ಬಿಟ್ಟ ಅಥವಾ ತನ್ನ ಸಮುದಾಯದಿಂದ ಹೊರಹಾಕಲ್ಪಟ್ಟ ಅಥವಾ ಜಾತಿಭ್ರಷ್ಟನಾದ ಕಾರಣ ಅವನ ಅಥವಾ ಅವಳ ಪಿತ್ರಾರ್ಜಿತ ಆಸ್ತಿಗೆ ಉತ್ತರಾಧಿಕಾರದ ಹಕ್ಕಿಗೆ ಧಕ್ಕೆ ತರುವ ಸದ್ಯಕ್ಕೆ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆ ಅಥವಾ ರೂಢಿಗೆ ಈಸ್ಟ್ ಇಂಡಿಯಾ ಕಂಪನಿಯ ನ್ಯಾಯಾಲಯಗಳಲ್ಲಿ ಮತ್ತು ಮೇಲೆ ಹೇಳಿದ ಪ್ರದೇಶಗಳಲ್ಲಿ ರಾಯಲ್ ಚಾರ್ಟರ್ ಸ್ಥಾಪಿಸಿದ ನ್ಯಾಯಾಲಯಗಳಲ್ಲಿ ಕ್ರಿಯಾರೂಪ ಕೊಡುವುದು ನಿಲ್ಲತಕ್ಕದ್ದು.

೧೮೫೬ರ ಹಿಂದೂ ವಿಧವೆಯರ ಪುನರ್ವಿವಾಹ ಕಾಯಿದೆ XV ಸಾಮಾಜಿಕ ಶಾಸನದ ನಾಲ್ಕನೆಯ ತುಕಡಿ ಆಗಿರುತ್ತದೆ. ಅದು ಕೆಳಗಿನಂತೆ ಕಾಯಿದೆ ರೂಪ ಪಡೆದಿರುತ್ತದೆ.

**ಹಿಂದೂ ವಿಧವೆಯರ ವಿವಾಹಕ್ಕೆ ಎದುರಾಗುವ ಎಲ್ಲ ಕಾನೂನಿನ ಅಡೆತಡೆಗಳನ್ನು ತೊಡೆದುಹಾಕುವ ಕಾಯಿದೆ:**

**ಪ್ರಸ್ತಾವನೆ**

ಈಸ್ಟ್ ಇಂಡಿಯಾ ಕಂಪನಿಯ ಅಧೀನ ಪ್ರದೇಶಗಳಲ್ಲಿರುವ ಪುನಃ ಸ್ಥಾಪಿತವಾದ ವ್ಯಾವಹಾರಿಕ ನ್ಯಾಯಾಲಯಗಳಲ್ಲಿ ಬಳಸಲಾದ ಕಾಯಿದೆಯಿಂದ ತಿಳಿದು ಬರುವುದೇನೆಂದರೆ–

ಕೆಲವರನ್ನು ಹೊರತುಪಡಿಸಿ, ಹಿಂದೂ ವಿಧವೆಯರು ಒಮ್ಮೆ ಮದುವೆಯಾಗಿದ್ದ ಕಾರಣಕ್ಕಾಗಿ ಎರಡನೆಯ ಕಾನೂನುಬದ್ಧ ಮದುವೆಯನ್ನು ಮಾಡಿಕೊಳ್ಳಲು ಅನರ್ಹರಾಗಿದ್ದಾರೆಂದು ಮತ್ತು ಅಂಥ ಮದುವೆಯಿಂದ ಹುಟ್ಟಿದ ಮಕ್ಕಳನ್ನು ಹಾದರಕ್ಕೆ ಹುಟ್ಟಿದವರೆಂದೂ, ಅವರು ಆಸ್ತಿಗೆ ಉತ್ತರಾಧಿಕಾರಿಗಳಾಗಲು ಅನರ್ಹರು ಎಂದು, ಮತ್ತು ಅನೇಕ ಹಿಂದೂಗಳು ಈ ದೋಷಾರೋಪಿತ ಕಾನೂನು, ಅವರ ಧರ್ಮದ ನೀತಿ ಬೋಧೆಯ ಸರಿಯಾದ ಅರ್ಥ ವಿವರಣೆಯ ಪ್ರಕಾರ ಇದ್ದಾಗ್ಯೂ, ದುರ್ಬಲವಿದೆ ಎಂದು ತಿಳಿಯುತ್ತಿರುವ ಕಾರಣ ಮತ್ತು ನ್ಯಾಯಗಳು ಬಳಸುವ ಸಿವಿಲ್ ಕಾಯಿದೆಯು, ಅನ್ಯಧರ್ಮ ಪದ್ಧತಿಯನ್ನು ಅನುಸರಿಸಲು ನಿರ್ಧರಿಸಿ ಹಿಂದೂಗಳು ತಮ್ಮ ವಿವೇಕ ಹೇಳಿದಂತೆ ವರ್ತಿಸುವುದನ್ನು ತಡೆಯಬಾರದೆಂದು ಬಯಸುತ್ತಿರುವ ಕಾರಣ ಮತ್ತು ಇಂಥ ಎಲ್ಲ ಹಿಂದೂಗಳನ್ನು ಅವರು ಆರೋಪಿಸುವ ಕಾಯಿದೆ ಅವಶ್ಯಕತೆಯಿಂದ ಮುಕ್ತಗೊಳಿಸುವುದು ಮತ್ತು ಹಿಂದೂ ವಿಧವೆಯರ ವಿವಾಹಕ್ಕಿರುವ ಆತಂಕಗಳ ನಿವಾರಣೆಗೆ ಉತ್ತಮ ನೀತಿ ರೂಪಿಸುವುದು ಮತ್ತು ಸಾರ್ವಜನಿಕ ಹಿತವನ್ನು ಹೆಚ್ಚಿಸುವುದು ಸೂಕ್ತವೆನಿಸುವ ಕಾರಣ, ಕೆಳಗಿನಂತೆ ಶಾಸನ ಮಾಡಲಾಗಿದೆ–

**ಹಿಂದೂ ವಿಧವೆಯರ ಮದುವೆಯನ್ನು ಕ್ರಮಬದ್ಧಗೊಳಿಸಿದ್ದು**

ಹೆಣ್ಣುಮಗಳು ಈ ಮೊದಲು ಮದುವೆಯಾಗಿದ್ದಾಳೆಂಬ ಅಥವಾ ಬೇರೊಬ್ಬನ ಜೊತೆಗೆ ಮದುವೆ ನಿಶ್ಚಯವಾಗಿದ್ದು, ಈ ಮದುವೆ ಸಮಯಕ್ಕೆ ಅವನು ಬದುಕಿರುವುದಿಲ್ಲ ಎಂಬ ಕಾರಣಕ್ಕಾಗಿ, ಯಾವುದೇ ಹಿಂದೂ ಕಾಯಿದೆಯ ರೂಢಿ ಮತ್ತು ಅರ್ಥ ವಿವರಣೆ ಅದರ ವಿರುದ್ಧ ಇದ್ದಾಗ್ಯೂ ಈರ್ವರು ಹಿಂದೂಗಳ ನಡುವಿನ ಮದುವೆಯು ಅಸಿಂಧು ಆಗಲಾರದು.

**ಮರುಮದುವೆಯಾದ ಬಳಿಕ ಮೃತ ಪತಿಯ ಆಸ್ತಿ ಮೇಲಿನ ಹಕ್ಕು ಇಲ್ಲದಾಗುವುದು**

ಯಾವುದೇ ವಿಧವೆ ತನ್ನ ಮೃತ ಪತಿಯ ಆಸ್ತಿಯಲ್ಲಿ, ಜೀವನಾವಶ್ಯಕತೆಗಾಗಿ ಅಥವಾ ಅವನ ಉತ್ತರದಾಯಿತ್ವದ ಕಾರಣ, ಮೃತ್ಯುಪತ್ರ ಅಥವಾ ಮರಣ ಶಾಸನ ಮರುಮದುವೆಗೆ ಪರವಾನಗಿ ಕೊಡದೆ ಅದನ್ನು ಪರಭಾರೆ ಮಾಡುವ ಅಧಿಕಾರ ಕೊಡದೆ, ಅದು ತೋರಿದ ಸೀಮಿತ ಆಸಕ್ತಿಯ ಕಾರಣ, ಹೊಂದಿರಬಹುದಾದ ಎಲ್ಲ ಅಧಿಕಾರ ಮತ್ತು ಆಸಕ್ತಿಗಳು, ಅವಳು ಮರುಮದುವೆಯಾಗುವುದರಿಂದ ಇಲ್ಲದಾಗುತ್ತದೆ, ಮತ್ತು ಅವಳು ಸತ್ತಿದ್ದಾಳೆನ್ನುವಂತೆ ನಿರ್ಣಯಿಸಲಾಗುತ್ತದೆ, ಮತ್ತು ಅವಳ ಮೃತಪತಿಯ ಮುಂದಿನ ವಾರಸುದಾರರು ಅಥವಾ ಅವಳ ಮರಣಾನಂತರ ಆ ಆಸ್ತಿಗೆ ವಾರಸುದಾರರಾಗುವವರು ಅದರ ಒಡೆಯರಾಗುತ್ತಾರೆ.

**ಸಾಮಾಜಿಕ ಶಾಸನದ ಐದನೆಯ ತುಕಡಿ ಸ್ತ್ರೀಯೊಂದಿಗೆ ಸಂಭೋಗ ಮಾಡುವುದಕ್ಕೆ ವಯೋಮಿತಿಯನ್ನು ವಿಧಿಸಿದ್ದು:**

೧೮೬೦ರ ಪೀನಲ್ ಕೋಡ್ ಸೆಕ್ಷನ್ ೩೭೫ರ ಕಾಯಿದೆ VLV ಅದು ಕೆಳಗಿನಂತೆ ಶಾಸನ ರೂಪ ತಾಳಿರುತ್ತದೆ.

ಒಬ್ಬ ಪುರುಷನು ಒಬ್ಬ ಸ್ತ್ರೀಯೊಂದಿಗೆ, ಈ ಮುಂದೆ ಹೇಳಿದ ಸಂದರ್ಭಗಳನ್ನು ಬಿಟ್ಟು ಕೆಳಗಿನ ಸಂದರ್ಭಗಳಲ್ಲಿ ಲೈಂಗಿಕ ಸಂಬಂಧ ಹೊಂದಿದ್ದರೆ ಅದು ಅತ್ಯಾಚಾರವಾಗುತ್ತದೆ.

| | | |
|---|---|---|
| ಮೊದಲನೆಯದು | : | ಅವಳ ಇಚ್ಛೆಯ ವಿರುದ್ಧ |
| ಎರಡನೆಯದು | : | ಅವಳ ಒಪ್ಪಿಗೆ ಇಲ್ಲದೆ |
| ಮೂರನೆಯದು | : | ತಾನು ಅವಳ ಗಂಡನಲ್ಲವೆಂದು ಗೊತ್ತಿದ್ದೂ ಅವಳ ಒಪ್ಪಿಗೆಯಿಂದ ಮತ್ತು ಅವನು ತನ್ನನ್ನು ಮದುವೆಯಾಗಿದ್ದಾನೆಂದು ತಿಳಿದು ಒಪ್ಪಿಗೆ ಕೊಟ್ಟಾಗ. |
| ನಾಲ್ಕನೆಯ | : | (ಖಾಲಿ ಸ್ಥಳ – ed.) |
| ಐದನೆಯದು | : | ಅವಳ ಒಪ್ಪಿಗೆ ಇರಲಿ, ಇಲ್ಲದಿರಲಿ, ಅವಳು ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಿದ್ದಾಗ |
| ವಿವರಣೆ | : | (ಖಾಲಿ ಸ್ಥಳ – ed.) |
| ಅಪವಾದ | : | ಒಬ್ಬ ಪುರುಷ ಹತ್ತು ವರುಷಕ್ಕಿಂತ ಕಡಿಮೆ ಇರದ ತನ್ನ ಹೆಂಡತಿಯೊಂದಿಗೆ ಸಂಭೋಗ ಮಾಡಿದರೆ ಅದು ಅತ್ಯಾಚಾರ ಆಗುವುದಿಲ್ಲ. |

## ಅಸ್ಪೃಶ್ಯರ ಪರಿಸ್ಥಿತಿ ಏನು?

ಭಾರತದಲ್ಲಿ ಜಾತಿ ಮತ್ತು ಅಸ್ಪೃಶ್ಯತೆ ಎರಡು ಬಹು ದೊಡ್ಡ ಕೆಡಕುಗಳಾಗಿರುತ್ತವೆ. ಜಾತಿ ಸಮಗ್ರ ಹಿಂದೂ ಸಮಾಜವನ್ನು ಅಪಾಂಗಗೊಳಿಸಿರುತ್ತದೆ. ಅಸ್ಪೃಶ್ಯತೆ ಬಹುಸಂಖ್ಯಾ ಜನರನ್ನು ಹತ್ತಿಕ್ಕಿರುತ್ತದೆ. ಆದಾಗ್ಯೂ ಬ್ರಿಟಿಷ್ ಸರಕಾರ ಈ ಎರಡೂ ಕೆಡುಕುಗಳನ್ನು ಸಂಪೂರ್ಣ ಕಡೆಗಣಿಸಿರುತ್ತದೆ. ಭಾರತೀಯ ಕಾನೂನಿನಲ್ಲಿ ಜಾತಿ ಮತ್ತು ಅಸ್ಪೃಶ್ಯತೆಯ ಬಗೆಗೆ ಕಾಯಿದೆಯನ್ನು ಹುಡುಕುವುದು ವ್ಯರ್ಥ. ಜಾತಿ ಮತ್ತು ಅಸ್ಪೃಶ್ಯತೆಗಳು ಸಾಮಾಜಿಕ ವಿಷಯಗಳು. ಜನರು– ಒಂದು ಕುಲದವರು ಮತ್ತೊಂದು ಕುಲದವರೊಂದಿಗೆ ಉಣ್ಣುವುದು ಮತ್ತು ಮದುವೆಯಾಗುವುದನ್ನು ಪ್ರಾರಂಭಿಸಿದಾಗ ಅವು ಮಾಯವಾಗುತ್ತವೆ. ಕಾಯಿದೆ ಒಬ್ಬನನ್ನು ಇನ್ನೊಬ್ಬನೊಂದಿಗೆ ಊಟ ಮಾಡಲು ಒತ್ತಾಯಿಸಲಾರದು. ಕಾಯಿದೆ ಒಂದು ಜಾತಿಯವನನ್ನು ಇನ್ನೊಂದು ಜಾತಿಯ, ಇಂಥದೇ ಜಾತಿಯ ವ್ಯಕ್ತಿಯನ್ನು ಮದುವೆಯಾಗೆಂದು ಒತ್ತಾಯಿಸಲಾರದೆಂಬುದು ಸತ್ಯ. ಆದರೆ ಒಂದು ಜಾತಿಯವರು ಬೇರೊಂದು ಜಾತಿಯವಳನ್ನು ಮದುವೆಯಾಗುವುದನ್ನು ತಡೆಯಬಲ್ಲುದೆಂಬುದೂ ಸತ್ಯ. ಜಾತಿ ಮುಂದುವರಿಯುತ್ತಿದೆ. ಏಕೆಂದರೆ ಅದರ ಸದಸ್ಯರು ಅದರ ನಿಯಮಗಳನ್ನು ಉಲ್ಲಂಘಿಸಿದರೆ ಅವರ ವಿರುದ್ಧ ಸಾಮಾಜಿಕ ಬಹಿಷ್ಕಾರ ಘೋಷಿಸಿ ಅವರನ್ನು ಶಿಕ್ಷಿಸಲು ಯೋಜಿಸುವುದು ಶಕ್ಯವಿರುತ್ತದೆ. ಅಂಥ ಸಾಮಾಜಿಕ ಬಹಿಷ್ಕಾರ ಅಪರಾಧವೆಂದು ಘೋಷಿಸುವಂಥ ಕಾಯಿದೆಯನ್ನು ರೂಪಿಸುವುದು ನಿಜಕ್ಕೂ ಸಾಧ್ಯವಿತ್ತು ಮತ್ತು ಅಸ್ಪೃಶ್ಯತೆಯ ವಿಷಯದಲ್ಲಿ ಅನರ್ಹತೆಗಳು ಕೇವಲ ಸಾಮಾಜಿಕ ವಿಷಯವಾಗಿ ಉಳಿದಿಲ್ಲ. ಅವು ಮೂಲಭೂತವಾಗಿ ನಾಗರಿಕ ವಿಷಯಗಳಾಗಿರುತ್ತವೆ.

ಒಂದು ಶಾಲೆಗೆ ಪ್ರವೇಶ ಪಡೆಯುವ ಅನರ್ಹತೆ, ಸಾರ್ವಜನಿಕ ವಾಹನದಲ್ಲಿ ಪ್ರವಾಸ ಮಾಡುವ ಅನರ್ಹತೆ, ಸಾರ್ವಜನಿಕ ಬಾವಿಯಿಂದ ನೀರು ತೆಗೆದುಕೊಳ್ಳುವ ಅನರ್ಹತೆ, ಲೋಕಸೇವೆಯಲ್ಲಿ ನೌಕರಿ ಪಡೆಯುವ ಅನರ್ಹತೆ ಇವೆಲ್ಲ ನಾಗರಿಕ ಅನರ್ಹತೆಗಳಾಗಿರುತ್ತವೆ. ಕನಿಷ್ಠಪಕ್ಷ ಅವರ ನಾಗರಿಕ ಹಕ್ಕುಗಳನ್ನು ರಕ್ಷಿಸಲು ಅವಶ್ಯವಿರುವ ಕಾಯಿದೆಯನ್ನು ಮಾಡುವುದು ಬ್ರಿಟಿಷ್ ಸರಕಾರದ ಕರ್ತವ್ಯವಾಗಿತ್ತು. ಹಾಗೆ ಮಾಡಲು ಸಾಧ್ಯವೂ ಇದ್ದಿತು. ಜಾತಿ ಆಧಾರ ಅನರ್ಹತೆಗಳ ನಿರ್ಮೂಲನ ಕಾಯಿದೆ ಮಾದರಿಯ ಚಿಕ್ಕ ಶಾಸನ ಸಾಕಾಗುತ್ತಿತ್ತು. ಆದಾಗ್ಯೂ ಈ ಎರಡೂ ಕೆಡಕುಗಳು ಅಸ್ತಿತ್ವದಲ್ಲಿ ಇಲ್ಲವೆಂದೇ ಬ್ರಿಟಿಷ್ ಸರಕಾರ ನಡೆದುಕೊಂಡಿತು. ಶಾಸನ ಸಭೆಗಳು ೧೮೬೧ರಲ್ಲಿ ಸ್ಥಾಪಿತವಾಗಿದ್ದರೂ ಮತ್ತು ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ ಕಾಯಿದೆಗಳನ್ನು ಅವು ರೂಪಿಸುತ್ತ ಬಂದಿದ್ದರೂ ಮತ್ತು ಸಾಮಾಜಿಕ ವಿಷಯಗಳನ್ನು ಚರ್ಚಿಸುತ್ತಿದ್ದರೂ, ಎರಡು ಸಂದರ್ಭಗಳನ್ನು ಬಿಟ್ಟರೆ, ಎಲ್ಲಿಯೂ ಅಸ್ಪೃಶ್ಯರ ಉಲ್ಲೇಖ ಕೂಡ ಇಲ್ಲದಿರುವುದು ಗಮನಾರ್ಹ ಸಂಗತಿ.

ಪ್ರಥಮ ಬಾರಿ ಅವರನ್ನು ಉಲ್ಲೇಖಿಸಿದ್ದು ೧೯೧೬ರಲ್ಲಿ ಸರ್ ಮನೆಕಜಿ ದಾದಾಭಾಯಿ ಎಂಬ ಪಾರ್ಸಿ ಸಭ್ಯಗೃಹಸ್ಥ ಕೇಂದ್ರ ಶಾಸನ ಸಭೆಯಲ್ಲಿ ಕೆಳಗಿನ ಗೊತ್ತುವಳಿಯನ್ನು ಮಂಡಿಸಿದಾಗ:

> "ದಲಿತ ವರ್ಗಗಳ ನೈತಿಕ, ಭೌತಿಕ ಮತ್ತು ಶೈಕ್ಷಣಿಕ ಸುಧಾರಣೆಗಾಗಿ, ಅವಶ್ಯವಿದ್ದರೆ, ಅಧಿಕಾರಿಗಳ ಮತ್ತು ನಾಗರಿಕ ಚಿಕ್ಕ ಸಮಿತಿಯ ಸಹಾಯದಿಂದ, ಕ್ರಮಗಳನ್ನು ರೂಪಿಸಬೇಕೆಂದು ಮತ್ತು ಆ ದಿಶೆಯಲ್ಲಿ ಪ್ರಥಮ ಹೆಜ್ಜೆಯಾಗಿ, ಸ್ಥಾನಿಕ ಸ್ಥಿತಿಗತಿಗಳಿಗನು ಗುಣವಾಗಿ ಯೋಜನೆಗಳನ್ನು ರೂಪಿಸಲು ಸ್ಥಾನಿಕ ಸರಕಾರ ಮತ್ತು ಆಡಳಿತಗಳನ್ನು ಆಮಂತ್ರಿಸಬೇಕೆಂದು ಈ ಸಭೆಯು ಗವರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಶಿಫಾರಸು ಮಾಡುತ್ತದೆ."

ಈ ಗೊತ್ತುವಳಿಗೆ ಸಹಾನುಭೂತಿ ಇರಲಿಲ್ಲ. ಇಂಥ ವಿಷಯವನ್ನು ಶಾಸನ ಸಭೆಯ ಮುಂದೆ ತಂದುದಕ್ಕೆ ಹಿಂದೂ ಶಾಸಕರು ಆ ಗೊತ್ತುವಳಿಯನ್ನು ಮಂಡಿಸಿದವರೊಂದಿಗೆ ಸಿಟ್ಟಿಗೆದ್ದರು.

**ಪಂಡಿತ ಮದನಮೋಹನ ಮಾಳವಿಯ ಅವರು ಹೇಳಿದ್ದೆಂದರೆ–**

> ಮಾನ್ಯರೆ, ಹೀಗೆ ಹೇಳುವುದು ಅಸಭ್ಯ ಎನಿಸಬಹುದು. ಆದರೆ ಈ ಸಭೆಯ ನಡವಳಿಕೆಯ ಗೌರವ ಭಾವನೆ ಈ ಸಭೆಯ ಮುಂದೆ ಕೆಲವೊಂದು ಸಲ ಚರ್ಚೆಗೆ ವಿಷಯಗಳನ್ನು ತರುವ ರೀತಿಗೆ ಪ್ರತಿರೋಧ ವ್ಯಕ್ತಪಡಿಸಲು ಒತ್ತಾಯಿಸುತ್ತದೆ...
>
> ನನ್ನ ಸ್ನೇಹಿತ ಸನ್ಮಾನ್ಯ ಶ್ರೀ ದಾದಾಭಾಯಿ ಮಂಡಿಸಿದ ಗೊತ್ತುವಳಿಯ ಉದ್ದೇಶಕ್ಕೆ ನನ್ನ ತ್ವರಿತ ಹೃತ್ಪೂರ್ವಕ ಬೆಂಬಲವಿರುತ್ತದೆ. ಆದರೆ ಅದನ್ನು ಮಂಡಿಸುವಾಗ ಅನವಶ್ಯಕವಾಗಿ ಹಿಂದೂ ಸಮಾಜದ ವಿರುದ್ಧ ಹೇಳಿಕೆಗಳನ್ನು ಕೊಡುವುದನ್ನು, ನನಗನಿಸಿದಂತೆ ತಪ್ಪಿಸಬೇಕು. ನಾನು ಇಲ್ಲಿರುವುದು ಹಿಂದೂ ಎಂದಿರುವುದನ್ನೆಲ್ಲ ಸಮರ್ಥಿಸಲು ಅಲ್ಲ. ನಮ್ಮ ಸಮಾಜದ ಒಂದಿಲ್ಲೊಂದು ಭಾಗದಲ್ಲಿ ಕಾಣಸಿಗುವ ಪೂರ್ವಗ್ರಹಿಕೆಗಳು ಮತ್ತು ಮೂಢನಂಬಿಕೆಗಳ ಅರಿವು ನನಗಿದ್ದು, ಅವುಗಳಿಗಾಗಿ ವಿಷಾದ ವ್ಯಕ್ತಪಡಿಸುವುದಿಲ್ಲ. ಆದರೆ, ಮೂಢನಂಬಿಕೆಗಳನ್ನು ಬಿಟ್ಟುಬಿಡುವುದು ಕಷ್ಟದ್ದೆಂಬುದನ್ನು ಬರಿ ಹಿಂದೂ ಸಮಾಜ ಒಂದಕ್ಕೆ ಸೀಮಿತ ಅಲ್ಲ...

ಎಳ್ಳಷ್ಟು ಅಗೌರವ ತೋರಿಸುವ ಉದ್ದೇಶವಿರದೆ, "ಸತ್ತ ಹೆಂಡತಿಯ ತಂಗಿಯ ಜೊತೆಗೆ ಮದುವೆಯ ಬಿಲ್"ನ್ನು ಉದಾಹರಿಸುತ್ತೇನೆ... ನಾವು ಹಿಂದೂಗಳು ಕೆಲವು ಅತ್ಯಂತ ಕೆಟ್ಟ ಪೂರ್ವಗ್ರಹಿಕೆಗಳ ವಿರುದ್ಧ ಹೋರಾಡಬೇಕಿದೆ... ಆದರೆ ಹಿಂದೂಗಳು ತಮ್ಮಲ್ಲಿರುವ ಸಾಮಾಜಿಕ, ಧಾರ್ಮಿಕ ಅನರ್ಹತೆಗಳ ವಿರುದ್ಧ ಹೋರಾಡಿ ಯಾವುವನ್ನು ನಿವಾರಿಸಲು ಸಾಧ್ಯವೋ ಅವುಗಳ ವಿಷಯಕ್ಕೆ ಇಲ್ಲಿ ಉಪಸ್ಥಿತವಿರುವ ಅಥವಾ ಹೊರಗಿರುವ ಹಿಂದೂಗಳಿಗೆ ಭಾಷಣ ಮಾಡುವುದು ಈ ಸಭೆಯ ಸದಸ್ಯನ ಅಧಿಕಾರ ವ್ಯಾಪ್ತಿಯಲ್ಲಿ ಇರದೆಂದು ನನಗನಿಸುತ್ತದೆ. ಸದಸ್ಯರ ಅಧಿಕಾರ ವ್ಯಾಪ್ತಿ ಸರಕಾರ ಸೂಕ್ತವಾಗಿ ಕೈಗೆತ್ತಿಕೊಳ್ಳಬಹುದಾದಂಥ ಕಾಯಿದೆಗೆ ಅಥವಾ ಉಳಿದ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ವ್ಯವಹಾರಕ್ಕೆ ಸೀಮಿತವಾಗಿರುತ್ತದೆ. ಈ ಮೊದಲು ಎತ್ತಿ ತೋರಿಸಿದಂತೆ, ಸರಕಾರ, ಜಾಣ ಮತ್ತು ಉದಾರ ಕಾರ್ಯ ನೀತಿಗನುಸರಿಸಿ, ಧಾರ್ಮಿಕ ಸಾಮಾಜಿಕ ಧಾರ್ಮಿಕ ವಿಷಯಗಳಲ್ಲಿ ಕೈಹಾಕುವುದಿಲ್ಲ ಎಂದು ಕಟ್ಟುನಿಟ್ಟಾಗಿ ಹೇಳಿರುತ್ತದೆ. ಆದ್ದರಿಂದ ಈ ತರಹದ ಆರೋಪಗಳನ್ನು ಮಾಡತಕ್ಕದ್ದಲ್ಲ... ನಾನು ಆರೋಪಿಗಳ ಗುಣದೋಷಗಳ ವಾದವಿವಾದಕ್ಕೆ ಅಥವಾ ಇಲ್ಲಿ ವ್ಯಕ್ತಪಡಿಸಿದ ಸಾಮಾನ್ಯ ಹೇಳಿಕೆಗಳ ಸಮರ್ಥನೆಗೆ ಇಳಿಯಲಿಚ್ಛಿಸುವುದಿಲ್ಲ. ಆದರೆ ನಾನು ಪ್ರತಿರೋಧಿಸದಿದ್ದರೆ, ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೂ ಹರಡಿರುವ ಹಿಂದೂ ಸಮಾಜ ಈ ಗೊತ್ತುವಳಿ ಮಂಡಿಸಿದ ನನ್ನ ಸನ್ಮಾನ್ಯ ಸ್ನೇಹಿತ ಸೂಚಿಸಿದ ಎಲ್ಲ ಕೆಡಕುಗಳಿಗೆ ದೋಷಿಯಾಗಿರುತ್ತದೆಂಬುದನ್ನು ಸುಮ್ಮನೆ ಕೇಳುವ ಸ್ಥಿತಿಯಲ್ಲಿ ಇದ್ದಂತಾಗುತ್ತದೆ... ನಾವು ಹಿಂದೂಗಳು ಅನೇಕ ಪೂರ್ವಗ್ರಹಿಕೆಗಳ ವಿರುದ್ಧ ಹೋರಾಡಿ ಜಯಿಸಬೇಕಿದ್ದ ಅರಿವು ನನಗಿರುತ್ತಿದೆ. ಆದರೆ ಇದನ್ನು ಹೇಳಲಿಕ್ಕೆ ಇದು ಸರಿಯಾದ ಸ್ಥಳವಲ್ಲವೆಂದು ನಾನು ನಮ್ರನಾಗಿ ಹೇಳಬಯಸುತ್ತೇನೆ.

ಸಮಾಜ ಸುಧಾರಕ ಸರ್ ಸುರೇಂದ್ರನಾಥ ಬ್ಯಾನರ್ಜಿಯಂಥವರು ಕೂಡ ತುಷ್ಟರಿರಲಿಲ್ಲ. ಅವರು (ಹೀಗೆ) ಹೇಳಿದರು:

"...ಗೊತ್ತುವಳಿ ಮಂಡಿಸಿದ ನನ್ನ ಸನ್ಮಾನ್ಯ ಸ್ನೇಹಿತರು, ಹಿಂದೂ ಸಮಾಜದ ವಿರುದ್ಧ ದೋಷಾರೋಪ ಮಾಡಲು (ಉದ್ದೇಶಪೂರ್ವಕ ಮಾಡಿದರೆಂದು ನನಗನಿಸುವುದಿಲ್ಲ) ತಮ್ಮ ಮಿತಿಯನ್ನು ಮೀರಿದರು. ನಾವು ಪ್ರಪಂಚದಷ್ಟು ಹಳೆಯದಾದ ರೂಢಿಗಳ, ನಾಗರಿಕತೆಯ ಉತ್ತರಾಧಿಕಾರಿಗಳಾಗಿದ್ದೇವೆಂಬುದನ್ನು ಅವರು ನೆನಪಿನಲ್ಲಿ ಇಡತಕ್ಕದ್ದು. ಆ ನಾಗರಿಕತೆಯಲ್ಲಿ ದೋಷಗಳಿದ್ದವು. ಆದರೆ ಅದು ಪ್ರಪಂಚದ ಮುಂಜಾವಿನಲ್ಲಿ ಕಾಯಿದೆ, ಕ್ರಮಬದ್ಧತೆ ಮತ್ತು ಸಾಮಾಜಿಕ ಸ್ಥಿರತೆಯ ಭರವಸೆ ಆಗಿತ್ತು. ಹಿಂದಕ್ಕೆ ಲಕ್ಷಾನುಲಕ್ಷ ಜನರಿಗೆ ನೆಮ್ಮದಿ ಕೊಟ್ಟಿತ್ತು. ನಾವು ಇಂದಿನ ವಾತಾವರಣಕ್ಕನುಸರಿಸಿ ರಾಷ್ಟ್ರ ವ್ಯವಸ್ಥೆಯನ್ನು ತರಲು ಯತ್ನಿಸುತ್ತಿದ್ದೇವೆ. ಆದರೆ ಹಿಂದಿನಿಂದ ಬಂದುದೆಲ್ಲವನ್ನೂ ಬದಿಗೊತ್ತಲಾಗುವುದಿಲ್ಲ. ನಮ್ಮ ಪೂರ್ವಜರಿಂದ ನಿರ್ಮಿಸಲ್ಪಟ್ಟ ಪ್ರಾಚೀನ ಪವಿತ್ರ ಪೂಜನೀಯ ಸಮಾಜ ವ್ಯವಸ್ಥೆಯ ರಚನೆಯನ್ನು ಗೌರವಿಸುತ್ತೇವೆ. ಅದರ ದೋಷಗಳನ್ನು ನೋಡುತ್ತೇವೆ. ಮತ್ತು ಅವುಗಳನ್ನು ಕ್ರಮೇಣ ಮತ್ತು ದೃಢತೆಯಿಂದ ಹೊಡೆದುಹಾಕಲು ನಾವು ಹಾತೊರೆಯುತ್ತೇವೆ. ಆದರೆ ಕ್ರಾಂತಿಕಾರಕ ಚಳವಳಿಯ ಮುಖಾಂತರ ಅಲ್ಲ, ನಿಧಾನವಾದ ಎಡೆಬಿಡದ ಉತ್ಪತ್ತಿ

ಕ್ರಮದ ಮುಖಾಂತರ. ನನ್ನ ಸ್ನೇಹಿತರು ನಮಗೆ ಸ್ವಲ್ಪ ಸಹಾನುಭೂತಿ ತೋರಬೇಕು. ಆ ಸಮಸ್ಯೆಯನ್ನು ಬಗೆಹರಿಸುವ ನಮ್ಮ ಪ್ರಯತ್ನದೆಡೆಗೆ ಉದಾರಭಾವ ತಾಳಬೇಕು. ನನ್ನ ಸನ್ಮಿತ್ರರು ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತಾರೆ... ಇಂಥ ವಿಷಯದಲ್ಲಿ ಸರಕಾರದ ಕ್ರಮವನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಒಟ್ಟಿನಲ್ಲಿ ಪರಿಸ್ಥಿತಿಯನ್ನು ವಿಶ್ಲೇಷಿಸಿದರೆ, ಇದು ಸಾಮಾಜಿಕ ಸಮಸ್ಯೆ ಎಂದೆನಿಸುತ್ತದೆ. ಮತ್ತು ಸರಕಾರ ಅತ್ಯಂತ ಸೂಕ್ತವಾಗಿ ಅದರ ಪ್ರಾಚೀನ ಪದ್ಧತಿಗಳಿಗನುಗುಣವಾಗಿ, ಸಾಮಾಜಿಕ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡದೆ ದೂರ ಉಳಿದಿರುತ್ತದೆಂದು ನನಗನಿಸುತ್ತದೆ.

ಸರಕಾರ ಶಿಕ್ಷಣದ ಮುಖಾಂತರ ದಲಿತ ವರ್ಗಗಳಲ್ಲಿ ಔದ್ಯೋಗಿಕ ಕ್ರಾಂತಿಗೆ ಸಹಾಯ ಮಾಡುವುದರಿಂದ, ಸಾಕಷ್ಟು ಕೆಲಸ ಮಾಡಬಹುದು. ಮುಖ್ಯ ಸಮಸ್ಯೆ ಇರುವುದು, ಸಮಸ್ಯೆಗಳೆಲ್ಲವುಗಳ ಮೂಲವಾಗಿರುವ ಸಾಮಾಜಿಕ ಉದ್ಧರಣದಲ್ಲಿ ಮತ್ತು ಅಲ್ಲಿ ಸರಕಾರ ಒಬ್ಬ ಹಿತಚಿಂತಕ ಪ್ರೇಕ್ಷಕ ಮಾತ್ರ ಆಗಲು ಶಕ್ಯವಿರುವುದು. ಅದು ನಮ್ಮ ಸಮಸ್ಯೆಗಳಿಗೆ ಸಹಾನುಭೂತಿ ತೋರಬಹುದು. ಆದರೆ ಸಕ್ರಿಯವಾಗಿ ಅದರಲ್ಲಿ ಪಾಲ್ಗೊಳ್ಳಲಾರದು..."

ಸನ್ಮಾನ್ಯ ಶ್ರೀ ದಾದಾಭಾಯಿ ತಮ್ಮನ್ನು ಸಮರ್ಥಿಸಿಕೊಳ್ಳಬೇಕಾಗಿತ್ತು. ತಮ್ಮ ಉತ್ತರದಲ್ಲಿ ಅವರು ಹೀಗೆ ಹೇಳಿದರು:

"ಮಾನ್ಯರೇ,

ನಾನು ಒಂದು ವಿಚಿತ್ರ ಮತ್ತು ದುರ್ದೈವ ಸ್ಥಿತಿಯಲ್ಲಿದ್ದೇನೆ. ಈ ಸಭೆಯಲ್ಲಿ ಎರಡು ಪಕ್ಷಗಳಿದ್ದು ಅವೆರಡೂ ಈ ಸಂದರ್ಭದಲ್ಲಿ ತಮ್ಮ ತಮ್ಮ ರಕ್ಷಣೆಯಲ್ಲಿ ತೊಡಗಿರುತ್ತವೆ. ಈ ಗೊತ್ತುವಳಿಯನ್ನು ತರಲು ನನ್ನ ಸಮರ್ಥನೆ, ಏನಾದರೂ ಸಮರ್ಥನೆ ಬೇಕಿದ್ದರೆ, ನಾನು ನನ್ನ ಅಧಿಕಾರೇತರ ಸಹೋದ್ಯೋಗಿಗಳಿಂದ ಪಡೆದ ನಿರುತ್ಸಾಹದ ಮತ್ತು ಅರೆಮನಸ್ಸಿನ ಬೆಂಬಲವೇ ಆಗಿರುತ್ತದೆ. ಮಾನ್ಯರೇ, ಈ ಗೊತ್ತುವಳಿಯನ್ನು ಮಂಡಿಸುವುದರಿಂದ ನನಗೆ ಎಳ್ಳಷ್ಟೂ ಸಂತೋಷವಾಗಿಲ್ಲವೆಂದು ನಿಮಗೆ ಭರವಸೆ ಕೊಡುತ್ತೇನೆ. ಅದನ್ನು ತಪ್ಪಿಸಲು ಸಾಧ್ಯವಿದ್ದರೆ, ನಾನು ಬಹಳ ಸಂತೋಷದಿಂದ ಮತ್ತು ಸ್ವ ಇಚ್ಛೆಯಿಂದ ಹಾಗೆ ಮಾಡುತ್ತಿದ್ದೆ. ಸನ್ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ, ಈ ಸುಧಾರಿತ ಶಾಸನಸಭೆಯ ಆರನೆಯ ವರ್ಷ ನಡೆದಿರುತ್ತದೆ ಮತ್ತು ಎರಡನೆಯ ಅವಧಿಯೂ ಮುಗಿಯುತ್ತ ಬಂದಿದೆ. ಈ ಐದು ವರ್ಷಗಳಲ್ಲಿ, ನಾನು ಈ ಸಭೆಯ ಸದಸ್ಯನಾಗಿರುವ ಬಹುಪಾಲು ಅವಧಿಯಲ್ಲಿ ಸಾರ್ವಜನಿಕ ಸ್ವಾತಂತ್ರ್ಯ, ಹುರುಪು, ಸಾಹಸ ಮತ್ತು ಸಂಸ್ಕೃತಿಗಳ ಪರವಾಗಿ ಹೋರಾಡುವ ವೀರರಾಗಿರುವ ನನ್ನ ಸ್ನೇಹಿತರಾದ ಸನ್ಮಾನ್ಯ ಸುರೇಂದ್ರನಾಥ್ ಬ್ಯಾನರ್ಜಿ ಅವರು ಅಥವಾ ಪಂಡಿತ ಮದನಮೋಹನ ಮಾಲವಿಯ ಅವರು ಇಂಥ ಗೊತ್ತುವಳಿಯನ್ನು ಮಂಡಿಸುವ ತೊಂದರೆ ತೆಗೆದುಕೊಳ್ಳುತ್ತಾರೆಂದು ನಾನು ನಿರೀಕ್ಷಿಸಿದ್ದೆ. ದಲಿತರ ಉದ್ಧಾರಕ್ಕಾಗಿ ಇಬ್ಬರು ಉತ್ಸಾಹಿ ಸದಸ್ಯರಲ್ಲಿ ಒಬ್ಬರು ಗೊತ್ತುವಳಿಯನ್ನು ಮಂಡಿಸುವರೆಂದು ಇಷ್ಟು ಸಮಯ ಕಾಯ್ದು ನೋಡಿದೆ. ಆದರೆ ಈ ವಿಷಯ ಒಮ್ಮೊಮ್ಮೆ ಕಾಂಗ್ರೆಸ್ ಮಂಟಪದಲ್ಲಿ ಚರ್ಚಿಸಲಾಗಿದ್ದರೂ

ಇವರಾರೂ ಈ ವಿಷಯವನ್ನು ಎತ್ತಿಕೊಳ್ಳದಿದ್ದುದನ್ನು ಕಂಡಾಗ, ಮತ್ತು ಈ ಸಭೆಯಲ್ಲಿಯೂ ಈ ವಿಷಯವನ್ನು ಎತ್ತಿಕೊಳ್ಳದಿರುವುದು ಕಂಡಾಗ.... ಪಾರ್ಸಿಯಾದ, ಹಿಂದೂ ಕ್ಷೇತ್ರವನ್ನು ಪ್ರತಿನಿಧಿಸುವ ನಾನು ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆಗೆ ಮಂಡಿಸುವುದು ನನ್ನ ಕರ್ತವ್ಯವೆಂದು ಭಾವಿಸಿದೆನು."

ಸರಕಾರಕ್ಕೆ ಈ ಜಗಳದಿಂದ ಸಹಜ ನೆಮ್ಮದಿ ದೊರೆಯಿತು. ಶಾಸನಸಭೆಯ ಹಿಂದೂ ಸದಸ್ಯರ ಬೆಂಬಲದಿಂದ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುತ್ತಿರುವ ಸರ್ ಎರೆಜಿನಾಲ್ಡ್ ಕ್ರ್ಯಾಡೊಕ್ ಸರಕಾರದ ಪರವಾಗಿ ಮಾತನಾಡುತ್ತ ಆ ಗೊತ್ತುವಳಿಯನ್ನು ಈ ಕೆಳಗಿನ ಮಾತುಗಳಲ್ಲಿ ಕಿತ್ತುಹಾಕಿದರು:

"ಮಾನ್ಯರೇ, ಸನ್ಮಾನ್ಯ ಶ್ರೀ ದಾದಾಭಾಯಿಯವರ ಗೊತ್ತುವಳಿಯ ಉದ್ದೇಶಕ್ಕೆ ನಾವು ನಮ್ಮ ಸಹಾನುಭೂತಿ ತೋರುತ್ತೇವೆ. ಸ್ಥಾನಿಕ ಸರಕಾರಗಳು ಈ ಜನರ ಸ್ಥಿತಿಯನ್ನು ಸುಧಾರಿಸುವುದಕ್ಕೆ ಏನು ಮಾಡಿವೆ ಮತ್ತು ಏನು ಮಾಡುತ್ತಿವೆ ಮತ್ತು ಏನು ಮಾಡಲು ಅವುಗಳಿಗೆ ಶಕ್ಯವಿದೆ ಎಂಬುದನ್ನು ಲಿಖಿತ ರೂಪದಲ್ಲಿ ಕೇಳುವಷ್ಟರಮಟ್ಟಿಗೆ ಮುಂದುವರಿಯಲು ಇಚ್ಛಿಸುತ್ತೇವೆ. ಆದರೆ ವಿಶೇಷ ಸಮಿತಿಗಳಲ್ಲಿ ನಮಗೆ ನಂಬುಗೆ ಇಲ್ಲ. ಸಮಸ್ಯೆಗಳು ಎಷ್ಟೊಂದು ಹರವಾದವು ಮತ್ತು ಅವುಗಳನ್ನು ಬಗೆಹರಿಸುವುದು ಅಸಾಧ್ಯ ಎಂಬುದನ್ನು ಸಮಿತಿಗಳ ಮುಖಾಂತರ ಈ ಸಭೆಗೆ ನಾನು (ಈಗಾಗಲೇ) ಸೂಚಿಸಿರುವುದಿಲ್ಲವೇ? ಸರಕಾರಕ್ಕೆ ಅದರ ಅಡಿಯಿಂದ ಮುಡಿಯವರೆಗೆ ಸಮಸ್ಯೆಗಳಿರುತ್ತವೆ. ನಾನು ಹೇಳುವುದೇನೆಂದರೆ, ಸನ್ಮಾನ್ಯ ಶ್ರೀ ದಾದಾಭಾಯಿಯವರ ಉದ್ದೇಶಕ್ಕೆ ಸಹಾನುಭೂತಿ ತೋರುತ್ತಿದ್ದರೂ, ಈ ವಿಷಯವನ್ನು ಸ್ಥಾನಿಕ ಸರಕಾರಕ್ಕೆ ಒಪ್ಪಿಸುವ ಆಶ್ವಾಸನೆ ಕೊಡುವುದಕ್ಕಿಂತ ಹೆಚ್ಚಿಗೆ ಏನನ್ನೂ ಮಾಡಲಾರೆವು, ಮತ್ತು ಈಗ ಅವು ಮಾಡುವುದಕ್ಕಿಂತ ಹೆಚ್ಚಿಗೆ ಏನಾದರೂ ಮಾಡಲು ಶಕ್ಯವೇ ಎಂದು ಕೇಳುತ್ತೇವೆ. ನಾವು ಮಾಡುವುದಿಷ್ಟೇ, ಆ ಭರವಸೆಯಿಂದ ಸನ್ಮಾನ್ಯ ಸದಸ್ಯರು ತಮ್ಮ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ."

ಎರಡನೆಯ ಸಲ, ಅಸ್ಪೃಶ್ಯರ ಉಲ್ಲೇಖವಾದದ್ದು ೧೯೨೮ರ ಶಾಸನ ಸಭೆಯ ನಡವಳಿಕೆಗಳಲ್ಲಿ, ಶ್ರೀ ಎಂ.ಆರ್. ಜಯಕರ ಕೆಳಗಿನ ಗೊತ್ತುವಳಿಯನ್ನು ಮಂಡಿಸಿದಾಗ:

"ಅಸ್ಪೃಶ್ಯರ ಮತ್ತು ಉಳಿದ ದಲಿತ ವರ್ಗಗಳಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳನ್ನು ಕೊಡಲು, ಮತ್ತು ಎಲ್ಲ ಸಾರ್ವಜನಿಕ ಸೇವೆಗಳನ್ನು ವಿಶೇಷವಾಗಿ, ಪೊಲೀಸ್ ಸೇವೆಯನ್ನು ತೆರೆದಿಡಲು ಎಲ್ಲ ಸ್ಥಾನಿಕ ಸರಕಾರಗಳಿಗೆ ನಿರ್ದೇಶನ ನೀಡಬೇಕೆಂದು ಈ ಸಭೆ ಶಿಫಾರಸು ಮಾಡುತ್ತದೆ."

ಈ ಸಂದರ್ಭದಲ್ಲಿ ಕೂಡ ಭಾರತ ಸರಕಾರ ೧೯೧೬ರಲ್ಲಿದ್ದುದಕ್ಕಿಂತ ಹೆಚ್ಚು ಉತ್ಸುಕ ಆಗಿರಲಿಲ್ಲ. ಸರಕಾರದ ಪರವಾಗಿ ಮಾತಾಡುತ್ತ ಶ್ರೀ ಬಾಜಪೈ (ಹೀಗೆ) ಹೇಳಿದರು:

"ಸ್ಥಾನಿಕ ಸರಕಾರಗಳು ತಮ್ಮ ಜವಾಬುದಾರರಿಗೆ ಸ್ಪಂದಿಸುತ್ತಿರುತ್ತವೆ. ತಮಗೆ ಸಾಧ್ಯವಿದ್ದಷ್ಟು ಅವು ಮಾಡುತ್ತಿರುತ್ತವೆ. ಅವು ಆದರ್ಶವನ್ನು ಸಾಧಿಸಿವೆ ಎಂದು ಹೇಳುವುದು ನನ್ನ

ಸುಯೋಗವಲ್ಲ. ಆದರೆ ಅದರ ವಿಷಯಕ್ಕೆ ಎಚ್ಚರಿಕೆ ಬಂದಿದೆಯೆಂದೂ ಮತ್ತು ಜವಾಬುದಾರಿಯ ಭಾವನೆ ಎಚ್ಚತ್ತಿದೆ ಎಂದೂ, ಈ ದಲಿತವರ್ಗಗಳ ಸ್ಥಿತಿಯನ್ನು ಸುಧಾರಿಸಲು ಯತ್ನಿಸುವ ಭಾವನೆ ಜಾಗ್ರತವಾಗಿದೆ ಎಂದು ಹೇಳುತ್ತೇನೆ. ವಸ್ತುಸ್ಥಿತಿ ಹೀಗಿದ್ದಾಗ, ನಿರ್ದೇಶನ ಮತ್ತು ಬೇಡಿಕೆಗಳ ಮುಖಾಂತರ ಅವುಗಳ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದು ಉಚಿತವಲ್ಲ. ಈ ಸದನ ಇಚ್ಛಿಸಿದಲ್ಲಿ ಸರಕಾರ ಈ ರಾಷ್ಟ್ರೀಯ ಸಮಸ್ಯೆಯ ಬಗೆಗೆ ಈ ಸದನದ ವಿಚಾರಗಳನ್ನು ಮುಟ್ಟಿಸಬಹುದು."

ಈ ಭಾಷಣಕ್ಕಾಗಿ ನಡಾವಳಿಕೆಯ ಕಚೇರಿಯ ವರದಿಯ ಪ್ರಕಾರ, ಶ್ರೀ ಬ್ಯಾನರ್ಜಿಯವರನ್ನು ಶ್ಲಾಘಿಸಲಾಯಿತು!!

ಇಂತಿದೆ ಸಾಮಾಜಿಕ ಸುಧಾರಣೆಯ ವಿಷಯದಲ್ಲಿ ಬ್ರಿಟಿಷ್ ಸರಕಾರದ ದಾಖಲೆ! ಎಂಥ ಶೋಚನೀಯ ದಾಖಲೆ ಇದು? ಎಷ್ಟು ಅಲ್ಪ? ಅರವತ್ತು ವರ್ಷಗಳ ಶಾಸನ ನಿರ್ಮಾಣ ಕ್ರಿಯೆಯಲ್ಲಿ ಆರು ಕಾಯಿದೆಗಳು! ಪ್ರಾರಂಭದಿಂದಲೂ, ಸಾಮಾಜಿಕ ಸುಧಾರಣೆಯ ಕಡೆಗೆ ಅದರ ಒಲವು ನಿರರ್ಗಳ ಆಗಿರುವುದಿಲ್ಲ. ೧೮೬೦ರವರೆಗೆ ಅದು ಜವಾಬುದಾರಿ ಸರಕಾರದ ಮುಖವಾಡ ಧರಿಸಿತು. ೧೮೬೦ರಿಂದ ಈಚೆಗೆ ಆ ಮುಖವಾಡವನ್ನು ತೆಗೆದೊಗೆಯಿತು. ಸರಕಾರ ನಿಷ್ಕ್ರಿಯವಾಯಿತು. ಸುಧಾರಣೆ ಸಂಪೂರ್ಣ ಸ್ಥಗಿತಗೊಂಡಿತು. ೧೮೮೧ರಲ್ಲಿ ಬಾಲ್ಯವಿವಾಹ ನಿಷೇಧ ಕಾಯಿದೆಯ ಪರವಾಗಿ ದೊಡ್ಡ ಚಳುವಳಿ ಪ್ರಾರಂಭವಾಯಿತು. ಸಾಮಾಜಿಕ ಸುಧಾರಣೆಯಿಂದ ಪೀಡಿಸಿಕೊಳ್ಳುವುದಕ್ಕಿಂತ, ತನ್ನ ಸುಧಾರಣಾ ವಿರೋಧಿ ಕಾರ್ಯನೀತಿಯನ್ನು ಸಾರ್ವಜನಿಕವಾಗಿ, ಒಮ್ಮೆ ಅಂತಿಮವಾಗಿ, ಘೋಷಿಸುವ ಧೈರ್ಯ ತಾಳಿತು. ಆ ವರ್ಷದ ಸರಕಾರಿ ಗೊತ್ತುವಳಿಯಲ್ಲಿ ಬ್ರಿಟಿಷ್ ಸರಕಾರ (ಕೆಳಗಿನಂತೆ) ಘೋಷಿಸಿತು:

"ಶ್ರೀ ಮಲಬಾರಿಯ ಟಿಪ್ಪಣಿಗಳಲ್ಲಿ ಎತ್ತಿದ ವಿಷಯಗಳೊಂದಿಗೆ ವ್ಯವಹರಿಸುವಲ್ಲಿ ಭಾರತದಲ್ಲಿರುವ ಬ್ರಿಟಿಷ್ ಸರಕಾರ ಕೆಲವು ಸಾಮಾನ್ಯ ನಿಯಮಗಳಿಂದ ಮಾರ್ಗದರ್ಶನ ಪಡೆದಿರುತ್ತದೆ. ಉದಾ: ಸಾಮಾನ್ಯ ಅಪರಾಧದ ಕಾನೂನಿನ ಉಲ್ಲಂಘನೆಯನ್ನು ಒಳಗೊಳ್ಳುವಂಥ ರೂಢಿಯನ್ನು ಒಂದು ಜಾತಿ ಅಥವಾ ಪದ್ಧತಿ ರಾಜ್ಯ ಕಾಯಿದೆಯ ಬಳಕೆಗೆ ಒತ್ತಾಯಿಸುತ್ತದೆ. ಜಾತಿ ಅಥವಾ ಪದ್ಧತಿ ನಾಗರಿಕರ ಆಯ್ಕೆಗೆ ಬಿಟ್ಟ ವಿಷಯಗಳೊಂದಿಗೆ ವ್ಯವಹರಿಸುವಂಥ ಕಾಯಿದೆಯನ್ನು ಮಾಡಿದಾಗ ಮತ್ತು ಅವುಗಳ ಬಳಕೆಗೆ ಸಿವಿಲ್ ಅಥವಾ ಕ್ರಿಮಿನಲ್ ಕೋರ್ಟುಗಳ ಸಹಾಯ ಬೇಕಾಗುವುದಿಲ್ಲವೊ, ರಾಜ್ಯ ಅದರಲ್ಲಿ ಹಸ್ತಕ್ಷೇಪ ಮಾಡುವುದು ಅಪೇಕ್ಷಣೀಯವೂ ಅಲ್ಲ, ಅವಶ್ಯಕವೂ ಅಲ್ಲ.

ಇಂಥ ಸಾಮಾನ್ಯ ತತ್ವಗಳನ್ನು ವಿಶೇಷ ಪ್ರಕರಣಗಳಿಗೆ ಅನ್ವಯಿಸುವಲ್ಲಿ ನಿಜವಾಗಿಯೂ ಭಿನ್ನಾಭಿಪ್ರಾಯಕ್ಕೆ ಅವಕಾಶವಿರುತ್ತದೆ. ಆದರೆ ಸದ್ಯ ಗಮನಿಸಲಾಗಿದ್ದಂಥ ವಿಷಯಗಳೊಂದಿಗೆ ವ್ಯವಹರಿಸುವ ಶಾಸಕಾಂಗ ಅಥವಾ ಆಡಳಿತಾಂಗದ ಸಾಮರ್ಥ್ಯದಲ್ಲಿ ರಾಜ್ಯ ಕೈಹಾಕಬೇಕೋ, ಬೇಡವೋ ಎಂಬುದನ್ನು ಪರಿಶೀಲಿಸುವಲ್ಲಿ ಉಪಯೋಗಿಸಬಹುದಾದ ಒಂದು ಸಾಮಾನ್ಯ ಜ್ಞಾನದ ಪರೀಕ್ಷೆ ಇರುತ್ತದೆ. ಆ ಪರೀಕ್ಷೆ ಎಂದರೆ–

> "ತನ್ನ ಬಳಿಯಿರುವ ಸಾಮಾನ್ಯ ಆಡಳಿತ ಮಾತ್ರದ ಸಹಾಯದಿಂದ ರಾಜ್ಯ ತನ್ನ ಆದೇಶಗಳನ್ನು ಕಾರ್ಯರೂಪಕ್ಕಿಳಿಸಬಹುದೆ? ಇಲ್ಲದಿದ್ದರೆ, ತನ್ನ ಪರಿಪಾಠದಿಂದ ದೂರ ಸರಿಯದೆ ಕಾರ್ಯಾಚರಣೆಯಲ್ಲಿ ತರಲು ಆಗದಂಥ ಕಾಯಿದೆಗಳನ್ನು ಮಾಡದಿರುವುದು ಅಪೇಕ್ಷಣೀಯ.
>
> ಈ ಪರೀಕ್ಷೆಗೆ ಸದ್ಯದ ಪ್ರಕರಣವನ್ನು ಗುರಿಪಡಿಸಿದರೆ, ರಾಜ್ಯವು ಮಧ್ಯ ಪ್ರವೇಶಿಸುವುದು ಅಪೇಕ್ಷಣೀಯ ಅಲ್ಲ ಎಂಬುದಕ್ಕೆ ಮತ್ತು ಅನೇಕ ಪರಸ್ಪರ ಹೊಂದಿಕೆ ಮತ್ತು ಭಿನ್ನತೆಗಳಿರುವ ಜನಾಂಗಗಳ ಸಾಮಾಜಿಕ ಸಂಪ್ರದಾಯದ ಮೇಲೆ ವಿಪರೀತ ಪರಿಣಾಮ ಬೀರುವಂಥ ಶ್ರೀ ಮಲಬಾರಿ ಅವರು ವಾದಿಸಿದ, ಸುಧಾರಣೆಗಳನ್ನು ಸಮಯದ ಪ್ರಭಾವಕ್ಕೆ ಮತ್ತು ಶಿಕ್ಷಣದ ಮುಖಾಂತರ ಆಗುವ ಜನರ ಮಾನಸಿಕ ಮತ್ತು ನೈತಿಕ ಬೆಳವಣಿಗೆಯ ಕ್ರಮೇಣ ಕ್ರಿಯೆಗೆ ಬಿಟ್ಟುಬಿಡಬೇಕೆಂಬುದಕ್ಕೆ ಹಿಸ್ ಎಕ್ಸಲನ್ಸಿ–ಇನ್–ಕೌನ್ಸಿಲ್‌ರ ಅಭಿಪ್ರಾಯಗಳು ಸ್ಪಷ್ಟವಾಗುತ್ತವೆ.
>
> ಕೆಲವು ಭೌತಿಕ ವಿಷಯಗಳಲ್ಲಿ ಜಾತಿ ಸ್ಥಾಪಿಸಿದ ಮಟ್ಟದಿಂದ ಸ್ವತಂತ್ರವಾದ ಮತ್ತು ಅದಕ್ಕಿಂತ ಭಿನ್ನವಾದ ನೈತಿಕ ಮಟ್ಟವನ್ನು ಭಾರತದಲ್ಲಿ ಬ್ರಿಟಿಷ್ ಸರಕಾರ ಶಾಸನದ ಮುಖಾಂತರ ಸ್ಥಾಪಿಸಿರುತ್ತದೆ. ಅದು ದೇಶೀಯ ಪರಂಪರೆ, ರೂಢಿ ಮತ್ತು ವಿಚಾರದ ರೀತಿಗಳ ಮೇಲೆ ಒಳ್ಳೆಯ ಪ್ರಭಾವ ಬೀರಿರಲು ಸಾಧ್ಯವಿರುತ್ತದೆ. ಆದರೆ ಶಾಸನ, ಅದರ ಉದ್ದೇಶ ನೀತಿಬೋಧಕ ಇದ್ದಾಗ್ಯೂ, ಶಾಸನದ ಪ್ರಭಾವ ಮತ್ತು ಜಾತಿ ಮತ್ತು ಪದ್ಧತಿಗಳ ಪ್ರಭಾವದ ನಡುವಿನ ಪೈಪೋಟಿಯಲ್ಲಿ ಅದರ ಯಶಸ್ಸಿನ ಸ್ಥಿತಿ ಇಂತಿದೆ– "ಶಾಸಕಾಂಗವು ತನ್ನ ಸ್ವಾಭಾವಿಕ ಸೀಮೆಯಲ್ಲಿರತಕ್ಕದ್ದು ಮತ್ತು ಆ ಸೀಮೆಗಳನ್ನು ಉಲ್ಲಂಘಿಸಿ ಸಾಮಾಜಿಕ ಅಭಿಪ್ರಾಯಕ್ಕೆ ನೇರ ವಿರುದ್ಧ ಸ್ಥಿತಿಯಲ್ಲಿ ತನ್ನನ್ನು ಇರಿಸಿಕೊಳ್ಳಬಾರದು."

ಈ ಗೊತ್ತುವಳಿಯಲ್ಲಿ ಒತ್ತಿ ಹೇಳಿದ ಕ್ರಿಯಾನೀತಿ ಸಾಮಾಜಿಕ ಸುಧಾರಣೆಯ ವಿಷಯದಲ್ಲಿ ಬ್ರಿಟಿಷ್ ಸರಕಾರ ಎಂದಿನಿಂದಲೂ ಹೊಂದಿದ್ದ ಕ್ರಿಯಾ ನೀತಿ ಆಗಿರುತ್ತದೆ.

## V

ಭಾರತ ಸರಕಾರ ಅಸ್ಪೃಶ್ಯರನ್ನು ಏಕೆ ನಿರ್ಲಕ್ಷಿಸಿತು?

ಅಪರಾಧ ರೂಪದ ಅಲಕ್ಷತನಕ್ಕೆ ಸರ್ ರೆಜಿನಾಲ್ಡ್ ಕ್ರ್ಯಾಡೊಕ್ ವಿವರಣೆ ಕೊಟ್ಟರು. ೧೯೧೬ರಲ್ಲಿ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸರ್ ಮಾನೇಕಜಿ ದಾದಾಭಾಯಿ ಗೊತ್ತುವಳಿಗೆ ಸರಕಾರದ ಪರವಾನಗಿ ಉತ್ತರಿಸುತ್ತ ಅಸ್ಪೃಶ್ಯರ ವಿಷಯಕ್ಕೆ ಸರಕಾರ ಯಾವ ನಿಲುವು ತೆಗೆದುಕೊಂಡಿತೆಂದು ಕೆಳಗಿನಂತೆ ಹೇಳಿದರು:

> "ಅವರ (ಅಸ್ಪೃಶ್ಯರ) ವಿಷಯಕ್ಕೆ ತೊಂದರೆ ಇರುವುದು ಸರಕಾರ ಅವರನ್ನು ಗುರುತಿಸುವುದಿಲ್ಲವೆಂದಲ್ಲ, ಎಲ್ಲಿಯವರೆಗೆ ಶತಮಾನಗಳ ರೂಢಿ ಮತ್ತು ನಂಬಿಕೆಗಳು ತೆಗೆದುಹಾಕಲ್ಪಡುವುದಿಲ್ಲವೊ, ಅವರ ನೆರೆಯವರ ಕೈಗಳು ಅವರನ್ನು ಹತ್ತಿಕ್ಕುವವೊ... ಇವರು ಹೆಚ್ಚಾಗಿ ಗ್ರಾಮಗಳಲ್ಲಿ ಮತ್ತು ನಗರಗಳ ಹಿಂದಿನ ಓಣಿಗಳಲ್ಲಿ ವಾಸಿಸುತ್ತಿರುವ

ರೆಂಬುದನ್ನು ಮತ್ತು ಅವರ ನೆರೆಯವರು ಇದುವರೆಗೆ ವಿಶಾಲ ಮತ್ತು ಉದಾರ ಮನೋಭಾವಗಳ ಪ್ರಭಾವಕ್ಕೊಳಗಾಗಿಲ್ಲವೆಂಬುದನ್ನು ನೆನಪಿಡತಕ್ಕದ್ದು. ಆದುದರಿಂದ ಅನೇಕ ಭಾಷಣಕಾರರು ಸೂಚಿಸಿರುವಂತೆ, ಈ ವಿಷಯವನ್ನು ನೋಡಿಕೊಳ್ಳುವುದರಲ್ಲಿರುವ ಸಮಸ್ಯೆ ಪೂರ್ಣ ಆಡಳಿತಾತ್ಮಕವಾಗಿರುವುದಕ್ಕಿಂತ ಹೆಚ್ಚು ಸಾಮಾಜಿಕ ಮತ್ತು ಧಾರ್ಮಿಕ ವಾಗಿರುತ್ತದೆ.

"ಶಾಲೆಗಳಲ್ಲಿರುವ ಅನೇಕ ತೊಂದರೆಗಳನ್ನು ನಾನು ಬಲ್ಲೆ. ಮಹಾರ ಜಾತಿಯ ಹುಡುಗರು ಪ್ರವೇಶಿಸಿದಂಥ ಅನೇಕ ಶಾಲೆಗಳಿರುತ್ತವೆ. ವರ್ಥಾಂಡದಲ್ಲಿ ಮಾತ್ರ ಪ್ರವೇಶಿಸಿ ಶಿಕ್ಷಕರ ಲಕ್ಷ್ಯದ ಅಲ್ಪ ಮಾತ್ರ ಲಾಭ ಪಡೆಯಬಹುದು ಅಥವಾ ಪೂರ್ತಿ ಹೊರಗೆ ಹಾಕಲ್ಪಡಬಹುದು. ಈ ತೊಂದರೆಯನ್ನು ಕ್ರಮೇಣ ನಿವಾರಿಸಲು ಮಾತ್ರ ಸಾಧ್ಯ. ನಾನು ಈ ಸಮಸ್ಯೆಯನ್ನು ಬಿಟ್ಟುಬಿಡದೆ ಸ್ಥಳದಲ್ಲಿಯೇ ಬಗೆಹರಿಸಿದ್ದೇನೆ. ಜನರೊಂದಿಗೆ ಮಾತಾಡಿದ್ದೇನೆ. (ಅವರಲ್ಲಿ) ನಿಮ್ಮಂಥ ತೆರಿಗೆ ತೆರುವವರಿದ್ದಾರೆ. ಅವರಿಗೆ ಒಳಗೆ ಬರಲು ಬಿಡಿ, ಅಥವಾ ನೀವು ನಿಮ್ಮ ಪೂರ್ವಗ್ರಹಿಕೆಗಳಿಗೆ ಅಂಟಿಕೊಳ್ಳಬಯಸಿದರೆ, ನಿಮಗನಿಸಿದಂತೆ, ಸರಿ ಎನಿಸುವ ಪೂರ್ವಗ್ರಹಿಕೆಗಳಿರಬಹುದು– ಅವರು ತಮಗಾಗಿ ಒಂದು ಪ್ರತ್ಯೇಕ ಶಾಲೆಯನ್ನು ಕೇಳಬಯಸುವುದಕ್ಕೆ ನೀವು ಸಹಾಯ ಮಾಡಿದಂತಾಗುವುದಿಲ್ಲವೆ? ಎಂದು ಜನರಿಗೆ ತಿಳಿಹೇಳಿದ್ದೇನೆ. ಕೆಲವು ಉತ್ತಮರು ಬಾವಿ ಮತ್ತು ಶಾಲೆಗಳ ವಿಷಯದಲ್ಲಿ ದಲಿತರಿಗೆ ಸಹಾಯ ಮಾಡಲು ಮುಂದೆ ಬಂದಿರುತ್ತಾರೆ, ಅವರು ಸಹಾಯ ಮಾಡಿದ್ದಾರೆ ಮತ್ತು ತೊಂದರೆಗಳನ್ನು ನಿವಾರಿಸಿದ್ದಾರೆ. ಆದರೆ ಇದು ಸಮಯ ತೆಗೆದುಕೊಳ್ಳುವ ವಿಷಯ. ಸರಕಾರ ತನ್ನಷ್ಟಕ್ಕೆ ತಾನೇ ಒತ್ತಾಯ ಮಾಡಲಾರದು. ಅವರು ಕೆಲವು ಸಲ ಅದರ ಸಮೀಪ ಹೋಗುತ್ತಾರೆ. ಉದಾಹರಣೆಗೆ, ರೈಲ್ವೆಯಲ್ಲಿ ಪ್ರಯಾಣ ಮಾಡುವಾಗ, ಮತ್ತು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವಾಗ. ಆದರೆ ಅವರು ಈ ಜನರನ್ನು ತಮ್ಮ ಕಚೇರಿಗಳಲ್ಲಿ ಯಾವಾಗಲೂ ಸರಿಯಾಗಿ ನೋಡಿಕೊಳ್ಳುವರೆಂಬ ಭರವಸೆಯಿರುವುದಿಲ್ಲ. ಅನೇಕ ಸಲ ನನಗನಿಸುತ್ತದೆ, ಇವರು ತಾವು ಪಡೆಯಬಯಸಿದ ಸೇವೆಯಲ್ಲಿ ಕೆಲಸಕ್ಕೆ ಸೇರಲು ಮನಸ್ಸು ಮಾಡುವುದಿಲ್ಲ. ಏಕೆಂದರೆ, ನೆರೆಯವರು ಅವರನ್ನು ಪ್ರೀತಿಯಿಂದ ಕಾಣುವ ಸಂಭವವಿಲ್ಲ. ಗೊತ್ತುವಳಿಯನ್ನು ಮಂಡಿಸಿದ ಸದಸ್ಯರು ಮುಂಬಯಿ ಸರಕಾರದ ಹೇಳಿಕೆಯನ್ನು ಘನವಾದ ನಟನೆ ಎಂದು ವರ್ಣಿಸಿದ್ದರೂ ಅದು ನನಗನಿಸುವಂತೆ ಪರಿಸ್ಥಿತಿಯ ನಿಜವಾದ ತೊಂದರೆಗಳನ್ನು ಬಹಳ ಸರಿಯಾಗಿ ವರ್ಣಿಸುತ್ತದೆ. ಈ ಹತಭಾಗ್ಯ ಜನರಿಗೆ ಸಹಾಯ ಮಾಡಲು ಸರಕಾರ ಇಚ್ಛಿಸಿದಾಗ್ಯೂ ಭವಿಷ್ಯತ್ತಿನಲ್ಲಿ ಈ ಜಾತಿ ಮತ್ತು ಪಂಗಡಗಳ ಸ್ಥಿತಿ ಅರ್ಧ ಅವರನ್ನೇ ಮತ್ತು ಇನ್ನರ್ಧ ಹೆಚ್ಚು ಅನುಗ್ರಹಿತ ಭಾರತೀಯ ಸಮಾಜಗಳನ್ನು ಅವಲಂಬಿಸಿರುತ್ತದೆ ಎಂಬುದು ಸತ್ಯ. ಈ ಸಮಾಜಗಳು ತಮ್ಮ ಮಾನವ ಸಹವಾಸಿತನದ ಸಹಾಯ ಹಸ್ತವನ್ನು ನೀಡಿ ಅವರನ್ನು ಉದ್ಧರಿಸುವ ಅಥವಾ ತಮ್ಮ ಹೃದಯವನ್ನು ಕಠೋರಗೊಳಿಸಿ ಅವರನ್ನು ಅಧೋಗತಿಗೊಯ್ಯುವ ಶಕ್ತಿಯನ್ನು ಪಡೆದಿರುತ್ತದೆ.

ಮಾನ್ಯರೆ, ಇದು ನನಗನಿಸುತ್ತದೆ, ದಲಿತ ವರ್ಗಗಳಿಗೆ ಸಂಬಂಧಿಸಿದ ವಿಷಯಗಳ ವಸ್ತುಸ್ಥಿತಿಯನ್ನು ಪ್ರಾಮಾಣಿಕವಾಗಿ ಮತ್ತು ಸರಿಯಾಗಿ ಬಿಂಬಿಸುತ್ತದೆ....'

೧೯೨೮ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ಜಯಕರರ ಗೊತ್ತುವಳಿಯನ್ನು ಚರ್ಚಿಸಿದಾಗ ಅದೇ ಒಲವು ಪುನಃ ವ್ಯಕ್ತವಾಗಿತ್ತು. ಆಗ ಸರಕಾರದ ಪರವಾಗಿ ಮಾತನಾಡುತ್ತ ಶ್ರೀ ಬಾಜಪೈ ಹೇಳಿದರು–

> "...ವಿಶೇಷ ಮೀಸಲು ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಈ ಸಮಸ್ಯೆಯನ್ನು ನೀವು ಬಗೆಹರಿಸಲಾಗುವುದಿಲ್ಲ. ದಲಿತ ವರ್ಗಗಳ ಬಗೆಗೆ ಸಮಾಜದ ಎಲ್ಲ ಜಾತಿ ಪಂಗಡಗಳ ಸದ್ಭಾವನೆಗಳನ್ನು ಕುದುರಿಸುವುದರಿಂದ ಮತ್ತು ಹೃದಯವನ್ನು ವಿಶಾಲಗೊಳಿಸುವುದರಿಂದ ಮಾತ್ರ ನೀವು ಈ ಸಮಸ್ಯೆಯನ್ನು ಬಗೆಹರಿಸಬಲ್ಲಿರಿ."

ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದನ್ನು ಹಿಂದೂಗಳ ವಿವೇಕ ಜಾಗೃತಿಗೆ ಒಪ್ಪಿಸಿ, ಬ್ರಿಟಿಷ್ ಸರಕಾರ ಅಸ್ಪೃಶ್ಯರನ್ನು ಅಲಕ್ಷಿಸಿತು ಮತ್ತು ಅಸ್ಪೃಶ್ಯರ ದುಃಸ್ಥಿತಿಯನ್ನು ಸುಧಾರಿಸುವುದು ಸರಕಾರದ ಕೆಲಸ ಅಲ್ಲವೆಂದು ತಿಳಿಯಿತು. ತಮ್ಮ ಪ್ರಜೆಗಳಲ್ಲಿ ಅಸ್ಪೃಶ್ಯರಂಥ ಅಸಹಾಯಕ ದಲಿತರನ್ನು ನಿರ್ಲಕ್ಷಿಸುವುದನ್ನು ಹೇಗೆ ಸಮರ್ಥಿಸಿತು?

ಉತ್ತರ ಬಹಳ ಸ್ಪಷ್ಟವಿದೆ. ಅಸ್ಪೃಶ್ಯತೆಯ ಪಿಡುಗು ತಾವು ಸೃಷ್ಟಿಸಿದ್ದಲ್ಲ ಎಂಬ ಅಭಿಪ್ರಾಯ ತಾಳಿ ತಮ್ಮ ನಿಲುವನ್ನು ಸಮರ್ಥಿಸಿದರು. ಅವರು ವಾದಿಸಿದ್ದು ಹೀಗೆ: ತಾವು ಅಸ್ಪೃಶ್ಯತೆಯ ಪಿಡುಗನ್ನು ನಿವಾರಿಸಲು ಯತ್ನಿಸದಿದ್ದರೆ ತಮ್ಮನ್ನು ದೂಷಿಸಬೇಕಾಗಿಲ್ಲ. ಏಕೆಂದರೆ ಆ ಅನಿಷ್ಟ ಪದ್ಧತಿ ತಮ್ಮಿಂದ ಹುಟಿದ್ದಲ್ಲ. ಹೀಗೆಂದು ೧೮೫೬ರಲ್ಲಿ ಮುಂಬಯಿ ಸರಕಾರ ಸ್ಪಷ್ಟವಾಗಿ ಸಾರಿ ಹೇಳಿತು. ೧೮೫೬ರ ಜೂನ್ ತಿಂಗಳು ಮಹರ್ ಹುಡುಗನೊಬ್ಬನ ಪರವಾಗಿ, ಅವನು ಸಾಮಾನ್ಯವಾದ ಶಾಲಾ ಫೀ ಕೊಡಲು ಒಪ್ಪಿದರೂ ಧಾರವಾಡ ಸರಕಾರಿ ಶಾಲೆಯಲ್ಲಿ ಪ್ರವೇಶ ನಿರಾಕರಿಸಲಾಗಿದೆ ಎಂದು ಮುಂಬಯಿ ಸರಕಾರಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಅದರ ವಿಲೇವಾರಿ ಮಾಡುವಾಗ, ಈ ವಿಷಯ ಬಹಳ ಮಹತ್ವದ್ದೆಂದು ತಿಳಿದು, ೧೮೫೬ರ ಜುಲೈ ಒಂದರಂದು ಮುಂಬಯಿ ಸರಕಾರ ಒಂದು ಗೊತ್ತುವಳಿಯನ್ನು ಹೊರಡಿಸಿತು. ಅದರ ಪೂರ್ಣಪಾಠ ಕೆಳಗಿನಂತಿದೆ:

> "೧. ಪತ್ರದಲ್ಲಿ ಚರ್ಚಿಸಲಾದ ವಿಷಯ ಬಹಳ ವ್ಯಾವಹಾರಿಕವಾಗಿ ತೊಂದರೆಯದಾಗಿರುತ್ತದೆ.
>
> ೨. ಮಹಾರ ಅರ್ಜಿದಾರನ ಪಕ್ಷದಲ್ಲಿ ನ್ಯಾಯ ಇರುವುದು ನಿಸ್ಸಂಶಯ. ಧಾರವಾಡದಲ್ಲಿ ಸದ್ಯ ಲಭ್ಯವಿರುವ ಶಿಕ್ಷಣ ಪಡೆಯಲು ಅವನನ್ನು ತಡೆಯುವ ಪೂರ್ವಗ್ರಹಿಕೆಗಳನ್ನು ಕೂಡಲೇ ಹೊಡೆದುಹಾಕಲಾಗುವುದೆಂದು ಸರಕಾರ ನಂಬುತ್ತದೆ.
>
> ೩. ಆದರೆ ಒಬ್ಬನ ಸಲುವಾಗಿ ಯುಗಯುಗಗಳಿಂದ ನಂಬಿದ ಪೂರ್ವಗ್ರಹಿಕೆಗಳಲ್ಲಿ ಅವಸರದಿಂದ ಕೈಹಾಕುವುದು ಬಹುಶಃ ಶಿಕ್ಷಣದ ಧ್ಯೇಯಕ್ಕೆ ಧಕ್ಕೆ ಉಂಟು ಮಾಡಿದಂತಾಗುತ್ತದೆ. ಅರ್ಜಿದಾರನ ಅನಾನುಕೂಲತೆ ಸರಕಾರ ಸೃಷ್ಟಿಸಿದ್ದಲ್ಲ. ಅವನು ಕೇಳುವಂತೆ ಸರಕಾರ ಮಧ್ಯ ಪ್ರವೇಶಿಸಿ ಅವನ ಪರವಾಗಿ ಅದನ್ನು ಕ್ಷಿಪ್ರವಾಗಿ ಕಿತ್ತೊಗೆಯಲು ಬಾರದಂಥದಿರುತ್ತದೆ."

ಇದು ನಿಜವಾಗಿಯೂ ಸರಕಾರ ತನ್ನ ಕರ್ತವ್ಯಗಳ ಬಗೆಗೆ ತಾಳಿರುವ ಸರಳ ದೃಷ್ಟಿ. ಅದು ಜವಾಬುದಾರಿಯ ದೃಷ್ಟಿಯಲ್ಲ. ಅದು ನಿಜವಾಗಿಯೂ ಒಂದು ನಾಗರಿಕ ಸರಕಾರ ತೆಗೆದುಕೊಳ್ಳುವ ದೃಷ್ಟಿ

ಅಲ್ಲ. ಆಳಲು ಅಂಜುವ ಸರಕಾರ ಸರಕಾರವೇ ಅಲ್ಲ. ಅದೊಂದು ತೆರಿಗೆ ಸಂಗ್ರಹಿಸುವ ಮಹಾಸಂಸ್ಥೆ. ಬ್ರಿಟಿಷ್ ಸರಕಾರ ತೆರಿಗೆ ಸಂಗ್ರಹಿಸುವ ಯಂತ್ರವಾಗುವುದಕ್ಕಿಂತಲೂ ಹೆಚ್ಚಿನದನ್ನು ಉದ್ದೇಶಿಸಿತ್ತು. ಮತ್ತೇಕೆ ಅದು ಕೆಡುಕು ಅನ್ಯಾಯಗಳನ್ನು ತಡೆಯಲಿಲ್ಲ? ಕಾರಣ, ಅಧಿಕಾರ ಇಲ್ಲದಿರುವುದೋ ಅಥವಾ ಆ ಅಧಿಕಾರವನ್ನು ಬಳಸಲು ಅಂಜುತ್ತಿರುವುದೋ ಅಥವಾ ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಏನೂ ತಪ್ಪಿಲ್ಲವೆಂದು ತಿಳಿಯಿತೋ?

ಉತ್ತರ, ಅದರ ಬಳಿಗೆ ಅಧಿಕಾರವಿತ್ತು. ಸಾಕಷ್ಟು ಅಧಿಕಾರವಿತ್ತು. ಅದನ್ನು ಏಕೆ ಬಳಸಲಿಲ್ಲವೆಂದರೆ, ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಏನಾದರೂ ತಪ್ಪಿದೆಯೆಂದು ಅದಕ್ಕೆ ಕೆಲಕಾಲ ಅನಿಸಲಿಲ್ಲ. ಮತ್ತು ತಪ್ಪುಗಳಿವೆಯೆಂದು ಮನವರಿಕೆಯಾದಾಗ ಅದನ್ನು ಅಂಜಿಕೆ ಆವರಿಸಿತ್ತು.

ತನ್ನ ಆಳ್ವಿಕೆಯ ಯಾತ್ರೆಯ ಪ್ರಾರಂಭದಲ್ಲಿ 'ಕ್ರೈಸ್ತ ಧರ್ಮತತ್ವ' ಪ್ರಸಾರಕ್ಕೆ ಕೊಟ್ಟ ಅನುಮತಿಯ ಪರಿಣಾಮದ ಭೀತಿ ಮತ್ತು ಭಯಂಕರತೆ ಕುಪ್ರಸಿದ್ಧವಾಗಿತ್ತು. ಆದರೆ ಅದು ಅದೇ ಸಮಯಕ್ಕೆ ದೇಶೀಯ ಪೂರ್ವಗ್ರಹಿಕೆಗಳಿಗೆ ಗೌರವ ತೋರಿದಷ್ಟು ಕೆಟ್ಟದಾಗಿರಲಿಲ್ಲ. ಕಾಳಿಘಟ್ಟದಲ್ಲಿದ್ದ ಮಿಸ್ಟರ್ ವಾರ್ಡ್ ಎಂಬ ಧರ್ಮ ಪ್ರಚಾರಕ ೧೮೦೨ರ ತನ್ನ ದಿನಚರಿಯಲ್ಲಿ ಕೆಳಗಿನ ಸಂಗತಿಯನ್ನು ಉಲ್ಲೇಖಿಸುತ್ತಾನೆ:

> "ಕಳೆದ ವಾರ ಸರಕಾರದಿಂದ ಒಂದು ನಿಯೋಗವು ಮೆರವಣಿಗೆಯಲ್ಲಿ ಕಾಳಿಘಟ್ಟಕ್ಕೆ ಹೋಯಿತು, ಮತ್ತು ಇಂಗ್ಲಿಷರು ಈ ದೇಶದಲ್ಲಿ ಇತ್ತೀಚೆಗೆ ಪಡೆದ ಯಶಸ್ಸಿಗಾಗಿ ಕಂಪನಿಯ ಹೆಸರಿನಲ್ಲಿ ಹಿಂದೂ ದೇವತೆಗೆ ಕೃತಜ್ಞತೆ ಸಲ್ಲಿಸಿತು. ಐದು ಸಾವಿರ ರೂಪಾಯಿಯ ಕಾಣಿಕೆ ಕೊಟ್ಟಿತು. ಸಾವಿರಾರು ದೇಶೀಯರು, ಇಂಗ್ಲಿಷ್‌ರು ಈ ದೇವತೆಗೆ ಕಾಣಿಕೆ ಅರ್ಪಿಸುವುದನ್ನು ಪ್ರತ್ಯಕ್ಷ ನೋಡಿದರು. ಆ ಸಂದರ್ಭದಲ್ಲಿ ದೇಶೀಯರು ಮೆರೆದ ಅಟ್ಟಹಾಸ ನಮಗೆ ಬಹಳ ನೋವನ್ನುಂಟುಮಾಡಿದೆ."[೧]

ಅಂಥದೇ ಮತ್ತೊಂದು ಉದಾಹರಣೆಗಳನ್ನು ವಾರೆನ್ಸ್ ಹೇಸ್ಟಿಂಗ್ಸ್‌ನ ಕಾಲಕ್ಕೆ ಈಸ್ಟ್ ಇಂಡಿಯಾ ಕಂಪನಿಯ ನಾಗರಿಕ ಸೇವೆಯಲ್ಲಿದ್ದ ಮಿಸ್ಟರ್ ರಾಬರ್ಟ್ ಲಿಂಡ್ಸೆ ಕೊಡುತ್ತಾನೆ. ಸಿಲ್‌ಹೆಟ್‌ದಲ್ಲಿಯ ರಾಜಪ್ರತಿನಿಧಿಯ ಕಚೇರಿಯಲ್ಲಿ ತಾನು ಪಡೆದ ಕಾರ್ಯದೀಕ್ಷೆಯನ್ನು ವರ್ಣಿಸುತ್ತ ಹೇಳುತ್ತಾನೆ:

> "ನೂತನ ರಾಜಪ್ರತಿನಿಧಿ ಗುರು ಸಂತ ಶಾ ಜಲೊಲ್‌ನ ಗದ್ದುಗೆಗೆ ವಂದನೆ ಸಲ್ಲಿಸುವುದು ವಾಡಿಕೆ ಎಂದು ನನಗೆ ಹೇಳಲಾಯಿತು. ಭಾರತದ ಪ್ರತಿಯೊಂದು ಮೂಲೆಯಿಂದ ಇಸ್ಲಾಮಿಯರು ಈ ಗದ್ದುಗೆಗೆ ಬರುತ್ತಾರೆ. ಈ ಸಮಾಧಿಗೆ ಬರುವ ಕಟ್ಟಾ ಇಸ್ಲಾಮೀಯರು ಬಹಳ ಅಪಾಯಕಾರಿಗಳೆಂದು ನನಗೆ ಅನಂತರ ಗೊತ್ತಾಯಿತು. ಧಾರ್ಮಿಕ ನಂಬಿಕೆಗಳ ವಿರುದ್ಧ ಹೋರಾಡುವುದು ನನ್ನ ಕೆಲಸವಾಗಿರಲಿಲ್ಲ. ನನ್ನ ಮುಂಚಿನವರು ಮಾಡಿದಂತೆ ಬೂಟುಗಳನ್ನು ಹೊಸ್ತಿಲ ಬಳಿಗೆ ಬಿಟ್ಟು ನೇರವಾಗಿ ಒಳಗೆ ಹೋದೆ. ಮತ್ತು ಐದು ಬಂಗಾರದ ನಾಣ್ಯಗಳನ್ನು ಕಾಣಿಕೆಯಾಗಿ ಅರ್ಪಿಸಿದೆ. ಹೀಗೆ ಪುನೀತನಾಗಿ ನನ್ನ ವಾಸಸ್ಥಳಕ್ಕೆ ಮರಳಿ ಬಂದು ನನ್ನ ಪ್ರಜೆಗಳಿಂದ ಗೌರವ ಸ್ವೀಕರಿಸಿದೆ."

---

೧. ಹಿಸ್ಟರಿ ಆಫ್ ಸೆರಾಂಪೊರ್ ಮಿಷನ್, ಸಂ. I, ಪುಟ ೧೫೭ರಲ್ಲಿ ಬಳಸಿದ ಅವತರಣಿಕೆ.

ದೇಶೀಯ ನಂಬಿಕೆಗಳೊಂದಿಗೆ (ಪೂರ್ವಗ್ರಹಿಕೆಗಳೊಂದಿಗೆ) ಬ್ರಿಟಿಷ್ ಸರಕಾರ ಎಷ್ಟೊಂದು ಸಂಬಂಧ ಮತ್ತು ಅವುಗಳಲ್ಲಿ ಎಷ್ಟೊಂದು ಆಸಕ್ತಿ ಹೊಂದಿತ್ತೆಂಬುದು ೧೮೮೩ರಲ್ಲಿ ಬಿಶಪ್ ಕೊರೀ ಮದ್ರಾಸ ಸರಕಾರಕ್ಕೆ ಸಲ್ಲಿಸಿದ ಸ್ಮರಣ ಕಾಣಿಕೆಯಿಂದ ಕಂಡು ಬರುತ್ತದೆ. ಆ ಸ್ಮರಣ ಕಾಣಿಕೆಯಲ್ಲಿ ಉದಾಹರಿಸಿದ ಸಂದರ್ಭಗಳು ಇಂತಿವೆ:

"ಮೊದಲನೆಯದು, ಕ್ರೈಸ್ತಮತೀಯ ಸರಕಾರದ ನೌಕರರು– ನಾಗರಿಕ ಮತ್ತು ಸೈನಿಕ– ವಿಧರ್ಮೀಯರ (ಹೀದನ್) ಮತ್ತು ಮಹಮ್ಮದೀಯ ಹಬ್ಬಗಳನ್ನು, ಅವರಿಗೆ ಗೌರವ ತೋರುವ ಉದ್ದೇಶದಿಂದ, ಆಚರಿಸಬೇಕಾಗಿದೆ. ಎರಡನೆಯದು, ಕೆಲವು ಸಂದರ್ಭಗಳಲ್ಲಿ ಆ ದೇವತೆಗಳಿಗೆ ಕಾಣಿಕೆ ಅರ್ಪಿಸುವುದು ಮತ್ತು ಗೌರವ ತೋರುವುದು ಅವಶ್ಯವಿರುತ್ತದೆ. ಮೂರನೆಯದು, ಪಗೋಡಾಗಳ ಹೊಲಸು ಮತ್ತು ಅವಹೇಳನಕರ ಕೆಲಸಗಳನ್ನು ಪ್ರಧಾನ ಕ್ರೈಸ್ತ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಮಾಡತಕ್ಕದ್ದು. ಪಗೋಡಾ ಮತ್ತು ಮಸೀದಿಗಳ ಆಡಳಿತ ವ್ಯವಸ್ಥೆ ಮತ್ತು ಹಣಕಾಸಿನ ಮತ್ತು ದತ್ತಿಗಳ ನಿಯಂತ್ರಣ ಅಧಿಕಾರ, ೧೮೧೭ರ ನಿಬಂಧನೆ VIIರ ಷರತ್ತಿನ ಅಡಿಯಲ್ಲಿ, ಅವರ ಕೈಯಲ್ಲಿ ಇಡಲಾಗಿದೆ. ಯಾವುದೇ ಮಹತ್ವದ ಮೂರ್ತಿಯ ಹಬ್ಬವನ್ನು ಆಚರಿಸಲಾಗದು, ವಿವಿಧ ಮೂರ್ತಿಗಳ ಪೂಜಕರಿಗೆ, ಸೇವಕರಿಗೆ, ದೇವದಾಸಿಯರಿಗೆ ಕೂಡ ಸವಲತ್ತು ಕೊಡಲಾಗದು ಅಥವಾ ಬಿಡುಗಡೆ ಮಾಡಕೂಡದು ಅಥವಾ ಅಲ್ಪ ಹಣವನ್ನು ಕೂಡ ಕಚೇರಿಯ ಒಪ್ಪಿಗೆ ಇರದೆ ಮತ್ತು ಕ್ರೈಸ್ತ ಕಾರ್ಯ ನಿರ್ವಾಹಕರ ಆದೇಶವಿರದೆ ಖರ್ಚು ಮಾಡಲಾಗದು. ನಾಲ್ಕನೆಯದು, ಬ್ರಿಟಿಷ್ ಅಧಿಕಾರಿಗಳು, ಸರಕಾರದ ಟ್ರೂಪ್‌ಗಳ ಜೊತೆಗೆ ಗುಂಡು ಹಾರಿಸಿ ಗೌರವ ತೋರಿಸುವ ಕೆಲಸದಲ್ಲಿ ನೇಮಿಸಲ್ಪಟ್ಟಿರುತ್ತಾರೆ, ಮತ್ತು ಬೇರೆ ರೀತಿಯಲ್ಲಿ, ಸಬ್ಬತ್ ದಿನ ಕೂಡ, ಮಹಮ್ಮದೀಯ ಮತ್ತು ಮೂರ್ತಿ ಪೂಜಾ ಕಾರ್ಯಕ್ರಮಗಳಲ್ಲಿ, ಗೌರವ ಸೂಚಿಸುವ ಕೆಲಸದಲ್ಲಿ, ಕ್ರೈಸ್ತರು ಮೇಲಿಂದ ಮೇಲೆ, ಸರಕಾರದ ಆದೇಶದ ಮೇರೆಗೆ, ತಮ್ಮವೇ ಅತ್ಯಂತ ಪವಿತ್ರ ಸಂಸ್ಥೆಗಳನ್ನು ಅಪವಿತ್ರಗೊಳಿಸಲು ಮತ್ತು ಅಪವಿತ್ರ ಮತ್ತು ಅವಹೇಳನಕರ ಅಂಧಶ್ರದ್ಧೆಗಳಲ್ಲಿ ಪಾಲ್ಗೊಳ್ಳಲು, ಒತ್ತಾಯಿಸಲ್ಪಟ್ಟಿರುತ್ತಾರೆ."

ಭಾರತದಲ್ಲಿಯ ಬ್ರಿಟಿಷ್ ಸರಕಾರ ದೇವವಾಣಿಯ ಸತ್ಯಗಳು ಚೆಲ್ಲಾಪಿಲ್ಲಿಯಾಗುವುದನ್ನು ತಡೆಯುವ ತಮ್ಮ ಯತ್ನದಿಂದ ತುಷ್ಟರಾಗದೆ, ಮುಚ್ಚುಮರೆಯಿಲ್ಲದೆ ಮತ್ತು ಅಧಿಕಾರ ಯುತವಾಗಿ ಭೂತಾರಾಧನೆಯ ಅತ್ಯಂತ ಕೆಟ್ಟ ರೂಪಗಳ ಬೆಳವಣಿಗೆಗೆ ಸಹಾಯ ಮಾಡುತ್ತಿತ್ತು. ಹಿಂದೂ ಧರ್ಮದ ಅತ್ಯಂತ ಅಶ್ಲೀಲ ಮತ್ತು ಓಕರಿಕೆ ಬರಿಸುವ ಕ್ರೂರ ಕೃತ್ಯಗಳಿಗೆ ತಮ್ಮ ವಿಶೇಷ ಪೋಷಣೆ ನೀಡುತ್ತಿತ್ತು. ಕುಡಿದು ಕುಣಿದಾಡುವ ನರಕ ಸದೃಶ ದೇವತಾರಾಧನೆಯ ಅಧ್ಯಕ್ಷತೆಯನ್ನು ವಹಿಸಲು ತಮ್ಮ ಉತ್ಸವಾಧಿಕಾರಿಗಳನ್ನೇ ಕಳಿಸುತ್ತಿತ್ತು. ಪಿತೃ ಅನುಕಂಪದಿಂದ ಗುಡಿಯ ಆಸ್ತಿಯ ಮೇಲ್ವಿಚಾರಣೆ ಮಾಡುವುದು, ಪೂಜಾರಿಗಳನ್ನು ಓಲೈಸುವುದು, ನೃತ್ಯಗಾರ್ತಿಯರನ್ನು ನೋಡಿಕೊಳ್ಳುವುದು, ಹೀದನ್‌ರಿಗೆ ಇಂಥ ಗೌರವ ತೋರುವುದು, ಸಾಮಾನ್ಯವಾಗಿ ದೇಶೀಯರ ಅಂಧಶ್ರದ್ಧೆಗಳೊಂದಿಗೆ ತಮ್ಮ ಸಂಬಂಧವನ್ನು ಅತ್ಯಂತ ಹೇಯ ರೀತಿಯಲ್ಲಿ ಇಟ್ಟುಕೊಳ್ಳುವ ಲೆಕ್ಕಾಚಾರದಿಂದ ಮಾಡಿದುದಾಗಿರುತ್ತದೆ.

೧೮೪೧ರವರೆಗೂ ಸರಕಾರ ಹಿಂದೂ ಮತ್ತು ಮಹಮ್ಮದೀಯ ಧಾರ್ಮಿಕ ಸಮಾರಂಭಗಳಲ್ಲಿ ಪ್ರತ್ಯಕ್ಷ ಭಾಗವಹಿಸುವುದನ್ನು ನಿಲ್ಲಿಸಲಿಲ್ಲ, ಮತ್ತು ಅದೂ ಕೂಡ ಕ್ರೈಸ್ತ ಧರ್ಮ ಪ್ರಚಾರಕರ ದೊಡ್ಡ ಚಳುವಳಿಯ ನಂತರವೇ.

> "ಸೇಂಟ್ ಜಾರ್ಜ್ ಫೋರ್ಟ್ ಸರಕಾರದ ಸೈನಿಕ ಕಾರ್ಯದರ್ಶಿ ಸಹಿ ಮಾಡಿದ ಮತ್ತು ಪ್ರಧಾನ ದಂಡನಾಯಕರಿಗೆ ಬರೆದ ೧೮೪೧ರ ಜುಲೈ ೬ರ ಸುತ್ತೋಲೆಯಲ್ಲಿ ಇದನ್ನು ತಿಳಿಸಲಾಗಿದೆ. ಭಾರತ ಸರಕಾರದ ಮುಖಾಂತರ ಮುಟ್ಟಿಸಲ್ಪಟ್ಟ ನಿರ್ದೇಶಕರ ಮಂಡಳಿ(Court of Directors)ಯ ಆಜ್ಞೆಯಡಿಯಲ್ಲಿ ಟ್ರೂಪುಗಳು ಇಲ್ಲವೆ ಮಿಲಿಟರಿ ಬ್ಯಾಂಡುಗಳು ದೇಶೀಯರ ಹಬ್ಬಗಳಲ್ಲಿ ಇಲ್ಲವೆ ಸಮಾರಂಭಗಳಲ್ಲಿ ಹಾಜರಿರುವುದನ್ನು ಅಥವಾ ಅಂಥ ಸಂದರ್ಭಗಳಲ್ಲಿ ಗುಂಡು ಹಾರಿಸಿ ಗೌರವ ಸೂಚಿಸುವುದನ್ನು ಇನ್ನು ಮುಂದೆ ನಿಲ್ಲಿಸತಕ್ಕದ್ದು. ಇದರ ಉದ್ದೇಶ ಹಿಂದೂ ಮತ್ತು ಮಹಮ್ಮದೀಯ ಧಾರ್ಮಿಕ ಸಮಾರಂಭಗಳೊಂದಿಗೆ ಸರಕಾರ ಮತ್ತು ಅದರ ಅಧಿಕಾರಿಗಳ ಸಂಬಂಧ ಕಡಿಯುವುದಾಗಿರುತ್ತದೆ. ಏನೇ ಆಗಲಿ, ದೇಶೀಯ ರಾಜಕುಮಾರರಿಗೆ, ಅವರು ಇಂಥ ಹಬ್ಬ ಇಲ್ಲವೆ ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗುವಾಗ ಮತ್ತು ಅಲ್ಲಿಂದ ಮರಳುವಾಗ ತೋರುವ ಸಾಮಾನ್ಯ ಗೌರವವನ್ನು ತೋರಿಸತಕ್ಕದ್ದು. ಈ ಬದಲಾವಣೆಯನ್ನು ದೇಶೀಯರ ಮನಸ್ಸಿಗೆ ಗಾಬರಿಯನ್ನು ಅಥವಾ ಅವರ ಭಾವನೆಗಳಿಗೆ ನೋವನ್ನು ಉಂಟುಮಾಡದಂತೆ ಸರಿಯಾಗಿ ಯೋಚಿಸಿ ತರಬೇಕು." ಈ ಆದೇಶಗಳನ್ನು ಮುಖ್ಯದಂಡನಾಯಕರಿಂದ ವಿಭಾಗೀಯ ಜನರಲ್‌ರಿಗೆ, ಮತ್ತು ಅವರಿಂದ ಅವರ ಅಧೀನದಲ್ಲಿರುವ ಅನೇಕ ಸೈನಿಕ ತುಕಡಿ(ರೆಜಿಮೆಂಟ್)ಗಳಿಗೆ ಮುಟ್ಟಿಸಲಾಗಿತ್ತು."

ದೇಶೀಯ ಪೂರ್ವ ಗ್ರಹಿಕೆಗಳಲ್ಲಿ ಅಷ್ಟೊಂದು ಮುಳುಗಿದ್ದ ಮತ್ತು ಕಚೇರಿಯ ಸಂಪನ್ಮೂಲಗಳನ್ನು ಅವುಗಳ ಪೋಷಣೆಗೆ ಮತ್ತು ರಕ್ಷಣೆಗೆ ದುರ್ಬಳಕೆ ಮಾಡಿದ ಸರಕಾರದಿಂದ ಯಾವ ಸುಧಾರಣೆಯನ್ನು ನಿರೀಕ್ಷಿಸಬಹುದು?

ಅದು (ದೇಶೀಯ ಪೂರ್ವಗ್ರಹಿಕೆಗಳಿಗೆ ತೋರಿದ) ಅನುಕಂಪದಿಂದ ಅದಕ್ಕೆ ಪಾರ್ಶ್ವವಾಯು ತಗುಲಿದಂತಾಯಿತು. ಈ ಭಯಕ್ಕೆ ಎರಡು ಕಾರಣಗಳಿದ್ದವು.

ಮೊದಲನೆಯದು, ಅದು ಭಾರತೀಯರಿಗೆ ಕೊಟ್ಟ ಆಶ್ವಾಸನೆಗಳಿಗೆ ಸಂಬಂಧಿಸಿತ್ತು. ಅದುವರೆಗೆ ದೇಶೀಯ ಅರಸರ ಆಳ್ವಿಕೆಯಲ್ಲಿದ್ದ ಹೊಸ ಪ್ರದೇಶಗಳ ಅಧಿಕಾರ ಸೂತ್ರ ವಹಿಸಿಕೊಂಡಾಗ ಅವರ ನಿರಾತಂಕ ಧರ್ಮಾಚರಣೆಯಲ್ಲಿ ಅವರಿಗೆ ರಕ್ಷಣೆ ಕೊಡುವುದಾಗಿ ಮತ್ತು ಅವರ ಸಂಸ್ಥೆಗಳಿಗಾಗಲಿ ಅಥವಾ ಅವರ ರೂಢಿಗಳಿಗಾಗಲಿ ಧಕ್ಕೆ ತಗಲದು ಎಂದು ಘೋಷಿಸುವುದು ವಾಡಿಕೆಯಾಗಿತ್ತು. ಹಾಗೆ ೧೮೦೧ರಲ್ಲಿ ಕರ್ನಾಟಕದ ಜನರಿಗೆ ಈ ಕೆಳಗಿನಂತೆ ಪವಿತ್ರ ಘೋಷಣೆ ಮಾಡಿತು:

> "ಈಗಾಗಲೇ ಕರ್ನಾಟಕದ ಮೂಲನಿವಾಸಿಗಳ ಅನುಭವಕ್ಕೆ ಬಂದಿರುವಂತೆ ಬ್ರಿಟಿಷ್ ಸರಕಾರದ ಗುಣಲಕ್ಷಣಗಳಾಗಿರುವ ಮಧ್ಯಮ ಮಾರ್ಗಾನುಸರಣೆ, ನ್ಯಾಯ, ರಕ್ಷಣೆ ಮತ್ತು ಭದ್ರತೆಯ ಸಾಮಾನ್ಯ ತತ್ವಗಳನ್ನು ವಿವರಿಸುವುದು ಅನವಶ್ಯಕವೆಂದು ಸನ್ಮಾನ್ಯ ಗವರ್ನರ-ಇನ್-ಕೌನ್ಸಿಲ್ ನಂಬಿದರೂ, (ದೇಶೀಯರು) ಕಂಪೆನಿಗೆ ತೋರಿದ ಪವಿತ್ರ

ನಂಬುಗೆಯನ್ನು ಸ್ವೀಕರಿಸುತ್ತ, ಕಂಪನಿಯ ಅಧಿಕಾರಕ್ಕೆ ವಿಧೇಯತೆಯನ್ನು ಸಂತೋಷದಿಂದ ತೋರಬೇಕೆಂದು ಕರ್ನಾಟಕದ ಜನರನ್ನು ಕೇಳಿಕೊಳ್ಳುತ್ತಾರೆ. ಅವರು ಸಾರ್ವಜನಿಕ ಕಾಯಿದೆಗಳ ರಕ್ಷಣೆಯಡಿಯಲ್ಲಿ, ಪ್ರತಿಯೊಂದು ನ್ಯಾಯಯುತ ನಿಗದಿಪಡಿಸಿದ ನಾಗರಿಕ ಹಕ್ಕುಗಳನ್ನು, ಪೂರ್ವಜರ ಪದ್ಧತಿಗಳನ್ನು ನಿರಾತಂಕವಾಗಿ ಉಪಭೋಗ ಮಾಡುವ ಭರವಸೆ ಹೊಂದಿದ್ದಾರೆ.

೧೮೩೪ರ ಮೇ ತಿಂಗಳು ಕೊಡಗನ್ನು (ಕೂರ್ಗನ್ನು) ಜಯಿಸಿದಾಗ ಕೊಡಗರಿಗೆ ಕೆಳಗಿನ ಘೋಷಣೆಯನ್ನು ಮಾಡಲಾಯಿತು:

'ಕೊಡಗದ ಸರ್ವ ನಿವಾಸಿಗಳ ಇಚ್ಛೆಯು ಬ್ರಿಟಿಷ್ ಸರಕಾರದ ರಕ್ಷಣೆಯಲ್ಲಿರುವುದಾಗಿರುವುದರಿಂದ, ಇದುವರೆಗೆ ವೀರ ರಾಜೇಂದ್ರರಿಂದ ಆಳಲ್ಪಟ್ಟ ಪ್ರದೇಶವನ್ನು ಮಾನ್ಯ ಕಂಪನಿಗೆ ಒಪ್ಪಿಸಲು ಸನ್ಮಾನ್ಯ ಗವರ್ನರ್ ಜನರಲ್ ಸಂತೋಷದಿಂದ ನಿರ್ಣಯಿಸುತ್ತಾರೆ. ಅವರನ್ನು ಮತ್ತೊಮ್ಮೆ ದೇಶೀಯ ಆಳ್ವಿಕೆಗೊಳಪಡಿಸುವುದಿಲ್ಲವೆಂದೂ, ಅವರ ನಾಗರಿಕ ಹಕ್ಕುಗಳು ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ರಕ್ಷಿಸಲಾಗುವುದೆಂದೂ ಈ ಮೂಲಕ ಭರವಸೆ ನೀಡಲಾಗುವುದು, ಮತ್ತು ಅವರ ಭದ್ರತೆ ಸೌಖ್ಯ ಮತ್ತು ಸಂತೋಷವನ್ನು ಹೆಚ್ಚಿಸುವಲ್ಲಿ ಬ್ರಿಟಿಷ್ ಸರಕಾರಕ್ಕಿರುವ ಪ್ರಬಲ ಇಚ್ಛೆಯನ್ನು ತಪ್ಪದೇ ತೋರಿಸಲಾಗುವುದು."

೧೮೪೯ರಲ್ಲಿ ಪಂಜಾಬ ಪ್ರಾಂತ್ಯವನ್ನು ಸೇರಿಸಿಕೊಂಡಾಗ ಅಲ್ಲಿಯ ಜನರಿಗೆ ಕೆಳಗಿನ ಭರವಸೆಯನ್ನು ಕೊಡಲಾಯಿತು:

"ಬ್ರಿಟಿಷ್ ಸರಕಾರವು– ಮುಸಲ್ಮಾನರಿರಲಿ, ಹಿಂದೂಗಳಿರಲಿ, ಅಥವಾ ಸಿಖ್ಖರಿರಲಿ– ಎಲ್ಲರಿಗೂ ತಮ್ಮ ತಮ್ಮ ಧರ್ಮವನ್ನು ನಿರಾತಂಕವಾಗಿ ಆಚರಿಸಲು ಪರವಾನಗಿ ನೀಡುತ್ತದೆ. ಆದರೆ ಒಂದು ಧರ್ಮದವರು ಇನ್ನೊಂದು ಧರ್ಮ ವಿಧಿಸಿದ ಇಲ್ಲವೆ ಅನುಮತಿಸಿದ ರೂಢಿ ಮತ್ತು ಪದ್ಧತಿಗಳ ಆಚರಣೆಯಲ್ಲಿ ಕೈಹಾಕಲು ಪರವಾನಗಿ ನೀಡುವುದಿಲ್ಲ."

ಅದೇ ತರಹದ ಉಳಿದ ಇನ್ನೂ ಕೆಲವು ಘೋಷಣೆಗಳನ್ನು ಉದಾಹರಿಸಬಹುದು. ಅವು ಬಹಿರಂಗ ಪ್ರತಿಜ್ಞೆಗಳಾಗಿದ್ದವು. ಇಂಥ ಭಾಷೆಗಳು ನ್ಯಾಯಯುತವೋ, ರಾಜಕೀಯ ಪ್ರೇರಿತವೋ, ಏನೊ, ಆದರೆ ಒಮ್ಮೆ ಕೊಟ್ಟವುಗಳನ್ನು ಅಲಕ್ಷಿಸುವುದು ರಾಜಕೀಯ ಚಾತುರ್ಯವಲ್ಲ ಎಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಆದರೆ ಅವುಗಳನ್ನು ಪದಶಃ ಅರ್ಥಮಾಡುವ ಕೆಲವರಿದ್ದರು. ಅವರ ವಿಚಾರ ಅವುಗಳಿಗೆ ವಿಶಿಷ್ಟ ಅರ್ಥ ಕಲ್ಪಿಸುವುದಾಗಲಿ, ಅವುಗಳ ವಿಷಯಕ್ಕೆ ಸಂಶಯಪಡುವುದಾಗಲಿ ಇದ್ದಿರಲಿಲ್ಲ. ಅಂತೂ ಕೆಲವರು ಆ ಭಾಷೆಗೆ ಈ ಅರ್ಥ ಬರುವಂತೆ ಅದನ್ನು ವಿವರಿಸಲು ಇಚ್ಛಿಸಿದರು– 'ಭಾರತೀಯರಾದ ನೀವು ಹೊಸ ಆಳ್ವಿಕೆಯಲ್ಲಿ ಇದನ್ನು ನಿರಾತಂಕವಾಗಿ ಅನುಭವಿಸಿದ್ದೀರಿ." "ಇದರಿಂದ ದೂರ ಸರಿಯುವುದು ವಿಶ್ವಾಸಘಾತವಾಗುತ್ತದೆ" ಎಂದು ವಾದಿಸಿದರು. ವಿಶ್ವಾಸಘಾತದ ಭೀತಿ ಒಂದು ಕಾರಣ. ತೆರೆದ ದಂಗೆಯ ಭೀತಿ ಮತ್ತೊಂದು ಕಾರಣ. ಭಾರತದಲ್ಲಿರುವ ಬ್ರಿಟಿಷ್ ಸರಕಾರದ ಮಟ್ಟಿಗೆ ದಂಗೆಯ ಭೀತಿ ಅರಿಯದ ಭೀತಿ ಆಗಿರಲಿಲ್ಲ. ಅದು ಅನುಭವಕ್ಕೆ ಬಂದ ಸಂಗತಿ ಆಗಿತ್ತು. ೧೮೦೧ರಲ್ಲಿ ಒಂದು ದಂಗೆ ಆಯಿತು.

ಅದು ವೆಲ್ಲೋರ್ ದಂಗೆ. ೧೮೫೭ರಲ್ಲಿ ಮತ್ತೊಂದು ಆಯಿತು. ಅದು ಸಿಪಾಯಿ ದಂಗೆ. ವೆಲ್ಲೋರ್ ದಂಗೆ ಸಣ್ಣ ಕಿಡಿ, ಆದರೆ ಸಿಪಾಯಿ ದಂಗೆ ದಳ್ಳುರಿ ಆಗಿತ್ತು. ಎರಡೂ ಪ್ರಕರಣಗಳಲ್ಲಿ ಹಿಂದೂಗಳ ಧಾರ್ಮಿಕ ಆಚರಣೆಗಳಲ್ಲಿ ಸರಕಾರದ ಹಸ್ತಕ್ಷೇಪವೇ ಕಾರಣ. ಪಾಠ ಕಲಿಸಲು ಎರಡು ದಂಗೆಗಳು ಸಾಕು. ಬ್ರಿಟಿಷ್ ಸರಕಾರ ಈ ಎರಡು ದಂಗೆಗಳಿಂದ ಪಾಠ ಕಲಿಯದಿರಲಿಲ್ಲ. ೧೮೦೧ರ ವೆಲ್ಲೋರ್ ದಂಗೆ ಬ್ರಿಟಿಷ್ ಸರಕಾರಕ್ಕೆ ಸಾಮಾಜಿಕ ಬದಲಾವಣೆಗಳ ವಿಷಯದಲ್ಲಿ ಎಚ್ಚರಿಕೆ ನೀಡಿತು. ಸಿಪಾಯಿ ದಂಗೆ ಯಾವುದೇ ರೀತಿಯ ಸಾಮಾಜಿಕ ಸುಧಾರಣೆಯನ್ನು ವೈರ ಭಾವದಿಂದ ನೋಡುವಂತೆ ಮಾಡಿತು. ಬ್ರಿಟಿಷ್‌ರು ಯಾವುದೇ ಅಪಾಯಕ್ಕೆ ಕೈಹಾಕಬಯಸಲಿಲ್ಲ. ಮತ್ತು ಅವರ ದೃಷ್ಟಿಯಲ್ಲಿ ಆ ಅಪಾಯ ಬಹು ದೊಡ್ಡದೇ ಆಗಿತ್ತು. ದಂಗೆ ಅವರನ್ನು ಎಷ್ಟು ಭಯಭೀತರನ್ನಾಗಿಸಿತೆಂದರೆ ಸಾಮಾಜಿಕ ಸುಧಾರಣೆಯ ನಿಶ್ಚಿತ ಪರಿಣಾಮವೆಂದರೆ ಭಾರತವನ್ನು ಕಳೆದುಕೊಳ್ಳುವುದು ಎಂದು ಅವರ ಅನಿಸಿಕೆ ಆಗಿತ್ತು. ಭಾರತವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲು ಕಾತರರಾಗಿರುವುದರಿಂದ ಅವರು ಯಾವುದೇ ಸಾಮಾಜಿಕ ಸುಧಾರಣೆಯ ಕಡೆಗೆ ಗಮನ ಹರಿಸಲು ನಿರಾಕರಿಸಿದರು.

ಸಾಮಾಜಿಕ ಸುಧಾರಣೆಯ ಕಡೆಗೆ ಬ್ರಿಟಿಷ್ ಸರಕಾರ ತಾಳಿದ ಈ ನಿಲುವು ಅರ್ಥವಾಗುತ್ತದೆ. ಸರಕಾರ ಎಷ್ಟೇ ಸಾರ್ವಭೌಮತ್ವ ಹೊಂದಿದ್ದರೂ ಅದರ ಅಧಿಕಾರ ಎರಡೂ ಸೀಮಾ ರೇಖೆಗಳಿಂದ ಸುತ್ತುವರೆದಿರುತ್ತದೆ.

> "ಮೊಟ್ಟ ಮೊದಲನೆಯದು ಆಂತರಿಕ ಮಿತಿ. ಅದು ಅಧಿಕಾರದಲ್ಲಿದ್ದವರ ಸ್ವಭಾವ, ಉದ್ದೇಶ ಮತ್ತು ಆಸಕ್ತಿಗಳಿಂದ ಉದ್ಭವಿಸುತ್ತದೆ. ಸುಲ್ತಾನನು ಮಹಮ್ಮದೀಯ ಧರ್ಮವನ್ನು ತೊಡೆದುಹಾಕದಿದ್ದರೆ, ಪೋಪ್ ಕೆಥೊಲಿಕ್ ಧರ್ಮವನ್ನು ಬಹಿಷ್ಕರಿಸದಿದ್ದರೆ, ಬ್ರಾಹ್ಮಣರು ಜಾತಿಯನ್ನು ಖಂಡಿಸದಿದ್ದರೆ, ಬ್ರಿಟಿಷ್ ಪಾರ್ಲಿಮೆಂಟ್ 'ನೀಲಿಕಣ್ಣಿನ' ಶಿಶುಗಳ ಸಂರಕ್ಷಣೆ ನ್ಯಾಯಬಾಹಿರವೆಂದು ಘೋಷಿಸದಿದ್ದರೆ, ಅದರ ಅರ್ಥ, ಅವರು ಈ ಕೆಲಸಗಳನ್ನು "ಮಾಡಲಾರರು" ಎಂದಲ್ಲ, ಆದರೆ ಅವರು ಮಾಡಲು "ಇಚ್ಛಿಸುವುದಿಲ್ಲ". ಅದೇ ರೀತಿ ಭಾರತದಲ್ಲಿರುವ ಕಾರ್ಯಾಂಗವು ಪ್ರಗತಿಗೆ ಬಹಳ ಒಗ್ಗುವಂಥ ಕೆಲವು ಕಾರ್ಯಗಳನ್ನು ಮಾಡದಿದ್ದರೆ, ಅದಕ್ಕೆ ಕಾರಣ, ಅದು ಸಾರ್ವಭೌಮವಾಗಿದ್ದುದರಿಂದ, ಮತ್ತು ಅದರ ಸ್ವಭಾವ, ಉದ್ದೇಶ ಮತ್ತು ಆಸಕ್ತಿಗಳ ಕಾರಣದಿಂದ, ಭಾರತೀಯ ಸಮಾಜದಲ್ಲಿ ಜಾಗ್ರತವಿದ್ದ ಶಕ್ತಿಗಳೊಂದಿಗೆ ಹೊಂದಿಕೊಳ್ಳುವುದು ಆಗಲಿಲ್ಲ. ಅದರ ಕೊರತೆಗಳು, ಅದರ ನೋವುಗಳು, ಅದರ ಪ್ರಬಲ ಇಚ್ಛೆ ಮತ್ತು ಆಸೆಗಳು ಅದರ (ಬ್ರಿಟಿಷ್ ಸರಕಾರದ) ಮನಸ್ಸನ್ನು ಅನುಕಂಪದಿಂದ ತುಂಬಲಿಲ್ಲ. ಅದು ಭಾರತೀಯರ ಆಕಾಂಕ್ಷೆಗಳೊಂದಿಗೆ ವೈರಭಾವ ತಾಳಿತು. ಅದು ಶಿಕ್ಷಣವನ್ನು ಬೆಳೆಸಲಿಲ್ಲ. ಸ್ವದೇಶಿ ತತ್ವಕ್ಕೆ ಅವಕೃಪೆ ತೋರಿತು ಅಥವಾ ರಾಷ್ಟ್ರೀಯತೆಯ ವಾಸನೆ ಹೊತ್ತುದನ್ನೆಲ್ಲ ಕತ್ತರಿಸಿತು. ಏಕೆಂದರೆ ಇವೆಲ್ಲ ಅದರ ಸ್ವಭಾವದ ವಿರುದ್ಧ ನಡೆದವು. ಆದರೆ ಬೇಜವಾಬುದಾರಿ ಸರಕಾರ ತಾನು ಮಾಡಬಯಸಿದುದನ್ನು ಕೂಡ ಮಾಡಲು ಅಸಮರ್ಥ ಆಗುತ್ತದೆ. ಏಕೆಂದರೆ ಅಧಿಕಾರ ಹೊರಗಿನ ಪ್ರತಿರೋಧದಿಂದ ಸೀಮಿತ ವಾಗಿರುತ್ತದೆ. ಅದಕ್ಕೆ ತಾನು ಮಾಡಬಯಸುವ ಕಾರ್ಯಗಳಿವೆ. ಆದರೆ ಅವುಗಳನ್ನು ಮಾಡುವುದರಿಂದ ತನ್ನ ಅಧಿಕಾರಕ್ಕೆ ಪ್ರತಿರೋಧವನ್ನು ಪ್ರಚೋದಿಸುವ ಭೀತಿಯಿಂದ ಅದು ಅವುಗಳನ್ನು ಮಾಡುವ ಧೈರ್ಯ ತಾಳದು, ಸೀಝರ್ ರೋಮನ್‌ರು ಪೂಜೆಯನ್ನು ನಿಲ್ಲಿಸುವ ಧೈರ್ಯ ತಾಳನು, ಆಧುನಿಕ ಪಾರ್ಲಿಮೆಂಟ್, ಎಷ್ಟೇ ಮನಸ್ಸಿದ್ದರೂ, ವಸಾಹತುಗಳ

ಮೇಲೆ ಸುಂಕ ಹೇರಲಾರದು. ಅದೇ ಕಾರಣಕ್ಕಾಗಿ ಭಾರತ ಸರಕಾರ ಜಾತಿ ಪದ್ಧತಿಯನ್ನು ಹೊಡೆದುಹಾಕುವ, ಏಕಪತಿತ್ವ ಇಲ್ಲವೆ ಏಕಪತ್ನೀತ್ವ ಪದ್ಧತಿಯನ್ನು ವಿಧಿಸುವ, ವಾರಸಾದ ಕಾಯಿದೆಯನ್ನು ತಿದ್ದುವ, ಅಂತರ್ಜಾತಿಯ ವಿವಾಹವನ್ನು ಸಕ್ರಮಗೊಳಿಸುವ, ಚಹ ತೋಟದ ಒಡೆಯರಿಗೆ ತೆರಿಗೆ ವಿಧಿಸುವ ಧೈರ್ಯ ಮಾಡದು. ಪ್ರಗತಿಯಲ್ಲಿ ಸಾಮಾಜಿಕ ಜೀವನದ ಪ್ರಚಲಿತ ನೀತಿ ಸಂಹಿತೆಯ ಹಸ್ತಕ್ಷೇಪವಿರುತ್ತದೆ. ಹಸ್ತಕ್ಷೇಪ ಪ್ರತಿರೋಧ ಹುಟ್ಟಿಸುತ್ತದೆ. ಆದಾಗ್ಯೂ ಜನರಿಗಾಗಿರುವ ಸರಕಾರ, ಜನರಿಂದ ದೂರವಿರದ ಸರಕಾರ, ಪ್ರಗತಿ ಪಥದಲ್ಲಿ ಮುನ್ನಡೆಯಲು ಸಾಧ್ಯ. ಏಕೆಂದರೆ ಅದು ವಿಧೇಯತೆ ಎಲ್ಲಿಗೆ ಮುಗಿಯುತ್ತದೆ ಮತ್ತು ಪ್ರತಿರೋಧ ಎಲ್ಲಿಂದ ಪ್ರಾರಂಭವಾಗುತ್ತದೆ ಎಂಬುದನ್ನು ತಿಳಿಯುವ ಸ್ಥಿತಿಯಲ್ಲಿರುತ್ತದೆ. ಆದರೆ ಭಾರತೀಯ ಕಾರ್ಯಾಂಗ, ಜನಪರ ಕಾರ್ಯಾಂಗ ಆಗದಿದ್ದುದರಿಂದ, ಜನರ ಹೃದಯ ಮಿಡಿತವನ್ನು ಕೇಳಲು ಅದಕ್ಕೆ ಸಾಧ್ಯವಾಗದು. ಸಾರಾಂಶವಿಷ್ಟೇ, ಭಾರತದಲ್ಲಿ ಅಧಿಕಾರ ದಲ್ಲಿರುವ ಬೇಜವಾಬುದಾರಿ ಕಾರ್ಯಾಂಗ ಅದರ ಅಧಿಕಾರಕ್ಕಿರುವ ಈ ಎರಡು ಮಿತಿಗಳ ನಡುವೆ ನಿಷ್ಕ್ರಿಯವಾಗಿತ್ತು. ಜೀವನವನ್ನು ಸುಧಾರಿಸುವಂಥದ್ದೆಲ್ಲವನ್ನೂ ತಡೆ ಹಿಡಿಯಲಾಗಿತ್ತು. ಅರ್ಥ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವ ಇಚ್ಛೆ ಅದಕ್ಕಿರಲಿಲ್ಲ, ಇನ್ನರ್ಥವನ್ನು ಕೈಗೆತ್ತಿಕೊಳ್ಳಲು ಅದಕ್ಕೆ ಆಗಲಿಲ್ಲ. ಭೌತಿಕ ಮಟ್ಟದಲ್ಲಿ ಸ್ವಲ್ಪ ಪ್ರಗತಿ ಆಗಿದ್ದುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಪ್ರಪಂಚದಲ್ಲಿ ಯಾವ ಜನರೂ ಬರಿ ಶಾಂತಿ ಸುವ್ಯವಸ್ಥೆಯ ಲಾಭಗಳಿಂದ ಬಹುಕಾಲ ತುಷ್ಟರಾಗಿರಲು ಸಾಧ್ಯವಿಲ್ಲ. ಹಾಗಿರಲು ಅವರು ಮೂಕಪಶುಗಳಲ್ಲ. ಅದು ತಮ್ಮ ರಸ್ತೆಗಳನ್ನು ಸುಧಾರಿಸಿದೆ. ಹೆಚ್ಚು ವೈಜ್ಞಾನಿಕ ತತ್ವದ ಮೇಲೆ ಕಾಲುವೆಗಳನ್ನು ನಿರ್ಮಿಸಿದೆ, ರೇಲ್ವೆ ಮುಖಾಂತರ ಸಂಪರ್ಕ ಕಲ್ಪಿಸಿದೆ. ಅಗ್ಗ ದರದಲ್ಲಿ ಅಂಚೆಯ ವ್ಯವಸ್ಥೆ ಮಾಡಿದೆ, ಸಂದೇಶವನ್ನು ವಿದ್ಯುತ್ತಿನ ಮುಖಾಂತರ ಕ್ಷಣಾರ್ಧದಲ್ಲಿ ಕಳಿಸುತ್ತಿದೆ, ಅರ್ಥ ವ್ಯವಸ್ಥೆಯನ್ನು ಸುಧಾರಿಸಿದೆ, ತೂಕ ಮತ್ತು ಅಳತೆಗಳನ್ನು ವ್ಯವಸ್ಥಿತಗೊಳಿಸಿದೆ, ತಮ್ಮ ಭೂಗೋಲ, ಖಗೋಲ ಮತ್ತು ವೈದ್ಯಕೀಯ ಜ್ಞಾನದ ಬಗೆಗಿನ ಕಲ್ಪನೆಗಳನ್ನು ಸರಿಪಡಿಸಿದೆ, ಮತ್ತು ತಮ್ಮ ಆಂತರಿಕ ಜಗಳಗಳನ್ನು ನಿಲ್ಲಿಸಿದೆ ಎನ್ನುವ ಕಾರಣಕ್ಕಾಗಿ ಜನರು ಅಧಿಕಾರಶಾಹಿಯನ್ನು ನಿರಂತರ ಬೆಂಬಲಿಸುತ್ತಾರೆಂದು ಭಾವಿಸುವುದು ಮೂರ್ಖತನವಾಗುತ್ತದೆ. ಯಾವುದೇ ಜನರು ಎಷ್ಟೇ ಸಮಾಧಾನವಿದ್ದರೂ, ಇಂದಿಲ್ಲ ನಾಳೆ, ಕೇವಲ ಸಾಮರ್ಥ್ಯ (ಕಾರ್ಯ ನಿಪುಣತೆಯ) ಯಂತ್ರವಾಗಿರುವ ಸರಕಾರಕ್ಕಿಂತ ಹೆಚ್ಚಿನದಾಗಿರುವ ಸರಕಾರವನ್ನು ಬೇಡುತ್ತಾರೆ."

ಜನರು ರಾಜಕೀಯ, ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯ ಬಯಸಿದ್ದರು. ಆದರೆ ಬ್ರಿಟಿಷ್ ಸರಕಾರ ಅದನ್ನು ನಿರ್ಮಿಸಲು ನಿರಾಕರಿಸಿತು–

"ತತ್‌ಪರಿಣಾಮವಾಗಿ, ಜನರ ನೈತಿಕ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧ ಪಟ್ಟಂತೆ, ಮೊಗಲರ ಸರಕಾರದಿಂದ ಬ್ರಿಟಿಷ್ ಸರಕಾರಕ್ಕೆ ಆದ ಬದಲಾವಣೆ ವ್ಯವಸ್ಥೆಯ ಬದಲಾವಣೆಗಿಂತ ಕೇವಲ ಅರಸರ ಬದಲಾವಣೆಯಾಗಿತ್ತು. ಅರ್ಥ ಆದ್ಯತೆಯ ಮೇರೆಗೆ ಅರ್ಥ ಅವಶ್ಯಕತೆಯ ಮೇರೆಗೆ ಬ್ರಿಟಿಷರು 'ನಿರ್‌ಹಸ್ತಕ್ಷೇಪ' ತತ್ವವನ್ನು ಅಳವಡಿಸಿಕೊಂಡಿದ್ದಕ್ಕಾಗಿ, ಭಾರತೀಯ ನಿವಾಸಿಗಳು ಈ ಮೊದಲು ಮರೆತುಹೋದ ಇತಿಹಾಸದುದ್ದಕ್ಕೂ, ಶ್ರಮಿಸಿದ್ದರೋ,

> ದಣಿದಿದ್ದರೋ, ಪೂಜಿಸದಿದ್ದರೋ, ಬದುಕಿದ್ದರೋ, ಸತ್ತಿದ್ದರೋ ಅವುಗಳಿಂದ ಯಾವ ಮಹತ್ವದ ಅಂಶಗಳಲ್ಲಿಯೂ ಭಿನ್ನವಾದ ಸರಕಾರದ ಕೆಳಗೆ ತಮ್ಮನ್ನು ಕಂಡುಕೊಂಡರು. ರಾಜಕೀಯ ದೃಷ್ಟಿಯಿಂದ, ಬದಲಾವಣೆ, ಒಂದು ನಿರಂಕುಶ ಪ್ರಭುತ್ವದಿಂದ ಮತ್ತೊಂದು ನಿರಂಕುಶ ಪ್ರಭುತ್ವಕ್ಕೆ ಆದ ಬದಲಾವಣೆ ಆಗಿರುತ್ತದೆ. ಅದು ತನಗೆ ಸಿಕ್ಕ ವ್ಯವಸ್ಥೆಗಳನ್ನೆಲ್ಲ ಇದ್ದಕ್ಕಿದ್ದಂತೆ ಸ್ವೀಕರಿಸಿತು.[೧] ಮತ್ತು ಚೀನಿಯ ಸಿಂಪಿಗನ ಹಾಗೆ ಅದನ್ನು ಪ್ರಾಮಾಣಿಕವಾಗಿ ಉಳಿಸಿಕೊಂಡಿತು. ಚೀನಿಯ ಸಿಂಪಿಗನು ಹಳೆಯ ಅಂಗಿಯನ್ನು ಮಾದರಿಗಾಗಿ ಕೊಟ್ಟಾಗ, ತದ್ರೂಪ ಅದರಂತೆ, ತೂತು, ತೇಪೆ ಎಲ್ಲವನ್ನೊಳಗೊಂಡ ಹೊಸ ಅಂಗಿಯನ್ನು ಹೆಮ್ಮೆಯಿಂದ ಹೊಲಿದುಕೊಟ್ಟನು."[೨]

ಹಸ್ತಕ್ಷೇಪ ಮಾಡದ ಕಾರ್ಯನೀತಿ ಸೂಕ್ತವೆನಿಸಿದರೂ, ಅಸ್ಪೃಶ್ಯರ ಮಟ್ಟಿಗೆ ಮಾತ್ರ ಅದರ ಕಲ್ಪನೆ ತಪ್ಪಾಗಿತ್ತು ಮತ್ತು ಪರಿಣಾಮ ವಿಧ್ವಂಸಕವಾಗಿತ್ತು. ಅಸ್ಪೃಶ್ಯನ ಉದ್ಧಾರ, ಹಿಂದೂಗಳಲ್ಲಿ ಅವನ ಹಕ್ಕುಗಳನ್ನು ಗುರುತಿಸಿದಾಗ ಮತ್ತು ಅವನೊಬ್ಬ ಮಾನವನೆಂದು ಸರಿಯಾಗಿ ತಿಳಿದಾಗ, ಹಿಂದೂಗಳಿಂದಲೇ ಸಾಧ್ಯ.

ಆದರೆ ಅದರಿಂದ ಆ ವಿಷಯದ ಪೂರ್ಣ ವಿಲೇವಾರಿ ಆದಂತಾಗುವುದಿಲ್ಲ. ಅವನನ್ನು ಮಾನವನೆಂದು ಗುರುತಿಸಿ ಅವನ ಹಕ್ಕುಗಳನ್ನು ದೊರಕಿಸುವ ಪ್ರಶ್ನೆ ಹಾಗೇ ಉಳಿದಿದೆ. ಈ ಉದ್ದೇಶ ಈಡೇರಲು ಸಹಾಯ ಮಾಡುವಂಥ ಕೇವಲ ಎರಡು ಮಾರ್ಗಗಳಿರುತ್ತವೆ. ಒಂದು, ಅವನಿಗೆ ಶಿಕ್ಷಣ ಕೊಟ್ಟು, ಅವನನ್ನು ಅಧಿಕಾರದಲ್ಲಿ ಕೂಡಿಸುವುದು. ಮತ್ತೊಂದು ಅಸ್ಪೃಶ್ಯತೆಯ ಆಧಾರದ ಮೇಲೆ ವ್ಯಕ್ತಿಯನ್ನು ಗುರುತಿಸುವುದು ಶಿಕ್ಷಾರ್ಹ ಅಪರಾಧವೆಂದು ವಿಧಿಸಿ ಸಾಮಾಜಿಕ ಸುಧಾರಣೆಯನ್ನು ತರುವುದು. ಬ್ರಿಟಿಷ್ ಸರಕಾರ ಇದಾವುದನ್ನು ಮಾಡಲು ಸಿದ್ಧವಿರಲಿಲ್ಲ. ಸಾರ್ವಜನಿಕ ಸೇವೆಗಳಲ್ಲಿ ಅಸ್ಪೃಶ್ಯರಿಗೆ ಆದ್ಯತೆ ಕೊಡಬಯಸಲಿಲ್ಲ. ಹಿಂದೂ ಸಮಾಜವನ್ನು ಸುಧಾರಿಸಲೂ ಬಯಸಲಿಲ್ಲ. ಅದರ ಪರಿಣಾಮವೆಂದರೆ ಅಸ್ಪೃಶ್ಯನು ಬ್ರಿಟಿಷ್ ಸರಕಾರ ಬರುವುದಕ್ಕಿಂತ ಪೂರ್ವದಲ್ಲಿ ಹೇಗಿದ್ದನೋ ಹಾಗೆ ಅಸ್ಪೃಶ್ಯನಾಗಿಯೇ ಉಳಿದಿದ್ದಾನೆ. ಅವನೊಬ್ಬ ನಾಗರಿಕನಾಗಿದ್ದ. ಆದರೆ ಅವನಿಗೆ ನಾಗರಿಕ ಹಕ್ಕುಗಳನ್ನು ಕೊಡಲಿಲ್ಲ. ಅವನು ಕೊಟ್ಟ ಕರದಿಂದ ಶಾಲೆಗಳನ್ನು ನಡೆಸಲಾಯಿತು. ಆದರೆ ಅವನ ಮಕ್ಕಳಿಗೆ ಆ ಶಾಲೆಗಳಲ್ಲಿ ಪ್ರವೇಶ ಇಲ್ಲದಾಯಿತು. ಅವನು ಕೊಟ್ಟ ಕರದಿಂದ ಬಾವಿಗಳನ್ನು ತೋಡಲಾಯಿತು. ಆದರೆ ಆ ಬಾವಿಗಳಿಂದ ನೀರು ತೆಗೆದುಕೊಳ್ಳುವ ಹಕ್ಕು ಅವನಿಗೆ ಇಲ್ಲದಾಯಿತು. ಅವನು ಕೊಟ್ಟ ಕರದಿಂದ ರಸ್ತೆಗಳ ನಿರ್ಮಾಣವಾಯಿತು. ಆದರೆ ಅವುಗಳನ್ನು ಉಪಯೋಗಿಸುವ ಹಕ್ಕು ಅವನಿಗಿದ್ದಿರಲಿಲ್ಲ. ರಾಜ್ಯದ ಆಡಳಿತ ವ್ಯವಸ್ಥೆಗಾಗಿಯೂ ಅವನು ಕರ ಸಂದಾಯ ಮಾಡಿದನು. ಆದರೆ ರಾಜ್ಯದಲ್ಲಿಯ ಕಚೇರಿಗಳಲ್ಲಿ ಅಧಿಕಾರಿ ಆಗುವ ಹಕ್ಕು ಅವನಿಗಿದ್ದಿರಲಿಲ್ಲ. ಅವನೊಬ್ಬ ಪ್ರಜೆಯಾಗಿದ್ದ, ಆದರೆ ನಾಗರಿಕನಲ್ಲ. ಅಸ್ಪೃಶ್ಯನಿಗೆ ಅತ್ಯವಶ್ಯ ಬೇಕಾಗಿದ್ದದು ಶಿಕ್ಷಣ ಮತ್ತು ನೀರು. ಅವನಿಗೆ ತನ್ನನ್ನು ರಕ್ಷಿಸಿಕೊಳ್ಳಲು ಕಚೇರಿಯಲ್ಲಿ ಅವಕಾಶ ಬೇಕಿತ್ತು. ಬಡತನದ ಕಾರಣಕ್ಕಾಗಿ ಅವನನ್ನು ಕರಮುಕ್ತ ಮಾಡಬೇಕಿತ್ತು. ಅದೆಲ್ಲ

---

೧. ಬರ್ಮಾದಲ್ಲಿ ತಲೆಗಂದಾಯ ಹಿಂದಿನಿಂದ ರೂಢಿಯಲ್ಲಿದ್ದದ್ದು ವಿಜಯದ ದಿನ ಕಂಡುಬಂದದ್ದರಿಂದ ಮುಂದುವರಿಸಲ್ಪಟ್ಟಿತು.

೧. ಬರ್ನಾರ್ಡ್ ಹೊಟನ್, ಬ್ಯೂರೋಕ್ರಾಟಿಕ್ ಗವರ್ನಮೆಂಟ್.

ಹಿಂದುಮುಂದಾಯಿತು. ಸ್ಪೃಶ್ಯರಿಗೆ ಶಿಕ್ಷಣ ಕೊಡುವುದಕ್ಕಾಗಿ ಅಸ್ಪೃಶ್ಯರ ಮೇಲೆ ಕರ ಹೇರಲಾಯಿತು. ಸ್ಪೃಶ್ಯರಿಗೆ ನೀರು ಪೂರೈಸುವುದಕ್ಕಾಗಿ ಅಸ್ಪೃಶ್ಯರ ಮೇಲೆ ಕರ ಹೇರಲಾಯಿತು. ಕಚೇರಿಗಳ ಕಾರ್ಯ ನಿರ್ವಹಿಸುವ ಸ್ಪೃಶ್ಯರಿಗೆ ಸಂಬಳ ಕೊಡುವುದಕ್ಕಾಗಿ ಅಸ್ಪೃಶ್ಯರ ಮೇಲೆ ಕರ ಹೇರಲಾಯಿತು.

ಬ್ರಿಟಿಷ್‌ರು ಭಾರತದ ಮೇಲೆ ಜಯ ಸಾಧಿಸುವುದರಿಂದ ಅಸ್ಪೃಶ್ಯರಿಗೆ ಆದ ಒಳಿತಾದರೂ ಏನು? ಶಿಕ್ಷಣದಲ್ಲಿ ಶೂನ್ಯ, ಸೇವೆಯಲ್ಲಿ ಶೂನ್ಯ, ಸ್ಥಾನಮಾನ ದೊರಕಿಸುವಲ್ಲಿ ಶೂನ್ಯ. ಒಂದು ವಿಷಯದಲ್ಲಿ ಅಸ್ಪೃಶ್ಯರಿಗೆ ಲಾಭವಾಗಿರುವುದು. ಅದು ಕಾಯಿದೆಯ ದೃಷ್ಟಿಯಲ್ಲಿಯ ಸಮಾನತೆ. ಆದರೆ ಅದರಲ್ಲಿ ವಿಶೇಷವೇನೂ ಇಲ್ಲ. ಏಕೆಂದರೆ, ಕಾಯಿದೆಯ ದೃಷ್ಟಿಯಲ್ಲಿ ಸಮಾನತೆ ಎಲ್ಲರಿಗೂ ಸಾಮಾನ್ಯವಿರುತ್ತದೆ. ಆದಾಗ್ಯೂ ಅದು ಅಸ್ಪೃಶ್ಯನಿಗೆ ಎಟಕುವಂಥದ್ದಲ್ಲ. ಏಕೆಂದರೆ ಅಧಿಕಾರಿಗಳು ತಮ್ಮ ಅಧಿಕಾರದ ದುರುಪಯೋಗ ಮಾಡಿ ಅಸ್ಪೃಶ್ಯರಿಗೆ ಕಾಯಿದೆಯ ಸಮಾನತೆಯ ಲಾಭವನ್ನು ನಿರಾಕರಿಸುತ್ತಾರೆ. ಇಷ್ಟೆಲ್ಲ ಇದ್ದಾಗ್ಯೂ, ಕಾಯಿದೆಯ ಎದುರು ಎಲ್ಲರೂ ಸಮಾನರೆನ್ನುವ ತತ್ವದಿಂದ ವಿಶೇಷ ಲಾಭವಿರುತ್ತದೆ. ಏಕೆಂದರೆ, ಬ್ರಿಟಿಷರು ಬರುವುದಿಕ್ಕಿಂತ ಮೊದಲು ಅವರೆಂದೂ ಇದನ್ನು ಪಡೆದಿರಲಿಲ್ಲ. ಮನುವಿನ ಕಾಯಿದೆ ಸಮಾನತೆಯ ತತ್ವವನ್ನು ಗುರುತಿಸಲಿಲ್ಲ, ಅಸಮಾನತೆಯೇ ಮನುಶಾಸ್ತ್ರದ ಆತ್ಮ ಆಗಿತ್ತು. ಅದು ಜೀವನದ ಎಲ್ಲ ರಂಗಗಳನ್ನು, ಸಾಮಾಜಿಕ ಸಂಬಂಧಗಳನ್ನು, ರಾಜ್ಯದ ಎಲ್ಲ ಇಲಾಖೆಗಳನ್ನು ತುಂಬಿತ್ತು. ಅದು ಹವೆಯನ್ನು ದೂಷಿತಗೊಳಿಸಿತ್ತು. ಅದರಿಂದ ಅಸ್ಪೃಶ್ಯರು ಉಸಿರುಗಟ್ಟಿದ್ದರು. ಕಾಯಿದೆ ಎದುರು ಸಮಾನತೆ ತತ್ವ ಸೋಂಕು ಹವೆಯನ್ನು ಶುದ್ಧಗೊಳಿಸಿರುತ್ತದೆ. ಮತ್ತು ಅಸ್ಪೃಶ್ಯರು ಸ್ವಾತಂತ್ರ್ಯದ ಹವೆಯನ್ನು ಉಸಿರಾಡಲು ಅನುವು ಮಾಡಿಕೊಡಲಾಗಿರುತ್ತದೆ. ಇದು ಅಸ್ಪೃಶ್ಯರಿಗಾದ ನಿಜವಾದ ಲಾಭ. ಗತ ಸ್ಥಿತಿಗೆ ಹೋಲಿಸಿದರೆ ಇದು ಸಣ್ಣ ಲಾಭ ಅಲ್ಲ.

# ವಿಭಾಗ – ಮೂರು

*ಅಧ್ಯಾಯ ೧ : ಬ್ರಿಟಿಷ್ ಸಂವಿಧಾನ ಕುರಿತು ಉಪನ್ಯಾಸಗಳು.*

*ಅಧ್ಯಾಯ ೨ : ಸಾರ್ವಭೌಮ ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿ ಭಾರತೀಯ ಸಂಸ್ಥಾನಗಳ ಬೇಡಿಕೆ.*

ದಿನಾಂಕ ೮ ಜನವರಿ ೧೯೩೬ರ, ಸರಕಾರದ ಕಾನೂನು ಮಹಾವಿದ್ಯಾಲಯದ ಮ್ಯಾಗಜಿನ್‌ನಲ್ಲಿ 'ಕಾಲೇಜ್ ಟಿಪ್ಪಣಿ' ಎಂದು ಹೀಗೆ ಹೇಳಲಾಗಿದೆ:

> "ಶ್ರೀ ಫಯಜಿ ಅವರು ತಮ್ಮ ಪ್ರಾಂಶುಪಾಲ ಹುದ್ದೆಯನ್ನು ಒಬ್ಬ ವ್ಯಕ್ತಿ ಡಾ. ಅಂಬೇಡ್ಕರರಿಗೆ ವಹಿಸಿದ್ದು ಸಂತಸದ ಸಂಗತಿಯಾಗಿದೆ. ಅವರು ಹೆಸರಾಂತ ನ್ಯಾಯವಾದಿಗಳೂ, ಉತ್ತಮ ಅರ್ಥಶಾಸ್ತ್ರಜ್ಞರೂ ಸಂವಿಧಾನ ಕಾನೂನಿನ ತಜ್ಞರೂ ಹಾಗೂ ಶ್ರೇಷ್ಠ ವ್ಯಕ್ತಿಯಾಗಿ ಕೇವಲ ಭಾರತದಲ್ಲಿ ಮಾತ್ರ ಅಲ್ಲ, ಬೇರೆಡೆಗಳಲ್ಲಿಯೂ ಹೆಸರುವಾಸಿಯಾಗಿದ್ದಾರೆ. ಅವರ ಬಗೆಗೆ ಈಗಲೇ ಏನು ಬರೆದರೂ ಅದು ಉದ್ಧಟತನವಾದೀತು. ಅವರು ನಮ್ಮ ಪ್ರಾಂಶುಪಾಲರಾಗಿರುವುದರಿಂದ ಅವರಿಂದ ಹೆಚ್ಚು ನಿರೀಕ್ಷಿಸುತ್ತೇವೆ. ಆದುದರಿಂದ ಅವರಿಗೆ ಮುಜುಗರ ಉಂಟುಮಾಡದೇ ನಾವು ತಾಳ್ಮೆಯಿಂದ ನಿರೀಕ್ಷಿಸುತ್ತೇವೆ."

## ಅಧ್ಯಾಯ–೧

# ಬ್ರಿಟಿಷ್ ಸಂವಿಧಾನ ಕುರಿತ ಉಪನ್ಯಾಸಗಳು

**ಪೀಠಿಕೆ**

I. ಬ್ರಿಟಿಷ್ ಸಂವಿಧಾನದ ಮೂಲತತ್ವಗಳು

II. ಸಂಸತ್ತು ಎಂದರೇನು?

III. ಅರಸೊತ್ತಿಗೆ (ರಾಜ್ಯಾಧಿಕಾರ)

IV. ಹಿರಿಯರ ಸಭೆ

V. ಹಿರಿಯರ ಮತ್ತು ಸಾಮಾನ್ಯರ ಸಭೆಗಳ ಅಧಿಕಾರ ಹಾಗೂ ಹಕ್ಕು ಬಾಧ್ಯತೆಗಳು

# ಪೀಠಿಕೆ

ಬ್ರಿಟಿಷ್ ಸಂವಿಧಾನದ ಕುರಿತಂತೆ ನಾನು ಈ ಉಪನ್ಯಾಸಗಳನ್ನು ಬೊಂಬಾಯಿ ಸರಕಾರದ ಕಾನೂನು ವಿದ್ಯಾರ್ಥಿಗಳಿಗೆ ೧೯೩೪–೩೫ರಲ್ಲಿ ಮಾಡಿದ್ದೆ. ಈ ಉಪನ್ಯಾಸವನ್ನು ಪ್ರಕಟಿಸುವಲ್ಲಿ ಓರ್ವ ಭಾರತೀಯನು, ಬ್ರಿಟಿಷ್ ಸಂವಿಧಾನ ಕುರಿತಂತೆ ಹೇಳುವುದು ಉದ್ಧಟತನದ ಕ್ರಮವಾಗಬಹುದೆಂಬುದನ್ನು ಮರೆಯದೆ ಈ ಸಾಹಸಕ್ಕೆ ಕೈ ಹಾಕಿರುವೆ. ಭಾರತೀಯ ಸಂವಿಧಾನ ಸುಧಾರಣೆಯ ಆಯೋಗದ ಮುಂದೆ ಬಂದಿದ್ದ ಸಾಕ್ಷಿಗಳನ್ನು ಪರಿಶೀಲಿಸುವಾಗ ಆಸ್ಟಿನ್ ಚೆಂಬರ್ಲೀನ್ ಅವರ ಹೇಳಿಕೆ ಗಮನಾರ್ಹ.

ಈ ಸಾಕ್ಷಿಗಳು ಭಾರತೀಯ ಪರಿಸ್ಥಿತಿಯನ್ನು ವಿವರಿಸಿದ್ದನ್ನು ನಾನು ತುಂಬಾ ಗೌರವದಿಂದ ಆಲಿಸುತ್ತೇನೆ. ಆದರೆ ಅವರು ಇಂಗ್ಲೆಂಡಿನ ಸಂವಿಧಾನದ ಬಗೆಗೆ ಪ್ರಸ್ತಾಪಿಸಿದಾಗ ಮಾತ್ರ ನನ್ನದೇ ಆದ ಅಭಿಪ್ರಾಯಗಳನ್ನು ಹೊಂದಿರಲು ಅವಕಾಶವಿರಬೇಕೆಂದೇ ಹೇಳುವೆ. (ಸಾಕ್ಷಿ ನಡಾವಳಿಕೆ ಸಂ. 11c 9812). ಈ ಒಂದು ಹೇಳಿಕೆಯು ಸತ್ಯವಾದುದರಿಂದ ಯಾವ ಭಾರತೀಯನೇ ಆಗಲೀ ಬ್ರಿಟಿಷ್ ಸಂವಿಧಾನದ ಬಗೆಗೆ ಪ್ರಸ್ತಾವಿಸುವಾಗ ತುಂಬಾ ಎಚ್ಚರ ವಹಿಸಬೇಕು. ಈ ಬಗೆಗೆ ಬರೆಯಬಹುದಾದ ಭಾರತೀಯ ಲೇಖಕರು ಅರಿಯಲೇಬೇಕಾದ ಸಂಗತಿ ಎಂದರೆ, ಬ್ರಿಟಿಷ್ ಸಂವಿಧಾನದ ಬಗೆಗೆ ಪರಕೀಯರು ಪ್ರಸ್ತಾಪಿಸಿರಬಹುದಾದ ವಿಷಯಗಳನ್ನು ಆಂಗ್ಲೇಯರು ತುಂಬಾ ಗೌರವದಿಂದ ಕೇಳುತ್ತಾರೆ. ಆದರೆ ಅವರ ಬರಹದಿಂದ ಅಭಿಪ್ರಾಯಗಳು ಬದಲಾಯಿಸಿವೆ. ಆದುದರಿಂದ ನನ್ನ ಈ ಬರಹವನ್ನು ಕುರಿತಂತೆ ಆಸ್ಟಿನ್ ಚೆಂಬರ್ಲೀನ್ ಅವರ ಹೇಳಿಕೆಯು ಆತಂಕವನ್ನು ಒಡ್ಡಲಾರದು. ಏಕೆಂದರೆ ನಾನು ನನ್ನದೇ ಆದ ಯಾವ ವಿಷಯವನ್ನೂ ಈ ದಿಶೆಯಲ್ಲಿ ಪ್ರಸ್ತಾಪಿಸಿಲ್ಲ. ಮುಂದುವರಿದು ನಾನು ಇದನ್ನು ಆಂಗ್ಲೇಯರಿಗೆಂದು ಪ್ರಸ್ತಾಪ ಮಾಡುತ್ತಿಲ್ಲ. ನಾನು ಭಾರತೀಯ ವಿದ್ಯಾರ್ಥಿಗಳಿಗೆ ಡೈಸಿ ಅವರು ಬರೆದಿರುವ ಬ್ರಿಟಿಷ್ ಸಂವಿಧಾನವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಪ್ರಸ್ತಾಪಿಸಿರುವೆ. ಏಕೆಂದರೆ, ಭಾರತೀಯ ವಿದ್ಯಾರ್ಥಿಗಳ ದೃಷ್ಟಿಕೋನದಿಂದ ಡೈಸಿಯವರ ಬರಹವು ಎರಡು ಕುಂದುಗಳಿಂದ ಕೂಡಿದೆ. ಬ್ರಿಟಿಷ್ ಸಂವಿಧಾನದ ಹಲವಾರು ಸಂಗತಿಗಳನ್ನು ಮುಂಚೆಯೇ ಅರಿತಿರುವವರಿಗೆ ಡೈಸಿ ಅವರ ಬರಹಗಳು ಅರ್ಥವಾಗಲು ಸಾಧ್ಯ. ಉದಾಹರಣೆಗೆ ಸಂಸತ್ತು ಎಂದರೇನು? ಅದು ಹೇಗೆ ಉದಯಗೊಂಡು ಜಾರಿಯಲ್ಲಿ ಬಂದಿತು ಹಾಗೂ ಅದರ ಕಾರ್ಯಗಳೇನು ಮುಂತಾದ ವಿಷಯಗಳು. ಈ ದಿಶೆಯಲ್ಲಿ ಆಂಗ್ಲ ವಿದ್ಯಾರ್ಥಿಗಳಿಗೆ ಇರಬಹುದಾದ ತಿಳುವಳಿಕೆ, ಮೊದಲನೆಯ ಬಾರಿಗೆ ಡೈಸಿಯವರ ಬರಹವನ್ನು ಅಧ್ಯಯನ ಮಾಡುವ ಭಾರತೀಯ ವಿದ್ಯಾರ್ಥಿಗಳಿಗೆ ಇರಲಾರದು. ಆದುದರಿಂದ ಭಾರತೀಯ ವಿದ್ಯಾರ್ಥಿಗಳು ಕಾನೂನಿನ ಆಡಳಿತದ ಸಮಗ್ರ ಸಂಗತಿಯನ್ನು ಅರಿಯದೇ ಈ ಒಂದು ಮೂಲ ಸೂತ್ರದ ಬಗೆಗೆ ದಂಗುಬಡಿದು ಏನೂ ಅರಿಯದೇ ಹೋಗಬಹುದು. ಆದುದರಿಂದ ಭಾರತೀಯ ವಿದ್ಯಾರ್ಥಿಗಳು ಈ ಸೂಕ್ಷ್ಮವಾದ ವಿಷಯವನ್ನು ಅರಿಯಲೆಂದೇ ಒಬ್ಬ ಅಧ್ಯಾಪಕನು ಡೈಸಿ ಅವರ ಮಹತ್ವಪೂರ್ಣ ಬರಹಗಳನ್ನು ವಿವರಿಸಬೇಕಾದುದು ಅನಿವಾರ್ಯ. ಎರಡನೆಯದಾಗಿ, ಬ್ರಿಟಿಷ್ ಸಂವಿಧಾನವು ಅಪಾರವಾಗಿ ಹಾಗೂ ಅಗಾಧವಾಗಿ, ಕಾನೂನು ಆಡಳಿತೆ ಮತ್ತು ಸಂವಿಧಾನದ ಸಂಪ್ರದಾಯಗಳ ಬಗೆಗೆ, ಡೈಸಿ ಅವರು ಬರೆದ ನಂತರದಲ್ಲಿ ಬೆಳೆದುಬಂದಿರುವುದನ್ನು ನಾವು ಗಮನಿಸಬೇಕು. ಈ ಅಪಾರ ಬೆಳವಣಿಗೆಗಳು ಎರಡು ವಿಧವಾಗಿವೆ. ಏಕೆಂದರೆ ಡೈಸಿ ಅವರು ನೀಡಿರುವ ಕೆಲವು ಉದಾಹರಣೆಗಳು ಈ ದೃಷ್ಟಿಯಿಂದ

ಅಸಮಂಜಸವೆಂದೇ ತೋರುತ್ತಿವೆ. ಎರಡನೆಯ ಹಾಗೂ ಪ್ರಮುಖವಾದ ವಿಷಯ ಎಂದರೆ ಇಂಗ್ಲಿಷ್ ಸಂವಿಧಾನದ ಸಂಬಂಧಗಳು. ಬ್ರಿಟಿಷರ ಮುಕುಟ ಅಥವಾ ಕಿರೀಟ ಮತ್ತು ಸಂಸತ್ತು ವಸಾಹತುಗಳ ಬಗೆಗೆ ಹೊಂದಿರುವ ಧೋರಣೆಗಳಿಂದ ಪ್ರಭಾವಕ್ಕೆ ಈಡಾಗಿರುವ ಸಂಗತಿ ಡೈಸಿ ಅವರ ಬರಹಗಳಲ್ಲಿ ಸ್ಪಷ್ಟವಾಗಿರದೆ ಕೇವಲ ಅವರ ಗ್ರಂಥದ ಅಧ್ಯಯನವು ಭಾರತೀಯ ವಿದ್ಯಾರ್ಥಿಗಳಿಗೆ ಬೇಕಾದ ಅರಿವನ್ನು ಮೂಡಿಸಲು ಅಸಮರ್ಥವಾಗಲೂಬಹುದು. ವಿಷಯಗಳ ಸೇರಿಸುವಿಕೆ ಮತ್ತು ಆಕೃತಿಯ ಬದಲಾವಣೆಗಳನ್ನು ಹೊರತುಪಡಿಸಿದರೆ ಈ ಉಪನ್ಯಾಸಗಳಲ್ಲಿ ಹೊಸತೇನೂ ಇಲ್ಲ. ಅವು ಆಂಗ್ಲ ಸಂವಿಧಾನದ ಕುರಿತ ಡೈಸಿಯವರ ಗ್ರಂಥದ ಪುನರ್ವಿಮರ್ಶೆಯ ಮೂಲಕ ಅದರ ಕೊರತೆಗಳನ್ನು ನಿವಾರಿಸುವುದು ಹಾಗೂ ಅದನ್ನು ಇಂಡಿಯಾದ ವಿದ್ಯಾರ್ಥಿಗಳ ಅಗತ್ಯಕ್ಕೆ ಹೊಂದಿಸುವುದು ನನ್ನ ಉದ್ದೇಶ.

# I
# ಬ್ರಿಟಿಷ್ ಸಂವಿಧಾನದ ಮೂಲತತ್ವಗಳು

ಡೈಸಿ ಅವರು ಹೇಳುವಂತೆ ಬ್ರಿಟಿಷ್ ಸಂವಿಧಾನವು ಪ್ರಮುಖವಾಗಿ ಮೂರು ಸೂತ್ರಗಳನ್ನು ಹೊಂದಿದ್ದು, ಅದು ವಿಶ್ವದ ಇತರ ಸಂವಿಧಾನಗಳಿಂದ ವಿಭಿನ್ನವಾಗಿದೆ. ಆ ಸೂತ್ರಗಳೆಂದರೆ:

೧. ಸಂಸತ್ತಿನ ಶಾಸನೀಯ ಕಾರ್ಯದ ಪರಮಾಧಿಕಾರ.

೨. ಕಾನೂನು ಆಡಳಿತದ ಪ್ರಭುತ್ವ.

೩. ಸಂಪ್ರದಾಯದ ಮೇಲೆ ಸಂವಿಧಾನದ ಅವಲಂಬನೆ.

ಈ ತತ್ವಗಳು ಆಂಗ್ಲ ಸಂವಿಧಾನದ ವಿಶಿಷ್ಟ ಲಕ್ಷಣಗಳೆಂಬ ದೃಢನುಡಿಯ ಕುರಿತು ಎರಡು ಟೀಕೆಗಳನ್ನು ನ್ಯಾಯಸಮ್ಮತವಾಗಿಯೇ ಮಾಡಬಹುದು. ಇವು ಬೇರೆ ಸಂವಿಧಾನಗಳಲ್ಲಿ ದೊರೆಯುವುದಿಲ್ಲ. ಒಂದು ವಿಷಯ ಮಾತ್ರ ಖಚಿತ. ಅದೇನೆಂದರೆ ಕೆಲವು ಲಕ್ಷಣಗಳು ಈಗ ಜಾರಿಯಲ್ಲಿ ಇರದೇ ಹೋದರೂ, ಡೈಸಿ ಅವರು ಗ್ರಂಥರಚನೆ ಮಾಡಿದಾಗ ಅವು ಜಾರಿಯಲ್ಲಿದ್ದವು. ಉದಾಹರಣೆಗೆ ಹೇಳಬಹುದೆಂದರೆ ೧೯೩೦ರಲ್ಲಿ ಜಾರಿಯಲ್ಲಿ ಬಂದ ವೆಸ್ಟ್ ಮಿನಿಸ್ಟರ್ ಶಾಸನದಿಂದ ಪಾರ್ಲಿಮೆಂಟಿನ ಅಥವಾ ಸಂಸತ್ತಿನ ಸಾರ್ವಭೌಮತೆಗೆ ಚ್ಯುತಿ ಬಂದಂತಾಗಿದೆ. ಎರಡನೆಯ ಟೀಕೆ ಎಂದರೆ, ಕಾನೂನಿನ ಆಡಳಿತ ಹಾಗೂ ಸಂಪ್ರದಾಯಗಳು ಕೇವಲ ಬ್ರಿಟಿಷ್ ಸಂವಿಧಾನಕ್ಕೆ ಮಾತ್ರ ಸೀಮಿತವಾಗಿರದೆ, ಬೇರೆ ದೇಶಗಳ ಸಂವಿಧಾನಗಳಲ್ಲಿಯೂ ನಾವು ಈ ಲಕ್ಷಣಗಳನ್ನು ಕಾಣುತ್ತೇವೆ. ಸಂಪ್ರದಾಯಗಳು ಎಲ್ಲಾ ಸಂವಿಧಾನಗಳಲ್ಲಿವೆ. ಕಾನೂನು ಆಡಳಿತವು ತನ್ನದೇ ಆದ ಕ್ರಮದಲ್ಲಿ ಅಮೆರಿಕೆಯಲ್ಲಿ ಜಾರಿಯಲ್ಲಿದೆ. ಆದರೆ ಇಂಗ್ಲಿಷ್ ಸಂವಿಧಾನವು ತನ್ನದೇ ಆದ ಸೂತ್ರಗಳನ್ನು ಹೊಂದಿದ್ದು ಈ ವೈವಿಧ್ಯವನ್ನು ನಾವು ಬೇರೆ ಸಂವಿಧಾನಗಳಲ್ಲಿ ಕಾಣಲಾರೆವು. ಈ ಒಂದು ಹಿನ್ನೆಲೆಯಲ್ಲಿ ಬ್ರಿಟಿಷ್ ಸಂವಿಧಾನದ ಸೂತ್ರಗಳ ಪಾತ್ರ ಇತರ ಸಂವಿಧಾನಗಳಿಗಿಂತ ಭಿನ್ನವಾಗಿವೆ ಎಂಬುದರಲ್ಲಿ ಸಂದೇಹವೂ ಇಲ್ಲ.

# (I) ಪಾರ್ಲಿಮೆಂಟಿನ ಶಾಸನೀಯ ಅಧಿಕಾರದ ಪ್ರಭುತ್ವ

ಆಂಗ್ಲ ಸಂವಿಧಾನದ ಮೊದಲ ಮತ್ತು ಮುಖ್ಯ ವಿದೇಶಿ ಟೀಕಾಕಾರನಾದ ಹಾಂಡೆಸ್ಕ್ಯೂ ತನ್ನ ಅಧ್ಯಯನದ ಪರಿಣಾಮವಾಗಿ ಬಂದ ತೀರ್ಮಾನವೆಂದರೆ ತನ್ನ ಕಾಲದ ಫ್ರಾನ್ಸಿನ ಸಂವಿಧಾನದಲ್ಲಿಲ್ಲದ ಲಕ್ಷಣಗಳು ಆಂಗ್ಲ ಸಂವಿಧಾನದಲ್ಲಿತ್ತು. ಅವರಿಗೆ ಹೊಳೆದಂತೆ ಇಂಗ್ಲಿಷ್ ಸಂವಿಧಾನದಲ್ಲಿನ ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳು ಬೇರೆಬೇರೆಯಾಗಿಯೇ ಕಾರ್ಯಾಚರಣೆ ಮಾಡುತ್ತಿರುವಂತೆ ತಿಳಿಸಿದ್ದಾನೆ. ಮುಂದುವರಿದು ಅವರ ಹೇಳಿಕೆಯಂತೆ ಪ್ರತಿಯೊಂದು ಅಂಗವೂ ತನ್ನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದು, ಬೇರೆ ಅಂಗದ ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವಂತಿರಲಿಲ್ಲ. ಮಾಂಟಿಸೆಕ್ಯೂ ಅವರು ಬ್ರಿಟಿಷ್ ಸಂವಿಧಾನದ ಬಗೆಗೆ ಬರೆದಾಗ, ಬ್ರಿಟಿಷ್ ಪ್ರಜೆಗಳು ತಮ್ಮದೇ ಆದ ಸ್ವಾತಂತ್ರ್ಯವನ್ನು ಉಪಭೋಗಿಸುತ್ತಿದ್ದರು. ಅಲ್ಲದೆ ಅವರ ಕಲ್ಪನೆಯಲ್ಲದ ಲಕ್ಷಣವಾದ "ಅಧಿಕಾರ ವಿಭಜನೆ"ಯ ಸಿದ್ಧಾಂತವನ್ನು ಈ ವಿದೇಶೀ ಟೀಕಾಕಾರ ಮೊದಲು ಬ್ರಿಟಿಷ್ ಸಂವಿಧಾನದ ಆಚರಣೆಯಲ್ಲಿ ಕಂಡದ್ದು ಅಚ್ಚರಿಯ ವಿಷಯವೇ ಆಗಿದೆ. ಈ ಒಂದು ಸಿದ್ಧಾಂತದಿಂದ ಪ್ರಭಾವಗೊಂಡ ಅವನು ಫ್ರೆಂಚ್ ದೇಶದ ಸಂವಿಧಾನದಲ್ಲಿ, ಬ್ರಿಟಿಷ್ ಸಂವಿಧಾನದ ಮಾದರಿಯಲ್ಲಿಯ "ಅಧಿಕಾರ ವಿಭಜನೆ" ಸಿದ್ಧಾಂತವನ್ನು ಅಳವಡಿಸಬೇಕೆಂದು ಆಗ್ರಹಪಡಿಸಿದನು. ಈ ಒಂದು ಸಿದ್ಧಾಂತವು ಮುಂಬರುವ ಸಂವಿಧಾನಗಳ ತಳಪಾಯವಾಗಿರಬೇಕೆಂದೇ ಮಾಂಟೆಸ್‌ಕ್ಯೂ ಅವರ ಹಿರಿಯಾಶೆ. ಸೋಜಿಗದ ಸಂಗತಿ ಎಂದರೆ, ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ ಮಾಂಟೆಸ್‌ಕ್ಯೂ ಅವರು ತಪ್ಪಾಗಿ ಕಲ್ಪಿಸಿಕೊಂಡಿದ್ದ ಭಾವನೆಗಳು. ಅನೇಕ ದೇಶಗಳ ಸಂವಿಧಾನಗಳನ್ನು ತಪ್ಪು ದಾರಿಗೆ ಎಳೆಯುವಂತಾಯಿತು. ಏಕೆಂದರೆ ಅವರು ಭಾವಿಸಿದಂತೆ, ಬ್ರಿಟಿಷ್ ಸಂವಿಧಾನದಲ್ಲಿ 'ಅಧಿಕಾರ ವಿಭಜನೆ' ಸಿದ್ಧಾಂತವೇ ಇರಲಿಲ್ಲ. ಖಚಿತವಾಗಿ ಹೇಳಬೇಕಾದರೆ, ಇಂಗ್ಲೆಂಡಿನ ಸಂವಿಧಾನವು ಈ ಸಿದ್ಧಾಂತವನ್ನೇ ಮನ್ನಿಸುವುದಿಲ್ಲ. ಏಕೆಂದರೆ ಆ ದೇಶದ ಅರಸನೇ ಅಲ್ಲಿಯ ಶಾಸಕಾಂಗದ, ನ್ಯಾಯಾಂಗದ ಹಾಗೂ ದೇಶದ ಸಕಲ ಆಡಳಿತದ ಅಧಿಕಾರಿಯಾಗಿದ್ದಾನೆ. ಆಡಳಿತ ಅಧಿಕಾರವನ್ನು ನಡೆಸುವ ಮಂತ್ರಿವರ್ಗದವರು, ಪಾರ್ಲಿಮೆಂಟಿನ ಸದಸ್ಯರಾಗಿದ್ದಾರೆ. ಆದುದರಿಂದ ಆಡಳಿತಾಂಗ ಹಾಗೂ ಶಾಸಕಾಂಗಗಳ ಮಧ್ಯೆ ಅಧಿಕಾರ ವಿಭಜನೆಯ ಪ್ರಶ್ನೆಯೇ ಉದ್ಭವಿಸದು. ಲಾರ್ಡ್ ಛಾನ್ಸೆಲ್ಲರು ನ್ಯಾಯಾಂಗದ ಪ್ರಮುಖ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವರು. ಆದರೆ ಅವರು ಸಂಪುಟದ ಸದಸ್ಯರಾಗಿರುತ್ತಾರೆ. ಹೀಗಾಗಿ ನ್ಯಾಯಾಂಗ ಹಾಗೂ ಆಡಳಿತಾಂಗಗಳಲ್ಲಿ ಅಧಿಕಾರ ವಿಭಜನೆಯ ಪ್ರಶ್ನೆಯೇ ಇಲ್ಲ. ರಾಜ್ಯದ ಮೂರೂ ಪ್ರಮುಖ ಅಂಗಗಳಲ್ಲಿ ಅಧಿಕಾರ ವಿಭಜನೆ ಎಂಬುದೇ ಇಲ್ಲ. ಮುಂದುವರಿದು ಅಮೆರಿಕೆಯ ಲಿಖಿತ ಸಂವಿಧಾನದಂತೆ, ಇಂಗ್ಲೆಂಡಿನಲ್ಲಿ ಲಿಖಿತ ಸಂವಿಧಾನವೇ ಇರದಾಗ 'ಅಧಿಕಾರ ವಿಭಜನೆ'ಯ ಪ್ರಸ್ತಾಪವೇ ಬರಲಾರದು. ಬ್ರಿಟಿಷ್ ಸಂವಿಧಾನದಡಿಯಲ್ಲಿ ವಿಶೇಷ ಅಧಿಕಾರವೆಂದೇನಾದರೂ ಇದ್ದರೆ ಅದು ಪಾರ್ಲಿಮೆಂಟಿಗೇ ಸೇರಿದೆ. ಆಡಳಿತಾಂಗ ಹಾಗೂ ನ್ಯಾಯಾಂಗದ ಕಾರ್ಯಗಳೇನಾದರೂ ಸೀಮಿತವಾಗಿವೆ ಎಂದಲ್ಲಿ ಪಾರ್ಲಿಮೆಂಟಿನ ಕಾರ್ಯಸೀಮಿತವಾಗಿದೆ ಎಂದಲ್ಲ. ಏಕೆಂದರೆ ಸಂದರ್ಭಕ್ಕೆ ಅನುಸಾರವಾಗಿ ಪಾರ್ಲಿಮೆಂಟೇ ಕೆಲವು ಅಂಗಗಳಿಗೆ ಹಲವಾರು ಕಾರ್ಯಗಳನ್ನು ಮಾಡುವಂತೆ ಸೂಚಿಸಿದೆ ಎಂದರ್ಥ. ಕಾರ್ಯಾಂಗ ಹಾಗೂ ನ್ಯಾಯಾಂಗದ ಇತಿಮಿತಿಗಳು ಶಾಸಕಾಂಗ, ಅಂದರೆ ಪಾರ್ಲಿಮೆಂಟಿಗೆ ಅನ್ವಯಿಸುವುದಿಲ್ಲ.

ಏಕೆಂದರೆ ಪಾರ್ಲಿಮೆಂಟಿನ ಅಧಿಕಾರವನ್ನು ಕುಗ್ಗಿಸುವ ಹಾಗೂ ಹಿಗ್ಗಿಸುವ ಅಧಿಕಾರ ಕೇವಲ ಪಾರ್ಲಿಮೆಂಟಿಗೇ ಸೇರಿದೆ.

## ಪಾರ್ಲಿಮೆಂಟಿನ ಶಾಸನ ಪರಮಾಧಿಕಾರದ ಅರ್ಥ

ಪಾರ್ಲಿಮೆಂಟಿನ ಶಾಸನಾಧಿಕಾರದ ಸಂಪೂರ್ಣ ವಿಚಾರವನ್ನು ಅರಿಯಬೇಕಾದಲ್ಲಿ ಎರಡು ಸಂಗತಿಗಳನ್ನು ನಾವು ತಿಳಿಯಲೇಬೇಕು. ಮೊದಲನೆಯದೆಂದರೆ, ಬ್ರಿಟಿಷ್ ಸಂವಿಧಾನದಡಿಯಲ್ಲಿ ಪಾರ್ಲಿಮೆಂಟ್ ಯಾವ ಕಾನೂನನ್ನಾದರೂ ಮಾಡಬಹುದು ಹಾಗೂ ಮಾಡಿದ್ದನ್ನು ತೆಗೆದುಹಾಕಲೂ ಬಹುದು. ಅಂದರೆ ರಾಜ್ಯದ ಸರ್ವೋನ್ನತ ಅಧಿಕಾರ ಪಾರ್ಲಿಮೆಂಟಿನಲ್ಲಿ ಅಡಗಿದೆ. ಎರಡನೆಯದಾಗಿ, ಯಾವ ಕಾನೂನುಬದ್ಧ ವ್ಯಕ್ತಿಯೇ ಆಗಲೀ ಅಥವಾ ವ್ಯಕ್ತಿಗಳಿಂದ ಕೂಡಿದ ಸಂಸ್ಥೆಯೇ ಆಗಲೀ ಪಾರ್ಲಿಮೆಂಟಿನ ಕಾನೂನುಗಳನ್ನು ತಳ್ಳಿಹಾಕುವಂತಿಲ್ಲ. ಪಾರ್ಲಿಮೆಂಟು ರಚಿಸಿದ ಶಾಸನಗಳು ಕಾನೂನುಬದ್ಧವಾಗಿದ್ದು ಅದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈಗಾಗಲೇ ತಿಳಿಸಿದಂತೆ ಪಾರ್ಲಿಮೆಂಟ್ ಎಂದರೆ ಅರಸ, ಲಾರ್ಡ್ಸ್ ಸಭೆ ಹಾಗೂ ಕಾಮನ್ಸ್ ಸಭೆಗಳಿಂದ ಕೂಡಿದ ಸಂಸ್ಥೆ. ಆದುದರಿಂದ ಈ ಮೂರೂ ಬೇರೆ ಬೇರೆಯಾಗಿ ಪಾರ್ಲಿಮೆಂಟಿನ ಕಾಯ್ದೆಗಳನ್ನು ರಚಿಸಲು ಆಸ್ಪದವೇ ಇಲ್ಲ. ಮುಂದುವರಿದು ಶಾಸನ ಎಂಬ ಪದವನ್ನು ಸಂಪೂರ್ಣ ಕಾನೂನಿನ ಅರ್ಥದಲ್ಲಿಯೇ ಗ್ರಹಿಸಬೇಕು. ಅಂದರೆ ನ್ಯಾಯಾಂಗದಿಂದ ಜಾರಿಗೊಳಿಸುವ ನಿಯಮಗಳು ಎಂದೇ ಅರಿಯಬೇಕು. ಪಾರ್ಲಿಮೆಂಟಿನ ಶಾಸನೀಯ ಸರ್ವಾಧಿಕಾರವನ್ನು ವಿವರಿಸಿದ ಮೇಲೆ ಇದಕ್ಕೆ ಸಾಕ್ಷಿ ಏನು ಎಂಬುದನ್ನು ಕೇಳಬಹುದು.

ಪಾರ್ಲಿಮೆಂಟಿನ ಶಾಸನೀಯ ಪರಮಾಧಿಕಾರವನ್ನು, ಬ್ರಿಟಿಷ್ ಸಂವಿಧಾನದಡಿಯಲ್ಲಿಯ ಎಲ್ಲ ನ್ಯಾಯವಾದಿಗಳೂ ಅಂಗೀಕರಿಸಿದ್ದಾರೆ. ಸರ್ ಎಡ್‌ವರ್ಡ್ ಕೋಕ್ ಅವರು ಪಾರ್ಲಿಮೆಂಟಿನ ಅಧಿಕಾರ ಹಾಗೂ ಇತಿಮಿತಿಗಳ ಬಗೆಗೆ ಮಾತನಾಡಿ, ಅದರ ಅಧಿಕಾರ ಯಾವುದೇ ಕಾರಣಗಳಿಂದಾಗಲೀ ಅಥವಾ ವ್ಯಕ್ತಿಗಳಿಂದಾಗಲಿ ಅನಿರ್ಬಂಧ ಹಾಗೂ ಅಬಾಧಿತವಾಗಿದೆ ಎಂದು ಹೇಳಿರುವರು. ಅಂದರೆ ಅದರ ಅಧಿಕಾರವು ವ್ಯಕ್ತಿ ಹಾಗೂ ಕಾರಣಗಳ ಮೇರೆಗೆ ಮೀರಿದ್ದು.

## ಪುಟ ೩೬*

ಖ್ಯಾತ ಟೀಕೆಗಳನ್ನು ಬರೆದಿರುವ ಬ್ಲಾಕ್‌ಸ್ಟೋನ್ ಹೇಳಿರುವಂತೆ, "ಪಾರ್ಲಿಮೆಂಟ್ ಸಾರ್ವಭೌಮ ಮತ್ತು ಅನಿಯಂತ್ರಿತ ಅಧಿಕಾರವನ್ನು, ಕಾನೂನುಗಳ ರಚನೆ, ವಿಸ್ತರಿಸುವ, ಮೊಟಕುಗೊಳಿಸುವ, ದೃಢೀಕರಿಸುವ, ತೆಗೆದುಹಾಕುವ, ಭಂಗಗೊಳಿಸುವ, ಮರಳಿ ಜಾರಿ ಮಾಡುವ ವಿವಿಧ ಅಧಿಕಾರಗಳನ್ನು ರಾಜ್ಯದ ಧಾರ್ಮಿಕ, ನಾಗರಿಕ ಹಾಗೂ ಮಿಲಿಟರಿ ಮತ್ತು ದಂಡನೀತಿ ಶಾಸನಗಳ ಬಗೆಗೆ ಹೊಂದಿದೆ. ಸಂವಿಧಾನ ತಿಳಿಸುವಂತೆ, ಸರ್ಕಾರದ ಸರ್ವಾಧಿಕಾರಗಳನ್ನು ಹೊಂದಿರುವ ಅಂಗವೆಂದರೆ ಪಾರ್ಲಿಮೆಂಟೇ ಎಂದು ಹೇಳಬಹುದು. ಕಾನೂನಿನ ಅಡಿಯಲ್ಲಿ ಬರಬಹುದಾದ ತಂಟೆ ತಗಾದೆಗಳು, ಅದರ ಪರಿಹಾರ, ಕಾರ್ಯಾಚರಣೆ ಮತ್ತು ನಿವಾರಣೋಪಾಯಗಳಿಗೆಲ್ಲಾ ಈ ಸಂಸ್ಥೆಯೇ ವಿಶೇಷ ನ್ಯಾಯಮಂಡಳಿಯಾಗಿದೆ. ಪಾರ್ಲಿಮೆಂಟ್ ರಾಜನು ಪಟ್ಟಕ್ಕೆ ಏರುವ ನಿರ್ಣಯಗಳನ್ನೂ ಮಾಡುವ ಅಧಿಕಾರ ಹೊಂದಿದೆ. ಉದಾ: ಎಂಟನೆಯ ಹೆನ್ರಿ ಮತ್ತು

---

* ಮೂಲದಲ್ಲಿದ್ದಂತೆ ಪುನರ್ ಮುದ್ರಿಸಿದೆ. ಪುಟ ೩೬ ಲಭ್ಯವಾಗಲಿಲ್ಲ. –ಸಂ.

ಮೂರನೆಯ ವಿಲಿಯಮ್‌ರ ಕಾಲ. ಅದು ದೇಶದ ಧರ್ಮವನ್ನೂ ಬದಲಾಯಿಸುವ ಅಧಿಕಾರ ಹೊಂದಿರುವುದನ್ನು ನಾವು ಎಂಟನೆಯ ಹೆನ್ರಿ ಆಳ್ವಿಕೆಯಲ್ಲಿ ಕಂಡಿದ್ದೇವೆ. ಆದುದರಿಂದಲೇ ಈ ಬಗ್ಗೆ ಹೇಳಲಾದ "ಪಾರ್ಲಿಮೆಂಟ್ ಮಾಡಬಹುದಾದ ಕಾರ್ಯವನ್ನು ಭೂಮಿಯ ಮೇಲಿರುವ ಮತ್ತೊಬ್ಬರು ಮಾಡಲಾರರು." ಅಂದರೆ ಬ್ರಿಟನ್‌ನಲ್ಲಿ ಪಾರ್ಲಿಮೆಂಟಿನಂತಹ ಬಲವಾದ ಸಂಸ್ಥೆ ಬೇರೆ ಯಾವುದೂ ಇಲ್ಲ. ಡಿಲೋಮೆ ಎಂಬ ಫ್ರೆಂಚ್ ನ್ಯಾಯವಾದಿಯು ಕೋಕ್ ಮತ್ತು ಬ್ಲಾಕ್‌ಸ್ಟೋನ್ ಅವರ ಹೇಳಿಕೆಯನ್ನು ಅನುಮೋದಿಸುತ್ತಾ ಈ ವಿಧವಾಗಿ ಹೇಳುತ್ತಾನೆ: "ಪಾರ್ಲಿಮೆಂಟ್ ಒಬ್ಬ ಸ್ತ್ರೀಯನ್ನು ಪುರುಷನನ್ನಾಗಿ ಮತ್ತು ಪುರುಷನನ್ನು ಸ್ತ್ರೀಯನ್ನಾಗಿ ಮಾಡುವುದರ ಹೊರತಾಗಿ ಇನ್ನೆಲ್ಲವನ್ನು ಮಾಡಲು ಶಕ್ತವಾಗಿದೆ."

**ಪಾರ್ಲಿಮೆಂಟಿನ ಶಾಸನೀಯ ಸಾರ್ವಭೌಮತೆಯನ್ನು ಬ್ರಿಟಿಷ್ ಪಾರ್ಲಿಮೆಂಟಿನ ಚರಿತ್ರೆಯನ್ನು ಈ ಕೆಳಗಿನಂತೆ ಉದಾಹರಿಸಬಹುದು:**

೧) ಪಾರ್ಲಿಮೆಂಟಿನ ಸಾರ್ವಭೌಮತೆ ಹಾಗೂ ಒಕ್ಕೂಟದ ಕಾಯ್ದೆಗಳು:

ಸ್ಕಾಟ್‌ಲ್ಯಾಂಡ್ ಹಾಗೂ ಐರ್‌ಲ್ಯಾಂಡ್‌ಗಳಿಂದ ಕೂಡಿದ ಒಕ್ಕೂಟದ ಕಾಯ್ದೆಗಳು ಒಪ್ಪಂದ ಸ್ವರೂಪದಲ್ಲಿದ್ದು ಹಲವಾರು ಕಲಂಗಳಿಂದ ಕೂಡಿದ್ದಾಗಿದೆ. ಅವರನ್ನು ಬ್ರಿಟಿಷ್ ಪಾರ್ಲಿಮೆಂಟಿಗೆ ರದ್ದುಗೊಳಿಸುವ ಹಕ್ಕು ಇಲ್ಲ. ಅವು ಮೂಲಭೂತವಾದದ್ದು ಎಂದೇ ಭಾವಿಸಲಾಗಿತ್ತು. ಸ್ಕಾಟ್‌ಲ್ಯಾಂಡಿನೊಡನೆ ಮಾಡಿಕೊಂಡ ಒಕ್ಕೂಟದ ಒಪ್ಪಂದದಂತೆ ಸ್ಕಾಟಲ್ಯಾಂಡ್ ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ಪ್ರಾಧ್ಯಾಪಕ ತನ್ನ ವೃತ್ತಿಯಲ್ಲಿ ನಂಬಿಕೆ ಹೊಂದಿರುವುದಾಗಿ ಒಪ್ಪಿಗೆಯನ್ನು ತಿಳಿಸಬೇಕೆಂದು ಹೇಳಲಾಗಿತ್ತು. ಈ ಒಪ್ಪಂದ ಮೂಲಭೂತವಾದದ್ದು ಎಂದೇ ಭಾವಿಸಲಾಗಿತ್ತು. ಆದರೆ ಈ ಒಂದು ನಿಯಮವನ್ನು ೧೮೫೩ರ ಸ್ಕಾಟ್‌ಲ್ಯಾಂಡ್ ಕಾಯ್ದೆ ಅಡಿಯಲ್ಲಿ ಕೈಬಿಡಲಾದುದರಿಂದ ಸ್ಕಾಟ್‌ಲ್ಯಾಂಡ್ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರುಗಳು ಈಗ ಆ ವಿಧವಾದ ಒಪ್ಪಿಗೆಯನ್ನು ನೀಡಬೇಕಾಗಿಲ್ಲ. ಮುಂದುವರಿದು ಐರ್‌ಲ್ಯಾಂಡಿನೊಡನೆ ಮಾಡಿಕೊಂಡ ಒಪ್ಪಂದದಂತೆ, "ಕಾನೂನಿನಿಂದ ಸ್ಥಾಪಿಸಲಾದ ಇಂಗ್ಲೆಂಡ್ ಹಾಗೂ ಐರ್‌ಲ್ಯಾಂಡಿನ ಖರ್ಚುಗಳು ಒಂದೇ ಪ್ರೊಟೆಸ್ಟೆಂಟ್ ಬಿಷಪ್‌ನ ಅಧಿಕಾರಕ್ಕೆ ಒಳಪಟ್ಟಿದ್ದ ಒಂದೇ ಚರ್ಚಿನಂತೆ ಇರಬೇಕು. ಆ ಚರ್ಚನ್ನು ಇಂಗ್ಲೆಂಡ್ ಹಾಗೂ ಐರ್‌ಲ್ಯಾಂಡ್ ಚರ್ಚ್ ಎಂಬ ಒಂದೇ ಹೆಸರಿನಿಂದ ಕರೆಯಬೇಕು. ಸಿದ್ಧಾಂತ, ಆರಾಧನೆ, ಶಿಸ್ತುಗಳ ಬಗೆಗೆ ಇಂತಹ ಒಕ್ಕಟ್ಟು ಹೊಂದಿದ ಚರ್ಚಿನ ಸರಕಾರವೇ ಅಂತಿಮ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿದೆ. ಇದು ಒಕ್ಕೂಟ ಕಾಯ್ದೆಯ ಮೂಲಭೂತ ಅಂಶವಾಗಿದೆ." ಈ ಒಂದು ಒಕ್ಕಣಿಕೆಯಿಂದ ವೇದ್ಯವಾಗುವ ವಿಷಯವೆಂದರೆ, ಈ ಚರ್ಚಿನ ಬಗೆಗೆ ಕಾನೂನು ಮಾಡುವ ಅಧಿಕಾರ ಪಾರ್ಲಿಮೆಂಟಿಗೆ ಇಲ್ಲ. ಆದರೆ ೧೮೬೯ರ ಐರಿಷ್ ಚರ್ಚ್‌ಗಳ ಕಾಯ್ದೆಯಂತೆ ಐರ್‌ಲ್ಯಾಂಡಿನ ಚರ್ಚನ್ನು ಪಾರ್ಲಿಮೆಂಟ್ ಅನೂರ್ಜಿತಗೊಳಿಸಿದ ಕ್ರಮವನ್ನು ಯಾರು ವಿರೋಧಿಸಲಿಲ್ಲ.

## II

ಪಾರ್ಲಿಮೆಂಟಿನ ಶಾಸನೀಯ ಸಾರ್ವಭೌಮ ಸರ್ವಾಧಿಕಾರವನ್ನು ತೋರಿಸಬಹುದಾದ ಮತ್ತೊಂದು ಉದಾಹರಣೆ ಎಂದರೆ ೧೭೦೭ರ ಸಪ್ತ ಸಂವತ್ಸರದ ಕಾಯ್ದೆ. ೧೬೯೪ರ ಕಾಯ್ದೆಯಂತೆ ಪಾರ್ಲಿಮೆಂಟಿನ ಅವಧಿ ಕೇವಲ ಮೂರು ವರ್ಷದ್ದಾಗಿತ್ತು. ೧೭೧೬ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕಾಗಿತ್ತು. ಆದರೆ ಆಳರಸ ಹಾಗೂ ಮಂತ್ರಿಮಂಡಲದ ಅಭಿಪ್ರಾಯದಂತೆ ರಾಜಕೀಯ ವಾತಾವರಣ ಚುನಾವಣೆಗೆ

ಅನುಕೂಲಕರವಾಗಿಲ್ಲ. ಅಲ್ಲದೆ, ಚುನಾವಣೆ ನಡೆಸಿದಲ್ಲಿ ಅದು ರಾಜ್ಯಕ್ಕೆ ಮತ್ತು ಮಂತ್ರಿಮಂಡಳಕ್ಕೆ ಮಾರಕವಾಗುವ ಸಂಭವ ಇದೆ. ಆದುದರಿಂದ ಅಂದಿನ ಮಂತ್ರಿಮಂಡಳವು ಪಾರ್ಲಿಮೆಂಟಿನ ಅವಧಿಯನ್ನು ವಿಸ್ತರಿಸುವಂತೆ ಆಗ್ರಹಪಡಿಸಿತು. ಅಂತೆಯೇ ಅವಧಿಯನ್ನು ೩ರಿಂದ ೭ ವರ್ಷಕ್ಕೆ ವಿಸ್ತರಿಸಲಾಯಿತು. ಆಗ ಸಾಮಾನ್ಯ ಸಭೆ ವಚನಭ್ರಷ್ಟ ಹಾಗೂ ವಂಚನೆಯ ಆರೋಪಕ್ಕೆ ಗುರಿಯಾಗಬೇಕಾಯಿತು. ಟೀಕಾಕಾರರು ಮುಂದುವರಿದು ಪಾರ್ಲಿಮೆಂಟಿನ ಸದಸ್ಯರು ತಮ್ಮನ್ನು ಚುನಾಯಿಸಿದ ಮತದಾರರಿಗೆ ಮೋಸ ಮಾಡಿದ್ದಾರೆ ಎಂದೂ ಗುರುತರ ಆಪಾದನೆ ಮಾಡಿದರು. ಈ ಆಪಾದನೆಗೆ ಮೇಲ್ಮನೆಯ ಸದಸ್ಯರಾದ 'ಪೀರ್' ಅವರು ಸಹ ಬೆಂಬಲ ನೀಡಿದರು. ಈ ವಿಧವಾಗಿ ಈ ಕಾಯ್ದೆಯ ವಿರುದ್ಧ ಮಾಡಲಾದ ರಾಜಕೀಯ ಟೀಕೆಗಳ ಹಿನ್ನೆಲೆಯಲ್ಲಿ ಕಾನೂನುಬದ್ಧ ಅಂಶವನ್ನೇ ಕಡೆಗಣಿಸಲಾಯಿತು. ಈ ದಿಶೆಯಲ್ಲಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯದೆಂದರೆ ಈ ವಿಧವಾದ ಕಾಯ್ದೆಯನ್ನು ಪಾರ್ಲಿಮೆಂಟ್ ರಚಿಸಿರುವುದು ಸಮಂಜಸವೇ ಅಥವಾ ಅಸಮಂಜಸವೇ? ಎರಡನೆಯದಾಗಿ, ಪಾರ್ಲಿಮೆಂಟ್ ತನ್ನ ಅವಧಿಯನ್ನು ವಿಸ್ತರಿಸಬಹುದೇ? ಸೋಜಿಗದ ಸಂಗತಿ ಎಂದರೆ ಮೊದಲನೆಯ ಪ್ರಶ್ನೆಯಂತೆ ಕಾಯ್ದೆಯ ಬಗೆಗೆ ವಿರೋಧ ವ್ಯಕ್ತಪಡಿಸಿದರೂ, ಎರಡನೆಯ ಪ್ರಶ್ನೆಯ ಅಡಿಯಲ್ಲಿ ಯಾವ ಪ್ರಶ್ನೆಗಳನ್ನೂ ಎತ್ತದಿರುವುದನ್ನು ನೋಡಿದಾಗ ಸಪ್ತ ಸಂವತ್ಸರದದ ಅವಧಿಯ ಕಾಯ್ದೆಯನ್ನು ರಚಿಸುವ ಅಧಿಕಾರ ಪಾರ್ಲಿಮೆಂಟಿನ ಶಾಸನದ ವ್ಯಾಪ್ತಿಯಲ್ಲಿದೆ ಎಂದಂತಾಯಿತು.

ಈ ವಿಧವಾಗಿ ಸಪ್ತ ಸಂವತ್ಸರದ ಕಾಯಿದೆಯ ಒಂದು ಲಕ್ಷಣವನ್ನು ನಾವು ಗಮನಿಸಲೇಬೇಕಾಗಿದೆ. ಏಕೆಂದರೆ ಅದು ಪಾರ್ಲಿಮೆಂಟಿನ ಶಾಸನೀಯ ಸಾರ್ವಭೌಮ ಸರ್ವಾಧಿಕಾರವನ್ನು ಅರಿಯಲು ಸಹಕಾರಿಯಾಗಿದೆ. ಪಾರ್ಲಿಮೆಂಟು ತನ್ನ ಅವಧಿಯನ್ನು ವಿಸ್ತರಿಸುವ ಕಾಯ್ದೆಯನ್ನು ಮುಂಬರುವ ಪಾರ್ಲಿಮೆಂಟ್‌ಗಳಿಗೂ ವಿಸ್ತರಿಸಬಹುದಾಗಿತ್ತು. ಅದರ ಈ ಒಂದು ಕ್ರಮವನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಈ ವಿಧವಾದ ಕಾಯ್ದೆಯನ್ನು ಮುಂಬರುವ ಪಾರ್ಲಿಮೆಂಟಿಗೆ ವಿಸ್ತರಿಸದೇ ಹೋದರೂ ಈ ದಿಶೆಯಲ್ಲಿ ತನಗೆ ಇರುವ ಅಧಿಕಾರ ವ್ಯಾಪ್ತಿಯನ್ನು ಎತ್ತಿಹಿಡಿಯಿತು. ನಿಸ್ಸಂದೇಹವಾಗಿ ಅವಧಿ ವಿಸ್ತರಣೆಯ ಅಧಿಕಾರ ಕಾನೂನುದತ್ತವಾಗಿಲ್ಲದ ದುರಾಕ್ರಮಣ ಅಧಿಕಾರವಾಗಿತ್ತು. ಆದರೂ ಈ ದುರಾಕ್ರಮಣ ಅಧಿಕಾರವನ್ನು ಪಾರ್ಲಿಮೆಂಟ್ ತನ್ನ ಅಂಗೀಕಾರದಿಂದ ಕಾನೂನುಬದ್ಧವಾಗಿಸಿತು. ಈ ದಿಶೆಯಲ್ಲಿ ಹೆಚ್ಚಿನ ವಿವರಗಳನ್ನು ಕೆದಕದೇ, ಈಚಿನ ದಿನಗಳಲ್ಲಿ ಅಂದರೆ ೧೯೧೪ರಲ್ಲಿ ಪಾರ್ಲಿಮೆಂಟ್ ತನ್ನ ಸಮಾವೇಶದ ಅವಧಿಯನ್ನು ವಿಸ್ತರಿಸಿಕೊಂಡಿದ್ದನ್ನು ನಾವು ಸ್ಮರಿಸಬಹುದಾಗಿದೆ. ನಷ್ಟ ಪರಿಹಾರ ವಿನಾಯಿತಿ ಕಾಯ್ದೆಗಳು ಸಾಮಾನ್ಯವಾಗಿ ಜಾರಿಯಲ್ಲಿರುವುದನ್ನು ಕಾಣಬಹುದು. ಈ ವಿಧವಾದ ಕಾನೂನುಗಳು ನಮಗೆ ಜ್ಞಾಪಿಸುವುದೇನೆಂದರೆ ಪಾರ್ಲಿಮೆಂಟಿನ ಶಾಸನೀಯ ಅಧಿಕಾರ. ನಷ್ಟ ಪರಿಹಾರ ವಿನಾಯಿತಿ ಕಾಯ್ದೆಯಂತೆ ವ್ಯಕ್ತಿಗಳು ದಂಡ ತೆರಬೇಕಾಗಿಲ್ಲ. ಅದರಂತೆಯೇ ಪಾರ್ಲಿಮೆಂಟ್ ಅಕ್ರಮವಾದುದನ್ನು ಸಕ್ರಮಗೊಳಿಸಬಹುದು ಎಂಬ ಅಂಶ ತಿಳಿಯುತ್ತದೆ.

## ಖಾಸಗಿ ಹಕ್ಕುಗಳಲ್ಲಿ ಹಸ್ತಕ್ಷೇಪ

ಸರ್ವಸಾಮಾನ್ಯವಾಗಿ ಶಾಸನಸಭೆಗಳು ಸಾರ್ವಜನಿಕ ಹಕ್ಕುಗಳನ್ನು ರಕ್ಷಿಸುವಲ್ಲಿ ತಮ್ಮ ಶಾಸನೀಯ ಅಧಿಕಾರವನ್ನು ಚಲಾಯಿಸುತ್ತವೆ. ಆದರೆ ಖಾಸಗಿ ಕೌಟುಂಬಿಕ ಹಕ್ಕುಗಳು ಪವಿತ್ರ ಹಾಗೂ ವ್ಯಕ್ತಿಗತವಾಗಿರುವುದರಿಂದ ಅವು ಪಾರ್ಲಿಮೆಂಟಿನ ವ್ಯಾಪ್ತಿಗೆ ಬರಲಾರವು. ಆದರೆ ಬ್ರಿಟಿಷ್ ಪಾರ್ಲಿಮೆಂಟ್

ಈ ನಿರ್ಬಂಧನೆಗಳನ್ನು ಒಪ್ಪಿಕೊಳ್ಳಲಾರದು. ಏಕೆಂದರೆ ಅದು ಡ್ಯೂಕ್ ಆಫ್ ಕ್ಲಾರೆನ್ಸ್ ಹಾಗೂ ಗಲೋಸೆಸ್ಟರರ ಖಾಸಗಿ ವಿಷಯದಲ್ಲಿ ಅಂದರೆ ಅವರ ಪತ್ನಿಯರು ಹಾಗೂ ಮಕ್ಕಳು ಅವರ ಆಸ್ತಿಯನ್ನು ಪಡೆಯಲು ಪಾರ್ಲಿಮೆಂಟರಿ ಕಾಯ್ದೆಯನ್ನೇ ಅಂಗೀಕರಿಸಿದೆ. ಡ್ಯೂಕ್ ಆಫ್ ಬಕಿಂಗ್‌ಹ್ಯಾಮ್ ಅವರ ವಿಷಯದಲ್ಲಿ ಅವರು ಪ್ರಬುದ್ಧ ವಯಸ್ಕರಲ್ಲದಿದ್ದರೂ, ಪಾರ್ಲಿಮೆಂಟ್ ಅವರನ್ನು ಕಾನೂನು ವಿಷಯಗಳಿಗೆ ಸೇರಿದಂತೆ ಪ್ರಬುದ್ಧರೆಂದೇ ಪರಿಗಣಿಸಬೇಕೆಂದು ಶಾಸನ ರಚಿಸಿದ್ದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಸರ್ ರಾಬರ್ಟ್ ಫ್ಲೇ ಫಿನ್‌ಷ್ಟನ್ ಅವನು ತೀರಿಹೋದರೂ, ಅವನು ಅಪರಾಧಿ ಎಂದೇ ಕಾನೂನನ್ನು ಪಾಸು ಮಾಡಿತು. ಮಾರ್ಕಿಸ್ ಆಫ್ ವಿನ್‌ಚೆಸ್ಟರರ ವಿಷಯದಲ್ಲಿ ಅವರಿಗೆ ನೈತಿಕವಾಗಿ ಹುಟ್ಟಿದ ಸಂತಾನವನ್ನೇ ಅನೈತಿಕವೆಂದು ಸಾರಿತು. ಇದಕ್ಕೆ ತದ್ವಿರುದ್ಧವಾದ ಉದಾಹರಣೆ ಎಂದರೆ ವಿವಾಹದ ಮುನ್ನವೇ ಹುಟ್ಟಿದ ಸಂತಾನವನ್ನು ನೈತಿಕವೆಂದು, ಡ್ಯೂಕ್ ಆಫ್ ಲಂಕ್ಯಾಸ್ಟೆರ್ ಜಾನ್‌ಗಾಂಟಿಗೆ, ಕ್ಯಾಥರೀನ್ ಸ್ವಿನ್ ಫೋರ್ಡರಲ್ಲಿ ಹುಟ್ಟಿದ ಮಗುವನ್ನು ಎತ್ತಿಹಿಡಿದ ಉದಾಹರಣೆ ಇದೆ. ಸೋಜಿಗದ ಸಂಗತಿ ಎಂದರೆ ಕ್ಯಾಥರಿನ್ ಅವರಿಗೆ ವಿವಾಹದ ಮುನ್ನವೇ ಡ್ಯೂಕರಿಂದ ನಾಲ್ಕು ಅನೈತಿಕ ಮಕ್ಕಳಿದ್ದು ಅವರ ಹೆಸರು ಹೀಗಿವೆ. ಹೆನ್ರಿ, ಜೋನ್, ಥಾಮಸ್ ಹಾಗೂ ಜೀನ್ ಎಂಬ ಪುತ್ರಿ ಇದ್ದರು. ದೊರೆಯು ಸಂಸತ್ತಿನ ಕಾಯ್ದೆಯ ಮೂಲಕ ಈ ಎಲ್ಲರನ್ನೂ ನೈತಿಕರೆಂದೇ ಸಾರಿದರು. ಈ ಎಲ್ಲಾ ಉದಾಹರಣೆಗಳಿಂದ ತಿಳಿದುಬರುವ ಅಂಶವೆಂದರೆ ಪಾರ್ಲಿಮೆಂಟ್ ಕೇವಲ ವ್ಯಕ್ತಿಗೆ ಸಂಬಂಧಿಸಿದಂತಲ್ಲದೆ ಸಾಮಾನ್ಯ ಕಾನೂನನ್ನು ಕೂಡಾ ಬದಲಾಯಿಸುವ ಹಕ್ಕನ್ನು ಹೊಂದಿದೆ.

## II

# ಸಂಸತ್ತು ಎಂದರೇನು?

೧. ಈ ದಿನಗಳಲ್ಲಿ ಅನೇಕ ಜನರಿಂದ ಕೂಡಿದ ಸಂಸತ್ತು ಎಂದರೆ ಹೌಸ್ ಆಫ್ ಕಾಮನ್ಸ್ ಅಥವಾ ಶ್ರೀಸಾಮಾನ್ಯರ ಸಭೆ. ಅದು ಲಾರ್ಡ್ಸ್ ಅಂದರೆ ಹಿರಿಯರ ಸಭೆ ಹಾಗೂ ದೊರೆಯಿಂದ ಕೂಡಿರದ ಸಭೆ ಅಲ್ಲ ಎಂಬುದನ್ನು ನಾವು ಮರೆಯಬಾರದು. ಈ ಒಂದು ಜನಪ್ರಿಯ ನಂಬಿಕೆ ಬರಲು ಕಾರಣವೆಂದರೆ ಇಂಗ್ಲಿಷ್ ಸಂವಿಧಾನದ ಅಡಿಯಲ್ಲಿ ಹೌಸ್ ಆಫ್ ಕಾಮನ್ಸ್ ವಹಿಸಿರುವ ಪ್ರಮುಖ ಪಾತ್ರ. ಆದರೆ ಅದು ಎಷ್ಟೇ ಪ್ರಧಾನ ಪಾತ್ರ ವಹಿಸಿದರೂ ಈ ಒಂದು ಅಭಿಪ್ರಾಯವನ್ನು ಕಾನೂನಿನ ದೃಷ್ಟಿಯಿಂದ ಸರಿ ಎಂದು ಹೇಳಲಾಗದು. ಏಕೆಂದರೆ ಕಾನೂನುಬದ್ಧವಾಗಿ ಸಂಸತ್ತು ಎಂದರೆ ದೊರೆ, ಹಿರಿಯರು ಹಾಗೂ ಸಾಮಾನ್ಯ ಎಂಬ ಮೂರು ಅಂಗಗಳನ್ನೊಳಗೊಂಡಿದ್ದು, ಶಾಸನೀಯ ಅಧಿಕಾರಗಳೆಲ್ಲಾ ದೊರೆ, ಹಿರಿಯರು ಹಾಗೂ ಸಾಮಾನ್ಯರೆಂಬ ಮೂರು ಅಂಗಗಳಿಗೂ ಸೇರಿದೆ. ಅದು ಜಂಟಿ ಅಧಿಕಾರವಾಗಿದೆ. ಖಚಿತವಾಗಿ ಹೇಳಬೇಕೆಂದರೆ ಅದು ಅರಸನಿಂದ ಕೂಡಿದ ಸಂಸತ್ತಿನಲ್ಲಿ ಅಡಕವಾಗಿದೆ. ಅಂದರೆ ಎರಡೂ ಸದನಗಳಿಂದ ಅಂಗೀಕರಿಸಿದ ಮಸೂದೆಗೆ ಅರಸನ ಒಪ್ಪಿಗೆಯ ನಂತರವೇ ಅದನ್ನು ಕಾನೂನು ಎಂದು ಪರಿಗಣಿಸಲಾಗುವುದು. ಅರಸನ ಒಪ್ಪಿಗೆಯ ಪ್ರಭಾವದ ಪಾತ್ರವನ್ನು ಅರಿಯಬೇಕಾದರೆ, ಎರಡೂ ಸದನಗಳು ತಮ್ಮ ಕಾರ್ಯ ಕಲಾಪಗಳನ್ನು ಜರುಗಿಸಬೇಕಾದರೆ, ಅರಸನ ಒಪ್ಪಿಗೆಯು ಅನಿವಾರ್ಯ. ಏಕೆಂದರೆ ಎರಡೂ ಸದನಗಳ ಆಜ್ಞೆ ಅರಸನು ಆಜ್ಞೆ ಮಾಡಿದ ಮೇಲೆಯೇ ಒಂದಾಗುತ್ತದೆ. ಈ ಸದನಗಳು ತಾವೇ ತಾವಾಗಿ ಸೇರಲು ಬರುವುದಿಲ್ಲ. ಮುಂದುವರಿದು ಅರಸನ ಅಪ್ಪಣೆ ಇಲ್ಲದೆ ಕಾರ್ಯಕಲಾಪಗಳನ್ನು ಮಾಡುವಂತಿಲ್ಲ. ಮುಂದುವರಿದು ಅರಸನ ಪ್ರಭಾವ ಎಷ್ಟು ಎಂದರೆ ಅವನು ತಮ್ಮ ಇಚ್ಛೆಯಂತೆ ಪಾರ್ಲಿಮೆಂಟನ್ನು ಕರೆಯುಬಹುದು, ವಿಸರ್ಜಿಸಬಹುದು ಹಾಗೂ ಮುಂದೂಡಲೂಬಹುದು. ಆದರೆ ಸತ್ಯ ಸಂಗತಿ ಎಂದರೆ ಅರಸನು ಎರಡೂ ಸಭೆಗಳ ಸಮ್ಮತಿ ಪಡೆಯದೆ ಯಾವ ಕಾನೂನನ್ನು ಮಾಡಲಾರ. ಹೀಗಾಗಿ ರಾಜನ ಎಲ್ಲಾ ಕಾರ್ಯಗಳಿಗೂ ಸದನಗಳ ಸಮ್ಮತಿ ಅನಿವಾರ್ಯವೆಂದೇ ಹೇಳಬಹುದು.

೨. ಶಾಸನೀಯ ಅಧಿಕಾರವೆಲ್ಲಾ ಅರಸನಿಂದ ಕೂಡಿದ ಸಂಸತ್ತಿನ ಹಸ್ತದಲ್ಲಿದೆ ಎಂಬ ಹೇಳಿಕೆಯು ಹಾಗೂ ಎರಡೂ ಸದನಗಳಿಂದ ಅಂಗೀಕರಿಸಿದೆ, ಮಸೂದೆಗೆ ಅರಸನ ಒಪ್ಪಿಗೆಯು ಅನಿವಾರ್ಯ ಎಂಬುದು ಎರಡು ಅರ್ಹತೆಗಳ ಆಧಾರ ಹೊಂದಿದೆ.

(೧) **ಅರಸನ ನಿಷೇಧಾಧಿಕಾರ:** ಆಂಗ್ಲ ಭಾಷೆಯಲ್ಲಿ "ವಿಟೋ" ಎಂದು ಕರೆಯಲಾಗುವ ಈ ಕ್ರಮ ಯಾವುದೇ ಕಾನೂನು ಆಗಬೇಕಾದರೆ ಅರಸನ ಒಪ್ಪಿಗೆ ಬೇಕೆಂದು ಈಗಾಗಲೇ ತಿಳಿಸಲಾಗಿದೆ. ಹೀಗೆಂದಾಗ

ಅರಸನ ನಿಷೇಧಾಧಿಕಾರವು ಒಂದು ರೀತಿಯಲ್ಲಿ ಜಾರಿಯಲ್ಲಿ ಇಲ್ಲವೆಂದೇ ಹೇಳಿದರೂ ತಪ್ಪಾಗಲಾರದು. ಏಕೆಂದರೆ ಕಳೆದ ಎರಡೂವರೆ ಶತಮಾನದಿಂದ ಅಂದರೆ ರಾಣಿ ಆನ್ನೆ ಅವರ ಕಾಲದಿಂದ ಈಚೆಗೆ ಈ ಅಧಿಕಾರವನ್ನು ಯಾರೂ ಚಲಾಯಿಸಿಲ್ಲ. ಕ್ರಿ.ಶ. ೧೭೦೭ರಲ್ಲಿ ರಾಣಿ ಆನ್ನೆ ಅವರು ಸ್ಕಾಟ್ ಮಿಲಿಟರಿಯ ಮಸೂದೆಗೆ ತನ್ನ ಅಂಗೀಕಾರವನ್ನು ನೀಡಿರಲಿಲ್ಲ. ಈ ಅರಸನ ಅಧಿಕಾರವು ಕಾನೂನು ದೃಷ್ಟಿಯಿಂದ ಅಡಚಣೆ ಎಂದು ಭಾವಿಸಬೇಕಾಗಿಲ್ಲ. ಏಕೆಂದರೆ ಎರಡೂ ಸದನಗಳಿಂದ ಅಂಗೀಕರಿಸಿದ ಮಸೂದೆಗಳನ್ನು ಅರಸನು ತಿರಸ್ಕರಿಸುವಂತೆಯೇ ಇಲ್ಲ ಎಂಬ ಒಂದು ಸಂಪ್ರದಾಯ ಜಾರಿಯಲ್ಲಿದೆ. ಮುಂದುವರಿದು ಈ ನಿಷೇಧಾಧಿಕಾರವು ಕಳೆದ ಎರಡೂವರೆ ಶತಮಾನಗಳಿಂದ ಜಾರಿಯಲ್ಲಿ ಇರದೇ ಹೋದರೂ ಅದು ಸತ್ತು ಹೋಗಿದೆ ಎಂದು ಯಾರೂ ಹೇಳುವಂತಿಲ್ಲ. ಏಕೆಂದರೆ ಯಾವುದಾದರೊಂದು ಮಸೂದೆಯನ್ನು ಅಂಗೀಕರಿಸಿದ ನಂತರ ಕಾಮನ್ಸ್ ಸಭೆಯು ರಾಜೀನಾಮೆ ನೀಡಿದ ನಂತರ, ಲಾರ್ಡ್ಸ್ ಸಭೆಯವರು ಅದನ್ನು ಅಂಗೀಕರಿಸಿದ್ದು, ನೂತನ ಕಾಮನ್ಸ್ ಸಭೆಯು ತನ್ನ ವಿರೋಧವನ್ನು ವ್ಯಕ್ತಪಡಿಸಿದರೂ, ಅದನ್ನು ಅರಸನ ಅಂಗೀಕಾರಕ್ಕೆ ಕಳಿಸಿಕೊಡಬಹುದು.

(೨) **ಹಿರಿಯರ ಸಭೆಯ ನಿಷೇಧಾಧಿಕಾರ:** ಒಂದು ಕಾಲದಲ್ಲಿ ಹಿರಿಯರ ಸಭೆಯು ಕೂಡಾ ಕಾನೂನುಗಳನ್ನು ಪಾಸು ಮಾಡುವಲ್ಲಿ ಸಾಮಾನ್ಯರ ಸಭೆಯಂತೆಯೇ ಸಮಾನ ಅಧಿಕಾರಗಳನ್ನು ಪಡೆದಿತ್ತು. ಆದರೆ ಆಚರಣೆಯಲ್ಲಿ ಕಾಮನ್ಸ್ ಸಭೆಯು ಹಣಕಾಸಿನ ಮಸೂದೆಗಳ ವಿಚಾರದಲ್ಲಿ ತನ್ನದೇ ಆದ ಹೆಚ್ಚು ಅಧಿಕಾರವನ್ನು ಚಲಾವಣೆಯಲ್ಲಿ ತಂದಿದ್ದರಿಂದ ಮೇಲ್ಮನೆಯ ಅಧಿಕಾರ ಮೊಟಕುಗೊಂಡಿತು. ೧೬೭೧ರಲ್ಲಿ ಸಾಮಾನ್ಯ ಸಭೆಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಹೀಗೆ ಹೇಳಿತು. "ಸಾಮಾನ್ಯ ಸಭೆಯಿಂದ, ರಾಜರಿಗೆ ಕೊಡಲಾದ ಎಲ್ಲ ಸಹಾಯಗಳಲ್ಲಿ ಕರದ ದರದಲ್ಲಿ ಹಿರಿಯರ ಸಭೆಯವರು ಯಾವ ಬದಲಾವಣೆ ಮಾಡಕೂಡದು."

೧೬೭೮ರಲ್ಲಿ ಕಾಮನ್ಸ್ ಸಭೆಯು ಮತ್ತೊಂದು ಗೊತ್ತುವಳಿಯನ್ನು ಅಂಗೀಕರಿಸಿ "ಹಣಕಾಸಿನ ಯಾವ ಮಸೂದೆಯೇ ಆಗಿರಲಿ, ಅದನ್ನು ಪ್ರಥಮವಾಗಿ ಕಾಮನ್ಸ್ ಸಭೆಯಲ್ಲಿ ಮಂಡಿಸಬೇಕು. ಏಕೆಂದರೆ ಹಣಕಾಸಿನ ಬಗೆಗೆ ಕಾಮನ್ಸ್ ಸಭೆಗೆ ವಿಶೇಷ ಅಧಿಕಾರವಿರುವುದರಿಂದ ಹಿರಿಯರ ಸಭೆಗೆ ಅದನ್ನು ತಿದ್ದುವ, ತಿರಸ್ಕರಿಸುವ, ನಿರ್ಬಂಧಿಸುವ, ಬದಲಾಯಿಸುವ ಯಾವ ವಿಧವಾದ ಅಧಿಕಾರವಿಲ್ಲ."

ಇನ್ನು ಸಾಮಾನ್ಯ ಮಸೂದೆಗಳು ಅಂದರೆ ಹಣಕಾಸೇತರ ಮಸೂದೆಯ ಬಗೆಗೆ ಹಿರಿಯರ ಸಭೆಯು ತನ್ನ ಭಿನ್ನಾಭಿಪ್ರಾಯವನ್ನು ಸೂಚಿಸಬಹುದು. ಆದರೆ ವಿವಾದವಾದಲ್ಲಿ ಅದು ಯಾವುದಾದರೊಂದು ಹಂತದಲ್ಲಿ ಸಾಮಾನ್ಯರ ಸಭೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲೇಬೇಕು. ಏಕೆಂದರೆ ಒಂದು ತಿಂಗಳ ಅವಧಿಯಲ್ಲಿ ಅದು ತನ್ನ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸದೇ ಹೋದಲ್ಲಿ ನೇರವಾಗಿ ಆ ಮಸೂದೆಯನ್ನು ಅರಸನ ಅಂಗೀಕಾರಕ್ಕೆ ಕಳಿಸಬಹುದಾಗಿದೆ. ಈ ವಿಧವಾದ ನಿಷೇಧಾಧಿಕಾರವನ್ನು ಹಿರಿಯರ ಸಭೆಯು ಚಲಾಯಿಸದೇ ಹೋಗಿದೆ. ಈ ಒಂದು ಕಾರ್ಯವು ಕಾನೂನಿನ ಅಡಚಣೆಯಾಗಿರದೆ ಸಹಜ ಶಕ್ತಿಯ ದ್ಯೋತಕವಾಗಿದೆ ಎಂದೇ ಹೇಳಬಹುದು. ಆದರೆ ಸಂಪ್ರದಾಯಕ್ಕೆ ವಿರೋಧವಾಗಿ ೧೯೧೦ರಲ್ಲಿ ಹಿರಿಯರ ಸಭೆಯು ಲಾಯ್ಡ್ ಜಾರ್ಜ್ ಅವರ ಮುಂಗಡ ಪತ್ರಕ್ಕೆ ಅಂಗೀಕಾರವನ್ನು ನಿರಾಕರಿಸಿದ ಪರಿಣಾಮವೇ ೧೯೧೧ರ ಪಾರ್ಲಿಮೆಂಟ್ ಕಾಯ್ದೆಗೆ ಅವಕಾಶ ಒದಗಿಸಿತು. ಹಣಕಾಸಿನ ಮಸೂದೆಗೆ ಸಂಬಂಧಿಸಿದಂತೆ ಇಂಗ್ಲಿಷ್ ಸಂವಿಧಾನದಲ್ಲಿ ಇದಕ್ಕೆ ಪ್ರಮುಖ ಸ್ಥಾನ ದೊರಕಿತು. ಏಕೆಂದರೆ

ಹಿರಿಯರ ಸಭೆಗೆ ಇದ್ದಿರಬಹುದಾದ ನಿಷೇಧಾಧಿಕಾರವನ್ನು ಇದು ಸಂಪೂರ್ಣವಾಗಿ ಬಿಸಾಡಿತು ಎಂದರೆ ಅಚ್ಚರಿ ಏನೂ ಇಲ್ಲ.

೧೯೧೧ರ ಪಾರ್ಲಿಮೆಂಟಿನ ಕಾಯ್ದೆ ಸಾರ್ವಜನಿಕ ಮಸೂದೆಗಳಿಗೆ ಮಾತ್ರ ಅನ್ವಯಿಸುತ್ತದೆ. ಖಾಸಗಿ ಮಸೂದೆಗಳಿಗಲ್ಲ. ಖಾಸಗಿ ಮಸೂದೆಗಳ ಬಗೆಗೆ ಹಿರಿಯರ ಸಭೆಯ ಅಧಿಕಾರಕ್ಕೆ ಯಾವ ಕುಂದೂ ಇಲ್ಲ. ಏಕೆಂದರೆ ಅದು ಕೇವಲ ಸಾರ್ವಜನಿಕ ಮಸೂದೆಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅದು ಸಂಸತ್ತಿನ ಅವಧಿಯಲ್ಲಿ ವಿಸ್ತರಿಸುವ ಮಸೂದೆಗಳಿಗೆ ಅನ್ವಯಿಸಲಾರದು. ಆದರೆ ಸಂಸದೀಯ ಕಾಯ್ದೆಯ ಅಡಿಯಲ್ಲಿ ಸಾಮಾನ್ಯರ ಸಭೆಗೆ ಈ ಅಧಿಕಾರವಿದೆ. ಹೀಗಾಗಿ ನಿಷೇಧಾಧಿಕಾರದ ಬಗೆಗೆ ಎರಡೂ ಸದನಗಳ ಸ್ಥಾನಮಾನ ಒಂದೇ ಆಗಿಲ್ಲ. ಏಕೆಂದರೆ ಸಾರ್ವಜನಿಕ ಮಸೂದೆಗಳನ್ನು ಪಾರ್ಲಿಮೆಂಟ್ ಕಾಯ್ದೆಯು ಎರಡು ವಿಧವಾಗಿ ವಿಂಗಡಿಸಿದೆ: (೧) ಹಣಕಾಸಿನ ಸಾರ್ವಜನಿಕ ಮಸೂದೆ, (೨) ಹಣಕಾಸಿಗೆ ಸಂಬಂಧವಿರದ ಸಾರ್ವಜನಿಕ ಮಸೂದೆಗಳು. ಹಣಕಾಸಿನ ಮಸೂದೆಯನ್ನು ಸಾಮಾನ್ಯ ಸಭೆಯ ಅಧ್ಯಕ್ಷರು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿರ್ಧರಿಸುತ್ತಾರೆ. ಕರಹೇರುವ, ಕಡಿಮೆ ಮಾಡುವ, ತೆಗೆದುಹಾಕುವ ಹಾಗೂ ನಿಯಂತ್ರಿಸುವ ಹಾಗೂ ಸಾರ್ವಜನಿಕ ಸಾಲ ಮತ್ತು ಸಂಚಿತ ನಿಧಿಯ ಅಡಿಯಲ್ಲಿ ಖರ್ಚು ಮಾಡುವ, ಎಲ್ಲಾ ಬಾಬತ್ತುಗಳ ಹಣ ಖರ್ಚು ಮಾಡುವ ಹಾಗೂ ಶೇಖರಿಸುವ, ಸಾರ್ವಜನಿಕ ಹಣಕಾಸಿನ ರಕ್ಷಣೆ, ಲೆಕ್ಕ ಪರಿಶೋಧನೆ, ಸಾರ್ವಜನಿಕ ಸಾಲಗಳನ್ನು ಎತ್ತುವ ಮತ್ತು ಮರುಪಾವತಿ ಮಾಡುವ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಮಸೂದೆ ಹಣಕಾಸಿನವು ಎಂದೇ ಪರಿಗಣಿಸಲಾಗುವುದು. ಮುಂದುವರಿದು ಈ ಮಸೂದೆಯಂತೆ ಹಣಕಾಸಿನ ಮಸೂದೆಯನ್ನು ಕಾಮನ್ಸ್ ಸಭೆ ಅಂಗೀಕರಿಸಿದ ನಂತರ, ಹಿರಿಯರ ಸಭೆಯು ಅದನ್ನು ಒಂದು ತಿಂಗಳ ಅವಧಿಗಿಂತ ಹೆಚ್ಚುಕಾಲ ತನ್ನ ಬಳಿ ಇರಿಸಿಕೊಳ್ಳಲೂಬಾರದು. ಸಮ್ಮತಿ ಅಥವಾ ತಿದ್ದುಪಡಿ ಇಲ್ಲವೇ ಅಸಮ್ಮತಿಯನ್ನು ಈ ಕಾಲಾವಧಿಯಲ್ಲಿ ತಿಳಿಸದೇ ಹೋದರೆ, "ಅಂತಹ ಮಸೂದೆಯನ್ನು ನೇರವಾಗಿ ಅರಸನ ಅಂಗೀಕಾರಕ್ಕೆ ಕಳಿಸಿಕೊಡಲಾಗುವುದು. ಇತರ ಸಾರ್ವಜನಿಕ ಮಸೂದೆಗಳಿಗೆ ಸಂಬಂಧಿಸಿದಂತೆ ೧೯೧೧ನೇ ಕಾಯ್ದೆಯು ಈ ಕೆಳಕಂಡ ಅವಕಾಶವನ್ನು ಕಲ್ಪಿಸಿದೆ. ಅದೇನೆಂದರೆ ಯಾವುದಾದರೊಂದು ಮಸೂದೆಯನ್ನು ಸತತವಾಗಿ ಮೂರು ಅಧಿವೇಶನದಲ್ಲಿ ಕಾಮನ್ಸ್ ಸಭೆಯು ಅಂಗೀಕರಿಸಿದ್ದು, ಮೂರು ಬಾರಿಯೂ ಹಿರಿಯರ ಸಭೆಯು ಅದನ್ನು ತಿರಸ್ಕರಿಸಿದಲ್ಲಿ ಆ ಮಸೂದೆಯನ್ನು ನೇರವಾಗಿ ಅರಸನ ಅಂಗೀಕಾರಕ್ಕೆ ಕಳಿಸಬಹುದು. ಮುಂದುವರಿದು ಮೊದಲನೆಯ ಅಧಿವೇಶನ ಹಾಗೂ ಮೂರನೆಯ ಅಧಿವೇಶನದ ಮಧ್ಯೆ ಕನಿಷ್ಠ ಎರಡು ವರ್ಷಗಳು ಸಂಧಿಸಿದ ನಂತರವೇ ಆ ಮಸೂದೆ ಕಾನೂನಿನ ರೂಪವನ್ನು ಪಡೆಯಬಹುದು. ಹೀಗೆ ಮೂರನೇ ಬಾರಿ ಕಾಮನ್ಸ್ ಸಭೆಯಿಂದ ಅಂಗೀಕೃತವಾದಲ್ಲಿ ಅದನ್ನು ಕಾನೂನನ್ನಾಗಿ ಪರಿಗಣಿಸಲು ಯಾವ ಆತಂಕವೂ ಇಲ್ಲ."

ಈ ಹಲವು ಪ್ರಮುಖ ಅಂಶಗಳೇ ೧೯೧೧ರ ಕಾಯ್ದೆಯಲ್ಲಿ ಅಡಕವಾಗಿವೆ. ಹೀಗಾಗಿ ಅದು ಸಾರ್ವಜನಿಕ ಮಸೂದೆಗಳ ಬಗೆಗೆ ಇದ್ದಿರಬಹುದಾದ ನಿಷೇಧಾಧಿಕಾರವನ್ನು ನಿಯಂತ್ರಿಸಿದೆ. ಆದರ ಹಣಕಾಸಿನ ಮಸೂದೆ ಮತ್ತು ಸಾರ್ವಜನಿಕ ಮಸೂದೆಯ ಬಗೆಗೆ ಇರುವ ಅಂತರ ಎಂದರೆ ಸಾರ್ವಜನಿಕ ಹಣಕಾಸೇತರ ಮಸೂದೆಗಳ ಬಗೆಗೆ ನಿಷೇಧಾಧಿಕಾರವು ಸ್ಥಗಿತ ರೂಪದಲ್ಲಿದೆ. ಹೀಗಾಗಿ ಒಂದು ಕಾಲದಲ್ಲಿ ಮಸೂದೆಗಳನ್ನು ನಿರೋಧಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಪಡೆದಿದ್ದ ಹಿರಿಯರ ಸಭೆಯು ತನ್ನ ಈ ಅಧಿಕಾರವನ್ನು ಕಳೆದುಕೊಂಡಿತು. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡೇ

ಪಾರ್ಲಿಮೆಂಟ್ ಅರಸ, ಹಿರಿಯರ ಮತ್ತು ಸಾಮಾನ್ಯರಿಂದ ಕೂಡಿದೆ ಎಂಬ ಹೇಳಿಕೆಯನ್ನು ಗಮನಿಸಬೇಕು. ಆದರೆ ಈ ಎಲ್ಲರ ಅಂಗೀಕಾರದಿಂದಲೇ ಮಸೂದೆ ಕಾನೂನಾಗುವುದು, ಅಷ್ಟೇ ಸತ್ಯದ ಸಂಗತಿಯಾಗಿದೆ. ಹೀಗಾಗಿ ಈ ಒಂದು ದಿಶೆಯಲ್ಲಿ ೧೯೧೧ರ ಮುಂಚಿನ ಪರಿಪಾಟವೇ ಜಾರಿಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು.

# III

# ಅರಸೊತ್ತಿಗೆ

**(೧) ಅರಸೊತ್ತಿಗೆ ರಾಜನ ಬಿರುದು:** ೧೬೮೮ರಲ್ಲಿ ದೊರೆ ಜೇಮ್ಸ್ II ದೇಶದಿಂದ ಪಲಾಯನ ಮಾಡಿದ ನಂತರ, ಒಂದು ಗೊತ್ತುವಳಿಯನ್ನು ಅಂದಿನ ಸಂಸತ್ತು ಸ್ವೀಕರಿಸಿ ಜೇಮ್ಸ್ ದೊರೆಗೆ ಪಟ್ಟವನ್ನು ವಾಪಸು ನೀಡಲಾಯಿತು. ಆದರೆ ಈ ಘಟನೆಗೆ ಮುಂಚೆ ಯಾವ ಸಂಪ್ರದಾಯದ ಮೇಲೆ ಅಂದರೆ ಆನುವಂಶಿಕತೆಯ ಅಥವಾ ಚುನಾವಣೆಯ ಮೂಲಕ ರಾಜನು ತನ್ನ ಪಟ್ಟಾಧಿಕಾರ ಪಡೆಯುತ್ತಿದ್ದನು ಎಂದು ಖಚಿತವಾಗಿ ಹೇಳಲೂಬಾರದು. ಆದರೆ ೧೬೮೮ರ ಮೌನಕ್ರಾಂತಿಯ ನಂತರವಂತೂ ಈ ಪಟ್ಟಾಧಿಕಾರ, ಸಂಸತ್ತಿನಿಂದ ನೀಡಿದ ಅಧಿಕಾರವಾಗಿದೆ. ಏಕೆಂದರೆ ಸಿಂಹಾಸನಕ್ಕೆ ಏರುವ ಹಕ್ಕನ್ನು ನಿರ್ಧರಿಸುತ್ತದೆ. ಸಿಂಹಾಸನಕ್ಕೆ ಸಂಬಂಧಿಸಿದ ಬಿರುದು ಹಾಗೂ ಇತರ ಗೌರವಗಳನ್ನು, ಅರಸರಿಗೆ ೧೭೦೧ರ ಸಿಂಹಾಸನದ ಉತ್ತರಾಧಿಕಾರಿಗಳ ಕಾಯ್ದೆಯಂತೆ ನೀಡಲಾಗುತ್ತಿದೆ. ಈ ಒಂದು ಕಾನೂನಿನ ಆಧಾರದ ಮೇಲೆಯೇ ವಿಲಿಯಂ ಮತ್ತು ಮೇರಿ ಅವರ ಸಂತಾನಕ್ಕೆ ಸಿಂಹಾಸನವೇರುವ ಅಧಿಕಾರವನ್ನು ನೀಡಲಾಯಿತು. ಈ ಕಾನೂನಿನ ಬಿರುದು ಎರಡು ಷರತ್ತುಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಒಂದರಂತೆ ಉತ್ತರಾಧಿಕಾರಿಯು ಹಿರಿಯ ಮಗ ಅಥವಾ ಮಗಳಾಗಿರಬೇಕು. ಎರಡನೆಯದೆಂದರೆ ಉತ್ತರಾಧಿಕಾರಿಯು ಪ್ರೊಟೆಸ್ಟೆಂಟ್ ಮತಾನುಯಾಯಿ ಆಗಿರಬೇಕು.

**(೨) ಅರಸೊತ್ತಿಗೆಯ ಹಕ್ಕು ಹಾಗೂ ಕರ್ತವ್ಯಗಳು:** ಅರಸನ ಹಕ್ಕುಗಳು ಶಾಸನೀಯ ಇಲ್ಲವೇ ದೈವದತ್ತವಾದ ಹಕ್ಕುಗಳು. ಶಾಸನೀಯ ಹಕ್ಕುಗಳನ್ನು ಪಾರ್ಲಿಮೆಂಟ್ ನೀಡುತ್ತದೆ. ಅರಸನ ದೈವದತ್ತವಾದ ಹಕ್ಕುಗಳೆಂದರೆ ನಾಡಿನ ಸಂಪ್ರದಾಯದಂತೆ ಜಾರಿಯಲ್ಲಿರುವ ಸಾಮಾನ್ಯ ಕಾನೂನುಗಳು ರಾಜನಿಗೆ ನೀಡಿರಬಹುದಾದ ಹಕ್ಕುಗಳು. ಈ ವಿಧವಾದ ಹಕ್ಕುಗಳು ಕಾನೂನಿನಿಂದ ಮುಕ್ತವಾಗಿವೆ. ಏಕೆಂದರೆ ಯಾವ ಶಾಸನವೂ ಅದನ್ನು ಪ್ರಶ್ನಿಸಿಲ್ಲ ಅಥವಾ ಕಿತ್ತುಕೊಂಡಿಲ್ಲ. ರಾಜರಿಗೆ ನೀಡಿದ ಶಾಸನೀಯ ಹಕ್ಕುಗಳ ಪರಿಶೀಲನೆ ಅನಾವಶ್ಯಕ. ಏಕೆಂದರೆ ಅದರ ಇತಿಮಿತಿಗಳನ್ನು ನಾವು ಅರಿಯಬಹುದಾಗಿದೆ. ಅದರಂತೆಯೇ ದೈವದತ್ತ ಹಕ್ಕುಗಳನ್ನು ನಾವು ಹೆಚ್ಚಾಗಿ ಪರಿಶೀಲಿಸಬೇಕಾಗಿಲ್ಲ. ಏಕೆಂದರೆ ಅವು ಕಾನೂನುಗಳಿಂದ ಮುಕ್ತವಾಗಿದ್ದು, ಸಂಪ್ರದಾಯದ ಮಡಿಲಿನಿಂದ ಸೂಸಿ ಬಂದಿವೆ. ಈ ಒಂದು ಸಂಪ್ರದಾಯಬದ್ಧ ಹಕ್ಕುಗಳ ಸ್ವರೂಪ ಹಾಗೂ ವ್ಯಾಪ್ತಿಯು ನ್ಯಾಯಾಲಯದ ಕಾನೂನುಗಳಿಂದಲೇ ನಿರ್ಣಯಿಸಬೇಕಾದ ಸಂಗತಿಯಾದುದರಿಂದ, ಅರಸರ ಈ ಮಾದರಿ ದೈವದತ್ತ ಹಕ್ಕುಗಳ ಅಧ್ಯಯನಕ್ಕೆ ಅನುಕೂಲಕ್ಕಾಗಿ ಎರಡು ವಿಧಗಳಲ್ಲಿ ಚರ್ಚಿಸಬಹುದು.

## (I)

## ವ್ಯಕ್ತಿಗತ ಅಭಾಧಿತವಾದ ಹಕ್ಕು

**(೧) ಅರಸು ಅಪರಾಧ ಮಾಡಲಾರ:** ರಾಜ್ಯದ ಎಲ್ಲಾ ಕಾರ್ಯಗಳೂ ಅರಸನ ಹೆಸರಿನಲ್ಲಿಯೇ ಜಾರಿಗೊಳಿಸಲಾಗುವುದರಿಂದ, ಈ ಎಲ್ಲ ರಾಜಕಾರ್ಯಗಳಿಗೆ ಅವರು ಹೊಣೆಗಾರರಲ್ಲ. ಅವರ

ಈ ರಾಜ್ಯ ಕಾರ್ಯಗಳಿಗೆ ಹೊಣೆಗಾರರೆಂದರೆ ಅವರ ಮಂತ್ರಿವರ್ಗ. ಆದುದರಿಂದ ಈ ಆಡಳಿತ ಕಾನೂನುಗಳ ವಿರುದ್ಧ ರಾಜರನ್ನು ವಿಚಾರಣೆಗೆ ಗುರಿಪಡಿಸಲಾಗದು ಹಾಗೂ ಅವರನ್ನು ಹೊಣೆಗಾರರೆಂದು ಹೇಳಲೂ ಬಾರದು. ಯಾವುದೇ ಪ್ರಜೆಯು ಈ ವಿಧವಾದ ಆಡಳಿತ ಕಾನೂನಿನಿಂದ ನಷ್ಟಕ್ಕೆ ಗುರಿಯಾದರೆ, ಆ ನಷ್ಟವನ್ನು ತುಂಬಿ ಕೊಡುವಂತೆ ರಾಜನ ವಿರುದ್ಧ ಮೊಕದ್ದಮೆ ಹೂಡಲಾರನು. ಒಪ್ಪಂದ ಅಥವಾ "ಟಾರ್ಟ್"ಗಳು ಭಂಗವಾದಲ್ಲಿ ಕೂಡಾ ಅರಸರ ವಿರುದ್ಧ ದಾವೆ ಮಾಡಲಾಗದು. ಈ ವಿಧವಾದ ತೊಡಕುಗಳು ಉಂಟಾಗಬಾರದೆಂದೇ, ಕಾನೂನಿನ ಕಠಿಣತೆಯನ್ನು ನಿವಾರಿಸಲು ವಿಶೇಷ ವಿಧಾನವನ್ನು ರಚಿಸಲಾಗಿದೆ. ಅದೇನೆಂದರೆ, "ಸೂಕ್ತ ಕ್ರಮಕ್ಕೆ ಮನವಿ". ಈ ಒಂದು ಕ್ರಮದಲ್ಲಿ, ಹಾನಿಗೀಡಾದ ಪ್ರಜೆಯು ತನಗಾದ ಹಾನಿಯನ್ನು ಸರಿಪಡಿಸಿಕೊಡಬೇಕೆಂದು ಅರಸನಲ್ಲಿ ಮನವಿ ಸಲ್ಲಿಸಬಹುದು. ಈ ವಿಧವಾದ ಮನವಿಯನ್ನು ಅಟಾರ್ನಿ ಜನರಲ್ಲರು ಪರಿಶೀಲಿಸಿ ಪರವಾನಿಗೆಯನ್ನು ನೀಡಿದಾಗ, ನ್ಯಾಯಾಲಯಗಳು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲಾದ 'ಸೂಟ್' ಅಥವಾ ಅರ್ಜಿ ಎಂದು ಪರಿಗಣಿಸಿ ಕಾನೂನಿನಂತೆ ಕಾರ್ಯ ಕೈಗೊಳ್ಳುತ್ತವೆ. ಆದರೂ ಈ ದಿಶೆಯಲ್ಲಿ ಅನೇಕ ನಿರ್ಬಂಧನೆಗಳಿದ್ದು, ಅರಸನು ತಾನೇ ಖುದ್ದಾಗಿ ಆಡಳಿತ ಕ್ರಮವನ್ನು ಕೈಗೆತ್ತಿಕೊಳ್ಳಬಹುದು. ಏಕೆಂದರೆ ಈ ವಿಧವಾದ ಕಾರ್ಯಾಚರಣೆಯು ಕಿರೀಟದ ಭವಿಷ್ಯಕ್ಕೆ ಬಂಧನಕಾರಿಯಾಗಬಹುದು. ಆದುದರಿಂದಲೇ ಕಿರೀಟಕ್ಕೆ ಅಂದರೆ ಅರಸನಿಗೆ ತನ್ನ ಕೈಕೆಳಗಿನ ಅಧಿಕಾರಿಗಳನ್ನು ತೆಗೆದುಹಾಕುವ ಅಧಿಕಾರವಿದೆ. ಈ ಒಂದು ಕ್ರಿಯೆಯನ್ನು ಯಾರು ಪ್ರಶ್ನಿಸುವಂತಿಲ್ಲ.

**(೨) ರಾಜನಿಗೆ ಮರಣವೇ ಇಲ್ಲ:** ರಾಜನಿಗೆ ಅಜರಾಮರತೆಯ ವಿಶೇಷವಿದೆ. ಏಕೆಂದರೆ ರಾಜ ಒಬ್ಬ ವ್ಯಕ್ತಿಯಲ್ಲ ಅದು ಒಂದು ಸಂಸ್ಥೆ. ರಾಜನಾಗಿದ್ದ ವ್ಯಕ್ತಿ ತೀರಿಹೋದರೂ, ರಾಜನು ತೀರಿದಂತಲ್ಲ, ಏಕೆಂದರೆ ಆ ಸಂಸ್ಥೆ ಅಜರಾಮರ. ವ್ಯಕ್ತಿ ತೀರಿದರೂ ರಾಜ ಅಮರ, ಅದು ಖಾಲಿ ಬೀಳುವ ಪ್ರಶ್ನೆಯೇ ಇಲ್ಲ. ಅವನು ತೀರಿದೊಡನೆಯೇ ಬೇರೊಬ್ಬರು ಆ ಸ್ಥಾನವನ್ನು ಕೂಡಲೇ ಅಲಂಕರಿಸುತ್ತಾರೆ. ಇದು ಕಾನೂನು. ಆದುದರಿಂದಲೇ ರಾಜನು ತೀರಿಕೊಂಡಾಗ ಕೂಡಾ ರಾಜನು ಅಮರನಾಗಲಿ ಎಂದೇ ರಾಷ್ಟ್ರಗೀತೆಯನ್ನು ಹೇಳಲಾಗುತ್ತದೆ. ಏಕೆಂದರೆ ಕಾನೂನುಬದ್ಧವಾಗಿ ಅರಸೊತ್ತಿಗೆ ಅಮರ, ಆದುದರಿಂದ ನಾವು ಅರಸು ಹಾಗೂ ಅರಸೊತ್ತಿಗೆಯಲ್ಲಿ ಸೂಕ್ಷ್ಮ ಭೇದವನ್ನು ಅರಿಯಲೇಬೇಕು. ಸೋಜಿಗದ ಸಂಗತಿ ಎಂದರೆ ರಾಜನ ಉತ್ತರಾಧಿಕಾರಿಯ ಪಟ್ಟಾಭಿಷೇಕವಾಗದೇ ಹೋದರೂ ಅವನನ್ನು ರಾಜನೆಂದೇ ಪರಿಗಣಿಸಲಾಗುತ್ತದೆ. ಪಟ್ಟಾಭಿಷೇಕ ಸಮಾರಂಭವು ರಾಜನಾರೆಂದು ಪ್ರಜೆಗಳಿಗೆ ತಿಳಿಯಲೆಂದೇ ಏರ್ಪಡಿಸುವ ಉತ್ಸವವಾಗಿದ್ದು ಅದರ ಉದ್ದೇಶ ಬೇರೆ ಏನೂ ಇಲ್ಲ.

(೩) **ಕಾಲಮಿತಿಯ ಕಾನೂನು:** ಅರಸೊತ್ತಿಗೆಯ ದಾವಾ ಹೂಡುವ ಇಲ್ಲವೇ ಶಿಕ್ಷಿಸುವ ಹಕ್ಕಿಗೆ ಅಡ್ಡಿಯಾಗುವುದಿಲ್ಲ. ಖಾಸಗಿ ವ್ಯಕ್ತಿಗಳೂ ತಮಗೆ ಬರಬೇಕಾದ ಪರಿಹಾರಗಳಿಗೆ ಸಂಬಂಧಿಸಿದಂತೆ ಆರು ವರ್ಷಗಳ ಅವಧಿಯೊಳಗೆ ಕ್ರಮ ಕೈಕೊಳ್ಳಬೇಕೆಂಬ ನಿಯಮವಿದೆ. ಆದರೆ ಈ ವಿಧವಾದ ನಿಯಮದಡಿಯಲ್ಲಿ ಅರಸರಿಗೆ ಅರವತ್ತು ವರ್ಷಗಳೆಂದು ನಿಯಮವಿದ್ದರೂ ಅದನ್ನು ಅವರಿಗೆ ಅನ್ವಯಿಸಲಾಗುವುದಿಲ್ಲ. ಇದು ಒಂದು ವಿಧವಾಗಿ ಸಂಪ್ರದಾಯವಾಗೇ ಬೆಳೆದುಬಂದಿದೆ. ಹೀಗಾಗಿ ಅರಸರಿಗೆ ಅವಧಿಯ ಪರಿಮಿತಿಯ ನಿಯಮವೇ ಇಲ್ಲ ಎಂದು ಹೇಳಿದರೂ ತಪ್ಪಾಗಲಾರದು.

(೪) ಯಾವುದಾದರೊಂದು ಸಂದರ್ಭದಲ್ಲಿ ಅರಸನ ಹಾಗೂ ಪ್ರಜೆಯ ಹಕ್ಕುಗಳ ನಡುವೆ ಕಲಹ ಉಂಟಾದರೆ ಪ್ರಜೆಯು ತನ್ನ ಹಕ್ಕನ್ನು ಅರಸನ ಪರವಾಗಿ ಬಿಟ್ಟುಕೊಡಬೇಕು.

(೫) ರಾಜನು ಯಾವುದೇ ಕಾನೂನಿಗೆ, ಅದು ಸ್ಪಷ್ಟವಾಗಿ ನಮೂದಿಸದಿದ್ದಲ್ಲಿ, ಒಳಪಡುವುದಿಲ್ಲ.

## (II)
## ರಾಜಕೀಯ ಹಕ್ಕುಗಳು

ಈ ಹಕ್ಕುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು, ದೇಶದಲ್ಲಿರುವ ಸರಕಾರಕ್ಕೆ ಸಂಬಂಧಿಸಿದ್ದು. ಎರಡನೆಯದೆಂದರೆ ವಿವಿಧ ದೇಶಗಳಿಗೆ ಸಂಬಂಧಿಸಿದ್ದು. ಅಂದರೆ, ವಿದೇಶಿ ವ್ಯವಹಾರಗಳಿಗೆ ಸೇರಿದ್ದು. ರಾಜನ ಅಧಿಕಾರ ದೇಶದ ಆಡಳಿತವನ್ನು ನಡೆಸುವ ಸರಕಾರಕ್ಕೆ ಸೇರಿದಂತೆ. ಅದನ್ನು ಆಡಳಿತ, ಶಾಸನೀಯ ಮತ್ತು ನ್ಯಾಯಾಂಗ ಕಾರ್ಯಗಳನ್ನು ಕುರಿತಂತೆ ಅರಿಯಬಹುದು. ಇಂಗ್ಲಿಷ್ ಸಂವಿಧಾನ ಶಾಸನದಂತೆ ಎಲ್ಲಾ ಆಡಳಿತ ಅಧಿಕಾರಗಳು ಅರಸನ ಅಧೀನದಲ್ಲಿವೆ. ಆಡಳಿತಾಂಗದ ಸರ್ವಶ್ರೇಷ್ಠ ಅಧಿಕಾರಿಯಾಗಿರುವುದು ಅವರ ಹಕ್ಕೆಂದೇ ಪರಿಗಣಿಸಲಾಗಿದೆ. ಆದುದರಿಂದ ಆಡಳಿತಕ್ಕೆ ಸಂಬಂಧಿಸಿದ ರಾಜಕೀಯ ಮತ್ತು ಖಾಯಂ ಅಧಿಕಾರಿಗಳನ್ನು ನೇಮಿಸುವ ಹಕ್ಕು ಅವರದಾಗಿದೆ. ಅವರನ್ನು ಸೇವೆಯಿಂದ ತೆಗೆದುಹಾಕುವ ಹಕ್ಕು ಅವರಿಗೇ ಸೇರಿದೆ. ಅವರು ಸೈನ್ಯದ ಮೂರು ಭಾಗಗಳಾದ ಭೂಪಡೆ, ವಾಯುಪಡೆ ಮತ್ತು ನೌಕಾಪಡೆಗಳ ದಂಡನಾಯಕರೂ ಆಗಿರುವುದು ಅವರ ಹಕ್ಕು. ನಾಗರಿಕ ಸೇವಾ ಸಿಬ್ಬಂದಿಯು ಅವರ ಅಧೀನದಲ್ಲಿ ಕಾರ್ಯ ಮಾಡುತ್ತದೆ. ಯಾವ ಅಧಿಕಾರಿಯೇ ಇರಲಿ, ಅವನು ರಾಜ್ಯ ಸೇವೆಗೆ ಹೇಗೆ ನೇಮಕ ಹೊಂದಿದ್ದರೂ ಅವರೆಲ್ಲರೂ ಅರಸನ ಸೇವಕರು ಎಂಬುದನ್ನು ಮರೆಯಬಾರದು. ಅವರ ನ್ಯಾಯಾಂಗದ ಅಧಿಕಾರದ ಬಗೆಗೆ ಹೇಳಬೇಕೆಂದರೆ ಒಂದು ಕಾಲದಲ್ಲಿ ರಾಜನೇ ನ್ಯಾಯಾಂಗದ ಪ್ರಮುಖವಾಗಿ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದನು. ಆದರೆ ಈ ಹಕ್ಕು ಇಂದು ಜಾರಿಯಲ್ಲಿಲ್ಲ. ಮುಂದುವರಿದು, ಆ ಕಾಲದಲ್ಲಿ ರಾಜನಿಗೆ ನ್ಯಾಯಾಲಯಗಳನ್ನು ನಿರ್ಮಿಸುವ ಹಾಗೂ ಅದರ ಅಧಿಕಾರವನ್ನು ನಿರ್ಧರಿಸುವ ಅಧಿಕಾರವೂ ಇತ್ತು. ಈ ವಿಧವಾದ ಹಕ್ಕನ್ನು ನಾವು ಒಂದನೇ ಚಾರ್ಲ್ಸ್ ಅವರ ಅಧಿಕಾರಾವಧಿಯಲ್ಲಿ ನೋಡಬಹುದು. ಏಕೆಂದರೆ ಅವರು 'ಸ್ಟಾರ್ ಛೇಂಬರ್' ಮತ್ತು 'ಉನ್ನತ ಆಯೋಗದ ನ್ಯಾಯಾಲಯ'ಗಳನ್ನು ರಚಿಸಿದರು. ಈ ಒಂದು ಹಕ್ಕನ್ನೂ ಅರಸನು ಕಳೆದುಕೊಂಡಿದ್ದಾನೆ. ಈ ದಿನಗಳಲ್ಲಿ ಪಾರ್ಲಿಮೆಂಟಿನ ಅನುಮತಿ ಇಲ್ಲದೇ ಸಾಮಾನ್ಯ ಕಾನೂನನ್ನು ಜಾರಿಗೊಳಿಸುವ ನ್ಯಾಯಾಲಯವನ್ನು ನೇಮಿಸಬಹುದು. ಈ ಒಂದು ಉಳಿದಿರುವ ಅಧಿಕಾರವನ್ನೂ ಅವರು ಚಲಾಯಿಸುವಂತಿಲ್ಲ. ಏಕೆಂದರೆ ಈ ನ್ಯಾಯಾಲಯದ ನಿರ್ವಹಣೆಗೆ ಬೇಕಾದ ಹಣಕಾಸಿಗೆ ಅವರು ಪಾರ್ಲಿಮೆಂಟಿನ ಅನುಮತಿಯನ್ನು ಕೋರಲೇಬೇಕಾಗಿದೆ. ಹೀಗಾಗಿ ಅವರಿಗೆ ಉಳಿದಿರಬಹುದಾದ ಅಲ್ಪಸ್ವಲ್ಪ ನ್ಯಾಯಾಧಿಕಾರಗಳೆಂದರೆ: (೧) ಪ್ರೀವಿ ಕೌನ್ಸಿಲ್‌ಗೆ ಮನವಿ ಮಾಡಲು ಅಪ್ಪಣೆ ನೀಡುವ, (೨) ನ್ಯಾಯಾಧೀಶರನ್ನು ನೇಮಿಸುವ, (೩) ಅಪರಾಧಿಯನ್ನು ಕ್ಷಮಿಸುವ, (೪) ಶಿಕ್ಷೆಗಳನ್ನು ತಗ್ಗಿಸುವ ಅಥವಾ ಕೈಬಿಡಲು ಆದೇಶ ನೀಡುವ ಅಧಿಕಾರ.

ಅರಸನ ಶಾಸನೀಯ ಹಕ್ಕುಗಳೆಂದರೆ, ಒಂದು ಕಾಲದಲ್ಲಿ ಅವುಗಳ ವ್ಯಾಪ್ತಿ ಹಾಗೂ ಪಾತ್ರ ವಿಶಾಲವಾಗಿದ್ದವು. ಏಕೆಂದರೆ ರಾಜನೇ ಶಾಸನಗಳನ್ನು ಮಾಡುತ್ತಿದ್ದು, ಅವುಗಳನ್ನು ರಾಜಶಾಸನವೆಂದೇ ಕರೆಯಲಾಗುತ್ತಿತ್ತು.

ಅರಸನು ಪಾರ್ಲಿಮೆಂಟಿನ ಬೆಂಬಲವಿಲ್ಲದೇ ಶಾಸನಗಳನ್ನು ರಚಿಸಬಹುದಾಗಿತ್ತು. ಹಾಗೂ ಅವುಗಳನ್ನು ರದ್ದುಗೊಳಿಸುವ ಅಧಿಕಾರವನ್ನೂ ಹೊಂದಿದ್ದ. ಆದರೆ ಇಂದು ಈ ಯಾವ ಅಧಿಕಾರಗಳೂ ಜಾರಿಯಲ್ಲಿ ಇಲ್ಲ. ಮುಂದುವರಿದು, ಪಾರ್ಲಿಮೆಂಟು ರಚಿಸಿದ ಕಾನೂನುಗಳನ್ನು ಸ್ಥಗಿತ ಅಥವಾ ರದ್ದುಗೊಳಿಸುವ ಅವಕಾಶವೇ ಅರಸನಿಗಿಲ್ಲ. ಕಾನೂನನ್ನು ರಚಿಸುವ ಅಧಿಕಾರ ಕೇವಲ ವಸಾಹತುಗಳಿಗೆ ಮಾತ್ರ ಸೀಮಿತವಾಗಿದೆ. ಈಗ ಅರಸನಿಗೆ ಉಳಿದಿರಬಹುದಾದ ಶಾಸನೀಯ ಹಕ್ಕುಗಳೆಂದರೆ (೧) ಪಾರ್ಲಿಮೆಂಟಿನ ಅಧಿವೇಶನವನ್ನು

ಕರೆಯುವ, (೨) ಪಾರ್ಲಿಮೆಂಟನ್ನು ಮುಂದೂಡುವ ಮತ್ತು (೩) ಪಾರ್ಲಿಮೆಂಟನ್ನು ವಿಸರ್ಜಿಸುವ ಹಕ್ಕು.

ದೇಶದ ಆಂತರಿಕ ಆಡಳಿತ ಕುರಿತಂತೆ ಎರಡು ಹಕ್ಕುಗಳಿವೆ. ಅದನ್ನು ವಿವರಿಸುವುದು ಅಗತ್ಯ. ಮೊದಲನೆಯದೆಂದರೆ ಕ್ರಿಶ್ಚಿಯನ್ ಚರ್ಚಿಗೆ ಸೇರಿದ ಹಕ್ಕು ಮತ್ತು ಎರಡನೆಯದೆಂದರೆ ಕಂದಾಯಕ್ಕೆ ಸಂಬಂಧಿಸಿದ ಹಕ್ಕು.

**ಧಾರ್ಮಿಕ ಹಕ್ಕು:** ಕ್ರೈಸ್ತ ಮತೀಯ ಹಕ್ಕುಗಳಿಗೆ ಸಂಬಂಧಿಸಿದಂತೆ ಅರಸನು, ಕಾನೂನಿನಿಂದ ರಚಿಸಲಾದ ಇಂಗ್ಲೆಂಡ್ ಚರ್ಚಿನ ಸರ್ವಶ್ರೇಷ್ಠ ಅಧಿಕಾರಿ. ಈ ಒಂದು ಸ್ಥಾನ ಬಲದಿಂದ, ಅರಸನು ಪ್ರಧಾನಿಯ ಶಿಫಾರಸ್ಸಿನಂತೆ ಆರ್ಚ್ ಬಿಷಪ್, ಬಿಷಪ್ ಮುಂತಾದ ಚರ್ಚಿನ ಅಧಿಕಾರಿಗಳನ್ನು ನೇಮಿಸುತ್ತಾನೆ. ಮುಂದುವರಿದು, ಚರ್ಚಿನ ಶಾಸನ ಸಭೆಗಳನ್ನು ಅಂದರೆ ಚರ್ಚಿನ ಕೋರ್ಟು ಮುಂದೂಡುವ, ವಿಸರ್ಜಿಸುವ ಅಧಿಕಾರ ಹೊಂದಿದ್ದು, ಈ ಶಾಸನಗಳ ಬಗೆಗೆ ಉದ್ಭವಿಸಿದ ತಂಟೆ ತಗಾದೆಗಳನ್ನು ಪ್ರೈವಿ ಕೌನ್ಸಿಲ್‌ಗೆ ಕೊಂಡು ಹೋಗಲು ಪರವಾನಿಗೆ ನೀಡುವ ಅಧಿಕಾರವನ್ನೂ ಹೊಂದಿದ್ದಾನೆ.

**ಕಂದಾಯದ ಹಕ್ಕುಗಳು:** ಬ್ರಿಟಿಷ್ ಸರಕಾರದ ಕಂದಾಯಗಳು ಎರಡು ವಿಧವಾಗಿವೆ: (೧) ಸಾಮಾನ್ಯ ಕಂದಾಯ (೨) ವಿಶೇಷ ಕಂದಾಯ. ಸಾಮಾನ್ಯ ಕಂದಾಯಗಳನ್ನು ಹಕ್ಕುಗಳ ಕಂದಾಯವೆಂದೂ ಹೇಳಬಹುದು. ಅವು ಈ ಕೆಳಗಿನ ಮೂಲಗಳಿಂದ ಲಭಿಸುವುವು.

೧. ಬಿಷಪ್ಪಿನ ಪ್ರಭುತ್ವದ ಅಡಿಯಲ್ಲಿ ಸ್ಥಾನಗಳು ಖಾಲಿಯಾದಾಗ ಅವರ ಉತ್ತರಾಧಿಕಾರಿಯು ಅಧಿಕಾರ ವಹಿಸಿಕೊಳ್ಳುವವರೆಗೆ ಅದು ಅರಸನ ಕೈಯಲ್ಲಿರುತ್ತದೆ. ಅಂದರೆ ಈ ಸಮಯದಲ್ಲಿ ಅರಸನು ಅದರ ಧರ್ಮದರ್ಶಿಯಾಗಿರುತ್ತಾನೆ.

೨. ಮುಂದುವರಿದು ಅರಸನು ಬಿಷಪ್ ಅವರ ಆಡಳಿತದಲ್ಲಿಯ ಲಾಭಾಂಶಗಳನ್ನು ಪಡೆಯುವ ಅಧಿಕಾರ ಹೊಂದಿದ್ದಾನೆ. ಮೊದಲು ಧರ್ಮಪ್ರಭುತ್ವದ ಕಾಲದಲ್ಲಿ ಇದನ್ನು ಕ್ರಿಶ್ಚಿಯನ್ ಗುರುವಾದ ಪೋಪರಿಗೆ ಸಲ್ಲಿಸಲಾಗುತ್ತಿತ್ತು. ಚರ್ಚಿನ ಆಡಳಿತ ಕಂದಾಯದಲ್ಲಿ ಒಂದು– ಹತ್ತಂಶ ವಾರ್ಷಿಕ ಆದಾಯದಲ್ಲಿಯ ಲಾಭ ಅರಸನಿಗೆ ಸಲ್ಲುತ್ತದೆ. ಈ ಲಾಭಾಂಶವೂ ಮೊದಲು ಪೋಪರಿಗೇ ಸಲ್ಲುತ್ತಿದ್ದು ಈಗ ಅದನ್ನು ರಾಣಿಯನ್ನೇ ಅವರ ಗವರ್ನರರ ನಿಧಿಗೆ ಸಲ್ಲಿಸಲಾಗುತ್ತದೆ.

೩. ಭೂ ಕಂದಾಯ ಎಲ್ಲವೂ ಅರಸನಿಗೆ ಸಲ್ಲುತ್ತದೆ.

೪. ಮೀನುಗಾರಿಕೆ, ಅರಣ್ಯಸಂಪತ್ತು, ಗಣಿಗಳು ಎಲ್ಲವೂ ರಾಜನಿಗೆ ಸೇರಿದ್ದರಿಂದ ಈ ದಿಶೆಯಲ್ಲಿ ಬರಬಹುದಾದ ಆದಾಯಗಳು ಅರಸನಿಗೆ ಸಲ್ಲತಕ್ಕದ್ದು.

ಈ ಮೇಲೆ ತಿಳಿಸಿದ ವಿಷಯಗಳು ಸಾಮಾನ್ಯ ಕಂದಾಯಕ್ಕೆ ಸೇರಿದ್ದು. ೧೭೧೫ರವರೆಗೂ ಈ ಆದಾಯವು ಅರಸರ ಹಕ್ಕಾಗಿದ್ದು, ಅದನ್ನು ಅವರಿಗೇ ಸಲ್ಲಿಸಲಾಗುತ್ತಿತ್ತು. ಆದರೆ ೧೭೧೫ರ ಒಪ್ಪಂದದಂತೆ ನಾಗರಿಕ ಪಟ್ಟಿಯ ಕಾನೂನಿನಂತೆ, ಈಗ ಅರಸನು ಪಾರ್ಲಿಮೆಂಟ್‌ಗೆ ಈ ಹಕ್ಕನ್ನು ತೊರೆದಿದ್ದಾನೆ. ಈ ಒಪ್ಪಂದದಂತೆ ಪಾರ್ಲಿಮೆಂಟ್ ಸಂಚಿತ ನಿಧಿಯಿಂದ ಅರಸು ಮನೆತನದ ಖರ್ಚನ್ನು ನೀಡಬೇಕು. ಈ ವಿಧವಾದ ನಾಗರಿಕ ಪಟ್ಟಿಯ ಒಪ್ಪಂದವು ಚಿರಸ್ಥಾಯಿಯಾದುದಲ್ಲ. ಅದು ತಾತ್ಕಾಲಿಕವಾಗಿ ಆಳುತ್ತಿರುವ ಅರಸು ಹಾಗೂ ಪಾರ್ಲಿಮೆಂಟಿನ ನಡುವಿನ ಒಪ್ಪಂದ. ಹೀಗಾಗಿ ಈ ಒಪ್ಪಂದ ಪ್ರತಿಯೋರ್ವ ಅರಸನ ಜೀವನಾವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ವಿಧವಾದ ಒಪ್ಪಂದ ಆಗದಿದ್ದಲ್ಲಿ ಸಾಮಾನ್ಯ ಕಂದಾಯ ರಾಜನಿಗೆ ಸಲ್ಲುತ್ತದೆ. ಹೀಗೆಂದ ಮಾತ್ರಕ್ಕೆ ಒಪ್ಪಂದ ಕಡಿದು ಹಾಕಿದೆ ಎಂದಲ್ಲ. ಅದು

ಕಂದಾಯದ ಆದಾಯದಲ್ಲಿ ಕಡಿಮೆ ಮಾಡಬಹುದು. ಕಂದಾಯ ಆಕರಿಸುವ ಹಕ್ಕಿಗೆ ಯಾವ ಧಕ್ಕೆಯೂ ಒದಗಲಾರದು.

## III
## ದೇಶ, ವಿದೇಶೀ ಸಂಬಂಧಗಳ ಕುರಿತ ಅರಸನ ಹಕ್ಕು

ವಿದೇಶಿ ರಾಯಭಾರಿಗಳನ್ನು ಕರೆಯುವ ಹಾಗೂ ಬೇರೆ ದೇಶಗಳಿಗೆ ರಾಯಭಾರಿಗಳನ್ನು ನೇಮಿಸುವ ಹಕ್ಕು ಅರಸನಿಗೆ ಸೇರಿದೆ. ಇದು ಪ್ರಮುಖವಾದ ಹಕ್ಕು. ಏಕೆಂದರೆ ವಿದೇಶೀ ರಾಯಭಾರಿಗಳು ದೇಶದ ನಾಗರಿಕ ಹಾಗೂ ಕ್ರಿಮಿನಲ್ ಕಾಯ್ದೆಗಳಿಂದ ಮುಕ್ತರು. ಹೀಗಾಗಿ ಅವರ ಸ್ಥಾನಮಾನಗಳೇ ಬೇರೆ. ಏಕೆಂದರೆ ಅವರಿಗೆ ಹಲವಾರು ರಿಯಾಯಿತಿಗಳಿವೆ. ಅವನ್ನು ಮುಂದೆ ಚರ್ಚಿಸುವೆ. ಈ ವಿಧವಾದ ರಿಯಾಯಿತಿಗಳನ್ನು ರಾಜನು ಮಾತ್ರ ಮಾನ್ಯ ಮಾಡಬಹುದು.

ಅರಸನಿಗೆ ಇರುವ ಮತ್ತೊಂದು ಹಕ್ಕು ಎಂದರೆ ಯುದ್ಧ ಸಾರುವ ಮತ್ತು ಶಾಂತಿಯನ್ನು ಘೋಷಿಸುವುದು ಅವರಿಗೇ ಸೇರಿದೆ. ಯಾವುದೇ ಒಂದು ದೇಶದೊಡನೆ ಒಪ್ಪಂದ ಮಾಡಿಕೊಳ್ಳುವ ಹಕ್ಕು ರಾಜನಿಗೇ ಸೇರಿದೆ. ಒಪ್ಪಂದವು ರಾಜಕೀಯ ಅಥವಾ ವಾಣಿಜ್ಯದ್ದೇ ಆಗಿರಲಿ, ಅದು ಅವರಿಗೆ ಸೇರಿದ ಹಕ್ಕು. ಒಂದೇ ಒಂದು ನಿರ್ಬಂಧ ಎಂದರೆ ಒಪ್ಪಂದವು ದೇಶದ ನಾಗರಿಕರ ಹಕ್ಕುಗಳಿಗೆ ಧಕ್ಕೆ ಉಂಟುಮಾಡಬಾರದು.

ಈ ವಿಧವಾಗಿ ಅರಸನು ಹೊಂದಿರುವ ಹಕ್ಕುಗಳು ಹಲವಾರು ಪ್ರಶ್ನೆಗಳಿಗೆ ಆಸ್ಪದ ನೀಡುವುದರಿಂದ ಅದನ್ನು ವಿವರಿಸಬೇಕಾಗಿದೆ. ಮೊದಲನೆಯ ಪ್ರಶ್ನೆ ಎಂದರೆ ಅರಸನ ಹಕ್ಕು ಹಾಗೂ ಪಾರ್ಲಿಮೆಂಟಿನ ಅಧಿಕಾರಗಳ ಮಧ್ಯೆ ಇರಬೇಕಾದ ಬಾಂಧವ್ಯವೇನು? ಒಂದು ವೇಳೆ ಅರಸನು ತನಗೆ ನೀಡಲಾದ ಹಕ್ಕುಗಳನ್ನು ಚಲಾಯಿಸಲು ಅಸಮರ್ಥನಾದರೆ ಏನಾಗುವುದು?

ಮೊದಲನೆಯ ಪ್ರಶ್ನೆಗೆ ಸೇರಿದಂತೆ ಅರಸನ ಹಕ್ಕು ವಿವಾದಾತೀತ ಮತ್ತು ಪಾರ್ಲಿಮೆಂಟಿನಿಂದ ಮುಕ್ತವಾದದ್ದು. ಹೀಗೆಂದ ಮಾತ್ರಕ್ಕೆ ಅದು ಪಾರ್ಲಿಮೆಂಟಿನ ಅಧಿಕಾರ ವ್ಯಾಪ್ತಿಗೆ ಸೇರಿಲ್ಲ ಎಂದು ಭಾವಿಸಿದರೆ ಅನಾಹುತಕ್ಕೆ ಆಸ್ಪದ ನೀಡಿದಂತಾಗುತ್ತದೆ. ಈ ವಿಧವಾದ ಅರಸನ ಹಕ್ಕುಗಳನ್ನು ಕ್ರಮಬದ್ಧಗೊಳಿಸುವ ಹಾಗೂ ತಿದ್ದುಪಡಿ ಮಾಡುವ ಹಾಗೂ ಅವನ್ನು ನಿಷೇಧಿಸುವ ಅಧಿಕಾರ ಪಾರ್ಲಿಮೆಂಟಿಗೆ ಇದೆ. ಒಂದು ಬಾರಿ ಹೀಗೆ ಪಾರ್ಲಿಮೆಂಟಿನಿಂದ ಅರಸನ ಹಕ್ಕುಗಳ ಬಗೆಗೆ ಕ್ರಮ ತೆಗೆದುಕೊಂಡಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ರಾಜನ ಹಕ್ಕುಗಳು ಮೊಟಕುಗೊಂಡಂತೆ. ಹೀಗಾಗಿ ಅರಸನು ಈ ಹಕ್ಕುಗಳನ್ನು ಚಲಾಯಿಸುವಾಗ ತುಂಬಾ ಎಚ್ಚರ ವಹಿಸಬೇಕು.

ಹೀಗೆಂದಾಗ, ಪಾರ್ಲಿಮೆಂಟಿನ ವಿರೋಧ ಕಟ್ಟಿಕೊಂಡಂತೆ. ರಾಜನು ತನ್ನ ಹಕ್ಕುಗಳನ್ನು ಚಲಾಯಿಸುವುದೇ ಹಿತಕರವಾದುದು. ಎರಡನೆಯ ಪ್ರಶ್ನೆ ಎಂದರೆ ಅರಸು ತನಗೆ ನೀಡಲಾದ ಹಕ್ಕುಗಳನ್ನು ಚಲಾಯಿಸದೇ ಹೋದ ಸಂದರ್ಭಕ್ಕೆ ಸೇರಿದವು. ಈ ಪ್ರಶ್ನೆಯನ್ನು ನಾವು ಸರಳವಾಗಿ ತಳ್ಳಿ ಹಾಕುವಂತಿಲ್ಲ. ಏಕೆಂದರೆ ಅರಸೊತ್ತಿಗೆ ಹಲವಾರು ಕರ್ತವ್ಯಗಳನ್ನು ಆಚರಿಸಲೇಬೇಕು. ಅವು ಹೀಗಿವೆ:

(೧) ಅರಸನು ತನ್ನ ರಾಜ್ಯದಲ್ಲಿ ಇರದೇ ಹೋಗಬಹುದು.

(೨) ರಾಜನು ಅಪ್ರಬುದ್ಧ ವಯಸ್ಸಿನ ಬಾಲಕನಾಗಿರಬಹುದು.

(೩) ಅವನಿಗೆ ಬುದ್ಧಿಭ್ರಮಣೆಯಾಗಿರಬಹುದು. ಮತ್ತು

(೪) ಅವನು ನೈತಿಕವಾಗಿ ಅಸಮರ್ಥನಾಗಿರಬಹುದು.

ಅರಸನು ದೇಶದಿಂದ ಹೊರಗಡೆ ಹೋದರೆ ಅದೇನೂ ಸಮಸ್ಯೆ ಅಲ್ಲ. ಏಕೆಂದರೆ ಆಧುನಿಕ ಸಂಪರ್ಕ ವ್ಯವಸ್ಥೆ ಈ ದಿಶೆಯಲ್ಲಿ ತುಂಬಾ ಸಹಕಾರಿಯಾಗಿದೆ. ಆದುದರಿಂದ ಅರಸನು ಎಲ್ಲೇ ಇರಲಿ ತನ್ನ ಕಾರ್ಯಭಾರವನ್ನು ನಡೆಸಬಹುದು. ಮುಂದುವರಿದು, ಅರಸನು ತನ್ನ ಅಧಿಕಾರವನ್ನು ಯಾರಿಗಾದರೂ ವಹಿಸಿಕೊಡಲೂಬಹುದು. ಅರಸನು ಅಪ್ರಬುದ್ಧ ವಯಸ್ಸಿನವನಾಗಿದ್ದರೆ ಕಾನೂನು ದೃಷ್ಟಿಯಿಂದ ಅದೇನು ಸಮಸ್ಯೆಯಲ್ಲ. ಆದುದರಿಂದ ಅಪ್ರಬುದ್ಧ ವಯಸ್ಸಿನ ರಾಜಕುಮಾರ ಆಡಳಿತ ನಡೆಸಬಹುದು. ಇಂಥ ಸಂದರ್ಭದಲ್ಲಿ ಪಾರ್ಲಿಮೆಂಟ್ ಕಾನೂನಿನ ರೀಜೆಂಟರನ್ನು ನೇಮಿಸುತ್ತದೆ. ಇದು ಕಾನೂನಿನ ಕ್ರಮವಾಗಿರದೆ ಕೇವಲ ಮುತ್ಸದ್ದಿತನದ ಪ್ರದರ್ಶನವೆಂದೇ ಹೇಳಬಹುದು.

ಅರಸನ ಬುದ್ಧಿ ಭ್ರಮಣೆಯ ಸಂಗತಿ ತುಂಬಾ ಕಠಿಣವಾದದ್ದು. ಏಕೆಂದರೆ ಈ ಸಂದರ್ಭದಲ್ಲಿ ಅರಸನು ತನ್ನ ಅಧಿಕಾರವನ್ನು ವಹಿಸುವಂತೆಯೂ ಇಲ್ಲ ಹಾಗೂ ಪಾರ್ಲಿಮೆಂಟ್ ರೀಜೆಂಟರನ್ನು ನೇಮಿಸುವಂತೆಯೂ ಇಲ್ಲ. ಈ ವಿಧವಾದ ತೊಂದರೆಯನ್ನು ಆರನೇ ಹೆನ್ರಿ (೧೪೫೪) ಮತ್ತು ಮೂರನೆಯ ಜಾರ್ಜ್ (೧೭೮೮) ಇವರ ಆಳ್ವಿಕೆಯಲ್ಲಿ ಎದುರಿಸಬೇಕಾಯಿತು. ಆಗ ಅನುಸರಿಸಿದ ಕ್ರಮವು ತುಂಬಾ ಕ್ರೂರವಾಗಿತ್ತು. ಆದರೆ ಸಂವಿಧಾನದ ದೃಷ್ಟಿಯಿಂದ ಅನಿವಾರ್ಯವಾಗಿತ್ತು. ಏಕೆಂದರೆ ಕಾನೂನಾಗಬೇಕಾದರೆ ರಾಜ್ಯದ ಮೂರು ಅಂಗಗಳ ಅಂಗೀಕಾರ ಬೇಕಲ್ಲವೇ?

ರಾಜನು ಅನ್ಯೆತಿಕನಾಗಿದ್ದರೆ, ಅದೊಂದು ರೀತಿಯ ಕಠಿಣ ಸಮಸ್ಯೆಯನ್ನೇ ನಿರ್ಮಿಸುತ್ತದೆ. ಜನತೆಯು ರಾಜನನ್ನು ತಿರಸ್ಕರಿಸಿದರೆ ಅವರು ರಾಜೀನಾಮೆ ಕೊಡಬಹುದೇ? ಒಂದು ವೇಳೆ ಅವನು ರಾಜೀನಾಮೆಗೆ ಒಪ್ಪದೆ ಹೋದರೆ ಜನತೆ ಅವನನ್ನು ತೆಗೆದುಹಾಕಬಹುದೇ? ಮೇಲೆ ಹೇಳಿದ ಎರಡೂ ಪ್ರಸಂಗಗಳಿಗೆ ಕಾನೂನಿನಲ್ಲಿ ಉತ್ತರ ದೊರೆಯದೇ ಹೋಗಬಹುದು.

## ಅರಸನ ಮರಣದಿಂದಾಗಬಹುದಾದ ಪರಿಣಾಮ

### ೧. ಸಂಸತ್ತಿನ ಮೇಲೆ

ಮೂಲ ನಿಯಮದಂತೆ ಅರಸನು ಮರಣ ಹೊಂದಿದಾಗ ಸಂಸತ್ತನ್ನು ವಿಸರ್ಜಿಸಲಾಗುತ್ತಿತ್ತು. ಸಂವಿಧಾನ ಹಾಗೂ ಸಿದ್ಧಾಂತದಂತೆ ಅಂದಿನ ಸಂಸತ್ ಸದಸ್ಯರೆಲ್ಲರೂ ಅರಸನ ಸಲಹೆಗಾರರಾಗಿದ್ದು, ಅವರಿಂದಲೇ ನೇಮಕಗೊಂಡಿದ್ದು, ಅವರ ಮರಣದಿಂದ ಈ ಸದಸ್ಯರು ಮುಂದುವರೆಯ ಕೂಡದೆಂದೇ ಅಂದಿನ ಸಂಪ್ರದಾಯ. ಆದುದರಿಂದ ಮರಣ ಹೊಂದಿದ ಅರಸನ ಪ್ರತಿನಿಧಿಗಳ ಸ್ಥಾನಗಳು ತೆರವಾದ ನಂತರವೇ ನೂತನ ಅರಸನು ತನ್ನವರನ್ನು ನೇಮಿಸಬಹುದಾಗಿತ್ತು. ಆದರೆ ಒಂದು ನಿಯಮವೇನೆಂದರೆ ಮೂರನೆಯ ವಿಲಿಯಂ ಅವರ ಆಳ್ವಿಕೆಯಲ್ಲಿ ತಿದ್ದುಪಡಿ ಮಾಡಿ, ಅರಸನ ಮರಣದಿಂದ ಆರು ತಿಂಗಳ ಅವಧಿಯವರೆಗೂ ಸಂಸತ್ ಮುಂದುವರಿಯಲೇಬೇಕು. ಈ ಆರು ತಿಂಗಳ ಅವಧಿಯಲ್ಲಿ ನೂತನ ಅರಸನು ಸಂಸತ್ತನ್ನು ವಿಸರ್ಜಿಸದೇ ಹೋದರೆ ಅದು ತನ್ನ ಅವಧಿಯವರೆಗೂ ಮುಂದುವರಿಯಲು ಯಾವ ಅಡ್ಡಿಯೂ ಇಲ್ಲ. ನಂತರ ೧೮೬೭ರಲ್ಲಿ ರಾಣಿ ವಿಕ್ಟೋರಿಯಾ ಅವರ ಆಡಳಿತದಲ್ಲಿ ಈ ನಿಯಮವನ್ನು ಕೈಬಿಡಲಾಯಿತು. ಅರಸನ ಮರಣದಿಂದಾಗಿ ಸಂಸತ್ತನ್ನು ವಿಸರ್ಜನೆ ಮಾಡುವ ಪ್ರಮೇಯಕ್ಕೆ ಮಂಗಳ ಹಾಡಲಾಯಿತು.

## ೨. ಅಧಿಕಾರಾವಧಿಯ ಮೇಲೆ

ಮೂಲ ನಿಯಮದ ಪ್ರಕಾರ ಅರಸನು ಮರಣ ಹೊಂದಿದ ಕೂಡಲೇ ಅರಸನ ಅಧೀನದಲ್ಲಿದ್ದ ಆಡಳಿತಾಂಗದ ಅಧಿಕಾರಿಗಳೆಲ್ಲರೂ ರಾಜೀನಾಮೆ ನೀಡುತ್ತಿದ್ದರು. ಈ ದಿಶೆಯಲ್ಲಿಯೂ ಕ್ರಮೇಣವಾಗಿ ಕಾನೂನನ್ನು ಬದಲಾಯಿಸಲಾಯಿತು. ೧೭೦೭ರ ಸಿಂಹಾಸನ ಆರೋಹಣ ಕಾನೂನಿನಂತೆ, ರಾಜನ ಮರಣದಿಂದ ಮುಂದೆ ಆರು ತಿಂಗಳು ಅಧಿಕಾರಿಗಳ ಅವಧಿಯನ್ನು ಮುಂದುವರಿಸಲಾಯಿತು. ಮತ್ತೊಂದು ಕಾಯ್ದೆಯಂತೆ ಅವಧಿಯನ್ನು ವಿಸ್ತರಿಸಿದರೂ ೧೯೦೧ನೆಯ ಅರಸೊತ್ತಿಗೆ ಕಾಯ್ದೆಯಂತೆ ಈ ಕ್ರಮಕ್ಕೆ ಮುಕ್ತಾಯ ಹೇಳಿ ಪಾರ್ಲಿಮೆಂಟಿನ ಅವಧಿಗೂ ಹಾಗೂ ಅರಸನ ಮರಣಕ್ಕೂ ಇರಬಹುದಾದ ತಳಿಕೆಯನ್ನು ಕಿತ್ತು ಎಸೆಯಲಾಯಿತು.

## IV

# ಹಿರಿಯರ ಸಭೆ

ಈ ಸಭೆಯ ಸದಸ್ಯರು ಮೂರು ವಿಧವಾದ ಮಾರ್ಗಗಳಿಂದ ಕೂಡಿದ್ದಾರೆ. (೧) ಇಂಗ್ಲೆಂಡಿನ ಹಾಗೂ ಅದರ ಒಕ್ಕೂಟದ ಆನುವಂಶಿಕ "ಕುಲೀನರು" (peers). (೨) ಪ್ರತಿನಿಧಿ "ಕುಲೀನರು" (೩) ಅಧಿಕಾರ ಬಲ "ಕುಲೀನರು". ಮೊಟ್ಟ ಮೊದಲನೆಯ ಪ್ರಶ್ನೆ ಎಂದರೆ, ಯಾವ ಆಧಾರದಿಂದ ಈ ಸದಸ್ಯರು ಮೇಲ್ಮನೆಯಲ್ಲಿ ಕುಳಿತುಕೊಳ್ಳಲು ಅಧಿಕಾರ ಹೊಂದಿದ್ದಾರೆ? ಹೇಗೆ ಈ ಮೇಲ್ಮನೆಯಲ್ಲಿ ಕುಳಿತುಕೊಳ್ಳಲು ಅಧಿಕಾರ ಹೊಂದಿದ್ದಾರೆ? ಹೇಗೆ ಈ ಮೇಲ್ಮನೆಯು ರಚನೆ ಹೊಂದಿತು ಎಂಬುದನ್ನು ಅರಿಯಲು ಇದು ಅನಿವಾರ್ಯ.

### ಇಂಗ್ಲೆಂಡಿನ ಹಾಗೂ ಒಕ್ಕೂಟದ "ಕುಲೀನರು"

ಈ ವಿಧವಾದ ಬಿರುದನ್ನು ಇಂಗ್ಲೆಂಡಿನ ಅರಸನಿಂದ ಸನ್ನದು ಮೂಲಕ ಇವರನ್ನು ಕರೆ ಕಳುಹಿಸಿ ಪಾರ್ಲಿಮೆಂಟಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಯಿತು. ಆದುದರಿಂದ ಈ ವಿಧವಾದ ಸದಸ್ಯತ್ವವು ರಾಜನಿಂದ ನೀಡಿದ ಸನ್ನದು ಪತ್ರಗಳಿಂದ ರಚಿಸಲಾಗಿದೆ. ಹೀಗಾಗಿ ಈ ವಿಧವಾದ ಸನ್ನದು ಪತ್ರಗಳನ್ನು ಪಡೆದಿರುವುದರ ಬಗೆಗೆ ಏನೂ ತೊಂದರೆ ಇಲ್ಲ. ಆದರೆ ನಾವು ಇಲ್ಲಿ ವಿಚಾರ ಮಾಡಬೇಕಾದ ಸಂಗತಿ ಎಂದರೆ, ಅರಸನು ಜೀವಾವಧಿ 'ಕುಲೀನರು'ಗಳನ್ನು ರಚಿಸುವ ಹಕ್ಕನ್ನು ಹೊಂದಿರುವನೇ? ಈ ಒಂದು ಹಿನ್ನೆಲೆಯಲ್ಲಿ ತುಂಬಾ ವಾದ ವಿವಾದಗಳೂ ನಡೆದು, ಕೊನೆಗೆ ೧೮೫೬ರ ವೇನ್ಸ್‌ಡೇಲ್ ಕುಲೀನತೆ ಖಟ್ಲೆಯ ಮುಖಾಂತರ ಇದನ್ನು ಬಗೆಹರಿಸಲಾಯಿತು. ಇದು ಎರಡು ಅಂಶಗಳಿಂದ ಕೂಡಿದೆ.

(೧) ಅರಸನಿಗೆ ಕುಲೀನ ವರ್ಗವನ್ನು ಹಾಗೂ ಜೀವಾವಧಿ ಕುಲೀನರುಗಳನ್ನು ರಚಿಸುವ ಅಧಿಕಾರವಿದೆ.

(೨) ಜೀವಾವಧಿ ಕುಲೀನನು ಹಿರಿಯರ ಸಭೆಯ ಸದಸ್ಯತ್ವಕ್ಕೆ ಅರ್ಹನಲ್ಲವಾದುದರಿಂದ ಅರಸನು ಅವರಿಗೆ ಸಭೆಗೆ ಬರುವಂತೆ ಪತ್ರ ನೀಡುವಂತಿಲ್ಲ. ಈ ವಿಧವಾದ ತೀರ್ಮಾನಕ್ಕೆ ನೀಡಲಾದ ಕಾರಣ ಎಂದರೆ ಸಂಪ್ರದಾಯದಂತೆ ಅರಸನಿಗೆ ಈ ವಿಧವಾದ ಅಧಿಕಾರ ಹಕ್ಕಿನಿಂದ ದೊರೆತಿದೆ. ಆದುದರಿಂದ ಅರಸನು ಅದನ್ನು ಉಲ್ಲಂಘಿಸಲಾಗದು. ಆದರೆ ಸನ್ನದು ಪತ್ರಗಳನ್ನು ಹೊಂದದೇ ಹೋದ ಕುಲೀನರುಗಳ ಹಕ್ಕು ಏನು? ಆದರೆ ಅವರೂ ಅರಸನ ಪತ್ರಗಳ ಆಧಾರದಿಂದಲೇ ಸಭೆಯ ಸದಸ್ಯರಾಗಿರುವುದು ಸಕ್ರಮವೇ? ಈ ದಿಶೆಯಲ್ಲಿ ಕುಲೀನ ವರ್ಗದವರು ಹೇಳಿದಂತೆ 'ಇನಾಂದಾರ' ವರ್ಗದ ಶ್ರೀಮಂತರಿಗೆ ಮಾತ್ರ ಮೇಲ್ಮನೆಯಲ್ಲಿ ಕೂಡುವ ರಾಯಸ ಪತ್ರಗಳನ್ನು ಅರಸು ನೀಡಬಹುದೇ ಹೊರತು ಸರ್ವರಿಗೂ ಅಲ್ಲ. ಏಕೆಂದರೆ ಬೇರೆಯವರು ಶ್ರೀಮಂತ ವರ್ಗದವರಲ್ಲ. ಆದರೆ ಅರಸು ಪರ ವಾದಿಗಳ ಪ್ರಕಾರ ಅರಸನ ಅಧಿಕಾರ ಈ ದಿಶೆಯಲ್ಲಿ ಅವಿಚ್ಛಿನ್ನವಾದುದು. ಆದುದರಿಂದ, ಅರಸನು ಕೇವಲ ಶ್ರೀಮಂತ ವರ್ಗದವರಿಗೆ ಮಾತ್ರ ರಾಯಸ ಪತ್ರಗಳನ್ನು ಕಳುಹಿಸಬಹುದು ಎಂಬ ತರ್ಕ ಸೂಕ್ತವಾಗಲಾರದು. ಈ ವಿಧವಾದ

ವಾದವು ಅನೇಕ ವರ್ಷಗಳವರೆಗೂ ಜರುಗಿ ಅಂತಿಮವಾಗಿ ಈ ಕೆಳಕಂಡ ನಿರ್ಣಯಕ್ಕೆ ಬರಲಾಯಿತು.

(೧) ಇನಾಮನ್ನು ಹೊಂದಿರುವ ಅವಧಿ ಅರಸನ ಆಜ್ಞಾಪತ್ರಕ್ಕೆ ಆಧಾರವಲ್ಲ.

(೨) ಅರಸನು ಕುಲೀನರ ವಂಶಸ್ಥರಿಗೆ ಎಷ್ಟೇ ಅವಧಿ ಕಳೆದಿದ್ದರೂ ಅವರಿಗೆ ಆಜ್ಞಾ ಪತ್ರಗಳನ್ನು ಸಭೆಗೆ ಬರುವಂತೆ ಕಳುಹಿಸಿ ಕೊಡಬಹುದು. ಆದುದರಿಂದ ಈ ಮೇಲ್ಮನೆಯ ಸದಸ್ಯತ್ವವು ಆನುವಂಶಿಕವಾದದ್ದು.

(೩) ಈ ಹಕ್ಕು ಆನುವಂಶಿಕವಾದರೂ ಎರಡು ನಿಯಮಗಳಿಗೆ ಅನುಗುಣವಾಗಿದೆ: (ಅ) ಮೊದಲಿನ ಸಂತಾನಕ್ಕೆ ಮಾತ್ರ ಸೀಮಿತ. (ಆ) ಪುರುಷ ಉತ್ತರಾಧಿಕಾರಿಗಳಿಗೆ ಮಾತ್ರ ಈ ಹಕ್ಕನ್ನು ನೀಡಬೇಕು.

### ಪ್ರಾತಿನಿಧಿಕ ಕುಲೀನರು

ಪ್ರಾತಿನಿಧಿಕ ಕುಲೀನರು ಎರಡು ವರ್ಗದಲ್ಲಿದ್ದಾರೆ. ಮೊದಲನೆಯದಾಗಿ ಸ್ಕಾಟ್‌ಲ್ಯಾಂಡಿನ ಪ್ರತಿನಿಧಿ ಕುಲೀನರು ಹಾಗೂ ಎರಡನೆಯವರು ಎಂದರೆ ಐರ್‌ಲ್ಯಾಂಡಿನ ಪ್ರತಿನಿಧಿ ಕುಲೀನರು. ಸ್ಕಾಟ್‌ಲ್ಯಾಂಡಿನ ಪ್ರತಿನಿಧಿಗಳ ಬಿರುದಾವಳಿಯು ೧೭೦೭ರಲ್ಲಿ ಆದ ಒಪ್ಪಂದದ ಪರಿಣಾಮವಾಗಿ ಸ್ಕಾಟ್‌ಲ್ಯಾಂಡ್ ಹಾಗೂ ಇಂಗ್ಲೆಂಡ್ ಒಬ್ಬ ಅರಸನ ಆಳ್ವಿಕೆಗೆ ಒಳಪಟ್ಟು ಮಹಾಬ್ರಿಟನ್ ಒಕ್ಕೂಟವು ಜಾರಿಯಲ್ಲಿ ಬಂದಿತು. ಈ ವಿಧವಾದ ಒಕ್ಕೂಟವು ಜಾರಿಗೆ ಬರುವ ಮುನ್ನ ಸ್ಕಾಟ್‌ಲ್ಯಾಂಡ್ ತನ್ನದೇ ಆದ ಕುಲೀನರ ವ್ಯಸ್ಥೆಯನ್ನು ಹೊಂದಿದ್ದು ಆ ವಿಧವಾದ ಸದಸ್ಯರು ಪಾರ್ಲಿಮೆಂಟಿಗೆ ಬರುತ್ತಿದ್ದರು. ೧೮೦೦ರಲ್ಲಿ ಐರ್‌ಲ್ಯಾಂಡ್ ಇಂಗ್ಲೆಂಡ್‌ನ ಒಕ್ಕೂಟದಲ್ಲಿ ಸೇರ್ಪಡೆ ಹೊಂದಿತು. ಸ್ಕಾಟ್‌ಲ್ಯಾಂಡಿನ ಮಾದರಿಯ ಮೇಲೆ ಐರ್‌ಲ್ಯಾಂಡ್ ಕೂಡಾ ತನ್ನದೇ ಆದ ಕುಲೀನರ ವ್ಯವಸ್ಥೆಯನ್ನು ಹೊಂದಿತ್ತು. ಈ ವಿಧವಾಗಿ ಒಕ್ಕೂಟ ಜಾರಿಗೆ ಬಂದ ಮೇಲೆ ಯಾರಿಗೆ ಎಷ್ಟು ಪ್ರಾತಿನಿಧ್ಯ ನೀಡಬೇಕು ಎಂಬ ಪ್ರಶ್ನೆ ಉದ್ಭವಿಸಿದಾಗ ಪ್ರತಿಯೊಂದು ವಿಭಾಗವೂ ತನ್ನ ಪ್ರತಿನಿಧಿಗಳ ಸಂಖ್ಯೆಯನ್ನು ಮುಂದು ಮಾಡಿದವು. ಈ ಬಗೆಗೆ ಒಂದು ತೀರ್ಮಾನಕ್ಕೆ ಬರಲಾಯಿತು.

(೧) ಇಂಗ್ಲಿಷ್ ಕುಲೀನರುಗಳಿಗೆ ಹೊಸ ಪಾರ್ಲಿಮೆಂಟಿನಲ್ಲಿ ಒಪ್ಪಿಗೆ ನೀಡಲಾಯಿತು.

(೨) ಸ್ಕಾಟ್‌ಲ್ಯಾಂಡಿನವರು ೧೬ ಮಂದಿ ಸದಸ್ಯರನ್ನು ನೂತನ ಪಾರ್ಲಿಮೆಂಟಿಗೆ ಚುನಾಯಿಸಿ ಕಳುಹಿಸಲೇಬೇಕೆಂದು ನಿರ್ಧರಿಸಲಾಯಿತು.

(೩) ಐರಿಷ್ ಕುಲೀನರುಗಳನ್ನು ೨೮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

ಸ್ಕಾಟ್‌ಲ್ಯಾಂಡ್ ಪಾರ್ಲಿಮೆಂಟ್ ವಿಸರ್ಜಿಸಲಾದಾಗೆಲ್ಲಾ ತನ್ನ ನೂತನ ೧೬ ಪ್ರತಿನಿಧಿಗಳನ್ನು ಚುನಾಯಿಸಬೇಕೆಂದು ಐರ್‌ಲ್ಯಾಂಡಿನವರು ಜೀವಾವಧಿಗೆ ಚುನಾಯಿಸಬೇಕೆಂದೂ ನಿರ್ಣಯಿಸಲಾಯಿತು. ಹೀಗಾಗಿ ಐರ್‌ಲ್ಯಾಂಡಿನಲ್ಲಿ ಪಾರ್ಲಿಮೆಂಟ್ ವಿಸರ್ಜನೆ ಆದರೆ ಚುನಾವಣೆಗಳಿಲ್ಲ. ಆದರೆ ಯಾರಾದರೂ ತೀರಿಹೋದರೆ, ಅವರ ಸ್ಥಾನಕ್ಕೆ ಚುನಾವಣೆ ನಡಸಬಹುದು. ಹೀಗೆ ಅನೇಕ ಕಾಲದಿಂದ ಜಾರಿಯಲ್ಲಿರುವ ಈ ವಿಧವಾದ ಪ್ರಾದೇಶಿಕ ಕುಲೀನರ ಪದ್ಧತಿಯಲ್ಲದೆ, ನೂತನವಾಗಿ ಬ್ರಿಟನ್ ಒಕ್ಕೂಟದ ಕುಲೀನರುಗಳೂ ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳುವ ಅವಕಾಶವನ್ನು ಪಡೆದಿದ್ದಾರೆ. ಈ ವಿಧ ಅವಕಾಶವನ್ನು ರಾಜನು ಕಲ್ಪಿಸಬಹುದಾಗಿದೆ. ಈ ಒಂದು ವ್ಯವಸ್ಥೆಯ ಲಾಭವನ್ನು ಸ್ಕಾಟ್‌ಲ್ಯಾಂಡಿನವರು ಹಾಗೂ ಐರ್‌ಲ್ಯಾಂಡಿನವರು ಒಕ್ಕೂಟದ ಒಪ್ಪಂದವಲ್ಲದೆ ಪಡೆಯಬಹುದಾಗಿದೆ.

## ಅಧಿಕಾರಿ ಕುಲೀನರು

ಈ ವಿಧವಾದ ಪ್ರತಿನಿಧಿಗಳನ್ನು ಎರಡು ವರ್ಗದಲ್ಲಿ ವಿಂಗಡಿಸಬಹುದು.

(೧) ಆಧ್ಯಾತ್ಮಿಕ ಕುಲೀನರುಗಳು (೨) ಮರು ಪರಿಶೀಲನೆಯ ಸಾಮಾನ್ಯ ಲಾರ್ಡ್ಸ್. ಕಾನೂನಿನ ಪ್ರಕಾರ ೨೬ ಅಧಿಕಾರಿಗಳು ಚರ್ಚಿನಿಂದ ಈ ವಿಧವಾಗಿ ಲಾರ್ಡ್ಸ್ ಸಭೆಯಲ್ಲಿ ಉಪಸ್ಥಿತರಾಗಬಹುದು. ಈ ಪೈಕಿ ಕೆಂಟರಬರಿ ಆರ್ಚ್ ಬಿಷಪ್ ಹಾಗೂ ಯಾರ್ಕ್ ಮತ್ತು ಲಂಡನ್ನಿನ ಬಿಷಪ್‌ಗಳು, ಡರ್‌ಹ್ಯಾಮ್ ಹಾಗೂ ವಿನ್‌ಚೆಷ್ಟರ್ ಪ್ರತಿನಿಧಿಗಳು ಆಧ್ಯಾತ್ಮಿಕ ಕುಲೀನರುಗಳೆಂದು ಉಪಸ್ಥಿತರಾಗಿರುತ್ತಾರೆ. ಬಾಕಿ ೨೧ ಆಧ್ಯಾತ್ಮಿಕ ಕುಲೀನರುಗಳು ೨೧ ಡೈಯೋಸಿಯಾನ್ ಬಿಷಪ್‌ಗಳು ತಮ್ಮ ಸೇವಾ ಜೇಷ್ಠತೆಯ ಆಧಾರದ ಮೇಲೆ ಸ್ಥಾನಗಳನ್ನು ಪಡೆಯುತ್ತಾರೆ. ಆದುದರಿಂದ ಈ ೨೧ ಡಯಾಸಿಯಾನ್ ಕುಲೀನರುಗಳಲ್ಲಿ ಯಾರಾದರೂ ತೀರಿಹೋದರೆ ಹಾಗೂ ರಾಜೀನಾಮೆ ನೀಡಿದರೆ, ಅವರ ಸ್ಥಾನಗಳನ್ನು ಸೇವಾ ಜೇಷ್ಠತೆಯ ಆಧಾರದಿಂದಲೇ ಭರ್ತಿ ಮಾಡಲಾಗುವುದು.

**ಸಾಮಾನ್ಯ ಮರು ಪರಿಶೀಲನೆಯ (ಮೇಲ್ಮನವಿ) ಹಿರಿಯರು:**

ಮೇಲ್ಮನೆಯು ಕೇವಲ ಶಾಸನ ಸಭೆಯಾಗಿರದೇ ಅದು ನಾಡಿನ ಸರ್ವೋನ್ನತ ನ್ಯಾಯಾಲಯವೂ ಆಗಿದೆ. ಇದು ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್ ಮತ್ತು ಐರ್‌ಲ್ಯಾಂಡಿನ ಎಲ್ಲಾ ಕೋರ್ಟುಗಳಿಗಿಂತ ಅಧಿಕವಾದ ಸ್ಥಾನದಲ್ಲಿದ್ದು, ಅರಸನ ಸರ್ವೋಚ್ಚ ನ್ಯಾಯಾಲಯವಾಗಿದೆ. ಹಿರಿಯರ ಸಭೆಯು ನ್ಯಾಯಾಂಗ ಕಾರ್ಯವನ್ನು ನಿರ್ವಹಿಸುವಲ್ಲಿ ಈ ಸಭೆಯ ಸದಸ್ಯರೆಲ್ಲವೂ ಭಾಗವಹಿಸಬಹುದಾಗಿದೆ. ಆದರೆ ಈ ಸಭೆಯ ಸದಸ್ಯರು ಸಾಮಾನ್ಯ ವರ್ಗಕ್ಕೆ ಸೇರಿದ್ದು, ಅವರಿಗೆ ನ್ಯಾಯ ವಿಷಯಗಳಲ್ಲಿ ಹೆಚ್ಚು ಅರ್ಹತೆ ಇರದೇ ಹೋದುದರಿಂದ, ಈ ಒಂದು ವಿಶೇಷ ಕಾರ್ಯನಿರ್ವಹಿಸಿದರೆ ಅಪರಾಧವಾದೀತು. ಈ ಒಂದು ಉದ್ದೇಶದಿಂದ ಹಾಗೂ ಸಭೆಯ ಹಕ್ಕಿಗೆ ಚ್ಯುತಿ ಬಾರದಂತೆ ಲಾರ್ಡ್ಸ್ ಮರುಪರಿಶೀಲನೆಗೆಂದೇ ಈ ವಿಧವಾದ ಯೋಜನೆಯನ್ನು ರಚಿಸಲಾಗಿದೆ. ೧೮೭೬ರ ಮರು ಪರಿಶೀಲನೆ ವ್ಯಾಪ್ತಿಯ ಕಾಯ್ದೆಯನ್ನು ರಚಿಸಲಾಯಿತು. ಈ ಕಾಯ್ದೆಯ ಅಡಿಯಲ್ಲಿಯ ಸಮಿತಿಯು (೧) ಹಿರಿಯ ಕುಲಪತಿಗಳು, (೨) ಹಿರಿಯರ ಸಭೆಯಲ್ಲಿ ಉಪಸ್ಥಿತರಿದ್ದ ಉನ್ನತ ನ್ಯಾಯಾಧಿಕಾರಿಗಳು ಮತ್ತು (೩) ರಾಜರಿಂದ ನೇಮಕಗೊಂಡ ಅಸಾಮಾನ್ಯ ಮರುಪರಿಶೀಲನೆ ಹಿರಿಯರು. ಈ ಎಲ್ಲರಿಂದ ಸಮಿತಿಯ ಮುಂದೆಯೇ ನ್ಯಾಯಾಂಗ ಕಾರ್ಯ ನಡೆಯಬೇಕು ಎಂದೇ ನಿರ್ಧರಿಸಲಾಗಿದೆ.

೧೮೭೬ರ ಮೇಲ್ಮನವಿ ಅಧಿಕಾರ ವ್ಯಾಪ್ತಿಯ ಕಾನೂನಿನಂತೆ, ಈ ವಿಧವಾದ ನ್ಯಾಯಾಧಿಕಾರಿ ಹಿರಿಯರ ಸದಸ್ಯರ ಅವಧಿಯನ್ನು ಕೇವಲ ಅವರು ನ್ಯಾಯಾಂಗ ಕಾರ್ಯದಲ್ಲಿ ತೊಡಗಿರುವವರಿಗೆಂದೇ ಅರಸನು ನೇಮಿಸುತ್ತಿದ್ದನು. ಆದರೆ ೧೮೮೭ರ ಕಾನೂನಿನಂತೆ ಈ ಕುಲೀನರ ಅವಧಿಯನ್ನು ಜೀವಾವಧಿಗೆ ವಿಸ್ತರಿಸಲಾಯಿತು. ಹಿರಿಯರ ಸಭೆಯ ರಚನೆಯನ್ನು ವಿವರಿಸಿದ ನಂತರ ಅದರ ಬಗೆಗೆ ಇರುವ ಹಲವು ಪ್ರಶ್ನೆಗಳನ್ನು ಪರಿಶೀಲಿಸಬಹುದು. ಮೊದಲನೆಯದೆಂದರೆ, ಈ ವಿಧವಾದ ಹಿರಿಯರ ಸದಸ್ಯರ ಮತದಾನ ಕ್ಷೇತ್ರದ ಬಿರುದನ್ನು ಇವರು ಹೊಂದಿರಲಾಗದು. ಆದರೆ ಅವರ ಬಿರುದಾಂಕಿತ ಅರಸನ ರಾಯಸ ಪತ್ರದ ಒಕ್ಕಣೆಯ ಆಧಾರದ ಮೇಲೆಯೇ ಅವರು ಸಭೆಗೆ ಹಾಜರಾಗಬಹುದು. ಆದರೆ ಇದು ಜನರಿಗೆ ನೀಡಿದ ಅನಿರ್ಬಂಧ ಹಕ್ಕಾಗಿರದೇ ಕೇವಲ ಪಾರ್ಲಿಮೆಂಟಿನಿಂದ ಕಾಲಕಾಲಕ್ಕೆ ನೇಮಿಸುವ ಅಧಿಕಾರವೆಂದೇ ಪರಿಗಣಿಸಬೇಕು. ಹೀಗಾಗಿ ಈ ವಿಧವಾದ ಸದಸ್ಯರನ್ನು ಭಂಗಗೊಳಿಸುವ ಅಧಿಕಾರ ವಿಸ್ತರಿಸುವ ಹಾಗೂ

ಬದಲಾಯಿಸುವ ಹಕ್ಕು ಅರಸರಿಗೆ ಇಲ್ಲ. ಈ ವಿಧವಾಗಿ ಕುಲೀನರನ್ನು ನೇಮಿಸುವ ಅರಸನ ಹಕ್ಕುಗಳ ಮೇಲೆಯೂ ಹಲವು ನಿರ್ಬಂಧಗಳಿವೆ ಎಂಬುದನ್ನು ನಾವು ಅರಿಯಬೇಕು. ಏಕೆಂದರೆ ಪರದೇಶದ ಕುಲೀನರನ್ನು ಅರಸನು ನೇಮಿಸಿದ್ದರೂ ಅವರನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಆಸೀನರಾಗುವಂತೆ ಅರಸನು ಆದೇಶ ನೀಡುವಂತಿಲ್ಲ, ಮತ್ತೊಂದು ಪ್ರಶ್ನೆ ಎಂದರೆ ಕುಲೀನ ಅಂದರೆ ರಾಜನಿಂದ ನೀಡಲ್ಪಟ್ಟ ಈ ಒಂದು ಗೌರವ ಹಾಗೂ ಬಿರುದನ್ನು ಬೇರೆಯವರಿಗೆ ವರ್ಗಾಯಿಸಲೂಬಾರದು. ಅದು ಕೇವಲ ಅವರ ವಂಶಜರಿಗೆ ಮಾತ್ರ ಸಲ್ಲತಕ್ಕ ಗೌರವವಾಗಿದೆ. ಅದೂ ವಂಶ ಪರಂಪರೆಯ ನಿಯಮಾವಳಿಯಂತೆ ಅವರ ಉತ್ತರಾಧಿಕಾರಿಗಳಿಗೆ ಸಲ್ಲುತ್ತದೆ. ಮುಂದುವರಿದು ಈ ವಿಧವಾಗಿ ಒಮ್ಮೆ ಸಂದ ಗೌರವವನ್ನು ಮರಳಿಸುವ ಹಾಗೂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಒಂದು ಬಾರಿ ಕುಲೀನನು ನೇಮಕಗೊಂಡ ಮೇಲೆ ಸದಾಕಾಲ ಅವನು ಕುಲೀನ ಆಗಿಯೇ ಇರುತ್ತಾನೆ.

ಮೂರನೆಯ ಪ್ರಶ್ನೆ ಎಂದರೆ ಕುಲೀನ ಹಾಗೂ ಹಿರಿಯರ ಸಭೆಯ ಸದಸ್ಯತ್ವದಲ್ಲಿಯ ವ್ಯತ್ಯಾಸ. ಸಾಮಾನ್ಯವಾಗಿ ಈ ಎರಡೂ ಒಂದೇ ಎಂದು ಅನೇಕರ ಭಾವನೆಯಾಗಿದೆ. ಆದರೆ ಅದು ಸರಿಯಲ್ಲ. ಏಕೆಂದರೆ ಅರಸನಿಂದ ಕೇವಲ ಜೀವಾವಧಿಗೆಂದು ನೇಮಕಗೊಂಡ ಕುಲೀನರ ಹಾಗೂ ಆನುವಂಶಿಕ ಕುಲೀನರಲ್ಲಿಯ ವ್ಯತ್ಯಾಸವನ್ನು ಮನಗಾಣಬೇಕು. ಏಕೆಂದರೆ ಒಬ್ಬರು ಕೇವಲ ತಮ್ಮ ಜೀವಾವಧಿಗೆ ಮಾತ್ರ ಸದಸ್ಯತ್ವವನ್ನು ಹೊಂದಿದ ಆನುವಂಶಿಕರು ತಲೆತಲಾಂತರ ಕುಲೀನರಾಗಿ ಮುಂದುವರಿಯುವರು. ಮುಂದುವರಿದು ಆಧ್ಯಾತ್ಮಿಕ ಹಾಗೂ ಸಾಮಾನ್ಯ ಮರುಪರಿಶೀಲನೆಯ ಹಿರಿಯ ಸದಸ್ಯರು ಆನುವಂಶಿಕ ಕುಲೀನರಂತೆ ಅಲ್ಲ. ಆಧ್ಯಾತ್ಮಿಕ ಕುಲೀನರುಗಳು ತಮ್ಮ ಜೀವನಾವಧಿಗೆ ಮತ್ತು ಸಾಮಾನ್ಯ ಮರುಪರಿಶೀಲನೆಯ ಸ್ಥಾನಗಳಿಗೆ ನೇಮಕವಾದವರು ತಮ್ಮ ಅಧಿಕಾರಾವಧಿಯಲ್ಲಿ ಮಾತ್ರ ಆಸೀನರಾಗಿರುತ್ತಾರೆ. ಅವರು ಕಾನೂನಿನಂತೆ ಆನುವಂಶಿಕ ಕುಲೀನರುಗಳಿಗೆ ಸರಿಸಮರಲ್ಲ.

# V

# ಹಿರಿಯರ ಮತ್ತು ಸಾಮಾನ್ಯರ ಅಧಿಕಾರ ಮತ್ತು ಹಕ್ಕು ಬಾಧ್ಯತೆಗಳು

ಪಾರ್ಲಿಮೆಂಟಿನ ಎರಡೂ ಸದನಗಳು ಸಾಮೂಹಿಕವಾಗಿ ಒಂದೇ ವಿಧವಾದ ಹಕ್ಕು ಬಾಧ್ಯತೆಗಳನ್ನು ಹೊಂದಿವೆ. ಆದರೆ ಅಧಿಕಾರದಲ್ಲಿ ಅವು ಒಂದೇ ಆಗಿರದೇ ಹೋದುದರಿಂದ ಅವುಗಳ ಕಾರ್ಯ ಕಲಾಪಗಳನ್ನು ತಿಳಿದುಕೊಳ್ಳಬೇಕು. ಎರಡೂ ಸದನದ ಸದಸ್ಯರೆಂದು ಸಾಮೂಹಿಕವಾಗಿ ಹೊಂದಿರುವ ಹಕ್ಕು ಬಾಧ್ಯತೆಗಳಲ್ಲದೆ ವ್ಯಕ್ತಿಗತವಾಗಿ ಹೊಂದಿರುವ ಸೌಲಭ್ಯಗಳನ್ನು ಅವರ ಘನತೆ ಗೌರವಗಳನ್ನು ಕಾಪಾಡಲೆಂದೇ ನೀಡಲಾಗಿದೆ.

.

## ಭಾಗ–I

## ಸಂಸತ್ತಿನ ಸೌಲಭ್ಯಗಳು

(ಅ) **ಕಾಮನ್ಸ್ ಸದನದ ಸೌಲಭ್ಯಗಳು:** ಸದಸ್ಯರಲ್ಲದವರನ್ನು ಬಿಟ್ಟು ತಾವೇ ತಾವು ಸದನದ ಒಳಗಡೆ ಚರ್ಚೆ ಮಾಡುವ ಅಧಿಕಾರವಿದೆ. ಈ ಸಂಪ್ರದಾಯದ ಮೂಲವನ್ನು ಎರಡು ವಿಧವಾದ ಸಂದರ್ಭಗಳಲ್ಲಿ ಕಾಣಬಹುದಾಗಿದೆ. ಏಕೆಂದರೆ ಕಾಮನ್ಸ್ ಸಭೆಯಲ್ಲಿಯ ಆಸನ ವ್ಯವಸ್ಥೆ ಸೂಕ್ತವಾಗಿರದೆ ಇದ್ದುದು. ಸದಸ್ಯರು, ಪರಕೀಯರೆಂದು ಬೇರೆ ಬೇರೆ ಆಸನ ವ್ಯವಸ್ಥೆಯೇ ಇಲ್ಲ. ಹೀಗಾಗಿ ಯಾವಾಗಲಾದರೂ ಮತ ಎಣಿಕೆಯ ಸಮಯದಲ್ಲಿ ಅವಾಂತರಕ್ಕೆ ಆಸ್ಪದವೇ ಅಧಿಕವಾಗಿರುವುದರಿಂದ ಸದಸ್ಯೇತರರನ್ನು ಹೊರಗೆ ಹಾಕಿ ಮತಗಣನೆ ಕಾರ್ಯ ಮಾಡಲಾಗುವುದು. ಎರಡನೆಯ ಸಂದರ್ಭವೆಂದರೆ, ಹಿಂದಿನ ಕಾಲದಲ್ಲಿ ರಾಜನಿಗೆ ಸದಸ್ಯರು ತನ್ನ ಬಗೆಗೆ ಏನು ಮಾತನಾಡುವರು ಎಂದು ತಿಳಿಯುವ ಕುತೂಹಲದಿಂದ ಬೇಹುಗಾರಿಕೆಗೆಂದೇ ಹಲವಾರು ವ್ಯಕ್ತಿಗಳನ್ನು ಸದನಕ್ಕೆ ಕಳುಹಿಸುತ್ತಿದ್ದ. ಇದರಿಂದಾಗಿ ಸದನದ ಸದಸ್ಯರು ರಾಜನ ಬೆದರಿಕೆಗೆ ಗುರಿಯಾಗಬೇಕಾಗುತ್ತಿತ್ತು ಹಾಗೂ ಅರಸನ ಅವಕೃಪೆಗೂ ಬಲಿಯಾಗುತ್ತಿದ್ದರು. ಮುಂದುವರಿದು ಸದಸ್ಯರ ಸ್ವಾತಂತ್ರ್ಯವೂ ಮೊಟಕುಗೊಳ್ಳುತ್ತಿತ್ತು. ಈ ಒಂದು ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗಬಹುದಾದ ಏಕಮಾತ್ರ ಉಪಾಯವೆಂದರೆ ಸದಸ್ಯೇತರರನ್ನು ಹೊರಗೆ ಹಾಕಿ ಕಾರ್ಯಕಲಾಪಗಳನ್ನು ನಡೆಸುವುದು. ಈ ಒಂದು ಹಕ್ಕಿನಂತೆ ಪರಕೀಯರು ಸದನದ ಚರ್ಚೆಯ ಕಾಲದಲ್ಲಿ ಕಲಾಪಗಳನ್ನು ವೀಕ್ಷಿಸುತ್ತಿದ್ದರು. ಆದರೆ ಸದನದ ಸದಸ್ಯರು ಯಾರಾದರೂ ಅದಕ್ಕೆ ಆಕ್ಷೇಪಿಸಿದಲ್ಲಿ ಸಭಾಧ್ಯಕ್ಷರು ಅವರನ್ನು ಅನಿವಾರ್ಯವಾಗಿ ಹೊರಹಾಕ ಬೇಕಾಗುತ್ತಿತ್ತು. ಈ ಒಂದು ಪೇಚಿಗೆ ಆಸ್ಪದ ನೀಡಬಾರದೆಂದೇ ಸದನವು ತನ್ನದೇ ಆದ ಒಂದು ಉಪಾಯ ಹೂಡಿತು. ಅದೇನೆಂದರೆ ೧೮೭೫ರಲ್ಲಿ ಹಳೆಯ ನಿಯಮಾವಳಿಯಲ್ಲಿ ಬದಲಾವಣೆಯನ್ನು ತಂದು, ಸದನದ ಯಾವ ಸದಸ್ಯನಾದರೂ ಅಪರಿಚಿತರನ್ನು ಸದನದಲ್ಲಿ ಗುರುತಿಸಿದಾಗ, "ಸಾರ್ ಅಪರಿಚಿತ ಬೇಹುಗಾರರು" ಎಂದು ಅಧ್ಯಕ್ಷರ ಗಮನ ಸೆಳೆದರೆ ಸಾಕು, ಕೂಡಲೇ ಸಭೆಯ ಅಧ್ಯಕ್ಷರು ಸದನದಲ್ಲಿಯ

ಸದಸ್ಯೇತರರನ್ನು ಹೊರಗೆ ಹೋಗಬೇಕೆಂದೇ ಸೂಚಿಸುತ್ತಾರೆ. ಈ ಒಂದು ಉಪಾಯದಿಂದ ಸದನ ಈ ದಿಶೆಯಲ್ಲಿ ಈಗಾಗಲೇ ರಚಿಸಿರುವ ನಿಯಮಕ್ಕೆ ಯಾವ ವಿಧವಾದ ತೊಂದರೆಯೂ ಬಾರದು. ಅಲ್ಲದೆ ಯಾವ ಸದಸ್ಯರಿಗೂ ನೋವು ಉಂಟುಮಾಡದು. ಆದರೆ ಈ ನಿಯಮಾವಳಿಯು ಸಭೆಯ ಅಧ್ಯಕ್ಷರಿಗೆ ಹೆಚ್ಚು ಅಧಿಕಾರ ನೀಡುತ್ತದೆ. ಮುಂದುವರಿದು, ಸಾಮಾನ್ಯ ಸಭೆಯು ತನ್ನ ಚರ್ಚೆಗಳ ರಹಸ್ಯತೆಯನ್ನು ಕಾಪಾಡುವ ಹಕ್ಕನ್ನೂ ಹೊಂದಿದೆ. ಹೀಗಾಗಿ ಅದು ತನ್ನ ಚರ್ಚೆಗಳನ್ನು ಪ್ರಕಟಿಸುವುದಿಲ್ಲ. ಆದರೆ ೧೭೭೧ರಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಉದಾಹರಿಸಬಹುದು. ಏಕೆಂದರೆ ಅದು ಯಾವ ಚರ್ಚೆಗೂ ಆಸ್ಪದ ನೀಡದೇ ಈ ಒಂದು ಹಕ್ಕನ್ನು ಎತ್ತಿಹಿಡಿದಿದೆ. ಲಂಡನ್ನಿನ ಒಬ್ಬ ಮುದ್ರಕನು ಸಭೆಯ ನಡವಳಿಕೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದನು. ಆದರೆ ಸಭೆಯ ಸಮ್ಮತಿಯನ್ನು ಪಡೆದಿರಲಿಲ್ಲ. ಸಾಮಾನ್ಯ ಸಭೆಯು ತನ್ನ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಮುದ್ರಕನನ್ನು ದಸ್ತಗಿರಿ ಮಾಡುವಂತೆ ಒಬ್ಬ ಸೇವಕನನ್ನು ಕಳುಹಿಸಿಕೊಟ್ಟರು. ಆದರೆ ಮುದ್ರಕನು ದೂರು ನೀಡಿ ಸಾಮಾನ್ಯರು ಕಳುಹಿಸಿದ ಸೇವಕನನ್ನು ಪೊಲೀಸರ ವಶಕ್ಕೆ ಕೊಟ್ಟನು. ಈ ದಿಶೆಯಲ್ಲಿ ನಡೆದ ಕ್ರಿಮಿನಲ್ ಮೊಕದ್ದಮೆಯ ಸಂಚಾಲಕರುಗಳಾದ ಮೇಯರ್ ಹಾಗೂ ಇಬ್ಬರು 'ಆಲ್ಡರ್ ಮೆನ್'ಗಳು ಸಾಮಾನ್ಯ ಸಭೆಯ ಅಧಿಕಾರವನ್ನು ಅಂಗೀಕರಿಸದೆ, ಸಾಮಾನ್ಯ ಸಭೆಯವರು ಕಳುಹಿಸಿದ ಸೇವಕನನ್ನು 'ಬೇಲ್' ಮೇಲೆ ಬಿಡುಗಡೆ ಮಾಡಿದರು. ಸಾಮಾನ್ಯರ ಸಭೆಯು ಮೇಯರ್, ಆಲ್ಡರ್‌ಮೆನ್ ಹಾಗೂ ದಾಖಲಿಸಿದ ಗುಮಾಸ್ತ ಮೂವರನ್ನು ಸಭೆಗೆ ಕರೆಸಿತು. ಅವರು ಬರೆದಿದ್ದುದನ್ನು ಅಳಿಸಿ ಹಾಕಿದರು ಹಾಗೂ ಆ ಹಾಳೆಯನ್ನು ಹರಿದು ಹಾಕಿ ಈ ಮೂವರನ್ನೂ ಲಂಡನ್ನಿನ ಗೋಪುರದಲ್ಲಿ ವಾರೆಂಟನ್ನು ಮನ್ನಿಸದೇ ಹೋದುದಕ್ಕೆ ಬಂಧನದಲ್ಲಿರಿಸಿದರು. ಅಂದಿನಿಂದ ಯಾರೂ ಸಾಮಾನ್ಯರ ಸಭೆಯ ಆದೇಶಗಳನ್ನು ಉಲ್ಲಂಘಿಸುವ ಸಾಹಸಕ್ಕೆ ಕೈ ಹಾಕಿಲ್ಲ. ನಾವು ವಾರ್ತಾ ಪತ್ರಿಕೆಗಳಲ್ಲಿ ನೋಡಬಹುದಾದ ವಾರ್ತೆಗಳನ್ನು ಅದು ಮನಸ್ಸು ಮಾಡಿದರೆ, ನಿಲ್ಲಿಸಬಹುದು. ಅನೇಕ ಬಾರಿ ಸದನದ ಕಲಾಪಗಳು ಪತ್ರಿಕೆಯಲ್ಲಿ ವರದಿಯಾಗುವುದಿಲ್ಲ. ಯುದ್ಧ ಸಮಯದಲ್ಲಿ ಪಾರ್ಲಿಮೆಂಟಿನ ರಹಸ್ಯ ಸಭೆಗಳನ್ನು ನಾವು ಸ್ಮರಿಸಬಹುದಾಗಿದೆ.

ಸಾಮಾನ್ಯ ಸಭೆಯ ಮತ್ತೊಂದು ಹಕ್ಕು ಎಂದರೆ ಸದನಕ್ಕೆ ಸೂಕ್ತವಾದ ಸಂವಿಧಾನವನ್ನು ನೀಡುವುದು. ಈ ಹಕ್ಕನ್ನು ಕುರಿತು ಮೂರು ವಿಧವಾದ ಪ್ರಶ್ನೆಗಳನ್ನು ಯೋಚಿಸಬಹುದು.

(೧) ಖಾಲಿ ಅಥವಾ ತೆರವಾದ ಸ್ಥಾನಗಳನ್ನು ತುಂಬುವುದು: ಸಾರ್ವತ್ರಿಕ ಚುನಾವಣೆಗಳ ಮೂಲಕ ನೂತನ ಪಾರ್ಲಿಮೆಂಟನ್ನು ರಚಿಸುವ ಹಕ್ಕು ಅರಸನದಾಗಿದ್ದರೆ ಪಾರ್ಲಿಮೆಂಟ್ ಜಾರಿಯಲ್ಲಿದ್ದಾಗ ತೆರವಾದ ಸ್ಥಾನಗಳನ್ನು ತುಂಬುವುದು ಸಾಮಾನ್ಯರ ಸಭೆಗೆ ಸೇರಿದ ಹಕ್ಕು. ಆದುದರಿಂದ ಈ ವಿಧವಾಗಿ ಸ್ಥಾನಗಳು ಖಾಲಿ ಬಿದ್ದಾಗ ಅದನ್ನು ತುಂಬಲು ಸಭೆಯ ಅಧ್ಯಕ್ಷರು ಸಾಮಾನ್ಯರ ಸಭೆಯ ಆದೇಶದಂತೆ ಆಜ್ಞೆ ಹೊರಡಿಸುತ್ತಾರೆಯೇ ಹೊರತು ರಾಜನ ಆಜ್ಞೆಯಂತಲ್ಲ. ಪಾರ್ಲಿಮೆಂಟ್ ಅಧಿವೇಶನ ಇಲ್ಲದೇ ಹೋದಲ್ಲಿ ಸಚಿವರ ಸಭೆಯ ಅಧ್ಯಕ್ಷರೇ ಬೇರೆ ರೀತಿಯಲ್ಲಿ ಈ ಆಜ್ಞೆಯನ್ನು ಹೊರಡಿಸುತ್ತಾರೆ.

ಈ ದಿಶೆಯಲ್ಲಿ ಗಮನಿಸಬೇಕಾದ ಎರಡನೆಯ ಹಕ್ಕು ಎಂದರೆ ಚುನಾವಣೆಯ ತಕರಾರುಗಳ ಬಗೆಗೆ ನಿರ್ಣಯ ತೆಗೆದುಕೊಳ್ಳುವುದು. ಈ ಒಂದು ವಿಷಯದಲ್ಲಿ ಅರಸ ಹಾಗೂ ಸಾಮಾನ್ಯರ ಸಭೆಯ ಮಧ್ಯೆ ದೀರ್ಘ ವಿವಾದ ಜರುಗಿತು. ಪ್ರತಿಯೊಂದು ಪಕ್ಷವೂ ತನ್ನದೇ ಅಧಿಕಾರವಿದೆ ಎಂದು ಸಾಧಿಸತೊಡಗಿದ್ದನ್ನು ನಾವು ಸ್ಮರಿಸಬಹುದು. ಮೂಲವಾಗಿ ಮತದಾರ ಕ್ಷೇತ್ರಕ್ಕೆ ಚುನಾವಣೆ ನಡೆಸುವ ಆಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಪಾರ್ಲಿಮೆಂಟಿಗೇ ನೀಡಿ ಸಾಮಾನ್ಯರ ಸಭೆಯ ಹಕ್ಕನ್ನು ಪರಿಗಣಿಸಲಾಯಿತು. ಆದರೆ

ನಾಲ್ಕನೆಯ ಹೆನ್ರಿಯ ಆಳ್ವಿಕೆಯಲ್ಲಿ ಇದನ್ನು ರಾಜನ ಅಧಿಕಾರವೆಂದೇ ಪರಿಗಣಿಸಿ ನ್ಯಾಯಾಧ್ಯಕ್ಷರಿಗೆ ಅಂದರೆ "ಛಾನ್ಸರಿ"ಗೆ ವಹಿಸಿಕೊಡಲಾಯಿತು. ೧೬೦೪ರಲ್ಲಿ ಈ ವಾದವು ಮತ್ತೊಂದು ತಿರುವನ್ನೇ ಹೊಂದಿತು. ಅರಸನಾದ ಒಂದನೆಯ ಜೇಮ್ಸನು ರಾಜಾಜ್ಞೆಯನ್ನು ಸಾರಿ ಯಾವ ದಿವಾಳಿಕೋರ ಅಥವಾ ದೇಶಭ್ರಷ್ಟನನ್ನು ಪಾರ್ಲಿಮೆಂಟಿಗೆ ಚುನಾಯಿಸಲಾಗದು ಎಂದೇ ಘೋಷಿಸಿದನು. ಆದರೆ ಬಕ್ಸ್‌ಕೌಂಟಿಯು ಮಿ. ಗಾಡ್‌ವಿನ್ ಎಂಬ ದೇಶಭ್ರಷ್ಟನನ್ನು ಚುನಾಯಿಸಿತು. ಆದುದರಿಂದ ಅರಸನು ಅವನ ಚುನಾವಣೆಯನ್ನು ಕಾನೂನು ವಿರೋಧವೆಂದು ಸಾರಿ ಮರು ಚುನಾವಣೆಗೆ ಆಜ್ಞೆ ನೀಡಿದನು. ಪೋರ್ಟ್ವಿಸ್ಕೋ ಎಂಬ ವ್ಯಕ್ತಿ ಚುನಾಯಿತನಾದ. ಪಾರ್ಲಿಮೆಂಟ್ ಅರಸನ ಆಜ್ಞೆಯಂತೆ ಚುನಾವಣೆ ಹೊಂದಿದ್ದನ್ನು ಲೆಕ್ಕಿಸದೇ ಗಾಡ್‌ವಿನ್ ಅವನ ಚುನಾವಣೆಯನ್ನು ತನ್ನ ಗೊತ್ತುವಳಿಯ ಮೂಲಕ ಸಭೆಯ ಸದಸ್ಯನೆಂದು ಸಾರಿತು. ಆದರೆ ಅರಸನು ಈ ಒಂದು ತಂಟೆಯನ್ನು ಬಗೆಹರಿಸುವ ಹಕ್ಕು ತನಗೆ ಸೇರಿದುದು ಎಂದೇ ಘೋಷಿಸಿದನು. ಈ ತಗಾದೆಯನ್ನು ಬಗೆಹರಿಸಲೆಂದೇ ಸಾಮಾನ್ಯರ, ಹಿರಿಯರ ಹಾಗೂ ರಾಜನನ್ನು ಒಳಗೊಂಡಂತೆ ಒಂದು ಸಭೆಯನ್ನು ಕರೆದಾಗ ಸಾಮಾನ್ಯರ ಸದಸ್ಯರು ಅರಸನಿಗೆ ತನ್ನ ಅಧಿಕಾರವನ್ನು ಪಾರ್ಲಿಮೆಂಟಿಗೇ ಬಿಟ್ಟು ಕೊಡಬೇಕೆಂದು ಸಲಹೆ ಮಾಡಿದರು. ಆದರೆ ಈ ವಿಧವಾದ ಚುನಾವಣೆ ತಕರಾರುಗಳನ್ನು ಪರಿಶೀಲಿಸುವ ಸಾಮಾನ್ಯರ ಸಭೆ ಅಧಿಕಾರವು ಅನೇಕ ತೊಂದರೆ ಹಾಗೂ ಆತಂಕಗಳಿಗೆ ಆಸ್ಪದ ನೀಡಿ ಅಭ್ಯರ್ಥಿಗಳಿಗೆ ಕಿರಿಕಿರಿಯಾಯಿತು. ಏಕೆಂದರೆ ಈ ಬಗೆಯ ವಿಚಾರಣೆಯು ಪಕ್ಷಾತೀತವಾಗಿರದೇ ಪಕ್ಷಗಳ ರಾಜಕಾರಣಕ್ಕೆ ಆಸ್ಪದ ನೀಡಿತ್ತು. ಕೊನೆಗೆ ೧೮೬೮ರಲ್ಲಿ ಸದನವು ಈ ಸಂಗತಿಯನ್ನು ನ್ಯಾಯಾಲಯಕ್ಕೆ ಬಿಟ್ಟುಕೊಟ್ಟಿತು.

ಈ ವಿಧವಾದ ಮೂರನೆಯ ಹಕ್ಕು ಎಂದರೆ, ಸದನದ ಗೌರವಕ್ಕೆ ಕುಂದು ತರುವಂತೆ ವರ್ತಿಸಿದ ಸದಸ್ಯನನ್ನು ಹೊರಗೆ ಹಾಕುವ ಸಂಗತಿಗೆ ಸೇರಿದ್ದು. ಹೊರಗೆ ಹಾಕುವುದು ಅವನು ಚುನಾವಣೆಗೆ ಅನರ್ಹನೆಂದು ಹೇಳಲಾಗದು. ಏಕೆಂದರೆ ಹೀಗೆ ಸದನದಿಂದ ಹೊರದೂಡಿದ ಸದಸ್ಯನು ಚುನಾವಣೆಗೆ ಸ್ಪರ್ಧಿಸಬಹುದಾಗಿತ್ತು. ನಾವು ಇಲ್ಲಿ ಸ್ಮರಿಸಬೇಕಾದ ಸಂಗತಿ ಎಂದರೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಮಾತ್ರಕ್ಕೆ ಸದನದಲ್ಲಿ ಆಸೀನನಾಗುವ ಹಕ್ಕು ಪಡೆದಂತಲ್ಲ. ಏಕೆಂದರೆ ಚುನಾವಣೆಗಳಲ್ಲಿ ಗೆಲ್ಲುವುದು ಮತದಾರರ ಕೃಪೆಯಿಂದ. ಅದರಂತೆಯೇ ಸದನದಲ್ಲಿ ಕೂಡಬೇಕಾದುದು ಸದನದ ಕೃಪೆಯಿಂದ ಮಾತ್ರ ಸಾಧ್ಯ. ಈ ದಿಶೆಯಲ್ಲಿ ಅನೇಕ ಉದಾಹರಣೆಗಳಿವೆ. ಅದೇನೆಂದರೆ ಚುನಾವಣೆಗಳಲ್ಲಿ, ವಿಜಯ ಗಳಿಸಿದರೂ ಸದನದ ಸದಸ್ಯತ್ವವನ್ನು ಪಡೆಯದೇ ಹೋಗಿದ್ದಾರೆ. ವಿಲ್ಕೆಯವರ ಘಟನೆ ಇದಕ್ಕೆ ಸಜೀವ ಉದಾಹರಣೆಯಾಗಿದೆ. ಸಸೆಕ್ಸ್ ಮತದಾರ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಚುನಾವಣೆಗೊಂಡರೂ ಹಿರಿಯರ ಸದನವು ನಾಲ್ಕು ಬಾರಿಯೂ ಅವರಿಗೆ ಸದನದಲ್ಲಿ ಕುಳಿತುಕೊಳ್ಳುವ ಆಸ್ಪದವನ್ನೇ ತಿರಸ್ಕರಿಸಿತು. ಮತ್ತೊಂದು ಮಹತ್ವದ ಹಕ್ಕು ಎಂದರೆ, ಸಭೆಯಲ್ಲಿ ಉದ್ಭವಿಸುವ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬಹುದಾದ ವಿಶೇಷ ಅಧಿಕಾರ. ಹೀಗೆಂದಾಗ ಸಭೆಯ ಕಾರ್ಯಕಲಾಪಗಳನ್ನು ನಡೆಸುವ ರೀತಿ ನೀತಿ ಹಾಗೂ ಅದರ ನಿರ್ಣಯಗಳನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸುವಂತಿಲ್ಲ. ಈ ಒಂದು ಸಂಗತಿಯ ಬಗೆಗೆ ಅನೇಕ ಉದಾಹರಣೆಗಳಿವೆ. ಮಿ. ಬ್ರಾಡ್ಲಾ ಹಾಗೂ ಗೋಸೆಟ್ ಪ್ರಕರಣದ ವಿವರಗಳು ಸರಳವಾಗಿವೆ. ದಿನಾಂಕ ೩ ಮೇ ೧೮೮೦ರಂದು ನಾರ್ತ್‌ಹ್ಯಾಂಟನ್ನಿನಿಂದ ಚುನಾವಣೆ ಹೊಂದಿದ ಮಿ. ಬ್ರಾಡ್ಲಾ ಅವರು ಸದನದ ಸಂಪ್ರದಾಯದಂತೆ ಪ್ರತಿಜ್ಞೆಯನ್ನು ಸ್ವೀಕರಿಸದೆ, ಕೇವಲ ತಮ್ಮ ಸಮ್ಮತಿಯನ್ನು ದೃಢೀಕರಿಸುವುದಾಗಿ ಹೇಳಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯು ಸತ್ಯವನ್ನು ದೃಢೀಕರಿಸುವ ಕ್ರಮವು ಕೇವಲ ನ್ಯಾಯಾಲಯಗಳಿಗೆ ಮಾತ್ರ ಸೀಮಿತವಾಗಿರುವುದರಿಂದ, ಪಾರ್ಲಿಮೆಂಟ್‌ನ ಸದಸ್ಯರು ಆ ಕ್ರಮವನ್ನು

ಅನುಸರಿಸಕೂಡದು ಎಂದು ತಿಳಿಸಿತು. ಹೀಗಾಗಿ ಪ್ರತಿಜ್ಞೆಯ ವಿಧಾನ ಒಂದೇ ಮಾರ್ಗವೆಂದು ಹೇಳಲಾಯಿತು. ಹೀಗೆಂದ ಮೇಲೆ ಮಿ. ಬ್ರಾಡ್ಲಾ ಅವರು ಪ್ರತಿಜ್ಞೆಯನ್ನು ಸ್ವೀಕರಿಸಲು ಅಧ್ಯಕ್ಷರ ಆಸನದತ್ತ ಧಾವಿಸಿದರು. ಆದರೆ ಸದನವು ಅವರ ಕ್ರಮವನ್ನು ವಿರೋಧಿಸಿ ಈ ವಿಧವಾದ ಪ್ರತಿಜ್ಞೆಯು ಮನಸ್ಸಾಕ್ಷಿಗೆ ವಿರೋಧವಾಗಿದ್ದು, ಕೇವಲ ಔಪಚಾರಿಕವಾಗುತ್ತದೆ ಎಂದು ಹೇಳಿ ಅವಕಾಶವನ್ನು ನಿರಾಕರಿಸಿತು. ಆಗ ಮತ್ತೊಂದು ಸಮಿತಿಯನ್ನು ನೇಮಿಸಿ ಮಿ. ಬ್ರಾಡ್ಲಾ ಅವರಿಗೆ ಪ್ರತಿಜ್ಞೆ ತೆಗೆದುಕೊಳ್ಳುವ ಅವಕಾಶವನ್ನು ನೀಡಬಹುದೇ ಎಂದು ಕೋರಲಾಯಿತು. ಸಮಿತಿಯು ಅವರ ಪ್ರತಿಜ್ಞೆಗೆ ಅವಕಾಶ ನಿರಾಕರಿಸಿ, ಸತ್ಯವನ್ನು ದೃಢೀಕರಿಸುವ ವಿಚಾರವನ್ನು ನ್ಯಾಯಾಲಯದ ತೀರ್ಪಿಗೆ ವಹಿಸಬೇಕೆಂದು ಸಲಹೆ ಮಾಡಿತು. ಈ ಒಂದು ಸಲಹೆಯಂತೆ ಸದನವು ಒಂದು ತಿದ್ದುಪಡಿಯ ನಿಲುವಳಿಯನ್ನು ತಂದು ಮಿ. ಬ್ರಾಡ್ಲಾ ಅವರಿಗೆ ಪ್ರತಿಜ್ಞೆ ಮಾಡುವ ಅಥವಾ ಸತ್ಯವನ್ನು ದೃಢೀಕರಿಸುವ ಎರಡೂ ಅವಕಾಶಗಳನ್ನು ನಿರಾಕರಿಸಲಾಯಿತು. ಆದರೆ ಮಿ. ಬ್ರಾಡ್ಲಾ ಅವರು ತಮ್ಮ ಪ್ರತಿಜ್ಞೆಗೆ ಒತ್ತಾಯಿಸಿದರು. ಆಗ ಸಭಾಧ್ಯಕ್ಷರು ಅದನ್ನು ವಾಪಸು ಪಡೆಯುವಂತೆ ಹೇಳಿದರು. ಆಗ ಬ್ರಾಡ್ಲಾ ಅವರು ಈ ಕ್ರಮವನ್ನು ಪ್ರತಿಭಟಿಸಿದರು. ಕಾವಲುಪಡೆಯ ಅಧಿಕಾರಿಗೆ ಅವರನ್ನು ಸದನದಿಂದ ಹೊರತಳ್ಳುವ ಆದೇಶ ನೀಡಲಾಯಿತು. ಅಧಿಕಾರಿ ಹಾಗೂ ಮಿ. ಬ್ರಾಡ್ಲಾ ಅವರ ಕಲಹದಲ್ಲಿ ಮಿ. ಬ್ರಾಡ್ಲಾ ಅವರಿಗೆ ಭೀಕರ ಗಾಯಗಳಾದವು. ಮಿ. ಗೋಸಟೆ ಹಾಗೂ ಮಿ. ಬ್ರಾಡ್ಲಾರ ಕಲಹದ ನಂತರ ಸದನ ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ಸತ್ಯ ದೃಢೀಕರಣಕ್ಕೆ ಒಪ್ಪಿಗೆ ನೀಡಿತು. ಆಗ ಮಿ. ಬ್ರಾಡ್ಲಾ ಅವರು ಸತ್ಯ ದೃಢೀಕರಿಸಿದರು. ಆದರೆ ನ್ಯಾಯಾಲಯವು ಈ ಕ್ರಮವನ್ನು ಪಾರ್ಲಿಮೆಂಟ್ ಸದಸ್ಯರಿಗೆ ನಿರಾಕರಿಸಿತು. ನಂತರ ಅವರ ಸ್ಥಾನವನ್ನು ಖಾಲಿ ಎಂದು ಘೋಷಿಸಲಾಯಿತು. ೧೮೮೧ರಲ್ಲಿ ಬ್ರಾಡ್ಲಾ ಅವರು ಮತ್ತೊಂದು ಬಾರಿ ಚುನಾಯಿಸಲ್ಪಟ್ಟರು. ಆದರೆ ಸದನವು ತನ್ನ ಹಿಂದಿನ ಕ್ರಮದಂತೆಯೇ ವರ್ತಿಸಿತು. ಅವರು ಅಧ್ಯಕ್ಷರ ಆಸನದೆಡೆಗೆ ಬಂದಾಗೆಲ್ಲಾ ಸದನ ತನ್ನ ಹಿಂದಿನ ನಿಲುವನ್ನೇ ಪ್ರದರ್ಶಿಸಿತು. ಹೀಗಾಗಿ ಅಧ್ಯಕ್ಷರು ಕಾವಲುಪಡೆಯ ಅಧಿಕಾರಿ ಮಿ. ಗೋಸೆಟ್ ಅವರಿಗೆ ಬ್ರಾಡ್ಲಾ ಅವರನ್ನು ಸದನದ ಪರಿಧಿಯಿಂದ ಹೊರಗೆ ಹಾಕಲು ಆದೇಶಿಸಿದರು. ಮಿ. ಬ್ರಾಡ್ಲಾ, ಗೋಸಟ್ಟೆ ಅವರ ವಿರುದ್ಧ ರಾಣಿಯ ನ್ಯಾಯಾಲಯದ ಪೀಠದ ಮುಂದೆ ಮನವಿ ಮಾಡಿಕೊಂಡರು. ಆದರೆ ಬ್ರಾಡ್ಲಾ ಅವರ ಈ ಮನವಿಯು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬಾರದೆಂದೇ ರಾಣಿಯ ನ್ಯಾಯಾಲಯ ಹೇಳಿತು. ನ್ಯಾಯಾಲಯವು ಸಾಮಾನ್ಯರ ಸಭೆ ತನ್ನ ಹಕ್ಕು, ಗೌರವ ಹಾಗೂ ಅಧಿಕಾರಗಳನ್ನು ಕಾಪಾಡುವಲ್ಲಿ ಸಶಕ್ತವಾಗಿದ್ದು, ಅವರ ವಿರುದ್ಧ ಹೋರಾಡುವುದು ನಿಷ್ಪ್ರಯೋಜಕ. ಆದುದರಿಂದ ಅದರ ಗೌರವಕ್ಕೆ ಚ್ಯುತಿ ಬರುವಂತಹ ಯಾವ ಕಾರ್ಯವನ್ನೂ ಮಾಡಬಾರದು. ಈ ಒಂದು ಕ್ರಮಕ್ಕೆ ಸಂಬಂಧಿಸಿದಂತೆ ಸೂತ್ರಗಳನ್ನು ನಿರೂಪಿಸಬಹುದು:

(೧) ಸದನದ ಕಾರ್ಯ ಕಲಾಪಗಳನ್ನು ಸಕ್ರಮಗೊಳಿಸುವ ಆಜ್ಞೆ ಹಾಗೂ ನಿಯಮಗಳನ್ನು ವಿರೋಧಿಸುವುದು ಅದರ ಹಕ್ಕನ್ನು ಚ್ಯುತಿಗೊಳಿಸಿದಂತಾಗುತ್ತದೆ. ಅದರಂತೆಯೇ ಸದನದ ಕಲಾಪ, ಗೊತ್ತುವಳಿಗಳನ್ನು ಅಪಾರ್ಥ ಬರುವಂತೆ ಪ್ರಕಟಿಸಿದರೆ ಹಾಗೂ ಗೊತ್ತುವಳಿಯನ್ನು ಆಯ್ಕೆ ಸಮಿತಿಗೆ ತಿಳಿಯುವ ಮುನ್ನವೇ ಪ್ರಕಟಿಸಿದಲ್ಲಿ ಅದು ಹಕ್ಕುಚ್ಯುತಿ ಎಂದೇ ಪರಿಗಣಿಸಲಾಗುತ್ತದೆ.

(೨) ಸದನದ ಆಜ್ಞೆಗಳಿಗೆ ಅವಿಧೇಯರಾಗಿರುವುದು; ಸದನದ ಗೊತ್ತುವಳಿಗಳು ಆರಂಭ ದೆಶೆಯಲ್ಲಿ ಹಾಗೂ ಅದರ ಮುಂದೆ ನೀಡಿದ ಸಾಕ್ಷಿಗಳ ಮಧ್ಯೆ ಕೈಹಾಕುವ ಅಥವಾ ಪ್ರಭಾವ ಬೀರುವವರ ವಿರುದ್ಧ ಕಠಿಣ ಕ್ರಮ ಕೈಕೊಳ್ಳಲಾಗುವುದು. ಸದನಕ್ಕೆ ಸುಳ್ಳು ಸಾಕ್ಷಿ ಹೇಳುವುದು, ಅದನ್ನು ತಪ್ಪು ಮಾರ್ಗಕ್ಕೆ ಎಳೆಯುವ, ಅಥವಾ ಆ ವಿಧೇಯತೆಯನ್ನು ಸೂಚಿಸಿದಲ್ಲಿ ಹಕ್ಕು ಚ್ಯುತಿಗೆ ಬಾಧ್ಯರಾಗುತ್ತಾರೆ.

(೩) ಸದನಕ್ಕೆ ಯಾವುದೇ ವಿಧದಲ್ಲಿ ಅವಮಾನ ಮಾಡುವ, ಕಲಾಪಗಳಿಗೆ ಕಳಂಕ ತರುವ ಹಾಗೂ ಅಗೌರವ ಸೂಚಿಸಿದಲ್ಲಿ ಹಕ್ಕುಚ್ಯುತಿಗೆ ಪಾತ್ರರಾಗುತ್ತಾರೆ. ಈ ವಿಧವಾದ ಕಾರ್ಯಗಳನ್ನು ಎಸಗಿದಲ್ಲಿ ಕೇವಲ ಸಾರ್ವಜನಿಕರು ಮಾತ್ರ ಅಪರಾಧಿಗಳು ಎಂದು ಪರಿಗಣಿಸದೇ, ಸದನದ ಸದಸ್ಯರೂ ಈ ದಿಶೆಯಲ್ಲಿ ಅಪರಾಧ ಮಾಡಿದರೆ ಅದನ್ನು ಹಕ್ಕುಚ್ಯುತಿ ಎಂದೇ ಪರಿಗಣಿಸಿ, ದಂಡಕ್ಕೆ ಗುರಿ ಮಾಡಲಾಗುವುದು. ೧೮೮೯ರಲ್ಲಿ ಪಾರ್ಲಿಮೆಂಟ್‌ನ ಸದಸ್ಯರಾದ ಮಿ. ಹಾಬ್‌ಹೌಸರು ಪಾರ್ಲಿಮೆಂಟರಿ ಸುಧಾರಣೆಗಳನ್ನು ತಮ್ಮ ಒಂದು ಬೇನಾಮಿ ಕರಪತ್ರದ ಮೂಲಕ ವಿರೋಧಿಸಿದ್ದನ್ನು ಒಪ್ಪಿಕೊಂಡ ನಂತರ ಸದನವು ಅವರನ್ನು ಹಕ್ಕು ಚ್ಯುತಿಗೊಳಿಸಿದ ಆಪಾದನೆಗೆ ಗುರಿಮಾಡಿತು. ೧೮೩೮ರಲ್ಲಿ ಮಿ. ಒಕೋಮೆಡ್ ಎಂಬ ಸದಸ್ಯನು ಸಾರ್ವಜನಿಕ ಸಭೆಯಲ್ಲಿ ಸದನದ ಸದಸ್ಯರು ಸುಳ್ಳು ಸಾಕ್ಷ್ಯ ಹೇಳಿದರೆಂದು ಚುನಾವಣೆ ತಕರಾರುಗಳ ಕಾರ್ಯವನ್ನು ಟೀಕಿಸಿದನು. ಅವರನ್ನು ಹಕ್ಕುಚ್ಯುತಿಗೆ ಗುರಿ ಮಾಡಲಾಯಿತು.

(೪) ಸದಸ್ಯರು ಸದನದ ಕಾರ್ಯಕಲಾಪಗಳನ್ನು ಹಸ್ತಕ್ಷೇಪ ಮಾಡಿದಲ್ಲಿ ಅದು ಹಕ್ಕುಚ್ಯುತಿಗೆ ಗುರಿಯಾಗುತ್ತದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಸದಸ್ಯರ ಮೇಲೆ ಧಾಳಿ ನಡೆಸುವ ಹಾಗೂ ಅವರನ್ನು ಅವಮಾನ ಮಾಡುವ, ಅವರ ವರ್ತನೆ(ಸದನ ಕುರಿತಂತೆ)ಯ ಮೇಲೆ ಆತಂಕ ಬೀರುವ, ವಿರೋಧಿಸುವ, ಲಂಚ ನೀಡುವ ವಿಷಯಗಳೆಲ್ಲ ಹಕ್ಕುಚ್ಯುತಿ ಎಂದೇ ಪರಿಗಣಿಸಲಾಗುವುದು.

## ಭಾಗ–II
## ಸದಸ್ಯರ ವೈಯಕ್ತಿಕ ಹಕ್ಕುಗಳು

(೧) **ದಸ್ತಗಿರಿಯಿಂದ ಮುಕ್ತತೆ:** ಸದನ ಯಾವ ಸದಸ್ಯರನ್ನೇ ಆಗಲಿ, ಸದನದ ಕಲಾಪದ ಮುನ್ನ ೪೦ ದಿನಗಳ ಹಾಗೂ ನಂತರ ಅವರನ್ನು ಬಂಧನಕ್ಕೆ ಗುರಿ ಮಾಡುವಂತಿಲ್ಲ. ಮೊದಲು ಈ ಸೌಲಭ್ಯವನ್ನು ಸದಸ್ಯರ ನೌಕರರಿಗೂ ಹಾಗೂ ಅವರ ಆಸ್ತಿಪಾಸ್ತಿಗಳಿಗೂ ನೀಡಲಾಗಿತ್ತು. ಆದರೆ ಈಗ ಕೇವಲ ಸದಸ್ಯರಿಗೆ ಮಾತ್ರ ಮೀಸಲಾಗಿದೆ.

(೨) **ವಾಕ್ ಸ್ವಾತಂತ್ರ್ಯ:** ವಿಲಿಯಂ ಹಾಗೂ ಮೇರಿಯವರ ಎಸ್‌೨ ಮತ್ತು ಸಿ೨ನೆಯ ಕಾನೂನುಗಳಂತೆ ಸದನದಲ್ಲಿ ಅವರು ಮಾತನಾಡುವ ಅಧಿಕಾರ ಹೊಂದಿದ್ದು, ಅವರ ಈ ಒಂದು ಕ್ರಮವನ್ನು ಯಾವ ನ್ಯಾಯಾಲಯವೂ ಪ್ರಶ್ನಿಸುವಂತಿಲ್ಲ ಹಾಗೂ ಅವರನ್ನು ದೋಷಾರೋಪಣೆಗೆ ಗುರಿ ಮಾಡುವಂತಿಲ್ಲ.

## ಭಾಗ–III
## ಹಕ್ಕುಚ್ಯುತಿಗೈದವರನ್ನು ದಂಡಿಸುವ ವಿಧಾನಗಳು

ಈ ವಿಧವಾದ ಅಪರಾಧಿಗಳನ್ನು ದಂಡಿಸುವ ಐದು ವಿಧಾನಗಳಿವೆ. ಗಂಭೀರವಾದ ಹಕ್ಕುಚ್ಯುತಿಯಾಗದೇ ಇದ್ದ ಸಂದರ್ಭದಲ್ಲಿ ದಸ್ತಗಿರಿ ಮಾಡಲಾದ ಸದಸ್ಯನು ತನ್ನ ತಪ್ಪನ್ನು ಒಪ್ಪಿ ಕ್ಷಮೆಯಾಚಿಸಿದಲ್ಲಿ, ಸದನ ಅವನಿಗೆ ಛೀಮಾರಿ ಹಾಕಿ ಬಿಡುಗಡೆ ಮಾಡಬಹುದು. ಎರಡನೆಯದಾಗಿ, ಅವನು ಮಾಡಿರಬಹುದಾದ

ಅಪರಾಧವನ್ನು ಖಂಡಿಸಿ ಬಿಡುಗಡೆ ಮಾಡಬಹುದು. ಒಂದು ವೇಳೆ ಗಂಭೀರವಾದ ಅಪರಾಧವೆಸಗಿದ್ದರೆ, ಅವನನ್ನು ಜೈಲಿಗೆ ಕಳಿಸಬಹುದು ಅಥವಾ ದಂಡ ಹಾಕಲೂಬಹುದು. ಇಲ್ಲವೇ ಅವನ ಸದಸ್ಯತ್ವವನ್ನೇ ರದ್ದುಪಡಿಸಬಹುದು. ಕೊನೆಯ ದಂಡವು ಕೇವಲ ಸದನದ ಸದಸ್ಯರಿಗೆ ಮಾತ್ರ ಎಂದು ಬೇರೆ ಹೇಳಲೆ ಬೇಕಾಗಿಲ್ಲ.

## ಭಾಗ–IV
## ಹಿರಿಯರ ಸಭೆಯ ಹಕ್ಕುಗಳು

ಸಾಮಾನ್ಯರ ಸಭೆಯಂತೆಯೇ ಈ ಸದನದ ಹಕ್ಕುಚ್ಯುತಿಗಳು ಒಂದೇ ಆಗಿರುವುದರಿಂದ ಅವನ್ನು ಹೆಚ್ಚು ಚರ್ಚಿಸಬೇಕಾಗಿಲ್ಲ. ಒಂದೇ ವ್ಯತ್ಯಾಸವನ್ನು ಹೇಳಬಹುದಾದರೆ ಸಾಮಾನ್ಯರ ಸಭೆಯ ಹಕ್ಕುಗಳು ರಾಜ ನೀಡಿದ ಕಾಣಿಕೆಗಳಾಗಿವೆ. ಆದುದರಿಂದ ಪ್ರತಿಯೊಂದು ಬಾರಿ ನೂತನ ಪಾರ್ಲಿಮೆಂಟ್ ಜಾರಿಗೆ ಬಂದಾಗೆಲ್ಲ ಸಭೆಯ ಅಧ್ಯಕ್ಷರು ಅವನನ್ನು ಕೋರಬೇಕು. ಆದರೆ ಹಿರಿಯರ ಬಗೆಗೆ ಇದು ರಾಜನಿಂದ ನೀಡಬೇಕಾಗಿರದೆ, ಅದು ಅವರ ಸ್ವಂತ ಹಕ್ಕಾಗಿದೆ.

## ಭಾಗ–V
## ಸದನದ ಅಧಿಕಾರಿಗಳು

ಹಿರಿಯ ಸಭೆಯ ಹಾಗೂ ಸಾಮಾನ್ಯರ ಸಭೆಗಳು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಹಾಗೂ ತಮ್ಮ ಕಾರ್ಯಕ್ರಮಗಳನ್ನು ಜರುಗಿಸಿಕೊಂಡು ಹೋಗಲು ಬೇರೆ ಬೇರೆ ಅಧಿಕಾರಗಳನ್ನು ಹೊಂದಿದ್ದಾರೆ. ಅವರ ಅಧಿಕಾರಗಳನ್ನು ಪ್ರತ್ಯೇಕವಾಗಿ ತಿಳಿಯುವುದು ಉತ್ತಮ.

## ಭಾಗ–VI
## ಸಾಮಾನ್ಯರ ಸಭೆ

**ಸಭೆಯ ಅಧ್ಯಕ್ಷ:** ಸಾಮಾನ್ಯವಾಗಿ ಇವರನ್ನು 'ಸಭಾಪತಿ' ಎಂದೇ ಸಂಬೋಧಿಸಲಾಗುತ್ತದೆ. ಸಾಮಾನ್ಯ ಸಭೆಯ ಮೊದಲನೆಯ ಅಧಿವೇಶನದಲ್ಲಿ ಸಭೆಯ ಅಧ್ಯಕ್ಷರನ್ನು ಚುನಾಯಿಸಲಾಗುತ್ತದೆ. ಈ ಸ್ಥಾನವನ್ನು ಅವರು ತಮ್ಮ ಜೀವಾವಧಿಯ ತನಕ ನಿರ್ವಹಿಸಬಹುದು. ಆದರೆ ಯಾವುದೇ ಕಾರಣದಿಂದ ಸಭೆಯು ಇವರ ಬಗೆಗೆ ಅಪನಂಬಿಕೆ ವ್ಯಕ್ತಪಡಿಸಿ ಗೊತ್ತುವಳಿಯ ಮೂಲಕ ಇವರನ್ನು ತೆಗೆದುಹಾಕಬಹುದು. ಮೂಲವಾಗಿ ರಾಜನೇ ಈ ಅಧ್ಯಕ್ಷರನ್ನು ನೇಮಿಸುತ್ತಿದ್ದ. ಆದರೆ ೧೬೭೯ರಲ್ಲಿ ನೂತನವಾಗಿ ಚುನಾವಣೆ ಹೊಂದಿದ ಸಾಮಾನ್ಯರ ಹಾಗೂ ಅಂದಿನ ಆಳರಸನಾದ ಎರಡನೆಯ ಚಾರ್ಲ್ಸ್ ನಡುವೆ, ಈ ಅಧ್ಯಕ್ಷರ ನೇಮಕಾತಿಯ ಬಗೆಗೆ ಕಲಹ ಉಂಟಾಯಿತು. ಸಾಮಾನ್ಯರ ಸಭೆಯು ಸರ್ ಎಡ್‌ವರ್ಡ್ ಸೇ ಮೂರ್ ಅವರನ್ನು ಚುನಾಯಿಸಿದ್ದು, ಅದಕ್ಕೆ ಅರಸನು ತನ್ನ ಒಪ್ಪಿಗೆಯನ್ನು ನೀಡಲಿಲ್ಲ. ಅರಸನು ತನ್ನ ಪರವಾದ ಓರ್ವರ ಹೆಸರನ್ನು ಸೂಚಿಸಿದನು. ಆದರೆ ಅದನ್ನು ಸಾಮಾನ್ಯರ ಸಭೆಯು ತಿರಸ್ಕರಿಸಿತು. ಪರಿಹಾರದ ದೃಷ್ಟಿಯಿಂದ ಸಾಮಾನ್ಯರ ಸಭೆಗೆ ಸ್ವತಂತ್ರ ಸದಸ್ಯರ ಹೆಸರನ್ನು ಸೂಚಿಸಲಾಯಿತು. ಸಾಮಾನ್ಯ ಸಭೆಯು ಅದನ್ನು ಒಪ್ಪಿಕೊಂಡಿತು. ಅರಸನೂ ಅದಕ್ಕೆ ವಿರೋಧಿಸಲಿಲ್ಲ. ಅಂದಿನಿಂದ ಇದನ್ನು ಸಾಮಾನ್ಯರ ಸಭೆಯ ಹಕ್ಕೆಂದೇ ಪರಿಗಣಿಸಲಾಯಿತು. ಅದನ್ನು ಅರಸನೂ ಪ್ರತಿಭಟಿಸಿಲ್ಲ.

## ಭಾಗ–VII
## ಅಧ್ಯಕ್ಷರ ಕರ್ತವ್ಯಗಳು

ಸಾಮಾನ್ಯರ ಸಭೆಯ ಅಧ್ಯಕ್ಷರು ಮೂರು ಪ್ರಮುಖ ವಿಧಾನಗಳಲ್ಲಿ ಕಾರ್ಯ ಮಾಡುತ್ತಾರೆ. ಅವರು ಸಭೆಯ ವಕ್ತಾರ ಹಾಗು ಪ್ರತಿನಿಧಿಯಾಗಿ ಈ ಕಾರ್ಯಗಳನ್ನು ನಿರ್ವಹಿಸುತ್ತಾರೆ:

(೧) ಸಭೆಯ ಹಕ್ಕುಬಾಧ್ಯತೆಗಳನ್ನು ಕೋರುತ್ತಾರೆ ಹಾಗೂ ಅದರ ಧನ್ಯವಾದ ಗೊತ್ತುವಳಿಯನ್ನು ಸಲ್ಲಿಸುತ್ತಾರೆ. ಮುಂದುವರಿದು ಅಂದರೆ ಸಭೆಯು ಖಂಡಿಸಿದ ಹಾಗೂ ಛೀಮಾರಿ ಹಾಕಿದ ಗೊತ್ತುವಳಿಯನ್ನು ತಿಳಿಸುತ್ತಾರೆ.

(೨) ಅವರು ಹಕ್ಕುಚ್ಯುತಿಗೆ ಗುರಿಯಾದವರ ವಿರುದ್ಧ ದಂಡಿಸುವ ಆದೇಶಗಳನ್ನು ಹೊರಡಿಸುತ್ತಾರೆ. ಆ ಸದನದ ಕಟಕಟೆಯಲ್ಲಿ ದಂಡವನ್ನು ಸ್ವೀಕರಿಸಲು ಹಾಜರಿರುವಂತೆ ಆದೇಶ ಹೊರಡಿಸುತ್ತಾರೆ. ಸದನದ ಇತರ ಆಜ್ಞೆಗಳನ್ನು ಜಾರಿಗೊಳಿಸುತ್ತಾರೆ.

(೩) ತೆರವಾದ ಸದನದ ಸ್ಥಾನಗಳ ಚುನಾವಣೆ ಕುರಿತಂತೆ ಆದೇಶ ಹೊರಡಿಸುತ್ತಾರೆ. ಮುಂದುವರಿದು ೧೯೧೧ರ ಕಾಯ್ದೆಯಂತೆ ಹಣಕಾಸಿನ ಮಸೂದೆಯನ್ನು ದೃಢೀಕರಿಸುವ ನೂತನ ಜವಾಬ್ದಾರಿಯನ್ನು ಇವರಿಗೆ ನೀಡಲಾಗಿದೆ.

ಸದನದ ಅಧ್ಯಕ್ಷರಾಗಿ ಈ ಕೆಳಗಿನ ಕಾರ್ಯಕಲಾಪಗಳನ್ನು ನೆರವೇರಿಸುತ್ತಾರೆ:

(೧) ಚರ್ಚೆಗಳನ್ನು ಘನತೆ ಹಾಗೂ ಗೌರವದಿಂದ ನಡೆಸಿಕೊಂಡು ಹೋಗುವ,

(೨) ಗೊತ್ತುವಳಿಗಳು ಸಕ್ರಮವಾಗಿವೆಯೋ ಇಲ್ಲವೋ ಎಂದು ನಿರ್ಧರಿಸುವ,

(೩) ಪ್ರಶ್ನೆಗಳ ಬಗೆಗೆ ಸಭೆಯ ಚರ್ಚೆಯಲ್ಲಿ ನಮೂದಿಸುವ ಮತ್ತು

(೪) ಪ್ರಶ್ನೆಗಳ ಬಗೆಗೆ ಸಭೆಯ ನಿರ್ಣಯವನ್ನು ಸಾರುವುದು.

## ಭಾಗ–VIII
## ಅಧ್ಯಕ್ಷರ ಅಧೀನ ಅಧಿಕಾರಿಗಳು

ಸಾಮಾನ್ಯರ ಸಭೆಯ ಅಧ್ಯಕ್ಷರ ಅಡಿಯಲ್ಲಿ ಇಬ್ಬರು ಅಧಿಕಾರಿಗಳಿದ್ದಾರೆ. ಸಾಮಾನ್ಯರ ಸಭೆಯ ಕಾರಕೂನರು, ಮತ್ತು ರಕ್ಷಣಾಧಿಕಾರಿ ಇವರೇ ಆ ಅಧಿಕಾರಿಗಳು. ಸಭೆಯ ಕಾರ್ಯಕಲಾಪಗಳನ್ನು ದಾಖಲಿಸಿಕೊಳ್ಳುವುದೇ ಕಾರಕೂನರ ಕಾರ್ಯವಾಗಿದೆ. ಅವರು ಸದನದ ಪತ್ರಿಕೆಯ ಅಧಿಕಾರಿಯಾಗಿ ಸದನದಲ್ಲಿ ನಡೆಸಲಾದ ಚರ್ಚೆ, ನಿರ್ಣಯ ಮತ್ತು ಇತರ ಎಲ್ಲಾ ಕಾರ್ಯಕಲಾಪಗಳನ್ನು ವರದಿ ಮಾಡುತ್ತಾರೆ ಮತ್ತು ರಕ್ಷಣಾ ಅಧಿಕಾರಿಯು ಸದನದ ಪೊಲೀಸ್ ಅಧಿಕಾರಿಯಾಗಿದ್ದು, ಸದನದಲ್ಲಿ ಶಾಂತಿ ಭಂಗವಾಗದಂತೆ ಅಧ್ಯಕ್ಷರ ಮೇರೆಗೆ ಕಾರ್ಯಾಚರಣೆ ಮಾಡುವ ಅಧಿಕಾರಿಯಾಗಿದ್ದಾರೆ.

## ಮೇಲ್ಮನೆ

**ಅಧ್ಯಕ್ಷರು:** ಸಾಮಾನ್ಯರ ಅಧ್ಯಕ್ಷರಂತೆ ಹಿರಿಯರ ಸಭೆಗೆ ತನ್ನ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರವಿಲ್ಲ. ಹಿರಿಯರ ಸಭೆ ಛಾನ್ಸೆಲ್ಲರು ಅಥವಾ ಮಹಾ ಮುದ್ರೆಯ ರಕ್ಷಕರೇ ಅಧ್ಯಕ್ಷರಾಗಿರುತ್ತಾರೆ. ಇವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಸಭೆಯನ್ನು ನಡೆಸಬಹುದು. ಇವರ ಒಂದು ಪಟ್ಟಿಯನ್ನೇ ಅರಸನು ಸಾರುತ್ತಾನೆ. ಈ ಎಲ್ಲರ ಗೈರುಹಾಜರಿಯಲ್ಲಿ ಸಭೆಯು ತನ್ನ ಅಧ್ಯಕ್ಷರನ್ನು ತಾನೇ ಆರಿಸಿಕೊಳ್ಳಬಹುದು. ಈ ಸಭೆಯ

ಅಧ್ಯಕ್ಷರು ಕುಲೀನರು ಆಗಿರಬೇಕೆಂಬ ಕಡ್ಡಾಯವೇನೂ ಇಲ್ಲ. ಏಕೆಂದರೆ ಅರಸನ ಮುದ್ರೆಗಳು ಆಯೋಗ ರೂಪದಲ್ಲಿ ಅಥವಾ ಅದರ ರಕ್ಷಕನು ಶ್ರೀಸಾಮಾನ್ಯನಾಗಿಯೂ ಇರಬಹುದಾದುದರಿಂದ ಅವನೇ ಅಧ್ಯಕ್ಷನಾಗಿ ಕಲಾಪಗಳನ್ನು ಜರುಗಿಸಬಹುದು. ಆದರೆ ಒಂದು ಮಾತು ಮಾತ್ರ ಸತ್ಯ. ಅದೇನೆಂದರೆ ಈ ಸಭೆಯ ಅಧ್ಯಕ್ಷ ಸಭೆಯ ಸದಸ್ಯನಾಗಿರದೇ ಇರಲೂಬಹುದು. ಆದುದರಿಂದಲೇ ಈ ಸಭೆಯ ಅಧ್ಯಕ್ಷನ ಆಸನವಾದ ಉಣ್ಣೆ ಮೂಟೆಯ ಚೀಲವನ್ನು ಹಿರಿಯರ ಸಭೆಯ ಸದಸ್ಯನಲ್ಲದೇ ಹೋದರೂ ಕಾರ್ಯಕಲಾಪ ಮಾಡಲು ಅನುಕೂಲವಾಗುವುದು.

## ಹಿರಿಯರ ಸಭೆಯ ಅಧ್ಯಕ್ಷರ ಕರ್ತವ್ಯಗಳು

ಹಿರಿಯರ ಸಭೆಯ ಅಧ್ಯಕ್ಷರ ಸ್ಥಾನಮಾನವು ಸಾಮಾನ್ಯರ ಸಭೆಯ ಅಧ್ಯಕ್ಷರ ಸ್ಥಾನಮಾನದಿಂದ ವಿಭಿನ್ನವಾಗಿದೆ. ಅವರ ಅಧಿಕಾರ ಹಾಗೂ ಕರ್ತವ್ಯಗಳು ಒಂದೇ ಆಗಿಲ್ಲ. ಈರ್ವರೂ ಬೇರೆ ಬೇರೆ ಸಭೆಗಳ ಅಧ್ಯಕ್ಷರಾಗಿರುವುದೊಂದೇ ಹೋಲಿಕೆ. ಇಬ್ಬರ ಅಧಿಕಾರಗಳು ವಿಭಿನ್ನವಾಗಿವೆ. ಈ ಒಂದು ಅಂಶವನ್ನು ಹಿರಿಯರ ಸಭೆಯ ಛಾನ್ಸೆಲರು ಅಧ್ಯಕ್ಷರಾಗಿ ಕಾರ್ಯ ಮಾಡುವ ಸ್ಥಾಯಿ ಆಜ್ಞೆ ೨೦ರಿಂದ ಅರಿಯಬಹುದಾಗಿದೆ. ಸ್ಥಾಯಿ ಆಜ್ಞೆಯ ಹೇಳಿಕೆ ಹೀಗಿದೆ:

ಹಿರಿಯರ ಸಭೆಯ ಛಾನ್ಸೆಲರು ಸದನದ ವಕ್ತಾರರಾಗಿ ಮಾತನಾಡುವ ಮುಂಚೆ ಹಿರಿಯರ ಸಭೆಯ ಅಭಿಮತವನ್ನು ಕೇಳಬೇಕು. ಮುಂದುವರಿದು ಅವರಿಗೆ ಸದನ ಮುಂದೂಡುವ ಮುಂತಾದ ಅಧಿಕಾರಗಳೇ ಇಲ್ಲ. ಸದನದ ಸಾಮಾನ್ಯ ಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕು. ಮಸೂದೆಗಳನ್ನು ಹಿಂದೆ ಮುಂದೆ ಅಂದರೆ ತಮ್ಮ ಮನಸ್ಸಿಗೆ ಬಂದ ಹಾಗೆ ಚರ್ಚೆಗೆ ಎತ್ತಿಕೊಳ್ಳುವ ಅಧಿಕಾರ ಹಿರಿಯರಿಗೆ ಸೇರಿದೆ. ಅಧ್ಯಕ್ಷನಾದವನು ಏನಾದರೂ ಹೇಳಬೇಕಾದಲ್ಲಿ ಅವನು ಸಾಮಾನ್ಯರ ಕುಲೀನರಂತೆ ಕುಲೀನರ ಸ್ಥಾನದಲ್ಲಿ ನಿಂತು ಹೇಳಬೇಕೇ ಹೊರತು ಅಧ್ಯಕ್ಷ ಸ್ಥಾನದಿಂದಲ್ಲ. ಈ ವಿಧವಾದ ಸ್ಥಾಯಿ ನಿಯಮಗಳಿಂದ ಅವನ ಅಧಿಕಾರ ಎಷ್ಟು ತಿಳಿದುಬರುತ್ತದೆ.

(೧) ಸದನದ ಕಾರ್ಯಕಲಾಪಗಳನ್ನು ಕ್ರಮಬದ್ಧವಾಗಿ ನಡೆಸಿಕೊಂಡು ಹೋಗುವಲ್ಲಿ ಅಧ್ಯಕ್ಷರಿಗೆ ಯಾವ ವಿಶೇಷ ಅಧಿಕಾರವಿರದೇ ಸದನದ ಸಾಮಾನ್ಯ ಸದಸ್ಯರಂತೆ ಅವರೂ ನಡೆದುಕೊಳ್ಳಬೇಕು.

(೨) ಸಾಮಾನ್ಯರ ಸಭೆಯ ಅಧ್ಯಕ್ಷರಂತೆ ಗೊತ್ತುವಳಿಯ ಕ್ರಮಬದ್ಧತೆಯನ್ನು ನಿರ್ಧರಿಸುವ ಅಧಿಕಾರ ಅವರಿಗೆ ಇಲ್ಲ. ಅವರು ಸಭೆಯನ್ನು ಸಾಮಾನ್ಯ ಕುಲೀನರಂತೆ ಉದ್ದೇಶಿಸಿ ಮಾತನಾಡಬಹುದು. ಸಭೆಯ ನಿರ್ಣಯಗಳನ್ನೆಲ್ಲ ಬಹುಮತದಿಂದ ಸಭೆಯೇ ಒಟ್ಟಾಗಿ ನಿರ್ಧರಿಸುತ್ತದೆ.

(೩) ಅಧ್ಯಕ್ಷರ ಅಧಿಕಾರವು ಮಿತಿಯಿಂದ ಇರುವುದರಿಂದ ಸಭೆಯಲ್ಲಿ ಕಾರ್ಯಕಲಾಪಗಳು ಅಧ್ಯಕ್ಷರನ್ನು ಉದ್ದೇಶಿಸಿ, ಸಾಮಾನ್ಯರ ಸಭೆಯಲ್ಲಿ ಜರುಗಿದಂತೆ ನಡೆಯದೇ ಸಭೆಗೆ ಈ ಅಧಿಕಾರವನ್ನು ನೀಡಲಾಗಿದೆ. ಹೀಗಾಗಿ ಕೆಲವು ಬಾರಿ ಇಬ್ಬರು ಸದಸ್ಯರು ಒಂದೇ ಬಾರಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡಬೇಕೆಂದರೆ ಫಜೀತಿಯುಂಟಾಗುತ್ತದೆ. ಆಗ ಸದನವು ಯಾರಾದರೊಬ್ಬರನ್ನು ಮಾತನಾಡಬೇಕೆಂದು ಅಧಿಕ ಮತದಿಂದ ನಿರ್ಧರಿಸುತ್ತದೆ. ಹೀಗಾಗಿ ಸಾಮಾನ್ಯರ ಸಭೆಯಂತೆ ಅಧ್ಯಕ್ಷರಿಂದ ತೀರ್ಮಾನವಾಗುವುದಿಲ್ಲ. ಆದುದರಿಂದ ಸದನದ ಕಲಾಪಗಳು ಶಿಸ್ತಿನಿಂದ ಕೂಡಿರುತ್ತದೆ. ಹೀಗಾಗಿ ಸಭೆಯ ಅಧ್ಯಕ್ಷ ಎಲ್ಲಾ ಕೋಲಾಹಲವನ್ನು ಮೂಕ ಪ್ರೇಕ್ಷಕನಾಗಿ ನೋಡಬೇಕು. ಸದನದ ಚರ್ಚೆಯನ್ನು ಮತಗಣನೆಗೆ ಹಾಕುವ ಅಧಿಕಾರ ಒಂದೇ ಅವರಿಗೆ ಇರುವ ಅವಕಾಶ.

## ಇತರ ಅಧಿಕಾರಿಗಳು

ಹಿರಿಯ ಕುಲಪತಿ ಅವರು ಸಭೆಯ ಅಧ್ಯಕ್ಷರಾಗಿ ತಮ್ಮೊಡನೆ ಮೂವರು ಇತರ ಅಧಿಕಾರಿಗಳನ್ನು ಹೊಂದಿದ್ದಾರೆ.

(೧) **ಪಾರ್ಲಿಮೆಂಟಿನ ಕಾರಕೂನ:** ಅವರ ಅಧಿಕಾರಗಳು ಸಾಮಾನ್ಯರ ಸಭೆಯ ಕಾರಕೂನನಂತೆ ಇವೆ. ಎಂದರೆ, ಹಿರಿಯರ ಸಭೆಯ ಕಾರ್ಯಕಲಾಪಗಳ ದಾಖಲೆ ಮಾಡುವುದು ಮತ್ತು ಪ್ರಕಟಿಸುವುದು.

(೨) **ಕರಿಕಟ್ಟಿಗೆ ಪ್ರತೀಹಾರಿ ಅಥವಾ ಸೇವಕ:** ಇವರ ಕರ್ತವ್ಯಗಳು ಸಾಮಾನ್ಯರ ರಕ್ಷಣಾ ಅಧಿಕಾರಿಯಂತೆ ಪೊಲೀಸ್ ಕಾರ್ಯಗಳಿಂದ ಒಡಗೂಡಿವೆ.

(೩) **ಭದ್ರತಾ ಸಿಬ್ಬಂದಿ:** ಹಿರಿಯ ಕುಲಪತಿಗಳ ಅಂಗರಕ್ಷಕ.

## ಅಧ್ಯಾಯ–೨

# ಸಾರ್ವಭೌಮ ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿ ಭಾರತೀಯ ಸಂಸ್ಥಾನಗಳ ಬೇಡಿಕೆ

ಟ್ರಾವನ್‌ಕೋರ್ ಹಾಗೂ ಹೈದರಾಬಾದ್ ಸಂಸ್ಥಾನಗಳು, ದಿನಾಂಕ ೧೫ ಆಗಸ್ಟ್ ಭಾರತಕ್ಕೆ ಸ್ವಾತಂತ್ರ್ಯ ನೀಡಿದ ನಂತರ, ತಾವು ಸಾರ್ವಭೌಮ ಸ್ವತಂತ್ರ ರಾಜ್ಯಗಳಾಗಿ ಮುಂದುವರಿಯುವ ಪ್ರಸ್ತಾವನೆಯನ್ನು ಮಂಡಿಸಿ ತಾವು ಒಕ್ಕೂಟದಿಂದ ಬೇರ್ಪಡೆ ಹೊಂದುವುದಾಗಿ ಸಾರಿದವು. ಈ ಒಂದು ಉದಾಹರಣೆಯನ್ನೇ ಬೇರೆ ಸಂಸ್ಥಾನಗಳು ಅನುಸರಿಸಿದರೆ, ನೂತನ ಸಮಸ್ಯೆ ನಿರ್ಮಾಣವಾಗುತ್ತದೆ. ಹೀಗೆ ಉದ್ಭವಿಸಬಹುದಾದ ಸಮಸ್ಯೆ ಸೂಕ್ಷ್ಮವಾದದ್ದು. ಆದುದರಿಂದ ಇದನ್ನು ಪರಿಶೀಲಿಸುವುದು ಅನಿವಾರ್ಯ. ಈ ಪ್ರಶ್ನೆಗೆ ಎರಡು ಮುಖಗಳುಂಟು. ಸಂಸ್ಥಾನಗಳು ತಾವೇ ಸ್ವಾತಂತ್ರ್ಯವನ್ನು ಪಡೆಯಬಹುದೇ? ತಮ್ಮ ಸ್ವಾತಂತ್ರ್ಯವನ್ನು ಸಾರುವ ಅಧಿಕಾರವಿದೆಯೇ. ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಸಂಸ್ಥಾನಗಳ ಈ ಒಂದು ಹಕ್ಕು, ೧೯೪೬ರ ಮೇ ೧೨ರಂದು ಸಂಪುಟ ಆಯೋಗದ ಹೇಳಿಕೆಯನ್ನೇ ಆಧರಿಸಿದೆ. ಅದು ಏನೆಂದರೆ ಬ್ರಿಟಿಷ್ ಸರಕಾರವು ತನ್ನ ಸಾರ್ವಭೌಮ ಅಧಿಕಾರವನ್ನು ಭಾರತಕ್ಕೆ ವರ್ಗಾಯಿಸಿದ ಮೇಲೆ, ಸಂಸ್ಥಾನಗಳು ಬ್ರಿಟಿಷ್ ಸರಕಾರದೊಂದಿಗೆ ಹೊಂದಿದ್ದ ಹಕ್ಕುಗಳೆಲ್ಲವೂ ಸಂಸ್ಥಾನಗಳಿಗೇ ಮರಳಿ ಬಂದಂತೆ. ಸಂಪುಟ ಆಯೋಗದ ಈ ವಿಧವಾದ ಹೇಳಿಕೆಯು ಯಾವ ರಾಜಕೀಯ ಉದ್ದೇಶದಿಂದ ಕೂಡಿರದೆ, ಕಾನೂನು ಬದ್ಧವಾದ ಹೇಳಿಕೆಯಾಗಿತ್ತು. ಆದರೆ ಉದ್ಭವಿಸಬಹುದಾದ ಪ್ರಶ್ನೆ ಎಂದರೆ ಸಂಸ್ಥಾನಗಳಿಗೆ ಅನ್ವಯಿಸಿದಂತೆ ಈ ಹೇಳಿಕೆಯು ಕಾನೂನುಬದ್ಧವಾದ ಸಮಂಜಸ ಹೇಳಿಕೆಯಾಗಿದೆಯೇ?

ಈ ಸಂಪುಟ ಆಯೋಗದ ಹೇಳಿಕೆಯಲ್ಲಿ ಮೂಲತಃ ಯಾವ ಪ್ರಮೇಯವೇ ಇರಲಿಲ್ಲ. ೧೯೨೯ರಲ್ಲಿ ಬ್ರಿಟಿಷರ ಹಾಗೂ ಸಂಸ್ಥಾನಗಳ ಸಂಬಂಧವನ್ನು ಸೂಚಿಸಲೆಂದೇ ನೇಮಿಸಿದ ಬಟ್ಲರ್ ಸಮಿತಿಯ ಪ್ರಸ್ತಾವನೆಗಳೇ ಅಡಕವಾಗಿವೆ. ರಾಜರುಗಳು ಬಟ್ಲರ್ ಸಮಿತಿಯ ಮುಂದೆ ಮಂಡಿಸಬಹುದಾದ ನಿಲುವು ಎರಡು ಪ್ರಮೇಯಗಳಿಂದ ಒಡಗೂಡಿದ್ದು, ಈ ವಿಷಯದ ವಿದ್ಯಾರ್ಥಿಗಳಿಗೆ ಗೊತ್ತೇ ಇದೆ.

(೧) ಸಂಸ್ಥಾನದ ರಾಜರುಗಳಿಂದ, ಬ್ರಿಟಿಷ್‌ರೊಡನೆ ಮಾಡಿಕೊಂಡಿದ್ದ ಒಡಂಬಡಿಕೆಗಳನ್ನು ಸಾರ್ವಭೌಮ ಅಧಿಕಾರವು ಮೀರುವಂತೆ ಇರದೆ ಇತಿಮಿತಿಯಿಂದ ಕೂಡಿತ್ತು.

(೨) ಈ ಒಡಂಬಡಿಕೆಯಂತೆ ಸಾರ್ವಭೌಮ ಅಧಿಕಾರ ಸಂಬಂಧಗಳೂ ಸಂಸ್ಥಾನ ಹಾಗೂ ಬ್ರಿಟಿಷರ ಮಧ್ಯೆ ಏರ್ಪಾಡಾಗಿದ್ದುದರಿಂದ, ಆ ಒಂದು ಅಧಿಕಾರವನ್ನು ಬ್ರಿಟಿಷ್ ಸರಕಾರವು ಭಾರತಕ್ಕೆ ವರ್ಗಾಯಿಸಲು ಬರುವಂತೆ ಇರಲಿಲ್ಲ. ಹಾಗೇನಾದರೂ ವರ್ಗಾಯಿಸಬೇಕೆಂದಿದ್ದರೆ ಸಂಸ್ಥಾನಗಳ ಪೂರ್ವಾನುಮತಿ ಪಡೆಯಲೇ ಬೇಕಾಗಿತ್ತು. ಬಟ್ಲರ್ ಸಮಿತಿಯು ಈ ಒಂದನೆಯ ಪ್ರಮೇಯವನ್ನು ಯಾವ ಮೋಸಕ್ಕೂ ಆಸ್ಪದ ನೀಡದೇ ತಳ್ಳಿಹಾಕಿ, ಸಾರ್ವಭೌಮತೆಯು ಸಾರ್ವಭೌಮವಾಗಿದ್ದು, ಒಪ್ಪಂದದ ಯಾವ ಕಾರಣದಿಂದಲೂ ಅದನ್ನು ನಿರ್ಬಂಧಿಸಲು ಬಾರದೆಂದೇ ಘಂಟಾಘೋಷವಾಗಿ ಸಾರಿತು. ಆದರೆ ಸೋಜಿಗದ ಸಂಗತಿ ಎಂದರೆ ಎರಡನೆಯ ಪ್ರಮೇಯವನ್ನು ಬಟ್ಲರ್ ಸಮಿತಿಯು

ಎತ್ತಿಹಿಡಿಯಿತು. ಅದು ಸಂಸ್ಥಾನದ ರಾಜರನ್ನು ಸಂತುಷ್ಟಿಗೊಳಿಸಬೇಕೆಂದೇ ಹೀಗೆ ಹೇಳಿತೋ ಏನೋ ಅದನ್ನು ಪರಿಶೀಲಿಸುವುದು ಅರ್ಥಹೀನ. ಆದರೆ ಒಂದು ಮಾತು ಸತ್ಯ. ಈ ಒಂದು ನಿರ್ಧಾರವು ಭಾರತದ ರಾಜಕೀಯ ಇಲಾಖೆ ಹಾಗೂ ರಾಜರಿಗೆ ಸಂತಸ ನೀಡಿತು.

ಸಾರ್ವಭೌಮ ಅಧಿಕಾರವನ್ನು ಭಾರತ ಸರಕಾರಕ್ಕೆ ವರ್ಗಾಯಿಸಲುಬಾರದು ಎಂಬ ಸಿದ್ಧಾಂತವು ಕುಯುಕ್ತಿಯಿಂದ ಕೂಡಿದ್ದು, ತಪ್ಪು ಕಲ್ಪನೆಗಳ ತಳಹದಿಯ ಮೇಲೆ ಆಧಾರವಾಗಿದೆ. ಮುಂದುವರಿದು ಈ ದಿಶೆಯಲ್ಲಿ ಅಡಕವಾಗಿರುವ ಸಮಸ್ಯೆಗಳನ್ನು ಸೂಕ್ತವಾಗಿ ಯಾರೂ ಪರಿಶೀಲಿಸಿಲ್ಲವೆಂದೇ ಹೇಳಬಹುದು. ಈ ಸಿದ್ಧಾಂತ ಅಸ್ವಾಭಾವಿಕವಾಗಿರುವುದರಿಂದಲೇ, ಈ ಬಗೆಗೆ ಕಾನೂನಿನ ತ್ರೈಮಾಸಿಕ ೧೯೩೦ರ ಅಕ್ಟೋಬರ್ ಪತ್ರಿಕೆಯಲ್ಲಿ ಇಂಗ್ಲಿಷ್ ಕಾನೂನಿನ ಚರಿತ್ರೆಯನ್ನು ಕುರಿತಂತೆ ಪ್ರೊ. ಹೋಲ್ಡ್ಸ್‌ವರ್ತ್ ಅವರ ಲೇಖನದಲ್ಲಿ ಯಾವ ಸತ್ಯಾಂಶವೂ ಇಲ್ಲ. ಅದು ಕೇವಲ ಕಸರತ್ತಿನ ಒಂದು ಕಾರ್ಯವಾಗಿದೆ. ದುರ್ದೈವದ ಸಂಗತಿ ಎಂದರೆ ಯಾವ ಭಾರತೀಯ ಸಂವಿಧಾನ ವಿದ್ಯಾರ್ಥಿಯೂ ಅವರು ಹೇಳಿದ ಸಂಗತಿಯನ್ನು ಖಂಡಿಸದೇ ಹೋದುದ್ದರಿಂದ, ಅವರ ಹೇಳಿಕೆಯೇ ಸೂಕ್ತ ಎಂದು ಭಾವಿಸಲಾಯಿತು. ಹೀಗಾಗಿ ಸಂಪುಟ ಆಯೋಗವು ಹೋಲ್ಡ್ಸ್‌ವರ್ತ್‌ರ ಅಭಿಪ್ರಾಯದ ಆಧಾರದ ಮೇಲೆ ಭಾರತ ಹಾಗೂ ಭಾರತೀಯ ಸಂಸ್ಥಾನಗಳ ಸಮಸ್ಯೆಯನ್ನು ನಿರ್ಧರಿಸಿತು. ಶೋಚನೀಯ ಸಂಗತಿ ಎಂದರೆ ಕಾಂಗ್ರೆಸ್ ಪಕ್ಷವು, ಸಂಪುಟ ಆಯೋಗದ ನಿರ್ಣಯವನ್ನು ಪ್ರತಿಭಟಿಸಲೇ ಇಲ್ಲ. ಆದರೆ ಈ ಪರಿಸ್ಥಿತಿಯು, ಭಾರತೀಯ ಹಕ್ಕು ಆದ ಪುನರ್ ವಿಮರ್ಶೆಯನ್ನು ನಿರಾಕರಿಸುವಂತಿಲ್ಲ. ಭಾರತವು ಸ್ವಂತ ಪರಿಶೀಲನೆ ಮಾಡಿ ತನ್ನದೇ ಆದ ನಿರ್ಣಯಕ್ಕೆ ಬರಬಹುದಾಗಿತ್ತು.

ಸಂಪುಟದ ದರ್ಜೆಯ ಆಯೋಗದ ನಿಲುವಿನ ವಿರುದ್ಧ ತೆಗೆದುಕೊಳ್ಳಬಹುದಾಗಿದ್ದ ನಿರ್ಣಯವನ್ನು ಈ ಎರಡು ಪ್ರಸ್ತಾವನೆಗಳಿಂದ ಬಗೆಹರಿಸಬಹುದಾಗಿತ್ತು.

(೧) ಸಾರ್ವಭೌಮತೆ ಎಂಬುದು ರಾಜನಿಗೆ ಇರಬಹುದಾದ ಹಕ್ಕಿನ ಮತ್ತೊಂದು ಮುಖವಾಗಿದೆ. ಸಾರ್ವಭೌಮತೆಯ ಹಕ್ಕು ಬೇರೆ ಸಾಮಾನ್ಯ ಹಕ್ಕುಗಳಿಗಿಂತ ಭಿನ್ನವಾದುದು ಎಂಬುದೂ ಸತ್ಯ; ಅದು ಈ ಎರಡು ವಿಧಗಳಿಂದ ಕೂಡಿದೆ.

(ಅ) ಅರಸನ ಸಾಮಾನ್ಯ ಹಕ್ಕುಗಳು ನಾಡಿನ ಸಾಮಾನ್ಯ ಕಾನೂನಿನಲ್ಲಿ ಅಡಕವಾಗಿದ್ದರೆ, ಸಾರ್ವಭೌಮತೆಯ ಹಕ್ಕು ಒಪ್ಪಂದಗಳಲ್ಲಿ ಅಡಕವಾಗಿರುವ ಅಂಶವಾಗಿದೆ. ಮೊದಲನೆಯದನ್ನು ಕಾನೂನಿನ ದೃಷ್ಟಿಯಿಂದ ನೋಡಿದರೆ ಎರಡನೆಯದು ಸಂಪ್ರದಾಯಕ್ಕೆ ಸೇರಿದೆ.

(ಬ) ಸಾಮಾನ್ಯ ಕಾನೂನಿನ ಹಕ್ಕು ಅರಸನ ಎಲ್ಲಾ ಪ್ರಜೆಗಳಿಗೂ ಅಂದರೆ ಅರಸನ ವಸಾಹತುಗಳಿಗೂ ಅನ್ವಯಿಸುತ್ತದೆ. ಆದರೆ ಸಾರ್ವಭೌಮತೆಯ ಹಕ್ಕು ಕೇವಲ ಭಾರತೀಯ ಸಂಸ್ಥಾನಗಳಿಗೆ ಅನ್ವಯಿಸುತ್ತದೆ. ಸಾರ್ವಭೌಮತೆಯು ಅರಸನ ವಿಶಿಷ್ಟ ಹಕ್ಕು ಎಂಬುದರಲ್ಲಿ ಸಂಶಯವೇ ಇಲ್ಲ. ಅದು ಅರಸನ ಹಕ್ಕು ಆಗಿದೆ ಎಂಬುದನ್ನು ಅವರೂ ಮರೆಯಬಾರದು.

(೨) ಅದು ಅರಸನ ಹಕ್ಕಾಗಿರುವುದರಿಂದ ಸಾರ್ವಭೌಮತೆಯು ನಗರ ಸಭೆಗಳ ಕಾನೂನು ಎಂದರೆ ಸಂವಿಧಾನ ಅಂಶವಾಗಿದೆ.

(೩) ಸಂವಿಧಾನ ಕಾನೂನುಗಳ ಸೂತ್ರಗಳಂತೆ ಹಕ್ಕು ಅರಸನಲ್ಲಿದ್ದರೂ, ಅರಸನು ಅದನ್ನು ತಾನೇ ಚಲಾಯಿಸಲಾರ. ಅರಸನು ಮಂತ್ರಿಮಂಡಲದ ಸಲಹೆಯಂತೆ ಮಾತ್ರ ಅಧಿಕಾರವನ್ನು ಚಲಾಯಿಸಬಹುದು ಎಂಬುದನ್ನು ನಾವು ಮನಗಾಣಬೇಕಾದ ವಿಷಯ.

ಮೇಲೆ ಹೇಳಿದ ಕೊನೆಯ ಪ್ರಸ್ತಾವನೆಗೆ ಹೆಚ್ಚಿನ ವಿವರ ನೀಡಬೇಕಾಗಿದೆ. ಯಾವ ಮಂತ್ರಿ ಮಂಡಲದ ಸಲಹೆಯನ್ನು ಅರಸನು ಅಂಗೀಕರಿಸಬೇಕು? ಎಂದು ಸಹಜವಾಗಿ ಕೇಳಬಹುದು. ಇದಕ್ಕೆ ಸರಳವಾದ ಉತ್ತರ ಎಂದರೆ ಸಂಬಂಧಿಸಿದ ವಸಾಹತುಗಳ ಮಂತ್ರಿ ಮಂಡಳ, ವೆಸ್ಟ್‌ಮಿನಿಷ್ಟರ್ ಕಾಯ್ದೆಯ ಮುನ್ನ ಬ್ರಿಟಿಷ್ ಸಾಮ್ರಾಜ್ಯ ಒಂದೇ ವಸಾಹತುವಿನಂತೆ ಕಾರ್ಯಾಚರಣೆ ಮಾಡುತ್ತಿತ್ತು; ಹೀಗಾಗಿ, ಈ ವಿಷಯದಲ್ಲಿ ಬ್ರಿಟಿಷ್ ಮಂತ್ರಿಮಂಡಲದ ಸಲಹೆಯಂತೆ ಅರಸನು ಕಾರ್ಯ ಮಾಡುತ್ತಿದ್ದನು. ಆದರೆ ವೆಸ್ಟ್‌ಮಿನಿಸ್ಟರ್ ಕಾಯ್ದೆಯಂತೆ, ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಐರ್ಲೆಂಡ್ ಮುಂತಾದ ವಸಾಹತು ರಾಜ್ಯಗಳು ನಿರ್ಮಾಣ ಹೊಂದಿದ ಮೇಲೆ ಆಯಾ ರಾಜ್ಯಗಳ ಮಂತ್ರಿಮಂಡಲದ ಸಲಹೆಯನ್ನು ಕೇಳಿ ಅರಸನು ತನ್ನ ಹಕ್ಕುಗಳನ್ನು ಚಲಾಯಿಸುವುದು ಅನಿವಾರ್ಯವಾಯಿತು. ಆದುದರಿಂದ ಭಾರತವೂ ಈ ಮಾದರಿಯ ಡೊಮಿನಿಯನ್ ಸರಕಾರವನ್ನು ಹೊಂದಿದ್ದಲ್ಲಿ ಅರಸನು ಇಲ್ಲಿಯ ಮಂತ್ರಿಮಂಡಳದ ಸಲಹೆಯಂತೆ ಸಾರ್ವಭೌಮ ಅಧಿಕಾರದ ಪ್ರಶ್ನೆ(ಸಂಸ್ಥಾನಗಳಿಗೆ ಸೇರಿದ)ಯನ್ನು ಪರಿಹರಿಸಬಹುದಲ್ಲವೇ?

ಈ ವಿಧವಾದ ಸಾರ್ವಭೌಮ ಅಧಿಕಾರವನ್ನು ಭಾರತಕ್ಕೆ ನೀಡಲುಬಾರದು ಎಂದು ಪ್ರತಿಪಾದಿಸುವವರು ೧೯೩೫ರ ಕಾಯ್ದೆಯಲ್ಲಿ ಕೈಬಿಡಲಾದ, ೧೯೩೩ರ ಕಾಯ್ದೆಯ ೨೯ನೆಯ ಕಲಮನ್ನು ಮುಂದೆ ಮಾಡಿ ಪ್ರತಿಪಾದಿಸುತ್ತಾರೆ. ಏಕೆಂದರೆ ೧೯೧೫-೧೯ರ ಅವಧಿಯ ಭಾರತದ ಸರಕಾರದ ಕಾಯ್ದೆಗಳಂತೆ ನಾಗರಿಕ ಹಾಗೂ ಮಿಲಿಟರಿ (ಭಾರತೀಯ ಸರಕಾರವು ಬ್ರಿಟಿಷ್ ಭಾರತದ ನಾಗರಿಕ ಹಾಗೂ ಮಿಲಿಟರಿ ಸರಕಾರದಿಂದ ಭಿನ್ನ) ಎಂದೇ ಭಾವಿಸಿದರೂ ಅಧಿಕಾರ ಮಾತ್ರ ಗವರ್ನರ್ ಜನರಲ್ ಹಾಗೂ ಅವರ ಸಲಹಾ ಮಂಡಳಿಯಲ್ಲಿದ್ದುದನ್ನು ಗಣನೆಗೆ ತೆಗೆದುಕೊಳ್ಳದೇ, ಸಾರ್ವಭೌಮ ಅಧಿಕಾರವನ್ನು ಹಸ್ತಾಂತರಿಸಲು ಬಾರದು ಎಂದು ಹೇಳುವುದು ಸೂಕ್ತವಲ್ಲ. ಈ ವಿಧವಾದ ಪ್ರತಿಪಾದನೆಯು ಅರ್ಥಹೀನವಾದುದು. ಈ ವಿಧವಾದ ಭೇದವು ಭಾರತ ಸರಕಾರದ ಕಾಯ್ದೆಯಲ್ಲಿದ್ದಿತೋ ಇಲ್ಲವೋ ಅದರ ವಿಚಾರವೇ ಬೇರೆ. ಆದರೆ ಭಾರತ ಸರ್ಕಾರ, ಸಾರ್ವಭೌಮತೆಗೆ ಸಂಬಂಧಿಸಿದ ಸಂಗತಿಯಲ್ಲಿ ಅದಕ್ಕಿರಬಹುದಾದ ಹಕ್ಕನ್ನು ಯಾರೂ ತಳ್ಳಿಹಾಕುವಂತಿಲ್ಲ. ನಾವು ಅರಿಯಬೇಕಾದ ಸಂಗತಿ ಎಂದರೆ ೧೯೩೩ರಿಂದ ೧೯೩೫ರವರೆಗೂ ಭಾರತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೂ ಅಂದರೆ (ಬ್ರಿಟಿಷ್ ಹಾಗೂ ಸಂಸ್ಥಾನಗಳ ಭಾರತ) ಕೂಡಿದಂತೆ, ಇಂಗ್ಲೆಂಡಿನಲ್ಲಿಯ ಭಾರತದ ಕಾರ್ಯದರ್ಶಿ ಅವರೇ ಅರಸನಿಗೆ ಸಲಹೆಗಾರರಾಗಿದ್ದರು ಎಂಬುದನ್ನು ನಾವು ಮರೆಯಕೂಡದು.

ಹೀಗಾಗಿ ಭಾರತದ ಗವರ್ನರ್ ಜನರಲ್ ಹಾಗೂ ಅವರ ಸಲಹಾ ಮಂಡಳಿ ಭಾರತದ ಕಾರ್ಯದರ್ಶಿ ಕಾರ್ಯಾಲಯಕ್ಕೆ ವಿಧೇಯರಾಗಿದ್ದರು ಎಂಬುದನ್ನು ಮರೆಯಬಾರದು. ೧೮೩೩ರಿಂದ ೧೯೩೭ರ ಅವಧಿವರೆಗೂ ಅನೇಕ ವಿಧಾನಗಳಿಂದ ಸಾರ್ವಭೌಮತೆಯ ಪ್ರಶ್ನೆಯನ್ನು ಬಗೆಹರಿಸಲಾದರೂ, ಭಾರತೀಯರ ಅರಸನಿಗೆ ಸಲಹೆ ಸೂಚಿಸುವ ಹಕ್ಕನ್ನು ಅಲ್ಲಗಳೆಯಲಾಗದು. ಸಾಮ್ರಾಜ್ಯದ ಸಂವಿಧಾನದ ಕಾನೂನಿನಂತೆ ಯಾವುದೇ ಡೊಮಿನಿಯನ್ ಸರಕಾರ ಜಾರಿಗೆ ಬಂದ ನಂತರವೇ ಅರಸನಿಗೆ ಸಲಹೆ ಮಾಡುವ ಅಧಿಕಾರವನ್ನು ಹೊಂದುತ್ತದೆ. ಆದರೆ ಅದರ ಮುಂಚೆಯೇ ಅರಸನಾಗಿದ್ದ ಹಕ್ಕುಗಳನ್ನೇ ಆಧಾರವಾಗಿರಿಸಿಕೊಂಡು, ಡೊಮಿನಿಯನ್ ಸರಕಾರದ ಈ ಒಂದು ಹಕ್ಕನ್ನು ತಿರಸ್ಕರಿಸಲಾಗದು. ಭಾರತ ಸರಕಾರದ ೧೯೩೫ರ ಕಾಯ್ದೆಯ ಅಡಿಯಲ್ಲಿ ಭಾರತವು ಜವಾಬ್ದಾರಿ ಸರಕಾರ ವ್ಯವಸ್ಥೆಯನ್ನು ಹೊಂದಿರಲಿಲ್ಲ. ಆದರೂ ಭಾರತವು ತನ್ನ ಸಂಸ್ಥಾನಗಳ ಸಾರ್ವಭೌಮತೆಯ ಬಗೆಗೆ ಹೇಳುವ ಅಥವಾ ಸಲಹೆ ನೀಡುವ ಹಕ್ಕನ್ನು ಹೊಂದಿದೆ ಎಂದೇ ಹೇಳಬೇಕು. ಏಕೆಂದರೆ ಸಾಮ್ರಾಜ್ಯದ ಸಂವಿಧಾನ ಕಾನೂನು ಜವಾಬ್ದಾರಿ ಹಾಗೂ ಡೊಮಿನಿಯನ್

ಸರಕಾರಗಳ ವಿಭಿನ್ನತೆಯನ್ನು ಗುರುತಿಸಿದೆ. ಜವಾಬ್ದಾರಿ ಸರಕಾರದಡಿಯಲ್ಲಿ ದೇಶದ ಆಂತರಿಕ ವ್ಯವಹಾರಗಳಿಗೆ ಸೇರಿದಂತೆ ಎಲ್ಲಾ ಆಡಳಿತ ವಿಷಯಗಳಲ್ಲಿ ಅರಸನು ಮಂತ್ರಿ ಮಂಡಳದ ಸಲಹೆಯನ್ನು ತಳ್ಳಿ ಹಾಕುವಂತಿಲ್ಲ. ಆದರೆ ಡೊಮಿನಿಯನ್ ಸರಕಾರದಲ್ಲಿ ಅಲ್ಲಿಯ ಸರಕಾರದ ಸಲಹೆಯೇ ಆಧಾರವಾಗಿರುವುದರಿಂದ ಆ ದೇಶಗಳ ಬಗೆಗೆ ಅರಸನು ಹೊಂದಿರಬಹುದಾದ ಹಕ್ಕುಗಳ ಸ್ಥಾನಮಾನವೇ ಬೇರೆ. ಹೀಗಾಗಿ ಡೊಮಿನಿಯನ್ ಸರಕಾರದ ದೇಶಗಳ ಆಂತರಿಕ ಹಾಗೂ ವಿದೇಶಿ ವ್ಯವಹಾರಗಳು ಸೇರಿದಂತೆ ಅರಸನಿಗೆ ಹೆಚ್ಚಿನ ಹಕ್ಕು ಇಲ್ಲ ಎಂಬುದನ್ನು ನಾವು ಅರಿಯಬೇಕು. ಏಕೆಂದರೆ ಯಾವುದೇ ಡೊಮಿನಿಯನ್ ಸರಕಾರವು ವಿದೇಶ ಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾದಲ್ಲಿ ಅರಸನ ಅಪ್ಪಣೆ ಬೇಕಾಗಿಲ್ಲ. ಹೀಗಾಗಿ ಭಾರತದ, ಸಂಸ್ಥಾನಗಳ ಸಾರ್ವಭೌಮತೆಯ ಬಗೆಗೆ, ಸಲಹೆ ಸೂಚಿಸುವ ಹಕ್ಕನ್ನೂ ಹೊಂದಿಲ್ಲ ಎಂದು ಹೇಳುವುದು ಅಪರಾಧವೇ ಸರಿ. ಈ ಮೇಲೆ ಹೇಳಲಾದುದೆಲ್ಲಾ ಸಾಮ್ರಾಜ್ಯ ಸಂವಿಧಾನ ಕಾನೂನಿನ ಸಾರಾಂಶವಾಗಿದ್ದರೂ, ಭಾರತದ ಸಲಹೆ ನೀಡಬಹುದಾದ ಹಕ್ಕನ್ನು ನೀಡದೇ ಇರುವುದು ತಿಳಿಯಲಾರದ ಸಂಗತಿಯಾಗಿದೆ. ಸಕಾರಣವಾಗಿ ಭಾರತಕ್ಕೆ ಈ ಹಕ್ಕು ದೊರೆಯಲೇಬೇಕು. ಏಕೆಂದರೆ ಈಗಾಗಲೇ ಈ ವಿಧವಾದ ಹಕ್ಕನ್ನು ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮುಂತಾದ ರಾಜ್ಯಗಳಿಗೆ ನೀಡಲಾಗಿದೆ. ಆದರೆ ಪ್ರೊ. ಹೋಲ್ಡ್ಸ್‌ವರ್ತ್ ಅವರು ಬೇರೆಯ ನಿರ್ಧಾರಕ್ಕೆ ಬಂದಿರುವುದು, ಸಂವಿಧಾನ ಕಾನೂನುಗಳಲ್ಲಿಯ ಮೂಲ ವ್ಯತ್ಯಾಸವೆಂದು ಯಾರೂ ಭಾವಿಸಬಾರದು. ಏಕೆಂದರೆ ಅವರು ಸಂವಿಧಾನ ಕಾನೂನುಗಳನ್ನು ಸ್ವತಃ ಒಪ್ಪಿಕೊಂಡಿದ್ದಾರೆ. ಅವರು ಬೇರೆ ವಿಧವಾದ ನಿರ್ಣಯಗಳಿಗೆ ಬರಲು ಅವರ ದೃಷ್ಟಿಕೋನ ಬೇರೆ ಆದುದರಿಂದ ಹಾಗೂ ಅವರು ಈ ದಿಶೆಯಲ್ಲಿ ಎತ್ತಲಾದ ಪ್ರಶ್ನೆಗಳೇ ಬೇರೆಯಾಗಿದ್ದವು. ಏಕೆಂದರೆ ಅವರು ಕೇಳಿರಬಹುದಾದ ಪ್ರಶ್ನೆ ಎಂದರೆ ಅರಸನು ಭಾರತ ಸರಕಾರಕ್ಕೆ ತನ್ನ ಸಾರ್ವಭೌಮ ಅಧಿಕಾರವನ್ನು ನೀಡಬಹುದೇ? ಆದರೆ ಇದು ನಿಜವಾದ ಸಮಸ್ಯೆಯೇ ಅಲ್ಲ. ನಿಜವಾದ ಸಮಸ್ಯೆ ಎಂದರೆ ಭಾರತ ಡೊಮಿನಿಯನ್ ಸರಕಾರವು ಅರಸನಿಗೆ ಸಾರ್ವಭೌಮ ಅಧಿಕಾರ ವಹಿಸಿಕೊಡುವಂತೆ ಸಲಹೆ ಮಾಡಬಹುದೇ? ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಸಾರ್ವಭೌಮ ಅಧಿಕಾರವನ್ನು ವರ್ಗಾಯಿಸುವ ಪ್ರಶ್ನೆಯೇ ನಮಗೆ ಸಂಬಂಧಿಸಿಲ್ಲ. ನಮಗೆ ಸಂಬಂಧಿಸಿದ ವಿಷಯವೆಂದರೆ ಸಾರ್ವಭೌಮ ಅಧಿಕಾರವನ್ನು ಹೇಗೆ ವರ್ಗಾಯಿಸಬಹುದು? ಆದುದರಿಂದ ನನ್ನ ವಿಚಾರದಲ್ಲಿ ಪ್ರೊ. ಹೋಲ್ಡ್ಸ್‌ವರ್ತ್ ಅವರು ನಿಜವಾದ ಸಮಸ್ಯೆಯನ್ನು ಅರಿತಿದ್ದರೆ ಅವರು ಈ ವಿಧವಾದ ನಿರ್ಣಯಗಳಿಗೆ ಬರುತ್ತಿದ್ದಿಲ್ಲ.

ನಾನು ಇಲ್ಲಿಯವರೆಗೆ, ಸಂಪುಟ ಆಯೋಗವು ಅರಸನು ಭಾರತ ಸರಕಾರಕ್ಕೆ ತಮ್ಮ ಸಾರ್ವಭೌಮತೆಯನ್ನು ವಹಿಸಿಕೊಡುವ ಬಗೆಗೆ ವಿವರಿಸಿರುವೆ. ಆದರೆ ಈ ಸಮಸ್ಯೆಯ ಮತ್ತೊಂದು ಮುಖವಿದ್ದು, ಅದರನ್ವಯ ಅರಸನು, ಭಾರತೀಯ ಸರಕಾರಕ್ಕೆ ಸಾರ್ವಭೌಮ ಅಧಿಕಾರವನ್ನು ವರ್ಗಾಯಿಸಲಾರ. ಅವರ ಅಭಿಪ್ರಾಯದಂತೆ ಸಾರ್ವಭೌಮ ಅಧಿಕಾರವೇ ಕಳಚಿ ಹೋಗುವುದು. ಈ ಹೇಳಿಕೆ ಸಂವಿಧಾನಾತ್ಮಕ ಕಾನೂನಿಗೆ ವಿರೋಧವಾದ ದಂಗುಬಡಿಸುವ ಹೇಳಿಕೆಯಾಗಿದೆ. ಈ ಸೂತ್ರದಂತೆ ಅರಸನು ತನ್ನ ಹಕ್ಕುಗಳನ್ನು ಯಾರಿಗೂ ಒಪ್ಪಿಸಲಾರ ಹಾಗೂ ತ್ಯಜಿಸಲಾರ. ಏಕೆಂದರೆ ಅವರು ವರ್ಗಾಯಿಸದೇ ಹೋದರೆ ಅದನ್ನು ತ್ಯಜಿಸದೇ ಹೋಗಲೂ ಬಹುದು. ಈ ಸೂತ್ರವು ಪ್ರೈವಿಕೌನ್ಸಿಲ್ ಮುಂದೆ ಬಂದಿದ್ದ **ಎಡ್ಲುಜೀ ಬೈರಮಜೀ** ಹಾಗೂ **ರಾಣಿ**ಯವರ ಪ್ರಕರಣದಲ್ಲಿ ೧೮೪೦ರಲ್ಲಿ ೫ ಮೂರರ ಪಿ.ಸಿ. ಪು. ೨೭೬ ಅವರ ಹೇಳಿಕೆಯಂತೆ, ಅರಸನು ತನ್ನ ಫರಮಾನ್ ಮೂಲಕ ಕೂಡಾ ತನ್ನ ಹಕ್ಕುಗಳನ್ನು ಬಿಟ್ಟು ಕೊಡಲುಬಾರದು. ಹೀಗಾಗಿ ಸಂಪುಟ ಆಯೋಗದ ಹೇಳಿಕೆಯಂತೆ ಅರಸನು ತನ್ನ ಸಾರ್ವಭೌಮ ಅಧಿಕಾರವನ್ನು ಸಂವಿಧಾನ ಕಾನೂನಿಗೆ ವಿರೋಧವಾದ

ಕಾನೂನಿನಿಂದ ಸಾಮ್ರಾಜ್ಯವನ್ನು ಆಳಲಾರ. ಹೀಗೆಂದಾಗ ಅರಸನು ತನ್ನ ಹಕ್ಕನ್ನು ಮುಂದುವರಿಸುತ್ತಾನೆ ಎಂದಂತಾಯಿತು. ಆದುದರಿಂದ ಅರಸನು ಯಾವುದಾದರೊಂದು ಖಚಿತ ಕಾನೂನಿನ ಅಡಿಯಲ್ಲಿ ತನ್ನ ಈ ಒಂದು ಹಕ್ಕನ್ನು ಒಪ್ಪಿಸಬಹುದಾಗಿದೆ. ಹೀಗೆಂದಾಗ ಈ ದಿಶೆಯಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಕಾನೂನನ್ನು ರಚಿಸಿ ಸಾರ್ವಭೌಮ ಅಧಿಕಾರವನ್ನು ತ್ಯಜಿಸುವಂತೆ ಮಾಡುವುದು ಸೂಕ್ತವೇ? ಹಾಗೂ ಕಾನೂನು ದೃಷ್ಟಿಯಿಂದ ಸಕ್ರಮವೇ? ನನ್ನ ಒಂದು ದೃಷ್ಟಿಯಿಂದ ಭಾರತೀಯರು ಬ್ರಿಟಿಷ್ ಪಾರ್ಲಿಮೆಂಟಿನ ಈ ಒಂದು ಕ್ರಮವು ಸೂಕ್ತ ಎಂದು ಹೇಳಲಾರರು. ಕಾನೂನಿನ ದೃಷ್ಟಿಯಿಂದ ಅದು ಸಕ್ರಮವಾಗಲಾರದು. ಏಕೆಂದರೆ, ಭಾರತವು ಡೊಮಿನಿಯನ್ ಸರಕಾರವಾದ ಮೇಲೆ, ಬ್ರಿಟಿಷ್ ಪಾರ್ಲಿಮೆಂಟಿಗೆ ಭಾರತದ ಮೇಲೆ ಯಾವ ವಿಧವಾದ ಅಧಿಕಾರವೂ ಇರಲಾರದು. ಮುಂದುವರಿದು, ಪಾರ್ಲಿಮೆಂಟ್ ರಚಿಸಿದ ಕಾನೂನಿನಿಂದ ಸಾರ್ವಭೌಮತೆಯನ್ನು ರದ್ದುಪಡಿಸುವುದು ಸರಿಯಾದ ಕ್ರಮವಾಗಲಾರದು. ಕಾರಣ ಸರಳವಾಗಿದೆ. ಸಾರ್ವಭೌಮ ಅಧಿಕಾರವನ್ನು ಎತ್ತಿ ಹಿಡಿಯುವುದು ಸೈನ್ಯಬಲ ಒಂದೇ. ಇದು ಭಾರತೀಯ ಸೈನ್ಯದ ಹಸ್ತದಲ್ಲಿದೆ. ಅಲ್ಲದೆ ಭಾರತವೇ ಅದಕ್ಕೆ ಹಣ ಪೂರೈಸಿದೆ. ಈ ವಿಧವಾದ ಬಲಿಷ್ಠ ಸೈನ್ಯ ಬ್ರಿಟಿಷ್ ಇಂಡಿಯಾದ ವೈಸ್‌ರಾಯ್ ಇಲ್ಲವೇ ಗವರ್ನರ್ ಜನರಲ್ ಅಡಿಯಲ್ಲಿ ಬೆಳೆದು ಬಾರದೇ ಇದ್ದಲ್ಲಿ ಬ್ರಿಟನ್ ತನ್ನ ಸಾರ್ವಭೌಮತೆಯ ಅಧಿಕಾರವನ್ನು ಸಂಪಾದಿಸುತ್ತಿರಲಿಲ್ಲ. ಈ ವಿಧವಾದ ಒಂದು ಅಧಿಕಾರ ಭಾರತೀಯರಿಗೆ ಸೌಲಭ್ಯ ನೀಡುವ ಒಂದು ಭರವಸೆಯಿಂದ ಉದ್ಭವಿಸಿರುವಾಗ, ಪಾರ್ಲಿಮೆಂಟ್ ಇದಕ್ಕೆ ವಿರೋಧವಾಗಿ ಕಾನೂನು ರಚಿಸಿದರೆ, ಅದು ಭಾರತೀಯರ ವಿಶ್ವಾಸಕ್ಕೆ ದ್ರೋಹ ಬಗೆದಂತೆ. ಸಂಸ್ಥಾನಗಳೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ ಹೊರಹೊಮ್ಮಿರುವ ಸಾರ್ವಭೌಮ ಅಧಿಕಾರವನ್ನೂ ಭಾರತವು ಕೋರುವುದು ಸರಿಯಾದ ಕ್ರಮವಾಗಿದೆ.

ಒಂದು ಪ್ರಶ್ನೆಯನ್ನು ಕೇಳಬಹುದು. ಭಾರತ ಸ್ವಾತಂತ್ರ್ಯ ಹೊಂದಿದ ಮೇಲೆ ಏನಾಗಬಹುದು? ಆಗ ಅರಸನ ಆಳ್ವಿಕೆಯೇ ಇರದು, ಆಗ ಅರಸನಿಂದ ಹಕ್ಕುಗಳನ್ನು ಪಡೆಯುವ ಪ್ರಶ್ನೆ ಇರುತ್ತದೆಯೇ? ಉತ್ತರ ಹೌದು. ಏಕೆಂದರೆ ಸ್ವಾತಂತ್ರ್ಯ ಭಾರತ ಉತ್ತರಾಧಿಕಾರಿ ರಾಜ್ಯವಾಗಿರುತ್ತದೆ. ಈ ಒಂದು ಪ್ರಶ್ನೆಗೆ ಉತ್ತರವನ್ನು ಅಂತರರಾಷ್ಟ್ರೀಯ ಕಾನೂನಿನಿಂದ ಪಡೆಯಬಹುದಾಗಿದೆ. ಒಪನ್‌ಹೀಮ್ ಅವರ ಹೇಳಿಕೆಯಂತೆ ಉತ್ತರಾಧಿಕಾರಿ ರಾಜ್ಯಗಳು ಹಿಂದಿನ ರಾಜ್ಯದ ಎಲ್ಲಾ ಅಧಿಕಾರಿಗಳನ್ನು ಪಡೆಯುತ್ತವೆ. ಹಾಲ್ಸರ ಅಂತರರಾಷ್ಟ್ರೀಯ ಕಾನೂನಿನಂತೆ ಒಪ್ಪಂದದಂತೆ ಉತ್ತರಾಧಿಕಾರಿ ಸರಕಾರವು ಎಲ್ಲ ಹಕ್ಕುಗಳನ್ನು ಹಾಗೂ ಆಸ್ತಿಪಾಸ್ತಿಗಳನ್ನು ಪಡೆಯುತ್ತದೆ. ಹೀಗಾಗಿ ಉತ್ತರಾಧಿಕಾರಿ ರಾಜ್ಯವಾದ ಭಾರತವು ಎಲ್ಲಾ ಅಧಿಕಾರಗಳನ್ನು ಪಡೆಯುತ್ತದೆ. ಈ ದಿಶೆಯಲ್ಲಿ ಹಾಲ್ಸರ ಅಂತರರಾಷ್ಟ್ರೀಯ ಕಾನೂನಿನ ಕೆಲವು ಅಂಶಗಳು ಭಾರತಕ್ಕೆ ಮಹತ್ವವಾಗಿವೆ.

"ಹಳೆಯ ರಾಷ್ಟ್ರವು ತನ್ನ ಬದುಕನ್ನು ಅನಿರ್ಬಂಧಿತವಾಗಿ ಮುಂದುವರಿಸುತ್ತಿರುವಾಗ, ಅದು ವ್ಯಕ್ತವಾಗಿ ಕಳೆದುಕೊಳ್ಳದ್ದನ್ನು ತನಗೆ ವ್ಯಕ್ತಿಗತವಾಗಿ ಸೇರಬೇಕಾದಂತೆ ಹೊಂದಿರುತ್ತದೆ. ಆದ್ದರಿಂದ ಒಪ್ಪಂದದಿಂದ ಗಳಿಸಿದ ಅದರ ಸ್ವತ್ತು ಮತ್ತು ಅನುಕೂಲಗಳು ವ್ಯಕ್ತಿಗತ ಸ್ವತ್ತಿನಂತೆ ಇಲ್ಲವೇ ಅದಕ್ಕೆ ಸೇರಿದ ಪರಿಣಾಮವಾಗಿ ಪ್ರಜೆಗಳ ಸ್ವತ್ತಿನಂತೆ ಅನುಭವಿಸುತ್ತದೆ ಮತ್ತು ಹೊಂದಿರುವುದನ್ನು ಮುಂದುವರಿಸುತ್ತದೆ. ಇನ್ನೊಂದು ರೀತಿಯಲ್ಲಿ, ಕಳೆದುಹೋದ ಪ್ರದೇಶದಲ್ಲಿ ಒಪ್ಪಂದಗಳ ಮೂಲಕ ಪ್ರದೇಶಗಳನ್ನು ವಿಂಗಡಿಸುವ ಮತ್ತು ಗಡಿಗುರುತುಗಳ, ತನಗೆ ಮಾತ್ರ ಸಂಬಂಧಿಸಿ ಒಪ್ಪಲಾದ ಹಕ್ಕುಗಳ, ಮತ್ತು ಅದರೊಳಗೆ ಇರುವ ಸ್ವತ್ತು, ಇವುಗಳನ್ನೂ ಸೇರಿದ ಹಕ್ಕುಗಳು ಮತ್ತು ಆದ್ದರಿಂದ ಒಂದು ಸ್ಥಳೀಯ ಲಕ್ಷಣವನ್ನು ಅಥವಾ ಅದರೊಳಗಿಲ್ಲದಿದ್ದರೂ ಸ್ಥಳೀಯವಾಗಿ ಸೇರಿ ಉಳಿಯುವ ಸ್ವತ್ತುಗಳೂ ಹೊಸ ರಾಷ್ಟ್ರವ್ಯಕ್ತಿಗೆ ವರ್ಗಾಯಿಸಿದ

ರಾಷ್ಟ್ರ ಸಂಸ್ಥೆಗಳಿಗೆ ಸೇರುತ್ತವೆ.” ಭಾರತೀಯ ಸಂಸ್ಥಾನಗಳು ಒಂದು ವಿಧವಾಗಿ ಸಾರ್ವಭೌಮ ರಾಜ್ಯಗಳಾಗಿ ಮುಂದುವರಿಯಬಹುದು. ಆದರೆ ಅವು ಸ್ವತಂತ್ರ ರಾಷ್ಟ್ರಗಳಾಗಲಾರವು. ಏಕೆಂದರೆ ಅವು ಬ್ರಿಟಿಷರ ಸಾರ್ವಭೌಮತೆಯನ್ನು ಅಂಗೀಕರಿಸಿದ್ದವು. ಹೀಗಾಗಿ ಭಾರತವು ಡೊಮಿನಿಯನ್ ಸರಕಾರ ಪಡೆದ ಮೇಲೆ ಅನಿವಾರ್ಯವಾಗಿ ಭಾರತದ ಸಾರ್ವಭೌಮತೆಯನ್ನು ಒಪ್ಪಲೇಬೇಕಾಗುತ್ತದೆ. ಹೀಗೆ ಸಾರ್ವಭೌಮ ಅಧಿಕಾರ ಮುಂದುವರಿದಾಗ ಸಂಸ್ಥಾನಗಳು ಸ್ವತಂತ್ರವಾಗಿ ಉಳಿಯಲಾರವು. ಅವು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಬಹುದು. ಆದರೆ ಸಾರ್ವಭೌಮತ್ವವು (ಬ್ರಿಟಿಷರ) ಹೋದರೂ ಭಾರತ ಸ್ವತಂತ್ರವಾದ ಮೇಲೆ ಅದು ಮುಂದುವರಿಯುತ್ತದೆ ಎಂಬ ಸಂಗತಿಯನ್ನು ಅವರು ಅರಿಯಲೇಬೇಕು. ಏಕೆಂದರೆ ಭಾರತವು ಅವರ ಸ್ವಾತಂತ್ರ್ಯವನ್ನು ಒಪ್ಪುವುದಿಲ್ಲ. ಮುಂದುವರಿದು ವಿದೇಶಿ ರಾಷ್ಟ್ರಗಳು ಇವುಗಳ ಸ್ವತಂತ್ರ ಸ್ಥಾನಮಾನಕ್ಕೆ ಮನ್ನಣೆ ನೀಡಲಾರವು. ಉಳಿದಿರುವ ಒಂದೇ ಮಾರ್ಗ ಎಂದರೆ ಭಾರತೀಯ ಸಂಸ್ಥಾನಗಳು ವಿಲೀನಹೊಂದಿ ತಮ್ಮ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯನ್ನು ಮರೆಯಬೇಕು. ಇದು ಭಾರತದ ಒಕ್ಕೂಟದಲ್ಲಿ ಸೇರಿದಾಗ ಮಾತ್ರ ಸಾಧ್ಯ. ಈ ಒಂದು ಸಂಗತಿಯನ್ನು ಅವರು ಮರೆತಂತೆ ಇರುವುದರಿಂದ ದುಂಡುಮೇಜಿನ ಪರಿಷತ್ತಿನಲ್ಲಿ ನಡೆದುದನ್ನು ಸ್ಮರಿಸುವುದು ಅನಿವಾರ್ಯ. ಮೊದಲು ಮೊದಲು ಸಂಸ್ಥಾನಗಳು ಒಕ್ಕೂಟವನ್ನು ಸೇರಬಾರದೆಂದೇ ನಿರ್ಣಯಿಸಿದ್ದವು. ನಂತರ ಅವು ಒಕ್ಕೂಟಕ್ಕೆ ಸೇರಲು ಒಪ್ಪಿದವು. ಇದಕ್ಕೆ ಕಾರಣವೆಂದರೆ, ಬಟ್ಲರ ಸಮಿತಿಯು ಸಾರ್ವಭೌಮತೆಯ ಬಗೆಗೆ ಕೆಲವು ಸಿದ್ಧಾಂತಗಳನ್ನು ಸೂಚಿಸಿದ್ದು ಸಾರ್ವಭೌಮತೆಯೇ ಸರ್ವಶ್ರೇಷ್ಠ ಎಂದೂ ತಿಳಿಸಿದ್ದು ಸಂಸ್ಥಾನಗಳು ಈ ಒಂದು ಬದಲಾವಣೆಗೆ ಪ್ರಮುಖವಾಗಿ ಭಾವಿಸಿದ ಅನಿಸಿಕೆ ಎಂದರೆ, ಸಾರ್ವಭೌಮತೆಯಲ್ಲಿ ಅಡಕವಾಗಿರಬಹುದಾದ ಅಧಿಕಾರಗಳನ್ನು, ಒಕ್ಕೂಟಕ್ಕೆ ಹಸ್ತಾಂತರಿಸಿದ ನಂತರ ಇರಲಾರವು. ಹೀಗಾಗಿ ನಮ್ಮಲ್ಲಿ ಅನೇಕರಿಗೆ ತಿಳಿದಂತೆ ಸಂಸ್ಥಾನಗಳ ರಾಜರು ಅನೇಕರು ಅಂದಿನ ರಾಜ್ಯಕಾರ್ಯದರ್ಶಿಯನ್ನು ಇವರ ಬಗೆಗೆ ಕೇಳಿದರು. ರಾಜರುಗಳ ಅನಿಸಿಕೆಯಂತೆ ಪಟ್ಟಿ ನಂಬರ್ ೧ರಲ್ಲಿಯ ವಿಷಯಗಳನ್ನು ಬಿಟ್ಟು ಸಾರ್ವಭೌಮ ಅಧಿಕಾರದ ವ್ಯಾಪ್ತಿ ಏನು ಎಂದು ತಿಳಿಯಲೂ ಬಯಸಿದರು. ಆದರೆ ಅಂದಿನ ರಾಜ್ಯ ಕಾರ್ಯದರ್ಶಿಗಳ ಬಳಿಯಲ್ಲಿ ಈ ಪ್ರಶ್ನೆಗೆ ಉತ್ತರವಿರದೇ ಹೋದುದರಿಂದ, ಅವರು ರಾಜರು ಮೌನವಾಗಿದ್ದು, ತಮ್ಮನ್ನು ಹಿಂಬಾಲಿಸಬೇಕೆಂದೇ ಹೇಳಿದರು. ರಾಜ್ಯ ಕಾರ್ಯದರ್ಶಿಗಳ ಅಭಿಪ್ರಾಯವೇನೇ ಇರಲಿ, ಸಾರ್ವಭೌಮ ಅಧಿಕಾರವು, ವಿಲೀನೀಕರಣದೊಂದಿಗೆ ಮುಕ್ತಾಯವಾಗುತ್ತದೆ ಎಂಬ ಸಂಗತಿ ರಾಜರುಗಳಿಗೆಲ್ಲಾ ತಿಳಿದ ಸಂಗತಿಯೇ ಆಗಿತ್ತು. ಇದು ವಾಸ್ತವಿಕವಾಗಿ ಅಂದಿಗೂ ಇಂದಿಗೂ ಯಾವ ಬದಲಾವಣೆಗೂ ಗುರಿಯಾಗಿಲ್ಲವೆಂದೇ ಹೇಳಬಹುದು. ಆದುದರಿಂದ ಭಾರತೀಯ ಸಂಸ್ಥಾನಗಳು ತಮ್ಮ ಸ್ವಾತಂತ್ರ್ಯದ ಬಿಸಿಲುಗುದುರೆಯ ಬೆನ್ನೇರಿ ಹೋಗುವುದನ್ನು ಕೈಬಿಟ್ಟು ಒಕ್ಕೂಟದಲ್ಲಿ ವಿಲೀನ ಹೊಂದುವುದು ಸೂಕ್ತ. ಆದುದರಿಂದ ಭಾರತೀಯರು ಸಂಪುಟ ಸಮಿತಿಯ ಹೇಳಿಕೆಯನ್ನು ಸಾರ್ವಭೌಮ ಅಧಿಕಾರ ಮುಗಿದು ಹೋಗುವುದು ಎಂಬುದನ್ನು ಖಂಡಿಸಬೇಕು. ಮುಂದುವರಿದು ಸಾರ್ವಭೌಮತ್ವದ ಉತ್ತರಾಧಿಕಾರಿಗಳಾದ ನಾವು ಸಂಸ್ಥಾನಗಳು ನಮ್ಮ ಒಕ್ಕೂಟದಲ್ಲಿ ವಿಲೀನಗೊಳ್ಳುವಂತೆ ಎಲ್ಲಾ ಒತ್ತಡವನ್ನು ಮುಂದುವರಿಸುವ ಅಧಿಕಾರವನ್ನು ಹೊಂದಿದ್ದೇವೆ ಎಂಬುದನ್ನು ಸಾಬೀತು ಮಾಡಬೇಕು. ಈ ಒಂದು ಅಭಿಪ್ರಾಯವನ್ನು ಸಂಸ್ಥಾನಗಳು ಅರಿಯಬೇಕು. ಏಕೆಂದರೆ ಅವು ತಮ್ಮ ಸ್ವಾತಂತ್ರ್ಯವನ್ನು ೫ ವರ್ಷಗಳಿಗಿಂತ ಹೆಚ್ಚು ಅವಧಿಯವರೆಗೆ ಮುಂದುವರಿಸುವ ಶಕ್ತಿ ಹೊಂದಿಲ್ಲ. ಆದುದರಿಂದ ಅವರು ಒಕ್ಕೂಟವನ್ನು ಸೇರಿ ಸಂವಿಧಾನಾತ್ಮಕ ಆಳರಸರಾಗಿ ಮುಂದುವರಿಯಬೇಕು. ಯಾವುದೇ ಸಂಸ್ಥಾನದ ದಿವಾನರು ಈ ಅಭಿಪ್ರಾಯಕ್ಕೆ ವಿರೋಧಿಗಳಿದ್ದರೆ ಅವರೇ ಸಂಸ್ಥಾನಗಳ ವೈರಿಗಳೆಂದೇ ಭಾವಿಸಬೇಕು. ಈ

ವಿಧವಾದ ವಿಲೀನೀಕರಣದಿಂದ ಜವಾಬ್ದಾರಿ ಸರಕಾರವು ಜಾರಿಯಲ್ಲಿ ಬಂದು, ಸಂಸ್ಥಾನದ ಅರಸುಗಳ ಪಾರಂಪರಿಕ ಹಕ್ಕುಗಳನ್ನು ಸೂಕ್ತವಾಗಿ ಪರಿಗಣಿಸಲು ಅವಕಾಶವಾಗುತ್ತದೆ. ಇದನ್ನು ಬಿಟ್ಟು ಸ್ವತಂತ್ರವಾಗಿದ್ದು, ಯು.ಎನ್.ಓ.ದ ಮನ್ನಣೆ ಮತ್ತು ಸಂರಕ್ಷಣೆಯನ್ನು ಪಡೆಯುತ್ತೇವೆ ಎಂಬುದು ಹಗಲು ಕನಸು. ಏಕೆಂದರೆ ಭಾರತದ ಸಾರ್ವಭೌಮ ಅಧಿಕಾರವನ್ನು ಕಡೆಗಣಿಸಿ ವಿಶ್ವಸಂಸ್ಥೆಯು ಇವರಿಗೆ ಮನ್ನಣೆ ನೀಡುವುದು ಸಂಶಯದ ಸಂಗತಿ ಆಗಿದೆ. ಒಂದು ವೇಳೆ ಅದು ಸಂಭವಿಸಿದರೂ, ಸಂಸ್ಥಾನಗಳು ಜವಾಬ್ದಾರಿ ಸರಕಾರವನ್ನು ಹೊಂದಿದರೂ, ಬಾಹ್ಯ ಆಕ್ರಮಣ ಸಂದರ್ಭಗಳಲ್ಲಿ ವಿಶ್ವಸಂಸ್ಥೆಯು ಸಹಕರಿಸುವುದು ಸಾಧ್ಯವಿಲ್ಲ. ಈ ಎಲ್ಲಾ ಸಂಗತಿಗಳು ಗೋಡೆಯ ಮೇಲಿನ ಬರಹದಂತೆ ನಮಗೆ ಗೋಚರವಾಗಿದೆ. ಅದನ್ನು ಓದದೇ ಹೋದವರು ತಮ್ಮ ಸ್ವಾರ್ಥಕ್ಕೆಂದೇ ಹೋರಾಡುವ ಸ್ವಾರ್ಥಿಗಳೆಂದೇ ಹೇಳಬೇಕು.

# ವಿಭಾಗ ನಾಲ್ಕು

# ಕಾಯಿದೆಗಳು ಮತ್ತು ಕಾನೂನುಗಳ ಕುರಿತ ಟಿಪ್ಪಣಿಗಳು


ಅಧ್ಯಾಯ ೧ : ಸಾಮಾನ್ಯ ನ್ಯಾಯ

ಅಧ್ಯಾಯ ೨ : ಆಧಿಪತ್ಯ ರಾಜ್ಯದ ಸ್ಥಾನಮಾನ ಕುರಿತ ಟಿಪ್ಪಣಿಗಳು

ಅಧ್ಯಾಯ ೩ : ನಿರ್ದಿಷ್ಟ ಪರಿಹಾರದ ಕಾನೂನು

ಅಧ್ಯಾಯ ೪ : ನ್ಯಾಸದ ಕಾನೂನು

ಅಧ್ಯಾಯ ೫ : ಕಾಲ ಪರಿಮಿತಿಯ ಕಾನೂನು

ಅಧ್ಯಾಯ ೬ : ಬ್ರಿಟಿಷ್ ಭಾರತದಲ್ಲಿ ದಂಡಪ್ರಕ್ರಿಯಾ ಕಾನೂನು

ಅಧ್ಯಾಯ ೭ : ಆಸ್ತಿಯ ವರ್ಗಾವಣೆ ಕಾಯ್ದೆ

ಅಧ್ಯಾಯ ೮ : ಸಾಕ್ಷ್ಯದ ಕಾನೂನು

## ಅಧ್ಯಾಯ– ೧

# ಸಾಮಾನ್ಯ ನ್ಯಾಯ

# ಸಾಮಾನ್ಯ ನ್ಯಾಯ

**ಸಾಮಾನ್ಯ ನ್ಯಾಯಕ್ಕೂ (ವ್ಯವಹಾರ ನ್ಯಾಯಕ್ಕೂ) ಧರ್ಮ ನ್ಯಾಯಕ್ಕೂ ಇರುವ ಸಂಬಂಧ:**

(೧) ಇಂಗ್ಲಿಷ್ ಪದ್ಧತಿಯಲ್ಲಿ ಧರ್ಮ ನ್ಯಾಯ(ಈಕ್ವಿಟಿ)ವು ಒಂದು ತಾಂತ್ರಿಕ ಅರ್ಥವನ್ನು ಪಡೆದು ಕೊಂಡಿದೆ. ನಮಗೆ ಅದನ್ನು ವ್ಯವಹಾರ ನ್ಯಾಯ ತತ್ವಗಳ ವಲಯದಿಂದ ಬೇರೆಯೇ ಆದ ಸಮಗ್ರ ನ್ಯಾಯ ವೃತ್ತಿ ಎಂದು ಭಾವಿಸುವ ಅಭ್ಯಾಸವಾಗಿದೆ.

(೨) ಒಳ್ಳೆಯದಕ್ಕೋ ಇಲ್ಲವೇ ಕೆಟ್ಟದಕ್ಕೋ, ಇಂಗ್ಲಿಷ್ ನ್ಯಾಯವಾಹಿನಿಯು ಎರಡು ಸೀಳುಗಳಾಗಿ ವಿಭಾಗಗೊಂಡಿತು. ಸಾಕಷ್ಟು ಮಟ್ಟಿಗೆ ಮಣ್ಣಿನ ಕಲಕು, ರೋಗದ ಸೋಂಕು ಹತ್ತಿದ ನೀರುಗಳು ಅನಿವಾರ್ಯವಾದುವು.

(೩) ಆದರೆ ಕಾನೂನು ಮತ್ತು ಧರ್ಮ ನ್ಯಾಯಗಳ ಪರಸ್ಪರ ಅವಲಂಬನವು ಎಂದೂ ಪೂರ್ತಿ ಕಣ್ಮರೆಯಾಗಿಲ್ಲ.

(೪) ನಾವು ವ್ಯವಹಾರ ನ್ಯಾಯವನ್ನೂ ಈಕ್ವಿಟಿ ಅಥವಾ ಧರ್ಮನ್ಯಾಯವನ್ನೂ ಪರಸ್ಪರ ವಿರೋಧೀ ಪದ್ಧತಿಗಳೆಂದು ಭಾವಿಸಬಾರದು. ಧರ್ಮನ್ಯಾಯವು ಸ್ವಯಂಪೂರ್ಣ ವ್ಯವಸ್ಥೆಯಲ್ಲ, ಪ್ರತಿ ಹಂತದಲ್ಲೂ ಅದಕ್ಕೆ ವ್ಯವಹಾರ ನ್ಯಾಯವಾದ ಅಸ್ತಿತ್ವದ ಪೂರ್ವಕಲ್ಪನೆ ಇದ್ದೇ ಇರುತ್ತದೆ.

**ಕೋರ್ಟ್ ಆಫ್ ಈಕ್ವಿಟಿಯು ಪರಿಹಾರವನ್ನು ಒದಗಿಸಲು ಆಧಾರವಾದ ತತ್ತ್ವ**

(೧) ಚಾನ್ಸೆರಿ ಅಥವಾ ಧರ್ಮ ಸೂಕ್ಷ್ಮ ನ್ಯಾಯಸ್ಥಾನವು ವಿಕಾಸಗೊಳಿಸಿದ ಧರ್ಮ ನ್ಯಾಯದ ಮೇಲೆ ಬೇರೆಲ್ಲದಕ್ಕಿಂತ ಹೆಚ್ಚಾಗಿ ಯಾವ ಒಂದು ತತ್ತ್ವವು ಪ್ರಭಾವ ಬೀರಿತು ಎಂಬುದನ್ನು ನೋಡಿದರೆ, ಅದು ದಾರ್ಶನಿಕ ಮತ್ತು ದೇವತಾಶಾಸ್ತ್ರೀಯ ಆತ್ಮಸಾಕ್ಷಿಯ ಪರಿಕಲ್ಪನೆಯಲ್ಲಿ ಕಂಡುಬರುತ್ತದೆ.

(೨) ಇಂಗ್ಲಿಷ್ ಧರ್ಮನ್ಯಾಯವು ಆತ್ಮಸಾಕ್ಷಿಯ ನೈತಿಕ ತತ್ವದ ನಿರ್ದೇಶನದಲ್ಲಿ ವ್ಯವಸ್ಥಿತವಾಗುತ್ತಾ ಹೋಗುತ್ತದೆ.

(೩) ಎಲ್ಲ ಮುಖ್ಯ ನ್ಯಾಯಾಧೀಶರೂ ಒಂದೇ ಸಮನಾಗಿ ಆ ತತ್ತ್ವದ ಅನ್ವೇಷಣೆಯಲ್ಲಿ ನಿರತರಾಗಿದ್ದರು ಎಂದು ನಾವು ಊಹಿಸಲು ಬರುವುದಿಲ್ಲ. ಟ್ಯೂಡರರ ಆಳ್ವಿಕೆಯಲ್ಲಿ ಕೆಲವು ನ್ಯಾಯಾಧಿಕಾರಿಗಳು ಅವಿಚಾರಿಕವಾಗಿ ಸ್ವೇಚ್ಛೆಯಿಂದ ವರ್ತಿಸಿದರು. ಹೀಗೆ ಆಗಾಗ ಕ್ರಮ ತಪ್ಪಿ ಅತಿರೇಕದಿಂದ ನಡೆದುಕೊಂಡದ್ದೇ ಚಾನ್ಸಲರನ ಹೆಜ್ಜೆಯನ್ನು ಕುರಿತು ಸೆಲ್ಡನನು ಹೇಳಿದ ಅರೆ ಗಂಭೀರ ವ್ಯಂಗ್ಯೋಕ್ತಿಗೆ ಸ್ಫೂರ್ತಿಯಾಗಿರಬಹುದು. ಚಾನ್ಸಲರನು ಅಥವಾ ಪ್ರಧಾನ ನ್ಯಾಯಾಧಿಕಾರಿಯು ತನ್ನ ಮುಂದುವರಿಸಿಕೊಂಡ ಆತ್ಮಸಾಕ್ಷಿಯು ಹೆಚ್ಚು ಸುಸಂಗತವಾಗಿತ್ತು. ಅವನ ಸ್ವೇಚ್ಛಾವರ್ತನೆಗಿಂತಲೂ ಹೆಚ್ಚು ವಿಚಿತ್ರವಾಗಿತ್ತು. ಆಮೇಲೆ ಒಂದು ಗಡಸುತನದ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ೧೯೭೬ರ ವೇಳೆಗೆ ಲಾರ್ಡ್ ನಾಟಿಂಗ್‌ಹ್ಯಾಮನು, ಚಾನ್ಸಲರನ ಆತ್ಮಸಾಕ್ಷಿಯು ಕೇವಲ ಸ್ವಭಾವಜನ್ಯ (naturalis et inferma) ಎಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ನಿರಾಕರಿಸುತ್ತಾನೆ. ೧೮೧೮ರಲ್ಲಿ ಲಾರ್ಡ್ ಸೆಲ್ಡನ್, ಒಬ್ಬ ಧರ್ಮ ನ್ಯಾಯಾಧಿಕಾರಿಗೆ ಕೇವಲ ವ್ಯಕ್ತಿಗತ ವಿವೇಚನೆಯಿರಬೇಕೆಂಬ

ಅಭಿಪ್ರಾಯವನ್ನು ಒಟ್ಟಾರೆ ನಿರಾಕರಿಸುತ್ತಾರೆ. ಧರ್ಮ ನ್ಯಾಯವೆನ್ನುವುದು ಆತ್ಮಸಾಕ್ಷಿಯ ಒಂದು ನೆಲೆಗೊಂಡ ವ್ಯವಸ್ಥೆ.

## ಚಾನ್ಸಲರನ ಅಧಿಕಾರಕ್ಕಿರುವ ಮಿತಿಗಳು

(೧) ಪರಿಹಾರ ನೀಡುವ ಈ ಹಕ್ಕಿಗೆ ಕೆಲವು ಮಿತಿಗಳಿದ್ದುವು.

(i) ಎಲ್ಲಿ ಕಾನೂನು ಯಾವ ಹಕ್ಕನ್ನು ಕೊಟ್ಟಿಲ್ಲವೋ ಆದರೆ, ಕೆಲವು ಹಕ್ಕುಗಳನ್ನು ನೀಡುವ ಅಗತ್ಯವಿದೆಯೆಂದು ಆತ್ಮಸಾಕ್ಷಿಯು ಹೇಳುತ್ತದೋ ಅಲ್ಲಿ ಮಾತ್ರ ಅದನ್ನು ಚಲಾಯಿಸಬೇಕು. ಇದನ್ನು ಧರ್ಮನ್ಯಾಯದ ಪ್ರತ್ಯೇಕ (exclusive) ನ್ಯಾಯಾಧಿಕಾರ ಕ್ಷೇತ್ರ ಎಂದು ಹೇಳಲಾಗಿದೆ.

(ii) ಎಲ್ಲಿ ಆತ್ಮಸಾಕ್ಷಿಯು ಹೇಳಿದಂತೆ ಹಕ್ಕುಗಳನ್ನು ಕಾನೂನು ಕೊಟ್ಟಿದೆಯೋ, ಆದರೆ ಅದು ಕೊಟ್ಟ ಪರಿಹಾರಗಳು ನ್ಯಾಯವನ್ನು ತೃಪ್ತಿಪಡಿಸಲು ಸಾಲದಾಗಿವೆಯೋ ಅಂಥ ಕಡೆ ಮಾತ್ರ ಅದನ್ನು ಚಲಾಯಿಸಬಹುದು– ಇದನ್ನು ಧರ್ಮನ್ಯಾಯದ ಸಹಗಾಮಿ (concurrent) ನ್ಯಾಯಾಧಿಕಾರ ಕ್ಷೇತ್ರ ಎಂದು ಕರೆಯಲಾಗಿತ್ತು.

(iii) ಎಲ್ಲಿ ಆತ್ಮಸಾಕ್ಷಿಯ ಪ್ರಕಾರ ಕಾನೂನು ಹಕ್ಕುಗಳನ್ನು ನೀಡಿವೆಯೋ, ನ್ಯಾಯವನ್ನು ತೃಪ್ತಿಪಡಿಸಲು ಆ ಪರಿಹಾರಗಳು ಸಾಲುತ್ತವೆಯೋ, ಆದರೆ ಅದರ ಪ್ರಕ್ರಿಯೆಯು ದೋಷಯುಕ್ತವಾಗಿದ್ದು, ಧರ್ಮನ್ಯಾಯದ ನೆರವಿಲ್ಲದೆ ಪರಿಹಾರಗಳನ್ನು ಪಡೆಯಲು ಸಾಧ್ಯವಿಲ್ಲವೋ ಅಂಥ ಕಡೆ ಚಲಾಯಿಸಬಹುದು. ಇದನ್ನು **ಸಹಾಯಕ** (auxiliary) ನ್ಯಾಯಾಧಿಕಾರ ಕ್ಷೇತ್ರ ಎಂದು ಕರೆದಿದೆ.

## ಧರ್ಮಸಮ್ಮತ ಹಕ್ಕಿನ ಸ್ವರೂಪ

(೧) ಒಂದು ನೈತಿಕ ಹಕ್ಕು ಮತ್ತು ಒಂದು ನ್ಯಾಯಿಕ ಹಕ್ಕಿಗೆ ವಿರುದ್ಧವಾಗಿ ಅಧ್ಯಯನ ಮಾಡಿದಾಗ ಒಂದು ಧರ್ಮಸಮ್ಮತ ಹಕ್ಕನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಕೇವಲ ಸೂತ್ರವನ್ನು ಕೊಡುವುದರಿಂದ ಅಷ್ಟಾಗಿ ಉಪಯೋಗವಿಲ್ಲ.

(೨) ಒಂದು ಹಕ್ಕಿನ ಪರಿಕಲ್ಪನೆಯನ್ನು ಕರಾರುವಾಕ್ಕಾಗಿ ಮಾಡಿಕೊಳ್ಳುವುದರಿಂದ ನಾವು ಪ್ರಾರಂಭ ಮಾಡಬಹುದೆಂದು ತೋರುತ್ತದೆ. ಯಾವೊಬ್ಬ ವ್ಯಕ್ತಿಗೆ ಒಂದು ಹಕ್ಕು ಇದೆ ಎಂದು ಹೇಳಿದಾಗ ನಮ್ಮ ಅರ್ಥ ಏನು?

(i) ಒಬ್ಬ ವ್ಯಕ್ತಿಯು ತನ್ನದೇ ಶಕ್ತಿಯಿಂದ ಅಥವಾ ಮನವೊಲಿಕೆಯಿಂದ ತಾನಾಗಿಯೇ ಅಥವಾ ಇತರರ ಕಾರ್ಯ ಪ್ರಭಾವಕ್ಕೊಳಗಾಗಿ ತನ್ನ ಇಚ್ಛೆಯನ್ನು ಕಾರ್ಯಗತಗೊಳಿಸಬಲ್ಲನಾದರೆ, ತನ್ನ ಅಪೇಕ್ಷೆಗಳ ನಿರ್ವಹಣೆಯ 'ಸಾಮರ್ಥ್ಯ' ಪಡೆದಿದ್ದಾನೆ ಎಂದು ಹೇಳಬಹುದು.

(ii) ಈ ಸಾಮರ್ಥ್ಯವನ್ನು ಪಡೆದಿರಲಿ ಬಿಡಲಿ, ಸಾರ್ವಜನಿಕ ದೃಷ್ಟಿಯಲ್ಲಿ ವ್ಯಕ್ತಿಯು ತನ್ನ ಇಚ್ಛೆಯನ್ನು ಪೂರೈಸಿಕೊಳ್ಳಬಲ್ಲನೆಂಬ ಮೆಚ್ಚುಗೆ ಉಂಟಾದರೆ, ಅವನ ಆ ವರ್ತನೆಗೆ ತೋರಿಸುವ ಯಾವುದೇ ಪ್ರತಿಭಟನೆಯನ್ನು ತಿರಸ್ಕರಿಸಿದರೆ ಅಂಥವನಿಗೆ ತನ್ನ ಇಚ್ಛೆಗಳನ್ನು ಪೂರೈಸಿಕೊಳ್ಳುವ 'ನೈತಿಕ ಹಕ್ಕು' ಇದೆ ಎಂದು ಪರಿಗಣಿಸಲಾಗುತ್ತದೆ.

(iii) ಸಾರ್ವಜನಿಕ ಸಮ್ಮತಿ ಅಥವಾ ಅಸಮ್ಮತಿಯ, ಮೂಗೊಪ್ಪಿಗೆ ಅಥವಾ ನಿರಾಕರಣೆಗಳ ವಿವರಣೆಯಿಲ್ಲದೆ ವ್ಯಕ್ತಿಯು ತನ್ನ ಇಚ್ಛೆಯನ್ನು ನೆರವೇರಿಸುವುದಕ್ಕೆ ಸರಕಾರವು ಬೆಂಬಲ ಕೊಡುತ್ತಿದ್ದರೆ, ಅವನಿಗೆ ಇಚ್ಛೆಗಳನ್ನು ಪೂರೈಸಿಕೊಳ್ಳುವ ನ್ಯಾಯಿಕ ಹಕ್ಕಿದೆ ಎಂದು ಭಾವಿಸಲಾಗುತ್ತದೆ.

(೩) ಅದು ಶಕ್ತಿಯ ಪ್ರಶ್ನೆಯೇ ಎನ್ನುವುದು ವ್ಯಕ್ತಿಯ ಸ್ವಂತ ಸಾಮರ್ಥ್ಯ, ಅಥವಾ ಪಟ್ಟು ಹಿಡಿಯುವಿಕೆಗಳನ್ನು ಅವಲಂಬಿಸುತ್ತದೆ. ಅದು ನೈತಿಕ ಹಕ್ಕು ಎನ್ನುವುದು ಅವನ ಪರವಾಗಿ ಸಾರ್ವಜನಿಕ ಅಭಿಪ್ರಾಯವು ದೊರಕುವುದನ್ನು ಅವಲಂಬಿಸಿರುತ್ತದೆ. ಅದು ನ್ಯಾಯಿಕ ಹಕ್ಕೇ ಎನ್ನುವುದು ಅವನ ಪರವಾಗಿ ಸರಕಾರವು ತನ್ನ ಶಕ್ತಿಯನ್ನು ವ್ಯಯಿಸಲು ಸಿದ್ಧವಾಗಿರುವುದನ್ನು ಅವಲಂಬಿಸಿರುತ್ತದೆ. ರಾಜ್ಯ ಎಂದು ಕರೆಸಿಕೊಳ್ಳುವ ವ್ಯವಸ್ಥಿತ ಸಮಾಜವು ಒಂದು ವರ್ತನೆಯನ್ನು ಜಾರಿಗೆ ತಂದು ಇನ್ನೊಂದನ್ನು ನಿಷೇಧಿಸಿದಾಗ ಅಲ್ಲಿ ನ್ಯಾಯಿಕ ಹಕ್ಕು ಇರುತ್ತದೆ. ಆದ್ದರಿಂದ ಒಂದು ಶಾಸನಬದ್ಧ ಹಕ್ಕು ರಾಜ್ಯವು ಪುರಸ್ಕರಿಸಿ ಸಂರಕ್ಷಿಸುವ ಒಂದು ಹಿತಾಸಕ್ತಿಯಾಗಿದೆ. ಹಕ್ಕು ಎನ್ನುವುದೇ ಒಂದು ಹಿತಾಸಕ್ತಿ, ಅದಕ್ಕೆ ಗೌರವ ತೋರಿಸುವುದು ಕರ್ತವ್ಯ, ಅದನ್ನು ಕುರಿತ ಅಗೌರವ ಒಂದು ದೋಷ.

### ನ್ಯಾಯಿಕ ಹಕ್ಕಿನ ಲಕ್ಷಣಗಳು

(೧) ಒಂದು ಶಾಸನ ಸಮ್ಮತ ಹಕ್ಕನ್ನು, ನೈತಿಕ ಹಕ್ಕಿನಂತಲ್ಲದೆ, ಸರಕಾರವೇ ಜಾರಿಗೊಳಿಸುತ್ತದೆ.

(೨) ಶಾಸನ ಸಮ್ಮತವಾದ ಒಂದು ಹಕ್ಕು ಒಂದು ಹಕ್ಕು ಪತ್ರದಲ್ಲಿ ಸ್ಥಾಪಿತವಾಗಿರುತ್ತದೆ. ಅದನ್ನು ಕಾನೂನು ಪುರಸ್ಕರಿಸುವ– ವಶಪಡಿಸಿಕೊಳ್ಳುವಿಕೆ, ವಿಧಿಸುವಿಕೆ, ಒಪ್ಪಂದ ಮತ್ತು ಆನುವಂಶಿಕತೆ ಈ ಯಾವುದೇ ಒಂದು ವಿಧಾನದಿಂದ ಹಕ್ಕುಗಾರಿಕೆಯನ್ನು ಪಡೆದುಕೊಳ್ಳಬಹುದಾಗಿದೆ.

(೩) ಒಂದು ಹಕ್ಕಿಗೆ ಒಬ್ಬ ವ್ಯಕ್ತಿಯಲ್ಲಿ ಹಕ್ಕುದಾರಿಕೆಯನ್ನು ಸೃಷ್ಟಿಸಿಕೊಡುವ ಒಂದು ಸಂಗತಿಯು ಇನ್ನೊಬ್ಬನಲ್ಲಿ ಅದೇ ಹಕ್ಕಿಗೆ ಅರ್ಹತೆಯನ್ನು ನಾಶಪಡಿಸುತ್ತದೆ.

(೪) ಶಾಸನ ಸಮ್ಮತ ಹಕ್ಕು ಒಂದು ಕರ್ತವ್ಯವನ್ನು ಸೃಷ್ಟಿಸುತ್ತದೆ. ಅದು ಸರ್ವಯುಕ್ತವಾದ (in rem) ಕರ್ತವ್ಯವಾಗಿರಬಹುದು, ಇಲ್ಲವೆ ವ್ಯಕ್ತಿಬದ್ಧ (in personam) ಕರ್ತವ್ಯವಾಗಿರಬಹುದು.

### ಒಂದು ಧರ್ಮ ಸಮ್ಮತ ಹಕ್ಕು ಒಂದು ಶಾಸನ ಸಮ್ಮತ ಹಕ್ಕನ್ನು ಯಾವ ಅಂಶಗಳಲ್ಲಿ ಹೋಲುತ್ತದೆ, ಮತ್ತು ಯಾವ ಅಂಶಗಳಲ್ಲಿ ಅದರಿಂದ ಬೇರೆಯಾಗುತ್ತದೆ.

(೧) ಧರ್ಮಸಮ್ಮತ ಹಕ್ಕು, ಸರಕಾರವು ಜಾರಿಗೊಳಿಸುವ ನೈತಿಕ ಹಕ್ಕಿನ ಹಾಗಲ್ಲ. ಸರಕಾರವು ಕಾರ್ಯಗತಗೊಳಿಸುತ್ತದೆ ಎನ್ನುವುದರಿಂದಾಗಿ ಅದು ಒಂದು ಶಾಸನ ಸಮ್ಮತ ಹಕ್ಕಿನ ಹಾಗೆ.

(೨) ಶಾಸನ ಸಮ್ಮತ ಹಕ್ಕೊಂದನ್ನು ಸೃಷ್ಟಿಸುವ ಅಂಗೀಕೃತ ವಿಧಾನಗಳಲ್ಲೊಂದರಿಂದಲೇ ಒಂದು ಧರ್ಮಸಮ್ಮತ ಹಕ್ಕಿಗೆ ಅಧಿಕಾರ ಬರಬೇಕಾಗಿಲ್ಲ. ಇದು ಬಹು ಮುಖ್ಯವಾದ ವ್ಯತ್ಯಾಸ.

**ನಿದರ್ಶನ:**

(i) ಶಾಸನಬದ್ಧವಾಗಿ ಭೂಮಿಯನ್ನು ಅಡಮಾನ ಮಾಡಬೇಕಾದರೆ ಅದಕ್ಕೊಂದು ಹಕ್ಕು ಪತ್ರ ಬೇಕು. ಆದರೆ ಒಂದು ಧರ್ಮಸಮ್ಮತ ಅಡಮಾನವನ್ನು ಹಕ್ಕು ಪತ್ರವಲ್ಲದೆ ಬೇರೆ ವಿಧಾನದಿಂದಲೂ

ಸೃಷ್ಟಿಸಬಹುದು.

(ಅ) ಭೂಸಂಬಂಧವಾದ ಯಾವುದೇ ಗುತ್ತಿಗೆ ಅಥವಾ ವಿಕ್ರಯ ಅಥವಾ ಯಾವುದೇ ಹಿತಾಸಕ್ತಿಗೆ, ಸಂಬಂಧಿತ ವ್ಯಕ್ತಿ ಅಥವಾ ಅವನ ಪ್ರತಿನಿಧಿಯ ಬರವಣಿಗೆಯಲ್ಲಿ ಕರಾರು ಮಾಡಿ ಅದಕ್ಕೆ ಸಹಿ ಹಾಕಿದ ಹೊರತು ಯಾವ ಕ್ರಮವನ್ನು ಕೈಗೊಳ್ಳಕೂಡದು ಎಂಬುದಾಗಿ ವ್ಯವಹಾರ ಕಾನೂನು ಹೇಳುತ್ತದೆ. ಆದರೆ ಒಂದು ಭೂಮಿಯ ಹಕ್ಕು ಪತ್ರವನ್ನು ಬಾಯಲ್ಲಿ ಏನನ್ನು ಹೇಳದೆಯೇ ಸಾಲ ಪಡೆದವನು ಸಾಲ ನೀಡಿದವನ ಕೈಗೆ ಕೊಟ್ಟ ಪಕ್ಷದಲ್ಲಿ, ಹಾಗೆ ಕೊಟ್ಟ ಪತ್ರದ ವಾಸ್ತವಾಂಶವೇ ಸಾಲ ಕೊಟ್ಟವನಿಗೆ ಜಮೀನಿನ ಅಡಮಾನ ಹಕ್ಕನ್ನು ನೀಡಲು ಸಾಕಾಗುತ್ತದೆ.

(ಆ) ಸಾಲದ ಪರಿಹಾರ ರೂಪವಾಗಿ ನ್ಯಾಯಯುತ ಗೇಣಿಯ ಮೇಲೆ ಸಾಲಿಗ(creditor)ನು ಜಮೀನನ್ನು ಇಟ್ಟುಕೊಳ್ಳಬಹುದು ಎಂಬ ಕರಾರು ಧರ್ಮನ್ಯಾಯದ ಅಡಮಾನ ವಾಗಿರುತ್ತದೆಯೇ ಹೊರತು ಶಾಸನ ಸಮ್ಮತವಾಗಿಯಲ್ಲ.

(ii) ವರ್ಗಪತ್ರ–ಕಾನೂನು ಸಮ್ಮತ ಮತ್ತು ಧರ್ಮನ್ಯಾಯಯುತ. ವರ್ಗಪತ್ರವು ಬರಹದಲ್ಲಿರಬೇಕು, ವರ್ಗ ಮಾಡಿಕೊಡುವವನು ಸಹಿ ಮಾಡಿರಬೇಕು. ಪ್ರತಿನಿಧಿಯ ಸಹಿ ಸಾಕಾಗುವುದಿಲ್ಲ.

ಬರವಣಿಗೆಯಲ್ಲಿ ಸಾಲ ಪಡೆದವನಿಗೆ ಸಾಲ ನೀಡಿದವನು ವರ್ಗ ಮಾಡಿದ್ದಕ್ಕಾಗಿ ಹಣ ಪಾವತಿ ಮಾಡತಕ್ಕದ್ದು ಎಂದು ಒಂದು ಆದೇಶ ಇರಬೇಕು.

ಸಾಲ ಪಡೆದವನಿಗೆ ವರ್ಗಾವಣೆಯ ಸ್ಪಷ್ಟ ಆದೇಶವಿರಬೇಕು.

**ಧರ್ಮಸಮ್ಮತ:** ವರ್ಗಾವಣೆಯ ವಿಧಾನ ಅಥವಾ ಸ್ವರೂಪ ಮುಖ್ಯವಲ್ಲ, ಸಂಬಂಧಿತ ಪಕ್ಷಗಳ ಉದ್ದೇಶ ಸ್ಪಷ್ಟವಾಗಿರಬೇಕು ಅಷ್ಟೆ. ವರ್ಗಾವಣೆ ಮೌಖಿಕವಾಗಿಯೂ ಇರಬಹುದು.

(iii) ಅಡಮಾನ– ನ್ಯಾಯಿಕ ಮತ್ತು ಧರ್ಮಸಮ್ಮತ

(iv) ಗೇಣಿ– ಧರ್ಮಸಮ್ಮತ ಮತ್ತು ನ್ಯಾಯಿಕ

(v) ಅನುಭೋಗ (ಪರಾಧೀನತೆ)– ಧರ್ಮಸಮ್ಮತ ಮತ್ತು ನ್ಯಾಯಿಕ

## ವಿವಾಹಿತ ಮಹಿಳೆಯ ಆಸ್ತಿ

ಒಂದು ನ್ಯಾಯಿಕ ಹಕ್ಕನ್ನು ಸೃಷ್ಟಿಸಲು ಬೇಕಾದ ಆಸ್ತಿ ವರ್ಗಾವಣೆಯ ಔಪಚಾರಿಕತೆಗಳಿಲ್ಲದೆ ಹೇಗೆ ಒಂದು ಧರ್ಮಸಮ್ಮತ ಹಕ್ಕು ಹುಟ್ಟಬಲ್ಲದು ಎಂಬುದನ್ನು ಇದು ನಿದರ್ಶಿಸುತ್ತದೆ.

(೧) ವ್ಯವಹಾರ (ಸಾಮಾನ್ಯ) ನ್ಯಾಯದಲ್ಲಿ ಪತಿ ಮತ್ತು ಪತ್ನಿ ಒಬ್ಬರೇ ವ್ಯಕ್ತಿಯಾಗುತ್ತಾರೆ. ಪತ್ನಿಯ ಸ್ಥಾನಮಾನವು ಪತಿಯ ಸ್ಥಾನಮಾನದೊಂದಿಗೆ ವಿಲೀನವಾಗಿಬಿಡುತ್ತದೆ. ಈ ವಿಲೀನದ ಫಲವೇನೆಂದರೆ, ಪತಿಯು ಅವನ ವೈಯಕ್ತಿಕ ಆಸ್ತಿಯ ಸಂಪೂರ್ಣ ಒಡೆಯನಾಗಿ, ಅವರಿಗೆ ಸೇರಿದ ಭೂಮಿಗಳನ್ನು ವ್ಯವಹರಿಸುವ ಪತ್ರ ನಿಯಂತ್ರಿಸುವ ಏಕೈಕ ಹಕ್ಕನ್ನು ಪಡೆಯಬಹುದು.

ಪತ್ನಿಯು ಮರಣ ಹೊಂದಿದಾಗ ಅದುವರೆಗೆ ಮಾರಿಲ್ಲದ ಅವನ ಯಾವುದೇ ಆಸ್ತಿಗೆ ಅವನು ಸಂಪೂರ್ಣ ಹಕ್ಕು ಪಡೆಯುತ್ತಾನೆ. ಒಂದು ಮಗು ಹುಟ್ಟಿರದಿದ್ದರೆ ಪರಭಾರೆ ಮಾಡಲಾಗದ ಆಸ್ತಿಯ ಹಕ್ಕನ್ನು ಪಡೆಯುತ್ತಾನೆ.

(೨) ಎರಡನೆಯದಾಗಿ, ಪತಿಯು ತನ್ನ ಪತ್ನಿಗೆ ದಾನ ಮಾಡುವಂತಿಲ್ಲ, ಅಥವಾ ಅವಳೊಂದಿಗೆ

ಕರಾರು ಮಾಡಿಕೊಳ್ಳುವಂತಿಲ್ಲ. ಏಕೆಂದರೆ ಇವಕ್ಕೆ ಅವಕಾಶ ಮಾಡುವುದೆಂದರೆ ಆಕೆಗೆ ಪ್ರತ್ಯೇಕ ಅಸ್ತಿತ್ವ ಕಲ್ಪಿಸಿದ ಹಾಗೆ.

(೩) ವ್ಯವಹಾರ ನ್ಯಾಯದಲ್ಲಿ ಮದುವೆಯ ಪರಿಣಾಮವು ಒಬ್ಬ ಮನುಷ್ಯನನ್ನು ಅವನ ಪತ್ನಿಯ ಆಸ್ತಿಗೆ ಸಂಪೂರ್ಣ ಒಡೆಯನನ್ನಾಗಿ ಮಾಡುವುದು ಮತ್ತು ಆಕೆಗೆ ಕರಾರು ಮಾಡಿಕೊಳ್ಳುವ ಸಾಮರ್ಥ್ಯವನ್ನು ವಂಚಿಸುವುದು.

(೪) ಆಸ್ತಿಯನ್ನು ವಿವಾಹಿತ ಮಹಿಳೆಗೆ ಸ್ಪಷ್ಟವಾಗಿಯೋ ಸೂಚ್ಯವಾಗಿಯೋ, ಅವಳು ಅದನ್ನು **'ತನ್ನ ಏಕೈಕ ಮತ್ತು ಪ್ರತ್ಯೇಕ ಉಪಯೋಗಗಳ'** ಪ್ರಯೋಜನಕ್ಕೆಂದು ಅನುಭೋಗಿಸಬೇಕು ಎಂದು ಹೇಳಿದ್ದರೆ, ಧರ್ಮನ್ಯಾಯವು ಪತಿಯನ್ನು ಒಬ್ಬ ವಿಶ್ವಸ್ಥನೆಂದು ಪರಿಗಣಿಸಿ ಸತಿಯ ನಿಯಂತ್ರಣದ ಆಸ್ತಿಯನ್ನು ಬಿಡಿಸಿ ಪತ್ನಿಗೆ ಅದರ ಅನುಭೋಗ ಮತ್ತು ಸ್ವಾಧೀನದ ಸಂಪೂರ್ಣ ಅಧಿಕಾರವನ್ನು ನೀಡುತ್ತದೆ.

ಆದರೆ ಧರ್ಮನ್ಯಾಯವು ಇದಕ್ಕಿಂತ ಮುಂದಕ್ಕೆ ಹೋಯಿತು. ಪತ್ನಿಯು ತನ್ನ ಪ್ರತ್ಯೇಕ ಆಸ್ತಿಯನ್ನು ಮಾರಿ ಅದರ ಹಣವನ್ನು ತನಗೆ ಕೊಟ್ಟುಬಿಡುವಂತೆ ಬಲಾತ್ಕರಿಸುವ ಅಪಾಯವನ್ನು ಮನಗಂಡು ವಿವಾಹ ನಿಶ್ಚಿತಾರ್ಥಗಳಲ್ಲಿ "ನಿರೀಕ್ಷೆ ಮಾಡುವುದರ ಮೇಲಿನ ಹತೋಟಿ" ಎನ್ನುವುದನ್ನು ಸೇರಿಸಲು ಅವಕಾಶ ಕೊಟ್ಟಿತು. ಅಂತಹ ಹತೋಟಿಯ ಪರಿಣಾಮ, ಒಬ್ಬ ಮಹಿಳೆಯು ವರಮಾನದ ಪೂರ್ಣ ಅನುಭೋಗದ ಅವಕಾಶವನ್ನು ಹೊಂದಿದ್ದರೂ, ಪತಿಯ ರಕ್ಷಣೆಯಲ್ಲಿರುವಷ್ಟು ಕಾಲ ಆಸ್ತಿಯ ಮೂಲಭಾಗವನ್ನು ಪರಭಾರೆ ಮಾಡಲು, ವೆಚ್ಚ ಮಾಡಲು ಅವಕಾಶವಿಲ್ಲದ ಹಾಗಾಯಿತು. ಆಕೆ ಉಯಿಲು ಬರೆದು ಆಸ್ತಿಯನ್ನು ವಹಿಸಿ ಕೊಡಬಹುದಾಗಿತ್ತೇ ಹೊರತು ಮಾರುವಂತಿರಲಿಲ್ಲ ಅಥವಾ ಅಡವಿಡುವಂತಿರಲಿಲ್ಲ. ಇದು ವ್ಯವಹಾರ ನ್ಯಾಯದ ಸಂಪೂರ್ಣ ಉಲ್ಲಂಘನೆಯಾಗಿತ್ತು. ವ್ಯವಹಾರ ನ್ಯಾಯದಂತೆ, ವಿವಾಹವು ಪತಿಗೆ ತನ್ನ ಪತ್ನಿಯ ಆಸ್ತಿಯ ಮೇಲೆ ಹಕ್ಕನ್ನು ಕೊಡುತ್ತಿದ್ದುದು ಮಾತ್ರವಲ್ಲದೆ, ಪತ್ನಿಯೊಂದಿಗಾಗಲಿ ಇತರ ಯಾವನೇ ವ್ಯಕ್ತಿಯೊಂದಿಗಾಗಲಿ ಮಾಡಿಕೊಂಡ ಯಾವುದೇ ಒಪ್ಪಂದವು ಆಕೆಯ ಆಸ್ತಿಯನ್ನು ಹಿಡಿದಿಟ್ಟುಕೊಳ್ಳುವ ಅಥವಾ ಪರಭಾರೆ ಮಾಡುವ ಹಕ್ಕನ್ನು ಅವನಿಗೆ ವಹಿಸುವಂತಿರಲಿಲ್ಲ.

ಇದು ಒಂದು ನ್ಯಾಯಿಕ ಹಕ್ಕು. ಧರ್ಮಸಮ್ಮತ ಹಕ್ಕಿಗಿಂತ ಸಂಪೂರ್ಣ ಬೇರೆಯೇ ಅದೇ ರೀತಿಯಲ್ಲಿ ಹೇಗೆ ವಾದಿಸುತ್ತದೆ ಎಂಬುದನ್ನು ನಿದರ್ಶಿಸುತ್ತದೆ.

(೩) ಧರ್ಮಸಮ್ಮತ ಹಕ್ಕಿಗೂ ನ್ಯಾಯಿಕ ಹಕ್ಕಿಗೂ ನಡುವೆ ಇರುವ ಎರಡನೆಯ ವ್ಯತ್ಯಾಸವನ್ನು ಹೀಗೆ ನಿರೂಪಿಸಬಹುದು:

(೧) ಒಬ್ಬ ಒಡೆಯನಿಗೆ ಬಂದಿರುವ ಒಂದು ಶಾಸನ ಸಮ್ಮತ ಅಥವ ನ್ಯಾಯಿಕ ಹಕ್ಕು, ಆ ಆಸ್ತಿಯ ಹಿಂದಿನ ಒಡೆಯನ ಹಕ್ಕನ್ನು ಪೂರ್ತಿಯಾಗಿ ಅಥವಾ ಭಾಗಶಃ ನಾಶ ಮಾಡುತ್ತದೆ. ಈ ನಾಶವು ಪೂರ್ಣವಾಗಿರಬಹುದು ಇಲ್ಲವೇ ಭಾಗಶಃ ಆಗಿರಬಹುದು. ಭೋಗ್ಯವಾದರೆ ಅದು ಭಾಗಶಃ ಹಾಳು ಮಾಡಿದ ಹಾಗೆ, ಕ್ರಯವಾದರೆ ಸಂಪೂರ್ಣವಾಗಿ ನಾಶಮಾಡಿದ ಹಾಗೆ. ಆದರೆ ಪೂರ್ಣವಾಗಲಿ ಭಾಗಶಃ ಆಗಲಿ ಅದು ವಿನಾಶವೇ. **ವಹಿಸಿಕೊಡುವಿಕೆಯು ಕಸಿಯುವಿಕೆಯೂ** ಆಗಿದೆ ಎಂದು ಹೇಳಿದಾಗ ಅರ್ಥ ಇದೇನೇ?

(೨) ಒಂದು ನ್ಯಾಯಿಕ ಹಕ್ಕಿಗೂ ಧರ್ಮಸಮ್ಮತ ಹಕ್ಕಿಗೂ ನಡುವೆ ಸ್ಪರ್ಧೆಯಿದ್ದಾಗ ಈ ಮಾತು ನಿಲ್ಲುವುದಿಲ್ಲ. ನ್ಯಾಯಿಕವಾದ ಹಕ್ಕೊಂದನ್ನು ಪಡೆದಿರುವವನಿಗೆ ಎದುರಾಗಿದ್ದಾಗ ಕೂಡ ಧರ್ಮಸಮ್ಮತ ಹಕ್ಕು ಆ ನ್ಯಾಯಿಕ ಹಕ್ಕುಗಳನ್ನು ನಾಶಪಡಿಸುವುದಿಲ್ಲ. ಈ ಎರಡೂ ಬಗೆಯ ಹಕ್ಕುಗಳ ನಡುವೆ ಸಂಘರ್ಷ ವುಂಟಾದಾಗ, ಧರ್ಮಸಮ್ಮತ ಹಕ್ಕು ನ್ಯಾಯಿಕ ಹಕ್ಕನ್ನು ನಾಶ ಮಾಡುವುದಿಲ್ಲ, ಒಂದು ನ್ಯಾಯಿಕ ಹಕ್ಕು

ಇನ್ನೊಂದು ನ್ಯಾಯಿಕ ಹಕ್ಕನ್ನು ಹೇಗೆ ಹಾಳುಮಾಡುವುದಿಲ್ಲವೋ ಹಾಗೆ.

(೩) **ಇದು ಹೀಗೆ ಏಕೆ?** ಇದನ್ನು ತಿಳಿದುಕೊಳ್ಳಲು, ಪ್ರಾರಂಭದಲ್ಲಿ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯವು ಒಂದು ಧರ್ಮಸಮ್ಮತ ಹಕ್ಕನ್ನು ಪುರಸ್ಕರಿಸತೊಡಗಿದುದು ಹೇಗೆ ಎಂಬುದನ್ನು ತಿಳಿಯುವುದು ಅತ್ಯಗತ್ಯ. ಇದರ ಐತಿಹಾಸಿಕ ಹಿನ್ನೆಲೆಯನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು:

(i) ಇಂಗ್ಲೆಂಡಿನಲ್ಲಿ ನಾರ್ಮನ್ ವಿಜಯಕ್ಕಿಂತ ಮೊದಲು ಇದ್ದ ರೂಢಿಯಂತೆ ಒಬ್ಬ ವ್ಯಕ್ತಿಯು ಇನ್ನೊಬ್ಬನ ಪರವಾಗಿ ಏನನ್ನಾದರೂ ಮಾಡಬಹುದಾಗಿತ್ತು. ಉದಾಹರಣೆಗೆ ಷೆರೀಫನು ಜಮೀನುಗಳನ್ನು ಸರಕಾರದ ಪರವಾಗಿ ತನ್ನ ವಶದಲ್ಲಿಟ್ಟುಕೊಳ್ಳುತ್ತಿದ್ದನು. ಒಬ್ಬ ರಾಜನು ಧರ್ಮಯುದ್ಧಗಳಿಗೆ (ಕ್ರುಸೇಡ್) ಹೋಗುವಾಗ ತನ್ನ ಹೆಂಡತಿ ಮಕ್ಕಳ ಪರವಾಗಿ ನೋಡಿಕೊಂಡಿರಲು ಆಸ್ತಿಯನ್ನು ಮಿತ್ರನೊಬ್ಬನಿಗೆ ವಹಿಸಿ ಕೊಡುತ್ತಿದ್ದನು. ಭದ್ರತೆಗೆಂದು ಪತ್ರವು ಕ್ರಮೇಣ ವ್ಯವಹಾರವಾಗಿ ಪರಿವರ್ತಿತವಾಯಿತು. ವರ್ಗಾವಣೆಗೊಂಡ ಭೂಮಿಯ ಅನುಭೋಗಕ್ಕೆ ಸಂದ ಜಮೀನು ಎಂದಾಯಿತು.

(ii) ಕೆಲವು ಸನ್ನಿವೇಶಗಳಲ್ಲಿ ಕೆಲವು ವ್ಯಕ್ತಿಗಳು ಇನ್ನೊಬ್ಬನ ಪರವಾಗಿ ಅಥವಾ ಇನ್ನೊಬ್ಬನ ಉಪಯೋಗಗಳ ಜಮೀನು ನಿರ್ವಹಿಸಬಹುದಾದ ಪಕ್ಷದಲ್ಲಿ, ಅನಿವಾರ್ಯವಾಗಿ ಜನರ ಮನಸ್ಸಿಗೆ ಬಂದ ಪ್ರಶ್ನೆ, ಒಬ್ಬ ವ್ಯಕ್ತಿಯು ಸಾಮಾನ್ಯವಾದ ರೀತಿಯಲ್ಲೇ ಇನ್ನೊಬ್ಬನ ಪರವಾಗಿ ಜಮೀನನ್ನು ಅನುಭೋಗಿಸಲು ಅವಕಾಶವಿರಬಾರದು ಎಂಬುದು. ಕೆಲಕಾಲ ಕಳೆದ ಮೇಲೆ ವಾಸ್ತವವಾಗಿ ಆದದ್ದು ಹಾಗೆಯೇ. 'ಎ' ಎಂಬ ಗೇಣಿದಾರನು ತನ್ನ ಜಮೀನಿನಲ್ಲಿ ಒಂದು ವ್ಯವಹಾರ ನ್ಯಾಯದಂತೆ 'ಬಿ' ಎನ್ನುವವನಿಗೆ ವರ್ಗಾಯಿಸಬಹುದು. 'ಬಿ'ಯು 'ಎ'ಯ ಪರವಾಗಿ, ಅಥವಾ ಸರಿಯಾದ ಪದವನ್ನು ಬಳಸುವುದಾದರೆ 'ಎ'ಯ ಉಪಯೋಗಕ್ಕಾಗಿ ಜಮೀನನ್ನು ಇಟ್ಟುಕೊಂಡಿರಲು ಒಪ್ಪಿದನು.

ಅಂತಹ ಸಂದರ್ಭಗಳಲ್ಲಿ 'ಬಿ'ಯನ್ನು ಮಾನ್ಯದಾರ ಅಥವಾ ಜಹಗೀರುದಾರನೆಂದು ಕರೆಯಲಾಯಿತು. ಕೆಲವು ಷರತ್ತುಗಳ ಮೇಲೆ ಅವನಿಗೆ ಆ ಜಮೀನನ್ನು ಮಾನ್ಯವಾಗಿ ನೀಡಲಾಗುತ್ತಿತ್ತು. 'ಎ'ಯನ್ನು ಯಾರ ಪರವಾಗಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆಯೋ ಆ ವ್ಯಕ್ತಿ ಎಂದು ಕರೆಯಲಾಯಿತು.

(iii) ಈ ಅಭ್ಯಾಸವು ಬೆಳೆದುದಕ್ಕೆ ಅನೇಕ ಕಾರಣಗಳಿವೆ. ಭೂಮಿಯ ಅನುಭೋಗದ ವಿಷಯದಲ್ಲಿ ಈ ರೂಢಿಯನ್ನು ಚಾಲ್ತಿಗೆ ತರಲು ಜನರು ಇಚ್ಛಿಸಿದುದಕ್ಕೆ ಒಬ್ಬನ ಮೇಲೆ ಆರು ಕಾರಣಗಳಿದ್ದವು. ಅವುಗಳ ಪೈಕಿ ಎರಡು ಕಾರಣಗಳು ಮುಖ್ಯವಾದವು:

(೧) ವ್ಯವಹಾರ ನ್ಯಾಯದಂತೆ ಉಂಟಾಗಿ ಸಂಬಂಧವಾದ ಹೊರೆಗಳಿಂದ ತಪ್ಪಿಸಿಕೊಳ್ಳಲು ವ್ಯಕ್ತಿಗೆ ಇದರಿಂದ ಅವಕಾಶವಾಯಿತು. ವ್ಯವಹಾರ ನ್ಯಾಯದಲ್ಲಿ ಜಹಗೀರು ಅಥವಾ ಉಂಬಳಿದಾರನ ಮೇಲೆ ಈ ಕೆಳಗಿನ ಹೊರೆಗಳು ಬೀಳುತ್ತಿದ್ದವು–

(i) **ಪರಿಹಾರ–** ಹಳೆಯ ಗೇಣಿದಾರನು ಮೃತನಾದಾಗ ಹೊಸ ಗೇಣಿದಾರನು ಪಾವತಿ ಮಾಡುತ್ತಿದ್ದುದು.

(ii) **ಸಹಾಯ–** ಮೂರು ಸಂದರ್ಭಗಳಲ್ಲಿ ನೀಡಲಾಗುತ್ತಿತ್ತು:

(ಅ) ಸೆರೆಗೆ ಹಾಕಿದಾಗ ಪ್ರಭುವನ್ನು ಬಿಡಿಸುವ ಹಣವಾಗಿ

(ಆ) ಪ್ರಭುವು ತನ್ನ ಪ್ರಭುವನ್ನು ಒಬ್ಬ ನೈಟ್ ಆಗಿ ಮಾಡಲು ಬಯಸಿದಾಗ
(ಇ) ಪ್ರಭುವು ತನ್ನ ಮಗಳನ್ನು ವರದಕ್ಷಿಣೆಯೊಂದಿಗೆ ಕೊಡಲು ಸಿದ್ಧನಾದಾಗ.

(iii) **ವಾದವಿಲ್ಲದೆ ಹಿಂದಕ್ಕೆ ಬರುವುದು–** ಗೇಣಿದಾರರು ಘೋರವಾದ ಅಪರಾಧ ಮಾಡಿದಾಗ ಅವನ ಭೂಮಿಯನ್ನು ಸರಕಾರವು ವಶಪಡಿಸಿಕೊಳ್ಳುವುದು.

(iv) **ಪಾಲಕತ್ವ–** ಗೇಣಿದಾರನು ೨೧ ವರ್ಷದೊಳಗಿನ ಮಗನನ್ನೋ ೧೪ ವರ್ಷದೊಳಗಿನ ಮಗಳನ್ನೋ ತನ್ನ ವಾರಸಾಗಿ ಬಿಟ್ಟು ಮೃತನಾದ ಪಕ್ಷದಲ್ಲಿ, ಆ ವಾರಸುದಾರನ ಪಾಲನೆಯು ಒಡೆಯನಿಗೆ ಬರುತ್ತಿತ್ತು. ಅದರಿಂದಾಗಿ ಅಪ್ರಾಪ್ತ ವಯಸ್ಕ ಅವಧಿಯಲ್ಲಿ ಅವರ ಜಮೀನನ್ನು ಯಾವುದೇ ಲೆಕ್ಕಪತ್ರ ಒಪ್ಪಿಸದೆ ಹೇಗೆ ಬೇಕಾದರೂ ಉಪಯೋಗಿಸುವ ಸ್ವಾತಂತ್ರ್ಯ ಅವನಿಗೆ ಬರುತ್ತಿತ್ತು.

(v) **ವಿವಾಹ–** ತನ್ನ ಪಾಲನೆಯಲ್ಲಿರುವ ಮಗುವಿಗೆ ತಕ್ಕ ಜೋಡಿಯನ್ನು ಕಂಡುಹಿಡಿಯುವುದು ಒಡೆಯನ ಹಕ್ಕು. ಬಾಲಕನು ಅದನ್ನು ಒಪ್ಪದೆ ಹೋದರೆ ಒಡೆಯನಿಗೆ ಪರಿಹಾರ ಕೊಡಬೇಕಾಗುತ್ತಿತ್ತು.

ಜಹಗೀರುದಾರನು ತನ್ನ ಜಮೀನಿನ ಉಪಯೋಗಕ್ಕೆ ಬಿಟ್ಟು ಸ್ವತಂತ್ರನಾಗುತ್ತಿದ್ದನು. ಹೊರೆಯು ಅದನ್ನು ಪಡೆದುಕೊಂಡವನ ಮೇಲೆ ಬೀಳುತ್ತಿತ್ತು.

(೨) ಎರಡನೆಯ ಅನುಕೂಲತೆಯೆಂದರೆ, ಸರಕಾರವು ಮುಟ್ಟುಗೋಲು ಹಾಕಿಕೊಳ್ಳುವುದನ್ನು, ವಾರಸಿಲ್ಲದ್ದಕ್ಕಾಗಿ ಸರಕಾರವು ವಹಿಸಿಕೊಳ್ಳುವುದನ್ನು ನಿವಾರಿಸಬಹುದಾಯಿತು.

ವ್ಯವಹಾರ ನ್ಯಾಯದಂತೆ, ಗೇಣಿದಾರನು ಘೋರ ಅಪರಾಧವೊಂದನ್ನು ಮಾಡಿದಾಗ ಅವನ ಆಸ್ತಿಯನ್ನು ಸರಕಾರವು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಅವನಿಗೆ ಶಿಕ್ಷೆಯಾಗಿ ಅಥವಾ ಗುಲಾಮಗಿರಿಯನ್ನು ವಿಧಿಸಿದಾಗ ಆಸ್ತಿಯು ಒಡೆಯನಿಗೆ ಸಲ್ಲುತ್ತಿತ್ತು. ಆದರೆ ಗೇಣಿದಾರನು ಅಂತಹ ಸಂದೇಹಾಸ್ಪದ ಕೃತ್ಯಗಳಿಗೆ ಕೈಹಾಕುವ ಮುನ್ನ ತನ್ನ ಜಮೀನುಗಳಲ್ಲಿ ತನ್ನ ಕೆಲವು ವಿಶ್ವಾಸಾರ್ಹ ಮಿತ್ರರಿಗೆ ವಹಿಸಿಕೊಡುವ ಬುದ್ಧಿವಂತಿಕೆ ತೋರಿಸಿದ್ದರೆ ಈ ಅಹಿತಕರ ಪರಿಣಾಮಗಳನ್ನು ನಿವಾರಿಸಬಹುದಾಗಿತ್ತು. ಅಪರಾಧಿಗೆ ಉಗ್ರವಾದ ಶಿಕ್ಷೆಯಾಗುತ್ತಿತ್ತು. ಆದರೆ ಕೊನೆಯ ಪಕ್ಷ ಅವನ ಕುಟುಂಬವು ನಿರಾಶ್ರಿತವಾಗುತ್ತಿರಲಿಲ್ಲ.

(೪) ನೆಲವನ್ನು ಉಪಯೋಗಕ್ಕೆ ಬಿಡುವುದರ ನ್ಯಾಯಿಕ ಪರಿಣಾಮ:

(i) ಹೀಗೆ ಜಮೀನನ್ನು ಅನುಭೋಗಕ್ಕೆ ಬಿಡುವ ರೂಢಿಯ ನ್ಯಾಯಿಕ ಪರಿಣಾಮವು ಗಮನಿಸಬೇಕಾದ ಮುಖ್ಯವಾದೊಂದು ಅಂಶ. ಅದು ವ್ಯವಹಾರ ನ್ಯಾಯದ ಕಣ್ಣಿನಲ್ಲಿ ಭೂಮಿಗೆ ಯಾವುದೇ ಸಂಬಂಧವಿಲ್ಲದಂತೆ ಪ್ರತ್ಯೇಕಿಸುತ್ತಿತ್ತು. ವ್ಯವಹಾರ ನ್ಯಾಯದಲ್ಲಿ ವರ್ತಿಸುವ ಒಂದು ವರ್ಗಪತ್ರದ ಪ್ರಕಾರ, ವ್ಯಕ್ತಿಯು ಆಸ್ತಿಯನ್ನು ಜಹಗೀರುದಾರನಿಗೆ ವರ್ಗಾಯಿಸಿರುತ್ತಾನೆ. ಆದ್ದರಿಂದ ಆ ಜಮೀನಿನ ಮೇಲೆ ಎಲ್ಲಾ ವ್ಯವಹಾರ ನ್ಯಾಯ ಹಕ್ಕುಗಳನ್ನೂ ಕಳೆದುಕೊಂಡಿರುತ್ತಾನೆ. ಅವನು ಏನೇನೂ ಅಲ್ಲ, ಮಾನ್ಯದಾರನೇ ಎಲ್ಲವೂ. ಜಹಗೀರುದಾರನ ಮೇಲೆ ಇಟ್ಟುಕೊಂಡ ವಿಶ್ವಾಸವನ್ನು ಎಲ್ಲದಕ್ಕೂ ಅವನು ಅವಲಂಬಿಸುತ್ತಾನೆ.

(ii) ಜಹಗೀರುದಾರನು ತನ್ನ ಮೇಲೆ ಹೊರಿಸಿದ ಕಾರ್ಯಭಾರಗಳನ್ನು ನಿರ್ವಹಿಸಲು ವಿಫಲನಾದರೆ ಅಥವಾ ನಿರಾಕರಿಸಿದರೆ, ಅಥವಾ ತನ್ನ ಸ್ವಂತ ಉದ್ದೇಶಗಳಿಗಾಗಿ ಆ ಜಮೀನನ್ನು ಪರಭಾರೆ

ಮಾಡಿದರೆ, ಅವನ ಮೇಲೆ ಅಪರಾಧ ಹೊರಿಸುವಂತಹ ಯಾವ ಕ್ರಮವೂ ವ್ಯವಹಾರ ನ್ಯಾಯದಲ್ಲಿರಲಿಲ್ಲ.

(iii) ಸಾಮಾನ್ಯನು ಭೂಮಿಯ ಒಡೆತನವನ್ನು ಪಡೆದರೆ, ಅವನನ್ನು ಕೇವಲ ಒಬ್ಬ ಗೇಣಿದಾರನನ್ನಾಗಿ ಪರಿಗಣಿಸಲಾಗುತ್ತಿತ್ತು. ಯಾವ ಗಳಿಗೆಯಲ್ಲಿ ಬೇಕಾದರೂ ಅವನನ್ನು ಬಿಡಿಸಬಹುದಾಗಿತ್ತು. ಅವಿಧೇಯತೆ ತೋರಿಸಿದರೆ ಜಹಗೀರುದಾರನು ಅವನ ಮೇಲೆ ಮೊಕದ್ದಮೆ ಹಾಕಬಹುದಾಗಿತ್ತು.

(೫) ಮುಖ್ಯ ನ್ಯಾಯಾಧೀಶರ ನ್ಯಾಯಾಲಯವು ಜಹಗೀರುದಾರರನ್ನು ರಕ್ಷಿಸಲು ಕೊಟ್ಟ ಪರಿಹಾರದ ಸ್ವರೂಪವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು.

(i) ಮುಖ್ಯ ನ್ಯಾಯಾಧೀಶನು ವ್ಯವಹಾರ ನ್ಯಾಯದ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯೊಳಗೆ ಮಧ್ಯ ಪ್ರವೇಶ ಮಾಡುವಂತಿರಲಿಲ್ಲ. ಜಮೀನಿನ ವಿರುದ್ಧವಾಗಿ ನೇರವಾಗಿಯೇ ಮೊಕದ್ದಮೆ ಹೂಡುವುದು ಸಾಧ್ಯವಿರಲಿಲ್ಲ. ಏಕೆಂದರೆ ಭೂಮಿಯ ಸಂಪೂರ್ಣ ಒಡೆತನದ ಹಕ್ಕು ಒಂದು ವರ್ಗಾವಣೆ ಪತ್ರದ ಮೂಲಕ ಜಹಗೀರುದಾರನಿಗೆ ಬಂದಿರುತ್ತದೆ. ಮಾನ್ಯದಾರ ಎಂದು ಕರೆಯುವ ವ್ಯವಹಾರ ನ್ಯಾಯಿಕ ವರ್ಗಾವಣೆ ಪತ್ರದ ಪ್ರಕಾರ ಅವನು ಆ ಜಮೀನಿನ ಸಂಪೂರ್ಣ ಒಡೆತನ ಪಡೆದಿರುವವನು ಎಂಬುದನ್ನು ನ್ಯಾಯಾಧೀಶನು ಕಡೆಗಣಿಸುವಂತಿಲ್ಲ.

(ii) ನ್ಯಾಯಾಧೀಶನು ನೆಲದ ಒಡೆತನ ಜಹಗೀರುದಾರನಿಗಿದೆ ಮತ್ತು ನ್ಯಾಯಿಕ ಹಕ್ಕಿದೆ ಎಂಬುದನ್ನು ನಿರ್ದಿಷ್ಟವಾಗಿ ಪುರಸ್ಕರಿಸಿದನೇನೋ ಹೌದು. ಆದರೆ ಅವನು ಹೇಳಿದ್ದು ಇಷ್ಟು:

"ನಿನಗೆ ನ್ಯಾಯಿಕವಾದ ಹಕ್ಕಿದೆ, ಅದನ್ನೇನೂ ನಿನ್ನಿಂದ ನಾನು ಕಸಿದುಕೊಳ್ಳುವುದಿಲ್ಲ. ಆದರೆ ವರ್ಗಾವಣೆ ಮಾಡಿಕೊಟ್ಟವನು ಯಾವ ಅರಿವಿನಿಂದ ವರ್ಗಾವಣೆ ಪತ್ರ ಮಾಡಿಕೊಟ್ಟನೋ ಅದನ್ನು ಅತಿಕ್ರಮಿಸುವ ರೀತಿಯಲ್ಲಿ ಆ ನ್ಯಾಯಿಕ ಹಕ್ಕನ್ನು ನೀನು ಚಲಾಯಿಸಲು ನಾನು ಅನುಮತಿ ಕೊಡುವುದಿಲ್ಲ."

(iii) ಮುಖ್ಯ ನ್ಯಾಯಾಧೀಶನು ಉಪಯೋಗಗಳ ಮೇಲೆ ತನ್ನ ನ್ಯಾಯಾಧಿಕಾರವನ್ನು ಸ್ಥಿರಪಡಿಸಿಕೊಳ್ಳುತ್ತ ವ್ಯವಹಾರ ನ್ಯಾಯದ ಪ್ರಕಾರ ಭೂಮಾಲೀಕನ ನ್ಯಾಯಿಕ ಹಕ್ಕನ್ನು ಮುಟ್ಟದೆ ಅತಿಕ್ರಮಿಸದೆ ಉಳಿಸಿದ ನೆಲದ ಮೇಲೆ ಅದು ನೇರವಾದ ನಿಯಂತ್ರಣವನ್ನು ಇಟ್ಟುಕೊಂಡಿರಲಿಲ್ಲ. ನ್ಯಾಯಿಕ ಹಕ್ಕು ಪಡೆದಿರುವ ಒಡೆಯನ ಮೇಲೆ ಷರತ್ತುಗಳನ್ನು ಪಾಲಿಸಲೇಬೇಕೆಂಬ ಕಡ್ಡಾಯವನ್ನು ಹೇರುವುದರ ಮೂಲಕ ನ್ಯಾಯಿಕ ಹಕ್ಕಿನ ಚಲಾವಣೆಯ ವಿಧಾನವನ್ನು ಸ್ವರೂಪವನ್ನು ನಿಯಂತ್ರಿಸಿತು. ನ್ಯಾಯಿಕ ಒಡೆಯನು ಭೂಮಿಯನ್ನು ತನ್ನ ಒಡೆತನದಲ್ಲಿ ಉಳಿಸಿಕೊಳ್ಳುವ ತನ್ನ ನ್ಯಾಯಿಕ ಹಕ್ಕನ್ನು ಉಳಿಸಿಕೊಂಡನು. ಮುಖ್ಯ ನ್ಯಾಯಾಧೀಶನು ಭೂಮಿಯನ್ನು ವರ್ಗಾವಣೆ ಮಾಡಿಕೊಟ್ಟವನಿಗೆ ವರ್ಗಾವಣೆಯ ಷರತ್ತುಗಳನ್ನು ಜಹಗೀರುದಾರನು ಪಾಲಿಸಿಯೇ ತೀರುವಂತೆ ಒತ್ತಾಯಪಡಿಸುವ ಧರ್ಮಸಮ್ಮತ ನೀಡಿದನು.

(೬) ಒಂದು ಶಾಸನ ಸಮ್ಮತವಾದ ನ್ಯಾಯಿಕ ಹಕ್ಕಿಗೂ ಒಂದು ಧರ್ಮಸಮ್ಮತ ಹಕ್ಕಿಗೂ ನಡುವೆ

ಇರುವ ವ್ಯತ್ಯಾಸದ ವಿವರಣೆ ಇದು. ಇದರ ಪ್ರಕಾರ ಒಂದು ನ್ಯಾಯಿಕ ಹಕ್ಕು ಇನ್ನೊಂದನ್ನು ಪೂರ್ತಿಯಾಗಿ ಅಥವಾ ಭಾಗಶಃ ನಾಶ ಮಾಡುತ್ತದೆ. ಆದರೆ ಒಂದು ಧರ್ಮಸಮ್ಮತ ಹಕ್ಕು ನ್ಯಾಯಿಕ ಹಕ್ಕನ್ನು ನಾಶಪಡಿಸುವುದಿಲ್ಲ.

(೭) ಸ್ಟ್ರಹಾನ್(Strahan)ನು ೧೧ನೆಯ ಪ್ರಕರಣದಲ್ಲಿ ಮಂಡಿಸಿರುವ ಒಂದು ನ್ಯಾಯಿಕ ಹಕ್ಕು ಅಥವಾ ಆಸಕ್ತಿಯು ಆಸ್ತಿಯಿಂದಲೇ ಹೊರಪಡುತ್ತದೆ. ಆದರೆ ಧರ್ಮಸಮ್ಮತ ಹಕ್ಕು ಅಥವಾ ಆಸಕ್ತಿಯು ನ್ಯಾಯಿಕ ಆಸಕ್ತಿಯಿಂದ ಹೊರಪಡುತ್ತದೆಯೇ ಹೊರತು ಆಸ್ತಿಯಿಂದಲ್ಲ– ಎಂಬ ಸಿದ್ಧಾಂತಕ್ಕೂ ವಿವರಣೆ ಇದೇನೇ.

ಇದೇಕೆ ಹೀಗೆ ಎಂದರೆ, ಮುಖ್ಯ ನ್ಯಾಯಾಧೀಶನು ಧರ್ಮಸಮ್ಮತ ಒಡೆಯನಿಗೆ ಆಸ್ತಿಯನ್ನು ತನ್ನ ವಶದಲ್ಲಿರಿಸಿಕೊಳ್ಳಲು ಇರುವ ಹಕ್ಕನ್ನು ಪುರಸ್ಕರಿಸಿಲ್ಲ. ಆ ಹಕ್ಕನ್ನು ಆತನು ನ್ಯಾಯಿಕ ಒಡೆಯನಲ್ಲಿ ಉಳಿಸಿದನು. ಧರ್ಮಸಮ್ಮತ ಒಡೆಯನಿಗೆ ಆತ ಹೇಳಿದ್ದು ಏನೆಂದರೆ, ನ್ಯಾಯಿಕ ಒಡೆಯನ ನಡವಳಿಕೆಯ ಮೇಲೆ ಒಂದು ಕರ್ತವ್ಯವನ್ನು ಹೇರಿದ್ದು; ಅಷ್ಟೇ ಹೊರತು, ಆಸ್ತಿಯನ್ನೇ ತನ್ನದೆಂದು ಹೇಳಿಕೊಳ್ಳುವ ಹಕ್ಕನ್ನು ಅವನಿಗೆ ಕೊಡಲಿಲ್ಲ.

*ನಿದರ್ಶನ: (೧೯೧೮) ಕೆಬಿ (ಐಆರ್) ೩೫೩ – ಗ್ರಹಾಂ><ಮೆಕೆಲ್‌ವೇನ್.*

(೮) ಈ ಸಂಗತಿಯಿಂದ ಹೊರಪಡುವ ಪರಿಣಾಮಗಳನ್ನು ಗಮನಿಸಬಹುದು:

ಧರ್ಮಸಮ್ಮತ ಹಕ್ಕು ಒಂದು ನ್ಯಾಯಿಕ ಹಕ್ಕಿನಿಂದ ಉದಿಸುತ್ತದೆಯೇ ಹೊರತು ಆಸ್ತಿಯಿಂದಲ್ಲವಾದುದರಿಂದ:

(i) ಅದು ಯಾವುದರಿಂದ ಉದಿಸುತ್ತದೆಯೋ ಆ ಶಾಸನ ವಿಹಿತ ಆಸ್ತಿಗಿಂತಲೂ ದೊಡ್ಡದಲ್ಲ.

ಉದಾಹರಣೆ:

'ಬಿ' ಮತ್ತು ಅವನ ವಾರಸುದಾರರ ಉಪಯೋಗಕ್ಕೆಂದು 'ಎ'ಗೆ ಭೂಮಿಯನ್ನು ವರ್ಗಾವಣೆ ಮಾಡಲಾಗಿದೆ. ಇಲ್ಲಿ 'ಎ' ನ್ಯಾಯಿಕ ಒಡೆತನ ಹೊಂದಿದ್ದಾನೆ. 'ಬಿ' ಧರ್ಮಸಮ್ಮತ ಒಡೆಯನಾಗಿದ್ದಾನೆ. ಆದರೆ ಭೂಮಿಯನ್ನು 'ಎ'ಗೆ ವರ್ಗಾವಣೆ ಮಾಡಲಾಗಿದೆಯೇ ಹೊರತು 'ಎ' ಮತ್ತು ಅವನ ವಾರಸುದಾರರಿಗಲ್ಲ. ಆದ್ದರಿಂದಾಗಿ, 'ಎ'ಯ ನ್ಯಾಯಿಕ ಹಕ್ಕು ಅವನ ಮರಣದೊಂದಿಗೆ ಹೊರಟುಹೋಗುತ್ತದೆ.

ಹಾಗೆಯೇ 'ಬಿ'ಯ ಧರ್ಮಸಮ್ಮತ ಹಕ್ಕೂ ಸಹ.

ಧರ್ಮಸಮ್ಮತ ಆಸಕ್ತಿಯು ಯಾವುದರಿಂದ ಹೊರಪಡುವುದೋ ಆ ನ್ಯಾಯಿಕ ಆಸಕ್ತಿಯನ್ನು ಮೀರಿಸಿ ಉಳಿಯಲಾರದು. (೧೯೧೪) ಅಧ್ಯಾಯ ೩೦೦.

(ii) ನ್ಯಾಯಿಕ ಹಕ್ಕಿನಲ್ಲಿರುವ ಎಲ್ಲಾ ದೌರ್ಬಲ್ಯಗಳು ಧರ್ಮಸಮ್ಮತ ಹಕ್ಕಿನ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತವೆ.

'ಎ'ಯು ಅಂತಿಮ ಇಷ್ಟಪತ್ರವನ್ನು ಬರೆದಿಡದೆ 'ಬಿ' ಮತ್ತು 'ಸಿ'ಯ ಮಕ್ಕಳನ್ನು ಬಿಟ್ಟು ಸತ್ತುಹೋದನು. ಅವರಲ್ಲಿ 'ಬಿ' ದೊಡ್ಡವನು.

'ಬಿ' ಹೊರಹೋಗಿರುವಾಗ 'ಸಿ'ಯು ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡು 'ಡಿ'ಗೆ ಅವನ ಪತ್ನಿ 'ಇ'ಯ ಉಪಯೋಗಕ್ಕಾಗಿ ವರ್ಗಾಯಿಸುತ್ತಾನೆ.

'ಬಿ' ಹಿಂದಿರುಗಿ ಬಂದು ಆಸ್ತಿಯನ್ನು ಕೇಳುತ್ತಾನೆ. 'ಡಿ' ನ್ಯಾಯಿಕ ಹಕ್ಕು, 'ಸಿ'ಯ ಒಡೆತನದಲ್ಲೇ ದೋಷವಿದ್ದುದರಿಂದಾಗಿ ಕೊನೆಗೊಳ್ಳುತ್ತದೆ.

'ಸಿ'ಯ ಪತ್ನಿ 'ಇ'ಯ ಧರ್ಮಸಮ್ಮತ ಹಕ್ಕು ಕೂಡ ಕೊನೆಗೊಳ್ಳುತ್ತದೆ.

(iii) ಒಂದು ನ್ಯಾಯಿಕ ಹಕ್ಕಿಗೂ ಧರ್ಮಸಮ್ಮತ ಹಕ್ಕಿಗೂ ಇರುವ ಮೂರನೆಯ ವ್ಯತ್ಯಾಸ ಇದು. ಒಂದು ನ್ಯಾಯಿಕ ಹಕ್ಕು ರೆಮ್ (Rem) ಹಕ್ಕಾಗಿರಬಹುದು ಅಥವಾ ಪರ್ಸೊನಮ್ (personam) ಹಕ್ಕಾಗಿರಬಹುದು. ಆದರೆ ಧರ್ಮಸಮ್ಮತ ಹಕ್ಕು ಯಾವಾಗಲೂ ಪರ್ಸೊನಮ್ ಹಕ್ಕಾಗಿರುತ್ತದೆ. ಧರ್ಮಸಮ್ಮತ ಒಡೆಯನ ಹಕ್ಕನ್ನು ಗೌರವಿಸುವವರು ಯಾರು? ಜಗತ್ತಲ್ಲ, ನ್ಯಾಯಿಕ ಒಡೆಯನೇ ಹೊರತು ಬೇರೆ ಯಾರೂ ಅಲ್ಲ. ನಿಜ, ನ್ಯಾಯಿಕ ಒಡೆಯನು, ಮೊದಲು ಧರ್ಮಸಮ್ಮತ ಹಕ್ಕು ಯಾರ ವಿರುದ್ಧ ಹೊರಪಟ್ಟಿತೋ ಅವನು ಮಾತ್ರವಲ್ಲ, ಆ ಹಕ್ಕು ವರ್ಗಾವಣೆಗೊಳ್ಳುವ ಪ್ರತಿಯೊಬ್ಬ ನ್ಯಾಯಿಕ ಒಡೆಯನನ್ನೂ ಅದು ಒಳಗೊಳ್ಳುತ್ತದೆ. ಹಾಗಿದ್ದರೂ ಒಂದು ಧರ್ಮಸಮ್ಮತ ಹಕ್ಕು ಇನ್ ಪರ್ಸೊನಮ್ (in personam) ವೈಯಕ್ತಿಕ ಹಕ್ಕಾಗಿರುತ್ತದೆ, ಅದು ನ್ಯಾಯಿಕ ಒಡೆಯನನ್ನು ಮಾತ್ರ ಕಟ್ಟಿ ಹಾಕುತ್ತದೆ ಎಂಬ ಸಿದ್ಧಾಂತವು ನಿಲ್ಲುತ್ತದೆ.

**ವಿವರಣೆ:**

ಧರ್ಮಸಮ್ಮತ ಹಕ್ಕುಗಳು ರೆಮ್ (rem) ಹಕ್ಕುಗಳನ್ನು ಹೋಲುತ್ತವೆ.

(i) ಧರ್ಮಸಮ್ಮತ ಹಕ್ಕುಗಳು ಇನ್ ರೆಮ್ (in rem) ಹಕ್ಕುಗಳನ್ನು ಹೋಲುತ್ತವೆ ಎನ್ನುವುದು ನಿಜ.

(ii) ಈ ಹೋಲಿಕೆ ಹೇಗೆ ಉದಿಸುತ್ತದೆ?

(i) ಒಂದು ಧರ್ಮಸಮ್ಮತ ಹಕ್ಕನ್ನು ನ್ಯಾಯದ ಹಕ್ಕಿನ ಒಡೆಯನ ವಿರುದ್ಧವಾಗಿ ಮಾತ್ರ ಕಾರ್ಯಗತಗೊಳಿಸುವುದಲ್ಲ. ಅದನ್ನು ಇವರ ವಿರುದ್ಧವಾಗಿಯೂ ಜಾರಿಗೊಳಿಸಲಾಗುತ್ತದೆ.

(ಅ) ಅವನ ಮೂಲಕ ಅಥವಾ ಅವನ ಕೈಕೆಳಗೆ ಬಿದ್ದು ಒತ್ತಾಯಪಡಿಸುವ ಪ್ರತಿನಿಧಿಗಳು ಮತ್ತು ಸ್ವಯಂಸೇವಕರು.

(ಆ) ನ್ಯಾಯಿಕ ಹಕ್ಕುಗಳನ್ನು ಪಡೆಯುವ ವ್ಯಕ್ತಿಗಳು

(i) ನ್ಯಾಯಿಕ ಹಕ್ಕಿನ ಅರಿವಿನೊಂದಿಗೆ

(ii) ಆ ಅರಿವನ್ನು ಹೊಂದಿರಬಹುದಾದವರ ವಿರುದ್ಧವಾಗಿ

(iii) ತಿಳಿವಳಿಕೆಯ ಮಟ್ಟವನ್ನು ನ್ಯಾಯಾಲಯವು ಎಷ್ಟು ಎತ್ತರಕ್ಕೆ ನಿಗದಿಪಡಿಸಿದರೆ, ಯಾರೊಬ್ಬರೂ ಅದರಿಂದ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ, ಪ್ರತಿಯೊಬ್ಬ ಕೊಳ್ಳುಗನೂ ಅದರಿಂದ ಬದ್ಧನಾದನು.

## ನ್ಯಾಯೋಚಿತ ಆದ್ಯತೆಗಳು

(೧) ಒಂದು ನ್ಯಾಯೋಚಿತ ಹಕ್ಕು ವೈಯಕ್ತಿಕ (in personam) ಹಕ್ಕಾಗಿರುತ್ತದೆ, ಒಂದು ನ್ಯಾಯಿಕ ಹಕ್ಕನ್ನು ಪಡೆದಿರುವವನ ವಿರುದ್ಧವಾಗಿ ವರ್ತಿಸುತ್ತದೆ.

(೨) ಒಂದು ನ್ಯಾಯಿಕ ಹಕ್ಕಿನಿಂದ ಎರಡು ನ್ಯಾಯೋಚಿತ ಹಕ್ಕುಗಳೂ ಉದಿಸಬಹುದು. ಎರಡೂ ವೈಯಕ್ತಿಕ ಹಕ್ಕುಗಳೇ ಆಗಿರುತ್ತವೆ.

(೩) ಒಂದು ನ್ಯಾಯೋಚಿತ ಹಕ್ಕು ವೈಯಕ್ತಿಕ ಹಕ್ಕಾಗಿ, ಆಸ್ತಿಯಿಂದಲ್ಲದೆ ನ್ಯಾಯಿಕ ಹಕ್ಕಿನಿಂದ ಮೂಡಿಬರುತ್ತದೆಯಾದ್ದರಿಂದ, ಆ ನ್ಯಾಯಿಕ ಹಕ್ಕನ್ನು ಬೇರೆ ಹೊಸ ಒಡೆಯನಿಗೆ ವರ್ಗಾಯಿಸುವುದರ

ಮೂಲಕ ಸೋಲಿಸಬಹುದು. ಅಥವಾ ಈ ವರ್ಗಾವಣೆಯಿಂದ ಇನ್ನೊಂದು ನ್ಯಾಯೋಚಿತ ಹಕ್ಕು ಉದಿಸಿ ಹಿಂದಿನ ನ್ಯಾಯೋಚಿತ ಹಕ್ಕನ್ನು ಸೋಲಿಸಬಹುದು.

(೪) ಇಲ್ಲಿ ಪರಿಗಣಿಸಲಾದ ಪ್ರಶ್ನೆಯೆಂದರೆ, ಯಾವ ಸಂದರ್ಭದಲ್ಲಿ ಅಂತಹ ವರ್ಗಾವಣೆಯು ಒಂದು ನ್ಯಾಯೋಚಿತ ಹಕ್ಕನ್ನು ಸೋಲಿಸಬಹುದು?

(೫) ಈ ವಿಷಯವನ್ನು ನ್ಯಾಯೋಚಿತ ಆದ್ಯತೆಗಳು ಎಂಬ ಶೀರ್ಷಿಕೆಯಲ್ಲಿ ಸಾಮಾನ್ಯ ರೂಪದಲ್ಲಿ ಚರ್ಚಿಸಲಾಗಿದೆ. ಹಾಗೆ ಹೆಸರು ಕೊಟ್ಟಿರುವುದಕ್ಕೆ ಕಾರಣ, ನಿರ್ಧಾರಕ್ಕೆ ಇಟ್ಟಿರುವ ಪರೀಕ್ಷೆ ಕಾಲದ ಆದ್ಯತೆ. ಆದರೆ ನಿಜವಾದ ವಸ್ತು, ಒಂದು ನ್ಯಾಯೋಚಿತ ಹಕ್ಕು ಯಾವುದರಿಂದ ಒಡಮೂಡುತ್ತದೋ ಆ ನ್ಯಾಯಿಕ ಹಕ್ಕಿನ ವರ್ಗಾವಣೆಯಿಂದ ಸೋಲಬಲ್ಲದೆ? ಅಥವಾ ಅದೇ ನ್ಯಾಯಿಕ ಹಕ್ಕಿನಿಂದ ಇನ್ನೊಂದು ನ್ಯಾಯೋಚಿತ ಹಕ್ಕಿನ ಸೃಷ್ಟಿಯಾಗಿ ಆ ನ್ಯಾಯಿಕ ಹಕ್ಕು ಸೋಲುತ್ತದೆಯೇ?

(೬) ಸಂದರ್ಭಗಳು ಎರಡು ವರ್ಗದವುಗಳಾಗಿರುತ್ತವೆ.

(i) ನ್ಯಾಯಿಕ ಹಕ್ಕಿಗೂ, ನ್ಯಾಯೋಚಿತ ಹಕ್ಕಿಗೂ ನಡುವೆ ಸಂಘರ್ಷವಿರುವ ಸಂದರ್ಭಗಳು

(ii) ಎರಡು ಹಕ್ಕುಗಳ ನಡುವೆ ಸಂಘರ್ಷವಿರುವ ಸಂದರ್ಭಗಳು

(೭) ಮೊದಲನೆಯ ವರ್ಗದ ಸಂದರ್ಭಗಳಲ್ಲಿ ಎರಡು ಅಂಶಗಳಿವೆ. ಅವುಗಳನ್ನು ಗಮನಿಸಬೇಕು.

(ಅ) ನ್ಯಾಯಿಕ ಹಕ್ಕಿಗಿಂತ ಮೊದಲೇ ನ್ಯಾಯೋಚಿತ ಹಕ್ಕು ಅಸ್ತಿತ್ವದಲ್ಲಿರುವ ಸಂದರ್ಭ.

(ಆ) ನ್ಯಾಯಿಕ ಹಕ್ಕಿನ ನಂತರ ಒಂದು ನ್ಯಾಯೋಚಿತ ಹಕ್ಕು ಉದಿಸುವ ಸಂದರ್ಭ.

ಮಿಸೆಸ್ ಥಾರನ್‌ಡೈಕ್ ಒಂದು ವಿಶ್ವಸ್ಥನಿಧಿಯ ಫಲಾನುಭವಿಯಾಗಿದ್ದಳು. ಅದಕ್ಕೆ 'ಸಿ' ಒಬ್ಬ ಟ್ರಸ್ಟೀ. ಮಿಸೆಸ್ ಥಾರನ್‌ಡೈಕ್ ಹಾಕಿದ ಒಂದು ಮೊಕದ್ದಮೆಯಲ್ಲಿ ನ್ಯಾಯಾಲಯವು, ನಿಧಿಯನ್ನು ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದೂ, ಥಾರನ್‌ಡೈಕ್ ಟ್ರಸ್ಟ್ ನಿರ್ಮಾಣದ ಉದ್ದೇಶಕ್ಕಾಗಿ ಅದು ಅಗತ್ಯವಾಗಿದೆಯೆಂದೂ ಒಬ್ಬ ಆಡಳಿತಾಧಿಕಾರಿಯು ಅದನ್ನು ನಿರ್ವಹಿಸುವನೆಂದೂ ಆದೇಶಿಸಿತು. ಯಾರ ವಿರುದ್ಧ ನ್ಯಾಯಾಲಯವು ಆದೇಶ ನೀಡಿತೋ ಆ ಟ್ರಸ್ಟಿಗಳು ಸೂಕ್ತವಲ್ಲದ ರೀತಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡಿ ನಿಧಿಯ ವಾರಸ ಕೋರ್ಟಿಗೆ ಬರುವಂತೆ ಮಾಡಿದ್ದರು. ಸಾಲದ್ದಕ್ಕೆ ಈ ಸಂದರ್ಭದಲ್ಲಿ ಮೂರನೆಯ ವ್ಯಕ್ತಿಗಳಿದ್ದರು. ಅವರನ್ನು ನೋಯಿಸಲಾಗಿತ್ತು. ಹಾಗೆ ನೊಂದ ಮೂರನೆಯ ವ್ಯಕ್ತಿಗಳು ಮೊಕದ್ದಮೆ ಹಾಕಿ, ಥಾರನ್‌ಡೈಕ್‌ರ ಹೆಸರಿನಲ್ಲಿರುವ ನಿಧಿಯನ್ನು ತಮಗೆ ವರ್ಗಾಯಿಸಬೇಕೆಂದು ಕೇಳಿದರು. ವಾದ: ನ್ಯಾಯಿಕ ಒಡೆತನ ಮಿಸೆಸ್ ಥಾರನ್‌ಡೈಕ್ ಅವರಿಗಿಲ್ಲ, ಆದ್ದರಿಂದ ಅವರ ಹಕ್ಕು ನಿಲ್ಲುವುದಿಲ್ಲ. ವಾದವನ್ನು ತಳ್ಳಿಹಾಕಲಾಯಿತು. ನ್ಯಾಯಿಕ ಒಡೆತನವನ್ನು ವ್ಯಕ್ತಿಗತವಾಗಿ ಪಡೆದಿರಬೇಕಾದ ಅಗತ್ಯವೇನಿಲ್ಲ. ಆದ್ದರಿಂದ ತಿಳಿವಳಿಕೆ ಪತ್ರವೂ ಇಲ್ಲ.

(೮) ಒಟ್ಟಿನ ಮೇಲೆ ನಾವು ಪರಿಶೀಲಿಸಬೇಕಾದ ಮೂರು ಪ್ರಶ್ನೆಗಳಿವೆ. ಅವುಗಳನ್ನು ಹೀಗೆ ನಿರೂಪಿಸಬಹುದು:

(i) ನ್ಯಾಯಿಕವಾದ ಹಕ್ಕನ್ನು ಪಡೆಯುವ ವ್ಯಕ್ತಿಯು ಅದಕ್ಕಿಂತ ಮುಂಚಿನ ನ್ಯಾಯೋಚಿತ ಹಕ್ಕಿಗೆ ಬದ್ಧನಾಗಿರುತ್ತಾನೆಯೇ?

(ii) ನ್ಯಾಯಿಕ ಹಕ್ಕೊಂದನ್ನು ಪಡೆದಿರುವ ವ್ಯಕ್ತಿಯು, ಆಮೇಲೆ ಉದಿಸಿ ಬರುವ ಒಂದು ನ್ಯಾಯೋಚಿತ ಹಕ್ಕಿಗೆ ಬದ್ಧನಾಗುವನೆ?

(iii) ಯಾವುದೇ ಪಕ್ಷವು ನ್ಯಾಯಿಕ ಹಕ್ಕನ್ನು ಪಡೆದಿರದೆ ಇಬ್ಬರೂ ನ್ಯಾಯೋಚಿತ ಹಕ್ಕುಗಳನ್ನು ಮಾತ್ರ ಪಡೆದಿರುವಾಗ ಅವರಲ್ಲಿ ಯಾರಿಗೆ ಆದ್ಯತೆ ಇರುತ್ತದೆ?

(I) **ಒಂದು ನ್ಯಾಯಿಕ ಹಕ್ಕನ್ನು ಪಡೆದಿರುವ ವ್ಯಕ್ತಿಯು ಅದಕ್ಕಿಂತ ಮೊದಲಿನ ಒಂದು ನ್ಯಾಯೋಚಿತ ಹಕ್ಕಿಗೆ ಒಳಪಟ್ಟಿರುತ್ತಾನೆಯೆ**?

ಈ ಪ್ರಶ್ನೆಗೆ ಉತ್ತರ ಹೀಗಿದೆ:

(೧) ಬೆಲೆಯುಳ್ಳ ಪ್ರತಿಫಲ ನೀತಿ ಒಂದು ಶಾಸನ ಸಮ್ಮತ ಆಸ್ತಿಯನ್ನು ಕೊಂಡವನು, ಅದಕ್ಕಿಂತ ಮುಂಚೆ ಒಂದು ನ್ಯಾಯೋಚಿತ ಹಕ್ಕು ಇದ್ದಿತೆಂಬ ಅರಿವೇ ಅವನಿಗಿರದಿದ್ದರೆ, ಅಂಥದೊಂದು ಹಕ್ಕಿನಿಂದ ಬಂಧಿತನಾಗುವುದಿಲ್ಲ.

(೨) ಈ ಸೂಚನೆಯಲ್ಲಿ ಅತಿ ಮುಖ್ಯವಾದ ಮೂರು ಅಂಶಗಳಿವೆ:

ಕೊಳ್ಳುಗನು ಕಾನೂನು ಸಮ್ಮತವಾದ ಆಸ್ತಿಯನ್ನು ವಶಪಡಿಸಿಕೊಂಡಿರಬೇಕು. ಈ ವಿಚಾರವಾಗಿ ಹೆಚ್ಚು ಹೇಳುವಂಥದೇನೂ ಇಲ್ಲ. ಆದರೆ ಈ ಕೆಳಗಿನ ಅಂಶಗಳನ್ನು ಗಮನಿಸಬಹುದು:

(ಅ) ನ್ಯಾಯಿಕ ಆಸ್ತಿಯನ್ನು ವ್ಯಕ್ತಿಗತವಾಗಿ ಅವನೇ ಹೊಂದಿರಬೇಕೆಂದು ನಿಯಮವಿಲ್ಲ. ಯಾರಾದರೂ ಅವನ ಪರವಾಗಿ ಪಡೆದರೂ ಸಾಕು.

*ಥಾರನ್‌ಡೈಕ್ > < ಹಂಟ್ (೧೮೫೯) ೩ De.G.l. ೫೬೩ = ೪೪ E.R. 1386*

(ಆ) ಕೊಳ್ಳುಗನ ಹಕ್ಕು ಪತ್ರವು ಅತ್ಯಂತ ಸಮರ್ಪಕವಾದ ಹಕ್ಕುಗಾರಿಕೆ ಪತ್ರವಾಗಿರಬೇಕಾಗಿಲ್ಲ.

**ನಿದರ್ಶನ:** ಟ್ರಸ್ಟಿಯ ಆಸ್ತಿ ಮೇಲಿನ ಹಕ್ಕು ದೋಷಪೂರ್ಣವಾಗಿದ್ದರೆ, ಆಗಲೂ ಕೂಡ ಅವನು ಅಧಿಕೃತ ಕೊಳ್ಳುಗನಿಗೆ, ಬಡ್ಡಿ ಕೊಡುವುದಾಗಿ ಬರೆದುಕೊಡಬಹುದು. ಮುಂಚಿನ ಧರ್ಮಸಮ್ಮತ ಹಕ್ಕಿನ ಒಡೆಯನಾಗಿರುವ ಅವನು ಅದಕ್ಕೆ ಫಲಾನುಭವಿಯಾಗಿರುತ್ತಾನೆ.

*ಜೋನ್ಸ್ < > ಪೌಲೆಸ್ (೧೮೩೪) ೩ My & K. ೫೮೧*

**ವಾಸ್ತವಾಂಶಗಳು:**

(೧) ಜೇಮ್ಸ್ ಜೋನ್ಸ್– ಒಡೆಯ ತನ್ನ ಮನೆಯನ್ನು ಹಾಲ್‌ಬ್ರೂಕ್‌ನಿಗೆ ಅಡಮಾನ ಮಾಡಿದನು, ಅದನ್ನು ಬಿಡಿಸಿಕೊಂಡನು, ಹಣವನ್ನು ಪಾವತಿ ಮಾಡಿದುದಕ್ಕಾಗಿ ರಸೀತಿ ಪಡೆದನು. ಆದರೆ ಮರುವರ್ಗಾವಣೆ ಪತ್ರವನ್ನು ಪಡೆದುಕೊಳ್ಳಲಿಲ್ಲ. ನ್ಯಾಯಿಕವಾಗಿ ಆಸ್ತಿಯು ಹಾಲ್‌ಬ್ರೂಕ್‌ನಲ್ಲೇ ಉಳಿಯಿತು.

(೨) ಜೋನ್ಸ್ ಮೆರೆಡಿತ್ ಮೃತನಾಗಲು ಅವನ ಅಂಗಡಿ ಸಹಾಯಕನು ಜೋನ್ಸನ ಉಯಿಲನ್ನು ನಕಲು ಮಾಡಿ ಅದರ ಅಧಿಕಾರದಿಂದ ಮನೆಯನ್ನು ವಶಕ್ಕೆ ತೆಗೆದುಕೊಂಡನು.

(೩) ಮೆರೆಡಿತನು ಅದನ್ನು ಒಂದು ವರ್ಗಾವಣೆ ಪತ್ರದ ಮೂಲಕ ಹಾಲ್‌ನಿಗೆ ಅಡಮಾನ ಮಾಡಿದನು.

(೪) ಮೆರೆಡಿತ್ ತನ್ನ ಪತ್ನಿಯನ್ನು ಬಿಟ್ಟು ಮೃತನಾದನು. ಅದನ್ನು ಬಿಡಿಸಿಕೊಳ್ಳುವುದನ್ನು ಉಯಿಲು ಬರೆದು ಮೊದಲು ತನ್ನ ಪತ್ನಿಗೂ ಆಮೇಲೆ ಜೇಮ್ಸ್ ಜೋನ್ಸನಿಗೂ ಬಿಟ್ಟನು.

(೫) ಜೇಮ್ಸ್ ಜೋನ್ಸ್ ಅದನ್ನು ವಾಟ್‌ಕಿನ್ಸ್‌ನಿಗೆ ವರ್ಗಾವಣೆ ಮಾಡಿದನು.

(೬) ಜೇಮ್ಸ್ ಜೋನ್ಸ್ ಮತ್ತು ವಾಟ್‌ಕಿನ್ಸ್ ಭಾಗೀದಾರರಾದರು, ಆಸ್ತಿಯನ್ನು ಪೌಲೆಸ್‌ನಿಗೆ ಅಡಮಾನ ಮಾಡಿದರು, ಭೋಗ್ಯ ಮಾಡಿಸಿಕೊಂಡವನಾಗಿ ಪೌಲೆಸ್ ಅದನ್ನು ವಶಪಡಿಸಿಕೊಂಡನು.

(೭) ಪೌಲೆಸ್ ತನ್ನ ಪತ್ನಿ ಸಾರಾಳನ್ನು ಬಿಟ್ಟು ಮೃತನಾದನು.

(೮) ಸಾರಾ ಪೌಲೆಸ್ ಆಸ್ತಿಯ ಪೂರ್ಣ ಒಡೆತನ ಪಡೆದುಕೊಂಡಳು.

(೯) ಉಯಿಲು ನಕಲಿ ಎಂದು ಸಾರಾ ಜೋನ್ಸ್ ಸಾರಾ ಪೌಲೆಸ್ ಮೇಲೆ ಮೊಕದ್ದಮೆ ಹೂಡಿದಳು.

ಸಾರಾ ಪೌಲೆಸ್‌ಗೆ ತಿಳುವಳಿಕೆಯಿದ್ದುದರಿಂದ ಬಿಡಿಸಿಕೊಳ್ಳುವ ಅವಳ ಹಕ್ಕನ್ನು ಸೋಲಿಸಲಾಗಲಿಲ್ಲ.

(ಇ) ಕೊಳ್ಳುವವನು ಒಂದು ನ್ಯಾಯಿಕ ಹಕ್ಕನ್ನು ಪಡೆದಿರಬೇಕು. ಅದು–

(i) ಕೊಳ್ಳುವ ಸಮಯದಲ್ಲಿ ಆಗಬಹುದು, ಇಲ್ಲವೆ

(ii) ಆಮೇಲೆ ಕೂಡ ಆಗಬಹುದು.

**(II) ಕೊಳ್ಳುವವನು ತನ್ನ ಹಕ್ಕಿಗಾಗಿ ಬೆಲೆಬಾಳುವ ಪ್ರತಿಫಲವನ್ನು ಕೊಟ್ಟಿರಬೇಕು.**

ಸ್ವಯಂಪ್ರೇರಿತನು ಯಾವಾಗಲೂ ಒಂದು ನ್ಯಾಯೋಚಿತ ಹಕ್ಕಿಗೆ ಒಳಪಟ್ಟಿರುತ್ತಾನೆ.

ಇದಕ್ಕೆ ಕಾರಣ, ಯಾವುದೇ ಪ್ರತಿಫಲ ನೀಡಿರದುದರಿಂದ ಮುಂದಿನ ನ್ಯಾಯೋಚಿತ ಹಕ್ಕಿಗೆ ಒಳಪಟ್ಟು ಅವನು ಕಷ್ಟಪಡುವುದಿಲ್ಲ.

ಇರುವ ಸಾಲವೇ ಸಾಕಷ್ಟು ಪ್ರತಿಫಲವಾಗಿರುತ್ತದೆ.

*ನಿದರ್ಶನ ಥಾರನ್ ಡೈಕ್ >< ಹಂಟ್.*

'ಟಿ' ಯಾವ ಪ್ರತಿಫಲವನ್ನೂ ಕೊಟ್ಟಿರಲಿಲ್ಲ. ಅವನ ಹಕ್ಕು ಟ್ರಸ್ಟಿಯ ವಿರುದ್ಧವಾಗಿ ಸಾಲವೇ ಆಗಿತ್ತು.

**(III) ಕೊಳ್ಳುವವನು ಮೊದಲೇ ಒಂದು ನ್ಯಾಯೋಚಿತ ಹಕ್ಕಿದೆಯೆಂಬ ವಿಚಾರ ತಿಳಿಯದೆಯೇ ಹಕ್ಕನ್ನು ಪಡೆದುಕೊಂಡಿರಬೇಕು.**

ಇದು ಸಿದ್ಧಾಂತದ ಅತ್ಯಂತ ಮುಖ್ಯವಾದ ಅಂಶ. ಇಲ್ಲಿ ಪರಿಶೀಲಿಸಬೇಕಾದ ಪ್ರಶ್ನೆ ಇದು. (ಮುಂದಿನ ಭಾಗ ಉಪಲಬ್ಧವಿಲ್ಲ –ಸಂ.)

### ತಿಳಿವಳಿಕೆ (ನೋಟಿಸು) ಎಂದರೇನು?

(೧) ತಿಳಿವಳಿಕೆಯು ನೇರವಾಗಿರಬಹುದು ಇಲ್ಲವೇ ಆರೋಪಿತವಾಗಿರಬಹುದು. ನೇರ ತಿಳಿವಳಿಕೆ ಕೊಳ್ಳುವವನಿಗೆ ನೇರವಾಗಿ ಬರುವಂಥದು; ಆರೋಪಿತ ತಿಳಿವಳಿಕೆಯು ಅವನ ಪ್ರತಿನಿಧಿಗೆ ಬರುವಂಥದು.

(೨) ನೇರ ತಿಳಿವಳಿಕೆ ವಾಸ್ತವವಾಗಿರಬಹುದು ಅಥವಾ ರಚನಾತ್ಮಕವಾಗಿರಬಹುದು.

(i) ವಿಷಯವು ಕೊಳ್ಳುವವನ ಅಥವಾ ಅವನ ಪ್ರತಿನಿಧಿಯ ಅರಿವಿಗೆ ನಿಲುಕುವಂತೆ ಇದ್ದರೆ ಅದು ವಾಸ್ತವಿಕ ನೋಟೀಸು.

(ii) ಸೂಕ್ತ ವಿಚಾರಣೆಗಳನ್ನು ಮಾಡಿದ್ದರೆ ಅವನ ಅಥವಾ ಅವನ ಪ್ರತಿನಿಧಿಯ ಅರಿವಿಗೆ ಬರಬಹುದಾಗಿದ್ದ ಕಡೆ ರಚನಾತ್ಮಕ ನೋಟೀಸು.

### ವಾಸ್ತವಿಕ ತಿಳಿವಳಿಕೆ

ಒಂದು ನ್ಯಾಯಿಕ ಹಕ್ಕನ್ನು ಸೋಲಿಸುವುದಕ್ಕಾಗಿ ವಾಸ್ತವಿಕ ನೋಟೀಸನ್ನು ಅವಲಂಬಿಸಿದ್ದ ಪಕ್ಷದಲ್ಲಿ ಅದು:

(i) ಅದು ಆಸ್ತಿಯಲ್ಲಿ ಆಸಕ್ತಿಯಿರುವ ವ್ಯಕ್ತಿಗೆ ಕೊಟ್ಟಿದ್ದಾಗಿರಬೇಕು.

(ii) ಮಾತುಕತೆಗಳ ನಡುವೆ ಕೊಟ್ಟುದಾಗಿರಬೇಕು.

(iii) ಅದು ಸ್ಪಷ್ಟವಾಗಿರಬೇಕು.

**ರಚನಾತ್ಮಕ ತಿಳಿವಳಿಕೆ**

(೧) ಒಂದು ವಾಸ್ತವಾಂಶ ಅಥವಾ ವಾಸ್ತವಾಂಶಗಳು ಎಲ್ಲಿವೆಯೋ ಅಲ್ಲಿ ರಚನಶೀಲ ನೋಟೀಸಿಗೆ ಅವಕಾಶವಿದೆ. ಅದರಿಂದ ನ್ಯಾಯೋಚಿತ ಹಕ್ಕೆಂದರೆ ಅಸ್ತಿತ್ವವನ್ನು ತಿಳಿದುಕೊಳ್ಳಬಹುದಾಗಿದೆ. ಅದು ತಿಳಿವಳಿಕೆಯಲ್ಲ, ತಿಳಿವಳಿಕೆಯ ಸಾಕ್ಷಿ.

(೨) ರಚನಶೀಲ ತಿಳಿವಳಿಕೆಯ ಮೂರು ಬಗೆಗಳಿವೆ.

(i) ಹಕ್ಕಿನ ಅಸ್ತಿತ್ವದ ತಯಾರಿಕೆಗೆ ಅವಕಾಶವಾಗಬಹುದಾಗಿದ್ದ ಸಂಗತಿಯ ವಾಸ್ತವಿಕ ತಿಳಿವಳಿಕೆ ಇರುವ ಸಂದರ್ಭ. ಬಿಸ್ಕೋ ವಿರುದ್ಧ ಆರ್ಲ್ ಆಫ್ ಬಾನ್‌ಬರಿ (೧೬೭೬) (೬) ೧ Ch. Ca. ೨೮೭.

ಕೊಳ್ಳುಗನಿಗೆ ನಿರ್ದಿಷ್ಟ ಅಡಮಾನದ ವಾಸ್ತವಿಕ ತಿಳುವಳಿಕೆ ಇತ್ತು. ಆದರೆ ಇತರ ಹಕ್ಕುಗಳನ್ನಾಗಲಿ ಬದ್ಧತೆಗಳನ್ನಾಗಲಿ ಹೇಳುವ ಅಡಮಾನ ಪತ್ರವನ್ನು ಅವನು ಪರೀಕ್ಷಿಸಲಿಲ್ಲ.

ಅವನು ಇತರ ಬಾಧ್ಯತೆಗಳಿಗೆ ಒಳಪಟ್ಟಿದ್ದಾನೆಂದು ಭಾವಿಸಲಾಯಿತು. ಏಕೆಂದರೆ ಯಾವನೇ ವಿವೇಕಿಯಾದ ಮನುಷ್ಯನು ಮಾಡುವಂತೆ ಅವನೂ ಆ ಪತ್ರವನ್ನು ಪರೀಕ್ಷಿಸಿದ್ದರೆ ಆ ತೊಡರುಗಳು ಇರುವುದನ್ನು ಮನಗಾಣಬಹುದಾಗಿತ್ತು.

*I. ಡೇವಿಸ್ ವಿರುದ್ಧ ೧೯೦೭, ಇಲ್ಲುಟ್ಟಿಂಗ್ಸ್ Ch. ೩೫೬.*

ಒಬ್ಬ ವಿಶ್ವಸ್ಥನು ಅನುಭೋಗಿಯ ಒಂದು ಪಾಲನ್ನು ಸಾಲಿಸಿಟರನಿಗೆ ವರ್ಗಾಯಿಸಿದನು. ಅದನ್ನು ಮೊದಲೇ ವರ್ಗಾಯಿಸಲಾಗಿತ್ತು ಎಂಬ ಹೇಳಿಕೆಯನ್ನು ಅವಲಂಬಿಸಿ ಈ ವರ್ಗಾವಣೆ ನಡೆಯಿತು. ವರ್ಗಾವಣೆ ಪತ್ರವನ್ನು ತರಿಸಲಿಲ್ಲ. ಅದು ಇನ್ನೊಬ್ಬನ ಪರವಾಗಿ ಒಂದು ಬದಲಾವಣೆಗೆ ಒಳಪಟ್ಟಿತ್ತು. ಅವರಿಗೆ ಈ ಹೊರೆಯ ರಚನಶೀಲ ನೋಟೀಸು ಇದೆ ಎಂದು ನಿರ್ಣಯಿಸಲಾಯಿತು.

**ರಚನಶೀಲ ತಿಳಿವಳಿಕೆಯಾಗಿ ಗೇಣಿದಾರನು ವಶಪಡಿಸಿಕೊಳ್ಳುವುದು**

ಆಸ್ತಿಯು ಮಾರಿದವನ ಹೊರತು ಬೇರೆ ಯಾರಾದರೂ ವಶದಲ್ಲಿದ್ದರೆ ಅದನ್ನು ವಹಿಸಿಕೆಯು ಕೊಳ್ಳುಗನಿಗೆ ಆ ಗೇಣಿದಾರನ ಯಾವುದೇ ಹಕ್ಕಿನ ರಚನಶೀಲ ತಿಳಿವಳಿಕೆಯಾಗಿ ಕೊಡುತ್ತದೆ.

ಅದು ಮೂರನೆಯ ವ್ಯಕ್ತಿಯೊಬ್ಬನ ತಿಳಿವಳಿಕೆಯಾಗುವುದಿಲ್ಲ. ೯ Moo, p.c. ೧೮.

ಈಗ ನಾವು ನೋಟೀಸಿನ ಸಾಕ್ಷ್ಯಾಧಾರಕ್ಕೆ ಬರುತ್ತೇವೆ. ಈ ವಿಷಯದಲ್ಲಿ ತೀರ್ಪು ಖಚಿತವಾಗಿದೆ. ಕೊಳ್ಳುವವನು ಮಾರಿದವನ ಬಗೆಗೆ ಅಪರಿಚಿತರು ಕೊಡುವ ಅಸ್ಪಷ್ಟ ಗಾಳಿಸುದ್ದಿಗಳಿಗೆ ಬದ್ಧನಲ್ಲ, ಅವನು ಅವುಗಳಿಗೆ ಗಮನ ಕೊಡಬೇಕಾಗಿಲ್ಲ. ಬದ್ಧಗೊಳಿಸುವ ನೋಟೀಸು ಬರಬೇಕಾದದ್ದು ಆಸ್ತಿಯಲ್ಲಿ, ಆಸ್ತಿಯಿರುವ ವ್ಯಕ್ತಿಯಿಂದ

*R. ೩ Ch. App. ೪೮೮ ಲಾಯ್ಡ್ > < ಬ್ಯಾಂಕ್ಸ್ ಕ್ಯಾರೀಸ್ ಜೆ– ೧೮೬೮*

ಟ್ರಸ್ಟಿಯ ಗ್ರಹಿಕೆಯನ್ನು ಸಮರ್ಥಿಸಲು ಅವನು ಪ್ರಯತ್ನಿಸಿದ್ದೇ ಆದರೆ ಈ ನ್ಯಾಯಾಲಯವು ಸಾಮಾನ್ಯ ಸಂಭಾಷಣೆಗಳು ಎಂದು ಕರೆಸಿಕೊಳ್ಳುವುದಕ್ಕೆ ಗಮನ ಕೊಡುವುದು ಕಷ್ಟವಾಗುತ್ತದೆ. ಅಥವಾ

ಟ್ರಸ್ಟಿಯನ್ನು ಅನಾನುಕೂಲ ಪರಿಸ್ಥಿತಿಗೆ ಹಾಕುವಂತಹ ಬೇರಾವುದೇ ಮಾಹಿತಿ ಬಂದ ವಿಧಾನವನ್ನು ಗಮನಿಸುವುದು ಕಷ್ಟ. ಅದೇ ಸಮಯಕ್ಕೆ ಈ ನ್ಯಾಯಾಲಯವು ಉದ್ದಕ್ಕೂ ಪಾಲಿಸಿಕೊಂಡು ಬಂದಿರುವ ತತ್ತ್ವಗಳಿಗೆ ಅದು ಹೊಂದಿಕೆಯಾಗಲಾರದು, ಅಥವಾ ಉಲ್ಲೇಖಿತವಾಗಿರುವ ಪ್ರಮಾಣಗಳೊಂದಿಗೆ ಹೊಂದಿಕೆಯಾಗದು. ಟ್ರಸ್ಟಿಯು ಅಡ್ಡಿ ಹಾಕುವವನಿಂದ ಬಂದ ಸ್ಪಷ್ಟ ತಿಳಿವಳಿಕೆಯಲ್ಲದೆ, ತೊಡರಿನ ಅರಿವು ಅವನಿಗಿತ್ತು ಎಂದು ನಾನು ಹೇಳುವುದು ಸಾಧ್ಯವಾಗುವುದಿಲ್ಲ.

*ನಿದರ್ಶನ: ೬ Moo. P.C. ೧೮ ಬಾರ್ನ್‌ಹಾಟ್ > < ಗ್ರೀನ್ ಷೀಲ್ಡ್ಸ್*

ಆಸ್ತಿಯಲ್ಲಿ ಆಸಕ್ತಿಯಿರದ ವ್ಯಕ್ತಿಗಳಿಂದ ಬಂದ ಅಸ್ಪಷ್ಟ ವರದಿಗಳು ಕೊಳ್ಳುವವನ ಆತ್ಮಸಾಕ್ಷಿಯ ಮೇಲೆ ಅಡ್ಡಪರಿಣಾಮ ಬೀರುತ್ತವೆ ಎಂದು ಹೇಳಬಹುದು.

**ತಿಳಿವಳಿಕೆಯು ಋಣಬಾಧಕನಿಂದ ನೇರವಾಗಿ ಇರಬಹುದೇ?**

ಕೊಳ್ಳುವವನು, ಮಾಹಿತಿಯ ಯಾವುದೇ ಮೂಲದಿಂದ ಬರಲಿ, ಅದನ್ನು ಪುರಸ್ಕರಿಸದೆ ಇರಬಾರದು. ವ್ಯವಹಾರಸ್ಥನು ಮಾಹಿತಿಯ ಪತ್ರಿಕಾ ವರದಿಯಿಂದ ಬಂದರೂ ಆ ಮಾಹಿತಿಯ ಮೇಲೆ ಕ್ರಮ ಕೈಗೊಳ್ಳುತ್ತಾನೆ.

*S.R. ೩ Ch. Spp. ೪೮೮, ೧೮೬೮*

## ನೋಂದಣಿ

ಯಾವುದೇ ದಸ್ತಾವೇಜು ಪತ್ರವನ್ನು ಅಥವಾ ಕಾನೂನಿನ ಪ್ರಕಾರ ನೋಂದಣಿಯಾಗಿರಬೇಕಾದ ದಾಖಲೆಯನ್ನು ನೋಂದಾಯಿಸಬೇಕು. ಅದು ಆ ಪತ್ರ ಅಥವಾ ದಾಖಲೆಯ ವಾಸ್ತವ ತಿಳಿವಳಿಕೆಯನ್ನು ಒಳಗೊಂಡಿದೆಯೆಂದು ಭಾವಿಸಲಾಗುವುದೇ ಹೊರತು, ಅದರ ಒಳಪಿಡಿಯನ್ನು ಒಳಗೊಂಡಿರಲೇ ಬೇಕೆಂದಿಲ್ಲ.

(ii) ತಿಳಿವಳಿಕೆಗೆ ಬದ್ಧನಾಗುವ ಭೀತಿಯಿಂದ ಯಾವುದೇ ವಿವರಣೆಯನ್ನು ಉದ್ದೇಶಪೂರ್ವಕವಾಗಿ ನಿವಾರಿಸಿದ ಪಕ್ಷದಲ್ಲಿ.

(೧) ಜಾನ್ ಟೌಸೆ ೧೭೭೬ರಲ್ಲಿ ಒಂದು ಆಸ್ತಿಯನ್ನು ಕೊಳ್ಳಲು ಕರಾರು ಮಾಡಿಕೊಂಡನು.

(೨) ಅವನು ಕ್ರಯದ ಮೊಬಲಗನ್ನು ಡಾ. ಪಿ. ಎನ್ನುವವನಿಂದ ಸಾಲವಾಗಿ ಪಡೆದು ಕ್ರಯ ಪತ್ರವನ್ನು ಸಾಲಕ್ಕೆ ಭದ್ರತೆಯಾಗಿ ಅವನ ಕೈಗೆ ಕೊಟ್ಟನು.

(೩) ೧೭೯೦ರಲ್ಲಿ 'ಟಿ' ಒಬ್ಬ ಎಲ್ಲಾಮೆಸ್ ಎನ್ನುವವನಿಗೆ ತುಂಬ ಸಾಲ ಹಿಂದಕ್ಕೆ ಕೊಡಬೇಕಾಗಿದ್ದು, ಅದೇ ಆಸ್ತಿಯನ್ನು ಎಲ್ಲಾಮೆಸ್‌ಗೆ ಅಡಮಾನವಾಗಿ ಬರೆದುಕೊಟ್ಟನು.

(೪) ಡಾ. ಪಿ. ತನ್ನ ಹಕ್ಕನ್ನು ಕುರಿತು ಯಾವ ಮಾಹಿತಿಯನ್ನೂ ಎಲ್ಲಾಮೆಸ್‌ಗೆ ಬಿಟ್ಟುಕೊಡಲಿಲ್ಲ.

(೫) ಭದ್ರತೆ ಆಧಾರವನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ತಾನು ಆಸ್ತಿಯ ಹಕ್ಕುಪತ್ರದ ವಿಚಾರವಾಗಿ ಯಾವ ವಿವರಣೆಯನ್ನು ಮಾಡಲಿಲ್ಲವೆಂದೂ, ಅಡಮಾನ ಮಾಡಿಕೊಳ್ಳುವಾಗ ಅದನ್ನು ಕುರಿತು ಕೇಳಿ ಅದು ಡಾ. ಪಿ.ಯ ಕೈಯಲ್ಲಿವೆ ಎಂದು ತಿಳಿದುಕೊಂಡುದಾಗಿಯೂ, ಭದ್ರವಾಗಿರಲಿ ಎಂಬುದಕ್ಕಾಗಿ ಹಾಗೆ ಪಿ ಯ ಕೈಗೆ ಕೊಡಲಾಗಿದೆ ಎಂದು ತಾನು ಅರ್ಥಮಾಡಿಕೊಂಡುದಾಗಿಯೂ ಎಲ್ಲಾಮೇಸ್ ತಿಳಿಸಿದನು.

(೬) ಈ ಮಾಹಿತಿಯನ್ನು ಅವನು ಪಡೆದದ್ದು ಅವನ ಭಾವಮೈದುನ ಜೆ ಎನ್ನುವವನಿಂದ. ಅಡಮಾನ ಪತ್ರ ಸಿದ್ಧಪಡಿಸಿ ಅದನ್ನು ಕಾರ್ಯಗತಗೊಳಿಸುವಾಗ ಅವನ ಪ್ರತಿನಿಧಿಯಾಗಿ ಹಾಜರಿದ್ದವನು ಅವನೇ.

(೭) ಡಾ. ಪಿ. ಎಲ್ಲಾಮೆಸ್‌ಗೆ ಬದಲು ಆಸ್ತಿ ತನಗೆ ಬರಬೇಕಾಗಿದೆ ಎಂದು ಹಕ್ಕೊತ್ತಾಯ ಮಂಡಿಸಿದನು. ಎಲ್ಲಾಮೆಸ್‌ಗೆ ನೋಟೀಸು ಇದ್ದುದರಿಂದಾಗಿ, ಡಾ. ಪಿ.ಯ ಬೇಡಿಕೆ ಪುರಸ್ಕೃತವಾಯಿತು.

(iii) ಸಾಮಾನ್ಯವಾದ ಮತ್ತು ಸೂಕ್ತವಾದ ವಿಚಾರಣೆಗಳನ್ನು ಮಾಡುವುದರಲ್ಲಿ ಅಲಕ್ಷ್ಯ ತೋರಿಸಿದಾಗ.

*೧೮೯೯, ೨ Ch. ೨೬೪*

*೧೯೨೧. ೧ Ch. ೯೮*

**ಆರೋಪಿತ ನೋಟೀಸು**

(೧) ಪ್ರಾತಿನಿಧ್ಯದ ಹಿಂದಿರುವ ತತ್ತ್ವ, ಒಬ್ಬ ಮನುಷ್ಯನು ತಾನೇ ಮಾಡಬಹುದಾದ ಕೆಲಸವನ್ನು ಒಬ್ಬ ಪ್ರತಿನಿಧಿಯ ಮೂಲಕ ಮಾಡಬಹುದು ಎನ್ನುವುದು. ಇನ್ನೊಂದು ಕಡೆಯಿಂದ ಹೇಳುವುದಾದರೆ, ಪ್ರತಿನಿಧಿ ಮಾಡಿದುದು ಅವನು ಮಾಡಿದ ಹಾಗೆ ಎಂದು. ಹೀಗಿರುವಾಗ, ಪ್ರತಿನಿಧಿಗೆ ತಿಳಿದಿರುವುದು ಅವನಿಗೂ ತಿಳಿದಿರಬೇಕು ಎಂದು ವಾದಿಸಲು ಅವಕಾಶವಿದೆ. ಈ ಸಿದ್ಧಾಂತದ ಮೇಲೆ ಆರೋಪಿತ ನೋಟೀಸಿನ ತತ್ತ್ವ ನಿಂತಿದೆ.

**ಆರೋಪಿತ ತಿಳಿವಳಿಕೆಯ ಮೂಲಾಂಶಗಳು**

(೧) ತಿಳಿವಳಿಕೆಯು ಅವನಿಗೆ ಪ್ರತಿನಿಧಿಯಾಗಿಯೇ ಬಂದಿರಬೇಕು. ಬೇರೆ ಯಾವ ಪಾತ್ರದಿಂದಲೂ ಅಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಾತಿನಿಧ್ಯವನ್ನು ಕಡ್ಡಾಯವಾಗಿ ಸಮರ್ಥಿಸಬೇಕು.

*ಡೈಲೀ >< ಪೋಲನ್ – ೩೨ ಎಲ್.ಜೆ. Ch. ೭೮೨ (Ns).*

(೨) ಏಜೆಂಟನು ಬೇರೆ, ಕೇವಲ ಗುಮಾಸ್ತೆಯ ಕೆಲಸಗಳನ್ನು ಮಾಡಲು ನೇಮಿತನಾದ ವ್ಯಕ್ತಿ ಬೇರೆ. ಒಂದು ದಾಖಲೆ ಪತ್ರವನ್ನು ಪಡೆಯಲು ನೇಮಿತನಾದವನು ಏಜೆಂಟನೆನಿಸುತ್ತಾನೆ.

ಅಂತಹ ವ್ಯಕ್ತಿಯ ಗಮನಕ್ಕೆ ಬಂದಿರುವುದನ್ನು ಆರೋಪಿತ ತಿಳಿವಳಿಕೆಯ ಆಧಾರವೆಂದು ಇಟ್ಟುಕೊಳ್ಳಲು ಸಾಧ್ಯವಿಲ್ಲ.

(೩) ಈ ಸಂದರ್ಭದಲ್ಲಿ, ಇಬ್ಬರು ವ್ಯಕ್ತಿಗಳ ಸೇವೆಯಲ್ಲಿ ಏಜೆಂಟನಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಯ ವಿಷಯವನ್ನು ಪರಿಶೀಲಿಸಬೇಕು. 'ಎ' ಮತ್ತು 'ಬಿ' ಎಂಬ ಎರಡು ಕಂಪೆನಿಗಳಿವೆ. 'ಸಿ' ಅವೆರಡರಲ್ಲೂ ಕೆಲಸ ಮಾಡುತ್ತಿರುವ ಅಧಿಕಾರಿ. 'ಎ' ಕಂಪೆನಿಯು ತಮ್ಮ ನ್ಯಾಯಿಕ ಹಕ್ಕನ್ನು 'ಬಿ' ಕಂಪೆನಿಗೆ ವರ್ಗಾಯಿಸಿ ತೆನ್ನೋಣ. 'ಬಿ'ಯು 'ಡಿ'ಯ ಪರವಾಗಿ ಒಂದು ಧರ್ಮಸಮ್ಮತ ಹಕ್ಕಿಗೆ ಒಳಪಟ್ಟಿತ್ತು. ಅದು 'ಸಿ'ಗೆ ತಿಳಿದಿತ್ತು. 'ಎ' ಕಂಪನಿಯ ಏಜೆಂಟ್ 'ಸಿ'ಯು ತನ್ನ ಧರ್ಮಸಮ್ಮತ ಹಕ್ಕನ್ನು ತಿಳಿದುಕೊಂಡಿರುತ್ತಾನೆ. ಅವನು 'ಎ' ಕಂಪನಿಯ ಏಜೆಂಟನೂ ಆಗಿದ್ದುದರಿಂದ ಅದರ ಅರಿವು ಅವನಿಗೆ ಇತ್ತು ಎಂದು 'ಡಿ' ಹೇಳಬಹುದೆ?

**ಉತ್ತರ ಹೀಗೆ:** 'ಎ' ಕಂಪೆನಿಯ ಏಜೆಂಟನಾಗಿ ಅವನು ಗಳಿಸಿದ ಜ್ಞಾನವು 'ಬಿ' ಕಂಪೆನಿಗೆ ತನಗೆ ತಾನೆ ಆರೋಪಿತವಾಗುವುದಿಲ್ಲ. ತನ್ನ ಜ್ಞಾನವನ್ನು ಅವರಿಗೆ ತಿಳಿಯಪಡಿಸುವ ಕರ್ತವ್ಯವನ್ನು 'ಎ' ಕಂಪೆನಿ ವಿಧಿಸಿದ್ದು, ತಿಳಿವಳಿಕೆಯನ್ನು ಸ್ವೀಕರಿಸಲು 'ಬಿ' ಕಂಪೆನಿ ಸಿದ್ಧವಾಗಿದ್ದರೆ ಮಾತ್ರ ಅದು ಸಾಧ್ಯ.

*(೧೯೯೬) ೨ Ch. ೭೪೩ In Re ಹ್ಯಾಂಪ್‌ಶೈರ್ ಲ್ಯಾಂಡ್ ಕಂಪೆನಿ (Hampshire Land Company)*

**ವಾಸ್ತವಾಂಶಗಳು:**

(೧) ಹ್ಯಾಂಪ್‌ಶೈರ್ ಲ್ಯಾಂಡ್ ಕಂಪೆನಿಯು ೧೮೭೦ರ ಕಂಪೆನೀಸ್ ಆ್ಯಕ್ಟ್ ಪ್ರಕಾರ ನೋಂದಾಯಿತ ವಾಗಿತ್ತು.

(೨) ಕಂಪೆನಿಗೆ ಪೋರ್ಟ್ ಸೀ ಐಲೆಂಡ್ ಬಿಲ್ಡಿಂಗ್ ಸೊಸೈಟಿಯೊಂದಿಗೆ ನಿಕಟವಾದ ಆಂತರಿಕ ಸಂಬಂಧವಿದ್ದಿತು. ನಾಲ್ಕು ಮಂದಿ ಡೈರೆಕ್ಟರುಗಳೂ ವಿಶ್ಸ್ ಎಂಬ ಒಬ್ಬ ಕಾರ್ಯದರ್ಶಿಯೂ ಎರಡು ಕಂಪೆನಿಗಳಿಗೂ ಸಮಾನರಾಗಿದ್ದರು.

(೩) ೧೮೮೧ ಫೆಬ್ರವರಿ ೧೯ನೆಯ ತಾರೀಖು ಕಂಪೆನಿಯ ಸಾಮಾನ್ಯ ಸಭೆಯೊಂದು ನಡೆಯಿತು. ಒಂದು ನಿರ್ಣಯದಲ್ಲಿ ಸಭೆಯು ೩೦,೦೦೦ ಪೌಂಡುಗಳ ಸಾಲ ಮಾಡಲು ಡೈರೆಕ್ಟರುಗಳಿಗೆ ಅಧಿಕಾರ ಕೊಡಲಾಯಿತು.

(೪) ಡೈರೆಕ್ಟರುಗಳು ಪೋರ್ಟ್ ಸೀ ಸೊಸೈಟಿಯಿಂದ ಈ ಹಣವನ್ನು ಸಾಲ ಪಡೆದರು.

(೫) ಸೊಸೈಟಿಯು ೧೮೯೨ರಲ್ಲಿ ದಿವಾಳಿಯಾಯಿತು. ಸೊಸೈಟಿಯ ಲೇವಾದೇವಿಗಳ ವ್ಯವಸ್ಥಾಪಕನು ಕಂಪೆನಿಗೆ ಸಾಲವಾಗಿ ಕೊಟ್ಟಿದ್ದ ೩೦,೦೦೦ ಪೌಂಡುಗಳನ್ನು ಹಿಂದಕ್ಕೆ ಕೇಳಿದನು.

(೬) ಸಾಲ ಮಾಡಲು ಅಧಿಕಾರ ನೀಡಿದ ಕಂಪೆನಿಯ ನಿರ್ಣಯವು 'ಅಧಿಕಾರಕ್ಕೆ ಬಂದಿದ್ದು', ವಿಲಿಯಮ್ಸ್ ಕಾರ್ಯದರ್ಶಿಯಾಗಿದ್ದು, ಎರಡೂ ಸಂಸ್ಥೆಗಳಿಗೆ ಸಮಾನನಾಗಿದ್ದ ಅಧಿಕಾರಿಯಾಗಿದ್ದುದರಿಂದ ಅವನಿಗೆ ಬಂದ ತಿಳಿವಳಿಕೆ ಸೊಸೈಟಿಗೆ ಬಂದ ಹಾಗೆಯೇ, ಆದ್ದರಿಂದ ಸೊಸೈಟಿಯು ಮರುಪಾವತಿ ಕೇಳುವಂತಿಲ್ಲ ಎಂದು ವಾದಿಸಲಾಯಿತು.

(೭) ಆದರೆ ಪು. ೭೪೯ರಲ್ಲಿ ಕೊಟ್ಟಿರುವ ಕಾರಣಗಳಿಂದಾಗಿ ಸೊಸೈಟಿಯು ವಸೂಲು ಮಾಡಬಹುದು ಎಂದು ತೀರ್ಪು ನೀಡಲಾಯಿತು.

(ii) ಏಜೆಂಟನು ನೋಟೀಸನ್ನು ಅದೇ ವ್ಯವಹಾರದಲ್ಲಿ ಪಡೆದಿರಬೇಕೇ ಹೊರತು ಅದಕ್ಕಿಂತ ಹಿಂದಿನ ವ್ಯವಹಾರದಲ್ಲಲ್ಲ.

ಇದಕ್ಕೆ ಇನ್ನೂ ಸ್ಪಷ್ಟನೆಯಿದೆ. ಏಜೆಂಟನು ಅದೇ ವ್ಯವಹಾರದಲ್ಲಿಯೇ ತಿಳಿವಳಿಕೆ ಪಡೆದಿದ್ದರೂ ಅದು ಕೊಳ್ಳುವವನ ಮೇಲೆ ಆರೋಪಿತವಾಗುವುದಿಲ್ಲ, ಏಜೆಂಟನು ಮುಖ್ಯವ್ಯಕ್ತಿಗೆ ಅದನ್ನು ತಿಳಿಸಬೇಕಾದದ್ದು ಕರ್ತವ್ಯವಾಗುವ ಮಟ್ಟಿಗೆ ಮುಖ್ಯವಾಗಿರದಿದ್ದರೆ.

*(೧೮೮೬) – ೩೧ Ch. D. ೬೭೧ – In Re Cousins.*

**ವಾಸ್ತವಾಂಶಗಳು:**

(೧) ೧೮೭೧ರಲ್ಲಿ ವಿಲಿಯಂಸ್ ಕಸಿನ್ಸ್ ತನ್ನ ಆಸ್ತಿಗೆ ಸಂಬಂಧಿಸಿದಂತೆ ಒಂದು ಉಯಿಲು ಬರೆದು ಅದನ್ನು ವಿಶ್ವಸ್ಥರಿಗೆ ವಹಿಸಿದನು.

(೨) ವಿಲಿಯಂ ಬ್ಯಾಂಕ್ಸ್ ಎನ್ನುವವರು ಟ್ರಸ್ಟಿಗಳಿಗೆ ಸಲಹಾ ವಕೀಲರು.

(೩) ವಿಲಿಯಂಸ್ ಕಸಿನ್ಸ್ ಬಿಟ್ಟುಹೋದ ಆಸ್ತಿಯಲ್ಲಿ ಉಯಿಲಿನ ಪ್ರಕಾರ ಮ್ಯಾಥ್ಯೂ ಎಂಬ

ದಾಯಾದಿಯು ಸ್ಥಿರ ಮತ್ತು ಖಾಸಗಿ ಆಸ್ತಿ ಭಾಗವನ್ನು ಪಡೆಯಬೇಕಾಗಿತ್ತು.

(೪) ಮ್ಯಾಥ್ಯೂ ತನ್ನ ಪಾಲಿನ ಆಸ್ತಿಯನ್ನು ಸಲಹಾ ವಕೀಲನಾದ ವಿಲಿಯಂ ಬ್ಯಾಂಕ್ಸ್‌ಗೆ ೩೫ ಪೌಂಡು ಸಾಲಕ್ಕೆ ಭದ್ರತೆಯಾಗಿ ಅಡಮಾನ ಮಾಡಿದನು.

(೫) ೧೮೭೩ರಲ್ಲಿ ಮ್ಯಾಥ್ಯು ತನ್ನ ಪಾಲಿನಲ್ಲಿ ಬ್ಯಾಂಕ್ಸ್ ಮೂಲಕ ವಿಲಿಯಂ ರಿಚರ್ಡ್ಸನ್‌ನಿಗೆ ಅಡಮಾನ ಮಾಡಿದನು, ಬ್ಯಾಂಕ್ಸ್‌ಗೆ ಶುಲ್ಕ ಪಾವತಿ ಮಾಡಲಾಯಿತು.

(೬) ೧೮೭೪ರಲ್ಲಿ ರಿಚರ್ಡ್ಸನ್ ತನ್ನ ಬಳಿಯಿದ್ದ ವಿಲಿಯಂ ಡ್ರೇಕ್‌ನಿಗೆ ವರ್ಗಾಯಿಸಿದನು. ಈ ವಿಷಯವನ್ನು ಟ್ರಸ್ಟಿಗಳಿಗೆ ತಿಳಿಸಲಿಲ್ಲ.

(೭) ೧೮೭೫ರಲ್ಲಿ ಮ್ಯಾಥ್ಯೂ ತನ್ನ ಪಾಲನ್ನು ೫೦೦ ಪೌಂಡುಗಳಿಗೆ ಭದ್ರತೆಯಾಗಿ ಡೆನ್ನಿಸ್ ಪೆಪ್ಪರ್‌ನಿಗೆ ಒತ್ತೆಯಿಟ್ಟನು. ಬಾಂಕ್ಸ್ ಸಾಲಿಸಿಟರ್ (ಸಲಹಾ ವಕೀಲ) ಆಗಿ ಕೆಲಸ ಮಾಡಿದನು. ಡೆನಿಸ್ ಪೆಪ್ಪರ್‌ಗೆ ಅಡಮಾನವಾದ ಪತ್ರದಲ್ಲಿ ಹಿಂದೆ ವಿಲಿಯಂ ಡ್ರೇಕ್‌ನಿಗೆ ಅಡಮಾನವಾಗಿದ್ದುದನ್ನು ಪ್ರಸ್ತಾಪಿಸಿರಲಿಲ್ಲ. ಮುಂದೆ ಈ ಸಂಬಂಧವಾಗಿ ಟ್ರಸ್ಟಿಗಳಿಗೆ ಈ ವ್ಯವಹಾರ ಕುರಿತ ಒಂದು ನೋಟೀಸು ಕೊಡಲಾಯಿತು.

(೮) ಮ್ಯಾಥ್ಯೂನಿಂದ ಬರಬೇಕಾಗಿದ್ದ ಹಣವನ್ನು, ಪೆಪ್ಪರ್‌ನ ಬೇಡಿಕೆಗಿಂತ ಮೊದಲೇ ಪಾವತಿ ಮಾಡಬೇಕೆಂದು ಡ್ರೇಕ್ ಸಮನ್ಸ್ ಕಳಿಸಿದನು.

*೧೮೮೪. ೨೫ Ch. D. ೪೮೨.*

(೯) ಡ್ರೇಕ್‌ನ ಹಕ್ಕೊತ್ತಾಯದ ವಿಷಯ ತನಗೆ ತಿಳಿದಿರಲಿಲ್ಲ ಎನ್ನುವುದು ಪೆಪ್ಪರನ ವಾದ. ಮ್ಯಾಥ್ಯೂ ಅವನನ್ನು ತನ್ನ ಅಡಮಾನ ಪತ್ರದಲ್ಲಿ ಉಲ್ಲೇಖಿಸಿರಲಿಲ್ಲ.

(೧೦) ಪೆಪ್ಪರನಿಗೆ ವಿಷಯ ತಿಳಿದಿತ್ತು, ಏಕೆಂದರೆ ಅವನ ಪ್ರತಿನಿಧಿಯಾಗಿ ವರ್ತಿಸಿದ ಸಲಹಾ ವಕೀಲನಿಗೆ ಮ್ಯಾಥ್ಯೂ ಡ್ರೇಕನಿಗೆ ಅಡಮಾನ ಮಾಡಿದ್ದು ಗೊತ್ತಿತ್ತು ಎಂದು ಉತ್ತರ ಕೊಡಲಾಯಿತು.

(೧೧) ಬ್ಯಾಂಕ್ಸ್‌ಗೆ ತಿಳಿದಿತ್ತು ಎಂಬುದನ್ನು ನಿರಾಕರಿಸಲಿಲ್ಲ. ಬ್ಯಾಂಕ್ಸ್ ಪೆಪ್ಪರನ ಪ್ರತಿನಿಧಿ ಎಂಬುದನ್ನೂ ನಿರಾಕರಿಸಿಲ್ಲ. ಆದರೆ ಪ್ರಶ್ನೆ ಬ್ಯಾಂಕ್ಸ್‌ಗೆ ತಿಳಿದುದು ಪೆಪ್ಪರನಿಗೆ ತಿಳಿದಂತೆ ಎಂದು ಭಾವಿಸಬಹುದೇ ಎಂಬುದು.

(೧೨) ವಾದ ಇಲ್ಲ. ಪು. ೬೭೭.

**ಕಾರಣಗಳು:** ಪೆಪ್ಪರನೊಂದಿಗೆ ೧೮೭೫ರಲ್ಲಿ ವ್ಯವಹಾರ ಮಾಡಿದಾಗ ಬ್ಯಾಂಕ್ಸ್‌ಗೆ ತಿಳಿದಿದ್ದ ವಿಚಾರ ಪ್ರಸ್ತಾಪವಾಗಲಿಲ್ಲ. ಪೆಪ್ಪರನಿಗೆ ಈ ಸಂಬಂಧವಾದ ಯಾವ ತಿಳಿವಳಿಕೆಯೂ ಇಲ್ಲ ಎಂದು ಹೇಳಲಾಗದು.

(೧೩) ಪೆಪ್ಪರನ ಬೇಡಿಕೆಯನ್ನು ಒಪ್ಪಿಕೊಳ್ಳಲಾಯಿತು.

(III) ಏಜೆಂಟನು ಮುಖ್ಯ ವ್ಯಕ್ತಿಯನ್ನು ವಂಚಿಸಿ, ತನ್ನ ತಿಳಿವಳಿಕೆಯನ್ನು ಗೋಪ್ಯವಾಗಿಡಲು ಯತ್ನಿಸಿದಾಗ, ಮುಖ್ಯವ್ಯಕ್ತಿಗೆ ತಿಳಿಯಪಡಿಸದೆ ಹೋದಾಗ, ಏಜೆಂಟನ ತಿಳಿವಳಿಕೆಯು ಕೊಳ್ಳುಗನಿಗೆ ಆರೋಪಿತವಾಗುವುದಿಲ್ಲ.

*(೧೮೮೦) ೧೫ Ch. D. ೯೩೯ ಕೇನ್ > < ಕೇಲ್*

*(೧೯೨೮) ACI ಹೌಟನ್ ಎಂಡ್‌ಕೋ > < ನೋಥಾರ್ಡ್.*

(II) ಒಂದು ನ್ಯಾಯಿಕ ಹಕ್ಕನ್ನು ಪಡೆದ ನಂತರ ಒಂದು ಧರ್ಮಸಮ್ಮತ ಹಕ್ಕು ಅಸ್ತಿತ್ವಕ್ಕೆ ಬಂದಾಗ.

ಈ ಪ್ರಶ್ನೆಯನ್ನು ಕುರಿತ ಮುಖ್ಯವಾದ ಮೊಕದ್ದಮೆ ನಾರ್ದನ್ ಕಂಟ್ರೀಸ್ ಆಫ್ ಇಂಗ್ಲೆಂಡ್ ಫೈರ್ ಇನ್ಶೂರೆನ್ಸ್ ಕೋ >< ವಿಪ್.

*೧೮೮೪, ೨೬ Ch. D ೪೮೨*

**ವಾಸ್ತವಾಂಶಗಳು:**

(೧) ಒಂದು ಕಂಪೆನಿಯ ಮ್ಯಾನೇಜರ್ 'ಸಿ' ಎನ್ನುವವನು ತನ್ನ ಕಂಪೆನಿಗೆ ನ್ಯಾಯಿಕವಾದ ಒಂದು ಅಡಮಾನ ಪತ್ರವನ್ನು ಮಾಡಿಕೊಟ್ಟು ಹಕ್ಕು ಪತ್ರಗಳನ್ನು ತಲುಪಿಸಿದನು. ಅವುಗಳನ್ನು ಕಂಪನಿಯ ಕಬ್ಬಿಣದ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿರಿಸಲಾಯಿತು. ಅದರ ಬೀಗದ ಕೈ 'ಸಿ'ಯ ವಶದಲ್ಲಿತ್ತು. ಕೆಲವು ದಿನಗಳ ನಂತರ 'ಸಿ'ಯು ಆ ಹಕ್ಕುಪತ್ರಗಳನ್ನು ತೆಗೆದು ಅದೇ ಆಸ್ತಿಯ ಮೇಲೆ ಮಿಸೆಸ್ ವಿಪ್ ಎನ್ನುವವಳಿಗೆ ಇನ್ನೊಂದು ಅಡಮಾನ ಮಾಡಿಕೊಟ್ಟನು. ಕಂಪೆನಿಗೆ ಮಾಡಿಕೊಟ್ಟಿದ್ದ ಮೊದಲನೆಯ ಅಡಮಾನದ ವಿಷಯ ಮಿಸೆಸ್ ವಿಪ್‌ಗೆ ತಿಳಿದಿಲ್ಲ. ಕಂಪೆನಿಗೆ ಆದ್ಯತೆ ಕೊಡಬೇಕು ಎನ್ನುವುದು ವಾದ.

(೨) ಈ ಮೊಕದ್ದಮೆಯಲ್ಲಿ ನಿರೂಪಿತವಾದ ತತ್ತ್ವ ಹೀಗಿದೆ:– ನ್ಯಾಯಿಕವಾಗಿ ಸ್ಥಿರಾಸ್ತಿಯ ಒಡೆಯನಾದವನು ವಂಚನೆಯಲ್ಲಿ ತೊಡಗಿದರೆ ಅಥವಾ ಅದಕ್ಕೆ ಸಹಾಯ ಮಾಡಿದರೆ ಅದು ಮುಂದೆ ಧರ್ಮಸಮ್ಮತ ಒಡೆತನದ ಸೃಷ್ಟಿಗೆ ಅವಕಾಶವಾದರೆ, ಧರ್ಮಸಮ್ಮತ ಒಡೆಯನಿಗೆ ಮುಂಚಿನ ನ್ಯಾಯಿಕ ಹಕ್ಕಿನ ಅರಿವು ಇಲ್ಲದೆ ಹೋದಾಗ ನ್ಯಾಯಾಲಯವು, ಆಮೇಲೆ ಅಸ್ತಿತ್ವಕ್ಕೆ ಬಂದಿದ್ದರೂ ನ್ಯಾಯಿಕ ಹಕ್ಕಿಗಿಂಥ ಧರ್ಮಸಮ್ಮತ ಹಕ್ಕನ್ನು ಪುರಸ್ಕರಿಸುತ್ತದೆ.

(೩) ವಂಚನೆಗೆ ಸಹಾಯ ಮಾಡಿದ್ದಕ್ಕೆ ಅಥವಾ ಅದರಲ್ಲಿ ಪಾಲುಗೊಂಡಿದಕ್ಕೆ ಸಾಕ್ಷ್ಯಾಧಾರವೇನು?

(i) ಹಕ್ಕುಪತ್ರಗಳ ವಿಷಯವಾಗಿ ಪರಿಶೀಲಿಸಲು ಸಾಮಾನ್ಯ ಕಾಳಜಿಯನ್ನು ತೋರಿಸದಿರುವುದು.

(ii) ಹಕ್ಕು ಪತ್ರಗಳನ್ನು ಪಡೆದುಕೊಳ್ಳದಿರುವುದು.

ಈ ಎರಡೂ ವಂಚನೆಯಲ್ಲಿ ಭಾಗವಹಿಸಿದ್ದಕ್ಕೆ ಅಥವಾ ಅದಕ್ಕೆ ನೆರವು ನೀಡಿದುದಕ್ಕೆ ಸಾಕ್ಷ್ಯಾಧಾರಗಳು. ಅಂತಹ ನಡವಳಿಕೆಯನ್ನು ಬೇರೆ ಯಾವ ರೀತಿಯಲ್ಲೂ ವಿವರಿಸಲು ಬರುವುದಿಲ್ಲ.

(೪) ಇನ್ನೊಂದು ಮೊಕದ್ದಮೆಯ ವಿಷಯವೂ ಹಾಗೆಯೆ. ನ್ಯಾಯಿಕ ಒಡೆತನವನ್ನು ಮುಂದಿನ ಧರ್ಮಸಮ್ಮತ ಒಡೆತನಕ್ಕಿಂತ ಮೊದಲು ಪರಿಗಣಿಸಲಾಗಿದೆ.

ಅಡಮಾನ ಮಾಡಿಸಿಕೊಂಡವನು, ನ್ಯಾಯಿಕ ಆಸ್ತಿಯ ಒಡೆಯ ಅಡಮಾನ ಮಾಡಿಕೊಟ್ಟವನಿಗೆ ಅಥವಾ ಅವನ ಪ್ರತಿನಿಧಿಗೆ ಆ ಸ್ಥಿರಾಸ್ತಿಯ ಮೇಲೆ ಹಣವನ್ನೆತ್ತಲು ಅಧಿಕಾರ ಕೊಟ್ಟಿದ್ದು, ಏಜೆಂಟನ ತಪ್ಪು ನಡವಳಿಕೆಯಿಂದ ಅಥವಾ ವಂಚನೆಯಿಂದ ಆ ಆಸ್ತಿಯನ್ನು ಮೊದಲ ಆಸ್ತಿ ಎಂದು ಹೇಳಿದಾಗ–

(೫) ಈ ನಿಯಮವು ವರ್ತಿಸಲು ನ್ಯಾಯಿಕ ಒಡೆಯನ ಕೇವಲ ಅಲಕ್ಷ್ಯ ಅಥವಾ ವಿವೇಕಹೀನತೆ ಸಾಕಷ್ಟು ಆಧಾರವಾಗುವುದಿಲ್ಲ.

ಅಲ್ಲಿ ವಂಚನೆ ನಡೆದಿರುವುದು, ಅಥವಾ ಅದಕ್ಕೆ ನೆರವಾಗಿರುವುದು ಕಂಡುಬಂದಿರಬೇಕು. ವಂಚನೆಯ ಹೊರತು ಬೇರೆ ಯಾವುದೂ ಅದನ್ನು ಮುಂದಕ್ಕೆ ಹಾಕುವುದಿಲ್ಲ.

*(೧೯೧೩) ೨ Ch. ೧೮*

(iii) ಸ್ಪರ್ಧೆ ಎರಡು ನ್ಯಾಯೋಚಿತ ಹಕ್ಕುಗಳ ನಡುವೆ ಇರುವ ಸಂದರ್ಭದಲ್ಲಿ–

ಹಿಂದಿನ ಸಂದರ್ಭಗಳಲ್ಲಿ ಸ್ಪರ್ಧೆಯು ಒಂದು ನ್ಯಾಯಿಕ ಹಕ್ಕಿಗೂ ಒಂದು ನ್ಯಾಯೋಚಿತ ಹಕ್ಕಿಗೂ ನಡುವೆ ಇದ್ದಿತು. ಮೂರನೆಯ ಸಂದರ್ಭದಲ್ಲಿ ಅದು ಎರಡು ನ್ಯಾಯೋಚಿತ ಹಕ್ಕುಗಳ ನಡುವೆ.

*ಕೇಪ್ >< ಕೇವ್, (೧೮೮೦), ೧೫ Ch. D. ೬೩೯*

**ವಾಸ್ತವಾಂಶಗಳು:**

'ಎ' ಟ್ರಸ್ಟೀ ಮತ್ತು 'ಬಿ' ಒಬ್ಬ ಫಲಾನುಭವಿ.

'ಎ'ಯು ವಿಶ್ವಾಸವನ್ನು ಉಲ್ಲಂಘಿಸಿ ನೆಲವನ್ನು ಕೊಂಡು ಅದನ್ನು 'ಸಿ'ಗೆ ನ್ಯಾಯಿಕವಾಗಿ ಅಡಮಾನ ಮಾಡಿಕೊಟ್ಟನು.

'ಸಿ'ಗೆ ಟ್ರಸ್ಟ್ ವಿಷಯ ತಿಳಿದಿರಲಿಲ್ಲ.

ಮುಂದೆ ಒಂದು ನ್ಯಾಯೋಚಿತ ಅಡಮಾನದಲ್ಲಿ ಅದೇ ನೆಲವನ್ನು 'ಡಿ'ಗೆ ವರ್ಗಾಯಿಸಿದನು. ಈಗ ಹಕ್ಕುಗಳನ್ನು ಪಡೆದವರು ಮೂರು ಜನ. ನ್ಯಾಯಿಕ ಹಕ್ಕನ್ನು 'ಸಿ' ಪಡೆದಿದ್ದಾನೆ, ಅವನು ಅಡಮಾನ ಮಾಡಿಸಿಕೊಂಡವನು. ಅದು ನ್ಯಾಯಿಕ ಅಡಮಾನ.

'ಬಿ'ಯು ನ್ಯಾಯೋಚಿತ ಹಕ್ಕನ್ನು ಪಡೆದಿದ್ದಾನೆ. ಅದು 'ಎ'ಯ ಹಕ್ಕಿನಿಂದ ಮೂಡಿಬಂದಿದೆ, ಅದು ವರ್ಗಾವಣೆಗೊಂಡಿದೆ.

'ಡಿ'ಗೆ ನ್ಯಾಯೋಚಿತ ಹಕ್ಕಿದೆ, ಅದು 'ಎ'ಯ ಹಕ್ಕಿನಿಂದ ಮೂಡಿದೆ.

**ಈ ವ್ಯಕ್ತಿಗಳ ನಿಲುವು ಏನು?**

(೧) 'ಸಿ' ಮತ್ತು 'ಬಿ'ಗಳ ನಡುವೆ, 'ಬಿ'ಯ ನ್ಯಾಯೋಚಿತ ಹಕ್ಕು 'ಸಿ'ಯ ನ್ಯಾಯಿಕ ಹಕ್ಕಿಗಿಂತ ಆದ್ಯತೆಯನ್ನು ಪಡೆಯುತ್ತದೆ. 'ಸಿ'ಗೆ ತಿಳಿವಳಿಕೆ ಇರಲಿಲ್ಲವಾದ್ದರಿಂದ 'ಸಿ'ಗೆ ಆದ್ಯತೆ ಬರುತ್ತದೆ.

(೨) 'ಸಿ' ಮತ್ತು 'ಡಿ'ಗಳ ನಡುವೆ 'ಸಿ'ಗೆ ಆದ್ಯತೆ ಬರುತ್ತದೆ. ಏಕೆಂದರೆ 'ಡಿ'ಗೆ ಹಕ್ಕುಗಳನ್ನು ಸೃಷ್ಟಿಸುವುದರಲ್ಲಿ ಆದ ವಂಚನೆಯಲ್ಲಿ 'ಸಿ' ಭಾಗವಹಿಸಿರಲಿಲ್ಲ.

(೩) ಇನ್ನು 'ಬಿ' ಮತ್ತು 'ಡಿ'ಗಳ ನಡುವೆ. ಅವರ ಹಕ್ಕುಗಳು ಧರ್ಮಸಮ್ಮತ ಹಕ್ಕುಗಳು. ಇಲ್ಲಿ ಯಾರ ಹಕ್ಕು ನಿಲ್ಲುತ್ತದೆ? 'ಬಿ'ಯ ಹಕ್ಕು. ಇಲ್ಲಿನ ನಿಯಮವೇನೆಂದರೆ, ಎರಡು ನ್ಯಾಯೋಚಿತ ಹಕ್ಕುಗಳ ನಡುವೆ ಸ್ಪರ್ಧೆಯಿದ್ದರೆ, ಮೊದಲು ಹುಟ್ಟಿದುದು ಆಮೇಲೆ ಹೂಡಿದುದರ ಮೇಲೆ ಆದ್ಯತೆಯನ್ನು ಪಡೆಯುತ್ತದೆ.

(೪) ಈ ನಿಯಮವು, ಎಲ್ಲಿ ನ್ಯಾಯೋಚಿತ ಹಕ್ಕುಗಳು ತಮ್ಮ ಪರವಾಗಿ ಧರ್ಮ ನ್ಯಾಯವನ್ನು ಹೊಂದಿರುತ್ತವೆಯೋ ಅಲ್ಲಿ ವರ್ತಿಸುತ್ತದೆ.

*ರೈಸ್ >< ರೈಸ್ ೨ ಡ್ರ್ಯೂರಿ, ೭೩ (೭೬–೭೮)*

'ಎ'ಯು 'ಸಿ'ಗೆ ನೆಲವನ್ನು ಕ್ರಯದ ಹಣವನ್ನು ಪಡೆಯದೆಯೆ ಮಾರುತ್ತಾನೆ. (೧) 'ಬಿ'ಗೆ ನೆಲವನ್ನು ವಶಪಡಿಸುತ್ತಾನೆ, (೨) ಹಣ ಬಂದಿತೆಂದು ರಸೀತಿಗೆ ಸಹಿ ಮಾಡುತ್ತಾನೆ, (೩) ಹಕ್ಕುಪತ್ರಗಳನ್ನು 'ಬಿ'ಗೆ ತಲುಪಿಸುತ್ತಾನೆ. ಮುಂದೆ 'ಬಿ'ಯು ಆ ಆಸ್ತಿಯನ್ನು 'ಸಿ'ಗೆ ಅಡಮಾನ ಮಾಡುತ್ತಾನೆ. ಅವನಿಗೆ 'ಎ'ಯ ಹಕ್ಕಿನ ವಿಷಯ ತಿಳಿದಿಲ್ಲ. 'ಎ' ಮತ್ತು 'ಸಿ'ಗಳ ನಡುವೆ 'ಎ'ಯ ನ್ಯಾಯೋಚಿತ ಹಕ್ಕು 'ಸಿ'ಯದಕ್ಕಿಂತ ಮೊದಲಿನದಾದರೂ ಧರ್ಮ, ನ್ಯಾಯಗಳು ಅಸಮವಾಗಿವೆ. 'ಎ' ಅಲಕ್ಷ್ಯದ ತಪ್ಪು ಮಾಡಿದ್ದಾನೆ. ಆದ್ದರಿಂದ 'ಸಿ'ಯ ಧರ್ಮನ್ಯಾಯ ಉತ್ತಮವಾಗಿದೆ. ಕಾಲದಲ್ಲಿ ಈಚಿನದಾದರೂ ಅದಕ್ಕೆ ಆದ್ಯತೆ ದೊರಕುತ್ತದೆ.

(೫) ಕೆಲವು ಸಂದರ್ಭಗಳಲ್ಲಿ ಎರಡು ನ್ಯಾಯೋಚಿತ ಆಸಕ್ತಿಗಳ ನಡುವೆ ಆದ್ಯತೆಗಾಗಿ ಸಂಘರ್ಷ ವುಂಟಾಗುತ್ತದೆ. ಇತರ ಕೆಲವು ಸಂದರ್ಭಗಳಲ್ಲಿ ಸೂಕ್ತ ವ್ಯಕ್ತಿಗೆ ಅಥವಾ ಆಸಕ್ತಿಯನ್ನು ವರ್ಗಾಯಿಸಿಕೊಂಡ ವ್ಯಕ್ತಿಗಳಿಗೆ ಬರಹರೂಪದಲ್ಲಿ ನೋಟೀಸು ಕೊಟ್ಟ ಕಾಲವು ಅವನಲ್ಲಿ ನಿರ್ಧರಿಸುತ್ತದೆ.

ಸಂಕ್ಷೇಪವಾಗಿ– ಧರ್ಮ ನ್ಯಾಯದ ಮೂರು ಸೂತ್ರಗಳು:

(೧) ಧರ್ಮ ನ್ಯಾಯಗಳು ಸಮಾನವಾಗಿದ್ದಾಗ, ಕಾನೂನು ವರ್ತಿಸುತ್ತದೆ.

(೨) ಧರ್ಮ ನ್ಯಾಯಗಳು ಸಮವಾಗಿದ್ದಾಗ ಕಾಲದಲ್ಲಿ ಮೊದಲನೆಯದು.

(೩) ಧರ್ಮ ನ್ಯಾಯಗಳು ಅಸಮವಾಗಿದ್ದಾಗ ಉತ್ತಮ ಧರ್ಮ ನ್ಯಾಯವು ವರ್ತಿಸುತ್ತದೆ.

**ವಿವರಣೆ:**

(೧) ಮೊದಲನೆಯ ಸೂತ್ರವು, ಒಂದು ನ್ಯಾಯೋಚಿತ ಹಕ್ಕಿಗೂ ಒಂದು ನ್ಯಾಯಿಕ ಹಕ್ಕಿಗೂ ನಡುವೆ ಸಂಘರ್ಷವಿರುವುದನ್ನು ಉಲ್ಲೇಖಿಸುತ್ತದೆ. ಎರಡೂ ವರ್ಗದ ಮೊಕದ್ದಮೆಗಳಿಗೆ ಅನ್ವಯವಾಗುತ್ತದೆ: (i) ನ್ಯಾಯೋಚಿತ ಹಕ್ಕು ನ್ಯಾಯಿಕ ಹಕ್ಕಿನ ಮೇಲೆ ಆದ್ಯತೆ ಪಡೆದ ಸಂದರ್ಭಗಳಿಗೆ, (ii) ನ್ಯಾಯೋಚಿತ ಹಕ್ಕು ನ್ಯಾಯಿಕ ಹಕ್ಕಿನ ನಂತರದ್ದಾಗಿರಬೇಕು.

(೨) ಕಾನೂನು ನಿಲ್ಲುತ್ತದೆ ಎಂದರೆ ನ್ಯಾಯಿಕ ಹಕ್ಕಿನ ಒಡೆಯನಿಗೆ ವಂಚನೆ, ಮೋಸ ಮೊದಲಾದ ಧರ್ಮ ನ್ಯಾಯದ ಅಸಮತೆಯನ್ನು ಆರೋಪಿಸಲಾಗದಿದ್ದಾಗ, ನ್ಯಾಯೋಚಿತ ಹಕ್ಕಿನ ಮೇಲೆ ನ್ಯಾಯಿಕ ಹಕ್ಕು ನಿಲ್ಲುತ್ತದೆ ಎಂದರ್ಥ.

(೩) ಎರಡು ಮತ್ತು ಮೂರನೆಯ ಸಿದ್ಧಾಂತಗಳು, ಎರಡು ನ್ಯಾಯೋಚಿತ ಹಕ್ಕುಗಳ ನಡುವೆ ಸಂಘರ್ಷವಿರುವ ಸಂದರ್ಭಗಳನ್ನು ಉಲ್ಲೇಖಿಸುತ್ತವೆ.

## ನ್ಯಾಯೋಚಿತ ವಹಿಸಿಕೊಡುವಿಕೆ

### ೧. ಸಾಮಾನ್ಯ

(೧) ವಿಷಯವನ್ನು ನ್ಯಾಯೋಚಿತ ವಹಿಸಿಕೆ ಎಂದು ಕರೆಯಲಾಗಿದ್ದರೂ ಅದೊಂದು ಸಂಕ್ಷೇಪ ರೂಪ. ಅದು ಕ್ರಿಯಾ ಆಯ್ಕೆಯ (Chose in action) ನ್ಯಾಯೋಚಿತ ವಹಿಸಿಕೆ.

(೨) ಇಲ್ಲಿ ಮೊದಲೇ ಪರಿಶೀಲಿಸಬೇಕಾದ, ಪ್ರವೇಶ ರೂಪದ ಮೂರು ಅಂಶಗಳಿವೆ.

(i) ವಹಿಸಿಕೆ ಎಂದರೇನು?

(ii) ಕ್ರಿಯಾ ಆಯ್ಕೆ ಎಂದರೇನು?

(iii) ವಿಷಯದ ಅಧ್ಯಯನದ ಅಗತ್ಯ

**(೧) ವಹಿಸಿಕೆ ಎಂದರೇನು?**

೧. ಆಸ್ತಿಯನ್ನು ಕುರಿತ ಇಂಗ್ಲಿಷ್ ಕಾನೂನಿನ ಪ್ರಕಾರ ಆಸ್ತಿಯನ್ನು ಸ್ಥಿರ ಆಸ್ತಿ ಮತ್ತು ವ್ಯಕ್ತಿಗತ ಆಸ್ತಿ ಎಂದು ಎರಡಾಗಿ ವರ್ಗೀಕರಿಸಲಾಗಿದೆ.

೨. ಸ್ಥಿರ ಆಸ್ತಿಯ ಮೇಲಿನ ಹಕ್ಕುಗಳ ವರ್ಗಾವಣೆಗೆ ಸಂಬಂಧಿಸಿದಂತೆ ಉಪಯೋಗಿಸಿರುವ ಪದ ಕನ್ವೇಯನ್ಸ್. ವ್ಯಕ್ತಿಗತ ಆಸ್ತಿಯ ಮೇಲಿನ ಹಕ್ಕುಗಳನ್ನು ವರ್ಗಾಯಿಸುವ ಸಂದರ್ಭಗಳ ಬಳಸಿರುವ ಪದ ವರ್ಗಾವಣೆ (ಟ್ರಾನ್ಸ್‌ಫರ್ ಅಥವಾ ವಹಿಸುವಿಕೆ (ಅಸೈನ್‌ಮೆಂಟ್).

೩. ಆದ್ದರಿಂದ ವಹಿಸಿಕೆ ಎನ್ನುವುದು ಒಬ್ಬನು ತನ್ನ ವ್ಯಕ್ತಿಗತ ಆಸ್ತಿಯ ಮೇಲಿನ ವಿಶೇಷತಃ ಅದರ ಒಂದು ರೂಪವಾದ ಕ್ರಿಯಾ ಆಯ್ಕೆಯ ಮೇಲಿನ ಹಕ್ಕನ್ನು ವರ್ಗಾಯಿಸುವುದು ಎಂದು ಅರ್ಥವಾಗುತ್ತದೆ.

**(೨) ಕ್ರಿಯಾ ಆಯ್ಕೆ ಎಂದರೇನು?**

೧. ಇಂಗ್ಲಿಷ್ ಅರ್ಥದ ಪ್ರಕಾರ ವ್ಯಕ್ತಿತ್ವ ತತ್ವವನ್ನು ಎರಡು ವರ್ಗವಾಗಿ ಗುಂಪು ಮಾಡಬಹುದು.

(i) ಭೌತಿಕವಾಗಿ ವಶಪಡಿಸಿಕೊಳ್ಳಲಾಗುವಂತಹ ಚರ ವಸ್ತುಗಳು.

(ii) ಭೌತಿಕವಾಗಿ ವಶಪಡಿಸಿಕೊಳ್ಳಲು ಸಾಧ್ಯವಿಲ್ಲದೆ ಕಾರ್ಯದ ಮೂಲಕ ಕೇಳಬಹುದಾದ ಅಥವಾ ಜಾರಿಗೊಳಿಸಬಹುದಾದ ಆಸ್ತಿ ಹಕ್ಕುಗಳು.

೨. ಮೊದಲಿನದನ್ನು ಹೀಗೆ ಕರೆಯಬಹುದು:

(i) ವಶಪಡಿಸಿಕೊಳ್ಳುವ ಆಯ್ಕೆಗಳು – ವಶದಲ್ಲಿರುವ ವಸ್ತುಗಳು

(ii) ಕ್ರಿಯಾ ಆಯ್ಕೆಗಳು – ಕ್ರಿಯೆಗಳು

೩. ಕ್ರಿಯಾ ಆಯ್ಕೆಯ ವಿವರಣೆ–

*(೧೯೦೨) ೨ K.B. ೪೨೭ (೪೩೦) – ಚಾನಲ್ ಜೆ.*

ನಿಜವಾಗಿ ಹೇಳುವುದಾದರೆ ಅದು ಸಾಲ.

೪. ವಹಿಸಿಕೆ (ಅಸೈನ್‌ಮೆಂಟ್) ಎಂಬ ಪದವನ್ನು ಕ್ರಿಯಾ ಆಯ್ಕೆಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ. ವರ್ಗಾಯಿಸಬೇಕೆಂದಾದಾಗ ಸುಮ್ಮನೆ ಬರೆದು ಸಹಿಮಾಡಿ ಕೊಟ್ಟುಬಿಡಬಹುದಾದ ವಸ್ತುವೇ ಹೊರತು ಅದನ್ನು ಭೌತಿಕವಾಗಿ ವಶಕ್ಕೆ ಕೊಡಲು ಸಾಧ್ಯವಿಲ್ಲ.

**(೩) ನ್ಯಾಯೋಚಿತ ವಹಿಸಿಕೆಯನ್ನು ಅಧ್ಯಯನ ಮಾಡುವ ಅಗತ್ಯ**

ಅ. ವಹಿಸಿಕೆ ಎನ್ನುವುದು, ಆಸ್ತಿಯ ಒಡೆಯನು ಮೂರನೆಯ ಇನ್ನೊಬ್ಬ ವ್ಯಕ್ತಿಗೆ ಹಕ್ಕನ್ನು ವಹಿಸಿ ಕೊಡುವುದು.

**ನಿದರ್ಶನ:** 'ಎ' ಸಾಲ ಕೊಟ್ಟವನು, 'ಬಿ' ಸಾಲ ತೆಗೆದುಕೊಂಡವನು. 'ಎ'ಯು 'ಬಿ'ಯ ಮೇಲಿನ ತನ್ನ ಹಕ್ಕುಗಳನ್ನು 'ಸಿ'ಗೆ ವಹಿಸಿಕೊಡುತ್ತಾನೆ. 'ಬಿ'ಯು 'ಸಿ'ಗೆ ಬದ್ಧನಾಗುತ್ತಾನೆ. 'ಬಿ'ಯಿಂದ ಸಾಲವನ್ನು ವಸೂಲು ಮಾಡುವ ಹಕ್ಕು 'ಸಿ'ಗೆ ಬರುತ್ತದೆ.

೨. ವಹಿಸಿಕೆಯಲ್ಲಿ ಮೂವರು ವ್ಯಕ್ತಿಗಳು ಸಂಬಂಧಪಡುತ್ತಾರೆ.

(i) ಮೊದಲು ಒಡೆಯ

(ii) ಅವನಿಗೆ ಬದ್ಧನಾದ ವ್ಯಕ್ತಿ

(iii) ಒಡೆಯನು ಹಕ್ಕನ್ನು ಯಾರಿಗೆ ವರ್ಗಾಯಿಸಿದ್ದಾನೋ ಆ ವ್ಯಕ್ತಿ.

೩. ಹಕ್ಕು, ಅಂದರೆ ಕ್ರಿಯಾ ಆಯ್ಕೆ ನ್ಯಾಯಿಕವಾಗಿರಬಹುದು ಇಲ್ಲವೆ ನ್ಯಾಯೋಚಿತವಾಗಿರಬಹುದು, ಒಂದು ವಿಶ್ವಸ್ಥ ನಿಧಿಯಲ್ಲಿನ ಪರಂಪರಾಗತ ಆಸಕ್ತಿಯ ಹಾಗೆ.

೪. ವಹಿಸಿಕೆಯನ್ನು ಧರ್ಮ ನ್ಯಾಯವೂ ವ್ಯವಹಾರ ನ್ಯಾಯವೂ ಬೇರೆ ಬೇರೆಯಾದ ರೀತಿಯಲ್ಲಿ ಪರಿಗಣಿಸಿವೆ.

**ವ್ಯವಹಾರ ನ್ಯಾಯ ಮತ್ತು ಕ್ರಿಯಾ ಆಯ್ಕೆ**

೧. ವ್ಯವಹಾರ ನ್ಯಾಯದಲ್ಲಿ ಕ್ರಿಯಾ ಆಯ್ಕೆಯ ವಹಿಸಿಕೆ ಅಥವಾ ಒಪ್ಪಿಸಿಕೆ ಇರಲಾರದು. ನ್ಯಾಯೋಚಿತ ಆಯ್ಕೆಯ ವಹಿಸಿಕೆಯಿರುವುದು ಮಾತ್ರವಲ್ಲ, ನ್ಯಾಯಿಕ ಆಯ್ಕೆಯನ್ನೂ ವಹಿಸುವುದು ಸಾಧ್ಯವಾಗದು.

೨. ಮೊಕದ್ದಮೆಗಳ ಸಂಖ್ಯೆ ಅಧಿಕವಾಗಬಹುದೆನ್ನುವುದೇ ಅದಕ್ಕೆ ಕಾರಣ.

೩. ಕಾನೂನು ಮತ್ತು ವಿಶೇಷ ಕಾನೂನು ಕೆಲವು ಬಗೆಯ ಕ್ರಿಯಾ ಆಯ್ಕೆಯನ್ನು ವಹಿಸಬಹುದೆಂದು ಹೇಳಿದುವು.

(i) ವರ್ಗಾವಣೀಯ ಲಿಖಿತ(Negotiable Instruments)ವನ್ನು ಕಾನೂನು ವ್ಯಾಪಾರಿ ಮೂಲಕ ವಹಿಸಬಹುದೆಂದಾಯಿತು.

(ii) ಜೀವವಿಮೆ ಮತ್ತು ಕಡಲಿನ ವಿಮೆ ಪಾಲಿಸಿಗಳನ್ನು ಕಾನೂನು ಪ್ರಕಾರ ವಹಿಸಿಕೊಡಬಹುದಾಯಿತು.

(iii) ಜುಡಿಕೇಚರ್ ಆ್ಯಕ್ಟ್‌ನ ೨೫(೬)ನೇ ಕಲಮು: ಎಲ್ಲಾ ನ್ಯಾಯಿಕ ಕ್ರಿಯಾ ಆಯ್ಕೆಗಳನ್ನು ವಹಿಸಬಹುದಾಯಿತು.

## ಧರ್ಮನ್ಯಾಯ ಮತ್ತು ಕ್ರಿಯಾ ಆಯ್ಕೆ

೧. ಧರ್ಮನ್ಯಾಯದಲ್ಲಿ ಸದಾ ಕಾಲವೂ ಕ್ರಿಯಾ ಆಯ್ಕೆಯು ವಹಿಸಲು ಅರ್ಹವಾಗಿತ್ತು. ಧರ್ಮನ್ಯಾಯದ್ದು ಮಾತ್ರವಲ್ಲ, ನ್ಯಾಯಿಕ ಕ್ರಿಯಾ ಆಯ್ಕೆಯೂ ವಹಿಸಲು ಯೋಗ್ಯವಾಯಿತು.

೨. ಆಯ್ಕೆಯು ನ್ಯಾಯೋಚಿತವಾಗಿದ್ದರೆ ವಹಿಸಿಕೊಳ್ಳುವವನು ಅದನ್ನು ಮರಳಿ ಪಡೆಯಲು ಚಾನ್ಸೆರಿ ನ್ಯಾಯಾಲಯಕ್ಕೆ ಹೋಗಬಹುದು. ತನ್ನ ಸ್ವಂತ ಹೆಸರಿನಲ್ಲಿ ಮೊಕದ್ದಮೆ ಹೂಡಬಹುದು.

೩. ಅದು ನ್ಯಾಯಿಕ ಆಯ್ಕೆಯಾಗಿದ್ದರೆ, ನಡೆವಳಿಗಳು ವಹಿಸಿಕೊಟ್ಟವನ ಹೆಸರಿನಲ್ಲಿ ನಡೆಸಬಹುದು. ನ್ಯಾಯಾಲಯವು ಹೀಗೆ ಅವನು ತನ್ನ ಹೆಸರಿನಲ್ಲಿ ಉಪಯೋಗಿಸುವುದನ್ನು ಮಿತಿಗೊಳಿಸಿ, ವಹಿಸಿಕೊಂಡವನಿಗೆ ಸೂಕ್ತ ನಷ್ಟ ಭರ್ತಿಯನ್ನು ಕೊಡುವುದರ ಮೂಲಕ ಪ್ರವೇಶ ಮಾಡಿತು.

೪. ಆದರೂ ಸಾರ್ವಜನಿಕ ನೀತಿಯ ಆಧಾರದಿಂದ ಧರ್ಮನ್ಯಾಯವು ಕಾರ್ಯರೂಪಕ್ಕೆ ಕೊಡದೆ ಉಳಿದ ಕೆಲವು ಕ್ರಿಯಾ ಆಯ್ಕೆಗಳಿದ್ದವು.

(i) ರಾಷ್ಟ್ರೀಯ ನಿಧಿಯಿಂದ ಸಾರ್ವಜನಿಕ ಅಧಿಕಾರಿಗಳಿಗೆ ಪಾವತಿ ಮಾಡುವ ವೇತನ ಮತ್ತು ಅರೆ ವೇತನಗಳನ್ನು ವಹಿಸುವುದು.

(ii) ಪತ್ನಿಗೆ ಜೀವನಾಂಶಗಳನ್ನು ವಹಿಸುವುದು.

(iii) ಆಸ್ತಿಯ ರಕ್ಷಣೆಯಿಂದ ಉಂಟಾಗುವ ವಹಿಸಿಕೆ.

### ಸಾರಾಂಶ

೧. ಹೀಗೆ ವಹಿಸಿಕೊಡುವುದರಲ್ಲಿ ಎರಡು ವಿಭಾಗಗಳಿವೆ.

(i) ನ್ಯಾಯಿಕ, (ii) ನ್ಯಾಯೋಚಿತ.

೨. ಒಂದು ನ್ಯಾಯಿಕ ಆಯ್ಕೆಯ ನ್ಯಾಯಿಕ ವಹಿಸಿಕೆಯ ಪ್ರಕ್ರಮ ಮತ್ತು ಅದರ ಸ್ವರೂಪ ಹೇಗಿರಬೇಕೆಂಬುದನ್ನು ಜ್ಯುಡಿಕೇಚರ್ ಆ್ಯಕ್ಟ್ ನಿರೂಪಿಸಿದ್ದರೂ ಅದು ನ್ಯಾಯಿಕ ಆಯ್ಕೆಯನ್ನು ನ್ಯಾಯೋಚಿತ ರೀತಿಯಲ್ಲಿ ವಹಿಸಿಕೊಡಲು ಚಾನ್ಸೆರಿ ಮಾಡಿರುವ ನಿಯಮ ನಿಬಂಧನೆಗಳನ್ನು ಅತಿಕ್ರಮಿಸಿಲ್ಲ. ಯಾವುದಾದರೂ ಒಂದು ವಹಿಸಿಕೆಯು ಕಾನೂನು ಪ್ರಕಾರ ಪರಿಣಾಮಕಾರಿಯಲ್ಲದೆ ಹೋದರೆ, ಯಾವುದಾದರೂ ದೋಷವು ಅದಕ್ಕೆ ಕಾರಣವಾಗಿದ್ದರೆ, ಅದು ಧರ್ಮನ್ಯಾಯದ ನಿಬಂಧನೆಗಳಿಗೆ ಸಂಗತವಾಗಿರುವುದು ಒಳ್ಳೆಯದು. ಎರಡನೆಯದಾಗಿ, ಪರಮಾಧಿಕಾರ ನ್ಯಾಯಸ್ಥಾನವು ಯಾವುದೇ ಒಂದು ನ್ಯಾಯೋಚಿತ ಕ್ರಿಯಾ ಆಯ್ಕೆಯನ್ನು ಮುಟ್ಟುವುದಿಲ್ಲ.

**ಪರಿಶೀಲಿಸಬೇಕಾದ ಸಂದರ್ಭ ವರ್ಗಗಳು**

ಕ್ರಿಯಾ ಆಯ್ಕೆಯನ್ನು ವಹಿಸುವುದರ ಸಂಬಂಧವಾಗಿ ಪರಿಗಣಿಸಬೇಕಾದ ಮೂರು ವರ್ಗಗಳಿಗೆ ಸೇರುವ ಸಂದರ್ಭಗಳಿವೆ:

(i) ನ್ಯಾಯಿಕ ಕ್ರಿಯಾ ಆಯ್ಕೆಯೊಂದರ ನ್ಯಾಯಿಕ ವಹಿಸಿಕೆ.

(ii) ನ್ಯಾಯಿಕ ಕ್ರಿಯಾ ಅಯ್ಕೆಯ ನ್ಯಾಯೋಚಿತ ವಹಿಸಿಕೆ.

(iii) ನ್ಯಾಯೋಚಿತ ಕ್ರಿಯಾ ಆಯ್ಕೆಯೊಂದರ ನ್ಯಾಯೋಚಿತ ವಹಿಸಿಕೆ.

ಒಂದು ನ್ಯಾಯಿಕ ಆಯ್ಕೆಯ ನ್ಯಾಯಿಕ ವಹಿಸಿಕೆಗೆ ಈ ಕೆಲವು ಪೂರ್ವಾಗತ್ಯಗಳುಂಟು.

೧. ವಹಿಸಿಕೆಯು ಪರಿಪೂರ್ಣವಾಗಿರಬೇಕು, ಅಂದರೆ ವಹಿಸುವವನು ತನ್ನ ಹಕ್ಕನ್ನು ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು. ಸಾಲವು ಖಚಿತವಾಗಿರಬೇಕು ಮತ್ತು ಇಡಿ ಮೊತ್ತವಾಗಿರಬೇಕು.

೨. ವಹಿಸಿಕೆಯು ಬರಹದಲ್ಲಿದ್ದು ವಹಿಸುವವನು ಅದಕ್ಕೆ ಸಹಿ ಮಾಡಿರಬೇಕು.

ಅದು ಪತ್ರದ ಮುಖೇನ ಆಗಬೇಕಾಗಿಲ್ಲ.

ಅದು ನಿರ್ದಿಷ್ಟ ಮೌಲ್ಯಕ್ಕಾಗಿ ಆಗಬೇಕಾಗಿಲ್ಲ.

೩. ವಹಿಸಿಕೆಯ ಬಗೆಗೆ ಸಾಲ ಪಡೆದವರಿಗೆ ಸ್ಪಷ್ಟವಾದ ತಿಳಿವಳಿಕೆ ಕೊಡಬೇಕು.

ವಿಭಾಗವು–

(i) ನೋಟೀಸನ್ನು ಯಾರು ಕೊಡಬೇಕು, ವಹಿಸುವವನೇ, ವಹಿಸಿಕೊಂಡವನೇ ಎಂಬುದನ್ನು ಹೇಳುವುದಿಲ್ಲ.

(ii) ಯಾವ ಸಮಯದಲ್ಲಿ ನೋಟೀಸನ್ನು ಕೊಡಬೇಕು, ವಹಿಸಿಕೊಂಡವನು, ವಹಿಸಿದವನ ಮರಣಾನಂತರ ಕೊಡಬೇಕು ಎಂದು ಹೇಳುವುದಿಲ್ಲ.

**ತಿಳಿವಳಿಕೆಯ ಅಭಾವದ ಪರಿಣಾಮ**

೧. ತಿಳಿವಳಿಕೆ ಇಲ್ಲದ್ದರಿಂದ ವಹಿಸಿಕೊಂಡವನು ಆ ವಹಿಸಿಕೆಯ ಮೇಲೆ ಮೊಕದ್ದಮೆ ಹೂಡುವ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಕೆಲವು ಅಸಮರ್ಥತೆಗಳು ಅದರಿಂದುಂಟಾಗುತ್ತವೆ ಮತ್ತು ಅದರಿಂದಾಗಿ ಕೆಲವು ಅನಾನುಕೂಲತೆಗಳುಂಟಾಗುತ್ತವೆ.

(i) ವಹಿಸಿಕೊಂಡವನು ಮೂಲ ಸಾಲಿಗನನ್ನು ಒಬ್ಬ ವಾದಿಯನ್ನಾಗಿ ಮಾಡದೆ ತನ್ನ ಸ್ವಂತ ಹೆಸರಿನಲ್ಲಿ ಸಾಲಗಾರನ ಮೇಲೆ ಮೊಕದ್ದಮೆ ಹೂಡುವಂತಿಲ್ಲ.

(ii) ಸಾಲಗಾರನಿಗೂ ಅವನಿಗೆ ಸಾಲ ಕೊಟ್ಟವನಿಗೂ ನಡುವೆ ಉದ್ಭವಿಸುವ ಧರ್ಮ ನ್ಯಾಯಗಳಿಗೆ, ವಹಿಸಿಕೆಯ ತಾರೀಖಿಗೆ ಮುಂಚೆ ಬದ್ಧನಾಗಿರುತ್ತಾನೆ. ಸಾಲಗಾರನು ಮೂಲ ಸಾಲಿಗನಿಗೆ ಹಣವನ್ನು ಪಾವತಿ ಮಾಡಿಬಿಟ್ಟರೆ ಅವನು ಸಾಲಗಾರನ ವಿರುದ್ಧವಾಗಿ ತನಗಿರುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಇದಕ್ಕೆ ಪ್ರತಿಯಾಗಿ, ಸಾಲಗಾರನು ಮೂಲ ಸಾಲಿಗನಿಗೆ ವಹಿಸಿಕೆಯ ನೋಟೀಸು ಬಂದ ನಂತರ ಪಾವತಿ ಮಾಡಿದರೆ ವಹಿಸಿಕೊಂಡವನು ಅವನಿಂದ ಸಾಲವನ್ನು ವಸೂಲು ಮಾಡಿಕೊಳ್ಳಬಹುದು.

(iii) ವಹಿಸಿಕೆಯನ್ನು ಕುರಿತು ಸಾಲಗಾರನಿಗೆ ನೋಟೀಸು ಕೊಡುವಲ್ಲಿ ವಿಫಲನಾಗುವ ವಹಿಸಿಕೊಂಡವನು ಆದ್ಯತೆ ಬರುವುದಿಲ್ಲ. ಏಕೆಂದರೆ, ಹಿಂದಿನ ವಹಿಸಿಕೆಯ ಅರಿವಿಲ್ಲದೆ, ತನ್ನ ವಹಿಸಿಕೆಯ ನೋಟೀಸನ್ನು ಸಾಲಗಾರನಿಗೆ ಕೊಡುವ ಇನ್ನೊಬ್ಬನಿಗೆ ಆದ್ಯತೆ ಬರುತ್ತದೆ.

**ನ್ಯಾಯಿಕ ಕ್ರಿಯಾ ಆಯ್ಕೆಯ ನ್ಯಾಯೋಚಿತ ವಹಿಸಿಕೆಯ ಪೂರ್ವಾಗತ್ಯಗಳು**

ಕಾನೂನು ಅಗತ್ಯಗಳಿಗೆ ಹೊಂದಿಕೆಯಾಗದ ಒಂದು ವಹಿಸಿಕೆಯ ಪರಿಣಾಮರಹಿತವಾಗಿರಲೇ ಬೇಕೆಂದಿಲ್ಲ. ಏಕೆಂದರೆ ಅದು ಒಂದು ನ್ಯಾಯೋಚಿತ ವಹಿಸಿಕೆಯಾಗಿ ವರ್ತಿಸಬಹುದು.

ಎರಡು ಅಂಶಗಳು ಅಗತ್ಯವಾಗುತ್ತವೆ:

(೧) ವಹಿಸುವವನ ಮೌಲ್ಯವನ್ನು ನಿಗದಿಪಡಿಸಿರಬೇಕು.

(೨) ಸಾಲಗಾರ ಮತ್ತು ಸಾಲಿಗ ಇವರ ನಡುವೆ ನಿರ್ದಿಷ್ಟ ಮೊತ್ತದ ಮೇಲೆ ಆಗುವ ಒಪ್ಪಂದದಿಂದ ಬರುವ ಹೊಣೆ, ಅಥವಾ ಸಾಲಗಾರನಿಗೆ ಸೇರಿದ ಹಣವನ್ನು ಇಟ್ಟುಕೊಂಡಿರುವ ವ್ಯಕ್ತಿಗೆ ನೀಡಿದ ಆದೇಶ ಒಂದು ವಹಿಸಿಕೆ ಆಗುತ್ತದೆ.

*೧೮೩೯. ಬರ್ನ್ >< ಕರ್ವಾಲೋ*
*೪ ಹೈಲ್ವೆ ಮತ್ತು ಕ್ರೇಗ್ಸ್ ರಿಪೋರ್ಟ್ಸ್, ೬೯೦.*

**ವಾಸ್ತವಾಂಶಗಳು**

'ಎಫ್' ಎನ್ನುವವನು ಬೇರೊಂದು ನಗರದಲ್ಲಿ ವ್ಯಾಪಾರ ಮಾಡುತ್ತಿದ್ದ 'ಆರ್' ಎನ್ನುವವನಿಗೆ ಸರಕುಗಳನ್ನು ಕಳುಹಿಸುವ ಅಭ್ಯಾಸವಿತ್ತು. 'ಆರ್'ಗೆ ಬೆಲೆಪಟ್ಟಿಯನ್ನು ಬರೆದು ಕಳಿಸುತ್ತಿದ್ದನು. ಮೊತ್ತವು, ಅವನ ಖಾತೆಗೆ ಬರುತ್ತಿತ್ತು, ಅವನು ಪಡೆದುಕೊಳ್ಳುತ್ತಿದ್ದನು. 'ಆರ್' ಇಂದ ಹಣವನ್ನು ಬಿ ಎಂಡ್ ಕೋ ವಸೂಲು ಮಾಡಿ ತುಂಬಿಕೊಳ್ಳುತ್ತಿದ್ದಿತು. 'ಎಫ್' ನಿರ್ದಿಷ್ಟ ಮೊತ್ತವನ್ನು ಬಿ ಎಂಡ್ ಕೋ ಮೇಲೆ ಪಡೆದನು. ಆದರೆ ಆ ಹುಂಡಿಗಳನ್ನು ಮಾನ್ಯ ಮಾಡಲು 'ಆರ್' ವಿಫಲನಾದನು.

ಬಿ ಎಂಡ್ ಕೋ.ದ ಸಾಲಗಾರನಾದ 'ಎಫ್' ಬಿ ಎಂಡ್ ಕೋಗೆ ಪತ್ರ ಬರೆದು ಅವರ ಪ್ರತಿನಿಧಿಯಾದ 'ವಿ' ಎನ್ನುವವನಿಗೆ ಸರಕುಗಳನ್ನು ಪೂರೈಸುವುದಾಗಿ ಮಾತು ಕೊಟ್ಟನು. ಅದರಂತೆ ಪತ್ರವನ್ನು ಬರೆದನು. 'ಎಫ್' ತನ್ನ ವಶದಲ್ಲಿರುವ ಸರಕುಗಳನ್ನು ಬಿ ಎಂಡ್ ಕೋ.ದ ಪ್ರತಿನಿಧಿಯಾದ 'ವಿ'ಗೆ ವರ್ಗಾಯಿಸಬೇಕೆಂದು 'ಆರ್'ಗೆ ಬರೆದನು. ಅದರ ಪ್ರಕಾರ 'ವಿ'ಯು ೧೮೨೯ ಜೂನ್ ೩೦ರಂದು 'ವಿ'ಗೆ ತಲುಪಿಸಿದನು.

೧೮೨೯ರ ಜೂನ್ ೨೩ರಂದು 'ಎಫ್'ನನ್ನು ೧೮೨೯ ಮೇ ೨೩ನೆಯ ತಾರೀಖಿನಂದು ಮಾಡಿದ ಒಂದು ಕೃತ್ಯಕ್ಕಾಗಿ ದಿವಾಳಿಯೆಂದು ತೀರ್ಪು ಕೊಡಲಾಯಿತು. ಅವನ ಟ್ರಸ್ಟಿಯು ಬಿ ಎಂಡ್ ಕೋ ದಿಂದ ಸರಕುಗಳ ಮೌಲ್ಯ ವಸೂಲಿಗಾಗಿ ಮೊಕದ್ದಮೆ ಹೂಡಿದನು. 'ಎಫ್'ನ ಸರಕುಗಳ ಮೌಲ್ಯಕ್ಕೆ ಒಂದು ನ್ಯಾಯೋಚಿತ ವಹಿಸಿಕೆಯಿತ್ತೆಂದು ಬಿ ಎಂಡ್ ಕೋ ವಾದ ಮಾಡಿತು. ಸಾಲಗಾರನು ಕೊಟ್ಟ ಆದೇಶವೇ ನ್ಯಾಯೋಚಿತ ವಹಿಸಿಕೆಯಾಗಿದೆ ಎಂದು ಹೇಳಲಾಯಿತು.

*ರೋಡಿಕ್ >< ಗ್ಯಾಂಡೆಲ್*
*(೧೮೫೧–೨) ೧ Degex ೭೬೩. ೪೨, E.R. ೭೪೯*

ಗ್ಯಾಂಡೆಲ್ ಒಬ್ಬ ಎಂಜಿನಿಯರ್. ಒಂದು ಬ್ಯಾಂಕಿಗೆ ಅವನು ಭಾರೀ ಮೊತ್ತದ ಸಾಲ ತೀರಿಸಬೇಕಾಗಿದ್ದಿತು. ಬ್ಯಾಂಕ್ ಪಾವತಿಗಾಗಿ ಒತ್ತಾಯಪಡಿಸುತ್ತಿದ್ದಿತು.

ಗ್ಯಾಂಡೆಲ್ ಒಬ್ಬ ರೈಲ್ವೆ ಕಂಪೆನಿಗೆ ಲೇಣಿದಾರನೂ ಆಗಿದ್ದನು. ಬ್ಯಾಂಕು ತನ್ನನ್ನು ಮರುಪಾವತಿಗೆ ಒತ್ತಾಯಪಡಿಸದಿರುವಂತೆ ಮಾಡುವ ಸಲುವಾಗಿ, ಇತರ ಕೆಲವು ಡ್ರಾಫ್ಟುಗಳನ್ನೂ ಪಾವತಿ ಮಾಡುವ ಸಲುವಾಗಿ, ಗ್ಯಾಂಡೆಲ್‌ನು ತನಗೆ ರೈಲ್ವೆ ಕಂಪೆನಿಯಿಂದ ಬರಬೇಕಾದ ಹಣವನ್ನು ವಸೂಲು ಮಾಡಿ

ಬ್ಯಾಂಕಿಗೆ ಪಾವತಿ ಮಾಡುವಂತೆ ತನ್ನ ಸಲಹಾ ವಕೀಲನಿಗೆ ಆದೇಶ ನೀಡಬೇಕೆಂದು ತೀರ್ಮಾನಿಸಲಾಯಿತು. ಗ್ಯಾಂಡೆಲ್ ಸಲಹಾ ವಕೀಲನಿಗೆ ಒಂದು ಪತ್ರ ಬರೆದು, ರೈಲ್ವೆ ಕಂಪೆನಿಯಿಂದ ತನಗೆ ಬಾಕಿ ಬರಬೇಕಾಗಿರುವ ಹಣವನ್ನು ಸಂಗ್ರಹಿಸಿ ಅದನ್ನು ಬ್ಯಾಂಕುಗಳಿಗೆ ಪಾವತಿ ಮಾಡಬೇಕೆಂದು ಕೋರಿದನು. ಅವರು ಬ್ಯಾಂಕಿಗೆ ಪತ್ರ ಬರೆದು ಹಣವು ವಸೂಲಾದೊಡನೆ ಪಾವತಿ ಮಾಡುವುದಾಗಿ ತಿಳಿಸಿದರು.

ಸಾಲಗಾರ ಮತ್ತು ಸಾಲಿಗರ ನಡುವೆ ಯಾವ ಒಪ್ಪಂದವೂ ಇರಲಿಲ್ಲ. ಏಕೆ? ಸಲಹಾ ವಕೀಲನು ರೈಲ್ವೆ ಕಂಪೆನಿಯಿಂದ ಹಣವನ್ನೇನೋ ಸಂಗ್ರಹಿಸಿದನು. ಆದರೆ, ಅದನ್ನು ಬ್ಯಾಂಕಿಗೆ ಪಾವತಿ ಮಾಡುವುದಕ್ಕೆ ಬದಲಾಗಿ ಗ್ಯಾಂಡೆಲ್‌ಗೆ ಕೊಟ್ಟನು. ಗ್ಯಾಂಡೆಲ್ ದಿವಾಳಿಯಾದನು. ಅವನ ಆಸ್ತಿಯೆಲ್ಲವನ್ನು ಅಧಿಕೃತ ಅಸೈನೀ ವಶಕ್ಕೆ ತೆಗೆದುಕೊಂಡನು. ಗ್ಯಾಂಡೆಲನು ರೈಲ್ವೆಯಿಂದ ಪಡೆದು ಬ್ಯಾಂಕಿಗೆ ಕಟ್ಟಬೇಕಾಗಿದ್ದ, ಸಲಹಾ ವಕೀಲನು ಸಂಗ್ರಹಿಸಿದ ಹಣಕ್ಕಾಗಿ ಒಂದು ನ್ಯಾಯಸಮ್ಮತ ವಹಿಸಿಕೆಯಿದ್ದಿತೆಂದು ಬ್ಯಾಂಕು ಮೊಕದ್ದಮೆ ಹಾಕಿತು. ಆದ್ದರಿಂದ ಅಧಿಕೃತವಾಗಿ ವಹಿಸಿಕೊಂಡವನಿಂದ ಹಣವನ್ನು ವಸೂಲು ಮಾಡಲು ಬ್ಯಾಂಕಿಗೆ ಹಕ್ಕಿದೆ ಎಂದು ವಾದಿಸಲಾಯಿತು. ಆದರೆ ಅದು ನ್ಯಾಯೋಚಿತ ವಹಿಸಿಕೆಯಾಗಿರಲಿಲ್ಲ ಎಂದು ನಿರ್ಣಯಿಸಲಾಯಿತು. ಅದು ಸಾಲಗಾರನು ತನ್ನ ಸಾಲಿಗನಿಗೆ, ಹಾಗೆ ಸಾಲಿಗನ ಪರವಾಗಿ ಹಣವನ್ನು ಇಟ್ಟುಕೊಂಡಿದ್ದ ವ್ಯಕ್ತಿಗೆ ಅದನ್ನು ಸಾಲಿಗನಿಗೆ ಪಾವತಿ ಮಾಡಬೇಕೆಂದು ನಿರ್ದೇಶಿಸಿದ ಆದೇಶವಲ್ಲ.

ಒಂದು ನ್ಯಾಯೋಚಿತ ವಹಿಸಿಕೆಯು ಸಂಘಟಿಸಬೇಕಾದರೆ ವಹಿಸಿದವನ ಮತ್ತು ವಹಿಸಿಕೊಡುವವನ ನಡುವೆ ಒಂದು ಸಂಬಂಧವಿರಬೇಕು. ಹಾಗೆ ಸಂಬಂಧವಿಲ್ಲದೆ ಹೋದರೆ ಧರ್ಮನ್ಯಾಯದಲ್ಲೂ ವಹಿಸಿಕೆ ಸಂಭವಿಸಲಾರದು.

ಆದ್ದರಿಂದ, ಮುಖ್ಯವ್ಯಕ್ತಿಯು ತನಗೆ ಬರಬೇಕಾದ ಹಣವನ್ನು ವಸೂಲು ಮಾಡುವಂತೆ, ಮೂರನೆಯ ವ್ಯಕ್ತಿಗೆ ಅದನ್ನು ಪಾವತಿ ಮಾಡುವಂತೆ ನಿರ್ದೇಶಿಸಿದರೂ, ಆ ಆದೇಶವನ್ನು ಮೂರನೆಯ ವ್ಯಕ್ತಿಗೆ ತಿಳಿಯಪಡಿಸದೆ ಹೋದ ಪಕ್ಷದಲ್ಲಿ ಅವನು ಧರ್ಮನ್ಯಾಯದಂತೆ ಅಸೈನೀ ಆಗುವುದಿಲ್ಲ. ಮುಖ್ಯ ವ್ಯಕ್ತಿಯು ಅದನ್ನು ರದ್ದುಪಡಿಸಬಹುದು.

ಹಾಗೆಯೇ ಒಂದು ದೊರಕಿಸಿಕೊಳ್ಳುವ ಅಧಿಕಾರಿ (Power of attorney) ಅಥವಾ ಹಣವನ್ನು ಸಂಗ್ರಹಿಸಿ ಸಾಲಿಗನಿಗೆ ಪಾವತಿ ಮಾಡುವ ಅಧಿಕಾರವಷ್ಟೇ ನ್ಯಾಯಯುತ ವಹಿಸಿಕೆ ಆಗುವುದಿಲ್ಲ. ಒಂದು ಚೆಕ್ ಕೊಡುವುದು ನ್ಯಾಯಯುತ ವಹಿಸಿಕೆ ಅಥವಾ ಚೆಕ್ಕು ಬರೆದವನ ಖಾತೆಯಲ್ಲಿರುವ ಹಣವನ್ನು ಬಳಸಿಕೊಳ್ಳಲು ಅಧಿಕಾರವಾಗುವುದಿಲ್ಲ.

*ಹ್ಯಾಪ್ಕಿನ್‌ಸನ್ >< ಫಾರ್‌ಸ್ಟರ್ (೧೮೭೪) ಎಚ್.ಆರ್. ೧೯* Eq. *೭೪.*

ಈ ನಿರ್ದಿಷ್ಟ ನಿಧಿಯಿಂದ ಪಾವತಿ ಮಾಡಬೇಕೆಂದು ಸ್ಪಷ್ಟಪಡಿಸದೆ ಹೋದರೆ ಪಡೆದುಕೊಂಡದ್ದು ಅಥವಾ ವಹಿಸಿದ್ದು ಸಿಂಧುವಾಗುವುದಿಲ್ಲ.

*ಪರ್ಸಿವಲ್ >< ಡನ್ (೧೮೮೫) ೨೯* Ch. D. *೧೨೮.*

## ನ್ಯಾಯೋಚಿತ ವಹಿಸಿಕೆಗೆ ನೋಟೀಸು ಅಗತ್ಯವೆ?

೧. ವಹಿಸಿದವನು ಮತ್ತು ವಹಿಸಿಕೊಂಡವನು ಇವರ ನಡುವೆ ಯಾವುದೇ ಒಂದು ನ್ಯಾಯೋಚಿತ ವಹಿಸಿಕೆಯು ಸಾಲಗಾರನಿಗೆ ನೋಟೀಸು ಕೊಡದೆ ಇದ್ದರೂ ಸಹ, ಸಂಪೂರ್ಣವಾಗುತ್ತದೆ.

೨. ಆದರೂ ವಹಿಸಿಕೆಯ ನೋಟೀಸನ್ನು ಸಾಲಗಾರನಿಗೆ ಎರಡು ಕಾರಣಗಳಿಗಾಗಿ ಕೊಡಬೇಕು.

(i) ಹಾಗೆ ನೋಟೀಸು ಇರದೆ ಹೋದ ಪಕ್ಷದಲ್ಲಿ ಸಾಲಗಾರನು ಮೂಲ ಸಾಲಿಗನಿಗೆ,

ವಹಿಸಿಕೊಟ್ಟವನಿಗೆ ಪಾವತಿ ಮಾಡಲು ಸ್ವತಂತ್ರನಾಗಿರುತ್ತಾನೆಯೇ ಹೊರತು ವಹಿಸಿಕೊಂಡವನಿಗೆ ಪಾವತಿಸಲು ಬದ್ಧನಾಗುವುದಿಲ್ಲ. ಅದಕ್ಕೆ ಬದಲು ಅವನೇನಾದರೂ ನೋಟೀಸನ್ನು ಅಲಕ್ಷಿಸಿ ವಹಿಸಿಕೊಟ್ಟವನಿಗೆ ಪಾವತಿ ಮಾಡಿದ್ದೇ ಆದರೆ, ಅವನು ಮತ್ತೆ ವಹಿಸಿಕೊಂಡವನಿಗೂ ಪಾವತಿ ಮಾಡಬೇಕಾಗಿ ಬರುತ್ತದೆ.

*ಸ್ಟಾಕ್ಸ್ > < ಡಾಬ್‌ಸನ್ (೧೮೫೩) ೪ De. G.M. & G. ೧೧.*

(ii) ನೋಟೀಸು ಇರದೆ ಹೋದರೆ, ಅದೇ ಕ್ರಿಯಾ ಆಯ್ಕೆಯಲ್ಲಿ ಮುಂದೆ ಬೇರೊಬ್ಬ ವಹಿಸಿಕೊಂಡವನು ಬಂದರೆ ಅವನಿಗಿಂತ ಮೊದಲ ಆದ್ಯತೆ ಈ ಮೊದಲು ವಹಿಸಿಕೊಂಡವನಿಗೆ ಬರುವುದಿಲ್ಲ.

*ಡರ್ಲ್ > < ಹಾಲ್ (೧೮೨೩) ೧ R sess ೧= S.F.C. p. ೫೭.*

ಇಲ್ಲಿ ನಿಯಮ ಎಂದು ಹೇಳಿದೆ.

**ವಾಸ್ತವಾಂಶಗಳು:**

ಪೀಟರ್ ಬ್ರೌನ್ ಎನ್ನುವವನು ಸತ್ತನು. ಒಂದು ಉಯಿಲಿನಲ್ಲಿ ತನ್ನ ಆಸ್ತಿ, ಸ್ಥಿರ ಆಸ್ತಿಗಳ ಮಾರಾಟದಿಂದ ಬರುವ ಹಣ ಮೊದಲಾದವುಗಳಿಗೆ ಒಂದು ಟ್ರಸ್ಟ್ ಮಾಡಿದನು. ಅದರ ವಿಶ್ವಸ್ಥರಿಗೆ ಹಣವನ್ನು ಬಂಡವಾಳವಾಗಿ ಮಾಡಿ, ಬಡ್ಡಿಯನ್ನು ತನ್ನ ಮಗ ಜಕಾರಿಯ ಬ್ರೌನ್‌ನಿಗೆ ಅವನು ಬದುಕಿರುವವರೆಗೂ ಕೊಡಬೇಕೆಂದು ತಿಳಿಸಿದನು. ಈ ವರಮಾನವು ವರ್ಷಕ್ಕೆ ಸುಮಾರು ೯೩ ಪೌಂಡು ಆಗುತ್ತಿತ್ತು.

೧೮೦೮ ಡಿಸೆಂಬರ್ ೧೯ರಂದು ಬ್ರೌನ್ ತನಗೆ ವಿಲಿಯಂ ಡರ್ಲ್ ಕೊಟ್ಟಿದ್ದ ೨೦೪ ಪೌಂಡುಗಳ ಮರುಪಾವತಿಗೆ ತನ್ನ ವಾರ್ಷಿಕ ಆದಾಯದ ಒಂದು ಭಾಗವಾಗಿ ೩೭ ಪೌಂಡುಗಳನ್ನು ಅವನಿಗೆ ವಹಿಸಿದನು. ೧೮೦೯ ಸೆಪ್ಟೆಂಬರ್ ೨೬ರಂದು ಬ್ರೌನ್ ತನಗೆ ಶೆರ್ರಿಂಗ್ ಕೊಟ್ಟಿದ್ದ ೧೫೦ ಪೌಂಡುಗಳ ಮರುಪಾವತಿಗಾಗಿ ತನ್ನ ವಾರ್ಷಿಕಾದಾಯದ ಮತ್ತೊಂದು ಭಾಗವಾಗಿ ೨೭ ಪೌಂಡುಗಳನ್ನು ವಹಿಸಿಕೊಟ್ಟನು.

ಡರ್ಲ್ ಆಗಲಿ ಶೆರ್ರಿಂಗ್ ಆಗಲಿ ಈ ವಹಿಸಿಕೆಯ ನೋಟೀಸನ್ನು ವಿಶ್ವಸ್ಥ ಸಮಿತಿಯ ನಿರ್ವಾಹಕನಿಗೆ ತಿಳಿಸಲಿಲ್ಲ.

೧೮೧೨ರಲ್ಲಿ ಬ್ರೌನ್ ತನ್ನ ವಾರ್ಷಿಕ ಬಡ್ಡಿ ೯೩ ಪೌಂಡುಗಳನ್ನು ಯಾವ ತಡೆಯೂ ಇಲ್ಲದ ನಿಧಿಯಾಗಿ ಮಾರಾಟಕ್ಕೆ ಇಟ್ಟು ಜಾಹೀರಾತು ಕೊಟ್ಟನು.

ಜೋಸೆಫ್ ಹಾಲ್ ಅದನ್ನು ಕೊಳ್ಳಲು ಮುಂದಾದನು. ತನ್ನ ಸಲಹಾ ವಕೀಲನ ಮೂಲಕ ಬ್ರೌನ್‌ನ ಹಕ್ಕುಪತ್ರವನ್ನು ಪರೀಕ್ಷಿಸಿದನು. ವಿಶ್ವಸ್ಥ ನಿಧಿಯ ನಿರ್ವಾಹಕರ ಬಗೆಗೂ ವಿಚಾರಣೆ ಮಾಡಿದನು. ಬ್ರೌನ್ ಬಡ್ಡಿ ಹಣದ ಮೇಲೆ ಆತ ಪರಿಣಾಮವನ್ನುಂಟುಮಾಡುವ ಯಾವ ತಡೆಯೂ ಅವರಿಗೆ ತಿಳಿದಿರಲಿಲ್ಲ. ಆದ್ದರಿಂದ ಹಾಲ್ ಬ್ರೌನ್‌ನ ಬಡ್ಡಿಯನ್ನು ೭೧೧–೩–೬ ಪೌಂಡುಗಳಿಗೆ ಕೊಂಡು ಅದನ್ನು ತನಗೆ ವಹಿಸಿಕೊಡುವಂತೆ ನೋಡಿಕೊಂಡನು.

೧೮೧೨ ಏಪ್ರಿಲ್ ೨೫ರಂದು ಹಾಲ್ ನಿರ್ವಾಹಕರಿಗೆ ತನಗೆ ಕೊಟ್ಟಿರುವ ವಹಿಸಿಕೆಯನ್ನು ಬರಹದಲ್ಲಿ ನೋಟೀಸು ಕೊಟ್ಟನು.

೧೮೧೨ ಅಕ್ಟೋಬರ್ ೨೭ರಂದು ಡರ್ಲ್ ಮತ್ತು ಶೆರ್ರಿಂಗ್ ತಮ್ಮ ವಹಿಸಿಕೆಯನ್ನು ಕುರಿತು ನಿರ್ವಾಹಕರಿಗೆ ನೋಟೀಸು ಕೊಟ್ಟರು.

ನಿರ್ವಾಹಕರು ಈ ಮೂವರ ಹಕ್ಕುಗಳನ್ನು ನಿರ್ಣಯಿಸಿದ ಹೊರತು ಮೂವರಲ್ಲಿ ಯಾರಿಗೇ ಆಗಲಿ ಪಾವತಿ ಮಾಡಲು ನಿರಾಕರಿಸಿದರು.

ಡರ್ಲ್ ಮತ್ತು ಶೆರ್ರಿಂಗ್ ಇಬ್ಬರೂ ಹಾಲ್‌ಗೆ ವಿರುದ್ಧವಾಗಿ ಚಾನ್ಸರಿಯಲ್ಲಿ ಒಂದು ಅರ್ಜಿ ಸಲ್ಲಿಸಿದರು. ೯೩ ಪೌಂಡುಗಳನ್ನು ಜೋಸೆಫ್ ಹಾಲ್‌ಗೆ ಕೊಡುವುದಕ್ಕಿಂತ ಮುಂಚಿತವಾಗಿ ತಮ್ಮ ಹಕ್ಕುಗಳ ಪೂರೈಕೆಗೆ ಕೊಡಬೇಕೆಂದು ಕೇಳಿಕೊಂಡರು.

ಮೊದಲು ಬಂದವನಿಗೆ ಮೊದಲು ನ್ಯಾಯ ಎಂಬ ಸಿದ್ಧಾಂತವನ್ನು ಅನ್ವಯಿಸಿ ಹಾಲ್‌ಗಿಂತ ತನಗೆ ಆದ್ಯತೆ ನೀಡಬೇಕೆಂದು ಡರ್ಲ್ ವಾದಿಸಿದನು.

*ಇಲ್ಲಿ, ಹಾಲ್‌ಗೇ ಆದ್ಯತೆ ನೀಡತಕ್ಕದ್ದು ಎಂದು ತೀರ್ಪು ಕೊಡಲಾಯಿತು.*

ಪ್ಲೂಮರ್ ಅವರ ತೀರ್ಪು M.R.S. & C. p. *೫೫.*

ತನ್ನ ಬೇಡಿಕೆಯನ್ನು ಸಮರ್ಪಕಗೊಳಿಸಿಕೊಳ್ಳುವುದರಲ್ಲಿ ಅಲಕ್ಷ್ಯ ಅಜಾಗರೂಕತೆಗಳನ್ನು ತೋರಿಸಲಾಗಿದೆ ಎಂಬ ಆಧಾರದ ಮೇಲೆ ಈ ತೀರ್ಪು ನಿಂತಿತ್ತು. ಆದರೆ ಈಗ ಅದು ನಡವಳಿಕೆಗೆ ಸಂಬಂಧಪಡದೆ ಸ್ವತಂತ್ರವಾಗಿದೆ. ಮೊದಲು ನೋಟೀಸು ಕೊಡುವ ವಹಿಸಿಕೊಂಡ ವ್ಯಕ್ತಿಗೆ ಮೊದಲು ಪಾವತಿ, ಇನ್ನೊಬ್ಬ ವ್ಯಕ್ತಿಯು ಅಲಕ್ಷ್ಯ ತೋರಿಸಿದ್ದಾನೋ ಇಲ್ಲವೋ ಅದು ಇಲ್ಲಿ ಲೆಕ್ಕಕ್ಕೆ ಬರುವುದಿಲ್ಲ.

*ರೆ ಡಲ್ಲಾಸ್ (೧೯೦೪) ೨ Ch. ೩೮೫*

ಡರ್ಲ್ >< ಹಾಲ್ ಮೊಕದ್ದಮೆಯ ತೀರ್ಪು ಯಾವಾಗಲೂ ವ್ಯಕ್ತಿಯ ಎಲ್ಲಾ ನ್ಯಾಯೋಚಿತ ಆಸಕ್ತಿಗಳನ್ನು ವಹಿಸಿಕೊಡುವ ವಿಷಯಕ್ಕೆ ಅನ್ವಯಿಸುತ್ತದೆ.

**ಡರ್ಲ್ >< ಹಾಲ್ ತೀರ್ಪಿನಂತೆ ನೋಟೀಸನ್ನು ಯಾರಿಗೆ ಕೊಡಬೇಕು**

೧. ಅದನ್ನು ಸಾಲಿಗ, ವಿಶ್ವಸ್ಥ ಅಥವಾ ವಹಿಸಿಕೊಂಡವನಿಗೆ ಹಣ ಪಾವತಿ ಮಾಡುವ ಕರ್ತವ್ಯ ಹೊಂದಿರುವ ಬೇರೆ ಯಾವನೇ ವ್ಯಕ್ತಿಗೆ ಕೊಡಬೇಕು.

*ಸ್ಟೀಫನ್ಸ್ >< ಗ್ರೀನ್ (೧೮೯೫) ೨ Ch. ೧೪೮.*

೨. ಸಲಹಾ ವಕೀಲನಿಗೆ ನೋಟೀಸು ಪರಿಣಾಮಕಾರಿಯಾಗುವುದು, ಅವನಿಗೆ ಅದನ್ನು ಪಡೆಯಲು ಸ್ಪಷ್ಟವಾಗಿಯೋ, ಸೂಚ್ಯವಾಗಿಯೋ ಅಧಿಕಾರವಿದ್ದಾಗ ಮಾತ್ರ.

*(೧೮೮೦) ೧೪ Ch. D. ೪೦೬*

೪. ಹಳೆಯ ಟ್ರಸ್ಟಿಗಳಿಗೆ ನೋಟೀಸು ಕೊಟ್ಟಿದ್ದ ಪಕ್ಷದಲ್ಲಿ ಹೊಸ ಟ್ರಸ್ಟಿಗಳಿಗೆ ಹೊರತಾಗಿ ಕೊಡಬೇಕಾದ ಅಗತ್ಯ ಇಲ್ಲ.

**ತಿಳಿವಳಿಕೆಯ ಸ್ವರೂಪ ಹೇಗಿರಬೇಕು**

೧. ಹಿಂದೆ ನೋಟೀಸು ಎನ್ನುವುದು ಔಪಚಾರಿಕವಾದ ಬರಹ ರೂಪದ ತಿಳಿವಳಿಕೆಯಾಗಲೇ ಬೇಕೆಂದಿರಲಿಲ್ಲ, ಕೇವಲ ಬಾಯಿ ಮಾತೇ ಸಾಕಾಗಿತ್ತು.

೨. ಆದರೆ ೧೯೨೫ರಿಂದ ಈಚೆಗೆ ಅದು ಬರವಣಿಗೆಯಲ್ಲಿಯೇ ಇರತಕ್ಕದ್ದೆಂದು ನಿಯಮವಿದೆ.

## ಒಂದು ನ್ಯಾಯೋಚಿತ ವಹಿಸಿಕೆಯಲ್ಲಿ ವಹಿಸಿಕೊಂಡವನು ಯಾವ ಹಕ್ಕು ಪಡೆಯುತ್ತಾನೆ

೧. ಉದ್ದಕ್ಕೂ ಧರ್ಮನ್ಯಾಯದ ಪ್ರಕಾರ ಒಂದು ವಸ್ತುವಿನ ಕ್ರಿಯೆಯನ್ನು ವಹಿಸಿಕೊಂಡವನು ವಹಿಸಿಕೊಟ್ಟವನಿಗಿಂತ ಉತ್ತಮವಾದ ಹಕ್ಕನ್ನೇನೂ ಪಡೆಯುವುದಿಲ್ಲ.

೨. ಬೇರೆ ಮಾತುಗಳಲ್ಲಿ ಹೇಳುವುದಾದರೆ, ವಹಿಸಿಕೊಳ್ಳುವನಿಂದ ಯಾವ ಎಲ್ಲಾ ಪರಿಣಾಮಗಳಾಗುತ್ತವೋ ಅವೆಲ್ಲಕ್ಕೂ ಒಳಪಟ್ಟು ವಹಿಸಿಕೊಳ್ಳುತ್ತಾನೆ.

*ರಾಕ್ಸ್‌ಬರ್ಗ್ >< ಕಾಕ್ಸ್ (೧೮೮೧) ೧೭ Ch. d. ೫೨೦.*

ಹಾಗಾಗಿ–

(೧) ವಹಿಸುವವನಿಗೂ ಸಾಲಗಾರನಿಗೂ ನಡುವೆ ಒಪ್ಪಂದವು ಅನೂರ್ಜಿತಗೊಳಿಸ ಬಹುದಾಗಿದ್ದರೆ, ವಹಿಸಿಕೊಂಡವನಿಗೆದುರಾಗಿ ಒಪ್ಪಂದವು ಅನೂರ್ಜಿತವಾಗಬಹುದಾದ ಲಕ್ಷಣವನ್ನು ನಿರೂಪಿಸಬಹುದು.

(೨) ಸಾಲಗಾರನಿಗೆ ವಹಿಸಿಕೊಂಡವನಿಂದ ಉತ್ತರ ಹಾಕಿಕೊಳ್ಳಬೇಕಾದುದು ಏನಾದರೂ ಇದ್ದರೆ, ಅದು ಅವನಿಗೆ ದೊರಕುತ್ತದೆ.

(೩) ಆದರೂ ವಹಿಸಿಕೊಂಡವನಿಗೆ ನೋಟೀಸಿನ ನಂತರ ಉದ್ಭವವಾಗುವ ನ್ಯಾಯೋಚಿತ ನಿಯಮಗಳಿಂದ ಮುಕ್ತನಾಗಿರುತ್ತಾನೆ.

ನೋಟೀಸು ಕೊಟ್ಟ ತಾರೀಖಿನ ನಂತರ ಪಡೆದ ಯಾವುದೇ ಕೃತ್ಯದಿಂದ, ವಹಿಸಿಕೊಂಡವನಿಗೆ ನೋಟೀಸಿನ ದಿನ ಯಾವ ಹಕ್ಕುಗಳಿದ್ದುವೋ ಅವುಗಳನ್ನು ಸಾಲಗಾರನು ಕುಂಠಿತಗೊಳಿಸಲು ಸಾಧ್ಯವಿಲ್ಲ.

## ಮುಂದೆ ದೊರಕಲಿರುವ ಹಕ್ಕುಗಳ ವಹಿಸಿಕೆ

೧. ಇದುವರೆಗೆ ನಾವು ವಹಿಸಿಕೆಯು ಕೂಡಿ ಬಂದ ಹಕ್ಕುಗಳನ್ನು ವಹಿಸುವ ವಿಚಾರವಾಗಿ ಪರಿಶೀಲಿಸಿದ್ದೇವೆ.

೨. ಮುಂದೆ ದೊರಕಲಿರುವ ಹಕ್ಕುಗಳ ವಹಿಸುವಿಕೆಯನ್ನು ಕುರಿತು ಈಗ ಸ್ವಲ್ಪ ನೋಡಬಹುದು.

೩. ಅಂತಹ ಹಕ್ಕುಗಳ ಉದಾಹರಣೆ.

(i) ಆಸ್ತಿಗೆ ರಕ್ತಸಂಬಂಧಿ ವಾರಸುದಾರನ ಆಗಮನದ ನಿರೀಕ್ಷೆ.

(ii) ತನ್ನ ವ್ಯಕ್ತಿತ್ವಕ್ಕೆ ಮುಂದಿನ ವಾರಸುದಾರನ ನಿರೀಕ್ಷೆ.

(iii) ಇನ್ನೂ ಸಂಪಾದಿಸಿಲ್ಲದ ಸರಕುಸಾಗಣೆ ವೆಚ್ಚ.

(iv) ಮುಂದಿನ ಸಾಲಗಳು.

೪. ವ್ಯವಹಾರ ನ್ಯಾಯದಲ್ಲಿ ಅವೆಲ್ಲ ಊರ್ಜಿತವಾಗಿರಲಿಲ್ಲ. ಒಬ್ಬ ವ್ಯಕ್ತಿಯು ತನಗಿನ್ನೂ ಬಂದಿರದುದನ್ನು ವಹಿಸಿಕೊಡಲು ಸಾಧ್ಯವಿರಲಿಲ್ಲ. ಧರ್ಮನ್ಯಾಯದಲ್ಲಿ ಅವುಗಳನ್ನು ವಹಿಸಲು ಅವಕಾಶವಾಯಿತು.

೫. ಧರ್ಮನ್ಯಾಯವು ಅವುಗಳನ್ನು ವಹಿಸಿಕೆಗಳೆಂದು ಪರಿಗಣಿಸದೆ **ವಹಿಸಲು ಒಪ್ಪಂದಗಳು** ಎಂದು ಪರಿಗಣಿಸಿತು. ವಹಿಸಿಕೊಂಡವನಿಗೆ ಅವು ನಿಜವಾಗಿ ಪ್ರಾಪ್ತವಾದಾಗ ಒಪ್ಪಂದದ ಪ್ರಕಾರ ಅವನು ಕಡ್ಡಾಯವಾಗಿ ನಡೆದುಕೊಳ್ಳಬೇಕಾಗಿತ್ತು.

೬. ವಹಿಸುವವನಿಗೆ ಹಕ್ಕು ಬಂದಾಗ ಅದರ ಲಾಭವು ತಕ್ಷಣವೆ ವಹಿಸಿಕೊಂಡವನಿಗೆ ವರ್ಗಾವಣೆ

ಯಾಗುತ್ತಿತ್ತು. ಆದರೆ ನ್ಯಾಯಿಕ ಹಿತಾಸಕ್ತಿಯು ವಹಿಸುವವನಲ್ಲೇ ಉಳಿದಿರುತ್ತಿತ್ತು. ಹಾಗಾಗಿ ಅವನು ಹಣವನ್ನು ಕೊಟ್ಟು ಬೇರೊಬ್ಬನಿಗೆ ಮುಂದೆ ವಹಿಸಿಕೊಟ್ಟರೆ, ಹಿಂದಿನ ವಹಿಸಿಕೆಯ ವಿಚಾರ ಅವನಿಗೆ ತಿಳಿದಿರದಿದ್ದರೆ, ಅವನ ಹಕ್ಕು ಊರ್ಜಿತವಾಗುತ್ತಿತ್ತು.

## ಪರಿವರ್ತನೆ

### I. ಪರಿವರ್ತನೆಯ ಸಿದ್ಧಾಂತದ ಅಗತ್ಯ

೧. ಇಂಗ್ಲಿಷ್ ಕಾನೂನು ವ್ಯಕ್ತಿಯ ಸ್ಥಿರ ಮತ್ತು ಚರ ಆಸ್ತಿಗಳ ವಹಿಸುವಿಕೆಯು ಬೇರೆಯೇ ಆದ ಇನ್ನೊಂದು ವಿಧಾನವನ್ನು ಹೇಳಿತ್ತು. ಅಂತಿಮ ಇಷ್ಟಪತ್ರವನ್ನು ಬರೆದಿಡದೆ ಅವನು ಮೃತನಾದ ಸಂದರ್ಭದಲ್ಲಿ ಅದು ಅನ್ವಯವಾಗುತ್ತಿತ್ತು. ಸ್ಥಿರ ಆಸ್ತಿಯು ಅವನ ವಾರಸುದಾರನಿಗೂ ಚರ ಆಸ್ತಿಯು ಸಮೀಪ ಬಂಧುವಿಗೂ ಹೋಗುತ್ತಿತ್ತು.

೨. ಹೀಗಿರುವುದರಿಂದ, ಆಸ್ತಿಯು ವಾರಸುದಾರನಿಗೆ ಹೋಗಬೇಕೋ ಸಮೀಪ ಬಂಧುವಿಗೆ ಹೋಗಬೇಕೋ ಎನ್ನುವುದು ವಾರಸುದಾರಿಕೆಯು ಪ್ರಾರಂಭವಾದ ದಿನ ಆಸ್ತಿಯ ಸ್ಥಿತಿಗತಿ ಹೇಗಿತ್ತೋ ಅದನ್ನು ಅವಲಂಬಿಸುತ್ತದೆ.

೩. ಸಾಮಾನ್ಯವಾಗಿ ಕಷ್ಟವೇನೂ ಇರುವುದಿಲ್ಲ. ಆ ದಿನದಂದು ವಾಸ್ತವವಾಗಿ ಆಸ್ತಿಯು ಯಾವ ಸ್ಥಿತಿಯಲ್ಲಿತ್ತೋ ಅದು ಅದರ ವಹಿಸಿಕೆಯನ್ನು ನಿರ್ಧರಿಸುತ್ತದೆ. ಆದರೆ, ವಾರಸುದಾರಿಕೆ ಪ್ರಾರಂಭವಾದ ದಿನವೇ ನೆಲವನ್ನು **ಮಾರಬೇಕಾಗಿದೆ. ಆದರೆ ಇನ್ನೂ ಮಾರಿಲ್ಲ** ಅಥವಾ ನೆಲವನ್ನು ಕೊಳ್ಳಲು ಹಣವನ್ನು **ಹೂಡಬೇಕಾಗಿದೆ ಆದರೆ ಇನ್ನೂ ಹೂಡಿಲ್ಲ** ಎಂದಿಟ್ಟುಕೊಳ್ಳೋಣ. ಆಗ ಆಸ್ತಿಯ ವಹಿಸಿಕೆ ಹೇಗೆ ನಿರ್ಧರಿತವಾಗುತ್ತದೆ? ವಾಸ್ತವವಾಗಿ ಮಾರಾಟವಾಗುವ ಗಳಿಗೆಯವರೆಗೂ ನೆಲವನ್ನು ವಹಿಸಿಕೆಯಾಗಬೇಕಾದ ನೆಲವೆಂದು ಪರಿಗಣಿಸಿದರೆ ಅದು ವಾರಸುದಾರನಿಗೆ ಹೋಗುತ್ತದೆ. ಆದರೆ ಅದನ್ನು ಹಣವೆಂದು ಪರಿಗಣಿಸಿದ್ದೇ ಆದರೆ, ಅದನ್ನು ಹಣಕ್ಕಾಗಿ ಮಾರಾಟ ಮಾಡಬೇಕಾಗಿದ್ದುದರಿಂದ, ಅದು ನೆಲವೇ ಅದರೂ, ಸಮೀಪ ಬಂಧುವಿಗೆ ಸೇರುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇಲ್ಲಿ ಇದ್ದ ಪ್ರಶ್ನೆ ಆಸ್ತಿಯನ್ನು ಅದು ಇದ್ದ ರೀತಿಯಲ್ಲಿ ವಹಿಸಬೇಕಾಗಿತ್ತೆ ಅಥವಾ ಅದು ಪರಿವರ್ತಿತವಾಗಬೇಕಾದ ಸ್ವರೂಪದ ಆಧಾರದ ಮೇಲೆಯೇ ಎನ್ನುವುದು. ಧರ್ಮನ್ಯಾಯವು ಕೊಟ್ಟ ಉತ್ತರ, ಅದು ವಾಸ್ತವವಾಗಿ ಕಂಡುಬಂದಿದ್ದ ಸ್ಥಿತಿಯ ಆಧಾರದ ಮೇಲಲ್ಲ, ಯಾವ ರೀತಿಯಾಗಿ ಅದು ಪರಿವರ್ತಿತವಾಗಲು ಉದ್ದೇಶಿಸಿತ್ತು ಎಂಬುದರ ಮೇಲೆ ಆಸ್ತಿಯನ್ನು ವಹಿಸಬೇಕು ಎಂದು.

೪. ಪರಿವರ್ತನ ಸಿದ್ಧಾಂತ ಎಂದರೆ ಇದೇ. ಸ್ಥಿರ ಮತ್ತು ಚರ ಆಸ್ತಿಗಳ ಉತ್ತರಾಧಿಕಾರದ ನಿಯಮಗಳಲ್ಲಿ ವ್ಯತ್ಯಾಸವಿರದಿದ್ದರೆ ಈ ಸಿದ್ಧಾಂತದ ಅವಶ್ಯಕತೆ ಇರುತ್ತಿರಲಿಲ್ಲ. ಈಗ ಈ ವ್ಯತ್ಯಾಸವನ್ನು ೩೩, ೪೫ ವಿಭಾಗಗಳ ಮೂಲಕ ರದ್ದುಪಡಿಸಲಾಗಿದೆ. ಆದ್ದರಿಂದ ಪರಿವರ್ತನೆ ಎನ್ನುವುದು ತನ್ನೆಲ್ಲ ಪ್ರಾಮುಖ್ಯವನ್ನು ಕಳೆದುಕೊಂಡಿದೆ.

೫. ಭಾರತದಲ್ಲಿ ಹೇಗೆ ಪಿತ್ರಾರ್ಜಿತ ಆಸ್ತಿಯ ಉತ್ತರಾಧಿಕಾರದ ವಿಷಯದಲ್ಲಿ– ಸ್ಥಿರ ಆಸ್ತಿಯು ವಾರಸುದಾರನಿಗೆ, ಚರ ಆಸ್ತಿಯು ಸಮೀಪ ಬಂಧುವಿಗೆ ಇರುವಂತಹ– ವ್ಯತ್ಯಾಸ ಇಲ್ಲ.

## II. ಪರಿವರ್ತನೆಗೆ ಅವಕಾಶ ಮಾಡುವ ನಾಲ್ಕು ಸಂದರ್ಭಗಳು

(೧) ಕಾನೂನಿನ ಮೂಲಕ

(೨) ನ್ಯಾಯಾಲಯದ ಆದೇಶದ ಮೂಲಕ

(೩) ಒಪ್ಪಂದದ ಮೂಲಕ

(೪) ದಸ್ತಾವೇಜು ಅಥವಾ ಉಯಿಲಿನ ಸೂಚನೆಯಂತೆ

### (೧) ಕಾನೂನಿನ ಮೂಲಕ ಪರಿವರ್ತನೆ

೧. ಕಾನೂನಿನ ಮೂಲಕ ಪರಿವರ್ತನೆಯು ಸಂಭವಿಸುವ ಒಂದೇ ಒಂದು ಸಂದರ್ಭವಿದೆ. ಅದು ಪಾಲುದಾರರಿರುವ ಸಂದರ್ಭ ೧೮೯೦ರ ಪಾಲುದಾರಿಕೆ ಕಾಯಿದೆ ಪ್ರಕಾರ (ಕಲಂ ೩೯), ಭಾಗೀದಾರಿಕೆಗೆ ಒಳಪಟ್ಟಿರುವ ಆಸ್ತಿಯನ್ನು ಮಾರಿ ಪ್ರತಿಫಲವನ್ನು ಸಾಲ ಮತ್ತು ಇತರ ಬಾಧ್ಯತೆಗಳನ್ನು ತೀರಿಸಿದ ನಂತರ, ಪಾಲುದಾರರು ಬಂಡವಾಳದಲ್ಲಿ ತಮಗಿರುವ ಷೇರುಗಳ ಸಂಖ್ಯೆಗನುಗುಣವಾಗಿ ವಿಭಾಗಿಸಿಕೊಳ್ಳಬೇಕು. ಈ ಕಾನೂನಿನಿಂದಾಗಿ ಪಾಲುದಾರಿಕೆಯ ಆಸ್ತಿಯಾಗಿರುವ ನೆಲವನ್ನು ಚರ ಆಸ್ತಿ ಎಂದು ಪರಿಗಣಿಸಲಾಗುತ್ತದೆಯೇ ಹೊರತು ಸ್ಥಿರ ಆಸ್ತಿ ಎಂದಲ್ಲ.

೨. ಇದನ್ನು ಪಾಲುದಾರರು ಮತ್ತು ಅವರ ಮರಣಾನಂತರ ಅವರ ಪ್ರತಿನಿಧಿಗಳು ಇವರ ನಡುವೆ ಪಾಲುದಾರಿಕೆಯ ಸೊತ್ತುಗಳ ಹಂಚಿಕೆಗೆ ಸಂಬಂಧಪಟ್ಟ ಹಾಗೆ ಮಾತ್ರವಲ್ಲದೆ ಸತ್ತುಹೋದ ಒಬ್ಬ ಪಾಲುದಾರನ ಆಸ್ತಿಗೆ ಹಕ್ಕುದಾರರಾದ ವ್ಯಕ್ತಿಗಳ ನಡುವೆ ಹಂಚಿಕೆಗೂ ಚರ ಆಸ್ತಿ ಎಂದೇ ಪರಿಗಣಿಸಲಾಗುತ್ತದೆ.

೩. ಸ್ಥಿರ ಆಸ್ತಿಯು ಚರ ಆಸ್ತಿಯಾಗಿ ಪಾಲುದಾರಿಕೆ ಕಾಯಿದೆ ಪ್ರಕಾರ ಪರಿವರ್ತಿತವಾಗುವುದು ಪಾಲುದಾರಿಕೆಯು ವಿಸರ್ಜಿತವಾದ ದಿನ ಅಲ್ಲ, ಅಥವಾ ಒಬ್ಬ ಪಾಲುದಾರನು ಮೃತನಾದ ದಿನ ಅಲ್ಲ, ಅದು ಯಾವ ಗಳಿಗೆಯಲ್ಲಿ ಪಾಲುದಾರಿಕೆಯ ಆಸ್ತಿಯಾಯಿತೋ ಆಗಲೇ.

೪. ಪರಿವರ್ತನಾ ಸಿದ್ಧಾಂತವು ಪಾಲುದಾರಿಕೆಯ ಸ್ಥಿರ ಆಸ್ತಿಗೆ ಅನ್ವಯವಾಗುತ್ತದೆ. ಅದಕ್ಕೆ ವಿರುದ್ಧವಾದ ಉದ್ದೇಶವು ವ್ಯಕ್ತವಾಗಿರದಿದ್ದರೆ, ಪಾಲುದಾರಿಕೆಯ ಒಪ್ಪಂದಗಳು ಸ್ಥಿರ ಆಸ್ತಿಯನ್ನು ಚರ ಆಸ್ತಿಯನ್ನಾಗಿ ಏಕೆ ಪರಿವರ್ತಿಸುತ್ತವೆಯೆಂದರೆ, ಒಬ್ಬ ಪಾಲುದಾರನಿಗೆ ಪಾಲುದಾರಿಕೆಯು ವಿಸರ್ಜನೆಗೊಂಡಾಗ, ಆ ಆಸ್ತಿಯ ಯಾವುದೇ ನಿರ್ದಿಷ್ಟ ಭಾಗಗಳ ಹಕ್ಕುದಾರಿಕೆ ಇರುವುದಿಲ್ಲ. ಆದರೆ ಪಾಲು ಒಪ್ಪಂದದಲ್ಲಿ ಯಾವನೇ ಒಬ್ಬ ಪಾಲುದಾರನಿಗೆ ನಿರ್ದಿಷ್ಟ ಆಸ್ತಿಯನ್ನು ಪಡೆಯಲು ಅನುಮತಿಸುವ ಒಂದು ಅವಕಾಶ ಇರಬಹುದು. ಅಂತಹ ಸಂದರ್ಭದಲ್ಲಿ ಪರಿವರ್ತನೆಯು ಅನ್ವಯವಾಗುವುದಿಲ್ಲ.

### (೨) ನ್ಯಾಯಾಲಯದ ಆದೇಶದ ಮೂಲಕ ಪರಿವರ್ತನೆ

೧. ಸ್ಥಿರ ಆಸ್ತಿಯೊಂದರ ಮಾರಾಟಕ್ಕೆ ನ್ಯಾಯಾಲಯವು ಆದೇಶ ನೀಡಿದಾಗ, ಯಾರ ಆಸ್ತಿಯನ್ನು ಮಾರಲು ಆದೇಶಿಸಲಾಯಿತೋ ಆ ವ್ಯಕ್ತಿಯ ಉತ್ತರಾಧಿಕಾರದ ಉದ್ದೇಶದಿಂದ ಹಾಗೆ ಸ್ಥಿರ ಆಸ್ತಿಯನ್ನು ಚರ ಆಸ್ತಿಯನ್ನಾಗಿ ಪರಿವರ್ತಿಸಲಾಗುತ್ತದೆ.

**ನಿದರ್ಶನ:** 'ಎ' 'ಬಿ' 'ಸಿ' ಮೂವರಿಗೂ ಒಂದು ಸ್ಥಿರ ಆಸ್ತಿಯಲ್ಲಿ ಸಮಾನವಾದ ಷೇರುಗಳಿವೆ. ನ್ಯಾಯಾಲಯವು ಆ ಸ್ಥಿರ ಆಸ್ತಿಯನ್ನು ಮಾರಬೇಕೆಂದು ಆದೇಶಿಸುತ್ತದೆ. ಈ ಆದೇಶವು ಅವರ ಸ್ಥಿರ ಆಸ್ತಿಯ ಶೇರುಗಳನ್ನು ಚರ ಆಸ್ತಿಯ ಶೇರುಗಳನ್ನಾಗಿ ಪರಿವರ್ತಿಸುತ್ತದೆ. ಅದನ್ನು ಅನುಭೋಗಿಸುವ

ಹಕ್ಕು ಪಡೆದಿರುವವರು ಸಮೀಪ ಬಂಧುಗಳಾಗುವರೇ ಹೊರತು ವಾರಸುದಾರರಲ್ಲ.

೨. ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

(i) ಮಾರಾಟದ ಆದೇಶವು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೇ ಇರಬೇಕು.

(ii) ಆಸ್ತಿಯನ್ನು ಮಾರುವುದರ ಉದ್ದೇಶ ಅದರ ಮಾರಾಟದಿಂದ ಬಂದ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವುದೇ ಅಲ್ಲವೇ ಎನ್ನುವುದು ಮುಖ್ಯವಲ್ಲ. ಮಾರಾಟದ ಉದ್ದೇಶ ಕೇವಲ ವೆಚ್ಚವನ್ನು ನಿರ್ವಹಿಸಲಿಕ್ಕಾಗಿ ಇರಬಹುದು. ಆದರೂ ಆದೇಶವು ಮಾರಾಟಕ್ಕಾಗಿ ಇದ್ದರೆ, ಅದು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿದ್ದರೆ, ಪರಿವರ್ತನೆಯನ್ನು ಉಂಟುಮಾಡುತ್ತದೆ.

(iii) ಆಸ್ತಿಯು ವಾಸ್ತವವಾಗಿ ಮಾರಾಟವಾಯಿತೇ ಅಥವಾ ಮಾರಲು ಆದೇಶಿಸಲಾಯಿತೇ ಎನ್ನುವುದು ಮುಖ್ಯವಲ್ಲ. ಮಾರಾಟದ ಆದೇಶವೇ ಸಾಕು, ಪರಿವರ್ತನೆಯನ್ನು ಜಾರಿಗೊಳಿಸುತ್ತದೆ.

(iv) ಪರಿವರ್ತನೆಯು ಆದೇಶದ ದಿನದಿಂದ ಜಾರಿಗೆ ಬರುತ್ತದೆಯೇ ಹೊರತು ಮಾರಾಟವಾದ ದಿನದಿಂದ ಅಲ್ಲ.

೩. ನ್ಯಾಯಾಲಯದ ಆದೇಶವು ವಾರಸುದಾರಿಕೆಯ ಉದ್ದೇಶದಿಂದ ಪರಿವರ್ತನೆಯನ್ನು ವರ್ತಿಸದ ಎರಡು ಸಂದರ್ಭಗಳಿವೆ.

(i) ಆಸ್ತಿಯ ಸ್ವರೂಪ ಬದಲಾವಣೆಯು ವ್ಯಕ್ತಿಯ ಮರಣಾನಂತರ ವರ್ತಿಸುವುದಿಲ್ಲ ಎಂದು ನ್ಯಾಯಾಲಯವು ಆದೇಶಿಸಿದ್ದರೆ, ಅಂತಹ ಸಂದರ್ಭದಲ್ಲಿ ಮಾರಾಟದ ಹಣವು ವಾರಸುದಾರನಿಗೆ ಹೋಗುತ್ತದೆಯೇ ಹೊರತು ಸಮೀಪ ಬಂಧುವಿಗಲ್ಲ.

(ii) ಕಾನೂನಿನ ಯಾವುದಾದರೂ ಅವಕಾಶವು, ಆಸ್ತಿಯ ವಹಿಸುವಿಕೆಯನ್ನು ನಿಷೇಧಿಸಿದ್ದರೆ, ಉದಾಹರಣೆಗೆ, ೧೮೯೦ರ ಲ್ಯೂನಸಿ ಆ್ಯಕ್ಟ್‌ನ ೧೨೩ನೆಯ ಕಲಮು, ಮತಿಭ್ರಮಣೆ ಯಾಗಿರುವ ಒಬ್ಬನ ಆಸ್ತಿಯನ್ನು ಮಾರಿದರೆ, ಆ ಮೊತ್ತವು, ಮಾರಾಟವಾಗಿರದಿದ್ದರೆ, ಹೇಗೋ ಹಾಗೆ ಹಕ್ಕುದಾರರಿಗೆ ಸಲ್ಲುತ್ತದೆ.

### (೩) ಒಂದು ಒಪ್ಪಂದದ ಪ್ರವರ್ತನೆಯಿಂದ ಪರಿವರ್ತನೆ

೧. ಸ್ಥಿರ ಆಸ್ತಿಯನ್ನು ಮಾರಬೇಕೆಂದು ಒಂದು ಕರಾರಿನ ಬದ್ಧತೆಯಿದ್ದರೆ, ಆ ಸ್ಥಿರ ಆಸ್ತಿಯನ್ನು ಮಾರುವವನ ಚರ ಆಸ್ತಿಯ ಭಾಗ ಎಂದು ಪರಿಗಣಿಸಲಾಗುವುದು. ಇದಕ್ಕೆ ವಿರುದ್ಧವಾಗಿ ಕೊಂಡವನ ಆಸ್ತಿಯ ಬಡ್ಡಿಯನ್ನು ಒಪ್ಪಂದದ ಅವಧಿ ಮುಗಿಯುವ ಮೊದಲೇ ಅವನು ತೀರಿಕೊಂಡರೂ ಅದು ಸ್ಥಿರ ಆಸ್ತಿಯೆಂದು ಪರಿಗಣಿಸಲಾಗುವುದು.

೨. ಆದರೆ ಇದು ಒಂದು ನಿಯಮಕ್ಕೆ ಒಳಪಟ್ಟಿದೆ. ಒಪ್ಪಂದವು ಹೇಗಿರಬೇಕೆಂದರೆ, ಅದರ ನಿರ್ದಿಷ್ಟ ವರ್ತನೆಯನ್ನು ನ್ಯಾಯಾಲಯವು ಆದೇಶಿಸಿರಬೇಕು.

–೩೪ *Ch. D.* ೧೬೬.

ಪರಿವರ್ತನೆಯ ತತ್ವವನ್ನು ಜಾರಿಗೊಳಿಸಲು ನೋಟೀಸು ಕೊಡುವುದು ಸಾಲದು, ಕರಾರು ಅವಧಿಗೆ ಮೊದಲೇ ಮುಗಿದು ಹೋಗುವಂತಿದ್ದರೆ ಅಥವಾ ಜಾರಿಗೊಳಿಸಲು ಸಾಧ್ಯವಾಗುವಂತಿಲ್ಲವಾದರೆ ಪರಿವರ್ತನೆ ಇರುವುದಿಲ್ಲ.

## (೪) ಗೇಣಿ ಕರಾರಿನೊಂದಿಗೆ ಕೊಳ್ಳುವ ಆಯ್ಕೆಯೂ ಇದ್ದರೆ ಅದರನ್ವಯ ಪರಿವರ್ತನೆ

'ಎ'ಯು 'ಬಿ'ಗೆ ನಿರ್ದಿಷ್ಟ ಆಸ್ತಿಯನ್ನು ಏಳು ವರ್ಷಗಳಿಗೆ ಅಡಮಾನ ಹಾಕುತ್ತಾನೆ. ಆ ಅವಧಿಯೊಳಗೆ ನಿರ್ದಿಷ್ಟ ಮೊತ್ತವನ್ನು ಪಾವತಿ ಮಾಡಿ ಅದನ್ನು ಕೊಂಡುಕೊಳ್ಳುವ ಆಯ್ಕೆಯನ್ನು ಅವನಿಗೆ ಕೊಡುತ್ತಾನೆ. 'ಬಿ'ಯು ಈ ಆಯ್ಕೆಯನ್ನು ಚಲಾಯಿಸುತ್ತಾನೆ.

ಮೂರು ಪ್ರಶ್ನೆಗಳು ಉದ್ಭವಿಸುತ್ತವೆ:

(i) ಆಯ್ಕೆಯ ಚಲಾವಣೆಯು ಪರಿವರ್ತನೆಯನ್ನು ಉಂಟುಮಾಡುತ್ತದೆಯೇ?

(ii) ಭೋಗ್ಯ ಮಾಡಿದವನ ಮರಣಾನಂತರ ಆಯ್ಕೆಯನ್ನು ಚಾಲ್ತಿಗೆ ತಂದರೂ ಅದು ಪರಿವರ್ತನೆಯನ್ನು ತರುತ್ತದೆಯೇ?

(iii) ಅಂತಹ ಪರಿವರ್ತನೆಯು ಯಾವ ತಾರೀಖಿನಿಂದ ಪ್ರವರ್ತನೆಗೆ ಬರುತ್ತದೆ?

### (i) ಆಯ್ಕೆಯ ಚಲಾವಣೆಯು ಪರಿವರ್ತನೆಯನ್ನು ಉಂಟುಮಾಡುತ್ತದೆಯೇ?

ಕಾನೂನಿನಂತೆ, ಕೊಟ್ಟಿರುವ ಆಯ್ಕೆ ಮಾರಾಟ ಮಾಡುವುದಕ್ಕೆ. ಆಯ್ಕೆಯ ಚಲಾವಣೆಯೆಂದರೆ ಈ ನೀಡಿಕೆಯನ್ನು ಒಪ್ಪಿಕೊಳ್ಳುವುದು, ನೀಡಿಕೆಯನ್ನು ಒಪ್ಪಿಕೊಳ್ಳುವುದರಲ್ಲಿ ಒಪ್ಪಂದವಿದೆ. ಒಪ್ಪಂದದಲ್ಲಿ ಫಲಿತವಾಗುವಂತೆ ಆಯ್ಕೆಯನ್ನು ಚಲಾಯಿಸುವುದು ಪರಿವರ್ತನೆಗೆ ಎಡೆಗೊಡುತ್ತದೆ. ಆದ್ದರಿಂದ ಮೊದಲನೆಯ ಪ್ರಶ್ನೆಗೆ ಉತ್ತರ ಹೌದು ಎಂಬುದಾಗಿದೆ.

### (ii) ಗೇಣಿಗೆ ಮಾಡಿದವನು ಮೃತನಾಗಿ ಗೇಣಿದಾರನ ಮರಣಕ್ಕೆ ಮುಂಚೆ ಆಯ್ಕೆಯ ಚಲಾವಣೆ

(೧) ಭೋಗ್ಯದಾರನು (ಭೋಗ್ಯ ಮಾಡಿಸಿಕೊಂಡವನು) ಭೋಗ್ಯ ಮಾಡಿಕೊಟ್ಟವನು ಮೃತನಾಗುವ ಮುಂಚೆ, ಅವನಿನ್ನೂ ಬದುಕಿರುವಾಗಲೇ ತನ್ನ ಆಯ್ಕೆಯನ್ನು ಚಲಾಯಿಸಿದರೆ ಆಗ ಪರಿವರ್ತನೆಯುಂಟಾಗುತ್ತದೆ. ಏಕೆಂದರೆ, ಆಯ್ಕೆಯು ಕೊಡುವ ನೀಡಿಕೆಯನ್ನು ನ್ಯಾಯಿಕವಾಗಿ ಒಪ್ಪಿಕೊಳ್ಳಬಹುದು. ಅಲ್ಲಿ ಬದ್ಧಗೊಳಿಸುವ ಒಂದು ಕರಾರು ಘಟಿಸಬಹುದು.

(೨) ಭೋಗ್ಯದಾರನು ಅದನ್ನು ಮಾಡಿಕೊಟ್ಟವನ ಮರಣಾನಂತರ ಆಯ್ಕೆಯನ್ನು ಚಲಾಯಿಸಿದ ಪಕ್ಷದಲ್ಲಿ, ತಾತ್ವಿಕವಾಗಿ ಪರಿವರ್ತನೆ ಸಂಭವಿಸಬಾರದು. ಏಕೆಂದರೆ ಅಲ್ಲಿ ಯಾವುದೇ ಒಂದು ಕರಾರು ಇರುವುದಿಲ್ಲ. ಆಯ್ಕೆಯನ್ನು ನೀಡಿದವನು ಮೃತನಾದ ನಂತರ ಅದನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ.

ಆದರೆ ಲಾವೆಸ್ >< ಬೆನ್ನೆಟ್ (೧೭೮೫) ೧ Cax ೧೬೭ ಮೊಕದ್ದಮೆಯಲ್ಲಿ, ಭೋಗ್ಯ ಮಾಡಿದವನು ಮೃತನಾದ ಅನಂತರ ಆಗುವ ಆಯ್ಕೆಯ ಚಲಾವಣೆಯೂ ಪರಿವರ್ತನೆಗೆ ಸರಿಯಾದ ಅವಕಾಶವಾಗುತ್ತದೆ.

(೩) ಆದರೆ ಲಾವೆಸ್ >< ಬೆನ್ನೆಟ್ ಮೊಕದ್ದಮೆಯ ನಿಯಮವು ಅಸಮಾನತೆಯನ್ನು ಹೊಂದಿದ್ದು ಪ್ರವರ್ತನೆಯಲ್ಲಿ ಸೀಮಿತವಾಗುತ್ತದೆ. ಭೋಗ್ಯ ಮಾಡಿಕೊಟ್ಟ ವ್ಯಕ್ತಿಗಳಿಗೆ ಅದು ಅನ್ವಯಿಸುತ್ತದೆ.

ಆದರೆ ಭೋಗ್ಯ ಮಾಡಿಕೊಟ್ಟವನಿಗೂ ಮಾಡಿಸಿಕೊಂಡವನಿಗೂ ನಡುವೆ ಅದು ಅನ್ವಯವಾಗುವುದಿಲ್ಲ.

**ನಿದರ್ಶನ:** 'ಎ'ಯು 'ಬಿ'ಗೆ ಒಂದು ಆಸ್ತಿಯನ್ನು ಖರೀದಿಯ ಆಯ್ಕೆಯೊಂದಿಗೆ ಭೋಗ್ಯ ಮಾಡಿದನು. ಆ ಸ್ಥಳವನ್ನು ವಿಮೆ ಮಾಡಿಸಲಾಯಿತು. 'ಬಿ'ಯು ಆಯ್ಕೆಯನ್ನು ಚಲಾಯಿಸುವುದಕ್ಕೆ ಮೊದಲೇ ಅದು ಬೆಂಕಿಯಿಂದ ಸುಟ್ಟು ಹೋಗುತ್ತದೆ. 'ಬಿ' ಆಯ್ಕೆಯನ್ನು ಚಲಾಯಿಸಿ, ತನ್ನ ಖರೀದಿಯ ಭಾಗವಾಗಿ

ವಿಮೆಯ ಹಣವನ್ನು ಕೇಳುವಂತಿಲ್ಲ. ಅದು ಎ ಮತ್ತು ಬಿ ಗಳ ನಡುವೆ ಬೇಡಿಕೆಯಾಗಿರುತ್ತದೆ *(೧೮೭೮) ೭ Ch. D. ೪೫೮, ೧೦ D. App. ೩೮೬.*

### (iii) ಒಪ್ಪಂದದಿಂದ ಪರಿವರ್ತನೆಯು ಯಾವ ದಿನದಿಂದ ಕಾರ್ಯಗತಗೊಳ್ಳುತ್ತದೆ?

(೧) ಒಪ್ಪಂದವಾದ ಗಳಿಗೆಯಿಂದಲೇ ಪರಿವರ್ತನೆಯು ಕಾರ್ಯಗತಗೊಳ್ಳುತ್ತದೆ.

(೨) ಕೊಳ್ಳುವ ಆಯ್ಕೆಯ ಸಂದರ್ಭದಲ್ಲಿ, ಭೋಗ್ಯವು ಘಟಿಸಿದ ಸಮಯದಿಂದ ಪರಿವರ್ತನೆ ಉಂಟಾಗುತ್ತದೆ.

(೩) ಲಾಭ ಮುಂತಾದ ಉದ್ದೇಶಗಳಿಗಾಗಿ, ಆಯ್ಕೆಯನ್ನು ಚಲಾಯಿಸುವವರೆಗೂ ಆಸ್ತಿಯು ಸ್ಥಿರ ಆಸ್ತಿಯಾಗೇ ಉಳಿದಿರುತ್ತದೆ. ಅದರ ಮೇಲಿನ ಗುತ್ತಿಗೆ, ಲಾಭ ಮೊದಲಾದ ಎಲ್ಲ ಪ್ರಯೋಜನವನ್ನೂ ಸ್ಥಿರಾಸ್ತಿಗೆ ಹಕ್ಕುದಾರನಾದ ವಾರಸುದಾರನು ಪಡೆಯುತ್ತಿರುತ್ತಾನೆ.

(೪) ವಹಿಸಿಕೆಯ ಉದ್ದೇಶಗಳಿಗಾಗಿ ಅದು ಚರ ಆಸ್ತಿಯಾಗಿರುತ್ತದೆ.

### (iv) ಒಡೆಯನ ಆದೇಶದ ಮೂಲಕ ಪರಿವರ್ತನೆ

ಒಂದು ದಸ್ತಾವೇಜು ಅಥವಾ ವಿಲ್‌ನಲ್ಲಿ ಇರುವುದಾದರೆ,

(೧) ಒಂದು ದಸ್ತಾವೇಜು ಅಥವಾ ಉಯಿಲಿನಿಂದಾಗಿ ಪರಿವರ್ತನೆಯುಂಟಾಗಬೇಕಾದರೆ ಎರಡು ಅಂಶಗಳು ಅತ್ಯಗತ್ಯ.

(i) ಸ್ಥಿರಾಸ್ತಿಯನ್ನು ಮಾರಲು ಅಥವಾ ಕೊಳ್ಳಲು ನಿರ್ದೇಶನವಿರಬೇಕು.

(ii) ಆ ಆದೇಶವನ್ನು ಕಾರ್ಯಗತಗೊಳಿಸಲು ಒತ್ತಾಯಪಡಿಸುವ ಹಕ್ಕುಳ್ಳ ಒಬ್ಬ ವ್ಯಕ್ತಿಯಿರಬೇಕು. ಪರಿವರ್ತನೆಯು ಯಾವಾಗಲೂ ಒಬ್ಬ ವ್ಯಕ್ತಿಯ ಪ್ರಯೋಜನಕ್ಕಾಗಿರುತ್ತದೆ. ಲಾಭವನ್ನು ಕೋರಲು ಯಾವ ವ್ಯಕ್ತಿಯೂ ಇರದೆ ಹೋದ ಪಕ್ಷದಲ್ಲಿ ಪರಿವರ್ತನೆಯಾಗಬೇಕಾದ ಅಗತ್ಯವಿಲ್ಲ.

(೨) ಪರಿವರ್ತನೆಯಾಗಬೇಕಾದರೆ ಆದೇಶವು ವಿಧ್ಯುಕ್ತವಾಗಿರಬೇಕು. ನಿರ್ದೇಶನವು ಐಚ್ಛಿಕವಾಗಿದ್ದರೆ ಪರಿವರ್ತನೆಯಿರುವುದಿಲ್ಲ, ಆಸ್ತಿಯನ್ನು ಅದು ಯಾವ ಸ್ಥಿತಿಯಲ್ಲಿ ಕಂಡುಬಂದಿತೋ ಅದರ ಪ್ರಕಾರ ಸ್ಥಿರವೋ ಚರವೋ ಎಂದು ಪರಿಗಣಿಸಲಾಗುತ್ತದೆ.

**ಟಿಪ್ಪಣಿ:** ಒಂದು ನಿರ್ದೇಶನವು ನೇರವಾಗಿಯೂ ಐಚ್ಛಿಕವಾಗಿದೆಯೆ ಅಥವಾ ತೋರಿಕೆಗೆ ಐಚ್ಛಿಕವಾಗಿದೆಯೇ ಆದರೆ ನಿಜವಾಗಿ ವಿಧ್ಯುಕ್ತವಾಗಿದೆಯೇ ಎನ್ನುವ ವ್ಯತ್ಯಾಸಕ್ಕಾಗಿ ನೋಡಿ– ಇಯರ್ ಲೋಮ್ >< ಸಾಂಡರ್ಸ್ (೧೭೫೪) ಆಂಬ್ಲರ್ ವರದಿ ೨೪೧.

ನಿರ್ದೇಶನವು ಐಚ್ಛಿಕವಾಗಿದ್ದರೆ ಸ್ಪಷ್ಟವಾಗಿರಬೇಕು. ಇಲ್ಲವಾದರೆ ಯಾವಾಗಲೂ ಅದು ವಿಧ್ಯುಕ್ತವಾಗಿದೆ ಎಂದು ಭಾವಿಸಲಾಗುತ್ತದೆ.

(೩) ಸ್ಥಿರಾಸ್ತಿಯನ್ನು ಕೊಳ್ಳಲು ಅಥವಾ ಮಾರಲು ನಿರ್ದೇಶನ ಹಾಗೂ ಆಸ್ತಿಯನ್ನು ಮಾರುವ ಇಲ್ಲವೆ ಕೊಳ್ಳುವ ಸಮಯವನ್ನು ಕುರಿತ ವಿವೇಚನೆ ಇವುಗಳ ನಡುವೆ ವ್ಯತ್ಯಾಸವನ್ನು ಕಲ್ಪಿಸಬೇಕು.

(ಅ) ನಿರ್ದೇಶನವು ವಿಧ್ಯುಕ್ತವಾಗಿದ್ದರೆ ಅದು ವಿವೇಚನೆಯೊಂದಿಗೆ ಕೂಡಿಕೊಂಡಿದೆ ಎಂಬ ಸಂಗತಿಯು ಪರಿವರ್ತನೆಯಾಗುವುದನ್ನು ತಡೆಯುವುದಿಲ್ಲ.

(ಆ) ನಿರ್ದೇಶನವು ವಿಧ್ಯುಕ್ತವಾಗಿದ್ದರೆ, ಯಾರಿಗೆ ನಿರ್ದೇಶನ ನೀಡಲಾಗಿದೆಯೋ ಅವರು

ಅದನ್ನು ನೆರವೇರಿಸಲು ವಿಫಲರಾಗುವುದರಿಂದ ಕೂಡ ಪರಿವರ್ತನೆ ತಪ್ಪುವುದಿಲ್ಲ.

(೪) ಮಾರಲು ಅಥವಾ ಕೊಳ್ಳಲು ನೀಡುವ ಸರಳ ಆದೇಶಕ್ಕೂ ಯಾವನಾದರೂ ವ್ಯಕ್ತಿಯ ಕೋರಿಕೆ ಅಥವಾ ಸಮ್ಮತಿಯನ್ನು ಅವಲಂಬಿಸಿಕೊಳ್ಳಲು ಅಥವಾ ಮಾರಲು ನೀಡುವ ಆದೇಶಕ್ಕೂ ನಡುವೆ ವ್ಯತ್ಯಾಸವನ್ನು ಕಲ್ಪಿಸಬೇಕು.

ಅಂಥದೊಂದು ಸಂದರ್ಭದಲ್ಲಿ ಪರಿವರ್ತನೆಯಿರುತ್ತದೋ ಇಲ್ಲವೋ ಎನ್ನುವುದು ದಾಖಲೆಯ ರಚನೆಯ ಮೇಲೆ ನಿಲ್ಲುತ್ತದೆ.

(ಅ) ನಿಯಮದ ಉದ್ದೇಶವು ಹೆಸರಿಸಿರುವ ವ್ಯಕ್ತಿಯು ಪರಿವರ್ತನೆ ಮಾಡುವಂತೆ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವ ಹಾಗೆ ರೂಪಿತವಾಗಿದ್ದರೆ ಆಗ ಪರಿವರ್ತನೆಯಿರುತ್ತದೆ.

(ಆ) ನಿಯಮದ ಉದ್ದೇಶವು, ಆದೇಶದ ಪ್ರವರ್ತನೆಯು ಕೋರಿಕೆಗೆ ಒಳಪಡುವಂತೆ ಮಾಡಿ ನಿಯಂತ್ರಿಸುವುದರಿಂದ ಪಕ್ಷದಲ್ಲಿ ಆಗ ಅಂತಹ ಕೋರಿಕೆಯನ್ನು ಸಲ್ಲಿಸುವವರೆಗೂ ಪರಿವರ್ತನೆಯಾಗುವುದಿಲ್ಲ.

೫. **ಪರಿವರ್ತಿಸುವ ಅಧಿಕಾರಕ್ಕೂ ಪರಿವರ್ತಿಸಲು ಆದೇಶಕ್ಕೂ** ನಡುವೆ ವ್ಯತ್ಯಾಸವನ್ನು ಕಲ್ಪಿಸಬೇಕು.

*(೧೮೯೨) ೧ Ch. ೨೭೯*

*(೧೯೧೦) ೧ Ch. ೭೫೦*

ಪರಿವರ್ತನೆಯ ಅಧಿಕಾರವು ವಿಧ್ಯುಕ್ತವಾದ ಆದೇಶವಲ್ಲ, ಆದ್ದರಿಂದ ಅಲ್ಲಿ ಪರಿವರ್ತನೆಯಾಗುವುದಿಲ್ಲ.

**ನಿದರ್ಶನ:**

'ಎ'ಯು 'ಬಿ'ಯಿಂದ ತನ್ನ ಆಸ್ತಿಯನ್ನು ಭೋಗ್ಯ ಮಾಡಿ ೩೦೦ ಪೌಂಡುಗಳನ್ನು ಸಾಲವಾಗಿ ಪಡೆದನು. 'ಬಿ'ಗೆ ಮಾರಾಟದ ಅಧಿಕಾರವನ್ನು ಕೊಟ್ಟು, ಮಾರಾಟದಿಂದ ಬಂದ ಹೆಚ್ಚಿನ ಹಣವನ್ನು 'ಎ'ಗೆ ಅವನ ನಿರ್ವಾಹಕರಿಗೆ ಮತ್ತು ಆಡಳಿತಗಾರರಿಗೆ ಕೊಡತಕ್ಕದ್ದು ಎಂದು ಷರತ್ತು ಹಾಕಿದನು.

'ಎ' ಅಂತಿಮ ಉಯಿಲು ಬರೆದಿಡದೆ ಮೃತನಾದನು. 'ಎ'ಯ ಮರಣಾನಂತರ 'ಬಿ' ಆಸ್ತಿಯನ್ನು ಮಾರಿದನು. ಹೆಚ್ಚಿನ ಹಣ ಬಂದಿತು. ಈ ಹೆಚ್ಚುವರಿ ಹಣ ಯಾರಿಗೆ ಹೋಗಬೇಕು?

ಇದು ಮಾರಾಟಕ್ಕೆ ಕೊಟ್ಟ ನಿರ್ದೇಶನವಲ್ಲ, ಆಸ್ತಿಯು 'ಎ' ಮೃತನಾದ ದಿನ ವಾಸ್ತವವಾಗಿ ಯಾವ ಸ್ಥಿತಿಯಲ್ಲಿತ್ತೋ ಅದರ ಪ್ರಕಾರ ವರ್ಗಾವಣೆಯಾಗಬೇಕು. 'ಎ' ಮೃತನಾದಾಗ ಅದು ಸ್ಥಿರಾಸ್ತಿಯಾಗಿತ್ತು. ಆದ್ದರಿಂದ ಅದು ವಾರಸುದಾರನಿಗೆ ಸಲ್ಲಬೇಕಾಗಿತ್ತು. 'ಎ' ಬದುಕಿದ್ದಾಗಲೇ ಮಾರಾಟ ನಡೆದಿದ್ದರೆ ಅವನು ಮೃತನಾದಾಗ ಅದು ಚರಾಸ್ತಿಯಾಗುತ್ತಿತ್ತು. ಆದ್ದರಿಂದ ಸಮೀಪ ಬಂಧುವಿಗೆ ಹೋಗುತ್ತಿತ್ತು.

### II. ನಿರ್ದೇಶದಿಂದ ಆದ ಪರಿವರ್ತನೆಯು ಜಾರಿಗೊಳ್ಳುವ ಸಮಯ

೧. ಇದು ಉಯಿಲಿನಲ್ಲಿ ಅಥವಾ ದಸ್ತಾವೇಜಿನಲ್ಲಿ ಉಕ್ತವಾಗಿರುವ ನಿರ್ದೇಶದ ಪ್ರಕಾರ ವ್ಯತ್ಯಾಸವಾಗುತ್ತದೆ.

೨. ನಿರ್ದೇಶವು ಉಯಿಲಿನಲ್ಲಿದ್ದರೆ ಉಯಿಲು ಮಾಡಿದವನ ಮರಣದಿಂದ ಪರಿವರ್ತನೆಯು ಸಂಭವಿಸುತ್ತದೆ.

೩. ನಿರ್ದೇಶವು ದಸ್ತಾವೇಜಿನಲ್ಲಿದ್ದರೆ, ಅದರ ನೋಂದಣಿಯ ತಾರೀಖಿನಿಂದ ಪರಿವರ್ತನೆಯು ಜಾರಿಗೆ ಬರುತ್ತದೆ. ಆದರೂ ದಸ್ತಾವೇಜು ಮಾಡಿದ ವ್ಯಕ್ತಿಯು ಮೃತನಾಗುವವರೆಗೂ ಟ್ರಸ್ಟು ಆಸ್ತಿಯನ್ನು ಮಾರುವ ಅಥವಾ ಕೊಳ್ಳುವ ಪ್ರಶ್ನೆ ಏಳುವುದಿಲ್ಲ.

**III. ಉಯಿಲಿನಲ್ಲಿ ಅಥವಾ ದಸ್ತಾವೇಜಿನಲ್ಲಿ ಪರಿವರ್ತನೆಯು ನಿರ್ದೇಶಿತವಾಗಿರುವ ಅಂಶಗಳು ವಿಫಲವಾಗುವುದರ ಪರಿಣಾಮ**

೧. ಎರಡು ಸಂದರ್ಭಗಳನ್ನು ಪ್ರತ್ಯೇಕಿಸಿ ನೋಡಬೇಕು:

(i) ಸಂಪೂರ್ಣ ವಿಫಲತೆಯ ಸಂದರ್ಭಗಳು

(ii) ಭಾಗಶಃ ವಿಫಲತೆಯ ಸಂದರ್ಭಗಳು

**i) ಸಂಪೂರ್ಣ ವಿಫಲತೆಯ ಸಂದರ್ಭಗಳು**

೧. ದಸ್ತಾವೇಜು ಅಥವಾ ಉಯಿಲು ಜಾರಿಗೆ ಬರುವ ಸಮಯದಲ್ಲಿ ಅಥವಾ ಅದಕ್ಕೆ ಮುಂಚೆ, ಉದ್ದೇಶಗಳು ಸಂಪೂರ್ಣವಾಗಿ ವಿಫಲಗೊಂಡಾಗ, ಅಥವಾ ಪರಿವರ್ತಿಸುವ ಕರ್ತವ್ಯವು ಉದ್ಭವಿಸುವ ಸಮಯಕ್ಕಿಂತ ಮೊದಲು ವಿಫಲಗೊಂಡರೆ ಪರಿವರ್ತನೆ ಸಂಭವಿಸುವುದಿಲ್ಲ. ಆಸ್ತಿಯು ಇದ್ದ ಹಾಗೆಯೇ ಉಳಿಯುತ್ತದೆ. ಕಾರಣ, ಆಸ್ತಿಯ ಲಕ್ಷಣವನ್ನು ಬದಲಾಯಿಸುವ ಬಗೆಗೆ ಒತ್ತಾಯಪಡಿಸಬಲ್ಲಂಥವರು ಯಾರೂ ಇಲ್ಲದುದು.

೨. ಈ ವಿಫಲತೆಯು ಮುಂಚಿನವಾಗಿರಬೇಕೇ ಹೊರತು ಆಮೇಲಿನದಲ್ಲ.

೩. ಸಂಪೂರ್ಣವಾಗಿ ವಿಫಲತೆಯ ಸಂದರ್ಭದಲ್ಲಿ ಪರಿವರ್ತನೆಯನ್ನು ಕುರಿತ ನಿಯಮ ಏಕರೂಪದ್ದಾಗಿರುತ್ತದೆ. ದಸ್ತಾವೇಜಿನಲ್ಲಿರುವ ನಿರ್ದೇಶನದ ಪರಿಣಾಮಗಳಿಗೂ ಉಯಿಲಿನಲ್ಲಿರುವ ನಿರ್ದೇಶನದ ಪರಿಣಾಮಗಳಿಗೂ ನಡುವೆ ವ್ಯತ್ಯಾಸವಿಲ್ಲ.

**ii) ಭಾಗಶಃ ವೈಫಲ್ಯದ ಸಂದರ್ಭಗಳು**

೧. ಉದ್ದೇಶಗಳು ಭಾಗಶಃ ಮಾತ್ರ ವಿಫಲಗೊಂಡಾಗ, ವಿಫಲವಾಗದೆ ಉಳಿದ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಪರಿವರ್ತನೆ ಅಗತ್ಯವಾಗುತ್ತದೆ. ಅದರಿಂದ ಪರಿವರ್ತನೆಯ ಸಿದ್ಧಾಂತವು ಪ್ರವರ್ತಿಸುತ್ತದೆ, ಯಾವ ರೂಪದಲ್ಲಿ ಪರಿವರ್ತಿತವಾಗಬೇಕೆಂದು ಉದ್ದೇಶಿತವಾಗಿದೆಯೋ ಆ ರೂಪದಲ್ಲಿ ಆಸ್ತಿಯನ್ನು ಸ್ವೀಕರಿಸಲು ಪ್ರತಿನಿಧಿಯು ಹಕ್ಕು ಪಡೆಯುತ್ತಾನೆ.

೨. ಅಗತ್ಯವಾಗಿರುವಷ್ಟರ ಮಟ್ಟಿಗೆ ಅದನ್ನು ಕಾರ್ಯಗತಗೊಳಿಸಲಾಗುತ್ತದೆ.

**ನಿದರ್ಶನ:**

'ಎ'ಯು ತನ್ನ ಸ್ಥಿರ ಆಸ್ತಿಯನ್ನು ಟ್ರಸ್ಟಿಗೆ ಕೊಟ್ಟು ಟ್ರಸ್ಟಿಗಳು ಅದನ್ನು ಮಾರಿ ಬಂದ ಹಣವನ್ನು 'ಬಿ' ಮತ್ತು 'ಸಿ'ಗಳಿಗೆ ಹಂಚಬೇಕೆಂದು ಹೇಳಿದ್ದಾನೆ. 'ಎ'ಗಿಂತ ಮೊದಲೇ 'ಬಿ' ಮೃತನಾಗುತ್ತಾನೆ. 'ಎ' ಮೃತನಾದ ಮೇಲೂ 'ಸಿ' ಜೀವಿಸಿರುತ್ತಾನೆ. ಇಲ್ಲಿ 'ಎ' ತನಗೆ ಏನನ್ನು ಕೊಡಬೇಕೆಂದು ಬಯಸಿದ್ದಾನೋ ಅದನ್ನು ಅಂದರೆ ಹಣವನ್ನು ಪಡೆಯುವ ಸಲುವಾಗಿ ಮಾರಾಟ ಅಗತ್ಯ. 'ಸಿ'ಯು ತನ್ನ ಪಾಲನ್ನು ಹಣದ ರೂಪದಲ್ಲಿ ಪಡೆಯುತ್ತಾನೆ.

'ಬಿ'ಯ ಪಾಲಿಗೆ ಏನಾಗುತ್ತದೆ?

ಅದು ವಸ್ತುತಃ ನಗದು ಹಣ, ಸಮೀಪ ಬಂಧುವಿಗೆ ಹೋಗಬೇಕಾದದ್ದು. ಆದರೆ ಅಷ್ಟರಮಟ್ಟಿಗೆ ಪರಿವರ್ತನೆ ಅಗತ್ಯವಾಗಿರಲಿಲ್ಲವಾದ್ದರಿಂದ ಅದು ವಾರಸುದಾರನಿಗೆ ಹೋಗುತ್ತದೆ. ವಾರಸುದಾರನು ಅದನ್ನು ನಗದು ರೂಪದಲ್ಲಿ ಪಡೆಯುತ್ತಾನೆ ಅಷ್ಟೆ.

**ನಿದರ್ಶನ:**

'ಎ'ಯು ಚರ ಆಸ್ತಿಯನ್ನು ಟ್ರಸ್ಟಿಗಳಿಗೆ ವಹಿಸಿಕೊಡುತ್ತಾನೆ. 'ಬಿ' ಮತ್ತು 'ಸಿ'ಗಳಿಗೆ ಅದರಿಂದ ಜಮೀನು ಕೊಳ್ಳಬೇಕೆಂದು ಹೇಳುತ್ತಾನೆ. 'ಎ'ಗಿಂತ ಮೊದಲೇ 'ಬಿ' ಸತ್ತುಹೋಗುತ್ತಾನೆ. 'ಸಿ'ಯು 'ಎ' ಸತ್ತ ಮೇಲೂ ಜೀವಿಸಿರುತ್ತಾನೆ. ಇಲ್ಲಿ ಕೊಳ್ಳುವಿಕೆ ಅಗತ್ಯ. ಏಕೆಂದರೆ 'ಸಿ'ಗೆ 'ಎ'ಯು ಏನನ್ನು ಕೊಡಬೇಕೆಂದು ಬಯಸಿದ್ದಾನೋ ಅದನ್ನು, ಅಂದರೆ ನೆಲವನ್ನು 'ಸಿ' ಪಡೆಯಬೇಕಾಗಿದೆ. 'ಸಿ'ಯು ತನ್ನ ಪಾಲನ್ನು ಸ್ಥಿರ ಆಸ್ತಿಯಾಗಿ ಪಡೆಯುತ್ತಾನೆ.

'ಬಿ'ಯ ಪಾಲು ಏನಾಗುತ್ತದೆ? ಅದು ಸಮೀಪ ಬಂಧುವಿಗೆ ಹೋಗುತ್ತದೆ. ಏಕೆಂದರೆ, ಅಷ್ಟರಮಟ್ಟಿಗೆ ಪರಿವರ್ತನೆ ಅನಗತ್ಯವಾಗಿತ್ತು. ಆದರೆ ಬಂಧುವು ಅದನ್ನು ನೆಲದ ರೂಪದಲ್ಲಿ ಪಡೆಯುತ್ತಾನೆ.

## ಪುನರ್ ಪರಿವರ್ತನೆ

೧. ಪುನರ್ ಪರಿವರ್ತನೆ ಎಂದರೆ ಮುಂಚಿನ ಪರಿವರ್ತನೆಯನ್ನು ಸ್ಥಗಿತಗೊಳಿಸುವುದು ಅಥವಾ ರದ್ದುಪಡಿಸುವುದು. ಅದು ಆಸ್ತಿಯ ಸ್ವರೂಪವನ್ನು ಮೊದಲು ಹೇಗಿತ್ತೋ ಹಾಗೆಯೇ ಉಳಿಸುವುದು ಅಥವಾ ಆ ಸ್ವರೂಪಕ್ಕೆ ಹಿಂದಕ್ಕೆ ತರುವುದು.

೨. ಪುನರ್ ಪರಿವರ್ತನೆಯು ಎರಡು ರೀತಿಯಾಗಿ ನಡೆಯುತ್ತದೆ:

(i) ಸಂಬಂಧಿತ ವ್ಯಕ್ತಿಗಳ ವರ್ತನೆಯಿಂದ

(ii) ಕಾನೂನಿನ ಪ್ರವರ್ತನೆಯಿಂದ.

### i) ಸಂಬಂಧಿತ ವ್ಯಕ್ತಿಗಳ ವರ್ತನೆಯಿಂದ

೧. ಒಬ್ಬ ವ್ಯಕ್ತಿಗೆ ಆಸ್ತಿಯನ್ನು ಅದರ ಪರಿವರ್ತಿತ ಸ್ಥಿತಿಯಲ್ಲಿ ಪಡೆಯುವುದು ಅಥವಾ ಅದು ವಾಸ್ತವವಾಗಿ ಇರುವ ರೀತಿಯಲ್ಲಿ ಪಡೆಯುವುದು, ಇವೆರಡರ ನಡುವೆ ಆಯ್ಕೆಯ ಹಕ್ಕು ಇದ್ದಾಗ ಇದು ಸಂಭವಿಸುತ್ತದೆ.

೨. ಆ ರೀತಿಯಾಗಿ ಆಯ್ಕೆ ಮಾಡಿಕೊಂಡು ಅದರಿಂದ ಆಸ್ತಿಯನ್ನು ಪುನರ್ ಪರಿವರ್ತನೆ ಮಾಡುವ ಹಕ್ಕು ಈ ವ್ಯಕ್ತಿಗಳಿಗಿದೆ:

(೧) ಪರಿಪೂರ್ಣ ಒಡೆಯನಾದವನು

(೨) ಅವಿಭಜಿತ ಪಾಲುಗಳ ಒಡೆಯ– ಹಣವನ್ನು ನೆಲವನ್ನಾಗಿ ಪರಿವರ್ತಿಸುವ ಸಂದರ್ಭದಲ್ಲಿ ಸಹ ಮಾಲೀಕನ ಸಹಮತವಿಲ್ಲದೆ ಹೋಗಬಹುದು. ಆದರೆ ನೆಲವನ್ನು ಹಣವನ್ನಾಗಿ ಪರಿವರ್ತಿಸುವ ಸಂದರ್ಭದಲ್ಲಿ ಹಾಗಲ್ಲ. ಏಕೆಂದರೆ ಹಣವನ್ನು ಭಾಗ ಮಾಡಿ ಹಂಚಬಹುದು, ನೆಲವನ್ನು ಹಾಗೆ ಮಾಡಲಾಗದು.

**ನಿದರ್ಶನ:**

'ಎ' ಮತ್ತು 'ಬಿ' ಇವರ ಕೂಡು ಗೇಣಿದಾರರಿಗೆ ನೆಲವನ್ನು ಕೊಡಲು ಹಣವನ್ನು ಹೂಡಬೇಕಾಗಿದೆ. 'ಬಿ'ಯ ಸಹಮತವಿಲ್ಲದೆಯೂ 'ಎ' ಅದನ್ನು ಪುನರ್ ಪರಿವರ್ತಿಸಲು ಆಯ್ಕೆ ಮಾಡಿಕೊಳ್ಳಬಹುದು.

(೨) ಪ್ರಶ್ನೆ– ಉಳಿದಿರುವ ವ್ಯಕ್ತಿಯು ಆಸ್ತಿಯನ್ನು ಹೇಗಿದೆಯೋ ಹಾಗೆ ಪಡೆಯುವುದನ್ನು ಆಯ್ಕೆ ಮಾಡಿಕೊಂಡು ಪುನರ್ ಪರಿವರ್ತನೆ ಮಾಡಬಹುದೆ? ಇದು ಸ್ಪಷ್ಟವಾಗಿ ನಿರೂಪಿತವಾಗಿಲ್ಲ.

(೩)ಸಂಬಂಧಿತ ವ್ಯಕ್ತಿಗಳ ವರ್ತನೆಯಿಂದ ಪುನರ್‌ಪರಿವರ್ತನೆ ಮಾಡುವ ಈ ನಿಯಮವು ಅನ್ವಯವಾಗುವುದು, ವ್ಯಕ್ತಿಗೆ ಆಯ್ಕೆಯ ಹಕ್ಕಿದ್ದು ಅವನು ಯಾವುದೇ ದೌರ್ಬಲ್ಯಕ್ಕೊಳಪಡದೆ ಇರುವ ಸಂದರ್ಭಕ್ಕೆ.

**ಶಿಶುಗಳು** ಮತ್ತು **ಬುದ್ಧಿಮಾಂದ್ಯರು** ದೌರ್ಬಲ್ಯವುಳ್ಳವರು. ಆದ್ದರಿಂದ ಪುನರ್ ಪರಿವರ್ತನೆ ಮಾಡಲು ಅಸಮರ್ಥರು. ಆದರೆ ಪುನರ್ ಪರಿವರ್ತನೆಯು ಅವರಿಗೆ ಲಾಭದಾಯಕವಾಗಿರುವುದಾದರೆ ನ್ಯಾಯಾಲಯವು ಅವರ ಪರವಾಗಿ ನೇರವಾದ ಪುನರ್ ಪರಿವರ್ತನೆಗೆ ಆದೇಶಿಸಬಹುದು.

ವಿವಾಹಿತ ಮಹಿಳೆಯು, ಆಸ್ತಿಯು ಅವಳ ಪ್ರತ್ಯೇಕ ಉಪಯೋಗಕ್ಕಾಗಿ ಇದ್ದರೆ, ಪುನರ್ ಪರಿವರ್ತನೆ ಮಾಡಬಹುದು. ಅದು ಅವಳ ಪ್ರತ್ಯೇಕ ಆಸ್ತಿಯಾಗಿರದಿದ್ದರೆ ಆಗ ಅವಳು ತನ್ನ ಪತಿಯ ಅನುಮತಿಯಿಂದ ಮಾತ್ರ ಮಾಡಬಹುದು.

(೪) ಪುನರ್ ಪರಿಶೀಲನೆಯ ಆಯ್ಕೆಗೆ ಸಾಕ್ಷ್ಯಾಧಾರ–

(i) ಆ ವಿಷಯವಾಗಿ ಉದ್ದೇಶವನ್ನು ಸ್ಪಷ್ಟವಾಗಿ ಘೋಷಿಸುವುದು

(ii) ಆಯ್ಕೆಯ ನಡವಳಿಕೆ

**(೨) ಕಾನೂನಿನಂತೆ ಪುನರ್ ಪರಿವರ್ತನೆ**

ಆಸ್ತಿಯನ್ನು ಪರಿವರ್ತಿಸುವ ಬಾಧ್ಯತೆಯಿರುವ ಒಬ್ಬ ವ್ಯಕ್ತಿಯು ಆ ಬಾಧ್ಯತೆಯು ಮುಗಿದ ಮೇಲೆಯೂ ಆಸ್ತಿಯನ್ನು ತನ್ನ ವಶದಲ್ಲಿ ಹೊಂದಿದ್ದರೆ, ಅದರ ಮೇಲೆ ಹಕ್ಕು ಪಡೆದಿದ್ದರೆ, ಆ ಆಸ್ತಿಯನ್ನು ಅವನ ಯಾವ ವರ್ತನೆಯೂ ಇಲ್ಲದೆ ಪುನರ್ ಪರಿವರ್ತಿಸಬಹುದು. ಹಾಗಾಗಿ–

'ಎ' ಯು 'ಬಿ'ಯೊಂದಿಗೆ ಮದುವೆ ಮಾಡಿಕೊಂಡ ಮೂರು ವರ್ಷಗಳೊಳಗಾಗಿ ೧೦೦೦ ಪೌಂಡುಗಳನ್ನು ಜಮೀನು ಕೊಳ್ಳಲು ಹೂಡುವುದಕ್ಕಾಗಿ ಪರಿವರ್ತಿಸುತ್ತಾನೆ. ಮದುವೆಯಾದ ಒಂದು ವರ್ಷದೊಳಗಾಗಿ 'ಬಿ' ಮೃತಳಾಗುತ್ತಾಳೆ. ಹಣವನ್ನು ಭೂಮಿ ಕೊಳ್ಳಲು ವೆಚ್ಚಮಾಡುವ ಹಾಗೂ ಹೂಡಿಕೆಯನ್ನು ಪಡೆಯುವ ಹಕ್ಕುಗಳು ಎರಡೂ 'ಎ'ಗಿರುವುದರಿಂದ, ಬಾಧ್ಯತೆಯು ಕಾನೂನಿನಂತೆ ವರ್ತಿಸಿದೆ. ಒಪ್ಪಂದದಂತೆ ಜಮೀನಾಗಿ ಪರಿವರ್ತಿತವಾಗಿದ್ದ ಹಣ ಪುನರ್ ಪರಿವರ್ತಿತವಾಗುತ್ತದೆ, ಸಮೀಪ ಬಂಧುವಿನ ಕೈ ಸೇರುತ್ತದೆ.

## ಆಯ್ಕೆ

**I. ಕಾನೂನಿನಂತೆ ಆಯ್ಕೆಗೂ ಧರ್ಮನ್ಯಾಯದಂತೆ ಆಯ್ಕೆಗೂ ಇರುವ ವ್ಯತ್ಯಾಸ**

(ಎ) ಕಾನೂನಿನಂತೆ ಆಯ್ಕೆಯು ಒಬ್ಬ ವ್ಯಕ್ತಿಯ ಆಯ್ಕೆಗೆ ಸಂಬಂಧಿಸಿದೆ. ಅದು ಒಂದು ಅನಧಿಕೃತ ವರ್ತನೆಯಿಂದ ಹುಟ್ಟುವ ಬಾಧ್ಯತೆಯೊಂದನ್ನು ನಿರಾಕರಿಸುವುದು ಅಥವಾ ಆ ವರ್ತನೆಯನ್ನು

ಸ್ಥಿರೀಕರಿಸಿ ಬಾಧ್ಯತೆಯನ್ನು ಒಪ್ಪಿಕೊಳ್ಳುವುದು ಇವುಗಳ ನಡುವೆ ಆಯ್ಕೆಯಾಗಿರುತ್ತದೆ.

(ಬಿ) ಧರ್ಮನ್ಯಾಯದಲ್ಲಿ ಆಯ್ಕೆಯು ಒಂದು ಉಡುಗೊರೆಯನ್ನು ನಿರಾಕರಿಸುವ ಹಕ್ಕಿಗೊಳಪಟ್ಟು ಒಂದು ಉಡುಗೊರೆಯನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದೆ.

## II. ಆಯ್ಕೆಯ ಧರ್ಮನ್ಯಾಯ ಸಿದ್ಧಾಂತದ ಅಗತ್ಯ

(i) ಸಿದ್ಧಾಂತವು ಎದುರಿಸುವ ಸಮಸ್ಯೆ 'ಎ'ಯು 'ಬಿ'ಗೆ ತನ್ನ ಆಸ್ತಿಯನ್ನು ಒಂದು ಪತ್ರದ ಅಥವಾ ಉಯಿಲಿನ ಮೂಲಕ ಕೊಡುತ್ತಾನೆ. ಅದೇ ಆದೇಶದಲ್ಲಿ 'ಬಿ'ಗೆ ಸೇರಿದ ಒಂದು ಆಸ್ತಿಯನ್ನು 'ಸಿ'ಗೆ ಕೊಡುತ್ತಾನೆ. 'ಬಿ'ಯು ಅಂತಹ ಆದೇಶದ ಬಗೆಗೆ ಏನು ಮಾಡಬಹುದು?

ಇಲ್ಲಿ ಎರಡು ಉಡುಗೊರೆಗಳಿವೆ–

(i) 'ಎ'ಯ ಆಸ್ತಿ 'ಎ'ಯಿಂದ 'ಬಿ'ಗೆ

(ii) 'ಬಿ'ಯ ಆಸ್ತಿ 'ಎ'ಯಿಂದ 'ಸಿ'ಗೆ

'ಬಿ'ಗೆ ಬಂದ 'ಎ'ಯ ಆಸ್ತಿ ಸಿಂಧುವಾದ ಉಡುಗೊರೆ. ಏಕೆಂದರೆ ಆಸ್ತಿಯ ಒಡೆಯನಾದ 'ಎ' ಅದನ್ನು ನೀಡಿದ್ದಾನೆ. ಆದರೆ 'ಸಿ'ಗೆ 'ಎ'ಯು 'ಬಿ'ಯ ಆಸ್ತಿಯನ್ನು ಉಡುಗೊರೆ ನೀಡಿರುವುದು ಅಸಿಂಧುವಾಗುತ್ತದೆ. ಏಕೆಂದರೆ 'ಬಿ' ಅದಕ್ಕೆ ಅಧಿಕಾರ ನೀಡಿಲ್ಲ.

ಈಗ ಪ್ರಶ್ನೆ 'ಬಿ'ಯು 'ಎ'ಯಿಂದ ಅವನ ಆಸ್ತಿಯ ಉಡುಗೊರೆ ಪಡೆದು ತನ್ನ ಆಸ್ತಿಯನ್ನು 'ಎ'ಯು 'ಸಿ'ಗೆ ಕೊಟ್ಟಿದ್ದನ್ನು ನಿರಾಕರಿಸಬಹುದೆ? ಆಯ್ಕೆಯ ಸಿದ್ಧಾಂತವು ವ್ಯವಹರಿಸುವುದು ಈ ಸಮಸ್ಯೆಯನ್ನು ಕುರಿತಾಗಿದೆ.

(ii) ಆಯ್ಕೆಯ ಸಿದ್ಧಾಂತವು 'ಬಿ'ಯು 'ಸಿ'ಯ ಉಡುಗೊರೆ ಘಟಿಸಲು ಅನುಮತಿ ನೀಡಿದರೆ ಮಾತ್ರವೇ 'ಬಿ'ಗೆ ಕೊಟ್ಟ ಉಡುಗೊರೆಯು ಊರ್ಜಿತವಾಗುತ್ತದೆ ಎಂದು ಹೇಳುತ್ತದೆ.

## (III) ನಿಯಮದ ತತ್ವ

ಒಬ್ಬ ವ್ಯಕ್ತಿಯು ಹೀಗೆ ಉಡುಗೊರೆ ನೀಡಿದಾಗ ಧರ್ಮನ್ಯಾಯವು ಭಾವಿಸುವುದೇನೆಂದರೆ, ಅದರಲ್ಲಿ ಒಂದು ಷರತ್ತು ಸೂಚಿತವಾಗಿದೆ. ಒಂದು ಆದೇಶದಂತೆ ಒಂದು ಪ್ರಯೋಜನವನ್ನು ಪಡೆಯುವವನು ಅದನ್ನು ಇಡಿಯಾಗಿ ಪಡೆಯಬೇಕು, ಅದರ ಎಲ್ಲಾ ಅವಕಾಶಗಳಿಗೂ ಹೊಂದಿಕೊಂಡು, ಅದಕ್ಕೆ ಹೊಂದಿಕೆಯಾಗದ ಪ್ರತಿಯೊಂದು ಹಕ್ಕನ್ನೂ ನಿರಾಕರಿಸಬೇಕು.

(iii) ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಗೆ ಇರುವ ದಾರಿಗಳು.

[ಅ] ಒಂದು ಆಯ್ಕೆ ಮಾಡಿಕೊಳ್ಳಲಿರುವ ವ್ಯಕ್ತಿಗೆ ಎರಡು ದಾರಿಗಳು ತೆರೆದಿವೆ.

(೧) 'ಬಿ'ಯು ತನ್ನ ('ಬಿ'ಯ) ಆಸ್ತಿಯನ್ನು 'ಸಿ' ಪಡೆಯಲು ಅನುಮತಿ ಕೊಟ್ಟು ತಾನು 'ಎ'ಯ ಆಸ್ತಿಯನ್ನು ಪಡೆಯಬಹುದು.

(೨) 'ಬಿ'ಯು 'ಎ'ಯ ಆಸ್ತಿಯನ್ನು ತೆಗೆದುಕೊಂಡು 'ಸಿ'ಗೆ ತನ್ನ ('ಬಿ'ಯ) ಆಸ್ತಿಯನ್ನು ಪಡೆಯಲು ಅನುಮತಿ ನೀಡದೆ, ಅವನಿಗೆ ತೃಪ್ತಿಯಾಗಲು ಎಷ್ಟು ಬೇಕೋ ಅಷ್ಟು ಮಟ್ಟಿಗೆ ಪರಿಹಾರ ನೀಡಬಹುದು.

**ನಿದರ್ಶನ:**

'ಎ'ಯು 'ಸಿ'ಗೆ ಸೇರಿದ ೨೦,೦೦೦ ಪೌಂಡು ಮೌಲ್ಯದ ಕುಟುಂಬ ಆಸ್ತಿಯನ್ನು 'ಬಿ'ಗೆ ಕೊಡುತ್ತಾನೆ. ಅದೇ ಪತ್ರದಲ್ಲಿ 'ಸಿ'ಗೆ ೩೦,೦೦೦ ಪೌಂಡು ಮೌಲ್ಯದ ತನ್ನ ('ಎ'ಯ) ಆಸ್ತಿಯನ್ನು ಬಳುವಳಿಯಾಗಿ ಕೊಡುತ್ತಾನೆ. ಈಗ 'ಸಿ' ಎರಡು ಕೆಲಸಗಳನ್ನು ಮಾಡಬಹುದು.

(i) ಕುಟುಂಬದ ಆಸ್ತಿಯನ್ನು ತೆಗೆದುಕೊಳ್ಳಲು 'ಬಿ'ಗೆ ಅವಕಾಶ ಕೊಡಬಹುದು.

(ii) ಕುಟುಂಬದ ಆಸ್ತಿಯನ್ನು ತಾನೇ ಇರಿಸಿಕೊಂಡು 'ಬಿ'ಗೆ ೨೦,೦೦೦ ಪೌಂಡು ಕೊಡಬಹುದು.

[ಬ] ಮೊದಲನೆಯ ದಾರಿಯನ್ನು ಆದೇಶದನ್ವಯ ತೆಗೆದುಕೊಳ್ಳುವುದು ಎಂದು ಕರೆಯಲಾಗುತ್ತದೆ. ಎರಡನೆಯ ದಾರಿಯನ್ನು ಆದೇಶದ ವಿರುದ್ಧವಾಗಿ ತೆಗೆದುಕೊಳ್ಳುವುದು ಎಂದು ಕರೆಯಲಾಗುತ್ತದೆ. ಆಯ್ಕೆಯ ಈ ಎರಡು ವಿಧಾನಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

(i) ಆದೇಶದ ವಿರುದ್ಧವಾದ ಆಯ್ಕೆಯನ್ನು ಧರ್ಮನ್ಯಾಯವು ಅನುಮತಿಸುತ್ತದೆ. ಉಡುಗೊರೆ ಪಡೆದವನು ತನ್ನ ಸ್ವಂತ ಆಸ್ತಿಯನ್ನು ಕೊಟ್ಟಾಗ ಮಾತ್ರ ಎಂಬ ಷರತ್ತು ಅಲ್ಲಿ ಸೂಚಿತವಾಗಿದೆ. ಹಾಗೆಯೇ ಪಡೆದವನು ತನ್ನ ಸ್ವಂತ ಆಸ್ತಿಯನ್ನು ಬಿಟ್ಟುಕೊಡುತ್ತಾನೆ ಎಂಬ ಷರತ್ತು ಸ್ಪಷ್ಟವಾಗಿ ಹೇಳಿದ್ದಾಗ ಕೂಡ ಅದು ವರ್ತಿಸುತ್ತದೆ. ಧರ್ಮನ್ಯಾಯವು ಆದೇಶದ ವಿರುದ್ಧವಾಗಿ ಆಯ್ಕೆ ಮಾಡುವುದನ್ನು ಅನುಮತಿಸುವುದಿಲ್ಲ. ಷರತ್ತನ್ನು ಪಾಲಿಸದೆ ಹೋದರೆ ಉಡುಗೊರೆ ಪಡೆಯುವವನು ಏನನ್ನೂ ಪಡೆಯುವುದು ಸಾಧ್ಯವಿಲ್ಲ.

(ii) ಆದೇಶದನ್ವಯ ಒಬ್ಬ ವ್ಯಕ್ತಿಯು ಆಯ್ಕೆ ಮಾಡಿಕೊಂಡರೆ ಅಲ್ಲಿ ಯಾವುದೇ ಪರಿಹಾರದ ಪ್ರಶ್ನೆ ಏಳುವುದಿಲ್ಲ.

(iii) ಅನುಮತಿಸಿದ ಸಂದರ್ಭದಲ್ಲಿ, ಆದೇಶದ ವಿರುದ್ಧವಾದ ಆಯ್ಕೆಯು ಇಡೀ ಬಳುವಳಿಯ ಮುಟ್ಟುಗೋಲನ್ನು ಒಳಗೊಳ್ಳುವುದಿಲ್ಲ, ಪರಿಹಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕಸಿದುಕೊಳ್ಳಲಾಗುತ್ತದೆ.

## IV. ಸಿದ್ಧಾಂತದ ಅನ್ವಯಕ್ಕೆ ಷರತ್ತುಗಳು

(೧) ದಾನಿಯು ಪ್ರತಿಗ್ರಹಿಯ ಆಸ್ತಿಯನ್ನು ಮೂರನೆಯವನಿಗೆ ಕೊಟ್ಟಿರಬೇಕು.

(೨) ದಾನಿಯು ಅದೇ ಆದೇಶದನ್ವಯ ತನ್ನ ಸ್ವಂತ ಆಸ್ತಿಯನ್ನು ಪ್ರತಿಗ್ರಹಿಗೆ ಕೊಟ್ಟಿರಬೇಕು. ಇದಕ್ಕೆ ಈ ಕೆಳಗಿನ ಅಂಶಗಳನ್ನು ಸೇರಿಸಬೇಕು.

(೩) ಪ್ರತಿಗ್ರಹಿಗೆ ಕೊಟ್ಟ ಆಸ್ತಿಯು ಹೇಗಿರಬೇಕೆಂದರೆ, ಅದು ಮೂರನೆಯ ವ್ಯಕ್ತಿಗೆ ಪರಿಹಾರ ಕೊಡಲು ಉಪಯೋಗವಾಗುವಂತಿರಬೇಕು.

(೪) ಪ್ರತಿಗ್ರಹಿಯ ಆಸ್ತಿಯು ಪರಭಾರೆ ಮಾಡುವಂತಿರಬೇಕು.

**ಟಿಪ್ಪಣಿ:** ದಾನಿಯು ಆಸ್ತಿಯಿಂದ ತನಗೆ ದೊರಕಬಹುದಾದ ಬಡ್ಡಿಯನ್ನು ವಿನಿಯೋಗ ಮಾಡುತ್ತಾನೆಯೇ ಹೊರತು ಬೇರೇನೂ ಅಲ್ಲ ಎಂದು ಭಾವಿಸಲಾಗುತ್ತದೆ.

**V. ಆಯ್ಕೆಯ ಸಂದರ್ಭಗಳಿಂದ ಪ್ರತ್ಯೇಕಗೊಳಿಸಬೇಕಾದ ಕೆಲವು ಸಂದರ್ಭಗಳು**

(೧) ಒಬ್ಬನೇ ವ್ಯಕ್ತಿಗೆ ಎರಡು ಉಡುಗೊರೆಗಳ ಸಂದರ್ಭಗಳು.

ಅಂತಹ ಸಂದರ್ಭಗಳಲ್ಲಿ ಆಯ್ಕೆಯ ಸಿದ್ಧಾಂತವು ಅನ್ವಯವಾಗುವುದಿಲ್ಲ. ಅದು ತನ್ನದೇ ಆಸ್ತಿಯ ದಾನದ ಸಂದರ್ಭಗಳು.

ಇಲ್ಲಿ ಪ್ರತಿಗ್ರಹಿಯು ಲಾಭಕರವಾದುದೆಂಬುದನ್ನು ಅಂಗೀಕರಿಸಿ ಕಷ್ಟಕರವಾದುದನ್ನು ಕೈಬಿಡಬಹುದು. ದಾನಿಯ ಉದ್ದೇಶ ತ್ರಾಸದಾಯಕವಾದುದನ್ನು ಅಂಗೀಕರಿಸುವುದು ಲಾಭಕರವಾದುದರ ಸ್ವೀಕಾರಗಳ ಒಂದು ಷರತ್ತು ಎಂದು ಸ್ಪಷ್ಟವಾಗಿದ್ದರೆ ಮಾತ್ರ ಹಾಗೆ ಮಾಡಲು ಸಾಧ್ಯವಿಲ್ಲ.

(೨) ಒಂದು ದಾನದಲ್ಲಿ ಎರಡು ಗುಣಗಳು– ಒಂದು ಲಾಭಕರವಾದದ್ದು, ಮತ್ತೊಂದು ಕಷ್ಟಕರವಾದದ್ದು.

ದಾನದ ಉದ್ದೇಶದಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಪಡೆಯಲು ಅವಕಾಶ ಕೊಡುವಂತೆ ಇದ್ದ ಹೊರತು, ಅವನು ಎರಡನ್ನೂ ಸ್ವೀಕರಿಸಬೇಕು ಇಲ್ಲವೆ, ಎರಡನ್ನೂ ತ್ಯಜಿಸಬೇಕು.

**VI. ಉಪಸಂಹಾರ**

(೧) ಪರಿವರ್ತನೆ ಮತ್ತು ಆಯ್ಕೆ ಎರಡೂ ಧರ್ಮನ್ಯಾಯದ ತತ್ವಗಳನ್ನು ಉದ್ದೇಶಕ್ಕಿರುವ ಧರ್ಮ ದೃಷ್ಟಿಯನ್ನು ನಿದರ್ಶಿಸುವ ಸಿದ್ಧಾಂತಗಳು.

(೨) ಅದು ಹಾಗಿರುವುದರಿಂದ, ದಾನಿಯು ಪ್ರತಿಗ್ರಹಿಯನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸ್ಥಿತಿಗೆ ತರದೆ ಹೋದರೆ ಆಯ್ಕೆ ಬರುವುದಿಲ್ಲ.

**I. ನಿರ್ವಹಣೆ**

**೧. ಸಮಸ್ಯೆ:** 'ಎ'ಯು ಒಂದು ಕೆಲಸವನ್ನು ಮಾಡಲು 'ಬಿ'ಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೆ. ಆಮೇಲೆ ಅದೇ ಉದ್ದೇಶದ ಮೇಲೆ ಇಡಿಯಾಗಿ ಅಥವಾ ಭಾಗಶಃ ಪರಿಣಾಮ ಮಾಡುವ, ಆದರೆ ಒಡಂಬಡಿಕೆಗೆ ಸಂಬಂಧಪಡಿಸಿದ ಒಂದು ಕೆಲಸವನ್ನು ಮಾಡುತ್ತಾನೆ. ಈಗ ಪ್ರಶ್ನೆ ಈ ಕಾರ್ಯವನ್ನು *ಹೇಗೆ ಪರಿಗಣಿಸಬೇಕು?* ಅದು ಒಡಂಬಡಿಕೆಗೆ ಯಾವ ರೀತಿಯಲ್ಲೂ ಸಂಬಂಧಪಡದ ಸ್ವತಂತ್ರವಾದೊಂದು ಕೆಲಸ ಎಂದು ಭಾವಿಸಬೇಕೆ ಅಥವಾ ಈ ಕೆಲಸ ಮಾಡುವಾಗ 'ಎ'ಗೆ ಇದ್ದ ಉದ್ದೇಶ ಒಪ್ಪಂದದ ಬಾಧ್ಯತೆಯನ್ನು ನೆರವೇರಿಸುವುದೇ ಆಗಿತ್ತು ಎಂದು ಭಾವಿಸಬೇಕೆ? ಧರ್ಮನ್ಯಾಯವು ಕೊಡುವ ಉತ್ತರ, ಅದು ಒಪ್ಪಂದದ ಬಾಧ್ಯತೆಯನ್ನು ನಿರ್ವಹಿಸಲು ಉದ್ದೇಶಿತವಾಗಿದ್ದ ಕೆಲಸವೆಂದು ಪರಿಗಣಿಸತಕ್ಕದ್ದು ಎಂದು.

**೨. ತತ್ವ:** ನಿರ್ವಹಣೆಯ ಸಿದ್ಧಾಂತದ ಹಿಂದಿರುವ ತತ್ವ, ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಬಾಧ್ಯತೆಗಳನ್ನು ನಿರ್ವಹಿಸಬೇಕೆಂಬ ಉದ್ದೇಶವಿರುತ್ತದೆ. ಅವನು ಮಾತು ಕೊಟ್ಟಿದ್ದನ್ನು ಹೋಲುವಂತಹ ಒಂದು ಕೆಲಸ ಮಾಡಿದಾಗ ಧರ್ಮನ್ಯಾಯವು ಆ ಉದ್ದೇಶವನ್ನು ಎತ್ತಿ ಹಿಡಿಯುತ್ತದೆ.

**೩. ಈ ತತ್ವವನ್ನು ಪುರಸ್ಕರಿಸದ ಪಕ್ಷದಲ್ಲಿ ಎದುರಾಗಿರುವ ಕಷ್ಟಗಳು**

**ನಿದರ್ಶನ:**

'ಎ'ಯು ಮದುವೆಯ ಸಂದರ್ಭದಲ್ಲಿ ವರ್ಷಕ್ಕೆ ೨೦೦ ಪೌಂಡು ಬೆಲೆಯ ಜಮೀನುಗಳನ್ನು

ಕೊಂಡು ಅದನ್ನು ತನ್ನ ಪತ್ನಿಯ ವಿಧವಾನುಭವಕ್ಕೂ ವಿವಾಹವು ವಿಫಲಗೊಂಡ ಮೊದಲನೆಯ ಹಾಗೂ ಇತರ ಪುತ್ರರಿಗೂ ಬಿಡಲು ಮಾತುಕೊಟ್ಟನು.

'ಎ' ಆ ಮೌಲ್ಯದ ಜಮೀನುಗಳನ್ನು ಕೊಂಡನು. ಆದರೆ ಅದರ ಬಗೆಗೆ ಏನನ್ನೂ ನಿಗದಿಪಡಿಸದೆ ಸತ್ತುಹೋದನು. ಹಾಗಾಗಿ ನೆಲವೆಲ್ಲವೂ ಹಿರಿಯ ಮಗನಿಗೆ ಬಂದಿತು.

ಹಿರಿಯ ಮಗನು ಧರ್ಮನ್ಯಾಯದ ಪ್ರಕಾರ ಮನವಿ ಸಲ್ಲಿಸಿದನು. ತಂದೆಯು ಮಾಡಿದ ವಿವಾಹಪೂರ್ವ ಕರಾರು ಪ್ರಕಾರ, ಅವನ ಚರ ಆಸ್ತಿಯಿಂದ ವರ್ಷಕ್ಕೆ ೨೦೦ ಪೌಂಡು ಬೆಲೆಯ ನೆಲವನ್ನು ಕೊಂಡು, ಕರಾರುಗಳಲ್ಲಿ ಹೇಳಿದ ಉಪಯೋಗಕ್ಕೆ ನಿಗದಿಪಡಿಸುವುದು ಅವನ ಉದ್ದೇಶವಾಗಿತ್ತು. ನಿರ್ವಹಣೆಯ ಸಿದ್ಧಾಂತವಿರದಿದ್ದರೆ ಅವನಿಗೆ ಎರಡೂ ಲಭ್ಯವಾಗುತ್ತಿದ್ದುವು.

### II. ನಿರ್ವಹಣೆಯ ಪ್ರಶ್ನೆಗಳು ಎರಡು ವರ್ಗಗಳಾಗುವ ಸಂದರ್ಭಗಳು

(i) ನೆಲವನ್ನು ಕೊಂಡು ಇತ್ಯರ್ಥ ಮಾಡಬೇಕೆಂಬ ಒಡಂಬಡಿಕೆಯಿದ್ದೂ ವಾಸ್ತವವಾಗಿ ಹಾಗೆ ಕೊಂಡಿರುವ ಸಂದರ್ಭ.

(ii) ಚರ ಆಸ್ತಿಯನ್ನು ಒಬ್ಬ ವ್ಯಕ್ತಿಗೆ ಬಿಡುವುದಾಗಿ ಮಾತು ಕೊಟ್ಟು, ಅಂತಿಮ ಇಷ್ಟಪತ್ರ ಬರೆದಿಡದೆ ಮೃತನಾಗಿದ್ದರೆ ಆಸ್ತಿಯು ವಾಸ್ತವವಾಗಿ ಆ ವ್ಯಕ್ತಿಗೆ ಬರುವ ಸಂದರ್ಭಗಳು.

### III. ಮೊದಲನೆಯ ವರ್ಗಕ್ಕೆ ಸೇರುವ ಸಂದರ್ಭಗಳು

(i) ನಿದರ್ಶನ– ಆಗಲೆ ಕೊಡಲಾಗಿದೆ.

### ಗಮನಿಸಬೇಕಾದ ಅಂಶಗಳು

(i) ಕೊಂಡ ನೆಲವು ಒಡಂಬಡಿಕೆಯಲ್ಲಿ ನಿಗದಿಪಡಿಸಿದುದಕ್ಕಿಂತ ಕಡಿಮೆ ಬೆಲೆಯದಾಗಿರುವ ಸಂದರ್ಭ. ಏಕೆಂದರೆ ಅವುಗಳನ್ನು ಒಪ್ಪಂದದ ಭಾಗಶಃ ಈಡೇರಿಕೆ ಎಂದು ಪರಿಗಣಿಸಲಾಗುವುದು.

(ii) ಒಡಂಬಡಿಕೆಯು ಮುಂದೆ ಕೊಳ್ಳುವ ಜಮೀನುಗಳ ಬಗೆಗೆ ಸೂಚಿಸಿದ ಸಂದರ್ಭದಲ್ಲಿ, ಒಪ್ಪಂದಗಾರನು ಒಪ್ಪಂದ ಮಾಡುವ ಸಮಯದಲ್ಲಿ ಆಗಲೇ ತೀರ್ವೆಯಾಗಿಬಿಟ್ಟಿದ್ದ ನೆಲದ ಸಂದರ್ಭದಲ್ಲಿ ಅದನ್ನು ಭಾಗಶಃ ನಿರ್ವಹಣೆ ಎಂದು ತೆಗೆದುಕೊಳ್ಳಲಾಗದು.

(iii) ಒಪ್ಪಂದಗಾರನು ಕೊಳ್ಳಬೇಕೆಂದು ಒಪ್ಪಂದ ಮಾಡಿಕೊಂಡಿರುವುದಕ್ಕಿಂತ ಬೇರೆ ಸ್ವರೂಪದ ಆಸ್ತಿಯ ನಿರ್ವಹಣೆಯ ಸಿದ್ಧಾಂತಕ್ಕೆ ಒಳಪಡುವುದಿಲ್ಲ.

### IV. ಎರಡನೆಯ ವರ್ಗಕ್ಕೆ ಸೇರುವ ಸಂದರ್ಭಗಳು

(i) ನಿಶ್ಚಿತ ಮೊತ್ತದ ಹಣವನ್ನು ಬಿಟ್ಟುಹೋಗುವುದಾಗಿ ಒಪ್ಪಂದ.

'ಎ'ಯು ವಿವಾಹಪೂರ್ವದಲ್ಲಿ, ತನ್ನ ಪತ್ನಿಗೆ ೬೨೦ ಪೌಂಡುಗಳನ್ನು ಬಿಟ್ಟು ಹೋಗುವುದಾಗಿ ಮಾತು ಕೊಟ್ಟಿದ್ದನು. ಮದುವೆಯಾಯಿತು, ಅಂತಿಮ ಇಷ್ಟಪತ್ರವನ್ನು ಬರೆದಿಡದೆ ಅವನು ಮೃತನಾದನು. ಆ ಸ್ಥಿತಿಯಲ್ಲಿ ಅವಳ ಪಾಲಿಗೆ ಬಂದ ಹಣ ೬೨೦ ಪೌಂಡುಗಳಿಗಿಂತ ಕಡಿಮೆ.

ಪತ್ನಿಯು ಒಡಂಬಡಿಕೆಯ ನಿರ್ವಹಣೆಗಾಗಿ ಮೊಕದ್ದಮೆ ಹೂಡಿದಳು. ಪ್ರಶ್ನೆ ಇಷ್ಟಪತ್ರ ರಹಿತ

ಸ್ಥಿತಿಯಲ್ಲಿ ೬೨೦ ಪೌಂಡು ಪಡೆದದ್ದು ಒಡಂಬಡಿಕೆಯ ನಿರ್ವಹಣೆಯಲ್ಲವೆ ಎನ್ನುವುದು. ಹೌದು ಎಂದು ತೀರ್ಪು ಕೊಡಲಾಯಿತು. ಇಷ್ಟಪತ್ರ ರಹಿತ ಸ್ಥಿತಿಯಲ್ಲಿ ೬೨೦ ಪೌಂಡು ಪಡೆದಾದ ಮೇಲೆ ಒಡಂಬಡಿಕೆಯ ಬಾಕಿಯಾಗಿ ವಿಧವೆಯು ಮತ್ತೆ ತನ್ನ ಪಾಲನ್ನು ಕೇಳುವಂತಿಲ್ಲ.

(೨) ಈ ಸಂದರ್ಭದಲ್ಲಿ ಒಡಂಬಡಿಕೆಯು ಪೂರ್ತಿಯಾಗಿ ನಿರ್ವಾಹವಾಗಿತ್ತು. ಹಾಗೆ ಪಡೆದ ಹಣವು ಒಡಂಬಡಿಕೆಯ ಪ್ರಕಾರ ಬರಬೇಕಾದುದಕ್ಕಿಂತ ಕಡಿಮೆಯಾಗಿದ್ದರೂ ಕೂಡ ನಿರ್ವಹಣೆಯ ಸಿದ್ಧಾಂತವು ಅನ್ವಯವಾಗಿ, ಒಪ್ಪಂದವು ಎಷ್ಟೋ ಅಷ್ಟು ನಿರ್ವಾಹವಾಗಿದೆ ಎಂದು ಭಾವಿಸಲಾಗುತ್ತಿತ್ತು.

(೩) ಎರಡು ಅಂಶಗಳು ಗಮನಾರ್ಹವಾಗಿವೆ:

(i) ಬಾಧ್ಯತೆಯು ಬರುವ ಸಮಯದಲ್ಲಿ ಅಥವಾ ಅದಕ್ಕಿಂತ ಮುಂಚೆ ಒಪ್ಪಂದಗಾರನು ಮೃತನಾದರೆ ನಿರ್ವಹಣೆಯು ವರ್ತಿಸುತ್ತದೆ.

(ii) ಬಾಧ್ಯತೆಯು ಸಂಚಿತವಾದ ನಂತರ ಒಪ್ಪಂದಗಾರನು ಮೃತನಾದ ಪಕ್ಷದಲ್ಲಿ ನಿರ್ವಹಣೆ ವರ್ತಿಸುವುದಿಲ್ಲ.

## ನೆರವೇರಿಕೆ

**I. ಸಮಸ್ಯೆ**

'ಎ'ಯು 'ಬಿ'ಗೆ ಋಣಿಯಾಗಿದ್ದಾನೆ. 'ಎ'ಯು 'ಬಿ'ಗೆ ಒಂದು ಕೊಡುಗೆಯನ್ನು ನೀಡುತ್ತಾನೆ. ಈಗ ಪ್ರಶ್ನೆ: 'ಬಿ'ಗೆ ಕೊಟ್ಟ ಉಡುಗೊರೆಯನ್ನು ಉಡುಗೊರೆಯೆಂದು ಪರಿಗಣಿಸಬೇಕೆ ಇಲ್ಲವೆ, ಎಯು ಬಿಗೆ ಸಲ್ಲಿಸಬೇಕಾಗಿರುವ ಋಣದ ನೆರವೇರಿಕೆ ಎಂದು ಪರಿಗಣಿಸಬೇಕೆ?

**II. ನೆರವೇರಿಕೆಗೂ ನಿರ್ವಹಣೆಗೂ ಒಂದು ಸಮಾನತೆಯಿದೆ. ಹಾಗೆಯೇ ಎರಡರ ನಡುವೆ ಮೂಲಭೂತವಾದ ವ್ಯತ್ಯಾಸಗಳಿವೆ**

(೧) ನಿರ್ವಹಣೆಯಲ್ಲಿ ಕಾರ್ಯನಿರ್ವಾಹವು ಕರ್ತವ್ಯ ನಿರ್ವಹಣೆ ಮಾಡುತ್ತದೆ, ಆದರೆ ಬಾಧ್ಯನೊಂದಿಗೆ ನಿರ್ದಿಷ್ಟಗೊಳಿಸಿದ ಅಂಶಗಳಲ್ಲಿ ಸಂಬಂಧಿಸಿಲ್ಲ. ನೆರವೇರಿಕೆಯಲ್ಲಾದರೆ ಅದು ಬಾಧ್ಯನೊಂದಿಗೆ ಸಂಬಂಧಿಸುತ್ತದೆ, ಆದರೆ ಕರ್ತವ್ಯ ನಿರ್ವಹಣೆಯೊಂದಿಗಲ್ಲ.

(೨) ನಿರ್ವಹಣೆಯಲ್ಲಿ, ಒಡಂಬಡಿಕೆಯನ್ನು ನಿರ್ವಹಿಸಲಾಗಿದೆಯೆ ಅನ್ನುವುದು ಉದ್ದೇಶದ ಮೇಲಲ್ಲ, ನಡೆಯಬೇಕೆಂದು ಒಪ್ಪಿದ್ದುದನ್ನು ನಡೆಸಲಾಗಿದೆಯೇ ಎನ್ನುವುದರ ಮೇಲೆ ನಿಂತಿದೆ. ಉಡುಗೊರೆಯು ಒಂದು ಕರ್ತವ್ಯವನ್ನು ನೆರವೇರಿಸುತ್ತದೆಯೇ ಎನ್ನುವುದು ದಾನಿಯ ಉದ್ದೇಶವನ್ನು ಅವಲಂಬಿಸಿದೆ.

(೩) ಒಂದು ಕರ್ತವ್ಯವನ್ನು ಅದರ ನಿಯಮಗಳಿಗನುಗುಣವಾಗಿ ನಡೆಸಿದರೆ, ಬದ್ಧನಾದವನು ಬಿಡುಗಡೆ ಹೊಂದುತ್ತಾನೆ. ಬದ್ಧನಾದವನು ತನ್ನ ಬಾಧ್ಯತೆಯ ನೆರವೇರಿಕೆಗಾಗಿ ಉಯಿಲು ಬರೆದು ಒಂದು ಉಡುಗೊರೆ ಕೊಟ್ಟ ಪಕ್ಷದಲ್ಲಿ ಅದನ್ನು ಒಪ್ಪಿಕೊಳ್ಳಬೇಕೋ ಬೇಡವೋ ಎನ್ನುವುದು ಇವನಿಗೆ ಬಿಟ್ಟಿರುತ್ತದೆ. ಸ್ವೀಕರಿಸಿದರೆ ತನ್ನ ಬಾಧ್ಯತೆಯನ್ನು ಕಾರ್ಯಗತಗೊಳಿಸುವ ಹಕ್ಕನ್ನು ಅವನು ಕಳೆದುಕೊಳ್ಳುತ್ತಾನೆ. ನಿರಾಕರಿಸಿದರೆ ಮೂಲ ಹಕ್ಕುಗಳು ಅವನಿಗೆ ಅನ್ವಯಿಸುತ್ತವೆ.

**II. ಉದ್ದೇಶ, ಉಡುಗೊರೆಯು ಮುಂಚಿನ ಬಾಧ್ಯತೆಯೊಂದರ ನೆರವೇರಿಕೆ**

**III. ನೆರವೇರಿಕೆಯ ಪ್ರಶ್ನೆ ಏಳುವ ಸಂದರ್ಭಗಳು ಎರಡು ವರ್ಗಗಳಾಗುತ್ತವೆ**

(i) ದಾನದಿಂದ ಹುಟ್ಟುವ ಮುಂಚಿನ ಬಾಧ್ಯತೆಗಳು ಸಂದರ್ಭಗಳು

(ii) ಬಾಧ್ಯತೆಯು ಸಾಲದ ರೂಪದಲ್ಲಿರುವ ಸಂದರ್ಭಗಳು.

**IV. ದಾನದಿಂದ ಹುಟ್ಟುವ ಮುಂಚಿನ ಬಾಧ್ಯತೆ ಸಂದರ್ಭಗಳು ಎರಡು ಬಗೆಯಾಗಿವೆ.**

(ಅ) ಭಾಗಶಃ ಬಳುವಳಿಗಳ ನೆರವೇರಿಕೆ

(ಆ) ಬಳುವಳಿಗಳಿಂದ ಭಾಗಗಳ ನೆರವೇರಿಕೆ.

**(ಅ) ಬಳುವಳಿಗಳ ಭಾಗಶಃ ನೆರವೇರಿಕೆ**

ಭಾಗ – ಒಂದು ಮಗುವಿಗೆ ಕೊಟ್ಟ ಅಥವಾ ಬಿಟ್ಟುಹೋದ ಆಸ್ತಿಯ ಭಾಗ

**ನಿದರ್ಶನ:**

'ಎ'ಗೆ 'ಬಿ', 'ಸಿ', 'ಡಿ' ಎಂಬ ಮೂವರು ಮಕ್ಕಳಿದ್ದಾರೆ. ಅವನು ಒಂದು ಉಯಿಲು ಮಾಡುತ್ತಾನೆ. ಅದರಲ್ಲಿ ಮಕ್ಕಳು ಒಬ್ಬೊಬ್ಬರಿಗೂ ಪೂರ್ವಾರ್ಜಿತ ಆಸ್ತಿಯನ್ನು ಕೊಡುತ್ತಾನೆ. ಉಯಿಲು ಮಾಡಿದ ನಂತರ 'ಎ'ಯು ನಿರ್ದಿಷ್ಟ ಮೊತ್ತದ ಹಣವನ್ನು ಬಿಡುತ್ತಾನೆ.

೨. ಇಲ್ಲಿ ಪೂರ್ವಾರ್ಜಿತ ಆಸ್ತಿಯಿದೆ ಮತ್ತು ಆಮೇಲೆ ಆಸ್ತಿ ಭಾಗವಿದೆ. ಅವು ಒಟ್ಟಾಗಿವೆಯೋ ಬೇರೆ ಬೇರೆಯೋ? ಉಯಿಲಿನಲ್ಲಿ ಆಸ್ತಿಯನ್ನು ಪಡೆದ ಮಗುವಿಗೆ ಈ ಹಣದ ಭಾಗವನ್ನು ಪಡೆಯುವ ಹಕ್ಕಿದೆಯೆ? ಅಥವಾ ತಂದೆಯು ಕೊಟ್ಟ ಆಮೇಲಿನ ಆಸ್ತಿ ಭಾಗದಿಂದಾಗಿ ಪೂರ್ವಾರ್ಜಿತದ ಹಕ್ಕು ನೆರವೇರಿದಂತಾಗುತ್ತದೆಯೇ?

**II ಪೂರ್ವಾರ್ಜಿತ ಆಸ್ತಿಗಳಿಂದ ಆಸ್ತಿ ಭಾಗದ ನೆರವೇರಿಕೆ**

೧. ಇದು ಮೊದಲಿನದರ ವಿರುದ್ಧವಾದದ್ದು. ಮೊದಲ ವರ್ಗದ ಸಂದರ್ಭಗಳಲ್ಲಿ ಮೊದಲು ಪೂರ್ವಾರ್ಜಿತ ಆಸ್ತಿಯಿದೆ, ಆಮೇಲೆ ಆಸ್ತಿ ಭಾಗವಾದ ಹಣವಿದೆ. ಎರಡನೆಯ ವರ್ಗದಲ್ಲಿ ಮೊದಲು ಆಸ್ತಿ ಭಾಗವಿದೆ, ಆಮೇಲೆ ಪೂರ್ವಾರ್ಜಿತ ಆಸ್ತಿಯಿದೆ.

೨. ಮೊದಲನೆಯ ಸಂದರ್ಭದಲ್ಲಿ, ಉಯಿಲಿನಿಂದ ಬಂದ ಪೂರ್ವಾರ್ಜಿತದ ಹಕ್ಕು ಆಮೇಲೆ ಬಂದ ಆಸ್ತಿ ಭಾಗದಿಂದ ನೆರವೇರಿತೇ ಎನ್ನುವುದು ಪ್ರಶ್ನೆ. ಇದರಲ್ಲಿ ಪ್ರಶ್ನೆ ಬೇರೆ. ಆಸ್ತಿ ಭಾಗದ ಹಕ್ಕು ಆಮೇಲೆ ಬಂದ ಪೂರ್ವಾರ್ಜಿತದಿಂದ ನೆರವೇರಿಕೆ ಎನ್ನುವುದು.

೩. ಉತ್ತರ ಮೊದಲಿನ ಸಂದರ್ಭದಲ್ಲಿನಂತೆಯೇ ದುಪ್ಪಟ್ಟು ಆಸ್ತಿ ಭಾಗದ ವಿರುದ್ಧದ ನಿಯಮವು ಅನ್ವಯಿಸುತ್ತದೆ. ಪೂರ್ವಾರ್ಜಿತದಿಂದ ಆಸ್ತಿ ಭಾಗವು ನೆರವೇರಿದಂತಾಗುತ್ತದೆ.

೪. ಉಯಿಲು ಫೈಸಲಾತಿಗೆ ಮುಂಚಿತವಾಗಿದ್ದರೆ "ನಾನು ಉಯಿಲಿನ ಮೂಲಕ ಏನು ಕೊಟ್ಟಿದ್ದೇನೆಯೋ ಅದರ ಬದಲಿಗೆ ಇದು ಎಂದು ನನ್ನ ಉದ್ದೇಶವಾಗಿದೆ" ಎಂದು ವ್ಯಕ್ತಿಯು ಅಭಿಪ್ರಾಯಪಡುವುದು ಆವಶ್ಯಕ.

ಆದರೆ ಫೈಸಲಾತಿಯು ಉಯಿಲಿಗೆ ಮುಂಚಿತವಾಗಿದ್ದರೆ, ಉಯಿಲು ಬರೆದವನ ಅಭಿಪ್ರಾಯ ಹೀಗಿದೆಯೆಂದು ಭಾವಿಸಬೇಕು. "ನಾನು ಕೊಡಲು ಆಗಲೇ ಬದ್ಧನಾಗಿದ್ದೇನೆ. ಹಾಗೆ ಯಾರಿಗೆ ನಾನು ಬದ್ಧನಾಗಿರುತ್ತೇನೋ ಅವರು ಒಪ್ಪಿಕೊಳ್ಳುವುದಾದರೆ ಅದರ ಸ್ಥಾನದಲ್ಲಿ ಇದನ್ನು ಕೊಡುತ್ತಿದ್ದೇನೆ."

೫. ಆಸ್ತಿ ಭಾಗವೊಂದರ ಬೆನ್ನ ಹಿಂದೆ ಇನ್ನೊಂದು ಆಸ್ತಿ ಭಾಗವು ಬರುತ್ತಿದ್ದರೆ ಅಲ್ಲಿ ಇದೇ ನಿಯಮವು ವರ್ತಿಸುತ್ತದೆ.

**II ದುಪ್ಪಟ್ಟು ಆಸ್ತಿ ಭಾಗಗಳ ನಿಯಮದ ಮಿತಿಗಳು**

**೧. ನಿಯಮವು ಈ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲ:**

(೧) ಪೂರ್ವಾಜಿತ ಮತ್ತು ಆಸ್ತಿ ಭಾಗ ಎರಡೂ ಇರುವ ಸಂದರ್ಭ– ಪೂರ್ವಾಜಿತವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಎಂದು ಸ್ಪಷ್ಟವಾಗಿ ಉಕ್ತವಾಗಿರುವಾಗ, ಮುಂದೆ ನೀಡಿದ ಆಸ್ತಿ ಭಾಗವೂ ಅದೇ ಉದ್ದೇಶಕ್ಕಾಗಿರುವಾಗ

(೨) ಆಸ್ತಿ ಭಾಗ ಮತ್ತು ಪೂರ್ವಾರ್ಜಿತ, ಹಾಗೂ ಆಸ್ತಿ ಭಾಗ ಮತ್ತು ಈ ಸಂದರ್ಭ. ಆಸ್ತಿಯು ವಾಸ್ತವವಾಗಿ ಮಗುವಿಗೆ ವರ್ಗಾವಣೆಗೊಂಡು ಆಮೇಲೆ ಪೂರ್ವಾರ್ಜಿತ ರೂಪದಲ್ಲೋ ಆಸ್ತಿ ಭಾಗದ ರೂಪದಲ್ಲೋ ಅವಕಾಶ ಕಲ್ಪಿಸಿದಾಗ– ಸಂಕ್ಷೇಪವಾಗಿ ಹೇಳಬೇಕೆಂದರೆ, ಮೊದಲನೆಯ ಆಸ್ತಿ ಭಾಗವು ಕೇವಲ ಒಂದು ಋಣವಾಗಿರುವಾಗ

(೩) ಅವಕಾಶ ಕಲ್ಪಿಸುವ ವ್ಯಕ್ತಿಯು ತಂದೆಯಾಗಿರುವಾಗ ಅಥವಾ ತಂದೆಯ ಸ್ಥಾನದಲ್ಲಿರುವಾಗ– ಆದ್ದರಿಂದ, ಒಬ್ಬ ಅನ್ಯನಿಗೆ ಪೂರ್ವಾರ್ಜಿತವನ್ನು ಕೊಟ್ಟು ಆಮೇಲೆ ಅವನೊಂದಿಗೆ ಫೈಸಲಾತಿ ಮಾಡಿಕೊಂಡಾಗ ಅಥವಾ ಅದಕ್ಕೆ ತದ್ವಿರುದ್ಧವಾಗಿ ಅನ್ಯನು (i)– ಎರಡನ್ನೂ ಪಡೆಯಬಹುದು, ದುಪ್ಪಟ್ಟು ಆಸ್ತಿ ಭಾಗದ ವಿರುದ್ಧವಾದ ನಿಯಮವು ಅವನಿಗೆ ಅನ್ವಯವಾಗುವುದಿಲ್ಲ.

(i) ಕಾನೂನುಬಾಹಿರವಾಗಿ ಹುಟ್ಟಿದ ಮಗುವು ಅನ್ಯನೆನಿಸುತ್ತಾನೆ.
(ii) ಮೊಮ್ಮಗುವೂ ಅನ್ಯ.
(iii) ಮಗುವಿನ ಸ್ಥಾನಮಾನದ ಅನುಕೂಲಗಳನ್ನು ಅನ್ಯನು ತೆಗೆದುಕೊಳ್ಳುವುದು ಸಾಧ್ಯವಿಲ್ಲ.

**III ಒಂದೇ ಉಯಿಲಿನಲ್ಲಿ ಅಥವಾ ಉಯಿಲು ಮತ್ತು ಅದರ ತಿದ್ದುಪಡಿಯಲ್ಲಿ ಕೊಟ್ಟ ಎರಡು ಪೂರ್ವಾರ್ಜಿತಗಳಿರುವ ಸಂದರ್ಭಗಳು**

೧. ಎರಡನೆಯ ಪೂರ್ವಾರ್ಜಿತವು ಮೊದಲನೆಯದರ ಜೊತೆಗೂಡುವಂಥದ್ದೋ ಕೇವಲ ಪುನರುಕ್ತಿಯೋ ಎನ್ನುವುದು ಪ್ರಶ್ನೆ.

೨. ಮೊಕದ್ದಮೆ ಹೂಬಿ >< ಹ್ಯಾಟ್ಟನ್, ೧ Bro, C.C. ೩೯೦ N.

೩. ಎರಡೂ ವರ್ಗಗಳ ಸಂದರ್ಭಗಳನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು.

(೧) ಪೂರ್ವಾಜಿತ ಆಸ್ತಿಯು ಒಂದು ವಸ್ತುವಾಗಿರುವಲ್ಲಿ.
(೨) ಪೂರ್ವಾರ್ಜಿತ ಆಸ್ತಿಯು ಹಣವಾಗಿರುವಲ್ಲಿ.

೪. ಪೂರ್ವಾರ್ಜಿತವು ವಸ್ತುವಾಗಿರುವಾಗ ನಿಯಮ: ಒಂದೇ ವಸ್ತುವನ್ನು ಎರಡು ಸಾರಿ ಕೊಟ್ಟಾಗ ಅದು ಹೆಚ್ಚಿನದಾಗುವುದಿಲ್ಲ, ಮರುಕಳಿಕೆಯಾಗುತ್ತದೆ.

೫. ಪೂರ್ವಾರ್ಜಿತಗಳು ಹಣವಾಗಿರುವಾಗ:

(೧) ಕೊಡುಗೆಗಳು ಒಂದೇ ಆದೇಶದಲ್ಲಿವೆಯೇ ಬೇರೆ ಬೇರೆ ಆದೇಶಗಳಲ್ಲಿವೆಯೇ ಎಂಬುದನ್ನು ಅವಲಂಬಿಸಿ ನಿಯಮವು ಬೇರೆ ಬೇರೆಯಾಗುತ್ತದೆ.

(೨) ಧನರೂಪದ ಎರಡು ಪೂರ್ವಾರ್ಜಿತ ಕೊಡುಗೆಗಳು ಒಂದೇ ಆದೇಶದಲ್ಲಿರುವಾಗ ನಿಯಮ–

(i) ಸಮಾನವಾಗಿದ್ದರೆ – ಮರುಕಳಿಕೆ

(ii) ಅಸಮವಾಗಿದ್ದರೆ – ಜೊತೆಗೂಡಿಕೆ

(೩) ಬೇರೆ ಬೇರೆ ಆದೇಶಗಳಲ್ಲಿರುವ ಎರಡು ಧನರೂಪದ ಪೂರ್ವಾರ್ಜಿತ ಆಸ್ತಿಗಳು:

**ನಿಯಮ–** ಅವು ಸಂಚಿತವಾಗುತ್ತವೆ.

**ಅಪವಾದ–** ಎರಡೂ ಕೊಡುಗೆಗಳಿಗೆ ಒಂದೇ ಉದ್ದೇಶವನ್ನು ವ್ಯಕ್ತಪಡಿಸಿ ಅದೇ ಮೊತ್ತವನ್ನು ನೀಡಿರುವಾಗ– ಅದು ಮರುಕಳಿಕೆಯಾಗುತ್ತದೆ.

**ಬಿ. ಮುಂಚಿನ ಬಾಧ್ಯತೆಯು ಒಂದು ಸಾಲದ ಸ್ವರೂಪ ಇರುವ ಸಂದರ್ಭಗಳು**

೧. ಸಂದರ್ಭಗಳನ್ನು ಎರಡು ವರ್ಗಗಳನ್ನಾಗಿ ವಿಭಾಗಿಸಬಹುದು.

(i) ಪೂರ್ವಾರ್ಜಿತದಿಂದ ಋಣದ ನೆರವೇರಿಕೆ.

(ii) ಆಸ್ತಿ ಭಾಗದಿಂದ ಋಣದ ನೆರವೇರಿಕೆ.

**(i) ಪೂರ್ವಾರ್ಜಿತದಿಂದ–**

(೧) ಒಬ್ಬ ಸಾಲಗಾರನು, ಸಾಲವನ್ನು ಗಮನಕ್ಕೆ ತಂದುಕೊಟ್ಟರೆಯೇ ತನ್ನ ಸಾಲಿಗನಿಗೆ ಪೂರ್ವಾರ್ಜಿತವಾಗಿ ಒಂದು ಮೊತ್ತವನ್ನು ಉಯಿಲಿನ ಮೂಲಕ ಬಿಟ್ಟಾಗ ಈ ಸಂದರ್ಭವು ಉದ್ಭವವಾಗುತ್ತದೆ. ಇಲ್ಲಿ ಪ್ರಶ್ನೆ: ಪೂರ್ವಾರ್ಜಿತವು ಋಣವನ್ನು ನೆರವೇರಿಸುತ್ತಿದೆ ಎಂದು ಭಾವಿಸಬಹುದೆ ಅಥವಾ ಸಾಲಿಗನಿಗೆ ಪೂರ್ವಾರ್ಜಿತ ಹಾಗೂ ಋಣ ಎರಡರ ಹಕ್ಕೂ ಇದೆಯೇ?

(೨) **ನಿಯಮ–** ಪೂರ್ವಾರ್ಜಿತವು ಋಣವನ್ನು ನೆರವೇರಿಸುತ್ತಿದೆ ಎಂದು ಪರಿಗಣಿಸಬಹುದು.

(೩) **ನಿಯಮಕ್ಕಿರುವ ಮಿತಿ–** ಈ ಕೆಳಗಿನ ಸಂದರ್ಭಗಳಲ್ಲಿ ನಿಯಮವು ಅನ್ವಯವಾಗುವುದಿಲ್ಲ.

(i) ಪೂರ್ವಾರ್ಜಿತವು ಸಾಲಕ್ಕಿಂತ ಕಡಿಮೆ ಮೊತ್ತದ್ದಾಗಿದ್ದರೆ– ಅಲ್ಲಿ ನೆರವೇರಿಕೆ ಇಲ್ಲ, ಎಷ್ಟೋ ಅಷ್ಟೇ ಆದರೂ.

(ii) ಪೂರ್ವಾರ್ಜಿತವನ್ನು ಒಂದು ತುರ್ತಿಗಾಗಿ ನೀಡಿದಾಗ.

(iii) ಪೂರ್ವಾರ್ಜಿತವು ಅನಿರ್ದಿಷ್ಟ ಮೊತ್ತವಾಗಿರುವಾಗ– ಉದಾಹರಣೆಗೆ ಉಳಿಕೆಯಾಗಿರುವಾಗ.

(iv) ಪೂರ್ವಾರ್ಜಿತವನ್ನು ಕೊಡಲು ನಿಗದಿಪಡಿಸಿರುವ ಸಮಯವು– ಸಾಲವನ್ನು ಪಾವತಿ ಮಾಡಬೇಕಾಗಿರುವ ಸಮಯಕ್ಕಿಂತ ಬೇರೆಯಾಗಿರುವಾಗ– ಸಾಲಿಗನಿಗೆ ಅಷ್ಟೇ ಮಟ್ಟಿಗೆ ಪ್ರಯೋಜನಕಾರಿಯಾಗುವಂತೆ.

(v) ಪೂರ್ವಾರ್ಜಿತದ ವಸ್ತುವು ಸಾಲಕ್ಕಿಂತ ಬೇರೆಯಾಗಿರುವಾಗ– ಉದಾಹರಣೆಗೆ, ಭೂಮಿ.

**(ii) ಆಸ್ತಿ ಭಾಗದಿಂದ ಸಾಲದ ನೆರವೇರಿಕೆ**

(೧) ತಂದೆಯು ಮಗುವಿಗೆ ಋಣಿಯಾಗಿದ್ದು ಆಮೇಲೆ ತನ್ನ ಜೀವಿತಾವಧಿಯಲ್ಲಿ ಒಂದು ಆಸ್ತಿಭಾಗವನ್ನು ಕೊಡುವಲ್ಲಿ ಈ ಸಂದರ್ಭವು ಉದ್ಭವಿಸುತ್ತದೆ. ಪ್ರಶ್ನೆ– ಮಗುವು ಎರಡನ್ನೂ– ಸಾಲವನ್ನೂ, ಆಸ್ತಿ ಭಾಗವನ್ನೂ ಕೇಳಬಹುದೆ? ಅಥವಾ ಸಾಲವು ಆಸ್ತಿ ಭಾಗದಿಂದ ಪೂರೈಸಿರುತ್ತದೆಯೇ?

(೨) ನಿಯಮ– ಸಾಲವು ಆಸ್ತಿ ಭಾಗದಿಂದ ಪೂರೈಕೆಯಾಗುತ್ತದೆ.

(೩) ಈ ನಿಯಮವು ಅದೇ ಮಿತಿಗಳಿಗೆ ಒಳಪಟ್ಟಿರುತ್ತವೆ.

**(v) ನಿರ್ವಹಣೆ ಮತ್ತು ನೆರವೇರಿಕೆಗಳ ನಡುವೆ ವ್ಯತ್ಯಾಸ**

[ಮುಂದಿನ ಟಿಪ್ಪಣಿಗಳು ಲಭ್ಯವಾಗಿಲ್ಲ –ಸಂ.]

## ಅಧ್ಯಾಯ–೨

# ಆಧಿಪತ್ಯ ರಾಜ್ಯದ ಸ್ಥಾನಮಾನ ಕುರಿತು ಟಿಪ್ಪಣಿಗಳು

# ಅಧಿಪತ್ಯ ರಾಜ್ಯದ ಸ್ಥಾನಮಾನ ಕುರಿತ ಟಿಪ್ಪಣಿಗಳು

೧. ಬ್ರಿಟಿಷ್ ಕಾಮನ್‌ವೆಲ್ತ್ ಎಂದು ಕರೆಯುವ ಬ್ರಿಟಿಷ್ ಸಾಮ್ರಾಜ್ಯ ಭಾಗಗಳ ಸಂವಿಧಾನಾತ್ಮಕ ಸಂಬಂಧವನ್ನು ನಿಯಂತ್ರಿಸುವ ನಿಯಮವನ್ನು ವೆಸ್ಟ್ ಮಿನಿಸ್ಟರ್ ಕಾನೂನು ನಿರೂಪಿಸುತ್ತದೆ ಮತ್ತು ಕ್ರೋಡೀಕರಿಸುತ್ತದೆ.

೨. ವೆಸ್ಟ್ ಮಿನಿಸ್ಟರ್ ಕಾನೂನು ಪ್ರಭುತ್ವಗಳಿಗೆ ಅನ್ವಯಿಸುತ್ತದೆ ಮತ್ತು ಅವುಗಳ ಪ್ರಭುತ್ವದ ಸ್ಥಾನಮಾನ ಎಂದು ಹೇಳುವ ನಿಲುವನ್ನು ರೂಪಿಸುತ್ತದೆ. ನಮ್ಮ ಪರಿಶೀಲನೆ ಪ್ರಭುತ್ವದ ಸ್ಥಾನಮಾನ ಎಂಬುದರ ಅರ್ಥವನ್ನು ತಿಳಿದುಕೊಳ್ಳುವತ್ತ ನಿರ್ದೇಶಿತವಾಗಿದೆ. ವಿಷಯ ಪ್ರವೇಶ ಮಾಡುವುದಕ್ಕೆ ಮೊದಲು ನಾವು ಈ ಪ್ರಶ್ನೆಗಳನ್ನು ಕೇಳಬೇಕು–

**I. ೧. ಪ್ರಭುತ್ವ ಎಂದರೇನು?**

ಪ್ರಭುತ್ವ ಎನ್ನುವುದು ವೆಸ್ಟ್ ಮಿನಿಸ್ಟರ್ ಕಾನೂನು ಪ್ರಭುತ್ವ ಎಂದು ಘೋಷಿಸಿದ ಒಂದು ವಸಾಹತು.

**೨. ವಸಾಹತು ಎನ್ನುವುದೇನು?**

ಯು.ಕೆ. ಮತ್ತು ಭಾರತ ಹೊರತುಪಡಿಸಿ ಮಿಕ್ಕಂತೆ ಬ್ರಿಟಿಷ್ ಸ್ವಾಧೀನದಲ್ಲಿರುವ ಒಂದು ಕಾಲೋನಿ ಅಥವಾ ವಸಾಹತು.

**೩. ಬ್ರಿಟಿಷ್ ಸ್ವಾಧೀನ ಎಂದರೇನು?**

ಬ್ರಿಟಿಷ್ ಸ್ವಾಧೀನ ಎನ್ನುವುದು ಬ್ರಿಟಿಷ್ ಸಾಮ್ರಾಜ್ಯದ ಯಾವುದೇ ಭಾಗ. ಯುನೈಟೆಡ್ ಕಿಂಗ್‌ಡಮ್ ಇದಕ್ಕೆ ಸೇರುವುದಿಲ್ಲ. ಅಲ್ಲಿ ರಾಜನ ಪ್ರಭುತ್ವವೇ ಇದೆ.

**೪. ಬ್ರಿಟಿಷ್ ಸಾಮ್ರಾಜ್ಯ ಎಂದರೇನು?**

ರಾಜನು ಪ್ರಭುತ್ವವನ್ನು ಹೊಂದಿರುವ, ಅಥವಾ ಪ್ರಭುತ್ವಕ್ಕೆ ಸಮಾನವಾದ ನಿಯಂತ್ರಣವನ್ನು ಚಲಾಯಿಸುವ ಭೂಪ್ರದೇಶಗಳೆಲ್ಲವೂ ಸೇರಿ ಬ್ರಿಟಿಷ್ ಸಾಮ್ರಾಜ್ಯವೆನಿಸುತ್ತವೆ. ಆದ್ದರಿಂದ ರಾಜನು ಪ್ರಭುವಾಗಿರುವ ಎಲ್ಲಾ ಪ್ರಭುತ್ವಗಳು. ಸಂರಕ್ಷಿತ ಪ್ರದೇಶಗಳು ಮತ್ತು ರಾಜನ ನಿಯಂತ್ರಣಕ್ಕೊಳಪಟ್ಟ ವಿದೇಶಾಂಗ ಸಂಬಂಧಗಳನ್ನುಳ್ಳ ಸಂರಕ್ಷಿತ ಸಂಸ್ಥಾನಗಳು ಎಲ್ಲವೂ ಸಾಮ್ರಾಜ್ಯದಲ್ಲಿ ಒಳಗೊಳ್ಳುತ್ತವೆ. ಆಜ್ಞಾನುಸಾರವಾಗಿ ಆಳುವ ಪ್ರದೇಶಗಳೂ ಸೇರುತ್ತವೆ.

**II. ಪ್ರಭುತ್ವದ ಸ್ಥಾನಮಾನ ಎಂದರೇನು?**

೧. ವೆಸ್ಟ್ ಮಿನಿಸ್ಟರ್ ಕಾನೂನು ಉದ್ಘಾಟಿಸಿದ ಸರಕಾರದ ವ್ಯವಸ್ಥೆಯನ್ನು ಅದು ಜಾರಿಗೆ ಬರುವುದಕ್ಕೆ ಮೊದಲು ಚಾಲ್ತಿಯಲ್ಲಿದ್ದ ಸರಕಾರದೊಂದಿಗೆ ಹೋಲಿಸಿದರೆ ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

೨. ಆಗ ಚಾಲ್ತಿಯಲ್ಲಿದ್ದ ವ್ಯವಸ್ಥೆಗೆ ಜವಾಬ್ದಾರಿ ಸರಕಾರ ಎಂದು ಹೆಸರು. ಆದ್ದರಿಂದ ಮೊದಲು

ನಾವು ಜವಾಬ್ದಾರಿ ಸರಕಾರದ ಲಕ್ಷಣಗಳನ್ನು ಗ್ರಹಿಸಬೇಕು.

೩. ಏಕೆ ಜವಾಬ್ದಾರಿ ಸರಕಾರವು ಕೆಲವು ವಸಾಹತುಗಳಲ್ಲಿ ಅಸ್ತಿತ್ವಕ್ಕೆ ಬಂದು ಕೆಲವಲ್ಲಿ ಬರಲಿಲ್ಲ?

೪. ಒಂದು ಕಾಲೋನಿಯ ಸರಕಾರವು ಕಾಲೋನಿಯ ಸ್ವರೂಪಕ್ಕನುಗುಣವಾಗಿ ವ್ಯತ್ಯಾಸಗೊಂಡಿತು.

೫. ವಸಾಹತುಗಳು ಎರಡು ವರ್ಗಗಳಾಗುತ್ತವೆ.

(i) ನೆಲೆಸುವುದರಿಂದ ರೂಪುಗೊಳ್ಳುವ ವಸಾಹತು

(ii) ಗೆಲ್ಲುವುದರಿಂದ ಅಥವಾ ವಶಪಡಿಸಿಕೊಳ್ಳುವುದರಿಂದ ಆಗುವ ವಸಾಹತು

**(೧) ನೆಲೆಸುವಿಕೆ ವಸಾಹತು**

೧. ಹಾಗಾಗಿ ನೆಲೆಸುವಿಕೆಯಿಂದ ರೂಪುಗೊಳ್ಳುವ ಕಾಲೋನಿಯಲ್ಲಿ ಬೇಜವಾಬ್ದಾರಿಯ ಕಾರ್ಯಾಂಗ ಹಾಗೂ ಪ್ರಾತಿನಿಧಿಕ– ಶಾಸಕಾಂಗಗಳ ನಡುವೆ ಅನಿವಾರ್ಯವಾಗಿ ಘರ್ಷಣೆ ಉಂಟಾಯಿತು.

೨. ಈ ಸಮಸ್ಯೆಯನ್ನು ಪರಿಹರಿಸಲು ಈ ಕಾಲೋನಿಗಳಲ್ಲಿ ಜವಾಬ್ದಾರಿ ಸರಕಾರವನ್ನು ತರಬೇಕಾಯಿತು.

೩. ಜವಾಬ್ದಾರಿ ಸರಕಾರದ ಸ್ವರೂಪ.

ನೆಲೆಸುವ ವಸಾಹತುಗಳಿಗೆ ಸಂಬಂಧಿಸಿದಂತೆ ರಾಜನ ಸ್ಥಾನಕ್ಕೂ ಜಯಿಸಿದ ವಸಾಹತುಗಳಿಗೆ ಸಂಬಂಧಿಸಿದ ಅವನ ಸ್ಥಾನಕ್ಕೂ ವ್ಯತ್ಯಾಸವಿದೆ.

ರಾಜನು ಸಂಯುಕ್ತ ರಾಷ್ಟ್ರ(UK)ದಲ್ಲಿ ಪಡೆದಿರುವ ಸ್ಥಾನಮಾನಕ್ಕೆ ಸದೃಶವಾದ ಸ್ಥಾನವನ್ನೇ ನೆಲೆಸುವಿಕೆಯಿಂದ ರೂಪುಗೊಂಡ ವಸಾಹತಿನಲ್ಲೂ ಪಡೆಯುತ್ತಾನೆ. *೧೦ App. Calls ೬೯೨ (೭೪೪).* ಅವನಿಗೆ ಕಾರ್ಯಾಂಗಾಧಿಕಾರವಿದ್ದು, ನ್ಯಾಯಾಲಯಗಳನ್ನು ಸ್ಥಾಪಿಸುವ ಅಧಿಕಾರವೂ ಇರುತ್ತದೆ. *[೩ Moo P.C. ೧೧೫, ೧೮೬೫: ೧ ೪೧೧, ೧೮೬೩].* ಆದರೆ ಅವನು ಶಾಸನಗಳನ್ನು ಮಾಡುವಂತಿಲ್ಲ. ಶಾಸನಗಳನ್ನು ಅಂಗೀಕರಿಸಬೇಕಾದರೆ ಹೀಗೆ ಮಾಡಬೇಕು:

(೧) ಪ್ರಾತಿನಿಧಿಕ ಲಕ್ಷಣವುಳ್ಳ ಒಂದು ಶಾಸಕಾಂಗವು ಯು.ಕೆ.ಗೆ ಸದೃಶವಾದ ರೀತಿಯಲ್ಲಿ ಶಾಸನ ಮಾಡಬಹುದು.

(೨) ಈ ರೀತಿಯಲ್ಲಿ ಶಾಸನ ರಚನೆಯು ಕಷ್ಟವಾಗಿರುವ ಸಂದರ್ಭದಲ್ಲಿ ಬೇರೆ ರೀತಿಯ ಸಂವಿಧಾನವನ್ನು ಸ್ಥಾಪಿಸುವುದಕ್ಕೆ ಅಧಿಕಾರವನ್ನು ಸಾಂಸದಿಕ ಪ್ರಭುತ್ವವು ಕೊಟ್ಟಿರಬೇಕು.

**(೨) ವಿಜಯ ವಸಾಹತುಗಳು**

ಇವುಗಳಲ್ಲಿ ರಾಜನಿಗೆ, ತನಗೆ ಸೂಕ್ತವೆಂದು ತೋರುವ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಸ್ಥಾಪಿಸುವ ಪರಮಾಧಿಕಾರವಿರುತ್ತದೆ. ಸಮಸ್ತ ಬ್ರಿಟಿಷ್ ಸ್ವಾಮ್ಯಕ್ಕೆ ಅನ್ವಯವಾಗುವಂತೆ ರೂಪುಗೊಂಡಿರುವ ಯಾವುದೇ ಸಾಂಸದಿಕ ಶಾಸನಕ್ಕೆ ಅದು ವಿರುದ್ಧವಾಗಿರಬಾರದು ಅಷ್ಟೆ.

ಆದರೆ ಒಂದು ಪ್ರಾತಿನಿಧಿಕ ಶಾಸಕಾಂಗವನ್ನು ಮಂಜೂರು ಮಾಡುವುದರಿಂದ ಈ ಹಕ್ಕು ಕಳೆದು ಹೋಗುತ್ತದೆ. ಆದರೆ ಅದು ಇಡಿಯಾಗಿ ಅಥವಾ ಭಾಗಶಃ ಉಳಿದುಕೊಂಡು ವ್ಯಕ್ತವಾಗಿರಬೇಕು. ಹಾಗೆ ಉಳಿಸಿಕೊಳ್ಳದೆ ಹೋದರೂ ಸಂವಿಧಾನಕ್ಕೆ ಹೇಗೋ ಹಾಗೆಯೇ ಶಾಸನಾಧಿಕಾರವನ್ನು ಸಂಸತ್ತಿನೊಂದು

ಅಧಿಕಾರದ ಮೂಲಕ ಪಡೆಯಬಹುದು. *೧೮೩೫, ೨ Kuapp. ೧೩೦ (೧೫೨) Jenson >< Pura; ೧೯೩೨ ೨೬೦.*

೧. ವೆಸ್ಟ್ ಮಿನಿಸ್ಟರ್ ಕಾನೂನು ಇವುಗಳಿಗೆ ಅನ್ವಯಿಸುತ್ತದೆ.

(೧) ಕೆನಡಾದ ಪ್ರಭುತ್ವ

(೨) ಕಾಮನ್‌ವೆಲ್ತ್ ಆಫ್ ಆಸ್ಟ್ರೇಲಿಯಾ

(೩) ನ್ಯೂಜಿಲೆಂಡ್‌ನ ಪ್ರಭುತ್ವ

(೪) ಯೂನಿಯನ್ ಆಫ್ ಸೌತ್ ಆಫ್ರಿಕಾ

(೫) ಐರಿಷ್ ಫ್ರೀ ಸ್ಟೇಟ್

(೬) ನ್ಯೂ ಫೌಂಡ್‌ಲ್ಯಾಂಡ್.

೨. ಈ ಕಾನೂನು ಈ ವಸಾಹತುಗಳನ್ನು ಪ್ರಭುತ್ವಗಳೆಂದು ಕರೆದು ಇವುಗಳಿಗೆ ಪ್ರಭುತ್ವದ ಸ್ಥಾನಮಾನವನ್ನು ನೀಡುತ್ತದೆ.

೩. ವೆಸ್ಟ್ ಮಿನಿಸ್ಟರ್ ಕಾನೂನು ಬರುವುದಕ್ಕೆ ಮೊದಲು ಈ ಕಾಲೋನಿಗಳಲ್ಲಿ ಜವಾಬ್ದಾರಿ ಸರಕಾರಗಳಿದ್ದವು.

ಹಾಗಾದರೆ ಜವಾಬ್ದಾರಿ ಸರಕಾರಕ್ಕೂ ಡೊಮಿನಿಯನ್ ಸ್ಥಾನಮಾನಕ್ಕೂ ನಡುವೆ ವ್ಯತ್ಯಾಸವೇನು?

**ಜವಾಬ್ದಾರಿ ಸರಕಾರದ ರಚನೆ**

(೧) ಕಾಲೋನಿಯು ತಮ್ಮ ಮೇಲೆ ದುಷ್ಪರಿಣಾಮವಾಗುವಂತಹ ವಿಚಾರಗಳಲ್ಲಿ ವಸಾಹತು ಸ್ವಯಂ ಆಡಳಿತವನ್ನು ಕೋರುವುದು.

(೨) ಸಾಮ್ರಾಜ್ಯದ ಪಾರ್ಲಿಮೆಂಟು ಮಿತಿರಹಿತ ಸರ್ವೋನ್ನತ ಪ್ರಭುತ್ವವನ್ನು ಕೋರುವುದು.

ಈ ಎರಡೂ ಬೇಡಿಕೆಗಳು ಪರಸ್ಪರ ವಿರುದ್ಧವಾಗಿವೆ. ಸ್ವಯಂ–ಆಡಳಿತವಿರುವ ವಸಾಹತು ಎನ್ನುವುದರಲ್ಲೇ ಉಕ್ತಿಯ ವೈರುಧ್ಯವಿದೆ.

**ಈ ಪ್ರಶ್ನೆಯ ಪರಿಹಾರವು ಎರಡು ಪ್ರಶ್ನೆಗಳನ್ನು ಒಳಗೊಂಡಿದೆ:**

೧. ಕಾಲೋನಿಯ ಹಾಗೂ ಸಾಮ್ರಾಜ್ಯದ ಆಡಳಿತಗಳ ನಡುವೆ ಅಧಿಕಾರ ವಿಭಜನೆ ಹೇಗಿತ್ತು?

೨. ಒಂದೊಂದಕ್ಕೂ ಕೊಡಲಾದ ಅಧಿಕಾರಗಳನ್ನೂ ಅವು ಹೇಗೆ ಚಲಾಯಿಸಬೇಕಾಗಿತ್ತು.

ಸೂಚಿತ ವಿಭಜನೆಯು ಸಾಮ್ರಾಜ್ಯ ಮತ್ತು ವಸಾಹತು ಶಾಸಕಾಂಗ ಸಾಮರ್ಥ್ಯವನ್ನನುಸರಿಸಿ ಇರಲಿಲ್ಲ.

ಎಲ್ಲಾ ಶಾಸನ ಸಾಮರ್ಥ್ಯವೂ ವಸಾಹತು ಆಡಳಿತ ಸಾಮರ್ಥ್ಯಕ್ಕೆ ಒಳಪಟ್ಟಿತ್ತು. ವಸಾಹತು ಕಾನೂನುಗಳು ಕೈಲಿದ್ದವು. ಆದರೆ ಅವುಗಳಲ್ಲಿ ಕೆಲವನ್ನು ಸಾಮ್ರಾಜ್ಯ ಸರಕಾರವು ವೀಟೋ ಚಲಾಯಿಸಿ ವಿಫಲಗೊಳಿಸಬಹುದಾಗಿತ್ತು. ಅದೂ ವಸಾಹತು ಆಡಳಿತದ ಸಾಮರ್ಥ್ಯದಿಂದಾಚೆಗಿದೆ ಎಂಬ ಆಧಾರದಿಂದ ಅಲ್ಲ, ಈ ಕಾರಣದಿಂದ ಸಾಮ್ರಾಜ್ಯದ ಹಿತಾಸಕ್ತಿಯ ಮೇಲೆ ದುಷ್ಪರಿಣಾಮ ಬೀರುತ್ತಿವೆ.

ಸಾಮ್ರಾಜ್ಯದ ಆಡಳಿತಕ್ಕೆ ಸೇರಿದ ವಿಚಾರಗಳನ್ನು ಬರಹದಲ್ಲಿ ಸ್ಪಷ್ಟಪಡಿಸಿರಲಿಲ್ಲ. ಯಾವುದೇ ಒಂದು ವಿಷಯವು ಚಕ್ರಾಧಿಪತ್ಯದ ಹಿತಾಸಕ್ತಿಗೆ ಸೇರಿದ್ದೇ ಅಲ್ಲವೆ ಎನ್ನುವುದನ್ನು ನಿರ್ಧರಿಸಲು ಸರಕಾರವು

ಸ್ವತಂತ್ರವಿತ್ತು.

ಈ ಕೆಳಗಿನವು ಈ ವಸಾಹತುಗಳ ಸಂವಿಧಾನದ ಒಂದು ಲಕ್ಷಣವಾಗಿದ್ದವು:

(೧) ಸಾಮ್ರಾಜ್ಯದ ಸಚಿವ ಸಂಪುಟದ ಸಲಹೆಯಂತೆ ರಾಜನು ಗವರ್ನರ್ ಮತ್ತು ಗವರ್ನರ್ ಜನರಲ್‌ರನ್ನು ನೇಮಿಸುವುದು.

(೨) ತನ್ನ ಸಚಿವರ ಸಲಹೆಗೆ ವ್ಯತಿರಿಕ್ತವಾಗಿ ವರ್ತಿಸಲು ಗವರ್ನರ್ ಜನರಲ್‌ನಿಗಿರುವ ಹಕ್ಕು.

(೩) ಕೇಂದ್ರ ಸರಕಾರದ ಸಲಹೆಯಂತೆ ರಾಜನು ನಿರ್ಧಾರ ಕೈಗೊಳ್ಳಲು ಮಸೂದೆಯನ್ನು ಕಾದಿರಿಸಲು ಗವರ್ನರ್‌ಗಿರುವ ಅಧಿಕಾರ.

(೪) ಕೇಂದ್ರ ಸರಕಾರದ ಸಲಹೆಯನ್ನು ಕಟ್ಟಿಹಾಕಲು ರಾಜನಿಗಿರುವ ಅಧಿಕಾರ.

**ವೆಸ್ಟ್ ಮಿನಿಸ್ಟರ್ ಕಾನೂನಿನ ಅಂಶಗಳು**

I. ಬ್ರಿಟಿಷ್ ಪಾರ್ಲಿಮೆಂಟು ಅಂಗೀಕರಿಸುವ ಶಾಸನಗಳ ಮೇಲು ಪರಿಣಾಮದಿಂದ ಪ್ರಭುತ್ವದ ಶಾಸನಸಭೆಯನ್ನು ಅದು ಮುಕ್ತಗೊಳಿಸುತ್ತದೆ.

(೧) ಅದು ವಸಾಹತು ಕಾನೂನು ಸಿಂಧುತ್ವ ಕಾಯ್ದೆ (ಕಲೋನಿಯಲ್ ಲಾಸ್ ವ್ಯಾಲಿಡಿಟಿ ಆ್ಯಕ್ಟ್) ಅನ್ನು ರದ್ದುಪಡಿಸುತ್ತದೆ.

(೨) ಅದು ಯಾವುದೇ ಯು.ಕೆ. ಶಾಸನವನ್ನು ಪ್ರಭುತ್ವದ ಭಾಗವಾಗಿರುವಷ್ಟು ಮಟ್ಟಿಗೆ ಹಿಂತೆಗೆದುಕೊಳ್ಳಲು ಪ್ರಭುತ್ವದ ಶಾಸನ ಸಭೆಗೆ ಅವಕಾಶ ಕೊಡುತ್ತದೆ.

II. ಅದು ಬ್ರಿಟಿಷ್ ಪಾರ್ಲಿಮೆಂಟಿನ ಶಾಸಕಾಂಗ ಪ್ರಭುತ್ವದ ಮೇಲೆ ಮಿತಿಗಳನ್ನು ಹಾಕುತ್ತದೆ.

(೧) ೧೯೩೧ ಡಿಸೆಂಬರ್ ೧೧ರ ನಂತರ ಅಂಗೀಕೃತವಾದ ಪಾರ್ಲಿಮೆಂಟಿನ ಯಾವುದೇ ಶಾಸನವು ಒಂದು ಪ್ರಭುತ್ವಕ್ಕೆ ಅದರ ಶಾಸನದ ಭಾಗವಾಗಿ ವಿಸ್ತರಣೆಗೊಳ್ಳುವುದಿಲ್ಲ. ಅಥವಾ ವಿಸ್ತರಣೆ ಗೊಂಡಿರುವಂತೆ ಭಾವಿಸಲಾಗುವುದಿಲ್ಲ. ಹಾಗಾಗಬೇಕಾದರೆ ಪ್ರಭುತ್ವವನ್ನು ಪ್ರಾರ್ಥಿಸಿಕೊಂಡಿದೆ ಮತ್ತು ಆ ಶಾಸನ ರಚನೆಗೆ ಸಮ್ಮತಿಸಿದೆ ಎಂದು ಶಾಸನದಲ್ಲಿ ಸ್ಪಷ್ಟವಾಗಿ ಉಕ್ತವಾಗಿರಬೇಕು.

(೨) ಸಿಂಹಾಸನಕ್ಕೆ ಉತ್ತರಾಧಿಕಾರ, ಅಥವಾ ರಾಜ ನಡವಳಿಕೆ, ಬಿರುದು ಬಾವಲಿಗಳು ಇವುಗಳಿಗೆ ಸಂಬಂಧಪಡುವ ಶಾಸನದಲ್ಲಿ ಯಾವುದೇ ವ್ಯತ್ಯಾಸ ಮಾಡಬೇಕಾದರೆ ಅದಕ್ಕೆ ಪ್ರಭುತ್ವ ಹಾಗೂ ಯುನೈಟೆಡ್ ಕಿಂಗ್‌ಡಮ್ ಎರಡರ ಪಾರ್ಲಿಮೆಂಟುಗಳ ಸ್ಪಷ್ಟ ಸಮ್ಮತಿ ಅಗತ್ಯ.

**III. ಕಾನೂನು ಇತರ ಕೆಲವು ಅವಕಾಶಗಳನ್ನು ಬದಲಾಯಿಸುವುದಿಲ್ಲ**

(೧) ಗವರ್ನರ್ ಜನರಲ್‌ನ ನೇಮಕ

(೨) ಮಸೂದೆಗಳನ್ನು ಕಾದಿರಿಸುವುದು

(೩) ಮಸೂದೆಗಳು ಅಂಗೀಕೃತವಾಗಲು ಅವಕಾಶ ಕೊಡದಿರುವುದು.

ಆದರೆ ಈ ಅಧಿಕಾರಿಗಳ ಚಲಾವಣೆಯಲ್ಲಿ ಭಾರಿ ಬದಲಾವಣೆಯುಂಟಾಗಿದೆ. ಚಕ್ರವರ್ತಿಗೆ ಸಲಹೆ ಕೊಡುವ ಹಕ್ಕು.

* * * * *

ಪ್ರಭುತ್ವದ ಸ್ಥಾನಮಾನ ಅಂದರೆ ಚಕ್ರಾಧಿಪತ್ಯ ಎಂದಲ್ಲ.

* * * * *

೨. ಯುನೈಟೆಡ್ ಕಿಂಗ್‌ಡಮ್ ಸಂವಿಧಾನವನ್ನು ಕುರಿತು ಪ್ರಸ್ತಾಪ ಮಾಡಿದ್ದಾಗಿದೆ.

೩. ಭಾರತವನ್ನು ಕುರಿತು ಇಲ್ಲಿ ಹೇಳುವುದಿಲ್ಲ. ಹಾಗೆಯೇ ಸಂರಕ್ಷಿತ ಪ್ರದೇಶಗಳು ಮತ್ತು ಆಜ್ಞಾಪ್ರಕಾರ ಆಳುತ್ತಿರುವ ಭಾಗಗಳ ಬಗೆಗೂ ಇಲ್ಲಿ ಹೇಳಿಲ್ಲ.

೪. ಇಲ್ಲಿ ವಸಾಹತುಗಳ ಸಂವಿಧಾನಾತ್ಮಕ ವ್ಯವಸ್ಥೆಯನ್ನು ಕುರಿತು ಮಾತ್ರ ಚರ್ಚಿಸಿದೆ.


೫. ವಸಾಹತುಗಳ ಸಂವಿಧಾನಾತ್ಮಕ ಸಾಂಸ್ಥಿಕತೆಯು ಹೇಗೆ ಆ ವಸಾಹತು ಪ್ರದೇಶವನ್ನು ಗಳಿಸಿಕೊಳ್ಳಲಾಯಿತು ಎನ್ನುವುದರ ಮೇಲೆ ವ್ಯತ್ಯಾಸಗೊಳ್ಳುತ್ತದೆ.

೬. ಎರಡು ವಿಧಾನಗಳಿವೆ–

(೧) ನೆಲೆಸುವಿಕೆ

(೨) ಗೆಲ್ಲುವಿಕೆ ಅಥವಾ ವಶಪಡಿಸಿಕೊಳ್ಳುವಿಕೆ

* * * * *




**ಪ್ರಭುತ್ವಗಳು (ಆಧಿಪತ್ಯ ರಾಜ್ಯ)**

೧. ಪ್ರಭುತ್ವಗಳ ವ್ಯವಹಾರವನ್ನು ಕಾಲೋನಿಗಳ ವ್ಯವಹಾರದಿಂದ ಪ್ರತ್ಯೇಕಿಸಿ ನಿರ್ವಹಿಸುವ ಸಲುವಾಗಿ ೧೯೨೫ರಲ್ಲಿ ಪ್ರಭುತ್ವದ ಕಚೇರಿಯನ್ನು ಪ್ರಾರಂಭಿಸಲಾಯಿತು.

೨. ಮೊದಲಲ್ಲಿ ಪ್ರಭುತ್ವಗಳ ಮತ್ತು ಕಾಲೋನಿಗಳ ಕಾರ್ಯದರ್ಶಿತ್ವವನ್ನು ಒಬ್ಬನೇ ಸಚಿವನು ನಿರ್ವಹಿಸುತ್ತಿದ್ದನು. ಆದರೆ ೧೯೩೦ರ ನಂತರ ಪ್ರಭುತ್ವಗಳಿಗಾಗಿಯೇ ಒಬ್ಬ ಪ್ರತ್ಯೇಕ ಕಾರ್ಯದರ್ಶಿಯು ನೇಮಿತನಾದನು.

೩. ಪ್ರಭುತ್ವದ ಕಛೇರಿಯು ಪ್ರಭುತ್ವಗಳಿಗಾಗಿಯೇ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುತ್ತದೆ. ಅವು ದಕ್ಷಿಣ ರೋಡೀಸಿಯಾ, ದಕ್ಷಿಣ ಆಫ್ರಿಕಾದ ಹೈ ಕಮೀಷನ್ [ಅಂದರೆ, ಬಸುಟೋಲ್ಯಾಂಡ್,

ಬೆಚುನಾಲ್ಯಾಂಡ್, ಸಂರಕ್ಷಿತ ಸ್ವಾಜೀಲ್ಯಾಂಡ್]. ಸಾಗರೋತ್ತರ ನೆಲೆಗಳು, ಸಾಮ್ರಾಜ್ಯಕ್ಕೆ ಸಂಬಂಧಿಸಿದ ಸಭೆ–ಸಮಾವೇಶಗಳು ಇತ್ಯಾದಿ.

(ನೋಡಿ ಸರ್. ಜಿ.ವಿ. ಫಿಡ್ಡಿಸ್, ದಿ ಡೊಮಿನಿಯನ್ ಅಂಡ್ ಕಲೋನಿಯಲ್ ಆಫೀಸಸ್ The Dominios and Colonial Offices).

**ಓಲ್ಡ್ ಹ್ಯಾಲ್ಸ್‌ಬರಿ (Old Halsburry), I, ಪು. ೩೦೩**

೬೬೨. ಚಕ್ರವರ್ತಿಯವರ ಪ್ರಭುತ್ವಗಳಲ್ಲಿ–

(ಅ) ಯು.ಕೆ. ಮತ್ತು ಯಾವುದೇ ವಸಾಹತು, ಪ್ಲಾಂಟೇಶನ್, ದ್ವೀಪ, ಚಕ್ರವರ್ತಿಯವರ ಪ್ರಭುತ್ವಗಳಲ್ಲಿನ ಯಾವುದೇ ಭೂಪ್ರದೇಶ ಅಥವಾ ನೆಲೆ, ಅವು ಯು.ಕೆ.ಯೊಳಗೇ ಇರುವವಲ್ಲ.

*(ನ್ಯಾಚುರಲೈಸೇಷನ್ ಆ್ಯಕ್ಟ್, ೧೮೭೦, ೩೩, Ne.C.14s ೧೭)*

(ಆ) ಇಂಗ್ಲೆಂಡಿನ ರಾಜನ ಅಧೀನನಾದ ರಾಜನ ಭೂಪ್ರದೇಶದಲ್ಲಿ ಇರುವ ಸ್ಥಳಗಳು.

[ಕ್ರೋ ಮತ್ತು ರ್‍ಯಾಮ್‌ಸೇ (೧೬೭೦) ವಾಗ್, ೨೮೧]

(ಇ) ಬ್ರಿಟಿಷ್ ಯುದ್ಧನೌಕೆಗಳು ಮತ್ತು ಇತರ ಸಾರ್ವಜನಿಕ ಉಪಯೋಗಕ್ಕಾಗಿರುವ ಹಡಗುಗಳು (ಪಾರ್ಲಿಮೆಂಟ್ >< ಬೆಲ್ಗೆ (೧೬೭೦) ೫, ೧೯೭)

(ಈ) ಸಾಗರಾಂತರ ವಾಣಿಜ್ಯ ನಡೆಸುವ ವರ್ತಕರು

*[೧೮೭೦ S.R. ೬ Q.B. ೩೧ ಮಾರ್ಷಲ್ >< ಮುರ್ಗಟ್ರಾಯ್ಡ್]* ಮತ್ತು *ಬಹುಶಃ ಹೊರದೇಶಕ್ಕೆ ಸೇರಿದ ಸಮುದ್ರ ಭಾಗ. [ಹೋಲಿಸಿ: R V/s Carr and Wilson (೧೮೮೨) ೧೦. QBD. ೭೬]*

**ಹ್ಯಾಲ್ಸ್‌ಬರಿ (Halsburry) X ಪು. ೫೦೩ ಪ್ಯಾರಾ ೮೫೬**

೧. "ಬ್ರಿಟಿಷ್ ಆಸ್ತಿ" ಎಂದರೆ ಯು.ಕೆ. ಹೊರತುಪಡಿಸಿ, ಘನ ಚಕ್ರವರ್ತಿಯವರ ಪ್ರಭುತ್ವಗಳ ಯಾವುದೇ ಭಾಗ, ಅಂತಹ ಭಾಗಗಳು ಕೇಂದ್ರ ಮತ್ತು ಸ್ಥಳೀಯ ಶಾಸನ ಸಭೆಗಳೆರಡರ ನಿರ್ವಹಣೆಯಲ್ಲೂ ಇರುವುದನ್ನು ಬ್ರಿಟಿಷ್ ಆಸ್ತಿ ಎಂದು ಪರಿಗಣಿಸಲಾಗುತ್ತದೆ. *[Interpretation Act ೧೮೮೯ (೫೨* ಮತ್ತು *Vict. ೫೩ C. ೬೩) ೧೮ (೨)].*

೨. ಕಾಲೋನಿ ಎನ್ನುವುದು ಘನ ಚಕ್ರವರ್ತಿಯವರ ಪ್ರಭುತ್ವಗಳ ಯಾವುದೇ ಭಾಗ, ಬ್ರಿಟಿಷ್ ದ್ವೀಪಗಳು ಹಾಗೂ ಬ್ರಿಟಿಷ್ ಇಂಡಿಯಾ ಹೊರತುಪಡಿಸಿ, ಮತ್ತು ಅಂತಹ ಪ್ರಭುತ್ವದ ಭಾಗಗಳು ಕೇಂದ್ರ ಮತ್ತು ಒಂದು ಸ್ಥಳೀಯ ಶಾಸನ ಸಭೆಯ ಆಡಳಿತದಲ್ಲಿರುವ ಸಂದರ್ಭದಲ್ಲಿ ಕೇಂದ್ರ ಶಾಸನ ಸಭೆಯ ವ್ಯಾಪ್ತಿಗೆ ಬರುವ ಎಲ್ಲಾ ಪ್ರದೇಶಗಳನ್ನು ಒಂದು ಕಾಲೋನಿಯೆಂದು ಪರಿಗಣಿಸಲಾಗುತ್ತದೆ *[S. ೧೮ (೩)].*

೩. ಒಂದು ಬ್ರಿಟಿಷ್ ನೆಲೆಯೆಂದರೆ, ಸ್ವಾಧೀನಪಡಿಸಿಕೊಳ್ಳುವ ಮೂಲಕ ಅಥವಾ ಗೆಲ್ಲುವ ಮೂಲಕ ಸಂಪಾದಿಸಿದ್ದಲ್ಲದೆ, ಮತ್ತು ತತ್ಕಾಲಕ್ಕೆ ಯಾವುದೇ ಬ್ರಿಟಿಷ್ ಪ್ರದೇಶದ ಶಾಸನಸಭೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವ ಯಾವುದೇ ಬ್ರಿಟಿಷ್ ಆಸ್ತಿ, *[British Settlements Act, ೧೮೮೭ (೫೦–೫೧ Vic. (೫೬) S ೬].*

೪. ಔಪಚಾರಿಕವಾಗಿ ಬ್ರಿಟಿಷ್ ಪ್ರಭುತ್ವಗಳಿಗೆ ಸೇರಿಸಿರದ ಸ್ಥಳಗಳನ್ನು ಸೂಚಿಸಲು ಅವಲಂಬಿತ ರಾಜ್ಯಗಳು (Dependencies) ಎಂಬ ಉಕ್ತಿಯನ್ನು ಬಳಸಲಾಗುತ್ತದೆ. ಆದ್ದರಿಂದ ಅವು ಕಟ್ಟುನಿಟ್ಟಾಗಿ

ಹೇಳಬೇಕೆಂದರೆ, ಹೊರಗಿನ ರಾಜ್ಯಗಳು, ವಸ್ತುತಃ ಅವುಗಳನ್ನು ಗ್ರೇಟ್ ಬ್ರಿಟನ್ ಆಳುತ್ತಿರುತ್ತದೆ. ಇತರ ವಿದೇಶಗಳ ಬಗೆಗೆ ಉದ್ಭವಿಸುವ ಯಾವುದೇ ಸಂಬಂಧಕ್ಕೆ ಅವು ಪ್ರತಿನಿಧಿಸುತ್ತವೆ. ಅವುಗಳಲ್ಲಿ ಹೆಚ್ಚಿನವು 'ಸಂರಕ್ಷಿತ ರಾಜ್ಯ'(Protectorate)ಗಳು. ಅಂದರೆ ಬ್ರಿಟಿಷ್ ಚಕ್ರವರ್ತಿಯ ರಕ್ಷಣೆಯಲ್ಲಿ ಇರುವ ಭೂ ಪ್ರದೇಶಗಳು. ಸಾಮಾನ್ಯವಾಗಿ ದೇಶೀಯ ಅರಸರು ಮತ್ತು ನಾಯಕರೊಂದಿಗೆ ಮಾಡಿಕೊಂಡ ಒಪ್ಪಂದದಿಂದ ಇದು ನಡೆಯುತ್ತದೆ. ಸೈಸಐಪ್ರಸ್ ಮತ್ತು ವೀಹೈವೀ ಎರಡೂ ಅಲ್ಲಲ್ಲಿಯ ರಾಜರೊಂದಿಗೆ ಮಾಡಿಕೊಂಡ ವಿಶೇಷ ಒಪ್ಪಂದದಿಂದಾಗಿ ಗ್ರೇಟ್ ಬ್ರಿಟನ್ ಆಳುತ್ತಿರುವ ದೇಶಗಳೂ. ಆಳಿಕೆಯು Foreign Jurisdiction Act ೧೮೯೦, ೫೩–೫೪ Vic. C. ३೭ ಪ್ರಕಾರ ನಡೆಯುತ್ತದೆ. ಸಂರಕ್ಷಿತ ರಾಜ್ಯಗಳು ಹೇಗೋ ಇವುಗಳನ್ನು ಹಾಗೆಯೇ ನಿರ್ವಹಿಸಲಾಗುತ್ತದೆ. ದೇಶೀಯ ಸಂಸ್ಥಾನಗಳು ಮತ್ತು ಬ್ರಿಟಿಷ್ ರಾಜ್ಯ ಭಾಗಗಳು ಸೇರಿದಂತೆ ಭಾರತವನ್ನು ನಮ್ಮ ಬೃಹತ್ ಆಶ್ರಿತ ದೇಶ ಎಂಬುದಾಗಿ ಪದೇ ಪದೇ ಹೇಳಲಾಗುತ್ತದೆ.

೫. ನೆಲೆಸು ನಾಡುಗಳಲ್ಲಿ (ಕ್ರೌನ್ ಕಾಲೋನಿಗಳು) ಸರಕಾರವನ್ನು ನಿರ್ವಹಿಸುತ್ತಿರುವ ಸಾರ್ವಜನಿಕ ಅಧಿಕಾರಿಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಚಕ್ರವರ್ತಿಯು ಉಳಿಸಿಕೊಂಡಿರುತ್ತಾನೆ. ಶಾಸನಾಧಿಕಾರವನ್ನು ಸರಕಾರ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗೆ ವಹಿಸಲಾಗುತ್ತದೆ. [ಎಸ್ ಎಸ್ ಜಿಬ್ರಾಲ್ಟರ್, ಅಶಂತಿ, ವರ್ಜಿನ್ ದ್ವೀಪಗಳು, ಸೇಂಟ್ ಹೆಲೆನಾ ಮತ್ತು ಬಸುಟೋಲ್ಯಾಂಡ್] ಇಲ್ಲವೆ, ಚಕ್ರವರ್ತಿಯು ಭಾಗಶಃ ನಾಮಕರಣ ಮಾಡಿದ, ಮಿಕ್ಕ ಭಾಗವು ಚುನಾಯಿತವಾದ ಒಂದು ವಿಧಾನಪರಿಷತ್ತಿಗೆ ವಹಿಸಲಾಗುತ್ತದೆ. ಈ ಕಾಲೋನಿಗಳಲ್ಲಿ ಕೆಲವು ಅಪವಾದಗಳನ್ನು ಹೊರತುಪಡಿಸಿ ಚಕ್ರವರ್ತಿಯು ಸಂಪುಟದ ಸಲಹೆಯಂತೆ ಶಾಸನಾಡಳಿತ ನಡೆಸುವ ಹಕ್ಕನ್ನು ಕಾದಿರಿಸಿಕೊಂಡಿದ್ದಾರೆ.

**ಆಶ್ರಿತ ದೇಶಗಳು** (Protectorates) ಘನ ಚಕ್ರವರ್ತಿಯ ಪ್ರಭುತ್ವಗಳ ಭಾಗಗಳಾಗದೆ ಹೋದರೂ ಅಲ್ಲಿ ಕ್ರೌನ್ ಕಾಲೋನಿಗಳ ಹಾಗೆಯೇ ಆಡಳಿತ ನಡೆಸಲಾಗುತ್ತದೆ.

**ಪ್ರಭುತ್ವ**ಗಳು ಚುನಾಯಿತ ಶಾಸನ ಸಭೆಗಳಿರುವ ಕಾಲೋನಿಗಳು. ಅವುಗಳಲ್ಲಿ ಯು.ಕೆ.ಯಲ್ಲಿಯಂತೆಯೇ ಕಾರ್ಯಾಂಗವು ಜವಾಬ್ದಾರಿಯುತವಾಗಿರುತ್ತದೆ. ಚಕ್ರವರ್ತಿಯು ನೇಮಿಸಿ ನಿಯಂತ್ರಿಸುವ ಏಕೈಕ ಅಧಿಕಾರಿ ಗವರ್ನರ್ ಜನರಲ್.

### ಹ್ಯಾಲ್ಸ್‌ಬರಿ (Halsburry) X ಪು. ೫೨೧

೮೮೫. ಈಚಿನ ಎರಡು ಕಾನೂನುಗಳಲ್ಲಿ ಕಾಣಿಸಿಕೊಂಡಿದ್ದರೂ "ಪ್ರೊಟೆಕ್ಟೊರೇಟ್" ಎಂಬ ಪದದ ಶಾಸನ ಸಮ್ಮತವಾದ ಅಥವಾ ಅಧಿಕಾರ ಪೂರ್ವಕ ವಿವರಣೆಯನ್ನು ಕೊಡಲಾಗಿಲ್ಲ. ಆಶ್ರಿತ ರಾಜ್ಯಗಳು ನಿಖರವಾದ ಅರ್ಥದಲ್ಲಿ ಬ್ರಿಟಿಷ್ ಭೂಪ್ರದೇಶದಲ್ಲಿ. ಆದರೆ ಅವುಗಳ ವ್ಯವಹಾರಗಳಲ್ಲಿ ಬೇರೆ ಯಾವುದೇ ನಾಗರಿಕ ದೇಶವೂ ಮಧ್ಯ ಪ್ರವೇಶ ಮಾಡುವುದಿಲ್ಲ. ಫಾರಿನ್ ಜ್ಯೂರಿಸ್ಡಿಕ್ಷನ್ ಆ್ಯಕ್ಟ್, ೧೮೯೦ ಚಕ್ರವರ್ತಿಯವರಿಗೆ ವಹಿಸಿದ ಅಧಿಕಾರಗಳಿಂದ ಅವುಗಳ ಆಡಳಿತ ನಡೆಸಲಾಗುತ್ತದೆ. ಚಕ್ರವರ್ತಿಯ ಅಧಿಕಾರಗಳಿಗೆ ಪೂರಕವಾಗಿ ಹಲವು ರಾಜಹಕ್ಕುಗಳನ್ನು "ಅಥವಾ ಬೇರೆ ಬೇರೆ ರೀತಿಯಾಗಿ ಚಕ್ರವರ್ತಿಯವರಿಗಿರುವ" ಅಧಿಕಾರಗಳು ಎಂಬ ಉಕ್ತಿಯು ಸೂಚಿಸುತ್ತದೆ.

### ಹಾಲ್ಸ್‌ಬರಿ (Halsbury) XIV ಪು. ೪೨೦

"ಪ್ರಭುತ್ವ"ಗಳ ಅರ್ಥವನ್ನು ಕುರಿತು ಈಚೆಗೆ ಬರೆದಿಡುವುದಕ್ಕಾಗಿ ನೋಡಿ R V/s Crese ೧೯೧೦ S.K.B. ೫೭೬, ೬೦೭, ೫೨೬

## ಹಾಲ್ಸ್‌ಬರಿ (Halsbury) IX ಪು. ೧೬

ರಾಜನ ಅಧಿಕಾರವು ಅವನ ಸಮಸ್ತ ಪ್ರಜೆಗಳ ಮೇಲೂ, ಅವರು ಎಲ್ಲೇ ಇರಲಿ, ಮತ್ತು ಆ ಕ್ಷೇತ್ರದಲ್ಲಿರುವ ಎಲ್ಲಾ ವಿದೇಶೀಯರ ಮೇಲೂ ವಿಸ್ತಾರಗೊಳ್ಳುತ್ತದೆ. ಇಂಗ್ಲಿಷ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಾದರೋ ಸೀಮಿತವಾದದ್ದು. ಮೊದಲನೆಯದಾಗಿ, ಸ್ಕಾಟ್‌ಲೆಂಡ್ ಮತ್ತು ಐರ್ಲೆಂಡ್ ಎರಡನ್ನೂ ಯುನೈಟೆಡ್ ಕಿಂಗ್‌ಡಮ್‌ಗೆ ಸೇರಿಸಿದ ಶಾಸನಗಳಲ್ಲಿ ನಿರೂಪಿಸಿರುವ ಅಂಶಗಳಿಂದ ಅದು ಮಿತಗೊಂಡಿದೆ. ಎರಡನೆಯದಾಗಿ, ನ್ಯಾಯ ಸನ್ನದು (Charter of Justice), ನಿರ್ದಿಷ್ಟ ಕಾಲೋನಿಗಳ ಮೇಲೆ ಪರಿಣಾಮ ಮಾಡುವ ಪತ್ರಗಳು, ಮತ್ತು ಕಾನೂನುಗಳಿಂದ ಹಾಗೂ ಮೂರನೆಯದಾಗಿ, ಯಾವುದೇ ಇಂಗ್ಲಿಷ್ ನ್ಯಾಯಾಲಯವು ತನ್ನ ಆದೇಶಗಳನ್ನು ಜಾರಿಗೆ ತರಲು ಅಧಿಕಾರ ಹೊಂದಿಲ್ಲದ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸುವ ಕೆಲಸಕ್ಕೆ ಕೈಹಾಕುವುದಿಲ್ಲ. ಇದೂ ಒಂದು ಮಿತಿಯಾಗಿದೆ.

ಪ್ರತಿಯೊಂದು ನಿರ್ದಿಷ್ಟ ನ್ಯಾಯಾಲಯದ ನ್ಯಾಯಾಧಿಕಾರವನ್ನು ರಾಜನು ವಹಿಸಿಕೊಟ್ಟಿದ್ದಾನೆ. ಈ ವಹಿಸಿಕೆಯು ಸಂಪೂರ್ಣವಾಗಿದೆ. ಏಕೆಂದರೆ ರಾಜನು ತನ್ನ ದಂಡಿಸುವ ಅಧಿಕಾರವನ್ನು ಪೂರ್ತಿಯಾಗಿ ವಿಭಿನ್ನ ನ್ಯಾಯಾಲಯಗಳಿಗೆ ವಹಿಸಿಕೊಟ್ಟಿದ್ದಾನೆ.

* * * * *

## ಪ್ರಭುತ್ವದ ಸ್ಥಾನಮಾನದ ಬೆಳವಣಿಗೆ

೧. ಮೊದಲು ಸಾಮ್ರಾಜ್ಯದ ಪಾರ್ಲಿಮೆಂಟು ಮತ್ತು ಸರಕಾರ ಮಿತಿಯಿಲ್ಲದ ಪರಮಾಧಿಕಾರವನ್ನು ಪಡೆಯುತ್ತವೆ. ಅದನ್ನು ತಾರ್ಕಿಕ ಪರಿಪೂರ್ಣತೆಯಲ್ಲಿ ಲಾರ್ಡ್ ಜಾನ್ ರಸೆಲ್ ನಿರೂಪಿಸಿದ್ದಾನೆ.

೨. ಎರಡನೆಯ ಹಂತದಲ್ಲಿ ವಸಾಹತು ಸ್ವಯಮಾಡಳಿತದ ಬೇಡಿಕೆ ಬರುತ್ತದೆ. ಅವುಗಳ ಹಿತದ ವಿಚಾರಗಳಲ್ಲಿ ಕಾಲೋನಿಗಳೇ ತಮ್ಮ ವ್ಯವಹಾರಗಳನ್ನು ನೋಡಿಕೊಳ್ಳುತ್ತವೆ.

೩. ಮೂರನೆಯದಾಗಿ ಇವೆರಡರ ನಡುವೆ ವೈರುಧ್ಯ ಉಂಟಾಗುತ್ತದೆ. ಸ್ವಯಮಾಡಳಿತವಿರುವ ಆಶ್ರಿತ ರಾಜ್ಯ ಎನ್ನುವುದು ವಿರೋಧಾಭಾಸ.

## ಪರಿಹಾರ

ಒಂದು ಕಡೆ ಸಾಮ್ರಾಜ್ಯದ ಪಾರ್ಲಿಮೆಂಟು ಒಂದು ವಸಾಹತಿಗೆ ಚಟುವಟಿಕೆಯ ಕ್ಷೇತ್ರವನ್ನು ನಿಗದಿಪಡಿಸಿತು. ಅದರಲ್ಲಿ ವಸಾಹತು ಶಾಸಕಾಂಗ, ಆಡಳಿತಾಂಗ ಮತ್ತು ನ್ಯಾಯಾಂಗಗಳು ಸರಕಾರವಾಗಿ ಅಧಿಕಾರ ಚಲಾಯಿಸಲು ಅವಕಾಶ ಪಡೆಯಿತು. ಈ ವಲಯದಲ್ಲಿ ಕಾಲೋನಿಯು ಪರಮಾಧಿಕಾರ ಮಟ್ಟದ್ದಾಯಿತು.

ಇನ್ನೊಂದು ಕಡೆ ಸಾಮ್ರಾಜ್ಯದ ಪಾರ್ಲಿಮೆಂಟು ಅಧಿಕಾರವನ್ನೂ ಪೂರ್ಣ ನ್ಯಾಯಿಕ ಅಧಿಕಾರವನ್ನೂ ಹೊಂದಿದ್ದು, ಸೂಕ್ತವೆಂದು ಭಾವಿಸಿದಾಗ ಕಾಲೋನಿಯ ಹಕ್ಕುಗಳನ್ನು ಹಿಂತೆಗೆದುಕೊಳ್ಳಲು ಅಥವಾ ಮಿತಗೊಳಿಸಲು ಸಮರ್ಥವಾಗಿತ್ತು. ಕಾಲೋನಿಯ ಒಂದು ರಾಜ್ಯಾಂಗ ಶಾಸನವನ್ನು ಹಿಂತೆಗೆದುಕೊಂಡು ಅಥವಾ ತಿದ್ದುಪಡಿ ತಂದು ಅಥವಾ ಕಾಲೋನಿಯ ಅಧಿಕಾರ ವ್ಯಾಪ್ತಿಯಲ್ಲಿನ ಯಾವುದಾದರೂ ವಿಷಯಕ್ಕೆ ಅನ್ವಯಿಸುವಂತೆ ಒಂದು ಇಂಪೀರಿಯಲ್ ಶಾಸನವನ್ನು ಅಂಗೀಕರಿಸುವುದರಿಂದ ಈ ಅಧಿಕಾರವನ್ನು ಅದು ಚಲಾಯಿಸಿತು.

ಎರಡು ಪ್ರಶ್ನೆಗಳು: (೧) ವಸಾಹತು ಮತ್ತು ಸಾಮ್ರಾಜ್ಯಗಳ ನಡುವೆ ಅಧಿಕಾರಗಳ ಹಂಚಿಕೆ ಹೇಗೆ? (೨) ಇವು ಒಂದೊಂದಕ್ಕೂ ನೀಡಿರುವ ಅಧಿಕಾರವನ್ನು ಚಲಾಯಿಸುವ ವಿಧಾನ ಯಾವುದು?

(೨) ಸೂಚಿತವಾದ ವಿಭಜನೆಯು ಸಾಮ್ರಾಜ್ಯವಾದ ಹಾಗೂ ವಸಾಹತಿನ ಶಾಸಕಾಂಗ ಸಾಮರ್ಥ್ಯದ ಪ್ರಕಾರ ಅಲ್ಲ.

ಎಲ್ಲಾ ಶಾಸನ ಪ್ರಕ್ರಿಯೆಯೂ ವಸಾಹತು ಸಾಮರ್ಥ್ಯದ ಪರಿಧಿಯೊಳಗೇ ಇರಬೇಕಾಗಿತ್ತು. ಆದರೆ ಅದರ ಕೆಲಭಾಗವನ್ನು ಚಕ್ರವರ್ತಿಯು ವೀಟೋ ಚಲಾಯಿಸಿ ತಳ್ಳಿಹಾಕಬಹುದಾಗಿತ್ತು. ಆ ವಿಚಾರವು ಕಾಲೋನಿಯ ಶಾಸನ ಸಭೆಯ ಸಾಮರ್ಥ್ಯದಿಂದಾದುದು ಎಂಬ ಆಧಾರದಿಂದಲ್ಲ, ಅದು ಸಾಮ್ರಾಜ್ಯದ ಕೆಲವು ಹಿತಾಸಕ್ತಿಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ಕಾರಣದಿಂದ.

(೨) ಸಾಮ್ರಾಜ್ಯದ ಹಿತಕ್ಕೆ ಸಂಬಂಧಿಸಿದವೆಂದು ಭಾವಿಸಲಾಗುವ ವಿಷಯಗಳನ್ನು ಪಟ್ಟಿ ಮಾಡುವುದರ ಮೂಲಕ ಸಾಮ್ರಾಜ್ಯ ಸಕ್ರಿಯ ಅಂಶಗಳನ್ನು ಬರವಣಿಗೆಗೆ ಇಳಿಸಬೇಕು ಎಂದು ವಾದಿಸಲಾಯಿತು. ಈ ರೀತಿ ತನ್ನನ್ನು ನಿರ್ದಿಷ್ಟವಾಗಿ ಕಟ್ಟಿಹಾಕಿಕೊಳ್ಳಲು ಬ್ರಿಟಿಷ್ ಸರಕಾರವು ನಿರಾಕರಿಸಿತು. [ಆಸ್ಟ್ರೇಲಿಯನ್ ಮಸೂದೆಗಳಲ್ಲಿ ಮಾಡಿದ ಅವಕಾಶಗಳು ಈ ಕಾರಣದಿಂದಾಗಿ ನಿಲ್ಲದಾದುವು.]

(೩) ಕಾಲೋನಿಯ ಮತ್ತು ಸಾಮ್ರಾಜ್ಯದ ಪ್ರಾಧಿಕಾರಗಳ ಚಟುವಟಿಕೆಗಳನ್ನು ಗೊಂದಲವಿಲ್ಲದಂತೆ, ಒಂದರ ಮೇಲೊಂದು ಹೇರಿಕೊಳ್ಳದಂತೆ, ಸಂಘರ್ಷವಾಗದಂತೆ ಹೊಂದಾಣಿಕೆಗೊಳಿಸುವುದು ಹೇಗೆ? ಇದಕ್ಕೆ ಪರಿಹಾರವನ್ನು ಈ ಕೆಳಗಿನವುಗಳಲ್ಲಿ ಕಾಣದಾಯಿತು:

(i) ಮೀಸಲಾತಿಯ ಅಧಿಕಾರಗಳು
(ii) ವಜಾ ಮಾಡುವ ಅಧಿಕಾರಗಳು
(iii) ಗವರ್ನರ್ ಜನರಲ್‌ನ ನೇಮಕಾತಿ
(iv) ಕಾಲೋನಿಗಳಲ್ಲಿ ಜವಾಬ್ದಾರಿ ಸರಕಾರದ ಸ್ವರೂಪ
(v) ಚಕ್ರವರ್ತಿಗೆ ಸಲಹೆ ನೀಡಲು ಬ್ರಿಟಿಷ್ ಸರಕಾರಕ್ಕಿರುವ ಹಕ್ಕು
(vi) ೧೮೬೫ರ ವಸಾಹತು ಕಾನೂನುಗಳ ಸಿಂಧುತ್ವ ಶಾಸನ

(೪) ಕಾಲೋನಿಗಳಲ್ಲಿ ಜವಾಬ್ದಾರಿ ಸರಕಾರದ ಸ್ವರೂಪ

ಸರಕಾರದ ಕಾರ್ಯಾಂಗಾಧಿಕಾರವು ಗವರ್ನರ್‌ನಲ್ಲಿತ್ತು. ತನ್ನ ಕಾರ್ಯಕಾರಿ ಮಂಡಳಿಯನ್ನು ನೇಮಿಸಿಕೊಳ್ಳುವ ಅಧಿಕಾರ ಅವನಿಗಿತ್ತು. ಕಾನೂನಿನ ಪ್ರಕಾರ ಆ ಮಂಡಳಿಯ ಸದಸ್ಯರಾಗಿರುವವರ ಜೊತೆಗೆ ಅಧಿಕಾರ ಅವನಿಗಿತ್ತು. ಕಾನೂನಿನ ಪ್ರಕಾರ ಆ ಮಂಡಳಿಯ ಸದಸ್ಯರಾಗಿರುವವರ ಜೊತೆಗೆ ಸೂಕ್ತರಾದವರೆಂದು ತಾನು ಭಾವಿಸುವ ವ್ಯಕ್ತಿಗಳನ್ನು ಅವನು ನೇಮಿಸುತ್ತಿದ್ದನು. ಒಂದೋ ಎರಡೋ ಸಂದರ್ಭಗಳಲ್ಲಿ, ರಾಜ್ಯಾಂಗ ಕಾನೂನಿನಲ್ಲಿಯೇ ಸಚಿವರಾಗುವವರು ಕಾರ್ಯಕಾರೀ ಮಂಡಳಿಯ ಸದಸ್ಯರಾಗಿರಬೇಕೆಂದೋ ಕಾರ್ಯಕಾರಿ ಮಂಡಳಿಯ ಸದಸ್ಯರು ನಿರ್ದಿಷ್ಟ ಕಾಲಾವಧಿಗೆ ಶಾಸನಸಭೆಯ ಯಾವುದಾದರೂ ಒಂದು ಸದನದ ಸದಸ್ಯರಾಗಿರಬೇಕೆಂದೋ ಸ್ಪಷ್ಟವಾಗಿ ನಿರೂಪಿಸಲಾಗುತ್ತಿತ್ತು. ಯಾವುದೇ ಸಂದರ್ಭದಲ್ಲಿಯೂ ಕಾರ್ಯಕಾರೀ ಮಂಡಳಿಯಲ್ಲಿ ಮಂತ್ರಿಗಳಿರಬೇಕು, ಮಂತ್ರಿಗಳು ಮಾತ್ರವೇ ಇರಬೇಕು ಎಂದು ಕಾನೂನು ವಿಧಿಸಿರಲಿಲ್ಲ.

ಕಾರ್ಯಕಾರೀ ಮಂಡಳಿಯಲ್ಲಿ ಮಂತ್ರಿಗಳಿರಬಹುದು, ಆದರೆ ಮಂತ್ರಿಗಳು ಮಾತ್ರವೇ ಇರಬೇಕಾದ ಅಗತ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಕಾರ್ಯಕಾರೀ ಮಂಡಳಿಯ ಸದಸ್ಯರು ಶಾಸನ ಸಭೆಯ ಯಾವುದೇ

ಸದನದ ಸದಸ್ಯರಾಗಿರಬೇಕಾದ ಶಾಸನಬದ್ಧ ಅಗತ್ಯವಿಲ್ಲ.

ಶಾಸನವು ಕಾರ್ಯ ಚಟುವಟಿಕೆಯ ಒಂದು ವಲಯವನ್ನು ವಿಧಿಸಿತು. ಅದರೊಳಗೆ, ವಸಾಹತು ಶಾಸನ ಸಭೆಗೆ ಶಾಂತಿ, ಸುವ್ಯವಸ್ಥೆ ಮತ್ತು ಕಾಲೋನಿಯ ಉತ್ತಮ ಆಡಳಿತ ನಿರ್ವಹಣೆಗಳಿಗೆ ಅಗತ್ಯವಾದ ಕಾನೂನುಗಳನ್ನು ಮಾಡಲು ಅಧಿಕಾರವಿತ್ತು.

ಗವರ್ನರ್‌ರಿಗೆ ಸೂಚನೆಗಳು, ಆತನು ಕಾರ್ಯಕಾರೀ ಮಂಡಳಿಯೊಂದಿಗೆ ಆಡಳಿತ ನಡೆಸಲು ಅಧಿಕಾರ ಕೊಟ್ಟಿದ್ದುವು. ಮಂಡಳಿಯ ಸಲಹೆಯನ್ನು ಗವರ್ನರ್ ಸೂಕ್ತವೆಂದು ಭಾವಿಸಿದರೆ ಪುರಸ್ಕರಿಸದಿರಬಹುದು.

ಜವಾಬ್ದಾರಿ ಸರಕಾರವಾದರೋ ಆಧಾರಿತವಾಗಿದ್ದುದು ಕಾನೂನಿನ ಮೇಲಲ್ಲ, ಚಕ್ರವರ್ತಿಯ ವಿಶ್ವಾಸದ ಮೇಲೆ.

**ಅಂತರ–ಸಾಮ್ರಾಜ್ಯ ಸಂಬಂಧಗಳ ಲಕ್ಷಣ**

ಕಾಮನ್‌ವೆಲ್ತ್ ಮರ್ಚೆಂಟ್ ಷಿಪ್ಪಿಂಗ್ ಒಪ್ಪಂದದಲ್ಲಿ ಪ್ರಭುತ್ವಗಳು ಸಂಪೂರ್ಣ ಸಮಾನತೆಯ ನೆಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಇವು ೧೯೩೦ರ ಇಂಪೀರಿಯಲ್ ಕಾನ್‌ಫರೆನ್ಸ್‌ನಲ್ಲಿ ಸೂಚಿಸಿದ ಅಂತರ–ಸಾಮ್ರಾಜ್ಯ ನ್ಯಾಯಾಧಿಕರಣದ ಉಲ್ಲೇಖದೊಂದಿಗೆ ಹೋಲಿಕೆಗೆ ನಿಲ್ಲುತ್ತವೆ. [Cmd. ೩೯೪, ಭಾಗ VII]

ಆದರೆ ಸಂಬಂಧಗಳನ್ನು ಅಂತರರಾಷ್ಟ್ರೀಯ ಕಾನೂನು ನಿಯಂತ್ರಿಸುವುದಿಲ್ಲ. ಇದನ್ನು ಸ್ಪಷ್ಟವಾಗಿ ೧೯೨೪ರಲ್ಲಿ ಸ್ಥಿರಪಡಿಸಲಾಯಿತು. ಆಗ ಐರಿಷ್ ಫ್ರೀ ಸ್ಟೇಟ್, ಲೀಗ್ ಆಫ್ ನೇಷನ್ಸ್‌ನ ಸಚಿವಾಲಯದಲ್ಲಿ ನೋಂದಾಯಿಸಿಕೊಂಡಿತು. ೧೯೨೧ ಡಿಸೆಂಬರ್ ೬ನೆಯ ತಾರೀಕಿನ ಒಂದು ಒಪ್ಪಂದದ ಪ್ರಕರಣಗಳನ್ನು ಲೀಗ್ ಆಫ್ ನೇಷನ್ಸ್ ಪ್ರಣಾಳಿಕೆಯ ೧೮ನೆಯ ಪ್ರಕರಣದ ಅರ್ಥವ್ಯಾಪ್ತಿಯೊಳಗೇ ಇದೆ ಎಂಬ ಕಾರಣದಿಂದ ನೋಂದಾಯಿಸಲಾಯಿತು. ಒಪ್ಪಂದವಾಗಲಿ ಲೀಗಿನ ವತಿಯಿಂದ ಜಾರಿಗೆ ಬಂದ ಸಂಪ್ರದಾಯಗಳಾಗಲಿ ಕಾಮನ್‌ವೆಲ್ತ್ ಭಾಗಗಳಲ್ಲಿ ಅವರವರ ನಡುವಣ ಸಂಬಂಧಗಳನ್ನು ನಿಯಂತ್ರಿಸುವುದಿಲ್ಲ ಎಂದು ಬ್ರಿಟಿಷ್ ಸರಕಾರವು ಒತ್ತಾಯ ಪೂರ್ವಕವಾಗಿ ಹೇಳಿತು *[Keeth, R.G. II. ೮೮೪, ೮೮೫].*

೧೯೨೬ರ ಇಂಪೀರಿಯಲ್ ಕಾನ್‌ಫರೆನ್ಸ್ ಈ ನಿಲುವನ್ನು ತಳೆಯಿತು. ೧೯೨೫ರ ಆರ್ಮ್ಸ್ ಟ್ರಾಫಿಕ್ ಕಾನ್‌ಫರೆನ್ಸ್‌ನ ನ್ಯಾಯಿಕ ಸಮಿತಿಯು ಈ ಅರ್ಥದಲ್ಲಿ ನಿರ್ಧರಿಸಿತ್ತು. *[Cmd. ೨೭೬೮ p. ೨೩]*

(ಐರಿಷ್ ಫ್ರೀ ಸ್ಟೇಟ್ ಹಾಗೂ ಯು.ಕೆ.ಗಳನ್ನು ಹೊರತುಪಡಿಸಿ ಮಿಕ್ಕ ಪ್ರಭುತ್ವಗಳು ೧೯೨೯ರಲ್ಲಿ ನ್ಯಾಯಾಲಯದ ವಿಧಿಗಳಲ್ಲಿ ಐಚ್ಛಿಕ ಪ್ರಕರಣಗಳನ್ನು ಒಪ್ಪಿಕೊಳ್ಳುವಾಗ *(CMd. ೩೪೫೨, ಪು. ೪೧೫)* ಪರ್ಮನೆಂಟ್ ಕೋರ್ಟ್ ಆಫ್ ಇಂಟರ್‌ನ್ಯಾಷನಲ್ ಜಸ್ಟೀಸ್‌ಗೆ ಮಂಡಿಸಿದವುಗಳಿಂದ ಅಂತರ–ಸಾಮ್ರಾಜ್ಯ ವಿವಾದಗಳನ್ನು ಹೊರತುಪಡಿಸಿದುವು. ಹಾಗೆಯೇ ಅಂತರರಾಷ್ಟ್ರೀಯ ವಿವಾದಗಳ ಪೆಸಿಫಿಕ್ ಸೆಟ್ಲಮೆಂಟ್‌ಗಾಗಿ ೧೯೨೮ರ ಜನರಲ್ ಆ್ಯಕ್ಟ್ ಅನ್ನು ಅಂಗೀಕರಿಸುವಾಗ ಕೂಡ *[Cmd. ೩೯೩೦, ಪು. ೧೪, ೧೫].*

ಅಂತರ–ಸಾಮ್ರಾಜ್ಯ ಮೊದಲಾಯ್ಕೆಗಳದ್ದು ದೇಶದೊಳಗಿನ ವಿಚಾರ. ಅಲ್ಲಿ ಒಪ್ಪಂದಗಳ ರಾಷ್ಟ್ರೀಯ ನಿಯಮಗಳು ವರ್ತಿಸುವುದಿಲ್ಲ.

**ರಾಜನಿಷ್ಠೆ**

ಬ್ರಿಟಿಷ್ ಪ್ರಜೆಗಳೆಂಬ ಸಮಾನ ಸ್ಥಾನಮಾನವನ್ನು ಒಳಗೊಂಡ ಸಮಾನ ರಾಜನಿಷ್ಠೆಯ ಬಂಧನವನ್ನು

ಯಾವುದೇ ಒಂದು ಭಾಗದ ಏಕಪಕ್ಷೀಯ ಕ್ರಮವು ಕಡಿದುಹಾಕಲಾಗದು. ಇದು ವೆಸ್ಟ್ ಮಿನಿಸ್ಟರ್ ಕಾನೂನಿನ ಪ್ರಸ್ತಾವನೆಯಲ್ಲಿ ಔಪಚಾರಿಕವಾಗಿ ಘೋಷಿತವಾಗಿದೆ. ಚಕ್ರವರ್ತಿಯು ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಸದಸ್ಯರ ಮುಕ್ತ ಒಡನಾಟಗಳ ದ್ಯೋತಕ. ಅವರೆಲ್ಲರೂ ಸಮಾನ ರಾಜನಿಷ್ಠೆಯೆಂಬ ಸೂತ್ರದಿಂದ ಬಂಧಿತರಾಗಿದ್ದರಿಂದ ಸಿಂಹಾಸನದ ವಾರಸುದಾರಿಕೆ, ರಾಜ ನಡವಳಿಕೆ ಮತ್ತು ಬಿರುದು ಬಾವಲಿಗಳು ಮೊದಲಾದ ಅಂಶಗಳಿಗೆ ಸಂಬಂಧಪಡುವ ಕಾನೂನಿನಲ್ಲಿ ಮಾಡುವ ಯಾವುದೇ ಬದಲಾವಣೆಗೆ ಪ್ರಭುತ್ವಗಳ ಹಾಗೂ ಯು.ಕೆ.ಯ ಪಾರ್ಲಿಮೆಂಟುಗಳ ಸಮ್ಮತಿ ಅಗತ್ಯವಾಗುತ್ತದೆ.

ಪ್ರಸ್ತಾವನೆಯು ಕಾನೂನಲ್ಲ. ಅದು ಸಂವಿಧಾನದ ಒಂದು ಸಂಪ್ರದಾಯವನ್ನು ವ್ಯಕ್ತಪಡಿಸುತ್ತದೆ. ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಈ ಐಕ್ಯತೆಯ ತತ್ವವನ್ನು ತನ್ನ ಸಮಾನ ಸ್ಥಾನಮಾನದ ಆಧಾರದಿಂದಾಗಿ ಅತಿಕ್ರಮಿಸುವ ಯಾವುದೇ ಒಂದು ಅಂಗವು ಅಂಗೀಕರಿಸಿದ ಮಸೂದೆಗೆ ಚಕ್ರವರ್ತಿಯಾಗಲಿ ಅವನ ಪ್ರತಿನಿಧಿಯಾಗಲಿ ಸಮ್ಮತಿಯನ್ನು ವ್ಯಕ್ತಪಡಿಸುವುದು ಸಾಧ್ಯವಿಲ್ಲವಾಗುತ್ತದೆ.

ಟಿಪ್ಪಣಿ: ೧೯೨೯ರ ಸಮ್ಮೇಳನದ ವರದಿಯನ್ನು ಅಂಗೀಕರಿಸುತ್ತಾ, ಕೇಂದ್ರ ಪಾರ್ಲಿಮೆಂಟು, ಉದ್ದೇಶಿತ ಪ್ರಸ್ತಾವನೆಯು "ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಯಾವನೇ ಸದಸ್ಯನು ಅದರಿಂದ ಹಿಂತೆಗೆದುಕೊಳ್ಳಲು ಪಡೆದಿರುವ ಹಕ್ಕನ್ನು ಉಲ್ಲಂಘಿಸುತ್ತದೆಯೆಂದು ಭಾವಿಸಲಾಗದು" ಎಂದು ಹೇಳಿತು.

## ಜರ್ನಲ್ ಆಫ್ ಪಾರ್ಲಿಮೆಂಟ್ ಆಫ್ ಎಂಪೈರ್
## XI ೭೯೭–೮೦೦

ಆದರೆ ಇಂಪೀರಿಯಲ್ ಕಾನ್‌ಫರೆನ್ಸ್ ಎಂದೂ ಈ ದೃಷ್ಟಿಯನ್ನು ಔಪಚಾರಿಕವಾಗಿ ಅಂಗೀಕರಿಸಲಿಲ್ಲ.

ಪ್ರಭುತ್ವಗಳ ಹಾಗೂ ಯು.ಕೆ.ಯ ಸ್ಥಾನಮಾನದ ಸಮಾನತೆಯಿಂದಾಗಿ ಅಂತರ–ಸಾಮ್ರಾಜ್ಯ ವಿವಾದಗಳನ್ನು ಪರಿಹರಿಸುವ ಒಂದು ವಿಧಾನದ ಅಗತ್ಯವುಂಟಾಗುತ್ತದೆ. *[Cmd. ३४७९, p. ४೧]*

ಈ ಉದ್ದೇಶವನ್ನಿಟ್ಟುಕೊಂಡು ೧೯೩೦ರ ಇಂಪೀರಿಯಲ್ ಕಾನ್‌ಫರೆನ್ಸ್, ಅಂತಹ ವ್ಯಾಜ್ಯಗಳನ್ನು ಸ್ವಯಂಪ್ರೇರಿತ ಆಧಾರದಲ್ಲಿ ತಾತ್ಪೂರ್ತಿಕ ಮಧ್ಯಸ್ಥಿಕೆಯಿಂದ ವ್ಯವಹರಿಸಬೇಕು. ಕ್ರಮವನ್ನು ಸರಕಾರಕ್ಕೂ ನ್ಯಾಯಾರ್ಹವಾದವುಗಳಿಗೂ ನಡುವೆ ಇರುವ ವಿರೋಧಗಳಿಗೆ ಮಾತ್ರ ಸೀಮಿತಗೊಳಿಸಬೇಕು.

ನ್ಯಾಯಾಧಿಕರಣ(Tribunal)ವನ್ನು ಪ್ರತಿಯೊಂದು ವ್ಯಾಜ್ಯಕ್ಕೂ ತಾತ್ಪೂರ್ತಿಕವಾಗಿ ರಚಿಸಬೇಕು. ಅದರಲ್ಲಿ ಐವರು ಸದಸ್ಯರಿರಬೇಕು, ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಹೊರಗಿನಿಂದ ಯಾರನ್ನೂ ಸೇರಿಸುವಂತಿಲ್ಲ.

ಪ್ರತಿಯೊಂದು ಪಕ್ಷವೂ, ರಾಷ್ಟ್ರಗಳ ಕಾಮನ್‌ವೆಲ್ತ್ ಸದಸ್ಯರಿಂದ ಒಬ್ಬರನ್ನು ಆರಿಸಿಕೊಳ್ಳಬೇಕು. ಅವರು ವಿವಾದಕ್ಕೆ ಒಳಪಟ್ಟವರಾಗಿರಬಾರದು. ಉನ್ನತವಾದ ನ್ಯಾಯಿಕ ಅಧಿಕಾರದಲ್ಲಿರಬೇಕು ಅಥವಾ ಇದ್ದವರಾಗಿರಬೇಕು. ಅಥವಾ ಸುಪ್ರಸಿದ್ಧ ನ್ಯಾಯವಾದಿಯಾಗಿದ್ದು, ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯ ಹೊಂದಿದವರಾಗಿರಬೇಕು. ಇಂತಹ ನಾಲ್ಕು ಜನರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬಹುದು. ವೆಚ್ಚಗಳನ್ನು ಪಕ್ಷಗಳು ಸಮಾನವಾಗಿ ಭರಿಸಬೇಕು. ಪ್ರತಿಯೊಂದು ಪಕ್ಷವೂ ತನ್ನ ಪರವಾದ ವಾದವನ್ನು ಮಂಡಿಸುವ ವೆಚ್ಚವನ್ನು ವಹಿಸಿಕೊಳ್ಳಬೇಕು.

### ಆಧಿಪತ್ಯ ರಾಜ್ಯಗಳ ಬಾಹ್ಯ ಪ್ರಭುತ್ವ

ಆಧಿಪತ್ಯ ರಾಜ್ಯಗಳಿಗೆ ಸ್ವಯಮಾಡಳಿತವಿದೆ, ಆದರೆ ಸ್ಥಾನಮಾನವಿಲ್ಲ. (ಅವಕ್ಕೆ) ಸಾಂಪ್ರದಾಯಿಕ ಸ್ಥಾನವಿದೆ, ಅದು ನ್ಯಾಯಿಕವಾದದ್ದಲ್ಲ. ವಸ್ತುತಃ ಇದೆ, ನ್ಯಾಯಯುತವಾಗಿ ಅಲ್ಲ.

ಅನೇಕ ಉದ್ದೇಶಗಳಿಗಾಗಿ ಆಧಿಪತ್ಯ ರಾಜ್ಯಗಳಿಗೆ ಗಣನೀಯ ಪ್ರಮಾಣದ ಅಂತರ್ರಾಷ್ಟ್ರೀಯ ವ್ಯಕ್ತಿತ್ವವನ್ನು, ಬ್ರಿಟನ್‌ಗೆ ಸಂಬಂಧವಿಲ್ಲದ ರೀತಿ ನೀಡಲಾಗಿದೆ. ಆದರೆ ಸಮಾನ ರಾಜನಿಷ್ಠೆ ಮತ್ತು ಸಮಾನ ಚಕ್ರವರ್ತಿತ್ವಗಳಿಂದಾಗಿ ಪ್ರತಿಯೊಂದು ಆಧಿಪತ್ಯ ರಾಜ್ಯವನ್ನು ಪ್ರತ್ಯೇಕ ರಾಜ್ಯವಾಗದಂತೆ ಮಾಡಿವೆ.

ಯುದ್ಧದಲ್ಲಿ ತಾಟಸ್ಥ್ಯ ನೀತಿಯ ಸಾಧ್ಯತೆಯನ್ನು ಕುರಿತು ಚರ್ಚಿಸಲಾಗಿದೆ, ಆದರೆ ಅದನ್ನು ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಸರಕಾರವು ಮಾತ್ರ ಒತ್ತಾಯಿಸಿದೆ. [ಕೆರ್ತ್ ಡಿಜಿ II ೮೬೭, ೮೬೮, ೭೧, ೭೨, Soverignty of Dominions of D. ೩೦೦–೩೦೪, ೪೬೩–೪೭೧]

ಆಧಿಪತ್ಯ ರಾಜ್ಯಗಳನ್ನು ಒಳಪಡಿಸಿಯೇ ರಾಜನು ಯುದ್ಧವನ್ನು ಘೋಷಿಸಬಹುದೇ ಎಂಬ ಬಗೆಗೆ ಇನ್ನೂ ಗಂಭೀರವಾದ ಸಂದೇಹವಿದೆ.

### ಆಧಿಪತ್ಯ ರಾಜ್ಯದ ಸ್ಥಾನಮಾನದ ಪರಿಣಾಮಗಳು

೧. ಅದು ಚಕ್ರಾಧಿಪತ್ಯ ಸ್ಥಾನವನ್ನು ಪಡೆಯುತ್ತದೆಯೇ?

ಅವಕ್ಕೆ ಚಕ್ರಾಧಿಪತ್ಯ ರಾಷ್ಟ್ರದ ಕರ್ತವ್ಯಗಳಂತೂ ಇವೆ. ಆದರೆ ಚಕ್ರಾಧಿಪತ್ಯಗಳ ಸ್ಥಾನಮಾನ ಅವಕ್ಕಿಲ್ಲ.

೨. ಇದು ಮೂಲದಿಂದ ಕಡಿದುಕೊಳ್ಳುವ ಹಕ್ಕನ್ನು ಒಳಗೊಳ್ಳುತ್ತದೆಯೆ?

* * * * *

ಲಾ ಕ್ವಾರ್ಟರ್ಲಿ ರಿವ್ಯೂ

ಸಂಪುಟ – ೬

ಬ್ರಿಟಿಷ್ ಭೂಪ್ರದೇಶಗಳ ಪ್ರವೇಶ ಮಾಡಲು ವಿದೇಶಿಯರಿಗಿರುವ ಹಕ್ಕು ಪು. ೨೭

ವಿಷಯ – ವಲಯವನ್ನು ಬಿಟ್ಟುಹೋಗಲು ಒತ್ತಾಯ, ಪು. ೩೮೮.

ಪೌರತ್ವ ಮತ್ತು ನಿಷ್ಠೆ

ಸಂಪುಟ – ೧೭, ಪು ೨೭೦

ಸಂಪುಟ – ೧೮, ಪು. ೪೯

ಸಂಯುಕ್ತ ಸಂಸ್ಥಾನಗಳಲ್ಲಿ ಪೌರತ್ವ ಕಾನೂನು

(Law of Citizenship in the United States)

ಪ್ರೆಂಟಿಸ್ ವೆಬ್‌ಸ್ಟರ್

ಆಲ್ಬನಿ – ೧೮೯೧

### ವೆಬ್‌ಸ್ಟರ್

"ಕ್ರಮಬದ್ಧ ಪೌರರಿಗೂ, ಅಂದರೆ ರಾಜಕೀಯವಾಗಿ ಒಂದು ಚಕ್ರಾಧಿಪತ್ಯದ ಸದಸ್ಯರಿಗೂ ಆ ಚಕ್ರಾಧಿಪತ್ಯದ ಪ್ರಜೆಗಳಾಗಿದ್ದು ಪೌರರಾಗಿಲ್ಲದವರಿಗೂ ನಡುವೆ ಇರುವ ವ್ಯತ್ಯಾಸವನ್ನು ಸಾರ್ವಜನಿಕ

ನ್ಯಾಯವನ್ನು ಕುರಿತ ಅತ್ಯಂತ ಶ್ರೇಷ್ಠ ಪ್ರಮಾಣ ಗ್ರಂಥಗಳಲ್ಲಿ ಗುರುತಿಸಲಾಗಿದೆ. ಈ ವ್ಯತ್ಯಾಸವಂತೂ ಸತ್ಯ. ಯಾರು ಪ್ರಜೆಗಳು, ಯಾರು ಅಲ್ಲ ಎಂಬುದು ಮುಂದಿನ ಪ್ರಶ್ನೆ. ಅದರಲ್ಲಿ ಕೆಲವು ಕಷ್ಟಗಳಿವೆ. ಸಮಾನ ಹಕ್ಕುಗಳನ್ನು ಸೌಲಭ್ಯಗಳನ್ನು ಸ್ವದೇಶದಲ್ಲಿಯೂ ಅಷ್ಟೇಮಟ್ಟಿನ ಸಂರಕ್ಷಣೆಯನ್ನು ಹೊರ ದೇಶದಲ್ಲಿಯೂ ಪಡೆಯುವವರು ಎಂಬ ಸೂತ್ರವನ್ನು ಒಪ್ಪಿಕೊಂಡು ಈ ನೆಲೆಯಿಂದ ಪ್ರಶ್ನೆಯನ್ನು ಪರಿಗಣಿಸಬೇಕು. ಇದನ್ನು ನೋಡಬೇಕಾದದ್ದೇ ಹಾಗೆ. ಏಕೆಂದರೆ ನಮ್ಮ ಪ್ರಜೆಗಳನ್ನು ವರ್ಗಗಳಾಗಿ ವಿಂಗಡಿಸಿ ಅವರ ನಡುವೆ ಯಾವುದೇ ವ್ಯತ್ಯಾಸ ಕಲ್ಪಿಸುವ ಯಾವ ಕಾನೂನು ಅಮೆರಿಕದಲ್ಲಿ ಇಲ್ಲ. ಆಮೇಲೆ ಮುಂದುವರಿದು ಸ್ವದೇಶದಲ್ಲಿರುವಾಗ ಪ್ರಜೆಗಳೂ ಅನುಭೋಗಿಸುವ ಸಮಾನ ಹಕ್ಕುಗಳೇ ಅವರು ವಿದೇಶದಲ್ಲಿರುವಾಗಲೂ ಅವರಿಗಿರಬೇಕು ಎಂಬುದನ್ನು ಗಮನಿಸುತ್ತೇವೆ. ಏಕೆಂದರೆ ಪೌರತ್ವದಂತಹ ಪ್ರಶ್ನೆಗಳನ್ನು ಮುನಿಸಿಪಲ್ ಕಾನೂನು ನಿರ್ಧರಿಸುತ್ತದೆ. ಅದು ರಾಷ್ಟ್ರಗಳ ಕಾನೂನಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಪೌರತ್ವದ ಮೌಲ್ಯವನ್ನು ಕೀಳುಗೈಯವಂತಿಲ್ಲ."

## ರೋಮನ್ ನ್ಯಾಯದ ದೃಷ್ಟಿ

೧. ಒಂದು ಸಮಾಜವು ನಿರ್ಮಾಣವಾಗುವುದು ಮನುಷ್ಯನಿಂದ. ತನ್ನ ಸಹಚರರೊಂದಿಗೆ ಆ ಸಂಸ್ಥೆಯನ್ನು ಪ್ರವೇಶಿಸಿ ಮನುಷ್ಯನು ತನ್ನ ಸಹಜ ಹಕ್ಕುಗಳನ್ನು ಚಲಾಯಿಸಿದನು, ತಾನೂ ಇತರರೂ ಸೇರಿಕೊಂಡ ಸಮಾಜದ ಮೂಲವಸ್ತುವಾದನು.

೨. ಹೀಗೆ ಮನುಷ್ಯನಿಂದ ಮನುಷ್ಯನ ಸಂಸ್ಥೆಯು ರೂಪುಗೊಂಡು ಅವನು ಸಮಾಜದಲ್ಲಿ ಹೇಗೆ ಬೆರೆತುಕೊಂಡನೆಂದರೆ ಅವನಿಗೆ ಅದನ್ನು ತೊರೆದುಬರಲು ಸಾಧ್ಯವಿರಲಿಲ್ಲ.

೩. ರೋಮಿನ ಪ್ರಾರಂಭಿಕ ದಿನಗಳಲ್ಲಿ ಯಾರು ರೋಮಿನಲ್ಲಿ ಸ್ವತಂತ್ರರಾಗಿ ಹುಟ್ಟಿದರೋ ಅವರು ಮಾತ್ರವೇ ತಮ್ಮನ್ನು ರೋಮನರು ಎಂದು ಕರೆದುಕೊಳ್ಳಬಹುದಾಗಿತ್ತು. ಆದರೆ ಅನತಿ ಕಾಲದಲ್ಲೇ ವಿದೇಶೀಯರಿಗೂ ಶಾಸಕಾಂಗವು ರೋಮನ್ ಪೌರತ್ವವನ್ನು ನೀಡಿತು. ಮುಂದೆ ನೆರೆಹೊರೆಯ ರಾಜ್ಯಗಳನ್ನು ರೋಮ್ ಗೆದ್ದಾಗ ಅವುಗಳಿಗೆ ಶಾಸಕಾಂಗವು ಸನ್ನದುಗಳನ್ನು ನೀಡಿ, ಅವುಗಳಿಂದಾಗಿ ಆ ರಾಜ್ಯಗಳ ಜನತೆಯನ್ನು ರೋಮನ್ ಪೌರತ್ವಕ್ಕೆ ಸೇರಿಸಿಕೊಳ್ಳಲಾಯಿತು, ಅವರ ಹಿಂದಿನ ಪೌರತ್ವವು ನಿಷೇಧಿಸಲ್ಪಟ್ಟಿತು.

೪. ಸಿಸಿರೋ ಹೀಗೆ ನಿಯಮವನ್ನು ವಿಧಿಸುತ್ತಾನೆ:

"ಪ್ರತಿಯೊಬ್ಬ ಮನುಷ್ಯನೂ ಒಂದು ಸಮಾಜದಲ್ಲಿ ತನ್ನ ಸದಸ್ಯತ್ವದ ಹಕ್ಕುಗಳನ್ನು ಉಳಿಸಿಕೊಳ್ಳಲು ಅಥವಾ ತೊರೆಯಲು ಸಮರ್ಥನಾಗಿರಬೇಕು." ಅವನೇ ಮುಂದುವರಿದು ಹೇಳುತ್ತಾನೆ: "ಇದೇ ಸ್ವಾತಂತ್ರ್ಯದ ಅತ್ಯಂತ ದೃಢವಾದ ತಳಹದಿ." ಈ ನಿಯಮದ ಪ್ರಕಾರ, ಬಂದವರೆಲ್ಲರನ್ನೂ ರೋಮನರು ಬರಮಾಡಿ ಕೊಂಡರು. ಯಾರನ್ನೂ ತಮ್ಮೊಂದಿಗೇ ಉಳಿದಿರಬೇಕೆಂದು ಬಲಾತ್ಕಾರಪಡಿಸಲಿಲ್ಲ.

೫. ರೋಮನ್ ನ್ಯಾಯದ ಈ ದೃಷ್ಟಿಗೆ ಆಧಾರ ನೈಸರ್ಗಿಕ ನಿಯಮವಾಗಿದೆ.

## ಧಾಳಿಯ ಪರಿಣಾಮ

೬. ರೋಮ್ ಪತನಗೊಂಡನಂತರ ನೈಸರ್ಗಿಕ ನಿಯಮದ ಸ್ಥಾನದಲ್ಲಿ ಧಾಳಿಕೋರರು ಪರಿಚಯ ಮಾಡಿಕೊಟ್ಟ ಊಳಿಗಮಾನ್ಯ ತತ್ವಗಳು ಬಂದುವು.

೭. ಧಾಳಿಕಾರರು ಜನರನ್ನೂ ಅವರ ನೆಲವನ್ನೂ ಗೆದ್ದು ಅಲ್ಲಿ ತಮ್ಮ ಸರಕಾರವನ್ನು

ವ್ಯವಸ್ಥೆಗೊಳಿಸಿಕೊಂಡರು. ಪ್ರಜೆಗಳ ಮೇಲೆ ಸಂಪೂರ್ಣ ಅಧಿಕಾರ ಹೊಂದಿರುವ ರಾಜನು ಅಸ್ತಿತ್ವಕ್ಕೆ ಬಂದನು. ಮನುಷ್ಯ ಮನುಷ್ಯನಿಗೂ ಇರುವ ಸಂಬಂಧ, ಸರಕಾರದೊಂದಿಗೆ ಅವನಿಗಿರುವ ಸಂಬಂಧಗಳು ಹೇರಲ್ಪಟ್ಟವು. ಸ್ವಯಂಪ್ರೇರಿತವಾಗಿರಲಿಲ್ಲ. ಮಾನವನ ನೈಸರ್ಗಿಕ ಹಕ್ಕುಗಳನ್ನು ನಿರಾಕರಿಸಲಾಯಿತು.

# ಅಧ್ಯಾಯ–೩
# ನಿರ್ದಿಷ್ಟ ಪರಿಹಾರದ ಕಾನೂನು

(ಮೊದಲ ಭಾಗವು ಉಪಲಬ್ಧವಾಗಿಲ್ಲ –ಸಂ.)

* * * *

ನ್ಯಾಯವು ಅದರ ನಿರ್ದಿಷ್ಟ ಪಾಲನೆಗೆ ಅನುಮತಿ ಕೊಡುವ ಸಂದರ್ಭ:

(ii) ಎಲ್ಲಿ ನಿರ್ದಿಷ್ಟ ಪಾಲನೆಯನ್ನು ನೀಡಲ್ಪಡುವ ವ್ಯಕ್ತಿಯೂ ವಾದಿಯಾಗಿರುವುದು.

(iii) ಎಲ್ಲಿ ನಿರ್ದಿಷ್ಟಪಾಲನೆಯನ್ನು ಯಾರ ವಿರುದ್ಧ ಜಾರಿ ಮಾಡಬಹುದೋ ಆತನು ಪ್ರತಿವಾದಿಯಾಗಿರುವುದು.

ಪ್ರಶ್ನೆ ಹೀಗೆ: ಅಂತಹ ಸಂದರ್ಭಗಳಲ್ಲಿ ನಿರ್ದಿಷ್ಟ ಪರಿಹಾರವನ್ನು ಕೊಡಲು ನ್ಯಾಯಾಲಯವು ಬದ್ಧವಾಗಿದೆಯೆ?

ಈ ಪ್ರಶ್ನೆಗೆ ಉತ್ತರವು ೨೨ನೆಯ ಕಲಮಿನಲ್ಲಿದೆ.

(ಅ) ೨೨ನೆಯ ಕಲಮು ಸಾಮಾನ್ಯ ನಿಯಮಗಳನ್ನು ವಿಧಿಸುತ್ತದೆ–

- (೧) ನಿರ್ದಿಷ್ಟ ಪರಿಹಾರವು ವಿವೇಚನಾಪೂರ್ವಕವಾಗಿರಬೇಕಾದದ್ದು ಎಂದು ಅದು ಹೇಳುತ್ತದೆ. ನ್ಯಾಯಾಲಯವು ಬೇಕಾದರೆ ಅದನ್ನು ಮಂಜೂರು ಮಾಡಬಹುದು ಅಥವಾ ನಿರಾಕರಿಸಬಹುದು. ಅದು ಶಾಸನ ಸಮ್ಮತವಾಗಿದೆಯೆಂಬಷ್ಟರಿಂದಲೇ ಅದನ್ನು ಮಂಜೂರು ಮಾಡಲು ನ್ಯಾಯಾಲಯವು ಬದ್ಧವಾಗಿಲ್ಲ.
- (೨) ನ್ಯಾಯಾಲಯದ ವಿವೇಚನಾಧಿಕಾರವು ನಿರಂಕುಶವಲ್ಲ, ದೃಢವಾದದ್ದು ಮತ್ತು ತರ್ಕಸಮ್ಮತವಾದದ್ದು, ನ್ಯಾಯಿಕ ತತ್ವಗಳಿಂದ ನಿರ್ದೇಶಿತವಾದದ್ದು.

(ಆ) ನ್ಯಾಯಾಲಯವು ನಿರ್ದಿಷ್ಟ ವ್ಯವಹರಣೆಯನ್ನು ನೀಡದಿರಲು ವಿವೇಚನೆ ತೋರಿಸಬಹುದಾದ, ನಿರ್ದಿಷ್ಟ ವ್ಯವಹರಣೆಯನ್ನು ನೀಡಲು ವಿವೇಚನೆ ತೋರಿಸಬಹುದಾದ ಸಂದರ್ಭಗಳನ್ನು ಕೂಡ ೨೨ನೆಯ ವಿಭಾಗವು ನಿರ್ದಿಷ್ಟಪಡಿಸುತ್ತದೆ.

## ನಿರ್ದಿಷ್ಟ ಪಾಲನೆಯನ್ನು ಅನುಮತಿಸದಿರಲು ನ್ಯಾಯಾಲಯವು ವಿವೇಚನೆ ಬಳಸುವ ಸಂದರ್ಭಗಳು

(i) ನಿರ್ದಿಷ್ಟ ವ್ಯವಹರಣೆಯಿಂದ ಪ್ರತಿವಾದಿಯ ವಿರುದ್ಧ ಅಸಮಾನವಾಗುವಲ್ಲಿ.

(ii) ನಿರ್ದಿಷ್ಟ ಪಾಲನೆಯು ಪ್ರತಿವಾದಿಗೆ ಅವನು ಮುಂದಾಗಿ ಯೋಚಿಸದ ಕೆಲವು ಕಷ್ಟಗಳನ್ನು ಉಂಟುಮಾಡಿ, ಹಾಗೆ ಪಾಲನೆಯಿಲ್ಲದುದು ವಾದಿಗೆ ಆ ಕಷ್ಟಸ್ಥಿತಿಗಳನ್ನು ಉಂಟುಮಾಡದಿರುವ ಸಂದರ್ಭಗಳಲ್ಲಿ.

## ನಿರ್ದಿಷ್ಟ ಪಾಲನೆಯನ್ನು ಅನುಮತಿಸಲು ನ್ಯಾಯಾಲಯವು ವಿವೇಚನೆ ಬಳಸುವ ಸಂದರ್ಭಗಳು

ನಿರ್ದಿಷ್ಟ ಪಾಲನೆಗೆ ಅರ್ಹವಾದ ಒಪ್ಪಂದದ ಪರಿಣಮವಾಗಿ ವಾದಿಯು ಮೂಲಭೂತವಾದ ಕಾರ್ಯಗಳನ್ನು ಮಾಡಿದ್ದರೆ, ಅಥವಾ ನಷ್ಟಗಳನ್ನು ಅನುಭವಿಸಿದ್ದರೆ ಅಂತಹ ಸಂದರ್ಭಗಳಲ್ಲಿ.

## ನಷ್ಟ ಪರಿಹಾರಗಳು ಮತ್ತು ನಿರ್ದಿಷ್ಟ ಪಾಲನೆ

೧೯, ೨೦ ೨೯ನೇ ಕಲಮುಗಳು.

ಉಲ್ಲಂಘನೆಗೆ ಎರಡು ಪರಿಣಾಮಗಳು.

ಅವು ಪರಸ್ಪರ ಹೊರತಾಗಿವೆಯೇ ಅಥವಾ ಅವು ಪರಸ್ಪರ ಪೂರಕವಾಗಿವೆಯೇ? ಒಂದು ಇನ್ನೊಂದಕ್ಕೆ ತಡೆಯೊಡ್ಡುತ್ತದೆಯೆ?

ಇವು ೧೯, ೨೦, ೨೯ನೇ ಕಲಮುಗಳಲ್ಲಿ ಪರಿಶೀಲಿಸಿರುವ ಪ್ರಶ್ನೆಗಳು. ಈ ಮೂರು ವಿಭಾಗಗಳಲ್ಲಿರುವ ನಿಯಮಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು.

೧೦.(i) ಒಂದೇ ಮೊಕದ್ದಮೆಯಲ್ಲಿ ಹೆಚ್ಚಿನದಾಗಿ ಅಥವಾ ಬದಲಿಯಾಗಿ ಕೇಳಬಹುದು.

(iii) ಎಲ್ಲ ನ್ಯಾಯಾಲವು ನಿರ್ದಿಷ್ಟ ವ್ಯವಹರಣೆಯನ್ನು ಮಂಜೂರು ಮಾಡದಿರಲು ನ್ಯಾಯಾಲಯವು ನಿರ್ಧರಿಸಿದ ಸಂದರ್ಭದಲ್ಲಿ ವಾದಿಗೆ ಅರ್ಹತೆಯಿದ್ದರೆ ಪರಿಹಾರವನ್ನು ಮಂಜೂರು ಮಾಡಬಹುದು.

(iv) ಒಂದು ಮೊಕದ್ದಮೆಯಲ್ಲಿ ನ್ಯಾಯಾಲಯವು ನಿರ್ದಿಷ್ಟ ವ್ಯವಹರಣೆಯು ಸಾಲದು ಎಂಬ ತೀರ್ಮಾನಕ್ಕೆ ಬಂದ ಪಕ್ಷದಲ್ಲಿ ಅದರ ಜೊತೆಗೆ ಪರಿಹಾರವನ್ನು ಮಂಜೂರು ಮಾಡಬಹುದು.

೨೦. (v) ದಿವಾಳಿಯಾಗಿ ನಷ್ಟಪರಿಹಾರವನ್ನು ಕೊಡಲು ಒಪ್ಪಿಕೊಂಡಿರುವುದು ನಿರ್ದಿಷ್ಟ ವ್ಯವಹರಣೆಗೆ ಅಡ್ಡಿಯಾಗುವುದಿಲ್ಲ.

೨೯. (vi) ನಿರ್ದಿಷ್ಟ ವ್ಯವಹರಣೆಗಾಗಿ ಹಾಕಿದ ಮೊಕದ್ದಮೆಯು ಪರವಾಗಿ ಫೈಸಲಾಗಿದ್ದರೆ ಅದು ನಷ್ಟಪರಿಹಾರಕ್ಕಾಗಿ ಮೊಕದ್ದಮೆ ಹೂಡಲು ಅಡ್ಡಿಯಾಗುತ್ತದೆ.

# ಭಾಗ – I
# ಪ್ರವೇಶ

**I. ನಿರ್ದಿಷ್ಟ ಪರಿಹಾರವನ್ನು ನಿರೂಪಿಸುವ ಶಾಸನ**

೧. ನಿರ್ದಿಷ್ಟ ಪರಿಹಾರಕ್ಕೆ ಸಂಬಂಧಿಸಿದ ಕಾನೂನು ೧೮೭೭ರ ನಿರ್ದಿಷ್ಟ ಪರಿಹಾರ ಶಾಸನದಲ್ಲಿದೆ.

೨. ನಿರ್ದಿಷ್ಟ ಪರಿಹಾರ ಶಾಸನವನ್ನು ಅಂಗೀಕರಿಸುವುದಕ್ಕಿಂತ ಮುಂಚಿತವಾಗಿ, ಅದಕ್ಕೆ ಸಂಬಂಧಿಸಿದ ಕಾನೂನು ೧೮೫೯ರ ಸಿವಿಲ್ ಪ್ರೊಸೀಜರ್ ಕೋಡ್ (ಶಾಸನ VIII)ನ ೧೫ ಮತ್ತು ೧೯೨ನೇ ವಿಭಾಗದಲ್ಲಿದ್ದಿತು.

೩. ಕಾನೂನು ತುಂಡು ತುಂಡು ರೂಪದಲ್ಲಿತ್ತು. ೧೫ನೇ ಭಾಗವು ಘೋಷಣಾತ್ಮಕ ತೀರ್ಪುಗಳನ್ನು ಒಳಗೊಂಡಿದ್ದರೆ, ೧೯೨ನೆಯ ಭಾಗವು ಒಪ್ಪಂದಗಳ ನಿರ್ದಿಷ್ಟ ವ್ಯವಹರಣೆಯನ್ನು ಕುರಿತಾಗಿತ್ತು.

೪. ಸಿವಿಲ್ ನ್ಯಾಯಾಲಯದಲ್ಲಿ ಪಡೆಯಬಹುದಾದ ನಿರ್ದಿಷ್ಟ ಪರಿಹಾರಕ್ಕೆ ಸಂಬಂಧಪಟ್ಟ ಕಾನೂನನ್ನು ವಿವರಿಸುವುದು ಮತ್ತು ಅದಕ್ಕೆ ತಿದ್ದುಪಡಿ ಮಾಡುವುದು ಶಾಸನದ ಲಕ್ಷ್ಯವಾಗಿದೆ.

**II. ನಿರ್ದಿಷ್ಟ ಪರಿಹಾರ ನಿಯಮದ ಸ್ವರೂಪ**

೧. ಕಾನೂನುಗಳು ಮೂರು ವರ್ಗವಾಗುತ್ತವೆ:

(ಅ) ಹಕ್ಕುಗಳನ್ನು ವಿವರಿಸುವಂಥವು

(ಆ) ಪರಿಹಾರಗಳನ್ನು ವಿವರಿಸುವಂಥವು

(ಇ) ವಿಧಾನಗಳನ್ನು ವಿವರಿಸುವಂಥವು.

೨. ನಿದರ್ಶನಗಳು:

(ಇಲ್ಲಿ ಸ್ವಲ್ಪ ಸ್ಥಳವನ್ನು ತೆರವು ಬಿಟ್ಟಿದೆ –ಸಂ.)

೩. ನಿರ್ದಿಷ್ಟ ಪರಿಹಾರ ಕಾನೂನು ಎರಡನೆಯ ವರ್ಗಕ್ಕೆ ಸೇರುತ್ತದೆ. ಅದು ಪರಿಹಾರಗಳನ್ನು ಕುರಿತು ಹೇಳುವ ಕಾನೂನು.

೪. ರಿಲೀಫ್ ಎನ್ನುವುದು ರೆಮೆಡಿ ಎಂಬುದಕ್ಕೆ ಇನ್ನೊಂದು ಪದ. ಮೊಕದ್ದಮೆ ಹೂಡಿದವರಿಗೆ ಅದನ್ನು ನೀಡಲು ನ್ಯಾಯಾಲಯಕ್ಕೆ ಶಾಸನಬದ್ಧವಾದ ಅನುಮತಿಯಿದೆ.

**III. ನಿರ್ದಿಷ್ಟ ಪರಿಹಾರ ಎಂದರೆ ಅರ್ಥವೇನು?**

೧. ನಿರ್ದಿಷ್ಟ ಪರಿಹಾರ ಎನ್ನುವುದು ಕಾನೂನು ಪುರಸ್ಕರಿಸಿರುವ ಒಂದು ಪರಿಹಾರ ವಿಧಾನ. ಒಬ್ಬ ವ್ಯಕ್ತಿಯ ಹಕ್ಕುಗಳ ಮೇಲೆ ಅತಿಕ್ರಮಣವಾಗಿರುವ ಸಂದರ್ಭದಲ್ಲಿ ಅಂತಹ ವ್ಯಕ್ತಿಗೆ ಕಾನೂನು ಕೊಟ್ಟಿರುವ ವಿವಿಧ ಪರಿಹಾರಗಳನ್ನು ತಿಳಿದುಕೊಳ್ಳುವುದರಿಂದ ಅದರ ಸ್ವರೂಪವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

೨. ಒಂದು ಹಕ್ಕು ವಾಸ್ತವವಾಗಿರಬೇಕಾದರೆ ಅದಕ್ಕೆ ಒಂದು ಪರಿಹಾರವೂ ಇರಬೇಕು. ಯಾವುದೇ ಹಕ್ಕು ಅದರ ಅತಿಕ್ರಮಣಕ್ಕೆ ಪರಿಹಾರವನ್ನು ಒದಗಿಸದೆ ಹೋದ ಪಕ್ಷದಲ್ಲಿ ರಕ್ಷಣೆಯನ್ನು ಕೊಡಲಾರದು. ಆದ್ದರಿಂದ ಒಂದು ಹಕ್ಕಿನ ಉಲ್ಲಂಘನೆಗೆ ಕಾನೂನು ಒಂದು ಪರಿಹಾರವನ್ನು ಒದಗಿಸಿಯೇ ತೀರುತ್ತದೆ.

೩. ಒಂದು ಹಕ್ಕಿನ ಅತಿಕ್ರಮಣಕ್ಕೆ ಕಾನೂನು ವಿಧಿಸಿರುವ ಸಾಮಾನ್ಯ ಪರಿಹಾರ ದ್ರವ್ಯರೂಪದ ಪರಿಹಾರ. ಇದನ್ನೇ ಕಾಂಪೆನ್ಸೇಷನ್ ಅಥವಾ ನಷ್ಟಭರ್ತಿ (ಡ್ಯಾಮೇಜಸ್) ಎಂದು ಕರೆಯುತ್ತಾರೆ.

೪. ಹೀಗೆ ಹಣದ ರೂಪದಲ್ಲಿ ಪರಿಹಾರ ಕೊಡುವುದು ಎಲ್ಲಾ ಸಂದರ್ಭಗಳಲ್ಲೂ ಸಾಕಷ್ಟು ಮಟ್ಟಿನ ಪರಿಹಾರವಾಗುವುದಿಲ್ಲ. ಕೆಲವು ವಸ್ತುಗಳ ನಷ್ಟವನ್ನು ಹಣ ಕೊಟ್ಟು ತುಂಬಬಹುದು. ಅದೇ ವಸ್ತುವನ್ನು ತಂದುಕೊಡುವುದರ ಮೂಲಕ ನಷ್ಟವನ್ನು ತುಂಬಬಹುದು. ಹಾಗೆಯೇ ಒಂದು ಕರ್ತವ್ಯವನ್ನು ಆಚರಿಸಲು ನಿರಾಕರಿಸುವುದನ್ನು ಹಣದಿಂದ ಪರಿಹಾರ ಮಾಡಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಸಾಕಷ್ಟಾಗಬಲ್ಲ ಏಕೈಕ ಪರಿಹಾರ ಅದೇ ಕರ್ತವ್ಯವನ್ನು ನಡೆಸಲೇಬೇಕೆಂದು ಒತ್ತಾಯಪಡಿಸುವುದು.

೫. ಹೀಗಾಗಿ ಕಾನೂನು ಎರಡು ಬಗೆಯ ಪರಿಹಾರಗಳನ್ನು ಒದಗಿಸಿದೆ:

(ಅ) ಮೊಕದ್ದಮೆ ಮಾಡಿದವನಿಗೆ ಅವನು ಕಳೆದುಕೊಂಡಂಥ ವಸ್ತುಗಳನ್ನೇ ಅವನಿಗೆ ಅರ್ಹತೆಯಿರುವವನ್ನೇ ಮಂಜೂರು ಮಾಡುವುದು. ಇದು ತನ್ನ ಎದುರಾಳಿಯ ವಿರುದ್ಧವಾಗಿ ಅವನು ಪಡೆದುಕೊಂಡ ಹಕ್ಕಿನಿಂದಾಗಿ ಇದು ಸಾಧ್ಯ.

(ಆ) ಮೊಕದ್ದಮೆ ಹೂಡಿದವನಿಗೆ ಅವನು ಕಳೆದುಕೊಂಡ, ಅವನಿಗೆ ಪಡೆಯುವ ಹಕ್ಕಿರುವ ಅದೇ ವಸ್ತುವನ್ನು ಮರಳಿಸದೆ, ಹಣರೂಪದ ಪರಿಹಾರ ಅಥವಾ ನಷ್ಟಭರ್ತಿಯನ್ನು ಕೊಡುವುದು.

೬. ನಿರ್ದಿಷ್ಟ ಪರಿಹಾರವೆನ್ನುವುದು ಮೊದಲನೆಯ ಬಗೆಯ ಪರಿಹಾರಕ್ಕೆ ಕೊಟ್ಟ ಹೆಸರು.

೭. ಪರಿಹಾರವನ್ನು ನಿರ್ದಿಷ್ಟ ಎಂದು ಕರೆಯುವುದಕ್ಕೆ ಕಾರಣ, ಅದು ವಸ್ತು 'ಜಾತಿ'ಯ ಪರಿಹಾರ, ಅಂದರೆ, ಮೊಕದ್ದಮೆ ಹೂಡಿದವನು ಯಾವುದಕ್ಕೆ ಹಕ್ಕನ್ನು ಪಡೆದಿದ್ದಾನೆಯೋ ಅದೇ ವಸ್ತುವನ್ನು, ಅಂಥದೇ ವಸ್ತುವನ್ನು ಮರಳಿಸುವುದು.

**IV. ನಿರ್ದಿಷ್ಟ ಪರಿಹಾರ ಶಾಸನದಲ್ಲಿ ಯಾವ ನಿರ್ದಿಷ್ಟ ಪರಿಹಾರಗಳನ್ನು ಒದಗಿಸಿದೆ?**

೧. ನಿರ್ದಿಷ್ಟ ಪರಿಹಾರ ಶಾಸನದನ್ವಯ ಒದಗಿಸಲಾಗಿರುವ ನಿರ್ದಿಷ್ಟ ಪರಿಹಾರದ ಬಗೆಗಳು ನಾಲ್ಕು ವಿಭಾಗಗಳಾಗುತ್ತವೆ:

(೧) ಆಸ್ತಿಯನ್ನು ವಶಪಡಿಸಿಕೊಂಡು ಕಳೆದುಕೊಂಡಿದ್ದವನಿಗೆ ತಲುಪಿಸುವುದು.

(೨) ಒಪ್ಪಂದದ ನಿರ್ವಹಣೆ

(೩) ಕಾನೂನು ಪ್ರಕಾರವಾದ ಕರ್ತವ್ಯವನ್ನು ನಡೆಸಲು ಒತ್ತಾಯಪಡಿಸುವುದು.

(೪) ತಪ್ಪು ನಡೆಯದಂತೆ ನಿವಾರಿಸುವುದು.

೨. ನಾಲ್ಕನೆಯ ವರ್ಗವಾದ ಒಳವಿಭಾಗಗಳು ಹೀಗಿವೆ:

(೧) ಒಂದು ಆದೇಶವನ್ನು ಸರಿಪಡಿಸುವುದು.

(೨) ಒಂದು ಆದೇಶವನ್ನು ಹಿಂತೆಗೆದುಕೊಳ್ಳುವುದು.

(೩) ಒಂದು ಆದೇಶವನ್ನು ರದ್ದುಪಡಿಸುವುದು.

(೪) ಸ್ಥಾನಮಾನದ ಘೋಷಣೆ

(೫) ಪಡೆಯುವವರ ನೇಮಕಾತಿ.

(೬) ಆಜ್ಞೆಗಳು

**V. ನಿರ್ದಿಷ್ಟ ಪರಿಹಾರವನ್ನು ವಿವರಿಸುವ ಇತರ ಕಾನೂನುಗಳು**

೧. ಭಾರತದ ನ್ಯಾಯಾಲಯಗಳು ವಿಧಿಸುವ ನಿರ್ದಿಷ್ಟ ಪರಿಹಾರಗಳು ಇವು ಮಾತ್ರವೇ ಅಲ್ಲ. ಭಾರತೀಯ ನ್ಯಾಯವು ಪುರಸ್ಕರಿಸುವ ಮತ್ತು ಭಾರತದ ನ್ಯಾಯಾಲಯಗಳು ಜಾರಿಗೆ ತಂದಿರುವ ಇತರ ನಿರ್ದಿಷ್ಟ ಪರಿಹಾರಗಳೂ ಇವೆ.

೨. ನಿರ್ದಿಷ್ಟ ಪರಿಹಾರ ಶಾಸನದಿಂದಾಚೆಗಿನ ಇತರ ನಿರ್ದಿಷ್ಟ ಪರಿಹಾರಗಳು:

(i) ಮೃತ ವ್ಯಕ್ತಿಯ ಆಸ್ತಿಯ ವಿವರವಾದ ಲೆಕ್ಕ ಪಡೆದು ಅದನ್ನು ಜಾರಿಗೊಳಿಸುವುದು.
(ii) ಒಂದು ಟ್ರಸ್ಟಿನ ಲೆಕ್ಕಗಳನ್ನು ಗಣನೆಗೆ ತಂದುಕೊಂಡು ಟ್ರಸ್ಟ್ ಆಸ್ತಿಯನ್ನು ವಿಧಿಸುವುದು.
(iii) ಅಡಮಾನವಾಗಿರುವ ಆಸ್ತಿಯ ವಹಿಸಿಕೆಯ ಅಥವಾ ಕೊಳ್ಳಿಕೆಯ ಹಕ್ಕನ್ನು ಮುಂದಾಗಿಯೇ ರದ್ದುಪಡಿಸುವುದು.
(iv) ಭೋಗ್ಯವಾಗಿರುವ ಆಸ್ತಿಯನ್ನು ಬಿಡಿಸುವುದು ಮತ್ತು ಮರಳಿ ವರ್ಗಾಯಿಸುವುದು.
(v) ಪಾಲುದಾರಿಕೆಯನ್ನು ವಿಸರ್ಜಿಸುವುದು, ಪಾಲುದಾರಿಕೆ ಲೆಕ್ಕಾಚಾರಗಳನ್ನು ಪರಿಗಣಿಸುವುದು, ಆಸ್ತಿಗಳನ್ನು ಲೆಕ್ಕ ಹಿಡಿಯುವುದು, ಪಾಲುದಾರಿಕೆಯ ಸಾಲಗಳನ್ನು ತೀರಿಸುವುದು ಇತ್ಯಾದಿ.

೩. ಇವುಗಳು ನಮಗೆ ಸಂಬಂಧಿಸಿಲ್ಲ.

## ಭಾಗ –೨

## ಶಾಸನವು ಪುರಸ್ಕರಿಸಿದ ಹಲವು ಬಗೆಯ ನಿರ್ದಿಷ್ಟ ಪರಿಹಾರಗಳ ಪರಿಶೀಲನೆ

## ವಿಭಾಗ – I

## ಆಸ್ತಿಯ ಪುನರ್ ಸ್ವಾಧೀನ

೮, ೯, ೧೦ ಮತ್ತು ೧೧ನೇ ಕಲಮುಗಳು

೧. ಸ್ಥಿರ ಆಸ್ತಿಯ ಪುನರ್ ಸ್ವಾಧೀನ – ೮, ೯ನೇ ಕಲಮುಗಳು
೨. ಚರ ಆಸ್ತಿಯ ಪುನರ್ ಸ್ವಾಧೀನ – ೧೦, ೧೧ನೇ ಕಲಮುಗಳು

**ಸ್ಥಿರ ಆಸ್ತಿಯ ಪುನರ್ ಸ್ವಾಧೀನ**

೧. ಪ್ರಶ್ನೆ ಹೀಗಿದೆ:

ಒಬ್ಬ ವ್ಯಕ್ತಿಯು ಸ್ಥಿರ ಆಸ್ತಿಯ ಸ್ವಾಮಿತ್ವವನ್ನು ಕಳೆದುಕೊಂಡು ಅದನ್ನು ಮರಳಿ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಮೊಕದ್ದಮೆ ಹಾಕಿದರೆ, ನಷ್ಟಪರಿಹಾರವನ್ನು ಕೊಡುವ ಬದಲು ಆಸ್ತಿಯ ಸ್ವಾಮ್ಯವನ್ನೇ ಕೊಡಬಹುದಾದ ಸಂದರ್ಭ ಯಾವುದು?

೨. ಇಲ್ಲಿ ಒತ್ತಡವಿರುವುದು ಪರಿಹಾರದ ಸ್ವರೂಪದ ಮೇಲೆ. ಅಂದರೆ– ಸ್ವಾಧೀನ ತಪ್ಪಿದ್ದ ನಿರ್ದಿಷ್ಟ

ಆಸ್ತಿಯನ್ನು ಮರಳಿ ಸ್ವಾಧೀನಪಡಿಸಿಕೊಳ್ಳುವುದು. ಸಾಮಾನ್ಯ ಕಾನೂನಿನ ಪ್ರಕಾರ ನಷ್ಟಭರ್ತಿಯನ್ನಾಗಲಿ ಪರಿಹಾರವನ್ನಾಗಲಿ ಕೊಡುವ ಕ್ರಮವು ಸದಾ ತೆರೆದೇ ಇರುತ್ತದೆ. ನೊಂದ ವ್ಯಕ್ತಿಯು ಆಸ್ತಿಯನ್ನು ಮರಳಿ ಪಡೆಯುವ ನಿರ್ದಿಷ್ಟ ಪರಿಹಾರವನ್ನು ಒತ್ತಾಯಿಸಿ ಕೇಳಬಹುದೇ ಎನ್ನುವುದು ಪ್ರಶ್ನೆ.

೩. ಸ್ಥಿರಾಸ್ತಿಯ ಸ್ವಾಮಿತ್ವವನ್ನು ವ್ಯಕ್ತಿಯು ಕಳೆದುಕೊಂಡಿರುವ ಸಂದರ್ಭಗಳು ಎರಡು ವರ್ಗಗಳಿಗೆ ಸೇರುತ್ತವೆ.

(i) ವ್ಯಕ್ತಿಯು ಸ್ವಾಧೀನತೆಗೆ ಅರ್ಹನಾಗಿದ್ದು, ಆದರೆ ಅದನ್ನು ಕಳೆದುಕೊಂಡಿರುವ ಸಂದರ್ಭ.

(ii) ಹಿಂದೆ ಸ್ವಾಧೀನತೆಯನ್ನು ಹೊಂದಿದ್ದು, ಈಗ ಅದನ್ನು ಕಳೆದುಕೊಂಡಿರುವ ಸಂದರ್ಭ.

೪. ವ್ಯತ್ಯಾಸವಿರುವುದು ಸ್ವಾಧೀನತೆಗೆ ಅರ್ಹವಾಗಿರುವುದು ಮತ್ತು ಸ್ವಾಧೀನತೆಯನ್ನು ಹೊಂದಿರುವುದು ಇವುಗಳ ನಡುವೆ.

೫. ಈ ಎರಡೂ ಸಂದರ್ಭಗಳನ್ನು ೮ ಮತ್ತು ೯ನೆಯ ವಿಭಾಗಗಳಲ್ಲಿ ಪರಿಶೀಲಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ವಾದಿಗೆ ಆಸ್ತಿಯನ್ನು ಪುನರ್ ಸ್ವಾಧೀನಪಡಿಸಿಕೊಳ್ಳುವ ನಿರ್ದಿಷ್ಟ ಪರಿಹಾರದ ಹಕ್ಕಿದೆ ಎಂದು ಹೇಳಲಾಗಿದೆ.

೬. ೮ನೆಯ ವಿಭಾಗದ ಅಗತ್ಯಗಳು.

(i) ಸ್ವಾಧೀನತೆಗೆ ಹಕ್ಕಿದೆ ಮತ್ತು ನಿರ್ದಿಷ್ಟ ಪರಿಹಾರವಾಗಿ ಆಸ್ತಿಯನ್ನು ಪುನರ್ ಸ್ವಾಧೀನ ಪಡಿಸಿಕೊಂಡಿದ್ದೀರಿ ಎಂದು ಸಮರ್ಥಿಸಬೇಕು.

೭. ೯ನೇ ವಿಭಾಗದ ಅಗತ್ಯಗಳು.

(i) ಮೊಕದ್ದಮೆ ಹಾಕುವುದಕ್ಕೆ ಮುಂಚೆ ಆರು ತಿಂಗಳ ಒಳಗೆ ಆಸ್ತಿಯು ನಿಮ್ಮ ಸ್ವಾಧೀನದಲ್ಲಿತ್ತು ಎಂದು ಸಮರ್ಥಿಸಬೇಕು.

(ii) ಮುಂದೆ ನಿಮ್ಮ ಸಮ್ಮತಿಯಿಲ್ಲದೆಯೇ ಬೇರೆ ರೀತಿಯಾಗಿಯೇ ಅದು ನಿಮ್ಮ ಸ್ವಾಧೀನ ತಪ್ಪಿಹೋಯಿತು ಎಂದು ಸಮರ್ಥಿಸಬೇಕು.

'ಎ' ಹಕ್ಕುಪತ್ರ ಹೊಂದಿದ್ದು, ಹಕ್ಕುಪತ್ರವಿಲ್ಲದ 'ಬಿ' ಅದನ್ನು ಕಸಿದುಕೊಂಡಿದ್ದಾನೆ.

'ಎ'ಗೆ ಹಕ್ಕುಪತ್ರವಿರದೆ, ಹಕ್ಕುಪತ್ರವಿರುವ 'ಬಿ' ಅದನ್ನು ವಶಪಡಿಸಿಕೊಂಡಿದ್ದಾನೆ. 'ಎ'ಗೆ ಹಕ್ಕುಪತ್ರವಿರದೆ, ಹಕ್ಕುಪತ್ರವಿಲ್ಲದ 'ಬಿ' ವಶಪಡಿಸಿಕೊಂಡಿದ್ದಾನೆ.

೧. ಈ ಮೂರು ಸಂದರ್ಭಗಳಲ್ಲಿ 'ಎ'ಯು ೯ನೇ ವಿಭಾಗದ ಪ್ರಕಾರ ಅಂದರೆ, ಆರು ತಿಂಗಳ ಒಳಗಾಗಿ ಮೊಕದ್ದಮೆ ಹೂಡಿದರೆ, ಹಕ್ಕುಪತ್ರದ ಪ್ರಶ್ನೆಯಿಲ್ಲದೆ ತನ್ನ ಆಸ್ತಿಯನ್ನು ಪುನರ್ ಸ್ವಾಧೀನಪಡಿಸಿ ಕೊಳ್ಳಬಹುದು.

೨. ಆರು ತಿಂಗಳ ಅನಂತರ ಮೊಕದ್ದಮೆ ಹಾಕಿದರೆ, ಹಕ್ಕುಪತ್ರದ ಮೇಲೆ ಆಧರಿಸಬೇಕಾಗುತ್ತದೆ. ಏಕೆಂದರೆ 'ಎ'ಯು

(i) ಹಕ್ಕು ಪತ್ರವನ್ನು ಹೊಂದಿರುವುದರಿಂದ

(ii) ಹಕ್ಕು ಪತ್ರ ಪಡೆಯಲು ಅವನಿಗೆ ಅರ್ಹತೆಯಿರುವುದರಿಂದ ಆಸ್ತಿಯನ್ನು ಮರಳಿ ಸ್ವಾಧೀನ ಮಾಡಿಕೊಳ್ಳಬಹುದು.

ಆದರೆ ಮೂರರಲ್ಲಿ ಎರಡನೆಯ ಸಂದರ್ಭದಲ್ಲಿ ಸ್ವಾಧೀನತೆ ಸಾಧ್ಯವಿಲ್ಲ. ಏಕೆಂದರೆ 'ಬಿ'ಗೆ ಹಕ್ಕು ಪತ್ರವಿದೆ. 'ಎ'ಗೆ ಇಲ್ಲ.

**೧೦ನೆಯ ಭಾಗದ ಪ್ರಕಾರ ಮೊಕದ್ದಮೆ ಹೂಡಬಹುದಾದವರು ಯಾರು?**

೧. ೧೦ನೆಯ ಭಾಗದ ಪ್ರಕಾರ, ವಿವಾದದಲ್ಲಿರುವ ಆಸ್ತಿಯ ಒಡೆತನಕ್ಕೆ ಯಾರಿಗೆ ಹಕ್ಕಿದೆಯೋ ಅವರು ಮೊಕದ್ದಮೆ ಹಾಕಬಹುದು.

೨. "ಸ್ವಾಧೀನತೆಗೆ ಅರ್ಹವಾದ" ಎಂದು ಉಕ್ತಿಯ ಅರ್ಥ.

೩. ಸ್ವಾಧೀನತೆಯ ಅರ್ಹತೆಯು ಇದರಿಂದ ಬರಬಹುದು:

- (i) ಒಡೆತನದ ಫಲವಾಗಿ
- (ii) ಒಡೆತನಕ್ಕೆ ಸಂಬಂಧವಿಲ್ಲದ ಹಾಗೆ ಪ್ರಸ್ತುತ ಸ್ವಾಧೀನತೆಯ ತಾತ್ಕಾಲಿಕ ಅಥವಾ ವಿಶೇಷ ಹಕ್ಕಾಗಿ.

೪. ಒಡೆತನದ ಫಲವಾಗಿ ಸ್ವಾಧೀನತೆಯ ಅರ್ಹತೆ.

- (i) ಸ್ವಾಧೀನತೆಯು ಕೇವಲ ನ್ಯಾಯಿಕ ಒಡೆತನವಾಗಿರಬಹುದು ಇಲ್ಲವೆ ಲಾಭಾಸಕ್ತಿಯೊಂದಿಗೆ ಬೆರೆತ ನ್ಯಾಯಿಕ ಒಡೆತನವಾಗಿರಬಹುದು.
- (ii) ೧೦ನೆಯ ಭಾಗದ ಪ್ರಕಾರ ಒಂದು ಮೊಕದ್ದಮೆ ನಡೆಸಲು ನ್ಯಾಯಿಕ ಒಡೆಯನಿಗೆ ಒಂದು ಲಾಭಾಸಕ್ತಿಯೂ ಇರಬೇಕಾದುದು ಅತ್ಯಗತ್ಯವೇನಲ್ಲ.
- (iii) ಇದನ್ನು ವಿವರಣೆ I ಎಂಬಲ್ಲಿ ಸ್ಪಷ್ಟಪಡಿಸಲಾಗಿದೆ. ಅಲ್ಲಿ ಒಬ್ಬ ಟ್ರಸ್ಟಿಗೆ, ಟ್ರಸ್ಟ್ ಆಸ್ತಿಯ ಸ್ವಾಧೀನತೆಗಾಗಿ, ಅವನಿಗೆ ಯಾವುದೇ ಲಾಭಾಸಕ್ತಿಯಿರದಿದ್ದರೂ ಮೊಕದ್ದಮೆ ಹೂಡುವುದಕ್ಕೆ ಅನುಮತಿಯಿದೆ.

**೫. ಒಡೆತನದ ಸಂಬಂಧವಿಲ್ಲದೆ ಸ್ವಾಧೀನತೆಗೆ ಅರ್ಹತೆ**

೧. ಈ ಬಗೆಯ ಸ್ವಾಧೀನತೆಯು ಎರಡು ವಿಧಾನಗಳಿಂದ ಉದ್ಭವಿಸಬಹುದು:

- (i) ಒಡೆಯನು ಕೈಗೊಳ್ಳುವ ಕ್ರಮದಿಂದ.
- (ii) ಅದಲ್ಲದ ಬೇರೆ ವಿಧಾನದಿಂದ.

(i) ಒಡೆಯನ ಕ್ರಮದಿಂದ ಹುಟ್ಟುವ ಸ್ವಾಧೀನತಾ ಅರ್ಹತೆ.

- (i) ಒಡೆಯನು ತಾನು ಕೈಗೊಳ್ಳುವ ಕ್ರಮದಿಂದ ಇನ್ನೊಬ್ಬ ವ್ಯಕ್ತಿಯಲ್ಲಿ ಒಡೆಯನಾಗಿ ತನಗೆ ಸೇರಿರುವ ವಸ್ತುವೊಂದರ ಸ್ವಾಧೀನತೆಗೆ ಹಕ್ಕನ್ನು ಸೃಷ್ಟಿಸಬಹುದು.
- (ii) ಇಂತಹ ಸ್ವಾಧೀನತಾ ಹಕ್ಕಿಗೆ ನಿದರ್ಶನಗಳನ್ನು ಗೊತ್ತಾದ ಉದ್ದೇಶಕ್ಕಾಗಿ ಆಸ್ತಿಯನ್ನು ವಹಿಸುವುದು (ಬೇಲ್‌ಮೆಂಟ್) ಮತ್ತು ಸಾಲ ತೀರುವವರೆಗೆ ಆಸ್ತಿಯನ್ನು ಅನುಭವಿಸುತ್ತಿರುವುದು (ಲೀಸ್)ಗಳಲ್ಲಿ ನೋಡಬಹುದು.
- (೧) ಸರಳ ಜಾಮೀನು (ಬೇಲ್‌ಮೆಂಟ್) ಇವುಗಳನ್ನು ಒಳಗೊಳ್ಳುತ್ತದೆ:
  - (i) ಸಾಲ
  - (ii) ವಶದಲ್ಲಿರುವುದು
  - (iii) ಸಾಗಣೆ
  - (iv) ಏಜೆನ್ಸಿ
- (೨) ಇತರ ಜಾಮೀನು(ಬೇಲ್‌ಮೆಂಟು)ಗಳು.
  - (i) ಗಿರವಿಯಿಡುವುದು.

(ii) ಬಾಡಿಗೆಗೆ ಕೊಟ್ಟಿರುವುದು.

೨. ಸರಳ ಬೇಲ್‌ಮೆಂಟಿಗೂ ಗಿರವಿ ಅಂಗಡಿ ಬಾಡಿಗೆ ಮೊದಲಾದ ಇತರ ರೀತಿಯ ಬೇಲ್ ಮೆಂಟುಗಳಿಗೂ ಇರುವ ವ್ಯತ್ಯಾಸ:

(i) ಸರಳ ಬೇಲ್‌ಮೆಂಟಿನಲ್ಲಿ ಮಾಲೀಕನಿಗೆ ಸ್ವಾಧೀನತೆಯ ಹಕ್ಕಿದೆ, ಜಾಮೀನು ಮಾಡಿಸಿಕೊಂಡವನಿಗೆ ನ್ಯಾಯಿಕವಾದ ಸ್ವಾಧೀನತೆಯಿದೆ. ಅವನು ಸ್ವಾಧೀನತೆಗೆ ಅರ್ಹನಾಗಿದ್ದು, ಆಸ್ತಿಯನ್ನು ಮರಳಿ ವಶಪಡಿಸಿಕೊಳ್ಳುವುದಕ್ಕಾಗಿ ಮೊಕದ್ದಮೆ ಹಾಕಬಹುದು. ಜಾಮೀನುದಾರನಿಗಾದರೋ ಸ್ವಾಧೀನತೆಯ ಹಕ್ಕು ಇದೆ, ಜಾಮೀನು ಕೊಡಿಸಿಕೊಂಡವನ ಹೊರತು ಬೇರೆ ಯಾವ ವ್ಯಕ್ತಿಯ ವಿರುದ್ಧವಾಗಿ ಬೇಕಾದರೂ ಅವನು ಮೊಕದ್ದಮೆ ಹೂಡಬಹುದಾಗಿದೆ.

(ii) ಗಿರವಿ, ಬಾಡಿಗೆ ಮೊದಲಾದ ಇತರ ಬೇಲ್‌ಮೆಂಟುಗಳಲ್ಲಿ ಜಾಮೀನುದಾರನಿಗೆ ಸ್ವಾಧೀನತೆಯ ಹಕ್ಕಿರುವುದಿಲ್ಲ. ಅದು ಗಿರವಿದಾರ ಅಥವಾ ಬಾಡಿಗೆದಾರನಿಗೆ ಬರುತ್ತದೆ. ಜಾಮೀನಿನ ಅಥವಾ ಒತ್ತೆಯ ಕಾಲಾವಧಿಯವರೆಗೆ, ಸ್ವಾಧೀನತೆಯನ್ನು ಪಡೆಯಲು ಮೊಕದ್ದಮೆ ಹೂಡುವ ಹಕ್ಕಿರುವುದು (ಗಿರವಿದಾರ, ಬಾಡಿಗೆದಾರ) ಜಾಮೀನುದಾರನಿಗೆ ಮಾತ್ರವೇ.

೩. ಭೋಗ್ಯದ ಹಕ್ಕು ಅಥವಾ ಲೀಸ್ ಇನ್ನೊಂದು ಬಗೆಯಾದ, ಒಡೆಯನು ಕೈಗೊಂಡ ಕ್ರಮದಿಂದ ಉದ್ಭವಿಸುವ ಹಕ್ಕಿಗೆ ನಿದರ್ಶನ.

(೧) ಒಡೆಯನು ಸಾಲ ಪಡೆದಿದ್ದು ಅದರಿಂದ ಒಂದು ವಸ್ತುವಿನ ಸ್ವಾಧೀನತೆಯ ಮೇಲೆ ಹುಟ್ಟುವ ಹಕ್ಕು.

(೨) ಹೀಗೆ ಒಡೆಯನಿಗಿದ್ದ ಸ್ವಾಧೀನತೆಯ ಹಕ್ಕು ತಾತ್ಕಾಲಿಕವಾಗಿ ಇನ್ನೊಬ್ಬನಿಗೆ ಬಂದಿದೆ.

೪. ಮೊಕದ್ದಮೆಯನ್ನು ನಡೆಸಲು ಅಗತ್ಯವಾದುದೆಲ್ಲಾ ಸ್ವಾಧೀನತೆಯನ್ನು ಸರಿಯಾಗಿ ಮಂಡಿಸುವ ಹಕ್ಕು.

(i) ಪ್ರಸ್ತುತ ಸ್ವಾಧೀನತೆಯು ಒಡೆತನದ ಹಕ್ಕಿನಿಂದ ಹುಟ್ಟಿರಬಹುದು, ಅಥವಾ ಹುಟ್ಟದಿರಬಹುದು.

(ii) ಪ್ರಸ್ತುತ ಸ್ವಾಧೀನತೆಯ ಹಕ್ಕು ವಿಶೇಷವಾಗಿರಬಹುದು. ಇಲ್ಲವೆ ತಾತ್ಕಾಲಿಕವಾಗಿರಬಹುದು.

ಒಡೆಯನು ಕೈಗೊಂಡ ಕ್ರಮವಲ್ಲದೆ ಬೇರೆ ವಿಧಾನಗಳಿಂದ ಸ್ವಾಧೀನತೆಯ ಹಕ್ಕು–

(i) ಕಳೆದುಹೋದ ವಸ್ತು ಯಾರಿಗೆ ಕಾಣಿಸುವುದೋ ಅವನಿಗೆ ಹಕ್ಕಿದೆ.

(ii) ಅದು ಒಡೆಯನು ಕೈಗೊಂಡ ಯಾವುದೇ ನಡವಳಿಕೆಯ ಫಲವಲ್ಲ.

(iii) ನಿಜವಾದ ಒಡೆಯನ ಹೊರತು ಮಿಕ್ಕ ಇಡಿ ಜಗತ್ತಿಗೆ ಎದುರಾಗಿ ಅದು ನಿಲ್ಲುತ್ತದೆ.

## II. ಯಾರ ಮೇಲೆ ಅಂತಹ ಮೊಕದ್ದಮೆ ಹೂಡಬಹುದು.

೧. ೧೦ನೆಯ ವಿಭಾಗದಂತೆ ಯಾರ ವಿರುದ್ಧವಾಗಿ ಬೇಕಾದರೂ, ಕೊನೆಗೆ ನಿಜವಾದ ಮಾಲೀಕನ ಮೇಲೆಯೂ ಒಂದು ಮೊಕದ್ದಮೆಯನ್ನು ಹೂಡಬಹುದು.

೨. ಅಗತ್ಯವಾಗಿರುವ ಒಂದೇ ಒಂದು ವಿಷಯ, ವಾದಿಗೆ ಸ್ವಾಧೀನತೆ ಪಡೆಯಲು ಅರ್ಹತೆಯಿರಬೇಕು.

### ಕಲಮು – ೧೧ ಚರ ಆಸ್ತಿ

೧. ಪ್ರಶ್ನೆ ೧: ೧೧ನೆಯ ಕಲಮಿನಂತೆ ಯಾರು ಮೊಕದ್ದಮೆ ಹಾಕಬಹುದು?

ಉತ್ತರ: ತತ್‌ಕ್ಷಣದ ಸ್ವಾಧೀನತೆಗೆ ಅರ್ಹತೆಯಿರುವ ವ್ಯಕ್ತಿ.

೨. ಪ್ರಶ್ನೆ ೨: ಯಾರ ವಿರುದ್ಧವಾಗಿ ಅಂತಹ ಖಟ್ಲೆ ಹೂಡಬಹುದು?

ಉತ್ತರ: ಆಸ್ತಿಯ ಒಡೆಯನಲ್ಲದ ಯಾವನೇ ವ್ಯಕ್ತಿಯ ವಿರುದ್ಧವಾಗಿಯಾದರೂ ಆಗಬಹುದು. ಪ್ರತಿವಾದಿಯು ಒಡೆಯನಾಗಿರಬಾರದು. ಅವನು ಒಡೆಯನಾಗಿದ್ದರೆ ೧೦ನೆಯ ಭಾಗವು ಅನ್ವಯವಾಗುತ್ತದೆ.

೩. ಪ್ರಶ್ನೆ ೩: ಸ್ವಾಧೀನತೆಯನ್ನು ಮರಳಿ ಪಡೆಯುವ ನಿರ್ದಿಷ್ಟ ಪರಿಹಾರ ದೊರಕುವುದು ಯಾವ ಸಂದರ್ಭದಲ್ಲಿ?

ಉತ್ತರ: (i) ಇಲ್ಲಿ ಆಸ್ತಿಯನ್ನು ವಶದಲ್ಲಿಟ್ಟುಕೊಂಡಿರುವ ವ್ಯಕ್ತಿಯು ಹಕ್ಕುದಾರನ ಏಜೆಂಟನೋ, ವಿಶ್ವಸ್ಥನೋ ಆಗಿರುವಾಗ.

(ii) ಹಣದ ಪರಿಹಾರವು ಹಕ್ಕುದಾರನು ಅನುಭವಿಸಿರುವ ನಷ್ಟಕ್ಕೆ ಸಾಕಷ್ಟು ಪರಿಹಾರ ವಾಗಿಲ್ಲದಾಗ.

(iii) ಆಸ್ತಿಯು ಕಳೆದುಹೋದುದರಿಂದ ಆಗಿರುವ ವಾಸ್ತವ ಹಾನಿಯನ್ನು ಸರಿಯಾಗಿ ಸ್ಥಿರಪಡಿಸಿಕೊಳ್ಳಲು ಸಾಧ್ಯವಿಲ್ಲದಾಗ.

(iv) ವ್ಯಕ್ತಿಯು ಆಸ್ತಿಯನ್ನು ಹಿಡಿದಿಟ್ಟುಕೊಂಡಿರುವುದು ಹಕ್ಕುದಾರನಿಂದ ಅನ್ಯಾಯಯುತವಾಗಿ ವರ್ಗಾಯಿಸಿದುದರ ಫಲವಾಗಿರುವಾಗ.

### ಆಸ್ತಿ ಸ್ವಾಧೀನತೆಯನ್ನು ಕುರಿತು ನಿರ್ದಿಷ್ಟ ಪರಿಹಾರ

ಇವುಗಳನ್ನು ಕುರಿತು ೮ರಿಂದ ೧೧ನೆಯ ಕಲಮುಗಳವರೆಗೆ ಪರಿಶೀಲಿಸಲಾಗಿದೆ.

ಕಲಮು ೮. ಸ್ವಾಧೀನತೆ ಪಡೆಯಲು ಅರ್ಹತೆಯಿರುವ ವ್ಯಕ್ತಿಯು ನಿರ್ದಿಷ್ಟ ಸ್ಥಿರ ಆಸ್ತಿಯನ್ನು ಮರಳಿ ಸ್ವಾಧೀನತೆಗೆ ತೆಗೆದುಕೊಳ್ಳುವುದು.

ಕಲಮು ೯. ಕಳೆದುಕೊಂಡಿರುವ ವ್ಯಕ್ತಿಯು ನಿರ್ದಿಷ್ಟ ಸ್ಥಿರ ಆಸ್ತಿಯನ್ನು ಮರಳಿ ಸ್ವಾಧೀನಕ್ಕೆ ಪಡೆದುಕೊಳ್ಳುವುದು.

ಕಲಮು ೧೦. ಸ್ವಾಧೀನತಾ ಅರ್ಹತೆಯಿರುವ ವ್ಯಕ್ತಿಯು ನಿರ್ದಿಷ್ಟ ಚರ ಆಸ್ತಿಯನ್ನು ಮರಳಿ ಸ್ವಾಧೀನ ಮಾಡಿಕೊಳ್ಳುವುದು (೧) ಒಡೆತನ ಕಾರಣವಾಗಿ, (೨) ತಾತ್ಕಾಲಿಕ ಅಥವಾ ವಿಶೇಷ ಹಕ್ಕುಗಳ, ಬೇಲ್‌ಮೆಂಟ್ ಹಾಗೂ ಗಿರವಿ ಮುಂತಾದವುಗಳ ಕಾರಣವಾಗಿ.

ಕಲಮು ೧೧. ತಕ್ಷಣವೇ ಸ್ವಾಧೀನ ಪಡೆಯಲು ಅರ್ಹತೆಯಿರುವ ವ್ಯಕ್ತಿಯು ನಿರ್ದಿಷ್ಟ ಸ್ಥಿರ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದು.

ಪ್ರಸ್ತುತ ಸ್ವಾಧೀನಪಡಿಸಿಕೊಂಡಿರುವವನು ಒಡೆಯನಿಲ್ಲದಾಗ ಇದು ಅನ್ವಯಿಸುತ್ತದೆ.

**ನ್ಯಾಯಿಕವಾಗಿ ಸ್ವಾಧೀನತೆ ಎಂದರೇನು?**

ನ್ಯಾಯಿಕ ಸ್ವಾಧೀನತೆಯು ಎರಡು ಅಂಶಗಳ ಸಂಯುಕ್ತವಾಗಿದೆ: ಮೂಲ ಆಸ್ತಿ ಮತ್ತು ಲಾಭ.

**ಟಿಪ್ಪಣಿ:**

(i) ನ್ಯಾಯಿಕ ಸ್ವಾಧೀನತೆಯು ಹಕ್ಕುಪತ್ರ ಅಥವಾ ಹಕ್ಕುದಾರಿಕೆಯನ್ನು ಒಳಗೊಳ್ಳುವುದಿಲ್ಲ. ಅದು ಹಕ್ಕು ಅಥವಾ ಹಕ್ಕುಪತ್ರದಿಂದ ಸಂಪೂರ್ಣವಾಗಿ ಸ್ವತಂತ್ರವಾಗಿದೆ. ನ್ಯಾಯಿಕ ಸ್ವಾಧೀನತೆಯು ಕಾನೂನು ಸಮ್ಮತವಾಗಿರಬಹುದು ಇಲ್ಲವೆ ಕಾನೂನು ಬಾಹಿರವಾಗಿರಬಹುದು.

ಕಾನೂನು ಪುರಸ್ಕರಿಸಿರುವ ವಿಧಾನದಿಂದ ವಸ್ತುತಃ ಸ್ವಾಧೀನತೆಯನ್ನು ಗಳಿಸಿದ್ದರೆ ಅವನಿಗೆ ನ್ಯಾಯಯುತ ಸ್ವಾಮ್ಯವಿದೆ ಎಂದು ಹೇಳಲಾಗುತ್ತದೆ. ಹಾಗೆ ಆ ವಿಧಾನದಿಂದ ಸಂಪಾದಿಸಿರದಿದ್ದರೆ (ಕಳ್ಳನೊಬ್ಬನು ಮಾಡುವಂತೆ) ಅವನಿಗೆ ನ್ಯಾಯಿಕವಾಗಿ ಸ್ವಾಧೀನತೆಯಿರಬಹುದು, ಆದರೆ ಅದು ಕಾನೂನುಬಾಹಿರ ವಾದುದಾಗಿರುತ್ತದೆ.

(ii) ನ್ಯಾಯಿಕ ಸ್ವಾಧೀನತೆಯು ತಪ್ಪು ಮಾಡುವವರ ವಿರುದ್ಧ ವೈಯಕ್ತಿಕ ರಕ್ಷಣೆಗಿಂತ ಮಿಗಿಲಾದುದನ್ನು ನೀಡುತ್ತದೆ. ಅದು ಸ್ವಾಧೀನತೆಯ ಸಾಪೇಕ್ಷ ಹಕ್ಕನ್ನು ನೀಡುತ್ತದೆ. ಉತ್ತಮ ತರಹಕ್ಕೂ ತೋರಿಸದ ಎಲ್ಲರ ವಿರುದ್ಧವೂ ನಿಲ್ಲಬಲ್ಲ ಆಸ್ತಿ ಸ್ವರೂಪದ ಮೇಲಿನ ಹಕ್ಕನ್ನು ನೀಡುತ್ತದೆ.

ನ್ಯಾಯಿಕ ಸ್ವಾಧೀನತೆಯಲ್ಲಿ ಎರಡು ಅಂಶಗಳಿವೆ:

(i) ಕಾರ್ಪಸ್ (Corpus) – ದೈಹಿಕವಾದ ಸಂಬಂಧ

(ii) ಆ್ಯನಿಮಸ್ (Animus) – ಮಾನಸಿಕ ಸಂಬಂಧ

ದೈಹಿಕ ಸಂಬಂಧವೆಂದರೆ ದೈಹಿಕವಾಗಿ ಸಂಪರ್ಕವಿರುವುದು ಎಂದು ಮಾತ್ರವಲ್ಲ, ಇಚ್ಛೆ ಬಂದ ಹಾಗೆ ಪಡೆಯಬಲ್ಲ ದೈಹಿಕ ಸಂಪರ್ಕವನ್ನು ಅದು ಒಳಗೊಳ್ಳುತ್ತದೆ. ಇದರ ಸಾರಾಂಶ ಅಧಿಕಾರ. ಒಂದು ವಸ್ತುವಿನ ಉಪಯೋಗದಿಂದ ಇತರರನ್ನು ಹೊರತುಪಡಿಸುವ ಅಧಿಕಾರ. ಸ್ವಾಧೀನದಲ್ಲಿರುವ ವಸ್ತುವಿನ ಸ್ವರೂಪಗಳ ಅನುಗುಣವಾಗಿ ಅದನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದು ಅಥವಾ ನಿಯಂತ್ರಿಸುವುದು.

ಮಾನಸಿಕ ಸಂಬಂಧವೆಂದರೆ, ಒಂದು ವಸ್ತುವನ್ನು ತನ್ನ ಇಚ್ಛೆಗನುಗುಣವಾಗಿ ಅನುಭೋಗಿಸಿ ಇತರರನ್ನು ಹೊರತುಪಡಿಸುವುದು– **ಆ್ಯನಿಮಸ್ ಡೊಮಿನಿ.**

**ಮಾನಸಿಕ ಸಂಬಂಧದ ಮೂರು ಬಗೆಗಳು**

ಒಂದು ವಸ್ತುವನ್ನು ಭೌತಿಕವಾಗಿ ಸ್ವಾಧೀನದಲ್ಲಿರಿಸಿಕೊಂಡಿರುವವನ ಮಾನಸಿಕ ಪ್ರವೃತ್ತಿ ಮೂರು ಹಂತಗಳನ್ನು ತಳೆಯಬಲ್ಲುದು.

**ಮೊದಲನೆಯದು–** ಅವನ ಉದ್ದೇಶವು ವಸ್ತುವನ್ನು ಕೇವಲ ಸಂರಕ್ಷಿಸುವುದಾಗಿರಬಹುದು. ಇಲ್ಲಿ ಹಕ್ಕಿನ ಸ್ಥಿರಪಡಿಸಿಕೊಳ್ಳುವಿಕೆಯಿಲ್ಲ – ಒಡೆಯನಿಗೆ ಸೇರಿದ ವಸ್ತುಗಳನ್ನು ಸೇವಕನು ಇರಿಸಿಕೊಂಡಿರುವ ಹಾಗೆ.

**ಎರಡನೆಯದು–** ಕೇವಲ ಸೀಮಿತ ಉದ್ದೇಶಗಳಿಗಾಗಿ ನಿಯಂತ್ರಿಸುವ ಅಭಿಪ್ರಾಯ ಹೊಂದಿರುವುದು. ಉದಾಹರಣೆಗೆ ಗೇಣಿದಾರ ಅಥವಾ ಬಾಡಿಗೆದಾರ – ಒಡೆಯನನ್ನು ಬಿಟ್ಟು ಮಿಕ್ಕೆಲ್ಲರನ್ನು ಹೊರತುಪಡಿಸುವ ಉದ್ದೇಶ.

**ಮೂರನೆಯದಾಗಿ–** ಬೇರೆ ಪ್ರತಿಯೊಬ್ಬ ವ್ಯಕ್ತಿಯ ಹಕ್ಕನ್ನು ನಿರಾಕರಿಸುವುದು – ಇದೇ ನಿಜವಾದ **ಆ್ಯನಿಮಸ್ ಡೊಮಿನಿ.**

**ಸ್ವಾಧೀನತೆ ಮತ್ತು ಅತಿಕ್ರಮಣಗಳ ನಡುವೆ ಇರುವ ವ್ಯತ್ಯಾಸ**

೧. ಅಂತಹ ಸಂದರ್ಭಗಳಲ್ಲಿ ವಾದಿಯು ಸಮರ್ಥಿಸಬೇಕಾಗಿರುವುದು ಏನೆಂದರೆ, ವಿವಾದಗ್ರಸ್ತ ಆಸ್ತಿಯು ತನ್ನ ಸ್ವಾಧೀನದಲ್ಲಿದೆಯೆಂಬುದನ್ನೇ ಹೊರತು, ಆ ಆಸ್ತಿಯ ಮೇಲೆ ನಡೆಸಿದ ಅತಿಕ್ರಮಣದ ಬಿಡಿ ಸಂದರ್ಭಗಳನ್ನಲ್ಲ. ಆತನು–

(i) ಸ್ವಾಮಿತ್ವದ ಹಕ್ಕೆನಿಸುವ ಕಾರ್ಯಗಳನ್ನು ತಾನು ಮಾಡುತ್ತಿದ್ದುದಾಗಿಯೂ, ಆಸ್ತಿಯ ಸ್ವರೂಪಕ್ಕನುಗುಣವಾಗಿ ಈ ಕಾರ್ಯಗಳು ಬೇರೆಬೇರೆಯಾಗುತ್ತಿದ್ದುವೆಂದೂ ಸಮರ್ಥಿಸಬೇಕು.

(ii) ಸ್ವಾಮಿತ್ವದ ಹಕ್ಕಿನ ಕೆಲಸಗಳೂ ವಿಶಿಷ್ಟವಾಗಿದ್ದುವು ಎಂದೂ ತೋರಿಸಬೇಕು.

೨. ಆ ಕೃತ್ಯಗಳು ಸೂಚಿಸುವಂತೆ ವಾದಿಯ ವೃತ್ತಿಯು ಶಾಂತಿಯುತವೂ, ತಡೆಯಿಲ್ಲದುದೂ, ಸಾಕಷ್ಟು ದೀರ್ಘ ಸಮಯದವರೆಗೆ ಹರಡಿದ್ದುದೂ ಆಗಿದ್ದರೆ ವಾದಿಯು ಸ್ವಾಧೀನತೆಯನ್ನು ಹೊಂದಿದ್ದಾನೆ ಎಂದು ವಿಹಿತವಾಗಿಯೇ ಭಾವಿಸಲಾಗುತ್ತದೆ.

**೮ ಮತ್ತು ೯ನೆಯ ಕಲಮಿನ ಉದ್ದೇಶಗಳು**

(i) ಶಾಸನದ ೮ನೆಯ ಭಾಗದ ಪ್ರಕಾರ, ನಿರ್ದಿಷ್ಟ ಸ್ಥಿರ ಆಸ್ತಿಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಅರ್ಹನಾಗಿರುವ ವ್ಯಕ್ತಿಯು ಸಿ.ಪಿ.ಸಿ.ಯು ವಿಧಿಸಿರುವಂತೆ, ಹಕ್ಕುದಾರಿಕೆಯ ಆಧಾರದಿಂದ, ತೆರವು ಮಾಡಿಸಲು ಕೋರಿ ಮೊಕದ್ದಮೆ ಹಾಕಬಹುದು.

(ii) ಸಮ್ಮತಿಯಿಲ್ಲದೆಯೇ ವ್ಯಕ್ತಿಯ ಸ್ಥಿರ ಆಸ್ತಿಯನ್ನು ಕಬಳಿಸಿರುವಾಗ, ೯ನೆಯ ವಿಭಾಗದಲ್ಲಿ ಅಂತಹ ವ್ಯಕ್ತಿಗೆ ಪರಿಹಾರವನ್ನು ಸೂಚಿಸುತ್ತದೆ.

**ಕಲಮು ೯**

ಈ ವಿಭಾಗವು ಅಕ್ರಮವಾಗಿ ಸ್ವಾಧೀನತೆಯನ್ನು ಕಡಿದುಹಾಕುವ ವಿಷಯವನ್ನು ಪರಿಶೀಲಿಸುತ್ತದೆ. ಹಾಗೆ ಕಳೆದುಕೊಂಡವನಿಗೆ ಎರಡು ಬದಲಿ ಪರಿಹಾರಗಳನ್ನು ಕೊಡುತ್ತದೆ.

(i) ಘಟನೆ ನಡೆದ ಆರು ತಿಂಗಳ ಒಳಗಾಗಿ ಮೊಕದ್ದಮೆ ಹೂಡಿ ತನಗಾಗಿರುವ, ಅಕ್ರಮವಾಗಿ ಸ್ವಾಧೀನತೆಯನ್ನು ತಪ್ಪಿಸಿರುವ ಕೃತ್ಯವನ್ನು ಸಮರ್ಥಿಸಿ ಮರಳಿ ಆಸ್ತಿಯ ಸ್ವಾಧೀನತೆ ಪಡೆಯಬಹುದು. ಅವನಿಗೆ ಆಸ್ತಿಯ ಹಕ್ಕಿತ್ತೇ ಇಲ್ಲವೆ ಎನ್ನುವುದು ಇಲ್ಲಿ ಅಪ್ರಸ್ತುತವಾಗುತ್ತದೆ.

(ii) ಮೊಕದ್ದಮೆ ಹೂಡಿ, ತನಗಿರುವ ಸ್ವಾಧೀನತೆಯ ಹಕ್ಕನ್ನು ಅವಲಂಬಿಸಿ ಮರಳಿ ಸ್ವಾಧೀನತೆ ಪಡೆಯಬಹುದು. ಇಲ್ಲಿ ಅವನ ಯಶಸ್ಸು ನಿಲ್ಲುವುದು ತನಗಿರುವ ಹಕ್ಕನ್ನು ಅವನು ಸಮರ್ಥಿಸುವುದರ ಮೇಲೆ.

ಮೊದಲನೆಯದನ್ನು ಸ್ವಾಧೀನತಾ ಮೊಕದ್ದಮೆಯ ಮೂಲಕವಾದ ಪರಿಹಾರ ಎಂದು ಕರೆಯಲಾಗಿದೆ. ಶಾಸನದ ೯ನೆಯ ವಿಭಾಗದಲ್ಲಿ ಇದು ಉಕ್ತವಾಗಿದೆ. ಎರಡನೆಯದು ಹಕ್ಕನ್ನು ಅವಲಂಬಿಸಿದ ಮೊಕದ್ದಮೆಯ ಸಾಮಾನ್ಯ ಪರಿಹಾರ. ಶಾಸನದ ೮ನೆಯ ವಿಭಾಗದಲ್ಲಿ ಇದು ನಿರೂಪಿತವಾಗಿದೆ.

**೯ನೆಯ ಕಲಮಿನ ಸ್ವರೂಪ ಮತ್ತು ಉದ್ದೇಶ**

(i) ಜನರು ಕಾನೂನನ್ನು ತಾವೇ ಕೈಗೆತ್ತಿಕೊಳ್ಳುವುದನ್ನು ತಡೆಯುವುದು. ಅವರ ಹಕ್ಕು ಏನೇ ಇದ್ದರೂ ಈ ವಿಧಾನವನ್ನನುಸರಿಸದಂತೆ ನೋಡುವುದು.

(ii) ಸ್ವಾಧೀನತೆ ತಪ್ಪಿದುದರಿಂದಾಗಿ ಸಾಕ್ಷ್ಯಾಧಾರದ ಹೊರೆಯನ್ನು ವರ್ಗಾಯಿಸುವುದನ್ನು ನಿವಾರಿಸುವುದು– ಸ್ವಾಧೀನತೆಯು, ಮೇಲುನೋಟಕ್ಕೆ ಕಂಡುಬರುವ, ಹಕ್ಕಿನ ಆಧಾರ.

ಸ್ವಾಧೀನತೆಯನ್ನು ಕಡಿದವನು, ಕಳೆದುಕೊಂಡವನು ಇಬ್ಬರಿಗೂ ನಡುವೆ, ೯ನೇ ಭಾಗದ ಪ್ರಕಾರ ಮೊಕದ್ದಮೆಯಲ್ಲಿ, ಆರು ತಿಂಗಳ ಒಳಗಾಗಿ ಹೂಡಿದ್ದರೆ, ವಾಸ್ತವವಾಗಿ ಆಸ್ತಿಯನ್ನು ಹೊಂದಿರುವುದು ಸಮರ್ಪಕವಾದ ಹಕ್ಕನ್ನು ಒಳಗೊಳ್ಳುತ್ತದೆ.

ಪ್ರಶ್ನೆ: ೬ ತಿಂಗಳು ಕಳೆದುಹೋಗಿದ್ದು, ೯ನೆಯ ಕಲಮಿನಂತೆ ಮೊಕದ್ದಮೆ ಹೂಡಲು ಸಾಧ್ಯವಿಲ್ಲದಾಗ, ಸ್ವಾಧೀನತೆ ಕಳೆದುಕೊಂಡವನು ಹಿಂದೆ ಅದನ್ನು ಹೊಂದಿದ್ದುದರ ಪರಿಣಾಮ ಏನಾಗುತ್ತದೆ?

ಈ ಕೆಳಗಿನ ಸಲಹೆಗಳು ನ್ಯಾಯಿಕವಾಗಿಯೇ ಸ್ಥಾಪಿತವಾಗಿವೆ–

(i) ಅರವತ್ತು ವರ್ಷ ಮತ್ತು ಹೆಚ್ಚು ವರ್ಷಗಳ ಕಾಲ ಒಂದು ಆಸ್ತಿಯನ್ನು ಸ್ವಾಧೀನದಲ್ಲಿಟ್ಟು ಕೊಂಡಿದ್ದರೆ, ವ್ಯಕ್ತಿಗೆ ಹಕ್ಕನ್ನು ನೀಡಲು ಅದು ಸಾಕು. ಯಾರೂ ಅದನ್ನು ಪ್ರಶ್ನಿಸುವಂತಿಲ್ಲ. –೮ D.R. ೪೮೬.

(ii) ೧೪೨ನೆಯ ಪ್ರಕರಣದ ೧೨ ವರ್ಷಕಾಲ ವಿರುದ್ಧ ಸ್ವಾಧೀನತೆ ಹೊಂದಿದ್ದರೆ ಅದಷ್ಟೇ, ನ್ಯಾಯಯುತ ಒಡೆಯನ ವಿರುದ್ಧವಾಗಿ ಕೂಡ ಹಕ್ಕಾಗುತ್ತದೆ. ಇದರ ಪರಿಣಾಮವಾಗಿ ಸ್ವಾಧೀನತೆಗಾಗಿ ಕೂಡ ಹಕ್ಕಾಗುತ್ತದೆ.


ಇದರ ಪರಿಣಾಮವಾಗಿ ಸ್ವಾಧೀನತೆಗಾಗಿ ಹೂಡಿದ ಮೊಕದ್ದಮೆಯೊಂದರಲ್ಲಿ ನಿರ್ದಿಷ್ಟ ಸೀಮಿತ ಅವಧಿಯಲ್ಲಿ ವಿರೋಧಿ ಸ್ವಾಧೀನತೆ ಪಡೆದಿದ್ದರೆ, ಅದನ್ನು ಪ್ರತಿವಾದಿಯು ಸಾಬೀತುಪಡಿಸಿದರೆ, ಸೀಮಿತತೆಯ ಪ್ರಶ್ನೆಯು ಹಕ್ಕಿನ ಪ್ರಶ್ನೆಯಾಗುತ್ತದೆ. ಆಗ ವಾದಿಯು ಮೊಕದ್ದಮೆಯ ತಾರೀಕಿನಲ್ಲಿ ತನಗೆ ಹಕ್ಕಿತ್ತು ಎಂಬುದನ್ನು ಪ್ರತಿವಾದಿಯ ಸಮ್ಮುಖದಲ್ಲಿ ಸಾಕ್ಷ್ಯಾಧಾರದ ಸಮೇತ ಸ್ಥಾಪಿಸಲಾಗುತ್ತದೆ.

(iii) ಅದೆಷ್ಟೇ ಅಲ್ಪಕಾಲಿಕವಾಗಿದ್ದರೂ ಮುಂಚಿನ ಸ್ವಾಧೀನತೆಯಷ್ಟೇ ತಪ್ಪಿತಸ್ಥನ ವಿರುದ್ಧವಾಗಿ ಹಕ್ಕಾಗುತ್ತದೆ. ವಾಸ್ತವವಾಗಿ ಹಕ್ಕು ಕಸಿದುಕೊಂಡಿರುವುದು ಸ್ವಾಧೀನತೆಯನ್ನು ಮರಳಿ ಪಡೆಯಲು ಒತ್ತಾಯಿಸುವುದಕ್ಕೆ ಉತ್ತಮ ಆಧಾರವೇ ಆಗುತ್ತದೆ.

(೧) ಕಸಿದುಕೊಂಡವನು ತನ್ನ ಹಕ್ಕನ್ನು ಸಮರ್ಥಿಸಲಾಗದಿದ್ದರೆ,

(೨) ಉಭಯ ಪಕ್ಷಗಳೂ ಹಕ್ಕನ್ನು ಸಮರ್ಥಿಸದೆ ಹೋದರೆ,

**ಸ್ಥಿತಿಯ ತಃಖ್ತೆ**




**I. ಆರು ತಿಂಗಳ ಒಳಗಾಗಿ ಮೊಕದ್ದಮೆ ಹೂಡಲಾಗಿದೆ.**

(ಎ) ಮತ್ತು ('ಎ') ೯ನೆಯ ಭಾಗದ ಪ್ರಕಾರ ಎಯು
(ಬಿ) ಮತ್ತು ('ಬಿ') ಹಕ್ಕಿದೆಯೋ ಇಲ್ಲವೊ ಎಂಬ
(ಬಿ) ಮತ್ತು ('ಎ') ವಿವಕ್ಷೆಯಿಲ್ಲದೆ ಸ್ವಾಧೀನತೆ ಗಳಿಸಿಕೊಳ್ಳಬಹುದು.

**II.ಆರು ತಿಂಗಳ ನಂತರ ಮೊಕದ್ದಮೆ ಹಾಕಿದಾಗ–**

(ಎ) ಮತ್ತು ('ಎ') 'ಎ' ಗೆ ಹಕ್ಕಿರುವುದರಿಂದ ಸ್ವಾಧೀನತೆ ಪಡೆಯುವುದು
(ಬಿ) ಮತ್ತು ('ಬಿ') 'ಎ' ಪಡೆಯಲಾರನು, ಏಕೆಂದರೆ ಹಕ್ಕು 'ಬಿ' ಗಿದೆ.
(ಬಿ) ಮತ್ತು ('ಎ') 'ಎ' ಹಿಂದಿನ ಸ್ವಾಧೀನತೆಯಿಂದಾಗಿ ಪಡೆದುಕೊಳ್ಳಬಹುದು.

**ಸ್ವಾಧೀನತೆಗೆ ಅರ್ಹತೆ**

ಸ್ವಾಧೀನತೆಗೆ ಅರ್ಹತೆಯು

(i) ಒಡೆತನದ ಭಾಗವಾಗಿ ಅಥವಾ
(ii) ಒಡೆತನಗಳ ಸಂಬಂಧಪಡದೆ ಸ್ವತಂತ್ರವಾಗಿ, ತಾತ್ಕಾಲಿಕ ಅಥವಾ ವಿಶೇಷ ಹಕ್ಕಾಗಿ ಇರಬಹುದು.

ಈ ವಿಶೇಷ ಹಕ್ಕುಗಳು–

(i) ಒಡೆಯನು ಕೈಗೊಳ್ಳುವ ಕ್ರಮದಿಂದ ಹುಟ್ಟಬಹುದು, ಇಲ್ಲವೆ
(ii) ಒಡೆಯನು ಕೈಗೊಂಡ ಕ್ರಮವಲ್ಲದ ಬೇರೆ ವಿಧಾನದಿಂದ ಹುಟ್ಟಬಹುದು.

**I ಒಡೆಯನ ಕೃತ್ಯದಿಂದ–**

(೧) ಜಾಮೀನುದಾರಿಕೆ (ಬೇಲ್‌ಮೆಂಟ್)
(೨) ಉದ್ದೇಶಯುತ ಸ್ವಾಧೀನತೆ (ಲೀಸ್)

ಬೇಲ್‌ಮೆಂಟ್ (೧) ಸರಳ, (೨) ವಿಶೇಷ ಎಂದು ಎರಡು ವಿಧ.

(೧) ಸರಳ ಜಾಮೀನುದಾರಿಕೆಯು ಸಾಲ, ನ್ಯಾಸ, ಒಯ್ಯುವಿಕೆ ಮತ್ತು ಏಜೆನ್ಸಿ.

ಸರಳ ಬೇಲ್‌ಮೆಂಟುಗಳಲ್ಲಿ ಜಾಮೀನುದಾರನಿಗೆ ಸ್ವಾಧೀನತೆಯ ಹಕ್ಕಿದೆ, ಜಾಮೀನು ಪಡೆದವನಿಗೆ ನ್ಯಾಯಿಕ ಸ್ವಾಧೀನತೆಯಿದೆ.

ಎ ಜಾಮೀನುದಾರ 'ಬಿ' ಜಾಮೀನು ಪಡೆದವನು ಇಬ್ಬರು 'ಸಿ'ಗೆ ಎದುರಾಗಿ ಸ್ವಾಧೀನತೆಯನ್ನು ಪಡೆಯಬಹುದು. 'ಎ' ಯು 'ಬಿ'ಗೆ ಎದುರಾಗಿ ಸ್ವಾಧೀನತೆ ಗಳಿಸಬಹುದು.

(೨) ವಿಶೇಷ ಬೇಲ್‌ಮೆಂಟು – ಗಿರವಿ ಮತ್ತು ಬಾಡಿಗೆ.

ಜಾಮೀನುದಾರಿಕೆಯ ಅವಧಿಯಲ್ಲಿ ಜಾಮೀನುದಾರನಿಗೆ ಸ್ವಾಧೀನತೆಯ ಹಕ್ಕಿರುವುದಿಲ್ಲ; ಸ್ವಾಧೀನತೆಯನ್ನು ಅವನು ಮತ್ತೆ ಗಳಿಸಬಹುದು ಅಷ್ಟೆ.

ಲೀಸ್, ಧಾರಣಾಧಿಕಾರವು ಸಾಲದಿಂದಾಗಿ ಹುಟ್ಟುತ್ತದೆ. ಮಾರಿದವನು ಮಾರಿದ ವಸ್ತುವಿನ ಸ್ವಾಧೀನತೆಯ ಹಕ್ಕನ್ನು ಹೊಂದಿರುತ್ತಾನೆ, ಕೊಂಡವನು ಮಾರಾಟದ ಹಣವನ್ನು ಪಾವತಿ ಮಾಡುವವರೆಗೂ.

**II ಒಡೆಯನ ಕೃತ್ಯವಲ್ಲದ ವಿಧಾನದಿಂದ ಸ್ವಾಧೀನತೆಯ ಹಕ್ಕು**

ಕಳೆದುಹೋದ ವಸ್ತುಗಳನ್ನು ಕಂಡುಹಿಡಿಯುವವನು ಒಡೆಯನ ಹೊರತು, ಇಡಿ ಜಗತ್ತಿಗೇ ಎದುರಾಗಿ ಸ್ವಾಧೀನತೆಗೆ ಅರ್ಹತೆ ಪಡೆದಿರುತ್ತಾನೆ.

## ಭಾಗ – ೨

## ವಿಭಾಗ – ಎರಡು

# ಒಪ್ಪಂದದ ಪಾಲನೆ

ಒಂದು ಒಪ್ಪಂದದ ನಿರ್ದಿಷ್ಟ ಪಾಲನೆಯು ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಒಂದು ಕೆಲಸವನ್ನು ನಿರ್ವಹಿಸುವುದು. ಕರಾರನ್ನು ನಿರ್ವಹಿಸದೆ ಉಂಟಾದ ನಷ್ಟ ಭರ್ತಿ ಅಥವಾ ಪರಿಹಾರಗಳಿಗೆ ವಿರುದ್ಧವಾದುದು.

ಅದು ನಿರ್ದಿಷ್ಟ ಪರಿಹಾರದ ಒಂದು ರೂಪ. ಕರಾರುದಾರನಾಗಿ ಒಬ್ಬ ವ್ಯಕ್ತಿಯು ನಿರ್ವಹಿಸಬೇಕಾದ ಕೃತ್ಯವನ್ನು ನಿರ್ವಹಿಸಲೇಬೇಕೆಂದು ಆದೇಶಿಸುವುದು.

**ಒಂದು ಒಪ್ಪಂದದ ನಿರ್ದಿಷ್ಟ ಪಾಲನೆ**

೧೨ ಮತ್ತು ೨೧ನೆಯ ಕಲಮುಗಳು ಒಂದು ಒಪ್ಪಂದದ ನಿರ್ದಿಷ್ಟ ಪಾಲನೆಯನ್ನು ಕುರಿತಾಗಿದೆ.

ಕಲಮು ೨೧: ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದಂತಹ ಒಪ್ಪಂದಗಳನ್ನು ಕುರಿತಾಗಿದೆ.

ಕಲಮು ೧೨: ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಾಗಬಹುದಾದ ಒಪ್ಪಂದಗಳನ್ನು ಕುರಿತಿದೆ.

ಕಲಮು ೨೧: ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದಂತಹ ಎಂಟು ಬಗೆಯ ಒಪ್ಪಂದಗಳಿವೆ:

(i) ಒಪ್ಪಂದಗಳನ್ನು ಕಾರ್ಯಗತಗೊಳಿಸದೆ ಹೋದುದಕ್ಕೆ ಹಣದ ರೂಪದ ಪರಿಹಾರವು ಸಾಕಷ್ಟು ಮಟ್ಟಿನ ಪರಿಹಾರವಾಗುವ ಸಂದರ್ಭಗಳು.

(ii) ೧. ಅತಿ ಸೂಕ್ಷ್ಮ ವಿವರಗಳನ್ನು ಒಳಗೊಳ್ಳುವ ಒಪ್ಪಂದಗಳು

೨. ಸಂಬಂಧಿತರ ವೈಯಕ್ತಿಕ ಅರ್ಹತೆಗಳನ್ನೋ ಅನರ್ಹತೆಗಳನ್ನೋ ಅವಲಂಬಿಸಿದ ಒಪ್ಪಂದಗಳು.

೩. ಭೌತಿಕ ಷರತ್ತುಗಳನ್ನು ನ್ಯಾಯಾಲಯವು ನಿರ್ದಿಷ್ಟ ನಿರ್ವಹಣೆಯಾಗಬೇಕೆಂದು ಬಲಾತ್ಕರಿಸಲು ಸಾಧ್ಯವಿಲ್ಲದಂತಹ ಒಪ್ಪಂದಗಳು.

(iii) ನ್ಯಾಯಾಲಯವು ಷರತ್ತುಗಳನ್ನು ಖಚಿತವಾಗಿ ಗುರುತಿಸಲು ಸಾಧ್ಯವಾಗದಂತಹ ಒಪ್ಪಂದಗಳು.

(iv) ಸ್ವರೂಪದಿಂದಲೇ ರದ್ದುಪಡಿಸಬಹುದಾದಂತಹ ಕರಾರುಗಳು– ಉದಾ: ಕಾಲಾವಧಿಯಿಲ್ಲದ ಪಾಲುದಾರಿಕೆ.

(v) ತಮ್ಮ ಅಧಿಕಾರವನ್ನು ಮೀರಿ, ತಮ್ಮಲ್ಲಿನ ವಿಶ್ವಸ್ಥತೆಯನ್ನು ಉಲ್ಲಂಘಿಸಿ ಟ್ರಸ್ಟಿಗಳು ಮಾಡಿಕೊಳ್ಳುವ ಒಪ್ಪಂದಗಳು.

(vi) ಕಂಪೆನಿಯು ತನಗಿರುವ ಅಧಿಕಾರವನ್ನು ಮೀರಿ ಮಾಡಿಕೊಳ್ಳುವ ಒಪ್ಪಂದಗಳು.

(vii) ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದವರೆಗೆ ಒಂದೇ ಸಮನಾಗಿ ಕಾರ್ಯನಿರ್ವಹಣೆಯನ್ನು ಒಳಗೊಳ್ಳುವ ಒಪ್ಪಂದಗಳು.

(viii) ಎರಡು ಪಕ್ಷಗಳೂ ಒಪ್ಪಂದದ ಮೂಲವಸ್ತುವಿನಲ್ಲಿದೆಯೆಂದು ಭಾವಿಸಿರುವ ಭಾಗವು ಇಲ್ಲದೆ ಹೋದಾಗಿನ ಕರಾರುಗಳು.

(ix) ವಿವಾದವನ್ನು ಪಂಚಾಯಿತಿಗೆ ಒಪ್ಪಿಸುವ ಒಪ್ಪಂದಗಳು.

**ಟಿಪ್ಪಣಿ:** ವಸ್ತುತಃ ನಿರ್ದಿಷ್ಟ ನಿರ್ವಹಣೆ– ಏಕೆಂದರೆ ಮೊಕದ್ದಮೆ ಹೂಡುವ ಹಕ್ಕನ್ನು ನೀಡಿಲ್ಲ.

## ಕರಾರುಗಳ ನಿರ್ದಿಷ್ಟ ನಿರ್ವಹಣೆ

**ಕಲಮು ೧೨**

ನಿರ್ದಿಷ್ಟ ನಿರ್ವಹಣೆಯನ್ನು ಜಾರಿಗೊಳಿಸಬಹುದಾದ ನಾಲ್ಕು ಸಂದರ್ಭಗಳಿವೆ.

(i) ಮಾತು ಕೊಟ್ಟಿರುವ ಕೆಲಸವು ಒಂದು ಟ್ರಸ್ಟಿನ ನಿರ್ವಹಣೆಯಲ್ಲಿರುವಾಗ.

(ii) ವಾಸ್ತವವಾಗಿ ಆಗಿರುವ ಹಾನಿಯನ್ನು ಸ್ಥಿರಪಡಿಸಿಕೊಳ್ಳಲು ಯಾವ ಪ್ರಮಾಣವೂ ಇಲ್ಲದಲ್ಲಿ.

(iii) ನಷ್ಟಭರ್ತಿಯು ಸಾಕಷ್ಟು ಪರಿಹಾರವಲ್ಲದಾಗ.

(iv) ನಿರ್ವಹಿಸದಿರುವುದಕ್ಕೆ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ.

**ಕರಾರು**

ಒಂದು ಕರಾರಿನ ನಿರ್ದಿಷ್ಟ ನಿರ್ವಹಣೆಗಾಗಿ ಮೊಕದ್ದಮೆ ಹೂಡಿದಾಗ ನ್ಯಾಯಾಲಯವು ತೀರ್ಮಾನಿಸಬೇಕಾದ ಮೊದಲನೆಯ ಪ್ರಶ್ನೆ, ವಿವಾದದಲ್ಲಿರುವ ಪ್ರಶ್ನೆಯು ಒಂದು ಕರಾರೇ ಅಲ್ಲವೆ ಎನ್ನುವುದು. ಭಾಗ ೪ (ಎ)– ಒಪ್ಪಂದವು ಒಂದು ಕರಾರು ಆಗಿದ್ದ ಹೊರತು ಪರಿಹಾರದ ಹಕ್ಕು.

ಈ ಕೆಳಗಿನ ಒಪ್ಪಂದಗಳು ಕರಾರುಗಳಲ್ಲ. ಏಕೆಂದರೆ ಅವುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಅವನ್ನು ಹೊರತುಪಡಿಸಲಾಗಿದೆ–

(i) ಅಪೂರ್ಣ ಒಪ್ಪಂದಗಳು– ಎರಡೂ ಪಕ್ಷಗಳು ಮಾತುಕತೆಯ ಹಂತದಿಂದ ಮುಂದಕ್ಕೆ ಹೋಗಿಲ್ಲ.

(ii) ಅನೂರ್ಜಿತವಾದ ಒಪ್ಪಂದಗಳು.

(iii) ಭಾಗಶಃ ಆದ ಒಪ್ಪಂದ– ಸಾಂದರ್ಭಿಕವಾಗಿ "ಹುಟ್ಟುವ"ವರೆಗೆ ಅನೂರ್ಜಿತವಾಗುವ ಕರಾರುಗಳನ್ನು ಹೊರತುಪಡಿಸಿಲ್ಲ.

ನಿರ್ವಹಿಸಿಲ್ಲದ ಒಂದು ಕರಾರು ಸದಾ ನ್ಯಾಯಾಲಯದ ಮುಂದೆ ಇರಬೇಕು.

**ಪಾರಸ್ಪರಿಕತೆ**

ನಿರ್ದಿಷ್ಟ ನಿರ್ವಹಣೆಯ ರೂಪದ ಪರಿಹಾರವು ಪಾರಸ್ಪರಿಕವಾಗಿರುತ್ತದೆ. ಅಂದರೆ, ಮಾರುವವನು ಎಲ್ಲಾ ಸಂದರ್ಭಗಳಲ್ಲೂ ಕ್ರಮ ಕೈಗೊಳ್ಳಬಹುದು, ಆಗ ಕೊಳ್ಳುವವನಿಗೆ ನಿರ್ದಿಷ್ಟ ನಿರ್ವಹಣೆ ಖಚಿತವಾಗಿರಬೇಕು.

ಪಾರಸ್ಪರಿಕತೆ(mutuality)ಯ ಈ ತತ್ವವು ಚರ ಮತ್ತು ಸ್ಥಿರ ಆಸ್ತಿಗಳೆರಡಕ್ಕೂ ಅನ್ವಯಿಸುತ್ತದೆ.

**ಪಾರಸ್ಪರಿಕತೆಯ ಸಿದ್ಧಾಂತ:** ಇದರ ಅರ್ಥ ಹೀಗೆ. ಕರಾರು ಮಾಡಿಕೊಳ್ಳುವಾಗ, ಎರಡೂ ಪಕ್ಷಗಳು ಪರಸ್ಪರ ಕಾರ್ಯಗತಗೊಳಿಸಬೇಕಾದ ಕೆಲವು ಭರವಸೆಗಳು, ಪರಿಗಣನೆಗಳು ಇರಬೇಕು. ಆದ್ದರಿಂದ ಕಾರಣವಿಲ್ಲದೆ ಅನಾವಶ್ಯಕವಾಗಿ ಕೊಟ್ಟ ಭರವಸೆಯನ್ನು ಅಂಗೀಕರಿಸಲಾಗುವುದಿಲ್ಲ. ಹಾಗೆಯೇ ಒಂದು ಶಿಶುವು ಈ ಪರಿಹಾರ ವಿಭಾಗದಿಂದ ಒಂದು ಕರಾರನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಅವನ ಭರವಸೆಯು ಅವನ ಮೇಲೆಯೇ ಜಾರಿಗೊಳಿಸಲು ತಕ್ಕುದಾಗಿರುವುದಿಲ್ಲವಾದ್ದರಿಂದ ಧರ್ಮನ್ಯಾಯದ ನ್ಯಾಯಾಲಯಗಳು ಅನುಸರಿಸುವ ಸಾಮಾನ್ಯ ತತ್ವ ಎಲ್ಲಿ ಪರಿಹಾರವು ಪರಸ್ಪರ ಆಗಿದೆಯೋ ಅಂಥ ಕಡೆ ಮಧ್ಯ ಪ್ರವೇಶ ಮಾಡಬೇಕು ಎಂಬುದು ಧರ್ಮನ್ಯಾಯದ ನ್ಯಾಯಾಲಯಗಳ ತತ್ವ.

**ಕಲಮು ೧೩**

ಕರಾರಿನ ನಿರ್ದಿಷ್ಟ ನಿರ್ವಹಣೆ ಮತ್ತು ನಿರ್ವಹಣೆಯ ಅಸಾಧ್ಯತೆ. ಕರಾರು ಶಾಸನದ ೫೬ನೆಯ ಕಲಮು.

೫೬ನೇ ಕಲಮಿನ ೨ನೆಯ ಉಪಕಲಮು ಒಂದು ಸಾಮಾನ್ಯ ನಿಯಮವನ್ನು ಹೇಳುತ್ತದೆ. ಒಂದು ಕರಾರು ಯಾವಾಗ ಅನೂರ್ಜಿತವಾಗುತ್ತದೆ ಎಂಬುದನ್ನು ಅದು ನಿರೂಪಿಸುತ್ತದೆ.

ಈ ನಿಯಮವು ಅಸಾಧ್ಯತೆಯ ಎಲ್ಲಾ ಆಧಾರಗಳನ್ನು ಒಳಗೊಳ್ಳುತ್ತದೆ. ಎಲ್ಲ ಕರಾರು ಸಂದರ್ಭಗಳಲ್ಲೂ ನಿರ್ವಹಣೆಯು ಸಾಧ್ಯ ಸೂಚಿತವಾದ ಷರತ್ತು ಇದೆ ಎಂಬ ಊಹೆಯ ಮೇಲೆ ನಿಂತಿದೆ.

**ಕರಾರಿಗೆ ಸಂಬಂಧಿಸಿದಂತೆ ಅಸಾಧ್ಯತೆ:**

ಅಸಾಧ್ಯತೆ
(೧) ಆ ಸಮಯದಲ್ಲಿ ಅಥವಾ (೨) ಆಮೇಲೆ

ಭೌತಿಕವಾಗಿ ಅಥವಾ ನ್ಯಾಯಿಕವಾಗಿ ಅಸಾಧ್ಯ | ಕರಾರಿನ ಮುಖ್ಯ ವಿಷಯವೇ ಉಳಿದಿಲ್ಲ

**ಭವಿಷ್ಯದಲ್ಲಿನ ಅಸಾಧ್ಯತೆ**

ಕಂಡುಹಿಡಿದ ನಂತರ ಒಬ್ಬನನ್ನು ಬಿಡುಗಡೆ ಮಾಡಬಹುದೆ? ನಂತರದ ಅಸಾಧ್ಯತೆಯು ಇವುಗಳನ್ನು ಅವಲಂಬಿಸುತ್ತದೆ.

(i) ಕರಾರು ಷರತ್ತಿನೊಂದಿಗಿದೆಯೇ ಬೇಷರತ್ತಾಗಿದೆಯೇ.

(ii) ಬೇಷರತ್ತಾಗಿದ್ದರೆ– ನಿರ್ವಹಿಸಲೇಬೇಕು.

(II) ಷರತ್ತಿನೊಂದಿಗೆ ಇದ್ದರೆ– ಈ ಮೂರು ಸನ್ನಿವೇಶಗಳಲ್ಲಿ

(i) ಮುಂದುವರಿಯುವ ನ್ಯಾಯಿಕತೆ

(ii) ಸ್ಪಷ್ಟವಾಗಿ ಉಕ್ತವಾದ ಷರತ್ತುಗಳೊಂದಿಗೆ

(iii) ಮೂಲವಸ್ತುವಿನ ಮುಂದುವರಿಕೆ ಇದ್ದರೆ ಕರಾರು ಶಾಸನದ ೫೬ನೇ ಭಾಗ– ಮುಂದೆ ಸಾಧ್ಯತೆ– ಕರಾರು ಅನೂರ್ಜಿತ.

ಸಾಧ್ಯವಾಗಬಹುದಾದ್ದು ಎರಡು ಸಂದರ್ಭಗಳಲ್ಲಿ–

(i) ಒಪ್ಪಿಕೊಂಡಿರುವ ವಿಚಾರವು ಭೌತಿಕವಾಗಿಯಾಗಲೀ, ನ್ಯಾಯಿಕವಾಗಿಯಾಗಲೀ ಅಸಾಧ್ಯವಾಗಿದ್ದರೆ,

(ii) ಕರಾರಿನ ಮುಖ್ಯ ವಸ್ತುವು ಈಗ ಅಸ್ತಿತ್ವದಲ್ಲಿ ಇಲ್ಲದೆ ಹೋದರೆ, ಅಂತಹ ಅಸಾಧ್ಯತೆಯೂ ಎರಡು ರೂಪದ್ದಾಗಬಹುದು–

ಪ್ರಾರಂಭಿಕ ಅಥವಾ ಆಮೇಲಿನದು.

ಅಸಾಧ್ಯವಾಗಿದ್ದರೆ ಕರಾರು ಅನೂರ್ಜಿತವಾಗುತ್ತದೆ. ಅಸಾಧ್ಯತೆಯು ಪ್ರಾರಂಭಿಕವೋ ಆಮೇಲಿನದೋ ಎಂಬ ವಿವರವಿಲ್ಲದೆ ನಿರ್ದಿಷ್ಟ ಪರಿಹಾರದ ಪ್ರಶ್ನೆಯೇ ಏಳುವುದಿಲ್ಲ.

ನಿರ್ದಿಷ್ಟ ಪರಿಹಾರ ಶಾಸನದ ೧೩ನೆಯ ಭಾಗವು ಕರಾರು ಶಾಸನದ ೫೬ನೆಯ ಭಾಗಕ್ಕೆ ಒಂದು ಅಪವಾದವನ್ನು ಹೇಳುತ್ತದೆ. ಇದು ಒಂದು ಬಗೆಯ ಅಸಾಧ್ಯತೆಗೆ, ವಸ್ತು–ವಿಷಯದ ಅನಸ್ತಿತ್ವದ ಕಾರಣದಿಂದ ಅಸಾಧ್ಯವಾಗುವುದಕ್ಕೆ ಅನ್ವಯಿಸುತ್ತದೆ.

೧೩ನೆಯ ಕಲಮು ಒಂದು ಅಪವಾದವನ್ನು ಹೇಳುತ್ತದೆ–

ವಿಷಯವಸ್ತುವು ಭಾಗಶಃ ಅಸ್ತಿತ್ವದಲ್ಲಿರದ ಸಂದರ್ಭವನ್ನು ಕುರಿತು ಅದು ವ್ಯವಹರಿಸುತ್ತದೆ.

ನಿಯಮವು ಸಂಕ್ಷೇಪವಾಗಿ ಹೇಳಿತು–

> 'ಎ'ಯು ವಿಶೇಷವಾದ ಮತ್ತು ಅನಿವಾರ್ಯವಾದ ಸನ್ನಿವೇಶಗಳಿಂದಾಗಿ ತಾನು ಕೊಟ್ಟ ಮಾತನ್ನು ನೆರವೇರಿಸಲು ಅಸಮರ್ಥನಾದರೂ 'ಬಿ'ಯು ತನ್ನ ಮಾತಿನಂತೆ ನಿರ್ವಹಿಸದಿರಲು ಅದು ಕಾರಣವಲ್ಲ, ತನ್ನ ಕರ್ತವ್ಯ ನಿರ್ವಹಣೆಯನ್ನು 'ಎ'ಯ ಕರ್ತವ್ಯ ನಿರ್ವಹಣೆಯ ಮೇಲೆ ಆಧರಿಸಿ ರಕ್ಷಣೆ ಪಡೆದುಕೊಳ್ಳಬಹುದಾದ ಸಾಧ್ಯತೆ ಇರುವುದರಿಂದ ಈ ನಿಯಮ ಬೇಷರತ್ತಾದ ಭರವಸೆ ಕೊಟ್ಟ ಮೇಲೆ ಅವನು ಅದರಂತೆ ನಡೆದುಕೊಳ್ಳಲೇಬೇಕು.

## ಕರಾರಿನ ಒಂದು ಭಾಗದ ನಿರ್ದಿಷ್ಟ ಪಾಲನೆ

ನ್ಯಾಯಾಲಯವು ಒಪ್ಪಂದದ ಒಂದು ಭಾಗದ ನಿರ್ವಹಣೆಯನ್ನು ಆದೇಶಿಸಬಹುದೇ?

ಈ ಪ್ರಶ್ನೆಯನ್ನು ೧೪–೧೭ ಕಲಮುಗಳಲ್ಲಿ ಪರಿಶೀಲಿಸಲಾಗಿದೆ.

೧೭ನೆಯ ಕಲಮು ಒಂದು ಸಾಮಾನ್ಯ ನಿಯಮವನ್ನು ಹೇಳುತ್ತದೆ. ನ್ಯಾಯಾಲಯವು ಸಾಮಾನ್ಯವಾಗಿ, ಇಡೀ ಕರಾರನ್ನು ನಿರ್ವಹಿಸಲು ಸಾಧ್ಯವಾದ ಹೊರತು ಒಂದು ಕರಾರಿನ ನಿರ್ದಿಷ್ಟ ನಿರ್ವಹಣೆಯನ್ನು ಆದೇಶಿಸುವುದಿಲ್ಲ. ನಿರ್ದಿಷ್ಟ ನಿರ್ವಹಣೆ ಇಡಿಯಾಗಿರಬೇಕು, ಇಲ್ಲವೆ ಏನೂ ಇಲ್ಲ.

೧೪, ೧೫, ೧೬ನೆಯ ಕಲಮುಗಳು ನಿಯಮಕ್ಕೆ ಅಪವಾದಗಳನ್ನು ಹೇಳುತ್ತವೆ.

ಕೊಟ್ಟ ಮಾತುಗಳು – ಒಡೆಯಬಹುದಾದವು ಇಲ್ಲವೆ ಅಖಂಡವಾಗಿದ್ದು ಒಡೆಯಲಾರದಂಥವು.

I. ವಿಭಜಿಸಬಹುದಾದ ಭರವಸೆಗಳು– ಒಂದು ಭಾಗವು ಮತ್ತೊಂದರಿಂದ ಪ್ರತ್ಯೇಕವಾಗಿ ಸ್ವತಂತ್ರ

ಆಧಾರದ ಮೇಲೆ ನಿಲ್ಲುತ್ತದೆ. ಎರಡನೆಯದನ್ನು ನಿರ್ದಿಷ್ಟವಾಗಿ ನಿರ್ವಹಿಸಲು ಸಾಧ್ಯವಿಲ್ಲವಾದರೂ, ಸಾಧ್ಯವಾಗಬಹುದಾದರೂ ಮೊದಲನೆಯದನ್ನು ನಿರ್ದಿಷ್ಟವಾಗಿ ನಿರ್ವಹಿಸಲು ಸಾಧ್ಯವಿದ್ದರೆ, ನಿರ್ವಹಿಸಿದರೆ ಅದನ್ನು ಜಾರಿಗೊಳಿಸಬಹುದು– ೧೬ನೆಯ ಕಲಮು.

II. ವಿಭಜಿಸಲಾಗದ ಭರವಸೆಗಳು– ನಿರ್ವಹಿಸಲು ಸಾಧ್ಯವಿಲ್ಲದ ಭಾಗವು

(i) ಹಣದ ರೂಪದಲ್ಲಿ ಪರಿಹಾರವನ್ನು ಒಪ್ಪಿಕೊಳ್ಳಬಹುದು;

(ii) ಒಪ್ಪದೆ ಇರಬಹುದು.

(ಎ) ಪರಿಹಾರವನ್ನು ಒಪ್ಪುವುದು– ಎರಡು ಸಂದರ್ಭಗಳು.

(i) ಇಡೀ ವ್ಯವಹಾರದ ಒಂದು ಸಣ್ಣ ಭಾಗ

(ii) ಇಡೀ ವ್ಯವಹಾರದ ದೊಡ್ಡ ಭಾಗ

ಅದು– (i) ಸಣ್ಣ ಭಾಗವಾಗಿದ್ದ ಪಕ್ಷದಲ್ಲಿ ಒಬ್ಬನು ನಿರ್ದಿಷ್ಟ ನಿರ್ವಹಣೆಗಾಗಿ ಮೊಕದ್ದಮೆ ಹಾಕಿ ಯಾವುದೇ ಭಾಗದ ನಿರ್ವಹಣೆಯನ್ನು, ನಿರ್ವಹಿಸಲಾಗದ ಇನ್ನೊಂದು ಭಾಗಕ್ಕಾಗಿ ನಷ್ಟ ಪರಿಹಾರವನ್ನೂ ಕೋರಬಹುದು– ೧೪ನೆಯ ಕಲಮು.

ಅದು– (ii) ದೊಡ್ಡ ಭಾಗವಾಗಿದ್ದರೆ ಉಳಿಕೆ ಭಾಗದ ನಿರ್ದಿಷ್ಟ ನಿರ್ವಹಣೆಗಾಗಿ, ಮುಂದಿನ ನಿರ್ವಹಣೆಯ ಬೇಡಿಕೆಯನ್ನೂ ನಷ್ಟಪರಿಹಾರಕ್ಕೆ ಇರುವ ಹಕ್ಕನ್ನೂ ತೊರೆಯುವುದಾದರೆ, ಮೊಕದ್ದಮೆ ಹೂಡಬಹುದು.

(ಬಿ) ನಿರ್ವಹಿಸಲು ಸಾಧ್ಯವಿಲ್ಲದ ಭಾಗವು ಪರಿಹಾರವನ್ನು ಅನುಮತಿಸುವುದಿಲ್ಲ.

ಆಗ ಮಾತು ಕೊಟ್ಟವನು ಉಳಿಕೆ ಭಾಗದ ನಿರ್ದಿಷ್ಟ ನಿರ್ವಹಣೆಗಾಗಿ ಮೊಕದ್ದಮೆ ಹಾಕಬಹುದು– ಅವನು ಮಿಕ್ಕ ನಿರ್ವಹಣೆಗಾಗಿ ಹಾಗೂ ನಷ್ಟಪರಿಹಾರದ ಹಕ್ಕಿಗಾಗಿ ಕೇಳದೆ ಹೋದರೆ– ಕಲಮು ೧೫.

**ನಿದರ್ಶನ:**

'ಎ'ಯು ಒಂದು ಮನೆ ಮತ್ತು ತೋಟ ಕೂಡಿರುವ ಆಸ್ತಿಯನ್ನು 'ಬಿ'ಗೆ ಒಂದು ಲಕ್ಷ ರೂಪಾಯಿಗೆ ಮಾರಲು ಕರಾರು ಮಾಡಿಕೊಳ್ಳುತ್ತಾನೆ. ಮನೆಯನ್ನು ಅನುಭೋಗಿಸಬೇಕಾದರೆ ತೋಟವು ತುಂಬಾ ಮುಖ್ಯವಾಗಿದೆ. ಆದರೆ 'ಎ'ಯು ತೋಟವನ್ನು ವಹಿಸಿಕೊಡುವುದು ಸಾಧ್ಯವಿಲ್ಲವೆಂದು ಆಮೇಲೆ ವ್ಯಕ್ತವಾಗುತ್ತದೆ.

ಈಗ 'ಬಿ'ಯು ಕರಾರಿನ ನಿರ್ದಿಷ್ಟ ನಿರ್ವಹಣೆಯನ್ನು ಒತ್ತಾಯಿಸಿ ಪಡೆಯಬಹುದೇ? ಹೌದು. 'ಬಿ'ಯು ಒಪ್ಪಿತವಾಗಿರುವ ಬೆಲೆ ಕೊಟ್ಟು, ತೋಟವಿಲ್ಲದೆ ಮನೆ ಮತ್ತು ಎಸ್ಟೇಟನ್ನು ಸ್ವೀಕರಿಸಲು, 'ಎ'ಯ ಅಲಕ್ಷ್ಯ ಅಥವಾ ತಪ್ಪಿನಿಂದಾಗಿ ಆದ ನಷ್ಟಕ್ಕೆ ಪರಿಹಾರವನ್ನು ಕೇಳುವ ಹಕ್ಕನ್ನು ತ್ಯಾಗ ಮಾಡುವುದಾದರೆ ಆಗಬಹುದು.

ಹೀಗಾಗಿ ನಿಯಮಕ್ಕೆ ನಾಲ್ಕು ಅಪವಾದಗಳಿವೆ.

(೧) ಭಾಗಗಳನ್ನು ಒಡೆಯಲು ಸಾಧ್ಯವಿರುವಾಗ– ಎಲ್ಲಾ ಭಾಗಗಳನ್ನಲ್ಲವಾದರೂ ಒಂದು ಭಾಗದ ನಿರ್ದಿಷ್ಟ ನಿರ್ವಹಣೆಯನ್ನು ಆದೇಶಿಸಬಹುದು– ಕಲಮು ೧೬.

(೨) ಭಾಗಗಳನ್ನು ಒಡೆಯಲು ಸಾಧ್ಯವಿಲ್ಲದಾಗ– ನಿರ್ವಹಿಸಲು ಸಾಧ್ಯವಿಲ್ಲದ ಭಾಗವು ನಷ್ಟ ಪರಿಹಾರ ತಡೆಯಲು ಅರ್ಹವಾಗುತ್ತದೆ. ಇಡಿಯ ಒಂದು ಸಣ್ಣ ಭಾಗವಾಗುತ್ತದೆ. ವ್ಯಕ್ತಿಯು ಅದರ ನಿರ್ದಿಷ್ಟ ನಿರ್ವಹಣೆಗಾಗಿ ಮೊಕದ್ದಮೆ ಹಾಕಬಹುದು– ಕಲಮು ೧೪.

(೩) ಭಾಗಗಳು ಅವಿಭಾಜ್ಯವಾಗಿದ್ದಾಗ, ನಿರ್ವಹಿಸಲು ಸಾಧ್ಯವಿಲ್ಲದ ಭಾಗವು ನಷ್ಟಪರಿಹಾರಕ್ಕೆ

ಯೋಗ್ಯವಾಗುತ್ತದೆ. ಇಡಿ ವ್ಯವಹಾರದ ದೊಡ್ಡ ಭಾಗವಾಗಿರುತ್ತದೆ. ವ್ಯಕ್ತಿಯು ಉಳಿದ ಭಾಗದ, ನಿರ್ವಹಿಸಲು ಸಾಧ್ಯವಿರುವ ಭಾಗದ ನಿರ್ದಿಷ್ಟ ನಿರ್ವಹಣೆಗಾಗಿ, ಮುಂದಿನ ನಿರ್ವಹಣೆಯನ್ನು ಕೋರದಿದ್ದರೆ, ನಷ್ಟಭರ್ತಿಗೆ ಇರುವ ಹಕ್ಕನ್ನು ತೊರೆಯುವುದಾದರೆ, ಮೊಕದ್ದಮೆ ಹಾಕಬಹುದು– ಕಲಮು ೧೫.

(೪) ಭಾಗಗಳು ಅವಿಭಾಜ್ಯವಾಗಿದ್ದಾಗ, ನಿರ್ವಹಿಸಲು ಸಾಧ್ಯವಾಗದ ಭಾಗವು ಪರಿಹಾರಕ್ಕೆ ಯೋಗ್ಯವಾಗುವುದಿಲ್ಲ. ಅದು ದೊಡ್ಡ ಭಾಗವಾಗಿದ್ದು, ನಿರ್ದಿಷ್ಟ ನಿರ್ವಹಣೆಗೆ ಯೋಗ್ಯವಾಗಿರುತ್ತದೆ. ೧೫ನೆಯ ಕಲಮಿನಲ್ಲಿ ಸೂಚಿಸಿದ ಷರತ್ತುಗಳಿಗನುಗುಣವಾಗಿ ಅದರ ಬಗೆಗೆ ಆದೇಶಿಸಬಹುದು.

## ಒಂದು ಕರಾರಿನ ನಿರ್ದಿಷ್ಟ ನಿರ್ವಹಣೆ

ಮಾರುವವನು ಅಥವಾ ಭೋಗ್ಯದಾರನು ಆಸ್ತಿಯ ಮೇಲೆ ಅಸಮರ್ಪಕವಾದ ಹಕ್ಕು ಹೊಂದಿದ್ದರೆ–

೧. ಇದಕ್ಕೆ ಸಂಬಂಧಿಸಿದ ನಿಯಮವು ೧೮ನೆಯ ಕಲಮಿನಲ್ಲಿದೆ. ಈ ವಿಭಾಗವು ನಾಲ್ಕು ಉಪನಿಯಮಗಳನ್ನು ಒಳಗೊಂಡಿದೆ–

(i) ಕ್ರಯದಾರ/ಭೋಗ್ಯದಾರನು ಒಪ್ಪಂದವಾದ ನಂತರ ಸರಿಯಾದ ಹಕ್ಕು ಪಡೆದಿದ್ದರೆ,

(ii) ಇತರ ವ್ಯಕ್ತಿಗಳ ಸಮ್ಮತಿಯನ್ನು ಪಡೆಯುವುದು ಅಗತ್ಯವಾಗಿದ್ದರೆ,

(iii) ತಡೆಯಿರುವ ಸೊತ್ತನ್ನು ಯಾವುದೇ ತಡೆಯಿಲ್ಲವೆಂಬಂತೆ ಮಾರಾಟ ಮಾಡಿದ್ದರೆ,

(iv) ಠೇವಣಿಯನ್ನು ಕಟ್ಟಿದ್ದು, ನಿರ್ದಿಷ್ಟ ನಿರ್ವಹಣೆಗಾಗಿನ ಮೊಕದ್ದಮೆಯು ವಜಾ ಆಗಿದ್ದರೆ.

**ಮೊದಲನೆಯ ಉಪನಿಯಮ–** ಒಬ್ಬ ವ್ಯಕ್ತಿಯು ಕರಾರನ್ನು ನಿರ್ವಹಿಸುವ ಸಾಮರ್ಥ್ಯವಿಲ್ಲದೆ ಒಪ್ಪಂದ ಮಾಡಿಕೊಂಡಿದ್ದರೆ, ಮುಂದೆ ಆ ಕಾರ್ಯ ನಿರ್ವಹಣೆಯ ಅಧಿಕಾರವನ್ನು ಪಡೆದರೆ ಅವನು ಅದನ್ನು ನಿರ್ವಹಿಸಲೇಬೇಕು.

**ನಿದರ್ಶನ:** ವಾರಸುದಾರನು ತಾನು ಯಾವುದಕ್ಕೆ ವಾರಸಾಗಿದ್ದಾನೆಯೋ ಆ ಆಸ್ತಿಯನ್ನು ಮಾರುವುದಾಗಿ ಕರಾರು ಮಾಡಿಕೊಂಡರೆ, ಅವನು ಆಸ್ತಿಗೆ ಒಡೆಯನಾದ ಮೇಲೆ ಆ ನಿರ್ದಿಷ್ಟ ನಿರ್ವಹಣೆಯನ್ನು ಕಡ್ಡಾಯವಾಗಿ ನೆರವೇರಿಸಲೇಬೇಕು.

ಕರಾರು ಮಾಡಿಕೊಂಡ ನಂತರ ಕ್ರಯದಾರನಿಗೆ ಆ ಆಸ್ತಿಯಿಂದ ಏನೇನು ಬಡ್ಡಿ ಬರುತ್ತದೋ ಅದೆಲ್ಲವನ್ನು ಕೊಂಡವನಿಗೆ ವಹಿಸಿಕೊಡಬೇಕೆಂದು ಒತ್ತಾಯಪಡಿಸಬಹುದು.

**ಎರಡನೆಯ ಉಪನಿಯಮ–** ಕರಾರಿಗೆ ಹೊಸದಾಗಿರುವ ವ್ಯಕ್ತಿಯ ಸಮ್ಮತಿಯ ಮೇಲೆ ಕರಾರಿನ ಸಿಂಧುತ್ವವು ನಿಲ್ಲುವುದಾದ ಪಕ್ಷದಲ್ಲಿ, ಕ್ರಯದಾರ ಅಥವಾ ಭೋಗ್ಯದಾರನ ಕೋರಿಕೆಯ ಮೇಲೆ ಅವನು ಕರಾರನ್ನು ನೆರವೇರಿಸಲೇಬೇಕಾಗುತ್ತದೆ. ಕೊಂಡವನು ಅಥವಾ ಭೋಗ್ಯ ಪಡೆದವನು ಹಾಗೆ ಸಮ್ಮತಿ ನೀಡಲು ಅವನನ್ನು ಬಲಾತ್ಕರಿಸಬಹುದು.

**ಮೂರನೆಯ ಉಪನಿಯಮ:** ಮಾರಿದ ಅಥವಾ ಭೋಗ್ಯ ಮಾಡಿದ ಆಸ್ತಿಯು, ತಡೆಯುಳ್ಳದ್ದಾಗಿದ್ದರೂ ತಡೆಯಿಲ್ಲವೆಂಬಂತೆ ತೋರಿಸಿದ್ದರೆ, ಕ್ರಯದಾರನು ಅದನ್ನು ತಡೆಯಿಂದ ಬಿಡಿಸಬೇಕೆಂದು ಒತ್ತಾಯ ಪಡಿಸಬಹುದು– ಅದರ ಬೆಲೆಯು ಅಡಮಾನದ ಬೆಲೆಗಿಂತ ಅಧಿಕವಾಗಿರದುದು ಮುಖ್ಯ.

**ನಾಲ್ಕನೆಯ ಉಪನಿಯಮ:** ಒಂದು, ಎರಡು ಮತ್ತು ಮೂರನೆ ಉಪನಿಯಮಗಳು ಹಕ್ಕಿನ ಪರಿಪೂರ್ಣತೆಗಾಗಿ ಮೊಕದ್ದಮೆ ಹೂಡುವ ವಾದಿಯು, ಆಸ್ತಿಯನ್ನು ಕೊಂಡವನು ಅಥವಾ ಭೋಗ್ಯ

ಮಾಡಿಕೊಂಡವನಾಗಿರುವಾಗಿನ ಸಂದರ್ಭಗಳನ್ನು ಒಳಗೊಳ್ಳುತ್ತದೆ. ನಾಲ್ಕನೆಯದರಲ್ಲಿ ಕ್ರಯದಾರನು ಅಥವಾ ಭೋಗ್ಯದಾರನು ನಿರ್ದಿಷ್ಟ ನಿರ್ವಹಣೆಗಾಗಿ ಮೊಕದ್ದಮೆ ಹೂಡುವ ಸಂದರ್ಭವನ್ನು ಕುರಿತಾಗಿದೆ. ಆದರೆ ಅವನು ಹಕ್ಕನ್ನು ಪರಿಪೂರ್ಣಗೊಳಿಸಲು ಅಸಮರ್ಥನಾದ್ದರಿಂದ ವಿಫಲವಾಗುತ್ತದೆ.

ಅಂಥದೊಂದು ಸಂದರ್ಭದಲ್ಲಿ ನ್ಯಾಯಾಲಯವು ಮೊಕದ್ದಮೆಯನ್ನು ಕಟ್ಟಿಹಾಕಬಹುದು, ವೆಚ್ಚ ಸಹಿತ. ಅಷ್ಟೇ ಅಲ್ಲದೆ, ಪ್ರತಿವಾದಿಯಾದ ಕೊಳ್ಳುಗನಿಗೆ ಒಂದು ವಿಶೇಷ ಪರಿಹಾರವನ್ನು ಮಂಜೂರು ಮಾಡಬಹುದು. ಬಡ್ಡಿ ಸಹಿತ ಅವನ ಠೇವಣಿಯ ವಾಪಸಾತಿ, ಮೊಕದ್ದಮೆಯ ವೆಚ್ಚ, ಮಾರಲು ಒಪ್ಪದ ಆಸ್ತಿಯ ಮೇಲೆ ಇವುಗಳಿಗಾಗಿ ಹಕ್ಕು ಇವುಗಳನ್ನು ಕೊಡಬಹುದು.

**ಠೇವಣಿಗೆ ಸಂಬಂಧಿಸಿದಂತೆ ಸಾಮಾನ್ಯ ನಿಯಮ:**

ನಾಲ್ಕು ಬಗೆಯ ಮೊಕದ್ದಮೆಗಳನ್ನು ಪರಿಗಣಿಸಬೇಕು.

I. ಕರಾರುಗಳನ್ನು ನಿರ್ದಿಷ್ಟವಾಗಿ ಯಾರಿಗೆ ಜಾರಿಗೊಳಿಸಬಹುದೋ ಅವರಿಗೆ

II. ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದವರಿಗೆ

III. ಕರಾರುಗಳನ್ನು ಯಾರ ವಿರುದ್ಧವಾಗಿ ನಿರ್ದಿಷ್ಟವಾಗಿ ಜಾರಿಗೊಳಿಸಬಹುದೋ ಅವರಿಗೆ.

IV. ಕರಾರುಗಳನ್ನು ಯಾರ ವಿರುದ್ಧವಾಗಿ ನಿರ್ದಿಷ್ಟಗೊಳಿಸಲು ಸಾಧ್ಯವಿಲ್ಲವೋ ಅವರಿಗೆ.

**I ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಬಹುದು**

ಕಲಮು ೨೩: ನಿರ್ದಿಷ್ಟ ನಿರ್ವಹಣೆಯ ಆದೇಶವನ್ನು ಯಾರು ಪಡೆಯಬಹುದು ಎಂಬುದನ್ನು ಕುರಿತು ಹೇಳುತ್ತದೆ.

ಉಪನಿಯಮ (i) ಯಾರಾದರೂ ಆಗಬಹುದು.

(ii) ಭರವಸೆ ಪಡೆದವನ ಪರವಾಗಿ ವಹಿಸಿಕೊಂಡವನು.

(iii) ಭರವಸೆ ಪಡೆದವನು ಮೃತನಾಗಲು ಅವನ ನ್ಯಾಯಿಕ ಪ್ರತಿನಿಧಿ.

(iv) ಭರವಸೆ ಪಡೆದವನು ಸ್ಪಷ್ಟವಾಗಿ ಹೇಳದಿರುವವನು.

ಇವರು ಮೂವರೂ ತಮಗೆ ಆಸಕ್ತಿಯಿರುವ ಒಂದು ಕರಾರಿನ ನಿರ್ದಿಷ್ಟ ನಿರ್ವಹಣೆಯನ್ನು ಪಡೆಯಬಹುದು. ಆದರೆ ಒಂದೊಂದೂ ಒಂದು ನಿಯಮಕ್ಕೆ ಒಳಪಟ್ಟಿದೆ. ಅದು, ಕರಾರು ವೈಯಕ್ತಿಕವಾದುದಾಗಿರಕೂಡದು. ಭರವಸೆ ಪಡೆದವನ ಆಸಕ್ತಿಯನ್ನು ವಹಿಸಿಕೊಳ್ಳುವುದಕ್ಕೆ ಒಪ್ಪಂದವು ಅಡ್ಡಿಯಾಗಕೂಡದು.

(೩) ಒಂದು ಮದುವೆ ಕರಾರಿನ ಪ್ರಯೋಜನಕ್ಕೆ ಅರ್ಹರಾದವರು ಅಥವಾ ಒಂದೇ ಕುಟುಂಬದ ಸದಸ್ಯರ ನಡುವೆ ಸಂದೇಹಾಸ್ಪದವಾದ ಹಕ್ಕುಗಳಿದ್ದಾಗ ರಾಜಿ ಮಾಡಿಕೊಳ್ಳುವುದು.

(೪) ಗೇಣಿದಾರನು ಜೀವಾವಧಿಗೆ ಮಾಡಿದ ಕರಾರಿನ ಶೇಷಬಾಧ್ಯತೆಯುಳ್ಳವನು (Remainder man)

(೫) ಸ್ವಾಧೀನ ತಡೆಯುವ ಶೇಷಾನುಭೋಗಿ (Reversioner)

(೬) ಉಳಿಕೆಯ ಸ್ವಾಧೀನ ತಡೆಯುವ ಶೇಷಾನುಭೋಗಿ.

(೭) ಹಲವನ್ನು ಒಟ್ಟುಗೂಡಿಸಿದ ಮೇಲೆ ಹೊಸ ಕಂಪೆನಿ

(೮) ಪ್ರವರ್ತಕರು ಮಾಡಿಕೊಂಡ ಕರಾರಿನ ಮೇಲೆ ಕಂಪೆನಿ

**ವ್ಯತ್ಯಾಸಗೊಳಿಸದೆ ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದ ಸಂದರ್ಭಗಳು– ಕಲಮು ೭೬.**

(೧) ತಪ್ಪಿನಿಂದಲೋ ಮೋಸದಿಂದಲೋ ಕರಾರು, ಪ್ರತಿವಾದಿಯು ಉದ್ದೇಶಿಸಿದುದಕ್ಕಿಂತ ಬೇರೆಯಾದ ಷರತ್ತುಗಳನ್ನು ಹೊಂದಿರುವಾಗ.

(೨) ಕರಾರಿನ ಪರಿಣಾಮವು ಪ್ರತಿವಾದಿಗೂ ವಾದಿಗೂ ನಡುವೆ ಏನಾಗಿರುತ್ತದೆ ಎಂಬುದನ್ನು ತಿಳಿದುಕೊಟ್ಟರೆ ಪ್ರತಿವಾದಿಯು ಕರಾರು ಮಾಡಿಕೊಂಡಿರುವಾಗ.

(೩) ವಾದಿಯು ಕೊಟ್ಟ ತಪ್ಪು ಚಿತ್ರವನ್ನು ಆಧರಿಸಿಕೊಂಡು ಕರಾರು ಮಾಡಿಕೊಂಡಾಗ.

(೪) ಕರಾರು ಉತ್ಪಾದಿಸಲು ವಿಫಲಗೊಂಡ ಒಂದು ನಿರ್ದಿಷ್ಟ ಫಲಿತಾಂಶವನ್ನು ಒಂದು ವಸ್ತುವು ಉತ್ಪಾದಿಸುವಾಗ.

(೫) ಸಂಬಂಧಿತ ಪಕ್ಷಗಳು ಅದನ್ನು ವ್ಯತ್ಯಾಸಗೊಳಿಸಲು ಸಮ್ಮತಿಸಿರುವಾಗ.

**ಟಿಪ್ಪಣಿ:**

ಸಾಕ್ಷ್ಯ ಅಧಿನಿಯಮದ (ಎವಿಡೆನ್ಸ್ ಆ್ಯಕ್ಟ್) ೯೧, ೯೨ನೆಯ ಕಲಮುಗಳು.

ಬದಲಾವಣೆ ಮಾಡಲು ವಾದಿಯು ಮೌಖಿಕವಾಗಿ ಹೇಳುವುದು ಸೂಕ್ತವಾಗುವುದಿಲ್ಲ. ಮೋಸದಿಂದಲೋ ತಪ್ಪು ವಿವರಣೆ ನೀಡುವುದರಿಂದಲೋ ಆ ಬರವಣಿಗೆಯು ಇಡೀ ಕರಾರನ್ನು ಸರಿಯಾದ ರೀತಿಯಲ್ಲಿ ಒಳಗೊಳ್ಳದೆ ಹೋಗಿದೆ ಎಂದು ಪ್ರತಿವಾದಿಯು ತೋರಿಸಿಕೊಡಲು ಅದು ಅಡ್ಡಿಯಾಗುವುದಿಲ್ಲ. ೯೨ನೇ ವಿಭಾಗದ ೧ನೇ ಅವಕಾಶದ ಪ್ರಕಾರ, ಅದರಲ್ಲಿ ಬದಲಾವಣೆಯುಂಟಾಗಿದೆಯೆಂದು ಅವನು ಮೌಖಿಕ ಸಾಕ್ಷ್ಯವನ್ನು ನೀಡಬಹುದು.

ಅಂತಹ ಸಂದರ್ಭದಲ್ಲಿ ಬದಲಾವಣೆಯನ್ನು ಒಪ್ಪಿಕೊಳ್ಳದೆ ವಾದಿಯು ಆದೇಶವನ್ನು ಪಡೆಯುವುದು ಸಾಧ್ಯವಿಲ್ಲ. (೧) ಅವನು ನಿರ್ದಿಷ್ಟ ನಿರ್ವಹಣೆಯನ್ನು ರದ್ದುಪಡಿಸಲು ಕ್ರಮವನ್ನು ಕೈಗೊಳ್ಳಬಹುದು ಇಲ್ಲವೆ, (೨) ಅದನ್ನು ಬದಲಾಗಲು ಬಿಡಬಹುದು. ಬದಲಾವಣೆಯನ್ನು ಒಪ್ಪಿಕೊಳ್ಳದಿರಲು ಅವನು ಬಯಸಿದ ಪಕ್ಷದಲ್ಲಿ ನಷ್ಟಪರಿಹಾರವನ್ನು ಅವನು ಕಳೆದುಕೊಳ್ಳಬೇಕಾಗಿಲ್ಲ.

**II ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದ ವ್ಯಕ್ತಿಗಳು ೨೪ ಮತ್ತು ೨೫ನೇ ಕಲಮುಗಳಲ್ಲಿ ಇದನ್ನು ಪರಿಶೀಲಿಸಿದೆ.**

೨೪ನೆಯ ಕಲಮು:

(i) ಕರಾರಿನ ಉಲ್ಲಂಘನೆಗಾಗಿ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲದವರು.
(ii) ನಿರ್ವಹಿಸಲು ಅಸಮರ್ಥರಾಗಿರುವವರು ಅಥವಾ ಕರಾರಿನ ಯಾವುದೇ ಮೂಲಭೂತ ಷರತ್ತನ್ನು ಅತಿಕ್ರಮಿಸಿದವರು.
(iii) ಆಗಲೆ ತನ್ನ ಪರಿಹಾರ ವಿಧಾನವನ್ನು ಆರಿಸಿಕೊಂಡಿದ್ದು, ಉಲ್ಲಂಘನೆ ಎಂದು ಹೇಳಲಾದ ಕ್ರಿಯೆಯಿಂದ ತೃಪ್ತಿ ಪಡೆಯುವವರು.
(iv) ಕರಾರಿಗೆ ಮುಂಚಿತವಾಗಿಯೇ, ಒಂದು ಫೈಸಲಾತಿಯಾಗಿತ್ತು, ಅದು ಚಾಲ್ತಿಯಲ್ಲಿತ್ತು ಎಂದು ತಿಳುವಳಿಕೆ ಪಡೆದಿರುವವರು.

ಇದು ೨೫ನೆಯ ಕಲಮಿಗಿಂತ ಬೇರೆ. ನಿರ್ದಿಷ್ಟ ನಿರ್ವಹಣೆ ಕರಾರಿನಲ್ಲಿರುವ ಯಾವುದೇ ಒಂದು ಅಂಶದ ಮೇಲೆ ನಿಂತಿಲ್ಲ. ಆದರೆ ವಾದಿಯು ಕೈಗೊಳ್ಳುವ ಕ್ರಮಗಳು ಅಥವಾ ಅವನ ನಡವಳಿಕೆಯ ಮೇಲೆ ನಿಂತಿದೆ ಎಂದು ವಿವರಿಸಿದೆ.

೨೪ನೆಯ ಕಲಮು ಸಾಮಾನ್ಯ ವಿಭಾಗ. ೨೫ನೆಯದಾದರೋ ನಿರ್ದಿಷ್ಟವಾದದ್ದು, ಎರಡು ಬಗೆಯ ಕರಾರುಗಳಿಗೆ ಮಾತ್ರ ಅನ್ವಯವಾಗುವಷ್ಟಕ್ಕೆ ಸೀಮಿತಗೊಳ್ಳುತ್ತದೆ.

(i) ಮಾರಲು ಕರಾರು ಮತ್ತು, (ii) ಚರ ಅಥವಾ ಸ್ಥಿರ ಆಸ್ತಿಯನ್ನು ಬಾಡಿಗೆಗೆ ಕೊಡಲು ಕರಾರು.

ಅಂತಹ ಕರಾರನ್ನು ಈ ಕೆಳಗಿನ ಸಂದರ್ಭಗಳಲ್ಲಿ ಕ್ರಯದಾರನ ಅಥವಾ ಭೋಗ್ಯದಾರನ ಪರವಾಗಿ ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ೨೫ನೆಯ ಕಲಮು ಹೇಳುತ್ತದೆ.

(i) ಆಸ್ತಿಯ ಹಕ್ಕು ಪಡೆಯಲು ಸಾಧ್ಯವಿಲ್ಲವೆಂದು ತಿಳಿದಾಗ, ಅದನ್ನು ಮಾರಲು ಅಥವಾ ಬಾಡಿಗೆಗೆ ಕೊಡಲು ಕರಾರು ಮಾಡಿಕೊಳ್ಳುವವನು.

(ii) ಸಂಬಂಧಿತ ಪಕ್ಷಗಳೋ ನ್ಯಾಯಾಲಯವೋ ನಿಗದಿಗೊಳಿಸಿದ ತಾರೀಕಿಗೆ ಸಂದೇಹಕ್ಕೆಡೆಯಿಲ್ಲದ ಹಕ್ಕನ್ನು ಕೊಡಲು ಸಾಧ್ಯವಿಲ್ಲದವನು.

(iii) ಕರಾರು ಮಾಡಿಕೊಳ್ಳುವ ಮೊದಲು ಕರಾರಿನ ವಸ್ತು ವಿಷಯವನ್ನು ಕುರಿತು ಆಗಲೇ ಒಂದು ತೀರ್ಮಾನ ಮಾಡಿಕೊಂಡಿರುವವನು.

೩ನೆಯ ವಿಭಾಗದಲ್ಲಿ ಫೈಸಲಾತಿ (settlement) ಎನ್ನುವುದನ್ನು ಹೀಗೆ ವಿವರಿಸಿದೆ: ಅದೃಷ್ಟದಿಂದ ಅಥವಾ ವಹಿಸಿಕೊಡುವುದರಿಂದ ಚರ ಮತ್ತು ಸ್ಥಿರ ಆಸ್ತಿಯಲ್ಲಿನ ಮುಂದಿನ ಲಾಭಾಂಶಗಳೆಲ್ಲವನ್ನೂ ವಿನಿಯೋಗ ಮಾಡುವುದು ಅಥವಾ ವಿನಿಯೋಗ ಮಾಡಲು ಸಮ್ಮತಿಸುವುದು– ಅದನ್ನು ಕುರಿತ ಆದೇಶ.

**III ವಿರುದ್ಧವಾಗಿ ಕರಾರನ್ನು ಜಾರಿಗೊಳಿಸಬಹುದಾದ ವ್ಯಕ್ತಿಗಳು**

೨೭ನೆಯ ಕಲಮು:

(i) ಎರಡರಲ್ಲಿ ಯಾವುದೇ ಪಕ್ಷ.

(ii) ಕರಾರಿನ ಅನಂತರ ಹುಟ್ಟುವ ಹಕ್ಕಿನಿಂದ ಒತ್ತಾಯಪಡಿಸುವ ಯಾವನೇ ವ್ಯಕ್ತಿ [ಪೂರ್ವ ಸೂಚನೆ ಕೊಡದೆ ಮೌಲ್ಯವನ್ನು ವರ್ಗಾಯಿಸುವವನ ಹೊರತು]

(iii) ಕರಾರಿಗೆ ಮುಂಚಿತವಾಗಿಯೇ ಹಕ್ಕು ಅನೂರ್ಜಿತವಾದ, ವಾದಿಗೆ ಆ ವಿಷಯವು ತಿಳಿದಿದ್ದು, ಪ್ರತಿವಾದಿಯು ಅದನ್ನು ಮರೆಮಾಡಿರಬಹುದಾದ ಹಕ್ಕಿನ ಪ್ರಕಾರ ಒತ್ತಾಯಿಸುವ ಯಾವನೇ ವ್ಯಕ್ತಿ.

(iv) ಕೂಡಿಕೆಯ ಅನಂತರದ ನೂತನ ಕಂಪೆನಿ.

(v) ಪ್ರವರ್ತಕರು ಮಾಡಿಕೊಂಡ ಕರಾರಿನ ಬಗೆಗೆ ಕಂಪೆನಿ.

**IV ಯಾರ ವಿರುದ್ಧವಾಗಿ ಕರಾರನ್ನು ಜಾರಿಗೊಳಿಸಲು ಸಾಧ್ಯವಿಲ್ಲ**

೨೮ನೆಯ ವಿಭಾಗ:

(i) ಕೊಟ್ಟ ಹಣವು ಮೋಸಕ್ಕೆ ಸಾಕ್ಷ್ಯಾಧಾರವಾಗಲು ಸಾಕಷ್ಟು ಆಗದಿರುವಾಗ.

(ii) ತಪ್ಪು ತಿಳುವಳಿಕೆ ಕೊಟ್ಟು ಸಮ್ಮತಿಯನ್ನು ಪಡೆದಿರುವಾಗ; ನ್ಯಾಯವಲ್ಲದ ಆಚರಣೆ ಅಥವಾ ಇತರ ಭರವಸೆಗಳೂ ಈಡೇರಿರದ ಸ್ಥಿತಿ.

(iii) ವಿಷಯದ ತಪ್ಪು ಗ್ರಹಿಕೆಯ ಪ್ರಭಾವದಿಂದ ತಪ್ಪು ಕಲ್ಪನೆ ಅಥವಾ ಅಚ್ಚರಿಯ ಸ್ಥಿತಿಗಳಿಂದ ಸಮ್ಮತಿಯನ್ನು ಕೊಟ್ಟಿರುವುದು.

## ನಿರ್ದಿಷ್ಟ ನಿರ್ವಹಣೆ ಮತ್ತು ನ್ಯಾಯಾಲಯದ ವಿವೇಚನಾಧಿಕಾರ

ನಿರ್ದಿಷ್ಟ ಪರಿಹಾರವನ್ನು ಆದೇಶಿಸುವಾಗ ತುಂಬಾ ಮುಖ್ಯವಾದ ವಿಚಾರ– ಯಾವಾಗ ನ್ಯಾಯಾಲಯವು ನಿರ್ದಿಷ್ಟ ನಿರ್ವಹಣಾ ಪರಿಹಾರವನ್ನು ಆದೇಶಿಸಲು ಬದ್ಧವಾಗಿದೆ? ಎನ್ನುವುದು. ಯಾವುದೆ ನಿರ್ದಿಷ್ಟ ನಿರ್ವಹಣಾ ಪರಿಹಾರವನ್ನು ನೀಡುವಂತಿಲ್ಲ ಎಂದು ಕಾನೂನು ಸ್ಪಷ್ಟವಾಗಿ ವಿಧಿಸಿರುವ ಸಂದರ್ಭಗಳಲ್ಲಿ ನ್ಯಾಯಾಲಯವು ಅದನ್ನು ಆದೇಶಿಸುವಂತಿಲ್ಲ ಎಂಬುದು ಸ್ಪಷ್ಟವಾಗಿದೆ. ಇಂತಹ ಸಂದರ್ಭಗಳು ಮೂರು ವರ್ಗವಾಗಿವೆ:

(i) ಕರಾರಿನ ಸ್ವರೂಪವು ಕಾನೂನು ಅದನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಅವಕಾಶ ಕೊಡದಿರುವಂಥದಾಗಿರುವಾಗ.

(ii) ವಾದಿಯು ಒಂದು ಕರಾರು ಅವನ ಪರವಾಗಿ ನಿರ್ದಿಷ್ಟವಾಗಿ ಜಾರಿಗೊಳಿಸಲಾಗದಂತಹ ವ್ಯಕ್ತಿಯಾಗಿರುವಾಗ.

(iii) ಪ್ರತಿವಾದಿಯು, ಕರಾರಿನಲ್ಲಿ ಅವನ ವಿರುದ್ಧವಾಗಿ ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿಲ್ಲದಂತಹ ವ್ಯಕ್ತಿಯಾಗಿರುವಾಗ.

ಇನ್ನು, ಒಂದು ಕರಾರಿನಲ್ಲಿ ನಿರ್ದಿಷ್ಟವಾಗಿ ಜಾರಿಗೊಳಿಸಬಹುದಾದ ಈ ಕೆಳಗಿನ ಮೂರು ಸಂದರ್ಭಗಳು ಉಳಿದಿವೆ–

(i) ಕರಾರು ಅಂತಹ

[ಮುಂದಿನ ಪುಟಗಳು ದೊರೆತಿಲ್ಲ –ಸಂ.]

## ಸಂಬಂಧಿತ ವ್ಯಕ್ತಿಗಳ ಹೊಣೆಗಾರಿಕೆಗಳು

### ಕ್ರಯದಾರ

#### ವಹಿಸುವ ಮೊದಲು

೧) ಕಲಮು (೧) (ಎ)
ವಸ್ತು ದೋಷಗಳನ್ನು
ತೋರಿಸಿಕೊಡುವುದು.

೨) ಕಲಮು (೧) (ಬಿ)
ಹಕ್ಕು ಪತ್ರಗಳನ್ನು ಒದಗಿಸುವುದು

೩) ೫೫(೧) (ಸಿ)
ಹಕ್ಕು ಪತ್ರಗಳಿಗೆ ಸಂಬಂಧಿಸಿದ
ಪ್ರಶ್ನೆಗಳಿಗೆ ಉತ್ತರಿಸುವುದು.

೪) ೫೫(೧) (ಡಿ)
ವಹಿಸಿಕೆಯ ನಿರ್ವಹಣೆ.

೫) ೫೫(೧) (ಇ)
ಆಸ್ತಿಯನ್ನು ಕಟ್ಟೆಚ್ಚರದಿಂದ ಕಾಯುವುದು.

೬) ೫೫(೧) (ಜಿ)
ಲಾಭಾಂಶವನ್ನು ಕೊಡುವುದು.

#### ವಹಿಸಿದ ನಂತರ

೧) ೫೫ (೧) (ಬಿ)
ಸ್ವಾಧೀನಪಡಿಸಿ ಕೊಡುವುದು.
ಬಹಿರಂಗಪಡಿಸುವುದು, ಮೌಲ್ಯದ ಏರಿಕೆ.

೨) ೫೫ (೨)
ಹಕ್ಕುಪತ್ರಕ್ಕಾಗಿ ಅನುಸೂಚಿತ ಬೇಡಿಕೆ.

೩) ೫೫ (೩)
ಬೆಲೆಯು ದೊರೆತ ಮೇಲೆ ಹಕ್ಕುಪತ್ರವನ್ನು
ವಹಿಸಿ ಕೊಡುವುದು.

### ಕೊಂಡವನು

#### ವಹಿಸುವ ಮೊದಲು


೧) ೫೫ (೫) (ಎ)
ಭೌತಿಕವಾಗಿ ಸಂಗತಿಗಳನ್ನು
ಸಹಿಸುವುದು

೨) ೫೫ (೫) (ಬಿ)
ಬೆಲೆ ಕೊಡುವುದು

#### ವಹಿಸದ ನಂತರ

೧) ೫೫(೫) (ಸಿ)
ನಷ್ಟ ಅಥವಾ
ಆಸ್ತಿ ಹಾನಿಯನ್ನು

೨) ೫೫(೫) (ಡಿ)
ಲಾಭ ಕೊಡುವುದು.


ವ್ಯಕ್ತಿಗಳ ಹಕ್ಕುಗಳು
ಮಾರುವವನು
ಕೊಳ್ಳುವವನು
ವಹಿಸಿಕೆಗೆ ಮುಂಚೆ
೧) ಭಾಗ ೫೫(೪) (ಎ) ಬಾಡಿಗೆಗಳು ಮತ್ತು ಲಾಭಾಂಶಗಳನ್ನು ಪಡೆಯುವುದು
ವಹಿಸಿಕೊಟ್ಟ ಮೇಲೆ
೧) ೫೫ (೪) (ಬಿ) ಪಾವತಿ ಮಾಡಿಲ್ಲದ ಬೆಲೆಯ ಸ್ವಾಧೀನತೆ ಕೋರುವುದು
ವಹಿಸಿಕೆಗೆ ಮುಂಚೆ
೧) ೫೫ (೬) (ಬಿ) ಮೊದಲೇ ಕೊಟ್ಟಿರುವ ಬೆಲೆಯ ಸ್ವಾಧೀನತೆ ಕೋರುವುದು
ವಹಿಸಿಕೆಯ ನಂತರ
೧) ೫೫(೬) (ಎ) ಆಸ್ತಿಗೆ ಬಡ್ಡಿಯ ಲಾಭವನ್ನು ಕೊಡುವುದು

ಉಬೆರಿಮ ಫೈಡೀಸ್– ಅತ್ಯಧಿಕವಾದ ವಿಶ್ವಾಸ– ಅತ್ಯಧಿಕ ವಿಶ್ವಾಸವು ಅಗತ್ಯವಾಗಿರುವ ಕರಾರುಗಳು ಎಂಥವೆಂದರೆ ಒಂದು ನಿರ್ದಿಷ್ಟ ಬಾಂಧವ್ಯದಲ್ಲಿರುವಂಥವು.

(೧) ಪಾಲಕ ಮತ್ತು ಪಾಲಿತ

(೨) ವಕೀಲ ಮತ್ತು ಗ್ರಾಹಕ

(೩) ವೈದ್ಯ ಮತ್ತು ರೋಗಿ

(೪) ತಪ್ಪೊಪ್ಪಿಗೆ ಹೇಳಿಕೊಳ್ಳುವವನು ಮತ್ತು ಕ್ಷಮಿಸುವವನು. ಸಂಪೂರ್ಣವಾಗಿ ಹೇಳಿಕೊಳ್ಳುವುದು ಅಗತ್ಯ.

# ಪಕ್ಷಗಾರರ ಹೊಣೆಗಾರಿಕೆಗಳು

## ಅ. ಮಾರಾಟ ಮಾಡುವವನ ಹೊಣೆಗಾರಿಕೆಗಳು

## ೧. ಹಸ್ತಾಂತರ ಪತ್ರದ ಮೊದಲು

### ೧. ಕಲಮು ೫೫(೧) (ಅ) ಮುಖ್ಯ ನ್ಯೂನತೆಗಳನ್ನು ಬಹಿರಂಗಪಡಿಸುವುದು

(೧) ಒಂದು ಹೊಲವನ್ನು ಮಾರಾಟ ಮಾಡಲು ಮಾಡಿಕೊಂಡ ಕರಾರು ಒಪ್ಪಂದವು ಪರಮ ವಿಶ್ವಾಸದ ನಂಬಿಕೆಯ ಒಪ್ಪಂದವಾಗಿರುವುದಿಲ್ಲ. ಬಹಿರಂಗಪಡಿಸುವ ಕರ್ತವ್ಯವು ನಿರುಪಾಧಿಕ ಆದುದಲ್ಲ. ಅವ್ಯಕ್ತ ಕಾಣದ ನ್ಯೂನತೆಗಳನ್ನು ಬಹಿರಂಗಪಡಿಸುವುದು ಅವನ ಕರ್ತವ್ಯವಾಗಿದೆ– ಹೊಣೆಗಾರಿಕೆಯಾಗಿದೆ.

(೨) ಒಬ್ಬ ಕೊಳ್ಳುವವನು ವಾಸ್ತವಿಕವಾಗಿ ತನ್ನ ಸಾಮಾನ್ಯ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಯಾವದೇ ಅಡಗಿದ ನ್ಯೂನತೆಯನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದರೆ, ಅದು ಅಡಗಿದ ನ್ಯೂನತೆಯಾಗುತ್ತದೆ. ಯಾವುದರ ಬಗ್ಗೆ ಕೊಳ್ಳುವವನಿಗೆ ವಾಸ್ತವಿಕವಾಗಿ ಇಲ್ಲವೆ ರಚನಾತ್ಮಕವಾಗಿ ಸೂಚಿಸುವುದು ಅಗತ್ಯವಿರುವುದಿಲ್ಲ.

(೩) ಮಾರುವವನಿಗೆ ಗಮನಕ್ಕೆ ಬಾರದೇ ಹುದುಗಿರುವ ದೋಷಗಳು ಸ್ಪಷ್ಟವಾಗಿ ತಿಳಿಯದೆ ಇದ್ದರೆ ಕೊಳ್ಳುವವನು ಎಚ್ಚರಿಕೆಯಿಂದ ಇರಬೇಕು ಎಂಬ ಸೂತ್ರವು ಅನ್ವಯಿಸುವುದು. ಆದರೆ ಪರಸ್ಪರರಿಗೆ ಒಂದು ವಸ್ತು ಬಗ್ಗೆ ಕುರಿತು ನಿಜವಾಗಿ ತಪ್ಪು ಗ್ರಹಿಕೆಯಾಗಿದ್ದರೆ ಅಂತಹ ಒಪ್ಪಂದವು ಶೂನ್ಯವಾಗುತ್ತದೆ.

(೪) ಒಂದು ಆಸ್ತಿಯ ಅವ್ಯಕ್ತ ನ್ಯೂನತೆಯು ಇಲ್ಲವೆ ಅದರ ಮಾಲ್ಕೀ ಹಕ್ಕಿನ ಬಗ್ಗೆ ಇವು ಮಹತ್ವವಾದುವು. ಆ ವಸ್ತುವನ್ನು ಕುರಿತ ನ್ಯೂನತೆಯು ಇಂತಹ ಸ್ವರೂಪದ್ದಾಗಿರಬೇಕು. ಅದು ಯುಕ್ತವಾಗಿ ಕರಾರುವಾಕ್ಕಾದ ವರ್ಣನೆಯಿಂದ ಊಹಿಸಲು ಬರುವಂತಹ ಹಕ್ಕು ಇರಬೇಕು. ಅಂದರೆ ಕೊಳ್ಳುವವನು ಅದರ ಬಗೆಗೆ ತಿಳಿದಿದ್ದರೆ, ಅವನು ಆ ಒಪ್ಪಂದದ ಕರಾರಿಗೇನೇ ಒಪ್ಪಿಕೊಳ್ಳುತ್ತಿರಲಿಕ್ಕಿಲ್ಲ. ಯಾಕೆಂದರೆ ಅವನು ತಾನು ಕೊಳ್ಳಲು ಮಾಡಿಕೊಂಡ ಒಪ್ಪಂದದಿಂದ ಬೇರೊಂದನ್ನು ಪಡೆಯುತ್ತಾನೆ.

(೫) ಆ ನ್ಯೂನ್ಯತೆಯು ಮುಖ್ಯವಾದುದು ಇರಲಿ ಇಲ್ಲದಿರಲಿ ಅನ್ನುವುದು ಪ್ರತಿಯೊಂದು ಪ್ರಕರಣದ ಸಂದರ್ಭಗಳ ಮೇಲೆ ಅವಲಂಬಿಸಿರುತ್ತದೆ. ಒಂದು ಭೂಪಾಯವನ್ನು ಕಟ್ಟಡಗಳನ್ನು ಕಟ್ಟಿಸುವುದರ ಉದ್ದೇಶಗಳಿಗಾಗಿ ಮಾರಿದರೆ ಅದರಲ್ಲಿ ಒಳ ಚರಂಡಿ ಇದ್ದರೆ ಅದು ಮುಖ್ಯ ನ್ಯೂನತೆಯಾಗುವುದು. ಆದರೆ ಒಂದು ಮನೆ ಇಲ್ಲವೆ ಭೂಮಿಯನ್ನು ಮುಖ್ಯವಾಗಿ ವಾಸಕ್ಕಾಗಿ ಮಾರಿದರೆ ಅದು ಮುಖ್ಯವಾಗುವುದಿಲ್ಲ.

(೬) ನ್ಯೂನತೆಗಳು ಆಸ್ತಿಯಲ್ಲಿಯ ನ್ಯೂನತೆಗಳಾಗಿರಬಹುದು. ಇಲ್ಲವೆ ಆಸ್ತಿ ಮಾಲ್ಕೀಯ(ಸ್ವಾಮ್ಯ)ದಲ್ಲಿ ನ್ಯೂನತೆಗಳಿರಬಹುದು.

### ೨. ಕಲಮು ೫೫ (೧) (ಬ) ಆಸ್ತಿ ಸ್ವಾಮ್ಯದ ಮಾಲ್ಕಿ ಹಕ್ಕಿನ ದಸ್ತಾವೇಜಿನ ಸಂರಕ್ಷಣೆ

(೧) ಆಸ್ತಿಯ ಸ್ವಾಮ್ಯದ ಮಾಲ್ಕಿ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಮಾತ್ರ ಹಾಜರುಪಡಿಸಲು ಹೊಣೆಗಾರಿಕೆ ಇದೆ. ಆದರೆ ವರ್ಗಾವಣೆಗಾಗಿ ಇರುವುದಿಲ್ಲ.

(೨) ಆಸ್ತಿಯ ಸ್ವಾಮ್ಯದ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸುವ ಅವಶ್ಯಕತೆಯು ಅಂದರೆ ಮಾರುವವನ ಕಬ್ಜೆಯಲ್ಲಿರುವ ದಸ್ತಾವೇಜುಗಳನ್ನು ಮಾತ್ರವಲ್ಲ, ಅವನಿಗೆ ಆ ಆಸ್ತಿಗೆ ಅಧಿಕಾರ ವಹಿಸಿಕೊಡುವ ದಸ್ತಾವೇಜುಗಳನ್ನು ಸಹ ಅದು ಒಳಗೊಂಡಿರುತ್ತದೆ.

(೩) ಕೊಳ್ಳುವವನು ಕೋರಿಕೆ ಮಾಡಿದ ವಿನಾ ಸ್ವಾಮ್ಯತ್ವ ದಸ್ತಾವೇಜನ್ನು ಹಾಜರುಪಡಿಸುವ ಹೊಣೆಗಾರಿಕೆಯು ಇರುವುದಿಲ್ಲ.

(೪) ಆದಾಗ್ಯೂ ಕೊಳ್ಳುವವನು ಖರೀದಿ ಕಾಗದ ಪರಿಶೀಲಿಸುವುದನ್ನು ಬಿಟ್ಟು ಬಿಡತಕ್ಕದ್ದಲ್ಲ. ಇಲ್ಲವಾದರೆ ಬೇರೊಂದು ರೀತಿಯಲ್ಲಿ ಅವನಿಗೆ ಬಾಧಿತವಾದ ನೋಟೀಸು ಇದೆಯೆಂದು ಗ್ರಹಿಸಲಾಗುವುದು. ಅವನು ಆ ಆಸ್ತಿಯ ಖರೀದಿ ಕಾಗದದ ತಪಾಸಣೆ ನಡೆಯಿಸಿದ್ದರೆ, ಅವನಿಗೆ ಅದರಲ್ಲಿಯ ನ್ಯೂನತೆಗಳು ಕಂಡುಬರಬಹುದಾಗಿತ್ತು.

**೩. ಕಲಮು ೫೫(೧) (ಸಿ) ಪ್ರಶ್ನೆಗಳಿಗೆ ಉತ್ತರಿಸುವುದು ಮಾರುವವನ ಕರ್ತವ್ಯ**

(೧) ಸ್ವಾಮ್ಯದ ದಸ್ತಾವೇಜುಗಳನ್ನು ಹಾಜರುಮಾಡಿದಾಗ, ಕೊಳ್ಳುವವನು ಅವುಗಳನ್ನು ಪರೀಕ್ಷಿಸುತ್ತಾನೆ. ಅವನು ಅದರಿಂದ ತೃಪ್ತನಾಗದಿದ್ದರೆ ಅವನು ಕೋರಿಕೆಗಳನ್ನು ಮಾಡುತ್ತಾನೆ. ಇಂತಹ ಕೋರಿಕೆಗಳೆಂದರೆ:

(i) ಮಾಲಿಕತ್ವದ ಬಗ್ಗೆ: ಸ್ವಾಮ್ಯತ್ವದ ಬಗ್ಗೆ ಕೋರಿಕೆಗಳು

(ii) ಹಸ್ತಾಂತರಕ್ಕೆ ಸಂಬಂಧಿಸಿದ ಕೋರಿಕೆಗಳು.

(iii) ಉಳಿದ ವಿಚಾರಣೆಗಳು

(೨) ಮಾಲಿಕತ್ವದ ಬಗ್ಗೆ ಕೋರಿಕೆಗೆ ಒಪ್ಪಿಗೆ ತೋರಿಸದಿದ್ದಾಗ, ಇಲ್ಲವೆ ಕಾಗದ ಪತ್ರಗಳು ಫಲಪ್ರದವಾಗಿರದಿದ್ದರೆ ಎಂದರೆ ಅವುಗಳನ್ನು ಕಾನೂನುಬದ್ಧವಾಗಿ ಅನುಪ್ರಮಾಣಿಸದಿದ್ದರೆ, ಮಾಲಿಕತ್ವದ ಮೇಲಿನ ಕೋರಿಕೆಗಳು ತಕರಾರುಗಳು ಆಗುತ್ತವೆ.

(೩) ಇವುಗಳಲ್ಲಿ ಹಸ್ತಾಂತರದ ವಿಷಯಗಳಿಗೆ ಸಂಬಂಧಿಸಿದ ಕೋರಿಕೆಗಳು ಸೇರ್ಪಡೆಯಾಗುವಂತಹವು ಹಸ್ತಾಂತರಕ್ಕೆ ಸಹಮತವಾಗುವುದು.

(೪) ವಿಚಾರಣೆಗಳು ಕೊಳ್ಳುವವನ ಸಂರಕ್ಷಣೆಗಾಗಿರುತ್ತವೆ ಮತ್ತು ಮಾರುವವನು ಸಾಧ್ಯವಿದ್ದಷ್ಟು ಬಹಿರಂಗಪಡಿಸುವುದನ್ನು ತಪ್ಪದೇ ಗಮನಿಸಬೇಕು ಮತ್ತು ಕಿಟಕಿ, ಚೌಕಟ್ಟು ಅಥವಾ ಅದರ ಭಾಗ ವಿಭಾಗಿಸುವ ಗೋಡೆಗಳು ಮತ್ತು ವಿಮೆ ಇಳಿಸುವುದು ಇವೇ ಮುಂತಾದವುಗಳ ಬಗ್ಗೆ ಮಾಹಿತಿ ಪಡೆಯುವುದು.

(೫) ಸ್ವಾಮಿತ್ವದ ಬಗ್ಗೆ ಮತ್ತು ನಿರ್ದಿಷ್ಟವಾದ ಕೋರಿಕೆಗಳಿಗೆ ಮಾರುವವನು ಉತ್ತರಿಸಲೇಬೇಕು.

(೬) ಕೋರಿಕೆಗಳಿಗೆ ಉತ್ತರಿಸುವ ಕರ್ತವ್ಯವು ಕಲಂ ೫೫(೧) (ಅ)ದ ಕೆಳಗೆ ನ್ಯೂನತೆಗಳನ್ನು ಬಹಿರಂಗಪಡಿಸುವ ಕರ್ತವ್ಯಕ್ಕಿಂತ ಭಿನ್ನವಾಗಿರುತ್ತದೆ. ಕೊಳ್ಳುವವನು ಒಂದು ವಿಷಯದ ಬಗ್ಗೆ ಕೋರಿಕೆ ಸಲ್ಲಿಸದಿದ್ದರೆ ಆಗ ಮಾರುವವನು ನ್ಯೂನತೆಯನ್ನು ಬಹಿರಂಗಪಡಿಸದಿದ್ದರೆ ಮಾರುವವನು ಹೊಣೆಗಾರಿಕೆಯಿಂದ ಮುಕ್ತನಾಗಲಾರನು.

(೭) ಕೊಳ್ಳುವವನು ಕೋರಿಕೆಗಳನ್ನು ಬಿಟ್ಟುಬಿಡಬಹುದು, ಮನ್ನಾ ಮಾಡಬಹುದು. ಬಿಟ್ಟು ಕೊಡುವುದು ಪ್ರಕಟಿತವಾಗಿರಬಹುದು ಇಲ್ಲವೆ ಸೂಚ್ಯವಾದುದಾಗಿರಬಹುದು.

(೮) ಬಿಟ್ಟುಕೊಡುವುದು ಒಬ್ಬನ ನಡತೆಯ ಮೇಲೆ ಸೂಚ್ಯವಾಗಿರುತ್ತದೆ

(i) ಒಬ್ಬ ಕೊಳ್ಳುವವನು ತನ್ನ ಕೋರಿಕೆಯನ್ನು ಒತ್ತಾಯಿಸದಿದ್ದರೆ.

(ii) ಕೊಳ್ಳುವವನು ಅದರ ಬೆಲೆಯನ್ನು ಸಂದಾಯ ಮಾಡಲು ಅವಧಿಯನ್ನು ಕೇಳಿದಾಗ.
(iii) ಕೊಳ್ಳುವವನು ಕೊಂಡ ವಸ್ತುವಿನ ಸ್ವಾಧೀನತೆಯನ್ನು ಪಡೆದಾಗ.
(iv) ಕೊಳ್ಳುವವನು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಅದರ ಬೆಲೆಯನ್ನು ಕೊಟ್ಟಾಗ.

**೪. ಕಲಮು ೫೫(೧) (ಡಿ) ಹಸ್ತಾಂತರ ಪತ್ರಗಳನ್ನು ಬರೆದುಕೊಡುವುದು**

(೧) ಕೊಳ್ಳುವವನಿಗೆ ಇಲ್ಲವೆ ಕೊಳ್ಳುವವನು ನಿರ್ದೇಶಿಸಿದ ಅಂತಹ ಮನುಷ್ಯನಿಗೆ ಬರೆದು ಕೊಡಬಹುದು. ತತ್ಪರಿಣಾಮವಾಗಿ ಹಸ್ತಾಂತರ ಪತ್ರ ಬರೆದುಕೊಡುವ ಮೊದಲೇ ಕೊಳ್ಳುವವನು ಪುನಃ ಅದನ್ನು ಇನ್ನೊಬ್ಬರಿಗೆ ಮಾರಾಟ ಮಾಡಿದರೆ, ತತ್ಪರಿಣಾಮವಾಗಿ ಆ ಹಸ್ತಾಂತರ ಪತ್ರವನ್ನು ಅಂತಹ ಕೊಂಡವನಿಗೆ ಬರೆದುಕೊಡಲು ನಿರ್ದೇಶಿಸಬಹುದು. ಬೆಲೆಯಲ್ಲಿ ವ್ಯತ್ಯಾಸವಿದ್ದರೆ ಆಗ ಆ ಮಾರುವವನು ಮೂಲದಲ್ಲಿ ಕೊಂಡವನಿಗೆ ಆ ಹಸ್ತಾಂತರ ಪತ್ರಕ್ಕೆ ಪಕ್ಷಗಾರನಾಗಬೇಕೆಂದು ಅಗತ್ಯಪಡಿಸಬಹುದು. ಆದರೆ ಅನ್ಯಥಾ ಇರುವುದಿಲ್ಲ.

(೨) ಮಾರುವವನಿಗೆ ಯೋಗ್ಯ ಕರಡು ಪ್ರತಿಯನ್ನು ನೀಡುವುದು ಕೊಳ್ಳುವವನ ಕರ್ತವ್ಯವಾಗಿರುತ್ತದೆ. (೩೧ ಕಲ್ಕತ್ತ ಲಾ.ಜ. ೮೭)

(೩) ಕೊಳ್ಳುವವನ ಈ ಕರ್ತವ್ಯವು ಕರಾರಿಗೆ ಒಳಪಟ್ಟು ವಿರುದ್ಧವಾಗಿದ್ದರೆ.

(೪) ಹಸ್ತಾಂತರ ಪತ್ರವನ್ನು ಬರೆದುಕೊಡುವುದು ಮತ್ತು ಅದರ ಬೆಲೆಯನ್ನು ಸಂದಾಯ ಮಾಡುವುದು ಇವು ಪಾರಸ್ಪರಿಕ ಕರ್ತವ್ಯಗಳು. ಇವುಗಳನ್ನು ಏಕಕಾಲಕ್ಕೆ ಮಾಡತಕ್ಕದ್ದು. ಅವು ಸಮವರ್ತಿ ವಾಗ್ದಾನ ಗಳಾಗಿರುತ್ತವೆ. ಇಬ್ಬರಲ್ಲಿ ಒಬ್ಬರು ನಿರ್ದಿಷ್ಟ ಪರಿಹಾರ ಕೋರಿ ದಾವೆ ಮಾಡಿದರೆ ಅವನು ತಾನು ತನ್ನ ಪಾಲಿನ ವಾಗ್ದಾನವನ್ನು ಪೂರೈಸಲು ಸಿದ್ಧನಿದ್ದೇನೆಂದೂ ಹಾಗೂ ಸಮ್ಮತಿಯುಳ್ಳವನಾಗಿದ್ದೇನೆಂಬುದನ್ನು ತೋರಿಸಲೇಬೇಕು.

(೫) ಬರೆದು ಕೊಡಲು ಯೋಗ್ಯ ವೇಳೆ:
(i) ಯೋಗ್ಯ ವೇಳೆಯ ಬಗ್ಗೆ ಕಲಮಿನಲ್ಲಿ ಏನನ್ನೂ ಹೇಳಿಲ್ಲ. ಕಲಮು ಮೌನವಾಗಿದೆ.
(ii) ಸಾಮಾನ್ಯವಾಗಿ ವೇಳೆಯನ್ನು ಖರೀದಿ ವ್ಯವಹಾರದ ಒಪ್ಪಂದದ ಕಾಲಕ್ಕೆ ನಿಗದಿಪಡಿಸಿರುತ್ತಾರೆ.
(iii) ಕಾಲವನ್ನು ನಿಗದಿಪಡಿಸಿದ್ದರೆ ಮತ್ತು ಕಾರಣವಿಲ್ಲದೆ ವಿಳಂಬ ಅನುಚಿತ ವಿಳಂಬವಾದರೆ ಆಗ ಯೋಗ್ಯ ಕ್ರಮವೆಂದರೆ ಆಗ ಕಾಲವೇ ಮುಖ್ಯವಾದ ಅಂಶವಾಗಿರುವ ಕರಾರೆಂದು ಕಾಣಿಸಿ ನೋಟೀಸು ಕೊಡಬೇಕು.
(iv) ಕಾಲವನ್ನು ನಿಗದಿಪಡಿಸಿರದಿದ್ದರೆ, ಆಗ ಮಾರುವವನು ಯಾವಾಗ ತನಗೆ ಕಾಗದ ಬರೆದು ಕೊಡಲು ಅನುಕೂಲ ಮಾಡಿಕೊಳ್ಳುವನೋ ಅದೇ ಯೋಗ್ಯ ವೇಳೆ.

(೬) ಬರೆದು ಕೊಡುವ ಯೋಗ್ಯ ಸ್ಥಳ:
(i) ಕಲಂ ಮೌನವಾಗಿದೆ.
(ii) ಕೊಳ್ಳುವವನು ಮಾರುವವನಿಗೆ ಹಸ್ತಾಂತರದ ಹಣ ಡ್ರಾಫ್ಟನ್ನು ಸಂದಾಯ ಮಾಡುವುದು ಅವನ ಕರ್ತವ್ಯವಾಗಿರುವುದರಿಂದ ಹಸ್ತಾಂತರವನ್ನು ಬರೆದುಕೊಡುವ ಯೋಗ್ಯ ಸ್ಥಳವು ಮಾರುವವನ ವಾಸಸ್ಥಳವಾಗಿದೆ. ಇಲ್ಲವೆ ಆತನ ಸಲಹಾ ವಕೀಲರ ಕಚೇರಿ ಯೋಗ್ಯ ಸ್ಥಳವಾಗಿದೆ.

(೭) ಹಸ್ತಾಂತರದ ವೆಚ್ಚ:

(i) ಕಲಮು ಮೌನವಾಗಿದೆ.

(ii) ಇದನ್ನು ಸಾಮಾನ್ಯವಾಗಿ ಒಪ್ಪಂದದ ಕರಾರಿನಲ್ಲಿ ನಿರ್ಧರಿಸುತ್ತಾರೆ.

(iii) ವ್ಯಕ್ತಪಡಿಸಿದ ಯಾವುದೇ ಕರಾರು ಕಲಂ ೨೯ (ಕ)ದ ಅನ್ವಯ ಸ್ಟ್ಯಾಂಪ್ ಖರ್ಚನ್ನು ಕೊಡಬೇಕಾಗುತ್ತದೆ.

**೫. ಕಲಂ ೫೫(೧) (ಇ) – ಆಸ್ತಿಯ ರಕ್ಷಣೆ**

(೧) ಒಂದು ಖರೀದಿ ಒಪ್ಪಂದವು ಕೊಳ್ಳುವವನಿಗೆ ಆ ಆಸ್ತಿಯಲ್ಲಿ ಅವನಿಗೆ ಯಾವುದೇ ಹೊಣೆ ಪ್ರಾಪ್ತವಾಗುವುದಿಲ್ಲ. ಆದರೆ ಮಾರುವವನು ಆ ಆಸ್ತಿಯ ಕಾಳಜಿ ವಹಿಸುವ ವೈಯಕ್ತಿಕ ಹೊಣೆಯನ್ನು ವಿಧಿಸುತ್ತದೆ.

(೨) ಮಾರುವವನು ಸ್ವಾಮ್ಯದ ಹಕ್ಕಿನ ದಸ್ತಾವೇಜುಗಳ ಕಾಳಜಿಯನ್ನು ಸಹ ತೆಗೆದುಕೊಳ್ಳಲಿಕ್ಕೆಬೇಕು. ಈ ದಸ್ತಾವೇಜುಗಳು ಕಳೆದರೆ, ಆ ಆಸ್ತಿಯ ಬೆಲೆಯಲ್ಲಿ ಇಳಿಕೆಯಾಗುತ್ತದೆ. ಮತ್ತು ಆ ಆಸ್ತಿಗೆ ಹಾನಿ ಉಂಟಾಗುತ್ತದೆ.

(೩) ಕಾಳಜಿ ವಹಿಸಬೇಕು ಅಂದರೆ ಒಬ್ಬ ವಿವೇಕವುಳ್ಳ ಆಸ್ತಿಯ ಒಡೆಯನು ಯೋಗ್ಯ ದುರಸ್ತಿಗಳನ್ನು ಮಾಡಿ ಇಡತಕ್ಕಂತೆ ಇಡಲಿಕ್ಕೇಬೇಕು. ಮತ್ತು ಅದನ್ನು ಅತಿಕ್ರಮಣ ಮಾಡುವವರಿಂದ ಆಗುವ ಹಾನಿಯಿಂದ ಸಂರಕ್ಷಿಸಲೇಬೇಕು.

(೪) ಕಾಳಜಿ ತೆಗೆದುಕೊಳ್ಳುವ ಹೊಣೆಗಾರಿಕೆಯು ಆ ಒಪ್ಪಂದ ಕರಾರಿಗೆ ಆಧಾರದ ಸೊತ್ತಾಗುತ್ತದೆ. ಅದು ಹಸ್ತಾಂತರದಲ್ಲಿ ವಿಲೀನವಾಗುವುದಿಲ್ಲ. ಖರೀದಿ ವ್ಯವಹಾರವು ಮುಗಿದ ನಂತರವೂ ಆ ಕಾಳಜಿ ತೆಗೆದುಕೊಳ್ಳುವ ಕರ್ತವ್ಯವು ಮುಂದುವರೆಯುತ್ತದೆ. ಮಾರುವವನಿಂದ ಯಾವುದೇ ಹಾನಿ ಸಂಭವಿಸಿದರೆ, ಕೊಳ್ಳುವವನು ಹೊಣೆಗಾರನಾಗುವುದಿಲ್ಲ. ಮಾರುವವನು ತನ್ನ ಕರ್ತವ್ಯದಲ್ಲಿ ಯಾವುದೇ ನಿಷ್ಕಾಳಜಿ ತೋರಿದರೆ ಕೊಳ್ಳುವವನು ಆ ಕೊಂಡ ಹಣದಲ್ಲಿ ನಷ್ಟ ಪರಿಹಾರ ಕೇಳಲು ಬಾಧ್ಯಸ್ಥನಿದ್ದಾನೆ. ಈ ವ್ಯವಹಾರ ಪೂರ್ತಿಯಾದನಂತರ ಕೊಳ್ಳುವವನು ಈ ನಷ್ಟಗಳನ್ನು ವಸೂಲಿ ಮಾಡಿಕೊಳ್ಳಬಹುದು.

**೬. ಕಲಂ ೫೫(೧) (ಗ) ನಿರ್ಗಮನ**

(೧) ಭಾರತದಲ್ಲಿ ಇಂಗ್ಲಿಷ್ ಕಾನೂನಿನಲ್ಲಿ ಹೊರ ಹೋಗುವ, ಎಂದರೆ ನಿರ್ಗಮನವೆಂದು ಕರೆಯುವುದನ್ನು ಮಾರುವವನು ಕೊಂಡವನಿಗೆ ಕೊಡುವುದು ಅವನ ಕರ್ತವ್ಯವಾಗಿದೆಯೆಂಬುದು ಕೆಳಗಣ ವಿಷಯಗಳನ್ನು ಒಳಗೊಂಡಿರುತ್ತದೆ.

(i) ಸಾರ್ವಜನಿಕ ಸುಂಕಗಳು

(ii) ಬಾಡಿಗೆ

(iii) ಬಡ್ಡಿ

(iv) ಬೋಝ್ (ಜವಾಬ್ದಾರಿಗಳು)

**(i) ಸಾರ್ವಜನಿಕ ಸುಂಕಗಳ ಮೇಲೆ**

(i) ಸರಕಾರಿ ಕಂದಾಯ–ರಾಜಸ್ವ

(ii) ಮುನಿಸಿಪಾಲಿಟಿ ಕರಗಳು.

(iii) ಶಾಸನ ಪ್ರಕಾರ ಭೂಮಿಯ ಮೇಲೆ ವ್ಯಕ್ತಪಡಿಸಿದ, ಕರೆಕೊಟ್ಟದ್ದು, ಇಲ್ಲವೆ ಅವ್ಯಕ್ತವಾಗಿದ್ದು, ಕೊಡದಿದ್ದ ಪಕ್ಷದಲ್ಲಿ ಯಾರು ಅದನ್ನು ಜಪ್ತಿ ಮಾಡಿ ಇಲ್ಲವೆ ಬೇರೆ ರೀತಿಯಿಂದ ಆ ಭೂಮಿಯ ಮೇಲೆ ವಸೂಲು ಮಾಡಿಕೊಳ್ಳಲು ಬರುವುದೋ ಅಂತಹದನ್ನು.

(ii) ಬಾಡಿಗೆ–ಒತ್ತೆಯ ಆಸ್ತಿಯನ್ನು ಮಾರಾಟ ಮಾಡಿದಾಗ ಬಾಡಿಗೆ ಕೊಡುವ ಪ್ರಶ್ನೆಯು ಉದ್ಭವಿಸುತ್ತದೆ. ಮಾರಾಟ ಮಾಡಿದ ದಿನಾಂಕದವರೆಗೆ ಒತ್ತೆ ಸೊತ್ತಿನ ಬಾಡಿಗೆಯನ್ನು ಮಾರುವವನು ಕೊಡತಕ್ಕದ್ದು.

(iii) ಬಡ್ಡಿ

(೫) ಬೋಝ್:

(i) ಬೋಝ್ ಅಂದರೆ

(೧) ಮಾಗಣಿ ಕ್ಲೇಮು, (೨) ಧಾರಣಾಧಿಕಾರ ಅಥವಾ ಆಸ್ತಿಯ ಮೇಲೆ ಇರುವ ಜವಾಬ್ದಾರಿಗಳು

(ii) ಎಲ್ಲ ಭೋಜಾಗಳನ್ನು ಮುಕ್ತ ಮಾಡುವುದು ಮಾರಾಟ ಮಾಡುವವನ ಕರ್ತವ್ಯವಾಗಿರುತ್ತದೆ. ಕೊಳ್ಳುವವನು ಈ ಒಪ್ಪಂದ ಮಾಡಿಕೊಳ್ಳುವಾಗ ಈ ಭೋಜ್‌ಗಳು ಇರುವುದು ಅವನಿಗೆ ಗೊತ್ತಿದೆಯೋ ಇಲ್ಲವೋ ಇದು ಮಹತ್ವದ್ದಲ್ಲ.

(iii) ಈ ಬಗ್ಗೆ ಪರಿಣಾಮಕಾರಿಯಾಗುವ ವ್ಯಕ್ತಪಡಿಸುವ ಕರಾರು ಇಲ್ಲದಿರುವಾಗ ಭೋಜವು ಮಾರಾಟ ವಿಷಯ ವಸ್ತು ಆಗಿರುವುದಿಲ್ಲ.

(iv) ಆದರೆ ಈ ಬೋಜ್ ಮಾರಾಟ ಮಾಡುವವನ ಯಾವತ್ತೂ ಆಸ್ತಿಯ ಮೇಲೆ ಸಾಮಾನ್ಯ ಬೋಝ್ ಇದ್ದರೆ ಕೊಂಡುಕೊಳ್ಳುವವನು, ಆ ಮಾರುವವನು ತನ್ನ ಉಳಿದ ಆಸ್ತಿ ಮಾರಿ ಆ ಬೋಝ್ ತೀರಿಸಬೇಕೆಂದು ಆಗ್ರಹಪಡಿಸಬಹುದು.

(೬) ಮಾರಾಟ ಮಾಡುವವನ ಮೇಲೆ ವಿಧಿಸಿದ ಈ ಹೊಣೆಯು ಒಪ್ಪಂದಕ್ಕೆ ಆನುಷಂಗಿಕ ವಾಗಿರುವುದರಿಂದ, ಹಸ್ತಾಂತರ ಪತ್ರವಾದ ನಂತರವೂ ಅದನ್ನು ಜಾರಿಗೊಳಿಸಬಹುದು.

## ಮಾರುವವನ ಹೊಣೆಗಾರಿಕೆಗಳು

### ೨. ಹಸ್ತಾಂತರ ಪತ್ರ ಮಾಡಿಕೊಟ್ಟ ನಂತರ

**೧. ಕಲಂ ೫೫(೧) (ಬ) ಸ್ವಾಮ್ಯ (ಕಬ್ಜೆ) ನೀಡುವುದಕ್ಕೆ**

(೧) ಹಸ್ತಾಂತರ ಪತ್ರವಾದ ನಂತರ ಕಬ್ಜೆಯನ್ನು ಕೊಡುವುದು ಮಾರುವವನ ಕರ್ತವ್ಯವಾಗಿದೆ ಮತ್ತು ಕೊಂಡವನು ತನ್ನಷ್ಟಕ್ಕೆ ತಾನೇ ಕಬ್ಜೆಯನ್ನು ತೆಗೆದುಕೊಳ್ಳಲಿ ಎಂದು ಬಿಡಬಾರದು.

(೨) ಈ ಹೊಣೆಗಾರಿಕೆಯನ್ನು ನಿರ್ದಿಷ್ಟ ಪರಿಹಾರ ಕೋರಿ ದಾವೆ ಮಾಡಿ ಕಾರ್ಯಗತಗೊಳಿಸಲೂ ಬಹುದು.

(೩) ಕಬ್ಜೆಯನ್ನು ಕೊಡಲು ವೇಳೆ ಸಮಯವನ್ನು ಕಲಮು ಹೇಳುವುದಿಲ್ಲ.

(i) ಮಾರುವವನು ಯಾವಾಗ ಕಬ್ಜೆಯನ್ನು ಕೊಡತಕ್ಕದ್ದೆಂದು ಕಲಮಿನಲ್ಲಿ ಹೇಳುವುದಿಲ್ಲ.

(ii) ಕಲಂ ೫೫(೪) (ಅ) ಉಲ್ಲೇಖಿಸುವುದೇನೆಂದರೆ ಕೊಂಡವನಿಗೆ ಯಾವಾಗ ಸ್ವಾಮಿತ್ವವು ಹೋಗುತ್ತದೆಯೋ ಆಗ ಅದರ ಕಬ್ಜೆಯನ್ನು ಕೊಡಬೇಕು. ಇದು ಖರೀದಿ ಕಾಗದ

ಪತ್ರವನ್ನು ಬರೆದುಕೊಡುವುದಾಗಿ (೬ ಲಾಹೋರ ೩೦೮)

(iii) ಬೆಲೆಯನ್ನು ಕೊಡಬಾರದಂತಹ ಉದ್ದೇಶವು ಕೊಂಡವನಿಗೆ ಇರದ ಹೊರತು ಮತ್ತು ಅವನು ಅದರ ಬೆಲೆಯನ್ನು ಕೊಟ್ಟಿಲ್ಲವೆಂದು ಮಾರುವವನು ಅದರ ಕಬ್ಜೆಯನ್ನು ಕೊಡಲಿಕ್ಕೆ ನಿರಾಕರಿಸತಕ್ಕದ್ದಲ್ಲ.

(iv) ಕೊಂಡವನಿಗೆ ಕಬ್ಜೆ ಪಡೆಯುವ ಹಕ್ಕು ಮತ್ತು ಮಾರುವವನಿಗೆ ಅದರ ಬೆಲೆ ಕೊಡದಿದ್ದರೆ ಅವೆರಡನ್ನೂ ಒಂದೇ ದಾವೆಯಲ್ಲಿ ಜಾರಿಗೊಳಿಸಬಹುದು.

(೪) ಕಬ್ಜೆಯ ಸ್ವರೂಪ

(i) ಕಬ್ಜೆ ಅಂದರೆ ವಾಸ್ತವಿಕವಾಗಿ ಅಧಿಭೋಗದಲ್ಲಿರುವುದೆಂದು ಅರ್ಥವಲ್ಲ.

(ii) ಸ್ಪರ್ಶಕ್ಕೆ ತಗಲುವ (ಮೂರ್ತ ಫಲಿತಾಂಶ) ವಸ್ತುಗಳಿದ್ದರೆ ಪ್ರತ್ಯಕ್ಷ ಕಬ್ಜೆ ಮತ್ತು ಮುಟ್ಟಲಾಗದ ಆಸ್ತಿ ಅಮೂರ್ತ ಫಲಿತಾ ಪ್ರಕರಣಗಳಲ್ಲಿ ಸಾಂಕೇತಿಕ ಕಬ್ಜೆ ಪಡೆಯುವುದು ಸಾಕಷ್ಟು ಆಗುವುದು.

(iii) ಬಾಡಿಗೆದಾರರ ಇಲ್ಲವೆ ಒತ್ತೆ ಕಬ್ಜೆಯಲ್ಲಿರುವ ಆಸ್ತಿಗಳನ್ನು ಕುರಿತು ಬಾಡಿಗೆದಾರರ ಇಲ್ಲವೆ ಒತ್ತೆ ಇಟ್ಟುಕೊಂಡವರ ಕಬ್ಜೆಯಲ್ಲಿರುವ ಆಸ್ತಿಗಳಿಗೆ ಸಾಂಕೇತಿಕ ಕಬ್ಜೆಯು ಸಾಕಷ್ಟು ಆಗುವುದು.

**೨. ಕಲಂ ೫೫(೨) ಹಿತಾಸಕ್ತಿ ಇದೆಯೆಂದು ಆಶ್ವಾಸನೆ ಕೊಡುವುದಿಲ್ಲ**

(೧) ಮಾರಾಟ ಮಾಡುವವನ ಹೊಣೆಗಾರಿಕೆಯನ್ನು ಕುರಿತು ಎರಡು ಅಭಿಪ್ರಾಯಗಳಿವೆ ಎಂಬ ನಿಲುವಿನಂತೆ ಹಸ್ತಾಂತರ ಪತ್ರದ ಮೊದಲು ಇಲ್ಲವೆ ಹಸ್ತಾಂತರ ಪತ್ರವಾದ ನಂತರ ಇದು ಉದ್ಭವಿಸುತ್ತದೆ.

(i) **ಕಲ್ಕತ್ತೆಯ ಅಭಿಪ್ರಾಯ:** ಈ ಖಂಡವು ಉದ್ದೇಶಿಸಿರುವುದೇನೆಂದರೆ ಒಂದು ಮುಗಿದ ಒಪ್ಪಂದದ ಕರಾರು ಮತ್ತು ಹಕ್ಕಿನ ದಸ್ತಾವೇಜನ್ನು ಇದು ಇಂಗ್ಲಿಷ್ ಹಸ್ತಾಂತರದ ಕಾಗದಕ್ಕೆ ಪರಿವರ್ತಿಸುವ ಅನುರೂಪವಾಗಿದೆ. ೫೭ ಕಲ್ಕತ್ತಾ ೧೧೮೯

(ii) **ಮದ್ರಾಸದ ಅಭಿಪ್ರಾಯ:** ಈ ಖಂಡವು ಉದ್ದೇಶಿಸಿರುವುದೇನೆಂದರೆ ಯಾವ ಪ್ರಕರಣಗಳಲ್ಲಿ ಕೇವಲ ಒಪ್ಪಂದದ ಕರಾರಿಗಿಂತ ಮುಂಚೆ ವ್ಯವಹಾರವು ಪ್ರಗತಿ ಪಥದಲ್ಲಿರದಿದ್ದರೆ. (೪೦ ಮದ್ರಾಸ ೩೩೮ (೩೫೦) ೨೮ ಮದ್ರಾಸ ೧೧೭೧)

(iii) **ಲಾಹೋರ ಅಭಿಪ್ರಾಯ:** ಮದ್ರಾಸ ಅಭಿಪ್ರಾಯವನ್ನೇ ಅನುಸರಿಸುತ್ತಾರೆ.

(iv) **ಬಾಂಬೆ ಅಭಿಪ್ರಾಯ:** ಹೊಣೆಗಾರಿಕೆಗೆ ಸಂಬಂಧಿಸಿದಂತೆ ಅದು ಹಸ್ತಾಂತರ ಪತ್ರ ಬರೆದುಕೊಟ್ಟ ನಂತರ ಪ್ರಾರಂಭವಾಗುತ್ತದೆ. (೧೮ ಬಾಂಬೆ ಎಸ್.ಆರ್. ೨೯೨, ೫೨ ಬಾಂಬೆ ೮೮೩, ೩೧ ಬಾಂಬೆ ಎಲ್.ಆರ್. ೬೫೮)

(ಅ) ಕಲಂ ೫೫(೧)ರ ಉಪಬಂಧಗಳು ಒಪ್ಪಂದ ಕರಾರು ಪೂರ್ತಿಯಾಗುವ ಪೂರ್ವದಲ್ಲಿ ಕೊಳ್ಳುವವನಿಗೆ ಮಾರಾಟಕ್ಕೆ ಕೊಡಲಿರುವ ಅನ್ವಯ ಮಾಲ್ಕೀ ಹಕ್ಕು ಯಾವ ಯುಕ್ತ ಸಂಶಯಕ್ಕೆ ಆಸ್ಪದ ಇಲ್ಲದಂತೆ ಮುಕ್ತವಾಗಿದೆಯೆಂದು ಕಂಡುಹಿಡಿಯಬೇಕು. ಒಮ್ಮೆ ಅವನು ಹಸ್ತಾಂತರ ದಸ್ತಾವೇಜನ್ನು ಸ್ವೀಕರಿಸಿದ ನಂತರ ಮತ್ತು ಖರೀದಿ ವ್ಯವಹಾರವು

ಮುಗಿಯುತ್ತದೆ. ಅವನಿಗೆ ಮೋಸ, ವಂಚನೆಯ ಆಪಾದನೆ ಮಾಡುವ ಹೊರತಾಗಿ ಅವನಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ಕ್ರಮೋಪಾಯ ಇರುವುದಿಲ್ಲ.

(ಬ) ಸ್ವಾಮಿತ್ವ: ಮಾಲಿಕತ್ವದ ವಿಷಯ ಒಳಗೊಂಡ ಒಡಂಬಡಿಕೆ ಪತ್ರ ಕರಾರು ಪತ್ರವನ್ನು ಒಳಗೊಂಡ ಕಲಮು ೫೫(೧). ಇದು ಕೊಳ್ಳುವವನಿಗೆ ಯಾವುದೇ ನ್ಯೂನತೆಗಳು ಒಡಂಬಡಿಕೆಯ ಪತ್ರ ಹಸ್ತಾಂತರ ದಸ್ತಾವೇಜನ್ನು ಬರೆದುಕೊಟ್ಟ ನಂತರ ಕಂಡುಬಂದರೆ, ಬಹಿರಂಗಗೊಂಡರೆ, ಆಗ ಅವನಿಗೆ ಕ್ರಮೋಪಾಯವನ್ನು ಕಲ್ಪಿಸಿಕೊಡುತ್ತದೆ.

(iv) ಮತ್ತೊಂದು ಅಭಿಪ್ರಾಯವು ಇದು ಬಹುತರವಾಗಿ ಸರಿಯಾದ ಅಭಿಪ್ರಾಯವಾಗಿರುತ್ತದೆ.

(ಅ) ಮಾಲಿಕತ್ವ ಸ್ವಾಮ್ಯತ್ವದ ವಿಷಯದಲ್ಲಿ ಮಾರುವವನ ಹೊಣೆಗಾರಿಕೆಯು ಎರಡು ವಿಧವಾಗಿರುತ್ತದೆ.

(i) ಅವನು ಯಾವ ಯೋಗ್ಯ ಸಂಶಯವಿಲ್ಲದೆ ಸ್ವಾಮಿತ್ವ ಕೊಡುವವನಿಗೆ ವರ್ಗಾಯಿಸಲಿಕ್ಕೇ ಬೇಕು– ಕೊಡಲಿಕ್ಕೇಬೇಕು.

(ii) ಅವನು ಅದರ ಮಾಲೀಕತ್ವವನ್ನು ಕೊಂಡವನಿಗೆ ಬಹಿರಂಗವಾಗಿ ಘೋಷಿಸಿ, ವರ್ಗಾಯಿಸಲಿಕ್ಕೇಬೇಕು. ಮತ್ತು ಯಾವುದಕ್ಕೂ ಕಡಿಮೆ ಇಲ್ಲದಂತೆ, ಅವನು ತನ್ನ ಪ್ರಾತಿನಿಧ್ಯವನ್ನು ಚೆನ್ನಾಗಿ ಮಾಡಲಿಕ್ಕೇಬೇಕು.

(i)ರ ಕೆಳಗೆ ಅವನು ಮಾನ್ಯ ಮಾಡಿದ ರೀತಿಗಳಲ್ಲಿ ಅಂದರೆ ಚಿರಭೋಗ, ಕಬ್ಜಾ, ವಾರಸಾ, ಕೊಳ್ಳುವಿಕೆ ಮುಂತಾದ ರೀತಿಯಲ್ಲಿ ತನ್ನ ಮಾಲಿಕತ್ವವನ್ನು ಪಡೆದದ್ದನ್ನು ಸಿದ್ಧಮಾಡಲಿಕ್ಕೇಬೇಕು.

(ii)ರ ಕೆಳಗೆ ಇದು ಇನ್ನೂ ಮುಂದೆ ಹೋಗಿ ಬಹಿರಂಗವಾಗಿ ಅವನು ಆಸ್ತಿಯಲ್ಲಿಯ ತನ್ನ ಮಾಲ್ಕೀ ಹಕ್ಕನ್ನು ವರ್ಗಾಯಿಸಬೇಕು. ಆಗ ಆ ವರ್ಗಾಯಿಸಿದ ಹಕ್ಕುಗಳು ಸಂಪೂರ್ಣ ಮಾಲ್ಕೀ ಹಕ್ಕನ್ನು, ಹಿತಾಸಕ್ತಿಯನ್ನು ವರ್ಗಾಯಿಸಿದ್ದಾಗುತ್ತದೆ ಮತ್ತು ಅದು ಕೇವಲ ಅಧಿಭೋಗದ ಹಿತಾಸಕ್ತಿಯಾಗಿರದೆ, ಅದು ಋಣಭಾರಗಳಿಂದ ಮುಕ್ತವಾಗಿರುವ ವರ್ಗಾಯಿಸಬಲ್ಲ ಭೂಮಿಯ ಖರೀದಿ ವ್ಯವಹಾರವಾಗಿರಬೇಕು. ಮತ್ತು ಋಣಭಾರ ಗಳಿಂದ ಕೂಡಿದ್ದು ವರ್ಗಾಯಿಸಲು ಭೂಮಿಯ ಖರೀದಿ ಮೂಲಕ ವರ್ಗಾಯಿಸಲು ಬರುವುದಿಲ್ಲ.

(ಬ) ಕಲಂ ೫೫(೧): ಇದು ಹೊಣೆಗಾರಿಕೆಗೆ ಸಂಬಂಧಿಸಿದಂತೆ ಮಾಲ್ಕಿ ಹಕ್ಕನ್ನು ಮುಕ್ತನಾಗಿ ಯಾವುದೇ ಸಂಶಯವಿಲ್ಲದೆ ಭೂಮಿ ಸ್ವಾಮಿತ್ವ ಹಕ್ಕನ್ನು ವರ್ಗಾಯಿಸುವುದನ್ನು ಕುರಿತು ಹೇಳುತ್ತದೆ. ಕಲಂ ೫೫(೨): ಇದು ಸ್ವಾಮಿತ್ವಕ್ಕೆ ಸಂಬಂಧಿಸಿದಂತೆ ವರ್ಗಾಯಿಸುವುದನ್ನು ಹೇಳುತ್ತದೆ.

(೨) ಕಲಂ ೫೫(೨) ಇದು ಆಸ್ತಿ ಮಾಲ್ಕೀ ಹಕ್ಕು: ಸ್ವಾಮಿತ್ವದ ಬಗ್ಗೆ ತಪ್ಪು ನಿರೂಪಣೆ ಕುರಿತು ಹೇಳುತ್ತದೆ. ಮತ್ತು ಆಸ್ತಿಯನ್ನು ತಪ್ಪಾಗಿ ವರ್ಣಿಸಿದ್ದನ್ನು ಕುರಿತು ಹೇಳುತ್ತದೆ.

(i) ಮಾಲ್ಕಿ ಹಕ್ಕನ್ನು ತಪ್ಪಾಗಿ ವರ್ಣಿಸಿ ಅದು ಆ ಹಸ್ತಾಂತರ ದಸ್ತಾವೇಜಿನ ಮಾಲ್ಕೀ ಹಕ್ಕಿನ ಉಲ್ಲಂಘನೆಯು ಕಲಂ ೫೫(೨)ರ ಪ್ರಕಾರ ಆಗುತ್ತದೆ ಮತ್ತು ಅದಕ್ಕೆ ಪರಿಹಾರ ಕೇಳಲು ಹಕ್ಕು ಇರುತ್ತದೆ.

(ii) ಸ್ವಾಮಿತ್ವದ ಹಸ್ತಾಂತರ ದಸ್ತಾವೇಜು ಆಸ್ತಿಯ ತಪ್ಪು ವರ್ಣನೆಯ ವ್ಯಾಪ್ತಿಗೊಳಪಡುವುದಿಲ್ಲ.

(iii) ಒಬ್ಬ ಕೊಳ್ಳುವವನಿಗೆ ದಸ್ತಾವೇಜಿನಲ್ಲಿ ಕಾಣಿಸಿದ ಪತ್ರಕ್ಕಿಂತ ಕಡಿಮೆ ಇದೆಯೆಂದು ಕಂಡುಬಂದರೆ ಅದು ದಸ್ತಾವೇಜಿನಲ್ಲಿ ಖರೀದಿ ಪತ್ರದಲ್ಲಿ ಕಾಣಿಸಿದ ಕ್ಷೇತ್ರಕ್ಕೆ ದಸ್ತಾವೇಜು ಆಗಲಾರದು. ಇದು ಕೇವಲ ಕೊಂಡವನ ಮಾಲಿಕತ್ವವನ್ನು ತೋರಿಸುವ ಒಂದು ಒಪ್ಪಂದಕ್ಕೆ ಮಾರಾಟ ಮಾಡುವವನ ಹಕ್ಕನ್ನು ತೋರಿಸುವ ದಸ್ತಾವೇಜು ಆಗಿರುತ್ತದೆ. ಅದರ ಪರಿಣಾಮವಾಗಿ ಕೊಂಡವನಿಗೆ ಕ್ಷೇತ್ರದಲ್ಲಿ ಕಡಿಮೆ ಕಂಡುಬಂದರೆ ಆಗ ಅವನು ಮಾಡತಕ್ಕ ದಾವೆಯು ಅವನಿಗೆ ಬರೆದುಕೊಟ್ಟ ಖರೀದಿ ದಸ್ತಾವೇಜು ಮಾಲಿಕತ್ವದ ದಸ್ತಾವೇಜಿನ ಮೇಲೆ ಅವಲಂಬಿತ ಇರಬಾರದು. ಅದರ ಪ್ರತಿಫಲ ಭಾಗಶಃ ಒಪ್ಪಂದದ ಕರಾರಿನ ಮೇಲೆ ಆ ದಾವೆಯನ್ನು ಮಾಡಬೇಕು. ಮಾಲಿಕತ್ವ ತೋರಿಸುವ ದಸ್ತಾವೇಜು ಹಸ್ತಾಂತರ ಮಾಡುವ ಪ್ರತಿಯೊಬ್ಬನಿಗೆ ಅಂತರಂಗವಾದ ಮಾಲಿಕತ್ವದ ಹಕ್ಕು ಆಗಿರುತ್ತದೆ. ಆದರೆ ಪಕ್ಷಗಾರರು ವ್ಯಕ್ತಪಡಿಸಿದ ದಸ್ತಾವೇಜಿನ ಮಾಲಿಕತ್ವಕ್ಕೆ ತೋರಿಸುವ ಕುರಿತು ವ್ಯಕ್ತಪಡಿಸಿದ ದಸ್ತಾವೇಜು ಬರೆದುಕೊಡಲು ಕರಾರು ಮಾಡಿಕೊಳ್ಳಬಹುದು. ವ್ಯಕ್ತಪಡಿಸಿದ ದಸ್ತಾವೇಜಿನ ಬಗ್ಗೆ ಗಮನಿಸಬೇಕಾದ ಮಹತ್ವದ ಸಂಗತಿಗಳು ಕೆಳಗಿನಂತೆ ಇರುತ್ತವೆ.

**ವ್ಯಕ್ತಪಡಿಸಿದ ದಸ್ತಾವೇಜಿನ ಕರಾರುಗಳು**

(ಅ) ಅಂತರ್ಗತ ಅಧಿಕಾರವುಳ್ಳವರನ್ನು ಆಧಾರೋಹ ಮಾಡಿದರೆ ಮತ್ತು ಅದರ ಪರಿಣಾಮದ ಬಗೆಗೆ ಕಾಳಜಿ ಮಾಡದೆ ಇರುವುದು.

(ಬ) ಒಂದು ವ್ಯಕ್ತಪಡಿಸಿದ ಖರೀದಿ ದಸ್ತಾವೇಜ ಮಾತ್ರ ಎಲ್ಲ ಪಕ್ಷಗಾರರ ಹಕ್ಕುಗಳನ್ನು ಸಂರಕ್ಷಿಸಬಹುದು. ಆದರೂ ಸಹ ಅಂತರ್ಗತ ಹಕ್ಕುಳ್ಳವರ ದಸ್ತಾವೇಜನ್ನು ಅವರು ಸಂಶಯಕ್ಕೆ ಆಸ್ಪದವಿಲ್ಲದ ವಿವರಣೆ ಕೊಡದ ಹೊರತು ಮುಕ್ತವಾಗಲಾರದು.

**೪. ದಸ್ತಾವೇಜಿನ ಫಲದಲ್ಲಿ ಯಾರು ಹಕ್ಕು (ಕ್ಲೇಮು) ಕೇಳಬಹುದು**

ಈ ಖರೀದಿ ದಸ್ತಾವೇಜಿನ ಫಲವನ್ನು ಕೇವಲ ಕೊಂಡವನು ಮಾತ್ರವಲ್ಲದೆ, ಅವನ ಪ್ರತಿನಿಧಿಗಳು ಮತ್ತು ನಂತರ ಹಸ್ತಾಂತರ ಹೊಂದಿದವರು ಪರಭಾರೆ ಪಡೆದವನು ಸಹಿತ ಕೊಂಡವನ ಪರವಾಗಿ ಹಕ್ಕು ಕೇಳಬಹುದು. ಇದನ್ನು ಮಾರಾಟಮಾಡಿದವನ ವಿರುದ್ಧ ಕೇಳಬಹುದು.

೫. ಈ ಖಂಡದ ಅನ್ವಯ ಮಾರಾಟಮಾಡುವವನು ಆ ಆಸ್ತಿಗೆ ತಾನು ಸಂಪೂರ್ಣ ಹಕ್ಕುಳ್ಳವನಾಗಿರುವೆನೆಂದು ತನ್ನ ಮಾಲಿಕತ್ವ ಉಳ್ಳವನೆಂದು ಖಾತರಿ ಮಾಡಿಕೊಡುತ್ತಾನೆಂದು ಗ್ರಹಿಸತಕ್ಕದ್ದು. ಅವನು ಆ ಖರೀದಿ ದಸ್ತಾವೇಜಿನ ಹೊರಗಡೆ ಸಂಪರ್ಕಿಸುವುದಾದರೆ, ಆಗ ಅವನು ವ್ಯಕ್ತವಾಗಿ ಇಲ್ಲವೆ ಅವ್ಯಕ್ತವಾದ ಇಂಗಿತವಾದ ಕರಾರುಗಳಿಂದ ಅವನು ಹಾಗೆ ಮಾಡಲಿಕ್ಕೇಬೇಕು.

೬. ಮಾಲಿಕತ್ವ ತೋರಿಸುವ ಇಲ್ಲವೇ ಇಂಗಿತವಾದ ದಸ್ತಾವೇಜು ಕೊಳ್ಳುವವನ ಲಕ್ಷ್ಯಕ್ಕೆ ಆ ದಸ್ತಾವೇಜಿನಲ್ಲಿ ಮಾಲಿಕತ್ವದ ದೋಷದ ಬಗ್ಗೆ ನೋಟೀಸು ಇರಬಹುದು ಅಥವಾ ಇರಲಿಕ್ಕಿಲ್ಲ. ಅದಕ್ಕೆ ಈ ಇಂಗಿತ ದಸ್ತಾವೇಜು ಸಂಬಂಧ ಇರುವುದಿಲ್ಲ ಮತ್ತು ಕೊಳ್ಳುವವನಿಗೆ ಈ ನ್ಯೂನತೆಯು ಗೊತ್ತಿದ್ದರೂ ಸಹ ಅವನಿಗೆ ಪರಿಹಾರ ಕೇಳಿ ದಾವೆ ಮಾಡುವ ಹಕ್ಕಿಗೆ ಚ್ಯುತಿ ಬಾರದು. ಮತ್ತು ಆ ಖರೀದಿ ದಸ್ತಾವೇಜಿನ

ನ್ಯೂನತೆಯಿಂದ ಆ ಆಸ್ತಿಯ ಕಬ್ಜೆಯಿಂದ ಹೊರಗೆ ಹಾಕಲ್ಪಟ್ಟರೆ, ಅವನು ಆ ಖರೀದಿ ಹಣವನ್ನು ತಿರುಗಿಕೊಡಲು ಕೇಳಬಹುದು.

೭. ಮಾಲಿಕತ್ವದ ಬಗ್ಗೆ ದಸ್ತಾವೇಜು. ಇದು ಏನನ್ನು ಒಳಗೊಂಡಿರುತ್ತದೆ ಎನ್ನುವುದು ಇಂಗ್ಲಿಷಿನ ಹಸ್ತಾಂತರಿಸುವಿಕೆಯಲ್ಲಿ ಸೂಚ್ಯವಾದಂತೆ

(i) ದಸ್ತಾವೇಜನ್ನು ಬರೆದುಕೊಡುವ ಹಕ್ಕು
(ii) ಶಾಂತವಾಗಿ ಉಪಭೋಗಿಸುವ ಹಕ್ಕು
(iii) ಯಾವುದೇ ಋಣಭಾರ ಇಲ್ಲದೆ ಅದನ್ನು ಹೊಂದುವ ಹಕ್ಕು
(iv) ಮುಂದಿನ ಆಶ್ವಾಸನೆಯ ಹಕ್ಕು

ಇವೆಲ್ಲವುಗಳನ್ನು ಒಳಗೊಂಡಿರುತ್ತದೆ. ಈ ದಸ್ತಾವೇಜಿನ ಅಡಿಯಲ್ಲಿ ಮುಂದಿನ ಆಶ್ವಾಸನೆ ಆ ಮಾರುವವನು, ಆ ಕೊಳ್ಳುವವನ ಯುಕ್ತ ಬೇಡಿಕೆಯಂತೆ ಮಾರುವವನು, ಕೊಳ್ಳುವವನ ಮಾಲಿಕತ್ವದ ಹಕ್ಕನ್ನು ಪೂರ್ತಿಗೊಳಿಸಲು, ಮುಂದಿನ ಕೃತಿಗಳನ್ನು ಮಾರಲಿಕ್ಕೇಬೇಕು. ಹೀಗೆ ಮಾರಾಟ ಮಾಡಿದ ನಂತರ, ತನ್ನ ಅಪೂರ್ಣ ಮಾಲಿಕತ್ವವನ್ನು ಪರಿಪೂರ್ಣಗೊಳಿಸಿಕೊಂಡಿದ್ದರೆ, ಅಂದರೆ ಇನ್ನುಳಿದ ಹಿತಾಸಕ್ತಿಯನ್ನು ಅವನು ಕೊಂಡುಕೊಂಡಿದ್ದರೆ ಅದನ್ನು ಅವನು ತನ್ನ ಈ ಖರೀದಿ ದಸ್ತಾವೇಜಿನ ಮೂಲಕ ಕೊಳ್ಳುವವನಿಗೆ ಹಸ್ತಾಂತರಿಸಲು ಒತ್ತಾಯಿಸಲಾಗುವುದು.

(೨) ಇಂಗ್ಲಿಷ್ ಖರೀದಿ ದಸ್ತಾವೇಜುಗಳು, ಆಸ್ತಿ ಶಾಂತಿಯುತ ಉಪಭೋಗಕ್ಕೆ ಋಣಭೋಗಗಳಿಂದ ಮುಕ್ತವಾಗಿರಲು ಮತ್ತು ಮುಂದಿನ ಆಶ್ವಾಸನೆಗಳನ್ನು ಇಂಗ್ಲಿಷ್ ದಸ್ತಾವೇಜಿನಲ್ಲಿ ಒಳಗೊಂಡಿರುವುದರಿಂದ ಇಂಗ್ಲಿಷ್ ದಸ್ತಾವೇಜುಗಳು ಹೆಚ್ಚು ವಿಶಾಲವಾಗಿರುತ್ತವೆ. ಆದರೆ ಭಾರತೀಯ ಕಾನೂನಿನಲ್ಲಿ ಅವು ಒಳಗೊಂಡಿರುವುದಿಲ್ಲ.

೮. ಮಾಲಿಕತ್ವ ತೋರಿಸುವ ದಸ್ತಾವೇಜು ಯುಕ್ತ ಸಂಶಯಗಳಿಂದ ಮುಕ್ತವಾದ ದಸ್ತಾವೇಜು ಆಗಿರುತ್ತದೆ. ಪ್ರೈವಿಕೌನ್ಸಿಲ್ಲದವರು ೬೧.ಎ.೭೦೦(೭೧೩)ರಲ್ಲಿ ಮಾರುವವನ ಸಂಪೂರ್ಣ ಮಾಲಿಕತ್ವದ ಬಗ್ಗೆ ಖಾತರಿ ಮಾಡಿಕೊಳ್ಳಲು ಕೊಳ್ಳುವವನು ಅವನನ್ನು ಒತ್ತಾಯಿಸಲು ಬರುವುದಿಲ್ಲವೆಂದು ಹೇಳಿದ್ದಾರೆ.

೯. ಸೂಚ್ಯವಾದ ಮಾಲಿಕತ್ವದ ದಸ್ತಾವೇಜು ಟ್ರಸ್ಟ್ ನ್ಯಾಸಧಾರಿ ಇವರಿಗೆ ಅನ್ವಯಿಸುವುದಿಲ್ಲ.

(i) ಒಬ್ಬ ಟ್ರಸ್ಟಿ(ನ್ಯಾಸಧಾರಿ)ಯು ಕೇವಲ ಒಂದು ದಸ್ತಾವೇಜಕ್ಕೆ ಯಾವುದೇ ಋಣ ಭಾರ ಇರುವ ಕೃತ್ಯ ಮಾಡಿಲ್ಲವೆಂದು ಗ್ರಹಿಸಲಾಗುವುದು. ಅಥವಾ ಯಾವುದೇ ದೃಷ್ಟಿಯಿಂದ ಅವನು ಅದನ್ನು ಹಸ್ತಾಂತರಿಸಲು ಅಡೆತಡೆ ಇಲ್ಲವೆಂದು ಗ್ರಹಿಸ ತಕ್ಕದ್ದು.

(ii) ಒಬ್ಬ ನ್ಯಾಸಧಾರಿ(ಟ್ರಸ್ಟಿ)ಯು ತನ್ನ ನಂಬಿಕೆಗೆ ಯೋಗ್ಯವಾದ ನಡತೆಯ ಬಗ್ಗೆ ಬಹಿರಂಗ ಪಡಿಸದೆ ತಾನು ನಿಸ್ಸಂಶಯನಾಗಿ ಒಬ್ಬ ಪ್ರಯೋಜನಕಾರಿ ಮಾಲಿಕನ ಖಾತೆಯಿಂದ ಮಾಲಿಕತ್ವದ ಸಾಮಾನ್ಯ ದಸ್ತಾವೇಜಿನಲ್ಲಿ ಬರುವಂತೆ ಹಸ್ತಾಂತರಿಸಬಹುದು.

೧೦. ಒಬ್ಬ ಅಲ್ಪವಯಿಯ ಪರವಾಗಿ ಆತನ ಸಂರಕ್ಷಣದಾರನು ಅಲ್ಪವಯಿಯ ಪರವಾಗಿ ಮಾರಾಟ ಮಾಡಲು ಈ ಸೂಚ್ಯ ದಸ್ತಾವೇಜು ಅನ್ವಯಿಸುವುದಿಲ್ಲ.

# ಅಧ್ಯಾಯ–೪

# ನ್ಯಾಸದ ಕಾನೂನು

# ಮುಖ್ಯಾಂಶಗಳು

**ಭಾಗ–I**

ನ್ಯಾಸವೆಂದರೇನು (ಟ್ರಸ್ಟ್) ಮತ್ತು ಕಾನೂನು (ಅಧಿನಿಯಮ) ಯಾವುದಕ್ಕೆ ಅನ್ವಯಿಸುತ್ತದೆ?

**ಭಾಗ–II**

ಅಭಿವ್ಯಕ್ತ ಇಲ್ಲವೆ ಘೋಷಿಸಿದ ನ್ಯಾಸಗಳು

(i) ಸೃಷ್ಟಿಸುವುದು

(ii) ನಿರ್ಮೂಲ ಮಾಡುವುದು

**ಭಾಗ–III**

ಒಂದು ನ್ಯಾಸದ ಆಡಳಿತ

**ಭಾಗ–IV**

ರಚನಾತ್ಮಕ ನ್ಯಾಸಗಳು

**ಭಾಗ–V**

ರಚನಾತ್ಮಕ ನ್ಯಾಸಗಳ ಆಡಳಿತ

## ಭಾಗ–I

## ನ್ಯಾಸವೆಂದರೇನು (ಟ್ರಸ್ಟ್)? ಆ ಕಾನೂನು (ಅಧಿನಿಯಮ) ಯಾವುದಕ್ಕೆ ಅನ್ವಯಿಸುತ್ತದೆ?

**II. ಯಾವ ವಿಧದ ನ್ಯಾಸಗಳಿಗೆ ಈ ಕಾನೂನು ಅನ್ವಯಿಸುತ್ತದೆ?**

೧. ಇದು ಯಾವ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲವೆಂದು ಕಲಂ ೧ರಲ್ಲಿ ಹೇಳಲಾಗಿದೆ. ಅವು ಕೆಳಗಿನಂತೆ ಇರುತ್ತವೆ:

(i) ಮಹಮ್ಮದೀಯರು ಮಾಡಿದ ಪಕ್ಷಗಳು.

(ii) ರೂಢಿ ಸಂಪ್ರದಾಯದ ಪ್ರಕಾರ ಇಲ್ಲವೆ ವೈಯಕ್ತಿಕ ಕಾನೂನಿನ ಅನ್ವಯ ಗೊತ್ತುಪಡಿಸಿದ ಒಬ್ಬರಿಗೊಬ್ಬರಲ್ಲಿ ಸಂಬಂಧಿಸಿದ ಹಿಂದೂ ಕಾನೂನಿನ ಅವಿಭಕ್ತ ಕುಟುಂಬ ಸದಸ್ಯರಿಗೆ.

(iii) ಸಾರ್ವಜನಿಕ ಇಲ್ಲವೆ ವೈಯಕ್ತಿಕ ಧಾರ್ಮಿಕ ಇಲ್ಲವೆ ಧರ್ಮಾರ್ಥ ದತ್ತಿಗಳು.

೨. ವಿವರಣೆಗಳು:

೧. ಪಕ್ಷ– ಮಹಮ್ಮದೀಯ ಧರ್ಮದ ಇಲ್ಲವೆ ಆ ಧರ್ಮವನ್ನು ಸ್ವೀಕರಿಸಿ ಪರಿಪಾಲಿಸುವ ಮಹಮ್ಮದೀಯನು ನಿರಂತರವಾಗಿ ಮಹಮ್ಮದೀಯ ಕಾನೂನಿನ ಅನ್ವಯ ದೇವರ ಹೆಸರಿನಲ್ಲಿ ಇಟ್ಟ ಆಸ್ತಿ, ಮನ್ನಿಸಲ್ಪಟ್ಟ ಧಾರ್ಮಿಕ ಧರ್ಮಾರ್ಥ ಸ್ವರೂಪದ ಕಾರ್ಯಗಳಿಗಾಗಿ ಮುಡುಪಿಟ್ಟಿದ್ದು, ಎರಡು ವರ್ಗದ ಪಕ್ಷಗಳು ಇವೆ.

(i) ಆ ಪಕ್ಷದ ಪ್ರಯೋಜನವು ಆ ಪಕ್ಷವನ್ನು ಸ್ಥಾಪಿಸಿದವನಿಗೆ ಮತ್ತು ಆತನ ಕುಟುಂಬ ವರ್ಗಕ್ಕೆ ಕಾಯ್ದಿರಿಸಲಾಗುತ್ತದೆ– ೧೯೧೩ನೆಯ ಇಸ್ವಿಯ ೬ನೆಯ ಅಧಿನಿಯಮವು ಅನ್ವಯಿಸುತ್ತದೆ.

(ii) ಎಲ್ಲ ಪ್ರಯೋಜನವು ಕಾಯ್ದಿರಿಸಲಾಗುವುದಿಲ್ಲ. ೧೯೨೩ನೆಯ ಇಸ್ವಿಯ ೪೨ನೆಯ ಅಧಿನಿಯಮವು ಅನ್ವಯಿಸುತ್ತದೆ.

ಉದಾ:

(೧) ಒಂದು ಅವಿಭಕ್ತ ಹಿಂದೂ ಕುಟುಂಬದ ಕರ್ತ ಮತ್ತು ಆ ಕುಟುಂಬದ ಇತರ ಸದಸ್ಯರು.

(೨) ಒಬ್ಬ ಹಿಂದೂ ವಿಧವೆ ಮತ್ತು ಅವಳ ಉತ್ತರಭೋಗಾದಿಗಳು ಇಂತಹ ಸಂಬಂಧಗಳು ನ್ಯಾಸ ಅಧಿನಿಯಮಕ್ಕೆ ಒಳಪಡುವುದಿಲ್ಲ. ಅವರು ತಮ್ಮ ರೂಢಿ ಸಂಪ್ರದಾಯದ ಕಾನೂನು ಪ್ರಕಾರ ಇಲ್ಲವೆ ಅವರ ವೈಯಕ್ತಿಕ ಕಾನೂನಿನ ಅನ್ವಯ ನಿಯಂತ್ರಿಸಲ್ಪಡುತ್ತಾರೆ.

**I. ಯುದ್ಧದಲ್ಲಿ ಪಡೆದ ಬಹುಮಾನಗಳ ವಿತರಣೆ**

೧. ಬಹುಮಾನ: ಈ ಶಬ್ದವು ನೌಕಾಪಡೆಯ ಒಂದು ಹಡಗು ಇಲ್ಲವೆ ಯುದ್ಧ ಸೂರೆ ಸರಕುಗಳನ್ನು ಸಮುದ್ರದಲ್ಲಿ ಇಲ್ಲವೆ ಬಂದರಲ್ಲಿ ಸೆರೆ ಹಿಡಿಯಲ್ಪಟ್ಟಿದ್ದು.

೨. ಯುದ್ಧದಲ್ಲಿ ಪಡೆದ ಎಲ್ಲ ಬಹುಮಾನಗಳು ಅರಸನಿಗೆ ಸೇರುತ್ತವೆ. ಮತ್ತು ಅವು ಸಾಮಾನ್ಯವಾಗಿ

ನಂಬಿಕಸ್ಥ ನ್ಯಾಸಧಾರಿಗಳಿಗೆ ಈ ರಾಯಲ್ ವಾರಂಟನ್ನು ಕೊಡಲಾಗಿರುತ್ತದೆ. ಅವರು ಅದನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಬಂಧನಕ್ಕೆ ಒಳಗಾದವರಿಗೆ ಹಂಚಬೇಕು.

ಇಂತಹ ಬಹುಮಾನಗಳನ್ನು ಹಂಚಲು ಮಾಡಿದ ನ್ಯಾಸಕ್ಕೆ ಈ ನ್ಯಾಸ ಕಾನೂನು ಅನ್ವಯಿಸುವುದಿಲ್ಲ.

## II. ಸಾರ್ವಜನಿಕ ನ್ಯಾಸಗಳು ಮತ್ತು ಖಾಸಗಿ ಧಾರ್ಮಿಕ ಅಥವಾ ಧರ್ಮಾರ್ಥ ದತ್ತಿಗಳು

ನ್ಯಾಸಗಳು ಸಾರ್ವಜನಿಕ ನ್ಯಾಸಗಳು. ಇಲ್ಲವೆ ಖಾಸಗಿ ನ್ಯಾಸಗಳು

i. ಸಾರ್ವಜನಿಕ ನ್ಯಾಸಗಳು ಒಂದು ಆಸ್ತಿಯ ಪ್ರಯೋಜನವು ಮುಕ್ತವಾಗಿ ಯಾವತ್ತೂ ಸಾರ್ವಜನಿಕರಿಗೆ ಇಲ್ಲವೆ ಅದರ ಗಣನೀಯ ಭಾಗವನ್ನು ಒಂದು ನಿರ್ದಿಷ್ಟವಾಗಿ ವರ್ಣಿಸಿದವರಿಗೆ ಕೊಡಲು ರಚಿಸಿದ್ದು, ಸಾರ್ವಜನಿಕ ನ್ಯಾಸವು ಗುರುತಿಸಲು ಬರತಕ್ಕಂತಹ ಜನರು ಇರಬಹುದು. ಹಾಗಿದ್ದರೂ ಸಹ ಗುರುತಿಸಲು ಬಾರದಂಥ ವ್ಯಕ್ತಿ ಸಮೂಹವೂ ಇರುತ್ತದೆ.

ii. ಖಾಸಗಿ ನ್ಯಾಸ: ಕೇವಲ ಗೊತ್ತುಪಡಿಸಿದ ಖಾಸಗಿ ವ್ಯಕ್ತಿಗಳ ಪ್ರಯೋಜನಕ್ಕಾಗಿ ರಚಿಸಿದ್ದಾಗಿರುತ್ತದೆ. ಇಲ್ಲಿನ ನಿರ್ದಿಷ್ಟ ವೇಳೆಯಲ್ಲಿ ಗುರುತಿಸತಕ್ಕಂತಹ ವ್ಯಕ್ತಿಗಳ ಪ್ರಯೋಜನಕ್ಕೆ ಇರುತ್ತದೆ.

iii. ಸಾರ್ವಜನಿಕ ನ್ಯಾಸಗಳ ಉದ್ದೇಶಗಳು: ಅವು ಮೂರು ವಿಧದಲ್ಲಿ ಇರುತ್ತವೆ.

(i) ಸಾರ್ವಜನಿಕ ಉದ್ದೇಶಗಳಿಗಾಗಿ

(ii) ಧರ್ಮಾರ್ಥ ಉದ್ದೇಶಗಳಿಗಾಗಿ

(iii) ಧಾರ್ಮಿಕ ಉದ್ದೇಶಗಳಿಗಾಗಿ

ಸಾರ್ವಜನಿಕ ಉದ್ದೇಶಗಳಿಗೆ ಈ ಪದವನ್ನು ಎರಡು ಅರ್ಥಗಳಲ್ಲಿ ಉಪಯೋಗಿಸಲಾಗಿದೆ.

(ಅ) ಇದರ ಸಾಮಾನ್ಯ ಅರ್ಥದಲ್ಲಿ– ಇದು ಉದ್ದೇಶಗಳನ್ನು ಒಳಗೊಂಡಿರುತ್ತದೆ. ರಸ್ತೆಗಳನ್ನು ಸರಿಪಡಿಸುವುದಕ್ಕಾಗಿ, ದುರಸ್ತಿ ಮಾಡುವುದಕ್ಕಾಗಿ, ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ ನೀರು ಪೂರೈಸುವುದು, ಯಾವುದೇ ಚರಂಡಿಯಲ್ಲಿ ಅಥವಾ ಯಾವುದೇ ಹಳ್ಳದ ಮೇಲೆ ಇಲ್ಲವೆ ಅಡಿಗಾವಲ ಮೇಲೆ ಸೇತುವೆ ಕಟ್ಟಲು ಇಲ್ಲವೇ ರಿಪೇರಿ ಮಾಡಲು.

೨. ಧರ್ಮಾರ್ಥ ಉದ್ದೇಶ. ಈ ಪದವು ದಾನ ಮಾಡುವುದು, ಧರ್ಮಶಾಲೆ ಕಟ್ಟಿಸುವುದು, ಆಸ್ಪತ್ರೆ ಕಟ್ಟಿಸುವುದೇ ಇವೇ ಮುಂತಾದವುಗಳನ್ನು ಒಳಗೊಂಡಿರುತ್ತದೆ.

೩. ಧಾರ್ಮಿಕ ಉದ್ದೇಶ– ಈ ಪದವು ಧಾರ್ಮಿಕ ಶಿಕ್ಷಣ ಇಲ್ಲವೆ ಪೂಜೆ, ಇಲ್ಲವೆ ಧಾರ್ಮಿಕ ಪುಸ್ತಕಗಳ ವಿತರಣೆ ಅಥವಾ ಖರೀದಿ ಅಥವಾ ಖರ್ಚುಗಳನ್ನಾಗಲಿ ಇಲ್ಲವೆ ದೇವಾಲಯಗಳನ್ನು ನವೀಕರಿಸುವುದು ಇವೇ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಒಂದು ನ್ಯಾಸವು ಸಾರ್ವಜನಿಕ ನ್ಯಾಸವಿದ್ದರೆ– ನ್ಯಾಸ ಅಧಿನಿಯಮವು ಅದಕ್ಕೆ ಅನ್ವಯಿಸುವುದಿಲ್ಲ. ಒಂದು ನ್ಯಾಸವು ಖಾಸಗಿ ನ್ಯಾಸವಾಗಿದ್ದರೆ, ಅದಕ್ಕೆ ನ್ಯಾಯ ಅನ್ವಯಿಸುತ್ತದೆಯೇ?

ಈ ಅಧಿನಿಯಮವು ಖಾಸಗಿ ನ್ಯಾಸವು ಧಾರ್ಮಿಕ ಇಲ್ಲವೆ ಧರ್ಮಾರ್ಥವಾಗಿರದಿದ್ದರೆ ಖಾಸಗಿ ನ್ಯಾಸಕ್ಕೆ ಅನ್ವಯಿಸುತ್ತದೆ.

ಖಾಸಗಿ ಅಥವಾ ಸಾರ್ವಜನಿಕ ನ್ಯಾಸಗಳು, ಧಾರ್ಮಿಕ ಮತ್ತು ಧರ್ಮಾರ್ಥವಾಗಿದ್ದರೆ ಅವುಗಳಿಗೆ ಯಾವ ಅಧಿನಿಯಮವು ಅನ್ವಯಿಸುತ್ತದೆ?

ಅವುಗಳಿಗೆ ಅನೇಕ ಕಾನೂನುಗಳು ಅನ್ವಯಿಸುತ್ತವೆ.

(i) ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ ೯೨.
(ii) ಧಾರ್ಮಿಕ ದತ್ತಿಗಳ ಅಧಿನಿಯಮ ೧೮೬೩.
(iii) ಧಾರ್ಮಿಕ ಸಂಘಗಳ ಅಧಿನಿಯಮ (೧೮೮೦ನೆಯ ೧ನೆಯ ಅಧಿನಿಯಮ).
(iv) ನ್ಯಾಸಾಧಿಕಾರಿ ಅಧಿನಿಯಮ ೧೯೧೩ನೆಯ ಇಸ್ವಿ ೨ನೆಯ ಅಧಿನಿಯಮ.
(v) ಧಾರ್ಮಿಕ ದತ್ತಿಗಳ ೧೮೯೦ನೆಯ ಇಸ್ವಿ ೬ನೆಯ ಅಧಿನಿಯಮ.
(vi) ಧರ್ಮಾರ್ಥ ಮತ್ತು ಧಾರ್ಮಿಕ ಅಧಿನಿಯಮ ೧೯೭೦ನೆಯ ಇಸವಿ ೧೪ನೆಯ ಅಧಿನಿಯಮ.

**ಬೇರೆ ಬೇರೆ ವಿಧದ ನ್ಯಾಸಗಳು**

೧. ನ್ಯಾಸಗಳು ಬೇರೆ ಬೇರೆ ವರ್ಗಗಳಲ್ಲಿ ಬರುತ್ತವೆ. ನ್ಯಾಸಗಳು ಯಾವ ವರ್ಗದಲ್ಲಿ ಬರುತ್ತವೆಂಬುದು ಯಾವ ದೃಷ್ಟಿಯಿಂದ ಆ ನ್ಯಾಸವನ್ನು ನೋಡುತ್ತೇವೆಯೋ ಅದನ್ನು ಅವಲಂಬಿಸಿರುತ್ತದೆ.

೨. ಒಂದು ನ್ಯಾಸವನ್ನು ಮೂರು ದೃಷ್ಟಿಯಿಂದ ನೋಡಬಹುದು.

(i) ನ್ಯಾಸವನ್ನು ಯಾವ ರೀತಿಯಲ್ಲಿ ರಚಿಸಲಾಗಿದೆಯೋ ಆ ದೃಷ್ಟಿಯಿಂದ ನೋಡಬಹುದು.
(ii) ನ್ಯಾಸವನ್ನು ಯಾವ ದೃಷ್ಟಿಯಿಂದ ರಚಿಸಲಾಗಿದೆಯೋ ಆ ದೃಷ್ಟಿಯಿಂದ
(iii) ನ್ಯಾಸಧಾರಿಯ ಮೇಲೆ ಯಾವ ಸ್ವರೂಪದ ಕರ್ತವ್ಯಗಳನ್ನು ವಿಧಿಸಲಾಗಿದೆಯೋ ಆ ದೃಷ್ಟಿಯಿಂದ.

೩. ಒಂದು ನ್ಯಾಸವನ್ನು ಯಾವ ರೀತಿಯಿಂದ ರಚಿಸಲ್ಪಟ್ಟಿದೆಯೋ ಅದನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು.

(i) ವ್ಯಕ್ತಪಡಿಸಿದ.
(ii) ರಚನಾತ್ಮಕ.

೪. ಒಂದು ನ್ಯಾಸದ ರಚನೆಯ ದೃಷ್ಟಿಯಿಂದ ನ್ಯಾಸವನ್ನು ಎರಡು ವರ್ಗಗಳಲ್ಲಿ ವಿಂಗಡಿಸಲಾಗಿದೆ.

(i) ಸಂಪೂರ್ಣವಾಗಿ ರಚಿಸಲ್ಪಟ್ಟ ನ್ಯಾಸ.
(ii) ಅಪೂರ್ಣವಾಗಿ ರಚಿಸಿದ ನ್ಯಾಸ.

೫. ನ್ಯಾಸಧಾರಿಯ ಮೇಲೆ ವಿಧಿಸಲಾದ ಕರ್ತವ್ಯಗಳ ಸ್ವರೂಪದ ಮೇಲೆ ನ್ಯಾಸಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಲಾಗಿದೆ.

(i) ಸಾದಾ ನ್ಯಾಸ.
(ii) ವಿಶೇಷ ನ್ಯಾಸ.

**೧. ವ್ಯಕ್ತಪಡಿಸಿದ ಮತ್ತು ರಚನಾತ್ಮಕ (ಊಹ್ಯ) ನ್ಯಾಸಗಳು**

೧. ಒಂದು ನ್ಯಾಸವು ಎರಡು ರೀತಿಯಿಂದ ಉದ್ಭವಿಸುತ್ತದೆ.

(i) ಒಬ್ಬ ವ್ಯಕ್ತಿಯು ಸ್ವತಂತ್ರವಾಗಿ ಘೋಷಿಸಿದ ಪರಿಣಾಮವಾಗಿ ಉದ್ಭವಿಸಿದ್ದು,
(ii) ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಉದ್ಭವಿಸಿದ್ದು ಆಗಿರಬಹುದು.

೨. ಒಂದು ನ್ಯಾಸವು ಸ್ವತಂತ್ರವಾಗಿ ಘೋಷಿಸಲ್ಪಟ್ಟಿದ್ದರ ಪರಿಣಾಮವಾಗಿ ಉದ್ಭವಿಸಿದ್ದರೂ ಅದು ವ್ಯಕ್ತಪಡಿಸಿದ ಅಥವಾ ಘೋಷಿಸಿದ ನ್ಯಾಸವಾಗಿರುತ್ತದೆ. ಒಂದು ಅಸ್ತಿತ್ವದಲ್ಲಿರುವ ಕಾನೂನಿನ ಪರಿಣಾಮವಾಗಿ

ಉದ್ಭವಿಸಿದ್ದರೆ ಅಂತಹ ನ್ಯಾಸಕ್ಕೆ ಊಹ್ಯ ಅಥವಾ ರಚನಾತ್ಮಕ ನ್ಯಾಸವೆನ್ನುವರು.

೩. ರಚನಾತ್ಮಕ ನ್ಯಾಸವನ್ನು ಬೇರೆ ಅರ್ಥದಲ್ಲಿ ಹೇಳಲಾಗಿದೆ. ಇದನ್ನು ದಸ್ತಾವೇಜಿನಲ್ಲಿ ರಚಿಸಲ್ಪಟ್ಟ ನ್ಯಾಸವನ್ನು ಗುರುತಿಸುವುದಕ್ಕಾಗಿ ಬಳಸಲಾಗಿದೆ. ನ್ಯಾಸವು ಒಂದು ಉದ್ದೇಶವನ್ನೊಳಗೊಂಡದ್ದಾಗಿರುತ್ತದೆ. ಈ ಉದ್ದೇಶವು ವಿಶೇಷವಾದ ಪದಗಳಿಂದ ಘೋಷಿಸಲ್ಪಟ್ಟಿದ್ದಿರಬಹುದು. ಪಕ್ಷಗಾರರು ರಚಿಸಿಕೊಂಡ ದಸ್ತಾವೇಜಿನ ಮೇಲಿಂದ ಸೂಚಿಸಲ್ಪಟ್ಟಿದ್ದಿರಬಹುದು. ನ್ಯಾಯಾಲಯವು ಇಲ್ಲವೆ ಪಕ್ಷಗಾರರು ಯುಕ್ತ ದಸ್ತಾವೇಜಿನಲ್ಲಿ ಸೂಚಿಸಿದ್ದರ ಮೇಲಿಂದ ನ್ಯಾಯಾಲಯದವರು ತಿಳಿದಿದ್ದರೆ ಇದರಲ್ಲಿಯ ಎರಡನೆಯ ಭಾಗದಲ್ಲಿ ನ್ಯಾಸವು ಕೆಲವು ವೇಳೆ ರಚನಾತ್ಮಕ ನ್ಯಾಸವೆಂದು ಕರೆಯಲ್ಪಡುತ್ತದೆ.

೪. ಈ ಅರ್ಥದಲ್ಲಿ ರಚನಾತ್ಮಕ ನ್ಯಾಸಗಳಿಗೆ ಸಂಬಂಧಿಸಿದಂತೆ ಎರಡು ಸಂಗತಿಗಳನ್ನು ನೆನಪಿನಲ್ಲಿಡ ತಕ್ಕದ್ದು.

(i) ಒಂದು ವ್ಯಕ್ತಪಡಿಸಿದ ನ್ಯಾಸಕ್ಕೆ ರಚನಾತ್ಮಕ ನ್ಯಾಸವು ಕೆಲವು ವೇಳೆಯಲ್ಲಿ ಭಿನ್ನವಾಗಿರುತ್ತದೆಂದು ಹೇಳುವುದು ತುಂಬಾ ತಪ್ಪು. ಇಂತಹ ರಚನಾತ್ಮಕ ನ್ಯಾಸವು ನಿಜವಾಗಿಯೂ ಒಂದು ವ್ಯಕ್ತಪಡಿಸಿದ ನ್ಯಾಸವಾಗಿರುತ್ತದೆ. ಮತ್ತು ಅದನ್ನು ಅದರ ವ್ಯತಿರಿಕ್ತವಾಗಿ ನೋಡತಕ್ಕದ್ದಲ್ಲ ಎಂದು ನ್ಯಾಸವು ವ್ಯಕ್ತಪಡಿಸಿದ ನ್ಯಾಸವೇ ಇದೆ. ಏಕೆಂದರೆ ಅದರಲ್ಲಿ ನ್ಯಾಸದಾರನು ಬಳಸಿದ ಭಾಷೆಯು ಸಂಶಯಕ್ಕೆ ಆಸ್ಪದ ಕೊಡುವಂತಹದ್ದು ಹಾಗೂ ಸ್ಪಷ್ಟವಾಗಿ ಇಲ್ಲದ್ದು. ಅವುಗಳ ನಿಜವಾದ ಭಾಷೆಯ ಅರ್ಥವನ್ನು ನ್ಯಾಯಾಲಯವು ನ್ಯಾಸದ ಉದ್ದೇಶವನ್ನು ಹೊಂದಿದೆಯೆಂದು ತೀರ್ಮಾನಿಸಿರುವುದರಿಂದ ಅದನ್ನು ವ್ಯಕ್ತಪಡಿಸಿದ ನ್ಯಾಸವೆಂದು ಕರೆಯುತ್ತೇವೆ.

(ii) ಒಂದು ರಚನಾತ್ಮಕ ನ್ಯಾಸದ ದಸ್ತಾವೇಜಿನಲ್ಲಿರುವ ಶಬ್ದಗಳ ಅರ್ಥಗಳ ಮೇಲಿಂದ ಗೊಂದಲ ಮಾಡಿಕೊಳ್ಳಬಾರದು.

ಒಂದು ಅಸ್ತಿತ್ವದಲ್ಲಿರುವ ಕಾನೂನಿನಿಂದ ರಚಿಸಲ್ಪಟ್ಟ ನ್ಯಾಸಕ್ಕೆ ಅದರ ದಸ್ತಾವೇಜಿನಲ್ಲಿ ಬಳಸಿದ ಪದಗಳಿಂದ ಈ ರಚನಾತ್ಮಕ ಶಬ್ದಕ್ಕೆ ಗೊಂದಲವನ್ನು ಮಾಡಿಕೊಳ್ಳಬಾರದು. ಮೊದಲನೆಯದಾಗಿ, ನ್ಯಾಸವನ್ನು ಮಾಡುವ ಉದ್ದೇಶದ ಮೇಲಿಂದ ಇದು ಪಕ್ಷಗಾರರು ಸ್ವತಂತ್ರವಾಗಿ ಮಾಡಿದ ಕೃತ್ಯವಿರುತ್ತದೆ. ಎರಡನೆಯದಾಗಿ, ನ್ಯಾಸವನ್ನು ರಚಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. ಇದು ಪಕ್ಷಗಾರರ ಕೃತ್ಯದಿಂದ ಇರುವುದಿಲ್ಲ. ಇದು ಕಾನೂನಿನ ಮೇರೆಗೆ ರಚಿಸಲ್ಪಟ್ಟಿರುತ್ತದೆ. ಅದು ಪಕ್ಷಗಾರರ ಕೃತ್ಯದಿಂದ ರಚಿಸಲ್ಪಟ್ಟಿರುವುದಿಲ್ಲ.

ರಚನಾತ್ಮಕ ನ್ಯಾಸಗಳನ್ನು ಎರಡು ಉಪ ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

(i) ಪರಿಣಾಮೀ ನ್ಯಾಸ

(ii) ಅಪರಿಣಾಮಿ ನ್ಯಾಸ

ಇವೆರಡರ ವ್ಯತ್ಯಾಸವನ್ನು ರಚನಾತ್ಮಕ ನ್ಯಾಸದ ಬಗ್ಗೆ ವಿವರಿಸುವಾಗ ವಿವರಿಸಲಾಗುವುದು. ಇವೆರಡರಲ್ಲಿ ಒಂದು ಸಾಮಾನ್ಯ ಸಂಗತಿ ಇದೆ. ಅದೆಂದರೆ– ಜಾರಿಯಲ್ಲಿರುವ ಕಾನೂನಿನ ಪರಿಣಾಮವಾಗಿರುತ್ತವೆ ಮತ್ತು ಪಕ್ಷಗಾರರ ಕೃತ್ಯದ ಪರಿಣಾಮವಾಗಿ ಅಲ್ಲ.

**೨. ಸಂಪೂರ್ಣವಾಗಿ ರಚಿಸಿದ ನ್ಯಾಸಗಳು ಮತ್ತು ಅಪೂರ್ಣವಾಗಿ ರಚಿಸಿದ ನ್ಯಾಸಗಳು**

೧. ಒಂದು ನ್ಯಾಸದ ಆಸ್ತಿಯನ್ನು ಅದರ ಫಲಾನುಭವಿಗಳ ಹಿತಕ್ಕಾಗಿ ನ್ಯಾಸಧಾರಿಯ ವಶಕ್ಕೆ

ಕೊಟ್ಟರೆ ಅದಕ್ಕೆ ಸಂಪೂರ್ಣವಾಗಿ ರಚಿಸಿದ ನ್ಯಾಸವೆನ್ನುತ್ತಾರೆ. ಕೇವಲ ಘೋಷಣೆಯ ನ್ಯಾಸವಾಗಿದ್ದರೆ ಅದರ ಆಸ್ತಿಯನ್ನು ನ್ಯಾಸಧಾರಿಯ ವಶಕ್ಕೆ ಕೊಡದಿದ್ದರೆ ಅದು ಅಪೂರ್ಣವಾಗಿ ರಚಿತವಾದ ನ್ಯಾಸ ವಾಗಿರುತ್ತದೆ.

೨. ಯಾವ ನ್ಯಾಸಕ್ಕೆ ಯುಕ್ತ ಪ್ರತಿಫಲ ಇರುವುದಿಲ್ಲವೋ ಅಂತಹ ನ್ಯಾಸವು ಸಂಪೂರ್ಣವಾಗಿ ರಚಿಸಲ್ಪಟ್ಟಿದೆಯೋ ಅಥವಾ ಇಲ್ಲವೋ ಎಂಬುದು ಅಷ್ಟು ಮಹತ್ವ ವಿಷಯವಲ್ಲ.

೩. ನ್ಯಾಸದ ಆಸ್ತಿಯ ಬೆಲೆಯನ್ನು ಕಟ್ಟಿದ್ದರೆ ಅದು ಸಂಪೂರ್ಣವಾದ ನ್ಯಾಸವೋ ಇಲ್ಲವೋ ಎನ್ನುವುದು ಮಹತ್ವವಲ್ಲ. ಈ ಬೆಲೆ ಕಟ್ಟುವುದರ ಬಗ್ಗೆ ಒಪ್ಪಂದವಾಗಿದ್ದರೆ ಮತ್ತು ಆ ರೀತಿಯಾಗಿ ನಡೆದು ಕೊಂಡಿದ್ದರೆ ನ್ಯಾಯಸಮ್ಮತವಾಗಿ ನೋಡಲಾಗಿ, ಅಪೂರ್ಣವಾಗಿ ಬರೆದುಕೊಟ್ಟ ದಸ್ತಾವೇಜಿಗೆ ನ್ಯಾಸಕ್ಕೆ ಈ ರೀತಿ ಬೆಲೆ ಕಟ್ಟಿದ್ದನ್ನು ಒಂದು ದಸ್ತಾವೇಜು ಮಾಡಲು ಬರೆದುಕೊಟ್ಟಂತಹ ಬೆಲೆಯೆಂದು ಪರಿಗಣಿಸ ಲಾಗುತ್ತದೆ.

೪. ಬೆಲೆಯನ್ನು ಕಟ್ಟದಿದ್ದರೆ ಅದು ನ್ಯಾಯಸಮ್ಮತವಾಗುವುದಿಲ್ಲ ಮತ್ತು ನ್ಯಾಯಾಲಯವು ಅಂತಹದ್ದನ್ನು ಜಾರಿಯಲ್ಲಿ ತರಲು ಇಚ್ಛಿಸಿದ ವ್ಯಕ್ತಿಗೆ ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ.

೫. ಇದು ಸ್ವ-ಇಚ್ಛೆಯಿಂದ ಸಂಪೂರ್ಣ ಆಸ್ತಿಯನ್ನು ಹಸ್ತಾಂತರಿಸಿದ್ದರೆ ಅಂತಹದ್ದನ್ನು ಕಾನೂನು ಬದ್ಧವಾಗಿ ಹಸ್ತಾಂತರದ ದಸ್ತಾವೇಜು ಮಾಡಲಾಗುವುದು ಹಾಗೂ ನ್ಯಾಯಾಲಯವು ಅಂತಹ ನ್ಯಾಸವನ್ನು ಜಾರಿಗೊಳಿಸುವುದು.

(i) ನ್ಯಾಸವನ್ನು ಮಾಡುವವನು ಆಸ್ತಿಯನ್ನು ನ್ಯಾಸಧಾರಿಗಳಿಗೆ ಹಸ್ತಾಂತರ ದಸ್ತಾವೇಜಿನ ಮೂಲಕ ಹಸ್ತಾಂತರಿಸಬಹುದು.

(ii) ನ್ಯಾಸವನ್ನು ಮಾಡುವವನು ತನ್ನಷ್ಟಕ್ಕೆ ತಾನೇ ಅದರ ನ್ಯಾಸಧಾರಿಯೆಂದು ಘೋಷಿಸಿ ಕೊಳ್ಳಬಹುದು.

೭. ಪರಿಪೂರ್ಣ ಹಾಗೂ ಅಪರಿಪೂರ್ಣ ನ್ಯಾಸಗಳಲ್ಲಿಯ ವ್ಯತ್ಯಾಸ.

(i) ಪರಿಪೂರ್ಣ ನ್ಯಾಸವೆಂದರೆ ನ್ಯಾಸದ ಆಸ್ತಿಯನ್ನು ಸಂಪೂರ್ಣವಾಗಿ ಹಾಗೂ ಕೊನೆಯದಾಗಿ ನ್ಯಾಸಧಾರಿಗಳಿಗೆ ಕೊಟ್ಟಿದ್ದು ಅಂತಹಕ್ಕೆ ಪರಿಪೂರ್ಣ ನ್ಯಾಸವೆಂದು ಕರೆಯಲಾಗುತ್ತದೆ.

(ii) ಯಾವ ನ್ಯಾಸದ ಆಸ್ತಿಯನ್ನು ಯಾವಾಗ ಸಂಪೂರ್ಣವಾಗಿ ಕೊಡಲಾಗಿಲ್ಲವೋ ಅಂಥ ನ್ಯಾಸಕ್ಕೆ ಅಪೂರ್ಣವಾಗಿ ರಚಿಸಿದ ನ್ಯಾಸವೆಂದು ಕರೆಯಲಾಗುತ್ತದೆ.

**ಸೂಚನೆ:** ಉಯಿಲು ಅಥವಾ ಮೃತ್ಯುಪತ್ರದ ಮೂಲಕ ಮಾಡಿದ ಎಲ್ಲ ನ್ಯಾಸಗಳು ಅಂತಹವು. ಅವು ಜಾರಿಗೊಳಿಸಿದ ಇಲ್ಲವೆ ಜಾರಿಗೊಳಿಸಬಹುದಾಗಿರಬಹುದು. ಅದೇ ಅಂಥವುಗಳು ಪರಿಪೂರ್ಣವಾಗಿ ರಚಿಸಿದ ನ್ಯಾಸಗಳಾಗಿರುತ್ತವೆ.

(iii) ಮಾರಾಟಗಾರನು ನ್ಯಾಸಧಾರನಿಗೆ ಆಸ್ತಿಯನ್ನು ವಶಕ್ಕೆ ಕೊಡುವ ಕುರಿತು ಸಂಬಂಧಿಸಿದ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮತ್ತು ಒಂದು ವೇಳೆ ಮಾರಾಟ ಮಾಡುವವನ ಉದ್ದೇಶವು ವ್ಯವಹಾರದಿಂದ ತಪ್ಪಿಸಿಕೊಳ್ಳುವುದಾಗಿದ್ದರೆ ಹಸ್ತಾಂತರಕ್ಕೆ ಸಂಬಂಧಿಸಿದ ದಸ್ತಾವೇಜಿನಲ್ಲಿ ನ್ಯಾಸದ ಬಗ್ಗೆ ಘೋಷಣೆ ಮಾಡಿರಬೇಕು.

೮. ಈ ವ್ಯತ್ಯಾಸದಿಂದ ಉದ್ಭವಿಸುವ ಪರಿಣಾಮಗಳು.

(i) ಅಪೂರ್ವ ನ್ಯಾಸಕ್ಕೆ ಬೆಲೆ ಕಟ್ಟಿದ್ದಾದರೆ ಅಂತಹದನ್ನು ಜಾರಿಗೊಳಿಸಲಾಗುವುದು. ಆದರೆ

ಅದು ಕೇವಲ ಸ್ವ–ಇಚ್ಛೆಯಿಂದ ಆಗಿದ್ದರೆ, ಅದಕ್ಕೆ ಬೆಲೆ ಕೊಡದಿದ್ದರೆ ಅದನ್ನು ಜಾರಿಗೊಳಿಸಲಾಗುವುದಿಲ್ಲ.

(ii) ಭಾರತೀಯ ಒಪ್ಪಂದ ಕರಾರಿನಲ್ಲಿ ಹೇಳಿದಂತೆ ಪ್ರತಿಫಲವು ನ್ಯಾಸ ಕಾನೂನಿನಲ್ಲಿಯೂ ಇರುತ್ತದೆ. ಅದು ಕೆಲವು ಹಣದ ರೂಪದಲ್ಲಿ ನಿರ್ಧರಿಸಬಹುದು. ಮದುವೆ ಮತ್ತು ದಾವೆಯನ್ನು ಮಾಡದೇ ಇರುವುದು. ಇಂತಹವುಗಳನ್ನು ಹೊರತುಪಡಿಸಿ ಉಳಿದ ವಸ್ತುವಿಗೆ ಬೆಲೆ ನಿರ್ಧರಿಸುವಂತೆ ಒಪ್ಪಂದ ಕರಾರು ಕಾನೂನಿನಲ್ಲಿ ಇರುವಂತೆ ಯುಕ್ತ ಪ್ರತಿಫಲ ಈ ನ್ಯಾಸ ಅಧಿನಿಯಮದಲ್ಲಿಯೂ ಇರುತ್ತದೆ.

(iii) ಯುಕ್ತ ಪ್ರತಿಫಲ ಮತ್ತು ಒಳ್ಳೆ ಪ್ರತಿಫಲ ಇವುಗಳಲ್ಲಿ ಅಂತರ ಇರುತ್ತದೆ. ಒಳ್ಳೆ ಫಲ ಈ ಪದಪುಂಜವನ್ನು ಸ್ವಾಭಾವಿಕವಾದ ಪ್ರೀತಿ ಹಾಗೂ ವಾತ್ಸಲ್ಯಕ್ಕೆ ಅನ್ವಯಿಸುತ್ತದೆ. ಅಂತಹ ಪ್ರತಿಫಲವು ಒಳ್ಳೆಯದು ಇದ್ದರೂ ಸಹಿತ ಅದು ಬೆಲೆಯುಳ್ಳದ್ದಾಗುವುದಿಲ್ಲ (ಬೆಲೆಕಟ್ಟಲು ಬರುವುದಿಲ್ಲ).

(iv) ಸ್ವ–ಇಚ್ಛೆಯ ಮೇರೆಗೆ ಹೇಳುವ ಸ್ವಯಂ ಹೇಳಿಕೆಯ ಮೇರೆಗೆ ಅಪರಿಪೂರ್ಣ ನ್ಯಾಸವನ್ನು ಜಾರಿಗೊಳಿಸಲು ಬರುವುದಿಲ್ಲ. ಇದು ಒಂದು ಪರಿಮಾಣ ನ್ಯಾಸವನ್ನು ಅಲ್ಲಗಳೆಯುವ ಉದ್ದೇಶಕ್ಕಾಗಿ ಉಪಯೋಗವಾಗುತ್ತದೆ.

(v) ಮದುವೆಯು ಎಷ್ಟರಮಟ್ಟಿಗೆ ಒಂದು ಪ್ರತಿಫಲವೆನಿಸುವುದು:

(i) ಒಂದು ವೇಳೆ ಮದುವೆಗಿಂತ ಮೊದಲು ಮತ್ತು ಮದುವೆಗಾಗಿ ಗೊತ್ತು ಮಾಡಿದ್ದರೆ ಮತ್ತು ಯುಕ್ತ ಪ್ರತಿಫಲಕ್ಕಾಗಿ ಮಾಡಿದ್ದರೆ; ಇದನ್ನು ಮದುವೆಯ ನಂತರ ಮಾಡಿದ್ದರೆ ಭವಿಷ್ಯದಲ್ಲಿ ಆಗಬಹುದಾದ ಮದುವೆಯ ಒಪ್ಪಂದ ಕರಾರುಗಳ ಪರಿಪೂರ್ಣತೆಗಾಗಿ ಮಾಡಿದ್ದರೆ.

(ii) ಮದುವೆಯ ನಂತರ ಭವಿಷ್ಯದಲ್ಲಿ ಮಾಡಬಹುದಾದ ಮದುವೆ ಕರಾರು ಒಪ್ಪಂದಗಳಿಗೆ ಅನುಗುಣವಾಗಿರದಿದ್ದರೆ ಅದು ಸ್ವಯಂ ಆಗುತ್ತದೆ.

(vi) ಮದುವೆಯ ಪ್ರತಿಫಲದಲ್ಲಿ ಯಾರು ಸೇರಿರುತ್ತಾರೆ.

(i) ಮದುವೆಯ ಪ್ರತಿಫಲದಲ್ಲಿ ವಾಸ್ತವಿಕ ಪಕ್ಷಗಾರರು ಮಾತ್ರ ಇರತಕ್ಕದ್ದು. ಗಂಡ ಮತ್ತು ಹೆಂಡತಿ ಮತ್ತು ಇಂತಹ ಮದುವೆಯಿಂದ ಹುಟ್ಟಿದ ಸಂತಾನಗಳು.

(ii) ಉಳಿದ ಇತರ ಜನರು ಸ್ವಯಂ ಸೇವಕರು ಮತ್ತು ಅವರು ಆ ನ್ಯಾಸವನ್ನು ಸ್ಥಾಪಿಸಿದವರ ವಿರುದ್ಧ ಉಪಬಂಧಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಯಾಕೆಂದರೆ ಆಸ್ತಿಯ ಹಸ್ತಾಂತರವು ಇನ್ನೂ ಪೂರ್ತಿಯಾಗಿರುವುದಿಲ್ಲ. ಉದಾ: ನಿಶ್ಚಯಕ್ಕೆ ಒಂದು ಒಪ್ಪಂದದ ನಂತರ–ಆಸ್ತಿಯ ಸ್ವಾಧೀನಪಡಿಸಿಕೊಳ್ಳುವುದು.

೯. ಪೂರ್ತಿಗೊಂಡ ವ್ಯವಹಾರದ ಮತ್ತು ಅಪೂರ್ಣಗೊಂಡ ವ್ಯವಹಾರದ ನ್ಯಾಸಗಳು ಇವುಗಳಲ್ಲಿನ ಅಂತರವನ್ನು ಭಾರತೀಯ ನ್ಯಾಸ ಅಧಿನಿಯಮವು ಮನ್ನಿಸುತ್ತದೆಯೇ?

## ಸಾದಾ ಮತ್ತು ವಿಶೇಷ ನ್ಯಾಸಗಳು

೧. ಒಂದು ಸಾದಾ ನ್ಯಾಸದಲ್ಲಿ ನ್ಯಾಸಧಾರಿಯು ಒಬ್ಬ ಅಭಿರಕ್ಷಕನಾಗಿರುತ್ತಾನೆ. ಅವನು ಆ ಆಸ್ತಿಯ ಕುರಿತು ಯಾವ ಕ್ರಿಯಾಸಕ್ತ ಕಾರ್ಯ ಮಾಡಲು ಬರುವುದಿಲ್ಲ.

೨. ಒಂದು ವಿಶೇಷ ನ್ಯಾಸದಲ್ಲಿ ಈ ನ್ಯಾಸ ಸ್ಥಾಪಕನು ನ್ಯಾಸಧಾರಿಯನ್ನು ನೇಮಿಸಿ ಅವನು ಒಂದು ಯೋಜನೆಯನ್ನು ಕಾರ್ಯಗತಗೊಳಿಸಲು ವಿಶೇಷವಾಗಿ ಅದರ ಸ್ಥಾಪಕನು ನಮೂದಿಸಿದ ಮತ್ತು ಯಾವುದನ್ನು ನೆರವೇರಿಸಲು ತನಗೆ ಸಾಧ್ಯವಿದ್ದಷ್ಟು ಶ್ರಮ ವಹಿಸಲು ಹಾಗೂ ಅದರ ಸ್ಥಾಪಕನ ಉದ್ದೇಶವನ್ನು ಕಾರ್ಯಗತಗೊಳಿಸಲು ನ್ಯಾಸಧಾರಿಗೆ ಕೋರಲಾಗಿದೆ.

೩. ಒಂದು ಸಾದಾ ನ್ಯಾಸವನ್ನು ಅನಾಸಕ್ತ ನ್ಯಾಸ ಎಂದು ಕರೆಯಲಾಗುತ್ತದೆ ಮತ್ತು ಒಂದು ವಿಶೇಷ ನ್ಯಾಸವನ್ನು ಸಕ್ರಿಯ ನ್ಯಾಸವೆಂದು ಕರೆಯಲಾಗುವುದು.

೪. ಎಲ್ಲಿ ಒಂದು ಸಾದಾ ನ್ಯಾಸವು ಇದೆಯೋ ಅದರ ಫಲಾನುಭವಿಯನ್ನು ಕ್ರಮ ಕೈಕೊಳ್ಳಲು ಅರ್ಹನನ್ನಾಗಿ ಮಾಡಲಾಗಿರುತ್ತದೆ. ಮತ್ತು ಅವನಿಗೆ ಸಂಪೂರ್ಣವಾಗಿ ಆ ಆಸ್ತಿಯ ಸ್ವಾಮ್ಯತ್ವ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಇದಲ್ಲದೆ ಅವನು ನ್ಯಾಸಧಾರಿಗಳಿಗೆ ಆಯಾ ಪ್ರಯೋಜನಕಾರರಿಗೆ ಕಾನೂನು ಪ್ರಕಾರ ಅವರವರ ಅನುದೇಶದ ಪ್ರಕಾರ ಆ ಕಾನೂನಿನ ಆಸ್ತಿಯನ್ನು ಹಸ್ತಾಂತರಿಸಲು ನ್ಯಾಸಧಾರಿಗಳಿಗೆ ಒತ್ತಾಯಿಸುವ ಹಕ್ಕನ್ನು ಸಹ ಅವನು ಹೊಂದಿದ್ದಾನೆ.

೫. ವಿಶೇಷ ನ್ಯಾಸಗಳನ್ನು ಈ ರೀತಿ ವಿಂಗಡಿಸಲಾಗಿದೆ.

(i) ಲಿಪಿಕ ಮತ್ತು

(ii) ವಿವೇಚನಾತ್ಮಕ

೬. ಇವೆರಡೂ ನ್ಯಾಸಗಳಲ್ಲಿ ನ್ಯಾಸಧಾರಿಯು ಅವಶ್ಯಕ ಕರ್ತವ್ಯಗಳನ್ನು ಮಾಡತಕ್ಕದ್ದು.

೭. ಇವೆರಡರಲ್ಲಿನ ಅಂತರವೆಂದರೆ– ಲಿಪಿಕ ನ್ಯಾಸದಲ್ಲಿ ನ್ಯಾಸಧಾರಿಯು ತನ್ನ ಕರ್ತವ್ಯ ಪಾಲನೆಯಲ್ಲಿ ತನ್ನ ಜಾಣ್ಮೆಯನ್ನು ಚಲಾಯಿಸುವ ಅವಶ್ಯಕತೆಯು ಇರುವುದಿಲ್ಲ. ಆದರೆ ವಿವೇಚನಾತ್ಮಕ ನ್ಯಾಸದಲ್ಲಿ ನ್ಯಾಸಧಾರಿಯು ಆವಶ್ಯಕವಾಗಿ ತನ್ನ ಜಾಣ್ಮೆಯನ್ನು ಚಲಾಯಿಸಬೇಕಾಗುತ್ತದೆ.

# ಭಾಗ–II

# ಅಭಿವ್ಯಕ್ತ ಇಲ್ಲವೆ ಘೋಷಿತ ನ್ಯಾಸಗಳು

**ಅಧ್ಯಾಯ–I**

ಎರಡು ರೀತಿಯ ಘೋಷಿತ ನ್ಯಾಸಗಳು

(i) ನಿರ್ವಹಿಸಿದ

(ii) ನಿರ್ವಹಿಸಲೇಬೇಕಾದ

**ಅಧ್ಯಾಯ–II**

ಒಂದು ಅಭಿವ್ಯಕ್ತ ನ್ಯಾಸವನ್ನು ರಚಿಸುವುದು

**ಅಧ್ಯಾಯ–III**

ಒಂದು ಅಭಿವ್ಯಕ್ತ ನ್ಯಾಸವನ್ನು ರದ್ದುಗೊಳಿಸುವುದು

**ಅಧ್ಯಾಯ–IV**

ಒಂದು ಅಭಿವ್ಯಕ್ತ ನ್ಯಾಸವನ್ನು ಅಂತ್ಯಗೊಳಿಸುವುದು

# ಅಧ್ಯಾಯ I

## ಎರಡು ರೀತಿಯ ಘೋಷಿತ ನ್ಯಾಸಗಳು

**ಜಾರಿಗೊಳಿಸಿದ ಮತ್ತು ಜಾರಿಗೊಳಿಸಬೇಕಾದ**

ಒಂದು ವ್ಯಕ್ತಪಡಿಸಿದ ನ್ಯಾಸವು ಜಾರಿಗೊಳಿಸಿದ ನ್ಯಾಸ ಇರಬಹುದು ಅಥವಾ ಜಾರಿಗೊಳಿಸಲ್ಪಟ್ಟ ಅಥವಾ ಜಾರಿಗೊಳಿಸಲ್ಪಡುವ ನ್ಯಾಸವಾಗಿರುತ್ತದೆ.

(೧) ಜಾರಿಗೊಳಿಸಿದ ಮತ್ತು ಜಾರಿಗೊಳಿಸಬೇಕಾದ ನ್ಯಾಸಗಳಿಗೆ ಇರುವ ರಚನೆಯ ಒಪ್ಪಂದದಲ್ಲಿ ಬಳಸಿದ ಪದಗಳ ಬಗ್ಗೆ ಒಂದೇ ಅರ್ಥ ಇರುವುದಿಲ್ಲ.

(೨) ಒಂದು ಒಪ್ಪಂದದ ಕರಾರಿನ ಸಂಬಂಧವಾಗಿ ಉಪಯೋಗಿಸಿದ ಪದಗಳೂ ಅದನ್ನು ಜಾರಿಗೊಳಿಸುವ ಬಗ್ಗೆ ಉಲ್ಲೇಖಿಸುತ್ತವೆ. ಒಂದು ನ್ಯಾಸದಲ್ಲಿ ಉಪಯೋಗಿಸಿದ ಪದಗಳು ನ್ಯಾಸದ ರಚನೆಯನ್ನು ಉಲ್ಲೇಖಿಸುತ್ತವೆ. ಹೀಗೆ ಜಾರಿಗೊಳಿಸುವುದರಲ್ಲಿ ಅವು ಭಿನ್ನವಾಗಿರುತ್ತವೆ.

(೩) ಒಪ್ಪಂದದ ಕರಾರಿನಲ್ಲಿ ಬಳಸಿದ ಪ್ರತಿಯೊಂದು ಪದದ ಅರ್ಥದಲ್ಲಿ ಬಳಸಿದ ಪದವು ಅದು ಪೂರ್ತಿಗೊಳ್ಳುವವರಿಗೆ ಜಾರಿಗೊಳಿಸುವ ಅರ್ಥವನ್ನು ಕೊಡುತ್ತದೆ. ಆದರೆ ನ್ಯಾಸದ ಸಂಬಂಧವಾಗಿ ಆ ಪದವನ್ನು ಬಳಸಿದರೆ ಅದೇ ಎಂಬ ಪದಗಳನ್ನು ಒಂದು ನ್ಯಾಸದ ಬಗ್ಗೆ ಉಪಯೋಗಿಸಿದರೆ ಅವುಗಳಿಗೆ ಬೇರೆ ಬೇರೆ ಅರ್ಥವು ಇರುತ್ತದೆ.

(೪) ಜಾರಿಗೊಳಿಸಿದ ಮತ್ತು ಜಾರಿಗೊಳಿಸಬೇಕಾದ ಎಂಬ ಪದಗಳನ್ನು ಒಂದು ನ್ಯಾಸದ ಬಗ್ಗೆ ಉಪಯೋಗಿಸಿದರೆ ಅವುಗಳಿಗೆ ಬೇರೆ ಬೇರೆ ಅರ್ಥವು ಇರುತ್ತದೆ.

(೧) ಒಂದು ನ್ಯಾಸವನ್ನು ಮಾಡಿದವನು ಆ ನ್ಯಾಸದ ಆಸ್ತಿಯ ಪ್ರಯೋಜನಕಾರರ ಹೆಸರನ್ನು ಮಾತ್ರ ಹೆಸರಿಸಿರುವುದಿಲ್ಲ. ಮತ್ತು ಅವರು ಅವರಿಗೆ ಆ ನ್ಯಾಸದ ಆಸ್ತಿಯಲ್ಲಿ ಹೊಂದಲಿರುವ ಯಾವ ಹಿತಾಸಕ್ತಿಯನ್ನು ಪಡೆಯುವರೆಂಬುದನ್ನು ಸೂಚಿಸಿರುವುದಿಲ್ಲ. ಆದರೆ, ಆ ನ್ಯಾಸವನ್ನು ಸ್ಥಾಪಿಸಿದವನು ಮತ್ತೊಂದು ದಸ್ತಾವೇಜಿನಿಂದ ನೇಮಿಸುವ ಇನ್ನೊಬ್ಬ ಮನುಷ್ಯನು ಅದನ್ನು ವ್ಯಾಖ್ಯಾನಿಸಲು ಬಿಟ್ಟು ಬಿಟ್ಟಿರುತ್ತಾನೆ. ಆಗ ಆ ನ್ಯಾಸವು ಜಾರಿಗೊಳಿಸಿದ ನ್ಯಾಸವೆನಿಸುತ್ತದೆ.

ಉದಾ: 'ಅ' ಮತ್ತು 'ಬ' ಇವರ ವಿವಾಹದ ನಂತರ ಅವರಲ್ಲಿ ಆದ ಒಪ್ಪಂದದ ಕರಾರು ಏನೆಂದರೆ– ಅವರಿಗಾಗಿ ಮತ್ತು ಅವರ ಮಕ್ಕಳಿಗಾಗಿ ಕೆಲವು ಆಸ್ತಿಗಳ ನ್ಯಾಸವನ್ನು ಸ್ಥಾಪಿಸತಕ್ಕದ್ದು.

**ಟಿಪ್ಪಣಿ:** ಇಲ್ಲಿ ಪ್ರಯೋಜನ ಪಡೆಯುವವರ ಪಕ್ಷಗಾರರನ್ನು ವ್ಯಾಖ್ಯಾನಿಸದೆ ಅವರು 'ಅ' ಮತ್ತು 'ಬ' ಹಾಗೂ ಅವರ ಮಕ್ಕಳು.

(i) ಆದರೆ 'ಅ' ಮತ್ತು 'ಬ' ಮತ್ತು ಅವರ ಮಕ್ಕಳು ಯಾವ ಹಿತಾಸಕ್ತಿಗೆ ಹಕ್ಕುದಾರ ರಿದ್ದಾರೆಂಬುದನ್ನು ವ್ಯಾಖ್ಯಾನಿಸಿರುವುದಿಲ್ಲ.

(ii) ಅದರಿಂದ ಅದು ಕಾರ್ಯಗತಗೊಳಿಸಬೇಕಾದ ನ್ಯಾಸವು.

(iii) ಕಾರ್ಯಗತಗೊಳಿಸಿದ ನ್ಯಾಸ ಮತ್ತು ಕಾರ್ಯಗತಗೊಳಿಸಬೇಕಾದ ನ್ಯಾಸಗಳ ನಡುವಿನ ದಾರಿಯು ಸೀಳುದಾರಿಗಿಂತಲೂ ಬೇರೆಯಾಗಿದೆ, ಸಂಪೂರ್ಣ ರಚಿಸಿದ ನ್ಯಾಸ ಮತ್ತು ಅಪೂರ್ಣವಾಗಿ ರಚಿಸಿದ ನ್ಯಾಸಗಳ ದಾರಿಯೂ ಬೇರೆಯಾಗಿದೆ.

(iv) ಸಂಪೂರ್ಣವಾಗಿ ರಚಿತವಾದ ನ್ಯಾಸ ಮತ್ತು ಅಪೂರ್ಣವಾಗಿ ರಚಿತವಾದ ನ್ಯಾಸಗಳ ನಡುವಿನ ಭೇದವು: ಮೊದಲನೆಯದರಲ್ಲಿ ಆಸ್ತಿಯನ್ನು ನ್ಯಾಸಧಾರಿಗಳಿಗೆ ನಂಬುಗೆ ಯಿಂದ ವಹಿಸಿಕೊಟ್ಟಿರುತ್ತದೆ. ಅಪೂರ್ಣ ನ್ಯಾಸದಲ್ಲಿ ಹಾಗೆ ಆಸ್ತಿಯನ್ನು ವಹಿಸಿ ಕೊಟ್ಟಿರುವುದಿಲ್ಲ.

(v) ಜಾರಿಗೊಳಿಸಿದ ನ್ಯಾಸ ಮತ್ತು ಜಾರಿಗೊಳಿಸಬೇಕಾದ ನ್ಯಾಸದ ನಡುವಣ ಭೇದವೆಂದರೆ ಮೊದಲನೆಯದರಲ್ಲಿ ಫಲಾನುಭವಿಗಳ ಹಿತಾಸಕ್ತಿಗಳನ್ನು ವ್ಯಾಖ್ಯಾನಿಸಿರುತ್ತದೆ. ಆದರೆ ಎರಡನೆಯದರಲ್ಲಿ ಹೀಗೆ ವ್ಯಾಖ್ಯಾನಿಸಿರುವುದಿಲ್ಲ.

(vi) ವಸ್ತುಸ್ಥಿತಿ ಹೀಗೆ ಇರುವುದರಿಂದ ಒಂದು ಜಾರಿಗೊಳಿಸಬೇಕಾದ ನ್ಯಾಸವು ಸಂಪೂರ್ಣವಾಗಿ ರಚಿತವಾದ ನ್ಯಾಸವಾಗಿರಬಹುದು.

**II. ನ್ಯಾಸದ ಪಕ್ಷಗಾರರು:**

(೧) ಒಂದು ನ್ಯಾಸದ ವ್ಯವಹಾರಕ್ಕೆ ಕಣ್ಣಿಗೆ ಕಾಣುವಂತೆ ಮೂರು ಜನ ಪಕ್ಷಗಾರರು ಇರುತ್ತಾರೆ.

(i) ನ್ಯಾಸವನ್ನು ಮಾಡುವ ಪಕ್ಷಗಾರ,

(ii) ನ್ಯಾಸವನ್ನು ಒಪ್ಪಿಕೊಳ್ಳುವ ಪಕ್ಷಗಾರ, ಮತ್ತು

(iii) ಯಾರ ಪ್ರಯೋಜನೆಗಾಗಿ ನ್ಯಾಸವನ್ನು ಮಾಡಿದೆಯೋ ಆ ಪಕ್ಷಗಾರ.

(೨) ಯಾವ ಪಕ್ಷಗಾರನು ಮಾಡುವನೋ ಅವನಿಗೆ ನ್ಯಾಸದ ಜನಕ ಎಂದು ಕರೆಯುತ್ತಾರೆ. ಯಾವ ಪಕ್ಷಗಾರನು ನ್ಯಾಸವನ್ನು ಒಪ್ಪಿಕೊಳ್ಳುತ್ತಾನೆಯೋ ಅವನನ್ನು ಧರ್ಮದರ್ಶಿಯೆಂದು ಕರೆಯುತ್ತಾರೆ. ಯಾವ ಪಕ್ಷದ ಪ್ರಯೋಜನಕ್ಕಾಗಿ ನ್ಯಾಸದ ಜನಕನು ಈ ನ್ಯಾಸವನ್ನು ಮಾಡಲಾಗಿದೆಯೋ ಅವನಿಗೆ ಫಲಾನುಭವಿ ಎಂದು ಕರೆಯುತ್ತಾರೆ.

(೩) ಈ ಮೂರು ಪಕ್ಷಗಾರರು ಸುಸ್ಪಷ್ಟವಾಗಿ ಬೇರೆ ಬೇರೆಯಾಗಿರುವುದು ಅವಶ್ಯವಿದೆಯೆ?

ಮೂವರಲ್ಲಿ ಒಬ್ಬನು ಉಳಿದ ಇಬ್ಬರ ಪಾತ್ರವನ್ನು ಮಾಡಲಾರನೇ? ಈ ಪ್ರಶ್ನೆಗೆ ಉತ್ತರವೆಂದರೆ ಅವರಲ್ಲಿ ಕೆಲವರು ಇನ್ನುಳಿದ ಇಬ್ಬರ ಪಾತ್ರವನ್ನು ಮಾಡಬಲ್ಲರು.

(i) ನ್ಯಾಸದ ಜನಕ ಮತ್ತು ನ್ಯಾಸದ ಫಲಾನುಭವಿ ಇವರು ಸುಸ್ಪಷ್ಟವಾಗಿ ಭಿನ್ನರಾಗಿರಲಿಕ್ಕೇ ಬೇಕು.

(ii) ಧರ್ಮದರ್ಶಿ ಮತ್ತು ಫಲಾನುಭವಿ ಅವರು ಸುಸ್ಪಷ್ಟವಾಗಿ ಭಿನ್ನರಾಗಿರಲಿಕ್ಕೇ ಬೇಕು.

(iii) ನ್ಯಾಸದ ಜನಕನು ಮತ್ತು ಧರ್ಮದರ್ಶಿ ಇವರು ಸುಸ್ಪಷ್ಟವಾಗಿ ಬೇರೆ ಬೇರೆ ಇರುವ ಅವಶ್ಯಕತೆಯೂ ಇರುವುದಿಲ್ಲ.

(೪) ಕೆಲವು ಪಕ್ಷಗಾರರು ಉಳಿದ ಇಬ್ಬರು ಪಕ್ಷಗಾರರ ಪಾತ್ರವನ್ನು ವಹಿಸಿಕೊಳ್ಳಬಹುದೆಂಬುದಕ್ಕೆ ಕಾರಣವೇನೆಂದರೆ ಇಬ್ಬರು ಒಬ್ಬರೇ ಆಗಿರುತ್ತಾರೆ ಮತ್ತು ಕೆಲವರು ಹಾಗೆ ಮಾಡಲು ಬರುವುದಿಲ್ಲವೆಂಬುದು ಮಹತ್ವದ್ದಾಗಿದೆ.

(i) ಒಂದು ನ್ಯಾಸವನ್ನು ಮಾಡುವುದು ಒಂದೇ ಆಸ್ತಿಯಲ್ಲಿ ಎರಡು ಸುಸ್ಪಷ್ಟವಾದ ಆಸ್ತಿಗಳನ್ನು ಸೃಷ್ಟಿಸುವುದರ ಪರಿಣಾಮವಾಗಿರುತ್ತದೆ.

(i) ಒಂದು ನ್ಯಾಸವನ್ನು ಮಾಡುವವನು ತನ್ನ ಆಸ್ತಿಯನ್ನು ಒಂದು ನ್ಯಾಸವನ್ನಾಗಿ ರಚಿಸಬೇಕೆಂದರೆ ಆತನ ಆ ಒಂದೇ ಆಸ್ತಿಯು ಎರಡು ಆಸ್ತಿಗಳ ಪರಿಣಾಮವಾಗಿರುತ್ತದೆ. ಅಂದರೆ ಯಾವುದು ಕಾನೂನುಬದ್ಧ ಮತ್ತು ನ್ಯಾಯಸಮ್ಮತವಾದ ನ್ಯಾಸದ ಆಸ್ತಿಯಾಗಿರುತ್ತದೆ. ಇವೆರಡೂ ಹಿತಾಸಕ್ತಿಗಳು ಎಲ್ಲಿಯವರೆಗೆ ನಡೆಯುತ್ತವೆಯೋ ಅಲ್ಲಿಯವರೆಗೆ ಒಂದು ನ್ಯಾಸವು ಬೇರೆ ಬೇರೆಯಾಗಿ ಅಸ್ತಿತ್ವದಲ್ಲಿರುತ್ತದೆ. (ii) ಈ ಕಾನೂನುಬದ್ಧ ಮತ್ತು ನ್ಯಾಯಸಮ್ಮತ ಆಸ್ತಿಗಳು ಒಬ್ಬನ ಕೈಯಲ್ಲಿಯೇ ಉಳಿಯುತ್ತವೆ. ಆಗ ನ್ಯಾಯಸಮ್ಮತವು ನಾಶವಾಗುತ್ತದೆ. ಯಾಕೆಂದರೆ, ಅದು ಕಾನೂನಿನಲ್ಲಿ ಒಳಗೊಳ್ಳುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದೆಂದರೆ ಕಾನೂನಿನ ಹಾಗೂ ನ್ಯಾಯಸಮ್ಮತ ಹಿತಾಸಕ್ತಿಗಳೆರಡೂ ಸಹ ಜೀವಿಸುತ್ತವೆ. ಮತ್ತು ಒಬ್ಬ ಮನುಷ್ಯನಲ್ಲಿಯೇ ಸಮ್ಮಿಳಿತವಾಗುತ್ತದೆ. ಆಗ ನ್ಯಾಯಸಮ್ಮತವು ಕಾನೂನಿನ ಹಿತಾಸಕ್ತಿಯಲ್ಲಿ ಸೇರಿಕೊಳ್ಳುತ್ತದೆ. ಅದೇನೆಂದರೆ ನ್ಯಾಸವು ಮುಕ್ತಾಯಕ್ಕೆ ಬರುತ್ತದೆ. ಇಲ್ಲಿ ಎರಡು ಮಹತ್ವದ ತತ್ವಗಳಿರುವುದನ್ನು ಲಕ್ಷ್ಯದಲ್ಲಿಡಬೇಕು.

(i) ನ್ಯಾಯಸಮ್ಮತವಾದ ಪ್ರತ್ಯೇಕ ಹಿತಾಸಕ್ತಿಯನ್ನು ರಚಿಸಿದ್ದರೆ ಅದು ನ್ಯಾಸವಾಗುವುದಿಲ್ಲ.

(ii) ಕಾನೂನಿನ ಮತ್ತು ನ್ಯಾಯಸಮ್ಮತವಾದ ಬೇರೆ ಬೇರೆ ಹಿತಾಸಕ್ತಿಗಳು ಒಂದಾದರೆ ಅಲ್ಲಿ ನ್ಯಾಸವು ಇರುವುದಿಲ್ಲ.

೫. ಇವೆರಡೂ ತತ್ವಗಳನ್ನು ಅನ್ವಯಿಸಿದರೆ, ನಾವು ಕೆಳಗಣ ನಿರ್ಣಯಕ್ಕೆ ಬರುತ್ತೇವೆ.

(i) ನ್ಯಾಸದ ಜನಕ ಹಾಗೂ ಧರ್ಮದರ್ಶಿ ಇಬ್ಬರೂ ಒಬ್ಬರೇ ಆದರೆ ಅವೆರಡೂ ಒಂದಾಗುವುದಿಲ್ಲ. ಆದ್ದರಿಂದ ಇವೆರಡೂ ಬೇರೆ ಬೇರೆ ಭಿನ್ನವಾಗಿರುವ ಅವಶ್ಯಕತೆಯೂ ಇರುವುದಿಲ್ಲ.

(ii) ನ್ಯಾಸದ ಜನಕ ಹಾಗೂ ಅದರ ಫಲಾನುಭವಿ ಇಬ್ಬರೂ ಒಬ್ಬರೇ ಆದರೆ ಅಲ್ಲಿ ನ್ಯಾಯ ಸಮ್ಮತವಾದ ಹಿತಾಸಕ್ತಿಯನ್ನು ಆ ಆಸ್ತಿಯಲ್ಲಿ ಹುಟ್ಟಿಸುವ ಅವಶ್ಯಕತೆಯು ಇರುವುದಿಲ್ಲ. ಆದ್ದರಿಂದ ಅವೆರಡು ಬೇರೆ ಬೇರೆಯಾಗಿರಲಿಕ್ಕೇ ಬೇಕು.

(iii) ಧರ್ಮದರ್ಶಿ ಮತ್ತು ಫಲಾನುಭವಿ ಒಬ್ಬನೇ ಆದಾಗ ಅವು ಒಂದಾಗುತ್ತವೆ. ಆದ್ದರಿಂದ ಅವೆರಡೂ ಬೇರೆಬೇರೆಯಾಗಿರಲಿಕ್ಕೇ ಬೇಕು.

ಸಾರಾಂಶವೇನೆಂದರೆ– ನ್ಯಾಸದ ಜನಕ ಮತ್ತು ಧರ್ಮದರ್ಶಿ ಇವೆರಡು ಒಬ್ಬನೇ ಆಗಿರಬಹುದು. ಆದರೆ ಫಲಾನುಭವಿಯು ಬೇರೆ ವ್ಯಕ್ತಿಯಾಗಿರಲಿಕ್ಕೇಬೇಕು. ಅಂದರೆ ಆ ನ್ಯಾಸ ಜನಕನಿಗೆ ಅದರಂತೆ ಧರ್ಮದರ್ಶಿಯಿಂದ ಬೇರೆಯಾಗಿರಬೇಕು.

(೬) ಇಲ್ಲಿಯವರೆಗೆ ಈ ಪಕ್ಷಗಾರರು ಒಬ್ಬನೇ ವ್ಯಕ್ತಿಯಾಗಿರುವ ಸಾಧಾರಣ ಪ್ರಕರಣವನ್ನು ಕೈಗೆತ್ತಿಕೊಂಡಿದ್ದೆವು. ಪಕ್ಷಗಾರರು ಅನೇಕ ಜನರಿದ್ದರೆ ಮತ್ತು ಅವರಲ್ಲಿ ಕೆಲವು ಜನರು ದ್ವಿಪಾತ್ರಗಳನ್ನು ವಹಿಸಿದರೆ, ಏನು ಆಗುತ್ತದೆ. ಉದಾ:

(i) 'ಅ' ಮತ್ತು 'ಬ' ಇವರು ಒಂದು ನ್ಯಾಸದ ಫಲಾನುಭವಿಗಳಾಗಿರುತ್ತಾರೆ. ಅವರಲ್ಲಿ 'ಅ'ನು ಒಬ್ಬ ಧರ್ಮದರ್ಶಿಯೂ ಸಹ ಆಗಿರುತ್ತಾನೆ. ಇಂತಹ ನ್ಯಾಸವು ಕಾನೂನುಬದ್ಧವೇ?

(ii) 'ಅ' ಮತ್ತು 'ಬ' ಇವರು ಒಂದು ನ್ಯಾಸದ ಫಲಾನುಭವಿಗಳು ಆಗಿರುತ್ತಾರೆ.

ಅವರಲ್ಲಿ 'ಅ'ನು ಆ ನ್ಯಾಸದ ಜನಕನಾಗಿರುತ್ತಾನೆ. ಇಂತಹ ನ್ಯಾಸವು ಕಾನೂನು ಬದ್ಧವಾದುದೇ?

೭. ಮೊದಲನೆಯ ಪ್ರಶ್ನೆಗೆ ಉತ್ತರ ಸಕಾರಾತ್ಮಕವಾಗಿರುತ್ತದೆ. ಈ ಬಗ್ಗೆ ಕಲಂ ೬ರಲ್ಲಿ ನ್ಯಾಸದ ವ್ಯಾಖ್ಯಾನವನ್ನು ಕೊಡಲಾಗಿದೆ. ಈ ವ್ಯಾಖ್ಯೆಯು ಎರಡನೆಯ ಪ್ರಶ್ನೆಗೆ ಉತ್ತರವನ್ನು ಕೊಡುವುದಿಲ್ಲ. ಆದಾಗ್ಯೂ ಇಂತಹ ನ್ಯಾಸವು ಕಾನೂನುಬದ್ಧವಾಗಿರದಿದ್ದರೂ ಸಹ ಆ ಎರಡನೆಯ ಪ್ರಶ್ನೆಗೆ ಉತ್ತರವನ್ನು ಕೊಡುವುದಿಲ್ಲ.

# ಅಧ್ಯಾಯ II

## (೧) ಒಂದು ವ್ಯಕ್ತಪಡಿಸಿದ (ಅಭಿವ್ಯಕ್ತ) ನ್ಯಾಸವನ್ನು ಮಾಡುವುದು

(೧) ಒಂದು ಕಾನೂನುಬದ್ಧ ನ್ಯಾಸವನ್ನು ಮಾಡಲು ಕರಾರುಗಳು ಒಂದು ಘೋಷಿತ ನ್ಯಾಸದ ಕಾನೂನು ಬದ್ಧಗಳು ಕೆಳಗಿನ ನಾಲ್ಕು ಕರಾರುಗಳನ್ನು ಕಾನೂನು ಪ್ರಕಾರ ನಿರ್ಧರಿಸಲಾಗಿದೆ. ಅವುಗಳನ್ನು ಪೂರೈಸಬೇಕು.

**(i) ಕಲಮು ೬**

(i) ಒಂದು ನ್ಯಾಸಕ್ಕೆ ಅವಶ್ಯವಾದ ಪಕ್ಷಗಾರರು ಇರಲಿಕ್ಕೇಬೇಕು.

(ii) ನ್ಯಾಸದ ಜನಕನ ಭಾಷೆಯು, ನ್ಯಾಯಾಲಯವು ಅವನ ಉದ್ದೇಶವನ್ನು ನಿಜ ಸಂಗತಿ ಕಂಡು ಹಿಡಿಯುವಂತಹದ್ದಿರಬೇಕು.

(ಅ) ಒಂದು ನ್ಯಾಸವನ್ನು ಮಾಡುವ ಉದ್ದೇಶ.

(ಬ) ಗುರುತಿಸಬಲ್ಲ ಆಸ್ತಿ.

(ಕ) ಗುರುತಿಸಬಲ್ಲ ಫಲಾನುಭವಿಗಳು ಮತ್ತು

(ಡ) ಗುರುತಿಸಬಲ್ಲ ಉದ್ದೇಶಕ್ಕಾಗಿ ಇರಬೇಕು.

**(II) ಕಲಮು ೭ ಮತ್ತು ೮**

ನ್ಯಾಸಕ್ಕೆ ಕೊಡಬಹುದಾದ ಆಸ್ತಿಯು ಎಂತಹ ಸ್ವರೂಪದ್ದಿರಬೇಕೆಂದರೆ ಅದನ್ನು ಹಸ್ತಾಂತರಿಸಲು ಬರುವಂಥವಾಗಿದ್ದು, ನ್ಯಾಸದಲ್ಲಿ ಸ್ಥಾಪಿಸುವಂತಹದ್ದಾಗಿರಬೇಕು.

**(III) ಕಲಮು ೪**

ನ್ಯಾಸದ ಉದ್ದೇಶವು ಕಾನೂನುಬದ್ಧವಾಗಿರಬೇಕು.

(೨) ಇಂಗ್ಲಿಷಿನ ನ್ಯಾಸದ ಕಾನೂನು ಭಾರತೀಯ ನ್ಯಾಸದ ಕಾನೂನಿಗಿಂತ ನ್ಯಾಸವನ್ನು ರಚಿಸುವಲ್ಲಿ ಭಿನ್ನವಾಗಿರುತ್ತದೆ. ಸ್ನೆಲ್ಲನ (Snell) ಅಭಿಪ್ರಾಯದಂತೆ ಒಂದು ನ್ಯಾಸವನ್ನು ಮಾಡಬೇಕಾದರೆ ಮೂರು ನಿಶ್ಚಿತಾರ್ಥಗಳು ಇರಬೇಕು.

(i) ನಿಶ್ಚಿತವಾದ ಉದ್ದೇಶ.

(ii) ನಿಶ್ಚಿತವಾದ ನ್ಯಾಸದ ಆಸ್ತಿ.

(iii) ನಿಶ್ಚಿತವಾದ ಫಲಾನುಭವಿಗಳು. ಅಂಡರಹಿಲ್ಲನ ಅಭಿಪ್ರಾಯದಂತೆ, ಒಂದು ನ್ಯಾಸವನ್ನು ಮಾಡಬೇಕಾದರೆ ನಾಲ್ಕು ನಿಶ್ಚಿತಾರ್ಥಗಳು ಇರಬೇಕು. ಸ್ನೆಲ್ಲನು ಹೇಳಿದವುಗಳು ಹಾಗೂ ಮತ್ತೊಂದು, ಅದೆಂದರೆ

(iv) ನ್ಯಾಸದ ಉದ್ದೇಶ.

ಇಂಗ್ಲಿಷ್ ಕಾನೂನಿನ ಅನ್ವಯ ನ್ಯಾಸದ ಆಸ್ತಿಯನ್ನು ಧರ್ಮದರ್ಶಿಗೆ ಹಸ್ತಾಂತರಿಸುವ ಅವಶ್ಯಕತೆಯು ಇರುವುದಿಲ್ಲ. ಆದರೆ ಭಾರತೀಯ ಕಾನೂನು ಅದನ್ನು ಹೇಳುತ್ತದೆ.

### (II) ನಿಶ್ಚಿತವಾದ ಉದ್ದೇಶ

(i) ಒಂದು ನ್ಯಾಸವನ್ನು ಮಾಡುವ ಉದ್ದೇಶವು ಅವನ ಕೃತಿಯಿಂದ ಇಲ್ಲವೇ ಮಾತಿನಿಂದ ಇರಬಹುದು.

(ii) ಈ ಉದಾಹರಣೆಗಳು ಒಂದು ನ್ಯಾಸವನ್ನು ಹೇಗೆ ಅದರ ಜನಕನು ತನ್ನ ಕೃತಿಯಿಂದ ಮಾಡಿದನು ಎಂಬುದನ್ನು ತೋರಿಸುತ್ತದೆ.

ಉದಾ:

(i) ಒಬ್ಬ ತಂದೆಯು ತನ್ನ ಖಾತೆ ಪುಸ್ತಕದಲ್ಲಿ ತನ್ನ ಮಗನ ಹೆಸರಿನಿಂದ ಒಂದು ಖಾತೆ ತೆರೆಯುತ್ತಾನೆ. ಅದರಲ್ಲಿ ತನ್ನ ಮಗನ ಹೆಸರಿನಲ್ಲಿ ಹಣವನ್ನು ಜಮಾ ಮಾಡುತ್ತಾನೆ.

*೯ ಬಾಂಬೆ ೧೨೫*

(ii) 'ಅ'ನು ಶೇರುಗಳನ್ನು ಕೊಳ್ಳುವುದು

*೫ ಬಾಂಬೆ ೨೬೮*

*೧೭, ಕಲ್ಕತ್ತ ೬೨೦ (೬೨೮*

(೩) ಬಾಯಿ ಮಾತಿನಿಂದ ಮಾಡಿದ ನ್ಯಾಸವು ಉದಾಹರಣೆಗಳ ಅನಾವಶ್ಯಕವಾಗಿರುತ್ತದೆ. ನ್ಯಾಸವನ್ನು ಮಾಡುವ ನಿಶ್ಚಿತ ಉದ್ದೇಶವನ್ನು ತೋರಿಸುವ ಯಾವ ತರಹದ ಭಾಷೆ ಅವಶ್ಯವಿರುತ್ತದೆಂಬುದೇ ಪ್ರಶ್ನೆಯಾಗಿದೆ.

(i) ಯಾವುದೇ ಪಾರಿಭಾಷಿಕ ಪದಗಳು ಒಂದು ನ್ಯಾಸವನ್ನು ಮಾಡಲು ಅವಶ್ಯವಿರುವುದಿಲ್ಲ. ಆ ವಿಷಯ ರಚನೆಗಾಗಿರುತ್ತದೆ. ಆದ್ದರಿಂದ ಅವನ ಉಯಿಲು ಪತ್ರವನ್ನು ಇಲ್ಲವೆ ಸಂಪೂರ್ಣ ದಸ್ತಾವೇಜನ್ನು ಅರ್ಥೈಸುವುದರ ಮೂಲಕ ಆ ಪ್ರಶ್ನೆಯನ್ನು ನಿರ್ಧರಿಸಬೇಕು. ಆ ಮೃತ್ಯುಪತ್ರ ಮಾಡಿದವನು, ಆ ಆಸ್ತಿಯನ್ನು ಧರ್ಮದರ್ಶಿಯು ಕೇವಲ ಧರ್ಮದರ್ಶಿಯಾಗಿ (ನ್ಯಾಸಧಾರಿಯಾಗಿ) ತೆಗೆದುಕೊಳ್ಳತಕ್ಕದ್ದು. ಇಲ್ಲವೆ ಲಾಭದಾಯಕವಾಗಿ ತೆಗೆದುಕೊಳ್ಳಬೇಕು. ಮೃತ್ಯುಪತ್ರ ಮಾಡಿದವನು ವಿಚಾರಿಸಿದಂತೆ ಇಲ್ಲವೇ ಆತನ ಇಚ್ಛೆಯಂತೆ ದಾನ ಪಡೆದವನು ಅದನ್ನು ಸ್ವೀಕರಿಸುವಂತೆ, ಆದರೆ ಅವನ ಮೇಲೆ ಯಾವುದೇ ಋಣಬಾಧ್ಯತೆ ಹೇರದೆ ಅದನ್ನು ಸ್ವೀಕರಿಸುವಂತೆ ಇರಬೇಕು. ಇಲ್ಲಿರುವ ಪ್ರಶ್ನೆಯೆಂದರೆ ನ್ಯಾಸದ ಜನಕನು ಕೇವಲ ತನ್ನ ಉದ್ದೇಶವನ್ನು ವ್ಯಕ್ತಪಡಿಸಿದನೇ? ಧರ್ಮದರ್ಶಿಯು ಒಂದು ನಿಶ್ಚಿತಕಾರ್ಯವನ್ನು ಅಥವಾ ಕೆಲವು ಕೆಲಸ ಮಾಡಲು ಅವನಿಗೆ ಋಣಭಾರ ಹೇರಿದನೇ? ನಿಜವಾಗಿ ಅವನ ಮೇಲೆ ಒಂದು ಋಣಭಾರ ಹೇರುವ ಉದ್ದೇಶವಿದ್ದರೆ, ನಿಜವಾಗಿ ಅದರಲ್ಲಿ ಅವನು ಸ್ಪಷ್ಟವಾಗಿ ನ್ಯಾಸ ಮಾಡುವ ಉದ್ದೇಶ ಇರುತ್ತದೆ.

(iii) ಬಳಸಿದ ಭಾಷೆಯು ಬೇಡಿಕೆಯ ಪ್ರಾರ್ಥನಾತ್ಮಕವಾಗಿರಬಹುದು. ಇಲ್ಲವೆ ಆಜ್ಞಾಪಿಸುವ ರೀತಿಯಲ್ಲಿರಬಹುದು.

(i) ವಿನಂತಿ, ಶಿಫಾರಸು, ಇಚ್ಛಿಸು, ಆಶಯ ಮುಂತಾದವು ಪ್ರಾರ್ಥನಾತ್ಮಕವಾಗಿರುತ್ತವೆ.

(ii) ಇಂತಹ ಶಬ್ದಗಳು ಒಂದು ನ್ಯಾಸವನ್ನು ಮಾಡಲು ಇಚ್ಛೆಯನ್ನು ಸೂಚಿಸುವುದಿಲ್ಲ.

ಯಾಕೆಂದರೆ, ಅವು ಧರ್ಮದರ್ಶಿಯ ಮೇಲೆ ಯಾವುದೇ ಹೊಣೆ ಹೇರುವ ಉದ್ದೇಶ ಹೊಂದಿರುವುದಿಲ್ಲ.

(iii) ಇಂಗ್ಲಿಷ್ ಕಾನೂನಿನ ಮೇರೆಗೆ ಇಂತಹ ಪ್ರಾರ್ಥನಾತ್ಮಕ ಶಬ್ದಗಳು ಒಂದು ನ್ಯಾಸವನ್ನು ಮಾಡಲು ಹೇಳುತ್ತವೆ ಮತ್ತು ಇಂಥ ನ್ಯಾಸಗಳನ್ನು ಪ್ರಾರ್ಥನಾತ್ಮಕ ನ್ಯಾಸಗಳೆಂದು ಕರೆಯುತ್ತಾರೆ. ಆದರೆ ಆಧುನಿಕ ಜಗತ್ತಿನ ಪ್ರವೃತ್ತಿ ಇದಕ್ಕೆ ವಿರೋಧವಾಗಿದೆ.

## (III) ಫಲಾನುಭವಿಗಳ ಬಗ್ಗೆ ನಿಶ್ಚಿತತೆ

೧. ಫಲಾನುಭವಿಗಳನ್ನು ನಿರ್ದೇಶಿಸಿರಬೇಕು ಇಲ್ಲವೆ ಸಾಕಷ್ಟು ವರ್ಣಿಸಿರಬೇಕು– ಅದು ಹೇಗೆಂದರೆ ಅವರನ್ನು ಗುರುತಿಸಲು ಸಾಕಾಗುವಷ್ಟಿರಬೇಕು.

೨. ಅನಿಶ್ಚಿತತೆಯ ಉದಾಹರಣೆಗಳು:

(i) 'ಅ'ನಿಗೆ ಕೊಟ್ಟ ಆಸ್ತಿಯು ಈ ನಿರ್ದೇಶನದೊಂದಿಗೆ ಇದೆ. ಎಲ್ಲಿಯವರೆಗೆ ಅವನು ಮನೆತನದಲ್ಲಿ ಮುಂದುವರೆಯುವನೋ ಅಲ್ಲಿಯವರೆಗೆ ಎಂದು ಇದೆ. ಇಲ್ಲಿ ಮನೆತನ ಎಂಬ ಪದವು ಅನಿಶ್ಚಿತವಾಗಿದೆ.

(ii) ಜಾತ್ಯತೀತ ಸಂಬಂಧಿಕರಿಗೆ–ಸಂಬಂಧಿಕರು ಅನಿಶ್ಚಿತ.

೩. ಸಾಕಷ್ಟು ವರ್ಣನೆ ಇರುವ ಉದಾಹರಣೆಗಳು.

(i) ದಸ್ತಾವೇಜುಗಳು– ಈ ದಸ್ತಾವೇಜುಗಳಲ್ಲಿ ಸಾಕಷ್ಟು ವರ್ಣನೆಯು ಇರುವುದರಿಂದ ಅವು ಅನಿಶ್ಚಿತವಾಗಿರುವುದಿಲ್ಲ.

## ೩. ಉದ್ದೇಶವು ನಿಶ್ಚಿತವಾಗಿರುವುದು

೧. ಆಸ್ತಿಯನ್ನು ಹೇಗೆ ಅನ್ವಯಿಸಬೇಕು ಎಂಬುದನ್ನು ನಿರ್ದೇಶಿಸಲಿಕ್ಕೇಬೇಕು.

೨. ಉದ್ದೇಶದ ಅನಿಶ್ಚಿತತೆಯ ಉದಾಹರಣೆಗಳು:

(i) ಕೆಲವು ಜನರನ್ನು ಪರಿಗಣಿಸುವುದು.

(ii) ಅವರಿಗೆ ದಯಾಪರವಾಗಿರುವುದು.

(iii) ಅವರಿಗೆ ಬಹಳಷ್ಟು ಸೌಕರ್ಯಗಳನ್ನು ಮಾಡುವುದು (ಪೂರೈಸುವುದು)

(iv) ಅವರನ್ನು ಸ್ಮರಿಸುವುದು.

(v) ಅವರಿಗೆ ನ್ಯಾಯ ಒದಗಿಸಿಕೊಡುವುದು.

(vi) ಭವಿಷ್ಯಕಾಲದಲ್ಲಿ ಎಷ್ಟು ಅತ್ಯುತ್ತಮವಾಗಿ ಸಾಧ್ಯವೋ ಅಷ್ಟರಮಟ್ಟಿಗೆ ತನ್ನ ಸಹೋದರ ಇಲ್ಲವೇ ಸಹೋದರಿಯ ಮಗನ ಯೋಗಕ್ಷೇಮ ನೋಡಿಕೊಳ್ಳುವುದು.

(vii) ಒಬ್ಬಳು ಆ ಆಸ್ತಿಯನ್ನು ತಾನು ಹಾಗೂ ತನ್ನ ಮಕ್ಕಳ ಉಪಯೋಗಕ್ಕೆ ಮತ್ತು ದೇವರ ಚರ್ಚಿನ ಸದಸ್ಯರಿಗೆ ಮತ್ತು ಬಡವರಿಗೆ ಉಪಯೋಗಿಸುವುದು.

೩. ಉದ್ದೇಶವೆಂದರೆ ಫಲಾನುಭವಿಗಳು ಯಾವ ರೀತಿಯಲ್ಲಿ ಅದರ ಪ್ರಯೋಜನ ಪಡೆಯತಕ್ಕದ್ದು ಮತ್ತು ಯಾವ ರೀತಿಯಲ್ಲಿ ಈ ಆಸ್ತಿಯನ್ನು ಅನ್ವಯಿಸಬೇಕು ಎಂಬುದನ್ನು ಹೇಳುವುದು.

## ೪. ನ್ಯಾಸದ ಆಸ್ತಿಯ ಬಗ್ಗೆ ನಿಶ್ಚಿತತೆ

೧. ನ್ಯಾಸಕ್ಕೆ ಒಳಪಡಿಸುವ ಆಸ್ತಿಯನ್ನು ಯುಕ್ತವಾಗಿ ನಿಶ್ಚಿತವಾಗಿ ಅದನ್ನು ನಿರ್ದೇಶಿಸಿರಲಿಕ್ಕೆ ಬೇಕು. ಇಲ್ಲವೆ ಸಾಕಷ್ಟು ವರ್ಣಿಸಿರಬೇಕು. ಅದರಿಂದ ಅದನ್ನು ಗುರುತಿಸಲಿಕ್ಕೆ ಬರುವಂತಿರಬೇಕು.

ಉದಾ:

(i) 'ಅ'ನು 'ಬ'ನಿಗೆ ಕೆಲವು ಆಸ್ತಿಯನ್ನು ಮರಣಶಾಸನದ ಮೂಲಕ ಕೊಡುತ್ತಾನೆ. ಅದರ ಬಹುಭಾಗವನ್ನು 'ಕ'ನ ಮಕ್ಕಳಲ್ಲಿ ಹಂಚಬೇಕೆಂದು ನಿರ್ದೇಶನ ಕೊಟ್ಟಿದ್ದಾನೆ. ಇಲ್ಲಿ ನ್ಯಾಸವನ್ನು ಮಾಡಿಲ್ಲ. ಯಾಕೆಂದರೆ, ಆ ಆಸ್ತಿಯನ್ನು ಯೋಗ್ಯ ನಿಶ್ಚಿತತೆಯಿಂದ ಅವನು ನಿರ್ದೇಶಿಸಿರುವುದಿಲ್ಲ.

(ii) 'ಅ'ನು ನ್ಯಾಸದ ಮೂಲಕ ತನ್ನ ಹೆಂಡತಿಗೆ ಆಸ್ತಿಯನ್ನು ಮತ್ತು ಅವನು ನಿರ್ದೇಶಿಸುವುದೇನೆಂದರೆ ಯಾವ ಭಾಗವು ಅವಳಿಗೆ ಅವಶ್ಯವಿರುವುದಿಲ್ಲವೋ ಅಂತಹ ಭಾಗವನ್ನು ಅವಳ ಮರಣದ ನಂತರ ನ್ಯಾಸದ ಮೂಲಕ ತನ್ನ ಮಕ್ಕಳಿಗೆ ಕೊಡಬೇಕು.

(iii) 'ಅ'ನು ನ್ಯಾಸದ ಮೂಲಕ ಆಸ್ತಿಯನ್ನು ತನ್ನ ಸೇವಕರಿಗೆ ಕೊಡುತ್ತಾನೆ ಮತ್ತು ಅವರಿಗೆ ಪಾರಿತೋಷಕವಾಗಿ ಅವರು ತ್ಯಜಿಸುವುದರ ಮೇಲೆ ನನ್ನ ಈ ಆಸ್ತಿಯಲ್ಲಿಯ ಅಂತಹ ಭಾಗಗಳನ್ನು ಅಂದರೆ ಅವಳಿಗೆ ಯಾವುದನ್ನು ಮಾರಲು ಇಲ್ಲವೆ ಪರಾಧೀನ ಮಾಡಲು ಬರುವುದಿಲ್ಲವೋ ಅಂತಹ ಭಾಗವನ್ನು ಕೊಡಬೇಕು.

### ಮುಕ್ತಾಯ: ಉಪಸಂಹಾರ

೧. ಹೀಗೆ ನ್ಯಾಸದ ಜನಕನು ಒಂದು ನಿಶ್ಚಿತ ನ್ಯಾಸವನ್ನು ಮಾಡಲು ಉದ್ದೇಶಿಸಿದ್ದರೆ ಅದನ್ನು ನಿಶ್ಚಿತ ಆಸ್ತಿಯ ಮೇಲೆ ನಿರ್ದಿಷ್ಟ ಉದ್ದೇಶಗಳಿಗಾಗಿ ಮಾಡಲಿಕ್ಕೇಬೇಕು. ಒಂದು ನ್ಯಾಸವನ್ನು ಮಾಡುವ ಉದ್ದೇಶವಿರದಿದ್ದರೆ ಮತ್ತು ಒಂದು ನಿಶ್ಚಿತ ನ್ಯಾಯಸಮ್ಮತತೆಯ ಹೊಣೆಗಾರಿಕೆ– ಕರ್ತವ್ಯ ಇಲ್ಲದೆ ಹಾಗೂ ನಿಶ್ಚಿತ ಫಲಾನುಭವಿಗಳಿಗೆ ನಿಶ್ಚಿತ ನ್ಯಾಯಸಮ್ಮತ ಹಕ್ಕು ಕೊಡದಿದ್ದರೆ ಅಲ್ಲಿ ನ್ಯಾಸವು ಇರುವುದಿಲ್ಲ.

೨. ಆದಾಗ್ಯೂ ಒಬ್ಬ ನಿಶ್ಚಿತ ವ್ಯಕ್ತಿಯನ್ನು ಧರ್ಮದರ್ಶಿಯೆಂದು ನೇಮಿಸಲು ತಪ್ಪಿದರೆ, ಅದು ನ್ಯಾಸವನ್ನು ಕಾನೂನುಬದ್ಧಗೊಳಿಸುವುದಿಲ್ಲವೆಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಒಂದು ನಿಶ್ಚಿತ ನ್ಯಾಸವನ್ನು ಮಾಡುವ ಉದ್ದೇಶವಿದ್ದರೆ ಸ್ವ–ಇಚ್ಛೆಯಿಂದ ನ್ಯಾಸದ ನಿಯಮಗಳಿಗೆ ಅನುಗುಣವಾಗಿ ಕೇವಲ ಧರ್ಮದರ್ಶಿಯನ್ನು ನೇಮಿಸದಿದ್ದಾಗ, ಅದು ನ್ಯಾಸದ ಕಾನೂನುಬದ್ಧತೆಗೆ ಚ್ಯುತಿ ಬರುವುದಿಲ್ಲ. ನ್ಯಾಯಸಮ್ಮತಿಯ ದೃಷ್ಟಿಯಿಂದ ಧರ್ಮದರ್ಶಿ ಇಲ್ಲವೆಂದು ಒಂದು ನ್ಯಾಸವು ವಿಫಲಗೊಳ್ಳಲು ಅನುವು ಮಾಡಿಕೊಡುವುದಿಲ್ಲ. ಆದ್ದರಿಂದ ಒಬ್ಬ ಧರ್ಮದರ್ಶಿಯನ್ನು ನೇಮಿಸದೆ ಇದ್ದಾಗ ಇಲ್ಲವೆ ನೇಮಿಸಿದ ಧರ್ಮದರ್ಶಿಯು ಸತ್ತರೆ, ಇಲ್ಲವೆ ಒಲ್ಲೆನೆಂದರೆ, ಇಲ್ಲವೆ ಅದನ್ನು ನಿರ್ವಹಿಸಲು ಅಸಮರ್ಥನಾದರೆ, ಇಲ್ಲವೆ ಇನ್ನಾವುದೇ ಇಂತಹ ಕಾರಣಕ್ಕಾಗಿ ಆ ನ್ಯಾಸವು ವಿಫಲಗೊಳ್ಳುವುದಿಲ್ಲ. ಆದರೆ ಅದು ವಿವೇಕಾತ್ಮಕದ ಮೇಲೆ ಕಟ್ಟಿಹಾಕಲಾಗಿದೆ. (ನೋಟೀಸು ಇಲ್ಲದ ಬೆಲೆ ಕೊಟ್ಟು ಕೊಂಡವರನ್ನು ಬಿಟ್ಟು) ಯಾರ ಸ್ವಾಧೀನಕ್ಕೆ ಅಂತಹ ಆಸ್ತಿ ಬರುತ್ತದೆ, ಅಂತಹ ವ್ಯಕ್ತಿಯು ಕಬ್ಜಿದಾರ ನ್ಯಾಸಧಾರಿಯಾಗಿದ್ದು, ಅವನಿಗೆ ಆ ಆಸ್ತಿ ಕುರಿತು ಯಾವ ಕ್ರಮ ಕೈಕೊಳ್ಳಲೂ ಬರುವುದಿಲ್ಲ. ಅವನ ಕರ್ತವ್ಯವು ಕೇವಲ ಅದನ್ನು ಹೊಸ ಧರ್ಮದರ್ಶಿಗೆ ಹಸ್ತಾಂತರಿಸುವುದು.

೩. ಆಸ್ತಿಯನ್ನು ಕುರಿತು ಅನಿಶ್ಚಿತತೆಯು ಇದ್ದುದರ ಪರಿಣಾಮ ಇಲ್ಲವೇ, ಫಲಾನುಭವಿಗಳು ಇಲ್ಲವೆ ನ್ಯಾಸದ ಉದ್ದೇಶವು ಬೇರೆ ಬೇರೆಯಾಗಿದ್ದರೆ:

(i) ಒಂದು ಅನಿಶ್ಚಿತವಾದ ಆಸ್ತಿ ಕುರಿತು ಮಾಡಿದ ನ್ಯಾಸವು ಕಾನೂನುಬದ್ಧವಾಗಿರುವುದಿಲ್ಲ. ಗುರುತಿಸಲ್ಪಡುವ ಆಸ್ತಿಯೇ ಇಲ್ಲದಿರುವಾಗ, ಅದರ ಬಗ್ಗೆ ತಂಟೆಯೇ ಇರುವುದಿಲ್ಲ.

(ii) ಫಲಾನುಭವಿಗಳ ಅನಿಶ್ಚಿತತೆಯಿಂದ ಇಲ್ಲವೆ ಉದ್ದೇಶದ ಅನಿಶ್ಚಿತತೆಯ ಪರಿಣಾಮದಿಂದಾಗಿ ನ್ಯಾಸವು ಕಾನೂನುಬಾಹಿರವಾಗಿರುತ್ತದೆ. ಫಲಾನುಭವಿಯ ಹೆಸರೇ ಇಲ್ಲದಿರುವಾಗ ಅದನ್ನು ಜಾರಿಗೊಳಿಸಲು ಯಾರೂ ಮುಂದೆ ಬರುವುದಿಲ್ಲ.

(iii) ಎಲ್ಲ ನ್ಯಾಸದ ಆಸ್ತಿಯನ್ನು ನಿರ್ದಿಷ್ಟವಾಗಿ ಸಾಕಷ್ಟು ವರ್ಣಿಸದೆ ಇದ್ದಾಗ ಮತ್ತು ನಿಜವಾಗಿ ಅಲ್ಲಿ ಉಪಯೋಗಿಸದ ಪದಗಳು ಸುತ್ತಲಿನ ನ್ಯಾಸದ ಜನಕನು ಅದನ್ನು ಸಾಕಷ್ಟು ವರ್ಣಿಸದೆ ಇದ್ದಾಗ್ಯೂ ಸಂದರ್ಭದ ಮೇಲಿಂದ ಅಂತಹ ಆಸ್ತಿಯನ್ನು ಗುರುತಿಸಬಹುದು. ಆತನು ಆಸ್ತಿಯ ಉದ್ದೇಶಗಳು ತನ್ನ ಆಸ್ತಿಯನ್ನು ಹೇಗೆ ಉಪಯೋಗಿಸಬೇಕು ಎನ್ನುವುದರ ಬಗ್ಗೆ ಅವನ ಇಚ್ಛೆ. ಆ ಧರ್ಮದರ್ಶಿಯು ಯಾವತ್ತೂ ಆ ಆಸ್ತಿಯ ಪ್ರಯೋಜನಕಾರಿ ಹಿತಾಸಕ್ತಿ ಹೊಂದಬಾರದೆಂಬುದೇ ಆಗಿರುತ್ತದೆ. ಒಂದು ನ್ಯಾಸವು ಪರಿಪೂರ್ಣ ನ್ಯಾಸವಾಗಬೇಕೆಂದು ಕಾನೂನು ಗ್ರಹಿಸುತ್ತದೆ. ಅದು ದಾನ ಮಾಡಿದವನ ಇಲ್ಲವೆ ಅವನ ಪ್ರತಿನಿಧಿಗಳ ಮುಖಾಂತರ ಆಗಬೇಕು.

**II. ನ್ಯಾಸದ ಆಸ್ತಿಯು ಹಸ್ತಾಂತರಿಸಲು ಬರುವಂತಹದ್ದಾಗಿರಬೇಕು**

೧. ಯಾವ ಆಸ್ತಿಯನ್ನು ಹಸ್ತಾಂತರಿಸಲು ಬರುತ್ತದೆ?

೨. ಆಸ್ತಿಯ ಹಸ್ತಾಂತರ ಅಧಿನಿಯಮದಲ್ಲಿ ಈ ಪ್ರಶ್ನೆಗೆ ಕಲಮು ೬ರಲ್ಲಿ ಉತ್ತರವು ದೊರೆಯುತ್ತದೆ.

೩. ಯಾವ ಆಸ್ತಿಯನ್ನು ಹಸ್ತಾಂತರಿಸಲು ಬರುತ್ತದೆಯೋ ಅದು ನ್ಯಾಸದ ವಿಷಯವಸ್ತು ಆಗಬಲ್ಲದು.

೪. ಆದರೆ ಅಸ್ತಿತ್ವದಲ್ಲಿರುವ ನ್ಯಾಸದಲ್ಲಿ ಯಾವುದೇ ಪ್ರಯೋಜನಕಾರಿ ಹಿತಾಸಕ್ತಿಯ ನ್ಯಾಸ ಇರುವುದಿಲ್ಲ. ಒಬ್ಬ ಫಲಾನುಭವಿಯು ಒಂದು ನ್ಯಾಸದಲ್ಲಿನ ತನ್ನ ಹಿತಾಸಕ್ತಿಯನ್ನು ಕುರಿತು ಒಂದು ನ್ಯಾಸವನ್ನು ರಚಿಸಲು ಬರುವುದಿಲ್ಲ. ಆದರೆ ಅವನ ಹಿತಾಸಕ್ತಿಯನ್ನು ಹಸ್ತಾಂತರಿಸಬಹುದು. ಆದರೆ ಅವನು ಅದನ್ನು ಕುರಿತು ನ್ಯಾಸ ರಚಿಸಲು ಬರುವುದಿಲ್ಲ.

೫. ಇಂಗ್ಲಿಷ್ ಕಾನೂನಿನಲ್ಲಿ ಮತ್ತು ಭಾರತೀಯ ನ್ಯಾಸ ಕಾನೂನು ಇವುಗಳಲ್ಲಿ ಒಂದು ಮಹತ್ವದ ಅಂತರವನ್ನು ಗುರುತಿಸುತ್ತದೆ.

೬. ಇಂಗ್ಲಿಷ್ ಕಾನೂನಿನಲ್ಲಿ ಫಲಾನುಭವಿಯು ತನ್ನ ಹಿತಾಸಕ್ತಿಯನ್ನು ಕುರಿತು ನ್ಯಾಯಸಮ್ಮತವಾದ ನ್ಯಾಸವನ್ನು ರಚಿಸಬಹುದು.

೭. ಭಾರತೀಯ ಕಾನೂನಿನಲ್ಲಿ ಕಾನೂನುಬದ್ಧ ಮತ್ತು ನ್ಯಾಯಸಮ್ಮತ ಇವುಗಳಲ್ಲಿಯ ಅಂತರವನ್ನು ಮನ್ನಿಸುವುದಿಲ್ಲ.

**ಕಲಮು II: ಒಂದು ನ್ಯಾಸವನ್ನು ಕಾನೂನುಬದ್ಧವಾಗಿ ರಚಿಸಬಹುದು ಮತ್ತು ಜಾರಿಗೊಳಿಸಲು ಬರುವಂತಹದ್ದು ಇರಬೇಕು.**

೧. ಒಂದು ಕಾನೂನುಬದ್ಧವಾದ ನ್ಯಾಸವನ್ನು ರಚಿಸಿದ್ದರೂ ಅದನ್ನು ಜಾರಿಗೊಳಿಸಲು ಬರದಿದ್ದರೆ, ಅದನ್ನು ಜಾರಿಗೊಳಿಸುವುದರ ಸಲುವಾಗಿ ನ್ಯಾಸವು ಎರಡು ಕರಾರುಗಳನ್ನು ಪೂರೈಸಲಿಕ್ಕೇಬೇಕು.

(i) ನ್ಯಾಸದ ಉದ್ದೇಶವು ಕಾನೂನಿಗೆ ವಿರುದ್ಧವಾಗಿರಬಾರದು.

(ii) ನ್ಯಾಸವನ್ನು ರಚಿಸುವುದರ ಸಲುವಾಗಿ ಗೊತ್ತುಪಡಿಸಿದ ಔಪಚಾರಿಕತೆಯನ್ನು ಪೂರೈಸಲಿಕ್ಕೇ ಬೇಕು.

## ನ್ಯಾಸದ ಉದ್ದೇಶ
## ಕಲಮು ೪

೧. ನ್ಯಾಸದ ಉದ್ದೇಶವು ಕಾನೂನುಬದ್ಧವಾಗಿರಬೇಕು.

೨. ಕಾನೂನುಬದ್ಧ ಉದ್ದೇಶಗಳು ಯಾವುವು?

(i) ಆ ಉದ್ದೇಶವು ಕಾನೂನಿನಿಂದ ಬಹಿಷ್ಕರಿಸಿದ್ದು ಪ್ರತಿಬಂಧಿಸಿದ್ದಾಗಿರಬಾರದು.

(ii) ಆ ಉದ್ದೇಶವನ್ನು ಜಾರಿಗೊಳಿಸಲು ಅನುಮತಿ ಕೊಟ್ಟರೆ ಯಾವುದೇ ಕಾನೂನಿನ ಉಪಬಂಧಗಳ ಉಲ್ಲಂಘನೆಯನ್ನು ಮಾಡುವ ಉದ್ದೇಶ ಇರತಕ್ಕದ್ದಲ್ಲ.

ಕಾನೂನಿಗೆ ವಿರುದ್ಧವಾದ ಉದ್ದೇಶಗಳಾವುವು?

(i) ಯಾವ ಉದ್ದೇಶವು ವಂಚನೆಯಿಂದ ಕೂಡಿದ್ದಾಗಿರಬಾರದು.

(ii) ಯಾವುದೇ ವ್ಯಕ್ತಿಗೆ ಇಲ್ಲವೇ ಇನ್ನೊಬ್ಬರ ಆಸ್ತಿಗೆ ವ್ಯಕ್ತವಾಗಿ ಹಾನಿ ಮಾಡತಕ್ಕಂತಹುದು ಇಲ್ಲವೆ ಅವ್ಯಕ್ತವಾಗಿ ಹಾನಿಮಾಡತಕ್ಕ ಉದ್ದೇಶ ಇದ್ದರೆ.

(iii) ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದುದು ಹಾಗೂ ಅನೈತಿಕ ಉದ್ದೇಶವಿದ್ದಾಗ.

ಉದಾ:

(೧) ಹೆಣ್ಣುಮಕ್ಕಳ ಕಲ್ಯಾಣದ ಸಲುವಾಗಿ ನ್ಯಾಸ ರಚಿಸಿ ಅವರನ್ನು ವೇಶ್ಯಾವೃತ್ತಿಗೆ ತರಬೇತಿ ಕೊಡುವುದು ಕಂಡುಬಂದಾಗ.

(೨) ಒಂದು ನ್ಯಾಸವನ್ನು ಕಳ್ಳಸಾಗಾಣಿಕೆಯ ವ್ಯವಹಾರ ನಡೆಸಲು ಮತ್ತು ಅದರ ಲಾಭ ಪಡೆಯಲು.

(೩) ಒಬ್ಬನು ತಾನು ದಿವಾಳಿಯಾದ ಸಂದರ್ಭದಲ್ಲಿ ಸಾರ್ವಜನಿಕರನ್ನು ಮೋಸಗೊಳಿಸಲು ನ್ಯಾಸವನ್ನು ರಚಿಸುವುದು.

(೪) ಅನೈತಿಕವಾಗಿ ಹುಟ್ಟಿದ ಮಕ್ಕಳ ಸಲುವಾಗಿ ನ್ಯಾಸ ರಚಿಸಿದರೆ.

(೫) ಶಾಶ್ವತೆಯ ಉದ್ದೇಶದಿಂದ ನ್ಯಾಸ ರಚಿಸುವುದು.

(೬) ಭವಿಷ್ಯದಲ್ಲಿ ಗಂಡ ಮತ್ತು ಹೆಂಡತಿಯರು ಬೇರೆ ಬೇರೆಯಾದಾಗ, ಜಾರಿಯಲ್ಲಿ ಬರುವ ನ್ಯಾಸ.

೩. ಒಂದು ಸ್ಥಿರ ಆಸ್ತಿ ಕುರಿತು ಮಾಡಿದ ನ್ಯಾಸವು ಕಾನೂನುಬದ್ಧ ಇದೆಯೋ ಇಲ್ಲವೋ ಅನ್ನುವುದನ್ನು ನಿರ್ಧರಿಸುವುದು. ಸ್ಥಿರ ಆಸ್ತಿಯು ಎಲ್ಲಿದೆಯೋ ಅಲ್ಲಿನ ಕಾನೂನಿನ ಪ್ರಕಾರ ನಿರ್ಧರಿಸತಕ್ಕದ್ದು.

೪. ಕಾನೂನಿಗೆ ವಿರುದ್ಧವಾದ ನ್ಯಾಸವು ಕಾನೂನುಬದ್ಧವಾಗುವುದಿಲ್ಲ.

೫. ಒಂದು ನ್ಯಾಸವು ಎರಡು ಉದ್ದೇಶಗಳನ್ನು ಹೊಂದಿದಾಗ ಹಾಗೂ ಅದರಲ್ಲಿ ಒಂದು ಉದ್ದೇಶವು ಕಾನೂನುಬದ್ಧವಾದುದು ಹಾಗೂ ಇನ್ನೊಂದು ಕಾನೂನಿಗೆ ವಿರುದ್ಧ ಇದ್ದಾಗ ಆ ಎರಡೂ ಉದ್ದೇಶಗಳನ್ನು ವಿಂಗಡಿಸುವ ಆಧಾರದ ಮೇಲೆ ಆ ನ್ಯಾಸದ ಕಾನೂನುಬದ್ಧತೆ ಅವಲಂಬಿಸಿರುತ್ತದೆ. ಅದರಲ್ಲಿ ಒಂದನ್ನು ಕಾನೂನುಬದ್ಧ ಉದ್ದೇಶವೆಂದು ವಿಂಗಡಿಸಲು ಬಂದಾಗ ಅದು ಕಾನೂನುಬದ್ಧ ಉದ್ದೇಶವಾಗಿರುತ್ತದೆ.

ಇನ್ನೊಂದನ್ನು ವಿಂಗಡಿಸಲು ಬರದೇ ಇದ್ದಾಗ ಅದು ಕಾನೂನಿಗೆ ವಿರುದ್ಧವಾದ ಉದ್ದೇಶವು ಇದ್ದುದು ಬೇಕಾಯಿದೆಶೀರ ಆಗುತ್ತದೆ. ಇವೆರಡನ್ನೂ ವಿಂಗಡಿಸಲು ಬಾರದೆ ಇದ್ದಾಗ್ಯೂ ಆ ಸಂಪೂರ್ಣ ನ್ಯಾಸವು ಕಾನೂನುಬಾಹಿರವಾಗುತ್ತದೆ.

೬. ನ್ಯಾಸದ ಜನಕನು ಕಾನೂನಿಗೆ ವಿರುದ್ಧ ನ್ಯಾಸ ರಚಿಸಿದ ಪರಿಣಾಮಗಳು:

(i) ಅದರ ಫಲಾನುಭವಿಗಳು ಅದರ ಪ್ರಯೋಜನ ಪಡೆಯಲು ನ್ಯಾಯಾಲಯವು ಅವರ ಪರವಾಗಿ ಜಾರಿ ಕೊಡಲು ಅನುಮತಿ ಕೊಡುವುದಿಲ್ಲ.

(ii) ಆಸ್ತಿಯನ್ನು ಮರಳಿ ಪಡೆಯಲು ನ್ಯಾಸದ ಜನಕನಿಗೆ ನ್ಯಾಯಾಲಯವು ಸಹಾಯ ಮಾಡುವುದಿಲ್ಲ.

## ಒಂದು ಕಾನೂನುಬದ್ಧ ನ್ಯಾಸದ ಔಪಚಾರಿಕೆಗಳು

## ಕಲಮು ೫

೧. ಒಂದು ನ್ಯಾಸವು ಸ್ಥಿರ ಆಸ್ತಿಯ ನ್ಯಾಸವಾಗಿರಬಹುದು, ಇಲ್ಲವೆ ಚರ ಆಸ್ತಿಗಳ ನ್ಯಾಸವಾಗಿರ ಬಹುದು. ಸ್ಥಿರ ಆಸ್ತಿ ಇಲ್ಲವೇ ಚರ ಆಸ್ತಿಗಳನ್ನು ಕುರಿತು ಇರುವ ನ್ಯಾಸದ ಕಾನೂನುಬದ್ಧತೆಯು ಅವುಗಳ ಔಪಚಾರಿಕತೆಯ ಮೇಲೆ ಅವಲಂಬಿಸಿರುತ್ತದೆ.

೨. ಸ್ಥಿರ ಆಸ್ತಿಯ ನ್ಯಾಸದ ಸಂಬಂಧಿಸಿದ ಪ್ರಕರಣಕ್ಕೆ ಔಪಚಾರಿಕತೆಗಳು. ಇಂತಹ ನ್ಯಾಸಗಳನ್ನು ಎರಡು ರೀತಿಗಳಲ್ಲಿ ರಚಿಸಬಹುದು.

(i) ಮರಣ ಶಾಸನವಲ್ಲದೆ ದಸ್ತಾವೇಜಿನ ಮೂಲಕ ಅವನು ಸಹಿ ಮಾಡುವುದರ ಮೂಲಕ ಇಲ್ಲವೆ ಅವರ ಧರ್ಮದರ್ಶಿಯು

(ii) ಮರಣ ಶಾಸನದ ಮೂಲಕ.

೩. ಜಂಗಮ ಆಸ್ತಿ ಕುರಿತು ಮಾಡಿದ ನ್ಯಾಸದ ಔಪಚಾರಿಕತೆಗಳು. ಇವುಗಳನ್ನು ಮೂರು ರೀತಿಗಳಲ್ಲಿ ರಚಿಸಬಹುದು.

(i) ಮರಣ ಶಾಸನವಿಲ್ಲದೆ ಇತರ ದಸ್ತಾವೇಜಿನ ಮೂಲಕ ಬೇರೆಯವರು ಸಹಿ ಮಾಡಿದ್ದು ಇಲ್ಲವೆ ಧರ್ಮದರ್ಶಿಯು ಸಹಿ ಮಾಡಿದ್ದು.

(ii) ಮರಣ ಶಾಸನದ ಮೂಲಕ ಮಾಡಿದ್ದು ಬೇರೆಯವರು ಸಹಿ ಮಾಡುವುದರ ಮೂಲಕ ಇಲ್ಲವೆ ಅದರ ಧರ್ಮದರ್ಶಿ ಸಹ ಮಾಡುವುದರ ಮೂಲಕ.

(iii) ಧರ್ಮದರ್ಶಿಯ ಹೆಸರಿಗೆ ಆಸ್ತಿಯನ್ನು ಹಸ್ತಾಂತರಿಸುವುದರ ಮೂಲಕ.

೪. ಒಂದು ನ್ಯಾಸದ ರಚನೆ ಹಾಗೂ ಘೋಷಣೆಯಲ್ಲಿಯ ಅಂತರ (ವಿವರಿಸಿಲ್ಲ).

## ೫. ನ್ಯಾಸದ ಆಸ್ತಿಯನ್ನು ಹಸ್ತಾಂತರಿಸುವುದು

೧. ನ್ಯಾಸದ ಜನಕನು ನ್ಯಾಸದ ಆಸ್ತಿಯನ್ನು ತನ್ನಿಂದ ತೊರೆಯದ ಹೊರತು ನ್ಯಾಸವು ಆಗುವುದಿಲ್ಲ. ಅದೆಂದರೆ ಅವನು ಆ ಆಸ್ತಿಯನ್ನು ಧರ್ಮದರ್ಶಿಯ ಹೆಸರಿಗೆ ಹಸ್ತಾಂತರಿಸಲಿಕ್ಕೇಬೇಕು.

೨. ಯಾವ ನ್ಯಾಸದಲ್ಲಿ ಅದರ ಜನಕನು ತಾನೇ ಅದರ ಧರ್ಮದರ್ಶಿಯಾಗಿರುವ ಆ ನ್ಯಾಸಕ್ಕೆ ಇದು ಅನ್ವಯಿಸುವುದಿಲ್ಲ. ನ್ಯಾಸದ ಆಸ್ತಿ ಸಂಬಂಧವನ್ನು ಬದಲಿಸಿರುವನೆಂಬುದನ್ನು ಅವಶ್ಯವಾಗಿ

ತೋರಿಸಬೇಕಾಗುತ್ತದೆ.

೩. ಒಂದು ಮರಣ ಶಾಸನದ ಮೂಲಕ ನ್ಯಾಸವನ್ನು ಮಾಡಿದ್ದರೆ ಇದು ಅನ್ವಯಿಸುವುದಿಲ್ಲ. ಆ ಮೃತ್ಯುಪತ್ರವು ಆತನ ಮರಣದ ನಂತರ ಜಾರಿಯಲ್ಲಿ ಬರುತ್ತದೆ ಮತ್ತು ಧರ್ಮದರ್ಶಿಗಳು ನಂತರ ಆ ಆಸ್ತಿ ಸ್ವಾಧೀನವನ್ನು ಪಡೆಯುತ್ತಾರೆ.

**ವಿಭಾಗ II : ಒಂದು ನ್ಯಾಸವು ಖಂಡನಾರ್ಹವಿದ್ದಾಗಲೂ ಅದು ಕಾನೂನುಬದ್ಧವಾಗಿರುತ್ತದೆ.**

೧. ಒಂದು ಕಾನೂನುಬದ್ಧ ನ್ಯಾಸವನ್ನು ಕೆಳಗಿನ ಕಾರಣಗಳಿಂದ ಹಾಗೂ ಕೆಳಗೆ ಹೇಳಿದ ಜನರು ಖಂಡಿಸಬಹುದು ಅಥವಾ ಪ್ರಶ್ನಿಸಬಹುದು.

(ಅ) ಆ ನ್ಯಾಸದ ಜನಕ (ಸ್ಥಾಪಿಸಿದವನು) ಇಲ್ಲವೆ ಅವನ ವಾರಸುದಾರರು ಯಾರಿಗೆ ಆ ಆಸ್ತಿಯಲ್ಲಿ ಹಕ್ಕು ಇರುವುದೋ ಅವರು.
- (i) ಪಕ್ಷಗಾರರ ಅಸಾಮರ್ಥ್ಯದಿಂದ.
- (ii) ಕೆಲವು ತಪ್ಪಿನಿಂದಾಗಿ ಅಥವಾ ನ್ಯಾಸದ ಜನಕನಿಗೆ ಮೋಸ ಮಾಡಿದ್ದರೆ.

(ಬ) ನ್ಯಾಸ ಸ್ಥಾಪಿಸಿದವನಿಗೆ (ಜನಕನಿಗೆ) ಸಾಲ ಕೊಟ್ಟವರು ಅವನು ತಮಗೆ ಕೊಟ್ಟ ಸಾಲ ಮುಳುಗಿಸಲು ಇಲ್ಲವೇ ಅವರ ಹಕ್ಕು ನಾಶ ಮಾಡಲು ಇಲ್ಲವೆ ಅದನ್ನು ವಿಳಂಬ ಮಾಡುವುದು ಇಲ್ಲವೇ ದಿವಾಳಿ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದೂ;

(ಕ) ಹಿಂದೆ ಆದ ನ್ಯಾಸದ ಸಂಗತಿ ಗೊತ್ತಿಲ್ಲದೆ, ಭವಿಷ್ಯದಲ್ಲಿ ಆ ನ್ಯಾಸ ಜನಕನಿಂದ ನೋಟೀಸು ಇಲ್ಲದೆ ಮುಂದೆ ಕೊಳ್ಳುವವರು, ಈ ಆಸ್ತಿಯು ಭೂಮಿಯಾಗಿದ್ದರೆ, ಭವಿಷ್ಯದಲ್ಲಿ ಅದನ್ನು ಕೊಳ್ಳುವವರಿಗೆ ಹಾನಿ ಮಾಡಲು ಆ ಸಾಲ ಕೊಟ್ಟವರ ಹಕ್ಕು ಮುಳುಗಿಸುವ ದುಷ್ಟ ಇರಾದೆಯಿಂದ ಮಾಡಿದ್ದು ಇರಬಹುದು.

**೧. ನ್ಯಾಸದ ಪಕ್ಷಗಾರರ ಅಸಮರ್ಥತೆ**

ನ್ಯಾಸದ ಜನಕ ಅಥವಾ ಸ್ಥಾಪಿಸುವವನ ಸಾಮರ್ಥ್ಯ

೧. ನ್ಯಾಸವನ್ನು ಮಾಡುವವನು (ಜನಕನು) ಒಂದು ಕರಾರು ಒಪ್ಪಂದ ಮಾಡಿಕೊಳ್ಳಲು ಸಮರ್ಥನಿರಬೇಕು.

ಉದಾ: (i) ಅವನು ವಯಸ್ಕನಿರಬೇಕು ಮತ್ತು
(ii) ಅವನು ಸ್ವಸ್ಥಚಿತ್ತನಾಗಿರಬೇಕು

೨. ಇದು ಒಬ್ಬ ಅಪ್ರಾಪ್ತ ವಯಸ್ಕನು ನ್ಯಾಸ ಮಾಡುವುದನ್ನು ಪ್ರತಿಬಂಧಿಸಿದರೂ ಸಹ, ಕಾನೂನು ಬದ್ಧ ಅಪ್ರಾಪ್ತ ವಯಸ್ಕನ ನ್ಯಾಸವನ್ನು ಉಪಬಂಧಿಸುತ್ತದೆ. ಕಾನೂನಿನ ಕೆಳಗೆ ನಿರ್ದಿಷ್ಟಪಡಿಸಿದ ಕರಾರುಗಳನ್ನು ಅವಲೋಕಿಸಿದರೆ, ಒಬ್ಬ ಅಪ್ರಾಪ್ತ ವಯಸ್ಕನು ಇಲ್ಲವೆ ಅವನ ವತಿಯಿಂದ ಅಸಲು ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಸಿವಿಲ್ ನ್ಯಾಯಾಲಯದ ಪರವಾನಗಿಯ ಮೇರೆಗೆ ನ್ಯಾಸವನ್ನು ಮಾಡಬಹುದು.

ಸಿವಿಲ್ ಪ್ರಕ್ರಿಯಾ ಸಂಹಿತೆ ಅನ್ವಯ ಮೂಲ ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಸಿವಿಲ್ ನ್ಯಾಯಾಲಯವೆಂದರೆ ಜಿಲ್ಲಾ ನ್ಯಾಯಾಲಯವಿರುತ್ತದೆ.

೩. ನ್ಯಾಸವನ್ನು ಮಾಡುವವನ ಸಾಮರ್ಥ್ಯವು (ಸಕ್ಷಮತೆಯು) ಎರಡು ರೀತಿಗಳಿಂದ ಸೀಮಿತವಾಗಿದೆ.

(i) ಆ ನ್ಯಾಸದ ವಿಷಯವಾಗಿರುವ ಆಸ್ತಿಯು ಹಸ್ತಾಂತರ ಮಾಡಲಿಕ್ಕೆ ಬರುವಂಥದು ಇರಲಿಕ್ಕೇಬೇಕು.

(ii) ಅವನು ಈಗ ಜಾರಿಯಲ್ಲಿರುವ ಕಾನೂನಿನ ಪರಿಮಿತಿಯಲ್ಲಿ ಅದನ್ನು ಹಸ್ತಾಂತರಿಸಬಲ್ಲನು. ಆ ಆಸ್ತಿಯನ್ನು ಹಸ್ತಾಂತರಿಸಲು ಅಥವಾ ಮಾರಲು ಆ ನ್ಯಾಸ ಜನಕನಿಗೆ ಅಧಿಕಾರ ಇರದಿದ್ದರೆ ಆ ನ್ಯಾಸವು ಕಾನೂನುಬದ್ಧವಾಗುವುದಿಲ್ಲ.

೪. ಯಾವ ಆಸ್ತಿಯನ್ನು ಹಸ್ತಾಂತರಿಸಬಹುದು ಮತ್ತು ಯಾವ ಆಸ್ತಿ ಹಸ್ತಾಂತರಿಸಬಾರದು ಎಂಬುದನ್ನು ಆಸ್ತಿಯ ಹಸ್ತಾಂತರ ಅಧಿನಿಯಮದ ಕಲಂ ೬ರಲ್ಲಿ ವ್ಯಾಖ್ಯಾನಿಸಲಾಗಿದೆ.

೫. ನ್ಯಾಸವನ್ನು ಮಾಡುವವನ (ಜನಕ) ಅಧಿಕಾರವು ಮತ್ತು ಅದರ ವ್ಯಾಪ್ತಿಯು ಕಾನೂನಿನ ಮೇಲೆ ಅವಲಂಬಿಸಿರುತ್ತದೆ.

ಉದಾ:

(i) ಒಬ್ಬ ತಂದೆಯ ಪಿತ್ರಾರ್ಜಿತ ಆಸ್ತಿಯನ್ನು ಮಾರಲಿಕ್ಕೆ ಇಲ್ಲವೆ ಹಸ್ತಾಂತರಗೊಳಿಸಲು ಬರುವುದಿಲ್ಲ. ಆದ್ದರಿಂದ ಅವನು ನ್ಯಾಸವನ್ನು ಮಾಡಲು ಬರುವುದಿಲ್ಲ.

(ii) ಒಬ್ಬ ಹಿಂದೂ ವಿಧವೆಯು ತನ್ನ ಗಂಡನಿಂದ ಅವಳಿಗೆ ಬಂದ ಆಸ್ತಿಯನ್ನು ಮಾರಲು ಬರುವುದಿಲ್ಲ. ಅವಳಿಗೆ ಅದರಲ್ಲಿ ಅವಳು ಜೀವಿಸಿರುವವರೆಗೆ ಉಪಯೋಗಿಸುವ ಹಕ್ಕು ಇರುತ್ತದೆ. ಕಾರಣ ಅವಳು ಅದನ್ನು ನ್ಯಾಸ ಮಾಡಲು ಬರುವುದಿಲ್ಲ.

(iii) ಒಬ್ಬ ಮಹಮ್ಮದೀಯನು ತನ್ನ ಆಸ್ತಿಯಲ್ಲಿ ತಾನು ಮಾಡಿದ ಸಾಲ ಮತ್ತು ಆತನ ಸ್ಮಶಾನ ಯಾತ್ರೆಯ ಖರ್ಚು ಕಳೆದು ಉಳಿದ ಆಸ್ತಿಯಲ್ಲಿ ೧/೩ಕ್ಕಿಂತ ಹೆಚ್ಚಿನ ಆಸ್ತಿಯನ್ನು ಹಸ್ತಾಂತರಿಸಲು ಬರುವುದಿಲ್ಲ. ಆದ್ದರಿಂದ ಅವನು ೧/೩ಕ್ಕಿಂತ ಹೆಚ್ಚಿನ ಆಸ್ತಿಯ ನ್ಯಾಸವನ್ನು ಮಾಡಲು ಬರುವುದಿಲ್ಲ.

## ಒಬ್ಬ ಧರ್ಮದರ್ಶಿಯಾಗಲು ಸಮರ್ಥತೆ
## ಕಲಮು ೧೦

೧. ಆಸ್ತಿಯನ್ನು ಹೊಂದಬಲ್ಲ ಪ್ರತಿಯೊಬ್ಬ ವ್ಯಕ್ತಿಯೂ ಧರ್ಮದರ್ಶಿಯಾಗಲು ಅರ್ಹನಿರುತ್ತಾನೆ.

೨. ಆಸ್ತಿಯನ್ನು ಹೊಂದಲು ಯಾರು ಸಮರ್ಥರಿರುತ್ತಾರೆ?

ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯೂ ಆಸ್ತಿಯನ್ನು ಹೊಂದಲು ಮತ್ತು ತೆಗೆದುಕೊಳ್ಳಲು ಸಮರ್ಥನಿರುತ್ತಾನೆ. ಆದ್ದರಿಂದ ಜೀವಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅವನು ಅಲ್ಪವಯಿ ಇರಲಿ, ಇಲ್ಲವೇ ಒಬ್ಬ ಭ್ರಮೆಯಾದವನಿರಲಿ, ಅವನು ಧರ್ಮದರ್ಶಿ ಆಗಲು ಸಮರ್ಥನಿರುತ್ತಾನೆ.

೩. ಒಂದು ಒಪ್ಪಂದ ಕರಾರು ಮಾಡಿಕೊಳ್ಳುವ ಸಾಮರ್ಥ್ಯತೆ ಮತ್ತು ಆಸ್ತಿಯನ್ನು ಹೊಂದುವ ಮತ್ತು ತೆಗೆದುಕೊಳ್ಳುವ ಸಾಮರ್ಥ್ಯದಲ್ಲಿ ಅಂತರವಿದೆ. ಜೀವಿಸಿರುವ ಪ್ರತಿಯೊಬ್ಬನಿಗೂ ಒಂದು ಒಪ್ಪಂದ ಕರಾರು ಮಾಡಿಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಅದರೆ ಜೀವಿಸಿರುವ ಪ್ರತಿಯೊಬ್ಬ ಮನುಷ್ಯನಿಗೆ ಆಸ್ತಿಯನ್ನು ಹೊಂದುವ ಹಾಗೂ ತೆಗೆದುಕೊಳ್ಳುವ ಸಾಮರ್ಥ್ಯ ಇರುತ್ತದೆ.

೪. ಈ ಭೇದ(ಅಂತರ)ವನ್ನು ಅವಶ್ಯವಾಗಿ ನೆನಪಿನಲ್ಲಿ ಇಡಬೇಕು. ಯಾಕೆಂದರೆ ಒಬ್ಬ ವ್ಯಕ್ತಿಗೆ ಒಂದು ಒಪ್ಪಂದದ ಕರಾರು ಮಾಡಿಕೊಳ್ಳಲು ಸಾಮರ್ಥ್ಯ ಇಲ್ಲದಿರಬಹುದು. ಆದಾಗ್ಯೂ ಅವನು

ಧರ್ಮದರ್ಶಿಯಾಗಲು ಅರ್ಹನಿರುತ್ತಾನೆ. ಪರಂತು ಅವನಿಗೆ ಆಸ್ತಿ ಹೊಂದುವ ಮತ್ತು ತೆಗೆದುಕೊಳ್ಳುವ ಸಾಮರ್ಥ್ಯವಿರಬೇಕು. ಭೌತಿಕ ಮರಣ ಇಲ್ಲವೆ ವ್ಯಾವಹಾರಿಕ ಮರಣ ಹೊಂದಿರತಕ್ಕದ್ದಲ್ಲ.

(i) ಒಬ್ಬನಿಗೆ ಗಡಿಪಾರು ಶಿಕ್ಷೆ ವಿಧಿಸಿದ್ದರೆ ಅದು ವ್ಯಾವಹಾರಿಕ ಮರಣವಲ್ಲ.

೭. ಇಲ್ಲಿ ಇನ್ನೊಂದು ಅಂತರವಿದೆ. ಅದನ್ನು ಗಮನಿಸಬೇಕು. ಸಾಮಾನ್ಯವಾಗಿ ಒಬ್ಬ ಧರ್ಮದರ್ಶಿಯಾಗಲು ಸಮರ್ಥನಿದ್ದವನು ಒಂದು ನ್ಯಾಸವನ್ನು ಸಹಿ ಮಾಡಬಲ್ಲನು ಹಾಗೂ ಜಾರಿಗೊಳಿಸಬಲ್ಲನು. ಆದರೆ ಯಾವ ನ್ಯಾಸದಲ್ಲಿ ಆತನ ವಿವೇಚನಾ ಶಕ್ತಿಯನ್ನು ಉಪಯೋಗಿಸಬೇಕಾದ ಪ್ರಕರಣಗಳಲ್ಲಿ, ಯಾವ ಮನುಷ್ಯನು ಧರ್ಮದರ್ಶಿಯಾಗಲು ಅರ್ಹನಿರುತ್ತಾನೋ ಅವನು ಅವಶ್ಯಕವಾಗಿ ನ್ಯಾಸವನ್ನು ಜಾರಿಗೊಳಿಸುವ ಸಾಮರ್ಥ್ಯ ಹೊಂದಿರುವುದಿಲ್ಲ.

೮. ಯಾವ ನ್ಯಾಸದಲ್ಲಿ ವಿವೇಚನಾಶಕ್ತಿಯನ್ನು ಉಪಯೋಗಿಸುವ ಅವಶ್ಯಕತೆಯು ಇರುವುದಿಲ್ಲವೋ, ಅಂತಹದರಲ್ಲಿ ಒಂದು ನ್ಯಾಸವನ್ನು ಜಾರಿಗೊಳಿಸುವ ಅರ್ಹತೆಯು, ಅವನಿಗೆ ಧರ್ಮದರ್ಶಿಯಾಗುವ ಅರ್ಹತೆಯೇ ಆಗಿರುತ್ತದೆ. ಅದೆಂದರೆ ಆಸ್ತಿಯನ್ನು ಹೊಂದುವುದು ಮತ್ತು ತೆಗೆದುಕೊಳ್ಳುವ ಸಾಮರ್ಥ್ಯ.

೯. ಯಾವ ನ್ಯಾಸದಲ್ಲಿ ವಿವೇಚನಾಶಕ್ತಿಯನ್ನು ಉಪಯೋಗಿಸುವ ಆವಶ್ಯಕತೆಯು ಇದೆಯೋ, ಅಲ್ಲಿ ಧರ್ಮದರ್ಶಿಗೆ ಒಪ್ಪಂದದ ಕರಾರು ಮಾಡಿಕೊಳ್ಳುವ ಸಾಮರ್ಥ್ಯವು ಇರಲಿಕ್ಕೇಬೇಕು.

## ಫಲಾನುಭವಿಯಾಗಲು ಸಾಮರ್ಥ್ಯ

## ಕಲಮು ೯

೧. ಆಸ್ತಿಯನ್ನು ಹೊಂದಲು ಶಕ್ತನಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಫಲಾನುಭವಿಯಾಗಬಲ್ಲನು.

೨. ಧರ್ಮದರ್ಶಿಯಾಗಲು ಬೇಕಾದ ಅರ್ಹತೆಗಳು ಒಬ್ಬ ಫಲಾನುಭವಿಯಾಗಲು ಬೇಕಾದ ಅರ್ಹತೆಗಳು ಒಂದೇ ಆಗಿರುತ್ತವೆ.

೩. ಅದೆಂದರೆ, ಜೀವಿಸಿರುವ ಪ್ರತಿಯೊಬ್ಬನು ಫಲಾನುಭವಿಯಾಗಬಲ್ಲನು. ಜೀವಿಸಿರುವ ಪ್ರತಿಯೊಬ್ಬ ವ್ಯಕ್ತಿಯ ಹಿತಾಸಕ್ತಿಗೆ ನ್ಯಾಸವನ್ನು ಮಾಡಬಹುದು. ಫಲಾನುಭವಿಗೆ ಒಪ್ಪಂದ ಕರಾರು ಮಾಡಿಕೊಳ್ಳುವ ಅರ್ಹತೆಯು ಇರುವ ಅವಶ್ಯಕತೆಯು ಇರುವುದಿಲ್ಲ. ಈ ದಿಶೆಯಲ್ಲಿ ಆ ಸ್ಥಾನವನ್ನು ಧರ್ಮದರ್ಶಿಯ ಸ್ಥಾನದ ಮೇರೆಗೆ ನಿಯಂತ್ರಿಸಲಾಗಿದೆ. ಧರ್ಮದರ್ಶಿಗೆ ಅನ್ವಯಿಸುವ ಉಪಬಂಧಗಳೇ ಫಲಾನುಭವಿಗೂ ಅನ್ವಯಿಸುತ್ತದೆ.

## ಅಧ್ಯಾಯ III

## ಒಂದು ವ್ಯಕ್ತಪಡಿಸಿದ (ಅಭಿವ್ಯಕ್ತ) ಘೋಷಿತ ನ್ಯಾಸವನ್ನು ರದ್ದು ಮಾಡುವುದು

### ಕಲಮು ೬೮

೧. ಒಂದು ನ್ಯಾಸವನ್ನು ರದ್ದು ಮಾಡುವುದು, ಆ ನ್ಯಾಸವನ್ನು ಹೇಗೆ ರಚಿಸಲಾಗಿದೆಂಬುದನ್ನು ಅವಲಂಬಿಸಿದೆ.

(i) ಒಂದು ನ್ಯಾಸವನ್ನು ಮೃತ್ಯುಪತ್ರದಿಂದ ಮಾಡಿದ್ದರೆ ಆಗ ಆ ಮೃತ್ಯುಪತ್ರವನ್ನು ಮಾಡಿದವನೇ ಅದನ್ನು ತನಗೆ ಬೇಕಾದಾಗ ರದ್ದುಪಡಿಸಬಹುದು. ಯಾಕೆಂದರೆ ಅವನು ಮರಣ ಹೊಂದುವವರೆಗೆ ಅವನ ಮೃತ್ಯುಪತ್ರವು ಅಮಲಿನಲ್ಲಿ ಬರುವುದಿಲ್ಲ. ಅದನ್ನು ಜಾರಿಗೊಳಿಸುವ ಪೂರ್ವದಲ್ಲಿಯೇ ಅದನ್ನು ರದ್ದುಗೊಳಿಸಬಹುದು.

೨. ನ್ಯಾಸವನ್ನು ಮೃತ್ಯು ಪತ್ರವನ್ನು ಹೊರತುಪಡಿಸಿ ಮಾಡಿದ್ದರೆ–

ಉದಾ: ಮರಣ ಶಾಸನ ಹೊರತುಪಡಿಸಿ ಉಳಿದ ದಸ್ತಾವೇಜುಗಳಿಂದ ನ್ಯಾಸ ಮಾಡಿದ್ದರೆ ಅಥವಾ ಮೌಖಿಕವಾಗಿ ನ್ಯಾಸ ಮಾಡಿದ್ದರೆ, ಆಗ ಅದನ್ನು ಈ ಕೆಳಗಿನ ಸಂದರ್ಭಗಳಲ್ಲಿ ರದ್ದುಪಡಿಸಬಹುದು.

(i) ಆ ನ್ಯಾಸವನ್ನು ಮಾಡಿದವನಿಗೆ (ಜನಕನಿಗೆ) ಆ ಅಧಿಕಾರವನ್ನು ವ್ಯಕ್ತಪಡಿಸಿ ಕಾಯ್ದಿರಿಸಿದರೆ.

(ii) ಫಲಾನುಭವಿಗಳೆಲ್ಲರೂ ಒಪ್ಪಂದ ಮಾಡಿಕೊಳ್ಳಲು ಅರ್ಹರಿದ್ದರೆ, ಅವರೆಲ್ಲರೂ ತಮ್ಮ ತಮ್ಮ ಒಪ್ಪಿಗೆ ಕೊಟ್ಟರೆ ಹಾಗೆ ಮಾಡಬಹುದು.

## ಅಧ್ಯಾಯ IV

## ಒಂದು ವ್ಯಕ್ತಪಡಿಸಿದ (ಅಭಿವ್ಯಕ್ತ) ನ್ಯಾಸವನ್ನು ರದ್ದುಗೊಳಿಸುವುದು

**ಕಲಮು ೭೭**

೧. ಕೆಳಗಿನ ಪ್ರಕರಣಗಳಲ್ಲಿ ನ್ಯಾಸವು ರದ್ದಾಗುತ್ತದೆ (ಅಂತ್ಯಗೊಳ್ಳುತ್ತದೆ).

(i) ಉದ್ದೇಶವನ್ನು ಸಂಪೂರ್ಣವಾಗಿ ಆಚರಣೆಗೆ ತಂದಾಗ.

(ii) ಅದರ ಉದ್ದೇಶವು ಅಕ್ರಮದ್ದಾದಾಗ.

(iii) ಅದನ್ನು ಪೂರ್ತಿಗೊಳಿಸುವುದು ಅಸಾಧ್ಯವಾದಾಗ.

(iv) ರದ್ದುಮಾಡಲು ಬರುವಂತಹ ಒಂದು ನ್ಯಾಸವನ್ನು ರದ್ದುಪಡಿಸುವುದಾಗಿ ಪ್ರಕಟಿಸಿದರೆ,

(v) ಒಬ್ಬನೇ ಒಬ್ಬ ಫಲಾನುಭವಿ ಇಲ್ಲವೆ ಅನೇಕ ಫಲಾನುಭವಿಗಳು (ಎಲ್ಲರೂ ಏಕಕಾಲಕ್ಕೆ ಹಕ್ಕುಳ್ಳವರಾಗಿರಲಿ, ಇಲ್ಲವೇ ಒಬ್ಬರ ನಂತರ ಇನ್ನೊಬ್ಬರು ತೆಗೆದು ಕೊಳ್ಳುವುದಿರಲಿ) ಅವರು ಯಾವುದೇ ಅನರ್ಹತೆ (ಅಲ್ಪವಯಿ ಕೂಸು, ಬುದ್ಧಿಮಾಂದ್ಯ) ಹೊಂದಿರಲಿ ಇಲ್ಲವೆ ಹೊಂದಿರದೇ ಇರಲಿ ಅವರು ಸ್ಥಾಪಕನ (ಜನಕನ) ಇಚ್ಛೆಯ ಉಲ್ಲೇಖವಿಲ್ಲದೆ ಇಲ್ಲವೇ ಧರ್ಮದರ್ಶಿಯ ಇಚ್ಛೆ ಇಲ್ಲದೆ ನ್ಯಾಸವನ್ನು ರದ್ದುಗೊಳಿಸಬಹುದು.

೨. ಒಂದು ನ್ಯಾಸವನ್ನು ರದ್ದುಗೊಳಿಸಲು ಬೇಕಾಗುವ ಕರಾರುಗಳೆಂದರೆ ಒಂದು ಕರಾರು ಒಪ್ಪಂದ ರದ್ದುಗೊಳಿಸಲು ಬೇಕಾದ ಕರಾರುಗಳೇ ಆಗಿರುತ್ತವೆ.

(೧) ಇನ್ನೂ ಎರಡು ಪ್ರಶ್ನೆಗಳನ್ನು ವಿಚಾರಿಸಬೇಕಾಗಿದೆ–

(i) ಒಂದು ನ್ಯಾಸವು ಯಾವಾಗ ಆಡಳಿತಾತ್ಮಕ ಆಗುತ್ತದೆ?

(ii) ಯಾವಾಗ ಆಸ್ತಿಯು ನ್ಯಾಸವನ್ನು ಮಾಡುತ್ತದೆ ಮತ್ತು ಯಾವಾಗ ಫಲಾನುಭವಿಗಳಿಗೆ ನ್ಯಾಸವು ಆಗುತ್ತದೆ?

(೨) ಒಂದು ನ್ಯಾಸದ ಆಡಳಿತಕ್ಕೆ ಈ ಪ್ರಶ್ನೆಗಳು ಆರಂಭಿಕ ಪ್ರಶ್ನೆಗಳಾಗಿರುತ್ತವೆ.

(i) ಒಂದು ನ್ಯಾಸವು ಯಾವಾಗ ಕಾರ್ಯ ಮಾಡಲು ಪ್ರಾರಂಭಿಸುವುದು?

ಯಾವಾಗ ಧರ್ಮದರ್ಶಿಯು ಹಾಗೂ ಫಲಾನುಭವಿಗಳು ಸ್ವೀಕರಿಸುತ್ತಾರೆಯೋ ಆಗ ಆ ನ್ಯಾಸವು ಆಡಳಿತ ನಡೆಸಬಹುದು.

**೧. ಒಂದು ನ್ಯಾಸದ ಹಕ್ಕನ್ನು ಬಿಟ್ಟುಬಿಡುವುದು ಮತ್ತು ಸ್ವೀಕರಿಸುವುದು**

ಸ್ವೀಕರಿಸುವುದು ಪರಿಚ್ಛೇದ ೩೪, ಕಲಮು ೧೦

೧. ನ್ಯಾಸವನ್ನು ಸ್ಥಾಪಿಸಿದವನು (ಜನಕನು) ಒಬ್ಬ ವ್ಯಕ್ತಿಯನ್ನು ಧರ್ಮದರ್ಶಿಯೆಂದು ನೇಮಿಸಿದ್ದರೂ ಹಾಗೆ ನೇಮಿಸಿದ ವ್ಯಕ್ತಿಯು ಅಂತಹ ನೇಮಕವನ್ನು ಅವನು ಸ್ವೀಕರಿಸಲೇಬೇಕೆಂದಿಲ್ಲ.

೨. ಈ ಧರ್ಮದರ್ಶಿಯ ಸ್ಥಾನಕ್ಕೆ ನೇಮಕಗೊಂಡ ವ್ಯಕ್ತಿಯು ಆ ಸ್ಥಾನವನ್ನು ಸ್ವೀಕರಿಸಬಹುದು

ಇಲ್ಲವೆ ಅದನ್ನು ಅವನು ನಿರಾಕರಿಸಬಹುದು.

೩. ಈ ಹುದ್ದೆಯನ್ನು ವ್ಯಕ್ತವಾಗಿ ಸೂಚಿಸಬಹುದು ಇಲ್ಲವೆ ಅವನ ನಡತೆಯಿಂದ ತೋರಿಸಬಹುದು. ಅದು ಅವನ ನಡತೆಯಿಂದ ಇದ್ದರೆ, ಅವನು ಅದನ್ನು ಯುಕ್ತವಾದ ಹಾಗೂ ನಿಶ್ಚಿತವಾದ ರೀತಿಯಲ್ಲಿ ಸ್ವೀಕೃತಿಯನ್ನೂ ವ್ಯಕ್ತಪಡಿಸಬೇಕು.

ಉದಾ: 'ಅ'ನು ತನ್ನ ಮೃತ್ಯುಪತ್ರದ ಮೂಲಕ ತನ್ನ ನಿಶ್ಚಿತ ಆಸ್ತಿಗಳನ್ನು 'ಬ' ಮತ್ತು 'ಕ' ಇವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿ 'ಡ'ನಿಗಾಗಿ ಒಂದು ನ್ಯಾಸವನ್ನು ಕಲ್ಪಿಸುತ್ತಾನೆ. 'ಬ' ಮತ್ತು 'ಅ'ನ ಮೃತ್ಯುಪತ್ರವನ್ನು ಸಿದ್ಧಪಡಿಸುತ್ತಾರೆ. 'ಬ' ಮತ್ತು 'ಕ' ಇವರು ನ್ಯಾಸದ ಧರ್ಮದರ್ಶಿಯ ಹುದ್ದೆಯನ್ನು ಸ್ವೀಕರಿಸಿರುವರೋ ಎಂಬ ಪ್ರಶ್ನೆಯನ್ನು ಎತ್ತಲಾಯಿತು. ಇಲ್ಲಿ ನಿರ್ಣಯಿಸಿದ್ದು ಏನೆಂದರೆ ಆ ಮೃತ್ಯುಪತ್ರವನ್ನು ಸಿದ್ಧಪಡಿಸುವಾಗ ಅವರ ನಡತೆಯು ಸ್ವೀಕರಿಸುವುದನ್ನು ಸೂಚಿಸುತ್ತದೆ.

೪. ನಡತೆಯ ಮೂಲಕ ಸ್ವೀಕರಿಸುವ ಇತರ ಉದಾಹರಣೆಗಳು

(೧) ಮೌನ ಸಮ್ಮತಿಯಿಂದ ಸ್ವೀಕರಿಸುವುದು– ನ್ಯಾಸದ ಆಸ್ತಿಯನ್ನು ಕುರಿತು ತನ್ನ ಹೆಸರನ್ನು ಅದರಲ್ಲಿ ದಾಖಲು ಮಾಡಿಸುವುದು.

(೨) ನ್ಯಾಸದ ಆಸ್ತಿಯ ಮೇಲೆ ಅಧಿಪತ್ಯವನ್ನು ಸಾಧಿಸುವುದರ ಮೂಲಕ ಮಾರಾಟ ಮಾಡುವುದಕ್ಕಾಗಿ ಜಾಹೀರಾತು ಕೊಡುವುದು– ಬಾಡಿಗೆದಾರರಿಗೆ ನೋಟೀಸು ಕೊಡುವುದು ಮುಂತಾದವುಗಳಿಂದ.

(೩) ಆ ಆಸ್ತಿ ಕುರಿತು ವ್ಯಾಪಾರ ಮಾಡುವುದು– ಆ ವ್ಯವಹಾರವು ವಿಷದವಾಗಿ ಬೇರೊಂದು ಕಾರಣಕ್ಕಾಗಿ ಉಲ್ಲೇಖಿಸಬಹುದಾಗಿದೆಯೇ ಹೊರತು.

(೪) ನ್ಯಾಸದ ನೋಟೀಸು ಬಂದು ಬಹುದಿನಗಳಾದರೂ ಮೌನವಾಗಿರುವುದರಿಂದ ಸ್ವೀಕರಿಸುವುದು ಮತ್ತು ಅಂತಹ ಮೌನಕ್ಕೆ ಯಾವುದೇ ಸಮಾಧಾನಕಾರಕ ವಿವರಣೆ ಇಲ್ಲದಿರುವುದು.

೫. ನ್ಯಾಸದ ಒಂದು ಭಾಗವನ್ನು ಸ್ವೀಕರಿಸುವುದು ಅಂದರೆ ಆ ಸಂಪೂರ್ಣ ನ್ಯಾಸವನ್ನು ಸ್ವೀಕರಿಸುವುದು, ತದ್ವಿರುದ್ಧವಾಗಿ ಅವನು ಯಾವುದೇ ಭಾಗವನ್ನು ನಿರಾಕರಿಸುವ ಪ್ರಯತ್ನವೂ ಅದನ್ನು ಸ್ವೀಕರಿಸಿದಂತಾಗುತ್ತದೆ.

೬. ಈ ವಿಷಯದ ಮೇಲೆ ಕಾನೂನು ಮೌನವಾಗಿದೆ. ನಿರಾಕರಿಸುವುದನ್ನು ಕುರಿತು ನ್ಯಾಯಾಲಯಗಳ ತೀರ್ಪುಗಳ ಮೇಲಿಂದ ಕೆಳಗಣ ವಿಷಯಗಳನ್ನು ನಿರ್ಧರಿಸಲಾಗಿದೆ.

ಆ ನ್ಯಾಸವನ್ನು ಮಾಡುವವನ (ಜನಕನ) ಜೀವಾವಧಿಯಲ್ಲಿ ಒಬ್ಬನೇ ತಾನು ನ್ಯಾಸದ ಧರ್ಮದರ್ಶಿ ಯಾಗುವನೆಂದು ಅನುಮತಿಯನ್ನು ಕೊಟ್ಟಿದ್ದರೂ ಅದನ್ನು ಈಗ ನಿರಾಕರಿಸಬಲ್ಲನು.

(i) ಧರ್ಮದರ್ಶಿಯ ಸ್ಥಾನವನ್ನು ನಿರಾಕರಿಸುವುದು. ಅದನ್ನು ಸ್ವೀಕರಿಸುವ ಪೂರ್ವದಲ್ಲಿಯೇ ಆಗಿರಬೇಕು. ಒಮ್ಮೆ ಧರ್ಮದರ್ಶಿಯು ಸ್ಥಾನವನ್ನು ಸ್ವೀಕರಿಸಿದ ನಂತರ ಕಲಮು–೪೬ರಲ್ಲಿ ಹೇಳಿದ ಸಂದರ್ಭಗಳಲ್ಲಿ ಮಾತ್ರ ಈ ಧರ್ಮದರ್ಶಿಯ ಸ್ಥಾನವನ್ನು ತ್ಯಾಗ ಮಾಡಬಹುದು.

(ii) ಒಬ್ಬನು ಈ ಮುಂಚೆ ನ್ಯಾಸಧಾರಿಯ ಜೀವಿತಕಾಲದಲ್ಲಿ ಧರ್ಮದರ್ಶಿಯಾಗಿರಲು ಸಮ್ಮತಿಸಿದ್ದರೂ ಅದನ್ನು ಅವನು ನಿರಾಕರಿಸಬಹುದು.

(iii) ಒಬ್ಬ ಧರ್ಮದರ್ಶಿಯು ನ್ಯಾಸದ ಹುದ್ದೆಯ ಒಂದು ಭಾಗವನ್ನು ಸ್ವೀಕರಿಸಿ, ಇನ್ನೊಂದು ಭಾಗವನ್ನು ನಿರಾಕರಿಸಲು ಬರುವುದಿಲ್ಲ.

(iv) ನಿರಾಕರಿಸುವುದು ಲಿಖಿತದಲ್ಲಿರಬಹುದು ಇಲ್ಲ ನಡತೆಯಿಂದ ಇರಬಹುದು.

**೭. ನಿರಾಕರಿಸಿದುದರ ಪರಿಣಾಮ:**

(i) ಒಬ್ಬನೇ ಧರ್ಮದರ್ಶಿಯು ಇದ್ದರೆ, ಅವನು ಅದನ್ನು ಸ್ವೀಕರಿಸಲು ನಿರಾಕರಿಸಿದರೆ ಆ ನ್ಯಾಸದ ಆಸ್ತಿಯು ಆತನಲ್ಲಿ ನಿಹಿತವಾಗುವುದನ್ನು ಪ್ರತಿಬಂಧಿಸುತ್ತದೆ.

(ii) ಇಬ್ಬರು ಇಲ್ಲವೇ ಹೆಚ್ಚಿಗೆ ಧರ್ಮದರ್ಶಿಗಳಿದ್ದರೆ ಅವರಲ್ಲಿ ಒಬ್ಬನು ಆ ಹುದ್ದೆ ಸ್ವೀಕರಿಸಲು ನಿರಾಕರಿಸಿದರೆ ಆಗ ಅಂತಹ ನಿರಾಕರಿಸುವವನು ತನ್ನಲ್ಲಿ ನಿಹಿತವಾಗುವ ಅಸ್ತಿಯನ್ನು ಇನ್ನೊಬ್ಬ ಧರ್ಮದರ್ಶಿಯಲ್ಲಿ ನಿಹಿತವಾಗುವಂತೆ ಮಾಡುತ್ತಾನೆ. ಅಥವಾ ಬೇರೆಯವರಲ್ಲಿ ನಿಹಿತವಾಗುವಂತೆ ಮಾಡುವನು. ಅವನನ್ನು ಇಲ್ಲವೆ ಅವರನ್ನು ಸಂಪೂರ್ಣ ಧರ್ಮದರ್ಶಿಗಳು ಎಂದು ಆ ನ್ಯಾಸವು ರಚಿಸಲ್ಪಟ್ಟ ದಿನಾಂಕದಿಂದ ಆಗುತ್ತದೆ.

**೮. ಒಬ್ಬನೇ ಧರ್ಮದರ್ಶಿಯು ಇದ್ದರೆ, ಮತ್ತು ಅವನು ಅದನ್ನು ನಿರಾಕರಿಸಿದರೆ ಅದರ ಪರಿಣಾಮ ಎರಡು ರೀತಿಯಲ್ಲಿ ಆಗುತ್ತವೆ**

(i) ಕಲಮು ೭೩ರ ಅಡಿಯಲ್ಲಿ ಒಬ್ಬ ಹೊಸ ಧರ್ಮದರ್ಶಿಯನ್ನು ನೇಮಿಸಬಹುದು.

(ಅ) ನ್ಯಾಸದಲ್ಲಿ ಕಾಣಿಸಿದ ಒಬ್ಬನನ್ನು,

(ಆ) ಅಂಥವರು ಯಾರೂ ಇರದಿದ್ದರೆ, ಆ ನ್ಯಾಸವನ್ನು ಮಾಡಿದವನು (ಜನಕನು) ಜೀವಿಸಿದ್ದರೆ ಮತ್ತು ಅವನು ಒಪ್ಪಂದ ಕರಾರು ಮಾಡಿಕೊಳ್ಳಲು ಅರ್ಹನಿದ್ದರೆ ಅವನಿಂದ.

೯. ನ್ಯಾಸದ ಆಸ್ತಿಗೆ ಏನಾಗುತ್ತದೆ? ಅದು ನ್ಯಾಸದಿಂದ ಮುಕ್ತವಾಗುತ್ತದೆಯೇ? ಇದು ನ್ಯಾಸಕ್ಕೆ ಒಳಪಟ್ಟು ಉಳಿಯುತ್ತದೆಯೇ?

ನ್ಯಾಸವು ಅಂತ್ಯಗೊಳ್ಳುವುದಿಲ್ಲವೆಂಬುದು ಇದರ ಉತ್ತರವಾದರೆ ನ್ಯಾಸವನ್ನು ಮಾಡಿದವನು ಅಥವಾ ಉತ್ತರಾಧಿಕಾರಿಗಳು ಅವನನ್ನು ಪ್ರತಿನಿಧಿಸುವವರು ಅದನ್ನು ಸ್ಥಾಪಿಸಿದವನು (ಜನಕನು) ಸತ್ತಿದ್ದರೆ ಪ್ರತಿನಿಧಿಗಳು ಅದನ್ನು ಫಲಾನುಭವಿಗಳ ವತಿಯಿಂದ ಆ ನ್ಯಾಸದ ಆಸ್ತಿ ಹೊಂದಿರುತ್ತಾರೆ. ನಿರಾಕರಿಸಿದ ಧರ್ಮದರ್ಶಿಯ ಸ್ಥಾನದಲ್ಲಿ ಆ ನ್ಯಾಸದ ಜನಕ ಇಲ್ಲವೇ ಆತನ ಪ್ರತಿನಿಧಿಗಳು ಧರ್ಮದರ್ಶಿಗಳಾಗುತ್ತಾರೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

ನಿಯಮವು ಹೇಳುವುದೇನೆಂದರೆ ಧರ್ಮದರ್ಶಿಯು ಇರದಿದ್ದರೆ, ನ್ಯಾಸವು ಅಂತ್ಯಗೊಳ್ಳುವುದಿಲ್ಲ. ಎಲ್ಲಿ ನ್ಯಾಸವು ಇರುತ್ತದೆಯೋ, ಅದನ್ನು ಜಾರಿಗೊಳಿಸಲು ಧರ್ಮದರ್ಶಿಯು ಇರದಿದ್ದರೆ, ಯಾವ ವ್ಯಕ್ತಿಯಲ್ಲಿ ಕಾನೂನುಬದ್ಧವಾಗಿ ನಿಹಿತವಾಗುತ್ತದೆಯೋ ಆತನು ಅದರ ಧರ್ಮದರ್ಶಿಯಾಗಿ ಆ ಆಸ್ತಿಯನ್ನು ಹೊಂದುತ್ತಾನೆ. ಈ ನಿಯಮವನ್ನು ಫಲಾನುಭವಿಗಳ ಹಿತರಕ್ಷಣೆ ಕಾಪಾಡುವ ಉದ್ದೇಶದಿಂದ ಮಾಡಿದ್ದಾಗಿದೆ.

*ಮಲ್ಲೊಟ್ಟ ವಿರುದ್ಧ ವಿಲ್ಸನ್ (೧೯೦೩) ೨ ಸಿಎಚ್ ೪೯೪*

## II. ಫಲಾನುಭವಿಯು ನಿರಾಕರಿಸುವದು ಮತ್ತು ಸ್ವೀಕರಿಸುವುದು

### ಕಲಂ ೯

೧. ಒಬ್ಬ ಫಲಾನುಭವಿಯು ನ್ಯಾಸವನ್ನು ಸ್ವೀಕರಿಸಲಿಕ್ಕೇ ಬೇಕೆಂದು ನಿಯಮ ಇರುವುದಿಲ್ಲ. ಅವನು ಅದನ್ನು ಸ್ವೀಕರಿಸಬಹುದು ಇಲ್ಲವೆ ನಿರಾಕರಿಸಬಹುದು.

೨. ಆತನು ನಿರಾಕರಿಸುವುದು ನ್ಯಾಸದಲ್ಲಿಯ ಆತನ ಹಿತಾಸಕ್ತಿಯನ್ನು ಪರಿತ್ಯಜಿಸಿದಂತಾಗುತ್ತದೆ.

೩. ಅವನು ಅದನ್ನು ನಿರಾಕರಿಸಲು ಇಚ್ಛಿಸಿದರೆ ಅವನು ಅದನ್ನು ಎರಡು ರೀತಿಗಳಲ್ಲಿ ತಿಳಿಸಬಹುದು.

(i) ಧರ್ಮದರ್ಶಿಯನ್ನು ಸಂಬೋಧಿಸುವ ಮೂಲಕ, ಇಲ್ಲವೇ.

(ii) ನ್ಯಾಸದ ವಿರುದ್ಧ ಮಾಗಣಿ ಮಾಡುವುದು ಮತ್ತು ಆ ನ್ಯಾಸದ ಆಸ್ತಿಯ ಮಾಲಿಕತ್ವವನ್ನು ಕೇಳುವುದು.

೪. ನ್ಯಾಸದ ಆಸ್ತಿಯ ಮಾಲಿಕತ್ವದಂತಹ ಹಕ್ಕು ನ್ಯಾಸದ ಜೊತೆಯಲ್ಲಿ ಅಸಮಂಜಸ ಹಕ್ಕಾಗುತ್ತದೆ.

**೪. ಫಲಾನುಭವಿಯು ನಿರಾಕರಿಸಿದರೆ ನ್ಯಾಸದ ಸ್ಥಿತಿ ಏನಾಗುವುದು?**

(III) ಒಂದು ನ್ಯಾಸದ ಅಡಿಯಲ್ಲಿರುವ ಆಸ್ತಿಯು ಧರ್ಮದರ್ಶಿಯ (ಪುಟಗಳು ಖಾಲಿ ಇವೆ).

(IV) ನ್ಯಾಸದಲ್ಲಿರುವ ಆಸ್ತಿಯು ಫಲಾನುಭವಿಯ ಆಸ್ತಿಯು (ಪುಟಗಳು ಖಾಲಿ ಇವೆ).

# ಭಾಗ – III
# ನ್ಯಾಸದ ಆಡಳಿತ

## ಭಾಗ III

# ಒಂದು ನ್ಯಾಸದ ಆಡಳಿತ

ಒಂದು ನ್ಯಾಸದ ಆಡಳಿತವನ್ನು ಕುರಿತು ಅದರ ಧರ್ಮದರ್ಶಿಗೆ ಕೆಲವು–

(೧) ಕರ್ತವ್ಯಗಳು ಕಲಮುಗಳು– ೧೨ರಿಂದ ೨೦ರ ಅನ್ವಯ

(೨) ಹೊಣೆಗಾರಿಕೆಗಳು ಕಲಮುಗಳು– ೧೨ರಿಂದ ೨೦ರ ಅನ್ವಯ

(೩) ಹಕ್ಕುಗಳು ಕಲಮುಗಳು ೩೧ರಿಂದ ೩೬ರ ಅನ್ವಯ

(೪) ಅಧಿಕಾರಗಳು ಕಲಮುಗಳು ೩೬ರಿಂದ ೪೫ರ ಅನ್ವಯ

(೫) ಅನರ್ಹತೆಗಳು ಕಲಮುಗಳು ೪೬ರಿಂದ ೫೪ರ ಅನ್ವಯ

ಅದರಂತೆ ಫಲಾನುಭವಿಗಳಿಗೆ ಕೆಲವು–

(i) ಹಕ್ಕುಗಳು ಕಲಮುಗಳು ೫೫ರಿಂದ ೬೬ರ ಅನ್ವಯ

(ii) ಹೊಣೆಗಾರಿಕೆಗಳು ಕಲಮುಗಳು ೬೮ರ ಅನ್ವಯ

### ೧. ಧರ್ಮದರ್ಶಿಗಳ ಕರ್ತವ್ಯಗಳು
### ಕಲಮುಗಳು ೧೨–೨೦

| | | |
|---|---|---|
| V | (೨) | ನ್ಯಾಸದ ನಿರ್ದೇಶನಗಳನ್ನು ಪಾಲಿಸುವ ಕರ್ತವ್ಯಗಳು. |
| IV | (೩) | ಫಲಾನುಭವಿಗಳ ನಡುವೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಕರ್ತವ್ಯ. |
| IV | (೪) | ನಿರುಪಯುಕ್ತವಾದ ಮತ್ತು ಮರಳಿ ಹೋಗುವಂತಹ ಆಸ್ತಿಗಳನ್ನು ಮಾರುವ ಕರ್ತವ್ಯ. |
| IV | (೫) | ಹೊರಗೆ ಹೋಗುವ ಬೆಳೆಗಳ ಮತ್ತು ಉತ್ಪನ್ನಗಳನ್ನು ಸಂದಾಯ ಮಾಡುವ ಕರ್ತವ್ಯ. |
| IV | (೬) | ಯುಕ್ತ ಕಾಳಜಿಯನ್ನು ವಹಿಸುವ ಕರ್ತವ್ಯ. |
| IV | (೭) | ನ್ಯಾಸದ ಆಸ್ತಿಗಳ ಹಣವನ್ನು ತೊಡಗಿಸುವ ಕರ್ತವ್ಯ. |
| IV | (೮) | ನ್ಯಾಸದ ಹಣವನ್ನು ಯೋಗ್ಯ ಜನರಿಗೆ ಸಂದಾಯ ಮಾಡುವ ಕುರಿತು ಕರ್ತವ್ಯ. |
| IV | (೯) | ಅಧಿಕಾರ ಮತ್ತು ಕರ್ತವ್ಯಗಳನ್ನು ಇನ್ನೊಬ್ಬರಿಗೆ ವಹಿಸಿಕೊಡುವ ಕುರಿತು ಕರ್ತವ್ಯ. |
| IV | (೧೦) | ಒಬ್ಬರಿಗಿಂತ ಹೆಚ್ಚಿನ ಧರ್ಮದರ್ಶಿಗಳಿದ್ದಾಗ, ಅವರೊಂದಿಗೆ ಜಂಟಿಯಾಗಿ ಕೆಲಸ ಮಾಡುವ ಕರ್ತವ್ಯ. |
| *IV | (೧೧) | ಮೂರನೆಯವನ ಹಕ್ಕನ್ನು ಮಾನ್ಯ ಮಾಡದ ಕರ್ತವ್ಯ. |

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ನಾವುದೇ ವಿವರಗಳನ್ನು ಒಳಗೊಂಡಿಲ್ಲ.

| | |
|---|---|
| *IV (೧೨) | ಯಾವ ಪ್ರತಿಫಲವಿಲ್ಲದೆ ಕೆಲಸ ಮಾಡುವ ಕರ್ತವ್ಯ. |
| *IV (೧೩) | ನ್ಯಾಸದ ಆಸ್ತಿಯಲ್ಲಿ ದುರ್ವಾರ ಮಾಡದ ಕರ್ತವ್ಯ. |
| *IV (೧೪) | ಲೆಕ್ಕಪತ್ರ ಸಿದ್ಧಪಡಿಸಿಡುವ ಕರ್ತವ್ಯ. |

## ಒಬ್ಬ ಧರ್ಮದರ್ಶಿಯ ಅಧಿಕಾರಗಳು
## ಕಲಮು ೩೭–೪೫ರವರೆಗೆ

| V–ಧರ್ಮದರ್ಶಿಯ ಅಧಿಕಾರಗಳು | | |
|---|---|---|
| *V | (೧) | ಧರ್ಮದರ್ಶಿಯ ಸಾಮಾನ್ಯ ಅಧಿಕಾರಗಳು. |
| *V | (೨) | ನ್ಯಾಸದ ಆಸ್ತಿಗಳನ್ನು ಧರ್ಮದರ್ಶಿಯು ಮಾರಾಟ ಮಾಡುವ ಇಲ್ಲವೆ ದತ್ತಿ ಹಾಕುವ ಅಧಿಕಾರ. |
| *V | (೩) | ಮಾರಾಟಕ್ಕೆ ಸಂಬಂಧಿಸಿದಂತೆ ಅಧಿಕಾರಗಳು. |
| *V | (೪) | ಪಾವತಿ ಕೊಡಲು ಅಧಿಕಾರ. |
| *V | (೫) | ವ್ಯಾಜ್ಯಗಳನ್ನು ರಾಜೀ ಮಾಡುವ ಮತ್ತು ಇತ್ಯರ್ಥಗೊಳಿಸುವ ಅಧಿಕಾರ |
| *V | (೬) | ಚಿಕ್ಕಮಕ್ಕಳ ಪೋಷಣೆಗಾಗಿ ಹಣ ಒದಗಿಸುವ ಅಧಿಕಾರ. |
| *V | (೭) | ಫಲಾನುಭವಿಗಳಿಗೆ ಧರ್ಮದರ್ಶಿಗಳು ವೆಚ್ಚದ ಹಣ ಕೊಡುವ ಅಧಿಕಾರ. |
| *V | (೮) | ಆಡಳಿತಾತ್ಮಕ ಕ್ರಮದಿಂದ ಧರ್ಮದರ್ಶಿಗಳ ಅಧಿಕಾರಗಳನ್ನು ಅಮಾನತಿನಲ್ಲಿಡುವುದು. |

## VI. ಫಲಾನುಭವಿಗಳ ಅಧಿಕಾರಗಳು

* i (೧) ಏಕೈಕ ಫಲಾನುಭವಿಯ ಅಧಿಕಾರ.

* i (೨) ಅನೇಕ ಫಲಾನುಭವಿಗಳಲ್ಲಿ ಒಬ್ಬ ಫಲಾನುಭವಿಯ ಅಧಿಕಾರ.

೨೫. ಒಬ್ಬ ಧರ್ಮದರ್ಶಿಯು ತನ್ನ ಹಿಂದಿನ ಧರ್ಮದರ್ಶಿಯು ಮಾಡಿದ ವಿಶ್ವಾಸಕ್ಕೆ ಈಗ ಇರುವ ಧರ್ಮದರ್ಶಿಯು ಹೊಣೆಗಾರನೇ? ಅವನು ಹೊಣೆಗಾರನಿರುವುದಿಲ್ಲ.

೨೬. ಒಬ್ಬ ಸಹ ಧರ್ಮದರ್ಶಿಯು ವಿಶ್ವಾಸಘಾತ ಮಾಡಿದರೆ ಇನ್ನೊಬ್ಬ ಧರ್ಮದರ್ಶಿಯು ಅದಕ್ಕೆ ಹೊಣೆಗಾರನೇ?

ಈ ಕೆಳಗಿನ ಪ್ರಕರಣಗಳನ್ನು ಹೊರತುಪಡಿಸಿ ಅವನು ಜವಾಬ್ದಾರನಿರುವುದಿಲ್ಲ.

(i) ಎಲ್ಲಿ ಒಬ್ಬ ಧರ್ಮದರ್ಶಿಯು ತನ್ನ ಸಹಧರ್ಮದರ್ಶಿಗೆ ನ್ಯಾಸದ ಆಸ್ತಿಯನ್ನು ಅವನು ಯೋಗ್ಯ ರೀತಿಯಿಂದ ಅದನ್ನು ಅನ್ವಯಿಸುವ ಬಗ್ಗೆ ನೋಡದೆ ಅವನಿಗೆ ಹಸ್ತಾಂತರಿಸಿದ್ದರೆ ಹೊಣೆಗಾರನಾಗುತ್ತಾನೆ.

(ii) ಯಾವ ಸಂದರ್ಭದಲ್ಲಿ ಒಬ್ಬ ಧರ್ಮದರ್ಶಿಯು ತನ್ನ ಸಹಧರ್ಮದರ್ಶಿಗೆ ಆತನ ವ್ಯವಹರಣೆಗಳನ್ನು ವಿಚಾರಣೆ ಮಾಡದೆ, ನ್ಯಾಸದ ಆಸ್ತಿಗಳನ್ನು ಸಹಧರ್ಮದರ್ಶಿಗೆ

---

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ಯಾವುದೇ ವಿವರಗಳನ್ನು ಒಳಗೊಂಡಿಲ್ಲ.

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ಯಾವುದೇ ವಿವರಗಳನ್ನು ಒಳಗೊಂಡಿಲ್ಲ.

ಸ್ವೀಕರಿಸುವಂತೆ ನೋಡಿಕೊಂಡರೆ ಅಥವಾ ಸದರಿ ಆಸ್ತಿಯನ್ನು ಯುಕ್ತ ವೇಳೆಗಿಂತ ಹೆಚ್ಚು ಅವಧಿಯವರೆಗೆ ಅವನ ಹತ್ತಿರ ಇಟ್ಟುಕೊಳ್ಳುವಂತೆ ಮಾಡಿದರೆ.

(iii) ಒಬ್ಬ ಧರ್ಮದರ್ಶಿಯು ಸಹಧರ್ಮದರ್ಶಿಯು ನ್ಯಾಸೋಲ್ಲಂಘನೆ ಮಾಡಿರುವನೆಂದು ತಿಳಿದೂ ಮತ್ತು ಅದನ್ನು ಮುಚ್ಚಿಟ್ಟು ಇಲ್ಲವೆ ಆ ಆಸ್ತಿಯನ್ನು ಸಂರಕ್ಷಿಸಲು ಯಾವುದೇ ಯೋಗ್ಯ ಕ್ರಮ ಕೈಕೊಳ್ಳದಿದ್ದರೆ ಅವನು ಹೊಣೆಗಾರನಾಗುತ್ತಾನೆ.

**೨೭. ಸಹಧರ್ಮದರ್ಶಿಗಳು ಜಂಟಿಯಾಗಿ ನ್ಯಾಸೋಲ್ಲಂಘನೆ ಮಾಡಿದಾಗ**

ಪ್ರತಿಯೊಬ್ಬನ ಹೊಣೆಗಾರಿಕೆಯು ಏನಿರುತ್ತದೆ? ಇದು ಸಂಪೂರ್ಣ ಹೊಣೆಗಾರಿಕೆಯೇ? ಪ್ರತಿಯೊಬ್ಬನೂ ಫಲಾನುಭವಿಗೆ ಸಂಪೂರ್ಣ ಹೊಣೆಗಾರನಿರುತ್ತಾನೆ. ಉಳಿದವರಿಂದ ಚಂದಾ ಕೂಡಿಸುವ ಹಕ್ಕು ಇರುತ್ತದೆ.

೨೮. ಯಾವ ವ್ಯಕ್ತಿಯಲ್ಲಿ ಫಲಾನುಭವಿಯ ಹಕ್ಕನ್ನು ನಿಹಿತಗೊಳಿಸಿರುವುದಿಲ್ಲವೋ ಅಂತಹ ವ್ಯಕ್ತಿಗೆ ಧರ್ಮದರ್ಶಿಯು ನ್ಯಾಸದ ಹಣ ಕೊಟ್ಟರೆ ಧರ್ಮದರ್ಶಿಯ ಹೊಣೆಗಾರಿಕೆ– ಆದರೆ ಕೆಲ ಸಂದರ್ಭಗಳಲ್ಲಿ ಧರ್ಮದರ್ಶಿಯು ಹೊಣೆಗಾರನಾಗಿರುವುದಿಲ್ಲ. ಅವ್ಯಾವುವೆಂದರೆ:

(i) ಮತ್ತೊಬ್ಬನಲ್ಲಿ ಹಿತಾಸಕ್ತಿಯು ನಿಹಿತವಾಗಿದೆಂಬುದರ ಬಗ್ಗೆ ಅವನಿಗೆ ನೋಟೀಸು ಇರುವುದಿಲ್ಲ.

(ii) ಯಾರಿಗೆ ಹಣ ಸಂದಾಯವಾಗಿದೆಯೋ ಅಂತಹ ವ್ಯಕ್ತಿಯು ಹಣ ಪಡೆಯಲು ಹಕ್ಕುಳ್ಳವನಾಗಿದ್ದರೆ.

**ಧರ್ಮದರ್ಶಿಗಳಿಗೆ ರಕ್ಷಣೆ**

| | |
|---|---|
| *(೧) | ಸಾಮಾನ್ಯ ರಕ್ಷಣೆ. |
| *XIII (೨) | ಕಾಲ ಪರಿಮಿತಿಯ ಶಾಸನ. |
| *XIII (೩) | ಫಲಾನುಭವಿಯ ಸಹಮತ ಕೊಡುವುದು ಇಲ್ಲವೆ ಹಕ್ಕು ಬಿಟ್ಟುಬಿಡುವುದು. ಇಲ್ಲವೆ ಬಿಡುಗಡೆ ಮಾಡುವುದು. |
| *XIII (೪) | ಸಹಧರ್ಮದರ್ಶಿಯ ಕೃತಿಗಳಿಂದ ರಕ್ಷಣೆ |
| *XIII (೫) | ಸಹಧರ್ಮದರ್ಶಿಗಳಲ್ಲಿ ಚಂದಾ ಕೂಡಿಸುವ ನಷ್ಟ ಭರ್ತಿ ಹಕ್ಕು. |
| *XIV (೬) | ಮೂರನೆಯ ವ್ಯಕ್ತಿಗಳ ಮತ್ತು ಫಲಾನುಭವಿಗಳ ಹೊಣೆಗಾರಿಕೆ. |
| *XIV (೧) | ಯಾರು ಮೂರನೆಯ ವ್ಯಕ್ತಿಗಳು ಮತ್ತು ಫಲಾನುಭವಿಗಳು ಒಂದು ವಿಶ್ವಾಸಘಾತಕ ಕೃತ್ಯಕ್ಕೆ ಭಾಗಿದಾರರು ಇರುವರೋ ಅವರ ಹೊಣೆಗಾರಿಕೆ. |
| *XIV (೨) | ಈ ಮುಂದಿನ ನ್ಯಾಸದ ಆಸ್ತಿಗಳು ಮೂರನೆಯ ವ್ಯಕ್ತಿಗಳ ಸ್ವಾಧೀನಕ್ಕೆ ಹೋಗುವುದು. |

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ನಾವುದೇ ವಿವರಗಳನ್ನು ಒಳಗೊಂಡಿಲ್ಲ.

ಭಾಗ – IV

# ರಚನಾತ್ಮಕ ನ್ಯಾಸಗಳು

## ಭಾಗ IV

## ರಚನಾತ್ಮಕ ನ್ಯಾಸಗಳು

೧. ನ್ಯಾಸ ಅಧಿನಿಯಮದಲ್ಲಿ ಹದಿನಾಲ್ಕು ರೀತಿಯ ರಚನಾತ್ಮಕ ನ್ಯಾಸದ ಪ್ರಕರಣಗಳನ್ನು ಉದಾಹರಿಸಲಾಗಿದೆ.

೨. ಅವು ಐದು ರೀತಿಯ ತಲೆಬರಹಗಳಲ್ಲಿ ಬರುತ್ತವೆ.

(೧) ಹಸ್ತಾಂತರಗಳಿಂದ ಉದ್ಭವಿಸುವ ರಚನಾತ್ಮಕ ನ್ಯಾಸಗಳು– ಕಲಮುಗಳು ೮೧, ೮೨, ೮೪, ೮೫.

(೨) ಒಬ್ಬನು ಮತ್ತೊಬ್ಬನಿಂದ ಅನುಚಿತ ಲಾಭ ಗಳಿಸುವುದರಿಂದ ಉಂಟಾಗುವ ರಚನಾತ್ಮಕ ನ್ಯಾಸಗಳು ಕಲಮುಗಳು– ೮೫, ೮೮, ೮೯, ೯೦, ೯೩.

(೩) ಕರಾರು–ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ ಉಂಟಾಗುವ ರಚನಾತ್ಮಕ ನ್ಯಾಸಗಳು– ಕಲಮುಗಳು ೮೬, ೯೧, ೯೩

(೪) ಎರಡು ವ್ಯಕ್ತಿತ್ವಗಳು ಒಬ್ಬನೇ ಆದಾಗ ಹುಟ್ಟಿಕೊಳ್ಳುವ ರಚನಾತ್ಮಕ ನ್ಯಾಸಗಳು. ವಿಭಾಗ–೮೭

(೫) ಹಿಂದಿನ ನ್ಯಾಸದಿಂದ ಉದ್ಭವಿಸುವ ರಚನಾತ್ಮಕ ನ್ಯಾಸಗಳು. ಕಲಮುಗಳು–೮೩.

**(೧) ಆಸ್ತಿಯನ್ನು ಹಸ್ತಾಂತರಿಸುವುದರಿಂದ ಇಲ್ಲವೇ ಮೃತ್ಯುಪತ್ರದಿಂದ ಕೊಡುವುದು:**

(i) **ಕಲಮು ೮೧**

೧. ಕೆಲವು ಪ್ರಕರಣಗಳಲ್ಲಿ ಆಸ್ತಿಯನ್ನು ಹಸ್ತಾಂತರಿಸುವುದರಿಂದ ಇಲ್ಲವೆ ಮೃತ್ಯುಪತ್ರದಿಂದ ಕೊಡುವುದರಿಂದ ಯಾರಿಗೆ ಅದನ್ನು ವರ್ಗಾಯಿಸಲಾಗಿದೆಯೋ, ಅವನ ಮೇಲೆ ಹೊಣೆಯನ್ನು ವಿಧಿಸುತ್ತದೆ, ಇಲ್ಲವೇ ರಿಕ್ತಗ್ರಾಹಿ–ಇಚ್ಛಾಪತ್ರದ ಮೂಲಕ ಆಸ್ತಿ ಪಡೆಯುವವನು ನ್ಯಾಸದ ರೂಪದಲ್ಲಿ ಅವರ ಮಾಲೀಕನು ಇಲ್ಲವೇ ಅವನ ಪ್ರತಿನಿಧಿಗಳು ಮತ್ತು ಆ ನ್ಯಾಸವನ್ನು ಅವರ ಹೆಸರಿನಿಂದ ಮಾಡಿದಂತಿರುತ್ತದೆ.

ಸಾಮಾನ್ಯವಾಗಿ ಯಾರಿಗೆ ಆಸ್ತಿಯನ್ನು ಹಸ್ತಾಂತರಗೊಳಿಸಲಾಗಿದೆಯೋ ಇಲ್ಲವೇ ಮೃತ್ಯುಪತ್ರದ ಮೂಲಕ ಪಡೆಯಲಾಗಿದೆಯೋ ಅವನು ಯಾವುದೇ ಹೊಣೆಗಾರಿಕೆ ಇಲ್ಲವೇ ತೆಗೆದುಕೊಳ್ಳುತ್ತಾನೆ.

೨. ಯಾರಿಗೆ ಹಸ್ತಾಂತರಿಸಲಾಗಿದೆ ಇಲ್ಲವೇ ಮೃತ್ಯುಪತ್ರದಿಂದ ಕೊಡಲಾಗಿದೆಯೋ, ಅಂಥವನು ಯಾವಾಗ ಹೊಣೆಗಾರಿಕೆಯಿಂದ ತೆಗೆದುಕೊಳ್ಳುತ್ತಾರೋ, ಯಾರಿಗೆ ಆ ಆಸ್ತಿಯನ್ನು ಹಸ್ತಾಂತರಿಸಲಾಗಿದೆಯೋ ಇಲ್ಲವೇ ಮೃತ್ಯುಪತ್ರದ ಮೂಲಕ ಕೊಡಲಾಗಿದೆಯೋ ಅಂಥವನಿಗೆ ಆ ಆಸ್ತಿಯ ಲಾಭದಾಯಕ ಹಿತಾಸಕ್ತಿಯನ್ನು ವರ್ಗಾಯಿಸಲು ಬಾರದೆಂದು ಅವನ ಇಚ್ಛೆ ಇದ್ದಾಗ ಅವನು ಆ ಕರಾರಿಗೆ ಒಳಪಟ್ಟು ತೆಗೆದುಕೊಳ್ಳುತ್ತಾನೆ.

೩. ಉದ್ದೇಶವನ್ನು ಹೇಗೆ ನಿರ್ಧರಿಸಬೇಕು? ಆಯಾ ಪ್ರಕರಣದ ಸಂದರ್ಭಗಳ ಮೇಲಿಂದ ಮಾಲೀಕನ ಉದ್ದೇಶಗಳನ್ನು ಗೊತ್ತುಮಾಡಲು ಉಲ್ಲೇಖಿಸಬೇಕಾದ್ದು ಸಂದರ್ಭಗಳನ್ನು.

**(ii) ಕಲಮು ೮೨**

೧. ಆಸ್ತಿಯನ್ನು ವರ್ಗಾವಣೆ ಪಡೆದವನ ಮೇಲೆ ನ್ಯಾಸದ ರೀತಿಯ ಕರ್ತವ್ಯವನ್ನು ವಿಧಿಸುವ ಎರಡನೆಯ ಪ್ರಸಂಗವೆಂದರೆ ಎಲ್ಲಿ ವರ್ಗಾವಣೆಯನ್ನು ಪಡೆದವನ ಹೊರತಾಗಿ ಇನ್ನೊಬ್ಬನು ಕ್ರಯದ ಮೌಲ್ಯವನ್ನು ಪಾವತಿಸುತ್ತಾನೋ ಅಲ್ಲಿ– ಅಂತಹ ಪ್ರಸಂಗಗಳಲ್ಲಿ ವರ್ಗಾವಣೆ ಪಡೆದವನು ಅದನ್ನು ಮೌಲ್ಯ ಪಾವತಿಸಿದವನಿಗೆ ನ್ಯಾಸವಾಗಿ ಹೊಂದಿರುತ್ತಾನೆ.

೨. ಈ ನಿಯಮವು ಯಾರು ಹೀಗೆ ಹಸ್ತಾಂತರ ಮಾಡಿಕೊಳ್ಳಲು ಪ್ರತಿಫಲವನ್ನು ಕೊಡುವುದಿಲ್ಲವೋ ಅವರು ನ್ಯಾಸದ ರೂಪದಲ್ಲಿ, ಯಾರು ಪ್ರತಿಫಲ ಕೊಟ್ಟರೋ ಅವನ ಪರವಾಗಿ ಹೊಂದಿರುತ್ತಾನೆ. ಸಾಮಾನ್ಯವಾಗಿ ಇದು ಅನ್ವಯಿಸುತ್ತದೆ. ಆದರೆ ಇದಕ್ಕೆ ಒಂದು ಅಪವಾದವಿದೆ.

೩. ಅಪವಾದ:

ಹಸ್ತಾಂತರಗೊಳ್ಳುವವನಿಗೆ ಪ್ರಯೋಜನಕಾರಿಯಾಗಲೆಂದು ಇನ್ನೊಬ್ಬನು ಅದಕ್ಕೆ ಪ್ರತಿಫಲ ಕೊಟ್ಟಿದ್ದರೆ ಈ ನಿಯಮವು ಅನ್ವಯಿಸುವುದಿಲ್ಲ.

೪. ಉದ್ದೇಶದ ಆಧಾರ:

(iii) ಕಾನೂನುಬಾಹಿರ ಉದ್ದೇಶಕ್ಕಾಗಿ ಹಸ್ತಾಂತರ ಮಾಡುವುದು.

**ಕಲಮು ೮೪**

೧. ಸಾಮಾನ್ಯವಾಗಿ, ಒಂದು ಆಸ್ತಿ ವರ್ಗಾವಣೆಯು ಒಂದು ಅಕ್ರಮ ಉದ್ದೇಶಕ್ಕಾಗಿ ಇದ್ದರೆ, ಅಂತಹವುಗಳಿಗೆ ನ್ಯಾಯಾಲಯವು ಅಂತಹ ಹಸ್ತಾಂತರಗೊಂಡವನ ಹೆಸರಿಗೆ ಜಾರಿಗೊಳಿಸಲು ಅನುಮತಿ ಕೊಡುವುದಿಲ್ಲ. ಹಾಗೂ ಅವನಿಗೆ ಆಸ್ತಿ ಸ್ವಾಧೀನತೆಯಿಂದ ಹೊರಗೆ ಹಾಕಿದ್ದರೆ ಕೋರ್ಟಿನವರು ಅವನಿಗೆ ಸ್ವಾಧೀನ ಪಡೆಯಲು ಸಹಾಯ ಮಾಡುವುದಿಲ್ಲ.

೨. ಆದರೆ ಈ ನಿಯಮವು ಎಲ್ಲ ಸಂದರ್ಭಗಳಲ್ಲಿಯೂ ಅನ್ವಯಿಸುವುದಿಲ್ಲ. ಈ ನಿಯಮವು ಕೆಲವು ಸಂದರ್ಭಗಳಲ್ಲಿ ಮಾತ್ರ ಅನ್ವಯಿಸುತ್ತದೆ.

೩. ಯಾವ ಸಂದರ್ಭಗಳಲ್ಲಿ ಈ ನಿಯಮವು ಅನ್ವಯಿಸುವುದಿಲ್ಲ?

ಯಾವ ಸಂದರ್ಭಗಳಲ್ಲಿ ಈ ನಿಯಮವು ಅನ್ವಯಿಸುವುದಿಲ್ಲವೆಂದರೆ–

(i) ಆ ಉದ್ದೇಶವನ್ನು ಕಾರ್ಯರೂಪಕ್ಕೆ ತರದೇ ಇದ್ದಾಗ,

(ii) ಹಸ್ತಾಂತರ ಮಾಡುವವನು ಹಸ್ತಾಂತರಗೊಳ್ಳುವವನಂತೆ ತಪ್ಪುಗಾರನಾಗಿರದಿದ್ದರೆ,

(iii) ಹಸ್ತಾಂತರಗೊಂಡವನಿಗೆ ಆ ಆಸ್ತಿಯನ್ನು ಇಟ್ಟುಕೊಳ್ಳಲು ಪರವಾನಗಿಯ ಪರಿಣಾಮವು ಅಸ್ತಿತ್ವದಲ್ಲಿರುವ ಯಾವುದೇ ಕಾನೂನನ್ನು ಉಲ್ಲಂಘಿಸುವುದೇ ಆಗಿದ್ದಾಗ.

೪. ಈ ಪ್ರಕರಣಗಳಲ್ಲಿ ನ್ಯಾಯಾಲಯವು ಆಸ್ತಿ ಹಸ್ತಾಂತರಗೊಳಿಸುವವನಿಗೆ ಸಹಾಯ ಮಾಡುತ್ತದೆ ಮತ್ತು ಯಾರಿಗೆ ಹಸ್ತಾಂತರಿಸಲಾಗಿದೆಯೋ ಅವರಿಗೆ ಆ ಆಸ್ತಿಯನ್ನು ಇನ್ನೊಬ್ಬರ ಪರವಾಗಿ ಹೊಂದಲು ಹೇಳುತ್ತದೆ.

(iv) ಒಂದು ಕಾನೂನುಬಾಹಿರ ಉದ್ದೇಶಕ್ಕಾಗಿ ಮೃತ್ಯುಪತ್ರದ ಮೂಲಕ ನ್ಯಾಸವನ್ನು ಮಾಡುವುದು.

**ಕಲಮು ೮೫**

೧. ಕಾನೂನಿನ ದೃಷ್ಟಿಯಲ್ಲಿ ಒಂದು ಕಾನೂನುಬಾಹಿರ ಕರಾರು ಒಪ್ಪಂದ ಮಾಡಿಕೊಂಡ ಪರಿಣಾಮವಾಗಿಯೇ ಒಂದು ಕಾನೂನುಬಾಹಿರ ನ್ಯಾಸ ರಚಿಸಿದರೆ ಅದೇ ಪರಿಣಾಮ ಆಗುತ್ತದೆ.

೨. ಅದೇಂದರೆ ಯಾರು ಇಂತಹ ವ್ಯವಹಾರದಿಂದ ಪ್ರಯೋಜನ ಪಡೆಯಲಿಚ್ಛಿಸುವರೋ ಅಂತಹವರಿಗೆ ನ್ಯಾಯಾಲಯವು ಅಂತಹ ನ್ಯಾಸವನ್ನು ಜಾರಿಗೊಳಿಸುವುದಿಲ್ಲ. ಇದಲ್ಲದೆ ಅಂತಹ ನ್ಯಾಸ ಜನಕನು ಹಕ್ಕು ಕಳೆದುಕೊಂಡವನಿಗೆ ನ್ಯಾಸ ರಚಿಸಿದವನಿಗೆ ಆ ಆಸ್ತಿ ಹಕ್ಕು ಕೊಡಿಸಲು ಕೋರ್ಟು ಸಹಾಯ ಮಾಡುವುದಿಲ್ಲ.

*೯ ಬಾಂಬೆ ಎಸ್.ಆರ್. ೫೩೨*

೩. ಒಂದು ನ್ಯಾಸದ ಉದ್ದೇಶವು ಕಾನೂನುಬಾಹಿರ ಇದ್ದರೂ ಸಹ ಕಲಮು ೮೫ ಅಂತಹ ನ್ಯಾಸವನ್ನು ಮಾನ್ಯ ಮಾಡುತ್ತದೆ. ಇದು ನ್ಯಾಸ ಅಧಿನಿಯಮದ ಕಲಮು ೪ರ ಸಾಮಾನ್ಯ ತತ್ವಗಳಿಗೆ ವ್ಯತಿರಿಕ್ತವಾಗಿರುತ್ತದೆ. ಆದ್ದರಿಂದ ಇದಕ್ಕೆ ಸ್ವಲ್ಪ ವಿವರಣೆಯ ಅವಶ್ಯಕತೆ ಇದೆ.

೪. ಕಾಯಿದೆಬಾಹಿರ ನ್ಯಾಸಕ್ಕೆ ಪಕ್ಷಗಾರನಿಗೆ ಸಾಮಾನ್ಯ ತತ್ವಗಳನ್ವಯ ಉಂಟಾಗುವ ಹಕ್ಕುಗಳು ಮತ್ತು ಆ ತತ್ವಗಳ ಅಪವಾದಗಳನ್ನು ಕೆಳಗಿನಂತೆ ರೂಪಿಸಬಹುದು.

I. ಒಂದು ನ್ಯಾಸವನ್ನು ಕಾಯಿದೆಬಾಹಿರ ಉದ್ದೇಶಕ್ಕೆ ಮತ್ತು ಮೋಸದ ಉದ್ದೇಶದಿಂದ ಮಾಡಿದ್ದರೆ ನ್ಯಾಯಾಲಯವು ಯಾವ ಪಕ್ಷಗಾರರ ಪ್ರಯೋಜನಕ್ಕಾಗಿ ಹಾಗೂ ಪರವಾಗಿ ಅದನ್ನು ರಚಿಸಲಾಗಿದೆಯೋ ಅಂತಹವರು ಅದನ್ನು ಜಾರಿಗೊಳಿಸಲು ನ್ಯಾಯಾಲಯ ಅವರಿಗೆ ಸಹಾಯ ಮಾಡಲು ನಿರಾಕರಿಸುತ್ತದೆ. ಮತ್ತು ಅಂಥ ನ್ಯಾಸ ಮಾಡಿದವನು ಆ ನ್ಯಾಸದ ಆಸ್ತಿ ಹಕ್ಕನ್ನು ಕಳೆದುಕೊಂಡಿದ್ದರೆ ಅದನ್ನು ಪಡೆಯಲು ಅವನು ಕೋರ್ಟಿಗೆ ಹೋದರೆ ನ್ಯಾಯಾಲಯ ಅವನಿಗೆ ಸಹಾಯ ಮಾಡುವುದಿಲ್ಲ.

(ಒಂದು ಪ್ರಕರಣ ಹೊತುಪಡಿಸಿ)

ಪ್ರಶ್ನೆ– ಅದನ್ನು ಜಾರಿಗೊಳಿಸಲು ಒಬ್ಬ ಫಲಾನುಭವಿಗೆ ಯಾಕೆ ಅನುಮತಿ ಕೊಡುವುದಿಲ್ಲ?

ಉತ್ತರ– ಯಾಕೆಂದರೆ ಇದು ಒಂದು ಕಾನೂನುಬಾಹಿರ ಉದ್ದೇಶಕ್ಕೆ ಚಾಲನೆ ಕೊಟ್ಟಂತಾಗುತ್ತದೆ.

ಪ್ರಶ್ನೆ– ಅದನ್ನು ಸ್ಥಾಪಿಸಿದವನು ಆ ಆಸ್ತಿ ಹಕ್ಕು ಕಳೆದುಕೊಂಡಿದ್ದರೆ, ಅದನ್ನು ಮರಳಿ ಪಡೆಯಲು ಅನುಮತಿ ಕೊಡುವುದಿಲ್ಲವೇಕೆ?

ಉತ್ತರ– ಯಾಕೆಂದರೆ ಅವನಿಗೆ ಆ ಆಸ್ತಿ ಹಕ್ಕು ಪಡೆಯಲು ಸಹಾಯ ಮಾಡಿದರೆ, ಒಬ್ಬನಿಗೆ ತನ್ನ ಮೋಸದ ಲಾಭ ಪಡೆಯಲು ಸಹಾಯ ಮಾಡಿದಂತಾಗುತ್ತದೆ.

II. ಒಂದು ಪ್ರಕರಣದಲ್ಲಿ ಆ ನ್ಯಾಸ ಸ್ಥಾಪಿಸಿದವನಿಗೆ ಅವನ ಆಸ್ತಿ ಹಕ್ಕು ಪಡೆಯಲು ಸಹಾಯ ಮಾಡಲಾಯಿತೆಂದರೆ ಅಲ್ಲಿ ನ್ಯಾಸವನ್ನು ಕಾನೂನುಬಾಹಿರ ಉದ್ದೇಶಕ್ಕಾಗಿ (ಅಕ್ರಮ ಉದ್ದೇಶಕ್ಕಾಗಿ) ಮಾಡಿದ್ದರೂ ಸಹ ಸಹಾಯ ಮಾಡಲಾಯಿತು, ಯಾಕೆಂದರೆ ಇಲ್ಲಿ ಅಕ್ರಮ ಉದ್ದೇಶವು ಪರಿಣಾಮಕಾರಿಯಾಗಿರಲಿಲ್ಲ.

ಪ್ರಶ್ನೆ– ಈ ಅಪವಾದವನ್ನು (ವಿನಾಯಿತಿ) ಯಾಕೆ ಮಾಡಲಾಯಿತು?

ಉತ್ತರ– ಅದಕ್ಕೆ ಎರಡು ಕಾರಣಗಳಿವೆ.

(i) ಕಾನೂನುಬಾಹಿರ ಉದ್ದೇಶವಿರುವ ನ್ಯಾಸವು ನ್ಯಾಸವೇ ಆಗುವುದಿಲ್ಲ ಅದು ಶೂನ್ಯವಾಗಿರುತ್ತದೆ. ಪ್ರಾರಂಭದಿಂದಲೇ ಅದು ಕಾನೂನುಬಾಹಿರವಾದುದು ಆಗಿರುತ್ತದೆ.

(ii) ಧರ್ಮದರ್ಶಿಯು ಯಾವ ಪ್ರತಿಫಲವನ್ನೂ ಕೊಟ್ಟಿರಲಿಲ್ಲ. ಮತ್ತು ಆ ಆಸ್ತಿಯು ಪ್ರಯೋಜನಕಾರಿ ಹಿತಾಸಕ್ತಿ ಆಗುವುದನ್ನು ಮಾಡಿಕೊಳ್ಳಲಿಕ್ಕೆ ಹಕ್ಕು ಇರಲಿಲ್ಲ. ಆದ್ದರಿಂದ ಅದನ್ನು ನ್ಯಾಸದ ಸ್ಥಾಪಕ(ಜನಕ)ನಿಗೆ ತಿರುಗಿ ಕೊಡಲಾಯಿತು.

III. ಒಂದು ಕಾನೂನುಬಾಹಿರ ನ್ಯಾಸದ ಸ್ಥಾಪಕನಿಗೆ ಇರುವ ನ್ಯೂನತೆಗಳು ಆತನ ಕಾನೂನು ಪ್ರತಿನಿಧಿಗಳಿಗೆ ಅನ್ವಯಿಸುವುದಿಲ್ಲ.

ಪ್ರಶ್ನೆ– ಏಕೆ?

ಉತ್ತರ– ಆ ವ್ಯವಹಾರಕ್ಕೆ ಅವರು ಪಕ್ಷಗಾರರಿರುವುದಿಲ್ಲ.

**೫. ಕಲಮು ೮೫:** ಇದು ಕಾನೂನು ಪ್ರತಿನಿಧಿಗಳ ಪ್ರಯೋಜನಕ್ಕಾಗಿ ಮಾಡಿದ ಒಂದು ನ್ಯಾಸವನ್ನು ಮನ್ನಿಸುತ್ತದೆಂಬುದಕ್ಕೆ ಕಾರಣವೇನೆಂದರೆ ಅವರು ನಿರ್ದೋಷಿ ಪಕ್ಷಗಾರರು. ಕಾನೂನುಬಾಹಿರ ನ್ಯಾಸ ಮಾಡಲು ಅವರು ಏನನ್ನೂ ಮಾಡಲಿಲ್ಲ.

**(೨) ಒಂದು (ದುರ್ಲಾಭ ಪಡೆದ): ಅನುಚಿತ ಲಾಭ ಪಡೆದುದರಲ್ಲಿ ಉದ್ಭವಿಸಿದ ರಚನಾತ್ಮಕ ನ್ಯಾಸ.**

### I. ಕಲಮು ೮೫

೧. ಈ ತಲೆಬರಹದ ಮೇಲೆ ಮೊದಲನೆಯ ಪ್ರಕರಣ ಯಾವಾಗ ಉದ್ಭವಿಸುತ್ತದೆ. ಎಂದರೆ, ಒಂದು ಮರಣಶಾಸನದ ಮೂಲಕ ಆಸ್ತಿಯನ್ನು ಕೊಟ್ಟರೆ, ಮತ್ತು ಆ ಮೃತ್ಯುಪತ್ರ ಮಾಡಿಕೊಟ್ಟವನು ತನ್ನ ಜೀವಿತ ಅವಧಿಯಲ್ಲಿ ಅಂತಹ ಮೃತ್ಯುಪತ್ರವನ್ನು ರದ್ದುಪಡಿಸಲು ಇಚ್ಛಿಸಿದ್ದನ್ನು, ಆದರೆ ಅವನು ಹಾಗೆ ಮಾಡಲು ಬಲಾತ್ಕಾರದಿಂದ ತಡೆ ಹಿಡಿಯಲಾದಾಗ.

೨. ಇಂತಹ ಸಂದರ್ಭಗಳಲ್ಲಿ ಮೃತ್ಯುಪತ್ರದ ಮೂಲಕ ಆಸ್ತಿ ಪಡೆಯುವವರು ಆ ಆಸ್ತಿಗೆ ಅದರ ಪ್ರಯೋಜನಕಾರಕ ಮಾಲೀಕರೆಂದು ತೆಗೆದುಕೊಳ್ಳುವುದಿಲ್ಲ. ಆದರೆ ಅದನ್ನು ಮೃತ್ಯುಪತ್ರ ಮಾಡಿದವನ ಕಾನೂನು ಪ್ರತಿನಿಧಿಗಳ ಧರ್ಮದರ್ಶಿಯೆಂದು ಆ ಆಸ್ತಿಯನ್ನು ಹಿಡಿದುಕೊಂಡಿರುತ್ತಾರೆ.

೩. ಇದಕ್ಕೆ ಕಾರಣವೇನೆಂದರೆ ಆ ಮೃತ್ಯುಪತ್ರದಿಂದ ಆಸ್ತಿ ಪಡೆದವನು ನ್ಯಾಯವಲ್ಲದ ರೀತಿ ಉಪಯೋಗಿಸಿ ದುರ್ಲಾಭ ಪಡೆದುಕೊಂಡಿದ್ದಾನೆ. ಆದ್ದರಿಂದ ಅವನು ಅಂತಹ ಲಾಭವನ್ನು ಇಟ್ಟುಕೊಳ್ಳಲು ಅನುಮತಿ ಕೊಡಬಾರದು.

### II. ಕಲಮು ೮೮

೧. ಯಾವ ವ್ಯಕ್ತಿಯು ಇನ್ನೊಬ್ಬರ ಹಿತಾಸಕ್ತಿಯನ್ನು ನಂಬುಗೆಯ ವಿಶ್ವಾಸಾವಲಂಬಿ ಸಂಬಂಧದಿಂದ ಸಂರಕ್ಷಿಸಲು ಬದ್ಧನಾಗಿರುತ್ತಾನೋ ಅಂತಹ ಪ್ರಕರಣದಲ್ಲಿ ಎರಡನೆಯದು ಉದ್ಭವಿಸುತ್ತದೆ.

೨. ಈ ವರ್ಗದಲ್ಲಿ ಬರುವ ಜನರು ಯಾರೆಂದರೆ:

(೧) ಏಜಂಟ್ ಮತ್ತು ಮಾಲೀಕ,

(೨) ಒಂದು ವ್ಯಾಪಾರದಲ್ಲಿಯ ಪಾಲುಗಾರರು,

(೩) ಅಲ್ಪವಯಿ ಸಂರಕ್ಷಣದಾರರು ಮತ್ತು ಪ್ರತಿಪಾಲಿತ,

(೪) ಧರ್ಮದರ್ಶಿಗಳು ಮತ್ತು ಫಲಾನುಭವಿಗಳು,

(೫) ಮೃತ್ಯುಪತ್ರ ಬರೆದು ಕೊಡುವವ ಹಾಗೂ ಮೃತ್ಯುಪತ್ರದ ಮೂಲಕ ಆಸ್ತಿ ಪಡೆಯುವವನು.

೩. ಈ ಕಲಮು ಹೇಳುವುದೇನೆಂದರೆ:

(i) ಯಾವನೊಬ್ಬನು ಇನ್ನೊಬ್ಬರೊಂದಿಗೆ ಹೊಂದಿದ ನಂಬಿಕೆಯಿಂದ ಯಾವುದೇ ಮೌಲ್ಯಾಧಾರಿತ ಅನುಕೂಲತೆಯನ್ನು ಹೊಂದಿದರೆ,

(ii) ಆ ಸಂದರ್ಭಗಳಲ್ಲಿ ಒಂದು ವ್ಯವಹಾರವನ್ನು ಮಾಡುತ್ತಾನೆ. ಅದರಲ್ಲಿ ಆತನ ಹಿತಾಸಕ್ತಿಗಳು ಅವನು ಯಾವನ ಹಿತಾಸಕ್ತಿಯನ್ನು ರಕ್ಷಿಸಲು ಬದ್ಧನಾಗಿರುವನೋ ಅವನ ಹಿತಾಸಕ್ತಿಗೆ ಪ್ರತಿಕೂಲವಾಗಿದ್ದರೆ ಮತ್ತು ಅದರಲ್ಲಿ ಅವನು ಅನುಚಿತ ಲಾಭ ಪಡೆದರೆ,

ಆಗ

ಅವನು ತಾನು ಪಡೆದ ಮೌಲ್ಯಾಧಾರಿತ ಅನುಕೂಲತೆಗಳನ್ನು ಯಾವನ ಹಿತಾಸಕ್ತಿ ಕಾಪಾಡಲು ಬದ್ಧನಾಗಿರುವನೋ ಅಂತಹವನಿಗಾಗಿ ಹೊಂದಿರಲಿಕ್ಕೇಬೇಕು.

೪. ಉದಾಹರಣೆ:

(i) ಪಾಲುಗಾರಿಕೆಯಲ್ಲಿಯ ಹಣದಿಂದ ಒಬ್ಬ ಪಾಲುಗಾರನು ತನ್ನ ಹೆಸರಿನಿಂದ ಖರೀದಿಸುತ್ತಾನೆ. ಅವನು ಆ ಪಾಲುಗಾರರ ಹಿತಕ್ಕಾಗಿ ಫಾಯಿದೆಗಾಗಿ ಆ ಆಸ್ತಿಯನ್ನು ಹೊಂದಿರುತ್ತಾನೆ.

(ii) ಒಬ್ಬ ಧರ್ಮದರ್ಶಿಯು ಇನ್ನೊಬ್ಬ ಸಹಧರ್ಮದರ್ಶಿಯಿಂದ ಲಂಚ ಪಡೆದ ಪ್ರಕರಣದಲ್ಲಿ 'ಅ' ಧರ್ಮದರ್ಶಿ ಆ ನ್ಯಾಸದಿಂದ ನಿವೃತ್ತನಾಗುತ್ತಾನೆ. ಆ ಧರ್ಮದರ್ಶಿಯು ಆ ಹಣವನ್ನು ನ್ಯಾಸದ ಹಿತಕ್ಕಾಗಿ ಇಟ್ಟುಕೊಳ್ಳತಕ್ಕದ್ದು.

(iii) 'ಅ'ನು ತನಗೆ 'ಬ'ನಿಂದ ಕೆಲವು ಆಸ್ತಿ ಗೇಣಿ ಪಡೆಯುವ ಕುರಿತು ಒಬ್ಬ ಏಜೆಂಟನನ್ನು ನೇಮಿಸುತ್ತಾನೆ. ಆ ಏಜೆಂಟನು ತಾನೇ ಗೇಣಿಯನ್ನು ಪಡೆದುಕೊಳ್ಳುತ್ತಾನೆ. ಆ ಏಜೆಂಟನು ಅದನ್ನು ಮಾಲೀಕನ ವತಿಯಿಂದ ಹೊಂದತಕ್ಕದ್ದು.

(iv) ಒಬ್ಬ ಪಾಲಕನು, ತನ್ನ ಸಂರಕ್ಷಣೆಯಲ್ಲಿರುವವನಾಗಿ ಒಂದು ಆಸ್ತಿಯ ಬೆಲೆಯನ್ನು ಕಡಿಮೆ ಕಿಮ್ಮತ್ತಿಗೆ ಕೊಂಡುಕೊಳ್ಳುತ್ತಾನೆ ಮತ್ತು ಅದರಿಂದ ಆ ಆಸ್ತಿಯ ಮೇಲೆ ಋಣಭಾರವನ್ನು ಅವನು ನಿಜವಾಗಿ ಅದರ ಬೆಲೆ ಕೊಟ್ಟಿದ್ದರ ಮೇಲೆ ಅಲ್ಪವಯಿಯನ್ನು ಆ ಋಣಭಾರದಿಂದ ರಕ್ಷಿಸುತ್ತಾನೆ.

## III. ಕಲಮು ೮೯

೧. ಒಬ್ಬನು ಇನ್ನೊಬ್ಬನ ಮೇಲೆ ತನ್ನ ಅನುಚಿತ ಪ್ರಭಾವವನ್ನು ಬೀರಿ ಅವನಿಂದ ಲಾಭವನ್ನು ಪಡೆದುಕೊಂಡರೆ ಮೂರನೆಯ ಪ್ರಕರಣ ಉದ್ಭವಿಸುತ್ತದೆ.

೨. ಇದನ್ನು ಕಲಮು ೮೯ರಲ್ಲಿ ಚರ್ಚಿಸಲಾಗಿದೆ. ಕಲಮು ೮೯ ಹೇಳುವುದೇನೆಂದರೆ ಅಂತಹ ಮನುಷ್ಯನು ಆ ಮೌಲ್ಯವನ್ನು ಯಾರು ಅನುಚಿತ ಭಾವಕ್ಕೆ ಬಲಿಯಾಗಿರುವನೋ ಅವನ ಸಲುವಾಗಿ ಹೊಂದತಕ್ಕದ್ದು.

೩. ಇದು ಎರಡು ಮಿತಿಗಳಿಗೆ ಒಳಪಟ್ಟಿರುತ್ತದೆ.

(i) ಈ ಅನುಕೂಲವು ಯಾವುದೇ ಪ್ರತಿಫಲವಿಲ್ಲದೆ ಬಂದುದು ಇರಲಿಕ್ಕೇಬೇಕು.

(ii) ಆ ಮನುಷ್ಯನಿಗೆ ತಾನು ತನ್ನ ಅನುಚಿತ ಪ್ರಭಾವ ಬೀರಿ ಈ ಲಾಭ ಮಾಡಿಕೊಂಡಿದ್ದು ಗೊತ್ತಿರಲಿಕ್ಕೇಬೇಕು.

### IV. ಕಲಮು ೯೦

೧. ಒಬ್ಬ ಪರಿಮಿತ ಮಾಲಿಕನು ತನ್ನ ಸ್ಥಾನಮಾನದ ಮೇಲಿಂದ ಆ ಆಸ್ತಿಯಲ್ಲಿ ಹಿತಾಸಕ್ತಿಯುಳ್ಳ ಬೇರೆ ವ್ಯಕ್ತಿಗೆ ಹಕ್ಕುಗಳನ್ನು ನ್ಯೂನತೆಗೊಳಿಸುವುದರಿಂದ ಈ ನಾಲ್ಕನೆಯ ಪ್ರಕರಣವು ಉದ್ಭವಿಸುತ್ತದೆ.

೨. ಇದನ್ನು ಕಲಮು ೯೮ರಲ್ಲಿ ವಿವರಿಸಲಾಗಿದೆ. ಕಲಮು ೯೦ ಹೇಳುವುದೇನೆಂದರೆ ಅಂತಹ ಲಾಭವನ್ನು ಎಲ್ಲರ ಸಲುವಾಗಿ ಹೊಂದತಕ್ಕದ್ದು. ಆದರೆ ಯಾವನು ಆ ಲಾಭವನ್ನು ಹೊಂದಿರುವನೋ ಕೇವಲ ಅವನಿಗಾಗಿ ಮಾತ್ರ ಇರುವುದಿಲ್ಲ.

೩. ಎರಡು ಕರಾರುಗಳಿಗೆ ಒಳಪಟ್ಟು,

(i) ಕಾನೂನುಬದ್ಧವಾಗಿ ಖರ್ಚಾದ ಹಣವನ್ನು ತಮ್ಮ ಪಾಲಿನ ಪ್ರಮಾಣಕ್ಕೆ ತಕ್ಕಂತೆ ಉಳಿದವರು ತಿರುಗಿ ಕೊಡಲಿಕ್ಕೇಬೇಕು.

(ii) ಅಂತಹ ಲಾಭವನ್ನು ಪಡೆಯುವ ಉಳಿದವರು ಆ ಹೊಣೆಗಾರಿಕೆಯನ್ನು ತಮ್ಮ ಪಾಲಿನ ಪ್ರಮಾಣಕ್ಕೆ ತಕ್ಕಂತೆ ಒಪ್ಪಂದದಂತೆ ಆ ಖರ್ಚನ್ನು ವಹಿಸತಕ್ಕದ್ದು.

೪. ಸಹಗೇಣಿದಾರರ, ಅವಿಭಕ್ತ ಕುಟುಂಬದ ಸದಸ್ಯರ ಒತ್ತೆ ಮುಂತಾದ ಪ್ರಕರಣಗಳನ್ನು ಚರ್ಚಿಸಲಾಗಿದೆ.

### IV. ಕಲಮು ೯೩

೧. ಸಾಲವನ್ನು ಕೊಟ್ಟವನು ಗುಪ್ತವಾಗಿ ಯಾವುದೇ ಲಾಭ ಮಾಡಿಕೊಂಡರೆ ಐದನೆಯ ಪ್ರಕರಣವು ಉಂಟಾಗುತ್ತದೆ.

೨. ಸಾಮಾನ್ಯವಾಗಿ ಇಂತಹ ಪ್ರಕರಣದಲ್ಲಿ ಸಾಲ ಕೊಟ್ಟವನು, ಸಾಲ ತೆಗೆದುಕೊಂಡವನು ತನ್ನ ಪೂರ್ಣಸಾಲವನ್ನು ತಿರುಗಿಕೊಡಲು ಅಶಕ್ತನಿರುವುದರಿಂದ ಅವನೊಂದಿಗೆ ರಾಜಿ ಮಾಡಿಕೊಳ್ಳುತ್ತಾನೆ.

೩. ರಾಜಿಗೆ ಅನೇಕ ಜನ ಸಾಲ ಕೊಟ್ಟವರಲ್ಲಿ ಕೆಲವರು ಪಕ್ಷಗಾರರಿದ್ದರೆ, ಅವರು ಒಂದು ವ್ಯವಸ್ಥೆಯ ಮೇರೆಗೆ ಆ ಸಾಲ ತೆಗೆದುಕೊಂಡವರ ಸಂಗಡ ಉಳಿದ ಸಾಲ ಕೊಟ್ಟವರಿಗೆ ಗೊತ್ತಿಲ್ಲದಂತೆ ತಾನೇ ಅದರ ಲಾಭ ತೆಗೆದುಕೊಂಡರೆ, ಅಂತಹ ಲಾಭವನ್ನು ಅವನು ಉಳಿದ, ಸಾಲ ಕೊಟ್ಟವರಿಗೆ ಅನ್ಯಾಯವಾಗುವುದರಿಂದ ಅವನು ಹಾಗೆ ಇಟ್ಟುಕೊಳ್ಳಲು ಬರುವುದಿಲ್ಲ.

೪. ಈ ವ್ಯವಹಾರದಲ್ಲಿ ಅವನು ಪಡೆದುಕೊಂಡ ಲಾಭವನ್ನು ಕುರಿತು ಕಾನೂನು ಹೇಳುವುದೇನೆಂದರೆ, ಅವನು ಉಳಿದ ಸಾಲ ಕೊಟ್ಟವರಿಗೆ ಧರ್ಮದರ್ಶಿಯಾಗುತ್ತಾನೆ. ಅದು ಆ ಲಾಭದ ಮಟ್ಟಿಗೆ.

## ೩. ಒಪ್ಪಂದಗಳಿಗೆ ಉದ್ಭವಿಸುವ ರಚನಾತ್ಮಕ ನ್ಯಾಸಗಳು

### I. ಕಲಮು ೮೬

೧. ಈ ತಲೆಬರಹದ ಕೆಳಗೆ ನ್ಯಾಸ ಅಧಿನಿಯಮದ ಅನ್ವಯ ಬರುವ ಮೊದಲನೆಯ ಪ್ರಕರಣವು ಆಸ್ತಿಯ ಹಸ್ತಾಂತರ ಒಪ್ಪಂದದ ಕರಾರಿಗೆ ಸಂಬಂಧಪಟ್ಟದ್ದಾಗಿರುತ್ತದೆ.

೨. ಇದು ಕಲಮು ೮೬ರಲ್ಲಿ ಬರುತ್ತದೆ. ಇದು ಒಂದು ಒಪ್ಪಂದದ ಕರಾರಿನ ಮೇರೆಗೆ ಆಸ್ತಿಯನ್ನು ಹಸ್ತಾಂತರಿಸಿದ್ದು ಮತ್ತು ಈ ಒಪ್ಪಂದದ ಕರಾರು ಇಂತಹ ಸ್ವರೂಪದ್ದು ಇದ್ದು.

(i) ಇದನ್ನು ರದ್ದುಗೊಳಿಸಬಹುದು ಅಥವಾ

(ii) ಇದನ್ನು ತಪ್ಪುಗ್ರಹಿಕೆ ಇಲ್ಲವೆ ಮೋಸದಿಂದ ಪ್ರಚೋದಿಸಬಹುದು.

೩. ಇಂತಹ ಪ್ರಕರಣಗಳಲ್ಲಿ ಯಾರ ಹೆಸರಿಗೆ ಆಸ್ತಿ ಹಸ್ತಾಂತರಿಸಲಾಗಿದೆಯೋ ಅವರು ಆ ಆಸ್ತಿಯನ್ನು ಅವರ ಪರವಾಗಿ ಹೊಂದಿರತಕ್ಕದ್ದು.

೪. ಈ ಹೊಣೆಗಾರಿಕೆಯು ಕೆಲವು ನಿರ್ದಿಷ್ಟ ಪ್ರಸಂಗಗಳಲ್ಲಿ ಉದ್ಭವಿಸುತ್ತದೆ. ಆದರೆ ಅದು ಪೂರ್ಣವಾದುದಲ್ಲ.

(i) ಆಸ್ತಿಯ ಹಸ್ತಾಂತರಿತನಿಂದ ನೋಟೀಸು ಪಡೆದುಕೊಂಡಾಗ ಮಾತ್ರ ಈ ಹೊಣೆಗಾರಿಕೆಯು ಉದ್ಭವಿಸುತ್ತದೆ. ಆ ಒಪ್ಪಂದವನ್ನು ತಿರುಗಿ ಪಡೆದುಕೊಳ್ಳಬಹುದಾಗಿದೆ. ಯಾಕೆಂದರೆ ಅದನ್ನು ಮೋಸದಿಂದ ಇಲ್ಲ ತಪ್ಪು ಗ್ರಹಿಕೆಯಿಂದ ಮಾಡಿದ್ದಾಗಿದೆ.

(ii) ಹಸ್ತಾಂತರಿತನು ಹಸ್ತಾಂತರಿಗೆ ವಾಸ್ತವಿಕವಾಗಿ ಪ್ರತಿಫಲ ಸಂದಾಯ ಮಾಡಿದಾಗ ಮಾತ್ರ ಈ ಒಪ್ಪಂದ ಕರಾರನ್ನು ಜಾರಿಗೊಳಿಸುವ ಹೊಣೆಗಾರಿಕೆ ಇರುತ್ತದೆ.

## II. ಕಲಮು ೯೧

೧. ಬೇರೊಬ್ಬ ವ್ಯಕ್ತಿಯೊಂದಿಗೆ ಒಪ್ಪಂದ ಕರಾರು ಮಾಡಿಕೊಂಡು ಆಸ್ತಿಯ ಹಕ್ಕನ್ನು ಪಡೆದುಕೊಳ್ಳುವುದು ಮತ್ತು ಅದನ್ನು ಬೇರೊಬ್ಬ ವ್ಯಕ್ತಿಯೊಂದಿಗೆ ಒಪ್ಪಂದ ಕರಾರು ಮಾಡಿಕೊಂಡ ಬಗ್ಗೆ ನೋಟೀಸು.

೨. ಇಂತಹ ಪ್ರಕರಣದಲ್ಲಿ ಯಾರು ಆ ಆಸ್ತಿಯ ಹಕ್ಕನ್ನು ಪಡೆದುಕೊಳ್ಳುವರೋ ಅದನ್ನು ಒಪ್ಪಂದ ಕರಾರು ಮಾಡಿಕೊಳ್ಳುವ ಹಕ್ಕು ಇದ್ದವರ ಪರವಾಗಿ ಹೊಂದಿರತಕ್ಕದ್ದು.

೩. ಈ ಹೊಣೆಗಾರಿಕೆಯ ವ್ಯಾಪ್ತಿಯು ಸೀಮಿತವಾಗಿರುತ್ತದೆ. ಒಂದು ಒಪ್ಪಂದದ ಕರಾರನ್ನು ಪರಿಣಾಮಕಾರಿಯಾಗಿ ಜಾರಿಮಾಡುವ ಅವಶ್ಯಕತೆಗೆ ಸೀಮಿತವಾಗಿದೆ.

೪. ಒಂದು ಒಪ್ಪಂದ ಕರಾರಿನಿಂದ ಒಂದು ಆಸ್ತಿಯಲ್ಲಿ ಮಾಲ್ಕೀಹಕ್ಕು ಪಡೆದ ಪ್ರತಿಯೊಂದು ಪ್ರಕರಣದಲ್ಲಿ ಈ ಹೊಣೆಗಾರಿಕೆಯು ಉದ್ಭವಿಸುವುದಿಲ್ಲ.

## III. ಕಲಮು ೯೨

೧. ಕೆಲವು ಜನರ ಸಲುವಾಗಿ ನ್ಯಾಸದಲ್ಲಿ ಆಸ್ತಿಯನ್ನು ಕೊಳ್ಳುವುದು.

೨. 'ಅ'ನು 'ಬ' ಸಂಗಡ ಒಂದು ಆಸ್ತಿಯನ್ನು ಕೊಂಡುಕೊಳ್ಳುವ ಒಪ್ಪಂದ ಮಾಡಿಕೊಂಡು ಅದರಲ್ಲಿ ಅವನು ಆ ಆಸ್ತಿಯನ್ನು 'ಕ'ನ ಸಲುವಾಗಿ ನ್ಯಾಸ ರಚಿಸುವ ಉದ್ದೇಶ ಹೊಂದಿರುವನು. 'ಬ'ನು 'ಅ'ನ ಈ ಹೇಳಿಕೆಯನ್ನು ನಂಬಿ 'ಅ'ನಿಗೆ ಆ ಆಸ್ತಿಯನ್ನು ಮಾರುತ್ತಾನೆ.

೩. 'ಅ'ನು ಆ ಆಸ್ತಿಯನ್ನು 'ಕ'ನ ಉಪಯೋಗಕ್ಕಾಗಿ ಹೊಂದತಕ್ಕದ್ದು.

೪. ಈ ಹೊಣೆಗಾರಿಕೆಯು ಸಹ ಸೀಮಿತವಾಗಿರುತ್ತದೆ. ಒಪ್ಪಂದದ ಪರಿಣಾಮ ಬೀರುವುದಕ್ಕಾಗಿ ಇದನ್ನು ಜಾರಿಗೊಳಿಸಲಾಗುವುದು.

೫. ಆ ಒಪ್ಪಂದದ ಕರಾರು ಆಸ್ತಿಯ ಒಂದು ಭಾಗವನ್ನು 'ಕ'ನ ವತಿಯಿಂದ ನ್ಯಾಸದ ರೂಪದಲ್ಲಿ ಹೊಂದಬಹುದಾಗಿದೆ. ಅಂಥ ಸಂದರ್ಭದಲ್ಲಿ ಹೊಣೆಗಾರಿಕೆಯನ್ನು ಆ ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ಜಾರಿಗೊಳಿಸಬಹುದು.

**೪. ಎರಡು ವ್ಯಕ್ತಿತ್ವವನ್ನು ಹೊಂದಿದವರು ಒಬ್ಬನೇ ವ್ಯಕ್ತಿಯಾಗಿ ವಿಲೀನವಾದಾಗ ಉದ್ಭವಿಸಿದ ರಚನಾತ್ಮಕ ನ್ಯಾಸಗಳು**

## I. ಕಲಮು ೮೭

೧. ಎರಡು ವ್ಯಕ್ತಿತ್ವವುಳ್ಳ ಇಬ್ಬರು, ಇರುವಲ್ಲಿ ಆ ವ್ಯಕ್ತಿತ್ವವು ಒಬ್ಬನಲ್ಲಿಯೇ ವಿಲೀನವಾಗುವುದರ ಬಗ್ಗೆ ಹೇಳುತ್ತದೆ.

೨. ಪ್ರತಿಯೊಂದು ಒಪ್ಪಂದದ ಕರಾರಿನಲ್ಲಿ ಸಾಲ, ಹೊಣೆಗಾರಿಕೆ, ಅಥವಾ ವಹಿಸಿಕೊಡುವಲ್ಲಿ ಇಬ್ಬರು ವ್ಯಕ್ತಿಗಳ ಅವಶ್ಯಕತೆಯು ಇರುತ್ತದೆ.

೩. ಆದರೆ ಅವರಿಬ್ಬರೂ ಒಬ್ಬನೇ ಆಗಿರಬಹುದು.

೪. ಇಂತಹ ಎಲ್ಲ ಪ್ರಕರಣಗಳಲ್ಲಿ ಇಬ್ಬರು ವ್ಯಕ್ತಿತ್ವವೆಂದು ಪರಿಚಯಿಸಿಕೊಳ್ಳದಿದ್ದರೆ, ಹೊಣೆಗಾರಿಕೆಯು ಇಲ್ಲವೆ ಭೋಜಾವು ವಿಲೀನದಿಂದ ಹಾಳಾಗುತ್ತದೆ.

೫. ಯಾಕೆಂದರೆ ಒಬ್ಬನು ತನ್ನ ಹಕ್ಕಿನ ಮೇಲೆ ತಾನೇ ಹೊಣೆಗಾರನಾಗುವುದಿಲ್ಲ. ಇಲ್ಲವೆ ತನ್ನ ಆಸ್ತಿಯ ಮೇಲೆ ತಾನೇ ಭೋಜಾ ಹೊಂದುವುದಿಲ್ಲ.

೬. ಆದರೆ ಎರಡು ವ್ಯಕ್ತಿಗಳನ್ನು ಮನ್ನಿಸುವುದರಿಂದ ಇದು ಸಾಧ್ಯವಾಗುತ್ತದೆ.

೭. ವಸ್ತುಸ್ಥಿತಿಯಲ್ಲಿ ಇದು ಅವಶ್ಯವಿರುತ್ತದೆ.

೮. ಉದಾ:

ಸಾಲಗಾರನೇ ಕಾರ್ಯನಿರ್ವಾಹಕನಾಗಬಹುದು. ಕಾನೂನಿನ ದೃಷ್ಟಿಯಲ್ಲಿ ಕಾರ್ಯನಿರ್ವಾಹಕನು ಮಾಲೀಕನಾಗುತ್ತಾನೆ.

ವಿಲೀನ – ಸಾಲದ ನಿರ್ಮೂಲನೆ:

೯. ಕಲಮು ಇದನ್ನು ಅಲ್ಲಗಳೆಯುತ್ತದೆ.

# ಭಾಗ – V

# ರಚನಾತ್ಮಕ ನ್ಯಾಸಗಳ ಆಡಳಿತ

## ಭಾಗ V

# ರಚನಾತ್ಮಕ ನ್ಯಾಸಗಳ ಆಡಳಿತ ಭಾರತೀಯ ನ್ಯಾಸ ಅಧಿನಿಯಮ

೧. ೧೮೮೨ನೆಯ ಇಸವಿ ೨ನೆಯ ಅಧಿನಿಯಮದಲ್ಲಿ ನ್ಯಾಸಕ್ಕೆ ಸಂಬಂಧಿಸಿದ ಕಾನೂನು ಒಳಗೊಂಡಿದೆ.

೨. ಈ ಅಧಿನಿಯಮವು ನ್ಯಾಸವನ್ನು ವ್ಯಾಖ್ಯಾಯಿಸುತ್ತದೆ ಹಾಗೂ ತಿದ್ದುಪಡಿ ಮಾಡುತ್ತದೆ. ಎಂದರೆ ಅದು ಯಾವುದೇ ಹೊಸ ತತ್ವಗಳನ್ನು ಸೇರಿಸುವುದಿಲ್ಲ.

೩. ಈ ಅಧಿನಿಯಮವು ಕಾನೂನನ್ನು ಕ್ರೋಢೀಕರಿಸುವುದಿಲ್ಲ. ಎಂದರೆ ಈ ಸಂಹಿತೆಯು ಸಂಪೂರ್ಣವಾಗಿರುವುದಿಲ್ಲ.

೪. ಈ ಅಧಿನಿಯಮದ ಉದ್ದೇಶವು ನ್ಯಾಸಕ್ಕೆ ಸಂಬಂಧಿಸಿದ ಕಾನೂನಿನ ಉಪಬಂಧಗಳನ್ನು ಒಂದು ಗುಂಪಿನಲ್ಲಿ ಸೇರಿಸಿ ಶಾಸನ ಮಾಡಲಾಗಿದೆ. ೧೮೮೨ರ ಅಧಿನಿಯಮದ ಪೂರ್ವದಲ್ಲಿ ನ್ಯಾಸಕ್ಕೆ ಸಂಬಂಧಿಸಿದ ಶಾಸನಾತ್ಮಕ ಕಾನೂನುಗಳನ್ನು ಕಲಮು ೭ರಿಂದ ೧೧ರವರೆಗೆ ೨೯ ಸಿವಿಆರ್ ೧೧–ಸಿ ೩೧ ಇದರಲ್ಲಿ ವಿವರಿಸಿದೆ. ೧೮೬೬ರ ಅಧಿನಿಯಮ XXVII ಮತ್ತು XXVIII ಅಧಿನಿಯಮ.

ಭಾರತ ದಂಡ ಸಂಹಿತೆ ನಿರ್ದಿಷ್ಟ ಪರಿಹಾರ ಕಾನೂನು ಸಿವಿಲ್ ಪ್ರಕ್ರಿಯಾ ಸಂಹಿತೆ, ಸ್ಟಾಂಪ್ ಅಧಿನಿಯಮ, ಕಾಲ ಪರಿಮಿತಿ ಅಧಿನಿಯಮ, ಗವರ್ನಮೆಂಟ್ ಸೆಕ್ಯುರಿಟಿ ಆ್ಯಕ್ಟ್, ಕಂಪನಿ ಕಾನೂನು, ಪಟ್ಟಣ ಬ್ಯಾಂಕುಗಳ ಅಧಿನಿಯಮ ಮುಂತಾದ ಅಧಿನಿಯಮಗಳಲ್ಲಿ ಈ ಕಾನೂನಿನ ಕೆಲವು ಉಪಬಂಧಗಳಲ್ಲಿ ಹಂಚಿಹೋಗಿದ್ದವು.

೫. ಮೊದಲು ಪಾಸಾದಂತೆ ಈ ಅಧಿನಿಯಮವು ಸಂಪೂರ್ಣ ಬ್ರಿಟಿಷ್ ಭಾರತಕ್ಕೆ ಅನ್ವಯಿಸುತ್ತಿರಲಿಲ್ಲ. ಉದಾ: ಇದು ಮುಂಬೈಗೆ ಅನ್ವಯಿಸುತ್ತಿರಲಿಲ್ಲ. ಆದರೆ ರಾಜ್ಯ ಸರಕಾರವು ಪ್ರಕಟನೆ ಹೊರಡಿಸುವ ಮೂಲಕ ಈ ಅಧಿನಿಯಮವನ್ನು ರಾಜ್ಯಕ್ಕೆ ಅನ್ವಯಿಸುವ ವ್ಯವಸ್ಥೆ ಮಾಡಿತು.

೬. ಹಿಂದೂ ಕಾನೂನು ಮತ್ತು ಮಹಮ್ಮದೀಯ ಕಾನೂನು ಇವು ನ್ಯಾಸ ಅಧಿನಿಯಮ ಇದರಲ್ಲಿ ವ್ಯಾಖ್ಯಾಯಿಸಿದಂತೆ ಮಾನ್ಯ ಮಾಡುತ್ತವೆಯೇ ಎನ್ನುವುದನ್ನು ಇಲ್ಲಿ ಚರ್ಚಿಸುವುದು ಅವಶ್ಯ ಇರುವುದಿಲ್ಲ. ಅದನ್ನು ಬೇರೆಯವರು ಮಾಡಲಿ.

### ನ್ಯಾಸದ ಸ್ವರೂಪ

೧. ಕಲಮು ೩ರಲ್ಲಿ ನ್ಯಾಸದ ವ್ಯಾಖ್ಯೆಯನ್ನು ಕೊಡಲಾಗಿದೆ– ಒಂದು ನ್ಯಾಸವು ಮೂರು ಸಂಗತಿಗಳನ್ನು ಒಳಗೊಂಡಿರುತ್ತದೆ.

(i) ಕೆಲವು ಆಸ್ತಿಯ ಮಾಲೀಕನಾಗಿರುವ ವ್ಯಕ್ತಿಯು,

(ii) ಮಾಲೀಕತ್ವವು ಹೊಣೆಗಾರಿಕೆಯೊಂದಿಗೆ ಕೂಡಿದ್ದು,

(iii) ಆಸ್ತಿಯನ್ನು ಫಲಾನುಭವಿಗಳ ಸಲುವಾಗಿ ಹಾಗೂ ಬೇರೆಯವರ ಸಲುವಾಗಿ ಹಾಗೂ

ತನ್ನ ಸಲುವಾಗಿ ಉಪಯೋಗಿಸುವ ಹೊಣೆಗಾರಿಕೆಯು.

೨. ಮಾಲೀಕತ್ವವು ಪ್ರಯೋಜನಕಾರಿ ಹಿತಾಸಕ್ತಿ ರಹಿತವಾದದ್ದು, ಮತ್ತು ಪ್ರಯೋಜನಕಾರಿ ಉಪಯೋಗವನ್ನು ಹೊಂದಿರುವುದಾಗಿದೆ.

೩. ಒಬ್ಬನು ಇನ್ನೊಬ್ಬರಲ್ಲಿ ವಿಶ್ವಾಸ ಇಡುವುದರಿಂದ ಮತ್ತು ಅದನ್ನು ಮಾಲೀಕನು ಸ್ವೀಕರಿಸುವುದರಿಂದ ಒಂದು ನ್ಯಾಸವು ಉಂಟಾಗುತ್ತದೆ.

೪. ಕಾನೂನಿನ ದೃಷ್ಟಿಯಲ್ಲಿ ಮಾಲೀಕನು ಧರ್ಮದರ್ಶಿಯಾಗಿರುತ್ತಾನೆ. ನ್ಯಾಸವು ಅಸ್ತಿತ್ವದಲ್ಲಿ ಬಂದ ನಂತರ ಆ ನ್ಯಾಸವನ್ನು ಸ್ಥಾಪಿಸಿದವನು (ಜನಕನು) ಆ ಆಸ್ತಿಯ ಮಾಲೀಕತ್ವದಿಂದ ಮುಕ್ತನಾಗುತ್ತಾನೆ.

**೧. ಒಂದು ನ್ಯಾಸವೆಂದರೇನು?**

I. ನ್ಯಾಸ ಮತ್ತು ಧರ್ಮದರ್ಶಿ ಈ ಪದಗಳನ್ನು ಭಾರತೀಯ ಶಾಸಕಾಂಗದ ಅನೇಕ ಅಧಿನಿಯಮಗಳಲ್ಲಿ ವ್ಯಾಖ್ಯಾನಿಸಲಾಗಿದೆ.

(೧) ನಿರ್ದಿಷ್ಟ ಪರಿಹಾರ ಅಧಿನಿಯಮ ೧೮೭೭ರ ೧ನೆಯ ಅಧಿನಿಯಮದಲ್ಲಿ ಕಲಮು ೩ರಲ್ಲಿಯ ವ್ಯಾಖ್ಯೆಯು:

(i) ಹೊಣೆಗಾರಿಕೆಯು ಪ್ರತಿಯೊಂದು ಕರ್ತವ್ಯವನ್ನು ಒಳಗೊಂಡಿರುತ್ತದೆ ಹಾಗೂ ಅದು ಕಾನೂನಿನಿಂದ ಜಾರಿಗೊಳಿಸಲು ಬರುವಂತದ್ದಾಗಿರುತ್ತದೆ.

(ii) ನ್ಯಾಸವು ವ್ಯಕ್ತ, ಅವ್ಯಕ್ತ ಇಲ್ಲವೆ ರಚನಾತ್ಮಕ ವಿಶ್ವಾಸಾತ್ಮಕ ಮಾಲೀಕತ್ವವನ್ನು ಒಳಗೊಂಡಿರುತ್ತದೆ.

(iii) ಪ್ರತಿಯೊಬ್ಬ ಆಸ್ತಿ ಹೊಂದುವವನು ಪ್ರಕಟಿತವಾಗಿ ಇಲ್ಲವೆ ಇಂಗಿತ, ಅಪ್ರಕಟಿತ ಇಲ್ಲವೆ ರಚನಾತ್ಮಕವಾಗಿ ವಿಶ್ವಸ್ತ, ಹಣ, ಮಾಲೀಕ ಇವರೆಲ್ಲರೂ ಧರ್ಮದರ್ಶಿಯಲ್ಲಿ ಒಳಗೊಳ್ಳುತ್ತಾರೆ.

(೨) ಭಾರತೀಯ ನ್ಯಾಸಗಳ ಅಧಿನಿಯಮ ೧೮೬೬ರ XXVIIರಲ್ಲಿ ಕಲಂ ೨ರಲ್ಲಿಯ ವ್ಯಾಖ್ಯೆ: ನ್ಯಾಸವೆಂದರೆ ಒಂದು ದಸ್ತಾವೇಜಿನ ಮಾಲೀಕ ನ್ಯಾಸದ ಆಸ್ತಿಯನ್ನು ಒತ್ತೆ ಹಾಕಿದ್ದರೆ ಅದಕ್ಕೆ ಸಂಬಂಧಿಸಿದ ಸಂಗತಿಯದಾಗಿದೆ. ಮಾಡುವ ಕರ್ತವ್ಯಗಳಲ್ಲಿ ಆದರೆ ಈ ಅಪವಾದವನ್ನು ಹೊರತುಪಡಿಸಿ ಒಂದು ನ್ಯಾಸ ಮತ್ತು ಧರ್ಮದರ್ಶಿ ಈ ಪದಗಳ ಅರ್ಥವ್ಯಾಪ್ತಿಗೆ ಒಬ್ಬ ಧರ್ಮದರ್ಶಿಗೆ ರಚನಾತ್ಮಕ ನ್ಯಾಸದಲ್ಲಿ ಆ ನ್ಯಾಸದ ಆಸ್ತಿಯಲ್ಲಿ ಯಾವುದೇ ಪ್ರಯೋಜನಕಾರಕ ಹಿತಾಸಕ್ತಿ ಸಹ ಒಳಗೊಳ್ಳುತ್ತದೆ. ಹೀಗೆ ನ್ಯಾಸವು ಅದನ್ನು ಮಾಡಿಕೊಟ್ಟವನ ಇಲ್ಲವೇ ಮೃತನ ಆಡಳಿತಗಾರನ ಹಿತಾಸಕ್ತಿಯನ್ನು ಸಹ ಒಳಗೊಳ್ಳುತ್ತದೆ.

(iii) ಕಾಲ ಪರಿಮಿತಿ ಅಧಿನಿಯಮ ೧೯೦೮ನೆಯ ಇಸವಿ ೯ನೆಯ ಅಧಿನಿಯಮ ಕಲಮು ೨(೧೧)ರ ವ್ಯಾಖ್ಯೆ:

ನ್ಯಾಸವು ಬೇನಾಮಿದಾರರನ್ನು ಮತ್ತು ಆಸ್ತಿಯ ಮಾಲೀಕತ್ವವು ಇಲ್ಲದೆ ಆಸ್ತಿಯ ಸ್ವಾಧೀನದ ಒತ್ತೇದಾರನಾಗಿದ್ದವನನ್ನು ಒಳಗೊಳ್ಳುವುದಿಲ್ಲ.

(iii) ಭಾರತೀಯ ನ್ಯಾಸಗಳ ಅಧಿನಿಯಮ ೧೮೭೨ರ ೧೧ನೆಯ ಅಧಿನಿಯಮವು.

(1) ಕಲಮು ೩ – ಒಂದು ನ್ಯಾಸವು ಒಂದು ಆಸ್ತಿಯ ಮಾಲೀಕತ್ವಕ್ಕೆ ಹೊಂದಿಕೊಂಡಿರುವ ಹೊಣೆಗಾರಿಕೆ.

(೨) ನ್ಯಾಸದ ಅವಶ್ಯವಾದ ಅಂಶಗಳೆಂದರೆ:

(i) ನ್ಯಾಸವು ಒಂದು ಹೊಣೆಗಾರಿಕೆ,

(ii) ಆ ಹೊಣೆಗಾರಿಕೆಯು ಒಂದು ಆಸ್ತಿ ಮಾಲಿತ್ವಕ್ಕೆ ಸಂಬಂಧಿಸಿದ್ದು.

(iii) ಈ ಮಾಲಿಕತ್ವವು ಒಬ್ಬನು ಇನ್ನೊಬ್ಬನಲ್ಲಿಟ್ಟ ವಿಶ್ವಾಸ ಹಾಗೂ ಮಾಲಿಕನು ಅದನ್ನು ಸ್ವೀಕರಿಸುವುದರಿಂದ ಉದ್ಭವಿಸುತ್ತದೆ.

(iv) ಈ ಮಾಲೀಕತ್ವವು ಇನ್ನೊಬ್ಬರ ಪ್ರಯೋಜನ, ಉಪಭೋಗಕ್ಕಾಗಿ ಇರಲಿಕ್ಕೆ ಬೇಕು. (ಎಂದರೆ ಮಾಲೀಕನನ್ನು ಹೊರತುಪಡಿಸಿ ಇನ್ನೊಬ್ಬ ಮನುಷ್ಯನು) ಇಲ್ಲವೆ ಇನ್ನೊಬ್ಬ ಮತ್ತು ಆ ಮಾಲೀಕ.

**ಪದಗಳ ವಿವರಣೆ**

I. ಅದರಲ್ಲಿ ಹೊಣೆಗಾರಿಕೆ ಇರತಕ್ಕದ್ದು.

II. ಈ ಹೊಣೆಗಾರಿಕೆಯು ಆಸ್ತಿಗೆ ಸಂಬಂಧಿಸಿರಬೇಕು.

(i) ಒಂದು ನ್ಯಾಸಕ್ಕೆ ಆಸ್ತಿಯನ್ನು ಸಂಬಂಧವಿಲ್ಲದಿದ್ದರೂ, ಒಬ್ಬ ವ್ಯಕ್ತಿಯನ್ನು ಒಂದು ನ್ಯಾಸಕ್ಕೆ ಆಳಿಕೆಗೆ ಒಳಪಡಿಸಿದರೆ ಅಲ್ಲಿ ಹೊಣೆಗಾರಿಕೆಯನ್ನು ಹೊರಿಸಬಹುದು. ಉದಾ: ಅಪಕೃತ್ಯಗಳು ಅಕ್ರಮ,

(ii) ಯಾವುದೇ ಹೊಣೆಗಾರಿಕೆಯನ್ನು ಹೊರಿಸದೆ ಅದಕ್ಕೆ ಆಸ್ತಿಯು ಇರಬಹುದು. ಉದಾ: ಪೂರ್ಣ ಮತ್ತು ಸಮಗ್ರ ಮಾಲೀಕತ್ವ ಆಸ್ತಿಯ ಖರೀದಿ.

III. ಆಸ್ತಿಯ ಮಾಲೀಕತ್ವವನ್ನು ವಿಶ್ವಾಸದ ಮೂಲಕ ಸ್ಥಾಪಿಸಿ ಅದನ್ನು ಪೂರ್ಣಗೊಳಿಸಬಹುದು. ಇಲ್ಲವೆ ಹಾಗಿಲ್ಲದೆ ಇರಬಹುದು.

ಉದಾ:

ಒಬ್ಬನು ತನ್ನ ಮಾಲೀಕತ್ವವನ್ನು ಇನ್ನೊಬ್ಬನ ಹೆಸರಿಗೆ, ಅವನಿಗೆ ಆ ಆಸ್ತಿ ಉಪಭೋಗದ ಹಕ್ಕು ದಯಪಾಲಿಸುವ ಇಚ್ಛೆಯು ಇಲ್ಲದೆ ಅವನು ವರ್ಗಾಯಿಸಬಹುದು.

ಒಬ್ಬನು ತನ್ನ ಆಸ್ತಿಯ ಮಾಲೀಕತ್ವವನ್ನು ಇನ್ನೊಬ್ಬನಿಗೆ ಅವನು ಆ ಆಸ್ತಿಯ ಹಕ್ಕನ್ನು ಅವನು ಉಪಭೋಗಿಸುವ ಹಕ್ಕು ಕೊಡುವ ಇರಾದೆ ವರ್ಗಾಯಿಸಬಹುದು.

ವಿಶ್ವಾಸದ ಮೂಲಕ ಸ್ಥಾಪಿತವಾದುದು, ವಿಶ್ವಾಸದಿಂದ ಮಾಡಿದ್ದು ಮತ್ತು ಮಾಲೀಕತ್ವವು ವಿಶ್ವಾಸದ ಮೇಲೆ ಅವಲಂಬಿಸದೆ ಇರುವುದು ಇವುಗಳಲ್ಲಿಯ ಅಂತರವು.

(i) ಕೊನೆಯದರಲ್ಲಿ ಇದು ಕಾನೂನಿಗೆ ಸಂಬಂಧಿಸಿದ ವಿಷಯ (ಅಪರಿಪೂರ್ಣ ಹಕ್ಕುಗಳು)

(ii) ಮೊದಲನೆಯದರಲ್ಲಿ ಇದು ಇರುವುದಿಲ್ಲ. ಉದಾ: ಸರಕು ರಕ್ಷಣೆ

೩. ಒಂದು ಪರಿಪೂರ್ಣ ನ್ಯಾಸವಾಗುವ ಒಪ್ಪಂದವನ್ನು ಕರಾರಿನ ವ್ಯವಹಾರದ ಮೇಲಿಂದ ಆ ನ್ಯಾಸದ ಸ್ವಭಾವವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

## ನ್ಯಾಸವನ್ನು ಏಜೆನ್ಸಿಯಿಂದ ಬೇರ್ಪಡಿಸಲಾಗಿದೆ

೧. ಎಲ್ಲಿ ಒಂದು ನ್ಯಾಸವಿದೆಯೋ, ಅಲ್ಲಿ ನ್ಯಾಸದ ಆಸ್ತಿಯು ಧರ್ಮದರ್ಶಿಯಲ್ಲಿ ಇರುತ್ತದೆ. ನ್ಯಾಸದ ಆಸ್ತಿಯನ್ನು ಧರ್ಮದರ್ಶಿಯು ವೈಯಕ್ತಿಕವಾಗಿ ತಾನು ಮಾಡಿಕೊಳ್ಳುವ ಪ್ರತಿಯೊಂದು ಒಪ್ಪಂದದ ಕರಾರಿಗೆ ಹೊಣೆಗಾರನಾಗುತ್ತಾನೆ. ಅವನಿಗೆ ನ್ಯಾಸದ ಹಣದ ಮೇಲೆ ಅವಲಂಬನೆ ಇದೆ, ಇಲ್ಲವೆ ಫಲಾನುಭವಿಯ ವಿರುದ್ಧವೂ ಕ್ರಮ ಕೈಗೊಳ್ಳಬಹುದು.

೨. ಒಬ್ಬ ಏಜಂಟನಿಗೆ ಒಪ್ಪಿಸಿದ ಸರಕುಗಳಲ್ಲಿ ಅವನಿಗೆ ಮಾಲೀಕತ್ವವು ಇರುವುದಿಲ್ಲ. ಒಬ್ಬ ಏಜಂಟನು ತಾನು ಏಜಂಟನಾಗಿಯೇ ಒಂದು ಒಪ್ಪಂದದ ಕರಾರು ಮಾಡಿಕೊಂಡರೆ ಅವನು ವೈಯಕ್ತಿಕವಾಗಿ ಹೊಣೆಗಾರನಿರುವುದಿಲ್ಲ. ಆ ಒಪ್ಪಂದವು ಅವನ ಮಾಲೀಕನೊಂದಿಗೆ ಮಾಡಿಕೊಂಡದ್ದಾಗಿರುತ್ತದೆ.

## ನ್ಯಾಸವನ್ನು ಒಪ್ಪಂದ ಕರಾರಿನಿಂದ ಬೇರ್ಪಡಿಸಲಾಗಿದೆ

೧. ಕರಾರಿನ ಪ್ರಕರಣಗಳು ನ್ಯಾಸದ ಪ್ರಕರಣಗಳಿಂದ ಎರಡು ರೀತಿಯಿಂದ ಭಿನ್ನವಾಗಿವೆ.

ಮೊದಲನೆಯದು ಆಸ್ತಿಯ ಮಾಲೀಕನನ್ನು ಹೊರತುಪಡಿಸಿ ಬೇರೆಯೊಂದು ನ್ಯಾಸದ ಆಸ್ತಿಯನ್ನಾಗಿ ಮಾಡಲಾರರು. 'ಅ'ನು ತನ್ನ ಆಸ್ತಿಯನ್ನು ಒಂದು ಮರಣ ಶಾಸನದ ಮೂಲಕ ವ್ಯಕ್ತಪಡಿಸಿದ ಇಲ್ಲವೆ ಅವ್ಯಕ್ತಪಡಿಸಿದ ಕರಾರುಗಳ ಮೇಲೆ, 'ಬ'ನು ತನ್ನ ಆಸ್ತಿಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ 'ಅ'ನು ನಿರ್ದೇಶಿಸಿದಂತೆ ಪರಾಧೀನ ಮಾಡಬಹುದೆಂದು ಹೇಳಿದೆ. ಎರಡನೆಯದಾಗಿ, ಈ ಮನುಷ್ಯನ ಹೊಣೆಗಾರಿಕೆಯು ಯಾವನ ಮೇಲೆ ಇಂತಹ ಕರಾರನ್ನು ವಿಧಿಸಲಾಗಿದೆಯೋ ಅದು ಅವನಿಗೆ ಕೊಟ್ಟ ಆಸ್ತಿಯ ಬೆಲೆಯ ಮೇಲೆ (ಮೌಲ್ಯದ ಮೇಲೆ) ಅವಲಂಬಿತ ಇರುವುದಿಲ್ಲ. ಉದಾ: 'ಅ'ನು 'ಬ'ನಿಗೆ ಒಂದು ಮೃತ್ಯುಪತ್ರ ಕೊಟ್ಟರೆ ಮತ್ತು ಅದರಲ್ಲಿ 'ಬ'ನು 'ಅ'ನ ಸಾಲಗಳನ್ನು ಕೊಡಬೇಕೆಂದು ಕರಾರು ಇದ್ದರೆ, 'ಬ'ನು ಆ ಮರಣಶಾಸನವನ್ನು ಒಪ್ಪುತ್ತಾನೆ. ಆದರೆ ಅವನಿಗೆ ಕೊಟ್ಟ ಆಸ್ತಿಯ ಕಿಮ್ಮತ್ತಿಗಿಂತಲೂ ಆತನು ಕೊಡಬೇಕಾದ ಸಾಲದ ಹೊಣೆಯು ಹೆಚ್ಚಿಗೆ ಇರಬಹುದಾದರೂ ನ್ಯಾಯಸಮ್ಮತ ದೃಷ್ಟಿಯಿಂದ ಆ ಸಾಲವನ್ನು 'ಬ'ನು ಮರುಪಾವತಿ ಮಾಡಲು ಒತ್ತಾಯಿಸಲು ಬರುತ್ತದೆ.

೨. ಆದರೆ ಕರಾರಿನ ಮೇಲೆ ಈ ಪದವು ನಿಜವಾದ ನ್ಯಾಸವನ್ನು ಹುಟ್ಟಿಸುತ್ತದೆ. ಆಮೇಲೆ 'ಅ'ನ ಆಸ್ತಿಯ ಈ ಬಕ್ಷೀಸು ಬಾಡಿಗೆ ಕೊಡುವ ಮತ್ತು ಫಾಯಿದೆಗಳನ್ನು 'ಬ'ನಿಗೆ ಕೊಡುವುದು ಒಂದು ನ್ಯಾಸವಾಗುತ್ತದೆ. ಏಕೆಂದರೆ ಆ ಆಸ್ತಿಯಲ್ಲಿ 'ಅ'ನಿಗೆ ಯಾವುದೇ ಪ್ರಯೋಜನಕಾರಿ ಹಿತಾಸಕ್ತಿಯು ಉಳಿದಿಲ್ಲವೆಂಬುದು ಸುಸ್ಪಷ್ಟವಾಗಿದೆ.

'ಅ'ನು 'ಬ'ನಿಗೆ ವ್ಯಕ್ತಪಡಿಸಿದ ಇಲ್ಲವೆ ಅವ್ಯಕ್ತಪಡಿಸಿದ ಕರಾರಿನ ಮೇಲೆ ತನ್ನ ಆಸ್ತಿಯನ್ನು ಹಸ್ತಾಂತರಿಸಬಹುದೆಂದರೆ 'ಬ'ನು ತನ್ನ ಆಸ್ತಿಯನ್ನು 'ಕ'ನಿಗೆ ವರ್ಗಾಯಿಸುತ್ತಾನೆ. ಇಲ್ಲಿ 'ಕ'ನ ಹೆಸರಿಗೆ ಒಂದು ಕರಾರಿನ ಮೇಲೆ ಮಾಡಲಾಗಿದೆ.

## ಇದು ಒಂದು ನ್ಯಾಸವೇ?

## ನ್ಯಾಸವನ್ನು ಸರಕು ರಕ್ಷಣೆಯಿಂದ ವಿಂಗಡಿಸಲಾಗಿದೆ

೧. ಸರಕು ರಕ್ಷಣೆಯು ಸರಕುಗಳನ್ನು ಠೇವಣಿ ಇಡುವುದು ಒಂದು ದೃಷ್ಟಿಯಲ್ಲಿ ಇದು ನ್ಯಾಸದ ಒಂದು ವಿಶೇಷವೆಂದು ವರ್ಣಿಸಬಹುದು. ಆದರೆ ಸರಕು ಸಂರಕ್ಷಣೆ ಮತ್ತು ಒಪ್ಪಂದ ಕರಾರುಗಳಲ್ಲಿ ಒಂದು ದೊಡ್ಡ ಅಂತರವಿದೆ. ನ್ಯಾಸದಲ್ಲಿ ಸಾಮಾನ್ಯ ಆಸ್ತಿಯು ಧರ್ಮದರ್ಶಿಯಲ್ಲಿರುತ್ತದೆ. ಆದರೆ, ಸರಕು ಸಂರಕ್ಷಣೆಯಲ್ಲಿ ಒಂದು ವಿಶೇಷ ಆಸ್ತಿಯು ಸಾಮಾನ್ಯ ಆಸ್ತಿಯಾಗಿ ರಕ್ಷಣೆಗಾಗಿ ಸರಕು ಇಡುವವನಲ್ಲಿ ಇರುತ್ತದೆ.

೨. ಇವುಗಳ ಪರಿಣಾಮಗಳ ಅಂತರವೇನೆಂದರೆ ಒಬ್ಬ ಧರ್ಮದರ್ಶಿಯು ಕಾಯ್ದೆಬಾಹಿರ ರೀತಿಯಿಂದ ಒಂದು ನ್ಯಾಸದ ಆಸ್ತಿಯನ್ನು ಮಾರಾಟ ಮಾಡಿದರೆ, ಕೊಂಡುಕೊಳ್ಳುವವನು ಆ ನ್ಯಾಸದ ನೋಟೀಸು ಇಲ್ಲದೆ ನಿಜವಾದ ಖರೀದಿದಾರನಿಗೆ ಅದರ ಮಾಲಿಕತ್ವವು ಪ್ರಾಪ್ತವಾಗುತ್ತದೆ (ಕಾಯಿದೆಬದ್ಧ ಹಕ್ಕು ಪ್ರಾಪ್ತವಾಗುತ್ತದೆ). ಆದರೆ ಸರಕು ಇಟ್ಟುಕೊಂಡವನು ಮಾರಾಟ ಮಾಡಿದರೆ ನಿಜವಾದ ಮಾಲೀಕನ ವಿರುದ್ಧ ಅವನಿಗೆ ಯಾವ ಹಕ್ಕೂ ಪ್ರಾಪ್ತವಾಗುವುದಿಲ್ಲ.

೩. ಸರಕುಗಳನ್ನು ರಕ್ಷಣೆಗಾಗಿ ಇಟ್ಟುಕೊಂಡವನು ಆ ಸರಕುಗಳಿಗೆ ಸರಕು ಸಂರಕ್ಷಣೆಯ ದೃಷ್ಟಿಯಿಂದ ಅವುಗಳಿಗೆ ಮಾಲೀಕನಾಗುವುದಿಲ್ಲ. ಆದರೆ ಧರ್ಮದರ್ಶಿಯು ಆ ನ್ಯಾಸದ ಪರಿಣಾಮವಾಗಿ ಕಾನೂನಿನ ದೃಷ್ಟಿಯಲ್ಲಿ ಮಾಲೀಕನಾಗುತ್ತಾನೆ. ಒಂದು ನಿರ್ದಿಷ್ಟ ರೀತಿಯಲ್ಲಿ ಆ ಆಸ್ತಿಯನ್ನು ವ್ಯವಹರಿಸಲು ಅವನಿಗೆ ಹೊಣೆಗಾರಿಕೆಯು ಇದ್ದರೂ ಮಾಲೀಕನಾಗುತ್ತಾನೆ.

## ನ್ಯಾಸವನ್ನು ದತ್ತಿಯಿಂದ ವಿಭಿನ್ನಗೊಳಿಸಲಾಗಿದೆ

ಒಂದು ಸಾಮಾನ್ಯ ಒಪ್ಪಂದದ ಕರಾರು ನ್ಯಾಸದಿಂದ ಭಿನ್ನವಾಗಿರುತ್ತದೆ. ಮೂರನೆಯ ವ್ಯಕ್ತಿಗೆ ಲಾಭ ದೊರಕುವಂತೆ ಇದ್ದರೆ ಅದು ನ್ಯಾಸಕ್ಕೆ ಹೋಲುತ್ತದೆ.

೧. ನ್ಯಾಸದ ಆಸ್ತಿ ಮತ್ತು ದತ್ತಿ ಆಸ್ತಿ ಇವುಗಳಲ್ಲಿ ಒಂದು ಸಾಮ್ಯತೆಯು ಇದೆ. ಅದೆಂದರೆ ಇವೆರಡರಲ್ಲಿ ಆಸ್ತಿಯ ಹಸ್ತಾಂತರವು ಮಾಲೀಕತ್ವವನ್ನು ನೀಡುತ್ತದೆ. ನ್ಯಾಸಧಾರಿ (ಧರ್ಮದರ್ಶಿ) ಮತ್ತು ದತ್ತಿ ಸ್ವೀಕರಿಸುವವ ಇವರಿಬ್ಬರೂ ಆಸ್ತಿಯ ಮಾಲೀಕರಾಗುತ್ತಾರೆ.

೨. ಆದರೆ ಅವೆರಡರಲ್ಲಿ ಅಂತರವಿದೆ, ದತ್ತಿಯಲ್ಲಿ ದತ್ತಿ ಪಡೆದವನು ಆ ಆಸ್ತಿ ಕುರಿತು ತನ್ನ ಮನಸ್ಸಿಗೆ ಬಂದಂತೆ ವ್ಯವಹರಿಸಲು ಸ್ವತಂತ್ರನಿರುತ್ತಾನೆ. ಆದರೆ ನ್ಯಾಸದಲ್ಲಿ ಧರ್ಮದರ್ಶಿಯು ಒಂದು ನಿರ್ದಿಷ್ಟ ರೀತಿಯಲ್ಲಿ ಆಸ್ತಿಯನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸುವ ಹೊಣೆಯುಳ್ಳವ ನಾಗಿದ್ದಾನೆ.

## ನ್ಯಾಸವನ್ನು ಒಂದು ಒಪ್ಪಂದದಿಂದ ಬೇರ್ಪಡಿಸಲಾಗಿದೆ

೧. ಒಂದು ನ್ಯಾಸದ ಉಲ್ಲಂಘನೆ ಮತ್ತು ಒಂದು ಒಪ್ಪಂದ ಉಲ್ಲಂಘನೆಯ ಪರಿಣಾಮಗಳು ಇವೆರಡೂ ಬೇರೆ ಬೇರೆ ಎಂಬುದನ್ನು ತೋರಿಸುತ್ತವೆ.

೧. ಒಂದು ನ್ಯಾಸವನ್ನು ರಚಿಸಿದ್ದರೆ, ಅದರ ಫಲಾನುಭವಿಯು ಯಾರು ಅದಕ್ಕೆ ಪಕ್ಷಗಾರನಲ್ಲವೋ ಅವನು.

(i) ಒಂದು ಒಪ್ಪಂದದ ಕರಾರಿನಲ್ಲಿ ಯಾರು ಪಕ್ಷಗಾರರು ಇರುವರು ಅಂಥವರು ಕಾನೂನು ಬದ್ಧವಾಗಿ ಅದರ ಮೇಲೆ ದಾವೆ ಮಾಡುವ ಹಾಗೆ ಒಂದು ನ್ಯಾಸದಲ್ಲಿಯ ಫಲಾನುಭವಿಯು ಆ ನ್ಯಾಸಕ್ಕೆ ಪಕ್ಷಗಾರನಿರದಿದ್ದರೂ ಅವನು ಅದನ್ನು ಜಾರಿಗೊಳಿಸಬಹುದು.

(ii) ಒಂದು ಸ್ವ–ಸಂತೋಷದಿಂದ ರಚಿತ ನ್ಯಾಸವನ್ನು ಸಂಪೂರ್ಣವಾಗಿ ಜಾರಿಗೊಳಿಸಬಹುದು. ಆದರೆ ಒಂದು ಒಪ್ಪಂದದ ಕರಾರಿನಲ್ಲಿ ಪ್ರತಿಫಲ ಇಲ್ಲದಿದ್ದರೆ ಅದನ್ನು ಜಾರಿಗೊಳಿಸಲು ಬರುವುದಿಲ್ಲ.

೨. ಆದಾಗ್ಯೂ ಕೊಟ್ಟ ಸಂಗತಿಗಳ ಮೇಲಿಂದ ನ್ಯಾಸವು ಇಲ್ಲವೇ ಒಂದು ಒಪ್ಪಂದದ ಕರಾರು ಎಂಬುದನ್ನು ಕಂಡುಹಿಡಿಯುವುದು ಕಷ್ಟಕರ. ಇದನ್ನು ಪರೀಕ್ಷಿಸುವುದು ಹೇಗೆ?

ಕೀತನ–ಪುಟಗಳು: ೫–೬ (೧೯೧೯) ಎ.ಸಿ. ೮೦೧ ೩೮ ಬಾಂಬೆ ಎಸ್.ಆರ್. ೬೧೦ (೧೯೨೬) ಎ.ಸಿ. ೧೦೮

ಇದು ಒಂದು ಉದ್ದೇಶದ ಪ್ರಶ್ನೆ ಇರುತ್ತದೆ.

## ನ್ಯಾಸವನ್ನು ಅಧಿಕಾರದಿಂದ ಬೇರ್ಪಡಿಸಲಾಗಿದೆ

೧. 'ಅಧಿಕಾರ' ಈ ಪದಕ್ಕೆ ವಿಶಾಲ ಅರ್ಥದಲ್ಲಿ ಯಾವನೊಬ್ಬ ವ್ಯಕ್ತಿಗೆ ದತ್ತಿ ಸ್ವೀಕರಿಸುವವನ ಅಧಿಕಾರ ಇನ್ನೊಬ್ಬನ ತನ್ನ ಹಕ್ಕನ್ನು ಚಲಾಯಿಸಲು ಕೊಟ್ಟ ಅಧಿಕಾರವನ್ನು ಕೊಡುವ, ಕೊಡುವುದನ್ನು ಒಳಗೊಂಡಿರುತ್ತದೆ. ಈ ವಿಶಾಲವಾದ ಅರ್ಥದಲ್ಲಿ 'ಅಧಿಕಾರ' ಪದವನ್ನು ಬಳಸಲಾಗಿದೆ.

೨. ಅಧಿಕಾರಗಳು ಅನೇಕ ರೀತಿಯಿರುತ್ತವೆ.

ಉದಾ:

(i) ಸಾಮಾನ್ಯ ಕಾನೂನಿನ ಅನ್ವಯ ಒಬ್ಬ ಏಜೆಂಟನು ತನ್ನ ಯಜಮಾನನ ವತಿಯಿಂದ ಕೆಲಸ ಮಾಡಲು ಅವನಿಗೆ ಸಾಮಾನ್ಯವಾದ ಅಧಿಕಾರ ಪತ್ರದಿಂದ ಅಧಿಕಾರವನ್ನು ಹೊಂದಿದವನಾಗಿದ್ದಾನೆ.

(ii) ಶಾಸನಬದ್ಧ ಮಾರಾಟ ಮಾಡುವಂತಹ ಅಧಿಕಾರವನ್ನು ಅಡಮಾನ ಪಡೆದವನಿಗೆ ಕೊಡಲಾಗಿದೆ.

(iii) ಅನೇಕ ವ್ಯಕ್ತಪಡಿಸಿದ ಮತ್ತು ಅವ್ಯಕ್ತ ನ್ಯಾಯಸಮ್ಮತವಾದ ಅಧಿಕಾರಗಳನ್ನು ಧರ್ಮದರ್ಶಿಗಳು ಮತ್ತು ನಿರ್ವಾಹಕರು ಹೊಂದಿದ್ದಾರೆ.

(iv) ನ್ಯಾಯ ಸಮ್ಮತವಾದ ಹಿತಾಸಕ್ತಿಯುಳ್ಳ ನ್ಯಾಸಗಳನ್ನು ನೇಮಿಸುವ ಅಧಿಕಾರಗಳು.

೩. ಈ ನೇಮಕವನ್ನು ಮಾಡುವ ಅಧಿಕಾರವು ಒಂದು ನ್ಯಾಸವನ್ನು ಹೋಲುತ್ತದೆ. ಅನುರೂಪವಾಗಿದೆ ಮತ್ತು ಹೀಗೆ ಇದನ್ನು ನ್ಯಾಸದಿಂದ ವಿಂಗಡಿಸಲಿಕ್ಕೆ ಬೇಕು.

ನೇಮಕ ಪದದ ಅರ್ಥವು ತೋರಿಸುವುದು ಎಂದಾಗುತ್ತದೆ. ಆಸ್ತಿಯನ್ನು ಕುರಿತು ಅವನಿಗೆ ಕೊಟ್ಟ ಅಧಿಕಾರವನ್ನು ಚಲಾಯಸುವ ಒಂದು ಕೃತ್ಯವಾಗಿದೆ. ಒಂದು ನಿರ್ದಿಷ್ಟ ಆಸ್ತಿಯ ಗುರಿಯನ್ನು ಘೋಷಿಸಲು ಸೂಚಿಸುವ ಅದು ಒಂದು ಕಚೇರಿಗೆ ನೇಮಿಸುವ ಉದ್ದೇಶದ ಕೃತಿಯಾಗಿದೆ.

ನೇಮಕ ಪದದ ಕೊನೆಯ ವರ್ಗದಲ್ಲಿ ಭವಿಷ್ಯದಲ್ಲಿ ರಚಿಸಬಹುದಾದ ಹಿತಾಸಕ್ತಿಯನ್ನು ಕುರಿತು ಅದು ಪೂರ್ತಿಗೊಳ್ಳುವುದನ್ನು ಮುಂದಕ್ಕೆ ಹಾಕುವ ಘೋಷಣೆಯನ್ನು ಇಚ್ಛಿಸುವವನು ಈ ಪದವನ್ನು

ಉಪಯೋಗಿಸಲಾಗುವುದು. ಹೀಗೆ ಒಂದು ಮದುವೆಯ ಒಪ್ಪಂದದ ಕರಾರಿನಲ್ಲಿ ಒಂದು ಆಸ್ತಿಯ ನ್ಯಾಸವನ್ನು ರಚಿಸಿ ಆ ಗಂಡ–ಹೆಂಡತಿಯ ಜೀವನ ಪರ್ಯಂತ ಮತ್ತು ಅವರಲ್ಲಿ ಯಾರಾದರೂ ಸತ್ತರೆ ಬದುಕಿ ಉಳಿದವರು (೧) ಅಂತಹ ಮದುವೆಯಿಂದ ಜನಿಸಿದ ಎಲ್ಲ ಮಕ್ಕಳು ಬದುಕಿ ಉಳಿದ ಮಕ್ಕಳು ನೇಮಿಸತಕ್ಕದ್ದು ಇಲ್ಲವೇ, (೨) ಆ ಮದುವೆಯಿಂದ ಜನಿಸಿದ ಎಲ್ಲ ಮಕ್ಕಳು ಬದುಕಿ ಉಳಿದವರಂತೆ ನೇಮಿಸತಕ್ಕದ್ದು. ಇಂತಹ ಪ್ರಕರಣದಲ್ಲಿ ನೇಮಿಸಿದಾಕ್ಷಣ ಯಾವ ಮಕ್ಕಳ ಸಲುವಾಗಿ ಇದನ್ನು ಮಾಡಲಾಗಿದೆಯೋ ಅವರು ಮೂಲ ದಾಖಲೆಯಲ್ಲಿ ಕಾಣಿಸಿದಂತೆ ವಾಸ್ತವಿಕವಾಗಿ ಪರಿಮಿತಿಯಂತೆ ತೆಗೆದುಕೊಳ್ಳುತ್ತಾರೆ. ಈ ರೀತಿಯ ಅಧಿಕಾರವು ಅದರ ಉದ್ದೇಶಗಳಿಗೆ ಒಂದು ಕರಾರು ಇದ್ದರೆ (ಅವೆಂದರೆ ಯಾರ ಹಿತಕ್ಕಾಗಿ ಇದನ್ನು ಉಪಯೋಗಿಸಲಾಗಿದೆ) ಅವನಿಗೆ ವಿಶೇಷ ಅಧಿಕಾರವನ್ನು ನೇಮಕ ಎಂದು ಕರೆಯುತ್ತಾರೆ. ಆದರೆ ಅಲ್ಲಿ ಸಾಮಾನ್ಯ ಅಧಿಕಾರದ ನೇಮಕವೂ ಇರಬಹುದು. ಅಂದರೆ ಅಲ್ಲಿ ಅಂತಹ ಕರಾರು ಇರುವುದಿಲ್ಲ. ಯಾಕೆಂದರೆ ಆ ದತ್ತಿ ಸ್ವೀಕರಿಸಿದವನು ತನ್ನನ್ನು ತಾನೇ ನೇಮಿಸಿಕೊಳ್ಳಬಹುದು. ಇಂತಹ ಪ್ರಕರಣದಲ್ಲಿ ದತ್ತಿ ಸ್ವೀಕರಿಸಿದವನಿಗೆ ಬಹಳಷ್ಟು ಉದ್ದೇಶಕ್ಕಾಗಿ ತಾನೇ ಅದರ ಮಾಲೀಕನಂತೆ ಅದನ್ನು ಮಾರುವ ಅಧಿಕಾರ ಇರುತ್ತದೆ.

(i) ಒಂದು ಅಧಿಕಾರವು ಕೇವಲ ವಿವೇಚನೆ ಮತ್ತು ಅದರಿಂದ ಅದು ನ್ಯಾಸದಿಂದ ಭಿನ್ನವಾಗಿರುತ್ತದೆ. ಯಾವುದು ಒಂದು ಹೊಣೆಯನ್ನುಂಟುಮಾಡುತ್ತದೆ, ಇಲ್ಲವೇ

(ii) ಒಂದು ಅಧಿಕಾರವು ಈ ವಿವೇಚನೆಯನ್ನು ಉಪಯೋಗಿಸಲು ಒತ್ತಾಯಿಸುವ ಹೊಣೆಯನ್ನು ಹೇರಬಹುದು.

ಮೊದಲಿನ ಪ್ರಕರಣದಲ್ಲಿ ನ್ಯಾಸವು ಇರುವುದಿಲ್ಲ. ನಂತರದ ಪ್ರಕರಣದಲ್ಲಿ ನ್ಯಾಸವು ಇರುತ್ತದೆ. ಮೊದಲನೆಯದನ್ನು ಕೇವಲ ಅಧಿಕಾರವೆಂದು ಕರೆಯುತ್ತಾರೆ. ನಂತರದ್ದನ್ನು ನ್ಯಾಸದ ಹೆಸರಿನಲ್ಲಿ ಕರೆಯುವ ಅಧಿಕಾರವೆಂದು ಕರೆಯುತ್ತಾರೆ. ಇಲ್ಲವೇ ನ್ಯಾಸದಿಂದ ಒಡಗೂಡಿದ ಅಧಿಕಾರವೆನಿಸುವುದು.

(i) ಮೂರನೆಯ ವರ್ಗದ ಪ್ರಕರಣಗಳು ನ್ಯಾಸದ ಅಧಿಕಾರ ಹೊಂದಿದ ಪ್ರಕರಣಗಳು

ಒಬ್ಬ ಧರ್ಮದರ್ಶಿಯು ಫಲಾನುಭವಿಯಾಗಿ ಆ ಆಸ್ತಿಯನ್ನು ಉಪಯೋಗಿಸಲು ಈ ಪ್ರಕರಣಗಳಲ್ಲಿ ಧರ್ಮದರ್ಶಿಯ ಕೆಲವೇ ವ್ಯಕ್ತಿಗಳಿಗೆ ಅಥವಾ ಉದ್ದೇಶಗಳಿಗೆ ವಿನಿಯೋಗಿಸುವ ಹೊಣೆಗಾರನಾಗಿದ್ದರೂ ಸಹಿತ ಕೆಲವೇ ಜನಗಳ ಪ್ರಯೋಜನಕ್ಕೆ ಇಲ್ಲವೆ ಉದ್ದೇಶಗಳಿಗೆ ಅವುಗಳನ್ನು ನಿರ್ದಿಷ್ಟಪಡಿಸಿದ ಕೃತ್ಯಗಳಿಗೆ ಉಪಯೋಗಿಸುವುದು ಇಲ್ಲವೇ ಬಿಡುವುದು ಅವರ ವಿವೇಚನೆಗೆ ಬಿಟ್ಟ ವಿಷಯ. ಇಲ್ಲವೇ ಯಾವುದೇ ಒಬ್ಬ ವ್ಯಕ್ತಿಗೆ ಎಷ್ಟು ವಿನಿಯೋಗಿಸಬೇಕೆಂದು ಇಲ್ಲವೆ ಉದ್ದೇಶ ಇಲ್ಲವೇ ವೇಳೆ ಮತ್ತು ಯಾವ ರೀತಿ ಅದನ್ನು ವಿನಿಯೋಗಿಸಬೇಕೆಂದು ಅವನ ವಿವೇಚನೆಗೆ ಬಿಟ್ಟ ವಿಷಯವಾಗಿದೆ. ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯವು ಧರ್ಮದರ್ಶಿಯು ಅನುಚಿತವಾಗಿ ತನ್ನ ಅಧಿಕಾರವನ್ನು ಚಲಾಯಿಸುವುದನ್ನು ಪ್ರತಿಬಂಧಿಸುತ್ತದೆ. ಅವನನ್ನು ಇಂತಹದೇ ಕೃತ್ಯ ಮಾಡಬೇಕೆಂದು ಒತ್ತಾಯಿಸುವುದಿಲ್ಲ. ಇಲ್ಲವೆ ಆತನು ತನ್ನ ವಿವೇಚನೆಯನ್ನು ಯೋಗ್ಯ ರೀತಿಯಲ್ಲಿ ಚಲಾಯಿಸುವಂತೆ ಮಾಡಲು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವಂತೆ ಪ್ರಯತ್ನ ಮಾಡುವುದಿಲ್ಲ.

೧. ಅಧಿಕಾರವು ನ್ಯಾಸಕ್ಕೆ ಹೋಲುತ್ತದೆ. ಆದರೆ ಅದರಿಂದ ಭಿನ್ನವೂ ಆಗಿದೆ.

(i) ಭೂಮಿಯ ಮಾರಾಟಕ್ಕೆ ಸಂಬಂಧಿಸಿದಂತೆ ಇರುವ ಅಧಿಕಾರವು ನ್ಯಾಸವನ್ನು ಹೋಲುತ್ತದೆ. ಆದರೆ ಆ ಭೂಮಿಯನ್ನು ಉಪಭೋಗಿಸುವ ಹಕ್ಕನ್ನು ದಯಪಾಲಿಸುವುದಿಲ್ಲ.

(ii) ಅದು ನ್ಯಾಸದಿಂದ ಬೇರೆಯಾಗಿದೆ. ಈ ಅಧಿಕಾರವು ಆತನ ವಿವೇಚನೆಗೆ ಬಿಟ್ಟ ವಿಷಯವಾಗಿದ್ದರೆ ಅದು ಅದನ್ನು ಬೇರ್ಪಡಿಸುತ್ತದೆ. ಆದರೆ ನ್ಯಾಸವು ನಿರ್ದೇಶನ ನೀಡುತ್ತದೆ. ಧರ್ಮದರ್ಶಿಯು ಅದನ್ನು ಸ್ವೀಕರಿಸಿದರೆ ಅವನು ಅವಶ್ಯವಾಗಿ ಅದನ್ನು ಸ್ಥಾಪಿಸಿದವನ (ಜನಕನ) ನಿರ್ದೇಶನದಂತೆ ಮಾಡಬೇಕು.

| | | |
|---|---|---|
| *VII. | | ಹೊಸ ಧರ್ಮದರ್ಶಿಗಳು. |
| | (೧) | ಜೀವಿತ ಅಧಿಕಾರ ಮತ್ತು ಆಸ್ತಿ ಇಲ್ಲವೆ ಧರ್ಮದರ್ಶಿಯು ಮರಣದ ನಂತರ. |
| | *(೨) | ಅಧಿಕಾರ ಮತ್ತು ಆಸ್ತಿಯು ಬದುಕಿ ಉಳಿದವರಿಗೆ ಹೋಗುವುದು. |
| | *(೩) | ಧರ್ಮದರ್ಶಿಯನ್ನು ನಿವೃತ್ತಗೊಳಿಸುವುದು ಇಲ್ಲವೇ ಕಿತ್ತುಹಾಕುವುದು. |
| | *(೪) | ಹೊಸ ಧರ್ಮದರ್ಶಿಗಳ ನೇಮಕ. |
| *VIII | | ಒಬ್ಬ ನ್ಯಾಯಿಕ ಧರ್ಮದರ್ಶಿಯನ್ನು ನೇಮಿಸುವುದು. |
| *IX | | ಸಾರ್ವಜನಿಕ ಧರ್ಮದರ್ಶಿ. |
| | (೧) | ಸ್ವರೂಪ ಮತ್ತು ಕಾರ್ಯ. |
| | *(೨) | ಸಾರ್ವಜನಿಕ ಧರ್ಮದರ್ಶಿಯನ್ನು ಸಾಮಾನ್ಯ ಧರ್ಮದರ್ಶಿಯಾಗಿ ನೇಮಿಸುವುದು. |
| | *(೩) | ಒಂದು ಸಾರ್ವಜನಿಕ ಧರ್ಮದರ್ಶಿ ನೇಮಕ ಮತ್ತು ಕಿತ್ತುಹಾಕುವುದು. |
| | *(೪) | ಆರಕ್ಷಕ ಧರ್ಮದರ್ಶಿ ಮತ್ತು ವ್ಯವಸ್ಥಾಪಕ ಧರ್ಮದರ್ಶಿಗಳ ಕರ್ತವ್ಯಗಳು ಹಕ್ಕುಗಳು ಮತ್ತು ಬಾಧ್ಯತೆಗಳು. |
| | *(೫) | ಸಾರ್ವಜನಿಕ ಧರ್ಮದರ್ಶಿಗೆ ಸಂಬಂಧಿಸಿದಂತೆ ವಿಶೇಷ ನಿಯಮಗಳು. |
| *X | | ಧರ್ಮದರ್ಶಿ ಹಕ್ಕುಗಳು. |
| | (೧) | ತುಂಬಿಕೊಡುವ ಮತ್ತು ನಷ್ಟ ಭರ್ತಿ ಮಾಡುವ ಹಕ್ಕುಗಳು. |
| | *(೨) | ನ್ಯಾಸವು ಪೂರ್ತಿಯಾದ ನಂತರ ಆ ನ್ಯಾಸದ ಹುದ್ದೆಯಿಂದ ಬಿಡುಗಡೆಯಾಗುವುದು. |
| | *(೩) | ನ್ಯಾಸದ ಹಣವನ್ನು ನ್ಯಾಯಾಲಯದಲ್ಲಿ ಜಮಾ ಮಾಡುವುದು. |
| *XI | | ಸಾರ್ವಜನಿಕ ನ್ಯಾಸದಲ್ಲಿ ಇಲ್ಲವೇ ನ್ಯಾಯಾಲಯದಲ್ಲಿ ಧರ್ಮದರ್ಶಿಯ ಮತ್ತು ಫಲಾನುಭವಿಗಳ ಹಕ್ಕುಗಳನ್ನು ಚಲಾಯಿಸುವುದು. |
| | *(೧) | ಅಧಿಕೃತ ತಪಾಸಣೆಯನ್ನು (ಆಡಿಟನ್ನು) ಮಾಡಿಸುವ ಅಧಿಕಾರವು. |
| | *(೨) | ಕೋರ್ಟಿನ ಆದೇಶವನ್ನು ಪಡೆಯುವ ಹಕ್ಕು. |
| | *(೩) | ನ್ಯಾಯಾಲಯದಿಂದ ಆಡಳಿತ ನಡೆಸುವ ನ್ಯಾಸವನ್ನು ಹೊಂದುವ ಹಕ್ಕು. |
| | *(೪) | ನ್ಯಾಯಾಲಯದಿಂದ ನಿರ್ದೇಶನವನ್ನು ಪಡೆಯುವ ಹಕ್ಕು. |
| | *(೫) | ನ್ಯಾಯಾಲಯದಿಂದ ಆಡಳಿತ ನಡೆಸುವ ನ್ಯಾಸವನ್ನು ಮಾಡುವ ಹಕ್ಕು. |

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ಯಾವುದೇ ವಿವರಗಳನ್ನು ಒಳಗೊಂಡಿಲ್ಲ.

**XII. ನ್ಯಾಸದ ವಿಶ್ವಾಸದ್ರೋಹ ಮಾಡಿದ್ದರೆ ಪರಿಣಾಮ**

೧. ನ್ಯಾಸದ ವಿಶ್ವಾಸದ್ರೋಹ ವ್ಯಾಖ್ಯೆಯು–

ನ್ಯಾಸದ ವಿಶ್ವಾಸದ್ರೋಹ ಇದನ್ನು ಕಲಮು ೩ರಲ್ಲಿ ವ್ಯಾಖ್ಯಾನಿಸಲಾಗಿದೆ. ಧರ್ಮದರ್ಶಿಗೆ ವಿಧಿಸಿದ ಯಾವುದೇ ಕರ್ತವ್ಯವನ್ನು ಇಲ್ಲವೇ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ವ್ಯತಿರಿಕ್ತವಾಗಿದ್ದರೆ ಅದಕ್ಕೆ ನ್ಯಾಸದ ವಿಶ್ವಾಸದ್ರೋಹವೆಂದು ಕರೆಯುತ್ತಾರೆ.

೨. ಇಂಗ್ಲಿಷ್ ಕಾನೂನಿನಲ್ಲಿ ಧರ್ಮದರ್ಶಿಯ ಯಾವುದೇ ಕಾರ್ಯದಲ್ಲಿ ನಿಷ್ಕಾಳಜಿ, ಇಲ್ಲವೆ ಕೆಲಸ ಮಾಡಲು ಅಧಿಕಾರ ಕೊಟ್ಟಿರುವುದಿಲ್ಲವೊ ಇಲ್ಲವೆ ಕಾನೂನಿಗೆ ವ್ಯತಿರಿಕ್ತವಾದುದು ನ್ಯಾಸದ ವಿಶ್ವಾಸದ್ರೋಹವೆಂದು ಕರೆಯಲಾಗುವುದು.

೩. ಕರ್ತವ್ಯ ಲೋಪ: ಧರ್ಮದರ್ಶಿಗೆ ಕರ್ತವ್ಯಗಳ ಹಕ್ಕುಗಳು, ಅಧಿಕಾರಗಳು ಇರುತ್ತವೆ. ಅನರ್ಹತೆಗಳು ಕೇವಲ ಕರ್ತವ್ಯ ಲೋಪವು ಮಾತ್ರ ನ್ಯಾಸದ ಉಲ್ಲಂಘನೆಯಾಗುತ್ತದೆ. ಹೊಣೆಗಾರಿಕೆಯ ಮಾನದಂಡವೆಂದರೆ ನ್ಯಾಸದ ಆಸ್ತಿಗೆ ಎಷ್ಟು ಹಾನಿಯಾಗಿದೆಯೆಂಬುದು.

೨. ಅವನು ಬಡ್ಡಿಯನ್ನು ಕೊಡಲು ಬಾಧ್ಯನಿರುವನೋ?

ಈ ಕೆಳಗಿನ ಪ್ರಕರಣಗಳಲ್ಲಿ ಮಾತ್ರ.

(ಅ) ತಾನು ಎಲ್ಲಿ ವಾಸ್ತವಿಕವಾಗಿ ಬಡ್ಡಿಯನ್ನು ತೆಗೆದುಕೊಂಡಿರುವನೋ.

(ಬ) ಫಲಾನುಭವಿಗಳಿಗೆ ನ್ಯಾಸದ ಹಣವನ್ನು ಕೊಡುವಲ್ಲಿ ಅನುಚಿತವಾಗಿ ವಿಳಂಬವಾದುದಕ್ಕೆ.

(ಕ) ಧರ್ಮದರ್ಶಿಯು ಎಲ್ಲಿ ಬಡ್ಡಿಯನ್ನು ಸ್ವೀಕರಿಸಿದ್ದಾನೆಂದು ಪ್ರಾಮಾಣಿಕವಾಗಿ ಗ್ರಹಿಸುವಂತೆ ಇದ್ದರೆ.

(ಇ) ನ್ಯಾಸದ ಹಣವನ್ನು ತೊಡಗಿಸುವಲ್ಲಿ ತಪ್ಪಿದರೆ ಮತ್ತು ಅಂತಹ ಬಡ್ಡಿಯನ್ನು ಸಂಗ್ರಹಿಸದಿದ್ದರೆ, ಡಿವಿಡೆಂಡ್ ಸಂಗ್ರಹಿಸದಿದ್ದರೆ,

(ಎಫ್) ನ್ಯಾಯದ ಆಸ್ತಿಯನ್ನು ಇಲ್ಲವೆ ಅದರ ಉತ್ಪನ್ನದ ನ್ಯಾಸದ ಬದಲಿ ವ್ಯಾಪಾರ ಮತ್ತು ವ್ಯವಹಾರಕ್ಕೆ ಉಪಯೋಗಿಸಿದ್ದು ಕಂಡುಬಂದರೆ,

೩. ವಿಶ್ವಾಸ ದ್ರೋಹ ಬಗೆದು ಅವನು ಅದಕ್ಕೆ ಹಾನಿ ಉಂಟುಮಾಡಿದಾಗ ಅಂತಹದರಿಂದ ಲಾಭ ಪಡೆದದ್ದನ್ನು ಹಾನಿಗೆ ಸರಿ ಹೊಂದಿಸಲು ಅವನಿಗೆ ಬರಬಹುದೇ?

ಇಲ್ಲ. ಅವನು ಹಾಗೆ ಮಾಡಲು ಬರುವುದಿಲ್ಲ.

---

* ಪ್ರತಿಯೊಂದು ಪುಟವು ಕೇವಲ ತಲೆಬರಹವನ್ನು ಹೊಂದಿದ್ದು ಮತ್ತು ಇನ್ಯಾವುದೇ ವಿವರಗಳನ್ನು ಒಳಗೊಂಡಿಲ್ಲ.

## ಅಧ್ಯಾಯ–೫

# ಕಾಲ ಪರಿಮಿತಿಯ ಕಾನೂನು

# ಕಾಲ ಪರಿಮಿತಿಯ ಕಾನೂನಿನ ಉಪನ್ಯಾಸಗಳ ರೂಪರೇಷೆಗಳು

## ೧. ಪ್ರಸ್ತಾವನೆ

೧. ಕಾಲ ಪರಿಮಿತಿಯ ಕಾನೂನಿನ ಸ್ವರೂಪ

೨. ಕಾಲ ಪರಿಮಿತಿ, ವಿಬಂಧ, ಮೌನಸಮ್ಮತಿ ಮತ್ತು ಕರ್ತವ್ಯಲೋಪ ಇವುಗಳಲ್ಲಿನ ವಿಭಿನ್ನತೆಗಳು.

೩. ಕಾಲ ಪರಿಮಿತಿ ಕಾನೂನಿನ ಉದ್ದೇಶ.

## ೨. ಕಾಲ ಪರಿಮಿತಿ ಕಾನೂನಿನ ವ್ಯವಸ್ಥೆಯ ಕ್ರಮ

೧. ಭಾರತೀಯ ಶಾಸನಾತ್ಮಕ ಕಾನೂನಿನಲ್ಲಿ ವೇಳೆಯ ಲೋಪದೋಷಗಳ ನಿರ್ವಹಣೆ.

೨. ಅಧಿನಿಯಮದ ಯೋಜನೆ.

## ೩. ಅಧಿನಿಯಮದ ಅನ್ವಯಿಸುವಿಕೆ

೧. ಪ್ರದೇಶಕ್ಕೆ ಸಂಬಂಧಿಸಿದಂತೆ

೨. ವಿಶೇಷ ವ್ಯವಹರಣೆಗಳಿಗೆ ಸಂಬಂಧಿಸಿದಂತೆ.

೩. ಕ್ರಿಮಿನಲ್ (ಅಪರಾಧ) ವ್ಯವಹರಣೆಗಳಿಗೆ ಸಂಬಂಧಿಸಿದಂತೆ.

೪. ಸಿವಿಲ್ ವ್ಯವಹರಣೆಗಳಿಗೆ ಸಂಬಂಧಿಸಿದಂತೆ.

೫. ವಿಶೇಷ ಕಾನೂನಿಗೆ ಸಂಬಂಧಿಸಿದಂತೆ ವಿಶೇಷ ಕಾನೂನಿನ ವಿರುದ್ಧದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ.

## ೪. ಮೂರನೆಯ ಅಂಕಣದಿಂದ ಉದ್ಭವಿಸುವ ಪ್ರಶ್ನೆಗಳು

I. ಕಾಲ ಪರಿಮಿತಿಯು ಎಂದಿನಿಂದ ಪ್ರಾರಂಭವಾಗುವುದು.

೧. ಸಾಮಾನ್ಯ ನಿಯಮ ದಾವೆ ಮಾಡುವ ಹಕ್ಕು ಯಾವಾಗ ಪ್ರಾಪ್ತವಾಗುತ್ತದೆ?

**ಅಪವಾದಗಳು:**

(೧) ಕೆಲವು ಪ್ರಕರಣಗಳಲ್ಲಿ ದಾವೆಯನ್ನು ಹೂಡುವ ಪೂರ್ವದಲ್ಲಿಯೇ ಕಾಲ ಪರಿಮಿತಿಯು ಆರಂಭವಾಗಿರುವುದು.

(೨) ಕೆಲವು ಪ್ರಕರಣಗಳಲ್ಲಿ ದಾವೆ ಮಾಡುವ ಹಕ್ಕು ಪ್ರಾಪ್ತವಾಗಿದ್ದರೂ ಕಾಲ ಪರಿಮಿತಿಯು ಪ್ರಾರಂಭ ವಾಗದಿರುವಿಕೆಯು.

(೩) ಕೆಲವು ಪ್ರಕರಣಗಳಲ್ಲಿ ಕಾಲ ಪರಿಮಿತಿಯು ಹೊಸದಾಗಿ ಪ್ರಾರಂಭವಾಗುವಿಕೆ.

(ಸೂಚನೆ: ಭಾಗಗಳ ಹಾಗೂ ಅಧ್ಯಾಯಗಳ ಸಂಖ್ಯೆಗಳನ್ನು ಮೂಲ ಹಸ್ತಪ್ರತಿ ಎಸ್‌ದಲ್ಲಿ ಇದ್ದಂತೆ ಇಡಲಾಗಿದೆ –ಸಂಪಾದಕ)

೨. ಒಂದರ ಮೇಲೊಂದರಂತೆ ಮಾಡುವ ಅಕ್ರಮಗಳ ಪ್ರಕರಣಗಳಲ್ಲಿನ ಉಗಮಸ್ಥಾನ.

೩. ಅಕ್ರಮ ಕೃತ್ಯಗಳು ಮುಂದುವರೆಯಲಿರುವ ಪ್ರಕರಣಗಳಲ್ಲಿಯ ಮೂಲಸ್ಥಾನ.

II. ಕಾಲ ಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆ?

೧. ವಾದಿಯ ವಿರುದ್ಧ ಯಾವಾಗ

೨. ಪ್ರತಿವಾದಿಯ ವಿರುದ್ಧ ಯಾವಾಗ

### ೫. ಎರಡನೆಯ ಅಂಕಣದಿಂದ ಉದ್ಭವಿಸುವ ಪ್ರಶ್ನೆಗಳು

I. ಕಾಲ ಪರಿಮಿತಿಯ ಅವಧಿಯ ಲೆಕ್ಕವನ್ನು ಹೇಗೆ ಹಾಕುವುದು?

(೧) ಕ್ಯಾಲೆಂಡರ್

(೨) ಯಾವ ಪ್ರಕರಣಗಳಲ್ಲಿ ವೇಳೆಯನ್ನು ಹೊರತುಪಡಿಸಲಾಗುವುದು.

(೩) ಯಾವ ಪ್ರಕರಣಗಳಲ್ಲಿ ಕಳೆದುಹೋದ (ನಷ್ಟವಾದ) ವೇಳೆಯನ್ನು ಕಳೆಯಲಾಗುವುದು.

II. ಕಾಲಪರಿಮಿತಿ ಅವಧಿಯನ್ನು ವಿಸ್ತರಿಸಬಹುದೇ?

III. ವಿಳಂಬವನ್ನು ಕ್ಷಮಿಸಬಹುದೇ?

### IX. ಕಾಲ ಪರಿಮಿತಿಯ ಶಾಸನವನ್ನು ಅರ್ಥೈಸುವಿಕೆಯು

(೧) ಸಾಮಾನ್ಯ ತತ್ವಗಳು

(೨) ನಿರ್ದಿಷ್ಟ ಹಾಗೂ ಉಳಿವಿಕೆಯ ಅನುಚ್ಛೇದಗಳು

### ಭಾಗ–೪ : ಒಂದನೆಯ ಅಂಕಣದಿಂದ ಉದ್ಭವಿಸುವ ಪ್ರಶ್ನೆಗಳು
### ವಿಭಾಗ – ೧ – ದಾವೆಗಳು

ಗುಂಪು ೧– ಹಣ ವಸೂಲಿಗಾಗಿ ದಾವೆಗಳು – ೫೭ – ೬೪ – ೬೫

ವಿವರ: (೧) ತಿಳಿಸಿದ ಲೆಕ್ಕ–೬೪

(೨) ಹಣವನ್ನು ಕೊಟ್ಟದ್ದು ಮತ್ತು ತೆಗೆದುಕೊಂಡದ್ದು–೬೨

(೩) ಪರಸ್ಪರ ಬಹಿರಂಗ ಚಲಾವಣೆಯ ಲೆಕ್ಕ–೬೫

(೪) ಠೇವಣಿ–೬೦

ಗುಂಪು ೨– ವರ್ಗಾವಣೆಯ ಲಿಖಿತಗಳ ಮೇಲೆ ಮಾಡುವ ದಾವೆಗಳು– ೬೯, ೮೦

ವಿವರ: ದಾಖಲೆಗಳ ಮೇಲೆ ಕೊಡಬೇಕಾದ ಹಣ–೭೫

ಗುಂಪು ೩– ಅಲ್ಪವಯಿಯು ವಯಸ್ಕನಾದ ನಂತರ ಮಾಡುವ ದಾವೆಗಳು.

ವಿವರ:

ಗುಂಪು ೪– ಅಡಮಾನಗಳ ಮೇಲೆ ಮಾಡುವ ದಾವೆಗಳು– ೧೩೨, ೧೩೪, ೧೪೭, ೧೪೮

ವಿವರ: ಗುಂಪು ೫– ಸ್ಥಿರಾಸ್ತಿಯನ್ನು ಪಡೆದುಕೊಳ್ಳಲು ಮಾಡುವ ದಾವೆಗಳು.

ವಿವರ:

(೧) ಶೀರ್ಷಿಕೆಯು ಮಾಲ್ಕೀ ಹಕ್ಕಿನ ಮೇಲೆ ಆಧರಿಸಿದ ದಾವೆಗಳು.

(೨) ಕಬ್ಜೆಯ ಮೇಲೆ ಆಧರಿಸಿದ ದಾವೆಗಳು.

(ಅ) ಪ್ರತಿಕೂಲ ಕಬ್ಜಾ ಅಥವಾ ಸ್ವಾಧೀನ

(ಆ) ಸ್ವಾಧೀನ (ಕಬ್ಜಾ) ತಪ್ಪಿಸಿದ

(೩) ಹಿಸ್ಸಾ ಮಾಡಿಕೊಂಡ(ವಾಟಣಿ)ದ್ದರ ಮೇಲೆ ದಾವೆಗಳು.

ಗುಂಪು ೬– ಮೋಸ ಇಲ್ಲವೆ ವಂಚನೆಯಿಂದ ಪಡೆದುಕೊಂಡ ಡಿಕ್ರಿ ಅಥವಾ ದಸ್ತಾವೇಜುಗಳನ್ನು ರದ್ದುಗೊಳಿಸಲು ಮಾಡುವ ದಾವೆಗಳು– ೯೧, ೯೫

ವಿವರ: ಗುಂಪು ೭– ಡಿಕ್ರಿಗಳನ್ನು ಮತ್ತು ನ್ಯಾಯಾಲಯದ ಆದೇಶಗಳನ್ನು ಮತ್ತು ಸರಕಾರಿ ಅಧಿಕಾರಿಗಳು ಮಾಡಿದ ಆದೇಶಗಳನ್ನು ರದ್ದುಪಡಿಸಲು ಮಾಡಲಾಗುವ ದಾವೆಗಳು– ೧೧, ೧೧ಅ, ೧೨, ೧೩, ೧೪

ಗುಂಪು ೮– ನೋಂದಾಯಿತ ದಸ್ತಾವೇಜುಗಳ ಮೇಲೆ ದಾವೆಗಳು–೧೧೬

ಗುಂಪು ೯– ಕೋಟೆ(ಕಿಲ್ಲಾಗಳ)ಗಳ ಮೇಲೆ ದಾವೆಗಳು

ವಿವರ: ದೋಷಪೂರ್ವಕ ಅಭಿಯೋಜನೆ– ದಾವೆ ಮಾಡುವ ಹಕ್ಕು ಯಾವಾಗ ಪ್ರಾರಂಭ ವಾಗುತ್ತದೆ. ೨..................೩

ಗುಂಪು ೧೦– ಕರಾರಿನ ಒಡಂಬಡಿಕೆಯ ಮೇಲೆ ಮಾಡುವ ದಾವೆಗಳು.

ವಿಭಾಗ ೨– ಮೇಲ್ಮನವಿಗಳು (ಪುಟ ಖಾಲಿ ಇದೆ)

ವಿಭಾಗ ೩– ಅರ್ಜಿಗಳು (ಪುಟ ಖಾಲಿ ಇದೆ)

**೭–ಚಿರಭೋಗದ ಕಾನೂನು–** (ಪುಟ ಖಾಲಿ ಇದೆ)

# ಭಾರತೀಯ ಕಾಲ ಪರಿಮಿತಿಯ ಕಾನೂನು

# I. ಪ್ರಸ್ತಾವನೆ

## ಕಾಲ ಪರಿಮಿತಿಯ ಕಾನೂನಿನ ಸ್ವರೂಪ ಯಾವುದು?

೧. ಒಂದು ವ್ಯವಹಾರದ ದಾವೆಯ ವ್ಯವಹರಣೆಯನ್ನು ಪ್ರಾರಂಭಿಸಲು ಕಾಲ ಪರಿಮಿತಿಯ ಅನೇಕ ಮಾರ್ಗಗಳು ಇರುತ್ತವೆ.

(೧) ಕೆಲವು ಪ್ರಕರಣಗಳಲ್ಲಿ ಕಾನೂನಿನಲ್ಲಿ ಹೇಳಿದ ಪರಿಮಿತಿಯಲ್ಲಿ ಕ್ರಮ ಕೈಕೊಳ್ಳತಕ್ಕದ್ದು. ಉದಾ: ಆರ್ಡರ್ ೬ ರೂಲ್ ೧೮– ವಾದ ಪತ್ರದ ತಿದ್ದುಪಡಿ– ವಾದ ಪತ್ರ ತಿದ್ದುಪಡಿ ಮಾಡಲು ಅನುಮತಿ ಕೇಳಿದವರು ನ್ಯಾಯಾಲಯವು ನಿರ್ಧರಿಸಿದ ಅವಧಿಯೊಳಗೆ ತಿದ್ದುಪಡಿಯನ್ನು ಮಾಡತಕ್ಕದ್ದು ಮತ್ತು ಒಂದು ವೇಳೆ ಹೀಗೆ ಅವಧಿಯನ್ನು ನಿರ್ಧರಿಸದಿದ್ದರೆ, ೧೪ ದಿನಗಳಲ್ಲಿ ಅದರ ತಿದ್ದುಪಡಿ ಮಾಡತಕ್ಕದ್ದು.

(೨) ಕೆಲವು ಪ್ರಕರಣಗಳಲ್ಲಿ ಕೆಲವು ಅವಧಿಯು ಮುಗಿಯುವ ಪೂರ್ವದಲ್ಲಿ ಯಾವುದೇ ಕ್ರಮ ಕೈಕೊಳ್ಳತಕ್ಕದ್ದಲ್ಲವೆಂದು ಕಾನೂನು ಹೇಳುತ್ತದೆ.
ಉದಾ: ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಮು ೮೦ ರಾಜ್ಯ ಸರಕಾರದ ಕಾರ್ಯದರ್ಶಿಯ ವಿರುದ್ಧ ದಾವೆ.
ಭಾರತೀಯ ಕೌನ್ಸಿಲ್‌ನ ಕಾರ್ಯದರ್ಶಿ ಅಥವಾ ಯಾವುದೇ ಸಾರ್ವಜನಿಕ ಅಧಿಕಾರಿಯು ಯಾವುದೇ ಕಾನೂನು ಅನ್ವಯ ಅಧಿಕಾರ ಪಡೆದುಕೊಂಡ ವ್ಯಕ್ತಿಯು ತನ್ನ ಸ್ಥಾನದ ಸಾಮರ್ಥ್ಯದ ಅನ್ವಯ ಮಾಡಿದ ಕೃತ್ಯದ ವಿರುದ್ಧ ಯಾವುದೇ ದಾವೆಯನ್ನು ಲಿಖಿತ ನೋಟೀಸು ಕೊಟ್ಟು ಎರಡು ತಿಂಗಳ ಅವಧಿ ಮುಗಿಯುವುದರೊಳಗೆ ಮಾಡತಕ್ಕದ್ದು.

(೩) ಕೆಲವೊಂದು ಪ್ರಕರಣಗಳಲ್ಲಿ ಕಾನೂನು ನಿರ್ಧರಿಸಿದ ಕಾಲ ಪರಿಮಿತಿಯ ಕೆಲಕಾಲ ಮುಗಿದ ನಂತರ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

೨. ಹೇಳುವುದಾದರೆ ಕಾಲ ಪರಿಮಿತಿಯ ಕಾನೂನಿನ ಸಂವಿಧಾನಾತ್ಮಕ ವಿಷಯ ಮೂರನೆಯ ವರ್ಗದ ಪ್ರಕರಣಗಳಾಗಿರುತ್ತದೆ.

### ೨. ಕಾಲ ಪರಿಮಿತ ವಿಬಂಧ, ಮೌನಸಮ್ಮತಿ, ಕರ್ತವ್ಯ ಉಪೇಕ್ಷೆ ಇವುಗಳಲ್ಲಿಯ ವ್ಯತ್ಯಾಸ

ಈ ಮೇಲಿನವುಗಳೆಲ್ಲವೂ ತಪ್ಪು ಮಾಡಿದ ವ್ಯಕ್ತಿಯಿಂದ ಬಾಧಿತ ವ್ಯಕ್ತಿಯು ಪರಿಹಾರ ಪಡೆಯಲು ನಿರಾಕರಿಸುವ ಪರಿಣಾಮ ಹೊಂದಿರುತ್ತವೆ. ಆದ್ದರಿಂದ ಇವುಗಳನ್ನು ಕಾಲ ಪರಿಮಿತಿಯಿಂದ ಬೇರ್ಪಡಿಸಲೇ ಬೇಕು.

### ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಆದ ಕಾಲ ಪರಿಮಿತಿ ಮತ್ತು ವಿಬಂಧ

೧. ಒಬ್ಬನು ತನ್ನ ಪರಿಹಾರ ಪಡೆದುಕೊಳ್ಳಲು ಕಾಲ ಪರಿಮಿತಿಯ ಕಾನೂನು ಪ್ರತಿಬಂಧಿಸುತ್ತದೆ–

ಕಾರಣವೇನೆಂದರೆ ಅವನು ತನ್ನ ದಾವೆಯನ್ನು ಕಾನೂನು ಪರಿಮಿತಿ ಕಾನೂನಿನಲ್ಲಿ ಕಾಣಿಸಿದ ಅವಧಿಯಲ್ಲಿ ತಂದಿರುವುದಿಲ್ಲ.

೨. ಒಬ್ಬನು ತನ್ನ ಪರಿಹಾರ ಪಡೆದುಕೊಳ್ಳಲು ವಿಬಂಧದಿಂದ ವಿಫಲನಾಗುತ್ತಾನೆ. ಯಾಕೆಂದರೆ ಅವನು ತನ್ನ ಪ್ರಕರಣವನ್ನು ರುಜುವಾತುಪಡಿಸಲು ಕಾನೂನಿನಿಂದ ತಡೆಹಿಡಿಯಲಾಗುತ್ತದೆ.

## ಕಾಲ ಪರಿಮಿತಿ ಮತ್ತು ಮೌನ ಸಮ್ಮತಿ

೧. ಒಬ್ಬನು ತಪ್ಪು ಮಾಡಲು ತಾನೇ ಒಪ್ಪಿಗೆ ಕೊಟ್ಟು ನಂತರ ಆ ತಪ್ಪಿನಿಂದ ಆದ ಹಾನಿಗೆ ಪರಿಹಾರ ಪಡೆಯಲು ಕಾಲ ಪರಿಮಿತಿಯು ಅದನ್ನು ವಿಫಲಗೊಳಿಸುತ್ತದೆ. ಯಾಕೆಂದರೆ ಅವನ ದಾವೆಯು ಕಾನೂನಿನ ಹೊರಗೆ ಇರುತ್ತದೆ.

೨. ಒಬ್ಬನು ಮಾಡಿದ ತಪ್ಪಿಗಾಗಿ ಪರಿಹಾರ ಪಡೆದುಕೊಳ್ಳುವ ವಿಷಯದಲ್ಲಿ ಆತನ ಮೌನಸಮ್ಮತಿಯು ವಿಫಲಗೊಳಿಸುತ್ತದೆ. ಯಾಕೆಂದರೆ ಅವನು ಆ ತಪ್ಪು ಮಾಡಲು ತಾನೇ ಒಪ್ಪಿಗೆ ಕೊಟ್ಟಿರುತ್ತಾನೆ.

## ಕಾಲ ಪರಿಮಿತಿ ಮತ್ತು ಕರ್ತವ್ಯ ಉಪೇಕ್ಷೆ

೧. ಇವೆರಡಲ್ಲಿ ಒಂದು ಸಾಮಾನ್ಯ ಹೋಲಿಕೆ ಇರುತ್ತವೆ. ಒಂದೇ ಆಧಾರದ ಮೇಲೆ ಪರಿಹಾರವನ್ನು ನಿರಾಕರಿಸಲಾಗಿರುತ್ತದೆ. ಮತ್ತು ಅವಧಿ ಮುಗಿಯುವುದರೊಳಗಾಗಿ ಕ್ರಮ ಕೈಗೊಂಡಿಲ್ಲ.

೨. ಇದರಲ್ಲಿ ಈ ರೀತಿ ವಿಭಿನ್ನತೆ ಇದೆ– ಕಾಲ ಪರಿಮಿತಿಯಲ್ಲಿ ಕಾನೂನಿನಿಂದ ನಿರ್ಧರಿಸಲ್ಪಟ್ಟ ಅವಧಿಯಲ್ಲಿ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಹೇಳಲಾಗಿದೆ. ಕರ್ತವ್ಯ ಉಪೇಕ್ಷೆಯಲ್ಲಿ ಕಾಲಪರಿಮಿತಿಯನ್ನು ನ್ಯಾಯಾಲಯದಲ್ಲಿ ಮತ್ತು ಕಾನೂನಿನಲ್ಲಿ ಯಾವುದೇ ಅವಧಿಯನ್ನು ನಿರ್ಧರಿಸುವುದಿಲ್ಲ. ಆದ್ದರಿಂದ ಪರಿಹಾರವನ್ನು ನೀಡುವಾಗ 'ಅನುಚಿತ ವಿಳಂಬ' ಎಂಬ ತತ್ವದ ಮೇಲೆ ನಿರ್ಧರಿಸುತ್ತಾರೆ.

೩. ಭಾರತದಲ್ಲಿ ಉಪೇಕ್ಷೆಗೆ ಬಹಳಷ್ಟು ಅವಕಾಶವಿಲ್ಲ. ಯಾಕೆಂದರೆ ಕಾಲಪರಿಮಿತಿ ಅಧಿನಿಯಮವು ಬಹುತರ ಎಲ್ಲ ಕೃತಿಗಳಿಗೆ ಒಂದು ನಿರ್ದಿಷ್ಟ ಕಾಲ ಪರಿಮಿತಿಯನ್ನು ಗೊತ್ತುಪಡಿಸಿರುತ್ತದೆ. ಆದ್ದರಿಂದ ಒಬ್ಬನು ಒಂದು ದಾವೆಯನ್ನು ಮಾಡಲು ಕಾಲ ಪರಿಮಿತಿ ಕಾನೂನಿನಲ್ಲಿ ಗೊತ್ತುಪಡಿಸಿದ ಅವಧಿಯ ಮೊದಲನೆಯ ದಿನ ಇಲ್ಲವೆ ಕೊನೆಯ ದಿನ ಎಂಬುದು ನಿರೂಪಣೆಯ ವಿಷಯವಾಗಿರುವುದಿಲ್ಲ.

೪. ಉಪೇಕ್ಷೆಯ ಸಿದ್ಧಾಂತವು ಭಾರತದಲ್ಲಿ ಕೆಳಗಣ ಪ್ರಕರಣಗಳಲ್ಲಿ ಮಾತ್ರ ಅನ್ವಯಿಸುತ್ತದೆ.

(೧) ನ್ಯಾಯಾಲಯವು ದಯಪಾಲಿಸಲಿರುವ ಪರಿಹಾರವು ವಿವೇಚನಾತ್ಮಕವಾದುದು. ಹಾಗಿದ್ದಲ್ಲಿ

(i) ನಿರ್ದಿಷ್ಟ ಪರಿಹಾರ ಕೇಳಿದ ವರ್ಗದಲ್ಲಿ ಬರುವ ಪ್ರಕರಣಗಳು.

(ii) ಪರಿಹಾರ ಕೇಳುವ ವರ್ಗದಲ್ಲಿ ಬರುವ ಪ್ರಕರಣಗಳು.

೨. ಕಾಲ ಪರಿಮಿತಿಯ ಕಾನೂನು ಯಾವುದರಲ್ಲಿ ಅನ್ವಯವಾಗುವುದಿಲ್ಲವೋ

ಉದಾ: ವೈವಾಹಿಕ ವ್ಯಾಜ್ಯಗಳು.

ಬಿ ವಿಳಂಬವಾದರೆ ಅಪರಾಧವನ್ನು ಕ್ಷಮಿಸಿದಂತಾಗುವುದು.

### ೩. ಕಾಲ ಪರಿಮಿತಿಯ ಉದ್ದೇಶ

೧. ಒಂದು ಸುವ್ಯವಸ್ಥಿತವಾದ ಸಮುದಾಯಕ್ಕೆ ಎರಡು ಸಂಗತಿಗಳು ಅವಶ್ಯವಾಗಿರುತ್ತವೆ.

(i) ಅನ್ಯಾಯಕ್ಕೆ ಪರಿಹಾರವನ್ನು ಒದಗಿಸಲೇಬೇಕು.

(ii) ಶಾಂತಿಯನ್ನು ಕಾಪಾಡಲಿಕ್ಕೇಬೇಕು.

೨. ಸಮಾಜದಲ್ಲಿ ಶಾಂತತೆಯನ್ನು ಕಾಪಾಡಿಕೊಳ್ಳಲು ಆಸ್ತಿಯ ಹಕ್ಕು ಸೌಮ್ಯ ಮತ್ತು ಸಾಮಾನ್ಯವಾಗಿ ಹಕ್ಕಿನ ವಿಷಯಗಳು ನಿರಂತರ ಅನಿಶ್ಚಿತತೆ, ಸಂಶಯ ಮತ್ತು ಸಂದಿಗ್ಧವಾಗಿರತಕ್ಕದ್ದಲ್ಲ.

೩. ತತ್ಪರಿಣಾಮವಾಗಿ ತಮಗೆ ಯಾವನೊಬ್ಬನು ಕೃತಿಯಿಂದ ಅನ್ಯಾಯವಾಗಿದೆಯೆಂದು ಅವನು ಭಾವಿಸಿದರೆ ಆ ಅನ್ಯಾಯಕ್ಕೆ ಪರಿಹಾರ ಕೇಳಲು ಅವನಿಗೆ ಅನುಮತಿ ಕೊಟ್ಟರೆ ಅವನು ಅಂತಹ ಪರಿಹಾರವನ್ನು ನಿಶ್ಚಿತ ಅವಧಿಯಲ್ಲಿ ಕೇಳಲಿಕ್ಕೇಬೇಕೆಂದು ಒತ್ತಾಯಿಸತಕ್ಕದ್ದು. ಒಬ್ಬನು ತನಗಾದ ಅನ್ಯಾಯವನ್ನು ಒಂದು ನಿಶ್ಚಿತ ಅವಧಿಯನ್ನು ಮೀರಿ ಸಹಿಸಿಕೊಂಡಿದ್ದರೆ, ಅಂತಹ ಮನುಷ್ಯ ಪರಿಹಾರ ಕೇಳಿದಾಗ ಅದನ್ನು ನಿರಾಕರಿಸಿದರೆ ಅದು ಅನ್ಯಾಯವಾಗುವುದಿಲ್ಲ.

೪. ಕಾಲ ಪರಿಮಿತಿಯ ಕಾನೂನು ಈ ಮೂಲತತ್ತ್ವದ ಆಧಾರದ ಮೇಲೆ ಆಧರಿಸಿರುತ್ತದೆ.

೫. ಹೀಗೆ ಇದು ಆಧಾರಭೂತ ತತ್ತ್ವದ ಆಧಾರದ ಮೇಲೆ ನಿಂತುದರಿಂದ ಕಾಲ ಪರಿಮಿತಿಯ ಕಾನೂನಿನ ಕಾರ್ಯಾಚರಣೆಯಲ್ಲಿ ಸಂಪೂರ್ಣವಾಗಿರುತ್ತದೆ. ಮತ್ತು ಅದು ಯಾವುದೇ ಒಡಂಬಡಿಕೆ ಇಲ್ಲವೆ ಪಕ್ಷಗಾರನ ನಡತೆಗೆ ಒಳಪಟ್ಟಿರುವುದಿಲ್ಲ. ಹೇಳಬೇಕೆಂದರೆ ಇದು ಕೆಳಗಿನವುಗಳಿಗೆ ಒಳಪಟ್ಟಿರುವುದಿಲ್ಲ.

(೧) ಹಕ್ಕು ಬಿಟ್ಟುಕೊಡುವುದು.

(೨) ರೂಢಿ ಮತ್ತು ಸಂಪ್ರದಾಯ.

(೩) ವಿಬಂಧ.

(೪) ಕರಾರು ಅಧಿನಿಯಮದ ಕಲಮು ೨೮ ಮತ್ತು ೨೩ರ ಅನ್ವಯ ಪಕ್ಷಗಾರರು ಅವಧಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕಾಗಿ ಇಲ್ಲವೆ ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಮಾಡಿಕೊಂಡ ಒಪ್ಪಂದಗಳು ಸಂಬಂಧಿಸಿದಂತೆ.

೬. ಈ ವಿಷಯದಲ್ಲಿ ಕಾಲ ಪರಿಮಿತಿಯ ಕಾನೂನು ವರ್ಗಾವಣೆಯ ಲಿಖಿತ ಕಾನೂನಿನಿಂದ ವಿಭಿನ್ನವಾಗಿದೆ.

**೭. ಕಾಲ ಪರಿಮಿತಿ ಹಾಗೂ ರುಜುವಾತಿನ ಹೊಣೆ:**

(೧) ರುಜುವಾತು ಮಾಡುವ ಹೊಣೆಯು ವಾದಿಯ ಮೇಲೆ ಇರುತ್ತದೆ. ಕಾಲ ಪರಿಮಿತಿಯ ಅವಧಿಯಲ್ಲಿ ಅವನು ತನ್ನ ದಾವೆ ಮಾಡಿರುವನೆಂದು ರುಜುವಾತುಪಡಿಸಲಿಕ್ಕೇಬೇಕು.

**೩೭ ಬಾಂಬೆ ಎಸ್‌ಆರ್ ೪೭೧ ಎಐಯ್‌ಆರ್ ೧೯೩೫ ಸೆಪ್ಟೆಂಬರ್**

'ಅ'ನು ದಿನಾಂಕ ೮ ಜುಲೈ ೧೯೨೨ರಂದು ಒಂದು ನೋಂದಣಿ ಕಾಗದದ ಮೂಲಕ ೨೫ ವರ್ಷಗಳ ಕಾಲ 'ಬಿ'ಗೆ ಕೆಲವು ಹೊಲಗಳನ್ನು ಲಾವಣಿಯಾಗಿ ಕೊಡುತ್ತಾನೆ. ತದನಂತರ 'ಅ'ನು ಮೇಲೆ ಅನುಚಿತ ಪ್ರಭಾವ ಮೀರಿ ಲಾವಣಿ ಪತ್ರ ಬರೆಯಿಸಿಕೊಂಡಿದ್ದಾನೆಂದು ಆಪಾದಿಸಿ 'ಬ'ನ ಕಬ್ಜೆಯನ್ನು ತಪ್ಪಿಸುತ್ತಾನೆ. 'ಬ'ನು ಆ ಭೂಮಿಯ ತನ್ನ ಕಬ್ಜೆ ಮತ್ತು ಉಪಭೋಗಕ್ಕೆ 'ಅ'ನು ಯಾವುದೇ ರೀತಿಯಿಂದ ಅಡ್ಡಿ ಆತಂಕ ಹರಕತ್ತು ಮಾಡಬಾರದೆಂದು ತಾಕೀದಿ ದಾವೆಯನ್ನು ಮಾಡುತ್ತಾನೆ. 'ಬ'ನ ಪ್ರತಿವಾದವು

'ಅ'ನಿಗೆ ಲಾವಣಿಪತ್ರದ ಕಾನೂನುಬದ್ಧತೆಯನ್ನು ಪ್ರಶ್ನಿಸಲು ಅವಕಾಶ ಕೊಡದೆ ಇರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಪ್ರತಿವಾದಿಯ ವಾದವು ಏನೆಂದರೆ ಅದು ಕಾಲ ಪರಿಮಿತಿಯನ್ನು ಮೀರಿದ್ದು ಆಗಿರುತ್ತದೆ.

ಪ್ರಶ್ನೆ: ಪ್ರತಿವಾದಿಯು ಕಾಲ ಪರಿಮಿತಿಯ ಕಾನೂನಿಗೆ ಬದ್ಧನಾಗಿರುತ್ತಾನೆಯೆ?

ಉತ್ತರ: ಇಲ್ಲ. ಕಲಮು ೩ ವಾದಿಗೆ ಅನ್ವಯಿಸುತ್ತದೆ ಮತ್ತು ಪ್ರತಿವಾದಿಗೆ ಅನ್ವಯಿಸುವುದಿಲ್ಲ.

**೮. ಕಾಲ ಪರಿಮಿತಿಯ ವಾದ ಮತ್ತು ವ್ಯವಹರಣೆಗಳ ಹಂತಗಳು**

೧. ವ್ಯವಹರಣೆಯ ಯಾವುದೇ ಹಂತದಲ್ಲಿ ಕಾಲ ಪರಿಮಿತಿಯ ವಾದವನ್ನು ಎತ್ತಬಹುದು. ಅಂದರೆ ಎರಡನೆಯ ಮೇಲ್ಮನವಿಯಲ್ಲಿಯೂ ಸಹ ಎತ್ತಬಹುದು.

೨. ಇದನ್ನು ಮೇಲ್ಮನವಿಯಲ್ಲಿ ಮೊದಲನೆ ಸಲ ಎತ್ತಬಹುದು.

೩೮ ಮದ್ರಾಸ್ ೩೭೪,
೩೬ ಕಲ್ಕತ್ತ ೯೨೦,
೩೮ ಕಲ್ಕತ್ತಾ ೫೧೨,
೩೮ ಬಾಂಬೆ ೭೦೯ (೭೧೪)

೩. ಕೆಳಗಿನ ನ್ಯಾಯಾಲಯದಲ್ಲಿ ಇದನ್ನು ಬಿಟ್ಟುಬಿಟ್ಟಿದ್ದರೂ ಸಹ ಮೇಲ್ಮನವಿಯಲ್ಲಿ ಇದನ್ನು ಎತ್ತ ಬಹುದು.

೩ ಅಲಹಾಬಾದ್ ೮೪೬ (೮೪೮)

೪. ಕೆಳಗಿನ ನ್ಯಾಯಾಲಯದಲ್ಲಿ ಇದನ್ನು ಬಿಟ್ಟುಬಿಟ್ಟಿದ್ದರೂ ಪ್ರೈವಿ ಕೌನ್ಸಿಲ್ಲಿನ ಮುಂದೆ ಇದನ್ನು ಎತ್ತಬಹುದು.

೩೬ ಆಯ್‌ಎ. ೨೧೦

೫. ಇದು ಒಂದು ಪರಂತಕಕ್ಕೆ ಒಳಪಟ್ಟು ತೀರ್ಮಾನಿಸಲು ಕಾಗದದ ಮೇಲಣ ಲಿಖಿತ ಸಂಗತಿಗಳು ಸಾಕಷ್ಟು ಇಲ್ಲದಿರುವಾಗ ಮತ್ತು ಇದರಲ್ಲಿ ಸಂಗತಿಗಳು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕೆಂದಾಗ ಮೇಲ್ಮನವಿಯಲ್ಲಿ ಇದನ್ನು ಎತ್ತಿದಾಗ ನ್ಯಾಯಾಲಯವು ಇದಕ್ಕೆ ಅನುಮತಿ ಕೊಡುವುದಿಲ್ಲ.

೫೭ ಕಲ್ಕತ್ತ ೧೧೪

# II. ಭಾರತೀಯ ಕಾಲ ಪರಿಮಿತಿ ಕಾನೂನು

## ಇದರ ಹೊಂದಾಣಿಕೆ ಯೋಜನೆ
## ಭಾರತೀಯ ಶಾಸನಗಳಲ್ಲಿ ಕಾಲಾವಸಾನ ನಿರ್ವಹಣೆ

೧. ನಿಶ್ಚಿತವಾದ ಅವಧಿಯು ಗತಿಸಿಹೋಗುವುದರಿಂದ ಭಾರತೀಯ ಶಾಸನಗಳಲ್ಲಿ ಕೆಳಗಣ ನಾಲ್ಕು ಪರಿಣಾಮಗಳು ಉದ್ಭವಿಸುತ್ತವೆ.

೧. ಒಬ್ಬನಿಗೆ ಆದ ಅನ್ಯಾಯಕ್ಕಾಗಿ ಪರಿಹಾರ ಪಡೆದುಕೊಳ್ಳಲು ಹಕ್ಕುಳ್ಳ ವ್ಯಕ್ತಿಗೆ ಬಹುವಿಧ ಹಕ್ಕುಗಳುಂಟಾಗುವವು– ಕಾಲ ಪರಿಮಿತಿ ಕಾನೂನಿನ ಕಲಮು ೩.

೨. ಅದು ಅವನ ಪರಿಹಾರಕ್ಕೆ ಬಾಧಕವಾಗುವುದಲ್ಲದೆ ಅವನ ಹಕ್ಕನ್ನು ಕಲಂ ೨೮ ಉಪಶಮನ ಗೊಳಿಸುತ್ತದೆ– ಕಾಲ ಪರಿಮಿತಿ ಕಾನೂನು ಕಲಮು ೨೮.

೩. ಬೆಳಕು, ಗಾಳಿ, ದಾರಿ, ನೀರಿನ ಮೂಲಾಧಾರಗಳು, ನೀರಿನ ಬಳಕೆ ಇಲ್ಲವೇ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಉಪಯೋಗ ಮಾಡಿದ ವ್ಯಕ್ತಿಗೆ ಅನುಭೋಗದ ಹಕ್ಕುಗಳನ್ನು ಇದು ದೃಢೀಕರಿಸುತ್ತದೆ– ಕಾಲ ಪರಿಮಿತಿ ಕಲಮು ೨೬.

೪. ಇದು ಅನುಭೋಗದ ಹಕ್ಕುಗಳನ್ನು ಉಪಶಮನಗೊಳಿಸುತ್ತದೆ.

–೧೮೮೨ರ ೫ನೆಯ ಮುಧಿನಿಯಮದ ಕಲಮು ೪೭

(೨), (೩), (೪) ಇವು ಚಿರಭೋಗದ ಹಕ್ಕಿನ ಕಾನೂನಿನ ಕೆಳಗೆ ಬರುತ್ತವೆ. (೧) ಮಾತ್ರ ಕಾಲ ಪರಿಮಿತಿಯ ಕಾನೂನಿನ ಕೆಳಗೆ ಬರುತ್ತದೆ. ಕಾಲ ಪರಿಮಿತಿಯ ಕಾನೂನು ಅನೇಕ ಕಾನೂನುಗಳ ಸಮ್ಮಿಶ್ರ ಸಮೂಹಗಳನ್ನು ಪರಿಶೀಲಿಸುತ್ತದೆ ಮತ್ತು ಇವೆರಡನ್ನೂ ಬೇರೆ ಬೇರೆಯಾಗಿ ಅಭ್ಯಸಿಸಬೇಕು.

# III. ಭಾರತೀಯ ಕಾಲಪರಿಮಿತಿ ಕಾನೂನು

## ಇದರ ಅನ್ವಯಿಕೆ

### ೧. ರಾಜ್ಯ ಭೂಪ್ರದೇಶಕ್ಕೆ ಸಂಬಂಧಿಸಿದಂತೆ

೧. ಈ ಅಧಿನಿಯಮವು ಇಡೀ ಬ್ರಿಟಿಷ್ ಇಂಡಿಯಾಕ್ಕೆ ಅನ್ವಯಿಸುತ್ತದೆ– ಕಲಮು ೧ (೨)

೨. ಈ ಅಧಿನಿಯಮವು ಬ್ರಿಟಿಷ್ ಇಂಡಿಯಾದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯಗಳಲ್ಲಿ ಪ್ರತಿಯೊಂದು ದಾವೆ ಹೂಡಲು, ಮೇಲ್ಮನವಿ ಸಲ್ಲಿಸಲು, ಅರ್ಜಿಯನ್ನು ಮಾಡಲು ಅನ್ವಯಿಸುತ್ತದೆ.

೩. ದಾವೆಯ ಕಾರಣ ಎಲ್ಲಿ ಉಂಟಾಯಿತು ಅನ್ನುವುದು ಮುಖ್ಯವಲ್ಲ. ಅದು ಬ್ರಿಟಿಷ್ ಇಂಡಿಯಾದಲ್ಲಿ ಇಲ್ಲವೆ ಬ್ರಿಟಿಷ್ ಇಂಡಿಯಾದ ಹೊರಗಡೆ ಎಲ್ಲಿ ವ್ಯವಹಾರವು ನಡೆಯಿತೆಂಬ ವಿಷಯ ಮುಖ್ಯವಲ್ಲ. ಅದು ಬ್ರಿಟಿಷ್ ಇಂಡಿಯಾ ಇಲ್ಲವೇ ಬ್ರಿಟಿಷ್ ಇಂಡಿಯಾದ ಹೊರಗಡೆ ದಾವೆಯನ್ನು ಹೂಡುವುದಾಗಲಿ ಅಥವಾ ಮೇಲ್ಮನವಿ ಸಲ್ಲಿಸುವುದಾಗಲಿ ಇಲ್ಲವೇ ಬ್ರಿಟಿಷ್ ನ್ಯಾಯಾಲಯಗಳಲ್ಲಿ ಅರ್ಜಿ ಮಾಡಿದರೆ, ಅಂಥವುಗಳಿಗೆ ಭಾರತೀಯ ಕಾಲ ಪರಿಮಿತಿ ಅನ್ವಯಿಸುತ್ತದೆ. ಪರದೇಶದ ಕಾಲ ಪರಿಮಿತಿ ಕಾನೂನು ಅನ್ವಯಿಸುವುದಿಲ್ಲ.

೪. ಈ ನಿಯಮ ಒಂದು ಅಪವಾದವಿದೆ. ಅದು ಕಲಮು ೧೧(೨)ರಲ್ಲಿ ಅಧಿನಿಯಮಿತಗೊಳಿಸಲ್ಪಟ್ಟಿದ್ದು, ಅದು ಹೇಳುವುದೇನೆಂದರೆ, ಪರದೇಶದಲ್ಲಿ ಮಾಡಿಕೊಂಡ ಒಪ್ಪಂದಗಳನ್ನು ಕುರಿತು ಬ್ರಿಟಿಷ್ ಇಂಡಿಯಾದಲ್ಲಿ ದಾವೆ ಮಾಡಿದ್ದರೆ, ಆಗ ಪರದೇಶದ ಕಾಲ ಪರಿಮಿತಿಯ ನಿಯಮಗಳ ಸಂರಕ್ಷಣೆಗೆ ಬರುತ್ತದೆ. ಈ ಒಪ್ಪಂದ ಮಾಡಿಕೊಂಡ ಪಕ್ಷಗಾರರು ಈ ನಿರ್ದಿಷ್ಟಪಡಿಸಿದ ನಿಯಮಗಳ ಪ್ರಕಾರ ಅಂಥ ಪರದೇಶದಲ್ಲಿ ಖಾಯಂ ಆಗಿ ವಾಸವಾಗಿದ್ದರೆ ಈ ನಿಯಮವು ಉಪಶಮನಗೊಳ್ಳುತ್ತದೆ.

### ೨. ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ

೧) ಮಧ್ಯಸ್ಥಿಕೆಯ ವ್ಯವಹರಣೆಗಳು:

ಕಾಲಪರಿಮಿತಿಯ ಕಾನೂನು ಕೇವಲ ದಾವೆಗಳಿಗೆ, ಮೇಲ್ಮನವಿಗಳಿಗೆ ಮತ್ತು ನ್ಯಾಯಾಲಯಗಳಿಗೆ ಸಲ್ಲಿಸಿದ ಅರ್ಜಿಗಳಿಗೆ ಮಾತ್ರ ಅನ್ವಯಿಸುತ್ತದೆಂಬ ಕಾರಣಕ್ಕಾಗಿ ಕಾಲ ಪರಿಮಿತಿಯ ಕಾನೂನು ಮಧ್ಯಸ್ಥಗಾರನ ವ್ಯವಹರಣೆಗಳಿಗೆ ನ್ಯಾಯಾಲಯವು ಅಹುದೋ? ಇಲ್ಲವೇ ಅಲ್ಲವೋ ಎನ್ನುವ ಒಂದು ಸಂಶಯದ ಕಾಲ ಇತ್ತು. ಪಕ್ಷಗಾರರು ತಮ್ಮ ವಿವಾದವನ್ನು ಮಧ್ಯಸ್ಥಗಾರನ ಮುಂದೆ ತಂದಾಗ ಆ ಮಧ್ಯಸ್ಥಗಾರನು ಜಾರಿಯಲ್ಲಿದ್ದ ಕಾನೂನಿನ ಪ್ರಕಾರ ನ್ಯಾಯ ನಿರ್ಣಯಿಸುತ್ತಾನೆ. ಅವನು ಕಾಲ ಪರಿಮಿತಿಯ ಕಾನೂನಿನ ಅನ್ವಯ ಹಾಗೂ ಅದರ ಪರಿಣಾಮ ಪಕ್ಷಗಾರರು ತಮ್ಮ ಒಪ್ಪಂದದಲ್ಲಿ ಕಾಲ ಪರಿಮಿತಿಯನ್ನು ಹೊರತುಪಡಿಸಿದ್ದರೆ, ಮಾತ್ರ ಮಧ್ಯಸ್ಥಗಾರನು ಅದನ್ನು ಬಿಡಬಹುದಾದ ಕಾಲ ಪರಿಮಿತಿಯ ಪ್ರತಿಯೊಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಈಗ ಈ ಸಂಶಯವನ್ನು ಪ್ರೈವಿ ಕೌನ್ಸಿಲ್ ನಿರ್ಣಯದಿಂದ ನಿವಾರಿಸಲಾಗಿದೆ.

(೧೯೨೯) ೫೬ I.A. ೧೨೮.

ಪ್ರಶ್ನೆ: ಪಕ್ಷಗಾರರು ತಮ್ಮ ಖಾಸಗಿ ಒಪ್ಪಂದಗಳ ಮೂಲಕ ಕಾಲ ಪರಿಮಿತಿ ಕಾನೂನನ್ನು ಪರಿವರ್ತನೆ ಗೊಳಿಸುವ ಹಂತಕ್ಕೆ ಈ ನಿರ್ಣಯ ಹೋಗಿದೆ.

ಇದು ಒಪ್ಪಂದ ಕಾನೂನಿನ ಕಲಮು ೨೮ ಮತ್ತು ೨೩ ಇವುಗಳ ಉಪಬಂಧಗಳನ್ನು ಕಡೆಗಣಿಸಿದಂತೆ ಕಾಣುತ್ತದೆ.

(೨) ಕಂಪನಿಯ ಕಾನೂನಿನನ್ವಯ ವ್ಯವಹರಣೆಗಳು

ಕಂಪನಿಯು ವಿಸರ್ಜನೆಯಾಗುವಾಗ ಆ ಕಂಪನಿಯ ವ್ಯವಹಾರಗಳನ್ನು ಮುಂದುವರೆಯಿಸಿಕೊಂಡು ಹೋಗಲು ಲಿಕ್ವಿಡೇಟರರನ್ನು ನೇಮಿಸುತ್ತಾರೆ. ಕಂಪನಿ ಕಾನೂನು ಕಲಮು ೧೮೬ ಇದರ ಅನ್ವಯ ಲಿಕ್ವಿಡೇಟರನು ಕೋರ್ಟಿಗೆ ಅರ್ಜಿ ಕೊಟ್ಟು ಕಂಪನಿಗೆ ಕೊಡಬೇಕಾದ ಬಾಕಿ ಹಣವನ್ನು ತನಗೆ ಕೊಡಬೇಕೆಂದು ಕೋರ್ಟಿನಿಂದ ಆದೇಶ ಪಡೆಯುತ್ತಾನೆ. ಸಾಮಾನ್ಯವಾಗಿ, ಇದು ಒಂದು ದಾವೆಯಾಗಬೇಕು. ಆದರೆ ಅನೇಕ ದಾವೆಗಳನ್ನು ತಪ್ಪಿಸುವುದರ ಸಲುವಾಗಿ ಈ ವಿಶೇಷ ವ್ಯವಹರಣೆಯು ಕಾನೂನಿನಿಂದ ಅನುಮತಿಸಲ್ಪಟ್ಟಿದೆ.

ಇಂತಹ ವ್ಯವಹರಣೆಗಳಿಗೆ ಕಾಲ ಪರಿಮಿತಿ ಕಾನೂನು ಅನ್ವಯಿಸುತ್ತದೆಯೇ ಎನ್ನುವ ಪ್ರಶ್ನೆಯು ಕಂಪನಿ ಕಾನೂನಿನ ಕಲಮು ೧೮೬ರ ಅನ್ವಯ 'ಬಾಕಿ ಹಣ' ಅಂದರೆ ಅದು ಬಾಕಿ ಮತ್ತು ಕಾನೂನು ಪ್ರಕಾರ ವಸೂಲು ಮಾಡಲು ಬರುವಂತಹದ್ದು ಇರಬೇಕು. ಅಂದರೆ ಅವಧಿ ಮೀರಿದ ಹಣವಲ್ಲವೆಂದು ನಿರ್ಣಯಿಸಿದ್ದಾರೆ. ಇದರ ಅರ್ಥವು ಕಾಲ ಪರಿಮಿತಿ ಕಾನೂನು ಇಂಥ ವ್ಯವಹರಣೆಗಳಿಗೆ ಅನ್ವಯಿಸುತ್ತದೆ. ೬೦ ಆಯ್.ಎ. ೧೩(೨೩)

(೩) ಆದಾಯ ತೆರಿಗೆ ಅಧಿನಿಯಮ ಅನ್ವಯ ವ್ಯವಹರಣೆಗಳಿಗೆ ಭಾರತದಲ್ಲಿ ಸಿವಿಲ್ ನ್ಯಾಯಾಲಯಗಳಿಗೆ ಸಾರ್ವಜನಿಕ ಕಂದಾಯ ವಿಷಯಗಳ ಮೇಲೆ ನ್ಯಾಯಾಧಿಕಾರ ಇರುವುದಿಲ್ಲ. ನಿರ್ದಿಷ್ಟ ಕಂದಾಯ ಅಧಿನಿಯಮದಲ್ಲಿ ಅವರಿಗೆ ಅಂಥ ನ್ಯಾಯಾಧಿಕಾರವನ್ನು ವಹಿಸಿಕೊಟ್ಟಾಗ ಮಾತ್ರ ಅವರಿಗೆ ಅಂಥ ನ್ಯಾಯಾಧಿಕಾರವು ಇರುತ್ತದೆ. ಉದಾಹರಣೆಗಾಗಿ, ಭಾರತೀಯ ಆದಾಯ ತೆರಿಗೆ ಅಧಿನಿಯಮ ೧೯೨೨ ಕಲಮು ೬೬(೩) ಇದರಲ್ಲಿ ಒಂದು ಉಪಬಂಧ ಸಿಗಬಹುದಾಗಿದೆ. ಈ ಕಲಮಿನ ಅನ್ವಯ ಆದಾಯ ತೆರಿಗೆ ಅಧಿಕಾರಿಯು ಆದಾಯ ತೆರಿಗೆಯನ್ನು ನಿರ್ಧರಿಸುತ್ತಾನೆ. ಈ ಆದೇಶದಿಂದ ಬಾಧಿತನಾದ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ತನ್ನ ಪ್ರಕರಣವನ್ನು ಒಯ್ಯುತ್ತಾನೆ. ಮತ್ತು ಅದನ್ನು ಸ್ವೀಕರಿಸಲು ನಿರಾಕರಿಸಿದಾಗ ಅವನು ಕಮೀಷನರ್ ಅವರಿಗೆ ತಮ್ಮ ಪ್ರಕರಣವನ್ನು ಉಚ್ಚನ್ಯಾಯಾಲಯಕ್ಕೆ ನಿವೇದನೆ ಮಾಡಬೇಕು ಮತ್ತು ಉಚ್ಚ ನ್ಯಾಯಲಯಕ್ಕೆ ಒಪ್ಪಿಸಬೇಕೆಂದು ಒತ್ತಾಯಿಸಬೇಕು. ಇಂಥ ಅರ್ಜಿ ಕೊಡಲಿಕ್ಕೆ ಕಾಲ ಪರಿಮಿತಿಯು ಇರುತ್ತದೆ. ಆದರೆ ಕಾಲ ಪರಿಮಿತಿ ಕಾನೂನು ಇದಕ್ಕೆ ಅನ್ವಯಿಸುವುದಿಲ್ಲ. ಇದಕ್ಕೆ ಕಾಲ ಮಿತಿ ಆದಾಯ ತೆರಿಗೆ ಅಧಿನಿಯಮದಲ್ಲಿಯೇ ಕಾಲ ಪರಿಮಿತಿಯನ್ನು ವಿಧಿಸಲಾಗಿದೆ. ಆದರೆ ಕಾಲ ಪರಿಮಿತಿ ಕಾನೂನಿನಲ್ಲಿ ಇರುವುದಿಲ್ಲ.

(೪) ಕೆಲಸಗಾರರ ನಷ್ಟಪರಿಹಾರ ಕಮೀಷನರ್ ಅವರ ಮುಂದಿನ ವ್ಯವಹರಣೆಗಳು:

ಕೆಲಸಗಾರರ ನಷ್ಟ ಪರಿಹಾರವನ್ನು ಅಧಿನಿಯಮ ೧೯೨೩ ಕಲ್ಪಿಸುತ್ತದೆ. ಅಧಿನಿಯಮದಂತೆ ಕೆಲಸಗಾರರಿಗೆ ಅವರ ಕೆಲಸದ ವೇಳೆಯಲ್ಲಿ ಗಾಯಗಳಾದರೆ ಅವರಿಗೆ ಪರಿಹಾರ ಕೊಡಬೇಕೆಂದು ಈ ಉಪಬಂಧದಲ್ಲಿ ಹೇಳುತ್ತದೆ. ಈ ಪ್ರಕರಣಗಳ ವಿಚಾರಣೆಯನ್ನು ಕಮೀಷನರ್ ಅವರು ಮಾಡುತ್ತಾರೆ. ಕಮೀಷನರ್ ಅವರು ವಿಶೇಷ ನ್ಯಾಯಾಧಿಕರಣವಾಗಿರುತ್ತಾರೆ. ಆದರೆ ಅದು ನ್ಯಾಯಾಲಯವಲ್ಲ ಮತ್ತು ಅದರಿಂದ ಇದಕ್ಕೆ ಕಾಲ ಪರಿಮಿತಿ ಕಾನೂನು ಇವರಿಗೆ ಅನ್ವಯಿಸುವುದಿಲ್ಲ.

ಹೀಗೆಂದರೆ ಯಾವುದೇ ಒಬ್ಬನಿಗೆ ಆದ ನೋವು, ಅನ್ಯಾಯದ ಪರಿಹಾರಕ್ಕಾಗಿ ಅವನ ಮುಂದೆ ಯಾವುದೇ ವೇಳೆಯಲ್ಲಿ ಮಾಡಬೇಕೆಂದು ಆಗುವುದಿಲ್ಲ. ಅಧಿನಿಯಮದಲ್ಲಿ ಕಾಲ ಪರಿಮಿತಿಯ ಉಪಬಂಧವನ್ನು ಮಾಡಿರದಿದ್ದರೆ ಹಾಗೆ ಮಾಡಬಹುದಾಗಿತ್ತು. ಈ ಅಧಿನಿಯಮವು ಆರು ತಿಂಗಳ ಒಳಗಾಗಿ ಎಂದು ಕಾಲ ಪರಿಮಿತಿಯನ್ನು ಹಾಕಿದೆ. ದಾವೆಗಳನ್ನು ಈ ಅವಧಿಯೊಳಗೆ ದಾಖಲು ಮಾಡತಕ್ಕದ್ದು.

(೫) ನೋಂದಣಿ ಕಾಯ್ದೆಯಡಿಯಲ್ಲಿ ವ್ಯವಹರಣೆ.

(i) ದಸ್ತಾವೇಜುಗಳನ್ನು ಹಾಜರುಪಡಿಸುವುದು– ೪ ತಿಂಗಳು.

(ii) ದಸ್ತಾವೇಜುಗಳ ಸ್ವೀಕರಣೆಗೆ ಪಕ್ಷಕಾರರ ಹಾಜರಾತಿಗೆ ೪ ತಿಂಗಳು.

### ೩. ಅಪರಾಧಿಕ (ಕ್ರಿಮಿನಲ್) ವ್ಯವಹರಣೆಗಳು

೧. ಅಪರಾಧಿಕ ವ್ಯವಹರಣೆಗಳಲ್ಲಿ ಸಾಮಾನ್ಯವಾಗಿ ಸಾರ್ವಭೌಮ ಸರಕಾರದ ಹೆಸರಿನಿಂದಲೇ ಅಭಿಯೋಜನೆಯನ್ನು ಹೂಡುತ್ತಾರೆ. ಯಾಕೆಂದರೆ ಅವು ಸರಕಾರದ ಶಾಂತತೆಯ ಉಲ್ಲಂಘನೆಯನ್ನು ಒಳಗೊಂಡಿರುತ್ತದೆ.

೨. ಸಂವಿಧಾನಾತ್ಮಕ ಕಾನೂನಿನ ಸೂತ್ರವು ಹೇಳುವುದೇನೆಂದರೆ ಕಾಲ ಗತಿಸುವುದರಿಂದ ಸಾರ್ವಭೌಮ ಸರಕಾರದ ಹಕ್ಕುಗಳಿಗೆ ಧಕ್ಕೆ ಉಂಟಾಗುವುದಿಲ್ಲ.

೩. ಹೀಗಿರುವುದರಿಂದ ಕಾಲ ಪರಿಮಿತಿಯ ಕಾನೂನು ಅಪರಾಧಿಕ ಅಭಿಯೋಜನೆಗಳಿಗೆ ಅನ್ವಯಿಸುವುದಿಲ್ಲ.

೪. ಇಲ್ಲಿ ಎರಡು ಸಂಗತಿಗಳನ್ನು ಟಿಪ್ಪಣಿ ಮಾಡಬಹುದು.

(೧) ಆಯಾ ಅಧಿನಿಯಮಗಳ ಅನ್ವಯ ಅಭಿಯೋಜನೆಯನ್ನು ಹೂಡುವ ಕಾಲಪರಿಮಿತಿಯ ಅವಧಿಯನ್ನು ಗೊತ್ತುಪಡಿಸಿದ ಅನೇಕ ಅಧಿನಿಯಮಗಳು ಇರುತ್ತವೆ. ಉದಾ: ಕೇಂದ್ರ ಸರಕಾರದ ಆಧಿನಿಯಮ: ಕಲಮು ೧೨೮, ಅಫೀಮು ಅಧಿನಿಯಮ, ಸೀಮಾ ಸುಂಕಗಳ ಅಧಿನಿಯಮ, ಉಪ್ಪು ಮತ್ತು ಅಬಕಾರಿಗಳ ಅಧಿನಿಯಮಗಳು, ಮತ್ತು ಪೊಲೀಸ್ ಅಧಿನಿಯಮ.

(೨) ಅಪರಾಧಿಕ ಅಭಿಯೋಜನೆಗಳಿಗೆ ಕಾಲ ಪರಿಮಿತಿ ಅಧಿನಿಯಮದ ಅನ್ವಯ ಯಾವುದೇ ಕಾಲ ಪರಿಮಿತಿಯ ಉಪಬಂಧವನ್ನು ಗೊತ್ತುಪಡಿಸಿರದಿದ್ದರೂ, ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಮೇಲ್ಮನವಿಗಳನ್ನು ಸಲ್ಲಿಸಲು ಉಪಬಂಧ ಕಲ್ಪಿಸಲಾಗಿದೆ.

### ೪. ಸಿವಿಲ್ ವ್ಯವಹರಣೆಗಳು

(೧) ಬೇರೆ ಬೇರೆ ನಮೂನೆಯ ದಾವೆಗಳ ವಿಷಯ ಕುರಿತು ಬೇರೆ ಬೇರೆ ಅನುಚ್ಛೇದಗಳಲ್ಲಿ ನಿರ್ದಿಷ್ಟಪಡಿಸಲಾಗಿದೆ. ಅಲ್ಲಿ ಒಂದು ಸಾಮಾನ್ಯ ಶೇಷ ಅನುಚ್ಛೇದ ನಂ. ೧೨೦ ಇದು ಯಾವ ದಾವೆಯನ್ನು ಕುರಿತು ಬೇರೆ ಕಡೆ ಕಾಲ ಪರಿಮಿತಿಯನ್ನು ಪರಿಶಿಷ್ಟದಲ್ಲಿ ಕಲ್ಪಿಸಿರುವುದಿಲ್ಲವೋ ಅಂಥ ಯಾವುದೇ ದಾವೆಗೂ ಇದು ಅನ್ವಯಿಸುತ್ತದೆ. ಆದ್ದರಿಂದ ಈ ಅಧಿನಿಯಮವು ಎಲ್ಲ ದಾವೆಗಳಿಗೂ ಅನ್ವಯಿಸುತ್ತದೆ.

(೨) ಮೇಲ್ಮನವಿಗಳ ಬಗ್ಗೆ ಭಾರತದಲ್ಲಿ ಎರಡು ನ್ಯಾಯಾಲಯಗಳಿಗೆ ಮೇಲ್ಮನವಿಗಳನ್ನು ಸಲ್ಲಿಸಬಹುದಾಗಿದೆ (i) ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಮತ್ತು (ii) ಉಚ್ಚ ನ್ಯಾಯಾಲಯ. ಕಾಲ

ಪರಿಮಿತಿ ಅಧಿನಿಯಮವು ಇವೆರಡೂ ನ್ಯಾಯಾಲಯಗಳಿಗೆ ಮೇಲ್ಮನವಿಗಾಗಿ ಕಾಲ ಪರಿಮಿತಿಯನ್ನು ನಿರ್ದಿಷ್ಟಪಡಿಸುತ್ತದೆ. ಆದ್ದರಿಂದ ಎಲ್ಲ ಮೇಲ್ಮನವಿಗಳನ್ನು ಕಾಲ ಪರಿಮಿತಿ ಕಾನೂನು ಅನ್ವಯಿಸುತ್ತದೆಂದು ಹೇಳಬಹುದು.

(೩) ಅರ್ಜಿಗಳನ್ನು ಕುರಿತು ಬೇರೆ ಬೇರೆ ನಮೂನೆಯ ಅರ್ಜಿಗಳ ಬಗ್ಗೆ ಪರಿಶಿಷ್ಟದ ಬೇರೆ ಬೇರೆ ಅನುಚ್ಛೇದಗಳಲ್ಲಿ ಹೇಳಲಾಗಿದೆ. ದಾವೆಗಳನ್ನು ಕುರಿತು ಅನುಚ್ಛೇದಗಳಿರುವಂತೆ ಅಲ್ಲಿ ಅನುಚ್ಛೇದ ೧೮೧ ಇದ್ದು, ಇದರ ಅನ್ವಯ ಅರ್ಜಿ ಕೊಡಲು ಪರಿಶಿಷ್ಟದಲ್ಲಿಯೇ ಆಗಲಿ, ಇಲ್ಲವೇ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಮು ೪೮ರಲ್ಲಿಯೇ ಆಗಲಿ, ಯಾವುದೇ ಕಾಲಪರಿಮಿತಿಯನ್ನು ನಿರ್ಧರಿಸಿಲ್ಲ. ಆದರೆ ಬಹುತೇಕ ಎಲ್ಲ ಉಚ್ಚನ್ಯಾಯಾಲಯಗಳು ಈ ಅಧಿನಿಯಮವನ್ನು ಜಾರಿಗೊಳಿಸುವುದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಅನ್ವಯ ತಿರಸ್ಕರಿಸಿವೆ. ಹೀಗೆ ಇರುವುದರಿಂದ ಎಲ್ಲ ಅರ್ಜಿಗಳಿಗೆ ಕಾಲ ಪರಿಮಿತಿ ಅಧಿನಿಯಮ ಅನ್ವಯಿಸುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಉದಾಹರಣೆಗೆ:

(೧) ಒಂದು ಮೃತ್ಯುಪತ್ರದ ಪ್ರಮಾಣಿತ ಪ್ರತಿ (ಪ್ರೊಬೇಟ್) ಮರಣಶಾಸನದ ಪ್ರಮಾಣಿತ ಪ್ರತಿ. ಆಸ್ತಿಯ ಆಡಳಿತ ನಡೆಯಿಸುವುದಕ್ಕಾಗಿ ಉತ್ತರಾಧಿಕಾರ ಪತ್ರಕ್ಕಾಗಿ ಅರ್ಜಿಗಳು.

(೨) ಉಚ್ಚ ನ್ಯಾಯಾಲಯದ ನಿಯಮಗಳನ್ವಯ ಮಾಡುವ ಅರ್ಜಿಗಳು.

೩೨ ಬಾಂಬೆ ೧
೪೮ ಕಲ್ಕತ್ತ ೮೧೭
೪೬ ಕಲ್ಕತ್ತ ೨೪೯

(೩) ಸ್ಥಾನಿಕ ಇಲ್ಲವೆ ವಿಶೇಷ ಅಧಿನಿಯಮಗಳ ಅನ್ವಯ ಅಂತಹ ಅಧಿನಿಯಮವು ವಿಶೇಷವಾಗಿ ಅದರ ಬಗ್ಗೆ ಉಪಬಂಧ ಕಲ್ಪಿಸದಿದ್ದರೆ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಈ ವಿಷಯ ಕುರಿತು ಏನೂ ಹೇಳಿಲ್ಲ.

**ಜನರನ್ನು ಕುರಿತು**

(೧) ಸಾಮಾನ್ಯ ನಿಯಮವೇನೆಂದರೆ ಕಾಲ ಪರಿಮಿತಿಯ ವಿಶೇಷ ಉದ್ದೇಶವೇನೆಂದರೆ ಅದು ಪ್ರತಿಯೊಬ್ಬ ವಾದಿಗೂ ಅನ್ವಯಿಸುತ್ತದೆ.

(೨) ಪ್ರಾರಂಭದಲ್ಲಿ ಸಾರ್ವಭೌಮ ಸರಕಾರವು ವಾದಿ ಅಂಥ ಒಂದು ದಾವೆ ಮಾಡಿದಾಗ ಅದಕ್ಕೆ ಕಾಲಪರಿಮಿತಿಯ ಕಾನೂನು ಅನ್ವಯಿಸುತ್ತಿರಲಿಲ್ಲ. ಯಾಕೆಂದರೆ ಕಾಲ ಗತಿಸುವುದು ಆ ಸರಕಾರದ ಮೇಲೆ ಯಾವ ಪರಿಣಾಮವನ್ನುಂಟುಮಾಡಲಿಲ್ಲ. ಸಂವಿಧಾನದ ಈ ಸೂತ್ರವು ಅಪರಾಧಿಕ ಅಭಿಯೋಜನೆಯನ್ನು ಕುರಿತು ಹೇಳುತ್ತದೆ. ಆದರೂ, ದಿವಾಣಿ ವ್ಯವಹರಣೆಗಳು ಸರಕಾರದಿಂದ ಮಾಡಿದವುಗಳಾಗಿರುವುದರಿಂದ ನಕಾರಾತ್ಮಕವಾಗಿ ನಿರ್ಣಯಿಸಲ್ಪಡುತ್ತವೆ. ಸರಕಾರದಿಂದ ಮಾಡಲಾಗುವ ವ್ಯವಹರಣೆಗಳಿಗೆ ಕಾಲ ಪರಿಮಿತಿ ಅಧಿನಿಯಮದ ಅನುಚ್ಛೇದ ೧೪೯ ಅನ್ವಯಿಸುತ್ತದೆ. ಇದು ಸರಕಾರ ತರುವ ಎಲ್ಲ ರೀತಿಯ ದಾವೆಗಳಿಗೂ ಅನ್ವಯಿಸುತ್ತದೆ ಮತ್ತು ೬೦ ವರ್ಷಗಳನ್ನು ಕಾಲ ಪರಿಮಿತಿಯೆಂದು ನಿರ್ಧರಿಸಲಾಗಿದೆ. ಸರಕಾರದ ವಿರುದ್ಧ ದಾವೆಗಳನ್ನು ನಿರ್ದಿಷ್ಟಪಡಿಸಿದ ಸಾಮಾನ್ಯ ಕಾಲ ಪರಿಮಿತಿಯಲ್ಲಿ ಮಾಡಲಿಕ್ಕೇಬೇಕು.

೧೫ ಮದ್ರಾಸ್ ೩೧೫

ಅದರಂತೆ ಸರಕಾರದ ವಿರುದ್ಧ ಪರಿಹಾರ ಕೇಳಿ ಖಾಸಗಿ ವ್ಯಕ್ತಿಗಳು ಮಾಡುವ ದಾವೆಗಳು ಸಹ ಸಾಮಾನ್ಯ ಕಾಲ ಪರಿಮಿತಿಗೆ ಕಾಲಪರಿಮಿತಿ ಅಧಿನಿಯಮದ ನಿರ್ಧಾರಕ್ಕೆ ಒಳಪಡುತ್ತವೆ. ಇದು ಯಾವಾಗಲೂ ನಿಯಮವಾಗಿರುತ್ತದೆ. ಆದರೆ ಸರಕಾರವು ಒಂದು ದಾವೆ ಮಾಡಲು ನಿರ್ದಿಷ್ಟ ಕಾಲ ಪರಿಮಿತಿಯನ್ನು ಗೊತ್ತುಪಡಿಸಿರುವುದಿಲ್ಲ. ಇದನ್ನು ಈಗ ವ್ಯತ್ಯಾಸಗೊಳಿಸಲಾಗಿದೆ. ಆದ್ದರಿಂದ ನಿಯಮದ ಪ್ರಕಾರ ಕಾಲಪರಿಮಿತಿ ಅಧಿನಿಯಮವು ಎಲ್ಲ ವ್ಯಕ್ತಿಗಳಿಗೆ, ಅಂದರೆ ಅವರು ಖಾಸಗಿ ವ್ಯಕ್ತಿಗಳಾಗಲಿ ಇಲ್ಲವೆ ಸರಕಾರದ ನಿಗಮಗಳಿರಲಿ, ಈ ಕಾಲ ಪರಿಮಿತಿಯ ಕಾನೂನು ಪ್ರತಿಯೊಬ್ಬ ಪ್ರತಿವಾದಿಗೆ ಹಾಗೂ ವಾದಿಗೆ ಅನ್ವಯಿಸುತ್ತದೆ. ಈ ವಾದಿಯು ಖಾಸಗಿ ವ್ಯಕ್ತಿಯಾಗಿರಲಿ ಇಲ್ಲವೇ ಸರಕಾರವೇ ಆಗಿರಲಿ ಕಾಲಪರಿಮಿತಿಯ ವಾದವು ಪ್ರತಿಯೊಬ್ಬ ಪ್ರತಿವಾದಿಗೂ ಲಭ್ಯವಿರುತ್ತದೆ.

(೩) ಈ ನಿಯಮಕ್ಕೆ ಕೆಲವು ಅಪವಾದಗಳು ಇರುತ್ತವೆ.

೩೭ ಬಾಂಬೆ ಎಸ್.ಆರ್. ೪೭೧

**ಕಲಮು ೧೦:**

ಯಾವನೊಬ್ಬ ವ್ಯಕ್ತಿಗೆ ನ್ಯಾಸಧಾರಿಯೆಂದು ಒಂದು ಆಸ್ತಿಯ ಕಬ್ಜೆಯನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕೊಟ್ಟಿದ್ದರೆ ಅಂಥ ವ್ಯಕ್ತಿಗೆ ಕಾಲ ಪರಿಮಿತಿಯ ವಾದವು- ಲಭ್ಯವಾಗುವುದಿಲ್ಲ ಇಲ್ಲವೇ ಅವನ ಕಾನೂನುಬದ್ಧವಾದ ವಾರಸುದಾರರಿಗೂ ಇಲ್ಲವೆ ಅವನು ಯಾರಿಗಾದರೂ ಹಸ್ತಾಂತರಿಸಿದ್ದರೆ ಇಲ್ಲವೇ ವಹಿಸಿಕೊಟ್ಟಿದ್ದರೆ (ಅದರ ಯೋಗ್ಯ ಪ್ರತಿಫಲವಿಲ್ಲದೆ ಹಸ್ತಾಂತರಿಸಿದ್ದರೆ) ಒಂದು ಆಸ್ತಿಯ ಕಬ್ಜೆ ಪಡೆಯುವುದಕ್ಕಾಗಿ ಇಲ್ಲವೆ ಅದರ ಉತ್ಪನ್ನವನ್ನು ಪಡೆಯುವುದಕ್ಕಾಗಿ ಮಾಡಿದ ದಾವೆಯಲ್ಲಿ ಈ ಕಲಂ ಅನ್ನು ಅನ್ವಯಿಸತಕ್ಕದ್ದಲ್ಲ. ಆದರೆ ಘೋಷಿಸಿದ ನ್ಯಾಸಗಳಿಗೆ ಇದು ಅನ್ವಯಿಸುತ್ತದೆ. ಆದರೆ ಸೂಚಿತ ಅವ್ಯಕ್ತ ನ್ಯಾಸ ಇಂಗಿತ ಅಥವಾ ರಚನಾತ್ಮಕ ನ್ಯಾಸಗಳಿಂದ ಭಿನ್ನವಾಗಿದೆ. ಒಂದು ಇಂಗಿತ ನ್ಯಾಸದ ಅಧಿಕಾರಿ(ಧರ್ಮದರ್ಶಿ)ಯು ಕಾಲಪರಿಮಿತಿಯ ವಾದದ ರಕ್ಷಣೆ ಪಡೆದುಕೊಳ್ಳಬಹುದು.

ಒಂದು ವ್ಯಕ್ತಪಡಿಸಿದ ನ್ಯಾಸ, ಒಂದು ಇಂಗಿತ ಇಲ್ಲವೆ ರಚನಾತ್ಮಕ ನ್ಯಾಸಗಳ ನಡುವಿನ ವ್ಯತ್ಯಾಸಗಳು: ಕಲಮು ೧೦ರನ್ವಯ ವಿಶ್ವಾಸಾವಲಂಬಿ, ನಂಬಿಕೆಯ, ಕಬ್ಜೆಯನ್ನು ಹೊಂದಿದವರು ಧರ್ಮದರ್ಶಿಗಳಲ್ಲ, ಉದಾ: ಒಬ್ಬ ಏಜೆಂಟ್, ಮ್ಯಾನೇಜರ್, ದಲ್ಲಾಳಿ, ಬೇನಾಮಿದಾರ, ಮರಣಶಾಸನ ನಿರ್ವಾಹಕ ಇಲ್ಲವೆ ಆಡಳಿತಗಾರ, ಬ್ಯಾಂಕರ್, ಪಾಲುಗಾರರಲ್ಲಿ ಜೀವಿಸಿರುವವನು, ಒಂದು ಕಂಪನಿಯ ನಿರ್ದೇಶಕ, ಇಲ್ಲವೆ ಒಂದು ಕಂಪನಿಯ ಸಮಾಪಕ, ಒಂದು ಅವಿಭಕ್ತ ಹಿಂದೂ ಕುಟುಂಬದ ಕರ್ತ, ಇಲ್ಲವೇ ಮ್ಯಾನೇಜರ್, ಎರಡನೆಯದಾಗಿ ಕಲಮು ೧೦ ಇದು ಕೇವಲ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. ಅಂದರೆ ಯಾರಿಗೆ ಆಸ್ತಿಯನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ವಹಿಸಿಕೊಡಲಾಗಿದೆಯೋ ಅಂಥವರಿಗೆ ಮಾತ್ರ ಅನ್ವಯಿಸುತ್ತದೆ.

೪೪ ಮದ್ರಾಸ್ ೨೭೭ (೨೮೧-೨)

ಒಂದು ನಿರ್ದಿಷ್ಟ ಉದ್ದೇಶವೆಂದರೇನು? ಯಾವುದೊಂದು ನ್ಯಾಸವನ್ನು ಒಂದು ದಸ್ತಾವೇಜಿನ ಮೂಲಕ ಸ್ಥಾಪಿಸಿ ಅದರಲ್ಲಿ ಆ ಆಸ್ತಿಯನ್ನು ವಾಸ್ತವಿಕವಾಗಿ ಹಾಗೂ ನಿರ್ದಿಷ್ಟವಾಗಿ ಯಾವ ಉದ್ದೇಶಕ್ಕಾಗಿ ಅದನ್ನು ಕೊಡಲಾಗಿದೆಯೆಂದು ವ್ಯಾಖ್ಯಾನಿಸಿರುವರೋ ಅದೇ ನಿರ್ದಿಷ್ಟ ಉದ್ದೇಶವಾಗಿದೆ.

೪೯೧.೧.೩೭(೪೩)

೫೮೧.ಅ.೧.

ಇದು ಹೀಗೆ ಇರುವುದರಿಂದ ಒಬ್ಬ ವ್ಯಕ್ತನ್ಯಾಸದ ಧರ್ಮದರ್ಶಿಯು– ಸಹ ಈ ಕಲಮಿನ ಒಳಗೆ ಬರುತ್ತಾನೆ.

**ವ್ಯಕ್ತ ನ್ಯಾಸಧರ್ಮದರ್ಶಿಯ (de son tort) ಅರ್ಥ:**

**ವಿವರಣೆ:** ಹಿಂದೂ, ಮಹಮ್ಮದೀಯರು, ಧಾರ್ಮಿಕ ದತ್ತಿ ಉಂಬಳಿಗಳನ್ನು ಸ್ಪಷ್ಟಪಡಿಸಿದ ನ್ಯಾಸಗಳಾಗಿರುತ್ತವೆ. ಅವುಗಳ ವ್ಯವಸ್ಥಾಪಕರು ಇಲ್ಲಿಯ ಮ್ಯಾನೇಜರು ಸ್ಪಷ್ಟಪಡಿಸಿದ ಧರ್ಮದರ್ಶಿಗಳು.

**ಮೂರನೆಯದಾಗಿ:** ಕಲಮು ೧೦ ಇದು ತಪ್ಪುಗಾರ ಧರ್ಮದರ್ಶಿಗಳಿಗೂ ಅನ್ವಯಿಸುತ್ತದೆ. ಅಲ್ಲದೆ, ಅವನ ಕಾನೂನುಬದ್ಧ ವಾರಸುದಾರರಿಗೂ ಮತ್ತು ಅವನು ಅದನ್ನು ವಹಿಸಿಕೊಟ್ಟವರಿಗೂ ಅನ್ವಯಿಸುತ್ತದೆ. ಆದರೆ ಸಾಕಷ್ಟು ಪ್ರತಿಫಲ ಕೊಟ್ಟು ಪಡೆದುಕೊಂಡವರಿಗೆ ಇದು ಅನ್ವಯಿಸುವುದಿಲ್ಲ. ಪ್ರತಿಫಲ ಕೊಟ್ಟು ಕೊಂಡವರು ತಪ್ಪಿತಸ್ಥ ಧರ್ಮದರ್ಶಿಗಿಂತ ಭಿನ್ನವಾಗಿರುತ್ತಾರೆ. ಹಾಗೆ ರಕ್ಷಣೆ ಇದ್ದರೆ, ಅವರು ಕಾಲ ಪರಿಮಿತವಾದ ಉಪಯೋಗವನ್ನು ತೆಗೆದುಕೊಳ್ಳಬಹುದು.

ಒಬ್ಬ ಧರ್ಮದರ್ಶಿಯಿಂದ ಕೊಂಡವರು ಕೇವಲ ಯೋಗ್ಯ ಪ್ರತಿಫಲಕ್ಕೆ ಕೊಳ್ಳುವವರಾಗಿರದೆ ಆ ನ್ಯಾಸದ ವಿಷಯದ ಅಧಿನಿಯಮದ ಬಗ್ಗೆ ಮೌನ ಹೊಂದಿದವರಾಗಿರಬೇಕು. ನ್ಯಾಯಿಕ ನಿರ್ಣಯಗಳು ಈ ವಿಷಯದ ಬಗ್ಗೆ ಒಂದಕ್ಕೊಂದು ವಿರುದ್ಧವಾಗಿವೆ.

ಕಾಲ ಪರಿಮಿತಿಯ ಅಧಿನಿಯಮ ಕಲಮು ೨೯ ಉಪಕಲಮು ೩(೧೧) ಇದು ಭಾರತೀಯ ವಿಚ್ಛೇದನ ಅಧಿನಿಯಮ (೧೮೬೯ನೆಯ ಅಧಿನಿಯಮ) ಇದಕ್ಕೆ ಅನ್ವಯಿಸುವುದಿಲ್ಲ.

(ಪುಟ ಖಾಲಿ ಬಿಡಲಾಗಿದೆ –ಸಂ)

**ವಿಶೇಷ ಕಾನೂನಿನ ವಿರುದ್ಧ:**

೧. ಈ ಸಾಮಾನ್ಯ ಕಾನೂನಿನ ಹೊರತಾಗಿ ಇತರ ವಿಶೇಷ ಇಲ್ಲವೆ ಸ್ಥಾನಿಕ ಕಾನೂನುಗಳು ಇದ್ದ ಅವುಗಳಿಗೆ ಸಹ ದಾವೆಗಳನ್ನು ಹೂಡಲು, ಮೇಲ್ಮನವಿ ಸಲ್ಲಿಸಲು, ಅರ್ಜಿಗಳನ್ನು ಕೊಡಲು ಕಾಲಪರಿಮಿತಿಯನ್ನು ಗೊತ್ತುಪಡಿಸಿರುತ್ತವೆ. ವಿಶೇಷ ಕಾನೂನು ಮತ್ತು ಸಾಮಾನ್ಯ ಕಾನೂನುಗಳು ನಿರ್ದಿಷ್ಟಪಡಿಸಿದ ಕಾಲ ಪರಿಮಿತಿಯಲ್ಲಿ ಯಾವ ಕಾನೂನು ಅನ್ವಯವಾಗುತ್ತದೆ?

೨. ಈ ಪ್ರಶ್ನೆಗೆ ಉತ್ತರವನ್ನು ಕಲಮು ೨೯ರಲ್ಲಿ ಕೊಡಲಾಗಿದೆ. ಈ ಕಲಮಿನ ಅನ್ವಯ ವಿಶೇಷ ಕಾನೂನು ಸಾಮಾನ್ಯ ಕಾನೂನಿಗಿಂತ ಹೆಚ್ಚು ಪ್ರಭಾವಶಾಲಿಯಾಗುತ್ತದೆ.

೩. ಕಾಲಪರಿಮಿತಿಯ ಬಗ್ಗೆ ವಿಶೇಷ ಕಾನೂನು ಮತ್ತು ಸಾಮಾನ್ಯ ಕಾನೂನುಗಳಲ್ಲಿ ಘರ್ಷಣೆ ವಿರೋಧವಿದ್ದರೆ ಆಗ ಕಾಲಪರಿಮಿತಿ ಅಧಿನಿಯಮದ ಕಲಮು ೨೯ ಅನ್ವಯಿಸುತ್ತದೆ. ಇದು ಯಾವ ಪ್ರಕರಣಗಳಿಗೆ ಅನ್ವಯಿಸುತ್ತದೆ ಮತ್ತು ಯಾವ ಪ್ರಕರಣಗಳಿಗೆ ಅನ್ವಯಿಸುವುದಿಲ್ಲವೆಂಬುದನ್ನು ಉಪಬಂಧಿಸುತ್ತದೆ.

೪. ಕಾಲಪರಿಮಿತಿ ಅಧಿನಿಯಮ ಕಲಮು ೪, ೯ರಿಂದ ೧೮ ಮತ್ತು ೨೨ ಪ್ರಕರಣಗಳಲ್ಲಿ ಯಾವುದೇ ಘರ್ಷಣೆಗಳಿದ್ದರೆ ಕಲಮು ೨೯ ಇದು ಅನ್ವಯಿಸುತ್ತದೆ. (ಇದು ಅನ್ವಯಿಸುವುದೆ ಇಲ್ಲವೇ ಎಂದು ವ್ಯಕ್ತವಾಗಿ ಸ್ಪಷ್ಟವಾಗಿ) ಮತ್ತು ಅಧಿನಿಯಮದ ಉಳಿದ ಉಪಬಂಧಗಳು ಅನ್ವಯಿಸತಕ್ಕದ್ದಲ್ಲ. (ವಿಶೇಷ ಕಾನೂನಿನ ಅನ್ವಯ ಅವು ಅನ್ವಯಿಸುತ್ತವೆಂದು ಹೇಳದ ವಿನಾ)

**ಕಾಲ ಪರಿಮಿತ ಕಾನೂನಿನ ಯೋಜನೆ**

೧. ಭಾರತೀಯ ಕಾಲ ಪರಿಮಿತಿಯ ಅಧಿನಿಯಮವು ೨೯ ಕಲಮುಗಳನ್ನು ಮತ್ತು ಒಂದು ಪರಿಶಿಷ್ಟವನ್ನು ಒಳಗೊಂಡಿದೆ.

೨. ಈ ಪರಿಶಿಷ್ಟವನ್ನು ೩ ವಿಭಾಗಗಳಲ್ಲಿ ವಿಭಾಗಿಸಲಾಗಿದೆ.

ಮೊದಲನೆಯ ವಿಭಾಗವು– ದಾವೆಯ ಬಗ್ಗೆ ವ್ಯವಹರಿಸುತ್ತದೆ.

ಎರಡನೆಯ ವಿಭಾಗವು– ಮೇಲ್ಮನವಿಗಳ ಬಗ್ಗೆ ವ್ಯವಹರಿಸುತ್ತದೆ.

ಮೂರನೆಯ ವಿಭಾಗವು– ಅರ್ಜಿಗಳ ಬಗ್ಗೆ ವ್ಯವಹರಿಸುತ್ತದೆ.

೩. ಪ್ರತಿಯೊಂದು ವಿಭಾಗದಲ್ಲಿಯ ಪರಿಶಿಷ್ಟವನ್ನು ಮೂರು ಅಂಕಣಗಳಲ್ಲಿ ವಿಭಾಗಿಸಲಾಗಿದೆ.

**೧ನೆಯ ಅಂಕಣ:** ಇದರಲ್ಲಿ ಯಾವ ಪರಿಹಾರವನ್ನು ಕೇಳಿ ದಾವೆ ಮಾಡಲಾಗಿದೆ. ಅದರ ಸ್ವರೂಪ ಮೇಲ್ಮನವಿ ಇಲ್ಲವೆ ಅರ್ಜಿ ಏನನ್ನಾದರೂ ಮಾಡುವುದಿದ್ದರೆ ಅವುಗಳ ಬೇರೆ ಬೇರೆ ವರ್ಗಗಳ ದಾವೆಗಳನ್ನು ಕಲಮು ೧೫೪ರ ಉಪಬಂಧದಲ್ಲಿ ಒದಗಿಸಲಾಗಿದೆ. ೯ ಬೇರೆ ಬೇರೆ ವರ್ಗಗಳ ಮೇಲ್ಮನವಿಗಳಿಗೆ ಉಪಬಂಧಗಳನ್ನು ಕಲ್ಪಿಸಲಾಗಿದೆ. ಬೇರೆ ಬೇರೆ ೨೬ ನಮೂನೆಗಳ ಅರ್ಜಿಗಳಿಗೆ ಉಪಬಂಧ ಕಲ್ಪಿಸಲಾಗಿದೆ. ಇದರ ಪ್ರತಿಯೊಂದು ಉಪಬಂಧಕ್ಕೆ ಕ್ರಮವಾಗಿ ಅನುಚ್ಛೇದದ ಅಂಕಿಯೆಂದು ಕರೆಯಲಾಗುತ್ತದೆ. ಒಟ್ಟಾರೆ ಈ ಪರಿಶಿಷ್ಟದಲ್ಲಿ ೧೮೯ ಅನುಚ್ಛೇದಗಳಿರುತ್ತವೆ. ಆದರೂ ಕೊನೆಯ ಅನುಚ್ಛೇದವು ೧೮೩ ಇರುತ್ತವೆ. ಅದೆಂದರೆ ಕೆಲವು ಅನುಚ್ಛೇದಗಳಿಗೆ ಒಂದೇ ಅಂಕಿಯನ್ನು ಕೊಡಲಾಗಿದೆ. ಅವುಗಳಿಗೆ 'ಅ' ಅಂಕಿಯನ್ನು ಕೂಡಿಸಿ ಉಳಿದವುಗಳಿಂದ ಬೇರ್ಪಡಿಸಲಾಗಿದೆ.

**೨ನೆಯ ಅಂಕಣ:** ಯಾವ ಅವಧಿಯಲ್ಲಿ ದಾವೆಯನ್ನು ಮಾಡಬೇಕು, ಮೇಲ್ಮನವಿಯನ್ನು ಸಲ್ಲಿಸಬೇಕು ಅಥವಾ ಅರ್ಜಿಯನ್ನು ಯಾವಾಗ ಮಾಡಬೇಕೆಂಬುದನ್ನು ನಿರ್ಧರಿಸುತ್ತದೆ.

**೩ನೆಯ ಅಂಕಣ:** ಕಾಲ ಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆ ಮತ್ತು ಯಾವ ಅವಧಿಯಲ್ಲಿ ದಾವೆ ಅಥವಾ ಮೇಲ್ಮನವಿಯನ್ನು ಅಥವಾ ಅರ್ಜಿಯನ್ನು ಮಾಡಲೇಬೇಕೆಂಬುದನ್ನು ನಿರ್ಧರಿಸುತ್ತದೆ.

೪. ಕಾಲ ಪರಿಮಿತಿ ಅಧಿನಿಯಮದ ಕಲಮುಗಳು

ಸ್ಥಿರ ಆಸ್ತಿ ಅನುಭೋಗದ ಕಾನೂನಿಗಿಂತ ಭಿನ್ನವಾಗಿ ಪರಿಶಿಷ್ಟದಲ್ಲಿಯ ೩ ಅಂಕಣಗಳಲ್ಲಿ ಉದ್ಭವಿಸುವ ಬೇರೆ ಬೇರೆ ಪ್ರಶ್ನೆಗಳಿಗೆ ಸಂಬಂಧಿಸಿದ ವಿಷಯ ಚರ್ಚಿಸುತ್ತದೆ. ಆದ್ದರಿಂದ ಕಾಲ ಪರಿಮಿತಿ ಅಧಿನಿಯಮದಲ್ಲಿ ಈ ಪರಿಶಿಷ್ಟವು ಬಹಳ ಮಹತ್ವದ್ದು ಆಗಿರುತ್ತದೆ.

# IV. ಕಾಲ ಪರಿಮಿತಿಯ ಕಾನೂನು

## ೩ನೆಯ ಅಂಕಣದಲ್ಲಿ ಉದ್ಭವಿಸುವ ಪ್ರಶ್ನೆಗಳು

ಽನೆಯ ಅಂಕಣದ ವಸ್ತು ವಿಷಯ

೧. ಅಂಕಣ ೩ ಇದು ಕಾಲಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆಂಬುದನ್ನು ವಿವರಿಸುತ್ತದೆ. ಇಲ್ಲಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ.

(೧) ಕಾಲಪರಿಮಿತಿಯು ಯಾವಾಗಿನಿಂದ ಪ್ರಾರಂಭವಾಗುತ್ತದೆ? ಯಾವ ಬಿಂದುವಿನಿಂದ ಪ್ರಾರಂಭವಾಗುತ್ತದೆ?

(೨) ಕಾಲಪರಿಮಿತಿಯ ಉಗಮದ ಬಿಂದುವು ಕೇವಲ ಒಂದೇ ಆಗಿರುತ್ತದೆಯೇ? ಅಥವಾ ಹೊಸ ಕಾಲಪರಿಮಿತಿಯ ಬಿಂದುವು ಇರಬಲ್ಲದೇ?

**I. ಕಾಲ ಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆ?**

೧. ಕಾಲ ಪರಿಮಿತಿಯು ಯಾವಾಗ ಪ್ರಾರಂಭವಾಗುತ್ತದೆಂಬ ಪ್ರಶ್ನೆಗೆ ಉತ್ತರವು ಹೀಗಿದೆ:

ಒಂದು ದಾವೆಯನ್ನು ಹೂಡಲು ಮೇಲ್ಮನವಿ ಸಲ್ಲಿಸಲು ಇಲ್ಲವೆ ಅರ್ಜಿಯನ್ನು ಮಾಡಿಕೊಳ್ಳಲು ಕಾಲಪರಿಮಿತಿಯು ೩ನೆಯ ಅಂಕಣದಲ್ಲಿ ಕಾಣಿಸಿದ ಘಟನೆ ನಡೆದ ದಿನದಿಂದ ಕಾಲಪರಿಮಿತಿ ಆರಂಭವಾಗುತ್ತದೆ. ಬಹಳಷ್ಟು ಪ್ರಕರಣಗಳಲ್ಲಿ ಘಟನೆ ಸಂದರ್ಭಗಳು ಪರಿಣಾಮ ಬೀರುತ್ತವೆ. ಆದರೆ ಕೆಲವು ಪ್ರಕರಣಗಳಲ್ಲಿ ವಾದಿಗೆ ೬೦–೬೨ ಈ ಘಟನೆ ಬಗ್ಗೆ ಮಾಹಿತಿ ಇದ್ದರೆ ಕಾಲ ಪರಿಮಿತಿಯು ಪ್ರಾರಂಭವಾಗುತ್ತದೆ. ಘಟನೆಯು ನಡೆದದ್ದೋ ಅಥವಾ ಆ ಘಟನೆ ನಡೆದ ಬಗ್ಗೆ ಮಾಹಿತಿ ಇದ್ದು ೩ರಲ್ಲಿ ಕಾಣಿಸಿದ ಘಟನೆ ನಡೆದದ್ದು ಕಾಲಪರಿಮಿತಿಯನ್ನು ಗುರುತಿಸಿ ಅಂದಿನಿಂದ ಕಾಲಪರಿಮಿತಿ ಪ್ರಾರಂಭವಾಗುತ್ತದೆ. ಒಂದು ದಾವೆ ಮಾಡುವ ಹಕ್ಕು ಮತ್ತು ದಾವೆಯ ಕಾರಣ ಈ ಕುರಿತು ಎರಡು ಪ್ರಶ್ನೆಗಳು.

(೧) ಒಂದು ದಾವೆಯ ಕಾರಣವು ಉಂಟಾದಾಗ ವಾದಿಯು ದಾವೆ ಮಾಡಲೇಬೇಕೇ?

೨. ದಾವೆಗಳಿಗೆ ಸೀಮಿತಗೊಳಿಸಿ, ದಾವೆ ಮಾಡುವ ಹಕ್ಕು ಉದ್ಭವವಾದಾಗ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ. ಅನುಚ್ಛೇದ ೧೨೦ ಮೊದಲನೆಯ ಮೂಲಭೂತ ನಿಯಮವಾಗಿರುತ್ತದೆ.

ದಾವೆ ಮಾಡುವ ಹಕ್ಕು ಯಾವಾಗ ಉದ್ಭವಿಸುತ್ತದೆ.

(i) ಮೂರನೆಯ ಅಂಕಣದಲ್ಲಿ ಕಾಣಿಸಿದ ಘಟನೆ ಸಂಬಂಧಿಸಿದ ಆ ದಾವೆಯು ಯಾವುದೆ ಅನುಚ್ಛೇದದ ಕೆಳಗೆ ಬರುತ್ತಿದ್ದರೆ,

(ii) ದಾವೆಯು ಯಾವುದೇ ನಿರ್ದಿಷ್ಟ ಅನುಚ್ಛೇದದ ಕೆಳಗೆ ಬರದಿದ್ದರೆ, ಆದರೆ ಸಾಮಾನ್ಯ ಅನುಚ್ಛೇದ (೧೨೦) ಇದರ ಅಡಿ ಬರುತ್ತಿದ್ದರೆ ಆಗ ದಾವೆ ಮಾಡುವ ಹಕ್ಕು ಉತ್ಪನ್ನವಾಗುತ್ತದೆ. ಆಗ ದಾವೆಯ ಕಾರಣವು ಉಂಟಾಗುತ್ತದೆ. ಇಲ್ಲವೆ ಕೆಲವು ಪ್ರಕರಣಗಳಲ್ಲಿ ದಾವೆಯ ಕಾರಣ ಉಂಟಾಗಿದೆ ಎಂಬುದರ ಅರಿವು ವಾದಿಗೆ ಬಂದಾಗ ಅಂದರೆ ದಾವೆಯ

ಕಾರಣ ಘಟಿಸಿದ ವೇಳೆಯಿಂದ ಅಥವಾ ಈ ದಾವೆಯ ಕಾರಣ ನಡೆದಿದೆಯೆಂಬ ವಾದಿಗೆ ಬಂದಾಗ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.

ಒಬ್ಬನಿಗೆ ಅನ್ಯಾಯವೆನಿಸಿದಾಗ ಅವನಿಗೆ ದಾವೆಯ ಕಾರಣವು ಉದ್ಭವಿಸುತ್ತದೆ. ಪ್ರತಿಯೊಂದು ಅನ್ಯಾಯವೂ ಅವಶ್ಯವಾಗಿ ದಾವೆಯ ಕಾರಣವಾಗುವುದಿಲ್ಲ. ಆ ಸಂದರ್ಭವು ನಿಜವಾಗಿ ಮತ್ತು ಅವಶ್ಯಕವಾಗಿ ಕ್ರಮ ಕೈಗೊಳ್ಳುವಂತಹದು ಇರಬೇಕು.

(iii) ಕಾಲಪರಿಮಿತಿಯು ಪ್ರಾರಂಭವಾಗುವಾಗ ಮರಣ ಸಂಭವಿಸಿದರೆ ಅದರ ಪರಿಣಾಮ.

(೧) ಒಬ್ಬನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾಗುವ ಪೂರ್ವದಲ್ಲಿಯೇ ಅವನು ಮೃತನಾದರೆ ಕಾಲಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆ?

(೨) ಒಬ್ಬನಿಗೆ ದಾವೆ ಮಾಡುವ ಹಕ್ಕು ಉಂಟಾಗುವ ಪೂರ್ವದಲ್ಲಿಯೇ ಮತ್ತೊಬ್ಬನು ಮೃತನಾದರೆ ಆಗ ಕಾಲಪರಿಮಿತಿಯು ಎಂದಿನಿಂದ ಪ್ರಾರಂಭವಾಗುತ್ತದೆ?

I. ಒಬ್ಬನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾಗುವ ಮುನ್ನವೇ ಮೃತನಾದರೆ ಆಗ ಆತನ ಕಾನೂನುಬದ್ಧ ವಾರಸುದಾರರು ಅಂತಹ ದಾವೆಯನ್ನು ಹೂಡಲು ಅರ್ಹರಿದ್ದರೆ, ಅಂದಿನಿಂದ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.

II. ಒಬ್ಬನ ವಿರುದ್ಧ ಒಂದು ದಾವೆ ಮಾಡುವ ಹಕ್ಕು ಉದ್ಭವವಾಗಬಹುದಿತ್ತೋ ಅಂಥ ಘಟನೆಗೆ ಮುನ್ನ ಅವನು ಮೃತನಾದರೆ, ಆಗ ಆತನ ಕಾನೂನುಬದ್ಧ ವಾರಸುದಾರರ ವಿರುದ್ಧ ದಾವೆಯನ್ನು ತರಬಹುದಾದ ದಿನದಿಂದ ಕಾಲಪರಿಮಿತಿಯು ಪ್ರಾರಂಭಿಸುತ್ತದೆ.

**ಮೂಲಭೂತ ನಿಯಮಕ್ಕೆ ಅಪವಾದ–ದಾವೆ ಮಾಡುವ ಹಕ್ಕು ಉತ್ಪನ್ನವಾದ ಕೂಡಲೆ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.**

೧. ದಾವೆ ಮಾಡುವ ಹಕ್ಕು ಪೂರ್ವದಲ್ಲಿಯೇ ಕೆಲವು ಪ್ರಕರಣಗಳಲ್ಲಿ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.

(೧) ಕೇಳಿದಾಗ ಹಣ ಕೊಡುವ ಮತ್ತು ಒಂದು ಬಿಲ್ಲಿನ ಮೇಲೆ ಹಣ ಪಾವತಿ ಮಾಡಬೇಕಾದಾಗ ಇಲ್ಲವೆ ಒಂದು ಪ್ರೊನೋಟು ಕೇಳಿದಾಗ ಹಣ ಕೊಡುವ ವಚನ ಪತ್ರ.

ಈ ಪ್ರಕರಣಗಳಲ್ಲಿ ಹಣ ಕೊಡಲು (ಮಾಗಣಿ) ಕೇಳಿದಾಗ ಮತ್ತು ಹಣ ಕೊಡಲು ಕೇಳಿದಾಗ ಅವನು ನಿರಾಕರಿಸಿದರೆ ಅವನ ವಿರುದ್ಧ ದಾವೆ ಮಾಡಲು ಬರುವುದಿಲ್ಲ. ಅವನು ಹಣ ಕೊಡಲು ನಿರಾಕರಿಸಿದ ದಿನದಿಂದ ದಾವೇ ಮಾಡುವ ಹಕ್ಕು ಉತ್ಪನ್ನವಾಗುತ್ತದೆ. ಆದರೆ ಕಾಲಪರಿಮಿತಿಯು ಅವನು ನಿರಾಕರಿಸಿದ ದಿನದಿಂದ ಪ್ರಾರಂಭವಾಗುವುದಿಲ್ಲ. ಆದರೆ ಅವನು ಸಾಲ ತೆಗೆದುಕೊಂಡ ದಿನಾಂಕ, ಇಲ್ಲವೆ ಬಿಲ್ಲಿನ ದಿನಾಂಕ, ಇಲ್ಲವೆ ವಚನ ಪತ್ರದ ದಿನಾಂಕದಿಂದ ಉದ್ಭವಿಸುತ್ತದೆ. ಉದಾ: ದಾವೆ ಮಾಡುವ ಹಕ್ಕು ಉತ್ಪನ್ನವಾಗುವ ಮುನ್ನ.

೫೭–೫೮–೫೯–೬೭–೭೩

(೨) ಒಂದು ಒತ್ತೆಯನ್ನು ಬಿಡಿಸಿಕೊಳ್ಳುವುದರ ಬಗ್ಗೆ ದಾವೆ.

ಸರಕುಗಳನ್ನು ಒತ್ತೆ ಇಟ್ಟು ಸಾಲ ತೆಗೆದುಕೊಂಡವನು ಆ ಸರಕಿನ ಮೇಲೆ ಸಾಲ ತಿರುಗಿ ಕೊಟ್ಟ ಮೇಲೆ ಆ ಸರಕುಗಳನ್ನು ಪಡೆಯಲು ಅವನಿಗೆ ದಾವೆ ಮಾಡುವ ಹಕ್ಕು ಉತ್ಪನ್ನವಾಗುತ್ತದೆ. ಆದರೆ ಅವನು

ಸಾಲ ಕೊಟ್ಟ ದಿನದಿಂದ ಕಾಲ ಪರಿಮಿತಿಯು ಆರಂಭವಾಗುವುದಿಲ್ಲ. ಆದರೆ ಅವನು ಒತ್ತೆ ಇಟ್ಟ ದಿನದಿಂದ ಅದು ಪ್ರಾರಂಭವಾಗುತ್ತದೆ. ಉದಾ: ದಾವೆ ಮಾಡುವ ಹಕ್ಕು ಪ್ರಾಪ್ತವಾಗುವ ಪೂರ್ವದಲ್ಲಿ–೧೪೫.

**ದಾವೆ ಮಾಡುವ ಹಕ್ಕು ಉಂಟಾದಾಗಲೂ ಕಾಲಪರಿಮಿತಿಯು ಆರಂಭವಾಗದಿರುವ ಪ್ರಕರಣಗಳು–ಕಲಮು ೬, ೭, ೮**

೧. ಒಬ್ಬನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾದಾಗ್ಯೂ ಹಕ್ಕು ದೊರೆತ ದಿನ ಅವನು ದಾವೆ ಹೂಡಲು ಅಸಮರ್ಥನಾಗಿರುತ್ತಾನೆ.

೨. ಈ ಅಪವಾದದ ಮೇರೆಗೆ ಅವನಿಗೆ ದಾವೆ ಹೂಡುವ ಹಕ್ಕು ಪ್ರಾಪ್ತವಾದಾಗ್ಯೂ ಅವನು ದಾವೆ ಹೂಡಲು ಅಸಮರ್ಥನಾದುದರಿಂದ ಅವನ ವಿರುದ್ಧ ಕಾಲ ಪರಿಮಿತಿಯು ಆರಂಭವಾಗುವುದಿಲ್ಲ.

೩. ಕೇವಲ ಮೂರು ರೀತಿಯ ಅಸಮರ್ಥತೆಯನ್ನು ಮಾನ್ಯ ಮಾಡಲಾಗಿದೆ.

(೧) ಅಲ್ಪವಯಿ, (೨) ಹುಚ್ಚು, (೩) ಬುದ್ಧಿಮಾಂದ್ಯ (ಮತಿಹೀನತೆ).

೪. ಒಬ್ಬನು ದಾವೆ ಹೂಡಲು ಅಸಮರ್ಥನಾದವನಿಗೆ ಆ ಅಸಮರ್ಥತೆಯು ನಿವಾರಣೆಯಾದ ದಿನದಿಂದ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.

೫. ಈ ಎಲ್ಲ ಅಸಮರ್ಥತೆಗಳು ಏಕಕಾಲಕ್ಕೆ, ಇಲ್ಲವೆ ಒಂದರ ನಂತರ ಒಂದರಂತೆ ಕಂಡುಬಂದರೆ ಆ ಎಲ್ಲ ಅಸಮರ್ಥತೆಗಳು ನಿವಾರಣೆಯಾದ ದಿನಗಳಿಂದ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ.

೬. ಆ ಅಸಮರ್ಥತೆಯು ಆ ಮನುಷ್ಯನ ಮರಣದವರೆಗೂ ಮುಂದುವರೆದರೆ ಆಗ ಕಾಲ ಪರಿಮಿತಿಯ ಆತನ ಕಾನೂನುಬದ್ಧ ವಾರಸುದಾರರ ವಿರುದ್ಧ ಅವನ ಮರಣದ ದಿನಾಂಕದಿಂದ ಪ್ರಾರಂಭವಾಗುತ್ತದೆ.

೭. ಆತನ ಮರಣದ ಕಾಲಕ್ಕೆ ಅವನ ಕಾನೂನುಬದ್ಧ ವಾರಸುದಾರನು ಅಸಮರ್ಥತೆಯಿಂದ ಬಳಲುತ್ತಿದ್ದರೆ ಆಗ ಆತನ ಆ ಅಸಮರ್ಥತೆಯು ನಿವಾರಣೆಯಾದ ನಂತರ ಕಾಲ ಪರಿಮಿತಿಯು ಪ್ರಾರಂಭವಾಗುತ್ತದೆ.

೮. ಜಂಟಿಯಾಗಿ ದಾವೆ ಮಾಡಲು ಹಕ್ಕುಳ್ಳವನು ಅಸಮರ್ಥನಾದಾಗ ಕಾಲಪರಿಮಿತಿಯ ಪ್ರಾರಂಭದ ಪರಿಣಾಮವೇನು?

ಎರಡು ಪ್ರಕರಣಗಳನ್ನು ಮಾತ್ರ ವಿಂಗಡಿಸತಕ್ಕದ್ದು:

(i) ಅದರಲ್ಲಿ ಕೆಲವರು ಮಾತ್ರ ಅಸಮರ್ಥತೆಯಿಂದ ಬಳಲುತ್ತಿದ್ದರೆ.

(ii) ಅದರಲ್ಲಿ ಎಲ್ಲರೂ ಅಸಮರ್ಥತೆಯಿಂದ ಬಳಲುತ್ತಿದ್ದರೆ.

I. ಅದರಲ್ಲಿ ಕೆಲವರು ಮಾತ್ರ ಅಸಮರ್ಥತೆಯಿಂದ ಬಳಲುತ್ತಿದ್ದರೆ,

(i) ಅಸಮರ್ಥತೆಯು ಇಲ್ಲದ ಪಕ್ಷಗಾರರು ಪ್ರತಿವಾದಿಗಳಿಗೆ ಅಸಮರ್ಥತೆಯಿಂದ ಬಳಲುವ ಪಕ್ಷಗಾರರ ಅನುಮತಿ ಇಲ್ಲದೇ ಸಂಪೂರ್ಣವಾಗಿ ಬಿಡುಗಡೆ ಇಲ್ಲವೆ ವಿಮೋಚನೆ ಮಾಡಬಹುದು. ಅಂತಹ ಸಂದರ್ಭಗಳಲ್ಲಿ ದಾವೆ ಮಾಡುವ ಹಕ್ಕು ದೊರೆತ ಕೂಡಲೆ ಅವರೆಲ್ಲರ ವಿರುದ್ಧ ಕಾಲ ಪರಿಮಿತಿ ಆರಂಭವಾಗುವುದು.

(ii) ಇಂತಹ ಬಿಡುಗಡೆಯನ್ನು ಕೊಡಲು ಸಾಧ್ಯವಿಲ್ಲದಿದ್ದಾಗ ಅಸಮರ್ಥತೆಯಿಂದ ಬಳಲುವವರಿಗೆ ಆ ಅಸಮರ್ಥತೆಯು ನಿವಾರಣೆಯಾಗುವವರೆಗೆ ಅಥವಾ ಆ ಅಸಮರ್ಥತೆಯುಳ್ಳ ಮನುಷ್ಯನು

ಆ ವಸ್ತುಸ್ಥಿತಿಯಲ್ಲಿ ತನ್ನ ಆಸಕ್ತಿಯನ್ನು ಕಳೆದುಕೊಂಡಾಗ ಆಗ ಕಾಲ ಪರಿಮಿತಿಯು ಯಾರ ವಿರುದ್ಧವಾಗಿಯೂ ಆರಂಭವಾಗುವುದಿಲ್ಲ.

II. ದಾವೆ ಹೂಡಲು ಅಧಿಕಾರವುಳ್ಳ ಎಲ್ಲರೂ ಅಸಮರ್ಥತೆಯಿಂದ ಬಳಲುತ್ತಿರುವ ಪ್ರಕರಣಗಳು:

(i) ಎಲ್ಲರೂ ಅಸಮರ್ಥತೆಯಿಂದ ಬಳಲುತ್ತಿದ್ದರೆ ಆಗ ಕಲಮು ೬ರಲ್ಲಿಯ ನಿಯಮಗಳು ಅನ್ವಯಿಸುತ್ತವೆ.

(ii) ಅವರಲ್ಲಿ ಒಬ್ಬನು ಅಸಮರ್ಥತೆಯಿಂದ ಮುಕ್ತನಾದರೆ ಆಗ ಕಲಮು ೭ ಅನ್ವಯಿಸುತ್ತದೆ. ಆಗ ಉದ್ಭವಿಸುವ ಮುಖ್ಯ ಪ್ರಶ್ನೆ ಏನೆಂದರೆ, ಅಸಮರ್ಥನೆಯಿಂದ ಬಿಡುಗಡೆಯಾದ ಮನುಷ್ಯನು ಇನ್ನೂ ಅಸಮರ್ಥತೆಯಿಂದ ಬಳಲುತ್ತಿರುವವರ ಅನುಮತಿ ಇಲ್ಲದೆ ಸಂಪೂರ್ಣ ಬಿಡುಗಡೆಯನ್ನು ಕೊಡಬಲ್ಲನೇ? ಇದಕ್ಕೆ ಉತ್ತರ ಹೌದು ಎಂದರೆ ಆ ಮನುಷ್ಯನ ಅಸಮರ್ಥತೆಯು ನಿವಾರಣೆ ಯಾವ ಕ್ಷಣದಿಂದ ಎಲ್ಲರ ವಿರುದ್ಧ ಕಾಲಪರಿಮಿತಿಯು ಪ್ರಾರಂಭಿಸುತ್ತದೆ. ಉತ್ತರವು ಇಲ್ಲವೆಂದಾಗ ಅವರೆಲ್ಲರೂ ಅಸಮರ್ಥತೆಯಿಂದ ಮುಕ್ತರಾಗುವವರೆಗೆ ಕಾಲಪರಿಮಿತಿಯು ಅವರ ವಿರುದ್ಧ ಅನ್ವಯವಾಗುವುದಿಲ್ಲ.

೯. ಆ ಅಸಮರ್ಥತೆಯು ಸಮಾಪ್ತಿಯಾದ ಯಾವ ದಿನಾಂಕದಿಂದ ಆ ಅಸಮರ್ಥತೆಯಿಂದ ಬಳಲುತ್ತಿದ್ದ ಮನುಷ್ಯನಿಗೆ ದಾವೆ ಮಾಡುವ ಹಕ್ಕು ದೊರೆಯುತ್ತದೆ. ಮತ್ತು ಯಾವ ವೇಳೆಯಲ್ಲಿ ಅವನು ದಾವೆ ಮಾಡಬಹುದು?

೧. ಈ ಪ್ರಶ್ನೆಗೆ ಮೂರು ಉತ್ತರಗಳಿರುತ್ತವೆ.

(i) ನಿರ್ದಿಷ್ಟಪಡಿಸಿದ ಅವಧಿಯಲ್ಲಿ, ಅವನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾದ ದಿನದಿಂದ ಎಂದರೆ ಅವನ ಅಸಮರ್ಥತೆಯು ಪರಿಸಮಾಪ್ತಿಯಾದ ಅವಧಿ ಮೂರು ವರ್ಷಗಳಿಗಿಂತ ಹೆಚ್ಚಿಗೆ ಇದ್ದರೆ ಉದಾ: ನಿರ್ದಿಷ್ಟ ಅವಧಿ ೧೨ ವರ್ಷಗಳು– ೧೯೨೦ರಿಂದ ೧೯೩೨ರ ವರೆಗೆ.

ಅಸಮರ್ಥತೆಯ ವರ್ಷಗಳು– ೪ ವರ್ಷಗಳು ಅಂದರೆ ೧೯೨೪ರಿಂದ ೧೯೩೬ರವರೆಗೆ. ಉಳಿದ ಕಾಲಪರಿಮಿತಿಯು– ೯ ವರ್ಷಗಳು, ದಾವೆಯನ್ನು ೧೯೩೨ಕ್ಕಿಂತ ಮೊದಲು ಮಾಡಬೇಕು.

ದಾವೆಯನ್ನು ೯ ವರ್ಷಗಳ ಅವಧಿಯೊಳಗಾಗಿ ಮಾಡಲಿಕ್ಕೇಬೇಕು ಎಂದರೆ ದಾವೆ ಮಾಡುವ ಹಕ್ಕು ಪ್ರಾಪ್ತವಾದ ೧೨ ವರ್ಷದೊಳಗಾಗಿ ಅಂದರೆ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಮಾಡತಕ್ಕದ್ದು. ಅವನಿಗೆ ಯಾವುದೇ ರೀತಿ ಲಾಭ ಸಿಗುವುದಿಲ್ಲ. ಅವನ ಕಾಲಪರಿಮಿತಿಯ ಅವಧಿಯ ಲೆಕ್ಕವನ್ನು ಅವನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾದಂದಿನಿಂದ ಹಾಕುತ್ತಾರೆ.

(ii) ನಿರ್ದಿಷ್ಟ ಅವಧಿಯಲ್ಲಿ ಇದನ್ನು ಅವನಿಗೆ ಉಂಟಾದ ಅಸಮರ್ಥತೆಯು ಸಮಾಪ್ತಿಗೊಂಡ ಮೂರು ವರ್ಷಗಳಿಗಿಂತ ಕಡಿಮೆ ಅವಧಿಯುದು ಇದ್ದರೆ–ಅವನಿಗೆ ಆತನ ಅಸಮರ್ಥತೆಯಿಂದ ಯಾವ ಲಾಭವೂ ಸಿಗುವುದಿಲ್ಲ. ಅವನ ಕಾಲ ಪರಿಮಿತಿಯು

ಅವನು ಎಂದು ಅಸಮರ್ಥತೆಯಿಂದ ಮುಕ್ತನಾದನೋ, ಆ ದಿನಾಂಕದಿಂದ ಪ್ರಾರಂಭವಾಗುತ್ತದೆ. ಉದಾ: ನಿರ್ದಿಷ್ಟಪಡಿಸಿದ ಕಾಲಮಿತಿ ೧ ವರ್ಷ, ೧೯೨೦ರಿಂದ ೧೯೨೧ ಅಸಮರ್ಥತೆಯ ದಾವೆಯನ್ನು ೧೯೨೫ರಲ್ಲಿ ಮಾಡಲಿಕ್ಕೇ ಬೇಕು.

(iii) ಈ ಅಸಮರ್ಥತೆಯು ನಿವಾರಣೆಯಾದ ದಿನಾಂಕದಿಂದ ಮೂರು ವರ್ಷಗಳಲ್ಲಿ, ಈ ಅಸಮರ್ಥತೆಯು ನಿವಾರಣೆಯಾದಾಗ ೩ ವರ್ಷಗಳಿಗಿಂತ ಕಡಿಮೆ ಅವಧಿ ಇದ್ದಲ್ಲಿ ಹಾಗೂ ನಿರ್ದಿಷ್ಟಪಡಿಸಿದ ಅವಧಿಯು ಮೂರು ವರ್ಷಗಳಿಗಿಂತ ಹೆಚ್ಚು ಇದ್ದಾಗ ನಿರ್ದಿಷ್ಟಪಡಿಸಿದ ಅವಧಿಯು ೬ ವರ್ಷಗಳು– ೧೯೨೦ರಿಂದ ೧೯೨೬.
ಅಸಮರ್ಥತೆಯ ಕಾಲ ೪ ವರ್ಷಗಳು– ೧೯೨೪: ೧೯೩೦ ಅಸಮರ್ಥತೆಯು ನಿವಾರಣೆಯಾದ ನಂತರ ಉಳಿದ ಅವಧಿಯು ೨ ವರ್ಷಗಳು. ಅಸಮರ್ಥತೆಯು ನಿವಾರಣೆಯಾದ ನಂತರ ಎಂದರೆ ೧೯೨೮ರ ನಂತರ ೩ ವರ್ಷದೊಳಗೆ ದಾವೆ ಹೂಡತಕ್ಕದ್ದು.

೧೦. ಈ ಅಸಮರ್ಥತೆಯ ಪ್ರಶ್ನೆಗೆ ಸಂಬಂಧಿಸಿದಂತೆ ಗಮನಿಸಬೇಕಾದ ಕೆಲವು ಅಂಶಗಳು.

(೧) ಈ ಕಲಮು ಕೇವಲ ದಾವೆಗಳಿಗೆ ಹಾಗೂ ಡಿಕ್ರಿ ಅಮಲ ಬಜಾವಣೆ ಅರ್ಜಿಗಳು (ದರಖಾಸ್ತ)ಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಮೇಲ್ಮನವಿ ಹಾಗೂ ಇತರ ಅರ್ಜಿಗಳಿಗೆ ಅನ್ವಯಿಸುವುದಿಲ್ಲ.

(೨) ಒಬ್ಬನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾದಾಗ ಅವನು ಈ ಅಸಮರ್ಥತೆಯಿಂದ ಬಳಲುತ್ತಿದ್ದರೆ ಮಾತ್ರ ಈ ಕಲಮು ಅನ್ವಯಿಸುತ್ತದೆ. ಆದರೆ ಅಸಮರ್ಥತೆಯು ಹಕ್ಕು ಪ್ರಾಪ್ತವಾದ ನಂತರ ಉದ್ಭವಿಸಿದಲ್ಲಿ ಈ ಕಲಮು ಅನ್ವಯಿಸುವುದಿಲ್ಲ.

(೩) ಈ ಕಲಮು ಇಲ್ಲವೆ ದಾವೆ ಹೂಡಲು ಅರ್ಹತೆಯುಳ್ಳ ವ್ಯಕ್ತಿಯು ಅಸಮರ್ಥತೆಯಲ್ಲಿದ್ದಾಗ ಮಾತ್ರ ಅನ್ವಯಿಸುತ್ತದೆ. ಆದರೆ ಪ್ರತಿವಾದಿಯು ಅಥವಾ ಯಾವನ ವಿರುದ್ಧ ದಾವೆಯನ್ನು ಹೂಡಬಹುದೋ ಅಂಥವನ ಅಸಮರ್ಥತೆಯು ಈ ಕಲಮಿಗೆ ಯಾವುದೇ ಸಂಬಂಧ ಇರುವುದಿಲ್ಲ. ಪ್ರತಿವಾದಿಯು ಅಸಮರ್ಥತೆಯಿಂದ ಬಳಲುತ್ತಿದ್ದರೂ ವಾದಿಗೆ ಕಾಲ ಪರಿಮಿತಿಯು ಪ್ರಾರಂಭಿಸುತ್ತದೆ.
ಮೊದಲನೆಯ ಮೂಲಭೂತ ನಿಯಮವೇನೆಂದರೆ ಅಸಮರ್ಥತೆಯಿಂದ ಬಳಲದೇ ಇರುವ ವ್ಯಕ್ತಿಯ ವಿಷಯದಲ್ಲಿ ಕಾಲಪರಿಮಿತಿಯು ೩ನೆಯ ಅಂಕಣದಲ್ಲಿ ನಮೂದಿಸಿದ ಘಟನೆಯು ನಡೆದ ದಿನಾಂಕದಿಂದ ಪ್ರಾರಂಭವಾಗುತ್ತದೆ. ಮತ್ತು ೩ನೆಯ ಅಂಕಣದಲ್ಲಿ ಯಾವುದೇ ಘಟನೆ ಕಾಣಿಸದಿದ್ದಲ್ಲಿ ದಾವೆಯ ಕಾರಣ ಉಂಟಾದ ದಿನಾಂಕದಿಂದ ಕಾಲಪರಿಮಿತಿಯು ಪ್ರಾರಂಭಿಸುತ್ತದೆ.

## ಮೂಲಭೂತ ನಿಯಮ – II

೧. ಒಮ್ಮೆ ಕಾಲ ಪರಿಮಿತಿಯು ಆರಂಭವಾದನಂತರ ಉದ್ಭವಿಸಿದ ಯಾವುದೇ ಅಸಮರ್ಥತೆ ಅಥವಾ ದಾವೆ ಹೂಡಲು ಅಶಕ್ತತೆಯು ಅದನ್ನು ನಡೆಯುವುದಿಲ್ಲ.

೨. ಇದರ ಅರ್ಥವೇನೆಂದರೆ ಒಮ್ಮೆ ಕಾಲ ಪರಿಮಿತಿಯು ಪ್ರಾರಂಭಿಸಿದರೆ ಅದು ಎಂದಿಗೂ

ಅಮಾನತುಗೊಳ್ಳುವುದಿಲ್ಲ. ಒಂದು ವೇಳೆ ವ್ಯಕ್ತಿಯು ಮನೋವಿಕಲತೆ ಹೊಂದಿದರೆ ಅಥವಾ ಅವನಿಗೆ ದಾವೆ ಹೂಡುವ ಹಕ್ಕು ಪ್ರಾಪ್ತವಾದ ನಂತರ ಅವನು ಮೃತಪಟ್ಟರೆ, ಕಾಲ ಪರಿಮಿತಿಯು ಅವನ ವಿರುದ್ಧ ಹೋಗುತ್ತದೆ.

II. ಕಾಲ ಪರಿಮಿತಿಯ ಆರಂಭಕ್ಕೆ ಒಂದೇ ಆರಂಭಿಕ ಬಿಂದು ಇರುತ್ತದೆಯೆ? ಇಲ್ಲವೆ ಹೊಸ ಕಾಲ ಪರಿಮಿತಿ ಪ್ರಾರಂಭ ಬಿಂದು ಇರಬಹುದೆ?

೧. ಹೊಸ ದಾವೆಯ ಕಾರಣ ಪ್ರಾಪ್ತತೆಗೆ ಮತ್ತು ಹೊಸ ಕಾಲ ಪರಿಮಿತಿಯ ಪ್ರಾರಂಭ ಬಿಂದುವಿನ ನಡುವೆ ಇರುವ ವ್ಯತ್ಯಾಸವನ್ನು ಮಾಡಲೇಬೇಕಾಗುತ್ತದೆ. ಒಂದೇ ದಾವೆಯ ಕಾರಣಕ್ಕೆ ಸಂಬಂಧಿಸಿದಂತೆ ಪ್ರಾಪ್ತವಾಗುವ ಹೊಸ ಕಾಲ ಪರಿಮಿತಿಯ ಪ್ರಾರಂಭ ಬಿಂದುವಿನ ಪ್ರಕರಣಗಳನ್ನು ನಾವು ಇಲ್ಲಿ ಪರಿಗಣಿಸುತ್ತಿದ್ದೇವೆ.

೨. ಕಾಲಪರಿಮಿತಿ ಕಾನೂನಿನ ಸಾಮಾನ್ಯ ನಿಯಮವೇನೆಂದರೆ ದಾವೆ ಹೂಡುವ ಹಕ್ಕಿಗೆ ಒಂದೇ ಒಂದು ಕಾಲಪರಿಮಿತಿಯ ಪ್ರಾರಂಭ ಬಿಂದು ಇರುತ್ತದೆ. ಮತ್ತು ಅದು ದಾವೆ ಹೂಡುವ ಹಕ್ಕು ಪ್ರಾರಂಭವಾದ ದಿನಾಂಕದಿಂದ ಪ್ರಾರಂಭವಾಗುತ್ತದೆ.

೩. ಒಂದೇ ದಾವೆಯು ಕಾರಣಕ್ಕೆ ಸಂಬಂಧಿಸಿದಂತೆ ಹೊಸ ಕಾಲ ಪರಿಮಿತಿಯ ಪ್ರಾರಂಭ ಬಿಂದು ಇರುವಂಥ ಮೂರು ಪ್ರಕರಣಗಳಿರುತ್ತವೆ.

(i) ಯಾವ ಪ್ರಕರಣಗಳಲ್ಲಿ ಸ್ವೀಕೃತಿ ಪತ್ರ ಇರುತ್ತದೆಯೊ.

(ii) ಯಾವ ಪ್ರಕರಣಗಳಲ್ಲಿ ಭಾಗಶಃ ಹಣ ಸಂದಾಯ ಮಾಡಲಾಗಿರುತ್ತದೆಯೋ.

(iii) ಯಾವ ಪ್ರಕರಣಗಳಲ್ಲಿ ದಾವೆಯ ಕಾರಣ ಒಪ್ಪಂದದ ಹೊರತಾಗಿ ಅಥವಾ ಒಂದೇ ಸಮನೆ ಉಲ್ಲಂಘನೆಯಿಂದ ಉದ್ಭವಿಸಿರುತ್ತದೆಯೋ.

ಈ ಮೂರೂ ಪ್ರಕರಣಗಳಲ್ಲಿ ಕಾಲ ಪರಿಮಿತಿಯ ಹೊಸ ಕಾಲ ಬಿಂದು ಉದ್ಭವಿಸುತ್ತದೆ.

**ಕಲಮು ೧೯ – ಸ್ವೀಕೃತಿ**

I. ಸಾಮಾನ್ಯವಾಗಿ:

೧. ಕಾಲ ಪರಿಮಿತಿಯ ಅವಧಿಯು ವಾಸ್ತವಿಕವಾಗಿ ಮುಗಿಯುವ ಪೂರ್ವದಲ್ಲಿ ಸ್ವೀಕೃತಿಯಾಗಿ ಅವಧಿಯು ಮುಗಿದ ನಂತರ ಮಾಡಿದ ಸ್ವೀಕೃತಿ ಯಾವುದೇ ಪರಿಣಾಮ ಹೊಂದಿರುವುದಿಲ್ಲ ಮತ್ತು ಹೊಸ ಕಾಲಪರಿಮಿತಿ ಕೇಂದ್ರ ಬಿಂದುವನ್ನು ಕೊಡಲಾಗುವುದಿಲ್ಲ.

೨. ಸ್ವೀಕೃತಿಯು ಲಿಖಿತ ರೂಪದಲ್ಲಿರತಕ್ಕದ್ದು.

೩. ಸ್ವೀಕೃತಿಗೆ ಹೊಣೆಗಾರಿಕೆಯುಳ್ಳ ಕಕ್ಷಿಗಾರನು ಅಥವಾ ಅವನಿಂದ ಅಧಿಕಾರ ಪಡೆದ ಏಜೆಂಟನು ಸಹಿ ಮಾಡತಕ್ಕದ್ದು.

೪. ಈ ಸ್ವೀಕೃತಿಯನ್ನು ಸಾಲ ಕೊಟ್ಟವನಿಗೇ ನೀಡಬೇಕೆಂದಿಲ್ಲ.

೫. ಈ ಸ್ವೀಕೃತಿಯು ಜಾರಿಯಲ್ಲಿರುವ ಹೊಣೆಗಾರಿಕೆಯ ಒಪ್ಪಿಗೆಯನ್ನು ಒಳಗೊಂಡಿರತಕ್ಕದ್ದು. ಇದು ಅವಶ್ಯವಾಗಿ ಹಣಸಂದಾಯ ಮಾಡುವ ನಿರಾಕರಣೆ ಅಥವಾ ವಜಾ ಮಾಡುವ ಕ್ಲೇಮ್ ಮಾಗಣಿಗಳನ್ನು ಒಳಗೊಂಡಿರಬಹುದು.

II. ಕಲಂ ೨೧(೨)– ಜಂಟಿ ಹೊಣೆಗಾರಿಕೆಯುಳ್ಳ ವ್ಯಕ್ತಿಗಳಿಂದ ಸ್ವೀಕೃತಿ.

೧. ಯಾವುದೇ ಒಂದು ಆಸ್ತಿ ಅಥವಾ ಹಕ್ಕನ್ನು ಜಂಟಿ ಹೊಣೆಗಾರಿಕೆಯುಳ್ಳ ಜಂಟೀ ಗುತ್ತಿಗೆದಾರರು, ಪಾಲುಗಾರರು, ಕಾರ್ಯನಿರ್ವಾಹಕರು, ಒತ್ತೆ ಹಾಕಿಕೊಂಡವರು, ಮುಂತಾದ ವ್ಯಕ್ತಿಗಳ ವಿರುದ್ಧ ಕ್ಲೇಮ್ (ಮಾಗಣಿ) ಮಾಡಿದಾಗ ಅದರ ಸ್ವೀಕೃತಿಗೆ ಅದರಲ್ಲಿ ಯಾರೇ ಒಬ್ಬರು ಅಥವಾ ಅವರ ಏಜೆಂಟನು ಸಹಿ ಮಾಡಿದರೆ ಅದಕ್ಕೆ ಅವರೆಲ್ಲರೂ ಋಣಭಾರಿಗಳಾಗಿರುತ್ತಾರೆ.

III. ಕಲಂ ೨೧ (೩) ಹಿಂದೂ ವಿಧವೆಯಿಂದ ಸ್ವೀಕೃತ

ಹಿಂದೂ ವಿಧವೆ ಅಥವಾ ಇತರ ಮಿತಿಗೆ ಒಳಪಟ್ಟ ಮಾಲೀಕನಿಂದ ಪಡೆದ ಸ್ವೀಕೃತಿಯು ಅವರ ಉತ್ತರಾಧಿಕಾರಿಗಳಿಗೆ ಬಂಧನಕಾರಿಯಾಗಿರುತ್ತದೆ.

IV. ಕಲಮು ೨೧ (೩) ಒಬ್ಬ ಹಿಂದೂ ಅವಿಭಕ್ತ ಕುಟುಂಬದ ವ್ಯವಸ್ಥಾಪಕನಿಂದ ಸ್ವೀಕೃತಿ.

ಒಬ್ಬ ಹಿಂದೂ ಅವಿಭಕ್ತ ಕುಟುಂಬದ ವ್ಯವಸ್ಥಾಪಕ ಅಥವಾ ಅವನ ಏಜೆಂಟನು ಸಹಿ ಮಾಡಿದ ಸ್ವೀಕೃತಿಯು ಒಂದು ವೇಳೆ ಅದು ಇಡಿ ಕುಟುಂಬದ ಹೊಣೆಗಾರಿಕೆಗೆ ಸಂಬಂಧಿಸಿದ್ದರೆ ಅದು ಆ ಕುಟುಂಬದ ಎಲ್ಲ ಸದಸ್ಯರಿಗೂ ಬಂಧನಕಾರಿಯಾಗಿರುತ್ತದೆ.

## ಸಾಲದ ಮೇಲೆ ಬಡ್ಡಿ ಕೊಡುವುದು ಇಲ್ಲವೆ ವಾರಸುತನ ಕಲಮು ೨೦– ಅಸಲಿನಲ್ಲಿ ಭಾಗಶಃ ಸಂದಾಯ ಮಾಡುವಿಕೆ

೧. ಕಾಲ ಪರಿಮಿತಿಯು ಮುಗಿಯುವ ಮೊದಲೇ ಅದನ್ನು ಸಂದಾಯ ಮಾಡಿರಬೇಕು.

೨. ಈ ಹಣವನ್ನು ಸಾಲ ತೆಗೆದುಕೊಂಡವನು ಇಲ್ಲವೇ ಅವನಿಂದ ಕಾನೂನುಬದ್ಧ ಅಧಿಕಾರ ಪಡೆದ ಏಜೆಂಟನು ಸಂದಾಯ ಮಾಡಿರಬೇಕು.

೩. ಈ ಸಂದಾಯವನ್ನು ಸ್ವ–ಇಚ್ಛೆಯಿಂದ ಮಾಡಿರಬೇಕು.

## ಕಲಮು ೨೩೦ ಸತತವಾಗಿ ಕರಾರಿನ ಉಲ್ಲಂಘನೆ ಮತ್ತು ಒಪ್ಪಂದದ ಹೊರತಾಗಿ ಸತತವಾಗಿ ಮಾಡಿದ ಅಕ್ರಮ ಕೃತ್ಯ

೧. ಸತತ ಕರಾರು ಉಲ್ಲಂಘನೆ ಅಥವಾ ಸತತ ಅಕ್ರಮ ಕೃತ್ಯದ ಪ್ರಕರಣಗಳಲ್ಲಿ ಪ್ರತಿಯೊಮ್ಮೆ ಕರಾರು ಉಲ್ಲಂಘನೆ ಅಥವಾ ಅಕ್ರಮ ಕೃತ್ಯ ಎಸಗಿದಾಗಲೆಲ್ಲ ಹೊಸದಾಗಿ ಕಾಲ ಪರಿಮಿತಿಯ ಅವಧಿಯು ಪ್ರಾರಂಭವಾಗುತ್ತದೆ.

## ಪ್ರಶ್ನೆ– ಸತತ ಉಲ್ಲಂಘನೆ ಮತ್ತು ಸತತ ಕೃತ್ಯ ಅಂದರೇನು? ಸತತ ಕರಾರು ಉಲ್ಲಂಘನೆ

೧. ಒಂದು ಬಾಡಿಗೆ ಪತ್ರದಲ್ಲಿ ದುರಸ್ತಿಗಾಗಿ ಮಾಡಿದ ಕರಾರು ಆ ಕಟ್ಟಡವನ್ನು ದುರಸ್ತಿ ಮಾಡದಿರುವ ಸಮಯದವರೆಗೆ ಪ್ರತಿದಿನವೂ ಅದನ್ನು ಉಲ್ಲಂಘಿಸಿದಂತೆ ಆಗುತ್ತದೆ.

೨. ಆ ಬಾಡಿಗೆ ಪತ್ರದಲ್ಲಿ ಮಾಡಿಕೊಂಡ ಕರಾರಿನ ವಿರುದ್ಧವಾಗಿ ಆ ಕಟ್ಟಡದ ಉಪಯೋಗ ಮಾಡುವುದು.

**ಒಂದು ಅಪಕೃತ್ಯಕ್ಕೆ ಸಂಬಂಧಿಸಿದಂತೆ ಸತತ ಅಕ್ರಮ ಕೃತ್ಯಗಳು**

೧. ಒಂದು ವ್ಯಾಪಾರ ಚಿನ್ಹೆಯ ಉಲ್ಲಂಘನೆ.

೨. ಒಬ್ಬ ಹೆಂಡತಿಯು ತನ್ನ ಗಂಡನ ಮನೆಗೆ ಮರಳಲು ನಿರಾಕರಿಸುವಿಕೆ.

ಈ ಮೇಲಣ ಪ್ರಕರಣಗಳಲ್ಲಿ ದಾವೆ ಹೂಡುವ ಹಕ್ಕು ಪ್ರತಿದಿನವು ಉದ್ಭವಿಸುತ್ತದೆ.

೩. ಸತತ ಅಕ್ರಮ ಕೃತ್ಯ ಹಾಗೂ ಸತತವಲ್ಲದ ಅಕ್ರಮ ಕೃತ್ಯಗಳ ನಡುವೆ ವ್ಯತ್ಯಾಸ ಮಾಡುವುದು ಕಷ್ಟಕರವಾಗಿರುತ್ತದೆ. ಒಂದು ಅಕ್ರಮ ಕೃತ್ಯವು ಒಮ್ಮೆಯೇ ನಡೆದರೂ ಅದರ ಪರಿಣಾಮ ಸತತವಾಗಿ ಮುಂದುವರೆಯುವ ಕಾರಣಕ್ಕಾಗಿ ಅಥವಾ ಒಂದು ಅಕ್ರಮ ಕೃತ್ಯವನ್ನು ಮೇಲಿಂದ ಮೇಲೆ ಎಸಗುವ ಕಾರಣಕ್ಕಾಗಿ ಅದು ಸತತ ಅಕ್ರಮ ಕೃತ್ಯವಾಗಿರುತ್ತದೆ. ಸತತ ಅಕ್ರಮ ಕೃತ್ಯದ ಪ್ರಕರಣವು ಮೇಲಿಂದ ಮೇಲೆ ಅಕ್ರಮ ಕೃತ್ಯವನ್ನು ಎಸಗುವ ಪ್ರಕರಣವಾಗಿರುತ್ತದೆಯೇ ವಿನಾ ಅಕ್ರಮ ಕೃತ್ಯದ ಪರಿಣಾಮದ ಸತತ ಮುಂದುವರಿಕೆಯ ಪ್ರಕರಣವಾಗಿರುವುದಿಲ್ಲ.

# ಅಧ್ಯಾಯ ೬
# ಬ್ರಿಟಿಷ್ ಭಾರತದಲ್ಲಿ ದಂಡ ಪ್ರಕ್ರಿಯಾ ಕಾನೂನು

# ಅಧ್ಯಾಯ ೬

# ಬ್ರಿಟಿಷ್ ಭಾರತದಲ್ಲಿ ದಂಡ ಪ್ರಕ್ರಿಯಾ ಕಾನೂನು

## ಪ್ರಾರಂಭಿಕೆ

### ಅಕ್ರಮ ಮತ್ತು ಅದರ ಪರಿಹಾರ

೧. ಅಮೆರಿಕ ಸಂಯುಕ್ತ ಸಂಸ್ಥಾನಗಳ (ಯು.ಎಸ್.ಎ.) ಸಂವಿಧಾನದಲ್ಲಿಯ ಒಂದು ಖಂಡವು ಈ ರೀತಿ ಹೇಳುತ್ತದೆ.

"ಯಾವುದೇ ನಾಗರಿಕನಿಗೆ ಕಾನೂನುಬದ್ಧ ವಿಧಿವಿಧಾನವಿಲ್ಲದೆ ಅವನ ಜೀವ, ಸ್ವಾತಂತ್ರ್ಯ ಹಾಗೂ ಆಸ್ತಿಯನ್ನು ಹರಣಮಾಡುವ ಹಾಗಿಲ್ಲ."

ಬೇರೆ ದೇಶಗಳ ಸಂವಿಧಾನಗಳಲ್ಲಿ ಇಂತಹ ಒಂದು ಖಂಡವು ಕಂಡುಬರುವುದಿಲ್ಲ. ಪ್ರತಿಯೊಂದು ನಾಗರಿಕ ದೇಶವು ತನ್ನ ನಾಗರಿಕರ ಜೀವ, ಸ್ವಾತಂತ್ರ್ಯ, ಆಸ್ತಿಯನ್ನು ಅಕ್ರಮ ಧಾಳಿಗಳಿಂದ ಸಂರಕ್ಷಿಸ ಬಯಸುತ್ತದೆ.

ಇಂತಹ ಭರವಸೆಯು ದೇಶದ ಬುನಾದಿಯಾಗಿರುತ್ತದೆ. ಇದನ್ನು ಗುರಿಯಾಗಿಟ್ಟುಕೊಂಡು ಪ್ರತಿಯೊಂದು ದೇಶವು ಅಕ್ರಮ ಕೃತ್ಯಗಳನ್ನು ವ್ಯಾಖ್ಯಾಯಿಸುವ ಕಾನೂನಿನ ಸಂಹಿತೆಯನ್ನು ಹೊಂದಿರುತ್ತದೆ. ಭಾರತದಲ್ಲಿ ನಾವು ದಂಡಸಂಹಿತೆ ಮತ್ತು ಅಪಕೃತ್ಯ ಕಾನೂನನ್ನು ಹೊಂದಿರುತ್ತೇವೆ.

೨. ಅಕ್ರಮ ಕೃತ್ಯಗಳು ದಿವಾಣಿ ಇಲ್ಲವೆ ಅಪರಾಧಿಕವಾಗಿರುತ್ತವೆ. ಕೆಲವು ಅಕ್ರಮ ಕೃತ್ಯಗಳು ದಿವಾಣಿ ಹಾಗೂ ಅಪರಾಧಿಕ ಹೀಗೆ ಎರಡೂ ಆಗಿರುತ್ತವೆ. ಹಲ್ಲೆ, ಮಾನಹಾನಿ, ಇವುಗಳು ದಿವಾಣಿ ಹಾಗೂ ಅಪರಾಧಿಕ ಎರಡು ತರಹದ ಅಕ್ರಮ ಕೃತ್ಯಗಳಾಗಿರುತ್ತವೆ. ಬಾಧಿತ ವ್ಯಕ್ತಿಯು ದಿವಾಣಿ ನ್ಯಾಯಾಲಯದಲ್ಲಿಯೂ ಮತ್ತು ಅಪರಾಧಿಕ ನ್ಯಾಯಾಲಯದಲ್ಲಿಯೂ ದಾವೆ ಹೂಡಬಹುದಾಗಿದೆ.

೩. **ಪರಿಹಾರ:** ಸಮರ್ಪಕವಾದ ಪರಿಹಾರವನ್ನು ನೀಡದೆ ಯಾವುದೇ ಒಂದು ಅಕ್ರಮ ಕೃತ್ಯವನ್ನು ಅಕ್ರಮವೆಂದು ಶಾಸನೀಕರಿಸುವುದರಿಂದ ಯಾವುದೇ ಉಪಯೋಗ ಇರುವುದಿಲ್ಲ. ಇದಕ್ಕೆ ವಿರುದ್ಧವಾಗಿ ಕಾನೂನು ಒಂದು ಅಕ್ರಮ ಸತ್ಯವನ್ನು ಮತ್ತು ಗುರುತಿಸಬೇಕಾದರೆ ಅದಕ್ಕೊಂದು ಪರಿಹಾರವನ್ನು ನೀಡಿರಲೇ ಬೇಕಾಗುತ್ತದೆ. ಯಾವುದೇ ಒಂದು ಅಕ್ರಮ ಕೃತ್ಯಕ್ಕೆ ಪರಿಹಾರವನ್ನು ರೂಪಿಸಿರದಿದ್ದರೆ ಅಂತಹ ಅಕ್ರಮ ಕೃತ್ಯದ ಶಾಸನೀಕರಣವು ನಿರರ್ಥಕ ಕೆಲಸವಾಗಿರುತ್ತದೆ.

ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಬಂದೀ ಪ್ರತ್ಯಕ್ಷೀಕರಣ (Habeus Corpus).

೪. ದಂಡ ಪ್ರಕ್ರಿಯಾ ಸಂಹಿತೆಯು ಒಂದು ಪರಿಹಾರಾತ್ಮಕ ಕಾನೂನು ಆಗಿರುತ್ತದೆ. ಅದು ಬಾಧಿತ ವ್ಯಕ್ತಿಗೆ ಅಪರಾಧಿಯ ವಿರುದ್ಧ ಅವನಿಗೆ ಎಸಗಲಾದ ಅಪರಾಧಿಕ ಕೃತ್ಯಕ್ಕೆ ಸಮರ್ಪಕವಾಗಿ ಪರಿಹಾರವನ್ನು ನೀಡುತ್ತದೆ. ಕಾನೂನು ಹತ್ತು ಜನ ಅಪರಾಧಿಗಳನ್ನು ತಪ್ಪಿಸಿಕೊಳ್ಳಲು ಬಿಟ್ಟರೂ, ಒಬ್ಬ ನಿರಪರಾಧಿ ವ್ಯಕ್ತಿಯನ್ನು ಶಿಕ್ಷಿಸುವುದಿಲ್ಲವೆನ್ನುವುದು ಒಂದು ಪ್ರಸಿದ್ಧ ಕಲ್ಪನೆಯಾಗಿರುತ್ತದೆ. ಇದು ಸಂಪೂರ್ಣವಾಗಿ

ದೋಷಯುಕ್ತವಾಗಿರುತ್ತದೆ. ಕಾನೂನು ಹೇಳುವುದೇನೆಂದರೆ– ಯಾವುದೇ ವ್ಯಕ್ತಿಯನ್ನು ಕಾನೂನಿನಲ್ಲಿ ಅಳವಡಿಸಿಕೊಳ್ಳಲಾದ ಪ್ರಕ್ರಿಯೆಗೆ ಅನುಗುಣವಾಗಿ ಮಾತ್ರ ವಿಚಾರಣೆಗೆ ಗುರಿಪಡಿಸಬಹುದು.

೫. ದಂಡ ಪ್ರಕ್ರಿಯೆಯು ಈ ರೀತಿ ಹೇಳುತ್ತದೆ:

(೧) ಅಪರಾಧಿಕ ನ್ಯಾಯಾಲಯಗಳ ರಚನೆ.

(೨) ಅಪರಾಧಿಕ ನ್ಯಾಯಾಲಯಗಳ ಮುಂದೆ ವಿಚಾರಣೆಗಾಗಿ ಆರೋಪಿಯನ್ನು ತರುವ ವಿಧಾನಗಳು.

(೩) ಆರೋಪಿಯ ವಿಚಾರಣೆಗೆ ಸಂಬಂಧಿಸಿದ ನಿಯಮಗಳು.

(೪) ಶಿಕ್ಷೆಗೆ ಸಂಬಂಧಿಸಿದ ನಿಯಮಗಳು ಮತ್ತು

(೫) ವಿಚಾರಣೆಯಲ್ಲಿ ಆದ ದೋಷದ ಸರಿಪಡಿಸುವಿಕೆ ಆರೋಪಿಯನ್ನು ಶಿಕ್ಷಿಸುವುದು ಮುಂತಾದವುಗಳಿಗೆ ಸಂಬಂಧಿಸಿದ ನಿಯಮಗಳು.

* * *

## I. ಅಪರಾಧಿಕ ನ್ಯಾಯಾಲಯಗಳ ರಚನೆ

೭. ಈ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರೆಸಿಡೆನ್ಸಿ ವ್ಯವಸ್ಥೆ ಮತ್ತು ಪ್ರಾಂತೀಯ ವ್ಯವಸ್ಥೆ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕಾಗುತ್ತದೆ. ಇಂತಹ ವ್ಯತ್ಯಾಸವನ್ನು ಭಾರತದಲ್ಲಿ ಇತರ ಕಾನೂನುಗಳಿಗೆ ಸಂಬಂಧಿಸಿದಂತೆ ಸಹ ಮಾಡಲಾಗಿದೆ.

**ಉದಾ:** ದಿವಾಳಿ: ೧. ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಅಧಿನಿಯಮ.

೨. ಪ್ರಾಂತೀಯ ದಿವಾಳಿ ಅಧಿನಿಯಮ

**ಲಘು ವಿವಾದಗಳು:**

೧. ಪ್ರೆಸಿಡೆನ್ಸಿ ಪಟ್ಟಣಗಳು ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ

೨. ಪ್ರಾಂತೀಯ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ.

## ಅ. ಪ್ರಾಂತೀಯ ವ್ಯವಸ್ಥೆ

### ೧. ಸತ್ರ ನ್ಯಾಯಾಲಯಗಳು

**ಕಲಮು ೭ (೧)**

೮. (೧) ಪ್ರತಿಯೊಂದು ಪ್ರಾಂತವು ಒಂದು ಸತ್ರ ವಿಭಾಗವಾಗಿರುತ್ತದೆ ಅಥವಾ ಅದನ್ನು ಒಂದಕ್ಕಿಂತಲೂ ಹೆಚ್ಚು ಸತ್ರ ವಿಭಾಗದಲ್ಲಿ ವಿಭಾಗಿಸಬಹುದು. ಪ್ರತಿಯೊಂದು ಸತ್ರ ವಿಭಾಗವು ಒಂದು ಜಿಲ್ಲೆ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಹೊಂದಿರಬಹುದು.

**ಕಲಮು ೯ (೩)**

೩. ಪ್ರತಿಯೊಂದು ಸತ್ರ ವಿಭಾಗದಲ್ಲಿ ಹೆಚ್ಚುವರಿ ಸತ್ರ ನ್ಯಾಯಾಧೀಶರು ಮತ್ತು ಸಹಾಯಕ ನ್ಯಾಯಾಧೀಶರು ಒಂದು ಅಥವಾ ಹೆಚ್ಚು ಸತ್ರ ನ್ಯಾಯಾಲಯಗಳಲ್ಲಿ ನ್ಯಾಯ ಅಧಿಕಾರ ಚಲಾಯಿಸಬಹುದು.

**ಕಲಮು ೯ (೨)**

೪. ಸತ್ರ ನ್ಯಾಯಾಲಯವು ತನ್ನ ಕಾರ್ಯವನ್ನು ಸ್ಥಳೀಯ ಸರಕಾರದ ರಾಜ್ಯ ಪತ್ರದಲ್ಲಿ ಕಾಣಿಸಿದ ಸ್ಥಳ ಹಾಗೂ ಸ್ಥಳಗಳಲ್ಲಿ ನಡೆಸಬಹುದಾಗಿದೆ.

**ಕಲಮು ೯ (೪)**

೫. ಒಂದು ವಿಭಾಗದ ಸತ್ರ ನ್ಯಾಯಾಧೀಶನನ್ನು ಇನ್ನೊಂದು ವಿಭಾಗದ ಹೆಚ್ಚುವರಿ ಸತ್ರ ನ್ಯಾಯಾಧೀಶನನ್ನಾಗಿ ನೇಮಿಸಬಹುದಾಗಿದೆ. ಅಂತಹ ಸಂದರ್ಭಗಳಲ್ಲಿ ಅವನು ಯಾವುದೇ ವಿಭಾಗದಲ್ಲಿ ಕುಳಿತು ಪ್ರಕರಣಗಳನ್ನು ನಿಖಾಲೆ ಮಾಡಬಹುದಾಗಿದೆ.

**೨. ದಂಡಾಧಿಕಾರಿಗಳ ನ್ಯಾಯಾಲಯಗಳು**

೯. (೧) ಜಿಲ್ಲಾ ದಂಡಾಧಿಕಾರಿಗಳು

**ಕಲಮು ೧೦**

(೧) ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಒಂದನೆಯ (ಪ್ರಥಮ)ಶ್ರೇಣಿ ದಂಡಾಧಿಕಾರಿ ಇರುತ್ತಾನೆ. ಮತ್ತು ಅವನನ್ನು ಜಿಲ್ಲಾ ದಂಡಾಧಿಕಾರಿಯೆಂದು ಕರೆಯಲಾಗುತ್ತದೆ.

(೨) ಯಾವುದೇ ಪ್ರಥಮ ಶ್ರೇಣಿ ದಂಡಾಧಿಕಾರಿಯನ್ನು ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಯೆಂದು ಕೆಲಸ ಮಾಡಲು ನೇಮಿಸಬಹುದಾಗಿದೆ.

**(೨) ಉಪ ವಿಭಾಗೀಯ ದಂಡಾಧಿಕಾರಿಗಳು**

**ಕಲಮು ೮ (೧)**

೧೦. ಒಂದು ಜಿಲ್ಲೆಯನ್ನು ಉಪ ವಿಭಾಗದಲ್ಲಿ ವಿಭಾಗಿಸಬಹುದು.

**ಕಲಮು ೧೩ (೧) ಮತ್ತು (೨)**

ಒಬ್ಬ ಪ್ರಥಮ ಶ್ರೇಣಿ ದಂಡಾಧಿಕಾರಿ ಅಥವಾ ದ್ವಿತೀಯ ಶ್ರೇಣಿ ದಂಡಾಧಿಕಾರಿಯನ್ನು ಒಂದು ಉಪವಿಭಾಗದ ಪ್ರಭಾರಿಯನ್ನಾಗಿ ಮಾಡಬಹುದು ಮತ್ತು ಅವನನ್ನು ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್‌ನೆಂದು ಕರೆಯಲಾಗುತ್ತದೆ.

**(೩) ಅಧೀನ ದಂಡಾಧಿಕಾರಿಗಳು**

**ಕಲಮು ೧೨ (೧)**

೧೧. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ದಂಡಾಧಿಕಾರಿಯ ಹೊರತಾಗಿ ಅವಶ್ಯವಿರುವಷ್ಟು ಪ್ರಥಮ ಶ್ರೇಣಿ, ದ್ವಿತೀಯ ಶ್ರೇಣಿ ಮತ್ತು ತೃತೀಯ ಶ್ರೇಣಿಯ ದಂಡಾಧಿಕಾರಿಗಳನ್ನು ನೇಮಿಸಬಹುದು. ಪ್ರತಿಯೊಬ್ಬರಿಗೆ ನಿರ್ದಿಷ್ಟಪಡಿಸಬಹುದಾದ ಅಂತಹ ಸ್ಥಾನಿಕ ಸ್ಥಳಗಳಲ್ಲಿ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಹೊಂದುತ್ತಾರೆ.

**ಕಲಮು ೧೨ (೨)**

ಅವರ ಇಂತಹ ಕ್ಷೇತ್ರವ್ಯಾಪ್ತಿಯನ್ನು ಗೊತ್ತುಪಡಿಸಿರದಿದ್ದರೆ, ಅವರು ತಮ್ಮ ಅಧಿಕಾರವನ್ನು ಇಡಿ ಜಿಲ್ಲೆಯಲ್ಲಿ ನಡೆಸತಕ್ಕದ್ದು.

### ೩. ಜಿಲ್ಲಾ ದಂಡಾಧಿಕಾರಿ ಮತ್ತು ಪ್ರಥಮ ದರ್ಜೆಯ ದಂಡಾಧಿಕಾರಿ

ಈ ಸಂಹಿತೆಯ ಯಾವುದೇ ನಿರ್ದಿಷ್ಟ ನ್ಯಾಯಾಲಯವನ್ನು ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯವೆಂದು ಮನ್ನಿಸುವುದಿಲ್ಲ. ಆದರೆ ೧ನೆಯ ದರ್ಜೆ, ೨ನೆಯ ದರ್ಜೆ ಮತ್ತು ೩ನೆಯ ದರ್ಜೆಯ ದಂಡಾಧಿಕಾರಿಯ ನ್ಯಾಯಾಲಯಗಳನ್ನು ಮಾತ್ರ ಈ ರೀತಿ ಗುರುತಿಸುತ್ತದೆ.

ಒಂದು ಪ್ರಕರಣದ ವಿಚಾರಣೆ ಕುರಿತಂತೆ, ಒಬ್ಬ ಕಾರ್ಯ ನಿರ್ವಾಹಕ ಜಿಲ್ಲಾ ದಂಡಾಧಿಕಾರಿಯನ್ನು ಅದು ಮುಗಿಯುವ ಮುಂಚೆಯೇ ಅವನನ್ನು ಪೂರ್ವಸ್ಥಾನಕ್ಕೆ ಮೊದಲನೆಯ ಶ್ರೇಣಿಯ ದಂಡಾಧಿಕಾರಿಗೆ ಯಾವ ತನ್ನ ಸ್ಥಾನಬಲದಿಂದ ಈ ಅಪರಾಧದ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯು ಉಂಟಾಗಿತ್ತೋ ಅವನು ಆ ವಿಚಾರಣೆಯನ್ನು ಮುಂದುವರಿಸಬಹುದೆಂದು ನಿರ್ಣಯಿಸಲಾಗಿದೆ.

**ಎಂಪರರ್ ವಿರುದ್ಧ ಸೈಯದ್ ಹುಸೇನ್ ೩ ಎ.ಎಲ್.ಜೆ. ೮೨೫**

೧೧. ಅಸಲ (ಮೂಲ) ಅಧಿಕಾರ ವ್ಯಾಪ್ತಿ ಕುರಿತಂತೆ ತನ್ನ ವಿಭಾಗದ ಹೊರಗಡೆಗೆ ಘಟಿಸಿದ ಅಪರಾಧಗಳನ್ನು ಕುರಿತು ಆ ಜಿಲ್ಲಾ ದಂಡಾಧಿಕಾರಿಯು ಏನನ್ನಾದರೂ ಮಾಡಬಹುದು. ಉಪವಿಭಾಗದ ದಂಡಾಧಿಕಾರಿಯು ತನ್ನ ಸ್ಥಾನಿಕ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಅಪರಾಧಗಳ ವಿಚಾರಣೆ ಮಾಡಲು ಸಕ್ಷಮನಾಗಿದ್ದಾನೆ.

### ೪. ವಿಶೇಷ ದಂಡಾಧಿಕಾರಿ

**ಕಲಮು ೧೪ (೧):**

೧೨. (೧) ಯಾವುದೇ ಸ್ಥಳೀಯ ಕ್ಷೇತ್ರದ ಜನರಲ್ಲಿ ಪ್ರಥಮ ಶ್ರೇಣಿ, ದ್ವಿತೀಯ ಶ್ರೇಣಿ, ಇಲ್ಲವೆ ತೃತೀಯ ಶ್ರೇಣಿ ದಂಡಾಧಿಕಾರಿಯ ಅಧಿಕಾರಗಳನ್ನು ಕೆಲವು ನಿರ್ದಿಷ್ಟ ಪ್ರಕರಣಗಳಿಗೆ ಇಲ್ಲವೆ ವರ್ಗಗಳ ಪ್ರಕರಣಗಳನ್ನು ಕುರಿತು ಇಲ್ಲವೆ ಸಾಮಾನ್ಯ ಪ್ರಕರಣಗಳನ್ನು ಕುರಿತು ಅಧಿಕಾರವನ್ನು ನಿಹಿತಗೊಳಿಸಬಹುದು.

(೨) ಅವರನ್ನು ವಿಶೇಷ ದಂಡಾಧಿಕಾರಿಯೆಂದು ಮತ್ತು ಒಂದು ನಿರ್ದಿಷ್ಟ ಪಡಿಸಿದ ಅವಧಿಗೆ ಕರೆಯಬೇಕು.

(೨) ಅಂತಹ ವ್ಯಕ್ತಿಯು ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಯಾಗಿರಬಹುದು.

(೪) ಅವನು ಪೊಲೀಸ್ ಅಧಿಕಾರಿಯಾಗಿದ್ದರೆ, ಅವನು ಸಹಾಯಕ ಜಿಲ್ಲಾ ಅಧೀಕ್ಷಕ ಹುದ್ದೆಗಿಂತ ಕಡಿಮೆ ಹುದ್ದೆಯವನಾಗಿರಬಾರದು ಮತ್ತು ಅವನಿಗೆ ಈ ಕೆಳಗಿನವುಗಳಿಗೆ ಅವಶ್ಯವಿರುವುದಕ್ಕಿಂತ ಹೆಚ್ಚಿನ ಯಾವ ಅಧಿಕಾರವೂ ಇರತಕ್ಕದ್ದಲ್ಲ.

(i) ಶಾಂತತೆಯನ್ನು ಕಾಪಾಡುವುದು.

(ii) ಅಪರಾಧಗಳನ್ನು ತಡೆಯುವುದು.

(iii) ಅಪರಾಧಿಯನ್ನು ಬಂಧಿಸಿಡುವುದು. ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲು ಅಪರಾಧಿಗಳನ್ನು

ಪತ್ತೆ ಮಾಡುವುದು, ಹಿಡಿಯುವುದು ಮತ್ತು ಬಂಧಿಸಿ ಇಡುವುದು.

(iv) ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಅನ್ವಯ ಅವನಿಗೆ ನೀಡಲಾದ ಕರ್ತವ್ಯಗಳನ್ನು ನೆರವೇರಿಸುವುದು.

### ೫. ನ್ಯಾಯಪೀಠ ದಂಡಾಧಿಕಾರಿಗಳು

**ಕಲಮು ೧೫ (೧)**

೧೩. ಯಾವುದೇ ಇಬ್ಬರು ಇಲ್ಲವೇ ಹೆಚ್ಚು ದಂಡಾಧಿಕಾರಿಗಳು ನ್ಯಾಯಪೀಠದ ರೂಪದಲ್ಲಿ ಕುಳಿತು ಕೊಳ್ಳಬಹುದಾಗಿದೆ ಮತ್ತು ಆ ಬಗ್ಗೆ ನಿರ್ಧರಿಸಿದ ಸ್ಥಾನಿಕ ವ್ಯಾಪ್ತಿಯಲ್ಲಿ ಬರುವಂತಹ ಪ್ರಕರಣಗಳನ್ನು ಅಥವಾ ಅಂತಹ ವರ್ಗಗಳ ಪ್ರಕರಣಗಳನ್ನು ವಿಚಾರಿಸಬಹುದಾಗಿದೆ.

### ೬. ಪ್ರಾಂತೀಯ ವ್ಯವಸ್ಥೆಯಲ್ಲಿ ವಿವಿಧ ನ್ಯಾಯಾಲಯಗಳ ಸಂಬಂಧ

**ಕಲಮು ೧೭ (೨)**

೧೪. ಒಂದು ಉಪ ವಿಭಾಗದಲ್ಲಿನ ಪ್ರತಿಯೊಂದು ನ್ಯಾಯಪೀಠ ಹಾಗೂ ಪ್ರತಿಯೊಬ್ಬ ದಂಡಾಧಿಕಾರಿ ಉಪವಿಭಾಗ ದಂಡಾಧಿಕಾರಿಯ ಅಧೀನಕ್ಕೆ ಒಳಗಾಗಿರುತ್ತಾರೆ. ಒಂದು ಉಪ ವಿಭಾಗದಲ್ಲಿ ಜಿಲ್ಲಾ ದಂಡಾಧಿಕಾರಿ ಮತ್ತು ಉಪ ವಿಭಾಗೀಯ ದಂಡಾಧಿಕಾರಿ ಇವರ ಅಧಿಕಾರ ವ್ಯಾಪ್ತಿಯು ಒಂದಕ್ಕೊಂದು ಸಮನ್ವಯವಾಗಿರುತ್ತದೆ.

ಉಪ ವಿಭಾಗಿ ದಂಡಾಧಿಕಾರಿಗೆ ಅಧೀನನಾಗಿರುವ ದಂಡಾಧಿಕಾರಿಯು ಜಿಲ್ಲಾ ದಂಡಾಧಿಕಾರನಿಗೂ ಅಧೀನನಾಗಿರುತ್ತಾನೆ. ಎಲ್ಲ ನ್ಯಾಯಪೀಠಗಳು ಮತ್ತು ಉಪವಿಭಾಗೀಯ ದಂಡಾಧಿಕಾರಿಗಳನ್ನೊಳಗೊಂಡು ಎಲ್ಲ ದಂಡಾಧಿಕಾರಿಗಳು ಜಿಲ್ಲಾ ದಂಡಾಧಿಕಾರಿಗೆ ಅಧೀನರಾಗಿರುತ್ತಾರೆ.

**ಕಲಮು ೧೦ (೩)**

ಒಬ್ಬ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಯು ಕೇವಲ ಕಲಮು ೧೯೨ (೧), ೪೦೭ (೨) ಮತ್ತು ೫೨೮ (೨) ಮತ್ತು (೩) ಇವುಗಳ ಉದ್ದೇಶಕ್ಕಾಗಿ ಜಿಲ್ಲಾ ದಂಡಾಧಿಕಾರಿಗೆ ಅಧೀನನಾಗಿರುತ್ತಾನೆ.

**ಕಲಮು ೧೭ (೩)**

ಎಲ್ಲಾ ಸಹಾಯಕ ಸತ್ರ ನ್ಯಾಯಾಧೀಶರು ಯಾವ ಸತ್ರ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಾರೋ ಅವನಿಗೆ ಅಧೀನರಾಗಿರುತ್ತಾರೆ.

೧೫. ಅಧೀನ– (೧) ಶ್ರೇಣಿಯಲ್ಲಿ ಕಡಿಮೆ

*೯ ಬಾಂಬೆ ೧೦೦ ೮ ಮದ್ರಾಸ್ ೧೮ (ಎಫ್.ಬಿ)*

(೨) ನ್ಯಾಯಿಕ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅಧೀನತೆ.

*೨ ಆಲ್. ೨೦೫ (ಎಫ್.ಬಿ.)*

ಅಧೀನತೆ ಇಲ್ಲದೆ ಕಡಿಮೆ ದರ್ಜೆ ಇರಬಹುದಾಗಿದೆ. ಆದರೆ ಕಡಿಮೆ ದರ್ಜೆ ಇಲ್ಲದೆ ಅಧೀನತೆ ಇರಲು ಸಾಧ್ಯವಿಲ್ಲ. ಏಕೆಂದರೆ ಅಧೀನತೆಯ ಅರ್ಥ ಕಡಿಮೆ ದರ್ಜೆ ಎಂದಾಗಿರುತ್ತದೆ.

**ಕಲಮು ೧೭ (೫)**

ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ವ್ಯಕ್ತಪಡಿಸಿದ ಹೊರತು ಜಿಲ್ಲಾ ದಂಡಾಧಿಕಾರಿ ಇಲ್ಲವೇ ದಂಡಾಧಿಕಾರಿ ಅಥವಾ ನ್ಯಾಯಪೀಠಗಳು, ಸತ್ರ ನ್ಯಾಯಾಧೀಶನಿಗೆ ಅಧೀನವಾಗಿರುವುದಿಲ್ಲ. ಕಲಮು ೧೨೩, ೧೯೩, ೪೦೮, ೪೩೧, ೪೩೬, ೪೩೭ ಇವುಗಳ ಉದ್ದೇಶಕ್ಕಾಗಿ ಸತ್ರ ನ್ಯಾಯಾಧೀಶನಿಗೆ ಅಧೀನರಾಗಿರುತ್ತಾರೆ. ಸತ್ರ ನ್ಯಾಯಾಧೀಶನು ದಲ್ಲಾಳಿಗಳನ್ನು ನ್ಯಾಯಾಲಯದಲ್ಲಿ ಪ್ರವೇಶಿಸುವಂತಿಲ್ಲವೆಂದು ಆಜ್ಞಾಪಿಸಿದರೆ ಅದು ದಂಡಾಧಿಕಾರಿಗೆ ಅನ್ವಯಿಸುವುದಿಲ್ಲ.

ಅಧೀನತೆಯೆಂದರೆ ಕೇವಲ ಕಾರ್ಯ ನಿರ್ವಹಣೆಗಾಗಿ ಮಾತ್ರವಲ್ಲ. ಅಧೀನತೆಯೆಂದರೆ ನ್ಯಾಯಿಕವಾಗಿ ದರ್ಜೆಯಲ್ಲಿಯೂ ಸಹ ಕಡಿಮೆಯಾಗಿರುತ್ತದೆ. ಅಂದರೆ ಕಲಮು ೪೩೫ರ ಕೆಳಗೆ ಒಂದು ನ್ಯಾಯಾಲಯದವರ ಮೇಲೆ ಮತ್ತೊಂದು ನ್ಯಾಯಾಲಯವು ಮುಂದುವರೆಯಬಲ್ಲದು.

(ದಾಖಲೆಗಳನ್ನು ತರಿಸಿಕೊಂಡು ಅದರ ಮೇಲೆ ಆದೇಶ ಮಾಡುವುದು)

*೯ ಬಾಂಬೆ – ೧೦೦*

## ಪ್ರೆಸಿಡೆನ್ಸಿ ಪಟ್ಟಣಗಳಲ್ಲಿನ ಪದ್ಧತಿ

### ೧. ದಂಡಾಧಿಕಾರಿಗಳು

**ಕಲಮು ೧೮ (೧)**

೧೬. ಪ್ರತಿಯೊಂದು ಪ್ರೆಸಿಡೆನ್ಸಿ ಟೌನ್‌ಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪ್ರೆಸಿಡೆನ್ಸಿ ದಂಡಾಧಿಕಾರಿ ಕೆಲಸ ಮಾಡಲು ನೇಮಕಾತಿ ಮಾಡಬೇಕು. ಒಂದು ಪಟ್ಟಣಕ್ಕೆ ನೇಮಕ ಮಾಡಿದವರಲ್ಲಿ ಒಬ್ಬರನ್ನು ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿ ಎಂದು ಕೆಲಸ ಮಾಡಲು ನೇಮಿಸಬೇಕು. ಯಾವುದೇ ವ್ಯಕ್ತಿಯನ್ನು ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿ ಎಂದು ಕೆಲಸ ಮಾಡಲು ನೇಮಿಸಬಹುದು.

**ಕಲಮು ೧೯**

೧೭. ಯಾವುದೇ ಇಬ್ಬರು ಇಲ್ಲವೆ ಹೆಚ್ಚು ಜನ ಪ್ರೆಸಿಡೆನ್ಸಿ ದಂಡಾಧಿಕಾರಿಗಳು ನ್ಯಾಯಪೀಠವಾಗಿ ಕುಳಿತುಕೊಳ್ಳಬಹುದಾಗಿದೆ.

### ೨. ಮುಖ್ಯ ಪ್ರಾಂತೀಯ ದಂಡಾಧಿಕಾರಿಯೊಂದಿಗೆ ದಂಡಾಧಿಕಾರಿಗಳ ಸಂಬಂಧ

**ಕಲಮು ೨೧**

೧೮. ಅವನು ಜಿಲ್ಲಾ ದಂಡಾಧಿಕಾರಿಯಂತಿದ್ದು ತನಗೆ ಅಧೀನರಾದ ದಂಡಾಧಿಕಾರಿಗಳನ್ನು ನಿಯಂತ್ರಿಸುತ್ತಾನೆ. ಸ್ಥಳೀಯ ಸರಕಾರವು ಅಂತಹ ಅಧೀನತೆಯ ಮಟ್ಟವನ್ನು ಘೋಷಿಸಬೇಕಾಗುತ್ತದೆ. ನಿಯಂತ್ರಣ:

೧. ನ್ಯಾಯಾಲಯಗಳಲ್ಲಿ ನಡತೆ ಮತ್ತು ವ್ಯವಹಾರ ಮತ್ತು ವೃತ್ತಿ, ಆಚರಣೆಯಲ್ಲಿ ಭಿನ್ನತೆ.

೨. ನ್ಯಾಯಪೀಠಗಳ ರಚನೆ.

೩. ನ್ಯಾಯಪೀಠಗಳನ್ನು ಸ್ಥಾಪಿಸುವ ಸ್ಥಳಗಳ ಮತ್ತು ಸಮಯಗಳ ನಿರ್ದಿಷ್ಟತೆ.

೪. ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಗೊಳಿಸುವುದು.

೧೮. ಮುಂಬೈ ಸರಕಾರವು ಪ್ರಾಂತೀಯ ದಂಡಾಧಿಕಾರಿಯು ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿಗೆ ಅಧೀನನಾಗಿರತಕ್ಕದ್ದೆಂದು ವ್ಯಾಖ್ಯಾನಿಸಿದೆ.

*ಬಾಂಬೆ ಎಲ್.ಆರ್. ೪೩೭*

## ಉಚ್ಚ ನ್ಯಾಯಾಲಯ

೧೯. ಈ ಮೇಲೆ ನಮೂದಿಸಿರುವ ಅಪರಾಧಿಕ ನ್ಯಾಯಾಲಯಗಳೊಂದಿಗೆ ನಾವು ಉಚ್ಚ ನ್ಯಾಯಾಲಯಗಳನ್ನು ಹೊಂದಿರುತ್ತೇವೆ.

ಉಚ್ಚ ನ್ಯಾಯಾಲಯಗಳು ೧೮೬೧ರಲ್ಲಿ ಸಂಸತ್ತು, ಶಾಸನೀಕರಿಸಿದ 'ಚಾರ್ಟರ್ಡ್ ಆಕ್ಟ್'ನಲ್ಲಿ ತಮ್ಮ ಮೂಲವನ್ನು ಹೊಂದಿರುತ್ತವೆ.

ಕಲಮು ೧ರ 'ಲೆಟರ್ಸ್ ಪೇಟೆಂಟ್'ನ ಮೂಲಕ ಮಹಾರಾಣಿಗೆ ಬಂಗಾಳದ ಕಲ್ಕತ್ತಾದಲ್ಲಿ, ಮುಂಬೈಯಲ್ಲಿ ಮತ್ತು ಮದ್ರಾಸಿನಲ್ಲಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸುವ ಅಧಿಕಾರವನ್ನು ನೀಡಿದೆ.

**ಕಲಮು ೯**

ಸಂಹಿತೆಯ ಕಲಮು ೧೦೬ರಲ್ಲಿ ಸ್ಥಾಪಿತವಾದ ಪ್ರತಿಯೊಂದು ಉಚ್ಚ ನ್ಯಾಯಾಲಯವು ಮಹಾರಾಣಿ ನೀಡಲಾದ ಹಾಗೂ ನಿರ್ದೇಶಿಸಲಾದ ಎಲ್ಲ ತರಹದ ದಿವಾಣಿ, ಅಪರಾಧಿಕ, ನೌಕಾದಳ ವಿಷಯ ಮತ್ತು ಉಪನೌಕಾದಳ ವಿಷಯ, ಮರಣಶಾಸನ, ಮೃತ್ಯುಪತ್ರರಹಿತ ಮತ್ತು ವೈವಾಹಿಕ ವ್ಯಾಪ್ತಿ, ಮೂಲ ಮತ್ತು ಮೇಲ್ಮನವಿ ಮತ್ತು ಸ್ಥಾಪಿಸಲಾದ ಪ್ರೆಸಿಡೆನ್ಸಿಯಲ್ಲಿ ನ್ಯಾಯ ನಿರ್ವಹಣೆಗಾಗಿ ಸಂಬಂಧಿಸಿದ ಎಲ್ಲ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

**ಉಚ್ಚ ನ್ಯಾಯಾಲಯದ ಅಧೀಕ್ಷಣಾ ಅಧಿಕಾರ**

ಶೆಯೋನಂದನ ವಿರುದ್ಧ ಚಕ್ರವರ್ತಿ, ೩ ಪಾಟ್ನ ಎಲ್.ಜೆ. ೫೮೧.೭.ಬಿ.

೧. ಉಚ್ಚ ನ್ಯಾಯಾಲಯದ ಮೇಲ್ವಿಚಾರಣಾ ಅಧಿಕಾರವು ೧೮೬೧ರ ಸಂಹಿತೆಯ ಕಲಮು ೧೫ರ ಭಾರತ ಸರಕಾರ ಸಂಹಿತೆ (ಕಲಮು ೧೦೭) ಮಿತಿಗೆ ಒಳಪಟ್ಟಿದೆ.

೨. ಉಚ್ಚ ನ್ಯಾಯಾಲಯಕ್ಕೆ ಅಧೀಕ್ಷಣೆ ಅಧಿಕಾರವಿದ್ದಲ್ಲಿ ಅಧೀನ ನ್ಯಾಯಾಲಯಕ್ಕಿಂತ ಅಂತಹ ಮಾರ್ಪಡಿಸಿದ ರೂಪದಲ್ಲಿದ್ದ ಆ ನ್ಯಾಯಾಲಯದ ಮೇಲೆ ಅಧೀಕ್ಷಣೆಗೆ ಒಳಪಡದ ಪ್ರಕರಣಗಳಲ್ಲಿ ಸಹ ಅಧೀಕ್ಷಣೆಯನ್ನು ಚಲಾಯಿಸುತ್ತದೆ. ಯಾವ ಪ್ರಕರಣಗಳಲ್ಲಿ ಅಧೀಕ್ಷಣೆಗೆ ಅವಕಾಶವಿರುವುದಿಲ್ಲವೋ ಅಂತಹ ಪ್ರಕರಣಗಳಲ್ಲಿ ಸಹ ಅದು ಅಧೀಕ್ಷಣೆಯನ್ನು ನಡೆಯಿಸುತ್ತದೆ.

### ೩. ಇಲ್ಲಿ ೩ ನಮೂನೆಯ ಪ್ರಕರಣಗಳನ್ನು ಪರಿಗಣಿಸತಕ್ಕದ್ದು

(ಅ) ಒಂದು ಕೆಳಗಿನ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಮೇಲ್ಮನವಿ ಅಧಿಕಾರಕ್ಕೆ ಒಳಪಟ್ಟಿದ್ದಾಗ ಕೆಲವು ಪ್ರಕರಣಗಳಲ್ಲಿ ಮಾತ್ರ ಕೇವಲ ಅಧೀಕ್ಷಣೆಯ ಹಕ್ಕು ಇರುತ್ತದೆ. ಅದರ ನ್ಯಾಯಕ್ಕೆ ಮೇಲ್ಮನವಿಯ ಹಕ್ಕು ಇರುತ್ತದೆ.

ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಹಕ್ಕು ಇದ್ದ ಪ್ರಕರಣಗಳಲ್ಲಿ ಅದರ ಅಧಿಕಾರವು

ಸೀಮಿತವಾಗಿರುವುದಿಲ್ಲ. ಈ ಅಧೀಕ್ಷಣೆಯ ವಿಶೇಷ ಅಧಿಕಾರವನ್ನು ಎಲ್ಲಿ ಬೇರೆ ವ್ಯವಹರಣೆಗಳ ಮೂಲಕ ಪರಿಹಾರ, ಅಂದರೆ ಮೇಲ್ಮನವಿ ಇಲ್ಲದೆ ಪುನರೀಕ್ಷಣೆಗಳಂಥವು ಇದ್ದರೆ ನಿಯಮಗಳ ಪ್ರಕಾರ ಚಲಾಯಿಸುವುದಿಲ್ಲ.

(ಬ) ಕೆಳಗಿನ ನ್ಯಾಯಾಲಯಗಳ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಪುನರೀಕ್ಷಣೆ ಅಧಿಕಾರವಿದ್ದಿದ್ದರೆ ಅಥವಾ ಉಚ್ಚ ನ್ಯಾಯಾಲಯಕ್ಕೆ ಕೆಳಗಿನ ನ್ಯಾಯಾಲಯವು ಅಭಿಪ್ರಾಯ ಕೊಟ್ಟಿರುವ ಹಕ್ಕು ಇದ್ದಾಗ ಒಂದು ಮಾರ್ಪಾಟಾದ ಮೇಲ್ಮನವಿ ನಮೂನೆಯು ಇದೆಯೆಂದು ಹೇಳಬಹುದು.

(ಕ) ಅಧೀನ ನ್ಯಾಯಾಲಯಗಳನ್ನು ಸ್ವತಂತ್ರವಾಗಿಟ್ಟು ಚಾರ್ಟರ್ಡ್ ಆಕ್ಟ್ ಕಲಮು ೧೫೮ರ ಮೇರೆಗೆ ಉಚ್ಚ ನ್ಯಾಯಾಲಯಗಳ ಅಧೀಕ್ಷಣೆ ಹಕ್ಕು ದಯಪಾಲಿಸಲಾಗಿದೆ.

೪. ಉಚ್ಚ ನ್ಯಾಯಾಲಯದ ಅಧೀಕ್ಷಣೆಯ ಹಕ್ಕು ಇಲ್ಲದೆ ಒಂದು ನ್ಯಾಯಾಲಯವನ್ನು ಸ್ಥಾಪಿಸ ಬಹುದು.

**ಬೇರೆ ಕ್ರಿಮಿನಲ್ ನ್ಯಾಯಾಲಯಗಳೊಂದಿಗೆ ಉಚ್ಚ ನ್ಯಾಯಾಲಯದ ಸಂಬಂಧ**

**ಕಲಮು ೧೫, ೧೦೭**

ಪ್ರತಿಯೊಂದು ಉಚ್ಚ ನ್ಯಾಯಾಲಯ ಮೇಲ್ಮನವಿ ಅಧಿಕಾರಕ್ಕೆ ಒಳಪಟ್ಟು ಮತ್ತು ಕೆಳಗಿನ ನ್ಯಾಯಾಲಯದ ಕಾಗದಪತ್ರಗಳನ್ನು ಹಾಗೂ ವರದಿ ಮುಂತಾದವುಗಳನ್ನು ತರಿಸಿಕೊಳ್ಳುವ ಹಕ್ಕು (ಅಧಿಕಾರ) ಹೊರತು ಮೇಲ್ವಿಚಾರಣೆಯ ಅಧಿಕಾರ ಹೊಂದಿರುತ್ತದೆ.

ಮೇಲ್ಮನವಿಗೆ ಒಳಪಟ್ಟ ನ್ಯಾಯಾಲಯಗಳು ಯಾವುವು?

**ಲೆಟರ್ಸ್ ಪೇಟಂಟ್**

ಪ್ರೆಸಿಡೆನ್ಸಿ ಟೌನ್‌ಗಳಲ್ಲಿ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಕೋರ್ಟಿನ ಮೇಲ್ಮನವಿ ನ್ಯಾಯಾಲಯ ಆಗಿರತಕ್ಕದ್ದು.

೩. ಪಾಟ್ನಾ ಎಲ್.ಜೆ. ೫೮೧೭ ಬ
ಶೇಯೋನಂದನ ವಿರುದ್ಧ ಎಂಪರರ್

ಎರಡು ಪ್ರಶ್ನೆಗಳು

೧. ಯಾವ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಅಧಿಕಾರ ವಿರುವುದಿಲ್ಲವೋ ಮತ್ತು ಕೇವಲ ಪುನರೀಕ್ಷಣೆ ಇಲ್ಲವೆ ಅಭಿಪ್ರಾಯ ಕೋರಿಕೆ ಅಧಿಕಾರ ಮಾತ್ರ ಇದೆಯೋ ಆಗ ಉಚ್ಚ ನ್ಯಾಯಾಲಯಕ್ಕೆ ಅಧೀಕ್ಷಣೆಯ ಹಕ್ಕು ಇರುವುದೇ?

೨. ಪ್ರೆಸಿಡೆನ್ಸಿ ಟೌನ್‌ನಲ್ಲಿ ಉಚ್ಚ ನ್ಯಾಯಾಲಯದ ಅಧೀಕ್ಷಣೆಯ ಅಧಿಕಾರಕ್ಕೆ ಒಳಪಡದ ಕ್ರಿಮಿನಲ್ ಕೋರ್ಟ್ ಇರಬಲ್ಲದೇ?

ಅಧಿಕಾರ ವ್ಯಾಪ್ತಿಯ ಸ್ಥಾನಿಕ ಮೇರೆಗಳು

೧೦. (೧) ಜಿಲ್ಲಾ ದಂಡಾಧಿಕಾರಿಯ ಸ್ಥಾನಿಕ ಅಧಿಕಾರ ವ್ಯಾಪ್ತಿಯ ಮೇರೆಗಳು ಆ ಜಿಲ್ಲೆಯ ಮೇರೆಗಳು.

೧೧ (೨) ಸಬ್ ಡಿವಿಜನಲ್ ದಂಡಾಧಿಕಾರಿಯದು ಆ ಉಪವಿಭಾಗ.

೧೨ (೩) ಅಧೀನ ದಂಡಾಧಿಕಾರಿಯದು ಸ್ಥಾನಿಕ ಸರಕಾರವು ನಿಗದಿಪಡಿಸಿದಂತಹ ಸ್ಥಾನಿಕ ಕ್ಷೇತ್ರವು.

೧೪ (೪) ವಿಶೇಷ ದಂಡಾಧಿಕಾರಿಯದು ಸ್ಥಾನಿಕ ಸರಕಾರವು ನಿಗದಿಪಡಿಸಬಹುದಾದ ಸ್ಥಾನಿಕ ಕ್ಷೇತ್ರ.

೨೯ (೫) ಪ್ರೆಸಿಡೆನ್ಸಿ ದಂಡಾಧಿಕಾರಿಯದು.


ಪ್ರತಿಯೊಬ್ಬ ಪ್ರೆಸಿಡೆನ್ಸಿ ದಂಡಾಧಿಕಾರಿ ತಾನು ನೇಮಕಗೊಂಡ ಪ್ರೆಸಿಡೆನ್ಸಿ ಟೌನ್‌ನಲ್ಲಿ ಎಲ್ಲ ಸ್ಥಳಗಳ ಮೇಲೆ ತನ್ನ ಅಧಿಕಾರವನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪಟ್ಟಣದ ಬಂದರು ಮತ್ತು ನೌಕಾ ಸಂಚಾರಕ್ಕೆ ಯೋಗ್ಯವಾದ ನದಿ ಇಲ್ಲವೇ ಅಲ್ಲಿಂದ ಹೊರಡುವ ಕಾಲುವೆ, ಈ ಪ್ರಕಾರ ಮೇರೆಗಳನ್ನು ಕಾನೂನಿನಲ್ಲಿ ವ್ಯಾಖ್ಯಾನಿಸಲಾಗಿದೆ.

(೬) ಸತ್ರ ನ್ಯಾಯಾಧೀಶ – ಒಂದು ಸತ್ರ ವಿಭಾಗದಲ್ಲಿ.

(೭) ಉಚ್ಚ ನ್ಯಾಯಾಲಯ.

**ಕ್ರಿಮಿನಲ್ ವಿಷಯಗಳಲ್ಲಿ ಲೆಟರ್ಸ್ ಪೇಟೆಂಟ್‌ನಿಂದ ದಯಪಾಲಿಸಿದ ಅಧಿಕಾರಗಳು ಯಾವುವು?**

೨೨. ಲೆಟರ್ಸ್ ಪೇಟೆಂಟು ನಿರ್ದೇಶಿಸಿದಂತೆ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಈ ಕೆಳಗಿನಂತೆ ಇರತಕ್ಕದ್ದು.




೨೩. ಉಚ್ಚ ನ್ಯಾಯಾಲಯಕ್ಕೆ ಕ್ರಿಮಿನಲ್ ಪ್ರಕರಣದ ಮೂಲ ಅಧಿಕಾರ ವ್ಯಾಪ್ತಿ ಇರುತ್ತದೆ. ಅದು ಸಾಮಾನ್ಯವಾಗಿ ಮೂಲಸ್ಥಾನಿಕ ಮೇರೆಗಳ ದಿವಾಣಿ ಅಧಿಕಾರ ವ್ಯಾಪ್ತಿಗೆ ಒಳಪಟ್ಟದ್ದು.

೨೪. ವಿಶೇಷ ಮೂಲ ಕ್ರಿಮಿನಲ್ ಅಧಿಕಾರ ವ್ಯಾಪ್ತಿ– ಉಚ್ಚ ನ್ಯಾಯಾಲಯಕ್ಕೆ ಕ್ರಿಮಿನಲ್ ಪ್ರಕರಣಗಳಲ್ಲಿ ವಿಶೇಷವಾಗಿ ಮೂಲ ಅಧಿಕಾರ ಇರುತ್ತದೆ. ಇದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಯಾವುದೇ ನ್ಯಾಯಾಲಯದ ಮೇಲೆ ಇದರ ಮೇಲ್ವಿಚಾರಣೆ ಅಧಿಕಾರವು ಇರುತ್ತದೆ.

೨೫. ಕ್ರಿಮಿನಲ್ ಮೇಲ್ಮನವಿ ಅಧಿಕಾರ ವ್ಯಾಪ್ತಿ: ಉಚ್ಚ ನ್ಯಾಯಾಲಯವು ಪ್ರೆಸಿಡೆನ್ಸಿ ಪಟ್ಟಣಗಳಲ್ಲಿರುವ

ಕ್ರಿಮಿನಲ್ ನ್ಯಾಯಾಲಯಗಳ ಮೇಲ್ಮನವಿ ನ್ಯಾಯಾಲಯವಾಗಿರುತ್ತದೆ. ಮತ್ತು ಉಳಿದ ನ್ಯಾಯಾಲಯಗಳ ಮೇಲೆ ತನ್ನ ಮೇಲ್ವಿಚಾರಣೆಯುಳ್ಳದ್ದು ಮತ್ತು ಜಾರಿಯಲ್ಲಿರುವ ಯಾವುದೇ ಕಾನೂನಿನ ಅನ್ವಯ ಮೇಲ್ಮನವಿ ಅಧಿಕಾರವನ್ನು ಚಲಾಯಿಸತಕ್ಕದ್ದು.

## ಪರಾರಿಯಾದ ಅಪರಾಧಿಗೆ ಶಿಕ್ಷೆ:

**ಕಲಮು ೩೯೭**

(೧) ಪರಾರಿಯಾದ ಒಬ್ಬ ಅಪರಾಧಿಗೆ ಶಿಕ್ಷೆಯನ್ನು ವಿಧಿಸಿದಾಗ, ಅಂತಹ ಶಿಕ್ಷೆಯು ಮರಣದಂಡನೆ ಇದ್ದರೆ ಅಥವಾ ದಂಡ ಇಲ್ಲವೆ ಛಡಿ ಏಟು ಆಗಿದ್ದರೆ, ಕೆಳಗೆ ಕಾಣಿಸಿದ ಉಪಬಂಧಗಳಿಗೆ ಒಳಪಟ್ಟು ಸೆರೆಮನೆವಾಸ, ದಾಸ್ಯದ ದಂಡ ಇಲ್ಲವೆ ಗಡಿಪಾರು ಇದ್ದರೆ ಅವು ಈ ಕೆಳಗಿನ ನಿಯಮಗಳ ಪ್ರಕಾರ ಜಾರಿಯಲ್ಲಿ ಬರುತ್ತವೆ. ಎಂದರೆ–

(೨) ಹೊಸ ಶಿಕ್ಷೆಯು ಘೋರತರದ್ದಾಗಿದ್ದರೆ, ತಪ್ಪಿಸಿಕೊಂಡಾಗ ಅನುಭವಿಸುತ್ತಿದ್ದ ಶಿಕ್ಷೆ. ಅಪರಾಧಿಯು ತಾನು ತಪ್ಪಿಸಿಕೊಂಡಾಗ ಅನುಭವಿಸುತ್ತಿದ್ದ ಶಿಕ್ಷೆಗಿಂತ ಈ ಹೊಸ ಶಿಕ್ಷೆಯು ಕಠಿಣತರವಾಗಿದ್ದರೆ ಅಂತಹ ಹೊಸ ಶಿಕ್ಷೆಯು ಆ ಕೂಡಲೇ ಜಾರಿಗೆ ಬರುತ್ತದೆ.

(೩) ಅಪರಾಧಿ ತಪ್ಪಿಸಿಕೊಳ್ಳುವಾಗ ಅನುಭವಿಸುತ್ತಿದ್ದ ಶಿಕ್ಷೆಗಿಂತ ಹೊಸ ಶಿಕ್ಷೆಯು ಘೋರತರವಾಗಿ ಇರದಿದ್ದರೆ ಈ ಹೊಸ ಶಿಕ್ಷೆಯು ಅವನು ತನ್ನ ಸೆರೆವಾಸದ ಅವಧಿಯು ಮುಗಿದ ನಂತರ ಜಾರಿಗೆ ಬರುತ್ತದೆ. ದಾಸ್ಯದಂಡ ಅಥವಾ ಗಡಿಪಾರು ಏನಾದರೂ ಇದ್ದರೆ ಅದಕ್ಕೆ ಸಮಾನವಾದ ಕಾಲ ಅವನು ತಪ್ಪಿಸಿಕೊಳ್ಳುವ ಕಾಲಕ್ಕೆ ತನ್ನ ಮೊದಲಿನ ಶಿಕ್ಷೆಯ ಉಳಿದ ಶಿಕ್ಷೆಗೆ ಸಮಾನವಾಗಿ ಈ ಶಿಕ್ಷೆ ವಿಧಿಸತಕ್ಕದ್ದು.

ವಿವರಣೆ: ಈ ಕಲಮಿನ ಉದ್ದೇಶಕ್ಕಾಗಿ:

(ಅ) ಗಡಿಪಾರು, ಇಲ್ಲವೇ ದಾಸ್ಯದಂಡ ಇವು ಸೆರೆಮನೆ ವಾಸಕ್ಕಿಂತ ಕಠೋರವೆಂದು ಗ್ರಹಿಸಲಾಗುವುದು.

(ಬ) ಏಕಾಂತ ಬಂಧನದ ಸೆರೆಮನೆಯ ವಾಸವು, ಸಾದಾ ಸೆರೆಮನೆ ವಾಸಕ್ಕಿಂತ ಕಠೋರವಾದುದು.

(ಕ) ಕಠಿಣ ಸೆರೆಮನೆಯ ವಾಸ ಶಿಕ್ಷೆಯು ಸಾದಾ ಸೆರೆಯವಾಸ ಏಕಾಂತ ಬಂಧನ ಇದು ಅಥವಾ ಇಲ್ಲದೆ ಇದ್ದ ಶಿಕ್ಷೆಗಿಂತ ಹೆಚ್ಚು ಕಠೋರವಾದುದೆಂದು ಗ್ರಹಿಸಲಾಗುವುದು.

**೩೯೭. ಒಂದು ಶಿಕ್ಷೆಯನ್ನು ಈಗಾಗಲೇ ಅನುಭವಿಸುತ್ತಿರುವ ವ್ಯಕ್ತಿಗೆ ಅದರ ಮೇಲೆ ಇನ್ನೊಂದು ಶಿಕ್ಷೆ–**

ಒಬ್ಬನು ಈಗಾಗಲೇ ಅನುಭವಿಸುತ್ತಿರುವ ಸೆರೆಮನೆ ವಾಸದ ಶಿಕ್ಷೆಗೆ ದಾಸ್ಯಗೊಂಡ ಅಥವಾ ಗಡಿಪಾರು ಶಿಕ್ಷೆ ಸೆರೆಮನೆವಾಸ ಈ ಶಿಕ್ಷೆಯನ್ನು ವಿಧಿಸಿದಾಗ ಅವನಿಗೆ ದಾಸ್ಯ ದಂಡ ಅಥವಾ ಗಡಿಪಾರು ಸೆರೆಮನೆಯ ವಾಸ, ದಾಸ್ಯದಂಡ ಅಥವಾ ಗಡಿಪಾರು ಈ ಶಿಕ್ಷೆಗಳು, ಆತನು ಈಗ ಅನುಭೋಗಿಸುತ್ತಿರುವ ಸೆರೆಮನೆವಾಸ ಮುಗಿದ ನಂತರ ದಾಸ್ಯ ದಂಡ, ಅಥವಾ ಗಡಿಪಾರು ಶಿಕ್ಷೆಯನ್ನು ಅವನಿಗೆ ಈ ಹಿಂದೆ ವಿಧಿಸಿದ್ದರೆ ನಂತರ ವಿಧಿಸಿದ ಶಿಕ್ಷೆ ಹಿಂದಿನ ಶಿಕ್ಷೆಗೆ ಸಮವರ್ತಿಯಾಗಿ ಇರತಕ್ಕದ್ದು. ಪರಂತು ಅವನು ಸೆರೆಮನೆವಾಸದ ಶಿಕ್ಷೆಯನ್ನು ಅನುಭವಿಸುತ್ತಿದ್ದರೆ, ಮತ್ತು ಅವನಿಗೆ ನಂತರ ಶಿಕ್ಷೆಯಾಗಿ, ಅವನಿಗೆ ಗಡಿಪಾರು ಶಿಕ್ಷೆ ವಿಧಿಸಿದ್ದರೆ ನ್ಯಾಯಾಲಯವು ತನ್ನ ವಿವೇಚನೆಯಲ್ಲಿ ನಂತರದ ಶಿಕ್ಷೆಯು ತತ್‌ಕ್ಷಣದಿಂದಲೇ ಪ್ರಾರಂಭವಾಗತಕ್ಕದ್ದು, ಇಲ್ಲವೆ ಅವನಿಗೆ ಈ ಹಿಂದೆ ವಿಧಿಸಿದ ಶಿಕ್ಷೆಯ ಅವಧಿಯು ಮುಗಿದ ನಂತರ ಪ್ರಾರಂಭವಾಗುತ್ತದೆ. ಪರಂತು ಒಬ್ಬನಿಗೆ ಅನ್ವಯ ಜಾಮೀನು ಕೊಡಲು ತಪ್ಪಿದರೆ ಸೆರೆಮನೆ ವಾಸದ ಶಿಕ್ಷೆ ವಿಧಿಸಿದರೆ ಆಗ

ಅಂತಹ ಶಿಕ್ಷೆ ಅನುಭೋಗಿಸುತ್ತಿದ್ದರೆ ಮತ್ತು ಅಂತಹ ಆದೇಶ ಹೊರಡುವ ಮುನ್ನವೇ ಶಿಕ್ಷೆ ವಿಧಿಸಿದ್ದರೆ ನಂತರ ವಿಧಿಸಿದ ಶಿಕ್ಷೆ ತತ್‌ಕ್ಷಣದಿಂದಲೇ ಜಾರಿಯಲ್ಲಿ ಬರುತ್ತದೆ.

**ಕಲಮು ೩೯೮ – (೧)**

ಒಬ್ಬ ವ್ಯಕ್ತಿಯು ಅವನ ಹಿಂದಿನ ಅಥವಾ ನಂತರದ ಶಿಕ್ಷೆಗೆ ಅರ್ಹನಾದಾಗ ಕಲಮು ೩೯೬ ಅಥವಾ ೩೯೭ರ ಅನ್ವಯ ಯಾವುದೇ ಕ್ಷಮೆ ಯಾಚಿಸುವಂತಿಲ್ಲ.

**೩೯೯. ಸುಧಾರಣಾಲಯಗಳಲ್ಲಿ ತರುವ ಅಪರಾಧಿಗಳ ಬಂಧನ**

(ಹಸ್ತಪ್ರತಿಯಲ್ಲಿ ಪುಟ ಖಾಲಿ ಇದೆ –ಸಂ)

**ಶಿಕ್ಷೆಯನ್ನು ತಡೆಹಿಡಿಯುವುದು, ಮನ್ನಾ ಮಾಡುವುದು ಮತ್ತು ಪರಿವರ್ತಿಸುವುದು**

(ಪುಟ ಖಾಲಿ ಇದೆ –ಸಂ)

**ಕಲಮು ೪೦೧**

ಗವರ್ನರ್–ಜನರಲ್–ಇನ್–ಕೌನ್ಸಿಲ್ ಇಲ್ಲವೇ ಸ್ಥಾನಿಕ ಸರಕಾರಗಳು ಯಾವುದೇ ಶಿಕ್ಷೆಯನ್ನು ಕರಾರಿಗೆ ಒಳಪಟ್ಟು ಇಲ್ಲವೆ ಯಾವುದೇ ಶಿಕ್ಷೆಯನ್ನು ತಡೆಹಿಡಿಯಬಹುದು, ಇಲ್ಲವೆ ಮಾಫಿ ಮಾಡಬಹುದು.

(ಹಸ್ತಪ್ರತಿಯಲ್ಲಿ ಪುಟ ಖಾಲಿ ಇದೆ –ಸಂ)

**ಕಲಮು ೪೦೨**

ಶಿಕ್ಷೆಯನ್ನು ಕಡಿಮೆಗೊಳಿಸುವ ಅಧಿಕಾರ.

(ಹಸ್ತಪ್ರತಿಯಲ್ಲಿ ಪುಟ ಖಾಲಿ ಇದೆ –ಸಂ)

**IV. ಅಧಿಕಾರ ವಹಿಸುವುದು, ಮುಂದುವರಿಸುವುದು ಮತ್ತು ರದ್ದುಪಡಿಸುವುದು**

**ಕಲಮು ೩೯**

(೧) ಸ್ಥಾನಿಕ ಸರಕಾರವು ತನ್ನ ಆದೇಶದ ಮೂಲಕ ವಿಶೇಷವಾಗಿ ಅವರ ಪದನಿಮಿತ್ತ ಅಧಿಕಾರವನ್ನು ಅವರ ಹೆಸರಿನಿಂದ ಅಧಿಕಾರ ವಹಿಸಿಕೊಡಬಹುದು, ಇಲ್ಲವೆ ಅವರ ಕಚೇರಿಯ ಹೆಸರಿನಿಂದ, ಇಲ್ಲವೆ ಸಾಮಾನ್ಯವಾಗಿ ಅಧಿಕಾರಿಗಳ ವರ್ಗನಿಮಿತ್ತ ಅವರ ಪದನಾಮದಿಂದ ನೇಮಿಸಲು ಈ ಸಂಹಿತೆಯ ಈ ಕಲಮಿನ ಅನ್ವಯ ಅಧಿಕಾರವನ್ನು ಪ್ರದತ್ತ ಮಾಡಿದೆ.

(೨) ಇಂತಹ ಪ್ರತಿಯೊಂದು ಆದೇಶವು ಯಾರಿಗೆ ಈ ರೀತಿ ಅಧಿಕಾರ ವಹಿಸಿಕೊಟ್ಟಿದೆಯೋ ಅವರಿಗೆ ಯಾವ ದಿನಾಂಕದಂದು ತಿಳಿಸಲಾಗಿದೆಯೋ, ಆ ದಿನಾಂಕದಂದು ಆದೇಶವು ಅಮಲಿನಲ್ಲಿ ಬರುತ್ತದೆ.

**ಕಲಮು ೪೦**

ಯಾವುದೇ ಸ್ಥಾನಿಕ ಕ್ಷೇತ್ರದ ಎಲ್ಲಾ ಕಡೆಗೆ ಈ ಸಂಹಿತೆಯ ಕೆಳಗೆ, ಸರಕಾರದ ಸೇವೆಯಲ್ಲಿರುವ

ಯಾವುದೇ ವ್ಯಕ್ತಿಗೆ ಅಧಿಕಾರವನ್ನು ಸಹಿತಗೊಳಿಸಿ ನೇಮಕ ಮಾಡಲಾಗಿದೆಯೇ? ಇದ್ದ ಹುದ್ದೆಗೆ ಸಮಾನವಾದುದು ಇಲ್ಲವೆ ಅದೇ ಸ್ವರೂಪದ ಯಾವ ಸ್ಥಾನಿಕ ಕ್ಷೇತ್ರದೊಳಗೆ ಸ್ಥಾನಿಕ ಸರಕಾರ ಬೇರೆ ನಿರ್ದೇಶನಗಳನ್ನು ನೀಡದ ಹೊರತು ಅಂಥ ಅಧಿಕಾರಿಯು ಯಾವ ಸ್ಥಾನಿಕ ಕ್ಷೇತ್ರದಲ್ಲಿ ನೇಮಕಗೊಂಡಿರುತ್ತಾನೆಯೋ ಅವನು ಅಂತಹ ಅಧಿಕಾರವನ್ನು ಚಲಾಯಿಸಬಹುದು.

**ಕಲಮು ೪೧**

(೧) ಸ್ಥಾನಿಕ ಸರಕಾರವು ಈ ಸಂಹಿತೆಯ ಕೆಳಗೆ ಯಾವುದೇ ವ್ಯಕ್ತಿಗೆ ಇಲ್ಲವೇ ತನಗೆ ಅಧೀನರಾದ ಅಧಿಕಾರಿಗಳಿಗೆ ಪ್ರದತ್ತ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(೨) ಜಿಲ್ಲಾ ದಂಡಾಧಿಕಾರಿಯು ಪ್ರದತ್ತ ಮಾಡಿದ ಯಾವುದೇ ಅಧಿಕಾರಗಳನ್ನು ಜಿಲ್ಲಾ ದಂಡಾಧಿಕಾರಿಯೇ ಹಿಂದಕ್ಕೆ ತೆಗೆದುಕೊಳ್ಳುವುದು. ಒಬ್ಬನು ತನ್ನ ಸಾಕ್ಷಿಯಲ್ಲಿ ಹೇಳಿದ್ದು ಫಿರ್ಯಾದಿಯಾಗುವುದಿಲ್ಲ.

(ಮೂಲ ಹಸ್ತಪ್ರತಿಯಲ್ಲಿ ಪುಟ ಖಾಲಿ ಬಿಡಲಾಗಿದೆ –ಸಂ)

## ಭಾಗ–೨
## ಒಬ್ಬ ಆಪಾದಿತನ ವಿಚಾರಣೆ

೧. ಒಂದು ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳುವುದು.

ಒಂದು ಅಪರಾಧ ಸಂಭವಿಸಿದಾಗ ದಂಡಾಧಿಕಾರಿಯು ಮೂರು ರೀತಿಯಲ್ಲಿ ಆ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳಬಲ್ಲನು.

**ಕಲಮು ೧೯೦**

(ಅ) ಒಂದು ಫಿರ್ಯಾದಿಯನ್ನು ಸ್ವೀಕರಿಸಿದ ನಂತರ ಅದರಲ್ಲಿಯ ಸಂಗತಿಗಳು ಅಪರಾಧ ಘಟಿಸಿದುದನ್ನು ತೋರಿಸುತ್ತವೆ.

(ಬ) ಯಾವುದೇ ಒಬ್ಬ ಪೊಲೀಸ್ ಅಧಿಕಾರಿಯು ಲಿಖಿತದಲ್ಲಿ ಅಂತಹ ಸಂಗತಿಗಳನ್ನು ತಿಳಿಸಿಕೊಟ್ಟ ವರದಿ.

(ಕ) ಪೊಲೀಸ್ ಅಧಿಕಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಯು ಕೊಟ್ಟ ಮಾಹಿತಿ ಇಲ್ಲವೆ ತನ್ನ ಸ್ವಂತ ತಿಳುವಳಿಕೆಯ ಮೇಲೆ ಅಥವಾ ಸಂಶಯದ ಮೇಲೆ, ಅಂಥ ಅಪರಾಧ ಘಟಿಸಿದೆ ಎಂದು ತಿಳಿದುಕೊಳ್ಳುವುದು.

**ಅ. ದಂಡಾಧಿಕಾರಿ ಅವರಿಗೆ ಫಿರ್ಯಾದಿ ಕೊಡುವುದು**

೧. ಒಂದು ಫಿರ್ಯಾದಿಯ ವ್ಯಾಖ್ಯೆಯು ಅಂದರೆ ಒಬ್ಬ ದಂಡಾಧಿಕಾರನಿಗೆ ಲಿಖಿತದಲ್ಲಿ ಇಲ್ಲವೆ ಮೌಖಿಕವಾಗಿ ಆರೋಪವನ್ನು ಮಾಡಿ ಅವನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕಾರ ಸಂಜ್ಞೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿದ್ದು, ಅಪರಾಧ ಮಾಡಿದ ಮನುಷ್ಯನು ಗೊತ್ತಿದ್ದವನೋ ಇಲ್ಲದೇ ಗೊತ್ತಿಲ್ಲದವನೋ ಆದರೆ ಪೊಲೀಸ್ ಅಧಿಕಾರಿಯು ಕೊಟ್ಟ ವರದಿ ಫಿರ್ಯಾದಿ ಆಗುವುದಿಲ್ಲ.

ಫಿರ್ಯಾದಿಯಲ್ಲಿ ಅಪರಾಧವು ಘಟಿಸಿದ್ದನ್ನು ಆರೋಪಿಸಲೇಬೇಕು.

ಕಲಮು ೧೦೭ರನ್ವಯ ಕ್ರಮ ತೆಗೆದುಕೊಳ್ಳಬೇಕೆಂದು ಕೊಟ್ಟ ಅರ್ಜಿಯು ಫಿರ್ಯಾದಿಯಾಗುವುದಿಲ್ಲ. ಫಿರ್ಯಾದಿಯನ್ನು ದಂಡಾಧಿಕಾರಿಗೆ ಕೊಡಲಿಕ್ಕೇ ಬೇಕು. ಅವನು ಅದರ ಸಂಜ್ಞೆಯನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕೊಟ್ಟಿರಬೇಕು.

ದಂಡಾಧಿಕಾರಿಗೆ ಕೇವಲ ಮಾಹಿತಿ ಸಲುವಾಗಿ ಕೊಟ್ಟ ಹೇಳಿಕೆಯು ಮತ್ತು ಅವನು ಅದರ ಬಗ್ಗೆ ಯಾವುದೇ ಸಂಜ್ಞೆ ತೆಗೆದುಕೊಳ್ಳಬೇಕೆಂಬ ಇಚ್ಛೆ ಇಲ್ಲದೆ ಕೊಟ್ಟದ್ದು ದೂರು ಆಗುವುದಿಲ್ಲ.

ಉದಾಹರಣೆ: ಒಬ್ಬ ಸಹಾಯಕ ಕಲೆಕ್ಟರನು ಜಿಲ್ಲಾ ದಂಡಾಧಿಕಾರಿ ಅವರಿಗೆ ಒಬ್ಬ ವ್ಯಕ್ತಿಯ ವಿರುದ್ಧ ದೂರು (ಫಿರ್ಯಾದಿ) ನೀಡಿ ಕೇವಲ ಆದೇಶಕ್ಕಾಗಿ ಪ್ರಾರ್ಥಿಸುತ್ತಾನೆ. ಇದು ಫಿರ್ಯಾದಿ ಆಗುವುದಿಲ್ಲ. ಇದನ್ನು ಈ ಸಂಹಿತೆಯ ಕೆಳಗೆ ಅವನು ಕ್ರಮ ಕೈಗೊಳ್ಳುವ ಉದ್ದೇಶದಿಂದ ಮಾಡರಲಿಕ್ಕೇ ಬೇಕು. ಆದರೆ ಮುಂಬೈ ಜೂಜಾಟ ಅಧಿನಿಯಮ(ಮುಂಬೈ ೧೮೮೭ನೆಯ ೪ನೆಯ ಅಧಿನಿಯಮ)ದ ಕಲಮು ೬ರ ಪ್ರಕಾರ ಕೊಟ್ಟದ್ದು ಈ ಕಲಮಿನ ಅನ್ವಯ ಫಿರ್ಯಾದಿ ಆಗುವುದಿಲ್ಲ.

*(೧೫ ಸಿಆರ್‌ಎಲ್‌ಎಫ್ ೬೫೭)*

### ೨. ಯಾರು ಫಿರ್ಯಾದಿಯನ್ನು (ದೂರನ್ನು) ಕೊಡಬಹುದು

ಸಾಮಾನ್ಯ ನಿಯಮದ ಪ್ರಕಾರ ಬಾಧಿತನಾದ ವ್ಯಕ್ತಿಯು ಫಿರ್ಯಾದಿದಾರನು. ಆದರೆ ಅಪರಾಧಿಕ ವ್ಯವಹರಣೆಗಳನ್ನು ಆರಂಭಿಸುವುದಕ್ಕೆ ಫಿರ್ಯಾದಿಯು ಅವಶ್ಯಕವಾದ ಪಕ್ಷಗಾರನಾಗಿರುವುದಿಲ್ಲ. ದಂಡಾಧಿಕಾರಿಯು ತನಗೆ ದೊರೆತ ಮಾಹಿತಿಯ ಪ್ರಕಾರ (ಸಮಾಚಾರದ) ಮೇಲಿಂದ ಇಲ್ಲವೆ ತನಗೆ ಸ್ವಂತಕ್ಕೆ ತಿಳಿದು ಬಂದ ಮಾಹಿತಿಯ ಮೇಲಿಂದ ಕ್ರಮ ಕೈಕೊಳ್ಳಬಲ್ಲನು.

ಅವನು ಹೀಗೆ ಕ್ರಮ ಕೈ ಕೊಂಡಾಗ್ಯೂ ಅವನು ಕಲಮು ೪೯೧ರ ಉಪಬಂಧಗಳಿಗೆ ಬದ್ಧನಾಗಿರುತ್ತಾನೆ.

ಆದರೆ ಈ ಸಾಮಾನ್ಯ ನಿಯಮಕ್ಕೆ ಕೆಲವು ಅಪವಾದಗಳಿರುತ್ತವೆ.

ಈ ಅಪವಾದಗಳನ್ನು ಕಲಮು ೧೯೫ರಿಂದ ೧೯೯ಅ ದವರೆಗಿನ ಕಲಮುಗಳಲ್ಲಿ ಕಾಣಬಹುದು. ಕಲಮು ೧೯೫ ಪರಿಶೀಲಿಸುವ ಅಂಶಗಳೇನೆಂದರೆ:

(ಅ) ಸಾರ್ವಜನಿಕ ನೌಕರರ ಕಾನೂನುಬದ್ಧ ಅಧಿಕಾರ ನಿಂದನೆಯ ಅಭಿಯೋಜನೆ.

(ಬ) ಸಾರ್ವಜನಿಕ ನ್ಯಾಯದ ವಿರುದ್ಧ ಕೆಲವು ಅಪರಾಧಗಳ ಅಭಿಯೋಜನೆ.

(ಕ) ಸಾಕ್ಷಿಯಲ್ಲಿ ಕೊಟ್ಟ ಕೆಲವು ದಸ್ತಾವೇಜುಗಳಿಗೆ ಸಂಬಂಧಿಸಿದ ಕೆಲವು ಅಪರಾಧಗಳ ಅಭಿಯೋಜನೆ 'ಅ'ದಲ್ಲಿ ಬರುವ (ಅ) ಸಾರ್ವಜನಿಕ ನೌಕರನು ಅಥವಾ ಅವನು ಅಧೀನನಾಗಿರುವ ಮತ್ತೊಬ್ಬ ಸಾರ್ವಜನಿಕ ನೌಕರನು ಲಿಖಿತದಲ್ಲಿ ಒಂದು ಫಿರ್ಯಾದಿಯನ್ನು ಕೊಡದಿದ್ದರೆ, ಆಗ ಯಾವ ನ್ಯಾಯಾಲಯವು ಅಂಥ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

'ಬ' ವರ್ಗದಲ್ಲಿ ಬರುವ ಪ್ರಕರಣಗಳು– (ಬ) ಯಾವುದೇ ನ್ಯಾಯಾಲಯ ಇಲ್ಲವೆ ಅದು ಯಾವ ನ್ಯಾಯಾಲಯಕ್ಕೆ ಅಧೀನವಾಗುತ್ತದೆಯೋ ಸಂಜ್ಞೆಯನ್ನು ತೆಗೆದುಕೊಳ್ಳತಕ್ಕದಲ್ಲ, ಅಂದರೆ 'ಬ' ವರ್ಗದಲ್ಲಿ ಬರುವವನ್ನು ಯಾವುದೇ ನ್ಯಾಯಾಲಯ ಇಲ್ಲವೇ ಅದು ಯಾವ ನ್ಯಾಯಾಲಯಕ್ಕೆ ಅಧೀನವಾಗಿರುತ್ತದೆಯೋ ಅಂಥ ನ್ಯಾಯಾಲಯದ ಲಿಖಿತ ಫಿರ್ಯಾದಿ ಇಲ್ಲದಿದ್ದರೆ ಯಾವ ನ್ಯಾಯಾಲಯವೂ ಅದರ ಸಂಜ್ಞೆಯನ್ನು ತೆಗೆದುಕೊಳ್ಳಬಾರದು.

(ಕ) ವರ್ಗದಲ್ಲಿ ಬರುವ ಪ್ರಕರಣಗಳು ಅಂಥ ನ್ಯಾಯಾಲಯದ ಇಲ್ಲವೆ ಅದಕ್ಕೆ ಅಧೀನವಾಗಿರುವ

ಬೇರೆ ನ್ಯಾಯಾಲಯದ ಲಿಖಿತ ಫಿರ್ಯಾದಿ ಇಲ್ಲದಿದ್ದರೆ ಯಾವ ನ್ಯಾಯಾಲಯವೂ ಅದರ ಸಂಜ್ಞೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

ಕಲಮು ೧೯೬– ಸರಕಾರದ ವಿರುದ್ಧ ಅಪರಾಧಗಳ ಅಭಿಯೋಜನೆ: ಸರಕಾರದ ಆದೇಶದ ಮೇರೆಗೆ ಫಿರ್ಯಾದಿ ಇಲ್ಲವೇ ಅಧಿಕಾರವಿದ್ದಂಥವರು ಗವರ್ನರ್–ಜನರಲ್–ಇನ್–ಕೌನ್ಸಿಲ್ ಇಲ್ಲವೆ ಸ್ಥಾನಿಕ ಸರಕಾರ ಇಲ್ಲವೇ ಗವರ್ನರ್–ಜನರಲ್–ಇನ್–ಕೌನ್ಸಿಲ್ ಅವರಿಂದ ಈ ಬಗ್ಗೆ ಅಧಿಕಾರ ಹೊಂದಿದ ಯಾವುದೇ ಅಧಿಕಾರಿಯು ಇವರಿಂದ ಪರವಾನಗಿ ಇಲ್ಲದೆ ಯಾವುದೇ ದೂರನ್ನು ಮಾಡಲು ಬರುವುದಿಲ್ಲ.

**ಕಲಮು ೧೯೬–(ಅ)**

ಕೆಲವು ವರ್ಗದ ಅಪರಾಧಿಕ ಒಳಸಂಚುಗಳ ಅಭಿಯೋಜನೆಯು ಭಾರತ ದಂಡ ಸಂಹಿತೆಯ ಕಲಮು ೧೨೦ ಬ ಕೆಳಗೆ ಬರುತ್ತದೆ.

ಅವು ಉಪ–ಕಲಮು (೧)ರಡಿಯಲ್ಲಿ ಬಂದರೆ–

ಫಿರ್ಯಾದಿಯು ಗವರ್ನರ್–ಜನರಲ್–ಇನ್–ಕೌನ್ಸಿಲ್ ಸ್ಥಾನಿಕ ಸರಕಾರ ಅಥವಾ ಗವರ್ನರ್–ಜನರಲ್–ಇನ್–ಕೌನ್ಸಿಲ್ ಇವರ ಆದೇಶ ಮೇರೆಗೆ ಒಬ್ಬ ಅಧಿಕಾರಿಗೆ ಈ ಬಗ್ಗೆ ಅವರ ಆದೇಶ ಇರಬೇಕು.

ಅವು ಉಪ ಕಲಮು (೨)ರಲ್ಲಿ ಬರುತ್ತಿದ್ದರೆ ಮುಖ್ಯ ಪ್ರಾಂತೀಯ ದಂಡಾಧಿಕಾರಿ, ಅಥವಾ ಜಿಲ್ಲಾ ದಂಡಾಧಿಕಾರಿ ಅವರು ಲಿಖಿತದಲ್ಲಿ ಆದೇಶ ಹೊರಡಿಸಿ ವ್ಯವಹರಣೆಗಳನ್ನು ಪ್ರಾರಂಭಿಸಲು ಅನುಮತಿ ಕೊಡಬೇಕು.

**ಕಲಮು ೧೯೭**

ನ್ಯಾಯಾಧೀಶರು, ದಂಡಾಧಿಕಾರಿ ಮತ್ತು ಸಾರ್ವಜನಿಕ ನೌಕರರು ಅವರು ತಮ್ಮ ಸರಕಾರಿ ಕರ್ತವ್ಯ ನಿರ್ವಹಣೆಯಲ್ಲಿ ನಿರತರಾದಾಗ ಇಲ್ಲವೆ ನಿರತರಾಗಬೇಕೆಂದಾಗ ಅಪರಾಧಗಳನ್ನು ಮಾಡಿರುವರೆಂದು ಆಪಾದಿಸಿದಾಗ ಅಭಿಯೋಜನೆ ಮಾಡುವುದು.

ಸ್ಥಾನಿಕ ಸರಕಾರದ ಪೂರ್ವ ಅನುಮತಿ ಇಲ್ಲದೆ ಯಾವ ನ್ಯಾಯಾಲಯವೂ ಇಂತಹ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(೨) ಇಂತಹ ಸ್ಥಾನಿಕ ಸರಕಾರವು ಯಾರಿಂದ ಯಾವ ರೀತಿಯಾಗಿ ಯಾವುದರ ಸಲುವಾಗಿ ಅಂಥ ಅಪರಾಧ ಇಲ್ಲವೇ ಅಪರಾಧಗಳನ್ನು ಅಂಥ ನ್ಯಾಯಧೀಶರ ಅಭಿಯೋಜನೆ ಮುಂತಾದವುಗಳನ್ನು ನಡೆಯಿಸುವುದು ಮತ್ತು ಯಾವ ನ್ಯಾಯಾಲಯದ ಮುಂದೆ ವಿಚಾರಣೆ ನಡೆಯತಕ್ಕದ್ದೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

**ಕಲಮು ೧೯೮**

ಒಂದು ಒಡಂಬಡಿಕೆಯ ಉಲ್ಲಂಘನೆಗಾಗಿ ಅಥವಾ ಮಾನಹಾನಿ ಅಥವಾ ವೈವಾಹಿಕ ಅಪರಾಧಗಳ ಅಭಿಯೋಜನೆ ಇಂತಹ ಅಪರಾಧದಿಂದ ಬಾಧಿತನಾದ ಫಿರ್ಯಾದಿ ಇಲ್ಲದೆ ಸಂಜ್ಞೆಯನ್ನು ತೆಗೆದುಕೊಳ್ಳ ಕೂಡದು. ಪರಂತು ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದ ಅನುಮತಿ ಪಡೆದು ಕೆಲವು ಜನರು ಅವನ ಇಲ್ಲವೆ ಅವಳ ವತಿಯಿಂದ ಫಿರ್ಯಾದಿಯನ್ನು ಕೊಡಬಹುದು.

**ಕಲಮು ೧೯೯**

ಪರಸತಿಯ ಸಂಗ ಇಲ್ಲವೆ ಒಬ್ಬ ಲಗ್ನವಾದ ಹೆಣ್ಣುಮಗಳನ್ನು ಓಡಿಸಿಕೊಂಡು ಹೋದುದಕ್ಕೆ ಅಭಿಯೋಜನೆಯನ್ನು ಹೂಡುವುದು: ಆ ಹೆಣ್ಣುಮಗಳ ಗಂಡನ ಫಿರ್ಯಾದಿ ಇಲ್ಲವೆ ಆತನ ಗೈರುಹಾಜರಿಯಲ್ಲಿ ನ್ಯಾಯಾಲಯದ ಪರವಾನಗಿಯನ್ನು ಪಡೆದು ಹೆಣ್ಣುಮಗಳು ಯಾವ ಅಂತಹ ಮನುಷ್ಯನ ರಕ್ಷಣೆಯಲ್ಲಿ ಅವನ ವತಿಯಿಂದ ಆ ಅಪರಾಧ ಘಟಿಸಿದಾಗ ಇರುತ್ತಿದ್ದಳೋ ಅಂಥವನ ಫಿರ್ಯಾದಿ ಇಲ್ಲದೆ ಸಂಜ್ಞೆಯನ್ನು ತೆಗೆದುಕೊಳ್ಳಬರುವುದಿಲ್ಲ.

**ಪೊಲೀಸ್ ವರದಿ**

**೧. ಅದು ಹೇಗೆ ಉದ್ಭವಿಸುತ್ತದೆ?**

ಪ್ರಥಮ ಮಾಹಿತಿಯೆಂದು ಕರೆಯುವುದರ ಮೂಲದಿಂದ ಇದು ಉದ್ಭವಿಸುತ್ತದೆ. ಈ ಮಾಹಿತಿಯನ್ನು ಸಾಮಾನ್ಯವಾಗಿ ಬಾಧಿತ ವ್ಯಕ್ತಿಯು ಕೊಡುತ್ತಾನೆ. ಆದರೆ ಅದನ್ನು ಯಾವುದೇ ಪಕ್ಷಗಾರನು ಕೊಡಬಹುದು. ಪೊಲೀಸ್ ಅಧಿಕಾರಿಯಾಗಿದ್ದರೂ ಆತನು ತನಗೆ ತಿಳಿದು ಬಂದ ಸಂಗತಿಗಳ ಮೇಲಿಂದ ಇಂತಹ ಮಾಹಿತಿಯನ್ನು ಕೊಡಬಹುದು. ಇಷ್ಟೇ ಅಲ್ಲ. ಕೆಲವು ಪ್ರಸಂಗಗಳಲ್ಲಿ ಕಾನೂನು ಕೆಲವು ಜನರನ್ನು ಇಂತಹ ಮಾಹಿತಿ ಕೊಡಲು ಒತ್ತಾಯಿಸುತ್ತದೆ.

**ಕಲಮು ೪೪**

ಕೆಲವು ಅಪರಾಧಿಗಳ ಮಾಹಿತಿಯನ್ನು ಪ್ರತಿಯೊಬ್ಬನೂ ದಂಡಾಧಿಕಾರಿಗೆ ಇಲ್ಲವೆ ಪೊಲೀಸರಿಗೆ ಕೊಡತಕ್ಕದ್ದು.

**ಕಲಮು ೪೫**

ಪೊಲೀಸರಿಗೆ ಕೊಟ್ಟ ಮಾಹಿತಿಯು ಸಂಜ್ಞೆಯ ಅಪರಾಧವನ್ನು ಇಲ್ಲವೆ ಆ ಸಂಜ್ಞೆಯ ಅಪರಾಧವನ್ನು ಉಲ್ಲೇಖಿಸಬಹುದು.

ಸಂಜ್ಞೇಯ ಅಪರಾಧದಲ್ಲಿ ಪೊಲೀಸರು ದಸ್ತಗಿರಿ ಆದೇಶ ಇಲ್ಲದೆ ಒಬ್ಬನನ್ನು ಬಂಧಿಸ ಬಹುದು. ಸಂಜ್ಞೇಯವಲ್ಲದ ಅಪರಾಧದಲ್ಲಿ ಪೊಲೀಸರು ದಸ್ತಗಿರಿ ಆದೇಶ ಇಲ್ಲದೆ ಒಬ್ಬನನ್ನು ಬಂಧಿಸಲು ಬರುವುದಿಲ್ಲ.

**ಕಲಮು ೧೫೪**

ಒಂದು ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒಂದು ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಗೆ ಕೊಟ್ಟಂತೆ, ಅವನು ಅದನ್ನು ಬರವಣಿಗೆಯಲ್ಲಿರಿಸಬೇಕು. ಇಲ್ಲವೆ ಆತನ ನಿರ್ದೇಶನದಲ್ಲಿ ಬರೆಯಿಸಬೇಕು ಮತ್ತು ಆ ಮಾಹಿತಿಯನ್ನು ಕೊಟ್ಟವನಿಗೆ ಅದನ್ನು ಓದಿ ಹೇಳಬೇಕು. ಇಂತಹ ಮಾಹಿತಿಯನ್ನು ಯಾವಾಗಲಾದರೂ ಲಿಖಿತದಲ್ಲಿ ಕೊಟ್ಟಿದ್ದರೆ ಇಲ್ಲವೆ ಲಿಖಿತದಲ್ಲಿ ಮೇಲೆ ಹೇಳಿದಂತೆ ಬರೆದಿದ್ದರೆ ಆ ಮಾಹಿತಿಯನ್ನು ಕೊಟ್ಟವನು ಅದಕ್ಕೆ ತನ್ನ ಸಹಿ ಮಾಡಬೇಕು ಮತ್ತು ಅದರ ಸಾರಾಂಶವನ್ನು ಈ ಬಗ್ಗೆ ಸ್ಥಾನಿಕ ಸರಕಾರವು ಗೊತ್ತುಪಡಿಸಬಹುದಾದ ನಮೂನೆಯಲ್ಲಿ ಅಂಥ ಪೊಲೀಸ್ ಅಧಿಕಾರಿಯು ಇಟ್ಟಂತಹ ಪುಸ್ತಕದಲ್ಲಿ ನಮೂದಿಸತಕ್ಕದ್ದು.

**ಕಲಮು ೧೫೫**

ಒಂದು ಅಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದಂತೆ ಮಾಹಿತಿಯು.

ಈ ಬಗ್ಗೆ ಇಟ್ಟ ಪುಸ್ತಕದಲ್ಲಿ ಮಾಹಿತಿಯ ಸಾರಾಂಶವನ್ನು ನಮೂದಿಸಬೇಕು. ಮತ್ತು ಆ ಮಾಹಿತಿ ಕೊಟ್ಟವನನ್ನು ದಂಡಾಧಿಕಾರಿಗೆ ಕಳುಹಿಸಿಕೊಡಬೇಕು.

**ಕಲಮು ೧೫೫**

ಒಂದು ಸಂಜ್ಞೇಯ ಅಪರಾಧವನ್ನು ಯಾವ ಪೊಲೀಸ್ ಅಧಿಕಾರಿಯು ತಪಾಸಣೆಯನ್ನು ೧ನೆಯ ವರ್ಗದ ಇಲ್ಲವೆ ೨ನೆಯ ವರ್ಗದ ದಂಡಾಧಿಕಾರಿ ಅಧಿಕಾರ ಉಳ್ಳವರು ಅಂತಹ ಪ್ರಕರಣದ ವಿಚಾರಣೆ ಮಾಡಲು ಇಲ್ಲವೆ ಅದನ್ನು ವಿಚಾರಣೆಗೆ ಒಪ್ಪಿಸಲು ಆದೇಶವಿಲ್ಲದೆ ಇಲ್ಲವೆ ಪ್ರೆಸಿಡೆನ್ಸಿ ದಂಡಾಧಿಕಾರಿ ಆದೇಶವಿಲ್ಲದೆ ಮಾಡಲು ಬರುವುದಿಲ್ಲ.

**ಕಲಮು ೧೫೬**

ಒಂದು ಪೊಲೀಸ್ ಠಾಣೆ ಪ್ರಭಾರಿ ಅಧಿಕಾರಿಯು ದಂಡಾಧಿಕಾರಿಯ ಆದೇಶವಿಲ್ಲದೆ, ಯಾವುದೇ ಸಂಜ್ಞೇಯ ಅಪರಾಧದ ಪ್ರಕರಣದ ತಪಾಸಣೆಯನ್ನು ಮಾಡಬಹುದು. ಆ ಠಾಣೆಯು ಸ್ಥಾನಿಕ ಕ್ಷೇತ್ರದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿ ನ್ಯಾಯಾಲಯವು ಅದರ ವಿಚಾರಣೆಯನ್ನು ಮಾಡುತ್ತದೆ. ದಂಡಾಧಿಕಾರಿಯು ಕ್ರಮ ಕೈಗೊಳ್ಳಲು ಈ ಪೊಲೀಸ್ ವರದಿಯು ತಳಹದಿಯಾಗಿರುತ್ತದೆ. ಇದು ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದ ಮಾಹಿತಿಯ ಆಧಾರವಾಗಿರುತ್ತದೆ.

**ಕಲಮು ೧೫೭**

ಕಲಮು ೧೫೪ರ ಅನ್ವಯ ದೊರೆತ ಮಾಹಿತಿಯ ಮೇಲಿಂದ ಅಧಿಕಾರಿಗೆ ಸಂಜ್ಞೇಯ ಅಪರಾಧವು ನಡೆದಿದೆಯೆಂದು ಸಂಶಯಪಡಲು ಕಾರಣಗಳಿದ್ದರೆ ಆಗ–

೧) ಅವನು ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳಲು ಅಧಿಕಾರ ಕೊಟ್ಟ ದಂಡಾಧಿಕಾರಿಗೆ ವರದಿಯನ್ನು ಕಳುಹಿಸತಕ್ಕದ್ದು.

(೨) ಸಂಗತಿಗಳ ತನಿಖೆ(ಅನ್ವೇಷಣೆ)ಗಾಗಿ ಮತ್ತು ಪ್ರಕರಣದ ಸಂದರ್ಭಗಳನ್ನು ತಿಳಿಯಲು ಅಪರಾಧದ ಸ್ಥಳಕ್ಕೆ ಹೋಗತಕ್ಕದ್ದು, ಮತ್ತು

(೩) ಆರೋಪಿಗಳನ್ನು ಪತ್ತೆ ಹಚ್ಚಲು ಮತ್ತು ಅವರನ್ನು ಬಂಧಿಸಲು ಅವಶ್ಯವಿರುವ ಕ್ರಮಗಳನ್ನು ಕೈಕೊಳ್ಳಬೇಕು.

ಪರಂತು,

(ಅ) ಮಾಹಿತಿ ಕೊಟ್ಟವನು ಅಪರಾಧಿಯ ಹೆಸರನ್ನು ಹೇಳಿದರೆ ಮತ್ತು ಪ್ರಕರಣವು ಗಂಭೀರ ಸ್ವರೂಪದಲ್ಲಿದೆ ಎಂದು ಆ ಅಧಿಕಾರಿ ಅಭಿಪ್ರಾಯಪಟ್ಟರೆ, ಅಧಿಕಾರಿಯು ಸ್ವತಃ ಅಪರಾಧದ ಜಾಗಕ್ಕೆ ತನಿಖೆ ಮಾಡಲು ಹೋಗುವ ಅವಶ್ಯಕತೆಯಿಲ್ಲ.

(ಬ) ತನಿಖೆ ಕೈಕೊಳ್ಳಲು ಸಾಕಷ್ಟು ಕಾರಣಗಳು ಇಲ್ಲವೆಂದು ಆ ಅಧಿಕಾರಿಗೆ ಅನಿಸಿದರೆ, ಅವನು ಪ್ರಕರಣದ ತನಿಖೆ ಮಾಡದೆ ಬಿಟ್ಟುಬಿಡಬಹುದು.

ಅವನು ತನ್ನ ಈ ಕಾರಣಗಳನ್ನು ತನ್ನ ವರದಿಯಲ್ಲಿ ಯಾವ ಕಾರಣಕ್ಕಾಗಿ ಸಂಪೂರ್ಣವಾಗಿ ಈ ಕಲಮಿನ ಅನ್ವಯದ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಪಾಲಿಸಿಲ್ಲವೆಂದು ಹೇಳತಕ್ಕದ್ದು. ಆ ಮಾಹಿತಿ ಕೊಟ್ಟವನಿಗೆ ಅವನು ಆ ಪ್ರಕರಣದ ತನಿಖೆಯನ್ನು ಮಾಡುವುದಿಲ್ಲವೆಂದು ಅಧಿಸೂಚಿಸತಕ್ಕದ್ದು. ಆದರೆ ಪೊಲೀಸರ ಈ ಹಿಂತೆಗೆದುಕೊಳ್ಳುವಿಕೆಯು ಆರೋಪಿಯ ವಿರುದ್ಧ ಅಭಿಯೋಜನೆಯನ್ನು ತಡೆಹಿಡಿಯ ಲಾಗುವುದಿಲ್ಲ. ಇದಕ್ಕೆ ಇನ್ನೂ ಎರಡು ಮಾರ್ಗಗಳು ತೆರೆದಿವೆ.

**ಕಲಮು ೧೫೯**

೧. ದಂಡಾಧಿಕಾರಿಗಳು ಅಂತಹ ವರದಿಯನ್ನು ಸ್ವೀಕರಿಸಿದ ನಂತರ ತನಿಖೆ ನಡೆಸಲು ನಿರ್ದೇಶನ ಕೊಡಬಹುದು. ಇಲ್ಲವೆ ತತ್‌ಕ್ಷಣ ಕ್ರಮ ಕೈಕೊಳ್ಳಬಹುದು ಮತ್ತು ಅಧೀನ ದಂಡಾಧಿಕಾರಿಗೆ ಅದರ ಪ್ರಾಥಮಿಕ ವಿಚಾರಣೆ ನಡೆಯಿಸಲು ಇಲ್ಲವೆ ಬೇರೆ ರೀತಿಯಿಂದ ಈ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ನಿಖಾಲೆ ಮಾಡಲು ಹೇಳಬಹುದು. ಇದು ತನಿಖೆಯ ಪೂರ್ವಭಾವಿ ವರದಿಯಾಗಿರುತ್ತದೆ. ದಂಡಾಧಿಕಾರಿಯು ಕಲಮು ೧೫೯ರ ಅನ್ವಯ ಕಾರ್ಯಪ್ರವರ್ತನಾಗಬಹುದು. ಆದರೆ ತನಿಖೆಯ ನಂತರ ವರದಿಯನ್ನು ಸಲ್ಲಿಸಿದ್ದರೆ ಆಗ ದಂಡಾಧಿಕಾರಿಗೆ ಈ ಕಲಮಿನ ಅನ್ವಯ ಅಧಿಕಾರ ಚಲಾಯಿಸಲು ಬರುವುದಿಲ್ಲ.

**II. ಬಾಧಿತ ಪಕ್ಷಗಾರನು ಅಭ್ಯರ್ಥಿಸಬಹುದು**

ಪೊಲೀಸರು ಅಭ್ಯರ್ಥಿಸದಿದ್ದಲ್ಲಿ ಆಗ ಅವರಿಗೆ ಕೆಳಗಿನ ಅಧಿಕಾರಗಳಿರುತ್ತವೆ.

**ಕಲಮು ೧೬೦**

(೧) ಸಾಕ್ಷಿದಾರರಿಗೆ ಹಾಜರಾಗಲು ಲಿಖಿತದಲ್ಲಿ ಆದೇಶ ಮಾಡುವ ಅಗತ್ಯತೆ: ಈ ಕಲಮಿನ ಕೆಳಗೆ ಸಾಕ್ಷೀದಾರನು ಸತ್ಯವನ್ನು ಹೇಳುವ ಅವಶ್ಯಕತೆಯು ಇರುವುದಿಲ್ಲ. ಅವರು ಸುಳ್ಳು ಸಾಕ್ಷಿ ಕೊಟ್ಟರೆ ಅವರ ವಿರುದ್ಧ ಅಭಿಯೋಜನೆ ಹೂಡಲು ಬರುವುದಿಲ್ಲ. ಅವರು ಅದಕ್ಕೆ ಸಹಿ ಮಾಡುವುದಿಲ್ಲ. ಅದನ್ನು ಪೊಲೀಸರ ಮುಂದೆ ಮಾಡಲಾಗಿದೆ.

**ಕಲಮು ೧೬೧**

ಪ್ರಕರಣದ ಸಂಗತಿಗಳು ಗೊತ್ತಿದ್ದವರನ್ನು ಪೊಲೀಸರು ಪರೀಕ್ಷಿಸಬಹುದು.

(೨) ಅಂತಹ ಸಾಕ್ಷಿದಾರರು ಅವರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಅಂತಹ ಸಾಕ್ಷಿದಾರರಿಗೆ ಅವರ ಮೇಲೆ ಅಪರಾಧದ ಆರೋಪ ಮಾಡುವುದರ ಹೊರತು ಪೊಲೀಸರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

ಪೊಲೀಸರು ಸಾಕ್ಷಿದಾರರಿಂದ ಹೇಳಿಕೆಗಳನ್ನು ತೆಗೆದುಕೊಳ್ಳಬಲ್ಲರಾದರೂ, ಇನ್ನೂ

**ಕಲಮು ೧೬೨**

(ಅ) ಅವರು ಅವುಗಳಿಗೆ ಸಹಿ ಮಾಡಬೇಕಾಗಿಲ್ಲ.

(ಬ) ಬರೆದುಕೊಟ್ಟಿದ್ದ ಹೇಳಿಕೆಯನ್ನು ಯಾವುದೇ ಅಪರಾಧ ಕುರಿತು ಯಾವುದೇ ವಿಚಾರಣೆಯಲ್ಲಿ ಇಲ್ಲವೆ ಅಧಿವಿಚಾರಣೆಯಲ್ಲಿ ಅವುಗಳ ಉಪಯೋಗವನ್ನು ಮಾಡತಕ್ಕದ್ದಲ್ಲ.

ಪರಂತು,

ಆರೋಪಿಯ ವಿನಂತಿಯ ಮೇರೆಗೆ ನ್ಯಾಯಾಲಯವು ಅಂಥ ಲಿಖಿತ ಹೇಳಿಕೆಯನ್ನು ಉಲ್ಲೇಖಿಸ ಬಹುದು ಮತ್ತು ಅದರ ಒಂದು ಪ್ರತಿಯೊಂದನ್ನು ಅಂಥ ಸಾಕ್ಷಿದಾರನದೇ ತಪ್ಪೆಂದು ಸುಳ್ಳೆಂದು ತೋರಿಸಲು ಆರೋಪಿಗೆ ಕೊಡಲು ನಿರ್ದೇಶನ ಕೊಡಬಹುದು. ಪರಂತು, ನ್ಯಾಯಾಲಯವು ಸಂಬಂಧವಿಲ್ಲದ ಭಾಗವನ್ನು ಸೇರಿಸದೆ ಬಿಟ್ಟುಬಿಡಬಹುದು, ಇಲ್ಲವೇ ಅದನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತದ ದೃಷ್ಟಿಯಿಂದ ಸೂಕ್ತವಲ್ಲವೆಂದು, ಇಲ್ಲವೇ ನ್ಯಾಯದಾನದ ವೃದ್ಧಿಗೊಳಿಸುವುದಿಲ್ಲವೆಂದು ತೋರಿದರೆ ನ್ಯಾಯಾಲಯ ಬಿಟ್ಟುಬಿಡಬಹುದು. ಸಂಕ್ಷಿಪ್ತದಲ್ಲಿ ಸಾಕ್ಷ್ಯವಾಗಿ ಕೊಡಬಲ್ಲ ಸಾಕ್ಷಿಗಳ ರೂಪದಲ್ಲಿ ಅವು ಬರುವುದಿಲ್ಲ. ಇಂತಹ ಹೇಳಿಕೆಗಳನ್ನು ಸಾಕ್ಷಿಗಳನ್ನಾಗಿ ಭಾವಿಸಬೇಕಾದರೆ ಅವುಗಳನ್ನು ದಂಡಾಧಿಕಾರಿಯು ಅಭಿಲೇಖಿಸಬೇಕು. ಆದರೆ ಪೊಲೀಸ್ ಅಧಿಕಾರಿಗಳಿಂದಲ್ಲ. ತತ್‌ಪರಿಣಾಮವಾಗಿ ದಂಡಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧವನ್ನು ಮಾಡಲಾಗಿದೆ.

**ಕಲಂ ೧೬೪**

ಯಾವುದೇ ಪ್ರೆಸಿಡೆನ್ಸಿ ೧ನೆಯ ವರ್ಗದ ದಂಡಾಧಿಕಾರಿ ಮತ್ತು ವಿಶೇಷವಾಗಿ ಅಧಿಕಾರ ವಹಿಸಿಕೊಟ್ಟ ೨ನೆಯ ವರ್ಗದ ದಂಡಾಧಿಕಾರರು, ಅವನು ಪೊಲೀಸ್ ಅಧಿಕಾರಿಯಾಗಿರದಿದ್ದರೆ, ಯಾವುದೇ ತನಿಖೆಯಲ್ಲಿ ಅವನ ಮುಂದೆ ಮಾಡಿದ ಹೇಳಿಕೆ, ಇಲ್ಲವೇ ತಪ್ಪೊಪ್ಪಿಗೆಯನ್ನು ಈ ಅಧ್ಯಾಯದ ಕೆಳಗೆ ದಾಖಲು ಮಾಡಿಕೊಳ್ಳಬಹುದು.

ಈ ಹೇಳಿಕೆಗಳನ್ನು ಸಾಕ್ಷಿಗಳನ್ನು ದಾಖಲು ಮಾಡಿಕೊಳ್ಳಬೇಕು. ಉಪಬಂಧಿಸಿದ ರೀತಿಯಲ್ಲಿಯೇ ದಾಖಲು ಮಾಡಿಕೊಳ್ಳಬೇಕು. ತಪ್ಪೊಪ್ಪಿಗೆಯನ್ನು ಅದಕ್ಕಾಗಿ ಕಲಮು ೩೬೪ರಲ್ಲಿ ಉಪಬಂಧಿಸಿದ ರೀತಿಯಲ್ಲಿ ದಾಖಲು ಮಾಡತಕ್ಕದ್ದು.

ಪರಂತು,

ಇಂತಹ ತಪ್ಪೊಪ್ಪಿಗೆಯನ್ನು ದಂಡಾಧಿಕಾರಿಯು ದಾಖಲು ಮಾಡಿಕೊಳ್ಳುವ ಮೊದಲು ಅವನು ಆರೋಪಿಗೆ ಅದನ್ನು ಮಾಡಲು ಬದ್ಧನಾಗಿಲ್ಲ ಮತ್ತು ಅವನು ಹಾಗೆ ಮಾಡಿದರೆ, ಅದನ್ನು ಅವನ ವಿರುದ್ಧ ಸಾಕ್ಷಿಯನ್ನಾಗಿ ಉಪಯೋಗಿಸಲಾಗುವುದೆಂದು ವಿವರಿಸತಕ್ಕದ್ದು. ಈ ಹೇಳಿಕೆಯನ್ನು ಸ್ವ–ಇಚ್ಛೆಯಿಂದ ಮಾಡುತ್ತಾನೆ ಎಂದು ನಂಬುವುದಕ್ಕೆ ಕಾರಣಗಳಿಲ್ಲದೆ ಯಾವ ದಂಡಾಧಿಕಾರಿಯು ತಪ್ಪೊಪ್ಪಿಗೆಯನ್ನು ದಾಖಲು ಮಾಡಿಕೊಳ್ಳತಕ್ಕದ್ದಲ್ಲ. ತಪ್ಪೊಪ್ಪಿಗೆಯನ್ನು ದಾಖಲು ಮಾಡಿಕೊಂಡ ನಂತರ ಆ ಬರವಣಿಗೆಯ ಅಡಿಯಲ್ಲಿ ಮ್ಯಾಜಿಸ್ಟ್ರೇಟನು ಒಂದು ಟಿಪ್ಪಣಿಯನ್ನು ಮಾಡಿ ಅದರಲ್ಲಿ ಕರಾರುಗಳನ್ನು ಪಾಲಿಸಿದ್ದೇನೆಂದು ಕಾಣಿಸತಕ್ಕದ್ದು.

**ಶೋಧನೆ**

**ಕಲಮು ೧೬೫**

(೧) ತನ್ನ ತನಿಖೆಯ ಕಾಲಕ್ಕೆ ಒಬ್ಬ ಪೊಲೀಸ್ ಅಧಿಕಾರಿಯು ಯಾವುದೇ ಸ್ಥಳವನ್ನು ಶೋಧಿಸಲು ಅವಶ್ಯಕತೆ ಬೀಳಬಹುದು. ಆಗ ಶೋಧಿಸಿ ಒಂದು ಪೊಲೀಸ್ ಠಾಣೆಯ ಪ್ರಭಾರಿಯಲ್ಲಿರುವ ಹಾಗೂ ಅದರ ವ್ಯಾಪ್ತಿಯಲ್ಲಿ ಅಂಥ ಅಧಿಕಾರಿಯು ತಾನು ಒಂದು ವಸ್ತುವಿಗೆ ಶೋಧಿಸಲು ನಂಬಲು ಇರುವ ಕಾರಣಗಳನ್ನು ಲಿಖಿತದಲ್ಲಿ ಕಾಣಿಸಿ, ಯಾವ ವಸ್ತುವಿಗಾಗಿ ಈ ಶೋಧನೆಯನ್ನು ಮಾಡಲಾಗುವುದೆಂದು ಸಾಧ್ಯವಿದ್ದಷ್ಟು ಮಟ್ಟಿಗೆ ಆ ಸ್ಥಳದ ಮೇರೆಗಳನ್ನು ನಿರ್ದೇಶಿಸಿ, ತಾನೆ ಆ ವಸ್ತುವಿಗಾಗಿ ಆ ಶೋಧನೆಯನ್ನು ಮಾಡಬಹುದು ಇಲ್ಲವೆ ಶೋಧನೆಯನ್ನು ಮಾಡಿಸಬಹುದು.

(೨) ಆ ಪೊಲೀಸ್ ಅಧಿಕಾರಿಯು ಸಾಧ್ಯವಿದ್ದಷ್ಟು ಮಟ್ಟಿಗೆ ಸ್ವತಃ ಈ ಶೋಧನೆಯನ್ನು ಮಾಡತಕ್ಕದ್ದು.

(೩) ಲಿಖಿತದಲ್ಲಿ ಕಾರಣಗಳನ್ನು ಕಾಣಿಸಿ ತನ್ನ ಅಧೀನರಿಗೆ ಆ ಸ್ಥಳವನ್ನು ಹಾಗೂ ಯಾವ ವಸ್ತುಗಳನ್ನು ಶೋಧಿಸಬೇಕೆಂದು ನಿರ್ದೇಶಿಸತಕ್ಕದ್ದು.

(೪) ಶೋಧನೆಯ ವಾರಂಟುಗಳನ್ನು ಕುರಿತು ಈ ಸಂಹಿತೆಯಲ್ಲಿಯ ಉಪಬಂಧಗಳು ಮತ್ತು ಶೋಧನೆಗಳಿಗಾಗಿ ಸಾಮಾನ್ಯ ಉಪಬಂಧಗಳು ಕಲಮು ೧೦೨ ಮತ್ತು ಕಲಮು ೧೦೩ರಲ್ಲಿವೆಯೋ ಅವು ಅನ್ವಯಿಸುತ್ತವೆ.

(೫) ಶೋಧನೆಯ ಕಾಲಕ್ಕೆ ಮಾಡಿದ ದಾಖಲೆಗಳ ನಕಲುಗಳನ್ನು ಅತ್ಯಂತ ಸಮೀಪದಲ್ಲಿರುವ ದಂಡಾಧಿಕಾರಿಗೆ ಕಳುಹಿಸತಕ್ಕದ್ದು. ಆ ಶೋಧನೆಯ ಸ್ಥಳದ ಮಾಲಿಕನಿಗೆ ಇಲ್ಲವೇ ಅಧಿಭೋಗದಾರನು ಶುಲ್ಕ ಕೊಟ್ಟರೆ ಅವನಿಗೆ ದಾಖಲೆಯ ಒಂದು ಪ್ರತಿಯನ್ನು ಕೊಡಬೇಕು.

**ಕಲಮು ೧೬೬**

ಪೊಲೀಸ್ ಅಧಿಕಾರಿಯು ಇನ್ನೊಂದು ಪೊಲೀಸ್ ಠಾಣೆಯ ಕ್ಷೇತ್ರದಲ್ಲಿ ಶೋಧನೆ ಮಾಡಿಸಬಹುದು.

**ಕಲಮು ೧೬೭**

ಕಲಮು ೬೧ರ ಅನ್ವಯ ತನಿಖೆಯು ೨೪ ಗಂಟೆಗಳೊಳಗೆ ಮುಗಿಯದಿದ್ದರೆ ಮತ್ತು ಆರೋಪ ಇಲ್ಲವೆ ಮಾಹಿತಿಯು ಸಾಧಾರವೆಂದು ನಂಬಲು ಕಾರಣಗಳಿದ್ದರೆ, ಆ ಕೂಡಲೆ ಪೊಲೀಸರು ಅತ್ಯಂತ ಸಮೀಪದ ದಂಡಾಧಿಕಾರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ದಿನಚರಿ ನಕಲಿನೊಂದಿಗೆ ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಗೆ ಆರೋಪಿಯನ್ನು ಕಳುಹಿಸತಕ್ಕದ್ದು.

(೨) ದಂಡಾಧಿಕಾರಿಯು ಕಾಲಕಾಲಕ್ಕೆ ಇಂತಹ ಆರೋಪಿಯ ಅಭಿರಕ್ಷಣೆ ಬಂಧನವನ್ನು ತನಗೆ ಯೋಗ್ಯವೆನಿಸಿದ ಅವಧಿಯವರೆಗೆ ಒಂದು ಸಲ ೧೫ ದಿನಗಳಿಗೆ ಮೀರದಂತೆ ಆದೇಶಿಸುತ್ತಾನೆ.

(೩) ಪೊಲೀಸ್ ಅಭಿರಕ್ಷಣೆಯಲ್ಲಿರುವ ಆರೋಪಿಯ ಬಂಧನವನ್ನು ಅಧಿಕೃತಗೊಳಿಸುವ ದಂಡಾಧಿಕಾರಿಯು ಹಾಗೆ ಮಾಡಲು ಕಾರಣಗಳನ್ನು ದಾಖಲು ಮಾಡಬೇಕು.

**ಕಲಮು ೧೬೯**

ದಂಡಾಧಿಕಾರಿಯೆದುರು ಹಾಜರಾಗಲು ಸಾಕಷ್ಟು ಪುರಾವೆಯೂ ಇಲ್ಲವೆಂದು ಪೊಲೀಸ್ ಅಧಿಕಾರಿಗೆ

ಕಂಡುಬಂದರೆ ಇಲ್ಲವೆ ಸಂಶಯಕ್ಕೆ ಸಾಕಷ್ಟು ಕಾರಣಗಳಿಲ್ಲವೆಂದು ಕಂಡುಬಂದರೆ ಅವನಿಂದ ಹಾಗೂ ಅವನ ಜಾಮೀನುದಾರರಿಂದ ಒಂದು ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಇಲ್ಲವೆ ಸ್ವಂತ ಮುಚ್ಚಳಿಕೆ ಬರೆಯಿಸಿಕೊಂಡು ಯಾವಾಗಲಾದರೂ ದಂಡಾಧಿಕಾರಿಯ ಮುಂದೆ ಹಾಜರಾಗುವ ಅವಶ್ಯಕತೆಯು ಬಿದ್ದರೆ ಸಂಜ್ಞೆಯನ್ನು ತೆಗೆದುಕೊಳ್ಳಲು ಅಧಿಕಾರವುಳ್ಳ ದಂಡಾಧಿಕಾರಿಯ ಮುಂದೆ ಹಾಜರಾಗುತ್ತೇನೆಂದು ಮುಚ್ಚಳಿಕೆ ಬರೆಯಿಸಿಕೊಂಡು ಬಿಡುಗಡೆ ಮಾಡತಕ್ಕದ್ದು.

**ಕಲಮು ೧೭೦**

(೧) ಆರೋಪಿಯನ್ನು ದಂಡಾಧಿಕಾರಿಯೆದುರು ಹಾಜರಾಗಲು ಪೊಲೀಸರಿಗೆ ಸಾಕಷ್ಟು ಕಾರಣಗಳಿವೆಯೆಂದು ಅನಿಸಿದರೆ ಇಲ್ಲವೇ ಸಂಶಯಕ್ಕೆ ಅಂತಹ ಯೋಗ್ಯ ಕಾರಣಗಳಿವೆಯೆಂದು ಅನಿಸಿದರೆ, ಅಂತಹ ಅಧಿಕಾರಿಯು ಆರೋಪಿಯನ್ನು ಅಭಿರಕ್ಷಣೆಯಲ್ಲಿ ಸಂಜ್ಞೆಯನ್ನು ತೆಗೆದುಕೊಳ್ಳಲು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟನ ಬಳಿ ಕಳುಹಿಸತಕ್ಕದ್ದು.

(೨) ಇದರ ಸಂಗಡ ದಂಡಾಧಿಕಾರಿಯ ಮುಂದೆ ಹಾಜರುಪಡಿಸಲು ಅವಶ್ಯವಿರುವ ವಸ್ತುಗಳನ್ನು ಕಳುಹಿಸತಕ್ಕದ್ದು ಮತ್ತು ಫಿರ್ಯಾದಿದಾರನು ಹಾಗೂ ಸಾಕ್ಷಿದಾರರು ದಂಡಾಧಿಕಾರಿಯ ಮುಂದೆ ಹಾಜರಾಗುವುದಾಗಿ ಮುಚ್ಚಳಿಕೆ ಬರೆದುಕೊಡಬೇಕು.

**ಕಲಮು ೧೭೩**

ಪೊಲೀಸ್ ಅಧಿಕಾರಿಯು ಪಕ್ಷಗಾರರ ಹೆಸರುಗಳನ್ನು ಪ್ರತಿಯೊಬ್ಬರು ಯಾವುದಕ್ಕೆ ಹೊಣೆಗಾರರಾಗಿರುತ್ತಾರೆಂದು ಕಾಣಿಸಿ ವರದಿಯನ್ನು ಕಳುಹಿಸತಕ್ಕದ್ದು.

ಆರೋಪಿಯು ಇಂತಹ ವರದಿಯ ಒಂದು ನಕಲು ಪಡೆಯಲು ಹಕ್ಕುಳ್ಳವನಿದ್ದಾನೆ.

**ಆರೋಪಿಯು ಹಾಜರಾಗುವುದರಿಂದ ವಿನಾಯಿತಿ:**

ಕಲಮು ೨೦೫, ೪೨೪; ೬ ಅಲಹಾಬಾದ್ ೫೯: ೨೧ ಕಲ್ಕತ್ತ ೫೮೮.

**ಕಲಮು ೨೦೫**

ಮ್ಯಾಜಿಸ್ಟ್ರೇಟನು ಆರೋಪಿಗೆ ಸಮನ್ಸುಗಳನ್ನು ಹೊರಡಿಸುವ ಕಾಲಕ್ಕೆ ಆರೋಪಿಯು ಸ್ವತಃ ಹಾಜರಾಗುವ ಕಾರಣವಿಲ್ಲವೆಂದು ಅನಿಸಿದರೆ ಆಗ ಆರೋಪಿಯು ಹಾಜರಾಗುವುದನ್ನು ಬಿಟ್ಟುಬಿಡಲು ಮತ್ತು ಅವನು ತನ್ನ ವಕೀಲರ ಮುಖಾಂತರ ಹಾಜರಾಗಲು ಪರವಾನಗಿ ಕೊಡಬಹುದು.

(೨) ಆದರೆ ದಂಡಾಧಿಕಾರಿಯು ಆರೋಪಿಯನ್ನು ಬೇಕಾದ ಕಾಲಕ್ಕೆ ಕರೆಯಿಸಬಹುದು.

**ಕಲಮು ೩೬೬– ತೀರ್ಪು ಕೊಡುವ ಕಾಲಕ್ಕೆ:**

ಆರೋಪಿಯು ಸ್ವತಃ ಹಾಜರಾಗುವುದರಿಂದ ವಿನಾಯಿತಿ ನೀಡಿದ ಹೊರತಾಗಿ ಮತ್ತು ಶಿಕ್ಷೆಯು ಕೇವಲ ದಂಡವಾಗಿರದಿದ್ದಲ್ಲಿ ಇದನ್ನು ಆರೋಪಿಯ ಸಮ್ಮುಖದಲ್ಲಿಯೇ ಓದತಕ್ಕದ್ದು.

**ಕಲಮು ೪೨೪**

ಮೇಲ್ಮನವಿ ನ್ಯಾಯಾಲಯದ ತೀರ್ಪು: ತೀರ್ಪನ್ನು ಕೇಳಲು ಆರೋಪಿಯನ್ನು ಕರೆಯಿಸುವ ಅವಶ್ಯಕತೆಯೂ ಇಲ್ಲ.

## ೨. ಒಂದು ವಿಚಾರಣೆಯಲ್ಲಿ ನ್ಯಾಯಾಲಯವು ಎಷ್ಟು ಅಪರಾಧಗಳ ಸಂಜ್ಞೆಯನ್ನು ತೆಗೆದುಕೊಳ್ಳಬಲ್ಲದು ದೋಷಾರೋಪಣೆಗಳ ಸೇರ್ಪಡೆ ಕಲಮು ೨೩೩, ೨೩೪, ೨೩೫

**ಕಲಮು ೨೩೩**

೧) ಪ್ರತಿಯೊಂದು ಅಪರಾಧವನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡತಕ್ಕದ್ದು. ಒಂದು ಪ್ರಕರಣದಲ್ಲಿ ಅವನ ಮೇಲೆ ಕಳವಿನ ಆರೋಪವಿದೆ. ಮತ್ತೊಂದು ಪ್ರಕರಣದಲ್ಲಿ ಅವನು ತೀವ್ರ ಗಾಯ ಮಾಡಿದ ಆರೋಪ ಇರುತ್ತದೆ. ಅವನ ವಿಚಾರಣೆಯನ್ನು ಈ ಎರಡೂ ಅಪರಾಧಗಳಿಗಾಗಿ ಪ್ರತ್ಯೇಕವಾಗಿಯೇ ವಿಚಾರಣೆಯನ್ನು ಮಾಡತಕ್ಕದ್ದು. ಅವೆರಡೂ ಅಪರಾಧಗಳಿಗಾಗಿ ಅವನನ್ನು ಒಂದೇ ವಿಚಾರಣೆ ಮಾಡಬಾರದು, ಆದರೆ ಈ ಸಾಮಾನ್ಯ ನಿಯಮಕ್ಕೆ ಅಪವಾದಗಳು ಇರುತ್ತವೆ.

**ಕಲಮು ೨೩೪**

ಒಂದೇ ರೀತಿಯ ಮೂರು ಅಪರಾಧಗಳನ್ನು ಹನ್ನೆರಡು ತಿಂಗಳ ಅವಧಿಯೊಳಗಾಗಿ ಮಾಡಿದ್ದರೆ ಆ ಎಲ್ಲ ಅಪರಾಧಗಳನ್ನು ಒಂದೇ ವಿಚಾರಣೆಯಲ್ಲಿ ನಡೆಯಿಸತಕ್ಕದ್ದು, ಅವು ಒಬ್ಬನ ವಿರುದ್ಧ ಎಸಗಿದವುಗಳಿರಬಹುದು ಇಲ್ಲವೇ ಇಲ್ಲದೆ ಇರಬಹುದು.

ಒಂದೇ ರೀತಿಯ ಅಪರಾಧಗಳು ಒಂದೇ ರೀತಿಯ ಶಿಕ್ಷೆಯನ್ನು ಭಾರತೀಯ ದಂಡಸಂಹಿತೆ ಇಲ್ಲವೇ ಯಾವುದೇ ವಿಶೇಷ ಅಥವಾ ಸ್ಥಾನಿಕ ಕಾನೂನಿನ ಅನ್ವಯ ಒಂದೇ ಕಲಮಿನ ಕೆಳಗೆ ಶಿಕ್ಷೆ ವಿಧಿಸತಕ್ಕಂತವು.

(೨) ಮೂರಕ್ಕಿಂತ ಹೆಚ್ಚಿಗೆ ಸೇರ್ಪಡಿಸಲೇಬಾರದು. ಕಲಮು ೪೧೧ರ ಅನ್ವಯ ಮತ್ತು ಕಲಮು ೪೧೪ರ ಅನ್ವಯ ದೋಷಾರೋಪಣೆಗಳನ್ನು ಸೇರ್ಪಡಿಸುವುದು ಸರಿಯಲ್ಲ. ಮೂರು ಖೊಟ್ಟಿ ಕಾಗದಗಳ ಸೃಷ್ಟಿಸಿದ ಅಪರಾಧಗಳು ಮತ್ತು ಮೂರು ದ್ರೋಹವೆಸಗಿದ ಅಪರಾಧಗಳನ್ನು ಸೇರ್ಪಡಿಸುವುದು ಸರಿಯಲ್ಲ.

| | | |
|---|---|---|
| ೧. ಒಂದೇ ರೀತಿಯವು: | ಪರಸತಿ ಸಂಗ ಮತ್ತು ದ್ವಿಪತ್ನಿತ್ವ | |
| | ಕೊಲೆ ಮತ್ತು ಗಾಯ | ಇವೆಲ್ಲವೂ ಒಂದೇ |
| | ಖೊಟ್ಟಿ ಪತ್ರ ಸೃಷ್ಟನೆ | ರೀತಿಯವು ಅಲ್ಲ |
| | ಮತ್ತು ಸುಳ್ಳು ಸಾಕ್ಷಿ ಹೇಳುವುದು | |

ಒಂದೇ ರೀತಿಯದಾಗಿದ್ದು ಇದು ಎರಡು ಪರಂತುಕಗಳಿಗೆ ಅಧೀನವಾಗಿದೆ.

i) ಕಲಮು ೩೭೯ರ ಕೆಳಗಿನ ಅಪರಾಧಗಳು (ಕಳವು) ಮತ್ತು ಕಲಮು ೩೮೦ರ ಮೇರೆಗೆ (ವಾಸದ ಮನೆಯಲ್ಲಿ ಕಳವು) ಇವೆರಡೂ ಒಂದೇ ನಮೂನೆಯ ಅಪರಾಧಗಳಾಗಿರುತ್ತವೆ. ಆದರೂ ಅವು ಒಂದೇ ಕಲಮಿನ ಮೇರೆಗೆ ಅಪರಾಧಗಳಲ್ಲಿ ಅವುಗಳು ಶಿಕ್ಷೆಯಲ್ಲಿ ಮಾತ್ರ ಬೇರೆ ಬೇರೆಯಾಗಿರುತ್ತವೆ.

**ಕಲಮು ೨೩೫ (೨)**

ಒಂದು ಅಪರಾಧವು ಎರಡು ಅಥವಾ ಹೆಚ್ಚಿನ ಬೇರೆ ಬೇರೆ ವ್ಯಾಖ್ಯೆಗಳಲ್ಲಿ ಬರುತ್ತಿದ್ದರೆ, ಆ ಅಪರಾಧವನ್ನು ವ್ಯಾಖ್ಯೆಯಿಸುವ ಮತ್ತು ಶಿಕ್ಷಿಸುವ ಅಪರಾಧಗಳು. ಅಂತಹ ಅಪರಾಧ ಎಸಗಿದ ಆರೋಪಿತರನ್ನು ಒಂದೇ ವಿಚಾರಣೆಯಲ್ಲಿ ಇಂತಹ ಪ್ರತಿಯೊಂದು ಅಪರಾಧಕ್ಕಾಗಿ ವಿಚಾರಣೆಗಾಗಿ ಗುರಿಪಡಿಸಬಹುದು.

**ಕಲಮು ೨೩೫ (೩)**

ಒಂದು ಕೃತಿಯೇ ಅಪರಾಧವಾಗುತ್ತಿದ್ದರೆ, ಅದು ಮತ್ತೊಂದು ಅಪರಾಧದೊಂದಿಗೆ ಸೇರಿದರೆ ಬೇರೊಂದು ಅಪರಾಧವಾಗುತ್ತದೆ.

ಅಂಥ ಆಪಾದನೆಗೆ ಒಳಗಾದ ಆರೋಪಿಯನ್ನು ಒಂದೇ ನಮೂನೆಯ ಅಪರಾಧಗಳಿಗಾಗಿ ಒಂದೇ ವಿಚಾರಣೆಗೆ ಒಳಪಡಿಸಬಹುದು. ಒಂದು ಇಂಥ ಕೃತಿ ಮತ್ತೊಂದು ಅಪರಾಧದೊಂದಿಗೆ ಸೇರ್ಪಡೆಯಾದರೆ ಮತ್ತೆ ಬೇರೆ ಅಪರಾಧಗಳು ಆ ಕೃತಿಯಿಂದ ಘಟಿಸಿದ್ದರೆ, ಅವೆಲ್ಲವುಗಳನ್ನು ಒಂದೇ ವಿಚಾರಣೆಯಲ್ಲಿ ಸೇರ್ಪಡಿಸಬಹುದು.

ಒಂದು ಇಲ್ಲವೇ ಅನೇಕ ಕೃತಿಗಳನ್ನು ಆರೋಪಿ ಎಸಗಿದ್ದರೆ, ಅವು ಎಲ್ಲವೂ ಒಂದೇ ಅಪರಾಧ ವೆಂದಾಗುತ್ತದೆ. ಆರೋಪವೆಸಗಿದ ಕೃತಿಗಳು ಒಂದಕ್ಕಿಂತ ಹೆಚ್ಚಿನ ಅಪರಾಧಗಳು ಆಗುತ್ತಿದ್ದರೆ ಉದಾ: ಅನೇಕ ಅಪರಾಧಗಳನ್ನು ಎಸಗಿದ್ದಾನೆಂದು ತೋರಿಸಬಹುದು. ಆ ಎಲ್ಲ ಆರೋಪಗಳನ್ನು ಒಂದೇ ವಿಚಾರಣೆಯಲ್ಲಿ ನಡೆಯಿಸಬಹುದೇ? ಅಥವಾ ಪ್ರತಿಯೊಂದು ಅಪರಾಧವನ್ನು ಪ್ರತ್ಯೇಕವಾಗಿಯೇ ವಿಚಾರಣೆ ಮಾಡಬೇಕೇ?

ಈ ಬಗ್ಗೆ ನಿಯಮಗಳನ್ನು ಕಲಂ ೨೩೫(೧)ರಲ್ಲಿ ನೋಡಬಹುದು.

ಒಂದೇ ವ್ಯವಹಾರದಲ್ಲಿ ಆರೋಪಿಯ ಕೃತಿಗಳು ಬೇರೆ ಬೇರೆ ಅಪರಾಧಗಳಾಗುತ್ತಿದ್ದರೆ, ಆಗ ಅವನನ್ನು ಅಂಥ ಪ್ರತಿಯೊಂದು ಅಪರಾಧಕ್ಕೆ ಪ್ರತ್ಯೇಕ ವಿಚಾರಣೆ ಮಾಡಬೇಕು.

**I. ಒಂದೇ ವ್ಯವಹಾರ**

ಆರೋಪಿಯ ಬೇರೆ ಬೇರೆ ಕೃತಿಗಳು ಒಂದೇ ವ್ಯವಹಾರದಿಂದ ಇದ್ದಾಗ ಅದು ಒಂದೇ ಕೃತಿಯೇ ಎಂಬುದನ್ನು ನಿರ್ಧರಿಸುವಾಗ ವೇಳೆಯ ಸಾಮೀಪ್ಯವು ಅಷ್ಟು ಮಹತ್ವದಲ್ಲ. ಆದರೆ ಆ ಕೃತಿಯ ಮುಂದುವರೆಯುವಿಕೆ ಮತ್ತು ಸಾಮೂಹಿಕ ಉದ್ದೇಶ ಹಾಗೂ ಗುರಿ ನಿರ್ಧರಿಸುತ್ತವೆ.

ಒಂದು ಅಪರಾಧವನ್ನು ಎಸಗಿದ ನಂತರ ಮತ್ತೊಂದು ಅಪರಾಧವನ್ನು ಎಸಗುವಾಗ ಈ ಮಧ್ಯದ ವೇಳೆಯ ವಿರಾಮ ಅಪರಾಧವು ಮುಂದುವರೆದಿಲ್ಲವೆಂದು ತಾತ್ಪರ್ಯ. ವಿರಾಮ ವೇಳೆಯ ಅವಧಿಯು ಮಹತ್ವದ ಸಂಗತಿಯಾಗಿದ್ದರೂ ಎರಡು ಕೃತಿಗಳನ್ನು ಕೂಡಿಸುವ ಪ್ರಶ್ನೆಯು ಬಂದಾಗ ವೇಳೆಯ ಅವಧಿಯು ಮಹತ್ವದ ಸಂಗತಿ.

೨. ಒಂದೇ ವಿಚಾರಣೆಯಲ್ಲಿ ಇಷ್ಟೇ ಸಂಖ್ಯೆಯ ಅಪರಾಧಗಳನ್ನು ಕೂಡಿಸಿ ನಡೆಯಿಸಬೇಕೆಂಬ ಮಿತಿ ಇರುವುದಿಲ್ಲ.

## III. ನ್ಯಾಯಾಲಯದ ಎಷ್ಟು ಆರೋಪಿಗಳನ್ನು ಒಂದು ಅವಧಿ ವಿಚಾರಣೆಯಲ್ಲಿ ಮಾಡಬಹುದು

### ಆರೋಪಿಗಳ ಸೇರ್ಪಡೆ

**ಕಲಮು ೨೩೯**

ಈ ಕೆಳಕಾಣಿಸಿದ ಜನರ ಮೇಲೆ ದೋಷಾರೋಪಣೆ ಹೊರಿಸಬಹುದು ಮತ್ತು ಅವರೆಲ್ಲರನ್ನೂ ಕೂಡಿಸಿಯೇ ವಿಚಾರಣೆ ಮಾಡಬೇಕು.

(ಅ) ಒಂದು ಘಟನೆಯನ್ನು ಮಾಡಿ ಆರೋಪವೆಸಗಿದ್ದಾರೆನ್ನುವ ಎಲ್ಲ ಆರೋಪಿಗಳನ್ನು.

(ಬ) ಒಂದು ಆರೋಪವೆಸಗಿದ್ದಾರೆನ್ನುವ ಆರೋಪಿಗಳನ್ನು ಮತ್ತು ಅದಕ್ಕೆ ದುಷ್ಪ್ರೇರಣೆ ಮಾಡಿದ ಆರೋಪಿಗಳನ್ನು ಇಲ್ಲವೆ ಇಂತಹ ಅಪರಾಧವೆಸಗಲು ಪ್ರಯತ್ನಿಸಿದವರನ್ನು;

(ಕ) ಒಂದೇ ನಮೂನೆಯ ಒಂದಕ್ಕಿಂತ ಹೆಚ್ಚು ಅಪರಾಧಗಳಲ್ಲಿ ಆರೋಪಿಸಲ್ಪಟ್ಟ ಜನರು ಕಲಮು ೨೩೪ರ ಅರ್ಥದಲ್ಲಿ ಅವರೆಲ್ಲ ಜಂಟಿಯಾಗಿ ೧೨ ತಿಂಗಳ ಅವಧಿಯಲ್ಲಿ ಎಸಗಿದವರು;

(ಡ) ಒಂದು ಅಪರಾಧವನ್ನು ಎಸಗುವ ಕಾಲಕ್ಕೆ ಬೇರೆ ಬೇರೆ ಅಪರಾಧಗಳನ್ನು ಬೇರೆ ಬೇರೆ ಆರೋಪಿ ಜನರು ಎಸಗಿದವರನ್ನು;

(ಇ) ಒಂದು ಕಳವಿನ, ಬಲತ್ಕಾರದಿಂದ ಸುಲಿಗೆ, ಇಲ್ಲವೆ ಅಪರಾಧಿಕ ದುರ್ವಿನಿಯೋಗವೆನಿಸುವ ಅಪರಾಧವೆಸಗಿದ ಆರೋಪಿಗಳನ್ನು;

(ಎಫ್) ಒಬ್ಬನು ಒಂದು ಕಳವಿನ ಅಪರಾಧವನ್ನು ಮೊದಲು ಮಾಡಿರುವನೆಂದೂ ಅಂತಹ ಮನುಷ್ಯನು ಕಳವಿನ ಮೂಲಕ ವಸ್ತುಗಳನ್ನು ವರ್ಗಾಯಿಸಿದ್ದಾನೆಂದು ಆ ಕಳವಿನ ಮಾಲನ್ನು ಸ್ವೀಕರಿಸಿದವ ಇಲ್ಲವೆ ಇಟ್ಟುಕೊಂಡವ ಇಲ್ಲವೇ ಅದನ್ನು ಮಾರಾಟ ಮಾಡಲು ಸಹಾಯ ಮಾಡುವವರನ್ನು; ಇಲ್ಲವೆ

ಒಂದು ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ ಜನರನ್ನು ಇಲ್ಲವೆ ಕೊನೆಗೆ ಹೆಸರಿಸಿದ ಅಪರಾಧ ಮಾಡಲು ಪ್ರಯತ್ನಿಸಿದ ಎಲ್ಲ ಆರೋಪಿಗಳನ್ನು;

(ಎಫ್) ಭಾರತ ದಂಡ ಸಂಹಿತೆಯ ಕಲಮು ೪೧೧ ಮತ್ತು ಕಲಮು ೪೧೪ರ ಅನ್ವಯ ಆರೋಪಿಸಲಾದ ಎಲ್ಲರನ್ನು ಇಲ್ಲವೇ ಈ ಕಲಮುಗಳಲ್ಲಿ ಒಂದು ಕಲಮಿನ ಅನ್ವಯ ಆಸ್ತಿಯ ಕಬ್ಜೆಯನ್ನು ವರ್ಗಾಯಿಸಿ ಒಂದು ಅಪರಾಧವೆಸಗಿದವನನ್ನು;

(ಜಿ) ಭಾರತ ದಂಡ ಸಂಹಿತೆಯ ಅಧ್ಯಾಯದಡಿಯಲ್ಲಿ ನಾಣ್ಯಗಳ ಖೋಟಾ ತಯಾರಿಕೆ ಕುರಿತು ಆರೋಪಿಸಲಾದವರು ಮತ್ತು ಆ ಅಧ್ಯಾಯದ ಕೆಳಗೆ ಅದೇ ನಾಣ್ಯಕ್ಕೆ ಸಂಬಂಧಿಸಿದಂತೆ ಬೇರೆ ಅಪರಾಧವೆಸಗಿರುವರೆಂದು ಆರೋಪಿಸಲಾದವರನ್ನು ಇಲ್ಲವೆ ಅವರಿಗೆ ದುಷ್ಪ್ರೇರಣೆ ಮಾಡಿದವರನ್ನು ಇಲ್ಲವೆ ಇಂತಹ ಅಪರಾಧ ಮಾಡಲು ಪ್ರಯತ್ನಿಸಿದವರನ್ನು.

**ಟಿಪ್ಪಣಿ:** ಬೇರೆ ಬೇರೆ ಜನರನ್ನು ಜಂಟಿಯಾಗಿ ಅಧಿವಿಚಾರಣೆಗೆ ಒಳಪಡಿಸುವ ತಳಹದಿಯ ಪ್ರಕ್ರಿಯೆಯು ಅವರು ಅದನ್ನು ಸಾಧಿಸಲು ಪಡೆಯಲು ಪ್ರಾರಂಭದಿಂದ ಅದರ ಮುಕ್ತಾಯದವರೆಗೆ ಸಂಬಂಧ ಹೊಂದಿರುತ್ತಾರೆ.

ಅವರು ತಮ್ಮ ಯೋಜನೆಯನ್ನು ಒಂದಾದ ಮೇಲೊಂದರಂತೆ ಅನುಕ್ರಮ ಕೃತಿಗಳನ್ನು ಮಧ್ಯಂತರದಲ್ಲಿ ಮಾಡುವುದನ್ನು ಅವರ ಆಯೋಜನೆಯನ್ನು ಏಕತೆಗೆ ಪ್ರತಿಬಂಧಿಸುವುದಿಲ್ಲ. ಆ ಎಲ್ಲ ಕೃತಿಗಳ ಶ್ರೇಣಿಗಳು ಒಂದೇ ಕೃತ್ಯ ರಚನೆ ಆಗಿರುತ್ತವೆ.

*೨೦ ಕಲ್ಕತ್ತ ೩೫೮, ೫ ಮದ್ರಾಸ ೧೯೯*

**IV. ಆರೋಪಿಗಳ ಮತ್ತು ಸಾಕ್ಷಿದಾರರ ಹಾಜರಾತಿಯನ್ನು ದೊರಕಿಸಿಕೊಳ್ಳುವುದು**

ನ್ಯಾಯಾಲಯವು ಒಂದು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡಾಗ್ಯೂ ವಾಸ್ತವವಾಗಿ ಅಪರಾಧಿಕ ವ್ಯವಹರಣೆಗಳು ನ್ಯಾಯಾಲಯದಲ್ಲಿ ಆರೋಪಿಗಳು ದೋಷಾರೋಪಣೆಗೆ ಉತ್ತರಿಸಲು ಮತ್ತು ಸಾಕ್ಷಿದಾರರು ಸಾಕ್ಷಿ ಕೊಡಲು ಹಾಜರಿದ್ದಾಗ ಮಾತ್ರ ಪ್ರಾರಂಭವಾಗಲು ಸಾಧ್ಯ.

*ಅವರನ್ನು ನ್ಯಾಯಾಲಯದ ಮುಂದೆ ಹೇಗೆ ತರಲಾಗುತ್ತದೆ?*

**ಕಲಮು ೧೦೪**

೧. ಪೊಲೀಸರು ಒಂದು ಅಪರಾಧದ ಸಂಜ್ಞೆಯನ್ನು ತೆಗೆದುಕೊಂಡು ತನಿಖೆ ಕೈಕೊಂಡು ಕಲಮು ೧೭೩ರ ಅನ್ವಯ ತನ್ನ ವರದಿ ಸಲ್ಲಿಸಿದಾಗ ಆರೋಪಿ ಹಾಗೂ ಸಾಕ್ಷಿದಾರರು ಈಗಾಗಲೇ ನ್ಯಾಯಾಲಯದ ಮುಂದೆ ಇರುತ್ತಾರೆ.

೨. ಪೊಲೀಸ್ ವರದಿ ಹೊರತುಪಡಿಸಿ ಕಲಮು ೧೭೩ರ ಅನ್ವಯ ಸಂಜ್ಞೆಯನ್ನು ತೆಗೆದುಕೊಂಡಿದ್ದರೆ ಆರೋಪಿಗಳು ಮತ್ತು ಸಾಕ್ಷಿದಾರರು ನ್ಯಾಯಾಲಯದ ಎದುರು ಹಾಜರಿರುವುದಿಲ್ಲ. ಅವರನ್ನು ನ್ಯಾಯಾಲಯದ ಮುಂದೆ ತರಬೇಕಾಗುತ್ತದೆ.

ಅವರನ್ನು ನ್ಯಾಯಾಲಯದ ಮುಂದೆ ತರುವ ಕ್ರಮ ಯಾವುದು?

ದಂಡ ಪ್ರಕ್ರಿಯಾ ಸಂಹಿತೆಯು ಅಂತಹ ಎರಡು ಕ್ರಮಗಳನ್ನು ಉದ್ದೇಶಿಸಲಾಗಿದೆ.

**ಕಲಮು ೬೮**

೧. ಹಾಜರಾಗಲು ಸಮನ್ಸುಗಳು ೨. ದಸ್ತಗಿರಿ ಮಾಡಲು ವಾರಂಟು

**೧. ಹಾಜರಾಗಲು ಸಮನ್ಸು:** ನ್ಯಾಯಾಲಯವು ಈ ಸಂಹಿತೆಯ ಕೆಳಗೆ ಹೊರಡಿಸುವ ಪ್ರತಿಯೊಂದು ಸಮನ್ಸು ಲಿಖಿತ ದ್ವಿಪ್ರತಿಯಲ್ಲಿರತಕ್ಕದ್ದು ಹಾಗೂ ಅಂತಹ ನ್ಯಾಯಾಲಯದ ಪೀಠಾಧೀನ ಅಧಿಕಾರಿಯ ಸಹಿ ಹೊಂದಿರತಕ್ಕದ್ದು ಇಲ್ಲವೇ, ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಮಾಡಿದ ನಿಯಮಗಳ ನಿರ್ದೇಶನ ಪ್ರಕಾರ ಉಳಿದ ಯಾವುದೇ ಅಧಿಕಾರಿಯು ಸಹಿ ಮಾಡಬೇಕು.

೨. ಸಮನ್ಸನ್ನು ಪೊಲೀಸ್ ಅಧಿಕಾರಿಗಳು ಇಲ್ಲವೇ ಸ್ಥಾನಿಕ ಸರಕಾರವು ಈ ಕುರಿತು ನಿರ್ದಿಷ್ಟಪಡಿಸಿದಂತೆ ಅದನ್ನು ಹೊರಡಿಸಿದ ನ್ಯಾಯಾಲಯದ ಅಧಿಕಾರಿ ಇಲ್ಲವೇ ಇತರ ಸಾರ್ವಜನಿಕ ಅಧಿಕಾರಿ ಜಾರಿ ಮಾಡಬೇಕು.

**ಕಲಮು ೬೯**

**ಖುದ್ದು ಜಾರಿ:** ಸಮನ್ಸುಗಳನ್ನು ಕಾರ್ಯಸಾಧ್ಯವಾದಷ್ಟು ಯಾರನ್ನುದ್ದೇಶಿಸಿದೆಯೋ ಅವರಿಗೆ ಖುದ್ದಾಗಿ ದ್ವಿಪ್ರತಿಯಲ್ಲಿಯ ಸಮನ್ಸಿನ ಒಂದು ಪ್ರತಿಯನ್ನು ಅವನಿಗೆ ಕೊಡುವುದು ಇಲ್ಲವೆ ನೀಡುವುದರ ಮೂಲಕ ಜಾರಿ ಮಾಡಬೇಕು.

೨. ಯಾರಿಗೆ ಇಂತಹ ಸಮನ್ಸು ಜಾರಿ ಮಾಡಲಾಗಿದೆಯೋ ಅವನು, ಆ ಜಾರಿಮಾಡುವ ಅಧಿಕಾರಿಯು ಬೇರೊಂದು ದ್ವಿಪ್ರತಿಯ ಹಿಂಬದಿಯಲ್ಲಿ ಸ್ವೀಕೃತ ಸಹಿ ಮಾಡಬೇಕೆಂದು ಕೇಳಿದರೆ ಹಾಗೆ ಮಾಡಬೇಕು.

**೩. ನಿಗಮಗಳ ಮೇಲೆ ಜಾರಿ ಮಾಡುವುದು:** ನಿಗಮಿತಗೊಳಿಸುವ ಕಂಪನಿಗಳ ಮೇಲೆ ಇಲ್ಲವೆ ಉಳಿದ ನಿಗಮಿತ ನಿಕಾಯಗಳ ವಿರುದ್ಧದ ಸಮನ್ಸನ್ನು ಬ್ರಿಟಿಷರ ಭಾರತದ ನಿಗಮಗಳ ಕಾರ್ಯದರ್ಶಿಯ ಮೇಲೆ, ಸ್ಥಾನಿಕ ಮ್ಯಾನೇಜರನ ಮೇಲೆ, ಇಲ್ಲವೆ ನಿಗಮದ ಮುಖ್ಯ ಅಧಿಕಾರಿಗಳ ಮೇಲೆ ಜಾರಿ ಮಾಡುವ ಮೂಲಕ ಮಾಡಬೇಕು. ಇಂತಹ ಪ್ರಕರಣದಲ್ಲಿ ಸಾಮಾನ್ಯ ಅಂಚೆಯಿಂದ ಪತ್ರ ಕಳುಹಿಸಿದರೆ ಅದು ಸಮನ್ಸ್ ಜಾರಿ ಮಾಡಿದಂತೆಯೇ ಎಂದು ಗ್ರಹಿಸಲಾಗುವುದು.

**ಕಲಮು ೭೦**

ಸಮನ್ಸ್ ಜಾರಿಯಾಗಬೇಕಾದವನು ಸಿಗದೆ ಇದ್ದಾಗ ಅವನ ಕುಟುಂಬದ ಯಾವುದೇ ವಯಸ್ಕ ಗಂಡಸಿಗೆ ಜಾರಿಮಾಡಿ ಆ ದ್ವಿಪ್ರತಿಯ ಒಂದು ಸಮನ್ಸನ್ನು ಅವನಿಗೆ ಕೊಡಬೇಕು ಅಥವಾ ಪ್ರೆಸಿಡೆನ್ಸಿ ಪಟ್ಟಣಗಳಲ್ಲಾದರೆ ಅವನೊಂದಿಗೆ ವಾಸಿಸುವ ನೌಕರನ ಮೇಲೆ ಜಾರಿಮಾಡಬಹುದು.

ಯಾವ ವ್ಯಕ್ತಿಗೆ ಅದನ್ನು ಕೊಡಲಾಗಿದೆಯೋ ಅವನು ಆ ದ್ವಿಪ್ರತಿಯ ಹಿಂಭಾಗದಲ್ಲಿ ತನ್ನ ಸಹಿ ಮಾಡಬೇಕು.

ಆರೋಪಿಯ ಮೇಲೆ ಸಮನ್ಸು ಖುದ್ದು ಜಾರಿಮಾಡಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಬದಲಿ ಜಾರಿಯು ಅಸಮರ್ಪಕವಾಗುತ್ತದೆ.

**ಕಲಮು ೭೧**

ಇದು ಸಾಧ್ಯವಿಲ್ಲದಿದ್ದರೆ, ಆಗ ಆ ಸಮನ್ಸು ಜಾರಿ ಮಾಡುವ ಅಧಿಕಾರಿಯು ಆ ಸಮನ್ಸು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ಮನುಷ್ಯನು ಸಾಮಾನ್ಯವಾಗಿ ಯಾವ ಮನೆಯಲ್ಲಿ ಇಲ್ಲವೆ ವಾಸ ಸ್ಥಳದಲ್ಲಿ ವಾಸವಾಗಿರುವನೋ ಆ ಮನೆಯ ಎದ್ದು ಕಾಣುವ ಭಾಗದಲ್ಲಿ ಆ ಸಮನ್ಸ್‌ನ ದ್ವಿಪ್ರತಿಯನ್ನು ಅಂಟಿಸಬೇಕು.

**ಕಲಮು ೭೨**

**ಸರಕಾರಿ ನೌಕರನ ಇಲ್ಲವೆ ರೇಲ್ವೆ ಕಂಪನಿ ನೌಕರನ ಮೇಲೆ ಜಾರಿ ಮಾಡುವುದು**

ಯಾರಿಗೆ ಸಮನ್ಸು ಜಾರಿ ಮಾಡಬೇಕಾಗಿದೆಯೋ ಅಂತಹ ವ್ಯಕ್ತಿಯು ಸರಕಾರಿ ಇಲ್ಲವೆ ರೇಲ್ವೆ ಕಂಪನಿಯ ಸಕ್ರಿಯ ಸೇವೆಯಲ್ಲಿದ್ದರೆ ಸಮನ್ಸು ಹೊರಡಿಸುವ ನ್ಯಾಯಾಲಯವು ಸಾಮಾನ್ಯವಾಗಿ ಅವುಗಳನ್ನು ದ್ವಿಪ್ರತಿಯಲ್ಲಿ ಎಲ್ಲಿ ಅವನು ಕೆಲಸ ಮಾಡುವನೋ ಆ ಕಚೇರಿಯ ಮುಖ್ಯಸ್ಥನಿಗೆ ಕಳುಹಿಸಬೇಕು. ಅಂತಹ ಮುಖ್ಯಸ್ಥನು ಆಮೇಲೆ ಕಲಮು ೬೯ರಲ್ಲಿ ಕಾಣಿಸಿದ ರೀತಿಯಲ್ಲಿ ಆ ಸಮನ್ಸ್‌ನ್ನು ಜಾರಿ ಮಾಡಬೇಕು ಮತ್ತು ಆ ಕಲಮಿನ ಕೆಳಗೆ ಕಾಣಿಸಿದಂತೆ ಆ ಸಮನ್ಸ್‌ನ ಹಿಂಬದಿಯಲ್ಲಿ ತನ್ನ ಸಹಿ ಮಾಡಿ ಶರಾ ಬರೆದು ನ್ಯಾಯಾಲಯಕ್ಕೆ ಕಳುಹಿಸಬೇಕು.

(೨) ಇಂತಹ ಸಹಿಯು ಸಮರ್ಪಕ ಜಾರಿಯೆಂಬುದಕ್ಕೆ ಸಾಕ್ಷಿಯಾಗಿರುತ್ತದೆ.

**ಕಲಮು ೭೩**

**ವ್ಯಾಪ್ತಿಗಳಾಚೆಗೆ ಸಮನ್ಸು ಜಾರಿಮಾಡುವುದು:**

ಒಂದು ನ್ಯಾಯಾಲಯವು ತಾನು ಹೊರಡಿಸಿದ ಸಮನ್ಸುಗಳನ್ನು ತನ್ನ ಪ್ರಾದೇಶಿಕ ವ್ಯಾಪ್ತಿಯ ಹೊರಗಡೆಯ ಅಧಿಕಾರ ವ್ಯಾಪ್ತಿಯಲ್ಲಿ ಜಾರಿ ಮಾಡಬೇಕೆಂದು ಬಯಸಿದಲ್ಲಿ ಅಂಥ ಸಮನ್ಸುಗಳನ್ನು ಸಾಮಾನ್ಯವಾಗಿ ದ್ವಿಪ್ರತಿಯಲ್ಲಿ ಯಾರ ಮೇಲೆ ಸಮನ್ಸು ಜಾರಿ ಮಾಡಬೇಕಾಗಿದೆಯೋ, ಅಂಥ ಮನುಷ್ಯನು ಯಾವ ಮ್ಯಾಜಿಸ್ಟ್ರೇಟನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಅವನು ವಾಸಿಸುವನೋ ಅಥವಾ ಇರುವನೋ ಅಲ್ಲಿಗೆ ಅವುಗಳನ್ನು ಕಳುಹಿಸತಕ್ಕದ್ದು.

**ಕಲಮು ೭೪**

ಜಾರಿ ಮಾಡುವ ಅಧಿಕಾರಿಯು ಹಾಜರಿಲ್ಲದಿದ್ದ ಸಂದರ್ಭಗಳಲ್ಲಿ ಜಾರಿಯ ಪುರಾವೆ.

(i) ಸಮನ್ಸು ಜಾರಿ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಒಂದು ಪ್ರಮಾಣಪತ್ರ: ಅಂತಹ ಸಮನ್ಸನ್ನು ಜಾರಿ ಮಾಡಲಾಗಿದೆ ಮತ್ತು ಆ ಸಮನ್ಸನ ದ್ವಿಪ್ರತಿಯ ಹಿಂಭಾಗದಲ್ಲಿ (ಕಲಮು ೬೯ ಅಥವಾ ೭೦ ಇವುಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ) ಯಾರು ಅದನ್ನು ಜಾರಿ ಮಾಡಿದರು, ಅಥವಾ ಯಾರಿಗೆ ಅದನ್ನು ಕೊಡಲಾಗಿದೆ, ಅಥವಾ ಯಾರಿಗೆ ಅದನ್ನು ಸಲ್ಲಿಸಲಾಗಿದೆ, ಇಲ್ಲವೇ ಯಾರಲ್ಲಿ ಅದನ್ನು ಕೊಡಲಾಗಿದೆ ಯೆಂಬುದು ಸಾಕ್ಷಿಯಲ್ಲಿ ಸ್ವೀಕೃತವಾಗುತ್ತದೆ ಮತ್ತು ಇದಕ್ಕೆ ವ್ಯತಿರಿಕ್ತವು ಸಾಬೀತಾಗುವವರೆಗೆ ಅದರಲ್ಲಿ ಕಾಣಿಸಿದ ಹೇಳಿಕೆಯು ಸರಿಯಾಗಿದೆಯೆಂದು ತಿಳಿಸಲಾಗುವುದು.

(ii) ಈ ಕಲಮಿನಲ್ಲಿ ಕಾಣಿಸಿದ ಪ್ರಮಾಣ ಪತ್ರವನ್ನು ಆ ದ್ವಿಪ್ರತಿ ಸಮನ್ಸಿಗೆ ಲಗತ್ತಿಸಿ ನ್ಯಾಯಾಲಯಕ್ಕೆ ಅದನ್ನು ಹಿಂದಿರುಗಿಸಬೇಕು.

ನ್ಯಾಯವಾದಿಯ ಮೇಲೆ ಜಾರಿ ಮಾಡಿದರೆ ಸಾಕಾಗುವುದಿಲ್ಲ.

*೬ ಕಲ್ಕತ್ತ ಡಬ್ಲ್ಯು.ಎನ್. ೯೨೭*

ಪ್ರತಿಯನ್ನು ಜಾರಿ ಮಾಡಬೇಕು ಮತ್ತು ಕೇವಲ ಅದನ್ನು ತೋರಿಸುವುದಾದರೆ ಸಾಲದು

*೫ ಬಿ.ಎಚ್.ಸಿ.ಆರ್. ೨೦*

ಸಮನ್ಸು ಸ್ವೀಕರಿಸಲು ನಿರಾಕರಿಸಿದಾಗ ಅದರ ನೀಡಿಕೆಯು ಜಾರಿಯೆಂದಾಗುತ್ತದೆ.

*೨೮ ಎಂ.ಎಲ್.ಎಫ್. ೫೦೫*

ಸಮನ್ಸನ್ನು ಸ್ವೀಕರಿಸಲು ನಿರಾಕರಿಸುವುದು ಅಪರಾಧವಾಗುವುದಿಲ್ಲ.

## ೨. ದಸ್ತಗಿರಿ ಮಾಡುವ ವಾರಂಟು

**ಕಲಮು ೭೫**

೧. ಲಿಖಿತವಾಗಿದ್ದ ಪೀಠಾಧೀನ ನ್ಯಾಯಾಧೀಶನಿಂದ ಸಹಿ ಮಾಡಲ್ಪಟ್ಟಿರಬೇಕು ಅಥವಾ ಇಬ್ಬರಿಗಿಂತ ಹೆಚ್ಚಿನ ದಂಡಾಧಿಕಾರಿಗಳು ಇದ್ದಲ್ಲಿ ಅವರ ಪೈಕಿ ಒಬ್ಬ ಸದಸ್ಯನ ಸಹಿಯಿರಬೇಕು ಮತ್ತು ನ್ಯಾಯಾಲಯದ ಮೊಹರು ಹಾಕಿರಬೇಕು.

ಯಾವ ನ್ಯಾಯಾಲಯವು ಈ ವಾರಂಟನ್ನು ಹೊರಡಿಸಿದೆಯೋ, ಆ ನ್ಯಾಯಾಲಯವು ಅದನ್ನು ರದ್ದುಗೊಳಿಸುವವರೆಗೆ ಇಲ್ಲವೆ ಜಾರಿಯಾಗುವವರೆಗೆ ಅಸ್ತಿತ್ವದಲ್ಲಿರುತ್ತದೆ.

**೨. ಸಮನ್ಸು ಮತ್ತು ವಾರಂಟು ಇವುಗಳಲ್ಲಿಯ ಭೇದ:**

ಸಮನ್ಸು ಅಂದರೆ ಯಾರಿಗೆ ಅದನ್ನು ಕಳುಹಿಸಲಾಗಿದೆಯೋ, ಅವನಿಗೆ ಅದು ಒಂದು ಆದೇಶವಾಗಿರುತ್ತದೆ. ವಾರಂಟು ಯಾವನನ್ನು ದಸ್ತಗಿರಿ ಮಾಡಬೇಕಾಗಿದೆಯೋ ಅವನಿಗೆ ಆದೇಶವಲ್ಲ. ಆದ್ದರಿಂದ ಒಬ್ಬನನ್ನು ಸಮನ್ಸಿನ ಉಲ್ಲಂಘನೆಗೆ ಶಿಕ್ಷಿಸಬಹುದು; ವಾರಂಟಿನ ಉಲ್ಲಂಘನೆಗೆ ಅವನನ್ನು ಶಿಕ್ಷಿಸಲು ಬರುವುದಿಲ್ಲ.

*೫ ಡಬ್ಲ್ಯು.ಆರ್. ಸಂ. ೭೧*

**ಕಲಮು ೭೬**

**ಜಾಮೀನು ತೆಗೆದುಕೊಳ್ಳಲು ನ್ಯಾಯಾಲಯವು ನಿರ್ದೇಶಿಸಬಹುದು**

೧. ವಾರಂಟು ಹೊರಡಿಸುವ ನ್ಯಾಯಾಲಯವು ತನ್ನ ವಿವೇಚನೆಯಲ್ಲಿ ಹಿಂಬರಹದಲ್ಲಿ ಅಂಥ ಮನುಷ್ಯನು ಸಾಕಷ್ಟು ಜಾಮೀನನ್ನು ಕೊಟ್ಟು ತಾನು ನ್ಯಾಯಾಲಯಕ್ಕೆ ಕೋರ್ಟಿನ ನಿರ್ದೇಶನದಂತೆ ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ವೇಳೆಗೆ ಹಾಜರಾಗುವುದಾಗಿ ತದನಂತರ ನ್ಯಾಯಾಲಯವು ನಿರ್ದೇಶಿಸಿದಂತೆ ನಡೆದುಕೊಳ್ಳುವುದಾಗಿ ಬರೆದುಕೊಟ್ಟಲ್ಲಿ, ಯಾವ ಅಧಿಕಾರಿಗೆ ಇಂತಹ ವಾರಂಟ್ ಜಾರಿ ಮಾಡಲು ಕೊಡಲಾಗಿದೆಯೋ ಆ ಅಧಿಕಾರಿಯು ಜಾಮೀನು ತೆಗೆದುಕೊಂಡು ಅಂತಹ ವ್ಯಕ್ತಿಯನ್ನು ಬಂಧನದಿಂದ ಮುಕ್ತ ಮಾಡತಕ್ಕದ್ದು.

೨. ಆ ಹಿಂಬರಹದಲ್ಲಿ ಕಾಣಿಸತಕ್ಕದ್ದೆಂದರೆ–

(ಅ) ಜಾಮೀನುದಾರರ ಸಂಖ್ಯೆ

(ಬ) ಜಾಮೀನುದಾರರ ಹಾಗೂ ದಸ್ತಗಿರಿ ಮಾಡಿ ಬಂಧನಕ್ಕೆ ವಾರಂಟನ್ನು ಹೊರಡಿಸಲಾಗಿದೆಯೋ ಅವರು ಅನುಕ್ರಮವಾಗಿ ಎಷ್ಟು ಹಣಕ್ಕೆ ಬಾಧ್ಯಸ್ಥರಾಗಿರುತ್ತಾರೆ. ಮತ್ತು

(ಕ) ಅವನು ಯಾವ ವೇಳೆಗೆ ಕೋರ್ಟಿಗೆ ಹಾಜರಾಗತಕ್ಕದ್ದು.

೩. ಈ ಕಲಮಿನ ಕೆಳಗೆ ಜಾಮೀನು ತೆಗೆದುಕೊಂಡಾಗ ಯಾವ ಅಧಿಕಾರಿಗೆ ಈ ವಾರಂಟನ್ನು ನಿರ್ದೇಶಿಸಲಾಗಿದೆಯೋ ಅಂಥ ಅಧಿಕಾರಿಯು ಈ ಮುಚ್ಚಳಿಕೆಗಳನ್ನು ಕೋರ್ಟಿಗೆ ರವಾನೆ ಮಾಡತಕ್ಕದ್ದು.

**ಕಲಮು ೭೭**

**೧. ವಾರಂಟು ಯಾರಿಗೆ ನಿರ್ದೇಶನ ಮಾಡತಕ್ಕದ್ದು:** ವಾರಂಟುಗಳನ್ನು ಸಾಮಾನ್ಯವಾಗಿ ಒಂದು ಅಥವಾ ಹೆಚ್ಚಿನ ಪೊಲೀಸ್ ಅಧಿಕಾರಿಗಳಿಗೆ ಉದ್ದೇಶಿಸಬೇಕು ಮತ್ತು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊರಡಿಸಿದರೆ, ಅದನ್ನು ಯಾವಾಗಲೂ ಹೀಗೆಯೇ ನಿರ್ದೇಶನ ಮಾಡತಕ್ಕದ್ದು. ಆದರೆ ಬೇರೆ ಯಾವುದೇ ನ್ಯಾಯಾಲಯ ಇಂತಹ ವಾರಂಟುಗಳನ್ನು, ಹೊರಡಿಸಿದರೆ ಮತ್ತು ಆ ಕೂಡಲೇ ಅದರ ಜಾರಿ ಅವಶ್ಯವಿದ್ದರೆ, ಯಾವುದೇ ಪೊಲೀಸ್ ಅಧಿಕಾರಿಯು ತತ್‌ಕ್ಷಣ ಲಭ್ಯವಿಲ್ಲದ ಪಕ್ಷದಲ್ಲಿ ಯಾವುದೇ ವ್ಯಕ್ತಿ, ಇಲ್ಲವೇ ವ್ಯಕ್ತಿಗಳಿಗೆ ಅದನ್ನು ನಿರ್ದೇಶಿಸಬಹುದು ಮತ್ತು ಅಂತಹ ವ್ಯಕ್ತಿ ಇಲ್ಲವೆ ವ್ಯಕ್ತಿಗಳು ಅದನ್ನು ಜಾರಿ ಮಾಡತಕ್ಕದ್ದು.

೨. ಒಬ್ಬನಿಗಿಂತ ಹೆಚ್ಚು ಜನರಿಗೆ ವಾರಂಟನ್ನು ನೀಡಿದ್ದರೆ, ಅವರೆಲ್ಲರೂ ಅಥವಾ ಅದರಲ್ಲಿ ಯಾರಾದರೊಬ್ಬರು ಅಥವಾ ಹೆಚ್ಚಿಗೆ ಜನರು ಅದನ್ನು ಜಾರಿ ಮಾಡಬಹುದು.

**ಕಲಮು ೭೮**

೧. ವಾರಂಟನ್ನು ಭೂ ಹಿಡುವಳಿದಾರನಿಗೆ, ಒಕ್ಕಲಿಗನಿಗೆ ಅಥವಾ ಹೊಲಗಳ ಮೇಲ್ವಿಚಾರಕನಿಗೆ ಕೊಡಬಹುದು.

(i) ಪರಾರಿಯಾದ ಅಪರಾಧಿ

(ii) ಉದ್ಘೋಷಿತ ಅಪರಾಧಿ ಅಥವಾ

(iii) ಯಾರು ಜಾಮೀನುರಹಿತ ಅಪರಾಧವೆಸಗಿದ್ದಾರೆಂದು ಆರೋಪಿಸಲಾಗಿದೆಯೋ ಮತ್ತು ಯಾರು ತಪ್ಪಿಸಿಕೊಂಡಿದ್ದಾರೋ ಅಂತಹವರ ಬಂಧನಕ್ಕಾಗಿ.

೨. ವ್ಯಕ್ತಿಯು ಒಬ್ಬನ ನಿಯಂತ್ರಣದ ಜಾಗದಲ್ಲಿದ್ದಾಗ ಯಾರು ಸಹಿ ಮಾಡಬೇಕು ಹಾಗೂ ಅದನ್ನು ಜಾರಿ ಮಾಡಬೇಕು.

೩. ಒಬ್ಬನನ್ನು ದಸ್ತಗಿರಿ ಮಾಡಿದ ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ಅವನನ್ನು ಒಪ್ಪಿಸಬೇಕು.

**ಕಲಮು ೭೯**

ಒಂದು ವಾರಂಟನ್ನು ಒಬ್ಬ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಿದ್ದರೆ ಅವನು ಮತ್ತೊಬ್ಬ ಪೊಲೀಸ್ ಅಧಿಕಾರಿಗೆ ಅದನ್ನು ಜಾರಿ ಮಾಡಲು ಹಿಂಬರಹದ ಮೂಲಕ ನೀಡಬಹುದು.

**ಕಲಮು ೮೦**

ದಸ್ತಗಿರಿ ಮಾಡುವ ಅಧಿಕಾರಿಯು ಆ ವಾರಂಟಿನ ಸಾರಾಂಶವನ್ನು ಆ ದಸ್ತಗಿರಿಯಾಗುವ ವ್ಯಕ್ತಿಗೆ ತಿಳಿಸತಕ್ಕದ್ದು.

**ಕಲಮು ೮೧**

ಜಾಮೀನಿಗೆ ಸಂಬಂಧಿಸಿದಂತೆ ಕಲಮು ೭೬ರ ಉಪಬಂಧಗಳಿಗೊಳಪಟ್ಟು ಬಂಧಿಸುವ ಅಧಿಕಾರಿಯು ಅನವಶ್ಯಕ ವಿಳಂಬವಿಲ್ಲದೆ, ಬಂಧನಕ್ಕೊಳಗಾದ ವ್ಯಕ್ತಿಯನ್ನು ಯಾವ ನ್ಯಾಯಾಲಯದ ಮುಂದೆ ಹಾಜರು ಮಾಡಬೇಕಾಗಿದೆಯೋ ಅಲ್ಲಿಗೆ ತರಬೇಕು.

**ಕಲಮು ೮೨**

ಬ್ರಿಟಿಷ್ ಇಂಡಿಯಾದ ಯಾವುದೇ ಭಾಗದಲ್ಲಿ ವಾರಂಟನ್ನು ಜಾರಿ ಮಾಡಬಹುದು.

**ಕಲಮು ೮೩**

ವಾರಂಟು ಹೊರಡಿಸುವ ನ್ಯಾಯಾಲಯಕ್ಕೆ ತನ್ನ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಹೊರಗಡೆ ಅದನ್ನು ಜಾರಿಗೊಳಿಸಬೇಕಾದಾಗ, ಅಂಥ ನ್ಯಾಯಾಲಯವು ಅಂಥ ವಾರಂಟನ್ನು ಪೊಲೀಸರಿಗೆ, ಅಧಿಕಾರಿಗೆ ನಿರ್ದೇಶಿಸುವುದರ ಬದಲು ಅದನ್ನು ಅಂಚೆಯಿಂದ ಇಲ್ಲವೇ ಇನ್ನಾವುದೇ ರೀತಿಯಿಂದ ಯಾವುದೇ ದಂಡಾಧಿಕಾರಿಗೆ, ಇಲ್ಲವೇ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್ ಇಲ್ಲವೇ ಪ್ರೆಸಿಡೆನ್ಸಿ ಪಟ್ಟಣದಲ್ಲಿ ಪೊಲೀಸ್ ಕಮೀಶನರ್ ಅವರಿಗೆ, ಉದ್ದೇಶಿತ ವ್ಯಕ್ತಿಯು ಯಾರ ಪ್ರಾದೇಶಿಕ ವ್ಯಾಪ್ತಿಯಲ್ಲಿರುವನೋ ಅವರಿಗೆ ನಿರ್ದೇಶಿಸಿ ರವಾನೆ ಮಾಡಬೇಕು.

(೨) ದಂಡಾಧಿಕಾರಿ ಇಲ್ಲವೆ ಡಿ.ಎಸ್.ಪಿ. ಇಲ್ಲವೆ ಕಮೀಶನರ್ ಹೀಗೆ ಯಾರಿಗೆ ಈ ವಾರಂಟನ್ನು ರವಾನೆ ಮಾಡಲಾಗಿದೆಯೋ ಅವನು ಅದರ ಹಿಂಬರಹದಲ್ಲಿ ತನ್ನ ಹೆಸರು ಬರೆಯಬೇಕು. ಮತ್ತು ಸಾಧ್ಯವಾಗುವ ಮಟ್ಟಿಗೆ ಈ ಹಿಂದೆ ಕಾಣಿಸಿದಂತೆ ತನ್ನ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಲ್ಲಿ ಅದನ್ನು ಜಾರಿ ಗೊಳಿಸತಕ್ಕದ್ದು.

**ಕಲಮು ೮೪**

ಪೊಲೀಸ್ ಅಧಿಕಾರಿಗೆ ನಿರ್ದೇಶನ ಮಾಡಿದ ವಾರಂಟನ್ನು ವ್ಯಾಪ್ತಿಯ ಹೊರಗಡೆ ಜಾರಿ ಮಾಡಬೇಕಾದಲ್ಲಿ ಅದನ್ನು ಯಾವ ವ್ಯಾಪ್ತಿಯಲ್ಲಿ ಜಾರಿ ಮಾಡಬೇಕಾಗಿದೆಯೋ ಆ ಮ್ಯಾಜಿಸ್ಟ್ರೇಟನ ಇಲ್ಲವೆ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಗಿಂತ ಕಡಿಮೆಯಲ್ಲದ ಅಧಿಕಾರಿಗೆ ನೀಡಿ, ಆ ವಾರೆಂಟ್ ಮೇಲೆ ಹಿಂಬರಹ ತೆಗೆದುಕೊಳ್ಳಬೇಕು.

(೨) ಅಂತಹ ದಂಡಾಧಿಕಾರಿ ಇಲ್ಲವೆ ಡಿ.ಎಸ್.ಪಿ. ಇಲ್ಲವೆ ಕಮೀಶನರ್ ಹೀಗೆ ಯಾರಿಗೆ ಈ ವಾರಂಟನ್ನು ರವಾನೆ ಮಾಡಲಾಗಿದೆಯೋ ಅವನು ಅದರ ಹಿಂಬರಹದಲ್ಲಿ ತನ್ನ ಹೆಸರು ಬರೆಯಬೇಕು. ಮತ್ತು ಸಾಧ್ಯವಾಗುವಮಟ್ಟಿಗೆ ಹಿಂದೆ ಕಾಣಿಸಿದಂತೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಲ್ಲಿ ಅದನ್ನು ಜಾರಿಗೊಳಿಸ ತಕ್ಕದ್ದು.

**ಕಲಮು ೮೪**

ಪೊಲೀಸ್ ಅಧಿಕಾರಿಗೆ ನಿರ್ದೇಶನ ಮಾಡಿದ ವಾರಂಟನ್ನು ವ್ಯಾಪ್ತಿಯ ಹೊರಗಡೆ ಜಾರಿ ಮಾಡಬೇಕಾದಲ್ಲಿ ಅದನ್ನು ಯಾವ ವ್ಯಾಪ್ತಿಯಲ್ಲಿ ಜಾರಿ ಮಾಡಬೇಕಾಗಿದೆಯೋ ಆ ದಂಡಾಧಿಕಾರಿಯ ಇಲ್ಲವೆ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಗಿಂತ ಕಡಿಮೆಯಲ್ಲದ ಅಧಿಕಾರಿಗೆ ನೀಡಿ ಆ ವಾರಂಟ್ ಮೇಲೆ ಹಿಂಬರಹ ತೆಗೆದುಕೊಳ್ಳಬೇಕು.

(೨) ಅಂತಹ ದಂಡಾಧಿಕಾರಿ ಇಲ್ಲವೇ ಪೊಲೀಸ್ ಅಧಿಕಾರಿಯು ಅದರ ಮೇಲೆ ತಮ್ಮ ಹೆಸರನ್ನು ಹಿಂಬರಹದಲ್ಲಿ ಬರೆಯಬೇಕು. ಇಂತಹ ಹಿಂಬರಹವು ಈ ವಾರಂಟ್‌ನಲ್ಲಿ ನಿರ್ದೇಶಿಸಿದವನಿಗೆ ಯೋಗ್ಯ ಅಧಿಕಾರವಾಗುತ್ತದೆ.

(೩) ಇಂತಹ ಹಿಂಬರಹದ ಸಹಿ ಪಡೆದುಕೊಳ್ಳುವುದು ತಡವಾಗುತ್ತಿದ್ದರೆ ಅಂತಹ ಹಿಂಬರಹ ಇಲ್ಲದೆ ಜಾರಿ ಮಾಡಬಹುದು.

**ಕಲಮು ೮೫**

ಹೊರಗಡೆ ಒಬ್ಬ ಮನುಷ್ಯನನ್ನು ದಸ್ತಗಿರಿ ಮಾಡಿದರೆ ಆಗ ಅವರನ್ನು ದಂಡಾಧಿಕಾರಿ ಇಲ್ಲವೆ ಡಿ.ಎಸ್.ಪಿ., ಪೊಲೀಸ್ ಕಮೀಶನರ್ ಅವರ ಮುಂದೆ ಹಾಜರು ಮಾಡಬೇಕು.

**ಕಲಮು ೮೬**

ಅವರು ನಂತರದಲ್ಲಿ ಆತನನ್ನು ವಾರಂಟ್ ನೀಡಿದ ನ್ಯಾಯಾಲಯಕ್ಕೊಯ್ಯಲು ನಿರ್ದೇಶಿಸತಕ್ಕದ್ದು.

**ದಸ್ತಗಿರಿ ಮಾಡಲು ಕೊಟ್ಟ ಒಂದು ವಾರಂಟು ಜಾರಿಯಾಗದಿದ್ದರೆ ಅದರ ಪರಿಣಾಮ**

**ಕಲಮು ೮೭**

ದಸ್ತಗಿರಿ ಮಾಡಬೇಕಾದ ಆರೋಪಿಯು, ತಲೆ ಮರೆಸಿಕೊಂಡಿದ್ದರೆ, ಆಗ ಅಂಥ ನ್ಯಾಯಾಲಯವು ಲಿಖಿತ ಉದ್ಘೋಷಣೆಯನ್ನು ಹೊರಡಿಸಿ, ಉದ್ಘೋಷಣೆಯ ಪ್ರಕಟಣೆಯಿಂದ ೩೦ ದಿನಗಳಿಗಿಂತ ಕಡಿಮೆಯಲ್ಲದ ನಿಗದಿತ ಸ್ಥಳ, ಮತ್ತು ನಿರ್ದಿಷ್ಟ ಸಮಯದಲ್ಲಿ ಹಾಜರಾಗಲು ಸೂಚಿಸಬಹುದು.

**(೨) ಆ ಉದ್ಘೋಷಣೆಯನ್ನು ಹೇಗೆ ಪ್ರಕಟಿಸಬೇಕು?**

(ಅ) ಅವನು ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿ ಅದನ್ನು ಓದಬೇಕು.

(ಬ) ಅವನು ವಾಸಿಸುವ ಮನೆಯ ಎದ್ದುಕಾಣುವ ಭಾಗದಲ್ಲಿ ಅದನ್ನು ಅಂಟಿಸತಕ್ಕದ್ದು.

(ಕ) ಅದರ ಒಂದು ನಕಲನ್ನು ನ್ಯಾಯಾಲಯ ಕಟ್ಟಡಕ್ಕೆ ಅಂಟಿಸಬೇಕು.

**ಕಲಮು ೮೮**

ಕಲಮು ೮೭ರ ಅನ್ವಯ ಉದ್ಘೋಷಣೆಯನ್ನು ಹೊರಡಿಸುವ ನ್ಯಾಯಾಲಯ, ಯಾವುದೇ ವೇಳೆಗೆ ಆ ಯಾವನನ್ನು ಕುರಿತು ಉದ್ಘೋಷಣೆ ಹೊರಡಿಸಲಾಗಿದೆಯೋ ಅವನ ಚರ ಇಲ್ಲವೆ ಸ್ಥಿರ ಆಸ್ತಿ ಇಲ್ಲವೇ ಎರಡನ್ನೂ ಜಪ್ತಿ ಮಾಡಲು ಆದೇಶ ಮಾಡಬಹುದು.

(೨) ಅಂತಹ ಆದೇಶವನ್ನು ಯಾವ ಜಿಲ್ಲೆಯಲ್ಲಿ ಮಾಡಲಾಗಿದೆಯೋ ಅಲ್ಲಿನ ಆತನಿಗೆ ಸಂಬಂಧಿಸಿದ ಆಸ್ತಿಯ ಜಪ್ತಿಗೆ ಅಧಿಕಾರ ನೀಡತಕ್ಕದ್ದು.

**ಕಲಮು ೮೯**

**ಜಪ್ತು ಮಾಡಿದ ಆಸ್ತಿಗಳನ್ನು ಪೂರ್ವಸ್ಥಿತಿಗೆ ಕೊಡುವುದು**

ಜಪ್ತಿ ಆದೇಶದ ೨ ವರ್ಷಗಳ ಒಳಗಾಗಿ ಅವನು ಹಾಜರಾಗಿ ಮನವರಿಕೆ ಮಾಡಿಕೊಟ್ಟರೆ (೧) ತಾನು ತಲೆಮರೆಯಿಸಿಕೊಂಡಿಲ್ಲವೆಂದೋ ಇಲ್ಲವೇ ಅಡಗಿಕೊಂಡು ಕುಳಿತಿರಲಿಲ್ಲವೆಂದೋ (೨) ತನಗೆ ಅವಧಿಯೊಳಗೆ ಹಾಜರಾಗಲು ಆ ಉದ್ಘೋಷಣೆಯ ಅರಿವಿರಲಿಲ್ಲವೆಂದೋ ಮನವರಿಕೆ ಮಾಡಿದರೆ.

**ಕಲಮು ೯೦**

**ಯಾರ ವಿರುದ್ಧ ವಾರಂಟನ್ನು ಹೊರಡಿಸಬಹುದು?**

ಸಾಮಾನ್ಯವಾಗಿ ಇದನ್ನು ಆರೋಪಿಯ ವಿರುದ್ಧ ಮಾತ್ರ ಹೊರಡಿಸಲಾಗುವುದೆಂದು ಒಬ್ಬನು ಕಲ್ಪಿಸುತ್ತಾನೆ. ಆದರೆ ಅದು ಹಾಗಲ್ಲ, ಜ್ಯುರಿ ಸದಸ್ಯ ಅಥವಾ ವಿಶ್ಲೇಷಕ ಇವರನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿಯ ಸಮನ್ಸು ಕಳುಹಿಸಬಹುದಾದ ವಿರುದ್ಧ ವಾರಂಟನ್ನು ಹೊರಡಿಸಬಹುದು ಎಂದರ್ಥ. ಹೀಗೆಂದರೆ ವಾರಂಟನ್ನು ಸಾಕ್ಷಿದಾರರ ವಿರುದ್ಧವೂ ಸಹ ಹೊರಡಿಸಬಹುದು ಎಂದರ್ಥ.

ಪರಂತು,

(೧) ಹಾಜರಾತಿಯ ಸಮಯಕ್ಕೆ ಮುನ್ನ ನ್ಯಾಯಾಲಯಕ್ಕೆ ಆತನು ಪರಾರಿಯಾಗಿದ್ದಾನೆ ಇಲ್ಲವೇ ಸಮನ್ಸ್‌ಗೆ ತಲೆಬಾಗನೆಂಬ ನಂಬಿಕೆಗೆ ಕಾರಣಗಳಿದ್ದರೆ;

(೨) ಅವನ ಮೇಲೆ ಕಾನೂನುಬದ್ಧವಾಗಿ ಸಮನ್ಸು ಜಾರಿಯಾಗಿದ್ದರೂ ಅವನು ನ್ಯಾಯಾಲಯಕ್ಕೆ ಸಕಾಲದಲ್ಲಿ ಹಾಜರಾಗಲು ವೇಳೆ ಇದ್ದರೂ ಅವನು ಹಾಜರಾಗದಿದ್ದರೆ.

**ನ್ಯಾಯಾಲಯವು ಸೂಕ್ತ ವಿಧಾನದಲ್ಲಿ ಕರೆಸಿದ ವ್ಯಕ್ತಿಗಳ ಸತತ ಹಾಜರಾತಿಯ ಭದ್ರತೆ.**

**ಕಲಮು ೯೧**

ಯಾವನೇ ವ್ಯಕ್ತಿಯು ಆತನ ಹಾಜರಾತಿ ಅಥವಾ ದಸ್ತಗಿರಿಗೆ ಸಮನ್ಸ್ ಇಲ್ಲವೇ ವಾರಂಟನ್ನು ನೀಡಲು ಯುಕ್ತಾಧಿಕಾರವುಳ್ಳ ಪೀಠಾಧಿಕಾರಿಯ ನ್ಯಾಯಾಲಯದಲ್ಲಿ ಹಾಜರಿದ್ದರೆ, ಅಂತಹ ಅಧಿಕಾರಿಯು ಆ ವ್ಯಕ್ತಿಗೆ ಆ ನ್ಯಾಯಾಲಯದಲ್ಲಿ ಹಾಜರಾಗಲು ಜಾಮೀನುದಾರರ ಅಥವಾ ಅವರ ಹೊರತಾಗಿ ಮುಚ್ಚಳಿಕೆ ನೀಡುವಂತೆ ಸೂಚಿಸಬಹುದು.

**ಕಲಮು ೯೨**

ಅಂತಹ ಮುಚ್ಚಳಿಕೆಗೊಳಗಾದ ವ್ಯಕ್ತಿಯು ಹಾಜರಾಗದಿದ್ದರೆ ಆ ಪೀಠಾಸೀನ ನ್ಯಾಯಾಧೀಶನು ಅವನನ್ನು ದಸ್ತಗಿರಿ ಮಾಡಿ ತನ್ನ ಮುಂದೆ ಹಾಜರುಪಡಿಸಲು ವಾರಂಟು ನೀಡಬಹುದು. ಇದಲ್ಲದೆ ಫಿರ್ಯಾದಿ, ಆರೋಪಿ ಮತ್ತು ಸಾಕ್ಷಿದಾರರು ಕೋರ್ಟಿನ ಮುಂದೆ ಹಾಜರಾಗುವ ಅವಶ್ಯಕತೆ ಇದೆ. ಕೋರ್ಟಿನ ಮುಂದೆ ಅಪರಾಧದ ಸಾರ ಸಂಗತಿ, ಅಂದರೆ ದೋಷಾರೋಪಣೆಯ ಸಂಗತಿಗಳು ಇಲ್ಲವೆ ಆರೋಪ ಸಿದ್ಧ ಮಾಡಲು ಅವಶ್ಯವಿರುವ ವಸ್ತುಗಳು, ಸಾಮಗ್ರಿಗಳು ಕೋರ್ಟಿನ ಮುಂದೆ ಹಾಜರಿರುವುದು ಅವಶ್ಯವಿದೆ.

**ಸೃಷ್ಟಿಸಿದ ದಾಖಲೆ, ಬಂಧಿತ ವ್ಯಕ್ತಿ**

ಆದ್ದರಿಂದ ನಾವು ಇವುಗಳನ್ನು ಹಾಜರು ಮಾಡುವ ನಿಯಮಗಳನ್ನು ವಿಚಾರಿಸಬೇಕಾಗಿದೆ.

೧. ಒಂದು ದಸ್ತಾವೇಜು ಇಲ್ಲವೆ ವಸ್ತುವಿನ ಹಾಜರಿ.

**ಕಲಮು ೯೪**

ಯಾವುದೇ ನ್ಯಾಯಾಲಯವು ಯಾವುದೇ ದಸ್ತಾವೇಜು ಇಲ್ಲವೆ ವಸ್ತುವಿನ ಹಾಜರಿಯು ಇಲ್ಲವೇ, ಅಂಥ ಕೋರ್ಟಿನ ವಿಚಾರಣೆಗೆ, ಇಲ್ಲವೇ ಅಧಿವಿಚಾರಣೆಗೆ, ಇಲ್ಲವೆ ಯಾವುದೇ ವ್ಯವಹರಣೆಗೆ ಆ ನ್ಯಾಯಾಲಯದ ಮುಂದೆ ಅವಶ್ಯವೆಂದು ಕಂಡುಬಂದರೆ, ಆಗ ಅವನು ಯಾವ ವ್ಯಕ್ತಿಯ ಕಬ್ಜೆಯಲ್ಲಿ, ಇಲ್ಲವೇ ಅಧಿಕಾರದಲ್ಲಿ ಅಂತಹ ದಸ್ತಾವೇಜು, ಇಲ್ಲವೆ ವಸ್ತು ಇದೆಯೆಂದು ನಂಬಲಾಗಿದೆಯೋ, ಅಂತಹ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗಿ ಅದನ್ನು ಹಾಜರು ಮಾಡಲು ವೇಳೆ ಮತ್ತು ಸ್ಥಳ ಕಾಣಿಸಿದ ಸಮನ್ಸನ್ನು ನೀಡಬಹುದು.

೨. ಸಮನ್ಸು ಕೇವಲ ಹಾಜರುಮಾಡಲು ಇದ್ದರೆ, ಅವನು ಹಾಜರಾಗುವ ಅವಶ್ಯಕತೆಯು ಇರುವುದಿಲ್ಲ. ಅವನು ಅದನ್ನು ಕಳುಹಿಸಿದರೆ ಸಾಕು.

* * *

( ಮೊದಲಿನ ಭಾಗವು ಲಭ್ಯವಿಲ್ಲ. –ಸಂಪಾದಕ)

ಒಬ್ಬ ಅಧಿಕಾರಿ ಇಲ್ಲವೇ ನ್ಯಾಯಾಧೀಶನು ತನ್ನ ಸಮಕ್ಷಮದಲ್ಲಿ ಮತ್ತು ತನ್ನ ವೈಯಕ್ತಿಕ ನಿರ್ದೇಶನದಲ್ಲಿ ಒಂದು ಅಧಿವಿಚಾರಣೆ ನಡೆಸಿದ್ದರೆ ಮತ್ತು ಅವನ ಮೇಲ್ವಿಚಾರಣೆಯಲ್ಲಿ ನಡೆದಿದ್ದರೆ, ಆಗ ಅಂಥವುಗಳಿಗೆ ದಂಡಾಧಿಕಾರಿ ಇಲ್ಲವೇ ಸತ್ರ ನ್ಯಾಯಾಧೀಶನು ಸಹಿ ಮಾಡಬೇಕು.

ದಂಡಾಧಿಕಾರಿ ಇಲ್ಲವೆ ಸತ್ರ ನ್ಯಾಯಾಧೀಶನು ತನ್ನ ಮುಂದೆ ಹಾಜರುಪಡಿಸಿದ ಸಾಕ್ಷ್ಯವನ್ನು, ಸಾಕ್ಷ್ಯ ವಿಚಾರಣೆಯು ಮುಂದುವರಿಯುತ್ತಿದ್ದಂತೆ ಬರೆದುಕೊಳ್ಳದಿದ್ದರೆ, ಆಗ ಪ್ರತಿಯೊಬ್ಬ ಸಾಕ್ಷಿದಾರನು ಏನು ಹೇಳಿದನೆಂಬುದರ ಸಾರಾಂಶ ರೂಪದ ಟಿಪ್ಪಣಿಯನ್ನು ಮಾಡಬೇಕು. ಮತ್ತು ಇಂತಹ ಸಾರಾಂಶ ರೂಪದ ಟಿಪ್ಪಣಿಯನ್ನು ತಾನೇ ಬರೆದು, ಅದಕ್ಕೆ ದಂಡಾಧಿಕಾರಿ ಇಲ್ಲವೆ ಸತ್ರ ನ್ಯಾಯಾಧೀಶನು ಸಹಿ ಮಾಡಬೇಕು ಮತ್ತು ಅವು ಅಭಿಲೇಖಿಸುವ ದಾಖಲೆಗಳ ಭಾಗವಾಗುತ್ತವೆ.

**ಕಲಮು ೩೬೩**

ಸತ್ರ ನ್ಯಾಯಾಧೀಶನು ಮತ್ತು ದಂಡಾಧಿಕಾರಿಯು ಸಾಕ್ಷಿದಾರರು ಸಾಕ್ಷಿ ಹೇಳುತ್ತಿರುವಾಗ ಅವನ ನಡವಳಿಕೆ ಬಗ್ಗೆ ಸಹ ತನ್ನ ಅಭಿಪ್ರಾಯವನ್ನು ದಾಖಲಿಸಬೇಕು.

**ಕಲಮು ೩೬೦**

ಪ್ರತೀ ಸಾಕ್ಷಿಯ ಹೇಳಿಕೆಯನ್ನು ದಾಖಲಿಸುವ ಕಾರ್ಯ ಪೂರ್ಣಗೊಂಡಾಗ, ಆರೋಪಿಯು ಹಾಜರಿದ್ದರೆ ಆತನ ಸಮಕ್ಷಮ ಅಥವಾ ಆರೋಪಿಯು ವಕೀಲರ ಮೂಲಕ ಪ್ರತಿನಿಧಿಸಲ್ಪಟ್ಟಿದ್ದರೆ ಅವರ ಸಮಕ್ಷಮ, ಆತನಿಗೆ ಓದಿ ಹೇಳತಕ್ಕದ್ದು ಮತ್ತು ಅಗತ್ಯವಾದರೆ ಸರಿಪಡಿಸತಕ್ಕದ್ದು.

ಸಾಕ್ಷಿದಾರನಿಗೆ ಅವನ ಸಾಕ್ಷಿಯನ್ನು ಅವನಿಗೆ ಓದಿ ಹೇಳಿದಾಗ ಅವನ ಸಾಕ್ಷಿಯ ಯಾವುದೇ ಭಾಗವು ಸರಿಯಲ್ಲವೆಂದು ಅವನು ನಿರಾಕರಿಸಿದರೆ ಆಗ ದಂಡಾಧಿಕಾರಿ, ಇಲ್ಲವೇ ಸತ್ರ ನ್ಯಾಯಾಧೀಶನು ಆ ಸಾಕ್ಷಿಯನ್ನು ಸರಿಪಡಿಸುವ ಬದಲಿಗೆ ಅವನು ತೆಗೆದುಕೊಂಡ ತಕರಾರುಗಳ ಸಾರಾಂಶ ರೂಪದ ಟಿಪ್ಪಣಿಯನ್ನು ಮಾಡಿ ತನ್ನ ಶರಾಗಳನ್ನು ತನಗೆ ಅವಶ್ಯವೆನಿಸಿದ್ದನ್ನು ಕೂಡಿಸತಕ್ಕದ್ದು. ಓದದೇ ಇರುವುದು ಕಾನೂನುಬಾಹಿರವಾಗುತ್ತದೆ.

**II. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ**

**ಕಲಮು ೩೬೨**

ಮೇಲ್ಮನವಿ ಸಲ್ಲಿಸಬಹುದಾದ ಮತ್ತು ಸಲ್ಲಿಸಲು ಬಾರದ ಪ್ರಕರಣಗಳು:

ಮೇಲ್ಮನವಿ ಸಲ್ಲಿಸಬಹುದಾದ ಪ್ರಕರಣಗಳು ದಂಡಾಧಿಕಾರಿಯು ಸಾಕ್ಷಿದಾರರು ಸಾಕ್ಷಿ ಹೇಳಿದ್ದನ್ನು ತನ್ನ ಕೈಯಿಂದ ಬರೆದುಕೊಳ್ಳಬೇಕು, ಇಲ್ಲವೆ ತೆರೆದ ನ್ಯಾಯಾಲಯದಲ್ಲಿ ತನ್ನ ಹೇಳಿಕೆಯಂತೆ ಬರೆಯಿಸಬೇಕು.

ಹೀಗೆ ಬರೆದುಕೊಂಡ ಎಲ್ಲ ಸಾಕ್ಷಿಯ ಹೇಳಿಕೆಗಳಿಗೆ ದಂಡಾಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಅವು ಅಭಿಲೇಖಿಸುವ ದಾಖಲೆಗಳ ಭಾಗವಾಗಿರುತ್ತವೆ.

ದಂಡಾಧಿಕಾರಿಯು ಆರೋಪಿಯ ವಿಚಾರಣೆಯ ನಂತರ ಅವನು ಹೇಳಿದ್ದರ ಸಾರಾಂಶವನ್ನು ಟಿಪ್ಪಣಿ ಮಾಡಬೇಕು. ಇಂತಹ ಟಿಪ್ಪಣಿಗೆ ದಂಡಾಧಿಕಾರಿಯು ಸಹಿ ಮಾಡಬೇಕು. ಅದು ಅವನ ಹಸ್ತಾಕ್ಷರದಲ್ಲಿ ಇರಬೇಕು. ಅದು ಅಭಿಲೇಖಿಸುವ ದಾಖಲೆಯ ಭಾಗವಾಗುತ್ತದೆ.

**ಮೇಲ್ಮನವಿ ಇಲ್ಲದ ಪ್ರಕರಣಗಳು**

ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಸಾಕ್ಷಿದಾರರ ಸಾಕ್ಷಿಯನ್ನಾಗಲಿ ಇಲ್ಲವೇ ದೋಷಾರೋಪಣೆಯನ್ನು ರಚಿಸುವ ಅವಶ್ಯಕತೆಯು ಇರುವುದಿಲ್ಲ.

**ಕಲಮು ೩೫೯, ೩೬೨ (೨)**

**ಸಾಕ್ಷಿಯನ್ನು ದಾಖಲು ಮಾಡಿಕೊಳ್ಳುವ ವಿಧಾನ:**

ಸಾಮಾನ್ಯವಾಗಿ ಸಾಕ್ಷಿಯನ್ನು ನಿರೂಪಣೆ ರೂಪದಲ್ಲಿ ತೆಗೆದುಕೊಳ್ಳಬೇಕು. ನ್ಯಾಯಾಲಯವು ತನ್ನ ವಿವೇಚನೆಯಲ್ಲಿ ತೆಗೆದುಕೊಳ್ಳಬಹುದಾದರೂ ಯಾವುದೇ ಒಂದು ನಿರ್ದಿಷ್ಟ ಪ್ರಶ್ನೆಯನ್ನು ಮತ್ತು ಅದರ ಉತ್ತರವನ್ನು ಬರೆಯಿಸಬಹುದು.

ಅಪವಾದಗಳು: ಆರೋಪಿಯ ವಿಚಾರಣೆ.

**ಕಲಮು ೩೬೪**

ಇಂತಹ ಪೂರ್ಣ ವಿಚಾರಣೆಯು ಅವನಿಗೆ ಕೇಳಿದ ಪ್ರತಿಯೊಂದು ಪ್ರಶ್ನೆಯು ಮತ್ತು ಅವನು ಕೊಟ್ಟ ಪ್ರತಿಯೊಂದು ಉತ್ತರವನ್ನೊಳಗೊಂಡಿದ್ದನ್ನು ಸಂಪೂರ್ಣವಾಗಿ ದಾಖಲು ಮಾಡತಕ್ಕದ್ದು. ಉಚ್ಚ ನ್ಯಾಯಾಲಯವು ಆರೋಪಿಯನ್ನು ವಿಚಾರ ಮಾಡಿ ದಾಖಲು ಮಾಡಿಕೊಳ್ಳುವುದಕ್ಕೆ ಇದು ಅನ್ವಯಿಸುವುದಿಲ್ಲ.

**II. ಸಂಕ್ಷಿಪ್ತ ಅಧಿವಿಚಾರಣೆಯಲ್ಲಿ ಅಭಿಲೇಖಿಸುವುದು**

**ಕಲಮು ೨೬೦**

೧. ಜಿಲ್ಲಾ ದಂಡಾಧಿಕಾರಿಗಳು.

೨. ಸ್ಥಳೀಯ ಸರಕಾರವು ವಿಶೇಷವಾಗಿ ನಿಯುಕ್ತಿಗೊಳಿಸಿದ ಪ್ರಥಮ ದರ್ಜೆ ದಂಡಾಧಿಕಾರಿಗಳು.

೩. ಇಬ್ಬರಿಗಿಂತ ಹೆಚ್ಚಿನ ದಂಡಾಧಿಕಾರಿಗಳು (ಬೆಂಚ್) ಇವರಿಗೆ ೧ನೆಯ ವರ್ಗದ ದಂಡಾಧಿಕಾರಿಗಳನ್ನು ವಿಶೇಷವಾಗಿ ಸ್ಥಳೀಯ ಸರಕಾರವು ಈ ಬಗ್ಗೆ ಅಧಿಕಾರ ವಹಿಸಿಕೊಟ್ಟಿದ್ದರೆ ಅವನು ಅದು ಯೋಗ್ಯವೆಂದು ಅನಿಸಿದರೆ, ಆಗ ಸಂಕ್ಷಿಪ್ತ ಅಧಿವಿಚಾರಣೆಯಲ್ಲಿ ಈ ಕೆಳಗಿನ ಎಲ್ಲಾ ಅಥವಾ ಯಾವುದೇ ಅಪರಾಧಗಳನ್ನು ಸಂಕ್ಷಿಪ್ತದಲ್ಲಿ ಅಧಿವಿಚಾರಣೆ ಮಾಡಬಹುದು.

(೧) ಮರಣದಂಡನೆ, ಗಡಿಪಾರು ಶಿಕ್ಷೆ, ಇಲ್ಲವೆ ಆರು ತಿಂಗಳಿಗಿಂತ ಹೆಚ್ಚಿನ ಸೆರೆಮನೆಯ ವಾಸದ ಶಿಕ್ಷೆ ಕೊಡಲೂ ಬರುವುದಿಲ್ಲವೋ, ಅಂಥ ಅಪರಾಧಗಳು ಮತ್ತು ಕಲಮಿನಲ್ಲಿ ಕಾಣಿಸಿದ ಉಳಿದ ಕೆಲವು ಅಪರಾಧಗಳು. ಸಂಕ್ಷಿಪ್ತ ಅಧಿವಿಚಾರಣೆ ಮಾಡಬಹುದಾದ, ಮೇಲ್ಮನವಿ ಸಲ್ಲಿಸಬಹುದಾದ ಇಲ್ಲವೆ ಸಲ್ಲಿಸಲು ಬಾರದೆ ಇರುವ ಪ್ರಕರಣಗಳು.

**ಕಲಮು ೨೬೩**

ಆದರೆ ಅವರು ಅವುಗಳನ್ನು ಸ್ಥಳೀಯ ಸರಕಾರವು ನಿರ್ದೇಶಿಸಿದಂತೆ ನಮೂನೆಯಲ್ಲಿ ಕೆಳಗಿನ ವಿವರಣೆಗಳನ್ನು ನಮೂದಿಸಬೇಕು.

(ಅ) ಅನುಕ್ರಮ ಸಂಖ್ಯೆ

(ಆ) ಅಪರಾಧ ನಡೆದ ದಿನಾಂಕ

(ಕ) ವರದಿ ಇಲ್ಲವೇ ಫಿರ್ಯಾದಿಯ ದಿನಾಂಕ

(ಡ) ಫಿರ್ಯಾದಿದಾರನ ಹೆಸರು (ಇದ್ದರೆ)

(ಇ) ಆರೋಪಿಯ ಹೆಸರು, ತಂದೆಯ ಹೆಸರು ಹಾಗೂ ವಿಳಾಸ

(ಎಫ್) ದೂರು ಕೊಟ್ಟಿರುವ ಆರೋಪಿ ಮತ್ತು ಆರೋಪಿಗಳು (ಸಿದ್ಧವಾದ) ಮತ್ತು ಯಾವುದರ ವಸ್ತು ಕುರಿತು ಈ ಅಪರಾಧ ಮಾಡಲಾಗಿದೆಯೋ ಆ ವಸ್ತುವಿನ ಬೆಲೆ.

(ಜಿ) ಆರೋಪಿಯ ಹೇಳಿಕೆಯು ಮತ್ತು ಅವನ ವಿಚಾರಣೆ ಏನಾದರೂ ಇದ್ದರೆ,

(ಎಚ್) ತೀರ್ಪು ಮತ್ತು ಶಿಕ್ಷೆಯ ತೀರ್ಮಾನದ ಸಂಕ್ಷಿಪ್ತ ಕಾರಣಗಳ ಹೇಳಿಕೆ.

(ಆಯ್ ನಡವಳಿಕೆ ಶಿಕ್ಷೆ ಇಲ್ಲವೆ ಇತರ ಅಂತಿಮ ಆದೇಶ ಮತ್ತು

(ಜೆ) ನಡವಳಿಕೆಗಳು ಮುಕ್ತಾಯವಾದ ದಿನಾಂಕ.

**ಕಲಮು ೨೬೪**

ಶಿಕ್ಷೆಯನ್ನು ವಿಧಿಸುವ ಪೂರ್ವದಲ್ಲಿ ನ್ಯಾಯಾಲಯವು ತೀರ್ಪನ್ನು ಕೊಡಬೇಕು. ಅವರಲ್ಲಿ ಸಾಕ್ಷಿದಾರರ ಹೇಳಿಕೆಯ ಸಾರ ಮತ್ತು ಮೇಲ್ಮನವಿ ಸಲ್ಲಿಸಲು ಬಾರದಿರುವ ಈ ಪ್ರಕರಣಗಳಲ್ಲಿ ಒಳಗೊಂಡಿರಬೇಕಾದ ವಿವರಗಳು.

ಮೇಲ್ಮನವಿ ಸಲ್ಲಿಸಬಹುದಾದ ಪ್ರಕರಣಗಳಲ್ಲಿ ಇಂತಹ ತೀರ್ಪೇ ಅಭಿಲೇಖನ ದಾಖಲೆಯಾಗಿರುತ್ತದೆ.

## ತೀರ್ಪು

**ಕಲಮು ೩೬೬**

ಕ್ರಿಮಿನಲ್ ನ್ಯಾಯಾಲಯದ ಪ್ರತಿಯೊಂದು ಅಧಿವಿಚಾರಣೆಯಲ್ಲಿ ತೀರ್ಪನ್ನು ಹೇಳಬೇಕು, ಇಲ್ಲವೆ ಅಂತಹ ತೀರ್ಪಿನ ಸಾರಾಂಶವನ್ನು ವಿವರಿಸಬೇಕು.

(೧) ತೆರೆದ ನ್ಯಾಯಾಲಯದಲ್ಲಿ ಕೂಡಲೆ ಇಲ್ಲವೇ ನಂತರದ ಅಧಿಸೂಚಿಸಿದ ದಿನಾಂಕದಂದು ಪರಂತು,

ಪಕ್ಷಗಾರರು ವಿನಂತಿಸಿಕೊಂಡರೆ ಅದನ್ನು ಪೂರ್ತಿ ಓದಬೇಕು.

(೨) ಆರೋಪಿಯು ಅಭಿರಕ್ಷಣೆಯಲ್ಲಿದ್ದರೆ, ಅವನನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಬೇಕು. ಅಭಿರಕ್ಷಣೆಯಲ್ಲಿ ಇರದಿದ್ದರೆ ತೀರ್ಪು ಕೊಡುವುದನ್ನು ಕೇಳಲು ಅವನನ್ನು ನ್ಯಾಯಾಲಯಕ್ಕೆ ಕರೆಯಿಸ ಬೇಕು.

ಆದರೆ ವೈಯಕ್ತಿಕವಾಗಿ ಹಾಜರಾಗಲು ನ್ಯಾಯಾಲಯವು ವಿನಾಯತಿ ಕೊಡದ ಹೊರತು ಮತ್ತು ಶಿಕ್ಷೆಯು ಕೇವಲ ದಂಡ ಮಾತ್ರವಾಗಿದ್ದರೆ, ಇಲ್ಲವೇ ಅವನನ್ನು ದೋಷಮುಕ್ತನನ್ನಾಗಿ ನಿರಪರಾಧಿಯೆಂದು ನಿರ್ಣಯಿಸಿದ್ದರೆ.

ವಿ.ಸೂ. (೩) ಆರೋಪಿಯ ಗೈರುಹಾಜರಾತಿಯಲ್ಲಿ ತೀರ್ಪು ಹೇಳಿದರೆ ಅದನ್ನು ಓದತಕ್ಕದ್ದಲ್ಲ.

**ಕಲಮು ೩೬೭**

ಅನ್ಯಥಾ ಉಪಬಂಧಿತವಾದ ಹೊರತು, ಪ್ರತಿಯೊಂದು ತೀರ್ಪನ್ನು ನ್ಯಾಯಾಲಯದ ಅಧಿಕಾರಿಯು ಬರೆಯಬೇಕು ಇಲ್ಲವೆ ಅವನು ಹೇಳಿ ಬರೆಯಿಸಬೇಕು.

ಅದು ಒಳಗೊಳ್ಳಬೇಕಾದ ಅಂಶಗಳು:

(೧) ನಿರ್ಣಯಿಸಬೇಕಾದ ಅಂಶ ಅಥವಾ ಅಂಶಗಳು

(೨) ಅದರ ಮೇಲಿನ ನಿರ್ಣಯ ಮತ್ತು

(೩) ಆ ನಿರ್ಣಯಕ್ಕೆ ಕಾರಣಗಳು

(೪) ತೆರೆದ ನ್ಯಾಯಾಲಯದಲ್ಲಿ ಆ ತೀರ್ಪನ್ನು ಹೇಳುವಾಗ ಅಧ್ಯಕ್ಷಾಧಿಕಾರಿಯು ಅದನ್ನು ಘೋಷಿಸುವ ಸಮಯದಲ್ಲಿ ದಿನಾಂಕವನ್ನು ನಮೂದಿಸಿ ಸಹಿ ಹಾಕತಕ್ಕದ್ದು ಮತ್ತು ಅದನ್ನು ಅಧ್ಯಕ್ಷಾಧಿಕಾರಿಯು ಸ್ವಹಸ್ತದಲ್ಲಿ ಬರೆಯದಿದ್ದ ಪಕ್ಷದಲ್ಲಿ ತೀರ್ಪಿನ ಪ್ರತೀ ಪುಟದಲ್ಲೂ ಸಹಿ ಹಾಕತಕ್ಕದ್ದು.

(೫) ಅದು ಯಾವ ಅಪರಾಧವೆಂಬುದನ್ನು ನಿರ್ದಿಷ್ಟಪಡಿಸಬೇಕು ಮತ್ತು ಆಯ್.ಪಿ.ಸಿ. ಇಲ್ಲವೆ ಇನ್ನಾವುದೋ ಉಳಿದ ಕಾನೂನಿನನ್ವಯ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆ ಮತ್ತು ಅವನಿಗೆ ಯಾವ ಶಿಕ್ಷೆಯನ್ನು ವಿಧಿಸಲಾಗಿದೆ ಎಂದು ತಿಳಿಸಬೇಕು.

(೬) ಶಿಕ್ಷೆಯು ಆರ್.ಪಿ.ಸಿ. ಕೆಳಗೆ ಇದ್ದರೆ ಮತ್ತು ಒಂದೇ ಕಲಮಿನ ಎರಡು ಭಾಗಗಳಲ್ಲಿ ಯಾವ ಭಾಗವು ಅನ್ವಯಿಸುತ್ತದೆಂಬುದು ಸಂಶಯಾಸ್ಪದವಾಗಿದ್ದರೆ, ಆಗ ನ್ಯಾಯಾಲಯವು ತೀರ್ಪನ್ನು ಹೇಳುವಾಗ ಅದನ್ನು ನೇರವಾಗಿ ಹೇಳಬೇಕು ಮತ್ತು ಬದಲಿ ತೀರ್ಪನ್ನು ನೀಡಬೇಕು.

(೭) ಅದು (ಆರೋಪಿಯನ್ನು) ದೋಷಮುಕ್ತ ಮಾಡಿದ ತೀರ್ಪು ಆದಲ್ಲಿ ಅದರಲ್ಲಿ ಯಾವ ಅಪರಾಧದಡಿಯಿಂದ ಮುಕ್ತ ಮಾಡಲಾಗಿದೆಯೆಂಬುದನ್ನು ಮತ್ತು ಅವನನ್ನು ಮುಕ್ತಗೊಳಿಸಲಾಗಿದೆಯೆಂದು ನಿರ್ದೇಶಿಸಬೇಕು.

(೮) ಆರೋಪಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದ್ದರೆ ಮತ್ತು ನ್ಯಾಯಾಲಯವು ಮರಣ ಶಿಕ್ಷೆ ಕೊಡದೆ ಅವನಿಗೆ ಬೇರೆ ಶಿಕ್ಷೆ ವಿಧಿಸಿದರೆ ಆಗ ನ್ಯಾಯಾಲಯ ಕಾರಣಗಳನ್ನು ಕೊಡತಕ್ಕದ್ದು. ಪರಂತು ಜೂರಿಯ ಆ ಅಧಿವಿಚಾರಣೆಯಲ್ಲಿ ನ್ಯಾಯಾಲಯದ ತೀರ್ಪು ಬರೆಯಬೇಕಾಗಿಲ್ಲ. ಆದರೆ ಸತ್ರ ನ್ಯಾಯಾಲಯವು ದೋಷಾರೋಪಣೆಯ ಶೀರ್ಷಿಕೆಗಳನ್ನು ದಾಖಲು ಮಾಡಬೇಕು.

**ಕಲಮು ೩೬೮**

ಮರಣದಂಡನೆ ವಿಧಿಸಿದಾಗ ಅವನು ಸಾಯುವವರೆಗೆ ಅವನ ಕತ್ತಿಗೆ ನೇಣು ಹಾಕತಕ್ಕದ್ದೆಂದು ಶಿಕ್ಷೆಯಲ್ಲಿ ನಿರ್ದೇಶಿಸತಕ್ಕದ್ದು.

**ಕಲಮು ೩೬೯**

**ತೀರ್ಪಿನಲ್ಲಿಯ ಬದಲಾವಣೆಗಳು:** ಈ ಸಂಹಿತೆಯಲ್ಲಿ ಅನ್ಯಥಾ ನಿಯಮಿಸಿದುದನ್ನುಳಿದ ಇಲ್ಲವೇ ಯಾವುದೇ ಕಾನೂನು ಇಲ್ಲವೆ ಉಚ್ಚ ನ್ಯಾಯಾಲಯ ಲಿಪಿಗಾರನ ತಪ್ಪನ್ನು ಹೊರತು ಒಮ್ಮೆ ತೀರ್ಪಿಗೆ ಸಹಿ ಮಾಡಿದರೆ, ಅದರಲ್ಲಿ ವ್ಯತ್ಯಾಸ ಇಲ್ಲವೇ ಪುನರವಲೋಕನ ಮಾಡತಕ್ಕದ್ದಲ್ಲ. (ಉಚ್ಚ ನ್ಯಾಯಾಲಯಕ್ಕೆ ಸಹ ಅಧಿಕಾರ ಇರುವುದಿಲ್ಲ.)

**ಕಲಮು ೩೭೦**

**ಪ್ರೆಸಿಡೆನ್ಸಿ ದಂಡಾಧಿಕಾರಿ ಅವರಿಂದ ತೀರ್ಪು:** ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನು ಒಂದು ತೀರ್ಪನ್ನು ಮೇಲೆ ಹೇಳಿದಂತೆ ಅಭಿಲೇಖಿಸುವ ಬದಲು ಒಬ್ಬ ಪ್ರೆಸಿಡೆನ್ಸಿ ದಂಡಾಧಿಕಾರಿಯು ಕೆಳಗಿನ ವಿವರಗಳನ್ನು ದಾಖಲು ಮಾಡಬೇಕು.

(ಅ) ಅನುಕ್ರಮ ಸಂಖ್ಯೆ.
(ಬ) ಅಪರಾಧ ಮಾಡಿದ ದಿನಾಂಕ.
(ಕ) ಫಿರ್ಯಾದಿದಾರನ ಹೆಸರು (ಯಾವುದಾದರೂ ಇದ್ದರೆ).
(ಡ) ಆರೋಪಿಯ ಹೆಸರು ಮತ್ತು (ಯುರೋಪಿಯನ್ ಬ್ರಿಟಿಷರ ಪ್ರಜೆಗಳ ಹೊರತಾಗಿ) ತಂದೆಯ ಹೆಸರು ಮತ್ತು ವಾಸಸ್ಥಳ.
(ಇ) ದೋಷಾರೋಪಣೆ ಮಾಡಿದ ಇಲ್ಲವೇ ಸಿದ್ಧವಾದ ಅಪರಾಧ.
(ಎಫ್) ಆರೋಪಿಯ ಹೇಳಿಕೆ ಮತ್ತು ಆತನ ವಿಚಾರಣೆ (ಏನಾದರೂ ಇದ್ದರೆ)
(ಜಿ) ಅಂತಿಮ ಆದೇಶ
(ಎಚ್) ಅಂತಹ ಆದೇಶದ ದಿನಾಂಕ
(ಆಯ್) ಎಲ್ಲ ಪ್ರಕರಣಗಳಲ್ಲಿ ಶಿಕ್ಷೆಯು ಸೆರೆಮನೆ ವಾಸ, ಇಲ್ಲವೆ ೨೦೦ ರೂಪಾಯಿಗಿಂತ ಹೆಚ್ಚಿನ ಮೊತ್ತದ ದಂಡ, ಇಲ್ಲವೇ ಎರಡೂ ಇದ್ದರೆ ಶಿಕ್ಷೆಗೆ ಕಾರಣಗಳನ್ನು ಸಂಕ್ಷಿಪ್ತದಲ್ಲಿ ಕಾಣಿಸಬೇಕು.

**ಕಲಮು ೩೭೧**

ತೀರ್ಪಿನ ಪ್ರತಿಯನ್ನು ಆರೋಪಿಗೆ ತಡಮಾಡದೆ ಕೊಡಬೇಕು. ಸಮನ್ಸು ಪ್ರಕರಣಗಳನ್ನು ಹೊರತುಪಡಿಸಿ ಅದನ್ನು ಪುಕ್ಕಟೆಯಾಗಿ ಆರೋಪಿಗೆ ಕೊಡಬೇಕು.

ಜ್ಯುರಿಯವರು ನಡೆಯಿಸಿದ ಅಧಿವಿಚಾರಣೆಯಲ್ಲಿ ಜ್ಯುರಿಗಳು ಮಾಡಿದ ದೋಷಾರೋಪಣೆಯ ಶೀರ್ಷಿಕೆಗಳನ್ನು ಅವನಿಗೆ ಕೊಡಬೇಕು. ಮರಣದಂಡನೆ ವಿಧಿಸಿದಾಗ, ಮೇಲ್ಮನವಿ ಸಲ್ಲಿಸಲು ಇರುವ ಕಾಲ ಪರಿಮಿತಿಯ ಅವಧಿಯನ್ನು ಆರೋಪಿಗೆ ತಿಳಿಸಬೇಕು.

**ಕಲಮು ೩೭೩**

ಸತ್ರ ನ್ಯಾಯಾಲಯವು ತನ್ನ ನಿರ್ಣಯ ಮತ್ತು ಶಿಕ್ಷೆಯ ನಕಲನ್ನು ಜಿಲ್ಲಾ ದಂಡಾಧಿಕಾರಿಗೆ ಕಳುಹಿಸಬೇಕು.

**ಆರೋಪಿಯ ಅಧಿವಿಚಾರಣೆಯಲ್ಲದ ದಂಡ ಪ್ರಕ್ರಿಯೆಗಳು**

(i) ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಪ್ರಕ್ರಿಯೆಗಳು.
(ii) ನಿರ್ದಿಷ್ಟ ಕರ್ತವ್ಯಗಳ– ಕೌಟುಂಬಿಕ ಕರ್ತವ್ಯಗಳ ಮತ್ತು ಸಾರ್ವಜನಿಕ ಉಪಟಳಗಳ ಕುರಿತ ಪಾಲನೆಯ ಪ್ರಕ್ರಿಯೆಗಳು.
(iii) ಯಾವುದೇ ಸಾರ್ವಜನಿಕ ಶಾಂತಿಯನ್ನು ಕಾಪಾಡುವ ಕುರಿತ ಪ್ರಕ್ರಿಯೆಗಳು.

೧. ಸಾರ್ವಜನಿಕ ಸಭೆ– ಶಾಂತಿ ಪಾಲನೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಕಾಪಾಡುವುದು.

ಒಂದು ಅಪರಾಧವು ಘಟಿಸಿದ ನಂತರ ಅದಕ್ಕೆ ಶಿಕ್ಷೆ ವಿಧಿಸುವುದಕ್ಕಿಂತ ಅದನ್ನು ತಡೆಗಟ್ಟುವುದು ಲೇಸು.

ಈ ತತ್ವವನ್ನು ವಿಶ್ವಾದ್ಯಂತ ಮಾನ್ಯ ಮಾಡಿಲ್ಲ. ಅಪರಾಧ ಮಾಡುವುದನ್ನು ತಡೆಗಟ್ಟುವುದು ವ್ಯಕ್ತಿಯ ಸ್ವಾತಂತ್ರ್ಯದಲ್ಲಿ ವಿನಾಕಾರಣ ಹಸ್ತಕ್ಷೇಪವಾಗಬಹುದು.

ಒಬ್ಬ ವ್ಯಕ್ತಿಯ ನಡತೆಯು ಒಂದು ಅಪರಾಧವು ಆಗುತ್ತಿದ್ದರೆ, ಮಾತ್ರ ಸರಕಾರವು ಮಧ್ಯ ಪ್ರವೇಶಿಸ ಬಹುದೆಂಬ ಅಭಿಪ್ರಾಯದತ್ತ ಇಂಗ್ಲೀಷ್ ತತ್ವದ ಒಲವು ಇದೆ.

ಉದಾ: ಆಂಗ್ಲರ ಕಾನೂನಿನಡಿ ರಾಜದ್ರೋಹ, ದೇಶದ್ರೋಹ.

ಇದಕ್ಕೆ ವಿರುದ್ಧವಾಗಿ ಭಾರತೀಯ ಕಾನೂನು ಬೇರೆ ದೃಷ್ಟಿ ಹೊಂದಿದೆ. ಉದಾ: ಪತ್ರಕರ್ತರ ಅಧಿನಿಯಮ ಮತ್ತು ಸಾರ್ವಜನಿಕ ಸಭೆಗಳ ಅಧಿನಿಯಮ.

ಇದು ಹೀಗಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆಯು ಕೆಲವು ಕಲಮುಗಳನ್ನು ಅಧಿನಿಯಮಿಸುತ್ತದೆ. ಮತ್ತು ಅಪರಾಧಿಕ ನ್ಯಾಯಾಲಯಗಳು ಇಂತಹ ಅಪರಾಧ ಘಟಿಸುವುದನ್ನು ತಡೆಯಲು ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ.

(ಪುಟ ಖಾಲಿ ಬಿಡಲಾಗಿದೆ –ಸಂ.)

* * *

ಅಧ್ಯಾಯ ೮, ಸಾರ್ವಜನಿಕ ನೆಮ್ಮದಿಯ ವಿರುದ್ಧದ ಅಪರಾಧಗಳನ್ನು ವಿವರಿಸುತ್ತದೆ.

(ಖಾಲಿ ಪುಟಗಳಿವೆ –ಸಂ)

* * *

ನ್ಯಾಯಾಲಯವು ಈ ಕೆಳಗಿನವುಗಳನ್ನು ಅಂತಹ ತಡೆಯುವ ಇಲ್ಲವೇ ನಿರೀಕ್ಷಣಾ ಕ್ರಮಗಳಿಗೆ ಸೂಕ್ತವೆಂದು ತಿಳಿಯುತ್ತದೆ.

೧. ಜಗತ್ತಿನ ಪ್ರತಿಯೊಂದು ದೇಶದಲ್ಲಿ ಜಗಳಗಂಟ ಜನರಿರುತ್ತಾರೆ. ಮತ್ತು ಕೆಲವು ಜಗಳಗಳು ಹಿಂಸೆಗೆ ಮತ್ತು ಘೋರ ಅಪರಾಧಕ್ಕೂ ಹಾದಿ ಮಾಡಿಕೊಡುತ್ತವೆ.

೨. ಇದೇ ರೀತಿಯಾಗಿ, ಕೆಲವು ರೀತಿಯ ಪ್ರಚಾರಗಳನ್ನು ಯಾವುದೇ ರೀತಿಯ ನಿಗ್ರಹವಿಲ್ಲದೆ ಮುಂದುವರೆಯಿಸಿದರೆ, ತಿಳುವಳಿಕೆಯಿಲ್ಲದೆ ಜನರನ್ನು ಹಾನಿಕಾರಕ ಸಂಗತಿಗಳನ್ನು ಮಾಡಲು ಪ್ರಚೋದಿಸಬಹುದು. ಅವರು ಸುಳ್ಳು ಸುದ್ದಿಗಳನ್ನು ಹಬ್ಬಿಸಬಹುದು, ಇಲ್ಲವೆ ಇನ್ನೂ ಘೋರತರ ಅರೆಸತ್ಯದ ಸುದ್ದಿಗಳನ್ನು ಹರಡಬಹುದು. ತಿಳುವಳಿಕೆ ಇಲ್ಲದ ಜನರು ಅಂತಹ ಸುದ್ದಿಗಳ ಆಧಾರದ ಮೇಲೆ ಯಾರೂ ಮಾಡಬಾರದ ದ್ವೇಷಪೂರ್ವಕ ಸಂಚುಗಳನ್ನು ಪ್ರಸರಿಸಬಹುದು.

೩. ಸೋಮಾರಿತನದ ಜೀವನ ನಡೆಯಿಸುವುದನ್ನು ಬಯಸುವವರು, ಅಪರಾಧವು ಪತ್ತೆಯಾಗುವ ಸಂಭವನೆಗಳು ಕಡಿಮೆ ಇರುವಾಗ ಪ್ರಾಮಾಣಿಕ ಜೀವನ ನಡೆಯಿಸುವುದಕ್ಕಿಂತ ಆಗಾಗ ಅಪರಾಧಗಳನ್ನು ಮಾಡುವುದೇ ಲೇಸೆಂದು ಬಯಸುತ್ತಾರೆ. ಕೆಲವು ಜನರು ತಾವು ಮಾಡಿದ ಅಪರಾಧದ ಆದಾಯದ ಮೇಲೆ ತಮ್ಮ ಜೀವನ ನಡೆಯಿಸುತ್ತಾರೆ. ಇಲ್ಲವೇ ಉಳಿದವರು ಎಸಗಿದ ಅಪರಾಧದ ಆಸ್ತಿಯ ಮೇಲೆ ತಮ್ಮ ಉಪಜೀವನ ನಡೆಯಿಸುವವರು ಅಪರಾಧ ಪತ್ತೆಯಾಗದಂತೆ ಮಾಡಲು ಸಹಾಯ ಮಾಡುವರು ಇಲ್ಲವೆ ಅವರು ಒಂದು ಸಂಘಟನೆಯನ್ನು ಕಟ್ಟಿ ಸಹಾಯ ಮಾಡುತ್ತಾರೆ. ಅದು ಅವರು ತಾವು ಅಪ್ರಮಾಣಿಕ ರೀತಿಯಿಂದ ಗಳಿಸಿದ ಆಸ್ತಿಯನ್ನು ಪರಾಧೀನ ಮಾಡಲು ಅವಕಾಶ ಕಲ್ಪಿಸಿಕೊಡುತ್ತದೆ ಮತ್ತು ಶಿಕ್ಷೆಯಿಂದ ರಕ್ಷಣೆ ಪಡೆಯುವಂತಹ ಸದಾವಕಾಶವನ್ನು ಒದಗಿಸಿಕೊಡುತ್ತದೆ.

## ೪. ರೂಢಿಗತ ಅಪರಾಧಿಗಳು

**ಕಲಮು ೧೮೩**

೯. ಒಬ್ಬನು ಪ್ರಯಾಣದಲ್ಲಿದ್ದಾಗ ಇಲ್ಲವೆ ಸಮುದ್ರಯಾನದಲ್ಲಿದ್ದಾಗ ಒಬ್ಬ ಆರೋಪಿಯು ಒಂದು ಅಪರಾಧವನ್ನು ಎಸಗಿದರೆ, ಅಂತಹ ಅಪರಾಧದ ವಿಚಾರಣೆಯನ್ನು ಇಲ್ಲವೇ ಅಧಿವಿಚಾರಣೆಯನ್ನು ಅದು ಯಾವುದರ ಮುಖಾಂತರ ಹಾಯ್ದು ಹೋಗುವುದೋ ಆ ನ್ಯಾಯಾಲಯ ಇಲ್ಲವೇ ಯಾವ

ನ್ಯಾಯಾಲಯದ ಸ್ಥಾನಿಕ ವ್ಯಾಪ್ತಿಯಲ್ಲಿ ಯಾವ ಕೋರ್ಟಿಗೆ ಅಧಿಕಾರ ವ್ಯಾಪ್ತಿ ಇದೆಯೋ ಆ ನ್ಯಾಯಾಲಯವು ಮಾಡಬಹುದು.

| | |
|---|---|
| ಅಪರಾಧಿ ಇಲ್ಲವೆ ಯಾವ ಮನುಷ್ಯನ ವಿರುದ್ಧ ಇಲ್ಲವೇ ಯಾವ ವಸ್ತುವನ್ನು ಕುರಿತು ಅಪರಾಧವು ಘಟಿಸಿದೆ. | ಪ್ರಯಾಣದಲ್ಲಿ ಇಲ್ಲವೆ ಸಮುದ್ರ ಯಾನದಲ್ಲಿ ದಾಟಿದ ಸಂದರ್ಭದಲ್ಲಿ |

**ಕಲಮು ೧೮೪**

೧೦. ಸದ್ಯಕ್ಕೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳು ರೇಲ್ವೆಗಳಿಗೆ, ಟೆಲಿಫೋನಿಗೆ, ಅಂಚೆ ಕಚೇರಿಗೆ ಇಲ್ಲವೆ ಆಯುಧಗಳು ಮತ್ತು ಮದ್ದು ಗುಂಡುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ ವಿಚಾರಣೆ ಮತ್ತು ಅಧಿವಿಚಾರಣೆ ನಡೆಸಬಹುದು.

**ಕಲಮು ೧೮೫**

೧೧. ಸಂಶಯದ ಪ್ರಕರಣಗಳಲ್ಲಿ ಅದು ಯಾವ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುತ್ತದೆಯೋ ಆ ಕೋರ್ಟಿಗೆ ಅಧಿಕಾರ ವ್ಯಾಪ್ತಿ ಇರುತ್ತದೆ.

ಎರಡು ಇಲ್ಲವೆ ಹೆಚ್ಚಿನ ಅಧೀನ ನ್ಯಾಯಾಲಯಗಳು ಇದ್ದರೆ ಅವು ಒಂದೇ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರದಿದ್ದರೆ ಆಗ ಉಚ್ಚ ನ್ಯಾಯಾಲಯವು ತನ್ನ ಅಪರಾಧಿಕ ಮೇಲ್ಮನವಿ ಅಧಿಕಾರ ವ್ಯಾಪ್ತಿಯಲ್ಲಿ ವ್ಯವಹರಣೆಗಳು ಮೊದಲು ಪ್ರಾರಂಭವಾದವೋ ಅದು ನಿರ್ಧರಿಸಬಹುದು ಮತ್ತು ನಿರ್ದೇಶನಗಳನ್ನು ಕೊಡಬಹುದು.

**ಕಲಮು ೧೮೬**

೧೨. ಸ್ಥಳೀಯ ಸರಕಾರವು ವಿಶೇಷ ಅಧಿಕಾರವನ್ನು ಕಲ್ಪಿಸಿಕೊಟ್ಟ ಒಬ್ಬ ಪ್ರೆಸಿಡೆನ್ಸಿ ದಂಡಾಧಿಕಾರಿ, ಜಿಲ್ಲಾ ದಂಡಾಧಿಕಾರಿ, ಉಪವಿಭಾಗದ ದಂಡಾಧಿಕಾರಿ ಇಲ್ಲವೆ ಪ್ರಥಮ ದರ್ಜೆ ದಂಡಾಧಿಕಾರಿಗಳಿಗೆ ತನ್ನ ಪ್ರಾದೇಶಿಕ ವ್ಯಾಪ್ತಿಯ ಯಾವನೇ ವ್ಯಕ್ತಿಯು ಅಂತಹ ಪ್ರಾದೇಶಿಕ ವ್ಯಾಪ್ತಿಯ ಹೊರಗೆ (ಬ್ರಿಟಿಷ್ ಇಂಡಿಯಾದ ಒಳಗೆ ಅಥವಾ ಹೊರಗೆ) ಒಂದು ಅಪರಾಧವನ್ನು ಮಾಡಿದ್ದಾನೆಂದು ನಂಬಲು ಸಕಾರಣಗಳಿದ್ದರೆ, ಅದನ್ನು ಅಂತಹ ಪ್ರಾದೇಶಿಕ ವ್ಯಾಪ್ತಿಯಲ್ಲಿ ಪ್ರಶ್ನಿಸಲು ಅಥವಾ ವಿಚಾರಿಸಲು ಸಾಧ್ಯವಿಲ್ಲದಿದ್ದರೆ, ಆದರೆ ಬ್ರಿಟಿಷ್ ಇಂಡಿಯಾದಲ್ಲಿ ಊರ್ಜಿತದಲ್ಲಿರುವ ಇತರ ಕಾನೂನಿನನ್ವಯ ಪ್ರಶ್ನಿಸಲು ಅಥವಾ ವಿಚಾರಿಸಲು ಸಾಧ್ಯವಿದ್ದರೆ,

**ಬ್ರಿಟಿಷ್ ಭಾರತದ ಹೊರಗಡೆಯ ಅಪರಾಧಗಳು**

ಅಂತಹ ದಂಡಾಧಿಕಾರಿಯು ಆ ಅಪರಾಧವನ್ನು ಪ್ರಶ್ನಿಸಬಹುದು ಮತ್ತು ಅಂತಹ ವ್ಯಕ್ತಿಗಳನ್ನು ಹಾಜರಾಗಲು ಒತ್ತಾಯಿಸಬಹುದು ಮತ್ತು ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಗೆ ಕಳುಹಿಸಬಹುದು.

ಇದುವರೆಗೆ ಬ್ರಿಟಿಷ್ ಭಾರತದ ಸರಹದ್ದಿನಲ್ಲಿ ನಡೆದ ಅಪರಾಧಗಳನ್ನು ಕುರಿತು ನಾವು ಚರ್ಚಿಸಿದೆವು. ಆದರೆ ಒಂದು ಅಪರಾಧವು ಬ್ರಿಟಿಷ್ ಭಾರತದ ಹೊರಗಡೆ ಘಟಿಸಿದ್ದಾದರೆ, ಅಂತಹ ಪ್ರಸಂಗದಲ್ಲಿ ಹೇಗೆ ವ್ಯವಹರಿಸಬೇಕು?

ಇದನ್ನು ಎರಡು ರೀತಿಯಲ್ಲಿ ಮಾಡಬಹುದು.

೧. ಯಾವ ದೇಶದಲ್ಲಿ ಆ ಅಪರಾಧ ಮಾಡಲಾಗಿದೆಯೋ ಆ ದೇಶದಲ್ಲಿ ಅಧಿವಿಚಾರಣೆ ನಡೆಯಿಸಲು ಆರೋಪಿಯನ್ನು ಅಲ್ಲಿಗೆ ಒಪ್ಪಿಸಬಹುದು.

೨. ಬ್ರಿಟಿಷರ ಭಾರತದಲ್ಲಿ ಆರೋಪಿಯು ಅಧಿವಿಚಾರಣೆಯನ್ನು ನಡೆಯಿಸಬಹುದು. ಮೊದಲನೆಯದು ಪ್ರತ್ಯರ್ಪಣವೆಂದು (Extradition) ಹೆಸರಾಗಿದೆ. ಎರಡನೆಯದನ್ನು ಪ್ರಾದೇಶಿಕ ಪರಿಮಿತಿಗಳಲ್ಲಿ ನಡೆಯುವ ವ್ಯವಹರಣೆಗಳೆಂದು ಕರೆಯಬಹುದು.

೧. ಪ್ರತ್ಯಾರ್ಪಣೆಯು ಭಾರತದ ಹೊರಗಡೆ ಯಾವುದೇ

(ಅ) ದೇಶೀಯ ಸಂಸ್ಥಾನ

(ಆ) ಪರದೇಶ

(ಕ) ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯ ದೇಶದಲ್ಲಿ ಆಗಿರಬಹುದು.

(ಅ) ದೇಶೀಯ ಸಂಸ್ಥಾನ: ದೇಶೀಯ ಸಂಸ್ಥಾನಗಳಿಗೆ ಪ್ರತ್ಯಾರ್ಪಣೆಯನ್ನು ಭಾರತೀಯ ಪ್ರತ್ಯಾರ್ಪಣೆ ಅಧಿನಿಯಮ ೧೯೦೩ ಇದರ ಅನ್ವಯ ನಿಯಂತ್ರಿಸುತ್ತದೆ.

* * *

ದೇಶಗಳ ಸಂಸತ್ತಿನ ಶಾಸನಗಳನ್ನು ಮತ್ತು ಭಾರತೀಯ ವಿಧಾನಮಂಡಲದ ಅಧಿನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ನಾನು ಜಗತ್ತಿನ ಭೌಗೋಳಿಕ ವಿಭಾಗಗಳನ್ನು ನ್ಯಾಯಾಲಯಗಳ ಜಾತ್ಯತೀತ ಅಧಿಕಾರ ವ್ಯಾಪ್ತಿಯ ಉದ್ದೇಶಕ್ಕಾಗಿ ಕೆಳಗಿನ ವಿಭಾಗಗಳನ್ನು ಮಾಡುತ್ತೇನೆ.

(೧) ಭೂಮಿಯ ಪ್ರಾದೇಶಿಕ ಭಾಗಗಳು ಮತ್ತು ಪರದೇಶ ಸರಕಾರವು ದಂಡಕ್ರಿಯಾ ಸಂಹಿತೆ ಮತ್ತು ಸಾಮ್ರಾಜ್ಯಧಿಮಾನ ಶಾಸನ ಮಂಡಲ ಭಾರತಕ್ಕಾಗಿ ಮಾಡಿದ ಶಾಸನಗಳು ನಿಯಂತ್ರಿಸುತ್ತವೆ.

(೨) ಪ್ರಾದೇಶಿಕ ನೀರಿನ ಅಧಿಕಾರ ವ್ಯಾಪ್ತಿಯನ್ನು ೪೧ ಮತ್ತು ೪೨ ಪರಿನಿಯಮಗಳ ಶಾಸನಗಳು ನಿಯಂತ್ರಿಸುತ್ತವೆ.

ವಿಕ್ಟೋರಿಯಾ ಸಿ ೭೩

(೩) ಮಧ್ಯ ಸಮುದ್ರ, ಪರಿನಿಯಮ ೧೨ ಮತ್ತು ೧೩ ವಿಕ್ಟೋರಿಯಾ ಸಿ ೮೮ ಮತ್ತು ೩೭ ಮತ್ತು ೩೮ ವಿಕ್ಟೋರಿಯಾ ಸಿ ೨ ಇವು ನಿಯಂತ್ರಿಸುತ್ತವೆ. ಮಧ್ಯ ಸಮುದ್ರ ಅಪರಾಧಗಳನ್ನು ಕುರಿತು ಕೇವಲ ಸಂಸತ್ತಿನ ಪರಿನಿಯಮಗಳು ೧೨ ಮತ್ತು ೧೩ ವಿಕ್ಟೋರಿಯಾ ಇವು ವಸಾಹತು ನ್ಯಾಯಾಲಯಗಳಿಗೆ ೨೩ ಮತ್ತು ೨೪ ವ್ಹಿ.ಸಿ. ಎಲ್ಲ ರೀತಿಯ ಅಪರಾಧಗಳ ಅಧಿವಿಚಾರಣೆಯನ್ನು ನೌಕಾಧಿಪತಿ, ನೌಕಾದಳ ವಿಷಯದ ವಸಾಹತು ನ್ಯಾಯಾಲಯಗಳ ಅಧಿವಿಚಾರಣೆ ನಡೆಯಿಸಬಹುದಾದ ಅಪರಾಧಗಳನ್ನು ವಸಾಹತು ನ್ಯಾಯಾಲಯಗಳು ಅಧಿವಿಚಾರಣೆ ನಡೆಯಿಸಬಹುದು.

ಕಲಮು ೧ ಪರಿನಿಯಮ ೨೩ ಮತ್ತು ೨೪ರ ಅನ್ವಯ ನೌಕಾದಳಕ್ಕೆ ಸಂಬಂಧಿಸಿದ ವಿಷಯಕ್ಕೆ ನೌಕಾದಳ ನ್ಯಾಯಾಲಯ ಅಧಿವಿಚಾರಣೆ ನಡೆಯಿಸಬಹುದಾದ ಅಪರಾಧಗಳನ್ನು ಪರಿನಿಯಮ ೨೩ ಮತ್ತು ೨೪ರ ಕಲಂ ೧ ವ್ಹಿ.ಸಿ. ೮೮ ಇದು ಪರಿನಿಯಮ ೧೨ ಮತ್ತು ೧೩, ೯೬ ವ್ಹಿ.ಸಿ. ಇವುಗಳಿಗೆ ಮೇಲ್ಮನವಿಯನ್ನು ಭಾರತಕ್ಕೆ ಮತ್ತು ಪರಿನಿಯಮ ೩೭ ಮತ್ತು ೩೮ ವಿಕ್ಟೋರಿಯಾ ಸಿ ೨೭ ಇದು ಭಾರತದ ಕಾನೂನಿನ ಅನ್ವಯ ಶಿಕ್ಷಾರ್ಹವಾಗಿದೆ.

*೧೯ ಬಾಂಬೆ ಲಾ.ರಿ. ೫೨೭*

೧೮೯೭ರ xನೇ ಸಾಮಾನ್ಯ ಖಂಡಗಳ ಅಧಿನಿಯಮ ಇದರಲ್ಲಿ ಇಂಡಿಯದ ವ್ಯಾಖ್ಯೆಯನ್ನು ಕಲಮು ೩(೨೭)ರಲ್ಲಿ ಕೊಡಲಾಗಿದೆ.

ಇಂಡಿಯಾ ಅಂದರೆ ಬ್ರಿಟಿಷರ ಇಂಡಿಯಾ. ಯಾವುದೇ ದೇಶೀಯ ಸಂಸ್ಥಾನದ ಆಳುವ ಪ್ರಭು ರಾಜ ಇಲ್ಲವೇ ಬ್ರಿಟಿಷ್ ಅರಸರ ಸಾರ್ವಭೌಮತ್ವದ ಅಧಿಕಾರದಲ್ಲಿ ನೇಮಿಸಿದ ಮುಖ್ಯಸ್ಥನು ಗವರ್ನರ್ ಜನರಲ್ ಆಫ್ ಇಂಡಿಯಾ ಮುಖಾಂತರ ಅಧಿಕಾರ ನಡೆಯಿಸುವವರು ಇಲ್ಲವೆ ಗವರ್ನರ್ ಜನರಲ್ ಆಫ್ ಇಂಡಿಯಾ ಅವರ ಅಧೀನ ಅಧಿಕಾರಿಗಳು, ಅಧಿಕಾರ ಹೊಂದಿರುವರು.

ಸಾಮಾನ್ಯ ಖಂಡಗಳ ಅಧಿನಿಯಮ ೮ ಬಾಂಬೆ ಎಚ್.ಸಿ.ಆರ್.ಸಿ.ಆರ್. 'ಸಿ' ೬೩. ೧೮೯೭ರ ಅಧಿನಿಯಮ ಬ್ರಿಟಿಷ್ ಭಾರತದ ವ್ಯಾಖ್ಯೆಯನ್ನು ಕಲಮು ೩ (೭).

ಅಂದರೆ ಎಲ್ಲ ಪ್ರಾದೇಶಿಕ ಮತ್ತು ಸ್ಥಳಗಳು ಯಾವುವು ಬ್ರಿಟಿಷ್ ದೊರೆ ಅವರ ಸಾಮ್ರಾಜ್ಯವಾಗಿ ಗವ್ಹರ್ನರ್ ಜನರಲ್‌ರ ಮುಖಾಂತರ ಇಲ್ಲವೆ ಇತರ ಅಧಿಕಾರಿಗಳ, ಇಲ್ಲವೆ ಗವ್ಹರ್ನರ್ ಜನರಲ್ ಆಫ್ ಇಂಡಿಯಾ ಅವರಿಗೆ ಅಧೀನರಾಗಿರುವವರ ಅಧೀನದಲ್ಲಿರುವ ಪ್ರದೇಶಗಳು. ಬ್ರಿಟಿಷ್ ಇಂಡಿಯಾ ಬ್ರಿಟಿಷ್ ಇಂಡಿಯಾ+೩ ಮೈಲು.

*೮ ಬಾಂಬೆ. ಎಚ್.ಸಿ.ಆರ್.ಸಿ.ಆರ್.'ಸಿ'. ೬೩*

* * *

## ಭಾರತ ದಂಡಸಂಹಿತೆಯ ಕೆಳಗಿನ ಅಪರಾಧಗಳಿಗೆ ಯಾರು ಹೊಣೆಗಾರರು, ಯಾರು ಅಧಿವಿಚಾರಣೆ ಮಾಡಬೇಕು?

ಭಾರತ ದಂಡಸಂಹಿತೆ ಕಲಮು ೩ ಗವರ್ನರ್ ಜನರಲ್ ಆಫ್ ಇಂಡಿಯಾ ಭಾರತದ ಹೊರಗಡೆ ಮಾಡಿದ ಯಾವುದೇ ಭಾರತೀಯ ಕಾನೂನಿನ ಮೇರೆಗೆ ವಿಚಾರಣೆಗೆ ಗುರಿಯಾಗುವ ಯಾವುದೇ ವ್ಯಕ್ತಿಯ ಬಗ್ಗೆ ಭಾರತದ ಹೊರಗೆ ಮಾಡಿದ ಯಾವುದೇ ಕೃತ್ಯದ ಸಂಬಂಧದಲ್ಲಿ ಆ ಕೃತ್ಯವನ್ನು ಭಾರತದಲ್ಲಿ ಮಾಡಿದ್ದರೆ ಹೇಗೋ ಹಾಗೆ ಈ ಸಂಹಿತೆಯ ಉಪಬಂಧಗಳ ಮೇರೆಗೆ ವ್ಯವಹರಿಸತಕ್ಕದ್ದು.

ಆಯ್.ಪಿ.ಸಿ. ಕಲಮು ೪೧. ರಾಜ್ಯ ಕ್ಷೇತ್ರದ ಹೊರಗಡೆ ಅಪರಾಧಗಳಿಗೆ ಸಂಹಿತೆಯನ್ನು ವ್ಯಾಪ್ತಿಗೊಳಿಸುವುದು.

(೧) ಭಾರತದ ಹೊರಗೆ ಮತ್ತು ಆಚೆ ಇರುವ ಯಾವುದೇ ಸ್ಥಳದಲ್ಲಿ ಯಾವನೇ ದೇಶೀಯ ಭಾರತೀಯನು ಬ್ರಿಟಿಷ್ ದೊರೆಯ ಪ್ರಜೆಯಾಗಿರುವವನು.

(೨) ಯಾವುದೇ ಉಳಿದ ಬ್ರಿಟಿಷ್ ನಾಗರಿಕ ದೇಶಿ ಸಂಸ್ಥಾನಗಳ ದೊರೆಗಳ ಇಲ್ಲವೆ ಮುಖ್ಯಸ್ಥರ ಆಡಳಿತದ ಪ್ರದೇಶಗಳಲ್ಲಿ.

(೩) ಮಹಾರಾಣಿಯ ಯಾವುದೇ ನೌಕರನು, ಬ್ರಿಟಿಷ್ ಪ್ರಜೆಯಾಗಿರಲಿ ಇಲ್ಲವೆ ಆಗದೆ ಇರಲಿ, ಅವನು ಯಾವುದೇ ದೇಶೀಯ ಸಂಸ್ಥಾನಗಳ ದೊರೆಗಳ ಪ್ರಾದೇಶಿಕ ಹದ್ದಿನಲ್ಲಿ ಇಲ್ಲವೆ ಮುಖ್ಯಸ್ಥನ ಹದ್ದಿಯಲ್ಲಿ.

**ವಿವರಣೆ**

ಈ ಕಲಮಿನಲ್ಲಿ ಅಪರಾಧವೆಂಬ ಪದವು ಯಾವ ಕೃತ್ಯವನ್ನು ಭಾರತದ ಒಳಗೆ ಮಾಡಿದ್ದರೆ ಈ ಸಂಹಿತೆಯ ಮೇರೆಗೆ ದಂಡನಾರ್ಹವಾಗುತ್ತಿತ್ತೋ ಭಾರತದ ಹೊರಗೆ ಮಾಡಿದ ಅಂತಹ ಪ್ರತಿಯೊಂದು ಕೃತ್ಯವೂ ಒಳಗೊಳ್ಳುತ್ತದೆ.

**ಅಧಿನಿಯಮದ ಕಲಮು ೭(೧)**

ಈ ಕಲಮಿನ ಅನ್ವಯ ಅಂತಹ ಸಂಸ್ಥಾನಗಳಿಗೆ ರಾಜಕೀಯ ಪ್ರತಿನಿಧಿಯು ಜಿಲ್ಲಾ ದಂಡಾಧಿಕಾರಿಗೆ ಸಂಬೋಧಿಸಿದ ವಾರಂಟನ್ನು ಹೊರಡಿಸಿ, ಅದರಲ್ಲಿ ಆರೋಪಿಯು ಶರಣಾಗತನಾಗುವಂತೆ ಅದರಲ್ಲಿ ಕೇಳಿಕೊಳ್ಳಬೇಕು. ಪರಂತು ಆರೋಪಿಯು ಯುರೋಪಿಯನ್ ಬ್ರಿಟಿಷ್ ಪ್ರಜೆಯಾಗಿರಬಾರದು. ಮತ್ತು ಆ ಅಪರಾಧವು ಭಾರತೀಯ ಪ್ರತ್ಯರ್ಪಣ ಅಧಿನಿಯಮದ ೧ನೆಯ ಪರಿಶಿಷ್ಟದಲ್ಲಿ ವರ್ಣಿಸಿದಂತಹದಾಗಿರಬೇಕು.

**ಕಲಮು ೧೦**

ಬ್ರಿಟಿಷ್ ಭಾರತದಲ್ಲಿ ದಂಡಾಧಿಕಾರಿಗಳು ಸ್ವಪ್ರೇರಣೆಯಿಂದ ಮತ್ತು ಕೋರಿಕೆಯು ಇಲ್ಲದೇ ಸಾಕಷ್ಟು ಮಾಹಿತಿಯು ದೊರೆತು ಸಮಾಧಾನಕರವಾದರೆ ಇಲ್ಲವೇ ಫಿರ್ಯಾದಿ ಇದ್ದರೆ ಹೊರಡಿಸಬಹುದು ಮತ್ತು ಅಂತಹ ದಂಡಾಧಿಕಾರಿಯ ಅಧಿಕಾರ ವ್ಯಾಪ್ತಿಯಲ್ಲಿ ಅವನು ಅಂತಹ ಅಪರಾಧವೆಸಗಿದ್ದರೆ ಅಂತಹ ಆರೋಪಿಯನ್ನು ದಸ್ತಗಿರಿ ಮಾಡಲು ವಾರಂಟು ಹೊರಡಿಸಬಹುದು ಮತ್ತು ಅಂತಹ ರಾಜ್ಯಕ್ಕೆ ಶರಣಾಗತನಾಗಲು ಆದೇಶಿಸಬಹುದು.

**ವಿ.ಸೂ.**: ಈ ಅಧಿನಿಯಮವು ಒಪ್ಪಂದದ ಹಕ್ಕುಗಳಿಗೆ ಒಳಪಟ್ಟಿದೆ.

**ಪ್ರತ್ಯಾರ್ಪಣೆಯು ಪ್ರತ್ಯಾರ್ಪಣೆ ಅಧಿನಿಯಮದ ಅನ್ವಯ ನಿಯಂತ್ರಿಸಲ್ಪಡುತ್ತದೆ**

(ಬ) ಪರದೇಶಗಳ ಅಪರಾಧ ಜಾಗವು ಪರದೇಶಗಳನ್ನು ಕುರಿತು ಯಾರಿಗೆ ಇಂಗ್ಲಿಷ್ ಪ್ರತ್ಯಾರ್ಪಣೆಯು ಅನ್ವಯಿಸುತ್ತದೆಯೋ ಆಗ ಆರೋಪಿಯ ಕೋರಿಕೆಯ ಮೇರೆಗೆ ಅಂತಹ ಪರದೇಶಕ್ಕೆ ಶರಣಾಗಬಹುದು. ಪರಂತು–

(೧) ಭಾರತ ಸರಕಾರವು ಇಲ್ಲವೆ ಸ್ಥಾನಿಕ ಸರಕಾರಕ್ಕೆ ಯೋಗ್ಯವೆನಿಸಿದರೆ,

(೨) ಭಾರತೀಯ ಪ್ರತ್ಯಾರ್ಪಣ ಅಧಿನಿಯಮದ ಪರಿಶಿಷ್ಟ ೧ರಲ್ಲಿ ಕಾಣಿಸಿದ ಅಪರಾಧ ಆಗಿದ್ದರೆ,

(೩) ಅಪರಾಧವು ರಾಜಕೀಯ ಸ್ವರೂಪದ್ದು ಆಗಿರಬಾರದು.

(ಕ) **ಡೊಮಿನಿಯನ್ನುಗಳು** (ಆಧಿಪತ್ಯ ಸಾಮಂತರಾಜ್ಯ): ಅಪರಾಧ ಸ್ಥಳ: ಪ್ರತ್ಯಾರ್ಪಣೆ ಭಾಗಶಃ ಅನ್ವಯಿಸುವ ಸಂದರ್ಭಗಳು.

(೧) ಓಡಿಹೋದ, ಪರಾರಿಯಾದ ಆರೋಪಿಯ ಅಧಿನಿಯಮ ೧೮೮೧ (ಸಂಸತ್ತಿನ ಶಾಸನ) ಮತ್ತು ಭಾಗಶಃ.

(೨) ಭಾರತೀಯ ಪ್ರತ್ಯಾರ್ಪಣ ಅಧಿನಿಯಮ.

ಎಲ್ಲ ಅಪರಾಧಿಕ ಅಧಿಕಾರ ವ್ಯಾಪ್ತಿಯು ಸ್ಥಾನಿಕವಾಗಿರುತ್ತದೆ. ಅಪರಾಧದ ಅಧಿಕಾರ ವ್ಯಾಪ್ತಿಯು ಆ

ಅಪರಾಧವು ಘಟಿಸಿದ ದೇಶಕ್ಕೆ ಸಂಬಂಧಿಸಿದ್ದು ಆಗಿರುತ್ತದೆ.

*ಎಲ್.ಆರ್. (೧೮೯೧) ಎ.ಸಿ. ೪೫೮*

ಅಪರಾಧವು ಅಪ್ಪಟ ಸ್ಥಾನಿಕ ಎಂದರೆ ಅದು ಎಲ್ಲಿ ಘಟಿಸಿದೆಯೋ ಆ ದೇಶದ ಕಾನೂನಿನ ಮೇಲೆ ಅವಲಂಬಿಸಿರುತ್ತದೆ. ಆದರೆ ಆ ಅಪರಾಧವನ್ನು ಮಾಡಿದವನ ರಾಷ್ಟ್ರೀಯತೆಯ ಮೇಲೆ ಅವಲಂಬಿಸಿರುವುದಿಲ್ಲ.

*ಎಲ್.ಆರ್. (೧೮೯೧) ಎ.ಸಿ. ೬೭೦*

ಬ್ರಿಟಿಷ್ ಭಾರತದಲ್ಲಿಯ ನ್ಯಾಯಾಧೀಶರಿಗೆ ಬ್ರಿಟಿಷ್ ಭಾರತದ ಹೊರಗಡೆ ಒಬ್ಬ ಪರದೇಶದವನು ಒಂದು ಅಪರಾಧವನ್ನು ಮಾಡಿ ಅದನ್ನು ಪೂರ್ತಿಗೊಳಿಸಿದ್ದರೆ ಆ ಅಪರಾಧಗಳ ವಿಚಾರಣೆಯನ್ನು ಮಾಡುವ ಅಧಿಕಾರ ಇರುವುದಿಲ್ಲ. ಬ್ರಿಟಿಷ್ ಭಾರತದಲ್ಲಿ ಪರದೇಶದ ಪ್ರಜೆಯ ಅಧಿವಿಚಾರಣೆಯನ್ನು ಅವನು ಬ್ರಿಟಿಷ್ ಭಾರತದ ಹೊರಗಡೆ ಮಾಡಿದ ಅಪರಾಧಗಳಿಗೆ ಅಧಿವಿಚಾರಣೆ ಮಾಡಲು ಬರುವುದಿಲ್ಲ.

*೨೮ ಅಲ ೩೭೨: ೨ ಬಾಂಬೆ ಲಾ.ರಿ. ೩೩೭*

ದೇಶೀಯ ಸಂಸ್ಥಾನದ ಪ್ರಜೆಯು ಆ ಸಂಸ್ಥಾನದಲ್ಲಿಯೇ ಒಂದು ಕಳವಿನ ಅಪರಾಧವೆಸಗಿದರೆ ಮತ್ತು ಅನಂತರ ಅವನು ಆ ಕಳವಿನ ಮಾಲು ಸಹಿತ ಅವರ ವಶದಲ್ಲಿದ್ದಾಗ, ಬ್ರಿಟಿಷರ ಭಾರತದಲ್ಲಿ ಅವನು ಸಿಕ್ಕರೆ ಬ್ರಿಟಿಷ್ ಭಾರತದ ನ್ಯಾಯಾಲಯಗಳಿಗೆ ಅವನ ಅಧಿವಿಚಾರಣೆಯನ್ನು ಆ ಅಪರಾಧ ಕಳವು ಕುರಿತು ಮಾಡುವ ಅಧಿಕಾರವು ಇರುವುದಿಲ್ಲ. ಆದಾಗ್ಯೂ ಅವನು ಕಳವಿನ ಮಾಲನ್ನು ತನ್ನಲ್ಲಿ ಇಟ್ಟುಕೊಂಡ ಅಪರಾಧಕ್ಕಾಗಿ ಅವನ ಅಧಿವಿಚಾರಣೆಯನ್ನು ನಡೆಯಿಸುವ ಅಧಿಕಾರ ವ್ಯಾಪ್ತಿಯು ಅದಕ್ಕೆ ಇರುತ್ತದೆ.

*೧೦ ಬಾಂಬೆ ೧೮೬*

ಪತ್ತೆಯಾದದ್ದು = ಒಬ್ಬ ವ್ಯಕ್ತಿಯನ್ನು ಎಲ್ಲಿ ಕಂಡುಹಿಡಿದರು ಎಂದರ್ಥವಲ್ಲ, ಬದಲಿಗೆ ಎಲ್ಲಿ ಆತನು ತನ್ನಿಚ್ಚೆಯಂತೆ ಅಥವಾ ದಸ್ತಗಿರಿಯಲ್ಲಿ ಬಂದು, ವಾಸ್ತವವಾಗಿ ಹಾಜರಿದ್ದಾನೋ (ಆ ಜಾಗವೆಂದು ತಿಳಿಯತಕ್ಕದ್ದು).

*೬ ಬಾಂಬೆ ೬೨೨*

ಈ ಕಲಮಿನಡಿ ನಡೆವ ವಿಚಾರಣೆಯು ಆರೋಪಿಯನ್ನು ಬ್ರಿಟಿಷ್ ಇಂಡಿಯಾದೊಳಗೆ ವಿದೇಶಿ ಪ್ರದೇಶದಿಂದ ಅಕ್ರಮ ದಸ್ತಗಿರಿಯಡಿ ತರಲಾಗಿದೆಯೆಂಬ ಕಾರಣದಿಂದ ನಿರಸನಗೊಳ್ಳುವುದಿಲ್ಲ.

*೧೩ ಬಾಂಬೆ ಲಾ.ರಿ. ೨೯೬*

**ಕಲಮು ೧೦೬ ಮತ್ತು ೧೦೭ ಇವು ಮಾರಕ ಜಗಳಗಳ ಕುರಿತಾಗಿವೆ**

ಕಲಮು ೧೦೬ ಈ ಕೆಳಗಿನ ಪ್ರಕರಣಗಳ ಕುರಿತಾಗಿದೆ.

ಭಾರತೀಯ ದಂಡ ಸಂಹಿತೆಯ ಕಲಮು ೧೪೩, ೧೪೯, ೧೫೩–ಎ ಮತ್ತು ೧೫೪ನ್ನು ಹೊರತುಪಡಿಸಿ ೮ನೇ ಅಧ್ಯಾಯದಡಿ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಥವಾ ಹಲ್ಲೆ ಅಥವಾ ಶಾಂತಿಭಂಗಕ್ಕೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಥವಾ ಅಂಥದ್ದನ್ನು ಪ್ರೇರೇಪಿಸಿದ ಇತರ ಅಪರಾಧದ, ಅಥವಾ ಅಪರಾಧಿಕ ಬೆದರಿಕೆಯನ್ನು ಮಾಡಿದನೆಂದು ಆರೋಪಿಸಲಾದ ವ್ಯಕ್ತಿಯು ಶಿಕ್ಷೆಗೊಳಪಟ್ಟಾಗ ಮತ್ತು ಅಂತಹ ನ್ಯಾಯಾಲಯವು ಅಂತಹ ವ್ಯಕ್ತಿಯು ಶಾಂತಿ ಪಾಲನೆಗಾಗಿ ಮುಚ್ಚಳಿಕೆಯನ್ನು ನೀಡುವುದು ಅವಶ್ಯವೆಂದು ಅಭಿಪ್ರಾಯಪಟ್ಟಲ್ಲಿ, ಅಂತಹ ನ್ಯಾಯಾಲಯವು ಆತನಿಗೆ ಆತನ ಶಕ್ತ್ಯಾನುಸಾರ ನಿಗದಿತ ಮೊತ್ತಕ್ಕೆ ಜಾಮೀನು ಸಹಿತ ಅಥವಾ ರಹಿತ ಮುಚ್ಚಳಿಕೆಯನ್ನು, ಮೂರು ವರ್ಷಗಳಿಗೆ ಮೀರದಂತೆ ಅಂತಹ ಅವಧಿಯಲ್ಲಿ ಶಾಂತಿ ಪಾಲಿಸಲು ನೀಡಬೇಕೆಂದು ಆದೇಶಿಸಬಹುದು.

೨. ಈ ಶಿಕ್ಷೆಯನ್ನು ಮೇಲ್ಮನವಿಯಲ್ಲಿ ರದ್ದು ಮಾಡಿದರೆ ಅಥವಾ ಬೇರೆಡೆ ಹೀಗೆ ಬರೆದುಕೊಟ್ಟ ಮುಚ್ಚಳಿಕೆಯು ರದ್ದಾಗುತ್ತದೆ.

೩. ಉಚ್ಚ ನ್ಯಾಯಾಲಯವು ತನ್ನ ಪುನರೀಕ್ಷಣೆಯಲ್ಲಿ ಭದ್ರತೆಯನ್ನು ಕೇಳಬಹುದು.

ಟಿಪ್ಪಣಿ: ಶಾಂತಿ ಭಂಗವನ್ನೊಳಗೊಂಡದ್ದು.

ಎರಡು ರೀತಿಯ ಅರ್ಥವಿವರಣೆ:

(೧) ಈ ಪದಗಳು ಶಾಂತಿಭಂಗವು ಅವಶ್ಯ ಅಂಶವಾಗಿರುವ ಅಪರಾಧಗಳಿಗೆ ಸಂಬಂಧಿಸಿದೆ ಮತ್ತು ಶಾಂತಿಭಂಗಕ್ಕೆ ಪ್ರೇರೇಪಣೆ ಮಾತ್ರವಾದ ಅಥವಾ ಎಡೆಮಾಡಿಕೊಡಬಲ್ಲವೆಂದು ಮಾತ್ರ ತಿಳಿಯಬಹುದಾದ ಅಪರಾಧಗಳಿಗೆ ಅನ್ವಯವಾಗುವುದಿಲ್ಲ.

(೨) ಈ ಪದಗಳು ಶಾಂತಿಭಂಗವಾಗಬಹುದಾದ ಸಂದರ್ಭಗಳ ಅಪರಾಧಗಳನ್ನೊಳಗೊಳ್ಳುತ್ತವೆ.

ಭಾ.ದ.ಸಂ.ನ ೫೦೪ನೇ ಕಲಮಿನಡಿ (ಶಾಂತಿಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಅನುಮಾನಿಸುವುದು) ಮತ್ತು ಹಾಗೆಯೇ ಭಾ.ದ.ಸಂ.ನ ೪೪೮ನೇ ಕಲಮಿನಡಿ (ಭೂಮಿಯ ಗಡಿ ಗುರುತುಗಳನ್ನು ಕಿತ್ತುಹಾಕುವುದು) ಕಾನೂನುಬದ್ಧವಾಗಿವೆ.

**ಕಲಮು ೧೦೭**

ಯಾವುದೇ ಅಪರಾಧಿಕ ನ್ಯಾಯಾಲಯಕ್ಕೆ ಯಾವನೇ ವ್ಯಕ್ತಿಯು ಶಾಂತಿಭಂಗ ಮಾಡಬಹುದೆಂಬ ಅಥವಾ ಸಾರ್ವಜನಿಕ ನೆಮ್ಮದಿಯನ್ನು ಕೆಡಿಸಬಹುದೆಂಬ ಅಥವಾ ಶಾಂತಿಭಂಗ ಇಲ್ಲವೇ ಸಾರ್ವಜನಿಕ ನೆಮ್ಮದಿಯನ್ನು ಕೆಡಿಸಬಹುದಾದ ಇನ್ಯಾವುದೇ ಅಕ್ರಮ ಕ್ರಿಯೆ ನಡೆಯಬಹುದೆಂಬ ಸುದ್ದಿ ಸಿಕ್ಕಿದಲ್ಲಿ ಆ ದಂಡಾಧಿಕಾರಿಯು ಅಂತಹ ವ್ಯಕ್ತಿಯ ವಿರುದ್ಧ ಮುಂದುವರಿಯಲು ಸಾಕಷ್ಟು ಆಧಾರವಿದೆಯೆಂದು ಅಭಿಪ್ರಾಯಪಟ್ಟಲ್ಲಿ ಅಂತಹ ವ್ಯಕ್ತಿಗೆ ಜಾಮೀನುಸಹಿತ ಅಥವಾ ರಹಿತವಾಗಿ ಒಂದು ವರ್ಷಕ್ಕೆ ಮೀರದಂತೆ ದಂಡಾಧಿಕಾರಿಯು ನಿಗದಿಪಡಿಸುವ ಸೂಕ್ತ ಅವಧಿಯಲ್ಲಿ ಶಾಂತಿಪಾಲನೆಯ ಮುಚ್ಚಳಿಕೆಯನ್ನು ನೀಡಲು ಏಕೆ ಆದೇಶಿಸಬಾರದೆಂದು ಕಾರಣ ಕೊಡಲು ಆದೇಶಿಸಬಹುದು.

**ಟಿಪ್ಪಣಿಗಳು**

**ತಿಳಿಸಲ್ಪಟ್ಟಿದೆ:** ಸುದ್ದಿ ಸಮಾಚಾರ ಮಾಹಿತಿಯು ನಂಬಲು ಅರ್ಹವಾಗಿರಲಿಕ್ಕೇ ಬೇಕು. ಒಬ್ಬ ಖಾಸಗಿ

ವ್ಯಕ್ತಿಯ ಹೇಳಿಕೆಯು ಹೇಳಿಕೆಯನ್ನು ದೇವರ ಆಣೆ ಮಾಡಿ ಇಲ್ಲವೆ ಸತ್ಯದ ಪ್ರತಿಜ್ಞೆಪೂರ್ವಕವಾಗಿ ಹೇಳುವುದು ಎನ್ನುವುದು ನಂಬಲರ್ಹವಾದ ಮಾಹಿತಿ ಅಲ್ಲ. ಕೇವಲ ಇದರ ಮೇಲೆ ದಂಡಾಧಿಕಾರಿಯು ಈ ಕಲಮಿನ ಕೆಳಗೆ ಆರೋಪಿಗೆ ನೋಟೀಸು ಹೊರಡಿಸಬಹುದು. ಈ ಸಮಾಚಾರ ಸುದ್ದಿಯು ಒಂದು ನಿಶ್ಚಿತ ರೀತಿಯದು ಇರಬೇಕು. ನೇರವಾಗಿ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದು ಇರಬೇಕು. ಯಾರ ವಿರುದ್ಧ ನೋಟೀಸು ಜಾರಿ ಮಾಡಿದೆಯೋ ಅಂಥ ಮನುಷ್ಯನಿಗೆ ನೇರವಾಗಿ ಸಂಬಂಧಿಸಿದ್ದು ಇರಬೇಕು. ಅದು ಮೂರ್ತಸ್ವರೂಪ ಸಂಗತಿಗಳನ್ನು ಬಹಿರಂಗಪಡಿಸಬೇಕು ಮತ್ತು ವಿವರಗಳನ್ನು ಕೊಡಬೇಕು. ಆ ಸುದ್ದಿಯು ಸ್ಪಷ್ಟವಾಗಿ ಮತ್ತು ನಿರ್ದಿಷ್ಟ ರೀತಿಯದ್ದಾಗಿದ್ದು ಯಾರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಳ್ಳಬೇಕಾಗಿದೆಯೋ ಅವನಿಗೆ ಒಂದು ಮೂರ್ತ ಸ್ವರೂಪದ ಸಂಗತಿಯನ್ನು ಬಹಿರಂಗಪಡಿಸಬೇಕು ಮತ್ತು ವಿವರಗಳನ್ನೊಳಗೊಂಡಿರಬೇಕು. ಅಂದರೆ ಯಾರಿಗೆ ಈ ನೋಟೀಸನ್ನು ಕೊಡಲಾಗಿದೆಯೋ ಅವನಿಗೆ ತಾನು ಏನು ಮಾಡಬೇಕೆಂಬುದು ತಿಳಿಯಬೇಕು.

೨. ಕೃತಿಯು ಶಾಂತಿಭಂಗ ಮಾಡುವ ಸಾಧ್ಯತೆಯು ಸನ್ನಿಹಿತವಾಗಿರಲಿಕ್ಕೇಬೇಕು, ಆದರೆ ಭವಿಷ್ಯ ಕಾಲದಲ್ಲಿ ಸಂಭವಿಸಬಹುದಾದುದಲ್ಲ. ಆ ಸುದ್ದಿ ಬಂದ ಕಾಲಕ್ಕೆ ಅದು ಉದ್ದಿಷ್ಟಿತವಾಗಿದ್ದಿತ್ತೆಂಬುದನ್ನು ತೋರಿಸಲಿಕ್ಕೇಬೇಕು.

೩. ಶಾಂತಿಯನ್ನು ಭಂಗ ಮಾಡುವ ಚಟುವಟಿಕೆಯು ಅಕ್ರಮವಾದುದಾಗಿರಬೇಕು. ಒಬ್ಬನು ಕಾನೂನುಬದ್ಧ ಹಕ್ಕುಗಳನ್ನು ಚಲಾಯಿಸುವುದನ್ನು ಅಕ್ರಮ ಕೃತಿಗಳೆಂದು ಈ ಕಲಮಿನ ಕೆಳಗೆ ಆದೇಶ ಹೊರಡಿಸುವ ಅವಶ್ಯಕತೆಯು ಇರುವುದಿಲ್ಲ.

ಕಾನೂನುಬದ್ಧವಾದ ಒಂದು ಕ್ರಿಯೆಯು, ಕೆಲವು ಜನರು ವಿರೋಧಿಸುತ್ತಾರೆಂಬ ಕಾರಣಕ್ಕೆ ಕಾನೂನು ವಿರೋಧಿಯಾಗುವುದಿಲ್ಲ.

ಉದಾ: ಒಂದು ಆಕಳನ್ನು ಕೊಲ್ಲುವುದು
ರಸ್ತೆಯಲ್ಲಿ ಲಾವಣಿ ಪದಗಳನ್ನು ಹಾಡುವುದು
ಮಸೀದಿಯಲ್ಲಿ ಪ್ರಾರ್ಥನೆಯನ್ನು ಸಲ್ಲಿಸುವಾಗ ಅಮೀನ್ ಎಂದು ದೊಡ್ಡ ಧ್ವನಿಯಲ್ಲಿ ಅನ್ನುವುದು.

**ಕಲಮು ೧೦೮**

ಇದು ಅಪಾಯಕಾರಿ ಪ್ರಚಾರವನ್ನು ಕುರಿತು ವ್ಯವಹರಿಸುತ್ತದೆ.

ಇದು ಯಾವುದೇ ವ್ಯಕ್ತಿಯು ದಂಡಾಧಿಕಾರಿಯ ಅಧಿಕಾರವ್ಯಾಪ್ತಿ ಹದ್ದಿನೊಳಗೆ ಇಲ್ಲವೇ, ಅಧಿಕಾರ ವ್ಯಾಪ್ತಿಯ ಹೊರಗಡೆ ಮೌಖಿಕವಾಗಿ ಇಲ್ಲವೆ ಲಿಖಿತದಲ್ಲಿ ಅಥವಾ ಇನ್ನಾವುದೋ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಸಮಾಚಾರವನ್ನು ಪ್ರಚಾರ ಮಾಡುತ್ತಾನೆ, ಇಲ್ಲವೆ ಪ್ರಚಾರ ಮಾಡಲು ಪ್ರಯತ್ನಿಸುತ್ತಾನೆ, ಇಲ್ಲವೇ ಇನ್ನಾವುದೇ ವಿವೇಕವುಳ್ಳವನ ಬಗ್ಗ ದುಷ್ಪ್ರೇರಣೆಗೆ ಪ್ರಚಾರ ಮಾಡುವುದರ ಬಗ್ಗೆ ವ್ಯವಹರಿಸುತ್ತದೆ.

(ಅ) ರಾಜದ್ರೋಹದ ವಿಷಯ ಅಂದರೆ ಇಂಥ ವಿಷಯವನ್ನು ಪ್ರಕಟಿಸುವುದು ಅಂದರೆ ಭಾರತ ದಂಡ ಸಂಹಿತೆ ಕಲಮು ೧೨೪ಅ ದ ಅನ್ವಯ ಶಿಕ್ಷಿಸಲ್ಪಡುವುದು.

(ಬ) ಭಾರತ ದಂಡ ಸಂಹಿತೆ ಕಲಮು ೧೫೩ಅ ದ ಅನ್ವಯ ಶಿಕ್ಷಿಸುವ ಯಾವುದೇ ವಿಷಯವನ್ನು ಪ್ರಕಟಿಸುವುದು, ಇಲ್ಲವೇ.

(ಕ) ಯಾವುದೇ ವಿಷಯ ನ್ಯಾಯಾಧೀಶರಿಗೆ ಸಂಬಂಧಿಸಿದ್ದು ಯಾವುದು ಅಪರಾಧಿಕ ಭಯೋತ್ಪಾದನೆ ಆಗಿರುತ್ತದೆ, ಇಲ್ಲವೆ ಭಾರತ ದಂಡಸಂಹಿತೆಯ ಕೆಳಗೆ ಮಾನಹಾನಿ ಅಪರಾಧವಾಗಿರುತ್ತದೆಯೋ ಆಗ ಅಂಥ ದಂಡಾಧಿಕಾರಿಯ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಸಾಕಷ್ಟು ಕಾರಣ ಗಳಿವೆಯೆಂದೂ ಆಗ ಅಂತಹ ವ್ಯಕ್ತಿಯು ಒಂದು ಕಾರಣ ತೋರಿಸುವ ನೋಟೀಸು ಕೊಟ್ಟು ಆತನು ಜಾಮೀನುದಾರರೊಂದಿಗೆ ಇಲ್ಲವೇ ಜಾಮೀನುದಾರರು ಇಲ್ಲದೆ ಒಂದು ಜಾಮೀನು ಪತ್ರವನ್ನು ಒಂದು ವರ್ಷಕ್ಕೆ ಮಿಕ್ಕದಂತೆ ಇಲ್ಲವೇ ಕೋರ್ಟಿಗೆ ಯೋಗ್ಯ ಕಂಡ ಅವಧಿಗೆ ಒಳ್ಳೆ ನಡತೆಯ ಬಗ್ಗೆ ಜಾಮೀನು ಪತ್ರ ಬರೆದುಕೊಡಲು ನೋಟೀಸು ಕೊಡಬೇಕು.

**ಟಿಪ್ಪಣಿಗಳು:**

೧. ಯಾವುದೇ ರೀತಿಯಲ್ಲಿ ಉದಾ: ಗ್ರಾಮೋಫೋನ್ ರಿಕಾರ್ಡುಗಳ ಮೂಲಕ.

೨. ಉದ್ದೇಶಪೂರ್ವಕವಾಗಿ ಮುಗ್ಧ ಏಜೆಂಟರನ್ನು ಹೊರಗಿರಿಸುವುದು ಮತ್ತು ತಿಳುವಳಿಕೆ ಇಲ್ಲದ ಸಾಧನೆಗಳು, ಉದಾ: ದಿನಪತ್ರಿಕೆ ಮಾರಾಟ ಮಾಡುವ ಹುಡುಗರು. ಇಲ್ಲವೇ ಉಳಿದವರು ಕೇವಲ ನಿರ್ವಹಿಸುವವರು.

೩. ಬರವಣಿಗೆಯಲ್ಲಿಲ್ಲದಿದ್ದರೂ ಕೇವಲ ಪ್ರಸಾರ ಮಾಡುವುದು ಅವಶ್ಯವಾಗಿ ಇರಲೇಬೇಕು. ಯಾವಾಗ ಆ ವಿಷಯವು ವೃತ್ತ ಪತ್ರಿಕೆಗಳ ಮುಖಾಂತರ ಪ್ರಸಾರವಾಗುತ್ತದೆಯೋ ಆಗ ಅದರ ಸಂಪಾದಕ, ಮಾಲೀಕ ಪ್ರಿಂಟು ಮಾಡಿದವ ಇಲ್ಲವೇ ಪ್ರಸಿದ್ಧಿ ಮಾಡಿದವ ಇವರ ವಿರುದ್ಧ ಸ್ಥಳೀಯ ಸರಕಾರದ ಆದೇಶದ ಹೊರತಾಗಿ ಕ್ರಮ ಕೈಕೊಳ್ಳಲು ಬರುವುದಿಲ್ಲ.

**ಕಲಮು ೧೦೯ ಮತ್ತು ೧೧೦**

ಇವು ಅಪಾಯಕಾರಿ ನಡತೆಯ ಜನರನ್ನು ಕುರಿತು ವ್ಯವಹರಿಸುತ್ತವೆ.

**ಕಲಮು ೧೦೯**

ಈ ಕೆಳಕಂಡ ವ್ಯಕ್ತಿಗಳನ್ನುದ್ದೇಶಿಸಿದೆ:–

(ಅ) ಒಬ್ಬ ಆರೋಪಿಯು ಸ್ಥಾನಿಕ ಸರಹದ್ದಿನ ದಂಡಾಧಿಕಾರಿಯ ಅಧಿಕಾರ ವ್ಯಾಪ್ತಿಯಲ್ಲಿ ತನ್ನ ಇರುವಿಕೆಯಲ್ಲಿ ಬಚ್ಚಿಟ್ಟುಕೊಳ್ಳುವಂತೆ ಕಾಳಜಿ ವಹಿಸುವುದು. ಮತ್ತು ಅಂಥ ಮನುಷ್ಯನು ಅಂಥ ಅಪರಾಧ ಮಾಡುವುದನ್ನು ಮುಂದುವರಿಸಿದ್ದಾನೆಂದು ನಂಬಲು ಯೋಗ್ಯ ಕಾರಣಗಳಿದ್ದರೆ,

(ಬ) ಯಾವ ಮನುಷ್ಯನಿಗೆ ಹೇಳಿಕೊಳ್ಳುವಂತಹ ಉಪಜೀವನದ ಮಾರ್ಗಗಳು ಇಲ್ಲದಿರುವುದು, ಇಲ್ಲವೆ ಅವನು ತನ್ನ ಬಗ್ಗೆ ಸಮಾಧಾನಕರ ಮಾಹಿತಿ ಕೊಡಲು ಅಶಕ್ಯನಾದವನು.

ಇಂಥ ಪ್ರಕರಣಗಳಲ್ಲಿ ಈ ಮುಚ್ಚಳಿಕೆಯನ್ನು ಒಂದು ವರ್ಷದ ಅವಧಿಗೆ ಪಡೆಯಬಹುದು.

೧. ಬಚ್ಚಿಟ್ಟುಕೊಂಡು ಕುಳಿತುಕೊಳ್ಳುವುದು ಅಪರಾಧ ಮಾಡುವ ಉದ್ದೇಶದಿಂದಲೇ ಆಗಿರತಕ್ಕದ್ದು.

೨. ಹೇಳಿಕೊಳ್ಳುವ ಜೀವನೋಪಾಯದ ಮಾರ್ಗಗಳು.

ಹಣವಿಲ್ಲದಿರುವುದು, ಅಥವಾ ನಿರುದ್ಯೋಗವು ಅಂದರೆ ಜೀವನೋಪಾಯದ ಮಾರ್ಗಗಳು ಇಲ್ಲವೆಂದು ಅರ್ಥವಲ್ಲ.

*೨೩ ಕಲ್ಕತ್ತ ೩೪೭ ವಿಕ್ಟರ ವಿರುದ್ಧ ಎಂಪರರ್*

**ಕಲಮು ೧೧೦**

ಕೆಳಗೆ ಕಾಣಿಸಿದ ರೂಢಿಗರ ಅಪರಾಧಗಳ ಪ್ರಕರಣಗಳನ್ನು ಕುರಿತು ವಿವರಿಸುತ್ತದೆ:

(ಅ) ಒಬ್ಬನು ರೂಢಿಯಿಂದ ಒಬ್ಬ ಸುಲಿಗೆಗಾರ, ರಾತ್ರಿ ಕಳ್ಳತನ ಮಾಡುವವ ಕಳ್ಳ ಇಲ್ಲವೆ ಕೃತಕ ಸ್ವಪ್ಪನೆ ಮಾಡುವವ ಇಲವೇ.

(ಬ) ರೂಢಿಯಿಂದ ಕಳವಿನ ಮಾಲೆಂದು ತಿಳಿದಿದ್ದರೂ ಅದನ್ನು ಸ್ವೀಕರಿಸುವವ, ಇಲ್ಲವೇ.

(ಕ) ರೂಢಿಯಿಂದ ಕಳವು ಮಾಡಿದವರನ್ನು ಸಂರಕ್ಷಿಸುವುದು, ಇಲ್ಲವೇ ಆಶ್ರಯ ಕೊಡುತ್ತಾನೆ ಇಲ್ಲವೆ ಕಳವಿನ ಮಾಲನ್ನು ಬಚ್ಚಿಡಲು ಇಲ್ಲವೆ ಮಾರಾಟ ಮಾಡಲು ಸಹಾಯ ಮಾಡುತ್ತಾನೆ.

(ಳ) ..... ರೂಢಿಗತ ಅಪರಾಧಿಗಳನ್ನು ಕುರಿತು ಮೂರು ವರ್ಷದವರೆಗೆ ಮುಚ್ಚಳಿಕೆಯನ್ನು ಪಡೆಯಬಹುದು.

**ಕಲಮು ೧೨೧**

ಇಂತಹ ಜನರು ಶಾಂತತೆಯನ್ನು ಕಾಪಾಡಿಕೊಂಡು ಹೋಗಲು ಒತ್ತಾಯಿಸುವುದರ ಸಲುವಾಗಿ ಅಳವಡಿಸಿದ ಮಾರ್ಗವು ಇಲ್ಲವೇ ಒಳ್ಳೇ ನಡತೆಯ ಬಗ್ಗೆ ಅವರಿಂದ ಶಾಂತತೆ ಕಾಪಾಡಲು ಇಲ್ಲವೆ ಕೆಲವು ಅವಧಿಗೆ ಮತ್ತು ನಂತರವೂ ಜಾಮೀನು ಪತ್ರ ಬರೆದುಕೊಂಡು ಅವರಿಗೆ ಕೇಳತಕ್ಕದ್ದು.

**ಶಾಂತಿಯನ್ನು ಕಾಪಾಡಿಕೊಂಡು ಬರುವ ಮುಚ್ಚಳಿಕೆ ಮತ್ತು ಒಳ್ಳೇ ನಡತೆಯ ಬಗ್ಗೆ ಬರೆದುಕೊಡುವ ಮುಚ್ಚಳಿಕೆ ಇವುಗಳ ನಡುವಣ ವ್ಯತ್ಯಾಸ.**

೧. ಶಾಂತಿಯನ್ನು ಕಾಪಾಡಿಕೊಂಡು ಹೋಗಲು ಮುಚ್ಚಳಿಕೆಯನ್ನು ಆ ವ್ಯಕ್ತಿ ಏನಾದರೂ ಒಂದು ಅಪರಾಧ ಮಾಡಿದರೆ, ಮುಟ್ಟುಗೋಲು ಹಾಕಲು ಬರುವುದಿಲ್ಲ. ಆದರೆ ಅಂಥ ಅಪರಾಧ ಮಾಡುವುದರಿಂದ ಅವುಗಳ ಪರಿಣಾಮದಿಂದ ಶಾಂತಿ ಭಂಗವಾಗುವ ಸಾಧ್ಯತೆ ಇದ್ದರೆ ಮಾತ್ರ ಹಾಗೆ ಮಾಡಬಹುದು.

೨. ಒಳ್ಳೆಯ ನಡತೆಗಾಗಿ ಬರೆದುಕೊಟ್ಟ ಮುಚ್ಚಳಿಕೆಯನ್ನು ಅವನು ಯಾವುದೇ ಅಪರಾಧ ಮಾಡಿ ಶಿಕ್ಷೆಗೆ ಗುರಿಯಾದರೆ ಅವನ ಮುಚ್ಚಳಿಕೆಯನ್ನು ಮುಟ್ಟುಗೋಲು ಹಾಕಬಹುದು.

**ಶಾಂತಿ ಭಂಗದ ಬಗ್ಗೆ ಮುಚ್ಚಳಿಕೆಯ ಉಲ್ಲಂಘನೆಯ ಪ್ರಕ್ರಿಯೆಯು:**

ಒಬ್ಬನಿಗೆ ಒಂದು ಅಪರಾಧಕ್ಕೆ ಶಿಕ್ಷೆಯಾದರೆ ಅವನು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಮುಟ್ಟುಗೋಲು ಹಾಕಲಾಗುವುದು. ಆ ಮುಟ್ಟುಗೋಲು ಹಾಕಿದ ಮುಚ್ಚಳಿಕೆ ಪತ್ರದಲ್ಲಿ ಹಣವನ್ನು ವಸೂಲು ಮಾಡಬಹುದು. ಆದರೆ ಆ ಕೂಡಲೆ ಅವನು ಮುಚ್ಚಳಿಕೆ ಕೊಟ್ಟ ಉಳಿದ ಅವಧಿಗೆ ಅವನನ್ನು ಜೇಲಿಗೆ ಕಳುಹಿಸಲು ಕ್ರಮೋಪಾಯವೆಂದರೆ ಈ ಅಧ್ಯಾಯದ ಕೆಳಗೆ ಹೊಸ ವ್ಯವಹರಣೆಗಳನ್ನು ತೆಗೆದುಕೊಳ್ಳುವುದು. ದಂಡಾಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಿ ಬರೆದುಕೊಟ್ಟು ಮುಚ್ಚಳಿಕೆಯ ಪತ್ರವನ್ನು ಮುಟ್ಟುಗೋಲು ಹಾಕುವುದು. ಯಾಕೆಂದರೆ ಶಾಂತತಾ ಭಂಗ ಆರೋಪಿಸಲ್ಪಟ್ಟ ಪಕ್ಷಗಾರನಿಗೆ ಸಾಕ್ಷಿದಾರರಿಗೆ ಪಾಟೀ ಸವಾಲು ಮಾಡಲು ಅವಕಾಶ ಕಲ್ಪಿಸಿ ಕೊಡದೆ ಹೀಗೆ ಮುಟ್ಟುಗೋಲು ಹಾಕುವುದು ಸಮರ್ಥನೀಯವಲ್ಲ. ಯಾಕೆಂದರೆ ಅವರ ಸಾಕ್ಷಿಯ ಆಧಾರದ ಮೇಲೆ ಅವನಿಗೆ ಕಾರಣ ತೋರಿಸುವ ನೋಟೀಸು ಕೊಡಲಾಗಿದೆ.

ಈ ಭದ್ರತೆಯು ಯಾವುದೇ ವ್ಯಕ್ತಿಯ ಭದ್ರತೆಯಾಗಿದ್ದು ಜಾಮೀನುಸಹಿತ ಇಲ್ಲವೇ ರಹಿತವಾಗಿರಬಹುದು.

ಯಾವ ವರ್ಗದ ಜಾಮೀನು ಎಂದು ವ್ಯಾಖ್ಯಾನಿಸುವ ಹಕ್ಕು ದಂಡಾಧಿಕಾರಿಗೆ ಇದೆ. ಉದಾ: ಭೂಮಾಲೀಕರು ಮುಂತಾದವರು.

**ಕಲಮು ೧೨೨**

ಯಾವುದೇ ಜಾಮೀನನ್ನು ದಂಡಾಧಿಕಾರಿಯು ಸ್ವೀಕರಿಸಲು ನಿರಾಕರಿಸಬಹುದು, ಇಲ್ಲವೇ ಆ ಮೊದಲು ಅವನೇ ಸ್ವೀಕರಿಸಿದ ಜಾಮೀನನ್ನು ತಿರಸ್ಕರಿಸಬಹುದು, ಇಲ್ಲವೇ ಆತನ ಪೂರ್ವಜರದನ್ನು ಸ್ವೀಕರಿಸಲು ನಿರಾಕರಿಸಬಹುದು. ಈ ಜಾಮೀನಿನ ಉದ್ದೇಶಕ್ಕಾಗಿ ಅಂತಹ ಜಾಮೀನು ಅಯೋಗ್ಯವಾಗಿರುತ್ತದೆಂಬ ಕಾರಣದ ಮೇಲೆ ನಿರಾಕರಿಸಬಹುದು.

ಯೋಗ್ಯವಾಗಿದೆಯೆಂಬುದರ ಬಗೆಗೆ ವಿಚಾರಣೆ ಮಾಡಬೇಕು:

ಯೋಗ್ಯವಾಗಿದೆಯೆಂಬುದರ ಬಗ್ಗೆ ಪರೀಕ್ಷೆಯೆಂದರೆ ಜಾಮೀನುದಾರನು, ಯಾವನಿಗೆ ಜಾಮೀನು ಆಗಿ ಜಾಮೀನು ಬರೆದು ಕೊಟ್ಟಿರುವನೋ ಅಂಥವನ ಮೇಲೆ ಸೂಕ್ತ ನಿಯಂತ್ರಣವನ್ನು ಸಾಧಿಸಬಲ್ಲನೆ ಎಂಬುದಾಗಿದೆ. ಕೇವಲ ಆರ್ಥಿಕ ಅರ್ಹತೆಯ ಪರೀಕ್ಷೆಯಲ್ಲಿ ಜಾಮೀನನ್ನು ಪಡೆಯುವ ಅವಶ್ಯಕತೆಯು ಮುಚ್ಚಳಿಕೆಯನ್ನು ಮುಟ್ಟುಗೋಲು ಹಾಕಿ ಆಳುವವರಿಗೆ ಹಣ ಪಡೆಯುವುದಲ್ಲ, ಬದಲಾಗಿ ಆರೋಪಿಯು ಉತ್ತಮ ನಡತೆಯವನೆಂದು ಖಚಿತಗೊಳಿಸುವುದಾಗಿದೆ.

ಜಾಮೀನುದಾರನು ದೂರ ವಾಸವಿದ್ದರೆ ಅವನು ಸೂಕ್ತನಲ್ಲ.

ಮುಂಬೈ ಉಚ್ಚ ನ್ಯಾಯಾಲಯದ ಪ್ರಕಾರ ಅವನು ಧನಾನುಕೂಲವುಳ್ಳವನು, ಋಣ ರಹಿತನೂ, ಗೌರವಾನ್ವಿತನೂ ಆಗಿದ್ದರೆ ಸಾಕೆಂದು ಹೇಳುತ್ತದೆ.

*೨೨ ಬಾಂಬೆ ಎಲ್.ಆರ್. ೧೯೦.*

ಆರೋಪಿಯನ್ನು ನಿಯಂತ್ರಿಸುವ ಅರ್ಹತೆಯುಳ್ಳವ ಎಂಬುದು ಅಪೇಕ್ಷಣೀಯವಾದ ಕರಾರು ಅಲ್ಲ.

**ಕಲಮು ೧೨೬**

ಜಾಮೀನುದಾರನ ಹೊಣೆಯು ಮುಚ್ಚಳಿಕೆಯ ಉಲ್ಲಂಘನೆಯ ಮೂಲಕ ಮತ್ತು ಉಲ್ಲಂಘನೆಯು ಆರೋಪದಂತೆ ಶಿಕ್ಷೆಯಾಗುವುದರ ಮೂಲಕ ಉದ್ಭವಿಸುತ್ತದೆ.

ಉತ್ತಮ ನಡತೆ ಮತ್ತು ಶಾಂತತೆ ಇವೆರಡೂ ಸಾಮಾನ್ಯ ಪದಗಳು, ಮತ್ತು ಅನೇಕ ಅಪರಾಧಗಳನ್ನು ಒಳಗೊಳ್ಳುತ್ತವೆ. ಹೀಗಾಗಿ ಆರೋಪಿ (ಮುಖ್ಯಸ್ಥ) ಮಾಡಿರುವನೆಂದು ಊಹಿಸಬಹುದಾದ ಪ್ರತಿಯೊಂದು ಅಪರಾಧಕ್ಕೆ ಜಾಮೀನುದಾರನನ್ನು ಹೊಣೆಗಾರನನ್ನಾಗಿ ಮಾಡುವುದು ಯೋಗ್ಯವಲ್ಲ.

ಯಾವ ಸಂದರ್ಭಗಳಲ್ಲಿ ಉತ್ತಮ ನಡತೆಯನ್ನು ಸೂಚಿಸುತ್ತವೆ ಎಂಬುದು ಯಾವ ಸಂದರ್ಭದಲ್ಲಿ ಜಾಮೀನನ್ನು ಕೇಳಲಾಯಿತೆಂಬುದನ್ನು ಅವಲಂಬಿಸುತ್ತದೆ.

## ಪ್ರಕ್ರಿಯೆಯು

**ಕಲಮು ೧೧೨**

ಯಾವುದೇ ವ್ಯಕ್ತಿಯು ಇಂತಹ ಕಲಮಿನ ಅನ್ವಯ ಕಾರಣ ತೋರಿಸುವ ನೋಟೀಸು ಕೊಡುವ ಅವಶ್ಯಕತೆ ಇದೆಯೆಂದು ದಂಡಾಧಿಕಾರಿಗೆ ಅನಿಸಿದರೆ ಅವನು ಲಿಖಿತವಾಗಿ ಒಂದು ಆದೇಶವನ್ನು ಹೊರಡಿಸಿ

ಅದರಲ್ಲಿ ದೊರೆತ ಮಾಹಿತಿಯ ಸಾರಾಂಶವನ್ನು ಆದೇಶದಲ್ಲಿ ವಿವರಿಸಬೇಕು. ಎಷ್ಟು ಮೊತ್ತಕ್ಕೆ ಮುಚ್ಚಳಿಕೆ ಬರೆದುಕೊಡಬೇಕು, ಅದು ಎಷ್ಟು ಅವಧಿಯವರೆಗೆ ಜಾರಿಯಲ್ಲಿರುತ್ತದೆ, ಎಷ್ಟು ಜನರು ಮತ್ತು ಜಾಮೀನುದಾರರ ಸಂಖ್ಯೆ, ವರ್ಗ ಮತ್ತು ಚಾರಿತ್ರ್ಯ (ಯಾವುದಾದರೂ ಇದ್ದರೆ) ಬೇಕಾದವುಗಳು.

**ಕಲಮು ೧೧೩**

ಅಂತಹ ವ್ಯಕ್ತಿಯು ನ್ಯಾಯಾಲಯದಲ್ಲಿ ಹಾಜರಿದ್ದರೆ ಆ ಆದೇಶವನ್ನು ಅವನಿಗೆ ಓದಿ ಹೇಳಬೇಕು ಇಲ್ಲವೆ ಅವನು ಇಚ್ಛಿಸಿದರೆ ಅದರ ಸಾರಾಂಶವನ್ನು ಅವನಿಗೆ ವಿವರಿಸಬೇಕು.

**ಕಲಮು ೧೧೪**

ಅವನು ನ್ಯಾಯಾಲಯದಲ್ಲಿ ಹಾಜರಿಲ್ಲದಿದ್ದರೆ ಅವನಿಗೆ ಸಮನ್ಸು ಹೊರಡಿಸಬೇಕು.

ಕೂಡಲೇ ಶಾಂತಿಭಂಗವಾಗುವುದೆಂಬ ಭಯ, ಹೆದರಿಕೆ ಇದ್ದರೆ ವಾರಂಟನ್ನು ಹೊರಡಿಸಬಹುದು.

**ಕಲಮು ೧೧೫**

ಆ ಸಮನ್ಸಿನೊಂದಿಗೆ ಆದೇಶದ ಒಂದು ಪ್ರತಿಯೊಂದನ್ನು ಲಗತ್ತಿಸತಕ್ಕದ್ದು.

**ಕಲಮು ೧೧೬**

ವೈಯಕ್ತಿಕ ಹಾಜರಿಯಿಂದ ವಿನಾಯಿತಿಗೊಳಿಸುವ ಅಧಿಕಾರವು.

**ಕಲಮು ೧೧೭**

***ಸುದ್ದಿ ಮಾಹಿತಿಯ ಸತ್ಯತೆಯನ್ನು ಕುರಿತು ತನಿಖೆ***

ಆ ವ್ಯಕ್ತಿಯು ನ್ಯಾಯಾಲಯದಲ್ಲಿ ಹಾಜರಿದ್ದಲ್ಲಿ ದಂಡಾಧಿಕಾರಿಯು ಕ್ರಮ ಕೈಗೊಂಡ ಸತ್ಯಾಸತ್ಯತೆಯನ್ನು ಕುರಿತು ತನಿಖೆಯನ್ನು ಮಾಡತಕ್ಕದ್ದು ಮತ್ತು ಅವಶ್ಯ ಕಂಡುಬಂದಲ್ಲಿ ಹೆಚ್ಚಿನ ಸಾಕ್ಷ್ಯವನ್ನು ಪಡೆಯತಕ್ಕದ್ದು. ಕ್ರಮ ಕೈಗೊಂಡರೆ ಅದು ಸಮನ್ಸ್ ಪ್ರಕರಣದ ವಿಧಾನದಲ್ಲಿರಬೇಕು.

ಕ್ರಮ ಕೈಕೊಂಡದ್ದು ಕಲಮು ೧೦೮, ೧೦೯ ಮತ್ತು ೧೧೦ರ ಕೆಳಗೆ ಇದ್ದರೆ ಆಗ ದೋಷಾರೋಪಣೆಯನ್ನು ಹೊರತುಪಡಿಸಿ ವಾರಂಟು ಪ್ರಕರಣದ ಪ್ರಕ್ರಿಯೆಯನ್ನು ಅನುಸರಿಸಬೇಕು.

ವಿಚಾರಣೆಯ ಕಾಲಕ್ಕೆ ದಂಡಾಧಿಕಾರಿಗೆ ಲಿಖಿತ ಕಾರಣಗಳ ಮೂಲಕ ತಕ್ಷಣದ ಕ್ರಮವು ಅವಶ್ಯವೆಂದು ಕಂಡುಬಂದಲ್ಲಿ ಆ ವ್ಯಕ್ತಿಗೆ ವಿಚಾರಣೆಯು ಮುಗಿಯುವವರೆಗೆ ಸರಿಯಾದ ನಡವಳಿಕೆಯ ಮುಚ್ಚಳಿಕೆಯನ್ನು ನೀಡಲು ಆದೇಶಿಸಬಹುದು.

**ಕಲಮು ೧೧೮**

ಇಂತಹ ವಿಚಾರಣೆಯ ಮೇಲಿಂದ ಜಾಮೀನು ತೆಗೆದುಕೊಳ್ಳುವುದು ಅವಶ್ಯವಿದೆಯೆಂದು ಸಿದ್ಧವಾದರೆ, ದಂಡಾಧಿಕಾರಿಯು ಆ ಪ್ರಕಾರ ಒಂದು ಆದೇಶ ಹೊರಡಿಸತಕ್ಕದ್ದು.

ಪರಂತು,

೧. ಅವನ ಮೇಲೆ ಜಾರಿ ಮಾಡಿದ ಆ ಆದೇಶಕ್ಕಿಂತ ಆ ಆದೇಶವು ಬೇರೆಯಾಗಿರತಕ್ಕದ್ದಲ್ಲ.
೨. ಪ್ರತಿಯೊಂದು ಜಾಮೀನು ಪತ್ರದಲ್ಲಿ ಕಾಣಿಸಿದ ಹಣವು ಅಧಿಕವೆಂದೆನ್ನಿಸುವಂತಿರಬಾರದು.
೩. ಜಾಮೀನು ಕೊಡಬೇಕಾದ ವ್ಯಕ್ತಿಯು ಅಪ್ರಾಪ್ತನಾಗಿದ್ದರೆ, ಜಾಮೀನುದಾರರು ಆ ಮುಚ್ಚಳಿಕೆಯನ್ನು ಜಾಮೀನುದಾರರು ಮಾತ್ರ ಬರೆದುಕೊಡಬೇಕು.

**ಕಲಮು ೧೧೯**

ಶಾಂತಿಯನ್ನು ಕಾಪಾಡಲು ಇಲ್ಲವೆ ಉತ್ತಮ ನಡತೆಯ ಜಾಮೀನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಸಿದ್ಧವಾದರೆ ಅವನು ಅಭಿರಕ್ಷಣೆಯಲ್ಲಿ ಅವನನ್ನು ಬಿಡುಗಡೆ ಮಾಡಬೇಕು. ಇಲ್ಲವೆ ಆ ಬಗ್ಗೆ ಆರೋಪದ ಮೇಲೆ ಒಂದು ನಮೂನೆಯಲ್ಲಿ ನಮೂದು ಮಾಡಿ ಆರೋಪಿಯನ್ನು ವಿಮೋಚನೆ ಮಾಡಬೇಕು.

***ಆ ವ್ಯಕ್ತಿಯು ಆರೋಪಿಯ ವಿರುದ್ಧ ಮುಂದುವರೆಯಬಹುದೇ?***

ಈ ಪ್ರಶ್ನೆಯ ಬಗ್ಗೆ ಭಿನ್ನ ಅಭಿಪ್ರಾಯಗಳಿವೆ. ಕೆಲವು ಪ್ರಕರಣಗಳಲ್ಲಿ ಅವನು ಆರೋಪಿಯೆಂದು ಹೇಳಲಾಗಿದೆ. ಉಳಿದ ಪ್ರಕರಣಗಳಲ್ಲಿ ಅವನು ಆರೋಪಿಯಲ್ಲವೆಂದು ಹೇಳಲಾಗಿದೆ.

*ಬಾಂಬೆ ಲಾ.ರಿ. ೨೭*

ಕಲಂಗಳು ಸ್ವಯಂ ಸ್ಪಷ್ಟವಾಗಿವೆ.

ಉದ್ದೇಶಪೂರ್ವಕವಾಗಿ ಇಂತಹ ಪದಗಳ ಉಪಯೋಗ ಬಳಕೆಯಿಂದ ಆ ವ್ಯಕ್ತಿ ಅಂತಹ ವ್ಯಕ್ತಿಗಳು ಮುಂತಾಗಿ ಮತ್ತು ಅಭ್ಯಾಸಪೂರ್ವಕವಾಗಿ ಆರೋಪಿ ಎಂಬ ಪದ ಉಪಯೋಗಿಸುವುದನ್ನು ಬಿಡುತ್ತಾರೆ. ಯಾರ ವಿರುದ್ಧ ಅದನ್ನು ಮಾಡಲಾಗಿದೆಯೋ ಅವನಿಗೆ ಅದನ್ನು ತಿಳಿಸುತ್ತಾರೆ. ಆ ವ್ಯಕ್ತಿಯು ಅದಕ್ಕೆ ಕಾರಣವನ್ನು ತೋರಿಸಲು ಕೇಳಲಾಗುವುದು. ಇದು ಹೀಗೆ ಇರುವುದರಿಂದ ಅವನಿಂದ ಪ್ರಮಾಣ ಮಾಡಿಸಬಹುದು ಮತ್ತು ಅವನ ಸಾಕ್ಷಿ ಮಾಡಿಸಬಹುದು ಹಾಗೂ ಪಾಟೀ ಸವಾಲು ಸಹ ಮಾಡಬಹುದು.

**ಕಲಮು ೧೨೦**

ಆದೇಶ ಮಾಡುವ ಕಾಲಕ್ಕೆ ಒಬ್ಬನು ಸೆರೆಮನೆ ವಾಸ ಅನುಭವಿಸುತ್ತಿದ್ದರೆ, ಆ ಜಾಮೀನಿನ ಅವಧಿಯು ಅವನ ಸೆರೆಮನೆ ವಾಸದ ಶಿಕ್ಷೆಯು ಮುಗಿದ ನಂತರ ಪ್ರಾರಂಭವಾಗುತ್ತದೆ.

ಉಳಿದ ಪ್ರಕರಣಗಳಲ್ಲಿ ದಂಡಾಧಿಕಾರಿಯು ಯೋಗ್ಯ ಕಾರಣಗಳಿಗಾಗಿ ಬೇರೊಂದು ದಿನವನ್ನು ಗೊತ್ತುಪಡಿಸಿದ ಹೊರತು, ಆ ಆದೇಶ ಮಾಡಿದ ದಿನಾಂಕದಿಂದಲೇ ಅದು ಪ್ರಾರಂಭವಾಗುತ್ತದೆ.

**ಕಲಮು ೧೨೩**

ಜಾಮೀನು ಕೊಡಲು ತಪ್ಪಿದರೆ, ಅವನು ಈಗಾಗಲೇ ಸೆರೆಮನೆ ವಾಸ ಅನುಭವಿಸುತ್ತಿದ್ದರೆ, ಅವನನ್ನು ಅಂಥ ಅವಧಿಯು ಮುಗಿಯುವವರೆಗೆ ಇಲ್ಲವೇ ಅವನು ಜಾಮೀನನ್ನು ಕೋರ್ಟಿಗೆ ಕೊಡುವ ಅವಧಿಯವರೆಗೆ ಯಾವ ದಂಡಾಧಿಕಾರಿಯು ಅಂಥ ಆದೇಶ ಮಾಡಿದನೋ ಅಲ್ಲಿಯವರೆಗೆ ಅವನನ್ನು ಸೆರೆಮನೆಯಲ್ಲಿಯೇ ತಡೆಹಿಡಿದು ಇಡಬೇಕು.

೨. ಬರೆದುಕೊಟ್ಟ ಮುಚ್ಚಳಿಕೆಯ ಅವಧಿಯು ಒಂದು ವರುಷಕ್ಕೆ ಮೀರಿದ್ದರೆ ಮತ್ತು ಜಾಮೀನು

ಕೊಡಲು ತಪ್ಪಿದರೆ ಆಗ ದಂಡಾಧಿಕಾರಿಯು ಅವನನ್ನು ಸೆರೆಮನೆಯಲ್ಲಿ ಸತ್ರ ನ್ಯಾಯಾಧೀಶನ ಆದೇಶ ವಾಗುವರೆಗೆ ಇಲ್ಲವೇ ಅವರು ಯಾವ ಉಚ್ಚ ನ್ಯಾಯಾಲಯಕ್ಕೆ ಆ ಪ್ರಕರಣವನ್ನು ಒಪ್ಪಿಸುವರೋ ಅಂಥ ನ್ಯಾಯಾಲಯದ ಆದೇಶ ಬರುವವರೆಗೆ ಅವನನ್ನು ಸೆರೆಮನೆಯಲ್ಲಿ ತಡೆಹಿಡಿದಿಡಬೇಕೆಂದು ದಂಡಾಧಿಕಾರಿಯು ಆದೇಶ ಮಾಡಬೇಕು. ಸತ್ರ ನ್ಯಾಯಾಲಯವಾಗಲಿ, ಇಲ್ಲವೇ ಉಚ್ಚ ನ್ಯಾಯಾಲಯವಾಗಲಿ ಮೂರು ವರ್ಷ ಸೆರೆಮನೆಯ ವಾಸ ಮೀರದಂತೆ ಯಾವುದೇ ಆದೇಶ ಮಾಡಬಹುದು.

ಒಬ್ಬನ ಪ್ರಕರಣ ಉಲ್ಲೇಖಿಸಿದರೆ, ಉಳಿದವರು ಜಂಟಿಯಾಗಿ ಅಧಿವಿಚಾರಣೆ ಮಾಡಿದ್ದನ್ನು ಸಹ ಉಲ್ಲೇಖಿಸಬೇಕು. ಆದರೆ ಅವರ ಅವಧಿಯನ್ನು ಹೆಚ್ಚಿಸತಕ್ಕದ್ದಲ್ಲ.

**ಸೆರೆಮನೆವಾಸ**

ಶಾಂತಿಯನ್ನು ಕಾಪಾಡಲು, ಜಾಮೀನು ಕೊಡಲು ತಪ್ಪಿದರೆ ಸಾದಾ ಸೆರೆವಾಸ.

ಕಲಮು ೧೦೮ ಮತ್ತು ೧೦೯ ಮತ್ತು ಕಲಮು ೧೧೦ರ ಕೆಳಗೆ ಜಾಮೀನು ಕೊಡಲು ತಪ್ಪಿದರೆ ಕಠಿಣ ಸೆರೆವಾಸ.

**ಕಲಮು ೧೨೪**

೧. ಜಿಲ್ಲಾ ದಂಡಾಧಿಕಾರಿಯು ಇಲ್ಲವೇ ಪ್ರೆಸಿಡೆನ್ಸಿ ದಂಡಾಧಿಕಾರಿಯು ಯಾವನೊಬ್ಬ ವ್ಯಕ್ತಿ ಜಾಮೀನು ಕೊಡಲು ತಪ್ಪಿದರೆ ಮತ್ತು ಆ ವ್ಯಕ್ತಿಯನ್ನು ಸಮಾಜಕ್ಕೆ ಹಾಗೂ ವ್ಯಕ್ತಿಗೆ ಅಪಾಯಕಾರಕವಲ್ಲವೆಂದು ಅಭಿಪ್ರಾಯ ಪಡೆದು ಅಂಥವನ್ನು ಬಿಡುಗಡೆ ಮಾಡಬೇಕು.

೨. ಜಿಲ್ಲಾ ದಂಡಾಧಿಕಾರಿಯು, ಇಲ್ಲವೇ ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿ ಇವರು ಯಾವುದೇ ವ್ಯಕ್ತಿಗೆ ಜಾಮೀನಿನ ಮೊತ್ತವನ್ನು ಕಡಿಮೆ ಮಾಡಬಹುದು, ಇಲ್ಲವೇ ಜಾಮೀನುದಾರರ ಸಂಖ್ಯೆಯನ್ನು, ಇಲ್ಲವೆ ಕೊಡಬೇಕಾದ ಜಾಮೀನಿನ ಅವಧಿಯನ್ನು ಕಡಿಮೆ ಮಾಡಬಹುದು.

೩. ಒಬ್ಬ ವ್ಯಕ್ತಿಯನ್ನು ಬಿಡುಗಡೆಯ ಕರಾರಿನ ಮೇಲೆ ಇಲ್ಲವೆ ಯಾವುದೇ ಕರಾರು ಇಲ್ಲದೆ ಬಿಡಬಹುದು.

ಕರಾರಿನ ಮೇಲೆ ಇದು ಅವಧಿಯು ಮುಗಿದ ನಂತರ ಮುಗಿಯುತ್ತದೆ. ವಿಮೋಚನೆಯ ಆದೇಶ ಕರಾರಿನ ಮೇಲೆ ವಿಮೋಚನೆಯ ಆದೇಶವನ್ನು ಕರಾರು ಪೂರೈಸದಿದ್ದರೆ, ರದ್ದುಪಡಿಸಬಹುದು.

ಕರಾರಿನ ಮೇಲೆ ವಿಮೋಚನೆಯ ಆದೇಶವನ್ನು ರದ್ದುಪಡಿಸಿದರೆ, ಅಂಥ ವ್ಯಕ್ತಿಯನ್ನು ಯಾವುದೇ ಪೊಲೀಸ್ ಅಧಿಕಾರಿಯು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು. ಮತ್ತು ಜಿಲ್ಲಾ ದಂಡಾಧಿಕಾರಿ ಇಲ್ಲವೆ ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿಯ ಮುಂದೆ ಹಾಜರು ಮಾಡಬಹುದು.

ಮೂಲ ಆದೇಶದ ಕರಾರುಗಳ ಪ್ರಕಾರ ಜಾಮೀನು ಕೊಡದಿದ್ದರೆ ಆಗ ಜಿಲ್ಲಾ ದಂಡಾಧಿಕಾರಿ ಇಲ್ಲವೇ ಮುಖ್ಯ ಪ್ರೆಸಿಡೆನ್ಸಿ ದಂಡಾಧಿಕಾರಿಯು ಅಂಥ ವ್ಯಕ್ತಿಯನ್ನು ರಿಮಾಂಡ್ (ಬಂಧನಕ್ಕೊಳಪಡಿಸ) ಮಾಡಬಹುದು.

ಅಂಥ ವ್ಯಕ್ತಿಯನ್ನು ಉಳಿದ ಅವಧಿಗೆ ಸೆರೆವಾಸ ಅನುಭವಿಸಲು ಕಳುಹಿಸಬಹುದು. ಆಮೇಲೆ ಅವನು ಮೂಲ ಆದೇಶದ ಕರಾರನ್ನು ಜಾಮೀನು ಕೊಟ್ಟರೆ ಅವನನ್ನು ಬಿಡುಗಡೆ ಮಾಡಬಹುದು.

## ಕೆಲವು ಬಾಧ್ಯತೆಗಳನ್ನು ಜಾರಿಗೊಳಿಸುವ ವ್ಯವಹರಣೆಗಳು
## (ಪುಟಗಳನ್ನು ಖಾಲಿ ಬಿಟ್ಟಿದೆ)

*ದೇಶಭ್ರಷ್ಟ ಅಪರಾಧಿಗಳ ಅಧಿನಿಯಮ ೧೮೮೧ ಇದರ ಕಲಮು ೯.*

ದೇಶಭ್ರಷ್ಟ ಅಪರಾಧಿಯು ಒಂದು ಡೊಮಿನಿಯನ್ ದೇಶದಿಂದ ಬಂದು ಶರಣಾಗತನಾದಾಗ ಅವನು ದೇಶಭ್ರಷ್ಟ ಅಪರಾಧಗಳನ್ನು ಮಾಡಿರುವುದನ್ನು ಇಲ್ಲಿ ನಮೂದಿಸಲಾಗಿದೆ.

*ಭಾರತೀಯ ಸಾಕ್ಷ್ಯ ಅಧಿನಿಯಮ ಕಲಮು ೧೯ ಅ.*

ಇದು ಸಹ ಒಂದು ಡೊಮಿನಿಯನ್ ದೇಶದಿಂದ ಬಂದವನು ಯಾವಾಗ ಶರಣಾಗತನಾಗ ಬೇಕೆಂಬುದನ್ನು ಸಹ ಇಲ್ಲಿ ಕಾಣಿಸಲಾಗಿದೆ.

ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಲ್ಲಿ ವ್ಯವಹರಿಸುವ ಅವನನ್ನು ಪ್ರತ್ಯಾರ್ಪಣೆಯ ಬದಲು ಅವನು ಬ್ರಿಟಿಷ್ ಭಾರತದ ಹೊರಗಡೆ ಮಾಡಿದ ಅಪರಾಧಗಳ ಅಧಿವಿಚಾರಣೆಯನ್ನು ಬ್ರಿಟಿಷ್ ಭಾರತದಲ್ಲಿ ಮಾಡಬಹುದು.

**ಕಲಮು ೧೮೮**

ಉತ್ತರವು 'ಹೌದು' ಇದ್ದರೆ, ಪರಂತು–

೧. ಅವನು ಇಂಗ್ಲೆಂಡ್ ಅರಸನ ಪ್ರಜೆಯಾಗಿದ್ದು ಭಾರತ ದೇಶೀಯವನಾಗಿರಬೇಕು.

೨. ಅವನು ಬ್ರಿಟಿಷರ ಪ್ರಜೆಯಾಗಿದ್ದು ಮತ್ತು ಅವನು ದೇಶೀಯ ಸಂಸ್ಥಾನಗಳಲ್ಲಿ ರಾಜಕುಮಾರ ಇಲ್ಲವೇ ಭಾರತದ ಮುಖ್ಯಸ್ಥನ ಸರಹದ್ದಿನಲ್ಲಿ ಒಂದು ಅಪರಾಧವನ್ನು ಮಾಡಿದವನಾಗಿರಬೇಕು.

೩. ಅವನು ಇಂಗ್ಲೆಂಡಿನ ಅರಸನ ಸೇವಕನಾಗಿದ್ದು (ಅವನು ಬ್ರಿಟಿಷ್ ಪ್ರಜೆಯಾಗಿರಲೀ, ಇಲ್ಲದೆ ಇದ್ದಿರಲಿ) ಮತ್ತು ಅಪರಾಧವನ್ನು ದೇಶಿಯ ರಾಜಕುಮಾರ ಇಲ್ಲವೆ ಭಾರತೀಯ ಮುಖ್ಯಸ್ಥನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಾಡಲಾದ ಅಪರಾಧವಾಗಿರಬೇಕು.

೪. ಅಂಥ ಅಪರಾಧಿಯು ಬ್ರಿಟಿಷ್ ಭಾರತದಲ್ಲಿ ಸಿಕ್ಕವನಾಗಿರಬೇಕು.

**ವಿ.ಸೂ.:** ಕಲಮು ೧೮೮. ಇದು ಪರದೇಶಗಳ ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಾಡಿದ ಅಪರಾಧಗಳ ಅಧಿವಿಚಾರಣೆ ಮಾಡಲು ಅಧಿಕಾರ ವಹಿಸಿಕೊಡುತ್ತದೆ. ಆದರೆ ಸಮುದ್ರ ಮಧ್ಯದಲ್ಲಿ ಮಾಡಿದ ಅಪರಾಧಗಳಿಗಲ್ಲ.

*೧೯ ಬಾಂಬೆ ಎಲ್.ಆರ್.. ೫೨೭*

* * *

*ಯಾವುದರ ಬಗ್ಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿದೆಯೋ ಅದು ಏನಾಗುವುದು?*

ಒಂದು ಅಪರಾಧದ ಸಂಜ್ಞೇಯತೆಯನ್ನು ಒಂದು ನ್ಯಾಯಾಲಯವು ತೆಗೆದುಕೊಳ್ಳುವುದು ಮತ್ತು ಒಬ್ಬ ನಿರ್ದಿಷ್ಟ ವ್ಯಕ್ತಿಯು ಆ ಅಪರಾಧವನ್ನು ಮಾಡಿರುವನೆಂಬ ಸಂಗತಿಯನ್ನಲ್ಲ.

**ಕಾರಣಗಳು:**

(೧) ಒಂದು ನ್ಯಾಯಾಲಯವು ಒಂದು ಅಪರಾಧದ ಯೋಗ್ಯ ಸಂಜ್ಞೇಯವನ್ನು ತೆಗೆದುಕೊಂಡು ಅದರ ವ್ಯವಹರಣೆಗಳನ್ನು ಪ್ರಾರಂಭಿಸಿದಾಗ ನ್ಯಾಯಾಲಯಕ್ಕೆ ಇನ್ನೊಬ್ಬನು ಇಲ್ಲವೆ ಉಳಿದ ಆರೋಪಿತರು ಅಪರಾಧ ಮಾಡಿರುವರೆಂದು ಆ ಸಂಜ್ಞೇಯನು ತೆಗೆದುಕೊಂಡ ನಂತರ ಕಂಡುಬಂದರೆ ಮತ್ತು ಆ ಬಗ್ಗೆ ಸಂಜ್ಞೆ ತೆಗೆದುಕೊಂಡರೆ ಅವನು ಇಲ್ಲವೇ ಅವರು ಸಹ ಆರೋಪಿಗಳಾಗುವರೆಂದು ದಂಡಾಧಿಕಾರಿಗೆ ಅನಿಸಿದರೆ ಆಗ ನ್ಯಾಯಾಲಯವು ಅಂಥವರಿಗೆ ಹೊಸ ಆರೋಪಿಗಳ ವಿರುದ್ಧ ನ್ಯಾಯಾಲಯದ ಪ್ರೊಸೆಸ್–ಆದೇಶಿಕೆ ಹೊರಡಿಸಬಲ್ಲದು. ಮತ್ತು ಇಂಥ ಆರೋಪಿ ಇಲ್ಲವೆ ಆರೋಪಿಗಳ ವಿರುದ್ಧ ಮೂಲದಲ್ಲಿ ಕಾಣಿಸಿದ ಆರೋಪಿಗಳಂತೆ ವ್ಯವಹರಿಸಬಹುದು.

(೨) ನಿಜವಾಗಿ ಒಬ್ಬ ಆರೋಪಿಯು ಸಂಪೂರ್ಣವಾಗಿ ಗೊತ್ತಿಲ್ಲದವನು ಇದ್ದರೂ ಮತ್ತು ಆಮೇಲೆ ಸಾಧ್ಯವಿದ್ದಷ್ಟು ಬೇಗನೆ ಆದೇಶಿಕೆಯನ್ನು ವಿಚಾರಣೆ ಇಲ್ಲವೆ ತನಿಖೆಗಾಗಿ ಹೊರಡಿಸಬಹುದು. ಕೆಲವು ಆರೋಪಿಗಳ ವಿರುದ್ಧ ಅಧಿವಿಚಾರಣೆ ನಡೆಯಿಸಲು ಸಮರ್ಥಿಸುವ ಸಾಕ್ಷಿ ಇದ್ದರೆ ಆದೇಶಿಕೆ ಪ್ರಾರಂಭಿಸ ಬಹುದು.

(೩) ಪುನಃ ದಂಡಾಧಿಕಾರಿಗೆ ಒಂದು ಪ್ರಕರಣವನ್ನು ವರ್ಗಾಯಿಸಲಾಗುತ್ತದೆ. ಆದರೆ ಅದರ ಸಂಜ್ಞೇಯವನ್ನು ತಾನೇ ತೆಗೆದುಕೊಳ್ಳಲು ದಂಡಾಧಿಕಾರಿಗೆ ಅಧಿಕಾರ ಇರುವುದಿಲ್ಲ. ಆದರೂ ಅವನು ಆದೇಶ ಹೊರಡಿಸಬಹುದು. ಆದರೂ ಯಾವ ಆರೋಪಿಗಳ ವಿರುದ್ಧ ಸಾಕ್ಷಿ ಇರುವುದೋ ಆ ಎಲ್ಲ ಆರೋಪಿಗಳ ವಿರುದ್ಧ ವಿಚಾರಣೆಯ ಯಾವುದೇ ಹಂತದಲ್ಲಿ ಬಹುತರವಾಗಿ ಆ ಅಪರಾಧಕ್ಕೆ ಸಂಬಂಧಿಸಿದವರೆಂದು ದಂಡಾಧಿಕಾರಿಗೆ ಕಂಡುಬಂದರೆ ಅವರಿಗೆ ಆದೇಶ ಹೊರಡಿಸಬಹುದು.

**ಸಂಜ್ಞೇಯ ತೆಗೆದುಕೊಳ್ಳುವುದಕ್ಕೆ ನಿಷೇಧ:**

I. ಕಲಮು ೩೩೭–ಮಾಫಿ ಸಾಕ್ಷಿದಾರ.

II. *ಅಪರಾಧಿಕ ನ್ಯಾಯಾಲಯಗಳ ಅಧಿಕಾರಗಳು:* ಈ ವಿಷಯವನ್ನು ಕೆಳಗಿನ ಮೂರು ಶೀರ್ಷಿಕೆಗಳಲ್ಲಿ ವಿಚಾರಿಸಬಹುದು.

(೧) ಒಂದು ಅಪರಾಧದ ಸಂಜ್ಞೇಯವನ್ನು ತೆಗೆದುಕೊಳ್ಳುವ ಅಧಿಕಾರ.

(೨) ಅಪರಾಧಿಕ ಪ್ರಕರಣಗಳಲ್ಲಿ ಮಧ್ಯಂತರ ಆದೇಶಗಳನ್ನು ಮಾಡುವ ಅಧಿಕಾರ.

(೩) ಶಿಕ್ಷೆ ಕೊಡುವ ಅಧಿಕಾರ.

*೧) ಒಂದು ಅಪರಾಧದ ಸಂಜ್ಞೇಯ ತೆಗೆದುಕೊಳ್ಳುವ ಅಧಿಕಾರ*

ಒಂದು ನ್ಯಾಯಾಲಯವು ಒಂದು ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳುವುದು ಕೆಳಗಣ ಸಂಗತಿಗಳನ್ನು ಅವಲಂಬಿಸಿರುತ್ತದೆ.

(ಅ) ನ್ಯಾಯಾಲಯದ ಸ್ಥಾನಮಾನ, ಅಂತಸ್ತು.

(ಬ) ಆರೋಪಿಯ ರಾಷ್ಟ್ರೀಯತೆ.

(ಕ) ಈ ನ್ಯಾಯಾಧೀಶನ ಇಲ್ಲವೇ ದಂಡಾಧಿಕಾರಿಯ ಮುಂದೆ ಆರೋಪಿಗೆ ನ್ಯಾಯವು ಸಿಗಬಹುದೆ ಅನ್ನುವುದರ ಮೇಲೆ ಅವಲಂಬಿಸಿದೆ.

**ಕಲಮು ೬**

**(ಅ) ನ್ಯಾಯಾಲಯದ ಅಂತಸ್ತು: ಸ್ಥಾನಮಾನ**

ದಂಡ ಪ್ರಕ್ರಿಯಾ ಸಂಹಿತೆಯ ಅನ್ವಯ ೫ ವರ್ಗಗಳ ಕ್ರಿಮಿನಲ್ (ಅಪರಾಧಿಕ) ನ್ಯಾಯಾಲಯಗಳು ಬ್ರಿಟಿಷ್ ಭಾರತದಲ್ಲಿ ಇರುತ್ತವೆ.

(೧) ಸತ್ರ ನ್ಯಾಯಾಲಯ.

(೨) ಪ್ರೆಸಿಡೆನ್ಸಿ ದಂಡಾಧಿಕಾರಿ.

(೩) ೧ನೆಯ ವರ್ಗದ ದಂಡಾಧಿಕಾರಿ.

(೪) ೨ನೆಯ ವರ್ಗದ ದಂಡಾಧಿಕಾರಿ.

(೫) ೩ನೆಯ ವರ್ಗದ ದಂಡಾಧಿಕಾರಿ.

ಇವುಗಳಿಗೆ ಉಚ್ಚ ನ್ಯಾಯಾಲಯವನ್ನು ಸೇರಿಸಬೇಕು.

**ಕಲಮು ೨೮**

**೧. ದಂಡ ಸಂಹಿತೆಯಲ್ಲಿಯ ಅಪರಾಧಗಳನ್ನು ಕುರಿತು:**

೧. ಭಾರತದ ದಂಡ ಸಂಹಿತೆಯಲ್ಲಿ ಉಚ್ಚ ನ್ಯಾಯಾಲಯವು ಯಾವುದೇ ಅಪರಾಧದ ಅಧಿವಿಚಾರಣೆಯನ್ನು ನಡೆಸಬಹುದು.

೨. ಭಾರತದ ದಂಡ ಸಂಹಿತೆಯ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ನ್ಯಾಯಾಲಯವು ಮಾಡಬಹುದು.

೩. ಆದರೆ ಉಳಿದ ದಂಡಾಧಿಕಾರಿಯನ್ನು ಕುರಿತು ಅವರಿಗೆ ದಂಡ ಪ್ರಕ್ರಿಯಾ ಸಂಹಿತೆಯ ಎರಡನೆಯ ಪರಿಶಿಷ್ಟದಲ್ಲಿ ೮ನೆಯ ಕಲಂ (ಅಂಕಣದಲ್ಲಿ) ಉಪಬಂಧಿಸಿದಂತೆ ಅವರಿಗೆ ಅಧಿಕಾರ ಕೊಟ್ಟ ಅಪರಾಧಗಳ ಬಗ್ಗೆ ಮಾತ್ರ ಸಂಜ್ಞೇಯವನ್ನು ತೆಗೆದುಕೊಳ್ಳಬಲ್ಲರು.

**ಕಲಮು ೨೯**

**(೨) ಉಳಿದ ಕಾನೂನುಗಳ ಕೆಳಗೆ ಅಪರಾಧಗಳನ್ನು ಕುರಿತು.**

೧. ಆ ಕಾನೂನು ನ್ಯಾಯಾಲಯದ ಹೆಸರನ್ನು ಕಾಣಿಸಿದ್ದರೆ ಉಳಿದ ಯಾವುದೇ ನ್ಯಾಯಾಲಯವು ಆ ಅಪರಾಧಯ ಸಂಜ್ಞೆಯನ್ನು ತೆಗೆದುಕೊಳ್ಳಲಾರವು.

೨. ಆ ಕಾನೂನು ನ್ಯಾಯಾಲಯವು ಅದರ ಅಧಿವಿಚಾರಣೆ ಮಾಡಬಹುದು.

(ಅ) ಉಚ್ಚ ನ್ಯಾಯಾಲಯವು ಅದರ ವಿಚಾರಣೆ ಮಾಡಬಹುದು.

(ಆ) ದಂಡ ಪ್ರಕ್ರಿಯಾ ಸಂಹಿತೆ ೨ನೆಯ ಪರಿಶಿಷ್ಟದಲ್ಲಿ ಬೇರೆ ಕಾನೂನುಗಳಲ್ಲಿಯ ಅಪರಾಧಗಳು ಎಂಬ ಶೀರ್ಷಿಕೆಯಲ್ಲಿ ೮ನೆಯ ಕಾಲಂನಲ್ಲಿ ಕಾಣಿಸಿದ ನ್ಯಾಯಾಲಯವು ಅಧಿವಿಚಾರಣೆಯನ್ನು ಮಾಡಬಲ್ಲದು.

**ಕಲಮು ೨೯ ಅ**

**(ಬ) ಆರೋಪಿಯ ರಾಷ್ಟ್ರೀಯತೆ:**

ಆರೋಪಿಯು ಯುರೋಪಿಯನ್ ಬ್ರಿಟಿಷ್ ಪ್ರಜೆ ಆಗಿದ್ದರೆ ೫೦ ರೂಪಾಯಿಗಳ ಹೆಚ್ಚಿನ ದಂಡ ವಿಧಿಸಬಹುದಾದ ಅಪರಾಧಗಳನ್ನು ೨ನೆಯ ವರ್ಗದ ಇಲ್ಲವೆ ೩ನೆಯ ವರ್ಗದ ದಂಡಾಧಿಕಾರಿಯು ಅವುಗಳ ಅಧಿವಿಚಾರಣೆ ನಡೆಯಿಸತಕ್ಕದ್ದಲ್ಲ.

ಅಪರಾಧವು ಹೀಗಿದೆಯೆಲ್ಲ ಅದಕ್ಕೆ ಕಾರಾಗೃಹ ಶಿಕ್ಷೆ ಇರುವುದಿಲ್ಲ. ಅದಕ್ಕೆ ಶಿಕ್ಷೆಯು ಕೇವಲ ದಂಡವಾಗಿರುತ್ತದೆ ಮತ್ತು ಆ ದಂಡದ ಮೊತ್ತವು ೫೦ ರೂಪಾಯಿಗಳಿಗಿಂತ ಕಡಿಮೆ ಇರುತ್ತದೆ. ಆಗ ಅವನನ್ನು ೨ನೆಯ ವರ್ಗದ ಮತ್ತು ೩ನೆಯ ವರ್ಗದ ದಂಡಾಧಿಕಾರಿಯು ಅಧಿವಿಚಾರಣೆ ಮಾಡಬಹುದು.

ಅದು ಕಾರಾಗೃಹ ವಾಸದಿಂದ ಇಲ್ಲವೆ ದಂಡ ೫೦ ರೂ. ಮೀರಿ ಶಿಕ್ಷಿಸುವಂತಹದು ಇದ್ದರೆ ಅವರು ಅದರ ಅಧಿವಿಚಾರಣೆಯನ್ನು ಮಾಡಲಾರರು.

**ವಿ.ಸೂ.:** ಯುರೋಪಿಯನ್ ಬ್ರಿಟಿಷ್ ಪ್ರಜೆಯು ತನಗೆ ಕೊಟ್ಟ ವಿಶೇಷ ಹಕ್ಕನ್ನು ಅಧಿಕಾರಾತೀತ ಮತ್ತು ಅಧಿಕಾರದೊಳಗೆ ಎಂಬ ತತ್ವದ ಮೇಲೆ ಕ್ಲೇಮು ಮಾಡಿದರೆ (ಕೇಳಿದರೆ) ಹಾಗೆ ಮಾಡಬಹುದು.

೧೯೨೩ಕ್ಕೆ ಮುಂಚೆ ಈ ವ್ಯಾಖ್ಯೆಯು ಕೆಳಗಿನಂತೆ ಇದ್ದಿತು.

> ಯುರೋಪಿಯನ್ ಬ್ರಿಟಿಷ್ ಪ್ರಜೆಯು ಅಂದರೆ (i) ಇಂಗ್ಲೆಂಡ್‌ನ ಅರಸನ ಪ್ರಜೆಯು ದೇಶೀಕರಣದಿಂದ ಹುಟ್ಟಿದವನು ಇಲ್ಲವೆ ಯು.ಕೆ.ದಲ್ಲಿ ಆದಿವಾಸಿಯಾಗಿದ್ದವ ಇಲ್ಲವೆ ಯಾವುದೇ ಯುರೋಪಿಯನ್, ಅಮೆರಿಕೆಯ ಇಲ್ಲವೆ ಆಸ್ಟ್ರೇಲಿಯಾದ ವಸಾಹತುಗಳಲ್ಲಿ, ಇಲ್ಲವೆ ಇಂಗ್ಲೆಂಡ್‌ದ ಅರಸನ ಅಧೀನದಲ್ಲಿರುವ ವಸಾಹತುಗಳಲ್ಲಿ, ಇಲ್ಲವೆ ನ್ಯೂಜಿಲ್ಯಾಂಡ್‌ದ ಯಾವುದೇ ವಸಾಹತುಗಳಲ್ಲಿ, ಇಲ್ಲವೆ ಕೇಪ್ ಆಫ್ ಗುಡ್ ಹೋಪ್‌ದ ಯಾವುದೇ ವಸಾಹತುವಿನಲ್ಲಿ, ಇಲ್ಲವೆ ನೇಟಾಳ್ (ii) ಯಾವುದೇ ಮನುಷ್ಯನ ಮಗು, ಇಲ್ಲವೆ ಮೊಮ್ಮಗ ಕಾನೂನುಬದ್ಧ ವಂಶಸ್ಥನಾಗಿರಬೇಕು.

ಮೂಲ ವಾಸಸ್ಥಳ– ಎಲ್ಲಿ ಒಬ್ಬನಿಗೆ ಅವನ ಮನೆ ಇದೆಯೋ ಹಾಗೂ ಅವನು ಅದಕ್ಕೆ ತಿರುಗಿ ಬರುತ್ತಾನೆಯೋ ಅಲ್ಲಿ.

ಮೂಲ ವಾಸಸ್ಥಳಗಳು ಮೂರು ರೀತಿಯವಾಗಿರುತ್ತವೆ:

(೧) ಜನ್ಮವಾದುದರಿಂದ

(೨) ಆಯ್ಕೆ– (ಇಚ್ಛೆಯ) ಮೂಲಕ.

(೩)ಕಾನೂನಿನ ಅನ್ವಯ (ಉದಾ: ಹೆಂಡತಿಯು ಗಂಡನ ಮೂಲ ವಾಸಸ್ಥಳವನ್ನು ಪಡೆಯುತ್ತಾಳೆ.)

**ಕಲಮು ೧೦೫**

ಇದು ನ್ಯಾಯದಾನಕ್ಕೆ ಸಂಬಂಧಿಸಿದ ಅಪರಾಧಗಳನ್ನು ಕುರಿತು ವ್ಯವಹರಿಸುತ್ತದೆ.

**ಸಾಮಾನ್ಯ ನಿಯಮ:**

ಒಬ್ಬ ದಂಡಾಧಿಕಾರಿಯು ತನ್ನ ಕೋರ್ಟಿನ ನಿಂದನೆಗಾಗಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಅವನಿಗೆ ಶಿಕ್ಷಿಸಲು ಬರುವುದಿಲ್ಲ. ಅದನ್ನು ಬೇರೊಬ್ಬ ದಂಡಾಧಿಕಾರಿಗೆ ಒಪ್ಪಿಸುವುದು ಅವಶ್ಯವಿದೆ. ಯಾವ ಕೋರ್ಟಿನ

ಮುಂದೆ ಆ ಅಪರಾಧವು ಘಟಿಸಿದ ಮತ್ತು ಕಲಮು ೧೭೬ರ ಅನ್ವಯ ಪ್ರಾರಂಭಿಕ ವಿಚಾರಣೆಯನ್ನು ಯಾವ ನ್ಯಾಯಾಲಯವು ಮಾಡಿತೋ ಆ ನ್ಯಾಯಾಲಯವು ಆ ಪ್ರಕರಣದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

**ಕಲಮು ೪೮೦**

ಒಂದು ನ್ಯಾಯಾಲಯವು ಅದರ ಸಮಕ್ಷಮದಲ್ಲಿ ನಡೆದ ಈ ಅಪರಾಧಗಳಿದ್ದರೆ ಅದು ಪ್ರಕರಣದ ಅಧಿವಿಚಾರಣೆಯನ್ನು ನಡೆಯಿಸಬಹುದು.

೧೭೫. (ಒಬ್ಬ ಸಾರ್ವಜನಿಕ ಅಧಿಕಾರಿಗೆ ಒಂದು ದಾಖಲೆಯನ್ನು ಬದ್ಧವಾಗಿ ಹಾಜರುಪಡಿಸ ಬೇಕಾದವನು ಹಾಜರುಮಾಡಲು ತಪ್ಪಿದರೆ.)

೧೭೮. (ಕಾನೂನುಬದ್ಧ ಪ್ರಮಾಣ ಮಾಡಲು ಇಲ್ಲವೆ ಪ್ರತಿಜ್ಞೆ ಮಾಡಲು ನಿರಾಕರಿಸಿದರೆ.)

೧೭೯. ಒಬ್ಬ ಸಾರ್ವಜನಿಕ ಅಧಿಕಾರಿಯು ಕಲಮು ೧೮೦ರ ಅನ್ವಯ ಪ್ರಶ್ನಿಸಲು ಅಧಿಕಾರ ಕೊಟ್ಟವನು ಪ್ರಶ್ನಿಸಿದಾಗ ಅವುಗಳಿಗೆ ಉತ್ತರ ಕೊಡಲು ನಿರಾಕರಿಸಿದರೆ.

೧೮೦. –ಹೇಳಿಕೆಗೆ ಸಹಿ ಮಾಡಲು ನಿರಾಕರಿಸುವುದು.

೨೨೮. ಉದ್ದೇಶಪೂರ್ವಕ ಒಬ್ಬನನ್ನು ಅಪಮಾನಗೊಳಿಸುವುದು ಇಲ್ಲವೆ ಒಬ್ಬ ಸಾರ್ವಜನಿಕ ನೌಕರನು ನ್ಯಾಯಾಧೀಶನ ನಾತೆಯಿಂದ ಕಾರ್ಯ ಮಾಡುವಾಗ ಅಡ್ಡಿ ಆತಂಕ ಮಾಡಿದರೆ.)

**ಕಲಮು ೪೮೫**

೭ ದಿನಗಳ ಕಾರಾಗೃಹ ವಾಸ ಇಲ್ಲವೆ ಒಪ್ಪಿಸುವಿಕೆಯು ಒಬ್ಬ ಸಾಕ್ಷಿದಾರನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದರೆ, ಇಲ್ಲವೆ ನ್ಯಾಯಾಲಯ ಆದೇಶದ ದಸ್ತಾವೇಜನ್ನು ಹಾಜರು ಮಾಡಲು ತಪ್ಪಿದರೆ ನೀಡಬಹುದಾಗಿದೆ. ಒಬ್ಬ ಯುರೋಪಿಯನ್ ಬ್ರಿಟಿಷರ ಪ್ರಜೆ ಈ ಮೊದಲು ಅನುಭವಿಸಿದ ವಿಶೇಷ ಸೌಲಭ್ಯ ಮತ್ತು ಅವನು ಈಗ ಅನುಭವಿಸುತ್ತಿರುವ ವಿಶೇಷ ಸವಲತ್ತುಗಳಿಗೆ ವುಡ್‌ಡ್ರಾಫ್ ಬರೆದ ದಂಡ ಪ್ರಕ್ರಿಯಾ ಸಂಹಿತೆ (೧೯೨೬) ಪುಟ ೫೧೬ರಿಂದ ೫೧೯ರವರೆಗೆ ನೋಡಿ.

**ಕಲಮು ೪(೧)**

**ಯುರೋಪಿಯನ್ ಬ್ರಿಟಿಷ್ ಪ್ರಜೆ ಅಂದರೆ–**

(೧) ಬ್ರಿಟಿಷ್ ದ್ವೀಪಗಳು ಇಲ್ಲವೇ ಯಾವುದೇ ವಸಾಹತಿನಲ್ಲಿ ಹುಟ್ಟಿದ, ಪ್ರಜೆಯಾಗಿದ್ದ, ಇಲ್ಲವೇ ವಾಸಿಸುತ್ತಿದ್ದು ಯುರೋಪಿಯನ್ ಗಂಡು ವಂಶಸ್ಥನಾಗಿರುವ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆ, ಅಥವಾ

(೨) ಅಂತಹ ವ್ಯಕ್ತಿಯ ಕಾನೂನುಬದ್ಧ ವಂಶಸ್ಥ ಮಗ ಇಲ್ಲವೇ ಮೊಮ್ಮಗ.

**೧ನೇ ಕಂಡಿಕೆಯ ಅವಶ್ಯಕತೆಗಳು:–**

ಬ್ರಿಟಿಷ್ ದ್ವೀಪಗಳು ಇಲ್ಲವೇ ಯಾವುದೇ ವಸಾಹತುವಿನಲ್ಲಿ

೧. ಯುರೋಪಿಯನ್ ವಂಶಸ್ಥಿಕೆ.

೨. ಗಂಡು ಸಂತತಿ.

೩. ಹುಟ್ಟು ಪ್ರಜೆಯಾಗಿರುವುದು, ವಾಸ.

**೪. ೨ನೇ ಕಂಡಿಕೆಯ ಅವಶ್ಯಕತೆಗಳು–** ವ್ಯಕ್ತಿಯು ತಾನಾಗಿಯೇ ಹುಟ್ಟು ಪ್ರಜೆಯಾಗಿರುವುದು, ವಾಸ ಇವುಗಳನ್ನು ಹೊಂದಿಲ್ಲದೇ ಇರಬಹುದು. ಆದರೆ ಆತನು ಅಂತಹ ವ್ಯಕ್ತಿಯ ಮಗನಾಗಿರಬಹುದು. ೨ನೇ ಕಂಡಿಕೆಯಲ್ಲಿ ಯುರೋಪಿಯನ್ ಬ್ರಿಟಿಷ್ ಪ್ರಜೆಯ ಸವಲತ್ತುಗಳನ್ನು ಅಪೇಕ್ಷಿಸುವ ವ್ಯಕ್ತಿಯು ೧. ಕಾನೂನುಬದ್ಧ ವಂಶಸ್ಥನೆಂದು ಮತ್ತು ೨. ತನ್ನ ತಂದೆ ಇಲ್ಲವೇ ಪಿತಾಮಹನ ರಾಷ್ಟ್ರೀಯತೆಯನ್ನು ಸಾಬೀತುಮಾಡಬೇಕು.

*೬ ಎಂ.ಎಚ್.ಸಿ.ಆರ್. ೭ ಟರ್ನ್‌ಬುಲ್*

* * *

(III) ಆರೋಪಿಗೆ ನ್ಯಾಯಾಧೀಶನ ಇಲ್ಲವೆ ದಂಡಾಧಿಕಾರಿಯ ಕೈಯಲ್ಲಿ ನ್ಯಾಯ ಸಿಗುತ್ತದೆಯೋ ಎಂಬುದರ ಮೇಲೆ (ನ್ಯಾಯದಾನ) ಅವಲಂಬಿಸಿರುತ್ತದೆ. ನ್ಯಾಯಾಧೀಶನು ಇಲ್ಲವೆ ದಂಡಾಧಿಕಾರಿಯು ತಾವೇ ಫಿರ್ಯಾದಿದಾರರಾದರೆ ಆಗ ನ್ಯಾಯ ಸಿಗುವುದು ಬಹಳ ದುರ್ಲಭ. ಕಾನೂನಿನ ತತ್ವವೇನೆಂದರೆ ಯಾವುದೇ ಪ್ರಕರಣದಲ್ಲಿ ಅಭಿಯೋಜಕನೂ ನ್ಯಾಯಾಧೀಶನೂ ಒಬ್ಬನೇ ಆಗಿರಬಾರದು.

**ಕಲಮು ೪೮೭**

(೧) ಕಲಮು ೪೮೦ ಮತ್ತು ೪೮೫ರಲ್ಲಿ ಹೇಳಿದ್ದನ್ನು ಹೊರತುಪಡಿಸಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಹೊರತುಪಡಿಸಿ, ಯಾವುದೇ ಅಪರಾಧಿಕ ನ್ಯಾಯಾಲಯದ ನ್ಯಾಯಾಧೀಶ, ಇಲ್ಲವೆ ದಂಡಾಧಿಕಾರಿಯು ಕಲಮು ೧೯೫ರಲ್ಲಿ ಹೇಳಿದ ಅಪರಾಧದ ಅಧಿವಿಚಾರಣೆ ಮಾಡಕೂಡದು. ಅವನ ಮುಂದೆ ಅಂತಹ ಅಪರಾಧ ಘಟಿಸಿದರೆ, ಇಲ್ಲವೆ ಅವನ ಅಧಿಕಾರದ ನಿಂದನೆ ಮಾಡಿದರೆ, ಇಲ್ಲವೆ ಅವನ ಗಮನಕ್ಕೆ ತಂದರೆ, (ಅಂತಹ ನ್ಯಾಯಾಧೀಶ ಇಲ್ಲವೆ ದಂಡಾಧಿಕಾರಿಯು), ನ್ಯಾಯಿಕ ವ್ಯವಹರಣೆಗಳಲ್ಲಿ ಅವನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

(೨) ಕಲಮು ೪೭೬ ಇಲ್ಲವೆ ಕಲಮು ೪೮೨ರಲ್ಲಿ ಯಾವುದೇ ಆರೋಪಿಯನ್ನು ಸತ್ರ ನ್ಯಾಯಾಲಯಕ್ಕೆ ಇಲ್ಲವೆ ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಲು ಅಡ್ಡಿಯಾಗುವುದಿಲ್ಲ.

**ಟಿಪ್ಪಣಿ:** ಕಲಮು ೧೯೫ ನ್ಯಾಯದಾನವನ್ನು ಪ್ರಭಾವಿಸುವ ಅಪರಾಧಗಳಿಗೆ ಸಂಬಂಧಿಸಿದೆ.

ಈ ಕಲಮು ಹೇಳುವುದೇನೆಂದರೆ ಅಂತಹ ಅಪರಾಧವು ನ್ಯಾಯಾಧೀಶನ ಸಮ್ಮುಖದಲ್ಲಿ ನಡೆದಿದ್ದರೆ ಇಲ್ಲವೇ ಆತನ ಅಧಿಕಾರ ನಿಂದನೆಯಲ್ಲಿ ಮಾಡಿದ್ದಾಗಿ ಆತನ ಗಮನಕ್ಕೆ ತಂದಿದ್ದಾದರೆ ಆತನಿಂದ ವಿಚಾರಣೆ ಯಾಗತಕ್ಕದ್ದಲ್ಲ.

ಕಲಮು ೪೮೦ ಮತ್ತು ೪೮೫ರಡಿ ಪ್ರಕರಣಗಳು ಸಂಬಂಧಿತವಾಗಿರದಿದ್ದರೆ,

ನಿಂದನೆಯಾದರೆ ಯಾವುದೇ ಕ್ರಿಯೆ ಇಲ್ಲವೇ ಬರವಣಿಗೆಯನ್ನು ಒಂದು ನ್ಯಾಯಾಲಯ ಇಲ್ಲವೇ ನ್ಯಾಯಾಲಯದ ನ್ಯಾಯಾಧೀಶನನ್ನು ನಿಂದನೆ ಮಾಡಲು ಇಲ್ಲವೇ ಆತನ ಅಧಿಕಾರವನ್ನು ಅವಮಾನಿಸಲು ಇಲ್ಲವೇ ನ್ಯಾಯಪಾಲನೆಯ ಅಥವಾ ನ್ಯಾಯಾಲಯದ ಕಾನೂನುಬದ್ಧ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಲು ಅಥವಾ ಅಡ್ಡಿಮಾಡಲುದ್ದೇಶಿಸಿ ಪ್ರಕಟಮಾಡುವಿಕೆ.

*(ನವಿಯನ್‌ಬೆಗ್. ೧೦ ಬಿ.ಎಚ್.ಸಿ.ಆರ್. ೭೩)*

ನ್ಯಾಯಾಧೀಶ– ೧೮೭೨ರ ಸಂಹಿತೆಯಲ್ಲಿದ್ದ 'ನ್ಯಾಯಾಲಯ' ಎಂಬ ಪದಕ್ಕೆ ಬದಲಾಗಿ ಈ ಪದವನ್ನು ಬಳಸಿದ್ದರಿಂದಾಗಿ ಅನರ್ಹತೆಯು ವೈಯಕ್ತಿಕವಾಗುತ್ತದೆ ಮತ್ತು ಅಂತಹ ಅಧಿಕಾರಿಯ ಹುದ್ದೆಯಲ್ಲಿ ನಂತರ ಬರುವವರು ಅಂತಹ ವಿಚಾರಣೆಯನ್ನು ಕೈಗೊಳ್ಳಬಹುದಾಗಿದೆ.

*(೧೨ ಸಿ.ಡಬ್ಲ್ಯು.ಎನ್. ೨೪೬)*

ವಿಚಾರಣೆ ಎಂದರೆ ಒಂದು ಮೇಲ್ಮನವಿಯ ವಿಚಾರಣೆಯನ್ನು ಸಹ ಒಳಗೊಂಡಿರುತ್ತದೆ.

ಹೀಗಿರುವುದರಿಂದ ನ್ಯಾಯಾಧೀಶ ಅಥವಾ ದಂಡಾಧಿಕಾರಿ– ಹಾಗೆಂದರೆ ಅವನು ಅದರ ಅಧಿ ವಿಚಾರಣೆಯನ್ನು ನ್ಯಾಯಾಧೀಶ ಅಥವಾ ದಂಡಾಧಿಕಾರಿ ನಾತೆಯಿಂದ ಮಾಡಲಿಕ್ಕೆ ಬರುವುದಿಲ್ಲ. ಇದೇ ಪ್ರಕರಣವು ಅವನ ಮುಂದೆ ಬೇರೊಂದು ಅಧಿಕಾರ ಸ್ಥಾನದಲ್ಲಿ ಬಂದರೆ ಅವನು ಅದರ ಅಧಿವಿಚಾರಣೆ ಮಾಡಬಹುದು.

ಇಬ್ಬರು ವ್ಯಕ್ತಿಗಳು ಒಂದೇ ಅನ್ನುವುದು ಅಧಿಕಾರ ಸ್ಥಾನದಲ್ಲಿ ಒಂದೇ ಅನ್ನುವುದಕ್ಕಿಂತ ಭಿನ್ನವಾಗಿರುತ್ತದೆ. ಈ ಕಲಮು ಒಂದೇ ಅಧಿಕಾರ ಸ್ಥಾನ ಎಂಬುದನ್ನು ಅವಲಂಬಿಸಿರುತ್ತದೆ.

*೧೬ ಸಿವಿಲ್ ೭೭೬ ಆಫ್ ಬಿ, ೧೮ ಬಾಂಬೆ ૩೮೦ ಆಫ್ ಬಿ*

**ವ್ಯತಿರಿಕ್ತ–**

೧. ಮದ್ರಾಸ್, ೩೦೫ ಅನರ್ಹತೆಯ ಇಬ್ಬರು ವ್ಯಕ್ತಿಗಳು ಒಂದೇ ಅನ್ನುವುದರ ಮೇಲೆ ಅನರ್ಹತೆಯು ಅವಲಂಬಿಸಿರುತ್ತದೆ.

**ಕಲಮು ೫೫೬**

ಯಾವನೇ ನ್ಯಾಯಾಧೀಶ ಮತ್ತು ದಂಡಾಧಿಕಾರಿಯು ತನ್ನ ನ್ಯಾಯಾಲಯದ ಆದೇಶದ ವಿರುದ್ಧ ಯಾವ ನ್ಯಾಯಾಲಯಕ್ಕೆ ಮೇಲ್ಮನವಿಯಿದೆಯೋ ಅದರ ಅನುಮತಿಯಿಲ್ಲದೆ, ತಾನು ಪಕ್ಷಕಾರನಾಗಿರುವ, ಇಲ್ಲವೇ ವೈಯಕ್ತಿಕವಾಗಿ ಆಸಕ್ತಿಹೊಂದಿದ ಪ್ರಕರಣವನ್ನು ವಿಚಾರಿಸಕೂಡದು ಅಥವಾ ವಿಚಾರಣೆಗಾಗಿ ಒಪ್ಪಿಸಕೂಡದು, ಮತ್ತು ಯಾವ ನ್ಯಾಯಾಧೀಶನು ಇಲ್ಲವೇ ದಂಡಾಧಿಕಾರಿಯು ತಾನು ಮಾಡಿದ ಇಲ್ಲವೇ ವಿಧಿಸಿದ ಆದೇಶ ಅಥವಾ ತೀರ್ಪಿನಿಂದ ಉದ್ಭವವಾದ ಮೇಲ್ಮನವಿಯನ್ನು ಪರಿಗಣಿಸಕೂಡದು.

**ವಿವರಣೆ:**

ಒಬ್ಬ ನ್ಯಾಯಾಧೀಶನು ಇಲ್ಲವೇ ದಂಡಾಧಿಕಾರಿಯು ಪೌರಾಯುಕ್ತನಾಗಿದ್ದಾನೆಂಬ ಅಥವಾ ಒಂದು ಸಾರ್ವಜನಿಕ ಹುದ್ದೆಗೆ ಸಂಬಂಧಿಸಿದವನೆಂಬ ಕಾರಣಕ್ಕಾಗಿ, ಅಥವಾ ಆತನು ಅಪರಾಧ ನಡೆದ ಇಲ್ಲವೇ ಪ್ರಕರಣಕ್ಕೆ ಸಂಬಂಧಿಸಿದ ಇತರ ವ್ಯವಹಾರವು ನಡೆದ ಸ್ಥಳವನ್ನು ನೋಡಿದ್ದಾನೆಂಬ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಿದ್ದಾನೆಂಬ ಏಕೈಕ ಕಾರಣಕ್ಕಾಗಿ ಪಕ್ಷಕಾರನೆಂದು, ಇಲ್ಲವೇ ವೈಯಕ್ತಿಕವಾಗಿ ಆಸಕ್ತಿ ಹೊಂದಿದವನೆಂದು ತಿಳಿಯಕೂಡದು.

**ಪಕ್ಷಗಾರ:**

ವೈಯಕ್ತಿಕವಾಗಿ ಆಸಕ್ತಿಯುಳ್ಳವನೆಂದರೆ ಕೇವಲ ಬೌದ್ಧಿಕ ಆಸಕ್ತಿಯಲ್ಲ. ಅದು ಲಾಭ ಆಶಿಸುವುದನ್ನು ಒಳಗೊಂಡಿರುತ್ತದೆ. ಇಲ್ಲವೆ ಹಾನಿಯನ್ನು ಸಹ ಇಲ್ಲವೆ ಕೆಲವು ಅನುಕೂಲತೆಗಳನ್ನು ಇಲ್ಲವೆ ಆ ವ್ಯಕ್ತಿಯು

ಒಂದು ರೀತಿಯ ಲಾಭ ಹೊಂದುವುದನ್ನು, ಇಲ್ಲವೆ ಹಾನಿ ಹೊಂದುವುದನ್ನು, ಅಥವಾ ಯಾವುದೇ ಅನನುಕೂಲತೆಯನ್ನು ಹೋಗಲಾಡಿಸುವುದು ಇವೆಲ್ಲವುಗಳನ್ನು ಹೊಂದಿದವನು ಆಸಕ್ತಿ ಹೊಂದಿದವನಾಗುತ್ತಾನೆ.

*೮ ಬಾಂಬೆ ಎಲ್.ಆರ್. ೯೪೭*

**(೧) ಆರ್ಥಿಕ ಹಿತಾಸಕ್ತಿ**

ಒಂದು ಕಂಪನಿಯ ಶೇರುದಾರನಾದ ದಂಡಾಧಿಕಾರಿಯು ಆ ಕಂಪೆನಿಯನ್ನು ಕುರಿತು ಫಿರ್ಯಾದಿಯ ಪ್ರಕರಣವನ್ನು ವಿಚಾರ ಮಾಡಲು ಅನರ್ಹನಾಗುತ್ತಾನೆ.

*೨೦ ಬಾಂಬೆ ೫೦೨*

ಒಬ್ಬ ದಂಡಾಧಿಕಾರಿಯು ತನಗೆ ಋಣಿಯಾದ ಜನರು ಫಿರ್ಯಾದಿದಾರರಾಗಲಿ ಇಲ್ಲವೆ ಆರೋಪಿಗಳಾಗಲಿ ಇರುವ ಪ್ರಕರಣವನ್ನು ಸ್ವೀಕರಿಸತಕ್ಕದ್ದಲ್ಲ.

**ಸಂಬಂಧ–ಬಾಂಧವ್ಯ:**

ಫಿರ್ಯಾದಿದಾರನು ದಂಡಾಧಿಕಾರಿಯ ನೌಕರನಾಗಿದ್ದರೆ, ಅವನು ಅನರ್ಹನಾಗುತ್ತಾನೆ.

*೭ ಕಲ್ಕತ್ತ ೩೨೨: ೧೦ ಕಲ್ಕತ್ತ ೧೯೪*

ಫಿರ್ಯಾದಿದಾರಳು ದಂಡಾಧಿಕಾರಿಯ ಹೆಂಡತಿಯಾಗಿದ್ದರೆ ಅನರ್ಹನಾಗುತ್ತಾನೆ.

*೧೪ ಬಾಂಬೆ ೫೭೨*

ದಂಡಾಧಿಕಾರಿಯು ಫಿರ್ಯಾದಿದಾರನ ಒಡೆಯನಾಗಿದ್ದರೆ ಅವನು ಅನರ್ಹನಾಗುವುದಿಲ್ಲ.

*೯ ಬಾಂಬೆ ೧೭೨*

**ಕಲಮು ೪೮೭ ಮತ್ತು ೫೫೬ರಲ್ಲಿಯ ಅಂತರ:**

೧. **ಕಲಮು ೪೮೭:** ಇಂದು ಒಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಅನರ್ಹಗೊಳಿಸುವುದಿಲ್ಲ. ಕಲಮು ೫೫೬ ಅನರ್ಹಗೊಳಿಸುತ್ತದೆ.

೨. **ಕಲಮು ೪೮೭:** ಇದು (ಕಮಿಟ್ ಮಾಡುವುದು) ಒಪ್ಪಿಸುವುದು ಅನರ್ಹಗೊಳಿಸುವುದಿಲ್ಲ. ಕಲಮು ೫೫೬ ಅನರ್ಹಗೊಳಿಸುತ್ತದೆ.

**ಕಲಮು ೫೫೬ ಮತ್ತು ೫೨೬** (ವರ್ಗಾವಣೆ)

ಈ ಪ್ರಕರಣಗಳಲ್ಲಿ ತುಂಬಾ ಅಸ್ಪಷ್ಟತೆಯು ಇದೆ. ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದು ಅಪರಾಧದ ಬಗ್ಗೆ ಆದರೆ ಆರೋಪಿಯ ಬಗ್ಗೆ ಅಲ್ಲ.

* * *

**ಕಲಮು ೧೨೯**

ಇದು ದಂಡಾಧಿಕಾರಿಗೆ ಒಂದು ಕಾನೂನುಬಾಹಿರ ಕೂಟವನ್ನು ಬೇರೆ ರೀತಿಯಿಂದ ಚದುರಿಸಲು ಸಾಧ್ಯವಿಲ್ಲವಾದಾಗ ಅದನ್ನು ಚದುರಿಸಲು ಸಾರ್ವಜನಿಕ ಸುರಕ್ಷತೆಯ ದೃಷ್ಟಿಯಿಂದ ಆ ಕಾನೂನುಬಾಹಿರ ಕೂಟವನ್ನು ಚದುರಿಸುವುದು ಅವಶ್ಯವೆನಿಸಿದಾಗ ಸೈನ್ಯವನ್ನು ಕರೆಯಿಸುವ ಅಧಿಕಾರವನ್ನು ಕೊಡುತ್ತದೆ.

(೧೧) ಅಪರಾಧಿಕ ಪ್ರಕರಣಗಳಲ್ಲಿ ವಾದಕಾಲೀನ (ಮಧ್ಯಂತರ) ಆದೇಶಗಳನ್ನು ಮಾಡುವ ಅಧಿಕಾರ:

**ಕಲಮು ೩೬**

**೧. ಸಾಮಾನ್ಯ ಅಧಿಕಾರಗಳು:**

ದಂಡ ಪ್ರಕ್ರಿಯಾ ಸಂಹಿತೆಯ ಮೂರನೆಯ ಪರಿಶಿಷ್ಟದಲ್ಲಿ ಇವುಗಳನ್ನು ನಮೂದಿಸಲಾಗಿದೆ. ಬೇರೆ ಬೇರೆ ದಂಡಾಧಿಕಾರಿಗೆ ಅವು ಸ್ಥಾನಮಾನಕ್ಕನುಸಾರವಾಗಿ ಪ್ರತ್ಯೇಕವಾಗಿರುತ್ತವೆ.

**೨. ಹೆಚ್ಚಿನ ಅಧಿಕಾರಗಳು:**

ಸ್ಥಾನಿಕ ಸರಕಾರವು ಇಲ್ಲವೆ ಜಿಲ್ಲಾ ದಂಡಾಧಿಕಾರಿಯು ಅವರು ಉಪವಿಭಾಗ ದಂಡಾಧಿಕಾರಿ ಇಲ್ಲವೆ ಯಾವುದೇ ೧ನೆಯ ವರ್ಗದ, ೨ನೆಯ ವರ್ಗದ ಇಲ್ಲವೆ ೩ನೆಯ ವರ್ಗದ ದಂಡಾಧಿಕಾರಿ ಅವರಿಗೆ ಕೆಲವು ಹೆಚ್ಚಿನ ಅಧಿಕಾರಗಳನ್ನು ವಿಹಿತಗೊಳಿಸಬಹುದು.

ಅವುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ನಾಲ್ಕನೆಯ ಪರಿಶಿಷ್ಟದಲ್ಲಿ ಕಾಣಿಸಲಾಗಿದೆ. ಅವು ದಂಡಾಧಿಕಾರಿಯ ಸ್ಥಾನಮಾನಕ್ಕನುಸಾರವಾಗಿ ಪ್ರತ್ಯೇಕವಾಗಿರುತ್ತವೆ.

ಇಂತಹ ಅಧಿಕಾರಗಳನ್ನು ಜಾರಿಗೊಳಿಸುವ ವಿಧಾನ.

ಕಲಮು ೧೦೭ (೩)– ಯಾವುದೇ ವ್ಯಕ್ತಿಯು ಶಾಂತಿ ಭಂಗಮಾಡಬಹುದು ಇಲ್ಲವೆ ಸಾರ್ವಜನಿಕ ಶಾಂತಿಯನ್ನು ಕದಡುವ ಸಂಭವವಿದೆಯೆಂದು ನಂಬಲು ಸಾಕಷ್ಟು ಕಾರಣಗಳಿವೆಯೆಂದು, ಇಲ್ಲವೆ ಯಾವುದೇ ಕಾನೂನಿಗೆ ವಿರುದ್ಧ ಕ್ರಮ ಕೈಗೊಳ್ಳುವುದರಿಂದ ಶಾಂತಿಭಂಗ ಮಾಡಿದರೆ, ಇಲ್ಲವೆ ಕದಡಿದರೆ ಅದನ್ನು ತಡೆಯಲು ಸಾಧ್ಯವಾಗದಿದ್ದಾಗ ದಂಡಾಧಿಕಾರಿಯು ಅಂತಹ ವ್ಯಕ್ತಿಯ ದಸ್ತಗಿರಿ ಮಾಡಲು ವಾರಂಟು ಹೊರಡಿಸಬಹುದು. ಅವನು ಅದಕ್ಕೆ ತನ್ನ ಕಾರಣಗಳನ್ನು ಕಾಣಲಿಕ್ಕೇಬೇಕು.

ನ್ಯಾಯಾಲಯಗಳು ತಮ್ಮ ಕಾನೂನುಬದ್ಧ ಅಧಿಕಾರದಂತೆ ಸೂಕ್ತ ಶಿಕ್ಷೆಯನ್ನು ವಿಧಿಸಬಹುದು. ಒಬ್ಬ ಅಪರಾಧಿಯು ಕಾನೂನಿನಲ್ಲಿ ಸಲ್ಲುವ ಶಿಕ್ಷೆಯ ಬದಲಿಗೆ ಸಲ್ಲದ ಶಿಕ್ಷೆಯನ್ನು ವಿಧಿಸಲು ಕೇಳಿಕೊಂಡರೆ ಅಂತಹ ಶಿಕ್ಷೆಯು ಕಾನೂನುಬದ್ಧವಾಗುವುದಿಲ್ಲ.

*೩ ಬಿ.ಎಲ್.ಆರ್. ೫೦*

**(ದಂಡನೆಯನ್ನು) ತಗ್ಗಿಸುವಿಕೆ:**

ದಂಡ ಸಂಹಿತೆಯ ೫೯ನೇ ಕಲಮು ಯಾವ ಪ್ರಸಂಗಗಳಲ್ಲಿ ಕಾರಾಗೃಹ ವಾಸದ ಬದಲು ಗಡಿಪಾರನ್ನು ವಿಧಿಸಬಹುದೆಂದು ಸೂಚಿಸುತ್ತದೆ.

ಗಡಿಪಾರು ಶಿಕ್ಷೆಯನ್ನು ಕಾರಾಗೃಹವಾಸದ ಶಿಕ್ಷೆಯ ಬದಲಿಗೆ ಸ್ವತಂತ್ರ ಶಿಕ್ಷೆಯಾಗಿ ನಿಯಮಿಸಲಾಗಿದೆ. ಒಂಬತ್ತು ವರ್ಷಗಳ ಗಡಿಪಾರು ಮತ್ತು ರೂ. ೩೦೦ರ ದಂಡ ಮತ್ತು ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೂ ಮೂರು ವರ್ಷಗಳ ಗಡಿಪಾರು ಶಿಕ್ಷೆಯು ಈ ಭಾಗಕ್ಕೆ ಅನ್ವಯವಾಗುವಂತೆ ಕಾನೂನಿಗೆ ವಿರೋಧವಾಗಿರುತ್ತದೆ.

(ಬ) ಕಲಮು ೫೯ರಂತೆ– ಏಳು ವರ್ಷಗಳಿಗಿಂತ ಕಡಿಮೆ ಅವಧಿಯದ್ದಾಗಿರಬಾರದು ಮತ್ತು ಅಪರಾಧಿಗೆ ವಿಧಿಸಬಹುದಾದ ಕಾರಾಗೃಹವಾಸದ ಅವಧಿಗಿಂತ ಹೆಚ್ಚಿನದ್ದಾಗಿರಬಾರದು.

**III. ಶಿಕ್ಷಿಸುವ ಅಧಿಕಾರ**

ಭಾರತ ದಂಡ ಸಂಹಿತೆ ಕಲಮು ೫೩

**೧. ಮರಣದಂಡನೆ**

(ಅ) ಕಲಮು ೧೨೧, ೧೩೨, ೧೯೪, ೩೦೨, ೩೦೫, ೩೦೭, ೩೯೬ರ ಅನ್ವಯ ಈ ಶಿಕ್ಷೆಯನ್ನು ವಿಧಿಸಬಹುದು.

(ಬ) ಕಲಮು ೩೦೩ರ ಅನ್ವಯ (ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವವನು ಒಂದು ಕೊಲೆ ಮಾಡಿದರೆ) ಇದನ್ನು ವಿಧಿಸತಕ್ಕದ್ದು.

**೨. ಗಡಿಪಾರು**

೧. ಜೀವಾವಧಿ–

(ಅ) ಕಲಮು ೭೫, ೧೨೫, ೧೨೮ ಇವುಗಳನ್ವಯ ವಿಧಿಸಬಹುದು.

(ಬ) ಕಲಮು ೨೨೬, ೩೩೧ ಇವುಗಳನ್ವಯ ವಿಧಿಸಲಿಕ್ಕೇ ಬೇಕು.

**೨. ಯಾವುದೇ ಅವಧಿಗೆ–**

(ಅ) ಕಲಮು ೧೨೧ ಅ, ೧೨೪ಅ ಇವುಗಳನ್ವಯ ವಿಧಿಸಬಹುದು.

(ಬ) ಕಲಮು ೫೯ರ ಅನ್ವಯ ಏಳು ವರ್ಷಗಳಿಗಿಂತ ಕಡಿಮೆ ಇಲ್ಲದೆ ಹಾಗೂ ಆರೋಪಿ ಕಾರಾಗೃಹವಾಸ ಅವಧಿಗಿಂತ ಹೆಚ್ಚಿಗಿರಬಾರದು.

**೩. ದಂಡನೆಯ ಅನುಭೋಗ**

ಕಲಮು ೫೯ರ ಅನ್ವಯ ಯಾವುದೇ ಯುರೋಪಿಯನ್ ಇಲ್ಲವೆ ಅಮೆರಿಕೆಯವನು ಗಡಿಪಾರು ಶಿಕ್ಷೆಯನ್ನು ವಿಧಿಸುವ ಅಪರಾಧ ಮಾಡಿದ್ದರೆ ಅವನಿಗೆ ಆ ಶಿಕ್ಷೆಯನ್ನು ವಿಧಿಸಲಿಕ್ಕೇ ಬೇಕು.

**IV. ಕಾರಾಗೃಹ ವಾಸ**

(೧) ೧೪ ವರುಷದ ಅವಧಿ ಮೀರದಂತೆ ಅವಧಿಗೆ ಅದನ್ನು ವಿಧಿಸಬಹುದು.

(೨) ಇದು ಸಾದಾ ಶಿಕ್ಷೆಯಾಗಿರಬಹುದು ಅಥವಾ

(೩) ಇದು ಕಠಿಣ ಶಿಕ್ಷೆಯಾಗಿರಬಹುದು.

**೧೯೨೧ನೆಯ XVIನೆಯ ಅಧಿನಿಯಮ ಕಲಮು ೪ರಿಂದ ಇದನ್ನು ನಿರಶನಗೊಳಿಸಲಾಗಿದೆ.**

V. ಮುಟ್ಟುಗೋಲು ಹಾಕುವುದು. (i) ಎಲ್ಲ ಆಸ್ತಿಗಳನ್ನು:

(ಅ) ಕಲಮು ೧೨೬, ೬೨ರ ಅನ್ವಯ ವಿಧಿಸಬಹುದು.

(ಬ) ಕಲಮು ೧೨೧, ಮತ್ತು ೧೨೨ದ ಅನ್ವಯ ವಿಧಿಸಲಿಕ್ಕೇ ಬೇಕು.

**(II) ನಿರ್ದಿಷ್ಟ ಆಸ್ತಿಯು**

(ಅ) ಕಲಮು ೧೨೬, ೧೨೭ರ ಅನ್ವಯ ವಿಧಿಸಬಹುದು.

(ಆ) ಕಲಮು ೧೬೯ರ ಅನ್ವಯ ವಿಧಿಸಲಿಕ್ಕೇ ಬೇಕು.

## ಪುನರೀಕ್ಷಣಾ ಅಧಿಕಾರ ವ್ಯಾಪ್ತಿ

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|

**ಸಿವಿಲ್ ಪ್ರಕ್ರಿಯಾ ಸಂಹಿತೆ**

**ಕಲಮು ೧೧೫**

ಉಚ್ಚ ನ್ಯಾಯಾಲಯವು ತನ್ನ ಅಧೀನದಲ್ಲಿರುವ ಯಾವುದೇ ಕೆಳಗಿನ ನ್ಯಾಯಾಲಯವು ತೀರ್ಮಾನಿಸಿದ ಪ್ರಕರಣಗಳ ದಸ್ತಾವೇಜುಗಳನ್ನು ತರಿಸಿಕೊಳ್ಳಬಹುದು.

ಯಾವ ಪ್ರಕರಣದಲ್ಲಿ ಮೇಲ್ಮನವಿಗೆ ಆಸ್ಪದವಿರುವುದಿಲ್ಲವೋ ಮತ್ತು ಅಂತಹ ಕೆಳಗಿನ ನ್ಯಾಯಾಲಯವು ಈ ಕೆಳಗಿನಂತೆ ಮಾಡಿದ್ದು ಕಂಡುಬಂದರೆ ಅಂಥ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯವು ಆ ಪ್ರಕರಣದ ರಿಕಾರ್ಡುಗಳನ್ನು ತರಿಸಿಕೊಳ್ಳಬಹುದು.

(ಅ) ಕಾನೂನು ಪ್ರಕಾರ ಇದಕ್ಕೆ ಇಲ್ಲದ ವ್ಯಾಪ್ತಿಯನ್ನು ಅದು ಚಲಾಯಿಸಿದೆ ಎಂದು ಕಂಡು ಬಂದರೆ, ಇಲ್ಲವೆ

(ಬ) ಹಾಗೆ ನಿಹಿತಗೊಳಿಸಿದ ಅಧಿಕಾರವನ್ನು ಚಲಾಯಿಸಲು ತಪ್ಪಿದರೆ, ಇಲ್ಲವೆ

(ಕ) ಅದು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದನ್ನು ಕಾನೂನುಬಾಹಿರವಾಗಿ ಇಲ್ಲವೆ ಮುಖ್ಯ ಕ್ರಮದೋಷ ಮಾಡಿದ್ದರೆ–

ಉಚ್ಚ ನ್ಯಾಯಾಲಯವು ಸೂಕ್ತ ಕಂಡಂತೆ ಯೋಗ್ಯ ಆದೇಶ ಮಾಡಬಹುದು.

**ದಂಡ ಪ್ರಕ್ರಿಯಾ ಸಂಹಿತೆ**

**ಕಲಮು ೪೩೫**

(೧) ಉಚ್ಚ ನ್ಯಾಯಾಲಯವು ಇಲ್ಲವೆ ಯಾವುದೇ ಸತ್ರ ನ್ಯಾಯಾಲಯ ಇಲ್ಲವೆ ಜಿಲ್ಲಾ ದಂಡಾಧಿಕಾರಿ ಇಲ್ಲವೆ ಪ್ರಾಂತೀಯ ಸರಕಾರವು ಈ ಬಗ್ಗೆ ಅಧಿಕಾರ ವಹಿಸಿಕೊಟ್ಟ ಯಾವುದೇ ಉಪವಿಭಾಗ ದಂಡಾಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಯಾವುದೇ ಕೆಳಗಿನ ಅಪರಾಧಿಕ ನ್ಯಾಯಾಲಯದ ವ್ಯವಹರಣೆಗಳು ಸರಿಯಾಗಿವೆಯೋ ಇಲ್ಲವೋ, ಸಮಾಧಾನಕರವಾಗಿ ಇಲ್ಲವೆ ಅದನ್ನು ಸರಿಪಡಿಸುವುದಕ್ಕಾಗಿ ಕಾನೂನು ಬದ್ಧವಾಗಿದೆಯೋ ಎಂಬುದರ, ಇಲ್ಲವೆ ಯಾವುದೇ ನಿರ್ಣಯ ಕೊಟ್ಟಿದ್ದರ ಔಚಿತ್ಯವನ್ನು ಕಂಡು ಹಿಡಿಯಲು ವಿಧಿಸಿದ ಶಿಕ್ಷೆ ಇಲ್ಲವೆ ಆದೇಶವನ್ನು ನಮೂದು ಮಾಡಿಕೊಂಡಿದ್ದು ಮತ್ತು ವ್ಯವಹರಣೆಗಳ ಕ್ರಮಬದ್ಧತೆ ಇವುಗಳ ವಿಚಾರಣೆಗಾಗಿ ಯಾವುದೇ ಕೆಳಗಿನ ನ್ಯಾಯಾಲಯದ ರಿಕಾರ್ಡುಗಳನ್ನು ತರಿಸಿಕೊಳ್ಳಬಹುದು. ಆರೋಪಿಗೆ ಹೀಗೆ ಕೆಳ ನ್ಯಾಯಾಲಯದ ರಿಕಾರ್ಡುಗಳನ್ನು ತರಿಸಿಕೊಳ್ಳುವಾಗ ಯಾವುದೇ ಸೆರೆಮನೆ ವಾಸದ ಶಿಕ್ಷೆಯನ್ನು ವಿಧಿಸಿದ್ದರೆ ಅವನನ್ನು ಜಾಮೀನಿನ ಮೇಲೆ ಬಿಡಬೇಕು ಇಲ್ಲವೆ ಅವನ ಸ್ವಂತ ಜಾಮೀನು ಬಾಂಡಿನ ಮೇಲೆ ಈ ರಿಕಾರ್ಡುಗಳನ್ನು ಪರೀಕ್ಷಿಸುವವರೆಗೆ ಬಿಡಬೇಕು.

**ವಿವರಣೆ–** ಎಲ್ಲ ದಂಡಾಧಿಕಾರಿಗಳು ತಮ್ಮ ಅಧಿಕಾರವನ್ನು ಮೂಲ ಅಧಿಕಾರ ವ್ಯಾಪ್ತಿಯಲ್ಲಿ ಇಲ್ಲವೆ ಮೇಲ್ಮನವಿ ಅಧಿಕಾರ ವ್ಯಾಪ್ತಿಯಲ್ಲಿಯ ಅಧಿಕಾರವು ಸೆಶನ್ಸ್ ನ್ಯಾಯಾಲಯಕ್ಕೆ ಅಧೀನವಾದುದೆಂದು ಈ ಕಲಮಿನ ಉದ್ದೇಶಕ್ಕಾಗಿ ಮತ್ತು ಕಲಮು ೪೩೭ಕ್ಕಾಗಿ ಗ್ರಹಿಸತಕ್ಕದ್ದು.

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|
| | (೨) ಯಾವುದೇ ಉಪವಿಭಾಗ ದಂಡಾಧಿಕಾರಿಯು ಈ ಕಲಮಿನ ಉಪಕಲಮು (೧)ರ ಅನ್ವಯ ಯಾವುದೇ ನಿರ್ಣಯ, ಇಲ್ಲವೆ ಆದೇಶವು ಕಾನೂನಿಗೆ ವಿರುದ್ಧವಾದುದು ಇಲ್ಲವೆ ಅಯೋಗ್ಯ ಇಲ್ಲವೆ ಇಂತಹ ಯಾವುದೇ ವ್ಯವಹರಣೆಗಳ ಕ್ರಮ ದೋಷಪೂರಿತವಾದುವುಗಳೆಂದು ಕಂಡುಬಂದರೆ ಆಗ ಅವನು ತನಗೆ ಯೋಗ್ಯ ಕಂಡ ಶರಾ ಅದರ ಮೇಲೆ ಬರೆದು ಅವುಗಳನ್ನು ಜಿಲ್ಲಾ ದಂಡಾಧಿಕಾರಿಗೆ ಒಪ್ಪಿಸಬೇಕು. |
| | * * * |
| | (೪) ಈ ಕಲಮಿನ ಕೆಳಗೆ ಒಂದು ಅರ್ಜಿಯನ್ನು ಸತ್ರ ಸೆಶನ್ಸ್ ನ್ಯಾಯಾಧೀಶ ಇಲ್ಲವೆ ಜಿಲ್ಲಾ ದಂಡಾಧಿಕಾರಿಗೆ ಸಲ್ಲಿಸಲಾಗಿದ್ದರೆ ನಂತರ ಹೆಚ್ಚಿನ ಅರ್ಜಿಯನ್ನು ಇವರಿಬ್ಬರೂ ಸ್ವೀಕರಿಸಲೇ ಬಾರದು. |
| | **ಕಲಮು ೪೩೬** |
| | ಕಲಮು ೪೩೫ರ ಇಲ್ಲವೆ ಬೇರೆ ಯಾವುದರ ಅನ್ವಯ ಆ ರಿಕಾರ್ಡುಗಳನ್ನು ಪರೀಕ್ಷಿಸಿದ ನಂತರ ಉಚ್ಚ ನ್ಯಾಯಾಲಯ ಇಲ್ಲವೆ ಸತ್ರ ಸೆಶನ್ಸ್ ನ್ಯಾಯಧೀಶನು ಜಿಲ್ಲಾ ದಂಡಾಧಿಕಾರಿಗೆ ಮಾಡಲು ಇಲ್ಲವೆ ಯಾವುದೇ ಕೆಳಗಿನ ದಂಡಾಧಿಕಾರಿಯು ಹೆಚ್ಚಿನ ಯಾವುದೇ ವಿಚಾರಣೆಯನ್ನು ಇಲ್ಲವೆ ಕಲಮು ೨೦೪ರ ಉಪಕಲಮು (೩)ರ ಅನ್ವಯ ಇಲ್ಲವೆ ಯಾವುದೇ ವ್ಯಕ್ತಿಯ ಮೇಲೆ ಆರೋಪ ಹೊರಿಸಿದ್ದನ್ನು ವಿಮೋಚನೆ ಮಾಡಲಾಗಿದೆಯೋ ಅಂಥ ಫಿರ್ಯಾದಿಯನ್ನು ವಿಚಾರಣೆ ಮಾಡಲು ನಿರ್ದೇಶನ ನೀಡಬಹುದು. |
| | ಪರಂತು– ಯಾವ ನ್ಯಾಯಾಲಯವೂ ಈ ಕಲಮಿನ ಅನ್ವಯ ಒಂದು ಪ್ರಕರಣದ ವಿಚಾರಣೆ ಮಾಡಲು ನಿರ್ದೇಶನ ಕೊಡಕೂಡದು. ಯಾರಿಗೆ ಕಾರಣ ತೋರಿಸುವ ಒಂದು ಅವಕಾಶವನ್ನು |

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
| --- | --- |

ಕೊಡಲಾಗಿದೆಯೋ ಅಂಥ ಮನುಷ್ಯನನ್ನು ಬಿಡುಗಡೆ ಮಾಡಿದ್ದರೆ ಅಂಥ ಪ್ರಸಂಗದಲ್ಲಿ ಅಂಥವನಿಗೆ ಕಾರಣ ತೋರಿಸುವ ನೋಟೀಸನ್ನು ಕೊಡದೆ ಇಂತಹ ನಿರ್ದೇಶನವನ್ನು ಮಾಡಬಾರದು.

**ಕಲಮು ೪೩೭**

ಯಾವುದೇ ಪ್ರಕರಣದ ರಿಕಾರ್ಡುಗಳನ್ನು ಕಲಮು ೪೩೫ ಇಲ್ಲವೆ ಬೇರೆ ಇನ್ನಾವುದೇ ಕಲಮಿನ ಅನ್ವಯ ಮಾಡಿದ ಮೇಲೆ ಸೆಶನ್ಸ್ ನ್ಯಾಯಾಧೀಶ ಇಲ್ಲವೆ ಜಿಲ್ಲಾ ದಂಡಾಧಿಕಾರಿಯು ಅಂತಹ ಪ್ರಕರಣವು ಪ್ರತ್ಯೇಕವಾಗಿ ಸೆಶನ್ಸ್ ನ್ಯಾಯಾಧೀಶ ನಿಂದ ಅಧಿವಿಚಾರಣೆ ಮಾಡುವಂತಹದು ಮತ್ತು ಆರೋಪಿಯನ್ನು ಅಯೋಗ್ಯ ರೀತಿಯಲ್ಲಿ ಕೆಳಗಿನ ನ್ಯಾಯಾಲಯ ವಿಮೋಚನೆ ಮಾಡಿದಾಗ ಸೆಶನ್ಸ್ ನ್ಯಾಯಧೀಶ ಇಲ್ಲವೆ ಜಿಲ್ಲಾ ದಂಡಾಧಿಕಾರಿ ಅವನನ್ನು ದಸ್ತಗಿರಿ ಮಾಡಲು ಕ್ರಮ ಕೈಕೊಂಡು ಆಮೇಲೆ ಅದರಲ್ಲಿ ಹೊಸದಾಗಿ ವಿಚಾರಣೆ ಮಾಡುವ ಬದಲು ಅವನನ್ನು ಅಧಿವಿಚಾರಣೆಗೆ ಸೆಶನ್ಸ್ ಕೋರ್ಟಿಗೆ ಒಪ್ಪಿಸುವ ಆದೇಶ ಮಾಡುವುದು ಯೋಗ್ಯವೆಂದು ಸೆಶನ್ಸ್ ಇಲ್ಲವೆ ಜಿಲ್ಲಾ ದಂಡಾಧಿಕಾರಿಯ ಅಭಿಪ್ರಾಯದಲ್ಲಿ ಯೋಗ್ಯವೆಂದು ಅನಿಸಿದರೆ ಹಾಗೆ ಆದೇಶ ಮಾಡಬಹುದು.

ಪರಂತು ಕೆಳಗಿನಂತೆ–

(ಅ) ಆರೋಪಿಗೆ ಕಾರಣ ತೋರಿಸುವ ಸೆಶನ್ಸ್ ನ್ಯಾಯಾಲಯಕ್ಕೆ ಕಮಿಟ್ ಮಾಡಬಾರದೆಂಬ ನೋಟೀಸ್ ಒಂದನ್ನು ಜಡ್ಜ್ ಇಲ್ಲವೆ ದಂಡಾಧಿಕಾರಿಯು ಅಥವಾ ನ್ಯಾಯಾಧೀಶನು ಇಂತಹ ಅವಕಾಶವನ್ನು ಆರೋಪಿಗೆ ಕೊಡದ ಹೊರತು.

(ಬ) ಇಂತಹ ನ್ಯಾಯಾಧೀಶ ಇಲ್ಲವೆ ದಂಡಾಧಿಕಾರಿಯ ಅಭಿಪ್ರಾಯದಲ್ಲಿ ಆರೋಪಿಯು

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|
| | ಬೇರೊಂದು ಅಪರಾಧವನ್ನು ಮಾಡಿದ್ದಾನೆಂದು ಸಾಕ್ಷಿ ಇದ್ದರೆ, ಅಂತಹ ನ್ಯಾಯಾಧೀಶ ಇಲ್ಲವೆ ದಂಡಾಧಿಕಾರಿಯು ಕೆಳಗಿನ ನ್ಯಾಯಾಲಯಕ್ಕೆ ಆದೇಶ ಮಾಡಿ ಅಂತಹ ಅಪರಾಧ ವಿಚಾರಣೆ ಮಾಡಲು ಆದೇಶ ನೀಡಬಹುದು.<br><br>**ಕಲಮು ೪೩೮**<br>(೧) ಸೆಶನ್ಸ್ ನ್ಯಾಯಾಧೀಶ ಇಲ್ಲವೆ ಜಿಲ್ಲಾ ದಂಡಾಧಿಕಾರಿ ಕಲಮು ೪೩೫ರ ಅನ್ವಯ ಪರಿಶೀಲಿಸಿ ಅವನ ಅಭಿಪ್ರಾಯದಲ್ಲಿ ಯೋಗ್ಯ ವೆನಿಸಿದಲ್ಲಿ ಇಲ್ಲವೆ ಆ ವ್ಯವಹರಣೆಯ ಯಾವುದೇ ರಿಕಾರ್ಡುಗಳನ್ನು ಉಚ್ಚ ನ್ಯಾಯಾಲಯದ ಆದೇಶಕ್ಕಾಗಿ ಕಳುಹಿಸಿದರೆ ಅಂತಹ ವರದಿಯು ಶಿಕ್ಷೆಯನ್ನು ರದ್ದುಗೊಳಿಸುವುದು, ಇಲ್ಲವೆ ಅದರಲ್ಲಿ ಮಾರ್ಪಾಡು ಮಾಡುವುದು ಅವಶ್ಯವೆಂದು ಶಿಫಾರಸು ಮಾಡಿದ್ದರೆ ಅಂತಹ ಶಿಕ್ಷೆ ವಿಧಿಸುವುದನ್ನು ಅಮಾನತಿನಲ್ಲಿ ಇಡಬಹುದು. ಮತ್ತು ಆರೋಪಿಯು ಜೇಲುವಾಸ ಅನುಭವಿಸುತ್ತಿದ್ದರೆ ಅವನನ್ನು ಜಾಮೀನಿನ ಮೇಲೆ ಅವನ ಸ್ವಂತ ಮುಚ್ಚಳಿಕೆ ಇಲ್ಲವೆ ಜಾಮೀನುದಾರರ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು.<br>(೨) ಈ ಕಲಮಿನ ಕೆಳಗೆ ಆರೋಪಿಗೆ ಪ್ರತಿಕೂಲವಾಗುವ ಯಾವುದೇ ಆದೇಶವನ್ನು ಅವನಿಗೆ ಸ್ವತಃ ಇಲ್ಲವೆ ಅವನ ವಕೀಲರ ಮುಖಾಂತರ ಅವನ ವಾದ ವಿಚಾರಣೆಗೆ ಅವಕಾಶ ಕೊಡದ ಹೊರತು ಯಾವುದೇ ಆದೇಶವನ್ನು ಶಿಕ್ಷಿಸುವ ಆದೇಶವನ್ನಾಗಿ ಪರಿವರ್ತನೆ ಮಾಡಕೂಡದು.<br>(೩) ಈ ಕಲಮಿನ ಕೆಳಗೆ ಕೊಟ್ಟ ಶಿಕ್ಷೆಯನ್ನು ಕಾರ್ಯನಿರ್ವಹಣ ದಂಡಾಧಿಕಾರಿ, ಇಲ್ಲವೆ ಕಲಮು ೩೪ರ ಅನ್ವಯದ ಹೊರತು ನ್ಯಾಯಾಲಯವು ಹೆಚ್ಚಿನ ಶಿಕ್ಷೆಯನ್ನು ಆ ಅಪರಾಧಕ್ಕೆ ವಿಧಿಸಬಾರದು. ಅದೇ ಅಪರಾಧಕ್ಕೆ ಪ್ರೆಸಿಡೆನ್ಸಿ ದಂಡಾಧಿಕಾರಿ ಇಲ್ಲವೆ |

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|
| | ೧ನೆಯ ವರ್ಗದ ದಂಡಾಧಿಕಾರಿಯು ಯಾವ ಶಿಕ್ಷೆ ವಿಧಿಸುತ್ತಿದ್ದನೋ ಅದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ವಿಧಿಸಬಾರದು. |

(೪) ಈ ಕಲಮಿನಲ್ಲಿಯ ಯಾವುದೇ ನಮೂನೆ ೨೭೩ನೆಯ ಕಲಮಿಗೆ ಅನ್ವಯಿಸುವು ದಿಲ್ಲ. ಇಲ್ಲವೆ ಉಚ್ಚ ನ್ಯಾಯಾಲಯಕ್ಕೆ ಅಧಿಕಾರ ಕೊಡುತ್ತದೆಂದು ಗ್ರಹಿಸಬಾರದು. ಇಲ್ಲವೆ ಒಂದು ಉಚ್ಚ ನ್ಯಾಯಾಲಯದ ಬಿಡುಗಡೆ ಖುಲಾಸೆಯ ಆದೇಶವನ್ನು ಕೊಡುತ್ತದೆಂದು ಗ್ರಹಿಸಬೇಕು.

(೫) ಈ ಸಂಹಿತೆಯ ಕೆಳಗೆ ಒಂದು ಮೇಲ್ಮನವಿ ಇದ್ದರೆ ಮತ್ತು ಅಂತಹ ಮೇಲ್ಮನವಿಯನ್ನು ಮಾಡಿರದಿದ್ದರೆ ಆಗ ಪುನರೀಕ್ಷಣೆಯ (ರಿವಿಜನ್) ಯಾವುದೇ ವ್ಯವಹರಣೆಗಳನ್ನು ಯಾವ ಪಕ್ಷಗಾರನು ಮೇಲ್ಮನವಿಯನ್ನು ಮಾಡಬಹುದಾಗಿತ್ತೋ ಅವನಿಂದ ಪುನರೀಕ್ಷಣಾ ಅರ್ಜಿಯನ್ನು ಸ್ವೀಕರಿಸ ತಕ್ಕದ್ದಲ್ಲ.

(೬) ಈ ಕಲಮಿನಲ್ಲಿ ಏನೇ ಹೇಳಿದ್ದರೂ ಯಾವುದೇ ಶಿಕ್ಷೆಗೊಳಗಾದ ವ್ಯಕ್ತಿಗೆ ಉಪ ಕಲಮು (೨)ರ ಅನ್ವಯ ಅವನಿಗೆ ಕೊಟ್ಟ ಶಿಕ್ಷೆಯನ್ನು ಯಾಕೆ ಹೆಚ್ಚಿಸಬಾರದೆಂಬುದಕ್ಕೆ ಕಾರಣ ತೋರಿಸುವ ಒಂದು ನೋಟೀಸಿನ ಅವಕಾಶವನ್ನು ಕಲ್ಪಿಸಿ ಈ ಕಾರಣ ತೋರಿಸುವ ನೋಟೀಸಿನಲ್ಲಿ ಆತನ ಶಿಕ್ಷೆಯ ವಿರುದ್ಧ ಕಾರಣ ತೋರಿಸುವುದಕ್ಕೆ ಹಕ್ಕುಳ್ಳವ ನಾಗಿದ್ದಾನೆ.

**ಕಲಮು ೪೪೦**

ಯಾವುದೇ ನ್ಯಾಯಾಲಯ ಪುನರೀಕ್ಷಣ ಅಧಿಕಾರದ ನ್ಯಾಯಾಲಯದ ಮುಂದೆ ಯಾವುದೇ ಪಕ್ಷಕ್ಕೆ ಅಹವಾಲನ್ನು ಸ್ವತಃ ಇಲ್ಲವೆ ತನ್ನ ವಕೀಲರ ಮುಖಾಂತರ ಕೇಳಬೇಕೆಂಬ ಹಕ್ಕು ಇರುವುದಿಲ್ಲ.

ಪರಂತು ನ್ಯಾಯಾಲಯವು ತನಗೆ ಯೋಗ್ಯ

## ಅಭಿಪ್ರಾಯ ಕೋರಿಕೆ

### ಸಿವಿಲ್ ಪ್ರಕ್ರಿಯಾ ಸಂಹಿತೆ

**ಕಲಮು ೧೧೩**

ನಿರ್ದಿಷ್ಟಪಡಿಸಬಹುದಾದ ನಿಯಮ ಮತ್ತು ನಿರ್ಬಂಧಗಳಿಗೊಳಪಟ್ಟು ಯಾವುದೇ ನ್ಯಾಯಾಲಯವು ಒಂದು ಪ್ರಕರಣದ ವಿಚಾರವನ್ನು ಹೇಳಿ ನಿರೂಪಿಸಬಹುದು ಮತ್ತು ಅದನ್ನು ಅಭಿಪ್ರಾಯಕ್ಕಾಗಿ ಕಳುಹಿಸಬಹುದು ಮತ್ತು ಉಚ್ಚ ನ್ಯಾಯಾಲಯವು ಅದರ ಮೇಲೆ ತನಗೆ ಸೂಕ್ತ ಕಂಡ ಆದೇಶ ಮಾಡಬಹುದು.

### ದಂಡ ಪ್ರಕ್ರಿಯಾ ಸಂಹಿತೆ

ವೆನಿಸಿದರೆ ಅಂತಹ ತನ್ನ ಅಧಿಕಾರವನ್ನು ಚಲಾಯಿಸುವಾಗ ಯಾವುದೇ ಪಕ್ಷಗಾರನನ್ನು ವೈಯಕ್ತಿಕವಾಗಿ ಇಲ್ಲವೆ ಆತನ ವಕಾಲತಿನ ಮುಖಾಂತರ ಕೇಳಬಹುದು ಮತ್ತು ಈ ಕಲಮಿನಲ್ಲಿ ಯಾವುದೇ ವಿಷಯವು ಕಲಮು ೪೩೯ರ ಉಪಕಲಮು (೨)ರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

**ಕಲಮು ೪೩೨**

ಒಬ್ಬ ಪ್ರೆಸಿಡೆನ್ಸಿ ದಂಡಾಧಿಕಾರಿಯು ತನಗೆ ಸೂಕ್ತವೆನಿಸಿದರೆ ಉಚ್ಚ ನ್ಯಾಯಾಲಯದ ಅಭಿಪ್ರಾಯಕ್ಕಾಗಿ ಯಾವುದೇ ಕಾನೂನಿನ ಪ್ರಶ್ನೆ ಯಾವುದೇ ಪ್ರಕರಣ ತನ್ನ ಮುಂದೆ ವಿಚಾರಣೆಗೆ ಇರುವುದು ಮತ್ತು ಯಾವ ವಿಚಾರಣೆಯಲ್ಲಿ ಈ ಕಾನೂನಿನ ಪ್ರಶ್ನೆ ಉದ್ಭವಿಸುತ್ತದೆ ಇಲ್ಲಿ ಅಂತಹ ಪ್ರಕರಣದಲ್ಲಿ ತಾನು ತೀರ್ಪು ಕೊಡಬೇಕಾಗಿರುವಾಗ ಉಚ್ಚ ನ್ಯಾಯಾಲಯದ ನಿರ್ಣಯಕ್ಕೊಳಪಟ್ಟು ಅಭಿಪ್ರಾಯ ಕೋರಿದ್ದರ ಮೇಲೆ ಬಂದ ಅಭಿಪ್ರಾಯದಂತೆ ತೀರ್ಪು ಕೊಡಬಹುದು. ಆರೋಪಿಯನ್ನು ಜೈಲಿಗೆ ಕಳುಹಿಸಬಹುದು ಇಲ್ಲವೆ ತೀರ್ಪಿಗಾಗಿ ಕರೆದಾಗ ಕೋರ್ಟಿಗೆ ಹಾಜರಾಗ ಬೇಕೆಂದು ಹೇಳಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು.

**ಕಲಮು ೪೩೩**

(೧) ಒಮ್ಮೆ ಈ ಪ್ರಶ್ನೆಯನ್ನು ಹೀಗೆ ಒಪ್ಪಿಸಿದರೆ ಅಗ ಉಚ್ಚ ನ್ಯಾಯಾಲಯವು ಅದರ ಮೇಲೆ ತನಗೆ ಸೂಕ್ತ ಕಂಡ ಆದೇಶ ಮಾಡುತ್ತದೆ ಮತ್ತು ಯಾವ ದಂಡಾಧಿಕಾರಿಯು ಈ ಅಭಿಪ್ರಾಯ ಕೋರಿ

## ಪುನರಾವಲೋಕನ

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|
| **ಕಲಮು ೧೪೪**<br>ಮೇಲೆ ಹೇಳಿದ್ದಕ್ಕೆ ಒಳಪಟ್ಟು ಯಾವುದೇ ಬಾಧಿತನಾಗಿರುವನೆಂದು ತಿಳಿಯುವ ವ್ಯಕ್ತಿಯು<br>(ಅ) ಯಾವುದೇ ಡಿಕ್ರಿ ಇಲ್ಲವೆ ಆದೇಶದ ವಿರುದ್ಧ ಮೇಲ್ಮನವಿಯನ್ನು ಮಾಡಲು ಈ ಸಂಹಿತೆಯ ಅನ್ವಯ ಅವಕಾಶವಿದ್ದು, ಆದರೆ ಅಂತಹ ಮೇಲ್ಮನವಿಯನ್ನು ಮಾಡಿರುವುದಿಲ್ಲ.<br>(ಬ) ಈ ಸಂಹಿತೆಯ ಅನ್ವಯ ಯಾವುದೇ ಡಿಕ್ರಿ ಇಲ್ಲವೆ ಆದೇಶದ ವಿರುದ್ಧ ಮೇಲ್ಮನವಿಗೆ ಅವಕಾಶವಿರುವುದಿಲ್ಲ.<br>(ಕ) ಲಘು ವಿವಾದ ನ್ಯಾಯಾಲಯವು ಒಂದು ಅಭಿಪ್ರಾಯ ಕೋರಿದ್ದರ ಮೇಲೆ ಕೊಟ್ಟ ತೀರ್ಪಿನ ವಿರುದ್ಧ;<br>ಇಂತಹ ಪ್ರಸಂಗದಲ್ಲಿ ಯಾವ ನ್ಯಾಯಾಲಯವು ತೀರ್ಪು ಕೊಟ್ಟು ಡಿಕ್ರಿ ಮಾಡಿದೆಯೇ ಇಲ್ಲವೆ ಯಾವ ನ್ಯಾಯಾಲಯ ಆದೇಶ ಮಾಡಿದೆಯೋ ಅಂತಹ ನ್ಯಾಯಾಲಯಕ್ಕೆ ಪುನರಾವಲೋಕನೆಗಾಗಿ ಅರ್ಜಿ ಮಾಡಬಹುದು. ಆಗ ನ್ಯಾಯಾಲಯವು ಅದರ ಮೇಲೆ ತನಗೆ ಯೋಗ್ಯ ಕಂಡ ಆದೇಶ ನೀಡಬಹುದು. | ಪ್ರಕರಣವನ್ನು ಒಪ್ಪಿಸಿದ್ದನೋ ಅವನಿಗೆ ಆದೇಶದ ಒಂದು ಪ್ರತಿಯನ್ನು ಕಳುಹಿಸುತ್ತದೆ. ಅವನು ಆ ಆದೇಶದ ಅನುರೂಪವಾಗಿ ಆದೇಶ ಮಾಡುತ್ತಾನೆ.<br>(೨) ಉಚ್ಚ ನ್ಯಾಯಾಲಯವು ಅಂತಹ ಉಲ್ಲೇಖದ ವೆಚ್ಚವನ್ನು ಯಾರು ಪಾವತಿಸಬೇಕೆಂದು ನಿರ್ದೇಶಿಸಬಹುದು.<br>ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಪುನರಾವಲೋಕನಕ್ಕೆ ಅವಕಾಶವಿಲ್ಲ. |

## ಪುನರಾವಲೋಕನ

### ಸಿವಿಲ್ ಪ್ರಕ್ರಿಯಾ ಸಂಹಿತೆ

**ಕಲಮು ೯೬**

(೧) ಇಲ್ಲಿ ವ್ಯಕ್ತವಾಗಿ ಬೇರೆ ಯಾವುದೇ ಜಾರಿಯಲ್ಲಿರುವ ಕಾನೂನಿನಿಂದ ಉಪಬಂಧಿಸಿದುದನ್ನುಳಿದು, ಪ್ರತಿಯೊಂದು ಅಸಲು ಅಧಿಕಾರ ವ್ಯಾಪ್ತಿಯ ನ್ಯಾಯಾಲಯಕ್ಕೆ ಡಿಕ್ರಿ ಮಾಡಲು ಅಧಿಕಾರವಿದೆ. ಅಂತಹ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಕೇಳುವ ಅಧಿಕಾರವು ಕಾನೂನಿನಿಂದ ಅಧಿಕಾರ ಹೊಂದಿದ ಬೇರೆ ಕೋರ್ಟಿಗೆ ಇದೆ.

(೨) ಏಕಪಕ್ಷೀಯವಾಗಿ ಅಸಲ ಡಿಕ್ರಿ ಮಾಡಿದಲ್ಲಿ ಮೇಲ್ಮನವಿಯನ್ನು ಮಾಡಬಹುದು.

**ಕಲಮು ೧೦೦**

(೧) ಅನ್ಯಥಾ ಈ ಸಂಹಿತೆಯಲ್ಲಿ ವ್ಯಕ್ತಪಡಿಸದ ಹೊರತು ಇಲ್ಲವೆ ಈಗ ಅಮಲಿನಲ್ಲಿರುವ ಬೇರೆ ಯಾವುದೇ ಕಾನೂನಿನ ಅನ್ವಯ ಪ್ರತಿಯೊಂದು ಅಸಲ ಡಿಕ್ರಿಯ ವಿರುದ್ಧ ಮೇಲ್ಮನವಿ ಉಚ್ಚ ನ್ಯಾಯಾಲಯದ ಅಧೀನ ನ್ಯಾಯಾಲಯಕ್ಕೆ ಇದೆ. ಅದು ಕೆಳಗಿನ ಯಾವುದೇ ಕಾರಣದ ಮೇಲೆ ಎಂದರೆ–

(ಅ) ತೀರ್ಪು ಕಾನೂನಿಗೆ ವಿರುದ್ಧ ಇಲ್ಲವೆ ಯಾವುದೇ ರೂಢಿ, ಸಂಪ್ರದಾಯ, ಪದ್ಧತಿ ಯಾವುದಕ್ಕೆ ಕಾನೂನಿನ ಮಾನ್ಯತೆಯು ಇದೆಯೋ;

(ಬ) ತೀರ್ಪು ಕಾನೂನಿನ ಮಹತ್ವದ ಮುಖ್ಯ ವಿವಾದಾಂಶ ನಿರ್ಣಯಿಸಲು ಇಲ್ಲವೆ ಯಾವುದೇ ಕಾನೂನು ಮಾನ್ಯ ಮಾಡಿದ ರೂಢಿ, ಸಂಪ್ರದಾಯ, ಪದ್ಧತಿಯಂತೆ ಅದನ್ನು ನಿರ್ಣಯಿಸಲು ತಪ್ಪಿದಾಗ,

(ಕ) ಇಲ್ಲಿ ಈ ಸಂಹಿತೆಯ ಪ್ರಕ್ರಿಯೆಯಲ್ಲಿ ಉಪಬಂಧಿಸಿದುದರಲ್ಲಿ ಅನೇಕ ನ್ಯೂನತೆಗಳಿವೆ.

### ದಂಡ ಪ್ರಕ್ರಿಯಾ ಸಂಹಿತೆ

**ಕಲಮು ೪೦೪**

ಯಾವುದೇ ಅಪರಾಧಿಕ ನ್ಯಾಯಾಲಯದ ತೀರ್ಪು ಇಲ್ಲವೆ ಆದೇಶದ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಇಲ್ಲವೆ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಅನ್ವಯ ಉಪಬಂಧಿಸದ ಹೊರತು ಮೇಲ್ಮನವಿಯನ್ನು ಮಾಡಲು ಬರುವುದಿಲ್ಲ.

**ಕಲಮು ೪೦೭**

(೧) ಯಾವುದೇ ೨ನೆಯ ದರ್ಜೆಯ ಇಲ್ಲವೆ ೩ನೆಯ ದರ್ಜೆಯ ದಂಡಾಧಿಕಾರಿಯು ಇಲ್ಲವೆ ಯಾವುದೇ ದಂಡಾಧಿಕಾರಿಯು ಒಂದು ಅಧಿ ವಿಚಾರಣೆಯನ್ನು ನಡೆಯಿಸಿ ಒಬ್ಬ ಆರೋಪಿಗೆ ಶಿಕ್ಷೆ ವಿಧಿಸಿ ಕಲಮು ೩೪೯ ಇಲ್ಲವೆ ಯಾವುದರ ಬಗ್ಗೆ ಒಂದು ಆದೇಶವನ್ನು ಕಲಮು ೩೮೦ರ ಅನ್ವಯು ಉಪ ದಂಡಾಧಿಕಾರಿ ೨ನೆಯು ವರ್ಗದವನು ಮಾಡಿದ್ದರೆ ಜಿಲ್ಲಾ ದಂಡಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು.

(೨) ಜಿಲ್ಲಾ ದಂಡಾಧಿಕಾರಿಯು ಈ ಕಲಂ ಇಲ್ಲವೆ ಯಾವುದೇ ವರ್ಗದ ಮೇಲ್ಮನವಿಗಳನ್ನು ಯಾವುದೇ ೧ನೆಯ ವರ್ಗದ ದಂಡಾಧಿಕಾರಿ ತನಗೆ ಅಧೀನವಾಗಿರುವವನಿಗೆ ಪ್ರಾಂತೀಯ ಸರಕಾರ ಅಂಥ ಮೇಲ್ಮನವಿ ಕೇಳಲು ಅಧಿಕಾರ ಕೊಟ್ಟ ದಂಡಾಧಿಕಾರಿಯು ಅವುಗಳನ್ನು ವಿಚಾರಣೆ ಮಾಡತಕ್ಕದ್ದೆಂದು ನಿರ್ದೇಶನ ಮಾಡಬಹುದು. ಆಗ ಆ ಮೇಲ್ಮನವಿಗಳನ್ನು ಕೆಳಗಿನ ದಂಡಾಧಿಕಾರಿಗಳಿಂದ ಈಗಾಗಲೇ ಜಿಲ್ಲಾ ದಂಡಾಧಿಕಾರಿಗೆ ಮಾಡಿದ್ದರೆ ಆ ಜಿಲ್ಲಾ ದಂಡಾಧಿಕಾರಿಯು ಅವುಗಳನ್ನು ತನ್ನ ಅಧೀನ ದಂಡಾಧಿಕಾರಿಗೆ ಅಂತಹ

## ಸಿವಿಲ್ ಪ್ರಕ್ರಿಯಾ ಸಂಹಿತೆ

ಇಲ್ಲವೆ ಈಗ ಚಾಲತಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಅನ್ವಯ ಇಂತಹ ತಪ್ಪು ಆಗುವ ಸಂಭವವಿದೆ, ಇಲ್ಲವೆ ಪ್ರಕರಣದ ತೀರ್ಪಿನಲ್ಲಿ ಗುಣದೋಷಗಳ ಮೇಲೆ ನ್ಯೂನತೆಗಳು ಎದ್ದು ಕಾಣುತ್ತವೆ.

(೨) ಈ ಕಲಮಿನ ಅನ್ವಯ ಮೇಲ್ಮನವಿಯ ಏಕಪಕ್ಷೀಯ ಡಿಕ್ರಿ ಪಾಸಾದುದರ ವಿರುದ್ಧ ಒಂದು ಮೇಲ್ಮನವಿ ಸಲ್ಲಿಸಬಹುದಾಗಿದೆ.

**ಕಲಮು ೧೦೪**

(೧) ಕೆಳಗಿನ ಆದೇಶಗಳ ವಿರುದ್ಧ ಮೇಲ್ಮನವಿ ಮಾಡಲು ಅವಕಾಶ ಇರುತ್ತದೆ ಈ ಸಂಹಿತೆಯೊಳಗೆ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನು ಉಳಿದು, ಇಲ್ಲವೆ ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಅನ್ವಯ ಬೇರೆ ಯಾವುದೇ ಆದೇಶಗಳು ನ್ಯಾಯಾಲಯ ಅನುಮತಿ ಕೊಟ್ಟ ಅವಧಿಯಲ್ಲಿ ಇರುವುದಿಲ್ಲ.

(ಎ) ಒಂದು ತೀರ್ಪು ಇನ್ನು ಪೂರ್ಣವಾಗ ದಿರುವಾಗ ಮಧ್ಯಸ್ಥಿಕೆಯನ್ನು ಒಂದು ಆದೇಶದ ಮೂಲಕ ಅಮಾನತುಗೊಳಿಸುವುದು.

(ಬಿ) ಒಂದು ತೀರ್ಪನ್ನು ಒಂದು ವಿಶೇಷ ಪ್ರಕರಣದಂತೆ ಹೇಳಿದ್ದರ ಮೇಲೆ ಒಂದು ಆದೇಶ.

(ಸಿ) ಒಂದು ತೀರ್ಪನ್ನು ಮಾರ್ಪಾಡು ಮಾಡಿದರೆ ಇಲ್ಲವೆ ಸರಿಪಡಿಸಿದರೆ.

(ಡಿ) ಒಂದು ಆದೇಶವನ್ನು ಕಡತಕ್ಕೆ ಸೇರಿಸುವಾಗ ಇಲ್ಲವೆ ಕಡತಕ್ಕೆ ಸೇರಿಸಲು ಇಲ್ಲವೆ ಒಂದು ಒಪ್ಪಂದವನ್ನು ತೀರ್ಪಿಗೆ ಕಳುಹಿಸಲು ನಿರಾಕರಿಸಿದಾಗ.

## ದಂಡ ಪ್ರಕ್ರಿಯಾ ಸಂಹಿತೆ

ಮೇಲ್ಮನವಿಗಳನ್ನು ವರ್ಗಾಯಿಸಬಹುದು. ಜಿಲ್ಲಾ ದಂಡಾಧಿಕಾರಿಯು ಯಾವುದೇ ಮೇಲ್ಮನವಿಯನ್ನು ಅಂತಹ ದಂಡಾಧಿಕಾರಿಯಿಂದ ಹಿಂದಕ್ಕೆ ತೆಗೆದು ಕೊಳ್ಳಬಹುದು. ಇಲ್ಲವೆ ಹೀಗೆ ವರ್ಗಾಯಿಸಿದವು ಇಲ್ಲವೆ ಹಾಜರು ಮಾಡಿದವು. ಯಾವುದೇ ವರ್ಗದ ಮೇಲ್ಮನವಿಗಳನ್ನು ತಿರುಗಿ ತೆಗೆದುಕೊಳ್ಳಬಹುದು.

**ಕಲಮು ೪೦೮**

ಯಾವುದೇ ಸಹಾಯಕ ಸತ್ರ ನ್ಯಾಯಾಧೀಶ ಇಲ್ಲವೆ ಜಿಲ್ಲಾ ದಂಡಾಧಿಕಾರಿ, ಇಲ್ಲವೆ ೧ನೆಯ ವರ್ಗದ ದಂಡಾಧಿಕಾರಿ ಇವರು ಒಬ್ಬ ಆರೋಪಿಗೆ ಕಲಮು ೩೪೯ ಇಲ್ಲವೆ ಯಾವುದರ ಬಗ್ಗೆ ಒಂದು ಆದೇಶವನ್ನು ಮಾಡಲಾಗಿದೆ ಇಲ್ಲವೆ ಒಂದು ಶಿಕ್ಷೆಯನ್ನು ಕಲಮು ೩೮೦ರ ಅನ್ವಯ ೧ನೆಯ ವರ್ಗದ ದಂಡಾಧಿಕಾರಿಯು ಶಿಕ್ಷೆ ವಿಧಿಸಿದ್ದು ಆಗ ಮೇಲ್ಮನವಿಯನ್ನು ಸತ್ರ ನ್ಯಾಯಾಲಯಕ್ಕೆ ಮಾಡಬಹುದು.

ಪರಂತು ಕೆಳಗಿನಂತೆ:

* * *

(ಬ) ಯಾವುದೇ ಪ್ರಕರಣದಲ್ಲಿ ಸಹಾಯಕ ಸತ್ರ ನ್ಯಾಯಾಧೀಶನು, ಇಲ್ಲವೆ ಕಲಮು ೩೦ರ ಅನ್ವಯ ವಿಶೇಷ ಅಧಿಕಾರ ಕೊಟ್ಟ ದಂಡಾಧಿಕಾರಿಯು ಯಾವುದೇ ಶಿಕ್ಷೆ ವಿಧಿಸಿ ಕಾರಾಗೃಹ ವಾಸವನ್ನು ೪ ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವಿಧಿಸಿದ್ದರೆ ಇಲ್ಲವೆ ಯಾವುದೇ ಗಡಿಪಾರು ಶಿಕ್ಷೆ ಪ್ರಕರಣಗಳಲ್ಲಿ ಎಲ್ಲರ ವತಿಯಿಂದ ಇಲ್ಲವೆ ಆರೋಪಿಯರ ಪೈಕಿ ಒಬ್ಬನ ಅಧಿವಿಚಾರಣೆಯಲ್ಲಿ ಶಿಕ್ಷೆಗೆ ಒಳಗಾದವನು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕು.

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|

ಇ) ಒಂದು ತೀರ್ಪಿಗೆ ಕಳುಹಿಸಲು ಒಪ್ಪಿ ಕೊಂಡಿರುವ ಅದನ್ನು ತಡೆಹಿಡಿಯುವ ಆದೇಶ ಮಾಡಿದಾಗ ಇಲ್ಲವೆ ಅದನ್ನು ತಡೆಹಿಡಿಯುವ ಆದೇಶ ಮಾಡಲು ನಿರಾಕರಿಸಿದಾಗ.

(ಈ) ಒಂದು ಮಧ್ಯಸ್ಥಿಕೆಯ ಕಡತವನ್ನು ಆದೇಶವನ್ನು ಹಾಜರುಪಡಿಸುವುದು ನ್ಯಾಯಾಲಯದ ಮಧ್ಯಪ್ರವೇಶ ಇಲ್ಲದೆ ಇಲ್ಲವೆ ಒಂದು ತೀರ್ಪು ಹಾಜರುಪಡಿಸಲು ನಿರಾಕರಿಸುವುದು.

(ಎಫ್.ಎಫ್.) ಕಲಮು ೩೫ಅ ಕೆಳಗೆ ಮಾಡಿದ ಒಂದು ಆದೇಶ,

(ಜಿ) ಕಲಮು ೯೫ರ ಕೆಳಗೆ ಮಾಡಿದ ಒಂದು ಆದೇಶ,

(ಎಚ್) ಒಂದು ಡಿಕ್ರಿಯ ಯಾವುದೇ ಅಮಲ್ ಬಜಾವಣೆಯ ಹೊರತಾಗಿ ಯಾವುದೇ ಒಬ್ಬ ವ್ಯಕ್ತಿ ಈ ಸಂಹಿತೆಯ ಯಾವುದೇ ಉಪಬಂಧದ ಕೆಳಗೆ ಕೇವಲ ದಂಡವನ್ನು ವಿಧಿಸಿದರೆ ಇಲ್ಲವೆ ಅವನನ್ನು ದಸ್ತಗಿರಿ ಮಾಡಲು ಆದೇಶ ಕೊಟ್ಟಿದ್ದರೆ ಇಲ್ಲವೆ ಯಾವುದೇ ವ್ಯಕ್ತಿಗೆ ಸಿವ್ಹಿಲ್ ಸೆರೆಮನೆ ವಾಸದಲ್ಲಿಟ್ಟಿದ್ದರೆ.

(ಆಯ್) ಯಾವುದೇ ಆದೇಶ ನಿಯಮಗಳ ಅನ್ವಯ ಮಾಡಿದ್ದು ಮತ್ತು ಯಾವುದರ ವಿರುದ್ಧ ವ್ಯಕ್ತಪಡಿಸಿದ ಮೇಲ್ಮನವಿ ನಿಯಮಗಳ ಅನ್ವಯ ಅವಕಾಶ ಕೊಟ್ಟಿದ್ದರೆ.

ಪರಂತು ಖಂಡ(ಎಫ್‌ಎಫ್)ದ ಅನ್ವಯ ನಿರ್ದೇಶನ ಮಾಡಿದ ಆದೇಶದ ವಿರುದ್ಧ ಕೆಳಗಿನ ಸಂದರ್ಭ ಹೊರತುಪಡಿಸಿ ಮೇಲ್ಮನವಿಗೆ ಅವಕಾಶ ಇರುವುದಿಲ್ಲ. ಒಂದು ಕಡಿಮೆ ರಕಮನ್ನು ಕೊಡುವುದರ ಬಗ್ಗೆ ಆದೇಶ ಮಾಡದಿರುವುದರ ಬಗ್ಗೆ ಇಲ್ಲವೆ ಆ ಕಡಿಮೆ ರಕಂ ಕೊಡುವುದರ ಬಗ್ಗೆ ಆದೇಶವನ್ನು ಮಾಡಲಿಕ್ಕೇ ಬೇಕಾಗಿತ್ತೆಂದು

(ಕ) ಯಾವನೊಬ್ಬನನ್ನು ಭಾರತದ ಸಂಹಿತೆಯ ಕಲಮು ೧೨೪ರ ಅನ್ವಯು ೦ಯಾವುದೇ ದಂಡಾಧಿಕಾರಿಯು ಶಿಕ್ಷಿಸಿದರೆ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕು.

**ಕಲಮು ೪೦೯**

ಒಂದು ಮೇಲ್ಮನವಿಯು ಸೆಶನ್ಸ್ ನ್ಯಾಯಾಲಯಕ್ಕೆ ಇರುತ್ತದೆ. ಆ ಸೆಶನ್ಸ್ ನ್ಯಾಯಾಧೀಶನು ಇಲ್ಲವೆ ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶನು ಆ ಮೇಲ್ಮನವಿ ವಿಚಾರಣೆ ಮಾಡಬೇಕು.

ಪರಂತು ಆ ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶನಿಗೆ ಪ್ರಾಂತೀಯ ಸರಕಾರವು ಸಾಮಾನ್ಯ ಇಲ್ಲವೆ ವಿಶೇಷ ಆದೇಶದ ಮೂಲಕ (ಆ ಅಧಿವಿಚಾರಣೆಯಲ್ಲಿ ಶಿಕ್ಷೆಗೆ ಒಳಗಾದವನು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕು.) ದಂಡ ಪ್ರಕ್ರಿಯಾ ಸಂಹಿತೆ ಆ ವಿಭಾಗದ ಸತ್ರ ನ್ಯಾಯಾಧೀಶನೆಂದು ಅಧಿಕಾರ ಕೊಟ್ಟಿದ್ದರೆ ಆದೇಶ ಹೊರಡಿಸಿದರೆ ಇಲ್ಲವೆ ಸೆಶನ್ಸ್ ನ್ಯಾಯಾಧೀಶ ಒಪ್ಪಿದರೆ ಅವನು ಇಂಥ ಮೇಲ್ಮನವಿಯನ್ನು ವಿಚಾರಣೆ ಮಾಡಬಹುದು.

**ಕಲಮು ೪೧೦**

ಸೆಶನ್ಸ್ ನ್ಯಾಯಾಧೀಶ ಇಲ್ಲವೆ ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶನು ಮಾಡಿದ ಅಧಿವಿಚಾರಣೆಯಲ್ಲಿ ಒಬ್ಬನಿಗೆ ಶಿಕ್ಷೆ ವಿಧಿಸಿದರೆ ಮೇಲ್ಮನವಿಯು ಉಚ್ಚ ನ್ಯಾಯಾಲಯಕ್ಕೆ ಇದೆ.

**ಕಲಮು ೪೧೧**

ಯಾವುದೇ ಪ್ರೆಸಿಡೆನ್ಸಿ ದಂಡಾಧಿಕಾರಿಯು ಒಂದು ಅಧಿವಿಚಾರಣೆ ನಡೆಯಿಸಿ ಅವನಿಗೆ ಶಿಕ್ಷೆಯನ್ನು ಕೊಟ್ಟರೆ ಅದರ ವಿರುದ್ಧ ಮೇಲ್ಮನವಿಯು ಶಿಕ್ಷೆ ವಿಧಿಸಿದ ಅವನಿಗೆ ದಂಡಾಧಿಕಾರಿಯು ಆರು

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|

(೨) ಈ ಕಲಮಿನ ಕೆಳಗೆ ಮಾಡಿದ ಯಾವುದೇ ಮೇಲ್ಮನವಿಯ ಮೇಲೆ ಮಾಡಿದ ಆದೇಶದ ಮೇಲೆ ಮೇಲ್ಮನವಿಗೆ ಅವಕಾಶ ಇರುವುದಿಲ್ಲ.

**ಕಲಮು ೧೦೫**

(೧) ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದ ಯಾವುದೇ ನ್ಯಾಯಾಲಯವು ತನ್ನ ಅಸಲು ಅಧಿಕಾರ ವ್ಯಾಪ್ತಿಯಲ್ಲಿ ಇಲ್ಲವೆ ಮೇಲ್ಮನವಿ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿದ ಆದೇಶದ ಮೇಲೆ ಯಾವುದೇ ಮೇಲ್ಮನವಿ ಮಾಡಲು ಬರುವುದಿಲ್ಲ. ಆದರೆ ಯಾವುದೇ ಡಿಕ್ರಿಯ ವಿರುದ್ಧ ಯಾವುದೇ ಪ್ರಮಾಣದ ತಪ್ಪು ಸೂಪ್ತದೋಷ ನ್ಯೂನತೆ ಇಲ್ಲ. ಕ್ರಮ ದೋಷತೆಯು ಯಾವುದೇ ಆದೇಶದಲ್ಲಿದ್ದರೆ ಆ ಪ್ರಕರಣದ ನಿರ್ಣಯಕ್ಕೆ ಪರಿಣಾಮವನ್ನುಂಟುಮಾಡುತ್ತಿದ್ದರೆ ಅವುಗಳನ್ನು ಕಾರಣಗಳನ್ನಾಗಿ ಆಧಾರಗಳನ್ನಾಗಿ ಆಕ್ಷೇಪಣೆಗಳನ್ನು ಕಾಣಿಸಿ ಮೇಲ್ಮನವಿಯ ವಿವರಣಾ ಪತ್ರದಲ್ಲಿ ಮೇಲ್ಮನವಿ ಸಲ್ಲಿಸಬಹುದು.

(೨) ೧ನೆಯ ಉಪಕಲಮಿನಲ್ಲಿ ಏನೇ ಹೇಳಿದ್ದರೂ ಯಾವುದೇ ವ್ಯಕ್ತಿಯ ಈ ಸಂಹಿತೆಯು ಅಮಲಿನಲ್ಲಿ ಬಂದ ನಂತರ ಯಾವುದೇ ಪುನರ್ ವಿಚಾರಣೆಗೆ ಆದೇಶ ಮಾಡಿದರೆ, ಮತ್ತು ಅಂಥ ಆದೇಶದ ವಿರುದ್ಧ ಮೇಲ್ಮನವಿ ಇರುತ್ತದೆ. ಆದರೆ ಅಂತಹ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಅಂಥವನು ಅದರಿಂದ ಅವನು ಅದರ ಸರಿತನವನ್ನು ವಿವಾದಿಸುವುದರಿಂದ ಪ್ರತಿಬಂಧಿಸಲಾಗಿದೆ.

**ಕಲಮು ೧೦೯**

ಕಾಲ ಕಾಲಕ್ಕೆ ಇಂಗ್ಲೆಂಡ್ ಅರಸನು ಹೀಜ ದಂಡಾಧಿಕಾರಿಯು ಕೌನ್ಸಿಲದಲ್ಲಿ ಮೇಲ್ಮನವಿ ಕುರಿತಂತೆ ಬ್ರಿಟಿಷ್ ಭಾರತದಲ್ಲಿ ಮತ್ತು ಇನ್ನು

ತಿಂಗಳಿಗಿಂತ ಹೆಚ್ಚಿನ ಕಾರಾಗೃಹ ವಾಸದ ಶಿಕ್ಷೆಯನ್ನು ವಿಧಿಸಿದರೆ, ಇಲ್ಲವೆ ದಂಡದ ಹಣ ಎರಡು ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಇದ್ದರೆ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕು.

**ಕಲಮು ೪೧೧ಅ**

(೧) ಕಲಮು ೪೪೯ರಲ್ಲಿ ಉಪಬಂಧಿಸಿದ್ದಕ್ಕೆ ಬಾಧೆ ಬಾರದಂತೆ ಯಾವುದೇ ವ್ಯಕ್ತಿಯ ಅಧಿ ವಿಚಾರಣೆ ನಡೆಯಿಸಿ ಉಚ್ಚ ನ್ಯಾಯಾಲಯವು ತನ್ನ ಅಸಲು ಅಧಿಕಾರ ವ್ಯಾಪ್ತಿಯಲ್ಲಿ ಆ ಶಿಕ್ಷೆ ವಿಧಿಸಿದರೆ ತನ್ನ ಅಪರಾಧಿಕ ಅಧಿಕಾರ ಚಲಾಯಿಸಿ, ಶಿಕ್ಷೆ ವಿಧಿಸಿದರೆ ಕಲಮು ೪೧೮ ಇಲ್ಲವೆ ಕಲಮು ೪೨೩ರ ಉಪಕಲಮು(೨)ನಲ್ಲಿ ಹೇಳಿದ್ದಕ್ಕೆ ತದ್ವಿರುದ್ಧವಾದಂತೆ, ಇಲ್ಲವೆ ಯಾವುದೇ ಉಚ್ಚ ನ್ಯಾಯಾಲಯದ ಲೆಟರ್ಸ್ ಪೇಟೆಂಟದ ತೀರ್ಪಿನ ವಿರುದ್ಧ ಮೇಲ್ಮನವಿ ಮಾಡಬಹುದು. (ಅ) ಮೇಲ್ಮನವಿಯು ಉಚ್ಚ ನ್ಯಾಯಾಲಯಕ್ಕೆ ಇದೆ. ಶಿಕ್ಷೆಯ ವಿರುದ್ಧ ಸಲ್ಲಿಸುವ ಯಾವುದೇ ಮೇಲ್ಮನವಿಯು ಕಾರಣಗಳಲ್ಲಿ ಕಾನೂನಿನ ಅಂಶವನ್ನು ಮಾತ್ರ ಒಳಗೊಂಡಿರಬೇಕು.

(ಬ) ಮೇಲ್ಮನವಿ ಪರವಾನಗಿಯೊಂದಿಗೆ ಇಲ್ಲವೆ ಅಧಿವಿಚಾರಣೆ ನಡೆಯಿಸಿದ ನ್ಯಾಯಾಧೀಶನು ಮೇಲ್ಮನವಿಗೆ ಯೋಗ್ಯವಿದೆ ಎಂದು ಕೊಟ್ಟ ಸರ್ಟಿಫಿಕೇಟಿನ ಮೇಲೆ ಶಿಕ್ಷೆಯ ವಿರುದ್ಧ ಯಾವುದೇ ವ್ಯಕ್ತಿಯು ಯಾವುದೇ ಕಾರಣ ತೋರಿಸಿ ಮೇಲ್ಮನವಿ ಸಲ್ಲಿಸಿದ್ದರಲ್ಲಿ ಕೇವಲ ಸಂಗತಿಗಳನ್ನು ಮಾತ್ರ ಒಳಗೊಂಡಿದ್ದರೆ, ಇಲ್ಲವೆ ವಿಷಯವನ್ನು ಕಾನೂನಿನ ಸಂಗಡ ಮಿಶ್ರಣ ಮಾಡಿದ್ದರೆ, ಇಲ್ಲವೆ ಯಾವುದೇ ಕಾರಣವು ಮೇಲ್ಮನವಿ–ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಸಾಕಷ್ಟು ಕಾರಣಗಳಿವೆಯೆಂದು ಅನಿಸಿದರೆ, ಮತ್ತು

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|

ಮುಂದೆ ಉಪಬಂಧಿಸಲಾದ ಕಲಂಗಳ ಅನ್ವಯ ಹೀಜ ದಂಡಾಧಿಕಾರಿಗೆ– ಇಂಗ್ಲೆಂಡ್‌ನ ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್ ಇವರಿಗೆ ಮೇಲ್ಮನವಿ ಸಲ್ಲಿಸಲು ಬರುತ್ತದೆ.

(ಅ) ಯಾವುದೇ ಮೇಲ್ಮನವಿಯಲ್ಲಿ ಮಾಡಿದ ಡಿಕ್ರಿಯ ಇಲ್ಲವೆ ಅಂತಿಮ ಆದೇಶವನ್ನು ಉಚ್ಚ ನ್ಯಾಯಾಲಯವು ಇಲ್ಲವೆ ಯಾವುದೇ ನ್ಯಾಯಾಲಯವು ಮೇಲ್ಮನವಿಯ ಅಧಿಕಾರ ವ್ಯಾಪ್ತಿಯಲ್ಲಿ ಅಂತಿಮ ಆದೇಶವನ್ನು ಮಾಡಿದ್ದರೆ,

(ಬ) ಉಚ್ಚ ನ್ಯಾಯಾಲಯವು ತನ್ನ ಅಸಲು ದಿವಾಣಿ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿದ ಯಾವುದೇ ಆದೇಶದ ವಿರುದ್ಧ ಮತ್ತು

(ಕ) ಈ ಮುಂದೆ ಉಪಬಂಧಿಸಿದಂತೆ ಯಾವುದೇ ಡಿಕ್ರಿ ಇಲ್ಲವೆ ಆದೇಶವು ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್– ಇಂಗ್ಲೆಂಡ್‌ನ ಅರಸನಿಗೆ ಮೇಲ್ಮನವಿ ಸಲ್ಲಿಸಲು ಯೋಗ್ಯವಾಗಿದೆಯೆಂದು ಆ ನ್ಯಾಯಾಲಯವು ಪ್ರಮಾಣೀಕರಿಸಿದರೆ,

**ಕಲಮು ೧೧೦**

ಕಲಮು ೧೦೯ರ ಖಂಡ(ಅ) ಮತ್ತು (ಬ)ದಲ್ಲಿ ಕಾಣಿಸಿದ ಪ್ರತಿಯೊಂದು ಪ್ರಕರಣದಲ್ಲಿ ಹಣ ಇಲ್ಲವೆ ದಾವೆಯ ಆಸ್ತಿ ಕಿಮ್ಮತ್ತು ಮೊದಲನೆಯ ನ್ಯಾಯಾಲಯದಲ್ಲಿ ೧೦,೦೦೦ ರೂಪಾಯಿಗಳು ಮತ್ತು ಹೆಚ್ಚಿಗೆ ಇರಬೇಕು ಮತ್ತು ಹಣ ಮತ್ತು ದಾವೆಯ ಆಸ್ತಿಯ ಕಿಮ್ಮತ್ತು ಮೇಲ್ಮನವಿಯಲ್ಲಿ 'ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್' ಇಂಗ್ಲೆಂಡ್‌ನ ಅರಸನಿಗೆ ಅದೇ ಹಣ ಮತ್ತು ಹೆಚ್ಚಿನದ್ದು ಇರಲಿಕ್ಕೇಬೇಕು.

ಇಲ್ಲವೆ ಯಾವುದೇ ಡಿಕ್ರಿ ಇಲ್ಲವೆ ಅಂತಿಮ ಆದೇಶ ಇದು ನೇರವಾಗಿ ಯಾವುದೇ ಆಸ್ತಿಗೆ ಇಲ್ಲವೆ ಅಂತಹ ಹಣಕ್ಕೆ ಕ್ಲೇಮು (ಮಾಗಣಿ) ಮಾಡಿರುವಂತಹದ್ದು ಇರಬೇಕು.

(ಕ) ಕಾನೂನಿನ ಪ್ರಕಾರ ಗೊತ್ತುಪಡಿಸಿದ ಶಿಕ್ಷೆ ಇರದಿದ್ದರೆ ಆಗ ಮೇಲ್ಮನವಿ–ನ್ಯಾಯಾಲಯದ ಪರವಾನಗಿ ಇಲ್ಲದೆ ಮೇಲ್ಮನವಿ ಸಲ್ಲಿಸಲು ಬರುವುದಿಲ್ಲ.

(೨) ಕಲಮು ೪೧೭ರಲ್ಲಿ ಏನೇ ಹೇಳಿದ್ದರೂ ಪ್ರಾಂತೀಯ ಸರಕಾರವು ಸಾರ್ವಜನಿಕ ಅಭಿಯೋಜಕನಿಗೆ ಉಚ್ಚ ನ್ಯಾಯಾಲಯ ಬಿಡುಗಡೆಯ ವಿರುದ್ಧ ಮೇಲ್ಮನವಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಆದೇಶಿಸಬಹುದು. ತನ್ನ ಮೂಲ ಅಧಿಕಾರ ವ್ಯಾಪ್ತಿಯಲ್ಲಿ ವಿಚಾರಣೆ ನಡೆಯಿಸಿ ಬಿಡುಗಡೆ ಮಾಡಿದ ಪ್ರಸಂಗದಲ್ಲಿ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವಂತೆ ಸಾರ್ವಜನಿಕ ಅಭಿಯೋಜಕನಿಗೆ ಆದೇಶ ನೀಡಬಹುದು. ಕಲಮು ೪೧೮ರಲ್ಲಿ ಏನೇ ಹೇಳಿದ್ದರೂ ಇಲ್ಲವೆ ಕಲಮು ೪೨೩ ಉಪ ಕಲಮು (೨) ಇಲ್ಲವೆ ಯಾವುದೇ ಉಚ್ಚ ನ್ಯಾಯಾಲಯದ ಲೆಟರ್ಸ್ ಪೇಟೆಂಟ್ ಅಂದರೆ ಈ ಖಂಡದ ಉಪಕಲಮದ ಖಂಡ(ಬ) ಮತ್ತು (ಕ)ದಲ್ಲಿ ಪರಿಬಂಧಿಸಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಬಹುದು.

(೩) ಶಿಕ್ಷೆಯ ಯಾವುದೇ ಅಧಿನಿಯಮದ ಅನ್ವಯ ಇಲ್ಲವೆ ರೆಗ್ಯುಲೇಶನ್‌ನ ವಿರುದ್ಧ ಮಾಡಿದ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದಷ್ಟು ನ್ಯಾಯಮೂರ್ತಿಗಳನ್ನು ಒಳಗೊಂಡಿರತಕ್ಕದ್ದು. ಆದರೆ ಉಚ್ಚ ನ್ಯಾಯಾಲಯದ ಅಸಲು ಅಧಿಕಾರ ವ್ಯಾಪ್ತಿಯಲ್ಲಿ ಅಧಿವಿಚಾರಣೆ ಮಾಡಿ ಶಿಕ್ಷೆ ವಿಧಿಸಿದ್ದರೆ ಅಂತಹ ನ್ಯಾಯಾಧೀಶನು ಈ ವಿಭಾಗೀಯ ಪೀಠದ ರಚನೆಯಲ್ಲಿ ಅಂಥ ಅಧಿನಿಯಮ ಸೇರಿಸುವುದು ಅಸಾಧ್ಯವೆಂದಾಗ ಉಚ್ಚ ನ್ಯಾಯಾಲಯವು ಪ್ರಕರಣದ

## ಸಿವಿಲ್ ಪ್ರಕ್ರಿಯಾ ಸಂಹಿತೆ

ಮತ್ತು ಕೆಳಗಿನ ನ್ಯಾಯಾಲಯದ ಡಿಕ್ರಿ ಇಲ್ಲವೆ ಅಂತಿಮ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆಯೋ ಅಂಥ ಮೇಲ್ಮನವಿಯಲ್ಲಿ ಆ ಕೂಡಲೇ ಕೆಳ ನ್ಯಾಯಾಲಯದ ಡಿಕ್ರಿ ಇಲ್ಲವೆ ಅಂತಿಮ ಆದೇಶವನ್ನು ದೃಢೀಕರಿಸಲಾಗಿದೆಯೋ ಅಂತಹ ಪ್ರಕರಣಗಳಲ್ಲಿ ಮೇಲ್ಮನವಿ ಮಾಡಿದಾಗ ಅದರಲ್ಲಿ ಕಾನೂನಿನ ಸಾರಭೂತ ಪ್ರಶ್ನೆ ಅಡಕವಾಗಿರಬೇಕು.

### ಕಲಮು ೧೧೧

ಕಲಮು ೧೧೦ರಲ್ಲಿ ಏನೇ ಹೇಳಿದ್ದರೂ 'ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್' ಇಂಗ್ಲೆಂಡ್ ಅರಸನಿಗೆ ಮೇಲ್ಮನವಿ ಸಲ್ಲಿಸಲು ಬರುವುದಿಲ್ಲ.

(ಅ) ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶನು ಮಾಡಿದ ಡಿಕ್ರಿ ಇಲ್ಲವೆ ಆದೇಶದ ವಿರುದ್ಧ ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್ ಇಂಗ್ಲೆಂಡ್ ಅರಸನನ್ನು ಒಳಗೊಂಡವರಿಗೆ ಲೆಟರ್ಸ್ ಪೇಟೆಂಟ್ ಇಲ್ಲವೆ ವಿಭಾಗ ನ್ಯಾಯಾಲಯದ ಒಬ್ಬ ನ್ಯಾಯಾಧೀಶನು ಇಲ್ಲವೆ ಇಬ್ಬರು ಇಲ್ಲವೆ ಹೆಚ್ಚು ಜನ ನ್ಯಾಯಾಧೀಶರು ಅಂತಹ ಉಚ್ಚ ನ್ಯಾಯಾಲಯದವರು ಇಲ್ಲವೆ ಒಂದು ವಿಭಾಗೀಯ ನ್ಯಾಯಾಲಯವು ಇಬ್ಬರು ಇಲ್ಲವೆ ಹೆಚ್ಚಿನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡಿದ್ದು ಯಾರು ತಮ್ಮ ಅಭಿಪ್ರಾಯದಲ್ಲಿ ಸರಿಸಮಾನ ಸಂಖ್ಯೆಯಲ್ಲಿ ವಿಭಾಗಿಸಲ್ಪಟ್ಟರೆ ಮತ್ತು ಆ ಎಲ್ಲ ನ್ಯಾಯಾಧೀಶರ ಒಟ್ಟು ಬಹುಮತವಿಲ್ಲದ ಸಂದರ್ಭದಲ್ಲಿ ಆ ಉಚ್ಚ ನ್ಯಾಯಾಲಯದ ಎಲ್ಲ ನ್ಯಾಯಾಧೀಶರು ಕೂಡಿ ಒಂದು ಬಹುಮತದ ತೀರ್ಪು ಕೊಡಲು ಸಾಧ್ಯವಾಗದಿರುವಾಗ;

(ಬ) ಯಾವುದೇ ಡಿಕ್ರಿ ಯಾವುದರ ವಿರುದ್ಧ ಕಲಮು ೧೦೨ರ ಕೆಳಗೆ ಎರಡನೆಯ ಮೇಲ್ಮನವಿಗೆ ಅವಕಾಶ ಇರುವುದಿಲ್ಲವೋ;

## ದಂಡ ಪ್ರಕ್ರಿಯಾ ಸಂಹಿತೆ

ಸಂದರ್ಭಗಳನ್ನು ಪ್ರಾಂತೀಯ ಸರಕಾರಕ್ಕೆ ತಿಳಿಸುತ್ತದೆ. ಅದಕ್ಕೆ ಅದು ಇಂತಹ ಮೇಲ್ಮನವಿ ಕಲಮಿನ ದೃಷ್ಟಿಯಿಂದ ಕಲಮು ೫೨೭ರ ಕೆಳಗೆ ಬೇರೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಲು ಯೋಗ್ಯ ಕ್ರಮ ಕೈಕೊಳ್ಳುತ್ತದೆ.

(೪) ಹಿಜ್ ಮ್ಯಾಜೆಸ್ಟಿ ಇಂಗ್ಲೆಂಡ್‌ನ ಅರಸನು ಈ ಬಗ್ಗೆ ಕಾಲಕಾಲಕ್ಕೆ ಮಾಡಬಹುದಾದ ನಿಯಮಗಳಿಗೆ ಒಳಪಟ್ಟು ಉಚ್ಚ ನ್ಯಾಯಾಲಯವು ಸ್ಥಾಪಿಸಬಹುದು, ಇಲ್ಲವೆ ಅವಶ್ಯ ಬೀಳಬಹುದಾದ ಒಂದು ಮೇಲ್ಮನವಿಯನ್ನು ಹಿಜ್ ಮ್ಯಾಜೆಸ್ಟಿ ಇನ್ ಕೌನ್ಸಿಲ್ ಅವರಿಗೆ ಯಾವುದೇ ಮೇಲ್ಮನವಿಯ ಮೇಲೆ ಮಾಡಿದ ಆದೇಶದ ಉಪಕಲಮು (೧)ರ ಅನ್ವಯ ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಾಲಯವು ಯಾವುದರ ಬಗ್ಗೆ ಆದೇಶ ಮಾಡಿರುತ್ತದೆಯೋ ಉಚ್ಚ ನ್ಯಾಯಾಲಯವು ಅಂತಹ ಮೇಲ್ಮನವಿಗೆ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಬೇಕು.

### ಕಲಮು ೪೧೨

ಈ ಕೆಳಗೆ ಏನೇ ಹೇಳಿದ್ದರೂ ಆರೋಪಿಯು ಎಲ್ಲ ತಪ್ಪೊಪ್ಪಿಗೆಯನ್ನು ಮಾಡಿದ್ದರೆ ಆ ಕುರಿತು ಉಚ್ಚ ನ್ಯಾಯಾಲಯವು ಸೆಶನ್ಸ್ ನ್ಯಾಯಾಲಯ ಇಲ್ಲವೆ ಪ್ರೆಸಿಡೆನ್ಸಿ ದಂಡಾಧಿಕಾರಿ, ಇಲ್ಲವೆ ೧ನೆಯ ವರ್ಗದ ದಂಡಾಧಿಕಾರಿಯು ಅಂತಹ ತಪ್ಪೊಪ್ಪಿಗೆಯ ಮೇಲೆ ಶಿಕ್ಷೆ ವಿಧಿಸಿದ್ದರೆ, ಆ ತೀರ್ಪಿನ ಆ ಶಿಕ್ಷೆಯ ಕಾನೂನು ಸಮ್ಮತಿಯ ಮಟ್ಟಿಗೆ ಹೊರತುಪಡಿಸಿ ಮೇಲ್ಮನವಿ ಸಲ್ಲಿಸಲು ಬರುವುದಿಲ್ಲ.

| ಸಿವಿಲ್ ಪ್ರಕ್ರಿಯಾ ಸಂಹಿತೆ | ದಂಡ ಪ್ರಕ್ರಿಯಾ ಸಂಹಿತೆ |
|---|---|

**ಕಲಮು ೧೧೧ಅ**

ಕಲಮು ೨೦೫ರ ಅನ್ವಯ ಒಂದು ಪ್ರಮಾಣ ಪತ್ರವನ್ನು ಕೊಡಲಾಗಿದೆಯೇ?

(೧) ಭಾರತ ಸರಕಾರದ ಅಧಿನಿಯಮ ೧೯೩೫ ಅದರ ಕೊನೆಯ ಮೂರು ಪೂರ್ವವರ್ತಿ ಕಲಮುಗಳು ಫೆಡರಲ್ ಕೋರ್ಟಿಗೆ ಮತ್ತು ಅದರಂತೆ ಹಿಜ್ ಮ್ಯಾಜಿಸ್ಟಿ ಇನ್ ಕೌನ್ಸಿಲ್‌ಗೆ ಮೇಲ್ಮನವಿಗಳನ್ನು ಸಲ್ಲಿಸಬೇಕಾದರೆ ಇವು ಅನ್ವಯಿಸುತ್ತವೆ. ಅದರಂತೆ ಹಿಜ್ ಮ್ಯಾಜಿಸ್ಟಿಗೆ ಅಭಿಪ್ರಾಯ ಕೋರಿಕೆಗೆ ಇವು ಅನ್ವಯಿಸುತ್ತವೆಯೆಂದು ಅರ್ಥೈಸಬೇಕು.

**ಪರಂತು**

(ಅ) ಯಾವ ಪ್ರಕರಣಗಳಲ್ಲಿ ಮೇಲ್ಮನವಿಗೆ ಅವಕಾಶವಿದೆಯೋ ಅಂತಹ ಪ್ರಕರಣಗಳಲ್ಲಿ ಈ ಕಾಲಮಿತಿ ಪರಿಮಿತಿಯು ಸೀಮಿತಗೊಳ್ಳುತ್ತದೆಂದು ಅರ್ಥೈಸಬೇಕೇ? ಯಾವ ಪ್ರಕರಣಗಳಲ್ಲಿ ಫೆಡರಲ್ ಕೋರ್ಟಿನ ಅನುಮತಿ ಇಲ್ಲದೆ ಮೇಲ್ಮನವಿಗೆ ಅವಕಾಶವಿರುವ ಪ್ರಕರಣಗಳಲ್ಲಿ ಕಾನೂನಿನ ಮೂಲಭೂತ ಪ್ರಶ್ನೆ ಕಲಂನಲ್ಲಿ ಅಡಗಿದೆಯೆಂದು ಅದರ ಅರ್ಥವಿವರಣೆ, ಇಲ್ಲವೆ ಕೌನ್ಸಿಲ್‌ನಲ್ಲಿ ಮಾಡಿದ ಯಾವುದೇ ಆದೇಶವನ್ನು ತಪ್ಪಾಗಿ ನಿರ್ಣಯಿಸಿದ್ದರೆ ಅಂತಹ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಬಹುದು.

(ಬ) ಕಲಮು ೧೦೯ರ ಖಂಡ(ಸಿ)ದ ಅನ್ವಯ ಒಂದು ಪ್ರಕರಣವು ಮೇಲ್ಮನವಿಗೆ ಯೋಗ್ಯವಾಗಿದೆಯೆಂಬುದನ್ನು ಮತ್ತು ಕಲಮು ೧೧೦ರ ಅನ್ವಯ ಕಾನೂನಿನ ಸಾರಭೂತ ಅಂಶವು ಅಡಗಿದೆ ಮತ್ತು ಯಾವುದೇ ಕಾನೂನಿನ ಪ್ರಶ್ನೆ ಈ ಕಲಮನ್ನು ಅರ್ಥೈಯಿಸುವಲ್ಲಿ ಅಥವಾ ಕೌನ್ಸಿಲ್‌ನಲ್ಲಿ ಮಾಡಿದ ಯಾವುದೇ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೆ ಹೋಗಿದೆಯೆ ಎಂಬುದನ್ನು ಪರಿಶೀಲಿಸಬೇಕು.

**ಕಲಮು ೪೧೩**

ಈ ಕೆಳಗೆ ಏನೇ ಹೇಳಿರಲಿ ಯಾವುದೇ ಒಬ್ಬನಿಗೆ ಉಚ್ಚ ನ್ಯಾಯಾಲಯವು ಯಾವನೊಬ್ಬ ವ್ಯಕ್ತಿಗೆ ಕೇವಲ ಆರು ತಿಂಗಳಿಗಿಂತ ಕಡಿಮೆ ಕಾರಾಗೃಹ ವಾಸದ ಶಿಕ್ಷೆ ಇಲ್ಲವೆ ಕೇವಲ ೨೦೦ ರೂಪಾಯಿಗಳಿಗೆ ಮಿಕ್ಕದಂತೆ ದಂಡ ವಿಧಿಸಿದ್ದರೆ ಇಲ್ಲವೆ ಸತ್ರ ಸೆಶನ್ಸ್ ನ್ಯಾಯಾಲಯವು ಕೇವಲ ಒಂದು ತಿಂಗಳು ಕಾರಾಗೃಹವಾಸ ಮೀರದಂತೆ ಇಲ್ಲವೆ ಒಬ್ಬ ಜಿಲ್ಲಾ ದಂಡಾಧಿಕಾರಿಯು ಇಲ್ಲವೆ ಯಾವುದೇ ೧ನೆಯ ವರ್ಗದ ದಂಡಾಧಿಕಾರಿಯು ಐವತ್ತು ರೂಪಾಯಿ ಮಿಕ್ಕದಂತೆ ದಂಡ ವಿಧಿಸಿದರೆ ಅದರ ವಿರುದ್ಧ ಮೇಲ್ಮನವಿ ಇರುವುದಿಲ್ಲ.

# ಅಧ್ಯಾಯ ೭

# ಆಸ್ತಿಯ ವರ್ಗಾವಣೆ ಕಾಯ್ದೆ

# ಆಸ್ತಿಯ ವರ್ಗಾವಣೆ ಕಾಯ್ದೆ

**ಹಂಚುವಿಕೆ**

೧. ಇಬ್ಬರು ಬೇರೆ ಬೇರೆ ವ್ಯಕ್ತಿಗಳ ಮಾಲೀಕತ್ವದ ಆಸ್ತಿಗಳನ್ನು ಒತ್ತೆ ಹಾಕಿದರೆ ಮತ್ತು ಆ ಒತ್ತೆಯ ಹಣವನ್ನು ತಿರುಗಿ ಕೊಡುವುದಕ್ಕಾಗಿ ಅದರಲ್ಲಿ ಒಂದೇ ಆಸ್ತಿಯನ್ನು ಮಾರಾಟ ಮಾಡಿದರೆ ಆ ಮಾರಾಟದಿಂದ ಆ ಒತ್ತೆಯ ಹಣ ಮುಟ್ಟಿಸಲು ಸಾಕಷ್ಟು ಹಣವಾಗುತ್ತಿದ್ದರೆ ಅದರ ಪರಿಣಾಮವೇನೆಂದರೆ ಒಬ್ಬ ಆಸ್ತಿಯ ಮಾಲೀಕನು ತನ್ನ ಆಸ್ತಿಯನ್ನು ಕಳೆದುಕೊಳ್ಳುತ್ತಾನೆ, ಆದರೆ ಇನ್ನೊಬ್ಬನು ಏನನ್ನು ಕೊಡದೆ ತನ್ನ ಆಸ್ತಿಯನ್ನು ತಿರುಗಿ ಪಡೆಯುತ್ತಾನೆ.

ಇದು ತುಂಬಾ ಅನ್ಯಾಯವಾದುದು. ಈ ಅನ್ಯಾಯವನ್ನು ಹೋಗಲಾಡಿಸುವುದಕ್ಕಾಗಿ ಮತ್ತು ನ್ಯಾಯ ಸಮ್ಮತತೆಯ ದೃಷ್ಟಿಯಿಂದ ವಂತಿಗೆ ಸಿದ್ಧಾಂತವನ್ನು ವಿಭಾಗ ೮೨ರಲ್ಲಿ ಸೇರಿಸಲಾಗಿದೆ.

೨. ಈ ವಿಭಾಗದ ಅನ್ವಯ ಬೇರೆ ಬೇರೆ ಮಾಲೀಕರು ತಮ್ಮ ಪ್ರಮಾಣಕ್ಕನುಗುಣವಾಗಿ ವಂತಿಗೆಯನ್ನು ಆ ಒತ್ತೆ ಹಾಕಿದ ಹಣ ಕೊಡಲು ಹೊಣೆಗಾರನಿರುತ್ತಾರೆ.

೩. ಪ್ರತಿಯೊಬ್ಬರು ಎಷ್ಟು ಹಣವನ್ನು ವಂತಿಗೆ ಕೊಡಬೇಕೆಂಬುದನ್ನು ನಿರ್ಧರಿಸುವಾಗ ಆ ಒತ್ತೆ ಹಾಕುವ ದಿನದಂದು ಇದ್ದ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದೇ ದಿನಾಂಕದಂದು ಯಾವುದೇ ಹಣ ಕೊಡುವುದಿದ್ದರೆ ಅದನ್ನು ಅದರಲ್ಲಿ ಕಳೆಯಬೇಕು.

೧. ಈ ಒತ್ತೆಯನ್ನು ಸಂಪೂರ್ಣವಾಗಿ ಕೊಟ್ಟು ಮುಟ್ಟಿಸಿದಾಗ ಈ ವಂತಿಕೆಯ ಕ್ಲೇಮ್ (ಮಾಗಣಿ) ಉದ್ಭವಿಸುತ್ತದೆ.

*೨೬ ಅಲಹಾಬಾದ್ ೪೦೭ (೪೨೬, ೨೭) ಟಿ.ಬಿ.*

೨. ಈ ಕ್ರಮ ನಿರ್ಣಯಿಸುವ ನಿಯಮವು ಈ ವಂತಿಗೆ ಹಕ್ಕಿನ ವಿಷಯವಾಗಿದೆ. ಈ ವಂತಿಗೆಯ ಹಕ್ಕಿನ ವಿಷಯವು ಕ್ರಮ ನಿರ್ಣಯಿಸುವ ನಿಯಮಗಳಾಗಿದೆ. ಅಂದರೆ ಎಲ್ಲ ಕ್ರಮ ನಿರ್ಣಯಿಸುವ ವಂತಿಗೆಯ ನಡುವೆ ವಿರೋಧಾಭಾಸ ಬಂದರೆ, ಕ್ರಮ ನಿರ್ಣಯಿಸುವ ನಿಯಮವು ಚಾಲ್ತಿಯಲ್ಲಿ ಬರುತ್ತದೆ. ಕಲಮು ೮೨ರ ಕೊನೆಯ ಪ್ಯಾರಾವು ಇದರ ಅರ್ಥವಾಗಿರುತ್ತದೆ.

**ಅಡಮಾನಕಾರನ ಹಕ್ಕನ್ನು ಯಾರು ಕೇಳಬೇಕು?**

**ಕಲಮು ೯೧**

* * *

**ಅಡಮಾನ ಪಡೆದವನ ಹಕ್ಕನ್ನು ಯಾರು ಕೇಳಬೇಕು?**

**ಕಲಮು ೯೨**

ಅಡಮಾನಕಾರನಲ್ಲದ ಯಾವುದೇ ಒಬ್ಬ ವ್ಯಕ್ತಿಯು ಒತ್ತೆಯ ಹಣವನ್ನು ಸಂದಾಯ ಮಾಡಿದರೆ ಆ ವ್ಯಕ್ತಿಯು ಅಡಮಾನ ಪಡೆದವನ ಹಕ್ಕನ್ನು ಪಡೆದುಕೊಳ್ಳುತ್ತಾನೆ.

ಅಂತಹ ವ್ಯಕ್ತಿಗಳು–

(೧) ತದನಂತರ ಅಡಮಾನ ಪಡೆದವನು.

(೨) ಜಾಮೀನುದಾರನು.

(೩) ಆಸ್ತಿಯಲ್ಲಿ ಹಿತಾಸಕ್ತಿಯುಳ್ಳ ಯಾವುದೇ ವ್ಯಕ್ತಿ.

(೪) ಸಹ ಅಡಮಾನಕಾರ.

(೫) ಯಾವುದೇ ವ್ಯಕ್ತಿಯು ಯಾರ ಹಣದಿಂದ ಒತ್ತೆಯನ್ನು ಮುಕ್ತ ಮಾಡಿಯೇ, ಇದಕ್ಕೆ ಯಾವುದೇ ನೋಂದಾಯಿತ ದಸ್ತಾವೇಜಿನ ಮೂಲಕ ಅಡಮಾನಕಾರನು ಒಪ್ಪಿಕೊಂಡಿರಬೇಕು. ಇದಕ್ಕೆ ಪ್ರತ್ಯಾಸನ ನಿಯಮವೆಂದು ಕರೆಯಲಾಗುತ್ತದೆ.

**II. ಮಾರಾಟದ ಕಾನೂನು ಯಾವುದೇ ನಿರ್ದಿಷ್ಟ ರೀತಿಯ ಹಸ್ತಾಂತರವನ್ನು ಒಳಗೊಂಡಿದೆಯೇ?**

೧. ಸ್ಥಿರ ಆಸ್ತಿಯ ಮಾರಾಟವನ್ನು ಒಂದು ನಿರ್ದಿಷ್ಟವಾದ ಹಾಗೂ ಗೊತ್ತುಪಡಿಸಿದ ರೀತಿಯನ್ನು ಒಳಗೊಂಡಿರುತ್ತದೆ. ಆ ಪದ್ಧತಿಯ ನೋಂದಣಿ ಮಾಡಿಸುವುದು ಇಲ್ಲವೇ ಆಸ್ತಿಯ ಸ್ವಾಧೀನ ಕೊಡುವುದರ ಮೂಲಕ ಇರುತ್ತದೆ.

೨. ಒಂದೇ ಪ್ರಕರಣದಲ್ಲಿ ಯೋಗ್ಯ ಪದ್ಧತಿ ಅಂದರೆ ನೋಂದಣಿ ಮಾಡಿಸುವುದು ಇಲ್ಲವೆ ಅದರ ಸ್ವಾಧೀನಕ್ಕೆ ಕೊಡುವುದು. ಇವು ಅವುಗಳ ಪ್ರತಿಫಲವನ್ನು ಅವಲಂಬಿಸಿರುತ್ತವೆ.

(i) ಆ ಸ್ಥಿರ ಆಸ್ತಿಯು ಭೌತಿಕ ಸ್ಥಿರ ವಸ್ತು ಇಲ್ಲವೇ ಅಭೌತಿಕ ಸ್ಥಿರ ವಸ್ತುಗಳಾಗಿದ್ದಾಗ.

(ii) ಆ ಸ್ಥಿರ ಆಸ್ತಿಯ ಬೆಲೆಯು ೧೦೦ ರೂ.ಗಳಿಗಿಂತ ಹೆಚ್ಚು ಇಲ್ಲವೇ ೧೦೦ ರೂ.ಗಳಿಗಿಂತ ಕಡಿಮೆ ಇದ್ದಾಗ.

೩. ಆಸ್ತಿಯು ಅಭೌತಿಕ ಆಸ್ತಿಯಾಗಿದ್ದರೆ, ಆಗ ಹಸ್ತಾಂತರವು ನೋಂದಣಿಯ ಮೂಲಕವೇ ಆಗತಕ್ಕದ್ದು. ಅದರ ಬೆಲೆಯು ಎಷ್ಟು ಎಂಬುದು ಮಹತ್ವದ್ದಲ್ಲ.

೪. ಆ ಆಸ್ತಿಯು ಭೌತಿಕ ಸ್ಥಿರ ಆಸ್ತಿಯಾಗಿದ್ದಾಗ.

(i) ಅದರ ಬೆಲೆಯು ೧೦೦ ರೂಪಾಯಿಗಳಿಗಿಂತ ಹೆಚ್ಚು ಇದ್ದಾಗ ಅದನ್ನು ನೋಂದಣಿ ಮೂಲಕವೇ ಹಸ್ತಾಂತರಿಸಬೇಕು.

((ii) ಅದರ ಬೆಲೆಯು ೧೦೦ ರೂ.ಗಳಿಗಿಂತ ಕಡಿಮೆ ಇದ್ದಾಗ ಅದನ್ನು ನೋಂದಣಿ ಮೂಲಕ ಇಲ್ಲವೆ ಅದರ ಸ್ವಾಧೀನ ಕೊಡುವುದರ ಮೂಲಕ ಹಸ್ತಾಂತರ ಮಾಡಬಹುದು.

೫. ಒಂದು ಪ್ರಕರಣವನ್ನು ಹೊರತು ಉಳಿದ ಪ್ರಕರಣಗಳಲ್ಲಿ ನೋಂದಣಿಯು ಒಂದು ರೀತಿ ಮಾರಾಟವನ್ನು ಪರಿಣಾಮಕಾರಿಯನ್ನಾಗಿ ಮಾಡುತ್ತದೆಂಬುದು ಸ್ಪಷ್ಟವಾಗುತ್ತದೆ. ಎಲ್ಲಿ ಆಯ್ಕೆಯ ಅವಕಾಶವಿದೆಯೋ, ಅಲ್ಲಿ ಭೌತಿಕ ಆಸ್ತಿಯು ಇದ್ದು ಅದರ ಬೆಲೆಯು ೧೦೦ ರೂಪಾಯಿಗಳಿಗಿಂತ ಕಡಿಮೆ ಇದ್ದಾಗ, ಅದನ್ನು ನೋಂದಣಿ ಮೂಲಕ ಇಲ್ಲವೇ ಅದರ ಸ್ವಾಧೀನ ಕೊಡುವ ಮೂಲಕ ಹಸ್ತಾಂತರಿಸಬಹುದು.

೬. ನೋಂದಣಿ ಮತ್ತು ಸ್ವಾಧೀನಕ್ಕೆ ಕೊಡುವುದು ಇವೆರಡೂ ಪರ್ಯಾಯವಾಗಿ ಪೂರಕಗಳಾಗಿರುತ್ತವೆ.

(i) ಒಂದು ವ್ಯವಹಾರವನ್ನು ಪೂರ್ತಿಗೊಳಿಸಲಿಕ್ಕೆ ನೋಂದಣಿಯು ಒಂದೇ ರೀತಿ ಎಂದು ಕಾನೂನು ಗೊತ್ತುಪಡಿಸಿದಾಗ, ಆಸ್ತಿಯ ಸ್ವಾಧೀನ ಕೊಡುವುದು ಆ ವ್ಯವಹಾರ ಪೂರ್ತಿಗೊಳಿಸಲು ಅವಶ್ಯವಿರುವುದಿಲ್ಲ.

(ii) ಯಾವ ವ್ಯವಹಾರದಲ್ಲಿ ಆಸ್ತಿ ಸ್ವಾಧೀನಕ್ಕೆ ಕೊಡಿಸುವುದನ್ನು ನಿರ್ದಿಷ್ಟಪಡಿಸಿದಾಗ, ಆಗ ಆ

ವ್ಯವಹಾರವನ್ನು ಪೂರ್ತಿಗೊಳಿಸಲು ನೋಂದಣಿಯ ಅವಶ್ಯಕತೆಯು ಇರುವುದಿಲ್ಲ. ಆದಾಗ್ಯೂ ಸ್ವಾಧೀನಕ್ಕೆ ಕೊಡುವ ಕೇವಲ ನೋಂದಣಿ ಇದ್ದರೆ ಆ ಮಾರಾಟದ ವ್ಯವಹಾರವು ಪೂರ್ತಿಗೊಳ್ಳುತ್ತದೆ.

೭. ಹಸ್ತಾಂತರವು ಇನ್ನಾವುದೇ ಬೇರೆ ರೀತಿಯಲ್ಲಿರುವುದಿಲ್ಲ.

ಹಸ್ತಾಂತರ ವ್ಯವಸ್ಥೆಗಳ ರೀತಿಗಳನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. ಮಾರಾಟವು ಇನ್ನಾವುದೇ ರೀತಿಯಲ್ಲಿ ಪರಿಣಾಮಕಾರಿಯಾಗುವುದಿಲ್ಲ. ಒಬ್ಬನು ಒಪ್ಪುವುದರಿಂದ, ಇಲ್ಲವೆ ಒಂದು ಕಾಗದದಲ್ಲಿ ಒಕ್ಕಣಿಕೆಯಾಗಿ ಕಾಣಿಸಿದ, ಇಲ್ಲವೆ ಒಂದು ಅರ್ಜಿಯಲ್ಲಿ ಕಾಣಿಸುವುದರಿಂದ, ಇಲ್ಲವೆ ಹಕ್ಕುಪತ್ರದಲ್ಲಿ ನಮೂದು ಮಾಡಿದರೆ ಮಾಲೀಕತ್ವವು ಬರುವುದಿಲ್ಲ. ಹೊಲವನ್ನು ಮಾರಾಟ ಮಾಡಿದ್ದನೆಂಬುದು ಒಂದು ಖರೀದಿ ಕಾಗದವನ್ನು ನೋಂದು ಮಾಡಿಕೊಟ್ಟಿದೆಂಬುದು ಕಾನೂನಿನ ದೃಷ್ಟಿಯಲ್ಲಿ ಉಪಬಂಧವಾಗುವುದು.

*೪೩ ಕಲ್ಕತ್ತ ೭೮೦*

೮. ಈ ವ್ಯವಹಾರಕ್ಕಾಗಿ ನಿರ್ದಿಷ್ಟಪಡಿಸಲಾದ ರೀತಿಗಳನ್ನು ಪಾಲಿಸುವುದು ಅವಶ್ಯವಿದೆ–

(i) ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಹಸ್ತಾಂತರ ಮಾಡಿದ ಹೊರತು ಮಾಲೀಕತ್ವವು ಹಸ್ತಾಂತರ ವಾಗುವುದಿಲ್ಲ.

(ii) ಒಂದು ನೋಂದಾಯಿಸಿದ್ದ ಖರೀದಿ ಕಾಗದವು ಸಾಕಾಗುವುದಿಲ್ಲ.

ಅ) ನೋಂದಣಿಯು ಕಡ್ಡಾಯವಿದ್ದ ಪ್ರಕರಣಗಳಲ್ಲಿ

ಬ) ಒಂದು ನೂರು ರೂಪಾಯಿಗಳಿಗಿಂತ ಕಡಿಮೆ ಬೆಲೆಯಿದ್ದ ಆಸ್ತಿಯ ಪ್ರಕರಣಗಳಲ್ಲಿಯೂ ಸಹ ಆಸ್ತಿಯ ಸ್ವಾಧೀನಕ್ಕೆ ಕೊಟ್ಟಿರದಿದ್ದರೆ ಅಲ್ಲಿ ಹಸ್ತಾಂತರವಾಗುವುದಿಲ್ಲ.

೯. ಭೌತಿಕ ಮತ್ತು ಅಭೌತಿಕಗಳ ಅರ್ಥ

(i) ಸ್ಥಿರಾಸ್ತಿಯು ಭೌತಿಕ ಇಲ್ಲವೆ ಅಭೌತಿಕ ಆಸ್ತಿಗಳಾಗಿರುತ್ತವೆ.

(ii) ಆನುವಂಶಿಕ ಭೌತಿಕ ವಸ್ತು ಮತ್ತು ಆನುವಂಶಿಕ ಅಭೌತಿಕ ವಸ್ತು ಇವೆರಡರಲ್ಲಿ ಅಂತರವು ಇಂಗ್ಲಿಷ್ ಕಾನೂನಿನಲ್ಲಿ ಮಾಡಿದಂತೆ ಭೌತಿಕ ಮತ್ತು ಅಭೌತಿಕ ವಸ್ತು ಒಂದನ್ನೊಂದು ಹೋಲುತ್ತವೆ.

(iii) ಒಂದು ಆನುವಂಶಿಕ ಭೌತಿಕ ವಸ್ತುವಿನಲ್ಲಿ ಸ್ವಾಧೀನದಲ್ಲಿರುವ ಹೊಲದ ಹಿತಾಸಕ್ತಿ ಅದೆಂದರೆ ಈಗ ಸಧ್ಯದಲ್ಲಿ ಹೊಲದ ವಹಿವಾಟು ಮತ್ತು ಉಪಭೋಗದ ಹಕ್ಕು ಆನುವಂಶಿಕ ಅಭೌತಿಕ ಆಸ್ತಿಯ ಹಕ್ಕು ಹೊಲದ ಸ್ವಾಮ್ಯವು ಬೇರೆಯವರಲ್ಲಿ ಇರುತ್ತದೆ. ಇದು ಭವಿಷ್ಯತ್ತಿನ ಸ್ವಾಧೀನ ಪಡೆಯುವ ಹಕ್ಕಾಗಿರುತ್ತದೆ. ಇಲ್ಲವೆ ಬೇರೆಯವರ ಒಡೆತನದಲ್ಲಿದ್ದ ಹೊಲದಲ್ಲಿ ಒಂದು ವಿಶೇಷ ಉದ್ದೇಶಕ್ಕಾಗಿ ಉಪಯೋಗಿಸುವುದಕ್ಕಾಗಿ, ಅದೆಂದರೆ ದಾರಿ ಹಕ್ಕು.

(iv) ಒಂದು ಭೌತಿಕ ಮತ್ತು ಅಭೌತಿಕ ವಸ್ತುಗಳಲ್ಲಿಯ ಒಪ್ಪಂದವು ಆಸ್ತಿ ಒಡೆತನವನ್ನು ಹೊಂದಿದ ವ್ಯಕ್ತಿಯ ನಡುವೆ ಇರುತ್ತದೆ. ಒಂದು ಭೌತಿಕ ವಸ್ತು ಮತ್ತು ಒಬ್ಬನಿಗೆ ಕೇವಲ ಒಂದು ಹಕ್ಕು ಇರುತ್ತದೆ. ಅಭೌತಿಕ ವಸ್ತುವೆಂದರೆ ಒಡೆತನ ಇಲ್ಲದ ಯಾವುದೇ ಭೌತಿಕ ವಸ್ತು.

v) ಭೌತಿಕ ವಸ್ತುವು ಪ್ರತ್ಯಕ್ಷವಾಗಿ ಒಡೆತನ ಕೊಡುವ ವಸ್ತು ಆಗಿರಲಿಕ್ಕೇಬೇಕು.

*ಸುಲೇಮಾನ್ ಸಿ.ಜೆ. ೫೦ ಅಲಹಾಬಾದ್ ೯೮೬*

೧೦. ಸ್ವಾಧೀನ ಕೊಡುವುದರ ಅರ್ಥ

(೧) ಮಾರಾಟ ಮಾಡುವವನು ಯಾವಾಗ ಕೊಳ್ಳುವವನಿಗೆ ಅಥವಾ ಅವನು ನಿರ್ದೇಶಿಸಿದ ಯಾವುದೇ ವ್ಯಕ್ತಿಗೆ ಒಡೆತನ ಕೊಡುವುದಕ್ಕೆ ಒಡೆತನ ಕೊಡುವುದು ಅನ್ನುತ್ತಾರೆ.

(೨) ಸ್ವಾಧೀನ ಕೊಡುವುದು ಅಂದರೆ ಖರೀದಿದಾರ: ಕೊಳ್ಳುವವನಿಗೆ ಆಸ್ತಿಯ ಸ್ವಾಧೀನ ಕೊಡುವ ಒಂದು ಕೃತಿಯಾಗಿದೆ.

(೩) ಯಾವುದು ಸ್ವಾಧೀನ ಎನಿಸುತ್ತದೆ ಈ ಪ್ರಶ್ನೆಗೆ ಉತ್ತರ ಇಲ್ಲದೆ ಹಾಗೆಯೇ ಉಳಿದಿದೆ. ಇದು ಪ್ರತ್ಯಕ್ಷ ವಾಸ್ತವಿಕ ಒಡೆತನ ಇರುತ್ತದೆಯೋ ಇಲ್ಲವೇ ಅದು ಕೇವಲ ಸಾಂಕೇತಿಕ ಸ್ವಾಧೀನತೆ ಇರುತ್ತದೆಯೇ.

(೪) ಒಂದು ದೃಷ್ಟಿಯಿಂದ ಕೇವಲ ಭೌತಿಕ ವಸ್ತುಗಳ ಸ್ವಾಧೀನ ಕೊಡುವುದನ್ನು ನಿರ್ದೇಶಿಸಲಾಗಿದೆ. ಶಾಸಕಾಂಗದವರ ಉದ್ದೇಶವು ಪ್ರತ್ಯಕ್ಷ ಸ್ವಾಧೀನ ಕೊಡುವುದನ್ನು ಹೇಳುತ್ತದೆ.

(೫) ಇನ್ನೊಂದು ದೃಷ್ಟಿಯಿಂದ ವಿಶಾಲವಾದ ಹಾಗೂ ಸಾಮಾನ್ಯವಾದ ಅರ್ಥದಲ್ಲಿ ಹೆಚ್ಚಿನ ಪ್ರಕರಣಗಳಲ್ಲಿ ಭೂಮಿಯು ರೈತನ ಸ್ವಾಧೀನದಲ್ಲಿ, ಅಥವಾ ಕೊಳ್ಳುವವನ ಸ್ವಾಧೀನದಲ್ಲಿ ಇರುವುದರ ಕಾರಣದಿಂದ ಪ್ರತ್ಯಕ್ಷ ಸ್ವಾಧೀನ ಕೊಡುವುದು ಸಾಧ್ಯವೇ ಇಲ್ಲ.

(೬) ಮೇಲಿನ ಎರಡನೆಯ ದೃಷ್ಟಿಯು ಸಾಮಾನ್ಯವಾಗಿ ಒಪ್ಪಿಕೊಂಡದ್ದು ಇರುತ್ತದೆ. ಆಸ್ತಿಯ ಮಾಲೀಕನು ಯಾವಾಗ ಕೊಳ್ಳುವವನನ್ನು ಆ ಆಸ್ತಿಗೆ ಅದರ ಸ್ವಾಧೀನದಲ್ಲಿಡುವುದು ತಾನು ಅದರ ಪ್ರತ್ಯಕ್ಷ ಸ್ವಾಧೀನದಲ್ಲಿ ಇದ್ದಂತೆ ಅವನನ್ನು ಇಡುವುದರಿಂದ ಆತನನ್ನು ಪ್ರತ್ಯಕ್ಷ ಸ್ವಾಧೀನಕ್ಕೆ ಬಂದಂತೆ ಆಗುತ್ತದೆ.

**II. ಮಾಲೀಕತ್ವವು ಯಾವಾಗ ಹಸ್ತಾಂತರವಾಗುತ್ತದೆ**

(i) ಮಾಲಿಕತ್ವವು ನೋಂದಣಿಯ ಮೂಲಕ ಇಲ್ಲವೇ ಸ್ವಾಧೀನ ಕೊಡುವುದರ ಮೂಲಕ ಉಂಟಾಗುತ್ತದೆ.

(ii) ನೋಂದಣಿ ಕುರಿತು ಕೆಳಗಣ ಸಂಗತಿಗಳನ್ನು ಗಮನಿಸಬೇಕು:

(ಅ) ಒಮ್ಮೆ ನೋಂದಣಿಯಾದರೆ ಅದು ಯಾವ ದಿನಾಂಕದಂದು ಬರೆದುಕೊಡಲಾಗಿದೆಯೋ ಆ ದಿನಾಂಕದಿಂದ ಮಾಲೀಕತ್ವವನ್ನು ಪರಿಗಣಿಸಲಾಗುವುದು.

(ಆ) ಒಂದು ಪತ್ರವನ್ನು ನೋಂದಾಯಿಸಿಕೊಟ್ಟು ನಂತರ ಮತ್ತೊಂದು ಪತ್ರವನ್ನು ಬರೆದು ಅದನ್ನು ಮೊದಲಿಗೆ ನೋಂದಾಯಿಸಿದರೆ ಈ ನೋಂದಾಯಿಸಿದ ಖರೀದಿ ದಸ್ತಾವೇಜಿಗೆ ಮತ್ತೊಂದು ದಸ್ತಾವೇಜಿನಿಂದ ಬಾಧೆ ಬರಲಾರದು.

(ಕ) ಒಂದು ದಸ್ತಾವೇಜನ್ನು ದಾವೇ ಮಾಡುವ ಪೂರ್ವದಲ್ಲಿಯೇ ಬರೆದು ದಾವೆ ಮಾಡಿದ ನಂತರ ಅದನ್ನು ನೋಂದಾಯಿಸಿದರೆ ಅಂತಹ ಹಸ್ತಾಂತರವು ದಾವೆಯು ಇತ್ಯರ್ಥವಾಗದೆ ಇರುವ ನಿಯಮಕ್ಕೆ ಬಾಧೆ ಇರುವುದಿಲ್ಲ.

(ಡ) ನೋಂದಣಿ ಆಗುವವರೆಗೆ ಮಾಲೀಕತ್ವವು ಹಸ್ತಾಂತರವಾಗುವವರೆಗೆ ಆಸ್ತಿಯು ಹಸ್ತಾಂತರ ವಾಗುವುದಿಲ್ಲವೆಂಬುದು ನಿಜವಿದ್ದರೂ ಪತ್ರವು ನೋಂದಣಿ ಆದ ಕ್ಷಣವೇ ಆಸ್ತಿಯು ಹಸ್ತಾಂತರ ವಾಗುವುದೆಂದು ಹೇಳುವುದು ನಿಜವಿರುವುದಿಲ್ಲ. ಅದರ ನಿಜವಾದ ಪರೀಕ್ಷೆಯು ಪಕ್ಷಗಾರರ ಉದ್ದೇಶವನ್ನು ಅವಲಂಬಿಸಿದ್ದು ಇರುತ್ತದೆ.

**III. ಕಲಮು ೫೫(೩)– ಮಾಲೀಕತ್ವದ ದಸ್ತಾವೇಜುಗಳನ್ನು ಹಸ್ತಾಂತರಿಸುವುದು**

೧. ಆಸ್ತಿಯ ಮಾಲೀಕತ್ವದ ದಸ್ತಾವೇಜುಗಳು ಆಸ್ತಿಗೆ ಸಹಕಾರಿಯಾಗುತ್ತವೆ. ಅವು ಹೆಸರು ಇಲ್ಲದೆ, ಹಸ್ತಾಂತರದೊಂದಿಗೆ ಹೋಗುತ್ತವೆ.

೨. ಇದು ಒಬ್ಬನು ತನ್ನ ಸ್ವಾಧೀನದಲ್ಲಿರುವ ಅದರಂತೆ ತನ್ನ ಅಧಿಕಾರದಲ್ಲಿರುವ ಆಸ್ತಿಯನ್ನು

ಹಸ್ತಾಂತರಿಸಿದ್ದನ್ನು ಕುರಿತು ಇರುವ ಎಲ್ಲಾ ದಸ್ತಾವೇಜುಗಳನ್ನು ಇದು ಒಳಗೊಳ್ಳುತ್ತದೆ.

೩. ಆಸ್ತಿಯ ಸ್ವಾಮಿತ್ವದ ದಸ್ತಾವೇಜುಗಳನ್ನು ಸಹ ಕೊಡುವುದು ಹಾಗೂ ಅವುಗಳನ್ನು ಪಡೆದುಕೊಳ್ಳಲು ತಗಲುವ ಖರ್ಚನ್ನು ಕೊಡುವುದು ಸಹ ಅವನ ಹೊಣೆಗಾರಿಕೆಯಲ್ಲಿ ಒಳಗೊಳ್ಳುತ್ತದೆ.

೪. ದೇಣಿಗೆಗಳ ಪ್ರತಿರೂಪಗಳು ಮತ್ತು 'ಕಬೂಲಾಯತಗಳು' ಆಸ್ತಿಯ ಮಾಲಿತ್ವಕ್ಕೆ ಸಹಾಯಕವಾಗುವ ದಸ್ತಾವೇಜುಗಳಾಗಿರುತ್ತವೆ.

೫. ಮಾಲಿಕತ್ವದ ದಸ್ತಾವೇಜುಗಳನ್ನು ಕೊಡುವುದು ಹಸ್ತಾಂತರ ಪತ್ರವನ್ನು ಪೂರ್ತಿಗೊಳಿಸುವುದನ್ನು ಅವಲಂಬಿಸಿದ ಕರ್ತವ್ಯವಾಗಿರುವುದಿಲ್ಲ. ಅದರ ಬೆಲೆಯನ್ನು ಕೊಡುವವರೆಗೆ ಈ ಹೊಣೆಯು ಉಂಟಾಗುವುದಿಲ್ಲ.

**ಅಪವಾದಗಳು:**

(i) ಮಾರುವವನು ಆ ದಸ್ತಾವೇಜಿನಲ್ಲಿ ಕಾಣಿಸಿದ ಆಸ್ತಿಯ ಕೆಲವು ಭಾಗಗಳನ್ನು ತನ್ನ ಸ್ವಾಮ್ಯದಲ್ಲಿ ಇಟ್ಟುಕೊಂಡರೆ ಅವನು ಆ ದಸ್ತಾವೇಜುಗಳನ್ನು ತನ್ನಲ್ಲಿ ಇಟ್ಟುಕೊಳ್ಳಬಹುದು, ಆದರೆ ಅವುಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ ಹೊಣೆಗಾರಿಕೆಗೆ ಒಳಗಾಗಿರುತ್ತಾನೆ. ಮತ್ತು ಅವುಗಳನ್ನು ಹಾಜರು ಮಾಡುವುದು, ಇಲ್ಲವೆ ಅವಶ್ಯವಿರುವಾಗ ಅವುಗಳ ಪ್ರಮಾಣಿತ ಪ್ರತಿಗಳನ್ನು ಹಾಜರುಪಡಿಸುವ ಹೊಣೆಯು ಅವನ ಮೇಲಿದೆ.

(ii) ಒಂದು ದೊಡ್ಡ ಆಸ್ತಿಯ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಹರಾಜುಗಳ ಮೂಲಕ ಮಾರಿದರೆ, ಅವುಗಳಲ್ಲಿ ಅತಿ ದೊಡ್ಡ ಭಾಗವನ್ನು ಕೊಂಡವನಿಗೆ ಆ ದಸ್ತಾವೇಜುಗಳನ್ನು ಪಡೆಯುವ ಹಕ್ಕು ಇರುತ್ತದೆ. (ಮೇಲೆ ಕಾಣಿಸಿದ ವಿಷಯಕ್ಕೊಳಪಟ್ಟ ಹೊಣೆಗಾರಿಕೆಗೆ ಒಳಪಟ್ಟು) ಒಂದು ವ್ಯಕ್ತಪಡಿಸಿದ ವಿಧಿಯುಕ್ತ ಒಪ್ಪಂದ ಕರಾರು ಕಾಗದವನ್ನು ದೊಡ್ಡ ಭಾಗವನ್ನು ಕೊಂಡವನಿಗೆ ಕೊಡಬಹುದು. ಅದೆಂದರೆ ಆ ಕ್ಷೇತ್ರದಲ್ಲಿ.

೬. ಆ ವ್ಯಾಪಾರಗಳು ಬೇರೆ ಬೇರೆ ಕಾಲಕ್ಕೆ ಆದರೆ ಏನು ಆಗುತ್ತದೆಂಬುದನ್ನು ಆ ಉಪವಿಭಾಗದಲ್ಲಿ ಹೇಳಿಲ್ಲ.

## ಕೊಳ್ಳುವವನ ಹೊಣೆಗಾರಿಕೆಗಳು

## I. ಹಸ್ತಾಂತರ ಪತ್ರದ ಮೊದಲು

**೧. ಕಲಮು ೫೫(೫) (ಅ)–** ಮಾರಾಟ ಮಾಡುವ ಆಸ್ತಿಯಲ್ಲಿ ಅದರ ಬೆಲೆಯಲ್ಲಿ ಮಹತ್ವದ ಹೆಚ್ಚಾಗುವ ಸಂಗತಿಗಳನ್ನು ತಿಳಿಯಪಡಿಸಬೇಕು.

೧. ಅವನು ಹೇಳುವ ಎಲ್ಲವನ್ನು ಕೊಳ್ಳುವ ಪ್ರತಿಯೊಬ್ಬನು ಸದುದ್ದೇಶದಿಂದ ಹೇಳಿದ್ದೆಂದು ಅಭಿಪ್ರಾಯ ಪಡತಕ್ಕದ್ದು ಇಲ್ಲವೆ ಆ ಒಪ್ಪಂದದ ಕರಾರಿಗೆ ಸಂಬಂಧಿಸಿ ಅವನು ಮಾಡುತ್ತಾನೆ ಮತ್ತು ಸತ್ಯ ಸಂಗತಿ ಮುಚ್ಚಿಡುವುದರ ಮೂಲಕವಾಗಿ ಇಲ್ಲವೆ ಮಿಥ್ಯವನ್ನು ಸೂಚಿಸುವ ಮೂಲಕ ಮೋಸ ವಂಚನೆ ಮಾಡಬಾರದು.

೨. ಆದಾಗ್ಯೂ ಕೊಳ್ಳುವವನು ಅವ್ಯಕ್ತ ಪ್ರಯೋಜನಗಳನ್ನು ಪ್ರಕಟಿಸುವ ಯಾವ ಹೊಣೆಯನ್ನು ಹೊಂದಿರುವುದಿಲ್ಲ. ಆದರೆ ಮಾರುವವನು ಅವ್ಯಕ್ತ ದೋಷಗಳನ್ನು ತಿಳಿಸುವ ಹೊಣೆಯಲ್ಲಿರುತ್ತಾನೆ.

೩. ಈ ನಿಯಮಕ್ಕೆ ಆಸ್ತಿಯ ಮಾಲಿಕತ್ವಕ್ಕೆ ಸಂಬಂಧಿಸಿದ ವಿಷಯಗಳು ಅಪವಾದವಾಗಿವೆ. ಸಾಮಾನ್ಯವಾಗಿ ಮಾರುವವನ ಮಾಲಿಕತ್ವವು ಆ ಆಸ್ತಿಗೆ ಸಂಬಂಧಿಸಿದಂತೆ ಆತನ ತಿಳಿವಳಿಕೆಯಲ್ಲಿರುತ್ತದೆ. ಆದಾಗ್ಯೂ ಕೆಲವು

ಪ್ರಕರಣಗಳಲ್ಲಿ ಮಾರುವವನಿಗೆ ಇಲ್ಲದ ಮಾಹಿತಿಯು ಕೊಳ್ಳುವವನಿಗೆ ಇರುತ್ತದೆ. ಇಂತಹ ಪ್ರಕರಣಗಳಲ್ಲಿ ಅವನು ಅದರ ನ್ಯಾಯವಲ್ಲದ ಉಪಯೋಗ ಮಾಡಲೇಬಾರದು.

ಉದಾಹರಣೆ–೧ : ಸಮರ್ಸ್ ವಿರುದ್ಧ ಗ್ರಿಪತ್ಸ್

ಒಬ್ಬ ಮುದುಕಿಯು ತನ್ನ ಆಸ್ತಿಗೆ ಯೋಗ್ಯ ಮಾಲೀಕತ್ವವನ್ನು ತಾನು ಮಾರ್ಕೆಟ್‌ನಲ್ಲಿ ಸಿದ್ಧ ಮಾಡಲಾರೆನೆಂದು ತಿಳಿದು, ಅದನ್ನು ಕಡಿಮೆ ಬೆಲೆಗೆ ಮಾರಿದಳು. ಆದರೆ ಕೊಳ್ಳುವವನಿಗೆ ಅದಕ್ಕೆ ಅವಳ ಮಾಲ್ಕೀ ಹಕ್ಕು ಇದೆಯೆಂಬುದು ಗೊತ್ತಿತ್ತು. ಆ ವ್ಯವಹಾರವನ್ನು ರದ್ದುಪಡಿಸಲಾಯಿತು.

ಉದಾಹರಣೆ–೨: ಎಲ್ಲಾರ್ಡ್ ವಿರುದ್ಧ ಲಂಡಾಫ್ಫ್ (ಲಾರ್ಡ್)

ಹಳೆಯ ಗೇಣಿಯು ಒಬ್ಬನ ಜೀವಿತಕಾಲವನ್ನು ಅವಲಂಬಿಸಿದ್ದು ಆ ಮನುಷ್ಯನು ಮೃತ್ಯುಶಯ್ಯೆಯ್ಯಲ್ಲಿದ್ದ ಸಂಗತಿಯನ್ನು ಮುಚ್ಚಿಟ್ಟು ಒಬ್ಬ ಗೇಣಿದಾರನು ನವೀಕರಿಸಬಹುದಾದ ಒಂದು ಗೇಣಿಯನ್ನು ಪಡೆದನು.

**೨. ಕಲಮು ೫೫(೫) (೬)– ಬೆಲೆಯನ್ನು ಕೊಡುವುದು.**

೧. ತಾನು ಕೊಂಡುಕೊಂಡ ಸಂಪೂರ್ಣ ಆಸ್ತಿಯ ಹಿತಾಸಕ್ತಿಯನ್ನು ತನ್ನ ಹೆಸರಿಗೆ ಖರೀದಿ ದಸ್ತಾವೇಜನ್ನು ಮಾಡಿದ ಪೂರ್ತಿಗೊಳಿಸದ ಹೊರತು, ಕೊಂಡವನು ಅದರ ಬೆಲೆಯನ್ನು ಕೊಡಲು ಬದ್ಧನಾಗಿರುವುದಿಲ್ಲ.

೨. ಆಸ್ತಿಯನ್ನು ಋಣಭಾರಗಳಿಂದ ಮುಕ್ತಮಾಡಿ ಮಾರಾಟ ಮಾಡಿದರೆ ಮತ್ತು ಖರೀದಿ ದಸ್ತಾವೇಜಿನ ಕಾಲಕ್ಕೆ ಅವುಗಳ ವಿಮೋಚನೆಯನ್ನು ಮಾಡಿರದಿದ್ದರೆ, ಆಗ ಕೊಂಡುಕೊಳ್ಳುವವನು ಕೊಡಲು ಬದ್ಧನಿರುವುದಿಲ್ಲ.

೩. ಆ ಋಣಭಾರದ ಹೊರೆಗಳಿಂದ ಮುಕ್ತನಾಗಲು ಅವನಿಗೆ ಇರುವ ಪರಿಹಾರೋಪಾಯಗಳು.

(i) ನಿರ್ದಿಷ್ಟ ಅಧಿನಿಯಮದ ಕಲಮು ೧೮(ಕ)ದ ಅನ್ವಯ ಮಾರಾಟ ಮಾಡುವವನಿಗೆ ಮುಕ್ತಗೊಳಿಸುವಂತೆ ಒತ್ತಾಯ ಮಾಡುವುದು.

(ii) ಅವನು ತಾನೇ ಅವುಗಳನ್ನು ಮುಕ್ತಗೊಳಿಸಬಹುದು ಮತ್ತು ಮಾರಾಟದ ಹಣದಲ್ಲಿ ಅವುಗಳನ್ನು ವಜಾ ಮಾಡಬಹುದು.

(iii) ನಂತರ ಮಾರಾಟ ಮಾಡಿದವನ ವಿರುದ್ಧ ದಾವೆ ಮಾಡಿ ಆ ಹಣವನ್ನು ಮರಳಿ ಪಡೆಯಬಹುದು.

೪. ಕಲಮು ೫೫ (೪) (ಬ)ದ– ಅನ್ವಯ ವಿಧಿಸಿದ ಹೊಣೆಯಲ್ಲದೆ ಈ ಉಪಕಲಮು ಒಂದು ವೈಯಕ್ತಿಕ ಹೊಣೆಯನ್ನು ವಿಧಿಸುತ್ತದೆ.

*೫೨ ಅಲಹಾಬಾದ್ ೬೦೧.*

## ಖರೀದಿದಾರನ ಹೊಣೆಗಾರಿಕೆಗಳು
## II. ಖರೀದಿ ದಸ್ತಾವೇಜಿನ ನಂತರ

### ೧. ಕಲಮು ೫೫(೫) (ಕ)– ಹಾನಿಯನ್ನು ಹೊತ್ತುಕೊಳ್ಳಬೇಕು ಮುಂತಾದವು

೧. ಕಲಮು ೫೫(೧)(ಕ)ದ ಅನ್ವಯ ಒಪ್ಪಂದ ಕರಾರು ಮತ್ತು ಖರೀದಿ ದಸ್ತಾವೇಜಿನ ಮಧ್ಯಂತರ ಅವಧಿಯಲ್ಲಿ ಮಾರಾಟ ಮಾಡುವವನು ಹಾನಿಯನ್ನು ಹೊತ್ತುಕೊಳ್ಳಬೇಕು.

೨. ಖರೀದಿ ದಸ್ತಾವೇಜು ಆದ ನಂತರ ಕೊಳ್ಳುವವನು ಮಾಲೀಕನಾಗುತ್ತಾನೆ. ಆಸ್ತಿಯು ಆತನ ವಶದಲ್ಲಿದ್ದು ಅದರ ಜವಾಬ್ದಾರಿ ಅವನದಾಗಿರುತ್ತದೆ. ಆದ್ದರಿಂದ ಅವನು ಅದರ ಹಾನಿಯನ್ನು ಭರಿಸಲಿಕ್ಕೇ ಬೇಕು.

೩. ಇದು ಇಂಗ್ಲಿಷ್ ಕಾನೂನಿಗಿಂತ ಭಿನ್ನವಾಗಿದೆ. ಯಾವ ಒಪ್ಪಂದದ ಕರಾರಿನ ಅನ್ವಯ ಖರೀದಿ ವ್ಯವಹಾರವನ್ನು ನ್ಯಾಯಸಮ್ಮತ ಆಸ್ತಿ ಎಂದು ಮಾಡಲಾಗಿದೆ, ಮತ್ತು ಯಾವುದೇ ಹಾನಿ ಇಲ್ಲವೆ ನಾಶಕ್ಕೆ ಹೊಣೆಗಾರನೆಂದು ಹೇಳುವುದು ಇಂಗ್ಲಿಷ್ ಕಾನೂನಿನಿಂದ ಭಿನ್ನವಾಗಿದೆ.

೪. ಯಾವುದೇ ದುರ್ವ್ಯಯಕ್ಕೆ ಮಾರುವವನೇ ಹೊಣೆಗಾರನಿರುತ್ತಾನೆ. ಮಾರುವವನು ಆ ಆಸ್ತಿಯ ವಿಮೆ ಮಾಡಿದ್ದರೆ ಆಗ ಕೊಂಡವನು ಅದಕ್ಕೆ ಅರ್ಜಿಯನ್ನು ಸಲ್ಲಿಸಿ ಅದರ ಮೊದಲಿನ ಸ್ಥಿತಿಗೆ ತರಲು ಒತ್ತಾಯಿಸಬಹುದು.

### ೨. ಕಲಮು ೫೫(೫) (ಡ)– ವೆಚ್ಚಗಳನ್ನು ಕೊಡುವುದು

೧. ಖರೀದಿ ದಸ್ತಾವೇಜನ್ನು ಬರೆದುಕೊಡುವ ಮೊದಲು ಈ ಹೊಣೆಗಾರಿಕೆಯು ಮಾರುವವನ ಮೇಲೆ ಬೀಳುತ್ತದೆ. ೫೫(೧) (ಗ) ಖರೀದಿ ದಸ್ತಾವೇಜಿನ ನಂತರ ಅದು ಕೊಂಡವನ ಮೇಲೆ ಬೀಳುತ್ತದೆ. ಸಾರ್ವಜನಿಕ ವೆಚ್ಚಗಳು, ಬಾಡಿಗೆ, ಬಡ್ಡಿ ಮತ್ತು ಋಣಭಾರ ಮುಂತಾದವು.

೨. ಈ ಹೊಣೆಗಾರಿಕೆಯು ಶಾಸನಬದ್ಧವಾದುದು ಮತ್ತು ಕೇವಲ ಕರಾರು ಒಪ್ಪಂದದ ಮೂಲಕವಲ್ಲ. ಆದ್ದರಿಂದ ಯಾವುದೇ ಅಲ್ಪವಯಿ ವತಿಯಿಂದ ಆಸ್ತಿಯನ್ನು ಮಾರಿದ್ದರೆ ಅವನು ಹೊಣೆಗಾರನಾಗುತ್ತಾನೆ.

೪೬ ಮದ್ರಾಸ್ ಲಾ.ಜ. ೪೬೪

೩. ಆಸ್ತಿಯನ್ನು ಋಣಭಾರಗಳಿಂದ ಮುಕ್ತವಾಡಿ ವಾರಾಟ ವಾಡಬೇಕೆಂದಿದ್ದರೆ ಮಾರುವವನು ಅದನ್ನು ಮುಕ್ತಮಾಡಲಿಕ್ಕೇಬೇಕು. ಆ ಋಣಭಾರಗಳಿಗೆ ಒಳಪಟ್ಟು ಮಾರಾಟ ಮಾಡಿದರೆ ಆಗ ಆ ಋಣಭಾರಗಳ ಹಿತಾಸಕ್ತಿಯು ಖರೀದಿ ಆಗುವವರೆಗೆ ಕೊಳ್ಳುವವನು ಕೊಡಲಿಕ್ಕೇ ಬೇಕು.

೨೬ ಬಾಂಬೆ ಎಸ್.ಆರ್. ೯೪೨

# ಖರೀದಿದಾರನ ಮತ್ತು ಮಾರಾಟಗಾರನ ಹಕ್ಕುಗಳು
## ಮಾರಾಟಗಾರನ ಹಕ್ಕುಗಳು

**I. ಖರೀದಿ ದಸ್ತಾವೇಜಿನ ಮೊದಲು**

೧. ಕಲಮು ೫೫ (೪) (ಅ)– ಬಾಡಿಗೆ ಮತ್ತು ಲಾಭಗಳನ್ನು ತೆಗೆದುಕೊಳ್ಳುವುದು.

(i) ಖರೀದಿ ದಸ್ತಾವೇಜು ಬರೆದುಕೊಡುವವರೆಗೆ ಮಾರುವವನು ಮಾಲೀಕನೆಂದು ಮುಂದುವರೆಯುತ್ತಾನೆ. ಆದ್ದರಿಂದ ಅವನಿಗೆ ಆಸ್ತಿಯ ಬಾಡಿಗೆಯನ್ನು ಮತ್ತು ಲಾಭಗಳನ್ನು ತೆಗೆದುಕೊಳ್ಳಲು ಹಕ್ಕು ಇರುತ್ತದೆ.

**II. ಖರೀದಿ ದಸ್ತಾವೇಜು ಆದನಂತರ:**

೧. ವಿಭಾಗ ೫೫ (೪) (ಬ)– ಆಸ್ತಿಯ ಬೆಲೆಯನ್ನು ಕೊಡದಿದ್ದರೆ ಅದು ಆಸ್ತಿಯ ಮೇಲೆ ಚಾರ್ಜು ಪ್ರಭಾರ ಋಣ

೧. ಒಂದು ಖರೀದಿ ದಸ್ತಾವೇಜಿನ ಮೂಲಕ ಒಂದು ವ್ಯವಹಾರವನ್ನು ಪೂರ್ತಿಗೊಳಿಸಿದ್ದರೆ ಮತ್ತು ಅದರ ಬೆಲೆ ಇಲ್ಲವೆ ಅದರ ಯಾವುದೇ ಭಾಗವನ್ನು ಕೊಟ್ಟಿರದಿದ್ದರೆ ಆಗ ಮಾರುವವನಿಗೆ ಈ ಉಪಕಲಮಿನ ಅನ್ವಯ ಪೂರ್ತಿ ಬೆಲೆ ಇಲ್ಲವೇ ಅದರ ಉಳಿದ ಯಾವುದೇ ಭಾಗ ಕುರಿತು ಆ ಆಸ್ತಿಯ ಮೇಲೆ ಚಾರ್ಜು ಉಳಿಯುತ್ತದೆ.

೨. ಚಾರ್ಜು ಇದು ಸ್ವಾಧೀನತೆ ಇಲ್ಲದ ಹೊರೆ, ಎಂದರೆ ಇದು ಆಸ್ತಿ ಸ್ವಾಧೀನತೆ ಇಟ್ಟುಕೊಳ್ಳುವ ಹಕ್ಕನ್ನು ಕೊಡುವುದಿಲ್ಲ. ಮಾಲ್ಕೀ ಹಕ್ಕು ಹೋಗಿರುವುದರಿಂದ ಈ ಹೊರೆ ಮಾರಾಟ ಮಾಡಿದವನಿಗೆ ಅದರ ಸ್ವಾಧೀನ ಕೊಡಲು ನಿರಾಕರಿಸಲು ಬರುವುದಿಲ್ಲ.

*೩೦ ಮದ್ರಾಸ್ ೫೨೪, ೪೩ ಮದ್ರಾಸ್ ೭೧೨, ೨೩ ಬಾಂಬೆ ೫೨೫, ೩೧ ಮದ್ರಾಸ್ ೫೪೩.*

೩. ಆ ಆಸ್ತಿಯ ಮೇಲೆ ಹೊರೆ ಇದ್ದರೂ ಅದನ್ನು ಅನೇಕ ಜನ ಕೊಳ್ಳುವವರು ತಮ್ಮಲ್ಲಿ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಹಣವನ್ನು ಕೊಡಲು ಕೊಂಡಿದ್ದರೆ ಆ ವಿಷಯಕ್ಕೆ ಏನೂ ಆಗುವುದಿಲ್ಲ.

೪. ಬೆಲೆ ಕೊಡದಿರಲು ಹೊರೆ ಇರುವುದರ ಮಾಗಣಿಯನ್ನು ಮಾಡಿ ದಾವೆ ಮಾಡಲು ಮೂಲತಃ ಕೊಂಡವನ ವಿರುದ್ಧ ಮಾತ್ರವಲ್ಲದೆ ಪ್ರತಿಫಲವಿಲ್ಲದ ಯಾರ ಹೆಸರಿಗೆ ವರ್ಗಾಯಿಸಲಾಗಿದೆಯೋ ಅವರೆಲ್ಲರ ವಿರುದ್ಧವೂ ಇಲ್ಲವೆ ಬೆಲೆ ಕೊಡದೆ ಇದ್ದದ್ದು ತಿಳಿದೂ ನೋಟೀಸಿಗೆ (ಗಮನಕ್ಕೆ) ಬಂದಿದ್ದರೂ ಕೊಂಡವನ ವಿರುದ್ಧವೂ ದಾವೆ ಮಾಡಬಹುದು.

೫. ಹೊರೆ ಕೇವಲ ಕೊಂಡುಕೊಂಡ ಹಣಕ್ಕೆ ಮಾತ್ರವಲ್ಲ. ಆ ಕೊಂಡ ಹಣದ ಮೇಲಿನ ಬಡ್ಡಿಗಾಗಿಯೂ ಇರುತ್ತದೆ.

೬. ಹೊರೆಯ ಮೇಲೆ ಬಡ್ಡಿಯು, ಯಾವ ದಿನಾಂಕದಿಂದ ಆಸ್ತಿಯ ಕಬ್ಜಾ ಕೊಡಲಾಗುವುದೋ, ಆ ದಿನದಿಂದ ಪ್ರಾರಂಭವಾಗುತ್ತದೆ.

ಈ ಹೊರೆಯ ಹಿತಾಸಕ್ತಿಯ ಹಕ್ಕಿನ ಸಲುವಾಗಿ ಆ ಆಸ್ತಿಯ ಮೇಲೆ ಸ್ವಾಧೀನವನ್ನು ಕೊಡುವ ಪೂರ್ವದಲ್ಲಿಯೇ ಇಡಲಾಗಿದೆಯೇ ಎಂಬುದು ನ್ಯಾಯಸಮ್ಮತತೆಯ ಮೇಲೆ ಮತ್ತು ಈ ಪ್ರಕರಣದ ಸಂಬಂಧಗಳನ್ನು ಅವಲಂಬಿಸಿರುತ್ತದೆ.

ಉದಾಹರಣೆಗೆ: ಆ ಋಣಭಾರವನ್ನು ಮಾರುವವನು ವಿಮುಕ್ತಗೊಳಿಸುವ ಖಾತರಿಗಾಗಿ ಕೊಂಡು ಕೊಂಡವನು ಕೊಂಡ ಬೆಲೆಯ ಕೆಲವು ಭಾಗವನ್ನು ಕೊಡದೆ ತನ್ನಲ್ಲಿ ಉಳಿಸಿಕೊಂಡರೆ, ಅವನು ಬಡ್ಡಿ ಕೊಡಲು ಹೊಣೆಗಾರನಿರುವುದಿಲ್ಲ.

೭. ಇಂಗ್ಲಿಷ್ ಮತ್ತು ಭಾರತೀಯ ಕಾನೂನು

(i) ಇಂಗ್ಲಿಷ್ ಕಾನೂನಿನನ್ವಯ ಆ ಒಪ್ಪಂದದ ಕರಾರು ಆದ ದಿನಾಂಕದಿಂದ ಆ ಮಾರುವವನಿಗೆ ಧಾರಣಾಬದ್ಧತೆ ಉಂಟಾಗುತ್ತದೆ.

(ii) ಭಾರತೀಯ ಕಾನೂನಿನ ಅನ್ವಯ ಹೊರೆ ಖರೀದಿ ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕದಿಂದ ಪ್ರಾರಂಭವಾಗುತ್ತದೆ.

(iii) ಈ ಅಂತರಕ್ಕೆ ಕಾರಣಗಳು:

(ಅ) ಭಾರತೀಯ ಕಾನೂನಿನ ಅನ್ವಯ ಮಾರುವವನು ಆ ಒಪ್ಪಂದದ ಕರಾರಿನ ಪರಿಣಾಮವಾಗಿ ಆಸ್ತಿಯ ಕಬ್ಜೆಯನ್ನು ಬಿಟ್ಟುಕೊಡುವನು.

(ಬ) ಭಾರತೀಯ ಕಾನೂನಿನ ಅನ್ವಯ ಮಾರುವವನು ಖರೀದಿ ದಸ್ತಾವೇಜನ್ನು ಬರೆದುಕೊಟ್ಟ ಪರಿಣಾಮವಾಗಿ ಆ ಆಸ್ತಿ ಬಿಟ್ಟುಕೊಡುತ್ತಾನೆ.

(ಕ) ಪರಿಣಾಮವು ಒಂದೇ ಆಗಿದೆ. ಇವೆರಡೂ ಆಸ್ತಿಯ ವಿರುದ್ಧ ಮುಂದುವರೆಯಿಸಲು ಹಕ್ಕು ಕೊಡುತ್ತವೆ. ಇವುಗಳಲ್ಲಿಯ ಒಂದೇ ಅಂತರವೆಂದರೆ ಇಂಗ್ಲಿಷ್ ಲೀನ್ ಇದು ನ್ಯಾಯಸಮ್ಮತವಾದುದಾಗಿದ್ದು ಇದನ್ನು ಸಂದರ್ಭಗಳ ಮೇಲಿಂದ ನ್ಯಾಯದಾನದ ದೃಷ್ಟಿಯಿಂದ ದಾವೆಯನ್ನು ಮಾಡಲು ಸಾಧ್ಯವಿದೆ. ಆದರೆ ಭಾರತೀಯ ಹೊರೆ ಶಾಸನಬದ್ಧವಾದುದು, ಒಂದು ಹಕ್ಕು ಮತ್ತು ಶಾಸನದ ಪ್ರಕಾರ ಇದನ್ನು ಪುಷ್ಟೀಕರಿಸಲೇಬೇಕು.

## ಖರೀದಿದಾರನ ಹಕ್ಕುಗಳು

### ೧. ಖರೀದಿ ದಸ್ತಾವೇಜಿನ ಮೊದಲು

೧. ಕಲಮು ೫೫(೬) (ಬ)– ಕೊಂಡ ಹಣವನ್ನು ಆಸ್ತಿಯ ಖರೀದಿ ದಸ್ತಾವೇಜು ಬರೆದುಕೊಡುವ ಪೂರ್ವದಲ್ಲಿ ಕೊಟ್ಟದ್ದಕ್ಕೆ ಆಸ್ತಿಯ ಮೇಲೆ ಋಣಭಾರದ ಮಾಗಣಿ ಮಾಡುವುದು.

೧. ಈ ಕಲಮುಗಳಲ್ಲಿ ಬಳಸಿದ ಪದಗಳು ಯಾವ ಅರ್ಥವನ್ನೂ ಕೊಡುವುದಿಲ್ಲ. ಇದರಲ್ಲಿ ಎರಡೂ ಭಾಗಗಳು ಇರುತ್ತವೆ. ಈ ಕಲಮು ಅವನು ಅನುಚಿತವಾಗಿ ಆ ಆಸ್ತಿಯ ಕಬ್ಜೆ ತೆಗೆದುಕೊಳ್ಳಲು ನಿರಾಕರಿಸಿದರೆ ಯಾವುದನ್ನು ನಿಷೇಧಾರ್ಥದಲ್ಲಿ ಬಳಸಿದ್ದನ್ನು ಸಕಾರಾತ್ಮಕವಾಗಿ ಖಂಡಿತವಾಗಿ ಎಂದು ತಿಳಿದು ಅವನಿಗೆ ಆಸ್ತಿ ಹಸ್ತಾಂತರಿಸಲು ನಿರಾಕರಿಸಿದರೆ ಆಗ ಅವೆರಡೂ ಕಲಮುಗಳಲ್ಲಿ ಯಾವ ಅಂತರವೂ ಇಲ್ಲ.

೨. ಆದರೆ ಅವೆರಡು ಭಾಗಗಳಲ್ಲಿ ಇರುವ ಅಂತರವನ್ನು ಸಾಬೀತುಪಡಿಸುವ ಹೊಣೆ ಉದ್ಭವಿಸುತ್ತದೆ. ಮೊದಲನೆಯ ಭಾಗದಲ್ಲಿ ಕೊಂಡವನು ಕೆಲವು ಹಕ್ಕುಗಳಿಗೆ ಬಾಧ್ಯಸ್ಥನಿರುತ್ತಾನೆ. ಅವನು ಅವುಗಳನ್ನು ಜಾರಿಗೊಳಿಸಬಲ್ಲನು. ಆದರೆ ಅವನು ಕಬ್ಜೆ ತೆಗೆದುಕೊಳ್ಳಲು ಅನುಚಿತವಾಗಿ ನಿರಾಕರಿಸಿದ ಹೊರತು, ಅದಾವುದೆಂದರೆ, ಮಾರುವವನು ಆ ಕೊಳ್ಳುವವನು ಅನುಚಿತವಾಗಿ ಸ್ವೀಕರಿಸಲು ನಿರಾಕರಿಸಿದನೆಂಬುದನ್ನು ಸಿದ್ಧ ಮಾಡಿದರೆ ಅವನು ತನ್ನ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಈ ಕಲಮಿನ ಎರಡನೆಯ ಭಾಗದಲ್ಲಿ

ಕೊಳ್ಳುವವನು ಕೆಲವು ಹೆಚ್ಚಿನ ಹಕ್ಕುಗಳನ್ನು ಪಡೆದುಕೊಳ್ಳುತ್ತಾನೆ ಮತ್ತು ಅವನು ಅವುಗಳನ್ನು ತಾನು ಯೋಗ್ಯವಾಗಿ ಆ ಕಬ್ಜೆಯನ್ನು ತೆಗೆದುಕೊಳ್ಳಲು ನಿರಾಕರಿಸಿದ ಎಂದು ತೋರಿಸಿದರೆ ಇದನ್ನು ಮಾಗಣಿ ಕ್ಲೇಮ್ ಮಾಡಬಹುದು ಮತ್ತು ಅದನ್ನು ಸಿದ್ಧ ಮಾಡುವ ಹೊಣೆಯು ಅವನ ಮೇಲೆ ಇದೆ.

೩. ಈ ಕಲಮಿನ ಕೆಳಗೆ ಕೊಳ್ಳುವವನಿಗೆ ಮೂರು ಸಂಗತಿಗಳಿಗಾಗಿ ಋಣಭಾರ ಇಡಲು ಹಕ್ಕು ಇರುತ್ತದೆ:

(i) ಕೊಂಡ ಆಸ್ತಿಯ ಬೆಲೆಯನ್ನು ಯೋಗ್ಯವಾಗಿ ಕೊಟ್ಟದ್ದಕ್ಕಾಗಿ.

(ii) ಯಾವುದೇ ಮುಂಗಡ ಹಣ ಕೊಟ್ಟಿದ್ದರೆ.

(iii) ಅವನಿಗೆ ಕೊಡಮಾಡಿದ ಖರ್ಚಿನ ಹಣಕ್ಕಾಗಿ.

೪. ಖರೀದಿ ಹಣ ಕೊಟ್ಟದ್ದಕ್ಕೆ ಋಣಭಾರ ಕೊಡಿಸುವುದು.

೧. ಈ ಋಣಭಾರವನ್ನು ಕೊಳ್ಳುವವನು ಖರೀದಿ ಹಣದ ಯಾವುದೇ ಭಾಗವನ್ನು ಕೊಟ್ಟ ಕ್ಷಣದಿಂದಲೇ ಸೇರುತ್ತದೆ.

೨. ಕೊಳ್ಳುವವನು ಅನುಚಿತವಾಗಿ ಕಬ್ಜೆ ತೆಗೆದುಕೊಳ್ಳಲು ನಿರಾಕರಿಸಿದನೆಂಬುದನ್ನು ಮಾರುವವನು ಸಿದ್ಧ ಮಾಡಿದರೆ ಕೊಂಡ ಹಣ ಋಣಭಾರ ಇರುವ ಹಕ್ಕು ನಷ್ಟವಾಗುತ್ತದೆ.

ಈ ಸಿದ್ಧ ಮಾಡುವ ಹೊಣೆಯು ಮಾರುವವನ ಮೇಲೆ ಇರುತ್ತದೆ.

೫. ಮುಂಗಡ ಹಣ ಮತ್ತು ಖರ್ಚಿನ ಹಣದ ಹೊಣೆ.

(೧) ಇವೆರಡರಲ್ಲಿ ಋಣಭಾರ ಇಡುವ ಸಾಧ್ಯತೆಯು ಇರುತ್ತದೆ. ಕೊಳ್ಳುವವನು ತಾನು ಯೋಗ್ಯ ರೀತಿಯಿಂದ ಕಬ್ಜಾ ತೆಗೆದುಕೊಳ್ಳಲು ನಿರಾಕರಿಸಿದನೆಂದು ಸಿದ್ಧ ಮಾಡಿದರೆ ಮಾತ್ರ ಈ ಸಾಧ್ಯತೆಯಿಂದ ವಸೂಲು ಮಾಡಲಾಗುವುದು. ಈ ಸಿದ್ಧ ಮಾಡುವ ಹೊಣೆಯು ಕೊಳ್ಳುವವನ ಮೇಲೆ ಇರುತ್ತದೆ.

೬. ಮುಂಗಡ ಮತ್ತು ಕೊಂಡ ಹಣ ಭಾಗ.

(೧) ಮುಂಗಡ ಹಣದ ಋಣಭಾರದ ಬಗ್ಗೆ ಮೇಲೆ ಏನು ಹೇಳಿದೆಯೋ ಆ ಹಣವನ್ನು ಮುಂಗಡ ಹಣವೆಂದು ಕೊಟ್ಟಿದ್ದರೆ ಮಾತ್ರ ಅದು ಅನ್ವಯಿಸುತ್ತದೆ.

(೨) ಖರೀದಿ ದಸ್ತಾವೇಜಿಗಿಂತ ಮೊದಲೇ ಕೊಳ್ಳುವವನು ಹಣ ಕೊಟ್ಟಿದ್ದರೆ ಅದು ಎರಡು ಉದ್ದೇಶಗಳನ್ನು ಸಾಧಿಸುತ್ತದೆ: (೧) ಅದು ಕೊಂಡ ಹಣದ ಒಂದು ಭಾಗವಾಗಿ ಠೇವಣಿಯಾಗುತ್ತದೆ. (೨) ಒಪ್ಪಂದದ ಕರಾರನ್ನು ಪೂರೈಸುವುದಕ್ಕೆ ಇಷ್ಟು ಆಧಾರವಾಗಿರುತ್ತದೆ. ನಂತರದ ಪ್ರಕರಣದಲ್ಲಿ ಅದು ಮುಂಗಡವಾಗುತ್ತದೆ. ಮೊದಲಿನ ಪ್ರಕರಣದಲ್ಲಿ ಅದು ಒಂದು ಕಂತಾಗಿರುತ್ತದೆ. (೩) ಈ ಅಂತರವು ಮಹತ್ವದ್ದಾಗಿದೆ. ಯಾಕೆಂದರೆ ಹೊಣೆ ಇರುವುದೋ ಇಲ್ಲವೋ ವೈಯಕ್ತಿಕ ಹೊಣೆಗಾರಿಕೆ ಇರುವುದೋ ಇಲ್ಲವೋ ಅನ್ನುವುದು ಆ ಹಣವನ್ನು ಕಂತಾಗಿ, ಇಲ್ಲವೆ ಮುಂಗಡವಾಗಿ ಕೊಟ್ಟರೋ ಅನ್ನುವುದರ ಮೇಲೆ ಅವಲಂಬಿಸಿರುತ್ತದೆ

(i) ಅದು ಮುಂಗಡವಾಗಿದ್ದರೆ, ಅಲ್ಲಿ ಋಣಭಾರ ಇಡಲು ಬರುವುದಿಲ್ಲ. (ಕೊಳ್ಳುವವನು ತಾನು ಯೋಗ್ಯವಾಗಿ ಕಬ್ಜೆಯನ್ನು ತೆಗೆದುಕೊಳ್ಳಲು (ಸ್ವೀಕರಿಸಲು) ನಿರಾಕರಿಸಿದನೆಂಬುದನ್ನು ಸಿದ್ಧಪಡಿಸದ ಹೊರತಾಗಿ) ಮುಂಗಡವು ಸಂಪೂರ್ಣವಾಗಿ ನಾಶವಾಗುತ್ತದೆ. ಅಲ್ಲಿ ಋಣಭಾರ ಇರುವುದಿಲ್ಲ. ಅದಲ್ಲದೆ ವೈಯಕ್ತಿಕ ಹೊಣೆಗಾರಿಕೆಯು ಸಹ ಇರುವುದಿಲ್ಲ.

(ii) ಅದನ್ನು ಭಾಗಶಃ ಎಂದು ಸಂದಾಯ ಮಾಡಿದ್ದರೆ ಕೊಳ್ಳುವವನು ಅನುಚಿತವಾಗಿ ಕಬ್ಜೆ ತೆಗೆದುಕೊಳ್ಳಲು ನಿರಾಕರಿಸಿದನೆಂಬುದನ್ನು ಸಿದ್ಧಮಾಡದ ಹೊರತಾಗಿ ಅದು ಋಣಭಾರವಾಗುತ್ತದೆ. ಭಾಗಶಃ

ಸಂದಾಯವು ಸಂಪೂರ್ಣವಾಗಿ ಎಂದೂ ನಷ್ಟವಾಗುವುದಿಲ್ಲ. ಒಂದು ಹೊರೆಯನ್ನು ಸೃಷ್ಟಿಸಲು ಸಾಧ್ಯವಾಗದಿದ್ದರೆ ಅದು ಮಾರುವವನ ವೈಯಕ್ತಿಕ ಹೊಣೆಯಾಗಿ ಉಳಿಯುತ್ತದೆ.

(೪) ಅದು ಭಾಗಶಃ ಸಂದಾಯವೋ ಇಲ್ಲವೆ ಮುಂಗಡವೋ ಎಂಬುದು ಒಪ್ಪಂದ ಕರಾರಿನ ವಿಷಯವಾಗಿದೆ ಇಲ್ಲವೇ ಉದ್ದೇಶವಾಗಿದೆ.

೭. ಕೊಳ್ಳುವವನ ಹೊಣೆ: ಋಣಭಾರವನ್ನು ಹಕ್ಕುಳ್ಳವನ ಮತ್ತು ಅವನ ಮುಖಾಂತರ ಮಾಗಣಿ ಮಾಡುವ ಎಲ್ಲರ ವಿರುದ್ಧ ಜಾರಿಗೊಳಿಸಬಹುದಾಗಿದೆ.

೮. (i) ಕೊಳ್ಳುವವನು ತನ್ನ ಋಣಭಾರವನ್ನು ಕಳೆದುಕೊಳ್ಳುತ್ತಾನೆ.

(ii) ನಂತರ ಆತನು ತನ್ನ ತಪ್ಪಿನಿಂದ ಕಬ್ಜೆಯನ್ನು ಅನುಚಿತವಾಗಿ ತೆಗೆದುಕೊಳ್ಳಲು ನಿರಾಕರಿಸುವುದರಿಂದ.

(೨) ಮುಂಗಡ ಹಣ– ಈ ಮುಂಗಡದಲ್ಲಿ ಎರಡು ಉದ್ದೇಶಗಳಿರುತ್ತವೆ:

(i) ಇದು ಕೊಂಡ ಹಣದ ಭಾಗವಾಗಿ ಹೋಗುತ್ತದೆ.

(ii) ಒಪ್ಪಂದದ ಕರಾರನ್ನು ಪರಿಪಾಲಿಸುವ ಜಾಮೀನು ಆಗಿರುತ್ತದೆ. ಒಪ್ಪಂದ ಕರಾರು ಪಾಲಿಸಿದರೆ ಇದು ಕೊಂಡ ಹಣದ ಭಾಗವಾಗುತ್ತದೆ. ಕೊಳ್ಳುವವನ ತಪ್ಪಿನಿಂದ ಆ ಒಪ್ಪಂದದ ಕರಾರನ್ನು ಪರಿಪಾಲಿಸಲು ತಪ್ಪಿದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

## II. ಖರೀದಿ ದಸ್ತಾವೇಜಿನ ನಂತರ

೧. ಕಲಮು ೫೫(೬) (ಅ)– ಲಾಭವನ್ನು ಕೇಳುವುದು.

೧. ಇದು ಹೀಗೆ ಆಗಲಿಕ್ಕೇಬೇಕು. ಯಾಕೆಂದರೆ ಅವನು ಖರೀದಿ ದಸ್ತಾವೇಜಿನ ನಂತರ ಮಾಲಿಕನಾಗುತ್ತಾನೆ.

(ಈ ಪುಟ ಖಾಲಿ ಇದೆ –ಸಂ.)

## ಋಣಭಾರಗಳಿಂದ ಮುಕ್ತವಾದ ಖರೀದಿಗಳು

೧. ಸಾಧ್ಯವಿದ್ದಷ್ಟು ಮಟ್ಟಿಗೆ, ಖರೀದಿಯು ಋಣಭಾರಗಳಿಂದ ಮುಕ್ತವಾದದ್ದಾಗಿರತಕ್ಕದ್ದು. ಮಾರಾಟ ಋಣಭಾರ ಮುಕ್ತವಾಗಿರುವಂತೆ ವ್ಯವಸ್ಥೆ ಮಾಡಬೇಕು. ಆಸ್ತಿಯ ಹಸ್ತಾಂತರ ಅಧಿನಿಯಮ (ಟಿ.ಪಿ.) ಇದು ಎರಡು ಕಲಮುಗಳನ್ನು ಒಳಗೊಂಡಿರುತ್ತದೆ. ಇವು ಇದನ್ನು ಸಾಧ್ಯಗೊಳಿಸುತ್ತವೆ. ಈ ಕಲಮುಗಳು ೫೬ ಮತ್ತು ೫೭ ಆಗಿರುತ್ತವೆ.

## ಕಲಮು–೧

# ಅಡಮಾನಿನ (ಒತ್ತೆಯ) ಸ್ವರೂಪ

**I. ವ್ಯಾಖ್ಯೆ:**

೧. ಕಲಮು ೫೮– ಇದು ಅಡಮಾನ(ಒತ್ತೆಯ)ವನ್ನು ವ್ಯಾಖ್ಯಾನಿಸುತ್ತದೆ. ಈ ಕಲಮಿನ ಅನ್ವಯ ಅಡಮಾನ (ಒತ್ತೆಯಲ್ಲಿ) ವ್ಯವಹಾರದಲ್ಲಿ ಮೂರು ಅಂಶಗಳು ಇರುತ್ತವೆ.

(i) ಹಿತಾಸಕ್ತಿಯ ವರ್ಗಾವಣೆ.

(ii) ಒಂದು ನಿರ್ದಿಷ್ಟ ಸ್ಥಿರ ಆಸ್ತಿಯಲ್ಲಿ.

(iii) ಸಾಲದ ಹಣವನ್ನು ಮುಂಗಡವಾಗಿ ಪಡೆಯುವುದಕ್ಕಾಗಿ ಭದ್ರತೆಯ ಉದ್ದೇಶದಿಂದ.

**II. ಈ ಅಂಶಗಳ ವಿವರಣೆ:**

೧. ಅಡಮಾನ (ಒತ್ತೆಗೆ) ಸ್ಥಿರ ಆಸ್ತಿಯು ಅವಶ್ಯವಾದ ಅಂಶವಾಗಿರುವುದಿಲ್ಲ:

(i) ಇಂಗ್ಲಿಷ್ ಕಾನೂನಿನಲ್ಲಿ ಸ್ವಂತ, ವೈಯಕ್ತಿಕ ಇಲ್ಲವೆ ಸ್ಥಿರವಾದ ಆಸ್ತಿಗಳು ಅಡಮಾನದ ವಿಷಯ ಗಳಾಗಿರಬಲ್ಲವು. ಈ ಸ್ಥಿರ ಆಸ್ತಿಯು ಭೌತಿಕ ಇಲ್ಲವೆ ಅಭೌತಿಕ ಮತ್ತು ಸ್ವಂತ ಆಸ್ತಿಯು ಕಬ್ಜೆಯಲ್ಲಿ ಇರಬಹುದು, ಇಲ್ಲವೆ ಜಡತೆಯ ಆ ಆಸ್ತಿಯು ಸಂಪೂರ್ಣವಾದುದು ಇಲ್ಲವೆ ನಿರ್ಣಯಿಸಲು ಸಾಧ್ಯವಾಗುವಂತಹದ್ದು ಆಗಿರಬಹುದು. ಅದೆಂದರೆ ಜೀವಮಾನದವರೆಗೆ ಅದು ಕಾನೂನುಬದ್ಧ ಇಲ್ಲವೆ ನ್ಯಾಯಸಮ್ಮತವಾದದ್ದು ಇರಬಹುದು. ಯಾವುದೇ ರೀತಿಯ ಹಿತಾಸಕ್ತಿಯು ಸಹ ಅಡಮಾನವಾಗಿಡಬಹುದು. ಆ ಹಿತಾಸಕ್ತಿಯು ಅವನಲ್ಲಿ ವಿದಿತವಾಗಿರಬಹುದು ಇಲ್ಲವೆ ಒಂದು ಘಟನೆಯನ್ನು ಅವಲಂಬಿಸಿ ಬರುವ ನಿರೀಕ್ಷಣೆ ಇದ್ದರೆ ಅದನ್ನು ಸಹ ಅಡಮಾನ ಇಡಬಹುದು.

(ii) ಆಸ್ತಿಯ ಹಸ್ತಾಂತರವು ಸ್ಥಿರ ಆಸ್ತಿಯನ್ನು ಕುರಿತು ಮಾತ್ರ ಅಡಮಾನದ ಬಗ್ಗೆ ಹೇಳುತ್ತದೆ. ಕಾನೂನು ಚರ ಆಸ್ತಿಯ ಅಡಮಾನವನ್ನು ಮಾನ್ಯ ಮಾಡುವುದಿಲ್ಲವೆಂಬ ಪರಿಣಾಮವನ್ನು ಬೀರುತ್ತದೆ. ಇದು ತಪ್ಪಾಗುತ್ತದೆ. ಆಸ್ತಿಯ ಹಸ್ತಾಂತರ ಅಧಿನಿಯಮವು ಕೇವಲ ಆಸ್ತಿಯನ್ನು ಕುರಿತು ವ್ಯಾಖ್ಯಾನಿಸುತ್ತದೆ. ಮತ್ತು ತಿದ್ದುಪಡಿ ಮಾಡುತ್ತದೆ. ಇದು ಕಾನೂನನ್ನು ಕ್ರೋಢೀಕರಿಸುವುದಿಲ್ಲ. ಆದ್ದರಿಂದ ಇದು ಸಂಪೂರ್ಣ ವಾಗಿರುವುದಿಲ್ಲ.

(iii) ಭಾರತದಲ್ಲಿ ಚರ ಆಸ್ತಿಗಳ ಅಡಮಾನವನ್ನು ಮಾನ್ಯ ಮಾಡಲಾಗಿದೆ.

*೯ ಸಿ.ಡಬ್ಲ್ಯೂ.ಎನ್. ೧೪: ೮ ಬಾಂಬೆ ಎಸ್.ಆರ್. ೩೪೪*

(iv) ಚರ ಆಸ್ತಿಗಳ (ಜಂಗಮ ಆಸ್ತಿಗಳ) ಒತ್ತೆ, ಅಡಮಾನಗಳು ಯಾವ ಕಾನೂನಿನ ವ್ಯವಸ್ಥೆಗೆ ಒಳಪಟ್ಟಿವೆ:

ಆಸ್ತಿಯ ಹಸ್ತಾಂತರ ಅಧಿನಿಯಮವು ಯಾವ ವ್ಯವಸ್ಥೆಯನ್ನು ಮಾಡಿಲ್ಲ. ಭಾರತೀಯ ಒಪ್ಪಂದ ಕರಾರು ಅಧಿನಿಯಮವೂ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಅದರ ಪರಿಣಾಮವಾಗಿ ಇಂಗ್ಲಿಷ್ ಕಾನೂನಿನ

ತತ್ತ್ವಗಳನ್ನು ಇಂತಹ ಅಡಮಾನಕ್ಕೆ (ಒತ್ತೆಗೆ) ಅನ್ವಯಿಸಲಾಗುವುದು.

*೩೪ ಕಲ್ಕತ್ತ ೨೨೩, (೨೨೮): ೨೭ ಬಾಂಬೆ ಎಸ್.ಆರ್. ೧೪೪೯*

(v) ಬರವಣಿಗೆ ಇಲ್ಲದೆ (ಲೇಖಿ ಇಲ್ಲದೆ) ಚರ (ಜಂಗಮ) ಆಸ್ತಿಗಳ ಆಸ್ತಿಯನ್ನು ಪರಿಣಾಮ ಕಾರಿಯಾಗಿ ಇಡಬಹುದು.

(vi) ವ್ಯವಹಾರಾರ್ಹವಾದ ಹಕ್ಕುಗಳ ಅಡಮಾನಕ್ಕೆ (ಒತ್ತೆಗೆ) ಲಿಖಿತದಲ್ಲಿ ಚರ ಆಸ್ತಿಗಳು. ಜಂಗಮ ಆಸ್ತಿಗಳು ಆಸ್ತಿಯ ಹಸ್ತಾಂತರ ಅಧಿನಿಯಮ (ಟಿ.ಪಿ.) ಇದರ ಕಲಂ ೧೩೦ರಲ್ಲಿಯ ಕಾರಣಗಳಿಗಾಗಿ ಇರಬೇಕೆಂದು ಹೇಳುತ್ತದೆ.

*೩೭– ಬಾಂಬೆ ೧೯೮ (ಪಿ.ಸಿ.)*

ಇನ್ಷೂರೆನ್ಸ್ ಪಾಲಿಸಿ(ಜೀವವಿಮಾ ಪಾಲಿಸಿ)ಯನ್ನು ಠೇವಣಿ ಇಡುವುದು.

೨. ಹಿತಾಸಕ್ತಿಯನ್ನು ವರ್ಗಾಯಿಸುವುದು.

(೧) ಅದೆಂದರೆ ಆ ಆಸ್ತಿಯ ಬಗ್ಗೆ ಅಡಮಾನ ಇಟ್ಟವನಿಗೆ ಇರುವ ಕೆಲವು ಹಕ್ಕುಗಳನ್ನು ವರ್ಗಾಯಿಸುವುದು.

(೨) ಒಡೆತನ (ಮಾಲಿಕತ್ವವು) ಕಬ್ಜೆ, ಉಪಭೋಗಿಸುವ ಹಕ್ಕು ಮಾರಾಟ ಮಾಡುವಂತಹ ಅನೇಕ ಹಕ್ಕುಗಳ ಸಮುದಾಯವೇ ಆಗಿರುತ್ತದೆ.

(೩) ಇವುಗಳಲ್ಲಿ ಯಾವುದೇ ಒಂದು ಹಕ್ಕನ್ನು ವರ್ಗಾಯಿಸಿದರೂ ಸಾಕಾಗುತ್ತದೆ. ವರ್ಗಾಯಿಸಿದ ಹಕ್ಕು ಬದಲಾಗಬಹುದು.

(i) ಇದು ಮಾರಾಟ ಮಾಡುವ ಹಕ್ಕು ಆಗಿರಬಹುದು.

(ii) ಇದು ಉಪಭೋಗಿಸುವ ಹಕ್ಕು ಆಗಿರಬಹುದು.

(iii) ಇದು ಪೂರ್ಣ ಸ್ವಾಮಿತ್ವ ಹೊಂದುವ ಹಕ್ಕಾಗಿರಬಹುದು.

೪) ಎಲ್ಲಿಯವರೆಗೆ ಕೆಲವು ಹಕ್ಕುಗಳನ್ನು ವರ್ಗಾಯಿಸಲಾಗಿದೆಯೋ ಅಲ್ಲಿಯವರೆಗೆ ಯಾವ ಸ್ವರೂಪದ ಹಕ್ಕುಗಳನ್ನು ವರ್ಗಾಯಿಸಲಾಗಿದೆಯೆಂಬುದು ಯಾವ ಪರಿಣಾಮ ಬೀರುವುದಿಲ್ಲ.

### III. ಸಾಲದ ಹಣವನ್ನು ಮುಂಗಡವಾಗಿ ಪಡೆಯುವ ಉದ್ದೇಶಕ್ಕಾಗಿ ಇರಲಿಕ್ಕೇಬೇಕು

೧. ಹಿತಾಸಕ್ತಿಯ ವರ್ಗಾವಣೆಯು ಜಾಮೀನಿನ ರೀತಿಯಾಗಿರುತ್ತದೆ. ಖಾತರಿ ಮಾಡಿಕೊಳ್ಳುವ ವಿಚಾರವು ಎರಡು ಸಂಗತಿಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಆರ್ಥಿಕ ಹೊಣೆಗಾರಿಕೆಯುಳ್ಳ ಸಾಲ ತೆಗೆದುಕೊಂಡವನು ಇರಲಿಕ್ಕೇಬೇಕು, ಮತ್ತು ಎರಡನೆಯದಾಗಿ ಆ ಹೊಣೆಗಾರಿಕೆಯನ್ನು ನೆರವಾಗಲು ಕೆಲವು ಆಸ್ತಿಯನ್ನು ಒತ್ತೆ ಇಡಲು ಇರಲಿಕ್ಕೇಬೇಕು.

೨. ಈ ವರ್ಗಾವಣೆಯ ವ್ಯವಹಾರದ ಉದ್ದೇಶವು ಸಾಲವನ್ನು ತೆಗೆದುಕೊಳ್ಳುವುದು ಇರಲಿಕ್ಕೇಬೇಕು. ಸಾಲವನ್ನು ತೆಗೆದುಕೊಳ್ಳುವ ಉದ್ದೇಶದಿಂದ ಮಾಡಿದ ವರ್ಗಾವಣೆಯು ಒಂದು ವರ್ಗಾವಣೆಯಿಂದ ವಿಭಿನ್ನವಾಗಿರಲಿಕ್ಕೇಬೇಕು. ಈ ಸಾಲದ ಉದ್ದೇಶವು ಸಾಲವನ್ನು ತೀರಿಸುವುದು ಆಗಿರುತ್ತದೆ.

*೨೫ ಅಲಹಾಬಾದ್ ೧೧೫– ೩೦೧ಎ ೫೪, ೧೧ ಬಾಂಬೆ ೪೬೨*

೩. ವರ್ಗಾಯಿಸಿದ ಈ ಹಕ್ಕು ಆ ವ್ಯಕ್ತಿಯು ಆ ಸಾಲವನ್ನು ತಿರುಗಿ ಪಡೆಯಲು ಸಹಾಯ ಮಾಡಲಿಕ್ಕೇಬೇಕು. ಆ ವರ್ಗಾವಣೆಯು ಸಾಲವನ್ನು ಅಂತ್ಯಗೊಳಿಸತಕ್ಕದ್ದಲ್ಲ. ಈ ವರ್ಗಾವಣೆಯ ಪರಿಣಾಮವು

ಸಾಲವನ್ನು ಅಂತ್ಯಗೊಳಿಸಬಹುದಾಗಿದ್ದರೆ ಅಲ್ಲಿ ಅಡಮಾನ ಇರುವುದಿಲ್ಲ.

*ಉದಾಹರಣೆ: ೧೧ ಬಾಂಬೆ ೪೬೨ ಅಬ್ದುಲಭಾಯಿ ವರ್ಸಸ್ ಕಾಶಿ*

೧೮೬೨ರಲ್ಲಿ 'ಅ'ನು ೧೫೦ ರೂಪಾಯಿಗಳನ್ನು ತೆಗೆದುಕೊಂಡು ಪ್ರತಿಫಲವಾಗಿ 'ಬ'ನಿಗೆ ಲಿಖಿತದಲ್ಲಿ ಒಂದು ಕರ್ಜರೋಖಾ (ಸಾಲಪತ್ರ) ಬರೆದುಕೊಟ್ಟನು (ಇತರ ವಿಷಯಗಳ ಜೊತೆಗೆ: 'ಅ'ನ ಮಾಲ್ಕಿ ಹೊಲವನ್ನು 'ಬ'ನು ಒಂದು ನಿರ್ದಿಷ್ಟ ಹೊಲವನ್ನು ಹೊಂದತಕ್ಕದ್ದು ಮತ್ತು ಅದನ್ನು ಅವನು ಉಪಭೋಗಿಸತಕ್ಕದ್ದು.

'ಅ'ನ ಮಾಲ್ಕಿ ಹೊಲವನ್ನು ೨೫ ವರ್ಷಗಳವರೆಗೆ 'ಬ'ನು ಹೊಂದತಕ್ಕದ್ದು ಮತ್ತು 'ಬ'ನು ಅದನ್ನು ಉಪಭೋಗಿಸತಕ್ಕದ್ದು. ಕೊನೆಗೆ ಆ ಹೊಲವನ್ನು 'ಅ'ನಿಗೆ ವಾಪಸ್ಸು ಕೊಡತಕ್ಕದ್ದು. ಅದು ಮೂಲ ಹಣ ಮತ್ತು ಅದರ ಬಡ್ಡಿ ಯಾವುದೇ ಮಾಗಣಿ(ಕ್ಲೇಮ್)ದಿಂದ ಮುಕ್ತವಾಗಿರತಕ್ಕದ್ದು.

*೨೫ ಅಲಹಾಬಾದ್ ೧೧೫*

**ಅಡಮಾನವನ್ನು ಉಳಿದ ಪರಭಾರೆಗಳ ನಮೂನೆಗಳೊಂದಿಗೆ ತುಲನೆ ಮಾಡುವುದು**

**ಅಡಮಾನ ಮತ್ತು ಖರೀದಿ**

೧. ಕಲಮು ೫೪ರಲ್ಲಿ ಖರೀದಿಯನ್ನು ವ್ಯಾಖ್ಯಾನಿಸಲಾಗಿದೆ. ಇದು ಒಂದು ಬೆಲೆಗೆ ಮಾಲಿಕತ್ವವನ್ನು ವರ್ಗಾಯಿಸುವುದು. ಈ ಬೆಲೆಯು ಸಾಲವಲ್ಲ ಮತ್ತು ಈ ವರ್ಗಾವಣೆಯು ಒಂದು ಹಿತಾಸಕ್ತಿಯನ್ನು ವರ್ಗಾಯಿಸುವುದಿಲ್ಲ. ಆದರೆ ಸಂಪೂರ್ಣ ಮಾಲಿಕತ್ವವನ್ನು ವರ್ಗಾಯಿಸುವುದಾಗಿದೆ.

೨. ಅಡಮಾನದಲ್ಲಿ ಕೊಟ್ಟ ಹಣವು ಸಾಲವಾಗಿರುತ್ತದೆ. ಮತ್ತು ವರ್ಗಾವಣೆಯು ಕೇವಲ ಅದರಲ್ಲಿ ಒಂದು ಹಕ್ಕಿನ ವರ್ಗಾವಣೆ ಮಾತ್ರವಾಗಿರುತ್ತದೆ.

೩. ಖರೀದಿ ಒಪ್ಪಂದದ ಕರಾರಿನ ಭಂಗ ಮಾಡಿದರೆ ಆ ಹಕ್ಕುಗಳು ಮಾರುವವನ ಮತ್ತು ಕೊಳ್ಳುವವನ ಹಕ್ಕುಗಳಾಗಿರುತ್ತವೆ. ಹೀಗಿರುವಾಗ ಅದು ಒಂದು ಅಡಮಾನದ ಒಪ್ಪಂದದ ಕರಾರು ಆಗಿರುತ್ತದೆ. ಅವು ಅಡವು ಇಟ್ಟವನ ಮತ್ತು ಅಡಮಾನ ಇಟ್ಟುಕೊಂಡವರ ಹಕ್ಕುಗಳೇ ಆಗಿರುತ್ತವೆ.

೪. ಖರೀದಿಯ ವ್ಯವಹಾರದಲ್ಲಿ ಆಸ್ತಿಯು ಸಂಪೂರ್ಣವಾಗಿ ವರ್ಗಾಯಿಸಲ್ಪಡುತ್ತದೆ. ಅಡಮಾನದಲ್ಲಿ ಆಸ್ತಿಯ ಒಂದು ಹಕ್ಕನ್ನು ಕೇವಲ ಸಾಲದ ಹಣ ತಿರುಗಿ ಕೊಡಲು ಖಾತರಿ ಮಾಡಿಕೊಳ್ಳಲು ಕೊಟ್ಟದ್ದಾಗಿರುತ್ತದೆ.

**ಅಡಮಾನ ಮತ್ತು ಇತರ ನಮೂನೆಯ ಭದ್ರತೆಗಳು**

೧. ನಾಲ್ಕು ನಮೂನೆಯ ಭದ್ರತೆಗಳು ಇರುತ್ತವೆ. (i) ಅಡಮಾನ, (ii) ಒತ್ತೆ, (iii) ಭೋಜಾ ಧಾರಣಾಧಿಕಾರ, (iv) ಆಧಾರವಾಗಿಡುವುದು ಇಲ್ಲವೆ ಋಣ ಭಾರವಾಗಿಡುವುದು.

ಅಡಮಾನ ಮತ್ತು ಬೇರೆ ನಮೂನೆಯ ಭದ್ರತೆಗಳ ಅಂತರವನ್ನು ತಿಳಿದುಕೊಳ್ಳುವುದು ಮಹತ್ವದ್ದಿದೆ.

**೧. ಅಡಮಾನ ಮತ್ತು ಒತ್ತೆ**

೧. ಸಾಲವನ್ನು ತಿರುಗಿ ಕೊಡುವುದರ ಸಲುವಾಗಿ ಸರಕುಗಳನ್ನು ಜಾಮೀನು ಮೇಲೆ ಇಡುವುದು

ಇಲ್ಲವೆ ವಚನವನ್ನು ಪಾಲಿಸುವುದಕ್ಕೆ ಒತ್ತೆ ಅನ್ನುವುದು– ಕಲಂ ೧೭೨ ಭಾರತೀಯ ಒಪ್ಪಂದ ಕರಾರು ಅಧಿನಿಯಮ.

೨. ಒಂದು ಅಡಮಾನದಲ್ಲಿ ಸಾಮಾನ್ಯವಾಗಿ ಒಂದು ಆಸ್ತಿಯ ಮಾಲಿಕತ್ವವು ಅಡವು ಇಟ್ಟುಕೊಂಡವನಿಗೆ ಹೋಗುತ್ತದೆ. ಮತ್ತು ಅಡವು ಇಟ್ಟವನಿಗೆ ಅದನ್ನು ಬಿಡಿಸಿಕೊಳ್ಳುವ ಹಕ್ಕು ಇರುತ್ತದೆ. ಒತ್ತೆಯಲ್ಲಿ ಒತ್ತೆ ಇಟ್ಟವನಿಗೆ ಸಾಮಾನ್ಯವಾಗಿ ಅದರ ಮಾಲಿಕತ್ವವು ಅವನಲ್ಲಿ ಇರುತ್ತದೆ. ಆದರೆ ಕೇವಲ ವಿಶೇಷ ಆಸ್ತಿಗಳಲ್ಲಿ ಮಾತ್ರ ಅಡವು ಇಟ್ಟುಕೊಂಡವನಿಗೆ ಹೋಗುತ್ತದೆ.

೩. ಒತ್ತೆ ಇಟ್ಟ ಆಸ್ತಿಯ ಕಬ್ಜಾವನ್ನು ಒತ್ತೆ ಇಟ್ಟುಕೊಂಡವನಿಗೆ ಕೊಡುವುದು ಅವಶ್ಯವಿದೆ. ಆದರೆ ಅಡಮಾನದಲ್ಲಿ ಆಸ್ತಿಯ ಕಬ್ಜೆ ಕೊಡುವುದು ಅವಶ್ಯ ಇರುವುದಿಲ್ಲ.

೪. ಒಮ್ಮೆ ಆಸ್ತಿಯನ್ನು ಒತ್ತೆ ಇಟ್ಟರೆ, ಎರಡನೆಯ ಬಾರಿ ಅದನ್ನು ಒತ್ತೆ ಇಡಲು ಬರುವುದಿಲ್ಲ. ಯಾಕೆಂದರೆ ಎರಡನೆಯ ಸಲ ಒತ್ತೆ ಇಟ್ಟುಕೊಳ್ಳುವವನಿಗೆ ಅದರ ಕಬ್ಜೆ ಕೊಡಲು ಬರುವುದಿಲ್ಲ. ಆದರೆ ಒಂದು ಬಾರಿ ಒಂದು ಆಸ್ತಿಯನ್ನು ಒಬ್ಬ ಅಡಮಾನ ಇಟ್ಟರೆ ಅದನ್ನು ಅನಂತರ ಬೇರೆಯವರಿಗೆ ಅಡಮಾನ ಇಡಬಹುದು.

೫. ಒತ್ತೆಯ ಆಸ್ತಿಯು ಕೇವಲ ಸ್ವಂತ ಆಸ್ತಿ ಇರಬಹುದು, ಅಡಮಾನವು ಸ್ವಂತ ಇಲ್ಲವೆ ಸ್ಥಿರ ಆಸ್ತಿಯಾಗಿರಬಹುದು.

## ಅಡಮಾನ ಮತ್ತು ಧಾರಣಾ ವ್ಯವಸ್ಥೆಗಳು

೧. ಧಾರಣಾ ವ್ಯವಸ್ಥೆಯು ಒಂದು ರೀತಿಯ ಖಾತರಿಯ ಜಾಮೀನು ಇದ್ದು ಅದು ಕಾನೂನಿನಿಂದ ಸೃಷ್ಟಿಸಿದ್ದಾಗಿರುತ್ತದೆ. ಧಾರಣಾ ವ್ಯವಸ್ಥೆಯ ಹಕ್ಕು ಕಾನೂನು ಪ್ರಕಾರ ಬಂದದ್ದು ಮತ್ತು ಕರಾರು ಒಪ್ಪಂದದ ಮೂಲಕ ಕಬ್ಜೆಯಲ್ಲಿ ಇಟ್ಟುಕೊಳ್ಳಲು ಒಪ್ಪಂದ ಕರಾರಿನ ಮೂಲಕ ಕಬ್ಜೆಯಲ್ಲಿ ಇಟ್ಟುಕೊಳ್ಳುವ ಕರಾರಿನಿಂದ ಇರುವುದಿಲ್ಲ.

೨. ಧಾರಣಾ ವ್ಯವಸ್ಥೆಯ ಮೇಲಿನ ಕಾನೂನು ಭಾರತೀಯ ಬೇರೆ ಬೇರೆ ಕಾನೂನುಗಳಲ್ಲಿ ಹರಿದು ಹಂಚಿಹೋಗಿದೆ. ಉದಾ: ಭಾರತ ಕರಾರು ಒಪ್ಪಂದ ಕಲಂ ೧೭೦ ಜನರಲ್ ೧೭೧– ಬ್ಯಾಂಕರ್ಸ್ ಸಾಲಿಸಿಟರ್ ಮುಂತಾದ ೨೨೧ ಏಜೆಂಟನ ಧಾರಣಾಧಿಕಾರ ಸರಕು ಸಾಗಾಣಿಕೆ– ೪೭, ಹಣ ಸಂದಾಯವಾಗದ ಮಾರಾಟಗಾರನ ಧಾರಣಾಧಿಕಾರ– ಟಿ ಪಿ ೫೫೪. ೫೫(೬) ಮಾರಾಟ ಮಾಡುವವರ ಹಾಗೂ ಕೊಳ್ಳುವವರ ಧಾರಣಾಧಿಕಾರ.

೩. ಅಡಮಾನವು ಮಾಡುವಂತೆ ಧಾರಣಾ ವ್ಯವಸ್ಥೆಯು ಸಾಮಾನ್ಯವಾಗಿ ಮಾಲೀಕತ್ವವನ್ನು ಸೃಷ್ಟಿಸುವುದಿಲ್ಲ, ಒತ್ತೆಯಲ್ಲಿ ಇದ್ದಂತೆ ನಿರೂಪಿತ (ಅರ್ಹ) ಆಸ್ತಿಯಲ್ಲಿ ಸಹ ಮಾಲಿಕತ್ವವು ಉಂಟಾಗುವುದಿಲ್ಲ. ಕೇವಲ ಕಬ್ಜೆಯನ್ನು ಇಟ್ಟುಕೊಳ್ಳುವ ಹಕ್ಕು ಮಾತ್ರ ಇರುತ್ತದೆ.

೪. ಅಡಮಾನ ಇಟ್ಟುಕೊಂಡವ ಮತ್ತು ಒತ್ತೆ ಇಟ್ಟುಕೊಂಡವ ಇಬ್ಬರೂ ಅದನ್ನು ಮಾರಬಲ್ಲರು. ಆದರೆ ಧಾರಣಾ ವ್ಯವಸ್ಥೆ (ಲೀನ) ಹೊಂದಿದವನು ಹಾಗೆ ಮಾಡಲು ಬರುವುದಿಲ್ಲ.

## ಅಡಮಾನ ಮತ್ತು ಋಣಭಾರ

(ಚಾರ್ಜ್) ಋಣಭಾರವನ್ನು ಕಲಂ ೧೦೦ರಲ್ಲಿ ವ್ಯಾಖ್ಯಾಯಿಸಿದ್ದಾಗಿರುತ್ತದೆ. ಋಣಭಾರದಲ್ಲಿ ಎರಡು

ಅಂಶಗಳು ಇರುತ್ತವೆ.

(i) ಇದರಲ್ಲಿ ಆರ್ಥಿಕ ಹೊಣೆಗಾರಿಕೆಯು ಇರುತ್ತದೆ.

(ii) ಆರ್ಥಿಕ ಹೊಣೆಗಾರಿಕೆಯನ್ನು ತೀರಿಸಲು ಸ್ಥಿರ ಆಸ್ತಿಯು ಜಾಮೀನು ಆಗಿರುತ್ತದೆ.

೨. ಒಂದು ಅಡಮಾನದಲ್ಲಿ ಮೂರು ಅಂಶಗಳಿರುತ್ತವೆ.

(i) ಇದರಲ್ಲಿ ಆರ್ಥಿಕ ಹೊಣೆಗಾರಿಕೆಯು ಇರುತ್ತದೆ.

(ii) ಸ್ಥಿರ ಆಸ್ತಿಯ ಆರ್ಥಿಕ ಹೊಣೆಗಾರಿಕೆಯನ್ನು ತೀರಿಸಲು ಸ್ಥಿರ ಆಸ್ತಿಯು ಭದ್ರತೆಯಾಗಿರುತ್ತದೆ.

(iii) ಸಾಲ ಕೊಟ್ಟವನ ಹೆಸರಿನಲ್ಲಿ ಆಸ್ತಿಯಲ್ಲಿಯ ಹಿತಾಸಕ್ತಿಯ ವರ್ಗಾವಣೆಯು ಇರುತ್ತದೆ.

೩. ಋಣಭಾರದಲ್ಲಿ ಹಿತಾಸಕ್ತಿಯ ವರ್ಗಾವಣೆಯು ಇರುವುದಿಲ್ಲ. ಅದರಲ್ಲಿ ಕೇವಲ ಹೊಣೆಗಾರಿಕೆ: ಜವಾಬ್ದಾರಿ ಇರುತ್ತದೆ.

*೩೫ ಕಲ್ಕತ್ತ ೮೩೭ (೮೪೪). ೧೩ ಲಾಹೋರ ೬೬೦ ಟಿ.ಬಿ. ೩೫ ಕಲ್ಕತ್ತಾ ೯೮೫*

೪. ಅಡಮಾನ ಮತ್ತು ಋಣಭಾರ (ಚಾರ್ಜ್) ಇವುಗಳಲ್ಲಿನ ಅಂತರವು ಮಹತ್ವದ್ದು.

೧. ಒಂದು ಅಡಮಾನವನ್ನು ಇಟ್ಟುಕೊಂಡವನಿಗೆ ಅದರಲ್ಲಿನ ಹಿತಾಸಕ್ತಿಯನ್ನು ವರ್ಗಾಯಿಸಿ ಅವನ ಕಬ್ಜೆಯಲ್ಲಿ ಕೊಟ್ಟದ್ದನ್ನು ಅಡಮಾನದ ಹಣಕ್ಕಾಗಿ ಅಡಮಾನ ಇಟ್ಟ ಆಸ್ತಿಯನ್ನು ಹಿಂಬಾಲಿಸಬಲ್ಲದು. ಆದರೆ ಎಂದು ಋಣಭಾರವನ್ನು ಯಾವನು ವರ್ಗಾಯಿಸಿರುತ್ತಾನೆಯೋ ಅವನ ವಿರುದ್ಧ ಮಾತ್ರ ನೋಟೀಸು ಕೊಟ್ಟು ಜಾರಿ ಮಾಡಬಹುದು.

*೩೩ ಕಲ್ಕತ್ತಾ ೯೩೫*

## ಅಡಮಾನದ ಬೇರೆ ಬೇರೆ ವರ್ಗಗಳು

೧. ಈ ವಿಭಾಗವು ಆರು ವರ್ಗಗಳ ಅಡಮಾನಗಳನ್ನು ಪರಿಗಣಿಸುತ್ತದೆ.

(೧) ಸಾದಾ ಅಡಮಾನ.

(೨) ಕರಾರಿನ ಮಾರಾಟದ ಮೇಲೆ ಅಡಮಾನ.

(೩) ಕಬ್ಜಾ ಅಡಮಾನ.

(೪) ಇಂಗ್ಲಿಷ್ ಅಡಮಾನ.

(೫) ನ್ಯಾಯಸಮ್ಮತ ಅಡಮಾನ.

(೬) ಅನಾಮಿಕ ಅಡಮಾನ.

೨. ಬೇರೆ ಬೇರೆ ವರ್ಗದ ಅಡಮಾನಗಳ ವೈಶಿಷ್ಟ್ಯಗಳು

### (೧) ಸಾದಾ ಅಡಮಾನ

ಸಾದಾ ಅಡಮಾನವು ಎರಡು ಸಂಗತಿಗಳನ್ನು ಒಳಗೊಂಡಿರುತ್ತದೆ.

(i) ಒಂದು ವೈಯಕ್ತಿಕ ಹೊಣೆಗಾರಿಕೆಯು ಅದು ವ್ಯಕ್ತಪಡಿಸಿದ್ದು ಇಲ್ಲವೆ ಇಂಗಿತಾರ್ಥವುಳ್ಳದ್ದು.

(ii) ಹಕ್ಕು ವರ್ಗಾಯಿಸಿದ ಆಸ್ತಿಯ ಮಾರಾಟ ಮಾಡಿಸುವುದು.

**ವೈಯಕ್ತಿಕ ಹೊಣೆಗಾರಿಕೆ:**

೧. ಒಬ್ಬನು ಒಂದು ಸಾಲವನ್ನು ತೆಗೆದುಕೊಂಡರೆ ಅದನ್ನು ತಿರುಗಿ ಕೊಡುವುದು ಅವನ ವೈಯಕ್ತಿಕ ಹೊಣೆಗಾರಿಕೆಯು ಆಗಿರುತ್ತದೆ.

ಒಬ್ಬನು ಒಂದು ಸಾಲವನ್ನು ತೆಗೆದುಕೊಂಡರೆ, ಅದನ್ನು ಒಂದು ನಿರ್ದಿಷ್ಟ ಮೊತ್ತದಲ್ಲಿ ಕೊಡಬೇಕೆಂಬ ಕರಾರು ಒಪ್ಪಂದದ ದಸ್ತಾವೇಜು ಇರದಿದ್ದರೆ, ಆ ಸಾಲವನ್ನು ಅವನು ತಿರುಗಿಕೊಡುವುದು ಅವನ ವೈಯಕ್ತಿಕ ಹೊಣೆಗಾರಿಕೆಯಾಗಿರುತ್ತದೆ.

*೧೦ ಕಲ್ಕತ್ತಾ ೨೪೦, ೨೨ ಕಲ್ಕತ್ತ ೪೩೪, ೧೬ ಕಲ್ಕತ್ತ ೫೪೦,*
*೧೩ ಮದ್ರಾಸ್ ೧೯೨, ೧೫ ಮದ್ರಾಸ್ ೩೦೪, ೨೭ ಮದ್ರಾಸ್ ೫೨೬: ೮೬.*

೧. ಒಂದು ಸಾಲವು ಭದ್ರತೆಯಿಂದ ಕೂಡಿದ್ದು ಸಾಲ ಇರಬಹುದು ಇಲ್ಲವೆ ಅಭದ್ರತೆಯ ಸಾಲ ಇರಬಹುದು.

೨. ಅಭದ್ರತೆಯ ಪ್ರತಿಯೊಂದು ಸಾಲವೂ ಅದನ್ನು ತಿರುಗಿ ಕೊಡಲು ಅವನ ವೈಯಕ್ತಿಕ ಹೊಣೆಗಾರಿಕೆಯನ್ನು ಒಳಗೊಂಡಿರುತ್ತದೆ.

*೪೪ ಆಯ್.ಎ. ೮೭*
*(ಇಂಡಿಯನ್ ಅಪೀಲ)*

೩. ಸಾಲವನ್ನು ತಿರುಗಿಕೊಡಲು ವೈಯಕ್ತಿಕ ಹೊಣೆಗಾರಿಕೆ ಇಲ್ಲವೆಂದು ಹೇಳಿದ ಒಂದೇ ಪ್ರಕರಣ ಅಂದರೆ– ಒಂದು ನಿರ್ದಿಷ್ಟ ನಿಧಿಯೊಳಗಿನ ಆ ಸಾಲದ ಹಣವನ್ನು ಕೊಡಬೇಕೆಂದು ಒಂದು ಕರಾರು ಒಪ್ಪಂದದ ದಸ್ತಾವೇಜು ಇದ್ದರೆ ಮಾತ್ರ ಅವನ ಹೊಣೆಗಾರಿಕೆಯು ಇಲ್ಲದಾಗುತ್ತದೆ.

*ಪ್ರಕರಣಗಳು : ೧೦ ಕಲ್ಕತ್ತ, ೨೪೦, ೨೨ ಕಲ್ಕತ್ತ ೪೩೪, ೧೫ ಕಲ್ಕತ್ತ ೫೪೦,*
*೧೩ ಮದ್ರಾಸ್ ೧೯೨, ೧೫ ಮದ್ರಾಸ್ ೩೦೪, ೨೭ ಮದ್ರಾಸ್ ೫೨೬: ೮೬*

೪. ಒಂದು ಸಾಲಕ್ಕಾಗಿ ಭದ್ರತೆಯು ಇದೆಯೋ ಇಲ್ಲವೋ ಅದು ವೈಯಕ್ತಿಕ ಹೊಣೆಗಾರಿಕೆಯನ್ನು ಒಳಗೊಂಡಿರುತ್ತದೆಯೋ, ಅನ್ನುವುದು ಅದನ್ನು ಅರ್ಥೈಸುವುದರ ಮೇಲೆ ಅವಲಂಬಿತ ಪ್ರಶ್ನೆಯಾಗಿರುತ್ತದೆ. ಎರಡು ರೀತಿ ಪ್ರಸ್ತಾವನೆ ಮಾಡಬಹುದು. ಕಾನೂನು ಸಂಗತಿಗಳನ್ನು ಕೆಳಗಿನಂತೆ ನಿರೂಪಣೆ ಮಾಡ ಬಹುದು.

(i) ಬಡ್ಡಿಸಹಿತ ಆ ಸಾಲದ ಹಣವನ್ನು ತಿರುಗಿಕೊಡುವ ಹೊಣೆಗಾರಿಕೆಯು ಕೇವಲ ಒಂದು ಜಾಮೀನು ಕೊಟ್ಟಿರುವನೆಂಬ ಸಂಗತಿಯ ಮೇಲಿಂದ ವೈಯಕ್ತಿಕ ಹೊಣೆಗಾರಿಕೆಯು ಬದಲಾಗುವುದಿಲ್ಲ.

(ii) ಜಾಮೀನಿನ ಸ್ವರೂಪ ಮತ್ತು ಕರಾರು ಸಾಲ ತೆಗೆದುಕೊಂಡವನ ಹೊಣೆಗಾರಿಕೆಯನ್ನು ನಿಷೇಧಿಸಬಹುದು.

೫. ಒಂದು ಸಾಮಾನ್ಯ ಒತ್ತೆಯಲ್ಲಿ ಪ್ರತಿಯೊಂದು ಕಾಲಕ್ಕೂ ಯಾವಾಗಲೂ ಭದ್ರತೆಯು ಇರುತ್ತದೆ. ಭದ್ರತೆಯಿಂದ ಕೂಡಿದ ಸಾಲವು ಅದರ ಭದ್ರತೆಯ ಸ್ವರೂಪ ಮತ್ತು ಕರಾರುಗಳ ಮೇಲಿಂದ ಒತ್ತೆ ಇಟ್ಟವನ ಹೊಣೆಗಾರಿಕೆಯನ್ನು ನಿಷೇಧಗೊಳಿಸತಕ್ಕದ್ದಲ್ಲ. ಸಾಲವನ್ನು ತಿರುಗಿಕೊಡುವ ಒಬ್ಬನ ವೈಯಕ್ತಿಕ ಹೊಣೆಯ ಇಂಗಿತಾರ್ಥ ಉಳ್ಳದ್ದು ಮತ್ತು ಪ್ರತಿಯೊಂದು ಸಾದಾ ಅಡಮಾನದ ಅವಶ್ಯ ಭಾಗವಾಗಿರುತ್ತದೆ.

*ಪ್ರಕರಣಗಳು– ೨೨ ಅಲಹಾಬಾದ್ ೪೫೩ (೪೬೧), ೨೯ ಮದ್ರಾಸ್ ೪೯೧,*
*೩೦ ಅಲಹಾಬಾದ್ ೩೮೮*

೬. ಇಂತಹ ಒಡಂಬಡಿಕೆಯು ಇಲ್ಲದಿದ್ದರೆ ಆ ಜಾಮೀನು ಕೇವಲ ಋಣಭಾರ ಆಗುತ್ತದೆ.

*ಪ್ರಕರಣ– ೪೨ ಅಲಹಾಬಾದ್ ೧೫೮ (೧೯೪)– ೪೯೧. ಎ ೨೨೮,*
*೫೨ ಅಲಹಾಬಾದ್ ೯೧೦*

**II. ಆಸ್ತಿಯನ್ನು ಮಾರಾಟ ಮಾಡಿಸುವ ಹಕ್ಕು**

೧. ಇದು ಒಂದು ನಿಯಂತ್ರಣವಾಗಿದ್ದಾಗ್ಯೂ ಇದನ್ನು ನ್ಯಾಯಾಲಯ ಮಧ್ಯ ಪ್ರವೇಶಿಸುವುದರ ಮೂಲಕ ಈ ಹಕ್ಕನ್ನು ಜಾರಿಗೊಳಿಸತಕ್ಕದ್ದು ಎಂಬ ಶಬ್ದಗಳು ಅಂತಹ ಆಸ್ತಿಯನ್ನು ಮಾರಾಟ ಮಾಡಿಸಬಹುದೆಂದು ಸೂಚಿಸುತ್ತವೆ.

೨. ವರ್ಗಾವಣೆಯ ಈ ಹಕ್ಕು ವ್ಯಕ್ತಪಡಿಸಿದ್ದು ಇಲ್ಲವೆ ಇಂಗಿತಾರ್ಥ ಉಳ್ಳದ್ದು ಆಗಿರಬಹುದು.

## (II) ಷರತ್ತಿನೊಂದಿಗೆ ಮಾರಾಟ ಮೂಲಕದ ಅಡಮಾನ

**೧. ವಿಶೇಷ ಗುಣಗಳು:**

(೧) ವರ್ಗಾವಣೆಯು ಮಾರಾಟದ ಮೂಲಕವಾಗಿರುತ್ತದೆ. ಇದು ಮಾಲೀಕತ್ವವನ್ನು ವರ್ಗಾಯಿಸಿರುವುದಾಗಿರುತ್ತದೆ.

(೨) ಖರೀದಿ ಮತ್ತು ಅಡಮಾನದಲ್ಲಿಯ ಅಂತರವು ಕರ ಮೂಲಕ ಖರೀದಿಯು ಅಂದರೆ ಖರೀದಿಯಲ್ಲಿ ವರ್ಗಾವಣೆಯು ಸಂಪೂರ್ಣವಾಗಿರುತ್ತದೆ. ಆದರೆ ಅಡಮಾನದಲ್ಲಿ ಕರಾರಿನ ಮೂಲಕ ಖರೀದಿ ಸಂಪೂರ್ಣವಾದುದಲ್ಲ, ಆದರೆ ಕರಾರಿಗೆ ಒಳಪಟ್ಟಿರುತ್ತದೆ.

(೩) ಈ ಕರಾರು ಮೂರು ವಿಧಗಳಲ್ಲಿ ಆಗಬಹುದು.

(i) ಅಡಮಾನದ ಹಣದ ಮರುಪಾವತಿಯನ್ನು ಒಂದು ನಿರ್ದಿಷ್ಟ ದಿನದಂದು ಕೊಡುವನೆಂಬ ಕರಾರಿಗೆ ತಪ್ಪಿತಸ್ಥನಾದರೆ ಆ ಖರೀದಿಯು ಸಂಪೂರ್ಣವಾಗುತ್ತದೆ.

(ii) ಆಮೇಲೆ ಅಂತಹ ಹಣ ಸಂದಾಯ ಮಾಡಿದರೆ, ಆ ಖರೀದಿಯು ಶೂನ್ಯವಾಗುತ್ತದೆ (ರದ್ದಾಗುತ್ತದೆ).

(iii) ಅಂತಹ ಹಣ ಸಂದಾಯ ಮಾಡಿದ್ದರೆ ಕೊಳ್ಳುವವನು ಅಂತಹ ಆಸ್ತಿಯನ್ನು ಮಾರುವವನಿಗೆ ವರ್ಗಾಯಿಸಬೇಕು.

೨. ಷರತ್ತುಪೂರ್ವಕ ಮಾರಾಟ ಮೂಲಕದ ಅಡಮಾನ ಮತ್ತು ಆ ಖರೀದಿಯನ್ನು ಪುನಃ ಕೊಳ್ಳುವುದು ಇವೆರಡರಲ್ಲಿ ಬಹು ಸಮೀಪದ ಹೋಲಿಕೆಗಳಿರುತ್ತವೆ. ಇವೆರಡೂ ಪ್ರಕರಣಗಳಲ್ಲಿ ಪುನಃ ಖರೀದಿ ದಸ್ತಾವೇಜನ್ನು ಪಡೆಯುವ ಹಕ್ಕು ಇರುತ್ತದೆ.

(೧) ಆದರೆ ಅವುಗಳು ಸ್ವರೂಪದಲ್ಲಿ ಮತ್ತು ಅವು ಯಾವ ಕರಾರುಗಳ ಮೇಲೆ ಈ ಪುನಃ ಖರೀದಿ ಕಾಗದ ಬರೆದು ಕೊಡುವ ಹಕ್ಕನ್ನು ಚಲಾಯಿಸಬೇಕೆಂಬುದು ಬೇರೆ ಬೇರೆ ಪ್ರಕರಣಗಳಲ್ಲಿ ಬದಲಾಗುತ್ತದೆ.

೨) ಷರತ್ತುಪೂರ್ವಕ ಮಾರಾಟವಿದ್ದು ಮತ್ತು ಪುನಃ ಖರೀದಿ ಹಿಡಿಯುವ ಹಕ್ಕು ಇದ್ದರೆ ಆಗ,

(i) ಆ ಹೊಣೆಯು ವೈಯಕ್ತಿಕವಾಗಿರುತ್ತದೆ. ಮತ್ತು ಇದನ್ನು ವರ್ಗಾಯಿಸಲು ಬರುವುದಿಲ್ಲ.

(ii) ಕೊಳ್ಳುವವನು ಲಿಖಿತದಲ್ಲಿ ವಿಧಿಸಿದ ಕಟ್ಟುನಿಟ್ಟಿನ ಕರಾರುಗಳನ್ನು ಪಾಲಿಸಿ, (ಪೂರೈಸಿ) ಈ ಹಕ್ಕನ್ನು ಜಾರಿಗೊಳಿಸಬಲ್ಲನು.

*ಪ್ರಕರಣಗಳು– ೧೦ ಕಲ್ಕತ್ತ ೩೦, ೬ ಅಲಹಾ. ೩೭,*
*೨೧ ಬಾಂಬೆ ೫೨೮*

(೩) ಷರತ್ತುಪೂರ್ವಕ ಮಾರಾಟ ಮೂಲಕ ಅಡಮಾನವಾಗಿದ್ದರೆ, ಆಗ

(i) ಪುನಃ ಖರೀದಿ ದಸ್ತಾವೇಜನ್ನು ಬರೆದುಕೊಡುವುದು ವೈಯಕ್ತಿಕ ಹಕ್ಕು ಆಗಿರುವುದಿಲ್ಲ. ಆದರೆ ಕರಾರಿನ ಹಕ್ಕು ಮತ್ತು ಇದನ್ನು ವರ್ಗಾವಣೆ ಪಡೆದವನು ವರ್ಗಾವಣೆಧಾರಕನು ಚಲಾಯಿಸಬಲ್ಲನು.

(ii) ಕಾಲಮಿತಿಯು ಅವಶ್ಯವೆಂದು ಪರಿಗಣಿಸಲಾಗುವುದಿಲ್ಲ.

೩. ಷರತ್ತು ಪೂರ್ವಕ ಮಾರಾಟದ ಅಡಮಾನದಲ್ಲಿ ಮತ್ತು ಪುನಃ ಕೊಂಡುಕೊಳ್ಳುವ ಕರಾರು ಇವುಗಳಲ್ಲಿರುವ ಅಂತರವು ಯಾವುದು?

(೧) ಷರತ್ತಿನ ಪೂರ್ವಕ ಮಾರಾಟ ಅಡಮಾನವಾದಲ್ಲಿ ಈ ವ್ಯವಹಾರವು ತದ್ವಿರುದ್ಧವಾದ ಯಾವುದೇ ರೀತಿಯದಿದ್ದರೂ ಸಾಲ ಕೊಡುವುದು: ಎರವಲ ಕೊಡುವುದು ಮತ್ತು ಸಾಲ ತೆಗೆದುಕೊಳ್ಳುವುದು ಉಳಿಯುತ್ತದೆ. ಹೊಲವನ್ನು ವರ್ಗಾಯಿಸುವುದು ಅದು ಖರೀದಿಯ ರೂಪದಲ್ಲಿದ್ದಾಗ್ಯೂ ನಿಜವಾಗಿ ಆ ಹಣದ ಭದ್ರತೆಗಾಗಿ ವರ್ಗಾಯಿಸಿದ್ದಾಗಿರುತ್ತದೆ.

(೨) ಪುನಃ ಖರೀದಿಗೆ ತೆಗೆದುಕೊಳ್ಳುವ ಈ ವ್ಯವಹಾರವು ಸಾಲ ಕೊಡುವುದಾಗಿರುವುದಿಲ್ಲ ಮತ್ತು ಸಾಲ ತೆಗೆದುಕೊಳ್ಳುವ ವ್ಯವಸ್ಥೆಯೂ ಆಗಿರುವುದಿಲ್ಲ. ಇದು ಒಂದು ಹಿತಾಸಕ್ತಿಯನ್ನು ವರ್ಗಾಯಿಸುವುದು ಆಗಿರುವುದಿಲ್ಲ. ಇದು ಎಲ್ಲ ಹಕ್ಕುಗಳನ್ನು ವರ್ಗಾಯಿಸುವುದಾಗಿರುತ್ತದೆ. ಇದು ಭದ್ರತೆಗಾಗಿ ಮಾಡಿದ ವರ್ಗಾವಣೆಯಾಗಿರುವುದಿಲ್ಲ. ಇದು ಸಂಪೂರ್ಣ ವರ್ಗಾಯಿಸಿದ್ದಾಗಿದ್ದು ಕೇವಲ ಪುನಃ ಕೊಳ್ಳುವ ವೈಯಕ್ತಿಕ ಹಕ್ಕನ್ನು ಮಾತ್ರ ಕಾಯ್ದಿಟ್ಟುಕೊಂಡದ್ದಾಗಿದೆ.

ಒಂದು ವ್ಯವಹಾರವು ಒಂದು ಅಡಮಾನದ್ದೇ ಎಂಬುದನ್ನು ನಿರ್ಧರಿಸಲು ಯಾವ ಪರೀಕ್ಷೆ ಮಾಡಬೇಕು?

(೧) ಯಾವುದೇ ನಿರ್ದಿಷ್ಟ ಶಬ್ದಗಳು ಇಲ್ಲವೆ ದಸ್ತಾವೇಜಿನ ನಮೂನೆಗಳು ಅಡಮಾನವನ್ನು ಅರ್ಥೈಸಲು ಅವಶ್ಯ ಇರುವುದಿಲ್ಲ. ಸಾಮಾನ್ಯ ನಿಯಮದ ಪ್ರಕಾರ ಕೆಲವು ಅಪವಾದಗಳಿಗೆ ಒಳಪಟ್ಟು ಒಂದು ಆಸ್ತಿಯ ವ್ಯವಹಾರವು ಪ್ರಾರಂಭದಿಂದ ಮೊದಲಿನಿಂದ: ಸಾಲದ ಹಣಕ್ಕೆ ಭದ್ರತೆ, ಜಾಮೀನು ಅಂತಹ ಉದ್ದೇಶವಿದ್ದರೆ, ಅದು ಅಡಮಾನವಾಗುತ್ತದೆ. ಮತ್ತು ಎಲ್ಲಿ ಹಾಗೆ ಇರುವುದಿಲ್ಲವೋ ಪ್ರಾರಂಭದಿಂದ ಉದ್ದೇಶಿಸಿದ್ದಲ್ಲವೊ ಅದು ಅಡಮಾನ ಎನಿಸುವುದಿಲ್ಲ.

(೨) ಒಂದು ಒಪ್ಪಂದ ಕರಾರಿಗೆ ಸಂಬಂಧಿಸಿದ ಪಕ್ಷಗಾರರು ಕೊಟ್ಟ ಒಂದು ಹೆಸರು ಇದಲ್ಲ. ಇದು ಆ ವ್ಯವಹಾರದ ಸ್ವರೂಪವನ್ನು ನಿರ್ಧರಿಸುತ್ತದೆ. ಒಂದು ದಸ್ತಾವೇಜು ಇದು ಖರೀದಿ ಎಂದು ನಿರ್ಧರಿಸಿದಾಗ್ಯೂ ಪಕ್ಷಗಾರರು ಅಡಮಾನವೆಂದು ಕರೆಯುತ್ತಾರೆ.

*೨ ಬಾಂಬೆ ೧೧೩*

(೩) ಅದು ಕಾನೂನು ಸಂಬಂಧವನ್ನು ರಚಿಸುತ್ತದೆ. ಆ ವ್ಯವಹಾರವು ಅಡಮಾನವು ಹೌದೋ ಅಲ್ಲವೋ ಎಂಬುದನ್ನು ಅದು ನಿರ್ಧರಿಸುತ್ತದೆ.

*೨ ಬಾಂಬೆ ೪೬೨*

೪. ಪಕ್ಷಕಾರರ ಉದ್ದೇಶವು ಏನಾಗಿತ್ತೆಂಬುದನ್ನು ಹೇಗೆ ಕಂಡುಹಿಡಿಯಬೇಕು?

ಅವರು ಆ ಮುಂಗಡ ಕೊಟ್ಟ ಹಣವನ್ನು ಹೇಗೆ ಪರಿಗಣಿಸಿದರು? ಅವರು ಅದನ್ನು ಸಾಲವೆಂದು ಪರಿಗಣಿಸಿದರೆಂದರೆ ಆಗ ಅದು ಅಡಮಾನವಾಗುತ್ತದೆ. ನ್ಯಾಯಾಲಯಗಳು ಅನುಸರಿಸುವ ಪ್ರಮಾಣಗಳು:

(i) ಒಂದು ಸಾಲವು ಅಸ್ತಿತ್ವದಲ್ಲಿರುವುದು.

ii) ಅದನ್ನು ಮರಳಿ ಸಂದಾಯ ಮಾಡುವ ಅವಧಿಯು ಅಲ್ಪಕಾಲದ್ದು ಎಂದು ಸೂಚಿಸುತ್ತಿದ್ದರೆ ಅದು ಖರೀದಿ ಎಂದೂ, ದೀರ್ಘಾವಧಿಯನ್ನು ಸೂಚಿಸುತ್ತಿದ್ದರೆ ಅದು ಅಡಮಾನ.

(iii) ಕಬ್ಜಾ ವೃತ್ತಿಯು ಮುಂದುವರೆದರೆ ಅದು ಅಡಮಾನವನ್ನು ಸೂಚಿಸುತ್ತದೆ.

(iv) ಅದರ ನಿಜವಾದ ಬೆಲೆಗಿಂತ ಕಡಿಮೆ ಹಣ ಸೂಚಿಸುತ್ತಿದ್ದರೆ ಅದು ಒಂದು ಅಡಮಾನವಾಗುತ್ತದೆ.

ಈ ಪರೀಕ್ಷೆಗಳನ್ನು ಅನ್ವಯಿಸುವಾಗ ಕಂಡುಬರುವ ಖರೀದಿ ದಸ್ತಾವೇಜು ಅಡಮಾನವೆಂದು ಹೇಳಿಕೊಳ್ಳುವ ಪಕ್ಷಗಾರನ ಮೇಲೆ ಅದನ್ನು ಸಿದ್ಧ ಮಾಡುವ ಹೊರೆಯನ್ನು ನ್ಯಾಯಾಲಯವು ಹೇರುತ್ತದೆ ಮತ್ತು ಯಾವುದೇ ಪ್ರಕರಣದಲ್ಲಿ ಸಂದಿಗ್ಧತೆಯು ಇದ್ದರೆ ಅದು ಅಡಮಾನವೆಂದು ಅರ್ಥೈಸಲು ಬರೆಯುತ್ತದೆ.

೫. ಉದ್ದೇಶದ ಬಗ್ಗೆ ಮೌಖಿಕ ಸಾಕ್ಷಿಯು ಸಾಕ್ಷಿಯಾಗಿ ಅಂಗೀಕಾರಾರ್ಹವಾದುದೆ?

೧. ಭಾರತೀಯ ಸಾಕ್ಷಿ ಅಧಿನಿಯಮವು ಪಾಸಾಗುವ ಪೂರ್ವದಲ್ಲಿ ಮೌಖಿಕ ಮತ್ತು ಉಳಿದ ದಾಖಲೆಗಳ ದಸ್ತಾವೇಜುಗಳು ಈ ಉದ್ದೇಶವನ್ನು ಸಿದ್ಧ ಮಾಡಲು ಮುಕ್ತವಾಗಿ ಅಂಗೀಕರಿಸಲಾಗುತ್ತಿತ್ತು. ಆದರೆ ಈ ರೀತಿಯ ಪದ್ಧತಿಯನ್ನು ಪ್ರಿವಿ ಕೌನ್ಸಿಲ್ ನಿಷ್ಪ್ರಯೋಜಕವೆಂದು ನಿಷೇಧಿಸಿತು.

೨. ಭಾರತೀಯ ಸಾಕ್ಷಿ ಅಧಿನಿಯಮವು ಪಾಸು ಆದ ನಂತರ ಈ ಪ್ರಶ್ನೆಯನ್ನು ಕಲಮು ೯೨ ನಿಯಂತ್ರಿಸುತ್ತದೆ.

೩. ಒಂದು ಲಿಖಿತ ದಾಖಲೆಯನ್ನು ವಿರೋಧಿಸಲು ಮೌಖಿಕ ಸಾಕ್ಷ್ಯವನ್ನು ಕಲಮು ೯೨ ಹೊರತು ಪಡಿಸುತ್ತದೆ. ಭಾರತೀಯ ನ್ಯಾಯಾಲಯಗಳು ಏನೇ ಆದಾಗ್ಯೂ ಲಿಂಕನ್ ವಿರುದ್ಧ ರೈಟ್ (೧೮೫೯) ೪ ಡಿಇಜಿ ಆ್ಯಂಡ್ ಜೆ ೧೬ ಇವು ಆಧಾರದ ಮೇಲಿಂದ ಕೃತಿಗಳ ಮತ್ತು ಪಕ್ಷಗಾರರ ನಡೆಯನ್ನು ತೋರಿಸುವುದಕ್ಕಾಗಿ ಮೌಖಿಕ ಸಾಕ್ಷಿಯನ್ನು ಅಂಗೀಕರಿಸುತ್ತವೆ. ಒಂದು ದಸ್ತಾವೇಜು ಸಂಪೂರ್ಣ ಮಾಲೀಕತ್ವವನ್ನು ವರ್ಗಾಯಿಸುವ ತಾತ್ಪರ್ಯವಾಗುತ್ತಿದ್ದರೆ, ಆ ದಸ್ತಾವೇಜು ಅಡಮಾನವಾಗುವ ಉದ್ದೇಶವೆಂಬುದಕ್ಕೆ ಮೌಖಿಕ ಸಾಕ್ಷಿ ಮಾಡಿಸಬಹುದು (ಅಂಗೀಕಾರ ಅರ್ಹವಾದುದು).

೪. ೧೮೯೯ರಲ್ಲಿ ಪ್ರಿವಿ ಕೌನ್ಸಿಲ್ ನಿಶ್ಚಿತವಾಗಿ ಬಾಳಕೃಷ್ಣನ್ ವಿರುದ್ಧ ಲಿಗ್ಲೆ– ೨೨ ಅಲಹಾಬಾದ್ ೪೮೯=೨೭ ಆಯ್.ಎ. ೫೮ ನಿಯಮಗಳನ್ನು ಮಾಡಿತು. ಲಿಂಕನ್ ವಿರುದ್ಧ ರೈಟ್ ಈ ನಿಯಮವು ಭಾರತದಲ್ಲಿ ಅನ್ವಯಿಸುವುದಿಲ್ಲ.

೫. ಇದರ ಪರಿಣಾಮವೇನೆಂದರೆ ನಿಶ್ಚಿತವಾಗಿಯೂ ನ್ಯಾಯಾಲಯಗಳು ಪಕ್ಷಗಾರರ ಉದ್ದೇಶವನ್ನು ತಿಳಿದುಕೊಳ್ಳುವುದಕ್ಕಾಗಿ ದಸ್ತಾವೇಜುಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಪಕ್ಷಗಾರರು ಏನು ಅರ್ಥೈಸುತ್ತಾರೆ ಅದು ಮಹತ್ವದ್ದಲ್ಲ. ಆದರೆ ಅವರು ಅದರಲ್ಲಿ ಉಪಯೋಗಿಸಿದ ಶಬ್ದಗಳ ಅರ್ಥದ ಪ್ರಶ್ನೆ ಇರುತ್ತದೆ.

**ಈ ಉಪಬಂಧದ ಮಹತ್ವವು**

೧. ಅದೇ ದಸ್ತಾವೇಜಿನಲ್ಲಿ ಕರಾರುಗಳನ್ನು ಕಾಣಿಸಲಿಕ್ಕೇಬೇಕು.

**ಪರಿಗಣಿಸಬೇಕಾದ ಅಂಶಗಳು**

೧. ಮುಖ್ಯವಾಗಿ ಹೇಳುವುದೇನೆಂದರೆ ಒಂದು ಪ್ರಶ್ನೆಯನ್ನು ನಿರ್ಧರಿಸುವಾಗ, ಆ ಉದ್ದೇಶದ ಕರಾರುಗಳು ಮತ್ತೊಂದು ದಸ್ತಾವೇಜಿನಲ್ಲಿದ್ದರೆ ನ್ಯಾಯಾಲಯವು ಉದ್ದೇಶವನ್ನು ನಿರ್ಧರಿಸುವುದರ ಸಲುವಾಗಿ ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ.

೨. ಆದರೆ ಒಂದು ವೇಳೆ ಅದು ಅದೇ ದಸ್ತಾವೇಜಿನಲ್ಲಿ ಒಳಗೊಂಡಿದ್ದರೆ, ಅದು ಅವಶ್ಯವಾಗಿ ಷರತ್ತು ಪೂರಕ ಮಾರಾಟದ ಮೂಲಕದ ಅಡಮಾನ. ಆದರೆ ಅದು ಪುನಃ ಖರೀದಿ ಮಾಡುವ ಕರಾರಿನಿಂದ ಆದ ಮಾರಾಟವಲ್ಲ.

೩. ಅರ್ಥೈಯಿಸುವ ಪ್ರಶ್ನೆಯು ಇನ್ನೂ ಹಾಗೆಯೇ ಉಳಿಯುತ್ತದೆ.

## III ಭೋಗ್ಯದ ಅಡಮಾನ

**I. ಲಕ್ಷಣಗಳು**

(i) ಆಸ್ತಿಯ ಕಬ್ಜೆ ಕೊಡುವುದು ಇಲ್ಲವೆ ಕಬ್ಜೆ ಕೊಡುವ ಕುರಿತು ಜವಾಬ್ದಾರಿ ವಹಿಸುವುದು.

(ii) ಅಡಮಾನದ ಹಣ ಮರುಪಾವತಿಯಾಗುವವರೆಗೆ ಅದರ ಕಬ್ಜೆಯನ್ನು ಇಟ್ಟುಕೊಳ್ಳುವ ಅಧಿಕಾರವು

(iii) ಅದರ ಬಾಡಿಗೆ ಮತ್ತು ಲಾಭವನ್ನು ಪಡೆದುಕೊಳ್ಳುವ ಅಧಿಕಾರವು ಮತ್ತು ಆ ರೀತಿ ಪಡೆದ ಹಣವು ಬಡ್ಡಿಯ ಬದಲು ಇಲ್ಲವೆ ಅಡಮಾನದ ಹಣವನ್ನು ಕೊಡುವುದರ ಅಧಿಕಾರ.

ಸೂಚನೆ: ವೈಯಕ್ತಿಕವಾಗಿ ಕೊಡುವ ಹೊಣೆಗಾರಿಕೆಯು ಇರುವುದಿಲ್ಲ.

## IV. ಇಂಗ್ಲಿಷ್ ಅಡಮಾನ

**೧. ಲಕ್ಷಣಗಳು:**

(i) ಅಡಮಾನ ಇಟ್ಟವನ ಮೇಲೆ ಒಂದು ಗೊತ್ತುಪಡಿಸಿದ ದಿನದಂದು ಆ ಹಣ ತಿರುಗಿಕೊಡುವ ವೈಯಕ್ತಿಕ ಹೊಣೆಗಾರಿಕೆಯು ಇರುತ್ತದೆ.

(ii) ಅಡಮಾನ ಇಟ್ಟುಕೊಂಡವನಿಗೆ ಹಸ್ತಾಂತರಿಸುವುದು ಸಂಪೂರ್ಣವಾಗಿರುತ್ತದೆ.

(iii) ಹಸ್ತಾಂತರವು ಕೆಲವು ಕರಾರುಗಳಿಗೆ ಒಳಪಟ್ಟಿದ್ದು ಇರುತ್ತದೆ. ಅದು ಏನೆಂದರೆ ಅಡಮಾನವನ್ನು ಇಟ್ಟುಕೊಂಡವನು ಅಡಮಾನದಾರನು ಹಣ ಸಂದಾಯ ಮಾಡಿದ ಕೂಡಲೇ ಅಡಮಾನ ಇಟ್ಟವನಿಗೆ ಪುನಃ ಬರೆದುಕೊಡಬೇಕು.

೨. ಇದು ಕರಾರಿಗೆ ಒಳಪಟ್ಟ ಅಡಮಾನಕ್ಕೆ ಅತಿ ಸಾಮೀಪ್ಯದಿಂದ ಹೋಲುತ್ತದೆ.

**ಅಂತರ:**

(೧) ಇಂಗ್ಲಿಷ್ ಅಡಮಾನದಲ್ಲಿ ಮಾರಾಟವು ಸಂಪೂರ್ಣವಾಗಿರುತ್ತದೆ. ಆದರೆ ಕರಾರಿಗೆ ಒಳಪಟ್ಟ ಅಡಮಾನದಲ್ಲಿ ಮಾರಾಟವು ಮೇಲುನೋಟಕ್ಕೆ ಇರುತ್ತದೆ.

ಒಂದು ವೇಳೆ ಖರೀದಿಯು ಸಂಪೂರ್ಣವಾಗಿದ್ದರೆ ಅದು ಹೇಗೆ ಅಡಮಾನವಾಗುತ್ತದೆ? ಅಡಮಾನ ವೆಂದರೆ ಹಿತಾಸಕ್ತಿ ವರ್ಗಾಯಿಸುವುದೆಂದು ವ್ಯಾಖ್ಯೆಗೆ ವಿರೋಧವಾಗುವಂತೆ ಭಾಸವಾಗುತ್ತದೆ.

ಅಂತರವು ಸಾಂಪ್ರದಾಯಕವಾಗಿ ರೂಢಿಯಲ್ಲಿ, ಅಂದರೆ ಇದು: ಇಂಗ್ಲಿಷ್ ಅಡಮಾನದಲ್ಲಿ ಅಡಮಾನ

ಇಟ್ಟುಕೊಂಡವನು ಆ ಕೂಡಲೆ ಆಸ್ತಿ ಕಬ್ಜೆ ಪಡೆಯಲು ಹಕ್ಕುಳ್ಳವನಾಗುತ್ತಾನೆ. ಆದರೆ ಷರತ್ತುಪೂರಕ ಮಾರಾಟ ಮೂಲಕ ಅಡಮಾನದಲ್ಲಿ ಕಬ್ಜೆ ಪಡೆಯುವ ಹಕ್ಕು ಅಡಮಾನದ ಕರಾರಿನ ಮೇಲೆ ಅವಲಂಬಿತ ವಾಗುತ್ತದೆ.

(೨) ಇಂಗ್ಲಿಷ್ ಅಡಮಾನದಲ್ಲಿ ವೈಯಕ್ತಿಕವಾಗಿ ಹಣ ಸಂದಾಯ ಮಾಡುವ ಹೊಣೆಗಾರಿಕೆಯು ಇರುತ್ತದೆ. ಆದರೆ ಕರಾರಿಗೊಳಪಟ್ಟ ಅಡಮಾನದಲ್ಲಿ ಅಂತಹ ಹಕ್ಕು ಇರುವುದಿಲ್ಲ.

**ಸ್ವಾಮ್ಯ ಪತ್ರಗಳ ಠೇವಣಿ ಮೂಲಕದ ಅಡಮಾನದ ಅವಶ್ಯಕತೆಗಳು**

೧. ಸಾಲವೆಂದರೆ: ಒಂದು ನಿರ್ದಿಷ್ಟ ಈಗಲೇ ಕೊಡಬೇಕಾದದ್ದು ಭವಿಷ್ಯದಲ್ಲಿ ಕೊಡಬೇಕಾದದ್ದಾಗಿದ್ದರೂ ಅದನ್ನು ದಾವೆ ಮಾಡಿ ಪಡೆದುಕೊಳ್ಳಬಹುದೆಂದು ವ್ಯಾಖ್ಯಾನಿಸಲಾಗಿದೆ.

*–(೧೯೨೨) ೨ ಕೆ.ಬಿ. ೫೯೯ (೬೧೭)*

**ಸೂಚನೆ:** ಶಾಸನಬದ್ಧವಾಗಿ ಕೊಡಬೇಕಾದ ಸಾಲ ಮತ್ತು ಒಪ್ಪಂದದ ಕರಾರಿನ ಮೂಲಕ ಕೊಡಬೇಕಾದ ಸಾಲ ಇವುಗಳಲ್ಲಿಯ ಅಂತರವು– (೧೯೨೨) ೨ ಕೆ.ಬಿ. ೩೭. ಶಾಸನಬದ್ಧವಾದ ಸಾಲವನ್ನು ವಸೂಲು ಮಾಡಿಕೊಳ್ಳಲು ಒಬ್ಬನು ಅದನ್ನು ತಿರುಗಿ ಕೊಡುವ ವಚನ ಕೊಡುವ ಪ್ರಮೇಯವಿಲ್ಲ. ಅವಶ್ಯಕತೆಯೂ ಇಲ್ಲ.

೨. ಆ ಸಾಲವು ಈಗ ಅಸ್ತಿತ್ವದಲ್ಲಿರಬಹುದು ಇಲ್ಲವೆ ಭವಿಷ್ಯದಲ್ಲಿಯ ಸಾಲವಾಗಿರಬಹುದು. ಠೇವಣಿಯ ಸದ್ಯದ ಮತ್ತು ಭವಿಷ್ಯದಲ್ಲಿಯ ಮುಂಗಡ ಹಣವಾಗಿರಬಹುದು

*–೫೦ ಆಯ್.ಎ. ೨೮೩ ೧೭ ಅಲಹಾಬಾದ್ ೨೫೨; ೨೫ ಕಲ್ಕತ್ತಾ ೬೧೧.*

೩. ಸಾಲವು ಸಾಮಾನ್ಯ ಬಾಕಿಯಾಗಿ ಒಂದು ಲೆಕ್ಕದಲ್ಲಿ ಉಳಿದಿರಬಹುದು.

*೨ ಮದ್ರಾಸ್ ೨೩೯ ಪಿ.ಸಿ.*

## II. ಖರೀದಿ ದಸ್ತಾವೇಜುಗಳನ್ನು ಠೇವಣಿ ಇಡುವುದು

(i) ಖರೀದಿ ದಸ್ತವೇಜುಗಳನ್ನು ಠೇವಣಿ ಇಡುವುದು

೧. ಠೇವಣಿ ಇಟ್ಟ ಖರೀದಿ ದಸ್ತಾವೇಜುಗಳನ್ನು ಆಸ್ತಿಗೆ ಸಂಬಂಧಿಸಿದ ಕಾಗದಗಳು ಮತ್ತು ಸ್ವಾಮಿತ್ವವನ್ನು ತೋರಿಸಲು ಸಾಕ್ಷಿಗೆ ಅರ್ಹವಾದುವು ಇದ್ದರೆ ಸಾಕು ಎಂದು ಇಂಗ್ಲೆಂಡ್‌ನಲ್ಲಿ ನಿರ್ಧರಿಸಿದ್ದಾರೆ. ಎಲ್ಲ ಖರೀದಿ ದಸ್ತಾವೇಜುಗಳನ್ನು ಠೇವಣಿ ಇಡುವ ಅವಶ್ಯಕತೆ ಇರುವುದಿಲ್ಲ.

*(೧೮೭೨) ೮ ಸಿಎಚ್.ವಿಪಿಪಿ ೧೫೫*

೨. ಈ ಪ್ರಕರಣಗಳನ್ನು ಭಾರತದಲ್ಲಿ ಅನುಸರಿಸಿದ್ದಾರೆ.

*೫೯ ಕಲ್ಕತ್ತಾ ೭೮೧*

೩. ಆದರೆ ಸಿ.ಆಫ್. ೧೧ ರಂಗೂನ ೨೩೯ ಎಫ್.ಬಿ. ಪೂರ್ಣಪೀಠದವರು ನಿರ್ಣಯಿಸಿದ್ದು ಏನೆಂದರೆ– ಖರೀದಿ ದಸ್ತಾವೇಜುಗಳು ಕೇವಲ ಆಸ್ತಿಗಳಿಗೆ ಮಾತ್ರ ಸಂಬಂಧಿಸಿದ್ದು ಇದ್ದರೆ ಸಾಕು. ಆದರೆ ಠೇವಣಿ ಇಡುವವನಲ್ಲಿ ಆ ಆಸ್ತಿಯಲ್ಲಿ ಮಾಲೀಕತ್ವವು ಇದೆಯೆಂದು ಮೇಲುನೋಟಕ್ಕೆ ಕಂಡು ಬರಬೇಕು.

೪. ಆ ಖರೀದಿ ದಸ್ತಾವೇಜುಗಳು ಯಾವುದೇ ನಮೂನೆಯ ಮಾಲಿಕತ್ವವನ್ನು ತೋರಿಸದಿದ್ದರೆ ಅಲ್ಲಿ

ಯಾವುದೇ ಅಡಮಾನ ಹುಟ್ಟುವುದಿಲ್ಲ– ತೆರಿಗೆ ಪಾವತಿ, ಪ್ಲಾನ್– ಇವು ಮಾಲಿಕತ್ವ ತೋರಿಸುವ ದಸ್ತಾವೇಜುಗಳಾಗಿರುವುದಿಲ್ಲ.

೫. ಇಂತಹ ಅಸಲು ಖರೀದಿ ದಸ್ತಾವೇಜುಗಳು ಕಳೆದುಹೋದರೆ ಅವುಗಳ ಪ್ರಮಾಣಿತ ನಕಲುಗಳನ್ನು ಠೇವಣಿ ಇಡಬಹುದು.

ii) ಈ ದಸ್ತಾವೇಜುಗಳನ್ನು ಅಡಮಾನದ ಮೂಲಕ ಠೇವಣಿ ಇಟ್ಟಿದ್ದರೆ ಅವುಗಳನ್ನು ಮುಂದಿನ ಮುಂಗಡ ಹಣಕ್ಕಾಗಿ ಜಾಮೀನು ಎಂದು ಮೌಖಿಕ ಕರಾರಿನಿಂದ ಕೊಡಬಹುದು. ಅವುಗಳನ್ನು ಅವನಿಗೆ ತಿರುಗಿಕೊಟ್ಟು ಪುನಃ ಠೇವಣಿ ಇಡುವಂತೆ ಹಿಂತಿರುಗಿಕೊಡುವ ಅವಶ್ಯಕತೆಯು ಇರುವುದಿಲ್ಲ.

*೧೭ ಅಲಹಾಬಾದ್ ೨೫೨, ೨೫ ಕಲ್ಕತ್ತಾ ೬೧೧*

### III. ಉದ್ದೇಶ

೧. ಮಾಲಿಕತ್ವ ತೋರಿಸುವ ದಸ್ತಾವೇಜು ಸಾಲಕ್ಕೆ ಭದ್ರತೆ. ಇದು ಈ ವ್ಯವಹಾರಕ್ಕೆ ಅತಿ ಮಹತ್ವದ ಉದ್ದೇಶವಾಗಿದೆ.

೨. ಒಪ್ಪಂದದ ಕರಾರನ್ನು ಊಹಿಸಲು ಕಬ್ಜೆಯು ಯಾವ ಮೂಲಕ ಉತ್ಪತ್ತಿಯಾಯಿತೆಂಬುದನ್ನು ತೋರಿಸಲು ಸಾಕ್ಷಿ ಇಲ್ಲದೆ ಕೇವಲ ಕಬ್ಜಾ ಮಾತ್ರ ಸಾಲದು.

*೨೩೧ಎ. ೧೦೬; ೩೮ ಬಾಂಬೆ ೩೭೨ ೧ ರಂಗೂನ ೫೪೫*

೩. ಒಂದು ವೇಳೆ ಪಕ್ಷಗಾರರು ಶಾಸನಬದ್ಧವಾದ ಅಡಮಾನ ತಯಾರಿಸುವ ಉದ್ದೇಶವನ್ನು ಹೊಂದಿದ್ದರೆ ಆ ಮೇರೆಗೆ ಮಾಲೀಕತ್ವ ತೋರಿಸುವ ಖರೀದಿ ದಸ್ತಾವೇಜುಗಳನ್ನು ಠೇವಣಿ ಇಟ್ಟರೆ, ಅಂತಹ ಠೇವಣಿಯು ನ್ಯಾಯಸಮ್ಮತವಾದ ಅಡಮಾನವನ್ನು ಸೃಷ್ಟಿಸುವುದಿಲ್ಲ.

೪. ಒಂದು ವೇಳೆ ದಸ್ತಾವೇಜುಗಳು ಠೇವಣಿಯ ಶಾಸನಬದ್ಧವಾದ ಅಡಮಾನಕ್ಕಾಗಿ ಇದ್ದರೆ ಮತ್ತು ತತ್‌ಕ್ಷಣ ಅವುಗಳಿಗೆ ಜಾಮೀನು ಕೊಡುವ ಉದ್ದೇಶವಿದ್ದರೆ, ಅಂತಹ ಸಂದರ್ಭಗಳಲ್ಲಿ ಠೇವಣಿಯು ನ್ಯಾಯಸಮ್ಮತ ಅಡಮಾನವನ್ನು ಸೃಷ್ಟಿಸುತ್ತದೆ.

೫. ಕೇವಲ ಕಬ್ಜೆಯು ಸಾಲದೊಂದಿಗೆ ಇದ್ದರೆ ಅದು ಅಡಮಾನವೆಂಬ ಊಹೆ ಮಾಡಲು ಬರುವುದಿಲ್ಲವೇ? ಇಲ್ಲಿ ಭಿನ್ನಾಭಿಪ್ರಾಯವಿರುತ್ತದೆ. ಆದರೆ ಸರಿಯಾದ ಅಭಿಪ್ರಾಯವೆಂದರೆ ಸಾಲ ಕೊಟ್ಟವನು ಮತ್ತು ಸಾಲ ತೆಗೆದುಕೊಂಡವನು ಆಸ್ತಿ ಕಬ್ಜೆ ಇವು ಸಾಲದೊಂದಿಗೆ ಇದ್ದರೆ ಅದು ಅಡಮಾನವೆಂದು ಗ್ರಹಿಸಲಾಗುವುದು.

### IV. ಪ್ರಾದೇಶಿಕ ನಿಯಂತ್ರಣಗಳು

೧. ಈ ರೀತಿಯ ನ್ಯಾಯಸಮ್ಮತ ಅಡಮಾನಗಳನ್ನು ಕೇವಲ ಕೆಲವು ನಿರ್ದಿಷ್ಟವಾದ ಪಟ್ಟಣಗಳಲ್ಲಿ ಮಾತ್ರ ಸೃಷ್ಟಿಸಬಹುದು.

೨. ಈ ನಿಯಂತ್ರಣಗಳು ಯಾರಿಗೆ ಉಲ್ಲೇಖಿಸುತ್ತವೆ ಎಂಬುದು ಪ್ರಶ್ನೆಯಾಗಿದೆ. ಅದು ಖರೀದಿ ದಸ್ತಾವೇಜುಗಳನ್ನು ಬರೆದುಕೊಟ್ಟ ಸ್ಥಳಕ್ಕೆ ಉಲ್ಲೇಖಿಸಲಾಗಿದೆಯೆ? ಅಥವಾ ಅಡಮಾನ ಇಟ್ಟ ಆಸ್ತಿಯು ಎಲ್ಲಿ ಇರುತ್ತದೆಯೋ ಅಂತಹ ಸ್ಥಳಕ್ಕೆ ಅನ್ವಯಿಸುವುದಿಲ್ಲವೆಂದು ಊಹಿಸಲಾಗಿದೆ. ನಿಯಂತ್ರಣವು ದಸ್ತಾವೇಜನ್ನು ಬರೆದುಕೊಟ್ಟ ಸ್ಥಳಕ್ಕೆ ಉಲ್ಲೇಖಿಸುತ್ತದೆ ಮತ್ತು ಅಡಮಾನ ಇಟ್ಟ ಆಸ್ತಿಯು ಇರುವ ಸ್ಥಳಕ್ಕೆ ಉಲ್ಲೇಖಿಸುವುದಿಲ್ಲವೆಂದು ನಿರ್ಧರಿಸಿದ್ದಾಗಿರುತ್ತದೆ.

*ಪ್ರಕರಣಗಳು– ೧೪ ಅಲಹಾಬಾದ್ ೨೩೮, ೨೩ ಆಯ್.ಎ. ೧೦೬*

ಆಸ್ತಿಯು ಕೆಳಗೆ ಕಾಣಿಸಿದ ಪಟ್ಟಣಗಳಲ್ಲಿ ಇರಬೇಕೆಂಬ ಅವಶ್ಯಕತೆಯು ಇರುವುದಿಲ್ಲ.

## VI. ಸಂದಿಗ್ಧ ಅಡಮಾನಗಳು

೧. ಮೇಲೆ ನಿರ್ದೇಶಿಸಿದ ಆ ಅಡಮಾನಗಳನ್ನು ಹೊರತುಪಡಿಸಿ, ಉಳಿದ ಅಡಮಾನಗಳನ್ನು ಸಂದಿಗ್ಧ ಅಡಮಾನವೆಂದು ಕರೆಯುತ್ತಾರೆ. ಮೇಲೆ ವಿವರಿಸಿದ ಐದು ವರ್ಗಗಳ ಅಡಮಾನಗಳಲ್ಲಿ ಇದು ಯಾವುದೇ ವರ್ಗದಲ್ಲಿ ಬರುವುದಿಲ್ಲ.

೨. ಸಂದಿಗ್ಧವಾದ ಅಡಮಾನಗಳು ಅನೇಕ ನಮೂನೆಗಳಲ್ಲಿ ರೂಪುಗೊಳ್ಳಬಹುದು. ಅವು ರೂಢಿ ಸಂಪ್ರದಾಯದಂತೆ ಇಲ್ಲವೆ ಸಾಲವನ್ನು ಕೊಟ್ಟವನ ಮನಸ್ಸಿಗೆ ಬಂದಹಾಗೆ ಕೆಲವು ಸಾದಾ ಅಡಮಾನ ನಮೂನೆ ಮತ್ತು ಉಳಿದವು ಆಯಾ ಜಿಲ್ಲೆಗಳಲ್ಲಿ ಪ್ರಚಲಿತವಿರುವ ನಿರ್ದಿಷ್ಟ ರೂಢಿ ಸಾಂಪ್ರದಾಯಕ, ಅಡಮಾನಗಳು ಮತ್ತು ಇವು ವಿಶೇಷವಾದ ಪ್ರಸಂಗಗಳು ಒಂದು ನಿರ್ದಿಷ್ಟ ಸ್ಥಾನಿಕ ಸ್ಥಳದಲ್ಲಿ ಪ್ರಚಲಿತವಿರುವ ರೂಢಿ ಸಂಪ್ರದಾಯದಂತೆ.

ಉಳಿದ ಅಡಮಾನಗಳಿಂದ ಇದನ್ನು ವಿಂಗಡಿಸುವುದು ಯಾವುದು?

ಯಾವುದು ಹಕ್ಕನ್ನು ವರ್ಗಯಿಸಲಾಗಿದೆಯೋ ಅದರ ಸ್ವರೂಪವು ಆ ಅಡಮಾನವನ್ನು ಬೇರ್ಪಡಿಸುತ್ತದೆ ಅಥವಾ ವಿಂಗಡಿಸುತ್ತದೆ.

(೧) ಒಂದು ಸಾದಾ ಅಡಮಾನಿನ ಖರೀದಿ ಮಾಡುವ ಅಧಿಕಾರವನ್ನು ವರ್ಗಾಯಿಸಲಾಗಿದೆ. ಯಾವ ಹಕ್ಕು ಮಾಲೀಕತ್ವದ ಒಟ್ಟಾರೆ ಹಕ್ಕನ್ನು ಪೂರ್ತಿಗೊಳಿಸುವ ಒಂದು ಭಾಗದ ಹಕ್ಕಾಗಿರುತ್ತದೆ.

(೨) ಒಂದು ಭೋಗ್ಯದ ಅಡಮಾನದಲ್ಲಿ ವರ್ಗಾಯಿಸಿದ್ದು ಏನೆಂದರೆ ಅದರ ಕಬ್ಜೆಯನ್ನು ಮತ್ತು ಅದರ ಫಲಾನುಭವವನ್ನು ಉಪಯೋಗಿಸುವ ಹಕ್ಕನ್ನು ವರ್ಗಾಯಿಸಲಾಗಿದೆ.

(೩) ಒಂದು ಕರಾರಿನ ಅಡಮಾನದಲ್ಲಿ ಮತ್ತು ಇಂಗ್ಲಿಷ್ ಅಡಮಾನದಲ್ಲಿ ವರ್ಗಾಯಿಸಿದ ಹಕ್ಕು: ಅಂದರೆ ಮಾಲೀಕತ್ವದ ಹಕ್ಕನ್ನು ವರ್ಗಾಯಿಸಲಾಗಿದೆ. ಆದರೆ ಅದು ಒಂದು ಕರಾರಿಗೆ ಒಳಪಟ್ಟಿದ್ದಾಗಿರುತ್ತದೆ.

(೪) ಒಂದು ಸಾದಾ ಅಡಮಾನ ಮತ್ತು ಇಂಗ್ಲಿಷ್ ಅಡಮಾನಗಳಲ್ಲಿ ಹಣ ಸಂದಾಯ ಮಾಡುವ ವೈಯಕ್ತಿಕ ಹೊಣೆ ಇರುತ್ತದೆ.

(೫) ಒಂದು ಭೋಗ್ಯದ ಅಡಮಾನದಲ್ಲಿ ಮತ್ತು ಷರತ್ತುಪೂರಕ ಮಾರಾಟ ಮೂಲಕದ ಅಡಮಾನ ಇವುಗಳಲ್ಲಿ ಹಣ ಕೊಡುವ ವೈಯಕ್ತಿಕ ಹೊಣೆಗಾರಿಕೆಯು ಇರುವುದಿಲ್ಲ.

**ಎಲ್ಲಾ ಅಡಮಾನಗಳಲ್ಲಿ ಸಾಮಾನ್ಯವಾಗಿರುವುದು ಯಾವುದು?**

೧. ಒಂದು ಅಡಮಾನವೆಂದರೆ ಒಂದು ನಿರ್ದಿಷ್ಟಪಡಿಸಿದ ಸ್ಥಾವರ ಆಸ್ತಿಯಲ್ಲಿಯ ಒಂದು ಹಿತಾಸಕ್ತಿಯನ್ನು ಆ ಸಾಲದ ಮರುಪಾವತಿ ಹಣಕ್ಕಾಗಿ ಜಾಮೀನು ಎಂದು ಆ ಹಕ್ಕನ್ನು ವರ್ಗಾಯಿಸುವುದಾಗಿರುತ್ತದೆ.

೨. ಆದ್ದರಿಂದ ಒಂದು ಸಾಲವು ಅಸ್ತಿತ್ವದಲ್ಲಿರುವುದು ಸಾಮಾನ್ಯ ಲಕ್ಷಣವಾಗಿದೆ.

೩. ಇದು ಹೀಗೆ ಆಗಲಾರದೆಂದು ಹೇಳಲಾಗುತ್ತದೆ. ಏಕೆಂದರೆ ಒಂದು ಕರಾರಿನ ಅಡಮಾನ ಇಲ್ಲವೆ ಒಂದು ಭೋಗ್ಯದ ಅಡಮಾನದಲ್ಲಿ ಹಣವನ್ನು ತಿರುಗಿಕೊಡುವ ವೈಯಕ್ತಿಕ ಹೊಣೆಗಾರಿಕೆ ಇಲ್ಲವೆಂದು ಹೇಳಲಾಗದು.

೪. ಇದಕ್ಕೆ ಉತ್ತರವೆಂದರೆ ಒಂದು ಸಾಲವು ಸಾಲವಾಗಿಯೇ ಮುಕ್ತಾಯವಾಗುವುದಿಲ್ಲ. ಸಾಲವನ್ನು ಮರಳಿ ಪಡೆಯಲು ಕ್ರಮೋಪಾಯವು ಒಂದು ದಾವೆ ಮಾಡುವ ಹಕ್ಕು ಇರುವುದಿಲ್ಲ. ಆ ಸಾಲವನ್ನು ಮರಳಿ ಪಡೆಯುವ ಕ್ರಮೋಪಾಯವು ಭಿನ್ನವಾಗಿರಬಹುದು. ಯಾವುದೇ ವ್ಯವಹಾರ ಇಲ್ಲದೆ ಎಂದು ಸಾಲದ ವ್ಯವಹಾರವು ಅಂತ್ಯಗೊಳ್ಳಬಹುದು.

ಒಂದು ಸಾದಾ ಅಡಮಾನದ ಭೂಮಿಯನ್ನು ಎರಡು ದೃಷ್ಟಿಯಿಂದ ನೋಡಬಹುದು.

(೧) ಸಾಲಗಾರನು ಸಾಲವನ್ನು ತಿರುಗಿಕೊಟ್ಟು ಮಾಡಿದ ವಚನವನ್ನು ಪಾಲಿಸುವುದು ಒಂದು ಒಪ್ಪಂದ ಕರಾರಿನ ವೈಯಕ್ತಿಕ ಹೊಣೆಯನ್ನು ಸೃಷ್ಟಿಸುತ್ತದೆ.

(೨) ಇದೂ ಸಹ ಒಂದು ಖರೀದಿ ದಸ್ತಾವೇಜು, ಏಕೆಂದರೆ ಅದು ಸಾಲ ಕೊಟ್ಟವನಿಗೆ ಒತ್ತೆ ಹಾಕಿದ ಆಸ್ತಿಯಲ್ಲಿ ಅಂದರೆ ಒಂದು ಸ್ಥಿರ ಆಸ್ತಿಯಲ್ಲಿ ಹಕ್ಕು ಅವನಿಗೆ ಹೋಗುತ್ತದೆ.

ಈ ಎರಡು ಅಂಶಗಳಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ.

ಪ್ರಶ್ನೆ I – ಅಡಮಾನ ಒತ್ತೆ ಹಾಕಿದ ಒಂದು ಹೊಲವು ಪರದೇಶದಲ್ಲಿ ಇದ್ದರೆ ಅದರ ಕಾನೂನಿನ ಸಮರ್ಥನೆಯನ್ನು ಯಾವ ಕಾನೂನಿನ ಅನ್ವಯ ನಿರ್ಧರಿಸಲಾಗುವುದು ಮತ್ತು ಅದಕ್ಕೆ ಯಾವ ಕಾನೂನು ಅನ್ವಯಿಸುತ್ತದೆ?

ಇದು ಈಗ ನಿರ್ಧಾರವಾಗಿದ್ದು, ಅದು ಎಲ್ಲಿ ಇರುತ್ತದೆಯೋ, ಅಲ್ಲಿಯ ಕಾನೂನು ಅದಕ್ಕೆ ಅನ್ವಯಿಸುತ್ತದೆ. ವಾಸ್ತವಿಕ ವರ್ಗಾವಣೆ ಮತ್ತು ಒಂದು ಕೇವಲ ಜಾರಿ ಮಾಡಲು ಯೋಗ್ಯವಾದ ಕರಾರು ಇವುಗಳಲ್ಲಿ ಯಾವ ವ್ಯತ್ಯಾಸವೂ ಇರುವುದನ್ನು ಮಾನ್ಯ ಮಾಡಿಲ್ಲ.

ಪ್ರಶ್ನೆ II – ಪ್ರಶ್ನೆಯಿಂದ ಕೂಡಿದ ಸಾಲದ ಸ್ಥಿತಿ ಏನು?– ಆ ಸಾಲವನ್ನು ಈ ದೇಶದಲ್ಲಿರುವ ಸಾಲವೆಂದು ತಿಳಿಯಬೇಕೇ? ಎಲ್ಲಿ ಆ ಸಾಲ ತೆಗೆದುಕೊಂಡವನು ವಾಸಿಸುತ್ತಾನೆ ಇಲ್ಲವೆ ಯಾವ ಹೊಲದ ಮೇಲೆ ಭದ್ರತೆ ಕೊಟ್ಟಿರುವರೊ ಅಂತಹ ಹೊಲವು ಎಲ್ಲಿ ಇದೆಯೋ? ಭದ್ರತೆಯಿಂದ ಕೂಡಿದ ಒಂದು ಸಾಲ ಶ್ರೇಣಿಯಲ್ಲಿಯೇ ಒಂದು ಮತ್ತೊಂದರ ಮೇಲೆ ಸಂಪುರ್ಣವಾಗಿ ಸಾಲ ತೆಗೆದುಕೊಂಡವನ ವೈಯಕ್ತಿಕ ಹೊಣೆಗಾರಿಕೆಯಾಗಿದೆ.

## III

## ಒಂದು ಕಾನೂನು ಮಾನ್ಯ ಅಡಮಾನದ ಅವಶ್ಯಕತೆಗಳಾವುವು

ಇದಕ್ಕೆ ಕೆಳಗಣ ವಿಷಯಗಳನ್ನು ತಿಳಿದುಕೊಳ್ಳುವುದು ಅವಶ್ಯವಿದೆ.

೧. ಒಂದು ಅಡಮಾನವನ್ನು ಬರೆದುಕೊಡುವ ಅಂಶಗಳು.

೨. ಒಂದು ಅಡಮಾನದಲ್ಲಿರಬೇಕಾದ ವಿಷಯ.

೩. ಒಂದು ಅಡಮಾನವನ್ನು ಕೊಡಲು ಮತ್ತು ಅದನ್ನು ಸ್ವೀಕರಿಸಲು ಪಕ್ಷಗಾರರಿಗಿರಬೇಕಾದ ಸಾಮರ್ಥ್ಯ.

### I. ಅದನ್ನು ಯಾವ ಔಪಚಾರಿಕತೆಯಲ್ಲಿ ಬರೆದುಕೊಡತಕ್ಕದ್ದು

**ಕಲಮು ೫೯**

೧. ಸ್ವಾಮ್ಯ ಪತ್ರಗಳನ್ನು ಠೇವಣಿ ಇಡುವ ಅಡಮಾನವನ್ನು ಹೊರತುಪಡಿಸಿ, ಪ್ರತಿಯೊಂದು

ಅಡಮಾನವು ಒಂದು ನೂರು ಅಥವಾ ಅದಕ್ಕಿಂತ ಹೆಚ್ಚಿನ ಸಾಲದ ರಕಮನ್ನು ಮೂಲಹಣ ಸಾಲದ ಮರುಪಾವತಿ ಪಡೆಯುವ ಜಾಮೀನು ಟಿ.ಪಿ. ಅಧಿನಿಯಮದ ಅನ್ವಯ ಆಗಿರಲಿಕ್ಕೇಬೇಕು. ದಸ್ತಾವೇಜನ್ನು ನೋಂದಾಯಿಸುವುದರ ಮೂಲಕ ಮತ್ತು ಅಡಮಾನ ಇಡುವವನು ಅದಕ್ಕೆ ಸಹಿ ಮಾಡುವುದರಿಂದ ಮತ್ತು ಕನಿಷ್ಟ ಇಬ್ಬರು ಸಾಕ್ಷಿದಾರರು ಸಹಿ ಮಾಡಬೇಕು.

೨. ಸಾಲದ ಅಸಲು ಮೊತ್ತವು ಒಂದು ನೂರು ರೂಪಾಯಿಗಿಂತ ಕಡಿಮೆ ಇದ್ದರೂ, ಅಡಮಾನವನ್ನು ಒಂದು ದಸ್ತಾವೇಜಿನ ಮೂಲಕ ಇಲ್ಲವೆ ಸಾದಾ ಅಡಮಾನದಲ್ಲಿ ಅಡಮಾನ ಇಟ್ಟ ಆಸ್ತಿ ಕಬ್ಜೆಯನ್ನು ಕೊಡುವುದರ ಮೂಲಕ ಅಡಮಾನವನ್ನು ರಚಿಸಬಹುದು.

೩. ಆ ಸಾಲದ ಅಸಲು ಮೊತ್ತವು ೧೦೦ ರೂಪಾಯಿಗಳಿಗಿಂತ ಹೆಚ್ಚಾಗಿದ್ದರೆ, ಆ ಅಡಮಾನದ ವ್ಯವಹಾರವು ಲಿಖಿತದಲ್ಲಿ ಇರಲಿಕ್ಕೇಬೇಕು. ಅದೆಂದರೆ ಅದು ದಸ್ತಾವೇಜಿನ ರೂಪದಲ್ಲಿ ಇರಲಿಕ್ಕೇಬೇಕು ಮತ್ತು ಆ ದಸ್ತಾವೇಜಿನಲ್ಲಿ ಇರಲಿಕ್ಕೇಬೇಕಾದ ಅಂಶಗಳೆಂದರೆ:

(೧) ಅಡಮಾನ ಇಡುವವನು ಸಹಿ ಮಾಡಬೇಕು,

(೨) ಕನಿಷ್ಠ ಇಬ್ಬರು ಸಾಕ್ಷಿದಾರರು ಸಹಿ ಹಾಕಬೇಕು,

(೩) ನೋಂದಾಯಿಸತಕ್ಕದ್ದು.

೪. ಅದು ೧೦೦ ರೂಪಾಯಿಗಳಿಗಿಂತ ಕಡಿಮೆ ಇದ್ದರೂ ಬರವಣಿಗೆಯಲ್ಲಿರುವುದು ಅವಶ್ಯವಿಲ್ಲ. ಅದು ಮೌಖಿಕ ಒಪ್ಪಂದವಾಗಿದ್ದರೆ ಸಾಕಾಗುತ್ತದೆ.

(೧) ಸಾದಾ ಅಡಮಾನ.

(೨) ಷರತ್ತಿನ ಅಡಮಾನ.

(೩) ಇಂಗ್ಲಿಷ್ ಅಡಮಾನ.

(೪) ಭೋಗ್ಯದ ಅಡಮಾನ.

ಮೌಖಿಕ ಒಪ್ಪಂದದೊಂದಿಗೆ ಕಬ್ಜಾ ಹಸ್ತಾಂತರಿಸುವುದು.

೫. ಅಡಮಾನದ ಹಣವು ೧೦೦ ರೂಪಾಯಿಗಳಿಗಿಂತ ಹೆಚ್ಚು ಇದ್ದವುಗಳನ್ನು ಮಾತ್ರ ನಾವು ಪರ್ಯಾಲೋಚಿಸಬೇಕು.

## (೧) ಸಹಿ

ಸಾಮಾನ್ಯವಾಗಿ ಕಲಮುಗಳ ಅಧಿನಿಯಮ ೧೮೯೭ ಕಲಮು ೩ (೫೨)

೧. ಸಹಿಯನ್ನು ಸಂಕೇತ ಮೂಲಕ ಇಲ್ಲವೆ ಪಡಿಯಚ್ಚು ಮೂಲಕ ಮಾಡಬಹುದು.

೨೫ ಕಲ್ಕತ್ತ ೯೧೧– ಹೆಸರಿನ ಸ್ಟ್ಯಾಂಪ್ ಇದ್ದಂತಹ ಮನುಷ್ಯನ ಸೇವಕನು ಅದನ್ನು ಉಪಯೋಗಿಸುವುದರಿಂದ.

೨. ಅದು ಒಬ್ಬ ಅಶಿಕ್ಷಿತ ಮನುಷ್ಯನ ಗುರುತು ಆಗಿರಬಹುದು.

೪೧ ಬಾಂಬೆ ೩೮೪– ಒಂದು ಹರಿತವಾದ ಆಯುಧದ ಗುರುತು ಆಗಿರಬಹುದು.

೩. ಆದರೆ ಒಬ್ಬ ಅಕ್ಷರಸ್ಥ ವ್ಯಕ್ತಿಯು ತನ್ನ ಸಹಿಯನ್ನು ಒಂದು ಗುರುತಿನ ಮೂಲಕ ಮಾಡಲಿಕ್ಕೆ ಬರುವುದಿಲ್ಲ. ತಪ್ಪೊಪ್ಪಿಗೆಗೆ ಕಲಿತ ಆರೋಪಿಯು ಸಹಿ ಮಾಡಿರಲಿಲ್ಲ.

*೩೨ ಕಲ್ಕತ್ತ ೫೫೦*

ಒಬ್ಬನು ಸಹಿಯು ಬರೆಯಲು ಬಾರದ ಒಬ್ಬ ವ್ಯಕ್ತಿಯು ಮಾಡುವ ಗುರುತನ್ನು ಸಹ ಒಳಗೊಂಡಿರುತ್ತದೆ.

### (೨) ಸಾಕ್ಷಿಯಾಗಿರುವಿಕೆ

೧. ಸಾಕ್ಷಿಯಾಗಿರುವಿಕೆ– ಸಾಕ್ಷಿಯಾಗಿರು ಅಂದರೆ ಒಂದಕ್ಕೆ ಸಾಕ್ಷಿಯಾಗು ಇಲ್ಲವೆ ಸತ್ಯವನ್ನು ಪ್ರತಿಜ್ಞೆ ಮಾಡಿ ಹೇಳುವುದು ಇಲ್ಲವೆ ಅದರ ನೈಜತೆಯ ಬಗ್ಗೆ ಪ್ರಮಾಣ ಮಾಡುವುದು; ಸಾಕ್ಷ್ಯ ಕೊಡುವುದು ಪ್ರಮಾಣೀಕರಿಸುವುದು. ಸಾಕ್ಷಿಯಾಗುವಿಕೆಯು ಅಂದರೆ ಒಂದು ದಸ್ತಾವೇಜು ಇಲ್ಲವೆ ಮರಣಪತ್ರ ಬರೆದುಕೊಟ್ಟುದುದನ್ನು ಸರಿಯಾಗಿ ನೋಡುವುದು. ಸತ್ಯವೆಂದು ಹೇಳುವುದಕ್ಕೆ ಸಾಕ್ಷಿದಾರರ ಸಮಕ್ಷಮದಲ್ಲಿ ಸಹಿ ಮಾಡುವುದು. ಅನುಪ್ರಮಾಣಿತ ಸಾಕ್ಷಿದಾರನೆಂದರೆ ಆ ದಸ್ತಾವೇಜನ್ನು ಸರಿಯಾಗಿ ಬರೆದುಕೊಡುವುದನ್ನು ನೋಡಿ ಸಹಿ ಮಾಡಿದ ಸಾಕ್ಷಿದಾರನು.

೨. ಪ್ರಶ್ನೆಯು ಹೀಗಿರುವುದರಿಂದ, ಪ್ರಮಾಣದ ಸಾಕ್ಷಿದಾರನು ಆ ದಸ್ತಾವೇಜನ್ನು ಬರೆದುಕೊಡುವ ಕಾಲಕ್ಕೆ ಹಾಜರಿರಲಿಕ್ಕೇಬೇಕು ಮತ್ತು ಒತ್ತೆಯನ್ನು ಹಾಕುವವನು (ಅಡಮಾನ ಮಾಡುವವನು ಮತ್ತು ಒತ್ತೆಯನ್ನು ಹಾಕುವವನು) ಅಡಮಾನ ಮಾಡುವವನು ಕೇವಲ ತಾನು ದಸ್ತಾವೇಜನ್ನು ಬರೆದುಕೊಟ್ಟಿರುವೆನೆಂದು ಆ ಸಾಕ್ಷಿದಾರನ ಮುಂದೆ ಒಪ್ಪಿದರೆ, ಆಮೇಲೆ ಆ ಸಾಕ್ಷಿದಾರನು ಅದನ್ನು ತನ್ನ ಸಹಿಯಿಂದ ಅನುಮೋದಿಸಿದರೆ ಕಾನೂನಿನ ಪ್ರಕಾರ ಈ ದಸ್ತಾವೇಜನ್ನು ಅನುಪ್ರಮಾಣೀಕರಿಸಲು ಬೇಕಾದ ಅವಶ್ಯಕತೆಗಳನ್ನು ಪೂರೈಸಿ ದಂತಾಗುತ್ತದೆಯೇ?

೩. ಪ್ರಿವ್ಹಿ ಕೌನ್ಸಿಲ್ ಹೇಳಿದ್ದೇನೆಂದರೆ ಅನುಪ್ರಮಾಣೀಕರಿಸುವ ಸಾಕ್ಷಿದಾರನು ಆ ದಸ್ತಾವೇಜನ್ನು ಅವನು ಬರೆದುಕೊಡುವ ಕಾಲಕ್ಕೆ ಹಾಜರು ಇರತಕ್ಕದ್ದು. ಅವನು ಕೇವಲ ಅದನ್ನು ಬರೆದುಕೊಟ್ಟಿರುವೆನೆಂದು ಒಪ್ಪಿದರೆ ಸಾಕಾಗುವುದಿಲ್ಲವೆಂದು ಹೇಳಿದೆ.

೩೯ ಅಯ್.ಎ. (ಇಂಡಿಯನ್ ಅಪೀಲ್ಸ್) ೨೧೮, *೩೫ ಮದ್ರಾಸ್ ೬೦೭*– ಇವು ಅಲಹಾಬಾದ್ ಮತ್ತು ಮುಂಬೈ ತೀರ್ಪಿಗೆ ವಿರುದ್ಧವಾಗಿವೆ. –*೨೭ ಬಾಂಬೆ ೯೧* ಮತ್ತು *ಅಲಹಾಬಾದ್ ೬೯.*

### ಘೋಷ ಹಾಕಿಕೊಂಡಿರುವವರು ಅನುಪ್ರಮಾಣೀಕರಿಸುವುದು: ಸಾಕ್ಷಿ ಹಾಕುವುದು

೪. ಅದೇ ನಿಯಮವನ್ನು ಅನ್ವಯಿಸಲಾಯಿತು. ಘೋಷಾ ಹಾಕಿರುವ ಒಬ್ಬ ಹೆಣ್ಣುಮಗಳು ಅನುಪ್ರಮಾಣೀಕರಿಸುವ ಸಾಕ್ಷಿದಾರಳು. ಆದರೆ ಅವಳ ಸಮಕ್ಷಮದಲ್ಲಿ ಆ ದಸ್ತಾವೇಜನ್ನು ಬರೆಯಲಿಕ್ಕೇಬೇಕು. ಇಲ್ಲವಾದರೆ ಅವಳು ಅನುಪ್ರಮಾಣಿತ ಸಾಕ್ಷಿದಾರಳೆಂದು ಕರೆಯಲಾಗುವುದಿಲ್ಲ.

*ನಿರ್ಣಯವಾದ ಪ್ರಕರಣ: ೪೫ ಆಯ್.ಎ. ೯೪*

ಒಂದು ಒತ್ತೆಯ ದಸ್ತಾವೇಜು ೧೦೦–೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಇದ್ದರೆ ಅದು ಪರದಾ ಹಾಕಿದ– (ಘೋಷಾ ಹಾಕಿದ) ಮಹಿಳೆ ಸಹಿ ಮಾಡಿದರೆ, ಇಲ್ಲವೆ ಅವಳು ತನ್ನ ಅಲ್ಪವಯಿ ಮಗನ ವತಿಯಿಂದ ಸಹಿ ಮಾಡಿದರೆ ಅದಕ್ಕೆ ಇಬ್ಬರು ಅನುಪ್ರಮಾಣಿತ ಸಾಕ್ಷಿದಾರರು ಸಹಿ ಮಾಡಲೇಬೇಕು. ಅವರ ಸಾಕ್ಷಿ ಮೇಲಿಂದ ಕಂಡುಬಂದುದೇನೆಂದರೆ, ಆ ಪರದಾ(ಘೋಷಾ)ದ ಮಹಿಳೆ ಸಹಿಗಾಗಿ ಆ ದಸ್ತಾವೇಜನ್ನು ತೆಗೆದುಕೊಂಡು ಹೋದಾಗ ಆ ಹೆಣ್ಣುಮಗಳು ಪರದೆಯ ಹಿಂದೆ ಸಹಿ ಮಾಡಿದ್ದಾಳೆ ಎಂದು ಆಕೆಯ ಮಗ ತಿಳಿಸಿದ ನಂತರ ಇಬ್ಬರು ಸಾಕ್ಷಿಗಳು ಸಹಿ ಹಾಕಿದರು. ಅನುಪ್ರಮಾಣಿತ ಸಾಕ್ಷಿದಾರ ಆ ಘೋಷಾದ ಹೆಣ್ಣುಮಗಳು ಸಹಿ ಮಾಡುವುದನ್ನು ನೋಡಲಿಲ್ಲ. ಆದರೆ ಅವಳ ಮಗನು ಪರದೆಯ

ಹಿಂದಿನಿಂದ ಬಂದು ಅದಕ್ಕೆ ತನ್ನ ತಾಯಿಯು ಸಹಿ ಮಾಡಿದ್ದಾಳೆಂದು ಹೇಳಿದನು. ಅದರ ಮೇಲಿಂದ ಅವರು ತಮ್ಮ ಸಹಿಯನ್ನು ಅನುಪ್ರಮಾಣಿತ ಸಾಕ್ಷಿದಾರರೆಂದು ಮಾಡಿದರು. ಆ ದಸ್ತಾವೇಜು ಅನುಪ್ರಮಾಣಿತ ಸಾಕ್ಷಿದಾರರಿಂದ ಕೂಡಿದ್ದಲ್ಲವೆಂದು ತೀರ್ಪು ಕೊಡಲಾಯಿತು. (ಟಿ.ಪಿ.) ಆಸ್ತಿ ಹಸ್ತಾಂತರ ಅಧಿನಿಯಮದ ಕಲಂ ೫೯ರ ಅನ್ವಯ ಅನುಪ್ರಮಾಣಿತವಾಗಿಲ್ಲವೆಂದು ನಿರ್ಧರಿಸಲಾಯಿತು.

*೪೨ ಆಯ್.ಎ. ೧೬೩*

ಒಂದು ಒತ್ತೆಯ ದಸ್ತಾವೇಜನ್ನು ಇಬ್ಬರು ಘೋಷಾ ಹೆಣ್ಣುಮಕ್ಕಳು ಬರೆದುಕೊಟ್ಟರೆಂದು ಹೇಳಿದರು. ಆ ದಸ್ತಾವೇಜಿನ ಇಬ್ಬರು ಅನುಪ್ರಮಾಣಿತ ಸಾಕ್ಷಿದಾರರ ಸಾಕ್ಷಿಯಿಂದ ಕಂಡುಬಂದುದೇನೆಂದರೆ ದಸ್ತಾವೇಜಿಗೆ ಸಹಿ ಮಾಡುವಾಗ ಪ್ರತಿಯೊಬ್ಬಳ ಕೈಯನ್ನು ಮಾತ್ರ ನೋಡಿದೆವೆಂದೂ ದಸ್ತಾವೇಜು ಬರೆದುಕೊಟ್ಟವರ ಮುಖಗಳನ್ನು ನೋಡಲಿಲ್ಲವೆಂದೂ ಆ ಬರೆದುಕೊಟ್ಟವರು ಮಾತನಾಡಿದುದನ್ನು ಕೇಳಿದರೆಂದೂ ಮತ್ತು ಅವರ ಧ್ವನಿಯನ್ನು ಗುರುತಿಸಿದರೆಂದು ಹೇಳಿದರು. ಇದರ ಮೇಲಿಂದ ತೀರ್ಮಾನಿಸಿದುದೇನೆಂದರೆ ಆಸ್ತಿಯ ಹಸ್ತಾಂತರ ಅಧಿನಿಯಮದ ಅನ್ವಯ ಆ ದಸ್ತಾವೇಜನ್ನು ಅನುಪ್ರಮಾಣಗೊಳಿಸಲಾಗಿದೆಯೆಂದು ತೀರ್ಮಾನಿಸಲಾಯಿತು.

೫. ಈಗ ಕಾನೂನು ಬದಲಾಗಿದೆ. ಮತ್ತು ಬರೆದುಕೊಟ್ಟವನ ಒಪ್ಪಿಗೆ ಹಾಗೂ ಸ್ವೀಕೃತಿಯ ಮೇಲೆ ಅವರ ಸಹಿ ಮಾಡುವುದರ ಮೂಲಕ ಅನುಪ್ರಮಾಣಿಕೆಯು ಸಾಕಷ್ಟು ಯುಕ್ತವಾದುದಾಗಿರುತ್ತದೆ. ಆಸ್ತಿಯ ಹಸ್ತಾಂತರ ಅಧಿನಿಯಮದ ೧೯೨೬ರಲ್ಲಿ ತಿದ್ದುಪಡಿಯಾದಂತೆ, ಅನುಪ್ರಮಾಣಿಕತೆಯ ವ್ಯಾಖ್ಯೆಯನ್ನು ನೋಡಿರಿ.

### (೩) ನೋಂದಾಯಿತ

(ಪುಟವನ್ನು ಖಾಲಿ ಬಿಡಲಾಗಿದೆ)

* * *

(ಮೊದಲಿನ ಭಾಗವು ಸಿಕ್ಕಿರುವುದಿಲ್ಲ –ಸಂ) ತ್ವರಿತವಾಗಿ ಪ್ರವರ್ತಿಸಲು ಸಾಂಕೇತಿಕ ಕಬ್ಜೆಯನ್ನು ಕೊಡುವುದಾಗಲಿ ಇಲ್ಲವೆ ಆ ದಸ್ತಾವೇಜನ್ನು ಬರೆದುಕೊಟ್ಟವನ ಕಬ್ಜೆಯಿಂದ ಹೊರಗೆ ಹೋಗುವುದು ಅವಶ್ಯವಿರುವುದಿಲ್ಲ.

*ಉದಾ: ಎಕ್ಸ್‌ಟೋನ್ ವಿರುದ್ಧ ಸ್ಕಾಟ್ (೧೮೩೩) ೬ ಸಾಯಮೋನ್ ೩೧*

ಮತ್ತೊಬ್ಬರಿಗೆ ಸಂಬಂಧಿಸಿದ ಹಣವನ್ನು ಒಬ್ಬನು ಆತನಿಗೆ ಯಾವುದೇ ಹೇಳುವಿಕೆ ಇಲ್ಲದೆ ಅದನ್ನು ಸ್ವೀಕರಿಸಿದ. ಹಾಗೂ ಅವನಿಗೆ ತಿಳಿಸದೆ ಅವನ ಹೆಸರಿನಿಂದ ಆ ಹಣಕ್ಕೆ ಒಂದು ಒತ್ತೆಯ ಪತ್ರದ ದಸ್ತಾವೇಜನ್ನು ಬರೆದುಕೊಟ್ಟ. ಅಡಮಾನ ಮಾಡುವವ ಆ ದಸ್ತಾವೇಜನ್ನು ತನ್ನ ಕಬ್ಜೆಯಲ್ಲಿಯೇ ಅನೇಕ ವರ್ಷಗಳವರೆಗೆ ಇಟ್ಟುಕೊಂಡನು. ಮತ್ತು ದಿವಾಳಿಖೋರನಾಗಿ ತೀರಿಕೊಂಡನು. ಅವನು ಸತ್ತನಂತರ ಒಂದು ಭದ್ರವಾದ ದೊಡ್ಡ ಪೆಟ್ಟಿಗೆಯಲ್ಲಿ ಆತನ ಮಾಲೀಕತ್ವವನ್ನು ತೋರಿಸುವ ದಸ್ತಾವೇಜಿನ ಸಂಗಡ ಈ ದಸ್ತಾವೇಜು ಸಿಕ್ಕಿತು. ಇದು ಕಾನೂನುಬದ್ಧವಾದ ಒತ್ತೆಯಲ್ಲವೆಂದು ವಾದಿಸಲಾಯಿತು. ಏಕೆಂದರೆ, ಆ ದಸ್ತಾವೇಜಿನ ಕಬ್ಜೆಯನ್ನು ಕೊಟ್ಟಿಲ್ಲ ಮತ್ತು ಹಸ್ತಾಂತರ ಮಾಡಿಲ್ಲ. ಆದರೆ ಈ ವಾದವನ್ನು ತಳ್ಳಿಹಾಕಲಾಯಿತು. ಆ ದಸ್ತಾವೇಜನ್ನು ಬರೆದುಕೊಟ್ಟ ತಕ್ಷಣದಿಂದ ಅದನ್ನು ಆಚರಣೆಯಲ್ಲಿ ತರಬೇಕೆಂಬ ಉದ್ದೇಶವು ಇದ್ದಿತೆಂದು ತೋರಿಸಲು ಸಾಕ್ಷಿಯು ಇರಲಿಲ್ಲವೆಂದು ನ್ಯಾಯಾಲಯವು ತೀರ್ಪು ಕೊಟ್ಟಿತು.

೬. ಇದರಲ್ಲಿ ಒಂದು ವಿಚಾರ ವ್ಯಕ್ತವಾಗುತ್ತದೆ. ಅದೇಂದರೆ ಈ ದಸ್ತಾವೇಜನ್ನು ಇನ್ನೊಬ್ಬನಿಗೆ ಕೊಡಲಾಗಿದ್ದರೆ ಕಾನೂನಿನ ದೃಷ್ಟಿಯಲ್ಲಿ ಅದನ್ನು ಆಚರಣೆಯಲ್ಲಿ ತರಲು ಎಳ್ಳಷ್ಟೂ ತಡಮಾಡಬಾರದು. ಆದರೆ ಇದು ಈಗ ಯಾವ ನಾತೆಯಿಂದ ಈ ದಸ್ತಾವೇಜನ್ನು ಒಬ್ಬನಿಗೆ ಹಸ್ತಾಂತರ ಮಾಡಿದರು ಎಂಬುದನ್ನು ತೋರಿಸುವ ಬಗ್ಗೆ ಸಾಕ್ಷಿಯು ಗ್ರಾಹ್ಯವಾಗಿದೆಯೆಂದು ಸ್ಥಾಪಿತವಾಗಿದೆ. ಯಾವ ಮನುಷ್ಯನಿಗೆ ಅದನ್ನು ಕೊಡಲಾಗಿದೆಯೋ ಅವನು ಅದಕ್ಕೆ ಪಕ್ಷಗಾರನಿದ್ದರೂ ಇರಬಹುದು. ಆದರೆ ಅವನು ಅಪರಿಚಿತನಿರಬಾರದು– *(೧೮೯೭) ೨ ಸಿಎಚ್. ೬೦೮.*

೭. ಯಾವಾಗ ಒಂದು ಕಾಗದ ಪತ್ರವು ಕೆಲವು ಕರಾರುಗಳನ್ನು ಪೂರೈಸಿದ ನಂತರವೇ ಜಾರಿಯಲ್ಲಿ ಬರುವಂತಹದ್ದು ಇದ್ದರೆ ಮತ್ತು ಅದು ಆ ಕೂಡಲೇ ಜಾರಿ ಬರದಂತಹದ್ದು ಇದ್ದರೆ ಅದಕ್ಕೆ ಅವಲಂಬಿತ ಪತ್ರವೆಂದು ಕರೆಯುತ್ತಾರೆ. ಇದರ ಸಾಮಾನ್ಯ ಅರ್ಥವು ಅವಸರದಲ್ಲಿ ಗೀಚುಹಾಕಿದ ಇಲ್ಲವೆ ಯಾವುದೇ ಒಂದು ಕರಾರನ್ನು ಪೂರ್ವಭಾವಿಯಾಗಿ ಪೂರೈಸುವವರೆಗೆ ಅದು ಜಾರಿಯಲ್ಲಿ ಬರತಕ್ಕದ್ದಲ್ಲವೆಂದು ಬರೆದುದಾಗಿರುತ್ತದೆ.

೮. ಕೇವಲ ಬರೆದುಕೊಟ್ಟರೆ ಸಾಕಾಗುವುದಿಲ್ಲ ಅದಕ್ಕೆ ಆ ಕ್ಷಣವೇ ಜಾರಿಕೊಡುವ ಉದ್ದೇಶವು ಇರಲಿಕ್ಕೇಬೇಕು. ಕೊಡುವುದು ಅಂದರೆ ಕೂಡಲೇ ಅದಕ್ಕೆ ಪರಿಣಾಮ ಕೊಡುವ ಉದ್ದೇಶ ಎಂದಾಗುತ್ತದೆ. ಈ ಉದ್ದೇಶವು ಒಪ್ಪಿಸುವುದು (ಕೊಡುವುದು) ಇಲ್ಲವೆ ಒಪ್ಪಿಸದಿರುವುದು (ಕೊಡದಿರುವುದು) ಇವುಗಳನ್ನು ಅವಲಂಬಿಸಿರುವ ಕಾರ್ಯವಿಧಾನವಾಗಿರುತ್ತದೆ.

೯. ಯಾವನೊಬ್ಬನು ಇಲ್ಲವೆ ಕೆಲವು ಜನರು ಒಂದು ದಸ್ತಾವೇಜನ್ನು ಬರೆದುಕೊಡುವ ಉದ್ದೇಶ ಹೊಂದಿದ್ದರೆ ಮತ್ತು ಉಳಿದ ಕೆಲವು ಜನರು ಆ ದಸ್ತಾವೇಜನ್ನು ಪೂರ್ತಿಗೊಳಿಸಲು ನಿರಾಕರಿಸಿದರೆ, ಆಗ ಉದ್ಭವಿಸುವ ಪ್ರಶ್ನೆ ಏನೆಂದರೆ ಯಾರು ಆ ದಸ್ತಾವೇಜನ್ನು ಬರೆದುಕೊಟ್ಟಿರುವರೋ ಅವರಿಗೆ ಬಂಧನಕಾರಕವಾಗಿರುವುದೋ ಎಂಬುದು ಪ್ರತಿಯೊಂದು ಪ್ರಕರಣದಲ್ಲಿ ಆಯಾ ಸಂಗತಿಗಳ ಮೇಲಿಂದ ಪಕ್ಷಗಾರರ ಉದ್ದೇಶವನ್ನು ಸಂಗ್ರಹಿಸುವುದನ್ನು ಅವಲಂಬಿಸಿರುತ್ತದೆ.

### ಒಂದು ದಸ್ತಾವೇಜಿನಲ್ಲಿ ಪ್ರಮುಖ ವ್ಯತ್ಯಾಸಗೊಳಿಸುವುದು– ಅದರ ಪರಿಣಾಮ

೧. ಒತ್ತೆ ಇಟ್ಟವನ ಸಮ್ಮತಿ ಪಡೆಯದೆ ಒಂದು ಒತ್ತೆಯ ದಸ್ತಾವೇಜಿನಲ್ಲಿ ಮುಖ್ಯ ವ್ಯತ್ಯಾಸವನ್ನು ಮಾಡಿದರೆ ಮತ್ತು ಕರಾರು ಭಾಗಿಯಾದವನ ಮತ್ತು ಯಾವನು ಅದರ ಮೇಲೆ ಅವಲಂಬಿಸಿರುತ್ತಾನೆಯೋ ಆ ದಸ್ತಾವೇಜಿನ ಪರಿಣಾಮಕಾರಿತ್ವವನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ.

೨. ಖಾಲಿ ಬಿಟ್ಟ ಸ್ಥಳಗಳನ್ನು ತುಂಬುವುದು ಅಂದರೆ ಕೇವಲ ವಿಧ್ಯುಕ್ತವಾದ ಸಂಗತಿಗಳನ್ನು ಅಡಮಾನ ಪಡೆದವನು ತನ್ನ ಹಕ್ಕಿಗೆ ಕೇಡು ತರದಂತಹವುಗಳನ್ನು ಅದರಲ್ಲಿ ತುಂಬಿಕೊಳ್ಳಬಹುದು.

*(೧೯೦೫) ೨ ಸಿಎಚ್ ೪೫೫)*

೩. ನಿಯಮದಲ್ಲಿ ಕೊಟ್ಟ ಅರ್ಥದ ಪ್ರಕಾರ ಮುಖ್ಯ ವ್ಯತ್ಯಾಸವೆಂದರೆ ಯಾವುದು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

*೧೦. ಸಿ.ಡಬ್ಲ್ಯೂ.ಎನ್. ೭೮೮* *(ನ್ಯಾಯಮೂರ್ತಿ ಮುಖರ್ಜಿ)*

ಯಾವುದೇ ಒಂದು ದಸ್ತಾವೇಜಿನಲ್ಲಿ ಯಾವುದೇ ವ್ಯತ್ಯಾಸ, ಬದಲಾವಣೆ ಮಾಡಿದರೆ ಅದು ಮೂಲದಲ್ಲಿ ಕೊಡಬೇಕಾಗಿದ್ದ ಅರ್ಥಕ್ಕಿಂತ ಕಾನೂನಿನ ಭಾಷೆಯಲ್ಲಿ ಬೇರೊಂದು ಅರ್ಥವನ್ನು ಕೊಟ್ಟರೆ, ಕಾನೂನು

ತನ್ನ ಗುರುತನ್ನು ಕಳೆದುಕೊಂಡರೆ ಇಲ್ಲವೆ ಅದಕ್ಕೆ ಸಂಬಂಧಿಸಿದ ಪಕ್ಷಗಾರರ ಸಂಬಂಧವನ್ನು ಬದಲಾಯಿಸಿದರೆ, ಅಂಥದಕ್ಕೆ ಮುಖ್ಯ ವ್ಯತ್ಯಾಸ ಇಲ್ಲವೆ ತಾಂತ್ರಿಕವಾಗಿ ಒಂದು ಬದಲಾವಣೆ ಮತ್ತು ಅಂತಹ ಬದಲಾವಣೆಯು ಆ ದಸ್ತಾವೇಜಿನಲ್ಲಿನ ವ್ಯತ್ಯಾಸಕ್ಕೆ ಸಮ್ಮತಿ ಕೊಡದ ಎಲ್ಲ ಪಕ್ಷಗಾರರ ವಿರುದ್ಧ ಅಸಿಂಧುವಾಗಿರುತ್ತದೆ.

ಒಂದು ಒಪ್ಪಂದದ ಕರಾರಿಗೆ ಒಬ್ಬ ಪಕ್ಷಗಾರರನ್ನು ಸೇರಿಸುವುದು ಒಂದು ಮುಖ್ಯ ವ್ಯತ್ಯಾಸದ ತಿದ್ದುಪಡಿಯಾಗುತ್ತದೆ.

### ಮೂರು ಔಪಚಾರಿಕೆಗಳ ಮಹತ್ವ

೧. ಮೂರು ಔಪಚಾರಿಕೆಗಳಲ್ಲಿ ಯಾವುದೊಂದರ ಅಭಾವವಿದ್ದರೂ ಆ ವ್ಯವಹಾರ ಅಪಾಯಕಾರಿ ಯಾಗುತ್ತದೆ. ಅದೊಂದೇ ಇಲ್ಲಿ ಮುಖ್ಯವಾದುದ್ದು.

೨. ಈ ಔಪಚಾರಿಕೆಗಳು ಇರಲಿಕ್ಕೇಬೇಕಲ್ಲದೆ ಅವು ಕಾನೂನುಬದ್ಧವೂ ಆಗಿರಲಿಕ್ಕೇಬೇಕು. ಅದೆಂದರೆ ಕಾನೂನಿನ ಅನ್ವಯ ಇರಬೇಕು.

೩. ಸಹಿಯು ಇರಲಿಕ್ಕೇಬೇಕಲ್ಲದೆ ಅವು ಕಾನೂನುಬದ್ಧವಾದ ಸಹಿಗಳಾಗಿರಬೇಕು.

೪. ಅವು ಅನುಪ್ರಮಾಣಿಕ ಸಾಕ್ಷಿಗಳು ಆಗಿರಲಿಕ್ಕೇಬೇಕು, ಅಲ್ಲದೆ ಆ ಅನುಪ್ರಮಾಣಿಕತೆ ಕಾನೂನು ಬದ್ಧವಾಗಿ ಇರಲಿಕ್ಕೇಬೇಕು. ಹೇಗೆಂದರೆ–

(i) ಆಸ್ತಿಯನ್ನು ಸರಿಯಾಗಿ ವರ್ಣಿಸಿರದಿದ್ದರೆ, ಅಂದರೆ ಅದನ್ನು ಗುರುತಿಸಲಿಕ್ಕೆ ಬಾರದಂತಿದ್ದರೆ,

*೧೮ ಲಕ್ಕತ್ತ ೫೫೬/ ೪ ಬಿ.*

(ii) ಒಂದು ದಸ್ತಾವೇಜಿನ ಮೂಲಕ ನೋಂದಾಯಿಸಿದ ಆಸ್ತಿಯು ಆ ಕ್ಷೇತ್ರದಲ್ಲಿ ಇರದಿದ್ದರೆ, ಆ ದಸ್ತಾವೇಜನ್ನು ಅಧಿಕಾರವುಳ್ಳ ಯೋಗ್ಯ ಮನುಷ್ಯನು ನೋಂದಣಿ ಮಾಡಲು ಹಾಜರುಪಡಿಸದಿದ್ದರೆ, ಆ ದಸ್ತಾವೇಜು ಅಸಿಂಧು ಆಗುತ್ತದೆ.

*(೫೮ ಅಯ್. ಎ.)*

ಉಳಿದ ಪ್ರಶ್ನೆಗಳನ್ನು ಈ ವಿಷಯ ಕುರಿತು ಇರುವ ಔಪಚಾರಿಕತೆಗಳಿಗೆ ಸಂಬಂಧಿಸಿದಂತೆ ವಿಚಾರಿಸ ಬೇಕಾಗುತ್ತದೆ.

### I. ಒಂದು ವಿತ್ತೆಯ ದಸ್ತಾವೇಜನ್ನು ಬರೆದುಕೊಟ್ಟರೆ ಅದನ್ನು ಜಾರಿಕೊಡಲು ಸಾಕಾಗುವುದೇ?

೧. ಕೇವಲ ಒಂದು ದಸ್ತಾವೇಜನ್ನು ಬರೆದುಕೊಟ್ಟರೆ ಸಾಕಾಗುವುದಿಲ್ಲವೆಂದು ಹೇಳುವ ಅವಶ್ಯಕತೆ ಇರುವುದಿಲ್ಲ. ಯಾಕೆಂದರೆ ಅದನ್ನು ಜಾರಿಗೊಳಿಸುವ ಉದ್ದೇಶವು ಇರದಿದ್ದರೆ ಅದು ಕಾನೂನುಬದ್ಧ ಒಪ್ಪಂದವಾಗಲಾರದು ಹಾಗೂ ಬಂಧನಕಾರಕವಾಗುವುದಿಲ್ಲ.

೨. ಇದನ್ನು ಇಂಗ್ಲಿಷ್ ಕಾನೂನಿನಲ್ಲಿ ಒಂದು ಸೂತ್ರದ ಮೂಲಕ ವ್ಯಕ್ತಪಡಿಸಲಾಗಿದೆ. ಒಂದು ದಸ್ತಾವೇಜನ್ನು ಹಸ್ತಾಂತರಿಸಲಿಕ್ಕೇಬೇಕು.

೩. ಹಸ್ತಾಂತರಿಸುವುದು ಅಂದರೇನು ಅನ್ನುವುದು ತಿಳಿಯದ ಹೊರತು ಇದು ಸ್ಪಷ್ಟವಾಗದಿರಬಹುದು. ಇದರಲ್ಲಿ ಒಂದು ದಸ್ತಾವೇಜಿನ ಹಸ್ತಾಂತರದಲ್ಲಿ ಯಾವುದೇ ತಾಂತ್ರಿಕ ಕ್ರಮವು ಇರುವುದಿಲ್ಲ. ಆದರೆ ಆ ದಸ್ತಾವೇಜು ಕೂಡಲೇ ಅಮಲಿನಲ್ಲಿ ಬರಬೇಕೆಂದು ಸೂಚಿಸುತ್ತದೆ.

೪. ಶಫರ್ಡ್ (Shephard) ಎಂಬುವವನು ತನ್ನ ಕೃತಿ ಟಚ್‌ಸ್ಟೋನ್ *(Touchstone)*ದಲ್ಲಿ ಹಸ್ತಾಂತರವು

ಒಂದು ಉತ್ತಮ ದಸ್ತಾವೇಜಿನಲ್ಲಿ ಇರಬೇಕಾದ ಅವಶ್ಯಕತೆಗಳಲ್ಲಿ ಒಂದಾಗಿದೆ ಮತ್ತು ಇದನ್ನು ಜ್ಯುರಿಗಳು ಸಂಗತಿಗಳ ಮೇಲಿಂದ ಕಂಡು ಹಿಡಿಯುವಂತಹದ್ದು ಎಂದು ಬರೆದಿದ್ದಾನೆ.

## ತೀರ್ಪುಜನ್ಯ ಕಾನೂನು

I. ಸೆಕ್ರೆಟರಿ ಆಫ್ ಸ್ಟೇಟ್ ಇವರ ವಿರುದ್ಧ ದಾವೆ

*(೧೯೦೬) ೧ ಕೆ.ಬಿ. ೬೧೩;೫ ಎಯುಸಿ ೧೫೭; ೩೭ ಮದ್ರಾಸ್ ೫೫*

II. ರಾಜನ ಸ್ಥಾನಮಾನ

*೧೯೨೦ ಎ ಸಿ ೫೦೮; ೧೯೩೨ ಎ ಸಿ ೨೮; ೧೯೨೯ ಎ ಸಿ ೨೮೫; ೮ ಎಪಿಪಿ ಕೇಸಿಸ್ ೭೬೭; ೮ ಎಮ್ ಅಯ್ ಎ ೫೦೦; ೧೯೦೩ ಎಪಿಪಿ ಕೇಸಿಸ್ ೫೦೧*

III. ಸಾರ್ವಭೌಮತೆ

*(೧೭೯೨) ೨ ಎಈಎಸ್ ೬೦, ೧೩ ವಿಮ್ ಪಿ ಸಿಸಿ ೨೨ (೧೯೦೬),*

*೧ ಕೆ ಬಿ ೬೧೩ ಬ್ರಿಟಿಷ್ ಇಂಡಿಯಾ – ಕಲಂ ೩ (೧೭)*

*ಸಾಮಾನ್ಯ ಖಂಡಗಳ ಅಧಿನಿಯಮ ೧೯೬೭*

ಸಂಪೂರ್ಣ ಬ್ರಿಟಿಷ್ ಇಂಡಿಯಾ: ಪರಿಶಿಷ್ಟದಲ್ಲಿ ಕಾಣಿಸಿದ ಜಿಲ್ಲೆಗಳನ್ನು ಒಳಗೊಳ್ಳುತ್ತದೆ. ಯಾವುದೇ ಹೊಸದಾಗಿ ಸ್ವಾಧೀನಪಡಿಸಿಕೊಂಡ ಪ್ರದೇಶವನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಕೊಂಡರೆ ಅದು ಬ್ರಿಟಿಷ್ ಇಂಡಿಯಾದ ಒಂದು ಭಾಗವಾಗುತ್ತದೆ.

*ಒನ್ಸಲೇ ವಿರುದ್ಧ ಫ್ಲೋವಡೆನ್ – (೧೯೫೬–೫೯) ೧ ಬಾಂಬೆ ೧೪೫*

ಆದರೆ ರಾಜ ಇಲ್ಲವೆ ಶಾಸನದ ಮೂಲಕ ತಿದ್ದುಪಡಿ ಮಾಡುವವರೆಗೆ ಅದು ತನ್ನ ಮೊದಲಿನ ಕಾನೂನನ್ನು ಇಟ್ಟುಕೊಳ್ಳುತ್ತದೆ.

*೧೯ ಬಾಂಬೆ ೬೮೦ (೬೮೬) ೧ ಎಮ್.ಆಯ್.ಎ.*

*೧೭೫: ೨೭೧–* ಇದನ್ನು ಅನುಸರಿಸಿ

### ಸ್ಟ್ಯಾಂಪು ಅಧಿನಿಯಮದಂತಹ ಕಾನೂನುಗಳು

ಭಾರತೀಯ ಶಾಸನದಿಂದ ಪಾಸಾಗಿರುವವುಗಳನ್ನು ಅನೇಕ ಪ್ರದೇಶಗಳು ಬ್ರಿಟಿಶರ ಆಡಳಿತದಲ್ಲಿ ಇರುವುದರಿಂದ ಅವು ಬ್ರಿಟಿಷ್ ಇಂಡಿಯಾದ ಹೊರಗಡೆ ಇದ್ದರೂ ಆ ಪ್ರದೇಶಗಳಿಗೆ ಈ ಕಾನೂನುಗಳನ್ನು ವಿಸ್ತರಿಸಲಾಗಿದೆ. (ಉದಾ: ಬೆಂಗಳೂರು, ಹೈದ್ರಾಬಾದ್‌ಗಳ ನಿಗದಿತ ಜಿಲ್ಲೆಗಳು, ಬರೋಡಾ ಕಂಟೋನ್‌ಮೆಂಟ್, ದಂಡಾಳಿತ ಪ್ರದೇಶ, ಮೌಂಟ್ ಅಬು ಮುಂತಾದವುಗಳು) ವಿದೇಶಿ ಅಧಿಕಾರ ವ್ಯಾಪ್ತಿ ಮತ್ತು ಪ್ರತ್ಯರ್ಪಣ ಅಧಿನಿಯಮ ೧೮೭೯ರ ಅನ್ವಯ ಕಲಮು ೪ ಮತ್ತು ೫ರ ಅನ್ವಯ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಮತ್ತು ಭಾರತ (ವಿದೇಶಿ ಅಧಿಕಾರ ವ್ಯಾಪ್ತಿ) ಆರ್ಡರ್–ಇನ್–ಕೌನ್ಸಿಲ್ ೧೯೦೨ ಇವುಗಳ ಅನ್ವಯ ಅಧಿಸೂಚನೆ ಹೊರಡಿಸುವ ಮೂಲಕ.

### ಒತ್ತೆ (ಅಡಮಾನ) ಹಾಕುವ (ಕೊಡುವ) ಮತ್ತು ತೆಗೆದುಕೊಳ್ಳುವ ಸಾಮರ್ಥ್ಯತೆಯು

೧. ಒಂದು ಒತ್ತೆಯ (ಅಡಮಾನವು) ಒಂದು ಆಸ್ತಿಯ ಹಸ್ತಾಂತರವಾಗಿರುತ್ತದೆ ಮತ್ತು ಇದೊಂದು

ಒಪ್ಪಂದದ ಕರಾರು ಆಗಿರುತ್ತದೆ. ಆದ್ದರಿಂದ ಇದು ಅವಶ್ಯಕತೆಗಳಾದ ಅಂಥ ಒಂದು ಕಾನೂನುಬದ್ಧವಾದ ಆಸ್ತಿಯ ಹಸ್ತಾಂತರದ ಒಪ್ಪಂದದ ಕರಾರಿನ ಪ್ರಕಾರ ಇರಬೇಕೆಂದು ಹೇಳುವ ಸಾಮರ್ಥ್ಯವು ಇದರಲ್ಲಿ ಇರಲಿಕ್ಕೇಬೇಕು.

**ಸಾಮರ್ಥ್ಯದ ಬಗ್ಗೆ ಅವಶ್ಯಕತೆಗಳು: ಕಾನೂನುಬದ್ಧ ಆಸ್ತಿಯ ಹಸ್ತಾಂತರ**

೧. ಆಸ್ತಿಯ ಹಸ್ತಾಂತರವೆಂದರೆ ಒಬ್ಬ ಜೀವಂತ ವ್ಯಕ್ತಿಯು ತನ್ನ ಆಸ್ತಿಯನ್ನು ಒಬ್ಬನಿಗೆ ಇಲ್ಲವೆ ಒಬ್ಬನಿಗಿಂತ ಹೆಚ್ಚು ಜೀವಂತ ಇರುವ ವ್ಯಕ್ತಿಗಳಿಗೆ ಅವನು ಇಲ್ಲವೆ ಅವಳು ತನ್ನಷ್ಟಕ್ಕೆ ಒಂದು ದಸ್ತಾವೇಜಿನ ಮೂಲಕ ಒಬ್ಬನಿಗೆ ಇಲ್ಲವೆ ಹೆಚ್ಚಿನ ಜೀವಂತ ಇರುವ ವ್ಯಕ್ತಿಗಳಿಗೆ ಬರೆದುಕೊಡುವ ಒಂದು ಕೃತಿಯಾಗಿರುತ್ತದೆ.

೨. ಒತ್ತೆಯು (ಅಡಮಾನ) ಆಸ್ತಿಯನ್ನು ಹಸ್ತಾಂತರಿಸುವ ಒಂದು ಕೃತಿಯಾಗಿರುತ್ತದೆ. ಈ ಕೃತಿಗೆ ಪಕ್ಷಗಾರರಾದವರು ಜೀವಂತವಾಗಿ ಇರಲಿಕ್ಕೇಬೇಕು.

೩. ಇಬ್ಬರೂ ಪಕ್ಷಗಾರರು ಜೀವಂತ ಇರಬೇಕೆಂದು ಹೇಳಲಾಗಿರುವುದರ ಉದ್ದೇಶವು ಎರಡು ವಿಭಿನ್ನತೆಯನ್ನು ಸ್ಪಷ್ಟಪಡಿಸುತ್ತದೆ.

(i) ಒಬ್ಬನು ತನ್ನ ಜೀವಂತ ಕಾಲದಲ್ಲಿಯೇ ಆಸ್ತಿಯ ಹಸ್ತಾಂತರ ಮಾಡುವುದು,

(ii) ಮತ್ತು ಮೃತ್ಯುಪತ್ರದ ಮುಖಾಂತರ ವರ್ಗಾಯಿಸುವ ಮತ್ತು ಒಂದು ಹಿತಾಸಕ್ತಿಯನ್ನು ಸೃಷ್ಟಿಸುವುದು (ವಿಭಾಗ ೧೩, ೧೪, ೧೬ ಮತ್ತು ೨೦).

೪. ಒಂದು ಮೃತ್ಯುಪತ್ರವು ಆ ಮೃತ್ಯುಪತ್ರ ಬರೆದುಕೊಟ್ಟವನ (ಮರಣ ಶಾಸನಕರ್ತನ) ಮರಣದಿಂದ ಜಾರಿಯಲ್ಲಿ ಬರುತ್ತದೆ. ಒಂದು ಒತ್ತೆಯನ್ನು (ಅಡಮಾನವನ್ನು) ಒಂದು ಮೃತ್ಯುಪತ್ರದಿಂದ ಸೃಷ್ಟಿಸಲು ಬರುವುದಿಲ್ಲ. ಆದ್ದರಿಂದ ಅದನ್ನು ಇಬ್ಬರೂ ಜೀವಂತ ಇರುವಾಗಲೇ ಮಾಡಲಿಕ್ಕೇಬೇಕು. ಒಂದು ಮೃತ್ಯುಪತ್ರವು ಇಬ್ಬರು ಜೀವಂತ ವ್ಯಕ್ತಿಗಳ ನಡುವಣ ಒಂದು ವ್ಯವಹಾರವಾಗಿ ಪರಿಣಾಮ ಬೀರುವುದಿಲ್ಲ.

೫. ಒಂದು ಒತ್ತೆ (ಅಡಮಾನ) ಎಂದರೆ ಒಂದು ಹಿತಾಸಕ್ತಿಯನ್ನು ವರ್ಗಾಯಿಸುವುದಾಗಿರುತ್ತದೆ. ಕಲಮು ೧೩, ೧೪, ೧೬, ೨೦ ಈ ಕಲಮು ವರ್ಗಾಯಿಸುವ ದಿನಾಂಕದಂದು ಅಸ್ತಿತ್ವದಲ್ಲಿರುವ ಒಬ್ಬ ವ್ಯಕ್ತಿಯ ಹೆಸರಿನಿಂದ ಒಂದು ಹಿತಾಸಕ್ತಿಯನ್ನು ವರ್ಗಾಯಿಸಲು ಪರವಾನಗಿ ಕೊಡುತ್ತದೆ. ಆದರೆ ಒತ್ತೆ(ಅಡಮಾನ)ಯು ಒಂದು ಹಿತಾಸಕ್ತಿಯನ್ನು ಸೃಷ್ಟಿಸುವುದಿಲ್ಲ. ಆದರೆ ಒಂದು ಹಿತಾಸಕ್ತಿಯನ್ನು ವರ್ಗಾಯಿಸುವುದು.

**ಜೀವಂತ ಇರುವ**

೧. ಜೀವಂತ ಇರುವ ಈ ಶಬ್ದದ ಅರ್ಥವೇನು? ಯಾವನು ಸ್ವಾಭಾವಿಕ ಮರಣವನ್ನು ಅನುಭವಿಸಿರುವುದಿಲ್ಲವೋ ಅವನು, ಅಥವಾ ಅದರ ಅರ್ಥವು ವ್ಯಾವಹಾರಿಕ ಮರಣವನ್ನು ಅನುಭವಿಸುತ್ತಿರುವುದಿಲ್ಲ ಎಂದು ಅರ್ಥವಾಗುವುದೇ? ಒಬ್ಬನಿಗೆ ವ್ಯಾವಹಾರಿಕ ಮರಣ ಆದಾಗ್ಯೂ ಅವನಿಗೆ ಸ್ವಾಭಾವಿಕ ಮರಣವಿಲ್ಲದೆ ಇರಬಹುದು.

ಉದಾ:

ಬೌದ್ಧ ಸನ್ಯಾಸಿ.

ಒಬ್ಬನು ಜಗತ್ತಿನ ಕಾರ್ಯಕಲಾಪಗಳನ್ನು ತ್ಯಜಿಸಿ ಸನ್ಯಾಸ ಆಶ್ರಮ ಕೈಕೊಂಡರೆ ಅವನ ಕೃತಿಯು ವ್ಯಾವಹಾರಿಕ ಮರಣವಾಗಿ ಮಾರ್ಪಡುತ್ತದೆ.

ಉದಾ:

ಸನ್ಯಾಸಿ – ಮುಲ್ಲಾ, *ಪುಟ ೧೧೩*

ಬೌದ್ಧ ಸನ್ಯಾಸಿ – *೭ ರಂಗೂನ ೬೭೭* ಐ.ಬಿ.

*೨.* ಒಬ್ಬನು ವ್ಯವಹಾರಿಕ ಮರಣ ಹೊಂದಿದರೆ ಟಿ.ಪಿ. ಅಧಿನಿಯಮದ ಆಸ್ತಿಯ ಹಸ್ತಾಂತರ ಅಧಿನಿಯಮದ ಉದ್ದೇಶಕ್ಕಾಗಿ ಅವನು ಸತ್ತಿರುವುದಿಲ್ಲ.

೩. ಭಾರತ ದಂಡ ಸಂಹಿತೆ (ಅಯ್.ಪಿ.ಸಿ.) ಕಲಮು ೨೯೯, ವಿವರಣೆ ೩ ಇದರಲ್ಲಿ ಜೀವಂತ ಇರು ಎನ್ನುವುದಕ್ಕೆ ವ್ಯಾಖ್ಯೆಯನ್ನು ಕೊಡಲಾಗಿದೆ. ದೇಹದ ಕೆಲವು ಭಾಗಗಳನ್ನು ಹಿಡಿದು ತರುವುದನ್ನು ಇದು ಸೂಚಿಸುತ್ತದೆಯೇ? ಆದರೆ ಹಿಂದೂ ಕಾನೂನಿನಲ್ಲಿ ಒಂದು ಗಂಡುಕೂಸು ಗರ್ಭದಲ್ಲಿದ್ದರೆ ಆ ಕೂಸು ಜೀವಂತ ಮಗನಿಗೆ ಸಮಾನವೆಂದು ಹೇಳಲಾಗಿದೆ. ಮುಲ್ಲಾ – ಪುಟ ೩೭೯, ಹಿಂದೂ ಕಾನೂನಿನ ಪ್ರಕಾರ ಒಬ್ಬನು ಜೀವಂತ ಮನುಷ್ಯನಾಗಿರಬಹುದು. ಆದರೆ, ಟಿ.ಪಿ. ಅಧಿನಿಯಮದ ಅನ್ವಯ (ಆಸ್ತಿಯ ಹಸ್ತಾಂತರ ಕಾನೂನಿನ) ಉದ್ದೇಶಕ್ಕಾಗಿ ಹಾಗೆ ಇರುವುದಿಲ್ಲ.

*೧೬ ಮದ್ರಾಸ್ ೭೬:೩೭ ಅಲಹಾ ೧೬೨, ೫೮ ಮದ್ರಾ. ೮೮೬*[೧]

೪. ಇನ್ನೊಂದು ಪ್ರಕರಣದಲ್ಲಿ ಒಬ್ಬ ಶಿಕ್ಷೆಗೊಳಗಾದವನ ಸ್ಥಾನದಲ್ಲಿರುವವನು ಇಂಗ್ಲಿಷ್ ಕಾನೂನಿನ ಅನ್ವಯ ಒಂದು ಕರಾರು ಒಪ್ಪಂದ ಮಾಡಿಕೊಳ್ಳಲು ಬರುವುದಿಲ್ಲ. ಇಲ್ಲವೆ ತನ್ನ ಆಸ್ತಿಯನ್ನು ಹಸ್ತಾಂತರ ಮಾಡಲಾರನು ಮತ್ತು ಎರವಲು ಕೊಡುವ ಅಧಿಕಾರ ಅವನಿಗೆ ಇರುವುದಿಲ್ಲ. ಇಲ್ಲವೆ ಒತ್ತೆಯ ಮೇಲೆ ಹಣವನ್ನು ಎರವಲು ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಆ ಶಿಕ್ಷೆಗೊಳಗಾದವನ ಆಡಳಿತಗಾರನು ಆ ಶಿಕ್ಷೆಗೆ ಒಳಗಾದವನ ಆಸ್ತಿಯ ಯಾವುದೇ ಭಾಗವನ್ನು ಒತ್ತೆ (ಅಡಮಾನ) ಹಾಕಬಹುದು. ಸ್ವತ್ತಿನ ಮುಟ್ಟುಗೋಲು ಹಾಕುವ ಅಧಿನಿಯಮದ ಕಲಮು ೬ ಮತ್ತು ೩೪ ಸಿಎಚ್ ೨೩, ೧೮೭೦ ಅಂದರೆ ಇಂಗ್ಲೆಂಡ್‌ದಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಮರಣ ಶಿಕ್ಷೆಯ ತೀರ್ಪನ್ನು ಕೊಡಲಾಗಿದೆಯೋ ಇಲ್ಲವೆ ಯಾವುದೇ ಅಧಿಕಾರ ವ್ಯಾಪ್ತಿಯುಳ್ಳ ಯೋಗ್ಯ ನ್ಯಾಯಾಲಯವು ದಂಡ ರೂಪದ ಶಿಕ್ಷೆಗೊಳಗಾದವನೆಂದು ನ್ಯಾಯಾಲಯವು ಹೇಳಿ ಆ ಬಗ್ಗೆ ನಮೂದಿಸಿದ್ದರೆ ಅಂಥವನಿಗೆ ಶಿಕ್ಷೆಯಾಗಿದೆ ಎಂದು ಹೇಳಲಾಗುತ್ತದೆ. ವೇಲ್ಸ್ ಇಲ್ಲವೆ ಐರ್‌ಲ್ಯಾಂಡ್‌ನಲ್ಲಿ ರಾಜದ್ರೋಹದ ಇಲ್ಲವೆ ಘೋರ ಅಪರಾಧದ ಯಾವುದೇ ದೋಷಾರೋಪಣೆಗೆ ಗುರಿಯಾಗಿ ಶಿಕ್ಷೆ ಹೊಂದಿದವನು ಎಂದು ಅರ್ಥವಾಗುತ್ತದೆ.

೫. ಭಾರತದಲ್ಲಿ ಶಿಕ್ಷೆಯಾದವನ ಸ್ಥಾನಮಾನವೇನು?

* (ಹಸ್ತಪ್ರತಿಯಲ್ಲಿ ಈ ಪುಟವು ಖಾಲಿ ಇದೆ –ಸಂ)

---

೧. ಬ್ರಿಟಿಷ್ ಕಾನೂನಿನಲ್ಲಿ ಸಹ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ (*en ventre*) ಗಂಡು ಮಗುವನ್ನು ಕೂಡ ಜೀವಂತ ವ್ಯಕ್ತಿಯೆಂದು ಪರಿಗಣಿಸಲಾಗುತ್ತದೆ. ಇದಕ್ಕೆ ಉಲ್ಲೇಖಿಸಲಾದ ಪ್ರಕರಣಗಳು

*(೧೯೦೩) ೨ ಸಿಎಚ್ ೪೧೧*

*(೧೯೦೯) ೧ ಕೆ.ಬಿ. ೧೭೮*

*(೧೯೦೭) ೨ ಕೆ.ಬಿ. ೪೨೨*

*(೧೯೨೬) ೯೬ ಎಲ್.ಐ.ಕೆ.ಬಿ. ೨೫೦*

*ಕಂಟ್ರಾ ೧೦. ಲಾಹೋರ್ ೭೧೩.*

## ವ್ಯಕ್ತಿ

೧. ಸಾಮಾನ್ಯ ಖಂಡಗಳ ಅಧಿನಿಯಮದ ಅನ್ವಯ 'ವ್ಯಕ್ತಿ' ಈ ಪದವು ಯಾವುದೆ ಕಂಪನಿ ಇಲ್ಲವೆ ಸಂಘ ಇಲ್ಲವೆ ಕೆಲವು ವ್ಯಕ್ತಿಗಳ ಸಮೂಹ. ಅದನ್ನು ನಿಯಮಿತಗೊಳಿಸಿರಲಿ ಇಲ್ಲವೆ ನಿಯಮಿತಗೊಳಿಸಿರದಿರಲಿ ಅವರೆಲ್ಲರನ್ನೂ ಒಳಗೊಳ್ಳುತ್ತದೆ.

೨. 'ವ್ಯಕ್ತಿ' ಈ ಪದವು 'ನ್ಯಾಯಿಕ ವ್ಯಕ್ತಿ'ಯಂತಹ ಕಾರ್ಪೊರೇಷನ್ ನಿಗಮ ಎಂದು ಬಹು ಹಿಂದೆಯೇ ಒಪ್ಪಿಕೊಂಡ ಅಭಿಪ್ರಾಯವಾಗಿದೆ. ಆದರೆ ಈಗ ಒಂದು ವಿಶೇಷ ಪರಂತುಕದ ಮೂಲಕ ಟಿ.ಪಿ. ಅಧಿನಿಯಮ, ಆಸ್ತಿ ಹಸ್ತಾಂತರ ಅಧಿನಿಯಮ ಇದಕ್ಕೆ ೧೯೨೯ರಲ್ಲಿ ಕಲಮು ೫ ಇದನ್ನು ಕೂಡಿಸುವುದರಿಂದ ಸ್ಪಷ್ಟವಾಗಿದೆ.

೩. ಯಾವುದೇ ಒಂದು ನಿಗಮಕ್ಕೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಮತ್ತು ಅದನ್ನು ಹೊಂದುವ ಅಧಿಕಾರವು ಅದರ ಅಂತರ್ಗತ ಅರ್ಥದಲ್ಲಿ ಅದರ ಉದ್ದೇಶವನ್ನು ಈಡೇರಿಸಿಕೊಂಡು ಹೋಗುವುದಕ್ಕಾಗಿ ಅಂದರೆ ಯಾವ ಉದ್ದೇಶಕ್ಕಾಗಿ ಅದನ್ನು ರಚಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಅದನ್ನು ಒತ್ತೆ (ಅಡಮಾನ) ಹಾಕಬಹುದು. ಶಾಸನಬದ್ಧ ನಿಗಮದ ಅಧಿಕಾರವು ಸಾಮಾನ್ಯವಾಗಿ ಹೇಳುವುದಾದರೆ ನಿಯಮಿತಗೊಳಿಸಿದ ಅಧಿನಿಯಮದ ಅನ್ವಯ ನಿಯಂತ್ರಿಸಲ್ಪಡುತ್ತದೆ. ಆದರೆ ಆ ನಿಗಮಕ್ಕೆ ಯಾವಾಗ ಸಾಲ ತೆಗೆದುಕೊಳ್ಳುವುದು ಅವಶ್ಯವಿದೆಯೋ ಆಗ ಟಿ.ಪಿ. ಅಧಿನಿಯಮ ಆಸ್ತಿ ಹಸ್ತಾಂತರವನ್ನು ಕಾನೂನಿನ ಮೂಲಕ ನಿಷೇಧಿಸಿಲ್ಲ. ಏಕೆಂದರೆ ಇದು ಒಂದು 'ವ್ಯಕ್ತಿ'ಯಾಗಿದೆ.

೪. ಹಿಂದೂ ಕಾನೂನಿನ ಅನ್ವಯ ಒಂದು ದೇವತಾಮೂರ್ತಿಯು 'ನ್ಯಾಯಿಕ ವ್ಯಕ್ತಿ'ಯಾಗಿದ್ದು, ಅದು ಆಸ್ತಿಯನ್ನು ಹೊಂದಲು ಸಮರ್ಥವಾಗಿದೆ.

೩೧ ಐ.ಎ. ೨೦೩

ಆದರೆ ಆ ದೇವತಾ ಮೂರ್ತಿಯ ಆಸ್ತಿಯ ಕಬ್ಜೆ ಮತ್ತು ವ್ಯವಸ್ಥೆಯು ಆ ಸಭಾಹಿತದಲ್ಲಿ ವಿಹಿತವಾಗಿರುತ್ತದೆ. ಆದರೆ ಮಾಲೀಕತ್ವವು ದೇವತಾಮೂರ್ತಿಯದಾಗಿರುತ್ತದೆ. ಮತ್ತು ದೇವತಾಮೂರ್ತಿಯು ನ್ಯಾಯಿಕ ವ್ಯಕ್ತಿಯಾಗಿದ್ದುದರಿಂದ ಅದು ಒಂದು ಜೀವಂತ ವ್ಯಕ್ತಿಯಾಗಿರುತ್ತದೆ. ಆದ್ದರಿಂದ ಅದು ಒಂದು ಒತ್ತೆ(ಅಡಮಾನ)ಗೆ ಪಕ್ಷಗಾರನಾಗಬಲ್ಲದು.

## ಒಂದು ಕರಾರು ಒಪ್ಪಂದದ ಸಾಮರ್ಥ್ಯಕ್ಕೆ ಬೇಕಾದ ಅವಶ್ಯಕತೆಗಳು

೧. ಇದನ್ನು ಕಲಮು ೭ರಲ್ಲಿ ಚರ್ಚಿಸಲಾಗಿದೆ. ಕಲಮು ೭ರಲ್ಲಿ ಎರಡು ಸಂಗತಿಗಳ ಅವಶ್ಯಕತೆಯು ಇರುತ್ತದೆ.

(i) ಆ ವ್ಯಕ್ತಿಗೆ ಒಂದು ಕರಾರು ಒಪ್ಪಂದ ಮಾಡಲಿಕ್ಕೆ ಸಾಮರ್ಥ್ಯವಿರಲಿಕ್ಕೇಬೇಕು.

(ii) ಆ ವ್ಯಕ್ತಿಗೆ ಆಸ್ತಿಯನ್ನು ಹಸ್ತಾಂತರಿಸುವ ಅಧಿಕಾರ ಇರಲಿಕ್ಕೇಬೇಕು. ಇಲ್ಲವೆ ಹಸ್ತಾಂತರಿಸಲು ಬರುವ ಆಸ್ತಿಯನ್ನು ವಿಲೇಮಾಡಲು ಅಧಿಕಾರ ಹೊಂದಿರಬೇಕು.

### (೧) ಒಂದು ಕರಾರು ಒಪ್ಪಂದಕ್ಕೆ ಕ್ಷಮತೆ

೧. ಟಿ.ಪಿ. ಅಧಿನಿಯಮ(ಆಸ್ತಿ ಹಸ್ತಾಂತರ ಅಧಿನಿಯಮ)ದ ಅಧ್ಯಾಯ ಮತ್ತು ಕಲಮು ೪, ಇದು ಒಪ್ಪಂದಕ್ಕೆ ಸಂಬಂಧಿಸಿದಂತೆ ಹೇಳುವುದೇನೆಂದರೆ ಇದನ್ನು ಭಾರತ ಕರಾರು ಒಪ್ಪಂದದ ಅಧಿನಿಯಮದ ಒಂದು ಭಾಗವೆಂದು ಪರಿಗಣಿಸಬೇಕು.

೨. ಕರಾರು ಒಪ್ಪಂದ ಮಾಡಿಕೊಳ್ಳಲು ಕ್ಷಮತೆಯು ಇರಲಿಕ್ಕೇಬೇಕು. ಅಂದರೆ ಕ್ಷಮತೆ ಭಾರತ ಒಪ್ಪಂದ ಕರಾರಿನ ಅಧಿನಿಯಮದ ಅನ್ವಯ ಇರಬೇಕು.

ಕಲಮು ೧೧ರ ಅನ್ವಯ ಒಂದು ಒಪ್ಪಂದ ಕರಾರು ಮಾಡಿಕೊಳ್ಳಲು ಪ್ರತಿಯೊಬ್ಬ ವಯಸ್ಕನು ಕಾನೂನಿನ ಅನ್ವಯ ಅವನು ಯಾವ ರಾಷ್ಟ್ರದ ಪ್ರಜೆಯಾಗಿರುವನೋ ಮತ್ತು ಯಾರು ಸ್ವಸ್ಥಚಿತ್ತದವನು ಮತ್ತು ಯಾರು ಒಂದು ಕರಾರು ಒಪ್ಪಂದ ಮಾಡಿಕೊಳ್ಳಲು ಅನರ್ಹನಲ್ಲವೆಂದು ಯಾವುದೇ ಕಾನೂನಿನ ಅನ್ವಯ ಅವನು ಯಾವ ರಾಷ್ಟ್ರದ ಪ್ರಜೆಯಾಗಿರುವನೋ ಅದರ ಕಾನೂನಿನಂತೆ ಘೋಷಿಸಲ್ಪಟ್ಟಿರುವವನು ಅರ್ಹನಾಗಿರುತ್ತಾನೆ.

೩. ಒಬ್ಬ ದಿವಾಳಿಯಾದವನ ಅನರ್ಹತೆಗಳು.

ಒಬ್ಬ ದಿವಾಳಿಯಾದವನು ನಂತರ ಯಾವುದೇ ಆಸ್ತಿ ಹೊಂದಿದ್ದರೆ, ಆ ಆಸ್ತಿ ಕುರಿತು ಅವನಿಗೆ ಇರುವ ಅಧಿಕಾರ; ಕ್ಷಮತೆಯನ್ನು ಕುರಿತು ಒಂದು ಮಾತನ್ನು ಹೇಳಬಹುದು. ಈಗ ಇದು ನಿರ್ಧರಿತ ಕಾನೂನು ಆಗಿರುತ್ತದೆ. ಅದೆಂದರೆ ಯಾವ ದಿವಾಳಿಕೋರನು ತನ್ನ ಅಂತಿಮ ವಿಮೋಚನೆಯನ್ನು ಪಡೆದಿರುವುದಿಲ್ಲವೋ ಅಂತಹವನು ತಾನು ನಂತರ ಹೊಂದಿದ, ಆರ್ಜಿಸಿದ ಸ್ಥಿರ ಆಸ್ತಿಯನ್ನು ಒತ್ತೆ (ಅಡಮಾನ) ಮಾಡಲಿಕ್ಕೆ ಅಧಿಕಾರ ಹೊಂದಿರುವುದಿಲ್ಲ.

*೧೭ ಮದ್ರಾಸ್ ೨೧ (ಆದರೆ ೮ ಕಲ್ಕತ್ತ, ೫೫೬ ನೋಡಿರಿ)*

**ಹಕ್ಕುಳ್ಳವನು**

೧. ಪ್ರಶ್ನೆಯೆಂದರೆ, ಹಕ್ಕುಳ್ಳವನು ಅಂದರೆ, ಅದರ ಸಂಪೂರ್ಣ ಮಾಲೀಕನಾಗಿ ಹಕ್ಕುಳ್ಳವನು ಇಲ್ಲವೆ ಸೀಮಿತ ಮಾಲೀಕನೆಂದೇ ಆಗಿರುತ್ತದೆ.

೨. ಸಂಪೂರ್ಣ ಮಾಲೀಕನಿಗೆ ಅದನ್ನು ಒತ್ತೆ (ಅಡಮಾನ) ಹಾಕುವ ಹಕ್ಕು ಇರುತ್ತದೆಂಬುದು ಸ್ಪಷ್ಟವಾಗಿರುತ್ತದೆ. ಆದರೆ ಸೀಮಿತ ಮಾಲೀಕನಿಗೆ ಒತ್ತೆ ಹಾಕುವ (ಅಡವು ಇಡುವ) ಅಧಿಕಾರವಿದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

೩. ಒಬ್ಬ ಧರ್ಮದರ್ಶಿಯಾಗಿ ಒಂದು ಆಸ್ತಿಯನ್ನು ಮಾರಾಟ ಮಾಡಲು ವ್ಯಕ್ತಪಡಿಸಿದರೆ ಅಧಿಕಾರವಿಲ್ಲದೆ ಒತ್ತೆ ಹಾಕುವುದು.

ಸಾಮಾನ್ಯವಾಗಿ ನಾವು ಇದನ್ನು ಹೀಗೆ ಹೇಳಬಹುದು. ಮಾರಾಟಕ್ಕಾಗಿ ಒಬ್ಬನು ಧರ್ಮದರ್ಶಿಯಾಗಿ ಒಂದು ನ್ಯಾಸದ ಆಸ್ತಿಯನ್ನು ಹೊಂದಿದ್ದು, ಅದನ್ನು ಸಂಪೂರ್ಣವಾಗಿ ಖರೀದಿಯನ್ನಾಗಿ ಪರಿವರ್ತಿಸುವ ನಿರ್ದೇಶನವನ್ನು ಹೊಂದಿರುತ್ತಾನೆ. ಆದರೆ ಒತ್ತೆ ಹಾಕುವ (ಅಡಮಾನ ಇಡುವ) ಅಧಿಕಾರವನ್ನು ಅವನಿಗೆ ಕೊಟ್ಟಿರುವುದಿಲ್ಲ.

೪. ಪಾಲುಗಾರ– ಒಬ್ಬ ಪಾಲುಗಾರನು ಪಾಲುಗಾರಿಕೆಯ ಆಸ್ತಿಯನ್ನು ಪಾಲುಗಾರಿಕೆಯ ಸಾಲಕ್ಕಾಗಿ ಒತ್ತೆ (ಅಡಮಾನ) ಹಾಕಬಲ್ಲನು.

೫. ಕಾರ್ಯನಿರ್ವಾಹಕನು ಇಲ್ಲವೆ ಆಡಳಿತಗಾರನು ಭಾರತೀಯ ವಾರಸಾ ಅಧಿನಿಯಮ ಅನ್ವಯ ಹಸ್ತಾಂತರಿಸಲು ಅಧಿಕಾರ ಹೊಂದಿರುತ್ತಾನೆ.

೬. ಹಿಂದೂ ವಿಧವೆ, ಒಂದು ಹಿಂದೂ ಅವಿಭಕ್ತ ಕುಟುಂಬದ ಸದಸ್ಯ ಮತ್ತು ಹಿಂದೂ ಅವಿಭಕ್ತ ಕುಟುಂಬದ ಕರ್ತ, ಹಿಂದೂ ಧಾರ್ಮಿಕ ದತ್ತಿಗಳ ಧರ್ಮದರ್ಶಿಗಳು.

೭. ಕೊನೆಯ ಇಬ್ಬರಿಗೆ ಈ ಅಧಿಕಾರವಿದೆ ಮತ್ತು ಅದರ ಅವಶ್ಯಕತೆಯೂ ಇದೆ.

## ಹಸ್ತಾಂತರಿಸಬಲ್ಲ ಆಸ್ತಿ

೧. ಒಬ್ಬನು ಆಸ್ತಿಯ ಸಂಪೂರ್ಣ ಮಾಲೀಕತ್ವವನ್ನು ಹೊಂದಿರಲಿ, ಇಲ್ಲವೆ ಸೀಮಿತ ಮಾಲೀಕತ್ವವನ್ನು ಹೊಂದಿರಲಿ, ಅಂತಹ ಆಸ್ತಿಯ ಹಸ್ತಾಂತರಿಸಲಿಕ್ಕೆ ಬರುವಂತಹದಾಗಿರಲಿಕ್ಕೇಬೇಕು.

೨. ಹಸ್ತಾಂತರಿಸಲು ಬರುವಂತಹ ಆಸ್ತಿಯು ಯಾವುದು?

(i) ಕಲಮು ೬ ಹೇಳುವುದೇನೆಂದರೆ– ಯಾವುದೇ ರೀತಿಯ ಆಸ್ತಿಯನ್ನು ಹಸ್ತಾಂತರಿಸಬಹುದು. ಆದರೆ, ಈ ಅಧಿನಿಯಮದ ಅನ್ವಯ ಬೇರೆ ರೀತಿಯಲ್ಲಿ ಉಪಬಂಧಿಸಿದ, ಹೊರತುಪಡಿಸಿದ ಇಲ್ಲವೆ ಬೇರೆ ಅಧಿನಿಯಮದ ಅನ್ವಯ ಉಪಬಂಧಿಸಿದ್ದನ್ನು ಹೊರತುಪಡಿಸಿದ್ದು, ಕಾನೂನಿನಿಂದ ನಿಷೇಧಿಸಲ್ಪಡದಿದ್ದರೆ ಎಲ್ಲ ರೀತಿಯ ಆಸ್ತಿಗಳು ಹಸ್ತಾಂತರಿಸಲು ಬರುವಂತಹವು ಆಗಿರುತ್ತವೆ.

(ii) ಈ ಅಪವಾದಗಳು ಎರಡು ವರ್ಗಗಳಲ್ಲಿ ಬರುತ್ತವೆ.

(ಅ) ಕೇವಲ ವೈಯಕ್ತಿಕ ಹಕ್ಕುಗಳನ್ನು ಹಸ್ತಾಂತರಿಸಲು ಬರಲಾರದು.

(ಬ) ಆಸ್ತಿಯಲ್ಲಿಯ ಒಂದು ಹಿತಾಸಕ್ತಿಯ ಅದರ ಮಾಲಿಕನಿಗೆ ವೈಯಕ್ತಿಕ ಸೀಮಿತ ಉಪಯೋಗವಿದ್ದರೆ ಅದನ್ನು ವರ್ಗಾಯಿಸಲು ಬರಲಾರದು.

೩. ಚರ ವಸ್ತುಗಳನ್ನು ಸಹ ಒತ್ತೆ (ಅಡಮಾನ) ಇಡಬಹುದೆಂದು ಇದು ತೋರಿಸುತ್ತದೆ. ಟಿ.ಪಿ. (ಆಸ್ತಿಯ ಹಸ್ತಾಂತರ) ಅಧಿನಿಯಮ ಈ ವಿಷಯವನ್ನು ಕುರಿತು ಪರಿಗಣಿಸುವುದಿಲ್ಲ. ಏಕೆಂದರೆ ಕರಾರು ಒಪ್ಪಂದವು ಇದನ್ನು ಒತ್ತೆ ಎಂದು ಪರಿಗಣಿಸುತ್ತದೆ. ಇದನ್ನು ನಿಷೇಧಿಸಲಾಗಿಲ್ಲ.

## ಒಂದು ಒತ್ತೆ (ಅಡಮಾನದ) ದಸ್ತಾವೇಜಿನ ಒಳ ಅಂಶಗಳು

ಅಡಮಾನದ ದಸ್ತಾವೇಜು ಕೆಲವು ನಿರ್ದಿಷ್ಟ ಸಂಗತಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

೧. ಸಾಲ ಇಲ್ಲವೆ ವಚನಬಂಧ ಇವು ಜಾಮೀನಿನ ವಿಷಯಗಳನ್ನು ನಿರ್ದಿಷ್ಟವಾಗಿ ದಸ್ತಾವೇಜಿನಲ್ಲಿ ನಮೂದಿಸತಕ್ಕದ್ದು. ಇಲ್ಲವಾದರೆ, ಆ ಒತ್ತೆ(ಅಡಮಾನವನ್ನು)ಯನ್ನು ಒಂದು ಸಾಲವನ್ನಾಗಿ ಇನ್ನೊಬ್ಬನಿಗೆ ಬದಲಿಸಬಹುದು.

೨. ಹಣ ಕೊಡುವ ವೇಳೆ ಇಲ್ಲವೆ ಕಾರ್ಯಗತಗೊಳಿಸುವ ಇದನ್ನು ನಿರ್ದಿಷ್ಟವಾಗಿ ದಸ್ತಾವೇಜಿನಲ್ಲಿ ಕಾಣಿಸಲಿಕ್ಕೇಬೇಕು. ಒಪ್ಪಂದದಲ್ಲಿಯ ಒಂದು ಕರಾರು ಸಂಪೂರ್ಣ ಹಣವನ್ನು ಕಂತುಗಳ ಮೂಲಕ ಕೊಡಬೇಕೆಂದು ಇರಬಹುದು.

೩. ಆ ದಸ್ತಾವೇಜಿನಲ್ಲಿ ಹಣ ಕೊಡುವ ಒಡಂಬಡಿಕೆಯನ್ನು ಒಳಗೊಂಡಿರತಕ್ಕದ್ದು. ಏಕೆಂದರೆ ಅನೇಕ ರೀತಿಯ (ಒತ್ತೆ) ಅಡಮಾನಗಳು ಇದ್ದು ಯಾವುದರಲ್ಲಿಯೂ ಸಾಲದ ಇಂಗಿತ ಒಳಗೊಂಡಿಲ್ಲ.

೪. ಅಡಮಾನವಿಟ್ಟ (ಒತ್ತೆ ಹಾಕಿದ) ಆಸ್ತಿಯನ್ನು ಸಾಕಷ್ಟು ವಿವರಿಸತಕ್ಕದ್ದು. ಯಾವಾಗಲೂ ವಾಸ್ತವಿಕವಾಗಿ ಆಸ್ತಿಯ ವರ್ಣನೆಯು ಅನಿರ್ದಿಷ್ಟ ಇಲ್ಲವೆ ತಪ್ಪು ವರ್ಣನೆ ಇದ್ದರೆ ಯಾವುದೇ ಆಸ್ತಿಯನ್ನು ಈ ಉದ್ದೇಶಕ್ಕಾಗಿ ಒತ್ತೆ (ಅಡಮಾನ) ಇಟ್ಟಿದ್ದನ್ನು ಗುರುತಿಸಲು ಯಾವಾಗಲೂ ಬಾಹ್ಯ ಸಾಕ್ಷಿಯು ಗ್ರಾಹ್ಯವಾಗಿರುತ್ತದೆ.

ಪ್ರಶ್ನೆ: ಆಸ್ತಿಯ ವಿವರಣೆ ಕೊಡದೆ ಒಬ್ಬ ವ್ಯಕ್ತಿಯ ಆಸ್ತಿಯ ಮೇಲೆ ಒತ್ತೆಯು ಕಾನೂನು ಬದ್ಧವಾದುದೇ?

ಪ್ರಶ್ನೆ: ಸಾಲಗಾರನ ಹತ್ತಿರ ಇದ್ದ ಆಸ್ತಿಗಳನ್ನು ಭೇದವಿಲ್ಲದೆ ಸಾಮಾನ್ಯ ಒತ್ತೆಯನ್ನು ನಮ್ಮ ಕಾನೂನಿನ ಪ್ರಕಾರ ಮಾಡಬಹುದೆ?

೧. ಯಾವುದೇ ಒಂದು ದಸ್ತಾವೇಜಿನಲ್ಲಿ ಸಾಕಷ್ಟು ಯೋಗ್ಯ ಶಬ್ದಗಳನ್ನು ಬಳಸಿ ಸಾಕಷ್ಟು ವರ್ಣನೆ ಕೊಟ್ಟು ಜಾಮೀನು ಕೊಟ್ಟದ್ದನ್ನು ಹಾಗೂ ಸಾಲಗಾರನು ತಾನು ಸಾಲದ ಹಣವನ್ನು ತಿರುಗಿ ಕೊಡಲು ತಪ್ಪಿದರೆ ಆ ಸಾಲದ ಆ ಹಣವನ್ನು ಆ ಸಾಲಗಾರನ ಯಾವತ್ತು ಆಸ್ತಿಯಿಂದ ತಿರುಗಿ ಪಡೆಯಲು ಸ್ವತಂತ್ರನಾಗಿದ್ದಾನೆ.

ನಂತರದ ಪ್ರಕರಣಗಳಲ್ಲಿ ಅವರು ಮಾತ್ರ ಉಳಿದರೆ, ಆ ಸಾಲವನ್ನು ಕೊಟ್ಟವನಿಗೆ ಸಾಮಾನ್ಯ ಸಾಹುಕಾರನ ಹಕ್ಕುಗಳನ್ನು, ಅಂದರೆ ಸಾಲ ತೆಗೆದುಕೊಂಡವನು ಬರೆದುಕೊಟ್ಟ ಆಸ್ತಿಯ ಮೇಲೆ ಯಾವುದೇ ಒತ್ತೆ (ಅಡಮಾನ) ಆಗುವುದಿಲ್ಲ. ಮೊದಲನೆಯ ವರ್ಗದಲ್ಲಿ ಈ ಪ್ರಕರಣವು ಬರುತ್ತದೆಂದು ತಿಳಿಯಿರಿ. ಇಂತಹ ಆಧಾರ ಮಾಡುವುದು ಒತ್ತೆ ಅಡಮಾನವನ್ನು ಉಂಟುಮಾಡುವುದೇ? ಭಾರತದಲ್ಲಿ ಇಂತಹ ಜಾಮೀನುಗಳ ಕಾನೂನುಬದ್ಧತೆಯು ಸಾಮಾನ್ಯವಾಗಿ ಇಂತಹ ಆಧಾರಗಳು ಜಾರಿಗೊಳಿಸಲು ಬಹಳ ಅಸ್ಪಷ್ಟವಾಗಿರುತ್ತವೆ ಎಂಬ ಕಾರಣದ ಮೇಲೆ ಪ್ರಶ್ನಿಸಲಾಗಿದೆ.

೧. ಇಂತಹ ಆಧಾರಗಳು ನೈತಿಕ ತತ್ವಗಳಿಗೆ ವಿರೋಧವಾಗಿವೆ. ಒಂದು ಕರಾರು ನಿರ್ದಿಷ್ಟವಾದುದು ಮತ್ತು ನಂಬಲರ್ಹವಾಗಿರಬೇಕು. ಕರಾರು ಅಧಿನಿಯಮದ ಕಲಮು ೨೯ರ ಅನ್ವಯ ಮತ್ತು ಭಾರತ ಸಾಕ್ಷ್ಯ ಅಧಿನಿಯಮದ ಕಲಮು ೯೩ರ ಅನ್ವಯ ನಂಬಿಕೆ ಇಡಲು ಬರುವಂತಹದ್ದು ಇರಬೇಕು.

೨. ಅಸ್ಪಷ್ಟತೆ (ಸಂದಿಗ್ಧತೆ) ತಪ್ಪು ದಾರಿ ತೋರಿಸುತ್ತದೆ. ಅದರ ಅರ್ಥವು ಬಳಸಿದ ಭಾಷೆಯು ಅಸ್ಪಷ್ಟವಾಗಿರುವುದರಿಂದ ಅದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ ಇಲ್ಲವೆ (೨) ಆ ಒಪ್ಪಂದದ ಕರಾರಿನಲ್ಲಿ ಆಸ್ತಿಯು ಯಾವುದಕ್ಕೆ ಸಂಬಂಧಿಸಿದಂತೆಯೋ ಅದನ್ನು ಆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿಲ್ಲ.

೩. ಆದಾಗ್ಯೂ ಅನಿಶ್ಚಿತತೆಯು ಮೇಲಿಂದ ಮೇಲೆ ಹೆಚ್ಚಿನ ಅವಕಾಶಕ್ಕೆ ಭಂಗ ತರುತ್ತದೆ. ಒಂದು ಕರಾರಿನ ವಿಷಯವು ವಿಶಾಲವಾಗಿ ಮತ್ತು ಇನ್ನೂ ನಿರ್ದಿಷ್ಟವಾಗಿರಬಹುದು. ಇದಕ್ಕೆ ವಿರೋಧವಾಗಿ ಇದು ಸಂಕುಚಿತವಾದುದು ಮತ್ತು ಇನ್ನೂ ಅನಿರ್ದಿಷ್ಟವಾಗಿರಬಹುದು. ಒಬ್ಬನು "ನಾನು ನನ್ನ ಜಮೀನಿನ ಎಲ್ಲಾ ಸ್ಥಿರ ಆಸ್ತಿಗಳನ್ನು ಒತ್ತೆ (ಅಡಮಾನ) ಮಾಡುವೆನು" ಎಂದು ಹೇಳಿದರೆ ಇದು ವಿಶಾಲವಾದುದು ಆದರೂ ನಿಶ್ಚಿತವಾದುದು ಆಗಿದೆ.

ಒಬ್ಬ ಮನುಷ್ಯನಿಗೆ ಅನೇಕ ಮನೆಗಳಿವೆ, ಅವನು ನನ್ನ ಮನೆಗಳಲ್ಲಿ ಒಂದು ಮನೆಯನ್ನು ಒತ್ತೆ (ಅಡಮಾನ) ಹಾಕುತ್ತೇನೆ ಎಂದು ಹೇಳಿದರೆ ಅದರ ವರ್ಣನೆಯು ವಿಶಾಲವಾಗಿಲ್ಲ. ಆದರೂ ಅದು ಇನ್ನೂ ಅನಿಶ್ಚಿತವಾಗಿರುತ್ತದೆ.

೪. ಟಿ. ಪಿ. ಅಧಿನಿಯಮದಲ್ಲಿ (ಆಸ್ತಿಯ ಹಸ್ತಾಂತರ ಅಧಿನಿಯಮ)ಯ ಈ ನಿರ್ದಿಷ್ಟ ಪದವನ್ನು ಸಾಮಾನ್ಯ ಪದದಿಂದ ವಿಶಿಷ್ಟವಾಗಿ ಉಪಯೋಗಿಸಲಾಗಿದೆ. ಆಸ್ತಿಯನ್ನು ದಸ್ತಾವೇಜಿನಲ್ಲಿ ನಿರ್ದಿಷ್ಟವಾಗಿ ಕಾಣಿಸದ ಹೊರತು ಕಾನೂನಿನ ದೃಷ್ಟಿಯಲ್ಲಿ ಅದು ಒತ್ತೆ(ಅಡಮಾನವು)ಯಾಗಲಾರದು.

೫. ಯಾವುದೇ ನಿರ್ದಿಷ್ಟ ರೀತಿಯಲ್ಲಿ ಅದನ್ನು ನಮೂದಿಸಲೇಬೇಕೆಂದು ಕಾನೂನಿನಲ್ಲಿ ಹೇಳಿರುವುದಿಲ್ಲ ವಾದರೂ ಆಸ್ತಿಯನ್ನು ನಿರ್ದಿಷ್ಟವಾಗಿ ಕಾಣಿಸಲಿಕ್ಕೇಬೇಕು.

## ವಿಭಾಗ II

# ಅಡಮಾನಿನ (ಒತ್ತೆಯ) ಹಕ್ಕುಗಳು ಮತ್ತು ಹೊಣೆಗಾರಿಕೆಗಳು

### ಪ್ರಸ್ತಾವನೆ

೧. ಅಡಮಾನದ (ಒತ್ತೆಯ) ವಸ್ತುವಾಗಿರುವ ಆಸ್ತಿಯು (ಒತ್ತೆ) ಹಾಕುವವನ ಅಡಮಾನಕಾರನ ಹಾಗೂ ಅಡಮಾನ ಪಡೆದವನ ಹಕ್ಕು ಬಾಧ್ಯತೆಗಳಿಗೆ ಒಳಪಟ್ಟಿವೆ.

೨. ಇಲ್ಲಿ ಎರಡು ಪ್ರಶ್ನೆಗಳನ್ನು ವಿಚಾರಿಸಬೇಕಾಗಿದೆ–

(i) ಅಡಮಾನಕಾರನ ಮತ್ತು ಅಡಮಾನ ಪಡೆದವನ ಹಕ್ಕುಗಳು ಯಾವುವು?

(ii) ಆ ಹಕ್ಕುಗಳ ಸ್ವರೂಪವೇನು?

### ಹಕ್ಕುಗಳ ಸ್ವರೂಪವೇನು

೧. ಬ್ರಿಟಿಷ್ ಕಾನೂನು ವಿಭಾಗಿಸಿರುವಂತೆ, ಅಡಮಾನಕಾರನ ಹಿತಾಸಕ್ತಿಗಳನ್ನು ನ್ಯಾಯಸಮ್ಮತ ಸಂಪದವೆಂದೂ ಆದರೆ ಅಡಮಾನ ಪಡೆದವನ ಹಿತಾಸಕ್ತಿಗಳನ್ನು ಕಾನೂನು ಸಮ್ಮತವೆಂದೂ ಹೇಳಲಾಗುತ್ತದೆ. ಭಾರತೀಯ ಕಾನೂನು ಈ ಕಾನೂನು ಮತ್ತು ನ್ಯಾಯಸಮ್ಮತ ಇವೆರಡರಲ್ಲಿ ಅಂತರ(ವ್ಯತ್ಯಾಸ)ವನ್ನು ಮಾನ್ಯ ಮಾಡುವುದಿಲ್ಲ.

*(೧೯೭೨) ಅಯ್.ಎ.ಸಪ್ಲಿಮೆಂಟ್ ೪೭ (೭೧), ೩೦ ಅಯ್.ಎ. ೨೩೮*

೨. ನ್ಯಾಸ ಅಧಿನಿಯಮದಲ್ಲಿಯೂ ಸಹ ಇಂತಹ ವ್ಯತ್ಯಾಸ(ಅಂತರ)ವನ್ನು ಮಾನ್ಯ ಮಾಡಿಲ್ಲ.

*೫೮ ಅಯ್.ಎ. ೨೭೯*

೩. ಇಬ್ಬರಿಗೂ ಕಾನೂನಿನ ಹಕ್ಕುಗಳು ಇದ್ದು, ಕಾನೂನಿಗೆ ವಿರುದ್ಧ ನ್ಯಾಯ ಸಮ್ಮತವೆನ್ನುವುದು ಯಾವುದೂ ಇರುವುದಿಲ್ಲ.

II. ಬ್ರಿಟಿಷ್ ಕಾನೂನಿನ ಅನ್ವಯ ಅಡಮಾನ ಪಡೆದವನು ಮಾಲೀಕನು ಆಗುತ್ತಾನೆ. ಅಡಮಾನಕಾರ: ಅಡಮಾನ ಮಾಡುವವನಿಗೆ ಕೇವಲ ಮರು ದಸ್ತಾವೇಜಿನಿಂದ ಪುನಃ ಪಡೆಯುವ ಹಕ್ಕು ಇರುತ್ತದೆ.

೧. ಭಾರತೀಯ ಕಾನೂನಿನ ಅನ್ವಯ ಇದು ವ್ಯತಿರಿಕ್ತವಾಗಿದೆ. ಅಡಮಾನಕಾರನು ಮಾಲೀಕನು ಮತ್ತು ಅಡಮಾನ ಪಡೆದವನು. ಅದನ್ನು ವಾಪಸು ಪಡೆಯಲು ಬರುವುದಿಲ್ಲ.

### ಅಡಮಾನಕಾರನ ಹಕ್ಕುಗಳು

೧. ಅಡಮಾನಕಾರನ ಹಕ್ಕುಗಳು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು.

(i) ವಾಪಸು ಪಡೆಯುವ ಹಕ್ಕು.

(ii) ಆಸ್ತಿಯ ವ್ಯವಸ್ಥೆ ಮಾಡುವ ಹಕ್ಕು.

(iii) ಪುನಃ ಹಸ್ತಾಂತರ ಪಡೆಯುವ ಹಕ್ಕು.

**ಕಲಮು ೬೦:**

೧. ಅಡಮಾನದ ವಿಮೋಚನೆಯ ಹಕ್ಕು ಅಡಮಾನಕಾರನಿಗೆ ಅಡಮಾನ ಪಡೆದವನು ಕೆಳಗಿನ ಮೂರು ಸಂಗತಿಗಳನ್ನು ಕೈಗೊಳ್ಳಬೇಕಾಗುತ್ತದೆ.

(i) ಅಡಮಾನಕಾರನಿಗೆ ಅಡಮಾನದ ದಸ್ತಾವೇಜನ್ನು ಕೊಡಬೇಕು.

(ii) ಅಡಮಾನ ಪಡೆದವನು ಆಸ್ತಿಯ ಕಬ್ಜೆಯಲ್ಲಿದ್ದರೆ ಅದನ್ನು ಅಡಮಾನಕಾರನಿಗೆ ಕೊಡಬೇಕು.

(iii) ಲಿಖಿತದಲ್ಲಿ ಒಪ್ಪಿಗೆಯ ಪತ್ರವನ್ನು ಬರೆದುಕೊಟ್ಟು ಅದನ್ನು ನೋಂದಾಯಿಸಬೇಕು (ಈ ಹಕ್ಕು ವಿಮೋಚನೆಯಾಗಿದ್ದರೆ).

೨. ವಿಮೋಚನೆ ಪಡೆಯುವ ಅಡಮಾನಕಾರನ ಹಕ್ಕನ್ನು ಕೆಳಗಣ ಕರಾರುಗಳಿಗೆ ಒಳಪಟ್ಟು ಚಲಾಯಿಸಬಹುದು.

(i) ಒತ್ತೆಯ ಹಣವನ್ನು ಕೊಟ್ಟ ನಂತರ ಇಲ್ಲವೆ ನೀಡಿದ ನಂತರ,

(ii) ಯಾವುದೇ ಕಾಲಕ್ಕೆ ಮೂಲ ಸಾಲದ ಹಣ ಪಾವತಿ ಮಾಡುವ ಅವಧಿಯು ಬಂದಾಗ.

(iii) ಕೋರ್ಟಿನ ವತಿಯಿಂದ ಇಲ್ಲವೆ ಪಕ್ಷಗಾರರ ಕೃತಿಯಿಂದ ವಿಮೋಚನೆ ಪಡೆಯುವ ಹಕ್ಕು ನಾಶವಾಗದಿದ್ದರೆ.

**I. ವಿಮೋಚನೆ ವಾಪಸ್ಸು ಪಡೆಯುವ ಹಕ್ಕು**

೧. ಈ ಕಲಮು ಒಪ್ಪಂದಕ್ಕೆ ವಿರುದ್ಧವಾಗಿ ಗೈರು ಹಾಜರಿ ಮುಂತಾದ ಯಾವುದೇ ಶಬ್ದಗಳ ಮುನ್ನುಡಿಯನ್ನು ಹೊಂದಿರುವುದಿಲ್ಲ.

೨. ಆದ್ದರಿಂದ ವಾಪಸ್ಸು ಪಡೆಯುವ ಈ ಹಕ್ಕು ಒಂದು ಶಾಸನಬದ್ಧವಾದ ಹಕ್ಕು. ಯಾವುದೇ ಕರಾರಿನಿಂದ ಅದನ್ನು ಅಡ್ಡಿಪಡಿಸತಕ್ಕದ್ದಲ್ಲ. ಯಾವುದೇ ಅಡಚಣೆ ಇಲ್ಲವೆ ಪ್ರತಿಬಂಧ ಮಾಡತಕ್ಕದ್ದಲ್ಲ.

*೪೯ ಅಯ್.ಎ. ೬೦*

೩. ಯಾವುದೇ ಅಂತಹ ಕರಾರು ವಾಪಸು ಪಡೆಯಲು ಆತಂಕ ಆಗುತ್ತದೆಯೋ ಅದು ಕಾನೂನು ಬಾಹಿರವಾಗುತ್ತದೆ.

**II. ವಾಪಸ್ಸು ಪಡೆಯಲು ಆತಂಕ**

ಒಂದು ಅಡಮಾನದ ವ್ಯವಹಾರದಲ್ಲಿ ಅಡಮಾನ ಮಾಡುವವನು ಅದನ್ನು ವಾಪಸು ಪಡೆಯುವುದನ್ನು ಪ್ರತಿಬಂಧಿಸಲು ಯಾವುದೇ ಉಪಬಂಧವನ್ನು ದಸ್ತಾವೇಜಿನಲ್ಲಿ ಸೇರಿಸುವುದು ಅಸಿಂಧುವಾಗುತ್ತದೆ.

(೧) ಈ ಆತಂಕದ ವಿರುದ್ಧ ಇರುವ ನಿಯಮದ ತತ್ವವೇನೆಂದರೆ ಒತ್ತೆಯ ಒಂದು ಸಾಲವನ್ನು ತಿರುಗಿ ಕೊಡಲು ಆ ಸಾಲಕ್ಕೆ ದಸ್ತಾವೇಜಿನ ಮೂಲಕ ಜಾಮೀನು ಆಗಿರುತ್ತದೆ. ಆ ಜಾಮೀನನ್ನು ತಿರುಗಿ ಪಡೆಯಲು ಯಾವುದೂ ಆ ವ್ಯಕ್ತಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

(೨) ಖರೀದಿ ಮತ್ತು ಜಾಮೀನು ಇವುಗಳಲ್ಲಿ ಅಂತರವಿದೆ. ಅದು ಖರೀದಿಯಾಗಿದ್ದರೆ, ಆಸ್ತಿಯನ್ನು ಪುನಃ ಪಡೆಯುವ ಹಕ್ಕು ಇರುವುದಿಲ್ಲ, ಜಾಮೀನು ಆಗಿದ್ದರೆ ಆಸ್ತಿಯನ್ನು ಪುನಃ ಪಡೆಯುವ (ವಾಪಸು) ಹಕ್ಕು ಇರುತ್ತದೆ.

(೩) ಒಂದು ಕರಾರಿನ ಮೂಲಕ ಈ ಹಕ್ಕನ್ನು ಕಿತ್ತುಕೊಳ್ಳಲು ಬರುವುದಿಲ್ಲ. ಹಾಗೆ ಮಾಡಿದರೆ, ಅದನ್ನು ಒಂದು ಆತಂಕ ಎಂದು ತಿಳಿದುಕೊಳ್ಳಲಾಗುವುದು ಮತ್ತು ಅದನ್ನು ಜಾರಿಯಲ್ಲಿ ಕೊಡಲಾಗುವುದಿಲ್ಲ.

**III. ವಾಪಸು ಪಡೆಯಲಿಕ್ಕೆ ಇರುವ ಅಡ್ಡಿಯ ಉದಾಹರಣೆಗಳು**

(i) ಈ ಕೆಳಗಿನವುಗಳು ವಾಪಸು ಪಡೆಯಲು ಅಡ್ಡಿಯ ಕಲಮುಗಳಾಗಿರುತ್ತವೆ.

೧. ಅಡಮಾನ ಮಾಡಿದವನ ಜೀವಿತ ಕಾಲದಲ್ಲಿಯೇ ಈ ಅಡಮಾನವನ್ನು ವಾಪಸು ಪಡೆಯಬೇಕು.

೨. ತನ್ನ ಹಣ ಕೊಟ್ಟು ಪಡೆಯುವುದು ಇತರ ಯಾವುದೇ ವ್ಯಕ್ತಿಯಿಂದ ಅಲ್ಲ.

೩. ಕಾನೂನು ಪ್ರಕಾರ ಕೊಡಬೇಕಾದ ಸಾಲದ ಹಣವನ್ನು ಕೊಟ್ಟು ವಾಪಸು ಪಡೆಯಬೇಕು, ಇಲ್ಲವಾದರೆ ಆ ಅಡಮಾನ ಖರೀದಿಯಾಗುತ್ತದೆ.

೪. ಕರಾರಿನ ಮೇಲೆ ವಾಪಸು ಪಡೆಯುವುದು ಅಡಮಾನ ಮಾಡಿದವನು ಅಡಮಾನ ಪಡೆದವನಿಗೆ ಶಾಶ್ವತ ಗುತ್ತಿಗೆ ಕೊಡುವುದರ ಮೂಲಕ.

(ii) ವಾಪಸು ಪಡೆಯಲು ಕೆಳಗಿನ ಖಂಡಗಳು ಅಡ್ಡಿಗಳೆಂದು ಭಾವಿಸಲಾಗುವುದಿಲ್ಲ.

೧. ಮೊದಲಿನ ಅಡಮಾನಗಳನ್ನು ವಾಪಸು ಪಡೆಯದೆ ಈ ಅಡಮಾನವನ್ನು ವಾಪಸು ಪಡೆಯ ತಕ್ಕದ್ದಲ್ಲ.

೨. ಭೋಗ್ಯ ಅಡಮಾನವನ್ನು ೧೫ ವರ್ಷಗಳವರೆಗೆ ವಾಪಸು ಪಡೆಯತಕ್ಕದ್ದಲ್ಲ.

೩. ವಾಪಸು ಪಡೆದ ನಂತರ ಅದರ ಕಬ್ಜೆ ತೆಗೆದುಕೊಳ್ಳುವ ಹಕ್ಕನ್ನು ಒಂದು ಯೋಗ್ಯ ಮತ್ತು ಅವಶ್ಯ ಅವಧಿಯವರೆಗೆ ಮುಂದುವರೆಯಿಸುವ ಹಕ್ಕು.

(iii) ಯಾವುದು ಅಡ್ಡಿ ಯಾವುದು ಅಲ್ಲ ಎನ್ನುವುದಕ್ಕೆ ಕಟ್ಟುನಿಟ್ಟಿನ ನಿಯಮವೇನೂ ಇರುವುದಿಲ್ಲ.

೧. ಕೇವಲ ಅಡಮಾನದ ಕರಾರುಗಳು ಕಠಿಣವಾಗಿವೆಯೆಂಬುದು ಆ ಕಲಮಿಗೆ ಅಡ್ಡಿಯಾಗುವುದಿಲ್ಲ.

೨. ಅಡಮಾನ ಮಾಡಿದವನು ತನ್ನ ಆಸ್ತಿ ವಾಪಸು ಪಡೆಯಲು ತನ್ನ ಹಕ್ಕು ಚಲಾಯಿಸಲು ತಡೆಯುಂಟುಮಾಡಿ, ಅವನು ತನ್ನ ಹಕ್ಕನ್ನು ಚಲಾಯಿಸುವುದು ಸಾಧ್ಯವಿಲ್ಲವೆನ್ನುವ ಸ್ಥಿತಿಗೆ ತಂದರೆ, ಅದೇ ಅದರ ಪರೀಕ್ಷೆ.

೩. ಒಂದು ಖಂಡವು ಅಡ್ಡಿ ಆಗಿದ್ದರೆ, ಅದನ್ನು ಜಾರಿಗೊಳಿಸಲಿಕ್ಕೆ ಬರುವುದಿಲ್ಲ. ಅವರ ಒಪ್ಪಿಗೆಯಲ್ಲಿ ಅದು ಒಳಗೊಂಡಿದ್ದರೂ, ಒಪ್ಪಿಗೆಯ ಮೂಲಕ ವಾಪಸು ಪಡೆಯುವ ಹಕ್ಕನ್ನು ಮನ್ನಾ ಮಾಡಲಿಕ್ಕೆ ಬರುವುದಿಲ್ಲ.

(iv) ವಾಪಸು ಪಡೆಯಲು ಅಡ್ಡಿ ಮಾಡುವ ತತ್ವವು ಪಕ್ಷಗಳ ನಡುವೆ ನಡೆಯುವ ಅಡಮಾನದ ವ್ಯವಹಾರಕ್ಕೆ ಸಂಬಂಧಿಸಿದ್ದು ಯಾವಾಗ ಅಡಮಾನದ ಕರಾರು ಮಾಡಿಕೊಳ್ಳುವ ಕಾಲಕ್ಕೆ ಅವರು ಒಬ್ಬರಿಗೊಬ್ಬರು ಒಪ್ಪಿಕೊಂಡದ್ದು ಇರುತ್ತದೆ. ಇದು ಅನಂತರ ಒಬ್ಬರಿಗೊಬ್ಬರು ಒಪ್ಪಿ ಮಾಡಿಕೊಂಡ ಕರಾರಿಗೆ ಅನ್ವಯಿಸುವುದಿಲ್ಲ.

೧. ಹೀಗೆಂದರೆ ಪಕ್ಷಗಾರರು ಅಡಮಾನದ ಒಂದು ಕರಾರನ್ನು ಮಾಡಿಕೊಳ್ಳುವಾಗ, ಅಡಮಾನ ಮಾಡಿದವನ ಅಡಮಾನದ ಆಸ್ತಿ ವಾಪಸು ಪಡೆಯುವ ಹಕ್ಕನ್ನು ಕಿತ್ತುಹಾಕುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ.

೨. ಆದರೆ ಅನಂತರ ಒಪ್ಪಂದದ ಕರಾರಿನಲ್ಲಿ ತಿದ್ದುಪಡಿ ಮಾಡಬಹುದು ಮತ್ತು ಯಾವುದೇ

ಖಂಡವು ಅಡಮಾನ ಮಾಡಿದವನು ಅದನ್ನು ತಿರುಗಿ ಪಡೆಯುವ ಹಕ್ಕಿಗೆ ಅಡ್ಡಿಯುಂಟು ಮಾಡಿದರೆ ಅದು ಅಡ್ಡಿ ಎಂದು ಗ್ರಹಿಸಲಾಗುವುದಿಲ್ಲ.

(v) ಸಲ್ಲತಕ್ಕದ್ದು:

೧. ಕೊಡಬೇಕಾದುದು ಇದರಿಂದ ಇದನ್ನು ವಿಂಗಡಿಸಬೇಕು. ಕೊಡಬೇಕಾದುದು ಹಣವು ಇರಬಹುದು, ಆದರೆ ಅದು ಸಲ್ಲತಕ್ಕದ್ದಾಗಿರುವುದಿಲ್ಲ.

೨. ಸಲ್ಲತಕ್ಕದ್ದು=ಮಾಗಣಿ ಮಾಡಬಹುದಾದ

೩. ಕೊಡಬೇಕಾದ ದಿನಾಂಕದಂದು ಅದನ್ನು ಕೊಡದಿದ್ದರೆ ನಿರಾಕರಿಸುವ ಹಕ್ಕು ನಷ್ಟವಾಗುವುದಿಲ್ಲ. ಅಡಮಾನವು ಅಡಮಾನವಾಗಿಯೇ ಉಳಿಯುತ್ತದೆ. ಅದನ್ನು ಚಲಾಯಿಸಬಹುದು.

**VI. ಸಂದಾಯ**

(i) ಅಡಮಾನ ಪಡೆದವರು ಒಬ್ಬರಿಗಿಂತ ಹೆಚ್ಚು ಜನರಿದ್ದರೆ, ಎಲ್ಲರಿಗೂ ಸಂದಾಯ ಮಾಡಲಿಕ್ಕೇ ಬೇಕು.

(ii) ಸಂದಾಯ ಮಾಡುವ ರೀತಿಯ ಕಾನೂನು ಸಮ್ಮತ ಚಲಾವಣೆಯ ಹಣ ಇಲ್ಲವೆ ಸಾಲ ಕೊಟ್ಟವನು ಸ್ವೀಕರಿಸಬಹುದಾದ ಇನ್ನಾವುದೇ ಮಾಧ್ಯಮದ ಮೂಲಕವಾಗಬಹುದು.

(iii) ಸಂದಾಯ ಮಾಡುವ ಸ್ಥಳ (ವಿವರಿಸಲಾಗಿಲ್ಲ).

**ವಿಮೋಚನೆ ಮತ್ತು ಸುಧಾರಣೆ**

**ವಿಭಾಗ ೬೩ಅ**

೧. ಅಡಮಾನ ಮಾಡುವವನು ವಿಮೋಚನೆಯ ನಂತರ ಒಪ್ಪಂದಕ್ಕೆ ವಿರುದ್ಧವಾದ ಯಾವುದೇ ಅಂಶ ಇಲ್ಲದಿರುವಾಗ ಆ ಸುಧಾರಣೆಗೆ ಅವನು ಬಾಧ್ಯಸ್ಥನಿರುತ್ತಾನೆ.

೨. ಅಡಮಾನ ಮಾಡುವವನು ಆ ಸುಧಾರಣೆಯ ಖರ್ಚಿನ ಹಣ ಕೊಡಲು ಹೊಣೆಗಾರನಿರುತ್ತಾನೆ. ಆ ಸುಧಾರಣೆಯನ್ನು ಈ ಉದ್ದೇಶದಿಂದ ಮಾಡಿದ್ದಾಗಿದ್ದರೆ;

(೧) ಆಸ್ತಿಯನ್ನು ಹಾಳಾಗುವುದರಿಂದ ಉಳಿಸಲು ಅವಶ್ಯವಿದ್ದರೆ,

(೨) ಸಾಕಷ್ಟು ಜಾಮೀನು ಇಲ್ಲದಿರುವುದನ್ನು ನಿವಾರಿಸಲು ಅವಶ್ಯವಾಗಿದ್ದರೆ,

(೩) ಒಬ್ಬ ಸಾರ್ವಜನಿಕ ಅಧಿಕಾರಿಯು ಕಾನೂನು ಪ್ರಕಾರ ಮಾಡಿದ ಆದೇಶ ಈಡೇರಿಸುವುದು.

೩. ಇದೂ ಸಹ ಒಪ್ಪಂದಕ್ಕೆ ವಿರುದ್ಧವಾಗಿರದಂತೆ ಇರುತ್ತದೆ.

೪. ಕಲಮು ೬೩ಅ– ಇದು ಹೇಳುವ ಸಾಮಾನ್ಯ ನಿಯಮವೇನೆಂದರೆ ಸಾಮಾನ್ಯವಾಗಿ ಅಡಮಾನ ಪಡೆದವನು ಅದರಲ್ಲಿ ಸುಧಾರಣೆ ಮಾಡಲು ಸ್ವತಂತ್ರನಾಗಿರುವುದಿಲ್ಲ. ಮತ್ತು ಅಡಮಾನ ಮಾಡಿದವನಿಗೆ ಅದರ ಜೊತೆಗೆ ಚಾರ್ಜು ಮಾಡಲು ಬರುವುದಿಲ್ಲ. ಕಾನೂನಿನ ಉಪದೇಶವು ಅಡಮಾನ ಪಡೆದವನು ಬಹಳಷ್ಟು ಹಣವನ್ನು ಖರ್ಚು ಮಾಡುವುದನ್ನು ಮತ್ತು ಅದರಿಂದ ತನ್ನ ಸಾಲದ ಮೊತ್ತವನ್ನು ಹೀಗೆ ಹೆಚ್ಚಿಸುವುದರಿಂದ ಅಡಮಾನ ಮಾಡಿದವನು ಅದನ್ನು ವಿಮೋಚನೆಗೊಳಿಸುವ ಅಧಿಕಾರವನ್ನು ಕುಂಠಿತ ಗೊಳಿಸುವಂತೆ ಮಾಡಬಾರದು. ಅಡಮಾನ ಪಡೆದವನು ಅದರಲ್ಲಿ ಸುಧಾರಣೆ ಮಾಡುವುದರಿಂದ ಅಡಮಾನ ಮಾಡಿದವನು ಅದನ್ನು ವಾಪಸು ಪಡೆಯಲಿಕ್ಕೆ ಅಸಾಧ್ಯವಾಗುವಂತೆ ಮಾಡಲು ಅನುಮತಿ ಕೊಡಬಾರದು.

ಇದನ್ನು ಒಬ್ಬ ಅಡಮಾನಕಾರನು ತನ್ನ ಆಸ್ತಿಯಿಂದ ಸುಧಾರಿಸುವುದು ಎನ್ನುತ್ತಾರೆ.

೫. ಸಾಲವನ್ನು ತಿರುಗಿ ಕೊಡುವ ವಚನ ಇರದ ಹೊರತು ಅಡಮಾನ ಮಾಡಿದವನು ಸುಧಾರಣೆ ಮಾಡಲು ಕೇವಲ ತನ್ನ ಒಪ್ಪಿಗೆ ಕೊಟ್ಟರೆ ಅದನ್ನು ಅವನನ್ನು ಹೊಣೆಗಾರರನ್ನಾಗಿ ಮಾಡಲು ಸಾಕಾಗುವುದಿಲ್ಲ.

## ಅಡಮಾನನ್ನು ವಾಪಸು ಪಡೆಯುವ ಹಕ್ಕು ಮತ್ತು ಒಂದು ಗೇಣಿಯ ನವೀಕರಣದ ಪ್ರಯೋಜನ

**ಕಲಮು ೬೪**

ಒಂದು ಗೇಣಿಯ ನವೀಕರಣವೆಂದರೆ ಅಡಮಾನ ಮಾಡಿದವನ ಮೂಲ ಹಿತಾಸಕ್ತಿಯ ಆಸ್ತಿಗೆ ಅನುವೃದ್ಧಿಯಂತಿರುತ್ತದೆ.

೧. ಅಡಮಾನ ಪಡೆದವನು ಆ ಗೇಣಿಯ ನವೀಕರಣ ಮಾಡಿ, ಆ ಅಡಮಾನ ಮಾಡಿದವನು ಆ ನವೀಕರಣದ ಪ್ರತಿಫಲ ಪ್ರಯೋಜನವನ್ನು ಅಡಮಾನದ ವಿಮೋಚನೆಯ ನಂತರ ಪಡೆಯಲು ಹಕ್ಕುಳ್ಳವ ನಾಗಿದ್ದಾನೆ.

೨. ಇದು ವಿರುದ್ಧವಾಗಿರದ ಒಪ್ಪಂದವಾಗಿರುತ್ತದೆ.

## ಅಡಮಾನ ಮಾಡಿದವನು ನಿರ್ವಹಣೆ ಮಾಡುವುದು

**ಕಲಮು ೬೬**

೧. ಅಡಮಾನ ಮಾಡಿದವನು ಎಲ್ಲಿಯವರೆಗೆ ಆ ಆಸ್ತಿಯ ಕಬ್ಜೆಯಲ್ಲಿರುವನೋ, ಅಲ್ಲಿಯವರೆಗೆ, ಆ ಆಸ್ತಿಯ ಮೇಲೆ ಸಾಮಾನ್ಯ ಅಧಿಕಾರ ಚಲಾಯಿಸಲು ಸ್ವಾತಂತ್ರ್ಯವುಳ್ಳವನಾಗಿದ್ದಾನೆ ಮತ್ತು ಅದರ ಬಾಡಿಗೆಯನ್ನು ಮತ್ತು ಪ್ರತಿಫಲಗಳನ್ನು ಅವುಗಳ ಯಾವುದೇ ಲೆಕ್ಕಪತ್ರ ಇಡದೆ ಅವನು ತೆಗೆದುಕೊಳ್ಳುವ ಹಕ್ಕುಳ್ಳವನಾಗಿದ್ದಾನೆ.

೨. ಇಲ್ಲಿ ಇರುವ ಪ್ರಶ್ನೆ ಎಂದರೆ ಅಡಮಾನ ಮಾಡಿದವನು ತಾನು ಮಾಡಿದ ದುರ್ವ್ಯಯಕ್ಕೆ ಹೊಣೆಗಾರನಿರುವನೋ?

೩. ದುರ್ವ್ಯಯ ತತ್ವವನ್ನು ಕುರಿತು ಈ ಕಲಮಿನಲ್ಲಿ ಹೇಳಲಾಗಿದೆ. ಈ ದುರ್ವ್ಯಯವು ಸ್ವ ಇಚ್ಛೆಯದೋ? ಇಲ್ಲವೆ ಅನುಮತಿಸಬಹುದಾದುದೆ? ಸ್ವ ಇಚ್ಛೆಯಿಂದ ದುರ್ವ್ಯಯದಲ್ಲಿ ಕೆಲವು ಕೃತಿಗಳು ಆ ಕಟ್ಟಡವನ್ನು ನಾಶ ಮಾಡುವ ಅಂದರೆ, ಅದರ ಜೋಡಣೆಗಳನ್ನು ತೆಗೆದುಹಾಕುವುದರಿಂದ, ಇಲ್ಲವೆ ಹುಲ್ಲುಗಾವಲು ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಪರಿವರ್ತನೆಗೊಳಿಸಿ, ಅವುಗಳ ಸ್ವರೂಪವನ್ನು ಬದಲಾಯಿಸುವುದು, ಇಲ್ಲವೆ ಕಟ್ಟಡಗಳನ್ನು ನೆಲಸಮ ಮಾಡುವುದು ದುರ್ವ್ಯಯವಾಗುತ್ತದೆ. ಅನುಮತಿಸಬಹುದಾದ ದುರ್ವ್ಯಯ ಇದು ಏನನ್ನೂ ಮಾಡದೆ ಬಿಡುವುದರಿಂದ ಕಟ್ಟಡಕ್ಕೆ ಧಕ್ಕೆ ಉಂಟಾಗುತ್ತದೆ. ಇಂತಹ ಸಂದರ್ಭದಲ್ಲಿ ಮನೆಗಳು ನಶಿಸಲು ಪ್ರಾರಂಭಿಸುತ್ತವೆಂಬುದು ಇದರ ಇಂಗಿತವಾಗಿರುತ್ತದೆ.

ಸ್ವ ಇಚ್ಛೆಯ ದುರ್ವ್ಯಯವೆನಿಸಲು ಕಟ್ಟಡಗಳನ್ನು ನಾಶ ಮಾಡುವುದು, ಹೀಗೆ ನಾಶ ಮಾಡುವುದು ಉದ್ದೇಶಪೂರ್ವಕ ಮಾಡಿದ್ದು ಇಲ್ಲವೆ ಅಜಾಗರೂಕತೆಯಿಂದ, ಅಲಕ್ಷ್ಯತನದಿಂದ ಆದುದು ಇರಬೇಕು. ಕಟ್ಟಡಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವಾಗ ಅವು ನಾಶವಾದರೆ ಮತ್ತು ಯಾವುದೇ ಉಪಯೋಗಿಸುವವನ ಉಪಯೋಗವು ಯುಕ್ತವಾಗಿದ್ದರೆ, ಅದನ್ನು ಯಾವ ಉದ್ದೇಶಕ್ಕಾಗಿ ಕಟ್ಟಲಾಗಿದೆಯೋ

ಅದೇ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಿದರೆ, ಉಪಯೋಗಿಸುವ ರೀತಿ ಮತ್ತು ವ್ಯಾಪ್ತಿಯು ಸ್ಪಷ್ಟವಾಗಿ ಕಣ್ಣಿಗೆ ಕಾಣುವಂತೆ ಯೋಗ್ಯವಾಗಿದ್ದರೆ, ಮತ್ತು ಆಸ್ತಿಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಮತ್ತು ಅದರ ಬಗ್ಗೆ ಗೇಣಿದಾರನಿಗೆ ಗೊತ್ತಾಗುತ್ತಿರುತ್ತದೆ.

೪. ಕಲಮು ೬೬ರ ಅನ್ವಯ ಅಡಮಾನ ಮಾಡಿದವನು ಅನುಮತಿಸಬಹುದಾದ ದುರ್ವ್ಯಯಕ್ಕೆ ಹೊಣೆಗಾರನಿರುವುದಿಲ್ಲ. ಅವನು ಸ್ವ ಇಚ್ಛೆಯ ದುರ್ವ್ಯಯದಿಂದ ಯಾವ ಜಾಮೀನು ಕೊಟ್ಟ ಆಸ್ತಿಯು ಸಾಕಷ್ಟು ಆಗುವುದಿಲ್ಲವೋ ಅದಕ್ಕೆ ಹೊಣೆಗಾರನಿರುತ್ತಾನೆ.

೫. ಕಾನೂನು ಪ್ರಕಾರ ಒಬ್ಬನು ಕೊಡಬೇಕಾದ ಹಣಕ್ಕಿಂತ ಕೊಟ್ಟ ಜಾಮೀನು ಆಸ್ತಿಯು ೧/೩ಕ್ಕಿಂತ ಕಡಿಮೆ ಇದ್ದರೆ, ಮತ್ತು ಜಾಮೀನು ಇಟ್ಟ ಕಟ್ಟಡದ ಕಿಮ್ಮತ್ತು ಕೊಟ್ಟ ಜಾಮೀನಿನ ಕಿಮ್ಮತ್ತಿಗಿಂತ ೧/೨ರಷ್ಟು ಕಿಮ್ಮತ್ತಿಗೆ ಆದರೆ ಆಗ ಜಾಮೀನು ಸಾಕಷ್ಟು ಇರುವುದಿಲ್ಲವೆಂದು ಹೇಳಲಾಗುವುದು. ಕಲಮು ೬೫ ಅ.

## ಅಡಮಾನುದಾರನ ಹೊಣೆಗಾರಿಕೆಗಳು

**ಕಲಮು ೬೫**

೧. ಕೆಲವು ಶಾಸನಬದ್ಧವಾದ ವಿಧಿಯುಕ್ತ ಒಡಂಬಡಿಕೆಗಳು ಹೊಣೆಗಾರಿಕೆಯನ್ನು ಒಳಗೊಂಡಿರುತ್ತವೆ.

೨. ಅವು ಶಾಸನಗಳಾಗಿದ್ದು, ಅವುಗಳನ್ನು ಉಲ್ಲಂಘಿಸಿದರೆ ಅಡಮಾನ ಮಾಡಿದವನು ಹೊಣೆಗಾರನಾಗಿರುತ್ತಾನೆ.

೧. ಸಾಮಾನ್ಯವಾಗಿ

(ಅ) ಮಾಲಿಕತ್ವಕ್ಕೆ ವಿಧಿಯುಕ್ತವಾದವುಗಳು

(i) ಅಡಮಾನ ಮಾಡುವವನಿಗೆ ಅಡಮಾನ ಮಾಡಿ ಹಸ್ತಾಂತರಿಸುವ ಆಸ್ತಿಯಲ್ಲಿ ಹಿತಾಸಕ್ತಿಯು ಇರುತ್ತದೆ.

(ii) ಅವನಿಗೆ ಹಸ್ತಾಂತರಿಸಲು ಹಕ್ಕು ಇದ್ದಿತು.

**ಬದಲಿ ಜಾಮೀನು**

ಒಬ್ಬ ಅವಿಭಕ್ತ ಕುಟುಂಬದ ಸದಸ್ಯನು ಅವಿಭಜಿತ ಅವಿಭಕ್ತ ಕುಟುಂಬದಲ್ಲಿಯ ತನ್ನ ಜಂಟಿ ಪಾಲನ್ನು ಅಡಮಾನ ಮಾಡುತ್ತಾನೆ. ಅಡಮಾನ ಪಡೆದವನು ಜಾಮೀನನ್ನು ತೆಗೆದುಕೊಳ್ಳುತ್ತಾನೆ. ಅಂದರೆ ಅಡಮಾನ ಪಡೆದವನು ಈ ಕೋಪಾರ್ಟನರ, ಸಹ ಪಾಲುಗಾರನ ಹಕ್ಕುಗಳಿಗೆ ಒಳಪಟ್ಟು ಆ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ವಿಭಜಿಸಿ ಆತನ ಪಾಲು ಪಡೆಯುವ ಹಕ್ಕನ್ನು ಪಡೆದುಕೊಳ್ಳುತ್ತಾನೆ. ಅದರ ಮೂಲಕ ಆ ಸಂಪೂರ್ಣ ಆಸ್ತಿಯಲ್ಲಿಯ ಅವಿಭಕ್ತ ಹಿಸ್ಸೆ ಇದನ್ನು ಒಂದು ನಿಶ್ಚಿತ ಭಾಗವಾಗಿ ಎಲ್ಲರೂ ಬೇರೆ ಬೇರೆ ಭಾಗಗಳನ್ನು ಪಡೆದವರನ್ನಾಗಿ ಪರಿವರ್ತಿಸುತ್ತಾನೆ. ೧೧ಎ. ೧೦೬, ಅವರಲ್ಲಿ ಸರಳ ಹಿಸ್ಸೆ ಆದನಂತರ ಈ ಜಾಮೀನು ಪ್ರತ್ಯೇಕ ಭಾಗವಾಗಿ ಅವಿಭಕ್ತ ಕುಟುಂಬದ ಆತನ ಜಂಟಿ ಹಿಸ್ಸೆಯ ಬದಲಿಗೆ ಅವನ ಹಿಸ್ಸೇಯ ವಿರುದ್ಧ ಕೊಡಲಾಗುವುದು, ಆದರೆ ಆತನ ಮೊದಲಿನ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ತನ್ನ ಜಂಟಿ ಪಾಲನ್ನು ಅಡಮಾನ ಮಾಡಿದ್ದರ ವಿರುದ್ಧ ಕೊಡಲಾಗುವುದಿಲ್ಲ.

* * *

(ಅ) ಮುಂದೂಡಿದ ಮಾಲಿಕತ್ವದ ವಿಧಿಯುಕ್ತತೆ:

(ಬ) ಸಾರ್ವಜನಿಕರಿಗೆ ಕ್ರಮಬದ್ಧವಾಗಿ ಸಲ್ಲಿಸಬೇಕಾದ ವಿಧಿಯುಕ್ತತೆ– ಅಡಮಾನ ಪಡೆದವನು ಅದರ ಕಬ್ಜೆಯಲ್ಲಿ ಇರದಿದ್ದರೆ.

(ಕ) ಅದರ ಮೇಲಿನ ಮೊದಲಿನ ಋಣಭಾರ (ಸಾಲ) ತಿರುಗಿ ಕೊಡುವ ಅವಧಿಯು ಸನ್ನಿಹಿತ ವಾಗಿದ್ದರೆ, ಅದನ್ನು ಕೊಡುವ ವಿಧಿಯುಕ್ತತೆ.

**II. ಅಡಮಾನ ಇಟ್ಟ ಆಸ್ತಿಯು ಗುತ್ತಿಗೆ ಸೊತ್ತು (ಗೇಣಿ ಸೊತ್ತು) ಆದಾಗ:**

(i) ಆ ಅಡಮಾನವು ಪ್ರಾರಂಭವಾದಂದಿನಿಂದ ಆಗಿದ್ದರೆ ಎಲ್ಲ ಕರಾರುಗಳನ್ನು ಪೂರೈಸುವ ವಿಧಿಯುಕ್ತತೆ.

(ii) ಅಡಮಾನ ಪಡೆದವನು ಅಡಮಾನದ ಆಸ್ತಿಯ ಕಬ್ಜೆಯಲ್ಲಿ ಇರದಿದ್ದರೆ, ಆ ಗೇಣಿಯ ಕಾಯ್ದಿರಿಸಿದ ಗೇಣಿ ಕೊಡುವ ವಿಧಿಯುಕ್ತತೆ.

(iii) ಗೇಣಿಯನ್ನು ನವೀಕರಣ ಮಾಡಿದರೆ ಎಲ್ಲ ಕರಾರುಗಳನ್ನು ಪೂರೈಸುವ ವಿಧಿಯುಕ್ತತೆ.

ಈ ಎಲ್ಲ ವಿಧಿಯುಕ್ತತೆಗಳು ವೈಯಕ್ತಿಕ ವಿಧಿಯುಕ್ತತೆಗಳಲ್ಲ. ಅವು ಅಡಮಾನವಿಟ್ಟ ಆಸ್ತಿಯ ಸಂಗಡ ಹೋಗುತ್ತವೆ. ಅವುಗಳನ್ನು ಯಾರಿಗೆ ಹಸ್ತಾಂತರದಿಂದ ಅಡಮಾನ ಪಡೆದವನಿಂದ ಪಡೆದಿರುವನೋ ಅವನು ಅವುಗಳ ಲಾಭವನ್ನು ಪಡೆಯಬಲ್ಲನು.

**ಅಡಮಾನ ಪಡೆದವನ ಹಕ್ಕುಗಳು**

೧. ಅವು ಎರಡು ವಿಭಾಗಗಳಲ್ಲಿ ಇರುತ್ತವೆ.

(೧) ಅಡಮಾನದ ಹಣವನ್ನು ವಸೂಲು ಪಡೆಯುವ ಹಕ್ಕು.

(೨) ಅಡಮಾನವು ಮುಂದುವರಿದಾಗ ಅದರ ಜಾಮೀನನ್ನು ಅಚ್ಚಳಿಯದೆ ಇಟ್ಟುಕೊಂಡು ಹೋಗುವುದು.

**೧. ಅಡಮಾನದ ಹಣವನ್ನು ವಸೂಲಿ ಮಾಡುವ ಹಕ್ಕು**

(೧) ಬಿಡಿಸಿಕೊಳ್ಳುವ ಹಕ್ಕಿನ ರದ್ದತಿ– ಕಲಮು ೬೭.

(೨) ಕಲಮು ೬೭ ಮತ್ತು ೬೯ರ ಅನ್ವಯ ಮಾರಾಟ ಮಾಡುವ ಹಕ್ಕು.

(೩) ಅಡಮಾನದ ಹಣಕ್ಕಾಗಿ ದಾವೆ ಕೊಡುವ ಹಕ್ಕು– ಕಲಮು ೬೮.

(೪) ಮಾರಾಟಮಾಡಿ ಬಂದ ಹಣದಲ್ಲಿ ತನ್ನ ಹಣ ಕೇಳುವ ಮತ್ತು ಸ್ವಾಧೀನಪಡಿಸಿ ಕೊಳ್ಳುವಿಕೆಯು– ಕಲಮು ೭೩.

೨. ಅಡಮಾನ ಪಡೆದವನು ಅಡಮಾನವಿಟ್ಟ ಆಸ್ತಿಯನ್ನು ಅಡಮಾನದಿಂದ ವಿಮೋಚನೆಗೊಳಿಸುವಂತೆ ಹಕ್ಕಿನಿಂದ ಅಡಮಾನ ಮಾಡಿದವನು ಸಂಪೂರ್ಣವಾಗಿ ಪ್ರತಿನಿಷೇಧಿತನಾಗಿದ್ದಾನೆಂದು ಒಂದು ದಾವೆ ಮಾಡಿ ಅದನ್ನು ಕೊಳ್ಳುವ ಹಕ್ಕಿನ ರದ್ದತಿ ಕುರಿತು ಮಾಡಿದ ದಾವೆಯು.

**ಟಿಪ್ಪಣಿ**

೧. ಅಡಮಾನದ ಹಣವೆಂದರೆ ಸಂಪೂರ್ಣವಾಗಿ ಅಡಮಾನದ ಹಣವೆಂದು ಅರ್ಥವಾಗುವುದಿಲ್ಲ ಎಂದು ಅಡಮಾನದ ಹಣವನ್ನು ಕಂತಿನ ಮೂಲಕ ಕೊಡುವುದಿದ್ದರೆ, ಆಗ ಅಡಮಾನ ಪಡೆದವನು ಆ

ಒಂದು ಕಂತಿನ ಹಣ ಅಂದರೆ ಸಾಲದ ಮೂಲ ಹಣ ಮತ್ತು ಅದರ ಮೇಲಿನ ಬಡ್ಡಿಗಾಗಿ ಅಡಮಾನ ಮಾಡಿದವರು ಮಾಡಿಕೊಳ್ಳುವ ಹಕ್ಕಿನ ರದ್ದತಿಗೆ ದಾವೆಯನ್ನು ಮಾಡಲು ಬರುತ್ತದೆ.

*೧೩ ಎಮ್.ಎಲ್.ಅಯ್. ೨*

೨. ಒಂದು ವ್ಯಕ್ತಪಡಿಸಿದ ಷರತ್ತು ಇರದಿದ್ದರೆ, ಅಡಮಾನ ಪಡೆದವನು ಕಂತುಗಳ ಮೂಲಕ ಹಣವನ್ನು ಸ್ವೀಕರಿಸಲು ಬದ್ಧನಾಗಿರುವುದಿಲ್ಲ.

*೨೪. ಅಲಹಾಬಾದ್ ೪೬೧*

೩. ಮೂಲ ಅಡಮಾನ ಹಣಕ್ಕಿಂತ ಮೊದಲು ಬಡ್ಡಿಗಾಗಿ ಮಾಡಿದ ದಾವೆಯು ಕಾನೂನುಬದ್ಧವಾಗಿದೆ. ಏಕೆಂದರೆ ಕಾನೂನುಬದ್ಧವಾಗಿ ಕೊಡುವ ಒಂದು ಒಪ್ಪಂದ ಇರದ ಹೊರತು, ಮೂಲ ಧನ ಕೊಡದ ಹೊರತು ಬಡ್ಡಿ ವಸೂಲಿಗೆ ದಾವೆ ಮಾಡಬಾರದೆಂದು ನಿಷೇಧಿತ ವಿಧಿಯುಕ್ತ ಒಪ್ಪಂದ ಇರದ ಹೊರತು ಅವನು ದಾವೆ ಮಾಡಬಹುದು.

೪. ಈ ಮೂರು ಹಣಗಳು ಪ್ರತಿಯೊಬ್ಬ ಅಡಮಾನ ಪಡೆದವನಿಗೆ ಲಭ್ಯವಿರುವುದಿಲ್ಲ.

**೧. ಹಣಕ್ಕಾಗಿ ದಾವೆ ಮಾಡುವ ಹಕ್ಕು**
**ಕಲಮು ೬೮**

ಅಡಮಾನ ಮಾಡಿದವನು ತಾನೇ ಹಣವನ್ನು ಮರುಸಂದಾಯ ಮಾಡುತ್ತೇನೆಂಬ ಬಂಧನಕ್ಕೊಳಗಾದರೆ ಮಾತ್ರ ಇದು ಲಭ್ಯವಾಗುತ್ತದೆ.

ಪ್ರಶ್ನೆ: ಅಡಮಾನ ಮಾಡಿದವನು ತಾನೇ ಅದನ್ನು ತಿರುಗಿ ಕೊಡುವುದಾಗಿ ಬಂಧನಕಾರಿಯಾಗುವನೆಂದು ಯಾವಾಗ ಹೇಳತಕ್ಕದ್ದು?

(ಅ) ಎಲ್ಲ ಅಡಮಾನಗಳಲ್ಲಿ, ಅದು ಯಾವುದೇ ರೀತಿಯದು ಇರಲಿ, ಇದು ಒಂದು ವಿಧಿಯುಕ್ತವೆಂದು ಪೂರ್ವಭಾವಿ ಗ್ರಹಿಕೆಯದಾಗಿದೆ. ಈ ಅಭಿಪ್ರಾಯಕ್ಕೆ ಅನುಗುಣವಾಗಿ ಉಂಟಾಗುವ ಒಂದೇ ಅಂತರವೆಂದರೆ ನ್ಯಾಯಾಲಯವು ವ್ಯಕ್ತವಾದ ವಿಧಿಯುಕ್ತವಾದ ಕರಾರುಗಳು ಇಲ್ಲದಿರುವಾಗ ಸ್ಪಷ್ಟವಾದ ಇಂಗಿತದ ವಿಧಿಯುಕ್ತವಾದ ಮತ್ತೊಂದು ಪ್ರಕರಣದಲ್ಲಿ ಬೇಕಾಗಬಹುದೆಂದು ಕೇಳಬಹುದು– *೧೩, ಲಾಹೋ. ೨೫೯.*

(ಬ) ಇನ್ನೊಂದು ಅಭಿಪ್ರಾಯವೆಂದರೆ ಒಂದು ವ್ಯಕ್ತಪಡಿಸಿದ ವಿಧಿಯುಕ್ತ ಒಪ್ಪಂದದ ಪದಗಳು ಅವನನ್ನು ಬಂಧನಕಾರಿಯನ್ನಾಗಿ ಮಾಡಬಲ್ಲವು. ವೈಯಕ್ತಿಕ ವಿಧಿಯುಕ್ತತೆಯು ಇಂತಹ ಎಲ್ಲಾ ಪ್ರಕರಣಗಳಲ್ಲಿ ಇಂಗಿತವಾಗಿರುತ್ತದೆ ಎಂದಾಗ ಈ ವಿಭಾಗ ಅನವಶ್ಯಕ.

**ವ್ಯಾಖ್ಯೆಯಿಂದ–**
**ಕಲಮು ೫೮**

೧. ಒಂದು ಸಾದಾ ಅಡಮಾನದಲ್ಲಿ ಅಡಮಾನ ಮಾಡಿದವನು ತಾನೇ ಆ ಹಣವನ್ನು ತಿರುಗಿ ಕೊಡುವುದಾಗಿ ಬಂಧನಕ್ಕೊಳಗಾಗುತ್ತಾನೆ.

೨. ಷರತ್ತುಪೂರ್ವಕ ಮಾರಾಟ ಮೂಲಕದ ಅಡಮಾನದಲ್ಲಿ ತನ್ನ ಆಸ್ತಿಯನ್ನು ತಿರುಗಿ ಪಡೆಯುವುದಿಲ್ಲ.

೩. ಮಿತವಾದ ಒಡಂಬಡಿಕೆಯನ್ನು ಸಹ ಅವನು ಭೋಗ್ಯ ಅಡಮಾನದಲ್ಲಿ ಕೊಂಡಿರುವುದಿಲ್ಲ. ಆದ್ದರಿಂದ ಅಡಮಾನ ಪಡೆದವನು ಸಾದಾ ಅಡಮಾನದ ಪ್ರಕರಣದಲ್ಲಿ ಹಣದ ಡಿಕ್ರಿಗಾಗಿ ದಾವೆ

ಮಾಡಬಹುದೆಂಬುದು ಸ್ಪಷ್ಟವಾಗಿದೆ. ಆದರೆ ಉಳಿದ ರೀತಿಯ ಅಡಮಾನಗಳಲ್ಲಿ ಆ ಪರಿಣಾಮವಾಗಿ ಒಂದು ವ್ಯಕ್ತಪಡಿಸಿದ ವಿಧಿಯುಕ್ತ ಒಪ್ಪಂದ ಇರದ ಹೊರತು ಹಾಗೆ ಮಾಡಲು ಬರುವುದಿಲ್ಲ.

**ಅಪವಾದಗಳು**

ಅಡಮಾನ ಪಡೆದವನು ಹಣದ ಡಿಕ್ರಿಗಾಗಿ ಅಡಮಾನ ಮಾಡಿದವನ ವಿರುದ್ಧ ದಾವೆ ಮಾಡಬಹುದು. ಆದರೆ ಅಡಮಾನ ಮಾಡಿದವನು ವರ್ಗಾವಣೆ ಪಡೆದವನ ವಿರುದ್ಧ, ಇಲ್ಲವೆ ಆತನ ವಾರಸುದಾರರು (ಕಾನೂನಿನ ಅನ್ವಯ ವಾರಸುದಾರರು) ಅವನ ವಿರುದ್ಧ ದಾವೆ ಮಾಡಲು ಬರುವುದಿಲ್ಲ. ಉಳಿದ ಪ್ರಕರಣಗಳಲ್ಲಿ ಹಣದ ಸಾಮಾನ್ಯ ಡಿಕ್ರಿಗಾಗಿ ಅಡಮಾನ ಮಾಡಿದವನು ತಾನು ಮಾಡಿಕೊಂಡ ವೈಯಕ್ತಿಕ ಒಪ್ಪಂದದ ಅನ್ವಯ ತಾನು ಹೊಣೆಗಾರನೆಂದು ಹೇಳಿದ ಪ್ರಕಾರ ದಾವೆ ಮಾಡಲು ಬರುತ್ತದೆ.

೨. ವೈಯಕ್ತಿಕ ವಿಧಿವತ್ತಾದ ಒಪ್ಪಂದ ಇರದಿದ್ದರೂ ಅಡಮಾನ ಪಡೆದವನು ಒಂದು ದಾವೆಯನ್ನು ಮಾಡಬಹುದಾದಂತಹ ಇತರ ಪ್ರಕರಣಗಳೂ ಇವೆ.

**ಕಲಮು ೬೮**

(i) ಅನಿರೀಕ್ಷಿತ ಕಾರಣಗಳಿಂದ ಸಂಭವಿಸಿದ ಪ್ರಕರಣಗಳಲ್ಲಿ ಎರಡೂ ಪಕ್ಷಗಳ ಕೃತಿಯಿಂದ ಆಗಿರದೆ ಅಗ್ನಿ (ಬೆಂಕಿ), ಮಹಾಪೂರ, ದೈವ ಘಟನೆ, ಅಪಘಾತ ಇವೇ ಮುಂತಾದವುಗಳಿಂದ ಆಸ್ತಿಯು ಸಂಪೂರ್ಣವಾಗಿ ಇಲ್ಲವೆ ಭಾಗಶಃ ನಾಶವಾಗುತ್ತದೆ. ಇದರಿಂದ ಕೊಟ್ಟ ಜಾಮೀನು ಸಾಕಷ್ಟು ಆಗದಿದ್ದರೆ ಮತ್ತು ಅಡಮಾನ ಮಾಡಿದವನಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರೂ ಅವನ ಹೆಚ್ಚಿನ ಜಾಮೀನು ಕೊಡಲು ತಪ್ಪಿದರೆ.

(ii) ಅಡಮಾನ ಪಡೆದವನಿಂದ ಜಾಮೀನಿಗೆ ಕೊಟ್ಟ ಸಂಪೂರ್ಣ ಆಸ್ತಿಯನ್ನು ಇಲ್ಲವೆ ಭಾಗಶಃ ಆ ಅಡಮಾನ ಮಾಡಿದವ ಕಾನೂನುಬಾಹಿರ ರೀತಿಯಿಂದ ಅವನಿಂದ ಅಪಹರಿಸಿದರೆ,

(iii) ಎಲ್ಲಿ ಅಡಮಾನ ಪಡೆದವನು ಕಾನೂನಿನ ಪ್ರಕಾರ ಅಡಮಾನದ ಸೊತ್ತಿನ ಕಬ್ಜೆ ಹಕ್ಕುಳ್ಳವ ನಾಗಿರುವನೋ, ಹಾಗೂ ಅಡಮಾನ ಮಾಡಿದವನು ಅದರ ಕಬ್ಜೆ ಕೊಡಲು ತಪ್ಪುತ್ತಾನೆಯೋ, ಇಲ್ಲವೆ ಅಡಮಾನ ಪಡೆದವನು ಜಾಮೀನು ತನ್ನ ಕಬ್ಜೆಯಲ್ಲಿ ಪಡೆದುಕೊಳ್ಳಲು ತಪ್ಪುತ್ತಾನೆ.

**ಮಾರಾಟ ಮಾಡುವ ಹಕ್ಕು**

೧. ಈ ಹಕ್ಕು ಕೇವಲ ಕೆಳಗಿನವುಗಳಿಗೆ ಮಾತ್ರ ಅನ್ವಯಿಸುತ್ತವೆ–

(i) ಸಾದಾ ಅಡಮಾನ.

(ii) ಬ್ರಿಟಿಷ್ ಅಡಮಾನ.

(iii) ನ್ಯಾಯಸಮ್ಮತ ಅಡಮಾನ.

೨. ಅವರು ದಾವೆ ಮಾಡಿ ಅವುಗಳ ಕಬ್ಜೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಅವರು ಅವುಗಳ ಮಾರಾಟ ಮಾಡಲು ದಾವೆ ಮಾಡಬಲ್ಲರು. ನ್ಯಾಯಾಲಯವು ತಪ್ಪಾಗಿ ಅವನಿಗೆ ಕಬ್ಜೆಯನ್ನು ಕೊಟ್ಟರೆ, ಅದು ಬಿಡಿಸಿಕೊಳ್ಳುವ ಹಕ್ಕಿನ ರದ್ದತಿಯಾಗುವುದಿಲ್ಲ. ಮತ್ತು ಅಡಮಾನ ಮಾಡಿದವನು ನಂತರ ಆ ಅಡಮಾನವನ್ನು ಬಿಡಿಸಿಕೊಳ್ಳಬಹುದು.

*೧೯. ಮದ್ರಾಸ್ ೨೪೯ (೨೫೨-೫೩) ಪಿ.ಸಿ.*

**ಮಾರಾಟ ಮಾಡುವ ಹಕ್ಕು ಮತ್ತು ಬಿಡಿಸಿಕೊಳ್ಳುವ ಹಕ್ಕು**
**ಇವುಗಳ ಹಕ್ಕನ್ನು ಚಲಾಯಿಸಲು ಕೊಡಬೇಕಾದ ಕರಾರುಗಳು**

೧. ಕಾನೂನಿನ ಅನ್ವಯ ಕೊಡಬೇಕಾದ ಅಡಮಾನದ ಹಣವನ್ನು ಯುಕ್ತ ಕಾಲದಲ್ಲಿ ಸಂದಾಯ ಮಾಡಿದರೆ, ಮತ್ತು ಅಡಮಾನವನ್ನು ಬಿಡಿಸಿಕೊಳ್ಳುವ ಹಕ್ಕನ್ನು ನಷ್ಟ ಮಾಡುವ ಡಿಕ್ರಿಯು ಪಾಸಾಗುವ ಪೂರ್ವದಲ್ಲಿ.

೨. ಆ ದಾವೆಯು ಅಡಮಾನದ ಹಣದ ಸಂಪೂರ್ಣ ಹಣಕ್ಕಾಗಿ ಇರಲಿಕ್ಕೇಬೇಕು. ಅಡಮಾನ ಹಣದ ಭಾಗಶಃ ವಸೂಲಿಗಾಗಿ ಮಾರಾಟ ಮಾಡಲು ಇಲ್ಲವೆ ಬಿಡಿಸಿಕೊಳ್ಳುವ ಹಕ್ಕಿನ ರದ್ದತಿಗೆ ಅಡಮಾನದ ಆಸ್ತಿಯ ಭಾಗಶಃ ಆಸ್ತಿಗೆ ದಾವೆ ಮಾಡಲಿಕ್ಕೆ ಬರುವುದಿಲ್ಲ.

**ಅಪವಾದಗಳು:** ಅಡಮಾನ ಪಡೆದವನ ಹಿತಾಸಕ್ತಿಗಳು ಬೇರ್ಪಡೆಯಾದರೆ, ಆ ಅಡಮಾನ ಮಾಡಿದವನ ಸಮ್ಮತಿಯಿಂದ ಒಂದು ಭಾಗದ ಬಗ್ಗೆ ಮಾತ್ರ ಅಡಮಾನ ಪಡೆದವನು ದಾವೆ ತರಬಹುದು.

**ಕಲಮು ೬೭ಅ**

೩. ಒಬ್ಬ ಅಡಮಾನ ಸ್ವೀಕರಿಸುವವನು ಒಬ್ಬ ಅಡಮಾನ ಮಾಡುವವನ ಅನೇಕ ಸೊತ್ತುಗಳನ್ನು ಅಡಮಾನವಿಟ್ಟುಕೊಂಡಿದ್ದರೆ, ಆ ಅಡಮಾನ ಇಟ್ಟುಕೊಂಡವನು ಒಂದೇ ಒಂದು ದಾವೆಯನ್ನು ತರಲಿಕ್ಕೇ ಬೇಕು–

(i) ಅವನಿಗೆ ದಾವೆ ಮಾಡುವ ಹಕ್ಕು ಪ್ರಾಪ್ತವಾಗಬೇಕು,

(ii) ಯಾವುದರ ಬಗ್ಗೆ ಅವನಿಗೆ ಒಂದೇ ರೀತಿಯ ಡಿಕ್ರಿ ಪಡೆಯುವ ಹಕ್ಕು ಇರುತ್ತದೆಯೋ

**ಕಲಮು ೬೫ಅ**

೪. ಅಡಮಾನ ಮಾಡಿದವನು ಆ ಆಸ್ತಿಯ ನಿರ್ವಹಣೆಯನ್ನು ಚೆನ್ನಾಗಿ ಮಾಡಲು ಅಶಕ್ಯನಾದಾಗ ಆದರೆ ಅವನು ಕಾನೂನುಬದ್ಧವಾಗಿ ಅಡಮಾನದ ಆಸ್ತಿ ಕಬ್ಜೆಯಲ್ಲಿದ್ದರೆ ಅವನಿಗೆ ಅದರ ಗೇಣಿಯನ್ನು ಕೊಡುವ ಹಕ್ಕು ಇರುತ್ತದೆ. ಅದು ಅಡಮಾನ ಪಡೆದವನಿಗೆ ಬಂಧನಕಾರಿಯಾಗಿರುತ್ತದೆ.

೫. ಅಡಮಾನದ ನಂತರ, ಅಡಮಾನ ಮಾಡಿದವನು ಆ ಆಸ್ತಿ ಕುರಿತು ವ್ಯವಹರಿಸುವ ಅಧಿಕಾರ ಸೀಮಿತವಾಗುತ್ತದೆ. ಅವನಿಗೆ ಸಾಮಾನ್ಯ ಅಧಿಕಾರ ಎನ್ನುವುದು ಯಾವುದೇ ಇರುವುದಿಲ್ಲ.

೬. ಗೇಣಿ ಕೊಡುವ ಅಧಿಕಾರವು ಕೆಲವು ಕರಾರುಗಳ ಮಿತಿಗೊಳಪಡುತ್ತದೆ.

(i) ಸ್ಥಾನಿಕ ಕಾನೂನು, ರೂಢಿ ಇಲ್ಲವೆ ಸಾಂಪ್ರದಾಯದ ಪ್ರಕಾರ ಅವನು ಗೇಣಿಗೆ ಕೊಡಬಹುದು.

(ii) ಪ್ರತಿಯೊಂದು ಗೇಣಿಯ ಕಾಯ್ದಿಡುವುದನ್ನು ಪರಿಮಿತಗೊಳಿಸುತ್ತದೆ. ಹಣವು ಯೋಗ್ಯ ರೀತಿಯಿಂದ ದೊರೆಯುವ ಗೇಣಿಯು ಅದನ್ನು ಮುಂಗಡವಾಗಿ ಕೊಡಲಾಗದಂತೆ ಮಾಡುತ್ತದೆ.

(iii) ಗೇಣಿಯು ನವೀಕರಣದ ವಿಧ್ಯುಕ್ತ ಕರಾರಿಗೆ ಒಳಗೊಳ್ಳಲೇಬಾರದು.

(iv) ಒಂದು ಗೇಣಿಯು ಯಾವ ದಿನಾಂಕದಿಂದ ಅಸ್ತಿತ್ವದಲ್ಲಿ ಬಂದಿತೋ ಆ ದಿನಾಂಕದಿಂದ ೬ ತಿಂಗಳುಗಳಿಗಿಂತ ಹೆಚ್ಚು ತಡವಾಗದಂತೆ ಅದನ್ನು ಜಾರಿಯಲ್ಲಿ ಕೊಡಬೇಕು.

(v) ಒಂದು ಕಟ್ಟಡದ ಗೇಣಿ. ಆದರೆ ಆ ಗೇಣಿ ಅವಧಿಯು ೩ ವರ್ಷಗಳಿಗೆ ಮಿಕ್ಕಬಾರದು.

೭. ಒಂದು ಗೇಣಿಯು ಸಾಮಾನ್ಯ ಅಧಿಕಾರವು ತದ್ವಿರುದ್ಧ ಕರಾರುಗಳಿಗೆ ಒಳಪಟ್ಟು ಉಳಿದ

ಉಪಬಂಧಗಳು ಅನೇಕ ವ್ಯತ್ಯಾಸಗಳಿಗೆ ಒಳಗಾಗಿರುತ್ತವೆ.

ಬಿಡಿಸಿಕೊಳ್ಳುವ ಹಕ್ಕಿನ ರದ್ದತಿಯ ಹಕ್ಕುಗಳು–

ಆ ಹಕ್ಕುಗಳು ಕೆಳಗಿನವರಿಗೆ

(೧) ಷರತ್ತುಗಳಿಂದ ಕೂಡಿದ ಮಾರಾಟ ಮೂಲಕ ಅಡಮಾನ.

(೨) ಯಾವ ಕರಾರಿನ ಮೂಲಕ ಒಂದು ಅಸಂಗತ ಅಡಮಾನ ಪಡೆದವನು ಬಿಡಿಸಿಕೊಳ್ಳುವ ಹಕ್ಕುಳ್ಳವನು.

ಅಡಮಾನ ಪಡೆದವರು ಮಾರಾಟಮಾಡಲು ಮತ್ತು ಬಿಡಿಸಿಕೊಳ್ಳುವ ಹಕ್ಕು ಹೊಂದಿರುವರು.

(೧) ಭೋಗ್ಯದ ಅಡಮಾನದಾರರು.

(೨) ಒಂದು ರೇಲ್ವೆಯ ಅಡಮಾನದಾರರು ಮತ್ತು ಕಾಲುವೆ ಇಲ್ಲವೆ ಉಳಿದ ಸಾರ್ವಜನಿಕ ಹಿತಾಸಕ್ತಿಯ ಕಾಮಗಾರಿಗಳನ್ನು ಸುವ್ಯವಸ್ಥಿತ ಸ್ಥಿತಿಯಲ್ಲಿಡುವ ಅಡಮಾನದಾರ.

*ಅಡಮಾನ ಮಾಡುವವನೇ ಅಡಮಾನ ಪಡೆದವನ ಧರ್ಮದರ್ಶಿಯಾಗುವ ಇಲ್ಲವೆ ಆತನ ಮತ್ತು ಪತ್ರದ ನಿರ್ವಾಹಕನಾಗುವುದರ ಪ್ರಕರಣ ಇಲ್ಲವೆ ಅಡಮಾನ ಪಡೆದವನು ಅಡಮಾನ ಮಾಡುವವನ ಧರ್ಮದರ್ಶಿಯಾಗುವುದು ಇಲ್ಲವೆ ಆತನ ಮೃತ್ಯುಪತ್ರದ ನಿರ್ವಾಹಕನಾಗುವುದು.*

ಇಂತಹ ಅಡಮಾನ ಮಾಡುವವರು ಇಲ್ಲವೆ ಅಡಮಾನ ಪಡೆದವರು ಬಿಡಿಸಿಕೊಳ್ಳುವ ಹಕ್ಕಿನ ರದ್ಧತಿ, ಮಾರಾಟ ಮಾಡಬಲ್ಲರೇ?

ಉಪಖಂಡ (ಬ) ಕಲಮು ೬೭ ಉಪಬಂಧಿಸುವುದೇನೆಂದರೆ– ಒಬ್ಬ ಅಡಮಾನಕಾರನ ಪ್ರಕರಣದಲ್ಲಿ ಯಾವನು ಅಡಮಾನ ಪಡೆದವನ ಧರ್ಮದರ್ಶಿಯೂ ಆಗಿರುವನೋ ಅವನು ಈ ಉಪಖಂಡದ ಅನ್ವಯ ಅಡಮಾನ ಮಾಡುವವನು ಧರ್ಮದರ್ಶಿಯಾದವನು, ಮಾರಾಟಕ್ಕಾಗಿ ದಾವೆ ಮಾಡಬಹುದು, ಆದರೆ ಅವನು ಬಿಡಿಸಿಕೊಳ್ಳುವ ಹಕ್ಕಿನ ರದ್ದತಿಗೆ ದಾವೆ ಮಾಡಲು ಅನುಮತಿ ಸಿಗುವುದಿಲ್ಲ.

ಇನ್ನೊಂದು ಪ್ರಕರಣದಲ್ಲಿ ಬಿಡಿಸಿಕೊಳ್ಳುವ ಹಕ್ಕಿನ ಬಿಡಿಸಿಕೊಳ್ಳುವ ಹಕ್ಕಿನ ರದ್ದತಿಯನ್ನು ನ್ಯಾಯಸಮ್ಮತ ದೃಷ್ಟಿಯೊಂದು ಪ್ರತಿಬಂಧಿಸಲಾಗಿದೆ. ಇದನ್ನು ಧರ್ಮದರ್ಶಿಯ ಕರ್ತವ್ಯವು ಅಡಮಾನ ಮಾಡುವವನ ಹಿತಾಸಕ್ತಿಯ ಸಮಾಲೋಚನೆಯನ್ನು ಮತ್ತು ಅಡಮಾನ ಮಾಡಿದವನ ಹಿತಾಸಕ್ತಿಗಳಾದ ಮಾರಾಟ ಮತ್ತು ಬಿಡಿಸಿಕೊಳ್ಳುವ ಹಕ್ಕಿನ ರದ್ದತಿ ಮಾಡುವುದಿಲ್ಲವೆಂಬ ಇಂಗ್ಲಿಷ್ ಪದ್ಧತಿಯ ತತ್ವದ ಮೇಲೆ ಅವಲಂಬಿಸಿದೆ.

**ನ್ಯಾಯಾಲಯದ ಮಧ್ಯಸ್ಥಿಕೆ ಇಲ್ಲದೆ ಮಾರಾಟ ಮಾಡುವ ಅಧಿಕಾರವನ್ನು ಚಲಾಯಿಸುವುದು**

೧. ನಿಯಮದ ಅನ್ವಯ ಅಡಮಾನ ಪಡೆದವನು ನ್ಯಾಯಾಲಯದ ಮೂಲಕ ಆಸ್ತಿಯನ್ನು ಮಾರಾಟಕ್ಕೆ ತರಬಲ್ಲನು.

**೨. ಕಲಮು ೬೯**– ಈ ನಿಯಮಕ್ಕೆ ಅಪವಾದವನ್ನು ಒದಗಿಸುತ್ತದೆ.

(i) ಅಡಮಾನವು ಇಂಗ್ಲಿಷ್ ಅಡಮಾನ ಇದ್ದಲ್ಲಿ ಅಡಮಾನ ಮಾಡಿದವನಾಗಲಿ ಇಲ್ಲವೆ ಅಡಮಾನ ಪಡೆದವನಾಗಲಿ ಇಬ್ಬರಲ್ಲಿ ಒಬ್ಬನು ಹಿಂದೂ ಆಗಿದ್ದರೆ, ಮಹಮ್ಮದೀನಾಗಿದ್ದರೆ ಇಲ್ಲವೆ ಬೌದ್ಧಮತದವನು ಇಲ್ಲವೆ ರಾಜ್ಯ ಪರಿಪತ್ರದಲ್ಲಿ ಅಧಿಸೂಚಿಸಿದ ಸಮಾಜದ ಒಬ್ಬ ಸದಸ್ಯನಾಗಿದ್ದರೆ

(ii) ಮಾರಾಟ ಮಾಡುವ ಅಧಿಕಾರವನ್ನು ವ್ಯಕ್ತಪಡಿಸಿ ದಸ್ತಾವೇಜಿನ ಮೂಲಕ ಅಧಿಕಾರವನ್ನು ಕೊಟ್ಟಿದ್ದರೆ, ಅಡಮಾನ ಪಡೆದವನು ಎಸ್‌ಆಫ್‌ಎಸ್.

(iii) ಮಾರಾಟ ಮಾಡುವ ಅಧಿಕಾರವನ್ನು ವ್ಯಕ್ತಪಡಿಸಿ, ದಸ್ತಾವೇಜಿನ ಮೂಲಕ ಅಧಿಕಾರವನ್ನು ಕೊಟ್ಟಿದ್ದರೆ, ಆ ಆಸ್ತಿಯು ಇಲ್ಲವೆ ಅದರ ಭಾಗವು ಆ ದಸ್ತಾವೇಜನ್ನು ಬರೆದುಕೊಡುವ ದಿನಾಂಕದಂದು ಮುಂಬೈ ಮುಂತಾದ ಶಹರಗಳಲ್ಲಿ ನೆಲೆಸಿದ್ದರೆ.

**ಕಲಮು ೬೯ಅ**

೩. ನ್ಯಾಯಾಲಯದ ಮಧ್ಯಸ್ಥಿಕೆಯು ಇಲ್ಲದೆ ಯಾವ ಅಡಮಾನ ಪಡೆದವನಿಗೆ ಮಾರಾಟ ಮಾಡುವ ಹಕ್ಕು ಇದೆಯೋ (ಯಾವ ಹಕ್ಕನ್ನು ವಿಂಗಡಿಸಲಾಗಿದೆ) ಅಂಥವನು ಲಿಖಿತದಲ್ಲಿ ತಾನೇ ಒಬ್ಬ ರಿಸೀವರನ್ನು ನೇಮಿಸಬೇಕು ಇಲ್ಲವೆ ಅವನ ವತಿಯಿಂದ ನೇಮಿಸಬೇಕು.

೪. ಮಾರಾಟ ಮಾಡುವ ಈ ಅಧಿಕಾರವನ್ನು ಚಲಾಯಿಸುವ ಇಲ್ಲವೆ ರಿಸೀವರನನ್ನು ನೇಮಕ ಮಾಡುವ ಅಧಿಕಾರವನ್ನು ಅಡಮಾನ ಮಾಡಿದವನಿಗೆ ನೋಟೀಸಿನಿಂದ ತಿಳಿಸಬೇಕು.

೫. ಕೊಡಬೇಕಾದ ಮೂಲ ಸಾಲದ ಹಣ ಹಾಗೂ ಮೂರು ತಿಂಗಳವರೆಗೆ ಕೊಡಲು ತಪ್ಪಿದ್ದಕ್ಕೆ ಕೊಡಬೇಕಾದ ಹಣ ಇವೆಲ್ಲವುಗಳನ್ನು ಅವಶ್ಯವಾಗಿ ಕಾಣಿಸಿ ಈ ನೋಟೀಸಿನಲ್ಲಿ ಲಿಖಿತದಲ್ಲಿ ಕಾಣಿಸಲಿಕ್ಕೇಬೇಕು.

**ಕಲಮು ೭೩**

*I. ಅಡಮಾನ ಪಡೆದವನು ಖರೀದಿ ಹಣದ ಕ್ರಮ ನಡೆಸುವ ಹಕ್ಕು*

೧. ಬಾಕಿ ಉಳಿದ ಕಂದಾಯದ ಹಣ ಇಲ್ಲವೆ ಉಳಿದ ಸಾರ್ವಜನಿಕವಾಗಿ ಕೊಡಬೇಕಾದ ಕರಭಾರ ತೆರಿಗೆ ಕೊಡದಿದ್ದುದಕ್ಕೆ ಆಸ್ತಿಯನ್ನು ಮಾರಾಟ ಮಾಡಿದರೆ ಇಂತಹದ್ದನ್ನು ಕೊಡಲು ತಪ್ಪುವುದು ಅಡಮಾನ ಪಡೆದವನ ಕರ್ತವ್ಯಲೋಪದಿಂದ ಆಗಿರದಿದ್ದರೆ, ಅಡಮಾನ ಪಡೆದವನು ಆ ಮಾರಾಟ ಮಾಡಿದ ಹಣದಲ್ಲಿ ಬಾಕಿ ಉಳಿದ ಹಣವನ್ನು ಕೇಳಲು ಅವನಿಗೆ ಅಧಿಕಾರ ಇರುತ್ತದೆ.

೨. ಅದರಂತೆ ಅವನು ಆಸ್ತಿಯನ್ನು ಅಡಮಾನ ಮಾಡಿದರೆ ಅದು ಕಡ್ಡಾಯವಾಗಿ ಅರ್ಜಿಸಿದ್ದು ಇದ್ದು, ಅಡಮಾನ ಪಡೆದವನು ಅಡಮಾನದ ಹಣವನ್ನು ಅಡಮಾನ ಮಾಡಿದವನಿಗೆ ಕೊಡಬೇಕಾದ ನಷ್ಟ ಪರಿಹಾರದ ಹಣದೊಳಗಿಂದ ಕೇಳಲು ಹಕ್ಕುಳ್ಳವನಾಗಿದ್ದಾನೆ.

೩. ಆತನ ಬೇಡಿಕೆ ಪೂರ್ವ ಅಡಮಾನದವರನ್ನು ಹೊರತುಪಡಿಸಿ, ಉಳಿದ ಎಲ್ಲರ ವಿರುದ್ಧವೂ ಅವನಿಗೆ ಪ್ರಭಾವವುಳ್ಳದ್ದಾಗಿದೆ.

೪. ಅಡಮಾನದ ಹಣವನ್ನು ಕೊಡುವ ದಿನಾಂಕವು ಇನ್ನೂ ಬಂದಿರದಿದ್ದರೂ ಆತನ ಮಾಗಣಿಯನ್ನು ಜಾರಿಗೊಳಿಸಬಹುದು.

*II. ಅಡಮಾನ ಪಡೆದವನು ಜಾಮೀನು ಕೊಟ್ಟ ಆಸ್ತಿಯ ದುರಸ್ತಿ ಮಾಡುವ ಹಕ್ಕುಗಳು ಅಡಮಾನವು ಮುಂದುವರೆದ ಕಾಲದಲ್ಲಿಯೂ ಅದು ಮುಂದುವರಿಯುವುದು.*

(i) ಅನುವೃದ್ಧಿಯ ಹಕ್ಕು– ಕಲಮು ೭೦

(ii) ಗೇಣಿ ನವೀಕರಿಸಿದ ಹಕ್ಕು– ಕಲಮು ೭೧

(iii) ಆಸ್ತಿಯನ್ನು ಸಂರಕ್ಷಿಸುವ ಹಕ್ಕು– ಕಲಮು ೭೨

**ಕಲಮು ೭೦**

**೧. ಅನುವೃದ್ಧಿ ಹಕ್ಕು:**

ಈ ಅನುವೃದ್ಧಿಯು ಅಡಮಾನದ ನಂತರ ಆಗಿದ್ದರೆ, ಅಡಮಾನ ಪಡೆದವನು ತನ್ನ ಜಾಮೀನಿಗೆ ಕೊಟ್ಟ ಆಸ್ತಿಯ ಅನುವೃದ್ಧಿಗೆ ಹಕ್ಕುಳ್ಳವನಾಗಿರುತ್ತಾನೆ. (೨೯ ಕಲ್ಕತ್ತಾ ೮೦೩) ಎರಡು ಅಡಮಾನಗಳನ್ನು ಒಂದೇ ಒಂದು ಮನೆ ಇದ್ದ ಒಂದೇ ಜಾಗವನ್ನು ಬರೆದುಕೊಟ್ಟ ನಂತರ ಅಡಮಾನ ಮಾಡಿದವನು ಎರಡು ಹೊಸ ಮನೆಗಳನ್ನು ಆ ಜಾಗದಲ್ಲಿ ಕಟ್ಟಿದರೆ, ಅವು ಅನುವೃದ್ಧಿಯೆಂದು ಯಾವುದರ ಮೇಲೆ ಅಡಮಾನ ಮಾಡುವವನು ಅವಲಂಬಿಸಿರುತ್ತಾನೋ ಅವನು ಅಡಮಾನಕ್ಕಿಂತ ಮೊದಲು ಮನೆಯನ್ನು ಕಟ್ಟಿದರೆ, ಹಾಗೆ ಮಾಡಲಾರನು.

ಡಿಕ್ರಿಗಿಂತ ಮೊದಲು ಅದನ್ನು ಕಟ್ಟಿದ್ದರೆ,

ಹಾಗೆ ಕಲಮು ಏನೂ ಹೇಳದಿದ್ದರೂ ಡಿಕ್ರಿಯ ನಂತರ ಕಟ್ಟಿದ್ದರೆ ಅವನು ಹಾಗೆ ಮಾಡಲಾರನು.

ಇದು ತದ್ವಿರುದ್ಧವಾದ ಕರಾರಿಗೆ ಒಳಪಟ್ಟಿದೆ.

**ಕಲಮು ೭೧**

**೨. ಒಂದು ಗೇಣಿ ನವೀಕರಣ ಮಾಡಿದರೆ ಪ್ರಯೋಜನ: ಲಾಭ ಪಡೆಯುವ ಹಕ್ಕು:**

ಆತನ ಜಾಮೀನಿನ ಉದ್ದೇಶಕ್ಕಾಗಿ ಹೊಸ ಗೇಣಿಯ ಪ್ರಯೋಜನ ಲಾಭವನ್ನು ಪಡೆಯಲು ಅವನು ಹಕ್ಕುದಾರನಾಗಿರುತ್ತಾನೆ.

ಇದು ತದ್ವಿರುದ್ಧ ಕರಾರಿಗೆ ಒಳಪಟ್ಟು ಇರುತ್ತದೆ.

**ಕಲಮು ೭೨**

**೩. ಆಸ್ತಿಯನ್ನು ಪರಿರಕ್ಷಿಸುವ ಹಕ್ಕು:**

೧. ಅಡಮಾನ ಪಡೆದವನು ಅಗತ್ಯವಿರುವಷ್ಟು ಹಣವನ್ನು ಖರ್ಚು ಮಾಡಬಹುದು.

(i) ಅಡಮಾನವಿಟ್ಟ ಆಸ್ತಿಯ ನಾಶವಾಗುವುದರಿಂದ ರಕ್ಷಿಸುವುದಕ್ಕಾಗಿ ಮುಟ್ಟುಗೋಲು ಹಾಕುವುದರಿಂದ, ಕಳೆದುಹೋಗುವುದರಿಂದ ಮಾರಾಟದಿಂದ ಪರಿರಕ್ಷಿಸುವುದಕ್ಕಾಗಿ.

(ii) ಅಡಮಾನ ಮಾಡಿದವನ ಆಸ್ತಿಯ ಮಾಲಿಕತ್ವವನ್ನು ಸಮರ್ಥಿಸುವುದಕ್ಕಾಗಿ,

(iii) ಅಡಮಾನ ಮಾಡಿದವನ ಮಾಲಿಕತ್ವ ಹಕ್ಕಿನ ವಿರುದ್ಧ ತನ್ನ ಹಕ್ಕು ಅದಕ್ಕಿಂತ ಉತ್ತಮವೆಂದು ಸಿದ್ಧಪಡಿಸುವುದಕ್ಕಾಗಿ.

(iv) ಅಡಮಾನ ಇಟ್ಟ ಆಸ್ತಿಯು ನವೀಕರಣಗೊಳಿಸಬಹುದಾದ ಗೇಣಿ ಆಸ್ತಿಯಾಗಿದ್ದರೆ ಅಂತಹ ಗೇಣಿಯನ್ನು ನವೀಕರಣ ಮಾಡುವುದಕ್ಕಾಗಿ.

(v) ಆಸ್ತಿಯ ವಿಮೆ ಇಳಿಸಲು ಬರುವಂತಹದ್ದಾದರೆ ಅದನ್ನು ವಿಮೆ ಇಳಿಸಬಹುದು. ವಿಮೆಯ ಕಂತಿನ ಹಣವನ್ನು ಮೂಲ ಸಾಲದ ಹಣದಲ್ಲಿ ಕೂಡಿಸಬಹುದು.

## ಮುಂಚಿನ ಅಡಮಾನದ ಆದ್ಯತೆಯ ಹಕ್ಕು

**I. ವೇಳೆಯಲ್ಲಿ ಆದ್ಯತೆ**

೧. ಸ್ಥಿರ ಆಸ್ತಿಯ ಹಿತಾಸಕ್ತಿಗಳನ್ನು ಹಸ್ತಾಂತರಿಸುವ ವಿಷಯದಲ್ಲಿ ಟಿ.ಪಿ. (ಆಸ್ತಿ ಹಸ್ತಾಂತರ) ಅಧಿನಿಯಮದ ಕಲಮು ೪೮ರಲ್ಲಿ ಸಾಮಾನ್ಯ ನಿಯಮವನ್ನು ಹೇಳಲಾಗಿದೆ.

೨. ಇದೇ ನಿಯಮವು ಅಡಮಾನಕ್ಕೂ ಅನ್ವಯಿಸುತ್ತದೆ. ಅಂದರೆ ಆದ್ಯತೆಯ ಅಡಮಾನಗಳು ಭಾರತದಲ್ಲಿ ಅವುಗಳನ್ನು ಸೃಷ್ಟಿಸಿದ ಅನುಕ್ರಮವಾದ ದಿನಾಂಕಗಳನ್ನು ಅವಲಂಬಿಸಿರುತ್ತದೆ. ದಿನಾಂಕದಲ್ಲಿ ಮೊದಲನೆಯದಾದುದಕ್ಕೆ ನಂತರ ಆದ ಅಡಮಾನದ ಮೇಲೆ ಆದ್ಯತೆ ಪಡೆಯುತ್ತದೆ.

*೫೬ ಕಲ್ಕತ್ತ ೮೬೮*

೩. ಈ ನಿಯಮಕ್ಕೆ ಕಲಮು ೭೮ ಒಂದು ಅಪವಾದವಾಗಿರುತ್ತದೆ. ಇದು ಹೇಳುವುದೇನೆಂದರೆ ನ್ಯಾಯಾಲಯವು ಮುಂಚಿನ ಅಡಮಾನ ಪಡೆದವರನ್ನು ನಂತರ ಅಡಮಾನ ಪಡೆದವನಕ್ಕಿಂತ ಮುಂದಕ್ಕೆ ಹಾಕಬಲ್ಲದು. ಎಲ್ಲಿ ಮುಂಚಿನ ಅಡಮಾನ ಪಡೆದವನು ಮೋಸದಿಂದ, ತಪ್ಪು ನಿರೂಪಣೆಯಿಂದ ಇಲ್ಲವೆ ಅತೀವ ನಿರ್ಲಕ್ಷ್ಯತನದಿಂದ ನಂತರದ ಅಡಮಾನ ಪಡೆದವನಿಗೆ ಆ ಅಡಮಾನ ಇಟ್ಟ ಆಸ್ತಿಯ ಮೇಲೆ ಮುಂಗಡ ಹಣ ಕೊಡಲು ಆತನ ಮನ ಒಲಿಸುತ್ತಾನೆ.

ತಪ್ಪು ನಿರೂಪಣೆ–

೧. ಇದರ ವ್ಯಾಖ್ಯೆಯನ್ನು ಭಾರತೀಯ ಕರಾರು ಅಧಿನಿಯಮ ಕಲಮು ೧೮ರಲ್ಲಿ ಕೊಡಲಾಗಿದೆ.

೨. ಹೀಗೆಂದರೆ ಇದು ಅವಶ್ಯವಾಗಿ ಮೋಸದ ತಪ್ಪು ನಿರೂಪಣೆ ಎಂದರ್ಥವಲ್ಲ.

**ಮೋಸ**

**ಅತೀವ ನಿರ್ಲಕ್ಷ್ಯ:**

ಬ್ರಿಟಿಷ್ ಮತ್ತು ಭಾರತೀಯ ಕಾನೂನುಗಳಲ್ಲಿ ಅಂತರವಿದೆ. ಬ್ರಿಟಿಷ್ ಕಾನೂನಿನ ಅನ್ವಯ ಅತೀವ ನಿರ್ಲಕ್ಷ್ಯ ಅಂದರೆ ಯಾವುದೇ ನಿರ್ಲಕ್ಷ್ಯವೂ ಮೋಸವೆನಿಸುತ್ತದೆ.

ಭಾರತೀಯ ಕಾನೂನಿನ ಅನ್ವಯ ಅತೀವ ನಿರ್ಲಕ್ಷ್ಯವು ಮೋಸಕ್ಕಿಂತ ಭಿನ್ನವಾಗಿದೆ.

**II. (ಹಣ) ಸಂದಾಯ ಮಾಡುವ ಆದ್ಯತೆಯು**

ಪ್ರಶ್ನೆ– ಒಬ್ಬ ಮೊದಲಿನ ಅಡಮಾನ ಪಡೆದವನ ಹಕ್ಕುಗಳನ್ನು ಕೊಂಡುಕೊಂಡ ಅಡಮಾನ ಪಡೆದವನು ಅಡಮಾನ ಪಡೆದವನ ಮಧ್ಯವರ್ತಿ: ವ್ಯಕ್ತಿ ಮೇಲೆ ಆದ್ಯತೆಯನ್ನು ಪಡೆಯಬಲ್ಲನೆ?

**ಕಲಮು ೯೩**

೧. ಒಂದು ಆಸ್ತಿಯ ಮೇಲೆ ಮಧ್ಯವರ್ತಿ ಅಡಮಾನ ಇರುವುದು ತಿಳಿದೋ, ತಿಳಿಯದೆಯೋ ಒಬ್ಬನು ಮೊದಲಿನ ಅಡಮಾನದಾರನ ಅಡಮಾನದ ಹಣವನ್ನು ಸಂದಾಯ ಮಾಡಿದರೆ, ಅಂತಹ ಅಡಮಾನದಾರನು ಮಧ್ಯವರ್ತಿ ಅಡಮಾನದಾರನ ಮೇಲೆ ಆದ್ಯತೆಯನ್ನು ಪಡೆಯಲಿಕ್ಕೆ ಸಾಧ್ಯವಿಲ್ಲ.

೨. ಮಧ್ಯವರ್ತಿ ಅಡಮಾನದಾರನು ಇರುವನೆಂಬುದು ತಿಳಿದೋ ಇಲ್ಲವೆ ತಿಳಿಯದೆಯೋ ಅಡಮಾನ

ಪಡೆದವನು ನಂತರ ಅಡಮಾನ ಮಾಡಿದವನಿಗೆ ಮುಂಗಡ ಹಣ ಸಂದಾಯ ಮಾಡುವವನು ನಂತರದ ಮುಂಗಡ ಹಣ ನೀಡಿದ ಮಧ್ಯವರ್ತಿ ಅಡಮಾನದಾರನ ಮೇಲೆ ಆದ್ಯತೆಯನ್ನು ಪಡೆಯುವುದಿಲ್ಲ.

**ಕಲಮು ೭೯**

ಈ ಕಲಮು ೯೩ರ ಎರಡನೆಯ ನಿಯಮಕ್ಕೆ ಅಪವಾದವಾಗಿರುತ್ತದೆ.

ಕಲಮು ೭೯– ಒಬ್ಬನ ನಂತರ ಅಡಮಾನ ಪಡೆದವನೊಬ್ಬ ಮೊದಲಿನ ಅಡಮಾನ ಸಂಗತಿಯು ನೋಟೀಸಿಗೆ ಬಂದಿದ್ದರೂ ಮುಂಗಡ ಹಣ ಕೊಡುವುದನ್ನು ಮುಂದಕ್ಕೆ ಹಾಕುತ್ತಾನೆ, ಒಂದು ವೇಳೆ ಮೊದಲಿನ ಅಡಮಾನವನ್ನು ಭವಿಷ್ಯದಲ್ಲಿ ಮುಂಗಡ ಪಡೆಯಲು ಮಾಡಿದ್ದರೆ ಮತ್ತು ನಂತರದ ಮುಂಗಡ ಹಣದ ಮೊತ್ತವು ಪರಮಾವಧಿಯನ್ನು ಮೀರಿದ್ದರೆ–

**ಅಡಮಾನ ಪಡೆದವನು ಕ್ರಮ ನಿರ್ಣಯಿಸುವ ಅಧಿಕಾರ**

**ಕಲಮು ೮೧**

**ಕಲಮು ೮೨**

**ಕ್ರಮ ನಿರ್ಣಯ ಪ್ರಶ್ನೆ**

೧. ಬೇರೆ ಬೇರೆ ಅಡಮಾನ ಪಡೆದವರಿಗೆ ಎರಡು ಇಲ್ಲವೆ ಹೆಚ್ಚಿನ ಆಸ್ತಿಗಳನ್ನು ಹೀಗೆ ಅಡಮಾನ ಮಾಡಿರುವುದಿಲ್ಲವೋ, ಎರಡು ಇಲ್ಲವೆ ಹೆಚ್ಚಿನ ಆಸ್ತಿಗಳು ಅಡಮಾನದ ವಸ್ತುಗಳಾಗಿ ಅಡಮಾನ ಪಡೆದವನೊಬ್ಬನಿಗೆ ಅವುಗಳಲ್ಲಿ ಹಕ್ಕಿದೆ. ಆದರೆ ಇನ್ನೊಂದೇ ಆಸ್ತಿಯು ಅಡಮಾನದ ವಸ್ತುವಾಗಿದ್ದು, ಅದರಲ್ಲಿ ಮಾತ್ರ ಇನ್ನೊಬ್ಬನಿಗೆ ಅಧಿಕಾರವಿದೆ. ಉದಾ: 'ಅ'ನು ಬ್ಲಾಕ್ ಕೇರ್ ಮತ್ತು ವೈಟ್ ಕೇರ್ ಎಂಬ ಎರಡು ಆಸ್ತಿಗಳ ಮಾಲೀಕನು ಆಗಿರುತ್ತಾನೆ. 'ಅ'ನು ವೈಟ್ ಕೇರ್ ಮತ್ತು ಬ್ಲಾಕ್ ಕೇರ್ ಎರಡನ್ನೂ 'ಬ'ನಿಗೆ, ಆಮೇಲೆ ಬ್ಲಾಕ್ ಕೇರ್ ಅದನ್ನು 'ಕ'ನಿಗೆ ಅಡವು ಇಡುತ್ತಾನೆ. ಇಲ್ಲಿ ಉದ್ಭವಿಸುವ ಪರಿಸ್ಥಿತಿಯು ಹೀಗಿದೆ: 'ಬ'ನಿಗೆ ವೈಟ್ ಕೇರ್ ಅದರಂತೆ ಬ್ಲಾಕ್ ಕೇರ್ ಎರಡು ಅಡಮಾನವಾಗಿದೆ. 'ಕ'ನಿಗೆ ಬ್ಲಾಕ್‌ಕೇರ್ ಒಂದೇ ಮಾತ್ರ ಅಡಮಾನವಾಗಿದೆ. ಅಡಮಾನದ ಹಣವನ್ನು ವಸೂಲಿ ಮಾಡುವುದಕ್ಕೂ, 'ಬ'ನಿಗೆ ಎರಡೂ ಆಸ್ತಿಗಳನ್ನು ವೈಟ್‌ಕೇರ್ ಅದರಂತೆ ಬ್ಲಾಕ್‌ಕೇರ್‌ನಿಗೆ ಮಾರುವ ಅಧಿಕಾರ ಇರುತ್ತದೆ. ಆದರೆ 'ಕ'ನಿಗೆ ಬ್ಲಾಕ್‌ಕೇರ್ ಒಂದನ್ನೇ ಮಾರುವ ಅಧಿಕಾರ ಇರುತ್ತದೆ.

ಅಡಮಾನ ಪಡೆದವನೆಂದು 'ಬ'ನಿಗೆ ಅವನ ಅಧಿಕಾರವನ್ನು ಚಲಾಯಿಸಲು ಅನುಮತಿ ಕೊಟ್ಟರೆ 'ಕ'ನಿಗೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

'ಕ'ನನ್ನು ಸಂರಕ್ಷಿಸಲು ನ್ಯಾಯವು ಕ್ರಮ ನಿರ್ಣಯವೆಂಬ ಒಂದು ತತ್ವವನ್ನು ಸೃಷ್ಟಿಸಿತು. ಈ ನ್ಯಾಯ ಸಮ್ಮತಿಯ ಅನ್ವಯ 'ಬ'ನು ಮೊದಲು ಅವನು ಇನ್ನೊಬ್ಬನ ಅಡಮಾನದ ಸಾಲಕ್ಕೆ ಜಾಮೀನು ಕೊಡದೆ ಇದ್ದ ಆಸ್ತಿಯ ವಿರುದ್ಧ ಕಾರ್ಯಕ್ರಮ ಕೈಕೊಳ್ಳಲು ಒತ್ತಾಯಿಸುತ್ತದೆ. ಇದನ್ನು ಕಲಮು ೮೧ ಒಳಗೊಂಡಿದೆ.

ಟಿಪ್ಪಣಿ: ಅಡಮಾನ ಪಡೆದವನಿಗೆ ತನ್ನ ಪ್ರಯೋಜನಕ್ಕಾಗಿ ಕ್ರಮ ಕೈಕೊಳ್ಳಲು ತನ್ನ ಹಣ ಕೇಳಲು ಮೊದಲಿನ ಅಡಮಾನದ ಅರಿವು ಇರುವುದು ಅನವಶ್ಯಕ ಇರುತ್ತದೆ.

# ಅಧ್ಯಾಯ ೮
# ಸಾಕ್ಷ್ಯದ ಕಾನೂನು

# ಸಾಕ್ಷ್ಯದ ಕಾನೂನು

**೧. ಸಾಕ್ಷ್ಯ ಪದದ ಅರ್ಥ:**

ಶಾಸನದಲ್ಲಿ ಹೆಚ್ಚಾಗಿ ಉಪಯೋಗ ಮಾಡುವ ಶಬ್ದಗಳಂತೆ ಈ ಪದ ಜನಪ್ರಿಯ ಮತ್ತು ಅದರಂತೆ ತಾಂತ್ರಿಕ ಅರ್ಥವನ್ನು ಒಳಗೊಂಡಿರುತ್ತದೆ.

**ಜನಪ್ರಿಯ ಅರ್ಥ:**

ಸಾಕ್ಷ್ಯವು ಜನಪ್ರಿಯ ವ್ಯಾಖ್ಯೆಯಲ್ಲಿ ಪರಿಗಣಿಸಬೇಕಾದ ವಿಷಯದ ಸತ್ಯವನ್ನು ಕಾಣಿಸುವ ಅಂಕವನ್ನು ಸೂಚಿಸುತ್ತದೆ.

೪ ಮದ್ರಾಸ್ ೩೯೩

**ತಾಂತ್ರಿಕ ಅರ್ಥ:**

ಆದಾಗ್ಯೂ ಈ ಶಬ್ದವನ್ನು ಸಾಕ್ಷ್ಯ ಅಧಿನಿಯಮದಲ್ಲಿ ತಾಂತ್ರಿಕ ಅರ್ಥದಲ್ಲಿ ಬಳಸಲಾಗಿದೆ.

ಸಾಕ್ಷ್ಯ ಅಧಿನಿಯಮದ ವಿಭಾಗ ೩ರಲ್ಲಿ ಸಾಕ್ಷ್ಯ ಎಂಬ ಶಬ್ದವನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಯೆಂಬುದನ್ನು ವ್ಯಾಖ್ಯಾನಿಸಲಾಗಿದೆ.

'ಸಾಕ್ಷ್ಯ' ಎಂದರೆ ಅದು ಕೆಳಗಣ ಅಂಶಗಳನ್ನು ಒಳಗೊಂಡಿರುತ್ತದೆ.

(೧) ನ್ಯಾಯಾಲಯವು ಯಾವ ಹೇಳಿಕೆಗೆ ಪರವಾನಗಿ ಕೊಡುತ್ತದೆಯೋ ಇಲ್ಲವೆ ಸಾಕ್ಷಿದಾರರು ನ್ಯಾಯಾಲಯದ ಮುಂದೆ ವಿಚಾರಣೆಗೆ ಇರುವ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯವಾಗಿ ನ್ಯಾಯಾಲಯದ ಮುಂದೆ ಹೇಳುವ; ಮಾಡುವ ಎಲ್ಲ ಹೇಳಿಕೆಗಳು ನ್ಯಾಯಾಲಯ ಪರೀಕ್ಷೆಗಾಗಿ ನ್ಯಾಯಾಲಯದಲ್ಲಿ ಹಾಜರು ಮಾಡಿದ ಎಲ್ಲ ದಸ್ತಾವೇಜುಗಳು ಸೇರುತ್ತವೆ.

'ಸಾಕ್ಷ್ಯ' ಪದದ ವ್ಯಾಖ್ಯೆಯು ಅಪೂರ್ಣವಾಗಿದೆ.

ಒಬ್ಬ ನ್ಯಾಯಾಧೀಶನು ತನ್ನ ಮುಂದೆ ವಿಚಾರಣೆಗೆ ತಂದ ವಿಷಯದ ಮೇಲೆ ತೀರ್ಪು ನೀಡಲು ಎರಡು ಮುಖ್ಯವಾದ ಅಂಶಗಳನ್ನು ಅವಲಂಬಿಸುತ್ತಾನೆ. ಅಂದರೆ ಸಾಕ್ಷಿದಾರರ ಹೇಳಿಕೆಗಳು ಮತ್ತು ದಸ್ತಾವೇಜುಗಳು ಈ ಕಲಮಿನಲ್ಲಿ ಅಡಕವಾಗಿವೆ. ಸಾಕ್ಷೀದಾರರ ಸಾಕ್ಷಿ ಮಾಡಿಸುವುದು ಸಾಮಾನ್ಯವಾಗಿ ಅನಿವಾರ್ಯವಾಗಿರುತ್ತದೆ. ಮತ್ತು ಇದರ ಮೂಲಕ ದಸ್ತಾವೇಜಿನ ಒಕ್ಕಣೆಗಳನ್ನು ಹೊರತುಪಡಿಸಿ, ಉಳಿದ ಎಲ್ಲ ವಿಷಯಗಳನ್ನು ಸಿದ್ಧಮಾಡಬಹುದು (ಕಲಮು–೫೯) ಯಾವನೊಬ್ಬನು ತಾನು ಬರೆದುಕೊಟ್ಟ ದಸ್ತಾವೇಜಿನ ವಿಷಯವು ನಿಜವೆಂದು ಸಿದ್ಧಪಡಿಸುವುದಕ್ಕಾಗಿ ಆತನ ಮೌಖಿಕ ಸಾಕ್ಷಿಯು ಅತ್ಯವಶ್ಯವಾಗಿದೆ. (ಕಲಮು ೬೭–೭೩)

'ಸಾಬೀತುಪಡಿಸಿದೆ' ಎಂಬ ಪದದ ವ್ಯಾಖ್ಯೆಗೆ ಹೋಲಿಸಿದರೆ 'ಸಾಕ್ಷ್ಯ' ಎಂಬ ಪದದ ವ್ಯಾಖ್ಯೆಯು ತೀರಾ ಸಂಕುಚಿತ ಅರ್ಥವುಳ್ಳದ್ದಾಗಿದೆ.

'ಸಾಬೀತುಪಡಿಸಿದೆ' ಎಂಬ ಶಬ್ದದ ವ್ಯಾಖ್ಯೆಯನ್ವಯ ಒಂದು ವಿಷಯವು 'ಸಾಬೀತುಪಡಿಸಿದೆ' ಎಂದು ಹೇಳಬೇಕಾದರೆ, ಯಾವಾಗ, ನ್ಯಾಯಾಲಯವು ತನ್ನ ಮುಂದೆ ಇರುವ ವಿಷಯಗಳನ್ನು ಪರಿಗಣಿಸಿ, ಅದು ಅಸ್ತಿತ್ವದಲ್ಲಿದೆಯೆಂದು ನಂಬಿದರೆ ಆ ವಿಷಯವನ್ನು 'ಸಾಬೀತುಪಡಿಸಿದೆ' ಎಂದು ಹೇಳಬಹುದು.

'ಮುಂದಿರುವ ವಿಷಯ' ಈ ಪದ 'ಸಾಕ್ಷ್ಯ' ಪದಕ್ಕೆ ಒಳಗೊಂಡಿರುವ ಅರ್ಥಕ್ಕಿಂತ ಹೆಚ್ಚಿನ ಅರ್ಥವನ್ನು ಹೊಂದಿದೆ.

**ಸಾಕ್ಷ್ಯವು ಈ ಕೆಳಗಿನವುಗಳನ್ನು ಒಳಗೊಂಡಿರುವುದಿಲ್ಲ:**

೧. ಪಕ್ಷಗಾರರು ಮಾಡಿದ ಹೇಳಿಕೆಗಳು ಮತ್ತು ಆರೋಪಿಗಳು ಮಾಡಿದ ಹೇಳಿಕೆಗಳು.

೨. ಸಾಕ್ಷಿದಾರರ ನಡೆವಳಿಕೆಗಳು.

೩. ಸ್ಥಾನಿಕ ವಿಚಾರಣೆಯ ಪರಿಣಾಮಗಳು.

೪. ನ್ಯಾಯಿಕವಾಗಿ ನ್ಯಾಯಾಧೀಶರ ಗಮನಕ್ಕೆ ಬಂದ ಸಂಗತಿಗಳು.

೫. ಯಾವುದೇ ಸ್ಥಿರ ಆಸ್ತಿ ಮತ್ತು ವೈಯಕ್ತಿಕ ಆಸ್ತಿಗಳ ಪರಿಶೀಲನೆಯು ಮಹತ್ವದ್ದಾಗಬಹುದು. ಮುಂದೆ ಆಯುಧಗಳು, ಉಪಕರಣಗಳು ಇಲ್ಲವೆ ಕಳವು ಮಾಡಿದ ವಸ್ತುಗಳಂತಹ ವಿವಾದಾಂಶವನ್ನು ಪ್ರಶ್ನೆಯನ್ನು ತೀರ್ಮಾನಿಸುವಾಗ ಮಹತ್ವದ ವಿಷಯವಾಗಬಹುದು.

೬. ಮ್ಯಾಜಿಸ್ಟ್ರೇಟರು ಆರೋಪಿಗೆ ಕೇಳಿದ ಪ್ರಶ್ನೆಗಳು ಮತ್ತು ಆರೋಪಿಯು ಅದಕ್ಕೆ ಕೊಟ್ಟ ಉತ್ತರ. ಆದರೆ, ಇವೆಲ್ಲವೂ ಅದರ ಮುಂದಿರುವ ವಿಷಯದಲ್ಲಿ ಒಳಗೊಂಡಿರುತ್ತವೆ.

ಸಾಕ್ಷ್ಯ ಇದರ ವ್ಯಾಖ್ಯೆಯನ್ನು ಖಚಿತವಾಗಿ ಅನ್ವಯಿಸಬಹುದಾದ ವಿಷಯಗಳನ್ನು ಸಾಕ್ಷ್ಯ ಅಧಿನಿಯಮದಲ್ಲಿ ಚರ್ಚಿಸಲಾಗಿರುತ್ತದೆ. ಇದು ಉಳಿದ ಅಧಿನಿಯಮಗಳಲ್ಲಿ ಸಾಕ್ಷ್ಯ ಕುರಿತು ವ್ಯವಹರಿಸುವುದಕ್ಕೆ ಅನ್ವಯಿಸುವುದಿಲ್ಲ.

**೨. ಭಾರತೀಯ ಸಾಕ್ಷ್ಯ ಅಧಿನಿಯಮದ ಮೂಲ:**

೧. ಭಾರತದಲ್ಲಿಯ ಸಾಕ್ಷ್ಯದ ಕಾನೂನು ಇದು ೧೮೭೨ರ ೧ನೆಯ ಅಧಿನಿಯಮದಲ್ಲಿ ಒಳಗೊಂಡಿದೆ.

**೩. ಸಾಕ್ಷ್ಯದ ಕಾನೂನಿನ ವೈವಿಧ್ಯ:**

ವಿವಿಧತೆ ಯಾವಾಗ ರೆಗ್ಯುಲೇಟಿಂಗ್ ಅಧಿನಿಯಮವನ್ನು ಸಂಸತ್ತಿನಲ್ಲಿ ಆಡಳಿತವನ್ನು ನಿಯಂತ್ರಿಸುವ ಉದ್ದೇಶದಿಂದ ಈಸ್ಟ್ ಇಂಡಿಯಾ ಕಂಪನಿಯು ತನ್ನ ವಶದಲ್ಲಿರುವ ಬ್ರಿಟಿಷ್ ಭಾರತದಲ್ಲಿ ೧೭೭೩ರಿಂದ ಎರಡು ರೀತಿಯ ನ್ಯಾಯಾಲಯಗಳನ್ನು ಸ್ಥಾಪಿಸಿತು. ಪ್ರೆಸಿಡೆನ್ಸಿ ಪಟ್ಟಣಗಳಾದ ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಗಳಲ್ಲಿ ರಾಯಲ್ ಚಾರ್ಟರ್‌ನ ಮೂಲಕ ಸುಪ್ರೀಮ್ ಕೋರ್ಟುಗಳನ್ನು ಸ್ಥಾಪಿಸಲಾಯಿತು. ಹಳ್ಳಿಯ ಪ್ರದೇಶಗಳಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸಿವಿಲ್ (ದಿವಾಣಿ) ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಸುಪ್ರೀಮ್ ಕೋರ್ಟಿನಲ್ಲಿ ಅನುಸರಿಸಿದ ಸಾಕ್ಷಿಯ ನಿಯಮಗಳು, ಹಳ್ಳಿಯ ಪ್ರದೇಶ ನ್ಯಾಯಾಲಯಗಳು ಅನುಸರಿಸುತ್ತಿರುವ ಸಾಕ್ಷ್ಯದ ನಿಯಮಗಳಿಗಿಂತ ಭಿನ್ನವಾಗಿದ್ದವು.

೩. ಸುಪ್ರೀಮ್ ಕೋರ್ಟುಗಳು ಇಂಗ್ಲೆಂಡ್ ಸಾಮಾನ್ಯ ಕಾನೂನಿನಲ್ಲಿರುವ ನಿಯಮಗಳನ್ನು ಮತ್ತು ೧೭೨೬ರ ಮೊದಲು ಇಂಗ್ಲೆಂಡ್‌ನಲ್ಲಿ ಕಾನೂನಿನ ನಿಯಮಗಳನ್ನು ಮತ್ತು ಅದೇ ವರ್ಷ ಭಾರತದಲ್ಲಿ

ಚಾರ್ಟರ್‌ದಿಂದ ಮಂಡಿಸಿದ ನಿಯಮಗಳನ್ನು ಅನುಸರಿಸುತ್ತಿದ್ದವು. ನಂತರ ಕೆಲವು ನಿಯಮಗಳನ್ನು ಶಾಸನಗಳನ್ನಾಗಿ ಸಂಸತ್ತಿನಲ್ಲಿ ಭಾರತಕ್ಕೆ ಅನ್ವಯಿಸಿದ್ದೆಂದು ವ್ಯಕ್ತಪಡಿಸಿ ಕೆಲವು ನಿಯಮಗಳನ್ನು ಮಾಡಿದರು. ಅದೇ ಕಾಲಕ್ಕೆ ಉಳಿದವುಗಳಿಗೆ ರೂಢಿ ಸಂಪ್ರದಾಯಕ್ಕಿಂತ ಹೆಚ್ಚಿನ ಅಧಿಕಾರ ಇರಲಿಲ್ಲ.

೪. ಪ್ರೆಸಿಡೆನ್ಸಿ ಪಟ್ಟಣಗಳ ಹೊರಗೆ ಇರುವ ನ್ಯಾಯಾಲಯಗಳಿಗಾಗಿ ಮತ್ತು ರಾಯಲ್ ಚಾರ್ಟರ್‌ನಿಂದ ಸ್ಥಾಪಿಸದೆ ಇರುವ ಸಂಪೂರ್ಣ ಸಾಕ್ಷ್ಯದ ನಿಯಮಗಳನ್ನು ಮಾಡಿಲ್ಲ. ಇಲ್ಲವೇ ಅಧಿಕೃತವಾಗಿ ಮಂಡಿಸಿರುವುದಿಲ್ಲ. ೧೭೯೩ ಮತ್ತು ೧೮೩೪ನೆಯ ಇಸವಿಯ ಮಧ್ಯದಲ್ಲಿ ಮಾಡಿದ ರೆಗ್ಯುಲೇಶನ್ನುಗಳು ಕೆಲವು ನಿಯಮಗಳನ್ನು ಒಳಗೊಂಡಿದ್ದು ಇರುತ್ತದೆ. ಉಳಿದವುಗಳನ್ನು ಜಾರಿಯಲ್ಲಿರುವ ರೂಢಿ ಸಂಪ್ರದಾಯಗಳ ಕಾನೂನಿನ ಸಾಕ್ಷ್ಯ ಮತ್ತು ಭಾಗಶಃ ಹೇಡ್ಯದ ಮತ್ತು ಮಹಮ್ಮದೀಯ ಕಾನೂನಿನ ಅಧಿಕಾರಿಗಳಿಂದ ಪಡೆದುಕೊಂಡದ್ದು ಇದೆ. ಉಳಿದವುಗಳನ್ನು ಇಂಗ್ಲಿಷ್ ಪಠ್ಯಪುಸ್ತಕಗಳಿಂದ ಪಡೆಯಲಾಗಿದೆ.

**ಏಕರೂಪತೆಯತ್ತ ಪ್ರಯತ್ನಗಳು:**

೫. ಗವರ್ನರ ಜನರಲ್‌ರ ಕೌನ್ಸಿಲ್ ಕುರಿತು ಮೊದಲನೆಯ ಅಧಿನಿಯಮವೆಂದರೆ ೧೮೩೫ನೆಯ ಇಸವಿಯ ೧೦ನೆಯ ಅಧಿನಿಯಮ. ಇದು ಸಾಕ್ಷ್ಯ ಸಂಬಂಧಿಸಿದ್ದಾಗಿದೆ. ಬ್ರಿಟಿಷ್ ಭಾರತದ ಎಲ್ಲ ನ್ಯಾಯಾಲಯಗಳಿಗೂ ಇದು ಅನ್ವಯಿಸಿತು. ಮತ್ತು ಗವರ್ನರ್ ಜನರಲ್ ಇವರ ಕೌನ್ಸಿಲ್ ಗವರ್ನರ್ ಜನರಲ್ ಅಧಿನಿಯಮ ಸಿದ್ಧಪಡಿಸುವಿಕೆಯನ್ನು ಕುರಿತದ್ದಾಗಿದೆ.

ಇದರ ಮುಂದೆ ಮುಂದಿನ ೨೦ ವರ್ಷಗಳ ಅವಧಿಯಲ್ಲಿ ೧೧ (ಹನ್ನೊಂದು) ಅಧಿನಿಯಮಗಳನ್ನು ಪಾಸು ಮಾಡಿದೆ. ಇದರ ಪರಿಣಾಮವಾಗಿ ಸಾಕ್ಷ್ಯದ ಕಾನೂನಿಗೆ ಅಲ್ಪಸ್ವಲ್ಪ ತಿದ್ದುಪಡಿಯೂ ಆಗಿದೆ. ಮತ್ತು ಇಂಗ್ಲೆಂಡಿನಲ್ಲಿ ಸಾಕ್ಷ್ಯ ಅಧಿನಿಯಮದಲ್ಲಿ ಆದ ಸುಧಾರಣೆಗಳನ್ನು ಭಾರತದ ನ್ಯಾಯಾಲಯಗಳಲ್ಲಿ ಅಳವಡಿಸಿ ಕೊಳ್ಳಲಾಗಿದೆ.

೧೮೫೫ರಲ್ಲಿ: ೧೮೫೫ರ ೨ನೆಯ ಅಧಿನಿಯಮವನ್ನು ಮುಂದಿನ ಸಾಕ್ಷ್ಯ ಅಧಿನಿಯಮದ ಸುಧಾರಣೆಗಾಗಿ ಪಾಸು ಮಾಡಿತು. ಅದರಲ್ಲಿ ಅನೇಕ ಕಲಮುಗಳು ಬ್ರಿಟಿಷ್ ಭಾರತಕ್ಕೆ ಅನ್ವಯವಾಗುವ ಅನೇಕ ಕಲಮುಗಳನ್ನು ಒಳಗೊಂಡದ್ದಾಗಿರುತ್ತದೆ.

೬. ಏಕರೂಪತೆ ತರುವ ಪ್ರಯತ್ನಗಳು ಏನೇ ಇದ್ದರೂ ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ ಸಾಕ್ಷ್ಯ ನಿಯಮ ಮತ್ತು ಹಳ್ಳಿಯ ಕೋರ್ಟುಗಳಲ್ಲಿ ಸಾಕ್ಷ್ಯ ನಿಯಮಗಳಲ್ಲಿ ವ್ಯತ್ಯಾಸವು ಮುಂದುವರಿಯಿತು. ಈ ವ್ಯತ್ಯಾಸವು ನ್ಯಾಯಾಲಯಗಳಿಂದ ಮೇಲಿಂದ ಮೇಲೆ ಟೀಕೆಗೆ ಗುರಿಯಾಗುವ ವಿಷಯವಾಗಿ ಮುಂದುವರಿಯಿತು. ಇಂತಹ ವಿಷಯವನ್ನು ನಿವಾರಿಸುವ ಸಲುವಾಗಿ ೧೮೭೨ನೆಯ ಇಸವಿ ೧ನೆಯ ಅಧಿನಿಯಮವನ್ನು ಪಾಸು ಮಾಡಲಾಯಿತು.

**ಅಧಿನಿಯಮವನ್ನು ಅರ್ಥೈಸುವುದು**

೧. ಒಂದು ಅಧಿನಿಯಮವನ್ನು (೧) ಕ್ರೋಡೀಕರಿಸಬಹುದು, (೨) ತಿದ್ದುಪಡಿ ಮಾಡಬಹುದು, (೩) ಇಲ್ಲವೆ ಅದನ್ನು ವ್ಯಾಖ್ಯಾಯಿಸುವುದಕ್ಕಾಗಿ ಎಂದರೆ ಕ್ರೋಢೀಕರಿಸುವುದಕ್ಕಾಗಿ ಇರಬಹುದು. ಒಂದು ಅಧಿನಿಯಮವನ್ನು ಅರ್ಥೈಸುವುದು ಅದನ್ನು ಕ್ರೋಡೀಕರಿಸುವ ಅಧಿನಿಯಮವು ಅದರ ಕ್ರೋಡೀಕರಣ ಅಧಿನಿಯಮದಿಂದ ಭಿನ್ನವಾಗಿರುತ್ತದೆ.

೨. ಒಂದು ಕ್ರೋಡೀಕರಿಸುವ ಅಧಿನಿಯಮವನ್ನು ಅರ್ಥೈಸುವುದು: ಒಂದು ಕ್ರೋಡೀಕರಿಸುವ ಅಧಿನಿಯಮವನ್ನು ಅರ್ಥೈಸುವ ನಿಯಮವನ್ನು (೧೯೮೧) ಎ.ಸಿ. ೧೦೭(೧೨೦)ಯಲ್ಲಿ ನಮೂದಿಸಲಾಗಿದೆ.

*ಬ್ಯಾಂಕ್ ಆಫ್ ಇಂಗ್ಲೆಂಡ್ ವರ್ಸಸ್ ವ್ಯಾಗಲಿಯನಾ*

*ಲಾರ್ಡ್ ಹಾಲ್ಬರಿಯು ಪರಿವೀಕ್ಷಿಸಿದ್ದು, ಪು. ೧೨೦*

"ಯಾವಾಗ ಒಂದು ಶಾಸನವನ್ನು ಕ್ರೋಡೀಕರಿಸುವ ಕಾನೂನು ಎಂದು ಹೇಳಿದ್ದರೆ, ಆಗ ನೀವು ಆ ಸಂಹಿತೆಯ ಹೊರಗೆ ಹೋಗಲು ಸ್ವತಂತ್ರ ಎಂಬ ಅಭಿಪ್ರಾಯವನ್ನು ಸಂಪೂರ್ಣವಾಗಿ ಸ್ವೀಕರಿಸಲು ನಾನು ಅಶಕ್ಯನಾಗಿದ್ದೇನೆ. ಏಕೆಂದರೆ ಹೀಗೆ ಸೃಷ್ಟಿಸಿದ ಈ ಸಂಹಿತೆಯು ಜಾರಿಯಲ್ಲಿ ಬರುವ ಪೂರ್ವದಲ್ಲಿ ಮತ್ತೊಂದು ಕಾನೂನು ಅಸ್ತಿತ್ವದಲ್ಲಿದ್ದಿತು."

**ಲಾರ್ಡ್ ಹರ್ಷೆಲ್ಸ್ ಗಮನಿಸಿದ್ದೇನೆಂದರೆ:**

**ಪುಟ ೧೪೪**

> "ಮೊದಲನೆಯ ಸೂಚನೆಯ ಮೇರೆಗೆ ಯೋಗ್ಯ ಕಾರಣವೆಂದರೆ ಶಾಸನದ ಭಾಷೆಯನ್ನು ಪರೀಕ್ಷಿಸುವುದು ಮತ್ತು ಅದರ ಸ್ವಾಭಾವಿಕ ಅರ್ಥವೇನು ಎಂದು ಪ್ರಶ್ನಿಸುವುದಾಗಿದೆ. ಕಾನೂನು ಬರುವ ಪೂರ್ವದಲ್ಲಿ (ಮುಂಚೆ) ಯಾವ ಸ್ಥಿತಿಯು ಇದ್ದಿತೆಂಬ ವಿಚಾರಣೆಯಿಂದ ಪ್ರಭಾವಿತರಾಗದೆ ಮತ್ತು ಹಿಂದೆ ಈ ಕಾನೂನು ಹೇಗೆ ಇದ್ದಿತೆಂಬ ವಿಚಾರಣೆಗೆ ಪ್ರಾರಂಭಿಸದೆ ಮತ್ತು ಆಮೇಲೆ ಬಹುತರವಾಗಿ ಬದಲಾವಣೆಗೆ ಬಿಡಬಾರದೆಂದು ಉದ್ದೇಶಿಸಿತೆಂದು ಊಹಿಸಬಾರದು. ಪದಗಳು ಆ ಅಭಿಪ್ರಾಯವನ್ನು ಸ್ಥಿರಪಡಿಸುವುದೋ ಹೇಗೆ ಎಂಬುದನ್ನು ನೋಡಬೇಕು."

೩. ಒಂದು ನಿರ್ದಿಷ್ಟ ಶಾಖೆಯ ಕಾನೂನನ್ನು ಕ್ರೋಢೀಕರಿಸುವ ಉದ್ದೇಶವೆಂದರೆ ಯಾವುದೇ ಪ್ರಶ್ನೆಗೆ ವಿಶೇಷವಾಗಿ ಅದು ಯಾವುದೇ ವಿಷಯದ ಬಗ್ಗೆ ಆ ಕಾನೂನಿನಲ್ಲಿ ವ್ಯವಹರಿಸಿದ್ದರೆ ಅದನ್ನು ಆ ಶಾಸನದ ಕ್ರೋಡೀಕರಣದಲ್ಲಿ ತರತಕ್ಕದ್ದು ಮತ್ತು ಅದರಲ್ಲಿ ಬಳಸಿದ ಭಾಷೆಯನ್ನು ಅರ್ಥೈಸುವುದರ ಮೂಲಕ ಅದನ್ನು ವಿಚಾರಿಸಿ ತಿಳಿಸಿಕೊಳ್ಳತಕ್ಕದ್ದು.

೪. ಕ್ರೋಡೀಕರಿಸಿದ ಅಧಿನಿಯಮವನ್ನು ಅರ್ಥೈಸುವುದು: ಕ್ರೋಡೀಕರಿಸಿದ ಅಧಿನಿಯಮವನ್ನು ಅರ್ಥೈಸುವ ನಿಯಮವನ್ನು (೧೮೯೪) ೨ ಸಿಎಚ್ ೫೫೭ರಲ್ಲಿ ಹೇಳಲಾಗಿದೆ.

ನ್ಯಾಯಮೂರ್ತಿ ಶಿಟ್ಟಿ (ಪು. ೫೬೧) ಅವರು ಬ್ಯಾಂಕ್ ಆಫ್ ಇಂಗ್ಲೆಂಡ್ ವಿರುದ್ಧ ವಾಗ್ಲೇನೋದಲ್ಲಿ ಕ್ರೋಡೀಕರಣ ಅಧಿನಿಯಮದ ಬಗ್ಗೆ ಲಾರ್ಡ್ ಹಾಲ್ಸಬರಿ ಉಲ್ಲೇಖಿಸಿ ಅರ್ಥೈಸುವ ನಿಯಮವನ್ನು ಸಮೀಕ್ಷಿಸಿದ್ದಾರೆ.

> "...ಆದರೆ ನಾನು ಇಲ್ಲಿ ಒಂದು ಸಂಸತ್ತಿನ ಅಧಿನಿಯಮವನ್ನು ಕ್ರೋಡೀಕರಿಸುವ ಕುರಿತು ವ್ಯವಹರಿಸುವುದಿಲ್ಲ. ಆದರೆ ಒಂದು ಅಧಿನಿಯಮವನ್ನು ತಿದ್ದುಪಡಿ ಮಾಡಿ ಕ್ರೋಡೀಕರಿಸುವ ಕಾನೂನು ಕುರಿತು ಹೇಳುತ್ತೇನೆ. ಮತ್ತು ಆದ್ದರಿಂದ ನಾನು ಹೇಳುವುದೇಂದರೆ, ಈ ಪರಿವೀಕ್ಷಣೆಗಳು (ಲಾರ್ಡ್ ಹಾಲ್ಸ್‌ಬರಿಯವು) ಅನ್ವಯಿಸುವುದಿಲ್ಲ. ಮತ್ತು ನನ್ನ ವಿಚಾರದಲ್ಲಿ ಒಂದು ಕ್ರೋಡೀಕರಿಸಿದ ಅಧಿನಿಯಮದ ಮತ್ತು ತಿದ್ದುಪಡಿಯಾದ ಕಲಮನ್ನು ಅರ್ಥೈಸುವುದು ಮತ್ತು ಈ ಕ್ರೋಡೀಕರಣ ಅಧಿನಿಯಮಗಳು ಹಿಂದಿನ ಕಾನೂನಿನ ಸ್ಥಿತಿಯ ಬಗ್ಗೆ ಉಲ್ಲೇಖಿಸಬೇಕು. ಯಾಕೆಂದರೆ ಯಾವ

ಉದ್ದೇಶದಿಂದ ವಿಚಾರಣೆ ನಡೆದಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಮತ್ತು ಶಾಸನ ಮಾಡುವುದರ ಉದ್ದೇಶವನ್ನು ಅರಿತುಕೊಳ್ಳುವುದು ಕಾನೂನುಬದ್ಧವಾಗಿದೆ.''

೫.ಕ್ರೋಢೀಕರಿಸುವ ಉದ್ದೇಶವು ತಿದ್ದುಪಡಿಯೊಂದಿಗೆ ಕೇವಲ ಅಸ್ತಿತ್ವದಲ್ಲಿರುವ ಕಾನೂನಿನ ಚದರಿಹೋದ ಭಾಗಗಳನ್ನು ಒಂದು ಕಡೆಗೆ ಸೇರಿಸುವುದು ಆಗಿರುತ್ತದೆ. ಅದು ಕೇವಲ ಹಳೆಯ ಕಾನೂನನ್ನು ಪುನಃ ಅಧಿನಿಯಮಿಸುವುದಾಗಿರುತ್ತದೆ. ಈ ಶಾಸನವು ಹೊಸ ಕಾನೂನು ಆಗಿರುವುದಿಲ್ಲ. ಮೇಲುನೋಟಕ್ಕೆ ಅದರ ಉಪಬಂಧಗಳಿಗೆ ಹಿಂದಿನ ಅಧಿನಿಯಮದಲ್ಲಿಯ ಉಪಬಂಧಗಳಿಗೆ ಯಾವ ರೀತಿಯ ಪರಿಣಾಮವನ್ನು ಕೊಡುತ್ತಿದ್ದರೋ ಈಗ ಅವುಗಳ ಸ್ಥಾನದಲ್ಲಿ ಬಂದ ಈ ಅಧಿನಿಯಮದ ಉಪಬಂಧಗಳಿಗೂ ಅದೇ ಪರಿಣಾಮವನ್ನು ಕೊಡತಕ್ಕದ್ದು.

೬. ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಸ್ತಾವನೆಯಲ್ಲಿ ಹೇಳಿದಂತೆ ಕ್ರೋಡೀಕರಿಸುವುದಕ್ಕಾಗಿ, ವ್ಯಾಖ್ಯಾನಿಸುವುದಕ್ಕಾಗಿ ಮತ್ತು ಸಾಕ್ಷ್ಯದ ಕಾನೂನನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮವಿದೆ.

ಇದು ಕೇವಲ ಕ್ರೋಡೀಕರಿಸುವುದನ್ನು ಮತ್ತು ಸಾಕ್ಷ್ಯವನ್ನು ತಿದ್ದುಪಡಿ ಮಾಡುತ್ತದೆ. ಅದೇಂದರೆ ಅದು ಸಾಕ್ಷ್ಯವನ್ನು ಕುರಿತು ಇರುವ ಕಾನೂನನ್ನು ಸಂಯೋಜನಗೊಳಿಸುವ *ಬ್ಯಾಂಕ್ ಆಫ್ ಇಂಗ್ಲೆಂಡ್ ವಿ. ವಾಗ್ಲಿನೋ* ಮತ್ತು ಅದರಲ್ಲಿ ಕಾಣಿಸಿದ ನಿಯಮಗಳ ಅನ್ವಯ ಇರುವುದಿಲ್ಲ.

**ಈ ಅಧಿನಿಯಮದ ವ್ಯಾಪ್ತಿ ಹಾಗೂ ವಿಸ್ತಾರ**

೧. ಕಲಮು ೨ರಲ್ಲಿ ಈ ಅಧಿನಿಯಮದ ವ್ಯಾಪ್ತಿ ಕುರಿತು ವ್ಯಾಖ್ಯಾನಿಸಲಾಗಿದೆ. ಸಾಕ್ಷ್ಯದ ಕಾನೂನು ಕಲಮು ೨ರ ಕೆಳಗೆ ಕಾಣಿಸಿದ್ದನ್ನು ಒಳಗೊಂಡಿದೆ.

(i) ಈ ಸಾಕ್ಷ್ಯ ಅಧಿನಿಯಮದಲ್ಲಿ ಮತ್ತು

(ii) ಉಳಿದ ಅಧಿನಿಯಮಗಳಲ್ಲಿ ಇಲ್ಲವೆ ಬೇರೆ ಶಾಸನಗಳಲ್ಲಿ ಇಲ್ಲವೆ ಯಾವ ಶಾಸನಗಳು ನಿರ್ದಿಷ್ಟವಾಗಿ ಸಾಕ್ಷ್ಯದ ವಿಷಯವಾಗಿ ಮತ್ತು ಯಾವುಗಳನ್ನು ವಿವರಣಾತ್ಮಕವಾಗಿ ನಿರಸನಗೊಳಿಸದಿದ್ದರೆ, ಈ ಕಲಮು ಪರಿಣಾಮ ಕೊಡುವಲ್ಲಿ ಸಾಕ್ಷಿಗೆ ಯಾವುದೇ ಅಧಿನಿಯಮದಲ್ಲಿ ಒಳಗೊಂಡಿರದ ಯಾವುದೇ ರೀತಿಯ ಸಾಕ್ಷ್ಯವನ್ನು ಉಪಯೋಗಿಸುವುದನ್ನು ನಿಷೇಧಿಸುತ್ತದೆ. ಇಲ್ಲವೆ ಇನ್ನಾವುದೇ ಶಾಸನ ಇಲ್ಲವೆ ರೆಗ್ಯುಲೇಶನ್ ವಿವರಣಾತ್ಮಕವಾಗಿ ನಿರಸನಗೊಳಿಸಲಾಗದ ರೆಗ್ಯುಲೇಷನ್‌ನಲ್ಲಿರದ ವಿಷಯಗಳ ಬಳಕೆಯನ್ನು ನಿಷೇಧಿಸಿದೆ.

ಕಲಮು ೨– ಕೆಳಗಿನ ಕಾಣಿಸಿದ ಕಾನೂನುಗಳನ್ನು ನಿರಸನಗೊಳಿಸಲಾಗಿದೆ.

(೧) ಯಾವುದೇ ಶಾಸನದ ಅಧಿನಿಯಮದಲ್ಲಿ ಇಲ್ಲವೆ ಜಾರಿಯಲ್ಲಿರುವ ಯಾವುದೇ ರೆಗ್ಯುಲೇಷನ್ ಇವುಗಳಲ್ಲಿ ಇರದ ಎಲ್ಲ ಸಾಕ್ಷಿಯ ನಿಯಮಗಳು.

(೨) ಇಂಥ ಎಲ್ಲ ನಿಯಮಗಳು ರೆಗ್ಯುಲೇಷನ್‌ನಲ್ಲಿ ಇರುವಂತಹುಗಳಿಗೆ ಭಾರತೀಯ ಕೌನ್ಸಿಲ್ ಅಧಿನಿಯಮದ ೧೮೬೧ ಕಲಮು ೨೫ರ ಅನ್ವಯ ಕಾನೂನಿನ ಪರಿಣಾಮವುಂಟಾಗಿದ್ದರೆ.

(೩) ಪರಿಶಿಷ್ಟರಲ್ಲಿ ಕಾಣಿಸಿದ ಶಾಸನಗಳು.

೨. ಸಾಕ್ಷ್ಯ ಅಧಿನಿಯಮ ಮತ್ತು ಸಾಕ್ಷ್ಯಕ್ಕೆ ಸಂಬಂಧಿಸಿದ ಬೇರೆ ಅಧಿನಿಯಮಗಳು.

೧. ಸಾಕ್ಷ್ಯ ಅಧಿನಿಯಮವು ಒಂದು ಪ್ರತ್ಯೇಕ ಶಾಸನವಾಗಿರುತ್ತದೆ. ಅದು ಕಾನೂನಿನ ಒಂದು ಮಹತ್ವದ ಭಾಗವನ್ನು ಕುರಿತು ವ್ಯವಹರಿಸುತ್ತದೆ. ಮತ್ತು ಅದರ ದಂಡ ಪ್ರಕ್ರಿಯಾ ಸಂಹಿತೆ ಉಪಬಂಧಗಳಿಂದ ಸ್ವತಂತ್ರವಾಗಿರುತ್ತವೆ. ಮತ್ತು ಅವುಗಳಿಗೆ ಸಂಪೂರ್ಣ ಅವಕಾಶ ಇರುತ್ತದೆ. ಸ್ಪಷ್ಟವಾಗಿ ಅವುಗಳನ್ನು ನಿರಸನ ಗೊಳಿಸಲಾಗಿದೆ. ಇಲ್ಲವೆ ಬೇರೊಂದು ಶಾಸನದ ಮೂಲಕ ತಿದ್ದುಪಡಿ ಮಾಡಿದೆ ಎಂದು ಸಿದ್ಧವಾಗದ ಹೊರತು ಈ ಉಪಬಂಧಗಳು ಸ್ವತಂತ್ರವಾಗಿದ್ದು, ಅವುಗಳಿಗೆ ಸಂಪೂರ್ಣ ಅವಕಾಶವಿರುತ್ತದೆ.

*೭ ಲಾಹೋರ್ ೮೪*

**ಅಧಿನಿಯಮವನ್ನು ಅನ್ವಯಿಸುವುದು**

**ಕಲಮು ೧: ಇದು ಈ ಅಧಿನಿಯಮದ ಅನ್ವಯಿಸುವಿಕೆಯನ್ನು ಗೊತ್ತುಪಡಿಸುತ್ತದೆ.**

೧. ಪ್ರಾದೇಶಿಕ ಅನ್ವಯ

ಇದು ಬ್ರಿಟಿಷ್ ಭಾರತದ ಸಂಪೂರ್ಣ ಭಾಗಕ್ಕೆ ಅನ್ವಯಿಸುತ್ತದೆ. ಮತ್ತು ಆದ್ದರಿಂದ ಪರಿಶಿಷ್ಟದಲ್ಲಿ ಕಾಣಿಸಿದ ಜಿಲ್ಲೆಗಳಿಗೆ ಅನ್ವಯಿಸುತ್ತದೆ.

ಇದು ಯಾವ ಸ್ಥಳದಲ್ಲಿ ಜಾರಿಯಲ್ಲಿ ಬರುವುದೆಂದು ಘೋಷಿಸಲಾಗಿದೆಯೋ ಆ ಭಾಗಕ್ಕೆ ಇದು ಅನ್ವಯಿಸುತ್ತದೆ.

೨. ನ್ಯಾಯಾಧಿಕರಣಗಳಿಗೆ ಅನ್ವಯಿಸುವುದು:

ಎಲ್ಲ ನ್ಯಾಯಿಕ ವ್ಯವಹರಣೆಗಳಿಗೆ ಇಲ್ಲವೆ ಯಾವುದೇ ನ್ಯಾಯಾಲಯದ ಮುಂದೆ ಇರುವ ಉಪಬಂಧಗಳಿಗೆ ಇದು ಅನ್ವಯಿಸುತ್ತದೆ.

**(i) ನ್ಯಾಯಿಕ ವ್ಯವಹರಣೆಗಳೆಂದರೇನು?**

ಅದಕ್ಕೆ ವ್ಯಾಖ್ಯೆಯು ಇರುವುದಿಲ್ಲ.

ಅದರ ಉದ್ದೇಶವು ಯಾವಾಗ ಇಬ್ಬರ ನಡುವಿನ ಕಾನೂನಿನ, ನ್ಯಾಯಿಕ ವಿಷಯ ಮತ್ತು ಸಮಾಜವು ಸಾಮಾನ್ಯವಾಗಿ ತಮ್ಮ ಸಂಬಂಧವನ್ನು ತೀರ್ಮಾನಿಸುವುದು ಇದ್ದರೆ, ಅದಕ್ಕೆ ನ್ಯಾಯಿಕ ವ್ಯವಹರಣೆಯ ವಿಚಾರಣೆ ಎಂದು ಹೇಳುತ್ತಾರೆ. ಆದರೆ ಒಬ್ಬ ನ್ಯಾಯಾಧೀಶನು ಇಂತಹ ಉದ್ದೇಶವಿಲ್ಲದೆ ಕಾರ್ಯ ನಿರ್ವಹಿಸಿದರೆ ಅದಕ್ಕೆ ಅದು ನ್ಯಾಯಿಕ ವ್ಯವಹರಣೆ ಆಗುವುದಿಲ್ಲ.

*೧೨ ಬಾಂಬೆ, ೧೦ ಎಮ್.ಅಯ್.ಎ. ೩೪೦*

ಮುಂಬೈ ಭೂಕಂದಾಯ ಅಧಿನಿಯಮ ಕಲಂ ೩೨ರ ಅನ್ವಯ ಒಂದು ವಿಚಾರಣೆಯು ಒಂದು ನ್ಯಾಯಿಕ ವ್ಯವಹರಣೆ ಆಗುವುದಿಲ್ಲ.

*೨೨ ಬಾಂಬೆ ೯೩೭*

೨. ಈ ಅಧಿನಿಯಮವು ಎಲ್ಲ ನ್ಯಾಯಿಕ ವ್ಯವಹರಣೆಗಳು ಅಂದರೆ ಎಲ್ಲ ಸಿವ್ಹಿಲ್ ಅದರಂತೆ ಕ್ರಿಮಿನಲ್ ಅನ್ವಯಿಸುವುದು.

೩. ಅಧಿನಿಯಮವು ಕೇವಲ ದಾವೆಗಳ ವ್ಯವಹರಣೆಗಳನ್ನು ಕುರಿತು ಮಾತ್ರ ಹೇಳುವುದಿಲ್ಲ. ಮತ್ತು ವಿಚಾರಣೆಯ ವ್ಯವಹರಣೆಗಳ ವಿಶಾಲ ಮೇರೆ ಕುರಿತು ಹೇಳುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೧೦೭ ಇಲ್ಲವೆ ಕಲಮು ೧೪೪ದಲ್ಲಿಯ ವಿಚಾರಣೆ ವಿಚಾರಣೆಯಾಗಿರುವುದಿಲ್ಲ. ಅದರಂತೆ ಒಂದು

ಡಿಕ್ರಿಯ ಅಮಲ ಬಜಾವಣಿಯು ಒಂದು ದಾವೆಯು ಆಗಿರುವುದಿಲ್ಲ. ಆದರೆ ಅದು ಒಂದು ಕೇವಲ ವ್ಯವಹರಣೆಯಾಗಿರುತ್ತದೆ. ತತ್‌ಪರಿಣಾಮವಾಗಿ ಈ ಅಧಿನಿಯಮವು ವಿಚಾರಣೆಗಳಿಗೆ ಮತ್ತು ದಾವೆಗಳ ಹೊರತಾದ ವ್ಯವಹರಣೆಗಳಿಗೂ ಅನ್ವಯಿಸುತ್ತದೆ.

**(ii) ನ್ಯಾಯಾಲಯವೆಂದರೆ ಏನು?**

೧. ಕಲಮು ೩– ಅರ್ಥವಿವರಣೆ ಕೊಡುವ ಖಂಡವು ಯಾವ ಅರ್ಥದಲ್ಲಿ 'ನ್ಯಾಯಾಲಯ' ಈ ಪದವನ್ನು ಈ ಅಧಿನಿಯಮದಲ್ಲಿ ಬಳಸಲಾಗಿದೆಂದು ಹೇಳಿದೆ. ಈ ಕಲಮಿನನ್ವಯ–

"ನ್ಯಾಯಾಲಯವು ಎಲ್ಲ ನ್ಯಾಯಾಧೀಶರನ್ನು ಮತ್ತು ಮ್ಯಾಜಿಸ್ಟ್ರೇಟರನ್ನು ಮತ್ತು ಮಧ್ಯಸ್ಥರನ್ನು ಹೊರತುಪಡಿಸಿ ಕಾನೂನು ಪ್ರಕಾರ ಸಾಕ್ಷಿ ತೆಗೆದುಕೊಳ್ಳಲು ಅಧಿಕಾರವುಳ್ಳವರು."

೨. ನ್ಯಾಯಾಲಯವೆಂದರೇನೆಂಬುದನ್ನು ಈ ಕಲಮು ವ್ಯಾಖ್ಯಾಯಿಸುವುದಿಲ್ಲ. ಇದು ನ್ಯಾಯಾಲಯ ಈ ಪದದಲ್ಲಿ ಏನು ಒಳಗೊಳ್ಳುತ್ತದೆಂದು ಮಾತ್ರ ಹೇಳುತ್ತದೆ.

ಅದೆಂದರೆ ಯಾವ ಕಾರ್ಯನಿರ್ವಾಹಕಗಳನ್ನು ನ್ಯಾಯಾಲಯಗಳೆಂದು ಪರಿಗಣಿಸಬೇಕೆಂದು ಹೇಳುತ್ತದೆ.

೩. ಒಂದು ಖಂಡವನ್ನು ಅರ್ಥೈಸುವಾಗ ಒಂದು ಪದದಲ್ಲಿ ಮತ್ತು ಇದು ಒಳಗೊಂಡಿದ್ದರೆ, ಮತ್ತು ಅದರ ಅರ್ಥವು ತನ್ನ ಮೊದಲಿನ ಸಾಮಾನ್ಯವಾದ ಅರ್ಥವನ್ನೇ ಉಳಿಸಿಕೊಂಡಿದ್ದರೆ ಮತ್ತು ಆ ಖಂಡವು ಆ ಪದದ ಅರ್ಥವನ್ನು ವಿಶಾಲಗೊಳಿಸಿದರೆ ಮತ್ತು ಸಾಮಾನ್ಯ ಅರ್ಥದಲ್ಲಿ ಕೊಡುವುದನ್ನು ಅದು ಒಳಗೊಂಡಿರದಿದ್ದರೆ.

*೨೩ ಎ.ಎಲ್.ಜೆ. ೮೪೫*

೪. ನ್ಯಾಯಾಲಯವೆಂದರೆ ಮಧ್ಯಸ್ಥಗಾರರನ್ನು ಹೊರತುಪಡಿಸಿ ಎಲ್ಲ ಜನರು ಯಾರಿಗೆ ಕಾನೂನು ಪ್ರಕಾರ ಸಾಕ್ಷಿ ತೆಗೆದುಕೊಳ್ಳಲು ಅಧಿಕಾರವಿದೆಯೋ ಅವರು ಇರುತ್ತಾರೆ. ಈ ಪ್ರಕಾರ ನ್ಯಾಯಾಲಯವನ್ನು ಕೇವಲ ಸಿವ್ಹಿಲ್ ನ್ಯಾಯಾಲಯಗಳ ಪೀಠಾಸೀನ ನ್ಯಾಯಾಧೀಶರಿಗೆ ಮತ್ತು ನ್ಯಾಯಾಧಿಕರಣಗಳಿಗೆ ಇಲ್ಲವೆ ಕ್ರಿಮಿನಲ್ ನ್ಯಾಯಾಧಿಕರಣಕ್ಕೆ ಸೀಮಿತಗೊಳಿಸಬಾರದ್ದು.

*೧೫ ಮದ್ರಾಸ್ ೧೩೮*

ಒಂದು ವಿಚಾರಣೆಯನ್ನು ನಡೆಯಿಸುತ್ತಿರುವ ಒಬ್ಬ ರಿಜಿಸ್ಟ್ರಾರ್ ನೋಂದಣಿ ಅಧಿನಿಯಮದ ಸಾಕ್ಷಿಯನ್ನು ತೆಗೆದುಕೊಳ್ಳುತ್ತಿರುವುದು ಒಂದು ನ್ಯಾಯಾಲಯವೇ ಆಗಿದೆ.

**೫. ನ್ಯಾಯಾಧೀಶರು:**

ಈ ಅಧಿನಿಯಮದಲ್ಲಿ 'ನ್ಯಾಯಾಧೀಶರು' ಈ ಪದದ ವ್ಯಾಖ್ಯೆಯನ್ನು ಕೊಟ್ಟಿರುವುದಿಲ್ಲ. ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಕಲಮು ೨(೮)ರಲ್ಲಿ 'ನ್ಯಾಯಾಧೀಶರು' ಈ ಪದದ ವ್ಯಾಖ್ಯೆಯನ್ನು ಕೊಡಲಾಗಿದೆ. ಪೀಠಾಸೀನ ಸಿವ್ಹಿಲ್ (ದಿವಾಣಿ) ನ್ಯಾಯಾಲಯ ಎಂಬ ಅರ್ಥದಲ್ಲಿ ಕೊಡಲಾಗಿದೆ.

ಭಾರತ ದಂಡಸಂಹಿತೆಯ ಕಲಮು ೧೯ರಲ್ಲಿಯೂ ಸಹ 'ನ್ಯಾಯಧೀಶ' ಇದರ ವ್ಯಾಖ್ಯೆಯನ್ನು ಕೊಡಲಾಗಿದೆ. ಈ ವ್ಯಾಖ್ಯೆಯ ಅನ್ವಯ ಯಾವ ಒಬ್ಬ ವ್ಯಕ್ತಿಯನ್ನು ನ್ಯಾಯಾಧೀಶನೆಂದು ಹೆಸರಿಸಲಾಗಿದೆಯೋ ಮತ್ತು ಯಾರಿಗೆ ಕಾನೂನಿನ ಅನ್ವಯ ಸಿವ್ಹಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಕಾನೂನಿನ ಪ್ರಕರಣಗಳಲ್ಲಿ ಅಂತಿಮ ತೀರ್ಮಾನ ಕೊಡಲು ನೇಮಿಸಲಾಗಿದೆಯೋ ಅಂತಹ ವ್ಯಕ್ತಿ.

**೬. ಮ್ಯಾಜಿಸ್ಟ್ರೇಟರು**

ಈ ಅಧಿನಿಯಮದಲ್ಲಿ ಈ ಪದದ ವ್ಯಾಖ್ಯೆಯನ್ನು ಕೊಟ್ಟಿರುವುದಿಲ್ಲ. ಸಾಮಾನ್ಯ ಖಂಡಗಳ ಅಧಿನಿಯಮ (೧೮೯೭ನೆಯ ಇಸವಿಯ ೧೦ನೆಯ ಅಧಿನಿಯಮ) ಇದರಲ್ಲಿ ಈ ಪದದ ವ್ಯಾಖ್ಯೆಯು ಕೆಳಗಿನಂತೆ ಇರುತ್ತದೆ.

'ಮ್ಯಾಜಿಸ್ಟ್ರೇಟ್' ಈ ಜಾರಿಯಲ್ಲಿರುವ ದಂಡ ಪ್ರಕ್ರಿಯಾ ಸಂಹಿತೆಯ ಕೆಳಗೆ ಎಲ್ಲ ಇಲ್ಲವೆ ಯಾವುದೇ ಅಧಿಕಾರವನ್ನು ಚಲಾಯಿಸುವ ಅಧಿಕಾರವುಳ್ಳ ಎಲ್ಲರೂ ಇವುಗಳಲ್ಲಿ ಒಳಗೊಳ್ಳುತ್ತಾರೆ.

**೭. ಈ ವ್ಯಾಖ್ಯೆಗಳ ವೈಲಕ್ಷಣ್ಯವೆಂದರೆ ಅವು ಏಕರೀತಿಯವು ಆಗಿರುವುದಿಲ್ಲ. ಇಲ್ಲವೆ ಅವು ಸಹ ವ್ಯಾಪ್ತಿ ಹೊಂದಿರುವುದಿಲ್ಲ.**

(i) ಸಿವಿಲ್ ಪ್ರಕ್ರಿಯಾ ಸಂಹಿತೆಯ ವ್ಯಾಖ್ಯೆಯ ಆಧಾರವೆಂದರೆ ಪ್ರೆಸಿಡೆನ್ಸಿ ಅಧಿಕಾರಿಯ ವ್ಯಾಪ್ತಿ. *ಬ್ಯಾಂಕ್ ಆಫ್ ಇಂಗ್ಲೆಂಡ್ ವಿ ವಾಗ್ಲಿಯಾನೋ* ಲಾರ್ಡ್ ಹಾಲ್ಸಬರಿ ಅವರು ಪರಿವೀಕ್ಷಿಸಿದ್ದು, ಭಾರತ ದಂಡಸಂಹಿತೆ ಕೆಳಗೆ ಅದೇ ಪದದ ವ್ಯಾಖ್ಯೆಯ ತಳಹದಿಯ ಆತನು ತೀರ್ಪು ಕೊಡುವ ಅಧಿಕಾರ ವಾಗಿರುತ್ತದೆ. ಸಾಕ್ಷ್ಯ ಅಧಿನಿಯಮದಲ್ಲಿಯ ವ್ಯಾಖ್ಯೆಯು ಸಾಕ್ಷಿಯನ್ನು ಬರೆದುಕೊಳ್ಳುವ ಅಧಿಕಾರವನ್ನು ಅವಲಂಬಿಸಿರುತ್ತದೆ.

(ii) ದಂಡ ಪ್ರಕ್ರಿಯಾ ಸಂಹಿತೆಯ ಕೆಳಗೆ ನ್ಯಾಯಾಧೀಶ ಎಂದರೆ 'ಮ್ಯಾಜಿಸ್ಟ್ರೇಟರ'ನು ಒಳಗೊಳ್ಳುವುದಿಲ್ಲ. ಆದರೆ ಭಾರತ ದಂಡಸಂಹಿತೆಯ ವ್ಯಾಖ್ಯೆಯಲ್ಲಿ 'ಮ್ಯಾಜಿಸ್ಟ್ರೇಟ್'ರನ್ನು ಒಳಗೊಳ್ಳುತ್ತದೆ.

(iii) ಸಾಕ್ಷ್ಯ ಅಧಿನಿಯಮ ಇದು ಮಧ್ಯಸ್ಥನನ್ನು ಇಲ್ಲವೆ ನ್ಯಾಯಾಧೀಶರನ್ನು ಇಲ್ಲವೆ ಮ್ಯಾಜಿಸ್ಟ್ರೇಟರನ್ನು ಒಳಗೊಳ್ಳುವುದಿಲ್ಲ. ಆದರೆ ಭಾರತ ದಂಡಸಂಹಿತೆಯು ನ್ಯಾಯಾಧೀಶರು, ಮ್ಯಾಜಿಸ್ಟ್ರೇಟರು ಅದರಂತೆ ಮಧ್ಯಸ್ಥಗಾರನನ್ನು ಒಳಗೊಳ್ಳುತ್ತದೆ.

ಭಾರತದ ಸಾಕ್ಷ್ಯ ಅಧಿನಿಯಮದಲ್ಲಿ ನ್ಯಾಯಾಲಯ ಪದದ ವ್ಯಾಖ್ಯೆಯು ಕೇವಲ ಈ ಅಧಿನಿಯಮದ ಸಲುವಾಗಿ ಮಾತ್ರ ರಚಿಸಿದ್ದಾಗಿದೆ. ಅದನ್ನು ಅದರ ಕಾನೂನುಬದ್ಧ ವ್ಯಾಪ್ತಿಯ ಆಚೆಗೆ ವ್ಯಾಪ್ತಿಗೊಳಿಸಬಾರದು.

I. ಯಾವ ವ್ಯವಹರಣೆಗಳಿಗೆ ಸಾಕ್ಷಿ ಅಧಿನಿಯಮ ಅನ್ವಯಿಸುವುದಿಲ್ಲ:

(i) ಸೈನ್ಯ ಅಧಿನಿಯಮ ಇಲ್ಲವೆ ವಾಯು ಸೇವೆ ಅಧಿನಿಯಮದ ಅನ್ವಯ ಕರೆದ ಸೇನಾ ನ್ಯಾಯಾಲಯ ದಲ್ಲಿರುವ ವ್ಯವಹರಣೆಗಳಿಗೆ ಇದು ಅನ್ವಯಿಸುವುದಿಲ್ಲ.

(ii) ಯಾವುದೇ ನ್ಯಾಯಾಲಯಕ್ಕೆ ಇಲ್ಲವೆ ಅಧಿಕಾರಿಗಳಿಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಾಗ.

(iii) ಮಧ್ಯಸ್ಥಗಾರರ ಮುಂದಿನ ವ್ಯವಹರಣೆಗಳು.

ಸೇನಾ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆ

೧. ಈ ಅಧಿನಿಯಮವು ಸೇನಾ ನ್ಯಾಯಾಲಯದ ಮುಂದೆ ಇರುವ ಭಾರತೀಯ ಸೇನಾ ಅಧಿನಿಯಮ ಅದೆಂದರೆ– ಇದೇ ರೀತಿಯ ನ್ಯಾಯಾಲಯಗಳ ಸೈನಿಕ ನ್ಯಾಯಾಲಯ (೧೯೧೧ರ ೮ನೆಯ ಅಧಿನಿಯಮವು) ಅನ್ವಯಿಸುತ್ತದೆ.

೨. ಭಾರತೀಯ ಸಮುದ್ರ ನ್ಯಾಯಾಲಯಗಳ ಮುಂದಿರುವ ಎಲ್ಲ ವ್ಯವಹರಣೆಗಳಿಗೂ ಅನ್ವಯಿಸುತ್ತದೆ.

೧೮೮೭ನೆಯ ಇಸವಿ ೧೪ನೆಯ ಅಧಿನಿಯಮ ಕಲಮು ೬೮

೧೯೮೮ರ ೧೭ನೆಯ ಅಧಿನಿಯಮ

೧೯೯೯ರ ೧ನೆಯ ಅಧಿನಿಯಮ

೩. ಬ್ರಿಟಿಷ್ ಸೈನಿಕ ಇಲ್ಲವೆ ವಾಯುದಳ ಅಧಿನಿಯಮದ ಅನ್ವಯ ಸೈನಿಕ ನ್ಯಾಯಾಲಯದಲ್ಲಿ ನಡೆಯುವ ವ್ಯವಹರಣೆಗಳಿಗೆ ಅನ್ವಯಿಸುವುದಿಲ್ಲ.

ಸಾಕ್ಷಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕರಾರು ಮಾಡಿಕೊಂಡ ಸ್ಥಳ ಕಾನೂನಿನ ಅನ್ವಯ ನಿರ್ಣಯಿಸಲ್ಪಡುತ್ತದೆ. ಆದರೆ ಯಾವ ದೇಶದಲ್ಲಿ ಈ ಪ್ರಶ್ನೆಯು ಉದ್ಭವಿಸುವುದೋ ಅದರ ಅನ್ವಯ ಪರಿಹಾರ ಕೋರಿದ್ದರೆ ಆ ದೇಶದ ಕಾನೂನನ್ನು ಅನ್ವಯಿಸಬೇಕು ಮತ್ತು ಇದನ್ನು ಪರಿಣಾಮಕಾರಿ ಮಾಡಲು ಜಾರಿಗೊಳಿಸಲು ಯಾವ ಪರಿಹಾರ ಬೇಕು ಮತ್ತು ನ್ಯಾಯಾಲಯವು ಯಾವ ಜಾಗೆಯಲ್ಲಿ ಕೂಡುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ.

ಇವುಗಳ ಆಧಾರದ ಮೇಲೆ ಆ ನ್ಯಾಯಾಲಯದ ಮುಂದೆ ಇರುವ ಈ ವ್ಯವಹರಣೆಗಳಿಗೆ ಆ ಘಟನಾ ಸ್ಥಳದ ಸ್ಥಾನಿಕ ಕಾನೂನಿನ ಅನ್ವಯ ನಿರ್ಧರಿಸಬೇಕು. ಈ ಸಾಮಾನ್ಯ ತತ್ವಕ್ಕೆ ಸಾಕ್ಷ್ಯ ಅಧಿನಿಯಮದ ಉಪಬಂಧ ಅಪವಾದವಾಗಿರುತ್ತದೆ.

**II. ಪ್ರಮಾಣ ಪತ್ರಗಳು:**

ಸಾಮಾನ್ಯವಾಗಿ ಸಾಕ್ಷಿದಾರರ ಸಾಕ್ಷಿಗಳನ್ನು ತೆರೆದ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸಮ್ಮುಖದಲ್ಲಿ ಮತ್ತು ಅವರ ವೈಯಕ್ತಿಕ ನಿರ್ದೇಶನದಲ್ಲಿ ಮತ್ತು ಅವರ ಅಧೀಕ್ಷಣೆ ಮತ್ತು ನಿಯಂತ್ರಣದಲ್ಲಿ ಬರೆದುಕೊಳ್ಳಲಾಗುವುದು.

*(ಸಿ.ಪಿ.ಸಿ. ಆರ್ಡರ್ ೧೮)*

೨. ಪ್ರಮಾಣಪತ್ರವು ಒಂದು ಸಾಕ್ಷಿಯಾಗಿದ್ದು ಅದು ಹೇಳಿಕೆ: ನಿರೂಪಣೆ ರೂಪದಲ್ಲಿ ಇಲ್ಲವೆ ಘೋಷಣೆಯ ರೂಪದಲ್ಲಿ ಲಿಖಿತದಲ್ಲಿ ಶಪಥವನ್ನು ಮಾಡಿಸಲು ಅಧಿಕಾರವನ್ನು ಕೊಟ್ಟ ಅಧಿಕಾರಿಯ ಎದುರು ಶಪಥ ಮಾಡಿ ದೃಢೀಕರಿಸಿದ್ದಾಗಿರುತ್ತದೆ.

೩. ಶಪಥ ಪತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯು ನಿಯಂತ್ರಿಸುತ್ತದೆ.

೪. ಶಪಥಪತ್ರದ ಸಾಕ್ಷ್ಯವು ನ್ಯಾಯಾಲಯದ ಮುಂದೆ ತೆಗೆದುಕೊಂಡದ್ದು ಇರುವುದಿಲ್ಲ ಮತ್ತು ಪಾಟೀ ಸವಾಲಿಗೆ ಒಳಪಡುವುದಿಲ್ಲ.

೫. ಶಪಥ ಪತ್ರಗಳಲ್ಲಿ ಸತ್ಯವನ್ನು ಸಂರಕ್ಷಿಸಲು ಎರಡು ವಿಧಾನಗಳಿರುತ್ತವೆ.

(i) ಪಾಟೀ ಸವಾಲಿಗೆ ಒದಗಿಸಲು ಸಾಕ್ಷಿದಾರರನ್ನು ಹಾಜರುಮಾಡುವ ಉಪಬಂಧಗಳು.

(ii) ಸುಳ್ಳು ಸಾಕ್ಷಿಯನ್ನು ಕೊಟ್ಟಿದ್ದಕ್ಕೆ ಸಂಬಂಧಿಸಿದ ದಂಡ ಸಂಹಿತೆಯ ಉಪಬಂಧಗಳು.

**ಮಧ್ಯಸ್ಥಗಾರರ ವ್ಯವಹರಣೆಗಳು**

ಅವನು ಸ್ಥೂಲ ರೂಪದಲ್ಲಿ ನ್ಯಾಯವನ್ನು ಕೊಡುತ್ತಾನೆ. ಮತ್ತು ಅವನು ಸಾಕ್ಷ್ಯ ಕಾನೂನಿನ ತಾಂತ್ರಿಕತೆಗಳಿಗೆ, ಕರಾರುಗಳಿಗೆ ಒಳಗಾಗಿರುವುದಿಲ್ಲ.

**ಸಾಕ್ಷ್ಯ ಅಧಿನಿಯಮದ ಅಭ್ಯಾಸಕ್ಕೆ ಯೋಗ್ಯ ಮಾರ್ಗ:**

೧. ಭಾರತೀಯ ಸಾಕ್ಷ್ಯ ಅಧಿನಿಯಮವು ಸಾಕ್ಷಿಯ ವಿಷಯವನ್ನು ಮೂರು ಭಾಗಗಳಲ್ಲಿ ವಿಭಾಗಿಸುತ್ತದೆ.

೧ನೆಯ ಭಾಗವು ಸಂಗತಿಯ ಸುಸಂಬದ್ಧತೆಯನ್ನು ಕುರಿತು ಹೇಳುತ್ತದೆ.

೨ನೆಯ ಭಾಗವು ರುಜುವಾತುಪಡಿಸುವುದನ್ನು ಕುರಿತು ಹೇಳುತ್ತದೆ.

೩ನೆಯ ಭಾಗವು ಸಾಕ್ಷಿದಾರರನ್ನು ಹಾಜರು ಮಾಡುವುದು ಮತ್ತು ಅದರ ಪರಿಣಾಮ ಕುರಿತು ಸಿದ್ಧ ಮಾಡುವ ಹೊಣೆಯನ್ನು ಹೇಳುತ್ತದೆ.

೨. ಇದೊಂದು ತರ್ಕಬದ್ಧ ಆದೇಶವಾಗಿರುತ್ತದೆ. ಇದೊಂದು ವೈಜ್ಞಾನಿಕ ಆದೇಶವಾಗಿರಬಹುದು. ಆದರೆ ನಿಶ್ಚಿತವಾಗಿ ಇದೊಂದು ಸ್ವಾಭಾವಿಕ ಆದೇಶವೆಂದು ಕಾಣುವುದಿಲ್ಲ. ಸ್ವಾಭಾವಿಕ ಸ್ವರೂಪವೆಂದರೆ ನ್ಯಾಯ ಮಾಡುವವರ ದೃಷ್ಟಿಯಿಂದ ನ್ಯಾಯಯುತವಾಗಿರುವುದು.

೩. ಪ್ರಕ್ರಿಯೆಯ ನಿಯಮಗಳು ದಾವೆಗಳ ಸಾಮಾನ್ಯ ನಡತೆಯನ್ನು ನಿಯಂತ್ರಿಸುತ್ತವೆ. ವಾದ ಪ್ರತಿವಾದ ನಿಯಮಗಳು ಪಕ್ಷಗಾರರ ಮಾರ್ಗದರ್ಶನಕ್ಕೆ ಮತ್ತು ನ್ಯಾಯಾಲಯಕ್ಕೆ ಸಹಾಯಕವಾಗುತ್ತವೆ. ಪ್ರತಿಯೊಂದು ಪ್ರಕರಣದಲ್ಲಿ ಮಹತ್ವದ ವಿವಾದಾಂಶಗಳು, ವಿಷಯಗಳಿರುತ್ತವೆ. ಆಗ ಸಿದ್ಧ ಮಾಡುವ ಪ್ರಶ್ನೆಯು ಉದ್ಭವಿಸುತ್ತದೆ. ಅದೆಂದರೆ ಯೋಗ್ಯ ಕಾನೂನಿನ ಮೂಲಕ ನ್ಯಾಯಾಲಯಕ್ಕೆ ತೃಪ್ತಿಯಾಗುವ ರೀತಿಯಲ್ಲಿ ವಿವಾದಾಂಶಗಳ ಸಂಗತಿಗಳನ್ನು ಸ್ಥಾಪಿಸುವುದು.

೪. ನ್ಯಾಯ ಮಾಡುವವನು ಎದುರಿಸುವ ಮೊದಲನೆಯ ಪ್ರಶ್ನೆಯೆಂದರೆ, ವಿವಾದಾಂಶವನ್ನು ಯಾರು ಸಾಬೀತುಮಾಡಬೇಕು? ಪ್ರಶ್ನೆಗಳೆಂದರೆ ಹೇಗೆ ಮತ್ತು ಯಾವ ರೀತಿಯ ಸಾಕ್ಷಿಯಿಂದ ಅವುಗಳನ್ನು ಸಾಬೀತುಮಾಡುವುದು ಅವನಿಗೆ ಅಪ್ರಮುಖ ಪ್ರಶ್ನೆಗಳಾಗಿರುತ್ತವೆ. ಆದ್ದರಿಂದ ನಾವು ಸಾಬೀತುಮಾಡುವ ಹೊಣೆಯನ್ನು ಕುರಿತಂತೆ ಆರಂಭಿಸಬೇಕು.

## ಭಾಗ ೧

# ರುಜುವಾತು ಮಾಡುವ ಹೊಣೆ

**೧. ರುಜುವಾತು ಮಾಡುವ ಹೊಣೆ ಅಂದರೇನು?**

ನ್ಯಾಯಾಧೀಶನಾಗಲಿ ಇಲ್ಲವೆ ಜ್ಯೂರಿಯಾಗಲಿ ಒಂದು ಪ್ರಕರಣದಲ್ಲಿಯ ಸತ್ಯ ಮತ್ತು ಆಪಾದಿಸಲಾದ ಅನೇಕ ಸಂಗತಿಗಳ ಮೌಲ್ಯದ ಮೇಲೆ ಮತ್ತು ಪಕ್ಷಗಾರರು ಸಿದ್ಧ ಮಾಡಿದ್ದರ ಮೇಲಿಂದ ಮತ್ತು ಸಂಗತಿಗಳು ನ್ಯಾಯಾಧೀಶ ಮತ್ತು ಜ್ಯೂರಿ ಇಬ್ಬರಿಗೂ ಗೊತ್ತಿರುವುದಿಲ್ಲವಾದ್ದರಿಂದ ಅವುಗಳನ್ನು ಸಾಕ್ಷಿಯ ಮೇಲಿಂದ ಸ್ಥಾಪಿಸಬೇಕಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಯಾವ ಪಕ್ಷವು ಆ ಸಾಕ್ಷಿಯನ್ನು ಒದಗಿಸಲಿಕ್ಕೆ ಬೇಕೋ ಅಂತಹ ಸಾಕ್ಷಿಯನ್ನು ಒದಗಿಸುವುದು ಮತ್ತು ಯಾವುದೇ ಆರೋಪಗಳನ್ನು ಸ್ಥಾಪಿಸುವುದಕ್ಕೆ "ರುಜುವಾತು ಮಾಡುವ ಭಾರ" ಎಂದು ಕರೆಯುತ್ತಾರೆ.

೨. ಒಂದು ವಿವಾದಾಂಶವನ್ನು ರುಜುವಾತು ಮಾಡುವ ಭಾರವು ಎರಡು ವಿಧದ್ದಾಗಿರುತ್ತದೆ.

(i) ಒಂದು ಸಂಗತಿಯನ್ನು ರುಜುವಾತುಪಡಿಸುವುದು

(ii) ಒಂದು ನಿರ್ದಿಷ್ಟ ಸಂಗತಿಯನ್ನು ರುಜುವಾತುಪಡಿಸುವುದು.

**ಈ ರೀತಿಯಾಗಿ ವಿಭಜಿಸುವ ಅವಶ್ಯಕತೆ:**

೧. ಒಂದು ವಿವಾದಾಂಶವನ್ನು ರುಜುವಾತು ಮಾಡುವ ಭಾರದಲ್ಲಿ ಒಳಗೊಂಡಂತಹ ಅನೇಕ ಸಂಗತಿಗಳಲ್ಲಿ ಒಂದು ಸಂಗತಿಯನ್ನಾದರೂ ಸಿದ್ಧ ಮಾಡುವ ಹೊಣೆಯು ಇರುತ್ತದೆ.

ಉದಾಹರಣೆ:

೧. ಮುದ್ದೆಯು 'ಅ'ನು 'ಬ'ನ ಖೂನಿ ಮಾಡಿರುವನೆ ಎಂಬುದಾಗಿದೆ.

೨. ಮುದ್ದೆಯು ಆ ದಸ್ತಾವೇಜಿನ ಮೇಲೆ ಇರುವ ಸಹಿಯು 'ಅ'ನದೇ?

೨ನೆಯ ವಿವಾದಾಂಶದಲ್ಲಿ ಒಂದೇ ಒಂದು ಸಂಗತಿಯನ್ನು ಸಿದ್ಧ ಮಾಡುವ ಭಾರವಿರುತ್ತದೆ.

೧ನೆಯ ವಿವಾದಾಂಶವು ಅನೇಕ ಸಂಗತಿಗಳನ್ನು ಸಿದ್ಧ ಮಾಡುವ ಹೊಣೆಯನ್ನು ಒಳಗೊಂಡಿರುತ್ತದೆ.

ಉದಾ: 'ಅ'ನು ಹಾಜರಿದ್ದನೇ?

'ಕ'ನು ಅವನನ್ನು ನೋಡಿದನೇ?

ರಕ್ತ ಹತ್ತಿದ ಶರ್ಟು ಅವನದೇ ಇತ್ಯಾದಿ.

**ಒಂದು ವಿವಾದಾಂಶವನ್ನು ರುಜುವಾತು ಮಾಡುವ ಹೊಣೆ**

೩. ಒಂದು ವಿವಾದಾಂಶವನ್ನು ರೂಪಿಸುವುದೆಂದರೆ ಒಂದು ನಿಶ್ಚಿತ ಸಂಗತಿಯ ಅನೇಕ ಸಂಗತಿಗಳು ಅಸ್ತಿತ್ವದಲ್ಲಿರುವುದನ್ನು ಇದು ಮುಂಚಿತವಾಗಿ ಊಹಿಸುತ್ತದೆ. ಒಂದು ಪಕ್ಷದವರು ಕೆಲವು ಸಂದರ್ಭಗಳನ್ನು ಒತ್ತಿ ಹೇಳುವುದು ಮತ್ತು ವಿರುದ್ಧ ಪಕ್ಷದವರು ಆ ಸಂಗತಿಗಳನ್ನು ನಿರಾಕರಿಸುವುದು. ಒಂದು ವಿವಾದವನ್ನು

ಎರಡು ಮಾರ್ಗಗಳಿಂದ ನ್ಯಾಯ ನಿರ್ಣಯ ಮಾಡಬಹುದು.

(೧) ಆರೋಪಿಸಲಾದ ಸಂದರ್ಭಗಳು ಅಸ್ತಿತ್ವದಲ್ಲಿಯೇ ಇರುವುದಿಲ್ಲ.

(೨) ಆರೋಪಿಸಲಾದ ಸಂದರ್ಭಗಳು ಅಸ್ತಿತ್ವದಲ್ಲಿಯೇ ಇದ್ದವೆಂದು ಸಿದ್ಧ ಮಾಡುವುದರಿಂದ ಪ್ರಶ್ನೆ ಉದ್ಭವಿಸುವ ಎಂದರೆ ಇವೆರಡೂ ಪದ್ಧತಿಗಳಲ್ಲಿ ಯಾವ ರೀತಿಯಿಂದ ವಿವಾದಾಂಶವನ್ನು ಸಿದ್ಧ ಮಾಡಲು ಅನುಸರಿಸಬೇಕೆಂಬುದಾಗಿದೆ– ಸಕಾರಾತ್ಮಕವಾಗಿ ಸಿದ್ಧ ಮಾಡುವ ಪದ್ಧತಿ ಇಲ್ಲವೆ ನಕಾರಾತ್ಮಕವಾಗಿ ಸಿದ್ಧ ಮಾಡುವ ಪದ್ಧತಿ.

೪. ಈ ರೀತಿಯ ನಿರ್ಣಯಕ್ಕೆ ಬರಲು ಯಾವುದೇ ಕಾರಣವು ಇರುವುದಿಲ್ಲವೋ:

(ಅ) ಯಾವುದು ಇದೆಯೆಂದು ಒತ್ತಿ ಹೇಳುತ್ತದೆಯೋ ಅದು ಇಲ್ಲವೆಂದು ಹೇಳುವುದಕ್ಕಿಂತ ಹೆಚ್ಚು ಸಂಭವನೀಯವಿರುತ್ತದೆ. ಮತ್ತು

(ಬ) ಎರಡೂ ಬಣದ ಪಕ್ಷಗಾರನಿಗೆ ಸಮನಾಗಿ ಅವಕಾಶ ಇರುವುದು.

ಈ ಸಂದರ್ಭದಲ್ಲಿ ಯಾವ ಪಕ್ಷಗಾರನು ಸಂಗತಿಗಳು ಅಸ್ತಿತ್ವದಲ್ಲಿವೆಯೆಂದು ಆಪಾದಿಸುತ್ತಾನೋ ಅವನೇ ಅದು ಅಸ್ತಿತ್ವದಲ್ಲಿದೆ ಎಂದು ಸಿದ್ಧಮಾಡಬೇಕೆಂಬ ನಿಯಮವು ಇರುತ್ತದೆ. ಯಾರು ಒಂದು ಪ್ರಸ್ತಾವವು ಸಕಾರಾತ್ಮಕವಾಗಿ ಇದೆಯೆಂಬುದು ಹೇಳುತ್ತಾನೆಯೋ ಅದನ್ನು ಸಿದ್ಧ ಮಾಡುವ ಹೊಣೆಗಾರಿಕೆಯು ಅವನ ಮೇಲೆ ಇರುತ್ತದೆ. ಯಾರು ನಕಾರಾತ್ಮಕವಾಗಿ ಅಲ್ಲಗಳೆಯುತ್ತಾರೆಯೋ ಅಂಥವರು ಅವು ಅಸ್ತಿತ್ವದಲ್ಲಿ ಇಲ್ಲವೆಂಬುದನ್ನು ಸಿದ್ಧ ಮಾಡುವ ಅವಶ್ಯಕತೆಯು ಇರುವುದಿಲ್ಲ.

ಈ ನಿಯಮವನ್ನು ಕಲಮು ೧೦೧ರಲ್ಲಿ ಹೇಳಲಾಗಿದೆ.

೫. ನಕಾರಾತ್ಮಕವಾಗಿ ಸಿದ್ಧ ಮಾಡುವ ಬದಲು ಸಕಾರಾತ್ಮಕವಾಗಿ ಸಿದ್ಧಮಾಡಬೇಕೆಂದು ಕಾನೂನಿನ ಅವಶ್ಯಕತೆಯಲ್ಲಿ ಹೇಳಿದ ಕಾರಣಗಳೇನು?

(೧) ಒಬ್ಬ ವ್ಯಕ್ತಿಯು ಇನ್ನೊಬ್ಬನನ್ನು ನ್ಯಾಯಾಧಿಕರಣದ ಮುಂದೆ ಕರೆತರುತ್ತಾನೆಯೋ ಅಂಥವನು ತನ್ನ ಹಕ್ಕಿನ ಆಧಾರದ ಮೇಲೆ ಮಾತ್ರ ಅವಲಂಬಿತನಾಗಿರಬೇಕು ಮತ್ತು ತಾನು ಸ್ಪಷ್ಟವಾಗಿ ಸಿದ್ಧಮಾಡುವುದು, ಮತ್ತು ಅವನ ಎದುರುಗಾರನ ಹಕ್ಕು ಅಥವಾ ಆತನ ರುಜುವಾತು ಮಾಡುವ ಅವಶ್ಯಕತೆಯ ಮೇಲೆ ಇರುವುದಿಲ್ಲ.

ಉದಾಹರಣೆ:

*ಮಿಡ್‌ಲ್ಯಾಂಡ್ ರೇಲ ಕಂಪನಿ ವಿರುದ್ಧ ಬ್ರಾಂಬಿ– ೧೭ ಸಿ.ಬಿ. ೩೭೨*

*ಡೋವ ವಿರುದ್ಧ ಲಾಂಗಫೀಲ್ಡ– ೧೬ ಎಮ್ ಆ್ಯಂಡ್ ಡಬ್ಲ್ಯು ೪೯೭*

*೧೭ ಸಿ.ಬಿ. ೩೭೨*

*ಪಿ.೩೮೦*

(೨) ಸಿದ್ಧ ಮಾಡುವುದು ಅಸಾಧ್ಯವಿಲ್ಲದಿದ್ದರೂ ಒಂದು ಸಾಧಾರಣ ನಕಾರಾತ್ಮಕವು ಒಂದು ಅನಿಶ್ಚಿತತೆಯ ಕಾರಣದಿಂದ ಕಠಿಣವಿರುತ್ತದೆ. ಒಬ್ಬನು ಒಂದು ಸಂಗತಿಯು ನಡೆದಿದೆಯೆಂದು ಒತ್ತಿ ಹೇಳುತ್ತಾನೆ. ಯಾವಾಗ ಎಂದು ಹೇಳದಿದ್ದರೆ ಯಾವ ವ್ಯಕ್ತಿಯು ಇದನ್ನು ನಿಜವಲ್ಲವೆಂದು ಸಿದ್ಧ ಮಾಡುತ್ತಾನೆಯೋ ಹಾಗೂ ಉಳಿದವರಿಗೆ ಮನದಟ್ಟು ಮಾಡಿಕೊಡುತ್ತಾನೆಯೋ ಮತ್ತು ಯಾವುದೇ ವೇಳೆ, ಯಾವುದೇ ಸ್ಥಳ ಮತ್ತು ಎಂತಹದೇ ಸಂದರ್ಭಗಳಲ್ಲಿ ಅಂತಹ ಸಂಗತಿಯು ನಡೆದಿಲ್ಲವೆಂದು ಸಿದ್ಧಮಾಡಲು ಸಾಧ್ಯವಿರುವುದೆ? ಕೊನೆಗೆ ಬಹಳಷ್ಟು ಸಂದರ್ಭಗಳಲ್ಲಿ ಘಟನೆ ಆಗಿದೆಯೆಂಬ ಸಂಗತಿಯು

ನಡೆದೇ ಇಲ್ಲ ಎಂದು ತೋರಿಸುವ ಮತ್ತು ಇದಕ್ಕೆ ಸಹ ಬಹಳಷ್ಟು ಗ್ರಹಿಸತಕ್ಕಂತಹ ಸಾಕ್ಷಿಗಳು ಬೇಕಾಗುತ್ತವೆ. ಒಂದು ನಕಾರಾತ್ಮಕ ಹೇಳಿಕೆಯನ್ನು ಸಕಾರಾತ್ಮಕ ಹೇಳಿಕೆಯ ವಿರುದ್ಧ ಸಾಕ್ಷಿಯಿಂದ ವಿಂಗಡಿಸತಕ್ಕದ್ದು. ಇದನ್ನು ತಾಂತ್ರಿಕವಾಗಿ ನಿರಾಕರಿಸು, ಪ್ರತಿಭಟಿಸು, ಇಲ್ಲವೆ ಅಡ್ಡಹಾಯಿ ಎಂದು ಕರೆಯುತ್ತಾರೆ.

ಉದಾಹರಣೆ: ದ್ವೇಷಪೂರ್ವಕ ಪ್ರೊಸಿಕ್ಯೂಶನ್

ಒಂದು ದ್ವೇಷಪೂರಿತ ಅಭಿಯೋಜನೆಯಲ್ಲಿ ವಾದಿಯು ಎರಡು ಮುಖ್ಯ ಆಪಾದನೆಗಳನ್ನು ಮಾಡುತ್ತಾನೆ.

(೧) ಪ್ರತಿವಾದಿಯು ಅವನ ಮೇಲೆ ಅಭಿಯೋಜನೆಯನ್ನು ಮಾಡಿದ್ದನು.

(೨) ಪ್ರತಿವಾದಿಗೆ ಹಾಗೆ ಮಾಡಲು ಯೋಗ್ಯ ಸಕಾರಣಗಳಿರಲಿಲ್ಲ.

ಇದರಲ್ಲಿ ಮೊದಲನೆಯದು ಸಕಾರಾತ್ಮಕ ಹಾಗೂ ಎರಡನೆಯದು ನಕಾರಾತ್ಮಕ ಹೇಳಿಕೆ ಆಗಿರುತ್ತದೆ. ಇವೆರಡನ್ನೂ ಸಿದ್ಧ ಮಾಡುವ ಹೊಣೆಗಾರಿಕೆಯು ವಾದಿಯ ಮೇಲೆ ಇರುತ್ತದೆ.

ನಿರ್ಲಕ್ಷ್ಯ:

ಪ್ರತಿವಾದಿಯು ಯೋಗ್ಯ ಮತ್ತು ಉಚಿತ ಕಾಳಜಿ ತೆಗೆದುಕೊಳ್ಳಲಿಲ್ಲ.

ಇದು ನಕಾರಾತ್ಮಕವಲ್ಲ ಆದರೆ ನಕಾರಾತ್ಮಕ ದೃಢೋಕ್ತಿಯಾಗಿದೆ.

೬. ಸಾಕ್ಷ್ಯವನ್ನು ಕುರಿತು ಎರಡು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಕಾರಾತ್ಮಕವಾದ ಹೇಳಿಕೆಯನ್ನು ರುಜುವಾತುಪಡಿಸಬೇಕು.

*೧೨ ಮದ್ರಾಸ್ ೫೨೬ ೧೫ ಜೆಯುಆರ್. ೫೪೪-೫೪೫*

**ನಿರಾಕರಿಸುವುದು ಎಂದರೇನು?**

೧. ಇದು ವಾದ ಪ್ರತಿವಾದ ಕಾನೂನಿಗೆ ಸಂಬಂಧಿಸಿದ್ದಿರುತ್ತದೆ. ಇಬ್ಬರು ನ್ಯಾಯ ಮಾಡುವವರ ಮಧ್ಯದಲ್ಲಿ ಭಿನ್ನಾಭಿಪ್ರಾಯವಿದ್ದ ಪ್ರಶ್ನೆಯನ್ನು ನ್ಯಾಯಾಧೀಶನು ತೀರ್ಮಾನಿಸುವ ಪೂರ್ವದಲ್ಲಿ, ಇದು ಬಹಳಷ್ಟು ಪ್ರಕರಣಗಳಲ್ಲಿ ಇರುವುದು ಅಪೇಕ್ಷಣೀಯವಾದುದು ಮತ್ತು ಬಹಳಷ್ಟು ಪ್ರಕರಣಗಳಲ್ಲಿ ಅವಶ್ಯಕವಾಗಿರುತ್ತದೆ. ಯಾವ ವಿಷಯವನ್ನು ಅವರ ತೀರ್ಪಿಗಾಗಿ ಒಪ್ಪಿಸಲಾಗಿರುತ್ತದೆಯೋ ಅದನ್ನು ಸ್ಪಷ್ಟವಾಗಿ ಪ್ರತಿಪಾದಿಸತಕ್ಕದ್ದು. ವಾದಿಯು ತನ್ನ ವಿರುದ್ಧ ಯಾವ ಸಂಗತಿಗಳನ್ನು ಆಪಾದಿಸಿದ್ದಾನೆಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರತಿವಾದಿಗೆ ಇರುತ್ತದೆ. ವಾದಿಗೆ ಪ್ರತಿವಾದಿಯು ತನ್ನ ವಿರುದ್ದ ತನ್ನ ಹೇಳಿಕೆಗೆ ಉತ್ತರ ರೂಪವಾಗಿ ಯಾವ ಪ್ರತಿರಕ್ಷಣೆಯನ್ನು ಎತ್ತಬಹುದೆಂಬುದನ್ನು ತಿಳಿದುಕೊಳ್ಳುವ ಹಕ್ಕುಳ್ಳವನಾಗಿದ್ದಾನೆ. ಪ್ರತಿವಾದಿಯು ಆ ಎಲ್ಲ ಹೇಳಿಕೆಗಳನ್ನು ಅಲ್ಲಗಳೆಯಬಹುದು, ಅಥವಾ ಅವನು ಒಪ್ಪಿಕೊಳ್ಳಬಹುದು. ಆದರೆ ಕೆಲವು ಸಂಗತಿಗಳನ್ನು ಒಪ್ಪಬಹುದು ಮತ್ತು ಬೇರೆ ಸಂಗತಿಗಳನ್ನು ಆರೋಪಿತ ಪ್ರಕರಣಕ್ಕೆ ಬೇರೆ ಸ್ವರೂಪ ಕೊಡಬಹುದು.

ತಾಂತ್ರಿಕವಾಗಿ ಹೇಳುವುದಾದರೆ ಪ್ರತಿವಾದಿಯು ಅವುಗಳನ್ನು

(೧) ಒಪ್ಪಬಹುದು.

(೨) ನಿರಾಕರಿಸಬಹುದು ಅಥವಾ ಅಲ್ಲಗಳೆಯಬಹುದು.

(೩) ಅಲ್ಲಗಳೆಯಬಹುದು ಮತ್ತು ಬೇರೆ ಸಂಗತಿಗಳನ್ನು ಆರೋಪಿ ಮಂಡಿಸಬಹುದು.

೨. ವಾದಿಯು ತನ್ನ ವಾದ ಪತ್ರದಲ್ಲಿ ಕಾಣಿಸಿದ ಸಂಗತಿಗಳನ್ನು ಪ್ರತಿವಾದಿಯು ಯಾವಾಗ ಅಲ್ಲಗಳೆಯುತ್ತಾನೆಯೋ ಅದನ್ನು ಅವನು ನಿರಾಕರಿಸುವುದು, ಪ್ರತಿಭಟಿಸುವುದು ಎನ್ನುತ್ತಾರೆ.

ನಿರಾಕರಿಸುವುದು ಎದುರುಗಾರನ ವಾದಪತ್ರದಲ್ಲಿಯ ಸಂಗತಿಗಳನ್ನು ವ್ಯತಿರಿಕ್ತವಾಗಿ ವ್ಯಕ್ತಪಡಿಸುವುದಾಗಿರುತ್ತದೆ. ಇದು ಸಾಮಾನ್ಯವಾಗಿ ಆಪಾದನೆಯ ರೀತಿಯಲ್ಲಿಯೇ ಒಂದು ಸಾಮಾನ್ಯ ವ್ಯತಿರಿಕ್ತತೆಯಾಗಿದೆ. ಇದನ್ನು ನಕಾರಾತ್ಮಕವಾಗಿ ಮಾಡಿದ ನಿಯಮಗಳ ಅನ್ವಯ ಯಾವ ಸಂಗತಿಯನ್ನು ಅಲ್ಲಗಳೆಯಲಾಗಿದೆಯೋ ಅದು ಸಕಾರಾತ್ಮಕವಾಗಿ ಆಪಾದಿಸಿದ ನಿಯಮಕ್ಕನುಗುಣವಾಗಿರುತ್ತದೆ. ಈ ಸಕಾರಾತ್ಮಕವಾದ ಆಪಾದನೆಗಳನ್ನು ನಿರಾಕರಿಸುವುದನ್ನು ನಕಾರಾತ್ಮಕ ಆಪಾದನೆಗಳಿಂದ ವಿಂಗಡಿಸಲಿಕ್ಕೇ ಬೇಕು. ಇದು ನಿಜವಾಗಿಯೂ ಸಕಾರಾತ್ಮಕ ಆಪಾದನೆಯಾಗಿರುತ್ತದೆ.

ಒಂದು ಪಕ್ಷವು ಒಂದು ಸಂಗತಿಯನ್ನು ಒತ್ತಿ ಹೇಳಿದರೆ ಮತ್ತು ಅವನು ತನ್ನ ಕೇಸನ್ನು ರುಜುವಾತು ಮಾಡುವಾಗ ಅದು ಅವಶ್ಯವಿರುತ್ತದೆ. ಕೆಲವು ಸಂಗತಿಗಳು ಅಸ್ತಿತ್ವದಲ್ಲಿರುವುದಿಲ್ಲ. ಅಥವಾ ಒಂದು ಸಂಗತಿಯು ಒಂದು ವಿಶೇಷ ಉದ್ದೇಶಕ್ಕೆ ಅಸಮರ್ಪಕವಾಗಿರುತ್ತದೆ ಮತ್ತು ಇಂತಹವು ನಕಾರಾತ್ಮಕವನ್ನು ಹೋಲುತ್ತಿದ್ದೂ ಸಹಿತ ಅವು ನಿಜವಾಗಿಯೂ ನಕಾರಾತ್ಮಕವಾಗಿರುವುದಿಲ್ಲ.

ಅವು ನಿಜವಾಗಿಯೂ ಸಾಧ್ಯವಿದ್ದ ಹೇಳಿಕೆಗಳು ಮತ್ತು ಯಾವ ಪಕ್ಷಗಾರನು ಅವುಗಳನ್ನು ಹೇಳುತ್ತಾನೆಯೋ ಅವನೇ ಅವುಗಳನ್ನು ರುಜುವಾತು ಮಾಡಲು ಬದ್ಧನಿದ್ದಾನೆ.

ವಾದಿಯು ತನ್ನ ಸಕಾರಾತ್ಮಕ ಸಂಗತಿಗಳನ್ನು ಸಿದ್ಧಮಾಡುವಾಗ ನಕಾರಾತ್ಮಕವಾದುದನ್ನು ಸಹ ಸಿದ್ಧ ಮಾಡಬೇಕಾಗುತ್ತದೆ.

ಒಂದು ನಕಾರಾತ್ಮಕ ಹೇಳಿಕೆಯು ಒಂದು ವೇಳೆ ಸತ್ಯವಿದ್ದಲ್ಲಿ ಅದು ನಕಾರಾತ್ಮಕ ಹೇಳಿಕೆಯಾಗಿದ್ದು ಅದನ್ನು ವಾದಿಯು ಸಿದ್ಧಮಾಡಲಿಕ್ಕೇಬೇಕು.

ಮಾರಾಟ ಮತ್ತು ಅಡಮಾನ (ಒತ್ತೆ)– ಯಥೋಚಿತ ಬೆಲೆ. ಬೆಲೆಯು ಯಥೋಚಿತವಾಗಿರುವುದಿಲ್ಲ?

II. ಒಂದು ವಿವಾದವು ಸಕಾರಾತ್ಮಕ ಮತ್ತು ನಕಾರಾತ್ಮಕವೆಂದರೆ ಆ ವಿಷಯದ ಸಕಾರಾತ್ಮಕ ಮತ್ತು ನಕಾರಾತ್ಮಕ ವಿಷಯಗಳ ವಿವಾದಾಂಶ ಮತ್ತು ಕೇವಲ ಸಕಾರಾತ್ಮಕ ಮತ್ತು ನಕಾರಾತ್ಮಕ ರೂಪದಲ್ಲಿ ಇರುವುದಿಲ್ಲ.

ಉದಾ:

*(೧) ಮೂಡಿ ಮತ್ತು ಎ ರೊಬಿನ್‌ಸನ್ ೪೬೪. ಅಮೆಸ್ ವಿರುದ್ಧ ಹ್ಯೂಸ್.*

### ವಾದಪತ್ರದಲ್ಲಿ ಆರೋಪಿ ಸಂಗತಿ

ಪ್ರತಿವಾದಿಯು ಒಬ್ಬ ಕೆಲಸಗಾರನು ಮಾಡುವ ರೀತಿಯಲ್ಲಿ ಕ್ಯಾಲಿಕೋ ಉಬ್ಬಚ್ಚು ಮಾಡಿರಲಿಲ್ಲ.

### ಲಿಖಿತ ಹೇಳಿಕೆಯಲ್ಲಿ ಆರೋಪಿಸಿದ ಸಂಗತಿಗಳು

ಪ್ರತಿವಾದಿಯು ಕೆಲಸಗಾರನಂತೆ ಇದನ್ನು ಉಬ್ಬಚ್ಚು ಮಾಡಿದ್ದನು. ಇದು ಯಾರ ಹೊಣೆಗಾರಿಕೆಯಾಗಿರುತ್ತದೆ? ಇದರ ಸ್ವರೂಪವನ್ನು ಮಾತ್ರ ಪರಿಗಣಿಸಿದರೆ, ಪ್ರತಿವಾದಿಯ ಮೇಲೆ ಈ ರುಜುವಾತು ಪಡಿಸುವ ಹೊಣೆ ಇರುತ್ತದೆ. ಇದರ ಸಾರಾಂಶವನ್ನು ಗಣನೆಗೆ ತೆಗೆದುಕೊಂಡರೆ, ಅದನ್ನು ಸಿದ್ಧ ಮಾಡುವ ಹೊಣೆಗಾರಿಕೆಯು ವಾದಿಯು ಮೇಲೆ ಇರಲಿಕ್ಕೇಬೇಕು. ಇದನ್ನು ನಕಾರಾತ್ಮಕವಾಗಿ ಹೇಳಿದ್ದರೂ ಅವನು ಕೆಲಸಗಾರನು ವೃತ್ತಿಪರನಲ್ಲದವನ ರೀತಿ ಕ್ಯಾಲಿಕೋ ಉಬ್ಬಚ್ಚು ಮಾಡಿದನು ಎಂಬಂತೆ ದೃಢೀಕರಿಸುತ್ತಾನೆ.

*(೨) ೭ ಕ್ಯಾರಿಂಗಟನ್ ಮತ್ತು ಪೇನ್, ೬೧೨. ಲೋವರ್ಡ ವಿರುದ್ಧ ಲೆಗ್ಗಾಟ್.*

**ವಾದಿಯು ಆರೋಪಿಸಿದ ಸಂಗತಿಗಳು**

ವಾದಿಯು ಆರೋಪಿಸಿದ ಸಂಗತಿಗಳು ಪ್ರತಿವಾದಿಯು ತನ್ನ ದಸ್ತಾವೇಜಿನಲ್ಲಿ ಬರೆದುಕೊಟ್ಟ ಪ್ರಕಾರ ಆವರಣವನ್ನು ದುರಸ್ತಿ ಮಾಡಲಿಲ್ಲ. ಪ್ರತಿವಾದಿಯು ಆರೋಪಿಸಿದ ಸಂಗತಿಗಳು; ಪ್ರತಿವಾದಿಯು ದುರಸ್ತಿ ಮಾಡಿಸಿದ್ದನು. ಇಂತಹ ನಮೂನೆಯಲ್ಲಿ ಪ್ರತಿವಾದಿಯ ಮೇಲೆ ರುಜುವಾತು ಮಾಡುವ ಹೊಣೆಯು ಇರುತ್ತದೆ. ಆದರೆ ಮೂಲತಃ ಇದನ್ನು ರುಜುವಾತು ಮಾಡುವ ಹೊಣೆಯು ವಾದಿಯ ಮೇಲೆ ಇರುತ್ತದೆ.

## ಕ್ರಿಮಿನಲ್ (ಫೌಜದಾರಿ) ಪ್ರಕರಣಗಳ ವಿಚಾರಣೆಗಳಲ್ಲಿ ವಿವಾದಾಂಶವನ್ನು ರುಜುವಾತು ಪಡಿಸುವ ಹೊಣೆಗಾರಿಕೆ

೧. ವಿಭಾಗ ೧೦೧: ಇದು ಸಾಮಾನ್ಯ ಕಲಮು ಆಗಿದ್ದು ಮತ್ತು ಇದು ಸಿವಿಲ್ ಮತ್ತು ಅದರಂತೆ ಕ್ರಿಮಿನಲ್ ಪ್ರಕರಣಗಳಿಗೆ ಅನ್ವಯಿಸುತ್ತದೆ.

**ವಿಭಾಗ ೧೦೫**

ಇದು ಒಂದು ವಿವಾದಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಇನ್ನೊಂದು ಕಲಮು ಆಗಿದ್ದು, ಒಂದು ಸಂಗತಿಯನ್ನು ಸಾಬೀತುಮಾಡುವ ಹೊಣೆಗಾರಿಕೆಗಿಂತ ಒಂದು ವಿವಾದಾಂಶವನ್ನು ಸಾಬೀತು ಮಾಡುವುದರಿಂದ ಬೇರೆಯಾಗಿದೆ. ಇದು ಕೇವಲ ಕ್ರಿಮಿನಲ್ ನ್ಯಾಯಾಲಯಗಳಿಗೆ ಮಾತ್ರ ಅನ್ವಯಿಸುತ್ತದೆ.

೨. ಈ ಕಲಮನ್ನು ತಿಳಿದುಕೊಳ್ಳುವುದಕ್ಕಾಗಿ ಭಾರತ ದಂಡಸಂಹಿತೆಯ ಯೋಜನೆಯನ್ನು ತಿಳಿದು ಕೊಳ್ಳುವುದು ಅವಶ್ಯವಿರುತ್ತದೆ. ಭಾರತ ದಂಡಸಂಹಿತೆಯು ವಿವಿಧ ಅಪರಾಧಗಳನ್ನು ವ್ಯಾಖ್ಯಾನಿಸುತ್ತದೆ. ಅವುಗಳೆಂದರೆ– ಕಳವು, ಕೊಲೆ, ಮೋಸ ಮುಂತಾದವುಗಳು. ಒಟ್ಟಾರೆ ಅವು ೪೦೦ ಇರುತ್ತವೆ.

ಈ ಶಬ್ದಗಳಿಗೆ ವ್ಯಾಖ್ಯೆಯನ್ನು ಕೊಡುವಾಗ ಅವು ಏಕರೂಪವಾಗಿರಬೇಕು, ಅವು ಬಹಳಷ್ಟು ವಿಶಾಲವಾಗಿ ಇಲ್ಲವೆ ಬಹಳಷ್ಟು ಸಂಕುಚಿತವಾಗಿ ಇರದ ಕಾರಣ ಅವುಗಳ ನಿಜವಾದ ವ್ಯಾಖ್ಯೆಯನ್ನು ಕೊಡಲು ತೊಂದರೆಯಾಗಿದೆ. ಈ ದಂಡಸಂಹಿತೆಯನ್ನು ಬರೆದವರು ತಮ್ಮ ಎಲ್ಲ ಪ್ರಯತ್ನ ಮಾಡಿದರೂ ನಿರ್ದಿಷ್ಟ ವ್ಯಾಖ್ಯೆಯನ್ನು ರಚಿಸುವಲ್ಲಿ ವಿಫಲರಾಗಿದ್ದಾರೆ. ಆದಾಗ್ಯೂ ಅವರು ಅದನ್ನು ಬಹಳ ವಿಶಾಲಗೊಳಿಸುವಲ್ಲಿ ವಿಫಲರಾಗಿದ್ದಾರೆ. ಅದರ ಪರಿಣಾಮವಾಗಿ, ಈ ವ್ಯಾಖ್ಯೆಗಳನ್ನು ಸೀಮಿತಗೊಳಿಸುವುದಕ್ಕಾಗಿ ಅಪವಾದಗಳನ್ನು ಪಾಸು ಮಾಡುವುದು ಅವಶ್ಯವೆಂದು ಅವರು ಕಂಡುಕೊಂಡರು. ಇಂತಹ ಕೆಲವು ಅಪವಾದಗಳು ದಂಡಸಂಹಿತೆಯ ಎಲ್ಲ ಅಪರಾಧಗಳಿಗೆ ಸಾಮಾನ್ಯವಾಗಿರುತ್ತವೆ. ಕೆಲವು ಅಪವಾದಗಳು ವಿಶೇಷವಾಗಿ ನಿರ್ದಿಷ್ಟ ಅಪರಾಧಗಳಿಗೆ ಅನ್ವಯಿಸುತ್ತವೆ.

ಉದಾ: (೧) ಯಾವನು ಗಾಯಗೊಳಿಸುತ್ತಾನೆಯೋ ಕಲಮು ೩೨೩.

(೨) ಯಾವನು ಕಳವು ಮಾಡುತ್ತಾನೆಯೋ (೩೭೯)

ಯಾರಾದರೂ ಅಂದರೆ ಯಾವುದೇ ವ್ಯಕ್ತಿ ಇವುಗಳನ್ನು ಮಾಡುತ್ತಾನೆಯೋ ಅಂತಹ ವ್ಯಕ್ತಿ ಇತ್ಯಾದಿ. ಯಾವುದೇ ವ್ಯಕ್ತಿಯು, ಯಾವುದೇ ವಯಸ್ಸಿನ ವ್ಯಕ್ತಿಯೆಂದು ಕಲಮಿನಲ್ಲಿ ಕಾಣಿಸಿದ ವ್ಯಾಖ್ಯೆಯಲ್ಲಿ ಕಾಣಿಸಿದೆ. ಇದು ೧ ವರ್ಷದ ಹುಡುಗನನ್ನು ತಪ್ಪಿತಸ್ಥನೆಂದು ಮಾಡಬಹುದು. ಆದರೆ ಭಾರತ ದಂಡಸಂಹಿತೆಯು ೭ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನಲ್ಲಿ ಅಪರಾಧಿಕ ಮನಸ್ಸು ಇರುವುದಿಲ್ಲವೆಂದು ಮನ್ನಣೆ ಪಡೆದಿದೆ.

ಒಂದು ಮಗುವು ಅಪರಾಧದ ಹೊಣೆಯಿಂದ ವಿನಾಯಿತಿ ಪಡೆಯಲು ಅವನು ಏಳು ವರ್ಷದ ಮೇಲೆ ಇರುವುದಿಲ್ಲ, ಇತ್ಯಾದಿಗಳನ್ನು ಭಾರತ ದಂಡಸಂಹಿತೆಯ ಪ್ರತಿಯೊಂದು ಕಲಮಿನಲ್ಲಿಯೂ ಹೇಳಬೇಕು.

೧. ಯಾವನಾದರೊಬ್ಬನು ಮತ್ತೊಬ್ಬನ ಕಬ್ಜೆಯಲ್ಲಿದ್ದು ಅವನ ಆಸ್ತಿಯನ್ನು ಆತನ ಪರವಾನಗಿ ಇಲ್ಲದೆ ತೆಗೆದುಕೊಂಡು ಹೋದರೆ– ೩೭೮

೨. ಯಾವನೊಬ್ಬನು ಇನ್ನೊಬ್ಬನನ್ನು ಅಕ್ರಮವಾಗಿ ಬಂಧನಕ್ಕೊಳಪಡಿಸಿದ್ದರೆ– ೩೪೨

೩. ಯಾವನೊಬ್ಬನು ಇನ್ನೊಬ್ಬನ ಕಬ್ಜೆಯಲ್ಲಿರುವ ಆಸ್ತಿಯ ಒಳಗೆ ಹೋದರೆ– ೪೪೧

೪. ಯಾವನೊಬ್ಬನು ಇನ್ನೊಬ್ಬನ ಮೇಲೆ ಹಲ್ಲೆ ಮಾಡಿದರೆ ಇಲ್ಲವೆ ಆತನಿಗೆ ಅಪರಾಧಿಕ (ಕ್ರಿಮಿನಲ್) ಬಲ ತೋರಿಸಿದರೆ– ೩೫೨

ಈ ಮೇಲಿನ ವ್ಯಾಖ್ಯೆಗಳ ಅನ್ವಯ ಒಬ್ಬ ಬೀಲಿಫನು ತನ್ನ ಉನ್ನತ ಅಧಿಕಾರಿಗಳ ಆದೇಶದ ಮೇರೆಗೆ ಜಪ್ತಿಯನ್ನು ಮಾಡಲು ಹೋದಾಗ ಕಳುವಿನ ಕಲಮು ೩೭೮ ಮತ್ತು (ಕ್ರಿಮಿನಲ್) ಅಪರಾಧಿಕ ಆಕ್ರಮಣ ೪೪೧ವಾಗುತ್ತದೆಂಬುದು ಸ್ಪಷ್ಟವಾಗಿದೆ. ಅದರಂತೆ ಒಬ್ಬ ಪೊಲೀಸ್ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಒಬ್ಬ ಮನುಷ್ಯನನ್ನು ದಸ್ತಗಿರಿ ಮಾಡಿದರೆ ಅವನು ಮೇಲೆ ಬೀಳುವ ಅಕ್ರಮ ಅಪರಾಧಕ್ಕೆ ೩೩ ಮತ್ತು ಅವನನ್ನು ಅಕ್ರಮಬಂಧನ ಮಾಡುವವ ತಪ್ಪಿಗೆ ಒಳಪಡುತ್ತಾನೆ. ೩೪೨ ಸಾರ್ವಜನಿಕ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಮಾಡಿದ ಕೃತಿಗಳನ್ನು ಹಾಗೂ ಅವರ ಕೃತಿಗಳ ಪರಿಣಾಮಗಳನ್ನು ಶಿಕ್ಷೆಯ ಪರಿಣಾಮದಿಂದ ದೂರವಿಡಲು ಸಾರ್ವಜನಿಕ (ಅಧಿಕಾರಿಗಳನ್ನು): ಸೇವಕರಿಗೆ ಈ ವ್ಯಾಖ್ಯೆಯ ವ್ಯಾಪ್ತಿಯಿಂದ ವಿನಾಯಿತಿ ಕೊಡಲು ಸಂಹಿತೆಯು ಅವುಗಳಿಗೆ ಮನ್ನಣೆ ಕೊಡುವುದು ಅವಶ್ಯವಾಗಿತ್ತು. ಈ ಪ್ರತಿಯೊಂದು ಕಲಮಿನಲ್ಲಿಯೂ ಸಾರ್ವಜನಿಕ ನೌಕರನು ಈ ವ್ಯಾಖ್ಯೆಯ ವ್ಯಾಪ್ತಿಯಿಂದ ವಿನಾಯಿತಿ ಪಡೆಯಲು ಹೀಗೆ ಹೇಳುವುದು ಅವಶ್ಯವಿದೆ. ಯಾವನು ತನ್ನ ಕಾರ್ಯ ನಿರ್ವಹಿಸಲು ಸಾರ್ವಜನಿಕ ನೌಕರನು ಇರುವುದಿಲ್ಲವೋ ಈ ಸೀಮಿತ ಶಬ್ದಗಳನ್ನು ಪುನಃ ಉಚ್ಚರಿಸುವುದರ ಬದಲು ಬೇರೆ ಬೇರೆ ಕಲಮುಗಳಿಗೆ ದಂಡಸಂಹಿತೆಯಲ್ಲಿ ಅವು ಏಕರೂಪವಾಗಿದ್ದು, ಇವುಗಳನ್ನು IVನೆಯ ಅಧ್ಯಾಯದಲ್ಲಿ ಒಂದುಗೂಡಿಸಿದ್ದು, ಅವುಗಳನ್ನು ಸಾಮಾನ್ಯ ಅಪರಾಧಗಳೆಂದು ಕರೆಯುತ್ತಾರೆ. ಅವು ಕಲಮು ೭೬ರಿಂದ ೧೦೬ರಲ್ಲಿ ಒಳಗೊಂಡಿರುತ್ತವೆ. ಅಲ್ಲಿ ಕೆಲವು ಖಂಡಗಳು ಇವುಗಳನ್ನು ಸೀಮಿತಗೊಳಿಸುತ್ತವೆ. ದಂಡಸಂಹಿತೆಯಲ್ಲಿ ವ್ಯಾಖ್ಯಾನಗಳು ಕೆಲವು ಅಪರಾಧಗಳಿಗೆ ಅನ್ವಯಿಸುತ್ತವೆ.

ಉದಾ: ಕಲಮು ೪೯೯ ಮಾನಹಾನಿ.

ಈ ವ್ಯಾಖ್ಯೆಯು ಎಷ್ಟು ವಿಶಾಲವಾಗಿದೆ ಎಂದರೆ ಅದಕ್ಕೆ ೧೦ ಅಪವಾದಗಳು ಇರುತ್ತವೆ. ೯ನೆಯ ಅಪವಾದದ ಅವಶ್ಯಕತೆಯು ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿದೆ. ಅಂತಹ ಅಪವಾದಗಳು ವಿಶೇಷ ಅಪವಾದಗಳಾಗಿದ್ದು, ಇವು ಸಾಮಾನ್ಯ ಅಪವಾದಗಳಿಂದ ಭಿನ್ನವಾಗಿವೆ.

ಇಂತಹ ಅಪವಾದಗಳು ವಿಶೇಷ ಅಪವಾದಗಳಾಗಿದ್ದು, ಅವುಗಳನ್ನು ಸಾಮಾನ್ಯ ಅಪವಾದಗಳಿಂದ ವಿಂಗಡಿಸಿದ್ದು ಆದರೆ–

**ಪರಂತು ಕ–**

ಉದಾಹರಣೆಗೆ: ಭಾರತ ದಂಡಸಂಹಿತೆ ಕಲಮು ೯೨.

ಪ್ರಶ್ನೆಯೆಂದರೆ– ಆರೋಪಿಯ ಮೇಲಣ ಆಪಾದನೆಯು ಸಾಮಾನ್ಯ ಅಥವಾ ವಿಶೇಷ ಅಪವಾದಗಳಲ್ಲಿ

ಬರುತ್ತದೆಂದು ಯಾರು ರುಜುವಾತು ಮಾಡಬೇಕು? ಅಪವಾದ ಅಥವಾ ಪರಂತುಕ ಇವುಗಳಲ್ಲಿ ಏನೇ ಇದ್ದರೂ, ಅಭಿಯೋಜನೆಯು, ಯಾರ ಮೇಲೆ ಆಪಾದನೆ ಇಲ್ಲವೆಂದು, ಅಥವಾ ಆರೋಪಿಯ ಮೇಲೆ ಆಪಾದನೆ ಇದೆಯೆಂದು ವಾದಿಸುವುದು? ಇದಕ್ಕೆ ಉತ್ತರವನ್ನು ಕಲಮು ೧೦೫ರಲ್ಲಿ ಕೊಡಲಾಗಿದೆ. ರುಜುವಾತು ಮಾಡುವ ಹೊಣೆಗಾರಿಕೆಯು ಆರೋಪಿಯ ಮೇಲೆ ಇರುತ್ತದೆ.

ಇದು ಮೊದಲಿನ ಕಾನೂನಿಗಿಂತ ಭಿನ್ನವಾಗಿರುತ್ತದೆ. ಅದರ ಅಡಿಯಲ್ಲಿ ಈ ಪ್ರಕರಣವು ಅಪವಾದಗಳಲ್ಲಿ ಬರುವುದಿಲ್ಲವೆಂದು ಸಿದ್ಧಮಾಡುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲೆ ಇದ್ದಿತು.

**ಸಿವಿಲ್ ಕಾನೂನಿನಲ್ಲಿ ಅಪವಾದಗಳನ್ನು ಸಿದ್ಧಮಾಡುವ ಹೊಣೆಗಾರಿಕೆ**

೧. ಸಿವಿಲ್ ಕಾನೂನಿಗೆ ಅಪವಾದಗಳನ್ನು ಸಿದ್ಧಮಾಡುವ ಹೊಣೆಗಾರಿಕೆಯನ್ನು ಕುರಿತು ಸಾಕ್ಷ್ಯ ಅಧಿನಿಯಮದಲ್ಲಿ ಯಾವುದೇ ನಿರ್ದಿಷ್ಟ ಕಲಮು ಇರುವುದಿಲ್ಲ. ಆದರೆ ಈ ನಿಯಮವು ಕ್ರಿಮಿನಲ್ ಕಾನೂನಿನಲ್ಲಿ ಇರುವಂತೆಯೇ ಇರುತ್ತದೆ. ಅದೆಂದರೆ ತನ್ನ ಪ್ರಕರಣ ಅಪವಾದಗಳಡಿಯಲ್ಲಿ ಬರುತ್ತದೆಂದು ಪ್ರತಿವಾದಿಯೇ ಸಿದ್ಧಮಾಡಬೇಕು.

ಉದಾ: ೧೫ ಕಲ್ಕತ್ತ ೫೫೫.

"ಈ ದಾವೆಯು ೧೮೪೫ನೆಯ ಇಸವಿ ಬಂಗಾಲದ ೧೧ನೆಯ ಅಧಿನಿಯಮದ ಕಲಮು ೩೭ರ ಅನ್ವಯ ನಿಯಂತ್ರಿಸಲ್ಪಟ್ಟಿದೆ. (ರಾಜಸ್ವ ಮಾರಾಟ ಅಧಿನಿಯಮ) ಮತ್ತು ಈ ಕಲಮು ವಿಶೇಷವಾಗಿ ಋಣಭಾರ ಹಾಗೂ ಬೇರೆ ಬೇರೆ ರೀತಿಯ ಭೂಮಿ ಹಿಡುವಳಿಯ ಬಗ್ಗೆ ಚರ್ಚಿಸುತ್ತದೆ. ಲಿಲಾವಿನಲ್ಲಿ ಹಿಡಿದವನಿಗೆ ಬೇರೆ ಬೇರೆ ರೀತಿಯ ಹಿಡುವಳಿಯನ್ನು ನಿವಾರಿಸಿ, ಹಕ್ಕುಳ್ಳವನೆಂದು ಸಾರಿ ಹೇಳುತ್ತದೆ. ಮತ್ತು ಕೆಲವು ಅಪವಾದಗಳಿಗೆ ಒಳಪಟ್ಟು ಅದರ ಕಬ್ಜೆಯಲ್ಲಿದ್ದವರನ್ನು ಹೊರಗೆ ಹಾಕಲು ಮತ್ತು ಅಪವಾದಗಳನ್ನು ಮುಂದು ಮಾಡುತ್ತ ಹೋಗುತ್ತದೆ ಎಂದು ನಮಗೆ ಹೀಗೆ ಅನಿಸುತ್ತದೆ. ಅದೇನೆಂದರೆ ಉಳಿದ ಬೇರೆ ಬೇರೆ ರೀತಿಯ ಹಿಡುವಳಿಗಳು ಶೂನ್ಯಗೊಳಿಸುವ ಸಾಮಾನ್ಯ ಕಾನೂನಿನ ನಿರೂಪಣೆ ಎಂದು ಸಾರಿ ಹೇಳುವುದರ ಪರವಾಗಿ ನಮಗೆ ಪೂರ್ವಗ್ರಹಿಕೆಯಾಗಿ ಕಂಡುಬರುತ್ತದೆ. ಮತ್ತು ಅಪವಾದವನ್ನು ವಾದಿಸುವುದರಿಂದ ಆತನು ಅದರಲ್ಲಿ ಬರುವಂತೆ ಮಾಡುತ್ತದೆ. ಅದು ಹೀಗಿರುವಾಗ ಪ್ರತಿವಾದಿಯು ತಾನು ವಾದ ಮಾಡುವಂತಹ ಅಪವಾದದಲ್ಲಿ ತಾನು ಬರುವಂತೆ ಮಾಡುವುದು ಅವನ ಮೇಲೆ ಇರುತ್ತದೆ.

ಒಂದು ಅಪವಾದಕ್ಕೆ ಪರಂತುಕ ಇದನ್ನು ಸಿದ್ಧ ಮಾಡುವ ಹೊಣೆಗಾರಿಕೆ ಅಥವಾ ಒಂದು ಒಪ್ಪಂದದಲ್ಲಿ ಪೂರ್ವ ಷರತ್ತು:

**೧. ಪರಂತುಕ ಮತ್ತು ಅಪವಾದಗಳ ನಡುವಣ ವ್ಯತ್ಯಾಸ**

ಒಂದು ಪರಂತುಕ ಇದನ್ನು ಸರಿಯಾಗಿ ಹೇಳಬೇಕೆಂದರೆ ಒಂದು ಒಪ್ಪಂದದ ವಿಷಯ ಸಂಗತಿಗಳ ಬಾಹ್ಯ ಸ್ಫೋಟಕ್ಕೆ ಅವುಗಳ ಉಲ್ಲಂಘನೆಯಾಗಿದ್ದರೆ ಆ ಒಪ್ಪಂದದ ಕರಾರಿನ ಪ್ರಕಾರ, ಆ ಒಪ್ಪಂದವನ್ನು ಮುಕ್ತ ಮಾಡುವುದು.

ಒಂದು ಅಪವಾದವು ಒಂದು ಒಪ್ಪಂದದ ವಿಷಯ ಸಂಗತಿಗಳಿಂದ ಅದರಲ್ಲಿಯ ಕೆಲವು ಹೊರತು ಪಡಿಸುವುದಾಗಿದೆ.

ಪರಂತುಕ ಅಥವಾ ಅಪವಾದ ಇವುಗಳಲ್ಲಿ ನಿರ್ದಿಷ್ಟವಾದ ಶಬ್ದಗಳು ಯಾವ ಒಂದು ಸಂಕ್ಷಿಪ್ತ

ರೂಪದಲ್ಲಿ ಅವುಗಳನ್ನು ಮಂಡಿಸಿರುತ್ತದೆಯೋ ಅದರ ಮೇಲೆ ಯಾವುದೇ ರೀತಿಯಿಂದ ಅವಲಂಬಿತ ವಾಗಿರುವುದಿಲ್ಲ. ಅಥವಾ ದಸ್ತಾವೇಜಿನ ಯಾವುದೇ ಭಾಗದಲ್ಲಿ ಅವು ಕಂಡುಬಂದರೆ,

**೨. ವಾದ ಪತ್ರದ ನಿಯಮದಂತೆ ವಾದಿಯು ಪರಂತುಕದ ಬಗ್ಗೆ ಯಾವಾಗ್ಯೂ ತನ್ನ ವಾದಪತ್ರದಲ್ಲಿ ಹೇಳಬೇಕೆಂದು ನಿಯಮ ಇರುವುದಿಲ್ಲ. ಆದರೆ ಅವನು ಯಾವಾಗಲೂ ಅಪವಾದಗಳನ್ನು ಹೇಳಬೇಕು.**

*ಆಗಾ ಸೈಯಿದ ಸದಕ್ ವಿರುದ್ಧ ರಾಖಿ ಝುಕಾರಿಯೂ ಮಹಮ್ಮದ್*

*೨ ಇಂಡಿ ಜರ್ನಲ್, ಎನ್.ಎಸ್. ೩೦೮ (೩೧೦)*

**೩೧೦ ಮಾರ್ಕಬಾಯ್ ಜೆ**

*ಥರ್ಸಬಾಯ್ ವಿರುದ್ಧ ಪ್ಲಾಂಟ್* ಇದರ ಟಿಪ್ಪಣಿ ೧ ಡಬ್ಲ್ಯು.ಎಮ್.ಎಸ್. ಸೌಂಡ ಪಿ ೨೩೩೬ ಇದರಲ್ಲಿ ನಿರ್ಧರಿಸಿದ್ದು ಏನೆಂದರೆ ಪರಂತುಕ ಇದು ಒಂದು ಒಪ್ಪಂದದ ವಿಷಯ ಸಂಗತಿಗಳ ಬಾಹ್ಯ ನೋಟಕ್ಕೆ ಅವುಗಳ ಉಲ್ಲಂಘನೆಯು ಆಗಿದ್ದರೆ ಆ ಒಪ್ಪಂದ ಕರಾರಿನ ಪ್ರಕಾರ ಆ ಒಪ್ಪಂದವನ್ನು ಮುಕ್ತ ಮಾಡುವುದು ಅಪವಾದವು. ಒಂದು ಒಪ್ಪಂದದ ವಿಷಯ ಸಂಗತಿಯಿಂದ ಅದರಲ್ಲಿಯ ಕೆಲವುಗಳನ್ನು ಹೊರಗೆ ತೆಗೆದುಕೊಳ್ಳುವುದಾಗಿದೆ. ಇವುಗಳ ಸರಿಯಾದ ವ್ಯಾಖ್ಯಾನವನ್ನು ವಾದಿಯು ಹೇಳಬೇಕೆಂದು ಯಾವಾಗಲೂ ಪರಂತುಕದ ಬಗ್ಗೆ ಹೇಳಬೇಕೆಂದು ಇರುವುದಿಲ್ಲ. ಆದರೆ ಯಾವಾಗಲೂ ಅಪವಾದಗಳ ಬಗ್ಗೆ ಹೇಳಬೇಕು.

೩. ಇದೊಂದು ವಾದ ಪತ್ರದ ನಿಯಮವೆಂದು ಹೇಳಿದ್ದರೂ ಇದು ಒಂದು ಸಿದ್ಧಮಾಡುವ ಹೊಣೆಗಾರಿಕೆಯ ನಿಯಮಕ್ಕೆ ಕೂಡ ಇದು ಸರಿಹೊಂದುತ್ತದೆ. ಒಂದು ವಿಮೆಯ ಪಾಲಿಸಿಯಲ್ಲಿಯ ಒಂದು ಖಂಡವು ಅಪವಾದವಾದರೆ ಅದನ್ನು ವಾದಿಯು ಹೇಳಬೇಕು. ಆದರೆ ಅದು ತನಗೆ ಅನ್ವಯಿಸುವುದಿಲ್ಲವೆಂದು ಅವನು ತೋರಿಸಬೇಕು. ಅದು ಪರಂತುಕ ಆಗಿದ್ದರೆ, ಅದನ್ನು ಪ್ರತಿವಾದಿಯು ಹೇಳಬೇಕು ಮತ್ತು ಅದು ಅನ್ವಯಿಸುತ್ತದೆಂದು ತೋರಿಸಬೇಕು.

*೨ ಇಂಡಿಯಾ ಜರ್ನಲ್, ಎನ್.ಎಸ್. ೩೦೮, ೩೧೦*

**೨. ಇಂಡಿಯನ್ ಜರ್ನಲ್ ಎನ್.ಎಸ್. ೩೦೮**

**೧೮೬೭**

'ಅ'ನು 'ಬ' ಮತ್ತು ಕಂಪನಿಯ ವಿರುದ್ಧ ಒಂದು ಹಡಗಿನ ಮೇಲಿನ ವಿಮೆಯ ಪಾಲಿಸಿ ಮೇಲೆ ದಾವಾ ಮಾಡುತ್ತಾನೆ. 'ಅಲಿಯಾ' ಎಂಬ ಹಡಗಿನ ಮೇಲೆ ೧೮೬೫ನೆಯ ಇಸವಿ ನವೆಂಬರ್ ೨೪ರ ಮಧ್ಯಾಹ್ನದಿಂದ ೧೮೬೬ನೆಯ ಇಸವಿಯ ಫೆಬ್ರವರಿ ೨೪ರ ತಾರೀಖಿನ ಮಧ್ಯಾಹ್ನದವರೆಗೆ ಮತ್ತು ಎಲ್ಲ ಬಂದರುಗಳಿಗೆ ಮತ್ತು ಸ್ಥಳಗಳಿಗೆ ಎಂದಿದ್ದು, "ಮತ್ತು ಎಲ್ಲ ಬಂದರುಗಳು ಮತ್ತು ಸ್ಥಳಗಳು" ಈ ಶಬ್ದಗಳನ್ನು ಮಾತ್ರ ಬರೆದದ್ದು ಉಳಿದವುಗಳನ್ನು ಮುದ್ರಿಸಲಾಗಿತ್ತು. 'ಬ' ಮತ್ತು ಕಂಪನಿ ತಮ್ಮ ಕೈಫಿಯತ್ತಿನಲ್ಲಿ ತಾವು ಕೊಟ್ಟ ಪಾಲಿಸಿ ಒಪ್ಪಿಕೊಳ್ಳುತ್ತಾರೆ. ಆದರೆ ಕೆಳಗಿನ ಅಪವಾದಗಳನ್ನು ಮುಂದೆ ಮಾಡಿದ್ದಾರೆ. ಒಂದು ಹಡಗನ್ನು 'ಸಿ' ತಡೆಹಿಡಿಯುವುದರಿಂದ ಉದ್ಭವಿಸುವ ಗಂಡಾಂತರ ಹಾನಿ ಸಂಭವಿಸುವಿಕೆಯು ನಷ್ಟವನ್ನು ಮತ್ತು ಬಿರುಗಾಳಿಯಿಂದ ಅಥವಾ ಸಮುದ್ರದ ಯಾವುದೇ ಗಂಡಾಂತರದಿಂದ ಇಲ್ಲವೆ ಪಲ್ಮರಾಸದಿಂದ

ಸಿಲೋನದವರೆಗೆ ಹಿಡಿದು ಕೋರಮಂಡಲ ಇದರ ಸಮುದ್ರ ದಂಡೆ ಮುಟ್ಟುವವರೆಗೆ ಮತ್ತು ಅದರ ಮೇಲೆ ವ್ಯವಹಾರ ಮಾಡುವಾಗ ಮತ್ತು ಅಕ್ಟೋಬರ್ ೧೫ರಿಂದ ಡಿಸೆಂಬರ್ ೧೫ರವರೆಗೆ ಎರಡೂ ದಿನಗಳನ್ನೊಳಗೊಂಡು ಸುತ್ತಮುತ್ತಲಿನ ಎಲ್ಲ ಪ್ರದೇಶಗಳಲ್ಲಿ ಈ ಮೂಲಕ ಒಪ್ಪಿಕೊಳ್ಳುತ್ತೇವೆ. ಯಾವ ಗಂಡಾಂತರ ಮತ್ತು ನಷ್ಟಗಳನ್ನು ವಿಮೆ ಮಾಡಿದವನು ಕೊಡಬೇಕು ಮತ್ತು ಅಲ್ಲಿ ಈ ಮುಂದೆ ಹೇಳಿದ್ದು ಏನೇ ವ್ಯತಿರಿಕ್ತ ಇದ್ದರೂ ಸಹಿತ. ವಿಮೆ ಮಾಡಿಕೊಂಡವನು ಕೊಡಬೇಕಾಗಿಲ್ಲ.

**೩. ಅಕಿಕ್ಸ**

**೪. ಪೂರ್ವಭಾವಿ ಶರತ್ತುಗಳು=ಪರಂತುಕ**

ಈ ವಿಷಯವಾಗಿ ಸಾಕ್ಷ್ಯದ ಕಾನೂನು ಮೂರು ತತ್ವಗಳನ್ನು ನಿರೂಪಿಸಿದೆ.

೧. ಒಂದು ಸಂಗತಿಯನ್ನು ರುಜುವಾತು ಮಾಡುವ ಭಾರವು ಯಾರು ಅದರ ಪ್ರಯೋಜನ ಪಡೆಯಲು ಇಚ್ಛಿಸುತ್ತಾರೆಯೋ ಅವನ ಮೇಲೆಯೇ ಇರುತ್ತದೆ. ಅವನಿಗೆ ಒದಗಿಸಿದ ವಿಶೇಷ ಸಾಕ್ಷ್ಯದ ಕಾನೂನಿನ ಸೌಕರ್ಯದ ಮೂಲಕ ಒಂದು ಸಂಗತಿಯನ್ನು ಸಿದ್ಧ ಮಾಡಬೇಕು.

ಈ ತತ್ವದ ಉದಾಹರಣೆ ಕಲಮು ೧೦೪ರಲ್ಲಿ ಇರುತ್ತದೆ.

**೨. ಒಂದು ನಿರ್ದಿಷ್ಟ ಸಂಗತಿಯನ್ನು ರುಜುವಾತು ಮಾಡುವ ಹೊಣೆ:**

೧. ಒಂದು ವಿವಾದಾಂಶವನ್ನು ರುಜುವಾತು ಮಾಡುವ ಹೊಣೆಯಂತೆಯೇ ಇವರ ನಿಯಮವು ಇರುತ್ತದೆ. ಒಂದು ನಿರ್ದಿಷ್ಟ ಸಂಗತಿಯನ್ನು ರುಜುವಾತು ಮಾಡುವ ಹೊಣೆಯು ಯಾವ ಪಕ್ಷದವನು, ಆ ಸಂಗತಿಯು ಅಸ್ತಿತ್ವದಲ್ಲಿದೆಯೆಂದು ದೃಢೀಕರಿಸುವನೋ ಅವನ ಮೇಲೆ ಇರುತ್ತದೆ ಮತ್ತು ಯಾವನು ನಿರಾಕರಿಸುತ್ತಾನೆ ಅವನ ಮೇಲೆ ಇರುವುದಿಲ್ಲ. ಈ ನಿಯಮವು ಕಲಮು ೧೦೩ರಲ್ಲಿ ಒಳಗೊಂಡಿದೆ ಮತ್ತು ಆ ನಿಯಮದ ಕಾರಣಗಳು ಸಹ ಎರಡೂ ಪ್ರಕರಣಗಳಲ್ಲಿ ಒಂದೇ ಆಗಿವೆ.

೨. ಆದಾಗ್ಯೂ ಕೆಲವು ಸಂಗತಿಗಳನ್ನು ರುಜುವಾತು ಮಾಡುವ ಭಾರವು ಕಾನೂನಿನ ಪ್ರಕಾರ ಅವನು ಒಂದು ಸಂಗತಿ ಅಸ್ತಿತ್ವದಲ್ಲಿದೆಯೆಂದು ಹೇಳುತ್ತಾನೆಯೋ ಅಥವಾ ಅದರ ಅಸ್ತಿತ್ವವನ್ನು ನಿರಾಕರಿಸುತ್ತಾನೆಯೋ ಎನ್ನುವ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಳ್ಳದೆ ಒಬ್ಬ ನಿರ್ದಿಷ್ಟ ವ್ಯಕ್ತಿಯ ಮೇಲೆ ಅದನ್ನು ರುಜುವಾತು ಮಾಡುವ ಹೊಣೆ ಇರುತ್ತದೆ. ಕಲಮು ೧೦೪ರಿಂದ ಕಲಮು ೧೧೧ರವರೆಗೆ ಇವು ನಿರ್ದಿಷ್ಟಪಡಿಸುವುದೇನೆಂದರೆ ಯಾವ ಪ್ರಕರಣಗಳಲ್ಲಿ ಸಾಕ್ಷ್ಯದ ಕಾನೂನು ರುಜುವಾತು ಮಾಡುವ ಭಾರವು ಒಂದು ನಿರ್ದಿಷ್ಟ ವ್ಯಕ್ತಿಯ ಮೇಲೆ ಇರುತ್ತದೆ.

೩. ಈ ಕಲಮುಗಳ ಕೆಳಗೆ ಅಡಕವಾಗಿರುವ ತತ್ವವು ಮತ್ತು ಸಾಮಾನ್ಯ ನಿಯಮದಿಂದ ರುಜುವಾತು ಮಾಡುವ ಹೊಣೆಯನ್ನು ಬಿಡುವುದಕ್ಕೆ ನಾಲ್ಕು ತತ್ವಗಳು ಕಾಣುತ್ತವೆ.

(i) ಒಂದು ಸಂಗತಿಯನ್ನು ಸಿದ್ಧ ಮಾಡುವ ಹೊಣೆಯು ಯಾವನು ಅದರ ಪ್ರಯೋಜನವನ್ನು ತೆಗೆದುಕೊಳ್ಳುವನೋ ಅವನು ಸಾಕ್ಷ್ಯ ಕಾನೂನಿನ ಅನ್ವಯ ಒದಗಿಸಿದ ವಿಶೇಷ ಸೌಲಭ್ಯ ಒದಗಿಸಿದ್ದರ ಮೂಲಕ ಆ ಸಂಗತಿಯನ್ನು ಸಿದ್ಧ ಮಾಡಬೇಕು.

(ii) ಯಾವಾಗ ಪಕ್ಷಗಾರರು ಸಾಪೇಕ್ಷ ಸ್ಥಾನದಲ್ಲಿ ಅಸಮಾನ ಸ್ಥಾನದಲ್ಲಿದ್ದರೆ ಒಂದು ನಿರ್ದಿಷ್ಟ ಸಂಗತಿಯನ್ನು ರುಜುವಾತು ಮಾಡುವ ಹೊಣೆಯು ಅವರಿಬ್ಬರಲ್ಲಿ ಯಾರು ತುಲನಾತ್ಮಕವಾಗಿ ಉತ್ತಮ ಸ್ಥಿತಿಯಲ್ಲಿರುವರೋ, ಇಲ್ಲವೆ ಗಟ್ಟಿಯಾದ ಸ್ಥಾನದಲ್ಲಿ ಇರುವರೋ ಅವರ ಮೇಲೆ ಇರುತ್ತದೆ.

(iii) ಎಲ್ಲ ಸಂಗತಿಗಳು ಇನ್ನು ಅಸ್ತಿತ್ವದಲ್ಲಿ ಮುಂದುವರಿದಿವೆಯೋ ಆಗ ಆ ಸಂಗತಿಯು ಮುಂದುವರಿದಿಲ್ಲವೆಂದು ಸಿದ್ಧ ಮಾಡುವ ಹೊಣೆಯು ಯಾವನು ಅದು ಮುಂದುವರಿದಿಲ್ಲವೆಂದು ಆಪಾದಿಸುವನೋ ಅವನ ಮೇಲೆ ಇರುತ್ತದೆ.

(iv) ಯಾವಾಗ ಒಂದು ಸಂಗತಿಯು ಕೇವಲ ಇನ್ನೊಂದು ಸಂಗತಿಯ ಕಾನೂನಿನ ಪರಿಣಾಮವಾಗಿದ್ದರೆ, ಆ ಪರಿಣಾಮವನ್ನು ಸಂಗತಿಯೆಂದು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲವೆಂದು ರುಜುವಾತು ಮಾಡುವ ಹೊಣೆಯು ಯಾವನು ಅದು ಆಗತಕ್ಕದ್ದಲ್ಲವೆಂದು ಆಪಾದಿಸುವನೋ ಅವನ ಮೇಲೆ ಇದೆ.

**ಮೊದಲನೆಯ ತತ್ವದ ಕಲಮುಗಳ ದೃಷ್ಟಾಂತ ರೂಪ**

೧. ಕಲಮು ೧೦೪ ಇದು ಮೊದಲನೆಯ ತತ್ವದ ಉದಾಹರಣೆ ಆಗಿದೆ. ಇದು ಒಂದು ಸಂಗತಿಯನ್ನು ರುಜುವಾತು ಮಾಡುವ ವಿಷಯ ಕುರಿತು ಹೇಳುತ್ತದೆ. ಇದನ್ನು ಸಿದ್ಧ ಮಾಡಲು ಅಂದರೆ ಮತ್ತೊಂದು ಸಂಗತಿಯನ್ನು ಸಿದ್ಧ ಮಾಡುವುದು.

೨. ಸಾಕ್ಷ್ಯದ ಕಾನೂನು ಕೆಲವು ಕರಾರುಗಳನ್ನು ವಿಧಿಸಿದೆ. ಅವುಗಳನ್ನು ಒಂದು ನಿರ್ದಿಷ್ಟ ಸಂಗತಿಯ ಬಗ್ಗೆ ಸಾಕ್ಷಿ ಕೊಡುವ ಪೂರ್ವದಲ್ಲಿ ಅವುಗಳನ್ನು ಪೂರೈಸಲಿಕ್ಕೇ ಬೇಕು. ಅದರಂತೆ ಸಾಕ್ಷ್ಯದ ಕಾನೂನು ಕೆಲವು ಕರಾರುಗಳನ್ನು ವಿಧಿಸುತ್ತದೆ. ಒಂದು ನಿರ್ದಿಷ್ಟ ಪದ್ಧತಿಯಲ್ಲಿ ಸಿದ್ಧ ಮಾಡುವ ಪೂರ್ವದಲ್ಲಿ ಒಂದು ಸಂಗತಿಯು ಅದರಲ್ಲಿ ಸೇರುತ್ತದೆ.

**ಉದಾಹರಣೆ: I**

ನ್ಯಾಯಾಲಯದಲ್ಲಿ ಒಬ್ಬನು ತನ್ನ ಸಾಕ್ಷಿಯನ್ನು ನ್ಯಾಯಾಧೀಶನ ಮುಂದೆ ಕೊಡದ ಹೊರತು ಅದು ಸಾಕ್ಷ್ಯವಾಗಲಾರದು. ಸಾಮಾನ್ಯವಾಗಿ ಅದರಿಂದ ಕೊಟ್ಟ ಹೇಳಿಕೆಯು ಹೇಳಿಕೆ ಕೊಟ್ಟ ಆ ಮನುಷ್ಯನು ಸತ್ತರೆ ಆತನದು ಸಾಕ್ಷ್ಯವೆನಿಸುವುದಿಲ್ಲ. ಆದಾಗ್ಯೂ ಸಾಕ್ಷ್ಯದ ಕಾನೂನು ಯಾವುದೇ ವಿಷಯದ ಬಗ್ಗೆ ಸತ್ತವನು ಸಾಕ್ಷ್ಯ ಕೊಟ್ಟಿದ್ದರೆ ಆ ಸಾಕ್ಷ್ಯವು ಆ ವಿವಾದಾಂಶಕ್ಕೆ ಸುಸಂಬಂಧವಾಗಿದ್ದರೆ ಅದಕ್ಕೆ ಅನುಮತಿ ಕೊಡುತ್ತದೆ. ಆದರೆ ಅವನು ಸತ್ತ ಸಂಗತಿಯು 'ಸಿದ್ಧವಾದ ಕರಾರಿನ ಮೇಲೆ'.

**ಉದಾಹರಣೆ: II**

ಸಾಕ್ಷ್ಯ ಕಾನೂನು ಅವಶ್ಯಪಡಿಸುವುದೇನೆಂದರೆ, ಒಂದು ದಸ್ತಾವೇಜಿನ ಸಂಗತಿಯನ್ನು ಸಾಬೀತು ಪಡಿಸುವ ಆ ಮೂಲ ದಸ್ತಾವೇಜನ್ನು ಹಾಜರುಪಡಿಸಲಿಕ್ಕೇಬೇಕು. ಆದಾಗ್ಯೂ ಕಾನೂನು ದ್ವಿತೀಯ ಸಾಕ್ಷ್ಯ ಕೊಡಲು ಅನುಮತಿ ಕೊಡುತ್ತದೆ. ಆದರೆ ಮೂಲ ಪ್ರತಿಯು ಕಳೆದಿದೆಯೆಂಬ ಕರಾರಿನ ಮೇಲೆ ಅದನ್ನು ಸಿದ್ಧ ಮಾಡಬೇಕು.

೩. ಇರುವ ಪ್ರಶ್ನೆಯು ಎಂದರೆ ಒಬ್ಬನು ಸತ್ತ ಸಂಗತಿಯನ್ನು ಇಲ್ಲವೆ ಒಂದು ಮೂಲ ದಸ್ತಾವೇಜು ಕಳೆದಿದೆಯೆಂಬುದನ್ನು ಯಾರು ರುಜುವಾತುಪಡಿಸಬೇಕು? ಸಾಮಾನ್ಯವಾಗಿ ಈ ಪೂರ್ವ ಕರಾರುಗಳನ್ನು ಯಾರು ಸಿದ್ಧಮಾಡಲಿಕ್ಕೇಬೇಕು? ಕಲಮು ೧೦೪ ಹೇಳುವುದೇನೆಂದರೆ ಯಾವ ಪಕ್ಷಗಾರರು ಅದರ ವಿಶೇಷ ಸೌಲಭ್ಯದ ಪ್ರಯೋಜನವನ್ನು ತೆಗೆದುಕೊಳ್ಳಲು ಇಚ್ಛಿಸುತ್ತಾನೆಯೋ ಅವನು ರುಜುವಾತು ಮಾಡಬೇಕು.

**ಎರಡನೆಯ ತತ್ವದ ಕಲಮುಗಳಿಗೆ ದೃಷ್ಟಾಂತರೂಪ**

೧. ಕಲಮು ೧೦೬ ಮತ್ತು ೧೧೧ ಎರಡನೆಯ ತತ್ವವನ್ನು ಉದಾಹರಿಸುವುದು.

**ಕಲಮು ೧೦೬**

ಈ ಕಲಮು ವಿಶೇಷವಾಗಿ ಒಂದು ಸಂಗತಿಯು ಒಬ್ಬ ಪಕ್ಷಗಾರನಿಗೆ ಮಾತ್ರ ಗೊತ್ತಿರುವ ಸಂಗತಿಯು ಆಗಿದ್ದು, ಈ ಸಂಗತಿಯನ್ನು ಸಿದ್ಧ ಮಾಡುವ ಹೊಣೆಯನ್ನು ಕುರಿತು ಈ ಕಲಮು ಹೇಳುತ್ತದೆ.

(i) 'ಅ'ನು ಒಂದು ಸಂಗತಿಯನ್ನು ಆಪಾದಿಸಿದರೆ 'ಬ'ನು ಅದನ್ನು ನಿರಾಕರಿಸಿದರೆ ಕಲಮು ೧೦೩ರಲ್ಲಿ ಕಾಣಿಸಿದ ನಿಯಮದ ಅನ್ವಯ 'ಅ'ನು ಅದನ್ನು ಸಿದ್ಧಮಾಡಲಿಕ್ಕೇಬೇಕು. ಯಾಕೆಂದರೆ 'ಅ'ನು ಅದನ್ನು ದೃಢೀಕರಿಸುತ್ತಾನೆ.

(ii) ಆದರೆ ಆ ವಿಷಯದ ಸಂಗತಿ ಜ್ಞಾನ ಅರಿವು 'ಬ'ನಿಗೆ ಮಾತ್ರ ಇದ್ದರೆ ಆಗ ಈ ಕಲಮಿನ ಅನ್ವಯ ಈ ಸಂಗತಿಯನ್ನು ರುಜುವಾತು ಮಾಡುವ ಹೊಣೆಯು 'ಬ'ನ ಮೇಲೆಯೇ ಬೀಳುತ್ತದೆ.

**೨. ಉದಾಹರಣೆಗಳು**

*೨೨ ಕಲ್ಕತ್ತ ೧೬೪*

ಹರ್ದನ್ನನಿಗೆ ೨ ಹೆಣ್ಣು ಮಕ್ಕಳಿದ್ದರು. ಅವರು ಅವಳಿ ಜವಳಿಗಳಾಗಿದ್ದು ೧ ವರ್ಷದವರಾಗಿದ್ದರು. ಅವರಲ್ಲಿ ಒಬ್ಬರನ್ನು ಕರುಣಾ ಅನ್ನುವ ವೇಶ್ಯೆಗೆ ೯ ರೂಪಾಯಿಗಳಿಗೆ ಮಾರಾಟ ಮಾಡಿದನು ಮತ್ತು ೧೦ ದಿನಗಳೊಳಗೆ ಕರುಣಾಳಿಗೆ ಈ ಮಾರಾಟ ಮಾಡಿದ್ದನು. ಅವಳೇ ಆ ಕೂಸನ್ನು ಚಿಕ್ಕಂದಿನಿಂದ (ಬಾಲ್ಯದಿಂದ) ಜೋಪಾನ ಮಾಡಿದ್ದಳು. ಅವಳು ಅವಳೊಂದಿಗೆ ಇಂದು ವೇಶ್ಯಾಜೀವನವನ್ನು ನಡೆಯಿಸುತ್ತಿದ್ದಳು.

ಪ್ರಶ್ನೆ: ಕಲಮು ೩೭೨:೩೭೩ರ ಅನ್ವಯ ನಡೆಯಿಸಿದ ಅಭಿಯೋಜನೆಯಲ್ಲಿ ಅಲ್ಪ ವಯಿ ಕೂಸನ್ನು ವೇಶ್ಯಾವಾಟಿಕೆಗಾಗಿ ಕೊಂಡುಕೊಂಡು ಮತ್ತು ಮಾರಾಟ ಮಾಡಿದ ಆ ಹುಡುಗಿಯರನ್ನು ವೇಶ್ಯಾವೃತ್ತಿಗೆ ಇಳಿಸುವ ಉದ್ದೇಶದಿಂದ ಮಾರಿದ್ದು ಮತ್ತು ಕೊಂಡದ್ದನ್ನು ಯಾರು ಸಿದ್ಧಮಾಡಬೇಕೆಂಬುದೇ ಪ್ರಶ್ನೆಯಾಗಿದೆ. ಈ ಉದ್ದೇಶವು ಕೇವಲ ಆರೋಪಿಗೆ ಮಾತ್ರ ಗೊತ್ತಿದೆ. ಕಾರಣ ಇದನ್ನು ಆರೋಪಿಯರು ಸಿದ್ಧ ಮಾಡಬೇಕು.

*೨೩ ಅಲಹಾಬಾದ ೧೨೪*

ಆಗ್ರಾ ಪಟ್ಟಣದ ಹೊರಗಡೆ ಅತೀ ಸಮೀಪದಲ್ಲಿ ರಾತ್ರಿ ೧೧ ಗಂಟೆಯ ಸುಮಾರಿಗೆ ಅನೇಕ ಜನರು ಬಂದೂಕು ಮತ್ತು ಖಡ್ಗಗಳನ್ನು ತಮ್ಮ ಅರಿವೆಗಳಲ್ಲಿ ಮುಚ್ಚಿಟ್ಟುಕೊಂಡು ತೆಗೆದುಕೊಂಡು ಹೋದರು. ಅವರಲ್ಲಿ ಯಾರಿಗೂ ಬಂದೂಕ ಒಯ್ಯಲು ಪರವಾನಿಗೆ ಇರಲಿಲ್ಲ. ಮತ್ತು ಯಾರೂ ಆ ಜಾಗೆಯಲ್ಲಿ ತಾವು ಹಾಜರಿದ್ದ ಬಗ್ಗೆ ಯೋಗ್ಯ ವಿವರಣೆಯನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ.

ಕಲಮು ೪೦೨ ದೋಷಾರೋಪಣೆಯಲ್ಲಿ ರುಜುವಾತು ಮಾಡುವ ಹೊಣೆಯು ಆರೋಪಿಯ ಮೇಲೆ ಇರುತ್ತದೆ.

**ಕಲಮು ೧೧೧**

೧. ಕಲಮು ಒಂದು ವ್ಯವಹಾರದ ಸದ್ಭಾವನೆಯನ್ನು ರುಜುವಾತು ಮಾಡುವ ಭಾರವನ್ನು ಕುರಿತು ಹೇಳುತ್ತದೆ.

**೨. ಸದ್ಭಾವನೆಯ ವ್ಯಾಖ್ಯೆ**

(೧) ಸಾಕ್ಷ್ಯದ ಅಧಿನಿಯಮದಲ್ಲಿ ಸದ್ಭಾವನೆಯನ್ನು ವ್ಯಾಖ್ಯಾಯಿಸಿರುವುದಿಲ್ಲ.

(೨) ಇದನ್ನು ಭಾರತ ದಂಡ ಸಂಹಿತೆ ಕಲಮು ೫೨ರಲ್ಲಿ ವ್ಯಾಖ್ಯಾಯಿಸಲಾಗಿದೆ. ಯಾವುದೊಂದು ಸಂಗತಿಯನ್ನು ತಕ್ಕ ಎಚ್ಚರಿಕೆ ಹಾಗೂ ಲಕ್ಷ್ಯವಿಲ್ಲದೆ ಮಾಡಿದ್ದು, ಇಲ್ಲವೆ ನಂಬದೆ ಮಾಡಿದ ಯಾವುದನ್ನು ಸದ್ಭಾವನೆ ಎಂದು ಕರೆಯಲಾಗುವುದಿಲ್ಲ.

(೩) ೧೮೯೭ನೆಯ ಸಾಮಾನ್ಯ ಖಂಡಗಳ ಅಧಿನಿಯಮ ೧೦ನೆಯ ಅಧಿನಿಯಮ ಇದರ ಕಲಮು ೨(೨೦)ರಲ್ಲಿ ಸಹ ಇದನ್ನು ವ್ಯಾಖ್ಯಾನಿಸಲಾಗಿದೆ.

'ಅ'ನು ಒಂದು ಸಂಗತಿಯನ್ನು ಸದ್ಭಾವನೆಯಿಂದ ಮಾಡಿರುವನೆಂದು ಗ್ರಹಿಸಲಾಗುವುದು. ಅವನು ಅದನ್ನು ಪ್ರಾಮಾಣಿಕವಾಗಿ ಮಾಡಿದ ಸಂಗತಿಯಾಗಿದ್ದರೆ, ಆದರೆ ಅವನು ಅದನ್ನು ನಿರ್ಲಕ್ಷ್ಯತನದಿಂದ ಮಾಡಿದರೆ ಇಲ್ಲವೆ ಮಾಡಿಲ್ಲದಿರಲಿ.

(೪) ಈ ಎರಡೂ ವ್ಯಾಖ್ಯಾಗಳಲ್ಲಿರುವ ಅಂತರವು ಏನೆಂದರೆ ಪ್ರಾಮಾಣಿಕತೆಯ ಪ್ರಶ್ನೆಯು ಸದ್ಭಾವನೆಗೆ ಮಹತ್ವವಲ್ಲ. ಏಕೆಂದರೆ ದಂಡಸಂಹಿತೆಯಲ್ಲಿ ಇದನ್ನು ವ್ಯಾಖ್ಯಾಯಿಸಲಾಗಿದೆ. ಆದರೆ ಈ ವ್ಯಾಖ್ಯೆಯು ಅತಿ ಮಹತ್ವದ್ದಾಗಿದೆ. ಅದನ್ನು ಸಾಮಾನ್ಯ ಖಂಡಗಳ ಅಧಿನಿಯಮದಲ್ಲಿ ಕೊಟ್ಟಿದೆ.

(೫) ಸಾಕ್ಷ್ಯ ಅಧಿನಿಯಮದಲ್ಲಿ ಸದ್ಭಾವನೆ ಈ ಪದವನ್ನು ಸಾಮಾನ್ಯ ಖಂಡಗಳ ಅಧಿನಿಯಮ ಇದರಲ್ಲಿ ಉಪಯೋಗಿಸಿದ ಅರ್ಥದಲ್ಲಿಯೇ ಇಲ್ಲಿಯೂ ಉಪಯೋಗಿಸಲಾಗಿದೆ.

**೩. ಸದ್ಭಾವನೆ ಇದನ್ನು ಸಿದ್ಧ ಮಾಡುವ ಕುರಿತು ಇರುವ ಸಾಮಾನ್ಯ ನಿಯಮ**

(೧) ಎಲ್ಲರೂ ತಮ್ಮ ವ್ಯವಹಾರದಲ್ಲಿ ಯುಕ್ತಾಯುಕ್ತವಾಗಿ ನಡೆದುಕೊಳ್ಳುತ್ತಾರೆಂದು ಕಾನೂನಿನ ಸಾಮಾನ್ಯ ತತ್ವವಾಗಿದೆ. ಯಾವುದೇ ಅಗೌರವವನ್ನು ಇಲ್ಲವೆ ದ್ವೇಷ ಭಾವನೆಯನ್ನು ಯಾವುದೇ ವ್ಯಕ್ತಿಯ ಮೇಲೆ ಹೊರಿಸಬಾರದು. ಕಾನೂನು ಯಾರ ಮೇಲೂ ದುರ್ಗುಣಗಳನ್ನು ಮತ್ತು ಅನೈತಿಕತೆಯನ್ನು ಆರೋಪಿಸುವುದಿಲ್ಲ. ಇದು ಹೀಗಿರುವುದರಿಂದ ಯಾವ ಮನುಷ್ಯನು ಇನ್ನೊಬ್ಬ ಮನುಷ್ಯನ ನಡತೆಯನ್ನು ಅಪ್ರಮಾಣಿಕನೆಂದು ಇಲ್ಲವೆ ದೋಷಯುಕ್ತವಾದುದೆಂದು ಖಂಡಿಸಲು ಇಚ್ಛಿಸಿದರೆ, ಅಂಥವನ ಮೇಲೆ ಅಪ್ರಮಾಣಿಕ ಮತ್ತು ದೋಷಪೂರಿತನೆಂದು ರುಜುವಾತು ಮಾಡುವ ಹೊಣೆಯು ಇರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಿದ್ಧ ಮಾಡುವುದನ್ನು ಕುರಿತು ಯೋಗ್ಯ ಸದ್ಭಾವನೆ ಇಲ್ಲವೆಂದು ಯಾರು ಆರೋಪಿಸುತ್ತಾರೆಯೋ ಅವನೇ ಅದನ್ನು ಸಿದ್ಧ ಮಾಡಲು ಹೊಣೆಗಾರನಾಗಿರುತ್ತಾನೆ. ಉದ್ದೇಶವನ್ನು ಸಿದ್ಧ ಮಾಡಲಿಕ್ಕೇಬೇಕು.

(೨) ಕಲಮು ೧೧೧– ಈ ಸಾಮಾನ್ಯ ನಿಯಮಕ್ಕೆ ಅಪವಾದವಾಗಿ ಅಧಿನಿಯಮವನ್ನು ಮತ್ತು ಸಂದರ್ಭಗಳನ್ನು ಗೊತ್ತುಪಡಿಸುತ್ತದೆ. ಆ ಮನುಷ್ಯನು ಅವುಗಳನ್ನು ಸಕಾರಾತ್ಮಕವಾಗಿ ಸದ್ಭಾವನೆಯಿಂದ ಸಿದ್ಧ ಮಾಡಲಿಕ್ಕೇಬೇಕು. ಇಬ್ಬರ ನಡುವಿನ ಒಂದು ಸದ್ಭಾವನೆಯ ವ್ಯವಹಾರದಲ್ಲಿ ಅವರಲ್ಲಿ ಒಬ್ಬನು

ಅದನ್ನು ಪ್ರಶ್ನಿಸಿದರೆ, ಮತ್ತು ಅವರಿಬ್ಬರೂ ಇಂತಹ ಸಂಬಂಧವನ್ನು ಅತ್ಯಂತ ವಿಶ್ವಾಸದಿಂದ ಕೂಡಿದ್ದಾಗಿದ್ದರೆ, ಅಂತಹ ಸಮಯದಲ್ಲಿ ಸದ್ಭಾವನೆಯನ್ನು ಸಿದ್ಧ ಮಾಡುವ ಭಾರವು ಯಾರು ಸಕ್ರಿಯ ವಿಶ್ವಾಸವನ್ನು ಹೊಂದಿರುವವರೋ ಅವರೇ ನಕಾರಾತ್ಮಕವಾಗಿ ಸಿದ್ಧ ಮಾಡಬೇಕು.

ಒಂದು ವ್ಯವಹಾರದ ಇಬ್ಬರೂ ಪಕ್ಷಗಾರರು ಒಬ್ಬನು ಇನ್ನೊಬ್ಬನಿಗೆ ಸಕ್ರಿಯ ವಿಶ್ವಾಸದಲ್ಲಿರುವ ಸಂಬಂಧ ಹೊಂದಿರುತ್ತಾರೆ.

**(೪) ಸಕ್ರಿಯ ವಿಶ್ವಾಸದ ಸ್ಥಾನದ ಅರ್ಥ:**

(i) 'ಅಂತಸ್ತು' ಎಂದರೆ ಕಾನೂನಿನ ಸಂಬಂಧವಾಗಿರುತ್ತದೆ

(ii) ಸಕ್ರಿಯ ವಿಶ್ವಾಸ ಎಂದರೆ ಸಮಾಲೋಚನೆ ಮತ್ತು ಉಪದೇಶದ ಮೇಲೆ ನಡೆದುಕೊಳ್ಳುವುದು.

ಸಕ್ರಿಯ ವಿಶ್ವಾಸದ ಸ್ಥಾನವು ಎಂದರೆ ಇಬ್ಬರು ಪಕ್ಷಗಾರರ ನಡುವಿನ ಸಂಬಂಧವು ಒಬ್ಬ ಪಕ್ಷದವನು ಇನ್ನೊಂದು ಪಕ್ಷದವನನ್ನು ತನ್ನ ಹಿತಸಂರಕ್ಷಣೆಗಾಗಿ ಸಮಾಲೋಚಿಸುತ್ತಾನೆ. ಮತ್ತು ಆ ಮತ್ತೊಬ್ಬನು ಕೊಡುವ ಉಪದೇಶವು ಅವನ ಹಿತಾಸಕ್ತಿಯನ್ನು ಸಂರಕ್ಷಿಸುವಂತಹದ್ದಾಗಿರುತ್ತದೆ.

ಈ ಕಲಂ ಉದ್ದೇಶಿಸಿರುವುದೇನೆಂದರೆ ಕಾನೂನಿನ ಸಂಬಂಧವು ಇಬ್ಬರು ಪಕ್ಷಗಾರರಲ್ಲಿ ವಿಶ್ವಾಸದಲ್ಲಿ ತೆಗೆದುಕೊಂಡ ಮನುಷ್ಯನು ಅವನ ಹಿತರಕ್ಷಣೆಯನ್ನು ಮಾಡುವುದು ಅವನ ಕರ್ತವ್ಯವಾಗಿದೆ.

| | |
|---|---|
| *ಕಾಲ್ಸನ್ ವಿರುದ್ಧ ಅಲ್ಲಿಸನ್ ೨ ಡಿ.ಎಫ್. ಆಂಡ್ ಜೆ ೫೮೧* | ಒಂದನೆಯ ಪ್ರಕರಣ ಈ ನಿಯಮವು ಅನ್ವಯಿಸುತ್ತದೆ ಯಾಕೆಂದರೆ ಪಕ್ಷಗಾರರು ಗಂಡ ಮತ್ತು ಹೆಂಡತಿ ಯಾಗಿರುತ್ತಾರೆ. |
| *ಹಾಯ್‌ಗ್ರೀವ ವಿರುದ್ಧ ಇವರಾಡ್ ೬ ಅಯರ್‌ಲಂಡ್ ಸಿ.ಎಚ್.ಆರ್.೨೭೮* | ಎರಡನೆಯ ಪ್ರಕರಣದಲ್ಲಿ ಈ ನಿಯಮವನ್ನು ಅನ್ವಯಿಸಲಿಲ್ಲ, ಏಕೆಂದರೆ ಪಕ್ಷಗಾರರು ಗಂಡ ಮತ್ತು ಹೆಂಡತಿಯಾಗಿರಲಿಲ್ಲ. ಅವರು ಪ್ರಿಯತಮ ಮತ್ತು ಪ್ರೇಯಸಿ ಆಗಿದ್ದರು. |

ಒಬ್ಬ ಧರ್ಮದರ್ಶಿ ಮತ್ತು ಫಲಾನುಭವಿ, ವಕೀಲ ಮತ್ತು ಪಕ್ಷಗಾರ, ತಂದೆ ಮತ್ತು ಮಗ ಇಲ್ಲವೇ ಗಂಡ ಮತ್ತು ಹೆಂಡತಿ ಅವರು ಸದ್ಭಾವನೆಯ ಅಂಶವನ್ನು ಎತ್ತಿದರೆ ಈ ನಿಯಮಕ್ಕೆ ಒಳಪಡುತ್ತಾರೆ.

(೫) ಯಾವ ಪ್ರಕರಣದಲ್ಲಿ ಒಬ್ಬನು ಇನ್ನೊಬ್ಬನೊಡನೆ ಇಂತಹ ಸಕ್ರಿಯ ವಿಶ್ವಾಸದಲ್ಲಿರುವ ಪ್ರಕರಣಗಳಿಗೆ ಈ ನಿಯಮವನ್ನು ಸೀಮಿತಗೊಳಿಸಬೇಕೆಂದು ಕಲಮಿನಲ್ಲಿ ಹೇಳಿದ್ದರೂ ನ್ಯಾಯಾಲಯಗಳು ಒಬ್ಬ ವ್ಯಕ್ತಿಯ ಮೇಲೆ ಇನ್ನೊಬ್ಬ ವ್ಯಕ್ತಿಯು ಪ್ರಾಬಲ್ಯ, ಆಧಿತ್ಯ ಹೊಂದಿದವನಾಗಿದ್ದರೆ, ಮತ್ತು ಅವನ ಮೇಲೆ ಅನುಚಿತ ಪ್ರಭಾವವನ್ನು ಬೀರುವ ಎಲ್ಲ ಪ್ರಕರಣಗಳಿಗೆ ಇದನ್ನು ವಿಸ್ತರಿಸಲಾಗಿದೆ.

**ಕಲಮು ೧೦೭, ೧೦೮**

೧. ಇವುಗಳನ್ನು ಕೂಡಿಯೇ ಓದತಕ್ಕದ್ದು ಯಾಕೆಂದರೆ ಕಲಮು ೧೦೮ ಇದು ಕಲಮು ೧೦೭ ಒಳಗೊಂಡಿರುವ ನಿಯಮಗಳಿಗೆ ಕೇವಲ ಪರಂತುಕವಾಗಿರುತ್ತದೆ.

೨. ಈ ವಿಭಾಗಗಳು ಒಬ್ಬನು ಎಷ್ಟು ಕಾಲ ಜೀವಂತ ಇರುವನು ಎಂಬ ಪ್ರಶ್ನೆಯನ್ನು ಕುರಿತು ಚರ್ಚಿಸುವುದಿಲ್ಲ.

೩. ಈ ವಿಭಾಗಗಳು ಯಾವ ವೇಳೆಯಲ್ಲಿ ಅವನು ಸತ್ತನು ಈ ವಿಷಯವಾಗಿ ಚರ್ಚಿಸುವುದಿಲ್ಲ.

೪. ಈ ವಿಭಾಗಗಳು ಆ ಹಿಂದಿನ ದಿನಾಂಕದಂದು ಅವನು ಜೀವಂತ ಇದ್ದನೋ ಇಲ್ಲವೆ ಸತ್ತಿದ್ದನೋ ಎಂಬ ವಿಷಯವಾಗಿ ಚರ್ಚಿಸುವುದಿಲ್ಲ.

೫. ಈ ವಿಭಾಗಗಳು ಈ ಪ್ರಶ್ನೆಯನ್ನು ಎತ್ತಿದಾಗ, ಅಂದರೆ ದಾವೆಯನ್ನು ದಾಖಲು ಮಾಡಿದ ದಿನಾಂಕದಂದು ಆ ಮನುಷ್ಯನು ಜೀವಂತ ಇದ್ದನೋ ಇಲ್ಲವೆ ಸತ್ತಿದ್ದನೋ ಈ ವಿಷಯವಾಗಿ ಚರ್ಚಿಸುವುದಿಲ್ಲ.

**ಮೂರನೆಯ ತತ್ವದ ಸಿದ್ಧಾಂತರೂಪದ ವಿಭಾಗಗಳು**
**ಕಲಮು ೧೦೭, ೧೦೮ ಮತ್ತು ೧೯**

**ಕಲಮು ೧೦೭:** ಇದು ಒಬ್ಬ ಮನುಷ್ಯನು ಜೀವಂತ ಇರುವನೋ ಇಲ್ಲವೆ ಸತ್ತಿರುವನೋ ಎಂಬುವ ಪ್ರಶ್ನೆಯು ಇರುವಾಗ ಅದನ್ನು ರುಜುವಾತು ಮಾಡುವ ಹೊಣೆಯನ್ನು ಕುರಿತು ಹೇಳುತ್ತದೆ.

ಈ ವಿಭಾಗದ ಅನ್ವಯ ಪ್ರಶ್ನೆಯಲ್ಲಿರುವ ವ್ಯಕ್ತಿಯು ಕಳೆದ ೩೦ ವರ್ಷಗಳಲ್ಲಿ ಜೀವಂತವಾಗಿದ್ದನೆಂಬುದು ಸಿದ್ಧವಾದಾಗ, ಆಗ ಅವನು ಸತ್ತಿರುವನೆಂದು ಹೇಳುವ ಪಕ್ಷದವನ ಮೇಲೆ ಅದನ್ನು ಸಿದ್ಧ ಮಾಡುವ ಹೊಣೆಯು ಇರುತ್ತದೆ. ಪ್ರಶ್ನೆಯಲ್ಲಿರುವ ವ್ಯಕ್ತಿಯು ೩೦ ವರ್ಷಗಳಲ್ಲಿ ಜೀವಂತ ಇದ್ದನೆಂದು ಸಿದ್ಧವಾಗಿರುವುದಿಲ್ಲವೋ ಆಗ ಅವನು ಜೀವಂತ ಇರುವನೆಂದು ಹೇಳುವ ವ್ಯಕ್ತಿಯ ಮೇಲೆ ಅದನ್ನು ಸಿದ್ಧ ಮಾಡುವ ಹೊಣೆಯು ಇರುತ್ತದೆ.

**ಕಲಮು ೧೦೮–** ಇದು ಯಾವ ಒಬ್ಬ ವ್ಯಕ್ತಿಯು ಜೀವಂತ ಇರುವನೆಂದು ಇಲ್ಲವೆ ಸತ್ತಿರುವನೆಂದು ಪ್ರಶ್ನೆಯನ್ನು ಕುರಿತು ರುಜುವಾತು ಮಾಡುವ ಹೊಣೆಯನ್ನು ಹೇಳುತ್ತದೆ.

**ಈ ಕಲಮಿನ ಅನ್ವಯ:**

(೧) ಆ ವ್ಯಕ್ತಿಯ ಬಗ್ಗೆ ಕಳೆದ ಏಳು ವರ್ಷಗಳಿಂದ ಏನೂ ತಿಳಿದುಬರದಿದ್ದರೆ.

(೨) ಸ್ವಾಭಾವಿಕವಾಗಿ ಕೆಲವರು ಅವನ ಬಗ್ಗೆ ಕೇಳಿರುವರೋ ಆಗ ಅದನ್ನು ರುಜುವಾತು ಮಾಡುವ ಹೊಣೆಯು, ಅವನು ಜೀವಂತ ಇರುವನೆಂದು ದೃಢೀಕರಿಸುವ ಪಕ್ಷಗಾರನ ಮೇಲೆ ಇರುತ್ತದೆ.

**ವ್ಯಾಖ್ಯಾನ:**

ಒಮ್ಮೆ ಯಾವುದೇ ವಿಷಯದಲ್ಲಿ ಜೀವಂತ ಇರುವನೆಂದು ನ್ಯಾಯಾಲಯದ ತೀರ್ಮಾನಕ್ಕೆ ಒಳಪಟ್ಟಿದ್ದು. ಈ ಪೂರ್ವಗ್ರಹಿಕೆಯು ಯಾವಾಗಲೂ ಒಬ್ಬನು ಜೀವಿಸಿರುವನೆಂದು ಹೇಳುತ್ತದೆ. ಸತ್ತಿರುವುದನ್ನು ಸಿದ್ಧ ಮಾಡುವ ಹೊಣೆಯು ಯಾರು ಅದನ್ನು ಒತ್ತಿ ಹೇಳುತ್ತಾರೆಯೋ ಅವರ ಮೇಲೆಯೇ ಇರುತ್ತದೆ. ಆದರೆ ಒಬ್ಬನು ಜೀವಂತ ಇರುವನೆಂಬ ಪೂರ್ವಭಾವನೆಯು ಆ ಪ್ರಶ್ನೆಯಲ್ಲಿರುವ ಮನುಷ್ಯನ ಬಗ್ಗೆ ಕೊನೆಯ ಸಲ ಕೇಳಿದ ಅವಧಿಯಿಂದ ಏಳು ವರ್ಷಕ್ಕೆ ಮುಕ್ತಾಯಗೊಳ್ಳುತ್ತದೆ. ಆ ಮನುಷ್ಯನು ಏಳು ವರ್ಷಗಳ ಅವಧಿಯಲ್ಲಿ ಜೀವಂತ ಇದ್ದನೆಂದು ಅದನ್ನು ಒತ್ತಿ ಹೇಳುವವನ ಮೇಲೆ ಅದನ್ನು ರುಜುವಾತು ಮಾಡುವ ಭಾರವು ಇರುತ್ತದೆ. ಆದರೆ ಉಳಿದ ಸಂದರ್ಭಗಳನ್ನು ಸಹಮತಿಸಿ ನ್ಯಾಯಾಲಯವು ಆ ಮನುಷ್ಯನ ಮರಣ ಹೊಂದಿದ ಇಲ್ಲವೆ ಸಂಭವಿಸಿದ ಸಂಗತಿಯು ಏಳು ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ನಡೆಯಿತೆಂಬ ತೀರ್ಮಾನಕ್ಕೆ ಬರಬಹುದು.

*೨: ವಾಕರರ್ (೧೯೦೯) ಪು. ೧೧೫*

**ಕಲಮು ೧೦೭–೧೦೮ ಇವುಗಳನ್ನು ಅನ್ವಯಿಸುವುದು**

ಕಲಮು ೧೦೭–೧೦೮: ಇವೆರಡೂ ಕಲಮುಗಳ ಉಪಬಂಧಗಳಂತೆ ಮಾಡಿದ ಪ್ರಶ್ನೆಯೆಂದರೆ ಈ ಪ್ರಶ್ನೆಯನ್ನು ಎತ್ತಿದಾಗ ಆ ಒಬ್ಬ ವ್ಯಕ್ತಿಯು ಜೀವಂತ ಇದ್ದನೋ ಇಲ್ಲವೆ ಸತ್ತಿದ್ದನೋ ಅನ್ನುವ ವಿಷಯ ಕುರಿತು ಇವೆರಡೂ ಕಲಮುಗಳ ಉಪಬಂಧಗಳು ಅನ್ವಯಿಸುತ್ತವೆ. ಒಬ್ಬ ಮನುಷ್ಯನು ಒಂದು ನಿರ್ದಿಷ್ಟ ವೇಳೆಯಲ್ಲಿ ಸತ್ತನೆಂಬ ವಿಷಯವಿದ್ದರೆ ಆ ಕಲಮುಗಳು ಅನ್ವಯಿಸುವುದಿಲ್ಲ. ಯಾವನೊಬ್ಬ ಒಬ್ಬ ವ್ಯಕ್ತಿಯು ಖಚಿತ ವೇಳೆಯಲ್ಲಿ ಸತ್ತನೆಂದು ಸ್ಥಾಪಿಸಲು ಯತ್ನಿಸಿದರೆ ಅದನ್ನು ರುಜುವಾತು ಮಾಡುವ ಹೊಣೆಯು ಅವನ ಮೇಲೆಯೇ ಇರುತ್ತದೆ.

**ಕಲಮು ೧೦೯:**

ಈ ಕಲಮು ಮೂವರು ಸಂಬಂಧಿಗಳ ಮುಂದುವರಿಕೆಯನ್ನು ಕುರಿತು ಇಲ್ಲವೆ ಅವರ ಸಂಬಂಧ ಮುಂದುವರೆಯದಿರುವುದನ್ನು ತಡೆಯುವ ಕುರಿತು ಸಿದ್ಧ ಮಾಡುವ ಹೊಣೆಯನ್ನು ಕುರಿತು ಹೇಳುತ್ತದೆ.

**(೧) ಪಾಲುಗಾರರು.**

**(೨) ಭೂಮಾಲಿಕರು ಮತ್ತು ಗೇಣಿದಾರರು.**

**(೩) ಯಜಮಾನ ಮತ್ತು ಏಜೆಂಟರು.**

ಈ ಕಲಮು ಒದಗಿಸುವುದೇನೆಂದರೆ, ಒಮ್ಮೆ ಇಬ್ಬರು ವ್ಯಕ್ತಿಗಳು ಪಾಲುಗಾರರಾಗಿ ಇದ್ದುದನ್ನು ಭೂಮಾಲೀಕ ಮತ್ತು ಗೇಣಿದಾರರೆಂದು ಇಲ್ಲವೆ ಯಜಮಾನ ಮತ್ತು ಏಜೆಂಟರೆಂದು ತೋರಿಸಿದರೆ, ಎಂದಿನಿಂದ ಅವರ ಸಂಬಂಧವು ಮುಕ್ತಾಯವಾಯಿತೆಂದು ಸಿದ್ಧಮಾಡುವ ಹೊಣೆಯು ಯಾವ ಪಕ್ಷಗಾರನು ಆ ಸಂಬಂಧವು ಮುಕ್ತಾಯವಾಗಿದೆಯೆಂದು ಆಪಾದಿಸುವನೋ ಅವನ ಮೇಲೆಯೇ ಇರುತ್ತದೆ.

**ನಾಲ್ಕನೆಯ ತತ್ವದ ಕಲಮಿನ ದೃಷ್ಟಾಂತ ರೂಪದವು**
**ಕಲಮು ೧೧೦**

ಈ ಕಲಮು ಆಸ್ತಿಯ ಮಾಲೀಕತ್ವವನ್ನು ಯಾವಾಗ ಒಂದು ಆಸ್ತಿಯು ಒಬ್ಬನ ಕಬ್ಜೆಯಲ್ಲಿರುತ್ತದೆ ಮತ್ತು ಆ ಆಸ್ತಿಯ ಮಾಲೀಕನಿಗೆ ಮತ್ತು ಕಬ್ಜೆಯಿಲ್ಲದ ಭೂಮಾಲೀಕ ಇವರಲ್ಲಿ ಸ್ಪರ್ಧೆಯು ಇರುವಾಗ ಅದನ್ನು ರುಜುವಾತು ಮಾಡುವ ಭಾರವನ್ನು ಕುರಿತು ಹೇಳುತ್ತದೆ.

೧. ಕಲಮು ೧೧೦ರಲ್ಲಿ ಹೇಳಲಾದ ನಿಯಮವೇನೆಂದರೆ ಮಾಲೀಕನಲ್ಲದವನು ಕಬ್ಜೆಯಲ್ಲಿರುವವನು ಅದರ ಮಾಲೀಕನಲ್ಲವೆಂದು ರುಜುವಾತು ಮಾಡುವ ಹೊಣೆಯು ಯಾರು ಅವನು ಮಾಲೀಕನಲ್ಲವೆಂದು ಆಪಾದಿಸುತ್ತಾನೆಯೋ ಅವನ ಮೇಲೆಯೇ ಇರುತ್ತದೆ.

**ಈ ನಿಯಮಕ್ಕೆ ಕಾರಣ:**

ಮುಖ್ಯವಾಗಿ ಮಾಲೀಕತ್ವವು ಆಸ್ತಿಯ ಉಪಭೋಗಕ್ಕಾಗಿ ಪ್ರತ್ಯೇಕ ಕಬ್ಜೆಯ ಅರ್ಥವನ್ನು ಕೊಡುತ್ತದೆ. ಮಾಲೀಕನು ಉಳಿದೆಲ್ಲರಿಗಿಂತಲೂ ಆಸ್ತಿಯ ಕಬ್ಜೆಯಲ್ಲಿರಲು ಹಕ್ಕುಳ್ಳವನಾಗಿರುವನು ಮತ್ತು ಅದನ್ನು ಉಪಯೋಗಿಸುವುದು, ಮತ್ತು ಅವನನ್ನು ಕಾನೂನುಬಾಹಿರವಾಗಿ ಕಬ್ಜೆಯಿಂದ ಅಪಹರಿಸಿದರೆ, ಅದರ

ಕಬ್ಜೆಯನ್ನು ಪಡೆಯುವ ಹಕ್ಕು ಅವನಿಗೆ ಇರುತ್ತದೆ. ಮಾಲೀಕತ್ವವು ಆ ಆಸ್ತಿಯನ್ನು ಅವನು ವಿಲೇ ಮಾರಾಟ ಮಾಡುವ, ಅಡಮಾನ ಹಾಕುವ ಇಲ್ಲವೆ ದೇಣಿಗೆಯನ್ನಾಗಿ ಕೊಡುವ ಅಧಿಕಾರವನ್ನು ಸಹ ಕೊಡುತ್ತದೆ. ಸಂಪೂರ್ಣ ಕಬ್ಜೆಯನ್ನು ಪಡೆಯುವ ಮತ್ತು ವಿಲೇ ಮಾಡುವ ಇವೆರಡೂ ಹಕ್ಕು; ಆದ್ದರಿಂದ ಮಾಲೀಕತ್ವ ಹಕ್ಕು ಅನುಗತವಾಗಿ ಬರುವ ಹಕ್ಕುಗಳಾಗಿರುತ್ತವೆ. ಎಲ್ಲಿ ಮಾಲೀಕತ್ವವು ಇರುತ್ತದೆಯೋ ಇದರೊಂದಿಗೆ ಅದರ ಕಬ್ಜೆಯೂ ಮತ್ತು ವಿಲೇಮಾಡುವ ಹಕ್ಕುಗಳೂ ಇರುತ್ತದೆ.

ಆದ್ದರಿಂದ ಕಾನೂನು ಹೇಳುವುದೇನೆಂದರೆ, ಒಬ್ಬನು ಒಂದು ಆಸ್ತಿಯ ಮಾಲೀಕನಲ್ಲದೆ ಅವನು ಅದರ ಕಬ್ಜೆಯಲ್ಲಿರುವುದಿಲ್ಲ ಮತ್ತು ಅದರ ರುಜುವಾತು ಮಾಡುವ ಭಾರವು ಅವನ ವಿರುದ್ಧ ಪಕ್ಷದವನ ಮೇಲೆ ಇರುತ್ತದೆ.

ಈ ಕಲಮಿನ ತತ್ವವು ಕೆಳಗಿನ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ–

(i) ಎಲ್ಲಿ ಕಬ್ಜೆಯು ವಾಸ್ತವಿಕತೆಯಿಂದ ವಿಂಗಡಿಸಿ ಕೇವಲ ನ್ಯಾಯಿಕವಾಗಿರುತ್ತದೆಯೋ.

(ii) ಎಲ್ಲಿ ಕಬ್ಜೆಯನ್ನು ಮೋಸ ಬಲತ್ಕಾರದಿಂದ ತೆಗೆದುಕೊಳ್ಳಲಾಗಿದೆಯೋ.

**ರುಜುವಾತು ಮಾಡುವ ಹೊಣೆ**

೧. ಯಾರ ಮೇಲೆ ಸಿದ್ಧ ಮಾಡುವ ಹೊಣೆಯು ಇರುವುದೋ ಅವರೇ ಅದನ್ನು ನಿರ್ವಹಣೆ ಗೊಳಿಸಬೇಕೆಂದು ಕಾನೂನು ಹೇಳುತ್ತದೆ.

೨. ರುಜುವಾತು ಮಾಡುವ ಹೊಣೆಯನ್ನು ನಿರ್ವಹಿಸುತ್ತಿರುವಾಗ ಎರಡು ಪ್ರತಿಫಲಗಳ ಬಗ್ಗೆ ಲಕ್ಷ್ಯ ಕೊಡಲಿಕ್ಕೇಬೇಕು.

(i) ಸಿದ್ಧ ಮಾಡುವ ಆವಶ್ಯಕತೆ ಇರದ ಕೆಲವು ವಿಷಯಗಳಿವೆ.

(ii) ರುಜುವಾತು ಮಾಡಲು ಅವಕಾಶ ಕೊಡುವಂತಹ ಕೆಲವು ವಿಷಯಗಳಿವೆ.

೩. ಆದ್ದರಿಂದ ನಾವು ಈ ವಿಷಯಗಳನ್ನು ವಿಚಾರಿಸಿ ಮುಂದುವರಿಯೋಣ ಮತ್ತು ಆ ನಿಯಮಗಳನ್ನು ನಿಯಂತ್ರಿಸುವುದನ್ನು ಕುರಿತು ವಿಚಾರಿಸೋಣ.

# I. ರುಜುವಾತು ಮಾಡುವ ಹೊಣೆಯು

**೧. ಯಾವ ವಿಷಯಗಳನ್ನು ಕುರಿತು ಸಿದ್ಧ ಮಾಡುವ ಅವಶ್ಯಕತೆಯು ಇರುವುದಿಲ್ಲ**

೧. ಯಾವ ಸಂಗತಿಗಳನ್ನು ಸಿದ್ಧ ಮಾಡುವ ಅವಶ್ಯಕತೆ ಇರುವುದಿಲ್ಲವೋ ಅವು ಮೂರು ಶೀರ್ಷಿಕೆಗಳಲ್ಲಿ ಬರುತ್ತವೆ.

(೧) ಯಾವ ಸಂಗತಿಗಳ ಬಗ್ಗೆ ನ್ಯಾಯಿಕ ಗಮನ ಹರಿಸಲಾಗಿದೆ.

(೨) ಯಾವ ವಿಷಯಗಳನ್ನು ಪಕ್ಷಗಾರರು ಒಪ್ಪಿಕೊಂಡಿರುತ್ತಾರೆ.

(೩) ಯಾವ ಸಂಗತಿಗಳ ಅಸ್ತಿತ್ವವನ್ನು ಕಾನೂನು ಪೂರ್ವಭಾವನೆಯನ್ನು ಹೊಂದಿರುತ್ತದೆ.

**(i) ಯಾವ ಸಂಗತಿಗಳ ಬಗ್ಗೆ ನ್ಯಾಯಿಕ ಗಮನ ಕೊಡಲಾಗಿದೆ.**

೧. ಕಲಮು ೫೬ ಮತ್ತು ೫೭ ಇವು ಒಂದು ಸಂಗತಿಯ ನ್ಯಾಯಿಕ ಗಮನ ತೆಗೆದುಕೊಂಡಿದ್ದನ್ನು ಕುರಿತು ಹೇಳುತ್ತವೆ.

೨. ಕಲಮು ೫೬. ಇದು ಹೇಳುವುದೇನೆಂದರೆ, ಯಾವ ವಿಷಯದ ಬಗ್ಗೆ ನ್ಯಾಯಾಲಯವು ನ್ಯಾಯಿಕ ಗಮನ ತೆಗೆದುಕೊಂಡಿರುವುದೋ ಅಂತಹ ಸಂಗತಿಗಳನ್ನು ಸಿದ್ಧ ಮಾಡುವ ಅವಶ್ಯಕತೆಯೂ ಇರುವುದಿಲ್ಲ.

೩. ಕಲಮು ೫೭ಇದು ೧೩ ವಿಷಯಗಳನ್ನು ಕಾಣಿಸಿ ನ್ಯಾಯಾಲಯವು ಈ ವಿಷಯಗಳನ್ನು ಕುರಿತು ನ್ಯಾಯಿಕ ಗಮನ ಕೊಡಲಿಕ್ಕೇಬೇಕೆಂದು ಹೇಳುತ್ತದೆ.

೪. ಕಲಮಿನ ತತ್ವವು: ಕೆಲವು ಸಂಗತಿಗಳು ಇಷ್ಟು ಸರ್ವಸಮ್ಮತಕ್ಕೆ ಪ್ರಸಿದ್ಧವಾಗಿರುತ್ತದೆ ಮತ್ತು ಇಷ್ಟು ಸ್ಪಷ್ಟವಾಗಿ ಸ್ಥಾಪಿತವಾಗಿರುತ್ತದಲ್ಲ ಇದನ್ನು ಸಾಕ್ಷಿಯ ಮೂಲಕ ಸಿದ್ಧಮಾಡತಕ್ಕದ್ದೆಂಬುದು ನಿಷ್ಪ್ರಯೋಜಕ.

ಉದಾ:

(೧) ಹಗೆತನ ಪ್ರಾರಂಭವಾದುದು ಮತ್ತು ಮುಂದುವರಿದುದು.

(೨) ಭೂವಿವರಣೆಯ ವಿಭಾಗಗಳು

೫. ಕಡೆಯ ಎರಡು ಪ್ಯಾರಾಗಳು ಮಹತ್ವದವುಗಳಾಗಿವೆ. ಮತ್ತು ಅವುಗಳನ್ನು ಕಲಮು ೫೬ರೊಂದಿಗೆ ಓದಬೇಕು. ಅವುಗಳನ್ನು ಯೋಗ್ಯ ರೀತಿಯಿಂದ ತಿಳಿದುಕೊಳ್ಳಲು ಒಂದು ಸುಳಿವನ್ನು ಒದಗಿಸುತ್ತವೆ. ಇದರ ಪರಿಣಾಮವೇನೆಂದರೆ ಯಾವಾಗ ಒಂದು ವಿಷಯವನ್ನು ಪರಿಗಣಿಸುವುದನ್ನು ಕಲಮು ೫೭ ಒಳಗೊಂಡಿದ್ದು ಪ್ರಶ್ನೆಯೊಳಗಾಗಿದ್ದರೆ, ಪಕ್ಷಗಾರರು ಒಂದು ಸಂಗತಿ ಅಸ್ತಿತ್ವದಲ್ಲಿರುವುದನ್ನು ಒತ್ತಿ ಹೇಳುವವನು ಅದಕ್ಕೆ ವಿರುದ್ಧವಾಗಿ ಯಾವುದೇ ಸಾಕ್ಷಿಯನ್ನು ತಮ್ಮ ಹೇಳಿಕೆಯ ಪುರಸ್ಕಾರಕ್ಕಾಗಿ ಮಾಡುವ ಅವಶ್ಯಕತೆ ಇರುವುದಿಲ್ಲ. ಯಾವುದೇ ವಿಧ್ಯುಕ್ತ ಸಾಕ್ಷಿಯ ಅವಶ್ಯಕತೆಯು ಇಲ್ಲದೆ ನ್ಯಾಯಾಲಯವು ಒಂದು ತೀರ್ಮಾನಕ್ಕೆ ಬರಲಿಕ್ಕೇಬೇಕು.

(೧) ನ್ಯಾಯಾಧೀಶನ ಸ್ವಂತದ ತಿಳುವಳಿಕೆ ಸಾಕಾಗುವುದು. ಹಾಗೆ ಆಗದಿದ್ದರೆ ಅವನು ವಿಷಯಕ್ಕೆ ಗಮನ ಕೊಡಲಿಕ್ಕೇಬೇಕು.

(೨) ನ್ಯಾಯಾಧೀಶನು ತನಗೆ ಅವಶ್ಯವೆಂದು ಕಂಡುಬಂದರೆ ಪಕ್ಷಗಾರರಿಗೆ ತನಗೆ ಸಹಾಯ ಮಾಡಬೇಕೆಂದು ಕೋರಬಲ್ಲನು.

(೩) ನ್ಯಾಯಾಧೀಶನು ಈ ತಪಾಸಣೆಯನ್ನು ಮಾಡುವಾಗ ಸಂಪೂರ್ಣವಾಗಿ ಸಾಕ್ಷಿಯ ಎಲ್ಲ ನಿಯಮಗಳು ಒಂದು ಸಂಗತಿಯ ತಪಾಸಣೆಯ ಸಂಬಂಧಿಸಿ ಕಾನೂನಿನ ಪ್ರಕಾರ ಒಬ್ಬನು ಅವುಗಳನ್ನು ಸಿದ್ಧ ಮಾಡುವ ಅವಶ್ಯಕತೆಯಿಂದ ಮುಕ್ತನಾಗಿರಬೇಕು.

**(II) ಪಕ್ಷಗಾರರು ಒಪ್ಪಿಕೊಂಡ ಸಂಗತಿಗಳು**

**ಕಲಮು ೫೮**

೧. ಎರಡು ರೀತಿಯ ಒಪ್ಪಿಗೆಗಳು ಇರುತ್ತವೆ, ಅವುಗಳನ್ನು ವಿಂಗಡಿಸಲಿಕ್ಕೇಬೇಕು.

(೧) ಔಪಚರಿಕ ಒಪ್ಪಿಗೆಗಳು ಒಂದು ನ್ಯಾಯಾಲಯದಲ್ಲಿ ಒಂದು ನ್ಯಾಯದ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಉದ್ದೇಶಪೂರ್ವಕವಾಗಿ ಪಕ್ಷಗಾರರು ಅವುಗಳನ್ನು ಸಿದ್ಧ ಮಾಡುವ ಹೊಣೆಯನ್ನು ಬಿಟ್ಟುಕೊಡುವುದಕ್ಕಾಗಿ ಮಾಡಿದ್ದು.

(೨) ಅನೌಪಚಾರಿಕ ಒಪ್ಪಿಗೆಗಳು ಒಂದು ದಾವೆಯಲ್ಲಿ ಒಂದು ಪಕ್ಷದವರು ಮಾಡಿರುವರು ಎಂದು ಆಪಾದಿಸಲಾದ ಒಪ್ಪಿಗೆಯು, ಆದರೆ ಅದು ವ್ಯವಹರಣೆಯ ಕ್ರಮದಲ್ಲಿ ಮಾಡಿದುದಾಗಿರುವುದಿಲ್ಲ.

೨. ಕಲಮು ೫೮ ಇದು ಔಪಚಾರಿಕ ಒಪ್ಪಿಗೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಔಪಚಾರಿಕ ಒಪ್ಪಿಗೆಗಳನ್ನು ಪಕ್ಷಗಾರರು ೬ ಬೇರೆ ಬೇರೆ ರೀತಿಯಲ್ಲಿ ಮಾಡಬಹುದು:

(೧) ವಾದ ಪತ್ರಗಳ ಮೇಲಿಂದ.

(೨) ಪರಿಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ.

(೩) ಒಂದು ನಿರ್ದಿಷ್ಟ ಸಂಗತಿಗೆ ಕೊಟ್ಟ ನೋಟೀಸಿಗೆ ಒಪ್ಪಿ ಉತ್ತರ ಕಳುಹಿಸಿದ್ದು.

(೪) ದಸ್ತಾವೇಜುಗಳನ್ನು ಹಾಜರುಮಾಡಲು ಮತ್ತು ಒಪ್ಪಿಕೊಳ್ಳಲು ಕೊಟ್ಟ ಉತ್ತರ.

(೫) ದಾವೆಯು ನಡೆದ ಕಾಲಕ್ಕೆ ಒಬ್ಬ ಪಕ್ಷಗಾರನ ಸಾಲಿಸಿಟರ್‌ನ ಸಲಹೆ.

(೬) ತೆರೆದ ನ್ಯಾಯಾಲಯದಲ್ಲಿ ಆ ದಾವೆ ಮಾಡಿದವನು ಸ್ವತಃ ಇಲ್ಲವೆ ಆತನ ವಕೀಲನ ಮೂಲಕ.

೩. ಇಂತಹ ಸಂಗತಿಗಳನ್ನು ಸಿದ್ಧ ಮಾಡುವುದು ನಿಷ್ಪ್ರಯೋಜಕ. ಪಕ್ಷಗಾರರು ಯಾವ ವಿವಾದಾಂಶಗಳ ಬಗ್ಗೆ ದಾವೆ ಇರುವುದೋ ಅಂತಹ ಪ್ರಶ್ನೆಗಳನ್ನು ನ್ಯಾಯಾಲಯದವರು ವಿಚಾರಣೆ ಮಾಡಿ ಅವರು ಒಪ್ಪಿದ ವಿಷಯಗಳನ್ನು ತೀರ್ಮಾನಿಸುವುದಿಲ್ಲ.

೪. ಕ್ರಿಮಿನಲ್ ಪ್ರಕರಣಗಳ ವಿಚಾರಣೆಗಳಲ್ಲಿ ಕಲಮು ೫೮ನ್ನು ಅನ್ವಯಿಸುವುದರ ಕುರಿತು ಭಿನ್ನಾಭಿಪ್ರಾಯವಿದೆ.

(i) ಕ್ರಿಮಿನಲ್ ಪ್ರಕರಣಗಳ ವಿಚಾರಣೆಗಳಿಗೆ ಇದು ಅನ್ವಯಿಸುವುದಿಲ್ಲವೆಂದು ನಾರ್ಟನ್ ಹೇಳುತ್ತಾನೆ.

(ii) ಅದು ಅನ್ವಯಿಸುತ್ತದೆಂದು ಕನಿಂಗ್ಯಾಮನು ಹೇಳುತ್ತಾನೆ.

**೩೦ ಬಾಂಬೆ ಲಾ. ಆರ್. ೬೪೬**

ಕಲಮು ೫೮ ಇದು ಕ್ರಿಮಿನಲ್ ವ್ಯವಹರಣೆಗಳನ್ನು ಕುರಿತು ಯಾವುದೇ ಅಪವಾದಗಳನ್ನು ಮಾಡುವುದಿಲ್ಲ.

**ಆರ್‌ಎಟಿ.ಯುಎನ್. ಕ್ರಿವಿಜ. ನಿ. ೭೬೯**

ಕಲಮು ೫೮ ಇದು ಕ್ರಿಮಿನಲ್ ವ್ಯವಹರಣೆಗಳನ್ನು ಕುರಿತು ಯಾವುದೇ ಅಪವಾದ ಮಾಡುವುದಿಲ್ಲ.

**೩೯ ಮದ್ರಾಸ್ ೪೪೯**

ನ್ಯಾಯಶಾಸ್ತ್ರದ ಸಾಮಾನ್ಯ ತತ್ತ್ವಗಳ ಮೇಲೆ ಕಲಂ ೫೮ ಇದನ್ನು ಕ್ರಿಮಿನಲ್ ವಿಚಾರಣೆಗೆ ಅನ್ವಯ ಮಾಡತಕ್ಕದ್ದಲ್ಲ.

"ನಾವು ಈ ನ್ಯಾಯಶಾಸ್ತ್ರದ ತತ್ವಗಳ ಸಹಾಯವನ್ನು ಆಹ್ವಾನಿಸಬಹುದೇ? ಇಲ್ಲವೆ ಇಂಗ್ಲಿಷ್ ಕಾನೂನಿನ ಪೂರಕವೆಂದು ಮತ್ತು ಸಾಕ್ಷ್ಯದ ಅಧಿನಿಯಮದಲ್ಲಿ ಕೊಟ್ಟ ನಿಯಮಗಳನ್ನು ವಿವರಿಸುವುದು ಈ ಕಲಮನ್ನು ಸಂಪೂರ್ಣವಾಗಿ ಉಪಯೋಗಿಸಲಾಗಿದೆಯೇ ಎಂಬ ಪ್ರಶ್ನೆಯು ಇನ್ನೂ ಹಾಗೆಯೇ ಉಳಿದಿದೆ." *೧೨ ಅಲಹ. ೧.* ಬ್ರಿಟಿಷ್ ಸಾಕ್ಷ್ಯದ ನಿಯಮಗಳು ಅನ್ವಯಿಸುತ್ತವೆ.

ಈ ನಿಯಮವು ಸಂಪೂರ್ಣವಾದುದಲ್ಲ. ಈ ಕಲಮು ಹೇಳುವುದೇನೆಂದರೆ ನ್ಯಾಯಾಧೀಶರು ಒಂದು ವಿಷಯವನ್ನು ಒಪ್ಪಿಕೊಂಡಿದ್ದರೂ ನ್ಯಾಯಾಲಯವು ಅದನ್ನು ಸಿದ್ಧ ಮಾಡಲು ಅದನ್ನು ಸಾಕ್ಷಿ ಆಧಾರ ಮೇಲೆ ಸಿದ್ಧ ಮಾಡಬೇಕೆಂದು ಅಪೇಕ್ಷಿಸಿದರೆ ಅದನ್ನು ಸಿದ್ಧ ಮಾಡುವ ಹೊಣೆಗಾರಿಕೆಯು ಆ ಪಕ್ಷಗಾರನ ಮೇಲೆ ಇರುತ್ತದೆ.

ಇದು ಅಜ್ಞಾನಿ ಮತ್ತು ಸಾದಾ ವ್ಯಕ್ತಿಗಳ ತಪ್ಪು ತಿಳುವಳಿಕೆಯಿಂದ ಅವರನ್ನು ರಕ್ಷಣೆ ಸಲುವಾಗಿ ಮಾಡಿದ್ದಾಗಿರುತ್ತದೆ.

ಬಹುತರವಾಗಿ ಇದೇ ಕಾರಣದಿಂದ ಈ ಉಪಬಂಧಗಳ ಮೇಲಿಂದ ಕ್ರಿಮಿನಲ್ ಪ್ರಕರಣಗಳಲ್ಲಿ ಇಂತಹ ಒಪ್ಪಿಗೆಗೆ ಅನುಮತಿ ಇರುವುದಿಲ್ಲ.

**ಕೆಲವು ಸಂಗತಿಗಳು ಅಸ್ತಿತ್ವದಲ್ಲಿ ಇರುವ ಕುರಿತು ಕಾನೂನಿನ ಅನ್ವಯ ಪೂರ್ವಗ್ರಹಿಕೆ:**

೧. ಪೂರ್ವಗ್ರಹಿಕೆಯ ವ್ಯಾಖ್ಯೆ:

ಪೂರ್ವಗ್ರಹಿಕೆಯು ಕೆಲವು ಸಂಗತಿಗಳ ಮೇಲಿಂದ ಮಾಡಿದ ಊಹೆ ಅಥವಾ ನಿರ್ಣಯವಾಗಿದೆ.

೨. ಪೂರ್ವಗ್ರಹಿಕೆಯ ನಿಯಮವು ಅವಲಂಬಿಸಿದ ತತ್ತ್ವ:

(೧) ವಿಶ್ವವು ವಿವಿಧ ಬೇರೆ ಬೇರೆ ತತ್ವಗಳನ್ನು ಒಳಗೊಂಡಿದ್ದು, ಅದು ಜನರ ಮೇಲೆ ಬೀರುವ ಉದ್ದೇಶಗಳು ಬೇರೆ ಬೇರೆ ಇರುತ್ತವೆ.

(೨) ವಸ್ತುಗಳಿಗೆ ಸಂಬಂಧಿಸಿದಂತೆ ಕಾಲಾನುಕ್ರಮವಾಗಿ ಋತುಗಳಲ್ಲಿ ಬದಲಾವಣೆ, ಉದಯವಾಗುವ ಹಾಗೂ ಮುಳುಗುವ ಆಕಾಶದ ವಸ್ತುಗಳು ಮತ್ತು ಗೊತ್ತಿದ್ದಂತಹ ವಸ್ತುವಿನ ಗುಣಧರ್ಮಗಳು: ಸೂಜಿಗಲ್ಲು ಮತ್ತು ವಿಶೇಷ ಗುರುತ್ವಾಕರ್ಷಣ ಇವು ನಿಯಮಿತವಾಗಿ ಮತ್ತು ಏಕತೆಯಿಂದ ಚಲನವಲನ ಆಗುವುದನ್ನು ತೋರಿಸುತ್ತವೆ.

(೩) ಜನರಿಗೆ ಸಂಬಂಧಿಸಿದಂತೆ ಸ್ವಾಭಾವಿಕ ಗುಣಗಳು ಅಧಿಕಾರಗಳು ಮತ್ತು ಮನುಕುಲಕ್ಕೆ ಪರಿಣಾಮ ಉಂಟಾಗುವ ವ್ಯಾಸಂಗ ವಿಭಾಗಗಳು ಸಾಮಾನ್ಯವಾಗಿ ಹೆಚ್ಚು ಕಡಿಮೆ ಏಕರೂಪವಾಗಿರುತ್ತವೆ.

(೪) ಜನರ ನಡತೆಯನ್ನು ಕುರಿತು ಹೆಚ್ಚು ಕಡಿಮೆ ಏಕರೂಪತೆ– ಅವುಗಳನ್ನು ಅದೇ ಏಕರೂಪತೆಯಿಂದ ಆಚರಿಸುತ್ತಿರುತ್ತಾರೆ.

೩. ಈ ಏಕರೂಪತೆ ಇದೆಯೆಂದಾಗ ಒಂದನ್ನು ಮತ್ತೊಂದನ್ನು ಅನುಸರಿಸಬಹುದೆಂದು ಹೇಳುವುದು ಸಾಧ್ಯವಿದೆ.

೪. ಕಲಮು ೧೧೪ ಈ ತತ್ವದ ಆಧರಿಸಿದ್ದಾಗಿರುತ್ತದೆ.

(೧) ಈ ಕಲಮು ಒಂದು ಸಂಗತಿಯು ಅಸ್ತಿತ್ವದಲ್ಲಿ ಇದೆಯೆಂದು ಪೂರ್ವಗ್ರಹಿಸಲು ಅಧಿಕಾರವನ್ನು ನೀಡುತ್ತದೆ. ಒಂದು ವೇಳೆ ಸಂಗತಿಯು ಒಂದು ನಿರ್ದಿಷ್ಟ ಸಂಗತಿಯಿಂದ ಪರಿಣಾಮವಾಗಿದ್ದರೆ ನ್ಯಾಯಾಲಯಕ್ಕೆ ಆ ಸಂಗತಿಯು ಅಸ್ತಿತ್ವದಲ್ಲಿದೆಂದು ಪೂರ್ವಗ್ರಹಿಕೆ ಮಾಡಲು ಅಧಿಕಾರ ಕೊಡುತ್ತದೆ.

(೨) ಪ್ರಯೋಗ:

(i) ಸಾಮಾನ್ಯ ಘಟಕಗಳ ಸ್ವಾಭಾವಿಕ ಕ್ರಮ.

(ii) ಮಾನವನ ನಡತೆ.

(iii) ಸಾರ್ವಜನಿಕ ಮತ್ತು ವೈಯಕ್ತಿಕ ವ್ಯವಹಾರ.

(೩) ಕೆಲವು ಸಂಗತಿಗಳ ಪರಿಣಾಮಗಳು ಏನಾಗುತ್ತದೆಂಬುದರ ಬಗ್ಗೆ ಇಲ್ಲಿ ೯ ಉದಾಹರಣೆಗಳನ್ನು ಕೊಡಲಾಗಿದೆ.

(೪) ಉದಾಹರಣೆಗಳ ವಿವರಣೆಗಳನ್ನು (ಹಸ್ತಪ್ರತಿಯಲ್ಲಿ ಕಾಣಿಸಿಲ್ಲ. –ಸಂ)

(೫) ಒಂದು ಸಂದರ್ಭದಲ್ಲಿ ಒಂದು ಸಂಗತಿಯು ಸಂಭವಿಸಬಹುದಾದರೂ ಬೇರೆ ಸಂದರ್ಭಗಳಲ್ಲಿ ಸಂಭವಿಸುವುದು ಸಾಧ್ಯವೇ ಇಲ್ಲ. ಆದ್ದರಿಂದ ಪೂರ್ವಭಾವನೆಯನ್ನು ಹೊಂದುವ ನ್ಯಾಯಾಲಯವು ಒಂದು ನಿರ್ದಿಷ್ಟ ಪ್ರಕರಣದ ಸಂಗತಿಯನ್ನು ತಿಳಿಯಬೇಕು.

ಉದಾಹರಣೆಗಳಿಗೆ ವಿವರಣೆಗಳು (ಹಸ್ತಪ್ರತಿ ಕೊಟ್ಟಿಲ್ಲ)

(೬) ಈ ಪೂರ್ವಗ್ರಹಗಳ ಸಾಮಾನ್ಯ ಕ್ರೋಡೀಕರಣವು ಸಾಧ್ಯವೇ ಇಲ್ಲ. ಯಾಕೆಂದರೆ ಸಂಭವಿಸಬಹುದಾದ ಪರಿಣಾಮಗಳು ಸಂದರ್ಭಕ್ಕನುಗುಣವಾಗಿ ಬದಲಾಗಲಿಕ್ಕೇಬೇಕು.

(೭) ಈ ಪೂರ್ವಗ್ರಹದ ಪರಿಣಾಮವು ಏನೆಂದರೆ ಒಬ್ಬ ವ್ಯಕ್ತಿಯು ರುಜುವಾತು ಮಾಡುವ ಹೊಣೆಯಿಂದ ಮುಕ್ತಗೊಳಿಸುತ್ತದೆ.

(೮) ಕಾನೂನಿನ ಪೂರ್ವಗ್ರಹಿಕೆ ಮತ್ತು ಸಂಗತಿಗಳ ಪೂರ್ವಗ್ರಹಿಕೆ.

(೯) ಪೂರ್ವಗ್ರಹಿಕೆಯು ಖಂಡಿಸಲು ಬರುವಂತಹದ್ದು ಮತ್ತು ಖಂಡಿಸಲು ಬಾರದಂತಹದ್ದಾಗಿರುತ್ತದೆ.

*ನಾರ್ಟನ್ ಪು. ೩೮೧.*

II ಸದೃಶ ಪೂರ್ವಗ್ರಹಗಳು ಕಾನೂನಿನ ಸೂತ್ರಗಳಾಗಿರುತ್ತವೆ. ಸಾಮಾನ್ಯ ದೃಷ್ಟಿಯಲ್ಲಿ ಅವುಗಳನ್ನು ಪೂರ್ವಗ್ರಹಿಕೆಗಳೆಂದು ಕರೆಯುತ್ತಾರೆ.

೧. ಕಾನೂನಿನ ಕೆಲವು ಸೂತ್ರಗಳನ್ನು ಪೂರ್ವಗ್ರಹಿಕೆಗಳೆಂದು ಕರೆಯುತ್ತಾರೆ.

೨. ಕಾನೂನಿನ ಸೂತ್ರಗಳ ಉದಾಹರಣೆಗಳು.

(೧) ಪ್ರತಿಯೊಬ್ಬನಿಗೂ ಕಾನೂನು ಗೊತ್ತಿದೆ ಎಂದು ಕಾನೂನು ಊಹಿಸುತ್ತದೆ.

(೨) ಪ್ರತಿಯೊಬ್ಬನು ತನ್ನ ಕೃತಿಯ ಪರಿಣಾಮಗಳನ್ನು ಉದ್ದೇಶಿಸುತ್ತಾನೆಂದು ಕಾನೂನು ಊಹಿಸುತ್ತದೆ.

(೩) ಒಬ್ಬ ಆರೋಪಿಯು ನಿರಪರಾಧಿಯೆಂದು ಕಾನೂನು ಊಹಿಸುತ್ತದೆ.

(೪) ಪ್ರತಿಯೊಬ್ಬ ಮನುಷ್ಯನಿಗೂ ತಿಳಿದುಕೊಳ್ಳುವ ಶಕ್ತಿ ಇದೆ ಎಂದು ಕಾನೂನು ಊಹಿಸುತ್ತದೆ.

(೫) ಯಾವುದೇ ಮನುಷ್ಯನು ತನ್ನ ಆಸ್ತಿಯನ್ನು ಹಾಗೆಯೇ ಬಿಟ್ಟುಬಿಡುವುದಿಲ್ಲವೆಂದು ಊಹಿಸುತ್ತದೆ. ಉದಾಹರಣೆ: ಕೊಡಲೇಬೇಕಿಲ್ಲದ ಹಣವನ್ನು ಕೊಡುವುದು.

(೬) ತಂದೆ ತಾಯಿಗಳು ಮಕ್ಕಳಿಗೆ ಕೊಟ್ಟದ್ದು ಬಕ್ಷೀಸು ಎಂದು ಆದರೆ ಸಾಲ ಅಲ್ಲವೆಂದು ಕಾನೂನು ಊಹಿಸುತ್ತದೆ.

ಈ ಸೂತ್ರಗಳಿಗೆ ಸಂಬಂಧಿಸಿದಂತೆ ರುಜುವಾತುಪಡಿಸುವುದಕ್ಕೆ ಸಂಬಂಧಿಸಿದ ನಿಯಮಗಳು ಇವಾಗಿರುತ್ತವೆ. ಅವು ರುಜುವಾತುಪಡಿಸುವ ಹೊಣೆಗಾರಿಕೆಯನ್ನು ನಿರ್ದಿಷ್ಟವಾಗಿ ಗುರ್ತಿಸಲು ಸಹಾಯಕವಾಗುತ್ತವೆ.

**ದಸ್ತಾವೇಜುಗಳ ಬಗ್ಗೆ ಪೂರ್ವಗ್ರಹಿಕೆ** **೭೯–೯೦**

೧. ಪ್ರಮಾಣಿತ ಪ್ರತಿಗಳ ಸತ್ಯಾಸತ್ಯತೆಯ ಬಗ್ಗೆ ಊಹೆ. ೭೯

೨. ದಸ್ತಾವೇಜುಗಳನ್ನು ಸಾಕ್ಷಿಯ ದಾಖಲೆಯೆಂದು ಹಾಜರುಮಾಡಿದ ಬಗ್ಗೆ ಅವುಗಳ ಸತ್ಯಾಸತ್ಯತೆ ಬಗ್ಗೆ ಊಹೆ. ೮೦

೩. ರಾಜ್ಯಪತ್ರ, ಸುದ್ದಿ ಪತ್ರಿಕೆ ಇವುಗಳ ಬಗ್ಗೆ ಊಹೆ. ೮೧

೪. ಇಂಗ್ಲೆಂಡ್‌ನಲ್ಲಿ ಮುದ್ರೆ (ಶೀಲ) ಅಥವಾ ಸಹಿ ಇವುಗಳನ್ನು ಸಿದ್ಧ ಮಾಡಿದ ದಸ್ತಾವೇಜುಗಳ ಬಗ್ಗೆ ಊಹೆ. ೮೨

೫. ಸರಕಾರಿ ಅಧಿಕಾರಿಗಳು ತಯಾರಿಸಿದ ನಕಾಶೆ ಅಥವಾ ಪ್ಲ್ಯಾನ್ ಇವುಗಳ ಬಗ್ಗೆ ಊಹೆ. ೮೩

೬. ಕಾನೂನು ಪುಸ್ತಕಗಳ ಮತ್ತು ನಿರ್ಣಯಗಳ ವರದಿ ಇವುಗಳನ್ನು ಕುರಿತು ಊಹೆ. ೮೪

೭. ಅಟಾರ್ನಿ ಅಧಿಕಾರಿಗಳ ಬಗ್ಗೆ ಊಹೆ. ೮೫

೮. ಪರದೇಶದ ನ್ಯಾಯಾಂಗದ ದಾಖಲೆಗಳ ಪ್ರಮಾಣಿತ ಪತ್ರಗಳ ನಕಲು ಬಗ್ಗೆ ಊಹೆ. ೮೬

೯. ಪುಸ್ತಕಗಳ, ನಕಾಶೆಗಳ ಮತ್ತು ಚಾರ್ಟ್ವ ಇವುಗಳ ಬಗ್ಗೆ ಊಹೆ.

೧೦. ತಂತಿ ಸಂದೇಶಗಳ ಬಗ್ಗೆ ಊಹೆ. ೮೭

೧೧. ಹಾಜರು ಮಾಡದೆ ಇರುವ ದಸ್ತಾವೇಜುಗಳ ಬಗ್ಗೆ ಇರುವ ಅನುಪ್ರಮಾಣಿಸುವುದು ಮತ್ತು ಬರೆದುಕೊಡುವುದು ಇವುಗಳ ಬಗ್ಗೆ ಊಹೆ. ೮೯

೧೨. ೩೦ ವರ್ಷಕ್ಕಿಂತ ಹಳೆಯದಾದ ದಸ್ತಾವೇಜುಗಳ ಬಗ್ಗೆ ಊಹೆ. ೯೦

**ರುಜುವಾತು ಮಾಡುವ ಹೊಣೆಗಾರಿಕೆಯು**

**(II) ಯಾವ ವಿಷಯಗಳ ಬಗ್ಗೆ ರುಜುವಾತು ಮಾಡಲು ಅನುಮತಿ ಕೊಡುವುದಿಲ್ಲ:**

೧. ಯಾವ ಸಂಗತಿಯ ಬಗ್ಗೆ ಪಕ್ಷಗಾರರು ಒತ್ತಿ ಹೇಳುವುದಕ್ಕೆ ಅನರ್ಹರಾಗಿರುತ್ತಾರೆ. (ನಿರ್ಣಾಯಕ ಸಾಕ್ಷಿ)

೨. ಪಕ್ಷಗಾರನು ಸಿದ್ಧಪಡಿಸುವುದನ್ನು ಪ್ರತಿಬಂಧಿಸಲಾಗಿದೆ. (ನಿರ್ಬಂಧ)

೩. ಪ್ರತಿಕೂಲವಾಗದಂತೆ ಹೇಳಿದ ಸಂಗತಿಗಳು.

೪. ಅಸಂಗತ ಸಂಗತಿಗಳು.

**I. ಪಕ್ಷಗಾರರು ಯಾವ ಸಂಗತಿಗಳನ್ನು ಸಿದ್ಧಪಡಿಸಲು ಅನರ್ಹರು ಇರುತ್ತಾರೆ**

ಪಕ್ಷಗಾರರು ಯಾವ ಸಂಗತಿಗಳನ್ನು ಒತ್ತಿ ಹೇಳಲು ಅನರ್ಹರಾಗಿದ್ದಾರೆಂದು ಅವುಗಳನ್ನು ಸಾಕ್ಷ್ಯದ ಅಧಿನಿಯಮದಲ್ಲಿ ನಿರ್ಣಾಯಕ ಸಂಗತಿಯೆಂಬುದರಲ್ಲಿ ಅಥವಾ ಸಾಮಾನ್ಯವಾಗಿ ಖಂಡಿಸಲು ಬಾರದಂತಹ ಪೂರ್ವಗ್ರಹಿಕೆ ಅಥವಾ ಕಾನೂನಿನ ಬಗ್ಗೆ ಪೂರ್ವಗ್ರಹಿಕೆ ಇವುಗಳಲ್ಲಿ ಹೇಳಲಾಗಿದೆ. ಇವುಗಳನ್ನು ಕಲಮು ೪೧, ೧೧೨ ಮತ್ತು ೧೧೩ ಇವುಗಳಲ್ಲಿ ಹೇಳಲಾಗಿದೆ.

II. **ಕಲಮು ೧೧೨**

(೧) ಕಲಮು 'ಅ'ನು 'ಬ'ನ ಮತ್ತು ಅವನ ಹೆಂಡತಿ 'ಕ' ಅವರ ಕಾನೂನುಬದ್ಧ ಮಗನೆಂದು ಹೇಗೆ ಸಿದ್ಧ ಮಾಡುವ ಬಗ್ಗೆ ಇಲ್ಲಿ ಹೇಳಲಾಗಿದೆ.

(೨) ಈ ಸಂಗತಿಯನ್ನು ಎರಡು ರೀತಿಯಿಂದ ಸಿದ್ಧಪಡಿಸಬಹುದು. ಇದು ಎರಡು ಬೇರೆ ಬೇರೆ ಆಕಸ್ಮಿಕಗಳ ಮೇಲೆ ಅವಲಂಬಿತವಾಗಿದೆ.

(i) ಈ ಒಂದು ಆಕಸ್ಮಿಕವೆಂದರೆ ಆ ಕೂಸು ಅವರ ವಿವಾಹವು ಕಾನೂನುಬದ್ಧವಾಗಿ ಮುಂದುವರೆದಾಗ ಜನಿಸಿದ್ದರೆ.

(ಅ) 'ಬ' ಮತ್ತು 'ಕ' ಇವರ ನಡುವೆ ಕಾನೂನುಬದ್ಧ ಲಗ್ನವಾಗಿದೆಯೆಂದು ಸಿದ್ಧಮಾಡಬೇಕು.

(ಬ) 'ಅ'ನು ಹುಟ್ಟುವ ದಿನಾಂಕದಂದು 'ಬ' ಮತ್ತು 'ಕ' ಇವರ ನಡುವೆ ಕಾನೂನುಬದ್ಧವಾದ ವೈವಾಹಿಕ ಸಂಬಂಧ ಇದ್ದಿತೆಂದು ಸಿದ್ಧ ಮಾಡಬೇಕು. ಇವೆರಡು ಸಂಗತಿಗಳನ್ನು ಸಿದ್ಧ ಮಾಡಿದಾಗ 'ಅ'ನು 'ಬ' ಮತ್ತು 'ಕ' ಇವರ ಕಾನೂನುಬದ್ಧವಾದ ಮಗನೆಂದು ಕಾನೂನು ನಿರ್ಣಯಕ್ಕೆ ಬರುತ್ತದೆ.

(ii) ಈ ಆಕಸ್ಮಿಕವು 'ಬ' ಮತ್ತು 'ಕ' ಇವರ ವೈವಾಹಿಕ ಜೀವನವನ್ನು ಬೇರ್ಪಡಿಸಿದಾಗ ತಂದೆಯು ತೀರಿಕೊಂಡ ನಂತರ ಇಲ್ಲವೆ ಅವರ ನಡುವೆ ಬಿಡುಗಡೆ ಆದ ನಂತರ ಈ ಕೂಸು ಹುಟ್ಟಿದರೆ,

(ಅ) ಆ ಕೂಸು ವೈವಾಹಿಕ ಜೀವನ ಬಿಡುಗಡೆ ಆದನಂತರ ೨೮೦ ದಿನಗಳ ಒಳಗಾಗಿ ಜನಿಸಿದನೆಂಬುದನ್ನು ಸಿದ್ಧ ಮಾಡಬೇಕು.

(ಬ) ತಾಯಿಯು ಆ ೨೮೦ ದಿನಗಳಲ್ಲಿ ಪುನಃ ಲಗ್ನವಾಗದೆ ಹಾಗೆಯೇ ಉಳಿದಳೆಂಬುದನ್ನು ಸಿದ್ಧ ಮಾಡಬೇಕು.

ಈ ಎರಡು ಸಂಗತಿಗಳನ್ನು ಸಿದ್ಧ ಮಾಡಿದಾಗ 'ಅ'ನು 'ಬ'ಮತ್ತು 'ಕ' ಇವರ ಕಾನೂನುಬದ್ಧ ಮಗನೆಂದು ಕಾನೂನು ನಿರ್ಣಯಿಸುತ್ತದೆ.

**ಗಮನಕ್ಕೆ ತೆಗೆದುಕೊಳ್ಳಬೇಕಾದ ಮುಖ್ಯ ಅಂಶಗಳು:**

೧. ಕೂಸಿನ ಕಾನೂನು ಸಮ್ಮತಿಯ ಪ್ರಶ್ನೆ ಬಂದಾಗ ಕಾನೂನುಬದ್ಧತೆಯ ಬಗ್ಗೆ ಕೂಸು ಗರ್ಭದಲ್ಲಿ ಯಾವ ವೇಳೆಯಲ್ಲಿ ಧಾರಣ ಮಾಡಿತು ಎಂಬುದು ನಿರ್ಣಾಯಕ ಸಂಗತಿಯಲ್ಲ. ಆದರೆ ಕೂಸಿನ ಜನನ ತಾರೀಖು ಮಹತ್ವದ್ದು ಇರುತ್ತದೆ. ಆ ಕೂಸಿನ ಜನನವಾಗುವ ಕಾಲಕ್ಕೆ ಆ ಹೆಣ್ಣುಮಗಳ ಗಂಡನು ಯಾವನು ಇರುತ್ತಾನೆಯೋ ಆತನು ಆ ಕೂಸಿನ ತಂದೆ ಇರುತ್ತಾನೆ. ಉದಾಹರಣೆ: *ಪಾಲ್‌ಸಿಂಗ್ ವಿರುದ್ಧ ಜಗೀರ. ೭ ಲಾಹೋರ್ ೩೬೮.*

ಹರ್ನಾಮ ಕೌರಳು ಹರಿಸಿಂಗನನ್ನು ಲಗ್ನವಾದಳು. ಹರಿಸಿಂಗನು ದಿನಾಂಕ ೧೯೧೯ನೆಯ ಇಸವಿ ಜನವರಿಯಂದು ಮರಣ ಹೊಂದಿದನು. ಹರ್ನಾಮ ಕೌರಳು ೧೯೧೯ನೆಯ ಫೆಬ್ರವರಿ ೨೫ನೆಯ ತಾರೀಖಿನಂದು ಸೋಹನಸಿಂಗನನ್ನು ಲಗ್ನವಾದಳು. ಜಗೀರನು ಹರ್ನಾಮ ಕೌರ ಇವಳಿಗೆ ದಿನಾಂಕ ೧೭-೧೦-೧೯೧೯ರಂದು ಜನಿಸಿದನು, ಅಂದರೆ ಹರಿಸಿಂಗನು ತೀರಿಕೊಂಡ ೨೭೯ ದಿನಗಳ ನಂತರ ಮತ್ತು ಆಕೆಯು ಸೋಹನಸಿಂಗನನ್ನು ಲಗ್ನವಾದ ನಂತರ ೧೯೮ ದಿನಗಳ ಮೇಲೆ ಜನಿಸಿದನು. ಜಹಗೀರನು ಯಾರ ಮಗನೆಂಬ ಪ್ರಶ್ನೆಯು ಬಂದ ನಂತರ ಹರಿಸಿಂಗನ ಮಗನು ಅಹುದೇ ಅಲ್ಲವೋ ಎಂಬ ಪ್ರಶ್ನೆಯು ಬಂದಾಗ ಜಗೀರನು ಸೋಹನಸಿಂಗ ಈತನ ಮಗನೆಂದೂ ಮತ್ತು ಹರಿಸಿಂಗನ ಮಗನಲ್ಲವೆಂದು ತೀರ್ಮಾನಿಸಲಾಯಿತು.

೨. *ಪಳನಿ ವಿರುದ್ಧ ಸೇತು ೪೯* ಮದ್ರಾ. *೫೫೩*

ಪೇಚಿ ಅಮ್ಮಾಳು ಸುಬ್ರಮಣ್ಯ ಎಂಬುವವನನ್ನು ಅಕ್ಟೋಬರ್ ೧೯೦೩ನೆಯ ಇಸವಿಯಲ್ಲಿ ಲಗ್ನವಾದಳು. ಆ ಲಗ್ನವು ೧೯೦೪ನೆಯ ಇಸವಿ ಜೂನ್‌ನಲ್ಲಿ ವಿಚ್ಛೇದವಾಯಿತು. ಜುಲೈ ೧೯೦೪ ಇಸವಿಯಲ್ಲಿ ಪೇಚಿಯು ತಿರುಮಣಿ ಎಂಬುವನನ್ನು ಲಗ್ನವಾದಳು. ಪಳನಿಯು ೧೯೦೪ನೆಯ ಇಸವಿಯ ಸೆಪ್ಟೆಂಬರ್ ಎರಡನೆಯ ವಾರದಲ್ಲಿ ಜನಿಸಿದನು, ಪೇಚಿಯು ಸುಬ್ರಮಣ್ಯನ ಜೊತೆಗೆ ಲಗ್ನದ ವಿಚ್ಛೇದ ಮಾಡಿಕೊಂಡ ೪ ತಿಂಗಳ ನಂತರ ಮತ್ತು ತಿರುಮಣಿಯ ಜೊತೆಗೆ ಲಗ್ನವಾದ ೩ ತಿಂಗಳ ನಂತರ.

ಪಳನಿಯು ಯಾರ ಮಗ? ಸುಬ್ರಮಣ್ಯ ಅಥವಾ ತಿರುಮಣಿಯ ಮಗನೇ?

ಅವನು ತಿರುಮಣಿಯ ಮಗನೆಂದು ತೀರ್ಪು ನೀಡಲಾಯಿತು.

೨. ಈ ಪ್ರಕರಣವು ನಿರ್ಣಾಯಕ ರುಜುವಾತು ಪ್ರಕರಣವೆಂದು ಪರಿಗಣಿಸಲಾಯಿತು. ಸತ್ಯವು ವಾದ-ವಿವಾದದ ಹೊರಗಡೆ ಇದೆಯೆಂದು ಇದನ್ನು ಪರಿಗಣಿಸಲಾಗಿಲ್ಲ. ಒಂದು ಹೆಣ್ಣುಮಗಳು ಒಬ್ಬನ ಜೊತೆ ಕಾನೂನುಬದ್ಧವಾಗಿ ಲಗ್ನವಾಗಿದ್ದರೂ, ಅವಳು ಇನ್ನೊಬ್ಬನ ಜೊತೆಗೆ ಅನೈತಿಕ ಸಂಬಂಧ ಇಟ್ಟುಕೊಂಡಿರ ಬಹುದು. ಆಕೆಯ ಮಕ್ಕಳು ಅಂತಹ ಪ್ರಿಯತಮನ ಮಕ್ಕಳೂ ಇರಬಹುದು. ಈ ರೀತಿ ಸಾರ್ವಜನಿಕ ನೀತಿಯ ಕಾರಣದಿಂದ ಇದನ್ನು ಈ ರೀತಿ ಹಿಡಿಯಲಾಗಿದೆ. ಇಲ್ಲವೆ, ಸಮಾಜದ ಹಿತದ ದೃಷ್ಟಿಯಿಂದ ಕೆಲವು ಸಂಗತಿಗಳಿಗೆ ಕಾನೂನಿನ ಅನ್ವಯ ಒಂದು ಕೃತಕವಾದ ಪ್ರಮಾಣೀಕರಣವಾದ ಮೌಲ್ಯವನ್ನು ಕೊಡಲಾಗಿತ್ತು ಮತ್ತು ಆ ಪರಿಣಾಮವನ್ನು ಹೋಗಲಾಡಿಸುವುದಕ್ಕೆ ಯಾವುದೇ ಸಾಕ್ಷಿಯನ್ನು ಹಾಜರು ಮಾಡಲು ಅನುಮತಿಸುವುದಿಲ್ಲ. ಕಲಂ ೧೧೨ರ ಅನ್ವಯ ಕೃತಕ ಪ್ರಮಾಣಿಕ

ಮೌಲ್ಯವು ಕೆಳಗಿನ ಸಂಗತಿಗಳಿಗೆ ಅನ್ವಯಿಸುತ್ತದೆ.

(೧) ಮದುವೆಯ ಸಂಗತಿ.

(೨) ಸಂಪರ್ಕಕ್ಕೆ ಅವಕಾಶ: ನೋಡುವ ಅವಕಾಶ ಸಂಗತಿಗಳು.

ಎಲ್ಲಿ ಇವೆರಡೂ ಸಂಗತಿಗಳು ಅಸ್ತಿತ್ವದಲ್ಲಿರುತ್ತವೆಯೋ ಅಲ್ಲಿ ಆ ಕೂಸು ಕಾನೂನುಬದ್ಧವಾಗಿ ಹುಟ್ಟಿದೆಂದು ನಿರ್ಣಯಿಸುತ್ತದೆ. ಅಂದರೆ ಆ ಕೂಸು ಆ ಗಂಡನಿಗೆ ಹುಟ್ಟಿರಲೇಬೇಕು.

(೨) ಸಂಪರ್ಕಕ್ಕೆ ಅವಕಾಶವೇ ಇಲ್ಲವೆಂಬುದನ್ನು ಸಾಕ್ಷಿ ಕೊಟ್ಟು ಈ ನಿಯಮವನ್ನು ರದ್ದುಗೊಳಿಸಬಹುದು.

ಆ ಕೂಸಿನ ಗರ್ಭಧಾರಣೆ ಆಗುವ ಕಾಲಕ್ಕೆ ಲಗ್ನವಾದ ಪಾರ್ಟಿಗಳಲ್ಲಿ ಒಬ್ಬರಿಗೊಬ್ಬರು ಯಾವುದೇ ವೇಳೆಯಲ್ಲಿ ಸಂಪರ್ಕಕ್ಕೆ ಅವಕಾಶ ಇರಲಿಲ್ಲವೆಂಬುದನ್ನು ಸಿದ್ಧ ಮಾಡಲಿಕ್ಕೇಬೇಕು.

**ಸಂಪರ್ಕಕ್ಕೆ ಅವಕಾಶ ಇಲ್ಲವೆಂಬುದಕ್ಕೆ ಅರ್ಥವು**

*೧೯೩೪–೩೮ ಬಾಂಬೆ ಎಲ್.ಆರ್. ೩೯೪*

*ಕರಪಯ್ಯ ವಿರುದ್ಧ ಮಯ್ಯಾಂಡಿ:*

ಸಂಪರ್ಕದ ಅವಕಾಶವೆಂದರೆ ಗಂಡ ಹೆಂಡಿರು ಕೂಡಿ ಇರಲಿಕ್ಕೇಬೇಕೆಂಬ ಅರ್ಥವಲ್ಲ. ಅದೆಂದರೆ ಅವರು ಸಂಭೋಗ ಮಾಡಲು ಅವಕಾಶ. ಇದಕ್ಕಿಂತ ಹೆಚ್ಚಿಗೆ ಅವಕಾಶ ಇಲ್ಲ.

ಕರಪ್ಪಯ್ಯ ಒಬ್ಬ ಮದ್ರಾಸದ ಹಿಂದೂವಾಗಿದ್ದು, ಬರ್ಮಾ ದೇಶದಲ್ಲಿ ಸಾಕಷ್ಟು ಆಸ್ತಿ ಮಾಡಿದ್ದನು. ೧೯೨೩ರಲ್ಲಿ ಅವನು ಹುಚ್ಚನಾಗಿ ತೀರಿಕೊಂಡನು. ಕರಪಯ್ಯನು ಮೊದಲು ಕರಪಾಯಿ ಅನ್ನುವವಳನ್ನು ಲಗ್ನವಾದನು. ಆ ನಂತರ ನಾಚಿಯಮ್ಮನನ್ನು ಲಗ್ನವಾದನು. ಕರಪಯ್ಯನು ನಾಚಿಯಮ್ಮನ ಜೊತೆಗೆ ತಮಾಗ್ಯೊ ಎಂಬಲ್ಲಿ ವಾಸಿಸುತ್ತಿದ್ದನು. ಆದರೆ ಕರಪಾಯಿ ಎಂಬುವಳು ಹೌಲಮೀನ ಎಂಬಲ್ಲಿ ತನ್ನ ತಾಯಿ ಹಾಗೂ ಸಹೋದರನ ಜೊತೆಗೆ ವಾಸವಾಗಿದ್ದಳು.

೧೯೧೧ನೆಯ ಡಿಸೆಂಬರದಲ್ಲಿ ಅವರಿಬ್ಬರಲ್ಲಿ ಒಂದು ಒಪ್ಪಂದವಾಯಿತು. (ಅಪೂರ್ಣವಾಗಿದೆ –ಸಂ)

೩) ಅವರಿಬ್ಬರಿಗೂ ಸಂಭೋಗ ಮಾಡಲು ಸಾಧ್ಯವಿರಲಿಲ್ಲ ಅನ್ನುವ ಬಗ್ಗೆ ಸಾಕ್ಷಿ ಕೊಟ್ಟು ಈ ನಿರ್ಣಯವನ್ನು ತೆಗೆದುಹಾಕಲು ಬರುವುದಿಲ್ಲ.

*೨೯ ಅಯ್. ಎ. ೧೭ ನರೇಂದ್ರ ವಿರುದ್ಧ ರಾಮ ಗೋವಿಂದ,*
*೧೯೦೧*

ಉಪೇಂದ್ರ ಎಂಬುವನು ತಿಲೋತ್ತಮಾಳೆಂಬುವಳನ್ನು ಲಗ್ನವಾಗಿದ್ದನು. ಉಪೇಂದ್ರನು ಜುಲೈ ೧೫, ಮರಣ ಹೊಂದಿದನು. ಬೆನ್ನಿನಲ್ಲಿ ಹುಣ್ಣು ಆಗಿದ್ದರ ಪರಿಣಾಮವಾಗಿ ಅವನು ಸತ್ತನು. ಅವನು ಅದಕ್ಕಿಂತ ಪೂರ್ವದಲ್ಲಿ ಅದರಿಂದ ಬಳಲುತ್ತಿದ್ದನು. ಉಪೇಂದ್ರನ ಮರಣನ ನಂತರ ೧೮೮೭ನೆಯ ಏಪ್ರಿಲ್ ೧೮ರಂದು ತಿಲೋತ್ತಮೆ ನರೇಂದ್ರ ಎಂಬ ಗಂಡು ಮಗುವಿಗೆ ಜನ್ಮವಿತ್ತಳು. ಅಂದರೆ ೯ ತಿಂಗಳ ೧೦ ದಿವಸ ಅಥವಾ ಉಪೇಂದ್ರನ ಮರಣದ ನಂತರ ೨೮೦ ದಿವಸಕ್ಕೆ. ಇಲ್ಲಿ ಮೂರು ಪ್ರಶ್ನೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

(೧) ನರೇಂದ್ರನು ತಿಲೋತ್ತಮಳ ಮಗನೇ ಅಥವಾ ಉಪೇಂದ್ರನ ಮಗನೇ.

(೨) ಉಪೇಂದ್ರನು ಸತ್ತ ೨೮೦ ದಿವಸಗಳ ನಂತರ ಅವನು ಹುಟ್ಟಿದನೋ?

(೩) ಮೇಲ್ಮನವಿದಾರನು ಗರ್ಭಧಾರಣವಾದಾಗ ಅವಳಿಗೆ ಹಾಗೂ ಅವನಿಗೆ ಒಬ್ಬರಿಗೊಬ್ಬರು ಯಾವುದೇ ವೇಳೆಯಲ್ಲಿ ಪ್ರವೇಶ ಅವಕಾಶ ಇರಲಿಲ್ಲವೆಂದು ಸಿದ್ಧಮಾಡಲಾಗಿದೆಯೇ?

ಕೊನೆಯ ವಿವಾದಾಂಶದ ಮೇಲೆ ಈ ಕೆಳಗಿನಂತೆ ಸಾಕ್ಷಿಯು ಇದ್ದಿತು:

ತಿಲೋತ್ತಮಳು ಇನ್ನೂ ಚಿಕ್ಕವಳಿದ್ದಾಗಲೇ ತನ್ನ ತಂದೆ–ತಾಯಿ ಹತ್ತಿರ ಇರುವಾಗಲೇ ಲಗ್ನವಾಗಿತ್ತು. ಆದರೆ ಜುಲೈ ೧೮೮೬ರಲ್ಲಿ ಅವನು ಸಾಯುವ ಪೂರ್ವದಲ್ಲಿ ಅವಳು ಆಕೆಯ ಗಂಡನ ಜೊತೆಗೆ ಇರಲು ಹೋಗಿದ್ದಳು. ಆದರೆ ಅವಳು ಎಷ್ಟು ದಿನ ಇದ್ದಳೆಂಬುದು ಸ್ಪಷ್ಟವಿಲ್ಲ. ಕೆಲವು ಸಾಕ್ಷಿದಾರರು ಅವಳು ೫–೬ ದಿನಗಳವರೆಗೆ ಇದ್ದಳೆಂದು, ಇತರರು ೧೦–೧೨ ದಿನಗಳವರೆಗೆ ಇದ್ದಳೆಂದು ಹೇಳುತ್ತಾರೆ.

ಈ ಪ್ರಕರಣದಲ್ಲಿ ಎರಡು ಮತಹ್ವದ ಸಂದರ್ಭಗಳು ಇದ್ದವು.

(೧) ಉಪೇಂದ್ರನು ೧೫ ದಿನಗಳಿಂದ ಕಾರ್ಬಂಕಲ್ ಎಂಬ ರೋಗದಿಂದ ಬಳಲುತ್ತಿದ್ದ ಪರಿಣಾಮವಾಗಿ ಮರಣ ಹೊಂದಿದನು.

(೨) ಉಪೇಂದ್ರನು ೧೪ನೆಯ ಜುಲೈ ೧೮೮೬ರಲ್ಲಿ ಒಂದು ಮೃತ್ಯುಪತ್ರ ಮಾಡಿ ಅದರಲ್ಲಿ ತಿಲೋತ್ತಮಳಿಗೆ ಒಂದು ಹುಡುಗನನ್ನು ದತ್ತಕ ತೆಗೆದುಕೊಳ್ಳಲು ನಿರ್ದೇಶಿಸಿ ಆಕೆಯನ್ನು ತನ್ನ ಮೃತ್ಯುಪತ್ರ ನಿರ್ವಾಹಕಳೆಂದು ನೇಮಿಸಿದನು. ಆತನು ಅನಾರೋಗ್ಯದಿಂದ ಇದ್ದರೆ ಅವನು ಅವಳ ಸಂಗಡ ಸಂಭೋಗ ಮಾಡಿರಲಿಕ್ಕಿಲ್ಲವೆಂದು ಅವರ ವಾದವಾಗಿತ್ತು. ಆ ವಾದವನ್ನು ತಿರಸ್ಕರಿಸಲಾಯಿತು.

ಸಂಭೋಗ ಮಾಡುವುದಕ್ಕೆ ಅಶಕ್ಯತೆ ಇದನ್ನು ನಪುಂಸಕ ಜೀವನದ ಅಶಕ್ಯತೆಯಿಂದ ವಿಂಗಡಿಸಲಿಕ್ಕೆ ಬೇಕು.

(೩) ೧೯೩೫ (ಆಲ್ ಇಂಡಿಯಾ ರಿಪೋರ್ಟ್) ಪಿ.ಓ. ೧೯೯ ದೈಹಿಕ ಅಶಕ್ತತೆಯ ಸಲುವಾಗಿ.

ಪ್ರಶ್ನೆ– ಒಂದು ವೇಳೆ ಅವನು ನಪುಂಸಕನಿದ್ದರೆ.

ಈ ಕಲಮು ಒಂದು ಕೂಸು ಔರಸ ಪುತ್ರನೇ ಎಂಬುದನ್ನು ಸಿದ್ಧಮಾಡಲು ಹಿಂದೂ ಮತ್ತು ಮಹಮ್ಮದೀಯ ಕಾನೂನಿನ ನಿಯಮಗಳನ್ನು ಸಂಕ್ಷಿಪ್ತಗೊಳಿಸುತ್ತದೆ. *೧೦ ಅಲಹ. ೨೮೯.*

೧. ಮಹಮ್ಮದೀಯ ಕಾನೂನಿನ ಅನ್ವಯ ಯಾವುದೇ ಕೂಸು ಲಗ್ನವಾದ ೬ ತಿಂಗಳ ನಂತರ ಇಲ್ಲವೆ ಅಥವಾ ಲಗ್ನದ ಬಿಡುಗಡೆಯಾದ ೨ ವರ್ಷಗಳ ಅಥವಾ ಗಂಡನು ಸತ್ತ ಎರಡು ವರ್ಷದೊಳಗಾಗಿ ಕೂಸು ಹುಟ್ಟಿದರೆ ಅದು ಅವನ ಕಾನೂನುಬದ್ಧ ಕೂಸು ಎಂದು ಕಾನೂನಿನ ಊಹೆ ಇರುತ್ತದೆ.

೨. ಹಿಂದೂ ಕಾನೂನಿನ ಅನ್ವಯ ಲಗ್ನದ ಬಿಡುಗಡೆಯಾದ ನಂತರ ೧೦ ತಿಂಗಳು ಅಥವಾ ಗಂಡ ಸತ್ತ ೧೦ ತಿಂಗಳ ನಂತರ, ಎಂದರೆ ೨೮೦ ದಿವಸಗಳ ನಂತರ ಹುಟ್ಟಿದ ಕೂಸು ತಾನು ಕಾನೂನುಬದ್ಧ ಕೂಸೆಂದು ಸಿದ್ಧಪಡಿಸಲು ಈ ಕಲಮು ಅಡ್ಡ ಬರುವುದಿಲ್ಲ. ಈ ರುಜುವಾತು ಮಾಡುವ ಹೊಣೆಯು ಆತನದೇ ಆಗಿದೆ. *೨೪ ಅಲಹಾ. ೪೪೫.* ೩೫೭ ದಿವಸಗಳು ತಂದೆ ತೀರಿಕೊಂಡ ನಂತರ.

ಕೂಸಿನ ಜನನದ ಕಾನೂನುಬದ್ಧತೆಯ ಪ್ರಶ್ನೆಯು ಬಂದಾಗ ಗಂಡ ಹೆಂಡಿರಲ್ಲಿ ಪ್ರವೇಶ ಅವಕಾಶ ಕುರಿತಂತೆ ಅರ್ಹತೆಯ ಬಗ್ಗೆ ಬ್ರಿಟಿಷ್ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಅಂತರ ಇರುತ್ತದೆ.

(೧) ಬ್ರಿಟಿಷ್ ಕಾನೂನಿನ ಅನ್ವಯ ಅವರು ಅನರ್ಹರು ಇರುತ್ತಾರೆ.

(೨) ಭಾರತೀಯ ಕಾನೂನಿನ ಅನ್ವಯ ಅವರು ಅರ್ಹರು ಇರುತ್ತಾರೆ

*೩೮ ಮದ್ರಾಸ್ ೪೬೬, ೨೮ ಬಾಂಬೆ ಎಲ್.ಆರ್. ೨೦೭*

**ಕಲಮು ೧೧೩**

**೧. ಈ ಕಲಮು ಒಂದು ಪ್ರದೇಶವು ಒಂದು ರಾಷ್ಟ್ರಕ್ಕೆ ಕೂಡಿದ್ದೆಂಬುದನ್ನು ರುಜುವಾತು ಮಾಡುವುದನ್ನು ಕುರಿತು ಹೇಳುತ್ತದೆ.**

ಕೆಲವು ಪ್ರದೇಶಗಳು ಒಂದು ಕಾಲಕ್ಕೆ ಬ್ರಿಟಿಷ್ ಇಂಡಿಯಾದ ಒಂದು ಭಾಗವಾಗಿತ್ತು ಎಂದೂ ಮತ್ತು ಅದು ಬ್ರಿಟಿಷ್ ಇಂಡಿಯಾದಿಂದ ಮುಕ್ತ ಹೊಂದಿದೆಯೆಂಬುದನ್ನು ಹೇಗೆ ರುಜುವಾತುಪಡಿಸಬಹುದು. ಇದನ್ನು ಹೇಗೆ ಸಾಬೀತುಮಾಡಬೇಕು.

೧. ಈ ಪ್ರಶ್ನೆಯು ಕೇವಲ ಪಾಂಡಿತ್ಯದ ಪ್ರಶ್ನೆಯಾಗಿಲ್ಲ. ಪ್ರಾಯೋಗಿಕ ದೃಷ್ಟಿಯಿಂದ ಇದಕ್ಕೆ ಬಹಳ ಮಹತ್ವ ಇದೆ. ಇದು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಮೂಲ ಪ್ರಶ್ನೆಗೆ ಹೋಗುತ್ತದೆ. ಒಂದು ಯಾವುದೇ ಭಾಗವು ಬ್ರಿಟಿಷ್ ಭಾರತದ ಆಗ ಅದು ಭಾರತದ ಯಾವುದೇ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲ.

೨. ಕಲಮು ೧೧೩ರಲ್ಲಿ ಉಪಬಂಧವನ್ನು ಮಾಡಲಾಗಿದೆ. ಭಾರತ ಪರಿಪತ್ರದಲ್ಲಿಯ ಒಂದು ಅಧಿಸೂಚನೆ ಅನ್ವಯ ಯಾವುದೇ ಬ್ರಿಟಿಷ್ ಪ್ರದೇಶವನ್ನು ದೇಶಿಯ ಸಂಸ್ಥಾನದ ರಾಜಕುಮಾರನಿಗೆ ಇಲ್ಲವೆ ರಾಜನಿಗೆ ಬಿಟ್ಟುಕೊಟ್ಟರೆ, ಆಗ ಅದನ್ನು ನಿರ್ಣಯಾತ್ಮಕ ಒಂದು ಕಾನೂನುಬದ್ಧವಾದ ಒಂದು ಪ್ರದೇಶವನ್ನು ಕಾಣಿಸಿದ ಒಂದು ದಿನಾಂಕದಂದು ಬಿಟ್ಟು ಕೊಡುವುದಾಗಿದೆಯೆಂದು ನಿರ್ಣಯಾತ್ಮಕವಾಗಿ ಸಾಬೀತಾಗಿದೆ.

೩. ಈ ಕಲಮು ಭಾರತದ ಶಾಸನದ ಅನ್ವಯ ಅಧಿಕಾರಾತೀತವಾದುದೆಂದು ಘೋಷಿಸಿದೆ ಮತ್ತು ಅದರಿಂದ ಅದು ಕಾನೂನುಬಾಹಿರ ಆಗಿದೆ ಮತ್ತು ಪ್ರಿವಿ ಕೌನ್ಸಿಲದ ಕಾನೂನು ಯಾವುದೇ ಪರಿಣಾಮವನ್ನುಂಟು ಮಾಡಿಲ್ಲ.

*<u>೧. ಬಾಂಬೆ ೩೬೭</u> ದಾಮೋದರ ಗೋರ್ದನ್ ವಿರುದ್ಧ ದೇವರಾಮ ಕಾನಜಿ*

*ಪಿ.ಓ. ೧೮೭೬*

ಗವರ್ನರ್–ಜನರಲ್–ಇನ್–ಕೌನ್ಸಿಲ್ ಇವರು ೨೪.೨೫ ವಿಐಸಿ ೦.೬೭ ಕಲಮು ೨೨ ಕೌನ್ಸಿಲ್ಲಿನಿಂದ ನೇರವಾಗಿ ಸಾರ್ವಭೌಮನಿಗೆ ಅಥವಾ ಭಾರತದ ಯಾವುದೇ ಒಂದು ಇಂಗ್ಲೆಂಡ್‌ನ ಅರಸನ ವಸಾಹತಿಗೆ ಅಥವಾ ಬ್ರಿಟಿಷ್‌ರ ಜನಾಂಗದ ಆಧಿಪತ್ಯವನ್ನು ಯಾವುದೆ ಶಾಸನದಿಂದ (ಈ.ಜಿ. ಸಾಕ್ಷ್ಯ ಅಧಿನಿಯಮ ಕಲಮು ೧೧೩) ಒಂದು ಶಾಸನವನ್ನು ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಮಾಡುವುದರಿಂದ ಆ ಪ್ರದೇಶವನ್ನು ಬೇರ್ಪಡಿಸಿದಂತೆ ನಿರ್ಣಯಾತ್ಮಕ ಸಿದ್ಧಾಂತವಾಗುವುದಿಲ್ಲ. ಹೀಗೆ ಬಿಡುಗಡೆ ಮಾಡಿದ್ದರ ಕುರಿತು ಅದರ ಸ್ವರೂಪ ಹಾಗೂ ಅದರ ಕಾನೂನುಬದ್ಧತೆ ಕುರಿತು ನ್ಯಾಯಾಂಗ ವಿಚಾರಣೆ ಮಾಡಬೇಕು.

**ತೀರ್ಪುಗಳು ನಿರ್ಣಯಾತ್ಮಕ ಸಿದ್ಧಾಂತಗಳಾಗಿ:**

೧. ಕೆಲವು ಸಂಗತಿಗಳು ಇನ್ನು ಬೇರೆ ಕೆಲವು ಸಂಗತಿಗಳು ನಿರ್ಣಯಾತ್ಮಕವಾಗಿ ಇರುವಂತೆ ಸಾಕ್ಷ್ಯ ಅಧಿನಿಯಮವು ಕೆಲವು ತೀರ್ಪುಗಳನ್ನು ಕೆಲವು ಮುದ್ದೆ (ವಿವಾದಂಶಗಳ ಬಗ್ಗೆ) ನಿರ್ಣಯಾತ್ಮಕ ಸಿದ್ಧಾಂತವೆಂದು ಪರಿಗಣಿಸುತ್ತದೆ. ಕಲಮು ೪೧.

೨. ನಿರ್ಣಯಾತ್ಮಕ ತೀರ್ಪುಗಳೆಂದು ಘೋಷಿಸಲ್ಪಟ್ಟವು ಯಾವುವು ಅಂದರೆ–

(೧) ಮರಣ ಶಾಸನದ ಪ್ರಮಾಣಿತ ಪ್ರತಿ.

(೨) ವೈವಾಹಿಕ ಪ್ರಕರಣಗಳು.

(೩) ನೌಕಾದಳಕ್ಕೆ ಸಂಬಂಧಿಸಿದ ಪ್ರಕರಣಗಳು.

(೪) ದಿವಾಳಿತನದ ವ್ಯಾಪ್ತಿ.

ಈ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದು ಕಾನೂನಾತ್ಮಕ ಸ್ವರೂಪವನ್ನು ನೀಡುತ್ತದೆಯೋ ಅಥವಾ ಕಾನೂನಾತ್ಮಕ ಸ್ವರೂಪವನ್ನು ನಿವಾರಿಸುತ್ತದೆಯೋ ಅಥವಾ ಒಬ್ಬ ವ್ಯಕ್ತಿಗೆ ಕಾನೂನಾತ್ಮಕ ಸ್ವರೂಪವನ್ನು ಘೋಷಿಸುತ್ತದೆ ಅಥವಾ ಒಂದು ವಸ್ತುವಿಗೆ ಒಬ್ಬ ನಿರ್ದಿಷ್ಟ ವ್ಯಕ್ತಿಯ ಬಗ್ಗೆ ಇರದೆ ಸಂಪೂರ್ಣವಾಗಿದ್ದು ಇಂತಹ ವಿಷಯಗಳ ಬಗ್ಗೆ ಯೋಗ್ಯ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಕೊಟ್ಟಂತಹ ಅಂತಿಮ ತೀರ್ಪು ಆದೇಶ ಮತ್ತು ಡಿಕ್ರಿಗಳಾಗಿರುತ್ತವೆ.

**ನಿರ್ಣಾಯಾತ್ಮಕ ಸಿದ್ಧಾಂತಗಳು:**

(೧) ಕಾನೂನಿನ ಸ್ವರೂಪವನ್ನು ಕೊಟ್ಟ ಇಲ್ಲವೆ ಕಿತ್ತುಕೊಂಡಂತಹವು.

(೨) ಇಂತಹದು ತೀರ್ಪಿನ ದಿನಾಂಕದಂದು ಕೊಟ್ಟದ್ದು ಇಲ್ಲವೆ ತೆಗೆದುಕೊಂಡದ್ದು ಇರಬಹುದು.

**ಕಲಮು ೪೧**

ಈ ಕಲಮು ಕಾನೂನಿನಂತೆ ರಚಿಸಿದ ನ್ಯಾಯಾಲಯವು ಕೊಟ್ಟ ತೀರ್ಪನ್ನು ಕುರಿತು ಕೆಲವು ಪ್ರಶ್ನೆಗಳನ್ನು ಸಿದ್ಧ ಮಾಡುವ ಕುರಿತು ಇಲ್ಲವೆ ಸಿದ್ಧಾಂತವನ್ನು ರದ್ದು ಮಾಡುವ ಕುರಿತು ಚರ್ಚಿಸುತ್ತದೆ. ಪ್ರಶ್ನೆಯೆಂದರೆ:

(೧) ಒಬ್ಬ ವ್ಯಕ್ತಿಯ ಸ್ಥಾನಮಾನಕ್ಕೆ ತಕ್ಕಂತಹ ಹಕ್ಕು.

(೨) ಅಂತಹ ಹಕ್ಕು ಅವನಿಗೆ ಯಾವಾಗ ಪ್ರಾಪ್ತವಾಯಿತು.

**ಪ್ರಶ್ನೆಯೆಂದರೆ:**

(೧) ಒಬ್ಬ ನಿರ್ದಿಷ್ಟ ವ್ಯಕ್ತಿಯು ತನಗೆ ಇದ್ದ ಸ್ಥಾನಮಾನ ಕಳೆದುಕೊಂಡಿದ್ದಾನೆಯೆ?

(೨) ಹಾಗೆ ಆಗಿದ್ದರೆ ಯಾವಾಗ?

ಪ್ರಶ್ನೆಯೆಂದರೆ ಯಾವುದೇ ವಿಶೇಷ ವ್ಯಕ್ತಿಯು ಕೆಲವು ಆಸ್ತಿಗೆ ಹಕ್ಕುದಾರನಿದ್ದಾನೆಯೇ ಎಂಬುದು. ಈ ಕಲಮು ಕೆಲವು ತೀರ್ಪುಗಳು ಈ ಸಂಗತಿಗಳು ನಿರ್ಣಯಾತ್ಮಕ ಸಾಕ್ಷಿ ಪುರಾವೆಯೆಂದು ಘೋಷಿಸುತ್ತವೆ. ಅಂತಹ ತೀರ್ಪುಗಳು ಯಾವುವು?

(೧) ಅದು ಯೋಗ್ಯ ನ್ಯಾಯಾಲಯದ ತೀರ್ಪು ಇರಲೇಬೇಕು.

(೨)ಅಂತಹ ತೀರ್ಪು ಕೆಳಗಿನವುಗಳನ್ನು ಕುರಿತು ಚಲಾಯಿಸಿದ್ದು ಇರಬೇಕು.

(i) ಮರಣಶಾಸನದ ಪ್ರಮಾಣಪತ್ರ

(ii) ವೈವಾಹಿಕ

(iii) ನೌಕಾದಳ.

(iv) ದಿವಾಳಿತನ.

೧. ಒಬ್ಬ ವ್ಯಕ್ತಿಗೆ ಅಥವಾ ಒಬ್ಬ ವ್ಯಕ್ತಿಯಿಂದ ಆತನ ಕಾನೂನು ಸ್ವರೂಪವನ್ನು ದಯಪಾಲಿಸುತ್ತದೆ, ಇಲ್ಲವೆ ಕಿತ್ತುಕೊಳ್ಳುತ್ತದೆ.

೨. ಯಾವ ಒಬ್ಬ ವ್ಯಕ್ತಿಯು ಒಂದು ವಿಶೇಷ ವಸ್ತುವಿಗೆ ಹಕ್ಕುಳ್ಳವನೆಂದು ಘೋಷಿಸುತ್ತದೆ. ಆದರೆ ಯಾವುದೇ ವಿಶೇಷ ವ್ಯಕ್ತಿಯ ವಿರುದ್ಧ ಸಂಪೂರ್ಣವಾಗಿ ಅಲ್ಲ.

೩. ಒಂದು ವೇಳೆ ಇದು ಅಂತಿಮ ತೀರ್ಪು, ಆದೇಶ ಅಥವಾ ಡಿಕ್ರಿ ಆಗಿದ್ದರೆ.

**ಮರಣ ಶಾಸನದ ಅಧಿಕಾರ ವ್ಯಾಪ್ತಿ**

ನ್ಯಾಯಾಲಯಗಳು (೧) ಭಾರತೀಯ ವಾರಸಾ ಕಾನೂನು (೨) ಹಿಂದೂ ಮರಣ ಶಾಸನದ ಅಧಿನಿಯಮ (೩) ಮರಣ ಶಾಸನ ಮತ್ತು ಆಡಳಿತದ ಅಧಿನಿಯಮ ಇವುಗಳ ಅನ್ವಯ ಮರಣಶಾಸನ ಬಿಟ್ಟುಹೋಗಿದ್ದರೆ ಮತ್ತು ಇಲ್ಲದಿದ್ದರೂ ತಮ್ಮ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತದೆ.

**ವೈವಾಹಿಕ ಅಧಿಕಾರ ವ್ಯಾಪ್ತಿ**

ಭಾರತೀಯ ವಿವಾಹ ವಿಚ್ಛೇದ ಅಧಿನಿಯಮ ಮತ್ತು ವಿವಾಹಕ್ಕೆ ಮತ್ತು ವಿವಾಹ ವಿಚ್ಛೇದನೆಗೆ ಸಂಬಂಧಿಸಿದ ಇತರ ಅಧಿನಿಯಮಗಳ ಮೇರೆಗೆ ಚಲಾಯಿಸುವ ಅಧಿಕಾರ ಚಲಾಯಿಸುವುದು.

**ನೌಕಾ ಅಧಿಕಾರ ವ್ಯಾಪ್ತಿ**

ಲೆಟರ್ಸ್ ಪೇಟೆಂಟ್ ಆಫ್ ಹೈಕೋರ್ಟ್ ಮತ್ತು ೧೮೯೦ನೆಯ ಇಸವಿ ವಸಾಹತುಶಾಹಿ ನೌಕಾ ಅಧಿನಿಯಮ.

**ದಿವಾಳಿತನ ಅಧಿಕಾರ ವ್ಯಾಪ್ತಿಯು**

ಸನ್ನದು ಮತ್ತು ದಿವಾಳಿತನ ಅಧಿನಿಯಮಗಳು.

**ಯಾವ ವಿಷಯಗಳನ್ನು ಕುರಿತು ಪಕ್ಷಗಾರರು ರುಜುವಾತು ಮಾಡುವುದನ್ನು ಪ್ರತಿಬಂಧಿಸಲಾಗಿದೆ.**

೧. ವಿಬಂಧ ಕಾನೂನು ಕಲಮು ೧೧೫, ೧೧೬, ೧೧೭ರಲ್ಲಿ ಹೇಳಿದ ಕಲಮು ೧೧೫ ವಿಬಂಧದ ಸಾಮಾನ್ಯ ನಿಯಮವನ್ನು ಹೇಳುತ್ತದೆ. ಕಲಮು ೧೧೬ ಮತ್ತು ೧೧೭ ಬೇರೆ ಬೇರೆ ವಿಧದ ವಿಬಂಧಗಳನ್ನು ಹೇಳುತ್ತವೆ.

**೨. ಕಲಮು ೧೧೫**

**(i) ಕಲಮು ೧೧೫– ಇದನ್ನು ಕಲಮು ೩೧ರೊಂದಿಗೆ ಹೋಲಿಸುವುದು:**

ವಿಬಂಧವು ಒಂದು ಒಪ್ಪಿಗೆಯಾಗಿದ್ದು, ಇದು ಒಂದು ಸಂಗತಿಯಬಗ್ಗೆ ಕೊಟ್ಟ ಹೇಳಿಕೆಯಂತೆಯೇ ಒಂದು ಸಂಗತಿಯಾಗಿ ಇರುತ್ತದೆ. ಬಹುಮಟ್ಟಿಗೆ ಇಂತಹ ಒಪ್ಪಿಗೆಗಳನ್ನು ಕೊಟ್ಟ ಪಕ್ಷಗಾರನು ಅದನ್ನು ವಾಪಸು ತೆಗೆದುಕೊಳ್ಳಬಹುದು. ಆದರೆ ವಸ್ತುಸ್ಥಿತಿಯೆಂದರೆ ಅವನು ಮಾಡಿದ ಒಪ್ಪಿಗೆಯು ಉಳಿಯುತ್ತದೆ. ಆದರೆ ಆ ಒಪ್ಪಿಗೆ ಕೊಟ್ಟ ಪಕ್ಷಗಾರನು ಅಂತಹ ಒಪ್ಪಿಗೆಯನ್ನು ನಿಷ್ಕಾಳಜಿಯಿಂದ ಮತ್ತು ತಾತ್ಸಾರತನದಿಂದ ಅಥವಾ ಪ್ರಾಮಾಣಿಕ ತಪ್ಪು ತಿಳುವಳಿಕೆಯಿಂದ ಮಾಡಿದ್ದರೆ ವಿವರಣೆ ಕೊಡಬಹುದು. ಹಾಗೂ ಅದನ್ನು ಅವನಿಂದ ಕೇಳಬಹುದು. ಆತನು ಅದನ್ನು ಹೇಳುವಾಗ

ಅದು ಸುಳ್ಳು ಅನ್ನುವುದು ಅವನಿಗೆ ಗೊತ್ತಿತ್ತೇ ಎಂಬುದನ್ನು ಸಹಿತ ಅವನಿಂದ ಕೇಳಬಹುದು. ಅವನು ಹಾಗೆ ಹೇಳಬಹುದು, ಆದರೆ ಒಬ್ಬನು ಒಂದು ಹೇಳಿಕೆಯನ್ನು ಇನ್ನೊಬ್ಬನಿಗೆ ಸಂಶಯ ಬರದಂತೆ ಹೇಳಿದರೆ ಮತ್ತು ಅಂತಹ ಸಂದರ್ಭದಲ್ಲಿ ಅದು ಇನ್ನೊಬ್ಬರ ನಡತೆಯ ಮೇಲೆ ನಿರ್ಣಯಾತ್ಮಕ ಪರಿಣಾಮ ಬೀರುತ್ತದೆ. ಇಂತಹ ಹೇಳಿಕೆಗಳನ್ನು ಕೊಟ್ಟ ಮನುಷ್ಯನು ಅದಕ್ಕೆ ತದ್ವಿರುದ್ಧ ಹೇಳಿಕೆ ಕೊಡಲು ಕಾನೂನು ಅವನಿಗೆ ಅನುಮತಿ ಕೊಡುವುದಿಲ್ಲ. ವಿಬಂಧ ಮತ್ತು ಒಪ್ಪಿಗೆ ಇವುಗಳ ನಡುವಿನ ಅಂತರವು ಬಹಳ ಕಡಿಮೆ ಇರುತ್ತದೆ. ಒಂದು ಹೇಳಿಕೆಯು ಒಪ್ಪಿಗೆ ಇಲ್ಲವೆ ವಿಬಂಧ ಎಂಬ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಆ ಹೇಳಿಕೆಯ ಸ್ವರೂಪ ಮತ್ತು ಅದಕ್ಕೆ ಸಂಬಂಧಿಸಿದ ಸಂದರ್ಭಗಳನ್ನು ಅವಲಂಬಿಸುತ್ತದೆ.

**(ii) ವಿಬಂಧಕ್ಕೆ ಸಂಬಂಧಿಸಿದ ನಿಯಮಗಳಿಗೆ ಕಾನೂನಿನ ಅವಶ್ಯಕತೆಗಳು ಯಾವುವು?**

ಕೆಳಗಿನ ಮೂರು ಕರಾರುಗಳನ್ನು ಪೂರೈಸಿದಾಗ ವಿಬಂಧವು ಆಚರಣೆಗೆ ಬರುತ್ತದೆ.

*೩೭ ಬಾಂಬೆ ಎಲ್.ಆರ್. ೫೪೪ ಪಿ.ಸಿ.*

(i) ಒಬ್ಬ ಪ್ರತಿವಾದಿಯು ಕೆಲವು ಸಂಗತಿಗಳು ಅಸ್ತಿತ್ವದಲ್ಲಿರುತ್ತವೆಯೆಂದು ಪ್ರತಿನಿಧಿಸುವ ಹೇಳಿಕೆ ಅಥವಾ ಅವನು ವಾದಿಯ ಕಾನೂನುಬದ್ಧ ಪ್ರತಿನಿಧಿ (ಏಜೆಂಟ್) ಅವನ ಅಥವಾ ಅವನ ಪರವಾಗಿ ಒಬ್ಬನು

(ii) ವಾದಿಯು ಒಂದು ಹೇಳಿಕೆಯ ಮೇಲೆ ಅವಲಂಬಿಸಿ ನಂಬಿದವನಾಗಿ ಕಾರ್ಯಾಚರಣೆ ಕೈಕೊಳ್ಳುತ್ತಾನೆ ಮತ್ತು

(iii) ವಾದಿಯು ಅಂತಹ ಹೇಳಿಕೆಯ ಮೇಲೆ ನಂಬಿಕೆ ಇಟ್ಟು ನಡೆಯುವುದಿಲ್ಲ.

**ಹೇಳಿಕೆಯು ಪ್ರತಿನಿಧಿಸಿರುವಂತೆ ಆಗಲಿಕ್ಕೇ ಬೇಕು:**

(೧) ಪ್ರತಿನಿಧಿಸುವಿಕೆಯು ಶಬ್ದಗಳಿಂದ ಇಲ್ಲವೆ ನಡತೆಯಿಂದ ಇರಬಹುದು.

(೨) ಮೌಖಿಕವಾಗಿದ್ದರೆ ಅದು ಸುಳ್ಳು ಇದೆಯೆಂದು ಅವನಿಗೆ ಉದ್ದೇಶಪೂರ್ವಕವಾಗಿ, ತಪ್ಪು ನಿರೂಪಣೆ ಮಾಡಿದ್ದು ಇರಬಹುದು.

ಉದಾ:

*ಮ್ಯಾಕ್‌ಕ್ಯಾನ್ಸ್ ವಿರುದ್ಧ ಲಂಡನ್ ಆಂಡ್ ನಾರ್ಥ್ ವೆಸ್ಟ್ರನ್ ರೇಲ್ವೆ ಕಂ (೧೮೬೧) ೭ ಎಚ್. ಆ್ಯಂಡ್ ಎನ್ ೪೭೭*

'ಎಮ್' ಎಂಬುವನು ತನ್ನ ಕುದುರೆಗಳನ್ನು ಲಿವರಪೂಲ್ ಹತ್ತಿರ ಇರುವ ಎಡ್ಜ್ ಹಿಲ್‌ದಿಂದ ವುಲ್‌ವರ್ ಹ್ಯಾಂಪ್ಟನ್‌ವರೆಗೆ ಯುಕ್ತವಾದ ಲಾರಿಗಳಲ್ಲಿ ಸಾಗಿಸುವ ಕುರಿತು ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ರೇಲ್ವೆದವರು ಯುಕ್ತ ಮತ್ತು ಸೂಕ್ತ ಟ್ರಕ್ಕುಗಳನ್ನು ಒದಗಿಸುವುದಾಗಿ ಒಪ್ಪಂದ ಮಾಡಿಕೊಳ್ಳುತ್ತಾರೆ. 'ಎಮ್', ಈತನು ಘೋಷಣೆಯ ಫಾರ್ಮನ್ನು ತುಂಬಿ ಅದರಲ್ಲಿ ಪ್ರತಿಯೊಂದು ಕುದುರೆಯ ಬೆಲೆಯು ೧೦ ಪೌಂಡಿಗಿಂತ ಹೆಚ್ಚಿಗೆ ಇಲ್ಲ ಅಂತಾ ಹೇಳುತ್ತಾನೆ. ಆಗಿನ ರೇಲ್ವೆದವರು ಕುದುರೆಯನ್ನು ಸಾಗಿಸಲು ಬೇರೆ ಬೇರೆ ವ್ಯವಸ್ಥೆಗಳನ್ನು ಅನುಸರಿಸುತ್ತಿದ್ದರು. ಒಂದು ಪದ್ಧತಿಯೆಂದರೆ ಆ ಕುದುರೆ ಮಾಲೀಕನು ತನಗೆ ಬೇಕಾದಷ್ಟು ಕುದುರೆಗಳನ್ನು ಅದರಲ್ಲಿ ಹಾಕಿಕೊಂಡು ಕಳುಹಿಸಬಹುದಾಗಿತ್ತು. ಇನ್ನೊಂದು ಪದ್ಧತಿಯೆಂದರೆ ಪ್ರತಿಯೊಂದು ಕುದುರೆಯನ್ನು ಪ್ರತ್ಯೇಕವಾದ ಸ್ಟಾಲುಗಳಲ್ಲಿ ಇಡುವ ಪದ್ಧತಿಯು.

ಎರಡನೆಯ ಪದ್ಧತಿಯಂತೆ ಕುದುರೆಗೆ ಸಾಗಿಸುವುದಕ್ಕೆ ದರವು ಮೊದಲನೆಯ ಪದ್ಧತಿಯಿಂದ ಸಾಗಿಸುವ ದರಕ್ಕಿಂತ ಮೂರುಪಟ್ಟು ಹೆಚ್ಚಿಗೆ ಇದ್ದಿತು. ಮತ್ತು ಇನ್ನೂ ಒಂದು ರೇಲ್ವೆ ನಿಯಮವೆಂದರೆ ರೇಲ್ವೆದವರು ೧೦ ಪೌಂಡ್ ಕಿಮ್ಮತ್ತಿಗಿಂತ ಹೆಚ್ಚಿನ ಕಿಮ್ಮತ್ತಿನ ಕುದುರೆಗಳನ್ನು ಟ್ರಕ್ಕಿನಲ್ಲಿ ತೆಗೆದುಕೊಳ್ಳುವದಾಗಿದ್ದಿತು. ಈ ರೀತಿ ಸಾಗಣೆಯಲ್ಲಿ ರೇಲ್ವೆದವರು ಪೂರೈಸಿದ ಟ್ರಕ್ಕುಗಳು ದೋಷಪೂರಿತವಿದ್ದ ಕಾರಣದಿಂದ ಕೆಲವು ಕುದುರೆಗಳು ಗಾಯಗೊಂಡಿದ್ದವು. ಇದರಿಂದ 'ಎಮ್'ನಿಗೆ ಹಾನಿಯಾಗಿದ್ದರಿಂದ ಆ ಕುದುರೆಗಳ ಬೆಲೆಯು ೧೦ ಪೌಂಡ್‌ನಿಂದ ೨೫ ಪೌಂಡ್ ಆಯಿತು. ಈ ಹಣವನ್ನು ರೈಲ್ವೆದವರು ಕೊಡಲು ಒಪ್ಪಿದರು. ಯಾಕೆಂದರೆ ಟ್ರಕ್ಕುಗಳು ದೋಷಪೂರಿತವಾಗಿದ್ದವು. ವಾದಿಯು ಹೇಳಿದ್ದೇನೆಂದರೆ ಕುದುರೆಯ ನಿಜವಾದ ಬೆಲೆಯು ४೦ ಪೌಂಡು ಮತ್ತು ಲುಕ್ಸಾನು ಆದದ್ದು ೫೫ ಪೌಂಡುಗಳವರೆಗೆ. ಇದು ಸಕ್ರಿಯ ತಪ್ಪು ನಿರೂಪಣೆಯ ಪ್ರಕರಣವಾಗಿರುತ್ತದೆ.

*ಉದಾ: (೨) ಮುನ್ನೂಲಾಲ ವಿರುದ್ಧ ಲಲ್ಲಾಚುನಿಲಾಲ. ೧. ಅಯ್.ಎ. ೧४४*

ರೀಪ ಸಿಂಗನು ಸಾಲದಲ್ಲಿದ್ದನು. ಆದರೆ ಅವನು ಸಾಕಷ್ಟು ಆಸ್ತಿಯನ್ನು ಹೊಂದಿದ್ದನು. 'ಎಮ್' ಎನ್ನುವನು ಅವನಿಗೆ ಸಾಲ ಕೊಡುವವನು (ಬ್ಯಾಂಕರ್) ಆಗಿದ್ದನು. ದಿನಾಂಕ ೯–೧೦–೧೮೬೩ರಂದು 'ಆರ್'ನಿಗೆ ೨೦,೦೦೦ ರೂ. ಸಾಲದ ಭದ್ರತೆಗಾಗಿ 'ಎಮ್'ನು 'ಆರ್'ನ ಆಸ್ತಿಯನ್ನು ಅಡಮಾನವನ್ನಾಗಿ ಇಟ್ಟುಕೊಂಡನು. ೯–೮–೧೮೬೩ರಂದು 'ಆರ್'ನು 'ಸಿ'ಗೆ ಅದೇ ಆಸ್ತಿಯನ್ನು ಮಾರಾಟ ಮಾಡಿದನು. 'ಆರ್' ಮತ್ತು 'ಸಿ' ಇವರ ಖರೀದಿ ವ್ಯವಹಾರವು ನಡೆದಾಗ 'ಎಮ್' ಹಾಜರಿದ್ದನು ಮತ್ತು ಅದರಲ್ಲಿ ಭಾಗವಹಿಸಿದ್ದನು ಮತ್ತು 'ಸಿ'ಯು ಮಾಡಿದ ವಿಚಾರಣೆಯಲ್ಲಿ ತನ್ನದು ಆ ಆಸ್ತಿಯ ಮೇಲೆ ಯಾವುದೇ ಭೋಜಾವು ಇಲ್ಲವೆಂದು ಉತ್ತರಿಸಿದನು.

೧೮೬೮ರಲ್ಲಿ 'ಎಮ್' ಈತನು 'ಸಿ'ನ ವಿರುದ್ಧ ತನ್ನ ಅಡಮಾನ ಪತ್ರದ ಮೇಲಿಂದ ಹಣ ಪಾವತಿ ಮಾಡಲು ದಾವೆ ಮಾಡಿದನು. ಅವನಿಗೆ ವಿಬಂಧಿಸಲಾಗಿತ್ತು.

ಇದು ಸಹ ಸಕ್ರಿಯ ತಪ್ಪು ನಿರೂಪಣೆಯ ಪ್ರಕರಣವಾಗಿರುತ್ತದೆ.

(ಬ) ಈ ನಿರೂಪಣೆಯು ನಿರಪರಾಧಿಕವಾದ (ಮುಗ್ಧ) ತಪ್ಪು ನಿರೂಪಣೆಯು ಇರಬಹುದು.

*ಉದಾ: ಗೌಲ್ಡ ವಿರುದ್ಧ ದಿ ಬ್ಯಾಕಪ್ ಲೋಕಲ್ ಬೋರ್ಡ್*

*(೧೮೮೧)೫೦ ಎಲ್.ಜೆ. (ಎಮ್.ಸಿ.) ४४)*

ಗೌಲ್ಡನಿಗೆ ಸೇರಿದ ಕೆಲವು ಆವರಣಗಳನ್ನು ತುಂಬಾ ಅನಾರೋಗ್ಯ ಪರಿಸ್ಥಿತಿಯಲ್ಲಿ ಇಟ್ಟಿದ್ದನು. ಬೋರ್ಡಿನವರು ಅವುಗಳಲ್ಲಿ ಕೆಲವು ಸುಧಾರಣೆ ಮಾಡಲು ಹೇಳಿದರು. ಆದರೂ ಅವನು ಹಾಗೆ ಮಾಡಲು ತಿರಸ್ಕರಿಸಿದನು. ಆಗ ಬೋರ್ಡಿನವರು ಅವನಿಗೆ ಒಂದು ನೋಟೀಸು ಜಾರಿ ಮಾಡಿ, ಇಂತಿಷ್ಟು ದಿನಗಳಲ್ಲಿ ಸುಧಾರಣೆಯನ್ನು ಆಚರಣೆಯಲ್ಲಿ ತರದಿದ್ದರೆ ಅವನ ವಿರುದ್ಧ ಕ್ರಮ ಕೈಕೊಳ್ಳುವುದಾಗಿ ತಿಳಿಸಿದರು.

ಅಧಿನಿಯಮದ ಅನ್ವಯ ಎರಡು ರೀತಿಯಿಂದ ಖರ್ಚುಗಳನ್ನು ವಸೂಲು ಮಾಡುವ ಪದ್ಧತಿಯು ಇದ್ದಿತು. ಒಂದು ಕಲಮು ೨೧೩ರ ಪ್ರಕಾರ ಇದ್ದಿತು ಮತ್ತು ಇನ್ನೊಂದು ಕಲಮು ೨४೦ರ ಪ್ರಕಾರ ಇದ್ದಿತು. ಕಲಮು ೨೧೩ರ ಪ್ರಕಾರ ಬೋರ್ಡಿನ ಸ್ಥಳೀಯ ಧಾರಣೆಯಲ್ಲದೆ ಹೆಚ್ಚಿನದನ್ನು ವಸೂಲು ಮಾಡಲು ಅನುಮತಿಯು ಇದ್ದಿತು ಮತ್ತು ಕಲಮು ೨४೦ರ ಪ್ರಕಾರ ಸ್ವತಂತ್ರವಾಗಿ ಒಂದೇ ಮೊತ್ತದಲ್ಲಿ ವಸೂಲು ಮಾಡುವ ಕುರಿತು ಅನುಮತಿಯು ಇದ್ದಿತು. ಗೌಲ್ಡನನಿಗೆ ಜಾರಿ ಮಾಡಿದ ನೋಟೀಸಿನಲ್ಲಿ

ಕಲಮು ೨೧೩ರ ಪ್ರಕಾರ ವಸೂಲ ಮಾಡಲಾಗುವುದೆಂದು ಇದ್ದಿತು. ಆದರೆ ಬೋರ್ಡಿನವರು ದಾವೆಯಲ್ಲಿ ಕಲಮು ೨೪೦ರ ಪ್ರಕಾರ ವಸೂಲ ಮಾಡುವ ಕುರಿತು ಕೇಳಿಕೊಂಡಿದ್ದರು. ಹೀಗಾಗಿ ಬೋರ್ಡಿನವರು ವಿಬಂಧಿಸಲ್ಪಟ್ಟರು. ಈ ಪ್ರಕರಣವು ಮುಗ್ಧ ತಪ್ಪು ನಿರೂಪಣೆಯು ಇರುತ್ತದೆ.

(೨) ನಿರೂಪಣೆಯು ಮಾತುಗಳಿಂದ ಇರಬಹುದು ಇಲ್ಲವೆ ಮೌನದಿಂದ ಇರಬಹುದು. ಕೆಲವು ಸಂದರ್ಭಗಳಲ್ಲಿ ಮೌನವು ಇರಬಹುದು ಮತ್ತು ನಿರೂಪಣೆಯ ಸ್ವರೂಪದ್ದು ಇರಬಹುದು ಮತ್ತು ನಿಜವಾಗಿ ಮಾತಿನಿಂದ ಇರಬಹುದು.

ಆದರೆ ಪ್ರತಿಯೊಂದು ಮೌನವನ್ನು ಮಾತನಾಡಿದ್ದಕ್ಕೆ ಸಮನಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಯಾಕೆಂದರೆ ಕಾನೂನು ಪ್ರತಿಯೊಂದು ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಇದ್ದುದನ್ನು ಹೇಳಬೇಕೆಂದು ಬಯಸುವುದಿಲ್ಲ. ಕಾನೂನಿಗೆ ಬೇಕಾದುದು ಏನೆಂದರೆ ಒಬ್ಬ ವ್ಯಕ್ತಿಯು ತಾನು ಮಾತನಾಡಲು ಕರ್ತವ್ಯ ಬದ್ಧನಿದ್ದಾನೆಂದಾಗ ಮಾತ್ರ ಅವನು ಮಾತನಾಡಬೇಕೆಂದು ಅಪೇಕ್ಷಿಸುತ್ತದೆ ಮತ್ತು ಮನಸ್ಸಿನಲ್ಲಿ ಇದ್ದುದನ್ನು ಬಹಿರಂಗಪಡಿಸಬೇಕೆಂದು ಬಯಸುತ್ತದೆ. ಇಲ್ಲವಾದರೆ ಮೌನವು ಬಂಗಾರವಾಗಿರುತ್ತದೆ. ಮೌನವು ವಿಬಂಧವಾಗಬೇಕಾದರೆ, ಆ ವ್ಯಕ್ತಿಯು ಮಾತನಾಡುವ ಹೊಣೆಯುಳ್ಳವನಾಗಿರಬೇಕು. ಇಂತಹ ಮೌನದ ಪರಿಣಾಮವನ್ನು ನೋಡಬೇಕಾದರೆ ಯಾವುದೇ ಸಂದರ್ಭದಲ್ಲಿ ಅವನಿಗೆ ಮಾತನಾಡಲು ಅವಕಾಶ ಯಾವುದೇ ವೇಳೆಗೆ ಮೌನಕ್ಕೆ ಸೂಕ್ತ ಅವಕಾಶವು ಇದ್ದಿತೋ ಅನ್ನುವುದನ್ನು ನೋಡಬೇಕು. ಮೌನದ ಬಗೆಗೆ ಕಾನೂನುಬದ್ಧವಾದ ಊಹೆ ಮಾಡುವ ಪೂರ್ವದಲ್ಲಿ ಇದನ್ನು ಮಾಡಿರಲೇಬೇಕು.

*(೧೮೯೬) ಎ.ಸಿ. ೨೩೧ (೨೩೮)*

*೨ ಬಿ.ಆರ್. ಸಿ.ಸಿ. ४೦೦ (४೧೯)*

*೬ ಬಾಂಬೆ ಎಲ್.ಆರ್.*

ಉದಾಹರಣೆಗಳು: **(೧) ಮೌನವು ವಿಬಂಧಕ್ಕೆ ಆಧಾರವಲ್ಲ**

*೧೦ ಬಾಂಬೆ ಎಲ್.ಆರ್. ೨೯೭*

ಒಬ್ಬ ಸಾಲ ಕೊಟ್ಟವನು ತಂದೆಯ ವಿರುದ್ಧ ಡಿಕ್ರಿ ಪಡೆಯುತ್ತಾನೆ. ದರಖಾಸ್ತದಲ್ಲಿ ಆ ಆಸ್ತಿಯನ್ನು ಜಿಲ್ಲಾ ಕಲೆಕ್ಟರನು ಅದರ ಉಸ್ತುವಾರಿ ಮಾಡುತ್ತಿದ್ದನು. ಮತ್ತು ಅದರ ಉತ್ಪತ್ತಿಯನ್ನು ಸಾಲ ಕೊಟ್ಟವನಿಗೆ ಕಳುಹಿಸಲಾಗುತ್ತಿತ್ತು. ಹೀಗೆ ನಡೆಯುತ್ತಿರುವಾಗ ತಂದೆಯು ಮರಣ ಹೊಂದಿದನು. ಮಗನು ಆ ಆಸ್ತಿಗೆ ವಾರಸುದಾರನಾದನು. ಜಂಟಿ ಸಾಲ ಕೊಟ್ಟವರು ಮಗನ ವಿರುದ್ಧ ಡಿಕ್ರಿ ಅಮಲ ಬಜಾವಣಿ ತರಲು ಮಗನು ಆ ಸಾಲವು ಅಯೋಗ್ಯ ಕಾರಣಗಳಿಗಾಗಿ ಇದ್ದಿತೆಂದು, ತಾನು ಅದನ್ನು ಕೊಡಲು ಬಾಧ್ಯಸ್ಥನಿಲ್ಲವೆಂದು ಪ್ರತಿಪಾದಿಸಿದನು. ಹೀಗೆ ಮಾಡಲು ಮಗನಿಗೆ ವಿಬಂಧಿಸಲಾಗಿದೆಂದು ಪ್ರತಿಪಾದಿಸಿದರು. ಯಾಕೆಂದರೆ ಆತನ ಮೌನವು ಆ ಡಿಕ್ರಿಯನ್ನು ಒಪ್ಪಿಕೊಂಡಿದ್ದು ಅದು ನಿರೂಪಿಸುತ್ತದೆ. ಅದು ಹಾಗೆ ಇರುವುದಿಲ್ಲವೆಂದು ಅಭಿಪ್ರಾಯ ಪಡಲಾಯಿತು. ಯಾಕೆಂದರೆ ಅವನಿಗೆ ಅಂತಹ ಕರ್ತವ್ಯ ಇರಲಿಲ್ಲ.

ಉದಾ: **(೨) ಮೌನವು ವಿಬಂಧಕ್ಕೆ ಆಧಾರ**

*೧೫ ಆಯ್.ಎ. ೧೭೧.*

ಒಂದು ಡಿಕ್ರಿಯ ಅಮಲ ಬಜಾವಣೆಯಲ್ಲಿ ನ್ಯಾಯಾಲಯದ ಪ್ರೊಕ್ಲೋಮೇಶನದಲ್ಲಿ ಜಡ್ಜ್‌ಮೆಂಟ್ ಡೆಟರನ ಹಕ್ಕುಗಳನ್ನು ಅತಿ ಅಸ್ಪಷ್ಟವಾಗಿ ವಿವರಣೆ ನೀಡಲಾಗಿತ್ತು. ಅದರ ಪರಿಣಾಮವಾಗಿ ४೦,೦೦೦ ರೂಪಾಯಿ ಕಿಮ್ಮತ್ತಿನ ಆಸ್ತಿಯನ್ನು ೨೦,೦೦೦ ರೂಪಾಯಿಗಳಿಗೆ ಮಾರಲಾಗಿತ್ತು. ಜಂಟೀ ಸಾಲಗಾರನು

ಆ ಖರೀದಿಯನ್ನು ರದ್ದುಪಡಿಸುವ ಕುರಿತು ದಾವೆ ಮಾಡಿದ್ದನು. ಆದರೆ ಅದರಲ್ಲಿ ಮೌನವು ವಿಬಂಧವೆಂದು ಪ್ರತಿಪಾದಿಸಲಾಗಿತ್ತು. ಆತನು ಮುಂದೆ ಒಂದು ಪ್ರೊಕ್ಲೋಮೇಶನ್‌ನು ಸರಿಪಡಿಸಿಕೊಳ್ಳುವುದು ಅವನ ಕರ್ತವ್ಯವಾಗಿತ್ತು ಎಂದು ನಿರ್ಣಯಿಸಲಾಯಿತು.

**ನಡತೆಯಿಂದ ನಿರೂಪಿಸುವಿಕೆ:**

I. ನಡತೆಯು ನಿರೂಪಣೆಯು ಆಗಬಹುದು ಇಲ್ಲವೆ ಆಗಲಿಕ್ಕಿಲ್ಲ.

(i) ಅದು ಎಲ್ಲಿ ನಿರೂಪಣೆಯಾಗುವುದೋ *೧೯ ಅಯ್. ಎ. ೨೦೩*

(ii) ಅದು ಎಲ್ಲಿ ಹಾಗೆ ಆಗುವುದಿಲ್ಲವೋ *೧೯ ಆಯ್.ಎ. ೨೨೧.*

II. ನಡತೆಯು ಕ್ರಿಯಾಶೀಲ ಇಲ್ಲವೆ ಮಂದಗತಿಯದು (ಜಡಸ್ವರೂಪ) ಇರಬಹುದು.

ಮಂದಗತಿಯ ನಡತೆಯು

(೧) ನಿರ್ಲಕ್ಷ್ಯ, (೨) ಮೌನಸಮ್ಮತಿ

ಇವೆರಡರಲ್ಲಿ ಒಂದು ಅಥವಾ ಇವೆರಡೂ ಇರಬಹುದು. ಒಂದು ಮಂದಗತಿ ನಡತೆ ಒಂದು ವಿಬಂಧವಾಗಬೇಕಾದರೆ, ಮೌನಸಮ್ಮತಿಯು ಇರಲಿಕ್ಕೇಬೇಕು. ಅದು ಕೇವಲ ನಿರ್ಲಕ್ಷ್ಯತನದ ನಡತೆಯಿಂದ ಇರಬೇಕೆಂದು ಅಲ್ಲ. ಮೌನಸಮ್ಮತಿಯ ನಡತೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

"ಒಬ್ಬ ವ್ಯಕ್ತಿಗೆ ಇರುವ ಹಕ್ಕು ಮತ್ತು ಇನ್ನೊಬ್ಬ ವ್ಯಕ್ತಿಯು ಆ ಹಕ್ಕನ್ನು ಚ್ಯುತಿಗೊಳಿಸಲು ಯತ್ನಿಸುವುದನ್ನು ಅವನು ನೋಡುವುದು ಇಲ್ಲವೆ ಆ ಹಕ್ಕನ್ನು ಅವನು ಚ್ಯುತಿಗೊಳಿಸುತ್ತಿರುವಾಗ, ಅಲ್ಲಿಯೇ ಅವನ ಹತ್ತಿರವಿದ್ದಾಗ್ಯೂ ಅವನು ಹಾಗೆ ಮಾಡಲು ಅವನಿಗೆ ಪ್ರಚೋದಿಸುವುದು ಮತ್ತು ಇಲ್ಲವಾದಲ್ಲಿ ಅವನು ಹಾಗೆ ಮಾಡಿದರೆ ದೂರ ಉಳಿಯಬಹುದಾಗಿತ್ತು. ಅವನು ಹಾಗೆ ಮಾಡಲು ಇವನು ಒತ್ತಾಯಿಸಿದ್ದು ಇಂತಹ ನಡತೆಯು ಮೌನಸಮ್ಮತಿ ಎನಿಸುತ್ತದೆ.

*೨ ಬಿಎಚ್ ೧೧೭ (೧೨೩) ೪೧ ಇ.ಆರ್. ೮೮೬*

*ಇಂಪೀರಿಯಲ್. ೪೫ ಬಂಬೆ ಅಯ್.ಎಲ್.ಆರ್. ೮೦*

*೧೪ ಅಲಹಾಬಾದ ೩೬೨ (೩೬೪)*

ಯಾವ ಒಂದು ಕೃತಿಯ ಬಗ್ಗೆ ಮೌನಸಮ್ಮತಿಯು ಮುಂದುವರಿದರೆ ಅದು ಮೌನಸಮ್ಮತಿ ಆಗುತ್ತದೆ. ಅಥವಾ ಅದು ಪೂರ್ತಿಯಾದಾಗ ಆಗುತ್ತದೆ.

ವಿಬಂಧದ ಉದ್ದೇಶಕ್ಕಾಗಿ ಚ್ಯುತಿ ಮಾಡುವುದು ಮುಂದುವರಿದಾಗ ಅದು ನಡೆಯಲಿಕ್ಕೇಬೇಕು.

*ಸಿಎಚ್.ಡಿ. ೨೮೬ (೩೧೪)*

**ಗಮನಿಸಬೇಕಾದ ಅಂಶಗಳು**

I. ತಪ್ಪು ನಿರೂಪಣೆಗಳು ಅಸ್ತಿತ್ವದಲ್ಲಿರುವ ಸಂಗತಿಗಳಾಗಿರಬೇಕು ಮತ್ತು ಕೇವಲ ಉದ್ದೇಶ ಅಲ್ಲ.

*೫ ಆರ್.ಎಲ್. ಕೆಸಿಸ್ ೧೮*

*ಉದಾಹರಣೆಗಳು:*

(೧) ಒಬ್ಬ ವ್ಯಕ್ತಿಗೆ ಒಂದು ಕಾನೂನುಬದ್ಧವಾದ ಹಕ್ಕು ಇರುತ್ತದೆ. ಆದರೆ ಆ ಹಕ್ಕು ಅವನಿಗೆ ಪ್ರಾಪ್ತವಾಗುವ ಪೂರ್ವದಲ್ಲಿ ಮತ್ತು ಅದನ್ನು ಜಾರಿಗೊಳಿಸಲು ಪ್ರಯತ್ನಿಸುವ ಪೂರ್ವದಲ್ಲಿ ಅವನು ಆ

ಹಕ್ಕನ್ನು ಬಿಟ್ಟುಕೊಡುವ ಉದ್ದೇಶವನ್ನು ನಿರೂಪಣೆ ಮಾಡಿದ್ದಾನೆ.

(೨) ಯಾವ ವಿಷಯದಲ್ಲಿ ನಿಜವಾಗಿಯೂ ಎರಡೂ ಪಕ್ಷದವರಿಗೆ ನಿಜ ಗೊತ್ತಿರುತ್ತದೆ. ಅಂತಹದ್ದರಲ್ಲಿ ವಿಬಂಧವು ಇರುವುದಿಲ್ಲ.

*೩೦ ಕಲ್ಕ. ೫೩೯ ಪಿ.ಸಿ. ಮೋಹರಿಬೀಬಿ ವಿರುದ್ಧ ಧರ್ಮದಾಸ ಘೋಜ್.*

೧೮೯೫ನೆಯ ಜುಲೈ ೨೦ನೆಯ ದಿನಾಂಕದಂದು ದಾಮೋದರ್ ದಾಸನು ಒಂದು ಅಡಮಾನದತ್ತವನ್ನು ಬ್ರಹ್ಮದತ್ತ ಅನ್ನುವ ಸಾಲ ಕೊಡುವವನ ಹೆಸರಿಗೆ ಬರೆದು ಕೊಟ್ಟನು. ಈ ಸಂಪೂರ್ಣ ವ್ಯವಹಾರವು ನಡೆದಾಗ ಈ ಬ್ರಹ್ಮದತ್ತನು ಗೈರುಹಾಜರು ಇದ್ದನು. ಮತ್ತು ಈ ಎಲ್ಲ ವ್ಯವಹಾರ ಆತನ ವಕೀಲನಾದ ಕೇದಾರನಾಥ ಈತನ ಮುಖಾಂತರ ನಡೆಯಿತು. ಹಣವನ್ನು ದೇಡ್ರಾಜ ಅನ್ನುವ ಸ್ಥಾನಿಕ ವ್ಯಕ್ತಿಯೇ ಕೊಡುತ್ತಿದ್ದನು. ಅವನು ಬ್ರಹ್ಮದತ್ತನ ಮ್ಯಾನೇಜರ್ ಅಂತಾ ಕೆಲಸ ಮಾಡುತ್ತಿದ್ದನು. ಈ ವ್ಯವಹಾರವು ನಡೆದಿರುವಾಗ ದಾಮೋದರದಾಸನ ತಾಯಿಯು ಕೇದಾರನಾಥ ವಕೀಲನಿಗೆ ಒಂದು ಪತ್ರವನ್ನು ಬರೆದು, ದಾಮೋದರ್‌ದಾಸನು ಅಲ್ಪವಯಿ ಇರುವವನೆಂದೂ ಮತ್ತು ಯಾರಾದರೂ ಅವನಿಗೆ ಸಾಲ ಕೊಟ್ಟರೆ ಅವರು ತಮ್ಮ ಜವಾಬ್ದಾರಿಯ ಮೇಲೆಯೇ ಕೊಡುತ್ತಾರೆ ಅಂತಾ ಬರೆದಳು. ಅಡಮಾನ ಇಟ್ಟುಕೊಳ್ಳುವ ದಿನ ಕೇದಾರನಾಥನು ದಾಮೋದರದಾಸನಿಂದ ಆತನು ವಯಸ್ಕರಿಸಿದ್ದನೆಂದು ದೀರ್ಘ ಘೋಷಣೆ ಪತ್ರವನ್ನು ತೆಗೆದುಕೊಂಡಿದ್ದನು.

ದಿನಾಂಕ ೧೦ ಸೆಪ್ಟೆಂಬರ್ ೧೮೯೫ನೆಯ ದಿವಸ ತಾಯಿಯು ದಾಮೋದರ ಅಲ್ಪವಯಿ ಇದ್ದ ಕಾರಣ ಅಡಮಾನ ಪತ್ರ ರದ್ದು ಮಾಡಬೇಕೆಂದು ದಾವೆ ಮಾಡಿದಳು.

ಬ್ರಹ್ಮದತ್ತನ ವಾದವೆಂದರೆ ದಾಮೋದರನನ್ನು ವಿಬಂಧಿಸಲಾಗಿದೆ ಎಂದು ನಿರ್ಣಯಿಸಲಾಯಿತು. ಏನೆಂದರೆ ಬ್ರಹ್ಮದತ್ತನಿಗೆ ಈ ವಿಷಯವು ಗೊತ್ತಿಲ್ಲವೆಂಬ ಕಾರಣದಿಂದ ಅವನು ಹಾಗೆ ಮಾಡಲು ಬರುವುದಿಲ್ಲವೆಂದು ಹೇಳಿದರು. ಆ ಸಂಗತಿಯನ್ನು ತಿಳಿದುಕೊಳ್ಳುವ ಬೇರೆ ಮಾರ್ಗದಿಂದ ಅದು ಗೊತ್ತಾಗಿದ್ದಿತು.

*ಎಲ್.ಆರ್. ೨೦ ಸಿಎಚ್.ಡಿ. ೧. ರೆಡ್‌ಗ್ರೇವ ಎ. ಹರ್ದ.*

ವಾದಿಯು ತನ್ನ ವ್ಯವಹಾರದಲ್ಲಿ ವರ್ಷಕ್ಕೆ ೩೦೦ ಪೌಂಡು ಬರುತ್ತದೆಂದು ನಿರೂಪಿಸಿದನು. ಮತ್ತು ಆ ಬಗ್ಗೆ ೨/೩ರಷ್ಟು ತೋರಿಸಲು ೩ ಸಂಕ್ಷಿಪ್ತ ವಿವರಣೆ ಹಾಗೂ ಕೆಲವು ಕಾಗದ ಪತ್ರದೊಂದಿಗೆ ಹಾಜರ ಪಡಿಸಿದನು. ಅವುಗಳನ್ನು ಪ್ರತಿವಾದಿಯು ಪರೀಕ್ಷಿಸಲಿಲ್ಲ. ಈ ಪ್ರತಿವಾದಿಯು ಈ ನಂಬಿಕೆಯ ಮೇಲೆ ವಾದಿಯು ವ್ಯವಹಾರ ಖರೀದಿ ಒಪ್ಪಂದಕ್ಕೆ ಸಹಿ ಹಾಕಿದನು. ಮತ್ತು ಕೆಲವು ಹಣವನ್ನು ಠೇವಣಿಯಾಗಿ ಇಟ್ಟನು. ನಂತರ ಆ ವ್ಯವಹಾರವು ಅಯೋಗ್ಯವೆಂದು ಕಂಡುಬಂದುದರಿಂದ ಅವನು ವ್ಯವಹಾರವನ್ನು ಪೂರ್ತಿಗೊಳಿಸಲು ನಿರಾಕರಿಸಿದನು ಮತ್ತು ವಾದಿಯು ನಿರ್ದಿಷ್ಟ ಪರಿಹಾರಕ್ಕಾಗಿ ದಾವೆ ಮಾಡಿದನು. ವಾದಿಯ ವಾದವೆಂದರೆ ಪ್ರತಿವಾದಿಯು ವಾದಿಯ ವಿರುದ್ಧ ವಾದಿಯ ನಿರೂಪಣೆಯು ಸುಳ್ಳು ಎಂದು ಆಪಾದಿಸಲು ವಿಬಂಧನೆ ಇರುತ್ತದೆ. ಯಾಕೆಂದರೆ ಅವನಿಗೆ ಸತ್ಯವನ್ನು ತಿಳಿದುಕೊಳ್ಳುವ ಮಾರ್ಗವು ಇದ್ದಿತು.

**ಜೆಸ್ಸೆಲ್ ಎಮ್.ಆರ್.ಪಿ. ೨೧**

"ಒಬ್ಬನು ಇನ್ನೊಬ್ಬನಿಗೆ ಸುಳ್ಳು ಸಂಗತಿ ನಿರೂಪಣೆ ಮಾಡಿ ಒಂದು ಒಪ್ಪಂದ ಮಾಡಿಕೊಳ್ಳಲು ಅವನ ಮನ ಒಲಿಸಿದರೆ, ಆಗ ಆ ಒಪ್ಪಂದವನ್ನು ಹಿಂತೆಗೆದುಕೊಳ್ಳಲು ಯಾರಿಗೆ ಆ ನಿರೂಪಣೆ ಮಾಡಲಾಗಿದೆ,

ಅವರಿಂದ ಈ ಒಪ್ಪಂದ ಹಿಂತೆಗೆದುಕೊಳ್ಳಲು ಒಂದು ಪ್ರತಿರಕ್ಷಣೆ ಆಗಲಾರದು. ಏಕೆಂದರೆ ಅವನು ನಿಜ ಸಂಗತಿ ಕಂಡುಕೊಳ್ಳಲು ಇಲ್ಲವೆ ಕಾಳಜಿಪೂರ್ವಕ ಆ ಸಂಗತಿಯು ನಿಜವಲ್ಲವೆಂದು ಕಂಡುಕೊಳ್ಳಬಹುದಾಗಿತ್ತು. ಆ ನಿರೂಪಣೆ ಮಾಡಿದ್ದಕ್ಕೆ ವಿರುದ್ಧವಾಗಿ ಅವನಿಗೆ ಆ ಸಂಗತಿ ಬಗ್ಗೆ ಮಾಹಿತಿ ತೆಗೆದುಕೊಳ್ಳಲು ಇಲ್ಲವೆ ಅವನು ಹೇಳಿದ ಕರಾರುಗಳು ಇಲ್ಲವೆ ಸ್ಪಷ್ಟವಾಗಿ ತನ್ನ ನಡತೆಯಿಂದ ಇಲ್ಲವೆ ತಾನು ಆ ನಿರೂಪಣೆಯನ್ನು ನಂಬಿರಲಿಲ್ಲ."

II. ಈ ನಿಯಮದಲ್ಲಿರುವ ಎರಡನೆಯ ವಿಬಂಧದ ಉದ್ದೇಶದ ಅನ್ವಯ ವಾದಿಯು ಹೇಳಿಕೆಯ ನಂಬಿಗೆಯ ಮೇಲಿಂದ ನಡೆದುಕೊಳ್ಳಲಿಕ್ಕೇಬೇಕು.

ನಿರೂಪಣೆ ಮಾಡುವ ಪಕ್ಷಗಾರನು ಮೋಸ ಮಾಡಲು ಇಲ್ಲವೆ ತಪ್ಪು ದಾರಿಗೆ ಎಳೆಯಲು ತನ್ನಷ್ಟಕ್ಕೆ ತಾನೇ ತಿಳಿದುಕೊಂಡು ಹಾಗೆ ನಡೆದುಕೊಂಡಿರಲಿಕ್ಕೇಬೇಕೆಂಬುದು ಅವಶ್ಯವಿರುವುದಿಲ್ಲ.

*೧೯ ಆಯ್.ಎ. ೨೦೩.*

ನಿರೂಪಣೆಯನ್ನು ಮಾಡುವ ಪಕ್ಷಗಾರನ ಉದ್ದೇಶವು ವಾದಿಯು ಆ ಹೇಳಿಕೆಯನ್ನು ನಂಬಿ ಅದರ ಮೇಲೆ ತಾನು ಕಾರ್ಯತತ್ಪರನಾಗಿರತಕ್ಕದ್ದು.

**ಉದ್ದೇಶವನ್ನು ಹೇಗೆ ಸಿದ್ಧ ಮಾಡಬೇಕು?**

ಉದ್ದೇಶ ಪದವನ್ನು ಎರಡು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲಾಗಿದೆ.

(೧) ಕಾನೂನಿನ ಪೂರ್ವಗ್ರಹಿಕೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿದೆ. ಒಬ್ಬ ಮನುಷ್ಯನು ತನ್ನ ಕೃತಿಯ ಸ್ವಾಭಾವಿಕ ಇಲ್ಲವೆ ಅವಶ್ಯ ಪರಿಣಾಮಗಳನ್ನು ಉದ್ದೇಶಿಸಿದ್ದನೆಂದು ಗ್ರಹಿಸಲಾಗುತ್ತದೆ.

(೨) ಒಂದು ನಿರ್ದಿಷ್ಟವಾಗಿ ಅಸ್ತಿತ್ವದಲ್ಲಿರುವ ಮನಸ್ಸು ಒಬ್ಬನಲ್ಲಿ ಇದ್ದಿತೆಂದು ತೋರಿಸಲು ಈ ಪದವನ್ನು ಉಪಯೋಗಿಸಲಾಗಿದೆ.

ಈ ನಿರ್ದಿಷ್ಟವಾದ ಮನಸ್ಸಿನ ಸ್ಥಿತಿಯನ್ನು ಒಂದು ಸಂಗತಿಯಂತೆ ಉಳಿದ ಸಂಗತಿಗಳಂತೆ ಸಿದ್ಧ ಮಾಡಲಿಕ್ಕೇಬೇಕು ಮತ್ತು ಪೂರ್ವಭಾವನೆಯನ್ನಾಗಿ ಗ್ರಹಿಸಲು ಬರುವುದಿಲ್ಲ.

*ಉದಾಹರಣೆಗಳು:*

(೧) ಕಲಮು ೨೨೫ ಭಾರತ ದಂಡ ಸಂಹಿತೆ ಅಯ್.ಪಿ.ಸಿ.: ಯಾವನು ಉದ್ದೇಶಪೂರ್ವಕವಾಗಿ ಕೊಡಮಾಡುತ್ತಾನೆಯೋ,

(೨) ಕಲಮು ೧೨೪ ಅಯ್.ಪಿ.ಸಿ. ಭಾರತ ದಂಡ ಸಂಹಿತೆ. ಯಾವನೊಬ್ಬನ ಉದ್ದೇಶದಿಂದ ಇಲ್ಲಿ ಉದ್ದೇಶವನ್ನು ಕಾನೂನಿನ ಪೂರ್ವಗ್ರಹಿಕೆಯಾಗಿ ಉಪಯೋಗಿಸಲಾಗಿದೆ ಮತ್ತು ಎರಡನೆಯ ಅರ್ಥದಲ್ಲಿ ಉಪಯೋಗಿಸಿರುವುದಿಲ್ಲ.

ಪಕ್ಷಗಾರನು ಒಂದು ನಿರ್ದಿಷ್ಟ ಸಂಗತಿಯ ಮೇಲೆ ನಡೆಯಬೇಕು. ಆದ್ದರಿಂದ ಉದ್ದೇಶವನ್ನು ಸಿದ್ಧ ಮಾಡುವ ಹೊಣೆಯು ಅವಶ್ಯವಿರುವುದಿಲ್ಲ.

ಒಬ್ಬ ಯುಕ್ತ ಮನುಷ್ಯನು ಈ ನಿರೂಪಣೆಯನ್ನು ಸತ್ಯವೆಂದು ಗ್ರಹಿಸಿ ಮತ್ತು ನಂಬಿ ಮತ್ತು ಅದರ ಮೇಲೆ ಕ್ರಮ ಕೈಕೊಳ್ಳಬೇಕೆಂಬ ಉದ್ದೇಶಕ್ಕಾಗಿ ಅವಶ್ಯಕವಿರುವ ಅವಶ್ಯಕತೆಗಳನ್ನು ಪೂರೈಸಬೇಕು.

*೧೯ ಅಯ್.ಎ. ೨೦೩ (೨೧೯)*

III. ವಿಬಂಧದಲ್ಲಿಯ ಮೂರನೆಯ ಅಂಶ ನಿಯಮ ಏನೆಂದರೆ ಯಾವ ಪಕ್ಷಗಾರನಿಗೆ ಆ ತಪ್ಪು

ನಿರೂಪಣೆಯನ್ನು ಮಾಡಲಾಗಿದೆಯೋ ಅವನು ಆ ನಂಬಿಕೆಯ ಮೇಲೆ ಕಾರ್ಯೋನ್ಮುಖವಾಗಿರಲಿಕ್ಕೇಬೇಕು.

೧. ಈ ಅಂಶವೇ ನಿಜವಾಗಿ ವಿಬಂಧನ ಕಾನೂನಿನ ತಳಹದಿಯಾಗಿದೆ ಮತ್ತು ಅದರಲ್ಲಿ ಅಡಗಿದ ತತ್ವವನ್ನು ವಿವರಿಸುತ್ತದೆ. ವಿಬಂಧ ನಿಯಮದಲ್ಲಿ ಅಡಕವಾಗಿರುವುದೇನೆಂದರೆ ಅಲ್ಲಿ ಅಸಮಾನತೆ ಮತ್ತು ಅನ್ಯಾಯ ಇರಲಿಕ್ಕೇಬೇಕು. ಒಬ್ಬನು ತನ್ನ ನಿರೂಪಣೆಯಿಂದ ನಿಜವಾಗಿ ಇನ್ನೊಬ್ಬನು ಸಾಮಾನ್ಯವಾಗಿ ಹಾಗೆ ಮಾಡುತ್ತಿರಲಿಲ್ಲ. ಯಾವ ಮನುಷ್ಯನು ಆ ನಿರೂಪಣೆ ಮಾಡಿರುವನೋ ಆ ಮನುಷ್ಯನು ಅದನ್ನು ನಿರಾಕರಿಸಲು ಅವನಿಗೆ ಅವಕಾಶವನ್ನು ಕೊಡತಕ್ಕದ್ದು ಇಲ್ಲವೆ ಅದರ ಮೊದಲಿನ ಹೇಳಿಕೆಯ ಪರಿಣಾಮವಾಗಿ ಆ ಮೊದಲಿನ ಹೇಳಿಕೆಯನ್ನು ನಂಬಿ ನಡೆದವನಿಗೆ ಆದ ಹಾನಿ ಲುಕ್ಸಾನುಗಳನ್ನು ಅಲ್ಲಗಳೆಯಲು ಅವನಿಗೆ ಅವಕಾಶವನ್ನು ಕೊಡಬೇಕು.

೨. ಈ ನಿಯಮದ ಕಾರಣವೇನೆಂದರೆ ಆ ಮನುಷ್ಯನು ಅದರ ಮೇಲೆ ಕಾರ್ಯತತ್ಪರನಾದನು ಮತ್ತು ತನ್ನ ಸ್ಥಾನಮಾನವನ್ನು ವ್ಯತ್ಯಾಸಗೊಳಿಸಿದನು. ವಿಬಂಧನೆಯು ಉಂಟಾಗಬೇಕಾದರೆ ಒಂದು ಹೇಳಿಕೆಯನ್ನು ಯಾರ ಬಗ್ಗೆ ಮಾಡಿರುವನೋ ಆ ಮನುಷ್ಯನು ಅದರ ಆಧಾರದ ಮೇಲೆ ಕಾರ್ಯೋನ್ಮುಖನಾಗಿರಲಿಕ್ಕೇಬೇಕು.

*೧೪ ಬಾಂಬೆ ೩೦೨*

*೧೩ ಮೂರ್ಸ್ ಇಂಡಿಯನ್ ಅಪೀಲ್ಸ್ ೫೮೫ (೫೯೯)*

**ವಿಬಂಧನೆಯ ನಿಯಮದ ಮೇಲೆ ಕಾಲಪರಿಮಿತಿ:**

೧. ಈ ದೇಶದ ಕಾನೂನನ್ನು ಇದು ಅಧ್ಯಾರೋಹಿಸಲಿಕ್ಕೇ ಸಾಧ್ಯ ಇರುವುದಿಲ್ಲ.

(i) ಅಲ್ಪವಯಿಯು– ವಯಸ್ಕರನಂತೆ ವರ್ತಿಸುತ್ತಾನೆ. ಇಲ್ಲಿ ಅಲ್ಪವಯಿಯೆಂಬುದನ್ನು ಸಿದ್ಧ ಮಾಡಲು ವಿಬಂಧನೆಯು ಇರುವುದಿಲ್ಲ.

(ii) ನಿಗಮ ನಿಯಮಗಳು ಅಧಿಕಾರಾತೀತವೆಂದು ಸಿದ್ಧ ಮಾಡಲು ವಿಬಂಧನೆಯು ಅಡ್ಡ ಬರುವುದಿಲ್ಲ.

**ಒಪ್ಪಿಗೆ ಮತ್ತು ವಿಬಂಧನೆಗಳ ನಡುವಿನ ಉಳಿದ ವಿಭಿನ್ನತೆಗಳು:**

೧. ಒಂದು ಒಪ್ಪಿಗೆಯನ್ನು ಇನ್ನೊಂದು ಪಕ್ಷದವನು ಅದು ಸತ್ಯವಲ್ಲವೆಂದು ರುಜುವಾತು ಮಾಡುವುದರಿಂದ ಪ್ರತಿಬಂಧಿಸಲಾಗಿಲ್ಲ. ಒಂದು ವಿಬಂಧನೆಯು ಇನ್ನೊಂದು ಪಕ್ಷದವರನ್ನು ಹಾಗೆ ಮಾಡುವುದರಿಂದ ಪ್ರತಿಬಂಧಿಸುತ್ತದೆ.

೨. ಒಂದು ಒಪ್ಪಿಗೆಯನ್ನು ಯಾವನೊಬ್ಬನಿಗೆ ಕೊಟ್ಟಿರುವನೋ ಅವನನ್ನು ಹೊರತುಪಡಿಸಿ ಉಳಿದ ಯಾರೇ ಆಗಲಿ, ಅದರ ಲಾಭ ತೆಗೆದುಕೊಳ್ಳಬಲ್ಲನು. ಒಂದು ವಿಬಂಧನೆಯನ್ನು ಯಾರಿಗೆ ಮಾಡಿರುವನೋ ಅವನು ಮಾತ್ರ ಅದರ ಲಾಭ ತೆಗೆದುಕೊಳ್ಳಬಲ್ಲನು. ಒಬ್ಬ ಅಪರಿಚಿತನ ವಿರುದ್ಧ ಅವನು ಅದರ ಸತ್ಯವನ್ನು ನಿರಾಕರಿಸಬಲ್ಲನು.

*೫ ಎ.ಆರ್. ೨೯*

ವಾದಿಯು ತನ್ನ ಒಂದು ದಾವೆಯಲ್ಲಿ ತಾನು ರೂ. ೧೦,೦೦೦ ರೂಪಾಯಿಗಳಿಗೆ ಒಂದು ಆಸ್ತಿಯನ್ನು ಕೊಂಡಿರುವುದಾಗಿಯೂ, ಆರ್ಥಿಕ ತೊಂದರೆಯಿಂದಾಗಿ ನಂತರ ತಾನು ಅದನ್ನು ತನ್ನ ತಾಯಿಗೆ ಅಡಮಾನ

ಹಾಕಿದನೆಂದೂ ಮತ್ತು ಒಂದು ವರ್ಷದ ನಂತರ ಅವನು ಆಸ್ತಿಯನ್ನು ತಿರುಗಿ ಪಡೆದನೆಂದೂ ಮತ್ತು ಅದರ ಕಬ್ಜೆಯನ್ನು ತೆಗೆದುಕೊಂಡನೆಂದು ಆರೋಪಿಸಿದ್ದನು.

ಪ್ರತಿವಾದಿಯು, ವಾದಿಯಾದ ತನ್ನ ತಾಯಿಯ ವಿರುದ್ಧ ಒಂದು ಡಿಕ್ರಿಯನ್ನು ಪಡೆದಿದ್ದನು. ಆ ಡಿಕ್ರಿಯ ಅಮಲಜಾರಿ ಹಾಗೂ ಡಿಕ್ರಿ ಸಮಾಧಾನಕ್ಕಾಗಿ ನ್ಯಾಯಾಲಯವು ಆಸ್ತಿಯನ್ನು ಮಾರಾಟ ಮಾಡಿತು. ಬೇನಾಮಿ ತರೀಖ ಅದನ್ನು ಕೊಳ್ಳಲಾಯಿತು. ಮತ್ತು ವರದಿಯನ್ನು ಅದರಿಂದ ಹೊರಹಾಕಲಾಯಿತು. ವಾದಿಯು ಈ ದಾವೆಯನ್ನು ಆಸ್ತಿಯ ವಸೂಲ (ಮರಳಿ ಪಡೆಯಲು) ಈ ದಾವೆ ಮಾಡಿದ್ದಾನೆ.

ಒಳಗಾಗಿ ಪ್ರತಿವಾದಿಯು ವಾದಿಸಿದ್ದೇನೆಂದರೆ ವಾದಿಯು ತಾನು ಮಾಲೀಕನೆಂದು ರುಜುವಾತು ಮಾಡಲು ವಿಬಂಧಿಸಲ್ಪಟ್ಟಿದ್ದಾನೆ. ಏಕೆಂದರೆ ಈ ಮೊದಲಿನ ದಾವೆಯಲ್ಲಿ ವಾದಿಯು ಆ ದಾವೆ ಆಸ್ತಿಗೆ ತನ್ನ ತಾಯಿಯು ಮಾಲೀಕಳೆಂದು ಒಪ್ಪಿಕೊಂಡಿದ್ದನು. ಪ್ರತಿವಾದಿಯು ಆ ದಾವೆಯಲ್ಲಿ ಪಕ್ಷಗಾರನಾಗಿರಲಿಲ್ಲ. ಆದ್ದರಿಂದ ಇಲ್ಲಿ ವಿಬಂಧನೆಯು ಅನ್ವಯಿಸುವುದಿಲ್ಲವೆಂದು ತೀರ್ಮಾನಿಸಲಾಯಿತು.

### ವಿಬಂಧನೆ ಮತ್ತು ನಿರ್ಣಯಾತ್ಮಕ ಋಜುವಾತು ಇವುಗಳಲ್ಲಿಯ ಅಂತರ

೧. ವಿಬಂಧನೆಯು ಯಾರ ಪರವಾಗಿ ಇದೆಯೋ ಅಂತಹ ಪಕ್ಷಗಾರನು ಅದನ್ನು ತ್ಯಜಿಸಬಲ್ಲನು. ಆದರೆ ನಿರ್ಣಯಾತ್ಮಕ ರುಜುವಾತನ್ನು ಬಿಟ್ಟುಬಿಡಲಿಕ್ಕೆ ಸಾಧ್ಯವಿಲ್ಲ.

### ಪೂರ್ವನ್ಯಾಯ ಮತ್ತು ವಿಬಂಧನಗಳಲ್ಲಿಯ ಅಂತರ

ಪೂರ್ವನ್ಯಾಯವು ಒಬ್ಬ ವ್ಯಕ್ತಿಯು ಒಂದು ವಿಷಯವನ್ನು ದೃಢವಾಗಿ ಎರಡು ಸಲ ಒಂದು ದಾವೆಯ ನಂತರ ಮತ್ತೊಂದು ದಾವೆಯಲ್ಲಿ ಹೇಳುವುದನ್ನು ಪ್ರತಿಬಂಧಿಸುತ್ತದೆ. ವಿಬಂಧನೆಯು ಒಬ್ಬನು ಒಂದು ವೇಳೆಗೆ ಒಂದು ಸಂಗತಿಯನ್ನು ಮತ್ತೊಂದು ವೇಳೆಗೆ ಅದಕ್ಕೆ ತದ್ವಿರುದ್ಧ ಹೇಳಿಕೆ ಕೊಡುವುದನ್ನು ಪ್ರತಿಬಂಧಿಸುತ್ತದೆ.

*೩೬ ಬಾಂಬೆ ೨೧೪*

### ವಿಬಂಧನೆಯ ಬ್ರಿಟಿಷ್ ಮತ್ತು ಭಾರತೀಯ ಕಾನೂನು

೧. ಬ್ರಿಟಿಷ್ ಕಾನೂನಿನ ಅನ್ವಯ ವಿಬಂಧನೆಗಳನ್ನು ಸಾಮಾನ್ಯ ಮೂರು ವಿಧದಲ್ಲಿ ವರ್ಗೀಕರಿಸ ಲಾಗಿದೆ.

(i) ದಾಖಲೆಯ ಮೂಲಕ ವಿಬಂಧನೆ.

(ii) ದಸ್ತಾವೇಜಿನ ಮೂಲಕ ವಿಬಂಧನೆ.

(iii) ನಡತೆಯ ಮೂಲಕ ವಿಬಂಧನೆ.

೨. ದಾಖಲೆಯ ಮೂಲಕ ವಿಬಂಧನೆ ಅಂದರೆ– ಯೋಗ್ಯ ನ್ಯಾಯಾಲಯದ ತೀರ್ಪಿನ ಮೂಲಕ.

(i) ದಾಖಲೆಯ ಮೂಲಕ ವಿಬಂಧನೆಯನ್ನು ಭಾರತೀಯ ಕಾನೂನು ಮಾನ್ಯ ಮಾಡಿದೆ. ಅದು ಅದನ್ನು ಪರಿಶೀಲಿಸುತ್ತದೆ.

(ಅ) ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಕಲಮು ೧೧.೪.

(ಬ) ಸಾಕ್ಷ್ಯ ಅಧಿನಿಯಮ ಕಲಮುಗಳು ೪೦–೪೪.

**೩. ದಸ್ತಾವೇಜಿನ ಮೂಲಕ ವಿಬಂಧನೆಯು**

೧. ಬ್ರಿಟಿಷ್ ಕಾನೂನಿನ ಅನ್ವಯ ಒಂದು ದಸ್ತಾವೇಜಿಗೆ ಪಕ್ಷವಾದವನು ಯಾವುದೇ ಕೃತಿಯಲ್ಲಿ ಆತನು ಮತ್ತು ಇನ್ನೊಂದು ಪಕ್ಷದವರ ವಿರುದ್ಧ ತಾನು ಆ ದಸ್ತಾವೇಜಿನಲ್ಲಿ ದೃಢೀಕರಿಸಿದ ಹೇಳಿಕೆಯ ತದ್ವಿರುದ್ಧವಾಗಿ ಹೇಳಲಿಕ್ಕೆ ಬರುವುದಿಲ್ಲ. ಈ ನಿಯಮವು ಒಂದು ಅತಿಶಯೋಕ್ತಿಯುಳ್ಳ ಬ್ರಿಟಿಷ್ ಕಾನೂನು 'ಸೀಲ್', (ಮುದ್ರೆ) ಇದರ ಮಹತ್ವವನ್ನು ಒದಗಿಸಿದೆ. ಒಂದು 'ಸೀಲ್' ರಚಿಸಬೇಕಾದರೆ ಅದನ್ನು ಶೀಲು ಮಾಡುವ ಮೇಣ ಇಲ್ಲವೆ ಸಾಂಕೇತ ಮಾಡುವುದರ ಅವಶ್ಯಕತೆಯು ಇರುವುದಿಲ್ಲ. ಒಂದು ದಸ್ತಾವೇಜಿನಿಂದ ತೋರಿ ಬರುವಂತೆ ಒಬ್ಬನು ಹಾಗೆ ಮಾಡಲು ಇಚ್ಛಿಸಿದರೆ ಮೇಲುನೋಟಕ್ಕೆ ಮಸಿ ಬಳಿದ ಸ್ಪಷ್ಟ ಚಿತ್ರ ಮಾಡಿ ಅದು ಒಂದು ದಸ್ತಾವೇಜು ಎಂದು ತೋರಿಸಲು ಬರುವಂತೆ ಮಾಡಬಹುದು ಮತ್ತು ಇದಕ್ಕೆ ಉದ್ದೇಶಪೂರ್ವಕ ಮತ್ತು ಗುರುತು ಹಿಡಿಯಲಾದ ಸಹಿ ದಸ್ತಾವೇಜು ಇವುಗಳಿಗಿಂತ ಕಾನೂನಿನಲ್ಲಿ ಬಹಳಷ್ಟು ಮಹತ್ವ ಇರುತ್ತದೆ. ಸಾಮಾನ್ಯ ದಸ್ತಾವೇಜಿನಲ್ಲಿ ಸಹಿ ಮಾಡಿದ ಬಗ್ಗೆ ವಿಬಂಧನೆಯು ಇರುವುದಿಲ್ಲ.

೨. ದಸ್ತಾವೇಜುಗಳಿಂದ ವಿಬಂಧನೆಯ ಕಟ್ಟುನಿಟ್ಟಿನ ತಾಂತ್ರಿಕ ತತ್ವದ ಭಾರತದಲ್ಲಿ ಅಸ್ತಿತ್ವದಲ್ಲಿರುತ್ತದೆ ಎಂದು ಹೇಳಲು ಬರುವುದಿಲ್ಲ.

೩. ಆದರೆ ತಾಂತ್ರಿಕ ತತ್ವವು ಈ ದೇಶದಲ್ಲಿ ಅನ್ವಯಿಸದಿದ್ದರೆ, ದಸ್ತಾವೇಜಿನ ಹೇಳಿಕೆಗಳು ಒಪ್ಪಿಗೆಗಳಾಗುತ್ತವೆ. ಮತ್ತು ಪಕ್ಷಗಾರರ ವಿರುದ್ಧ ಸಾಕ್ಷ್ಯವಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಇಂತಹ ಹೇಳಿಕೆಗಳು ಕೇವಲ ಒಪ್ಪಿಗೆ ಯಾಗುವುದಕ್ಕಿಂತ ಸ್ವಲ್ಪ ಹೆಚ್ಚು ಕಡಿಮೆ ಸಾಕ್ಷ್ಯದ ಮಹತ್ವವನ್ನು ಸಂದರ್ಭಕ್ಕೆ ಅನುಗುಣವಾಗಿ ಹೊಂದುತ್ತವೆ. ಆದರೆ ನಿರ್ಣಯಾತ್ಮಕವಾದುದವು ಆಗುವುದಿಲ್ಲ. ಉಳಿದ ಪ್ರಕರಣಗಳಲ್ಲಿ ಇನ್ನೊಂದು ಪಕ್ಷವು ಆ ದಸ್ತಾವೇಜಿನಲ್ಲಿ ಕಾಣಿಸಿದ ಆ ಹೇಳಿಕೆಯನ್ನು ನಂಬಿ ತನ್ನ ಸ್ಥಾನದಲ್ಲಿ ವ್ಯತ್ಯಾಸ ಮಾಡಲು ಮನ ಒಲಿಸಿದ್ದರೆ, ಅಂತಹ ಹೇಳಿಕೆಯು ಒಂದು ವಿಬಂಧನೆಯಾಗಿ ಪ್ರವರ್ತಿಸುತ್ತದೆ. ಈ ಸಂಗತಿ ಈ ದೃಷ್ಟಿಯಿಂದ ಒಂದು ದಸ್ತಾವೇಜಿನಿಂದ ಉದ್ಭವಿಸುವ ವಿಬಂಧವು ಇಲ್ಲವೆ ಉಳಿದ ಕಾಗದಗಳದ್ದು. ಕೇವಲ ನಿರ್ದಿಷ್ಟವಾಗಿ ಆ ವಿಬಂಧನವನ್ನು ನಡತೆಯಿಂದ ಇಲ್ಲವೆ ತಪ್ಪು ನಿರೂಪಣೆಯಿಂದ ಎಂದು ಕಲಮು ೧೧೫ರ ಅನ್ವಯ ಆಗಬಹುದು.

೪. ಕೇವಲ ಸಾಕ್ಷ್ಯ ಅಧಿನಿಯಮದ ಅನ್ವಯ ಒಂದು ನಿಬಂಧನ ಉದ್ಭವಿಸುವುದಿಲ್ಲ. ಯಾಕೆಂದರೆ ಒಂದು ಹೇಳಿಕೆಯು ಒಂದು ದಸ್ತಾವೇಜಿನಲ್ಲಿ ಒಳಗೊಂಡಿದೆ. ಅದು ಯಾವಾಗ ಕಲಮು ೧೧೫ರಲ್ಲಿ ಬರುತ್ತದೆಯೋ ಆಗ ಮಾತ್ರ ಅದು ವಿಬಂಧನೆ ಆಗುತ್ತದೆ.

*೧ ಅಲಹಾ ೪೦೩*

*೧೧ ಬಾಂಬೆ ೭೦೮*

೫. ಒಂದು ದಸ್ತಾವೇಜಿನಲ್ಲಿಯ ಒಕ್ಕಣಿಕೆ ಕೇವಲ ಒಂದು ಒಪ್ಪಿಗೆಯಾಗಿರಬಹುದು ಇಲ್ಲವೆ ಸಂದರ್ಭಗಳ ಪ್ರಕಾರ ಒಂದು ವಿಬಂಧನೆಯೂ ಆಗಬಹುದು.

**ನಿರ್ದಿಷ್ಟ ವಿಬಂಧನೆಗಳು**

೧. ಕಲಮು ೧೧೫ ಇದು ಸಾಮಾನ್ಯ ವಿಬಂಧನೆ ಕುರಿತು ಹೇಳುತ್ತದೆ. ಕಲಮು ೧೧೬ ಮತ್ತು ೧೧೭ ನಿರ್ದಿಷ್ಟ ವಿಬಂಧಗಳನ್ನು ಕುರಿತು ಹೇಳುತ್ತವೆ.

೨. ಕಲಮು ೧೧೫ರ ವಿಬಂಧನೆ ಹಾಗೂ ಕಲಂ ೧೧೬ ಮತ್ತು ೧೧೭ ವಿಬಂಧನೆ ನಡುವಿನ ಅಂತರವನ್ನು ಗಮನಿಸಬೇಕು.

(i) ಕಲಮು ೧೧೫ ವಿಬಂಧನೆಯು ಎರಡು ಪಕ್ಷಗಳ ನಡುವೆ ಉದ್ಭವಿಸಬಹುದು. ಅವರು ಯಾವುದೇ ನಿರ್ದಿಷ್ಟ ಕಾನೂನಿನ ಸಂಬಂಧ ಹೊಂದಿರತಕ್ಕದ್ದು ಎಂಬುದು ಅವಶ್ಯವಿರುವುದಿಲ್ಲ. ಕಲಂ ೧೧೬–೧೧೭ ವಿಬಂಧನಗಳು ಯಾವ ಪಕ್ಷಗಾರರ ನಡುವೆ ಒಂದು ನಿರ್ದಿಷ್ಟ ಸಂಬಂಧ ಹೊಂದಿದ್ದರೆ ಮಾತ್ರ ಅದು ಉದ್ಭವಿಸುತ್ತದೆ.

(ii) ಕಲಮು ೧೧೫ರಲ್ಲಿಯ ವಿಬಂಧನ ಒಂದು ಪಕ್ಷದವನು ಸಂಗತಿಗಳ ತಪ್ಪು ನಿರೂಪಣೆಯನ್ನು ಇನ್ನೊಂದು ಪಕ್ಷಗಾರನಿಗೆ ಮಾಡಿದಾಗ ಉಂಟಾಗುತ್ತದೆ. ಕಲಂ ೧೧೬, ೧೧೭ರ ವಿಬಂಧನವು ಪಕ್ಷಗಾರರು ತಾವು ಮಾಡಿಕೊಂಡ ಒಪ್ಪಂದದ ಮೂಲಕ ಉಂಟಾಗುತ್ತದೆ. ಅವರು ಒಬ್ಬರಿಗೊಬ್ಬರು ಸ್ಪಷ್ಟವಾಗಿ ನಿರ್ದಿಷ್ಟ ಸಂಬಂಧ ಹೊಂದಿದವರಾಗಿರುತ್ತಾರೆ.

**ಕಲಂ ೧೧೬**

ಇದು ಯಾರ ಮಧ್ಯ ನಿಬಂಧನಗಳು ಇರುತ್ತವೆಂದು ಹೇಳುತ್ತದೆ.

(i) ಭೂಮಿಯ ಮಾಲಿಕ ಮತ್ತು ಗೇಣಿದಾರ, ಮತ್ತು

(ii) ಒಂದು ಸ್ಥಿರ ಆಸ್ತಿಯನ್ನು ಕುರಿತು ಲೈಸನ್ಸ್ ಕೊಡುವವನು ಮತ್ತು ಲೈಸನ್ಸ್‌ದಾರನು.

**೧. ಭೂಮಿಯ ಮಾಲಿಕ ಮತ್ತು ಗೇಣಿದಾರನು**

ಈ ವಿಬಂಧನೆಯು ಸ್ಥಿರ ಆಸ್ತಿಯ ಗೇಣಿದಾರನಿಗೆ ಅನ್ವಯಿಸುತ್ತದೆ.

೨. ವಿಬಂಧನೆಯು ವೈಯಕ್ತಿಕ ಕ್ಲೇಮು– ಮಾಗಣಿಗೆ ಗೇಣಿದಾರನ ಮುಖಾಂತರ ಸಹ ಅನ್ವಯಿಸುತ್ತದೆ. ಬೇರೆ ಶಬ್ದಗಳಲ್ಲಿ, ಈ ಗೇಣಿದಾರನು ಈ ಆಸ್ತಿಯನ್ನು ಮಾಲೀಕನಿಗೆ ಗೊತ್ತಿಲ್ಲದ, ಆತನ ಪರವಾನಿಗೆ ಇಲ್ಲದೆ ಉಪಗೇಣಿಗೆ ಕೊಟ್ಟರೆ, ಆ ಉಪಗೇಣಿದಾರನು ಭೂಮಿಗೆ ಮಾಲೀಕನಿಗೆ ಪ್ರಾರಂಭದಲ್ಲಿ ಭೂಮಿಯ ಮಾಲೀಕತ್ವವೇ ಇರಲಿಲ್ಲವೆಂದು ನಿರಾಕರಿಸುವ ವಿಬಂಧನೆಯು ಇರುತ್ತದೆ.

೩. ಒಬ್ಬ ವ್ಯಕ್ತಿಯು ತನ್ನ ಭೂಮಿಯ ಮಾಲೀಕನ ಮುಖಾಂತರ ಈ ವಿಬಂಧನೆಯ ಪ್ರಯೋಜನಗಳನ್ನು ಖಚಿತಗೊಳಿಸಿಕೊಳ್ಳುವುದಿಲ್ಲ.

ಕಟ್ಟಡಗಳನ್ನು ಬಾಡಿಗೆ ಕೊಡಬಹುದಾದ ಎರಡು ಸಾಧ್ಯವಿರಬಹುದಾದ ಪ್ರಕರಣಗಳಿವೆ.

(i) ಎಲ್ಲಿ ವಾದಿಯು ಪ್ರತಿವಾದಿಗೆ ಭೂಮಿಯ ಗೇಣಿ ಕೊಟ್ಟು ಕಬ್ಜೆಯನ್ನು ಕೊಡುತ್ತಾನೆ.

(ii) ವಾದಿಯು ಪ್ರತಿವಾದಿಗೆ ತಾನೇ ಗೇಣಿ (ಬಾಡಿಗೆ) ಕೊಟ್ಟು ಅದರ ಕಬ್ಜೆಯನ್ನು ಕೊಟ್ಟಿಲ್ಲ. ಆದರೆ ಅದರ ಮಾಲಿಕತ್ವ ಇದ್ದ ಇನ್ನೊಬ್ಬನಿಂದ ಅದನ್ನು ಪಡೆದಿದ್ದರಿಂದ ಅವನು ಕ್ಲೇಮ (ಮಾಗಣಿ) ಮಾಡುತ್ತಾನೆ.

ಈ ಕಲಮು ಮೊದಲನೆಯ ಪ್ರಕರಣಕ್ಕೆ ಅನ್ವಯಿಸುತ್ತದೆ. ಮತ್ತು ಗೇಣಿದಾರನು ಅದರ ಮಾಲೀಕನ ಮಾಲೀಕತ್ವವನ್ನು ನಿರಾಕರಿಸುವುದಕ್ಕೆ ವಿಬಂಧನೆಯು ಅನ್ವಯಿಸುತ್ತದೆ. ಇದು ಎರಡನೆಯ ಪ್ರಕರಣಕ್ಕೆ ಅನ್ವಯಿಸುವುದಿಲ್ಲ. ಎಲ್ಲ ಭೂಮಾಲೀಕನ ಮಾಲಿಕತ್ವವನ್ನು ಇನ್ನೊಬ್ಬರಿಂದ ಉತ್ಪನ್ನವಾಗಿದೆ. ಖರೀದಿ ಗೇಣಿ ಇಲ್ಲವೆ ವಾರಸಾ ಮುಂತಾದವುಗಳ ಮೂಲಕ ಬಂದವು. ಹೀಗೆ ವಾದಿಯು ತನಗೆ ಉತ್ಪನ್ನವಾದ ಮಾಲೀಕತ್ವದ ಮೂಲಕ ಕೇಳಿದಾಗ ಪ್ರತಿವಾದಿಯು ವಾದಿಗೆ ಅದರಲ್ಲಿ ವಾದಿಯ ಮಾಲೀಕತ್ವವೇ ಇರುವುದಿಲ್ಲ. ಅದು ಬೇರೆಯವರ ಮಾಲೀಕತ್ವವನ್ನು ಅವರು ತೋರಿಸಬೇಕೆಂದು ಕೇಳಲು ವಿಬಂಧವು ಪ್ರತಿಬಂಧಿಸುವುದಿಲ್ಲ. ಆ ಗೇಣಿದಾರನು ತನಗೆ ಇನ್ನೊಬ್ಬರಿಂದ ಆ ಮಾಲೀಕತ್ವದ ಹಕ್ಕು ಉಂಟಾಗಿಲ್ಲವೆಂದು ತೋರಿಸಬಲ್ಲನು.

"ಮಾಲೀಕನ ಮುಖಾಂತರ ಕ್ಲೇಮ (ಮಾಗಣಿ) ಮಾಡಿದ್ದು" ಈ ಪದಗಳು ಇಲ್ಲದಿರುವುದರ ಪರಿಣಾಮವಾಗಿರುತ್ತದೆ.

ಮಾಲೀಕತ್ವವನ್ನು ನಿರಾಕರಿಸುವುದಕ್ಕೆ ಈ ವಿಬಂಧನವು ಗೇಣಿಯ ಪ್ರಾರಂಭದಲ್ಲಿಯೇ ಅನ್ವಯಿಸುತ್ತದೆ. ಯಾಕೆಂದರೆ ಗೇಣಿದಾರನು ತನ್ನ ಮಾಲೀಕತ್ವದ ಅವಧಿಯು ಮುಕ್ತಾಯವಾಗಿದ್ದೆಂದು ಇಲ್ಲವೆ ಅಂತ್ಯಗೊಂಡಿದ್ದೆಂದು ತೋರಿಸಬಲ್ಲನು. ಇಂತಹ ಪ್ರಕರಣದಲ್ಲಿ ಅವನು ಮಾಲೀಕತ್ವವನ್ನು ನಿರಾಕರಿಸಬಾರದು. ಆದರೆ ಒಪ್ಪಿಕೊಳ್ಳಬೇಕು ಮತ್ತು ಅದನ್ನು ಘಟನೆಯ ನಂತರ ಕೃತಿಯಿಂದಾಗಿ ನ್ಯಾಯದಾನ ದೃಷ್ಟಿಯಿಂದ ಗೇಣಿದಾರನಿಗೆ ತನ್ನ ವಾದವನ್ನು ಪ್ರತಿವಾದಿಸಲು ಪರವಾನಗಿ ಕೊಡಬೇಕು. ನಿಜವಾದ ಮಾಲೀಕತ್ವ ಇದ್ದವನಿಗೆ ಗೇಣಿದಾರನು ಹೊಣೆಗಾರನಿರುತ್ತಾನೆ. ಮತ್ತು ಅವನಿಗೆ ಹಣ ಸಂದಾಯ ಮಾಡುವ ಬಿಕ್ಕಟ್ಟೊ ಉಂಟಾಗಬಹುದು. ಹಾಗೆ ಹೊಣೆಗಾರನಿದ್ದರೆ ಅದು ಅನ್ಯಾಯವಾಗುತ್ತದೆ. ಇಲ್ಲವೆ ಅವನ ಹಕ್ಕು ನಷ್ಟವಾದುದನ್ನು ತೋರಿಸಲಿಕ್ಕೆ ಸಾಧ್ಯವೇ ಇರುವುದಿಲ್ಲ. ಅವನು ತನ್ನ ರಕ್ಷಣೆಯನ್ನಾಗಿ ಅದರ ಮಾಲೀಕನಿಗೆ ಆ ಆಸ್ತಿಯ ಮಾಲೀಕತ್ವದ ಅವಧಿಯು ಮುಕ್ತಾಯವಾಗಿತ್ತೆಂದು ಇಲ್ಲವೆ ಅವನ ಹಕ್ಕನ್ನು ಅಂತ್ಯಗೊಳಿಸಿತ್ತೆಂದೂ ತೋರಿಸಲು ಸಾಧ್ಯವಾಗಿದ್ದಿಲ್ಲ.

**೪. ವಿಬಂಧನೆಯ ವ್ಯಾಪ್ತಿ:**

ಒಬ್ಬ ಗೇಣಿದಾರ ಇಲ್ಲವೆ ಆತನ ಪ್ರತಿನಿಧಿಯು ಯಾವ ದಿನಾಂಕದಂದು ಅವರ ಗೇಣಿಯು ಪ್ರಾರಂಭವಾಯಿತೋ ಯಾವ ಭೂಮಿಯ ಮಾಲೀಕನು ಆ ಗೇಣಿಯನ್ನು ಅವನಿಗೆ ಕೊಡಮಾಡಿರುವನೋ ಅಂಥವನಿಗೆ ಆ ಆಸ್ತಿಯ ಮಾಲೀಕತ್ವವು ಆ ದಿನಾಂಕದಂದು ಇರಲಿಲ್ಲವೆಂದು ನಿರಾಕರಿಸಲು ಪರವಾನಗಿ ಕೊಡುವುದಿಲ್ಲ.

೫. ಈ ವಿಬಂಧನೆಯು ಗೇಣಿದಾರನಿಗೆ ಮಾತ್ರ ಎಲ್ಲಿಯವರೆಗೆ ಗೇಣಿಯು ಮುಂದುವರೆಯುವುದೋ ಅಲ್ಲಿಯವರೆಗೆ ಅವನಿಗೆ ಬಂಧನಕಾರಿಯಾಗುತ್ತದೆ. ಒಮ್ಮೆ ಗೇಣಿಯು ಮುಕ್ತಾಯವಾದರೆ ಆಗ ಅವನು ತನ್ನ ಮಾಲೀಕನಿಗೆ ಯಾವುದೇ ತರಹದ ಮಾಲೀಕ ಹಕ್ಕು ತನಗೆ ಗೇಣಿ ಕೊಟ್ಟ ದಿನಾಂಕದಿಂದಲೇ ಆಸ್ತಿ ಮಾಲೀಕತ್ವವು ಇರಲಿಲ್ಲವೆಂದು ನಿರಾಕರಿಸಲು ಮುಕ್ತನಾಗಿರುತ್ತಾನೆ.

II. ಒಂದು ಸ್ಥಿರ ಆಸ್ತಿಯನ್ನು ಕುರಿತು ಅನುಮತಿ ಕೊಡುವವ ಮತ್ತು ಅನುಮತಿಯನ್ನು ಪಡೆದುಕೊಂಡವ.

೧. ಅನುಮತಿ ಪಡೆದವನಂತೆ ಅಂದರೆ, ಅನುಮತಿ ಕೊಡುವವನಿಗೆ ಅಂತಹ ಕಬ್ಜೆಯ ಮಾಲೀಕತ್ವದ ಹಕ್ಕು, ಅನುಮತಿ ಕೊಡುವ ಕಾಲಕ್ಕೆ ಇದ್ದಿತು.

೨. ಗೇಣಿದಾರ ಮತ್ತು ಅನುಮತಿ ಪಡೆದವನ ನಡುವಿನ ಅಂತರ.

ಲೈಸನ್ಸ್ ಅಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಕೆಲವು ಸಂಗತಿ ಮಾಡಲು ಪರವಾನಗಿ ಕೊಡುವುದು. ಇಂತಹ ಪರವಾನಗಿ ಇಲ್ಲದೆ ಅವನು ಅಂತಹ ಕೃತಿಯನ್ನು ಮಾಡಿದರೆ, ಅದು ಕಾನೂನಿಗೆ ವ್ಯತಿರಿಕ್ತ ಆಗುತ್ತದೆ. ಇದು ವೈಯಕ್ತಿಕ ಹಕ್ಕು ಮತ್ತು ಇದನ್ನು ವರ್ಗಾಯಿಸಲು ಬರುವುದಿಲ್ಲ.

ಯಾರಿಗೆ ಇದನ್ನು ಕೊಡಲಾಗಿದೆಯೋ ಆ ವ್ಯಕ್ತಿಯ ಮರಣದೊಂದಿಗೆ ಅದು ಅಂತ್ಯಗೊಳ್ಳುತ್ತದೆ. ನಿಯಮಗಳ ಅನ್ವಯ ಇದನ್ನು ಅನುಮತಿ ಕೊಟ್ಟವನು ಅನುಮತಿ ರದ್ದು ಮಾಡದ ಹೊರತು ಅನುಮತಿ ಪಡೆದವನು ಅದಕ್ಕಾಗಿ ಕೊಡಬೇಕಾದ ಹಣ ಕೊಡದ ಹೊರತು ಅನುಮತಿ ಕೊಟ್ಟವನು ಅವನ್ನು ರದ್ದು ಮಾಡಲಾರನು.

**ಕಲಮು ೧೧೭**

(೧) ವಿನಿಮಯ ಪತ್ರದ ಒಪ್ಪಿಗೆದಾರನ ವಿಬಂಧನೆ.

(೨) ಸರಕು ರಕ್ಷಕನ ವಿಬಂಧನೆ.

(೩) ಲೈಸನ್ಸುದಾರನ ವಿಬಂಧನೆ.

ಇವುಗಳನ್ನು ಪರಿಶೀಲಿಸುತ್ತದೆ.

(೧) ಒಪ್ಪಿಗೆದಾರನ ವಿಬಂಧನೆ ಪ್ರಕಾರ ಧನಾದೇಶಕಾರನಿಗೆ ವಿನಿಮಯ ಪತ್ರವನ್ನು ಬರೆದುಕೊಡಲು ಅಥವಾ ಅದಕ್ಕೆ ಹಿಂಬರಹ ಮಾಡಲು ಅಧಿಕಾರವಿದ್ದಿತು ಎಂಬುದನ್ನು ನಿರಾಕರಿಸುವ ಅವಕಾಶವಿರ ತಕ್ಕದ್ದಲ್ಲ.

(೨) ಇದಕ್ಕೆ ಸಂಬಂಧಪಟ್ಟ ಕಾರಣವು ಒಪ್ಪಿಗೆದಾರ ಮತ್ತು ವಿನಿಮಯ ಪತ್ರಧಾರಕ ಇವರ ನಡುವೆ ಏರ್ಪಟ್ಟ ಒಪ್ಪಂದದಲ್ಲಿ ದೊರೆಯುತ್ತದೆ.

**ಅಂಗೀಕಾರದ ಒಪ್ಪಂದದ ಅರ್ಥವೇನು:**

(೧) ಅವನು ಸ್ವೀಕರ್ತನಿಗೆ ಅಥವಾ ಧಾರಕನಿಗೆ, ಸಂದಾಯ ಮಾಡುತ್ತಾನೆಂದು,

(೨) ಅವನು ಹಾಗೆ ಸಂದಾಯ ಮಾಡಲು ತಪ್ಪಿದರೆ, ಧನಾದೇಶಕಾರನು ಸಂದಾಯ ಮಾಡುವನೆಂದು.

ಧನಾದೇಶಕಾರನು ಸಂದಾಯ ಮಾಡುವನು ಎಂದರೆ ಅದರ ಅರ್ಥವೇನು? ಧನಾದೇಶಕಾರನಿಗೆ ತನ್ನನ್ನು ಬಂಧನಕ್ಕೆ ಒಳಪಡಿಸಿಕೊಳ್ಳುವ ಅಧಿಕಾರ ಮತ್ತು ಸಾಮರ್ಥ್ಯ ಇತ್ತು ಎಂದು ಅರ್ಥ.

ಸ್ವೀಕರ್ತನು ಈ ಒಪ್ಪಂದದ ಆಧಾರದ ಮೇಲೆ ಅದನ್ನು ತೆಗೆದುಕೊಂಡನು. ಆದ ಕಾರಣ, ಅಂಗೀಕರ್ತನು, ಈ ಒಪ್ಪಂದವನ್ನು ನಿರಾಕರಿಸುವಂತಿಲ್ಲ.

**ವಿವರಣೆ ೧**

ಇದರ ಪ್ರಕಾರ, ಧನಾದೇಶಕಾರನ ಸಹಿ ಖೋಟಾ ಎಂದು ನಿರಾಕರಿಸಲು ಅವಕಾಶ ನೀಡಲಾಗುತ್ತದೆ.

ಇದು ಬ್ರಿಟಿಷ್ ಕಾನೂನಿಗೆ ವಿರುದ್ಧವಾಗಿದೆ.

**(೨) ಮತ್ತು (೩) ಸರಕು ರಕ್ಷಕ ಮತ್ತು ಲೈಸೆನ್ಸುದಾರ ಇವರಿಗೆ ಸಂಬಂಧಪಟ್ಟ ವಿಬಂಧ:**

ಸರಕು ರಕ್ಷಣೆ ಅಥವಾ ಲೈಸೆನ್ಸು ಪ್ರಾರಂಭವಾದಾಗ, ಸರಕು ರಕ್ಷಕನು ಅಥವಾ ಲೈಸೆನ್ಸುದಾರನು ಅಂಥ ಸರಕು ರಕ್ಷಣೆಯನ್ನು ಮಾಡುವ ಅಥವಾ ಲೈಸೆನ್ಸು ನೀಡುವ ಬಗ್ಗೆ ಹೊಂದಿದ್ದ ಅಧಿಕಾರವನ್ನು ಅವರು ನಿರಾಕರಿಸುವಂತಿಲ್ಲ.

**ಪೂರ್ವಗ್ರಹವಿಲ್ಲದೆ ನಿರೂಪಿಸಲಾದ ವಿಷಯಗಳು**

೧. ಈ ಶೀರ್ಷಿಕೆಯ ಅಡಿಯಲ್ಲಿ, ಒಬ್ಬ ಪಕ್ಷಗಾರನು ಮಾಡಿದ ನಿರ್ದಿಷ್ಟ ವರ್ಗದ ಒಪ್ಪಿಗೆಗಳು ಬರುತ್ತವೆ.

೨. ಒಪ್ಪಿಗೆಯನ್ನು, ೨೩ನೇ ಕಲಮಿನಲ್ಲಿ ನಮೂದಿಸಿದ ನಿರ್ದಿಷ್ಟ ಸನ್ನಿವೇಶಗಳಲ್ಲಿ ಮಾಡಿದ್ದರೆ, ಅದನ್ನು ಮಾಡಿದ ಪಕ್ಷಗಾರನ ವಿರುದ್ಧ ಅದನ್ನು ಸಾಬೀತುಗೊಳಿಸಲು ಅವಕಾಶವಿರುವುದಿಲ್ಲ.

**೩. ಅಂತಹ ಸನ್ನಿವೇಶಗಳು ಯಾವುವು?**

(೧) ಅದನ್ನು ಕುರಿತು ಸಾಕ್ಷ್ಯವನ್ನು ನೀಡುವಂತಿಲ್ಲ ಎಂಬ ಷರತ್ತಿನ ಮೇಲೆ ಅದನ್ನು ಮಾಡಲಾಗಿದ್ದರೆ,

(ಅ) ಷರತ್ತು ವ್ಯಕ್ತವಾಗಿರಬಹುದು ಅಥವಾ

(ಆ) ಪಕ್ಷಕಾರರ ವರ್ತನೆಯಿಂದ ಷರತ್ತು ಇಂಗಿತವಾಗಿರಬಹುದು.

(೨) ಒಪ್ಪಂದವು ಮೌಖಿಕವಾಗಿರಬಹುದು ಅಥವಾ ಲಿಖಿತವಾಗಿರಬಹುದು.

**೪. ೨೩ನೇ ಕಲಮಿನ ಅನ್ವಯ**

(೧) ಇದು ಸಿವಿಲ್ ಮೊಕದ್ದಮೆಗಳಿಗೆ ಮಾತ್ರ ಅನ್ವಯಿಸುತ್ತದೆ. ಆ ನಿಯಮವು ಕ್ರಿಮಿನಲ್ ಮೊಕದ್ದಮೆಗಳಿಗೆ ವ್ಯಾಪ್ತವಾಗುವುದಿಲ್ಲ.

(೨) ನ್ಯಾಯಿಕ ಅರ್ಥವಿವರಣೆಯ ಮೂಲಕ, ಈ ಪ್ರಕರಣದ ಅನ್ವಯವನ್ನು, ಅದರಲ್ಲಿನ ವ್ಯವಹರಣೆಗಳ ಕ್ರಮದಲ್ಲಿ ಒಪ್ಪಿಗೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಯಾವುದೇ "ದಸ್ತಾವೇಜನ್ನು ಪೂರ್ವಗ್ರಹ ಇಲ್ಲದೆ" ಬರೆಯಲಾಗಿದೆ ಎಂದು ನಿರೂಪಿಸಿದ ಸಂಗತಿಯ ಮೂಲಕ ಮಾತ್ರವೆ ಅದನ್ನು ಹೊರತುಪಡಿಸುವಂತಿಲ್ಲ. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಜತೆ ವಿವಾದದಲ್ಲಿ ಅಥವಾ ಮಾತುಕತೆಯಲ್ಲಿ ಇರುವಾಗ, ಮತ್ತು ಆ ವಿವಾದವನ್ನು ಅಥವಾ ವ್ಯವಹಾರದ ಇತ್ಯರ್ಥಕ್ಕಾಗಿ ನಿಬಂಧನೆಗಳನ್ನು ಒಪ್ಪಿಕೊಂಡಿದ್ದ ಹೊರತು, "ಪೂರ್ವಗ್ರಹ ಇಲ್ಲದ" ಎಂದು ಗುರುತು ಹಾಕಲಾದ ದಸ್ತಾವೇಜುಗಳನ್ನು ಹೊರತುಪಡಿಸುವ ನಿಯಮವನ್ನು ಅನ್ವಯಿಸಲು ಅವಕಾಶ ಇರುವುದಿಲ್ಲ. *೨೩ ಬಾಂಬೆ, ೧೭೭ (೧೮೦).*

**ವಿವರಣೆ:**

ಒಬ್ಬ ವ್ಯಕ್ತಿಯನ್ನು ಒತ್ತಾಯಿಸಲು ಅವಕಾಶವಿರುವ ಸಂದರ್ಭಗಳಲ್ಲಿ ಈ ನಿಯಮವು ಅನ್ವಯವಾಗುವುದಿಲ್ಲ.

**ಸುಸಂಬದ್ಧವಲ್ಲದ ವಿಷಯಗಳು:**

೧. ಸಾಕ್ಷ್ಯದ ಕಾನೂನು ಯಾವ ವಿಷಯಗಳು ಅಸಂಬದ್ಧ ಎಂದು ನಿರೂಪಿಸುವುದಿಲ್ಲ.

೨. ಕಾನೂನು ಸುಸಂಬದ್ಧ ವಿಷಯಗಳು ಯಾವುವು ಎಂದು ನಿರೂಪಿಸುತ್ತ, ಯಾವ ವಿಷಯಗಳು ಅಸಂಬದ್ಧ ಎಂದು ಅವುಗಳನ್ನು ಹೊರತುಪಡಿಸುತ್ತದೆ.

೩. ಸುಸಂಬದ್ಧತೆಗೆ ಸಂಬಂಧಿಸಿದ ನಿಯಮಗಳು ಕೆಲಸಕ್ಕೆ ಬಾರದವುಗಳು ಎಂಬ ಆಕ್ಷೇಪವುಂಟು.

೪. ಇಂತಿರುವಾಗ ನ್ಯಾಯಾಧೀಶನು ಎರಡು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

(i) ಸಾಕ್ಷಿದಾರನು ಹೇಳುವುದನ್ನು ನಂಬಬೇಕೆ, ಬೇಡವೆ ಅಥವಾ ನಂಬುವುದಿದ್ದರೆ ಎಷ್ಟರ ಮಟ್ಟಿಗೆ ನಂಬಬೇಕು?

(ii) ಸಾಬೀತುಗೊಳಿಸಲಾಗಿದೆಯೆಂದು ತಾನು ನಂಬುವ ಸಂಗತಿಗಳ ಮೂಲಕ ಅವನು ಯಾವ ಊಹೆಗೆ ತಲುಪಬೇಕು?

ಪ್ರತಿಯೊಂದು ನ್ಯಾಯಿಕ ವ್ಯವಹರಣೆಯಲ್ಲಿ ಅತಿಮುಖ್ಯವಾದ ಎರಡು ಪ್ರಶ್ನೆಗಳಿರುತ್ತವೆ– ಇದು

ನಿಜವೆ? ಇದು ನಿಜವಾಗಿದ್ದರೆ, ಮುಂದಿನ ಕ್ರಮವೇನು?

೫. ಸುಸಂಬದ್ಧತೆಯ ನಿಯಮಗಳು 'ಇವೆರಡೂ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲುವುದಿಲ್ಲ. ಇನ್ನು, ಈ ನಿಯಮಗಳ ಬಗ್ಗೆ ಎಳ್ಳಷ್ಟೂ ತಿಳಿವಳಿಕೆಯಿಲ್ಲದ ವ್ಯಕ್ತಿಗಳು, ಇದಕ್ಕಿಂತ ಉತ್ತಮವಾದ ಉತ್ತರವನ್ನು ಕೊಡುವ ಸಂಭವವುಂಟು.

**೬. ಆಕ್ಷೇಪಣೆಗಳಿಗೆ ಉತ್ತರ**

(i) ಮನುಷ್ಯರು, ತರ್ಕಶಾಸ್ತ್ರವನ್ನು ಅಧ್ಯಯನ ಮಾಡದೆಯೇ ತರ್ಕ ಮಾಡುತ್ತಾರೆ. ಚೆನ್ನಾಗಿಯೇ ತರ್ಕ ಮಾಡುತ್ತಾರೆ. ಆದರೆ ನಾವು ತರ್ಕಶಾಸ್ತ್ರವನ್ನು ಅಧ್ಯಯನ ಮಾಡುವುದು ಅಗತ್ಯವಿಲ್ಲ ಎಂದು ಅದರ ಅರ್ಥವಲ್ಲವಷ್ಟೆ.

(ii) ಸುಸಂಬದ್ಧತೆಯ ನಿಯಮಗಳ ಮೂಲಕ ಮತ್ತು ಪ್ರಶ್ನೆಗಳ ಪ್ರವಾಹವೇ ಉಕ್ಕುತ್ತದೆ. ಪರಿಣಾಮವಾಗಿ ಎಂಥ ದೃಢ ಚೇತನವನ್ನೂ ಅಲುಗಾಡಿಸಬಹುದು. ಎಂಥ ಏಕಾಗ್ರತೆಯ ಬುದ್ಧಿಯನ್ನೂ ಸಹ ಕಂಗೆಡಿಸಬಹುದು, ವಿಚಲಿತಗೊಳಿಸಬಹುದು.

೧. ಸುಸಂಬದ್ಧತೆಯ ಪ್ರಧಾನ ನಿಯಮವೆಂದರೆ ನೀವು ಒಂದು ಸಂಗತಿಯನ್ನು ಸಾಬೀತು ಪಡಿಸಬಹುದು, ಆದರೆ ಅಭಿಪ್ರಾಯವನ್ನು ಸಾಬೀತುಪಡಿಸುವುದು ಸಾಧ್ಯವಿಲ್ಲ.

ಸಂಗತಿಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಬಹುದು: ಇಂದ್ರಿಯಗಳ ಮೂಲಕ ಗ್ರಹಿಸ ಬಹುದಾದವುಗಳು ಮತ್ತು ಇಂದ್ರಿಯಗಳ ಮೂಲಕ ಗ್ರಹಿಸಲಾಗದವುಗಳು, ಅವಾವುವೆಂದರೆ (೧) ಉದ್ದೇಶ, (೨) ಮೋಸ, (೩) ನಂಬುಗೆ ಮತ್ತು (೪) ಜ್ಞಾನ.

**ಕಾನೂನು ದ್ವಾರಾ ರುಜುವಾತಿಗೆ ಅವಕಾಶವಿರುವ ವಿಷಯ:**

೧. ವಿವಾದ್ಯ ಸಂಗತಿಗಳು ೩, ೫, ೧೨.

೨. ವಿವಾದ್ಯ ಸಂಗತಿಗಳಿಗೆ ಸುಸಂದಿಗ್ಧವಾದ ಸಂಗತಿಗಳು.

೩. ೬, ೭, ೮, ೯,

೧೩, ೧೬, ೨–೫೮, ೪೫–೫೧.

೩. ವಿವಾದ್ಯ ಸಂಗತಿಗಳಿಗೆ ಸಂಗತವಾದ ಅಥವಾ ಸುಸಂಬದ್ಧ ಸಂಗತಿಗಳಿಗೆ ಸಂಗತವಾದ ಅಥವಾ ವಿವಾದ್ಯ ಸಂಗತಿಗೆ ಮತ್ತು ಸುಸಂಬದ್ಧ ಸಂಗತಿಯ ಸಂಭಾವ್ಯತೆಯನ್ನು ತೋರಿಸುವ ಸಂಗತಿಗಳು. ೩೪, ೩೯, ೪೬.

ಟಿಪ್ಪಣಿ– ೩೧–೩೨ ಇವು ಅವುಗಳಿಗೆ ಅಪವಾದಗಳಾಗಿ ನೇರ ಸಾಕ್ಷ್ಯದ ಅಡಿಯಲ್ಲಿ ಬರುತ್ತವೆ.

೪. ೧೧(೧)ರೊಂದಿಗೆ ಸುಸಂಗತವಾದ ಸಂಗತಿಗಳು.

ವಿವಾದ್ಯ ಸಂಗತಿಗಳು ಅಥವಾ ಸುಸಂಬದ್ಧ ಸಂಗತಿಗಳು, ೧೭–೩೧

ಅಥವಾ ವಿವಾದ್ಯ ಸಂಗತಿಯ ಅಥವಾ ಸುಸಂಬದ್ಧ ಸಂಗತಿಯ

ಅಸಂಭಾವ್ಯತೆಯನ್ನು ತೋರಿಸುವ ಸಂಗತಿಗಳು. ೪೧–೪೪, ೪೬.

## ವಿವಾದ್ಯ ಸಂಗತಿಗಳು

**ಕಲಮು ೩:** ವಿವಾದ್ಯ ಸಂಗತಿಗೆ ಎರಡು ಅತ್ಯಗತ್ಯ ಅಂಶಗಳು ಇರುತ್ತವೆ.

**(೧) ಅದು ಅಗತ್ಯವಾದ ಸಂಗತಿ.**

ವಿವಾದ್ಯ ಸಂಗತಿ ಎಂದರೆ, ಕ್ಲೇಮು ಮಾಡಲಾದ ಹಕ್ಕಿಗೆ ಅಥವಾ ಒಬ್ಬ ಪಕ್ಷಕಾರನು ಇನ್ನೊಬ್ಬ ಪಕ್ಷಕಾರನ ವಿರುದ್ಧ ಅಥವಾ ಅವನ ಮೇಲೆ ವಿಧಿಸಬೇಕೆಂದು ಬಯಸುವ ಬಾಧ್ಯತೆಗೆ ಬುನಾದಿಯಾಗಿರುವ ಸಂಗತಿ.

ವಿವಾದ್ಯ ಸಂಗತಿ ಎಂದರೆ, ಕ್ಲೇಮನ್ನು ನೀಡಲು ಅಥವಾ ಬಾಧ್ಯತೆಯನ್ನು ವಿಧಿಸಲು ಯಾವುದರ ರುಜುವಾತು ಅಗತ್ಯವಿರುವುದೇ ಆ ಸಂಗತಿ.

**ದೃಷ್ಟಾಂತ**

(೧) 'ಅ'ನು 'ಬ'ನ ಮಗನಾಗಿರುವ ನಿಮಿತ್ತ ಅವನ ಸೊತ್ತಿಗೆ ವಾರಸದಾರನೆ ಅಲ್ಲವೆ ಎಂಬ ಬಗ್ಗೆ ವಿಚಾರಣೆ ಆಗಬೇಕಾಗಿದೆ ಎಂದು ಇಟ್ಟುಕೊಳ್ಳಿ.

ಆಗ ಕೆಳಕಂಡ ವಿಷಯಗಳು ಅಗತ್ಯ ಸಂಗತಿಗಳಾಗುತ್ತವೆ.

(i) 'ಅ'ನು 'ಬ'ನ ಮಗನೆ ಅಲ್ಲವೇ?

(ii) 'ಬ'ನು ಮೃತನಾಗಿರುವನೆ?

(iii) ಸೊತ್ತು 'ಬ'ಗೆ ಸೇರಿದ ಸೊತ್ತೆ? ಅಲ್ಲವೆ?

ಇವೆಲ್ಲ ಅಗತ್ಯ ಸಂಗತಿಗಳು. ಕಾರಣವೆಂದರೆ ಆ ಸಂಗತಿಗಳು ರುಜುವಾತು ಆಗದೆ 'ಅ'ನು ಉತ್ತರಾಧಿಕಾರ ಕೋರಿ ಸಲ್ಲಿಸುವ ಕ್ಲೇಮನ್ನು ಮಂಜೂರ್ಮಾಡಲು ಸಾಧ್ಯವಾಗುವುದಿಲ್ಲ. ಆ ಸಂಗತಿಗಳು ಅವನ ಕ್ಲೇಮಿಗೆ ಬುನಾದಿಯಾಗಿರುತ್ತವೆ.

**ದೃಷ್ಟಾಂತ**

(೨) ಇನ್ನು, ವಿಚಾರಣೆಯು ಕೆಳಕಂಡಂಥ ವಿಚಾರಣೆ ಎಂದು ಭಾವಿಸೋಣ.

'ಅ'ನು 'ಬ'ನ ಸಾವಿಗೆ ಕಾರಣನಾದನೇ ಹೇಗೆ?

ಆಗ ಕೆಳಕಂಡ ಸಂಗತಿಗಳು ಅಗತ್ಯ ಸಂಗತಿಗಳಾಗುತ್ತವೆ.

(i) 'ಅ'ನು 'ಬ'ನ ಸಾವಿಗೆ ಕಾರಣನಾದನೇ?

(ii) 'ಅ'ನಿಗೆ 'ಬ'ನನ್ನು ಸಾಯಿಸುವ ಉದ್ದೇಶವಿದ್ದಿತೇ ಹೇಗೆ?

೨. ಅಗತ್ಯವಾದ ಪ್ರತಿಯೊಂದು ಸಂಗತಿಯು ವಿವಾದ್ಯ ಸಂಗತಿ ಅಲ್ಲ. ಅಗತ್ಯವಾದ ಸಂಗತಿಯನ್ನು ಒತ್ತುಕೊಟ್ಟು ಹೇಳಿದಾಗ ಅಥವಾ ನಿರಾಕರಿಸಿದಾಗ, ಅದು ವಿವಾದ್ಯ ಸಂಗತಿ ಆಗುತ್ತದೆ.

೧ ಮತ್ತು ೨ ಈ ದೃಷ್ಟಾಂತಗಳಲ್ಲಿ ಯಾವುದೇ ಅಗತ್ಯ ಸಂಗತಿಯನ್ನು ನಿರಾಕರಿಸಿದರೆ, ಅದು ವಿವಾದ್ಯ ಸಂಗತಿ ಆಗುತ್ತದೆ.

೩. ಆದ್ದರಿಂದ ಒಂದು ವಿವಾದ್ಯ ಸಂಗತಿಯು, ಎರಡು ಪಕ್ಷಕಾರರ ನಡುವೆ ವಿವಾದದಲ್ಲಿರುವ ಒಂದು ಅಗತ್ಯ ಸಂಗತಿ.

**೨. ವಿವಾದ್ಯ ಸಂಗತಿಗಳಿಗೆ ಸುಸಂಬದ್ಧವಾದ ಸಂಗತಿಗಳು**

ಕಲಮು ೩. ೧. ಸುಸಂಬದ್ಧ ಸಂಗತಿ ಎಂದರೆ ವಿವಾದ್ಯ ಸಂಗತಿಗೆ ಸಂಬಂಧಪಟ್ಟ ಸಂಗತಿ.

೧. ಸಂಬಂಧವು ದೃಶ್ಯ ಮತ್ತು ಪ್ರಕಟ ಆಗಿರಬೇಕು ಅಂದರೆ ಸ್ಪಷ್ಟವಾಗಿರಬೇಕು.

೨. ಸಂಬಂಧವು ನಿಕಟವಾಗಿರಬೇಕು, ಸುದೂರ ಆಗಿರಕೂಡದು.

೩. ಸಂಬಂಧವು ಎಲ್ಲ ಪೂರ್ವಭಾವ್ಯ ಸಾಕ್ಷ್ಯವನ್ನು ಹೊರತುಪಡಿಸುವ ಅಗತ್ಯ ಸಂಬಂಧ ಆಗಿರಬೇಕಾಗಿಲ್ಲ. ಅದು ಯುಕ್ತ (ಸಮಂಜಸ) ಆಗಿರಬೇಕು, ಹೊರತು ಪ್ರಚ್ಛನ್ನ ಅಥವಾ ಊಹ್ಯ ಆಗಿರಕೂಡದು.

೪. ಸಂಬಂಧ ಇದೆಯೆ ಇಲ್ಲವೆ ಎನ್ನುವುದು ಅಭ್ಯಾಸದಿಂದ ಸಂಪಾದಿಸಿಕೊಳ್ಳಬೇಕಾದ ಕಾನೂನು ಪ್ರವೃತ್ತಿಗೆ ಅಥವಾ ಕಾನೂನು–ಭಾವನೆಗೆ ಸೇರಿದ ವಿಚಾರ. ಈ ಕುರಿತು ಕೆಲವು ದೃಷ್ಟಾಂತಗಳನ್ನು ಕೊಡಬಹುದಾಗಿದೆ.

(i) 'ಅ'ನ ಕ್ರಿಮಿನಲ್ ಅಧಿ ವಿಚಾರಣೆಯ ತರುವಾಯ, ಅವನು ಸಾಕ್ಷಿಯಿಲ್ಲದ 'ಬ'ನ ಹೇಳಿಕೆಯನ್ನು ಅಪರಾಧಿಯೆಂದು ಮತ್ತು 'ಅ'ನು ನಿರಪರಾಧಿ ಎಂದು ತಿರಸ್ಕರಿಸಲಾಗುವುದು. ಕಾರಣವೆಂದರೆ, ಷಾಮೀಲು ಮತ್ತು ಸ್ಪಷ್ಟನೆಯ ಅಪಾಯದ ಹೊರತಾಗಿ, ಸುದೂರ ಮತ್ತು ಸಂಬಂಧದ ಕೊರತೆ.

*(ಆರ್ ವಿರುದ್ಧ ಗ್ರೇ.ಐ.ಅಂಡ್.ಐರ್. ರೆಪ್. ೭೬)*

(ii) 'ಅ'ನು 'ಬ'ನಿಗೆ ಸಾಲವಾಗಿ ಕೊಟ್ಟಿದ್ದ ೫ ಪೌಂಡುಗಳ ವಸೂಲಿಗಾಗಿ 'ಅ'ನು 'ಬ' ವಿರುದ್ಧ ಹೂಡಿದ ದಾವೆಯಲ್ಲಿ, ಅವನು ತನ್ನ ಡೈರಿಯಲ್ಲಿ ಮಾಡಿದ ನಮೂದನೆಯನ್ನು ಸಂಬಂಧದ ಕೊರತೆಯ ಕಾರಣ ತಿರಸ್ಕರಿಸಲಾಗುವುದು.

*ಸ್ಟಾರ್ ವಿರುದ್ಧ ಸ್ಕಾಟ್. ೬. ಸಿ. ಪಿ. ೨೪೧*

(iii) ವಿದೇಶದಲ್ಲಿ ವಾಸವಾಗಿರುವ ವ್ಯಾಪಾರಸ್ಥನ ಏಜಂಟನಾಗಿರುವ 'ಅ'ನು 'ಕ'ನಿಂದ ಸರಕುಗಳನ್ನು ಖರೀದಿಸಿದನು. 'ಅ'ನು ಖರೀದಿ ಮಾಡುವಾಗ ತಾನು ಯಾವ ಯಜಮಾನನ ಏಜೆಂಟು ಎಂದು 'ಕ'ನಿಗೆ ತಿಳಿಸಿರಲಿಲ್ಲ. ಆದರೆ ಇನ್‌ವಾಯ್ಸ್‌ಗಳಲ್ಲಿ 'ಬ'ನ ಲೆಕ್ಕಕ್ಕೆ 'ಅ' ಮೂಲಕ ಖರೀದಿ ಎಂಬುದಾಗಿ ಸರಕುಗಳ ಖರೀದಿಗೆ ಸಂಬಂಧಿಸಿದ ವಿವರ. ಆ ತರುವಾಯ 'ಕ'ನು ಮೊಬಲಗಿಗಾಗಿ 'ಅ'ನ ಲೆಕ್ಕಕ್ಕೆ ಧನಾದೇಶ ಸಲ್ಲಿಸಿದನು. 'ಬ'ನು ಖರೀದಿ ಸಂಬಂಧವಾದ ಸೂಚನೆಯನ್ನು ಪಡೆದ ಮೇಲೆ ಮತ್ತು 'ಅ'ನು ಬಿಲ್ಲುಗಳನ್ನು ಅಂಗೀಕರಿಸಿದ ಮೇಲೆ 'ಅ'ನ ಹೆಸರಿಗೆ ದೊಡ್ಡ ಮೊತ್ತಗಳಲ್ಲಿ ಹಣ ಇರಸಾಲು ಮಾಡಿದನು. ಆದರೆ 'ಅ'ನು ದಿವಾಳಿ ಆಗಿದ್ದನು.

'ಕ'ನು ಯಜಮಾನ 'ಬ'ನ ಮೇಲೆ ದಾವೆ ಹೂಡಿದನು. ಉದ್ದಕ್ಕೂ ತಾನು ಯಜಮಾನನೆಂದು 'ಬ'ನ ಲೆಕ್ಕಕ್ಕೆ ಖರ್ಚು ಹಾಕಿದೆನು ಎಂದು ತೋರಿಸಲು ತನ್ನ ಲೆಕ್ಕದ ಪುಸ್ತಕಗಳನ್ನು ತೋರಿಸಬಯಸಿದನು.

ಸಾಕ್ಷ್ಯವು ಅಂಗೀಕಾರಾರ್ಹ ಅಲ್ಲ ಎಂದು ನಿರಾಕರಿಸಲಾಯಿತು.

*(ಸ್ಮಿತ್ ವಿರುದ್ಧ ಆಂಡರ್ಸನ್. ಎಫ್.ಸಿ. – ಬಿ. ೨೧)*

II. ಸಂಬಂಧಿಸಿದ ಪ್ರತಿಯೊಂದು ಸಂಗತಿ ಸುಸಂಬದ್ಧ ಎಂದು ಅರ್ಥವಲ್ಲ. ಒಂದು ವಿಶೇಷ (ನಿರ್ದಿಷ್ಟ) ರೀತಿಯಲ್ಲಿ ಸಂಬಂದ ಹೊಂದಿರುವ ಸಂಗತಿಗಳು ಮಾತ್ರವೇ ಸುಸಂಬದ್ಧ ಸಂಗತಿಗಳಾಗುತ್ತವೆ. ಒಂದು ನಿರ್ದಿಷ್ಟ ಸಂಗತಿಯನ್ನು ಸುಸಂಬದ್ಧ ಸಂಗತಿ ಎಂದು ಪರಿಗಣಿಸಬೇಕಾದರೆ, ಅದು ಯಾವ ರೀತಿಯಲ್ಲಿ ಸಂಬಂಧ ಹೊಂದಿರಬೇಕು ಎಂಬ ಅಂಶವನ್ನು ಸಾಕ್ಷ್ಯ ಅಧಿನಿಯಮವು (ಕಾಯಿದೆಯ) ಗೊತ್ತುಪಡಿಸುತ್ತದೆ.

೬.೧. ವಿವಾದ ಸಂಗತಿಯಲ್ಲಿ ಒಳಗೊಂಡಿರುವ ವ್ಯವಹಾರದ ಭಾಗವಾಗಿರುವ ಸಂಗತಿಗಳ ರುಜುವಾತಿಗೆ ಅನುಮತಿಯಿರುತ್ತದೆ.

ದೃಷ್ಟಾಂತ (a), (c), (d) ತೆಗೆದುಕೊಳ್ಳಿ.

**ವ್ಯವಹಾರ ಎಂದರೆ ಏನು?**

ಅಪರಾಧ (ಅಪರಾಧ), ಕರಾರು, ಮಾರಾಟ ಇತ್ಯಾದಿಯಾಗಿ ಒಂದೇ ಹೆಸರಿನಿಂದ ಕರೆಯಲಾಗುವ ಹಾಗೆ ಸಂಬಂಧಪಟ್ಟಿರುವ ಸಂಗತಿಗಳ ಗುಂಪಿಗೆ ವ್ಯವಹಾರ ಎಂದು ಹೆಸರು.

ಅಪರಾಧಕ್ಕೆ ಅಥವಾ ಕರಾರಿಗೆ ಸಂಬಂಧಪಟ್ಟ ಯಾವುದೇ ಸಂಗತಿಯು ಮುಕ್ತವಾಗಿದ್ದರೆ ಮತ್ತು ಗೋಚರವಾಗಿದ್ದರೆ, ಅಂದರೆ ಸಂಬಂಧವು ಸ್ಪಷ್ಟ ಮತ್ತು ನಿಕಟವಾಗಿದ್ದರೆ, ಅದು ಅದೇ ವ್ಯವಹಾರದ ಭಾಗವಾಗುತ್ತದೆ ಮತ್ತು ಸುಸಂಬದ್ಧವಾಗುತ್ತದೆ.

**ವ್ಯವಹಾರವು ಏನನ್ನು ಒಳಗೊಳ್ಳುತ್ತದೆ?**

ವ್ಯವಹಾರವು ಮಾಡಲಾದ ಕೃತ್ಯಗಳನ್ನು ಒಳಗೊಳ್ಳುತ್ತದೆ, ಹಾಗೆಯೇ ವ್ಯವಹಾರದ ಕ್ರಮದಲ್ಲಿ ಮಾಡಲಾದ ಹೇಳಿಕೆಗಳನ್ನು ಒಳಗೊಳ್ಳುತ್ತದೆ.

**ದೃಷ್ಟಾಂತ**

ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ಕೂಗು ಹೇಳಿಕೆಯ ಅದೇ ವ್ಯವಹಾರದ ಭಾಗವಾಗಬೇಕಾದರೆ, ಅದು ಆ ಕೃತ್ಯದ, ಜತೆಯಲ್ಲಿಯೇ ಘಟಿಸಿರಬೇಕು (ಸಂಭವಿಸಿರಬೇಕು).

**ಅದೇ ವ್ಯವಹಾರ ಎಂದರೇನು?**

೧. ಅದೇ (ಒಂದೇ) ಎಂದರೆ ಒಂದೇ ಬಗೆಯದು ಎಂದು ಅರ್ಥವಲ್ಲ. ಒಂದೇ ಬಗೆಯ ವ್ಯವಹಾರಗಳ ಸರಣಿಯು ಸುಸಂಬದ್ಧವಲ್ಲ.

೨. ಅದೇ ವ್ಯವಹಾರ ಎಂದರೆ, ಒಂದೇ ಸಮಯಕ್ಕೆ ಮತ್ತು ಒಂದೇ ಸ್ಥಳದಲ್ಲಿ ಸಂಭವಿಸಿದ ವ್ಯವಹಾರ ಎಂದು ಅರ್ಥವಲ್ಲ. ಸಂಭವದ ಏಕಕಾಲ, ಏಕ ಸ್ಥಳ ಇವುಗಳಿಗೆ ಯಾವುದೇ ಪರಿಗಣನೆಯಿಲ್ಲ.

**ದೃಷ್ಟಾಂತ**

ದರೋಡೆಯು ಒಂದು ಸ್ಥಳದಲ್ಲಿ ಜನವರಿಯಲ್ಲಿ ನಡೆದಿರಬಹುದು. ದರೋಡೆಯಾದ ವಸ್ತುಗಳನ್ನು, ಇನ್ನೊಂದು ಸ್ಥಳದಲ್ಲಿ ಫೆಬ್ರುವರಿಯಲ್ಲಿ ಪಡೆಯುವಾತನಿಗೆ ವಹಿಸಿಕೊಡಬಹುದು. ಮತ್ತು ಮೂರನೆಯ ಸ್ಥಳದಲ್ಲಿ ಮಾರ್ಚ್ ತಿಂಗಳಲ್ಲಿ ಆ ವಸ್ತುಗಳ ಮಾರಾಟವಾಗಬಹುದು. ಇವೆಲ್ಲ ಘಟನೆಗಳು ಒಂದೇ ವ್ಯವಹಾರದ ಭಾಗವಾಗುತ್ತವೆ.

೩. ಅದೇ ವ್ಯವಹಾರ ಎಂದರೆ ಸಂಬಂಧಪಟ್ಟ ಒಂದು ವ್ಯವಹಾರ– ಒಂದೇ ಪದಾರ್ಥದ ಭಾಗಗಳು.

*ತೀರ್ಪು–ನ್ಯಾಯ (ಕೇಸ್‌ಲಾ) ಕಾಕಲ್ಸ್, ಪು. ೬೬–೬೮.*

*೫೩. ಕಲ್ಕತ್ತಾ? ೩೭೨*

**ತತ್ವ:** ಅಂಥ ಸಾಕ್ಷ್ಯಕ್ಕೆ ಅವಕಾಶ ಕೊಡುವುದುಂಟು. ಕಾರಣವೆಂದರೆ ಆ ಮೂಲಕ ವಿಷಯವನ್ನು ಅರಿತುಕೊಳ್ಳಲು ಅನುಕೂಲವಾಗುತ್ತದೆ. ಅಂಥ ಸಾಕ್ಷ್ಯವು ಸಂದರ್ಭವನ್ನು ಒದಗಿಸುತ್ತದೆ.

೨. ವಿವಾದ್ಯ ಸಂಗತಿಯ ಅಥವಾ ಸುಸಂಬದ್ಧ ಸಂಗತಿಗೆ ಪ್ರಸಂಗ, ಕಾರಣ, ಪರಿಣಾಮ ಅಥವಾ ಅವಕಾಶ ಇವುಗಳನ್ನು ತೋರಿಸುವಂಥ ಸಂಗತಿಯನ್ನು ರುಜುವಾತು ಮಾಡಲು ಅವಕಾಶವುಂಟು.

೧. ಒಬ್ಬ ಮನುಷ್ಯನು ಕಳವು ಮಾಡಿರುವನೆಂದು ಆಪಾದಿತನಾಗಿದ್ದಾನೆ. ಅವನ ಬಳಿ ಹಣ ದೊರೆಯದಿದ್ದರೆ, ಅವನು ಕಳವು ಮಾಡಲಿಲ್ಲ ಎನ್ನುವುದೇ ಸಂಭಾವ್ಯತೆ. ಪ್ರತಿಯೊಂದು ಕಾರಣಕ್ಕೂ ಒಂದು ಪರಿಣಾಮ ಉಂಟು. ಪರಿಣಾಮ ಇಲ್ಲದಿದ್ದರೆ, ಕಾರಣ ಇದ್ದಿಲ್ಲ ಎಂದಾಯಿತು.

೨. ಒಬ್ಬ ಮನುಷ್ಯನು ಹಲ್ಲೆ ಮಾಡಿರುವನೆಂದು ಆಪಾದಿತನಾಗಿದ್ದಾನೆ. ಪ್ರಸಂಗ ಅಥವಾ ಕಾರಣ ಇತ್ತೆಂದು ತೋರಿಸಬೇಕಾದರೆ ಜಗಳ ನಡೆದಿತ್ತು ಎಂದು ರುಜುವಾತು ಮಾಡಬೇಕಾಗುತ್ತದೆ.

೩. ಒಬ್ಬ ಮನುಷ್ಯನು ತನ್ನ ಹೆಂಡತಿಗೆ ವಿಷ ಹಾಕಿರುವನೆಂದು ಆಪಾದಿತನಾಗಿದ್ದಾನೆ. ಅವನಿಗೆ ಹಾಗೆ ಮಾಡಲು ಅವಕಾಶ ದೊರೆಯಲಿಲ್ಲ ಎಂದು ತೋರಿಸಬೇಕಾದರೆ, ಅಲ್ಲಿ ದಾದಿ ಯಾವಾಗಲೂ ಹಾಜರಿದ್ದಳು ಎಂದು ರುಜುವಾತು ಮಾಡಬೇಕಾಗುತ್ತದೆ.

೪. 'ಅ'ನು 'ಬ'ನನ್ನು ಕೊಲೆ ಮಾಡಿರುವ ಬಗ್ಗೆ ಆಪಾದಿತನಾಗಿದ್ದಾರೆ.

೮. ಯಾವುದೇ ವಿವಾದ್ಯ ಸಂಗತಿಗೆ ಅಥವಾ ಸುಸಂಬದ್ಧ ಸಂಗತಿಗೆ **ಹೇತು** ಅಥವಾ **ಸಿದ್ಧತೆ** ಇದ್ದಿತೆಂದು ತೋರಿಸಲು ಸಂಗತಿಗಳನ್ನು ರುಜುವಾತು ಮಾಡಲು ಅವಕಾಶವುಂಟು.

ಹೇತು: ದೃಷ್ಟಾಂತಗಳು (ಅ) (ಬ) ವಿವೇಕಿಯಾದ ಯಾವ ಮನುಷ್ಯನೂ ಹೇತು ಇಲ್ಲದೆ ಯಾವುದೇ ಕೃತ್ಯವನ್ನು ಮಾಡುವುದಿಲ್ಲ.

ಸಿದ್ಧತೆ: ದೃಷ್ಟಾಂತಗಳು (ಸಿ) (ಡಿ)

**ತೀರ್ಪು ನ್ಯಾಯ: (ಕೇಸ್ ಲಾ)**

೧. ೬೧ ಕಲಕತ್ತಾ ೫೪ – ಹೇತು – ಉದ್ದೇಶ – ಸಿದ್ಧತೆ – ಪ್ರಯತ್ನ – ಕೃತ್ಯ

೨. ಆರ್. ವಿರುದ್ಧ ಪಾಮರ್ – ಕಾಕಲ್ ಪಿ ಕುಕ್‌ನನ್ನು ಹತ್ಯೆ ಮಾಡಿದನು, ಹಣಕಾಸಿನ ಇಕ್ಕಟ್ಟು, ಅವನು ವಿಷವನ್ನು ಕೊಂಡುಕೊಳ್ಳುವುದು, ಮಹಜರನ್ನು ತಪ್ಪಿಸಿಕೊಳ್ಳಲು ಪ್ರಯತ್ನ.

೩. ಆರ್. ವಿರುದ್ಧ ಲಿಲಿಮನ್ ಕಾಕಲ್‌ಪಿ. (೧೮೯೬) ೨QB೧೬೭

೪. ಯಾವುದೇ ದಾವೆಯ ಪಕ್ಷಕಾರನಾಗಿರುವವನ ನಡತೆಯ ಸಂಬಂಧದಲ್ಲಿ,

ಅದೇ ರೀತಿ, ಆಪಾದಿತನಾದ ವ್ಯಕ್ತಿಯ ನಡತೆಯು ವಿವಾದ್ಯವಾದ ಯಾವುದೇ ಸಂಗತಿಯ ಮೇಲೆ ಪ್ರಭಾವ ಬೀರುವುದಾದರೆ ಅಥವಾ ಅದರಿಂದ ಪ್ರಭಾವಿತವಾಗುವುದಾದರೆ ಆ ನಡತೆಯನ್ನು ರುಜುವಾತು ಮಾಡಲು ಅವಕಾಶವುಂಟು.

**೧. ಸಾಮಾನ್ಯವಾಗಿ ವ್ಯಕ್ತಿಗಳ ನಡತೆಯನ್ನು ಕುರಿತು**

ದೃಷ್ಟಾಂತಗಳು– (ಡಿ) ಮರಣಶಾಸನವನ್ನು ಮಾಡುವುದು.

ಮರಣ ಶಾಸನವನ್ನು ಮಾಡುವುದಕ್ಕೆ ಸುಮಾರು ಮುಂಚಿತವಾಗಿಯೇ, ಮೃತನು ವಿಚಾರಣೆ ಮಾಡಿದನು

ಮತ್ತು ಕರಡು ತಯಾರಿಸಿದ್ದನು ಎನ್ನುವುದು ಸುಸಂಬದ್ಧ.

**ಆಪಾದಿತನ ನಡತೆ**

ದೃಷ್ಟಾಂತಗಳು – (ಇ) ಸುಳ್ಳು ಸಾಕ್ಷಿ ಹೇಳುವುದು.

ದೃಷ್ಟಾಂತಗಳು – (ಹೆಚ್) ತಲೆಮರೆಸಿಕೊಂಡಿರುವುದು.

ದೃಷ್ಟಾಂತಗಳು – (ಹೆಚ್) ಸಂಗತಿಗಳನ್ನು ಬಚ್ಚಿಡುವುದು.

**ವಿವರಣೆ:**

೧. ಯಾವುದೇ ಹೇಳಿಕೆಯು ನಡತೆಯ ಜತೆಗಿದ್ದ ಹೊರತು ಮತ್ತು ನಡತೆಯನ್ನು ವಿವರಿಸುವ ಹೊರತು ನಡತೆಯು ಹೇಳಿಕೆಯನ್ನು ಒಳಗೊಳ್ಳುವುದಿಲ್ಲ.

೨. ನಡತೆಯು ಸುಸಂಬದ್ಧವಾದರೆ, ಆಗ ನಡತೆಯ ಮೇಲೆ ಪ್ರಭಾವ ಬೀರುವ ಹೇಳಿಕೆಯನ್ನು, ಆ ವ್ಯಕ್ತಿಯನ್ನು ಉದ್ದೇಶಿಸಿ ಅವನ ಇದಿರು ಮತ್ತು ಅವನಿಗೆ ಕೇಳುವಂತೆ ಮಾಡಿದ್ದರೆ, ಆ ಹೇಳಿಕೆಯು ಸುಸಂಬದ್ಧವಾಗುತ್ತದೆ.

**ದೃಷ್ಟಾಂತಗಳು:**

(g) 'ಅ'ನು 'ಬ'ನಿಗೆ ೧೦,೦೦೦/– ರೂಪಾಯಿ ಕೊಡಬೇಕಾಗಿದೆಯೆ ಹೇಗೆ ಎಂಬ ಪ್ರಶ್ನೆ.

'ಅ'ನು ತನಗೆ ಹಣ ಸಾಲ ಕೊಡುವಂತೆ 'ಕ'ನನ್ನು ಕೇಳಿದನು. 'ಡ'ನು 'ಅ'ನ ಇದಿರಿನಲ್ಲಿ ಮತ್ತು ಅವನಿಗೆ ಕೇಳುವ ಹಾಗೆ 'ಕ'ನಿಗೆ ಹೇಳುತ್ತಾನೆ. " 'ಅ'ನು ೧೦,೦೦೦/– ರೂಪಾಯಿ ಹಣ ಕೊಡಬೇಕಾಗಿದೆ. ಅವನನ್ನು ನಂಬಬೇಡ" ಎಂದು ಹೇಳಿದ್ದನ್ನು ಕೇಳಿದ 'ಅ' ಏನೂ ಮಾತನಾಡದೆ ಅಲ್ಲಿಂದ ಹೋಗಿ ಬಿಡುತ್ತಾನೆ. ಈ ಘಟನೆ ಸುಸಂಬದ್ಧವಾಗುತ್ತದೆ.

**ತೀರ್ಪು ಕಾನೂನು:**

*Imp. ೩೪ om. & R. ೧೦೮೭*

*Imp. ೭ ಅಲಹಾಬಾದ್. ೩೮೫ ಎಫ್. ಇ.*

*ಕಾಕಲ್ಸ್ P. ೭೫ Bright Vs. foe B. Tatham*

೫. ವಿವಾದ್ಯ–ಸಂಗತಿಯನ್ನು ಅಥವಾ ಸುಸಂಬದ್ಧ ಸಂಗತಿಯನ್ನು ವಿವರಿಸಲು ಅಥವಾ ಪ್ರಸ್ತಾಪಿಸಲು (ಮಂಡಿಸಲು) ಅವಶ್ಯವಿರುವ ಸಂಗತಿಗಳನ್ನು ರುಜುವಾತು ಮಾಡಲು ಅವಕಾಶವುಂಟು.

**ದೃಷ್ಟಾಂತಗಳು**

(d) ಅಪರಾಧಕ್ಕಾಗಿ ಆಪಾದಿತನಾದ ಮೇಲೆ ಆಪಾದಿತನು ತಲೆಮರೆಸಿಕೊಂಡಿದ್ದಾನೆ ಎಂದು ಆರೋಪಿಸಲಾಯಿತು.

ಅವನಿಗೆ ತುರ್ತು ಕೆಲಸ ಇತ್ತು ಎಂದು ಸಾಕ್ಷ್ಯವನ್ನು ಕೊಡಬಹುದು.

(f) ಪೊಲೀಸ್ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಅಥವಾ ಅವನನ್ನು ಭಯಪಡಿಸಲು

ದೊಂಬಿಯನ್ನು ನಡೆಸಿದ್ದಕ್ಕಾಗಿ "ಎ"ನನ್ನು ಅಧಿವಿಚಾರಣೆಗೆ ಗುರಿಪಡಿಸಿದ ತರುವಾಯ ಅವನು ದೊಂಬಿಯ ಧುರೀಣತ್ವ ವಹಿಸಿದ್ದನ್ನು ರುಜುವಾತು ಮಾಡಲಾಗಿದೆ. ಆ ವ್ಯವಹಾರವನ್ನು ವಿವರಿಸುವ ಸಲುವಾಗಿ ದೊಂಬಿಯ ಕೂಗಾಟಗಳನ್ನು ಸಾಕ್ಷ್ಯವಾಗಿ ಕೊಡಬಹುದು.

(b) ಅಪಕೀರ್ತಿಕರ ನಡತೆಯನ್ನು ಆರೋಪಿಸುವ ಅಪಮಾನಕರ ಲೇಖನದ ಬಗ್ಗೆ ದಾವೆಯನ್ನು ಕುರಿತು ಅಪಮಾನಕರ ಲೇಖನವನ್ನು ಪ್ರಕಟಿಸಿದ ಕಾಲಕ್ಕೆ ಪಕ್ಷಗಾರರ ನಡುವೆ ಇದ್ದ ಸ್ಥಾನಮಾನ ಮತ್ತು ಸಂಬಂಧಗಳು ವಿವಾದ್ಯ ಸಂಗತಿಗೆ ಪೀಠಿಕೆಯಾಗಿ ಸುಸಂಬದ್ಧ ಸಾಕ್ಷ್ಯವಾಗುತ್ತವೆ.

**ಇದರ ಅಡಿಯಲ್ಲಿ ಕೆಳಕಂಡವುಗಳ ಬಗ್ಗೆ ಸಾಕ್ಷ್ಯವನ್ನು ಒದಗಿಸಬಹುದು:**

(೧) ಯಾವ ವ್ಯಕ್ತಿಯ ಅಥವಾ ವಸ್ತುವಿನ ಗುರುತು ಪ್ರಶ್ನಿತವಾಗಿದೆಯೋ ಅಂಥ ವ್ಯಕ್ತಿಯ ಅಥವಾ ವಸ್ತುವಿನ ಗುರುತು.

(೨) ವಿವಾದ್ಯ ಸಂಗತಿಯು ಅಥವಾ ಸುಸಂಬದ್ಧ ಸಂಗತಿಯು ನಡೆದ ಸರಿಯಾದ ಸ್ಥಳ ಮತ್ತು ಸಮಯ.

(೩) ವಿವಾದ್ಯ ಸಂಗತಿಯ ಅಥವಾ ಸುಸಂಬದ್ಧ ಸಂಗತಿಯ ಪಕ್ಷಕಾರರ ನಡುವಣ ಸಂಬಂಧಗಳು.

೪. ಯಾವ ಬಗೆಯ ಮನೋಭಾವ (ಮನಸ್ಥಿತಿ) ಇದ್ದಿತು ಎಂದು ತೋರಿಸುವ ಸಂಗತಿಗಳನ್ನು ರುಜು ಮಾಡಲು ಅವಕಾಶವುಂಟು.

೧. ಇದರ ಅಡಿಯಲ್ಲಿ, ಹೇತು, ತಿಳಿವಳಿಕೆ, ಸದ್ಭಾವನೆ, ನಿರ್ಲಕ್ಷ್ಯ, ದುರ್ಭಾವನೆ ಅಥವಾ ಸದ್ಭಾವನೆ.

ತಿಳಿವಳಿಕೆ, ದೃಷ್ಟಾಂತಗಳು (a): ಸದ್ಭಾವನೆ ದೃಷ್ಟಾಂತಗಳು, (f) ಹೇತು ದೃಷ್ಟಾಂತಗಳು (j); ದುರ್ಭಾವನೆ ದೃಷ್ಟಾಂತಗಳು (k).

೩. ಈ ಪ್ರಕರಣದ ಆಳಿಕೆಯ ಮೇಲೆ ಪರಿಮಿತಿಗಳು.

೧) ಯಾವ ಮನಸ್ಥಿತಿಯನ್ನು ಕುರಿತು ಸಾಕ್ಷ್ಯವನ್ನು ಕೊಡಲಾಗಿದೆಯೋ ಅದು ಸಾಮಾನ್ಯ ಮನಸ್ಥಿತಿ– ಸಾಮಾನ್ಯ ಮನೋಭಾವ ಅಲ್ಲ. ಪ್ರಶ್ನಿತವಾದ ನಿರ್ದಿಷ್ಟ ವಿಷಯಕ್ಕೆ ಉಲ್ಲೇಖವಿರತಕ್ಕ ಮನಸ್ಥಿತಿ.

(೨) ಈ ಹಿಂದೆ ಎಸಗಿದ ಅಪರಾಧದ ಬಗೆಗಿನ ಸಾಕ್ಷ್ಯವು, ಆ ನಿರ್ದಿಷ್ಟ (ಪ್ರಶ್ನಿತವಾದ) ವಿಷಯಕ್ಕೆ ಸಂಬಂಧಿಸಿದಂತೆ ಇರುವ ಅವನ ಮನಸ್ಥಿತಿಯನ್ನು ತೋರಿರುವ ಸಾಕ್ಷ್ಯವಿರಬೇಕು.

೧೫. ಪ್ರಶ್ನಿತವಾದ ಕೃತ್ಯವನ್ನು ಉದ್ದೇಶಪೂರ್ವಕವಾಗಿ ಮಾಡಲಾಯಿತೆ ಹೊರತು ಆಕಸ್ಮಿಕವಾಗಿ ನಡೆಯಲಿಲ್ಲ ಎನ್ನುವುದನ್ನು ತೋರಿಸುವ ದೃಷ್ಟಿಯಿಂದ, ಕೃತ್ಯವು ಅದೇ ಬಗೆಯ ಕೃತ್ಯಗಳ ಸರಣಿಯ ಭಾಗವಾಗಿತ್ತು ಎಂದು ತೋರಿಸುವ ಸಾಕ್ಷ್ಯವನ್ನು ರುಜುವಾತು ಮಾಡಲು ಅವಕಾಶವುಂಟು.

ಉದಾಹರಣೆ– (ಎ) (ಬಿ)

೧. ಸಾಮಾನ್ಯವಾಗಿ ಒಂದೇ ಬಗೆಯ ಕೃತ್ಯಗಳ ಸಾಕ್ಷ್ಯವು ಅಷ್ಟೊಂದು ಸುಸಂಬದ್ಧವಾಗಿರುವುದಿಲ್ಲ. ಕಾರಣವೆಂದರೆ, ಒಬ್ಬ ವ್ಯಕ್ತಿಯು ಒಂದು ಕೃತ್ಯವನ್ನು ಮಾಡಿದರೆ, ಅವನು ಪ್ರಶ್ನಿತವಾದ ಆ ನಿರ್ದಿಷ್ಟ ಕೃತ್ಯವನ್ನು ಮಾಡಿರುವನೆಂದು ಊಹಿಸುವುದು ಸಮಂಜಸವಾಗಲಿಕ್ಕಿಲ್ಲ.

೧೬. ಒಂದು ನಿರ್ದಿಷ್ಟ ಕೃತ್ಯವನ್ನು ಮಾಡಲಾಯಿತೆ ಅಥವಾ ಇಲ್ಲವೆ ಎಂಬುದು ಪ್ರಶ್ನೆ ಆಗಿರುವಾಗ,

ಉದಾ: (ಎ) (ಬಿ)

ಇದು ಸಂಭಾವ್ಯತೆಯನ್ನು ತೋರಿಸುತ್ತದೆ.

ಇದು ನಿರ್ದಿಷ್ಟ ಪತ್ರವು 'ಅ'ನಿಗೆ ತಲುಪಿತೋ ಇಲ್ಲವೋ ಎಂಬುದು ಪ್ರಶ್ನೆ. ಪತ್ರವನ್ನು ಅಂಚೆಗೆ ಹಾಕಲಾಗಿತ್ತೇ. ಆದರೆ ಅದು ಡೆಡ್ ಲೆಟರ್ ಕಚೇರಿಯಿಂದ ವಾಪಸು ಬರಲಿಲ್ಲವೆಂಬ ಸಂಗತಿಯನ್ನು ರುಜುವಾತು ಮಾಡಬಹುದು.

೧೩. ಅಧಿಕಾರಿಗಳು ಮತ್ತು ರೂಢಿಗಳನ್ನು ರುಜುವಾತು ಮಾಡುವಲ್ಲಿ ವ್ಯವಹಾರಗಳು ಮತ್ತು ಉದಾಹರಣೆಗಳ ಸಾಕ್ಷ್ಯ.

೧. ಅಧಿಕಾರ ಎಂಬ ಪದದ ವ್ಯಾಪ್ತಿ

(ಎ) ಮೂರು ಪ್ರಕಾರದ ಅಧಿಕಾರಗಳಿರುತ್ತವೆ.

**ಖಾಸಗಿ–** ಖಾಸಗಿದಾರಿಯ ಅಧಿಕಾರ.

**ಸಾಮಾನ್ಯ–** ಯಾವುದೇ ಗಣನೀಯ ಪ್ರಮಾಣದ ವರ್ಗಕ್ಕೆ– ಸಾಮಾನ್ಯ ಅಧಿಕಾರ ಅಂದರೆ ಒಂದು ನಿರ್ದಿಷ್ಟ ಗ್ರಾಮದ ನಿವಾಸಿಗಳು ನಿರ್ದಿಷ್ಟ ಬಾವಿಯ ನೀರನ್ನು ಉಪಯೋಗಿಸಲು ಹೊಂದಿರುವ ಅಧಿಕಾರ. ಉದಾಹರಣೆ: ಕಲಮು ೪೮ ನೋಡಿ.

**ಸಾರ್ವಜನಿಕ:** ಈ ಅಧಿಕಾರವನ್ನು ಅಧಿನಿಯಮದಲ್ಲಿ ಪರಿಭಾಷಿಸಿಲ್ಲ. ಪ್ರತಿಯೊಂದು ಸಾರ್ವಜನಿಕ ಅಧಿಕಾರವು, ಈ ಹಿಂದಿನ ಸಾಮಾನ್ಯ ಅಧಿಕಾರದ ಪರಿಭಾಷೆಯ ಭಾವದಲ್ಲಿ ಸಾಮಾನ್ಯ ಅಧಿಕಾರವೇ. ಆದರೆ, ಇಂಗ್ಲಿಷ್ ಕಾನೂನು ಪ್ರಕಾರ ಪ್ರತಿಯೊಂದು ಸಾಮಾನ್ಯ ಅಧಿಕಾರವು ಸಾರ್ವಜನಿಕ ಅಧಿಕಾರವಲ್ಲ.

ಈ ಪ್ರಕರಣವು ಎಲ್ಲ ಅಧಿಕಾರಿಗಳಿಗೆ ಅನ್ವಯವಾಗುತ್ತದೆ. ಯಾವುದೇ ಎಂಬ ಪದದ ನಿಮಿತ್ತ, ಖಾಸಗಿ, ಸಾಮಾನ್ಯ ಅಥವಾ ಸಾರ್ವಜನಿಕ ಆಗಿದ್ದರೂ ಸರಿಯೆ, ಅನ್ವಯವಾಗುತ್ತದೆ.

(ಬಿ) ಈ ಪ್ರಕರಣವು ಎಲ್ಲ ಪ್ರಕಾರದ ಅಧಿಕಾರಗಳಿಗೆ ಅನ್ವಯವಾಗುತ್ತದೆಯೇ? ಪ್ರತಿಯೊಂದು ಎಂಬ ಪದವು ಇಲ್ಲದಿರುವುದೇ ಈ ಪ್ರಶ್ನೆಗೆ ಕಾರಣ. ಒಮ್ಮೆ ಈ ಪ್ರಶ್ನೆಯನ್ನು ಕುರಿತ ತೀರ್ಮಾನಗಳಲ್ಲಿ ಘರ್ಷಣೆ ಇರುತ್ತಿತ್ತು. ಒಂದು ಅಭಿಪ್ರಾಯದ ಪ್ರಕಾರ ಎಲ್ಲ ಅಧಿಕಾರಗಳನ್ನು ಒಳಗೊಂಡಿರುತ್ತದೆ. ಇನ್ನೊಂದು ಅಭಿಪ್ರಾಯದ ಪ್ರಕಾರ ನಿಗಮಿತ ಅಧಿಕಾರಗಳನ್ನು ಮಾತ್ರ ಒಳಗೊಂಡಿರುತ್ತದೆ.

ಈಗಿನ ಅಭಿಪ್ರಾಯದ ಪ್ರಕಾರದ ಸದರಿ ಪ್ರಕರಣವು ಎಲ್ಲ ಪ್ರಕಾರದ ಅಧಿಕಾರಗಳನ್ನು ಒಳಗೊಂಡಿರುತ್ತದೆ.

**೨. ರೂಢಿ ಎಂಬ ಪದದ ವ್ಯಾಪ್ತಿ**

ರೂಢಿಯು ಪ್ರಾಚೀನ ರೂಢಿಗೆ ಮಾತ್ರ ಪರಿಮಿತವಾಗಿಲ್ಲ. ಆದರೆ ರೂಢಿಗಳನ್ನೂ ಆಚರಣೆಗಳನ್ನೂ ಒಳಗೊಳ್ಳುತ್ತದೆ. ಆಚರಣೆ ಎಂಬ ಅರ್ಥದಲ್ಲಿ ಜನಸಮುದಾಯವು ಒಂದು ವಿಶಿಷ್ಟ ಸ್ಥಳದಲ್ಲಿ ಈಗ ಅಥವಾ ಇತ್ತೀಚೆಗೆ ಮಾಡುವ ಅಭ್ಯಾಸವುಳ್ಳ ಕೃತ್ಯವು ಒಳಗೊಳ್ಳುತ್ತದೆ. ಆ ವಿಶಿಷ್ಟ ಅಭ್ಯಾಸವು ಇತ್ತೀಚಿನದಾಗಿರಬಹುದು. ಅಥವಾ ಬಹುಕಾಲದಿಂದಲೂ ಮುಂದುವರಿದುಕೊಂಡು ಬಂದುದಾಗಿರಬಹುದು. ಸಾಮಾನ್ಯವಾಗಿ ಆಚರಿಸುವ ಅಭ್ಯಾಸ ಆದರೆ ಅದನ್ನು ಆಚರಣೆ ಎಂದು ಕರೆಯುತ್ತಾರೆ.

ಬಿ. ರೂಢಿಯು

(i) ಖಾಸಗಿ ರೂಢಿ – ಕುಟುಂಬ ರೂಢಿ

(ii) ಸಾಮಾನ್ಯ ರೂಢಿ – ಜನಸಮುದಾಯದ ಗಣನೀಯ ವರ್ಗಕ್ಕೆ ಸಾಮಾನ್ಯವಾದ ರೂಢಿ

ಮತ್ತು ಅದು

(ಎ) ಸ್ಥಳೀಯವಾಗಿರಬಹುದು.

(ಬಿ) ಜಾತಿ ಅಥವಾ ಒಂದು ವರ್ಗದ ರೂಢಿಯಾಗಿರಬಹುದು.

(ಸಿ) ವ್ಯಾಪಾರ ರೂಢಿ ಅಥವಾ ಆಚರಣೆ ಆಗಿರಬಹುದು.

(iii) ಸಾರ್ವಜನಿಕ – ಪರಿಭಾಷಿಸಿಲ್ಲ.

ಸಿ. ಈ ಪ್ರಕರಣವು ಎಲ್ಲ ರೂಢಿಗಳು ಮತ್ತು ಆಚರಣೆಗಳನ್ನು ಒಳಗೊಂಡಿರುತ್ತದೆ.

ಡಿ. ಕೊಡಬೇಕಾದ ಸಾಕ್ಷ್ಯವು, ಅಧಿಕಾರ ಅಥವಾ ರೂಢಿಯು ಯಾವ ವ್ಯವಹಾರ ಅಥವಾ ಸನ್ನಿವೇಶದಲ್ಲಿ (ಪ್ರಸಂಗ) ಉದ್ಭವಿಸಿತೋ ಅದನ್ನು ಕುರಿತ ಸಾಕ್ಷ್ಯವಾಗಿರಬೇಕು.

**ಎ. ವ್ಯವಹಾರ ಅಥವಾ ಪ್ರಸಂಗದ ಅರ್ಥ**

(೧) ವ್ಯವಹಾರ– ಇಬ್ಬರು ಅಥವಾ ಹೆಚ್ಚು ಜನ ವ್ಯಕ್ತಿಗಳ ನಡುವೆ ನಡೆಸಲಾಗುವ ದಂಧೆ ಅಥವಾ ವಹಿವಾಟು.

(೨) ಪ್ರಸಂಗ– ಸಂಭವಿಸುವ ಸಂದರ್ಭ– ವ್ಯಕ್ತಿಯು ಒಂದು ವಿಶಿಷ್ಟ ರೀತಿಯಲ್ಲಿ ಕಾರ್ಯ ಮಾಡುವುದು.

ಬಿ. ರುಜುವಾತು ವ್ಯವಹರಣೆಗಳಿಗೆ ಪಕ್ಷಕಾರರಾದವರ ಸಂದರ್ಭಗಳಲ್ಲಿನ ಹಿಂದಿನ ವಹಿವಾಟುಗಳಿಗೆ ನಿರ್ಬಂಧಿತವಾಗಿರುವುದಿಲ್ಲ. ಯಾವುದೇ ಎಂಬ ಪದದ ಬಳಕೆಯ ಮೂಲಕ ವ್ಯವಹಾರವು ವ್ಯಾಜ್ಯದ ಪಕ್ಷಕಾರರ ನಡುವೆ ಏರ್ಪಟ್ಟಿರಬೇಕು ಎಂದು ಅರ್ಥವಾಗುವುದಿಲ್ಲ. ಅದು (ವ್ಯವಹಾರವು) ವ್ಯಾಜ್ಯದ ಪಕ್ಷಕಾರ ಮತ್ತು ಒಬ್ಬ ಅಪರಿಚಿತ ಇವರ ನಡುವೆ ಅಥವಾ ಅಪರಿಚಿತರ ನಡುವೆ ಏರ್ಪಟ್ಟಿರಬಹುದು.

ಸಿ. ವ್ಯವಹಾರ ಮತ್ತು ಪ್ರಸಂಗ ಎಂಬ ಪದಗಳು ಸಾಕಷ್ಟು ತೊಂದರೆಗೆ ಎಡೆಮಾಡಿಕೊಟ್ಟಿವೆ. ಆ ಪದದ ಬಳಕೆಯಲ್ಲಿ, ವ್ಯವಹಾರ ಮತ್ತು ಪ್ರಸಂಗದ ಸಾಕ್ಷ್ಯವಾಗಿ ಅದೇ ಪಕ್ಷಕಾರರಲ್ಲಿ (ಸಾರ್ವಜನಿಕ ಸ್ವಭಾವವಲ್ಲದ) ಸಂಭವಿಸಿದ ವ್ಯವಹಾರವಾಗಿರದ ವ್ಯವಹಾರದಲ್ಲಿ ಉಚ್ಚರಿಸಲಾದ ಕ್ರಿಯೆಯನ್ನು ಮತ್ತು ಆ ವ್ಯವಹಾರವನ್ನು ಒಳಗೊಳ್ಳುವುದೋ ಹೇಗೆ ಎಂಬ ಪ್ರಶ್ನೆಯನ್ನು ಕೇಳುವುದುಂಟು.

ಈ ಪ್ರಶ್ನೆಯನ್ನು ಗಜ್ಜುಲಾಲ್ ಎಂಬ ಫತ್ತೇಲಾಲ್ ಮೊಕದ್ದಮೆಯಲ್ಲಿ ಪರ್ಯಾಲೋಚಿಸಲಾಯಿತು.

III ವಿವಾದ್ಯ ಸಂಗತಿಗಳು ಅಥವಾ ಸುಸಂಬದ್ಧ ಸಂಗತಿಗಳು ಅಥವಾ ವಿವಾದ್ಯ ಸಂಗತಿ ಅಥವಾ ಸುಸಂಬದ್ಧ ಸಂಗತಿ ಆಗುವ ಸಂಗತಿ– ಇವುಗಳಿಗೆ ಅನುಗುಣವಾಗುವ ಸಂಗತಿಗಳು ಅತ್ಯಂತ ಸಂಭಾವ್ಯ ವಾಗಿರುತ್ತವೆ.

೧. ಈ ಪ್ರಕರಣವನ್ನು ನಿಸ್ಸಂದೇಹವಾಗಿಯೂ ಅತ್ಯಂತ ವಿಶಾಲವಾದ ಮತ್ತು ವ್ಯಾಪ್ತಿಯುಳ್ಳ ಪದಗಳಲ್ಲಿ ಅಭಿವ್ಯಕ್ತಗೊಳಿಸಲಾಗಿದ್ದು, ಒಂದು ಸಂಗತಿಯು ಇನ್ನೊಂದು ಸಂಗತಿಯೊಡನೆ, ತರ್ಕಸರಣಿಯ ಮೂಲಕ ಸಂಬಂಧ ಕಲ್ಪಿಸಿ, ವಿವಾದ್ಯ ಸಂಗತಿಯ ಅಥವಾ ಸುಸಂಬದ್ಧ ಸಂಗತಿಯ ಮೇಲೆ ಪ್ರಭಾವ ಬೀರುವುದಾದರೆ, ಅಂಥ ಯಾವುದೇ ಸಂಗತಿಯನ್ನು, ರುಜುವಾತಿನಲ್ಲಿ ಅನುಮತಿಸಬಹುದು ಎಂಬ ತೀರ್ಮಾನಕ್ಕೆ ಬರಬಹುದು.

೨. ಅಷ್ಟೊಂದು ವ್ಯಾಪಕ ಅರ್ಥವು ಶಾಸಕಾಂಗದ ಉದ್ದೇಶವಾಗಿರಲಿಲ್ಲ ಎನ್ನುವುದು **'ಅತ್ಯಂತ'** ಎಂಬ ಪದಪ್ರಯೋಗದಿಂದ ವ್ಯಕ್ತವಾಗುತ್ತದೆ. 'ಅತ್ಯಂತ ಸಂಭವನೀಯ' ಎಂಬ ಪದವು ಸೂಚಿಸುವುದೆಂದರೆ,

ವಿವಾದ್ಯ ಸಂಗತಿ ಮತ್ತು ರುಜುವಾತು ಮಾಡಬೇಕಾದ ಸಂಗತಿ ಇವುಗಳ ಸಂಬಂಧವು, ಸಹ ಅಸ್ತಿತ್ವವು ಅತ್ಯಂತ ಸಂಭವನೀಯವಾಗುವ ಹಾಗೆ ನಿಕಟವಾಗಿರಬೇಕಾಗುತ್ತದೆ.

೩. ಈ ಪ್ರಕರಣದ ಅಡಿಯಲ್ಲಿ ಒಂದು ಸಂಗತಿಯನ್ನು ಅನುಮತಿಯೋಗ್ಯವಾಗಿ ಮಾಡಬೇಕಾಗಿರುವಲ್ಲಿ, (ಎ) ಅದನ್ನು ತರ್ಕಸಂಗತವಾದ ನಿರ್ಣಾಯಕ ಸಾಕ್ಷ್ಯದ ಮೂಲಕ ಸ್ಥಾಪಿತವಾಗಬೇಕು ಮತ್ತು (ಬಿ) ಹಾಗೆ ಸ್ಥಾಪಿತವಾದ ತರುವಾಯ, ವಿವಾದದಲ್ಲಿರುವ ವಿಷಯವನ್ನು ಕುರಿತಂತೆ ಸಮಂಜಸವಾದ ಪೂರ್ವಭಾವನೆಗೆ ಅಥವಾ ಊಹೆಗೆ ಅವಕಾಶ ಒದಗಿಸಬೇಕು.

೪. ಈ ಪ್ರಕರಣದ ನಿಬಂಧನೆಗಳು ವ್ಯಾಪಕವಾಗಿದ್ದರೂ, ಅಧಿನಿಯಮದ ಇತರ ಪ್ರಕರಣಗಳಿಗೆ ಒಳಪಟ್ಟು ಅವುಗಳನ್ನು ಓದಿಕೊಳ್ಳಬೇಕು.

**ದೃಷ್ಟಾಂತಗಳು–**

೧. ರಾಮಾನುಜನ್ ವಿರುದ್ಧ ಸಾರ್ವಭೌಮ,

*೫೮ Mad, ೫೨೩ F.B.*

ಸೀತಮ್ಮಾಳ್ ಅವಳನ್ನು ಹತ್ಯೆ ಮಾಡಿದ್ದನೆಂದು ರಾಮಾನುಜನ್ ಆಪಾದಿತನಾಗಿದ್ದನು. ಸಂಗತಿಗಳನ್ನು ಹಿಂದಿನ ಪುಟದಲ್ಲಿ ಕೊಟ್ಟಿದೆ.

ಹತ್ಯೆಗೆ ಯಾರೂ ಸಾಕ್ಷಿಗಳಿಲ್ಲ. ಪ್ರಾಸಿಕ್ಯೂಷನ್ ಕೆಳಕಂಡ ಸಂಗತಿಗಳ ಸಾಕ್ಷ್ಯವನ್ನು ಒದಗಿಸಿತು.

(೧) ಸೀತಮ್ಮಾಳ್ ತನ್ನ ಗಂಡನನ್ನು ತೊರೆದಾಗ ಒಬ್ಬ ಕೈದಿಯ ಜತೆಗೂಡಿ ಹೋದಳು. ಹೋಗುವಾಗ ಕೆಲವು ಆಭರಣಗಳನ್ನು ಮತ್ತು ಬೆಳ್ಳಿಯ ಪಾತ್ರೆಗಳನ್ನು ಒಯ್ದಳು.

(೨) ಸೀತಮ್ಮಾಳ್ ಮತ್ತು ಆಪಾದಿತನು ವಿವಿಧ ವಿಳಾಸಗಳಲ್ಲಿ ಒಟ್ಟಿಗೆ ವಾಸವಾಗಿದ್ದರು.

(೩) ಅವರಿಬ್ಬರು ಕೊನೆಯಲ್ಲಿ ಕಂಡುಬಂದದ್ದು, ಜನವರಿ ೧೧ನೇ ತಾರೀಖು, ೨೪, ಪೆದ್ದುನಾಯ್ಕನ್ ಸ್ಟ್ರೀಟ್ ಎಂಬ ಸ್ಥಳದಲ್ಲಿ.

(೪) ೧೨ನೇ ತಾರೀಖಿನ ಮುಂಜಾನೆ, ಹಾಲಿನವಳು ಅಲ್ಲಿಗೆ ಹೋದಾಗ, ಬಾಗಿಲಿಗೆ ಬೀಗ ಹಾಕಿತ್ತು.

(೫) ೧೩ನೇ ತಾರೀಖು ಅಥವಾ ಆ ಸುಮಾರಿಗೆ ಅವನು ಸೀತಮ್ಮಾಳ್ ಅವಳ ಕೆಲವು ಆಭರಣಗಳನ್ನು ಒತ್ತೆಯಿಟ್ಟನು.

(೬) ಹೆಣವನ್ನು ಸುತ್ತಿಟ್ಟ ಚಾಪೆಯನ್ನು ಅವನು ಖರೀದಿಸಿದ್ದನು.

೨. ಸಂದಾಯ ಮಾಡಬೇಕಾಗಿತ್ತೆಂದು ಹೇಳಲಾದ ಸಾಲದ ಬಗ್ಗೆ ದೀರ್ಘ ಅವಧಿಯವರೆಗೆ ತಗಾದೆ ಮಾಡದಿರುವುದು.

೩. ಜೀವನಾಂಶ ಪ್ರಕರಣದಲ್ಲಿ ಪ್ರತಿವಾದಿಯು ತಂದೆ ಎಂದು ರುಜುವಾತು ಮಾಡಲು ಮಗುವಿನೊಂದಿಗೆ ಅವನ ಹೋಲಿಕೆ.

11 (೨) ವಿವಾದ್ಯ ಸಂಗತಿಗಳು ಅಥವಾ ಸುಸಂಬದ್ಧ ಸಂಗತಿಗಳೊಂದಿಗೆ ಅಸಂಗತವಾಗಿರುವ ಅಥವಾ ಅವುಗಳನ್ನು ಅತ್ಯಂತ ಸಂಭವನೀಯಗೊಳಿಸುವ ಸಂಗತಿಗಳು.

**ದೃಷ್ಟಾಂತಗಳು**

೧. ಸಾಲವಾಗಿ ಕೊಟ್ಟ ಹಣದ ಬಗೆಗೆ ಕೈಕೊಂಡ ಕ್ರಮದ ಸಂಬಂಧದಲ್ಲಿ, ಸಾಲ ಕೊಟ್ಟವನು ಎಂದು ಹೇಳಲಾದವನ ಬಡತನವು ಸುಸಂಬದ್ಧವಾಗುತ್ತದೆ. ಕಾರಣವೆಂದರೆ ಅದು ಸಾಲ ನೀಡಿಕೆಗೆ ಅಸಂಗತವಷ್ಟೆ.

೨. ಸಾಕ್ಷಿಯು ಅಥವಾ ಆಪಾದಿತನು ಬೇರೆ ಸ್ಥಳದಲ್ಲಿ ಇದ್ದನು ಎನ್ನುವುದು ಸುಸಂಬದ್ಧವಾಗುತ್ತದೆ. ಏಕೆಂದರೆ, ಅಪರಾಧದ ಸ್ಥಳದಲ್ಲಿ ಇದ್ದನು ಎಂದು ಹೇಳಲಾದ ಹಾಜರಾತಿಗೆ ಅದು ಅಸಂಗತವಷ್ಟೆ.

೩. ಹೆಬ್ಬೆರಳ ಗುರುತು 'ಅ'ನದೋ ಅಲ್ಲವೋ ಎಂಬ ಪ್ರಶ್ನೆಯನ್ನು ನಿರ್ಧರಿಸುವ ಪ್ರಕರಣ. ಇನ್ನೊಂದು ದಸ್ತಾವೇಜಿನಲ್ಲಿನ ಅವನ ಹೆಬ್ಬೆರಳ ಗುರುತನ್ನು ಸಾಕ್ಷ್ಯವಾಗಿ ಕೊಡಬಹುದು. ಒಂದೆಡೆ ಇರುವ ಗುರುತಿಗೂ ಇನ್ನೊಂದೆಡೆ ಇರುವ ಗುರುತಿಗೂ ಹೋಲಿಕೆ ಇಲ್ಲದೆ ಅವನ ಹೆಬ್ಬೆರಳ ಗುರುತಿನ ಕಥೆಯು ಅಸಂಭವನೀಯವೆಂದು ತೋರುವಂತೆ ಮಾಡುವ ಸಂದರ್ಭದಲ್ಲಿ ಅಂಥ ಸಾಕ್ಷ್ಯ ಅತ್ಯಗತ್ಯ.

**೫೨–೫೫ ಶೀಲಕ್ಕೆ ಸಂಬಂಧಿಸಿದ ಸಂಗತಿಗಳ ರುಜುವಾತು**

೧. ಶೀಲವನ್ನು ಕುರಿತ ಸಾಕ್ಷ್ಯಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಎರಡು ವರ್ಗಗಳು ಇರುತ್ತವೆ.

I. ಸಾಕ್ಷಿಗಳ ಶೀಲಕ್ಕೆ ಸಂಬಂಧಿಸಿದವುಗಳು.

II. ಪಕ್ಷಕಾರರ ಶೀಲಕ್ಕೆ ಸಂಬಂಧಿಸಿದವುಗಳು.

**ಸಾಕ್ಷಿಗಳ ಶೀಲ**

೧. ಸಾಕ್ಷಿಯ ಶೀಲವು ಅವನ ಪ್ರತ್ಯಯದ ಪರಿಣಾಮ ಬೀರುವ ಕಾರಣ ಅದು ಯಾವಾಗಲೂ ಮಹತ್ವಪೂರ್ಣ. ಸಾಕ್ಷಿಯ ವಿಶ್ವಾಸಾರ್ಹತೆಯು ಯಾವಾಗಲೂ ವಿವಾದ್ಯ ವಿಷಯ. ಕಾರಣವೆಂದರೆ, ನ್ಯಾಯಾಲಯವು, ತನಗೆ ಒಪ್ಪಿಸಲಾದ ವಿಷಯಗಳ ಮೇಲೆ ನಿರ್ಣಯಕ್ಕೆ ಬರಬೇಕಾದದ್ದು ಸಾಕ್ಷಿಗಳ ಮಾಧ್ಯಮದ ಮೂಲಕವೇ. ಆದಕಾರಣ ಅಂಥ ಸಾಕ್ಷಿಗಳು ವಿಶ್ವಾಸಕ್ಕೆ ಪಾತ್ರರಾದವರೆ ಹೇಗೆ ಎಂದು ಖಚಿತಪಡಿಸಿಕೊಳ್ಳಬೇಕಾದದ್ದು ಮಹತ್ವಪೂರ್ಣವೂ, ಪ್ರಧಾನವೂ ಆಗಿರುತ್ತದೆ. ಯಾವಾಗಲೂ, ಮತ್ತು ಮೊಕದ್ದಮೆಯಲ್ಲಿ ವಿಶ್ವಾಸ ಪಾತ್ರತೆಯ ಸಲುವಾಗಿ, ಉಳಿದ ವಿಚಾರಗಳ ಜತೆಯಲ್ಲಿ ಸಾಕ್ಷಿದಾರನಿಗೆ ಅವನ ಶೀಲವನ್ನು ಕುರಿತು ಪ್ರಶ್ನೆಗಳನ್ನು ಕೇಳಲು ಅವಕಾಶವುಂಟು.

*–ಕಲಮುಗಳು ೧೪೫–೧೫೩.*

**ಪಕ್ಷಕಾರನ ಶೀಲ**

೧. ಪಕ್ಷಕಾರನ ಶೀಲದ ಸಂಬಂಧದಲ್ಲಿ ಕೆಳಕಂಡವುಗಳನ್ನು ವಿಭಿನ್ನ ಎಂದು ಭಾವಿಸಬೇಕು, ಅಂದರೆ ಪಕ್ಷಕಾರನ ಶೀಲವು ವಿವಾದ್ಯವಾಗಿರುವ ಪ್ರಕರಣಗಳು.

ಮತ್ತು

ಅದು (ಶೀಲವು) ವಿವಾದ್ಯವಾಗಿಲ್ಲದ ಪ್ರಕರಣಗಳು.

ಪಕ್ಷಕಾರನ ಶೀಲವು ವಿವಾದ್ಯವಾಗಿರುವುದಿಲ್ಲ. ವ್ಯವಹರಣೆಗಳು ಕ್ರಿಮಿನಲ್ ಅಥವಾ ಸಿವಿಲ್ ಎಂಬುದನ್ನು ಗಮನಿಸದೆ, ಶೀಲಕ್ಕೆ ಸಂಬಂಧಿಸಿದ ಸಂಗತಿಗಳನ್ನು ರುಜುವಾತು ಮಾಡಲು ಅವಕಾಶವುಂಟು.

*ಕಲಮು ೫೨.*

**ದೃಷ್ಟಾಂತಗಳು**

(i) ಒಂದು ಸಿವಿಲ್ ದಾವೆಯಲ್ಲಿ "ಗವರ್ನೆಸ್ ಅವಳು ತನ್ನ ನಿಯೋಜಕನ ಸೇವೆಯಲ್ಲಿ ಇದ್ದಾಗ, ದಕ್ಷತೆಯುಳ್ಳವಳು, ಸಭ್ಯಳು ಮತ್ತು ಸುಸ್ವಭಾವದವಳು ಆಗಿದ್ದಳೇ" ಎಂಬುದು ವಿವಾದ್ಯವಾಗಿರುವಾಗ, ಸಾಕ್ಷಿದಾರರಿಗೆ, ಸಾಮಾನ್ಯ ದಕ್ಷತೆ, ಉತ್ತಮ ಆಚರಣೆ ಮತ್ತು ಸ್ವಭಾವ ಇವುಗಳನ್ನು ಕುರಿತು ಹೌದೋ ಅಲ್ಲವೋ ಎಂಬ ಪ್ರಶ್ನೆ ಕೇಳಲು ಅವಕಾಶವುಂಟು.

(ii) ಸಾಮಾನ್ಯ ಮೋಸದ ದಂಧೆಯನ್ನು ನಡೆಸುವ ಒಳಸಂಚಿಗಾಗಿರುವ ಒಂದು ಕ್ರಿಮಿನಲ್ ದಾವೆಯಲ್ಲಿ ಆಪಾದಿತನ ಸಾಮಾನ್ಯ ಶೀಲವನ್ನು ಕುರಿತು ಹೌದೋ ಅಲ್ಲವೋ ಎಂಬ ಪ್ರಶ್ನೆಗಳನ್ನು ಕೇಳಲು ಅವಕಾಶವುಂಟು.

ಪಕ್ಷಕಾರನ ಅಂಥ ಸಾಮಾನ್ಯ ಶೀಲವು ವಿವಾದದಲ್ಲಿ ಇಲ್ಲದಿದ್ದಾಗ, ಶೀಲದ ರುಜುವಾತಿಗೆ ಕಾನೂನಿನಲ್ಲಿ ಅವಕಾಶವಿಲ್ಲ.

*ಕಲಮು ೫೨.*

ಈ ನಿಯಮಕ್ಕೆ ಎರಡು ಅಪವಾದಗಳಿರುತ್ತವೆ. ಅವುಗಳ ಅಡಿಯಲ್ಲಿ, ಶೀಲವು ವಿವಾದ್ಯವಲ್ಲವಾಗಿದ್ದರೂ, ಶೀಲವನ್ನು ಕುರಿತ ಸಾಕ್ಷ್ಯಕ್ಕೆ ಅವಕಾಶವುಂಟು.

(i) ಸಿವಿಲ್ ದಾವೆಗಳಲ್ಲಿ, ಶೀಲಕ್ಕೆ ಸಂಬಂಧಿಸಿದ ಸಂಗತಿಗಳು ನಷ್ಟಭರ್ತಿ ಮೊಬಲಗಿನ ಮೇಲೆ ಪರಿಣಾಮ ಬೀರುವಂತಿದ್ದರೆ, ಅಂಥ ಸಂಗತಿಗಳ ರುಜುವಾತಿಗೆ ಅವಕಾಶವುಂಟು.

*ಕಲಮು ೫೫.*

(ii) ಕ್ರಿಮಿನಲ್ ದಾವೆಗಳಲ್ಲಿ,

(i) ಆಪಾದಿತನು ಸಚ್ಛೀಲವಂತನೆಂದು ತೋರಿಸುವ ಸಂಗತಿಗಳ ರುಜುವಾತಿಗೆ ಯಾವಾಗಲೂ ಅವಕಾಶವುಂಟು. *ಕಲಮು ೫೩.*

(ii) ಕೆಳಕಂಡ ಪ್ರಕರಣದಲ್ಲಿ ಹೊರತು, ಆಪಾದಿತನು ದುಶ್ಶೀಲವಂತನೆಂದು ತೋರಿಸುವ ಸಂಗತಿಗಳ ರುಜುವಾತಿಗೆ ಅವಕಾಶವಿರುವುದಿಲ್ಲ.

ಆಪಾದಿತನು ತಾನು ಸಚ್ಛೀಲವಂತನೆಂಬ ಬಗ್ಗೆ ಸಾಕ್ಷ್ಯವನ್ನು ಒದಗಿಸಿರುವ ಪ್ರಕರಣ.

ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳ ಸಂಬಂಧದಲ್ಲಿ ಹೀಗೆ ಭೇದ ಮಾಡಿರುವ ಬಗೆಗಿನ ಕಾರಣಗಳು ಸ್ಪಷ್ಟವಾಗಿರುತ್ತವೆ.

(೧) ದುಶ್ಶೀಲವು ಆಪಾದಿತನ ವಿರುದ್ಧ ಪೂರ್ವಗ್ರಹವನ್ನು ಮಾತ್ರ ಉಂಟುಮಾಡುತ್ತದೆ. ಅವನ ವಿರುದ್ಧ ಪ್ರಕರಣವನ್ನು ಸಾಬೀತು ಮಾಡುವುದಿಲ್ಲ. ಆಪಾದಿತನು ತನ್ನ ಸಚ್ಛೀಲದ ಬಗ್ಗೆ ಸಾಕ್ಷ್ಯವನ್ನು ಒದಗಿಸುವ ಮೂಲಕ ಅದನ್ನು ವಿವಾದ್ಯ ಸಂಗತಿ ಆಗಿ ಮಾಡಿದ್ದ ಹೊರತು, ಅದು ಸುಸಂಬದ್ಧವಾಗುವುದಿಲ್ಲ. ಅಂದರೆ ಹಾಗೆ ಅವನು ಸಾಕ್ಷ್ಯವನ್ನು ಒದಗಿಸಿದ ಸಂದರ್ಭದಲ್ಲಿ ಮಾತ್ರ ಸುಶ್ಶೀಲದ ಸಾಕ್ಷ್ಯವನ್ನು ಒದಗಿಸ ಬಹುದು.

(೨) ಸಚ್ಛೀಲವು ಆಪಾದಿತನ ನಿರ್ದೋಷತೆಯನ್ನು ಬಲಗೊಳಿಸುತ್ತದೆ. ಆದ್ದರಿಂದ ಮಾನವೀಯ ಕಾರಣಗಳಿಗಾಗಿ ಆ ಕುರಿತ ಸಾಕ್ಷ್ಯಕ್ಕೆ ಅವಕಾಶ ನೀಡಬೇಕಾಗುತ್ತದೆ.

**ಎರಡು ಸಂಗತಿಗಳನ್ನು ಗಮನದಲ್ಲಿಡಬೇಕು.**

**೧. ಶೀಲ ಎಂಬ ಪದದಲ್ಲಿ ಏನು ಒಳಗೊಂಡಿರುತ್ತದೆ?**

**ಕಲಮು ೫**

ಶೀಲ ಎಂಬ ಪದವು ಖ್ಯಾತಿ ಮತ್ತು ಮನೋಭಾವ ಇವೆರಡನ್ನು ಒಳಗೊಳ್ಳುತ್ತದೆ. ಇದು ಬ್ರಿಟಿಷ್ ಕಾನೂನಿನಲ್ಲಿರುವ ವ್ಯಾಖ್ಯೆಗೆ ವಿಭಿನ್ನವಾದುದು. ಬ್ರಿಟಿಷ್ ಕಾನೂನಿನ ಪ್ರಕಾರ ಶೀಲವು ಖ್ಯಾತಿಗೆ ಮಾತ್ರ ಪರಿಮಿತವಾಗಿರುತ್ತದೆ.

ಖ್ಯಾತಿ ಮತ್ತು ಮನೋಭಾವ ಇವುಗಳಲ್ಲಿ ವ್ಯತ್ಯಾಸವುಂಟು. ಖ್ಯಾತಿ ಎಂದರೆ ಒಬ್ಬ ವ್ಯಕ್ತಿಯನ್ನು ಕುರಿತು ಇತರರು ಏನು ವಿಚಾರ ಮಾಡುತ್ತಾರೆ. ಮತ್ತು ಅದು ಸಾರ್ವಜನಿಕ ಅಭಿಪ್ರಾಯದ ಮೂಲಕ ಉಂಟಾಗುತ್ತದೆ. ಖ್ಯಾತಿಯು ಅಂಥ ಅಭಿಪ್ರಾಯ ದ್ವಾರಾ ಒಬ್ಬ ವ್ಯಕ್ತಿಯು ಪಡೆದ ಪ್ರತ್ಯಯ.

ಮನೋಭಾವ ಕೃತ್ಯದ ಸ್ತೋತ್ರವನ್ನೂ, ಹೇತುವನ್ನು ಒಳಗೊಳ್ಳುತ್ತದೆ, ಶಾಶ್ವತವಾಗಿರುತ್ತದೆ, ಸ್ಥಾಪಿತ ವಾಗಿರುತ್ತವೆ ಮತ್ತು ಮನಸ್ಸಿನ ಸಕಲ ಚೌಕಟ್ಟನ್ನೂ ಮತ್ತು ರಚನೆಯನ್ನೂ ಗಮನಿಸುತ್ತದೆ.

**೨. ಶೀಲವನ್ನು ರುಜುವಾತು ಮಾಡುವುದು ಹೇಗೆ?**

ಒಬ್ಬ ಮನುಷ್ಯನ ಶೀಲವನ್ನು ರುಜುವಾತು ಮಾಡಲು ಎರಡು ದಾರಿಗಳಿರುತ್ತವೆ. ಒಂದು ದಾರಿ ಸಾಮಾನ್ಯ ಖ್ಯಾತಿ ಮತ್ತು ಮನೋಭಾವವನ್ನು ಕುರಿತು ಸಾಕ್ಷ್ಯವನ್ನು ಒದಗಿಸುವುದು. ಇನ್ನೊಂದು ದಾರಿ ವಿಶಿಷ್ಟ ಕೃತ್ಯಗಳನ್ನು ಕುರಿತು ಸಾಕ್ಷ್ಯವನ್ನು ಒದಗಿಸುವುದು. ಅಂದರೆ ಆ ಮೂಲಕ ಜಾತಿ ಮತ್ತು ಮನೋಭಾವಗಳ ಆಧಾರವನ್ನು ಊಹಿಸಲು ಸಾಧ್ಯವಾಗುತ್ತದೆ.

**೫೫ರ ವಿವರಣೆ**

ಸಾಕ್ಷ್ಯ ಅಧಿನಿಯಮದಲ್ಲಿ ಸಾಮಾನ್ಯ ಖ್ಯಾತಿ ಮತ್ತು ಮನೋಭಾವಗಳನ್ನು ಕುರಿತು ಮಾತ್ರವೇ ಸಾಕ್ಷ್ಯವನ್ನು ಕೊಡಲು ಅವಕಾಶವುಂಟು.

**೫೫ರ ವಿವರಣೆ**

ಇದಕ್ಕೆ ಒಂದೇ ಒಂದು ಅಪವಾದವುಂಟು. ಆ ಮೇರೆಗೆ ದುಶ್ಶೀಲದ ಬಗೆಗಿನ ಸಾಕ್ಷ್ಯವಾಗಿ ಹಿಂದಿನ ಅಪರಾಧ ನಿರ್ಣಯದ (ದೋಷ ಸಿದ್ಧಿಯ) ಸಾಕ್ಷ್ಯವನ್ನು ಕೊಡಬಹುದು.

**ಕಲಮು ೪೫–೫೧**

**ಅಭಿಪ್ರಾಯಗಳ ರುಜುವಾತು**

೧. ಸಾಕ್ಷಿಗಳು– ನ್ಯಾಯಾಲಯಕ್ಕೆ ಪ್ರಕರಣವನ್ನು ಕುರಿತ ಮಾಹಿತಿಯನ್ನು ಒದಗಿಸುತ್ತಾರೆ. ಆಮೇಲೆ ತನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ನ್ಯಾಯಾಲಯದ ಕರ್ತವ್ಯವಾಗುತ್ತದೆ.

೨. ಸಾಕ್ಷಿದಾರರು ಏನು ವಿಚಾರ ಮಾಡಿದರು ಅಥವಾ ಏನನ್ನು ನಂಬಿದರು ಎಂದು ತೋರಿಸುವುದು ಎರಡು ಕಾರಣಗಳಿಗಾಗಿ ಆಕ್ಷೇಪಾರ್ಹವಾಗುತ್ತದೆ: (೧) ಆ ಮೂಲಕ ಏನನ್ನೂ ತೋರಿಸಲಾಗುವುದಿಲ್ಲ

ಮತ್ತು (೨) ಆ ಮೂಲಕ ನ್ಯಾಯಾಧೀಶನ ಕಾರ್ಯಕ್ಷೇತ್ರದ ಮೇಲೆ ಅತಿಕ್ರಮಣ ಮಾಡಿದಂತಾಗುತ್ತದೆ.

೩. ನಿಯಮದ ಪ್ರಕಾರ ಸಾಕ್ಷಿದಾರರು ಸಂಗತಿಗಳನ್ನು ಹೇಳತಕ್ಕದ್ದು, ಹೊರತು ತಮ್ಮ ಅಭಿಪ್ರಾಯಗಳನ್ನು ಹೇಳತಕ್ಕದ್ದಲ್ಲ. ನಿಯಮವನ್ನು ಕಟ್ಟುನಿಟ್ಟಾಗಿ ಅನ್ವಯಿಸಿದರೆ ಎರಡು ತೊಂದರೆಗಳನ್ನು ಎದುರಿಸ ಬೇಕಾಗುತ್ತದೆ.

(೧) ತೃತೀಯ ವ್ಯಕ್ತಿಯು (ಎಂದರೆ ವಾದಿಯು ಅಲ್ಲದ ಪ್ರತಿವಾದಿಯೂ ಅಲ್ಲದ ಅಥವಾ ಸೆರೆಯಾಳುವೂ ಅಲ್ಲದ, ಯಾರೋ ಒಬ್ಬ ವ್ಯಕ್ತಿಯು) ಪ್ರಶ್ನಿತ ವಿಷಯದ ಬಗ್ಗೆ ಏನು ವಿಚಾರ ಮಾಡುವನೋ ಅಥವಾ ನಂಬುವನೋ ಅದು ಮುಖ್ಯವಲ್ಲ. ಅಂಥ ತೃತೀಯ ವ್ಯಕ್ತಿಯನ್ನು ಸಾಕ್ಷಿಯೆಂದು ಕರೆದಾಗ, ನಿಯಮಾನುಸಾರ ಅವನು ಸಂಗತಿಗಳನ್ನು ಮಾತ್ರ ಹೇಳಬೇಕು; ಅವನ ವೈಯಕ್ತಿಕ ಅಭಿಪ್ರಾಯವು ಸಾಕ್ಷ್ಯವಾಗುವುದಿಲ್ಲ. ಆದರೆ ಒಬ್ಬ ಪಕ್ಷಕಾರನು ಮುಖ್ಯ ಕೃತ್ಯವನ್ನು ಮಾಡಿದಾಗ ಅವನು ಏನನ್ನು ವಿಚಾರ ಮಾಡುವನೋ ಅಥವಾ ಏನನ್ನು ನಂಬುವನೋ ಅದು ಕೆಲವೊಮ್ಮೆ ಕ್ರಿಮಿನಲ್ ಮತ್ತು ಸಿವಿಲ್ ವ್ಯವಹರಣೆಗಳಲ್ಲಿ ವಿವಾದ್ಯ ವಿಷಯವಾಗುತ್ತದೆ.

**ದೃಷ್ಟಾಂತಗಳು– ಕಾರ್ಟರ್ ವಿರುದ್ಧ ಬೋಚಿನ್, ಕಾಕಲ್ ಪಿ**

ಒಂದು ವಿಮಾ ಪಾಲಿಸಿಯನ್ನು ಕುರಿತಂತೆ ಯಾವ ಸಂಗತಿಗಳನ್ನು ವಿಮಾ ಪತ್ರಕಾರನಿಗೆ ತಿಳಿಸಿರಲಿಲ್ಲವೊ ಅವುಗಳನ್ನು ಬಚ್ಚಿಟ್ಟ ಕಾರಣದಿಂದಾಗಿ ಆ ಪಾಲಿಸಿಯು ನಿರರ್ಥಕವಾಯಿತೆ ಹೇಗೆ ಎಂಬ ಪ್ರಶ್ನೆ. ಬ್ರೋಕರನು ಆ ಸಂಗತಿಗಳ ಮಹತ್ವದ ಸಾಕ್ಷ್ಯವನ್ನು ಒದಗಿಸಿದನು. ಈ ಸಂಗತಿಗಳು ತಿಳಿದಿದ್ದರೆ, ಆ ಕರಾರನ್ನು ಮಾಡಿಕೊಳ್ಳುತ್ತಿದ್ದೆಯೋ ಹೇಗೆ ಎಂದು ಅವನನ್ನು ಕೇಳಲಾಗಿ, ತಾನು ಕರಾರು ಮಾಡಿಕೊಳ್ಳುತ್ತಿರಲಿಲ್ಲ ಎಂದು ಹೇಳಿದನು. ಆದರೆ ಅವನ ಈ ಹೇಳಿಕೆಯು ಅವನ ಅಭಿಪ್ರಾಯವಾಗಿದ್ದ ನಿಮಿತ್ತ, ಅದನ್ನು ಅನುಮತಿಸಲು ಅವಕಾಶವಿಲ್ಲ ಎಂದು ನಿರ್ಣಯಿಸಲಾಯಿತು. ಇನ್ನು, ಆ ಪ್ರಶ್ನೆಯನ್ನು ಪಕ್ಷಕಾರನಿಗೆ ಕೇಳಿದ್ದರೆ, ಅವನ ಅಭಿಪ್ರಾಯಕ್ಕೆ ಅವಕಾಶ ಕೊಡಬಹುದಾಗಿತ್ತು.

(೨) ನಿಯಮವನ್ನು ಕಟ್ಟುನಿಟ್ಟಾಗಿ ಅನ್ವಯಿಸಿದರೆ ತೊಂದರೆಗಳಿಗೆ ಎಡೆ ಕೊಡುವುದು ಖಂಡಿತ. ನ್ಯಾಯಾಲಯಗಳಲ್ಲಿ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಅವಶ್ಯವಿರುವ ಪ್ರಸಂಗಗಳಲ್ಲಿ, ಹಾಗೆ ಅಭಿಪ್ರಾಯ ರೂಪಿಸಿಕೊಳ್ಳಲು ಸಾಧ್ಯವಾಗದೆ ಇರಬಹುದು. ಕೆಲವು ಪ್ರಕರಣಗಳಲ್ಲಿ ನಿಜವಾದ ಅಭಿಪ್ರಾಯವನ್ನು ರೂಪಿಸಿಕೊಳ್ಳುವ ಮುನ್ನ ವಿಶೇಷ ತರಬೇತಿ ಅಥವಾ ವಿಶೇಷ ಅನುಭವ ಅಗತ್ಯವಾಗುತ್ತದೆ. ಆದ್ದರಿಂದ ಅಂಥ ಪ್ರಕರಣಗಳಲ್ಲಿ, ನ್ಯಾಯಮಂಡಳಿಯು ಸರಿಯಾದ ತೀರ್ಮಾನವನ್ನು ಕೈಗೊಳ್ಳಲು ಅನುಕೂಲವಾಗುವ ಹಾಗೆ ಅದರ ಮುಂದೆ ವಿಶೇಷ ತರಬೇತಿ ಪಡೆದವರ ಅಥವಾ ವಿಶೇಷ ಅನುಭವ ಇರುವವರ ತಿಳಿವಳಿಕೆಯನ್ನು ಸಾದರಪಡಿಸಬೇಕಾಗುತ್ತದೆ.

(೩) ಯಾರೇ ಸಾಕ್ಷಿದಾರನಿಗೆ, ಕೆಲವು ಪ್ರಕರಣಗಳಲ್ಲಿ ತನ್ನ ಖಚಿತ ಅಭಿಪ್ರಾಯಗಳನ್ನು ಹೇಳುವುದು ಸ್ವಾಭಾವಿಕವಾಗಿಯೇ ಕಷ್ಟಸಾಧ್ಯವಾಗುವುದುಂಟು. ಅವನು ತನ್ನ ಅಭಿಪ್ರಾಯ ಅಥವಾ ನಂಬಿಕೆಯ ಮಟ್ಟಿಗೆ ಹೇಳಲೇಬೇಕಾದರೂ ಕೂಡ, ಆ ಪ್ರಕರಣಗಳು ತುಂಬ ಸಂಕೀರ್ಣ ಸ್ವರೂಪ ದ್ದಾಗಿರುವುದಲ್ಲದೆ, ಅವನು ನೀಡುವ ಹೇಳಿಕೆಯು ಅಭಿಪ್ರಾಯ ವಿಷಯವಾಗುವುದೇ ಹೊರತು, ಅನಿಶ್ಚಿತ ಸ್ವರೂಪದ ಆ ಪ್ರಕರಣಗಳಲ್ಲಿ ಅವನ ಹೇಳಿಕೆಯು ಸಹ ಅನಿಶ್ಚಿತವೂ ಅಸ್ಪಷ್ಟವೂ ಆಗುವ ಸಂಭವ ಹೆಚ್ಚು. ಹೀಗಾಗಿ ನ್ಯಾಯಾಲಯವು ಅವನ ಅಭಿಪ್ರಾಯದ ಪೈಕಿ ಎಷ್ಟು ಸಮಂಜಸವೋ

ಅಷ್ಟನ್ನು ಮಾತ್ರ ಅಂಗೀಕರಿಸುತ್ತದೆ. ಮೊದಲು ನಮೂದಿತವಾದವುಗಳು ವಿಜ್ಞಾನ, ಕಲೆ ಅಥವಾ ಕೌಶಲ್ಯ ಇವುಗಳನ್ನು ಮುಖ್ಯವಾಗಿ ಒಳಗೊಂಡ ಪ್ರಕರಣಗಳು. ಎರಡನೆಯವು ತಜ್ಞರಲ್ಲದವರ ವ್ಯಕ್ತಿಗತ ಭಾವನೆಗಳಿಗೆ, ಅನಿಸಿಕೆಗಳಿಗೆ ಸಂಬಂಧಪಟ್ಟ ಪ್ರಕರಣಗಳು.

(೫) ಆದ್ದರಿಂದ, ಸಾಕ್ಷ್ಯ ಅಧಿನಿಯಮದಲ್ಲಿ, ಸಾಕ್ಷಿದಾರನ ಅಭಿಪ್ರಾಯಕ್ಕೆ ಅವಕಾಶವಿಲ್ಲ ಎಂಬ ಸಾಮಾನ್ಯ ನಿಯಮಕ್ಕೆ ಈ ಕೆಳಕಂಡ ಅಪವಾದವನ್ನು ಸೇರಿಸಲಾಗಿದೆ.

**ಕಲಮು ೪೫**

(೧) ಪೂರ್ಣವಾಗಿ ವೃತ್ತೀಯ ಅಥವಾ ವೈಜ್ಞಾನಿಕ ಸ್ವರೂಪದವುಗಳಾಗಿರತಕ್ಕ ವಿಷಯಗಳನ್ನು ವಿಶದೀಕರಿಸಲು ಕುಶಲ ಅಥವಾ ವೈಜ್ಞಾನಿಕ ಸಾಕ್ಷಿಗಳ (ತಜ್ಞರ) ಅಭಿಪ್ರಾಯವನ್ನು ಸಾಕ್ಷ್ಯವಾಗಿ ಅನುಮತಿಸ ಬಹುದಾಗಿದೆ.

*ಉದಾಹರಣೆಗೆ:*

(i) ವಿದೇಶೀ ಕಾನೂನಿನ ಪ್ರಶ್ನೆ.

(ii) (ಗನ್ ಮಷೀನ್ ಕಾರ್ಯಕ್ಕೆ ಸಂಬಂಧಪಟ್ಟ ಹಾಗೆ) ವಿಜ್ಞಾನ ಅಥವಾ ಕಲೆಯ ಪ್ರಶ್ನೆ.

(iii) ಕೈಬರಹವನ್ನು ಅಥವಾ ಹೆಬ್ಬೆರಳ ಗುರುತನ್ನು ಗುರುತಿಸುವ ಪ್ರಶ್ನೆ

**ಕಲಮು ೪೭**

(೨) ಯಾವ ವ್ಯಕ್ತಿಯು ದಸ್ತಾವೇಜಿಗೆ ಸಹಿ ಹಾಕಿದನೋ ಅಥವಾ ಅದನ್ನು ಬರೆದನೋ, ಆ ವ್ಯಕ್ತಿಯನ್ನು ಗುರುತಿಸುವ ಪ್ರಶ್ನೆಯಲ್ಲಿ, ಅವನ ಕೈ ಬರಹದ ಪರಿಚಯವಿರುವ ವ್ಯಕ್ತಿಯ ಅಭಿಪ್ರಾಯವು ಸುಸಂಬದ್ಧವಾಗುತ್ತದೆ.

**ಕಲಮು ೪೮**

(೩) ಯಾವುದೇ ಸಾಮಾನ್ಯ ರೂಢಿ ಅಥವಾ ಅಧಿಕಾರದ ಅಸ್ತಿತ್ವದ ಬಗ್ಗೆ ನ್ಯಾಯಾಲಯವು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಅದರ ಅಸ್ತಿತ್ವವನ್ನು ತಿಳಿಯುವ ಸಂಭವವಿರುವ ವ್ಯಕ್ತಿಯ ಅಭಿಪ್ರಾಯವು ಸುಸಂಬದ್ಧವಾಗುತ್ತದೆ.

**ಕಲಮು ೪೯**

(೪) ನ್ಯಾಯಾಲಯವು

(೧) ಯಾವುದೇ ಮಾನವ ಸಮುದಾಯದ ಆಚರಣೆಗಳ ಮತ್ತು ತತ್ವಗಳ ಬಗ್ಗೆ,

(೨) ಯಾವುದೇ ಮತಸಂಬಂಧವಾದ ಅಥವಾ ಧರ್ಮಾರ್ಥ ಪ್ರತಿಷ್ಠಾನದ ರಚನೆ ಮತ್ತು ಆಡಳಿತದ ಬಗಗೆ,

(೩) ವಿಶಿಷ್ಟ ಪ್ರದೇಶಗಳಲ್ಲಿ ಅಥವಾ ಜನವರ್ಗಗಳಲ್ಲಿ ಬಳಕೆಯಲ್ಲಿರುವ ಶಬ್ದಗಳು ಅಥವಾ ಪದಗಳ ಬಗ್ಗೆ,

ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಲ್ಲಿ, ಆ ಸಂಬಂಧವಾದ ತಿಳಿವಳಿಕೆಯ ವಿಶೇಷ ಅವಕಾಶ ಹೊಂದಿರುವ ವ್ಯಕ್ತಿಗಳ ಅಭಿಪ್ರಾಯಗಳು ಸುಸಂಬದ್ಧವಾಗುತ್ತವೆ.

**ಕಲಮು ೫೦**

ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯೊಡನೆ ಹೊಂದಿರುವ ಬಂಧುತ್ವದ ಬಗ್ಗೆ ನ್ಯಾಯಾಲಯವು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಲ್ಲಿ, ಆ ಸಂಬಂಧವಾದ ತಿಳಿವಳಿಕೆಯ ವಿಶೇಷ ಅವಕಾಶವಿರುವ ವ್ಯಕ್ತಿಗಳು, ಆ ಪಕ್ಷಕಾರರ ನಡತೆಯನ್ನು ಆಧರಿಸಿ ಕೊಟ್ಟ ಅಭಿಪ್ರಾಯಗಳು ಸುಸಂಬದ್ಧವಾಗುತ್ತವೆ.

**ದೃಷ್ಟಾಂತಗಳು– (ಎ) (ಬಿ)**

**ಪರಂತುಕ**. ಅಂಥ ಅಭಿಪ್ರಾಯವು ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮದ ಅಡಿಯಲ್ಲಿ ವಿವಾಹದ ಬಗ್ಗೆ ರುಜುವಾತು ಮಾಡಲು ಅಥವಾ ಭಾರತ ದಂಡಸಂಹಿತೆಯ ೪೯೪, ೪೯೬, ೪೯೭, ೪೯೮ ಈ ಕಲಮುಗಳ ಅಡಿಯಲ್ಲಿನ ಪ್ರಾಸಿಕ್ಯೂಷನ್‌ಗಳ ಸಂಬಂಧದಲ್ಲಿ ಸಾಕಷ್ಟು ಸಾಕ್ಷ್ಯವಾಗಲಾರದು.

# ರುಜುವಾತಿಗೆ ಅಗತ್ಯವಿರುವ ಸಾಕ್ಷ್ಯದ ಸ್ವಭಾವ

**ಕಾನೂನಿನ ಸಾರಾಂಶ**

I. ಉತ್ತಮ ಸಾಕ್ಷ್ಯದ ನಿಯಮ.

II. ಉತ್ತಮ ಸಾಕ್ಷ್ಯ ನಿಯಮದ ಅಗತ್ಯಗಳು.

(i) ಉತ್ತಮ ಸಾಕ್ಷ್ಯದ ನಿಯಮದ ಅಗತ್ಯಗಳೆಂದರೆ:

(a) ಸಾಕ್ಷ್ಯವು ಬಾಯಿಮಾತಿನ ಸಾಕ್ಷ್ಯವಾಗಿದ್ದರೆ ಅದು ನೇರವಾಗಿರಬೇಕು.

(b) ಅಪವಾದಗಳು.

(ii) ಉತ್ತಮ ಸಾಕ್ಷ್ಯ ನಿಯಮದ ಅಗತ್ಯದ ಪ್ರಕಾರ, ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯವಾಗಿದ್ದರೆ

(i) ಅಸಲು ಸಾಕ್ಷ್ಯವಾಗಿರಬೇಕು.

(a) ಅಪವಾದಗಳು

(ii) ಅದು ಅನನ್ಯವಾಗಿರಬೇಕು

(a) ಅಪವಾದಗಳು

**ಉತ್ತಮ ಸಾಕ್ಷ್ಯದ ನಿಯಮ**

೧. ಯಾವುದೇ ಸಂಗತಿಯನ್ನು ರುಜುವಾತು ಮಾಡಬೇಕಾದ ಯಾರೇ ಪಕ್ಷಗಾರನು, ಆ ಪ್ರಕರಣದ ಸ್ವಭಾವ ನಿಮಿತ್ತ ಸಾಧ್ಯವಿರುವಂಥ ಉತ್ತಮ ಸಾಕ್ಷ್ಯದ ಮೂಲಕ ರುಜುವಾತು ಮಾಡಬೇಕು ಎನ್ನುವುದು ಕಾನೂನಿನ ನಿರ್ವಿವಾದ ಸಿದ್ಧಾಂತ.

೨. ನಿಜವೆಂದರೆ, ಈ ನಿಯಮವು ಸಮಗ್ರ ಸಾಕ್ಷ್ಯ ಕಾನೂನಿಗೆ ಒತ್ತುಕೊಡುತ್ತದೆ.

(i) ಈ ನಿಯಮದ ಕಾರಣದಿಂದಲೇ, ಸಾಕ್ಷ್ಯದ ಅಂಗೀಕಾರಾರ್ಹತೆಗೆ ಪೂರ್ವ ಷರತ್ತು ಆಗಿ, ಮುಖ್ಯ ಸಂಗತಿ ಮತ್ತು ಸಾಕ್ಷ್ಯದ ಸಂಗತಿ ಇವುಗಳ ನಡುವೆ ಪ್ರಕಟವಾದ ಮತ್ತು ಸ್ಪಷ್ಟವಾದ ಸಂಬಂಧ ಇರಬೇಕು ಎಂದು ಕಾನೂನು ಆಗ ಅಗತ್ಯಪಡಿಸುತ್ತದೆ.

(ii) ಈ ನಿಯಮದ ಕಾರಣದಿಂದಲೇ ಸಾಕ್ಷ್ಯವು ಸ್ವೀಕಾರಾರ್ಹವಾಗಬೇಕಾಗಿದ್ದರೆ, ಅದು ಯಥೋಚಿತ ಲಿಖಿತಗಳ ಮೂಲಕ ಬರಬೇಕು ಎಂದು ಕಾನೂನು ಅಗತ್ಯಪಡಿಸುತ್ತದೆ.

(iii) ಈ ನಿಯಮದ ಕಾರಣದಿಂದಲೇ ಸಾಕ್ಷ್ಯವು ಅಂಗೀಕಾರಾರ್ಹವಾಗಬೇಕಾಗಿದ್ದರೆ, ಅದು ಮೂಲಸಾಕ್ಷ್ಯವಾಗಿರಬೇಕೆ ಹೊರತು ವ್ಯುತ್ಪನ್ನ ಸಾಕ್ಷ್ಯವಾಗಿರಕೂಡದು ಎಂದು ಕಾನೂನು ಅಗತ್ಯಪಡಿಸುತ್ತದೆ.

೩. ಒಂದು ಸಮಯದಲ್ಲಿ ಉತ್ತಮ ಸಾಕ್ಷ್ಯದ ನಿಯಮವನ್ನು ಕಟ್ಟುನಿಟ್ಟಾಗಿ ಅನ್ವಯಿಸಲಾಗುತ್ತಿತ್ತು. ಆದರೆ, ಅದರ ಅನ್ವಯವನ್ನು ಈಗ ಬಹುಮಟ್ಟಿಗೆ ಸಡಿಲಗೊಳಿಸಲಾಗಿದೆ ಮತ್ತು ಒಂದು ಕಾಲದಲ್ಲಿ ಅಂಗೀಕಾರಾರ್ಹತೆಗೆ ಆಕ್ಷೇಪಣೆಗಳಾಗಿದ್ದವುಗಳು ಪರ್ಯಾಪ್ತತೆಗೆ ಅಗತ್ಯವಾದವುಗಳು ಎಂದು ಪರಿಗಣಿಸಲ್ಪಡುತ್ತದೆ.

೪. ಆದರೆ ಈ ನಿಯಮವು ಇನ್ನೂ ಉಳಿದುಕೊಂಡು ಬಂದಿದೆ. ಮೌಖಿಕ ಸಾಕ್ಷ್ಯ ಮತ್ತು ದಸ್ತಾವೇಜು ಸಾಕ್ಷ್ಯ ಇವುಗಳ ಸಂಬಂಧದಲ್ಲಿ ಸಾಕ್ಷ್ಯ ಶಾಸನದ ಅಗತ್ಯತೆಗಳ ಕಾರಣ ಈ ನಿಯಮವು ಸ್ಪಷ್ಟಗೊಳ್ಳುತ್ತದೆ.

**ಮೌಖಿಕ ಸಾಕ್ಷ್ಯ**

೧. ಸಾಕ್ಷ್ಯವು ಮೌಖಿಕವಾಗಿದ್ದರೆ ಅದು ಪ್ರತ್ಯಕ್ಷವಾಗಿರಬೇಕು ಎಂದು ಉತ್ತಮ ಸಾಕ್ಷ್ಯದ ನಿಯಮವು ಅಗತ್ಯಪಡಿಸುತ್ತದೆ.

೨. ಈ ನಿಯಮವನ್ನು ಸಾಕ್ಷ್ಯ ಅಧಿನಿಯಮದ ೬೦ನೇ ಪ್ರಕರಣದಲ್ಲಿ ಸೇರ್ಪಡೆ ಮಾಡಲಾಗಿದೆ.

೩. ಪ್ರತ್ಯಕ್ಷ ಸಾಕ್ಷ್ಯ ಎಂದರೇನು?

೪. ಸಾಮಾನ್ಯವಾಗಿ ಕೊಡಲಾಗುವ ಉತ್ತರ ಎಂದರೆ ಪ್ರತ್ಯಕ್ಷ ಮೌಖಿಕ ಸಾಕ್ಷ್ಯವು ವದಂತಿ ಸಾಕ್ಷ್ಯವಾಗಿರಕೂಡದು. ಆ ಕಾರಣ ವದಂತಿ ಸಾಕ್ಷ್ಯ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ವದಂತಿ ಸಾಕ್ಷ್ಯವನ್ನು ಹೊರತುಪಡಿಸುವ ನಿಯಮವು ಮೂರು ಮುಖ್ಯ ವರ್ಗಗಳ ಅಪವಾದಗಳಿಗೆ ಒಳಪಟ್ಟಿರುತ್ತದೆ.

(i) ಒಪ್ಪಿಗೆಗಳು ಮತ್ತು ತಪ್ಪೊಪ್ಪಿಗೆಗಳು. ಪಕ್ಷಗಾರನ ಸಮಕ್ಷಮ ಮಾಡಲಾದ ಹೇಳಿಕೆಗಳು.

(ii) ಈ ಮಧ್ಯೆ ಮೃತರಾದ ವ್ಯಕ್ತಿಗಳ ಹೇಳಿಕೆಗಳು.

(iii) ಸಾರ್ವಜನಿಕ ದಸ್ತಾವೇಜುಗಳಲ್ಲಿ ಮಾಡಲಾದ ಹೇಳಿಕೆಗಳು.

**ವದಂತಿ ಸಾಕ್ಷ್ಯ ಎಂದರೇನು?**

೧. ವದಂತಿ ಸಾಕ್ಷ್ಯವನ್ನು ಹಲವಾರು ವಿಭಿನ್ನ ರೀತಿಗಳಲ್ಲಿ ಪರಿಭಾಷಿಸಲಾಗಿದೆ.

(i) ಸಾಕ್ಷಿದಾರನಿಗೆ ಕೊಡಲಾದ ಪ್ರತ್ಯಯವನ್ನು ಆಧರಿಸಿ ಮಾತ್ರವೇ ಹೊಮ್ಮುವುದಿಲ್ಲವೋ ಆದರೆ ಇನ್ನೊಬ್ಬ ಇತರ ವ್ಯಕ್ತಿಯ ಸತ್ಯತೆ ಮತ್ತು ಸಕ್ಷಮತೆಯನ್ನು ಸಹ ಭಾಗಶಃ ಆಧರಿಸಿರುವುದೋ ಆ ಎಲ್ಲ ಸಾಕ್ಷ್ಯ.

(ii) ವಿಚಾರಣೆಯಲ್ಲಿರುವ ಸಂಗತಿಯ ಅಸ್ತಿತ್ವ ಅಥವಾ ಅನಸ್ತಿತ್ವವನ್ನು ಕುರಿತ ಹೇಳಿಕೆಯು, ಸಾಕ್ಷಿದಾರನಲ್ಲದವನಿಂದ ಅನ್ಯಥಾ ನ್ಯಾಯಾಲಯದಲ್ಲಿ ಪರೀಕ್ಷೆಗೆ ಒಳಗಾಗಿರುವಾಗ ಮಾಡಲ್ಪಟ್ಟಿದ್ದರೆ, ಅದನ್ನು ಸಾಕ್ಷಿಯಾಗಿ ಬಳಸಿಕೊಳ್ಳಬಹುದು.

೨. ವದಂತಿ ಸಾಕ್ಷ್ಯ ಅಂದರೆ ಸಾಕ್ಷಿಗಳು ಸಾಕ್ಷಿಗಳಲ್ಲದವರು ಮಾಡಿದ ಹೇಳಿಕೆಗಳನ್ನು ವರದಿ ಮಾಡಿದರೆ ಅದು ವದಂತಿ ಸಾಕ್ಷ್ಯ.

**ವದಂತಿ ಸಾಕ್ಷ್ಯವನ್ನು ವರ್ಜಿಸುವುದೇಕೆ (ಹೊರತುಪಡಿಸುವುದೇಕೆ)?**

೧. ನ್ಯಾಯಾಲಯದಲ್ಲಿ 'ಅ'ನು ಪ್ರಮಾಣ ಮಾಡಿ ಹೇಳಿಕೆ ಕೊಡುವಾಗ, ತನ್ನ ಕಣ್ಣಿನಿಂದ ನೇರವಾಗಿ, ನೋಡಿಲ್ಲದ ಆದರೆ 'ಬ'ನ ಮೂಲಕ ಪರೋಕ್ಷವಾಗಿ ಕೇಳಿದ ಯಾವುದೇ ಸಂಗತಿಯನ್ನು ವಿವರಿಸಿದರೆ, ಅವನು ತನ್ನ ದೈಹಿಕ ಇಂದ್ರಿಯಗಳಿಂದ, ಪ್ರಾಪ್ತವಾದ ಸಾಕ್ಷ್ಯವನ್ನು ವ್ಯಕ್ತಗೊಳಿಸುತ್ತಿಲ್ಲ, ಆದರೆ, ಯಾರೋ ಮೂರನೇ ವ್ಯಕ್ತಿಯು ತಾನು ನೋಡಿರುವುದಾಗಿ ಪ್ರಮಾಣ ಮಾಡದೆ ಕೊಟ್ಟ ಹೇಳಿಕೆಯನ್ನು ತಿಳಿಯಪಡಿಸುವ ಮಾಧ್ಯಮವಾಗಿ ಮಾತ್ರವೇ ವರ್ತಿಸುತ್ತಾನೆ. ಅವನು ಸತ್ಯಕ್ಕೆ ಜನ್ಮ ಕೊಡುತ್ತಾನೆ, ಸೂಲಗಿತ್ತಿಯ ಕೈನ

ನೆರವಿನಿಂದ. ಅಂದರೆ, ನ್ಯಾಯಾಲಯದ ಸಮಕ್ಷಮದಲ್ಲಿ ಇಲ್ಲದ ಪಕ್ಷಕಾರನು ಒದಗಿಸಿದ ಮಾಹಿತಿಯನ್ನು ತಿಳಿಯಪಡಿಸುವ ಮಾಧ್ಯಮ ಅಥವಾ ಕೊಳವೆ ದಾರಿ ಮಾತ್ರವೇ ಆಗಿದ್ದಾನೆ. 'ಅ'ನು ತನಗೆ ಹೇಳಲಾಗಿರುವುದನ್ನು ಸರಿಯಾಗಿ ಮತ್ತು ಸತ್ಯವಾಗಿ ವರದಿ ಮಾಡಬಹುದು. ಆದಾಗ್ಯೂ, ಮೂಲ ಹೇಳಿಕೆಯ ಸತ್ಯಾಂಶವನ್ನು ಅಂಥ ಪರಿಸ್ಥಿತಿಗಳಲ್ಲಿ ಪರೀಕ್ಷೆಗೆ ಒಳಪಡಿಸುವುದು ಅಸಾಧ್ಯ ಎನ್ನುವುದು ಸುಸ್ಪಷ್ಟವೇ. ವರದಿಯ ಮೂಲಕರ್ತನು ಶಪಥಕ್ಕೆ ಅಥವಾ ಪಾಟೀ ಸವಾಲಿಗೆ ಒಳಗಾಗುವುದಿಲ್ಲ. ಅವನು ತನ್ನ ಹೇಳಿಕೆಯನ್ನು ತಮಾಷೆಯೆಂದಾಗಲಿ ಅಥವಾ ಲಘುವಾಗಿಯಾಗಲಿ ಮಾಡಿದ್ದಿರಬಹುದು. ಅವನು ಸಾಮಾನ್ಯ (ಮಾಮೂಲು) ಸಂಭಾಷಣೆಯಲ್ಲಿ ಹಿಂಜರಿಕೆಯಿಲ್ಲದೆ ಹಿಂದೆ ಮುಂದೆ ನೋಡದೆ ಹೇಳಿರುವುದನ್ನು ಶಪಥ ಮಾಡಿ ಹೇಳಲು ಸಿದ್ಧನಾಗಲಿಕ್ಕಿಲ್ಲ. ಅವನು ಉದ್ದೇಶಪೂರ್ವಕವಾಗಿಯೇ ಒಂದು ಸುಳ್ಳು ಕಥೆಯನ್ನು ಕಟ್ಟಿರಲಿಕ್ಕಿಲ್ಲ ಅಥವಾ ತೆರೆಯ ಮರೆಯಲ್ಲಿ ಸುದೂರದಲ್ಲಿರುವ ಯಾರದೋ ಮೋಸಕ್ಕೆ ಗುರಿಯಾಗಿರಬಹುದು ಅಥವಾ ತನ್ನ ಉದ್ದೇಶದ ವಿಚಾರದಲ್ಲಿ ಪ್ರಾಮಾಣಿಕನಾಗಿದ್ದಾಗ್ಯೂ ತಪ್ಪು ಭಾವನೆಗಳಿಂದಾಗಿ ಅಥವಾ ನೆನಪಿನ ಶಕ್ತಿಯು ಕೈಕೊಟ್ಟ ಕಾರಣದಿಂದಾಗಿ ಹಾಗೆ ಹೇಳಿರಬಹುದು ಮತ್ತು ಪಾಟೀ ಸವಾಲಿನ ಒಂದಿನಿತು ಆಘಾತಕ್ಕೆ ಅವನು ತಬ್ಬಿಬ್ಬಾಗಿ ಸೋತುಹೋಗಬಹುದು. ಆದಕಾರಣ, ಅಂಥ ಸಾಕ್ಷ್ಯವು ಅಂಗೀಕಾರಾರ್ಹವಲ್ಲ ಎಂದು ನಿರ್ಧರಿಸುತ್ತದೆ. ಕಾರಣವೇನೆಂದರೆ 'ಅ'ನನ್ನು ಕರೆಯುವ ಪಕ್ಷಕಾರನಿಗೆ, 'ಬಿ'ನಿಂದ 'ಅ'ನು ಕೇಳಿರುವ ಸಂಗತಿಗಳನ್ನು ಸ್ಥಾಪಿಸುವುದು ಮಹತ್ವಪೂರ್ಣವಾಗಿದ್ದರೆ, 'ಬಿ'ನನ್ನೇ ಹಾಜರುಪಡಿಸತಕ್ಕದ್ದು ಮತ್ತು ಅವನು ತನ್ನ ನ್ಯಾಯಾಲಯದಲ್ಲಿ ತನ್ನ ಹೇಳಿಕೆಯನ್ನು ತಾನೇ ಮಾಡತಕ್ಕದ್ದು ಮತ್ತು ಪ್ರಮಾಣ ಮತ್ತು ಪಾಟೀ ಸವಾಲಿನ ಎರಡು ಪರೀಕ್ಷೆಗಳಿಗೆ ಅವನನ್ನು ಗುರಿಪಡಿಸಬೇಕು ಮತ್ತು ನ್ಯಾಯಸಂಬಂಧಿ ವೃತ್ತಿಯಲ್ಲಿ ಅನುಭವವುಳ್ಳ, ಮಾನವ ಸ್ವಭಾವದ ತಿಳಿವಳಿಕೆಯಲ್ಲಿ ನಿಷ್ಣಾತನಾದ ಮತ್ತು ತನ್ನ ಮುಂದೆ ಸಾಕ್ಷ್ಯ ಕೊಡುವ ಪ್ರತಿಯೊಬ್ಬ ಸಾಕ್ಷಿದಾರನ ಚರ್ಯೆ, ನಡವಳಿಕೆ, ಹಾವಭಾವ ಇವುಗಳನ್ನು ಸೂಕ್ಷ್ಮ ನಿರೀಕ್ಷೆಗೆ ಗುರಿಪಡಿಸುವ ನ್ಯಾಯಾಧೀಶನ ಪರೀಕ್ಷೆಗೆ ಸಹ ಒಳಪಡಬೇಕಾಗುತ್ತದೆ.

**ಅಪವರ್ಜನದ (ಹೊರತುಪಡಿಸುವಿಕೆಯು) ಈ ನಿಯಮವು ಎಲ್ಲ ವದಂತಿ ಸಾಕ್ಷ್ಯಗಳಿಗೆ ಅನ್ವಯಿಸುತ್ತದೆಯೆ?**

೧. ವದಂತಿ ಎಂದರೆ ನ್ಯಾಯಾಲಯದಲ್ಲಿ ಸಾಕ್ಷಿದಾರನಾಗಿಲ್ಲದ ಯಾರ ಹೇಳಿಕೆಯನ್ನು, ಸಾಕ್ಷಿದಾರನಾಗಿ ನ್ಯಾಯಾಲಯಕ್ಕೆ ಬರುವ ಇನ್ನೊಬ್ಬ ವ್ಯಕ್ತಿಯ ಮುಖಾಂತರ ಸಾಕ್ಷ್ಯವಾಗಿ ನೀಡುವ ಬಗ್ಗೆ ಒಪ್ಪಿಸಲಾಗಿದೆಯೋ ಆ ಹೇಳಿಕೆ.

೨. ಪ್ರಶ್ನೆಯೆಂದರೆ, ನ್ಯಾಯಾಲಯದಲ್ಲಿ ಸಾಕ್ಷಿದಾರನಾಗಿಲ್ಲದ ವ್ಯಕ್ತಿಯ ಎಲ್ಲ ಹೇಳಿಕೆಗಳಿಗೂ ಅಪವರ್ಜನ ನಿಯಮವು ಅನ್ವಯಿಸುತ್ತದೆಯೆ?

೩. ಈ ಪ್ರಶ್ನೆಯನ್ನು ತಿಳಿದುಕೊಳ್ಳಬೇಕಾದರೆ, ಒಂದು ಹೇಳಿಕೆಯನ್ನು ಸಾಕ್ಷ್ಯವಾಗಿ ಒಪ್ಪಿಸಿದಾಗ, ಅದು ಎರಡು ಅಂಶಗಳನ್ನು ಹೊಂದಿರುತ್ತದೆ ಎಂದು ಅರಿತುಕೊಳ್ಳಬೇಕು. ಹೇಳಿಕೆ ಎಂದರೆ ಒಂದು ಸಂಗತಿ ಹಾಗೆಯೇ ಅದು ಸಂಗತಿಯ ಹೇಳಿಕೆ.

**ದೃಷ್ಟಾಂತಗಳು**

'ಅ'ನು ತನಗೆ 'ಬಿ'ನು ಅದನ್ನು ಅಥವಾ ಇದನ್ನು ಹೇಳಿದನು ಎಂದು ಸಾಕ್ಷ್ಯವನ್ನು ಕೊಟ್ಟರೆ

(i) ಸಂಗತಿಯಾಗಿ ತೆಗೆದುಕೊಂಡಾಗ, ಪ್ರಶ್ನೆಯೆಂದರೆ, ಅವನು ಹಾಗೆ ಹೇಳಿದನೆ ಅಥವಾ ಹೇಳಲಿಲ್ಲವೇ.

(ii)ಹೇಳಿಕೆಯಾಗಿ ತೆಗೆದುಕೊಂಡಾಗ, ಪ್ರಶ್ನೆಯೆಂದರೆ, ಹೇಳಿದ್ದು ಸುಳ್ಳೆ ಅಥವಾ ಸತ್ಯವೆ.

೪. ಸಾಕ್ಷಿದಾರನಲ್ಲದ ವ್ಯಕ್ತಿಯ ಹೇಳಿಕೆಯನ್ನು ಎರಡು ಉದ್ದೇಶಗಳಿಗಾಗಿ ಸಾಕ್ಷ್ಯವಾಗಿ ಕೊಡಬಹುದು.

(i) ಅಂಥ ಮಾಡಲಾಗಿತ್ತು ಎಂದು ರುಜುವಾತು ಮಾಡಲು

(ii) ಮಾಡಲಾದ ಹೇಳಿಕೆಯು ಸತ್ಯವಾದ ಹೇಳಿಕೆ ಎಂದು ರುಜುವಾತು ಮಾಡಲು.

ಮೊದಲನೆಯ ಅಂಶದಲ್ಲಿ ಅದು ವಿವಾದ್ಯ ಸಂಗತಿ ಮಾತ್ರ. ಎರಡನೆಯ ಅಂಶದಲ್ಲಿ, ಹೇಳಲಾದ ವಿಷಯದ ಸತ್ಯತೆಯನ್ನು ರುಜುವಾತು ಮಾಡುವ ಒತ್ತು ಹೇಳಿಕೆ.

೫. ಸಾಕ್ಷಿದಾರನಲ್ಲದವನು ಮಾಡಿದ ಹೇಳಿಕೆಯಾಗಿದ್ದು ಸಾಕ್ಷ್ಯವಾಗಿ ಕೊಡಲು ಬಯಸಿರುವ ಮತ್ತು ಅಂಗೀಕಾರಾರ್ಹತೆಯು ಪ್ರಶ್ನಿತವಾಗಿರುವ ಆ ಹೇಳಿಕೆಯನ್ನು, ಕೇವಲ ವಿವಾದ್ಯ ಸಂಗತಿಯಾಗಿ ಅಥವಾ ಸುಸಂಬದ್ಧ ಸಂಗತಿಯಾಗಿ ಕೊಡಲಾಗಿದೆಯೇ ಮತ್ತು ವಿಷಯದ ಸತ್ಯತೆಯನ್ನು ರುಜು ಮಾಡುವ ಒತ್ತು ಹೇಳಿಕೆ ಆಗಿ ಕೊಡಲಾಗಿದೆಯೇ ಎಂಬುದು ಯಾವ ಉದ್ದೇಶಕ್ಕಾಗಿ ಅದನ್ನು ಸಾಕ್ಷ್ಯವಾಗಿ ಕೊಡಲಾಗಿದೆ ಎಂಬುದನ್ನು ಅವಲಂಬಿಸಿರುತ್ತದೆ.

೬. ಅಪವರ್ಜನದ ನಿಯಮವನ್ನು ಸಂಕುಚಿತ ಅರ್ಥದಲ್ಲಿ, ಹಾಗೆಯೇ ವ್ಯಾಪಕ ಅರ್ಥದಲ್ಲಿ ನಿರೂಪಿಸಲಾಗಿದೆ. ಸಂಕುಚಿತ ಅರ್ಥದಲ್ಲಿ ಹೇಳಲಾದ ಸಂಗತಿಗಳ ಸತ್ಯತೆಯನ್ನು ರುಜುವಾತು ಮಾಡಲು ಬಳಸುವ ಪ್ರಮಾಣ ಮಾಡಿಲ್ಲದ ಹೇಳಿಕೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಇನ್ನು, ವ್ಯಾಪಕ ಅರ್ಥದಲ್ಲಿ, ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದರೂ ಸರಿಯೇ. ಅಂದರೆ ಕೇವಲ ಸಂಗತಿಗಳಾಗಿ ಬಳಸುವ ಹೇಳಿಕೆಗಳು ಸೇರಿದಂತೆ, ಎಲ್ಲ ಹೇಳಿಕೆಗಳನ್ನು ಒಳ ಸೇರಿಸಲು ಬಳಸಲಾಗುತ್ತದೆ.

### ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಅಳವಡಿಸಲಾದ ನಿಯಮ

೧. ಭಾರತೀಯ ಸಾಕ್ಷ್ಯ ಅಧಿನಿಯಮವು "ವಿಚಾರಣೆಯಲ್ಲಿರುವ ಮತ್ತು ನ್ಯಾಯಾಲಯದಲ್ಲಿ ಪರೀಕ್ಷೆಗೆ ಒಳಗಾದಾಗ, ಸಾಕ್ಷಿದಾರನ ಹೊರತಾಗಿ ಅನ್ಯಥಾ ಮಾಡಿದ ಹೇಳಿಕೆಯ ಅಸ್ತಿತ್ವವನ್ನು ಅಥವಾ ಅನಸ್ತಿತ್ವವನ್ನು ಕುರಿತ ಯಾವುದೇ ಹೇಳಿಕೆಯನ್ನು ಸಾಕ್ಷ್ಯವಾಗಿ ಬಳಸಲಾಗುವುದಿಲ್ಲ" ಎಂಬ ನಿಯಮವನ್ನು ಮಾನ್ಯ ಮಾಡುವುದಿಲ್ಲ.

–ಮಾರ್ಕ್‌ಬಿ

೨. ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ, ಸಾಕ್ಷಿದಾರರಲ್ಲದವರು ಮಾಡಿದ ಹೇಳಿಕೆಗಳನ್ನು, ಅವುಗಳ ನಿಷ್ಕೃಷ್ಟತೆಗಿಂತ ಅವುಗಳನ್ನು ಮಾಡಿರುವುದೇ ಮುಖ್ಯ ಅಂಶವಾಗಿರುವಾಗ, ಸಾಕ್ಷ್ಯದಲ್ಲಿ ಅಂಗೀಕರಿಸಲಾಗುತ್ತದೆ.

೩. ಆದ್ದರಿಂದ,

(i) ವಿವಾದಾಂಶ ಸಂಗತಿಯ ಭಾಗವಾಗಿರತಕ್ಕ ಹೇಳಿಕೆಗಳು, ವಾಸ್ತವವಾಗಿ ವಿವಾದ್ಯ ಸಂಗತಿ ಆಗಿ ರಚಿಸುವಂತಿರಲಿ ಅಥವಾ ಅದರ ಜತೆಗಿರಲಿ, ಅವುಗಳನ್ನು, (ಕಲಮುಗಳು ೫, ೮)

(ii) ಒಡೆತನದ, ಗೇಣಿ, ಲೈಸೆನ್ಸು ಮತ್ತು ಅನುದಾನ ಮುಂತಾಗಿ ಒಡೆತನಕ್ಕೆ ಸಂಬಂಧಪಡುವಂತ ಹೇಳಿಕೆಯನ್ನು, (ಕಲಮು ೧೩)

(iii) ಸಾಕ್ಷಿದಾರನ ಸಾಕ್ಷ್ಯವನ್ನು ಸಮರ್ಥಿಸುವ ಅಥವಾ ವಿರೋಧಿಸುವ ಹೇಳಿಕೆಗಳನ್ನು, (ಕಲಮುಗಳು ೧೫೫, ೧೫೭, ೧೫೮)

ಅವು ಸಾಕ್ಷಿದಾರರಲ್ಲದವರ ಹೇಳಿಕೆಗಳಾದರೂ, ಅಂಗೀಕರಿಸಲಾಗುವುದು.

೪. ವದಂತಿಯ ಅಪವರ್ಜನ(ಹೊರತುಪಡಿಸುವಿಕೆ)ದ ನಿಯಮವು ಸಾಕ್ಷಿದಾರರಲ್ಲದವರು ಮಾಡಿರುವ ಮತ್ತು ಹೇಳಲಾದ ಸಂಗತಿಗಳ ಸತ್ಯತೆಯನ್ನು ರುಜುವಾತು ಮಾಡಲು ಬಳಸುವ ಹೇಳಿಕೆಗಳಿಗೆ ಮಾತ್ರ ಅನ್ವಯವಾಗುತ್ತದೆ.

**೪. ಈ ನಿಯಮಕ್ಕೆ ಅಪವಾದಗಳು ಯಾವುವು?**

೧. ಸಾಕ್ಷ್ಯ ಅಧಿನಿಯಮದಲ್ಲಿರುವ ಸಾಕ್ಷ್ಯ ನಿಯಮದ ಅಡಿಯಲ್ಲಿ, ಸಾಕ್ಷಿದಾರನಲ್ಲದವನು ಮಾಡಿದ ಮತ್ತು ಹೇಳಲಾದ ಸಂಗತಿಗಳನ್ನು ರುಜು ಮಾಡಲು ಬಳಸುವ ಹೇಳಿಕೆಯು ಅಂಗೀಕಾರಾರ್ಹವಲ್ಲ.

೨. ಈ ನಿಯಮಕ್ಕೆ ಅಪವಾದಗಳುಂಟು.

**೩೨ನೇ ಕಲಮಿನಲ್ಲಿ ಒಳಗೊಂಡಿರುವ ಅಪವಾದಗಳು**

೧. ಯಾವುದೇ ವ್ಯಕ್ತಿಯು ಮೃತನಾದರೆ ಅಥವಾ ದೊರೆಯದಿದ್ದರೆ ಅಥವಾ ಸಾಕ್ಷ್ಯವನ್ನು ಕೊಡಲು ಅಸಮರ್ಥನಾದರೆ ಅಥವಾ ವಿಳಂಬವಿಲ್ಲದೆ ಅಥವಾ ವೆಚ್ಚವಿಲ್ಲದೆ ಅವನ ಹಾಜರಾತಿಯನ್ನು ದೊರಕಿಸಿ ಕೊಡಲು ಸಾಧ್ಯವಾಗದಿದ್ದರೆ, ಅಂಥ ವ್ಯಕ್ತಿಯು ಮಾಡಿದ ಲಿಖಿತ ಅಥವಾ ಬಾಯಿ ಮಾತಿನ ಹೇಳಿಕೆಗಳು ೩೨ನೇ ಕಲಮಿನಲ್ಲಿ ನಮೂದಿಸಲಾದ ೮ ಪ್ರವರ್ಗಗಳ ಪೈಕಿ ಯಾವುದೇ ಒಂದರ ಅಡಿಯಲ್ಲಿ ಬರುವಂತಿದ್ದರೆ, ಆ ಹೇಳಿಕೆಗಳನ್ನು ರುಜುವಾತು ಮಾಡಬಹುದು.

(i) ಅದು (ಹೇಳಿಕೆಯು) ದೃಷ್ಟಾಂತಗಳು ಅವನ ಮರಣಕ್ಕೆ ಸಂಬಂಧಿಸಿದ್ದರೆ, ದೃಷ್ಟಾಂತ (ಎ)

(ii) ಅದನ್ನು ಅವನ ವ್ಯವಹಾರದ ಕ್ರಮದಲ್ಲಿ ಮಾಡಿದ್ದರೆ, ದೃಷ್ಟಾಂತಗಳು (ಬಿ) (ಜೆ)

(iii) ಅದು ಅವನ ಆರ್ಥಿಕ ಅಥವಾ ಒಡೆತನದ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ಅಥವಾ ಅದು ನಿಜವಾಗಿದ್ದರೆ, ಅವನನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಅಥವಾ ನಷ್ಟಭರ್ತಿ ದಾವೆಗೆ ಗುರಿಪಡಿಸುವಂತಿದ್ದರೆ ದೃಷ್ಟಾಂತಗಳು (ಇ) (ಎಫ್)

(iv) ಅದು ಸಾರ್ವಜನಿಕ ಅಧಿಕಾರ, ರೂಢಿ ಅಥವಾ ಸಾಮಾನ್ಯ ಹಿತಾಸಕ್ತಿ ಇವುಗಳ ಬಗ್ಗೆ ಅವನು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಪ್ರಕಟಗೊಳಿಸುವುದಾದರೆ, ಪರಂತು ಅಂಥ ಅಭಿಪ್ರಾಯವನ್ನು ಅವನು ಈ ವಿವಾದವು ಉಂಟಾಗುವ ಮುನ್ನ ಕೊಟ್ಟಿದ್ದಿರಬೇಕು. ದೃಷ್ಟಾಂತ (ಎ)

(v) ಅದು ರಕ್ತಸಂಬಂಧ, ವಿವಾಹ ಸಂಬಂಧ ಅಥವಾ ಮತ್ತು ಸ್ವೀಕಾರ ಸಂಬಂಧ, ಇವುಗಳ ಅಸ್ತಿತ್ವಕ್ಕೆ ಸಂಬಂಧಿಸಿದ್ದು, ಆ ಬಗ್ಗೆ ಅವನಿಗೆ ವಿಶೇಷ ತಿಳಿವಳಿಕೆ ಇದ್ದು, ಅವನು ಅದನ್ನು ವಿವಾದವು ಉಂಟಾಗುವ ಮುನ್ನ ಮಾಡಿದ್ದರೆ,

(vi) ಅದು ಮೃತ ವ್ಯಕ್ತಿಗಳ ಜತೆ ಅವನು ಹೊಂದಿದ್ದ ಬಂಧುತ್ವದ ಅಸ್ತಿತ್ವಕ್ಕೆ ಸಂಬಂಧಿಸಿದ್ದು, ಅದನ್ನು ಯಾವುದೇ ಮರಣ ಶಾಸನದಲ್ಲಿ ಅಥವಾ ಕುಟುಂಬದ ವ್ಯವಹಾರಗಳಿಗೆ ಸಂಬಂಧಿಸಿದ ಪತ್ರದಲ್ಲಿ (ವಿಲೇಖದಲ್ಲಿ) ಅಥವಾ ಕುಟುಂಬದ ವಂಶಾವಳಿಯಲ್ಲಿ ಅಥವಾ ಸಮಾಧಿ

ಕಲ್ಲಿನಲ್ಲಿ, ಅಥವಾ ಕುಟುಂಬ ಚಿತ್ರದಲ್ಲಿ ಮಾಡಿದ್ದರೆ ಮತ್ತು ವಿವಾದವು ಉಂಟಾಗುವ ಮುನ್ನ ಮಾಡಿದ್ದರೆ,

(vii) ಅದು, ೧೩ನೇ ಪ್ರಕರಣದ (a) ಖಂಡದಲ್ಲಿ ನಮೂದಿಸಲಾದಂತೆ ಯಾವುದೇ ವಿಲೇಖದಲ್ಲಿ, ಮರಣ ಶಾಸನದಲ್ಲಿ ಒಳಗೊಂಡಿದ್ದರೆ

(viii) ಅದನ್ನು, ಅನೇಕ ವ್ಯಕ್ತಿಗಳು ತಮ್ಮ ಅನಿಸಿಕೆಗಳನ್ನು ಅಥವಾ ಭಾವನೆಗಳನ್ನು ಪ್ರಕಟನೆ ಮಾಡಿದಾಗ,

*–ದೃಷ್ಟಾಂತಗಳು V.*

**೩೩ನೇ ಕಲಮಿನಲ್ಲಿ ಒಳಗೊಂಡಿರುವ ಅಪವಾದಗಳು**

೧. ಯಾರೇ ವ್ಯಕ್ತಿ ಮೃತನಾದಾಗ, ದೊರೆಯದಿದ್ದಾಗ, ಸಾಕ್ಷ್ಯವನ್ನು ಕೊಡಲು ಅಸಮರ್ಥನಾದಾಗ ಅಥವಾ ಇದಿರು ಪಕ್ಷದವರು ಅವನು ಬಾರದಂತೆ ಮಾಡಿದಾಗ, ಅಥವಾ ವಿಳಂಬವಿಲ್ಲದೆ ಅಥವಾ ವೆಚ್ಚವಿಲ್ಲದೆ ಅವನ ಹಾಜರಾತಿಯನ್ನು ದೊರಕಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ, ಆಗ

ಅಂಥ ವ್ಯಕ್ತಿಯು ಹಿಂದಿನ ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ಅದನ್ನು ತೆಗೆದುಕೊಳ್ಳಲು ಕಾನೂನು ಮೂಲಕ ಅಧಿಕೃತವಾದ ಯಾರೇ ವ್ಯಕ್ತಿಯ ಸಮಕ್ಷಮ ಕೊಟ್ಟ ಸಾಕ್ಷ್ಯವನ್ನು,

ಅದರಲ್ಲಿ ನಿರೂಪಿಸಲಾದ ಸಂಗತಿಗಳನ್ನು ರುಜುವಾತು ಮಾಡುವ ಸಲುವಾಗಿ, ಆ ತರುವಾಯದ ನ್ಯಾಯಿಕ ವ್ಯವಹರಣೆಗಳಲ್ಲಿ ಅಥವಾ ಅದೇ ನ್ಯಾಯಿಕ ವ್ಯವಹರಣೆಯ ಉತ್ತರ (ತರುವಾಯದ) ಹಂತಗಳಲ್ಲಿ ಸಲ್ಲಿಸಬಹುದು.

**ಪರಂತು,**

(i) ಆ ವ್ಯವಹರಣೆಯು ಅದೇ ಪಕ್ಷಕಾರರ ಅಥವಾ ಹಿತಾಸಕ್ತಿ ಪ್ರತಿನಿಧಿಗಳ ನಡುವೆ ನಡೆದಿರಬೇಕು.

(ii) ಮೊದಲ ವ್ಯವಹರಣೆಯಲ್ಲಿ ವಿರೋಧಿ ಪಕ್ಷಕಾರನಿಗೆ ಪಾಟೀ ಸವಾಲು ಮಾಡಲು ಅವಕಾಶ ಒದಗಿಸಿದ್ದಿರಬೇಕು.

(iii) ವಿವಾದ್ಯ ಪ್ರಶ್ನೆಗಳು ಮೊದಲನೆಯ ವ್ಯವಹರಣೆಯಲ್ಲಿದ್ದವುಗಳಿಗೆ ಹೋಲಿಸಲಾಗಿ ಎರಡನೆಯ ವ್ಯವಹರಣೆಗಳಿದ್ದವುಗಳು ಗಣನೀಯ ಪ್ರಮಾಣದಲ್ಲಿ ಅವೇ ಆಗಿದ್ದುವು.

(ಮುಂದಿನ ಭಾಗವು ದೊರಕುತ್ತಿಲ್ಲ –ಸಂ.)

**೩೫. ಯಾವುದೇ ಪುಸ್ತಕ, ರಿಜಿಸ್ಟರು ಅಥವಾ ದಾಖಲೆ ಇವುಗಳಲ್ಲಿನ ನಮೂದನೆ**

**೧. ಅಂಗೀಕಾರಾರ್ಹತೆಯ ಷರತ್ತುಗಳು**

(i) ಈ ಪ್ರಕರಣದಲ್ಲಿ ಎರಡು ವರ್ಗದ ನಮೂದನೆಗಳನ್ನು ಕಲ್ಪಿಸಲಾಗಿದೆ (a) ಸಾರ್ವಜನಿಕ ನೌಕರರಿಂದ ಮಾಡಲಾದವುಗಳು ಮತ್ತು (b) ಸಾರ್ವಜನಿಕ ನೌಕರರಿಗೆ ಹೊರತಾದವರಿಂದ ಮಾಡಲಾದವುಗಳು. ಹೀಗೆ, ಸಾರ್ವಜನಿಕ ನೌಕರನು ಮಾಡಿದ್ದರೆ, ಅವನು ತನ್ನ ಅಧಿಕಾರಿಕ ಕರ್ತವ್ಯ ನಿರ್ವಹಣೆಯ ಕ್ರಮದಲ್ಲಿ ಮಾಡಿರಬೇಕು. ಸಾರ್ವಜನಿಕ ನೌಕರರಲ್ಲದ ಯಾರೇ ಇತರ ವ್ಯಕ್ತಿಗಳು ಮಾಡಿದ್ದರೆ, ಹಾಗೆ ನಮೂದನೆಯನ್ನು ಮಾಡುವ ಕರ್ತವ್ಯವನ್ನು ಕಾನೂನು ದ್ವಾರಾ ನಿಯಮಿಸಿದ್ದಿರಬೇಕು. ಮೊದಲನೆಯದು ಯಥಾ ಕ್ರಮದಲ್ಲಿ ಆಗುವ ಕೆಲಸ. ಎರಡನೆಯದು ವಿಶೇಷ ನಿರ್ದೇಶನದ ಪರಿಣಾಮ.

(ii) ಪುಸ್ತಕ, ರಿಜಿಸ್ಟರು ಅಥವಾ ದಾಖಲೆ ಸಾರ್ವಜನಿಕವಾಗಿರಬೇಕು ಅಥವಾ ಸರ್ಕಾರಿ ಆಗಿರಬೇಕು.

ಸರ್ಕಾರಿ ಎಂದರೆ ಖಾಸಗಿ ವ್ಯಕ್ತಿಯೊಬ್ಬನು ಇಟ್ಟುಕೊಂಡದ್ದಲ್ಲ, ಅದಕ್ಕೆ ವಿಭಿನ್ನವಾಗಿ ಸರ್ಕಾರವೇ ಇಟ್ಟುಕೊಂಡದ್ದು ಎಂದು ಅರ್ಥ.

ಸಾರ್ವಜನಿಕ ಎಂದರೆ ಸಾರ್ವಜನಿಕರ ಉಪಯೋಗಕ್ಕಾಗಿ ಇಟ್ಟುಕೊಂಡದ್ದು ಎಂದು ಅರ್ಥ. ಸಾರ್ವಜನಿಕ ಎಂದಾಕ್ಷಣ ಸಕಲರ ಸಲುವಾಗಿ ಇದೆ ಎಂದಲ್ಲ. ಆ ಕುರಿತು ಆಸಕ್ತಿ ಅಥವಾ ಸಂಬಂಧ ಇದ್ದವರ ಸಲುವಾಗಿ ಮಾತ್ರ ಎಂದು ಅರ್ಥ.

*೧೮ Cal. ೫೮೪*

(iii) ಪುಸ್ತಕ, ರಿಜಿಸ್ಟರು ಅಥವಾ ದಾಖಲೆ ಅಂದರೆ ಯಾವುದೇ ದೇಶದಲ್ಲಿ ಇಡಲಾದ ಪುಸ್ತಕ, ರಿಜಿಸ್ಟರ್ ಅಥವಾ ದಾಖಲೆ ಹೊರತು ಭಾರತದಲ್ಲಿ ಮಾತ್ರವೇ ಇಡಲಾದುದು ಎಂದು ಅರ್ಥವಲ್ಲ. ಎಲ್ಲಾದರೂ ಸರಿಯೆ, ಸಂಬಂಧಪಟ್ಟ ಷರತ್ತುಗಳಿಗೆ ಅಗತ್ಯವಾಗಿ ಅನುಗುಣವಾಗಿರಬೇಕು.

**ಗಮನಿಸಬೇಕಾದ ಅಂಶಗಳು**

(೧) ನಮೂದನೆಯ ಸಾಕ್ಷ್ಯವೇ; ಅದನ್ನು ಮಾಡಿದವನು ಜೀವಂತನಾಗಿದ್ದು, ಸಾಕ್ಷ್ಯ ಕೊಡಲು ಅವನನ್ನು ಕರೆಯದಿದ್ದರೂ ಕೂಡ, ಸಾರ್ವಜನಿಕ ಮತ್ತು ಸರ್ಕಾರಿ ದಸ್ತಾವೇಜುಗಳ ರುಜುವಾತಿನ ಬಗ್ಗೆ ೭೬–೭೮ ಈ ಕಲಮುಗಳನ್ನು ನೋಡಿ.

(೨) ಒಂದು ವಿಶಿಷ್ಟ ನಮೂದನೆಯನ್ನು ಮಾಡಿಲ್ಲ ಎಂಬುದನ್ನು ರುಜುವಾತು ಮಾಡಲು, ಈ ಪ್ರಕರಣದ ಅಡಿಯಲ್ಲಿ ಪುಸ್ತಕ, ರಿಜಿಸ್ಟರು ಅಥವಾ ದಾಖಲೆ ಇವು ಸಾಕ್ಷ್ಯ ಆಗುವುದಿಲ್ಲ.

*೧೦ Cal. ೧೦೨೪, ೨೫ All. ೯೦*

(೩) ಸರ್ಕಾರಿ ಅಧಿಕಾರಿಯೊಬ್ಬರು, ರಿಜಿಸ್ಟರಿನಲ್ಲಿ ಅಥವಾ ಯಾವುದೇ ಇತರ ಪುಸ್ತಕದಲ್ಲಿ ಅವನಿಗೆ ತಿಳಿದಿರುವ ವಾಸ್ತವಿಕ ಸಂಗತಿಯನ್ನು ನಮೂದು ಮಾಡುವುದು ಅಗತ್ಯವಾಗಿರತಕ್ಕ ಪ್ರಕರಣಗಳ ವರ್ಗಕ್ಕೆ ಈ ಕಲಮು ಸೀಮಿತವಾಗಿಲ್ಲ.

*೨೦ Cal. ೯೪೦*

(೪) ನಮೂದನೆಯನ್ನು ಸಾರ್ವಜನಿಕ ನೌಕರನು ತನ್ನ ಅಧಿಕಾರಿಕ (ಹುದ್ದೆಯ) ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಕಾನೂನು ದ್ವಾರಾ ವಿಶೇಷವಾಗಿ ನಿಯಮಿಸಲಾದ ಕರ್ತವ್ಯದ ನೆರವೇರಿಕೆಯಲ್ಲಿ ಮಾಡಿದ್ದಿರಬಹುದಾಗಿದ್ದರೂ, ಆ ನೌಕರನಿಗೆ ಅನುಮತಿಯಿಲ್ಲದ ಅಥವಾ ಅವನಿಂದ ಅಪೇಕ್ಷಿತವಲ್ಲದ ನಮೂದನೆಯಾಗಿರಕೂಡದು ಅಥವಾ ತನ್ನ ಕರ್ತವ್ಯಗಳ ಬಗೆಗಿನ ಅಜ್ಞಾನದಿಂದ ಅಥವಾ ಅನ್ಯಥಾ ನಮೂದನೆಯಲ್ಲಿ ನಿರೂಪಿಸಲಾದ ಸಂಗತಿಗಳ ಸತ್ಯತೆಯನ್ನು ಬಲ್ಲ ವ್ಯಕ್ತಿಯು ಹೇಳಿದ ಮೇರೆಗೆ ಮಾಡಿದ ನಮೂದನೆ ಆಗಿರಕೂಡದು.

*೨೫ All. ೯೦, F.B. ೧೦೧*

೨. ನಮೂದನೆಗಳನ್ನು ದೈನಿಕವಾಗಿ ಅಥವಾ (ಬ್ಯಾಂಕಿನಲ್ಲಿರುವಂತೆ) ವಹಿವಾಟುಗಳು ಜರುಗಿದಂತೆ ಗಂಟೆ ಗಂಟೆಗೆ ಬರೆದಿಡಬೇಕಾಗಿಲ್ಲ. ಅಂದರೆ ನಮೂದನೆಗಳನ್ನು ಮಾಡಿದ ಸಮಯವು ಅತ್ಯಗತ್ಯವಲ್ಲ. ಅಗತ್ಯವಾಗಿ ಬೇಕಾದುದೆಂದರೆ, ಅವುಗಳನ್ನು ವ್ಯವಹಾರದ ಕ್ರಮದಲ್ಲಿ ಕ್ರಮಬದ್ಧವಾಗಿ ಮಾಡಿದ್ದಿರಬೇಕು. ನಮೂದನೆಯಲ್ಲಿ ವಿಳಂಬವಾದರೆ, ಆ ಮೂಲಕ ಅದರ ಮೌಲ್ಯವು ಕಡಿಮೆಯಾಗಬಹುದು. ಆದರೆ

ಅದರ ಅಂಗೀಕಾರಾರ್ಹತೆಯ ಮೇಲೆ ಪರಿಣಾಮವಾಗುವುದಿಲ್ಲ.

*–೨೭ Cal. ೧೧೮ (P.C.); ೧೩ C.L.J. ೧೩೯*

೩. ವಹಿವಾಟಿನ ಕ್ರಮದಲ್ಲಿ ಕ್ರಮಬದ್ಧವಾಗಿ ಲೆಕ್ಕ ಪುಸ್ತಕಗಳಲ್ಲಿನ ವಾಸ್ತವಿಕ ನಮೂದನೆಗಳು ಸುಸಂಬದ್ಧವಾಗಿದ್ದರೂ, ಆಪಾದಿಸಲಾದ ವಹಿವಾಟಿಗೆ ಸಂಬಂಧಿಸಿದಂತೆ ಯಾವುದೇ ನಮೂದನೆ ಇಲ್ಲದಿರುವ ಸಂಗತಿಯನ್ನು ರುಜುವಾತು ಮಾಡಲು ಆ ಪುಸ್ತಕವು ಸುಸಂಬದ್ಧವಲ್ಲ.

*೧೦ Cal : ೧೦೨೪*

**ಟಿಪ್ಪಣಿ:** ಅದು ಕಲಮು ೯ ಮತ್ತು ೧೧ ಇವುಗಳ ಅಡಿಯಲ್ಲಿ ಅಂಗೀಕಾರಾರ್ಹವಾಗ ಬಹುದು–

*೧೯ C.N. ೧೦೨೪*

ಊಹೆಯ ಸಂಬಂಧದಲ್ಲಿ ನಮೂದನೆಯು ಇಲ್ಲದಿರುವಾಗಿನ ಊಹೆ.

*೩೦ Cal. ೨೩೧ (೨೪೭) P.C.*

೪. ನಮೂದನೆಯು ಪುಸ್ತಕದಲ್ಲಿ, ರಿಜಿಸ್ಟರಿನಲ್ಲಿ ಅಥವಾ ದಾಖಲೆಯಲ್ಲಿ ಇರಬೇಕು. ನಮೂದನೆಯಲ್ಲಿ ಪತ್ರ ವ್ಯವಹಾರವು ಒಳಗೊಳ್ಳುವುದಿಲ್ಲ.

*೭ M.L.I. ೧೧೭*

**ದೃಷ್ಟಾಂತಗಳು:**

೧. ಜನನ ಮತ್ತು ಮರಣ ರಿಜಿಸ್ಟರುಗಳಲ್ಲಿನ ನಮೂದನೆಗಳು.

೨. ಜನನ ಮತ್ತು ರೆವಿನ್ಯೂ ರಿಜಸ್ಟರುಗಳಲ್ಲಿನ ನಮೂದನೆಗಳು.

೩. ಜನನ ಮತ್ತು ವಿವಾಹ ರಿಜಿಸ್ಟರುಗಳಲ್ಲಿನ ನಮೂದನೆಗಳು.

೩೬. ಭೂಪಟಗಳು, ನಕ್ಷೆಗಳಲ್ಲಿ ಮತ್ತು ಚಿತ್ರಪಟ(ಚಾರ್ಟ್)ಗಳಲ್ಲಿನ ನಮೂದನೆಗಳು.

**I. ಅಂಗೀಕಾರಾರ್ಹತೆಯ ಷರತ್ತುಗಳು**

ಪ್ರಕರಣವು ಭೂಪಟಗಳು ಮತ್ತು ನಕ್ಷೆಗಳ ಎರಡು ವರ್ಗಗಳನ್ನು ಉಲ್ಲೇಖಿಸುತ್ತದೆ.

(ಎ) ಸಾಮಾನ್ಯವಾಗಿ ಸಾರ್ವಜನಿಕ ಮಾರಾಟಕ್ಕಾಗಿ ಇಟ್ಟವುಗಳು.

(ಬಿ) ಸರ್ಕಾರದ ಅಧಿಕಾರದ ಅಡಿಯಲ್ಲಿ ತಯಾರಾದವುಗಳು.

**(ಎ) ವರ್ಗದ ಅಂಗೀಕಾರಾರ್ಹತೆಗೆ ಕಾರಣಗಳು.**

ಅವುಗಳ ಪ್ರಕಟಣೆಯು ಸಕಲ ಸಮುದಾಯಕ್ಕೆ ಪರಿಶೀಲನೆಗೆ ದೊರೆಯುವ ಹಾಗೆ ಇರುತ್ತದೆ. ಆ ಕಾರಣ ವಿಮರ್ಶೆಗೆ ಅವಕಾಶವಿರುತ್ತದೆ. ಅವುಗಳಲ್ಲಿರಬಹುದಾದ ತಪ್ಪುಗಳನ್ನು ಅಥವಾ ನ್ಯೂನತೆಗಳನ್ನು ಕುರಿತು ಆಕ್ಷೇಪಿಸುವ ಅಥವಾ ಬಯಲಿಗೆಳೆಯುವ ಸಂಭಾವ್ಯತೆಯು ಅಧಿಕವಾಗಿರುತ್ತದೆ.

**(ಬಿ) ವರ್ಗದ ಅಂಗೀಕಾರಾರ್ಹತೆಗೆ ಕಾರಣಗಳು**

ಸರ್ಕಾರದ ಅಧಿಕಾರದ ಅಡಿಯಲ್ಲಿ ಸಿದ್ಧವಾಗಿ ಪ್ರಕಟಿಸಲಾಗುವ ಕಾರಣ, ಸಕ್ಷಮ (ಸಮರ್ಥ) ವ್ಯಕ್ತಿಗಳು ಮಾಡಿದವುಗಳೆಂದು ಮತ್ತು ಅವರ ಅಧ್ಯಯನದ ಮತ್ತು ವಿಚಾರಣೆಗಳ ಫಲವಾಗಿ ತಯಾರಾದವು ಗಳೆಂದು ಪರಿಗಣಿಸಬಹುದು.

೩೭. ಯಾವುದೇ ಅಧಿನಿಯಮದಲ್ಲಿನ ಅಥವಾ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆಯಲ್ಲಿನ ಒಕ್ಕಣಿಕೆಯಲ್ಲಿ ಮಾಡಲಾದ ಹೇಳಿಕೆ.

**ಕಾರಣಗಳು**

೧. ರಾಜಪತ್ರ (ಗೆಜೆಟ್) ಮತ್ತು ಅಧಿನಿಯಮಗಳು ಅಂಗೀಕಾರಾರ್ಹವಾಗಿರುತ್ತವೆ. ಕಾರಣವೆಂದರೆ, ಅವುಗಳನ್ನು ಸಾರ್ವಜನಿಕರ ಅಧಿಕೃತ ಏಜೆಂಟರು ತಮ್ಮ ಅಧಿಕಾರಕ (ಪದೀಯ) ಕರ್ತವ್ಯಗಳ ನಿರ್ವಹಣೆಯನ್ನು ಮಾಡಿರುತ್ತಾರೆ ಮತ್ತು ಅವುಗಳನ್ನು ಸರ್ಕಾರದ ಪ್ರಾಧಿಕಾರದ ಅಡಿಯಲ್ಲಿ ಪ್ರಕಟಿಸಲಾಗುತ್ತದೆ. ಮಾತ್ರವಲ್ಲದೆ, ಅವುಗಳಲ್ಲಿ ನಿರೂಪಿಸಲಾದ ಸಂಗತಿಗಳು ಸಾರ್ವಜನಿಕ ಸ್ವರೂಪದವುಗಳೂ ಆಗಿರುತ್ತವೆ.

೨. ಅವುಗಳಲ್ಲಿ ನಿರೂಪಿಸಲಾದ ಸಂಗತಿಗಳು ಸಾರ್ವಜನಿಕ ಸ್ವರೂಪದವುಗಳಾಗಿರುವ ಕಾರಣ, ಅನೇಕ ಸಲ ಅವುಗಳನ್ನು ಪ್ರಮಾಣಪೂರ್ವಕ ಸಾಕ್ಷಿದಾರರ ಮೂಲಕ ರುಜುವಾತು ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

(೧) ನ್ಯಾಯಾಲಯವು, ಸಾರ್ವಜನಿಕ ಸ್ವರೂಪದ ಯಾವುದೇ ಸಂಗತಿಯ ಅಸ್ತಿತ್ವಕ್ಕೆ ಸಂಬಂಧಪಟ್ಟ ಹಾಗೆ ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಲ್ಲಿ ಮಾತ್ರ ಸುಸಂಬದ್ಧವಾಗುತ್ತದೆ.

(೨) ಸಾರ್ವಜನಿಕ ಸ್ವರೂಪ

*(ವಿವರಿಸಿಲ್ಲ –ಸಂಪಾದಕ)*

೩. ಪ್ರಕರಣವು ಸಂಸತ್ತಿನ ಖಾಸಗಿ ಅಧಿನಿಯಮ ಅಥವಾ ಸಾರ್ವಜನಿಕ ಅಧಿನಿಯಮ ಎಂದು ಭೇದ ಮಾಡುವುದಿಲ್ಲ. ಇವೆರಡೂ ಪ್ರಕರಣಗಳಲ್ಲಿ ಒಕ್ಕಣಿಕೆಯಲ್ಲಿನ ಸಂಗತಿಯು ಸಾರ್ವಜನಿಕ ಸ್ವರೂಪದ ಸಂಗತಿಯಾಗಿರಬೇಕು ಎಂದು ಮಾತ್ರ ಅಗತ್ಯಪಡಿಸುತ್ತದೆ.

೪. ಸಾಕ್ಷ್ಯ ಅಧಿನಿಯಮದ ಮಟ್ಟಿಗೆ ಒಕ್ಕಣಿಕೆಯು ನಿರ್ಣಾಯಕವಲ್ಲ. ಆದಾಗ್ಯೂ, ಅವುಗಳನ್ನು ನಿರ್ಣಾಯಕ ಎಂದು ಸ್ಪಷ್ಟವಾಗಿ ಘೋಷಿಸಿದ್ದಿರಬಹುದು.

೫. ಒಂದು ಸಂಗತಿಯ ಅಸ್ತಿತ್ವವನ್ನು ತೋರಿಸಲು ಒಕ್ಕಣಿಕೆಯನ್ನು ರುಜುವಾತು ಮಾಡಬೇಕಾಗುತ್ತದೆ. ವಿಶಿಷ್ಟ ವ್ಯಕ್ತಿಗೆ ಅದರ ಅಸ್ತಿತ್ವ ತಿಳಿದಿದೆ ಎಂಬ ಬಗ್ಗೆ ಅದು ಸಾಕ್ಷ್ಯವಲ್ಲ. ಸಾರ್ವಜನಿಕ ಸ್ವರೂಪದ್ದಾಗಿದ್ದರೂ, ಗೆಜೆಟ್‌ನಲ್ಲಿರುವ ಅಧಿಸೂಚನೆಯ ಮೂಲಕ ಸಂಗತಿಯ ತಿಳಿವಳಿಕೆಯನ್ನು ಊಹಿಸುವಂತಿಲ್ಲ. ಅದು ನ್ಯಾಯಾಲಯದ ನಿರ್ಧಾರಕ್ಕೆ ಸೇರಿದ ಸಂಗತಿಯ ಪ್ರಶ್ನೆಯಾಗಿರುತ್ತದೆ. ಆ ಅಧಿಸೂಚನೆಯಿಂದ ಬಾಧಿತನಾದ ವ್ಯಕ್ತಿಯು ಬಹುಶಃ ಓದಿರಬಹುದು ಎಂದು ತೋರಿಸಬೇಕಾಗುತ್ತದೆ.

**೩೮ ಎಸ್.**

೧. ಯಾವುದೇ ದೇಶದ ಕಾನೂನಿನಲ್ಲಿರುವ ಹೇಳಿಕೆ ಅಂದರೆ

(a) ಅಂಥ ದೇಶದ ಸರ್ಕಾರದ ಪ್ರಾಧಿಕಾರದ ಅಡಿಯಲ್ಲಿ ಮುದ್ರಿತವಾಗಿದೆ ಎಂದು ಅಥವಾ ಪ್ರಕಟಿತವಾಗಿದೆಯೆಂದು ತಾತ್ಪರ್ಯವಾಗುವ ಪುಸ್ತಕದಲ್ಲಿರುವ ಹೇಳಿಕೆ.

೨. ಅಂಥ ದೇಶದ ನ್ಯಾಯಾಲಯದ ಅಧಿನಿರ್ಣಯದ (ರೂಲಿಂಗ್) ವರದಿ ಅಂದರೆ ಅಂತ ರೂಲಿಂಗ್‌ಗಳ ವರದಿ ಎಂದು ತಾತ್ಪರ್ಯವಾಗುವ ಪುಸ್ತಕದಲ್ಲಿ ಒಳಗೊಂಡಂಥ ವರದಿ.

ನ್ಯಾಯಾಲಯವು ಯಾವುದೇ ದೇಶದ ಕಾನೂನನ್ನು ಕುರಿತು ಅಭಿಪ್ರಾಯವನ್ನು ರೂಪಿಸಿಕೊಳ್ಳುವಲ್ಲಿ ಇದು ಅನ್ವಯವಾಗುತ್ತದೆ.

ವಿವಾದ್ಯ ಸಂಗತಿಗಳಿಗೆ ಅಥವಾ ಸುಸಂಬದ್ಧ ಸಂಗತಿಗಳಿಗೆ ಅಸಂಗತವಾಗಿರುವ ಅಥವಾ ಅವುಗಳನ್ನು ಅತ್ಯಂತ ಸಂಭವನೀಯಗೊಳಿಸುವ ಸಂಗತಿಗಳ ವಿಶಿಷ್ಟ ಪ್ರಸಂಗಗಳು (ಉದಾಹರಣೆಗಳು).

ಅವುಗಳೆಂದರೆ (೧) ಒಪ್ಪಿಗೆಗಳು, (೨) ತಪ್ಪೊಪ್ಪಿಗೆಗಳು ಮತ್ತು ತೀರ್ಪುಗಳು.

# ಒಪ್ಪಿಗೆಗಳು

**ಕಲಮು ೨೧**

೧. ಒಪ್ಪಿಗೆಗಳನ್ನು ಅವುಗಳನ್ನು ಮಾಡುವವನು ಅಥವಾ ಅವನ ಹಿತಾಸಕ್ತಿ ಪ್ರತಿನಿಧಿಯ ವಿರುದ್ಧ ರುಜುವಾತು ಮಾಡಬಹುದು.

೨. ಪ್ರಶ್ನೆಯೆಂದರೆ, ಒಪ್ಪಿಗೆ ಅಂದರೇನು? ಅದಕ್ಕೆ ಮುನ್ನ ಒಪ್ಪಿಗೆಯ ಸುಸಂಬದ್ಧತೆಯನ್ನು ಕುರಿತು ಕೆಲವು ಅಂಶಗಳನ್ನು ಗಮನಿಸಬೇಕು.

(೧) ಒಪ್ಪಿಗೆಯನ್ನು ಒಬ್ಬ ವ್ಯಕ್ತಿಯ ವಿರುದ್ಧ ರುಜುವಾತು ಮಾಡಬಹುದು. ಒಬ್ಬ ವ್ಯಕ್ತಿಯ ಪರವಾದ ಒಪ್ಪಿಗೆಯನ್ನು ಅವನು ರುಜುವಾತು ಮಾಡಲು ಸಾಧ್ಯವಿಲ್ಲ. ವಾದಿಯು, ಪ್ರತಿವಾದಿಯು ಮಾಡಿದ ಒಪ್ಪಿಗೆಯು, ತನ್ನ ಪ್ರಕರಣದಲ್ಲಿ ಅಗತ್ಯವಿದ್ದರೆ, ಅದನ್ನು ರುಜುವಾತು ಮಾಡಬಹುದು. ಪ್ರತಿವಾದಿಯು, ವಾದಿಯು ಮಾಡಿದ ಒಪ್ಪಿಗೆಯು, ತನ್ನ ಪ್ರಕರಣದಲ್ಲಿ ಅಗತ್ಯವಿದ್ದರೆ, ಅದನ್ನು ರುಜುವಾತು ಮಾಡಬಹುದು. ಆದರೆ ವಾದಿಯು ತಾನು ಮಾಡಿದ ಒಪ್ಪಿಗೆಯು ತನ್ನ ಪ್ರಕರಣದಲ್ಲಿ ಎಷ್ಟೊಂದು ನೆರವಾಗುವಂತಿದ್ದರೂ, ಅದನ್ನು ರುಜುವಾತು ಮಾಡಲು ಸಾಧ್ಯವಿಲ್ಲ. ಅದೇ ರೀತಿ, ಪ್ರತಿವಾದಿಯು, ತಾನು ಮಾಡಿದ ಒಪ್ಪಿಗೆಯು, ತನ್ನ ಸ್ವಂತದ ಪ್ರಕರಣದಲ್ಲಿ ಎಷ್ಟೊಂದು ನೆರವಾಗುವಂತಿದ್ದರೂ, ಅದನ್ನು ರುಜುವಾತು ಮಾಡಲು ಸಾಧ್ಯವಿಲ್ಲ.

ಇದಕ್ಕೆ ಕಾರಣವೆಂದರೆ, ಪಕ್ಷಕಾರನಿಗೆ ತನ್ನ ಸ್ವಂತದ ಪರವಾಗಿ ಸಾಕ್ಷ್ಯವನ್ನು ಸೃಷ್ಟಿಸಲು ಅನುಮತಿ ಇರುವುದಿಲ್ಲ.

ಈ ನಿಯಮಕ್ಕೆ ಮೂರು ಅಪವಾದಗಳಿರುತ್ತವೆ, ಆ ಪ್ರಕಾರ ಪಕ್ಷಕಾರನಿಗೆ ತನ್ನ ಸ್ವಂತದ ಪರವಾಗಿ ಒಪ್ಪಿಗೆಯ ಸಾಕ್ಷ್ಯವನ್ನು ಕೊಡಲು ಅನುಮತಿಯಿರುತ್ತದೆ.

(ಎ) ಒಪ್ಪಿಗೆಯ ೩೨ನೇ ಕಲಮಿನ ಅಡಿಯಲ್ಲಿ ಸುಸಂಬದ್ಧವಾಗಿದ್ದರೆ,

(ಬಿ) ಆ ಸುಮಾರಿನ ದೈಹಿಕ ಅಥವಾ ಮಾನಸಿಕ ಸ್ಥಿತಿಗೆ ಸಂಬಂಧಪಟ್ಟಿದ್ದರೆ ಮತ್ತು ನಡತೆಯಿಂದ ಕೂಡಿದ್ದರೆ

(ಸಿ) ಒಪ್ಪಿಗೆಯು, ಒಪ್ಪಿಗೆಯಾಗಿಯಲ್ಲದೆ ಅನ್ಯಥಾ ಸುಸಂಬದ್ಧವಾಗಿದ್ದರೆ
ದೃಷ್ಟಾಂತಗಳು: (ಡಿ) (ಇ).

**ಕಲಮು ೨೩**

(೨) ಈ ಮೂರು ಪ್ರಕರಣಗಳನ್ನು ಹೊರತುಪಡಿಸಿ, ಒಪ್ಪಿಗೆಯನ್ನು ರುಜುವಾತುಪಡಿಸುವದಾದರೆ, ಅದನ್ನು ಒಬ್ಬ ಪಕ್ಷಕಾರನ ವಿರುದ್ಧ ಮಾತ್ರವೇ ರುಜುವಾತು ಮಾಡಬಹುದು. ಒಪ್ಪಿಗೆಯ ರುಜುವಾತು ಕೊಡಲಾಗದಂಥ ಒಂದು ಪ್ರಕರಣವು ಇರುತ್ತದೆ. ಆ ಪ್ರಕರಣವೆಂದರೆ, ಒಪ್ಪಿಗೆಯ ರುಜುವಾತು ಕೊಡಕೂಡದು ಎಂಬ ಸ್ಪಷ್ಟ ಷರತ್ತಿನ ಮೇಲೆ ಒಪ್ಪಿಗೆಯನ್ನು ಕೊಟ್ಟಿರುವ ಪ್ರಸಂಗ.

**ಕಲಮು ೨೧**

(೩) ಒಪ್ಪಿಗೆಗಳು ಅಂಗೀಕರಿಸಲಾದ ವಿಷಯದ ಬಗ್ಗೆ ನಿರ್ಣಾಯಕ ರುಜುವಾತು ಅಲ್ಲ. ವಿಬಂಧಕ್ಕೆ ಅಗತ್ಯವಾದ ಅಂಶಗಳು ಇದ್ದರೆ, ಒಪ್ಪಿಗೆಯು ಒಂದು ವಿಬಂಧವಾಗಬಹುದು. ಈ ಪ್ರಸಂಗದಲ್ಲಿ, ಯಾವ ಪಕ್ಷಕಾರನ ವಿರುದ್ಧ ಅದನ್ನು ರುಜುವಾತುಗೊಳಿಸಲು ಉದ್ದೇಶಿಸಲಾಗಿದೆಯೋ ಆ ಪಕ್ಷಕಾರನು ಅದನ್ನು ಬೇರೆ ರುಜುವಾತು ಮಾಡಲು ಅಥವಾ ವಿವರಿಸಿಬಿಡಲು ಸಾಧ್ಯವಿಲ್ಲ. ಆದರೆ ಅದು ವಿಬಂಧವಾಗಿರದಿದ್ದರೆ, ಯಾವ ಪಕ್ಷಕಾರನ ವಿರುದ್ಧ ಅದನ್ನು ರುಜುವಾತು ಮಾಡಲಾಗಿದೆಯೋ ಆ ಪಕ್ಷಕಾರನು, ಅದನ್ನು ಬೇ–ರುಜುವಾತು ಮಾಡಲು ಅಥವಾ ವಿವರಿಸಿಬಿಡಲು ಸಾಕ್ಷ್ಯವನ್ನು ಕೊಡಬಹುದು.

೩. ಒಪ್ಪಿಗೆಗಳನ್ನು, ಯಾವ ಪಕ್ಷಕಾರನು ಮಾಡಿದನೋ ಅವರ ವಿರುದ್ಧ ಮಾತ್ರ ರುಜುವಾತು ಮಾಡಬಹುದು. ಆದರೆ ಅವನ ಹಿತಾಸಕ್ತಿ ಪ್ರತಿನಿಧಿಯ ವಿರುದ್ಧ ಸಹ ರುಜುವಾತು ಮಾಡಬಹುದು.

**ಹಿತಾಸಕ್ತಿ ಪ್ರತಿನಿಧಿ ಎಂದರೆ ಯಾರು?**

(i) ಅಧಿನಿಯಮದಲ್ಲಿ ಈ ಪದದ ಪರಿಭಾಷೆಯನ್ನು ಕೊಟ್ಟಿರುವುದಿಲ್ಲ.

(ii) ಅದು ಕಾನೂನು ಪ್ರತಿನಿಧಿ ಎಂಬ ಪದಕ್ಕಿಂತಲೂ ಹೆಚ್ಚು ವ್ಯಾಪಕವಾಗಿದೆ ಎಂದು ನಿರ್ಣಯಿಸಲಾಗಿದೆ. ಮತ್ತು ಅದು ಭಾರತ ದಂಡ ಸಂಹಿತೆಯ ಪ್ರಕಾರ, ಮೃತ ವ್ಯಕ್ತಿಯ ಎಸ್ಟೇಟನ್ನು ಕಾನೂನಿನ ಪ್ರಕಾರ ಪ್ರತಿನಿಧಿಸುವ ವ್ಯಕ್ತಿ.

(iii) ಅದು 'ಕಾನೂನು ಪ್ರತಿನಿಧಿ'ಯನ್ನು ಮಾತ್ರವೇ ಒಳಗೊಳ್ಳುವುದಿಲ್ಲ. ಒಬ್ಬ ವ್ಯಕ್ತಿಯ ಭಾಗಿದಾರರುಗಳನ್ನು ಸಹ ಒಳಗೊಳ್ಳುತ್ತದೆ.

(iv) ಒಬ್ಬನ ಭಾಗಿದಾರರುಗಳಲ್ಲಿ ಕೆಳಕಂಡವರು ಒಳಗೊಳ್ಳುತ್ತಾರೆ:

- (i) ರಕ್ತಸಂಬಂಧದಲ್ಲಿ ಭಾಗಿದಾರರು: ಇವರಲ್ಲಿ ಪೂರ್ವಜರು ಮತ್ತು ವಾರಸುದಾರರು ಒಳಗೊಳ್ಳುತ್ತಾರೆ.
- (ii) ಕಾನೂನಿನಲ್ಲಿ ಭಾಗಿದಾರರು: ಇವರಲ್ಲಿ ಮರಣಶಾಸನಕರ್ತನ ನಿರ್ವಾಹಕ ಅಥವಾ ಮರಣ ಶಾಸನ ಪಟ್ಟಿ ಇಲ್ಲದವ, ಆಡಳಿತಗಾರ ಒಳಗೊಳ್ಳುತ್ತಾರೆ.
- (iii) ಸಂಪದದಲ್ಲಿ ಅಥವಾ ಹಿತಾಸಕ್ತಿಯಲ್ಲಿ ಭಾಗಿದಾರರು: ಇವರಲ್ಲಿ ಮಾರಾಟಗಾರ ಮತ್ತು ಖರೀದಿಗಾರ, ಅನುದಾನ ಮಾಡುವವನು ಮತ್ತು ಅನುದಾನ ಪಡೆವವನು, ಗೇಣಿಗೆದಾರ ಮತ್ತು ದೇಣಿಗೆ ಪಡೆದವನು. ಗುತ್ತಿಗೆ/ಗೇಣಿ ಕೊಡುವವನು ಮತ್ತು ಗುತ್ತಿಗೆದಾರ/ಗೇಣಿದಾರ ಒಳಗೊಳ್ಳುತ್ತಾರೆ.

ಹೀಗಾಗಿ, ಒಂದು ಒಪ್ಪಿಗೆಯನ್ನು,

(೧) ತಂದೆಯು ಮಾಡಿದ್ದರೆ, ಮಗನ ವಿರುದ್ಧ ರುಜುವಾತು ಮಾಡಬಹುದು;

(೨) ಮೃತನು ಮಾಡಿದ್ದರೆ, ಕಾರ್ಯನಿರ್ವಾಹಕನ ಆಡಳಿತಗಾರನ ವಿರುದ್ಧ ರುಜುವಾತು ಮಾಡಬಹುದು.

(೩) ಮಾರಾಟಗಾರನು ಮಾಡಿದ್ದರೆ, ಖರೀದಿಗಾರನ ವಿರುದ್ಧ ರುಜುವಾತು ಮಾಡಬಹುದು.

**೧೭-೨೦ ಒಪ್ಪಿಗೆ ಅಂದರೆ ಏನು?**

೧. ಒಪ್ಪಿಗೆಯು (೧) ಔಪಚಾರಿಕ ಅಥವಾ (೨) ಅನೌಪಚಾರಿಕ ಆಗಿರಬಹುದು.

೧. ಔಪಚಾರಿಕ ಒಪ್ಪಿಗೆಗಳೆಂದರೆ:

(i) ವಾದಪತ್ರ(ಪ್ಲೀಡಿಂಗ್)ಗಳಲ್ಲಿ ಒಳಗೊಂಡ ಒಪ್ಪಿಗೆಗಳು.

(ii) ಪರಿಪ್ರಶ್ನೆಗಳಲ್ಲಿ ಒಳಗೊಂಡ ಒಪ್ಪಿಗೆಗಳು.

(iii) ಸಂಗತಿಗಳನ್ನು ಅಂಗೀಕರಿಸಲು ಕೊಟ್ಟ ನೋಟೀಸಿನಲ್ಲಿ ಒಳಗೊಂಡ ಒಪ್ಪಿಗೆಗಳು.

(iv) ದಸ್ತಾವೇಜುಗಳನ್ನು ಅಂಗೀಕರಿಸಲು ಕೊಟ್ಟ ನೋಟೀಸಿನಲ್ಲಿ ಒಳಗೊಂಡ ಒಪ್ಪಿಗೆಗಳು.

೨. ಅನೌಪಚಾರಿಕ ಒಪ್ಪಿಗೆಗಳು ಎಂದರೆ:

(i) ಸಾಲಿಸಿಟರುಗಳಿಂದ ಒಪ್ಪಿಗೆಗಳು.

(ii) ನಡತೆಯಿಂದ ತಿಳಿಯುವ ಒಪ್ಪಿಗೆಗಳು

(೧) ಕೃತ್ಯ ಅಥವಾ ಲೋಪ

(೨) ಮೌನ

(೩) ಮೌನ ಸಮ್ಮತಿ

೪. ಕಲಮು ೨೧ರಲ್ಲಿ ಅನೌಪಚಾರಿಕ ಒಪ್ಪಿಗೆಗಳನ್ನು ಕುರಿತು ಮಾತ್ರ ವ್ಯವಹರಿಸಲಾಗುತ್ತದೆ. ಆದರೆ ಅದರಲ್ಲಿ ಎಲ್ಲ ವರ್ಗಗಳ ಅನೌಪಚಾರಿಕ ಒಪ್ಪಿಗೆಗಳನ್ನು ಕುರಿತು ವ್ಯವಹರಿಸಲಾಗುವುದಿಲ್ಲ. ಇದಲ್ಲದೆ ನಡತೆಯ ಮೂಲಕ (ತಿಳಿಯುವ) ಒಪ್ಪಿಗೆಗಳನ್ನು ಕುರಿತು ಸಹ ವ್ಯವಹರಿಸಲಾಗುವುದಿಲ್ಲ. ಹೇಳಿಕೆಗಳಲ್ಲಿ ಒಳಗೊಂಡ ಅನೌಪಚಾರಿಕ ಒಪ್ಪಿಗೆಗಳನ್ನು ಕುರಿತು ಮಾತ್ರ ವ್ಯವಹರಿಸಲಾಗುತ್ತದೆ. ಅದರಲ್ಲಿ ಕೃತ್ಯಗಳನ್ನು ಕುರಿತು ವ್ಯವಹರಿಸಲಾಗುವುದಿಲ್ಲ. ಒತ್ತು- ಹೇಳಿಕೆಗಳನ್ನು ಕುರಿತು ಮಾತ್ರ ವ್ಯವಹರಿಸಲಾಗುತ್ತದೆ.

**೫. ಕಲಮು ೨೧ರಲ್ಲಿ ಬಳಸಲಾದಂತೆ ಒಪ್ಪಿಗೆಯ ಪರಿಭಾಷೆಯು ೧೭-೨೦ ಈ ಕಲಮುಗಳಿಗೂ ವ್ಯಾಪ್ತವಾಗುತ್ತದೆ.**

ಒಂದು ಒಪ್ಪಿಗೆ ಎಂದರೆ ಕಲಮು ೧೮, ೧೯, ೨೦ ಇವುಗಳಲ್ಲಿ ನಿರ್ದಿಷ್ಟಪಡಿಸಲಾದ ವ್ಯಕ್ತಿಯು ಮಾಡಿದ ಮತ್ತು ಯಾವುದೇ ವಿವಾದ್ಯ ಸಂಗತಿಗೆ ಅಥವಾ ಸುಸಂಬದ್ಧ ಸಂಗತಿ ಸಂಬಂಧಪಟ್ಟ ಹಾಗೆ ಊಹೆಯನ್ನು ಸೂಚಿಸುವ ಮೌಖಿಕ ದಸ್ತಾವೇಜು ಹೇಳಿಕೆ.

ಈ ಬಗ್ಗೆ ಎರಡು ಅಂಶಗಳು ಅಗತ್ಯವಿರುತ್ತದೆ. ಹೇಳಿಕೆಯು ವಿವಾದ್ಯ ಸಂಗತಿಗೆ ಅಥವಾ ಸುಸಂಬದ್ಧ ಸಂಗತಿಗೆ ನೇರವಾಗಿ ಸಂಬಂಧಿಸಿರಬೇಕಾಗಿಲ್ಲ. ವಿವಾದ್ಯ ಸಂಗತಿಯನ್ನು ಅಥವಾ ಸುಸಂಬದ್ಧ ಸಂಗತಿಯನ್ನು ಒಪ್ಪಿಕೊಳ್ಳುವ ಬಗೆಗಿನ ಊಹೆಯನ್ನು ಸೂಚಿಸುವಂತಿದ್ದರೆ ಸಾಕು.

**ದೃಷ್ಟಾಂತಗಳು:**

(೧) 'ಅ'ನು 'ಕ'ನ ಜಾನುವಾರುಗಳು ತನ್ನ ಜಮೀನಿನಲ್ಲಿ ಬೆಳೆಗೆ ಉಂಟು ಮಾಡಿದ ಹಾನಿಗಾಗಿ 'ಎಕ್ಸ್'ನ ವಿರುದ್ಧ ದಾವೆ ಮಾಡುತ್ತಾನೆ. 'ಎಕ್ಸ್' ಎಂಬುವನು ತನ್ನ ಜಾನುವಾರುಗಳಿಂದ ಹಾನಿ ಉಂಟಾಗಿದೆ ಯೆಂದು ಒಪ್ಪಿಕೊಳ್ಳುತ್ತಾನೆ. ಅವನು ಈ ಹಾನಿಗಾಗಿ ಪರಿಹಾರ ನೀಡುವುದಾಗಿ 'ಬ'ನ ಎದುರು ಒಪ್ಪಿಕೊಂಡಿರುವುದಾಗಿ 'ಬ'ನು ಸಾಕ್ಷಿ ಕೊಡುತ್ತಾನೆ.

ಈ ಹೇಳಿಕೆಯಿಂದ 'ಎಕ್ಸ್' ಜಾನುವಾರುಗಳು 'ಅ'ನ ಪೈರಿಗೆ ಹಾನಿಯುಂಟುಮಾಡಿವೆ ಎಂದು ಒಪ್ಪಿ

ಕೊಂಡಂತಾಗುತ್ತದೆ.

(೨) 'ಅ'ನು 'ಎಕ್ಸ್'ನ ನಾಯಿಯು ತನ್ನ ಕುರಿಗಳನ್ನು ಕೊಂದುಹಾಕಿದೆ ಎಂದು ಆಪಾದಿಸುತ್ತಾನೆ. ಇದಕ್ಕೆ ಸಾಕ್ಷಿಯಾಗಿ 'ಎಕ್ಸ್'ನು ನಾಯಿಯನ್ನು ಕೊಂದುಹಾಕಿದನು. ಆದ್ದರಿಂದ ಇನ್ನು ಮುಂದೆ ಅದು ಯಾವ ಕುರಿಗಳನ್ನು ಕೊಲ್ಲುವುದಿಲ್ಲ ಎಂಬ ಹೇಳಿಕೆಯನ್ನು ಮುಂದಿಟ್ಟನು.

**ಇದು ಒಪ್ಪಿಗೆಯೇ?**

II. ಅದನ್ನು ೧೮–೨೦ ಈ ಕಲಮುಗಳಲ್ಲಿ ನಿರ್ದಿಷ್ಟಪಡಿಸಲಾದ ವ್ಯಕ್ತಿ ಮಾಡಿದ್ದಿರಬೇಕು.

೧. ೧೮–೨೦ ಈ ಕಲಮುಗಳಿಗೆ ಮಾಡಿದ ಉಲ್ಲೇಖದಿಂದಾಗಿ ಈ ನಿರ್ದಿಷ್ಟ ಪಡಿಸಲಾದ ವ್ಯಕ್ತಿಗಳ ಪ್ರವರ್ಗಗಳು ಎರಡು ಇರುತ್ತವೆ ಎಂದು ಗೊತ್ತಾಗುತ್ತದೆ.

(೧) ವ್ಯವಹರಣೆಗಳಿಗೆ ಪಕ್ಷಕಾರರಾದ ವ್ಯಕ್ತಿಗಳು.

(೨) ವ್ಯವಹರಣೆಗಳಿಗೆ ಪಕ್ಷಕಾರರಾಗಿಲ್ಲದ ವ್ಯಕ್ತಿಗಳು– ಅಪರಿಚಿತರು (ಸಂಬಂಧವಿಲ್ಲದವರು) ವ್ಯವಹರಣೆಗಳಿಗೆ ಪಕ್ಷಕಾರರಾದ ವ್ಯಕ್ತಿಗಳಲ್ಲಿ ಕೆಳಕಂಡವರು ಒಳಗೊಳ್ಳುತ್ತಾರೆ.

(೧) ಪಕ್ಷಕಾರರು

(೨) ಪಕ್ಷಕಾರರ ಏಜೆಂಟರು

(೩) ವ್ಯವಹರಣೆಗಳ ವಸ್ತು ವಿಷಯದಲ್ಲಿ ಜಂಟಿಯಾಗಿ ಹಿತಾಸಕ್ತಿಗಳನ್ನು ಅಂದರೆ ಪಾಲುದಾರರು, ಜಂಟಿ ಕಂಟ್ರಾಕ್ಟರುಗಳು.

(೪) ಯಾವ ವ್ಯಕ್ತಿಗಳಿಂದ ಪಕ್ಷಕಾರರು ತಮ್ಮ ಹಿತಾಸಕ್ತಿಗಳನ್ನು ಪಡೆದಿರುವರೋ ಆ ವ್ಯಕ್ತಿಗಳು.

**೧. ಅಪರಿಚಿತರು (ಸಂಬಂಧವಿಲ್ಲದವರು)**

ಅಪರಿಚಿತನಾಗಿರುವ ಮತ್ತು ವ್ಯವಹರಣೆಗಳ ಪಕ್ಷಕಾರರಿಗೆ ಯಾವುದೇ ಬಗೆಯ ಸಂಬಂಧ ಹೊಂದಿಲ್ಲದ ವ್ಯಕ್ತಿಯು ಮಾಡಿದ ಹೇಳಿಕೆಯನ್ನು, ಪಕ್ಷಕಾರನ ಒಪ್ಪಿಗೆ ಎಂದು ಯಾವಾಗ ಭಾವಿಸಬಹುದು?

**ಅಂಥ ಪ್ರಕರಣಗಳು ಎರಡು:**

(೧) ಹೇಳಿಕೆಯು ರೆಫರಿಯ ಹೇಳಿಕೆ ಆಗಿರುವಾಗ –ಕಲಮು ೨೦.

II. ಅಪರಿಚಿತನ ಜವಾಬ್ದಾರಿಯು ಅಥವಾ ಸ್ಥಾನವು ವ್ಯವಹರಣೆಯ ವಸ್ತು ವಿಷಯವಾಗಿರುವಾಗ.

**ಮತ್ತು**

(೧) ಅಪರಿಚಿತನ ಹೇಳಿಕೆಯು ತನ್ನ ಜವಾಬ್ದಾರಿಯ ಒಪ್ಪಿಗೆ ಆದಂತಾಗುವಾಗ ಅಥವಾ ಹೇಳಿಕೆ ಆಗಿರುವಾಗ– ಅಂದರೆ ಅದು ೧೭–೧೮ ಈ ಕಲಮುಗಳ ವ್ಯಾಪ್ತಿಯಲ್ಲಿ ಬರಬೇಕು.

ದೃಷ್ಟಾಂತಗಳ ಕಲಮಿಗೆ– ಜವಾಬ್ದಾರಿ ಬಗ್ಗೆ

ದೃಷ್ಟಾಂತಗಳು ೫೫ Mad. ೨೫೯– ಸ್ಥಾನದ ಬಗ್ಗೆ

'ಎ' ಮತ್ತು 'ಬಿ' ಒಂದು ಹಣದ ಮೊತ್ತದ ಬಗ್ಗೆ 'ಸಿ'ಗೆ ಜವಾಬ್ದಾರರಾಗಿರುತ್ತಾರೆ. 'ಸಿ'ಯು 'ಎ' ಒಬ್ಬನ ಮೇಲೆಯೇ ಕಾನೂನುಕ್ರಮ ಕೈಗೊಳ್ಳುತ್ತಾನೆ. 'ಎ' ಅದಕ್ಕೆ ಆಕ್ಷೇಪಿಸುತ್ತಾನೆ. ತನ್ನನ್ನು ಒಂಟಿಯಾಗಿ ಅಥವಾ ಪ್ರತ್ಯೇಕವಾಗಿ ಜವಾಬ್ದಾರನಾಗಿ ಮಾಡಲಾಗದೆಂದೂ 'ಬಿ' ಜಂಟಿ ಜವಾಬ್ದಾರನಾಗಿರುವ ಕಾರಣ

ಅವನನ್ನು ಸಹ ಪ್ರತಿವಾದಿಯಾಗಿ ಮಾಡಬೇಕೆಂದೂ ಹೇಳುತ್ತಾನೆ.

ತನ್ನ ಜಂಟಿ ಜವಾಬ್ದಾರಿಯನ್ನು ಕುರಿತು 'ಬಿ'ಯು 'ಡಿ'ನಲ್ಲಿ ಒಪ್ಪಿಗೆಯು 'ಎ' ಮತ್ತು 'ಸಿ' ನಡುವೆ ಸುಸಂಬದ್ಧವಾಗುತ್ತದೆ ಮತ್ತು ಅದನ್ನು ರುಜುವಾತು ಮಾಡಬಹುದು.

'ಬಿ'ಯನ್ನು ಕರೆಯದಿದ್ದರೂ 'ಡಿ' ಅದನ್ನು ರುಜುವಾತು ಮಾಡಬಹುದು.

**ತಪ್ಪೊಪ್ಪಿಗೆ**

೧. ತಪ್ಪೊಪ್ಪಿಗೆಯ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು. ಪರಂತು ಅದನ್ನು ಖಾಸಗಿ ವ್ಯಕ್ತಿಗೆ ಕೊಟ್ಟಿದ್ದಿರಲಿ ಅಥವಾ ಮ್ಯಾಜಿಸ್ಟ್ರೇಟರ ಮುಂದೆ ಮಾಡಿದ್ದಿರಲಿ ಅದನ್ನು ಸ್ಪಷ್ಟವಾಗಿ ಹೊರತುಪಡಿಸಿದ್ದಿರಕೂಡದು.

೨. ತಪ್ಪೊಪ್ಪಿಗೆಯನ್ನು ಮಾಡಲಾಗಿತ್ತು ಎಂಬುದು ಒಂದು ಸಂಗತಿ ಮತ್ತು ಆ ಕಾರಣ ಯಾವುದೇ ಇತರ ಸಂಗತಿಯ ಹಾಗೆ ರುಜುವಾತು ಮಾಡತಕ್ಕದ್ದು.

೯. ಮದ್ರಾಸ್ ೨೨೪ (೨೪೦)
೫. ಲಾಹೋರ್ ೧೪೦
೪. ಅಲಹಾಬಾದ್ ೪೬ (೯೪)
೮. ಡಬ್ಲ್ಯು.ಆರ್. ಸಿಆರ್. ೨೮

೩. ಇಲ್ಲಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ:

I. ತಪ್ಪೊಪ್ಪಿಗೆ ಎಂದರೇನು?

II. ತಪ್ಪೊಪ್ಪಿಗೆ ಸಾಕ್ಷ್ಯವನ್ನು ಹೊರತುಪಡಿಸಿರುವ ಪ್ರಕರಣಗಳು ಯಾವುವು?

I. ತಪ್ಪೊಪ್ಪಿಗೆ ಎಂದರೇನು?

(೧) ಅಧಿನಿಯಮದಲ್ಲಿ ತಪ್ಪೊಪ್ಪಿಗೆಯ ಪರಿಭಾಷೆಯನ್ನು ಒದಗಿಸಿಲ್ಲ.

(೨) ಆದ್ದರಿಂದ ತಪ್ಪೊಪ್ಪಿಗೆ ಪದದ ಅರ್ಥ ವಿವರಣೆಯು ನ್ಯಾಯಾಧೀಶರ ಅಭಿಪ್ರಾಯದ ವಿಷಯವಾಗಿರುತ್ತದೆ.

(೩) ತಪ್ಪೊಪ್ಪಿಗೆ ಒಂದು ಹೇಳಿಕೆ. ಒಪ್ಪಿಗೆಯು ಸಹ ಹೇಳಿಕೆಯೇ. ಆದರೆ ಎರಡರಲ್ಲಿ ವ್ಯತ್ಯಾಸವುಂಟು. ಒಂದು ಆಪಾದಿತನು ಮಾಡಿದ ಹೇಳಿಕೆ. ಇನ್ನೊಂದು ಅಂದರೆ ಒಪ್ಪಿಗೆಯು ಪಕ್ಷಕಾರನು ಮಾಡಿದ ಹೇಳಿಕೆ. ಹೀಗಾಗಿ, ಎರಡು ಪ್ರಶ್ನೆಗಳು ಉದ್ಭವಿಸುತ್ತವೆ:

(೧) ಒಪ್ಪಿಗೆ ಮತ್ತು ತಪ್ಪೊಪ್ಪಿಗೆ ಇವೆರಡರ ನಡುವಣ ನಿಷ್ಕೃಷ್ಟವಾದ ವ್ಯತ್ಯಾಸವೇನು?

(೨) ಆಪಾದಿತನು ಮಾಡಿದ ಹೇಳಿಕೆಯು ಯಾವಾಗ ಒಪ್ಪಿಗೆ ಆಗುತ್ತದೆ ಮತ್ತು ಯಾವಾಗ ತಪ್ಪೊಪ್ಪಿಗೆ ಆಗುತ್ತದೆ?

೧. ಆಪಾದಿತ ವ್ಯಕ್ತಿಯು ಮಾಡಿದ ಹೇಳಿಕೆಗಳು ಒಂದು ವರ್ಗದಲ್ಲಿ ಸೇರುತ್ತವೆ. ಅವುಗಳನ್ನು ಸಾಕ್ಷ್ಯ ಅಧಿನಿಯಮದಲ್ಲಿ "ಒಪ್ಪಿಗೆ"ಗಳು ಎಂದು ಕರೆಯಲಾಗಿದೆ. (ಕಲಮುಗಳು ೧೭, ೧೮) ಮತ್ತು... ಅವು ಅದನ್ನು ಮಾಡುವವನ ವಿರುದ್ಧ ಸಾಕ್ಷ್ಯ ಆಗುತ್ತವೆಯೇ ಹೊರತು ಪರವಾದ ಸಾಕ್ಷ್ಯ ಆಗುವುದಿಲ್ಲ.

೨. ತಪ್ಪೊಪ್ಪಿಗೆಗಳು "ಹೇಳಿಕೆಗಳು" ಒಂದು ಉಪಜಾತಿ, ಮತ್ತು ಒಪ್ಪಿಗೆಗಳ ಒಂದು ಜಾತಿ.

೩. ಕೆಳಕಂಡ ತಃಖ್ತೆಯು ಪರಸ್ಪರ ಸಂಬಂಧವನ್ನು ತೋರಿಸುತ್ತದೆ:

ಹೇಳಿಕೆಗಳು

ಒಪ್ಪಿಗೆಗಳಂತಾಗುವವುಗಳು ಒಪ್ಪಿಗೆಗಳಂತಾಗದವುಗಳು

ತಪ್ಪೊಪ್ಪಿಗೆಗಳಂತಾಗುವ ಒಪ್ಪಿಗೆಗಳು ತಪ್ಪೊಪ್ಪಿಗೆಗಳಂತಾಗದ ಒಪ್ಪಿಗೆಗಳು

೪. ತಪ್ಪೊಪ್ಪಿಗೆಗಳು ಮತ್ತು ಒಪ್ಪಿಗೆಗಳು ಇವುಗಳಿಗೆ ಸಮಾನವಾದ ಲಕ್ಷಣವೆಂದರೆ, ಅವೆರಡೂ ವ್ಯವಹರಣೆಗಳಿಗೆ ಪಕ್ಷಕಾರರಾದವರು ಮಾಡಿದ ಹೇಳಿಕೆಗಳು.

೫. ಎರಡು ಪ್ರಶ್ನೆಗಳು ಉದ್ಭವಿಸುತ್ತವೆ:

(೧) ಹೇಳಿಕೆಯನ್ನು ಪಕ್ಷಕಾರನೇ ಮಾಡಿರದಿದ್ದರೂ ಅದು ಒಪ್ಪಿಗೆ ಆಗುತ್ತದೆ. ಅಂದರೆ ೧೮–೨೦ ಈ ಕಲಮುಗಳಲ್ಲಿ ಪರಿಭಾಷಿತನಾದ ವ್ಯಕ್ತಿಯು ಅದನ್ನು ಮಾಡಿದ್ದಿರಬೇಕು. ಹೇಳಿಕೆಯನ್ನು ಆಪಾದಿತನಲ್ಲದವನು ಮಾಡಿದ್ದರೂ, ಆದರೆ ೧೮–೨೦ ಈ ಕಲಮುಗಳಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಯು ಮಾಡಿದ್ದರೆ ತಪ್ಪೊಪ್ಪಿಗೆ ಆಗುವುದೇ?

೧. ತಪ್ಪೊಪ್ಪಿಗೆ ಆಗಬೇಕಾದರೆ ಅದನ್ನು ಆಪಾದಿತನೇ ಮಾಡಿರಬೇಕು. ಅದನ್ನು ಆಪಾದಿತನು ಮಾಡಿರದಿದ್ದರೆ, ಅದು ತಪ್ಪೊಪ್ಪಿಗೆ ಆಗುವುದಿಲ್ಲ.

(೧) ಆಪಾದಿತನು ಮಾಡಿದ ವಿವರಣಾತ್ಮಕ ಹೇಳಿಕೆಯು ತಪ್ಪೊಪ್ಪಿಗೆ ಆಗುವುದಿಲ್ಲ.

(೨) ಆಪಾದಿತನನ್ನು ಒಳಗೊಳ್ಳುವ ಆದರೆ ತಾನು ಅಪರಾಧ ಮಾಡಿಲ್ಲ ಎಂಬ ಆಪಾದಿತನ ಹೇಳಿಕೆಯು ತಪ್ಪೊಪ್ಪಿಗೆ ಆಗುವುದಿಲ್ಲ.

(೩) ಆಪಾದಿತನನ್ನು ಒಳಗೊಳ್ಳುವ ಮತ್ತು ಹಾಗೆಯೇ ಅವನನ್ನು ಮಾಡುವ ಹೇಳಿಕೆಯು ತಪ್ಪೊಪ್ಪಿಗೆ ಆಗುವುದು.

**ಗಮನಿಸಬೇಕಾದ ಅಂಶಗಳು**

೧. ಆಪಾದನೆ ಪ್ರತ್ಯಕ್ಷವಾಗಿರಬಹುದು ಅಥವಾ ಊಹೆಯ ಮೂಲಕ ಆಗಿರಬಹುದು. ಅಪರಾಧ ನಿರ್ಣಯಕ್ಕೆ (ದೋಷ ಸಿದ್ಧಿಗೆ) ತಾನೇ ಆಧಾರವಾಗಬಲ್ಲ ಹೇಳಿಕೆಯು ತಪ್ಪೊಪ್ಪಿಗೆಯಾಗುತ್ತದೆ.

೨. ಹೇಳಿಕೆಯು ಸ್ವಯಂ ಸ್ಪಷ್ಟ ಆಗಿರಬೇಕು ಎಂದು ಆಪಾದಿತನ ಆಶಯವಾಗಿದ್ದಿರಬಹುದು. ಆದಾಗ್ಯೂ ಆಪಾದನೆಯ ಪರಿಸ್ಥಿತಿಯ ಒಪ್ಪಿಗೆಯಾಗಿರಬಹುದು. ಆಗ, ಆ ಸಂದರ್ಭದಲ್ಲಿ, ಅದು ತಪ್ಪೊಪ್ಪಿಗೆ ಆದಂತಾಗುತ್ತದೆ.

೬ *Bom* ೩೪

**ಎರಡು ಬಗೆಯ ತಪ್ಪೊಪ್ಪಿಗೆಗಳು**

೧. ತಪ್ಪೊಪ್ಪಿಗೆಗಳು ನ್ಯಾಯಿಕವಾಗಿರುತ್ತವೆ ಅಥವಾ ನ್ಯಾಯಿಕೇತರ ಆಗಿರುತ್ತವೆ.

(i) ನ್ಯಾಯಿಕ ತಪ್ಪೊಪ್ಪಿಗೆಗಳು ಕಾನೂನು ವ್ಯವಹರಣೆಗಳ ಯಥಾಕ್ರಮದಲ್ಲಿ ಮ್ಯಾಜಿಸ್ಟ್ರೇಟರ ಸಮಕ್ಷಮ ಅಥವಾ ನ್ಯಾಯಾಲಯದಲ್ಲಿ ಮಾಡಲಾದವುಗಳು.

(ii) ನ್ಯಾಯಿಕೇತರ ತಪ್ಪೊಪ್ಪಿಗೆಗಳು ಪಕ್ಷಕಾರನು ಮ್ಯಾಜಿಸ್ಟ್ರೇಟರ ಸಮಕ್ಷಮ ಅಥವಾ ನ್ಯಾಯಾಲಯದಲ್ಲಿ ಇವುಗಳ ಹೊರತಾದ ಇತರೆಡೆಯಲ್ಲಿ ಮಾಡಿದವುಗಳು.

**ಯಾವ ಪ್ರಕರಣಗಳಲ್ಲಿ ತಪ್ಪೊಪ್ಪಿಗೆಗಳ ಸಾಕ್ಷ್ಯವನ್ನು ಹೊರತುಪಡಿಸಲಾಗುತ್ತದೆ?**

೧. ಸಾಕ್ಷ್ಯ ಅಧಿನಿಯಮವು ಮೂರು ಸಂಭಾವ್ಯ ಪ್ರಕರಣಗಳನ್ನು ಗುರುತಿಸಿದ್ದುಂಟು.

(i) ಪೊಲೀಸ್ ಅಧಿಕಾರಿಯ ಎದುರು ಮಾಡಿದ ತಪ್ಪೊಪ್ಪಿಗೆ.

(ii) ಪೊಲೀಸ್ ಅಧಿರಕ್ಷೆ(ಕಸ್ಟಡಿ)ಯಲ್ಲಿ ಇದ್ದಾಗ ಮಾಡಿದ ತಪ್ಪೊಪ್ಪಿಗೆ.

(iii) ಪೊಲೀಸ್ ಅಧಿಕಾರಿಯಲ್ಲದವನ ಎದುರು ಪೊಲೀಸ್ ಅಧಿರಕ್ಷೆಯಲ್ಲಿ ಇಲ್ಲದಿದ್ದಾಗ ಮಾಡಿದ ತಪ್ಪೊಪ್ಪಿಗೆ

(i) ಕ್ಕೆ ಸಂಬಂಧಿಸಿದಂತೆ

ಅದನ್ನು ೨೫ನೆಯ ಕಲಮಿನ ದ್ವಾರಾ ಹೊರತುಪಡಿಸಲಾಗಿದೆ.

(ii) ಕ್ಕೆ ಸಂಬಂಧಿಸಿದಂತೆ

ಅದನ್ನು ೨, ೨೬ ಈ ಕಲಮುಗಳ ದ್ವಾರಾ ಹೊರತುಪಡಿಸಲಾಗಿದೆ.

ಅಪವಾದ

*೨೭ನೆಯ ಕಲಮಿನ ಪರಿಣಾಮ*

*೬ All. ೫೦೯ (F.B.)*

ಪ್ರಶ್ನೆ: ೨೭ನೆಯ ಕಲಮು ೨೬ನೆಯ ಕಲಮಿಗೆ ಮಾತ್ರ ಅಪವಾದವೆ ಅಥವಾ ೨೫ನೇ ಕಲಮಿಗೆ ಸಹ ಅಪವಾದವೇ?

ಅಥವಾ

ಅವೆರಡಕ್ಕೂ ಅಪವಾದವೇ?

(iii) ಕ್ಕೆ ಸಂಬಂಧಿಸಿದಂತೆ

ಈ ವಿಷಯವು ೨೪ನೇ ಕಲಮಿಗೆ ಒಳಪಡುತ್ತದೆ.

ವಿವರಣೆ: ೧. ಪ್ರಾಧಿಕಾರ ಹೊಂದಿರುವ ವ್ಯಕ್ತಿ

೨. ಅಂತಹ ಅಧಿಕಾರವಿದೆಯೆಂದು ತೋರಿಸುವ ವ್ಯಕ್ತಿ

**ಗಮನಿಸಬೇಕಾದ ಅಂಶಗಳು**

೧. ಕಲಮು ೨೮ : ................ ತರುವಾಯದ ತಪ್ಪೊಪ್ಪಿಗೆಯನ್ನು ತೆಗೆದುಹಾಕಲಾಗಿದೆ.

೨. ಕಲಮು ೨೯.

**ಪ್ರಶ್ನೆಗಳು**

೧. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೨೮೭ನೇ ಕಲಮಿನ ಅಡಿಯಲ್ಲಿ ಕಮಿಟಿಂಗ್ ಮ್ಯಾಜಿಸ್ಟ್ರೇಟಿನ ಮುಂದೆ ಆಪಾದಿತನು ಮಾಡಿದ ಹೇಳಿಕೆಗಳಿಗೆ ೨೪ನೇ ಕಲಮು ಅನ್ವಯಿಸುತ್ತದೆಯೇ?

ಪ್ರಶ್ನೆ: ಇತ್ಯರ್ಥವಾಗಿಲ್ಲ. *೧೭ Bom. L.R. ೧೦೫೯*

II. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೩೩೯ (೨)ನೇ ಕಲಮಿನ ಅಡಿಯಲ್ಲಿ ಅಪ್ರೂವರನು ಮಾಡಿದ ಹೇಳಿಕೆಗಳಿಗೆ ೨೪ನೇ ಕಲಮು ಅನ್ವಯಿಸುತ್ತದೆಯೇ?

*೨೨ Bom. L.R. ೧೨೪೭*

**ತಪ್ಪೊಪ್ಪಿಗೆಗಳ ಉಪಯೋಗ**

೧. ಆಪಾದಿತನು ಮಾಡಿದ ಹೇಳಿಕೆಯು ಅವನನ್ನು ಮಾತ್ರ ಹಾಗೆ ಬಂಧಿಸುವುದಕ್ಕೆ– ಇದಕ್ಕೆ ಎರಡು ಕಾರಣಗಳಿರುತ್ತವೆ.

(i) ಒಬ್ಬ ವ್ಯಕ್ತಿಯು ಮಾಡಿದ ಹೇಳಿಕೆಯು ಇನ್ನೊಬ್ಬ ವ್ಯಕ್ತಿಯನ್ನು ಪ್ರತಿಕೂಲವಾಗಿ ಬಾಧಿಸುವ ಸಂಭವ ಉಂಟು ಎನ್ನುವುದು ಕಾನೂನಿನ ಸಾಮಾನ್ಯ ನಿಯಮ.

(ii) ಆಪಾದಿತ ವ್ಯಕ್ತಿಯು ಮಾಡಿದ ಹೇಳಿಕೆಯು ಪ್ರಮಾಣ ಮಾಡಿ ಮಾಡುವ ಹೇಳಿಕೆಯಲ್ಲ.

(iii) ಹೇಳಿಕೆಯು ಪಾಟೀ ಸವಾಲಿಗೆ ಗುರಿಯಾಗುವುದಿಲ್ಲ.

೨. ಆದರೆ ಹೇಳಿಕೆಯು, ಅವನನ್ನು ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಬಾಧಿಸುವಂಥ, ತಪ್ಪೊಪ್ಪಿಗೆಯಾಗಿರುವಾಗ, ಕಲಮು ೩೦ರ ಪ್ರಕಾರ, ನ್ಯಾಯಾಲಯವು, ಆಪಾದಿತನು ತಪ್ಪೊಪ್ಪಿಗೆಯಲ್ಲಿ ನಮೂದಿಸಿದ ವ್ಯಕ್ತಿಗಳ ವಿರುದ್ಧ ಮಾಡಿದ ತಪ್ಪೊಪ್ಪಿಗೆಯನ್ನು ಪರ್ಯಾಲೋಚಿಸಬಹುದು.

೩. ಆದ್ದರಿಂದ ೩೦ನೆಯ ಕಲಮು ಸಾಮಾನ್ಯ ನಿಯಮಕ್ಕೆ ಅಪವಾದವಾಗಿದೆ. ಈ ಅಪವಾದಕ್ಕೆ ಕಾರಣ ಸ್ವಯಂ ವೇದ್ಯ ಸಂಗತಿ. ಆ ಮೇರೆಗೆ ಅದನ್ನು ಪ್ರಮಾಣದ ಮಂಜೂರಿಯ ಮೇಲೆ ಮಾಡಲಾಗಿದ್ದರೆ ಹೇಗೋ ಹಾಗೆ ಎಂದು ಹೇಳಲಾಗುತ್ತದೆ ಅಥವಾ ಇನ್ನೊಬ್ಬನ ವಿರುದ್ಧದ ಆಪಾದನೆಯ ಸತ್ಯತೆಯ ಬಗ್ಗೆ ಅದೇ ಬಗೆಯ ಗ್ಯಾರಂಟಿ ಆಗುವುದೆಂದು ಭಾವಿಸಲಾಗುತ್ತದೆ.

೪. ಒಬ್ಬ ಆಪಾದಿತನು ಇನ್ನೊಬ್ಬ ಆಪಾದಿತನ ವಿರುದ್ಧ ಮಾಡಿದ ಆಪಾದನೆಯ ಉಪಯೋಗದ ಸಂಬಂಧದಲ್ಲಿರುವ ಮುಖ್ಯ ಪದಗಳೆಂದರೆ “ನ್ಯಾಯಾಲಯವು ಪರ್ಯಾಲೋಚಿಸಬಹುದು.” ಇದರ ಅರ್ಥವೆಂದರೆ:

(೧) ಉಪಯೋಗವು ಕಡ್ಡಾಯವಲ್ಲ. ಅವಕಾಶ ಪರ ಮತ್ತು ವಿವೇಕಾಧೀನ. ನ್ಯಾಯಾಲಯಕ್ಕೆ ಅದನ್ನು ಉಪಯೋಗಿಸಲು ಅವಕಾಶವುಂಟು, ಅನುಮತಿಯುಂಟು. ಆದರೆ ಉಪಯೋಗಿಸಲೇಬೇಕೆಂಬ ಬಗ್ಗೆ ಬಂಧನಕಾರಿಯಲ್ಲ.

(೨) ನ್ಯಾಯಾಲಯವು ಪರ್ಯಾಲೋಚಿಸಬಹುದು. ಪರ್ಯಾಲೋಚಿಸಬಹುದು ಎಂಬ ಪದ ಮಹತ್ವಪೂರ್ಣ–ಅರ್ಥಪೂರ್ಣ.

(೧) ಸಾಕ್ಷಿ ಎಂಬ ಪದದ ಪರಿಭಾಷೆಗೆ ಅನುಗುಣವಾಗಿ ಸಾಕ್ಷಿಯು ಮಾಡಿದ ಹೇಳಿಕೆ ಸಾಕ್ಷ್ಯ. ಆ ವಿಶೇಷ ಅರ್ಥದಲ್ಲಿ ಆಪಾದಿತನು ತನ್ನನ್ನು ಮತ್ತು ತನ್ನ ಸಹ–ಆಪಾದಿತನನ್ನು ಬಾಧಿಸುವಂತೆ ಮಾಡಿದ ತಪ್ಪೊಪ್ಪಿಗೆಯು ‘ಸಾಕ್ಷ್ಯ’ವಲ್ಲ. ಈ ಅರ್ಥದಲ್ಲಿ ಅದು ನ್ಯಾಯಾಲಯದ ಮುಂದೆ ಇರುವ ವಿಷಯ. ನ್ಯಾಯಾಲಯವು ಪರ್ಯಾಲೋಚಿಸಬಹುದಾದ ವಿಷಯ. ಹಾಗೆ ಪರ್ಯಾಲೋಚಿಸುವ ಅವಕಾಶವನ್ನು ಕೊಡುವಾಗ, ಆ (ಪರಿಭಾಷೆಯ ಪ್ರಕಾರ) ಇತರ ಸಾಕ್ಷ್ಯವು ಅಗತ್ಯವಿಲ್ಲ ಎಂದು ಅರ್ಥವೇ? ಸಾಕ್ಷ್ಯ ಅಧಿನಿಯಮದಲ್ಲಿ ನೇರವಾದ ಯಾವುದೇ ಉತ್ತರವನ್ನೂ ಕೊಟ್ಟಿಲ್ಲ. ಆದರೆ ಎಲ್ಲ ನ್ಯಾಯಾಲಯಗಳು ಇತರ ಸಾಕ್ಷ್ಯವು ಅಗತ್ಯವಿಲ್ಲ ಎಂದು ಅರ್ಥ ಹೊರಡುವುದಿಲ್ಲ ಎಂದು ನಿರ್ಣಯಿಸಿರುತ್ತವೆ. ಆ ಬಗ್ಗೆ

ಕಾರಣಗಳೆಂದರೆ:

(೧) ತಪ್ಪೊಪ್ಪಿಗೆಯು ಯಾವ ಇತರ ವ್ಯಕ್ತಿಗಳನ್ನು ಒಳಗೊಳ್ಳುವುದೋ ಆ ವ್ಯಕ್ತಿಗಳ ವಿರುದ್ಧ ಅದರ ಸತ್ಯತೆಯ ಬಗೆಗೆ ಎಂದಿಗೂ ಸಂಪೂರ್ಣ ಗ್ಯಾರಂಟಿಯಲ್ಲ. ತಪ್ಪೊಪ್ಪಿಗೆಯು ಅದನ್ನು ಮಾಡುವಾತನನ್ನು ಸಿಲುಕಿಸುವಷ್ಟರ ಮಟ್ಟಿಗೆ ಸತ್ಯವಾಗಬಹುದು. ಆದರೆ ಇತರರನ್ನು ಬಂಧಿಸುವಷ್ಟರ ಮಟ್ಟಿಗೆ ಸುಳ್ಳಾಗಿರಬಹುದು ಮತ್ತು ಸ್ವಷ್ಟನೆಯಾಗಿರಬಹುದು.

(೨) ತಪ್ಪೊಪ್ಪಿಗೆಯನ್ನು ಸಹಾಪರಾಧಿಯ ಸಾಕ್ಷ್ಯದ ಮೇಲೆ ಇಡಲು ಬರುವಂತಿಲ್ಲ. ಕಾರಣವೆಂದರೆ ಸಹಾಪರಾಧಿಯ ಸಾಕ್ಷ್ಯವು ಪಾಟೀ ಸವಾಲಿಗೆ ಗುರಿಯಾಗುವುದುಂಟು. ತಪ್ಪೊಪ್ಪಿಗೆ ಹಾಗೆ ಗುರಿಯಾಗುವುದಿಲ್ಲ. ಇನ್ನು, ಸಹಾಪರಾಧಿಯ ಸಾಕ್ಷ್ಯಕ್ಕೆ ಸಮರ್ಥನೆಯು ಅಗತ್ಯವಿದ್ದ ಪಕ್ಷದಲ್ಲಿ ತಪ್ಪೊಪ್ಪಿಗೆಗೆ ಸಹ ಅಗತ್ಯವಾಗಿ ಬೇಕಾಗುತ್ತದೆ.

**ನಿರ್ಣಯ– ಪ್ರಕರಣದಲ್ಲಿ**

(a) ಪೂರ್ಣವಾಗಿ ಯಾವುದೇ ಸಾಕ್ಷ್ಯವು ಇಲ್ಲದಿದ್ದರೆ, ಅಥವಾ

(b) ಇತರ ಸಾಕ್ಷ್ಯಕ್ಕೆ ಅನುಮತಿ ಇಲ್ಲದಿದ್ದರೆ, ಅದೇ ಅಂಗೀಕಾರಾರ್ಹವಾಗದಿದ್ದರೆ

ಅಂಥ ತಪ್ಪೊಪ್ಪಿಗೆಯು ಮಾತ್ರವೇ ಅಪರಾಧ ನಿರ್ಣಯಕ್ಕೆ ಆಧಾರವಾಗಲಾರದು. ಸಮರ್ಥನೆ ಇರಬೇಕಾಗುತ್ತದೆ.

ಒಂದೇ ವ್ಯವಹಾರದಿಂದ ಉದ್ಭವಿಸುವ ಒಂದೇ ಪರಿಭಾಷೆಯಲ್ಲಿ ಅಪರಾಧಕ್ಕಾಗಿ ವ್ಯಕ್ತಿಗಳನ್ನು ಆಪಾದಿಸಿರುವಾಗ, ಒಬ್ಬ ವ್ಯಕ್ತಿಯ ತಪ್ಪೊಪ್ಪಿಗೆಯನ್ನು ಇನ್ನೊಬ್ಬನ ಮೇಲೆ ಉಪಯೋಗಿಸಬಹುದು. ಸಹಾಪರಾಧಿಗೆ ಆರೋಪಿಸಲಾದ ಕೃತ್ಯಗಳಿಗಿಂತ ವಿಭಿನ್ನವಾದವುಗಳ ದ್ವಾರಾ ಅವನನ್ನು ವಿಂಗಡವಾಗಿ ತೋರಿಸಿ ಸಹಾಪರಾಧಿಯ ಅಪರಾಧಕ್ಕಿಂತ ಬೇರೆ ಅಪರಾಧ ಆಗುವಂತಿದ್ದರೂ ಹಾಗೆ ಉಪಯೋಗಿಸಬಹುದು.

*೮ Bom. ೨೨೩: ೭ Mad. ೫೭೯*

**ಉಪಶಮನ–** ಅದೇ ಅಪರಾಧ

೧. **ಮಾಡಲಾದ** ಮತ್ತು **ರುಜುವಾತು** ಮಾಡಲಾದ ಎಂಬ ಪದಗಳ ಮಹತ್ವ. ಈ ಪ್ರಕರಣವು ಒಬ್ಬ ಆಪಾದಿತನು ಮಾಡಿದ ಅಧಿವಿಚಾರಣೆಯಲ್ಲಿ ಮಾಡಿದ ಯಾವ ಹೇಳಿಕೆಯು ಅವನನ್ನು ಸ್ವತಃ ಅಪರಾಧದಲ್ಲಿ ಸಿಕ್ಕಿಸಿ ಹಾಕುವುದಲ್ಲದೆ ಸಹಾಪರಾಧಿಯನ್ನು ಸಹ ಸಿಕ್ಕಿಸಿ ಹಾಕುವುದೋ (ಇಂಗಿತ ದ್ವಾರಾ) ಅಂಥ ಹೇಳಿಕೆಯನ್ನು ಒಳಗೊಂಡಿರುವುದೇ? ಒಳಗೊಳ್ಳುವುದಿಲ್ಲ ಎನ್ನುವುದೇ ಉತ್ತರ.

"ಮಾಡಲಾದ" ಎಂಬ ಪದದ ಮುಂಚೆ "ಅಧಿವಿಚಾರಣೆಯಲ್ಲಿ" ಎಂಬ ಪದಗಳನ್ನು ಸೇರಿಸಲಾಗಿದೆ ಯೆಂದು ಮತ್ತು "ರುಜು ಮಾಡಲಾದ" ಎಂಬ ಪದಕ್ಕೆ ಬದಲಾಗಿ "ದಾಖಲಿಸಲಾದ" ಎಂಬ ಪದವನ್ನು ಸೇರಿಸಲಾಗಿದೆ ಎಂದು ಅರ್ಥ ಆಗುವ ಹಾಗೆ ಪ್ರಕರಣವನ್ನು ಓದಿಕೊಳ್ಳಬಾರದು.

*(೧೮೯೦) ೧೪. Mo. Jur. N.S. ೫೧೬.*

ಪ್ರಕರಣವು ಅಧಿವಿಚಾರಣೆಯಲ್ಲಿ ಮಾಡಲಾದ ಹೇಳಿಕೆಗಳನ್ನು ಉಲ್ಲೇಖಿಸುವುದಿಲ್ಲ. ಅಧಿವಿಚಾರಣೆಗೆ ಮುನ್ನ ಮಾಡಲಾದ ಮತ್ತು ಅಧಿವಿಚಾರಣೆಯಲ್ಲಿ ರುಜುವಾತು ಮಾಡಲಾದ ಹೇಳಿಕೆಗಳನ್ನು ಉಲ್ಲೇಖಿಸುತ್ತದೆ. ಕಾರ್ಯ ವಿಧಾನಕ್ಕೆ ತಪ್ಪೊಪ್ಪಿಗೆಯನ್ನು ರುಜುವಾತು ಮಾಡುವುದು ಎಂಬ ಪದದ ಉಪಯೋಗವು

ಸರಿಯಲ್ಲ. ಕಾರಣವೆಂದರೆ ಆ ವಿಧಾನದ ಅಡಿಯಲ್ಲಿ ನ್ಯಾಯಾಧೀಶನು ಪ್ರಶ್ನೆ ಕೇಳುತ್ತಾನೆ ಮತ್ತು ಆಪಾದಿತನು ವಿವರಣೆ ಕೊಡುತ್ತಾನೆ.

*೪೫ All ೩೨೩.*

೨. **''ಜಂಟಿಯಾಗಿ ಅಧಿವಿಚಾರಣೆ ಮಾಡಲಾದ''** ಎಂಬ ಪದಗಳ ಮಹತ್ವ

ಈ ಸಂಬಂಧದಲ್ಲಿ ಎರಡು ಮಹತ್ವಪೂರ್ಣ ಪ್ರಶ್ನೆಗಳು ಉದ್ಭವಿಸುತ್ತವೆ.– ಒಬ್ಬ ಆಪಾದಿತನು ತಪ್ಪೊಪ್ಪಿಗೆ ಮಾಡಿ, ಆ ತಪ್ಪೊಪ್ಪಿಗೆಯ ಮೂಲಕ ಸಹಾಪರಾಧಿಯನ್ನು ಸಿಕ್ಕಿಸಿಹಾಕಿ ತಾನು ತಪ್ಪಿತಸ್ಥ ಎಂದು ವಾದಿಸಿದಾಗ

(i) ಅಂಥ ಸಂದರ್ಭದಲ್ಲಿ ಅವನು ಈ ಪ್ರಕರಣದ ಅಡಿಯಲ್ಲಿ ಮಾಡಿದ ತಪ್ಪೊಪ್ಪಿಗೆಗೆ ಅವನ ಸಹಾಪರಾಧಿಯ ವಿರುದ್ಧವಾಗಲು ಎಡೆಕೊಡುವ ಹಾಗೆ, ಅವನನ್ನು ಜಂಟಿಯಾಗಿ ಅಧಿವಿಚಾರಣೆ ಮಾಡಲಾಯಿತು ಎಂದು ಪರಿಗಣಿಸಬಹುದೆ?

(ii) ಅಂಥ ಸಂದರ್ಭದಲ್ಲಿ ತಪ್ಪಿತಸ್ಥ ಎಂದು ವಾದಿಸಿದ ಆಪಾದಿತನನ್ನು, ತಪ್ಪಿತಸ್ಥರಲ್ಲ ಎಂದು ವಾದಿಸಿದ ಆಪಾದಿತರ ವಿರುದ್ಧ ಸಾಕ್ಷಿ ಆಗಿ ಕರೆಯಬಹುದೆ?

ಪ್ರಶ್ನೆ ೧: ಅವನು ಜಂಟಿಯಾಗಿ ಅಧಿವಿಚಾರಣೆಗೆ ಗುರಿಯಾಗುವುದು ಸಮಾಪ್ತವಾಗುವ ಕಾರಣ, ಅವನ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಳ್ಳುವಂತಿಲ್ಲ.

*೫ Bom. ೬೩; ೭ Mad. ೧೦೨; ೧೯ Bom. ೧೯೫*

ತಪ್ಪಿತಸ್ಥನು ಎಂದು ವಾದಿಸಿದ ಆಪಾದಿತನ ದೋಷಸಿದ್ಧಿ ಮಾಡದೆಯೆ ಅವನ ಅಧಿವಿಚಾರಣೆಯನ್ನು ಮುಂದುವರಿಸುವುದು ನ್ಯಾಯಾಲಯಕ್ಕೆ ಸೇರಿದ ವಿಷಯವಾಗಿದ್ದರೂ, ಅವರ ತಪ್ಪೊಪ್ಪಿಗೆಗಳನ್ನು ಇತರ ಆಪಾದಿತರ ವಿರುದ್ಧ ಗಣನೆಗೆ ತೆಗೆದುಕೊಳ್ಳುವ ಸಲುವಾಗಿ ಅವರ ದೋಷಸಿದ್ಧಿಯನ್ನು ಮುಂದಕ್ಕೆ ಹಾಕುವುದು ನ್ಯಾಯಸಮ್ಮತವಾಗಲಾರದು.

*೨೩ All.. ೫೩*

ಪ್ರಶ್ನೆ II : ಇದು ಆಪಾದಿತ ಎಂಬ ಪದದ ಪರಿಭಾಷೆಯನ್ನು ಅವಲಂಬಿಸಿರುತ್ತದೆ. ಆಪಾದಿತ ವ್ಯಕ್ತಿಯು ಆಪಾದಿತನಾಗಿರುವುದು ಮುಕ್ತಾಯವಾಗುವುದು ಯಾವಾಗ?

ದೋಷ ಸಿದ್ಧಿಯಾಗುವ ಅಥವಾ ತಪ್ಪಿತಸ್ಥ ಎಂದು ವಾದಿಸಿದ ಅವನನ್ನು ದೋಷಮುಕ್ತಗೊಳಿಸುವ ತನಕ ಆಪಾದಿತ ವ್ಯಕ್ತಿಯು ಆಪಾದಿತನಾಗಿಯೇ ಮುಂದುವರಿಯುತ್ತಾನೆ. ಆದ ಕಾರಣ ಅವನ ಸಹ–ಆಪಾದಿತರ ವಿರುದ್ಧ ಸಕ್ಷಮ ಸಾಕ್ಷಿ ಆಗುವುದಿಲ್ಲ. ೧೩. C.W.N. ೫೫೨. ತಪ್ಪಿತಸ್ಥ ಎಂದು ವಾದಿಸಿದ ಆಪಾದಿತ ವ್ಯಕ್ತಿಯ ದೋಷ ಸಿದ್ಧಿಯಾಗುವ ಅಥವಾ ಅವನಿಗೆ **ಶಿಕ್ಷಾದೇಶ** ಆಗುವ ತನಕ ಅವನು ಆಪಾದಿತನಾಗಿಯೇ ಮುಂದುವರಿಯುತ್ತಾನೆ. ಆದಕಾರಣ ಅವನು ಸಕ್ಷಮ ಸಾಕ್ಷಿ ಆಗುವುದಿಲ್ಲ.

*೩ Bom. L.R.*

**ಸಾರಾಂಶ**

೧. ಒಬ್ಬ ವ್ಯಕ್ತಿಯು ತಾನು ತಪ್ಪಿತಸ್ಥ ಎಂದು ವಾದಿಸಿದಾಗ, ಅವನು ಜಂಟಿಯಾಗಿ ಅಧಿವಿಚಾರಣೆ ಯಾಗುವುದರಲ್ಲಿ ಸಮಾಪ್ತವಾಗುತ್ತದೆಯೆ ಹೊರತು ಅವನು ಆಪಾದಿತ ವ್ಯಕ್ತಿಯಾಗಿರುವುದು ಸಮಾಪ್ತ ವಾಗುವುದಿಲ್ಲ. ಆದ್ದರಿಂದ, ಇತರ ಸಹಾಪರಾಧಿಗಳು ಜಂಟಿ ವಿಚಾರಣೆ ಆಗದಿರುವ ನಿಮಿತ್ತ, ಅವನು

ತಪ್ಪಿತಸ್ಥ ಎಂಬ ತಪ್ಪೊಪ್ಪಿಗೆಯನ್ನು ಗಣನೆಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಮಾತ್ರವಲ್ಲದೆ, ಶಿಕ್ಷಾದೇಶ ಆಗುವವರೆಗೆ ಅವನು ಆಪಾದಿತನಾಗಿ ಮುಂದುವರಿಯುವ ನಿಮಿತ್ತ, ಅವನನ್ನು ಸಾಕ್ಷಿದಾರನಾಗಿ ಸಹ ಕರೆಯುವಂತಿಲ್ಲ.

೨. ಒಬ್ಬ ವ್ಯಕ್ತಿಯು ತಾನು ತಪ್ಪಿತಸ್ಥ ಎಂದು ವಾದಿಸಿದರೆ ಮತ್ತು ಅವನನ್ನು ಜಂಟಿಯಾಗಿ ಅಧಿವಿಚಾರಣೆ ಮಾಡಿದಾಗ ಅವನು ಆಪಾದಿತ ವ್ಯಕ್ತಿಯಾಗಿರುವುದು ಮುಕ್ತಾಯವಾದರೆ ಅವನ ತಪ್ಪೊಪ್ಪಿಗೆಯನ್ನು ಉಪಯೋಗಿಸಿಕೊಳ್ಳುವಂತಿಲ್ಲ. ಆದರೆ ಅವನು ಸಕ್ಷಮ ಸಾಕ್ಷಿದಾರ ಆಗುತ್ತಾನೆ.

## ತೀರ್ಪುಗಳ ಸುಸಂಬದ್ಧತೆ

**ಕಲಮು ೪೦**

ನ್ಯಾಯಾಲಯವು ದಾವೆಯ ಸಂಜ್ಞಾನವನ್ನು ತೆಗೆದುಕೊಳ್ಳಬೇಕೇ ಅಥವಾ ಅಧಿವಿಚಾರಣೆಯನ್ನು ನಡೆಸಬೇಕೇ ಎಂಬ ಪ್ರಶ್ನೆಯು ಬಂದಾಗ,

ಒಂದು ದಾವೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳದಂತೆ ಅಥವಾ ಅಧಿವಿಚಾರಣೆಯನ್ನು ಮಾಡದಂತೆ ಯಾವುದೇ ನ್ಯಾಯಾಲಯವನ್ನು ಪ್ರತಿಬಿಂಬಿಸುವ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯ ಅಸ್ತಿತ್ವವು ಸುಸಂಬದ್ಧವಾಗುತ್ತದೆ.

**ವ್ಯಾಖ್ಯಾನ**

೧. ನ್ಯಾಯಾಲಯವನ್ನು ದಾವೆಯ ಸಂಜ್ಞೆಯವನ್ನು ತೆಗೆದುಕೊಳ್ಳದಂತೆ ಅಥವಾ ಅಧಿವಿಚಾರಣೆ ಮಾಡದಂತೆ ಹಿಂದಿನ ತೀರ್ಪು, ಆದೇಶ ಅಥವಾ ಡಿಕ್ರಿ ದ್ವಾರ ಪ್ರತಿಬಂಧಿಸುವ ಕಾನೂನು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಒಳಗೊಂಡಿರುತ್ತದೆ ಮತ್ತು ಹಿಂದಿನ ತೀರ್ಪು ದ್ವಾರಾ ಅಧಿವಿಚಾರಣೆಯನ್ನು ನಡೆಸದಂತೆ ನ್ಯಾಯಾಲಯವನ್ನು ಪ್ರತಿಬಂಧಿಸುವ ಕಾನೂನು ದಂಡಪ್ರಕ್ರಿಯಾ ಸಂಹಿತೆಯಲ್ಲಿ ಒಳಗೊಂಡಿರುತ್ತದೆ.

೨. ಸಿವಿಲ್ ಪ್ರಕ್ರಿಯಾ ಸಂಹಿತೆಯ ಸಂಬಂಧಪಟ್ಟ ಪ್ರಕರಣಗಳು ಎಂದರೆ ೧೧–೧೪. ಫೀಲ್ಡ್ (Field), p. ೨೬೦ರಲ್ಲಿ ಸಂಕ್ಷೇಪಿಸಲಾದ ಉಪಬಂಧಗಳು.

೩. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಸಂಬಂಧಪಟ್ಟ ಪ್ರಕರಣ ಎಂದರೆ ೫೪–೪. ಕಲಮು ೪೦ರ ಅಡಿಯಲ್ಲಿ ಒಂದು ತೀರ್ಪು ಪರಿಣಾಮದಲ್ಲಿ ನ್ಯಾಯಾಲಯವನ್ನು ಉಪಸಂಹರಿಸುವಂತಿದ್ದರೆ ಅದು ಸುಸಂಬದ್ಧವಾಗುತ್ತದೆ.

೫. ಅಂಥ ತೀರ್ಪು ಅದೇ ಪಕ್ಷಕಾರರ ನಡುವೆ ಮತ್ತು ಅದೇ ವಿಷಯಗಳ ಮೇಲೆ ನ್ಯಾಯಸಮ್ಮತ ವಾಗಬೇಕು.

೬. ತೀರ್ಪು ಪಕ್ಷಕಾರರ ನಡುವೆಯೇ ಹೊರತು ಅಪರಿಚಿತನನ್ನು ಸಂಬಂಧವಿಲ್ಲದವನಿಗೆ ಬಂಧನಕಾರಿ ಆಗುವುದಿಲ್ಲ. ಈ ನಿಯಮದಲ್ಲಿ ಅಂತರ್ ನಿಹಿತವಾದ ತತ್ವ ಎಂದರೆ ಯಾವ ಮನುಷ್ಯನಿಗೆ ವ್ಯವಹರಣೆಗಳೊಂದಿಗೆ ಯಾವುದೇ ಸಂಬಂಧವಿರುವುದಿಲ್ಲವೋ ಅಥವಾ ಅವುಗಳ ಮೇಲೆ ನಿಯಂತ್ರಣ ಇಲ್ಲವೋ ಆ ವ್ಯವಹರಣೆಗಳು ಅವನಿಗೆ ಬಂಧನಕಾರಿಯಾಗತಕ್ಕದ್ದಲ್ಲ.

## ನಿಯಮಕ್ಕೆ ಅಪವಾದ

(೧) ಕಲಮು ೪೧, ಈ ನಿಯಮಕ್ಕೆ ಅದರ ಅಡಿಯಲ್ಲಿ ಒಂದು ಅಪವಾದವನ್ನು ಅಧಿನಿಯಮಿಸುತ್ತದೆ.

ಸಕ್ಷಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿ

(i) ಪ್ರೊಬೇಟು

(ii) ವೈವಾಹಿಕ

(iii) ನೌಕಾದಳ ವಿಷಯಕ

(iv) ದಿವಾಳಿತನ

ಇವುಗಳ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಯಾರೇ ವ್ಯಕ್ತಿಗೆ ಸ್ಥಾನಮಾನವನ್ನು ಪ್ರದಾನ ಮಾಡುವ ಅಥವಾ ಅದನ್ನು ಅವನಿಂದ ತೆಗೆದುಕೊಳ್ಳುವ ಅಥವಾ ಯಾವುದೇ ನಿರ್ದಿಷ್ಟ ಪದಾರ್ಥಕ್ಕೆ ಆ ವ್ಯಕ್ತಿಯು ಹಕ್ಕುಳ್ಳವನು ಎಂದು ಘೋಷಿಸುವ ಹಾಗೆ ಕೈಕೊಂಡ ಅಂತಿಮ ತೀರ್ಪು ಸುಸಂಬದ್ಧವಾಗುತ್ತದೆ.

**ವ್ಯಾಖ್ಯಾನ**

೧. ಪಕ್ಷಕಾರರ ನಡುವಣ ತೀರ್ಪು, ವ್ಯವಹರಣೆಗಳಿಗೆ ಪಕ್ಷಕಾರರಲ್ಲದ ವ್ಯಕ್ತಿಗಳಿಗೆ

೨. ಈ ಪ್ರಕರಣವು ಈ ವಿಷಯದಲ್ಲಿ (ಇನ್‌ರೆಮ್) ಎಂಬ ಪದಾವಳಿಯನ್ನು ಉಪಯೋಗಿಸದೆ, ಅಂಥ ಎಂದು ಕರೆಯಲಾಗುವ ತೀರ್ಪುಗಳನ್ನು ಕುರಿತು ವ್ಯವಹರಿಸುತ್ತದೆ. ಎಲ್ಲ ತೀರ್ಪುಗಳು ಪಕ್ಷಕಾರರ ನಡುವಣ ತೀರ್ಪುಗಳು. ಆದರೆ ಕೆಲವು ಪಕ್ಷಕಾರರ ನಡುವಣ ತೀರ್ಪುಗಳು ವ್ಯಕ್ತಿಬದ್ಧ ತೀರ್ಪುಗಳು ಮತ್ತು ಕೆಲವು ತೀರ್ಪುಗಳು ಇವೆರಡೂ ಪಕ್ಷಕಾರ ತೀರ್ಪುಗಳೇ. ಈ ಪ್ರಕರಣವು ತೀರ್ಪುಗಳ ಪರಿಭಾಷೆ ಒದಗಿಸುವುದಿಲ್ಲ. ಅವುಗಳ ಪಟ್ಟಿಯನ್ನು ಮಾತ್ರ ಕೊಡುತ್ತದೆ.

೩. ಫಲಿತಾಂಶವೆಂದರೆ, ಸ್ಥಾನಮಾನವನ್ನು ಪ್ರದಾನ ಮಾಡುವ ಅಥವಾ ತೆಗೆದುಹಾಕುವ ಪ್ರತಿಯೊಂದು ತೀರ್ಪೂ ಅಂಗೀಕಾರಾರ್ಹವಲ್ಲ. ವಿಶಿಷ್ಟ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ನೀಡಲಾದ ತೀರ್ಪುಗಳು ಮಾತ್ರವೇ ಅಂಗೀಕಾರಾರ್ಹವಾಗುತ್ತವೆ.

**ದೃಷ್ಟಾಂತಗಳು**

ಸಂಬಂಧವಿಲ್ಲದವರ ನಡುವಣ ದತ್ತು ಸ್ವೀಕಾರವು ಅಂಗೀಕಾರಾರ್ಹವಲ್ಲ.

ತೀರ್ಪು ಸ್ಥಾನಮಾನವನ್ನು ಪ್ರದಾನಮಾಡುತ್ತದೆ. ಆದರೆ ಅದು ನಮೂದಿಸಲಾದ ಅಧಿಕಾರವ್ಯಾಪ್ತಿಯ ಪೈಕಿ ಯಾವುದೇ ಒಂದರ ಅಡಿಯಲ್ಲಿ ನೀಡಲಾದ ತೀರ್ಪು. ಆದ್ದರಿಂದ ಅಂಗೀಕಾರಾರ್ಹವಲ್ಲ.

(II) ಅಪವಾದ ಕಲಮು ೪೨

ವ್ಯಕ್ತಿಬದ್ಧ ತೀರ್ಪು ಸಾರ್ವಜನಿಕ ಸ್ವಭಾವದ ವಿಷಯಕ್ಕೆ ಸಂಬಂಧಿಸಿದ್ದರೆ, ಅದು ಸಂಬಂಧವಿಲ್ಲದವರ ನಡುವಣ ತೀರ್ಪು ಆಗಿ ಸುಸಂಬದ್ಧವಾಗುತ್ತದೆ.

ಸಾರ್ವಜನಿಕ ಸ್ವಭಾವದ ವಿಷಯಗಳು

(೧) ರೂಢಿಗಳು

(೨) ಚಿರಭೋಗಗಳು

(೩) ದಾರಿಸುಂಕಗಳು

(೪) ಸರಹದ್ದುಗಳು

(೫) ತಾರಿ–ಹಕ್ಕು

(೬) ಕಡಲಗೋಡೆ ಮುಂತಾದವುಗಳು

III. ಅಪವಾದ ಕಲಮು ೪೩: ಈ ಪ್ರಕರಣದ ಅಡಿಯಲ್ಲಿ ವ್ಯಕ್ತಿಬದ್ಧ ತೀರ್ಪುಗಳು, ಎರಡು ಪರಿಸ್ಥಿತಿಗಳಲ್ಲಿ, ಸಂಬಂಧವಿಲ್ಲದವರ ನಡುವೆ, ಅಂಗೀಕಾರಾರ್ಹವಾಗುತ್ತವೆ.

(i) ಅಂಥ ತೀರ್ಪಿನ ಅಸ್ತಿತ್ವವು ವಿವಾದ್ಯ ಸಂಗತಿ ಅಗಿರುವಾಗ

(i) ತೀರ್ಪು ಸಾಕ್ಷ್ಯ ಅಧಿನಿಯಮದ ಯಾವುದೇ ಇತರ ಉಪಬಂಧದ ಅಡಿಯಲ್ಲಿ ಸುಸಂಬದ್ಧ ವಾಗಿರುವಾಗ.

**ವ್ಯಾಖ್ಯಾನ**

(i) ಮೊದಲನೆಯ ಪರಿಸ್ಥಿತಿಯನ್ನು ಸುಲಭವಾಗಿ ಕಲ್ಪಿಸಬಹುದು.

**ದೃಷ್ಟಾಂತಗಳು:**

(೧) ಸ್ಪಷ್ಟನೆಯ ಅಪರಾಧಕ್ಕಾಗಿ ದೋಷಸಿದ್ಧಿ ಆಗಿದೆಯೆಂದು ನಿಂದೆಯ ಮಾತನ್ನಾಡಿದ್ದಕ್ಕಾಗಿ 'ಬಿ'ನ ಮೇಲೆ 'ಎ'ನು ದಾವೆ ಹೂಡಿದ್ದಾನೆ. ಅದು ನಿಜವಾಗಿತ್ತು ಎಂಬ ಆಧಾರದ ಮೇಲೆ 'ಬಿ' ಅದನ್ನು ಸಮರ್ಥಿಸಿಕೊಂಡರು.

ಸ್ಪಷ್ಟನೆಗಾಗಿ 'ಎ'ನ ದೋಷಸಿದ್ಧಿಯು ವಿವಾದ್ಯ ಸಂಗತಿಯಾಗುತ್ತದೆ ಮತ್ತು ಅವನು ದೋಷಸಿದ್ಧಿಯನ್ನು ಸಮರ್ಥಿಸುವ ತೀರ್ಪು ಸಹ ಅಂಗೀಕಾರಾರ್ಹವಾಗುತ್ತದೆ. 'ಬಿ'ನು 'ಆ' ತೀರ್ಪಿಗೆ ಪಕ್ಷಕಾರನಾಗಿರಲಿಲ್ಲ.

(೨) ಲೇಣೆದಾರನ ವಿರುದ್ಧ ಜಾಮೀನುದಾರನು ಪಡೆದ ತೀರ್ಪು ಮೂಲ ಋಣಿಯ ವಿರುದ್ಧ ಹೂಡುವ ದಾವೆಯಲ್ಲಿ ಅಂಗೀಕಾರಾರ್ಹವಾಗುತ್ತದೆ. ಮೂಲ ಋಣಿಯು ಅದಕ್ಕೆ ಪಕ್ಷಕಾರನಾಗಿಲ್ಲದಿದ್ದರೂ ಕೂಡ.

(೩) ನ್ಯಾಯಿಕ ವ್ಯವಹರಣೆಯಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದಕ್ಕಾಗಿ ಅಧಿವಿಚಾರಣೆಯನ್ನು ನಡೆಸಿದ ಮೇಲೆ ಆ ದಾಖಲೆಯ ನ್ಯಾಯಿಕ ವ್ಯವಹರಣೆ ನಡೆದಿತ್ತು ಎಂಬುದಕ್ಕೆ ಸಾಕ್ಷ್ಯವಾಗುತ್ತದೆ.

೨. ಎರಡನೆಯ ಪರಿಸ್ಥಿತಿಯು ತೊಂದರೆಗೆ ಎಡೆ ಮಾಡಿಕೊಟ್ಟಿದೆ. ಯಾವ ಕಲಮುಗಳ ಅಡಿಯಲ್ಲಿ ತೀರ್ಪು ಸುಸಂಬದ್ಧವಾಗುವ ಸಂಭವವಿರುತ್ತದೆ?

ಕಲಮು ೭ರ ಅಡಿಯಲ್ಲಿ – ಕಾರಣ, ಸನ್ನಿವೇಶ ತೋರಿಸಿ.

ಕಲಮು ೮ರ ಅಡಿಯಲ್ಲಿ – ಹೇತು (ಪ್ರೇರಣೆ) ನಡತೆ

ಕಲಮು ೯ರ ಅಡಿಯಲ್ಲಿ – ಸುಸಂಬದ್ಧ ಸಂಗತಿಗಳನ್ನು ವಿವರಿಸಲು ಸಂಗತಿಗಳು ಅಗತ್ಯ

ಕಲಮು ೧೧ರ ಅಡಿಯಲ್ಲಿ – ಸಂಗತಿಗಳು ಅಸಂಗತ

ಕಲಮು ೧೩ರ ಅಡಿಯಲ್ಲಿ – ವ್ಯವಹಾರ

೩. ಎರಡು ಪ್ರಶ್ನೆಗಳು

ಒಂದು ತೀರ್ಪು ಸಂಗತಿಯೇ?

ತೀರ್ಪು ಒಂದು ವ್ಯವಹಾರವೇ?

೬ *Cal.* ೧೭೧, *F.B.*

೪. ೬ Cal. ೧೭೧ರ ಮೇಲೆ ವ್ಯಾಖ್ಯಾನ. ಅದು ಸಂಗತಿ ಎಂಬುದಾಗಿ ಪು. ೧೮೧ ಸಂಗತಿ:

(೧) ಇಂದ್ರಿಯಗಳ ಮೂಲಕ ಅರಿಯಬಹುದಾದ ಸಂಗತಿಗಳ ಯಾವುದೇ ಸ್ಥಿತಿ, ಅಥವಾ ಸಂಗತಿಗಳ ಸಂಬಂಧ.

(೨) ಯಾರೇ ವ್ಯಕ್ತಿಯ ಪ್ರಜ್ಞೆಗೆ ತಿಳಿಯುವ ಯಾವುದೇ ಮಾನಸಿಕ ಸ್ಥಿತಿ.

## II. ದಸ್ತಾವೇಜು ಸಾಕ್ಷ್ಯ

೧. ವ್ಯವಹರಿಸಬೇಕಾದ ವಿಷಯವೆಂದರೆ ಒಂದು ದಸ್ತಾವೇಜಿನಲ್ಲಿ ಮಾಡಲಾದ ಹೇಳಿಕೆಗಳ ಅಂದರೆ ದಸ್ತಾವೇಜಿನ ಒಳಾಂಶಗಳ ರುಜುವಾತು. ಮೌಖಿಕ ಸಾಕ್ಷ್ಯವು ಒಬ್ಬ ಪಕ್ಷಕಾರನು ಮಾಡಿದ ಹೇಳಿಕೆಗಳ ರುಜುವಾತನ್ನು ಕುರಿತು ವ್ಯವಹರಿಸುತ್ತದೆ.

೨. ದಸ್ತಾವೇಜಿನ ಒಳಾಂಶಗಳ ರುಜುವಾತಿಗೆ ಸಂಬಂಧಿಸಿ ಉತ್ತಮ ಸಾಕ್ಷ್ಯದ ನಿಯಮದ ಅಗತ್ಯತೆಗಳೇನು? ಎರಡು ಅಗತ್ಯತೆಗಳಿರುತ್ತವೆ:

(i) ಕೆಲವು ಪ್ರಕರಣಗಳಲ್ಲಿ ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯವಾಗಿರತಕ್ಕದ್ದೇ ಹೊರತು ಮೌಖಿಕವಾಗಿರತಕ್ಕದ್ದಲ್ಲ.

(ii) ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯವಾಗಿರಬೇಕಾದ ಪ್ರಕರಣಗಳಲ್ಲಿ ಆ ಸಾಕ್ಷ್ಯವು ಪ್ರಾಥಮಿಕವಾಗಿರಬೇಕು.

### ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯವಾಗಿರತಕ್ಕ ಪ್ರಕರಣಗಳು

೧. ಅನೇಕ ವಿಷಯಗಳನ್ನು ಬರಹಕ್ಕೆ ಇಳಿಸಬಹುದು. ಅವುಗಳನ್ನು ಬರಹಕ್ಕೆ ಇಳಿಸಲಾಗಿದೆ ಎಂಬ ಕಾರಣದಿಂದ, ಅಂಥ ಪ್ರತಿಯೊಂದು ಪ್ರಕರಣವನ್ನು ದಸ್ತಾವೇಜುಗಳನ್ನು ಹಾಜರುಪಡಿಸಿಯೇ ರುಜುವಾತು ಮಾಡಬೇಕು ಎಂದು ಕಾನೂನು ಅಗತ್ಯಪಡಿಸುವುದಿಲ್ಲ. ಕೆಲವನ್ನು ಮೌಖಿಕ ಸಾಕ್ಷ್ಯದಿಂದ ರುಜುವಾತು ಮಾಡಬಹುದು ಮತ್ತು ಉಳಿದವುಗಳನ್ನು ದಸ್ತಾವೇಜು ಸಾಕ್ಷ್ಯದಿಂದಲೇ ರುಜುವಾತು ಮಾಡಬೇಕು.

೨. ಈ ಉದ್ದೇಶಕ್ಕಾಗಿ ಭಾರತ ಸಾಕ್ಷ್ಯ ಅಧಿನಿಯಮವು ಎರಡು ಭೇದಗಳನ್ನು ಮಾಡುತ್ತದೆ ಎಂಬುದನ್ನು ಗಮನಿಸಬೇಕು–

(೧) ಸ್ವಭಾವದಲ್ಲಿ ಇತ್ಯರ್ಥಕವಾದ ದಸ್ತಾವೇಜುಗಳು ಮತ್ತು ಸ್ವಭಾವದಲ್ಲಿ ಇತ್ಯರ್ಥಕವಲ್ಲದ ದಸ್ತಾವೇಜುಗಳು– ಇವುಗಳ ನಡುವೆ

(೨) ಕಾನೂನು ದ್ವಾರಾ ಅಗತ್ಯಪಡಿಸಲಾದ ವ್ಯವಹಾರಗಳು ಮತ್ತು ಹಾಗೆ ಅಗತ್ಯಪಡಿಸಿಲ್ಲದ ವ್ಯವಹಾರಗಳು– ಇವುಗಳ ನಡುವೆ

**೩. ಇತ್ಯರ್ಥಕ ಮತ್ತು ಇತ್ಯರ್ಥಕವಲ್ಲದ:**

ಇತ್ಯರ್ಥಕ ಅಥವಾ ವಿಲೇವಾರಿ ವ್ಯವಹಾರಗಳಲ್ಲಿ ಪಕ್ಷಕಾರರು ತಮ್ಮ ಹಕ್ಕುಗಳನ್ನು ಅಂದರೆ ಕರಾರು, ಅನುದಾನ ಮುಂತಾದವುಗಳನ್ನು ವಿಲೆ ಮಾಡುತ್ತಾರೆ. ಇತ್ಯರ್ಥಕವಲ್ಲದ ವ್ಯವಹಾರಗಳಲ್ಲಿ ಹಕ್ಕುಗಳ ವಿಲೇವಾರಿ ಒಳಗೊಳ್ಳುವುದಿಲ್ಲ.

೪. ಸಾಕ್ಷ್ಯ ಅಧಿನಿಯಮದಲ್ಲಿ ಒಳಗೊಂಡ ನಿಯಮವು ಇಬ್ಬಗೆಯದಾಗಿರುತ್ತದೆ:

(i) ದಸ್ತಾವೇಜು ಇತ್ಯರ್ಥಕ ದಸ್ತಾವೇಜು ಆಗಿರುವಾಗ ಮತ್ತು ಕಾನೂನು ದ್ವಾರಾ ಅದನ್ನು ಬರಹಕ್ಕೆ ಇಳಿಸಬೇಕು ಎಂಬ ಅಗತ್ಯವಿರುವಲ್ಲಿ, ವಿಷಯಕ್ಕೆ ಸಂಬಂಧಪಟ್ಟಂತೆ, ದಸ್ತಾವೇಜಿನ ಹೊರತಾಗಿ ಯಾವುದೇ ಇತರ ಸಾಕ್ಷ್ಯವನ್ನು ಕೊಡತಕ್ಕದ್ದಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಂಥ ಪ್ರಕರಣಗಳಲ್ಲಿ ದಸ್ತಾವೇಜು

ಸಾಕ್ಷ್ಯಕ್ಕೆ ಬದಲಾಗಿ ಮೌಖಿಕ ಸಾಕ್ಷ್ಯವನ್ನು ಒದಗಿಸುವಂತಿಲ್ಲ. ಆದರೆ ದಸ್ತಾವೇಜು ಇತ್ಯರ್ಥಕವಲ್ಲದ ಸ್ವಭಾವದ್ದಾಗಿದ್ದಲ್ಲಿ ಮತ್ತು ಕಾನೂನು ದ್ವಾರಾ ಅದನ್ನು ಬರಹಕ್ಕೆ ಇಳಿಸಬೇಕು ಎಂಬ ಅಗತ್ಯವಿರದಿದ್ದಲ್ಲಿ, ಆಗ ವ್ಯವಹಾರವನ್ನು ಬರಹಕ್ಕೆ ಇಳಿಸಿರಬಹುದಾಗಿದ್ದರೂ, ವ್ಯವಹಾರದ ರುಜುವಾತಾಗಿ ಮೌಖಿಕ ಸಾಕ್ಷ್ಯವನ್ನು ಕೊಡಬಹುದು.

(ii) ವ್ಯವಹಾರವು ಇತ್ಯರ್ಥಕ ಸ್ವಭಾವದ್ದಾಗಿರುವಲ್ಲಿ ಅಥವಾ ಕಾನೂನು ದ್ವಾರಾ ಬರಹಕ್ಕೆ ಇಳಿಸುವುದು ಅಗತ್ಯವಿರುವಂಥ ವ್ಯವಹಾರ ಆಗಿರುವಲ್ಲಿ, ದಸ್ತಾವೇಜು ಸಾಕ್ಷ್ಯಕ್ಕೆ ಬದಲಾಗಿ ಮೌಖಿಕ ಸಾಕ್ಷ್ಯವನ್ನು ಒದಗಿಸುವಂತಿಲ್ಲ. ಮಾತ್ರವಲ್ಲ, ಮೌಖಿಕ ಸಾಕ್ಷ್ಯವನ್ನು ದಸ್ತಾವೇಜಿನ ನಿಬಂಧನೆಗಳನ್ನು ವಿರೋಧಿಸಲು, ಮಾರ್ಪಾಟುಗೊಳಿಸಲು ಅಥವಾ ವ್ಯತ್ಯಾಸಗೊಳಿಸಲು ಅಂಗೀಕಾರಾರ್ಹವಾಗುವುದಿಲ್ಲ.

೫. ಈ ನಿಯಮವು ೯೧–೯೨ ಕಲಮುಗಳಲ್ಲಿ ಒಳಗೊಂಡಿರುತ್ತದೆ.

**೯೧–೯೨ ಕಲಮುಗಳಲ್ಲಿ ಒಳಗೊಂಡ ನಿಯಮಕ್ಕೆ ಅಪವಾದ**

೧. ಈ ನಿಯಮಕ್ಕೆ ಅಪವಾದಗಳುಂಟು. ಅವು ವಿಭಿನ್ನ ವರ್ಗಗಳಲ್ಲಿರುತ್ತವೆ. ಅವುಗಳನ್ನು ಪ್ರತ್ಯೇಕವಾಗಿ ಇಡಬೇಕು. ಒಂದು ವರ್ಗವು, ದಸ್ತಾವೇಜು ಸಾಕ್ಷ್ಯಕ್ಕೆ ಬದಲಾಗಿ ಮೌಖಿಕ ಸಾಕ್ಷ್ಯವನ್ನು ಕೊಡಬಹುದೇ ಎಂಬ ಪ್ರಶ್ನೆಯನ್ನು ಕುರಿತು ವ್ಯವಹರಿಸುತ್ತದೆ. ಎರಡನೇ ವರ್ಗವು, ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯವಾಗಿರಬೇಕು ಎಂದು ನಿಯಮವು ಅಗತ್ಯಪಡಿಸುವಲ್ಲಿ, ಮೌಖಿಕ ಸಾಕ್ಷ್ಯವು ದಸ್ತಾವೇಜು ಸಾಕ್ಷ್ಯಕ್ಕೆ ಬದಲಾಗಿ ಒದಗಿಸಲು ಅಲ್ಲದಿದ್ದರೂ, ದಸ್ತಾವೇಜು ಸಾಕ್ಷ್ಯವನ್ನು ಮಾರ್ಪಾಟುಗೊಳಿಸಲು ಅಂಗೀಕಾರಾರ್ಹವೆ ಎಂಬ ಪ್ರಶ್ನೆಯನ್ನು ಕುರಿತು ವ್ಯವಹರಿಸುತ್ತದೆ.

## ದಸ್ತಾವೇಜು ಸಾಕ್ಷ್ಯದ ಬದಲಾಗಿ ಮೌಖಿಕ ಸಾಕ್ಷ್ಯವನ್ನು ಅಂಗೀಕರಿಸುವ ಕೆಲವು ಅಪವಾದಗಳು

೧. ಅವು ೯೧ನೆಯ ಕಲಮಿನಲ್ಲಿರುತ್ತವೆ. ಕೆಳಕಂಡ ವಿಷಯಗಳಿಗೆ ಸಂಬಂಧಿಸಿರುತ್ತವೆ.

(i) ಸಾರ್ವಜನಿಕ ಅಧಿಕಾರಿಯ ನೇಮಕಾತಿ.

(ii) ಮರಣ ಶಾಸನವನ್ನು ಪ್ರೊಬೇಟು ರುಜುವಾತು ಮಾಡಬಹುದು.

## ದಸ್ತಾವೇಜಿನ ನಿಬಂಧನೆಗಳನ್ನು ಮಾರ್ಪಾಟುಗೊಳಿಸಲು ಮೌಖಿಕ ಸಾಕ್ಷ್ಯವನ್ನು ಅಂಗೀಕರಿಸುವ ಕೆಲವು ಅಪವಾದಗಳು

೧. ಅವು ೯೨ನೆಯ ಕಲಮಿನಲ್ಲಿರುತ್ತವೆ. ಕೆಳಕಂಡ ವಿಷಯಗಳಿಗೆ ಸಂಬಂಧಿಸಿರುತ್ತವೆ.

೨. ಮೊದಲಲ್ಲಿ ಒಂದು ಅಂಶವನ್ನು ಗಮನಿಸಬೇಕು. ಯಾವ ವ್ಯಕ್ತಿಗಳು ದಸ್ತಾವೇಜಿಗೆ ಪಕ್ಷಕಾರರಲ್ಲವೋ ಅಥವಾ ದಸ್ತಾವೇಜಿನ ಪಕ್ಷಕಾರರ ಹಿತಾಸಕ್ತಿ ಪ್ರತಿನಿಧಿಗಳಲ್ಲವೋ ಅಂಥ ವ್ಯಕ್ತಿಗಳು ಅಂಥ ಸಾಕ್ಷ್ಯವನ್ನು ಯಾವಾಗಲೂ ಕೊಡಬಹುದು.

೩. ದಸ್ತಾವೇಜಿನ ಪಕ್ಷಕಾರರು ಅಥವಾ ಅವರ ಹಿತಾಸಕ್ತಿ ಪ್ರತಿನಿಧಿಗಳು ಮೌಖಿಕ ಸಾಕ್ಷ್ಯ ಕೊಡುವ ಅವಕಾಶವಿರುವ ಪ್ರಕರಣಗಳು ಕೆಳಕಂಡಂತಿವೆ:

(i) ದಸ್ತಾವೇಜನ್ನು ಅಸಿಂಧುಗೊಳಿಸುವ ಸಂಗತಿ– ವಂಚನೆ, ಸಾಮರ್ಥ್ಯದ ಅಭಾವ.

(ii) ಯಾವ ಸಂಗತಿಯ ಬಗ್ಗೆ ದಸ್ತಾವೇಜು ಮೌನವಾಗಿರುವುದೋ ಮತ್ತು ಯಾವುದು ದಸ್ತಾವೇಜಿನ ನಿಬಂಧನೆಗಳಿಗೆ ಅಸಂಗತವಾಗಿಲ್ಲವೋ ಆ ಸಂಗತಿ.

(iii) ಹಿಂದಿನ ಷರತ್ತು.

(iv) ತರುವಾಯದ ಮೌಖಿಕ ಒಪ್ಪಂದ.

(v) ಯಾವ ಆಚರಣೆ ಅಥವಾ ರೂಢಿಗಳ ಮೂಲಕ ಘಟನೆಗಳನ್ನು ಕರಾರುಗಳಿಗೆ ಲಗತ್ತಿಸಲಾಗುವುದೋ, ಆ ಆಚರಣೆ ಅಥವಾ ರೂಢಿ. ಪರಂತು ಅದು ಅಸಂಗತವಾಗಿರಕೂಡದು.

vi) ಭಾಷೆಯು ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಹೇಗೆ ಸಂಬಂಧಪಟ್ಟಿದೆ ಎಂದು ತೋರಿಸುವ ಸಂಗತಿ.

## ದಸ್ತಾವೇಜು ಸಾಕ್ಷ್ಯವನ್ನು ವಿವರಿಸಲು ಮೌಖಿಕ ಸಾಕ್ಷ್ಯವನ್ನು ಅಂಗೀಕರಿಸಬಹುದಾದ ಪ್ರಕರಣಗಳು

ಮೌಖಿಕ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಉತ್ತಮ ಸಾಕ್ಷ್ಯದ ಮೊದಲನೆಯ ನಿಯಮದಿಂದ ಉದ್ಭವಿಸುವ ಎರಡು ಕಾನೂನು ಪ್ರಸ್ತಾಪಗಳಿರುತ್ತವೆ.

೧. ಒಂದು ದಸ್ತಾವೇಜಿನಲ್ಲಿ ಒಳಗೊಂಡಿರತಕ್ಕ ವ್ಯವಹಾರವು ಇತ್ಯರ್ಥಕವಲ್ಲದ ಸ್ವಭಾವದ್ದಾಗಿರುವಲ್ಲಿ ಅಥವಾ ಕಾನೂನು ದ್ವಾರಾ ಬರಹಕ್ಕೆ ಇಳಿಸುವುದು ಅಗತ್ಯವಲ್ಲದ್ದಾಗಿರುವಲ್ಲಿ, ವ್ಯವಹಾರದ ಸಂಗತಿಯನ್ನು ಮೌಖಿಕ ಸಾಕ್ಷ್ಯದಿಂದ ರುಜುವಾತು ಮಾಡಬಹುದು.

೨. ಅದು (ವ್ಯವಹಾರವು) ಇತ್ಯರ್ಥಕ ಅಥವಾ ಕಾನೂನು ದ್ವಾರಾ ಬರಹಕ್ಕೆ ಇಳಿಸುವ ಅಗತ್ಯವಿರುವುದಾಗಿರುವಲ್ಲಿ, ಆಗ ವ್ಯವಹಾರವನ್ನು ರುಜುವಾತು ಮಾಡಲು ಮೌಖಿಕ ಸಾಕ್ಷ್ಯವನ್ನು ಕೊಡಲು ಬರುವಂತಿಲ್ಲ. ಮಾತ್ರವಲ್ಲ, ದಸ್ತಾವೇಜಿನ ಒಳಗೊಂಡಿರತಕ್ಕ ಆ ಸಾಕ್ಷ್ಯದ ನಿಬಂಧನೆಗಳನ್ನು ವಿರೋಧಿಸಲು ಅಥವಾ ತಿದ್ದುಪಡಿ ಮಾಡಲು ಅಥವಾ ಮಾರ್ಪಾಟುಗೊಳಿಸಲು ಸಹ ಅದನ್ನು ಕೊಡಲು ಸಾಧ್ಯವಿಲ್ಲ.

೩. ಒಂದು ಪ್ರಶ್ನೆ ಇನ್ನೂ ಉಳಿಯುತ್ತದೆ. ದಸ್ತಾವೇಜು ಸಾಕ್ಷ್ಯವನ್ನು ವಿವರಿಸಲು ಮೌಖಿಕ ಸಾಕ್ಷ್ಯವನ್ನು ಕೊಡಬಹುದೆ? ಇದೊಂದು ವಿಶಿಷ್ಟ ಪ್ರಶ್ನೆ. ಇದನ್ನು ಕರಾರು ಮುಂತಾದವುಗಳನ್ನು ಮಾರ್ಪಾಟುಗೊಳಿಸಲು ದಸ್ತಾವೇಜು ಸಾಕ್ಷ್ಯದ ನಿಬಂಧನೆಗಳನ್ನು ಕೊಡಬಹುದೇ, ಹೇಗೆ ಎಂಬ ಪ್ರಶ್ನೆಯಿಂದ ಪ್ರತ್ಯೇಕಿಸಬೇಕು.

೪. ಈ ಪ್ರಶ್ನೆಯನ್ನು ಕುರಿತು ೯೩–೧೦೦ ಕಲಮುಗಳಲ್ಲಿ ವ್ಯವಹರಿಸಲಾಗಿದೆ.

೫. ದಸ್ತಾವೇಜು ಸಾಕ್ಷ್ಯವನ್ನು ಕುರಿತು ವ್ಯವಹರಿಸುವಲ್ಲಿ ಮೂರು ಅಂಶಗಳ ಬಗ್ಗೆ ವಿವಾದವು ಉದ್ಭವಿಸಬಹುದು.

(i) ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಭಾಷೆಯ ಅನ್ವಯದ ಸಾಧ್ಯತೆ ಅಥವಾ ಅನ್ವಯನ–ಅಸಾಧ್ಯತೆ ಇವುಗಳನ್ನು ಕುರಿತ ವಿವಾದಗಳು.

(ii) ಉಪಯೋಗಿಸಲಾದ ಭಾಷೆಯು ಸಂದಿಗ್ಧ ಅಥವಾ ದೋಷಪೂರ್ಣ ಆಗಿರುವಲ್ಲಿ ದಸ್ತಾವೇಜಿನ ಅರ್ಥವನ್ನು ಕುರಿತ ವಿವಾದಗಳು.

(iii) ದಸ್ತಾವೇಜಿನಲ್ಲಿ ಉಪಯೋಗಿಸಲಾದ ಪದಗಳನ್ನು ಕುರಿತ ವಿವಾದಗಳು.

೧. ೧ರ ಅಡಿಯಲ್ಲಿ ಮೂರು ಸಂಭಾವ್ಯ ಪ್ರಕರಣಗಳು ಬರುತ್ತವೆ.

(೧) ಭಾಷೆಯು ಸಂಗತಿಗಳಿಗೆ ಕರಾರುವಾಕ್ಕಾಗಿ ಅನ್ವಯಿಸುವಲ್ಲಿ ಮತ್ತು ಹಾಗೆ ಅನ್ವಯಿಸುವ ಆಶಯ ಇರಲಿಲ್ಲ ಎಂದು ವಾದಿಸುವಲ್ಲಿ– ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಅನ್ವಯವಾಗಿಯೇ ಆಗುತ್ತಿರುವ ಆ ಭಾಷೆಯು ಅನ್ವಯವಾಗುವ ಆಶಯ ಇರಲಿಲ್ಲ ಎಂಬ ವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಕೊಡಕೂಡದು.

–ಕಲಮು ೯೪.

(೨) ಭಾಷೆಯು ಅಸ್ತಿತ್ವದಲ್ಲಿರುವ ಸಂಗತಿಗಳ ಪೈಕಿ ಯಾವುದಾದರೂ ಒಂದಕ್ಕೆ ಅನ್ವಯವಾಗುತ್ತಿದ್ದು, ಆ ಎಲ್ಲ ಸಂಗತಿಗಳಿಗೆ ಅನ್ವಯವಾಗುತ್ತಿದ್ದರೆ– ಮತ್ತು ಅದು ಒಂದು ನಿರ್ದಿಷ್ಟ ಸಂಗತಿಗೆ ಅನ್ವಯವಾಗುತ್ತದೆ ಎಂಬ ವಾದವಿದ್ದರೆ– ಯಾವ ನಿರ್ದಿಷ್ಟ ಸಂಗತಿಗೆ ಅದು ಅನ್ವಯವಾಗುವ ಆಶಯ ಇತ್ತು ಎಂಬ ವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಕೊಡಬಹುದು.

–ಕಲಮು ೯೬

(೩) ಭಾಷೆಯು ಸಂಗತಿಗಳ ಒಂದು ಕಟ್ಟಿಗೆ ಭಾಗಶಃ ಮತ್ತು ಇನ್ನೊಂದು ಕಟ್ಟಿಗೆ ಭಾಗಶಃ ಹೀಗೆ ಅನ್ವಯವಾಗುತ್ತಿದ್ದರೆ ಮತ್ತು ಇಡೀ ಭಾಷೆಯು ಎರಡರ ಪೈಕಿ ಯಾವುದೇ ಒಂದಕ್ಕೆ ಸರಿಯಾಗಿ ಅನ್ವಯಿಸದಿದ್ದರೆ ಮತ್ತು ಅದು ಒಂದು ಕಟ್ಟಿಗೆ ಅನ್ವಯವಾಗುತ್ತದೆಯೆ ಹೊರತು ಇನ್ನೊಂದಕ್ಕೆ ಅನ್ವಯವಾಗುವುದಿಲ್ಲ ಎಂಬ ವಾದವಿದ್ದರೆ– ಆ ಎರಡು ಕಟ್ಟುಗಳ ಪೈಕಿ ಅದು ಯಾವುದಕ್ಕೆ ಅನ್ವಯವಾಗುತ್ತದೆ ಎಂದು ತೋರಿಸುವ ವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಕೊಡಬಹುದು.

–ಕಲಮು ೬೭.

೧. ವಿವಾದಗಳ ಎರಡನೆಯ ಶೀರ್ಷಿಕೆಯ ಅಡಿಯಲ್ಲಿ ಎರಡು ಸಂಭಾವ್ಯ ವಿವಾದಗಳಿರುತ್ತವೆ;

(i) ಭಾಷೆಯು ಸಂದಿಗ್ಧ ಅಥವಾ ದೋಷ ಪೂರ್ಣವಾಗಿದ್ದರೆ ಮತ್ತು ಪಕ್ಷಕಾರರು ನಿರ್ದಿಷ್ಟ ಸಂಗತಿಯನ್ನು ಉದ್ದೇಶಿಸಿದ್ದರು ಎಂಬ ವಾದವಿದ್ದರೆ– ಅದರ ಸರಿಯಾದ ಅರ್ಥವನ್ನು ಕೊಡುವ ಅಥವಾ ದೋಷಗಳನ್ನು ಸರಿಪಡಿಸುವ ವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಕೊಡಬಾರದು.

–ಕಲಮು ೯೩

(ii) ಭಾಷೆಯು ಸ್ವತಃ ಸ್ಪಷ್ಟವಾಗಿದ್ದರೂ ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಉಲ್ಲೇಖಿಸಿದಾಗ ಅರ್ಥವಾಗು ವಂತಿಲ್ಲದಿದ್ದರೆ ಮತ್ತು ಒಂದು ವಿಶಿಷ್ಟ ಸಂಗತಿಯನ್ನು ಸೂಚಿಸುವುದು ಅದರ ಆಶಯವಾಗಿತ್ತು ಎಂದು ವಾದಿಸಿರುವಲ್ಲಿ– ಅಂಥ ಆಶಯ ಇತ್ತು ಎಂದು ತೋರಿಸುವ ವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಕೊಡಬಹುದು.

–ಕಲಮು ೯೭

೩. ವಿವಾದಗಳ ವಂಚನೆಯ ಶೀರ್ಷಿಕೆಯ ಅಡಿಯಲ್ಲಿ ಕೆಳಕಂಡ ಪ್ರಕರಣವು ಬರುತ್ತದೆ:–

(i) .....

(ಹಸ್ತಪ್ರತಿಯಲ್ಲಿ ಸ್ಥಳವನ್ನು ಖಾಲಿ ಬಿಡಲಾಗಿದೆ, –ಸಂಪಾದಕ)

ಅವ್ಯಕ್ತ ಸಂದಿಗ್ಧತೆ ಮತ್ತು ವ್ಯಕ್ತ ಸಂದಿಗ್ಧತೆ ಇವುಗಳ ನಡುವಣ ವ್ಯತ್ಯಾಸ.

II. ಒಂದು ದಸ್ತಾವೇಜಿನ ಒಳಾಂಶಗಳನ್ನು ರುಜುವಾತು ಮಾಡುವುದು ಹೇಗೆ?

೧. ದಸ್ತಾವೇಜಿನ ಒಳಾಂಶಗಳ ರುಜುವಾತಿಗೆ ಸಂಬಂಧಿಸಿದಂತೆ ಉತ್ತಮ ಸಾಕ್ಷ್ಯದ ನಿಯಮದ ಅಗತ್ಯತೆಗಳೇನು?

೨. ಸಾಕ್ಷ್ಯ ಅಧಿನಿಯಮದಲ್ಲಿ ಗೊತ್ತುಪಡಿಸಲಾದಂತೆ ಈ ಸಂಬಂಧದಲ್ಲಿ ಎರಡು ಅಗತ್ಯತೆಗಳಿರುತ್ತವೆ.

(i) ದಸ್ತಾವೇಜಿನ ಒಳಾಂಶಗಳನ್ನು ಪ್ರಾಥಮಿಕ ಸಾಕ್ಷ್ಯ ದ್ವಾರಾ ರುಜುವಾತು ಮಾಡಬೇಕು.

(ii) ದಸ್ತಾವೇಜುಗಳು ನೈಜವೆಂದು ರುಜುವಾತು ಮಾಡಬೇಕು.

## ಪ್ರಾಥಮಿಕ ಸಾಕ್ಷ್ಯ ಎಂದರೇನು?

**ಪ್ರಕರಣ ೬೨**

(೧) ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಿದ ಪ್ರಾಥಮಿಕ ದಸ್ತಾವೇಜು.

**ವಿವರಣೆ**

(ಹಸ್ತಪ್ರತಿಯಲ್ಲಿ ಸ್ಥಳವನ್ನು ಖಾಲಿ ಬಿಡಲಾಗಿದೆ –ಸಂಪಾದಕ)

## ದಸ್ತಾವೇಜು ನೈಜವೆಂದು ರುಜುವಾತು ಮಾಡುವುದು ಹೇಗೆ?

೧. ದಸ್ತಾವೇಜುಗಳ ನೈಜತೆಯನ್ನು ರುಜುವಾತು ಮಾಡುವ ಉದ್ದೇಶಕ್ಕಾಗಿ ಸಾಕ್ಷ್ಯವು (೧) ಸಾರ್ವಜನಿಕ ದಸ್ತಾವೇಜು, (೨) ಖಾಸಗಿ ದಸ್ತಾವೇಜು ಎಂದು ಅವುಗಳನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತದೆ.

೨. ಸಾರ್ವಜನಿಕ ದಸ್ತಾವೇಜನ್ನು ಕಲಮು ೭೪ರಲ್ಲಿ ಪರಿಭಾಷಿಸಲಾಗಿದೆ.

೩. ಸಾರ್ವಜನಿಕ ದಸ್ತಾವೇಜು ಅಲ್ಲದ ಯಾವುದೇ ದಸ್ತಾವೇಜು ಖಾಸಗಿ ದಸ್ತಾವೇಜೆಂದು– ೭೫ನೇ ಕಲಮಿನಲ್ಲಿ ಘೋಷಿಸಲಾಗಿದೆ.

೪. ದಸ್ತಾವೇಜು ಸಾರ್ವಜನಿಕ ದಸ್ತಾವೇಜು ಅಥವಾ ಖಾಸಗಿ ದಸ್ತಾವೇಜು ಆಗಿದ್ದರೆ ಹೇಗೋ ಅದಕ್ಕನುಸಾರವಾಗಿ ಅದರ ನೈಜತೆಯನ್ನು ರುಜುವಾತು ಮಾಡುವ ನಿಯಮಗಳು ಭಿನ್ನವಾಗಿರುತ್ತವೆ.

೫. ಸಾರ್ವಜನಿಕ ದಸ್ತಾವೇಜಿನ ನೈಜತೆಯನ್ನು ರುಜುವಾತುಪಡಿಸುವ ವಿಧಾನವನ್ನು ೭೬–೭೮ ಕಲಮುಗಳಲ್ಲಿ ನಿರೂಪಿಸಲಾಗಿದೆ.

೬. ಖಾಸಗಿ ದಸ್ತಾವೇಜಿನ ನೈಜತೆಯನ್ನು ರುಜುವಾತು ಮಾಡುವ ವಿಧಾನವನ್ನು ೬೭–೭೫ ಕಲಮುಗಳಲ್ಲಿ ನಿರೂಪಿಸಲಾಗಿದೆ.

೭. ಖಾಸಗಿ ದಸ್ತಾವೇಜುಗಳನ್ನು ಸಾಮಾನ್ಯವಾಗಿ, ಮೂಲದ ಜತೆಗೆ, ಸಂದರ್ಭಾನುಸಾರ ಕೈಬರೆಹ, ಸಹಿ, ಒಕ್ಕಣಿಕೆಯ ಸಾಕ್ಷ್ಯ ಇವುಗಳನ್ನು ಹಾಜರುಪಡಿಸುವ ಮೂಲಕ ರುಜುವಾತು ಮಾಡಬಹುದು. ಅಪವಾದ–ಮರಣ ಶಾಸನವನ್ನು ಪ್ರೊಬೇಟ್ ಮೂಲಕ ರುಜುವಾತು ಮಾಡಬಹುದು.

೮. ಸಾರ್ವಜನಿಕ ದಸ್ತಾವೇಜುಗಳ ಸಾಕ್ಷ್ಯವನ್ನು ಸಾಮಾನ್ಯವಾಗಿ ೭೭ನೇ ಕಲಮಿನ ಅಡಿಯಲ್ಲಿ ಪ್ರಾಮಾಣಿತ ಪ್ರತಿಗಳನ್ನು ಹಾಜರುಪಡಿಸುವ ಮೂಲಕ ಅಥವಾ ಅವು ೭೮ನೇ ಕಲಮಿನಲ್ಲಿ ನಮೂದಿಸಲಾದ ಬಗೆಯ ದಸ್ತಾವೇಜುಗಳಾಗಿದ್ದಲ್ಲಿ, ಆ ಕಲಮಿನಲ್ಲಿ ನಿಯಮಿಸಲಾದ ವಿವಿಧ ವಿಧಾನಗಳ ಮೂಲಕ ರುಜುವಾತು ಮಾಡಬಹುದು.

೯. ಯಾವುದೇ ದಸ್ತಾವೇಜು ಸಾರ್ವಜನಿಕವೇ ಅಥವಾ ಖಾಸಗಿಯೇ ಎಂಬ ಬಗೆಗಿನ ನೈಜತೆಯ ರುಜುವಾತಿನ ಭಾರದ ವಿಷಯದಲ್ಲಿ, ಸಾಕ್ಷ್ಯ ಅಧಿನಿಯಮವು ಕೆಲವು ಪೂರ್ವ ಭಾವನೆಗಳನ್ನು ಅಧಿನಿಯಮಿಸಿದ್ದುಂಟು. ಅವು ೭೯–೯೦ ಕಲಮುಗಳಲ್ಲಿ ಒಳಗೊಂಡಿವೆ. ಆದರೆ ಅವು ನಿರ್ಣಾಯಕ ಪೂರ್ವಭಾವನೆಗಳಲ್ಲ.

**೧೦. ಈ ಪೂರ್ವಭಾವನೆಗಳು ಕೆಳಕಂಡ ವರ್ಗಗಳಲ್ಲಿ ಬರುತ್ತವೆ:**

(೧) ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕ ವರ್ಗದವುಗಳು. ೭೯–೮, ಮತ್ತು ೮೯.

(೨) ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕ ವರ್ಗದವುಗಳು. ೮೬–೮೮ ಮತ್ತು ೯೦.

## ಪ್ರಾಥಮಿಕ ಸಾಕ್ಷ್ಯವು ಯಾವಾಗ ಅಗತ್ಯವಿಲ್ಲ ಎಂದು ಹೇಳಬಹುದು?

(ಹಸ್ತಪ್ರತಿಯಲ್ಲಿ ಸ್ಥಳವನ್ನು ಖಾಲಿ ಬಿಡಲಾಗಿದೆ –ಸಂಪಾದಕ)

## ಪ್ರಾಥಮಿಕ ಸಾಕ್ಷ್ಯವು ಅಗತ್ಯವಿಲ್ಲ ಎಂದು ನಿರ್ಣಯಿಸಿರುವ ಪ್ರಕರಣಗಳಲ್ಲಿ ದಸ್ತಾವೇಜಿನ ಒಳಾಂಶಗಳನ್ನು ರುಜುವಾತು ಮಾಡುವುದು ಹೇಗೆ?

೧. ದ್ವಿತೀಯಕ ಸಾಕ್ಷ್ಯದ ಮೂಲಕ

(ಹಸ್ತಪ್ರತಿಯಲ್ಲಿ ಸ್ಥಳವನ್ನು ಖಾಲಿ ಬಿಡಲಾಗಿದೆ –ಸಂಪಾದಕ)

## ದ್ವಿತೀಯ ಸಾಕ್ಷ್ಯ ಎಂದರೇನು?

(ಹಸ್ತಪ್ರತಿಯಲ್ಲಿ ಸ್ಥಳವನ್ನು ಖಾಲಿ ಬಿಡಲಾಗಿದೆ –ಸಂಪಾದಕ)

# ರುಜುವಾತಿನ ಹೊಣೆ

೧. ಯಾವ ವ್ಯಕ್ತಿಯ ಮೇಲೆ ರುಜುವಾತಿನ ಹೊಣೆ ಇರುವುದೋ ಆ ವ್ಯಕ್ತಿಯೇ ಅದನ್ನು ನಿರ್ವಹಿಸಬೇಕು ಎಂದು ಕಾನೂನು ಅಗತ್ಯಪಡಿಸುತ್ತದೆ.

೨. ರುಜುವಾತಿನ ಹೊಣೆಯನ್ನು ನಿರ್ವಹಿಸುವಲ್ಲಿ ಕೆಳಕಂಡ ಅಂಶಗಳನ್ನು ಗಮನದಲ್ಲಿಡಬೇಕು–

(i) ರುಜುವಾತು ಅಗತ್ಯಪಡಿಸಿಲ್ಲದ ಕೆಲವು ವಿಷಯಗಳಿರುತ್ತವೆ.

(ii) ರುಜುವಾತಿಗೆ ಅವಕಾಶವಿಲ್ಲದ ವಿಷಯಗಳಿರುತ್ತವೆ.

೩. (i)ರ ಅಡಿಯಲ್ಲಿ ಅವನ  ಹೊಣೆ ಹಗುರವಾಗುತ್ತದೆ. (ಕಡಿಮೆಯಾಗುತ್ತದೆ) ಆದರೆ

(ii)ರ ಅಡಿಯಲ್ಲಿ ಅವನ ಹೊಣೆ ಅಧಿಕವಾಗುತ್ತದೆ.

# ರುಜುವಾತಿನ ಹೊಣೆ

## (i) ಕಾನೂನು ಮೂಲಕ ರುಜುವಾತು ಅಗತ್ಯಪಡಿಸಿಲ್ಲದ ವಿಷಯಗಳು

೧. ಕಾನೂನು ಮೂಲಕ ರುಜುವಾತು ಅಗತ್ಯಪಡಿಸಿಲ್ಲದ ವಿಷಯಗಳು ಮೂರು ಶೀರ್ಷಿಕೆಗಳಲ್ಲಿ ಬರುತ್ತವೆ;

೧. ನ್ಯಾಯಿಕವಾಗಿ ಗಮನಿಸಲಾದ ವಿಷಯಗಳು

೨. ಪಕ್ಷಕಾರರು ಅನುಮತಿಸಿದ ವಿಷಯಗಳು

೩. ಅಸ್ತಿತ್ವದ ಬಗ್ಗೆ ಕಾನೂನು ಪರಿಭಾವನೆ ಮಾಡಿದಂಥ ವಿಷಯಗಳು

### ನ್ಯಾಯಿಕವಾಗಿ ಗಮನಿಸಲಾದ ವಿಷಯಗಳು

೧. ೫೬ ಮತ್ತು ೫೭ ಕಲಮುಗಳು ನ್ಯಾಯಿಕವಾಗಿ ಗಮನಿಸಲಾದ ವಿಷಯಗಳನ್ನು ಕುರಿತು ವ್ಯವಹರಿಸುತ್ತವೆ. ೫೭ನೆಯ ಕಲಮಿನಲ್ಲಿ ನ್ಯಾಯಿಕ ಗಮನವನ್ನು ತೆಗೆದುಕೊಳ್ಳಬೇಕಾದ ವಿಷಯಗಳ ಪಟ್ಟಿ ಮಾಡಲಾಗಿದೆ.

೫೬ನೇ ಕಲಮಿನ ಪ್ರಕಾರ ಯಾವ ಸಂಗತಿಯ ಬಗ್ಗೆ ನ್ಯಾಯಾಲಯವು ನ್ಯಾಯಿಕ ಗಮನ ತೆಗೆದುಕೊಳ್ಳುವುದೋ ಆ ಸಂಗತಿಯನ್ನು ಸಾಕ್ಷ್ಯದ ಮೂಲಕ ರುಜುವಾತು ಮಾಡಬೇಕಾಗಿಲ್ಲ. ಯಾವ ಸಂಗತಿಯು ೫೭ನೇ ಕಲಮಿನ ಅಡಿಯಲ್ಲಿ ಬರುವ ವಿಷಯಗಳ ಪೈಕಿ ಯಾವುದೇ ಒಂದರ ಅಡಿಯಲ್ಲಿ ಬರುವುದೋ ಮತ್ತು ಯಾವುದರ ಬಗ್ಗೆ ನ್ಯಾಯಿಕ ಗಮನವನ್ನು ಅಗತ್ಯವಾಗಿ ತೆಗೆದುಕೊಳ್ಳತಕ್ಕದ್ದೋ ಆ ಸಂಗತಿಯನ್ನು ರುಜುವಾತು ಮಾಡಲು ಸಾಕ್ಷ್ಯವನ್ನು ಒದಗಿಸುವ ಭಾರದಿಂದ ಪಕ್ಷಕಾರನಿಗೆ ಬಿಡುಗಡೆಯುಂಟು.

೨. ಈ ಕಲಮುಗಳಿಗೆ ತತ್ವ: ಕೆಲವು ವಿಷಯಗಳು ಅತ್ಯಂತ ಕುಖ್ಯಾತವಾಗಿದ್ದು, ಸ್ಪಷ್ಟವಾಗಿ ಸ್ಥಾಪಿತವಾಗಿರುವ ಕಾರಣ, ಅವುಗಳನ್ನು ಸಾಕ್ಷ್ಯ ಮೂಲಕ ರುಜುವಾತು ಮಾಡಬೇಕು ಎಂದು ಆಗ್ರಹಪಡಿಸುವ ಅಗತ್ಯವಿರುವುದಿಲ್ಲ.

**ದೃಷ್ಟಾಂತಗಳು:**

೧. ಹಗೆತನದ ಪ್ರಾರಂಭ ಮತ್ತು ಮುಂದುವರಿಕೆ.

೨. ದೇಶದ ಭೌಗೋಲಿಕ ವಿಭಜನೆ.

ಈ ಸಂಗತಿಗಳು ಅತಿಶಯವಾಗಿ ಕುಖ್ಯಾತವಾದ ಸಂಗತಿಗಳಾಗಿರುವ ನಿಮಿತ್ತ ಸಾಕ್ಷ್ಯ ಮೂಲಕ ರುಜುವಾತು ಅನಗತ್ಯವಾಗುತ್ತದೆ.

೩. ೫೭ನೇ ಕಲಮಿನಲ್ಲಿ ಪಟ್ಟಿ ಮಾಡಲಾದ ವಿಷಯಗಳು.

**(i) ಕಾನೂನು ಬಲವಿರುವ ವಿಷಯಗಳು:**

ಅನೇಕ ಅಧಿನಿಯಮಗಳು, ಅದರ ಉಪಬಂಧಗಳನ್ನು ಜಾರಿಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಲು ಸ್ಥಳೀಯ ಸರ್ಕಾರಕ್ಕೆ ಅಧಿಕಾರ ನೀಡುತ್ತವೆ ಮತ್ತು ಅಂಥ ನಿಯಮಗಳು ಕಾನೂನು ಬಲವನ್ನು ಅಂದರೆ ಭಾರತ ಸರ್ಕಾರದ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಬಲವನ್ನು ಹೊಂದಿರತಕ್ಕದ್ದು ಎಂದು ಘೋಷಿಸುತ್ತವೆ. ಅಂಥ ನಿಯಮಗಳು ಈ ಪ್ರಕರಣದ ವ್ಯಾಪ್ತಿಯಲ್ಲಿ ಬರುತ್ತವೆ.

೨. ಕಾನೂನು ಬಲವಿರುವ ನಿಯಮ ಮತ್ತು ಕಾನೂನಿನ ಮೂಲವಾಗಿರುವ ರೂಢಿ ಇವುಗಳ ವ್ಯತ್ಯಾಸವನ್ನು ಗುರುತಿಸಬೇಕು. ಹಿಂದೂ ಕಾನೂನಿನ ಅಧಿಕಾಂಶ ರೂಢಿಯನ್ನು ಆಧರಿಸಿರುತ್ತದೆ. ಆದರೆ ನ್ಯಾಯಾಲಯವು ರೂಢಿಯ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳುವುದಿಲ್ಲ. ರೂಢಿಯ ಮೇಲೆ ಅವಲಂಬಿಸುವ ಪಕ್ಷಕಾರನು ಅಂಥ ರೂಢಿಯ ಅಸ್ತಿತ್ವವನ್ನು ರುಜುವಾತು ಮಾಡಬೇಕು. ಪಕ್ಷಕಾರನು ರೂಢಿಯ ಅಸ್ತಿತ್ವವನ್ನು ರುಜುವಾತುಪಡಿಸಿದ ತರುವಾಯ, ನ್ಯಾಯಾಲಯವು, ಆ ರೂಢಿಯು ಸಿಂಧುವಾದ ರೂಢಿ ಎಂಬ ನಿರ್ಣಯಕ್ಕೆ ಬಂದರೆ ಮಾತ್ರವೇ ಆ ರೂಢಿಯನ್ನು ಜಾರಿಗೊಳಿಸುತ್ತದೆ.

೩. ನ್ಯಾಯಾಲಯವು ಕೆಲವು ರೂಢಿಗಳ ರುಜುವಾತಿಗೆ ಸಾಕ್ಷ್ಯವನ್ನು ಅಗತ್ಯಪಡಿಸುವುದಿಲ್ಲ. ಅಂಥ ಕೆಲವು ರೂಢಿಗಳು ಇರುವುದು ನಿಜವೇ. ಆದರೆ ಅದು ನ್ಯಾಯಾಲಯವು ನ್ಯಾಯಿಕ ಗಮನ ತೆಗೆದುಕೊಳ್ಳಲು ಬದ್ಧವಾಗಿದೆ ಎಂಬ ಕಾರಣಕ್ಕಾಗಿ ಅಲ್ಲ. ನ್ಯಾಯಾಲಯಕ್ಕೆ ಔಪಚಾರಿಕ ರುಜುವಾತಿನ ಅಗತ್ಯವಿಲ್ಲ. ಏಕೆಂದರೆ ಪೂರ್ವನಿದರ್ಶನದ ನಿಯಮದ ಅಡಿಯಲ್ಲಿ, ನ್ಯಾಯಾಲಯವು ರೂಢಿಯನ್ನು ಎತ್ತಿಹಿಡಿಯಲು ಬದ್ಧವಾಗಿರುತ್ತದೆ. ಅಂದರೆ ಯಾವ ನ್ಯಾಯಾಲಯಕ್ಕೆ ಅದು ಅಧೀನವಾಗಿರುವುದೋ ಆ ನ್ಯಾಯಾಲಯದ ನಿರ್ಣಯ ಮೂಲಕ ಆ ರೂಢಿಯ ಅಸ್ತಿತ್ವ ಮತ್ತು ಸಿಂಧುತ್ವಕ್ಕೆ ಮನ್ನಣೆ ದೊರೆತಿರುತ್ತದೆ.

**(ii) ಶಾಸನ (ಪರಿನಿಯಮ) (Statutes):**

ಸಂಸತ್ತಿನಿಂದ ಅಂಗೀಕರಿಸಲಾದ ಪರಿನಿಯಮಗಳು ಸಾಮಾನ್ಯ ಅಥವಾ ವಿಶೇಷ ಪರಿನಿಯಮ ಗಳಾಗಿರುತ್ತವೆ.

ಸಾಮಾನ್ಯ ಪರಿನಿಯಮವು ಅದರ ಅನ್ವಯನದಲ್ಲಿ ಸಾರ್ವತ್ರಿಕವಾಗಿರುತ್ತದೆ ಮತ್ತು ಎಲ್ಲ ವ್ಯಕ್ತಿಗಳಿಗೆ ಮತ್ತು ಎಲ್ಲ ಕ್ಷೇತ್ರಗಳಿಗೆ ವ್ಯಾಪ್ತವಾಗುತ್ತದೆ.

ವಿಶೇಷ ಪರಿನಿಯಮವು ಸ್ಥಳೀಯ ಅಥವಾ ವೈಯಕ್ತಿಕವಾಗಿರುತ್ತದೆ ಮತ್ತು ವಿಶಿಷ್ಟ ವ್ಯಕ್ತಿಗಳ ಮೇಲೆ ಮತ್ತು ಖಾಸಗಿ ಸಂಸ್ಥೆಗಳ ಮೇಲೆ ಜಾರಿಯಾಗುತ್ತದೆ.

೨. ಸಂಸತ್ತಿನ ಅಧಿನಿಯಮಗಳು, ತದ್ವಿರುದ್ಧವಾಗಿ ಅದರಲ್ಲಿ ಘೋಷಿಸಲಾಗಿದ್ದ ಹೊರತು, ಸಾರ್ವಜನಿಕ ಅಧಿನಿಯಮಗಳಾಗಿರುತ್ತವೆ.

*೧೪ Vict. c.೨೧ ೧೩ನೇ ಕಲಮು*

೩. ಎಲ್ಲ ಸಾರ್ವಜನಿಕ ಅಧಿನಿಯಮಗಳ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳಬೇಕು. ಯಾವುದೇ ಖಾಸಗಿ ಅಧಿನಿಯಮದಲ್ಲಿ ನ್ಯಾಯಾಲಯವು ಅದರ ಬಗ್ಗೆ ನ್ಯಾಯಿಕ ಗಮನ ತೆಗೆದುಕೊಳ್ಳಬೇಕು ಎಂಬ ನಿರ್ದೇಶನ ಇದ್ದರೆ ಮಾತ್ರ ಹಾಗೆ ಗಮನ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಖಾಸಗಿ ಅಧಿನಿಯಮಗಳ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳಲು ನ್ಯಾಯಾಲಯಗಳು ಬದ್ಧವಾಗಿಲ್ಲ. ಹಾಗೆ ಖಾಸಗಿ ಅಧಿನಿಯಮದಲ್ಲಿ ನಿರ್ದೇಶನ ಇಲ್ಲದಿದ್ದರೆ, ಪಕ್ಷಕಾರನು, ತಾನು ಅವಲಂಬಿಸಿರುವ ಖಾಸಗಿ ಅಧಿನಿಯಮವು ಸಂಸತ್ತಿನ ಅಧಿನಿಯಮ ಎಂದು ರುಜುವಾತು ಮಾಡಬೇಕು.

**(iii) ಇಂಡಿಯನ್ ಆರ್ಟಿಕಲ್ಸ್ ಆಫ್ ವಾರ್**

ಇವು ಹಿಸ್ ಮ್ಯಾಜೆಸ್ಟಿಯ ಇಂಡಿಯನ್ ಆರ್ಮಿನಲ್ಲಿರುವ ದೇಶೀಯ ಅಧಿಕಾರಿಗಳು, ಸೈನಿಕರು ಮತ್ತು ಇತರ ವ್ಯಕ್ತಿಗಳ ಸಲುವಾಗಿರುವ ಶಿಸ್ತು ನಿಯಮಗಳು. ಇವು ೧೯೧೧ರ ಭಾರತೀಯ ಸೇನಾ ಅಧಿನಿಯಮ ಇದರಲ್ಲಿ ಒಳಗೊಂಡಿರುತ್ತವೆ.

**(iv) ಸಂಸತ್ತು ಮತ್ತು ಪರಿಷತ್ತಿನ ವ್ಯವಹರಣೆಗಳ ಕ್ರಮ**

೧. ವ್ಯವಹರಣೆಗಳು ಮತ್ತು ವ್ಯವಹರಣೆಗಳ ಕ್ರಮ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು.

೨. ನ್ಯಾಯಾಲಯವು ವ್ಯವಹರಣೆಗಳ ಕ್ರಮದ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳಬೇಕೇ ಹೊರತು ವ್ಯವಹರಣೆಗಳ ಬಗ್ಗೆ ಅಲ್ಲ.

**ಪರರಾಷ್ಟ್ರ**

ನ್ಯಾಯಾಲಯವು ಹಿಸ್ ಮ್ಯಾಜೆಸ್ಟಿಯು ಅಥವಾ ಗವರ್ನರ್ ಜನರಲ್ ಇನ್ ಕೌನ್ಸಿಲ್ ಒಂದು ಪರರಾಷ್ಟ್ರಕ್ಕೆ ಮನ್ನಣೆ ಕೊಟ್ಟಿರಲಿ ಅಥವಾ ಇಲ್ಲದಿರಲಿ ಆ ಬಗ್ಗೆ ನ್ಯಾಯಿಕ ಗಮನ ತೆಗೆದುಕೊಳ್ಳಬೇಕು.

**ಯುದ್ಧ–ಸ್ಥಿತಿ**

ಪರರಾಷ್ಟ್ರಗಳ ನಡುವೆ ಅಸ್ತಿತ್ವದಲ್ಲಿರುವ ಯುದ್ಧ–ಸ್ಥಿತಿಯ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳ ಬೇಕಾಗಿಲ್ಲ.

**ಭೂಮಿ ಅಥವಾ ಸಾಗರದ ಮೇಲೆ ಮಾರ್ಗ ನಿಯಮಗಳು ಕೊನೆಯ ಪ್ಯಾರಾದ ಪರಿಣಾಮ:**

೧. ನ್ಯಾಯಾಲಯಗಳು ಯಾವ ವಿಷಯಗಳ ಬಗ್ಗೆ ನ್ಯಾಯಿಕ ಗಮನ ತೆಗೆದುಕೊಳ್ಳಲು ಬದ್ಧವಾಗಿರುತ್ತವೆಯೋ ಆ ಬಗ್ಗೆ ಕೆಲವು ಪರಿಸ್ಥಿತಿಯಲ್ಲಿ ಗಮನ ತೆಗೆದುಕೊಳ್ಳಲು ನಿರಾಕರಿಸಬಹುದು.

೨. ನ್ಯಾಯಾಲಯಕ್ಕೆ ನ್ಯಾಯಿಕ ಗಮನ ತೆಗೆದುಕೊಳ್ಳುವಲ್ಲಿ ನೆರವಾಗಲು ಅಗತ್ಯ ಸಾಮಗ್ರಿಯನ್ನು ಹಾಜರುಪಡಿಸಲು ಬದ್ಧನಾಗಿರುತ್ತಾನೆ.

**ದೃಷ್ಟಾಂತಗಳು**

ಒಂದು ಉದ್ಘೋಷಣೆಯ ಬಗ್ಗೆ ನ್ಯಾಯಾಲಯವು ನ್ಯಾಯಿಕ ಗಮನವನ್ನು ತೆಗೆದುಕೊಳ್ಳಬೇಕೆಂದು ಪಕ್ಷಕಾರನು ಇಚ್ಛಿಸಿದರೆ, ಅವನು ರಾಜಪತ್ರದ (ಗೆಜೆಟ್) ಪ್ರತಿಯನ್ನು ಹಾಜರುಪಡಿಸಬೇಕು.

**ರುಜುವಾತಿನ ವಿಧಾನ**

೧. ರುಜುವಾತಿನ ವಿಧಾನಕ್ಕೆ ಸಂಬಂಧಿಸಿದ ಸಾಮಾನ್ಯ ನಿಯಮವನ್ನು ಕೆಳಕಂಡಂತೆ ನಿರೂಪಿಸಬಹುದು:

ಕೆಳಕಂಡ ಬಗೆಯ ವ್ಯಕ್ತಿಗಳು ಸಾಕ್ಷ್ಯವನ್ನು ಕೊಡಬೇಕು ಎಂದು ಕಾನೂನು ಅಗತ್ಯಪಡಿಸುತ್ತದೆ. ಎಂದರೆ,

(i) ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿ.

(ii) ಸಾಕ್ಷಿದಾರನಾಗಿರಲು ಕಾನೂನು ಸಮ್ಮತವಾಗಿ ಸಕ್ಷಮನಾಗಿರುವವನು.
(iii) ಪ್ರಮಾಣ ಅಥವಾ ಪ್ರತಿಜ್ಞೆಯ ಮೇಲೆ ಸಾಕ್ಷ್ಯ ಕೊಡುವವನು.
(iv) ಪರೀಕ್ಷೆಯ ಯಥಾಕ್ರಮದಲ್ಲಿ ಸಾಕ್ಷ್ಯ ಕೊಡುವವನು.
(v) ಸಂಗತಿಗಳಿಗೆ ಸಂಬಂಧಿಸಿದಂತೆ ವಿರೋಧಕ್ಕೆ ಒಳಪಟ್ಟು.
(vi) ಸತ್ಯಸಂಧತೆಯ (ಪ್ರಾಮಾಣಿಕತೆ) ಬಗ್ಗೆ ಅಪನಂಬಿಕೆ.

**I. ನ್ಯಾಯಾಲಯದಲ್ಲಿ ಹಾಜರಿ**

೧. ನ್ಯಾಯಾಲಯದಲ್ಲಿ ಹಾಜರಾಗಿ ನ್ಯಾಯದ ಯಥಾಯೋಗ್ಯ ಆಡಳಿತಕ್ಕೆ ಅಗತ್ಯವಾಗಬಹುದಾದಂತೆ ತಮ್ಮ ತಿಳಿವಳಿಕೆಗೆ ಬರುವಂಥ ಸಂಗತಿಗಳ ಬಗ್ಗೆ ಸಾಕ್ಷ್ಯ ಕೊಡುವುದು ನಾಗರಿಕರ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯವು, ಹಿಂದಿನ ಕಾಲದಿಂದಲೂ ಮನ್ನಣೆ ಪಡೆದ ಮತ್ತು ಸಾಮಾನ್ಯ ಕಾನೂನು ದ್ವಾರಾ ಜಾರಿಗೊಳಿಸಲಾಗುವ ಕರ್ತವ್ಯ.

೨. ಸಾಕ್ಷಿಗಳ ಹಾಜರಿಯನ್ನು ಒತ್ತಾಯಿಸುವ ಹಕ್ಕು ಸಾಮಾನ್ಯ ಕಾನೂನು ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಆನುಷಂಗಿಕವಾದ ಹಕ್ಕು. ಮತ್ತು ಈ ಹಕ್ಕನ್ನು ನ್ಯಾಯ ನಿರ್ಣಾಯಕರಂಥ ಅಧಿಕಾರಿಗಳಿಗೆ ಈ ಅಧಿಕಾರವನ್ನು ಈ ಪರಿನಿಯಮಗಳ ದ್ವಾರಾ ಪ್ರದಾನ ಮಾಡಲಾಗಿದೆ. ಯಾವುದೇ ದಾವೆಯನ್ನು ವಿಚಾರಣೆ ಮಾಡಿ ನಿರ್ಧರಿಸಲು ಅಧಿಕಾರ ಹೊಂದಿರುವ ಪ್ರತಿಯೊಂದು ನ್ಯಾಯಾಲಯವು, ಸಾಮಾನ್ಯ ಕಾನೂನು ದ್ವಾರಾ, ವಿವಾದದಲ್ಲಿರುವ ಎಲ್ಲ ಸಂಗತಿಗಳ ಎಲ್ಲ ಪರ್ಯಾಪ್ತ ರುಜುವಾತನ್ನು ಒದಗಿಸುವಂತೆ ಕೇಳುವ ಅಂತರ್ನಿಹಿತ ಅಧಿಕಾರ ಹೊಂದಿರುತ್ತದೆ ಮತ್ತು ಆ ಉದ್ದೇಶಕ್ಕಾಗಿ, ತನ್ನ ಮುಂದೆ ಸಾಕ್ಷಿಗಳ ಕರೆಯುವ ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವ ಅಧಿಕಾರವನ್ನು ಹೊಂದಿರುತ್ತದೆ.

೩. ಯಥಾ ರೀತಿ ಮತ್ತು ಸಮಂಜಸವಾಗಿ 'ಸಬ್‌ಪೊನಿಯಾ'ವನ್ನು ಜಾರಿಮಾಡಿದ ಅನಂತರವೂ ಹಾಜರಾಗಿ ಸಾಕ್ಷ್ಯ ಕೊಡಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ ನ್ಯಾಯಾಲಯ ನಿಂದನೆ ಆಗುತ್ತದೆ.

೪. ಸಾಕ್ಷ್ಯ ಅಧಿನಿಯಮದಲ್ಲಿ, ಸಾಕ್ಷ್ಯವನ್ನು ಕೊಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಹಾಜರಿಯನ್ನು ಒತ್ತಾಯಿಸುವ ಬಗ್ಗೆ ಆದೇಶಿಕೆಯನ್ನು ಒದಗಿಸಿರುವುದಿಲ್ಲ. ಸಿವಿಲ್ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಗಳಲ್ಲಿ ಆ ಬಗ್ಗೆ ವ್ಯವಸ್ಥೆ ಮಾಡಲಾಗಿದೆ.

೫. ಈ ಕೆಳಕಂಡ ವಿಷಯಗಳ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

(i) ಸಾಕ್ಷಿದಾರರನ್ನು ಸಮನು ಮಾಡುವುದು:
ಸಿವಿಲ್ ಪ್ರ. ಸಂಹಿತೆ O.XII
ಕ್ರಿ. ಪ. ಸಂಹಿತೆ ೬೮–೭೪ (ಸಮನ್ಸ್‌ಗಳು)
೯೦–೯೩ (ಆದೇಶಿಕೆ(ಪ್ರಾಸೆಸ್)ಯನ್ನು ಕುರಿತ ಇತರ ನಿಯಮಗಳು)
೩೨೮ (ಜ್ಯೂರರ್ ಅಥವಾ ಅಸೆಸ್ಸರ್ ಮೇಲೆ ಸಮನು)
೨೪೪ (ಸಮನು ಪ್ರಕರಣಗಳಲ್ಲಿ ಆದೇಶಿಕೆ ಹೊರಡಿಸುವುದು)
೯೫ಎ (ವಾರಂಟ್ ಪ್ರಕರಣಗಳಲ್ಲಿ ಸಮನು ಹೊರಡಿಸುವುದು)

೨೫೬ (– – –)

೨೫೭ (.....)

೫೪೦ (ಹಾಜರುಪಡಿಸಲಾದ ವ್ಯಕ್ತಿಯ ತನಿಖೆ ಮಾಡಿ ಮುಖ್ಯ ಸಾಕ್ಷಿಯನ್ನು ಕರೆಯುವ ಅಧಿಕಾರ)

(ii) ದಸ್ತಾವೇಜುಗಳನ್ನು ಮತ್ತು ಇತರ ವಸ್ತುಗಳನ್ನು ಹಾಜರುಪಡಿಸುವುದು.

ಸಿವಿಲ್ ಪ್ರ. ಸಂಹಿತೆ O.XI.XVI

ಕ್ರಿಮಿನಲ್ ಪ್ರ. ಸಂಹಿತೆ ೯೪–೯೫ (ದಸ್ತಾವೇಜುಗಳನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸಲು ಸಮನು)

೯೬–೯೯ರ (ಸರ್ಚ್ ವಾರೆಂಟುಗಳು)

೪೮೫ (ಹಾಜರುಪಡಿಸಲು ನಿರಾಕರಿಸಿದುದಕ್ಕೆ ಪರಿಣಾಮಗಳು)

(iii) ಸಾಕ್ಷಿದಾರರ ವೆಚ್ಚಗಳು

ಸಿವಿಲ್ ಪ್ರ. ಸಂ. O.XVIR ೨.೪.

ಕ್ರಿಮಿನಲ್ ಪ್ರ. ಸಂ. ೨೪೪, ೨೫೭

(iv) ಕ್ರಿಮಿನಲ್ ಪ್ರಕರಣಗಳಲ್ಲಿ ಫಿರ್ಯಾದುದಾರರಿಗೆ ಮತ್ತು ಸಾಕ್ಷಿದಾರರಿಗೆ ಪೊಲೀಸರ ನಿಗ್ರಹದಿಂದ ಸ್ವಾತಂತ್ರ್ಯ.

ಕ್ರಿಮಿನಲ್ ಪ್ರ. ಸಂ. ೧೭೧

(v) ಕ್ರಿಮಿನಲ್ ಪ್ರಕರಣಗಳಲ್ಲಿ ಫಿರ್ಯಾದುದಾರರ ಮತ್ತು ಸಾಕ್ಷಿದಾರರ ಹಾಜರಾತಿಯ ಬಗ್ಗೆ ಮುಚ್ಚಳಿಕೆ.

ಕ್ರಿಮಿನಲ್ ಪ್ರ. ಸಂ. ೨೧೭, ೧೭೦

ಟಿಪ್ಪಣಿ– ಸಿವಿಲ್ ಪ್ರಕರಣಗಳಲ್ಲಿ ಈ ಬಗ್ಗೆ ಉಪಬಂಧವಿಲ್ಲ.

(vi) ಸಿವಿಲ್ ಪ್ರಾಸೆಸ್ ಅಡಿಯಲ್ಲಿ ಸಾಕ್ಷಿದಾರರಿಗೆ ದಸ್ತಗಿರಿಯಿಂದ ವಿನಾಯಿತಿ.

ಟಿಪ್ಪಣಿ– ಕ್ರಿಮಿನಲ್ ಪ್ರಾಸೆಸ್ ವಿರುದ್ಧ ರಕ್ಷಣೆ ಒದಗಿಸಿಲ್ಲ.

೬. ಸಾಕ್ಷಿದಾರರನ್ನು ಸಮನು ಮಾಡಲು ಉಪಬಂಧವಿರುವುದಲ್ಲದೆ, ಅವರ ಹಾಜರಿಯನ್ನು ಒತ್ತಾಯಿಸಲು ಸಹ ಉಪಬಂಧಗಳಿವೆ.

(೧) ಸಮನ್ ಅನ್ನು ಪಾಲಿಸದೆ ಗೈರು ಹಾಜರಾದರೆ ಅದು ಭಾರತ ದಂಡಸಂಹಿತೆಯ ೧೭೪, ೧೭೫ ಕಲಮುಗಳ ಪ್ರಕಾರ ಅಪರಾಧವಾಗುತ್ತದೆ.

(೨) ಸಮನ್ ಅನ್ನು ಪಾಲಿಸದೆ ಗೈರು ಹಾಜರಾದರೆ, ಪರಿಣಾಮವಾಗಿ ೭೫–೮೬ ಕಲಮುಗಳ ಅಡಿಯಲ್ಲಿ ದಸ್ತಗಿರಿ ವಾರಂಟು ಮತ್ತು ಆ ತರುವಾಯ ಕ್ರಿಮಿನಲ್ ಪ್ರ.ಸಂಹಿತೆಯ ೮೭–೮೯ ಕಲಮುಗಳ ಅಡಿಯಲ್ಲಿ ಉದ್ಘೋಷಣೆ ಮತ್ತು ಜಪ್ತಿ ಇವುಗಳಿಗೆ ಅವಕಾಶವಾಗುತ್ತದೆ.

(೩) ಅಷ್ಟೇ ಅಲ್ಲದೆ, ಗೈರುಹಾಜರಾದರೆ, ಸಾಕ್ಷಿದಾರನು ೧೮೫೩ರ XIX ಅಧಿನಿಯಮದ (ಬಂಗಾಲದಲ್ಲಿ ಜಾರಿಯಲ್ಲಿರುವ) ೨೬ನೇ ಪ್ರಕರಣದ ಅಡಿಯಲ್ಲಿ ಮತ್ತು ೧೮೬೬ರ X ಅಧಿನಿಯಮದ (ಮುಂಬಯಿ ಮತ್ತು ಮದ್ರಾಸ್‌ನಲ್ಲಿರುವ) ೧೦ನೇ ಕಲಮಿನ ಅಡಿಯಲ್ಲಿ ಸಿವಿಲ್ ಕ್ರಮಕ್ಕೆ ಗುರಿಯಾಗಬೇಕಾಗಬಹುದು. *೨೪ W.R. ೭೨.*

೭. ಸಾಕ್ಷಿದಾರನಾಗಿ ಕರೆಯಲಾದ ವ್ಯಕ್ತಿಗಳು ವ್ಯಕ್ತಿಗತವಾಗಿ ಹಾಜರಾಗಬೇಕು ಎಂದು ಕಾನೂನು

ಅಗತ್ಯಪಡಿಸುವುದಾದರೂ, ಕೆಲವು ಪ್ರಕರಣಗಳಲ್ಲಿ ಗೈರುಹಾಜರಿಯನ್ನು ಮಾಫು ಮಾಡುವುದುಂಟು.

(i) ಕೆಲವು ನಿರ್ದಿಷ್ಟ ಪರಿಮಿತಿಗಳಲ್ಲಿ ವಾಸವಾಗಿಲ್ಲದಿರುವ ಕಾರಣ
ಸಿವಿಲ್ ಪ್ರ.ಸಂ. ೧೯

(ii) ಸಾಕ್ಷಿದಾರಳು ಪರ್ದಾನಶೀನ್ (ಘೋಷಾ) ಮಹಿಳೆ ಆಗಿರುವ ಕಾರಣ.
ಸಿವಿಲ್ ಪ್ರ. ಸಂ. ಪ್ರಕರಣ ೧೩೨

(iii) ಸಾಕ್ಷಿದಾರನು ರ್‍ಯಾಂಕಿನ (ವಿಶೇಷ ದರ್ಜೆಯ) ವ್ಯಕ್ತಿಯಾಗಿರುವ ಕಾರಣ
ಸಿವಿಲ್ ಪ್ರ.ಸಂ. ೧೩೩

**ಸಾಕ್ಷಿದಾರನು ಸಾಕ್ಷ್ಯವನ್ನು ಕೊಡಲು ಸಕ್ಷಮನಾಗಿರಲೇಬೇಕು**

೧. ಎರಡು ದೃಷ್ಟಿಕೋನಗಳಿಂದ ಒಬ್ಬ ವ್ಯಕ್ತಿಯ ಸಕ್ಷಮತೆಯನ್ನು ಪರಿಗಣಿಸಬಹುದು:

(೧) ಅವನ ಬೌದ್ಧಿಕ ಸಾಮರ್ಥ್ಯದ ದೃಷ್ಟಿಕೋನದಿಂದ

(೨) ಅವನ ಸತ್ಯತೆಯ ದೃಷ್ಟಿಕೋನದಿಂದ

**I. ಬೌದ್ಧಿಕ ಸಾಮರ್ಥ್ಯದ ದೃಷ್ಟಿಕೋನದಿಂದ ಸಕ್ಷಮತೆ**

೧. ೧೧೮ನೇ ಕಲಮಿನಲ್ಲಿ ಬೌದ್ಧಿಕ ದೃಷ್ಟಿಕೋನದಿಂದ ಸಕ್ಷಮತೆ ಈ ಪ್ರಶ್ನೆಯನ್ನು ಕುರಿತು ವ್ಯವಹರಿಸಲಾಗಿದೆ.

೨. ೧೧೮ನೇ ಕಲಮಿನಲ್ಲಿ ಅಧಿನಿಯಮಿಸಲಾದ ನಿಯಮವು ತಿಳಿವಳಿಕೆಯ ಶಕ್ತಿಯು ಸಕ್ಷಮತೆಗೆ ಏಕೈಕ ಪರೀಕ್ಷೆ ಎಂದು ಪರಿಗಣಿಸುವ ನಿಯಮ.

೩. ಪ್ರತಿಯೊಬ್ಬ ಸರ್ವಸಾಧಾರಣ ವ್ಯಕ್ತಿಯು ವಿಷಯವನ್ನು ತಿಳಿದುಕೊಳ್ಳುವ ಮತ್ತು ಅದರ ಮಹತ್ವವನ್ನು ಗ್ರಹಿಸುವ ಬೌದ್ಧಿಕ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಆದ್ದರಿಂದ ೧೧೮ನೇ ಕಲಮು ತಿಳಿವಳಿಕೆಯ ಕೊರತೆಯಿಂದ ಬಳಲುತ್ತಿರುವ ಹೊರತು, ಎಲ್ಲ ವ್ಯಕ್ತಿಗಳು ಬೌದ್ಧಿಕ ಸಾಮರ್ಥ್ಯವನ್ನು ಹೊಂದಿರುವ ನಿಮಿತ್ತ ಸಾಕ್ಷ್ಯವನ್ನು ಕೊಡಲು ಸಕ್ಷಮರಾಗಿರುತ್ತಾರೆ ಎಂದು ಘೋಷಿಸುತ್ತದೆ.

೪. ಆದ್ದರಿಂದ ಕ್ಷಮತೆಯ ಕಾನೂನು ವಾಸ್ತವವಾಗಿ ಅಕ್ಷಮತೆಯ ಕಾನೂನು ಆಗಿರುತ್ತದೆ. ಯಾವ ವ್ಯಕ್ತಿಯು ಅಕ್ಷಮನಲ್ಲವೋ ಅವನು ಸಕ್ಷಮನು.

೫. ಆದ್ದರಿಂದ, ಅಕ್ಷಮತೆ ಎಂದರೆ ತಿಳಿವಳಿಕೆಯ ಕೊರತೆ. ತಿಳಿವಳಿಕೆಯ ಕೊರತೆಯು ಈ ಕೆಳಕಂಡ ಸಂದರ್ಭಗಳಲ್ಲಿ ಕಂಡುಬರುತ್ತದೆ.

(i) ಎಳೆ ವಯಸ್ಸಿನವರು.

(ii) ಅತಿ ವೃದ್ಧರು.

(iii) ದೈಹಿಕ ಅಥವಾ ಮಾನಸಿಕ ಕಾಯಿಲೆ.

(iv) ಅದೇ ಬಗೆಯ ಯಾವುದೇ ಇತರ ಕಾರಣ.

**೬. ವ್ಯಾಖ್ಯಾನ:**

(i) ಎಳೆ ವಯಸ್ಸು ಅಥವಾ (ii) ಅತಿ ವೃದ್ಧಾಪ್ಯ– ಇವುಗಳನ್ನು ಪರಿಭಾಷಿಸಿಲ್ಲ.

ಏಳು ವರ್ಷದ ಹುಡುಗನು ಅಕ್ಷಮನಾಗಿರಲಿಕ್ಕಿಲ್ಲ. ಆದರೆ ೧೨ ವರ್ಷದವನು ಅಕ್ಷಮನಾಗಿರಬಹುದು. ಅಂದರೆ ೭ ವರ್ಷದವನಿಗೆ ತಿಳಿವಳಿಕೆ ಇದ್ದರೆ ಮತ್ತು ೧೨ ವರ್ಷದವನಿಗೆ ಇಲ್ಲದಿದ್ದರೆ ಎಂದು ಅರ್ಥ. ಹಾಗೆಯೇ ೬೦ ವರ್ಷದವನು ಅಕ್ಷಮನಾಗಿರಬಹುದು. ಆದರೆ ೮೦ ವರ್ಷದವನು ಅಕ್ಷಮನಾಗಿರಲಿಕ್ಕಿಲ್ಲ.

ವಯಸ್ಸು ಪರೀಕ್ಷೆಗೆ ಆಧಾರವಲ್ಲ. ಆಧಾರವೆಂದರೆ ತಿಳಿವಳಿಕೆ ಇದೆಯೆ, ಇಲ್ಲವೇ– ಅಷ್ಟೆ.

(iii) **ದೈಹಿಕ ಕಾಯಿಲೆ:**

ಒಬ್ಬ ಸಾಕ್ಷಿದಾರನು ತಿಳಿಯಲಾರದಷ್ಟು ಅಥವಾ ತಿಳಿದರೂ ಅದನ್ನು ವ್ಯಕ್ತಗೊಳಿಸಲಾಗದಷ್ಟು ವಿಪರೀತ ನೋವಿನಿಂದ ನರಳುತ್ತಿರಬಹುದು. ಅವನು ಮೂರ್ಛೆರೋಗದ ಆಘಾತಕ್ಕೆ ಒಳಗಾದವನಂತೆ, ಅಥವಾ ಅದೇ ರೀತಿಯಲ್ಲಿ ಪ್ರಜ್ಞಾಹೀನನಾಗಿರಬಹುದು. ಇಲ್ಲಿ ಸಹ, ಯಾವುದೇ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸಂಗತಿಯ ಪ್ರಶ್ನೆಯೆಂದರೆ, ಅವನು ತಿಳಿವಳಿಕೆಯ ಸಾಮರ್ಥ್ಯವನ್ನು ಕಳೆದುಕೊಳ್ಳುವಷ್ಟು ಮಟ್ಟಿಗೆ ದೈಹಿಕ ಕಾಯಿಲೆಯು ವಿಪರೀತವಾಗಿದೆಯೆ ಎಂಬ ಪ್ರಶ್ನೆ.

**(iii) ಮಾನಸಿಕ ಕಾಯಿಲೆ:**

೧. ಇದರಲ್ಲಿ ಹುಟ್ಟು ದಡ್ಡತನ ಮತ್ತು ಮನೋವಿಕಲನ ಸಂದರ್ಭವನ್ನು ಪರಿಕಲ್ಪಿಸಲಾಗಿದೆ. ಇಬ್ಬರೂ ಮಾನಸಿಕ ಕಾಯಿಲೆಯಿಂದ ಬಳಲುವವರು.

೨. ಹುಟ್ಟು ದಡ್ಡ ಎಂದರೆ ಹುಟ್ಟಿನಿಂದಲೇ ಅವಿವೇಕಿ. ತರ್ಕ ಸಂಗತವಾಗಿ ಯೋಚಿಸುವ ಸಾಮರ್ಥ್ಯ ಇಲ್ಲದವನು. ಮನೋವಿಕಲನು ವಿವೇಕಿಯಾಗಿ ಹುಟ್ಟಿರಬಹುದು. ಆಮೇಲೆ ಅವನು ತರ್ಕಸಂಗತವಾಗಿ ಯೋಚಿಸುವ ಸಾಮರ್ಥ್ಯವನ್ನು ಕಳೆದುಕೊಂಡಿರಬಹುದು.

೩. ಮನೋವಿಕಲನು ಏಕವಿಷಯದ ಮನೋವಿಕಲನೂ ಆಗಿರಬಹುದು ಅಥವಾ ತಾತ್ಕಾಲಿಕ ಮನೋವಿಕಲನಾಗಿರಬಹುದು. ಆದ್ದರಿಂದ, ಮನೋವಿಕಲ ಎಂಬ ಕಾರಣಕ್ಕಾಗಿ ಮಾತ್ರವೇ ಅವನು ಅಕ್ಷಮನಾಗಲಾರನು. ಮನೋವಿಕಲತೆ ಎಂದರೆ ತಿಳಿವಳಿಕೆಯ ಸಾಮರ್ಥ್ಯದ ಸರ್ವನಾಶವಲ್ಲ. ಸಾಮಾನ್ಯ ಮನೋವಿಕಲತೆ ಆಗಿದ್ದರೆ, ನಡುನಡುವೆ ಅವನ ಮನಸ್ಸು ತಿಳಿಯಾಗಬಹುದು. ಅಂದರೆ ಅಷ್ಟು ಸಮಯಕ್ಕೆ ವಿಕಲತೆ (ಹುಚ್ಚು) ಇಳಿದಿರಬಹುದು. ಅವನು ಏಕಮನೋವಿಕಲನಾಗಿದ್ದರೆ, ಇತರ ವಿಷಯಗಳ ಸಂಬಂಧದಲ್ಲಿ ಅವನ ತಿಳಿವಳಿಕೆಯು ಸ್ಪಷ್ಟವಾಗಿರಬಹುದು.

**ದೃಷ್ಟಾಂತಗಳು: ಆಂಶಿಕ ಮನೋವಿಕಲತೆ**

(೧) ಹುಚ್ಚಾಸ್ಪತ್ರೆಯಲ್ಲಿ (ಮನೋವಿಕಲಧಾಮ) ಹತ್ಯೆಯ ಚರ್ಚೆ

(೨) ಒಬ್ಬ ವ್ಯಕ್ತಿಯು ಮನೋವಿಕಲನಾದ ತನ್ನ ಸ್ನೇಹಿತನಾದವನ ಜತೆ ಸಂದರ್ಶನ ಮಾಡುವುದು, ಮತ್ತು ಆಗ ಅವನು ಸಮಯದ ಬಗ್ಗೆ ಟಿಪ್ಪಣಿ ಮಾಡುವುದು.

**ದೃಷ್ಟಾಂತಗಳು: ಏಕವಿಷಯ ಮನೋವಿಕಲರು**

(೧) ಆರ್. ವಿ. ಹಿಲ್ – ಹತ್ಯೆಯ ಅಪರಾಧಕ್ಕಾಗಿ ಹಿಲ್‌ನ ಅಧಿವಿಚಾರಣೆ ನಡೆಯಿತು. ಡೊನೆಲ್ಲಿ ಎಂಬಾತನು ಸಾಕ್ಷಿದಾರ–ಮನೋವಿಕಲ– ತನ್ನನ್ನು ಸುತ್ತುವರಿದಿರುವ ೨೦,೦೦೦ ಆತ್ಮಗಳು ತನ್ನ ಜತೆ

ಮಾತನಾಡುತ್ತಾ ಇರುತ್ತವೆ ಎಂಬ ಭ್ರಾಂತಿ.

ಹಾಗಿರುವಾಗ, ಮನೋವಿಕಲನು ಸಕ್ಷಮನಾಗಿರಬಹುದು. ವಿವರಣೆಯಲ್ಲಿ ಇದನ್ನು ಒಪ್ಪಿಕೊಳ್ಳಲಾಗಿದೆ.

(iv) ಯಾವುದೇ ಇತರ ಕಾರಣ:

ಅಂದರೆ ಒಬ್ಬ ವ್ಯಕ್ತಿಯು ತನ್ನ ತಿಳಿವಳಿಕೆ ಸಾಮರ್ಥ್ಯಕ್ಕೆ ಎರವಾಗುವಂತೆ ಮಾಡುವ ಯಾವುದೇ ಇತರ ಕಾರಣ.

ಉದಾ: ಕುಡಿದು ಅಮಲೇರಿರುವುದು (ಅಮಲಿನ ಸ್ಥಿತಿ).

ಈ ಅಸಮರ್ಥತೆಗಳ ಪೈಕಿ ಕೆಲವು ಕಾರಣದ ಜತೆ ಸಹವ್ಯಾಪಕವಾಗಿರುತ್ತವೆ. ಕಾರಣವನ್ನು ತೆಗೆದುಹಾಕಿದರೆ, ಸಾಕ್ಷಿದಾರನು ಸಕ್ಷಮನಾಗುವನು.

ಉದಾ: ನೋವು ನಿಂತರೆ.
ಅಮಲು ಇಳಿದರೆ.
ಮನೋವಿಕಲತೆಯು ಮರೆಯಾದರೆ.

ಸಾಕ್ಷಿದಾರನು ತಿಳಿವಳಿಕೆಯನ್ನು ಹೊಂದಿರುವನೆ ಇಲ್ಲವೆ ಎಂಬ ವಿಷಯವನ್ನು ನ್ಯಾಯಾಲಯವು ಸಾಕ್ಷಿದಾರನಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ನಿರ್ಧರಿಸುತ್ತದೆ.

## ಆಪಾದಿತನು ಸಾಕ್ಷಿದಾರನಾಗಿ

೧. ತಿಳಿವಳಿಕೆಯುಳ್ಳ ಎಲ್ಲ ವ್ಯಕ್ತಿಗಳು ಸಾಕ್ಷಿದಾರರಾಗಿ ಸಕ್ಷಮರಾಗಿರುವುದಾದರೂ, ಆ ನಿಯಮಕ್ಕೆ ಒಂದು ಅಪವಾದವುಂಟು. ಅಂದರೆ, ಆಪಾದಿತ ವ್ಯಕ್ತಿಯು, ಅವನ ಅಧಿವಿಚಾರಣೆಯಾಗುತ್ತಿರುವ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಪರೀಕ್ಷೆಗೆ ಗುರಿಯಾಗುವಂತಿಲ್ಲ.

ಕಲಮು ೧೧೯: ಅಂಥ ಸಾಕ್ಷಿದಾರನ ಪ್ರಕರಣವನ್ನು ಕುರಿತು ವ್ಯವಹರಿಸುತ್ತದೆ. ಆ ಪ್ರಕರಣವು ಅವನನ್ನು ಸಕ್ಷಮನಲ್ಲ ಎಂಬುದಾಗಿ ಘೋಷಿಸುವುದಿಲ್ಲ. ಇದಕ್ಕಲ್ಲದೆ, ಅದು ಅವನನ್ನು ಸಕ್ಷಮ ಎಂದು ಪರಿಗಣಿಸುತ್ತದೆ ಮತ್ತು ಅವನಿಗೆ ಯಾವುದೇ ರೀತಿಯ ಬರೆಹದ ಮೂಲಕ ಅಥವಾ ಬಹಿರಂಗ ನ್ಯಾಯಾಲಯದಲ್ಲಿ ಮಾಡಿದ ಸಂಜ್ಞೆಗಳ ಮೂಲಕ ಸಾಕ್ಷ್ಯ ಕೊಡಲು ಅನುಮತಿ ಕೊಡುತ್ತದೆ.

## ಸಾಕ್ಷಿದಾರನ ಪ್ರಾಮಾಣಿಕತೆಯ ದೃಷ್ಟಿಯಿಂದ ಅವನ ಸಕ್ಷಮತೆ

೧. ಜೀವನದ ಸಾಮಾನ್ಯ ವ್ಯವಹಾರಗಳಿಗಿಂತ, ನ್ಯಾಯಿಕ ವ್ಯವಹರಣೆಗಳಲ್ಲಿ ಒಬ್ಬ ವ್ಯಕ್ತಿಯು ಸತ್ಯವನ್ನು ಹೇಳದಂತೆ ಅವನನ್ನು ತಡೆಯುವ ಸಂದರ್ಭಗಳು ಅನೇಕವಾಗಿರುತ್ತವೆ, ಹೆಚ್ಚಾಗಿರುತ್ತವೆ. ಇದಕ್ಕೆ ಕಾರಣಗಳುಂಟು. ನ್ಯಾಯಿಕ ವ್ಯವಹರಣೆಗಳ ಪರಿಣಾಮವನ್ನು ತಿರಸ್ಕರಿಸುವಂತಿಲ್ಲ. ಆ ಪರಿಣಾಮಗಳು ಸಾಮಾನ್ಯ ಇತರ ಸಾಮಾನ್ಯ ವ್ಯವಹರಣೆಗಳಲ್ಲಿನ ಪರಿಣಾಮಗಳಿಗಿಂತ ಹೆಚ್ಚು ಕಠೋರವಾಗಿ ಬಂಧನಕಾರಿಯಾಗಿರುತ್ತವೆ. ಆ ಕಾರಣ, ಕಾನೂನು ಒಮ್ಮೆ ಒಂದು ಪ್ರಕರಣದಲ್ಲಿ ಬೌದ್ಧಿಕವಾಗಿ ಸಕ್ಷಮರಾದ ವ್ಯಕ್ತಿಗಳನ್ನು ಸಹ ಸಕ್ಷಮರಲ್ಲದವರನ್ನಾಗಿ ಮಾಡಿದ್ದುಂಟು.

೨. ಈ ಹಿಂದೆ, ಅಕ್ಷಮತೆಗೆ ಮಾನಸಿಕ ಅಶಕ್ತತೆಯ ಮಾತ್ರ ಆಧಾರವಾಗಿರಲಿಲ್ಲ, ಆದರೆ ಅಕ್ಷಮತೆಗೆ ಹಿತಾಸಕ್ತಿಯೂ ಆಧಾರವಾಗಿತ್ತು. ಕಾರಣವೆಂದರೆ ಹಿತಾಸಕ್ತಿಯುಳ್ಳ ವ್ಯಕ್ತಿಯು ಸತ್ಯವನ್ನು ಹೇಳಲಾರನು. ಆದ್ದರಿಂದ ಕೆಳಕಂಡ ವ್ಯಕ್ತಿಗಳು ಅಕ್ಷಮರು ಎಂದು ಪರಿಗಣಿಸಲಾಗಿತ್ತು.

೧. ದಾವೆಯ ಪಕ್ಷಕಾರರು.

೨. ಗಂಡ ಮತ್ತು ಹೆಂಡತಿ ಪರಸ್ಪರರ ವಿರುದ್ಧ.

೩. ಆಪಾದಿತನು ಸ್ವಂತದ ವಿರುದ್ಧ.

೪. ಸಹಾಪರಾಧಿ.

೩. ಕಾನೂನಿನ ಈ ನಿಲುವು ಈಗ ಬದಲಾಗಿದೆ. ತತ್ವವು ಪರಿವರ್ತನಗೊಂಡಿದೆ. ಸಕ್ಷಮತೆಯ ಅಥವಾ ಅಕ್ಷಮತೆಯ ಪ್ರಶ್ನೆಯು ವಿಶ್ವಾಸಾರ್ಹತೆಯ ಅಥವಾ ಅವಿಶ್ವಾಸಾರ್ಹತೆಯ ಪ್ರಶ್ನೆಯಾಗಿ ಪರಿವರ್ತನಗೊಂಡಿದೆ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯು ಸಾಕ್ಷ್ಯ ಕೊಡಲು ಸಕ್ಷಮನಾಗಿದ್ದಾನೆ. ಅವನು ಕೊಟ್ಟ ಸಾಕ್ಷ್ಯದ ಬಗ್ಗೆ ಅವನನ್ನು ನಂಬುವುದು ಅಥವಾ ನಂಬದಿರುವುದು ನ್ಯಾಯಾಲಯಕ್ಕೆ ಸೇರಿದ ವಿಷಯವಾಗಿದೆ.

೪. ಈ ಹೊಸ ತತ್ವವನ್ನು ೧೨೦ ಮತ್ತು ೧೩೩ ಕಲಮುಗಳಲ್ಲಿ ಸೇರಿಸಲಾಗಿದೆ.

## ಕಲಮು ೧೨೦

**I. ಸಿವಿಲ್ ವ್ಯವಹರಣೆಗಳು**

(i) ದಾವೆಯ ಪಕ್ಷಕಾರರು ಸಕ್ಷಮ ಸಾಕ್ಷಿದಾರರು

(ii) ದಾವೆಯ ಯಾರೇ ಪಕ್ಷಕಾರನ/ಳ ಗಂಡ ಮತ್ತು ಹೆಂಡತಿ ಸಕ್ಷಮ ಸಾಕ್ಷಿದಾರರು.

**II. ಕ್ರಿಮಿನಲ್ ವ್ಯವಹರಣೆಗಳು:**

ಆಪಾದಿತನ/ಳ ಹೆಂಡತಿ ಅಥವಾ ಗಂಡನು ಪರವಾಗಿ ಅಥವಾ ವಿರುದ್ಧ ಸಕ್ಷಮ ಸಾಕ್ಷಿದಾರರು.

## ಕಲಮು ೧೩೩

೧. ಈ ಕಲಮು ಸಹಾಪರಾಧಿಯ ಸಕ್ಷಮತೆಯನ್ನು ಕುರಿತು ವ್ಯವಹರಿಸುತ್ತದೆ. ಸಹಾಪರಾಧಿಯ ಸಾಕ್ಷ್ಯವು ಮೂರು ಕಾರಣಗಳಿಗಾಗಿ ಅವಿಶ್ವಾಸಾರ್ಹ ಎಂದು ನಿರ್ಣಯಿಸಲಾಗಿದೆ:

(i) ಸಹಾಪರಾಧಿಯು ತನ್ನ ಮೇಲಿಂದ ತಪ್ಪನ್ನು ಇನ್ನೊಬ್ಬನಿಗೆ ದಾಟಿಸಲು ಸುಳ್ಳು ಪ್ರಮಾಣ ಮಾಡುವ ಸಂಭವವುಂಟು.

(ii) ಸಹಾಪರಾಧಿಯು ಅಪರಾಧದಲ್ಲಿ ಭಾಗಿಯಾಗಿರುವ ಕಾರಣ, ಮತ್ತು ನೀತಿಭ್ರಷ್ಟ ವ್ಯಕ್ತಿಯಾಗಿರುವ ಕಾರಣ ಶಪಥದ ಮಹತ್ವವನ್ನು ತಿರಸ್ಕರಿಸುವ ಸಂಭವವುಂಟು.

iii) ಅಪರಾಧದಲ್ಲಿ ಭಾಗಿಯಾದವರ ವಿರುದ್ಧ ತನಗೆ ತಿಳಿದಿರುವ ಎಲ್ಲ ಸಂಗತಿಗಳನ್ನು ಬಹಿರಂಗಪಡಿಸಿದರೆ, ವಾಗ್ದಾನದ ಅಡಿಯಲ್ಲಿ, ಅಥವಾ ಪ್ರಾಸಿಕ್ಯೂಷನ್‌ಗೆ ಗುರಿಯಾಗಿರಲಿಕ್ಕಿಲ್ಲ ಎಂಬ ಆಸೆಯಿಂದ ಸಾಕ್ಷ್ಯವನ್ನು ಕೊಡುವನು.

೨. ಆದರೆ ಅವನ ಸಾಕ್ಷ್ಯವನ್ನು ಅಗತ್ಯತೆಯ ನಿಮಿತ್ತ ಅಂಗೀಕರಿಸಬೇಕಾಗುತ್ತದೆ. ಅನೇಕ ಸಲ ಅಂಥ ಸಾಕ್ಷ್ಯವನ್ನು ಅವಲಂಬಿಸದೆ ಮುಖ್ಯ ಅಪರಾಧಿಗಳನ್ನು ನ್ಯಾಯ(ಪ್ರಕ್ರಿಯೆಗೆ)ಕ್ಕೆ ಗುರಿಪಡಿಸಲು ಸಾಧ್ಯವಾಗುವುದಿಲ್ಲ.

## ಸಹಾಪರಾಧಿಗಳ ಮತ್ತು ಇತರ ವ್ಯಕ್ತಿಗಳ ಸಾಕ್ಷ್ಯದ ನಡುವಿನ ವ್ಯತ್ಯಾಸ

೧. ಸಹಾಪರಾಧಿಗಳ ಹೊರತಾದ ವ್ಯಕ್ತಿಗಳು ಸಕ್ಷಮರಾಗಿರುವರಷ್ಟೇ ಅಲ್ಲದೆ, ವಿಶ್ವಾಸಾರ್ಹರೂ ಆಗಿರುತ್ತಾರೆ. ಇದಕ್ಕೆ ವಿರುದ್ಧವಾಗಿ ಸಹಾಪರಾಧಿಯು ಸಕ್ಷಮನಾಗಿರುತ್ತಾನೆ, ಆದರೆ ವಿಶ್ವಾಸಾರ್ಹನಾಗಿರುವುದಿಲ್ಲ.

೨. ನ್ಯಾಯಾಧೀಶನ ಕಣ್ಣಿಗೆ ಸಾಕ್ಷಿದಾರರು ಅವಿಶ್ವಾಸಾರ್ಹರಾಗಿರಬಹುದು. ಆದರೆ ಕಾನೂನಿನ ದೃಷ್ಟಿಯಲ್ಲಿ ಅವರು ಅವಿಶ್ವಾಸಾರ್ಹರಲ್ಲ. ಸಹಾಪರಾಧಿಗೆ, ಕಾನೂನು ಮೂಲಕ ಶಾಸನಬದ್ಧ ಅವಿಶ್ವಾಸಾರ್ಹತೆಯನ್ನು ಲಗತ್ತಿಸಲಾಗಿರುತ್ತದೆ.

೩. ಈ ಶಾಸನಬದ್ಧ ಅವಿಶ್ವಾಸಾರ್ಹತೆಯು, ಸಾಕ್ಷ್ಯ ಅಧಿನಿಯಮದ ೧೧೪ನೇ ಕಲಮಿನಲ್ಲಿರುವ (ಬಿ) ದೃಷ್ಟಾಂತದ ಮೂಲಕ ಉದ್ಭವಿಸುತ್ತದೆ. ಅಧಿನಿಯಮದ ಮೂಲಕ ಪೂರ್ವಭಾವನೆಯನ್ನು ಪ್ರಧಾನ ಮಾಡಲಾಗಿರುತ್ತದೆ. ಅದನ್ನು ಖಂಡಿಸಬಹುದಾಗಿದ್ದರೂ, ಅದನ್ನು ಅಲಕ್ಷಿಸದಿರುವುದು ಕಾನೂನಿನ ಪ್ರಮಾದ ಆಗುತ್ತದೆ.

೪. ಈ ಶಾಸನಬದ್ಧ ಅವಿಶ್ವಾಸಾರ್ಹತೆಯನ್ನು ಲಗತ್ತಿಸುವುದಾದರೆ, ಸಾಕ್ಷಿದಾರನು ಸಹಾಪರಾಧಿಯೆ ಅಲ್ಲವೆ ಎಂಬುದನ್ನು ಅಗತ್ಯವಾಗಿ ನಿರ್ಧರಿಸಬೇಕಾಗುತ್ತದೆ. ಈ ಪದವನ್ನು ಪರಿಭಾಷಿಸಿಲ್ಲ.

i) ಸಹಾಪರಾಧಿ ಎಂದರೆ ಅಪರಾಧವನ್ನು ಎಸಗುವಲ್ಲಿ ಇನ್ನೊಬ್ಬನ ಅಥವಾ ಇನ್ನೊಬ್ಬರ ಜತೆ ಸಂಬಂಧ ಹೊಂದಿರುವ ವ್ಯಕ್ತಿ. ಆದರೆ ಅಪರಾಧದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರೂ ಸಹಾಪರಾಧಿಯಾಗುವುದಿಲ್ಲ. ಅಪರಾಧದ ಸ್ವಭಾವದ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಮತ್ತು ಸಹಾಪರಾಧದ ವ್ಯಾಪ್ತಿಯ ಮೇಲೆ ಸಹ ಬಹಳಷ್ಟು ಅವಲಂಬಿಸಿರುತ್ತದೆ.

ii) ಸಹಾಪರಾಧಿಯು ಅಪರಾಧದಲ್ಲಿ ತಪ್ಪಿತಸ್ಥ ಸಹವರ್ತಿ. ಅಥವಾ ಅಪರಾಧದ ಕೃತ್ಯದವರೆಗೂ ಆ ಸಂಬಂಧವನ್ನು ಉಳಿಸಿಕೊಂಡಿರುತ್ತಾನೆ. ಅಧಿವಿಚಾರಣೆಯಲ್ಲಿರುವ ಆಪಾದಿತನ ಜತೆ ಅವನನ್ನು ಸಹ ಕಾನೂನು ಸಮ್ಮತವಾಗಿ ಅಪರಾಧದ ಸಂಬಂಧವಿರುವಾತನು ಎಂದು ಸೂಚಿಸಬಹುದು.

## ೧೨೦ ಮತ್ತು ೧೩೩ ಕಲಮುಗಳ ಪರಿಣಾಮ

೧. ಈ ಕಲಮುಗಳು ಸಾಕ್ಷ್ಯವನ್ನು ಕೊಡಲು ಸಕ್ಷಮರಾದ ವಿಶಿಷ್ಟ ವ್ಯಕ್ತಿಗಳ ಪಟ್ಟಿಯನ್ನು ಒದಗಿಸುತ್ತದೆ. ಪ್ರಶ್ನೆಯೆಂದರೆ ಉಳಿದವರು ಸಕ್ಷಮರಲ್ಲವೆ? ಈ ವ್ಯಕ್ತಿಗಳು ಮಾತ್ರ ಸಕ್ಷಮರು, ಉಳಿದವರು ಸಕ್ಷಮರಲ್ಲ ಎಂಬ ಅರ್ಥದಲ್ಲಿ ಈ ಕಲಮುಗಳನ್ನು ತಿಳಿದುಕೊಳ್ಳಬೇಕಾಗಿಲ್ಲ. ಈ ಕಲಮುಗಳ ಪರಿಣಾಮ ಎಂದರೆ ೧೨೦ ಮತ್ತು ೧೩೩ ಕಲಮುಗಳಲ್ಲಿ ನಮೂದಿಸಲಾದ ವ್ಯಕ್ತಿಗಳೂ ಸೇರಿ ಎಲ್ಲ ವ್ಯಕ್ತಿಗಳು ಸಕ್ಷಮರಾಗಿರುತ್ತಾರೆ.

೨. ಈ ವರ್ಗಗಳ ಬಗ್ಗೆ ನಿರ್ದಿಷ್ಟವಾಗಿ ವ್ಯವಹರಿಸುವುದು ಯಾಕೆ ಅಗತ್ಯವಾಯಿತು ಎಂದರೆ, ಈ ಹಿಂದಿನ ಕಾನೂನುಗಳ ಅಡಿಯಲ್ಲಿ ಅಕ್ಷಮರಾಗಿದ್ದರು. ಅವರ ಮೇಲಣ ನಿಷೇಧವನ್ನು ತೆಗೆದುಹಾಕಬೇಕಾಗಿತ್ತು. ಅದು ಕಾರಣ ಅವುಗಳಿಗೆ ಸಂಬಂಧಪಟ್ಟ ಈ ಉಪಬಂಧಗಳು ಇತರ ವರ್ಗದ ವ್ಯಕ್ತಿಗಳನ್ನು ಈಗಾಗಲೇ ಸಕ್ಷಮರು ಎಂದು ಪರಿಗಣಿಸಲಾಗಿತ್ತು. ಅವರ ಬಗ್ಗೆ ಏನನ್ನಾದರೂ ಹೇಳುವುದು ಅನಗತ್ಯವಾಗಿತ್ತು.

೩. ೩೨೦ ಮತ್ತು ೧೩೩ ಕಲಮು ಪರಿಣಾಮವೆಂದರೆ

(೧) ದಾವೆಗಳ ಪಕ್ಷಕಾರರು.

(೨) ಗಂಡಂದಿರು ಮತ್ತು ಹೆಂಡಂದಿರು.

(೩) ಸಹಾಪರಾಧಿಗಳು.

ಇವರುಗಳು ಸಕ್ಷಮ ಸಾಕ್ಷಿಗಳಾಗಿರುವುದಲ್ಲದೆ

(೧) ಜ್ಯೂರರುಗಳು ಮತ್ತು ಅಸೆಸರುಗಳು– ಕಲಮು ೨೯೪, ಕ್ರಿ. ಪ್ರ. ಸಂಹಿತೆ

(೨) ಮರಣ ಶಾಸನದ ಕರ್ತ (ನಿರ್ವಾಹಕ)

(೩) ಪಕ್ಷಕಾರನ ಅಡ್ವೋಕೇಟು

ಇವರುಗಳು ಸಹ, ಯಾವ ಪ್ರಕರಣದಲ್ಲಿ ಅವರು ಪಕ್ಷಕಾರರಾಗಿರುವರೋ ಅವರಲ್ಲಿ ಹಿತಾಸಕ್ತಿ ಉಳ್ಳವರಾಗಿದ್ದರೂ ಸಕ್ಷಮ ಸಾಕ್ಷಿದಾರರಾಗುತ್ತಾರೆ.

## ಪ್ರಮಾಣ ಮಾಡಿ ಸಾಕ್ಷ್ಯವನ್ನು ಕೊಡಬೇಕು

೧. ಪ್ರಮಾಣವು ಭಾರತ ಸಾಕ್ಷ್ಯ ಅಧಿನಿಯಮದ ಅಗತ್ಯತೆಯಲ್ಲ. ಭಾರತ ಸಾಕ್ಷ್ಯ ಅಧಿನಿಯಮದ ಮಟ್ಟಿಗೆ, ಪ್ರಮಾಣ ಮಾಡದೆ ಸಾಕ್ಷಿದಾರನು ಸಾಕ್ಷ್ಯವನ್ನು ಕೊಟ್ಟರೂ ಸಹ ಅದು ಕಾನೂನು ಸಮ್ಮತ ಸಾಕ್ಷ್ಯವಾಗುತ್ತದೆ.

೨. ಭಾರತ ಪ್ರಮಾಣಗಳ ಅಧಿನಿಯಮ (೧೮೭೩ರ x ಅಧಿನಿಯಮ) ಇದರ ೫ನೇ ಕಲಮು ಆ ಅಧಿನಿಯಮದ ಅಗತ್ಯತೆ ಆಗಿರುತ್ತದೆ.

೧. ಪ್ರಮಾಣಗಳು ಅಥವಾ ಶಪಥಗಳು ಇವುಗಳನ್ನುಕೆಳಕಂಡ ವ್ಯಕ್ತಿಗಳು ಮಾಡತಕ್ಕದ್ದು.

(a) ಎಲ್ಲ ಸಾಕ್ಷಿದಾರರು.

(b) ಭಾಷಾಂತರಕಾರರು.

(c) ಜ್ಯೂರರುಗಳು.

೩. ಕಲಮು ೬– ಪ್ರಮಾಣ ಮಾಡಲು ಆಕ್ಷೇಪಿಸುವವನಿಗೆ ಶಪಥದ ಅವಕಾಶವುಂಟು.

೪. ಕಲಮು ೧೪– ನ್ಯಾಯಾಲಯದ ಮುಂದೆ ಅಥವಾ ಪ್ರಮಾಣ ವಚನ ಅಥವಾ ಶಪಥವನ್ನು ಬೋಧಿಸಲು ಅಧಿಕಾರ ಪಡೆದ ವ್ಯಕ್ತಿಯ ಮುಂದೆ ಸಾಕ್ಷ್ಯವನ್ನು ಕೊಡುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ವಿಷಯದ ಮೇಲೆ ಸತ್ಯವನ್ನು ಹೇಳಲು ಬದ್ಧನಾಗಿರತಕ್ಕದ್ದು.

೫. ಇಲ್ಲಿ ಪರಿಶೀಲಿಸಬೇಕಾದ ಮೂರು ಪ್ರಶ್ನೆಗಳು ಉದ್ಭವಿಸುತ್ತವೆ:

(i) ಪ್ರಮಾಣ ಅಥವಾ ಶಪಥವನ್ನು ಬೋಧಿಸಲು ನ್ಯಾಯಾಲಯವು ನಿರಾಕರಿಸಬಹುದೆ?

(ii) ಯಾರೇ ಪಕ್ಷಕಾರನು ಪ್ರಮಾಣ ಮಾಡಲು ಅಥವಾ ಶಪಥ ಮಾಡಲು ನಿರಾಕರಿಸಬಹುದೆ?

(iii) ಸಾಕ್ಷಿದಾರನು ಪ್ರಮಾಣ ಅಥವಾ ಶಪಥ ಮಾಡಲು ನಿರಾಕರಿಸಿದ್ದರ ಮತ್ತು ನ್ಯಾಯಾಲಯವು ಪ್ರಮಾಣ ವಚನ ಬೋಧಿಸಲು ತಪ್ಪಿದ್ದರ ಪರಿಣಾಮ.

### ಪ್ರಶ್ನೆ ೧ಕ್ಕೆ ಉತ್ತರ

ಪ್ರಮಾಣ ವಚನ ಬೋಧಿಸುವುದು ನ್ಯಾಯಾಲಯದ ಶಾಸನಬದ್ಧ ಕರ್ತವ್ಯ.

ಇದಕ್ಕೆ ಒಂದು ಷರತ್ತು ಉಂಟು. ನ್ಯಾಯಾಲಯವು ಸಕ್ಷಮವಾದ ವ್ಯಕ್ತಿಗೆ ಬೋಧಿಸಲು ಬದ್ಧವಾಗಿರುತ್ತದೆಯೇ ಹೊರತು ಅಕ್ಷಮವಾದ ವ್ಯಕ್ತಿಗೆ ಬೋಧಿಸಲು ಬದ್ಧವಾಗಿರುವುದಿಲ್ಲ. (ಉದಾ. ಒಂದು ಮಗುವಿಗೆ)

೬ *Pat. L.J.* ೧೪೭

**ಪ್ರಶ್ನೆ ೨ಕ್ಕೆ ಉತ್ತರ**

ಉತ್ತರವನ್ನು ೧೨ನೇ ಕಲಮಿನಲ್ಲಿ ಕೊಡಲಾಗಿದೆ. ಪಕ್ಷಕಾರನನ್ನು ಪ್ರಮಾಣ ಮಾಡಬೇಕೆಂದು ಒತ್ತಾಯಿಸುವಂತಿಲ್ಲ. ಆದರೆ ನ್ಯಾಯಾಲಯವು, ಅವನು ತನ್ನ ನಿರಾಕರಣೆಗೆ ಕೊಟ್ಟ ಕಾರಣವೇನಾದರೂ ಇದ್ದರೆ ಅದನ್ನು ದಾಖಲಿಸಬೇಕು.

**ಪ್ರಶ್ನೆ ೩ಕ್ಕೆ ಉತ್ತರ**

| | |
|---|---|
| ಭಾಗ – I ಪಕ್ಷಕಾರನು ಪ್ರಮಾಣ ಮಾಡಲು ಅಥವಾ ಶಪಥ ಮಾಡಲು ನಿರಾಕರಿಸಿದ್ದರೆ ಪರಿಣಾಮ | ೧.................... <br>೨. ಅಂಥ ನಿರಾಕರಣೆಯು ಸಾಕ್ಷ್ಯದ ಮೌಲ್ಯದ ಮೇಲೆ ಮಾತ್ರ ಪರಿಣಾಮ ಬೀರುತ್ತದೆ. |
| ಭಾಗ – II ನ್ಯಾಯಾಲಯವು ಪ್ರಮಾಣ ವಚನ ಬೋಧಿಸಲು ತಪ್ಪಿದರ ಪರಿಣಾಮ | ೧. ಸಾಕ್ಷ್ಯವು ಅಂಗೀಕಾರಾರ್ಹ ಆಗಿ ಉಳಿಯುತ್ತದೆ <br>೨. ಸತ್ಯವನ್ನು ಹೇಳುವ ಹೊಣೆಗಾರಿಕೆ ಉಳಿಯುತ್ತದೆ. |

೬. ಪ್ರಮಾಣಗಳ ಅಧಿನಿಯಮದ ಉಪಬಂಧಗಳು ಇಂಗ್ಲೆಂಡ್‌ನಲ್ಲಿರುವ ಹಾಗೆ ಭಾರತದಲ್ಲಿ ಕಟ್ಟುನಿಟ್ಟಾಗಿ ಇರುವುದಿಲ್ಲ.

(೧) ಪ್ರಮಾಣವು ಸತ್ಯವನ್ನು ಹೇಳುವ ಹೊಣೆಗಾರಿಕೆಗೆ ಪೂರ್ವಭಾವಿ ಆದ ಅಗತ್ಯ ಷರತ್ತು ಇಲ್ಲ. ಅದರ ಮಹತ್ವವನ್ನು ಸಾಕ್ಷಿದಾರನಿಗೆ ನೆನಪಿಸಲು ಮಾತ್ರ ಅದರ ಅಗತ್ಯ.

(೨) ಭಾರತ ಸಾಕ್ಷ್ಯ ಅಧಿನಿಯಮವು ಪ್ರಮಾಣ ವಚನದ ಬಗ್ಗೆ ನೆನಪಿಸಲು ತಪ್ಪಿದ್ದನ್ನು ಅಥವಾ ಮಾಡಲು ತಪ್ಪಿದ್ದನ್ನು ಮಾಫಿ ಮಾಡುತ್ತದೆ. ಅಂಥ ಸಾಕ್ಷ್ಯವನ್ನು ಇಂಗ್ಲಿಷ್ ಶಾಸನವು ಅಂಗೀಕಾರಾರ್ಹ ಅಲ್ಲ ಎಂದು ಪರಿಗಣಿಸುತ್ತದೆ.

**IV. ಪರೀಕ್ಷೆಯ ಕ್ರಮ**

೧. ಸಾಕ್ಷಿದಾರನು ಸಾಕ್ಷ್ಯವನ್ನು ಕೊಡಲು ಎರಡು ವಿಧಾನಗಳುಂಟು:

(i) ಸಂಗತಿಗಳನ್ನು ನಿರೂಪಿಸುವ ಮೂಲಕ.

(i) ಅವನಿಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುವ ಮೂಲಕ.

೨. ಸಾಕ್ಷ್ಯ ಅಧಿನಿಯಮವು ಉಪಬಂಧಿಸುವ ಪ್ರಕಾರ ಸಾಕ್ಷಿದಾರನ ಸಾಕ್ಷ್ಯವನ್ನು ಗೊತ್ತುಪಡಿಸಿದ ಪರೀಕ್ಷೆಯ ನಮೂನೆಯಲ್ಲಿ ತೆಗೆದುಕೊಳ್ಳತಕ್ಕದ್ದು, ಹೊರತು ನಿರೂಪಣೆಯ ನಮೂನೆಯಲ್ಲಿ ತೆಗೆದುಕೊಳ್ಳ ತಕ್ಕದ್ದಲ್ಲ. ಕಾನೂನು, ಸಾಕ್ಷ್ಯವನ್ನು ಕೊಡಲು ಪರೀಕ್ಷೆಯ ನಮೂನೆಯನ್ನು ಹೆಚ್ಚಿಗೆ ಇಷ್ಟಪಡುವ ಕಾರಣವನ್ನು ಸುಸಂಬದ್ಧತೆಯ ನಿಯಮದಲ್ಲಿ ಹುಡುಕಬೇಕಾಗುತ್ತದೆ. ಒಬ್ಬ ವ್ಯಕ್ತಿಗೆ ಸುಸಂಬದ್ಧವಾಗಿರುವ ವಿಷಯಗಳ ಬಗ್ಗೆ ಸಾಕ್ಷ್ಯವನ್ನು ಕೊಡಲು ಅನುಮತಿಯುಂಟು. ಪ್ರಶ್ನೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಸಾಕ್ಷ್ಯವನ್ನು ಕೊಡಲು ಅನುಮತಿಸಿಲ್ಲ. ಪ್ರಶ್ನೆಗೆ ಸಂಬಂಧಪಟ್ಟ ವಿಷಯಗಳು ಪ್ರಶ್ನೆಗೆ ಸುಸಂಬದ್ಧವಾಗಿರುವುದಿಲ್ಲ. ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ, ಯಾವುದೇ ನಿರ್ದಿಷ್ಟ ಸಂಗತಿಯು ಸುಸಂಬದ್ಧವೆ ಅಲ್ಲವೆ ಎಂದು ತೀರ್ಮಾನಿಸುವ ಮತ್ತು ಸುಸಂಬದ್ಧವಲ್ಲದಿರುವುದನ್ನು ಅಲ್ಲಿಯೇ ಆಗಲೇ ತಿರಸ್ಕರಿಸುವ ಕಾರ್ಯವು

ನ್ಯಾಯಾಧೀಶನ ಕರ್ತವ್ಯವಾಗಿರುತ್ತದೆ.

ಸಾಕ್ಷಿದಾರನಿಗೆ ತನ್ನ ಸಾಕ್ಷ್ಯವನ್ನು ನಿರೂಪಣೆಯ ನಮೂನೆಯಲ್ಲಿ ಕೊಡಲು ಅನುಮತಿಸಿದರೆ, ಎರಡು ಸಂಗತಿಗಳು ಸಂಭವಿಸುತ್ತವೆ:–

(i) ಪ್ರಾಯಶಃ ಸಾಕ್ಷಿದಾರನು ಸುಸಂಬದ್ಧವಾದ ಹಾಗೆಯೇ ಸುಸಂಬದ್ಧವಲ್ಲದ ಎಲ್ಲ ಸಂಗತಿಗಳನ್ನು ಹೇಳುತ್ತಾನೆ ಮತ್ತು ಆ ಮೂಲಕ ಅಸಂಬದ್ಧ ವಿಷಯಗಳನ್ನು ಸಹ ಸೇರಿಸಿಬಿಡುತ್ತಾನೆ. ಮತ್ತು

(ii) ಅಸಂಬದ್ಧವಾಗಿರತಕ್ಕ ವಿಷಯಗಳನ್ನು ತಿರಸ್ಕರಿಸಲು ನ್ಯಾಯಾಧೀಶನು ತೆಗೆದುಕೊಳ್ಳಬಹುದಾದ ಕ್ರಮವು ಘಟನೋತ್ತರ ಕ್ರಮವು ಆಗುತ್ತದೆ.

ಇನ್ನು, ಸಾಕ್ಷಿದಾರನಿಗೆ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಸಾಕ್ಷ್ಯವನ್ನು ಕೊಡುವಂತೆ ಅಗತ್ಯಪಡಿಸಿದರೆ, ಈ ಎರಡು ಉದ್ದೇಶಗಳು ಈಡೇರುತ್ತವೆ.

(i) ಅವನ ಸಾಕ್ಷ್ಯವು ಅತ್ತಲಿತ್ತ ಹೋಗದಂತೆ ಸುಸಂಬದ್ಧ ವಿಷಯಗಳಿಗೆ ಮಾತ್ರ ಪರಿಮಿತಗೊಳ್ಳುವ ಹಾಗೆ ಮಾಡಬಹುದು.

(ii) ನ್ಯಾಯಾಲಯವು ಆ ಕೂಡಲೇ ಪರಿಶೀಲಿಸಿ, ಅಸಂಬದ್ಧ ಸಾಕ್ಷ್ಯದ ಸೇರಿಕೆಯನ್ನು ತಿರಸ್ಕರಿಸಬಹುದು.

೩. ..........................................................................................................................

೪. ಸಾಕ್ಷಿದಾರರ ಪರೀಕ್ಷೆಗೆ ಸಂಬಂಧಿಸಿದಂತೆ, ಎರಡು ಪ್ರಶ್ನೆಗಳು ವಿಭಿನ್ನವಾಗಿರುತ್ತವೆ ಮತ್ತು ವಿಭಿನ್ನ ಕಾನೂನುಗಳಿಂದ ನಿಯಮಿಸಲಾಗುತ್ತದೆ. ಪಕ್ಷಕಾರರು ತಮ್ಮ ಸಾಕ್ಷಿದಾರರನ್ನು ಪರೀಕ್ಷೆಗಾಗಿ ಹಾಜರುಪಡಿಸತಕ್ಕ ಕ್ರಮವು ಮತ್ತು ನ್ಯಾಯಾಲಯದ ಮುಂದೆ ಆ ಪ್ರತಿಯೊಬ್ಬ ಸಾಕ್ಷಿದಾರರನ್ನು ಹಾಜರುಪಡಿಸಿದ ತರುವಾಯ ಅವನು ಗುರಿಯಾಗಬೇಕಾದ ಪರೀಕ್ಷೆಯ ಕ್ರಮವು ಇವೆರಡೂ ಪ್ರತ್ಯೇಕ ಪ್ರಶ್ನೆಗಳಾಗಿರುತ್ತವೆ.

**ಕಲಮು ೧೩೫ ಮತ್ತು ೧೩೮**

ಪಕ್ಷಕಾರರು ಯಾವ ಕ್ರಮದಲ್ಲಿ ಸಾಕ್ಷಿದಾರರನ್ನು ಹಾಜರುಪಡಿಸತಕ್ಕದೋ ಆ ಕ್ರಮವನ್ನು ಸಿವಿಲ್ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಗಳ ದ್ವಾರಾ ನಿಯಮಿಸಲಾಗಿರುತ್ತದೆ. ಇನ್ನು, ಸಾಕ್ಷಿದಾರರನ್ನು ಯಾವ ಕ್ರಮದಲ್ಲಿ ಪರೀಕ್ಷೆಗೆ ಗುರಿಪಡಿಸಬೇಕೋ ಆ ಕ್ರಮವನ್ನು ಸಾಕ್ಷ್ಯ ಅಧಿನಿಯಮವು ಗೊತ್ತು ಪಡಿಸುತ್ತದೆ.

**ಸಾಕ್ಷಿದಾರರನ್ನು ಹಾಜರುಪಡಿಸುವ ಕ್ರಮ**

| | |
|---|---|
| ೧. ಸಿವಿಲ್ ಪ್ರಕರಣಗಳಲ್ಲಿ | ಕ್ರಿಮಿನಲ್ ಪ್ರಕರಣಗಳಲ್ಲಿ |
| ಆದೇಶ XVIII ನಿಯಮ ೧ | ಸಮನ್ಸ್ ಪ್ರಕರಣಗಳು ೨೨೪ ಕ್ರಿ. ಪ್ರ. ಸಂ. |
| | ವಾರಂಟ್ ಪ್ರಕರಣಗಳು ೨೫೨ |
| | ೨೫೪ |
| | ೨೫೭ |

**ನಿಯಮ ಹೀಗಿರುವುದೆಂದು ತೋರುತ್ತದೆ**

೧. ಮೊದಲು ನಿರ್ಧರಿಸಬೇಕಾದ ಪ್ರಶ್ನೆಯೆಂದರೆ ಪ್ರಾರಂಭಿಸುವ ಹಕ್ಕು ಯಾರಿಗುಂಟು.

೨. ಪ್ರಾರಂಭಿಸುವ ಹಕ್ಕು, ಯಾರ ಮೇಲೆ ರುಜುವಾತಿನ ಭಾರ ಇರುವದೋ ಅದನ್ನು ಅವಲಂಬಿಸಿರುತ್ತದೆ.

## ಪರೀಕ್ಷೆಯ ಕ್ರಮ

೧. ಸಾಕ್ಷ್ಯ ಅಧಿನಿಯಮವು ಗೊತ್ತುಪಡಿಸಿದಂತೆ ಸಾಕ್ಷಿದಾರರ ಪರೀಕ್ಷೆಗಳ ಕ್ರಮವು ೩ ಭಾಗಗಳನ್ನು ಒಳಗೊಂಡಿರುತ್ತದೆ.

**ಕಲಮು ೧೩೮**

(i) ಮುಖ್ಯ ವಿಚಾರಣೆ.

(ii) ಪಾಟೀ ಸವಾಲು.

(iii) ಮರುಪರೀಕ್ಷೆ.

೨. ಮುಖ್ಯ ವಿಚಾರಣೆ: ಸಾಕ್ಷಿದಾರರನ್ನು ಕರೆದ ಪಕ್ಷಕಾರನಿಂದ ಸಾಕ್ಷಿದಾರರ ಪರೀಕ್ಷೆ.

**ಕಲಮು ೧೩೭**

**ಪಾಟೀ ಸವಾಲು:** ಪ್ರತಿ ಪಕ್ಷಕಾರರಿಂದ ಸಾಕ್ಷಿದಾರರ ಪರೀಕ್ಷೆ.

**ಮರು–ಪರೀಕ್ಷೆ:** ಸಾಕ್ಷಿಗಳನ್ನು ಪ್ರತಿಪಕ್ಷಕಾರನು ಪಾಟೀ ಸವಾಲು ಮಾಡಿದ ತರುವಾಯ, ಅವರನ್ನು ಕರೆತಂದ ಪಕ್ಷಕಾರನು ನಡೆಸುವ ಪರೀಕ್ಷೆ.

**ಪರಿಶೀಲಿಸಬೇಕಾದ ಪ್ರಶ್ನೆಗಳು**

೩. ಮುಖ್ಯ ಪರೀಕ್ಷೆಯು ಆಯ್ಕೆಯ ವಿಚಾರ. ಪಕ್ಷಕಾರನಿಗೆ ಸಾಕ್ಷಿದಾರರನ್ನು ಕರೆಯುವಂತೆ ಯಾರೂ ಒತ್ತಾಯಿಸುವಂತಿಲ್ಲ. ಇನ್ನು, ಸಾಕ್ಷಿದಾರರನ್ನು ಕರೆದರೆ ಮತ್ತು ಅವರ ಮುಖ್ಯ ವಿಚಾರಣೆ ಮಾಡಿದರೆ ಆಗ ಉದ್ಭವಿಸುವ ಪ್ರಶ್ನೆ ಎಂದರೆ– ಪಾಟೀ ಸವಾಲು ಮತ್ತು ಮರು ಪರೀಕ್ಷೆ. ಇವು ಹಕ್ಕಿನ ವಿಷಯವೆ ಅಥವಾ ವಿಶೇಷಾಧಿಕಾರದ ವಿಷಯವೇ? ಅದನ್ನು ನ್ಯಾಯಾಲಯದ ವಿವೇಚನಾಧಿಕಾರಕ್ಕೆ ಒಳಪಟ್ಟು ನೀಡಬಹುದೆ ಅಥವಾ ತಡೆಹಿಡಿಯಬಹುದೇ?

ಈ ಪ್ರಶ್ನೆಗೆ ಉತ್ತರ ಎಂದರೆ, ಪಾಟೀ ಸವಾಲು ಮತ್ತು ಮರುಪರೀಕ್ಷೆ ಇವು ಹಕ್ಕಿನ ವಿಷಯಗಳೇ ಹೊರತು ವಿಶೇಷಾಧಿಕಾರದ ವಿಷಯಗಳಲ್ಲ. ಪಕ್ಷಕಾರನು ಮುಖ್ಯ ವಿಚಾರಣೆ ಮಾಡಿರುವ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡದಂತೆ ಅಥವಾ ಮರುಪರೀಕ್ಷೆ ಮಾಡದಂತೆ ನ್ಯಾಯಾಲಯವು ಯಾರೇ ಪಕ್ಷಕಾರರನ್ನು ತಡೆಯುವಂತಿಲ್ಲ. ನ್ಯಾಯಾಲಯವು ಕರೆದಿರುವ, ಆದರೆ ವ್ಯವಹರಣೆಗಳಿಗೆ ಪಕ್ಷಕಾರನಾಗಿಲ್ಲದ ಸಾಕ್ಷಿದಾರನ ವಿಚಾರವೇನು? ಅಂಥ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಯಾವುದೇ ಹಕ್ಕು ಇಲ್ಲವೇ? ಇದ್ದರೆ, ಯಾವ ಪಕ್ಷಕಾರನಿಗೆ ಆ ಹಕ್ಕು ಉಂಟು? ಸಾಕ್ಷ್ಯ ಅಧಿನಿಯಮದಲ್ಲಿ ಅಂಥ ಸಂದರ್ಭದ ಬಗ್ಗೆ ಯಾವುದೇ ಉಪಬಂಧವಿಲ್ಲ. ಆದಾಗ್ಯೂ ನ್ಯಾಯಾಲಯವು ಸಮನ್ ಮಾಡಿ ಪರೀಕ್ಷೆ ಮಾಡಿದ ಸಾಕ್ಷಿದಾರರನ್ನು, ನ್ಯಾಯಾಧೀಶರ ಅನುಮತಿ ಇಲ್ಲದೆ ಉಭಯ ಪಕ್ಷಕಾರರ ಪೈಕಿ ಯಾರೂ ಹಕ್ಕು ಎಂಬ ಆಧಾರದಲ್ಲಿ ಪಾಟೀ ಸವಾಲು ಮಾಡುವಂತಿಲ್ಲ ಎಂದು ನಿರ್ಣಯಿಸಿದ್ದುಂಟು

*(೧೮೯೪) ೨ Q.B. ೩೧೬*

*೩ B.L.R. ೧೪೫*

*II W.R. ೧೧೦*

*೨೪ Cal. ೨೮೮*
*೫ Cal. ೬೧೪*
*೧೬ W.Q. ೨೫೭*

**೪. ಪಾಟೀ ಸವಾಲು ಮಾಡುವ ಹಕ್ಕನ್ನು ಯಾವಾಗ ಚಲಾಯಿಸಬಹುದು?**

ಇದಕ್ಕೆ ಸಂಬಂಧಪಟ್ಟ ಹಾಗೆ, ಸಿವಿಲ್ ಪ್ರಕರಣಗಳಲ್ಲಿ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ವ್ಯತ್ಯಾಸವುಂಟು.

(i) ಸಿವಿಲ್ ಪ್ರಕರಣಗಳಲ್ಲಿ, ಹಕ್ಕನ್ನು ಆ ಕೂಡಲೇ ಚಲಾಯಿಸಬೇಕು. ತರುವಾಯದ ತಾರೀಖಿಗೆ ಅದನ್ನು ಮುಂದೂಡುವಂತಿಲ್ಲ.

(ii) ಕ್ರಿಮಿನಲ್ ಪ್ರಕರಣಗಳಲ್ಲಿ, ಮ್ಯಾಜಿಸ್ಟ್ರೇಟನ ಮುಂದೆ ಇರುವ ಸಮನ್ಸ್ ಪ್ರಕರಣಗಳಲ್ಲಿ ಮತ್ತು ಸೆಷನ್ಸ್ ಪ್ರಕರಣಗಳಲ್ಲಿ ಹಕ್ಕನ್ನು ಆ ಕೂಡಲೇ ಚಲಾಯಿಸತಕ್ಕದ್ದು. ಆದರೆ ವಾರಂಟ್ ಪ್ರಕರಣದಲ್ಲಿ, ಆಪಾದಿತನು, ಪ್ರಾಸಿಕ್ಯೂಷನ್‌ನ ಪಾಟೀ ಸವಾಲನ್ನು ತರುವಾಯದ ಚುನಾವಣೆ ತಾರೀಖಿಗೆ ಮುಂದೂಡುವ ಹಕ್ಕು ಹೊಂದಿರುತ್ತಾನೆ.

ಉಭಯ ಪಕ್ಷಕಾರರು ಒಬ್ಬನೇ ವ್ಯಕ್ತಿಯನ್ನು ಸಾಕ್ಷಿದಾರನಾಗಿ ಕರೆದ ಪ್ರಕರಣ: 'ಎ' ಮತ್ತು 'ಬಿ' ನಡುವಣ ಒಂದು ವ್ಯಾಜ್ಯದಲ್ಲಿ 'ಸಿ'ನನ್ನು 'ಎ' ಮತ್ತು 'ಬಿ' ಇಬ್ಬರೂ ಸಾಕ್ಷಿದಾರನಾಗಿ ಹೇಳಿದ್ದಾರೆ. ಮೊದಲು 'ಎ'ನು ತನ್ನ ಪರ ಸಾಕ್ಷಿದಾರನಾಗಿ ಕರೆಯುತ್ತಾನೆ. 'ಬಿ'ನಿಂದ ಅವನಿಂದ ಪಾಟೀ ಸವಾಲು ಮತ್ತು 'ಎ'ನಿಂದ ಅವನ ಮರುಪರೀಕ್ಷೆ ಇವುಗಳ ತರುವಾಯ 'ಬಿ'ನು ಅವನನ್ನು ತನ್ನ ಪರ ಸಾಕ್ಷಿದಾರನಾಗಿ ಕರೆಯುತ್ತಾನೆ.

**'ಬಿ'ನು 'ಸಿ'ನನ್ನು ಪಾಟೀ ಸವಾಲು ಮಾಡಬಹುದೆ?**

ಸಾಕ್ಷ್ಯದ ಕಾನೂನಿನಲ್ಲಿ ಈ ಪ್ರಶ್ನೆಗೆ ನಿರ್ದಿಷ್ಟ ಉತ್ತರವಾಗಿ ಯಾವುದೇ ಉಪಬಂಧವಿಲ್ಲ. ಅದು ನ್ಯಾಯಿಕ ಅಭಿಪ್ರಾಯದ ಪ್ರಶ್ನೆ. ಈ ಪ್ರಶ್ನೆಯನ್ನು ಕುರಿತು ವಿಭಿನ್ನ ಅಭಿಪ್ರಾಯಗಳುಂಟು:

೧. ಒಂದು ಅಭಿಪ್ರಾಯ ಎಂದರೆ, ಒಬ್ಬ ವ್ಯಕ್ತಿಗೆ ಒಬ್ಬ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡುವ ಹಕ್ಕು ದೊರೆತ ಮೇಲೆ, ಅವನ ಆ ಹಕ್ಕು, ಆ ಪ್ರಕರಣದ ಆ ತರುವಾಯದ ಎಲ್ಲ ಹಂತಗಳಲ್ಲೂ ಆ ಸಾಕ್ಷಿದಾರನ ವಿರುದ್ಧ ಯಾವ ರೂಪದಲ್ಲಿ ಪುನಃ ಹಾಜರಾದರೂ ಸರಿಯೇ, ಮುಂದುವರಿಯುತ್ತದೆ, ಮತ್ತು ತತ್ಪರಿಣಾಮವಾಗಿ, ಅವನ ಸಾಕ್ಷಿದಾರನೇ ಆಗಿ ಬಂದಾಗ್ಯೂ ಅವನನ್ನು ಪಾಟೀ ಸವಾಲು ಮಾಡಬಹುದು. ಈ ದೃಷ್ಟಿಕೋನಕ್ಕೆ ಆಧಾರ ಆಗಿರತಕ್ಕ ತತ್ವ ಎಂದರೆ, ಪ್ರತಿಯೊಬ್ಬ ಸಾಕ್ಷಿದಾರನು ಅವನನ್ನು ಕರೆದ ಪಕ್ಷಕಾರನ ಪರ ಅನುಕೂಲ ಒಲವು ಹೊಂದಿರುತ್ತಾನೆ.

೨. ಇನ್ನೊಂದು ಅಭಿಪ್ರಾಯ ಎಂದರೆ, ಪ್ರತಿಯೊಬ್ಬ ಪಕ್ಷಕಾರನು ಪರ್ಯಾಯವಾಗಿ, ಅಂಥ ಸಾಕ್ಷಿದಾರರನ್ನು ಪ್ರತಿಪಕ್ಷಕಾರನ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಪಾಟೀಸವಾಲು ಮಾಡಲು ಹಕ್ಕು ಹೊಂದಿರಬೇಕು. ಆದರೆ, ಸಂಬಂಧಪಟ್ಟ ಆಯಾ ಮುಖ್ಯ ವಿಚಾರಣೆಯ ಕ್ರಮದಲ್ಲಿ, ಉಭಯ ಪಕ್ಷಕಾರರಿಗೆ ತಮ್ಮ ಪ್ರಕರಣಕ್ಕೆ ಸಂಬಂಧಿಸಿ ಉತ್ತರ ಸೂಚಕ ಪ್ರಶ್ನೆಗಳನ್ನು ಹಾಕದಂತೆ ತಡೆಯಬೇಕು. ಅಂದರೆ ಯಾರೇ ವಾದಿಯು ತನ್ನ ಸಾಕ್ಷಿದಾರರ ಪೈಕಿ ಯಾರನ್ನೇ ಆದರೂ, ಪ್ರತಿವಾದಿಯ ಪರವಾಗಿ ಕರೆಯಲಾದ ತರುವಾಯದ ಚುನಾವಣೆಯಲ್ಲಿ ಪಾಟೀ ಸವಾಲು ಮಾಡಬಹುದು.

ಹೆಚ್ಚು ಸಮಂಜಸವಾದ ಅಭಿಪ್ರಾಯ ಎಂದರೆ, ಪಾಟೀ ಸವಾಲು ಮಾಡುವ ಹಕ್ಕು ಆ ತರುವಾಯವೂ ಉಳಿಯುವುದಿಲ್ಲ ಮತ್ತು ಆ ಸಾಕ್ಷಿದಾರನಿಗೆ ಎರಡನೆಯ ಪರೀಕ್ಷೆಯಲ್ಲಿ ಉತ್ತರಸೂಚಕ ಪ್ರಶ್ನೆಗಳನ್ನು ಕೇಳಲು ಸಾಧ್ಯವಿಲ್ಲ. ಪ್ರತಿಪಕ್ಷಕಾರನು, ಇನ್ನೊಂದು ಪಕ್ಷಕಾರನು ಪರೀಕ್ಷೆ ಮಾಡಿದ ಮತ್ತು ಅವನು ಪಾಟೀ ಸವಾಲು ಹಾಕಿದ ಅದೇ ಸಾಕ್ಷಿದಾರನನ್ನು ಪುನಃ ಕರೆದರೆ, ಅವನು ಸ್ಪಷ್ಟವಾಗಿಯೂ ಅವನ ಮುಖ್ಯ ವಿಚಾರಣೆ ಮಾಡಬಹುದು.

ಈ ನಿಯಮವನ್ನು ಸಾಕ್ಷ್ಯ ಅಧಿನಿಯಮವು ಅಳವಡಿಸಿಕೊಂಡ ಹಾಗೆ ತೋರುತ್ತದೆ.

೫. ನಿಯಮಿಸಲಾದ ಈ ಪರೀಕ್ಷಾ ಕ್ರಮವು ಎಲ್ಲ ಸಾಕ್ಷಿದಾರರಿಗೂ ಅನ್ವಯಿಸುತ್ತದೆಯೆ?

೧. ನ್ಯಾಯಾಲಯದ ಮುಂದೆ ಕರೆಯಲಾಗುವ ಸಾಕ್ಷಿದಾರರಲ್ಲಿ ಮೂರು ಪ್ರಕಾರಗಳಿರುತ್ತವೆ:

(i) ಸುಸಂಬದ್ಧ ಸಂಗತಿಗಳ ಬಗ್ಗೆ ಹೇಳಿಕೆ ಕೊಡಲು ಕರೆಯಲ್ಪಟ್ಟವರು

(ii) ಶೀಲಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಲು ಕರೆಯಲ್ಪಟ್ಟವರು

(iii) ದಸ್ತಾವೇಜುಗಳನ್ನು ಹಾಜರುಪಡಿಸಲು ಕರೆಯಲ್ಪಟ್ಟವರು

೨. ಸುಸಂಬದ್ಧ ಸಂಗತಿಗಳ ಬಗ್ಗೆ ಹೇಳಿಕೆ ಕೊಡಲು ಅಥವಾ ಶೀಲಕ್ಕೆ ಸಂಬಂಧಿಸಿ ಮಾತನಾಡಲು ಕರೆಯಲ್ಪಟ್ಟವರ ಸಂಬಂಧದಲ್ಲಿ ಹೇಳುವುದಾದರೆ ಅವರು ಪರೀಕ್ಷೆ, ಪಾಟೀ ಸವಾಲು ಮತ್ತು ಮರುಪರೀಕ್ಷೆ ಇವುಗಳ ನಿಯಮಿಸಿದ ಪೂರ್ಣಕ್ರಮಕ್ಕೆ ಒಳಪಡಬೇಕಾಗುತ್ತದೆ. ಆದರೆ, ದಸ್ತಾವೇಜುಗಳನ್ನು ಹಾಜರುಪಡಿಸಲು ಕರೆಯಲ್ಪಟ್ಟ ಸಾಕ್ಷಿದಾರನು, ಬೇರೆ ನಿಯಮಗಳಿಗೆ ಒಳಪಡುತ್ತಾನೆ. ಅವನು ಸಾಕ್ಷಿದಾರನಲ್ಲ, ಆದ ಕಾರಣ ಅವನನ್ನು ಪಾಟೀ ಸವಾಲು ಮಾಡುವಂತಿಲ್ಲ.

೬. ಒಬ್ಬ ಸಹ ಆಪಾದಿತನು, ಇನ್ನೊಬ್ಬ ಸಹಆಪಾದಿತನು ಕರೆದ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಬಹುದೇ? ಒಬ್ಬ ಸಹ ಪ್ರತಿವಾದಿಯು ಕರೆದ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಬಹುದೆ?

(i) ಸಹಆಪಾದಿತನಿಂದ ಮತ್ತು ಸಹಪ್ರತಿವಾದಿಯಿಂದ ಪಾಟೀ ಸವಾಲಿಗೆ ಈ ಪ್ರಕರಣದಲ್ಲಿ ವಿಶೇಷ ಉಪಬಂಧವಿಲ್ಲ.

(ii) ಸಾಕ್ಷ್ಯ ಅಧಿನಿಯಮವು, ಪ್ರತಿಪಕ್ಷಕಾರನು ಕರೆದ ಸಾಕ್ಷಿದಾರನ ಪಾಟೀ ಸವಾಲಿಗೆ ಹಕ್ಕು ಕೊಡುತ್ತದೆ ಹೊರತು ಇನ್ನು ಯಾರಿಗೂ ಅಲ್ಲ. ತತ್ಪರಿಣಾಮವಾಗಿ, ಒಬ್ಬ ಸಹ ಆಪಾದಿತನು ಇನ್ನೊಬ್ಬ ಸಹ ಆಪಾದಿತನು ಕರೆದ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಬಹುದು. ಎರಡನೆಯವನ ಪ್ರಕರಣವು ಮೊದಲನೆಯವನ ಪ್ರಕರಣದ ವಿರುದ್ಧ ಇರುವಾಗ ಮಾತ್ರವೇ ಹಾಗೆ ಪಾಟೀ ಸವಾಲು ಮಾಡಬಹುದು.

*೨೧ Cal. ೪೦೧*

(iii) ಈ ಸಂಬಂಧದಲ್ಲಿ ಬ್ರಿಟಿಷ್ ಕಾನೂನಿನ ನಿಯಮವು ವಿಭಿನ್ನವಾಗಿದೆ. ಬ್ರಿಟಿಷ್ ಕಾನೂನಿನ ಅಡಿಯಲ್ಲಿ, ಸಹಆಪಾದಿತನನ್ನು ಅಥವಾ ಸಹಪ್ರತಿವಾದಿಯನ್ನು ಪಾಟೀಸವಾಲು ಮಾಡುವ ಪ್ರತಿವಾದಿಯ ಹಕ್ಕು, ಬ್ರಿಟಿಷ್ ಪ್ರಕರಣಗಳಿಗನುಸಾರವಾಗಿ, ಯಾವುದೇ ಷರತ್ತಿಗೆ ಒಳಪಟ್ಟಿರುವುದಿಲ್ಲ. ಅಂದರೆ ಆಪಾದಿತನ ಮತ್ತು ಸಹಆಪಾದಿತನ ಪ್ರಕರಣಗಳು ಒಂದಕ್ಕೊಂದು ವಿರುದ್ಧವಾಗಿರಬೇಕು ಅಥವಾ ಪ್ರತಿವಾದಿಯ ಮತ್ತು ಸಹಪ್ರತಿವಾದಿಯ ನಡುವೆ ವಿವಾದಾಂಶ ಇರಲೇಬೇಕು ಎಂಬ ಸಂಗತಿಯ ಮೇಲೆ ಅವಲಂಬಿತವಾಗಿಲ್ಲ. ಇದಲ್ಲದೆ, ಒಬ್ಬ ಸಹಪ್ರತಿವಾದಿಯು, ಸಹಪ್ರತಿವಾದಿಯ ಸಾಕ್ಷಿದಾರನನ್ನು ಮತ್ತು ಸಹಪ್ರತಿವಾದಿಯು ಸಾಕ್ಷ್ಯವನ್ನು ಕೊಟ್ಟರೆ ಅವನನ್ನು ಪಾಟೀ ಸವಾಲು ಮಾಡಬಹುದು.

**ಈ ಬ್ರಿಟಿಷ್ ನಿಯಮಕ್ಕೆ ಕಾರಣಗಳೆಂದರೆ:**

(i) ಒಬ್ಬ ಪಕ್ಷಕಾರನ ಸಾಕ್ಷ್ಯವನ್ನು, ಇನ್ನೊಬ್ಬ ಪಕ್ಷಕಾರನಿಗೆ ಅದನ್ನು ಪಾಟೀ ಸವಾಲು ದ್ವಾರಾ ಪರೀಕ್ಷಿಸಲು ಅವಕಾಶ ಕೊಟ್ಟ ಹೊರತು, ಅದನ್ನು ಅವನ ವಿರುದ್ಧ ಸಾಕ್ಷ್ಯವಾಗಿ ಅಂಗೀಕರಿಸುವಂತಿಲ್ಲ ಎಂದು ನಿರ್ಣಯಿಸಿದ್ದುಂಟು.

*Allen Vs. Allen L.R.P. D. (೧೮೯೪), ೨೪೮/೨೫೪*

(ii) ಹಾಗೆಯೇ, ಮುಖ್ಯ ವಿಚಾರಣೆಯಲ್ಲಿ ಅಥವಾ ಪಾಟೀ ಸವಾಲಿನಲ್ಲಿ ತೆಗೆದುಕೊಳ್ಳಲಾದ ಎಲ್ಲ ಸಾಕ್ಷ್ಯವು, ಸಾಮಾನ್ಯವಾಗಿ ಎಲ್ಲ ಪಕ್ಷಕಾರರಿಗೆ ತೆರೆದಿರುತ್ತದೆ (ಸೇರಿದ್ದು) ಎಂದು ನಿರ್ಣಯಿಸಿದ್ದುಂಟು.

*Lord Vs. Coloin, ೨ Drewery ೨೨೨*

(iii) ಹಾಗಾದರೆ, ಎಲ್ಲ ಸಾಕ್ಷ್ಯವು ಸಾಮಾನ್ಯವಾದರೆ, ಮತ್ತು ಒಬ್ಬ ಪಕ್ಷಕಾರನು ಕೊಟ್ಟ ಸಾಕ್ಷ್ಯವನ್ನು ಇನ್ನೊಬ್ಬ ಪಕ್ಷಕಾರನ ಪರ ಅಥವಾ ವಿರುದ್ಧವಾಗಿ ಉಪಯೋಗಿಸಲು ಅವಕಾಶವಿದ್ದರೆ, ಆ ಇನ್ನೊಬ್ಬ ಪಕ್ಷಕಾರನಿಗೆ ಪಾಟೀ ಸವಾಲು ಮಾಡಲಿಕ್ಕೆ ಸಹ ಅವಕಾಶ ಇದೆ ಎಂದ ಹಾಗಾಯಿತು.

**೭. ಕಾನೂನು ಮೂಲಕ ನಿಯಮಿಸಲಾದ ಸಾಕ್ಷಿದಾರರ ಪರೀಕ್ಷೆಯ ಕ್ರಮದಲ್ಲಿ ಉಂಟಾದ ಯಾವುದೇ ತಪ್ಪಿತದ ಪರಿಣಾಮವೇನು?**

೧. ಪಾಟೀ ಸವಾಲಿನಲ್ಲಿ ಅಥವಾ ಮರುಪರೀಕ್ಷೆಯಲ್ಲಿ ಒಂದು ತಪ್ಪಿತ ಉಂಟಾದರೆ ಮಾತ್ರ ಈ ಪ್ರಶ್ನೆಯು ಉದ್ಭವಿಸುತ್ತದೆ. ಮುಖ್ಯ ವಿಚಾರಣೆ ಆಗುವ ತನಕ, ಸಾಕ್ಷ್ಯ ಪದದ ಕಾನೂನು ಅರ್ಥದಲ್ಲಿ ಯಾವುದೇ ಸಾಕ್ಷ್ಯ ಇಲ್ಲ.

ಸಾಕ್ಷಿದಾರನು ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯವನ್ನು ಕೊಟ್ಟ ಅನಂತರ ಮಾತ್ರವೇ ಈ ಪ್ರಶ್ನೆಯು ಉದ್ಭವಿಸುತ್ತದೆ. ಆದ್ದರಿಂದ ಒಬ್ಬ ಸಾಕ್ಷಿದಾರನ ಸಾಕ್ಷ್ಯದ ಮೇಲೆ ಪಾಟೀ ಸವಾಲಿನಲ್ಲಿ ಅಥವಾ ಮರುಸವಾಲಿನಲ್ಲಿ ಅಥವಾ ಮರುಸವಾಲಿನಲ್ಲಿ ಉಂಟಾದ ತಪ್ಪಿತದ ಪರಿಣಾಮವೇ ಪರಿಶೀಲಿಸಬೇಕಾದ ಪ್ರಶ್ನೆ ಆಗುತ್ತದೆ.

೨. ಅಂಥ ತಪ್ಪಿತವು ಉಂಟಾಗುವುದು ಸಾಕ್ಷಿದಾರನು ಮೃತನಾದಾಗ ಅಥವಾ ಕಾಯಿಲೆ ಬಿದ್ದಾಗ ಅಥವಾ ಅವನು ಮನೋವಿಕಲನಾದಾಗ ಅಥವಾ ಪಕ್ಷವಾತ ಪೀಡಿತನಾದಾಗ ಅಥವಾ ಮುಖ್ಯ ವಿಚಾರಣೆಯ ಅನಂತರ ಅಥವಾ ಪಾಟೀ ಸವಾಲಿಗೆ ಮುನ್ನ ಕಣ್ಮರೆಯಾದಾಗ.

೩. ಸಾಕ್ಷ್ಯ ಅಧಿನಿಯಮವು ಅದರ ಪರಿಣಾಮ ಏನಾಗುತ್ತದೆ ಎಂದು ಸ್ಪಷ್ಟ ಪದಗಳಲ್ಲಿ ವ್ಯಕ್ತಗೊಳಿಸುವುದಿಲ್ಲ. ಪಾಟೀ ಸವಾಲು ಆಗದಿರುವ ಕಾರಣ ಅಥವಾ ಮರುಪರೀಕ್ಷೆ ಆಗದಿರುವ ಕಾರಣ, ಮುಖ್ಯ ವಿಚಾರಣೆಯಲ್ಲಿ ಅವನು ಕೊಟ್ಟ ಸಾಕ್ಷ್ಯವು, ಆ ಪದದ ಕಾನೂನು ಅರ್ಥದಲ್ಲಿ ಸಾಕ್ಷ್ಯವಾಗಿರುವುದು ಮುಕ್ತಾಯವಾಗುವುದೆ ಮತ್ತು ಅದನ್ನು ನ್ಯಾಯಾಲಯದ ಪರಿಶೀಲನೆಯಿಂದ ಹೊರತುಪಡಿಸಲಾಗುವುದೆ ಇಲ್ಲವೆ ಎಂಬ ಬಗೆಗಾಗಲಿ ಅಥವಾ ಆ ಮೂಲಕ ಕೇವಲ ಅದರ ಮೌಲ್ಯವು ಬಾಧಿತವಾಗುವುದೆ ಎಂಬ ಬಗೆಗಾಗಲಿ ಸಾಕ್ಷ್ಯ ಅಧಿನಿಯಮದಲ್ಲಿ ಏನನ್ನೂ ಹೇಳಿರುವುದಿಲ್ಲ. ಈ ಪ್ರಶ್ನೆಯನ್ನು ನ್ಯಾಯಿಕ ಅರ್ಥ ವಿವರಣೆಯ ಮೂಲಕ ನಿರ್ಧರಿಸಲಾಗುತ್ತದೆ.

ನ್ಯಾಯಿಕ ಅರ್ಥವಿವರಣೆಯ ಪ್ರಕಾರ ಎರಡು ಪ್ರಸ್ತಾಪಗಳು ಸುಸ್ಥಾಪಿತವಾಗಿರುತ್ತದೆ.

೧. ಅಂಥ ತಪ್ಪಿತವು ಸಾಕ್ಷ್ಯವನ್ನು ಅಗ್ರಾಹ್ಯ (ಅಂಗೀಕಾರಾರ್ಹವಲ್ಲದ್ದು) ಆಗಿ ಮಾಡುವುದಿಲ್ಲ. ಅದರ ವಿಶ್ವಾಸಾರ್ಹತೆಯನ್ನು ಮಾತ್ರ ಬಾಧಿಸುತ್ತದೆ.

೨. ಅದು ವಿಶ್ವಾಸಾರ್ಹ ಆಗುವುದೋ ಅಥವಾ ವಿಶ್ವಾಸಾರ್ಹವಲ್ಲದ್ದು ಆಗುವುದೋ ಎನ್ನುವುದು ಪಾಟೀ ಸವಾಲಿನಲ್ಲಿ ತಪ್ಪಿತದ ಕಾರಣಗಳನ್ನು ಅವಲಂಬಿಸಿರಬೇಕು.

ಪಾಟೀ ಸವಾಲಿನಲ್ಲಿ ತಪ್ಪಿತವು ಸಂಭವಿಸಬಹುದಾದ ಎರಡು ರೀತಿಗಳುಂಟು:

(i) ಪಕ್ಷಕಾರನು ಪಾಟೀ ಸವಾಲು ಮಾಡಬಹುದಾಗಿದ್ದು, ಹಾಗೆ ಮಾಡದಿದ್ದರೆ,

(ii) ಪಕ್ಷಕಾರನು ಪಾಟೀ ಸವಾಲು ಮಾಡಬಹುದಾಗಿದ್ದರೂ ಅವನಿಗೆ ಮಾಡಲು ಸಾಧ್ಯವಾಗದಿದ್ದರೆ.

ವಿಶ್ವಾಸಾರ್ಹತೆಯ ಪ್ರಶ್ನೆಯು ಎರಡನೆಯ ಪ್ರಕರಣದಲ್ಲಿ ಮಾತ್ರ ಸಂಭವಿಸಬಹುದು. ಮೊದಲನೆಯ ಸಂದರ್ಭದಲ್ಲಿ ಉದ್ಭವಿಸಲಿಕ್ಕಿಲ್ಲ. ಕಾನೂನು ಅವಕಾಶವನ್ನು ಒದಗಿಸಬಹುದು, ಅದನ್ನು ಮೀರಿ ಏನೂ ಮಾಡಲಾರದು. ಅವಕಾಶವನ್ನು ತೆಗೆದುಕೊಳ್ಳದಿದ್ದರೆ, ಕೃತಿ ಆಗಿಲ್ಲ ಎಂದು ಕಾನೂನು ನಿರ್ಣಯಿಸುತ್ತದೆ.

## ಪರೀಕ್ಷೆ ನಿಯತ ಕ್ರಮ

೧. ಸಾಕ್ಷಿದಾರನ ಪರೀಕ್ಷೆಯ ಕ್ರಮವು ನಿಯತವಾಗಿರಬೇಕು.

೨. ಪರೀಕ್ಷೆ ಕ್ರಮವು ನಿಯತ ಆಗಿರಬೇಕಾದರೆ ಅದು ಸಾಕ್ಷ್ಯ ನಿಯಮದಲ್ಲಿ ಪ್ರತಿಪಾದಿಸಲಾದ ನಿಯಮಗಳಿಗೆ ಅನುಗುಣವಾಗಿರಬೇಕಾಗುತ್ತದೆ.

೩. ಪರೀಕ್ಷೆಯ ನಿಯತ ಕ್ರಮದ ನಿಯಮಗಳು ಕೆಳಕಂಡವುಗಳಿಗೆ ಸಂಬಂಧಿಸಿರುತ್ತವೆ:

(i) ಪರೀಕ್ಷೆಯ ವ್ಯಾಪ್ತಿ.

(ii) ಪರೀಕ್ಷೆಯ ರೀತಿ.

(iii) ಪರೀಕ್ಷೆಯ ಪರಿಮಿತಿಗಳು.

## ಒಬ್ಬ ಸಾಕ್ಷಿದಾರನ ಪರೀಕ್ಷೆಯ ವ್ಯಾಪ್ತಿ

ಈ ಶೀರ್ಷಿಕೆಯ ಅಡಿಯಲ್ಲಿ, ಯಾವ ವಿಷಯಗಳ ಬಗ್ಗೆ ಒಬ್ಬ ಪಕ್ಷಕಾರನು ಸಾಕ್ಷಿದಾರನಿಗೆ ಪ್ರಶ್ನೆಗಳನ್ನು ಕೇಳಬಹುದೋ, ಆ ವಿಷಯಗಳನ್ನು ಕುರಿತು ವ್ಯವಹರಿಸತಕ್ಕದ್ದು.

೧. ಸಾಕ್ಷಿದಾರ ಪರೀಕ್ಷೆಗೆ ಆಧಾರವಾದ ಉದ್ದೇಶಗಳು ಮುಖ್ಯವಾಗಿ ಎರಡು:

(i) ಅವನಿಗೆ ಏನು ತಿಳಿದಿರುವುದೋ ಅದನ್ನು ಹೊರಗೆ ತರುವುದು

(ii) ಅವನು ಏನು ಹೇಳುವನೋ ಅದರ ಸತ್ಯತೆಯನ್ನು ಪರೀಕ್ಷಿಸುವುದು.

೨. ಸಾಕ್ಷಿದಾರರ ಪರೀಕ್ಷೆಯನ್ನು ಕೆಳಕಂಡವುಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ವ್ಯಾಪ್ತಿಗೊಳಿಸಿದರೆ ಮಾತ್ರವೇ ಸಾಕ್ಷಿದಾರನು ಏನು ಹೇಳಿರುವನೋ ಅದರ ಸತ್ಯತೆಯನ್ನು ಪರೀಕ್ಷಿಸುವ ಉದ್ದೇಶವನ್ನು ಸಾಧಿಸಲು ಸಾಧ್ಯವಾಗುತ್ತದೆ:

(i) ಸಾಕ್ಷಿದಾರನ ಸಮರ್ಥನೆ ಮತ್ತು ಖಂಡನೆ

(ii) ಸಾಕ್ಷಿದಾರನ ಪ್ರತ್ಯಯ ಅಥವಾ ಶೀಲದ ಸ್ಥಿರೀಕರಣ ಅಥವಾ ಖಂಡನೆ

೩. ಪರೀಕ್ಷೆಯ ವ್ಯಾಪ್ತಿಯ ಅಡಿಯಲ್ಲಿ, ನಾವು ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಗಮನಿಸತಕ್ಕದ್ದು:

(i) ಸಾಕ್ಷಿದಾರನ ಪರೀಕ್ಷೆಯ ಕ್ರಮದಲ್ಲಿ ಹೊರಬರಿಸಬಹುದಾದ ಅಥವಾ ಹೊರಬರಿಸಲಾಗದ ವಿಷಯಗಳಿಗೆ ಸಂಬಂಧಪಟ್ಟ ನಿಯಮಗಳು.

(ii) ಸಾಕ್ಷಿದಾರನ ವಿಶ್ವಾಸಾರ್ಹತೆಯನ್ನು ಅಥವಾ ವಿಶ್ವಾಸ–ಅನರ್ಹತೆಯ ಪರೀಕ್ಷಿಸುವ ಸಲುವಾಗಿರತಕ್ಕ ನಿಯಮಗಳು.

(iii) ಸಾಕ್ಷಿದಾರನು ಹೇಳಿಕೆ ನೀಡಿದ ವಿಷಯಗಳ ಪುಷ್ಟೀಕರಣ ಅಥವಾ ಖಂಡನೆಗೆ ಸಂಬಂಧಿಸಿದ ನಿಯಮಗಳು.

## ಒಂದು ಪರೀಕ್ಷೆಯ ಕ್ರಮದಲ್ಲಿ ಹೊರಬರಿಸಬಹುದಾದ ಅಥವಾ ಹೊರಬರಿಸಲಾಗದ ವಿಷಯಗಳು

೧. ಈ ಪ್ರಶ್ನೆಯನ್ನು ಕುರಿತು ೧೩೮ ಮತ್ತು ೧೪೬ ಕಲಮುಗಳಲ್ಲಿ ವ್ಯವಹರಿಸಲಾಗಿದೆ. ಈ ಕಲಮುಗಳ ಪರಿಣಾಮವೆಂದರೆ, ಒಬ್ಬ ಸಾಕ್ಷಿದಾರನ ಕಡೆಯಿಂದ ಅವನ ಪರೀಕ್ಷೆಯಲ್ಲಿ ಹೊರಬರಿಸಬಹುದಾದ ವಿಷಯಗಳು ಎರಡು ಬಗೆಯಾಗಿರುತ್ತವೆ.

(i) ವಿವಾದಾಂಶಕ್ಕೆ ಸುಸಂಬದ್ಧವಾದ ವಿಷಯಗಳು.

(ii) ಸಾಕ್ಷಿದಾರನ ವಿಶ್ವಾಸಾರ್ಹತೆಗೆ ಸಂಬಂಧಿಸಿದ ವಿಷಯಗಳು.

ಇವು ಸಾಕ್ಷಿದಾರರನ್ನು ಪರೀಕ್ಷೆಗೆ ಗುರಿಪಡಿಸಬಹುದಾದ ಎರಡೇ ಎರಡು ವಿಷಯಗಳಾಗಿರುತ್ತವೆ.

**೨. ಆದರೆ ಪ್ರತಿಯೊಬ್ಬ ಪಕ್ಷಕಾರನು ಇವೆರಡೂ ವಿಷಯಗಳ ಮೇಲೆ ಸಾಕ್ಷಿದಾರನನ್ನು ಪರೀಕ್ಷಿಸುವ ಹಕ್ಕು ಹೊಂದಿರುವುದಿಲ್ಲ.**

(i) ಸುಸಂಬದ್ಧವಾದ ವಿಷಯಗಳಿಗೆ ಸಂಬಂಧಪಟ್ಟ ಹಾಗೆ, ಸಾಕ್ಷಿದಾರನನ್ನು ಕರೆದ ಪಕ್ಷಕಾರ ಮತ್ತು ಪ್ರತಿ ಪಕ್ಷಕಾರ ಇವರಿಬ್ಬರೂ ಸಾಕ್ಷಿದಾರನನ್ನು ಪರೀಕ್ಷಿಸಲು ಹಕ್ಕು ಹೊಂದಿರುತ್ತಾರೆ. ನಿಜವಾಗಿಯೂ, ನಿಯಮಾನುಸಾರ ಪಕ್ಷಕಾರನು ಸಾಕ್ಷಿದಾರನನ್ನು ಎಲ್ಲ ಸುಸಂಬದ್ಧ ವಿಷಯಗಳ ಮೇಲೆ ಪರೀಕ್ಷಿಸಲು ಹಕ್ಕು ಹೊಂದಿರುತ್ತಾನೆ ಎಂದು ಅರ್ಥವಲ್ಲ; ಸಾಕ್ಷಿದಾರನ ಪರೀಕ್ಷೆಯು ಸುಸಂಬದ್ಧ ವಿಷಯಗಳಿಗೆ ಸೀಮಿತವಾಗಿರ ಬೇಕು. ಮುಖ್ಯ ವಿಚಾರಣೆಯಲ್ಲೇ ಆಗಲಿ, ಪಾಟೀ ಸವಾಲಿನಲ್ಲೇ ಆಗಲಿ ಸುಸಂಬದ್ಧವಲ್ಲದ ವಿಷಯಗಳಿಗೆ ಅನುಮತಿಯಿಲ್ಲ; ಅವಕಾಶವಿಲ್ಲ.

ಆದ್ದರಿಂದ ಸುಸಂಬದ್ಧ ಸಂಗತಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮುಖ್ಯ ವಿಚಾರಣೆಯ ಅಥವಾ ಪಾಟೀ ಸವಾಲಿನ ವ್ಯಾಪ್ತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲ.

(ಇಲ್ಲಿಗೆ ಹಸ್ತಪ್ರತಿಯ ೨೦೩ನೇ ಪುಟವು ಸಮಾಪ್ತವಾಗುತ್ತದೆ. ಪುಟ ೨೦೪ ಕಳೆದಿದೆ. ಮುಂದಿನ ಪಾಠವು ಪುಟ ೨೦೫ರಿಂದ ಪ್ರಾರಂಭವಾಗುತ್ತದೆ –ಸಂಪಾದಕ)

ಸತ್ಯವನ್ನು ನುಡಿಯುವ ವಿಶಿಷ್ಟ ಗುಣದ ಅಭಾವದಿಂದ ಮನುಷ್ಯನ ಪ್ರತ್ಯಥೆಯನ್ನು ಅಲುಗಾಡಿಸುವ ಅಗತ್ಯ ಪರಿಣಾಮ ಆಗುತ್ತದೆ ಎಂಬ ಬಗ್ಗೆ ಒಪ್ಪಿಗೆಯುಂಟು. ಆದ್ದರಿಂದ ಸಾಕ್ಷಿದಾರನ ಶೀಲದ ಆ ಅಂಶಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಯಾವಾಗಲೂ ಅವಕಾಶವುಂಟು. ಮತ್ತು ಅಂತ ಪ್ರಶ್ನೆಗಳನ್ನು ಪಾಟೀ ಸವಾಲಿನಲ್ಲಿ ಕೇಳಬಹುದು.

ಆದರೆ ಸಾಕ್ಷಿದಾರನ ಸತ್ಯತೆಯ ಮೇಲೆ ಸರ್ವಸಾಧಾರಣ ಉತ್ತಮಶೀಲನ ಅಭಾವದ ಪರಿಣಾಮ ಏನು ಎಂಬ ಬಗ್ಗೆ ಸಾಮಾನ್ಯ ಒಪ್ಪಿಗೆಯಿಲ್ಲ.

ಈ ವಿಷಯವನ್ನು ಕುರಿತು ಎರಡು ಅಭಿಪ್ರಾಯಗಳಿವೆ. ಸರ್ವೇಸಾಧಾರಣ ಕೆಟ್ಟ ಶೀಲವು ಸತ್ಯವನ್ನು ನುಡಿಯುವ ಸಾಮರ್ಥ್ಯವನ್ನು ದುರ್ಬಲಗೊಳಿಸುವ ಪರಿಣಾಮವನ್ನು ಒಳಗೊಂಡಿರುತ್ತದೆ. ಆದ್ದರಿಂದ

ಸಾಮಾನ್ಯ ನೈತಿಕ ಪತನವನ್ನು ತೋರಿಸಿದರೆ, ಸತ್ಯತೆಯ ಮೇಲೆ ಅನಿವಾರ್ಯವಾದ ಅವನತಿಯನ್ನು ತೋರಿಸಿದಂತೆ ಆಗುತ್ತದೆ. ಇನ್ನೊಂದು ಅಭಿಪ್ರಾಯವೆಂದರೆ, ಕೆಟ್ಟ ಸರ್ವೇಸಾಧಾರಣ ಮನೋಭಾವ ಅಂದರೆ ಅಗತ್ಯವಾಗಿ ಅಥವಾ ಸಾಮಾನ್ಯವಾಗಿ ಸತ್ಯತೆಯ ಅಭಾವಕ್ಕೆ ಎಡೆಮಾಡಿಕೊಡುತ್ತದೆ ಎಂದು ಹೇಳುವಂತಿಲ್ಲ. ಆದ್ದರಿಂದ ಒಂದು ಕೆಟ್ಟ ಸರ್ವೇಸಾಧಾರಣ ಮನೋಭಾವವು; ಸಾಕ್ಷಿದಾರನ ಪ್ರತ್ಯಯವನ್ನು ಅಲುಗಾಡಿಸಲು ಪ್ರಮಾಣೀಕರಣ (ಪರೀಕ್ಷಕ) ಮೌಲ್ಯವನ್ನು ಹೊಂದಿರುವುದಿಲ್ಲ.

ಬ್ರಿಟಿಷ್ ಕಾನೂನಿನ ಅಡಿಯಲ್ಲಿ ಶೀಲಕ್ಕೆ ಕ್ಷತಿಯ ಮೂಲಕ ಪ್ರತ್ಯಯವನ್ನು ಅಲುಗಾಡಿಸುವ ಉದ್ದೇಶದ ಸಲುವಾಗಿ ಸರ್ವೇಸಾಧಾರಣ ಶೀಲವನ್ನು ಹೊರತುಪಡಿಸಲಾಗುತ್ತದೆ ಮತ್ತು ಸತ್ಯತೆಯ ಸಲುವಾಗಿ ಮಾತ್ರ ಶೀಲವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

### ಪಾಟೀ ಸವಾಲಿನ ಮೂಲಕವಲ್ಲದೆ ಅನ್ಯಥಾ ಶೀಲದ ಖಂಡನೆ

**ಕಲಮು ೧೫೫**

೧. ೧೫೫ನೇ ಕಲಮಿನ ಉಪಬಂಧಗಳ ಅಡಿಯಲ್ಲಿ ಸ್ವತಂತ್ರ ಸಾಕ್ಷ್ಯವನ್ನು ಹಾಜರುಪಡಿಸುವ ಮೂಲಕ ಸಾಕ್ಷಿದಾರನ ಶೀಲವನ್ನು ಖಂಡಿಸಲು ಅನುಮತಿಯಿರುತ್ತದೆ.

೨. **ಇದೂ ಸಹ ಪ್ರತಿ ಪಕ್ಷಕಾರನು ಹೊಂದಿರುವ ಹಕ್ಕು.** ಆದಕಾರಣ ಸಾಕ್ಷಿದಾರನನ್ನು ಕರೆದ ಪಕ್ಷಕಾರನು, ಇತರ ವ್ಯಕ್ತಿಗಳ ಸಾಕ್ಷ್ಯದ ಮೂಲಕ ಆ ಸಾಕ್ಷಿದಾರನ ಶೀಲವನ್ನು ಖಂಡಿಸಲು ಸಾಧ್ಯವಿಲ್ಲ.

೩. ಈ ಕೆಳಕಂಡ ರೀತಿಗಳಲ್ಲಿ ಖಂಡನೆಗಳನ್ನು ಕೈಗೊಳ್ಳಬಹುದು:

(೧) ತಮ್ಮ ವ್ಯಕ್ತಿಗತ ತಿಳಿವಳಿಕೆಯ ಮೂಲಕ ಸಾಕ್ಷಿದಾರನು ಪ್ರತ್ಯಯಕ್ಕೆ ಯೋಗ್ಯನಲ್ಲವೆಂದು ಸಾಕ್ಷ್ಯ ಕೊಡುವ ವ್ಯಕ್ತಿಗಳ ಸಾಕ್ಷ್ಯದ ಮೂಲಕ.

(೨) ತನ್ನ ಸಾಕ್ಷ್ಯವನ್ನು ಕೊಡಲು ಲಂಚವನ್ನು ಪಡೆದಿದ್ದಾನೆಂದು ಅಥವಾ ಲಂಚ ಕೊಡುವುದಾಗಿ ಹೇಳಿರುವುದನ್ನು ಒಪ್ಪಿಕೊಂಡಿದ್ದಾನೆಂದು ಅಥವಾ ಇತರ ಭ್ರಷ್ಟ ಪ್ರಲೋಭನೆಗಳನ್ನು ಪಡೆದಿದ್ದಾನೆಂದು ರುಜುವಾತು ಮಾಡುವ ಮೂಲಕ.

(೩) ಖಂಡಿಸಲು ಅವಕಾಶವಿರುವ ಅವನ ಸಾಕ್ಷ್ಯದ ಯಾವುದೇ ಭಾಗವು ಅವನ ಈ ಹಿಂದಿನ ಹೇಳಿಕೆಗಳಿಗೆ ಅಸಂಗತವಾಗಿರುವುದೆಂದು ರುಜುವಾತು ಮಾಡುವ ಮೂಲಕ.

(೪) ಬಲಾತ್ಕಾರದ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ವ್ಯವಹರಣೆಗಳಲ್ಲಿ ಫಿರ್ಯಾದುದಾರಳು ಸಾಮಾನ್ಯವಾಗಿ ಅನೈತಿಕ ಶೀಲದವಳಾಗಿದ್ದಾಳೆ ಎಂದು ರುಜುವಾತು ಮಾಡುವ ಮೂಲಕ.

### ೩. ಸಾಕ್ಷಿದಾರನ ಸಮರ್ಥನೆ ಮತ್ತು ಖಂಡನೆ ಇವುಗಳಿಗೆ ಸಂಬಂಧಪಟ್ಟ ನಿಯಮಗಳು

೧. ಸಮರ್ಥಕ ಸಾಕ್ಷ್ಯದ – ಸಮರ್ಥಕ ಸಾಕ್ಷ್ಯ ಎಂದರೆ ಸರಳ ಪದಗಳಲ್ಲಿ ಇಷ್ಟೇ ಅರ್ಥ. ಒಬ್ಬ ಸಾಕ್ಷಿದಾರನ ಸಾಕ್ಷ್ಯದ ಸತ್ಯತೆಯನ್ನು ಸ್ಥಿರೀಕರಿಸುವ ಪರಿಣಾಮವುಳ್ಳ ಸಾಕ್ಷ್ಯ. ಸಾಕ್ಷಿದಾರನ ಭರವಸೆಯನ್ನು ಇಮ್ಮಡಿಯಾಗಿ ದೃಢೀಕರಿಸುವ ಸಾಕ್ಷ್ಯ.

೨. **ಸಮರ್ಥಕ ಸಾಕ್ಷ್ಯದ ಎರಡು ಪ್ರಕಾರಗಳು–** ಸಾಕ್ಷ್ಯ ಅಧಿನಿಯಮವು ಎರಡು ಪ್ರಕಾರದ ಸಮರ್ಥಕ ಸಾಕ್ಷ್ಯಗಳಿಗೆ ಮನ್ನಣೆ ನೀಡುತ್ತದೆ.

(i) ಸುಸಂಬದ್ಧ ಸಂಗತಿಗಳಿಗೆ ಹೊರತಾದ ಸಂಗತಿಗಳ ಬಗೆಗಿನ ಸಾಕ್ಷ್ಯ.
(ii) ಹೆಚ್ಚಿನ ಸಾಕ್ಷ್ಯ.

**ಕಲಮು ೧೫೬**

**ಸುಸಂಬದ್ಧ ಸಂಗತಿಗಳಿಗೆ ಹೊರತಾದ ಸಂಗತಿಗಳ ಬಗೆಗಿನ ಸಾಕ್ಷ್ಯ**

ಎರಡು ಅಗತ್ಯತೆಗಳನ್ನು ಪಾಲಿಸಬೇಕಾಗುತ್ತದೆ.

(i) ಯಾವ ಸಮರ್ಥಕ ಪರಿಸ್ಥಿತಿಯ ಬಗ್ಗೆ ಸಮರ್ಥಕ ಸಾಕ್ಷ್ಯವನ್ನು ಕೊಡಲಾಗುತ್ತಿದೆಯೋ ಆ ಪರಿಸ್ಥಿತಿಯನ್ನು, ಸುಸಂಬದ್ಧ ಸಂಗತಿಯು ಘಟಿಸಿದ ಸಮಯಕ್ಕೆ ಅಥವಾ ಸರಿ ಸುಮಾರು ಸಮಯಕ್ಕೆ ಸಾಕ್ಷಿಯು ಅದನ್ನು ನಿರೀಕ್ಷಿಸಿದ್ದಿರಬೇಕು.

(ii) ಅಂಥ ಪರಿಸ್ಥಿತಿಗಳನ್ನು, ರುಜುವಾತು ಮಾಡಿದರೆ, ಅವು ಸುಸಂಬದ್ಧ ಸಂಗತಿಯನ್ನು ಕುರಿತು ಸಾಕ್ಷಿದಾರನು ಕೊಟ್ಟ ಸಾಕ್ಷ್ಯಕ್ಕೆ ಸಮರ್ಥಕವಾಗುತ್ತವೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿರಲೇಬೇಕು.

**ದೃಷ್ಟಾಂತಗಳು**

'ಎ' ಮತ್ತು 'ಬಿ' ಒಂದು ಸ್ಥಳದಲ್ಲಿ ಜಂಟಿಯಾಗಿ ದರೋಡೆ ಮಾಡಿದರು. 'ಬಿ'ನ ಮೇಲೆ ಆರೋಪ ಹೊರಿಸಲಾಗಿದೆ ಮತ್ತು 'ಎ'ನು (ಸಹಾಪರಾಧಿಯಾದ) ಅವನ ವಿರುದ್ಧ ಸಾಕ್ಷ್ಯ ಕೊಡುತ್ತಾನೆ. 'ಎ'ನು ತನ್ನ ಸಾಕ್ಷ್ಯದಲ್ಲಿ, ದಾರಿಯಲ್ಲಿ ಸಂಭವಿಸಿದ ಆದರೆ ದರೋಡೆಗೆ ಸಂಬಂಧವಿಲ್ಲದ ಅನೇಕ ಘಟನೆಗಳನ್ನು ವರ್ಣಿಸಿ ಹೇಳುತ್ತಾನೆ.

ಪ್ರಾಸಿಕ್ಯೂಷನ್‌ನವರು ದಾರಿಯಲ್ಲಿ ಸಂಭವಿಸಿದ ಘಟನೆಗಳನ್ನು ಕುರಿತು ಸಹಾಪರಾಧಿಯು ಕೊಟ್ಟ ಸಾಕ್ಷ್ಯದ ಸತ್ಯತೆಯನ್ನು ಪರೀಕ್ಷಿಸಲು ಸ್ವತಂತ್ರ ಸಾಕ್ಷಿದಾರರನ್ನು ಕರೆಯುತ್ತಾರೆ.

'ಬಿ' ದರೋಡೆ ಮಾಡಿದ್ದನೋ ಹೇಗೆ ಎನ್ನುವುದೇ ಸುಸಂಬದ್ಧ ಪ್ರಶ್ನೆ. ಪ್ರಾಸಿಕ್ಯೂಷನ್ ಒದಗಿಸಿದ ಸಾಕ್ಷ್ಯವು ಸುಸಂಬದ್ಧ ಪ್ರಶ್ನೆಗೆ ಸಂಬಂಧಿಸಿಲ್ಲ. ಆದಾಗ್ಯೂ, ದರೋಡೆಯನ್ನು ಕುರಿತಂತೆ ಸಹಾಪರಾಧಿಯ ಸಾಕ್ಷ್ಯವನ್ನು ಪುಷ್ಟೀಕರಿಸುವುದೆಂದು ನ್ಯಾಯಲಯವು ಅಭಿಪ್ರಾಯಪಟ್ಟರೆ, ಅದನ್ನು ಅಂಗೀಕರಿಸಲಾಗುವುದು.

**ಸುಸಂಬದ್ಧ ಸಂಗತಿಗಳ ಹೆಚ್ಚಿನ ಸಾಕ್ಷ್ಯದ ರೂಪದಲ್ಲಿ ಸಮರ್ಥಕ ಸಾಕ್ಷ್ಯ**

**ಕಲಮು ೧೫೭**

೧. ಅದೇ ಸಂಗತಿಯನ್ನು ಸಾಕ್ಷಿದಾರನು ಕೊಟ್ಟ ಹೇಳಿಕೆಗಳ ಪೈಕಿ ಯಾವುದೇ ಹೇಳಿಕೆಯ ಸಾಕ್ಷ್ಯವನ್ನು ಒದಗಿಸಿ ರುಜುವಾತು ಮಾಡಬಹುದು. ಇದಕ್ಕೆ, ಸುಸಂಗತನಾಗಿರುವ ಯಾರೇ ವ್ಯಕ್ತಿಯನ್ನು ನಂಬಬಹುದು ಎನ್ನುವ ತತ್ವವೇ ಆಧಾರ. ಒಬ್ಬ ಮನುಷ್ಯನು, ಹಿಂದಿನ ಸಂದರ್ಭದಲ್ಲಿ, ಅದೇ ಹೇಳಿಕೆಯನ್ನು ಮಾಡಿದ್ದನು ಎಂಬ ಸಂಗತಿಯು ಮಾತ್ರವೇ ಸತ್ಯತೆಗೆ ಏನನ್ನು ಸೇರಿಸಲು ಸಾಧ್ಯವಿಲ್ಲ. ಆ ಮೂಲಕ ಎಳ್ಳಷ್ಟೂ ಪುಷ್ಟಿ ದೊರೆಯುವುದಿಲ್ಲ. ಒಬ್ಬನು ಒಮ್ಮೆ ಹೇಳಿದ ಸುಳ್ಳನ್ನು ಪದೇ ಪದೇ ಉಚ್ಚರಿಸುತ್ತ ಇರಬಹುದು, ಆ ಬಗ್ಗೆ ಹೇತು (ಪ್ರೇರಣೆ) ಏನಾದರೂ ಇದ್ದ ಪಕ್ಷದಲ್ಲಿ. ಅಂದರೆ, ಸುಸಂಗತೆಯು ನಿರ್ಣಾಯಕವಾದರೆ ಸಂಚು ಮಾಡಲು ಇದಕ್ಕಿಂತ ಸುಲಭವಾದ ಬೇರೆ ಉಪಾಯವಿರಲಾರದು ಮತ್ತು ಅನ್ಯಾಯಕ್ಕೆ ಹೇಸದ ವ್ಯಕ್ತಿಗಳು

ನಿರಪರಾಧಿಗಳಾದ ವ್ಯಕ್ತಿಗಳಿಗೆ ದೋಷ ಸಿದ್ಧಿಯಾಗುವಂತೆ ಮಾಡುವಲ್ಲಿ ಇಂಥ ದಾರಿಯನ್ನೇ ಅನುಸರಿಸುವುದುಂಟು. ಅಂಥ ಕೇಡಿಗಳು ತಮಗೆ ಬೇಡವಾದ ಯಾರೇ ನಿರಪರಾಧಿಯನ್ನು ಸಿಕ್ಕಿಸಿ ಹಾಕಲು ಈ ಹಾದಿಯನ್ನು ಅನುಸರಿಸುತ್ತಾರೆ. ಅವರು ಮೊದಲು ತಾವೇ ಅಪರಾಧ ಮಾಡುತ್ತಾರೆ. ಆ ತರುವಾಯ ವಿಭಿನ್ನ ಸ್ಥಳಗಳಲ್ಲಿ, ವಿಭಿನ್ನ ಸಮಯಗಳಲ್ಲಿ, ವಿಭಿನ್ನ ವ್ಯಕ್ತಿಗಳಿಗೆ ನಾನಾ ರೀತಿಯ ಹೇಳಿಕೆಗಳನ್ನು ಕೊಡುತ್ತಾರೆ. ಆ ಮೂಲಕ ಆ ನಿರಪರಾಧಿಯನ್ನು ಸಿಕ್ಕಿಸಿಹಾಕುತ್ತಾರೆ.

ಆರ್. ವಿರುದ್ಧ ಮಾಲಪ್ಪ, *II. Bom. H.C.R. ೧೯೬ (೧೯೮)*

೨. ಈ ಹಿಂದೆ ಮಾಡಿದ ಹೇಳಿಕೆಯು ಪ್ರಮಾಣದ ಮೇಲೆ ಅಥವಾ ಅನ್ಯಥಾ ಮಾಡಿದ ಹೇಳಿಕೆ ಆಗಿರಬಹುದು ಮತ್ತು ಸಾಮಾನ್ಯ ಸಂಭಾಷಣೆಯಲ್ಲಿ ಮಾಡಿದ ಹೇಳಿಕೆ ಆಗಿರಬಹುದು ಅಥವಾ ತನಿಖೆ ಮಾಡಲು ಮತ್ತು ಹೇಳಿಕೆ ಮಾಡಿದವನನ್ನು ಪ್ರಶ್ನಿಸಲು ಅಧಿಕಾರ ಹೊಂದಿರುವ ವ್ಯಕ್ತಿಯ ಮುಂದೆ ಮಾಡಿದ ಹೇಳಿಕೆ ಆಗಿರಬಹುದು. ಅದು ಬಾಯಿಮಾತಿನ ಹೇಳಿಕೆ ಆಗಿರಬಹುದು ಅಥವಾ ಲಿಖಿತ ಹೇಳಿಕೆ ಆಗಿರಬಹುದು. ತನಿಖೆ ಮಾಡಲು ಅಧಿಕಾರ ಹೊಂದಿರುವ ವ್ಯಕ್ತಿಯು ಮಾಡಿದ ಹಿಂದಿನ ಹೇಳಿಕೆ ಮತ್ತು ಹಾಗೆ ಅಧಿಕಾರ ಹೊಂದಿಲ್ಲದ ವ್ಯಕ್ತಿಯ ಮುಂದೆ ಮಾಡಿದ ಹಿಂದಿನ ಹೇಳಿಕೆ ಇವುಗಳಲ್ಲಿ ವ್ಯತ್ಯಾಸವುಂಟು. ಹೇಳಿಕೆಯನ್ನು, ಸಂಗತಿಯನ್ನು ತನಿಖೆ ಮಾಡಲು ಕಾನೂನು ಸಮ್ಮತವಾಗಿ ಸಕ್ಷಮನಲ್ಲದ ವ್ಯಕ್ತಿಯ ಮುಂದೆ ಮಾಡಿದ್ದರೆ, ಅದನ್ನು ಆ ಸಂಗತಿಯು ಘಟಿಸಿದ ಸಮಯಕ್ಕೆ ಅಥವಾ ಆ ಸುಮಾರಿನಲ್ಲಿ ಮಾಡಿದ್ದಿರಬೇಕು. ಈ ಷರತ್ತು ತನಿಖೆ ಮಾಡಲು ಸಕ್ಷಮವಾದ ವ್ಯಕ್ತಿಯ ಮುಂದೆ ಮಾಡಿದ ಹೇಳಿಕೆಗೆ ಅನ್ವಯಿಸುವುದಿಲ್ಲ.

*೨೫ Mad. ೨೧೦*

**ದೃಷ್ಟಾಂತಗಳು**

(i) ತನ್ನ ಮೇಲೆ ಬಲಾತ್ಕಾರವಾಯಿತೆಂದು ಆರೋಪಿಸಿ ಒಬ್ಬ ಹುಡುಗಿಯು ಮಾಡಿದ ಹೇಳಿಕೆಯನ್ನು, ಬಲಾತ್ಕಾರವು ನಡೆದ ಆ ತರುವಾಯವೇ ಮಾಡಿದ್ದರೆ, ಹೇಳಿಕೆಯು ಗ್ರಾಹ್ಯವಾಗುತ್ತದೆ.

(ii) ಸಾಯುವ ಸಮಯಕ್ಕೆ ಮಾಡಿದ ಹೇಳಿಕೆಯು ಪುಷ್ಟೀಕಾರಕ ಸಾಕ್ಷ್ಯವಾಗಿ ಗ್ರಾಹ್ಯವಾಗುತ್ತದೆ.

(iii) ಪೊಲೀಸರಿಗೆ ಕೊಟ್ಟ ಮೊದಲ ಮಾಹಿತಿಯು ಮಾಹಿತಿಗಾರನ ಸಾಕ್ಷ್ಯದ ಸಮರ್ಥನೆಯಾಗಿ (ಪುಷ್ಟೀಕರಣವಾಗಿ) ಗ್ರಾಹ್ಯವಾಗುತ್ತದೆ. (ಅಂಗೀಕಾರಾರ್ಹವಾಗುತ್ತದೆ).

ಎಚ್ಚರಿಕೆಯ ರೂಪದಲ್ಲಿ ಅಂಶಗಳು ಗಮನಿಸತಕ್ಕವುಗಳಾಗಿವೆ.

i) ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೧೬೨ನೇ ಕಲಮಿನ ಅಡಿಯಲ್ಲಿ ತನಿಖೆಯ ಅವಧಿಯಲ್ಲಿ ಪೊಲೀಸರ ಮುಂದೆ ಮಾಡಲಾದ ಹೇಳಿಕೆಗಳ ಉಪಯೋಗ. ಈ ಹೇಳಿಕೆಗಳು ಸಹ, ತನಿಖೆ ಮಾಡಲು ಅಧಿಕಾರ ಹೊಂದಿರುವ ವ್ಯಕ್ತಿಯ ಮುಂದೆ ಮಾಡಲಾದ ಹೇಳಿಕೆಗಳಾಗಿರುತ್ತವೆ.

ಅವುಗಳನ್ನು ಸಮರ್ಥನೆಯ (ಪುಷ್ಟೀಕರಣ) ಸಲುವಾಗಿ ಉಪಯೋಗಿಸಿಕೊಳ್ಳಬಹುದೆ?

ಒಂದು ಸಮಯದಲ್ಲಿ ಅವುಗಳನ್ನು ಹಾಗೆ ಉಪಯೋಗಿಸಿಕೊಳ್ಳಬಹುದು ಎಂದು ನಿರ್ಣಯಿಸಲಾಗಿತ್ತು.

*೩೬ Cal. ೨೮೧*

*೩೫ Mad. ೩೯೭*

*೩೯ Bom. ೫೮*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೧೬೨ನೇ ಕಲಮಿನ ತಿದ್ದುಪಡಿಯ ಮೂಲಕ ಲಿಖಿತ ದಾಖಲೆ ಮತ್ತು ಪೊಲೀಸರು ಮುಂದೆ ಮಾಡಲಾದ ಬಾಯಿಮಾತಿನ ಹೇಳಿಕೆಗಳು ಇವೆರಡನ್ನೂ ಹೊರತುಪಡಿಸಲಾಗಿದೆ. ಅವು ಹಿಂದಿನ ಹೇಳಿಕೆಗಳಾಗಿದ್ದರೂ ಅವುಗಳನ್ನು ಪುಷ್ಟೀಕರಣಕ್ಕಾಗಿ ಉಪಯೋಗಿಸುವಂತಿಲ್ಲ.

(ii) ಪುಷ್ಟೀಕರಣ ಸಾಕ್ಷ್ಯ ಮತ್ತು ಮೂಲ ಸಾಕ್ಷ್ಯ ಇವುಗಳ ನಡುವಣ ವ್ಯತ್ಯಾಸ ಪ್ರಧಾನವಾದದ್ದು. ಯಾಕೆಂದರೆ ಪುಷ್ಟೀಕರಣ ಸಾಕ್ಷ್ಯದ ಉಪಯೋಗ ಆ ವ್ಯತ್ಯಾಸ (ವಿಭಿನ್ನತೆಯನ್ನು) ಅವಲಂಬಿಸಿರುತ್ತದೆ. ಪುಷ್ಟೀಕರಣ ಸಾಕ್ಷ್ಯವು ಮೂಲ ಸಾಕ್ಷ್ಯವಲ್ಲ.

**ದೃಷ್ಟಾಂತಗಳು**

ಒಬ್ಬ ಸೆರೆಯಾಳುವಿನ ಅಧಿವಿಚಾರಣೆಯಲ್ಲಿ, ಅದೇ ಅಪರಾಧದಲ್ಲಿ ಒಳಗೊಂಡವರೆಂದು ಆಪಾದಿಸಲಾದ ಇತರ ವ್ಯಕ್ತಿಗಳ ಹಿಂದಿನ ಅಧಿವಿಚಾರಣೆಯಲ್ಲಿ ಕೊಡಲಾದ ಸಾಕ್ಷಿದಾರರ ಹೇಳಿಕೆಗಳನ್ನು, ಅವನ (ಸೆರೆಯಾಳುವಿನ) ವಿರುದ್ಧ ಉಪಯೋಗಿಸಲಾಗಿತ್ತು. ಆ ಸಾಕ್ಷಿದಾರರನ್ನು ಸಾಮಾನ್ಯ ರೀತಿಯಲ್ಲಿ ಪರೀಕ್ಷಿಸಲಿಲ್ಲ. ಅದಕ್ಕೆ ಬದಲಾಗಿ ಅವರಿಂದ ಪುನಃ ಪ್ರಮಾಣ ಮಾಡಿಸಿ ಹೀಗೆ ಹೇಳಿಕೆ ನೀಡುವಂತೆ ಮಾಡಲಾಯಿತು. "ನಾನು ಈ ಹಿಂದೆ ಈ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಕೊಟ್ಟಿದ್ದೆನು. ಆ ಸಾಕ್ಷ್ಯವು ಸತ್ಯವಾಗಿರುತ್ತದೆ."

ಈ ಸಾಕ್ಷ್ಯವು ಅಗ್ರಾಹ್ಯ ಎಂದು ನಿರ್ಣಯಿಸಲಾಯಿತು. ಅದು ಕೇವಲ ಪುಷ್ಟೀಕರಣ ಸಾಕ್ಷ್ಯವಾಗಿತ್ತು. ಮತ್ತು ಮೂಲ ಸಾಕ್ಷ್ಯವನ್ನು ಕೊಟ್ಟ ಅನಂತರವೇ ಅದನ್ನು ಉಪಯೋಗಿಸಬಹುದಾಗಿತ್ತು. ಮೂಲ ಸಾಕ್ಷ್ಯವನ್ನು ಕೊಡದಿರುವಲ್ಲಿ, ಪುಷ್ಟೀಕರಣ ಸಾಕ್ಷ್ಯವನ್ನು ಕೊಡಲು ಸಾಧ್ಯವಿಲ್ಲ.

೧೨ *W.R. Cr.* ೩.

**ಅದೇ ರೀತಿ** ಪಂಚನು ಆಪಾದಿತನನ್ನು ಗುರುತಿಸದಿದ್ದರೆ, ಗುರುತಿಸುವ ಪಂಚನಾಮೆಯು ಪುಷ್ಟೀಕರಣ ಸಾಕ್ಷ್ಯವಾಗಿ ಅಗ್ರಾಹ್ಯವಾಗುವ ಸಂಭವವುಂಟು.

ಈ ಸಂಬಂಧದಲ್ಲಿ ಒಂದು ಪ್ರಶ್ನೆಯೆಂದರೆ, ಸಾಕ್ಷಿದಾರನಾದ ಒಬ್ಬ ವ್ಯಕ್ತಿಯು ಮೃತನಾಗಿರುವ ಕಾರಣ ಅಥವಾ ಅವನನ್ನು ಹುಡುಕಲು ಸಾಧ್ಯವಿಲ್ಲದ ಕಾರಣ ಅಥವಾ ಅವನು ಸಾಕ್ಷ್ಯವನ್ನು ಕೊಡಲು ಅಸಮರ್ಥನಾಗಿರುವ ಕಾರಣ ಅಥವಾ ಸುಮಾರು ವಿಳಂಬವಿಲ್ಲದೆ ಅಥವಾ ವೆಚ್ಚವಿಲ್ಲದೆ ಅವನ ಹಾಜರಾತಿಯನ್ನು ದೊರಕಿಸಿಕೊಳ್ಳುವುದು ಸಾಧ್ಯವಾಗಿಲ್ಲದ ಕಾರಣ ಮೂಲಸಾಕ್ಷ್ಯವನ್ನು ಕೊಡಲು ಅವನನ್ನು ಕರೆಯಲು ಸಾಧ್ಯವಿಲ್ಲದಿರುವಾಗ, ಪುಷ್ಟೀಕರಣ ಸಾಕ್ಷ್ಯವನ್ನು ಕೊಡುವ ಪ್ರಶ್ನೆ. ನ್ಯಾಯಾಲಯವು, ಅಂಥ ಪರಿಸ್ಥಿತಿಗಳಲ್ಲಿ ಅದು ಸಮಂಜಸ ಅಲ್ಲ ಭಾವಿಸುತ್ತದೆ.

೧೫೮ನೇ ಕಲಮಿನ ಪ್ರಕಾರ, ಮೂಲಸಾಕ್ಷ್ಯವನ್ನು ಕೊಡಲು (ಒದಗಿಸಲು) ಸಾಧ್ಯವಿಲ್ಲದಿದ್ದರೂ ಪುಷ್ಟೀಕರಣ ಸಾಕ್ಷ್ಯವನ್ನು ಕೊಡಲು ಅನುಮತಿಯುಂಟು.

ಇದು ಪರಿನಿಯಮ ದ್ವಾರಾ ಸೃಷ್ಟಿಸಲಾದ ಅಪವಾದ. ಪರಿನಿಯಮವು ಸೃಷ್ಟಿಸಿದ ಇನ್ನೊಂದು ಅಪವಾದವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ೨೮೮ನೇ ಕಲಮಿನಲ್ಲಿ ಒಳಗೊಂಡಿದೆ. ಆ ಕಲಮಿನ ಮೂಲಕ ಒಪ್ಪಿಸುವ ಮ್ಯಾಜಿಸ್ಟ್ರೇಟನ ಮುಂದೆ ಕೊಡಲಾದ ಸಾಕ್ಷ್ಯವು, ಎಲ್ಲ ಉದ್ದೇಶಗಳಿಗಾಗಿ ಅಂದರೆ ಅದರಲ್ಲಿ ಹೇಳಿಕೆ ಕೊಡಲಾದ ಎಲ್ಲ ಸಂಗತಿಗಳ ಮೂಲ ಸಾಕ್ಷ್ಯವಾಗಿ, ಸತ್ರ ನ್ಯಾಯಾಲಯದ ಮುಂದೆ ಕೊಡಲಾದ ಸಾಕ್ಷ್ಯ ಎಂದು ಪರಿಗಣಿಸಲ್ಪಡುತ್ತದೆ.

**೩/೨ ಸಾಕ್ಷಿದಾರನ ಖಂಡನೆಗೆ ಸಂಬಂಧಿಸಿದ ನಿಯಮಗಳು**

೧. ಈ ವಿಷಯವು ಅಗತ್ಯವಾಗಿ ಎರಡು ಅಂಶಗಳಿಗೆ ಒಳಪಡಬೇಕಾದ ವಿಷಯಗಳಾಗಿರುತ್ತದೆ.

(i) ನ್ಯಾಯಾಲಯವು ನಡೆಸುವ ವಿಚಾರಣೆಯ ಉದ್ದೇಶವೆಂದರೆ ಸತ್ಯ ಶೋಧನೆ. ಆದ್ದರಿಂದ ಖಂಡನೆಗೆ ಅವಕಾಶ ಒದಗಿಸಲೇಬೇಕಾಗುತ್ತದೆ.

(ii) ಖಂಡನೆಗೆ ಅವಕಾಶ ಒದಗಿಸಿದರೆ, ಅನುಮತಿ ಕೊಟ್ಟರೆ, ವಿಚಾರಣೆಗೆ ಕೊನೆಯಿರಲಿಕ್ಕಿಲ್ಲ. ಆದ್ದರಿಂದ ಖಂಡನೆಯ ಪ್ರಕ್ರಿಯೆ ಮೇಲೆ ಒಂದಿಷ್ಟು ಪರಿಮಿತಿ ಇರಬೇಕಾದುದು ಸಮಂಜಸವೇ.

**೨. ಯಾವ ಪ್ರಕರಣಗಳಲ್ಲಿ ಸಾಕ್ಷಿಗಳನ್ನು ಖಂಡಿಸಬಹುದು?**

ಸಾಕ್ಷಿದಾರನ ಖಂಡನೆಯ ಬಗ್ಗೆ ವ್ಯವಹರಿಸುವ ಕಲಮು ಎಂದರೆ ಕಲಮು ೧೫೩. ಖಂಡನೆಯ ಉದ್ದೇಶಕ್ಕಾಗಿ, ಕಲಮು ಸಾಕ್ಷಿದಾರರ ಉತ್ತರಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸುತ್ತದೆ. (೧) ಸುಸಂಬದ್ಧ ಸಂಗತಿಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳು ಮತ್ತು (೨) ಸಾಕ್ಷಿದಾರರ ಪ್ರತ್ಯಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳು.

೩. ಪ್ರತ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಾಕ್ಷಿದಾರರು ಕೊಟ್ಟ ಉತ್ತರಗಳು ಖಂಡನೆಗೆ ಗುರಿಯಾಗುತ್ತವೆಯೇ?

ಕಲಮು ೧೫೩ಕ್ಕೆ ಕೊಟ್ಟ ಉತ್ತರವು ಅಂತಹ ಉತ್ತರಗಳನ್ನು ಖಂಡಿಸತಕ್ಕದ್ದಲ್ಲ ಎಂಬ ಅರ್ಥದಲ್ಲಿ ನಕಾರಾತ್ಮಕವಾಗಿದೆ.

ಈ ನಿಯಮಕ್ಕೆ ಕೇವಲ ಎರಡು ಅಪವಾದಗಳಿರುತ್ತವೆ.

(i) ಹಿಂದಿನ ಅಪರಾಧ ನಿರ್ಣಯವನ್ನು (ದೋಷಸಿದ್ಧಿಯನ್ನು) ನಿರಾಕರಿಸಿದರೆ, ನೀವು ಅದನ್ನು ಸಾಕ್ಷ್ಯ ದ್ವಾರಾ ಖಂಡಿಸಬಹುದು.

(ii) ಸಾಕ್ಷಿದಾರನು ಪಕ್ಷಪಾತವನ್ನು ನಿರಾಕರಿಸಿದರೆ, ಅವನನ್ನು ಖಂಡಿಸಬಹುದು.

ಈ ಸಂಬಂಧದಲ್ಲಿ ಒಂದು ವಿಷಯವನ್ನು ಗಮನದಲ್ಲಿಡಬೇಕು. ಕಲಮು ೧೫೫ರ ಉಪಬಂಧಗಳ ಅಡಿಯಲ್ಲಿ, ಒಬ್ಬ ಸಾಕ್ಷಿದಾರನು ಇನ್ನೊಬ್ಬ ಸಾಕ್ಷಿದಾರನ ಅವಿಶ್ವಾಸಾರ್ಹತೆಯಲ್ಲಿ ಅವನ ನಂಬಿಕೆಯ ಬಗ್ಗೆ X–ಪರೀಕ್ಷೆಯಲ್ಲಿ ಕಾರಣ ಸಮೇತ ಕೊಟ್ಟ ಉತ್ತರಗಳನ್ನು ಖಂಡನೆಗೆ ಗುರಿಪಡಿಸಲು ಅವಕಾಶವಿರುವುದಿಲ್ಲ.

ಈ ಎಲ್ಲ ಪ್ರಕರಣಗಳಲ್ಲಿ, ಪ್ರತ್ಯಯಕ್ಕೆ ಸಂಬಂಧಿಸಿದ ಪ್ರಶ್ನೆಗೆ ಸಾಕ್ಷಿದಾರನು ಕೊಟ್ಟ ಉತ್ತರಗಳನ್ನು ಖಂಡಿಸಲು ಅವಕಾಶ ಇಲ್ಲದಿರುವಾಗ, ಅವರ ಉತ್ತರಗಳು ಸುಳ್ಳಾಗಿದ್ದರೆ, ಅವರನ್ನು ಆ ತರುವಾಯ ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ಅವರ ಮೇಲೆ ಆರೋಪ ಹೊರಿಸಬಹುದು.

೪. ಸುಸಂಬದ್ಧ ಸಂಗತಿಗಳ ಮೇಲಣ ಪ್ರಶ್ನೆಗಳಿಗೆ ಸಾಕ್ಷಿದಾರರು ಕೊಟ್ಟ ಉತ್ತರಗಳು ಖಂಡನೆಗೆ ಗುರಿಯಾಗುತ್ತವೆಯೇ?

(೧) ಕಲಮು ೧೫೩ ನಕಾರಾತ್ಮಕ ಸ್ವಭಾವದ್ದಾಗಿದ್ದು ಖಂಡನೆಗೆ ಅವಕಾಶವಿಲ್ಲದ ಪ್ರಕರಣಗಳನ್ನು ಮಾತ್ರ ನಿರೂಪಿಸುತ್ತದೆ. ಯಾವ ಕಲಮುಗಳಲ್ಲಿ ಖಂಡನೆಗೆ ಅವಕಾಶ ಇದೆ ಎಂಬುದನ್ನು ನಿರೂಪಿಸುವುದಿಲ್ಲ.

(೨) ಅದು ನಿಷೇಧದಲ್ಲಿ ಸುಸಂಬದ್ಧ ಪ್ರಶ್ನೆಗಳಿಗೆ (ಕೊಟ್ಟ) ಉತ್ತರಗಳನ್ನು ಒಳಗೊಳ್ಳುವುದಿಲ್ಲ. ಸೂಚ್ಯಾರ್ಥ ದ್ವಾರಾ ಅಂಥ ಉತ್ತರಗಳಿಗೆ ಖಂಡನೆಯ ಅವಕಾಶವನ್ನು ಒದಗಿಸುತ್ತದೆ.

(೩) ಕಲಮು ೧೫೩ಕ್ಕೆ ಒಂದು ದೃಷ್ಟಾಂತವನ್ನು ಲಗತ್ತಿಸಿದೆ. ಆ ಮೂಲಕ ಅಂಥ ಉತ್ತರಗಳ ಖಂಡನೆಗೆ ಅವಕಾಶ ಒದಗಿಸಬೇಕು ಎಂದು ವಿಧಾನಮಂಡಲದ ಉದ್ದೇಶ ಎಂದು ಗೊತ್ತಾಗುತ್ತದೆ.

೫. ಆದ್ದರಿಂದ ಕಲಮು ೧೫೩, ಸುಸಂಬದ್ಧ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನು ನೀವು ಖಂಡಿಸಬಹುದು ಎಂಬ ನಿಯಮವನ್ನು ನಿರೂಪಿಸುತ್ತದೆ.

## ಸುಸಂಬದ್ಧ ಸಂಗತಿಗಳ ಮೇಲಣ ಖಂಡನೆ

೧. ಆನಂತರದ ಪ್ರಶ್ನೆ: ಸಾಕ್ಷಿದಾರರನ್ನು ಕರೆದ ಪಕ್ಷಕಾರನಿಗೆ ಮಾತ್ರ ಅಂಥ ಖಂಡನೆಗೆ ಅವಕಾಶವಿರುವುದೆ? ಅಥವಾ ವಿರುದ್ಧ ಪಕ್ಷದವರಿಗೆ ಮಾತ್ರ ಅಂಥ ಅವಕಾಶ ಇರುವುದೆ?

೨. ಒಬ್ಬ ಪಕ್ಷಕಾರನು, ವಿರುದ್ಧ ಪಕ್ಷಕಾರನ ಪರವಾಗಿ ಕರೆಯಲಾದ ಸಾಕ್ಷಿಯು ಕೊಟ್ಟ ಉತ್ತರಗಳನ್ನು ಖಂಡಿಸಬಹುದು ಎಂಬುದು ಪ್ರಶ್ನಾತೀತ. ಹಾಗೆ ಖಂಡಿಸಲು ಯಾವಾಗಲೂ ಅವಕಾಶವಿರುತ್ತದೆ. ಅದನ್ನು ಪ್ರತಿವಾದ ಸಾಕ್ಷಿದಾರರು ಖಂಡಿಸಬಹುದು. ಆದರೆ ಇತರ ಪ್ರಕರಣಗಳಲ್ಲಿ ಅದು ಅಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ. ಸಾಕ್ಷಿದಾರರನ್ನು ಒಬ್ಬ ಪಕ್ಷಕಾರನ ಪರವಾಗಿ ಕರೆಯಲಾಗುತ್ತದೆ. ಸುಸಂಬದ್ಧವಾದ ಸಂಗತಿಯ ಮೇಲಣ ಪ್ರಶ್ನೆಗೆ ಅವನು ಒಂದು ನಿರ್ದಿಷ್ಟ ಉತ್ತರವನ್ನು ಕೊಡುತ್ತಾನೆ ಮತ್ತು ಅವನನ್ನು ಕರೆದ ಪಕ್ಷಕಾರನಿಗೆ ಅದು ಅಸತ್ಯವಾಗಿ ತೋರುತ್ತದೆ. ಅವನನ್ನು ಕರೆದ ಪಕ್ಷಕಾರನು ಅವನನ್ನು ಖಂಡಿಸಲು ಇನ್ನೊಬ್ಬ ಸಾಕ್ಷಿದಾರನನ್ನು ಕರೆಯಬಹುದೇ?

೩. ಉತ್ತರವೆಂದರೆ ಅವನು ಕರೆಯಬಹುದು. ಕಾನೂನು ತನ್ನ ಸಾಕ್ಷಿದಾರನಾದವನ ಸಾಮಾನ್ಯ ಶೀಲವನ್ನು ಖಂಡಿಸಿ ಅವನನ್ನು ಅವಹೇಳನಕ್ಕೆ ಗುರಿಪಡಿಸುವುದು ಮತ್ತು ಒಂದು ನಿರ್ದಿಷ್ಟ ವಿಚಾರದಲ್ಲಿ ಅವನ ಸಾಕ್ಷ್ಯವು ಸರಿಯಾಗಿದ್ದಿಲ್ಲ ಎಂದು ಹೇಳುವುದು ಇವೆರಡರಲ್ಲಿ ವ್ಯತ್ಯಾಸವನ್ನು ಗುರುತಿಸುತ್ತದೆ.

## ಸಾಕ್ಷಿದಾರನ ಪರೀಕ್ಷೆಯ ರೀತಿ

೧. ಪರೀಕ್ಷೆಯ ರೀತಿ ಎಂದರೆ ಪರಿಪ್ರಶ್ನೆಗಳನ್ನು ಕೇಳುವ ಅಂದರೆ ಪ್ರಶ್ನೆಗಳನ್ನು ಹಾಕುವ ರೀತಿ.

೨. ಈ ವಿಷಯವು ಪರಿಪ್ರಶ್ನೆ ಹಾಕುವ ಪಕ್ಷಕಾರನ ವಿವೇಕಕ್ಕೆ ಸೇರಿದ ವಿಚಾರವಲ್ಲ. ಅದನ್ನು ಕಾನೂನು ದ್ವಾರಾ ವಿನಿಮಯಗೊಳಿಸಿದ್ದುಂಟು.

೩. ಪ್ರಶ್ನೆಗಳ ಕೇಳುವ ರೀತಿಯ ದೃಷ್ಟಿಯಿಂದ ಪ್ರಶ್ನೆಗಳೂ ಉತ್ತರ ಸೂಚಕ ಪ್ರಶ್ನೆಗಳಾಗಿರುತ್ತವೆ ಅಥವಾ ಉತ್ತರ ಸೂಚಕವಿಲ್ಲದ ಪ್ರಶ್ನೆಗಳಾಗಿರುತ್ತವೆ.

೪. ಕೇವಲ ಹೌದು ಅಥವಾ ಅಲ್ಲ ಎಂದು ಉತ್ತರ ನೀಡಬಹುದಾದ ಪ್ರಶ್ನೆಗಳನ್ನು ಸಾಮಾನ್ಯವಾಗಿ ಉತ್ತರಸೂಚಕ ಪ್ರಶ್ನೆಗಳು ಎಂದು ಹೇಳಲಾಗುತ್ತದೆ. ಅಂಥ ಎಲ್ಲ ಪ್ರಶ್ನೆಗಳು ಈ ನಿಯಮದ ಅಡಿಯಲ್ಲಿ ಬರುತ್ತವೆಯಾದರೂ, ಉತ್ತರಸೂಚಕ ಪ್ರಶ್ನೆಯು ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ.

ಸಾಕ್ಷ್ಯ ಅಧಿನಿಯಮವು, ಉತ್ತರ ಸೂಚಕ ಪ್ರಶ್ನೆಯನ್ನು ಹೀಗೆ ಪರಿಭಾಷಿಸುತ್ತದೆ. ಪ್ರಶ್ನೆ ಕೇಳುವಾತನು ಸಾಕ್ಷಿದಾರನಿಂದ ಅಪೇಕ್ಷಿಸುವ ನಿರ್ದಿಷ್ಟ ಉತ್ತರವನ್ನು ಸೂಚಿಸುವ ಪ್ರಶ್ನೆ ಉತ್ತರಸೂಚಕ ಪ್ರಶ್ನೆ.

**ದೃಷ್ಟಾಂತಗಳು**

ಇರಿದು ಹತ್ಯೆಗೈದ ಆರೋಪದ ಬಗ್ಗೆ, ಒಬ್ಬ ಸಾಕ್ಷಿದಾರನಿಗೆ 'ಹೆಣದ ಕಡೆಯಿಂದ ರಕ್ತಸಿಕ್ತನಾಗಿ ತನ್ನ ಕೈಯಲ್ಲಿ ಚಾಕು ಹಿಡಿದುಕೊಂಡು ಬರುತ್ತಿರುವ ಆಪಾದಿತನನ್ನು ನೋಡಿದೆಯಲ್ಲವೇ?' ಎಂದು ಕೇಳುವ ಪ್ರಶ್ನೆ ಉತ್ತರಸೂಚಕ ಪ್ರಶ್ನೆ.

೫. ಎರಡು ಬಗೆಯ ಉತ್ತರಸೂಚಕ ಪ್ರಶ್ನೆಗಳಲ್ಲಿ ವ್ಯತ್ಯಾಸ ಮಾಡಲೇಬೇಕು.

(i) ಉತ್ತರವನ್ನು ಸೂಚಿಸುವ ಉತ್ತರಸೂಚಕ ಪ್ರಶ್ನೆ.

(ii) ಯಾವ ವಿಷಯವನ್ನು ಕುರಿತು ಸಾಕ್ಷಿದಾರನಿಗೆ ಪ್ರಶ್ನೆ ಕೇಳಲಾಗಿದೆಯೋ ಆ ವಿಷಯದತ್ತ ಅವನ ಗಮನವನ್ನು ನಿರ್ದೇಶಿಸುವ ಪ್ರಶ್ನೆ.

ಎರಡನೆಯ ಬಗೆಯ ಪ್ರಶ್ನೆಗೆ ದೃಷ್ಟಾಂತವಾಗಿ ಕೆಳಕಂಡ ದೃಷ್ಟಾಂತವನ್ನು ನೋಡಿ.

ಒಂದು ಸಂಭಾಷಣೆಯಲ್ಲಿ 'ಎ'ನು 'ಬಿ'ನು ದಿವಾಳಿ ಪರಿಸ್ಥಿತಿಯಲ್ಲಿ ಇರುವನೆಂದು ಮತ್ತು ಅವನ ಹೆಸರು ಲಂಡನ್ ಗೆಜೆಟ್‌ನಲ್ಲಿ ಬರಲಿದೆಯೆಂದು 'ಸಿ'ಗೆ ಹೇಳಿರುವುದಕ್ಕಾಗಿ 'ಎ'ನ ಮೇಲೆ 'ಬಿ'ನು ಮಾನಹಾನಿ ದಾವೆ ಹೂಡಿದ್ದಾನೆ. ಸಾಕ್ಷಿದಾರನಿಗೆ ಪ್ರಶ್ನೆ ಕೇಳಲಾಯಿತು.

"ಗೆಜೆಟ್ ಬಗ್ಗೆ ಏನಾದರೂ ಹೇಳಿದನೇ?"

ಇದು, ಉತ್ತರವನ್ನು ಸೂಚಿಸುವುದು ಎಂಬ ಅರ್ಥದಲ್ಲಿ ಉತ್ತರಸೂಚಕ ಪ್ರಶ್ನೆ ಅಲ್ಲ. ಸಾಕ್ಷಿದಾರನಿಗೆ ಯಾವ ವಿಷಯದ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿದೆಯೋ ಆ ವಿಷಯದತ್ತ ಅವನ ಗಮನವನ್ನು ನಿರ್ದೇಶಿಸುವ ಉತ್ತರಸೂಚಕ ಪ್ರಶ್ನೆ ಅಷ್ಟೆ.

ಮುಖ್ಯ ವಿಚಾರಣೆಯಲ್ಲಿ ಪರಿಪ್ರಶ್ನೆ ಕೇಳುವ ರೀತಿಯು ಪಾಟೀ ಸವಾಲಿನಲ್ಲಿನ ತನಿಖೆಯ ರೀತಿಗಿಂತ ಭಿನ್ನವಾಗಿರುತ್ತದೆ.

ಪಾಟೀ ಸವಾಲಿನಲ್ಲಿ ಸಾಕ್ಷಿದಾರನಿಗೆ ಉತ್ತರಸೂಚಕ ಪ್ರಶ್ನೆಯ ನಮೂನೆಯಲ್ಲಿ ಪ್ರಶ್ನೆ ಕೇಳಬಹುದು. ಆದರೆ ಮುಖ್ಯ ವಿಚಾರಣೆಯಲ್ಲಿ, ವಿರುದ್ಧ ಪಕ್ಷದವರು ಆಕ್ಷೇಪಿಸಿದರೆ, ಉತ್ತರ ಸೂಚಕ ಪ್ರಶ್ನೆಯನ್ನು ಕೇಳುವಂತಿಲ್ಲ.

ಮುಖ್ಯ ವಿಚಾರಣೆಯಲ್ಲಿ, ಸಾಕ್ಷಿದಾರನಿಗೆ ಕೇವಲ ಈ ಮುಂದಿನಂಥ ಪ್ರಶ್ನೆಗಳನ್ನು ಕೇಳಬೇಕು: "ನೀನು ಏನು ನೋಡಿದೆ?", "ನೀನು ಕೇಳಿದ್ದೇನು?", "ಆ ತರುವಾಯು ಏನು ನಡೆಯಿತು?"

**ಈ ನಿಯಮಕ್ಕೆ ಕಾರಣಗಳು**

(i) ಸಾಕ್ಷಿದಾರನು ತನ್ನನ್ನು ಕರೆದ ಪಕ್ಷಕಾರನ ಬಗ್ಗೆ ಒಲವು (ಪಕ್ಷಪಾತ) ಹೊಂದಿರುತ್ತಾನೆ ಮತ್ತು ವಿರುದ್ಧ ಪಕ್ಷಕಾರನ ಬಗ್ಗೆ ಹಗೆತನವನ್ನು ಹೊಂದಿರುತ್ತಾನೆ. ಆದ್ದರಿಂದ, ಆ ಸಾಕ್ಷಿದಾರನು, ಪಕ್ಷಕಾರನ ವಕೀಲನು ಸೂಚಿಸಿದಂಥ ಉತ್ತರಗಳನ್ನು ಒಪ್ಪಿಕೊಳ್ಳುವ ಸಂಭವ ಇರುತ್ತದೆ.

(ii) ಸಾಕ್ಷಿದಾರನನ್ನು ಕರೆಯುವ ಪಕ್ಷಕಾರನಿಗೆ ತನ್ನ ಪ್ರತಿಪಕ್ಷದವನಿಗಿಂತ ಹೆಚ್ಚು ಅನುಕೂಲವಿರುತ್ತದೆ. ಸಾಕ್ಷಿದಾರನು ಏನು ರುಜುವಾತು ಮಾಡುತ್ತಾನೆ ಅಥವಾ ಅವನಿಂದ ಏನನ್ನು ಅಪೇಕ್ಷಿಸಲಾಗಿದೆ ಎಂಬುದು ಅವನಿಗೆ ಮುಂಚಿತವಾಗಿಯೇ ಗೊತ್ತಿರುತ್ತದೆ. ಮತ್ತು ಆ ಪರಿಣಾಮವಾಗಿ, ಅವನಿಗೆ ಉತ್ತರಸೂಚಕ ಪ್ರಶ್ನೆಯನ್ನು ಕೇಳಲು ಅವಕಾಶ ಕೊಟ್ಟ ಸಂದರ್ಭದಲ್ಲಿ, ಅವನು ಸಾಕ್ಷಿದಾರನಿಗೆ ತಿಳಿದಿರುವ ಮಾಹಿತಿಯ ಪೈಕಿ ತನ್ನ ಪಕ್ಷಕ್ಕೆ ಅನುಕೂಲವಾಗುವ ಅಂಶವನ್ನು ಹೊರತೆಗೆಯುವ ರೀತಿಯಲ್ಲಿ ಅಥವಾ ಇಡಿ ವಿಷಯದ

ಮೇಲೆ ಒಂದು ಸುಳ್ಳು ಬಣ್ಣ ಬರುವ ಹಾಗೆ ಪರಿಪ್ರಶ್ನೆಗಳನ್ನು ಕೇಳಬಹುದು.

**ಈ ನಿಯಮಕ್ಕೆ ಅಪವಾದಗಳು**

ಕೆಳಕಂಡ ಪ್ರಕರಣಗಳಲ್ಲಿ, ಮುಖ್ಯ ವಿಚಾರಣೆಯಲ್ಲಿ ಉತ್ತರಸೂಚಕ ಪ್ರಶ್ನೆಗಳನ್ನು ಕೇಳಬಹುದು:

(i) ವಿಷಯಗಳು ಕೇವಲ ಪ್ರಾಸ್ತಾವಿಕವಾಗಿರುವಾಗ ಅಂದರೆ ಸಾಕ್ಷಿದಾರನ ಹೆಸರು, ವೃತ್ತಿ, ವಗೈರೆ ಸಂದರ್ಭಗಳಲ್ಲಿ.

(ii) ವ್ಯಕ್ತಿಗಳನ್ನು ಅಥವಾ ವಸ್ತುವನ್ನು ಗುರುತಿಸುವಾಗ.

(iii) ವಿವಾದದಲ್ಲಿ ಇಲ್ಲದ ವಿಷಯಗಳ ಸಂಬಂಧದಲ್ಲಿ.

(iv) ಒಂದು ಪ್ರಶ್ನೆಯ ಅದರ ಸ್ವಭಾವ ಸಹಜವಾಗಿಯೇ ಉತ್ತರಸೂಚಕ ಪ್ರಶ್ನೆಗೆ ಹೊರತಾದ ರೀತಿಯಲ್ಲಿ ಕೇಳಲು ಸಾಧ್ಯವಿಲ್ಲದಿರುವಾಗ.

ಇನ್ನೊಂದು ಪಕ್ಷದ ಸಾಕ್ಷಿದಾರನು ಕೊಟ್ಟ ಸಾಕ್ಷ್ಯವನ್ನು ಖಂಡಿಸುವಾಗ.

ಉದಾಹರಣೆ: ವಾದಿಯು "ಎಲ್ಲ ಸರಕುಗಳು ಸ್ಯಾಂಪಲ್‌ಗೆ ಸರಿಯಾಗಿ ಇರಬೇಕೆಂದಿಲ್ಲ" ಎಂದು ಪ್ರತಿವಾದಿಯು ತನಗೆ ಪ್ರಮಾಣ ಮಾಡಿ ಹೇಳಿದನು ಎಂದು ಹೇಳುತ್ತಾನೆ. ಆಗ ಪ್ರತಿವಾದಿಗೆ ಹೀಗೆ ಪ್ರಶ್ನೆ ಕೇಳಬಹುದು, ಕೇಳಲೇಬೇಕು. "ನೀನು ಎಂದಾದರೂ ವಾದಿಗೆ ಎಲ್ಲ ಸರಕುಗಳು ಸ್ಯಾಂಪಲ್‌ಗೆ ಸರಿಯಾಗಿ ಇರಬೇಕೆಂದಿಲ್ಲ ಎಂದಾಗಲಿ ಅಥವಾ ಆ ಅರ್ಥ ಬರುವ ಮಾತುಗಳನ್ನಾಗಲಿ ಹೇಳಿದ್ದುಂಟೆ?"

ಸಾಕ್ಷಿದಾರನು ಯಾವಾಗಲೂ ತನ್ನವೇ ನೆನಪುಗಳಿಂದ ಮತ್ತು ಅವುಗಳಿಗೆ ಅನುಸಾರವಾಗಿ ಏನು ಸಂಭವಿಸಿತು ಎಂದು ನಿರೂಪಿಸಬೇಕು. ತನಗೆ ಆ ತರುವಾಯ ಏನು ಹೇಳಲಾಯಿತು ಅದನ್ನು ಆಧರಿಸಿ ಏನನ್ನು ಹೇಳಕೂಡದು.

ಇನ್ನು, ಸಾಕ್ಷಿದಾರನಿಗೆ ಸಂಗತಿಗಳನ್ನು ನೆನಪಿಸಿಕೊಳ್ಳುವುದು ಸಾಧ್ಯವಿಲ್ಲದಿರುವಾಗ ಅಂದರೆ ಅವನ ಸ್ಮರಣಶಕ್ತಿಯು ಕೈಕೊಟ್ಟಾಗ, ಏನು ಮಾಡಬೇಕು?

ಅಂತಹ ಸಂದರ್ಭದಲ್ಲಿ ಎರಡು ಪರಿಹಾರ ಮಾರ್ಗಗಳುಂಟು:

(೧) ಉತ್ತರ ಸೂಚಕ ಪ್ರಶ್ನೆಗಳನ್ನು ಕೇಳಿ ಸಾಕ್ಷಿದಾರನ ಸ್ಮರಣಶಕ್ತಿಗೆ ನೆರವಾಗುವುದು.

(೨) ಸಂಗತಿಯ ದಾಖಲೆಯಾಗಿರತಕ್ಕ ಯಾವುದೇ ಬರೆಹವನ್ನು ಪರಿಶೀಲಿಸಿ ತನ್ನ ಸ್ಮರಣಶಕ್ತಿಯನ್ನು ಚುರುಕುಗೊಳಿಸಿಕೊಳ್ಳಲು ಅವನಿಗೆ ಅನುಮತಿ ಕೊಡುವುದು.

ಸ್ಮರಣಶಕ್ತಿಯನ್ನು ಚುರುಕುಗೊಳಿಸಲು ಉಪಯೋಗಿಸುವ ಬರಹಗಳು.

ಉದಾಹರಣೆಗಳು:

(i) ದಿನಚರಿಗಳಲ್ಲಿನ ನಮೂದನೆಗಳು.

(ii) ಕರೆಪುಸ್ತಕಗಳಲ್ಲಿನ ನಮೂದನೆಗಳು.

(iii) ಲೆಕ್ಕಪುಸ್ತಕಗಳಲ್ಲಿನ ನಮೂದನೆಗಳು.

(iv) ರೈಲ್ವೆ ವೇಳಾಪತ್ರಿಕೆಯಲ್ಲಿನ ನಮೂದನೆಗಳು.

ಸಾಕ್ಷಿದಾರನು ತಾನೇ ಬರೆದ ಬರಹಗಳನ್ನು ಅಥವಾ ಮಾಡಿಕೊಂಡ ಯಾವುದೇ ದಸ್ತಾವೇಜನ್ನು ನೋಡಿ ತನ್ನ ಸ್ಮರಣಶಕ್ತಿಯನ್ನು ಚುರುಕುಗೊಳಿಸಿಕೊಳ್ಳಬೇಕು. ಇದಲ್ಲದೆ, ಇತರ ವ್ಯಕ್ತಿಗಳು ಅವನ ನೇರ

ನಿರೀಕ್ಷಣೆಯಲ್ಲಿ ಮಾಡಿದ ದಸ್ತಾವೇಜುಗಳಿಂದ ಸಹ ತನ್ನ ಸ್ಮರಣ ಶಕ್ತಿಯನ್ನು ಚುರುಕುಗೊಳಿಸಿಕೊಳ್ಳಬಹುದು.

ಈ ಬಗ್ಗೆ ಒಂದೇ ಷರತ್ತುಂಟು. ಆ ವ್ಯವಹಾರವು ಅವನ ನೆನಪಿನಲ್ಲಿ ಹೊಸತಾಗಿರುವಾಗ ಅದನ್ನು ಮಾಡಿದ್ದಿರಬೇಕು ಅಥವಾ ಅದನ್ನು ಬೇರೆಯವನು ಮಾಡಿದ್ದರೆ, ಆ ವ್ಯವಹಾರವು ಅವನ ನೆನಪಿನಲ್ಲಿ ಹೊಸದಾಗಿ ಇರುವಾಗ ಮತ್ತು ಸರಿಯೆಂದು ತಿಳಿದಿದ್ದಾಗ, ಅದನ್ನು ಅವನು **ಓದಿದ್ದಿರಬೇಕು**.

ದಸ್ತಾವೇಜಿನ ಮೂಲಪ್ರತಿಯನ್ನು, ನ್ಯಾಯಾಲಯಕ್ಕೆ ಮನವರಿಕೆಯಾಗುವ ಕಾರಣಗಳಿಗಾಗಿ ಹಾಜರುಪಡಿಸದಿದ್ದಾಗ, ಅದರ ಪ್ರತಿಯನ್ನು ಉಪಯೋಗಿಸಬಹುದು.

ಯಾವುದೇ ಬರೆಹವನ್ನು ಅಥವಾ ದಸ್ತಾವೇಜನ್ನು ನೋಡಿ (ಪರಿಶೀಲಿಸಿ) ಸ್ಮರಣ ಶಕ್ತಿಯನ್ನು ಚುರುಕುಗೊಳಿಸಿಕೊಂಡರೆ ಅದು ದಸ್ತಾವೇಜು ಸಾಕ್ಷ್ಯವಾಗುವುದಿಲ್ಲ.

ಸ್ಮರಣಶಕ್ತಿಯನ್ನು ಚುರುಕುಗೊಳಿಸಿಕೊಳ್ಳಲು ದಸ್ತಾವೇಜನ್ನು ಅಥವಾ ಬರೆಹವನ್ನು ಪರಿಶೀಲಿಸುವುದಕ್ಕೂ, ಪುಷ್ಟೀಕರಣಕ್ಕಾಗಿ (ಸಮರ್ಥನೆ) ದಸ್ತಾವೇಜನ್ನು ಉಪಯೋಗಿಸಿಕೊಳ್ಳುವುದಕ್ಕೂ ವ್ಯತ್ಯಾಸವುಂಟು.

ಪುಷ್ಟೀಕರಣಕ್ಕಾಗಿ ಉಪಯೋಗಿಸಿಕೊಳ್ಳಲಾಗದ ದಸ್ತಾವೇಜನ್ನು ಸ್ಮರಣಶಕ್ತಿಯನ್ನು ಚುರುಕುಗೊಳಿಸಿಕೊಳ್ಳಲು ಉಪಯೋಗಿಸಿಕೊಳ್ಳಬಹುದು.

ಉದಾಹರಣೆ: ಪೊಲೀಸ್ ಡೈರಿಗಳ ಉಪಯೋಗ.

ಸ್ಮರಣ ಶಕ್ತಿಯನ್ನು ಉಪಯೋಗಿಸುವ ದಸ್ತಾವೇಜಿನ ಸಂಬಂಧದಲ್ಲಿ ಜ್ಞಾಪನಪತ್ರದ ಮೂಲಕ ಸ್ಮರಣಶಕ್ತಿಗೆ ಸಹಾಯವಾಗಲಿಕ್ಕಿಲ್ಲವೇ ಹೇಗೆ ಎಂಬುದನ್ನು ಅಗತ್ಯವಾಗಿ ಖಚಿತಪಡಿಸಿಕೊಳ್ಳಬೇಕು.

ಆದ್ದರಿಂದ, ಕಾನೂನು ಈ ಸಂಬಂಧದಲ್ಲಿ ಇಂತು ಅಗತ್ಯಪಡಿಸುತ್ತದೆ. ಅಂಥ ಬರಹವನ್ನು ಎದುರು ಪಕ್ಷಕಾರನು ಅಗತ್ಯಪಡಿಸಿದರೆ ಅವನಿಗೆ ತೋರಿಸಬೇಕು ಮತ್ತು ಅವನು ಆ ತರುವಾಯ ಪಾಟೀ ಸವಾಲು ಹಾಕಲು ಅಪೇಕ್ಷಿಸಿದರೆ, ಹಾಗೆ ಪಾಟೀ ಸವಾಲು ಹಾಕಬಹುದು.

*–೮ Cal. ೭೩೯ (೭೪೫)*

ಪ್ರತಿಪಕ್ಷದವರಿಗೆ (ದಸ್ತಾವೇಜು ವಗೈರೆಗಳನ್ನು) ಪರಿಶೀಲಿಸಲು ಅವಕಾಶ ಕೊಡುವ ಬಗೆಗಿನ ಕಾರಣಗಳೆಂದರೆ: (i) ಸಂಗತಿಗಳಿಗೆ ಸಂಬಂಧಿಸಿದಂತೆ ಸಾಕ್ಷಿದಾರನ ನೆನಪಿನ ಪೂರ್ಣ ಪ್ರಯೋಜನವನ್ನು ಪಡೆಯುವುದು, (ii) ಅನುಚಿತ ದಸ್ತಾವೇಜುಗಳ ಉಪಯೋಗವನ್ನು ತನಿಖೆ ಮಾಡುವುದು ಮತ್ತು (iii) ಅವನ ಮೌಖಿಕ ಸಾಕ್ಷ್ಯವನ್ನು ಅವನ ಲಿಖಿತ ಪದಗಳೊಂದಿಗೆ ಹೋಲಿಸಿ ನೋಡುವುದು.

ಪ್ರತಿಪಕ್ಷದವನು ಬರಹವನ್ನು ನೋಡಿ ತನ್ನ ಸ್ಮರಣ ಶಕ್ತಿಯನ್ನು ಚುರುಕುಗೊಳಿಸಿಕೊಳ್ಳುವಂತೆ ಸಾಕ್ಷಿದಾರನನ್ನು ಒತ್ತಾಯಿಸಬಹುದೇ?

ಪೊಲೀಸ್ ಅಧಿಕಾರಿಯು ಒಂದು ನಿರ್ದಿಷ್ಟ ಸಂಗತಿಯನ್ನು ಕುರಿತು ಏನಾದರೂ ಹೇಳುವುದು ಆಪಾದಿತನಿಗೆ ಬಹಳ ಪ್ರಯೋಜನಕಾರಿಯಾಗಬಹುದು. ಪೊಲೀಸ್ ಅಧಿಕಾರಿಯು ಸಂಗತಿಯನ್ನು ನೆನಪಿಸಿಕೊಳ್ಳುವುದಿಲ್ಲ ಮತ್ತು ತನ್ನ ಡೈರಿಯನ್ನು ಪರಿಶೀಲಿಸಿ ತನ್ನ ಸ್ಮರಣಶಕ್ತಿಯನ್ನು ಚುರುಕುಗೊಳಿಸಿಕೊಳ್ಳುವುದಿಲ್ಲ.

*(೮ Cal. ೧೫೪), (೮ Cal. ೭೩೯)* ಇದರ ಪ್ರಕಾರ ಅವನನ್ನು ಒತ್ತಾಯಿಸಲು ಬರುವುದಿಲ್ಲ.

A.I.R. (೧೯೨೪) Pat ೮೨೯. ಇದರ ಪ್ರಕಾರ ಅವನನ್ನು ಒತ್ತಾಯಿಸಬಹುದು.

### ಸಾಕ್ಷಿದಾರರ ಪರೀಕ್ಷೆಯ ಮೇಲಣ ಪರಿಮಿತಿಗಳನ್ನು ಕುರಿತು

೧. ಈ ಶೀರ್ಷಿಕೆಯ ಅಡಿಯಲ್ಲಿ ಪರಿಶೀಲಿಸಲಾಗುವ ವಿಷಯ ವಸ್ತುವು ಸಾಕ್ಷಿದಾರನು ಉತ್ತರಿಸಲು ಬದ್ಧನಾದ ಅಥವಾ ಬದ್ಧನಾಗಿಲ್ಲದ ಪ್ರಶ್ನೆಗಳನ್ನು ಸಂಬಂಧಿಸಿರುತ್ತದೆ.

೨. ಸಾಮಾನ್ಯ ನಿಯಮವೆಂದರೆ, ಸಾಕ್ಷಿದಾರನು ಅವನಿಗೆ ಕೇಳಲಾದ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಬೇಕು.

**ಕಲಮು ೧೩೨**

೧೩೨ನೇ ಕಲಮು ಈ ವಿಷಯವನ್ನು ನಕಾರಾತ್ಮಕವಾಗಿ ಇಡುತ್ತದೆ.

೩. ಈ ನಿಯಮಕ್ಕೆ ಎರಡು ಷರತ್ತುಗಳಿವೆ.

(i) ಸಾಕ್ಷಿದಾರನಿಗೆ ಉತ್ತರ ಕೊಡುವಂತೆ ಒತ್ತಾಯಿಸಲಾಗದಂಥ ಕೆಲವು ನಿರ್ದಿಷ್ಟ ಪ್ರಶ್ನೆಗಳು

(ii) ಉತ್ತರ ಕೊಡಲು ಸಾಕ್ಷಿದಾರನಿಗೆ ಅಧಿಕಾರ ನೀಡಬಾರದಂಥ ಕೆಲವು ನಿರ್ದಿಷ್ಟ ಪ್ರಶ್ನೆಗಳು.

೪. ಉತ್ತರ ಕೊಡುವಂತೆ ಒತ್ತಾಯಿಸಲಾಗದಂಥ ಪ್ರಶ್ನೆಗಳನ್ನು ಕುರಿತು ವ್ಯವಹರಿಸುವ ಕಲಮುಗಳೆಂದರೆ: ೧೨೧, ೧೨೨, ೧೨೪, ೧೨೫, ೧೨೯.

೫. ಉತ್ತರ ಕೊಡಲು ಸಾಕ್ಷಿದಾರನಿಗೆ ಅಧಿಕಾರ ನೀಡಬಾರದಂಥ ಪ್ರಶ್ನೆಗಳನ್ನು ಕುರಿತು ವ್ಯವಹರಿಸುವ ಕಲಮುಗಳೆಂದರೆ: ೧೨೩, ೧೨೬, ೧೨೭, ೧೨೮.

### ರುಜುವಾತಿನ ಭಾರದ ವಿಮೋಚನೆ

೧. ಸಾಕ್ಷ್ಯದ ಪರಿಣಾಮವು ಕೆಳಕಂಡ ಸಂದರ್ಭಗಳಲ್ಲಿ ಆಗಬಹುದು.

(i) ಒಂದು ಸಂಗತಿಯನ್ನು ರುಜುವಾತು ಮಾಡುವುದು.

(ii) ಒಂದು ಸಂಗತಿಯನ್ನು ನಾಸಾಬೀತುಪಡಿಸುವುದು

(iii) ಸಾಬೀತುಪಡಿಸಲು ತಪ್ಪುವುದು ಮತ್ತು ಆ ಕಾರಣ ನಾಸಾಬೀತುಪಡಿಸುವುದು.

೨. ಕೆಳಕಂಡ ಸಂದರ್ಭಗಳಲ್ಲಿ ರುಜುವಾತಿನ ಭಾರವು ವಿಮೋಚನೆಯಾಗುತ್ತದೆ.

(i) ರುಜುವಾತುಪಡಿಸಲು ಅಗತ್ಯಪಡಿಸಲಾದ ಸಂಗತಿಯನ್ನು ರುಜುವಾತುಪಡಿಸಿದಾಗ.

(ii) ನಾಸಾಬೀತು ಪಡಿಸಲು ಅಗತ್ಯಪಡಿಸಲಾದ ಸಂಗತಿಯನ್ನು ನಾಸಾಬೀತುಪಡಿಸಿದಾಗ.

೩. ರುಜುವಾತಿನ ಭಾರವು ಯಾವ ಪಕ್ಷಕಾರನ ಮೇಲೆ ಇರುವುದೊ ಅವನು ಅದನ್ನು ಸಂದರ್ಭಾನುಸಾರ ಸಾಬೀತುಪಡಿಸಲು ಅಥವಾ ನಾಸಾಬೀತುಪಡಿಸಲು ತಪ್ಪಿದಾಗ, ರುಜುವಾತಿನ ಭಾರವು ಬಿಡುಗಡೆ ಆದಂತೆ ಆಗುವುದಿಲ್ಲ.

೪. ಒಂದು ಸಂಗತಿಯು ಯಾವಾಗ ಸಾಬೀತು ಆಯಿತು ಅಥವಾ ನಾಸಾಬೀತು ಆಗಲಿಲ್ಲ ಎಂದು ಹೇಳಬಹುದು?

ಈ ಪ್ರಶ್ನೆಗೆ ಉತ್ತರವನ್ನು ೩ನೇ ಕಲಮಿನಲ್ಲಿ ಕೊಟ್ಟಿದೆ.

ಟಿಪ್ಪಣಿ– ಎರಡು ಸಂಗತಿಗಳನ್ನು ಗಮನಿಸಬೇಕು.

(i) ರುಜುವಾತು ಎಂದರೆ ಕಟ್ಟುನಿಟ್ಟಾದ ಗಣಿತ ಪ್ರಾತ್ಯಕ್ಷಿಕತೆಯಂತಲ್ಲ.

(ii) ನೈತಿಕ ದೋಷ ಸಿದ್ಧಿಯ ರುಜುವಾತಲ್ಲ.

ರುಜುವಾತು ಎಂದರೆ ಸಾಕ್ಷ್ಯ.

ಅಂದರೆ ಒಬ್ಬ ವಿವೇಕವಂತ ಮನುಷ್ಯನಿಗೆ ಒಂದು ನಿರ್ಣಯಕ್ಕೆ ಬರುವಂತೆ ಪ್ರೇರೇಪಿಸುವಂಥ ಸಾಕ್ಷ್ಯ

*(೧೯೧೧) ೧ K.B. ೯೮೮ (೯೯೫) ೩೧ Bom. L.R. ೫೧೬*

ರುಜುವಾತಿನ ಪ್ರಶ್ನೆಯು ಸಂಭಾವ್ಯತೆಯ ಪ್ರಶ್ನೆಯೇ ಹೊರತು ಖಚಿತತೆಯ ಪ್ರಶ್ನೆಯಲ್ಲ.

**ರುಜುವಾತಿನ ಭಾರದ ವಿಮೋಚನೆ ಮತ್ತು ಸಾಕ್ಷ್ಯದ ಪರಿಮಾಣ**

(೧) ಬ್ರಿಟಿಷ್ ಕಾನೂನಿನ ಅಡಿಯಲ್ಲಿ ಕೆಲವು ಪ್ರಕರಣಗಳಲ್ಲಿ ಪುಷ್ಟೀಕರಣವು (ಸಮರ್ಥನೆಯು) ಅಗತ್ಯವಿರುತ್ತದೆ.

(i) ಘೋರ ರಾಜದ್ರೋಹ– ಇಬ್ಬರು ಸಾಕ್ಷಿದಾರರು.

(ii) ಸುಳ್ಳು ಪ್ರಮಾಣ.

(iii) ವಚನಭಂಗ.

iv) ಜಾರತ್ವದಿಂದ ಹುಟ್ಟಿದ ಮಗ– ತಾಯಿಯ ಸಾಕ್ಷ್ಯವನ್ನು ಪುಷ್ಟೀಕರಿಸಲೇ ಬೇಕು.

ಬ್ರಿಟಿಷ್ ಕಾನೂನಿನ ಅಡಿಯಲ್ಲಿ ಈ ನಿಯಮವು ನಿರುಪಾಧಿಕವಾಗಿರುತ್ತದೆ. ಪುಷ್ಟೀಕರಣ ಇಲ್ಲದಿದ್ದರೂ ನ್ಯಾಯಾಲಯವು ಒಬ್ಬ ಸಾಕ್ಷಿದಾರನ ಸಾಕ್ಷ್ಯದ ಮೇಲೆ ಕ್ರಮ ಕೈಗೊಳ್ಳಬಹುದು.

* * *

# ವಿಭಾಗ ಐದು

## ವಿಭಾಗ ೫

# ವೀಸಾ ನಿರೀಕ್ಷೆಯಲ್ಲಿದ್ದಾಗ

ಡಾ. ಅಂಬೇಡ್ಕರರು ಸ್ವತಃ ತಮ್ಮ ಕೈಬರಹದಿಂದಲೇ ನಿರೂಪಿಸಿದ ಕೆಲವೊಂದು ಜೀವನ ಸ್ಮೃತಿಗಳು ಇಲ್ಲಿವೆ. ಈ ಹಸ್ತಪ್ರತಿಗಳನ್ನು ಪೀಪಲ್ಸ್ ಎಜ್ಯುಕೇಶನ್ ಸೊಸೈಟಿಯ ಸಂಗ್ರಹದಲ್ಲಿ ಗುರುತಿಸಲಾಯಿತು. ಸೊಸೈಟಿಯು ೧೯೯೦, ಮಾರ್ಚ್ ೧೯ರಂದು ಈ ಜೀವನಸ್ಮೃತಿಗಳನ್ನು ಪುಸ್ತಿಕೆಯ ರೂಪದಲ್ಲಿ ಹೊರತಂದಿತು.

*–ಸಂ.*

# ವೀಸಾ ನಿರೀಕ್ಷೆಯಲ್ಲಿದ್ದಾಗ

ವಿದೇಶೀಯರು ಭಾರತದಲ್ಲಿರುವ ಅಸ್ಪೃಶ್ಯತೆಯಿರುವ ಬಗೆಗೆ ತಿಳಿದೇ ಇದ್ದಾರೆ. ಆದರೆ ಅಸ್ಪೃಶ್ಯರು ಉಚ್ಚ ಕುಲದವರ ಬಾಗಿಲುಗಳ ಹತ್ತಿರವೇ ವಾಸಿಸುವುದಿಲ್ಲವಾದ್ದರಿಂದ ಅದು ವಾಸ್ತವದಲ್ಲಿ ಎಷ್ಟೊಂದು ದಬ್ಬಾಳಿಕೆಯಿಂದ ಕೂಡಿದೆ ಎಂಬುದನ್ನು ಅವರು ಅರಿಯರು. ಅಲ್ಪಸಂಖ್ಯತರಾದ ಅಸ್ಪೃಶ್ಯರು, ಹಿಂದೂಗಳೇ ಬಹುಸಂಖ್ಯೆಯಲ್ಲಿರುವ ಗ್ರಾಮದ ಅಂಚಿನಲ್ಲಿಯೆ ವಾಸಿಸುತ್ತ, ಅನೇಕರಿಗೆ ಇಷ್ಟವಿಲ್ಲದ ಹೊಲಸನ್ನು ಹೊತ್ತೊಯ್ದು ಸ್ವಚ್ಛ ಮಾಡಲು ಗ್ರಾಮದ ಒಳಗೆ ನಿತ್ಯವೂ ಹೋಗುವವರು. ಚಿಲ್ಲರೆ ಪಲ್ಲರೆ ಸುದ್ದಿ ವಾಹಕರು, ಮಸಾಲೆ ಸಾಮಾನುಗಳನ್ನು ಮತ್ತು ಎಣ್ಣೆಯನ್ನು ಹಿಂದೂ ವ್ಯಾಪಾರಿಗಳಿಂದ ದೂರದಲ್ಲಿಯೆ ನಿಂತು ಕೊಳ್ಳುವವರು. ಗ್ರಾಮವನ್ನು ಎಲ್ಲ ದೃಷ್ಟಿಯಿಂದಲೂ ತಮ್ಮ ಮೂಲ ನೆಲೆಯನ್ನಾಗಿ ಪರಿಗಣಿಸಿದ್ದರೂ ಗ್ರಾಮದ ಇತರರನ್ನು ಮುಟ್ಟದವರು ಮತ್ತು ಇತರರಿಂದ ಮುಟ್ಟಿಸಿಕೊಳ್ಳದವರು. ಇಂಥ ಸ್ಥಿತಿಗತಿಗಳ ಅರ್ಥ ವಿದೇಶೀಯರಿಗೆ ಸುಲಭವಾಗಿ ಹೊಳೆಯದು, ತಿಳಿಯದು. ಸ್ಪೃಶ್ಯ ಹಿಂದೂಗಳು ಅಸ್ಪೃಶ್ಯರೊಂದಿಗೆ ಹೇಗೆ ನಡೆದುಕೊಂಡರು ಎಂಬುದನ್ನು ಚೆನ್ನಾಗಿ ತಿಳಿಸುವುದೇ ಇಲ್ಲಿ ನನ್ನ ಮುಖ್ಯ ಉದ್ದೇಶ. ಸಾಮಾನ್ಯ ವರ್ಣನೆಯಿಂದ ಅಥವಾ ಅವರನ್ನು ನಡೆಸಿಕೊಂಡ ಬಗ್ಗೆ ಪ್ರಕರಣಗಳ ಉಲ್ಲೇಖದಿಂದ, ಹೀಗೆ ಎರಡು ರೀತಿಯಿಂದ ಪ್ರಸ್ತುತ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಾಗಿದೆ. ಮೊದಲನೆಯದಕ್ಕಿಂತ ಎರಡನೇ ರೀತಿಯದು ಹೆಚ್ಚು ಪರಿಣಾಮಕಾರಿಯಾಗಬಲ್ಲದು ಎಂಬುದು ನನ್ನ ಭಾವನೆ. ಈ ದಿಶೆಯಲ್ಲಿಯ ದೃಷ್ಟಾಂತಗಳನ್ನು ನನ್ನ ಸ್ವಂತದ ಮತ್ತು ಬೇರೆಯವರ ಅನುಭವಗಳಿಂದ ಆಯ್ಕೆ ಮಾಡಿಕೊಂಡಿದ್ದೇನೆ. ಸದ್ಯ ನನ್ನ ಸ್ವಂತ ಜೀವನದಲ್ಲಿ ಸಂಭವಿಸಿದ ಘಟನೆಗಳಿಂದಲೇ ಇದನ್ನು ಪ್ರಾರಂಭಿಸುತ್ತೇನೆ.

# ಒಂದು

ನಮ್ಮ ಕುಟುಂಬವು ಮೂಲತಃ ಬಾಂಬೇ ಪ್ರಾಂತದ ರತ್ನಗಿರಿ ಜಿಲ್ಲೆಯ ದಾಪೋಲಿ ತಾಲೂಕಿನಿಂದ ಬಂದಿತು. ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತದ ಆರಂಭದಿಂದಲೂ ನನ್ನ ಪೂರ್ವಿಕರು ಕಂಪನಿಯ ಸೇನೆಗೆ ಸೇರುವುದಕ್ಕಾಗಿ ತಮ್ಮ ಆನುವಂಶಿಕ ವೃತ್ತಿಯನ್ನು ಬಿಟ್ಟಿದ್ದರು. ನನ್ನ ತಂದೆಯೂ ಕುಟುಂಬದ ಪರಂಪರೆಯನ್ನು ಅನುಸರಿಸಿ ಕಂಪೆನಿಯ ಸೇವೆಯನ್ನು ಯಾಚಿಸಿದರು. ಅವರು ಒಬ್ಬ ಅಧಿಕಾರಿಯ ಹಂತಕ್ಕೇರಿದರು ಮತ್ತು ನಿವೃತ್ತರಾದಾಗ ಸುಭೇದಾರರಾಗಿದ್ದರು. ನಿವೃತ್ತಿ ಹೊಂದಿದ ನಂತರ ನನ್ನ ತಂದೆ ದಾಪೋಲಿಯಲ್ಲಿರಲು ಬಯಸಿ ಕುಟುಂಬವನ್ನು ಅಲ್ಲಿಗೊಯ್ದರು. ಕುಟುಂಬವು ದಾಪೋಲಿಯನ್ನು ಬಿಟ್ಟು ಸತಾರಾಕ್ಕೆ ಹೋಗಿ ೧೯೦೪ರವರೆಗೆ ನಾವು ಅಲ್ಲಿದ್ದೆವು.

ನಾವು ಸತಾರಾದಲ್ಲಿದ್ದಾಗ, ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವ, ೧೯೦೧ರಲ್ಲಿ ನಡೆದೊಂದು ಘಟನೆಯನ್ನು ಉಲ್ಲೇಖಿಸಬಯಸುತ್ತೇನೆ. ಅಷ್ಟರಲ್ಲಿ ನನ್ನ ತಾಯಿ ತೀರಿಕೊಂಡಿದ್ದಳು. ಭಯಂಕರ ಬರಗಾಲ ಬಿದ್ದಿತ್ತು. ಜನರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಮುಂಬಯಿ ಸರಕಾರದವರು ಬರಗಾಲದಿಂದ ಬಳಲುತ್ತಿದ್ದ ಜನರಿಗೆ ಉದ್ಯೋಗ ಒದಗಿಸಲು, ಖಟಾಟ್ ತಾಲೂಕಿನ ಗೋರೆಗಾಂವ್ ಗ್ರಾಮದಲ್ಲಿ ಕೆರೆಯನ್ನು ತೋಡಿಸಲು ಹತ್ತಿದ್ದರು. ಈ ಬರಗಾಲ ಕಾಮಗಿರಿಯಲ್ಲಿ ಕ್ಯಾಶಿಯರ್ ಆಗಿ ಸೇವೆ ಸಲ್ಲಿಸಲು ನಮ್ಮ ತಂದೆ ಅಲ್ಲಿಗೆ ಹೋಗಿದ್ದರು. ನನ್ನನ್ನು, ಹಿರಿ ಸಹೋದರನನ್ನು, ತೀರಿಹೋದ ಹಿರಿಯ ಸಹೋದರಿಯ ಇಬ್ಬರು ಗಂಡುಮಕ್ಕಳನ್ನು ಸಾತಾರದಲ್ಲಿಯೇ ನನ್ನ ಪ್ರೀತಿಯ ಅತ್ತೆಯ ಆರೈಕೆಯಲ್ಲಿ, ನೆರೆಹೊರೆಯವರ ಕಾರುಣ್ಯದ ನೆರಳಿನಲ್ಲಿ ಬಿಟ್ಟುಹೋಗಿದ್ದರು. ಆಕೆ ಒಂದು ರೀತಿಯ ಗಿಡ್ಡಿ. ಜೊತೆಗೆ ಕಾಲುಗಳ ತೊಂದರೆ ಇದ್ದುದರಿಂದ ಆಕೆಗೆ ಬೇರೆಯವರ ಸಹಾಯವಿಲ್ಲದೆ ನಡೆದಾಡಲೂ ಕೂಡ ಅಸಾಧ್ಯವಾಗಿತ್ತು. ಮೇಲಿಂದ ಮೇಲೆ ಆಕೆಯನ್ನು ಎತ್ತಿ ಒಯ್ಯಬೇಕಾಗುತ್ತಿತ್ತು. ಇಂಥ ಸ್ಥಿತಿಯಲ್ಲಿದ್ದ ಅತ್ತೆಯು ನಮಗೆ ಅಡುಗೆಯನ್ನು ಹೇಗೆ ಮಾಡಿ ಹಾಕಿಯಾಳು? ಅಡುಗೆ ಮಾಡಿಕೊಳ್ಳುವುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ನನಗೆ ಸಹೋದರಿಯರಿದ್ದರೂ ಅವರೆಲ್ಲರಿಗೂ ವಿವಾಹವಾಗಿ ತಂತಮ್ಮ ಕುಟುಂಬದೊಂದಿಗೆ ದೂರದ ಊರುಗಳಲ್ಲಿ ವಾಸವಾಗಿದ್ದರು. ಹೀಗಾಗಿ ನಾವು ನಾಲ್ವರೂ ಮಕ್ಕಳು ಶಾಲೆಗೆ ಹೋಗುವುದರ ಜೊತೆಗೆ ಅಡುಗೆಯನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ನಮಗೆ ರೊಟ್ಟಿ ಅಥವಾ ಚಪಾತಿ ಮಾಡಲು ಬರುತ್ತಿರಲಿಲ್ಲ. ಪಲಾವ್ ಒಂದರ ಮೇಲೆಯೇ ಅವಲಂಬಿಸಬೇಕಾಗಿತ್ತು. ಯಾಕೆಂದರೆ ಅದು ಅತಿ ಸರಳವಾಗಿ ಮಾಡಬಹುದಾದ ಆಹಾರವಾಗಿತ್ತು. ಅಕ್ಕಿ, ಮಾಂಸ, ಸ್ವಲ್ಪ ಮಸಾಲೆ ಸೇರಿಸಿ ಬೇಯಿಸಿದರೆ ಆಗುವಂಥದು.

ನನ್ನ ತಂದೆ ಕ್ಯಾಶಿಯರ್ ಆಗಿದ್ದುದರಿಂದ ನಮ್ಮನ್ನು ಕಾಣಲು ಅವರಿಗೆ ಸತಾರಕ್ಕೆ ಬರಲು ಆಗುತ್ತಿರಲಿಲ್ಲ. ಆದ್ದರಿಂದ ಗೋರೇಗಾಂವ್‌ಗೆ ಬಂದು ಬೇಸಿಗೆ ರಜೆಯನ್ನು ತನ್ನೊಡನೆ ಕಳೆಯಲು ಪತ್ರ ಬರೆದಿದ್ದರು. ಅಲ್ಲಿಯವರೆಗೆ ಮಕ್ಕಳು ನಾವ್ಯಾರೂ ರೈಲುಗಾಡಿಯನ್ನೇ ನೋಡಿರಲಿಲ್ಲ. ಇಂಥ ಹಲವಾರು ಆನಂದದ ಕ್ಷಣಗಳ ನಿರೀಕ್ಷೆಯೇ ನಮ್ಮನ್ನು ಭಾವೋದ್ರೇಕಗೊಳಿಸಿತ್ತು.

ಪ್ರವಾಸದ ಸಿದ್ಧತೆ ದೊಡ್ಡ ಪ್ರಮಾಣದಲ್ಲಿ ಶುರು ಆಯಿತು. ಇಂಗ್ಲಿಷರಿಂದ ತಯಾರಾದ ಶರ್ಟುಗಳಿಗೆ,

ಮುತ್ತುಗಳಿಂದ ಅಲಂಕೃತವಾದ ಮುತ್ತು ಹೊಳಪುಳ್ಳ ಟೋಪಿಗಳು ಮತ್ತು ಹೊಸ ಶೂಗಳು ಮತ್ತು ರೇಷ್ಮೆ ಅಂಚಿನ ನಾಜೂಕಾದ ಹೊಸ ಧೋತರಗಳಿಗೆ ಕೋರಿಕೆ (order) ಸಲ್ಲಿಸಿ ಪಡೆಯಲಾಯಿತು. ನನ್ನ ತಂದೆಯು ಪ್ರವಾಸದ ವಿವರಗಳನ್ನು ತಿಳಿಸಿದ್ದರು. ಎಂದು ಹೊರಡುವವರಿದ್ದೇವೆ ಎಂಬುದನ್ನು ತಿಳಿಸಿದರೆ ಸ್ಟೇಷನ್ನಿಗೆ ಸೇವಕರನ್ನು ಕಳಿಸಿ ನಮ್ಮನ್ನು ಗೋರೇಗಾಂವ್‌ಗೆ ಕರೆದೊಯ್ಯಲು ವ್ಯವಸ್ಥೆ ಮಾಡುವುದಾಗಿಯೂ ಹೇಳಿದ್ದರು. ಅದರಂತೆ ನಾವು ಮುಂದಾಗಿ ತಿಳಿಸಿ ನಾನು, ನನ್ನಣ್ಣ, ಮತ್ತು ಸಹೋದರಿಯ ಒಬ್ಬ ಮಗ ಹೀಗೆ ಎಲ್ಲರೂ ಸೇರಿ ಸತಾರಾ ಸ್ಟೇಶನ್‌ದಿಂದ ಹೊರಟೆವು. ನಮ್ಮತ್ತೆಯನ್ನು ನೋಡಿಕೊಳ್ಳುವ ಭರವಸೆ ನೀಡಿದ್ದ ನೆರೆಹೊರೆಯವರಿಗೆ ಆಕೆಯನ್ನು ಒಪ್ಪಿಸಿದೆವು. ರೇಲ್ವೆ ಸ್ಟೇಷನ್ ನಮ್ಮ ವಾಸಸ್ಥಳದಿಂದ ಹತ್ತು ಮೈಲು ದೂರದಲ್ಲಿತ್ತು. ನಮ್ಮನ್ನು ಸ್ಟೇಷನ್ನಿಗೆ ಕರೆದೊಯ್ಯಲು ಟಾಂಗಾ ಗೊತ್ತುಪಡಿಸಿದ್ದೆವು. ಊರಿಗೆ ಹೋಗುವ ಉದ್ದೇಶಕ್ಕಾಗಿಯೆ ಸಿದ್ಧಪಡಿಸಿದ ಬಟ್ಟೆಗಳನ್ನು ತೊಟ್ಟುಕೊಂಡು ಆನಂದದಿಂದೇನೋ ಹೊರಟೆವು. ಆದರೆ ನಮ್ಮ ಅಗಲಿಕೆಯ ದುಃಖ ತಡೆಯಲಾರದೆ ನಮ್ಮತ್ತೆಯು ಬಿದ್ದು ಹೊರಳಾಡುತ್ತ ದುಃಖಿಸಹತ್ತಿದಳು.

ನಾವು ಸ್ಟೇಶನ್ ತಲುಪಿದೆವು. ನನ್ನಣ್ಣ ಟಿಕೀಟುಗಳನ್ನು ತಂದನು. ನನಗೆ ಮತ್ತು ನನ್ನ ಅಕ್ಕನ ಮಗನಿಗೆ ಉಲ್ಲಸಿತರಾಗಿರೆಂದು ಹೇಳಿ, ಒಬ್ಬೊಬ್ಬರಿಗೆ ಎರಡಾಣೆಯಂತೆ ಕೈ ಖರ್ಚಿಗೆ ಕೊಟ್ಟನು. ಕೂಡಲೆ ನಮ್ಮ ಸುಪ್ತಾ ಸ್ವೇಚ್ಛಾ ಜೀವನಕ್ಕೆ ಚಾಲನೆ ದೊರಕಿತು. ಇಬ್ಬರಿಗೂ ಒಂದೊಂದರಂತೆ ನಿಂಬೆ ಪಾನೀಯಕ್ಕೆ ಕೋರಿಕೆ ಸಲ್ಲಿಸಿದೆವು, ಕುಡಿದೆವು. ಸ್ವಲ್ಪ ಹೊತ್ತಿನಲ್ಲಿಯೆ ರೈಲು ಸೀಟಿ ಹೊಡೆಯುತ್ತಾ ಪ್ಲ್ಯಾಟ್‌ಫಾರ್ಮ್ ಪ್ರವೇಶಿಸಿತು. ಅದು ನಮ್ಮನ್ನು ಹಿಂದೆ ಬಿಟ್ಟುಹೋಗಬಹುದೆಂಬ ಹೆದರಿಕೆಯಿಂದ ಅವಸರವಸರದಿಂದ ರೈಲು ಹತ್ತಿದೆವು. ಗೋರೆಗಾಂವ್ ಹತ್ತಿರದ ಮಾಸೂರಿನಲ್ಲಿ ನಾವು ಕುಳಿತ ರೈಲು ಬದಲಿಸಿ ಬೇರೊಂದನ್ನು ಹತ್ತಬೇಕೆಂದು ಹತ್ತುವ ಮೊದಲೇ ತಿಳಿಸಲಾಗಿತ್ತು.

ಸಾಯಂಕಾಲ ಐದು ಗಂಟೆಗೆ ರೈಲು ಮಾಸೂರು ನಿಲ್ದಾಣ ತಲುಪಿತು. ನಾವು ನಮ್ಮ ಸಾಮಾನು ಸರಂಜಾಮುಗಳೊಂದಿಗೆ ಕೆಳಗೆ ಇಳಿದೆವು. ಉಳಿದೆಲ್ಲ ಪ್ರಯಾಣಿಕರು ಕೆಲವೇ ನಿಮಿಷಗಳಲ್ಲಿ ತಂತಮ್ಮ ಗುರಿಯೆಡೆಗೆ ಹೊರಟುಹೋದರು. ನಾವು ನಾಲ್ಕು ಮಕ್ಕಳು ನಮ್ಮ ತಂದೆ ಅಥವಾ ಅವರು ಕಳಿಸಲು ವಾಗ್ದಾನವಿತ್ತ ಸೇವಕನ ದಾರಿ ಕಾಯುತ್ತಾ ಪ್ಲ್ಯಾಟ್‌ಫಾರ್ಮಿನಲ್ಲಿಯೇ ಉಳಿದೆವು. ಅವರಿಗಾಗಿ ಹೆಚ್ಚು ಹೊತ್ತು ಕಾಯ್ದರೂ ಯಾರೊಬ್ಬರೂ ಬರಲಿಲ್ಲ. ಕಾಯುತ್ತಾ ನಿಂತು ಒಂದು ತಾಸು ಆಗಿರಬೇಕು. ಸ್ಟೇಶನ್ ಮಾಸ್ತರನು ನಮ್ಮೆಡೆಗೆ ಬಂದು ವಿಚಾರಿಸಿದನು. ನಾವು ಗೋರೇಗಾಂವ್‌ಗೆ ಹೋಗಬೇಕಾಗಿದೆ. ನಮ್ಮ ತಂದೆ ಅಥವಾ ಸೇವಕನ ದಾರಿ ಕಾಯುತ್ತಾ ನಿಂತು ಬಹಳ ಹೊತ್ತಾಯಿತು. ಯಾರೊಬ್ಬರೂ ಬಂದಿಲ್ಲ. ಗೋರೇಗಾಂವ್‌ಗೆ ಹೇಗೆ ಹೋಗಬೇಕೆಂಬುದೇ ತಿಳಿಯದಾಗಿದೆ ಎಂದು ಹೇಳಿದೆವು. ನಾವು ಒಳ್ಳೇ ಬಟ್ಟೆ ಧರಿಸಿದ್ದೆವು. ನಮ್ಮ ಬಟ್ಟೆಗಳಿಂದಾಗಲೀ, ಮಾತುಕತೆಯಿಂದಾಗಲೀ ನಾವು ಅಸ್ಪೃಶ್ಯರ ಮಕ್ಕಳೆಂದು ಯಾರಿಗೂ ತಿಳಿಯುವಂತಿರಲಿಲ್ಲ. ನಿಜ ಹೇಳಬೇಕೆಂದರೆ ಸ್ಟೇಷನ್ ಮಾಸ್ತರರು, ನಾವು ಬ್ರಾಹ್ಮಣರ ಮಕ್ಕಳೆಂದೇ ತಿಳಿದಂತಿತ್ತು. ಮತ್ತು ನಮ್ಮ ಅಸಹಾಯಕತೆಯ ಬಗ್ಗೆ ಅವನ ಮನಸ್ಸು ಪೂರ್ತಿ ಕರಗಿತ್ತು. ಕನಿಕರಪಟ್ಟಿದ್ದ ಹಿಂದೂಗಳಲ್ಲಿ ರೂಢಿಯಲ್ಲಿರುವಂತೆ ಸಹಜವಾಗಿ ನಾವಾರು ಎಂದು ಕೇಳಿದ. ಒಂದು ಅರೆಕ್ಷಣವೂ ವಿಚಾರಿಸದೆ, ನಾನು ಥಟ್ಟನೆ ನಾವು ಮಹಾರರು ಎಂದು ಉತ್ತರಿಸಿದೆ. (ಮಹಾರರೆಂದರೆ ಮುಂಬಯಿ ರಾಜ್ಯದಲ್ಲಿರುವ ಅಸ್ಪೃಶ್ಯರಲ್ಲಿಯ ಒಂದು ಪಂಗಡವೆಂದು ಪರಿಗಣಿತವಾಗಿತ್ತು.) ನನ್ನ ಮಾತನ್ನು ಕೇಳುತ್ತಿದ್ದಂತೆಯೆ ಅವನು ಬೆಚ್ಚಿಬಿದ್ದ. ಅವನ ಮುಖದಲ್ಲಿ ಬದಲಾವಣೆ ಕಾಣಿಸಿಕೊಂಡಿತು. ನಮ್ಮ ಬಗ್ಗೆ ತಿರಸ್ಕಾರಭಾವ ಮೂಡಿದ್ದನ್ನು ಯಾರಾದರೂ ಗುರುತಿಸಬಹುದಾಗಿತ್ತು. ತಡಮಾಡದೆ ತನ್ನ ಕಾರ್ಯಾಲಯದ ಕೋಣೆಗೆ

ಹೊರಟುಹೋದ. ನಾವು ನಿಂತಲ್ಲಿಯೇ ನಿಂತಿದ್ದೆವು. ೧೫–೨೦ ನಿಮಿಷಗಳು ಉರುಳಿದವು. ಸೂರ್ಯನು ಪಶ್ಚಿಮದ ಬಾನಂಚಿನಲ್ಲಿ ಪೂರ್ತಿ ಮುಳುಗಹತ್ತಿದ್ದ. ನಮ್ಮ ತಂದೆ ತಾನೂ ಬರಲಿಲ್ಲ. ಸೇವಕನನ್ನು ಕಳಿಸಿರಲಿಲ್ಲ. ಈಗ ಸ್ಟೇಶನ್ ಮಾಸ್ತರನೂ ನಮ್ಮನ್ನು ದೂರ ಸರಿಸಿ ನಡೆದಿದ್ದ. ನಮಗೆ ದಿಕ್ಕೇ ತೋಚದಂತಾಯಿತು. ಪ್ರವಾಸದ ಪ್ರಾರಂಭದಲ್ಲಿ ನಮ್ಮಲ್ಲಿದ್ದ ಆನಂದ ಮತ್ತು ಸಂತೋಷ ಮಾಯವಾಗಿ ಅತೀವ ದುಃಖ ಆವರಿಸಿತು.

ಅರ್ಧ ತಾಸಿನ ನಂತರ ತಿರುಗಿ ಬಂದ ಸ್ಟೇಶನ್ ಮಾಸ್ತರನು ನಮ್ಮ ಯೋಜನೆಯ ಬಗ್ಗೆ ವಿಚಾರಿಸಿದ. ಸವಾರಿ ಎತ್ತಿನ ಬಂಡಿಯು ಬಾಡಿಗೆಗೆ ಸಿಗುವುದಾದರೆ ಅದರ ಮೇಲೆ ಹೋಗುವುದಾಗಿಯೂ, ಗೋರೇಗಾಂವ್ ಸಮೀಪದಲ್ಲಿಯೇ ಇದ್ದಿದ್ದರೆ ಕೂಡಲೇ ಹೊರಡಲೇಬೇಕೆಂದಿರುವುದಾಗಿಯೂ ನಾವು ಹೇಳಿದೆವು. ಮಾಸೂರು ಸ್ಟೇಶನ್ ಮತ್ತು ಗೋರೇಗಾಂವ್ ಮಧ್ಯೆ ಬೇಕಾದಷ್ಟು ಸವಾರಿ ಬಂಡಿಗಳು ಓಡಾಡುತ್ತಿವೆ ಎಂದು ಸ್ಟೇಶನ್ ಮಾಸ್ತರ್ ಹೇಳಿದ. ಆದರೆ ಮಹಾರರಾದ ನಮ್ಮನ್ನು ಅವರು ಕರೆದೊಯ್ಯಬಹುದೇ ಎಂದು ಕೇಳಿದೆ. ಸಾರಿಗೆ ಬಂಡಿಯವರ ಬಳಿ ಹೋಗಿ ಸ್ಟೇಶನ್ ಮಾಸ್ತರ ವಿಚಾರಿಸಿದ. ಅಸ್ಪೃಶ್ಯ ಪ್ರಯಾಣಿಕರನ್ನು ಹತ್ತಿಸಿಕೊಂಡು ಮೈಲಿಗೆ ಉಂಟುಮಾಡಿಕೊಳ್ಳಲು ಒಬ್ಬ ಗಾಡಿಯವನು ಸಿದ್ಧನಿಲ್ಲ ಎಂಬುದು ತಿಳಿಯಿತು. ನಾವು ಎರಡರಷ್ಟು ಬಾಡಿಗೆ ಕೊಡುವ ಆಮಿಷ ತೋರಿಸಿದರೂ ಅದರ ಪರಿಣಾಮ ಗಾಡಿಯವರ ಮೇಲೆ ಆಗಲಿಲ್ಲ. ನಮ್ಮ ಪರವಾಗಿ ಸಂಧಾನ ನಡೆಸುತ್ತಿದ್ದ ಸ್ಟೇಶನ್ ಮಾಸ್ತರನಿಗೆ ಏನು ಮಾಡಬೇಕೆಂಬುದು ಹೊಳೆಯದಂತಾಗಿ ಮೌನ ಧರಿಸಿದನು. ಅವನಿಗೆ ಥಟ್ಟನೆ ಒಂದು ವಿಚಾರ ಹೊಳೆದಂತಾಗಿ 'ನೀವೇ ಗಾಡಿಯನ್ನು ಹೊಡೆಯಬಲ್ಲಿರಾ?' ಎಂದು ನಮ್ಮನ್ನು ಕೇಳಿದ. ನಮಗೆ ಅದು ಸಮಸ್ಯೆಗೆ ಪರಿಹಾರವಾದೀತೆಂದು ಅನಿಸಿ, 'ನಾವು ಹೊಡೆಯಬಲ್ಲೆವು' ಎಂದು ಕೂಗಿದೆವು. ನಮ್ಮ ಉತ್ತರ ಕೇಳಿದ ಸ್ಟೇಶನ್ ಮಾಸ್ತರನು ಎರಡು ಪಟ್ಟು ಬಾಡಿಗೆ ಕೊಟ್ಟು ನಾವೇ ಗಾಡಿಹೊಡೆಯುವುದಾಗಿಯೂ, ತಾನು ಗಾಡಿಯ ಹಿಂದೆ ನಡೆದು ಬಂದರೆ ಸಾಕೆಂದೂ ನಮ್ಮ ಪರವಾಗಿ ಹೇಳಿದ. ಇದರಿಂದ ತನಗೆ ಎರಡು ಪಟ್ಟು ಬಾಡಿಗೆಯೂ ಸಿಗುತ್ತದೆ. ಜೊತೆಗೆ ಮೈಲಿಗೆಯಾಗದಂತೆಯೂ ತಡೆಯುತ್ತದೆ ಎಂದು ಬಗೆದು ಒಬ್ಬ ಸಾರಿಗೆ ಗಾಡಿಯವನು ಇದಕ್ಕೆ ಒಪ್ಪಿದನು.

ಕತ್ತಲಾಗುವುದರೊಳಗಾಗಿ ಗೋರೆಗಾಂವ್ ತಲುಪಲು ಸಾಧ್ಯವೆಂಬ ಭರವಸೆ ಸಿಗುವವರೆಗೆ ಹೊರಡಬಾರದೆಂದು ನಿರ್ಧರಿಸಿದ್ದೆವು. ಆದ್ದರಿಂದ ದಾರಿಯ ದೂರ ಮತ್ತು ಗೋರೆಗಾಂವ್ ತಲುಪಲು ಹಿಡಿಯಲು ವೇಳೆಯ ಬಗ್ಗೆ ಗಾಡಿಯವನನ್ನು ಪ್ರಶ್ನಿಸಿದೆವು. ಮೂರು ಗಂಟೆಗಿಂತಲೂ ಹೆಚ್ಚು ವೇಳೆ ಹಿಡಿಯುವುದಿಲ್ಲವೆಂದು ಭರವಸೆ ಕೊಟ್ಟನು. ಅವನ ಮಾತನ್ನು ನಂಬಿದೆವು. ಗಾಡಿಯಲ್ಲಿ ನಮ್ಮ ಸಾಮಾನುಗಳನ್ನು ಇಟ್ಟೆವು. ಸ್ಟೇಶನ್ ಮಾಸ್ತರನಿಗೆ ಸಹಾಯಕ್ಕಾಗಿ ಧನ್ಯವಾದಗಳನ್ನು ಹೇಳಿದೆವು. ನಮ್ಮಲ್ಲಿಯೇ ಒಬ್ಬರು ಗಾಡಿಯ ಮುಂಭಾಗದ ಮೇಲೆ ಕುಳಿತು ಎತ್ತುಗಳ ಹಗ್ಗ ಹಿಡಿದೆವು. ಗಾಡಿ ಮುಂದೆ ಸಾಗಿತು. ಗಾಡಿಯವ ನಮ್ಮ ಮಗ್ಗುಲಲ್ಲಿಯೆ ಕಾಲುನಡಿಗೆಯಿಂದ ಹೊರಟ. ನಾವು ಸ್ಟೇಶನ್ ಬಿಡುವಾಗ ಸಾಯಂಕಾಲ ಸುಮಾರು ೬–೩೦ ಗಂಟೆ.

ಸ್ಟೇಶನ್ನಿನ ಸನಿಹದಲ್ಲಿಯೆ ನದಿಯೊಂದು ಹರಿದಿದೆ. ಅಲ್ಲಿ ಇಲ್ಲಿ ಇರುವ ನೀರಿನ ಹೊಂಡಗಳನ್ನು ಬಿಟ್ಟರೆ ಅದು ಸಂಪೂರ್ಣವಾಗಿ ಬತ್ತಿದಂತಿತ್ತು. ಮುಂದೆ ಮತ್ತೆಲ್ಲಿಯೂ ನೀರಿರುವುದಿಲ್ಲವಾದ್ದರಿಂದ ಇಲ್ಲಿಯೇ ಇಳಿದು ಊಟ ಮಾಡಿ ನೀರು ಕುಡಿದು ಮುಂದೆ ಸಾಗುವುದು ಸೂಕ್ತವೆಂಬ ಸೂಚನೆಯನ್ನು ಗಾಡಿಯವನು ನೀಡಿದ. ನಾವು ಒಪ್ಪಿದೆವು. ಬಾಡಿಗೆಯಲ್ಲಿಯ ಸ್ವಲ್ಪ ಹಣ ಮುಂಗಡವಾಗಿ ಕೊಟ್ಟರೆ ಇಲ್ಲಿಯೆ ಸನಿಹದಲ್ಲಿಯ ಗ್ರಾಮಕ್ಕೆ ಹೋಗಿ ಊಟ ಮಾಡಿ ಬರುತ್ತೇನೆಂದು ಹೇಳಿದ. ನನ್ನಣ್ಣ ಸ್ವಲ್ಪ ಹಣ ಕೊಟ್ಟ. ಬೇಗನೆ ಮರಳಿ ಬರುವ ಭರವಸೆ ಕೊಟ್ಟು ಹೋದ. ನಮಗೆ ಬಹಳ ಹಸಿವಾಗಿತ್ತು. ಆಹಾರ ಸೇವಿಸುವ ಸದವಕಾಶ

ಒದಗಿದ್ದಕ್ಕಾಗಿ ಅತೀವ ಸಂತೋಷವಾಯಿತು. ನಮ್ಮತ್ತೆ ನೆರೆಹೊರೆಯ ಮಹಿಳೆಯರಿಗೆ ಒತ್ತಾಯ ಮಾಡಿ ನಮಗೆ ಪ್ರಯಾಣದ ದಾರಿಯಲ್ಲಿ ತಿನ್ನುಣ್ಣಲು ರುಚಿಕಟ್ಟಾದ ಆಹಾರ ಪದಾರ್ಥಗಳ ಬುತ್ತಿಯನ್ನು ಕಟ್ಟಿಸಿ ಕೊಟ್ಟಿದ್ದಳು. ಬುತ್ತಿಯ ಚೀಲವನ್ನು ತೆರೆದು ತಿನ್ನಲು ಪ್ರಾರಂಭಿಸಿದೆವು. ನಂತರ ಪಾತ್ರೆಗಳನ್ನು ತೊಳೆಯಲು ನೀರು ಬೇಕಾಗಬಹುದೆಂದು ನಮ್ಮಲ್ಲೊಬ್ಬರು ಸನಿಹದಲ್ಲಿದ್ದ, ನದಿಯ ಮಧ್ಯದಲ್ಲಿದ್ದ ಹೊಂಡಕ್ಕೆ ಹೋದೆವು. ಆದರೆ ಅದರಲ್ಲಿದ್ದುದು ನಿಜವಾದ ನೀರೇ ಆಗಿರಲಿಲ್ಲ. ಅದು ನೀರು ಕುಡಿಯಲು ಹೋದ ಆಕಳು, ಎಮ್ಮೆ, ಮತ್ತಿತರ ಪ್ರಾಣಿಗಳ ಮೂತ್ರ, ಮಲ ಮತ್ತು ಕೆಸರು ಮಿಶ್ರಿತ ರಾಡಿಯಾಗಿತ್ತು. ವಾಸ್ತವವಾಗಿ ಆ ನೀರು ಮಾನವ ಬಳಕೆಯ ಉದ್ದೇಶದಿಂದ ಕೂಡಿರಲಿಲ್ಲ. ನಾವು ಕುಡಿಯಲು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ದುರ್ವಾಸನೆಯಿಂದ ಕೂಡಿತ್ತು. ಹೀಗಾಗಿ ಹಸಿವು ಇಂಗದ ಮುನ್ನವೇ ಊಟ ಮಾಡುವುದನ್ನು ನಿಲ್ಲಿಸಿ ಗಾಡಿಯವನು ಬರುವ ಹಾದಿಯನ್ನೇ ಕಾಯುತ್ತ ಕುಳಿತೆವು. ಅವನು ಬಹಳ ಹೊತ್ತಿನವರೆಗೆ ಬರಲೇ ಇಲ್ಲ. ಆಗ ನಾವು ಮಾಡಿದ ಒಂದೇ ಒಂದು ಕೆಲಸವೆಂದರೆ ಸುತ್ತೂ ಕಡೆಗೆ ನೋಡುತ್ತ ಅವನ ಬರುವಿಕೆಯನ್ನೇ ನಿರೀಕ್ಷಿಸುವುದಾಗಿತ್ತು. ತಡವಾಗಿಯಾದರೂ ಕೊನೆಗೆ ಬಂದ. ನಮ್ಮ ಪಯಣ ಮುಂದುವರಿಯಿತು. ನಾವು ನಾಲ್ಕೈದು ಮೈಲು ಗಾಡಿ ಹೊಡೆದೆವು. ಗಾಡಿಯವನು ನಡೆದ. ಆಮೇಲೆ ಜಿಗಿದು ಹತ್ತಿ ಎತ್ತಿನ ಹಗ್ಗಗಳನ್ನು ನಮ್ಮಿಂದ ಕಿತ್ತುಕೊಂಡ. ಮೊದಲು, ಮೈಲಿಗೆ ಆಗುವುದೆಂದು ಗಾಡಿಯನ್ನು ಬಾಡಿಗೆಗೆ ಕೊಡಲು ನಿರಾಕರಿಸಿದ ವ್ಯಕ್ತಿಯು ಈಗ ಎಷ್ಟೂ ಧಾರ್ಮಿಕ ಅಳುಕೂ ಇಲ್ಲದಂತೆ ನಮ್ಮ ಜೊತೆಗೆ ಅದೇ ಗಾಡಿಯಲ್ಲಿ ಕುಳಿತುಕೊಂಡ ವ್ಯಕ್ತಿಯ ವರ್ತನೆ ನಮಗೆ ಅತೀ ವಿಸ್ಮಯವನ್ನುಂಟುಮಾಡಿತು. ಆದರೆ ನಾವು ಈ ಬಗ್ಗೆ ಯಾವ ಪ್ರಶ್ನೆಯನ್ನೂ ಕೇಳುವ ಧೈರ್ಯ ಮಾಡಲಿಲ್ಲ. ನಮ್ಮ ಗುರಿಯಾಗಿದ್ದ ಗೋರೇಗಾಂವ್ ಅನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಲುಪಲು ಕಾತುರರಾಗಿದ್ದೆವು. ಆದ್ದರಿಂದ ಕೆಲಹೊತ್ತು ಗಾಡಿಯು ಚಲಿಸುವುದರ ಕಡೆಗೇ ಗಮನವಿತ್ತಿದ್ದೆವು. ಆದರೆ ಕೂಡಲೆ ಕತ್ತಲು ಆವರಿಸಿತು. (ಮಾರ್ಗದ ಮಟ್ಟಿಗಾದರೂ) ಇದನ್ನು ತಡೆಯಲು ಬೀದಿ ದೀಪಗಳ ವ್ಯವಸ್ಥೆ ಇರಲಿಲ್ಲ. ಸ್ತ್ರೀಯರಾಗಲೀ, ಪುರುಷರಾಗಲೀ, ಕೊನೆಗೆ ದನಕರುಗಳಾಗಲೀ ಅಡ್ಡಾಡಿ ಅವುಗಳ ಮಧ್ಯೆ ನಾವೆಲ್ಲ ಇದ್ದೇವೆ ಎಂಬ ಭಾವನೆ ಮೂಡಲಿಲ್ಲ. ನಮ್ಮ ಸುತ್ತಲೂ ಆವರಿಸಿದ್ದ ಏಕಾಂತದಿಂದ ನಮಗೆ ಹೆದರಿಕೆಯುಂಟಾಯಿತು. ನಮ್ಮ ವ್ಯಾಕುಲತೆ ವರ್ಧಿಸುತ್ತಾ ಹೋಯಿತು. ನಮ್ಮಲ್ಲಿ ಅಳಿದುಳಿದ ಧೈರ್ಯವನ್ನು ಒಟ್ಟುಗೂಡಿಸಿಕೊಂಡೆವು. ಆಗಲೇ ಮಾಸೂರಿನಿಂದ (ಮಾಸೂರು ರೈಲು ನಿಲ್ದಾಣದಿಂದ) ಬಹುದೂರ ಕ್ರಮಿಸಿದ್ದೆವು. ಮೂರು ಗಂಟೆಗಳಿಗಿಂತ ಹೆಚ್ಚು ಕಾಲ ಗತಿಸಿತ್ತು. ಆದರೆ ಗೋರೇಗಾಂವ್‌ದ ಕುರುಹು ಕಾಣಲಿಲ್ಲ. ಆಗ ನಮ್ಮ ಮನಸ್ಸಿನಲ್ಲಿ ಒಂದು ವಿಚಿತ್ರ ವಿಚಾರ ಸುಳಿಯಿತು. ನಮ್ಮನ್ನು ಮೋಸಗೊಳಿಸುವ ಕುತಂತ್ರದ ಉದ್ದೇಶವೇನಾದರೂ ಗಾಡಿಯವನಲ್ಲಿ ಇದ್ದಿರಬಹುದೇ? ಇದಕ್ಕಾಗಿಯೆ ನಮ್ಮ ಹತ್ಯೆ ಮಾಡಲು ಜನಸಂಚಾರವಿಲ್ಲದ ಸ್ಥಳಕ್ಕೆ ನಮ್ಮನ್ನು ಕರೆದೊಯ್ಯುತ್ತಿರಬಹುದೇ? ಎಂಬ ಸಂದೇಹ ಮೂಡಿತು. ನಮ್ಮ ಮೈಮೇಲೆ ಸಾಕಷ್ಟು ಬಂಗಾರದ ಆಭರಣಗಳಿದ್ದುದರಿಂದ ನಮ್ಮ ಸಂದೇಹಕ್ಕೆ ಬಲ ದೊರಕಿತ್ತು. ಗೋರೇಗಾಂವ್ ಇನ್ನೂ ಎಷ್ಟು ದೂರವಿದೆ. ಅದನ್ನು ತಲುಪಲು ಇಷ್ಟೊಂದು ತಡವೇಕೆ ಆಗುತ್ತಿದೆ ಎಂದು ಮುಂತಾಗಿ ಪ್ರಶ್ನಿಸಹತ್ತಿದೆವು. ಅದು, ಇನ್ನೇನು ಬಹಳ ದೂರವಿಲ್ಲ. ಇಷ್ಟರಲ್ಲಿಯೇ ತಲುಪಲಿದ್ದೇವೆ ಎಂದು ಹೇಳುತ್ತಲೇ ಹೋದ. ಆಗಲೇ ರಾತ್ರಿ ಹತ್ತು ಗಂಟೆಯಾಗಿತ್ತು. ಗೋರೇಗಾಂವ್‌ನ ಸುಳುಹು ಕಾಣಲಿಲ್ಲವಾದ್ದರಿಂದ ನಾವು ಅಳಹತ್ತಿದೆವು. ಅವನನ್ನು ಬಯ್ಯಲು ಶುರು ಮಾಡಿದೆವು. ನಮ್ಮ ಅಳು ಮತ್ತು ಗೋಳಾಟ ಬಹಳ ಹೊತ್ತಿನವರೆಗೆ ಮುಂದುವರಿಯಿತು. ಗಾಡಿಯವ ದಿವ್ಯ ಮೌನ ಧರಿಸಿದ್ದ. ಗಾಡಿಯವ ನಮಗೆ ಏನೂ ಹೇಳುವ ಗೊಡವೆಗೆ ಹೋಗದೆ ದಿವ್ಯ ಮೌನ ಧರಿಸಿದ್ದ. ಅನಿರೀಕ್ಷಿತವಾಗಿ ದೂರದಲ್ಲಿ

ಒಂದು ಮಿಣುಕು ದೀಪವನ್ನು ಕಂಡೆವು. 'ಆ ದೀಪ ನಿಮಗೆ ಕಾಣುತ್ತದೆಯೆ?' ಎಂದು ಗಾಡಿಯವ ಕೇಳಿದ. "ಅದು ಸುಂಕದ ಕಟ್ಟೆಯವನ ದೀಪ. ಅಲ್ಲಿಯೆ ರಾತ್ರಿ ಉಳಿದು ವಿಶ್ರಾಂತಿ ಪಡೆಯೋಣ" ಎಂದು ಹೇಳಿದ. ನಮಗೆ ನಿರಾತಂಕವೆನಿಸಿತು: ಅಳುವುದನ್ನು ನಿಲ್ಲಿಸಿದೆವು. ಆ ದೀಪ ಇನ್ನೂ ದೂರದಲ್ಲಿತ್ತು. ಅದನ್ನು ತಲುಪುವುದಿಲ್ಲವೇನೋ ಎಂದೆನಿಸಿತು. ಸುಂಕದಕಟ್ಟೆ ತಲುಪಲು ಎರಡು ಗಂಟೆ ಹಿಡಿಯಿತು. ಈ ಮಧ್ಯೆ ನಮ್ಮ ಕಳವಳ ಎಲ್ಲೆ ಮೀರಿತ್ತು. 'ಊರನ್ನು ತಲುಪಲು ಏಕೆ ಇಷ್ಟೊಂದು ತಡವಾಗುತ್ತಿದೆ? ಹೊರಟಿರುವ ದಾರಿ ಸರಿಯಾಗಿದೆಯೆ?' ಮುಂತಾದ ಹಲವಾರು ಪ್ರಶ್ನೆಗಳನ್ನು ಗಾಡಿಯವನಿಗೆ ಹಾಕುತ್ತಲೇ ಇದ್ದೆವು.

ಕೊನೆಯಲ್ಲಿ ಮಧ್ಯರಾತ್ರಿಗೆ ಗಾಡಿಯ ಸುಂಕದವನ ತಾಣವನ್ನು ತಲುಪಿತು. ಇದು ಗುಡ್ಡದ ಅಡಿಯಲ್ಲಿತ್ತು. ಆದರೆ ಮತ್ತೊಂದು ಬದಿಯಲ್ಲಿತ್ತು. ನಾವು ಅದನ್ನು ತಲುಪಿದಾಗ ಬಹಳಷ್ಟು ಎತ್ತಿನ ಗಾಡಿಗಳನ್ನು ರಾತ್ರಿ ವಿಶ್ರಾಂತಿಗೆಂದು ನಿಲ್ಲಿಸಿದ್ದನ್ನು ನೋಡಿದೆವು. ನಮಗೆ ಅತಿಯಾದ ಹಸಿವು, ತಿನ್ನುಣ್ಣಲು ಮಿತಿ ಮೀರಿದ ಅಪೇಕ್ಷೆ. ಮತ್ತೆ ನೀರಿನ ಪ್ರಶ್ನೆಯೇ ಧುತ್ತೆಂದು ಎದುರಿಗೆ ನಿಂತಿತು. ಇಲ್ಲಿ ನೀರನ್ನು ಪಡೆಯಲು ಸಾಧ್ಯವೇ ಎಂದು ಗಾಡಿ ಹೊಡೆಯುವವನನ್ನು ಕೇಳಿದೆವು. ಸುಂಕ ಸಂಗ್ರಾಹಕರು ಸ್ಪೃಶ್ಯ ಹಿಂದೂ ಎಂಬ ಎಚ್ಚರಿಕೆ ಕೊಟ್ಟನು. "ಒಂದು ವೇಳೆ ನೀವು ಮಹಾರರು ಎಂದು ನಿಜ ಹೇಳಿದರೆ ನಿಮಗೆ ನೀರು ಸಿಗುವುದು ಸಾಧ್ಯವೇ ಇಲ್ಲವೆಂದನು. ನೀವು ಮಹಮ್ಮದೀಯರು ಎಂದು ಹೇಳಿ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿರಿ" ಎಂದನು. ಅವನ ಉಪದೇಶದಂತೆ ನಾನು ಸುಂಕ ಸಂಗ್ರಾಹಕನ ಗುಡಿಸಲಿಗೆ ಹೋಗಿ ನಮಗೆ ಕುಡಿಯಲು ನೀರು (ಬೇಕಾಗಿದೆ) ಕೊಡುತ್ತೀರಾ, ಎಂದು ಕೇಳಿದೆ. "ನೀನಾರು?" ಎಂದು ಅವನು ವಿಚಾರಿಸಿದ. ನಾವು ಮುಸಲ್ಮಾನರು ಎಂದು ಹೇಳಿದೆ. ನಾನು ನಿಜವಾಗಿ ಮುಸಲ್ಮಾನನೇ ಎಂಬ ಸಂಶಯ ಬರದಿರಲೆಂದು ನನಗೆ ಚೆನ್ನಾಗಿ ಬರುತ್ತಿದ್ದ ಉರ್ದುವಿನಲ್ಲೇ ಅವನೊಂದಿಗೆ ಮಾತನಾಡಿದೆ. ನನ್ನ ತಂತ್ರ ಫಲಿಸಲಿಲ್ಲ. "ನಿಮಗೆಂದು ಯಾರಾದರೂ ನೀರು ಇಟ್ಟಿದ್ದಾರೆಯೆ? ಗುಡ್ಡದ ಮೇಲೆ ನೀರಿದೆ. ಅಲ್ಲಿಗೆ ಹೋಗುವ ಮನಸ್ಸಿದ್ದರೆ ಹೋಗಿ ತೆಗೆದುಕೊಳ್ಳಿ, ನನ್ನ ಹತ್ತಿರ ನೀರಿಲ್ಲ." ಅವನ ಉತ್ತರ ಹೆಚ್ಚು ಅವಿನಯದಿಂದ ಕೂಡಿತ್ತು ಮತ್ತು ಅಷ್ಟೇ ಮೊಟಕಾಗಿತ್ತು. "....." ಹೀಗೆಂದು ಹೇಳಿ ನನಗೆ ನೀರು ಕೊಡಲಿಲ್ಲ. ನಾನು ಗಾಡಿಯ ಬಳಿಗೆ ಹೋಗಿ ಸುಂಕದವನು ಹೇಳಿದ್ದನ್ನು ನನ್ನಣ್ಣನಿಗೆ ನಿವೇದಿಸಿದೆ. ಅಣ್ಣನ ಭಾವನೆ ಏನೆಂಬುದು ನನಗೆ ತಿಳಿಯಲಿಲ್ಲ. ಎಲ್ಲರೂ ಮಲಗಿಕೊಳ್ಳಿ ಎಂದು ಮಾತ್ರ ಹೇಳಿದ.

ಎತ್ತುಗಳ ಹೆಗಲಿನ ಮೇಲಿನ ನೊಗವನ್ನು ಇಳಿಸಲಾಯಿತು. ಇಳಿಜಾರಿಗೆ ಮುಖಮಾಡಿ ಗಾಡಿಯನ್ನು ನಿಲ್ಲಿಸಲಾಯಿತು. ಗಾಡಿಯ ಒಳಗಿನ ಹಲಗೆಗಳ ಮೇಲೆ ಹಾಸಿಗೆ ಹಾಸಿಕೊಂಡು ಮಲಗಿದೆವು. ಸುರಕ್ಷಿತ ಸ್ಥಳ ತಲುಪಿಯಾಗಿತ್ತು. ಉಳಿದದ್ದು ಏನಾದರಾಗಲಿ ಎಂದು ನಿಶ್ಚಿಂತೆಯಿಂದ ಇರಬೇಕೆಂದು ಬಯಸಿದೆವು. ಆದರೆ ನಮ್ಮ ಮನಸ್ಸುಗಳಿಗೆ ಕೊನೆಕೊನೆಗೆ ಜರುಗಿದ ಘಟನೆಯನ್ನು ಮರೆಯಲು ಸಾಧ್ಯವಾಗಲಿಲ್ಲ. ನಮ್ಮ ಹತ್ತಿರ ತಿನ್ನುಣ್ಣಲು ಸಾಕಷ್ಟು ಆಹಾರವಿತ್ತು. ಒಳಗೆ ಹಸಿವು ಕೊರೆಯುತ್ತಿತ್ತು. ಹೀಗಿದ್ದರೂ ಏನನ್ನೂ ತಿನ್ನದೆ ನಿದ್ರಿಸಬೇಕಾಗುತ್ತಿತ್ತು! ಏಕೆಂದರೆ ನಮಗೆ ಕುಡಿಯಲು ನೀರು ಸಿಗಲಿಲ್ಲ. ನೀರು ಏಕೆ ಸಿಗಲಿಲ್ಲವೆಂದರೆ ನಾವು ಅಸ್ಪೃಶ್ಯರಾದ್ದರಿಂದ. ಇದು ನಮ್ಮ ಮನಸ್ಸಿನಲ್ಲಿ ಕೊನೆಕೊನೆಗೆ ಕಾಣಿಸಿಕೊಂಡ ವಿಚಾರದ ಅಲೆ. ಹೇಗೂ ನಾವು ಸುರಕ್ಷಿತ ಸ್ಥಳದಲ್ಲಿ ಬಂದು ತಲುಪಿದ್ದೇವೆ ಎಂದು ನಾನಂದೆ. ಆದರೆ ನನ್ನಣ್ಣನ ಮನಸ್ಸಿನಲ್ಲಿ ಶಂಕೆ ಇದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ನಾವು ನಾಲ್ಕು ಜನರು ಒಮ್ಮೆಗೆ ನಿದ್ರಿಸುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಏನಾದರೂ ಸಂಭವಿಸಬಹುದು ಎಂದು ಹೇಳಿ ಸರದಿ ಪ್ರಕಾರ ಕೆಲ ಹೊತ್ತು ಇಬ್ಬರು ಮಲಗಬೇಕು,

ಮತ್ತಿಬ್ಬರು ಎಚ್ಚರಾಗಿದ್ದು ಕಾಯಬೇಕು ಎಂಬ ಉಪಾಯ ಸೂಚಿಸಿದ. ಗುಡ್ಡದಡಿಯಲ್ಲಿ ರಾತ್ರಿಯನ್ನು ಹೀಗೆಯೆ ಕಳೆದೆವು.

ಬೆಳಗಿನ ಐದು ಗಂಟೆಗೆ ನಮ್ಮ ಗಾಡಿಯವನು ಬಂದ. ಈಗ ನಾವು ಹೊರಡಲೇಬೇಕು ಅಂದ. ನಾವು ಅದನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದೆವು. ಎಂಟು ಗಂಟೆಯವರೆಗೆ ನಾವು ಕದಲಲಾರೆವು ಎಂದು ಹೇಳಿದೆವು. ನಮಗೆ ಅದೃಷ್ಟವನ್ನು ಪರೀಕ್ಷಿಸುವ ಮನಸ್ಸಿರಲಿಲ್ಲ. ಹೀಗಾಗಿ ಎಂಟು ಗಂಟೆಗೆ ಬಿಟ್ಟು ಹನ್ನೊಂದು ಗಂಟೆಗೆ ಗೋರೇಗಾಂವ್ ತಲುಪಿದೆವು. ತಂದೆಗೆ ನಮ್ಮನ್ನು ನೋಡಿ ಪರಮಾಶ್ಚರ್ಯವಾಯಿತು. ನಾವು ಬರುವ ಸಮಾಚಾರವೇ ಅವರಿಗೆ ತಲುಪಿರಲಿಲ್ಲವೆಂದು ಹೇಳಿದರು. ನಾವು ಸಮಾಚಾರವನ್ನು ಕಳಿಸಿರುವೆವೆಂದು ಅವರ ಮಾತಿಗೆ ಅಸಮ್ಮತಿ ಸೂಚಿಸಿದೆವು. ಅವರು ಆ ಸಂಗತಿಯನ್ನು ನಿರಾಕರಿಸಿದರು. ಆದರೆ ತಪ್ಪು ತಂದೆಯದಾಗಿರದೆ ಅವನ ಸೇವಕನದಾಗಿತ್ತೆಂಬುದು ನಂತರ ತಿಳಿದುಬಂತು. ಸೇವಕ ನಮ್ಮ ಪತ್ರ ಸ್ವೀಕರಿಸಿದ್ದ. ಆದರೆ ಅದನ್ನು ತಂದೆಗೆ ಕೊಟ್ಟಿರಲಿಲ್ಲ.

ಈ ಘಟನೆಗೆ ನನ್ನ ಜೀವನದಲ್ಲಿ ಪ್ರಮುಖ ಸ್ಥಾನವಿದೆ. ಇದು ಸಂಭವಿಸಿದಾಗ ನಾನು ಒಂಬತ್ತು ವರುಷದ ಹುಡುಗ. ಇದು ಅಳಿಸಲಾರದ ಪ್ರಭಾವವನ್ನು ನನ್ನ ಮನಸ್ಸಿನ ಮೇಲೆ ಬೀರಿದೆ. ಈ ಘಟನೆ ಸಂಭವಿಸುವ ಪೂರ್ವದಲ್ಲಿಯೆ ನಾನು ಅಸ್ಪೃಶ್ಯನೆಂಬುದು ಮತ್ತು ಕೆಲವೊಂದು ಅವಮಾನಗಳಿವೆ, ಭೇದ ಭಾವಗಳಿಗೆ ಒಳಗಾಗಿದ್ದರೆಂಬುದು ನನಗೆ ಗೊತ್ತಿತ್ತು. ಉದಾಹರಣೆಗಾಗಿ, ನಾನು ಓದುತ್ತಿದ್ದ ಶಾಲೆಯಲ್ಲಿ, ನನ್ನ ಸಾಧನೆಯನ್ನು ಅನುಸರಿಸಿ ವಿದ್ಯಾರ್ಥಿಗಳ ಮಧ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಕೂಡಲು ನನಗೆ ಅವಕಾಶವಿರಲಿಲ್ಲ. ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಒಬ್ಬನೇ ಕೂಡಬೇಕಾಗುತ್ತಿತ್ತು. ಶಾಲೆಯಲ್ಲಿ ನಾನೇ ಪ್ರತ್ಯೇಕವಾದ ಗೋಣೀಚೀಲ ತಂದು ಅದರ ಮೇಲೆ ಮುದುಡಿಕೊಂಡು ಕುಳಿತುಕೊಳ್ಳಬೇಕಾಗಿತ್ತು. ನಾನು ಉಪಯೋಗಿಸುತ್ತಿದ್ದ ಗೋಣಿಚೀಲವನ್ನು ಕಸಗುಡಿಸುವ ಸೇವಕನೂ ಕೂಡ ಮುಟ್ಟುತ್ತಿರಲಿಲ್ಲವೆಂಬುದೂ ನನ್ನ ನೆನಪಿನಲ್ಲಿತ್ತು. ಆ ಗೋಣಿಚೀಲವನ್ನು ಪ್ರತಿದಿನ ಸಾಯಂಕಾಲ ಮನೆಗೆ ಒಯ್ದು ಮರುದಿನ ಮುಂಜಾನೆ ತರಬೇಕಾಗುತ್ತಿತ್ತು. ಶಾಲೆಯಲ್ಲಿದ್ದಾಗ ಸ್ಪೃಶ್ಯ ಜಾತಿಗಳ ಮಕ್ಕಳು ನೀರಡಿಸಿದಾಗ ನಲ್ಲಿ ಜೋಡಿಸಿದ ಪೀಪಾಯಿಗೆ ಹೋಗಿ ತಾವೇ ನೀರು ಬಿಟ್ಟು ಕುಡಿದು ತಮ್ಮ ನೀರಡಿಕೆಯನ್ನು ಹಿಂಗಿಸಿಕೊಳ್ಳುತ್ತಿದ್ದರು. ಆಗ ಅವರಿಗೆ ಅಗತ್ಯವಾದದ್ದು ಶಿಕ್ಷಕರ ಪರವಾನಗಿ ಮಾತ್ರ ಎಂಬುದೂ ಗೊತ್ತಿತ್ತು. ಆದರೆ ನನ್ನ ಸ್ಥಿತಿ ಬೇರೆಯೆ ಆಗಿತ್ತು. ನಾನು ಉಳಿದ ಹುಡುಗರಂತೆ ನಲ್ಲಿಯನ್ನು ಮುಟ್ಟುವಂತಿರಲಿಲ್ಲ. ಸ್ಪೃಶ್ಯ ವ್ಯಕ್ತಿಯೇ ನಲ್ಲಿಯನ್ನು ಚಾಲೂ ಮಾಡಿದಾಗಲೇ ನಾನು ನೀರು ಕುಡಿದು ನೀರಡಿಕೆಯನ್ನು ನೀಗಿಸಿಕೊಳ್ಳಬೇಕಾಗಿತ್ತು. ನನ್ನ ವಿಷಯದಲ್ಲಿ ಶಿಕ್ಷಕನ ಅನುಮತಿ ಒಂದೇ ಸಾಕಾಗಿರಲಿಲ್ಲ. ಇಂಥ ಸಂದರ್ಭದಲ್ಲಿ ಶಾಲೆಯ ಸೇವಕನ ನೆರವೂ ಅತ್ಯಗತ್ಯವಾಗಿತ್ತು. ಸೇವಕನು ದೊರಕದಿದ್ದಾಗ ನಾನು ನೀರಿಲ್ಲದೆ ಕೊರಗಬೇಕಾಗಿತ್ತು. ಈ ಸಂದರ್ಭವನ್ನು ಸಂಕ್ಷಿಪ್ತವಾಗಿ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸೇವಕನಿಲ್ಲದಿದ್ದರೆ, ನೀರೂ ಇಲ್ಲ. ಮನೆಯಲ್ಲಿ ನನ್ನ ಸಹೋದರಿಯರೇ ಬಟ್ಟೆ ಒಗೆಯುತ್ತಿದ್ದರು. ಸತಾರದಲ್ಲಿ ಬಟ್ಟೆ ಒಗೆಯುವವರೇ ಇರಲಿಲ್ಲವೆಂದಲ್ಲ. ಬಟ್ಟೆ ಒಗೆಯುವವರಿಗೆ ಹಣ ಕೊಡುವ ಶಕ್ತಿಯೂ ನಮ್ಮಲ್ಲಿರಲಿಲ್ಲವೆಂದೂ ಅಲ್ಲ. ನಾವು ಅಸ್ಪೃಶ್ಯರಾಗಿದ್ದೆವು. ಬಟ್ಟೆ ಒಗೆಯುವವರು ಅಸ್ಪೃಶ್ಯರ ಬಟ್ಟೆಗಳನ್ನು ಒಗೆಯುವಂತಿರಲಿಲ್ಲ, ಅಷ್ಟೇ. ಕೂದಲು ಕತ್ತರಿಸುವ ಕಾರ್ಯವನ್ನು ಅಂದರೆ ನನ್ನನ್ನೊಳಗೊಂಡ ಗಂಡುಮಕ್ಕಳ ಕ್ಷೌರವನ್ನು ನನ್ನ ಹಿರಿಯಕ್ಕನೇ ಮಾಡುತ್ತಿದ್ದಳು. ಮಾಡುತ್ತಾ, ಮಾಡುತ್ತಾ ಆಕೆ ಕುಶಲ ಕ್ಷೌರಿಕಳಾಗಿದ್ದಳು. ಸತಾರಾದಲ್ಲಿ ಕ್ಷೌರಿಕರೇ ಇರಲಿಲ್ಲವೆಂತಲ್ಲ. ಇದ್ದರೂ, ಕ್ಷೌರಿಕನಿಗೆ ದುಡ್ಡು ಕೊಡುವ ಶಕ್ತಿಯೆ ನಮ್ಮಲ್ಲಿ ಇರಲಿಲ್ಲವೆಂತೂ ಅಲ್ಲ. ನಾವು ಅಸ್ಪೃಶ್ಯರಾಗಿದ್ದುದರಿಂದ ಯಾವ ಕ್ಷೌರಿಕನೂ

ನಮ್ಮ ಕ್ಷೌರ ಮಾಡಲು ಸಮ್ಮತಿಸುತ್ತಿರಲಿಲ್ಲ ಅಷ್ಟೆ. ಇದೆಲ್ಲವೂ ನನಗೆ ಗೊತ್ತೇ ಇತ್ತು. ಆದರೆ ಈ ಘಟನೆ ನನ್ನ ಮನಸ್ಸಿನ ಮೇಲೆ ಹಿಂದೆಂದೂ ಮಾಡಿರದಂಥ ದೊಡ್ಡ ಆಘಾತವನ್ನುಂಟುಮಾಡಿತು. ಇದು ಅಸ್ಪೃಶ್ಯತೆಯ ಬಗೆಗೆ ನನ್ನನ್ನು ಚಿಂತಿಸುವಂತೆ ಪ್ರೇರಣೆ ನೀಡಿತು. ಈ (ಘಟನೆ ನಡೆಯುವ) ಮೊದಲು ಸ್ಪೃಶ್ಯ, ಅಸ್ಪೃಶ್ಯರ ಬಗೆಗೆ ನಡೆದವೆಲ್ಲ ಘಟನೆಗಳು ನನಗೆ ಸಹಜವೆನಿಸಿದ್ದವು.

# ಎರಡು

೧೯೧೮ರಲ್ಲಿ ನಾನು ಭಾರತಕ್ಕೆ ಮರಳಿ ಬಂದೆ. ಘನವೆತ್ತ ಬರೋಡಾದ ಮಹಾರಾಜರು ಉಚ್ಚ ಶಿಕ್ಷಣ ಪಡೆಯಲು ನನ್ನನ್ನು ಅಮೆರಿಕೆಗೆ ಕಳುಹಿಸಿದ್ದರು. ೧೯೧೩ರಿಂದ ೧೯೧೭ರವರೆಗೆ ನಾನು ನ್ಯೂಯಾರ್ಕ್‌ನಲ್ಲಿಯ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದೆ. ೧೯೧೭ರಲ್ಲಿ ಲಂಡನ್ನಿಗೆ ಬಂದೆ. ಲಂಡನ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಯನ ಪ್ರಾರಂಭಿಸಿದೆ. ಅದನ್ನು ಪೂರ್ತಿಗೊಳಿಸುವ ಮುನ್ನವೇ, ಮೊದಲೇ ಮಾಡಿಕೊಂಡ ಒಪ್ಪಂದಕ್ಕೆ ಬದ್ಧನಾಗಿ ೧೯೧೮ರಲ್ಲಿ ನಾನು ಭಾರತಕ್ಕೆ ಮರಳಿ ಬರಬೇಕಾಯಿತು. ನಾನು ಬರೋಡಾ ರಾಜ್ಯದ ಹಣಕಾಸಿನ ಸಹಾಯದಿಂದಲೇ ಉಚ್ಚ ಶಿಕ್ಷಣ ಪಡೆದಿದ್ದೆನಾದ್ದರಿಂದ ಒಪ್ಪಂದಕ್ಕೆ ಅನುಗುಣವಾಗಿ ಅದೇ ರಾಜ್ಯಕ್ಕೆ ನನ್ನ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಹೀಗಾಗಿ ಭಾರತಕ್ಕೆ ಮರಳಿದ ಕೂಡಲೇ ನಾನು ನೇರವಾಗಿ ಬರೋಡಾಕ್ಕೆ ಹೋದೆ. ಅನಿರೀಕ್ಷಿತವಾಗಿ ಬರೋಡಾದ ಸೇವೆಯನ್ನು ತ್ಯಜಿಸಬೇಕಾಗಿ ಬಂತು. ಏಕೆ ತ್ಯಜಿಸಬೇಕಾಯಿತು ಎಂಬುದರ ವಿವರಣೆ ಸದ್ಯ ಅಪ್ರಸ್ತುತ. ಆದ್ದರಿಂದ ಆ ಕಾರಣಗಳ ಬಗೆಗೆ ವಿವರಿಸಲು ತೊಡಗುವುದಿಲ್ಲ. ಬರೋಡಾದಲ್ಲಿಯ ನನ್ನ ಸಾಮಾಜಿಕ ಅನುಭವಗಳ ವರ್ಣನೆಯ ಬಗೆಗೆ ಮಾತ್ರ ನನ್ನ ಬರಹವನ್ನು ಸೀಮಿತಗೊಳಿಸಲು ಉದ್ದೇಶಿಸಿದ್ದೇನೆ.

ಯೂರೋಪ್ ಮತ್ತು ಅಮೆರಿಕೆಯಲ್ಲಿನ ಐದು ವರುಷಗಳ ವಾಸ್ತವ್ಯವು ನಾನು ಅಸ್ಪೃಶ್ಯನೆಂಬ ಪ್ರಜ್ಞೆಯನ್ನು ಸಂಪೂರ್ಣವಾಗಿ ಅಳಿಸಿಹಾಕಿತ್ತು. ಭಾರತದೊಳಗಿರುವ ಅಸ್ಪೃಶ್ಯನಿಂದ ತನಗೂ ಸಮಸ್ಯೆ, ಇತರರಿಗೂ ಸಮಸ್ಯೆ, ನಾನು ಸ್ಟೇಶನ್ ಬಿಟ್ಟು ಹೊರಗೆ ಬಂದಿದ್ದೇ ತಡ, 'ಎಲ್ಲಿಗೆ ಹೋಗಲಿ? ನನ್ನನ್ನಾರು ಬರಮಾಡಿಕೊಳ್ಳುತ್ತಾರೆ?' ಎಂಬ ಪ್ರಶ್ನೆಗಳು ಮುತ್ತಿ ನನ್ನ ಮನಸ್ಸು ಗೊಂದಲದಲ್ಲಿ ಮುಳುಗಿತು. ನಾನು ಅತಿಯಾಗಿ ಉದ್ರೇಕಗೊಂಡೆ. (ಬಡೋದೆಯಲ್ಲಿ) 'ವಿಶಿ' ಎಂದು ಕರೆದುಕೊಳ್ಳುವ ಹಿಂದೂ ಹೋಟೆಲ್ಲುಗಳು ಇದ್ದುದು ನನಗೆ ಗೊತ್ತಿತ್ತು. ಅವು ನನಗೆ ಪ್ರವೇಶ ನೀಡಲಾರವು. ಅವುಗಳಲ್ಲಿ ಪ್ರವೇಶಿಸಲು ಇದ್ದ ಒಂದೇ ಒಂದು ಮಾರ್ಗವೆಂದರೆ ಅಸ್ಪೃಶ್ಯನಲ್ಲವೆಂಬಂತೆ ನಟಿಸುವುದು. ಇದಕ್ಕೆ ನಾನು ಸಿದ್ಧನಿರಲಿಲ್ಲ. ಏಕೆಂದರೆ, ನನ್ನ ನಿಜ ಸ್ವರೂಪ ಇಂದಿಲ್ಲ ನಾಳೆ ಬೈಲಿಗೆ ಬಂದೇ ಬರುತ್ತದೆಂಬ ಖಾತ್ರಿ ನನಗೆ ಇದ್ದುದರಿಂದಾಗಿ ಇದರ ಪರಿಣಾಮ ಎಷ್ಟೊಂದು ಭಯಾನಕವಾಗಬಲ್ಲದು ಎಂಬುದನ್ನು ಮೊದಲೇ ಊಹಿಸಬಲ್ಲವನಾಗಿದ್ದೆ. ಅಮೇರಿಕೆಗೆ ಓದಲು ಬಂದ ನನ್ನ ಕೆಲ ಗೆಳೆಯರು ಇದೇ ಬಡೋದೆಯವರಾಗಿದ್ದರು. ನಾನು ಅವರ ಬಳಿಗೆ ಹೋದರೆ, ಸ್ವಾಗತಿಸಬಲ್ಲರೇ? ಈ ಬಗ್ಗೆ ನನಗೆ ವಿಶ್ವಾಸವಿರಲಿಲ್ಲ. ಅಸ್ಪೃಶ್ಯನನ್ನು ತಮ್ಮ ಮನೆಯ ಒಳಗೆ ಬರಮಾಡಿ ಕೊಳ್ಳುವುದರಿಂದ ಅವರಿಗೆ ಮುಜುಗರ ಉಂಟಾಗುತ್ತಿತ್ತು. ಸ್ಟೇಶನ್ನಿನ ಮಾಳಿಗೆಯಡಿಯಲ್ಲಿ ನಿಂತು, ಎಲ್ಲಿಗೆ ಹೋಗಬೇಕು? ಏನು ಮಾಡಬೇಕು ಎಂದು ಕೆಲಹೊತ್ತು ಚಿಂತಾಮಗ್ನನಾದೆ. ದಂಡು ಪ್ರದೇಶದಲ್ಲಿ ನನಗೆ ವಸತಿ–ವ್ಯವಸ್ಥೆ ದೊರಕಬಹುದೆ ಎಂಬ ವಿಚಾರ ಹೊಳೆಯಿತು. ಅಷ್ಟರಲ್ಲಿ ಎಲ್ಲ ಪ್ರಯಾಣಿಕರೂ ಹೊರಟು ಹೋಗಿದ್ದರು. ನಾನೊಬ್ಬನೇ ಅಲ್ಲಿ ಉಳಿದಿದ್ದೆ. ಪ್ರಯಾಣಿಕರನ್ನು ಪಡೆಯಲು ಅಸಮರ್ಥರಾದ ಕೆಲವು ಹಳಸಲು ಗಾಡಿಯವರು ಉಳಿದ ನನ್ನೊಬ್ಬನ ದಾರಿ ಕಾಯುತ್ತಿದ್ದರು. ಅವರಲ್ಲಿ ಒಬ್ಬನನ್ನು ಕರೆದು, ದಂಡಿನ ಪ್ರದೇಶದಲ್ಲಿ ಹೋಟೆಲ್ ಇರುವುದು ನಿನಗೇನಾದರೂ ಗೊತ್ತಿದೆಯೆ ಎಂದು ಕೇಳಿದೆ. ಪಾರ್ಸಿಗಳ

ಒಂದು ಸಾರ್ವಜನಿಕ ಪ್ರವಾಸಿಗೃಹ ಇರುವುದಾಗಿಯೂ, ಅದು 'ದುಡ್ಡು ಕೊಟ್ಟು ಆತಿಥ್ಯ ಪಡೆಯುವ' ವ್ಯವಸ್ಥೆ (ಪೇಯಿಂಗ್ ಗೆಸ್ಟ್) ಹೊಂದಿರುವುದಾಗಿಯೂ ಹೇಳಿದ. ಪಾರ್ಸಿಗಳ ಯಜಮಾನಿಕೆಯಲ್ಲಿರುವ ಪ್ರವಾಸಿಗೃಹ ಇರುವುದನ್ನು ಕೇಳಿ ನನ್ನ ಹೃದಯ ಸಂತೋಷದಿಂದ ಉಬ್ಬಿಹೋಯಿತು. ಪಾರ್ಸಿಗಳೆಂದರೆ, ಪುರಾತನ ಪರ್ಸಿಯಾದ ಪ್ರವಾದಿಯಾದ ಜರತುಷ್ಟ್ರನ ಅನುಯಾಯಿಗಳು. ಈ ಧರ್ಮವು ಅಸ್ಪೃಶ್ಯತೆಯನ್ನು ಅನುಸರಿಸುವುದಿಲ್ಲವಾದ್ದರಿಂದ ನನ್ನನ್ನು ಅಸ್ಪೃಶ್ಯನೆಂದು ಪರಿಭಾವಿಸುವ ಹೆದರಿಕೆ ಇರಲಿಲ್ಲ. ಸಂತೋಷದಿಂದ ಬೀಗುತ್ತಿದ್ದ ಹೃದಯ, ನಿರ್ಭಯವಾದ ಮನಸ್ಸು ಉಳ್ಳವನಾಗಿ ನಾನು ಸಾಮಾನುಗಳನ್ನು ಗಾಡಿಯಲ್ಲಿಟ್ಟೆ. ಗಾಡಿಯವನಿಗೆ ನಮ್ಮನ್ನು ದಂಡಿನ ಪ್ರದೇಶದಲ್ಲಿನ ಪಾರ್ಸಿಗಳ ಪ್ರವಾಸಿಗೃಹಕ್ಕೆ ಕರೆದೊಯ್ಯಲು ಹೇಳಿದೆ.

ಪ್ರವಾಸಿಗೃಹವು ಎರಡಂತಸ್ತಿನ ಕಟ್ಟಡವಾಗಿತ್ತು. ಕಟ್ಟಡದ ನೆಲಮಾಳಿಗೆಯಲ್ಲಿ ವೃದ್ಧ ಪಾರ್ಸಿ ಗೃಹಸ್ಥನೊಬ್ಬನು ತನ್ನ ಕುಟುಂಬದೊಂದಿಗೆ ವಾಸಿಸುತ್ತಿದ್ದ. ಅಲ್ಲಿಗೆ ತಂಗಲು ಬಂದ ಪ್ರಯಾಣಿಕರ ಉಸ್ತುವಾರಿ ನೋಡಿ ಕೊಳ್ಳುವುದರ ಜೊತೆಗೆ ಅವರಿಗೆ ಆಹಾರವನ್ನು ಒದಗಿಸುತ್ತಿದ್ದ. ನಮ್ಮ ಗಾಡಿಯು ಆ ಪ್ರವಾಸಿ ಗೃಹವನ್ನು ತಲುಪುತ್ತಲೇ, ಆ ಉಸ್ತುವಾರಿ ಪಾರ್ಸಿ ಗೃಹಸ್ಥನು ಮೇಲೆ ಅಟ್ಟ ಹತ್ತಲು ಹೇಳಿದ. ನಾನು ಹತ್ತಿದೆ. ಗಾಡಿಯವನು ನನ್ನ ಸಾಮನುಗಳನ್ನು ಮೇಲೆ ತಂದ. ಅವನಿಗೆ ಬಾಡಿಗೆ ಕೊಟ್ಟು ಕಳಿಸಿದೆ. ಕೊನೆಗೆ ನನ್ನ ಪ್ರಮುಖ ಸಮಸ್ಯೆಗೆ ಪರಿಹಾರವೆಂಬಂತೆ ನನಗೆ ವಸತಿ ದೊರಕಿತ್ತು. ನನಗೆ ಆನಂದವಾಗಿತ್ತು. ವಿಶ್ರಾಂತಿ ತೆಗೆದುಕೊಳ್ಳಲು ಮೇಲಿನ ಬಟ್ಟೆಗಳನ್ನು ಕಳಚುತ್ತಿದ್ದೆ. ಅಷ್ಟರಲ್ಲಿ ಕೈಯಲ್ಲಿ ಪುಸ್ತಕಹಿಡಿದ ಉಸ್ತುವಾರಿ ವ್ಯಕ್ತಿಯು ಅಲ್ಲಿಗೆ ಬಂದ. ಅರೆಬೆತ್ತಲೆ ಸ್ಥಿತಿಯಲ್ಲಿದ್ದ ನನ್ನನ್ನು ನೋಡಿದ. ಪಾರ್ಸಿ ಅನ್ನಿಸಿಕೊಳ್ಳಬೇಕಾದರೆ ಇರಬೇಕಾಗಿದ್ದ ಸಾಂದ್ರ ಮತ್ತು ಕಸ್ತಿ (Sadra and Kasti) ಎಂಬ ಎರಡು ತೆರವಾದ ಒಳ ವಸ್ತ್ರಗಳು ನನ್ನ ಮೈಮೇಲೆ ಇಲ್ಲದುದನ್ನು ಕಂಡ. ಕೂಡಲೇ ತಿವಿಯುವ ಧ್ವನಿಯಲ್ಲಿ 'ನಾನಾರು' ಎಂದು ಕೇಳಿದ. ಈ ಪಾರ್ಸಿ ವಸತಿಗೃಹವು ಪಾರ್ಸಿಗಳಿಗಾಗಿಯೆ ಎಂಬುದು ನನಗೆ ತಿಳಿದಿರಲಿಲ್ಲವಾದ್ದರಿಂದ, ನಾನು ಹಿಂದು ಮುಂದು ನೋಡದೆ ನಾನು 'ಹಿಂದೂ' ಎಂದು ಹೇಳಿದೆ. ಅವನಿಗೆ ಸಿಡಿಲು ಬಡಿದಂತಾಯಿತು. ನನಗೆ ಪ್ರವಾಸಿ ಮಂದಿರದಲ್ಲಿ ಇರಲು ಸಾಧ್ಯವಿಲ್ಲ ಎಂದು ಹೇಳಿದ. ನನಗೂ ಬರಸಿಡಿಲು ಬಡಿದಂತಾಯಿತು. ಪೂರ್ತಿ ನಡುಗಹತ್ತಿದೆ. ಎಲ್ಲಿ ಹೋಗಬೇಕು? ಎಂಬ ಪ್ರಶ್ನೆ ಮತ್ತೆ ಮರುಕಳಿಸಿತು.

ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು, ಅವನ ಆಕ್ಷೇಪಣೆ ಇಲ್ಲವಾದರೆ, ಹಿಂದೂವಾದರೂ ಇರಲು ನನ್ನ ಆಕ್ಷೇಪಣೆಯಿಲ್ಲ ಎಂದು ಹೇಳಿದೆ. "ನೀನು ಹೇಗೆ ಇಲ್ಲಿರಬಲ್ಲೆ?' ನಾನು ತಂಗಲು ಬಂದವರ ದಾಖಲಾತಿಯನ್ನು ಇಡಲೇಬೇಕಾಗುತ್ತದೆ" ಎಂದು ಉತ್ತರಿಸಿದ. ಅವನ ತೊಂದರೆ ನನಗೆ ಅರ್ಥವಾಯಿತು. ರಿಜಿಸ್ಟರಿನಲ್ಲಿ ಬರೆಯಲು ನಾನು ಪಾರ್ಸಿ ಹೆಸರನ್ನು ಇಟ್ಟುಕೊಳ್ಳುವೆ. "ಇದಕ್ಕೆ ನನ್ನ ಆಕ್ಷೇಪಣೆಯೆ ಇಲ್ಲವಾದ ಮೇಲೆ ನಿನಗೇಕೆ ಆಕ್ಷೇಪಣೆ ಇರಬೇಕು. ಇದರಿಂದ ನೀನು ಏನೂ ಕಳೆದುಕೊಳ್ಳುವುದಿಲ್ಲ. ಮೇಲಾಗಿ ನಾನಿಲ್ಲಿರುವುದರಿಂದ ನಿನಗೇ ಲಾಭ." ನನ್ನ ಈ ಮಾತು ಅವನಿಗೆ ಮೆಚ್ಚಿಗೆಯಾದಂತೆ ಅವನ ಮುಖಭಾವದಿಂದ ವ್ಯಕ್ತವಾಯಿತು. ಬಹಳ ಹೊತ್ತಿನಿಂದ ಯಾವ ಪ್ರಯಾಣಿಕನೂ ಬಂದಿರಲಿಲ್ಲ. ಸ್ವಲ್ಪವಾದರೂ ಹಣ ಗಳಿಸುವ ಸದವಕಾಶವನ್ನು ಕಳೆದುಕೊಳ್ಳುವ ಇಚ್ಛೆ ಅವನಿಗೆ ಇರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ದಿನವೊಂದಕ್ಕೆ ಊಟ ಮತ್ತು ವಸತಿಗಾಗಿ ಒಂದೂವರೆ ರೂ. ಕೊಡಬೇಕು ಮತ್ತು ಪಾರ್ಸಿ ಎಂದು ರಿಜಿಸ್ಟರಿನಲ್ಲಿ ಬರೆಯಬೇಕು ಎಂಬ ಕರಾರಿನೊಂದಿಗೆ ನನ್ನ ವಾಸ್ತವ್ಯಕ್ಕೆ ಒಪ್ಪಿಗೆ ಸೂಚಿಸಿದ. ಅವನು ಮೆಟ್ಟಿಲಿಳಿದು ಕೆಳಗೆ ಹೋದ. ನಾನು ನೆಮ್ಮದಿಯ ನಿಟ್ಟುಸಿರು ಬಿಟ್ಟೆ. ಸಮಸ್ಯೆಗೆ ಪರಿಹಾರ ದೊರಕಿತ್ತು. ನನಗೆ ಆನಂದ ಉಂಟಾಗಿತ್ತು. ಆದರೆ ಅಯ್ಯೋ! ಆದರೆ ಈ ಆನಂದ ಎಷ್ಟೊಂದು ಕ್ಷಣಿಕವೆಂಬುದು ಆಗ ನನಗೆ ತಿಳಿದಿರಲಿಲ್ಲ. ಈ ವಸತಿ

ಗೃಹದಲ್ಲಿಯ ನನ್ನ ವಾಸ್ತವ್ಯದ ಅತ್ಯಂತ ದುರಂತವನ್ನು ವರ್ಣಿಸುವ ಪೂರ್ವದಲ್ಲಿ, ಅಲ್ಲಿದ್ದ ಸ್ವಲ್ಪ ಕಾಲದಲ್ಲಿಯೆ ನನ್ನ ಸಮಯವನ್ನು ಹೇಗೆ ಕಳೆದೆ ಎಂಬುದನ್ನು ನಾನು ಹೇಳಲೇಬೇಕು.

ವಸತಿ ಗೃಹದ ಮೊದಲನೇ ಮಹಡಿಯಲ್ಲಿ ಒಂದು ಚಿಕ್ಕ ಕೋಣೆ ಇತ್ತು. ಅದಕ್ಕೆ ಹೊಂದಿಕೊಂಡು ಒಂದು ಸಣ್ಣ ಬಚ್ಚಲುಮನೆ. ಅದರಲ್ಲಿಯೆ ನೀರಿನ ತೊಟ್ಟಿ. ಉಳಿದದ್ದೆಂದರೆ, ಒಂದು ದೊಡ್ಡ ಕೋಣೆ. ನಾನು ಅಲ್ಲಿ ತಂಗಿದಾಗ, ಆ ದೊಡ್ಡ ಕೋಣೆಯು ಮುರಿದ ಖುರ್ಚಿಗಳು, ಬೆಂಚುಗಳು, ಫಳಿಗಳು, ಮುಂತಾದ ನಿರುಪಯುಕ್ತ ವಸ್ತುಗಳಿಂದ ತುಂಬಿತ್ತು. ಇಂಥ ಪರಿಸರದ ಮಧ್ಯದಲ್ಲಿ ನಾನು ಏಕಾಕಿಯಾಗಿ ವಾಸವಾಗಿದ್ದೆ. ಉಸ್ತುವಾರಿ ವ್ಯಕ್ತಿಯು ಮುಂಜಾನೆ ಒಂದು ಕಪ್ಪು ಚಹಾದೊಂದಿಗೆ ಮೇಲೇರಿ ಬರುತ್ತಿದ್ದ. ಮತ್ತೆ ಮುಂಜಾನೆ ೯.೩೦ಕ್ಕೆ ಬೆಳಗಿನ ಉಪಹಾರ ಅಥವಾ ಊಟದೊಂದಿಗೆ. ಮೂರನೇ ಸಾರೆ, ೮.೩೦ ಗಂಟೆಯ ಸುಮಾರಿಗೆ ರಾತ್ರಿ ಊಟದೊಂದಿಗೆ ಬರುತ್ತಿದ್ದ. ಉಸ್ತುವಾರಿ ವ್ಯಕ್ತಿಯು ಹೀಗೆ ಅತಿ ಅಗತ್ಯವಿದ್ದಾಗ ಮಾತ್ರ ಬಂದು, ನನ್ನೊಡನೆ ಮಾತನಾಡಲು ನಿಲ್ಲದೆ ಹಾಗೆಯೇ ಹೋಗಿಬಿಡುತ್ತಿದ್ದ. ದಿನ ಹೇಗೇಗೊ ಕಳೆದುಹೋಗುತ್ತಿತ್ತು.

ಬಡೋದೆಯ ಮಹಾರಾಜರು ನನ್ನನ್ನು ಅಕೌಂಟೆಂಟ್ ಜನರಲ್ಲರ ಕಾರ್ಯಾಲಯದಲ್ಲಿ ಉಮೇದುವಾರನನ್ನಾಗಿ ಪ್ರೊಬೇಶನರ್ ನೇಮಿಸಿದ್ದರು. ನಾನು ಬೆಳಗಿನ ಹತ್ತು ಗಂಟೆಯ ಸುಮಾರಿಗೆ ವಸತಿಗೃಹ ಬಿಟ್ಟು ಆಫೀಸಿಗೆ ಹೋಗುವುದು ಮತ್ತು ಸಾಯಂಕಾಲ ೮ ಗಂಟೆಗೆ ತಿರುಗಿ ವಸತಿಗೃಹ ಸೇರುವುದು ವಾಡಿಕೆಯಾಗಿತ್ತು. ಆಫೀಸು ವೇಳೆಯನ್ನು ಬಿಟ್ಟು ಉಳಿದದ್ದನ್ನು ಗೆಳೆಯರ ಸಹವಾಸದಲ್ಲಿ ಎಷ್ಟು ಕಳೆಯಲು ಸಾಧ್ಯವೋ ಅಷ್ಟನ್ನು ಕಳೆಯಲು ತವಕಿಸುತ್ತಿದ್ದೆ. ರಾತ್ರಿ ಕಳೆಯಲು ವಸತಿ ಗೃಹಕ್ಕೆ ಮರಳುವ ವಿಚಾರವೇ ನನ್ನಲ್ಲಿ ಭಯ ಹುಟ್ಟಿಸುತ್ತಿತ್ತು. ವಿಶ್ರಾಂತಿ ಪಡೆಯಲು ಸೂರ್ಯನ ಅಡಿಯಲ್ಲಿ ಇನ್ನೆಲ್ಲೂ ಸ್ಥಳವಿಲ್ಲವೆಂದಾಗ ಮಾತ್ರ ನಾನು ವಸತಿಗೃಹಕ್ಕೆ ಹೋಗುತ್ತಿದ್ದೆ. ಮೊದಲಿನ ಮಹಡಿಯ ದೊಡ್ಡ ಕೋಣೆಯಲ್ಲಿ ನನ್ನೊಡನೆ ಮಾತನಾಡಲು ಜೊತೆಗಾರರೇ ಇರುತ್ತಿರಲಿಲ್ಲ. ನಾನೊಬ್ಬನೇ ಇರುತ್ತಿದ್ದೆ. ಇಡೀ ಕೋಣೆ ಕತ್ತಲೆಯಿಂದ ತುಂಬಿರುತ್ತಿತ್ತು. ಕತ್ತಲೆ ಕಳೆಯಲು ವಿದ್ಯುದ್ದೀಪಗಳು ಇರದಿದ್ದರೆ ಹೋಗಲಿ, ದೊಡ್ಡ ಎಣ್ಣೆ ದೀಪಗಳೂ ಇರಲಿಲ್ಲ. ನಾನು ಅಲ್ಲಿಗೆ ಹೋದ ಕೂಡಲೇ ಉಸ್ತುವಾರಿ ವ್ಯಕ್ತಿಯು ನನ್ನ ಉಪಯೋಗಕ್ಕೆಂದು ಸಣ್ಣ ಲಾಂದ್ರ ತರುತ್ತಿದ್ದ. ಇದರ ಬೆಳಕು ಕೆಲವು ಇಂಚುಗಳ ಆಚೆಗೂ ಬೀಳುತ್ತಿರಲಿಲ್ಲ. ನಾನು ಕತ್ತಲೆಯ ಗವಿಯಲ್ಲಿ ಇದ್ದಂತೆ ಭಾಸವಾಗುತ್ತಿತ್ತು. ಜನರ ಮಧ್ಯದಲ್ಲಿ ಇದ್ದು ಅವರೊಡನೆ ಮಾತನಾಡುವ ಬಯಕೆ ಉಂಟಾಗುತ್ತಿತ್ತು. ಆದರೆ ಒಬ್ಬರೂ ಇರಲಿಲ್ಲ. ಜನರ ಸಹವಾಸ ಇಲ್ಲವೆಂದಾಗ ನಾನು ಗ್ರಂಥಗಳ ಮೊರೆಹೊಕ್ಕು ಓದಿದ್ದೇ ಓದಿದ್ದು. ಓದಿನಲ್ಲಿ ಪೂರ್ತಿ ತಲ್ಲೀನನಾಗುತ್ತಿದ್ದ ನಾನು ನನ್ನ ಒಂಟಿತನವನ್ನು ಮರೆಯುತ್ತಿದ್ದೆ. ಆದರೆ ದೊಡ್ಡ ಕೋಣೆಯನ್ನ ತಮ್ಮ ನೆಲೆಯನ್ನಾಗಿ (ಮನೆಯನ್ನಾಗಿ) ಮಾಡಿಕೊಂಡಿದ್ದ ಕಣ್ಣಪ್ಪಡಿಗಳ ಚಿಲಿಪಿಲಿ ಧ್ವನಿ ಮತ್ತು ಹಾರಾಡುವಿಕೆಯು ನನ್ನ ಏಕಾಗ್ರತೆಗೆ ಭಂಗ ತರುತ್ತಿತ್ತು. ಮತ್ತು ನನ್ನಲ್ಲಿ ನಡುಕವುಂಟು ಮಾಡುತ್ತಿತ್ತು. ಯಾವ ಓದಿನಿಂದಾಗಿ ಒಂಟಿತನವನ್ನು ಮರೆಯುತ್ತಿದ್ದೆನೋ, ಅದಕ್ಕೆ ಭಂಗವುಂಟಾಗಿ ಒಂಟಿತನ ಮತ್ತೆ ಧುತ್ತೆಂದು ಎದುರು ನಿಲ್ಲುತ್ತಿತ್ತು. ನಾನಂದು ವಿಚಿತ್ರವಾದ ಸ್ಥಳದಲ್ಲಿ ಮತ್ತು ವಿಚಿತ್ರವಾದ ಸನ್ನಿವೇಶಗಳಲ್ಲಿ ಸಿಲುಕಿಕೊಂಡಿದ್ದೆ. ಅನೇಕ ಸಾರಿ ನಾನು ಸಿಟ್ಟಿಗೆದ್ದಿರಬೇಕು. ಆದರೆ ಇದು ಕತ್ತಲು ಗವಿಯೆ ಆಗಿರಬಹುದು, ಏನೂ ಇಲ್ಲದಿರುವುದಕ್ಕಿಂತ ಇದು ಮೇಲಲ್ಲವೇ ಎಂದು ಸಮಾಧಾನ ಮಾಡಿಕೊಂಡು ನನ್ನ ಸಿಟ್ಟು ಮತ್ತು ಸಂಕಟವನ್ನು ನುಂಗಿಕೊಳ್ಳುತ್ತಿದ್ದೆ. ನಾನು ಅಂಥ ಎದೆ ಬಿರಿಯುವ ಸ್ಥಿತಿಯಲ್ಲಿದ್ದಾಗಲೇ, ಹಿಂದೆ ಮುಂಬಯಿಯಲ್ಲಿ ಬಿಟ್ಟು ಬಂದ ಸಾಮಾನುಗಳನ್ನು ಕೊಡಲು ನನ್ನ ಸಹೋದರಿಯ ಮಗ ಬಂದ. ಬಂದವನೇ ನನ್ನ

ಸ್ಥಿತಿಯನ್ನು ನೋಡಿ ದೊಡ್ಡ ದನಿ ತೆಗೆದು ಅತ್ತ. ಕೂಡಲೇ ಅವನನ್ನು ಮರಳಿ ಕಳಿಸಿಬಿಟ್ಟೆ. ಪಾರಸಿಗಳ ಪ್ರವಾಸಿ ಗೃಹದಲ್ಲಿ, ಪಾರ್ಸಿಯವನಂತೆ ನಟಿಸುತ್ತಾ ನಾನಿಂಥ ಭಯಾನಕ ಸ್ಥಿತಿಯಲ್ಲಿದ್ದೆ. ಒಂದಿಲ್ಲೊಂದು ದಿನ ನನ್ನ ನಟನೆ ಬೆಳಕಿಗೆ ಬಂದೇ ಬರುತ್ತದೆಂದೂ ಅದು ಬಹಳ ದಿನ ಮುಂದುವರಿಯಲಾರದೆಂದೂ ನನಗೆ ತಿಳಿದಿತ್ತು. ಆದ್ದರಿಂದ ನನ್ನ ವಸತಿಗೆ ಸಂಸ್ಥಾನದ ಬಂಗಲೆ ಪಡೆಯಲು ಪ್ರಯತ್ನ ನಡೆಸಿದ್ದೆ. ಆದರೆ ನನಗಿರುವ ಆತುರತೆಗೆ ಅನುಗುಣವಾಗಿ ನನ್ನ ವಿನಂತಿಯನ್ನು ಪ್ರಧಾನಮಂತ್ರಿಯು (ಅಷ್ಟೇ ಆತುರತೆಯಿಂದ) ಪರಿಗಣಿಸಲಿಲ್ಲ. ನನ್ನ ಅರ್ಜಿಯು ಅಧಿಕಾರಿಯಿಂದ ಅಧಿಕಾರಿಗೆ ಹೋಗಿ ಕೊನೆಯ ನಿರ್ಣಯ ಬರುವುದರೊಳಗಾಗಿಯೇ ನನ್ನ ದುರ್ಗತಿಯ ಕ್ಷಣ ಸನ್ನಿಹಿತವಾಗಿತ್ತು.

ಪಾರ್ಸಿ ಪ್ರವಾಸಿ ಗೃಹದಲ್ಲಿ ಇದು ನನ್ನ ವಾಸ್ತವ್ಯದ ಹನ್ನೊಂದನೆಯ ದಿನ. ಮುಂಜಾನೆಯ ಊಟ ಮಾಡಿದೆ. ಬಟ್ಟೆ ತೊಟ್ಟುಕೊಂಡೆ. ನಿನ್ನೆ ರಾತ್ರಿ ಗ್ರಂಥಾಲಯದಿಂದ ತಂದಿದ್ದ ಪುಸ್ತಕಗಳನ್ನು ಮರಳಿ ಕೊಡಲು ತೆಗೆದುಕೊಂಡೆ. ಆಫೀಸಿಗೆ ಹೊರಡಲು ಕೋಣೆಯ ಹೊರಗೆ ಕಾಲಿಡುವಷ್ಟರಲ್ಲಿ ರಭಸದಿಂದ ಪಾವಟಿಗೆಗಳನ್ನು ಹತ್ತುತ್ತಿರುವ ಅನೇಕ ಜನರ ಹೆಜ್ಜೆ ಸಪ್ಪಳವನ್ನು ಕೇಳಿದೆ. ಅವರು ಬಹುಶಃ ಇಲ್ಲಿರಲು ಬಂದ ಹೊಸ ಪ್ರವಾಸಿಗರು ಇರಬಹುದೆಂದು ಮೊದಲು ಭಾವಿಸಿದೆ. ಆ ಗೆಳೆಯರಾರು ಎಂಬುದನ್ನು ನೋಡಹತ್ತಿದೆ. ಕೂಡಲೇ ಸಿಟ್ಟಿಗೆದ್ದ, ಎತ್ತರವಾದ, ಬಲಶಾಲಿಗಳಾದ, ಹನ್ನೆರಡು ಜನ ಪಾರ್ಸಿಗಳು ಕೈಯಲ್ಲಿ ಕೋಲುಗಳನ್ನು ಹಿಡಿದು ನನ್ನ ಕೋಣೆಯತ್ತ ಧಾವಿಸುತ್ತಿರುವುದನ್ನು ಕಂಡೆ. ಅವರು ಸಹ ಪ್ರಯಾಣಿಕರಲ್ಲ ಎಂದು ತಿಳಿಯಲು ಬಹಳ ಹೊತ್ತು ಹಿಡಿಯಲಿಲ್ಲ. ನನ್ನ ಕೋಣೆಯ ಬಾಗಿಲನ್ನು ಸುತ್ತುವರಿದು ನಿಂತರು. ನೀನಾರು? ಇಲ್ಲಿಗೇಕೆ ಬಂದೆ? ಪಾರ್ಸಿ ಹೆಸರನ್ನಿಟ್ಟುಕೊಂಡು ಇಲ್ಲಿರಲು ನಿನಗೆಷ್ಟು ಧೈರ್ಯ? ನೀನು ಈ ಪಾರ್ಸಿ ಪ್ರವಾಸಿ ಗೃಹವನ್ನು ಕಲುಷಿತಗೊಳಿಸಿರುವೆ. ಹೀಗೆ ಪ್ರಶ್ನೆಗಳ ಸುರಿಮಳೆಯನ್ನು ಎಡೆಬಿಡದೆ ಸಿಡಿಸಿದರು. ನಾನು ಚಕಾರವೆತ್ತದೆ, ಮೌನದಿಂದ ನಿಂತಿದ್ದೆ. ನಟನೆಯನ್ನು ಪಟ್ಟುಹಿಡಿದು ಮುಂದುವರಿಸುವ ಸ್ಥಿತಿಯಲ್ಲಿರಲಿಲ್ಲ. ವಾಸ್ತವವಾಗಿ ನಾನು ಮೋಸ ಮಾಡಿದ್ದೆ. ಅದು ಬೆಳಕಿಗೆ ಬಂದಿತ್ತು. ಮೋಸದ ನಟನೆಯ ಆಟವನ್ನೇ ಮುಂದುವರಿಸಿದ್ದರೆ ಧರ್ಮಾಂಧ ಮತ್ತು ಸಿಟ್ಟಿಗೆದ್ದ ಪಾರ್ಸಿ ಜನಜಂಗುಳಿಯು ನನ್ನ ಮೇಲೆ ಬೀಳುತ್ತಿತ್ತು. ಬಹುಶಃ ಸಾವಿನ ದುರ್ಗತಿ ಒದಗುವ ಸಾಧ್ಯತೆಯಿತ್ತು. ಹೀಗಾಗಿ ನಟನೆಯನ್ನು ಮುಂದುವರಿಸುವ ಮನಸ್ಸಿರಲಿಲ್ಲ. ನಾನು ವಿನೀತ ಭಾವ ಮತ್ತು ಮೌನ ಧರಿಸಿದೆ. ಇದು ನನ್ನ ದುರ್ಗತಿಯನ್ನು ತಪ್ಪಿಸಿತು. ಯಾವಾಗ ಖಾಲಿ ಮಾಡುವ ವಿಚಾರವಿದೆ ಎಂದು ಅವರಲ್ಲೊಬ್ಬ ಕೇಳಿದ. ಆ ಪ್ರಶ್ನೆಯು ಒಳಗೊಂಡ ಬೆದರಿಕೆಯು ಉಗ್ರವಾಗಿತ್ತು. ಆ ಹೊತ್ತು ನನ್ನ ಜೀವಕ್ಕಿಂತಲೂ ವಸತಿಯ ಮೌಲ್ಯ ಅಧಿಕವಾಗಿತ್ತು. ಮಂತ್ರಿಗೆ ವಸತಿಗಾಗಿ ಸಲ್ಲಿಸಿದ ಅರ್ಜಿಯು ಇಷ್ಟರಲ್ಲಿ ಇತ್ಯರ್ಥವಾಗಬಹುದೆಂದು ಭಾವಿಸಿದ್ದೆ. ಆದ್ದರಿಂದ ಮೌನ ಮುರಿದು ಒಂದು ವಾರದವರೆಗಾದರೂ ಇಲ್ಲಿರಲು ಅವಕಾಶ ಮಾಡಿಕೊಡಿ ಎಂದು ಅವರನ್ನು ದೈನ್ಯದಿಂದ ಬೇಡಿಕೊಂಡೆ. ಆದರೆ ಆ ಪಾರ್ಸಿಗಳು ನನ್ನ ಮೊರೆಯನ್ನು ಕಿವಿಗೆ ಹಾಕಿಕೊಳ್ಳುವ ಮನೋಸ್ಥಿತಿಯಲ್ಲಿರಲಿಲ್ಲ. ಸಾಯಂಕಾಲದೊಳಗಾಗಿ ಯಾವುದೇ ಕಾರಣಕ್ಕೂ ಇಲ್ಲಿರಕೂಡದೆಂದು ಅಂತಿಮ ಗಡುವು ಕೊಟ್ಟರು. ನಾನು ಹೊರಡಲು ಸಾಮಾನುಗಳನ್ನು ಕಟ್ಟಲೇಬೇಕೆಂದು ಆಗ್ರಹಿಸಿದರು. ಇಲ್ಲದಿದ್ದರೆ ಪರಿಣಾಮ ಉಗ್ರವಾಗುವುದೆಂದು ಎಚ್ಚರಿಸಿ ಹೋದರು. ನನಗೆ ದಿಗಿಲುಂಟಾಯಿತು. ಆಕಾಶವೇ ನನ್ನ ಮೇಲೆ ಕಳಚಿ ಬಿದ್ದ ಅನುಭವವಾಯಿತು. ಹೃದಯ ಕುಸಿದಂತೆ ಭಾಸವಾಯಿತು. ಎಲ್ಲರನ್ನೂ ಶಪಿಸಿದೆ. ಅತೀವ ವ್ಯಥೆಯಿಂದ ಕಣ್ಣೀರು ಕೋಡಿಯಾಗಿ ಹರಿಯಿತು. ಕೈದಿಗಳ ಕತ್ತಲು ಕೋಣೆಗಿಂತಲೂ ಕನಿಷ್ಠವಾಗಿದ್ದ ನನಗೆ ಮೌಲಿಕವಾದ ವಸತಿ ಸೌಲಭ್ಯದಿಂದ ನಾನು ವಂಚಿತನಾಗಿದ್ದೆ.

ಪಾರ್ಸಿಗಳು ಹೋದ ನಂತರ ವಸತಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಚಿಂತಿಸುತ್ತಾ ಕುಳಿತೆ. ಆದಷ್ಟು ಬೇಗನೆ ಸಂಸ್ಥಾನದ ಬಂಗಲೆ ನನಗೆ ದೊರಕಿದರೆ ನನ್ನ ಸಂಕಷ್ಟಗಳು ದೂರವಾಗಬಹುದೆಂಬ ಆಶೆಯಿತ್ತು. ಆದ್ದರಿಂದ ನನ್ನ ತಾತ್ಕಾಲಿಕ ವಸತಿ ಸಮಸ್ಯೆಗೆ, ಗೆಳೆಯರ ಬಳಿಗೆ ಹೋಗುವುದೇ ಸೂಕ್ತ ಪರಿಹಾರವೆಂದು ಬಗೆದೆ. ಬರೋಡಾ ಸಂಸ್ಥಾನದ ಅಸ್ಪೃಶ್ಯರಲ್ಲಿ ನನಗೆ ಗೆಳೆಯರಾರೂ ಇರಲಿಲ್ಲ. ಆದರೆ ಉಳಿದ ವರ್ಗಗಳಲ್ಲಿ ಗೆಳೆಯರಿದ್ದರು. ಅವರಲ್ಲೊಬ್ಬ ಹಿಂದೂ, ಇನ್ನೊಬ್ಬ ಭಾರತೀಯ ಕ್ರಿಶ್ಚಿಯನ್. ನಾನು ಮೊದಲು ಹಿಂದೂ ಗೆಳೆಯನ ಬಗೆಗೆ ಹೋಗಿ ನನಗೊದಗಿದ್ದ ಆಪತ್ತನ್ನು ನಿವೇದಿಸಿದೆ. ಅವನು ಶ್ರೇಷ್ಠ ಆತ್ಮ ಮತ್ತು ನನ್ನ ವೈಯಕ್ತಿಕ ಗೆಳೆಯ. ಅವನು ನನ್ನ ಸ್ಥಿತಿಯನ್ನು ಕೇಳಿ ದುಃಖಿತನಾದ ಮತ್ತು ನನ್ನನ್ನು ಇಂಥ ಸ್ಥಿತಿಗೆ ಈಡು ಮಾಡಿದವರ ಬಗೆಗೆ ಕೋಪಗೊಂಡ. ಜೊತೆಗೆ ನೀನು ನಮ್ಮ ಮನೆಗೆ ಬಂದರೆ ನನ್ನ ಸೇವಕರು ಮನೆ ಬಿಟ್ಟು ಹೋಗುತ್ತಾರೆಂದೂ ಹೇಳಿದ. ಅವನ ಸೂಕ್ಷ್ಮ ಸೂಚನೆ ನನಗೆ ಅರ್ಥವಾಯಿತು. ವಸತಿ ನೀಡಲು ನಾನು ಒತ್ತಾಯ ಮಾಡಲಿಲ್ಲ. ಕ್ರಿಶ್ಚಿಯನ್ ಗೆಳೆಯನ ಮನೆಗೂ ಹೋಗುವ ಮನಸ್ಸಾಗಲಿಲ್ಲ. ಒಮ್ಮೆ ಅವನು ಬಂದು ತನ್ನೊಡನೆ ಇರಲು ಆಮಂತ್ರಿಸಿದ್ದ. ಆದರೆ ನಾನೇ ಅವನ ಆಮಂತ್ರಣವನ್ನು ತಿರಸ್ಕರಿಸಿ ಪಾರ್ಸಿ ವಸತಿ ಗೃಹದಲ್ಲಿಯೇ ಇರಲು ಇಷ್ಟಪಟ್ಟಿದ್ದೆ. ಕಾರಣವೆಂದರೆ ಅವನ ಹವ್ಯಾಸಗಳು ನನಗೆ ಹಿಡಿಸುತ್ತಿರಲಿಲ್ಲ. ಈಗ ಅಲ್ಲಿಗೆ ಹೋಗುವುದೆಂದರೆ ಮುಖಭಂಗವನ್ನು ಆಹ್ವಾನಿಸಿದಂತೆಯೇ. ಆದ್ದರಿಂದ ನಾನು ಆಫೀಸಿಗೆ ಹೋದೆ. ಆದರೂ ವಸತಿ ಸೌಲಭ್ಯ ಪಡೆಯುವ ಪ್ರಯತ್ನ ಬಿಡಲು ಮನಸ್ಸಾಗಲಿಲ್ಲ. ಒಬ್ಬ ಗೆಳೆಯನ ಬಳಿಗೆ ಹೋಗಲು ನಿರ್ಧರಿಸಿದೆ. ನನಗೆ ತಾತ್ಕಾಲಿಕವಾಗಿ ವಸತಿ ಸೌಲಭ್ಯ ಒದಗಿಸಲು ಸಾಧ್ಯವೇ ಎಂದು ವಿನಂತಿಸಿದೆ. ಈ ಪ್ರಶ್ನೆಯನ್ನು ಅವನ ಮುಂದೆ ಇಟ್ಟಾಗ, ತನ್ನ ಹೆಂಡತಿಯು ಮರುದಿನವೇ ಊರಿಗೆ ಬರುತ್ತಿರುವುದಾಗಿಯೂ, ಅವಳನ್ನು ಒಂದು ಮಾತು ಕೇಳಿ ನನಗೆ ತಿಳಿಸುವುದಾಗಿಯೂ ಹೇಳಿದ. ಇದು ಮುತ್ಸದ್ದಿತನದ ಉತ್ತರವಾಗಿತ್ತೆಂದು ನಂತರ ನನಗೆ ತಿಳಿಯಿತು. ಅವನು ಮತ್ತು ಅವನ ಹೆಂಡತಿಯು ಇಬ್ಬರೂ ಮೂಲದಲ್ಲಿ ಬ್ರಾಹ್ಮಣರು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಾಗ ಪತಿಯು ಉದಾರವಾದಿಯಾದ. ಆದರೆ ಅವನ ಹೆಂಡತಿಯು ಸಂಪ್ರದಾಯಸ್ಥಳಾಗಿಯೇ ಮುಂದುವರಿದಳು. ಹೀಗಾಗಿ ಅವನು ಅಸ್ಪೃಶ್ಯನನ್ನು ಮನೆಯಲ್ಲಿಟ್ಟುಕೊಳ್ಳಲು ಸುತರಾಂ ಒಪ್ಪಲಿಲ್ಲ. ಇದ್ದದ್ದೊಂದು ಕೊನೆಯ ಆಶಾಕಿರಣವೇ ನಂದಿಹೋದಂತಾಯಿತು. ನಾನು ಭಾರತೀಯ ಕ್ರಿಶ್ಚಿಯನ್ನನ ಮನೆ ಬಿಟ್ಟಾಗ ಸಾಯಂಕಾಲ ೪ ಗಂಟೆಯಾಗಿತ್ತು. ಎಲ್ಲಿಗೆ ಹೋಗಬೇಕೆಂದು ನನ್ನೆದುರಿಗಿದ್ದ ಪ್ರಮುಖ ಪ್ರಶ್ನೆಯಾಗಿತ್ತು. ನಮ್ಮ ವಸತಿ ಗೃಹವನ್ನು ತೆರವು ಮಾಡಲೇಬೇಕಾಗಿತ್ತು. ಆಶ್ರಯ ನೀಡಬಲ್ಲ ಗೆಳೆಯರಾರೂ ಇರಲಿಲ್ಲ. ಮುಂಬಯಿಗೆ ಮರಳುವುದನ್ನು ಬಿಟ್ಟು ಬೇರೆ ಹಾದಿಯೆ ಇರಲಿಲ್ಲ.

ರಾತ್ರಿ ೯ ಗಂಟೆಗೆ ರೈಲು ಬರೋಡಾದಿಂದ ಮುಂಬಯಿಗೆ ಹೊರಡುವುದಿತ್ತು. ಅದಕ್ಕಾಗಿ ಇನ್ನೂ ಐದು ತಾಸು ಕಾಯಬೇಕಾಗಿತ್ತು. ಈ ಸಮಯವನ್ನು ಹೇಗೆ ಕಳೆಯುವುದು? ವಸತಿ ಗೃಹಕ್ಕೆ ಹೋಗಬೇಕೇ? ಗೆಳೆಯನ ಬಳಿಗೆ ಹೋಗಬೇಕೇ? ಪಾರ್ಸಿ ಪ್ರವಾಸಿ ಗೃಹಕ್ಕೆ ಹೋಗಲು ಧೈರ್ಯ ಸಾಲಲಿಲ್ಲ. ಪಾರ್ಸಿಗಳು ಬಂದು ನನ್ನನ್ನು ಮೈಮುರಿ ಹೊಡೆಯಬಹುದೆಂದು ಹೆದರಿಕೆಯಾಯಿತು. ನನ್ನ ಗೆಳೆಯನ ಬಳಿಗೂ ಹೋಗಲು ಮನಸ್ಸಾಗಲಿಲ್ಲ. ನನ್ನ ಸ್ಥಿತಿ ಶೋಚನೀಯವಾಗಿದ್ದರೂ ನಾನು ಮರುಗಿಸಿಕೊಳ್ಳಲು ಇಚ್ಛಿಸಲಿಲ್ಲ. ನಗರದ ಅಂಚಿನಲ್ಲಿ ಮತ್ತು ದಂಡು ಪ್ರದೇಶದಲ್ಲಿದ್ದ ಕಾಮಥಿಬಾಗ್ ಎಂದು ಕರೆಯಿಸಿಕೊಳ್ಳುತ್ತಿದ್ದ ಸಾರ್ವಜನಿಕ ಉದ್ಯಾನದಲ್ಲಿ ಐದು ತಾಸು ಕಳೆಯಲು ನಿರ್ಧರಿಸಿದೆ. ಸ್ವಲ್ಪಮಟ್ಟಿಗೆ ಶೂನ್ಯ ಮನಸ್ಥಿತಿಯಲ್ಲಿ, ಸ್ವಲ್ಪ ಮಟ್ಟಿಗೆ ನನಗೆ ಉಂಟಾದ ತೊಂದರೆಗೆ ದುಃಖಿತನಾಗಿ, ದೈನ್ಯ ಸ್ಥಿತಿಯಲ್ಲಿರುವ ಮಕ್ಕಳನ್ನು ನೋಡಿ ತಂದೆ ತಾಯಿಗಳು

ಎಷ್ಟೊಂದು ಮರುಗುತ್ತಿರಬೇಕು ಎಂಬ ಭಾವನೆಯೊಂದಿಗೆ ನಾನು ಅಲ್ಲಿ ಕುಳಿತೆ. ರಾತ್ರಿ ೫ ಗಂಟೆಗೆ ಉದ್ಯಾನದ ಹೊರಗೆ ಬಂದೆ. ವಸತಿ ಗೃಹಕ್ಕೆ ಗಾಡಿಯಲ್ಲಿ ಹೋಗಿ ನನ್ನ ಸಾಮಾನುಗಳನ್ನು ಕೆಳಗೆ ತೆಗೆದುಕೊಂಡು ಬಂದೆ. ಉಸ್ತುವಾರಿ ವ್ಯಕ್ತಿಯು ಹೊರಗೆ ಬಂದ. ಆದರೆ ಅವನಾಗಲೀ, ನಾನಾಗಲೀ ಒಂದೂ ಮಾತನ್ನು ಆಡಲಿಲ್ಲ. ತೊಂದರೆಯಲ್ಲಿ ಸಿಲುಕಿಕೊಳ್ಳಲು ತಾನೂ ಸ್ವಲ್ಪ ಮಟ್ಟಿಗೆ ಕಾರಣವಾಗಿದ್ದೇನೆಂದು ಅವನಿಗೆ ಅನಿಸಿರಬೇಕು. ನಾನು ಬಿಲ್ಲನ್ನು ಕೊಟ್ಟೆ. ಮೌನವಾಗಿಯೇ ಸ್ವೀಕರಿಸಿದ. ಮೌನವಾಗಿಯೇ ಬೀಳ್ಕೊಂಡೆ. ಬರೋಡಾಕ್ಕೆ ದೊಡ್ಡ ಆಸೆಯನ್ನಿಟ್ಟುಕೊಂಡು ಹೋಗಿದ್ದೆ. ಅನೇಕ ಕೆಲಸದ ಕೊಡುಗೆಗಳನ್ನು ನಿರಾಕರಿಸಿ ಅದರಲ್ಲಿ ಸೇರಿಕೊಂಡಿದ್ದೆ. ಅದು ಯುದ್ಧ ಕಾಲ. ಭಾರತೀಯ ಶಿಕ್ಷಣ ಸೇವೆಯಲ್ಲಿ ಅನೇಕ ಕೆಲಸಗಳು ಖಾಲಿ ಇದ್ದವು. ನನಗೆ ಲಂಡನ್ನಿನಲ್ಲಿ ಅನೇಕ ಪ್ರಭಾವೀ ವ್ಯಕ್ತಿಗಳ ಪರಿಚಯವೂ ಆಗಿತ್ತು. ಆದರೆ ನಾನು ಅದನ್ನು ಬಳಸಿಕೊಳ್ಳಲಿಲ್ಲ. ನನ್ನ ಶಿಕ್ಷಣದ ಖರ್ಚು ವೆಚ್ಚಗಳನ್ನು ನೋಡಿಕೊಂಡಿದ್ದ ಬರೋಡೆಯ ಮಹಾರಾಜರಿಗೆ ಸೇವೆಯಲ್ಲಿ ಆದ್ಯತೆ ನೀಡುವುದು ನನ್ನ ಪ್ರಥಮ ಕರ್ತವ್ಯವಾಗಿತ್ತು. ಆದರೆ ಬರೋಡೆಯಲ್ಲಿ ಕೇವಲ ೧೧ ದಿನ ಕೆಲಸ ಮಾಡಿ ಮುಂಬಯಿಗೆ ಮರಳುವಂಥ ಸ್ಥಿತಿ ನಿರ್ಮಾಣವಾಗಿತ್ತು. ಬಡಿಗೆ ಹಿಡಿದುಕೊಂಡಿದ್ದ ಹನ್ನೆರಡು ಜನ ಪಾರ್ಸಿಗಳು ನನ್ನನ್ನು ಬೆದರಿಸುತ್ತಾ ಸುತ್ತುವರಿದದ್ದು, ನಾನು ದೈನ್ಯದಿಂದ ಮತ್ತು ಹೆದರಿ ನಿಂತಿದ್ದು ಈ ಸನ್ನಿವೇಶ ಸಂಭವಿಸಿ ೧೮ ವರ್ಷಗಳಾದರೂ ಇನ್ನು ನನ್ನ ಮನಸ್ಸಿನಿಂದ ಮಾಸಿಲ್ಲ. ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಇದರ ನೆನಪು ಮರುಕಳಿಸಿದ ಕೂಡಲೇ ಕಣ್ಣಲ್ಲಿ ನೀರು ಒತ್ತಿ ಬರುತ್ತವೆ. ಹಿಂದೂಗಳಿಗೆ ಅಸ್ಪೃಶ್ಯನಾದವ, ಪಾರ್ಸಿಗಳಿಗೂ ಅಸ್ಪೃಶ್ಯನೇ ಎಂಬುದು ಮೊದಲನೇ ಸಾರೆ ನನ್ನ ಅನುಭವಕ್ಕೆ ಬಂತು.

# ಮೂರು

೧೯೨೯ನೇ ವರ್ಷ. ಅಸ್ಪೃಶ್ಯರ ತೊಂದರೆಗಳನ್ನು ತನಿಖೆ ಮಾಡಲು ಮುಂಬಯಿ ಸರಕಾರವು ಒಂದು ಸಮಿತಿಯನ್ನು ರಚಿಸಿತ್ತು. ಆ ಸಮಿತಿಯ ಒಬ್ಬ ಸದಸ್ಯನಾಗಿ ನೇಮಕಗೊಂಡಿದ್ದೆ. ಸಮಿತಿಯು ಪ್ರಾಂತದ ಉದ್ದಗಲಕ್ಕೂ ಪ್ರವಾಸ ಮಾಡಿ ಅಸ್ಪೃಶ್ಯರ ಮೇಲಿನ ಅನ್ಯಾಯ, ದಬ್ಬಾಳಿಕೆ ಮತ್ತು ಕ್ರೌರ್ಯಗಳ ಬಗೆಗಿನ ಆಪಾದನೆಗಳನ್ನು ತನಿಖೆ ಮಾಡುವ ಹೊಣೆಯನ್ನು ಹೊಂದಿತ್ತು. ಸಮಿತಿಯನ್ನು ಉಪಸಮಿತಿಗಳನ್ನಾಗಿ ವಿಭಾಗಿಸಲಾಯಿತು. ನನಗೆ ಮತ್ತು ಇನ್ನೊಬ್ಬ ಸದಸ್ಯನಿಗೆ ಖಾನ್‌ದೇಶದ ಎರಡು ಜಿಲ್ಲೆಗಳನ್ನು ವಹಿಸಲಾಯಿತು. ಇಬ್ಬರೂ ಕೂಡಿ ಆ ಕೆಲಸವನ್ನು ಮುಗಿಸಿದೆವು. ನಂತರ ಇಬ್ಬರೂ ಬೇರ್ಪಟ್ಟೆವು. ಅವನು ಒಬ್ಬ ಹಿಂದೂ ಸಂತನನ್ನು ಕಾಣಲು ಹೋದನು. ನಾನು ಮುಂಬಯಿಗೆ ರೈಲಿನಲ್ಲಿ ಹೊರಟೆ. ಧುಲಿಯಾ ಮಾರ್ಗದಲ್ಲಿಯ ಗ್ರಾಮ ಒಂದಕ್ಕೆ ಹೋಗಬೇಕಾದ್ದರಿಂದ ನಾನು ಚಾಲೀಸ್‌ಗಾಂವ್ ಸ್ಟೇಶನ್ನಿನಲ್ಲಿ ಇಳಿದೆನು. ಆ ಗ್ರಾಮದಲ್ಲಿ ಸವರ್ಣ ಹಿಂದೂಗಳು ಅದೇ ಗ್ರಾಮದಲ್ಲಿಯ ಅಸ್ಪೃಶ್ಯರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ ಪ್ರಕರಣದ ಬಗೆಗೆ ತನಿಖೆ ನಡೆಸಬೇಕಾಗಿತ್ತು. ಚಾಲೀಸ್‌ಗಾಂವಿನ ಅಸ್ಪೃಶ್ಯರು ಸ್ಟೇಶನ್ನಿಗೆ ಬಂದು ರಾತ್ರಿಯನ್ನು ಅವರೊಂದಿಗೆ ಕಳೆಯಲು ವಿನಂತಿಸಿದರು. ನನ್ನ ಮೊದಲಿನ ಯೋಜನೆಯಂತೆ ಸಾಮಾಜಿಕ ಬಹಿಷ್ಕಾರ ಪ್ರಕರಣದ ತನಿಖೆ ಮುಗಿಸಿ ನೇರವಾಗಿ ಮುಂಬೈಗೆ ಹೋಗಬೇಕಾಗಿತ್ತು. ಆದರೆ ಅವರೊಂದಿಗಿನ ವಾಸ್ತವ್ಯದ ಬಗೆಗೆ ಉತ್ಸುಕರಾಗಿದ್ದರಿಂದ ನಾನು ಒಪ್ಪಲೇಬೇಕಾಯಿತು. ನಾನು ಸಾಮಾಜಿಕ ಬಹಿಷ್ಕಾರದ ಆ ಗ್ರಾಮಕ್ಕೆ ಹೋಗಲು ಧುಲಿಯಾ ಸ್ಟೇಶನ್ನಿನಲ್ಲಿ ಇಳಿಯಬೇಕಾಗಿತ್ತು. ಆ ಗ್ರಾಮಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಅರಿತುಕೊಂಡೆ. ಮತ್ತೊಂದು ರೈಲಿನಿಂದ ಚಾಲೀಸ್‌ಗಾಂವ್‌ಗೆ ಮರಳಿ ಬಂದೆ.

ಚಾಲೀಸ್‌ಗಾಂವ್‌ನ ಅಸ್ಪೃಶ್ಯರು ರೈಲು ನಿಲ್ದಾಣದಲ್ಲಿ ನನ್ನ ಆಗಮನದ ನಿರೀಕ್ಷೆಯಲ್ಲಿ ನಿಂತುದನ್ನು ನೋಡಿದೆ. ನಾನು ರೈಲಿನಿಂದ ಇಳಿದ ಕೂಡಲೇ ಮಾಲಾರ್ಪಣೆ ಮಾಡಿದರು. ಅಸ್ಪೃಶ್ಯರ ವಾಸಸ್ಥಾನ 'ಮಹರವಾಡಾ' ರೈಲು ನಿಲ್ದಾಣದಿಂದ ಸುಮಾರು ೨ ಮೈಲು ದೂರದಲ್ಲಿತ್ತು. ಅದನ್ನು ತಲುಪಬೇಕಾದರೆ ನದಿಗೆ ಅಡ್ಡಲಾಗಿ ಕಟ್ಟಿದ ಸೇತುವೆ ಮೇಲೆ ಹಾಯ್ದು ಹೋಗಬೇಕಾಗುತ್ತಿತ್ತು. ರೈಲು ನಿಲ್ದಾಣ ಮತ್ತು ಸಮೀಪದ ಊರುಗಳಿಗೆ ಹೋಗಲು ಅನೇಕ ಟಾಂಗಾಗಳು ನಿಂತಿದ್ದವು. ಮಹರವಾಡೆಯು ರೈಲುನಿಲ್ದಾಣದಿಂದ ನಡೆದುಹೋದರೂ ತಲುಪಬಹುದಾಗಿದ್ದ ಸ್ಥಳ. ಅಲ್ಲಿ ಕೂಡಲೇ ನಡೆಯುತ್ತ ಕರೆದೊಯ್ಯಬಹುದೆಂದು ನಿರೀಕ್ಷಿಸಿದ್ದೆ. ಆದರೆ ಹಾಗೆ ಮಾಡಲಿಲ್ಲ. ನನ್ನನ್ನು ಕಾಯುತ್ತಾ ನಿಲ್ಲುವಂತೆ ಏಕೆ ಮಾಡಿದರು ಎಂಬುದರ ಅರ್ಥವೇ ಆಗ ನನಗಾಗಲಿಲ್ಲ. ಸುಮಾರು ಒಂದು ತಾಸಿನ ನಂತರ ಒಂದು ಟಾಂಗಾ ತಂದು ಪ್ಲಾಟ್‌ಫಾರ್ಮಿಗೆ ಸಮೀಪ ನಿಲ್ಲಿಸಿದರು. ನಾವು ಹೋಗಿ ಒಳಗೆ ಕುಳಿತೆ. ಟಾಂಗಾವಾಲಾ ಮತ್ತು ನಾನು ಇಬ್ಬರೇ ಗಾಡಿಯಲ್ಲಿದ್ದವರು. ಉಳಿದವರು ಸಮೀಪದ ಕಾಲುದಾರಿಯನ್ನು ಹಿಡಿದು ನಡೆಯುತ್ತಾ ಹೊರಟರು. ಟಾಂಗಾ ಎರಡು ನೂರು ಹೆಜ್ಜೆಗಳಿಗಿಂತ ಹೆಚ್ಚಿಗೆ ಹೋಗಿರಲಿಲ್ಲ. ಆಗ ಮೋಟಾರು ಕಾರಿಗೆ ಡಿಕ್ಕಿ ಹೊಡೆಯುವುದು ಸ್ವಲ್ಪದರಲ್ಲಿ ತಪ್ಪಿಹೋಯಿತು. ದಿನವೂ ಬಾಡಿಗೆ ಹೊಡೆಯುವವನು ಇಷ್ಟೊಂದು ಅನನುಭವಿ ಹೇಗೆ ಆಗಿರಲು ಸಾಧ್ಯ ಎಂದು ಆಶ್ಚರ್ಯವಾಯಿತು. ಅಪಘಾತ ನಡೆಯಲಿದ್ದುದನ್ನು

ಊಹಿಸಿದ ಪೊಲೀಸರು ಗಟ್ಟಿಯಾಗಿ ಕೂಗಿದ್ದರಿಂದ ಚಾಲಕನು ಕಾರನ್ನು ಹಿಂದಕ್ಕೆ ಕೊಂಡೊಯ್ದುದ್ದರಿಂದ ಅಪಘಾತ ತಪ್ಪಿತ್ತು.

ನಾವು ಹೇಗೋ ನದಿಗೆ ಅಡ್ಡಲಾಗಿ ಕಟ್ಟಿದ ಕಲ್ವರ್ಟಿನ ಹತ್ತಿರ ಬಂದೆವು. ಸೇತುವೆಗಳಿಗಿರುವಂತೆ ಕಲ್ವರ್ಟಿಗೆ ಎರಡೂ ಬದಿಗೆ ಪೂರ್ತಿ ಗೋಡೆಗಳಿರಲಿಲ್ಲ. ಐದು ಹತ್ತು ಫೂಟಿಗೊಂದರಂತೆ ಗೂಟು ಗಲ್ಲುಗಳನ್ನು ನಿಲ್ಲಿಸಿದ್ದರು. ಕಲ್ವರ್ಟಿನ ಮೇಲೂ ಕಲ್ಲುಗಳನ್ನು ಜೋಡಿಸಿದ್ದರು. ನದಿಯ ಮೇಲಿನ ಕಲ್ವರ್ಟ ನಾವು ಹೊರಟ ಹಾದಿಗೆ ಸಮಕೋನದಲ್ಲಿತ್ತು. ಕಲ್ವರ್ಟಿಗೆ ಹೋಗಬೇಕಾದರೆ ಗಾಡಿಯನ್ನು ಚುರುಕಾಗಿ ಹೊರಳಿಸಬೇಕಾಗಿತ್ತು. ಮೊದಲನೇ ಗೂಟದಲ್ಲಿನ ಹತ್ತಿರವೇ ಕುದುರೆಯು ನೇರವಾಗಿ ಹೋಗುವುದರ ಬದಲು ಹೊರಳಿ ಹತೋಟಿ ಮೀರಿ ಓಡಿಹೋಯಿತು. ಟಾಂಗಾದ ಗಾಲಿಯ ಬದಿಯು ಗಂಟುಗಂಬಕ್ಕೆ ರಭಸದಿಂದ ಬಡಿದದ್ದರಿಂದ ನಾನು ಕಲ್ಲು ಹಾಸಿಗೆಯ ಮೇಲೆ ತೂರಲ್ಪಟ್ಟೆನು. ಕುದುರೆ ಮತ್ತು ಟಾಂಗಾ ನದಿಯಲ್ಲಿ ಬಿದ್ದವು. ಪ್ರಜ್ಞೆ ತಪ್ಪಿ ಬೀಳುವಷ್ಟು ರಭಸದಿಂದ ಬಿದ್ದಿದ್ದೆನು. ಮಹಾರವಾಡೆಯು ನದಿಯ ಇನ್ನೊಂದು ಬದಿಯಲ್ಲಿತ್ತು. ನನ್ನನ್ನು ಸ್ವಾಗತಿಸಲು ಬಂದವರು ಆಗಲೇ ಊರನ್ನು ಮುಟ್ಟಿದ್ದರು. ಗಂಡಸರು, ಹೆಂಗಸರು ಮತ್ತು ಮಕ್ಕಳ ಅಳು ಮತ್ತು ಗೋಳಾಟದ ಮಧ್ಯೆ ನನ್ನನ್ನು ಎತ್ತಿಕೊಂಡು ಮಹಾರವಾಡೆಗೆ ಒಯ್ದರು. ಅಪಘಾತದಿಂದ ನನಗೆ ಅನೇಕ ಗಾಯಗಳಾಗಿದ್ದವು. ನನ್ನ ಕಾಲಿನ ಮೂಳೆ ಸೀಳಿ ಅನೇಕ ದಿನಗಳವರೆಗೆ ನನ್ನನ್ನು ಅಂಗವಿಕಲನನ್ನಾಗಿ ಮಾಡಿತು. ಇದೆಲ್ಲ ಹೇಗೆ ಘಟಿಸಿತ್ತು ಎಂಬುದು ನನಗೆ ತಿಳಿಯದಾಗಿತ್ತು. ಕಲ್ವರ್ಟಿನ ಮೇಲೆ ಟಾಂಗಾಗಳು ಪ್ರತಿದಿನ ಬಂದು ಹೋಗುತ್ತಲೇ ಇರುತ್ತವೆ. ಗಾಡಿಯ ಚಾಲಕನು ಒಮ್ಮೆಯೂ, ತಪ್ಪಿಯೂ ಕೂಡ ಅಪಘಾತಕ್ಕೆ ಎಡೆಮಾಡಿ ಕೊಟ್ಟಿರಲಿಲ್ಲ. ಅಂದರೆ ಸುರಕ್ಷಿತವಾಗಿಯೆ ಕರೆದುಕೊಂಡು ಹೋದದ್ದುಂಟು.

ನಾನು ಅವರನ್ನು ಈ ಬಗ್ಗೆ ವಿಚಾರಿಸಿದಾಗ ನಿಜಸಂಗತಿ ತಿಳಿಸಿದರು. ಅಸ್ಪೃಶ್ಯ ಪ್ರಯಾಣಿಕನನ್ನು ಕರೆದುಕೊಂಡು ಹೋಗಲು ಟಾಂಗಾವಾಲಿಗಳು ಸಿದ್ಧರಾಗಲಿಲ್ಲವೆಂಬುದೇ ರೈಲು ನಿಲ್ದಾಣದಿಂದ ಹೊರಡಲು ತಡವಾದದ್ದಕ್ಕೆ ಮುಖ್ಯ ಕಾರಣವೆಂದರು. ಇದು ಗೌರವಕ್ಕೆ ಕುಂದು ಎಂಬ ಭಾವನೆ ಅವರದು. ತಮ್ಮ ಕೇರಿಗೆ ನನ್ನನ್ನು ನಡೆಸುತ್ತ ಹೋಗುವುದನ್ನು ಮಹಾರರು ಸಹಿಸರು. ಇದು ಅವರಿಗೆ ಗೌರವ ತರುವ ವಿಷಯವಾಗಿರಲಿಲ್ಲ. ಎರಡೂ ಪಕ್ಷದವರು ಒಂದು ಒಪ್ಪಂದಕ್ಕೆ ಬಂದರು. ಅದೆಂದರೆ, ಟಾಂಗಾದ ಒಡೆಯನು ಟಾಂಗಾ ಹೊಡೆಯುವುದಿಲ್ಲ. ಆದರೆ ಬಾಡಿಗೆಗೆ ಕೊಡುತ್ತಾನೆ. ಮಹಾರರು ಟಾಂಗಾ ತೆಗೆದುಕೊಳ್ಳಬಹುದು, ಆದರೆ ತಮ್ಮಲ್ಲಿಯೆ ಟಾಂಗಾ ಹೊಡೆಯುವವನನ್ನು ಗೊತ್ತುಹಚ್ಚಬೇಕು. ಮಹಾರರಿಗೆ ಇಂದು ಸಂತೋಷದ ಪರಿಹಾರವಾಗಿತ್ತು. ಆದರೆ ಪ್ರಯಾಣಿಕನ ಗೌರವ ಕಾಪಾಡುವ ಭರದಲ್ಲಿ ಅವನ ಸುರಕ್ಷಿತತೆ ಹೆಚ್ಚು ಮಹತ್ವದ್ದು ಎಂಬುದನ್ನು ಸ್ಪಷ್ಟವಾಗಿ ಮರೆತಿದ್ದರು. ಈ ಬಗ್ಗೆ ಅವರು ಚಿಂತಿಸಿದ್ದರೆ ಟಾಂಗಾ ಹೊಡೆಯುವ ವ್ಯಕ್ತಿ ನನ್ನನ್ನು ಸುರಕ್ಷಿತವಾಗಿ ದಡ ಮುಟ್ಟಿಸಬಲ್ಲನೇ, ಇಲ್ಲವೆ ಎಂಬುದು ಅವರಿಗೇ ಹೊಳೆಯುತ್ತಿತ್ತು. ನಿಜ ಹೇಳಬೇಕೆಂದರೆ ಅಸ್ಪೃಶ್ಯರಲ್ಲಿ ಯಾರೂ ಟಾಂಗಾ ಹೊಡೆಯಲಾರರು. ಏಕೆಂದರೆ ಇದು ಅವರ ಉದ್ಯೋಗವೇ ಆಗಿರಲಿಲ್ಲ. ಆದರೂ ತಮ್ಮಲ್ಲಿಯೇ ಒಬ್ಬನನ್ನು ಟಾಂಗಾ ಹೊಡೆಯಲು ಕೇಳಿದರು. ಆ ವ್ಯಕ್ತಿ ಕೈಯಲ್ಲಿ ಲಗಾಮು ಹಿಡಿದು ಇದರಲ್ಲಿ ಏನೂ ವಿಶೇಷವಿಲ್ಲ ಎಂದು ಭಾವಿಸಿದ. ಮುಂದೆ ಸಾಗಿದಂತೆ ತನ್ನ ಜವಾಬುದಾರಿಯ ಅರಿವಾಯಿತು. ಅವನು ಪೂರ್ತಿ ಧೈರ್ಯ ಕಳೆದುಕೊಂಡ. ಕುದುರೆಯನ್ನು ನಿಯಂತ್ರಿಸುವ ಪ್ರಯತ್ನವನ್ನೇ ಕೈಬಿಟ್ಟ. ನನ್ನ ಗೌರವ ಕಾಪಾಡಲು ಚಾಲೀಸಗಾಂವಿನ ಮಹಾರರು ನನ್ನ ಜೀವವನ್ನೇ ಅಪಾಯದ

ಅಂಚಿಗೆ ತಂದು ನಿಲ್ಲಿಸಿದ್ದರು. ಕೀಳು ಕೆಲಸದ ಆಳಿಗಿಂತಲೂ ಎಷ್ಟೂ ಶ್ರೇಷ್ಠನಲ್ಲದ ಹಿಂದೂ ಟಾಂಗಾವಾಲಾನಿಗೆ ಗೌರವವಿರುತ್ತದೆ. ಅವನು ಎಲ್ಲ ಅಸ್ಪೃಶ್ಯರಿಗಿಂತಲೂ, ಅಷ್ಟೇ ಏಕೆ, ಅವರಲ್ಲಿಯೆ ಕಾಯ್ದೆಯಲ್ಲಿ ಬ್ಯಾರಿಷ್ಟರ ಪದವಿ ಪಡೆದವನಿಗಿಂತಲೂ ಶ್ರೇಷ್ಠ ವ್ಯಕ್ತಿ ಎಂದು ಭಾವಿಸಿರುತ್ತಾನೆ ಎಂಬುದು ಈ ಘಟನೆಯಿಂದ ಮನದಟ್ಟಾಯಿತು.

# ನಾಲ್ಕು

೧೯೩೪ನೇ ವರ್ಷ. ದಲಿತ ಚಳುವಳಿಯಲ್ಲಿ ಪಾಲುಗೊಂಡ ಸಹಕಾರ್ಯಕರ್ತರು, ನಾನು ಅವರೊಂದಿಗೆ ಹೋಗಲು ಒಪ್ಪಿದರೆ ಮಾತ್ರ, ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಪ್ರವಾಸ ಕೈಗೊಳ್ಳುವ ಇಚ್ಛೆ ವ್ಯಕ್ತಪಡಿಸಿದರು. ನಾನು ಒಪ್ಪಿದೆ. ನಮ್ಮ ಯೋಜನೆಯು ಎಂಥ ಪ್ರಸಂಗದಲ್ಲಿಯೂ ವೇರೂಳಿನಲ್ಲಿಯ ಬೌದ್ಧ ಗುಹೆಗಳನ್ನು ಒಳಗೊಂಡಿರಲೇಬೇಕು ಎಂಬ ನಿರ್ಧಾರಕ್ಕೆ ಬಂದೆವು. ನಾನು ನಾಸಿಕಕ್ಕೆ ಹೋಗಬೇಕು, ಉಳಿದವರು ಅಲ್ಲಿಗೇ ಬಂದು ನನ್ನನ್ನು ಸೇರಿಕೊಳ್ಳಬೇಕು ಎಂದು ನಿರ್ಧರಿಸಿದೆವು. ವೇರೂಳಿಗೆ ಔರಂಗಾಬಾದದ ಮೇಲಿಂದಲೇ ಹೋಗಬೇಕಾಗಿತ್ತು. ಔರಂಗಾಬಾದ ಪಟ್ಟಣವು ಮಹಮ್ಮದೀಯ ಸಂಸ್ಥಾನವಾಗಿದ್ದ ಹೈದರಾಬಾದಿನಲ್ಲಿತ್ತು. ಉಚ್ಚತಮ, ಘನವೆತ್ತ ನಿಜಾಮ ಬಾದಶಾಹನ ಆಧಿಪತ್ಯದ ಅಡಿಯಲ್ಲಿತ್ತು. ಔರಂಗಾಬಾದ ಮುಟ್ಟುವ ಮೊದಲು ಹೈದರಾಬಾದ ಸಂಸ್ಥಾನದಲ್ಲಿಯ ಇನ್ನೊಂದು ಪಟ್ಟಣ ದೌಲತಾಬಾದ ಹತ್ತುತ್ತದೆ. ಇದು ಐತಿಹಾಸಿಕ ಸ್ಥಳ. ಒಂದು ಕಾಲಕ್ಕೆ ಹಿಂದೂ ಅರಸ ರಾಮದೇವರಾಯನ ರಾಜಧಾನಿಯಾಗಿತ್ತು. ದೌಲತಾಬಾದ ಕೋಟೆಯು ಪ್ರಾಚೀನ ಐತಿಹಾಸಿಕ ಸ್ಮಾರಕವಾಗಿದೆ. ಯಾವುದೇ ಪ್ರವಾಸಿಯು ಆ ಪ್ರದೇಶದ ಸಮೀಪಕ್ಕೆ ಹೋದಾಗ ಅದನ್ನು ನೋಡುವುದನ್ನು ತಪ್ಪಿಸಿಕೊಳ್ಳಲೇ ಕೂಡದು. ಹೀಗಾಗಿ ನಮ್ಮ ಮಂಡಲಿಯು ದೌಲತಾಬಾದ ಕೋಟೆಯ ವೀಕ್ಷಣೆಯನ್ನು ಸೇರಿಸಿಕೊಂಡಿತ್ತು.

ನಾವು ಕೆಲವೊಂದು ಬಸ್ಸುಗಳನ್ನು ಮತ್ತು ಪ್ರವಾಸೀ ಕಾರುಗಳನ್ನು ಬಾಡಿಗೆಗೆ ಗೊತ್ತುಪಡಿಸಿದೆವು. ನಮ್ಮೆಲ್ಲರ ಒಟ್ಟು ಸಂಖ್ಯೆ ಸುಮಾರು ಮೂವತ್ತು. ನಾಸಿಕದಿಂದ ಪ್ರಾರಂಭಿಸಿ ಇವೊಲಾದ ಮೇಲಿಂದ ಔರಂಗಾಬಾದಕ್ಕೆ ಹೊರಟೆವು. ಉದ್ದೇಶಪೂರ್ವಕವಾಗಿಯೇ ನಮ್ಮ ಪ್ರವಾಸ ಕಾರ್ಯಕ್ರಮವನ್ನು ಮೊದಲೇ ಜಾಹೀರುಪಡಿಸಲಿಲ್ಲ. ಅಸ್ಪೃಶ್ಯ ಪ್ರವಾಸಿಯು ಹೊರ ಪ್ರಾಂತ್ಯಗಳಲ್ಲಿ ಎದುರಿಸಬಹುದಾದ ತೊಂದರೆಗಳನ್ನು ತಪ್ಪಿಸುವ ಉದ್ದೇಶದಿಂದಾಗಿಯೇ ನಾವು ಅಜ್ಞಾತರಾಗಿ ಪ್ರವಾಸ ಮಾಡಲು ಇಚ್ಛಿಸಿದ್ದೆವು. ಯಾವ ಕೇಂದ್ರಗಳಲ್ಲಿ ವಾಸ್ತವ್ಯ ಮಾಡಲು ಯೋಜಿಸಿದ್ದೆವೊ ಅಂಥ ಸ್ಥಳದ ನಮ್ಮವರಿಗೆ ಮಾತ್ರ ತಿಳಿಸಿದ್ದೆವು. ಹೀಗಾಗಿ ದಾರಿಯಲ್ಲಿ ಅನೇಕ ಗ್ರಾಮಗಳ ಮೇಲೆ ಹಾಯ್ದು ಹೋದರೂ ನಮ್ಮವರಾರೂ ಭೆಟ್ಟಿಯಾಗಲು ಬಂದಿರಲಿಲ್ಲ. ದೌಲತಾಬಾದದ ವಿಷಯವೇ ಸಹಜವಾಗಿ ಬೇರೆ ತೆರನಾಗಿತ್ತು. ಏಕೆಂದರೆ, ಅಲ್ಲಿರುವ ನಮ್ಮವರಿಗೆ ನಾವು ಹೋಗುವುದನ್ನು ಮೊದಲೇ ತಿಳಿಸಿದ್ದೆನಾದ್ದರಿಂದ ಅವರು ಹೆಚ್ಚು ಸಂಖ್ಯೆಯಲ್ಲಿ ಸೇರಿ ಪಟ್ಟಣದ ಪ್ರವೇಶ ಸ್ಥಳದಲ್ಲಿ ನಮ್ಮ ಆಗಮನದ ನಿರೀಕ್ಷೆಯಲ್ಲಿದ್ದರು. ನಮ್ಮನ್ನು ನೋಡಿದ ಕೂಡಲೇ 'ಗಾಡಿಯಿಂದ ಇಳಿಯಿರಿ, ಮೊದಲು ಅಲ್ಪೋಪಹಾರ ಮತ್ತು ಚಹ ತೆಗೆದುಕೊಂಡ ನಂತರವೇ ಕೋಟೆಯನ್ನು ನೋಡಲು ಹೋಗಬೇಕು' ಎಂದು ಕೇಳಿಕೊಂಡರು. ಅವರ ಸೂಚನೆ ನಮಗೆ ಒಪ್ಪಿಗೆಯಾಗಲಿಲ್ಲ. ನಮಗೆ ಚಹಾ ಕುಡಿಯುವ ಆಶೆಯೇನೊ ಅತಿಯಾಗಿತ್ತು. ಆದರೆ ಕತ್ತಲು ಕವಿಯುವುದರೊಳಗಾಗಿ ಕೋಟೆಯನ್ನು ವೀಕ್ಷಿಸಲು ಸಾಕಷ್ಟು ವೇಳೆ ಅವಶ್ಯಕತೆಯಿತ್ತು. ಆದ್ದರಿಂದ ತಿರುಗಿ ಬಂದು ಚಹ ಕುಡಿಯುತ್ತೇವೆ ಎಂದು ನಮ್ಮ ಜನರಿಗೆ ಹೇಳಿ, ಕೋಟೆ ನೋಡಲು ಹೊರಟೆವು. ನಮ್ಮ ಗಾಡಿಗಳ ಚಾಲಕರಿಗೆ ಇನ್ನು ಮುಂದೆ ಸಾಗಿರಿ ಎಂದು ಹೇಳಿದೆವು. ಕೆಲವೇ ಕ್ಷಣಗಳಲ್ಲಿ ನಾವು ಕೋಟೆಯ ಗೇಟಿನ ಬಳಿಯಲ್ಲಿದ್ದೆವು.

ಅದು ರಂಜಾನ ತಿಂಗಳಾಗಿತ್ತು. ಮಹಮ್ಮದೀಯರಿಗೆ ಉಪವಾಸದ ಪವಿತ್ರ ತಿಂಗಳು. ಕೋಟೆಯ

ಗೇಟಿನ ಹೊರಗೆ ಸಮೀಪದಲ್ಲಿಯೆ ತುಂಬಿ ತುಳುಕುವ ಒಂದು ಸಣ್ಣ ನೀರಿನ ತೊಟ್ಟಿ ಇತ್ತು. ಅದರ ಸುತ್ತಲೂ ವಿಸ್ತಾರವಾಗಿ ಹಾಸುಕಲ್ಲುಗಳನ್ನು ಹೊಂದಿಸಲಾಗಿತ್ತು. ಪ್ರವಾಸ ಕಾಲದಲ್ಲಿ ನಮ್ಮ ಮುಖಗಳು, ಶರೀರಗಳು ಮತ್ತು ಬಟ್ಟೆಗಳು ಪೂರ್ತಿ ಕೊಳೆಯಾಗಿದ್ದವು. ಆದ್ದರಿಂದ ನಾವೆಲ್ಲ ಮುಖ ಕೈಕಾಲುಗಳನ್ನು ತೊಳೆದುಕೊಳ್ಳಲು ಇಷ್ಟಪಟ್ಟೆವು. ಏನೊಂದೂ ವಿಚಾರಿಸದೆ ನಮ್ಮ ಗುಂಪಿನ ಕೆಲ ಸದಸ್ಯರು ಹತ್ತಿರದ ಕಲ್ಲು ಹಾಸಿನ ಮೇಲೆ ತಮ್ಮ ಮುಖ, ಕೈಕಾಲುಗಳನ್ನು ತೊಳೆದುಕೊಂಡೇಬಿಟ್ಟರು. ಈ ಶುಚಿ ಪ್ರೋಕ್ಷಣೆಯ ನಂತರ ನಾವು ಕೋಟೆಯ ದ್ವಾರದ ಹತ್ತಿರ ಹೋದೆವು. ಒಳಗೆ ಶಸ್ತ್ರಸಜ್ಜಿತ ಸಿಪಾಯಿಗಳಿದ್ದರು. ಅವರು ಮಹಾದ್ವಾರದ ದೊಡ್ಡ ಬಾಗಿಲುಗಳನ್ನು ತೆರೆದರು. ಕಮಾನು ಹಾದಿಯಿಂದ ಒಳಗೆ ಹೋಗಲು ಅವಕಾಶ ನೀಡಿದರು. ಕೋಟೆಯ ಒಳಗೆ ಹೋಗಲು, ಪರವಾನಗಿ ತೆಗೆದುಕೊಳ್ಳಲು ಅವಶ್ಯವಿದ್ದ ವಿಧಿವಿಧಾನಗಳ ಬಗೆಗೆ ಕಾವಲುಗಾರರನ್ನು ಅದೇ ಕೇಳಲು ಸುರುವು ಮಾಡಿದ್ದೆವು. ಅಷ್ಟರಲ್ಲಿ, ಅಲೆಗಳಂತೆ ಓಲಾಡುತ್ತಿದ್ದ ಬಿಳಿಗಡ್ಡದ ಒಬ್ಬ ಮಹಮ್ಮದೀಯ ವೃದ್ಧನು 'ಧೇಡರು (ಅಂದರೆ ಅಸ್ಪೃಶ್ಯರು) ತೊಟ್ಟಿಯನ್ನು ಮಲಿನಗೊಳಿಸಿದ್ದಾರೆ' ಎಂದು ಹಿಂದಿನಿಂದ ಕೂಗುತ್ತಾ ಬಂದನು. ಕೂಡಲೆ ಅಲ್ಲಿದ್ದ ಎಲ್ಲ ಯುವಕ ಮತ್ತು ವೃದ್ಧ ಮಹಮ್ಮದೀಯರು ಅವನೊಂದಿಗೆ ಸೇರಿಕೊಂಡರು. "ಥೆಡ್ಡರು ಸೊಕ್ಕಿಗೆ ಬಂದಿದ್ದಾರೆ. ತಮ್ಮ ಧರ್ಮವನ್ನು ಮರೆತಿದ್ದಾರೆ. (ಅಂದರೆ ತಾವು ಹೀನರು ಆಗಿಯೇ ಜೀವಿಸಬೇಕೆಂಬುದು ಅವರ ಧರ್ಮ) ಥೇಡ್ಡರಿಗೆ ಪಾಠ ಕಲಿಸಲೇಬೇಕು"ಎಂದು ಮುಂತಾಗಿ ಬೈಯ್ಯ ಹತ್ತಿದರು. ಅವರು ಅತಿಯಾಗಿ ಬೈಯಹತ್ತಿದರು. ಅವರು ಅತಿಯಾಗಿ ಭಯ ಹುಟ್ಟಿಸುವಂಥ ಮನೋಭಾವ ತಾಳಿದ್ದರು. ನಾವು ಹೊರಗಿನವರಾದ್ದರಿಂದ ಸ್ಥಳೀಯ ಸಂಪ್ರದಾಯಗಳ ಪರಿಚಯವಿರಲಿಲ್ಲವೆಂದು ಅವರಿಗೆ ತಿಳಿಸಿದೆವು. ಆಗ ಗೇಟಿನ ಬಳಿ ಬಂದ ಸ್ಥಳೀಯ ಅಸ್ಪೃಶ್ಯರ ಮೇಲೆ ನಮ್ಮ ಮೇಲಿನ ಸಿಟ್ಟನ್ನು ಹೊರಳಿಸಿ, ಈ ತೊಟ್ಟಿಯ ನೀರನ್ನು ಅಸ್ಪೃಶ್ಯರು ಮುಟ್ಟುವಂತಿಲ್ಲವೆಂದು ಈ ಹೊರಗಿನಿಂದ ಬಂದವರಿಗೆ ನೀವು ಏಕೆ ಹೇಳಲಿಲ್ಲ? ಎಂಬ ಪ್ರಶ್ನೆಯನ್ನೇ ಮೇಲಿಂದ ಮೇಲೆ ಕೇಳಿದರು. ಬಡಜನತೆ! ನಾವು ನೀರಿನ ತೊಟ್ಟಿಯನ್ನು ಪ್ರವೇಶಿಸಿದಾಗ ಅಲ್ಲಿ ಅವರಿರಲಿಲ್ಲ. ಅವರೇನು ಮಾಡಿಯಾರು? ವಿಚಾರಿಸದೆ ಹೀಗೆ ಮಾಡಿದ್ದು ನಿಜವಾಗಿಯೂ ನಮ್ಮದೇ ತಪ್ಪು ಎಂದು ಹೇಳಿದೆ. ನಾನು ಹೀಗೆ ಅಂದದ್ದಕ್ಕೆ, ತಪ್ಪು ನಮ್ಮದಲ್ಲ ಎಂದು ಊರ ಅಸ್ಪೃಶ್ಯರು ಪ್ರತಿಭಟಿಸಿದರು. ಆದರೆ ಮಹಮ್ಮದೀಯರು ನನ್ನ ವಿವರಣೆಯನ್ನು ಕೇಳಲು ಸಿದ್ಧರಿರಲಿಲ್ಲ. ಅವರು ದೌಲತಾಬಾದಿನ ಅಸ್ಪೃಶ್ಯರನ್ನು ಮತ್ತು ನಮ್ಮನ್ನು ಕೂಡಿಸಿಯೇ ಬೈಯ್ಯುತ್ತಲಿದ್ದರು. ಬೈಗಳು ಎಷ್ಟೊಂದು ಅಸಭ್ಯವಾಗಿದ್ದವೆಂದರೆ ನಮ್ಮೆಲ್ಲರನ್ನು ಅತಿಯಾಗಿ ರೇಗುವಂತೆ ಮಾಡಿದವು. ಇದರಿಂದ ಶಾಂತಿಭಂಗವಾಗುವ ಮತ್ತು ಕೊಲೆಗಳು ಸಂಭವಿಸುವ ಸಾಧ್ಯತೆ ಇತ್ತು. ಆದರೆ ನಾವು ನಮ್ಮನ್ನೇ ನಿಗ್ರಹಿಸಿಕೊಂಡೆವು. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡಲಿಲ್ಲ. ಅಪರಾಧಿ ಪ್ರಕರಣಕ್ಕೆ ಎಡೆಮಾಡಿಕೊಟ್ಟರೆ ಇದರಿಂದ ನಮ್ಮ ಪ್ರವಾಸವನ್ನು ಮಧ್ಯದಲ್ಲಿಯೆ, ಇಷ್ಟೇ ಏಕೆ, ಪ್ರಾರಂಭದಲ್ಲಿಯೆ ಹಠಾತ್ತನೇ ಮುಕ್ತಾಯಗೊಳಿಸುವ ಪ್ರಸಂಗ ಉಂಟಾಗುತ್ತಿತ್ತು.

ಆ ಜನಜಂಗುಳಿಯಲ್ಲಿಯ ಒಬ್ಬ ಮುಸ್ಲಿಂ ಯುವಕನು, ಪ್ರತಿಯೊಬ್ಬನೂ ತನ್ನ ಧರ್ಮದಂತೆ ನಡೆಯಬೇಕು, ಅಂದರೆ ಸಾರ್ವಜನಿಕ ತೊಟ್ಟಿಯ ನೀರನ್ನು ಬಳಸಕೂಡದು ಎಂದು ಮೇಲಿಂದ ಮೇಲೆ ಹೇಳುತ್ತಿದ್ದ. ಇದರಿಂದ ನನ್ನ ಸಹನೆ ಮಿತಿ ಮೀರಿತು. "ನಿನ್ನ ಧರ್ಮ ಕಲಿಸುತ್ತಿರುವುದು ಇದನ್ನೇ ಏನು? ಅಸ್ಪೃಶ್ಯನು ಮಹಮ್ಮದೀಯನಾಗಿ ಮತಾಂತರ ಹೊಂದಿದರೆ, ಅವನನ್ನು ಈ ತೊಟ್ಟಿಯನ್ನು ಮುಟ್ಟದಂತೆ, ಇದರ ನೀರು ಬಳಸದಂತೆ ತಡೆಯುತ್ತೀ ಏನು?" ಎಂದು ಅವನನ್ನು ಸಿಟ್ಟಿನಿಂದಲೇ ಕೇಳಿದೆ. ಈ ನೇರ ಪ್ರಶ್ನೆಗಳು ಅಲ್ಲಿಯ ಮಹಮ್ಮದೀಯರ ಮೇಲೆ ಪರಿಣಾಮ ಬೀರಿದಂತೆ ಕಂಡಿತು. ಅವರು ನಿರುತ್ತರರಾದರು ಮತ್ತು

ಮೌನ ಧರಿಸಿದರು. ಕಾವಲುಗಾರನೆಡೆಗೆ ಹೊರಳಿ, ಸಿಟ್ಟಿನಿಂದಲೇ, "ನಾವು ಕೋಟೆಯ ಒಳಗಡೆ ನೋಡಲು ಹೋಗಬೇಕೋ, ಬೇಡವೋ? ಬೇಡವೆಂದು ಹೇಳಿದರೆ ಇದಕ್ಕೆ ನಮ್ಮದೇನೂ ತಕರಾರು ಇಲ್ಲ" ಎಂದು ಕೇಳಿದೆ. ಕಾವಲುಗಾರನು ನನ್ನ ಹೆಸರನ್ನು ಕೇಳಿದ. ಒಂದು ತುಂಡು ಕಾಗದದ ಮೇಲೆ ಬರೆದು ತೋರಿಸಿದ. ಅದನ್ನು ಒಳಗಿದ್ದ ಅಧೀಕ್ಷಕನ ಹೋಗಿ ತೋರಿಸಿ ತಿರುಗಿ ಬಂದ. "ಕೋಟೆಯ ಒಳಗೆ ಹೋಗಬಹುದು. ಆದರೆ ಎಲ್ಲಿಯೂ ನೀರನ್ನು ಮುಟ್ಟಕೂಡದು" ಎಂದು ಹೇಳಿ ಈ ಆಜ್ಞೆಯನ್ನು ಮೀರಿದಂತೆ ಎಚ್ಚರಿಕೆ ವಹಿಸಲು ಒಬ್ಬ ಸಶಸ್ತ್ರ ಸಿಪಾಯಿಯನ್ನು ಕಳಿಸಲಾಯಿತು.

ಈ ಮೊದಲು ನಾನು ಕೊಟ್ಟ ಉದಾಹರಣೆಯಿಂದ, ಹಿಂದೂವಿಗೆ ಅಸ್ಪೃಶ್ಯನಾದ ವ್ಯಕ್ತಿಯು ಪಾರ್ಸಿಗೂ ಅಸ್ಪೃಶ್ಯನೇ ಎಂದು ಹೇಳಿದ್ದೆ. ಈಗ ಹಿಂದೂವಿಗೆ ಅಸ್ಪೃಶ್ಯನಾದವನು ಮಹಮ್ಮದೀಯನಿಗೂ ಅಸ್ಪೃಶ್ಯನೇ ಎಂದು ತಿಳಿಯಿತು.

# ಐದು

ನಂತರ ನಡೆದ ಇನ್ನೊಂದು ಪ್ರಕರಣ ಮೊದಲಿನಷ್ಟೇ ಹೃದಯಭೇದಕ. ಅಸ್ಪೃಶ್ಯರ ಅಂದಿನ ಸ್ಥಿತಿಗತಿಗಳ ಮೇಲೆ ಹೆಚ್ಚಿನ ಬೆಳಕು ಬೀರುವಂಥದು. ಕಾಠೇವಾಡ ಸಂಸ್ಥಾನದಲ್ಲಿಯ ಒಂದು ಗ್ರಾಮ. ಅಲ್ಲೊಬ್ಬ ಅಸ್ಪೃಶ್ಯ ಶಿಕ್ಷಕ. ಅವನದೊಂದು ಪತ್ರ, ಮಿ. ಗಾಂಧಿಯ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ಯಂಗ್ ಇಂಡಿಯಾ ಪತ್ರಿಕೆಯ ಡಿಸೆಂಬರ್ ೧೯೨೯, ೧೨ನೇ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದೇ ಜನ್ಮ ನೀಡಿದ ತನ್ನ ಪತ್ನಿ ಮತ್ತು ಮಗುವಿನ ರೋಗಕ್ಕೆ ಶುಶ್ರೂಷೆ ಮಾಡಲು ಹಿಂದೂ ಡಾಕ್ಟರನ ಮನವೊಲಿಸಲು ಪಟ್ಟ ಎಣೆಯಿಲ್ಲದ ಬವಣೆ ಮತ್ತು ಯೋಗ್ಯ ವೇಳೆಯಲ್ಲಿ ಮತ್ತು ಉಚಿತ ಚಿಕಿತ್ಸೆ ದೊರಕದೆ ಇಬ್ಬರೂ ಅಸುನೀಗಿದ ದಾರುಣ ವಾರ್ತೆಯನ್ನು ಒಳಗೊಂಡಿದೆ. ಆ ಪತ್ರದ ವಿಷಯ ಇಂತಿದೆ:

"ಈ ತಿಂಗಳಿನ ಐದನೆಯ ದಿನಾಂಕದಂದು ನನಗೆ ಮಗುವೊಂದು ಜನಿಸಿತು. ಏಳನೇ ದಿನಾಂಕದಂದು ನನ್ನ ಬಾಣಂತಿ ಪತ್ನಿಗೆ ಭೇದಿ ಹತ್ತಿ ಅನಾರೋಗ್ಯದಿಂದ ಬಳಲಿದಳು. ಆಕೆಯ ಶಕ್ತಿ ಉಡುಗಿತು. ಎದೆ ಊದಿಕೊಂಡಿತು. ಉಸಿರಾಡಿಸುವುದೂ ಕಷ್ಟವಾಯಿತು. ಪಕ್ಕೆ ಎಲುಬುಗಳು ಅತಿಯಾಗಿ ನೋಯಹತ್ತಿದವು. ನಾನು ಡಾಕ್ಟರನನ್ನು ಕರೆಯಲು ಹೋದೆ. ಆದರೆ ಅವನು ಅಸ್ಪೃಶ್ಯನ ಮನೆಗೆ ಬಂದು, ತಾಯಿ ಮಗುವನ್ನು ತಪಾಸಿಸಲಾರೆ ಅಂದನು. ಆಗ ನಾನು ಊರ ಪ್ರಮುಖ ಮತ್ತು ಗರಾಸಿಯಾ ದರ್ಬಾರ ಅವನ ಬಳಿಗೆ ಹೋಗಿ ನನಗೆ ಸಹಾಯ ಮಾಡಲು ಬೇಡಿಕೊಂಡೆ. ನಾಗರಶೇಠನು ನಾನು ಡಾಕ್ಟರರಿಗೆ ಕೊಡಬೇಕಾಗಿದ್ದ ಎರಡು ರೂಪಾಯಿಗೆ ಜಾಮೀನು ಆದನು. ರೋಗಿಗಳನ್ನು ಹರಿಜನ ಕೇರಿಯ ಹೊರಗೆ ತಂದರೆ ಮಾತ್ರ ತಪಾಸಿಸುವುದಾಗಿ ಕರಾರು ಹಾಕಿದನು. ನಾನು, ನನ್ನ ಪತ್ನಿ ಮತ್ತು ನವಜಾತ ಶಿಶುವನ್ನು ಹರಿಜನ ಕೇರಿಯ ಹೊರಗೆ ಒಯ್ದೆನು. ಆಗ ಡಾಕ್ಟರನು ತನ್ನ ಉಷ್ಣತಾಮಾಪಕವನ್ನು ಮುಸ್ಲೀಮನ ಕೈಯಲ್ಲಿ ಕೊಟ್ಟನು. ಅವನು ನನಗೆ ಕೊಟ್ಟನು. ನಾನು ನನ್ನ ಹೆಂಡತಿಗೆ ಕೊಟ್ಟೆ. ನಂತರ ಅದೇ ರೀತಿ ತಿರುಗಿ ಅದು ಡಾಕ್ಟರನ ಕೈ ಸೇರಿತು. ಅದನ್ನು ನೋಡಿದ ಡಾಕ್ಟರನು ರೋಗಿಪತ್ನಿಯು ನ್ಯೂಮೋನಿಯಾದಿಂದ ಬಳಲುತ್ತಿದ್ದಾಳೆಂದು ಹೇಳಿದ. ಅಷ್ಟೊತ್ತಿಗೆ ರಾತ್ರಿ ೮ ಗಂಟೆಯಾಗಿತ್ತು. ಡಾಕ್ಟರ್ ದವಾಖಾನೆಗೆ ಹೋಗಿ ಔಷಧ ಕೊಟ್ಟು ಕಳಿಸಿದ. ನಾನು ಪೇಟೆಗೆ ಹೋಗಿ ಸ್ವಲ್ಪ ಅಗಸೆಬೀಜ ತಂದು ರೋಗಿಗೆ ಕೊಟ್ಟೆ. ಬಾಣಂತಿ ಮತ್ತು ಕೂಸಿನ ತೊಂದರೆ ಕಡಿಮೆಯಾಗಲಿಲ್ಲ. ನಾನು ಕರಾರಿನಂತೆ ೨ ರೂ. ಕೊಟ್ಟರೂ ರೋಗಿಗಳನ್ನು ನೋಡಲು ಡಾಕ್ಟರನು ತಿರುಗಿ ಬರಲಿಲ್ಲ. ರೋಗವು ಅಪಾಯಕಾರಿ ಸ್ಥಿತಿ ತಲುಪಿತ್ತು. ದೇವರ ಮೇಲೆ ಭಾರ ಹಾಕಿದೆವು. ಆದರೆ ದೇವರೂ ನನ್ನ ನೆರವಿಗೆ ಬರದಾದ. ನನ್ನ ವಂಶದ ಜ್ಯೋತಿ ನಂದಿತು. ನನ್ನ ಪತ್ನಿಯೂ ಕೂಡ ಇಂದು ಸಾಯಂಕಾಲ ಎರಡು ಗಂಟೆಯ ಸುಮಾರಿಗೆ ಇಹಲೋಕ ತ್ಯಜಿಸಿದಳು."

ಅಸ್ಪೃಶ್ಯ ಶಾಲಾ ಶಿಕ್ಷಕನು ತನ್ನ ಹೆಸರನ್ನು ತಿಳಿಸಿಲ್ಲ. ಅದರಂತೆಯೆ ಡಾಕ್ಟರನ ಹೆಸರನ್ನೂ ಕೂಡ ಹೇಳಿಲ್ಲ. ಪ್ರತೀಕಾರ ಮಾಡಬಹುದೆಂಬ ಹೆದರಿಕೆಯಿಂದಲೇ ಎರಡೂ ಹೆಸರುಗಳನ್ನು ಗುಪ್ತವಾಗಿಡಲು ಪತ್ರಿಕೆಯ ಸಂಪಾದಕರನ್ನು ವಿನಂತಿಸಿದ್ದ. ಆದರೆ ಸಂಗತಿಗಳು ನಿಸ್ಸಂಶಯವಾದುವು, ವಿವರಣೆ ಅನವಶ್ಯಕ. ಡಾಕ್ಟರನು ಸುಶಿಕ್ಷಿತನಾದಾಗ್ಯೂ ಉಷ್ಣಮಾಪಕ ಯಂತ್ರವನ್ನು ತಾನೇ ನೇರವಾಗಿ ರೋಗಿಯ ಮೈಮೇಲಿಟ್ಟು ಪರೀಕ್ಷಿಸಿ ಕೂಡಲೇ ಶುಶ್ರೂಷೆಗೆ ಒಳಪಡಿಸಲಿಲ್ಲ. ಹೀಗಾಗಿ ಆ ಮಹಿಳೆ ಕೊನೆ ಉಸಿರು ಎಳೆದಳು. ನಿಷ್ಪಾಪಿ

ಮಗುವೂ ಅಸುನೀಗಿತು. ವೃತ್ತಿ ಧರ್ಮಕ್ಕೆ ಅನುಸರಿಸಿ ಅವನ ವಿವೇಕವು ಅವನನ್ನು ಎಚ್ಚರಿಸಿ ಶುಶ್ರೂಷೆಗೆ ತೊಡಗುವಂತೆ ಮಾಡಲಿಲ್ಲ. ಹಿಂದೂವು ಅಸ್ಪೃಶ್ಯನನ್ನು ಸ್ಪರ್ಶಿಸುವುದಕ್ಕಿಂತ ಅಮಾನುಷ ವ್ಯಕ್ತಿ ಅಂದಾದರೂ ಕರೆಯಿಸಿಕೊಳ್ಳಲು ಇಷ್ಟಪಡುತ್ತಾನೆ.

# ಆರು

ಇನ್ನೊಂದು ಘಟನೆ. ಈಗ ನಡೆದುದಕ್ಕಿಂತ ಹೆಚ್ಚು ಪರಿಣಾಮಕಾರಿಯಾದದ್ದು. ೧೯೩೮ನೆಯ ವರುಷ, ಮಾರ್ಚ್ ತಿಂಗಳು, ೭ನೆಯ ತಾರೀಖು, ಭಂಗಿಗಳ ಸಭೆಯು ಮುಂಬಯಿಯ ದಾದರಿನಲ್ಲಿ (ಉಣ್ಣೆ ಕಾರಖಾನೆಗಳ ಹಿಂಬದಿ) ಮಿ. ಇಂದುಜಾಲ ಯದ್ನಿಕ ಅವರ ಕಾರ್ಯಾಧ್ಯಕ್ಷತೆಯಲ್ಲಿ ಸೇರಿತ್ತು. ಈ ಸಭೆಯಲ್ಲಿ ಒಬ್ಬ ಭಂಗಿ ಹುಡುಗನು ತನ್ನ ಅನುಭವ ಕಥನವನ್ನು ಈ ಕೆಳಗಿನಂತೆ ನಿವೇದಿಸಿದ್ದಾನೆ:

"ನಾನು ೧೯೩೩ರಲ್ಲಿ ಮಾತೃಭಾಷೆಯ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆಯಾದೆ. ನಾಲ್ಕನೆಯ ವರ್ಗದವರೆಗೆ ಇಂಗ್ಲಿಷನ್ನೂ ಅಭ್ಯಾಸ ಮಾಡಿದೆ. ಪ್ರಾಥಮಿಕ ಶಿಕ್ಷಕನ ಕೆಲಸಕ್ಕಾಗಿ, ಮುಂಬಯಿಯ ನಗರಸಭೆಯ ಶಾಲಾ ಸಮಿತಿಗೆ ಅರ್ಜಿ ಹಾಕಿದೆ. ಶಿಕ್ಷಕರ ಹುದ್ದೆಗಳು ಖಾಲಿ ಇರಲಿಲ್ಲವಾದ್ದರಿಂದ ನನಗೆ ದೊರಕಲಿಲ್ಲ. ನಂತರ ನಾನು, ಅಹಮ್ಮದಾಬಾದಿನ ಹಿಂದುಳಿದ ವರ್ಗಗಳ ಅಧಿಕಾರಿಗೆ, ತಲಾಟಿ (ಗ್ರಾಮ ಪಟವಾರಿ) ಹುದ್ದೆಗೆ ಅರ್ಜಿ ಸಲ್ಲಿಸಿದೆ. ಇದರಲ್ಲಿ ನಾನು ಯಶಸ್ವಿಯಾದೆ, ೧೯೩೬, ಫೆಬ್ರುವರಿ ೧೯ರಂದು ಖೇಡಾ ಜಿಲ್ಲೆಯ, ಬೋರ್ಸಾದ ತಾಲೂಕಿನ, ಮಾಮಲೇದಾರರ ಆಫೀಸಿನಲ್ಲಿ ತಲಾಟಿ ಎಂದು ನೇಮಕಗೊಂಡೆ.

ನನ್ನ ಕುಟುಂಬದ ಮೂಲಪುರುಷರು ಗುಜರಾತಿನಿಂದಲೇ ಬಂದವರಾಗಿದ್ದರೂ, ನಾನೆಂದೂ ಅಲ್ಲಿಗೆ ಹೋಗಿರಲಿಲ್ಲ. ಅದರಂತೆಯೆ, ಸರಕಾರಿ ಆಫೀಸುಗಳಲ್ಲಿ ಅಸ್ಪೃಶ್ಯತಾಚರಣೆ ಇದ್ದುದೂ ನನಗೆ ತಿಳಿದಿರಲಿಲ್ಲ. ಮೇಲಾಗಿ, ನನ್ನ ಅರ್ಜಿಯಲ್ಲಿ ನಾನು ಹರಿಜನನೆಂದು ನಮೂದಿಸಿಯೇ ಇದ್ದೆ. ಆದ್ದರಿಂದ ಆಫೀಸಿನಲ್ಲಿಯೂ ನನ್ನ ಜೊತೆಗಾರರಿಗೆ ಮೊದಲೇ ನಾನಾರೆಂಬುದು ತಿಳಿದಿತ್ತು ಎಂದು ಭಾವಿಸಿದ್ದೆ. ಹೀಗಾಗಿದ್ದಾಗಲೂ ಮಾಮಲೇದಾರರ ಆಫೀಸಿನಲ್ಲಿ ತಲಾಟಿ ಕೆಲಸಕ್ಕೆ ನಾನು ಸೇರಲು ಹೋದಾಗ ಅಲ್ಲಿಯ ಕಾರಕೂನನು ನನ್ನನ್ನು ಕಂಡ ಬಗೆಯು ನನಗೆ ಆಶ್ಚರ್ಯವನ್ನು ಹುಟ್ಟಿಸಿತು.

ಕಾರಕೂನನು ನನ್ನನ್ನು ತಿರಸ್ಕಾರದಿಂದಲೇ 'ನೀನಾರು?' ಎಂದು ಕೇಳಿದ. 'ಸರ್, ನಾನು ಹರಿಜನ' ಎಂದು ಉತ್ತರಿಸಿದೆ. "ಹೋಗು, ದೂರದಲ್ಲಿ ನಿಲ್ಲು, ನನ್ನ ಸನಿಹದಲ್ಲಿ ನಿಲ್ಲಲು ನಿನಗೆಷ್ಟು ಧೈರ್ಯ, ನೀನು ಆಫೀಸಿನಲ್ಲಿರುವೆ ಎಂದು ಬಿಟ್ಟಿದ್ದೇನೆ. ಹೊರಗಾಗಿದ್ದರೆ, ನಾನು ಆರು ಒದೆತಗಳನ್ನು ಕೊಡುತ್ತಿದ್ದೆ. ಇಲ್ಲಿ ಕೆಲಸ ಮಾಡಲು ಬರಲಿಕ್ಕೆ ನಿನಗೆಷ್ಟು ಕೆಚ್ಚಿದೆ?" ಅನಂತರ, ನನ್ನ ಪ್ರಮಾಣ ಪತ್ರ ಮತ್ತು ತಲಾಟಿಯ ನೇಮಕಾಜ್ಞೆಗಳನ್ನು ನೆಲದ ಮೇಲಿಡು ಎಂದು ಅಂದ. ನಂತರ ಅದನ್ನು ಎತ್ತಿಕೊಂಡ. ನಾನು ಬೋರ್ಸಾಡದ ಮಾಮಲೇದಾರರ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ ಕುಡಿಯುವ ನೀರಿಗಾಗಿ ಬಹಳಷ್ಟು ತೊಂದರೆ ಅನುಭವಿಸಿದೆ. ಆಫೀಸಿನ ವರಾಂಡದಲ್ಲಿ ಕುಡಿಯುವ ನೀರಿನ ತಗಡಿನ ಪೀಪಾಯಿಗಳನ್ನು ಇಡಲಾಗಿತ್ತು. ಕೆಲಸಗಾರನೊಬ್ಬನ ಉಸ್ತುವಾರಿಯಲ್ಲಿ ಅವುಗಳನ್ನು ಇಡಲಾಗಿತ್ತು. ಆಫೀಸಿನಲ್ಲಿರುವವರಿಗೆ ನೀರು ಬೇಕಾದಾಗ ಅವರಿಗೆ ಕೊಡುವುದು ಅವನ ಕರ್ತವ್ಯವಾಗಿತ್ತು. ಅವನ ಗೈರು ಹಾಜರಿಯಲ್ಲಿ ಅವರೆ ಡಬ್ಬಗಳಿಂದ ನೀರು ತೆಗೆದುಕೊಂಡು ಕುಡಿಯುತ್ತಿದ್ದರು. ಆದರೆ, ನನ್ನ ವಿಷಯಕ್ಕೆ ಅದು ಅಸಾಧ್ಯವಾದ ಕೆಲಸವಾಗಿತ್ತು. ಆ ನೀರಿನ ಡಬ್ಬಗಳನ್ನು ನಾನು ಮುಟ್ಟಲು ಸಾಧ್ಯವಿರಲಿಲ್ಲ. ಏಕೆಂದರೆ ನಾನು ಮುಟ್ಟುವುದರಿಂದ ಆ ನೀರು ಮೈಲಿಗೆಯಾಗುತ್ತಿತ್ತು. ಆದ್ದರಿಂದ ನಾನು ನೀರು ಹನಿಸುವವನ ಮರ್ಜಿಯನ್ನೇ ಕಾಯಬೇಕಾಗುತ್ತಿತ್ತು. ನನ್ನ ಉಪಯೋಗಕ್ಕೆಂದು ಜಂಗು ಹತ್ತಿದ ಒಂದು ಸಣ್ಣ ಡಬ್ಬಿಯನ್ನು ಅಲ್ಲಿಯೇ ಪ್ರತ್ಯೇಕವಾಗಿ ಇಡಲಾಗಿತ್ತು.

ಅದನ್ನು ಯಾರೂ ಮುಟ್ಟುತ್ತಿರಲಿಲ್ಲ. ನನ್ನನ್ನು ಬಿಟ್ಟು ಯಾರೂ ಅದನ್ನು ತೊಳೆಯುತ್ತಿರಲಿಲ್ಲ. ಈ ಸಣ್ಣ ಡಬ್ಬದಲ್ಲಿ ಆ ನೀರು ಹನಿಸುವವನು ನನಗೆ ನೀರು ಸುರಿಯುತ್ತಿದ್ದ. ಆದರೆ ಅವನು ಇದ್ದರೆ ಮಾತ್ರ ನೀರು, ಇಲ್ಲದಿದ್ದರೆ ಇಲ್ಲ. ಈ ನೀರಿನ ಮನುಷ್ಯನಿಗೆ ನನಗೆ ನೀರು ಕೊಡುವುದು ಅವನಿಗೆ ಇಷ್ಟವಾದ ಕೆಲಸವಾಗಿರಲಿಲ್ಲ. ನಾನು ನೀರಿಗಾಗಿ ಬರುತ್ತಿರುವುದನ್ನು ಕಾಣುವುದೇ ತಡ ಅಲ್ಲಿಂದ ಹೇಗೊ ಜಾರಿಕೊಳ್ಳುತ್ತಿದ್ದ. ಅದರ ಪರಿಣಾಮವೆಂದರೆ, ನೀರಿಲ್ಲದೆ ನಾನು ಬಳಲುವುದು. ನೀರಿಲ್ಲದೆ ನಾನು ಬಳಲಿದ ದಿನಗಳ ಸಂಖ್ಯೆ ಸಣ್ಣದೇನಲ್ಲ.

ವಸತಿಯ ವಿಷಯಕ್ಕೂ ಇಂಥದೇ ತಾಪತ್ರಯಗಳನ್ನು ಅನುಭವಿಸಿದೆ. ಬೋರ್ಸಾಡದಲ್ಲಿ ನಾನು ಅಪರಿಚಿತ. ಒಬ್ಬ ಸವರ್ಣೀಯ ಹಿಂದುವೂ ನನಗೆ ಬಾಡಿಗೆಗೆ ಮನೆ ಕೊಡಲಿಲ್ಲ. ಆ ಊರಲ್ಲಿಯ ಅಸ್ಪೃಶ್ಯರೂ ಕೂಡ ಹಿಂದೂಗಳ ಅವಕೃಪೆಗೆ ಹೆದರಿ, ವಾಸ್ತವ್ಯ ಒದಗಿಸಲು ಮುಂದಾಗಲಿಲ್ಲ. ನನ್ನ ಹುದ್ದೆಗಿಂತಲೂ ಮೇಲ್ತರಗತಿಯದಾದ ಕಾರಕೂನನಂತೆ ನಾನು ಈ ಮೊದಲು ವರ್ತಿಸಿದ್ದು ಕಾರಕೂನನಿಗೆ ಹಿಡಿಸಿರಲಿಲ್ಲ. ಆಹಾರದ ವಿಷಯದಲ್ಲಂತೂ ಇನ್ನೂ ಹೆಚ್ಚಿನ ತೊಂದರೆಗಳನ್ನು ಅನುಭವಿಸಬೇಕಾಯಿತು. ನಾನು ಊಟಗಳಿಗಾಗಿ ಅವಲಂಬಿಸಲು ಒಂದು ಸ್ಥಳವಾಗಲೀ, ಒಬ್ಬ ವ್ಯಕ್ತಿಯಾಗಲೀ ಇರಲಿಲ್ಲ. ಮುಂಜಾನೆ ಮತ್ತು ಸಾಯಂಕಾಲ ಭಜಿ–ವಡಾಗಳನ್ನು ಕೊಂಡು ಗ್ರಾಮದ ಹೊರಗೆ ಏಕಾಂತ ಸ್ಥಳಕ್ಕೆ ಒಯ್ದು ತಿನ್ನುತ್ತಿದ್ದೆ. ಮಾಮಲೇದಾರರ ಆಫೀಸಿನ ಕೈಸಾಲೆಯ ಹಾಸುಗಲ್ಲುಗಳ ಮೇಲೆ ಮಲಗಿ ರಾತ್ರಿ ಕಳೆಯುತ್ತಿದ್ದೆ. ಈ ರೀತಿ ನಾಲ್ಕು ದಿನಗಳನ್ನು ಕಳೆದೆ. ಇದೆಲ್ಲ ನನಗೆ ಅಸಹನೀಯವೆನಿಸಿತು. ಅನಂತರ ನಾನು ನನ್ನ ಪೂರ್ವಜರ ಗ್ರಾಮ ಜೆಂತ್ರಾಲಿಗೆ ಹೋಗಿ ಇರಹತ್ತಿದೆ. ಬೋರ್ಸಾಡಾದಿಂದ ಇದು ಆರು ಮೈಲು ದೂರದಲ್ಲಿತ್ತು. ದಿನಂಪ್ರತಿ ನಾನು ಹನ್ನೊಂದು ಮೈಲಿ ನಡೆಯಬೇಕಾಗುತ್ತಿತ್ತು. ಒಂದೂವರೆ ತಿಂಗಳು ಹೀಗೆಯೆ ಮಾಡಿದೆ.

ಅನಂತರ ಮಾಮಲೇದಾರರು ಕೆಲಸ ಕಲಿಯಲು ತಲಾಟಿಯ ಬಳಿಗೆ ಕಳಿಸಿದರು. ಜೆಂತ್ರಾಲ, ಖಾಪುರ ಮತ್ತು ಸಾಯಿಜಪುರ– ಈ ಮೂರು ಗ್ರಾಮಗಳು ಆ ತಲಾಟಿಯ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಜೆಂತ್ರಾಲ ಗ್ರಾಮವು ಅವನ ಕೇಂದ್ರ ಕಾರ್ಯಸ್ಥಾನವಾಗಿತ್ತು. ಎರಡು ತಿಂಗಳುಗಳವರೆಗೆ ಈ ತಲಾಟಿಯೊಂದಿಗೆ ನಾನು ಜೆಂತ್ರಾಲ ಗ್ರಾಮದಲ್ಲಿದ್ದೆ. ಇವನು ನನಗೆ ಏನೂ ಕಲಿಸಲಿಲ್ಲ. ನಾನು ಒಮ್ಮೆಯೂ, ಆ ಗ್ರಾಮದ ಆಫೀಸನ್ನು ಪ್ರವೇಶಿಸಲಿಲ್ಲ. ಆ ಗ್ರಾಮದ ಮುಖ್ಯಸ್ಥನು ನನ್ನನ್ನು ಬಹಳಷ್ಟು ದ್ವೇಷಿಸುತ್ತಿದ್ದ. ಒಮ್ಮೆ ಅವನು ಹೀಗೆಂದ, “ಏ ಮನುಷ್ಯನೇ, ನಿನ್ನ ತಂದೆ ಮತ್ತು ಸಹೋದರ ಈ ಆಫೀಸಿನಲ್ಲಿ ಕಸಗುಡಿಸುವವರು. ಆದರೆ ನೀನು ನಮ್ಮ ಸರಿಜೋಡಿಯಾಗಿ ಆಫೀಸಿನಲ್ಲಿ ಕುಳಿತುಕೊಳ್ಳಬಯಸುವೆಯಾ? ಎಚ್ಚರದಿಂದಿರು. ನೀನು ಈ ಕೆಲಸ ಬಿಡುವುದೇ ನಿನಗೆ ಕ್ಷೇಮ.”

ಒಂದು ದಿನ ತಲಾಟಿಯು ಸೈಜಪುರ ಗ್ರಾಮದ ಜನಸಂಖ್ಯಾ ತಃಖ್ತೆಯನ್ನು ತಯಾರಿಸಲು ಕರೆಯಿಸಿದ. ಜಂತ್ರಾಲದಿಂದ ನಾನು ಸೈಜಪುರಕ್ಕೆ ಹೋದೆ. ಕಾರ್ಯಾಲಯದಲ್ಲಿ ಗ್ರಾಮ ಪ್ರಮುಖ ಮತ್ತು ತಲಾಟಿ ಇಬ್ಬರೂ ಸೇರಿ ಯಾವುದೋ ಕೆಲಸದಲ್ಲಿ ತೊಡಗಿದ್ದನ್ನು ನೋಡಿದೆ. ನಾನಲ್ಲಿಗೆ ಹೋಗಿ ಆಫೀಸಿನ ಬಾಗಿಲ ಹತ್ತಿರ ನಿಂತು ‘ಮುಂಜಾನೆಯ ವಂದನೆಗಳು’ ಎಂದು ಹೇಳಿದೆ. ಆದರೆ ಅವರು ಕಣ್ಣೆತ್ತಿಯೂ ಕೂಡ ನನ್ನನ್ನು ನೋಡಲಿಲ್ಲ. ಹದಿನೈದು ಮಿನಿಟುಗಳವರೆಗೆ ಅಲ್ಲಿಯೆ ಹಾಗೆಯೆ ನಿಂತೆ. ನನ್ನ ಬಗೆಗಿನ ಅಲಕ್ಷ್ಯ ಮತ್ತು ಅವಮಾನಕ್ಕೆ ನನ್ನ ಸಿಟ್ಟು ನೆತ್ತಿಗೇರಿತ್ತು. ನನಗೆ ಜೀವನವೇ ಬೇಸರವಾಗಿತ್ತು. ಅಲ್ಲಿಯೆ ಇದ್ದ ಖುರ್ಚಿ ಒಂದರ ಮೇಲೆ ಕುಳಿತೆ.

ನಾನು ಖುರ್ಚಿಯ ಮೇಲೆ ಕುಳಿತದ್ದು ನೋಡಿ ಗ್ರಾಮ ಪ್ರಮುಖ ಮತ್ತು ತಲಾಟಿಯು ನನಗೆ

ಏನನ್ನೂ ಹೇಳದೆ ಎದ್ದು ಹೊರಗೆ ಹೊರಟುಹೋದರು. ಸ್ವಲ್ಪ ಹೊತ್ತಿಗೆ ನಂತರ ಜನರು ಒಳಗೆ ಬರಲು ಪ್ರಾರಂಭಿಸಿದರು. ಕೂಡಲೇ ದೊಡ್ಡ ಜನಜಂಗುಳಿ ನನ್ನ ಸುತ್ತ ನೆರೆಯಿತು. ಈ ಜನಜಂಗುಳಿಯ ಮುಂದಾಳತ್ವ ವಹಿಸಿದವನು ಗ್ರಾಮ ವಾಚನಾಲಯದ ಗ್ರಂಥಪಾಲ. ಸುಶಿಕ್ಷಿತ ವ್ಯಕ್ತಿ ಗ್ರಂಥಪಾಲನು ಈ ಜನಜಂಗುಳಿಯ ನೇತೃತ್ವ ವಹಿಸಿದ್ದೇಕೆ ಎಂಬುದು ನನಗೆ ಕೂಡಲೇ ಹೊಳೆಯಲಿಲ್ಲ. ನಾನು ಕುಳಿತಿದ್ದ ಖುರ್ಚಿ ಗ್ರಂಥಪಾಲನದೆಂದು ನಂತರ ತಿಳಿಯಿತು. ಅವನು ಹೊಲಸು ಶಬ್ದಗಳಿಂದ ನನ್ನನ್ನು ತೆಗಳಲು ಸುರುವು ಮಾಡಿದ. ಅಲ್ಲಿದ್ದ ಗ್ರಾಮಸೇವಕನನ್ನು ಉದ್ದೇಶಿಸಿ, 'ಈ ಹೊಲಸು ಭಂಗೀ ನಾಯಿಯನ್ನು ನನ್ನ ಕುರ್ಚಿಯ ಮೇಲೆ ಕೂಡಲು ಹೇಳಿದವರಾರು?' ಎಂದು ಕೇಳಿದ. ಆ ಸೇವಕ ನನ್ನನ್ನು ಖುರ್ಚಿಯಿಂದ ಎಬ್ಬಿಸಿದನು ಮತ್ತು ಅದನ್ನು ತೆಗೆದುಕೊಂಡು ಹೋದ. ನಾನು ನೆಲದ ಮೇಲೆ ಕುಳಿತೆ. ಆಮೇಲೆ ಜನಜಂಗುಳಿಯು ಗ್ರಾಮದ ಆಫೀಸನ್ನು ಪ್ರವೇಶಿಸಿ ನನ್ನನ್ನು ಸುತ್ತುವರಿಯಿತು. ಆ ಜನಜಂಗುಳಿಯು ಹುಚ್ಚುಕೋಪದಿಂದ ಕೆರಳಿ ಕಿಡಿಕಾರುತ್ತಿತ್ತು. ಕೆಲವರು ನನ್ನನ್ನು ಸಿಕ್ಕಾಪಟ್ಟೆ ಬಯ್ಯುತ್ತಿದ್ದರು. ಮತ್ತೆ ಕೆಲವರು ಕುಡಗೋಲಿನಿಂದ (ಧರಿಯಾ ಎಂದು ಕರೆಯಲಾಗುವ ಹರಿತವಾದ ಖಡ್ಗದಂಥ ಉಪಕರಣ) ತುಂಡು ತುಂಡು ಮಾಡುವೆವೆಂದು ಹೆದರಿಸುತ್ತಿದ್ದರು. ನನ್ನ ಮೇಲೆ ಕರುಣೆದೋರಿ ಕ್ಷಮಿಸಲು ದೈನ್ಯದಿಂದ ಬೇಡಿಕೊಂಡೆ. ನನ್ನ ಮೊರೆಯ ಆ ಉದ್ರಿಕ್ತ ಜನಜಂಗುಳಿಯ ಮೇಲೆ ಏನೂ, ಎಷ್ಟೂ ಪರಿಣಾಮ ಬೀರಲಿಲ್ಲ. ನನ್ನನ್ನು ನಾನು ರಕ್ಷಿಸಿಕೊಳ್ಳುವುದು ಹೇಗೆಂಬುದು ತಿಳಿಯದಾಯಿತು. ಆದರೆ ನನ್ನ ಮೇಲೆ ಎರಗಿದ ದುರ್ವಿಧಿಯ ಬಗ್ಗೆ ಮಾಮಲೇದಾರರ ಗಮನಕ್ಕೆ ತಂದು, ಒಂದು ವೇಳೆ ಜನಜಂಗುಳಿಯಿಂದ ಹತನಾದರೆ ನನ್ನ ಹೆಣವನ್ನು ಏನು ಮಾಡಬೇಕು ಎಂಬುದನ್ನು ಬರೆದು ತಿಳಿಸುವ ವಿಚಾರ ನನ್ನ ಮನಸ್ಸಿನಲ್ಲಿ ಹೊಳೆಯಿತು. ನಾನು ಮಾಮಲೆದಾರರಿಗೆ ತಕರಾರು ಸಲ್ಲಿಸುತ್ತಿದೇನೆಂಬುದು ತಿಳಿದರೆ ಅವರು ನನಗೆ ಹೆಚ್ಚಿನ ತೊಂದರೆ ಉಂಟುಮಾಡಲಿಕ್ಕಿಲ್ಲವೆಂಬುದು ನನ್ನ ಆಶೆಯಾಗಿತ್ತು. ಅದಕ್ಕಾಗಿ ನಾನು ಸೇವಕನಿಗೆ ಒಂದು ತುಂಡು ಕಾಗದ ಕೊಡಲು ಕೇಳಿದೆ. ಅವನು ಕೊಟ್ಟ. ನನ್ನ ಪೆನ್ನಿನಿಂದ ಅದರ ಮೇಲೆ ಎಲ್ಲರಿಗೂ ಓದಲು ಬರುವಂತೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹೀಗೆ ಬರೆದೆ:

"ತಾಲೂಕು ಬೋರ್ಡ್ ಮಾಮಲತ್‌ದಾರರವರಿಗೆ

ಸರ್,

"ಪಾರಮಾರ ಕಾಲಿದಾಸ ಶಿವರಾಮನ ವಿನಮ್ರ ವಂದನೆಗಳನ್ನು ದಯಮಾಡಿ ಸ್ವೀಕರಿಸುವ ಕೃಪೆ ಮಾಡಬೇಕು. ಕ್ರೂರ ಸಾವಿನ ಕೈಯ್ಯಲ್ಲಿ ಸಿಕ್ಕುಕೊಂಡಿದ್ದೇನೆ ಎಂಬುದನ್ನು ನಮ್ರವಾಗಿ ತಿಳಿಸಬಯಸುತ್ತೇನೆ. ಒಂದು ವೇಳೆ ನನ್ನ ತಂದೆ ತಾಯಿಗಳ ಮಾತನ್ನು ಕೇಳಿದ್ದರೆ ನನಗೆ ಇಂಥ ದುಸ್ಥಿತಿ ಉಂಟಾಗುತ್ತಿರಲಿಲ್ಲವೇನೋ! ನನ್ನ ಸಾವಿನ ಸಂಗತಿಯನ್ನು ದಯಮಾಡಿ ನನ್ನ ತಂದೆತಾಯಿಗಳಿಗೆ ತಿಳಿಸುವ ಕೃಪೆ ಮಾಡಬೇಕೆಂದು ಕೇಳಿ ಕೊಳ್ಳುತ್ತಿದ್ದೇನೆ."

ಗ್ರಂಥಪಾಲನು ನಾನು ಬರೆದದ್ದನ್ನು ಓದಿದ ಕೂಡಲೇ ಅದನ್ನು ಹರಿದುಹಾಕಲು ಆಜ್ಞಾಪಿಸಿದ (ಹೇಳಿದ). ನಾನು ಹರಿದು ಹಾಕಿದೆ. ಅವರು ನನ್ನ ಮೇಲೆ ಅವಮಾನದ ಮಳೆಗರೆದರು. 'ನಾನು ನಿನ್ನನ್ನು ತಲಾಟಿಯೆಂದು ಕರೆಯಲು ಬಯಸುತ್ತೀಯಾ? ನೀನು ಹೇಳಿ ಕೇಳಿ ಭಂಗಿ. ಆಫೀಸಿನಲ್ಲಿ ಖುರ್ಚಿಯ ಮೇಲೆ ಕುಳಿತುಕೊಳ್ಳಲು ಇಚ್ಛಿಸುತ್ತೀಯಾ?' ಅವರು ಹಾಗೆಂದದ್ದಕ್ಕೆ, 'ನಾನು ಮತ್ತೆಂದೂ ಹಾಗೆ ಮಾಡಲಾರೆ. ಬೇಕಾದರೆ ನನ್ನ ತಲಾಟಿ ಕೆಲಸವನ್ನೇ ಬಿಟ್ಟುಬಿಡುತ್ತೇನೆ. ನನ್ನ ಮೇಲೆ ಕರುಣೆದೋರಿರಿ' ಎಂದು ಅಂಗಲಾಚಿ ಬೇಡಿಕೊಂಡೆ. ಸಾಯಂಕಾಲ ಏಳುಗಂಟೆಯವರೆಗೂ ಅಲ್ಲಿಯೆ ನನ್ನನ್ನು ಹಿಡಿದಿಟ್ಟಿದ್ದರು. ನಂತರ ಜನಜಂಗುಳಿ

ಕರಗಿತು. ಅಷ್ಟು ಹೊತ್ತಾದರೂ ಗ್ರಾಮ ಪ್ರಮುಖ ಮತ್ತು ತಲಾಟಿ ಇಬ್ಬರೂ ಇನ್ನೂ ತಿರುಗಿ ಬಂದಿರಲಿಲ್ಲ. ಆನಂತರ ನಾನು ೧೧ ದಿನಗಳ ರಜೆ ತೆಗೆದುಕೊಂಡು ಮುಂಬಯಿಯಲ್ಲಿಯ ನನ್ನ ತಂದೆತಾಯಿಗಳ ಬಳಿಗೆ ಹೋದೆ.

* * * * *

# ವಿಭಾಗ ಆರು
# ಇತರ ಟಿಪ್ಪಣಿಗಳು

# ವಿಭಾಗ ಆರು

# ಇತರ ಟಿಪ್ಪಣಿಗಳು

೧. ಬ್ರಿಟಿಷ್ ಭಾರತದ ಸಂವಿಧಾನ
೨. ಸಂಸತ್ತಿನ ಕಾರ್ಯಕಲಾಪಗಳ ಮೇಲಿನ ಟಿಪ್ಪಣಿಗಳು
೩. ಭಾರತದ ಇತಿಹಾಸದ ಮೇಲಿನ ಟಿಪ್ಪಣಿಗಳು
೪. ಮನು ಮತ್ತು ಶೂದ್ರರು
೫. ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆ
೬. ಹಿಂದೂಗಳೊಡನೆ
೭. ಆಶಾಭಂಗ (ಭ್ರಮನಿರಸನ)
೮. ರಾಜಕೀಯ ದಮನದ ಸಮಸ್ಯೆ
೯. ಯಾವುದು ಹೆಚ್ಚು ಕೆಟ್ಟದ್ದು? ಯಾವುದು ಅತಿ ಕೀಳು? ಗುಲಾಮಗಿರಿಯೋ? ಅಸ್ಪೃಶ್ಯತೆಯೋ?

# ೧
# ಬ್ರಿಟಿಷ್ ಭಾರತದ ಸಂವಿಧಾನ (ರಾಜ್ಯ ಘಟನೆ)

## ೧. ಪ್ರವೇಶ: ವಿಷಯದ ಇತಿ–ಮಿತಿಗಳು

ಬ್ರಿಟಿಷ್ ಇಂಡಿಯಾದ ಸಂವಿಧಾನವು ೧೯೧೯ರ ಭಾರತ ಸರಕಾರದ ಕಾಯಿದೆಯನ್ನು ಒಳಗೊಂಡಿದೆ. ಆದ್ದರಿಂದ ಭಾರತದ ಸಂವಿಧಾನದ ವಿದ್ಯಾರ್ಥಿಯು ಇಂಗ್ಲಿಷ್ ಸಂವಿಧಾನದ ವಿದ್ಯಾರ್ಥಿಯಂತೆ ಸಂವಿಧಾನವನ್ನು ಅನ್ವೇಷಿಸುವ ಅಗತ್ಯ ಇರುವುದಿಲ್ಲ. ಅವನ ಸ್ಥಿತಿಯು ಸ್ವಲ್ಪ ಹೆಚ್ಚೂಕಡಿಮೆ ಅಮೆರಿಕೆಯ ಸಂವಿಧಾನದ ವಿದ್ಯಾರ್ಥಿಯಂತೆಯೇ. ಅದು ಒಳಗೊಂಡ ಸೂತ್ರಗಳನ್ನು (Statutes) ತಿಳಿದುಕೊಳ್ಳುವುದು ಮತ್ತು ಅರ್ಥ ವಿವರಣೆ ಮಾಡುವುದಕ್ಕಿಂತ ದೊಡ್ಡ ಸಮಸ್ಯೆಯೇನಲ್ಲ. ಈ ದೃಷ್ಟಿಯಿಂದ, ಸಂವಿಧಾನಿಕ ಕಾಯಿದೆ ಅಂದರೇನು ಮತ್ತು ಇದರ ವ್ಯಾಪ್ತಿಯಲ್ಲಿ ಬರುವ ಪ್ರಶ್ನೆಗಳಾವುವು ಎಂಬ ಸಮಸ್ಯೆ ಎತ್ತುವುದು ಅನವಶ್ಯಕ ಎಂದು ತೋರುತ್ತದೆ. ಎರಡನೆಯದಾಗಿ, ಸಂವಿಧಾನಿಕ ಕಾಯಿದೆ ವಿಷಯದ ಇತಿಮಿತಿಗಳನ್ನು ಗೊತ್ತುಪಡಿಸುವ ಅವಶ್ಯಕತೆ ಇದೆ ಎಂದು ಭಾವಿಸಿ, ಇಂಥ ಅನ್ವೇಷಣೆಯು ಚಿಂತನದ ವಿಷಯದ ಪೀಠಿಕೆಯಾಗಿರಬೇಕೊ ಅಥವಾ ಅಂತ್ಯ ಭಾಗವಾಗಿರಬೇಕೊ ಎಂಬ ಪ್ರಶ್ನೆ ಏಳುತ್ತದೆ. ಕೀರ್ತಿಶೇಷ ಪ್ರೊ. ಮೇಟ್‌ಲ್ಯಾಂಡ್ ತನ್ನ ಬ್ರಿಟಿಷ್ ಸಂವಿಧಾನಿಕ ಚರಿತ್ರೆಯ ಅಧ್ಯಯನದಲ್ಲಿ ಎರಡನೇ ಮಾರ್ಗವನ್ನೇ ಅನುಸರಿಸಿದ್ದರೆ, ಇಂಥ ಮಾರ್ಗದ ಉಪಯುಕ್ತತೆಯ ಬಗೆಗೆ ಹೇಳಲು ಬೇಕಾದಷ್ಟಿದೆ. ಆದರೆ ಭಾರತೀಯ ಸಂವಿಧಾನದ ಅಧ್ಯಯನದಲ್ಲಿ ಇದು ಸೂಕ್ತವಾಗಲಾರದು ಎಂದು ಹೇಳಲಿಕ್ಕೂ ಕಾರಣಗಳಿಲ್ಲದಿಲ್ಲ.

ಸಂವಿಧಾನಿಕ ಕಾಯಿದೆ ಅಂದರೇನು ಎಂಬ ಪ್ರಶ್ನೆಯನ್ನು ಮೊದಲೇ ಎತ್ತಬೇಕಾದ ಕಾರಣವೆಂದರೆ ಈ ವಿಷಯದ ಇತಿ–ಮಿತಿಗಳು ಸ್ಪಷ್ಟವಾಗಿ ಗೊತ್ತಿರಬೇಕು ಮತ್ತು ಇದು ಒಳಗೊಳ್ಳುವ ಪ್ರಕರಣಗಳಾವುವು ಎಂಬುದು ಒಂದೆರಡು ಉದಾಹರಣೆಗಳಿಂದ ಸ್ಪಷ್ಟವಾಗಿ ತಿಳಿಯುವಂತಾಗಬೇಕು. ಹೇಬಿಯಸ್ ಕಾರ್ಪಸ್ (ಆಸಾಮಿ ಹಾಜರಿಯ) ಆಜ್ಞಾಪತ್ರ ಅಥವಾ ಮ್ಯಾಂಡೇಮಸ್ ಆಜ್ಞಾಪತ್ರ (ಮೇಲಿನ ನ್ಯಾಯಾಸ್ಥಾನದಿಂದ ಕೆಳಗಿನ ನ್ಯಾಯಾಸ್ಥಾನಕ್ಕೆ ಅಥವಾ ಅಧಿಕಾರಿಗೆ ಒಂದು ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವ ಬಗ್ಗೆ ಕಳುಹಿಸಿದ ಆಜ್ಞಾಪತ್ರ) ಅಥವಾ ಸರ್ಷಿಯೇರೇರೈ ಆಜ್ಞಾಪತ್ರ (ಕೆಳಕೋರ್ಟಿನಲ್ಲಿ ವಿಚಾರಣೆಯಾದ ಮೊಕದ್ದಮೆಯ ಕಾಗದ ಪತ್ರಗಳನ್ನು ಕಳುಹಿಸಬೇಕೆಂದು ಮೇಲುಕೋರ್ಟಿನವರು ಕೊಡುವ ಆಜ್ಞಾಪತ್ರ) ಇವುಗಳ ಬಗೆಗೆ ಇಂಡಿಯಾ ಸರಕಾರದ ಕಾನೂನು ಏನನ್ನೂ ಹೇಳುವುದಿಲ್ಲ. ಇದು ಸೈನಿಕ ಶಾಸನ ಅಥವಾ ಆಡಳಿತ ಸಂಬಂಧವಾದ ಶಾಸನದ ಬಗೆಗೂ ಏನನ್ನೂ ಹೇಳುವುದಿಲ್ಲ. ಭಾರತ ಸರಕಾರವು ತನ್ನ ಪ್ರಾಂತ್ಯಗಳೊಂದಿಗೆ ವ್ಯವಹರಿಸುವಾಗ (ಅವಶ್ಯವಿರುವ ಸಂದರ್ಭ ಸನ್ನಿವೇಶಗಳಲ್ಲಿ) ನಿಸ್ಸಂಶಯವಾಗಿ ತನ್ನ ಪರಮಾಧಿಕಾರ ಚಲಾಯಿಸಲೇಬೇಕಾಗುತ್ತದೆ. ಇಂಥ ಸಾರ್ವಭೌಮತ್ವ ಅಧಿಕಾರದ ಬಗೆಗೂ ಇಂಡಿಯಾ ಸರಕಾರದ ಕಾಯಿದೆಯು ಏನನ್ನೂ ಹೇಳುವುದಿಲ್ಲ. (ಸಂವಿಧಾನಿಕ ಕಾಯಿದೆ ಅಡಿಯಲ್ಲಿ) ಇಂಥ ಪ್ರಶ್ನೆಗಳನ್ನು

ಪರಿಶೀಲಿಸುವುದರ ಅಗತ್ಯವಿದೆಯೋ, ಇಲ್ಲವೊ? ಭಾರತೀಯ ಸಂವಿಧಾನಿಕ ಕಾಯಿದೆಯನ್ನು ಪರಿಶೀಲಿಸುವಾಗ ಇವು ಸೂಕ್ತವಾದ ವಿಷಯಗಳು ಹೌದೋ, ಅಲ್ಲವೋ? ಬೇರೆ ದೇಶಗಳಲ್ಲಿಯೂ ಸಂವಿಧಾನಿಕ ಕಾಯಿದೆಯನ್ನು ಕರತಲಾಮಲಕ ಮಾಡಿಕೊಂಡ ವಿದ್ವಾಂಸರು ಇದ್ದೇ ಇರುತ್ತಾರೆ. ಇಂಥ ಸಂದರ್ಭ, ಸನ್ನಿವೇಶಗಳಲ್ಲಿ ಅವರು ಹೇಗೆ ವ್ಯವಹರಿಸಿದರು ಎಂಬುದನ್ನು ಕೂಲಂಕಷವಾಗಿ ಗಮನಿಸುತ್ತಿರಬೇಕು. ಹೀಗೆ ಮಾಡಿದರೆ, ಸರ್ವರ ಸಮ್ಮತಿಯಿಂದ ಇಂಥ ವಿಷಯಗಳು ನಿಸ್ಸಂಶಯವಾಗಿ ಸಂವಿಧಾನಿಕ ಕಾಯಿದೆ ಕ್ಷೇತ್ರಕ್ಕೆ ಸಂಬಂಧಿಸಿದಂಥವು ಎಂದು ಪರಿಗಣಿಸಬೇಕು. ಆದ್ದರಿಂದ ಇಂಥ ವಿಷಯಗಳು ಇಂಡಿಯಾ ಸರಕಾರದ ಕಾಯಿದೆಯ ಅಡಿಯಲ್ಲಿ ಬರದಿದ್ದಾಗ್ಯೂ, ಸಂವಿಧಾನಿಕ ಕಾಯಿದೆಯ ಅಧ್ಯಯನದ ಅಂಗವಾಗಲೇಬೇಕು ಅಂದಾಗ ಈ ವಿಷಯವನ್ನು ಅರ್ಥೈಸುವ ಪ್ರಶ್ನೆ ಮಹತ್ವದ್ದೆನಿಸುತ್ತದೆ.

ಸಂವಿಧಾನಿಕ ಕಾಯಿದೆ ಅಂದರೇನು ಎಂಬ ಪ್ರಶ್ನೆಗೆ ವಿವಿಧ ವಿದ್ವಾಂಸರು (ಜನರು) ವಿವಿಧ ಉತ್ತರಗಳನ್ನು ಕೊಟ್ಟಿದ್ದಾರೆ. ಆಸ್ಟಿನ್ ಮತ್ತು ಮೇಟ್‌ಲ್ಯಾಂಡ್ ಇಬ್ಬರೂ ಎರಡು ಭಿನ್ನ ವಿಚಾರ ಧಾರೆಗಳನ್ನು ಪ್ರತಿನಿಧಿಸುತ್ತಾರೆ. ಆಸ್ಟಿನ್ ಸಾರ್ವಜನಿಕ ಕಾನೂನನ್ನು (ಪಬ್ಲಿಕ್ ಲಾ) ಅಥವಾ ಅವನೇ ಕರೆಯುವಂತೆ ರಾಜಕೀಯ ಸ್ಥಿತಿಗತಿಗಳ ಕಾನೂನನ್ನು (ಲಾ ಆಫ್ ಪೊಲಿಟಿಕಲ್ ಕಂಡೀಶನ್ಸ್), ಸಂವಿಧಾನಿಕ ಕಾಯಿದೆ ಮತ್ತು ಆಡಳಿತಾತ್ಮಕ ಕಾಯಿದೆ ಎಂದು ಎರಡು ವರ್ಗಗಳಲ್ಲಿ ವಿಭಾಗಿಸುತ್ತಾರೆ. ಅವರ ಪ್ರಕಾರ ಸಂವಿಧಾನಿಕ ಕಾಯಿದೆಯು ರಾಜ್ಯದಲ್ಲಿ ಸಾರ್ವಭೌಮ ಅಧಿಕಾರವನ್ನು ಹೊಂದಿದ ವ್ಯಕ್ತಿಗಳ್ಯಾರು, ಅಥವಾ ಇಂಥ ವಿಶೇಷಾಧಿಕಾರವುಳ್ಳ ವ್ಯಕ್ತಿಗಳನ್ನೊಳಗೊಂಡ ವರ್ಗಗಳಾವುವು ಎಂಬುದನ್ನು ನಿರ್ಧರಿಸುತ್ತದೆ. ಈ ವ್ಯಕ್ತಿಗಳು ರಾಜ್ಯದಲ್ಲಿ ಹೊಂದುವ ಸಾರ್ವಭೌಮತ್ವ ಅಧಿಕಾರದ ರೀತಿ ನೀತಿಗಳನ್ನು ಅರ್ಥೈಸುತ್ತಾರೆ. ಆಸ್ಟಿನ್ನನ ಸಂವಿಧಾನಿಕ ಕಾಯಿದೆಯ ವ್ಯಾಖ್ಯೆಯು ಮೇಲ್ನೋಟಕ್ಕೆ ಸ್ಪಷ್ಟವಾಗಿ ತೋರುವಂತೆ ಸಂವಿಧಾನವನ್ನು ಮತ್ತು ಸಾರ್ವಭೌಮ ಸಂಸ್ಥೆಯ ರಚನೆಯನ್ನು ನಿರ್ಧರಿಸಬಲ್ಲ ಆ ನಿಯಮಗಳನ್ನು ಮಾತ್ರ ಒಳಗೊಳ್ಳುತ್ತದೆ. ಸಾರ್ವಭೌಮ ಸಂಸ್ಥೆಯಿಂದ ಸಾರ್ವಭೌಮ ಅಧಿಕಾರದ ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ಅವನು ಸಂವಿಧಾನಿಕ ಕಾಯಿದೆಯಲ್ಲಿ ಸೇರಿಸುವುದಿಲ್ಲ. ಆಸ್ಟಿನ್ನನ ಸಂವಿಧಾನಿಕ ಕಾಯಿದೆಯ ವ್ಯಾಖ್ಯೆಯು ಅವನ ತತ್ವಗಳ ತರ್ಕವನ್ನು ಆಧರಿಸಿದರೆ ಮೇಟ್‌ಲ್ಯಾಂಡನು ಸಂವಿಧಾನಿಕ ಕಾಯಿದೆಯ ಇತಿಮಿತಿಗಳನ್ನು ನಿರ್ಧರಿಸುವುದನ್ನು ಅಂತಃಸಾಕ್ಷಿಗೆ ಸಂಬಂಧಿಸಿದ ವಿಷಯವನ್ನಾಗಿ ಮಾಡುತ್ತಾನೆ. ಮೇಟ್‌ಲ್ಯಾಂಡ್‌ನ ಪ್ರಕಾರ, ಸಂವಿಧಾನಿಕ ಕಾಯಿದೆಯು, ಸಾರ್ವಭೌಮ ಸಂಸ್ಥೆಯ ರಚನೆಗೆ ಆಧಾರವಾಗಿರುವ ನಿಯಮಗಳನ್ನು ಮಾತ್ರವಲ್ಲದೆ, ಪ್ರಿವ್ಹಿ ಕೌನ್ಸಿಲ್, ರಾಜ್ಯದ ಇಲಾಖೆಗಳು, ಸೆಕ್ರೆಟರಿ ಆಫ್ ಸ್ಟೇಟ್, ನ್ಯಾಯಾಧೀಶರು, ಶಾಂತಿಪಾಲಕ ನ್ಯಾಯಾಧಿಪತಿಗಳು, (ಜಸ್ಟೀಸ್ ಆಫ್ ದಿ ಪೀಸ್) ನಿರ್ಗತಿಕರ ಕಾನೂನು ರಕ್ಷಕರು (ಪೂರ್ ಲಾ ಗಾರ್ಡಿಯನ್ಸ್), ಆರೋಗ್ಯ ಮಂಡಳಿಗಳು ಮತ್ತು ಪೊಲೀಸರನ್ನು ಒಳಗೊಳ್ಳುತ್ತದೆ. ಇವು ಎರಡು ವಿಪರೀತ ವಿಧದ ದೃಷ್ಟಿಕೋನಗಳು. ಆಸ್ಟಿನ್ನನದು ಸಂಕುಚಿತವಾದದ್ದಾದರೆ, ಮೇಟ್‌ಲ್ಯಾಂಡ್‌ನದು ನಿಸ್ಸಂಶಯವಾಗಿ ಅತಿ–ವಿಶಾಲವಾದ ದೃಷ್ಟಿಕೋನ.

ಆದಾಗ್ಯೂ ಇವೆರಡರ ಮಧ್ಯೆ ಮಧ್ಯಮ ಮಾರ್ಗವೊಂದಿದೆ. ಅದನ್ನು ತನ್ನ ನ್ಯಾಯಶಾಸ್ತ್ರದಲ್ಲಿ ಅಭಿವ್ಯಕ್ತಗೊಳಿಸಿದ ಪ್ರೊ. ಹಾಲೆಂಡನ ದೃಷ್ಟಿಕೋನದಲ್ಲಿ ಕಾಣಬಹುದಾಗಿದೆ. ಹಕ್ಕು ಒಂದು ಶಕ್ತಿ. ಅದು ರಾಜ್ಯದ ಒಪ್ಪಿಗೆ ಮತ್ತು ನೆರವಿನೊಂದಿಗೆ, ಬೇರೆಯವರದೆ ವ್ಯವಹಾರದೊಂದಿಗೆ ನಿಯಂತ್ರಿಸುತ್ತಿರುವ ವ್ಯಕ್ತಿಯಲ್ಲಿ ನೆಲೆಸಿರುತ್ತದೆ. ಒಬ್ಬ ಪ್ರಜೆಯು ಇನ್ನೊಬ್ಬನಿಗೆ ಕೊಡಬಹುದಾದ ಹಕ್ಕುಗಳು ಖಾಸಗಿ ಕಾನೂನಿನ (Private law) ವಿಷಯದ ವಸ್ತುವೆನಿಸಿಕೊಳ್ಳುತ್ತದೆ. ಪ್ರಜೆಗಳಿಗೆ ವಿರುದ್ಧವಾಗಿ ರಾಜ್ಯವು ತನ್ನವೇ ಎಂದು

ಸಾಧಿಸುವ ಹಕ್ಕುಗಳು ಮತ್ತು ತನ್ನ ವಿರುದ್ಧವೇ ಬಳಸಿಕೊಳ್ಳಲು ಪ್ರಜೆಗಳಿಗೆ ಅವಕಾಶ ನೀಡುವ ಹಕ್ಕುಗಳು ಸಾರ್ವಜನಿಕ ಕಾನೂನಿನ (Public Law) ಅಂಶಗಳಾಗುತ್ತವೆ. ಸಂವಿಧಾನಿಕ ಕಾಯಿದೆಯು ನಿಸ್ಸಂಶಯವಾಗಿ ಸಾರ್ವಜನಿಕ ಕಾನೂನಿನ (ಪಬ್ಲಿಕ್ ಲಾ) ಅಂಗವೇ. ಎಲ್ಲಿಯವರೆಗೆ ಇದು ಹೀಗಿರುತ್ತದೋ ಅಲ್ಲಿಯವರೆಗೆ ಪ್ರಜೆಗಳ ವಿರುದ್ಧ ರಾಜ್ಯದ ಹಕ್ಕುಗಳ ಮತ್ತು ರಾಜ್ಯದ ವಿರುದ್ಧ ಪ್ರಜೆಗಳ ಹಕ್ಕುಗಳ ಬಗ್ಗೆ ಚರ್ಚಿಸಲೇಬೇಕು. ಆದರೆ ಸಂವಿಧಾನಿಕ ಕಾಯಿದೆಯು ಇದಕ್ಕಿಂತ ಹೆಚ್ಚಿನದನ್ನು ಒಳಗೊಳ್ಳುತ್ತದೆ. ಇದು ರಾಜ್ಯದ (ರಾಷ್ಟ್ರದ) ಸಂಘಟನೆಯನ್ನು ಒಳಗೊಳ್ಳಲೇಬೇಕು. ಏಕೆಂದರೆ, ರಾಷ್ಟ್ರವು (ರಾಜ್ಯವು) ಕಾಲ್ಪನಿಕ ವ್ಯಕ್ತಿಯ ಹಾಗೆ ದಂಡಿಸುವ, ಆಸ್ತಿ ಹೊಂದುವ, ಒಪ್ಪಂದ ಮಾಡಿಕೊಳ್ಳುವ ಹಕ್ಕುಗಳನ್ನು ಹೊಂದಿರುವುದಾಗಿ ಹೇಳಿಕೊಳ್ಳುತ್ತದೆ. ತನ್ನ ಮತ್ತು ಪ್ರಜೆಗಳ ಮಧ್ಯೆ ಮತ್ತು ಪ್ರಜೆಗಳಲ್ಲಿಯೇ ಹಕ್ಕು ಬಾಧ್ಯತೆಗಳನ್ನು ನಿಯಂತ್ರಿಸುತ್ತದೆ. ಈ ಕಾಲ್ಪನಿಕ ವ್ಯಕ್ತಿಯು ಹೇಗೆ ಸಂಯೋಜಿಸಲ್ಪಡುತ್ತಾನೆ ಎಂಬುದನ್ನು ಪರಿಶೀಲಿಸುವ ಅವಶ್ಯಕತೆ ಇದೆ. ಆದ್ದರಿಂದ ಸಂವಿಧಾನಿಕ ಕಾಯಿದೆಯ ಅಧ್ಯಯನವು ಮೂರು ವಿಷಯಗಳನ್ನು ಒಳಗೊಳ್ಳಲೇಬೇಕು. ಅವು ಯಾವುವೆಂದರೆ; (೧) ರಾಷ್ಟ್ರದ (ರಾಜ್ಯದ) ಸಂಘಟನೆ, (೨) ಪ್ರಜೆಗಳ ವಿರುದ್ಧ ರಾಜ್ಯದ (ರಾಷ್ಟ್ರದ) ಹಕ್ಕುಗಳು ಮತ್ತು (೩) ರಾಷ್ಟ್ರದ (ರಾಜ್ಯದ) ವಿರುದ್ಧ ಪ್ರಜೆಗಳ ಹಕ್ಕುಗಳು. ಇಂಡಿಯಾ ಸರಕಾರದ ಕಾನೂನಿಗೆ ಸಂಬಂಧಿಸಿದಂತೆ ಸಂವಿಧಾನಿಕ ಕಾಯಿದೆಯ ಇತಿ–ಮಿತಿಗಳ ಮತ್ತು ವ್ಯಾಪ್ತಿಯ ದೃಷ್ಟಿಕೋನವನ್ನು ನನ್ನ ಈ ಉಪನ್ಯಾಸಗಳಲ್ಲಿ ಅನುಸರಿಸುವ ಉದ್ದೇಶ ಹೊಂದಿದ್ದೇನೆ. ಇಂಥದೇ ದೃಷ್ಟಿಕೋನವನ್ನು ಪ್ರೊ. ಆ್ಯನ್‌ಸನ್‌ರು ತಮ್ಮ ಬ್ರಿಟಿಷ್ ಸಂವಿಧಾನದ ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಶ್ನೆಯು ಉದ್ಭವಿಸುವ ಸಾಧ್ಯತೆ ಇರುವುದರಿಂದ ಅದಕ್ಕೆ ತಕ್ಕ (ಸೂಕ್ತ ಉತ್ತರ ನೀಡಿ) ಮಂಗಳ ಹಾಡುವುದು ಸೂಕ್ತ. ವಿಷಯ ನಿರೂಪಣೆಯು ಚಾರಿತ್ರಿಕವಾಗಿರಬೇಕೋ, ಅಥವಾ ವರ್ಣನಾತ್ಮಕ ವಾಗಿರಬೇಕೋ? ಎಂಬುದೇ ಆ ಪ್ರಶ್ನೆ. ಇಂಡಿಯಾ ಸರಕಾರದ ಕಾನೂನಿನ ಅಧ್ಯಯನದಲ್ಲಿ ಸ್ವಲ್ಪ ಪ್ರಮಾಣದಲ್ಲಿಯೆ ಆಗಲಿ, ಚರಿತ್ರೆಯ ಅಂಶವನ್ನು ಬಿಡಲಿಕ್ಕೆ ಸಾಧ್ಯವೇ ಇಲ್ಲ. ಇಂಡಿಯಾ ಸರಕಾರದ ಕಾನೂನಿನ ಹೇಳಿಕೆಯ ಪ್ರಕಾರ ಈಸ್ಟ್ ಇಂಡಿಯಾ ಕಂಪನಿಗೆ ಒದಗಿದ ಪರಿಹಾರಗಳೇ ರಾಜ್ಯದ (ರಾಷ್ಟ್ರದ) ಕಾರ್ಯದರ್ಶಿಗೂ (ಸೆಕ್ರೆಟರಿ ಆಫ್ ದಿ ಸ್ಟೇಟ್) ಒದಗುತ್ತವೆ. ಅಲ್ಲದೆ, ಇಂಡಿಯಾ ಸರಕಾರದ ಕಾನೂನಿನ ಪ್ರಕಾರ ಮಹಾಪ್ರಭುಗಳು ಉಚ್ಚನ್ಯಾಯಾಲಯಗಳನ್ನು ಸ್ಥಾಪಿಸಬಹುದು. ಆದೇಶಾನುಸಾರವಾಗಿ ಉಚ್ಚ ನ್ಯಾಯಾಲಯವು ರದ್ದುಗೊಳಿಸಲಾದ ಸರ್ವೋಚ್ಚ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರುತ್ತದೆ. ಇಂಡಿಯಾ ಸರಕಾರದ ಕಾನೂನಿನಲ್ಲಿಯ ಬೇರೆ ಕೆಲವು ಕಲಮುಗಳನ್ನೂ ಅನ್ವಯಿಸಬಹುದು. ಚರಿತ್ರೆಯನ್ನು ಸಂಪೂರ್ಣವಾಗಿ ತಳ್ಳಿಹಾಕಲು ಬರುವುದಿಲ್ಲವೆನ್ನುವುದಕ್ಕೆ ಮೇಲಿನ ಎರಡು ಉದಾಹರಣೆಗಳು ಸಾಕಾಗುತ್ತವೆ. ಏಕೆಂದರೆ ಇಂಡಿಯಾ ಸಂವಿಧಾನದೊಂದಿಗೆ ವ್ಯವಹರಿಸುವಾಗ ರಾಷ್ಟ್ರದ ಕಾರ್ಯದರ್ಶಿಯ ವಿರುದ್ಧ ಇರುವ ಪರಿಹಾರಗಳ ಬಗ್ಗೆ ತಿಳಿದುಕೊಳ್ಳಲು, ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಪ್ರಜೆಗಳಿಗೆ ಯಾವ ಪರಿಹಾರಗಳನ್ನು ಮುಕ್ತವಾಗಿ ಒದಗಿಸಲಾಗಿತ್ತು ಎಂಬುದನ್ನು ಪರಿಶೀಲಿಸಲೇಬೇಕಾಗುತ್ತದೆ. ಮೊದಲ ಸರ್ವೋಚ್ಚ ನ್ಯಾಯಾಲಯವು ಹೊಂದಿದ್ದ ಅಧಿಕಾರಗಳ ಬಗ್ಗೆ ಪರಿಶೀಲಿಸದೆ ಉಚ್ಚ ನ್ಯಾಯಾಲಯದ ಅಧಿಕಾರಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ. (ಆದ್ದರಿಂದ) ಸ್ವಲ್ಪಮಟ್ಟಿನ ಚಾರಿತ್ರಿಕ ದೃಷ್ಟಿಕೋನ ಅವಶ್ಯವೆನಿಸಿದರೂ, ಸದ್ಯ ಕಾರ್ಯಾಚರಣೆಯಲ್ಲಿರುವ ಸಂವಿಧಾನಿಕ ಕಾಯಿದೆಯ ಪ್ರತಿಯೊಂದು ಅಂಶವನ್ನೂ ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವುದು ನ್ಯಾಯಸಮ್ಮತವೆನಿಸದು. ಭೂತಕಾಲವೆಲ್ಲ ವರ್ತಮಾನದಲ್ಲಿ ಗಣನೀಯವಾದದ್ದಲ್ಲ. ವರ್ತಮಾನದ ಯಾವುದಾದರೊಂದು ಸಂಗತಿಯನ್ನು ಮಾತ್ರ

ಚಾರಿತ್ರಿಕವಾಗಿ ಗಮನಿಸಬೇಕಾಗುತ್ತದೆ, ಎಲ್ಲವನ್ನೂ ಅಲ್ಲ. ಯಾವಾಗ, ಯಾವುದೇ ಪ್ರಶ್ನೆಯ ಸರಿಯಾದ ತಿಳುವಳಿಕೆಗೆ ಚಾರಿತ್ರಿಕ ದೃಷ್ಟಿಕೋನ ಅವಶ್ಯವೆನಿಸುತ್ತದೋ ಆಗ ಮಾತ್ರ ನಾನು ಹೀಗೆ ಮಾಡುವ ಉದ್ದೇಶ ಹೊಂದಿದ್ದೇನೆ.

(ಈ ವಿಷಯದ ಮೇಲೆ ಬೇರಾವ ಲೇಖನವೂ ನಮಗೆ ಲಭ್ಯವಾಗಿಲ್ಲ –ಸಂ.)

* * *

# ೨
# ಸಂಸತ್ತಿನ ಕಾರ್ಯಕಲಾಪಗಳ ಮೇಲಿನ ಟಿಪ್ಪಣಿಗಳು

ಸಂಸತ್ತಿನ (ಪಾರ್ಲಿಮೆಂಟಿನ) ಕಾರ್ಯಕಲಾಪಗಳ (ವಿಧಿವಿಧಾನಗಳ) ರೂಪಗಳು ಅದರ ಕಾರ್ಯಗಳಿಂದ ನಿರ್ಧರಿತವಾಗುತ್ತವೆ.

*ಸಂಸತ್ತಿನ ಮಹತ್ವದ ಕಾರ್ಯಗಳು ಇಂತಿವೆ:*

೧. ಕಾರ್ಯಾಂಗದ ಯಾವುದೇ ಕಾರ್ಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಮತ್ತು ಟೀಕೆ ಟಿಪ್ಪಣಿ ಮಾಡುವ ಅಧಿಕಾರ.

೨. ಕಾನೂನುಗಳನ್ನು ರಚಿಸುವ ಅಧಿಕಾರ.

೩. ಆಡಳಿತ ನಡೆಸುವುದಕ್ಕೆ ಅವಶ್ಯವಿರುವ ಹಣ ಒದಗಿಸುವ ಅಧಿಕಾರ.

I. ಕಾರ್ಯಾಂಗವು ಕೈಗೊಂಡ ಯಾವುದೇ ಕಾರ್ಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಅಥವಾ ಟೀಕೆ ಮಾಡುವ ಅಧಿಕಾರ. ಕಾರ್ಯಕಲಾಪದ ನಿಯಮಗಳು ಪರವಾನಗಿ ಕೊಡುವ ವಿಷಯಗಳು:

೧. ಪ್ರಶ್ನೆಗಳನ್ನು ಕೇಳಲು.

೨. ಗೊತ್ತುವಳಿಗಳನ್ನು ಮಂಡಿಸಲು.

೩. ಸದನದ ಕಾರ್ಯಕಲಾಪಗಳನ್ನು ಮುಂದೂಡಲು ಮಂಡನೆ.

೪. ಸರಕಾರದಲ್ಲಿ ವಿಶ್ವಾಸಮತ ಕೇಳುವ ಗೊತ್ತುವಳಿ ಮಂಡಿಸಲು.

I. **ಪ್ರಶ್ನೆಗಳನ್ನು ಕೇಳುವ ಅಧಿಕಾರ**

**ನಿಯಮ ಏಳು**

(ಇದು ಕೆಳಗಿನ) ನಿಬಂಧನೆಗಳಿಗೆ ಒಳಪಟ್ಟು

## ಕಾರ್ಯ ಕಲಾಪದ ವ್ಯವಸ್ಥೆ

I. ಆದ್ಯತೆಗೆ ಅನುಸಾರವಾಗಿ

೧. ಪ್ರಶ್ನೆಗಳು ಒಂದು ಗಂಟೆ: ಅರ್ಧ ಗಂಟೆ ಬೇಡಿಕೆಗಳ ಮೇಲೆ ಮತ ಚಲಾವಣೆ.

೨. ಮಸೂದೆಗಳು

೩. ಸ್ಥಾಯಿ ಬೇಡಿಕೆಗಳ ತಿದ್ದುಪಡಿಗಳ ಬಗೆಗೆ ನಿಲುವಳಿ ಮಂಡನೆಗಳು.

೪. ಗೊತ್ತುವಳಿಗಳು

ಅಧ್ಯಕ್ಷರು ಯಾವುದೇ ವಿಷಯಕ್ಕೆ ಆದ್ಯತೆ ಕೊಡಬಹುದು.

II. ಮಸೂದೆಗಳ, ಮಂಡನೆ ಮತ್ತು ಠರಾವುಗಳ ಬಗೆಗೆ ಆದ್ಯತೆ

(i) **ಮಸೂದೆಗಳು ಮತ್ತು ನಿಲುವಳಿ ಮಂಡನೆಗಳು**

ಕಡಿಮೆ ಮುಂದುವರಿದವುಗಳಿಗಿಂತ ಹೆಚ್ಚು ಮುಂದುವರಿದವುಗಳಿಗೆ ಆದ್ಯತೆ.

(ii)**ಗೊತ್ತುವಳಿಗಳು**

ಮತದಾನದಿಂದ ಆದ್ಯತೆಯನ್ನು ನಿರ್ಧರಿಸುವುದು.

## ಕೋರಂ

ಮುಂಬಯಿಯಲ್ಲಿ ೨೫ ಸದಸ್ಯರು

ಕೋರಂ ಇರದಿದ್ದರೆ, ಅಧ್ಯಕ್ಷನು ಮರುದಿನಕ್ಕೆ ಮುಂದೂಡತಕ್ಕದ್ದು.

**೨೭ನೇ ನಿಯಮ:** ಬಜೆಟ್‌ನ್ನು (ಕೇಂದ್ರ ಮುಂಗಡಪತ್ರವನ್ನು) ಎರಡು ಹಂತಗಳಲ್ಲಿ ಪರಿಶೀಲನೆಗೆ ಒಳಪಡಿಸಲಾಗುತ್ತದೆ.

(i) ಸಾಮಾನ್ಯ ಚರ್ಚೆ ಮತ್ತು

(ii) ಅನುದಾನ ಬೇಡಿಕೆಗಳ ಮೇಲೆ ಮತ ನೀಡಿಕೆ.

ಗವರ್ನರ್ ತನಗೆ ಸರಿಕಂಡಷ್ಟು ದಿನಗಳನ್ನು ಸಾಮಾನ್ಯ ಚರ್ಚೆಗೆ ಒದಗಿಸಬಹುದು.

ಬಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆ ನಡೆದ ವೇಳೆಯಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸುವುದನ್ನಾಗಲೀ, ಬಜೆಟ್ಟನ್ನು ಮತಕ್ಕೆ ಹಾಕುವುದನ್ನಾಗಲೀ ಮಾಡಲು ಬರುವಂತಿಲ್ಲ.

**೨೯ನೇ ನಿಯಮ. ಅನುದಾನ ಬೇಡಿಕೆಗಳ ಮೇಲೆ ಮತ ನೀಡಿಕೆ**

ಬೇಡಿಕೆಗಳ ಮೇಲಿನ ಮತ ನೀಡಿಕೆಗೆ ಹನ್ನೆರಡು ದಿನಗಳಿಗಿಂತಲೂ ಹೆಚ್ಚು ಕಾಲವನ್ನು ಗವರ್ನರ್ ವಿಧಿಸಿ ಕೊಡಲಾರ. ಯಾವುದೇ ಬೇಡಿಕೆಗೂ ಎರಡು ದಿನಗಳಿಗಿಂತ ಹೆಚ್ಚು ಸಮಯವನ್ನು ಒದಗಿಸಲಾರ. ಸಭಾಧ್ಯಕ್ಷನು ಬೇಡಿಕೆಗಳನ್ನು ಅನುಮೋದಿಸಲು ನಿಗದಿಪಡಿಸಿದ ಕೊನೆಯ ದಿನಗಳೊಳಗಾಗಿ ಅನುದಾನಕ್ಕೆ ಸಂಬಂಧಿಸಿದ ಎಲ್ಲ ಬೇಡಿಕೆಗಳನ್ನು ಪರಿಶೀಲಿಸಬೇಕಾಗುವುದು.

**೩೦ನೇ ನಿಯಮ:**

ಗವರ್ನರ್ ಶಿಫಾರಸು ಇಲ್ಲದೆಯೆ ಕೌನ್ಸಿಲ್ಲಿನ ಗಮನಕ್ಕೆ ಮಾತ್ರ ತಂದು ವಿನಿಯೋಗ ವಿಧೇಯಕಕ್ಕೆ ಯಾವುದೇ ನಿಲುವಳಿ ಮಂಡನೆ ಮಾಡಲು ಬರುವುದಿಲ್ಲ. ಅನುದಾನವನ್ನು ಕಡಿತಗೊಳಿಸುವ ಅಥವಾ ಯಾವುದೇ ಬಾಬನ್ನು ಕೈಬಿಡುವ ನಿಲುವಳಿಯನ್ನು ಮಂಡಿಸಲು ಸಾಧ್ಯ. ಆದರೆ ಅನುದಾನದ ವಿನಿಯೋಗವನ್ನು ಹೆಚ್ಚಿಸಲು ಅಥವಾ ಬದಲಿಸಲು ಬರುವಂತಿಲ್ಲ.

**೩೧ನೆಯ ನಿಯಮ:** ಮಿತಿ ಮೀರಿದ ಅನುದಾನಗಳು

(ಲೇಖಕರು ಈ ಬಗ್ಗೆ ಏನೂ ಬರೆದಿಲ್ಲ –ಸಂ)

**೩೨ನೆಯ ನಿಯಮ:** ಪೂರಕ ಅಥವಾ ಹೆಚ್ಚುವರಿ ಅನುದಾನ

ಹಣವು ಕಡಿಮೆ ಬೀಳುವಾಗ.

ಅಗತ್ಯ ಉದ್ಭವಿಸಿದಾಗ ಹೊಸ ಮೂಲದ (ಆಕರದ) ಅವಕಾಶ ಕಲ್ಪಿಸುವುದು.

**ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ**

**೩೩ನೆಯ ನಿಯಮ.** ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯನ್ನು ರಚಿಸುವುದು.

ಈ ಬಗ್ಗೆ ಲೇಖಕರು ಬರೆಯದೆ ಬಿಟ್ಟಿದ್ದಾರೆ. (ಬರೆದಿಲ್ಲ)

**೩೪ನೆಯ ನಿಯಮ.** ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಕರ್ತವ್ಯಗಳು:

೧. ಸಾರ್ವಜನಿಕ ಹಣವನ್ನು ಬೇಡಿಕೆಗೆ ಅನುಗುಣವಾಗಿ ವೆಚ್ಚ ಮಾಡಲಾಗಿದೆಯೇ ಇಲ್ಲವೋ ಎಂಬುದನ್ನು ಖಾತ್ರಿ ಮಾಡಿಕೊಳ್ಳುವುದು ಮತ್ತು ಅದನ್ನು ಸದನದ ಗಮನಕ್ಕೆ ತರುವುದು.

**ಕಾರ್ಯಕಲಾಪಗಳನ್ನು ನಡೆಸುವಿಕೆ**

ಇದು ಸ್ಥಾಯಿ ಆಜ್ಞೆಗಳಿಂದ ನಿಯಂತ್ರಿತವಾಗಿರುತ್ತದೆ.

**I. ಕೌನ್ಸಿಲ್ (ಪರಿಷತ್ತಿನ) ಅಧಿವೇಶನ**

೧. ಗವರ್ನರ್ ಅವರ ಪ್ರಕಟನೆಯ ಮೂಲಕ ಗೊತ್ತುಪಡಿಸಿದ ವೇಳೆ ಮತ್ತು ದಿನದಂದು ಕೌನ್ಸಿಲ್ ಅಧಿವೇಶನ ಜರುಗುತ್ತದೆ.

೨. ಗವರ್ನರ್‌ರವರ ಆಜ್ಞೆಯಿಂದ ಅಧಿವೇಶನವನ್ನು ಮುಂದಕ್ಕೆ ಹಾಕಲಾಗುತ್ತದೆ.

೩. ಕೌನ್ಸಿಲ್ ಅಧಿವೇಶನವು ಅಧ್ಯಕ್ಷರ ನಿರ್ದೇಶನದಂತೆ ನಿಗದಿತ ವೇಳೆ ಮತ್ತು ದಿನದಂದು ಸೇರುತ್ತದೆ.

**ಅಧಿವೇಶನವನ್ನು ಮುಕ್ತಾಯಗೊಳಿಸುವಿಕೆಯ ಪರಿಣಾಮ**

ಅಧಿವೇಶನವನ್ನು ಮುಕ್ತಾಯಗೊಳಿಸುವುದರಿಂದ ಇತ್ಯರ್ಥವಾಗದೆ ಉಳಿದ ಎಲ್ಲ ಸೂಚನ ಪತ್ರಗಳು ರದ್ದಾಗಿ ಹೋಗುತ್ತವೆ. ಮುಂದಿನ ಅಧಿವೇಶನಕ್ಕೆ ಹೊಸದಾಗಿ ಸೂಚನ ಪತ್ರಗಳನ್ನು ಕೊಡಲೇಬೇಕಾಗುತ್ತದೆ. ಆದರೆ ಇದಕ್ಕೆ ಕೆಲವೊಂದು ಪ್ರಕರಣಗಳು ಅಪವಾದವೆನಿಸಿವೆ. ಆದರೆ ಇವು ರದ್ದಾಗದೆ ಮುಂದಿನ ಅಧಿವೇಶನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿ ಮುಂದುವರಿಯುತ್ತವೆ. ಅಂಥವು ಈ ಕೆಳಕಂಡಂತಿವೆ:

೧. ಪ್ರಶ್ನೆ.

೨. ಶಾಸನ ಪರಿನಿಯಮ ನಿಲುವಳಿ ಮಂಡನೆಗಳು.

೩. ಮಂಡಿಸಲಾದ ಮಸೂದೆಗಳು.

೪. ಆಯ್ಕೆ ಸಮಿತಿಯ ಮುಂದೆ ಬಂದ ಸ್ಥಾಯೀ ಆಜ್ಞೆಗಳ ತಿದ್ದುಪಡಿಗೆ ಸಂಬಂಧಿಸಿದ ನಿಲುವಳಿ ಸೂಚನೆಗಳು.

**ವಿಧಿವಿಧಾನ**

ಕೆಳಗಿನವುಗಳಿಗೆ ಸಂಬಂಧಿಸಿದಂತೆ

**I. ಪ್ರಶ್ನೆ**

ಅಧ್ಯಕ್ಷನು ತನ್ನ ವಿವೇಚನೆಗೆ ಒಳಪಡಿಸಿ ನಿರ್ಧರಿಸಿದಂತೆ ಕೇಳಲಾದ ಪ್ರಶ್ನೆಗೆ ಉತ್ತರ ಕೊಡಲಾಗುತ್ತದೆ.

**II. ಮುಂದೂಡುವಿಕೆಯ ನಿಲುವಳಿ ಮಂಡನೆ**

೩೦ ಸದಸ್ಯರು ಬೆಂಬಲ ಸೂಚಿಸಬೇಕು.

ಸಾಯಂಕಾಲ ನಾಲ್ಕು ಗಂಟೆಗೆ ನಿಲುವಳಿ ಮಂಡನೆಯ ಮೇಲೆ ಚರ್ಚೆ ಪ್ರಾರಂಭ. ಸಾಯಂಕಾಲ ಆರು ಗಂಟೆಗೆ ಚರ್ಚೆ ಮುಕ್ತಾಯವಾಗಲೇಬೇಕು. ಆನಂತರ ನಿಲುವಳಿ ಮಂಡನೆಗೆ ಸಂಬಂಧಿಸಿದ ಪ್ರಶ್ನೆಗೆ ಅವಕಾಶವಿಲ್ಲ.

**III. ಮಸೂದೆಗಳು**

**(1) ನಾಲ್ಕು ಹಂತಗಳು**

೧. ಮಸೂದೆಯ ಮಂಡನೆ, ನಂತರ ಅಧಿವೇಶನವನ್ನು ಮುಂದೂಡಲು ಕೇಳಿಕೊಳ್ಳಲಾಗುತ್ತದೆ.

೨. ಪ್ರಥಮ ವಾಚನ.

೩. ದ್ವಿತೀಯ ವಾಚನ.

೪. ತೃತೀಯ ವಾಚನ.

1. ಆಸ್ಟ್ರೇಲಿಯಾದ ಸಂವಿಧಾನ ೪೯ನೆಯ ಕಲಮು
2. ಕೆನಡಾದ ಸಂವಿಧಾನ ೧೮ನೆಯ ಕಲಮು
3. ದಕ್ಷಿಣ ಆಫ್ರಿಕಾದ ಸಂವಿಧಾನ ೫೭ನೆಯ ಕಲಮು

ಭಾರತ ಸರಕಾರದ ಕಾಯಿದೆಯಲ್ಲಿ ಶಾಸಕಾಂಗಕ್ಕೆ ವಿಶೇಷ ಅಧಿಕಾರವನ್ನು ಕೊಡುವ ಯಾವ ವಿಧಿಯೂ ಇಲ್ಲ.

ಆದರೂ ಶಾಸಕಾಂಗದ ಸದಸ್ಯರಿಗೆ ಎರಡು ವಿಶೇಷ ಅಧಿಕಾರಗಳನ್ನು ಮಾತ್ರ ಕೊಟ್ಟಿದೆ.

**I. ಭಾಷಣ ಸ್ವಾತಂತ್ರ್ಯ (ವಾಕ್ ಸ್ವಾತಂತ್ರ್ಯ)**

೬೭ (೭)ನೆಯ ಕಲಮು

ಭಾರತದ ಉಭಯ ಸದನಗಳ ಸದಸ್ಯರಿಗೆ ಭಾಷಣ (ವಾಕ್) ಸ್ವಾತಂತ್ರ್ಯವಿರುತ್ತದೆ. ಉಭಯ ಸದನಗಳಲ್ಲಿ ಯಾವುದೇ ಸದಸ್ಯನು ಕೊಟ್ಟ ಹೇಳಿಕೆ ಅಥವಾ ನೀಡಿದ ಮತಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಬರುವುದಿಲ್ಲ. ಸಂಸತ್ತಿನ ವರದಿ; ಪ್ರಕಟಣೆಗಳು, ಕಾರ್ಯಕಲಾಪಗಳನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಲು ಬರುವಂತಿಲ್ಲ.

೭೨ಡಿ (೭)ನೆಯ ಕಲಮು (Sec. 72 D (7))

ಗವರ್ನರನ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಭಾಷಣ ಸ್ವಾತಂತ್ರ್ಯವಿರುತ್ತದೆ. ಇಂಥ ಕೌನ್ಸಿಲ್ಲಿನಲ್ಲಿ ಅದರ ಯಾವುದೇ ಸದಸ್ಯನು ಕೊಟ್ಟ ಹೇಳಿಕೆ ಅಥವಾ ನೀಡಿದ ಮತಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಬರುವಂತಿಲ್ಲ. ಅಂಥ ಕೌನ್ಸಿಲ್ಲಿನ ವರದಿ, ಪ್ರಕಟಣೆಗಳು ಮತ್ತು ಕಾರ್ಯಕಲಾಪಗಳನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಲು ಅವಕಾಶವಿಲ್ಲ.

ಭಾಷಣ (ವಾಕ್) ಸ್ವಾತಂತ್ರ್ಯದ ಈ ವಿಶೇಷ ಸೌಲಭ್ಯವು ಎರಡು ನಿರ್ಬಂಧನೆಗಳಿಗೆ ಅಧೀನವಾಗಿದೆ.

(೧) ಸ್ಥಾಯಿ ಆದೇಶಗಳು.
(೨) ಅಧಿಕೃತ ವರದಿ.

**II. ಬಂಧನಕ್ಕೆ ಒಳಗಾಗದ ಸ್ವಾತಂತ್ರ್ಯ**

ಈ ವಿಶೇಷ ಸೌಲಭ್ಯವು ಭಾರತ ಸರಕಾರದ ಕಾಯಿದೆಯಿಂದ ಕೊಡಮಾಡಿದ್ದಲ್ಲ. ಇದು ಭಾರತೀಯ ಶಾಸಕಾಂಗದಿಂದ ರಚಿತವಾದ ಶಾಸನದ ಕೊಡುಗೆ. ಇದನ್ನು ೧೯೨೫ರ ಶಾಸನಸಭಾ ಸದಸ್ಯರ ಕಾನೂನು ಎಂದು ಕರೆಯಲಾಗಿದೆ. (೧೯೨೫ರ ನಂ. ೨೩)

**ಈ ಕಾನೂನಿನ ಅಡಿಯಲ್ಲಿ**

೧. ಭಾರತ ಸರಕಾರದ ಕಾಯಿದೆ ಅಡಿಯಲ್ಲಿ ರಚಿತವಾದ ಶಾಸನ ಸಭೆಗಳ ಸದಸ್ಯರಿಗೆ ನ್ಯಾಯದರ್ಶಿಗಳ ಅಥವಾ ಕರನಿರ್ಧಾರಕರ ಸೇವೆಗಳನ್ನು ಸಲ್ಲಿಸುವುದು ಬಂಧನಕಾರಿಯಲ್ಲ.

೨. ದಿವಾಣಿ ಆದೇಶಿಕೆಯಂತೆ ಯಾವುದೇ ಶಾಸಕನನ್ನು ಬಂಧಿಸಲು ಅಥವಾ ಜೈಲಿನಲ್ಲಿ ಬಂಧನದಲ್ಲಿಡಲು ಅವಕಾಶವಿಲ್ಲ.

ಅ. ಭಾರತ ಸರಕಾರದ ಕಾಯಿದೆ ಅಡಿಯಲ್ಲಿ ರಚಿತವಾದ ಶಾಸನಸಭೆಯ ಸದಸ್ಯನಾಗಿದ್ದರೆ, ಅಂಥ ಸದನದ ಅಧಿವೇಶನ ನಡೆದ ಸಮಯದಲ್ಲಿ ಅವನನ್ನು ಬಂಧಿಸಲು ಸಾಧ್ಯವಿಲ್ಲ.
ಬ. ಅಂಥ ಸದನದ ಯಾವುದೇ ಸಮಿತಿಯ ಸದಸ್ಯನಾಗಿದ್ದರೆ, ಅಂಥ ಸಮಿತಿಯ ಸಭೆ ನಡೆದಿರುವ ದಿನಗಳಲ್ಲಿ ಶಾಸಕನನ್ನು ಬಂಧಿಸಲು ಸಾಧ್ಯವಿಲ್ಲ.
ಕ. ಎರಡರಲ್ಲಿ ಯಾವುದೇ ಒಂದು ಭಾರತೀಯ ಶಾಸನ ಸಭೆಯ ಸದಸ್ಯನಾಗಿದ್ದರೂ, ಅವುಗಳ ಜಂಟಿ ಅಧಿವೇಶನ ನಡೆದಿರುವಾಗ ಅಥವಾ ಶಾಸಕರ ಸಮ್ಮೇಳನ ನಡೆದಿರುವಾಗ ಅಥವಾ ಸಮಿತಿಗಳ ಜಂಟಿ ಸಭೆ ನಡೆದಿರುವಾಗ, ಅವನನ್ನು (ಶಾಸಕನನ್ನು) ಅಂಥ ಸಭೆ ಪ್ರಾರಂಭವಾಗುವ ೧೪ ದಿನಗಳ ಮೊದಲು ಅಥವಾ ನಂತರ ಅವನನ್ನು ಬಂಧಿಸಲು ಬರುವಂತಿಲ್ಲ.

**ಗಮನಿಸಬೇಕಾದ ಅಂಶಗಳು**

೧. ದಿವಾಣಿ (ಸಿವಿಲ್) ಬಂಧನವಾಗದಂತೆ ಮಾತ್ರ ಸ್ವಾತಂತ್ರ್ಯ.
೨. ಸ್ಥಾಯಿ ಆದೇಶಗಳು.

## ಶಾಸನಸಭೆಗಳ ಕಾರ್ಯವಿಧಾನ

I. ಭಾರತೀಯ ಶಾಸನಸಭೆಯ ಕಾರ್ಯವಿಧಾನವು

೧. ಕಾರ್ಯಕಲಾಪಗಳ ಬಗೆಗಿನ ನಿಯಮಾವಳಿಗಳು ಮತ್ತು
೨. ಸ್ಥಾಯಿ ಆದೇಶಗಳು

ಇವುಗಳ ಅಧೀನಕ್ಕೆ ಒಳಪಟ್ಟಿರುತ್ತವೆ.

| | |
|---|---|
| ೬೭(೧)ನೆಯ ಕಲಮು<br>೬೭(೬)ನೆಯ ಕಲಮು | ಕೇಂದ್ರೀಯ ಶಾಸನ ಸಭೆಗಾಗಿ ನಿಯಮಾವಳಿಗಳನ್ನು ಮತ್ತು ಸ್ಥಾಯಿ ಆದೇಶಗಳನ್ನು ರಚಿಸಲು ಅನುಮತಿ ನೀಡುತ್ತವೆ. |
| ೭೨ ಡಿ(೬)ನೆಯ ಕಲಮು<br>೭೨ ಡಿ(೭)ನೆಯ ಕಲಮು | ಸ್ಥಳೀಯ ಶಾಸನ ಸಭೆಗಾಗಿ ನಿಯಮಾವಳಿಗಳನ್ನು ಮತ್ತು ಸ್ಥಾಯಿ ಆದೇಶಗಳನ್ನು ರಚಿಸಲು ಅನುಮತಿ ನೀಡುತ್ತವೆ. |

II. ನಿಯಮಾವಳಿಗಳನ್ನು ಮತ್ತು ಸ್ಥಾಯೀ ಆದೇಶಗಳನ್ನು ರಚಿಸಲು ಶಾಸಕಾಂಗಗಳಿಗೆ ಅಧಿಕಾರವಿಲ್ಲ. ಡೊಮಿನಿಯನ್ನುಗಳಿಗೆ ಈ ಅಧಿಕಾರವಿದೆ.

ಭಾರತದಲ್ಲಿ ಈ ವಿಷಯವು ೧೨೯ಎ ಕಲಮಿನಿಂದ ನಿಯಂತ್ರಿತವಾಗಿತ್ತು. ಗವರ್ನರ್ ಜನರಲ್ ಇನ್ ಕೌನ್ಸಿಲ್‌ನೊಂದಿಗೆ ಸೇರಿ ನಿಯಮಾವಳಿಗಳನ್ನು ಮತ್ತು ಸ್ಥಾಯೀ ಆದೇಶಗಳನ್ನು ರೂಪಿಸಬಹುದಿತ್ತು.

**ಸ್ಥಾಯಿ ಆದೇಶಗಳು ಮತ್ತು ನಿಯಮಾವಳಿಗಳ ಮಧ್ಯದಲ್ಲಿರುವ ವ್ಯತ್ಯಾಸ**

೧. ಭಾರತದ ಪ್ರಾಂತೀಯ (ಸ್ಥಾನಿಕ) ಅಥವಾ ಕೇಂದ್ರೀಯ ಶಾಸಕಾಂಗಗಳು ನಿಯಮಾವಳಿಗಳನ್ನು ಬದಲಿಸುವ ಅಥವಾ ರದ್ದುಪಡಿಸುವ ಅಧಿಕಾರ ಹೊಂದಿರುವುದಿಲ್ಲ.

೨. ಕೆಲವೊಂದು ಉಪಾಧಿಗಳಿಗೆ ಒಳಪಟ್ಟು ಸ್ಥಾಯಿ ಆದೇಶಗಳನ್ನು ತಿದ್ದುಪಡಿ ಮಾಡಬಹುದು.

**ನಿಯಮಾವಳಿಗಳ ಮತ್ತು ಸ್ಥಾಯಿ ಆದೇಶಗಳ ವಿಭಿನ್ನ ಉದ್ದೇಶಗಳು**

ಎರಡು ಪ್ರಶ್ನೆಗಳು:

೧. ಯಾವ ಯಾವ ವಿಷಯಗಳನ್ನು ಕುರಿತು ಶಾಸಕಾಂಗವು ಚರ್ಚಿಸಬಲ್ಲದು ಮತ್ತು ಅದರ ಅಧಿಕಾರ ಕಕ್ಷೆಯಲ್ಲಿ ಬರುವ ಮತ್ತು ಬರದ ವಿಷಯಗಳಾವುವು?

೨. ಯಾವುದೇ ವಿಷಯವು ಇದರ ಅಧಿಕಾರಕ್ಕೆ ಒಳಪಟ್ಟಿದೆ ಎಂದು ಭಾವಿಸಿದರೆ, ಆ ವಿಷಯವನ್ನು ಹೇಗೆ ಚರ್ಚಿಸಬೇಕು? ಅದನ್ನು ಒಂದು ಮುದ್ದೆಯನ್ನಾಗಿ ಮಾರ್ಪಡಿಸುವುದು ಹೇಗೆ? ಸದಸ್ಯರು ಯಾವ ಕ್ರಮದಲ್ಲಿ ಭಾಷಣ ಮಾಡಬೇಕು? ಭಾಷಣ ಮಾಡುವಲ್ಲಿ ಯಾರಿಗಾದರೂ ಆದ್ಯತೆ ಇರುತ್ತದೆಯೆ? ಮತಗಳನ್ನು ದಾಖಲಿಸುವುದು ಹೇಗೆ? ಅವುಗಳನ್ನು ಎಣಿಸುವುದು ಹೇಗೆ? ಅವುಗಳ ಮೌಲ್ಯ ಗುರುತಿಸುವುದು ಹೇಗೆ?

ಮೊದಲನೆಯ ಪ್ರಶ್ನೆಯನ್ನು ಕಾರ್ಯಕಲಾಪಗಳನ್ನು ಬಗೆಗಿನ ನಿಯಮಾವಳಿಗಳಿಂದಲೇ ಬಗೆಹರಿಸಲು ಬರುತ್ತದೆ. ಎರಡನೆಯದನ್ನು ಸ್ಥಾಯಿ ಆದೇಶಗಳಿಂದ ಬಗೆಹರಿಸಲು ಸಾಧ್ಯ.

ಈ ಕಾನೂನಿನ ಭಾಷೆಯಲ್ಲಿ ಹೇಳುವುದಾದರೆ:

ಕಾರ್ಯಕಲಾಪದ ನಿಯಮಾವಳಿಗಳು ಕಾರ್ಯಕಲಾಪದ ವಿಧಿವಿಧಾನವನ್ನು ನಿಯಂತ್ರಿಸುತ್ತವೆ. ಸ್ಥಾಯೀ ಆದೇಶಗಳು ಕಾರ್ಯಕಲಾಪದ ವರ್ತನೆಯನ್ನು ಕಟ್ಟುಪಾಡಿಗೆ ಒಳಪಡಿಸುತ್ತವೆ.

**ಕಾರ್ಯಕಲಾಪದ ನಿಯಮಾವಳಿಗಳು ಮತ್ತು ಕಾರ್ಯಸ್ವಾತಂತ್ರ್ಯ**

ಕಾರ್ಯಕಲಾಪದ ನಿಯಮಾವಳಿಗಳು ಶಾಸಕರಿಗೆ ತಮ್ಮ ಪಾತ್ರ ನಿರ್ವಹಣೆಯಲ್ಲಿ ಅವಶ್ಯವಿದ್ದ ಸ್ವಾತಂತ್ರ್ಯವನ್ನು ನೀಡುತ್ತವೆಯೆ?

**೮ನೆಯ ನಿಯಮ:** ಸದಸ್ಯನೊಬ್ಬನ ವಿಶೇಷ ಗಮನ ಸೆಳೆಯುವ ಉದ್ದೇಶದಿಂದಲೇ, ಅವನಿಂದಲೇ, ಸಾರ್ವಜನಿಕ ಆಸಕ್ತಿಯ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಪಡೆಯುವ ನಿಟ್ಟಿನಲ್ಲಿ ಪ್ರಶ್ನೆಯೊಂದನ್ನು ಕೇಳಬಹುದು.

**ಸೂಚನೆಯ ಕಾಲಾವಧಿ**

ಅ. ಇದು ಪ್ರಾಮುಖ್ಯವಾಗಿ ಸ್ಥಾನಿಕ ಸರಕಾರಕ್ಕೆ ಸಂಬಂಧಿಸಿದ ವಿಷಯವಾಗಿದ್ದರೆ, ಸಭಾಧ್ಯಕ್ಷರು ಶಾಸಕನಿಗೆ ಪ್ರಶ್ನೆ ಕೇಳುವ ಅವಕಾಶವನ್ನು ನಿರಾಕರಿಸಬಹುದು.

ಆ. ಪ್ರಶ್ನೆ ಕೇಳಲು ಸಭಾಧ್ಯಕ್ಷರು ಒಪ್ಪಿಗೆ ಸೂಚಿಸಿದರೂ, ಗವರ್ನರನು ಈ ಕೆಳಗೆ ನಮೂದಿಸಿದ ವಿಷಯಗಳಿಗೆ ಸಂಬಂಧಿಸಿದ್ದರೆ ಶಾಸಕನಿಗೆ ಪ್ರಶ್ನೆ ಕೇಳುವ ಅವಕಾಶವನ್ನು ನಿರಾಕರಿಸಬಹುದು.

(i) ಅವರ ಪ್ರಭುಗಳು ಸರಕಾರ ಅಥವಾ ಭಾರತ ಸರಕಾರ, ಅಥವಾ ಗವರ್ನರ್ ಅಥವಾ ಗವರ್ನರ್–ಇನ್–ಕೌನ್ಸಿಲ್, ಯಾವುದೇ ವಿದೇಶಿ ರಾಜ್ಯ– ಇವುಗಳ ಸಂಬಂಧದ ಮೇಲೆ ಪರಿಣಾಮ ಬೀರಬಹುದಾದ ಯಾವುದೇ ವಿಷಯವನ್ನು ಒಳಗೊಂಡಂತಹ ಪ್ರಶ್ನೆ ಕೇಳುವುದನ್ನು ಗವರ್ನರನು ನಿರಾಕರಿಸಬಹುದು.

(ii) ಹುದ್ದೆ ತ್ಯಜಿಸುತ್ತಿರುವ ಯಾವುದೇ ಅಧಿಕಾರಿಗಳು ಮತ್ತು ಆಳುವ ಪ್ರಭು ಮತ್ತು ಮಹಾಪ್ರಭುವಿನ ಸಾರ್ವಭೌಮತ್ವದ ಅಡಿಯಲ್ಲಿನ ಪ್ರಮುಖ ಇವರಿಗೆ ಸಂಬಂಧಿಸಿದ ಯಾವುದೇ ವಿಷಯವಿದ್ದರೆ, ಅಂಥ ಪ್ರಭು ಮತ್ತು ಪ್ರಮುಖನಿಗೆ ಸಂಬಂಧಿಸಿದ ಯಾವುದೇ ವ್ಯವಹಾರ ಅಡಕವಾಗಿದ್ದರೆ, ಅಥವಾ ಅಂತಹ ಪ್ರಭು ಮತ್ತು ಪ್ರಮುಖನ ಪ್ರಾದೇಶಿಕ ಆಡಳಿತಕ್ಕೆ ಸಂಬಂಧಿಸಿದ ವಿಷಯವಾಗಿದ್ದರೆ, ಇಂಥ ಸಂಬಂಧಗಳನ್ನೊಳಗೊಂಡ ಪ್ರಶ್ನೆ ಕೇಳಲು ಸಭಾಧ್ಯಕ್ಷನು ಅವಕಾಶ ನೀಡಿದರೂ ಗವರ್ನರನು ಇದನ್ನು ನಿರಾಕರಿಸಬಹುದು.

(iii) ಮಹಾಪ್ರಭುವಿನ ಸಾರ್ವಭೌಮತ್ವದ ಅಡಿಯ ಯಾವುದೇ ಭಾಗದಲ್ಲಿ ಬರುವ ನ್ಯಾಯಾಲಯದಲ್ಲಿ ತೀರ್ಪಿಗಾಗಿ ಕಾಯುತ್ತಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳಲು ಗವರ್ನರನು ನಿರಾಕರಿಸಬಹುದು.

ಸೂಚನೆ: ಯಾವುದೇ ಸಂಶಯ ಉದ್ಭವವಾದರೆ ಅದನ್ನು ಗವರ್ನರನು ನಿರ್ಧರಿಸುತ್ತಾನೆ. ಅವನ ನಿರ್ಧಾರವೇ ಅಂತಿಮವಾದದ್ದು.

(ಕ) ಗವರ್ನರ್ ಜನರಲ್–ಇನ್–ಕೌನ್ಸಿಲ್ ಅಥವಾ ರಾಜ್ಯದ ಕಾರ್ಯದರ್ಶಿ ಮತ್ತು ಸ್ಥಾನಿಕ ಸರಕಾರ ಇವುಗಳ ಮಧ್ಯೆ ವಾದವಿವಾದ ಕಾಣಿಸಿಕೊಂಡಾಗ ಸಂಬಂಧಿಸಿದ ಯಾವ ಪ್ರಶ್ನೆಯನ್ನೂ ಕೇಳುವಂತಿಲ್ಲ. ಕೇಳುವುದೇ ಆದರೆ, ನಡೆದ ವಿಷಯಗಳ ಹೊರತಾಗಿ ಏನನ್ನೂ ಕೇಳದಿರುವುದು ಮತ್ತು ಇವುಗಳಿಗೆ ಉತ್ತರಗಳೆಂದರೆ, ಸತ್ಯಾಂಶದ ಹೇಳಿಕೆಗಳಿಗೆ ಮಾತ್ರ ಸೀಮಿತವಾಗಿರುವಂಥವು.

## ii) ಗೊತ್ತುವಳಿಗಳ ಮಂಡನೆಯ ಹಕ್ಕು

**೨೨–೨೩ ನಿಯಮಗಳು**

**೨೩ನೆಯ ನಿಯಮ.** (೧) ಪ್ರತಿಯೊಂದು ಗೊತ್ತುವಳಿಯು ಸರಕಾರವನ್ನು ಉದ್ದೇಶಿಸಿದ ನಿರ್ದಿಷ್ಟ ಶಿಫಾರಸ್ಸಿನ ರೂಪದಲ್ಲಿರಬೇಕು.

**ಶಾಸನ ಪರಿನಿಯಮಬದ್ಧ ನಿರ್ಬಂಧನೆಗಳು**

ಯಾವುದರ ಬಗ್ಗೆ ಪ್ರಶ್ನೆ ಕೇಳಲು ಅವಕಾಶವಿಲ್ಲವೊ, ಅಂತಹ ವಿಷಯಕ್ಕೆ ಸಂಬಂಧಿಸಿದ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ.

೨೨ನೆಯ ನಿಯಮ: ಗೊತ್ತುವಳಿ ಮಂಡಿಸುವ ಹಕ್ಕಿಗೆ ಸಂಬಂಧಿಸಿದಂತೆ, ಶಾಸನ ಪರಿನಿಯಮಬದ್ಧ ನಿರ್ಬಂಧನೆಗಳನ್ನು ಹೊರತುಪಡಿಸಿದರೆ ಕೆಲವೊಂದು ಕಾರಣಗಳ ಆಧಾರದ ಮೇಲೆ, ಸೂಚನಾ ಪತ್ರದ ಕಾಲಮಿತಿಯೊಳಗಾಗಿ ಯಾವುದೇ ಗೊತ್ತುವಳಿ ಮಂಡನೆಯನ್ನು ನಿರಾಕರಿಸುವ ಅಧಿಕಾರ ಗವರ್ನರನಿಗೆ ಇರುತ್ತದೆ. ಕಾರಣವೆಂದರೆ, ಇದನ್ನು ಮಂಡಿಸುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುತ್ತದೆ ಅಥವಾ ಇದು ಸ್ಥಾನಿಕ ಸರಕಾರಕ್ಕೆ ಪ್ರಮುಖವಾಗಿ ಸಂಬಂಧಿಸಿದ ವಿಷಯವೇ ಅಲ್ಲ ಎಂಬುದಾಗಿರುತ್ತದೆ.

**ಗೊತ್ತುವಳಿಗಳ ವಿರುದ್ಧ ನಿಷೇಧಗಳು**

೨೮–ಎಯ ನಿಯಮ: ಗೊತ್ತುವಳಿ ಮಂಡನೆಯನ್ನು ನಿಯಂತ್ರಿಸುವ ನಿಯಮಾವಳಿಗಳಿಗೆ ಅನುಸಾರವಾಗಿದ್ದರೂ, ಸಭಾಧ್ಯಕ್ಷನ ಮತ್ತು ಸಂಬಂಧಿಸಿದ ಇಲಾಖೆಯ ಸದಸ್ಯನ ಒಪ್ಪಿಗೆ ಇರದಿದ್ದರೆ, ಅಂತಹ ಸಾರ್ವಜನಿಕ ಹಿತಾಸಕ್ತಿಯ ವಿಷಯದ ಮೇಲೆ ಚರ್ಚೆ ನಡೆಸುವುದಕ್ಕಾಗಲೀ, ನಂತರ ಗೊತ್ತುವಳಿ ಸ್ವೀಕರಿಸುವುದಕ್ಕಾಗಲೀ ನಿಷೇಧವಿದೆ.

೨. ಯಾವ ವಿಷಯದ ಮೇಲೆ ಗೊತ್ತುವಳಿ ಮಂಡಿಸಲು ಬರುವುದಿಲ್ಲವೆಂದಿದೆಯೋ ಅಂಥ ವಿಷಯಕ್ಕೆ ಸಂಬಂಧಿಸಿದಂತೆ ಸಭಾಧ್ಯಕ್ಷನಾಗಲೀ, ಅಥವಾ ಸಂಬಂಧಿಸಿದ ಸರಕಾರಿ ಸದಸ್ಯನಾಗಲೀ ಗೊತ್ತುವಳಿ ಮಂಡಿಸಲು ಒಪ್ಪಿಗೆ ಕೊಡಲಾರನು.

## (ii) ಮುಂದೂಡಿಕೆಯ ನಿಲುವಳಿ

**೧೧ ಮತ್ತು ೧೨ನೆಯ ನಿಯಮಗಳು**

೧೧ನೆಯ ನಿಯಮ: ನಿಶ್ಚಿತವಾದ ಮತ್ತು ತುರ್ತಿನ ಸಾರ್ವಜನಿಕ ಮಹತ್ವದ ವಿಷಯವನ್ನು ಚರ್ಚಿಸುವ ಉದ್ದೇಶದಿಂದ ಕೌನ್ಸಿಲ್ಲಿನ ಕಾರ್ಯಕಲಾಪಗಳನ್ನು ಮುಂದೂಡುವ ನಿಲುವಳಿ ಮಂಡನೆ ಕೈಗೆತ್ತಿಕೊಳ್ಳಬಹುದು.

**೧೨ನೆಯ ನಿಯಮ:** ಇದು ಕೆಳಗಿನ ನಿರ್ಬಂಧನೆಗಳಿಗೆ ಒಳಪಟ್ಟಿದೆ.

(i) ಅಂತಹ ಒಂದೇ ಒಂದು ನಿಲುವಳಿ ಮಂಡನೆಯನ್ನು ಅದೇ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಬೇಕು.

(ii) ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಚರ್ಚಿಸತಕ್ಕದ್ದಲ್ಲ. ಅದನ್ನು ಇತ್ತೀಚೆಗೆ ಜರುಗಿದ ನಿರ್ದಿಷ್ಟ ವಿಷಯಕ್ಕೆ ಸೀಮಿತಗೊಳಿಸಬೇಕು.

(iii) ಆಗಲೇ ಮುಕ್ತಾಯಗೊಳಿಸಿ ವಿಷಯದ ಬಗ್ಗೆ ನಿಲುವಳಿ ಮಂಡಿಸಕೂಡದು. ವಿಷಯವನ್ನು ಊರ್ಜಿತಗೊಳಿಸಲೂ ಅವಕಾಶವಿಲ್ಲ.

(iv) ಸೂಚನೆ ನೀಡಿದಂತಹ ಅಥವಾ ವಿಷಯ ಪಟ್ಟಿಯಲ್ಲಿ (Agenda) ಸೇರ್ಪಡೆಯಾಗಿರುವ ವಿಷಯವನ್ನು ಮೊದಲೇ ಚರ್ಚಿಸಲು ಬರುವುದಿಲ್ಲ.

೧. ಯಾವುದರ ಬಗ್ಗೆ ಗೊತ್ತುವಳಿ ಮಂಡಿಸಲು ಬರುವುದಿಲ್ಲವೋ ಅಂಥ ವಿಷಯದ ಬಗ್ಗೆ ವಿಚಾರ ಮಾಡಲು ಅವಕಾಶವಿಲ್ಲ.

೨. ಸಭಾಧ್ಯಕ್ಷರು ಗೊತ್ತುವಳಿ ಮಂಡನೆಗೆ ತನ್ನ ಸಮ್ಮತಿ ಸೂಚಿಸಲೇಬೇಕು.

**iv. ವಿಶ್ವಾಸ ಮತ ಯಾಚನೆಯ ನಿಲುವಳಿ**

೧೨–ಎಯ ನಿಯಮ: ಮಂತ್ರಿಯಲ್ಲಿ ವಿಶ್ವಾಸವನ್ನು ವ್ಯಕ್ತಗೊಳಿಸುವ ಅಥವಾ ಮಂತ್ರಿಯ ಧೋರಣೆಯನ್ನು ಸಮ್ಮತಿಸದಿರುವ ನಿಲುವಳಿ ಮಂಡಿಸಬಹುದು.

* * *

# ೩
# ಭಾರತದ ಇತಿಹಾಸದ ಮೇಲೆ ಟಿಪ್ಪಣಿಗಳು

### (ಹಸ್ತಪ್ರತಿಗಳ ಪುನರಾವೃತ್ತಿ ಮಾಡಲಾಗಿದೆ –ಸಂ)

I

ಆಧುನಿಕ ತುರ್ಕೋಮನ್ನರನ್ನು[೧] ಹೋಲುವ ಮಧ್ಯ ಏಶಿಯಾದ ಅಲೆಮಾರಿಗಳಾದ ಶಕರ ಮತ್ತು ಯು–ಚಿಗಳ ದಿಗ್ವಿಜಯಗಳು ಭಾರತದ ಇತಿಹಾಸದ ದೃಷ್ಟಿಯಿಂದ ಹೆಚ್ಚು ಮಹತ್ವದ ಸಂಗತಿಗಳಾಗಿವೆ. ಇವರಲ್ಲಿ ಶಕರ ಬಗೆಗೆ ಮೊದಲು ಕೇಳಿಬಂದದ್ದು ಇವರು ಇಲಿ (Ili) ನದಿಯ ಕಣಿವೆಯ ಪ್ರದೇಶದಲ್ಲಿ ನೆಲೆಸಿದಾಗ. ಯು–ಚಿ (Yueh-Chih) ಜನರ ಪ್ರವೇಶದಿಂದ ಇವರು ಉಚ್ಚಾಟನೆಗೊಂಡರು. ದಕ್ಷಿಣಕ್ಕೆ ಸರಿಯುತ್ತ ಸರಿಯುತ್ತ ಕ್ರಿ.ಪೂ. ೧೫೦ರಲ್ಲಿ ವಾಯವ್ಯ ಭಾರತ ತಲುಪಿ ಅಲ್ಲಿಯೇ ನೆಲೆಸಿದರು. ಸಣ್ಣಪುಟ್ಟ ಪಾಳೆಯಗಾರರಾದರು. ಕೆಲವೊಂದು ಅವಧಿಯವರೆಗೆ ಅವರು ಪಾರ್ಥಿಯನರ ಸಾರ್ವಭೌಮತ್ವವನ್ನು ಒಪ್ಪಿಕೊಂಡಂತಿದೆ. ಸತ್ರಪಿಗಳೆಂಬ ಬಿರುದನ್ನು ಹೊಂದಿದ್ದರು. ಈ ಪಾಳೆಪಟ್ಟುಗಳಲ್ಲಿಯೆ ಅತಿ ಪ್ರಮುಖವಾದದ್ದನ್ನು ಮಹಾಸತ್ರಪಿ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಸೌರಾಷ್ಟ್ರ (ಕಾಠಿವಾಡ) ಮತ್ತು ಅದಕ್ಕೆ ಹೊಂದಿದ್ದ ವಿಸ್ತಾರವಾದ ಭೂಭಾಗ ಸೇರಿತ್ತು. ಇದು ಕ್ರಿ.ಶ. ೩೯೫ರವರೆಗೆ ಮುಂದುವರೆದಿತ್ತು. ಶಕರು, ಯವನರು ಅಥವಾ ಪಲ್ಲವರು ಮುಂತಾದ ವಿದೇಶಿ ದೊರೆಗಳು ಪಶ್ಚಿಮ ಭಾರತದ ಬೇರೆ ಬೇರೆ ಭಾಗಗಳನ್ನು ಆಳಿದರು. ಅವರ ರಾಜ್ಯಗಳ ಗಡಿಗಳು ಮತ್ತು ಪಾರಸ್ಪರಿಕ ಸಂಬಂಧಗಳು ಮೇಲಿಂದ ಮೇಲೆ ಬದಲಾಗುತ್ತಿದ್ದವು.

ಕ್ರಿ.ಪೂ. ೧೦೦ರ ಸುಮಾರಿಗೆ ಯು–ಚಿಗಳು ಚೀನದ ಗಡಿನಾಡಿನಿಂದ ಪಶ್ಚಿಮದತ್ತ ಹೊರಟು ತಮಗಿಂತ ಮೊದಲೇ ಬಂದಿದ್ದ ಶಕರನ್ನು ಹಿಂದಕ್ಕೆ ಸರಿಸಿ ಬ್ಯಾಕ್ಟ್ರಿಯಾದಲ್ಲಿ ನೆಲೆಸಿದರು. ಇಲ್ಲಿ ಕುಶಾನ ಬುಡಕಟ್ಟುಗಳಿಗೆ ಸಂಬಂಧಿಸಿದ ಒಂದು ಬುಡಕಟ್ಟಿನ ಮುಖಂಡನಾದ ಕಾಡ್‌ಫಿಸೆಸ್ ಎಂಬುವನು ಎಲ್ಲ ಬುಡಕಟ್ಟುಗಳನ್ನು ಒಂದುಗೂಡಿಸಿ ಒಂದು ಬಲಿಷ್ಠ ರಾಷ್ಟ್ರವನ್ನು ಕಟ್ಟಿದನು. ಕುಶಾನ ಸಾಮ್ರಾಜ್ಯದ ಕಾಲಗಣನಾಕ್ರಮ ಸೂಚಿಯು ಭಾರತೀಯ ಇತಿಹಾಸದಲ್ಲಿ ಬಹಳಷ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟ ಪ್ರಶ್ನೆಯಾಗಿಯೇ ಉಳಿದಿದೆ. ಅವರಿಗೆ ಸಂಬಂಧಿಸಿದಂತೆ ಕೆಳಗೆ ಕೊಟ್ಟ ಇಸವಿಗಳು ವಾಸ್ತವಿಕವಾದವು ಎಂದು ಹೇಳಲಾಗಿರುವ ಉದ್ದೇಶ ಪ್ರಸ್ತುತ. ಅವುಗಳ ಚರ್ಚೆಗೆ ಸಾಕಷ್ಟು ಸ್ಥಳಾವಕಾಶ ಇಲ್ಲದುದೇ ಆಗಿದೆ. ಆದರೂ ಅವುಗಳ ವಾಸ್ತವತೆಯ ಬಗ್ಗೆ ಸಂದೇಹ ಇದ್ದೇ ಇದೆ. ಮುಂದೆ ಈ ವಿಷಯದ ಮೇಲೆ ಹೆಚ್ಚಿನ ಬೆಳಕು ಬಿದ್ದಾಗ ಖಚಿತತೆಯ ಅಂಶ ಹೆಚ್ಚಬಹುದೆಂಬ ಆಸೆ ಇದ್ದೇ ಇದೆ. ಒಂದನೆಯ ಕಾಡ್‌ಫಿಸೆಸ್ಸನು (ಕ್ರಿ.ಶ. ೧೫–೪೫) ತನ್ನ ರಾಜ್ಯವನ್ನು ಸುಭದ್ರಗೊಳಿಸಿದ ನಂತರ ತನ್ನ ದಂಡಯಾತ್ರೆಯನ್ನು ದಕ್ಷಿಣಾಭಿಮುಖವಾಗಿ

---

೧. ಬಹುಶಃ ಭಾಷೆಗಳಲ್ಲಿ ಸಾಮ್ಯವಿಲ್ಲ. ಕುಶಾನರು ಅಥವಾ ಯು–ಚಿಗಳು ಇರಾಣಿಗಳ ನುಡಿಗಟ್ಟನ್ನು ಬಳಸಿದ್ದು ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿದೆ.

ಹೊರಳಿಸಿ ಕಾಬೂಲನ್ನು ಮತ್ತು ಬಹುಶಃ ಕಾಶ್ಮೀರವನ್ನು ಗೆದ್ದ. ಅವನ ಉತ್ತರಾಧಿಕಾರಿ ಎರಡನೆಯ ಕಾಡ್‌ಫಿಸೆಸ್ (ಕ್ರಿ.ಶ. ೪೭–೭೮) ಉತ್ತರ ಸಿಂಧು, ಪಂಜಾಬ ಮತ್ತು ಬಹುಶಃ ಬನಾರಸ ಒಳಗೊಂಡ ಸಂಪೂರ್ಣ ವಾಯವ್ಯ ಭಾರತವನ್ನು ಸ್ವಾಧೀನಪಡಿಸಿಕೊಂಡ. ಈ ಅವಧಿಯಲ್ಲಿ ಭಾರತ ಮತ್ತು ರೋಮ ಸಾಮ್ರಾಜ್ಯದ ನಡುವೆ ಸಾಕಷ್ಟು ವ್ಯಾಪಾರ ನಡೆಯುತ್ತಿತ್ತು. ಕಾಡ್‌ಫಿಸೆಸ್ಸನ ಉತ್ತರಾಧಿಕಾರಿ ಕನಿಷ್ಕನು (ಕ್ರಿ.ಶ. ೭೮–೧೨೩) ರೋಮ್ ಚಕ್ರಾಧಿಪತಿ ಟ್ರೋಜಾನನ ಆಸ್ಥಾನಕ್ಕೆ ರಾಯಭಾರಿಯನ್ನು ಕಳಿಸಿದ್ದ. ಬೌದ್ಧ ಧರ್ಮದ ಚರಿತ್ರೆಯ ಪ್ರಾರಂಭದಲ್ಲಿ ಅಶೋಕನು ವಹಿಸಿದ್ದ ಪಾತ್ರಕ್ಕೆ ಸರಿಸಮನಾದ ಪಾತ್ರವನ್ನು ಕನಿಷ್ಕನು ವಹಿಸಿದನು.[೧] ಅವನು ಪಾರ್ಥಿಯನರು ಮತ್ತು ಚೀನಿಯರ ಕೂಡ ಯುದ್ಧ ಮಾಡಿದನು. ಪೇಶಾವರವು ಅವನ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅವನ ಸಾಮ್ರಾಜ್ಯವು ಅಫಗಾನಿಸ್ತಾನ, ಬ್ಯಾಕ್ಟ್ರಿಯಾ, ಕಾಸ್ಗರ್, ಯಾರ್ಖಂಡ್, ಖೋಟನ್[೨] ಮತ್ತು ಕಾಶ್ಮೀರಗಳನ್ನು ಒಳಗೊಂಡಿತ್ತು. ಈ ಸಾಮ್ರಾಜ್ಯವು ಬಹುಶಃ ಪೂರ್ವಕ್ಕೆ ಗಯಾದವರೆಗೆ ಹಬ್ಬಿತ್ತು. ಕನಿಷ್ಕನ ಉತ್ತರಾಧಿಕಾರಿಗಳಾದ ಹುವಿಷ್ಕ (ಕ್ರಿ.ಶ. ೧೨೩–೧೪೦) ಮತ್ತು ವಾಸುದೇವ (ಕ್ರಿ.ಶ. ೧೪೦–೧೭೮) ಇವೆಲ್ಲವುಗಳನ್ನು ರಕ್ಷಿಸಿಕೊಂಡು ಬಂದಿದ್ದರು. ಆದರೆ ಇವರ ಆಳ್ವಿಕೆಯ ನಂತರದ ಕಾಳಗದಲ್ಲಿ ಆಂಧ್ರ ಮತ್ತು ಕುಶಾನ ರಾಜ್ಯಗಳು ಭಾರತದಲ್ಲಿ ಅವನತಿ ಹೊಂದಿದ್ದಾಗ್ಯೂ ಕುಶಾನ ಅರಸರು ಕಾಬೂಲಿನಲ್ಲಿ ತಮ್ಮ ಆಳಿಕೆಯನ್ನು ಮುಂದುವರಿಸಿದರು. ಭಾರತದಲ್ಲಿ ಇವರ ಅವನತಿಗೆ ಕಾರಣಗಳು ತಿಳಿದಿಲ್ಲವಾದರೂ ಪರ್ಶಿಯಾದಲ್ಲಿ ಸಸಾನಿಡ್ಡರ (Sassanids) ಉದಯವೇ ಇವರ ಅವನತಿಗೆ ಕಾರಣವೆಂದು ತೋರುತ್ತದೆ. ಶಕರ ರಾಜ್ಯವು ಸೌರಾಷ್ಟ್ರದಲ್ಲಿ ಮುಂದುವರೆದಿತ್ತು ಎಂಬುದರ ಹೊರತಾಗಿ ಸುಮಾರು ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಭಾರತದ ರಾಜಕೀಯ ಇತಿಹಾಸದ ಬಗೆಗೆ ಏನೂ ತಿಳಿದುಬಂದಿಲ್ಲ.

ಗುಪ್ತ ವಂಶದ ಸೂರ್ಯೋದಯದೊಂದಿಗೆ ಬೆಳಕು ಮರಳಿ ಹರಿಯಿತು. ಇದು ಬೌದ್ಧ ಧರ್ಮದ ವಿರುದ್ಧದ ಪ್ರತಿಕ್ರಿಯೆಯೂ ಹೌದು. ಮತ್ತು ಆಧುನಿಕ ಹಿಂದೂ ಧರ್ಮದ ಪ್ರಾರಂಭದ ಗುರುತೂ ಹೌದು. ಮೌರ್ಯ ಸಾಮ್ರಾಜ್ಯದ ರಾಜಧಾನೀ ನಗರ ಪಾಟಲೀಪುತ್ರದ ಅದೃಷ್ಟದ ಬಗೆಗೆ ಕ್ರಿಸ್ತಶಕದ ಪ್ರಾರಂಭದ ಮೂರು ಶತಮಾನಗಳವರೆಗಿನ ಚರಿತ್ರೆ ನಮಗೆ ಸ್ಪಷ್ಟವಾಗಿ ಏನೂ ತಿಳಿದಿಲ್ಲವಾದರೂ ಅದು ಹಾಗೆಯೇ ಮುಂದುವರೆದಿತ್ತು ಎಂಬುದು ಗೊತ್ತಿದೆ. ಕ್ರಿ.ಶ. ೩೨೦ರಲ್ಲಿ ಮೊದಲನೆಯ ಚಂದ್ರಗುಪ್ತನೆಂದು ಕರೆಯಿಸಿಕೊಂಡ ಸ್ಥಾನಿಕ ದೊರೆ ತನ್ನ ಪಾಳೆಯಪಟ್ಟುಗಳನ್ನು ಹೆಚ್ಚಿಸಿಕೊಂಡ. ತನ್ನ ಪಟ್ಟಾಭಿಷೇಕ ಸಮಾರಂಭ ನೆರವೇರಿಸಿಕೊಳ್ಳುವುದರೊಂದಿಗೆ ಗುಪ್ತ ಶಕಾರಂಭಕ್ಕೆ ನಾಂದಿ ಹಾಡಿದ. ಅವನ ಮಗ ಸಮುದ್ರಗುಪ್ತನು ತನ್ನ ವಿಜಯ ದಂಡಯಾತ್ರೆಗಳನ್ನು ಮುಂದುವರಿಸಿದ. ಕ್ರಿ.ಶ. ೩೪೦ರಲ್ಲಿ ಕೊನೆಗೊಂಡ ಒಂದು ಅಸಾಮಾನ್ಯ ದಂಡಯಾತ್ರೆಯಲ್ಲಿ ಪೂರ್ತಿ ಪರ್ಯಾಯ ದ್ವೀಪದ (Peninsula) ಶರಣಾಗತಿಯನ್ನು ಪಡೆದಂತಿದೆ. ಅವನು ಹೀಗೆ ಗೆದ್ದ ಎಲ್ಲ ಭೂಮಿ ಸೀಮೆಗಳನ್ನು ತನ್ನ ನೇರ ಆಡಳಿತದಡಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಆದರೆ ಹುಗ್ಲಿಯಿಂದ ಜಮುನಾ ನದಿಯವರೆಗೆ, ಪಶ್ಚಿಮದಲ್ಲಿಯ ಚಂಬಲ್ ನದಿ ಮತ್ತು ಹಿಮಾಲಯದಿಂದ ನರ್ಬುಡಾದವರೆಗೆ ವಿಸ್ತರಿಸಿದ ವಿಶಾಲವಾದ ಭೂಭಾಗದ ಮೇಲೆ ತನ್ನ ಪರಿಣಾಮಕಾರಿ

೧. ಇಬ್ಬರು ಕಾಡ್‌ಫಿಸೆಸ್‌ರ ನಂತರವಲ್ಲ, ಮೊದಲೇ ಕನಿಷ್ಕ ಬರುತ್ತಾನೆ ಮತ್ತು ಕ್ರಿ.ಪೂ. ೫೮ರ ಸುಮಾರಿಗೆ ತನ್ನ ಆಳ್ವಿಕೆ ಪ್ರಾರಂಭಿಸಿದನೆಂದು ಫ್ಲೀಚ್ ಮತ್ತು ಫ್ರ್ಯಾಂಕ್ ಪರಿಗಣಿಸುತ್ತಾರೆ.

೨. ಕ್ರಿ.ಶ. ೯೦ರ ಸುಮಾರಿಗೆ, ಕನಿಷ್ಕನು ಈ ಪ್ರದೇಶದಲ್ಲಿ ಚೀನೀ ಜನರಲ್ ಪಾನ್‌ಚಾವೋನಿಂದ ಸೋಲಿಸಲ್ಪಟ್ಟಂತೆ ತೋರುತ್ತದೆ. ಆದರೆ ಅವನೇ ಸುಮಾರು ಹದಿನೈದು ವರ್ಷಗಳ ನಂತರ ಜಯಶೀಲನಾಗಿ ಹೊರಹೊಮ್ಮಿದ.

ಅಧಿಕಾರವನ್ನು ಚಲಾಯಿಸುತ್ತಿದ್ದ. ಅವನ ಮಗ ಎರಡನೆಯ ಚಂದ್ರಗುಪ್ತ ಅಥವಾ ವಿಕ್ರಮಾದಿತ್ಯನು ಆಗಲೇ ಸ್ವಾಧೀನದಲ್ಲಿದ್ದ ಪ್ರದೇಶಗಳಿಗೆ ಮಾಳವಾ, ಗುಜರಾತ್ ಮತ್ತು ಕಾಠಿವಾಡಗಳನ್ನು ಸೇರಿಸಿಕೊಂಡ. ಮತ್ತು ಸುಮಾರು ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ರಾಜಪುತಾನಾ ಮತ್ತು ಸಿಂಧ ಬಿಟ್ಟು ಬಹುತೇಕ ಉತ್ತರ ಭಾರತವನ್ನು ಯಾವ ಅಡೆತಡೆಗಳಿಲ್ಲದೆಯೆ ಆಳಿದ. ಅವರ ರಾಜಧಾನಿಯು ಮೊದಲು ಪಾಟಲೀಪುತ್ರವಾಗಿತ್ತು. ಆದರೆ ನಂತರ ಕೌಶಾಂಬಿ ಮತ್ತು ಅಯೋಧ್ಯೆಗಳನ್ನು ಕೂಡ ತಮ್ಮ ರಾಜಮನೆತನದ ನಿವಾಸಸ್ಥಾನಗಳನ್ನಾಗಿ ಮಾಡಿಕೊಂಡರು.

ಅನಾಗರಿಕರೆಂದು ತಿಳಿಯಲಾಗಿದ್ದ ಹೂಣರು, ಇಪ್ಥಲೈಟರು[೧] (Ephthalites) ಅಥವಾ ಬಿಳಿಯ ಹೂಣರು ಅಂದರೆ, ಯುರೋಪಿನ ಮೇಲೆ ದಾಳಿ ಮಾಡಿದ ಹೂಣರ ಒಂದು ಪಂಗಡ. ಹೂಣರ ಮತ್ತೊಂದು ದಾಳಿಯಿಂದ ಗುಪ್ತರ ಅವನತಿ ಉಂಟಾಯಿತು. ಈ ಶಾಖೆಯು ಏಶಿಯಾದಲ್ಲಿಯೆ ಉಳಿದು ಉತ್ತರ ಪರ್ಶಿಯಾವನ್ನು ಆಕ್ರಮಿಸಿತು (ಸ್ವಾಧೀನಪಡಿಸಿಕೊಂಡಿತು). ಅವರು ಕ್ರಿ.ಶ. ೪೫೫ರಲ್ಲಿ ಭಾರತದ ಮೇಲೆ ದಾಳಿ ಮಾಡಿದರು. ಆಗ ಅವರನ್ನು ಹಿಮ್ಮೆಟ್ಟಿಸಲಾಯಿತು. ಕ್ರಿ.ಶ. ೪೯೦ರಲ್ಲಿ ಅವರು ಮತ್ತೊಮ್ಮೆ ಹೆಚ್ಚಿನ ಸೈನ್ಯಬಲದೊಂದಿಗೆ ದಾಳಿಮಾಡಿ ಗುಪ್ತರನ್ನು ಸೋಲಿಸಿದರು. ಅವರ ಅರಸರಾದ ತೋರಮಾನಾ ಮತ್ತು ಅವನ ಮಗ ಮಿಹಿರಗುಲಾ ಕ್ರಿ.ಶ. ೫೪೦ರವರೆಗೆ ಉತ್ತರ ಭಾರತವನ್ನು ಆಳಿದರು. ಪಂಜಾಬದಲ್ಲಿಯ ಸಿಯಾಲಕೋಟನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೂ ಬಹುಶಃ ಅವರ ರಾಜಧಾನಿ ಕೇಂದ್ರಗಳು ಬಾಮಿಯಾನ್ ಮತ್ತು ಬಾಲ್ಕಗಳಾಗಿದ್ದವು. ಮಿಹಿರಗುಲಾನ ಮಿತಿಮೀರಿದ ಕ್ರೌರ್ಯವು ಹಿಂದೂ ಅರಸರು ಒಟ್ಟುಗೂಡಲು ಪ್ರಚೋದನೆ ನೀಡಿತು. ಅವರನ್ನು ಉತ್ತರಕ್ಕೆ ದೂಡಲಾಯಿತು. ಪರ್ಶಿಯನ್ನರು ಮತ್ತು ತುರ್ಕರು ಒಟ್ಟುಗೂಡಿ ಹೋರಾಡಿದ (ಫಲವಾಗಿ) ಪರಿಣಾಮವಾಗಿ ಕ್ರಿ.ಶ. ೫೬೫ರಷ್ಟೊತ್ತಿಗೆ ಹೂಣರ ಪತನ ಪೂರ್ತಿಗೊಂಡಿತು. ಹೂಣರು ಶಾಶ್ವತ ರಾಜ್ಯಗಳನ್ನು ಕಟ್ಟದಿದ್ದರೂ ಅವರ ಧಾಳಿಯು ಮಹತ್ವದ್ದೆನಿಸಿದೆ. ಅವರು ರಾಜಕೀಯವಾಗಿ ಹಿಮ್ಮೆಟ್ಟಿದಾಗಲೂ ಅವರು ಮತ್ತು ಅವರಿಗೆ ಹತ್ತಿದ ಹೊಂದಿದ ಗುರ್ಜಾರರಂಥ (ಗುಜಾರರ) ಬುಡಕಟ್ಟುಗಳು, ಅಲ್ಲಿಯೇ ಉಳಿದು ವಾಯವ್ಯ ಭಾರತದ ಜನಪಂಗಡ, ಅದರಲ್ಲಿಯೇ ವಿಶೇಷವಾಗಿ ರಜಪೂತ ಕುಲಗಳು (clans) ರೂಪುಗೊಳ್ಳಲು ನೆರವು ನೀಡಿದವು. ಇವರಿಗಿಂತ ಮೊದಲು ಶಕರು ಮತ್ತು ಕುಶಾನರು ಇಂಥ ಪರಿಣಾಮವನ್ನೆ ಉಂಟುಮಾಡಿದ್ದರು.

ಹೂಣರ ಪತನದೊಂದಿಗೆ ಚರಿತ್ರೆಯಲ್ಲಿ ಮತ್ತೊಮ್ಮೆ ಮಸುಕುಮಸುಕಾದ ಕಾಲಾವಧಿ ಕಾಣಿಸಿಕೊಂಡಿತು. ಆದರೆ ಏಳನೆಯ ಶತಮಾನದ ಪ್ರಾರಂಭದಲ್ಲಿ ಥಾಣೇಶ್ವರದ ದೊರೆಯಾಗಿದ್ದ ಹರ್ಷನು (ಕ್ರಿ.ಶ. ೬೦೬–೬೪೬) ಮೂವತ್ತೈದು ವರ್ಷಗಳ ಎಡೆಬಿಡದ ಹೋರಾಟದಿಂದ ರಾಜ್ಯವೊಂದನ್ನು ಕಟ್ಟಿದ. ಆದರೆ ಅದು ಅವನ ಜೀವನಾಂತ್ಯದವರೆಗೂ ಉಳಿದಿದ್ದರೂ ಸ್ವಲ್ಪ ಕಾಲವಾದರೂ ಗುಪ್ತ ಸಾಮ್ರಾಜ್ಯದ ವಿಸ್ತೀರ್ಣ ಮತ್ತು ಉಚ್ಛ್ರಾಯ ಸ್ಥಿತಿಗಳ ಮೇಲ್ಪಂಕ್ತಿ ಅನುಸರಿಸಿತು. ಹರ್ಷನ ಕನೌಜದಲ್ಲಿಯ ಆಸ್ಥಾನಕ್ಕೆ ಭೇಟಿ ಕೊಟ್ಟ ಚೀನೀ ಯಾತ್ರಿಕ ಹುಯೆನ್–ತ್ಸಾಂಗನ ಹೇಳಿಕೆಯಿಂದ ನಮಗೆ ತಿಳಿದುಬರುವಂತೆ, ಬಂಗಾಲ, ಅಸಾಮ ಮತ್ತು ಉಜ್ಜಯನಿಯ ಅರಸರು ಅವನ ಸಾಮಂತರಾಗಿದ್ದರು. ಆದರೆ ಪಂಜಾಬ, ಸಿಂಧ ಮತ್ತು ಕಾಶ್ಮೀರಗಳ ಅರಸರು ಸ್ವತಂತ್ರರಾಗಿದ್ದರು. ಹರ್ಷನು ಬಂಗಾಲದ ದಕ್ಷಿಣಕ್ಕಿರುವ ಕಳಿಂಗವನ್ನು ಗೆದ್ದನಾದರೂ ಡೆಕ್ಕನದ ಚಾಲುಕ್ಯ ದೊರೆ ಎರಡನೆಯ ಪುಲಿಕೇಶಿಯನ್ನು ಸೋಲಿಸಲಾಗಲಿಲ್ಲ.

---

೧. ಆಧಾರಗಳಿಗಾಗಿ ನೋಡಿ: ವಿನ್ಸೆಂಟ್ ಸ್ಮಿತ್‌ನ ಅರ್ಲಿ ಹಿಸ್ಟರಿ ಆಫ್ ಇಂಡಿಯಾ, ೧೯೦೮, ಪುಟ ೪೦೧.

ನಾವು ಒಂದು ಕ್ಷಣ ದಕ್ಷಿಣದ ಇತಿಹಾಸದ ಕಡೆಗೆ ಹೊರಳಿ ನೋಡೋಣ. ಇದು ಘಟನೆಗಳ ಮತ್ತು ಕಾಲಗಣನಾಕ್ರಮದ ದೃಷ್ಟಿಯಿಂದ ಉತ್ತರಕ್ಕಿಂತ ಹೆಚ್ಚು ಅಸ್ಪಷ್ಟವಾಗಿದೆ. ಆದರೆ ನಾವು ದ್ರಾವಿಡ ರಾಜ್ಯಗಳನ್ನು ವಸತಿರಹಿತ ಅಥವಾ ಅನಾಗರಿಕವೆಂದು ಭಾವಿಸಕೂಡದು. ಗ್ರೀಕ್ ಮತ್ತು ರೋಮನ್ ಲೇಖಕರಿಗೆ ಇವುಗಳ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದಿತ್ತು. ಪಾಂಡ್ಯ ಅರಸನು ಕ್ರಿ.ಪೂ. ೨೦ರಲ್ಲಿ[೧] ರೋಮನ್ ಚಕ್ರವರ್ತಿ ಅಗಸ್ಟಸ್‌ನ ಆಸ್ಥಾನಕ್ಕೆ ನಿಯೋಗವನ್ನು ಕಳುಹಿಸಿದ್ದ. ಚರಿತ್ರೆಕಾರ ಪ್ಲಿನಿ (Pliny)[೨] ಮದುರಾ ಬಗ್ಗೆ ಹೇಳುತ್ತಾನೆ. ಟಾಲೆಮಿ (Ptolemy) ಇದೇ ಮದುರಾ ಮತ್ತು ಇತರ ನಾಲ್ವತ್ತು ಊರುಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಇಂದು ಕ್ಯಾಂಗನೂರ ಎಂದು ಗುರುತಿಸಲಾದ, ಹಿಂದೆ ಮ್ಯುಜಿರಸ್ ಆಗಿದ್ದ ಊರಿನಲ್ಲಿ ಅಗಸ್ಟಸ್ ದೇವಾಲಯವನ್ನು ಕಟ್ಟಿಸಿದ ಬಗ್ಗೆ ಶಾಸನದ ಉಲ್ಲೇಖವಿದೆ.[೩]

ಪ್ರಾಚೀನ ಕಾಲದಿಂದಲೇ ಪರ್ಯಾಯ ದ್ವೀಪದ ದಕ್ಷಿಣದ ತುತ್ತ ತುದಿಯು, ಪಾಂಡ್ಯ, ಚೇರ ಮತ್ತು ಚೋಳ ಎಂಬ ಮೂರು ರಾಜ್ಯಗಳಾಗಿ ವಿಭಾಗಗೊಂಡಿತ್ತು.[೩] ಮೊದಲನೆಯದಾದ ಪಾಂಡ್ಯ ರಾಜ್ಯವು, ಮದುರಾ ಮತ್ತು ತಿನ್ನೇವಲಿ ಜಿಲ್ಲೆಗಳನ್ನು ಒಳಗೊಂಡಿತ್ತು. ಚೇರ ಮತ್ತು ಕೇರಳ ರಾಜ್ಯಗಳು ಈಗಿನ ಪಶ್ಚಿಮ ಕರಾವಳಿಯ ತ್ರಾವಣಕೋರಿನಲ್ಲಿ ಇದ್ದವು. ಚೋಳ ರಾಜ್ಯವು, ತಂಜಾವೂರ, ತ್ರಿಚಿನಾಪಳ್ಳಿ, ಮದ್ರಾಸ, ಮೈಸೂರಿನ ಬಹುಭಾಗ, ಇವೆಲ್ಲ ಸೇರಿ ಆಗಿತ್ತು. ಕ್ರಿ.ಶ. ಆರರಿಂದ ಎಂಟನೆಯ ಶತಮಾನದವರೆಗೆ, ಮದ್ರಾಸ ಪ್ರೆಸಿಡೆನ್ಸಿಯ ಉತ್ತರ ಭಾಗದಲ್ಲಿ ಕಾಣಿಸಿಕೊಂಡ ಪಲ್ಲವರು ನಾಲ್ಕನೆಯ ಮಹಾನ್ ಶಕ್ತಿಯಾಗಿ ಹೊರಹೊಮ್ಮಿದ್ದರು. ಕಂಜೀವರಂ ಪಲ್ಲವರ ರಾಜಧಾನಿಯಾಗಿತ್ತು. ಪಲ್ಲವರು ಯಾವಾಗಲೂ ದಕ್ಷಿಣದ ಇನ್ನಿತರ ಮೂರು ರಾಜ್ಯಗಳೊಂದಿಗೆ ಕಾದಾಡುತ್ತಿದ್ದರು. ಅವರ ಅರಸನಾದ ನರಸಿಂಹವರ್ಮನು (ಕ್ರಿ.ಶ. ೬೨೫–೬೪೫) ಡೆಕ್ಕನ್ ಪ್ರದೇಶದ ಭಾಗವನ್ನು ಮತ್ತು ಚೋಳ ರಾಜ್ಯದ ಬಹುತೇಕ ಎಲ್ಲ ಪ್ರದೇಶವನ್ನು ಆಳಿದನು. ಆದರೆ ಕ್ರಿ.ಶ. ೭೫೦ರ ನಂತರ ಚೋಳರು ಪ್ರಬಲರಾದಾಗ ಪಲ್ಲವರ ಪತನವಾಯಿತು. ಅವರ ರಾಜರಾಜ ಎಂಬ ಹೆಸರಿನ ಪ್ರಖ್ಯಾತ ಅರಸನ (ಕ್ರಿ.ಶ. ೬೮೫–೧೦೧೮) ರಾಜ್ಯವು ಮದ್ರಾಸ ಮತ್ತು ಮೈಸೂರು ಪ್ರದೇಶಗಳನ್ನು ಒಳಗೊಂಡಿತ್ತು. ಅವರದು ದಕ್ಷಿಣ ಭಾರತದಲ್ಲಿ ಪರಮಾಧಿಕಾರವುಳ್ಳ ರಾಜ್ಯವಾಗಿತ್ತು. ಕ್ರಿ.ಶ. ೧೩ನೆಯ ಶತಮಾನದವರೆಗೆ ಪರಮಾಧಿಕಾರವನ್ನು ಉಳಿಸಿಕೊಂಡಿದ್ದರು.

ಈಗಾಗಲೇ ತಿಳಿಸಿರುವಂತೆ, ಡೆಕ್ಕನ್ ಪ್ರದೇಶವನ್ನು ಆಂಧ್ರರು ಕ್ರಿ.ಪೂ. ೨೨೦ರಿಂದ ಕ್ರಿ.ಶ. ೨೩೬ರವರೆಗೆ ಆಳಿದರು. ಆದರೆ ನಂತರ ಮೂರು ಶತಮಾನಗಳವರೆಗೆ ಅಂದರೆ ವಿಜಾಪುರದ ವಾತಾಪಿಯಲ್ಲಿ (ಬಾದಾಮಿ) ಚಾಲುಕ್ಯ ಸಾಮ್ರಾಜ್ಯದ ಸ್ಥಾಪನೆ ಆಗುವವರೆಗೆ ಇದರ ಇತಿಹಾಸದ ಬಗೆಗೆ ಸ್ಪಷ್ಟ ಮಾಹಿತಿ ಇಲ್ಲ. ಚಾಲುಕ್ಯ ವಂಶದ ಎರಡನೆಯ ಪುಲಕೇಶಿಯು (ಕ್ರಿ.ಶ. ೬೦೮–೬೪೨) ಹರ್ಷನ ಸಮಕಾಲೀನನಾಗಿದ್ದು ಅವನಿಗೆ ಸರಿಸಮನಾದ ಶಕ್ತಿಯುಳ್ಳ ವಿರೋಧಿ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದನು. ಇವನ ಸಾಮ್ರಾಜ್ಯವು ಗುಜರಾತಿನಿಂದ ಮದ್ರಾಸಿನವರೆಗೆ ಹಬ್ಬಿತ್ತು. ಪರ್ಶಿಯಾದ ದೊರೆ ಎರಡನೆಯ ಖುಸ್ರು ಮತ್ತು ತನ್ನ ರಾಜ್ಯ ಇವುಗಳ ನಡುವೆ ರಾಯಭಾರಿಗಳನ್ನು ವಿನಿಮಯ ಮಾಡಿಕೊಳ್ಳುವಷ್ಟು ಪುಲಿಕೇಶಿಯ ಖ್ಯಾತಿ ಹರಡಿತ್ತು. ಈ ಸಂಗತಿಯನ್ನು ಅಜಂತಾದ ಭಿತ್ತಿ ಚಿತ್ರಗಳಲ್ಲಿ ಚಿತ್ರಿಸಲಾಗಿದೆ. ಆದರೆ ಇಂಥ ಅರಸನು ಕ್ರಿ.ಶ. ೬೪೨ರಲ್ಲಿ

೧. ಸ್ಟ್ರಾಬೊ xv ೪. ೭೩.

೨. ಹಿಸ್ಟ, ನೇಟ್. vi ೨೩. (೨೬)

೩. ಪಾಂಡ್ಯ, ಕೇರಳಪುತ್ರ, ಚೋಳ ಮತ್ತು ಸಾತಿಯಾಪುತ್ರ— ಈ ನಾಲ್ಕು ರಾಜ್ಯಗಳ ಬಗೆಗೆ ಅಶೋಕನ ಶಾಸನಗಳಲ್ಲಿ ಉಲ್ಲೇಖವಿದೆ.

ಪಲ್ಲವರಿಂದ ಸೋಲಿಸಲ್ಪಟ್ಟನು ಮತ್ತು ಹತನಾದನು.

ಪುಲಕೇಶಿ ಮತ್ತು ಹರ್ಷ ಇವರ ಮರಣದೊಂದಿಗೆ, ರಜಪೂತರ ಕಾಲ (ಆಳ್ವಿಕೆ) ಸುಮಾರು ಕ್ರಿ.ಶ. ೬೫೦ರಿಂದ ಪ್ರಾರಂಭವಾಗಿ ಕ್ರಿ.ಶ. ೧೦೦೦ಕ್ಕೆ ಕೊನೆಗೊಳ್ಳುತ್ತದೆ. ರಜಪೂತರ ರಾಜ್ಯ ಒಂದೇ ಇರಲಿಲ್ಲ. ಬಹುಸಂಖ್ಯೆಯಲ್ಲಿ ಇದ್ದವು. ಅವರೆಲ್ಲರೂ ಸಾಂಕೇತಿಕವಾಗಿ ಹಿಂದೂಗಳಾಗಿದ್ದರು. ಏಕೆಂದರೆ, ಅವರ ವಂಶಗಳ ಮೂಲಪುರುಷರು ಔತ್ತರೇಯ ದಾಳಿಕಾರರು ಅಥವಾ ಹಿಂದೂ ಮೂಲವಲ್ಲದ ಪ್ರಾಚೀನ ಬುಡಕಟ್ಟುಗಳಿಗೆ ಸಂಬಂಧಿಸಿದವರು. ಅಂಥವರಲ್ಲಿ ಕೆಳಗಿನವರನ್ನು ಹೆಸರಿಸಬಹುದು:

೧. ಕನೋಜ ಅಥವಾ ಪಾಂಚಾಳ. ಹರ್ಷನ ಮರಣದ ನಂತರ ಈ ರಾಜ್ಯವು ಬಹಳಷ್ಟು ತೊಂದರೆಗಳನ್ನು ಅನುಭವಿಸಿತು. ಆದರೆ ಕ್ರಿ.ಶ. ೮೪೦ರಿಂದ ಕ್ರಿ.ಶ. ೯೧೦ರವರೆಗೆ ಆಳಿದ ಬೋಜ (ಅಥವಾ ಮಿಹಿರ) ಮತ್ತು ಅವನ ಮಗನ ಆಳ್ವಿಕೆಯ ಕಾಲದಲ್ಲಿ ಇದು ಪ್ರಬಲ ಶಕ್ತಿಯಾಗಿ ಹೊರಹೊಮ್ಮಿತು. ಆಗ ಇವರ ರಾಜ್ಯವು ಬಿಹಾರದಿಂದ ಸಿಂಧದವರೆಗೆ ಹಬ್ಬಿತ್ತು. ೧೨ನೆಯ ಶತಮಾನದಲ್ಲಿ ಗಹರ್ವಾಹ (Gaharwas) ಅರಸು ಮನೆತನವು ಮತ್ತೆ ಪ್ರಾಮುಖ್ಯತೆ ಪಡೆಯಿತು.

೨. ಕನೋಜ ಯಾವಾಗಲೂ ಬಂಗಾಲದ ಪಾಲರೊಂದಿಗೆ ಯುದ್ಧದಲ್ಲಿ ತೊಡಗಿತ್ತು. ಪಾಲರು, ಸುಮಾರು ಕ್ರಿ.ಶ. ೭೩೦ರಲ್ಲಿ ಪ್ರಾರಂಭವಾದ ಬೌದ್ಧ ಅರಸರ ಸಂತತಿಯವರು. ಧರ್ಮಪಾಲನು (ಕ್ರಿ.ಶ. ೮೦೦) ಕನೋಜದ ಅರಸನನ್ನು ಪದಚ್ಯುತಗೊಳಿಸುವಷ್ಟು ಬಲಶಾಲಿಯಾಗಿದ್ದನು. ಅವನ ನಂತರ ಪಾಲ ರಾಜ್ಯದ ಪೂರ್ವಭಾಗವು ಪ್ರತ್ಯೇಕಗೊಂಡು ಸೇನರ ವೈರಿ ರಾಜ್ಯವಾಯಿತು.

೩. ಜಮುನಾದ ದಕ್ಷಿಣಕ್ಕಿರುವ ಜೇಜಕಭುಕ್ತಿ (Jejakabhukti), ಬುಂದೇಲ ಖಂಡ ಮತ್ತು ಚೇದಿ (ಸುಮಾರು ನಮ್ಮ ಮಧ್ಯ ಪ್ರದೇಶದಷ್ಟು ವಿಸ್ತಾರವಾದವು) ಇವುಗಳನ್ನು ಚಾಂದೇಲರು ಮತ್ತು ಕಲಚೂರಿಗಳು ಎಂಬ ಎರಡು ರಾಜ ಸಂತತಿಯವರು ಆಳುತ್ತಿದ್ದರು. ಚಾಂದೇಲರನ್ನು ಗೊಂಡ ಬುಡಕಟ್ಟಿನ ಮೂಲದಿಂದ ಬಂದವರೆಂದು ಪರಿಗಣಿಸಲಾಗಿದೆ. ಅವರು ಅಸಾಮಾನ್ಯ ಕಟ್ಟಡ ನಿರ್ಮಾಪಕರಾಗಿದ್ದರು. ಅವರ ಈ ಶಕ್ತಿಯ ಉತ್ಕೃಷ್ಟ ಅಭಿವ್ಯಕ್ತಿಗಳಾಗಿ ಖಜರಾವೊ ದೇವಾಲಯಗಳನ್ನೊಳಗೊಂಡ ಎಷ್ಟೋ ಸ್ಮಾರಕಗಳು ರಚಿತವಾಗಿದ್ದು ಇಂದಿಗೂ ಕಂಗೊಳಿಸುತ್ತವೆ. ಚಾಂದೇಲ ಕೀರ್ತಿವರ್ಮನು (ಕ್ರಿ.ಶ. ೧೦೪೯–೧೧೦೦) ತನ್ನ ರಾಜ್ಯದ ಗಡಿಗಳನ್ನು ವಿಶಾಲವಾಗಿ ವಿಸ್ತರಿಸಿದನು. ಅವನು ವಿದ್ಯಾ ಪೋಷಕನಾಗಿದ್ದನು. ಪ್ರಬೋಧ ಚಂದ್ರೋದಯವೆಂಬ ಕಥನ ರೂಪಕವು ಅವನ ಆಸ್ಥಾನದಲ್ಲಿಯೆ ಪ್ರದರ್ಶಿತವಾಯಿತು.

೪. ಮಾಳವ ಪಾರಮಾರ (ಪವಾರ) ಎಂಬ ಅರಸು ಸಂತತಿಯ ಸಾಹಿತ್ಯ ಪೋಷಕವೆಂಬ ಪ್ರಸಿದ್ಧಿ ಪಡೆದಿತ್ತು. ಮುಂಜ (ಕ್ರಿ.ಶ. ೯೭೪–೯೯೫) ಮತ್ತು ಭೋಜ (ಕ್ರಿ.ಶ. ೧೦೧೮–೧೦೬೦) ಅರಸರು ಪ್ರಖ್ಯಾತ ಯೋಧರು ಮಾತ್ರವಾಗಿರದೆ ಕವಿಗಳೂ ಆಗಿದ್ದರು.

## II
## ಶಕರ ಕಾಲ

ವಿನ್‌ಸೆಂಟ್ ಸ್ಮಿತ್‌ನ ಪ್ರಕಾರ ಕನಿಷ್ಕನಿಂದ ಆರಂಭಗೊಂಡು ಶಕವರ್ಷವು ಮೊದಲು ಕ್ರಿ.ಶ. ೭೮ ಎಂಬುದು ಹೆಚ್ಚು ಸಂಭಾವ್ಯವಾಗಿ ಕಂಡಿತ್ತು. ಆದರೆ ಅವನು ಅಂತಿಮವಾಗಿ ಅದು ಕ್ರಿ.ಶ. ೧೨೦ ಎಂಬ ನಿರ್ಧಾರಕ್ಕೆ ಬಂದನು. ನಾವೂ ಇದನ್ನೇ ಒಪ್ಪಬಹುದಾಗಿದೆ. ಯಾವ ಕಾಲಾನುಕ್ರಮದಲ್ಲಿ ಪ್ರಧಾನ ಕುಶಾನ ಅರಸರು ಆಳಿದರು ಎಂಬುದು ಇಂದಿಗೂ ಸಂದೇಹದ ವಿಷಯವಾಗಿಯೇ ಉಳಿದಿದೆ. ಕನಿಷ್ಕನು ಒಂದನೆಯ

ಕಾಡ್‌ಫಿಸೆಸ್ (ಕುಜಲ ಕಾಸ ಕಾಡ್‌ಫಿಸೆಸ್) ಮತ್ತು ಎರಡನೆಯ ಕಾಡ್‌ಫಿಸೆಸ್ (ವಿಮ ಕಾಡ್‌ಫಿಸೆಸ್) ಇವರ ನಂತರವೇ ಬಂದನು ಎಂಬುದನ್ನು ಸಾಮಾನ್ಯವಾಗಿ ಒಪ್ಪಲಾಗಿದೆ. ಈ ಇಬ್ಬರಲ್ಲಿ ಮೊದಲನೆಯವನೇ ಬ್ಯಾಕ್ಟ್ರೀನೀಕರಣಗೊಂಡ ಸಿಥಿಯನನು. ಡಾ. ಸ್ಮಿತ್‌ನ ಪ್ರಕಾರ ಇವನು ಸುಮಾರು ಕ್ರಿ.ಶ. ೪೦ರಲ್ಲಿ ಅಧಿಕಾರ ಗ್ರಹಣ ಮಾಡಿದನು (ಪಟ್ಟವೇರಿದನು). ಇವನು ಪಾರ್ಥಿಯನ್ ದೊರೆ ಗೊಂಡೆ ಫೆರ್ನ‌ಸ್‌ನಿಂದ ಗಾಂಧಾರಾ ಮತ್ತು ತಕ್ಷಶಿಲಾ ರಾಜ್ಯವನ್ನು ವಶಪಡಿಸಿಕೊಂಡ. ಕ್ರಿಶ್ಚಿಯನ್ ಧರ್ಮ ಪ್ರವರ್ತಕರ ಪೊಳ್ಳು ಕೃತಿಗಳಿಗೆ, ಸುಳ್ಳು ಭರವಸೆಗಳಿಗೆ ಮಾರುಹೋಗಿ ಸಂತ ಥಾಮಸ್‌ನನ್ನು ತನ್ನ ರಾಜ್ಯಕ್ಕೆ ಸ್ವಾಗತಿಸಿದವನೇ ಗೊಂಡೊಫೆರ್ನೆಸ್. ಅವನ ಮಗ ವಿಮ ಕಾಡ್‌ಫಿಸೆಸ್ (ಕ್ರಿ.ಶ. ೭೮–೧೧೦) ಪಂಜಾಬ ಮತ್ತು ಗಂಗಾ ಕಣಿವೆ ಪ್ರದೇಶದ ಪಶ್ಚಿಮಾರ್ಧ ಭಾಗವನ್ನೆಲ್ಲ ಒಳಗೊಂಡ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿದ.

ಕಾಡ್‌ಫಿಸೆಸ್ ಮತ್ತು ಕನಿಷ್ಕ ಇವರ ನಡುವೆ ಏನಿಲ್ಲೆಂದರೂ ಹತ್ತು ವರ್ಷಗಳ ಮಧ್ಯಂತರವಿದ್ದಂತಿದೆ. ಕನಿಷ್ಕನು ವಾಜೇಷ್ಕನೊಬ್ಬನ ಮಗನೇ ವಿನಾ ಅವನ ಹಿಂದೆ ಆಳಿದವರ ಸಂಬಂಧಿಯಲ್ಲ. ಅವನು ಖೋಟನ್ನಿನಿಂದ ಬಂದವ, ಬ್ಯಾಕ್ಟ್ರಿಯಾದಿಂದ ಬಂದವನಲ್ಲ. ಅವನು ಬೇಸಿಗೆಯನ್ನು ಪರೋಪನ್ನದಲ್ಲಿಯ...[೧] ಕಾಪಸಿಯಲ್ಲಿ ಮತ್ತು ಚಳಿಗಾಲವನ್ನು ಪುರುಷಪುರದಲ್ಲಿ (ಪೇಶಾವರ್) ಕಳೆಯುತ್ತಿದ್ದವ. ಅವನ ಸಾಮ್ರಾಜ್ಯದ ಅಕ್ಷವು ಗ್ರೀಕೊ–ಇರಾನಿಯನ್ ದೇಶದ (ಮಧ್ಯದಲ್ಲಿ)[೨] ಇರಲಿಲ್ಲ.

ಕನಿಷ್ಕನ ಸಾಮ್ರಾಜ್ಯವು ಅಲ್ಪಾಯುಷಿಯಾಗಿತ್ತು. ಅವನಿಗೆ ವಶಿಷ್ಕ ಮತ್ತು ಹುವಿಷ್ಕರೆಂಬ ಇಬ್ಬರು ಮಕ್ಕಳಿದ್ದರು. ಅವನ ನಂತರ ಬದುಕಿ ಉಳಿದವ ಹವಿಷ್ಕನು ಮಾತ್ರ.

ಮೂರನೆಯ ಶತಮಾನದಲ್ಲಿ ಕುಶಾನರ ಆಳ್ವಿಕೆಯು ಕಾಬೂಲ್ ಮತ್ತು ಗಂಧಹಾರಗಳನ್ನು ಒಳಗೊಂಡ ಬ್ಯಾಕ್ಟ್ರಿಯಾಕ್ಕೆ ಮಾತ್ರ ಇಳಿಕೆಯಾಯಿತು, ಮತ್ತು ಅವರು ಸಸಾನಿಡ್ಡರ ಆಳ್ವಿಕೆಗೆ ಒಳಗಾದರು.

**ಕ್ಷತ್ರಪರು ಅಥವಾ ಸತ್ರಪರು**

ಇದು ಇರಾಣೀ ಹೆಸರಾಗಿದ್ದ ಯು–ಚಿ ಅಲೆಮಾರಿಗಳ ದಾಳಿಯಿಂದ ಹೊರಹಾಕಲ್ಪಟ್ಟು, ಶಕರಿಂದ ಸ್ಥಾಪಿತವಾದ ಎರಡು ರಾಜ ಸಂತತಿಗಳಿಂದ ಹೀಗೆ ಕರೆಯಿಸಿಕೊಂಡಿದೆ.

I. ಮೊದಲನೆಯದು ಸೌರಾಷ್ಟ್ರದಲ್ಲಿ (ಕಾಠೇವಾಡ) ಸ್ಥಾಪಿತವಾಯಿತು. ಈ ಚಷ್ಟನ ವಂಶದ ಅರಸನೊಬ್ಬ ಕುಶಾನರ ಅಭ್ಯುದಯಕ್ಕಿಂತ ಮೊದಲು ಕನಿಷ್ಕನ ಸಾಮಂತನಾಗಿ ಮಾಳವದಲ್ಲಿ ಆಳುತ್ತಿದ್ದಂತೆ ತೋರುತ್ತದೆ. ಇವನು ಭಾರತೀಯ ಸಂಸ್ಕೃತಿಯ ಕೇಂದ್ರ ಬಿಂದುವಿನಂತಿದ್ದ ಉಜ್ಜಯನಿಯಲ್ಲಿ ಆಳಿದ.

II. ಶಕವಂಶಜರ ಎರಡನೆಯ ಪಂಗಡವನ್ನು ಕ್ಷಹರಾತ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇವರು ಆಂಧ್ರರ ಆಜನ್ಮ ವೈರಿಗಳು. ಈ ಸಂತತಿಯವರು ಆಧುನಿಕ ಸೂರತ್ ಮತ್ತು ಮುಂಬಯಿ ಇವುಗಳ ಮಧ್ಯದ ಪ್ರದೇಶವಾಗಿದ್ದ ಮಹಾರಾಷ್ಟ್ರವನ್ನು ಆಳಿದರು. ಈ ಎರಡನೆಯ ಪಂಗಡದ ಶಕರಾಜ್ಯವನ್ನು ಸಾತಕರ್ಣಿಯು ನಿರ್ನಾಮಗೊಳಿಸಿದನು. ಉಜ್ಜಯನಿಯ ಸತ್ರಪ ರುದ್ರದಾಮನನು ಆಂಧ್ರದ ಅರಸನನ್ನು ಗೆದ್ದಾಗ ನೆರವು ನೀಡಿದವರು ಮೊದಲನೆಯ ಪಂಗಡದವರು. ಪೂರ್ವ ಮತ್ತು ಪಶ್ಚಿಮ ರಾಜ್ಯಗಳ ಮಧ್ಯದಲ್ಲಿದ್ದ ವೈರತ್ವಕ್ಕೆ ಆಧಾರ ಅವರವರ ಆದರ್ಶಗಳಲ್ಲಿದ್ದ ಭಿನ್ನತೆಗಳು. ಭಾರತದ ಎಲ್ಲ ಸಿಥಿಯನ್ನರು ಅವರ ಸೆರಿಂಡಿಯನ್ನರು

---

೧. ಹಸ್ತಪ್ರತಿಯ ಈ ಭಾಗದಲ್ಲಿ ಅಕ್ಷರಗಳು ಬಿಟ್ಟುಹೋಗಿವೆ.

೨. ಹಸ್ತಪ್ರತಿಯ ಈ ಭಾಗವನ್ನು ಗೆದ್ದಲು ತಿಂದಿವೆ.

(ಮಧ್ಯ ಏಶಿಯಾ), ಉದಾಹರಣೆಗೆ ತೋರಖನ್ನರು ಬೌದ್ಧ ಧರ್ಮದ ಬಗೆಗೆ ಸಹಾನುಭೂತಿ ಉಳ್ಳವರಾಗಿದ್ದರು. ಇದಕ್ಕೆ ವಿರುದ್ಧವಾಗಿ ಆಂಧ್ರರು ಬ್ರಾಹ್ಮಣ ಧರ್ಮದ ಬಗೆಗೆ ಒಲವುಳ್ಳವರಾಗಿದ್ದರು.

## ಗುಪ್ತರು

ಮೂರನೆಯ ಶತಮಾನದ ಘಟನೆಗಳ ಮೇಲೆ ಇತಿಹಾಸವು ಬೆಳಕು ಚೆಲ್ಲದೇ ಇರುವುದರಿಂದ ಆ ಕಾಲದ ಕುಶಾನರ ಸಾಮ್ರಾಜ್ಯದ ಬಗೆಗೆ ನಮಗೆ ತಿಳಿದದ್ದು ಸ್ವಲ್ಪ. ಕ್ರಿ.ಶ. ೩೧೮–೧೯ರಲ್ಲಿ, ಹಳೆಯ ರಾಜ್ಯವಾಗಿದ್ದ ಮಗಧದಲ್ಲಿ ಗುಪ್ತರ ಹೊಸದೊಂದು ರಾಜ್ಯವು ಉದಯವಾದಾಗ ಬೆಳಕು ಮರಳಿ ಮೂಡಿತು.

ಗುಪ್ತ ವಂಶದ ಎರಡನೆಯ ಚಂದ್ರಗುಪ್ತನು ಉಜ್ಜಯನಿಯ ಶಾಕ್ತ ವಂಶದ ಮೊದಲನೆಯ ಮಹಾಸತ್ರಪನನ್ನು ಯುದ್ಧದಲ್ಲಿ ಸೋಲಿಸಿ ಅವನನ್ನು ಸಿಂಹಾಸನದಿಂದ ಕೆಳಗೆ ಉರುಳಿಸಿದ. ಅವನು ಮಾಳವಾ, ಗುಜರಾತ ಮತ್ತು ಸೌರಾಷ್ಟ್ರ (ಕಾಠೇವಾಡ) ದೇಶಗಳನ್ನು (ರಾಜ್ಯಗಳನ್ನು) ವಶಪಡಿಸಿಕೊಂಡ. ಪಶ್ಚಿಮ ದಿಕ್ಕಿನಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ, ಪಾಟಲೀಪುತ್ರದ ಬದಲಿಗೆ ಅಯೋಧ್ಯೆ ಮತ್ತು ಕೌಶಾಂಬಿಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದನು.[೧]

## ಪಾರ್ಥಿಯನ್ನರು ಮತ್ತು ಬ್ಯಾಕ್ಟ್ರಿಯನ್ನರ ಸ್ವಾತಂತ್ರ್ಯಹರಣ

ಡೆಮಿಟ್ರಿಯಸ್ (ಅಥವಾ ಮಿನಾಂಡರ್) ಗ್ರೀಕ್ ಎಂಬ ಗ್ರೀಕ್ ದೊರೆಯು[೨] ಕ್ರಿ.ಪೂ. ೧೫೫ರ ಸುಮಾರಿಗೆ ಸಂಪೂರ್ಣವಾಗಿ ಸಿಂಧೂ ನದಿಯ ಕೆಳಭಾಗವನ್ನು ಮತ್ತು ಕಾಠೇವಾಡಗಳನ್ನು ಗೆದ್ದನು. ರಾಜಪುತಾನಾ ಮತ್ತು ಔಧಗಳ ವಿರುದ್ಧ ಯುದ್ಧ ಮಾಡಿ ಜಮುನಾ ನದಿಯ ದಂಡೆಯ ಮೇಲಿನ ಮಥುರಾವನ್ನು ವಶಪಡಿಸಿಕೊಂಡ. ಅವನ ದಂಡಯಾತ್ರೆಯು ಪಾಟಲೀಪುತ್ರದವರೆಗೂ ಹೋಗಿತ್ತು. ಆದರೆ ಅವನು ಪುಷ್ಯಮಿತ್ರನಿಂದ ಅತಿ ಹೀನಾಯವಾಗಿ ಸೋಲಿಸಲ್ಪಟ್ಟ. ಉತ್ತರದಲ್ಲಿ ಬ್ಯಾಕ್ಟ್ರಿಯಾವು ಒಳಸೇರಲು ಅಡ್ಡಗಟ್ಟೆಯಾಯಿತು. ಹೀಗಾಗಿ ಪಾರ್ಥಿಯಾದಿಂದ ಭಾರತಕ್ಕೆ ದಂಡೆತ್ತಿ ಬರಲು ಆಸ್ಪದವಿಲ್ಲವಾಯಿತು. ಆದಾಗ್ಯೂ ಮಿತ್ರ ಡೇಟಸ್‌ನೆಂಬ (ಕ್ರಿ.ಪೂ. ೧೭೧–೧೩೬) ಪಾರ್ಥಿಯಾದ ಅರಸನು ಕ್ರಿ.ಪೂ. ೧೩೮ರಲ್ಲಿ ದಂಡೆತ್ತಿ ಬಂದು ಕೆಲವರ್ಷಗಳ ಮಟ್ಟಿಗಾದರೂ ತಕ್ಷಶಿಲಾ ರಾಜ್ಯವನ್ನು ಆಕ್ರಮಿಸಿಕೊಂಡಿದ್ದ.

ಪಾರ್ಥಿಯಾ ಮತ್ತು ಬ್ಯಾಕ್ಟ್ರಿಯಾಗಳ ಸ್ವಾತಂತ್ರ್ಯಹರಣದ ಘಟನೆಯು ಭಾರತದಿಂದ ದೂರದಲ್ಲಿದ್ದ ಮಂಗೋಲಿಯದ ಬೈಲು ಪ್ರದೇಶದಿಂದ ಬಂದ ಬುಡಕಟ್ಟು ಜನಾಂಗಗಳ ಹೊಸ ಧಾಳಿಯಿಂದ ಸಂಭವಿಸಿತು.

---

೧. ಸುಮಾರು (ಕ್ರಿ.ಪೂ.) ೧೫೫ರಲ್ಲಿ ಆತನು ಇಡೀ ಕೆಳ ಸಿಂಧೂ ಪ್ರದೇಶವನ್ನು ಮತ್ತು ಕಾಠೇವಾಡವನ್ನು ಗೆದ್ದನು. ರಜಪುತಾನ ಮತ್ತು ಔಧ್‌ಗಳೊಂದಿಗೆ ಯುದ್ಧ ಮಾಡಿದನು, ಮತ್ತು ಜಮುನಾದ ತಟಿಯಲ್ಲಿದ್ದ ಮಥುರಾ(ಮತ್ರಾ)ವನ್ನು ವಶಪಡಿಸಿದನು. ಮತ್ತು ಪಾಟಲೀಪುತ್ರವನ್ನೂ ತಲುಪಿದನು.
ಆತನು ಪುಶ್ಯಮಿತ್ರ(?)ನಿಂದ ತೀವ್ರ ಸೋಲನ್ನನುಭವಿಸಿದನು. ಪಾರ್ಥಿಯಾ ಮತ್ತು ಇಂಡಿಯಾದ ಗಡಿಯಾದ ಬ್ಯಾಕ್ಟ್ರಿಯಾನಾವು ಕನಿಷ್ಠ ಉತ್ತರದಲ್ಲಿತ್ತು. ಆದ್ದರಿಂದ ಇಂಡಿಯಾವು ಪಾರ್ಥಿಯಾದ ಧಾಳಿಗೆ ಹೆಚ್ಚು ತೆರೆದುಕೊಂಡಿರಲಿಲ್ಲ. ಆದರೂ ಮಿತ್ರಡೇಟಸ್ ೧ (೧೭೧–೧೩೬) ಎಂಬ ಒಬ್ಬ ಪಾರ್ಥಿಯದ ಅರಸು ತಕ್ಷಶಿಲಾದ ದೇಶವನ್ನು ೧೩೮ರ ಸುಮಾರಿಗೆ ಸ್ವಾಧೀನಪಡಿಸಿಕೊಂಡನು.

೨. ಕನ್ನಡ ಅನುವಾದಕರ ಈ ಹಿಂದಿನ ವಿವರಣೆಯನ್ನು ಗಮನಿಸಿ.

ಕ್ರಿ.ಪೂ. ೧೭೦ರ ಸುಮಾರಿಗೆ ಸಿಥಿಯನ್ನರಿಗೆ ಸಂಬಂಧಿಸಿದ ಅಲೆಮಾರಿಗಳಾದ ಯು–ಚಿ ಅಥವಾ ತೋಖಾರಿಯನ್ನರ ತಂಡ ಒಂದನ್ನು ಗೋಬಿ ಅಂದರೆ ಆಧುನಿಕ ಕಾಲದ ಕಾನ್ಸುವಿನಿಂದ ಹಿಯಾಂಗ–ನು ಅಥವಾ ಹೂಣರು ಹೊರಗೆ ದಬ್ಬಿದರು. ಹೀಗೆ ಬಂದವರಿಂದ ಉಂಟಾದ ಅಮಾನುಷ ಧಾಳಿಯಿಂದ ಏಶಿಯಾ ಖಂಡದ ಸಮತೋಲನವೇ ಏರುಪೇರಾಯಿತು.

ಅವರು ಪರ್ಶಿಯನ್ ಸಾಮ್ರಾಜ್ಯದ ಉತ್ತರದಲ್ಲಿ ವಾಸಿಸುತ್ತಿದ್ದ ಶಕರು ಅಂದರೆ ಇರಾಣೀಕರಣಗೊಂಡ ಸಿಥಿಯನ್ನರ ಮೇಲೆ ಏರಿಹೋದರು. ಜರ್ಝಾರ್ಟಸ್ಸಿನ ಉತ್ತರದಲ್ಲಿದ್ದ ಹುಲ್ಲುಗಾವಲುಗಳಲ್ಲಿ ನೆಲೆಸಿದರು. ಹೊರದಬ್ಬಿಸಿಕೊಂಡ ಶಕರು ಕ್ರಿ.ಪೂ. ೧೪೦–೧೨೦ರ ಮಧ್ಯದಲ್ಲಿ ಪಾರ್ಥಿಯಾ ಮತ್ತು ಬ್ಯಾಕ್ಟ್ರಿಯಾಗಳ ಮೇಲೆ ಏರಿಹೋಗಿ ಗ್ರೀಕ ಆಳ್ವಿಕೆಯ ಕಾಲದ ಅಳಿದುಳಿದ ಅವಶೇಷಗಳನ್ನು ನೆಲಸಮ ಮಾಡಿದರು. ನಂತರ ಇದಕ್ಕೆ ಪ್ರತಿಯಾಗಿ ಉ–ಸುನ್ ಬುಡಕಟ್ಟಿನವರಿಂದ ಸೋಲನ್ನು ಅನುಭವಿಸಿದ ಟೋಖಾರಿಯನರು ಆಕ್ಸಸ್ಸಿನಲ್ಲಿ ನೆಲೆಸಿದರು. ಆನಂತರ, ಭಾರತದ ಪ್ರವೇಶ ಸ್ಥಳದ ಹತ್ತಿರವಿದ್ದ, ಇರಾಣದ ಪೂರ್ವಕ್ಕಿದ್ದ ಶಕರ ಇಡಿ ರಾಜ್ಯವನ್ನು ವಶಪಡಿಸಿಕೊಂಡರು. ಕ್ರಿ.ಶ. ಒಂದನೇ ಶತಮಾನದಲ್ಲಿ ಭಾರತದ ಆ ಪ್ರವೇಶ ಮಾರ್ಗವನ್ನು ಕಂಡುಹಿಡಿದರು.

ಕುಶಾನರು (ಕುಶಾನ) ಭಾರತವನ್ನು ಜಯಿಸಿದರು. ಕುಶಾನರೆಂದರೆ, ಹಲವಾರು ಯು–ಚಿ ಬುಡಕಟ್ಟುಗಳನ್ನು ಒಗ್ಗೂಡಿಸಿ ಆದವರು ಮತ್ತು ತಮ್ಮ ಬಂಧು ಬಳಗದವರೇ ಆದ ಪಾರ್ಥಿಯಾದ ಶಕರ ಮೇಲೂ ಮತ್ತು ಪಂಜಾಬದ ಜನರ ಮೇಲೂ ಸ್ವಾಮಿತ್ವವನ್ನು ಸ್ಥಾಪಿಸಿದವರು.

ಈ ವಂಶದ ಪ್ರಮುಖ ಅರಸನಾದ ಕಾನಿಷ್ಕನ ಪಟ್ಟಾಭಿಷೇಕವು ಕ್ರಿ.ಪೂ. ೫೭ ಮತ್ತು ಕ್ರಿ.ಶ. ೨೦೦ರ ಮಧ್ಯದಲ್ಲಿ ಯಾವಾಗ ನಡೆಯಿತು ಎಂಬುದರ ಬಗೆಗೆ ಅನಿಶ್ಚಿತತೆ ಇದೆ.

ಪುಷ್ಯಮಿತ್ರನು, ಫ್ರೆಂಚ್ ಇತಿಹಾಸಜ್ಞ ಸಿಲ್ವನ್ ಲೇವಿ ಕರೆದಂತೆ ಅರಮನೆಯಲ್ಲಿ ಪ್ರತಿಹಾರಿ (ಮೇಯರ್) ಆಗಿದ್ದ.[೧]

ಸೆಲ್ಯೂಸಿಡ್ ಸಾಮ್ರಾಜ್ಯವನ್ನು ಮೂರನೆಯ ಆಂಟಿಯೋಕಸ್‌ನು (ಕ್ರಿ.ಪೂ. ೨೬೧–೨೬೪) ಆಳಿದನು. ಮತ್ತು ಒಂದೇ ಕಾಲಕ್ಕೆ ತಾವು ಸ್ವತಂತ್ರರೆಂದು ಸಾರಿದ ಪಾರ್ಥಿಯಾ ಮತ್ತು ಬ್ಯಾಕ್ಟ್ರಿಯಾನಾ ಪ್ರಾಂತಗಳನ್ನು ಕಳೆದುಕೊಂಡನು. ಭಾರತೀಯರಿಂದ ಪಲ್ಲವರೆಂದು ಕರೆಯಿಸಿಕೊಂಡ ಪಾರ್ಥಿಯನರು ಟರ್ಕೋಮನ್ ಬಯಲಿನ ಅಲೆಮಾರಿ ಬುಡಕಟ್ಟುಗಳಿಗೆ ಸಂಬಂಧಿಸಿದವರು ಮತ್ತು ಕಾಸ್ಪಿಯನದ ಆಗ್ನೇಯಕ್ಕಿದ್ದ ದೇಶವನ್ನು ಆಕ್ರಮಿಸಿದವರು. ಬ್ಯಾಕ್ಟ್ರಿಯನರು ಈಶಾನ್ಯಕ್ಕಿದ್ದ ಪಾರ್ಥಿಯನರ ರಾಜ್ಯದ ಅಂಚಿನಲ್ಲಿದ್ದ ಹಿಂದೂಕುಶ್ ಪರ್ವತ ಮತ್ತು ಆಕ್ಸಸ್ ನದಿಯ ಮಧ್ಯದ ಪ್ರದೇಶದಲ್ಲಿ ನೆಲೆಸಿದ್ದರು. ಅವರ ನಗರಗಳ ಸಾಂಪತ್ತಿಕ ಸ್ಥಿತಿ, ಕಟ್ಟುಕತೆ ಎನ್ನುವಷ್ಟು ಹೆಚ್ಚಿಗಿತ್ತು. ಈ ಎರಡು ರಾಜ್ಯಗಳ ಅರಸರು ಪಶ್ಚಿಮದಲ್ಲಿದ್ದ ಆಂಟಿಯೋಕಸ್ ಮತ್ತು ಅವನ ಉತ್ತರಾಧಿಕಾರಿಗಳಾದ ಎರಡನೆಯ ಸೆಲ್ಯೂಕಸ್ (ಕ್ರಿ.ಪೂ. ೨೪೬–೨೨೬) ಮತ್ತು ಮೂರನೆಯ ಸೆಲ್ಯುಕಸ್ (ಕ್ರಿ.ಪೂ. ೨೨೬–೨೨೩) ಇವರ ತೊಂದರೆಗಳ ಲಾಭ ಪಡೆದು ಸಮಯ ಸಾಧಿಸಿ ಅವರ ಪರಾಧೀನತೆಯಿಂದ ಮುಕ್ತರಾದರು.

---

೧. ಪುಷ್ಯಮಿತ್ರನು ಮೌರ್ಯರ ಸೇನಾಪತಿ. ಬಲಹೀನನಾಗಿದ್ದ ಕೊನೆಯ ಮೌರ್ಯ ಅರಸನನ್ನು ಕೊಂದ. ಶುಂಗ ರಾಜಸಂತತಿ– ಪ್ರಾರಂಭಿಸಿದ. ಇವನ ಮಗ ಅಗ್ನಿಮಿತ್ರ ಡೆಮಿಟ್ರಿಯಸ್ ಎಂಬ ಗ್ರೀಕ್ ದಾಳಿಕಾರರನ್ನು ಸೋಲಿಸಿದ. —ಕನ್ನಡ ಅನುವಾದಕ.

ಆರ್ಸೇಸನು ಸಂಸ್ಥಾಪಿಸಿದ ಪಾರ್ಥಿಯನ್ ಸಾಮ್ರಾಜ್ಯವು ಐದುನೂರು ವರುಷ ಬದುಕಿತ್ತು. ಅವನು ಜನಗಳ ಮುಖಂಡನಾಗಿದ್ದರಿಂದ ಅವನ ನೇತೃತ್ವದಲ್ಲಿ ನಡೆದ ಪಾರ್ಥಿಯನರ ದಂಗೆಯು ಸಹಜವಾಗಿತ್ತು.

ಬ್ಯಾಕ್ಟ್ರಿಯನ್ ಉತ್ಥಾನವು ಸಾಧ್ಯವಾದದ್ದು ಒಬ್ಬ ಮಹತ್ವಾಕಾಂಕ್ಷಿ ಗ್ರೀಕ್ ಸತ್ರಪನಿಂದ. ಏಶಿಯಾದ ಹೃದಯದಲ್ಲಿ ಗ್ರೀಕ್ ಸಂಸ್ಕೃತಿ (ಹೆಲೆನಿಜಂ) ಜ್ವಾಲಾಮುಖಿಯಂತೆ ಸ್ಫೋಟಿಸಿದ್ದು ಡಿಯೋಡೋಟಸ್ ನೇತೃತ್ವದಲ್ಲಿ.

ಭಾರತ ಮತ್ತು ಇರಾಣ ಮಧ್ಯದ ಗಡಿಗಳಲ್ಲಿ ಕಾಣಿಸಿಕೊಂಡ ಈ ಸಾಹಸೀ ರಾಜ್ಯಗಳಿಂದ ಅಶೋಕನ ಸಾಮ್ರಾಜ್ಯವು ಅವನ ನಂತರ ಪಟ್ಟವೇರಿದ ಅರಸರ ಕಾಲಕ್ಕೆ ಅಲುಗಾಡಹತ್ತಿತ್ತು.

ಪಂಜಾಬವು ಒಂದು ಕಾಲಕ್ಕೆ ಪರ್ಶಿಯಾದ ಸತ್ರಪಿ (ಪ್ರಾಂತ್ಯ) ಆಗಿತ್ತು. ನಂತರ ಅಲೆಕ್ಸಾಂಡರನ ಸಾಮ್ರಾಜ್ಯದಲ್ಲಿ ಒಂದು ಪ್ರಾಂತ್ಯವಾಯಿತು. ಹೀಗಾದಾಗಲೇ ಅದು ಪಾರ್ಥಿಯಾ ಮತ್ತು ಬ್ಯಾಕ್ಟ್ರಿಯಾ ದೇಶಗಳ ದಾಳಿಗೆ ಬಲಿಯಾಯಿತು. ಈಗ ಚಿಕ್ಕದಾದರೂ ದುರ್ದಮ್ಯವಾದ ರಾಜ್ಯಗಳು ಅದರ ಬಾಗಿಲ ಬಳಿಯಲ್ಲಿಯೇ ಹುಟ್ಟಿಕೊಂಡಿದ್ದವು. ಮೊದಲನೆಯ ಮತ್ತು ಎರಡನೆಯ ಡಿಯೋಡೊಟಸ್‌ರ ಮೇಲೆ ದಂಡಯಾತ್ರೆ ಕೈಗೊಂಡನು. ಕ್ರಿ.ಪೂ. ೨೦೮ರ ಸುಮಾರಿಗೆ ಬ್ಯಾಕ್ಟ್ರಿಯಾದ ಸ್ವಾತಂತ್ರ್ಯದೊಂದಿಗೆ ಮತ್ತು ಅದರ ಮನ್ನಣೆಯೊಂದಿಗೆ ಶಾಂತಿ ಸ್ಥಾಪಿತವಾಯಿತು. ಆದರೆ ಯುದ್ಧಗಳ ಸಂದರ್ಭದಲ್ಲಿ ಸಿರಿಯಾದ ಸೈನ್ಯದ ತುಕಡಿಗಳು ಹಿಂದೂಕುಶ್ ದಾಟಿ, ಕಾಬೂಲ ಕಣಿವೆಯ ಮೂಲಕ ಒಳನುಗ್ಗಿ ಅಲ್ಲಿಯ ಅರಸು ಸುಭಗಸೇನನ ರಾಜ್ಯವನ್ನು ನಿರ್ದಾಕ್ಷಿಣ್ಯವಾಗಿ ಕೊಳ್ಳೆ ಹೊಡೆದಿದ್ದವು. ಯುಥೀಡೇಮಸ್‌ನ ಮಗ ಡೆಮಿಟ್ರಿಯಸ್ ತನ್ನ ರಾಜ್ಯವನ್ನು ವಿಸ್ತರಿಸಿದ. ಅದು ಈಗಿನ ಅಫಗಾನಿಸ್ತಾನವೆಂದರೆ, ಆಗಿನ ಭಾರತದ ಭಾಗವೇ ಆಗಿತ್ತು. ಎಂತಲೇ ಅವನು ಭಾರತದ ಪ್ರಭು ಎಂಬ ಬಿರುದನ್ನು ಹೊಂದಿದ್ದ (ಕ್ರಿ.ಪೂ. ೨೦೦–೧೯೦). ಕ್ರಿ.ಪೂ. ೧೯೦ ಮತ್ತು ೧೮೦ರ ಮಧ್ಯದಲ್ಲಿ ಪಾಲಿಯೋನ್ ಮತ್ತು ಅಗಥೊಕ್ಲಿಸ್ ಎಂಬ ಗ್ರೀಕ್ ಸಾಹಸಿ ಅರಸರು ತಕ್ಷಶಿಲಾದಲ್ಲಿ ಆಳುತ್ತಿದ್ದರು. ಕ್ರಿ.ಪೂ. ೧೬೦–೧೪೦ರವರೆಗೆ ಕಾಬೂಲ ಮತ್ತು ಪಂಜಾಬಗಳು ಮಿಲಿಂದ ಅಥವಾ ಮಿನಾಂಡರ್ ಎಂಬ ಶುದ್ಧ ಗ್ರೀಕ ಅರಸನ ರಾಜ್ಯಕ್ಕೆ ಒಳಪಟ್ಟಿದ್ದವು. ಇವನು ಬೌದ್ಧ ಧರ್ಮದ ಚರಿತ್ರೆಯಲ್ಲಿ ಅಜರಾಮರವಾದ ಕಾಣಿಕೆ ನೀಡಿದವನೆಂದು ಪರಿಗಣಿತನಾಗಿದ್ದಾನೆ.

## III
## ಹೂಣರು

ಕುಮಾರಗುಪ್ತನ ಕೊನೆಗಾಲದಲ್ಲಿ ಹೊಸ ಇರಾಣಿ ಪಂಗಡಗಳು ಅವನ ರಾಜ್ಯದ ಮೇಲೆ ದಾಳಿ ಮಾಡಿದವು. ಆಗ ಇವರನ್ನು ಗಡಿಯಾಚೆಗೆ ತಳ್ಳಲಾಯಿತು. ಮತ್ತೆ ಸ್ಕಂದಗುಪ್ತನ ಕಾಲಕ್ಕೆ ಅದೇ ಗಡಿಗಳಿಂದ ಭೀಕರ ಧಾಳಿಗಾರರ ತೆರೆಗಳು ಏರಿಬಂದವು. ಇದರಲ್ಲಿ ಅಲೆಮಾರಿ ಮಂಗೋಲಿಯನ್ನರಿದ್ದರು. ಭಾರತವು ಇವರನ್ನೇ ಸೂಕ್ತವಾಗಿ ಹೂಣರೆಂದು ಕರೆದಿದೆ. ಯುರೋಪಿನ ಮೇಲೆ ದಾಳಿ ಮಾಡಿದವರು ಇದೇ ಹೂಣರೆಂದು ಗುರುತಿಸಲಾಗಿದೆ.

ಐದನೆಯ ಶತಮಾನದ ಮಧ್ಯದ ನಂತರ ಭಾರತಕ್ಕೆ ಬಂದವರು ಬಿಳಿಯ ಹೂಣರು ಅಥವಾ ಇಫ್ಥಲೈಟ್ಸ್‌ರು. ದೈಹಿಕ ಲಕ್ಷಣಗಳನ್ನು ಆಧರಿಸಿದ ಪ್ರಕಾರ ದೃಷ್ಟಿಯಿಂದ ಅವರು ಹೆಚ್ಚಾಗಿ ಟರ್ಕರನ್ನು ಹೋಲುತ್ತಾರಲ್ಲದೆ, ಯುರೋಪಿನ ಮೇಲೆ ಧಾಳಿಮಾಡಿದ ಕ್ರೂರಿ ಅಟಲಾನ ಅನುಯಾಯಿಗಳನ್ನಲ್ಲ.

ಆಕ್ಸಸ್ಸಿನ ಕಣಿವೆಯಲ್ಲಿ ನೆಲೆಸಿದ ನಂತರ ಅವರು ಪರ್ಶಿಯಾ ಮತ್ತು ಕಾಬೂಲಗಳನ್ನು ಸ್ವಾಧೀನಪಡಿಸಿಕೊಂಡರು. ಸ್ಕಂದಗುಪ್ತನು ಕೆಲವು ವರ್ಷಗಳವರೆಗೆ ತಡೆಗಟ್ಟಿದ್ದ. (ಕ್ರಿ.ಶ. ೪೫೫). ಆದರೆ ಕ್ರಿ.ಶ. ೪೮೪ರಲ್ಲಿ ಸಸಾನಿಡ್ಡಿನ ಫಿರೋಜನನ್ನು ಕೊಂದನಂತರ ಯಾವ ಭಾರತೀಯನಿಗೂ ಅವರ ಧಾಳಿಯನ್ನು ತಡೆಯಲು ಸಾಧ್ಯವಾಗಲಿಲ್ಲ. ಅವರಲ್ಲಿಯೆ ತೋರಮಾನಾನೆಂಬುವವನು ಕ್ರಿ.ಶ. ೫೦೦ರಲ್ಲಿ ಮಾಳವಾ ದೇಶದಲ್ಲಿ ನೆಲೆ ನಿಂತನು. ಅವನ ಮಗ ಮಿಹಿರಗುಲನು ಪಂಜಾಬಿನ ಸಕೋಲವನ್ನು (ಶಿಯಾಲಕೋಟ) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.

ಸ್ಥಾನೀಯ ಅರಸ ಯಶೋಧರ್ಮನು ಮಿಹಿಗುಲನ ಪ್ರಭುತ್ವವನ್ನು ಕೊನೆಗಾಣಿಸಿದನು. ಹೂಣರ ಹೊರಗಟ್ಟುವಿಕೆಯು ಎಲ್ಲೆಡೆಗೂ ಸಂಪೂರ್ಣವಾಗಿ ಸಾಧ್ಯವಾಗಲಿಲ್ಲ. ಅವರು ಬಹುಸಂಖ್ಯೆಯಲ್ಲಿ ಸಿಂಧು ಕೊಳ್ಳದಲ್ಲಿ ಆಶ್ರಯ ಪಡೆದರು.

ಏಳನೆಯ ಶತಮಾನದ ಪ್ರಾರಂಭದಲ್ಲಿ ಕಾಣಿಸಿಕೊಂಡ ಅರಾಜಕತೆಯಲ್ಲಿ ತಾನೇಶ್ವರವೆಂಬ (ದಿಲ್ಲಿಯ ಹತ್ತಿರದ ಠಾಣೇಶ್ವರ) ಚಿಕ್ಕ ಸಂಸ್ಥಾನವೊಂದು ಉದಯಿಸಿತು. ಇದರ ಅಸೀಮ ಸಾಹಸಿ ರಾಜಾ ಪ್ರಭಾಕರ ವರ್ಧನನು ರಾಜ್ಯವೊಂದನ್ನು ಕಟ್ಟಿ ತಾನು ಎಷ್ಟು ಸಮರ್ಥನೆಂಬುದನ್ನು ಗುರ್ಜರರು, ಮಾಳವರು ಮತ್ತು ನೆರೆಹೊರೆಯ ಅರಸರೆಲ್ಲರಿಗೂ ಯುದ್ಧದಲ್ಲಿ ತೋರಿಸಿದನು. ಕ್ರಿ.ಶ. ೬೦೪ ಅಥವಾ ೬೦೫ರಲ್ಲಿ ಅವನು ಮರಣ ಹೊಂದಿದ ಸ್ವಲ್ಪ ಅವಧಿಯಲ್ಲಿ ಬಂಗಾಲದಲ್ಲಿಯ ಗೌಡ ಪ್ರಾಂತದ ಅರಸನ ಆಜ್ಞೆಯ ಮೇರೆಗೆ ಅವನ ಹಿರಿಯ ಮಗನನ್ನು ಕೊಲೆ ಮಾಡಲಾಯಿತು. ಆಗ ಅವನ ಕಿರಿಯ ಸಹೋದರ ಹರ್ಷನು ಪಟ್ಟವೇರಿದನು.

* * *

# ೪
# ಮನು ಮತ್ತು ಶೂದ್ರರು

[ಇದು ಡಾ. ಅಂಬೇಡ್ಕರರ ೩೧ ಪುಟಗಳ ಕೈಬರಹದ ಹಸ್ತಪ್ರತಿ. ಈ ಪ್ರಕರಣಕ್ಕೆ ತಲೆಬರಹವಿಲ್ಲ (ಇದು ಪೂರ್ತಿಯೂ ಆಗಿಲ್ಲ) ಇದು ಅಪೂರ್ಣವಾಗಿದೆ. ತಲೆಬರಹವನ್ನು ಸೂಚಿಸಲಾಗಿದೆ. –ಸಂ.]

I

ಮನುವಿನ ಸಾಮಾಜಿಕ ವ್ಯವಸ್ಥೆಯಲ್ಲಿ ಚಾತುರ್ವರ್ಣದ ಹೊರಗೆ ಇದ್ದವರದೊಂದು, ಮತ್ತು ಚಾತುರ್ವರ್ಣದ ಒಳಗೆ ಇದ್ದವರದು ಇನ್ನೊಂದು. ಹೀಗೆ, ಎರಡು ಪ್ರಧಾನ ಸಾಮಾಜಿಕ ವಿಭಾಗಗಳು ಇದ್ದವೆಂಬುದು ಈಗ ಓದುಗನಿಗೆ ತಿಳಿದ ವಿಷಯವೇ ಆಗಿದೆ. ಇಂದಿನ ಕಾಲದ ಅಸ್ಪೃಶ್ಯರು ಅಂದಿನ ಕಾಲದ ಚಾತುರ್ವರ್ಣದ ಹೊರಗಿನವರ ಪ್ರತಿರೂಪ. ಮತ್ತು ಚಾತುರ್ವರ್ಣದ ಒಳಗಿನವರಿಗೂ ಮತ್ತು ಹೊರಗಿನವರಿಗೂ ಮಧ್ಯೆ ಭಿನ್ನ ಭಾವ ಎದ್ದು ಕಾಣುತ್ತಿತ್ತು ಎಂಬುದೂ ಓದುಗನಿಗೆ ತಿಳಿದಿದೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ಭಿನ್ನ ಭಿನ್ನ ವರ್ಗಗಳು ಕೂಡಿ ಆದ ಒಪ್ಪಂದದ ವ್ಯವಸ್ಥೆ ಅದಾಗಿತ್ತು.

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಸಮುದಾಯ ಭಾವನೆಗಿಂತ ಸಾಮಾಜಿಕ ವರ್ಗಗಳ ಭಾವನೆಯು ಹೆಚ್ಚು ಪ್ರಧಾನವಾದುದು. ಇಷ್ಟೇ ಅಲ್ಲ, ಈ ವ್ಯವಸ್ಥೆಯು ವರ್ಗವರ್ಗಗಳ ಮಧ್ಯೆ ಮತ್ತು ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅಸಮಾನತೆಯನ್ನು ಆಧರಿಸಿರುವಂಥದು. ಸ್ಥೂಲವಾಗಿ ಹೇಳುವುದಾದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅಂತ್ಯಜ (ಅಸ್ಪೃಶ್ಯ) ವರ್ಗಗಳು ಸಮಾನಾಂತರವಾದುವಲ್ಲ, ಒಂದೇ ಪಾತಳಿಯಲ್ಲಿ ಇರುವಂಥವಲ್ಲ. ಅವು ಲಂಬವಾದುವು, ಒಂದರ ಮೇಲೊಂದು ಇರುವಂಥವು. ಯಾವ ಹಿಂದುವೂ ಇದು ಹೀಗಿಲ್ಲವೆಂದು ಹೇಳಲಾರ. ಪ್ರತಿಯೊಬ್ಬ ಭಾರತೀಯನಿಗೂ ಇದು ಗೊತ್ತು. ಯಾರಿಗಾದರೂ ಈ ವಿಷಯದಲ್ಲಿ ಸಂದೇಹ ಇರುವುದಾದರೆ ಅದು ವಿದೇಶಿ ವ್ಯಕ್ತಿಗೆ ಮಾತ್ರ ಸಾಧ್ಯ. ಅಂಥವನು ಮನುವಿನ ಕಾನೂನುಗಳನ್ನು ಅವಲೋಕಿಸಿದರೆ ಸಂದೇಹ ಕರಗಿಹೋಗುತ್ತದೆ. ಏಕೆಂದರೆ ಮನುವು ಹಿಂದೂ ಸಮಾಜದ ಶಿಲ್ಪಿ. ಅವನ ಕಾನೂನುಗಳ ಆಧಾರದ ಮೇಲೆಯೆ ಹಿಂದೂ ಸಮಾಜ ರಚಿತವಾಗಿದೆ. ಮನುಸ್ಮೃತಿಯ ಯಾವ ಉಕ್ತಿಗಳನ್ನು ಎತ್ತಿ ತೋರಿಸಿದರೆ ಹಿಂದೂ ಸಮಾಜವು ಅಸಮಾನತೆಯನ್ನು ಆಧರಿಸಿದೆ ಎಂಬುದನ್ನು ರುಜುವಾತು ಪಡಿಸಿದಂತೆ ಆಗುತ್ತದೆಯೋ ಅಂಥವುಗಳನ್ನು ಮಾತ್ರ ವಿದೇಶಿಯ ಸಹಾಯಕ್ಕಾಗಿ ಪುನರುಕ್ತಿಗೊಳಿಸುತ್ತಿದ್ದೇನೆ (ಉದ್ಧರಣೆಗೊಳಿಸುತ್ತಿದ್ದೇನೆ).

II

ತನ್ನ ಸ್ಮೃತಿಯಲ್ಲಿ ಅಸಮಾನತೆಯನ್ನು ವಿಧಿಸಿದ ಮನುವಿನ ವಿಷಯ ಎಷ್ಟಾದರೂ ಐತಿಹಾಸಿಕ ಮಹತ್ವದ್ದೆಂದು ಯಾರಾದರೂ ವಾದಿಸಬಹುದು. ಇದು ಗತಕಾಲದ ಇತಿಹಾಸ. ಇದಕ್ಕೂ ವರ್ತಮಾನಕಾಲದ ಹಿಂದುವಿನ ವರ್ತನೆಗೂ ಯಾವುದೇ ಸಂಬಂಧವಿಲ್ಲ ಎಂದು ಭಾವಿಸುವುದಕ್ಕಿಂತ ದೊಡ್ಡದಾದ ತಪ್ಪು

ಮತ್ತೊಂದಿರಲಿಕ್ಕಿಲ್ಲ ಎಂಬುದು ನನಗೆ ಖಾತ್ರಿ ಇದೆ. ಮನುವಿನ ವಿಷಯವು ಮುಗಿದ ಕತೆಯಲ್ಲ. ವರ್ತಮಾನದ ಚರಿತ್ರೆ ಮಾತ್ರವಲ್ಲ, ಇನ್ನೂ ಹೆಚ್ಚಿನ ಅಂಶಗಳನ್ನು ಒಳಗೊಂಡಿದೆ. ಇದು ಇನ್ನೂ 'ಜೀವಂತವಾಗಿರುವ ಭೂತ'. ಆದ್ದರಿಂದ ಇದು ಯಾವುದೇ ವರ್ತಮಾನವು ನೈಜವಾಗಿರುವಷ್ಟೇ ವಾಸ್ತವವಾಗಿದೆ.

ಬ್ರಿಟಿಷರ ಕಾಲದಲ್ಲಿ, ಮನುವಿನಿಂದ ನಿರೂಪಿತವಾದ ಅಸಮಾನತೆಯ ನಿಯಮವೇ ನಾಡಿನ ಶಾಸನವಾಗಿತ್ತು ಎನ್ನುವುದು ಬಹಳಷ್ಟು ವಿದೇಶಿಯರಿಗೆ ತಿಳಿದಿರಲಿಲ್ಲ. ಇದಕ್ಕೆ ನಿದರ್ಶನವಾಗಿ ಕೆಲವೊಂದೇ ಉದಾಹರಣೆಗಳು ಸಾಕು.

ಮರಾಠರ ಮತ್ತು ಪೇಶ್ವೆಗಳ ಆಳಿಕೆಯಲ್ಲಿ, ಪೇಶ್ವೆಯರ ರಾಜಧಾನಿಯಾಗಿದ್ದ ಪುಣೆ ನಗರದ ಹೆಬ್ಬಾಗಿಲುಗಳ ಒಳಗೆ ಸಾಯಂಕಾಲ ಮೂರು ಗಂಟೆ ಮತ್ತು ಮುಂಜಾನೆ ಒಂಬತ್ತು ಗಂಟೆಯ ಮಧ್ಯದಲ್ಲಿ ಅಸ್ಪೃಶ್ಯರಿಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಕಾರಣವೇನೆಂದರೆ, ಮುಂಜಾನೆ ಒಂಬತ್ತು ಗಂಟೆಯ ಮೊದಲು ಮತ್ತು ಸಾಯಂಕಾಲ ಮೂರು ಗಂಟೆಯ ನಂತರ ಅವರ ದೇಹಗಳ ನೆರಳು ಅತಿ ಉದ್ದವಾಗಿ ಬೀಳುತ್ತದೆ. ಅವರ ನೆರಳು ಬ್ರಾಹ್ಮಣನ ಮೇಲೆ ಬಿದ್ದರೆ ಅವನನ್ನು ಮಲಿನಗೊಳಿಸುತ್ತದೆ. ಇಂಥವನು ಸ್ನಾನದಿಂದ ಶುಚಿರ್ಭೂತ ನಾಗುವ ಮೊದಲು ನೀರನ್ನು ಕುಡಿಯುವ, ಆಹಾರವನ್ನು ಸೇವಿಸುವ ಧೈರ್ಯ ಮಾಡಲಾರ. ಅದೇ ರೀತಿ ಯಾವುದೇ ಅಸ್ಪೃಶ್ಯನಿಗೆ ಪಟ್ಟಣದ ಹೊರಗೋಡೆಯ ಒಳಗೆ ವಾಸಿಸಲು ಅನುಮತಿ ಇರಲಿಲ್ಲ. ದನಕರು ಮತ್ತು ನಾಯಿಗಳು ಸ್ವತಂತ್ರವಾಗಿ ಪ್ರವೇಶಿಸಬಲ್ಲವವಾಗಿದ್ದವು, ಅದು ಅಸ್ಪೃಶ್ಯರಿಗೆ ಅಸಾಧ್ಯವಾಗಿತ್ತು![೧]

ಮರಾಠರ ಮತ್ತು ಪೇಶ್ವೆಗಳ ಆಳ್ವಿಕೆಯಲ್ಲಿ, ಹಿಂದುವಿನ ಕಾಲಿಗೆ ತಗುಲಿ ಮೈಲಿಗೆ ಆಗಬಾರದೆಂದು ಅಸ್ಪೃಶ್ಯರು ನೆಲದ ಮೇಲೆ ಉಗುಳುವಂತಿರಲಿಲ್ಲ, ಅವರು ಕುತ್ತಿಗೆಗೆ ಮಣ್ಣಿನ ಮಡಕೆಯನ್ನು ಕೊರಳಿಗೆ ತೂಗುಹಾಕಿಕೊಂಡು ಅದರಲ್ಲಿಯೇ ಉಗುಳಬೇಕಾಗಿತ್ತು. ಅಸ್ಪೃಶ್ಯನು ತನ್ನ ಹೆಜ್ಜೆಯ ಅಳಿಸಿ ಹಾಕಲು ಹೆಗಲಿಗೆ ಮುಳ್ಳಿನ ಟೊಂಗೆಯನ್ನು ನೆಲಕ್ಕೆ ಎಳೆಯುವಂತೆ ಕಟ್ಟಿಕೊಳ್ಳಬೇಕಾಗಿತ್ತು. ಬ್ರಾಹ್ಮಣನು ಬರುವುದನ್ನು ಕಂಡಾಗ, ಅವನು ಇನ್ನೂ ದೂರದಲ್ಲಿರುವಾಗಲೇ, ಅವನ ಮೇಲೆ ತನ್ನ ನೆರಳು ಬೀಳದಿರಲೆಂದು ನೆಲದ ಮೇಲೆ ಮಂಡೆಯೂರಿ ಮಲಗಬೇಕಾಗಿತ್ತು.[೨]

ಮಹಾರಾಷ್ಟ್ರದಲ್ಲಿ ಅಸ್ಪೃಶ್ಯನೆಂದು ಗುರುತಿಸಲು ಕರೀದಾರವನ್ನು ಕುತ್ತಿಗೆಗೆ ಅಥವಾ ಮುಂಗೈಗೆ ಕಟ್ಟಿಕೊಳ್ಳಬೇಕಾಗಿತ್ತು.

ಗುಜರಾತಿನಲ್ಲಿ ಅಸ್ಪೃಶ್ಯರು ಅಸ್ಪೃಶ್ಯತೆಯ ಗುರುತಾದ ಕೊಂಬನ್ನು ತಲೆಗೆ ಕಟ್ಟಿಕೊಂಡು ತಿರುಗಲು ಒತ್ತಾಯ ಮಾಡಲಾಗುತ್ತಿತ್ತು.[೩]

ಪಂಜಾಬಿನಲ್ಲಿ ತಾನು ಕಸಗುಡಿಸುವ ಕೀಳುಜಾತಿಗೆ ಸೇರಿದವನೆಂದು ತೋರಿಸಲು ಪಟ್ಟಣಗಳ ಬೀದಿಯಲ್ಲಿ ನಡೆಯುವಾಗ ಕೈಯಲ್ಲಿ ಅಥವಾ ಬಗಲಲ್ಲಿ ಕಸಬರಿಗೆಯನ್ನು ಇಟ್ಟುಕೊಳ್ಳಬೇಕಾಗಿತ್ತು.[೪]

ಮುಂಬಯಿಯಲ್ಲಿ ಅಸ್ಪೃಶ್ಯರಿಗೆ ಸ್ವಚ್ಛವಾದ ಮತ್ತು ಹರಿಯದ ಬಟ್ಟೆಗಳನ್ನು ತೊಟ್ಟುಕೊಳ್ಳಲು ಅನುಮತಿ ಇರಲಿಲ್ಲ. ಅಂಗಡಿಕಾರರು ಬಟ್ಟೆ ಹರಿದಿದೆ ಮತ್ತು ಹೊಲಸಾಗಿದೆ ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರವೇ ಅದನ್ನು ಅಸ್ಪೃಶ್ಯರಿಗೆ ಮಾರಬೇಕಾಗಿತ್ತು.

---

೧. ಡಾ. ಮುರ್ರೆ ಮಿಚ್ಚೆಲ್– ಗ್ರೇಟ್ ರಿಲಿಜನ್ಸ್ ಆಫ್ ಇಂಡಿಯಾ, ಪು. ೬೩

೨. ಬಾಂಬೆ ಗೆಜೆಟಿಯರ್ಸ್, ಸಂಚಿಕೆ XII, ಪು. ೧೭೫

೩. ಎನ್ಸೈ ಆರ್ ಅಂಡ್ ಇ. ಸಂಚಿಕೆ IX, ಪು ೬೩೬ (ಬಿ)

೪. ಪಂಜಾಬ್ ಸೆನ್ಸಸ್ ರಿಪೋರ್ಟ್ ೧೯೧೧, ಪು. ೪೧೩

ಮಲಬಾರಿನಲ್ಲಿ ಅಸ್ಪೃಶ್ಯರಿಗೆ ಅಂತಸ್ತಿನ ಅಂತಸ್ತಿನ ಮನೆಗಳನ್ನು ಕಟ್ಟಲು[೧] ಮತ್ತು ಸತ್ತವರನ್ನು ಸುಡಲು ಒಪ್ಪಿಗೆ ಕೊಟ್ಟಿರಲಿಲ್ಲ.[೨] ಅಸ್ಪೃಶ್ಯರಿಗೆ ಕೊಡೆಗಳನ್ನು ಉಪಯೋಗಿಸಲು, ಬೂಟುಗಳನ್ನು ಮೆಟ್ಟಲು, ಬಂಗಾರದ ಆಭರಣಗಳನ್ನು ಧರಿಸಲು, ಆಕಳನ್ನು ಹಿಂಡಲು, ಇಷ್ಟೇ ಏಕೆ, ದೇಶದ ಸರ್ವಸಾಮಾನ್ಯ ಭಾಷೆಯನ್ನು ಬಳಸಲೂ ಕೂಡ ಅನುಮತಿ ಕೊಟ್ಟಿರಲಿಲ್ಲ.[೩]

ದಕ್ಷಿಣ ಭಾರತದಲ್ಲಿ ಅಸ್ಪೃಶ್ಯರು ಸೊಂಟದ ಮೇಲಿನ ದೇಹದ ಭಾಗವನ್ನು ಮುಚ್ಚಿಕೊಳ್ಳಕೂಡದೆಂದು ಸ್ಪಷ್ಟವಾಗಿ ನಿಷೇಧಿಸಲಾಗಿತ್ತು. ಅಸ್ಪೃಶ್ಯ ಮಹಿಳೆಯರೂ ಕೂಡ ಎದೆಯನ್ನು ಮುಚ್ಚಿಕೊಳ್ಳುವಂತಿರಲಿಲ್ಲ.[೪]

ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಸೋನಾರರಂತಹ (ಅಕ್ಕಸಾಲಿಗ) ಮೇಲ್ಜಾತಿಯವರೂ ಕೂಡ ಧೋತಿಗಳನ್ನು ಮಡಿಕೆ ಹಾಕಿ ಉಡುವಂತಿರಲಿಲ್ಲ.[೫] ಮತ್ತು ಅವರಿಗೆ, 'ನಮಸ್ಕಾರ' ಎಂಬ ವಂದನೆಯ ಶಬ್ದವನ್ನು ಬಳಸದಂತೆ ನಿಷೇಧಿಸಲಾಗಿತ್ತು.[೬]

ದಾಮುಲ್‌ಶೆಟ್ಟ ತ್ರಿಂಬಕ್ ಶೆಟ್,

ಅಕ್ಕಸಾಲಿಗರ ಜಾತಿಯ ಮುಖ್ಯಸ್ಥ (ಪ್ರಧಾನ) ಇವನಿಗೆ,

ಅಕ್ಕಸಾಲಿಗ ಜಾತಿಯವರು, ನಮಸ್ಕಾರ ಎಂದು ನುಡಿದು ವಂದಿಸುವ ವಿಧಾನವನ್ನು ನಿಷೇಧಿಸುವುದು ಕೌನ್ಸಿಲ್ಲಿನ ಆದರಣೀಯ ಅಧ್ಯಕ್ಷರಿಗೆ ಉಚಿತವೆಂದು ಅನಿಸಿದ್ದರಿಂದ ಗೊತ್ತುವಳಿ ಸ್ವೀಕರಿಸಿ, ಆಜ್ಞೆ ಹೊರಡಿಸಲಾಗಿದೆ. ಇದನ್ನು ನಿಮ್ಮ ಜಾತಿಯವರೆಲ್ಲರ ಗಮನಕ್ಕೆ ತಂದು, ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರಲು ಈ ಮೂಲಕ ನಿನಗೆ ಮುಂಚಿತವಾಗಿ ಆಜ್ಞಾಪಿಸಲಾಗಿದೆ.

ಆಜ್ಞೆಯ ಮೇರೆಗೆ

ಮುಂಬಯಿ ಕ್ಯಾಸಲ್ — ಸಹಿ. : ಡಬ್ಲ್ಯು. ಪೇಜ್

೯ನೆಯ ಆಗಸ್ಟ್ ೧೭೭೯ — ಸರಕಾರದ ಕಾರ್ಯದರ್ಶಿ

## ಸರಕಾರದ ಗೊತ್ತುವಳಿ

**೨೮ನೆಯ ತಾರೀಖು, ಜುಲೈ ೧೭೭೯**

ಅಕ್ಕಸಾಲಿಗರು "ನಮಸ್ಕಾರ" ಎಂದು ನುಡಿದು ವಂದಿಸುವ ಪರಿಯ ಬಗೆಗೆ ಬ್ರಾಹ್ಮಣ ಮತ್ತು ಅಕ್ಕಸಾಲಿಗರ ಜಾತಿಗಳ ಮಧ್ಯದಲ್ಲಿ, ಆಗಾಗ, ಮೇಲಿಂದ ಮೇಲೆ, ವಾದ ವಿವಾದಗಳು ಎದ್ದಿವೆ. ಅಕ್ಕಸಾಲಿಗರಿಗೆ ಹೀಗೆ ನಮಸ್ಕರಿಸುವ ಹಕ್ಕು ಇಲ್ಲ. ಹೀಗೆ ಮಾಡುವುದು ಹಿಂದೂ ಧರ್ಮದ ಉಲ್ಲಂಘನೆ; ಅದನ್ನು ಅಪವಿತ್ರಗೊಳಿಸಿದಂತೆ– ಎಂದು ಆಪಾದಿಸಿ ಬ್ರಾಹ್ಮಣರು ನಮಗೆ ಮೇಲಿಂದ ಮೇಲೆ ತಕರಾರು ಸಲ್ಲಿಸಿದರಿಂದ ಮತ್ತು ಪೇಶ್ವೆಯವರೂ ಕೂಡ ಅಧ್ಯಕ್ಷರಿಗೆ, ಈ ರೀತಿ ಅಕ್ಕಸಾಲಿಗರು ನಮಸ್ಕಾರ ಎಂಬ ಪದವನ್ನು ಬಳಸದಂತೆ ನಿಷೇಧಿಸಲು, ವಿನಂತಿಪೂರ್ವಕವಾಗಿ ಬರೆದುಕೊಂಡದ್ದರಿಂದ, ಇಂಥ ಗೊತ್ತುವಳಿ ಸ್ವೀಕರಿಸುವ ಅವಶ್ಯಕತೆ ಉಂಟಾಯಿತು. ಎರಡೂ ಜಾತಿಗಳ ಮಧ್ಯದಲ್ಲಿಯ ವಿವಾದವನ್ನು ಬಗೆಹರಿಸಲು ಒಂದು ನಿರ್ಧಾರಕ್ಕೆ ಬರಬೇಕಾಯಿತು. ಅಕ್ಕಸಾಲಿಗರು 'ನಮಸ್ಕಾರ' ಎನ್ನುವುದನ್ನು ನಿಷೇಧಿಸಬೇಕು ಎಂಬ ಬ್ರಾಹ್ಮಣರ ತಕರಾರು ಸಕಾರಣವಾಗಿದೆ ಎಂದು ಭಾವಿಸಿದ್ದೇವೆ. ಇದರಲ್ಲಿ ಕಂಪನಿ ಸರಕಾರದ ಯಾವ ಹಿತಾಸಕ್ತಿಗಳೂ ಅಡಕವಾಗಿಲ್ಲ. ನಮ್ಮ ಗೊತ್ತುವಳಿಯನ್ನು ಪೇಶ್ವೆಯವರಿಗೆ ಗೌರವಪೂರ್ವಕವಾಗಿ ಮತ್ತು ಅಧ್ಯಕ್ಷರು ತಮ್ಮ ನಿರ್ಧಾರವನ್ನು ತಿಳಿಸಲು ಇಚ್ಛಿಸಿದ್ದಾರೆ ಎಂದು ಬರೆದು ತಿಳಿಸಬೇಕು.

---

೧. ಭಟ್ಟಾಚಾರ್ಯ, ಪು. ೨೫೬

೨. ಮದ್ರಾಸ್ ಸೆನ್ಸಸ್, ೧೮೯೧, ಪು. ೨೦೯

೩. ಭಟ್ಟಾಚಾರ್ಯ, ಒಂದು ಕ್ಯಾಸ್ಟ್ಸ್, ಪು. ೨೫೯

೪. ಮದ್ರಾಸ್ ಸೆನ್ಸಸ್, ೧೮೯೧, ಪು. ೨೨೪

೫. ಮಡಿಕೆ ಹಾಕಿ ಧೋತಿಗಳನ್ನು ಉಡುವ ವಿಧಾನವು ಬ್ರಾಹ್ಮಣರಿಗೆ ಮಾತ್ರ ಅನ್ವಯವಾಗುತ್ತಿತ್ತು. ಶೂದ್ರರು ಧೋತಿಗಳನ್ನು ಮಡಿಕೆ ಹಾಕದೆ ಸುತ್ತಿಕೊಳ್ಳುತ್ತಿದ್ದರು.

೬. ಮನುವಿನಿಂದ ನಿರೂಪಿತವಾದ ಧರ್ಮವು ನಾಡಿನ ಶಾಸನವಾಗಿತ್ತೋ ಇಲ್ಲವೊ ಎಂಬುದರ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತಿದೆಯಾದ್ದರಿಂದ, ಕೆಳಗಿನ ಪತ್ರವು ಓದುಗನಿಗೆ ಸ್ವಾರಸ್ಯಕರವೆನಿಸಬಹುದು.

ಮರಾಠರ ಆಳ್ವಿಕೆಯಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಬೇರೆ ಯಾರೇ ಆಗಲಿ, ವೇದ ಮಂತ್ರವನ್ನು ಉಚ್ಚರಿಸುವಂತಿರಲಿಲ್ಲ. ಉಚ್ಚರಿಸಿದರೆ ಅಂಥವನ ನಾಲಿಗೆಯನ್ನು ಕತ್ತರಿಸಿ ಹಾಕಲಾಗುತ್ತಿತ್ತು. ವಾಸ್ತವ ಸಂಗತಿ ಎಂದರೆ, ಶಾಸನಕ್ಕೆ ವಿರುದ್ಧವಾಗಿ ವೇದಮಂತ್ರವನ್ನು ಉಚ್ಚರಿಸಿದ ಮೊಂಡುತನಕ್ಕಾಗಿ, ಭಂಡ ಧೈರ್ಯಕ್ಕಾಗಿ, ಅನೇಕ ಸೋನಾರರ (ಅಕ್ಕಸಾಲಿಗರ) ನಾಲಿಗೆಗಳನ್ನು ಅರಸನ ಆಜ್ಞೆಯನನುಸರಿಸಿ ಕೊಯ್ದು ಹಾಕಲಾಯಿತು.

ಇಡಿ ಭಾರತದಲ್ಲಿ ಬ್ರಾಹ್ಮಣನು ಮರಣ ದಂಡನೆಯ ಶಿಕ್ಷೆಯಿಂದ ಮುಕ್ತನಾಗಿದ್ದಾನೆ. ಕೊಲೆ ಮಾಡಿದರೂ ಅವನನ್ನು ಗಲ್ಲಿಗೆ ಹಾಕುವಂತಿರಲಿಲ್ಲ. ಪೇಶ್ವೆಯವರ ಆಳ್ವಿಕೆಯಲ್ಲಿ ಅಪರಾಧಿಗಳಿಗೆ ಅವರವರ ಜಾತಿಯನ್ನು ನೋಡಿ ಶಿಕ್ಷೆಯ ಸ್ವರೂಪವನ್ನು ನಿರ್ಧರಿಸಲಾಗುತ್ತಿತ್ತು. ಸಶ್ರಮ ಮತ್ತು ಮರಣದಂಡನೆ ಶಿಕ್ಷೆಗಳನ್ನು ಬಹುತೇಕವಾಗಿ ಅಸ್ಪೃಶ್ಯರೇ ಅನುಭೋಗಿಸಬೇಕಾಗಿತ್ತು.

ಪೇಶ್ವೆಯವರ ಆಳ್ವಿಕೆಯಲ್ಲಿ ಬ್ರಾಹ್ಮಣರಿಗೆ ಕೆಲವೊಂದು ವಿಶೇಷ ಸೌಲಭ್ಯಗಳಿದ್ದವು. ಬ್ರಾಹ್ಮಣ ಕಾರಕೂನರು ತಮ್ಮ ಕೆಲವೊಂದು ಸಾಮಾನುಗಳಿಗೆ ಸುಂಕವನ್ನು ಮತ್ತು ಆಮದು ಮಾಡಿಕೊಂಡ ಕಾಳುಕಡ್ಡಿಗಳಿಗೆ ಹರಿಗೋಲ ಬಾಡಿಗೆಯನ್ನು ಕೊಡಬೇಕಾಗಿರಲಿಲ್ಲ. ಬ್ರಾಹ್ಮಣ ಜಮೀನುದಾರರು, ಉಳಿದ ಜಾತಿಗಳ ಜಮೀನುದಾರರಿಗಿಂತ ಕಡಿಮೆ ಕರಾಕರಣೆಯ ಸೌಲಭ್ಯ ಹೊಂದಿದ್ದರು. ಬಂಗಾಲದಲ್ಲಿ ಭೂ ಹಿಡುವಳಿ ಮೇಲಿನ ಲಾವಣಿಯು ಜಾತಿಯನ್ನು ಆಧರಿಸಿ ನಿರ್ಧಾರವಾಗುತ್ತಿತ್ತು. ಹಿಡುವಳಿದಾರನು ಅಸ್ಪೃಶ್ಯನಾಗಿದ್ದರೆ ಹೆಚ್ಚು ಲಾವಣಿಯನ್ನು ಕೊಡಬೇಕಾಗುತ್ತಿತ್ತು.

ಮನುವು ಕ್ರಿ.ಶ. ಪೂರ್ವದಲ್ಲಿಯೇ ಜನಿಸಿರಲಿ ಅಥವಾ ಕ್ರಿ.ಶ. ನಂತರವೇ ಜನಿಸಿರಲಿ ಅವನು ಇನ್ನು ಸತ್ತಿಲ್ಲ, ಜೀವಂತನಾಗಿದಾನೆ ಎಂಬುದನ್ನು ಈ ಸಂಗತಿಗಳು ಸಾಬೀತುಪಡಿಸುತ್ತವೆ. ಹಿಂದೂ ಅರಸರು ಆಳುತ್ತಿದ್ದಾಗ, ಹಿಂದೂ ಮತ್ತು ಹಿಂದೂವಿನ ಮಧ್ಯೆ, ಸ್ಪೃಶ್ಯ ಮತ್ತು ಅಸ್ಪೃಶ್ಯನ ಮಧ್ಯೆ ನ್ಯಾಯ ನಿರ್ಣಯವು ಮನುವಿನ ಶಾಸನದ ಅನುಸಾರವಾಗಿಯೇ ನಡೆಯುತ್ತಿತ್ತು. ಅಂಥ ಶಾಸನವು ಅಸಮಾನತೆಯನ್ನೇ ಆಧರಿಸಿ ನಿಂತಿತ್ತು.

## III

ಇದು ಮನುವಿನಿಂದ ಸ್ಥಾಪಿತವಾದ ಧರ್ಮ. ಇದಕ್ಕೆ ಮಾನವ ಧರ್ಮವೆಂತಲೂ ಕರೆಯುತ್ತಾರೆ. ಅಂದರೆ ಇದರಿಂದ ಸಹಜವಾಗಿ ಎಲ್ಲರಿಗೂ ಎಲ್ಲ ಕಾಲಕ್ಕೂ, ಎಲ್ಲ ಸ್ಥಳದಲ್ಲೂ ಒಳ್ಳೆಯದೇ ಆಗುತ್ತದೆಂಬ ತಿಳಿವಳಿಕೆ. ಇಂಥದೊಂದು ಧರ್ಮವು ಭಾರತದ ಹೊರಗೆ ಇಲ್ಲದಿರುವುದು ಶಾಪವೋ, ವರವೋ ಎಂಬ ಬಗ್ಗೆ ಚಿಂತನೆ ಮಾಡುವ ಇಚ್ಛೆ ನನಗಿಲ್ಲ. ಆದರೆ ಒಂದು ಸಂಗತಿಯನ್ನು ಗಮನಿಸುವುದು ಮಹತ್ವದ್ದು. ಅದೆಂದರೆ ಎಲ್ಲ ಸೌಲಭ್ಯಗಳು ಇರುವುದು ಬ್ರಾಹ್ಮಣನಿಗಾಗಿಯೇ. ಆದರೆ ಶೂದ್ರನಿಗೆ ಮಾನವನಾಗಿ ಬದುಕಲೂ ಕೊಡಬೇಕಾದ ಕನಿಷ್ಠ ಹಕ್ಕುಗಳೂ (ಸೌಲಭ್ಯಗಳೂ) ಇಲ್ಲದಿರುವುದು. ಅಂದರೆ, ಮೇಲ್ಜಾತಿಯಲ್ಲಿ ಹುಟ್ಟಿದ ಒಂದೇ ಒಂದು ಕಾರಣದಿಂದ ಎಲ್ಲ ವಿಷಯಗಳಲ್ಲಿ ಬ್ರಾಹ್ಮಣನು ಎಲ್ಲರಿಗಿಂತ ಮೇಲು. ಶೂದ್ರನು ಎಲ್ಲರಿಗಿಂತಲೂ ಕೀಳು. ಶೂದ್ರನ ಯೋಗ್ಯತೆ ಎಷ್ಟೇ ದೊಡ್ಡದಿದ್ದರೂ ಅವನು ವಸ್ತುಗಳಿಂದ ಮತ್ತು ಸೌಲಭ್ಯಗಳಿಂದ ವಂಚಿತ. ಇಂಥ ಅಸಮಾನತೆಯ ಸಿದ್ಧಾಂತದ ಮೇಲೆ ಮಾನವ ಧರ್ಮ ನಿಂತಿದೆ.

ಈ ಮಾನವ ಧರ್ಮದ ನಾಚಿಕೆಗೇಡುತನ ಮತ್ತು ಅವಿವೇಕತನವನ್ನು ವ್ಯಕ್ತಪಡಿಸುವುದೆಂದರೆ ಇದನ್ನು ಪೂರ್ತಿ ಬುಡಮೇಲುಗೊಳಿಸುವುದು. ಇದನ್ನು ಬಿಟ್ಟು ಅನ್ಯಮಾರ್ಗವೇ ಇಲ್ಲ. ಈ ದಿಶೆಯಲ್ಲಿ ಸಮರ್ಥ ಪ್ರಯತ್ನ ಮಾಡಿದವರು, ಮಹಾನ್ ಶಿಕ್ಷಣತಜ್ಞ, ರಾಜಕಾರಣಿ ಮತ್ತು ಸಮಾಜ ಸುಧಾರಕ, ಡಾ. ಆರ್.ಪಿ.

ಪರಾಂಜಪೆ. ಅದನ್ನು ಪೂರ್ತಿಯಾಗಿ ಪುನರುಕ್ತಿಗೊಳಿಸಲು ನಾನು ಅವರ ಕ್ಷಮೆ ಕೋರಬೇಕಾಗಿಲ್ಲವೆಂದು ಭಾವಿಸಿದ್ದೇನೆ.

**ಭವಿಷ್ಯತ್ತಿನ ಇಣುಕು ನೋಟ**

ಮುಂಬಯಿ, ಮದ್ರಾಸ ಮತ್ತು ಮಧ್ಯಪ್ರದೇಶ ಪ್ರಾಂತಗಳಲ್ಲಿ ಅಧಿಕಾರದಲ್ಲಿದ್ದ ಬ್ರಾಹ್ಮಣೇತರ ಪಕ್ಷಗಳಿಗೆ ವಿರುದ್ಧವಾಗಿ (ಸಂಬಂಧಿಸಿದಂತೆ) ಈ ಅಂಕಣವನ್ನು ಬರೆಯಲಾಗಿದೆ. ರಾಜ್ಯ ಸೇವೆಗಳಲ್ಲಿ ಯಾವುದೇ ಜಾತಿಗೆ ಏಕಸ್ವಾಮ್ಯ ಹೊಂದಲು ಅವಕಾಶ ನೀಡಬಾರದೆಂಬ ಸ್ಪಷ್ಟ ಉದ್ದೇಶದಿಂದ ಬ್ರಾಹ್ಮಣೇತರ ಪಕ್ಷಗಳು ಸ್ಥಾಪಿತವಾಗಿದ್ದವು. ಭಾರತದ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಸೇವೆಗಳಲ್ಲಿ ಮತ್ತು ಇಲಾಖೆಗಳಲ್ಲಿ ಕೆಲಸ ಮಾಡುವವರೆಲ್ಲರೂ ಬಹುತೇಕವಾಗಿ ಬ್ರಾಹ್ಮಣರೇ ಆಗಿದ್ದರು. ಆದ್ದರಿಂದ ಅಧಿಕಾರದಲ್ಲಿದ್ದ ಬ್ರಾಹ್ಮಣೇತರರ ಪಕ್ಷಗಳು ಜಾತಿ–ಸಂಖ್ಯಾ ಪ್ರಮಾಣ ಆಧಾರಿತ ತತ್ವಕ್ಕೆ ಬದ್ಧವಾಗಿದ್ದವು. ಅಂದರೆ, ಸರಕಾರಿ ಸೇವೆಗಳಿಗೆ ನೇಮಕ ಮಾಡಿಕೊಳ್ಳುವಾಗ ಕನಿಷ್ಠ ಅರ್ಹತೆ ಹೊಂದಿದ ಬ್ರಾಹ್ಮಣೇತರ ಅಭ್ಯರ್ಥಿಗಳಿಗೆ, ಹೆಚ್ಚು ಅರ್ಹತೆ ಹೊಂದಿದ ಬ್ರಾಹ್ಮಣ ಅಭ್ಯರ್ಥಿಗಳಿಗಿಂತಲೂ (ಅವರವರ ಜನಸಂಖ್ಯಾ ಪ್ರಮಾಣಕ್ಕೆ ಅನುಸರಿಸಿ) ಹೆಚ್ಚಿನ ಆದ್ಯತೆ ನೀಡಬೇಕೆಂಬ ನಿರ್ಧಾರ ಕೈಗೊಂಡಿದ್ದವು. ನನ್ನ ದೃಷ್ಟಿಯಲ್ಲಿ ಈ ತತ್ವದಲ್ಲಿ ಯಾವ ದೋಷವೂ ಇರಲಿಲ್ಲ. ಯಾವುದೇ ಒಂದು ಜಾತಿಯವರು ಎಷ್ಟೇ ಚಾಣಾಕ್ಷರಿದ್ದಾಗಲೂ, ಸಂಪೂರ್ಣವಾಗಿ ಅವರ ಕೈಯಲ್ಲಿಯೆ ದೇಶದ ಆಡಳಿತ ಯಂತ್ರ ಇರಬೇಕೆಂಬುದು ನಿಸ್ಸಂಶಯವಾಗಿ ತಪ್ಪು.

ಒಳ್ಳೆಯ ಸರಕಾರವು ಸಮರ್ಥ ಸರಕಾರಕ್ಕಿಂತ ಉತ್ತಮವಾದುದು ಎಂಬ ತತ್ವವನ್ನು ಶಾಸಕಾಂಗ ಮತ್ತು ಕಾರ್ಯಾಂಗಗಳಿಗೆ ಮಾತ್ರ ಸೀಮಿತಗೊಳಿಸಬಾರದು. ಆಡಳಿತ ಕ್ಷೇತ್ರಕ್ಕೂ ಇದು ಅನ್ವಯವಾಗಬೇಕು ಎಂಬ ದೃಷ್ಟಿಕೋನವನ್ನು ಬ್ರಾಹ್ಮಣೇತರ ಪಕ್ಷಗಳು ಹೊಂದಿದ್ದವು. ಜನಸಾಮಾನ್ಯರೊಂದಿಗೆ ರಾಜ್ಯದ ನೇರ ಸಂಪರ್ಕ ಉಂಟಾಗುವುದು ಸರಕಾರಿ ಆಡಳಿತದ ಮೂಲಕವೇ. ಸಹಾನುಭೂತಿ ಹೊಂದಿದ ಆಡಳಿತದಿಂದ ಮಾತ್ರ ಒಳ್ಳೆಯದಾಗಬಹುದು. ಕೇವಲ ಬ್ರಾಹ್ಮಣರಿಂದ ಕೂಡಿದ ಆಡಳಿತ ಯಂತ್ರದಿಂದ ಸಹಾನುಭೂತಿ ಅಪೇಕ್ಷಿಸಲು ಸಾಧ್ಯವಿಲ್ಲ. ಜನಸಾಮಾನ್ಯರಿಗಿಂತ ತಾನು ಶ್ರೇಷ್ಠನೆಂದು ಭಾವಿಸಿದವನು ಉಳಿದ ಜಾತಿಯವರನ್ನು ಮತ್ತು ಶೂದ್ರರನ್ನು ತುಚ್ಛವಾಗಿ ಕಾಣುತ್ತಾನೆ ಮತ್ತು ಅವರ ಆಶೆ ಆಕಾಂಕ್ಷೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ. ತನ್ನ ಜಾತಿಯವರ ಬಗ್ಗೆ ಸಹಜವಾಗಿ ಒಲವುಳ್ಳವನಾಗಿರುತ್ತಾನೆ. ಬೇರೆ ಜಾತಿಯವರ ಬಗ್ಗೆ ಪಕ್ಷಪಾತ ದೃಷ್ಟಿ ಹೊಂದಿರುತ್ತಾನೆ. ಜನಸಾಮಾನ್ಯರ ಬಗೆಗೆ ನಿರಾಸಕ್ತಿ ಹೊಂದಿರುತ್ತಾನೆ. ಲಂಚ ರುಷುವತ್ತುಗಳ ಮುಖ ನೋಡುತ್ತಾನೆ. ಇಂಥ ಬ್ರಾಹ್ಮಣನು ಹೇಗೆ ತಾನೆ ಒಳ್ಳೆಯ ಆಡಳಿತಗಾರನಾಗಿರಲು ಸಾಧ್ಯ? ಇವನು ಜನಸಾಮಾನ್ಯರಿಗೆ ಬೇರೆ ದೇಶದವನಷ್ಟೇ ಪರಕೀಯನಾಗಿರುತ್ತಾನೆ. ಅಂದರೆ ಸಹೃದಯತೆ ಇಲ್ಲದವನಾಗಿರುತ್ತಾನೆ. ಇದಕ್ಕೆ ವಿರುದ್ಧವಾಗಿ ಬ್ರಾಹ್ಮಣರು ತಮಗೆ ಸಿಗುತ್ತಿರುವ ಅಮಿತ ಅವಕಾಶಕ್ಕೆ ಮುಖ್ಯ ಕಾರಣ ತಮ್ಮ ಕಾರ್ಯ ಸಾಮರ್ಥ್ಯವಲ್ಲದೆ ಮತ್ತೇನು ಅಲ್ಲವೆಂದು ಶುದ್ಧ ಮತ್ತು ಸರಳವಾಗಿ ಬಗೆದಿರುತ್ತಾರೆ. ಉಚ್ಚ ಶಿಕ್ಷಣ ಪಡೆದ ಅವರಿಗೆ ಗೆಲುವು ತಂದುಕೊಡಬಲ್ಲ ಇಸ್ಪೀಟಿನ ಎಲೆಯೆಂದರೆ ಅದೊಂದೇ. ಆದರೆ ಇದಕ್ಕೆ, ಒಂದು ವೇಳೆ ಕಾರ್ಯಸಾಮರ್ಥ್ಯ ಒಂದೇ ಮಾನದಂಡವಾಗಿರುತ್ತಿದ್ದರೆ, ಸರಕಾರಿ ಸೇವೆಗಳ ಏಕಸ್ವಾಮ್ಯವನ್ನು ಈಗಿರುವ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಪಡೆಯಲು ಇಷ್ಟೊಂದು ಸಂಭಾವ್ಯವೇ ಇರುತ್ತಿರಲಿಲ್ಲ ಎಂಬುದನ್ನು ಅವರು ನೆನಪು ಹಾಕುತ್ತಾರೆ. ಕಾರ್ಯಸಾಮರ್ಥ್ಯ ಒಂದನ್ನೇ ಮಾನದಂಡವನ್ನಾಗಿ ಪರಿಗಣಿಸಿದರೆ ಬ್ರಾಹ್ಮಣರಿಗಿಂತಲೂ ಸಮರ್ಥರಾದ ಇಂಗ್ಲಿಷರನ್ನು, ಫ್ರೆಂಚರನ್ನು, ಜರ್ಮನರನ್ನು ಮತ್ತು ಟರ್ಕರನ್ನು ಕೆಲಸಕ್ಕೆ ಸೇರಿಸಿಕೊಂಡರೆ ತಪ್ಪೇನು ಇಲ್ಲವೆಂದಂತಾಗುತ್ತದೆ. ಅದು ಹೇಗಾದರೂ ಇರಲಿ, ಬ್ರಾಹ್ಮಣೇತರ

ಪಕ್ಷಗಳು ಕಾರ್ಯ ಸಾಮರ್ಥ್ಯದ ಮಾನದಂಡ ಒಂದನ್ನೇ ಪರಿಗಣಿಸಲು ನಿರಾಕರಿಸಿದರು. ಇದಕ್ಕೆ ಬದಲಾಗಿ, ಜಾತಿಯ ಜನಸಂಖ್ಯಾ ಪ್ರಮಾಣಕ್ಕೆ ಅನುಸರಿಸಿ ಸರಕಾರಿ ಸೇವೆಗಳಲ್ಲಿ ಅವಕಾಶಗಳನ್ನು ಒದಗಿಸುವುದರಿಂದ ಎಲ್ಲ ಜಾತಿಗಳ ಮಿಶ್ರಣವಾದಂತಾಗಿ ಆಡಳಿತವು ಉತ್ತಮವಾಗಿ ಪರಿಣಮಿಸುತ್ತದೆ ಎಂದು ಭಾವಿಸಿದರು. ಬ್ರಾಹ್ಮಣೇತರ ಪಕ್ಷಗಳು ತಾವು ಅಧಿಕಾರದಲ್ಲಿದ್ದಾಗ ಈ ತತ್ವವನ್ನು ಕಾರ್ಯಗತಗೊಳಿಸುವ ಮೂಲಕ, ಬ್ರಾಹ್ಮಣರಿಂದಲೇ ತುಂಬಿದ ಆಡಳಿತವನ್ನು ಸ್ವಚ್ಛಗೊಳಿಸುವ ಮತ್ತು ಬ್ರಾಹ್ಮಣೇತರರ ಮಧ್ಯದಲ್ಲಿನ ಸಮತೋಲನವನ್ನು ಕಾಯುವ ಆತುರದಲ್ಲಿ ತಾವು ಕಾರ್ಯಸಾಮರ್ಥ್ಯವನ್ನು ಕನಿಷ್ಠಮಟ್ಟಕ್ಕೆ ಸೀಮಿತಗೊಳಿಸುತ್ತಿದ್ದೇವೆ ಎಂಬುದನ್ನು ಮರೆತಿದ್ದರು. ಆದರೆ ಮಾರ್ಗದರ್ಶಕವೆಂದು ಅವರು ಅನುಸರಿಸಿದ ತತ್ವವು ಜನಸಾಮಾನ್ಯರ ಹಿತಾಸಕ್ತಿಗಳ ದೃಷ್ಟಿಯಿಂದ ಪ್ರಶಂಸನೀಯವಲ್ಲವೆಂದೇನೂ ಅರ್ಥೈಸಬಾರದು.

ಈ ಧೋರಣೆಯಿಂದ ಅನೇಕ ಬ್ರಾಹ್ಮಣರು ಹಲ್ಲು ಕಡಿದಿರಬೇಕು ಎಂಬುದರಲ್ಲಿ ಸಂಶಯವಿಲ್ಲ. ಅವರ ಸಿಟ್ಟು ಬಹಳಷ್ಟು ಉಗ್ರವಾಗಿತ್ತು. ಡಾ. ಪರಾಂಜಪೆಯವರ ಈ ಅಂಕಣ–ಲೇಖನವು ಬ್ರಾಹ್ಮಣೇತರರ ಪಕ್ಷದ ಧೋರಣೆಯ ಬಗೆಗಿನ ಒಂದು ಉತ್ಕೃಷ್ಟ ರೀತಿಯಲ್ಲಿ ವಿಡಂಬಿಸುತ್ತದೆ. ಇದು ಪ್ರಕಟವಾದಾಗ ಅನೇಕ ಬ್ರಾಹ್ಮಣೇತರ ಮುಖಂಡರು ಅತ್ಯುಗ್ರವಾಗಿ ಕೆರಳಿದರು ಮತ್ತು ರೋಷಾವೇಶದಿಂದ ಅವರ ಮಾತು ಕಟ್ಟಿಹೋದಂತಾಯಿತು ಎಂಬುದು ನನಗೆ ಗೊತ್ತು. ಡಾ. ಪರಾಂಜಪೇಯವರಿಗೆ ನನ್ನ ತಕರಾರು ಏನೆಂದರೆ, ಅವರು ಅದರಲ್ಲಿ ಅಡಗಿದ ತಮಟೆಯನ್ನು ಅರಿಯದೆ ಹೋದದ್ದು. ಬ್ರಾಹ್ಮಣೇತರರ ಪಕ್ಷ ಹೊಸದೇನನ್ನೂ ಮಾಡುತ್ತಿರಲಿಲ್ಲ. ಇದು ಕೇವಲ ಮನುಸ್ಮೃತಿಯನ್ನು ತಲೆ ಕೆಳಗು ಮಾಡುತ್ತಿತ್ತು. ವಿರೋಧಪಕ್ಷದ ಸ್ಥಿತಿಯನ್ನು ವಿಪರ್ಯಾಸ ಮಾಡುತ್ತಿತ್ತು. ಮನುವು ಶೂದ್ರನನ್ನು ಇಟ್ಟ ಸ್ಥಾನದಲ್ಲಿ ಇದು ಬ್ರಾಹ್ಮಣನನ್ನು ಇಡುತ್ತಿದೆ ಅಷ್ಟೆ. ಅವನು ಬ್ರಾಹ್ಮಣನೆಂಬ ಒಂದೇ ಕಾರಣಕ್ಕಾಗಿ ಮನುವು ಅವನಿಗೆ ವಿಶೇಷ ಸೌಲಭ್ಯಗಳನ್ನು ಕೊಟ್ಟಿರಲಿಲ್ಲವೇ? ಅರ್ಹತೆ ಇದ್ದಾಗಲೂ ಮನುವು ಶೂದ್ರನನ್ನು ಸಮಾನ ಹಕ್ಕಿನಿಂದ ವಂಚಿತನನ್ನಾಗಿ ಮಾಡಿರಲಿಲ್ಲವೇ? ಅವನು ಶೂದ್ರನೆಂಬ ಕಾರಣಕ್ಕಾಗಿ ಕೆಲವೊಂದು ವಿಶೇಷ ಸೌಲಭ್ಯಗಳನ್ನು ಈಗ ಕೊಟ್ಟರೆ ಇದಕ್ಕೆ ಬ್ರಾಹ್ಮಣ ಏಕೆ ತಕರಾರು ಮಾಡಬೇಕು? ಇದು ಅಸಂಬದ್ಧವೆಂದು ಅನಿಸಬಹುದು. ಆದರೆ, ಈ ನಿಯಮಕ್ಕೆ ಪೂರ್ವತೀರ್ಮಾನವೇ ಆಧಾರವಾಗಿದೆ. ಪೂರ್ವ ತೀರ್ಮಾನವೆಂದರೆ, ಬೇರೆ ಮತ್ತೇನೂ ಅಲ್ಲ. ಸ್ವತಃ ಮನುಸ್ಮೃತಿಯೆ. ಹೀಗಿರುವಾಗ ಬ್ರಾಹ್ಮಣೇತರರ ಪಕ್ಷದೆಡೆಗೆ ಯಾರು ತಾನೆ ಕಲ್ಲುಗಳನ್ನು ಒಗೆಯಬಲ್ಲರು? ತಾವು ಪಾಪ ಮಾಡಿರದಿದ್ದರೆ ಬಹುಶಃ ಬ್ರಾಹ್ಮಣರು ಕಲ್ಲುಗಳನ್ನು ಒಗೆಯಬಹುದಿತ್ತೇನೋ. ಆದರೆ ಲೇಖಕರು, ಪೂಜಾರಿಗಳು, ಮನುಸ್ಮೃತಿಯನ್ನು ತಲೆಯ ಮೇಲೆ ಹೊತ್ತುಕೊಂಡವರು, ತಾವು ಪಾಪ ಮಾಡದವರೆಂದು ಸಾಧಿಸಲು ಸಾಧ್ಯವೇ? ಡಾ. ಪರಾಂಜಪೆಯವರ ಅಂಕಣ–ಲೇಖನವು ಮಾನವ ಧರ್ಮದ ಮೂಲಾಧಾರವಾಗಿರುವ ಅನ್ಯಾಯದ ಉತ್ಕೃಷ್ಟ ಖಂಡನೆ. ಶೂದ್ರನ ಸ್ಥಾನದಲ್ಲಿ ಬ್ರಾಹ್ಮಣನನ್ನು ಇಟ್ಟಾಗ ಅವನ ಮನಸ್ಸಿನಲ್ಲಿ ಇಂಥ ಭಾವನೆಗಳು ಮೂಡುತ್ತವೆ ಎಂಬುದನ್ನು ಬೇರೆ ಯಾವುದಕ್ಕೂ ತೋರಿಸಲು ಸಾಧ್ಯವಾಗದ ರೀತಿಯಲ್ಲಿ ಇದು ತೋರಿಸುತ್ತದೆ.

## I

ಅಸಮಾನತೆ ಹಿಂದೂಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದು ಬೇರೆಡೆಗಳಲ್ಲೂ ಅಸ್ತಿತ್ವದಲ್ಲಿತ್ತು. ಇದೇ ಅಸಮಾನತೆ, ಸಮಾಜವನ್ನು ಮೇಲಿನ ಮತ್ತು ಕೆಳಗಿನ ಸ್ವತಂತ್ರ ಮತ್ತು ಗುಲಾಮ ಎಂಬ ಮುಂತಾದ ವರ್ಗಗಳನ್ನಾಗಿ ವಿಭಾಗಿಸಲು ಕಾರಣವಾಯಿತು.

(ಹಸ್ತಪ್ರತಿಯು ಅಪೂರ್ಣವಾಗಿದೆ –ಸಂ.)

೫

# ಸಾಮಾಜಿಕ ವ್ಯವಸ್ಥೆಯ ಸಂರಕ್ಷಣೆ

[ಇವು ಡಾ. ಅಂಬೇಡ್ಕರರ ಕೈಬರಹದ ಹಸ್ತಪ್ರತಿಗಳ ನಾಲ್ಕು ಪುಟಗಳು. ಮಧ್ಯೆ ಮಧ್ಯೆ ಧರ್ಮ ಗ್ರಂಥಗಳಿಂದ ಬೆರಳಚ್ಚು ಮಾಡಿದ ಉದ್ಧರಣೆಗಳಿವೆ. ಮೊದಲನೆಯ ಪುಟವನ್ನು ೫೬ನೆಯ ಪುಟವೆಂದು ಬರೆಯಲಾಗಿದೆ. ಮೊದಲಿನ ಭಾಗವು ಉಪಲಬ್ಧವಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಇದೇ ರೀತಿ ಹಸ್ತಪ್ರತಿಯ ನಂತರದ ಭಾಗವೂ ಕಾಣದಾಗಿದೆ. ತಲೆಬರಹವನ್ನು ಸೂಚಿಸಲಾಗಿದೆ. –ಸಂ.]

* * *

XII. ೧೦೦ "ಯಾರು ವೇದಶಾಸ್ತ್ರವನ್ನು ಪರಿಪೂರ್ಣವಾಗಿ ತಿಳಿದಿರುತ್ತಾನೋ ಅವನಿಗೆ ಮಾತ್ರ, ಸೈನ್ಯಗಳ ಆಧಿಪತ್ಯ, ಅರಸರ ಅಧಿಕಾರ, ಶಿಕ್ಷಿಸುವ ಅಧಿಕಾರ, ಎಲ್ಲ ರಾಷ್ಟ್ರಗಳ ಮೇಲಿನ ಸಾರ್ವಭೌಮತ್ವ ಅಧಿಕಾರ ಇವೆಲ್ಲವನ್ನು ಹೊಂದುವ ಅರ್ಹತೆ ಇರುತ್ತದೆ (ಅಂದರೆ, ಯಾರು ಬ್ರಾಹ್ಮಣನೋ ಅವನಿಗೆ).

*(ಮನುಸ್ಮೃತಿ)*

ಸ್ಥಾಪಿತ ವ್ಯವಸ್ಥೆಯ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಯೋಜಿಸಲಾದ ಎರಡನೆಯ ತಂತ್ರವು ಮೊದಲನೆಯದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ನಿಜವಾಗಿ ಹೇಳುವುದಾದರೆ ಇದು ಹಿಂದೂ ಸಾಮಾಜಿಕ ವ್ಯವಸ್ಥೆಯ ವಿಶಿಷ್ಟ ಲಕ್ಷಣವೇ ಆಗಿರುತ್ತದೆ.

ಉಗ್ರ ಸ್ವರೂಪದ ಆಕ್ರಮಣದಿಂದ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸಲು ಮೂರು ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವ ಅಗತ್ಯವಿರುತ್ತದೆ. ಕ್ರಾಂತಿ ತಲೆದೋರುವಿಕೆಯು ಮೂರು ಉಪಾಧಿಗಳಿಗೆ ಒಳಪಟ್ಟಿರುತ್ತದೆ. (೧) ಲೋಪದೋಷಗಳ ಇರುವಿಕೆಯ ಪ್ರಜ್ಞೆ, (೨) ಲೋಪದೋಷಗಳ ಮೂಲಕವಾಗಿ ಉಂಟಾಗುವ ಸಂಕಷ್ಟಗಳನ್ನು ಅರಿಯುವ ಸಾಮರ್ಥ್ಯ ಮತ್ತು (೩) ಶಸ್ತ್ರಾಸ್ತ್ರಗಳ ಲಭ್ಯತೆ. ಎರಡನೆಯ ವಿಚಾರಕ್ಕೆ ಸಂಬಂಧಿಸಿದಂತೆ ಕ್ರಾಂತಿಯೊಂದಿಗೆ ವ್ಯವಹರಿಸಲು ಎರಡು ಮಾರ್ಗಗಳಿವೆ. ಮೊದಲನೆಯ ಮಾರ್ಗವೆಂದರೆ, ಕ್ರಾಂತಿಯು ಸಂಭವಿಸದಂತೆ ಮೊದಲೇ ಅದನ್ನು ತಡೆಗಟ್ಟುವುದು. ಅಂದರೆ ಕ್ರಾಂತಿ ಸಂಭವಿಸದಂತೆ ಮೊದಲೇ ಎಚ್ಚರಿಕೆ ವಹಿಸುವುದು. ಎರಡನೆಯ ಮಾರ್ಗವೆಂದರೆ, ಕ್ರಾಂತಿ ಸಂಭವಿಸಿದನಂತರ ಸೂಕ್ತ ವಿಧಿವಿಧಾನಗಳಿಂದ ಅದನ್ನು ಹತ್ತಿಕ್ಕುವುದು. ಮೂರನೆಯ ವಿಚಾರವೆಂದರೆ, ಕ್ರಾಂತಿಯನ್ನು ಮೊದಲೇ ತಡೆಯುವುದು ಶಕ್ಯವೇ, ಅಥವಾ ಕ್ರಾಂತಿಯನ್ನು ಹತ್ತಿಕ್ಕುವುದು ಮಾತ್ರ ಉಳಿದ ಒಂದೇ ಮಾರ್ಗವೇ ಎಂಬುದನ್ನು ಕ್ರಾಂತಿಗೆ ಕಾರಣವಾದ ಉಪಾಧಿಗಳು ನಿಯಂತ್ರಿಸುತ್ತವೆ.

ಎಲ್ಲಿ ಸಾಮಾಜಿಕ ವ್ಯವಸ್ಥೆಯು ಅಭಿವೃದ್ಧಿಯ ಸದವಕಾಶವನ್ನು ನಿರಾಕರಿಸುತ್ತದೆಯೋ, ಶಿಕ್ಷಣದ ಹಕ್ಕನ್ನು ಕೊಟ್ಟಿರುವುದಿಲ್ಲವೋ, ಶಸ್ತ್ರಾಸ್ತ್ರಗಳ ಬಳಕೆಯನ್ನು ನಿರಾಕರಿಸುತ್ತವೆಯೋ ಅಲ್ಲಿ, ಅದು ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡೇಳುವುದನ್ನು ತಡೆಗಟ್ಟುವ ಸ್ಥಿತಿಯಲ್ಲಿರುತ್ತವೆ. ಇದಕ್ಕೆ ವಿರುದ್ಧವಾಗಿ, ಎಲ್ಲಿ ಸಾಮಾಜಿಕ ವ್ಯವಸ್ಥೆಯು ಉತ್ಕರ್ಷ ಹೊಂದಲು ಸದವಕಾಶ ನೀಡುತ್ತದೆಯೋ, ಶಿಕ್ಷಣ ಪಡೆಯುವ ಹಕ್ಕು

ಒದಗಿಸುತ್ತಿದೆಯೋ ಮತ್ತು ಶಸ್ತ್ರಾಸ್ತ್ರಗಳ ಬಳಕೆಗೆ ಅನುಮತಿ ಕೊಡುತ್ತದೆಯೋ ಅಂಥ ಸ್ಥಿತಿಗತಿಗಳಲ್ಲಿ ಸಂಕಷ್ಟಕ್ಕೆ ಒಳಗಾದವರನ್ನು ಬಂಡಾಯ ಏಳುವುದರಿಂದ ತಪ್ಪಿಸಲು ಸಾಧ್ಯವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸುವ ಒಂದೇ ಒಂದು ಪರಿಹಾರವೆಂದರೆ ಬಂಡೇಳುವುದನ್ನು ಹಿಂಸೆ ಮತ್ತು ಬಲದಿಂದ ನಿಗ್ರಹಿಸುವುದು. ಹಿಂದೂ ಸಾಮಾಜಿಕ ವ್ಯವಸ್ಥೆಯು ಬಂಡಾಯವು ಏಳದಂತೆ ಮಾಡಲು ಮೊದಲನೆಯ ವಿಧಾನವನ್ನು ಅನುಸರಿಸಿದೆ. ಮುಂಬರುವ ಎಲ್ಲ ತಲೆಮಾರುಗಳಿಗೂ ಕೆಳವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವು ಇಷ್ಟೇ ಕೆಳಮಟ್ಟದ್ದಿರಬೇಕೆಂದು ನಿರ್ದಿಷ್ಟಪಡಿಸಿದೆ. ಅಂದಿನ ಮತ್ತು ಇಂದಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನದಲ್ಲಿ ವ್ಯತ್ಯಾಸವಿರದ್ದರಿಂದ ಅವರಲ್ಲಿ ಅಸಮಾಧಾನ ಹೆಚ್ಚಲು ಅವಕಾಶವಿಲ್ಲ. ಸಾಮಾಜಿಕ ವ್ಯವಸ್ಥೆಯು ಕೆಳವರ್ಗಗಳಿಗೆ ಶಿಕ್ಷಣ ಸೌಲಭ್ಯವನ್ನು ನಿರಾಕರಿಸಿದೆ. ಇದರ ಪರಿಣಾಮವೆಂದರೆ, ಅವರ ಕೆಳಮಟ್ಟದ ಸ್ಥಿತಿಗತಿಗಳೇ ಅವರ ಸಂಕಷ್ಟಗಳಿಗೆ ಮೂಲವೆಂಬ ಪ್ರಜ್ಞೆ ಅವರಲ್ಲಿ ಯಾರಿಗೂ ಇಲ್ಲದಂತಾಗಿರುವುದು. ಪ್ರಜ್ಞೆ ಒಂದು ವೇಳೆ ಇರುವುದೇ ಆದರೆ, ತಮ್ಮ ಕೆಳಮಟ್ಟದ ಸ್ಥಿತಿಗತಿಗಳಿಗೆ ಯಾರೂ ಕಾರಣರಲ್ಲ ಎಂಬುದು. ಇದು ತಮ್ಮ ಹಣೆಯ ಬರಹದ ಪರಿಣಾಮ ಎಂದು ತಿಳಿದು ತೆಪ್ಪಗಿರುತ್ತಾರೆ. ಕಷ್ಟ–ನಿಷ್ಠುರಗಳು ಮತ್ತು ಅವುಗಳ ಬಗೆಗಿನ ಅರಿವು ಇದೆ ಎಂದು ಭಾವಿಸಿದರೂ, ಶಸ್ತ್ರಾಸ್ತ್ರಗಳ ಬಳಕೆಯನ್ನು ನಿರಾಕರಿಸುವುದರಿಂದ ಕೆಳವರ್ಗಗಳ ಜನರು ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡೇಳಲು ಸಾಧ್ಯವಾಗುವುದಿಲ್ಲ... ಎಲ್ಲರಿಗೂ ಸಮಾನವಾದ ಸದವಕಾಶಗಳನ್ನು ಒದಗಿಸಲಾದ, ಜ್ಞಾನ ಸಂಪಾದನೆಯ ಸ್ವಾತಂತ್ರ್ಯ ನೀಡಲಾದ ಮತ್ತು ಶಸ್ತ್ರಾಸ್ತ್ರಗಳನ್ನು ಹೊಂದುವ ಹಕ್ಕನ್ನು ಪಡೆದ ಸಾಮಾಜಿಕ ವ್ಯವಸ್ಥೆಯಲ್ಲಿ ದಂಗೆಯು ದುಸ್ಸಾಧ್ಯವಾದ ಶಕ್ತಿ ಮತ್ತು ಹಿಂಸೆಯ ರೂಪ ತಳೆದಾಗ ಮೇಲೆ ಸೂಚಿಸಿದ ಮಾರ್ಗಕ್ಕೆ ವಿರುದ್ಧವಾದ ಮಾರ್ಗವನ್ನು ಕೈಗೊಳ್ಳಬೇಕಾಗುತ್ತದೆ. ಸದವಕಾಶಗಳ ಹಕ್ಕು, ಜ್ಞಾನಸಂಪಾದನೆಯ ಸ್ವಾತಂತ್ರ್ಯ, ಶಸ್ತ್ರಾಸ್ತ್ರಗಳನ್ನು ಹೊಂದುವ ಹಕ್ಕು ಇವುಗಳನ್ನು ನಿರಾಕರಿಸುವುದು ಅತ್ಯಂತ ಅನ್ಯಾಯದ ವಿಷಯ... ಹಿಂದೂ ಸಾಮಾಜಿಕ ವ್ಯವಸ್ಥೆಯು ಇದರಿಂದ ನಾಚಿಕೆಪಟ್ಟಿಲ್ಲ. ಆದಾಗ್ಯೂ ಇದು ಎರಡು ಸಾಧನೆಗಳನ್ನು ಮಾಡಿದೆ. ಒಂದನೆಯದು, ಸ್ಥಾಪಿತ ವ್ಯವಸ್ಥೆಯನ್ನು ಸಂರಕ್ಷಿಸಲು, ಅತ್ಯಂತ ಪರಿಣಾಮಕಾರಿಯಾದ ಮತ್ತು ಅಷ್ಟೇ ನಾಚಿಕೆಗೇಡಿನ ರೀತಿಯನ್ನು ಕಂಡುಹಿಡಿದಿರುವುದು. ಎರಡನೆಯದು, ಮನುಷ್ಯತ್ವವನ್ನು ಹತ್ಯೆ ಮಡಲು ಅತಿ ಅಮಾನುಷ ಸಾಧನೆಗಳನ್ನು ಬಳಸಿದಾಗ್ಯೂ, ಹಿಂದೂಗಳೆಂದರೆ ಅತಿ ದಯಾಪರರು ಎಂಬ ಖ್ಯಾತಿಯನ್ನು ಪಡೆದದ್ದು.

ಹಿಂದೂ ಸಾಮಾಜಿಕ ವ್ಯವಸ್ಥೆಯ ಇನ್ನೊಂದು ವೈಶಿಷ್ಟ್ಯಪೂರ್ಣ ಲಕ್ಷಣವು ಅದರ ಸಂರಕ್ಷಣೆಗಾಗಿ ಯೋಜಿಸಿದ ತಂತ್ರಕ್ಕೆ ಸಂಬಂಧಿಸಿರುತ್ತದೆ. ತಂತ್ರದಲ್ಲಿ ಎರಡು ಬಗೆಗಳಿವೆ.

ಮೊದಲನೆಯ ತಂತ್ರವು, ಸಾಮಾಜಿಕ ವ್ಯವಸ್ಥೆಯ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಮತ್ತು ಎತ್ತಿ ಹಿಡಿಯುವ ಹೊಣೆಯನ್ನು ಅರಸನ ಬಾಹುಗಳ ಮೇಲೆ ಹೊರಿಸಿದೆ. ಮನುವು ಇದನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾನೆ.

VIII. ೪೧೦. "ವೈಶ್ಯ ವರ್ಗದ (ಜಾತಿಯ) ಪ್ರತಿಯೊಬ್ಬ ವ್ಯಕ್ತಿಗೆ ವ್ಯಾಪಾರ, ವ್ಯವಹಾರ ಮಾಡಲು, ಅಥವಾ ಹಣ ಸಾಲವಾಗಿ ನೀಡಲು, ಅಥವಾ ಒಕ್ಕಲುತನ ಮತ್ತು ಪಶುಪಾಲನೆ ಮಾಡಲು; ಮತ್ತು ದಾಸ್ಯ ವರ್ಗದ (ಜಾತಿಯ) ಪ್ರತಿಯೊಬ್ಬ ವ್ಯಕ್ತಿಗೆ ದ್ವಿಜರ ಸೇವೆಯನ್ನು ಮಾಡಲು ಅರಸನು ಆಜ್ಞೆ ಮಾಡಲೇಬೇಕು."

VIII. ೪೧೮. "ವ್ಯಾಪಾರಿಗಳು ಮತ್ತು ಯಂತ್ರಕರ್ಮಿಗಳು ತಂತಮ್ಮ ಕರ್ತವ್ಯ ಕರ್ಮಗಳನ್ನು ಸರಿಯಾಗಿ ನಿರ್ವಹಿಸುತ್ತಾರೊ ಇಲ್ಲವೊ ಎಂಬುದನ್ನು ಅರಸನಾದವನು ಯಾವಾಗಲೂ ಎಚ್ಚರಿಕೆಯಿಂದ

ಗಮನಿಸುತ್ತಿರಬೇಕು. ಏಕೆಂದರೆ, ಅವರು ತಮ್ಮ ಕರ್ತವ್ಯಗಳಿಂದ ಚ್ಯುತಿಗೊಂಡರೆ ಈ ಜಗತ್ತನ್ನು ಗೊಂದಲದ ಮಡುವಿನಲ್ಲಿ ದೂಡುತ್ತಾರೆ."

ಮನುವು ಈ ಸಂಬಂಧದಲ್ಲಿ ಅರಸನ ಕರ್ತವ್ಯದ ಸ್ಪಷ್ಟ ನಿರೂಪಣೆ ಅಷ್ಟನ್ನೇ ಮಾಡಿಬಿಡುವುದಿಲ್ಲ. ಸ್ಥಾಪಿತ ಸಾಮಾಜಿಕ ವ್ಯವಸ್ಥೆಯ ಮುನ್ನಡೆಯುವಿಕೆ ಮತ್ತು ಸಂರಕ್ಷಣೆಯ ತನ್ನ ಕರ್ತವ್ಯವನ್ನು ಅರಸನು ಎಲ್ಲ ಕಾಲಕ್ಕೂ ಮಾಡಿಯೇ ಮಾಡುತ್ತಾನೆ. ತಮ್ಮನ್ನು ಅಪಾಯದಿಂದ ರಕ್ಷಿಸುತ್ತಾನೆ ಎಂಬ ಭರವಸೆ ಪ್ರಜೆಗಳ ಮನಸ್ಸಿನಲ್ಲಿ ಮೂಡುವಂತೆಯೂ ಮಾಡಬೇಕೆಂದೂ ಹೇಳುತ್ತಾನೆ. ಆದ್ದರಿಂದ ಮನುವು ಮತ್ತೆರಡು ಹೆಚ್ಚಿನ ಕಟ್ಟುಪಾಡುಗಳನ್ನು ಅರಸನ ಮೇಲೆ ಹಾಕುತ್ತಾನೆ. ಮೊದಲಿನ ಒಂದು ಕಟ್ಟುಪಾಡಿನ ಪ್ರಕಾರ, ಸಾಮಾಜಿಕ ವ್ಯವಸ್ಥೆಯನ್ನು ಕಾರ್ಯಶೀಲಗೊಳಿಸುವ ತನ್ನ ಕರ್ತವ್ಯದಲ್ಲಿ ಅರಸನು ಅಯಶಸ್ವಿಯಾಗುವುದೆಂದರೆ ಅಪರಾಧಗೈದಂತೆ, ಅದಕ್ಕಾಗಿ ಅರಸನು ಸಾಮಾನ್ಯ ವ್ಯಕ್ತಿಯಂತೆ ನ್ಯಾಯವಿಚಾರಣೆಗೆ ಮತ್ತು ಶಿಕ್ಷೆಗೆ ಬದ್ಧನಾಗುತ್ತಾನೆ. ಇದು ಮನುವಿನ ಕೆಳಗಿನ ಉದ್ಧರಣೆಗಳಿಂದ ಸ್ಪಷ್ಟವಾಗಬಹುದಾಗಿದೆ.

VIII. ೩೩೫. "ತಂದೆಯಾಗಲೀ, ಬೋಧಕನಾಗಲಿ, ಮಿತ್ರನಾಗಲಿ, ತಾಯಿಯಾಗಲಿ, ಪತ್ನಿಯಾಗಲಿ, ಪುತ್ರನಾಗಲಿ, ಮನೆಯ ಪುರೋಹಿತನಾಗಲಿ (ಗುರು) ತಂತಮ್ಮ ಕರ್ತವ್ಯ ಕರ್ಮಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸದಿದ್ದರೆ ಎಲ್ಲರೂ ಅರಸನ ಶಿಕ್ಷೆಯಿಂದ ಮುಕ್ತರಾಗಿರಲು ಶಕ್ಯವಿಲ್ಲ."

VIII. ೩೩೬. "ಕೀಳು ಕುಲದಲ್ಲಿ ಜನಿಸಿದ ವ್ಯಕ್ತಿಗೆ ಒಂದು ಪಣ ದಂಡ ಹಾಕಲಾಗುತ್ತಿದ್ದರೆ, ಅರಸನಿಗೆ ಒಂದು ಸಾವಿರ ಪಣಗಳ ದಂಡ ಹಾಕಬೇಕು. ಆ ದಂಡವನ್ನು ಪುರೋಹಿತನಿಗೆ ಕೊಡಬೇಕು ಅಥವಾ ಪಣಗಳನ್ನು ನದಿಯಲ್ಲಿ ಎಸೆಯಬೇಕು, ಇದು ಪವಿತ್ರ ನಿಯಮ."

ಮನುವು ವಿಧಿಸಿದ ಇನ್ನೊಂದು ಕಟ್ಟಳೆಯೆಂದರೆ, ಯಾವ ರಾಜನು ನಿರ್ಲಕ್ಷ್ಯತೆ ಉಳ್ಳವನಾಗಿರುತ್ತಾನೊ ಅಥವಾ ಸ್ಥಾಪಿತ ವ್ಯವಸ್ಥೆಗೆ ವಿರೋಧಿಯಾಗಿರುತ್ತಾನೊ ಅಂಥವನ ವಿರುದ್ಧ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಸಶಸ್ತ್ರ ದಂಗೆ ಏಳುವ ಅಧಿಕಾರ ಹೊಂದಿರುತ್ತಾರೆ.

VIII. ೩೪೮. "ದ್ವಿಜರ ಕರ್ತವ್ಯದ ಮೇಲೆ ನಿರ್ಬಂಧ ಹೇರಿದಾಗ, ಕೇಡುಗಾಲದಲ್ಲಿ ಮತ್ತು ಆಪತ್ತು ಸಂಭವಿಸಿದಾಗ, ಇಂಥ ಸಂದರ್ಭಗಳಲ್ಲಿ ದ್ವಿಜರು ಶಸ್ತ್ರಸನ್ನದ್ಧರಾಗಬಹುದು."

(ಹಸ್ತಪ್ರತಿ ಅಪೂರ್ಣವಾಗಿದೆ –ಸಂ.)

೬
# ಹಿಂದೂಗಳೊಂದಿಗೆ

[ಕೈಬರಹದ ಹಸ್ತಪ್ರತಿಯಿಂದ ಪುನರುಕ್ತಿಗೊಳಿಸಲಾಗಿದೆ –ಸಂ.]

ಹಿಂದೂಗಳು ಎಂದಾದರೂ ಅಸ್ಪೃಶ್ಯರನ್ನು ತಮ್ಮ ಸಮಾಜದಲ್ಲಿ ಒಳಗೊಳ್ಳುತ್ತಾರೆಂದು ನಂಬುವುದು ಅಸಾಧ್ಯ. ಅವರ ಜಾತಿ ಪದ್ಧತಿ ಮತ್ತು ಧರ್ಮ ಸಂಪೂರ್ಣವಾಗಿ ನಿಷೇಧಾತ್ಮಕ, ಅಂದರೆ ದೂರ ತಳ್ಳುವ ಸ್ವರೂಪದ್ದು. ಒಂದರೊಳಗೊಂದು ಲೀನಗೊಳ್ಳುವ ಆಶೆಯಿಲ್ಲ. ಆದರೂ ಅಸ್ಪೃಶ್ಯರನ್ನು ತಮ್ಮಲ್ಲಿ ಲೀನಗೊಳಿಸಿಕೊಳ್ಳುವ ಸಾಧ್ಯತೆಯಲ್ಲಿ ಇನ್ನೂ ಹೆಚ್ಚಿನ ವಿಶ್ವಾಸ ಹೊಂದಿದವರಿದ್ದಾರೆ. ಇವರು ಮಿತಿ ಮೀರಿದ ಆಶಾವಾದಿತ್ವವುಳ್ಳವರು. ಇಂಥವರ ಸಂಖ್ಯೆ ಅಸ್ಪೃಶ್ಯರಿಗಿಂತ ಸವರ್ಣ ಹಿಂದೂಗಳಲ್ಲಿಯೆ ಹೆಚ್ಚು. ಇಂಥ ಆಶಾವಾದಿಗಳು ತಮ್ಮ ಅಭಿಪ್ರಾಯದಲ್ಲಿ ಪ್ರಾಮಾಣಿಕರೋ, ಅಪ್ರಮಾಣಿಕರೋ ಎಂಬ ಪ್ರಶ್ನೆಯು ಉಪೇಕ್ಷೆ ಮಾಡುವಂಥದಲ್ಲ. ಏನೇ ಆಗಲಿ, ಲೀನಗೊಳ್ಳಲು ಬೇಕಾದ ಕಾಲಮಿತಿಯನ್ನು ನಿರ್ಧರಿಸಲು ಇವರು ಶಕ್ತರಾಗಿಲ್ಲ. ಈ ಮಿತಿಮೀರಿದ ಆಶಾವಾದಿಗಳನ್ನು ನಾವು ಪ್ರಾಮಾಣಿಕರೆಂದೇ ಭಾವಿಸಿದರೂ, ಇದು ಶತಶತಮಾನಗಳವರೆಗೆ ಮುಂದುವರೆಯುವಂತಹ ಕ್ರಿಯೆಯಾಗಬಹುದು ಎಂಬುದರಲ್ಲಿ ಸಂಶಯವೇ ಇಲ್ಲ. ಅಲ್ಲಿಯವರೆಗೆ, ಅಸ್ಪೃಶ್ಯರು ಸವರ್ಣ ಹಿಂದೂಗಳ ಸಾಮಾಜಿಕ ಮತ್ತು ರಾಜಕೀಯ ಸ್ವಾಮಿತ್ವದಡಿಯಲ್ಲಿ ಜೀವಿಸಬೇಕಾಗುತ್ತದೆ. ಹಿಂದಿನಂತೆಯೇ ಇಂದು, ಮುಂದೂ ಅವರು ಮೇಲ್ಜಾತಿಯವರ ದಬ್ಬಾಳಿಕೆ ಮತ್ತು ಹಿಂಸೆಯಿಂದ ಸಂಕಟ ಅನುಭವಿಸಬೇಕಾಗುತ್ತದೆ. ಅಸ್ಪೃಶ್ಯರನ್ನು ಸವರ್ಣ ಹಿಂದೂಗಳ ಇಚ್ಛೆ ಮತ್ತು ಆನಂದದ ಈಡೇರಿಕೆಗಾಗಿ ಮೊದಲಿದ್ದಂತೆಯೆ ಅವರ ಸುಪರ್ದಿಯಲ್ಲಿ ಬಿಟ್ಟು, ಕಾಣದ ಭವಿಷ್ಯತ್ತಿನಲ್ಲಿ ಅವರು ಹಿಂದೂಗಳಲ್ಲಿ ಲೀನಗೊಳ್ಳುತ್ತಾರೆಂಬ ಕನಸು ಕಾಣುತ್ತ ಕಾಲಹರಣ ಮಾಡುವುದನ್ನು ನಿಸ್ಸಂಶಯವಾಗಿ ಬುದ್ಧಿ ಸರಿಯಿದ್ದ ಯಾವುದೇ ವ್ಯಕ್ತಿ ಮಾಡಲಾರ. ಬದಲಾವಣೆಯ ಕಾಲಾವಧಿ ಹೆಚ್ಚೇ ಆಗಿರಲಿ, ಕಡಿಮೆಯೆ ಆಗಿರಲಿ, ಸವರ್ಣ ಹಿಂದೂಗಳ ದಬ್ಬಾಳಿಕೆ, ತುಳಿತ, ಮತ್ತು ಹಿಂಸೆಗಳ ವಿರುದ್ಧ ಅಸ್ಪೃಶ್ಯರಿಗೆ ರಕ್ಷಣೆಯ ಏರ್ಪಾಡು ಆಗಲೇಬೇಕು. ಈ ಸಂಬಂಧದಲ್ಲಿ ಎಂಥ ಏರ್ಪಾಡುಗಳು ಅವಶ್ಯವಾಗಿ ಬೇಕು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದನ್ನು ಅಸ್ಪೃಶ್ಯರಿಗೇ ಬಿಟ್ಟರೆ, ಅವರು ಎರಡು ಏರ್ಪಾಡುಗಳನ್ನು ಅಪೇಕ್ಷಿಸುತ್ತಾರೆ. ಒಂದು, ಸಂವಿಧಾನಾತ್ಮಕ ರಕ್ಷಣೆಗಳು; ಮತ್ತು ಎರಡು, ಪ್ರತ್ಯೇಕ ವಸಾಹತುಗಳು (ಸೆಟಲ್‌ಮೆಂಟ್ಸ್).

## I

ಭಾರತೀಯ ಅಸ್ಪೃಶ್ಯರ ರಾಜಕೀಯ ಸಂಘಟನೆಯಾದ ಆಲ್ ಇಂಡಿಯಾ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್, ಇದು ಅಸ್ಪೃಶ್ಯರ ರಕ್ಷಣೆಗಾಗಿ ಸಂವಿಧಾನಾತ್ಮಕ ಭದ್ರತೆಗಳ ಸ್ವರೂಪವನ್ನು ಗೊತ್ತುವಳಿಗಳ ರೂಪದಲ್ಲಿ ಅರ್ಥೈಸಿದೆ. ಹೀಗೆ ಅರ್ಥೈಸಲಾದ ಗೊತ್ತುವಳಿಗಳ ಸಂಖ್ಯೆ ಮೂರು ಮತ್ತು ಏಳು, ಕೆಳಗಿನಂತಿವೆ:

### ಗೊತ್ತುವಳಿ ಸಂಖ್ಯೆ ೩

(ಉದ್ಧರಣೆ ಪು. ೩೫೯)

(ಹಸ್ತಪ್ರತಿಯಲ್ಲಿ ಬರೆಯಲಾಗಿಲ್ಲ –ಸಂ.)

### ಗೊತ್ತುವಳಿ ಸಂಖ್ಯೆ ೭

(ಉದ್ಧರಣೆ ಪು. ೩೬೧)

(ಹಸ್ತಪ್ರತಿಯಲ್ಲಿ ಬರೆಯಲಾಗಿಲ್ಲ)

ಅಸ್ಪೃಶ್ಯರಿಗೆ ಈ ಭದ್ರತೆಗಳನ್ನು ಕೊಡಲು ಹಿಂದೂಗಳು ಹಿಂದು ಮುಂದೆ ನೋಡುತ್ತಾರೆ. ಹಿಂದೂಗಳ ಆಕ್ಷೇಪಣೆಯು ಸಾರ್ವತ್ರಿಕವಾದದ್ದು. ಕೆಲವೊಂದು ವಿಶೇಷ ಭದ್ರತೆಗಳ ಬಗೆಗೂ ಹಿಂದೂಗಳ ಆಕ್ಷೇಪಣೆಯಿದೆ. ಸಾರ್ವತ್ರಿಕವಾದ ಆಕ್ಷೇಪಣೆಯೆಂದರೆ, ಅಸ್ಪೃಶ್ಯರು ಅಲ್ಪಸಂಖ್ಯಾತರಲ್ಲ. ಆದ್ದರಿಂದ ಉಳಿದ ಅಲ್ಪಸಂಖ್ಯಾತರಿಗೆ ಲಭ್ಯವಾಗುವ ಅರ್ಹತೆಗಳಿಗೆ (ಹಕ್ಕುಗಳಿಗೆ) ಅವರು ಅರ್ಹರಾಗುವುದಿಲ್ಲ. ಅವರು ವಾದವನ್ನು ಮುಂದುವರಿಸುತ್ತ, ಧರ್ಮದ ಆಧಾರದ ಮೇಲೆ ಮಾತ್ರ ಅಲ್ಪಸಂಖ್ಯಾತರೆನ್ನಿಸಿಕೊಳ್ಳಲು ಅರ್ಹರಾಗಬಲ್ಲರು ಎಂದು ಹೇಳುತ್ತಾರೆ. ಧರ್ಮದ ದೃಷ್ಟಿಯಿಂದ ಅಸ್ಪೃಶ್ಯರು ಹಿಂದೂಗಳಿಂದ ಭಿನ್ನರಲ್ಲ. ತತ್ಪರಿಣಾಮವಾಗಿ ಅಸ್ಪೃಶ್ಯರು ಅಲ್ಪಸಂಖ್ಯಾತರಲ್ಲ. ಈ ಸಮಸ್ಯೆಯ ಬಗೆಗೆ ಅಧ್ಯಯನ ಮಾಡಿದ ಎಲ್ಲರಿಗೂ ಅಲ್ಪಸಂಖ್ಯಾತರ ಈ ವ್ಯಾಖ್ಯೆಯು ನಿಸ್ಸಂಶಯವಾಗಿ ಬಾಲಿಶವಾದದ್ದು ಎಂದೆನಿಸದಿರದು.

(ಲೇಖನ ಅಪೂರ್ಣವಾಗಿದೆ –ಸಂ.)

# ೭
# ಆಶಾಭಂಗ (ಭ್ರಮನಿರಸನ)

ಅಸ್ಪೃಶ್ಯರು ಅತಿ ಬಸವಳಿದ, ಹೆಚ್ಚು ಜುಗುಪ್ಸೆಗೊಂಡ ಮತ್ತು, ಅತಿ ಸಂಕಟಕ್ಕೆ ಈಡಾದ ಜನಾಂಗವೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಅವರು ತ್ಯಾಗ ಬಲಿದಾನ ಮಾಡಿದ ಜನ. ಶೆಲ್ಲಿ ಮಾತಿನಲ್ಲಿ ಹೇಳುವುದಾದರೆ, ಅವರದು–

"ಸ್ವರ್ಗವೇರುವ ಬಳಲಿಕೆಯ ಬಿಳಿಚು ಮತ್ತು ಭೂಮಿಯ ಕಡೆಗೆ ದೃಷ್ಟಿ, ಜೊತೆಗಾರರಿಲ್ಲದ ಸುತ್ತಾಟ.
ಭಿನ್ನ ಹುಟ್ಟಿರುವ ತಾರೆಗಳ ನಡುವೆ."

ಸರಳವಾದ ಶಬ್ದಗಳಲ್ಲಿ ಹೇಳುವುದಾದರೆ, ಆಶಾಭಂಗದ ಭಾವನೆ ಅಸ್ಪೃಶ್ಯರನ್ನು ದಟ್ಟವಾಗಿ ಮತ್ತು ಪೂರ್ಣವಾಗಿ ಮುಸುಕಿದೆ. ಮಾಥ್ಯು ಆರ್ನಾಲ್ಡ್ ಹೇಳುವಂತೆ,[೧] "ಜೀವನವು ಸಹಜವಾಗಿ ತನ್ನ ಅಂತಃಸತ್ವವನ್ನು ಬೆಳಗಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿರುತ್ತದೆ. ಇದರ ಅರ್ಥ, ಯಥೇಚ್ಛವಾಗಿ ಶುದ್ಧವಾದ ಗಾಳಿ ಮತ್ತು ಬೆಳಕನ್ನು ಹೊಂದುವುದು, ಯಾವುದರ (.....)[೨] ಅನಿಷ್ಟ ಪ್ರಭಾವಕ್ಕೂ ಒಳಗಾಗದಿರುವುದು, ತನ್ನ ಅಸ್ತಿತ್ವವನ್ನು ಸ್ವತಂತ್ರವಾಗಿ ಮತ್ತು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿಕೊಳ್ಳುವತ್ತ ಪ್ರಯತ್ನಿಸುವುದು. ಹೀಗೆ ಅಂತಃಸತ್ವವನ್ನು ಅರಳಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಗತಿಯೇ ಆಶಾಭಂಗಕ್ಕೆ ಮತ್ತೊಂದು ಹೆಸರು. ಶ್ರೇಷ್ಠವಾದುದನ್ನು ಸಾಧಿಸುವ ಪ್ರಯತ್ನದಲ್ಲಿ ನಿಷ್ಫಲಗೊಳ್ಳುವುದು, ಸ್ವಾಭಾವಿಕ ಶಕ್ತಿ ಸಾಮರ್ಥ್ಯಗಳು ಕಮರುವುದು, ವ್ಯಕ್ತಿತ್ವದ ವಿಕಸನ ಕುಂಠಿತಗೊಳ್ಳುವುದು."

ಅಸಂಖ್ಯ ಜನರು ತಮ್ಮ ಜೀವನಯಾತ್ರೆಯಲ್ಲಿ ಆಶಾಭಂಗದಿಂದ ಸಂಕಟಪಟ್ಟಿದ್ದಾರೆ. ಆದರೆ ಅವರು ಸುಸಮಯ, ಸುಸಂದರ್ಭ ಒದಗಿದಾಗ ಕೂಡಲೆ ಉಪದ್ರವಗಳಿಂದ ತಪ್ಪಿಸಿಕೊಂಡು, ಹೊಸ ಕಂಪನಿಗಳಿಂದ ಚೇತರಿಸಿಕೊಂಡು ಜೀವನದಲ್ಲಿ ಗೌರವ ಖ್ಯಾತಿ ಮರಳಿ ಗಳಿಸಿದ್ದಾರೆ. ಅಸ್ಪೃಶ್ಯರ ವಿಷಯವು ಇಂಥವರಿಗಿಂತ ಭಿನ್ನವಾಗಿದೆ. ಇವರ ಆಶಾಭಂಗವು ತಾತ್ಕಾಲಿಕವಾಗಿರದೆ ಎಂದೆಂದಿಗೂ ಆಶಾಭಂಗವಾಗಿಯೇ ಮುಂದುವರಿದಿದೆ. ಅದು ದೇಶ ಅಥವಾ ಕಾಲದಿಂದ ವಿಮೋಚನೆಗೊಂಡಿಲ್ಲ.

ಈ ವಿಷಯಕ್ಕೆ ಸಂಬಂಧಿಸಿದಂತೆ ಅಸ್ಪೃಶ್ಯರ ಕತೆಯು ಯಹೂದಿಗಳಿಗಿಂತ ವಿಚಿತ್ರವಾದ ವೈಪರೀತ್ಯಗಳಿಂದ ಕೂಡಿದೆ.

ಇಜಿಪ್ತದಲ್ಲಿಯ ಯಹೂದಿಗಳ ಬಂಧನವು ಅವರ ಮೊದಲನೆಯ ಆಪತ್ತು ಆಗಿತ್ತು. ಬೈಬಲ್ಲಿನಲ್ಲಿ ಹೇಳಿರುವಂತೆ:

(ಉದ್ಧರಣೆ– ಚಿಲ್ರನ್ಸ್ ಬೈಬಲ್–೩೯)

(ಉದ್ಧರಣೆ– ಬರೆದಿಲ್ಲ –ಸಂ)

---

೧. ಪ್ರಜಾಪ್ರಭುತ್ವದ ಮೇಲಿನ ಪ್ರಬಂಧಗಳು.

೨. ಹಸ್ತಪ್ರತಿಯಲ್ಲಿ ಅಳಿಸಲಾಗಿದೆ. –ಸಂ.

ಅಂತಿಮವಾಗಿ ಫೆರೊ ಅರಸನು ದುರ್ಬಲನಾಗಿ ಸೋತನು. ಆಗ ಯಹೂದಿಗಳು ಇಜಿಪ್ತದ ಅರಸನ ಬಂಧನದಿಂದ ತಪ್ಪಿಸಿಕೊಂಡು ಹಾಲುಜೇನಿನ ಹೊಳೆ ಹರಿಯುತ್ತಿದ್ದ, ಫಲವತ್ತಾದ ಪ್ರದೇಶ ಕ್ಯಾನನ್‌ದಲ್ಲಿ ನೆಲೆಸಿದರು.

ಯಹೂದಿಗಳಿಗೆ ಬ್ಯಾಬಿಲೋನಿಯ ಅರಸನಿಂದ ಎರಡನೆಯ ಆಪತ್ತು ಸಂಭವಿಸಿ ತಮ್ಮ ಸ್ವಾತಂತ್ರ್ಯ ಕಳೆದುಕೊಂಡರು. (ಕೆಲವು ಪುಟಗಳು ಲಭ್ಯವಿಲ್ಲ –ಸಂ).

ಅಸ್ಪೃಶ್ಯರು ಇಷ್ಟೊಂದು ಆಶಾಭಂಗಕ್ಕೆ ಹೇಗೆ ಒಳಗಾದರು ಎಂಬುದನ್ನು ನಮಗೆ ಈಗ ವಿವರಿಸಲು ಸಾಧ್ಯ. ಅವರ ದೇಹ ಮನಸ್ಸುಗಳ ಬೆಳವಣಿಗೆಗೆ ಸೂಕ್ತವಾದ ಸ್ಥಿತಿಗತಿಗಳಿರಲಿಲ್ಲ. ಅವರ ಜಡವಾದ, ಮಲಿನವಾದ ಮತ್ತು ನಿಸ್ಸತ್ವವಾದ ಗತಕಾಲವು ಭವಿಷ್ಯದ ಬೆಳವಣಿಗೆಗೆ ಪೋಷಕವಾದ ಆಶಾಕಿರಣವನ್ನು ಹೇಗೆ ತಾನೆ ಒದಗಿಸಬಲ್ಲದು? ಇದರಲ್ಲಿ ಅವರ ತಪ್ಪು ಏನೂ ಇಲ್ಲ. ಅವರ ಅದೃಷ್ಟದ ಆಶಾಭಂಗಕ್ಕೆ ಕಾರಣ ಹಿಂದೂ ಸಾಮಾಜಿಕ ವ್ಯವಸ್ಥೆಯಿಂದ ರೂಪುಗೊಂಡ ಅಹಿತಕರವಾದ ಸಾಮಾಜಿಕ ಪರಿಸರ. ಇದುವೇ ಅವರ ಪ್ರಗತಿಗೆ ಸಂಪೂರ್ಣವಾಗಿ ಮಾರಕವಾಗಿತ್ತು.

ಅವರ ಪಾಡು ಸಂಪೂರ್ಣವಾಗಿ ಅಸಹನೀಯವಾಗಿತ್ತು. ಕಾರ್ಲೈಯಿಲ್ ಹೀಗೆ ಹೇಳಿದ್ದಾನೆ–

(ಉದ್ಧರಣೆ ಪು. ೨೦೧)

(ಉದ್ಧರಣೆಯನ್ನು ಕೊಡಲಾಗಿಲ್ಲ –ಸಂ)

ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಕೆಲವರು ಕ್ರಾಂತಿಗಳ ಬಗ್ಗೆ, ಮತ್ತೆ ಕೆಲವರು ರಕ್ತಪಾತದಿಂದೊಡಗೂಡಿದ ಕ್ರಾಂತಿಗಳ ಬಗ್ಗೆ ಯೋಚಿಸುತ್ತಾರೆ. ಕ್ಯಾಬ್ಲಿ ವಿಲಿಯಮ್ಸ್ ಒಮ್ಮೆ ಹೇಳಿದುದನ್ನೇ ಮತ್ತೆ ಮತ್ತೆ ಎಲ್ಲರೂ ಹೇಳುತ್ತಾರೆ.

(ಉದ್ಧರಣೆ ಪು. ೧೫೨)

(ಉದ್ಧರಣೆಯನ್ನು ಬರೆಯಲಾಗಿಲ್ಲ)

ಅವರು ಅನುಭವಿಸಿದ ಆಶಾಭಂಗದ ಮಟ್ಟ ಇಷ್ಟೊಂದಿದೆ.

## III

ದೇವರ ಅನುಗ್ರಹವನ್ನು, ಎಮರ್ಸನ್‌ನ ಮಾತಿನಲ್ಲಿ, ದೇಹ ಮತ್ತು ಮನಸ್ಸುಗಳ ಆಧಿಕ್ಯದ ಸ್ಥಿತಿ ಎಂದು ಅರ್ಥೈಸಬಹುದು. ಎಮರ್ಸನ್ ಹೇಳಿದಂತೆ, "ಯಶಸ್ಸು ಸ್ವಭಾವಜನ್ಯವಾದುದು. ಇದು ದೇಹ ಮತ್ತು ಮನಸ್ಸುಗಳ ಆಧಿಕ್ಯವು, ದುಡಿಮೆಯ ಶಕ್ತಿ ಸಾಮರ್ಥ್ಯ ಮತ್ತು ಧ್ಯೇಯೋತ್ಸಾಹದ ಮೇಲೆ ಆಧರಿಸಿರುತ್ತದೆ. ಯಶಸ್ಸು ಮತ್ತು ಶಕ್ತಿ ಸಾಮರ್ಥ್ಯ ಮತ್ತು ಧ್ಯೇಯೋತ್ಸಾಹದ ಮೇಲೆ ಆಧರಿಸಿರುತ್ತದೆ. ಯಶಸ್ಸು ಮತ್ತು (ಕೆಲವೊಂದು) ಸ್ವಲ್ಪಮಟ್ಟಿನ ಆಧಿಕ್ಯದ ಸ್ಥಿತಿ ಅಥವಾ ಧನಾತ್ಮಕ ಶಕ್ತಿ ಇವೆರಡೂ ಯಾವಾಗಲೂ ತಪ್ಪದೆ ಜೊತೆಗೂಡಿ ಸಾಗುತ್ತವೆ. ಒಂದು ಔಂಸಿನ ಶಕ್ತಿ ಮತ್ತು ಒಂದು ಔಂಸಿನ ಭಾರ ಎರಡೂ (ಕೂಡಿಯೇ) ಸಮಸಮನಾಗಿರುತ್ತವೆ."

ಯಹೂದಿಗಳು ತಮ್ಮ ಮೊದಲನೆಯ ದಾಸ್ಯತ್ವದ ನಂತರ ಏಳಿಗೆ ಹೊಂದಲು ಅವರ ದೇಹ ಮತ್ತು ಮನಸ್ಸುಗಳ ಆಧಿಕ್ಯವೇ ಪ್ರಮುಖ ಕಾರಣವೆಂದು ಹೇಳಬಹುದು. ದೇಹ ಮತ್ತು ಮನಸ್ಸುಗಳ ಆಧಿಕ್ಯದ ಸ್ಥಿತಿಗತಿಯು ಎರಡು ಮೂಲಗಳಿಂದ ಉದ್ಭವವಾಗಬಹುದು. ಮೊದಲನೆಯದಾಗಿ, ದೇವರನ್ನು ನಂಬುವುದರಿಂದ, ನೆಚ್ಚುವುದರಿಂದ ಇದು ಸಾಧ್ಯವಾಗಬಹುದು. ('ನಂಬಿ ಕರೆದೊಡೆ ಓ ಎನ್ನನೇ ಶಿವನು'

ಎಂದು ಶರಣರು ಹೇಳಿಲ್ಲವೇ?) ಏನೂ ಇಲ್ಲದಾಗ ಕೊನೆಯಪಕ್ಷ ದೇವರ ಕರುಣೆಯಾದರೂ ಇದ್ದರೆ ನಮಗೆ ಧೈರ್ಯ ನೀಡಲು ಸಾಕು. ಸಂಕಟ ಕಾಲದಲ್ಲಿ ದೇವರಲ್ಲಿದ್ದ ನಂಬಿಕೆಯೇ ನಮ್ಮನ್ನು ರಕ್ಷಿಸುತ್ತದೆ. ಇಂತಹ ಮಾನಸಿಕ ಶಕ್ತಿಯು, ದೇಹ ಮತ್ತು ಮನಸ್ಸಿನ ಆಧಿಕ್ಯದ ಸ್ಥಿತಿಗತಿಯು ನಮ್ಮನ್ನು ರಕ್ಷಿಸಿ, ನಮ್ಮ ಯಶಸ್ಸಿಗೆ ಮೂಲ ಕಾರಣವಾಗಬಲ್ಲದು. ಆದ್ದರಿಂದ ದೇವರ ಕೃಪಾಶೀರ್ವಾದ ಇದ್ದುದರಿಂದಲೇ ಯಹೂದಿಗಳು ಯಶಸ್ವಿಯಾದರು ಎಂದು ಸರಿಯಾಗಿ ಅರ್ಥೈಸಿ ಹೇಳಿದ್ದರಲ್ಲಿ ಯಾವ ತಪ್ಪೂ ಇಲ್ಲ.

## IV

ದೇಹ ಮತ್ತು ಮನಸ್ಸಿನ ಆಧಿಕ್ಯದ ಸ್ಥಿತಿಯೂ ಕೂಡ ಸಾಮಾಜಿಕ ಪರಿಸರದ ಪರಿಣಾಮವೇ ಆಗಿರುತ್ತದೆ. ಆದರೆ ಪ್ರಸನ್ನವಾದ, ಅನುಕೂಲಕರವಾದ ಪರಿಸರವಿದ್ದರೆ ಮಾತ್ರ ಇಂಥ ಪರಿಣಾಮ ಉಂಟಾಗಲು ಸಾಧ್ಯ. ಎಂಥ ಪರಿಸರವು ದೇಹ ಮತ್ತು ಮನಸ್ಸುಗಳ ಆಧಿಕ್ಯಕ್ಕೆ ಅಂದರೆ ಏಳಿಗೆಗೆ ಸಹಾಯ ಮಾಡಬಲ್ಲದು? ಪ್ರಸನ್ನವಾದ ಸಾಮಾಜಿಕ ಪರಿಸರ ಏನನ್ನು ಒಳಗೊಳ್ಳುತ್ತದೆ? ಇದು ಬಂಧನಗಳಿಂದ ಮುಕ್ತವಾಗಿರುತ್ತದೆ. ಅಡ್ಡಿ ಆತಂಕಗಳಿಂದ ಸುರಕ್ಷಿತವಾಗಿರುತ್ತದೆ. ಹೇಗಾದರೂ ಜೀವಿಸುವುದಕ್ಕೆ ಅಲ್ಲ, ಸುಖ, ಸಂತೋಷ, ನೆಮ್ಮದಿಯಿಂದ ಬಾಳುವ ಹಕ್ಕುಳ್ಳವನನ್ನಾಗಿ ಮಾಡುವಂಥದು. ಒಬ್ಬನ ಐಷಾರಾಮಿನ ಸುಖಕ್ಕಾಗಿ ಮತ್ತೊಬ್ಬನನ್ನು ಕತ್ತೆಯಂತೆ ದುಡಿಯುವಂತೆ ಒತ್ತಾಯ ಮಾಡುವುದಿಲ್ಲ. ಸಹಜ ಶಕ್ತಿ ಸಾಮರ್ಥ್ಯಗಳ ವಿಕಸನದ ಹಕ್ಕನ್ನು ಯಾರಿಗೂ ದೋಚಲು ಅವಕಾಶ ನೀಡುವುದಿಲ್ಲ. ಮುಂದೋಡುತ್ತಿರುವ ಸ್ಪರ್ಧಾಳುವಿನ ಕಾಲನ್ನು ಯಾರೂ ಜಗ್ಗದಂತೆ ಜಾಗ್ರತೆ ವಹಿಸುತ್ತದೆ. ವ್ಯಕ್ತಿಯ ಸಾಧನೆ ಆಧರಿಸಿ ಪ್ರತಿಫಲ ನೀಡುತ್ತದೆಯೆ ವಿನಾ ಜಾತಿ ಆಧರಿಸಿ ಅಲ್ಲ. ಎಲ್ಲರೊಂದಿಗೆ ಒಳ್ಳೇ ಭಾವನಾತ್ಮಕ ಸಂಬಂಧ ಹೊಂದಿರುವಂಥದು. ಅಂದರೆ ಎಲ್ಲರಿಗೂ ಒಳ್ಳೆಯದನ್ನೇ ಬಯಸುವಂಥದು. ಇಂಥ ಪರಿಸರದ ಸ್ಥಿತಿಗತಿಗಳು ದೇಹ ಮತ್ತು ಮನಸ್ಸುಗಳ ಆಧಿಕ್ಯದ ಸ್ಥಿತಿಗೆ ನೆರವು ನೀಡಬಲ್ಲದು. ಏಳಿಗೆಗೆ ನೀರು ಗೊಬ್ಬರವಾಗಬಲ್ಲದು. (ಈ ಲೇಖನದ ಮುಂದಿನ ಸಾಲುಗಳನ್ನು ಅಳಿಸಿ ಹಾಕಿದ್ದರಿಂದ ಓದಲು ಬರದಂತಾಗಿದೆ. –ಸಂ)

(ಮೇಲಿನ ಭಾಗಗಳು ಡಾ. ಅಂಬೇಡ್ಕರರ ಕೈಬರಹದಲ್ಲಿವೆ. ಒಂದೊಂದು ಭಾಗವನ್ನೂ ಪ್ರತ್ಯೇಕ ಕಾಗದದಲ್ಲಿ ಬರೆಯಲಾಗಿದೆ. –ಸಂ.]

* * *

## ೮
# ರಾಜಕೀಯ ದಮನದ ಸಮಸ್ಯೆ*

ಭಾರತದಲ್ಲಿ ರಾಜಕೀಯ ಸ್ವಾತಂತ್ರ್ಯ ತತ್ವದ ಪ್ರವೇಶವು ಮಂದಗತಿಯದು ಮತ್ತು ಹಂತಹಂತವಾಗಿ ಕಾರ್ಯಗತವಾಗಿರುವಂಥದು. ೧೮೯೨ನೆಯ ವರ್ಷ, ಶಾಸಕಾಂಗಗಳ ರಚನೆಯಲ್ಲಿ ಪ್ರಜಾಪ್ರಾತಿನಿಧ್ಯದ ತತ್ವವನ್ನು ಅಳವಡಿಸಿದಾಗ ರಾಜಕೀಯ ಸ್ವಾತಂತ್ರ್ಯದ ಉದಯವಾಯಿತು. ೧೯೦೯ರಲ್ಲಿ ಈ ತತ್ವದ ವಿಸ್ತರಣೆಯಾಯಿತು. ಆದರೆ ಆಗಿನ ಪ್ರಜಾಪ್ರಾತಿನಿಧ್ಯದ ತತ್ವದಲ್ಲಿ ಎರಡು ದೋಷಗಳಿದ್ದವು. ಮೊದಲನೆಯ ದೋಷವೆಂದರೆ, ಚುನಾವಣಾ ಮತದಾನದ ಹಕ್ಕು ಅತಿ ಉಚ್ಚಮಟ್ಟದ ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಅಸಂಖ್ಯ ಜನರು ಈ ಹಕ್ಕಿನಿಂದ ವಂಚಿತರಾಗಿದ್ದರು. ಹಿಂದೂ ಮತ್ತು ಮುಸಲ್ಮಾನ ಶ್ರೀಮಂತ ವರ್ಗಗಳ ಕೆಲವೇ ಕೆಲವು ಜನರಿಗೆ ಮತದಾನದ ಹಕ್ಕು ಲಭ್ಯವಾಗಿತ್ತು. ಎರಡನೆಯ ದೋಷವೆಂದರೆ, ಪ್ರಜಾಪ್ರಾತಿನಿಧ್ಯ ತತ್ವವು ಶಾಸಕಾಂಗಕ್ಕೆ ಮಾತ್ರ ಸೀಮಿತವಾಗಿದ್ದುದು. ಈ ತತ್ವವನ್ನು ಆಡಳಿತಾಂಗಕ್ಕೆ ವಿಸ್ತರಿಸಲಾಗಿರಲಿಲ್ಲ. ಆಡಳಿತಾಂಗವು ಮತ್ತೊಂದರ ಮೇಲೆ ಅವಲಂಬಿಸಿರದೆ ಸರ್ವಸ್ವತಂತ್ರವಾಗಿತ್ತು. ಆಡಳಿತಾಂಗದ ಆಗುಹೋಗುಗಳ ಮೇಲೆ ಶಾಸಕಾಂಗದ ಹಿಡಿತ ಎಷ್ಟು ಇರಲಿಲ್ಲ. ೧೯೧೯ರ ಕಾಯಿದೆಯಲ್ಲಿ ಈ ದಿಶೆಯಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಯಿತು. ಆಶ್ಚರ್ಯವೆಂದರೆ, ೧೯೧೯ರ ಕಾಯಿದೆಯಲ್ಲಿ, ಮೊದಲಿದ್ದ ಸ್ಥಿತಿಗೆ ವಿರುದ್ಧವಾಗಿ, ಪ್ರಜಾಪ್ರಾತಿನಿಧ್ಯ ತತ್ವವನ್ನು ಶಾಸಕಾಂಗಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಡಳಿತಾಂಗಕ್ಕೆ ಅನ್ವಯಿಸಲಾಯಿತು. ರಾಜಕೀಯ ಆಂದೋಳನದ ನೇತೃತ್ವ ವಹಿಸಿದವರೆಲ್ಲರೂ ಉಚ್ಚ ವರ್ಗಗಳಿಗೆ ಸಂಬಂಧಿಸಿದ್ದರಿಂದಲೇ ಇದು ಹೀಗಾಯಿತು. ಅವರೆಲ್ಲರೂ ಆಡಳಿತಾಧಿಕಾರದ ಕಡೆಗೆ ಒಲವುಳ್ಳವರಾಗಿದ್ದರೇ ವಿನಾ ಮತದಾನದ ಹಕ್ಕಿನ ವಿಸ್ತರಣೆಯಲ್ಲಿ ಆಸಕ್ತಿ ಹೊಂದಿರಲಿಲ್ಲ. ಇದು ಸ್ವಾಭಾವಿಕ, ಆಡಳಿತಾಧಿಕಾರವನ್ನು ತಾವೇ ಹೊಂದುವುದರಿಂದಲೇ ಅವರಿಗೆ ಹೆಚ್ಚಿನ ಲಾಭವಾಗುತ್ತಿತ್ತು. ಮತದಾನದ ಹಕ್ಕಿನ ವಿಸ್ತರಣೆಯಿಂದ ಸಾಮಾನ್ಯ ಜನವರ್ಗಗಳಿಗೆ ಹೆಚ್ಚಿಗೆ ಲಾಭವಾಗುತ್ತಿತ್ತು.

ಆಡಳಿತಾಧಿಕಾರ ತಮಗೇ ಬೇಕೆಂದು ಉಚ್ಚ ವರ್ಗಗಳ ಪ್ರತಿಷ್ಠಿತರು ಬ್ರಿಟಿಷ್ ಉಚ್ಚ ಅಧಿಕಾರಿಗಳ ಕಿವಿ ಚುಚ್ಚಿದರು ಮತ್ತು ಅವರ ಮೇಲೆ ಒತ್ತಾಯ ತಂದರು. ಮತದಾನದ ಹಕ್ಕಿನ ವಿಸ್ತರಣೆಗೆ ಅವಕಾಶ ಕೊಡದೆ ತಾವೇ ಆಡಳಿತಾಧಿಕಾರವನ್ನು ಪಡೆಯುವಲ್ಲಿ ಯಶಸ್ವಿಯಾದರು.

ಮತದಾನದ ಹಕ್ಕು ನಿಸ್ಸಂಶಯವಾಗಿ ೧೯೧೯ರ ಕಾಯಿದೆಯಿಂದ ನಿರ್ಧರಿತವಾದ ಎಲ್ಲೆ ಮೀರಿ ವಿಸ್ತರಣೆಗೊಂಡಿತು. ಆದರೆ ದುರ್ದೈವದಿಂದ ಇದು ಅಸ್ಪೃಶ್ಯರನ್ನು ತಲುಪಲಿಲ್ಲ. ನಿಜವಾಗಿ ಹೇಳಬೇಕೆಂದರೆ, ಅಸ್ಪೃಶ್ಯರ ಕಡುಬಡತನ ಇದಕ್ಕೆ ಅಡ್ಡಬರುತ್ತಿತ್ತು. ಅವರು ಎಷ್ಟು ಬಡವರಾಗಿದ್ದರೆಂದರೆ, ಪ್ರೌಢ ಮತದಾನದ ಹಕ್ಕಿನ ವಿಸ್ತರಣೆಯಿಂದ ಮಾತ್ರ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿಸಲು ಸಾಧ್ಯವಿತ್ತು.

---

* ಇದು ಡಾ. ಅಂಬೇಡ್ಕರರ ಕೈಬರಹದ ಆರು ಪುಟಗಳ ಹಸ್ತಪ್ರತಿ. 'ಹಿಂದೂ ಸಾಮಾಜಿಕ ವ್ಯವಸ್ಥೆ' ಎಂಬ ಯೋಜನೆಯ ಅಡಿಯಲ್ಲಿ ಇದಕ್ಕೆ XIIIನೆಯ ಅಧ್ಯಾಯ ಎಂದು ಅಂಕಿ ಹಾಕಿದ್ದಾರೆ. ಕೊನೆಯ ವಾಕ್ಯದಿಂದ ಈ ಅಧ್ಯಾಯವು ಅಪೂರ್ಣವಾದಂತೆ ಕಾಣುತ್ತದೆ.

–ಸಂ.

ಇಂಡಿಯಾದ ಸರಕಾರವು ಇದರಿಂದ ಬಹಳಷ್ಟು ಕಂಗೆಟ್ಟಿತು (ಗೊಂದಲದಲ್ಲಿ ಬಿತ್ತು). ಅದಕ್ಕೆ ಹೆಚ್ಚಿಗೆ ಏನನ್ನೂ ಮಾಡುವ ಶಕ್ತಿ ಇರಲಿಲ್ಲ. ಅಸ್ಪೃಶ್ಯರಿಗೆ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಕೊಡದೆ ಅವರನ್ನು ಉಚ್ಚ ಜಾತಿಯ ಹಿಂದೂಗಳ ರಾಜಕೀಯ ಪ್ರಾಧಾನ್ಯತೆಯ ಅಡಿಯಲ್ಲಿ ಇಟ್ಟ ಬಗ್ಗೆ ಅದು ತನ್ನ ಕಳವಳವನ್ನು ಅಸಂತೋಷವನ್ನು ವ್ಯಕ್ತಪಡಿಸದೆ ಇರಲಿಲ್ಲ. ಅದು ತನ್ನ ೧೯೧೮ರ ಸರಕಾರಿ ಪ್ರಕಟಣೆಯಲ್ಲಿ ಹೀಗೆ ನಿರೀಕ್ಷಣೆ ಮಾಡಿದೆ–

(ಉದ್ಧರಣೆ ಮಾಡು)

೧೯೩೫ರಲ್ಲಿ, ಬ್ರಿಟಿಷ್ ಸರಕಾರದ 'ಮತೀಯ ತೀರ್ಪು' ಎಂದು ಕರೆಯಲಾಗಿರುವ ಯೋಜನೆಯ ಪ್ರಸ್ತಾಪದ ಮೂಲಕ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾಯಿತು.

(೧) ಅಸ್ಪೃಶ್ಯರು ತಮ್ಮ ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತು ಜನರಿಗೆ ಮತವನ್ನು ಚಲಾಯಿಸಲು ಅನುಕೂಲವಾಗುವಂತೆ ಭೇದಾತ್ಮಕ ಮತದಾನದ ಹಕ್ಕನ್ನು ಪಡೆಯುತ್ತಾರೆ.

(೨) ಅಸ್ಪೃಶ್ಯರು ಭೇದಾತ್ಮಕ ಮತದಾನದ ಹಕ್ಕನ್ನು ಮಾತ್ರ ಹೊಂದಿರದೆ, ಜೊತೆಗೆ ಪ್ರಾಂತೀಯ ಮತ್ತು ಕೇಂದ್ರೀಯ ಶಾಸನ ಸಭೆಗಳಲ್ಲಿ ಕೆಲವೊಂದು ಸ್ಥಾನಗಳ ಮೀಸಲಾತಿಯನ್ನು ಪಡೆಯುವರು.

(೩) ಅಸ್ಪೃಶ್ಯರಿಗಾಗಿ ಮೀಸಲಿಟ್ಟ ಸ್ಥಾನಗಳನ್ನು ಅವರ ಮತದಾರರನ್ನೇ ಒಳಗೊಂಡ ಪ್ರತ್ಯೇಕ ಮತದಾನ ಕ್ಷೇತ್ರಗಳ ಮೂಲಕ ತುಂಬಲಾಗುವದು.

(೪) ಅಸ್ಪೃಶ್ಯರು ತಮ್ಮದೇ ಆದ ಪ್ರತ್ಯೇಕ ಮತಕ್ಷೇತ್ರಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದುವುದರ ಜೊತೆಗೆ ಹಿಂದೂಗಳ ಮತಕ್ಷೇತ್ರಗಳಲ್ಲಿಯೂ ಹಿಂದೂ ಅಭ್ಯರ್ಥಿಗೆ ಎರಡನೆಯ ಅಥವಾ ಹೆಚ್ಚುವರಿ ಮತ ಚಲಾಯಿಸುವ ಹಕ್ಕನ್ನೂ ಪಡೆಯುವರು.

ಮಿ. ಗಾಂಧಿಯು ಮೊದಲಿನಿಂದಲೂ ಅಸ್ಪೃಶ್ಯರ ಪ್ರತ್ಯೇಕ ಪ್ರಾತಿನಿಧ್ಯವನ್ನು ಆಕ್ಷೇಪಿಸುತ್ತಲೇ ಬಂದಿದ್ದರು. ಹೀಗಾಗಿ ಬ್ರಿಟಿಷ್ ಸರಕಾರದ ಪ್ರಸ್ತುತ ಪ್ರಸ್ತಾವನೆಯನ್ನು ವಿರೋಧಿಸಿದರು. ಈ ಕೋಮು ಆಧಾರಿತ ವಿನಾಯಿತಿಗಳನ್ನು ಹಿಂತೆಗೆದುಕೊಳ್ಳದಿದ್ದರೆ, ಆಮರಣ ಉಪವಾಸ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದರು. ಮಿ. ಗಾಂಧಿಯ ಆಕ್ಷೇಪಣೆಯು ಮುಖ್ಯವಾಗಿ ಅಸ್ಪೃಶ್ಯರ ಪ್ರತ್ಯೇಕ ಮತಕ್ಷೇತ್ರದ ರಚನೆಗೆ ಸಂಬಂಧಿಸಿತ್ತು. ಅಸ್ಪೃಶ್ಯರು ಮತ್ತು ಹಿಂದೂಗಳು ತಮ್ಮ ತಮ್ಮಲ್ಲಿ ಒಡಂಬಡಿಕೆ ಮಾಡಿಕೊಳ್ಳದೆ ಹೋದರೆ ಬ್ರಿಟಿಷ್ ಸರಕಾರವು ತನ್ನ ಪ್ರಸ್ತಾವನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದನ್ನು ನಿರಾಕರಿಸಿತು. ಮಿ. ಗಾಂಧಿ ಮೊದಲೇ ನಿರ್ಧರಿಸಿದಂತೆ ತಮ್ಮ ಉಪವಾಸವನ್ನು ಪ್ರಾರಂಭಿಸಿದರು. ಕೊನೆಗೆ ಅನೇಕ ಹಿತೈಷಿಗಳ ಮಧ್ಯಪ್ರವೇಶದಿಂದ ೧೯೩೨ ಸೆಪ್ಟೆಂಬರ್ ತಿಂಗಳಲ್ಲಿ ಹಿಂದೂಗಳ ಮತ್ತು ಅಸ್ಪೃಶ್ಯರ ಮಧ್ಯದಲ್ಲಿ ಒಪ್ಪಂದವಾಯಿತು. ಇದು ಪೂನಾ ಒಪ್ಪಂದವೆಂದು ಪ್ರಖ್ಯಾತವಾಗಿದೆ. ಒಪ್ಪಂದದ ಕರಾರುಗಳನ್ನು ಕೆಳಗೆ ಪುನರುಕ್ತಿಗೊಳಿಸಲಾಗಿದೆ:

## ಪೂನಾ ಒಪ್ಪಂದ*

(೧) ಪ್ರಾಂತೀಯ ಶಾಸನ ಸಭೆಗಳಲ್ಲಿಯ ಸಾಮಾನ್ಯ ಮತಕ್ಷೇತ್ರಗಳ ಒಟ್ಟು ಸ್ಥಾನಗಳಲ್ಲಿ ಅಸ್ಪೃಶ್ಯರಿಗೆ ಮೀಸಲಾಗಿಟ್ಟ ಸ್ಥಾನಗಳು ಕೆಳಗಿನಂತಿರುತ್ತವೆ:

* ೧೯೩೨, ಸೆಪ್ಟೆಂಬರ್ ೨೫ರಂದು ಒಪ್ಪಂದಕ್ಕೆ ರುಜು ಹಾಕಲಾಯಿತು.

ಮದ್ರಾಸ್ ೩೦, ಸಿಂಧವನ್ನೊಳಗೊಂಡ ಮುಂಬಯಿ ೧೫, ಪಂಜಾಬ್ ೮, ಬಿಹಾರ ಮತ್ತು ಓಡಿಸ್ಸಾ ೧೮, ಮಧ್ಯಪ್ರಾಂತಗಳು ೧೮, ಅಸ್ಸಾಂ ೭, ಉತ್ತರ ಪ್ರದೇಶಗಳು ೨೦, ಒಟ್ಟು ಮೀಸಲಿಟ್ಟ ಸ್ಥಾನಗಳು ೧೪೮.

ಈ ಅಂಕಿ ಸಂಖ್ಯೆಗಳು ಪ್ರಧಾನಮಂತ್ರಿಯ ನಿರ್ಧಾರದ ಘೋಷಣೆಗೆ ಅನುಸಾರವಾಗಿ ರಚಿತವಾದ ಪ್ರಾಂತೀಯ ಕೌನ್ಸಿಲ್ಲುಗಳ ಒಟ್ಟು ಸಂಖ್ಯೆಯನ್ನು ಆಧರಿಸಿರುತ್ತವೆ.

(೨) ಈ ಮೀಸಲು ಸ್ಥಾನಗಳಿಗೆ ಚುನಾವಣೆಯು ಕೆಳಗಿನ ವಿಧಿ ವಿಧಾನಗಳಿಗೆ ಅನುಸರಿಸಿ ಸಂಯುಕ್ತ ಮತದಾನದ ಪದ್ಧತಿಯಂತೆ ನಡೆಯಬೇಕು. ಯಾವುದೇ ಮತಕ್ಷೇತ್ರದಲ್ಲಿ ಸರ್ವಸಾಮಾನ್ಯ ಮತದಾರರಾಗಿ ಹೆಸರು ನೋಂದಾಯಿಸಿದ ಪರಿಶಿಷ್ಟ ವರ್ಗಗಳ ಸದಸ್ಯರೆಲ್ಲರನ್ನೂ ಸೇರಿಸಿ ಇಲೆಕ್ಟೋರಲ್ ಕಾಲೇಜು ರಚಿತವಾಗುತ್ತದೆ. ಇದು ಪ್ರತಿಯೊಂದು ಮೀಸಲು ಕ್ಷೇತ್ರದ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದವರಲ್ಲಿ ಏಕಮತ ಪದ್ಧತಿಯಿಂದ ಆಯ್ಕೆ ಮಾಡಿದ ನಾಲ್ಕು ಅಭ್ಯರ್ಥಿಗಳ ಪಟ್ಟಿ (Panel) ತಯಾರಿಸುತ್ತದೆ. ಇಂಥ ಪ್ರಾಥಮಿಕ ಚುನಾವಣೆಯಲ್ಲಿ ಅತಿ ಹೆಚ್ಚು ಮತ ಪಡೆದ ನಾಲ್ವರು ವ್ಯಕ್ತಿಗಳು ಸಾರ್ವತ್ರಿಕ ಚುನಾಯತ ಸಮುದಾಯದ ಅಭ್ಯರ್ಥಿಗಳಾಗುತ್ತಾರೆ.

(೩) ಕೇಂದ್ರೀಯ ಶಾಸಕಾಂಗಕ್ಕೆ ಪರಿಶಿಷ್ಟ ವರ್ಗಗಳ ಪ್ರಾತಿನಿಧ್ಯವೂ ಕೂಡ ಸಂಯುಕ್ತ ಚುನಾಯತ ಸಮುದಾಯ ಮತ್ತು ಮೀಸಲು ಸ್ಥಾನಗಳ ತತ್ವವನ್ನೇ ಆಧರಿಸಿರುತ್ತದೆ. ಮೇಲಿನ ಎರಡನೆಯ ವಿಧಿಯಲ್ಲಿ ಸೂಚಿಸಿದಂತೆ ಪ್ರಾಥಮಿಕ ಚುನಾವಣೆಯ ವಿಧಾನವನ್ನು ಅನುಸರಿಸಿಯೆ ಪ್ರಾಂತೀಯ ಶಾಸಕಾಂಗಗಳಲ್ಲಿಯೂ ಪ್ರಾತಿನಿಧ್ಯ ನೀಡಲಾಗುತ್ತದೆ.

(೪) ಬ್ರಿಟಿಷ್ ಇಂಡಿಯಾದ ಕೇಂದ್ರೀಯ ಶಾಸಕಾಂಗದಲ್ಲಿ ನೂರಕ್ಕೆ ೧೮ ಸ್ಥಾನಗಳನ್ನು ಪರಿಶಿಷ್ಟ ವರ್ಗದವರಿಗೆ ಮೀಸಲಿಡಲಾಗುವುದು.

(೫) ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳ ಚುನಾವಣೆಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ನಿರೂಪಿಸಿದ ಪ್ರಾಥಮಿಕ ಚುನಾವಣಾ ವ್ಯವಸ್ಥೆಯು ಮೊದಲೇ ತೀರ್ಮಾನಿಸಿದಂತೆ ಒಂದು ವೇಳೆ ಕೆಳಗಿನ ೬ನೇ ವಿಧಿಯ ಷರತ್ತಿನಂತೆ ಮೊದಲೇ ಕೊನೆಗೊಳ್ಳದಿದ್ದ ಪಕ್ಷದಲ್ಲಿ ಹತ್ತು ವರ್ಷಗಳ ನಂತರ ಮುಕ್ತಾಯಗೊಳ್ಳುತ್ತದೆ.

(೬) ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳಲ್ಲಿನ ಪರಿಶಿಷ್ಟ ಸ್ಥಾನಗಳಿಗೆ ಸಂಬಂಧಿಸಿದ ಮೀಸಲಾತಿ ಪ್ರಾತಿನಿಧ್ಯದ ವ್ಯವಸ್ಥೆಯು ಮೇಲಿನ ಒಂದು ಮತ್ತು ನಾಲ್ಕನೇ ವಿಧಿಗಳಲ್ಲಿ ಸೂಚಿಸಿದಂತೆ ಎರಡೂ ಸಮುದಾಯಗಳ ಮಧ್ಯದಲ್ಲಿ ಆದ ಒಪ್ಪಂದಕ್ಕೆ ಅನುಗುಣವಾಗಿ ಮುಂದುವರಿಯುತ್ತದೆ.

(೭) ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳಿಗೆ ಅಸ್ಪೃಶ್ಯ ಜಾತಿಯ ಜನರ ಚುನಾವಣೆಯು ಲೋಥಿಅನ್ (Lothian) ಸಮಿತಿಯ ವರದಿಗೆ ಅನುಗುಣವಾಗಿ ನಡೆಯುತ್ತದೆ.

(೮) ಸ್ಥಾನಿಕ ಸಂಸ್ಥೆಗಳ ಚುನಾವಣೆಯಲ್ಲಾಗಲೀ ಅಥವಾ ಸಾರ್ವಜನಿಕ ಸೇವೆಗಳಿಗೆ ನೇಮಕ ಮಾಡುವಾಗ ಆಗಲೀ, ಅವನು ಅಸ್ಪೃಶ್ಯನೆಂಬ ಕಾರಣದಿಂದ ಯಾವ ದೌರ್ಬಲ್ಯಗಳೂ ಅಡ್ಡ ಬರಲಾರವು. ಆದರೆ ನೇಮಕಕ್ಕೆ ಅತ್ಯಾವಶ್ಯಕವಾದ ಕನಿಷ್ಠ ಶೈಕ್ಷಣಿಕ ಅರ್ಹತೆಗೆ ಒಳಪಟ್ಟು, ಅಸ್ಪೃಶ್ಯರಿಗೆ, ಈ ವಿಷಯದಲ್ಲಿ, ನ್ಯಾಯಯುತವಾದ ಪ್ರಾತಿನಿಧ್ಯದ ಭರವಸೆಯನ್ನು ಕೊಡುವ ದಿಶೆಯಲ್ಲಿ ಸಾಧ್ಯವಿದ್ದ ಎಲ್ಲ ಪ್ರಯತ್ನವನ್ನೂ ಮಾಡಲಾಗುವುದು.

(೯) ಪ್ರತಿಯೊಂದು ಪ್ರಾಂತದ ಶೈಕ್ಷಣಿಕ ಅನುದಾನದಲ್ಲಿ ಸಾಕಷ್ಟು ಮೊತ್ತವನ್ನು ಅಸ್ಪೃಶ್ಯರ ಶೈಕ್ಷಣಿಕ ಸೌಲಭ್ಯಗಳಿಗಾಗಿ ತೆಗೆದಿರಿಸಲಾಗುವದು.

ಈ ಒಪ್ಪಂದವು ಅಸ್ಪೃಶ್ಯರ ರಾಜಕೀಯ ಸ್ವಾತಂತ್ರ್ಯದ ಹಕ್ಕುಬಾಧ್ಯತಾ ಪತ್ರವೆನಿಸಿದೆ. ಮೊದಲನೆಯ ಚುನಾವಣೆ........ (ಅಪೂರ್ಣವಾಗಿದೆ –ಸಂ)

* * *

# ೬

# ಯಾವುದು ಹೆಚ್ಚು ಕೆಟ್ಟದ್ದು? ಯಾವುದು ಅತಿ ಕೀಳು? ಗುಲಾಮಗಿರಿಯೋ ಅಸ್ಪೃಶ್ಯತೆಯೋ?

[ಡಾ. ಅಂಬೇಡ್ಕರರು, ಗುಲಾಮಗಿರಿ ಮತ್ತು ಅಸ್ಪೃಶ್ಯತೆ ಎಂಬ ವಿಷಯದ ಬಗ್ಗೆ, ಈ ಮಾಲೆಯ ಐದನೆಯ ಸಂಪುಟದ ಒಂದು ಮತ್ತು ಎಂಟನೆಯ ಅಧ್ಯಾಯಗಳಲ್ಲಿ, 'ಗುಲಾಮರು ಮತ್ತು ಅಸ್ಪೃಶ್ಯರು' ಮತ್ತು 'ಸಮಾನಾಂತರ ನಿದರ್ಶನಗಳು' ಎಂಬ ಶಿರೋನಾಮೆಗಳ ಅಡಿಯಲ್ಲಿ ವಿವೇಚಿಸಿದ್ದಾರೆ. ಆದಾಗ್ಯೂ ಇದೇ ವಿಷಯಕ್ಕೆ ಸಂಬಂಧಿಸಿದ ಪುಸ್ತಿಕೆಯೊಂದು ನಮಗೀಗ ದೊರಕಿದೆ. ಈ ಪುಸ್ತಿಕೆಯಲ್ಲಿರುವ ಕೆಲವೊಂದು ಪ್ಯಾರಾಗಳು ಐದನೇ ಸಂಪುಟದ ಒಂದನೆಯ ಮತ್ತು ಎಂಟನೆಯ ಅಧ್ಯಾಯಗಳಲ್ಲಿ ಇಲ್ಲ. ಪ್ರಸ್ತುತ, ಪುಸ್ತಿಕೆಯಿಂದ ನಕಲು ಮಾಡಿದ ವಿಷಯ ಮತ್ತು ಮೊದಲು ಐದನೆಯ ಸಂಪುಟದಲ್ಲಿ ಬಂದ ವಿಷಯ ಎರಡೂ ಒಂದಕ್ಕೊಂದು ಪೂರಕವಾಗಿವೆ. ಪುನರುಕ್ತಿಗೆ ಅವಕಾಶವಿಲ್ಲ. ಸುಸಂಬದ್ಧ ಮತ್ತು ಪರಿಪೂರ್ಣ ಅಧ್ಯಯನಕ್ಕೆ ಸಹಕಾರಿಯೂ ಆಗಿವೆ. ಮೇಲಾಗಿ ಪ್ರಸ್ತುತ ಪುಸ್ತಿಕೆ ಒಳಗೊಂಡ ವಿಷಯದ ಬಗೆಗೆ ಎಳ್ಳಷ್ಟೂ ಸಂಶಯಪಡಲು ಕಾರಣವೇ ಇಲ್ಲ. ಈ ಪುಸ್ತಿಕೆಯ ಪ್ರಕಾಶಕರಾದ ಶ್ರೀ ದೇವಿ ದಯಾಲರಿಗೂ ಮತ್ತು ಡಾ. ಅಂಬೇಡ್ಕರರಿಗೂ ೧೯೪೩ರಿಂದ ೧೯೪೭ರವರೆಗಿನ ಅವಧಿಯಲ್ಲಿ ಸಂಪರ್ಕ, ಸಂಬಂಧ ಉಂಟಾಗಿತ್ತು. ಪ್ರಸ್ತುತ ಲೇಖನಕ್ಕೆ ಡಾ. ಅಂಬೇಡ್ಕರರು ಕೊಟ್ಟ ಶಿರೋನಾಮೆ ಮತ್ತು ಪುಸ್ತಿಕೆಗೆ ಇಟ್ಟ ಹೆಸರು ಎರಡೂ ಒಂದೇ ಆಗಿವೆ ಎಂಬುದು ಈ ಪುಸ್ತಿಕೆಯು ಅಂಬೇಡ್ಕರರೇ ಬರೆದದ್ದು ಎಂಬುದಕ್ಕೆ ಸಾಕ್ಷಿಯಾಗಿವೆ. ಈ ಪುಸ್ತಿಕೆಯ ಪ್ರಾರಂಭದ ಒಂದನೆಯ ಪುಟದಿಂದ ಹನ್ನೊಂದನೆಯ ಪುಟದವರೆಗೆ 'ಕನ್ಸಿಡರೇಶನ್ಸ್ ಆಫ್ ಹೂಮ್ಯಾನಿಟಿ' (ಮಾನವೀಯತೆ ಕುರಿತ ಆಲೋಚನೆಗಳು) ಎಂಬ ತಲೆಬರಹದ ಅಡಿಯಲ್ಲಿ ಬಂದ ಪ್ಯಾರಾಗಳು ಈಗಾಗಲೇ, ಐದನೆಯ ಸಂಪುಟದಲ್ಲಿ ೮೦ರಿಂದ ೮೮ರವರೆಗಿನ ಪುಟಗಳಲ್ಲಿ ಮುದ್ರಿತವಾಗಿವೆ. ಹೀಗಾಗಿ ಪುನರುಕ್ತಿಯಾಗದಿರಲೆಂದು ಅವುಗಳನ್ನು ಕೈಬಿಡಲಾಗಿದೆ. ಶ್ರೀ ದೇವಿ ದಯಾಲರಿಗಾಗಿ ಪ್ರಸ್ತುತ ಲೇಖನವನ್ನು ಮೊದಲು ಪ್ರಕಟಿಸಿದ ದಿಲ್ಲಿಯ ಶ್ರೀ ಭಗವಾನದಾಸರು ಪ್ರಶಂಸೆಗೆ, ಕೃತಜ್ಞತೆಗೆ ಪಾತ್ರರು.

–ಸಂಪಾದಕರು]

## ಭಾರತದಲ್ಲಿ ಗುಲಾಮಗಿರಿ

ಹಿಂದೂಗಳು ತಾವು ಬೇರೆ ರಾಷ್ಟ್ರಗಳಿಗಿಂತಲೂ ಶ್ರೇಷ್ಠರು ಎಂದು ವಾದಿಸುತ್ತ ಸಮರ್ಥಿಸುತ್ತ ಬಂದ ಕಾರಣಗಳಲ್ಲಿ ಕೆಳಗಿನ ಎರಡನ್ನು ಹೆಸರಿಸಬಹುದು. ಒಂದು, ಭಾರತದ ಹಿಂದೂಗಳಲ್ಲಿ ಗುಲಾಮಗಿರಿ ಎಂದೂ ಇರಲಿಲ್ಲ. ಎರಡು, ಅಸ್ಪೃಶ್ಯತೆಯು ನಿಸ್ಸಂಶಯವಾಗಿ ಗುಲಾಮಗಿರಿಗಿಂತ ಕಡಿಮೆ ಹಾನಿಕಾರಕ.

ಮೊದಲನೆಯ ಹೇಳಿಕೆಯು ನೈಜವಾಗಿ, ಐತಿಹಾಸಿಕವಾಗಿ ಅಸತ್ಯವಾದದ್ದು. ಗುಲಾಮಗಿರಿಯು ಹಿಂದೂಗಳ ಅತಿ ಪ್ರಾಚೀನವಾದ ಸಂಸ್ಥೆ. ಹಿಂದೂ ಧರ್ಮಶಾಸ್ತ್ರಕಾರನಾದ ಮನುವು ಇದನ್ನು ಮಾನ್ಯ ಮಾಡಿದ್ದಾನೆ. ಮನುವಿನ ನಂತರದ ಸ್ಮೃತಿಕಾರರು ಗುಲಾಮಗಿರಿಯನ್ನು ವಿಸ್ತಾರವಾಗಿ ವಿವರಿಸಿದ್ದಾರೆ

ಮತ್ತು ಅದಕ್ಕೊಂದು ವ್ಯವಸ್ಥಿತ ಸ್ವರೂಪ ನೀಡಿದ್ದಾರೆ. ಹಿಂದೂಗಳಲ್ಲಿ ಗುಲಾಮಗಿರಿಯು ಓಬೀರಾಯನ ಕಾಲದಲ್ಲಿ ಮಾತ್ರ ಕಾರ್ಯಪ್ರವೃತ್ತವಾಗಿದ್ದ ಪ್ರಾಚೀನ ಸಂಸ್ಥೆಯಲ್ಲ. ಭಾರತೀಯ ಇತಿಹಾಸದುದ್ದಕ್ಕೂ ಕ್ರಿ.ಶ. ೧೮೪೩ರರವರೆಗೆ ಜೀವಂತವಾಗಿ ಸಾಗಿಬಂದ ಸಂಸ್ಥೆ. ಕ್ರಿ.ಶ. ೧೮೪೩ರಲ್ಲಿ ಬ್ರಿಟಿಷರು ಅದನ್ನು ಕಾನೂನಿನ ಮೂಲಕ ರದ್ದುಪಡಿಸದಿದ್ದರೆ ಇಂದಿಗೂ ಮುಂದುವರಿಯುತ್ತಲೇ ಇರುತ್ತಿತ್ತೇನೋ! ಇದು ಸ್ಪೃಶ್ಯ ಮತ್ತು ಅಸ್ಪೃಶ್ಯ ಎರಡೂ ಜನವರ್ಗಗಳಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಥೆ.

ಸ್ಪೃಶ್ಯರಿಗಿಂತ ಅಸ್ಪೃಶ್ಯರಲ್ಲಿ ಬಡತನ ಹೆಚ್ಚು. ಇದೇ ಕಾರಣಕ್ಕಾಗಿಯೇ ಅಸ್ಪೃಶ್ಯರಲ್ಲಿ ಗುಲಾಮರ ಸಂಖ್ಯೆಯೂ ಹೆಚ್ಚು. ಕ್ರಿ.ಶ. ೧೪೮೩ರವರೆಗೆ ಅಸ್ಪೃಶ್ಯರು ಎರಡು ತೆರನಾದ ದಾಸ್ಯಕ್ಕೆ ಒಳಗಾದ ದುರ್ದೈವಿಗಳಾಗಿದ್ದರು. ಒಂದು, ಗುಲಾಮಗಿರಿಯ ದಾಸ್ಯ. ಇನ್ನೊಂದು ಅಸ್ಪೃಶ್ಯತೆಯದು. ಇವೆರಡರಲ್ಲಿ ಗುಲಾಮಗಿರಿಯ ದಾಸ್ಯ ಹಗುರವಾದದ್ದು. ಈ ದಾಸ್ಯವನ್ನು ಕ್ರಿ.ಶ. ೧೮೪೩ರ ಗುಲಾಮಗಿರಿ ನಿರ್ಮೂಲನ ಕಾಯಿದೆಯನ್ನು ಪಾಸುಮಾಡುವುದರಿಂದ ಬ್ರಿಟಿಷ್ ಸರಕಾರವು ಅದನ್ನು ಕತ್ತರಿಸಿಹಾಕಿದರು. ಅಸ್ಪೃಶ್ಯರು ಗುಲಾಮಗಿರಿಯಿಂದ ವಿಮೋಚನೆ ಹೊಂದಿದರು. ಇಂದು ಈ ದಾಸ್ಯದ ಶೃಂಖಲೆಯಿಂದ ವಿಮೋಚನೆ ಹೊಂದಿದ್ದಾರೆ. ಇದರ ಅರ್ಥ ಅವರಲ್ಲಿ ಗುಲಾಮಗಿರಿ ಇರಲೇ ಇಲ್ಲ ಎಂದಲ್ಲ. ಹೀಗೆ ತಿಳಿಯುವುದೆಂದರೆ ಇತಿಹಾಸದ ಪುಟಗಳನ್ನು ಸಂಪೂರ್ಣವಾಗಿ ಹರಿದು ಹಾಕಿದಂತೆಯೇ. ಇತಿಹಾಸದ ನೈಜತೆಯನ್ನು ಅಲ್ಲಗಳೆದಂತೆಯೇ.

ಭಾರತದ ಹಿಂದೂಗಳಲ್ಲಿ ಗುಲಾಮಗಿರಿ ಎಂದೂ ಇದ್ದೇ ಇರಲಿಲ್ಲ ಎಂಬ ಮೊದಲನೆಯ ವಾದದ ಹರವು ಅಷ್ಟೊಂದು ವ್ಯಾಪಕವಾದುದೇನೂ ಅಲ್ಲ. ಆದರೆ, ಅಸ್ಪೃಶ್ಯತೆಯು ಗುಲಾಮಗಿರಿಯದಕ್ಕಿಂತ ಕಡಿಮೆ ಅಪಾಯಕಾರಿ, ಕಡಿಮೆ ಕೆಡಕುಳ್ಳದ್ದು ಎಂಬ ವಾದದ ಹರವು ಹೆಚ್ಚು. ಮಿಸ್ ಮೇಯೋ ಹಿಂದೂ ಸಮಾಜವನ್ನು ಶುಭ್ರವಾಗಿ ಕಂಡು ಆಪಾದನೆ ಮಾಡಿದಾಗ, ಅಷ್ಟೊಂದು ಮಹಾನ್ ಸಮಾಜ ಸುಧಾರಕ, ಅಷ್ಟೊಂದು ದೊಡ್ಡ ಅಸ್ಪೃಶ್ಯರ ಮಿತ್ರ, ಹಿತಚಿಂತಕನಾದ ಲಾಲಾ ಲಜಪತರಾಯ್‌ರಂಥವರೂ ಕೂಡ, ಗುಲಾಮಗಿರಿಯೆದುರು ಅಸ್ಪೃಶ್ಯತೆ ಏನೂ ಅಲ್ಲ. ಗುಲಾಮಗಿರಿಯಿಂದ ಉಂಟಾದಷ್ಟು ಕೆಡಕು ಇದರಿಂದಾಗಿಲ್ಲ ವೆಂದರು. ತಮ್ಮ ಮಾತನ್ನು ಸಮರ್ಥಿಸಲೋಸುಗ ಭಾರತದಲ್ಲಿಯ ಅಸ್ಪೃಶ್ಯರನ್ನು ಅಮೆರಿಕೆಯಲ್ಲಿಯ ನೀಗ್ರೋಗಳಿಗೆ ಹೋಲಿಸಿ ತಮ್ಮ ನಿರ್ಣಯ ಸರಿಯೆಂದು ಸಾಧಿಸಿದರು. ಇಂತಹ ಮಹಾನ್ ವ್ಯಕ್ತಿಯಿಂದ ಹೀಗೆ ಪ್ರತಿಪಾದಿತವಾಗಿರುವಾಗ ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅಗತ್ಯವಿದೆಯೆಂದು ಭಾವಿಸಿದ್ದೇನೆ.

ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕಡಿಮೆ ಅಪಾಯಕಾರಿಯೇ? ಗುಲಾಮಗಿರಿಯು ಅಸ್ಪೃಶ್ಯತೆಗಿಂತ ಕಡಿಮೆ ಮಾನವೀಯತೆ ಉಳ್ಳದ್ದೇ. ಅಸ್ಪೃಶ್ಯತೆಗಿಂತ ಹೆಚ್ಚಾಗಿ ಗುಲಾಮಗಿರಿಯು ಬೆಳವಣಿಗೆಗೆ ಅಡೆತಡೆ ಒಡ್ಡುತ್ತಿದೆಯೆ? ಲಾಲಾ ಲಜಪತರಾಯ್ ಎತ್ತಿದ ವಾದ ವಿವಾದಕ್ಕಿಂತಲೂ ಈ ಪ್ರಶ್ನೆಗಳು ಮಹತ್ವವು. ಈ ಬಗೆಗಿನ ಚರ್ಚೆಯು ಸ್ವಾರಸ್ಯಕರ ಮತ್ತು ಬೋಧಪ್ರದವಾಗಬಲ್ಲದು. ಗುಲಾಮಗಿರಿ ಮತ್ತು ಅಸ್ಪೃಶ್ಯತೆ ಇವುಗಳ ಮಧ್ಯದಲ್ಲಿನ ವ್ಯತ್ಯಾಸ ತಿಳಿಯಲು ಗುಲಾಮಗಿರಿ ಶಬ್ದದ ಸ್ಪಷ್ಟ ಅರ್ಥ ವಿವರಣೆ ಅತ್ಯಾವಶ್ಯಕವಾದುದು. ಏಕೆಂದರೆ ಗುಲಾಮಗಿರಿಯನ್ನು ಹೋಲುವ ಸ್ಥಿತಿಗತಿಯನ್ನು ಸೂಚಿಸಲು ಗುಲಾಮಗಿರಿ ಎಂಬ ಶಬ್ದವನ್ನು ಅಲಂಕಾರಿಕವಾಗಿ ಬಳಸಲಾಗುತ್ತಿದೆ. ಆದರೆ ಗುಲಾಮಗಿರಿಯ ವೈಜ್ಞಾನಿಕ ಅರ್ಥ ಇದರಿಂದ ಭಿನ್ನವಾಗಿದೆ. ಉದಾಹರಣೆಗಾಗಿ, ಪತ್ನಿಯನ್ನು ತನ್ನ ಸಂಪೂರ್ಣ ನಿಯಂತ್ರಣದಲ್ಲಿ, ಅಧೀನದಲ್ಲಿ ಇಟ್ಟುಕೊಂಡಿದ್ದಾನೆ ಅಂದರೆ ಅವನು ಅವಳನ್ನು ಏನು ಬೇಕಾದರೂ ಮಾಡಬಹುದು. ಅಂದರೆ, ತನಗಾಗಿ ದುಡಿಸಿಕೊಳ್ಳಬಹುದು,

ದಂಡಿಸಬಹುದು, ದುರುಪಯೋಗಪಡಿಸಿಕೊಳ್ಳಬಹುದು, ಎರವಲಾಗಿ ಕೊಡಬಹುದು, ಮಾರಬಹುದು, ಇಷ್ಟೇ ಏಕೆ? ಕೊಲ್ಲಲೂಬಹುದು. ಇಂಥ ಸ್ಥಿತಿಗತಿಗೆ ಈಡಾಗಬಹುದಾದ ಪತ್ನಿಯನ್ನು ಪುರುಷನ ಗುಲಾಮಳು ಎಂದು ಕರೆಯಲಾಗುತ್ತದೆ. ಗುಲಾಮಗಿರಿ ಶಬ್ದದ ಅಲಂಕಾರಿಕ ಬಳಕೆಯ ಇನ್ನೊಂದು ಉದಾಹರಣೆಯೆಂದರೆ, ಜಮೀನು ಜೀತದಾಳುಗಳನ್ನು (Serfs) ಗುಲಾಮರೆಂದು ಕರೆಯುವುದು ವಾಡಿಕೆಯಾಗಿ ಬಂದಿದೆ. ಜೀತದಾಳು ಎಂದರೆ, ಒಡೆಯನಿಗೆ ನಿಶ್ಚಿತ ದಿನಗಳಲ್ಲಿ ದುಡಿಯುವವ. ನಿಶ್ಚಿತ ಸೇವೆಗಳನ್ನು ಸಲ್ಲಿಸುವವ ನಿಶ್ಚಿತ ಮೊತ್ತವನ್ನು ಕೊಡುವವ, ಒಡೆಯನ ಭೂಮಿಗೆ ಹೊಂದಿಕೊಂಡವ, ಧಣಿ ಜಮೀನನ್ನು ಮಾರಿದಾಗ ಜಮೀನಿನೊಡನೆ ತಾನೂ ಹೊಸ ಧಣಿಗೆ ಸೇರಿಹೋಗುವವ, ಇಂಥವನನ್ನು ಗುಲಾಮನೆಂದು ಕರೆಯಲಾಗುತ್ತದೆ. ಒಂದು ದೃಷ್ಟಿಯಿಂದ ಸ್ವಾತಂತ್ರ್ಯರಹಿತ ಸ್ಥಿತಿಯು ಗುಲಾಮಗಿರಿಯನ್ನು ಒಳಗೊಂಡು ಮೇಲಿನಂಥ ಎಲ್ಲ ಪದಗಳಿಗೂ ಸರ್ವಸಾಮಾನ್ಯವಾದುದು. ಆದರೆ ಕಾನೂನಿನ ದೃಷ್ಟಿಯಿಂದ ಇವೆಲ್ಲವುಗಳ ಅರ್ಥ ಒಂದೇ ಆಗಿರುವುದಿಲ್ಲ. ಬೇರೆ ಬೇರೆ ಆಗಿರುತ್ತದೆ.

ಜನ ಸಾಮಾನ್ಯನ ಭಾಷೆಯಲ್ಲಿ, ವ್ಯಕ್ತಿಯೊಬ್ಬ ಮತ್ತೊಬ್ಬನ ಆಸ್ತಿಯೆಂದು ಪರಿಗಣಿತವಾದಾಗ ಅಂಥವನನ್ನು ಗುಲಾಮನೆಂದು ಕರೆಯಲಾಗುತ್ತದೆ. ಸಾಮಾನ್ಯ ಓದುಗನಿಗೆ ಈ ವ್ಯಾಖ್ಯೆಯು ಬಹುಶಃ ಹೆಚ್ಚು ಅಸ್ಪೃಶ್ಯವೆನಿಸುತ್ತದೆ. ಆಸ್ತಿ ಎಂಬ ಪದವು ಯಾವುದೇ ವಸ್ತುಗಳ ಮೇಲೆ ವ್ಯಕ್ತಿಯು ಹೊಂದಿದ ಹಕ್ಕುಗಳ ಮೊತ್ತವನ್ನು ಸೂಚಿಸುತ್ತದೆ. ಒಡೆತನ ಹೊಂದುವ ಹಕ್ಕು, ಬಳಕೆಯ ಹಕ್ಕು, ಅದರಿಂದ ಲಾಭ ಹೊಂದುವ ಹಕ್ಕು, ಮಾರಾಟದ ಮೂಲಕ ಪರಭಾರೆ ಮಾಡುವ ಹಕ್ಕು, ಅಡವು ಇಡುವ ಅಥವಾ ಗೇಣಿ ಕೊಡುವ ಹಕ್ಕು ಮತ್ತು ನಾಶ ಮಾಡುವ ಹಕ್ಕು ಮುಂತಾದ ಹಕ್ಕುಗಳನ್ನು ಆಸ್ತಿಯ ಹಕ್ಕು ಒಳಗೊಂಡಿರುತ್ತದೆ. ಅದೆಲ್ಲ ಅವನ ಆಸ್ತಿ. ಒಡೆತನವೆಂದರೆ ಆಸ್ತಿಯ ಮೇಲಿನ ಸಂಪೂರ್ಣ ಸ್ವಾಮಿತ್ವ. ಇದನ್ನೇ ಸ್ಥೂಲವಾಗಿ ಹೇಳಬೇಕೆಂದರೆ, ಗುಲಾಮನು ಒಡೆಯನ ಆಸ್ತಿಯೆಂದಾಗ, ಒಡೆಯನು ಗುಲಾಮನನ್ನು ಅವನ ಇಚ್ಛೆಗೆ ವಿರುದ್ಧವಾಗಿ ಲಾಭವನ್ನು ಪಡೆಯಬಹುದು. ಒಡೆಯನು ತನ್ನ ಗುಲಾಮನನ್ನು ಗೇಣಿಗೆ ಕೊಡಬಹುದು, ಮಾರಬಹುದು ಅಥವಾ ಒತ್ತೆ ಇಡಬಹುದು. ಹೀಗೆ ಮಾಡಲು ಗುಲಾಮನ ಒಪ್ಪಿಗೆ ಕೇಳುವ ಅವಶ್ಯಕತೆಯಿಲ್ಲ. ಕಾನೂನನ್ನು ಅನುಸರಿಸಿ ಗುಲಾಮನನ್ನು ಕೊಲ್ಲುವ ಹಕ್ಕೂ ಕೂಡ ಒಡೆಯನಿಗೆ ಇತ್ತು. ಕಾನೂನಿನ ದೃಷ್ಟಿಯಲ್ಲಿ ಗುಲಾಮನ ಕೇವಲ ಒಂದು ಭೌತಿಕ ವಸ್ತು (ನಿರ್ಜೀವ ವಸ್ತು). ಒಡೆಯನು ಅದನ್ನು ತನ್ನ ಮನಸ್ಸಿಗೆ ಬಂದಂತೆ ಬಳಸಬಹುದು.

ಈ ಕಾನೂನಿನ ವ್ಯಾಖ್ಯೆಯ ಬೆಳಕಿನಲ್ಲಿ ನೋಡಿದಾಗ ಗುಲಾಮಗಿರಿಯು ಅಸ್ಪೃಶ್ಯತೆಗಿಂತ ಹೆಚ್ಚು ಕೆಟ್ಟದ್ದು ಎಂದು ಅನಿಸಿರಲೇಬೇಕು. ಗುಲಾಮನನ್ನು ಮಾರಬಹುದು, ಒತ್ತೆಯಿಡಬಹುದು ಅಥವಾ ಗೇಣಿಗೆ ಕೊಡಬಹುದು. ಆದರೆ ಅಸ್ಪೃಶ್ಯನನ್ನು ಮಾರಲು, ಒತ್ತೆಯಿಡಲು ಅಥವಾ ಗೇಣಿಗೆಗೆ ಕೊಡಲು ಸಾಧ್ಯವಿಲ್ಲ. ಒಡೆಯನು ಗುಲಾಮನನ್ನು ಕೊಲ್ಲಬಹುದು. ಗುಲಾಮನ ಕೊಲೆ ಅಪರಾಧವೆನಿಸುವುದಿಲ್ಲ. ಆದರೆ ಅಸ್ಪೃಶ್ಯನನ್ನು ಕೊಲೆ ಮಾಡಲು ಅವಕಾಶವಿಲ್ಲ. ಅವನ ಕೊಲೆ ಮಾಡಿದವನು ಶಿಕ್ಷೆಗೆ ಅರ್ಹನಾಗುತ್ತಾನೆ. ವಾಸ್ತವವಾಗಿ ಗುಲಾಮನನ್ನು ಕೊಂದವನಿಗೆ ದಂಡನೆಯಿಂದ ಬಿಡುಗಡೆಯಿಲ್ಲ. ಸ್ವತಂತ್ರ ವ್ಯಕ್ತಿಯ ಕೊಲೆಯು ಕೊಲೆಗಾರನನ್ನು ಶಿಕ್ಷೆಗೆ ಅರ್ಹನನ್ನಾಗಿ ಮಾಡುವಂತೆಯೆ ಗುಲಾಮನ ಹತ್ಯೆಯನ್ನು ಕೂಡ ನರಹತ್ಯೆಯೆಂದು ಕಾನೂನು ಪರಿಗಣಿಸುತ್ತದೆ. ಮತ್ತು ಶಿಕ್ಷೆಗೆ ಗುರಿ ಮಾಡುತ್ತದೆ. ಗುಲಾಮನ ಮತ್ತು ಅಸ್ಪೃಶ್ಯನ ಸ್ಥಿತಿಗತಿಗಳನ್ನು ಸಂಬಂಧಿಸಿದ ಕಾನೂನಿನ ಅರ್ಥ ಮತ್ತು ವಿಧಿವಿಧಾನಗಳ ಬೆಳಕಿನಲ್ಲಿ ನೋಡಿದಾಗ ಗುಲಾಮನ ಸ್ಥಿತಿಯು ನಿಸ್ಸಂಶಯವಾಗಿ ಹೆಚ್ಚು ಕೆಟ್ಟದ್ದು, ಚಿಂತಾಜನಕವಾದದ್ದು ಎಂದೆನಿಸುತ್ತದೆ.

ಗುಲಾಮನನ್ನು ಇನ್ನೊಂದು ರೀತಿಯಿಂದ ವ್ಯಾಖ್ಯಾನಿಸಬಹುದು. ಅದು ಮೇಲಿನಷ್ಟೇ ಕಾನೂನು ಬದ್ಧವಾದುದು ಮತ್ತು ನಿಖರವಾದುದು. ಆದರೆ ಈ ಮಾರ್ಗವು ಅಷ್ಟೊಂದು ವಾಡಿಕೆಯಲ್ಲಿಲ್ಲ. ಗುಲಾಮನನ್ನು ವ್ಯಾಖ್ಯಾನಿಸುವ ಆ ಇನ್ನೊಂದು ರೀತಿ ಹೀಗಿದೆ:

ಗುಲಾಮನು ಮಾನವ ಜೀವಿಯೇ ಆದರೂ ಕಾನೂನಿನ ದೃಷ್ಟಿಯಲ್ಲಿ ವ್ಯಕ್ತಿಯಲ್ಲ. ಗುಲಾಮನನ್ನು ಈ ರೀತಿ ವ್ಯಾಖ್ಯಾನಿಸುವುದು ಬಹುಶಃ ಕೆಲವರನ್ನು ದಿಗ್ಭ್ರಮೆಗೊಳಿಸಬಹುದು. ಆದ್ದರಿಂದ ಕಾನೂನಿನ ದೃಷ್ಟಿಯಿಂದ ವ್ಯಕ್ತಿ (person) ಮತ್ತು ಮಾನವಜೀವಿ ಈ ಎರಡೂ ಪದಗಳು ಒಂದೇ, ಭಿನ್ನವಾದುವಲ್ಲ ಎಂದು ಪರಿಗಣಿಸುವ ಅವಶ್ಯಕತೆಯಿದೆ. ಕಾನೂನಿನಲ್ಲಿ ವ್ಯಕ್ತಿಗಳೆಂದು ಪರಿಗಣಿಸದ ಮಾನವ ಜೀವಿಗಳಿರ ಬಹುದು. ಇದಕ್ಕೆ ವಿರುದ್ಧವಾಗಿ ಕಾನೂನಿನ ದೃಷ್ಟಿಯಿಂದ ಮಾನವಜೀವಗಳಲ್ಲದ ಕೆಲವನ್ನು ವ್ಯಕ್ತಿಗಳೆಂದು ಪರಿಗಣಿಸಲಾಗುತ್ತದೆ. ಕಾನೂನು, ವ್ಯಕ್ತಿ ಎಂಬ ಶಬ್ದಕ್ಕೆ ಅನ್ವಯಿಸುವ ಅರ್ಥದ ಕಾರಣದಿಂದಾಗಿ ಈ ಕುತೂಹಲಕಾರಿ ಪರಿಣಾಮ ಉಂಟಾಗಿರುತ್ತದೆ. ಕಾನೂನಿನ ಉದ್ದೇಶಗಳಿಂದ ವ್ಯಕ್ತಿಯೊಬ್ಬನನ್ನು ಮಾನವ ಅಥವಾ ಮಾನವೇತರ ವಸ್ತು ಎಂದು ವ್ಯಾಖ್ಯಾನಿಸಲಾಗಿದೆ. ಆ ವಸ್ತುವಿನಲ್ಲಿ ಅಡಕವಾಗಿರುವ ಹಕ್ಕುಗಳನ್ನು ಹೊಂದುವ ಮತ್ತು ಕರ್ತವ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ಕಾನೂನು ಮಾನ್ಯ ಮಾಡಿರುತ್ತದೆ. ಗುಲಾಮನು ಮಾನವ ಜೀವಿಯೇ ಆದರೂ ಕಾನೂನಿನ ದೃಷ್ಟಿಯಲ್ಲಿ ವ್ಯಕ್ತಿಯಲ್ಲ (person). ವಿಗ್ರಹವು ನಿರ್ಜೀವ ವಸ್ತುವೇ ಆದರೂ ಕಾನೂನಿನ ದೃಷ್ಟಿಯಲ್ಲಿ ವ್ಯಕ್ತಿ, ಈ ವ್ಯತ್ಯಾಸಕ್ಕೆ ಕಾರಣ ಸ್ಪಷ್ಟವಾಗಿದೆ. ಗುಲಾಮನು ಮಾನವ ಜೀವಿಯೇ ಆದರೂ ವ್ಯಕ್ತಿಯಲ್ಲ. ಏಕೆಂದರೆ, ಕಾನೂನು ಅವನನ್ನು ಶಾಸನ ಸಿದ್ಧವಾದ ಹಕ್ಕು ಬಾಧ್ಯತೆಗಳನ್ನು ಹೊಂದಿದವನೆಂದು ಪರಿಗಣಿಸುವುದಿಲ್ಲ. ವಿಗ್ರಹವು (idol) ಮಾನವಜೀವಿಯಲ್ಲದಿದ್ದರೂ ಕಾನೂನು ವ್ಯಕ್ತಿಯೆಂದು ಪರಿಗಣಿಸಿದೆ. ಅದರ ಹಕ್ಕುಬಾಧ್ಯತೆಗಳನ್ನು ಮಾನ್ಯ ಮಾಡಿದೆ. ಹೀಗೆ ಪರಿಗಣಿಸುವುದು ವಿವೇಕದ್ದೊ, ಅವಿವೇಕದ್ದೊ ಆ ಪ್ರಶ್ನೆ ಬೇರೆ. ವ್ಯಕ್ತಿಯೆಂದು ಮಾನ್ಯಮಾಡುವುದು ಬಹುಶಃ ಭೀಕರ ಪರಿಣಾಮಗಳಿಗೆ ಎಡೆಮಾಡಿ ಕೊಡಬಹುದಾದ ಸಂಗತಿ. ಈ ಸಂಗತಿಗೆ ಸಂಬಂಧಿಸಿದಂತೆ ಒಬ್ಬನನ್ನು ವ್ಯಕ್ತಿಯೆಂದು ಪರಿಗಣಿಸಿ ಆ ಮೂಲಕ ಹಕ್ಕುಗಳು ದೊರಕುವಂತೆ ಮಾಡುವುದರಿಂದ ಮತ್ತು ಅವನನ್ನು ಹಕ್ಕು ಸ್ವಾತಂತ್ರ್ಯಗಳಿಗೆ ಅರ್ಹನನ್ನಾಗಿ ಮಾಡುವುದರಿಂದ ಇವು ಕೇವಲ ಜೀವ ಪ್ರತಿಷ್ಠಾಪನೆ ಮಾತ್ರ ಮಾಡಿದಂತೆ ಅಲ್ಲ; ಇವು ಜೀವನಾಧಾರಗಳೇ ಆಗಿವೆ. ಪ್ರಾಪಂಚಿಕ ವಸ್ತುಗಳ ಸಂಪಾದನೆ, ಅವುಗಳ ಸುಖಾನುಭೋಗ, ಅವುಗಳ ವಿಕ್ರಯ ಅಥವಾ ವಿನಿಯೋಗ ಇವೆಲ್ಲವುಗಳನ್ನು ಭೌತವಸ್ತುಗಳ ಮೇಲಿನಹಕ್ಕು ಒಳಗೊಳ್ಳುತ್ತದೆ. ಇದನ್ನು ಆಸ್ತಿಯ ಹಕ್ಕು ಎಂದೂ ಕರೆಯುತ್ತಾರೆ. ಭೌತವಸ್ತುಗಳ ಮೇಲಿನ ಹಕ್ಕುಗಳಿಗಿಂತಲೂ ಅತಿ ಮಹತ್ವದ ಇತರ ಹಕ್ಕುಗಳೂ ಇವೆ. ಮೊದಲನೆಯದಾಗಿ, ಕಾನೂನಿನ ಮೂಲಕ ನಿಗದಿಪಡಿಸಿದ ಪ್ರಕ್ರಿಯೆಗೆ ಅನುಗುಣವಾಗಿಯಲ್ಲದೆ, ಪ್ರಾಣಹಾನಿ ಮಾಡದ ಹಕ್ಕು, ಊನ ಮಾಡಲಾರದ ಹಕ್ಕು, ಅಥವಾ ಗಾಯಗೊಳಿಸಲಾರದ ಹಕ್ಕು. ಇಂಥ ವ್ಯಕ್ತಿಗತ ಹಕ್ಕುಗಳಿರುತ್ತವೆ. ಕಾನೂನಿನ ಪ್ರಕ್ರಿಯೆಗೆ ಅನುಗುಣವಾಗಿಯಲ್ಲದೆ ಬಂಧನಕ್ಕೆ ಒಳಪಡದ ಹಕ್ಕು. ಇದನ್ನು ಸ್ವಾತಂತ್ರ್ಯದ ಹಕ್ಕು ಎಂದು ಕರೆಯಲಾಗಿದೆ. ಎರಡನೆಯದಾಗಿ, ಪ್ರಖ್ಯಾತಿ ಹೊಂದುವ ಹಕ್ಕು, ಅಪಹಾಸ್ಯಕ್ಕೆ ಒಳಗಾದ ಹಕ್ಕು ಅಥವಾ ಒಡನಾಡಿಗಳಲ್ಲಿ ಕೀಳೆನಿಸಿಕೊಳ್ಳದ ಹಕ್ಕು, ಒಳ್ಳೆಯ ಹೆಸರು ಪಡೆಯುವ ಹಕ್ಕು, ಅಂದರೆ ಬೇರೆಯವರ ದೃಷ್ಟಿಯಲ್ಲಿ ಬಹುದಿನಗಳಿಂದಿದ್ದ ಆದರ–ಗೌರವದ ಸ್ಥಾನಮಾನ ಕುಸಿಯದಂತೆ ಕಾಯ್ದುಕೊಳ್ಳುವ (ಕಾಪಾಡಿಕೊಳ್ಳುವ) ಹಕ್ಕು. ಮೂರನೆಯದಾಗಿ, ತನ್ನ ಶಕ್ತಿ ಸಾಮರ್ಥ್ಯಗಳನ್ನು ಮತ್ತು ಸ್ವಾತಂತ್ರ್ಯವನ್ನು ಅನಿರ್ಬಂಧವಾಗಿ ಚಲಾಯಿಸಿಕೊಳ್ಳುವ ಹಕ್ಕು.[೧]

ಪ್ರತಿಯೊಬ್ಬ ವ್ಯಕ್ತಿಯು, ತಾನು ವ್ಯಕ್ತಿಯೆಂಬ (person) ಕಾರಣದಿಂದ, ಯಾವುದೆ ಹಿಂಸೆಗೆ ಒಳಗಾಗದೇ, ಕಾನೂನುಬದ್ಧವಾದ ಎಲ್ಲ ಕಾರ್ಯಗಳನ್ನು ಮಾಡಲು ಮತ್ತು ಎಲ್ಲ ವಿಶೇಷ ಸೌಲಭ್ಯಗಳನ್ನು ಅನುಭೋಗಿಸಲು ಅರ್ಹನಿರುತ್ತಾನೆ. ಈ ತೆರನಾದ ಹಕ್ಕುಗಳಲ್ಲಿಯೆ ಅತಿ ನಿರ್ದಿಷ್ಟವಾದ ಹಕ್ಕು ಎಂದರೆ, ತಾನು ಉಪಜೀವನ ಸಾಗಿಸಲು ಆಯ್ಕೆ ಮಾಡಿದ ಉದ್ಯೋಗವನ್ನು ಯಾವ ಆತಂಕ, ಹಿಂಸೆಗಳಿಲ್ಲದೆಯೆ ಅನುಸರಿಸುವ ಹಕ್ಕು. ಇದೇ ತೆರನಾದ ಹಕ್ಕುಗಳ ಮಾಲಿಕೆ ಅಡಿಯಲ್ಲಿ ಬರುವ ಇತರ ಹಕ್ಕುಗಳೆಂದರೆ, ಸಾರ್ವಜನಿಕ ಹೆದ್ದಾರಿಗಳನ್ನು, ನೌಕಾ ಸಂಚಾರಯೋಗ್ಯ ನದಿಗಳನ್ನು ಮತ್ತು ಸಾರ್ವಜನಿಕ ಉಪಯುಕ್ತತೆಗಳನ್ನು ಅನಿರ್ಬಂಧವಾಗಿ ಬಳಸುವ ಹಕ್ಕುಗಳು. ಯಾವ ಆಡಳಿತ ಯಂತ್ರವನ್ನು ಎಲ್ಲರ ರಕ್ಷಣೆಗೆಂದು ಸ್ಥಾಪಿಸಲಾಗಿರುತ್ತದೆಯೋ ಅಂಥ ಆಡಳಿತ ಯಂತ್ರವನ್ನೇ ತನ್ನನ್ನು ಪೀಡಿಸುವ, ಹಿಂಸಿಸುವ ಸಾಧನವನ್ನಾಗಿ ಬಳಸದಂತೆ ತಡೆಯುವ ಹಕ್ಕನ್ನೂ ಕೂಡ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರುತ್ತಾನೆ. ಮೂರನೆಯದಾಗಿ, ನಷ್ಟ, ವಂಚನೆ ಅಥವಾ ದಬ್ಬಾಳಿಕೆ ಇವುಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕು ಇರುತ್ತದೆ. ಅಂದರೆ, ನಷ್ಟವುಂಟಾಗುವ ವ್ಯವಹಾರಕ್ಕೆ ಮೋಸದಿಂದ ಒಪ್ಪಿಗೆ ಪಡೆಯಲಾಗದ ಹಕ್ಕು ಮತ್ತು ತನ್ನ ಇಚ್ಛೆಗೆ ವಿರುದ್ಧವಾಗಿ, ಒತ್ತಾಯಕ್ಕೆ ಮಣಿದು, ಕೆಲಸ ಮಾಡದಿರುವ ಹಕ್ಕು. ನಾಲ್ಕನೆಯದಾಗಿ, ವ್ಯಕ್ತಿಯ (ವೈಯಕ್ತಿಕ) ಹಕ್ಕುಗಳನ್ನೆಲ್ಲ ಒಟ್ಟುಗೂಡಿಸಿ ಕೌಟುಂಬಿಕ ಹಕ್ಕುಗಳೆಂದು ಕರೆಯಲಾಗಿದೆ. ಈ ಕೌಟುಂಬಿಕ ಹಕ್ಕುಗಳಲ್ಲಿಯೆ, ವೈವಾಹಿಕ ಹಕ್ಕು, ಪೈತೃಕ ಹಕ್ಕು, ಪಾಲಕ ಹಕ್ಕು ಮತ್ತು ಪ್ರಭುವಿನ ಹಕ್ಕು ಎಂದು ಗುರುತಿಸಿ ಅವುಗಳ ಮಧ್ಯದಲ್ಲಿ ವ್ಯತ್ಯಾಸ ಕಲ್ಪಿಸಲಾಗಿದೆ. ವೈವಾಹಿಕ ಅಥವಾ ದಾಂಪತ್ಯದ ಹಕ್ಕು ಅಂದರೆ, ಒತ್ತಾಯದಿಂದಾಗಲೀ, ಮನವೊಲಿಸುವಿಕೆ ಯಿಂದಾಗಲೀ, ಯಾವುದೇ ವ್ಯಕ್ತಿಯಿಂದ ಅವನ ಪತ್ನಿಯ ಒಡನಾಟವನ್ನು ಅವನಿಂದ ಕಿತ್ತುಕೊಳ್ಳಲಾಗದ ಹಕ್ಕು ಮತ್ತು ಅವನ ಪತ್ನಿಯೊಂದಿಗೆ ಅಪರಾಧೀ ಭಾವದಿಂದ ಆತ್ಮೀಯತೆ ಬೆಳೆಸಿಕೊಳ್ಳಲಾಗದ ಹಕ್ಕು. ಇದನ್ನು ಹೋಲುವ ಹಕ್ಕನ್ನು ಪುರುಷನಿಗೆ ಬದಲಾಗಿ ಸ್ತ್ರೀಗೆ, ಅಮೆರಿಕೆಯ ಕೆಲವು ಪ್ರದೇಶಗಳಲ್ಲಿ ವಹಿಸಿಕೊಡಲಾಗಿದೆ ಎಂಬುದನ್ನು ಗುರುತಿಸಲಾಗಿದೆ. ಮಕ್ಕಳನ್ನು, ಅವರಿಗೆ ಪ್ರಾಪ್ತ ವಯಸ್ಸು ಆಗುವವರೆಗೆ

---

೧. ಹಕ್ಕುಗಳು, ಅಧಿಕಾರಗಳು ಮತ್ತು ಸ್ವಾತಂತ್ರ್ಯಗಳು ಇವುಗಳ ಮಧ್ಯದಲ್ಲಿರುವ ವ್ಯತ್ಯಾಸವನ್ನು ಜನಸಾಮಾನ್ಯರಿಗೆಂದು ಬರೆದ ಪ್ರಮಾಣ ಗ್ರಂಥಗಳ ಮೂಲಕ ಸ್ಪಷ್ಟವಾಗಿ ವಿವರಿಸುವ ಅಗತ್ಯವಿದೆ. ವ್ಯಕ್ತಿಯೊಬ್ಬ ಹಕ್ಕನ್ನು ಹೊಂದಿದ್ದಾನೆ ಎಂಬುದರ ಅರ್ಥ ಬೇರೊಬ್ಬ ವ್ಯಕ್ತಿ ಅಥವಾ ಸಂಸ್ಥೆ ಬಗೆಗೆ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ ಎಂಬುದು. ಕರ್ತವ್ಯವನ್ನು ನಿರ್ವಹಿಸುವುದರಿಂದ ಆ ಹಕ್ಕು ಸಾರ್ಥಕವಾಗಬಹುದು ಅಥವಾ ನಿಷ್ಕ್ರಿಯೆಯಿಂದ ಅದು ವ್ಯರ್ಥವಾಗಲೂಬಹುದು ಅಥವಾ ದುಷ್ಕ್ರಿಯೆಯಿಂದ ಕೆಡಕೂ ಆಗಬಹುದು.

ಹಕ್ಕು ಮತ್ತು ಸ್ವಾತಂತ್ರ್ಯ ಎರಡೂ ಒಂದೇ ಅಲ್ಲ, ಭಿನ್ನವಾದುವು. ಆದರೆ ಹಕ್ಕನ್ನು ವಿಶಾಲಾರ್ಥದಲ್ಲಿ (ವ್ಯಾಪಕಾರ್ಥದಲ್ಲಿ) ಬಳಸಿದಾಗ ಅದು ಸ್ವಾತಂತ್ರ್ಯವನ್ನೂ ಒಳಗೊಳ್ಳುತ್ತದೆ. ಆಗ ಇವೆರಡರ ಮಧ್ಯದ ವ್ಯತ್ಯಾಸ ಕಾಣದಾಗುತ್ತದೆ (ಕಣ್ಮರೆಯಾಗುತ್ತದೆ). ಉದಾಹರಣೆಗೆ, ವ್ಯಕ್ತಿಗೆ ಹಕ್ಕಿದೆ ಎಂದರೆ, ತನ್ನ ಮನಸ್ಸಿಗೆ ಸಂತೋಷವಾಗುವಂತೆ ಏನಾದರೂ ಮಾಡುವ ಸ್ವಾತಂತ್ರ್ಯ ಎಂದಾಗುತ್ತದೆ. ಆದರೆ ಆ ವ್ಯಕ್ತಿಯು ಬೇರೆಯವರ ಸ್ವಾತಂತ್ರ್ಯಕ್ಕೆ ಅಡ್ಡಬರುವ ಹಕ್ಕನ್ನು ಹೊಂದಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸದೆ ಹೀಗೆ ಹೇಳಲಾಗುತ್ತದೆ. ಆದ್ದರಿಂದ ಹಕ್ಕು ಮತ್ತು ಸ್ವಾತಂತ್ರ್ಯ ಇವುಗಳ ಮಧ್ಯದ ವ್ಯತ್ಯಾಸವನ್ನು ಹೀಗೆ ಹೇಳಬಹುದು: ವ್ಯಕ್ತಿಯ ಹಕ್ಕುಗಳಿಗೂ, ಇತರ ವ್ಯಕ್ತಿಗಳು ಅವನಿಗಾಗಿ ಮಾಡಲೇಬೇಕಾದ ಕಾರ್ಯಗಳಿಗೂ ಸಂಬಂಧವಿರುತ್ತವೆ. ವ್ಯಕ್ತಿಯ ಸ್ವಾತಂತ್ರ್ಯಗಳು ಅವನು ತನಗೆ ತಾನೇ ಮಾಡಬಹುದಾದ ವಿಷಯಗಳಿಗೆ ಸಂಬಂಧಿಸಿರುತ್ತವೆ.

ಸ್ವಾತಂತ್ರ್ಯಗಳೆಂದರೆ ಯಾವುದೇ, ವ್ಯಕ್ತಿಯು ಕಾನೂನಿನ ಬಂಧನಗಳಿಗೆ ಒಳಗಾಗದೆಯೆ ಮಾಡಬಹುದಾದ ಕಾರ್ಯಗಳ ಅವಸ್ಥೆಗಳು. ವ್ಯಕ್ತಿಯ ನ್ಯಾಯಿಕ ಸ್ವಾತಂತ್ರ್ಯವು ಅವನನ್ನು ಅವನಷ್ಟಕ್ಕೇ ತನಗಿಷ್ಟವಾದ ಕ್ರಿಯೆಗಳಲ್ಲಿ ತೊಡಗಲು ಬಿಟ್ಟು ತೃಪ್ತಿಯಿಂದಿರುತ್ತದೆ.

ತಮ್ಮ ವಶದಲ್ಲಿ ಮತ್ತು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದಕ್ಕೂ, ಅವರು ಪ್ರಾಪ್ತವಯಸ್ಕರಾದ ನಂತರ ಅವರ ಜೀವನ ಮಧ್ಯೆ (ಸಂಸಾರದಲ್ಲಿ) ಕೈ ಹಾಕದಿರುವುದಕ್ಕೂ ಸಂಬಂಧಿಸಿದ್ದು ಪೈತೃಕ ಹಕ್ಕು. ತಂದೆ ತಾಯಿಗಳು ತಮ್ಮ ಮಕ್ಕಳ ರಕ್ಷಕರಾಗಿರುವುದಕ್ಕೆ ಪಾಲಕ ಹಕ್ಕು ಎಂದೆನ್ನುತ್ತಾರೆ. ಈ ಹಕ್ಕಿನಿಂದ ಲಾಭವು ತಂದೆ ತಾಯಿಗಳಿಗಿಂತ ಮಕ್ಕಳಿಗೇ ಹೆಚ್ಚು. ಪಾಲಕರು ಮಕ್ಕಳ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುತ್ತಾರೆ; ಮತ್ತು ಅವರಲ್ಲಿ ಅರಿವು ಮೂಡಿಸುತ್ತಾರೆ. ಅಪ್ರಾಪ್ತ ವಯಸ್ಸಿನ ಮಕ್ಕಳ ಶ್ರಮದ ಲಾಭವನ್ನು ಪಾಲಕರು ಪಡೆಯುವುದಕ್ಕೆ ಪ್ರಭುವಿನ ಹಕ್ಕು, (tutelary right) ಎನ್ನುತ್ತಾರೆ. ಮಕ್ಕಳನ್ನು ಕೊಲ್ಲುವುದು, ಗಾಯಗೊಳಿಸುವುದು ಮತ್ತು ಮರಳುಗೊಳಿಸುವುದು, ಈ ಮೂಲಕ ಈ ಹಕ್ಕನ್ನು ಉಲ್ಲಂಘಿಸಲಾಗುತ್ತದೆ. ಈ ಹಕ್ಕಿನಿಂದ ವ್ಯಕ್ತವಾಗುವುದೇನೆಂದರೆ, ಮಕ್ಕಳ ಮೌಲ್ಯ ಕಡಿಮೆ, ಪಾಲಕರು ಹೆಚ್ಚು ಎಂಬುದು.

ಕಾನೂನಿನ ದೃಷ್ಟಿಯಲ್ಲಿ ಗುಲಾಮನು 'ವ್ಯಕ್ತಿ' (person) ಅಲ್ಲವಾದ್ದರಿಂದ, ಅವನಿಗೆ ಯಾವ ಹಕ್ಕುಗಳೂ ಇರುವುದಿಲ್ಲ. ಆದರೆ ಅಸ್ಪೃಶ್ಯನು ಕಾನೂನಿನ ಪ್ರಕಾರ ವ್ಯಕ್ತಿಯಾಗಿದಾನೆ. ಹೀಗಾಗಿ 'ವ್ಯಕ್ತಿಗೆ' ಕೊಡಮಾಡಿದ ಹಕ್ಕುಗಳು ಅಸ್ಪೃಶ್ಯನಿಗೆ ಲಭ್ಯವಾಗುವುದು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಅವನಿಗೆ ಆಸ್ತಿಯ ಹಕ್ಕು, ಜೀವಿಸುವ ಹಕ್ಕು, ಸ್ವಾತಂತ್ರ್ಯದ ಹಕ್ಕು, ಪ್ರಖ್ಯಾತಿಯ ಹಕ್ಕು, ಕೌಟುಂಬಿಕ ಹಕ್ಕು ಮತ್ತು ಸ್ವಾತಂತ್ರ್ಯಗಳ ಹಾಗೂ ಶಕ್ತಿ ಸಾಮರ್ಥ್ಯಗಳ ಅನಿರ್ಬಂಧ ಬಳಕೆಯ ಹಕ್ಕು, ಹೀಗೆ ಎಲ್ಲ ಹಕ್ಕುಗಳೂ ಇವೆ. ಗುಲಾಮನನ್ನು, ಆಸ್ತಿಯ ತುಂಡು ಎಂದಾಗಲೀ, ಅಥವಾ ವ್ಯಕ್ತಿ ಅಲ್ಲವೆಂದಾಗಲೀ, ಹೇಗಾದರೂ ವ್ಯಾಖ್ಯಾನಿಸಲಿ, ಗುಲಾಮನು ಅಸ್ಪೃಶ್ಯನಿಗಿಂತ ಅತೀ ಕೆಟ್ಟ ಸ್ಥಿತಿಯಲ್ಲಿ ಇದ್ದ ಹಾಗೆ ಕಾಣುತ್ತದೆ.

ಗುಲಾಮನ ಶಾಸನಾನುಸಾರವಾದ ಸ್ಥಿತಿಗತಿಯನ್ನು (de jure) ಪರಿಗಣಿಸಿದಾಗ ಇದು ಹೀಗೆಯೆ ತೋರುವುದು ಸ್ವಾಭಾವಿಕ. ಆದರೆ, ರೋಮ್ ಸಾಮ್ರಾಜ್ಯದಲ್ಲಿ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಗುಲಾಮರ ವಾಸ್ತವಿಕ (de facto) ಸ್ಥಿತಿಗತಿಗಳು ಎಂತಿದ್ದವು ಎಂಬುದನ್ನು ಈಗ ಪರಿಗಣಿಸೋಣ. ಇದನ್ನು ವಿಶದಪಡಿಸಲು ಮಿ. ಬ್ಯಾರೊ[೧] ಅವರ 'ರೋಮ್ ಸಾಮ್ರಾಜ್ಯದಲ್ಲಿ ಗುಲಾಮಗಿರಿ' ಎಂಬ ಗ್ರಂಥದಿಂದ ಕೆಳಗಿನ ಉದ್ಧರಣೆಗಳನ್ನು ನಿರೂಪಿಸುತ್ತಿದ್ದೇನೆ (ನಿವೇದಿಸುತ್ತಿದ್ದೇನೆ).

> "ಇಲ್ಲಿಯವರೆಗೆ ಮನೆಗೆಲಸಗಳಲ್ಲಿ ತೊಡಗಿಸಿಕೊಳ್ಳಲಾಗಿದ್ದ ಗುಲಾಮಗಿರಿಯ ಅಸಹ್ಯಕರವಾದ ಮುಖವನ್ನು ಮಾತ್ರ ಚಿತ್ರಿಸಲಾಗಿದೆ. ಆದರೆ ಅದಕ್ಕೆ ಬೇರೊಂದು ಮುಖವೂ ಇದೆ. ದೊಡ್ಡ ಕುಟುಂಬಗಳು ಅಂದು ಕ್ರಮಬದ್ಧವಾಗಿದ್ದವು (ಆದರ್ಶಪ್ರಾಯ, ಸಹಜ) ಎಂಬುದನ್ನು ಸಾಹಿತ್ಯವು ತೆರೆದು ತೋರಿಸಿದೆ. ನಿಜವಾಗಿ ನೋಡಿದರೆ ಹಾಗಿರಲಿಲ್ಲ. ದೊಡ್ಡದೊಡ್ಡ ಗುಲಾಮರ ಸಿಬ್ಬಂದಿಗಳು ನಿಸ್ಸಂಶಯವಾಗಿಯೂ ಅಸ್ತಿತ್ವದಲ್ಲಿದ್ದವು. ರೋಮ್‌ದಲ್ಲಂತೂ ಇದು ಸರ್ವೇಸಾಮಾನ್ಯವಾಗಿತ್ತು. ಇಟಲಿ ಮತ್ತು ಪ್ರಾಂತ್ಯಗಳಲ್ಲಿ ಇದರ ಬಹಿರಂಗ ಪ್ರದರ್ಶನದ ಅವಶ್ಯಕತೆ ಅಷ್ಟೊಂದಿರಲಿಲ್ಲ. ವಿಶೇಷವಾಗಿ ಹಳ್ಳಿಗಳ ಮನೆಗಳಲ್ಲಿ ಗೃಹಕೃತ್ಯಕ್ಕೆ ಸಂಬಂಧಿಸಿದ ಸಿಬ್ಬಂದಿ ಬಹುಭಾಗ ಭೂಮಿ ಮತ್ತು ಅದರ ಹುಟ್ಟುವಳಿಯ ಉತ್ಪಾದಕ ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಹಳೆಯ ತೆರನಾದ ಮೇಸ್ತ್ರಿ ಮತ್ತು ಗುಲಾಮನ ಬಾಂಧವ್ಯ ಅಲ್ಲಿ ಕಂಡುಬರುತ್ತಿತ್ತು. ಗುಲಾಮನು ಹೆಚ್ಚಾಗಿ ಒಡೆಯನ ಜೊತೆಗೆ ಕಾರ್ಯಕರ್ತನಾಗಿರುತ್ತಿದ್ದ. ತನ್ನ ಗುಲಾಮೀ ಸಿಬ್ಬಂದಿಯ ಬಗೆಗೆ ಪ್ಲಿನಿಗೆ ಇದ್ದ ಅಂತಃಕರಣವು ಪ್ರಖ್ಯಾತವಾಗಿದೆ. ಅವನು ತನ್ನ ಪತ್ರಗಳಲ್ಲಿ ಗುಲಾಮರ ನೋವು ಸಂಕಟಗಳಿಗೆ ತನ್ನ ಅಪಾರವಾದ ವ್ಯಥೆಯನ್ನು ವ್ಯಕ್ತಪಡಿಸಿರುವ

---

೧. ಸ್ಲೇವರಿ ಇನ್ ದಿ ರೋಮನ್ ಎಂಪೈರ್, ಪು. ೪೭–೪೯.

ಉದ್ದೇಶ ತಾನು ಧರ್ಮಶೀಲನೆಂದು ತೋರಿಸಿಕೊಳ್ಳಲು ಅಲ್ಲ; ಮತ್ತು ಜನರು ಭವಿಷ್ಯತ್ತಿನಲ್ಲಿ ತನ್ನ ಪತ್ರಗಳನ್ನು ಓದುತ್ತಾರೆ, ಇಷ್ಟೇ ಅಲ್ಲ, ಈ ಬಗ್ಗೆ ಶಹಬ್ಬಾಶ ಹೇಳುತ್ತಾರೆಂಬ ಕಾರಣಕ್ಕಾಗಿಯೂ ಅಲ್ಲ. ಪ್ಲಿನಿಯ ಮನೆತನವು ಗುಲಾಮರ ಚಿಕ್ಕ ಗಣರಾಜ್ಯದಂತಿತ್ತು. ಪ್ಲಿನಿಯು ತನ್ನ ಗುಲಾಮರನ್ನು ನಡೆಸಿಕೊಳ್ಳುತ್ತಿದ್ದ ರೀತಿನೀತಿಗಳ ಬಗೆಗಿನ ವರದಿಯನ್ನು ಕೆಲವೊಮ್ಮೆ ಮೌಲ್ಯರಹಿತ ಸಾಕ್ಷ್ಯಾಧಾರಗಳಂತೆ ಪರಿಗಣಿಸಲಾಗುತ್ತಿದೆ. ಇಂಥ ಮನೋಭಾವನೆಗೆ ಯಾವ ಕಾರಣವೂ ಇಲ್ಲ.

ಶ್ರೀಮಂತ ಕುಟುಂಬಗಳು ತಮ್ಮ ಮನೆಗಳಲ್ಲಿ ಸಾಹಿತ್ಯ ಮತ್ತು ಕಲೆಯಲ್ಲಿ ತರಬೇತಿ ಪಡೆದ ಗುಲಾಮರನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಿದ್ದರು. ಇದಕ್ಕೆ ಪ್ರದರ್ಶನದ ಮತ್ತು ನೈಜ ಸಾಹಿತ್ಯದ ಆಸಕ್ತಿ ಎಂಬೆರಡು ಕಾರಣಗಳಿದ್ದವು. ಸೆನಿಕಾ ಹೇಳಿರುವಂತೆ ಕಾಲ್ವಿಸೆಸ್ ಸಾಬಿನಸ್‌ನ ಮನೆಯಲ್ಲಿ ಹನ್ನೊಂದು ಗುಲಾಮರಿದ್ದರು. ಹೋಮರ್, ಹೆಸಿಯಾಡ್ ಮತ್ತು ಭಾವಗೀತೆಗಳನ್ನು ರಚಿಸಿದ ಒಂಬತ್ತು ಕವಿಗಳ ಎಲ್ಲ ಕೃತಿಗಳನ್ನು ಕಂಠಪಾಠ ಮಾಡಿ ಹಾಡಲು ಅವರಿಗೆ ಕಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ಅಸಭ್ಯ ಸ್ನೇಹಿತನೊಬ್ಬ 'ಪುಸ್ತಕಗಳ ಪೆಟ್ಟಿಗೆಗಳು ಇವರಿಗಿಂತ ಹೆಚ್ಚು ಸೋವಿಯಾಗಿರುತ್ತವೆ' ಅಂದ. ಅವನ ಪ್ರಶ್ನೆಗೆ ಕೊಟ್ಟ ಉತ್ತರ, 'ಛೆ, ಛೆ, ಮನೆಯ ಮಂದಿ ತಿಳಿದಷ್ಟೇ ಮನೆಯ ಯಜಮಾನನೂ ತಿಳಿದಿರುತ್ತಾನೆ'. ಇಂತಹ ತೆಗಳಿಕೆಗಳನ್ನು ಬದಿಗಿಟ್ಟು ನೋಡಿದರೆ, ಮುದ್ರಣದ ಆವಿಷ್ಕಾರ ಆಗದೇ ಇದ್ದ ಕಾಲದಲ್ಲಿ, ಸುಶಿಕ್ಷಿತ ಗುಲಾಮರ ಅವಶ್ಯಕತೆ ಇದ್ದಿರಬಹುದೇನೊ ಎಂದೆನಿಸುತ್ತಿದೆ... ಕೆಲಸದಲ್ಲಿ ಸದಾ ನಿರತ ವಕೀಲ, ಕಲಾಪ್ರೇಮಿಯಾದ ಕವಿ, ತತ್ವಜ್ಞಾನಿ, ಸಾಹಿತ್ಯಾಭಿರುಚಿಯುಳ್ಳ ಸುಶಿಕ್ಷಿತ ಸಜ್ಜನರು– ಇವರಿಗೆಲ್ಲ ನಕಲು ಮಾಡುವವರು, ಓದುಗರು ಮತ್ತು ಕಾರ್ಯದರ್ಶಿಗಳು ಅಗತ್ಯವೆನಿಸಿರಬೇಕು. ಅಂಥ ಜನರೆಲ್ಲ ಸ್ವಾಭಾವಿಕವಾಗಿ ಭಾಷಾಚತುರರೂ ಆಗಿದ್ದರು. ಗ್ರಂಥಪಾಲನೊಬ್ಬ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಮೃತನಾದ. ತಾನು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪಾರಂಗತ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ. ಬರೆದುದನ್ನು (ಕೃತಿಗಳ) ರಚನೆ ಮಾಡುವವರು ಎಲ್ಲೆಲ್ಲೂ ಕಂಡುಬರುತ್ತಿದ್ದರು. ಸಾರ್ವಜನಿಕ ಮತ್ತು ಖಾಸಗಿ ಗ್ರಂಥಾಲಯಗಳಲ್ಲಿ ಗ್ರಂಥಪಾಲರು ಇದ್ದದ್ದು ಕಾಣಬರುತ್ತಿತ್ತು. ಸಾಮ್ರಾಜ್ಯದಲ್ಲಿ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ಕಾಗದ ಪತ್ರಗಳನ್ನು ಪ್ರಮಾಣೀಕರಿಸಲು ಗುಲಾಮೀ ನೋಟರಿಗಳನ್ನು ನಿಯಮಿತವಾಗಿ ನೇಮಿಸಿಕೊಳ್ಳಲಾಗುತ್ತಿತ್ತು...

ಅನೇಕ ಸ್ವತಂತ್ರ ಪ್ರಜೆಗಳ, ಅಲಂಕಾರಿಕರ ಮತ್ತು ವ್ಯಾಕರಣ ಪಂಡಿತರ ಹೆಸರುಗಳನ್ನು ಸ್ಯೆಟೋನಿಯಸ್ ಎಂಬ ಗ್ರಂಥಕಾರನು ತನ್ನದೊಂದು ವಿಶಿಷ್ಟವಾದ ಪ್ರಕರಣ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಆಗಸ್ಟಸ್‌ನ ಮೊಮ್ಮಕ್ಕಳಿಗೆ ವೆರಿಯಸ್ ಫ್ಲಾಕಸ್ ಎಂಬುವವನು ಬೋಧಕನಾಗಿದ್ದ. ಅವನು ಸತ್ತ ನಂತರ ಅವನ ಮೂರ್ತಿಯನ್ನು ನಿಲ್ಲಿಸಿ ಸಾರ್ವಜನಿಕವಾಗಿ ಗೌರವಿಸಲಾಗಿತ್ತು. ಸ್ಕ್ರಿಬೋನಿಯಸ್ ಅಫ್ರೋಡೀಸಿಯಸ್ ಎಂಬುವವನು ಆರ್ಬಿಲಿಯಸ್ಸನ ಗುಲಾಮ ಮತ್ತು ಶಿಷ್ಯನಾಗಿದ್ದ. ನಂತರ ಅವನನ್ನು ಸ್ಕ್ರಿಬೋನಿಯ ಎಂಬುವವನು ದಾಸ್ಯದಿಂದ ಮಕ್ತಗೊಳಿಸಿದನು. ಹೈಜಿನಸ್ ಎಂಬುವವನು ಪ್ಯಾಲಟೈನ್ ಗ್ರಂಥಾಲಯದ ಗ್ರಂಥಪಾಲನಾಗಿದ್ದ. ಅವನ ನಂತರ ಗ್ರಂಥಪಾಲನ ಅಧಿಕಾರ ವಹಿಸಿಕೊಂಡವನು ಮೊದಲು ಗುಲಾಮನಾಗಿದ್ದು, ಅವನಿಂದಲೇ ಮುಕ್ತನಾದ ಜೂಲಿಯಸ್ ಮಾಡೆಸ್ಟಸ್ ಎಂಬುವವನು. ಸ್ವಾತಂತ್ರ್ಯ ಪಡೆದ ಚರಿತ್ರೆಕಾರರು ಮತ್ತು ವಾಸ್ತುಶಿಲ್ಪಿಗಳ ಬಗ್ಗೆ ಕೇಳುತ್ತಿದ್ದೇವೆ. ಗುಲಾಮ ತತ್ವಜ್ಞಾನಿಯೊಬ್ಬನಿಗೆ ಅವನ ಯಜಮಾನ ಸ್ನೇಹಿತರೊಂದಿಗೆ ವಾದ ಮಾಡಲು ಪ್ರೋತ್ಸಾಹಿಸಲಾಗುತ್ತಿದ್ದುದರ ಬಗೆಗೂ ಕೇಳುತ್ತಿದ್ದೇವೆ. ಸ್ವತಂತ್ರರಾದ ಗುಲಾಮರು ಡಾಕ್ಟರರಾದ ಬಗ್ಗೆ

ಮತ್ತು ಅವರಲ್ಲಿಯೆ ಕೆಲವರು ವಿಶೇಷ ತಜ್ಞರಾದ ಬಗ್ಗೆ ಶಾಸನಗಳಲ್ಲಿ ಮೇಲಿಂದ ಮೇಲೆ ಉಲ್ಲೇಖಿತವಾಗಿದೆ. ದೊಡ್ಡ ದೊಡ್ಡ ಮನೆತನಗಳಲ್ಲಿದ್ದ ಗುಲಾಮರಿಗೆ ವಿವಿಧ ಕ್ಷೇತ್ರಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿತ್ತು ಎಂಬುದು ಒಂದೆರಡು ಉದಾಹರಣೆಗಳಿಂದ ಸ್ಪಷ್ಟವಾಗಿ ತಿಳಿದಿದೆ. ಗುಲಾಮಗಿರಿಯಿಂದ ವಿಮೋಚನೆ ಹೊಂದಿದ ಬಳಿಕ ಅವರಲ್ಲಿ ಕೆಲವರು ಪ್ರಖ್ಯಾತರೂ ಆಗುತ್ತಿದ್ದರು ಮತ್ತು ಹೆಚ್ಚಿನ ಸಂಭಾವನೆಯನ್ನು ಪಡೆದು ಕುಖ್ಯಾತರೂ ಆಗುತ್ತಿದ್ದರು."

"ಸಮಾಜದ ಕೆಲವೊಂದು ಭಾಗದ ಪ್ರತಿಷ್ಠಿತರ ಅಭಿರುಚಿಗಳ ಪೂರೈಕೆಗಾಗಿ ನೃತ್ಯಪಟುಗಳು, ಗಾಯಕರು, ಸಂಗೀತಗಾರರು, ಜೂಜುಗಾರರು, ವಿವಿಧ ರೀತಿಯ ಕಲಾಕಾರರು, ದೈಹಿಕಪಟುಗಳಿಗೆ ತರಬೇತಿ ನೀಡುವವರು, ಅಂಗಮರ್ದನ ಮಾಡುವವರು– ಮುಂತಾದವರೆಲ್ಲರ ಅವಶ್ಯಕತೆಯಿತ್ತು. ಗುಲಾಮರಲ್ಲಿ ಇವರೆಲ್ಲರೂ ಕಂಡುಬರುತ್ತಿದ್ದರು. ಸುಪ್ರಸಿದ್ಧ ಬೋಧಕರಿಂದ ಗುಲಾಮರಿಗೆ ಈ ದಿಶೆಯಲ್ಲಿ ತರಬೇತಿ ನೀಡುವ ವ್ಯವಸ್ಥೆಯಿತ್ತು.

* * *

"ಆಗಸ್ಟಸ್‌ನ ಕಾಲದಲ್ಲಿ ವಾಣಿಜ್ಯದ ಮತ್ತು ಕೈಗಾರಿಕೆಯ ವಿಸ್ತರಣೆ ಶುರು ಆಯಿತು. ಈ ಮುಂಚೆಯೂ ಗುಲಾಮರನ್ನು ಕರಕುಶಲ ಕೆಲಸಗಳಲ್ಲಿ ನೇಮಿಸಿಕೊಳ್ಳಲಾಗುತ್ತಿತ್ತು. ಆದರೆ ವ್ಯಾಪಾರ ಉದ್ಯೋಗಗಳಲ್ಲಿ ಹಠಾತ್ತನೆ ಉಂಟಾದ ಬೆಳವಣಿಗೆಯಿಂದಾಗಿ... ಅವರಿಗೆ ಉದ್ಯೋಗಾವಕಾಶಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿದವು. ಇಲ್ಲದಿದ್ದರೆ ಅವರ ಅವಶ್ಯಕತೆ ಇಷ್ಟೊಂದು ಹೆಚ್ಚಿಗೆ ಇರುತ್ತಿರಲಿಲ್ಲ. ರೋಮನ್ನರು ತಮ್ಮ ವಿವಿಧ ವಾಣಿಜ್ಯದ ಮತ್ತು ಔದ್ಯೋಗಿಕ ಸಾಹಸಗಳಲ್ಲಿ ಹೆಚ್ಚು ಸ್ವತಂತ್ರವಾಗಿ ಮತ್ತು ತೆರೆದ ಮನಸ್ಸಿನಿಂದ ಗುಲಾಮರನ್ನು ನೇಮಿಸಿಕೊಂಡರು. ಹಾಗಿದ್ದಾಗ್ಯೂ ವಾಣಿಜ್ಯ ಚಟುವಟಿಕೆಗಳು ಅತಿ ವಿಸ್ತಾರಗೊಂಡಿದ್ದರಿಂದ ಮಧ್ಯಸ್ಥಿಕೆದಾರರು (ನಿಯೋಗಿಗಳು) ಹೆಚ್ಚಿನ ಪಾತ್ರ ನಿರ್ವಹಿಸುವಂತಾಯಿತು. ಇಂಥ ಮಧ್ಯಸ್ಥಿಕೆದಾರರೆಲ್ಲ ಬಹುತೇಕವಾಗಿ ಮತ್ತು ಅವಶ್ಯಕವಾಗಿ ಗುಲಾಮರೇ ಆಗಿರುತ್ತಿದ್ದರು. ಹೀಗಿದ್ದುದರಿಂದ ಗುಲಾಮಗಿರಿಯ ಬಂಧನವು ಒಂದು ರೀತಿಯ ಹೊಂದಾಣಿಕೆಯೇ ಆಗಿತ್ತು. ಸಂಪತ್ತು ಮತ್ತು ಸ್ವಾತಂತ್ರ್ಯದ ಆಶಯದಿಂದ ಹೆಚ್ಚಿನ ಕೆಲಸ ಮಾಡಲು ಉತ್ತೇಜಕ ಭತ್ಯೆ ಎನ್ನುವ ರೀತಿಯಲ್ಲಿ ಅವರ ಬಂಧನವನ್ನು ಸ್ವಲ್ಪಮಟ್ಟಿಗೆ ಸಡಿಲಿಸಲಾಗಿತ್ತು. ಜೊತೆಗೆ ಬಂಧನವನ್ನು ಬಿಗಿಗೊಳಿಸುವ ಪ್ರಯತ್ನವೂ ನಡೆದಿತ್ತು. ಅದು ಹೇಗೆಂದರೆ, ಗುಲಾಮನ ದುರ್ನಡತೆಯಿಂದಾಗಿ ಒಡೆಯನಿಗೆ ಯಾವ ನಷ್ಟವೂ ಆಗದಿರುವಂತೆ (ಮಧ್ಯಸ್ಥನು) ಖಾತರಿ ನೀಡಬೇಕಾಗುತ್ತಿತ್ತು. ವ್ಯಾಪಾರ ವ್ಯವಹಾರಗಳಲ್ಲಿ ಗುಲಾಮ, ಒಡೆಯ ಮತ್ತು ಮೂರನೆಯವ ಅಂದರೆ ಮಧ್ಯಸ್ಥ ಇವರ ನಡುವೆ ಒಪ್ಪಂದಗಳು ಸರ್ವೇಸಾಮಾನ್ಯವಿದ್ದಂತೆ ಕಾಣುತ್ತವೆ. ಇದರಿಂದ ಲಾಭ ಗಳಿಕೆಯು ಒಡೆಯನಿಗೆ ನಿಸ್ಸಂಶಯವಾಗಿ ಹೆಚ್ಚಿಗೆ ಆಗುತ್ತಿತ್ತು. ಒಡೆಯನ ಮುಖ್ಯ ಉದ್ದೇಶವೂ ಇದೇ ಆಗಿತ್ತು... ಹೊಲವನ್ನು ಗುಲಾಮನಿಗೆ ಲಾವಣಿ (ಬಾಡಿಗೆ) ಕೊಡುತ್ತಿದ್ದುದನ್ನು ಈಗಾಗಲೇ ಗಮನಿಸಲಾಗಿದೆ. ಉದ್ಯಮ ವ್ಯವಹಾರಗಳ ಕ್ಷೇತ್ರದಲ್ಲೂ ಹೆಚ್ಚು ಕಡಿಮೆ ಅಂಥದೇ ವ್ಯವಸ್ಥೆಯನ್ನು ವಿವಿಧ ರೂಪಗಳಲ್ಲಿ ಬಳಸಲಾಗುತ್ತಿತ್ತು. ಒಡೆಯನು ಒಂದು ಬ್ಯಾಂಕನ್ನೋ, ವ್ಯಾಪಾರಿ ಉದ್ದೇಶದ ಒಂದು ಹಡಗನ್ನೊ ನಿಗದಿಪಡಿಸಿದ ಗುತ್ತಿಗೆ ಆಧಾರದ ಮೇಲೋ, ಅಥವಾ ನಿರ್ದಿಷ್ಟವಾದ ಕಮೀಶನ್ನಿನ ಮೂಲಕವೋ ಗುಲಾಮನಿಗೆ ಕೊಡಬಹುದಿತ್ತು.[೧]"

೧. ಸ್ಲೇವರಿ ಇನ್ ದಿ ರೋಮನ್ ಎಂಪೈರ್, ಪು. ೧೦೧–೧೦೨.

"ಗುಲಾಮನ ಗಳಿಕೆಗಳು ಅವನ ಆಸ್ತಿಯಾಗಿ ಪರಿಣಮಿಸುತ್ತಿತ್ತು. ಹೀಗೆ ಉಳಿಕೆಯಿಂದ ಗಳಿಸಿದ ಸಂಪತ್ತನ್ನು ಅವನು ವಿವಿಧ ಉದ್ದೇಶಗಳಿಗೆ ಬಳಸಬಹುದಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಗಳಿಕೆಯು ಆಹಾರ ಮತ್ತು ಮನರಂಜನೆಗಾಗಿ ವ್ಯಯವಾಗುತ್ತಿತ್ತು ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ... ಆದರೆ ಅವನ ಆಸ್ತಿಯೆಂದರೆ, ಚಿಲ್ಲರೆ ಪಲ್ಲರೆ ಉಳಿತಾಯ, ಸಾಂದರ್ಭಿಕ ಗಳಿಕೆ ಮತ್ತು ಕಿಡಿಗೇಡಿತನದ ವ್ಯರ್ಥ ಖರ್ಚು ಎಂದು ಪರಿಗಣಿಸಲೇಬಾರದು. ಗುಲಾಮನು ತನ್ನ ಒಡೆಯನ ವ್ಯವಹಾರವನ್ನು ಲಾಭದಾಯಕವಾಗುವಂತೆ ಆಸ್ಥೆ ವಹಿಸುವುದರ ಜೊತೆಗೆ ತನ್ನ ಸ್ವಂತಕ್ಕೆ ಲಾಭ ಗಿಟ್ಟಿಸುತ್ತಿದ್ದ. ತನ್ನ ಗಳಿಕೆಯನ್ನು ಲಾಭದಾಯಕವಾಗುವಂತೆ ದುಡಿಸಿಕೊಳ್ಳುವ ಬಗ್ಗೆ ಅವನಲ್ಲಿ ನಿರಂತರವಾದ ಮತ್ತು (ಚುರುಕಾದ) ಹರಿತವಾದ ತಿಳುವಳಿಕೆಯಿತ್ತು. ಮೇಲಿಂದ ಮೇಲೆ ತನ್ನ ಆದಾಯವನ್ನು ಒಡೆತನ ವ್ಯವಹಾರದಲ್ಲಿ ಮತ್ತೆ ಮತ್ತೆ ತೊಡಗಿಸುತ್ತಿದ್ದ ಅಥವಾ ಒಡೆಯನಿಗೆ ಸಂಬಂಧವಿಲ್ಲದ ಇತರೆ ವ್ಯವಹಾರ ಉದ್ಯಮಗಳಲ್ಲಿಯೂ ತನ್ನ ಬಂಡವಾಳ ಹೂಡುತ್ತಿದ್ದ. ತನ್ನ ಒಡೆಯನ ಜೊತೆಗೆ ವ್ಯವಹಾರ ಸಂಬಂಧ ಬೆಳೆಸಲು ಅವಕಾಶವಿತ್ತು. ವ್ಯವಹಾರ ವಿಷಯದಲ್ಲಿ ಇಬ್ಬರೂ ಪ್ರತ್ಯೇಕವಾದ ವ್ಯಕ್ತಿಗಳು ಎಂಬ ಭಾವವಿತ್ತು. ಅಂದರೆ, ಗುಲಾಮ ಮತ್ತು ಒಡೆಯನ ಸಂಬಂಧವು ಅವರ ವ್ಯವಹಾರಕ್ಕೆ ಎಂದೂ ಅಡ್ಡ ಬರುತ್ತಿರಲಿಲ್ಲ. ಒಡೆಯನನ್ನು ಬಿಟ್ಟು ಮೂರನೆಯ ಅಂದರೆ ಬೇರೊಬ್ಬ ವ್ಯಕ್ತಿಯೊಂದಿಗೂ ವ್ಯವಹಾರವನ್ನು ಕುದುರಿಸಬಹುದಾಗಿತ್ತು. ಗುಲಾಮನು ತನ್ನ ಆಸ್ತಿಪಾಸ್ತಿಗಳ ಮತ್ತು ಆಸಕ್ತಿಗಳ ಉಸ್ತುವಾರಿ ನೋಡಿಕೊಳ್ಳಲು ಏಜೆಂಟರನ್ನು ಕೂಡ ನೇಮಿಸಿಕೊಳ್ಳಲು ಸಾಧ್ಯವಿತ್ತು. ಹೀಗಾಗಿ ಗುಲಾಮನ ಆಸ್ತಿಪಾಸ್ತಿಗಳೆಂದರೆ ಭೂಮಿ, ಮನೆಗಳು, ಅಂಗಡಿಗಳು ಮಾತ್ರವಾಗಿರದೆ ಹಕ್ಕು ಮತ್ತು ಬಾಧ್ಯಸ್ಥಿಕೆಗಳೂ ಸೇರಿದ್ದವು."

"ಗುಲಾಮರ ವಾಣಿಜ್ಯದ ಚಟುವಟಿಕೆಗಳು ಅಸಂಖ್ಯವಾಗಿವೆ. ಅವರಲ್ಲಿ ಎಷ್ಟೋ ಮಂದಿ ಅಂಗಡಿಕಾರರಿದ್ದರು. ಅವರು ಬ್ರೆಡ್, ಮಾಂಸ, ಉಪ್ಪು, ಮೀನು, ಮದ್ಯ, ತರಕಾರಿ, ಕಾಳುಗಳು, ಬೀಜಗಳು, ಜೇನುತುಪ್ಪ, ಮೊಸರು, ಹಂದಿಮಾಂಸ, ಬಾತುಕೋಳಿಗಳು ಮತ್ತು ತಾಜಾ ಮೀನು ಮುಂತಾದ ವಿವಿಧ ಆಹಾರ ಪದಾರ್ಥಗಳನ್ನು ಅಂಗಡಿಗಳಲ್ಲಿಟ್ಟು ಮಾರುತ್ತಿದ್ದರು. ಬಟ್ಟೆ ಬರೆಗಳನ್ನು, ನಿಲುವಂಗಿಗಳನ್ನು, ಮಹಿಳೆಯರ ಮೇಲಂಗಿಗಳನ್ನು, ಚಪ್ಪಲಿಗಳನ್ನು, ಬೂಟುಗಳನ್ನು ಮಾರುವ ಪ್ರತ್ಯೇಕ ಅಂಗಡಿಗಳೂ ಇದ್ದವು. ಅವರು ರೋಮ್‌ನಲ್ಲಿ, ಸರ್ಕಸ್ ಮ್ಯಾಕ್ಸಿಮಸ್, ಪೋರ್ಟಿಕಸ್ ಟ್ರಿಗೇಮಿನಸ್, ಎಸ್ಕಿಲೀನ್ ಮಾರುಕಟ್ಟೆ, ಕವೋಲಿಯನ್ ಬೆಟ್ಟದ ಮೇಲಿನ ದೊಡ್ಡ ಅಂಗಡಿ ಬೀದಿ, ಸುಬುರ್ರಾ ಇತ್ಯಾದಿ ಕಡೆಗಳಲ್ಲಿ ತಮ್ಮ ವ್ಯಾಪಾರದ ಮಳಿಗೆಗಳನ್ನು ಹೊಂದಿದ್ದರು.[೧]"

"ಪಾಂಪೇ ನಗರದಲ್ಲಿ ಸೆಸೇಲಿಯಸ್ ಜುತಂಡಸ್ ಎಂಬುವವನ ಮನೆಯಲ್ಲಿ ಆಗಿನ ಕಾಲದ ಕೆಲವು ರಶೀದಿಗಳು ದೊರಕಿವೆ. ಗುಲಾಮರು ಕಾರ್ಯದರ್ಶಿಗಳಾಗಿ ಮತ್ತು ಏಜೆಂಟರಾಗಿ ತಮ್ಮ ಒಡೆಯರ ಪರವಾಗಿ ಎಷ್ಟೊಂದು ಕೆಲಸ ಮಾಡುತ್ತಿದ್ದರೆಂಬುದನ್ನು ಆ ರಶೀದಿಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ."[೨]

"ಆಗ್ಗೆ ಪ್ರಭುತ್ವದ ಗುಲಾಮರನ್ನು ಒಳಗೊಂಡಿರುತ್ತಿತ್ತು ಎಂಬುದರಲ್ಲಿ ಆಶ್ಚರ್ಯಪಡುವಂಥಾದ್ದು ಏನೂ ಇಲ್ಲ. ಎಷ್ಟಾದರೂ ಯುದ್ಧವು ಪ್ರಭುತ್ವದ ಪ್ರಮುಖ ವಿಷಯವೇ ಆಗಿತ್ತು. ಯುದ್ಧದಲ್ಲಿ ಸೆರೆ

---

೧. ಸ್ಲೇವರಿ ಇನ್ ದಿ ರೋಮನ್ ಎಂಪೈರ್, ಪು. ೧೦೫.

೨. ಅದೇ, ಪು. ೧೦೬.

ಸಿಕ್ಕವರು ರಾಜ್ಯದ ಆಸ್ತಿಯಾಗುತ್ತಿದ್ದರು. ಇಲ್ಲಿ ಆಶ್ಚರ್ಯಪಡುವಂಥಾದ್ದೊ ಇತ್ತು. ಅದೆಂದರೆ, ಪ್ರಭುತ್ವದ ಅಡಿಯಲ್ಲಿ ಸಾರ್ವಜನಿಕ ಗುಲಾಮರನ್ನು ಗಮನಾರ್ಹವಾಗಿ ಬಳಸಿಕೊಂಡ ಬಗ್ಗೆ ಮತ್ತು ಗುಲಾಮರು ಹೊಂದಿದ್ದ ಅಸಾಮಾನ್ಯ ಸಾಮಾಜಿಕ ಸ್ಥಾನಮಾನಗಳು..."

"ರೋಮ್ ಸಾಮ್ರಾಜ್ಯದಲ್ಲಿ 'ಸಾರ್ವಜನಿಕ ಗುಲಾಮ'ನೆಂದರೆ ರಾಜ್ಯದಿಂದ ಅದರ ಬೇರೆ ಅಧಿಕಾರ ಸ್ಥಾನಗಳಿಗೆ ನೇಮಿಸಲ್ಪಟ್ಟ ಗುಲಾಮನೆಂಬ ಅರ್ಥ ಪ್ರಾಪ್ತವಾಗಿತ್ತು. ಆ ಗುಲಾಮ ಎಂಬ ಪದವು ಯಾವುದಾದರೊಂದು ಉದ್ಯೋಗವನ್ನು ಹಾಗೂ ಅನೇಕ ಸಂದರ್ಭಗಳಲ್ಲಿ ಸಾಮಾಜಿಕ ಸ್ಥಾನಮಾನವನ್ನೂ ಸೂಚಿಸುತ್ತಿತ್ತು. ಅಂದು ರಾಜ್ಯದ ಗುಲಾಮರು, ಪಟ್ಟಣ ಪ್ರದೇಶದ ಗುಲಾಮರು ಮತ್ತು ದೊರೆಯ ಗುಲಾಮರು ಎಂಬ ಪ್ರಭೇದಗಳಿಗೆ ಸಂಬಂಧಿಸಿದ ಗುಲಾಮರೆಲ್ಲರ ಕೆಲಸ ಕಾರ್ಯಗಳನ್ನು ನೋಡಿದರೆ, ಅವು ಇಂದಿನ ನಾಗರಿಕ ಸೇವೆಗಳಲ್ಲಿ ತೊಡಗಿರುವ ಕೆಲವು ಉನ್ನತವರ್ಗದ ಅಧಿಕಾರಿಗಳ ಮತ್ತು ಕೆಳವರ್ಗಗಳ ಎಲ್ಲ ಸೇವಕರು ಮತ್ತು ಪುರಸಭೆಗಳ ನೌಕರರು, ಇವರೆಲ್ಲರು ಮಾಡುವ ದೈಹಿಕ ಮತ್ತು ಬೌದ್ಧಿಕ ಕೆಲಸಗಳನ್ನು ಹೋಲುತ್ತವೆ... ರಾಜ್ಯ ಬೊಕ್ಕಸದ ಕೆಳಹಂತಗಳಲ್ಲಿ ಅನೇಕ ಕಾರಕೂನರು ಮತ್ತು ವಿತ್ತಾಧಿಕಾರಿಗಳು ಕೆಲಸ ಮಾಡುತ್ತಿದ್ದರು. ಅವರೆಲ್ಲ ಮುಕ್ತವಾಗಿದ್ದ ಗುಲಾಮರು ಇಲ್ಲವೆ ಗುಲಾಮರೇ ಆಗಿರುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ವಹಿವಾಟಿಗೆ ಇತಿಮಿತಿಗಳೇ ಇಲ್ಲವೆನ್ನುವಷ್ಟು ವಿಶಾಲವಾಗಿದ್ದಿರಬೇಕು. ನೈಟ್ ಪದವಿಯನ್ನು ಪಡೆದ ಅಧಿಕಾರಿಯು ಟಂಕಶಾಲೆಯ ಮುಖ್ಯಸ್ಥನಾಗಿರುತ್ತಿದ್ದ ಮತ್ತು ಅವನ ಕೆಳಗೆ ನಾಣ್ಯಗಳನ್ನು ಟಂಕಿಸುವ ಪ್ರಕ್ರಿಯೆಗಳ ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ದಾಸ್ಯದಿಂದ ಮುಕ್ತನಾದ ಗುಲಾಮನಿಗೆ ವಹಿಸಿಕೊಡಲಾಗುತ್ತಿತ್ತು. ಅವನ ಕೆಳಗೆ ದಾಸ್ಯಮುಕ್ತ ಗುಲಾಮರು ಮತ್ತು ಗುಲಾಮರು ಈ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದರು... ಅನಿವಾರ್ಯವಾದ ಒಂದೆರಡು ತುರ್ತು ಪ್ರಸಂಗಗಳಲ್ಲಿ ಹೊರತುಪಡಿಸಿ, ರಾಜ್ಯ ಒಂದು ಸೇವೆಯಿಂದ ಮಾತ್ರ ಗುಲಾಮರನ್ನು ಕಡ್ಡಾಯವಾಗಿ ಹೊರಗೆ ಇಡಲಾಗುತ್ತಿತ್ತು. ವೈರಿಯೊಂದಿಗೆ ಯುದ್ಧ ಮಾಡುವ ಸೈನ್ಯದಲ್ಲಿ ಅವರನ್ನು ಸೇರಿಸಿಕೊಳ್ಳಲಾಗುತ್ತಿರಲಿಲ್ಲ. ಏಕೆಂದರೆ ಅಂಥ ಗೌರವಕ್ಕೆ ಅವರು ಅನರ್ಹರೆಂದು ಭಾವಿಸಲಾಗಿತ್ತು. ನಿಸ್ಸಂಶಯವಾಗಿ ಇದಕ್ಕೆ ಬೇರೆ ಪ್ರೇರಕ ಕಾರಣಗಳೂ ಇದ್ದವು. ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ಕ್ರಮಬದ್ಧವಾದ ತರಬೇತಿಯನ್ನು ಗುಲಾಮರಿಗೆ ನೀಡುವುದು ಅಪಾಯಕಾರಿ ಪ್ರಯೋಗವಾಗಿ ಕಂಡಿರಬೇಕು. ಹೀಗಾಗಿ ಯುದ್ಧರಂಗದಲ್ಲಿ ನೇರವಾಗಿ ಕಾದಾಡಲಿಕ್ಕೆ ಅವರಿಗೆ ಆಸ್ಪದವಿರಲಿಲ್ಲ. ಆದಾಗ್ಯೂ ರಣರಂಗಕ್ಕೆ ಸಾಮಾನು ಸರಂಜಾಮುಗಳನ್ನು ಸಾಗಿಸಲು, ಸೈನ್ಯಾಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡಲು ಮತ್ತು ಯುದ್ಧ ನೌಕೆಗಳಲ್ಲಿ ನೆರವು ನೀಡಲು ಈ ಎಲ್ಲ ಕ್ಷೇತ್ರಗಳಲ್ಲಿ ಸೇವಕರೆಂದು ಅಧಿಕ ಸಂಖ್ಯೆಯಲ್ಲಿ ನೇಮಕಗೊಳ್ಳುತ್ತಿದ್ದರು."[೧]

ರೋಮ್‌ನ ಸಮಾಜದಲ್ಲಿ ಗುಲಾಮರ ವಾಸ್ತವಿಕ ಸ್ಥಿತಿಗತಿಗಳು ಈ ರೀತಿಯಾಗಿದ್ದವು. ಈಗ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಅವನು ಕಾನೂನಿನ ದೃಷ್ಟಿಯಲ್ಲಿ ಗುಲಾಮನೆಂದು ಪರಿಗಣಿತವಾದ ಕಾಲಕ್ಕೆ ಅವನ ವಾಸ್ತವಿಕ ಸ್ಥಿತಿಗತಿಗಳು ಎಂತಿದ್ದವು ಎಂಬುದನ್ನು ಗಮನಿಸೋಣ. ಈಗ ಇಲ್ಲಿ ನಿರೂಪಿಸಲಾಗುವ ಕೆಲವೊಂದು ಸಂಗತಿಗಳು ಗುಲಾಮರ ಸ್ಥಾನಮಾನದ ಮೇಲೆ ಬೆಳಕು ಚೆಲ್ಲುತ್ತವೆ:[೨]

---

೧. ಸ್ಲೇವರಿ ಇನ್ ದಿ ರೋಮನ್ ಎಂಪೈರ್, ಪುಟ ೧೩೦–೧೪೭.

೨. ಚಾರ್ಲಸ್ ಸಿ. ಜೋನ್ಸನ್‌ನ, 'ದ ನಿಗ್ರೋ ಇನ್ ಅಮೇರಿಕನ್ ಸಿವಿಲಿಜೇಶನ್'.

"ನೌಕಾಪಡೆಯಲ್ಲಿ ಮತ್ತು ಸೈನ್ಯದಲ್ಲಿದ್ದ ಬಿಳಿಯರು ಮತ್ತು ಕರಿಯರ ಕ್ರಾಂತಿಯಲ್ಲಿ ಭಾಗವಹಿಸಿದಾಗ ಯಾವ ಕಹಿ ಪ್ರಸಂಗಕ್ಕೂ ಅವಕಾಶ ಕೊಡದಂತೆ ಒಟ್ಟಿಗೆ ಕಾದಾಡುತ್ತಿದ್ದರು ಮತ್ತು ಊಟ ಮಾಡುತ್ತಿದ್ದರು ಎಂಬುದನ್ನು ಸ್ವತಃ ಕಣ್ಣಾರೆ ಕಂಡುದನ್ನು ಲಫಾಯೆತ್ ಉಲ್ಲೇಖಿಸಿದ್ದಾನೆ. ಉತ್ತರ ಕ್ಯಾರೋಲೀನಾದ ಗ್ರಾನ್‌ವಿಲ್ ಪ್ರದೇಶದ ಕೆಳಭಾಗದಲ್ಲಿ, ಶುದ್ಧ ನೀಗ್ರೋ ರಕ್ತವುಳ್ಳ ಮತ್ತು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ಜಾನ್ ಚಾವಿಸ್ ಎಂಬುವವನು ಬಿಳಿಯರ ಮಕ್ಕಳಿಗಾಗಿ ಖಾಸಗಿ ಶಾಲೆಯೊಂದನ್ನು ನಡೆಸುತ್ತಿದ್ದ. ಜೊತೆಗೆ ಸ್ಥಾನಿಕ ಚರ್ಚಿನಲ್ಲಿ ಉಪದೇಶ ನೀಡಲು ಪರವಾನಗಿಯನ್ನು ಹೊಂದಿದ್ದ. ಆ ರಾಜ್ಯದ ಬಿಳಿಯರ ಧಾರ್ಮಿಕ ಸಭೆಗಳಲ್ಲಿ ಉಪದೇಶ ನೀಡುತ್ತಿದ್ದ. ಅವನ ವಿದ್ಯಾರ್ಥಿಯೊಬ್ಬ ಉತ್ತರ ಕ್ಯಾರೋಲೀನಾದ ಗವರ್ನರ್ ಆಗಿದ್ದ. ಇನ್ನೊಬ್ಬ ವಿದ್ಯಾರ್ಥಿ ಅತಿ ಪ್ರಮುಖ ಉದಾರವಾದಿ ಸೆನೆಟರ್ ಆಗಿದ್ದ. ಅವನ ಇಬ್ಬರು ವಿದ್ಯಾರ್ಥಿಗಳು ಉತ್ತರ ಕ್ಯಾರೊಲೀನಾದ ಪ್ರಧಾನ ನ್ಯಾಯಮೂರ್ತಿಯ ಮಕ್ಕಳಾಗಿದ್ದರು. ರಾಜ್ಯದ ಅತ್ಯಂತ ಹಿರಿದಾದ ಮಿಲಿಟರಿ ಅಕಾಡೆಮಿಯ ಸಂಸ್ಥಾಪಕನಾಗಿದ್ದವನ ತಂದೆಯು ಇವರ ಮನೆಯಲ್ಲಿಯೇ ಇದ್ದು ಊಟೋಪಚಾರ ಪಡೆದು ಇವನ ಶಾಲೆಯಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದ.

ಗುಲಾಮರ ಶ್ರಮವನ್ನು ಎಲ್ಲ ತೆರನಾದ ಕೆಲಸಗಳಿಗೂ ಬಳಸಿಕೊಳ್ಳಲಾಗುತ್ತಿತ್ತು. ನೀಗ್ರೋ ಗುಲಾಮರಲ್ಲಿಯೆ ಹೆಚ್ಚು ಬುದ್ಧಿವಂತರಾದವರಿಗೆ ಕುಶಲ ಕರ್ಮಿಗಳಾಗಲು ತರಬೇತಿ ನೀಡಿ ಅವರನ್ನು ದುಡಿಸಿಕೊಳ್ಳಲಾಗುತ್ತಿತ್ತು ಮತ್ತು ಸಂದರ್ಭ ಬಂದಾಗ ಅವರನ್ನು ಒತ್ತೆ ಇಡುತ್ತಿದ್ದುದೂ ಉಂಟು. ಮಾರುಕಟ್ಟೆಯಲ್ಲಿ ಸಾಮಾನ್ಯ ಭೂಮಿಗೆಲಸದ ಆಳಿಗಿಂತ ಎರಡು ಪಟ್ಟು ಬೆಲೆ ಗುಲಾಮೀ ಕುಶಲಕರ್ಮಿಯ ಮಾರಾಟದಿಂದ ದೊರಕುತ್ತಿತ್ತು. ನಿಷ್ಣಾತರಾಗಿದ್ದ ಕುಶಲಕರ್ಮಿಗಳು ತಮ್ಮದೇ ಆದ ಸಿಬ್ಬಂದಿಯನ್ನು ಹೊಂದಿರುತ್ತಿದ್ದರು. ವ್ಯವಸ್ಥೆಯು ಸಂಕೀರ್ಣವಾಗುತ್ತ ನಡೆದಂತೆ ಕೆಲವು ಒಡೆಯರು ಮತ್ತೆ ಕೆಲವು ಗುಲಾಮರನ್ನು ಕೊಂಡು ಗುಲಾಮಿ ಕುಶಲಕರ್ಮಿಗಳಿಗೆ ಸಹಾಯಕರನ್ನಾಗಿ ಮಾಡಿಕೊಂಡರು. ಎಷ್ಟೋ ಗುಲಾಮಿ ಕುಶಲಕರ್ಮಿಗಳು ತಮ್ಮ ಸಾಮಾನ್ಯ ದುಡಿಮೆಗಿಂತಲೂ ಹೆಚ್ಚಿಗೆ ದುಡಿದು, ಉಳಿತಾಯ ಮಾಡಿ ಗಳಿಸಿ ತಮ್ಮ ಸ್ವಾತಂತ್ರ್ಯವನ್ನು ಕೊಂಡುಕೊಂಡರು, ಅಂದರೆ ದಾಸ್ಯದಿಂದ ಮುಕ್ತರಾದರು."

"ಗುಲಾಮರಾಗಿದ್ದು, ತಪ್ಪಿಸಿಕೊಂಡು ಹೋಗಿದ್ದವರ ಬಗ್ಗೆ ಮತ್ತು ಗುಲಾಮರ ಮಾರಾಟಕ್ಕೆ ಸಂಬಂಧಿಸಿದ ಅಂದಿನ ಜಾಹಿರಾತುಗಳು ಗುಲಾಮರ ಕೌಶಲ್ಯದ ಸೂಚ್ಯಂಕಗಳಾಗಿವೆ. ಅವರು ಬಿಳಿಯ ಸಾಮಾನ್ಯ ಬಡಕಾರ್ಮಿಕನಷ್ಟೇ ಅಥವಾ ಅವನಿಗಿಂತ ಹೆಚ್ಚು ಕೂಲಿಯನ್ನು ಪಡೆಯುತ್ತಿದ್ದರು. ಅವರು ತಮ್ಮ ಒಡೆತನ ಪ್ರಭಾವದಿಂದ ಉತ್ತಮ ಕೆಲಸಗಳನ್ನು ದೊರಕಿಸಿಕೊಳ್ಳುತ್ತಿದ್ದರು. ಜಾರ್ಜಿಯಾದ ಅಥೆನ್ಸ್ ಎಂಬ ಪಟ್ಟಣದಲ್ಲಿ, ೧೮೩೮ರಲ್ಲಿ ಅಲ್ಲಿಯ ಕಟ್ಟಡ ಕಟ್ಟುವ ಮತ್ತು ಮರಗೆಲಸದ ಗುತ್ತಿಗೆದಾರರಿಗೆ ಒಂದು ಮನವಿಯನ್ನು ಸಲ್ಲಿಸಿ, ನೀಗ್ರೋ ಕೆಲಸಗಾರರಿಗೆ ಆದ್ಯತೆ ನೀಡುವುದನ್ನು ನಿಲ್ಲಿಸಲು ವಿನಂತಿಸಲಾಗಿತ್ತು. ಆ ಮನವಿಯಲ್ಲಿ ಅಡಕವಾಗಿದ್ದ ಕೆಲವೊಂದು ವಿಷಯಗಳು ಇಂತಿದ್ದವು. "ಬಿಳಿಯನೇ ಈ ದೇಶದ ಮತ್ತು ರಾಜ್ಯದ ನಿಜವಾದ, ಕಾನೂನುಬದ್ಧ, ನೈತಿಕ ಮತ್ತು ನಾಗರಿಕ ಮಾಲೀಕ. ಈ ಮಾಲೀಕತ್ವದ ಹಕ್ಕು ಸ್ಥಾಪಿತವಾದದ್ದು ಬಿಳಿಯನು ಅಧ್ಯಯನ ಪ್ರಾರಂಭಿಸಿದ ದಿನದಿಂದಲೇ. ಕೋಪರ್ನಿಕಸ್ ಮತ್ತು ಗೆಲಿಲಿಯೋ ಅವರಂಥ ಬಿಳಿಯರೇ ಭೂಮಿಯು ಗೋಳವಾಗಿದೆ ಎಂದು ಸೂಚಿಸಿದವರು. ಹೀಗೆ ಸೂಚಿಸಿದ್ದರಿಂದಲೇ ಇನ್ನೊಬ್ಬ ಬಿಳಿಯನಾದ ಕೊಲಂಬಸ್ಸನಿಗೆ ಪಶ್ಚಿಮ

ದಿಕ್ಕಿನಲ್ಲಿ ನೌಕೆಯನ್ನು ನಡೆಸಿಕೊಂಡು ಹೋದರೆ ಹೊಸ ಭೂಮಿಯನ್ನು ಕಾಣಬಹುದೆಂಬ ವಿಚಾರ ಹೊಳೆದದ್ದು. ಆದ್ದರಿಂದ ಈ ಹೊಸ ಭೂಮಿಯನ್ನು ಕಂಡುಹಿಡಿದವರು ಬಿಳಿಯರಲ್ಲದೆ ಮತ್ತಾರೂ ಅಲ್ಲ. ಹೌದು, ಅಂಥ ಬಿಳಿಯರು ಇಂದು ಹಸಿದ ಹೊಟ್ಟೆಗೆ ರೊಟ್ಟಿಯಿಲ್ಲದೆ, ಮೈ ಮುಚ್ಚಿಕೊಳ್ಳಲು ಬಟ್ಟೆಗಳಿಲ್ಲದೆ ಕಂಗಾಲಾಗಿದ್ದಾರೆ. ಏಕೆ ಗೊತ್ತೇ? ನೀವು ನೀಗ್ರೋಗಳಿಗೆ ಬೆಂಬಲ ನೀಡಿ ಬಿಳಿಯರಿಗೆ ಜೀವನಾಧಾರವಾದ ಕೆಲಸಗಳನ್ನು ನಿರಾಕರಿಸುತ್ತಿರುವುದರಿಂದ ಅವರಲ್ಲಿ ಹಣವಿಲ್ಲದಾಗಿದೆ. ಇದು ನ್ಯಾಯವಲ್ಲ.'' ೧೮೫೮ರಲ್ಲಿ ಅಟ್ಲಾಂಟಾದ ಇಬ್ಬರು ಬಿಳಿಯ ಮೆಕ್ಯಾನಿಕ್‌ಗಳು ಮತ್ತು ಕಾರ್ಮಿಕರು ಒಡೆಯರ ಬೇರೆ ವಿಭಾಗಗಳಲ್ಲಿ ನೆಲೆಸಿದ್ದ ಕರಿಯ ಗುಲಾಮಿ ಕುಶಲಕರ್ಮಿಗಳಿಂದ ತಮ್ಮನ್ನು ರಕ್ಷಿಸಲು ಕೋರಿ ಸಹಿ ಮಾಡಿದ ಅರ್ಜಿಯೊಂದನ್ನು ಸಲ್ಲಿಸಿದ್ದರು. ಮರು ವರ್ಷವೇ ಬಿಳಿಯ ನಾಗರಿಕರಿಗೆ ಹೊಸದೊಂದು ತೊಂದರೆ ಕಾಣಿಸಿಕೊಂಡಿತ್ತು. ಅವರ ಮಧ್ಯದಲ್ಲಿಯೇ ಇದ್ದು ಕಾರ್ಯನಿರತನಾಗಲು ಒಬ್ಬ ನಿಗ್ರೋ ದಂತವೈದ್ಯನಿಗೆ ನಗರ ಸಮಿತಿಯು ಅವಕಾಶ ಮಾಡಿಕೊಟ್ಟಿದ್ದುದೇ ಅವರ ವ್ಯಥೆಗೆ ಕಾರಣವಾಗಿತ್ತು. 'ನಮಗೆ ಮತ್ತು ನಮ್ಮ ಸಮುದಾಯಕ್ಕೆ ಆದ ಅನ್ಯಾಯ ಕೊನೆಗೊಳ್ಳಲು ಕೂಡಲೇ ಇದನ್ನು ರದ್ದುಪಡಿಸಬೇಕು. ಅಟ್ಲಾಂಟಾದ ನಿವಾಸಿಗಳಾದ ನಾವು ನಿಮಗೆ ನ್ಯಾಯಕ್ಕಾಗಿ ಈ ಮನವಿ ಸಲ್ಲಿಸುತ್ತಿದ್ದೇವೆ.' ೧೮೯೯ರಲ್ಲಿ, ಜಾರ್ಜಿಯಾದ ರಿಚ್‌ಮಂಡ್ ಪ್ರದೇಶದಲ್ಲಿ ನಡೆದ ದಾಸ್ಯಮುಕ್ತ ನೀಗ್ರೋಗಳ ಜನಗಣತಿಯ ಪ್ರಕಾರ ಅವರಿಗೆ ಸಂಬಂಧಿಸಿದ ಕಸುಬುದಾರರೆಂದರೆ, ಬಡಗಿಗಳು, ಕ್ಷೌರಿಕರು, ದೋಣಿಗಳನ್ನು ರಿಪೇರಿ ಮಾಡುವವರು, ಜೇನು ಮಾಡುವವರು, ನೂಲುವವರು, ಗಿರಣಿದಾರರು, ಚರ್ಮಕಾರರು, ನೇಕಾರರು, ರಕ್ಷಾಕವಚಗಳ ತಯಾರಕರು, ಮರ ಕೊಯ್ಯುವವರ ಸಹಾಯಕರು, ಉಗಿದೋಣಿ ನಡೆಸುವವರು ಇತ್ಯಾದಿ. ಮನ್ರೋ ಅಮೇರಿಕದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ದಿನದಂದು ಹಾಕಿಕೊಂಡಿದ್ದ ಬೂಟುಗಳನ್ನು ತನ್ನ ಕೈಯಿಂದ ಮಾಡಿದವನು ಒಬ್ಬ ನೀಗ್ರೋ ಕಸಬುದಾರ. ಮೋಂಟಿಸೆಲ್ಲೊ ಎಂಬಲ್ಲಿ ಥಾಮಸ್ ಜೆಫರ್ಸನ್ನನ ಮನೆಗೆ ಸುಂದರವಾಗಿ ಹಾಸುಗಲ್ಲುಗಳನ್ನು ಜೋಡಿಸಿದ ಗುಲಾಮನ ಕೈಕುಸುರಿನ ಕೆಲಸವನ್ನು ನೋಡಿ ಹ್ಯಾರಿಯೆಟ್ ಮಾರ್ಟಿನೊ ನಿಬ್ಬೆರಗಾಗಿದ್ದಳು. ಆ ಹಳೆಯ ನೆಡುತೋಪಿನ ಮಧ್ಯದ ಬೃಹತ್ ಕಟ್ಟಡದಲ್ಲಿ ಆ ನೀಗ್ರೋ ಕುಶಲಕರ್ಮಿಗಳ ಕೈಚಳಕದ ಮಹತ್ತರ ಗುರುತುಗಳನ್ನು ಇಂದಿಗೂ ಕಾಣಬಹುದು. ಶುದ್ಧ ಮತ್ತು ಬಲಿತ ಓಕ್ ಮರಗಳನ್ನು ಕಡಿದು ಕಂಬಗಳನ್ನು ಮತ್ತು ಹಲಗೆಗಳನ್ನು ಕೊಯ್ದು, ಕಟ್ಟಿಗೆಯ ಮೊಳೆಗಳಿಂದ ಸುಂದರವಾಗಿ ಜೋಡಿಸಿ, ಭದ್ರವಾಗಿ ಕಟ್ಟಿದ ಆ ಭವನಗಳು ಇಂದಿಗೂ ತಮ್ಮ ಆಕರ್ಷಣೆಯನ್ನು ಉಳಿಸಿಕೊಂಡಿವೆ. ನೂಲುವ ಮತ್ತು ನೇಯ್ಗೆಯ ಕೆಲಸದಲ್ಲಿ ಕುಶಲಿಗಳಾದ ನೀಗ್ರೋ ಮಹಿಳೆಯರು ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದರು. ೧೮೩೯ರಲ್ಲಿ ಬಕಿಂಗ್‌ಹ್ಯಾಮ್ ಎಂಬವನು ಜಾರ್ಜಿಯಾದ ಅಥೆನ್ಸ್‌ನಲ್ಲಿ ಗುಲಾಮರು ಬಿಳಿಯ ಹುಡುಗಿಯರೊಂದಿಗೆ ಯಾವುದೇ ಆಕ್ಷೇಪ ಅಥವಾ ಜುಗುಪ್ಸೆ ಇಲ್ಲದೆ ಕೆಲಸ ಮಾಡುತ್ತಿದ್ದುದನ್ನು ಕಂಡಿದ್ದ.

ದಕ್ಷಿಣದ ಮುಕ್ತ ಮತ್ತು ಮುಕ್ತರಾಗಿಲ್ಲದ ಗುಲಾಮ ಕುಶಲಕರ್ಮಿಗಳು ಉತ್ತರದಲ್ಲಿದ್ದ ತಮ್ಮ ಸಹೋದರರಿಗಿಂತ ಹೆಚ್ಚು ಮುನ್ನಡೆ ಸಾಧಿಸಿದ್ದರು. ೧೮೫೬ರಲ್ಲಿ ಫಿಲಡೆಲ್‌ಫಿಯಾ ಎಂಬಲ್ಲಿ ೧೬೩೭ ನಿಗ್ರೋ ಕುಶಲಕರ್ಮಿಗಳಿದ್ದರೆಂದು ದಾಖಲಾಗಿದೆ. ಅವರಲ್ಲಿ ಎರಡು ಮೂರಾಂಶಕ್ಕಿಂತ ಕಡಿಮೆ ಜನರಿಗೆ ಮಾತ್ರ ತಮ್ಮ ಕಸುಬಿನ ಕೌಶಲ್ಯವನ್ನು ಉಪಯೋಗಿಸಲು ಸಾಧ್ಯವಾಗಿತ್ತು. ಇದಕ್ಕೆ ಹಗೆತನದ ಪೂರ್ವಾಗ್ರಹವೇ ಕಾರಣವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಆದಿಭಾಗದಿಂದಲೇ ಅಮೆರಿಕಾಕ್ಕೆ

ಗುಂಪುಗುಂಪಾಗಿ ಬರುತ್ತಿದ್ದ ಐರ್ಲೆಂಡಿನ ಜನರನ್ನು ಹೆಚ್ಚು ಕಡಿಮೆ ನಿಗ್ರೋ ಜನರನ್ನು ಬಳಸಿದಂತೆಯೇ ಬಳಸಿಕೊಂಡರು. 'ಅವರ ಪರವಾಗಿ ಮಾಡಲಾದ ಒಂದು ವಾದವೆಂದರೆ, ಐರ್ಲೆಂಡಿನ ಒಬ್ಬ ಕ್ಯಾಥೋಲಿಕ್ ಪಂಥೀಯನು ತನಗೆ ನೀಡಲಾದ ಸ್ಥಾನದಿಂದ ಉನ್ನತ ಸ್ಥಾನಕ್ಕೇರಲು ಯತ್ನಿಸುವುದೇ ಅಪರೂಪ, ಆದರೆ ನಿಗ್ರೋ ಯತ್ನವನ್ನು ಮಾಡುತ್ತಾನೆ ಇಷ್ಟೇ ಅಲ್ಲ, ಅದರಲ್ಲಿ ಸಫಲನೂ ಆಗುತ್ತಾನೆ. ಕರಿಯ ಗುಲಾಮರ ಮಾರಾಟ ಜಾರಿಯಲ್ಲಿದ್ದ ಸಮಯದಲ್ಲಿ ಪ್ಯೂರಿಟನ್ ಆಲಿವರ್ ಕ್ರಾಮ್‌ವೆಲ್ ಎಂಬುವನು ದ್ರೊಘೇಡಾ ಹತ್ಯಾಕಾಂಡದಲ್ಲಿ ಸಾಯದೇ ಉಳಿದಿದ್ದ ಐರ್ಲೆಂಡಿನ ಜನರನ್ನು ಬರ್ಬಡಾಸ್‌ಗೆ (ವೆಸ್ಟ್ ಇಂಡೀಜ್ ದ್ವೀಪ) ಮಾರಿರಲಿಲ್ಲವೇನು? ನ್ಯೂಯಾರ್ಕ್ ಮತ್ತು ಪೆನ್ಸಿಲ್ವೇನಿಯಾ ಗಳಲ್ಲಿದ್ದ ಮುಕ್ತ ಮತ್ತು ತಲೆ ತಪ್ಪಿಸಿಕೊಂಡಿದ್ದ ನೀಗ್ರೋಗಳು ಯಾವಾಗಲೂ ಐರಿಶ್ ಜನರ ಗುಂಪಿನ ವಿರುದ್ಧ ಘರ್ಷಣೆಯಲ್ಲಿರುತ್ತಿದ್ದರು. ನ್ಯೂಯಾರ್ಕಿನಲ್ಲಿ ನಡೆದ ಅತಿ ಹಿಂಸಾತ್ಮಕ ಘರ್ಷಣೆಗಳು ಈ ವಿಷಪೂರಿತ ದ್ವೇಷಭಾವನೆಯು ಭುಗಿಲೆದ್ದಾಗ ಜರುಗಿವೆ. ಐರ್ಲೆಂಡಿನ ಈ ಜನರು ಗಾರೆ ಕೆಲಸದವರ ಭಾರವಾದ ವಸ್ತುಗಳನ್ನು ಹೊರುವ ಮತ್ತಿತರ ಸಾಮಾನ್ಯ ಕೆಲಸದ ಅವಕಾಶಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ತಮ್ಮ ಜೀವನಾಧಾರವನ್ನು ಮತ್ತು ಅಮೆರಿಕದ ಮೇಲೆ ಅವರಿಗಿದ್ದ ಅಲ್ಪಸ್ವಲ್ಪ ಹಿಡಿತವನ್ನು ಕಸಿದುಕೊಳ್ಳುವ ಕೇಡಿಗರೆಂದು ಅವರು ನೀಗ್ರೋಗಳನ್ನು ಹೆಜ್ಜೆ ಹೆಜ್ಜೆಗೂ ವಿರೋಧಿಸುತ್ತಿದ್ದರು."

ರೋಮ್‌ನ ಗುಲಾಮ ಮತ್ತು ಅಮೇರಿಕದ ನಿಗ್ರೋ ಗುಲಾಮ ಇವರ ವಾಸ್ತವಿಕ ಸ್ಥಿತಿ ಹೀಗಿದ್ದಿತು. ಭಾರತದ ಅಸ್ಪೃಶ್ಯರ ಸ್ಥಾನಮಾನಗಳೊಂದಿಗೆ ಹೋಲಿಸಬಹುದಾಗಿದ್ದು, ಏನಾದರೂ ಇದೆಯೇ? ರೋಮ್ ಸಾಮ್ರಾಜ್ಯದಡಿಯಲ್ಲಿದ್ದ ಗುಲಾಮರ ಸ್ಥಿತಿಗತಿಗಳೊಡನೆ ಭಾರತದ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಹೋಲಿಸಿ ನೋಡಲು ಆ ಕಾಲವನ್ನೇ ತೆಗೆದುಕೊಳ್ಳುವುದು ಅಸಮಂಜಸವಾಗಿರುವುದಿಲ್ಲ. ಆದರೆ ರೋಮ್ ಸಾಮ್ರಾಜ್ಯದ ಗುಲಾಮರ ಸ್ಥಿತಿಗತಿಗಳೊಡನೆ ಈಗಿನ ಕಾಲದ ಅಸ್ಪೃಶ್ಯರ ಸ್ಥಿತಿಗತಿಗಳೊಡನೆ ಹೋಲಿಸಿ ನೋಡಲು ನನ್ನದೇನೂ ಅಭ್ಯಂತರವಿಲ್ಲ. ಆದರೆ ಇದು ಒಂದು ಕಡೆಯ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಇನ್ನೊಂದು ಕಡೆಯ ಅತ್ಯುತ್ತಮ ಸ್ಥಿತಿಗತಿಗಳೊಡನೆ ಹೋಲಿಸಿದಂತಾಗುತ್ತದೆ ಅಷ್ಟೆ. ಏಕೆಂದರೆ ಭಾರತದಲ್ಲಿ ಅಸ್ಪೃಶ್ಯರಿಗೆ ಇಂದಿನ ಕಾಲವನ್ನು ಸುವರ್ಣಯುಗವೆಂದು ಭಾವಿಸಲಾಗುತ್ತಿದೆ. ಅಸ್ಪೃಶ್ಯರ ವಾಸ್ತವಿಕ ಸ್ಥಿತಿಯನ್ನು ಅಂದಿನ ಗುಲಾಮರ ವಾಸ್ತವಿಕ ಸ್ಥಿತಿಗತಿಗಳೊಂದಿಗೆ ಹೋಲಿಸಿ ನೋಡಿದಾಗ ನಮಗೆ ಕಾಣುವುದೇನು? ರೋಮ್‌ನಲ್ಲಿದ್ದ ಗುಲಾಮರು, ಗ್ರಂಥಪಾಲಕರ, ಸಾಹಿತ್ಯ ಕೃತಿಗಳ ಪ್ರತಿ ಮಾಡುವವರ, ಶೀಘ್ರಲಿಪಿಕಾರರ ಮಂತಾದ ವೃತ್ತಿಗಳಲ್ಲಿ ತೊಡಗಿರುತ್ತಿದ್ದರು. ಇಂಥ ವೃತ್ತಿಗಳಲ್ಲಿ ಎಷ್ಟು ಜನ ಅಸ್ಪೃಶ್ಯರು ತೊಡಗಿರುತ್ತಾರೆ? ರೋಮ್‌ನಲ್ಲಿದ್ದಂತೆ ಎಷ್ಟು ಜನ ಅಸ್ಪೃಶ್ಯರು, ಬೌದ್ಧಿಕವಾದ ಆಲಂಕಾರಿಕ, ವ್ಯಾಕರಣಕಾರ, ತತ್ವಜ್ಞಾನಿ, ಬೋಧಕ, ವೈದ್ಯ ಮತ್ತು ಕಲಾವಿದ ವೃತ್ತಿಗಳಲ್ಲಿ ತೊಡಗಿದ್ದಾರೆ? ರೋಮ್‌ನಲ್ಲಿದ್ದಂತೆ ಎಷ್ಟು ಜನ ಅಸ್ಪೃಶ್ಯರು ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ? ಅಸ್ಪೃಶ್ಯನ ಇಂದಿನ ಸ್ಥಾನಮಾನವನ್ನು ನಿಗ್ರೋನ ಅಂದಿನ ಸ್ಥಾನಮಾನಕ್ಕೆ ಹೋಲಿಸಿದಾಗಲೂ ಇಂದಿನ ಅಸ್ಪೃಶ್ಯನ ಸ್ಥಿತಿಗತಿಗಳು ಗುಲಾಮನಿಗಿಂತ ಚೆನ್ನಾಗಿವೆ ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಅಸ್ಪೃಶ್ಯರು ಕುಶಲಕರ್ಮಿಗಳಾದುದಕ್ಕೆ ಏನಾದರೂ ಉದಾಹರಣೆಗಳಿವೆಯೇ? ಅಸ್ಪೃಶ್ಯರು ನಡೆಸುತ್ತಿದ್ದ ಶಾಲೆಯಲ್ಲಿ ಜ್ಞಾನಸಂಪಾದಿಸುವ ಉದ್ದೇಶದಿಂದ ಅವನ ಕಾಲ ಬಳಿ ಕುಳಿತು ಓದಿದ ಬ್ರಾಹ್ಮಣರ ಮಕ್ಕಳ ಉದಾಹರಣೆಗಳಿವೆಯೇ? ಅಂಥ ಸಂಗತಿಗಳನ್ನು ಭಾವಿಸಲಿಕ್ಕೂ ಕೂಡ ಏಕೆ ಸಾಧ್ಯವಿಲ್ಲದಾಗಿದೆ? ಆದರೆ ಇಂಥದು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ನಡೆದಿದೆ. ರೋಮಿನ

ಗುಲಾಮ ಮತ್ತು ಅಮೆರಿಕೆಯ ನಿಗ್ರೋ ಇವರೊಂದಿಗೆ ಇಂದಿನ ಭಾರತದ ಅಸ್ಪೃಶ್ಯರನ್ನು ಉದ್ದೇಶಪೂರ್ವಕವಾಗಿಯೆ ಹೋಲಿಸಿ ನೋಡುತ್ತಿದ್ದೇನೆ. ಏಕೆಂದರೆ ವರ್ತಮಾನ ಕಾಲವನ್ನು ಅಸ್ಪೃಶ್ಯರ ಸುವರ್ಣಯುಗವೆಂದು ಭಾವಿಸಲಾಗಿದೆ. ಆಧುನಿಕ ಕಾಲದ ಅಸ್ಪೃಶ್ಯರ ಸ್ಥಿತಿಗತಿಗಳಿಗೂ, ಹಿಂದಿನ ಕಾಲದ ಗುಲಾಮರ ಸ್ಥಿತಿಗತಿಗಳಿಗೂ ಹೋಲಿಸಿ ನೋಡಿದಾಗ, ಹಿಂದಿನ ಕಾಲದ ಗುಲಾಮರನ್ನು ಚರಿತ್ರೆಕಾರರು ಅನಾಗರಿಕರೆಂದು ಕರೆದುದಕ್ಕಿಂತಲೂ ಹೆಚ್ಚಾಗಿ ಇಂದಿನ ಕಾಲದ ಅಸ್ಪೃಶ್ಯರು ಹೆಚ್ಚು ನೆಲಕಚ್ಚಿದ (ಕುಸಿದುಹೋದ) (ಜನರಾಗಿದ್ದಾರೆ) ಜನಾಂಗವಾಗಿದ್ದಾರೆ. ಆದ್ದರಿಂದ ಅಸ್ಪೃಶ್ಯರು ಗುಲಾಮರಿಗಿಂಥ ಅತಿ ಕೆಟ್ಟ ಸ್ಥಿತಿಯಲ್ಲಿದ್ದಾರೆಂದು ನಿಸ್ಸಂಶಯವಾಗಿ ಹೇಳಬಹುದು. ಇದರ ಅರ್ಥವೆಂದರೆ, ಗುಲಾಮಗಿರಿಯು ಮಾನವ ಬೆಳವಣಿಗೆಗೆ ಯಾವ ಕಾಲಕ್ಕೂ ಅಸ್ಪೃಶ್ಯತೆಯಷ್ಟು ಹಾನಿಕಾರಕವಾಗಿರಲಿಲ್ಲ. ಇದರ ಮೇಲೆ ಒಂದು ವಿರೋಧಾಭಾಸದ ಉಕ್ತಿಯಿದೆ. ಕಾನೂನಿನ ದೃಷ್ಟಿಯಿಂದ ಅತಿ ಕೆಟ್ಟ ಸ್ಥಿತಿಯಲ್ಲಿದ್ದ ಗುಲಾಮರು ವಾಸ್ತವವಾಗಿ ಅಸ್ಪೃಶ್ಯರಿಗಿಂತ ಅತ್ಯಂತ ಸುಸ್ಥಿತಿಯಲ್ಲಿದ್ದರು. ಕಾನೂನಿನ ದೃಷ್ಟಿಯಲ್ಲಿ ಗುಲಾಮರಿಗಿಂತ ಅತ್ಯಂತ ಸುಸ್ಥಿತಿಯಲ್ಲಿದ್ದ ಅಸ್ಪೃಶ್ಯರು ವಾಸ್ತವವಾಗಿ ಅತಿಹೀನ ಸ್ಥಿತಿಯಲ್ಲಿದ್ದರು. ಈ ವಿರೋಧಾಭಾಸದ ಉಕ್ತಿಯನ್ನು ವಿವರಿಸುವುದೆಂತು? ಎಲ್ಲ ಪ್ರಶ್ನೆಗಳ ಪ್ರಶ್ನೆ ಇದಾಗಿರುತ್ತದೆ. ಗುಲಾಮರಿಗೆ, ಕಾನೂನಿನ ಮೂಲಕ ಉಂಟಾದ ಪಾರತಂತ್ರ್ಯದ ಕಠಿಣವಾದ ತೊಡಕನ್ನು ದಾಟಲು ಮತ್ತು ಅವರ ಅಭಿವೃದ್ಧಿಗೆ, ಬೆಳವಣಿಗೆಗೆ ಸಹಾಯ ಮಾಡಿದ್ದು ಯಾವುದು? ಅಸ್ಪೃಶ್ಯನಿಗೆ ಕಾನೂನು ನೀಡಿದ ಸ್ವಾತಂತ್ರ್ಯದ ಪರಿಣಾಮವನ್ನು ನಿಷ್ಫಲಗೊಳಿಸಿ, ಅವನ ಜೀವಶಕ್ತಿಯು ಕಮರುವಂತೆ, ಬೆಳವಣಿಗೆ ಕುಂಠಿತವಾಗುವಂತೆ ಮಾಡಿದ್ದಾವುದು?

ಈ ವಿರೋಧಾಭಾಸ ಉಕ್ತಿಯ ವಿವರಣೆಯು ಬಹಳಷ್ಟು ಸರಳವಾಗಿದೆ. ಕಾನೂನು ಮತ್ತು ಜನಾಭಿಪ್ರಾಯ ಇವುಗಳ ಸಂಬಂಧವನ್ನು ಅರಿತರೆ ಈ ವಿರೋಧಾಭಾಸದ ಉಕ್ತಿಯ ಅರ್ಥವನ್ನು ಸರಳವಾಗಿ ತಿಳಿದುಕೊಳ್ಳಬಹುದು. ಕಾನೂನು ಮತ್ತು ಜನಾಭಿಪ್ರಾಯಗಳು ಜನರ ವರ್ತನೆಯನ್ನು (ನಡತೆಯನ್ನು) ನಿಯಂತ್ರಿಸುವ ಎರಡು ಶಕ್ತಿಗಳು. ಅವುಗಳಲ್ಲಿ ಒಂದರ ಕ್ರಿಯೆ ಇನ್ನೊಂದರ ಪ್ರತಿಕ್ರಿಯೆಗೆ ಕಾರಣವಾಗುತ್ತದೆ. ಆಗಾಗ ಜನಾಭಿಪ್ರಾಯವು ಕಾನೂನಿಗಿಂತಲೂ ಮುಂದಿರುತ್ತದೆ. ಇದು ಕಾನೂನಿನ ಕಾಠಿಣ್ಯವನ್ನು ಕಡಿಮೆ ಮಾಡುತ್ತದೆ ಮತ್ತು ನಿವಾರಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಕಾನೂನು ಮತ್ತು ಜನಾಭಿಪ್ರಾಯಗಳು ಒಂದಕ್ಕೊಂದು ವಿರೋಧವಾಗಿರುತ್ತವೆ. ಇವೆರಡರಲ್ಲಿ ಜನಾಭಿಪ್ರಾಯವೇ ಹೆಚ್ಚು ಶಕ್ತಿಶಾಲಿಯಾಗಿರುವುದರಿಂದ ಕಾನೂನು ವಿಧಿಸಿದ್ದನ್ನು ಉಪೇಕ್ಷಿಸುವಂತೆ ಮಾಡುತ್ತದೆ ಅಥವಾ ನಿಷ್ಪ್ರಯೋಜಕಗೊಳಿಸುತ್ತದೆ. ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಿರ್ಬಂಧಪಡಿಸಿದ್ದರಿಂದಲೋ ಅಥವಾ ಗುಲಾಮರನ್ನು ಲಾಭದಾಯಕವಾಗಿ ಬಳಸುವ ಸ್ವಾರ್ಥದ ದುರಾಸೆಯಿಂದಲೋ, ಮಾನವೀಯತೆಯ ವಿಚಾರದಿಂದಲೋ, ಗುಲಾಮರ ಸ್ಥಾನಮಾನದ ವಿಷಯಕ್ಕೆ ರೋಮ್‌ನಲ್ಲಾಗಲೀ ಅಥವಾ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಾಗಲೀ ಕಾನೂನು ಮತ್ತು ಜನಾಭಿಪ್ರಾಯಗಳ ಮಧ್ಯದಲ್ಲಿ ಒಮ್ಮತವಿರಲಿಲ್ಲ. ಎರಡೂ ದೇಶಗಳಲ್ಲಿಯ ಕಾನೂನುಗಳ ದೃಷ್ಟಿಯಲ್ಲಿ ಗುಲಾಮನು ಕಾನೂನುಬದ್ಧವಾದ ವ್ಯಕ್ತಿಯಾಗಿರಲಿಲ್ಲ. ಆದರೆ ಎರಡೂ ಸ್ಥಳಗಳಲ್ಲಿ ಸಾಮಾಜಿಕ ದೃಷ್ಟಿಯಿಂದ ಮಾನವಜೀವಿ ಎಂಬ ಅರ್ಥದಲ್ಲಿ ವ್ಯಕ್ತಿಯಾಗಿಯೆ ಪರಿಗಣಿತನಾಗಿದ್ದ. ಇದನ್ನೇ ಬೇರೆ ಶಬ್ದಗಳಲ್ಲಿ ಈ ರೀತಿ ಹೇಳಬಹುದು. ಕಾನೂನಿನ ತಡೆಹಿಡಿಯಲಾಗಿದ್ದ ವ್ಯಕ್ತಿತ್ವವನ್ನು ಗುಲಾಮನಿಗೆ ಸಮಾಜವು ದಯಪಾಲಿಸಿತ್ತು. ಇದರಲ್ಲಿಯೇ ಅಸ್ಪೃಶ್ಯತೆ ಮತ್ತು ಗುಲಾಮಗಿರಿಗಳ ಮಧ್ಯದಲ್ಲಿಯ ಅಗಾಧವಾದ ವ್ಯತ್ಯಾಸ ಅಡಗಿರುತ್ತದೆ. ಅಸ್ಪೃಶ್ಯನ ವಿಷಯದಲ್ಲಿ ಗುಲಾಮನಿಗೆ ವಿರುದ್ಧವಾದದ್ದು ಸಂಭವಿಸಿದೆ. ಕಾನೂನು ಅಸ್ಪೃಶ್ಯನಿಗೆ ದಯಪಾಲಿಸಿದ್ದ ವ್ಯಕ್ತಿತ್ವವನ್ನು ಸಮಾಜವು ತಡೆಹಿಡಿದಿತ್ತು. ಗುಲಾಮನ

ವಿಷಯದಲ್ಲಿ ಕಾನೂನು ಅವನನ್ನು ವ್ಯಕ್ತಿಯೆಂದು ಪರಿಗಣಿಸಿರದಿದ್ದರೂ ಸಮಾಜವು ಅವನನ್ನು ಎತ್ತಿ ಹಿಡಿದದ್ದರಿಂದ ಅವನಿಗೆ ಯಾವ ಹಾನಿಯೂ ಆಗಿರಲಿಲ್ಲ. ಅಸ್ಪೃಶ್ಯರ ವಿಷಯದಲ್ಲಿ ಕಾನೂನು ಅಸ್ಪೃಶ್ಯನನ್ನು ವ್ಯಕ್ತಿಯೆಂದು ಪರಿಗಣಿಸಿದ್ದರೂ ಹಿಂದೂ ಸಮಾಜವು ಅದನ್ನು ಮನ್ನಿಸದೆ ನಿಷ್ಕ್ರಿಯೆಗೊಳಿಸಲು ನಿರ್ಧರಿಸಿದ್ದರಿಂದ ಅಂಥ ಕಾನೂನಿನಿಂದ ಅಸ್ಪೃಶ್ಯನಿಗೆ ಏನೂ ಒಳ್ಳೆಯದಾಗಲಿಲ್ಲ. ಕಾನೂನು ದಯಪಾಲಿಸದಿದ್ದರೂ ಗುಲಾಮನಿಗೆ ಆ ದೇಶಗಳಲ್ಲಿ ವ್ಯಕ್ತಿತ್ವವಿತ್ತು. ಭಾರತದಲ್ಲಿ ಕಾನೂನಿನ ಆದೇಶವಿದ್ದರೂ ಅಸ್ಪೃಶ್ಯನಿಗೆ ವ್ಯಕ್ತಿತ್ವವಿರಲಿಲ್ಲ. ಈ ವ್ಯತ್ಯಾಸವು ಮೂಲಭೂತವಾದುದು. ಇದು ಮಾತ್ರ ಮೇಲಿನ ವಿರೋಧಾಭಾಸದ ಉಕ್ತಿಯನ್ನು ವಿವರಿಸಬಲ್ಲದು. ಗುಲಾಮರಿಗೆ ಕಾನೂನಿನ ಬಂಧನವಿದ್ದರೂ ಗುಲಾಮನನ್ನು ಸಮಾಜ ಎತ್ತಿಹಿಡಿದಿತ್ತು. ಅಸ್ಪೃಶ್ಯತೆಗೆ ಕಾನೂನಿಗೆ ನೆರವಿದ್ದರೂ ಸಮಾಜ ಅಸ್ಪೃಶ್ಯನನ್ನು ತುಳಿದಿತ್ತು.

ಗುಲಾಮಗಿರಿಯನ್ನು ತೆಗಳಿದವರು ಒಂದರ್ಥದಲ್ಲಿ ಪ್ರಾರಂಭದಲ್ಲಿ ಅದು ವ್ಯಾಪಾರ, ಕೈಕಸಬು ಅಥವಾ ಶಾಲೆಗಳಲ್ಲಿ ಕಡ್ಡಾಯದ ಉಮೇದುವಾರಿಕೆಯಾಗಿರುತ್ತದೆ ಎಂಬುದೊಂದು ಸಂಗತಿಯನ್ನು ನಿಸ್ಸಂಶಯವಾಗಿ ಮರೆತಿರುತ್ತಾರೆ. ನಷ್ಟ ಸ್ವಾತಂತ್ರ್ಯಕ್ಕೆ ಏನೂ ಪರಿಹಾರವಿರದ ದುಃಖಪೂರಿತ ಗುಲಾಮಗಿರಿಯು ಸ್ವಾಭಾವಿಕವಾಗಿ ತೆಗಳಿಕೆಗೆ ಅರ್ಹವಾದದ್ದು. ಆದರೆ ವ್ಯಕ್ತಿಯನ್ನು ಗುಲಾಮನನ್ನಾಗಿ ಮಾಡಿಕೊಳ್ಳುವುದರ ಜೊತೆಗೆ ಅವನಿಗೆ ಕಸುಬಿನಲ್ಲಿ ತರಬೇತಿ ನೀಡುವ ಸದವಕಾಶವು ನಿಶ್ಚಯವಾಗಿಯೂ ಸ್ವಾತಂತ್ರ್ಯಕ್ಕೆ ಅಂಟಿಕೊಂಡ ಅಮಾನುಷ ಕ್ರೌರ್ಯಕ್ಕಿಂತ ಮೇಲು. ಗುಲಾಮಗಿರಿಯೆಂದರೆ ಅರೆ ಅನಾಗರಿಕತೆಗೆ ನಾಗರಿಕತೆಯನ್ನು ವಿನಿಮಯ ಮಾಡಿಕೊಂಡಂತೆ. ಸಾಕಷ್ಟು ಅನಿಶ್ಚಿತವಾದದ್ದೇ ಆದರೂ ನೈಜವಾದದ್ದು. ನಾಗರಿಕ ಜೀವನದ ಎಲ್ಲ ಸದವಕಾಶಗಳ ಸಂಪೂರ್ಣ ಬಳಕೆಗೆ ಸ್ವಾತಂತ್ರ್ಯವು ನಿಸ್ಸಂಶಯವಾಗಿ ಅತ್ಯಾವಶ್ಯಕವಾದದ್ದು ನಿಜ. ಆದರೆ ಗುಲಾಮಗಿರಿಯು ಉದ್ಯೋಗ ವ್ಯವಹಾರಗಳಲ್ಲಿ ಪೂರ್ವ ತರಬೇತಿ ನೀಡಬಹುದಾದ ಒಂದು ಸದವಕಾಶವಾಗಿತ್ತು. ಇದನ್ನೇ ಪ್ರೊಫೆಸರ್ ಮ್ಯುರೆಸ್, "ಉನ್ನತ ಸಂಸ್ಕೃತಿಯಲ್ಲಿ ಪ್ರವೇಶ" ಎಂದು ಕರೆದಿದ್ದಾನೆ.

ಗುಲಾಮಗಿರಿಯ ಬಗೆಗಿನ ಈ ದೃಷ್ಟಿಕೋನವು ಹೆಚ್ಚು ಸರಿಯಾದದ್ದು ಎಂದು ತೋರುತ್ತದೆ. ಈ ತರಬೇತಿ ಸಂಸ್ಕೃತಿಯಲ್ಲಿ ಈ ಉಪಕ್ರಮ ಇವು ಗುಲಾಮರಿಗೆ ಹೆಚ್ಚು ಪ್ರಯೋಜನಕಾರಿಯಾಗಿದ್ದವು. ಜೊತೆಗೆ ಅಷ್ಟೇ ಖರ್ಚು ವೆಚ್ಚಗಳನ್ನು ಒಡೆಯನು ತನ್ನ ಗುಲಾಮರನ್ನು ತರಬೇತಿಗೊಳಿಸಲು ಮತ್ತು ಅವರನ್ನು ಉಚ್ಚ ಸಂಸ್ಕೃತಿಯಲ್ಲಿ ಪ್ರವೇಶಿಸುವಂತೆ ಮಾಡಲು ಭರಿಸಬೇಕಾಗಿತ್ತು. "ಗುಲಾಮರಾಗುವ ಮೊದಲು ಶಿಕ್ಷಣ ಮತ್ತು ತರಬೇತಿ ಹೊಂದಿದವರ ಸಂಖ್ಯೆ ಅತಿ ಸಣ್ಣದಿತ್ತು. ಇದು ಬೇಡಿಕೆಗೆ ಅನುಗುಣವಾಗಿರಲಿಲ್ಲ. ಇದಕ್ಕೆ ಪರಿಹಾರವೆಂದರೆ, ಗುಲಾಮರಿಗೆ ಚಿಕ್ಕವರಿರುವಾಗಲೇ ಮನೆಗೆಲಸದಲ್ಲಿ ಅಥವಾ ಕೈಕೆಲಸಗಳಲ್ಲಿ ತರಬೇತಿ ನೀಡಿ ಅವರನ್ನು ಕುಶಲ ಕಾರ್ಮಿಕರನ್ನಾಗಿ ಪರಿವರ್ತಿಸುವುದು. ಉದಾಹರಣೆಗೆ, ರೋಮ್ ಸಾಮ್ರಾಜ್ಯದ ಪೂರ್ವದಲ್ಲಿ ಹಿರಿಯ ಕೇಟೊ ಸ್ವಲ್ಪಮಟ್ಟಿಗೆ ಹೀಗೆ ಮಾಡಿದ್ದ. ಗುಲಾಮರಿಗೆ ತರಬೇತಿಯನ್ನು ಒಡೆಯ ಮತ್ತು ಸಿಬ್ಬಂದಿ ಕೂಡಿಯೇ ನೀಡುತ್ತಿದ್ದರು. ದೊಡ್ಡ ಶ್ರೀಮಂತ ಕುಟುಂಬಗಳು ಇದೇ ಉದ್ದೇಶದಿಂದ ತಜ್ಞ ಬೋಧಕರನ್ನು ಹೊಂದಿರುತ್ತಿದ್ದವು. ಈ ತರಬೇತಿಯು, ಕೈಗಾರಿಕೆ, ವ್ಯಾಪಾರ, ಕಲೆಗಳು ಮತ್ತು ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ವ್ಯಾಪಿಸಿತ್ತು."

ಇಲ್ಲಿಯ ಪ್ರಶ್ನೆಯೆಂದರೆ, ಗುಲಾಮನಿಗೆ ಉಚ್ಚ ಸಂಸ್ಕೃತಿಯಲ್ಲಿ ಏಕೆ ಪ್ರವೇಶವನ್ನು ಮಾಡಲಾಗುತ್ತಿತ್ತು? ಹೀಗೆ ಪ್ರವೇಶ ಮಾಡಲಾಗುವಂಥದೇ ಸೌಲಭ್ಯ ಅಸ್ಪೃಶ್ಯನ ಅದೃಷ್ಟದಲ್ಲಿ ಏಕೆ ಬಿದ್ದಿರಲಿಲ್ಲ? ಈ ಪ್ರಶ್ನೆ ಹೆಚ್ಚು ಸೂಕ್ತವಾದದ್ದು. ಈ ಪ್ರಶ್ನೆಯನ್ನು ಎತ್ತುವಲ್ಲಿ ನನ್ನದೊಂದು ಉದ್ದೇಶವಿದೆ. ಈ ಪ್ರಶ್ನೆಯ ಉತ್ತರವು ನಾನು ತಲುಪಲಿರುವ ನನ್ನ ತೀರ್ಮಾನಕ್ಕೆ ಬಲ ನೀಡುತ್ತದೆ. ನನ್ನ ತೀರ್ಮಾನವೆಂದರೆ, ಅಸ್ಪೃಶ್ಯತೆಯು ಗುಲಾಮಗಿರಿಗಿಂತ

ಕೆಟ್ಟದ್ದು, ಏಕೆಂದರೆ ಗುಲಾಮನಿಗೆ ಒಂದು ವ್ಯಕ್ತಿತ್ವವಿತ್ತು. ಅದು ಅಸ್ಪೃಶ್ಯನಿಗೆ ಇರಲಿಲ್ಲ ಎಂಬುದು.

ಒಡೆಯನು ತನ್ನ ಗುಲಾಮನನ್ನು ವಿವಿಧ ಕಸಬುಗಳಲ್ಲಿ ತರಬೇತಿಗೊಳಿಸಲು ಬಹಳಷ್ಟು ತೊಂದರೆ ತೆಗೆದುಕೊಳ್ಳುತ್ತಿದ್ದ. ಹೀಗೆ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿ ಮತ್ತು ಉಚ್ಚ ಸಂಸ್ಕೃತಿಯಲ್ಲಿ ಪ್ರವೇಶಿಸಲು ಅನುಕೂಲವಾಗುವಂಥ ತರಬೇತಿ ನೀಡುವುದರ ಹಿಂದೆ ನಿಸ್ಸಂಶಯವಾಗಿ ಲಾಭದ ಉದ್ದೇಶವಿರುತ್ತಿತ್ತು. ಆಸ್ತಿಯ ಒಂದು ವಸ್ತು ಎಂಬ ದೃಷ್ಟಿಯಿಂದ ಕೌಶಲವುಳ್ಳ ಗುಲಾಮನ ಮೌಲ್ಯ ಕೌಶಲ್ಯರಹಿತ ಗುಲಾಮನಿಗಿಂತ ಹೆಚ್ಚಿಗಿತ್ತು. ಪರಿಣಿತ ಗುಲಾಮನನ್ನು ಮಾರಾಟ ಮಾಡಿದರೆ ಹೆಚ್ಚು ಹಣ ಬರುತ್ತಿತ್ತು. ಬಾಡಿಗೆ ಕೊಟ್ಟರೆ ಹೆಚ್ಚು ಬಾಡಿಗೆ ಬರುತ್ತಿತ್ತು. ಆದ್ದರಿಂದ ಒಡೆಯನಿಗೆ ತನ್ನ ಗುಲಾಮನನ್ನು ತರಬೇತಿಗೊಳಿಸುವುದೆಂದರೆ, ಬಂಡವಾಳ ತೊಡಗಿಸಿದಂತೆಯೆ ಆಗುತ್ತಿತ್ತು. ಗುಲಾಮನ ಉನ್ನತಿಗೆ ಮತ್ತು ಅಸ್ಪೃಶ್ಯನ ಅವನತಿಗೆ ಇದಿಷ್ಟೇ ಕಾರಣ ಸಾಲದು. ರೋಮ್‌ನ ಸಮಾಜದಲ್ಲಿ ಗುಲಾಮನ ಕೈಯಿಂದ ಕಾಯಿಪಲ್ಲೆ, ಹಾಲು, ಬೆಣ್ಣೆ, ನೀರು ಅಥವಾ ಮದ್ಯ ಕೊಳ್ಳಲು ಆಕ್ಷೇಪಣೆಯಿತ್ತು, ನಿಷೇಧವಿತ್ತು ಎಂದು ಊಹಿಸಿರಿ. ಅದೇ ರೀತಿ ರೋಮ್‌ನ ಸಮಾಜದಲ್ಲಿ ಗುಲಾಮನನ್ನು ಮುಟ್ಟಿಸಿಕೊಳ್ಳಲು, ತಮ್ಮ ಮನೆಗಳ ಒಳಗೆ ಪ್ರವೇಶಿಸಲು, ಕಾರಿನಲ್ಲಿ ತಮ್ಮೊಂದಿಗೆ ಪ್ರವಾಸ ಮಾಡಲು ಆಕ್ಷೇಪಣೆ ಇತ್ತು ಎಂದೂ ಭಾವಿಸಿರಿ. ಹೀಗಿದ್ದರೆ, ಒಡೆಯನಿಗೆ ತನ್ನ ಗುಲಾಮನನ್ನು ತರಬೇತಿಗೊಳಿಸಲು ಸಾಧ್ಯವಿತ್ತೇ? ಅವನನ್ನು ಅರೆ ಅನಾಗರಿಕ ಸ್ಥಿತಿಯಿಂದ ಸುಸಂಸ್ಕೃತ ಸ್ಥಿತಿಗೆ ಹರಿಸಲು ಸಾಧ್ಯವಿತ್ತೇ? ಸ್ಪಷ್ಟವಾಗಿ ಸಾಧ್ಯವೇ ಇರಲಿಲ್ಲ. ಗುಲಾಮನು ಅಸ್ಪೃಶ್ಯನಾಗಿರದೇ ಇದ್ದುದರಿಂದಲೇ ಒಡೆಯನು ಅವನನ್ನು ತರಬೇತಿಗೊಳಿಸುವುದು ಉನ್ನತಿಗೊಳಿಸುವುದು ಸಾಧ್ಯವಾಗಿತ್ತು. ಆದ್ದರಿಂದ ನಾವು ತಿರುಗಿ ಮತ್ತೆ ಅದೇ ತೀರ್ಮಾನಕ್ಕೆ ಬರಬೇಕಾಗುತ್ತದೆ. ಗುಲಾಮನ ವ್ಯಕ್ತಿತ್ವವನ್ನು ಮಾನ್ಯ ಮಾಡುವುದರ ಮೂಲಕವೇ ಸಮಾಜವು ಅವನನ್ನು ರಕ್ಷಿಸಿತ್ತು. ಇದಕ್ಕೆ ವಿರುದ್ಧವಾಗಿ ಹಿಂದೂ ಸಮಾಜವು ಅಸ್ಪೃಶ್ಯನ ವ್ಯಕ್ತಿತ್ವವನ್ನು ಮಾನ್ಯ ಮಾಡಿರಲಿಲ್ಲ. ಅಸ್ಪೃಶ್ಯನು ಸಾಮಾಜಿಕ ಸಂಪರ್ಕಕ್ಕೆ, ಎಲ್ಲರೊಂದಿಗಿನ ಒಡನಾಟಕ್ಕೆ ಅಯೋಗ್ಯನೆಂದು ಪರಿಗಣಿಸಿತ್ತು. ಹೀಗೆ ಮಾಡಿದ ಹಿಂದೂ ಸಮಾಜವು ಅಸ್ಪೃಶ್ಯನ ಸರ್ವನಾಶಕ್ಕೆ ಕಾರಣವಾಗಿತ್ತು.

ರೋಮ್‌ನಲ್ಲಿಯ ಗುಲಾಮನು, ಗುಲಾಮನೆಂಬ ಕಾರಣದಿಂದ ಅವನು ಮಾನವನಿಗಿಂತ ಯಾವ ದೃಷ್ಟಿಯಿಂದಲೂ ಕಡಿಮೆಯೆನಿಸಿರಲಿಲ್ಲ. ಅವನು ಬಂಧನದೊಳಗಿದ್ದರೂ ಮಾನವ ಸಂಪರ್ಕಕ್ಕೆ ಯೋಗ್ಯನಾಗಿದ್ದ ಎಂಬ ಮನೋವೃತ್ತಿಯು ರೋಮಿನ ಧರ್ಮಕ್ಕೆ ಅನುಗುಣವಾಗಿಯೇ ಇತ್ತು. ಈ ಬಗ್ಗೆ ಹೀಗೆ ನಿರೀಕ್ಷಿಸಲಾಗಿದೆ.

> "…..ರೋಮಿನ ಧರ್ಮವು ಗುಲಾಮನ ಬಗೆಗೆ ಎಂದಿಗೂ ದ್ವೇಷಭಾವ ಹೊಂದಿರಲಿಲ್ಲ. ಗುಲಾಮನು ಪ್ರವೇಶಿಸದಂತೆ ದೇವಾಲಯದ ಬಾಗಿಲುಗಳನ್ನು ಮುಚ್ಚಿರಲಿಲ್ಲ. ತನ್ನ ಧಾರ್ಮಿಕ ಉತ್ಸವಗಳನ್ನು ಆಚರಿಸಿದಂತೆ ಬಹಿಷ್ಕರಿಸಿರಲಿಲ್ಲ. ಗುಲಾಮರನ್ನು ಯಾವುದೇ ಧಾರ್ಮಿಕ ಸಮಾರಂಭಗಳಿಂದ ಹೊರಗಿಟ್ಟಿದ್ದರೆ, ಅದು ಸ್ವತಂತ್ರ ಪುರುಷರಿಗೂ ಮತ್ತು ಮಹಿಳೆಯರಿಗೂ ಕೂಡ ಅನ್ವಯವಾಗುತ್ತಿತ್ತು. ಅವರನ್ನು ಬೋನೊ ಡಿ, ವೆಸ್ಟಾ ಮತ್ತು ಸೆರಿಸ್ (Bono Dea, Vesta and Ceres) ಕ್ರಿಯಾವಿಧಿಗಳ ಆಚರಣೆ ಮಾಡದಂತೆ ನಿಷೇಧಿಸಲಾಗಿದೆ. ಮಹಿಳೆಯರನ್ನು ಆರಾ ಮಾಕ್ಸಿಮಾದಲ್ಲಿಯ (Ara Maxima) ಹರ್ಕ್ಯುಲಸ್‌ನಿಗೆ ಸಂಬಂಧಿಸಿದ ಮತಾಚರಣೆಗಳಿಂದ ನಿಷೇಧಿಸಲಾಗಿದೆ. ಹಿಂದಿನ ರೋಮ್‌ನ ದೇವತೆಗಳಿಗೆ ಭಕ್ತಿ, ಗೌರವಾದರಗಳು ಲಭ್ಯವಾಗಿದ್ದಾಗ ಗುಲಾಮರಿಗೆ ಕುಟುಂಬದ ಧಾರ್ಮಿಕ ಕ್ರಿಯಾಚರಣೆಗಳಲ್ಲಿ ಅನೌಪಚಾರಿಕವಾದ ಪ್ರವೇಶ ದೊರಕುತ್ತಿತ್ತು. ಮನೆದೇವತೆಗಳ ಕೃಪಾಕಟಾಕ್ಷದ

ರಕ್ಷೆಯ ಅಡಿಯಲ್ಲಿ ತಾನು ಇದ್ದೇನೆಂದು ಗುಲಾಮನು ಭಾವಿಸುತ್ತಿದ್ದ... ದಾಸ್ಯಮುಕ್ತ ಮಹಿಳೆಯರು ವೆಸ್ಟಾದ (Vesta) ಮಹಿಳಾ ಪಾದ್ರಿಗಳಾಗಲು ಅರ್ಹರಾಗಿದ್ದಾರೆಂದು ಅಗಸ್ಟಸ್ ಆಜ್ಞೆ ಮಾಡಿದ್ದ. ಗುಲಾಮನ ಸಮಾಧಿಯನ್ನು ಸ್ವತಂತ್ರ ವ್ಯಕ್ತಿಯ ಸಮಾಧಿಯಷ್ಟೇ ಪಾವಿತ್ರ್ಯದಿಂದ ಕಾಣಬೇಕೆಂಬುದು ಕಾನೂನಿನ ಬಿಗಿಯಾದ ನಿಬಂಧನೆ ಇತ್ತು. ಗುಲಾಮನ ಆತ್ಮಕ್ಕೆ ರೋಮ್‌ನ ಪುರಾಣವು ವಿಶಿಷ್ಟ ಸ್ವರ್ಗವನ್ನಾಗಲಿ, ಪ್ರತ್ಯೇಕ ನರಕವನ್ನಾಗಲೀ ಒದಗಿಸಿರಲಿಲ್ಲ. ಗುಲಾಮನ ಶರೀರ ಮತ್ತು ಆತ್ಮಗಳು ಒಡೆಯನ ಆತ್ಮ ಮತ್ತು ಶರೀರಗಳಂತೆಯೆ ಒಂದೇ ಮೂಲವಸ್ತುವಿನಿಂದ ರಚಿತವಾಗಿವೆಯೆಂದು ಜುವಿನೆಲ್ (Juvenal) ಕೂಡ ಒಪ್ಪುತ್ತಾನೆ..."

## ಗುಲಾಮ ಮತ್ತು ಕಾನೂನು

ಗುಲಾಮನ ರೂಪಕ್ಕೆ ಯಾವ ಕಳಂಕವನ್ನು ಅಂಟಿಸಲಾಗಿರಲಿಲ್ಲ. ರೋಮ್‌ನಲ್ಲಿ ಸಾಮಾಜಿಕ ಅಥವಾ ಧಾರ್ಮಿಕವಾದ ಯಾವುದೇ ಕಂದಕವು ಗುಲಾಮನನ್ನು ಸಮಾಜದಲ್ಲಿಯ ಇತರ ವ್ಯಕ್ತಿಗಳಿಂದ ಪ್ರತ್ಯೇಕಿಸಿರಲಿಲ್ಲ. ಹೊರನೋಟದಲ್ಲಿ ಗುಲಾಮನಿಗೂ ಮತ್ತಿತರ ವ್ಯಕ್ತಿಗಳಿಗೂ ಯಾವುದೇ ವ್ಯತ್ಯಾಸ ಕಾಣುತ್ತಿರಲಿಲ್ಲ. ಬಣ್ಣವಾಗಲೀ, ಉಡುಗೆ ತೊಡುಗೆಗಳಾಗಲೀ ಅವನು ಗುಲಾಮನೆಂದು ಸಾರುತ್ತಿರಲಿಲ್ಲ. ಸ್ವತಂತ್ರ ವ್ಯಕ್ತಿಗಳು ನೋಡುತ್ತಿದ್ದಂಥ ಆಟಗಳನ್ನೇ ಅವನೂ ನೋಡುತ್ತಿದ್ದ. ನಗರಸಭೆಯ ಜನಜೀವನದಲ್ಲಿ ಬೆರೆಯುತ್ತಿದ್ದ. ರಾಜ್ಯ ಸೇವೆಗಳಲ್ಲಿ ನೌಕರಿ ಮಾಡುತ್ತಿದ್ದ. ಸ್ವತಂತ್ರ ವ್ಯಕ್ತಿಗಳಂತೆಯೆ ವ್ಯಾಪಾರ ವಾಣಿಜ್ಯಗಳಲ್ಲಿ ತೊಡಗಿರುತ್ತಿದ್ದ. ಕಾನೂನಿನಿಂದ ದತ್ತವಾದ ಹಕ್ಕುಗಳ ನೈಜ ಚಿನ್ಹೆಗಳಿಗಿಂತಲೂ ಬಾಹ್ಯ ವಸ್ತುಗಳಿಂದ ಪ್ರಕಟಗೊಳ್ಳುವ ತೋರಿಕೆಯ ಸಮಾನತೆ ವ್ಯಕ್ತಿಗೆ ಗಣನೀಯವಾದದ್ದು. ಗುಲಾಮ ಮತ್ತು ಸ್ವತಂತ್ರ ವ್ಯಕ್ತಿ ಇವರ ಮಧ್ಯದಲ್ಲಿ ಇಲ್ಲವೇನೊ ಅನ್ನುವಷ್ಟು ಅತ್ಯಲ್ಪವಾದ ಸಾಮಾಜಿಕ ಅಡೆತಡೆಗಳಿದ್ದವು. ಇವರೀರ್ವರಲ್ಲಿ ವಿವಾಹವು ಸರ್ವೇಸಾಮಾನ್ಯವಾಗಿತ್ತು. ಸಮಾಜದಲ್ಲಿ ಗುಲಾಮನ ಸ್ಥಾನಮಾನವು ಕಳಂಕಿತವಾಗಿರಲಿಲ್ಲ. ಅವನು ಅಕಳಂಕಿತನಾಗಿದ್ದ, ಸ್ಪೃಶ್ಯನಾಗಿದ್ದ ಮತ್ತು ಗೌರವಾನ್ವಿತನಾಗಿದ್ದ.

ಅಸ್ಪೃಶ್ಯತೆಯು ಗುಲಾಮರಿಗಿಂತ ಅತ್ಯಂತ ಕೆಟ್ಟದು ಎಂಬುದನ್ನು ತೋರಿಸಲು ಸಾಕಷ್ಟು ಪ್ರಮಾಣೀಕರಿಸಲಾಯಿತು. ಮಧ್ಯಕಾಲೀನ ಯಹೂದಿಗಳ ದಾಸ್ಯವು ಇದ್ದುದರಲ್ಲಿಯೆ ಸ್ವಲ್ಪಮಟ್ಟಿಗೆ ಅಸ್ಪೃಶ್ಯರ ಸ್ಥಿತಿಗತಿಯನ್ನು ಹೋಲುತ್ತದೆ. ಆದರೆ ಇದರ ಬಗ್ಗೆ ಈ ಕೆಳಗಿನ ಕೆಲವು ವಿಚಾರಗಳನ್ನು ಹೇಳಬಹುದು. ಮೊದಲನೆಯದಾಗಿ, ಯಹೂದಿಗಳ ವಿರುದ್ಧ ಮಾಡಲಾದ ಭೇದಭಾವದ ಆಧಾರವು ಸಂಪೂರ್ಣವಾಗಿ ತಿಳಿಯುವಂಥಾದ್ದು. ಆದರೆ ನ್ಯಾಯಯುತವಾದದ್ದಲ್ಲ. ಇದು ಧರ್ಮದ ವಿಷಯದಲ್ಲಿದ್ದ ಯಹೂದಿಗಳ ಹಠಮಾರಿತನವನ್ನು ಆಧರಿಸಿತ್ತು. ಈ ಹಠಮಾರಿತನವೇ ಆ ಎಲ್ಲ ಶಿಕ್ಷೆ ದಂಡನೆಗಳಿಗೆ ಎಡೆಮಾಡಿಕೊಟ್ಟಿತ್ತು. ತಮ್ಮ ಹಠಮಾರಿತನವನ್ನು ಬಿಟ್ಟ ಕ್ಷಣದಿಂದಲೇ ಅವರು ಸಂಕಷ್ಟಗಳಿಂದ ಮುಕ್ತರಾದರು. ಅಸ್ಪೃಶ್ಯರ ವಿಷಯ ಹೀಗಿಲ್ಲ, ಬೇರೆಯೆ ಆಗಿದೆ. ಅವರ ಸಂಕಷ್ಟಗಳು ಅವರು ಪ್ರತಿಭಟನಕಾರರು ಅಥವಾ ಹಿಂದೂ ಧರ್ಮದ ತತ್ವಗಳನ್ನು, ನಿಯಮಪಾಲನೆಯನ್ನು ಒಪ್ಪದಿರುವವರು ಎಂಬ ಸಂಗತಿಗಳನ್ನು ಆಧರಿಸಿದ ಕಾರಣಗಳಿಂದಲ್ಲ.

ಎರಡನೆಯದಾಗಿ, ಯಹೂದಿಗಳು ತಮ್ಮದಲ್ಲದ ಧರ್ಮದಲ್ಲಿ ಸಂಪೂರ್ಣವಾಗಿ ಸೇರ್ಪಡೆಯಾಗಲು ಸಮ್ಮತಿಸಿದರು ಮತ್ತು ಅದರಲ್ಲಿ ಲೀನವಾಗಿ ಹೋದರು.

ಇದು ವಿಚಿತ್ರವಾಗಿ ಕಂಡರೂ ಇದನ್ನು ಸಂಗತಿಗಳ ಆಧಾರದಿಂದ ಸಿದ್ಧಮಾಡಿ ತೋರಿಸಬಹುದಾಗಿದೆ. ಈ ಸಂಬಂಧದಲ್ಲಿ, ಚರಿತ್ರೆಯಲ್ಲಿ ದಾಖಲುಗೊಂಡ ಎರಡು ಉದಾಹರಣೆಗಳನ್ನು ಕೊಡಬಹುದು. ಇದು

ಯಹೂದಿಗಳ ಮನೋವೃತ್ತಿಯನ್ನು ನಿರೂಪಿಸುತ್ತದೆ. ಮೊದಲನೆಯ ಉದಾಹರಣೆಯು ನೆಪೋಲಿಯನ್ನನ ಆಳ್ವಿಕೆಗೆ ಸಂಬಂಧಿಸಿರುತ್ತದೆ. ಫ್ರಾನ್ಸಿನ ರಾಷ್ಟ್ರೀಯ ಸಭೆಯು, ಮಾನವ ಹಕ್ಕುಗಳ ಘೋಷಣೆಯನ್ನು ಯಹೂದಿಗಳಿಗೂ ಅನ್ವಯಿಸಲು ಒಪ್ಪಿದಾಗ, ಗಿಲ್ಡ್ ವ್ಯಾಪಾರಸ್ಥರು ಮತ್ತು ಅಲಾಸ್ಕಾದ ಧಾರ್ಮಿಕ ಪ್ರಗತಿ–ವಿರೋಧಿಗಳು, ಯಹೂದಿಗಳ ಪ್ರಶ್ನೆಯನ್ನು ಮರಳಿ ಎತ್ತಿದರು. ನೆಪೋಲಿಯನ್ನನು ಈ ಪ್ರಶ್ನೆಯನ್ನು ಪರಿಹರಿಸಿಕೊಳ್ಳಲು ಯಹೂದಿಗಳ ಪರಿಗಣನೆಗೇ ಬಿಟ್ಟುಕೊಡಲು ನಿರ್ಧರಿಸಿದನು.

"ಯಹೂದ್ಯ ಮತದ ತತ್ವಗಳು ಮತ್ತು ಪೌರತ್ವ ನಿಯಮಗಳು ಎಷ್ಟರಮಟ್ಟಿಗೆ ಸುಸಂಗತವಾಗಿವೆ ಎಂಬುದನ್ನು ಕಂಡುಹಿಡಿಯಲು ನೆಪೋಲಿಯನ್ನನು ಫ್ರಾನ್ಸ್, ಜರ್ಮನಿ ಮತ್ತು ಇಟಲಿಯ ಯಹೂದಿ ಪ್ರಮುಖರ ಸಭೆ ಕರೆದನು. ಅವನು ಯಹೂದಿಗಳನ್ನು ಪ್ರಧಾನ ಜನಸಮುದಾಯದೊಂದಿಗೆ ಬೆಸೆಯುವ ಬಲವಾದ ಆಶೆಯುಳ್ಳವನಾಗಿದ್ದನು. ಯಹೂದಿ ದೇಶಾಭಿಮಾನದ ಸಾಧ್ಯತೆ, ಯಹೂದಿ ಮತ್ತು ಯಹೂದ್ಯೇತರರ ಮಧ್ಯದಲ್ಲಿಯ ಅಂತರವಿವಾಹದ ಅಂಗೀಕಾರಾರ್ಹತೆ ಮತ್ತು ದುಬಾರಿ ಬಡ್ಡಿ ವ್ಯವಹಾರದ ಕಾನೂನು ಬದ್ಧತೆ ಮುಂತಾದ ಪ್ರಮುಖ ವಿಷಯಗಳನ್ನೊಳಗೊಂಡ ಒಟ್ಟು ಹನ್ನೆರಡು ಪ್ರಶ್ನೆಗಳಿಗೆ ಪರಿಹಾರಗಳನ್ನು ಸೂಚಿಸಲು ೧೧೧ ಪ್ರತಿನಿಧಿಗಳನ್ನೊಳಗೊಂಡ ಸಭೆಯು ಪ್ಯಾರಿಸಿನ ನಗರಸಭಾ ಭವನದಲ್ಲಿ ೧೮೦೬, ಜುಲೈ ೨೬ರಂದು ಸೇರಿತು. ಸಭೆಯ ನಿರ್ಣಯಗಳಿಂದ ನೆಪೋಲಿಯನ್ನನು ಬಹಳಷ್ಟು ಸಂತೋಷಗೊಂಡ. ಅವನು ಪುರಾತನ ಜೆರುಸಲೆಮ್ಮಿನಲ್ಲಿಯ ಸಭೆಯ ಮಾದರಿಯಲ್ಲಿ ಸಭೆಯನ್ನು ಕರೆಯುವ ಆಜ್ಞೆ ಮಾಡಿದನು. ಅದು ಕೈಗೊಂಡ ನಿರ್ಣಯಗಳಿಗೆ ಶಾಸನಸಭೆಯಲ್ಲಿ ಪಾಸಾದ ವಿಧಿಗಳ ಸ್ಥಾನಮಾನ ನೀಡುವ ನಿರ್ಧಾರ ಕೈಗೊಂಡನು. ಫ್ರಾನ್ಸ್, ಜರ್ಮನಿ, ಹಾಲೆಂಡ್ ಮತ್ತು ಇಟಲಿಗಳ ೭೧ ಸದಸ್ಯರನ್ನೊಳಗೊಂಡ ಪುರಾತನ ಜೆರುಸಲೆಮ್ಮಿನಲ್ಲಿದ್ದ ಸಭೆಯ ಮಾದರಿಯಲ್ಲಿ ರಚಿಸಲಾಗಿದ್ದ ಸಭೆಯು ಸ್ಟ್ರಾಸ್‌ಬರ್ಗ್‌ದ ರಬ್ಬ ಸೈನೊಝುಮ್ ಅವರ ಅಧ್ಯಕ್ಷತೆಯಲ್ಲಿ, ೧೮೦೭ನೇ ಇಸವಿ, ಫೆಬ್ರವರಿ ತಿಂಗಳು ೯ನೆಯ ದಿನಾಂಕದಂದು ಸೇರಿತು. ಒಂದು ತೆರನಾದ ಚಾರ್ಟರ್ (ಸನ್ನದು) ಅಂಗೀಕರಿಸಿತು. ಆ ಚಾರ್ಟರ್ ಮೂಲಕ ಯಹೂದಿಗಳಿಗೆ ಫ್ರಾನ್ಸ್ ದೇಶವನ್ನು ತಮ್ಮ ಪಿತೃಭೂಮಿಯೆಂದು ಪರಿಗಣಿಸುವಂತೆಯೂ, ಅದರ ಪ್ರಜೆಗಳನ್ನು ಸಹೋದರ ಭಾವದಿಂದ ಕಾಣಬೇಕೆಂದೂ, ಫ್ರೆಂಚ್ ಭಾಷೆಯಲ್ಲಿ ಮಾತುಕತೆ ನಡೆಸಬೇಕೆಂದೂ ಬುದ್ಧಿವಾದ ಹೇಳಿತು ಮತ್ತು ಕ್ರಿಶ್ಚಿಯನ್ನರು ಮತ್ತು ಯಹೂದಿಗಳ ಮಧ್ಯದಲ್ಲಿ ನಡೆಯಬಹುದಾದ ವಿವಾಹಗಳನ್ನು ಸಹಾನುಭೂತಿಯಿಂದ ಕಾಣಬೇಕೆಂದೂ, ಅವುಗಳಿಗೆ ಯಹೂದ್ಯರ ಆರಾಧನಾ ಮಂದಿರದ ಮುನ್ನಡೆ ಅಗತ್ಯವಿಲ್ಲವೆಂದೂ ಸಾರಿತು." ಯಹೂದಿಗಳು ಮತ್ತು ಯಹೂದ್ಯೇತರರ ಮಧ್ಯದಲ್ಲಿನ ವಿವಾಹಕ್ಕೆ ಮುನ್ನಡೆ ನೀಡಲು ಯಹೂದಿಗಳು ನಿರಾಕರಿಸಿದರೆಂಬುದನ್ನು ಇಲ್ಲಿ ಗಮನಿಸಬೇಕು. ಅವುಗಳನ್ನು ಸಹನೆಯಿಂದ ಕಾಣುವುದಾಗಿ ಮಾತ್ರ ಭರವಸೆ ನೀಡಿದರು. ಎರಡನೆಯ ಉದಾಹರಣೆಯು, ೧೯೭೬ರಲ್ಲಿ ಬಲೌವಿಯನ್ ಗಣರಾಜ್ಯವು ಸ್ಥಾಪಿತವಾಗುವಾಗ ಸಂಭವಿಸಿದ ಘಟನೆಗೆ ಸಂಬಂಧಿಸಿದೆ. ಯಹೂದಿ ಸಮುದಾಯದ ಹೆಚ್ಚು ಬಲಶಾಲಿಗಳಾದ ಕೆಲವು ಸದಸ್ಯರು, ಯಹೂದಿ ಕೆಲಸಗಾರರು ಅನುಭವಿಸುತ್ತಿದ್ದ ಕಷ್ಟಕಾರ್ಪಣ್ಯಗಳನ್ನು ನಿವಾರಿಸಲು ಸರಕಾರದ ಮೇಲೆ ಒತ್ತಾಯ ತಂದರು. "ಆದರೆ ಪ್ರಗತಿಶೀಲ ಯಹೂದಿಗಳ ಸಂಪೂರ್ಣ ನಾಗರಿಕ ಹಕ್ಕುಗಳ ಬೇಡಿಕೆಯನ್ನು ಮೊದಲಿಗೆ, ಆಶ್ಚರ್ಯವೆನ್ನುವಂತೆ ಆ್ಯಮ್‌ಸ್ಟರ್‌ಡಾಮ್‌ನ ಯಹೂದಿ ಸದಸ್ಯರು ವಿರೋಧಿಸಿದರು. ಏಕೆಂದರೆ, ಪೌರಸಮಾನತೆಯು ಯಹೂದ್ಯ ಮತದ ಸಂರಕ್ಷಣೆಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ ಎಂದು ಅವರು ಹೆದರಿದ್ದರು. ಹೀಗಾಗಿ ತಮ್ಮ ಧಾರ್ಮಿಕ ನಂಬುಗೆಗಳ ಅಣತಿಯ ಪರಿಪಾಲನೆಗಾಗಿ ತಾವು ಸಹಧರ್ಮೀಯರೆಲ್ಲ ನಾಗರಿಕ ಹಕ್ಕುಗಳ ಕೊಡುಗೆಯನ್ನು ತ್ಯಜಿಸುವುದಾಗಿ ದೃಢವಾಗಿ ಸಾರಿದರು. ಯಹೂದಿಗಳು ಸಮಗ್ರ

ಸಮುದಾಯದ ಅಂಗವಾಗದೆ, ಪ್ರತ್ಯೇಕವಾಗಿ ಅಪರಿಚಿತರಂತೆ ಬಾಳಲು ಸಮ್ಮತಿಸಿದ್ದನ್ನು ಇದು ಎತ್ತಿ ತೋರಿಸುತ್ತದೆ. ದೇವರಿಂದ ಆಯ್ಕೆಗೊಂಡ "ಶಾಶ್ವತ ವ್ಯಕ್ತಿಗಳಂತೆ" ಅವರನ್ನು ಪ್ರತ್ಯೇಕಿಸಲಾಗಿದೆ. ಮತ್ತು ದಂಡನೆಗೆ ಒಳಪಡಿಸಲಾಗಿದೆ. ಆದರೆ ಅಸ್ಪೃಶ್ಯರ ವಿಷಯವು ಇದರಿಂದ ಭಿನ್ನವಾಗಿದೆ. ಅವರು ಕೂಡ ಒಂದರ್ಥದಲ್ಲಿ ಉಳಿದವರಿಗಿಂತ ಭಿನ್ನರಾದ "ಶಾಶ್ವತ ವ್ಯಕ್ತಿಗಳೇ". ಆದರೆ ಈ ಪ್ರತ್ಯೇಕತೆ ಯಹೂದಿಗಳಂತೆ ಬಯಸಿ ಉಂಡದ್ದಲ್ಲ. ಅಸ್ಪೃಶ್ಯರು ಉಳಿದವರೊಂದಿಗೆ ಬೆರೆಯುವುದಿಲ್ಲವೆಂಬ ಅಪರಾಧದ ಕಾರಣಕ್ಕಾಗಿ ಅವರನ್ನು ದಂಡಿಸಲಾಗಿಲ್ಲ. ಅವರು ಬೆರೆಯಬೇಕೆಂಬ ಉತ್ಕಟ ಇಚ್ಛೆಯುಳ್ಳವರಾಗಿದ್ದಾರೆಂಬುದಕ್ಕಾಗಿ ಈ ಶಿಕ್ಷೆ, ಈ ಸಂಕಟ.

ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕೆಟ್ಟದ್ದು, ಏಕೆಂದರೆ, ಗುಲಾಮನಿಗೆ ಸಮಾಜದಲ್ಲಿ ವ್ಯಕ್ತಿತ್ವವೆಂಬುದಿದೆ, ಆದರೆ ಅಸ್ಪೃಶ್ಯನಿಗೆ ವ್ಯಕ್ತಿತ್ವವೇ ಇಲ್ಲವೆಂಬುದನ್ನು ಈಗಾಗಲೇ ಸಾಕಷ್ಟು ವಿಶದವಾಗಿ ಸ್ಪಷ್ಟಪಡಿಸಲಾಗಿದೆ. ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕೆಟ್ಟದು ಎನ್ನುವುದಕ್ಕೆ ಇದೊಂದೇ ಕಾರಣವಲ್ಲ. ಬೇರೆ ಕೆಲವು ಕಾರಣಗಳೂ ಇವೆ. ಆದರೆ ಇವು ಎದ್ದು ಕಾಣುವಂಥವಲ್ಲ, ಆದರೂ ನಿಜವೆಂಬುದು ಸುಳ್ಳಲ್ಲ.

ಇವುಗಳಲ್ಲಿ ಕಡಿಮೆ ಎದ್ದು ಕಾಣುವಂಥದ್ದನ್ನು ಮೊದಲು ಇಲ್ಲಿ ಪ್ರಸ್ತಾಪಿಸಬಹುದು. ಗುಲಾಮಗಿರಿಯು ಗುಲಾಮನ ಸ್ವಾತಂತ್ರ್ಯಹರಣ ಮಾಡಿದರೂ ಅವನ ಜೀವನ ಮತ್ತು ದೇಹಗಳ ರಕ್ಷಣೆಯ ಭಾರವನ್ನು ಅವನ ಮೇಲೆ ಹಾಕಿದೆ. ಗುಲಾಮನು ತನ್ನ ಊಟ, ಬಟ್ಟೆ ಮತ್ತು ವಸತಿಗಳಂಥ ಮೂಲಭೂತ ಅವಶ್ಯಕತೆಗಳಿಂದ ಮುಕ್ತನಾಗಿದ್ದಾನೆ. ಇವೆಲ್ಲವನ್ನು ಅವನ ಒಡೆಯನು ಅವನಿಗೆ ಕಡ್ಡಾಯವಾಗಿ ಒದಗಿಸಲೇಬೇಕು. ಒಂದು ದೃಷ್ಟಿಯಿಂದ ಇದು ಒಡೆಯನಿಗೆ ಭಾರವಾದ ವಿಷಯವೇ ಅಲ್ಲ. ಏಕೆಂದರೆ, ಗುಲಾಮನು ತನ್ನಿಂದ ಒಡೆಯನಿಗೆ ಆಗುವ ಖರ್ಚುವೆಚ್ಚಗಳಿಗಿಂತಲೂ ಹೆಚ್ಚಿಗೆ ದುಡಿದು ಗಳಿಸಿಕೊಡುತ್ತಾನೆ. ಆದರೆ ಎಲ್ಲ ಸ್ವತಂತ್ರ ವ್ಯಕ್ತಿಗಳಿಗೆ ಯಾವಾಗಲೂ ಊಟ ಮತ್ತು ವಸತಿಯ ಖರ್ಚು ವೆಚ್ಚಗಳನ್ನು ಭರಿಸುವುದು ವಿಶೇಷವಾಗಿ ದುಬಾರಿಯ ಕಾಲದಲ್ಲಿ ಅಸಾಧ್ಯವೆಂಬುದು ಅವರಿಗೆ ತಿಳಿದ ವಿಷಯವೇ ಆಗಿರುತ್ತದೆ. ಕೆಲಸ ಮಾಡುವ ಇಚ್ಛೆ ಇದ್ದರೂ ಎಲ್ಲರಿಗೂ ಉದ್ಯೋಗ ದೊರಕುವುದಿಲ್ಲ. ಉದ್ಯೋಗವಿಲ್ಲದಿದ್ದರೆ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ. ವ್ಯಾಪಾರದ ಏರಿಳಿತಗಳು, ಉತ್ಕರ್ಷ–ಮುಗ್ಗಟ್ಟುಗಳು, ತೇಜಿ–ಮಂದಿಗಳು, ಸ್ವತಂತ್ರ ವ್ಯಕ್ತಿಗಳ ದುಡಿಮೆಯ ಮೇಲೆ ಪರಿಣಾಮ ಬೀರಿಯೇ ಬೀರುತ್ತವೆ. ಆದರೆ ಇವು ಗುಲಾಮನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಇವೆಲ್ಲವುಗಳಿಂದ ಗುಲಾಮನು ಮುಕ್ತನಾಗಿರುತ್ತಾನೆ. ಉತ್ಕರ್ಷವೇ ಇರಲಿ, ಮುಗ್ಗಟ್ಟೇ ಇರಲಿ, ಮೊದಲಿನಷ್ಟೇ ಆಹಾರವನ್ನು ಪಡೆದೇ ಪಡೆಯುತ್ತಾನೆ. ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕೆಟ್ಟದ್ದು ಏಕೆಂದರೆ, ಗುಲಾಮನಿಗಿದ್ದಂಥ ಉಪಜೀವನದ ಯಾವ ರಕ್ಷಣೆಯೂ ಅಸ್ಪೃಶ್ಯನಿಗೆ ಇರುವುದಿಲ್ಲ. ಅಸ್ಪೃಶ್ಯನ ಊಟ, ಬಟ್ಟೆ ಮತ್ತು ವಸತಿಗೆ ಯಾರೂ ಹೊಣೆಗಾರರಾಗಿರುವುದಿಲ್ಲ. ಈ ದೃಷ್ಟಿಕೋನದಿಂದ ಇಬ್ಬರನ್ನೂ ಹೋಲಿಸಿ ನೋಡಿದಾಗ ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕೆಟ್ಟದ್ದು ಮಾತ್ರವಲ್ಲ, ಕ್ರೌರ್ಯದಿಂದಲೂ ಕೂಡಿರುವಂಥದು. ಗುಲಾಮಗಿರಿಯಲ್ಲಿ ಒಡೆಯನು ತನ್ನ ಗುಲಾಮನಿಗೆ ಕೆಲಸವನ್ನು ಒದಗಿಸುವ ಬಾಧ್ಯತೆ ಹೊಂದಿರುತ್ತಾನೆ. ಮತ್ತು ಕಾರ್ಮಿಕ ವ್ಯವಸ್ಥೆಯಲ್ಲಿ ಕಾರ್ಮಿಕರು ಉಪಜೀವನ ಮಾರ್ಗಕ್ಕಾಗಿ ಸ್ಪರ್ಧಿಸ ಬೇಕಾಗುತ್ತದೆ. ಕೆಲಸಕ್ಕಾಗಿ ಇಂಥ ಕಚ್ಚಾಟವಿದ್ದಾಗ ಬಡಹೀನ ಅಸ್ಪೃಶ್ಯನ ಪಾಲಿಗೆ ಏನು ತಾನೆ ದಕ್ಕೀತು? ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ನೌಕರಿ ಸ್ಪರ್ಧೆಯಲ್ಲಿ, ಅವನಿಗಿರುವ ಸಾಮಾಜಿಕ ಕಳಂಕದ ಕಾರಣದಿಂದ ಅವನು ನೌಕರಿ ಪಡೆಯುವಲ್ಲಿ ಕೊನೆಯವ ಮತ್ತು ನೌಕರಿ ಕೊಡದೇ ಓಡಿಸಿಬಿಡುವಲ್ಲಿ ಮೊದಲನೆಯವ ನಾಗಿರುತ್ತಾನೆ. ಗುಲಾಮಗಿರಿಗೆ ಹೋಲಿಸಿದರೆ ಅಸ್ಪೃಶ್ಯತೆಯು ಕ್ರೌರ್ಯದಿಂದ ಕೂಡಿದೆ. ಏಕೆಂದರೆ, ಅಸ್ಪೃಶ್ಯರಿಗೆ

ಉಪಜೀವನ ಮಾರ್ಗದ ಸೌಲಭ್ಯ ನೀಡದೆಯೇ ಜೀವನ ಸಾಗಿಸುವ ಹೊಣೆ ಹೊರಿಸುತ್ತದೆ. ಮತ್ತೊಂದು ದೃಷ್ಟಿಯಿಂದಲೂ ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಕೆಟ್ಟದು. ಗುಲಾಮನು ಆಸ್ತಿಯಾಗಿದ್ದ. ಹೀಗಾಗಿ ಒಡೆಯನಿಗೆ ಸ್ವತಂತ್ರ ವ್ಯಕ್ತಿಗಿಂತ ಹೆಚ್ಚು ಪ್ರಯೋಜನಕಾರಿಯಾಗಿದ್ದ. ಮೌಲ್ಯವುಳ್ಳವನಾದ್ದರಿಂದ ಅವನ ಒಡೆಯನು ಗುಲಾಮನ ಆರೋಗ್ಯ ಮತ್ತು ಕ್ಷೇಮದ ಬಗ್ಗೆ ಕಾಳಜಿ ವಹಿಸುತ್ತಿದ್ದ. ಇದರಲ್ಲಿ ಒಡೆಯನ ಹಿತಾಸಕ್ತಿ ಅಡಕವಾಗಿತ್ತು. ರೋಮ್‌ನಲ್ಲಿ ಗುಲಾಮರನ್ನು ಎಂದಿಗೂ ಜವುಳು ನೆಲದಲ್ಲಿ ಮತ್ತು ಮಲೇರಿಯಾ ಬಾಧೆಗೆ ಒಳಗಾಗಬಹುದಾದ ಪ್ರದೇಶದಲ್ಲಿ ಕೆಲಸ ಮಾಡಲು ನೇಮಿಸಿಕೊಳ್ಳುತ್ತಿರಲಿಲ್ಲ. ಅಂಥ ಭೂಮಿಗಳಲ್ಲಿ ನೌಕರಿ ಮಾಡಲು ಸ್ವತಂತ್ರ ವ್ಯಕ್ತಿಗಳನ್ನು ಮಾತ್ರ ನೇಮಿಸಿಕೊಳ್ಳುತ್ತಿದ್ದರು. ತಗ್ಗು ಭೂಮಿ ಮತ್ತು ಮಲೇರಿಯಾ ಪೀಡಿತ ಪ್ರದೇಶದಲ್ಲಿ ಕೆಲಸ ಮಾಡಲು ಎಂದಿಗೂ ಗುಲಾಮರನ್ನು ನೇಮಿಸಿಕೊಳ್ಳಬೇಡಿರೆಂದು ಕೇಟೊ ರೋಮ್‌ನ ಭೂ ಒಡೆಯರಿಗೆ ಉಪದೇಶ ನೀಡುತ್ತಿದ್ದ. ಇದು ವಿಚಿತ್ರವಾಗಿ ಕಾಣುತ್ತದೆ. ಆದರೆ ಸ್ವಲ್ಪ ಒಳಹೊಕ್ಕು ನೋಡಿದರೆ ಇದು ಸಹಜವೆಂದು ತೋರುತ್ತದೆ. ಗುಲಾಮನು ಬೆಲೆಯುಳ್ಳ ಆಸ್ತಿ. ಹೀಗಾಗಿ ತನ್ನ ಹಿತಾಸಕ್ತಿಗಳನ್ನು ಚೆನ್ನಾಗಿ ಅರಿತ ವಿವೇಕಿಯಾದ ಒಡೆಯನು ಗುಲಾಮನನ್ನು ಮಲೇರಿಯಾ ಹಾವಳಿಗೆ ಗುರಿಮಾಡಲೇಕೂಡದು. ಗುಲಾಮನಷ್ಟೇ ಕಾಳಜಿಯನ್ನು ಸ್ವತಂತ್ರ ವ್ಯಕ್ತಿಗೆ ತೆಗೆದುಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ಅವನು ಯಜಮಾನನ ಬೆಲೆಯುಳ್ಳ ಆಸ್ತಿಯಲ್ಲ. ಇಂಥ ಪರಿಗಣನೆಯು ಗುಲಾಮನಿಗೆ ಹೆಚ್ಚಿನ ಪ್ರಯೋಜನವಾಗಿ ಪರಿಣಮಿಸಿತು.

ಯಾರಿಗೂ ಮಾಡದಷ್ಟು ಕಾಳಜಿಯನ್ನು ಗುಲಾಮನಿಗೆ ನೀಡುತ್ತಿದ್ದರು. ಇಂಥ ಆಲೋಚನೆಯು ಅಸ್ಪೃಶ್ಯನ ವಿಷಯದಲ್ಲಿ ಎಳ್ಳಷ್ಟೂ ಇರಲಿಲ್ಲ. ಅವನನ್ನು ಪೂರ್ತಿಯಾಗಿ ನಿರ್ಲಕ್ಷಿಸಲಾಗಿತ್ತು ಮತ್ತು ಹೊಟ್ಟೆ ಬಟ್ಟೆಗಳಿಗಿಲ್ಲದೆ ಕಂಗಾಲಾಗಿ ಸಾಯುವಂತೆ ಮಾಡಲಾಗಿತ್ತು.

ಅಸ್ಪೃಶ್ಯತೆ ಮತ್ತು ಗುಲಾಮಗಿರಿಗಳ ಮಧ್ಯದಲ್ಲಿರುವ, ಎರಡನೆಯ ಅಥವಾ ಬಹುಶಃ ಮೂರನೆಯ ವ್ಯತ್ಯಾಸವೆಂದರೆ ಗುಲಾಮಗಿರಿಯು ಎಂದಿಗೂ ಬಂಧನಕಾರಿಯಾಗಿರಲಿಲ್ಲ. ಆದರೆ ಅಸ್ಪೃಶ್ಯತೆಯು ಬಂಧನಕಾರಿಯಾಗಿರುತ್ತದೆ. ಒಬ್ಬ ವ್ಯಕ್ತಿಗೆ ಮತ್ತೊಬ್ಬನನ್ನು ಗುಲಾಮನನ್ನಾಗಿ ಮಾಡಿಕೊಳ್ಳಲು 'ಮಾನ್ಯತೆ ನೀಡಲಾಗಿದೆ'. ಆದರೆ ಅವನಿಗೆ ಗುಲಾಮನನ್ನಾಗಿ ಮಾಡಿಕೊಳ್ಳುವ ಮನಸ್ಸಿರದಿದ್ದರೆ ಬಿಡಬಹುದಿತ್ತು. ಅವನ ಮೇಲೆ ಯಾವ ಒತ್ತಾಯವೂ ಇರಲಿಲ್ಲ. (ಅಂದರೆ, ಒಡೆಯನಿಗೆ ಗುಲಾಮನನ್ನು ಹೊಂದುವ ಅಥವಾ ಬಿಡುವ ಸ್ವಾತಂತ್ರ್ಯವಿತ್ತು. ಆದರೆ ವ್ಯಕ್ತಿಯು ಗುಲಾಮನಾಗಬೇಕೊ, ಬೇಡವೊ ಎಂಬ ಪ್ರಶ್ನೆಯು ಉದ್ಭವಿಸುವುದಿಲ್ಲ. ಏಕೆಂದರೆ, ಅವನೊಂದು ಬೆಲೆಯುಳ್ಳ ವಸ್ತು ಮಾತ್ರವಾಗಿದ್ದ.) ಇದಕ್ಕೆ ಪ್ರತಿಯಾಗಿ ಸವರ್ಣ ಹಿಂದೂವು ಮತ್ತೊಬ್ಬನನ್ನು ಕಡ್ಡಾಯವಾಗಿ ಅಸ್ಪೃಶ್ಯನನ್ನಾಗಿ ಮಾಡಲೇಕೊಳ್ಳಬೇಕೆಂಬ ನಿರ್ಬಂಧವಿತ್ತು, ಕಟ್ಟಳೆಯಿತ್ತು. ಹಿಂದೂವಿನ ವೈಯಕ್ತಿಕ ಆಶಯಗಳು ಏನೇ ಇರಲಿ, ಅವನು ಅಸ್ಪೃಶ್ಯನ ಸೇವೆಯನ್ನು ಸ್ವೀಕರಿಸುವುದು ಅವನಿಗೆ ಬಂಧಕವಾಗಿತ್ತು, ಅನಿವಾರ್ಯವಾಗಿತ್ತು.

* * *

# ವಿಷಯಸೂಚಿ


**ಅ**

ಅಂಗೋರ ೪೩, ೪೪
ಅಂಜುಮನ್ ೧೧೯
ಅಂಟೋಸಿಸ್ ೪೦
ಅಂಡರಹಿಲ್ ೩೩೭
ಅಂಬೇಡ್ಕರ್ ೮೫
ಅಕ್ಬರ್ ೬೩
ಅಗಸ್ಟಸ್ ೨೭, ೪೦
ಅಗ್ರಿಪಿನಾ ೨೯
ಅಘಿಲ್ ೩೩
ಅಜರ್ ೫೮
ಅಟಲ್ಲಿಯಾ ೫೨
ಅಟ್ಟಿಲ್ಲಾ ೫೨
ಅಟ್ಲಾಂಟಿಕ್ ೪೦
ಅಡುಲೆ ೩೦
ಅಡೆನ್ ೧೬
ಅಡ್ರಿಯಾಕ್ ೫೨
ಅಡ್ರಿಯಾಟಿಕ್ ೫೧, ೫೨
ಅಡ್ರಿಯಾನೊಪಲ್ ೫೨
ಅಥೆನ್ಸ್ ೫೨
ಅದಾಲತ್ ೧೨೭, ೧೩೧, ೧೩೨, ೧೩೩, ೧೩೪, ೧೩೬, ೧೪೦
ಅಫಘಾನಿಸ್ತಾನ ೯, ೧೫
ಅಫಿಲ್ ೨೧
ಅಬಾಸೈಡ್ ೫೫
ಅಬಿಸೀನಿಯಾ ೧೬, ೨೮, ೩೭
ಅಮಲಫಿ ೫೧
ಅಮಲ್‌ಫಿತಾನಾ ೫೧
ಅಮಾಲ್‌ಫಿ ೫೧, ೫೪
ಅಮೆರಿಕ ೫೯, ೫೯, ೬೯, ೮೦, ೮೭, ೯೩, ೧೬೭, ೧೬೯, ೨೭೫
ಅಮೋನಿಯಾಕ್ ೭೧
ಅಯಿನೆಕ್ವಲ್ ೪೫
ಅಯೋಧ್ಯೆ ೧೩
ಅರಬ ೧೬, ೨೩, ೨೮, ೨೯, ೩೬, ೩೭, ೩೮, ೩೯, ೪೦, ೪೧, ೪೮, ೪೯
ಅರಬಿ ೪೦
ಅರಸ್‌ಲಾ ೪೨
ಅರಿಯಾನಾ ೧೯
ಅರಿಸ್ಟೊಬುಲಸ್ ೨೫
ಅರೇಬಿಯನ್ ೨೦
ಅರೇಬಿಯಾ ೭, ೧೯, ೨೨, ೨೮, ೩೫, ೩೬, ೩೭, ೩೮, ೪೦, ೪೧, ೪೨, ೫೭
ಅರ್ಸ್ಲನ್ ೪೨
ಅಲಹಾಬಾದ್ ೩೯೨
ಅಲೆಕ್ಸಾಂಡ್ರಿಯಾ ೨೫, ೨೬, ೨೯, ೩೬, ೫೩, ೫೬, ೯೦
ಅಲೆಗ್ಸಾಂಡರ್ ೧೩, ೧೬, ೨೩, ೨೪, ೨೫, ೨೬, ೨೭, ೨೯
ಅಲೆಪ್ಪೋ ೯೦
ಅಲ್ಲಾವುದ್ದೀನ್ ೪೩, ೪೪, ೪೫
ಅಸ್ಸೈನೀ ಫಾರ್‌ಸ್ಟರ್ ೧೮೭೪ ಎಚ್ ಆರ್ ೧೯ ಇಡಿ ೭೪ ಈ ನಿರ್ದಿಷ್ಟ ನಿಧಿಯಿಂದ ಪಾವತಿ ಮಾಡಬೇಕೆಂದು ಸ್ಪಷ್ಟಪಡಿಸದೆ
ಅಸ್ಟ್ರಾಖಾನ್ ೮೯
ಅಹಮದನಗರ ೧೦೨

ಅಹಾಲಿಮ್ ೨೧
ಅಹೋಲೋತ ೨೧

**ಆ**

ಆಂಗೋರಾ ೪೬
ಆಂಗ್ಲರು ೬೪, ೮೭, ೯೧, ೯೪
ಆಂಗ್ಲಶಾಲೆ ೧೦೨
ಆಂಗ್ಲೋ ೬೧, ೯೮, ೧೦೭
ಆಂಟಿಕೊ ೫೨
ಆಂಟಿಯೋಕ್ ೩೫, ೪೩, ೫೫, ೫೬, ೯೦
ಆಂಟೊನಿಯ ೩೧
ಆಂಟೊನಿಯುಸ್ ಪಿಯುಸ್ ೨೯
ಆಂಟೋನಿನ್ ೨೯
ಆಕ್ಕಾಡಿಯನ್ ೧೯
ಆಕ್ಲಂಡ್ ೧೦೩
ಆಕ್ವಿಲಿಯೇನ್ ೪೯
ಆಕ್ಸಸ್ ೪೨
ಆಟ್ಟಾಕ್ ೧೩
ಆಡಾನಾ ೫೨
ಆಡ್ರಿನೋಪಲ್ ೪೭
ಆಡ್‌ವ್ಯಾಲೋರಮ್ ೭೨
ಆನಿಮಸ್ ೨೯೦
ಆನ್ನೆ ೧೭೬
ಆಪರ್ಟ್ ೧೮
ಆಫ್ಘಾನಿಸ್ತಾನ ೯೦
ಆಫ್ರಿಕಾ ೧೬, ೨೦, ೨೨, ೩೫, ೩೬, ೪೦, ೪೮,
೫೨, ೨೦೩, ೨೦೪, ೨೬೭, ೨೭೪
ಆಬೋಕ್ ೭೧
ಆ್ಯಂಬರ್ ೭೪
ಆ್ಯಡಂಸ್ಮಿತ್ ೬೫
ಆ್ಯನಿಮಸ್ ೨೯೦, ೨೯೧
ಆರಲ್ ೧೯
ಆರ್ಕಾಟ್ ೯೪
ಆರ್ಟಾಕ್ಸರಟ್ಕ್ಸ್ ೪೦
ಆರ್ಮೇನಿಯಾ ೪೧, ೪೩, ೪೫
ಆರ್ಯನ್ ೧೯, ೨೨
ಆರ್ಯಪಡೆ ೩೧
ಆರ್ಲ್ ೧೮, ೬೮, ೧೦೩, ೨೨೬
ಆಲಮ್ ೫೬
ಆಲಿಪ್ಪೊ ೫೫
ಆಲಿವರ್ ೬೧
ಆಲ್ಡರ್‌ಮೆನ್ ೧೯೨
ಆಲ್ಬನಿ ೨೭೪
ಆಸ್ಟ್ರೇಲಿಯಾ ೨೦೩, ೨೦೪
ಆಸ್ಸೇರಿಯನ್ ೧೯

**ಇ**

ಇಂಗ್ಲಿಷ್ ೨೪, ೬೧, ೬೯, ೭೦, ೭೨, ೭೩, ೭೪,
೭೭, ೮೦, ೮೧, ೯೧, ೯೫, ೧೨೦, ೧೬೭,
೧೬೯, ೧೭೫, ೧೭೬, ೧೮೧, ೧೮೮, ೨೦೨,
೨೧೩, ೨೩೩, ೨೩೪, ೨೪೨, ೨೭೦, ೩೧೨,
೩೧೪, ೩೧೭, ೩೩೭, ೩೩೮, ೩೩೯, ೩೪೧,
೩೭೯
ಇಂಗ್ಲೆಂಡ್ ೫೭, ೬೧, ೬೨, ೬೬, ೬೭, ೬೮,
೬೯, ೭೦, ೭೧, ೭೨, ೭೩, ೭೫, ೭೬, ೭೮,
೮೦, ೮೧, ೯೧, ೯೩, ೯೫, ೧೦೪, ೧೦೮,
೧೬೯, ೧೭೧, ೧೮೨, ೧೮೭, ೧೮೮, ೧೮೯,
೨೦೩, ೨೧೮, ೨೩೦
ಇಂಚಿವರ್ ೨೪
ಇಂಡಸ್ ೩೧, ೩೨, ೫೮
ಇಂಡಿಕಸ್ ೭೧
ಇಂಡಿಗೊ ೫೭
ಇಂಡೀಸ್ ೭೧, ೭೨
ಇಂಡೋಸಿರಿಯನ್ ೯೦
ಇಂದ್ರಪ್ರಸ್ಥ ೧೩

ಇಜಿಪ್ತ ೧೭, ೧೮, ೮೮, ೯೧
ಇಜಿಪ್ಷಿಯನ್ ೧೭, ೧೯, ೩೫
ಇಟಲಿ ೨೭, ೫೦, ೫೧, ೫೬, ೫೭, ೫೮, ೬೩
ಇಟಾಲಿಯನ್ ೫, ೭, ೫೩, ೫೫
ಇಡುಮಿ ೨೦
ಇಥಿಯೋಪಿಯಾ ೩೦
ಇನಾಂದಾರ ೧೮೭
ಇನೋಪ್‌ಸ್ಟಿಯಾ ೫೨
ಇನ್ಶೂರೆನ್ಸ್ ೨೩೦
ಇಫಿಸಸ್ ೫೨
ಇಬ್ನೆ ೬೩
ಇಯರ್ ಲೋಮ್ ೨೪೬
ಇಯಾಮ್‌ಬ್ಲಿಚಿಸ್ ೬
ಇರಾಕ್ ೫೫
ಇಲ್ಲುಟ್ಜಿಂಗ್ಸ್ ೨೨೬
ಇಶಾಮ್ಯಾಕ್ಲಿಟೀಸ್ ೧೮
ಇಸರೇಲ್ ೪೨
ಇಸಿಡೋರು ೨೮
ಇಸೈಯಾ ೨೧
ಇಸ್ರೇಲಿ ೧೭
ಇಸ್ಲಾಂ ೨೯, ೩೬, ೩೭, ೩೮, ೩೯, ೪೦, ೪೧, ೪೨, ೪೮, ೫೪, ೫೭, ೫೮, ೯೦
ಇಸ್ಲಾಮೀಯರು ೧೫೨

## ಈ

ಈಕ್ವಿಟಿ ೨೧೩
ಈಜಿಪ್ಟ್ ೬, ೭, ೧೭, ೧೮, ೧೯, ೨೦, ೨೩, ೨೫, ೨೬, ೨೭, ೨೮, ೩೭, ೪೦, ೪೫, ೫೦, ೫೨, ೯೦
ಈಜಿಪ್ತಿಯನ್ ೨೪
ಈಡನ್ ೬೪

## ಉ

ಉಬೆರಿಮ ೩೦೭
ಉರಲ್ ೪೫
ಉಸ್ಮಾನ ೪೫

## ಎ

ಎಆಯ್‌ಆರ್ ೩೯೧
ಎಜಾಯಿನ್‌ಗರ್ ೨೧
ಎಟ್ರುಸ್ಕಾನ ೫
ಎಡಿನ್‌ಬರೋ ೧೧೩
ಎಡ್ಮಂಡ್ ೭೫
ಎಡ್ಮಂಡ್ ಬರ್ಕ್ ೭೪, ೭೫
ಎಡ್ಲುಜೀ ಬೈರಮಜೀ ೨೦೪
ಎಡ್‌ವರ್ಡ್ ಕೋಕ್ ೧೭೦, ೧೯೬
ಎಬಾ ೨೪
ಎಬು ೨೪
ಎಮಿಸಾ ೫೫
ಎರಟೊಫಲ್ ೪೩, ೪೪
ಎರುರುಝುವಮ್ ೩೪
ಎರೆಜಿನಾಲ್ಡ್ ೧೪೬
ಎರ್‌ಜರುಮ್ ೪೩, ೪೪
ಎರ್ಟೊಗ್ರುಲ್ ೪೩, ೪೪
ಎಲಾತ್ ೨೧
ಎಲಿಫೆಸ್ ೨೪
ಎಲಿಯಮ್ ೧೩೮
ಎಲೆನ್‌ಬರೋ ೭೬
ಎಲ್ಫಿನ್‌ಸ್ಟನ್ ೧೧೦, ೧೧೬
ಎಲ್ಲಾಮೆಸ್ ೨೨೭, ೨೨೮
ಎಸ್‌ಆರ್ ೩೯೧
ಎಸ್ಟೋನಿಯನ್ ೧೯
ಎಸ್ರಾಹಡನ್ ೨೨

## ಏ

ಏಡ್ ೧೨೦
ಏಶಿಯಾ ೬, ೧೮, ೧೯, ೨೧, ೨೪, ೨೭, ೩೬, ೪೨, ೪೩, ೪೪, ೪೫, ೪೬, ೪೭, ೪೮, ೫೭, ೫೮, ೬೨, ೭೩, ೭೫, ೮೯, ೯೧
ಏಷ್ಯಾಟಿಕ್ ೮೯

## ಐ

ಐರಿಷ್ ೧೭೧, ೧೮೮, ೨೬೫, ೨೭೨
ಐರೋಪ್ಯ ೯೪
ಐರ್ಲೆಂಡ್ ೧೭೧, ೧೮೮, ೧೮೯, ೨೦೩, ೨೭೦

## ಒ

ಒಕೋಮೆಡ್ ೧೯೫
ಒಕ್ಸಸ್ ೩೪, ೫೮
ಒಘುಜ್ ೪೩, ೪೪
ಒಟ್ಟಮಾನ್ ೪೩, ೪೪, ೪೬, ೪೭, ೫೮
ಒಪನ್‌ಹೀಮ್ ೨೦೫
ಒಬರ್ಟಿ ೫೨
ಒಮರ ೪೦
ಒಮಾನ್ ೧೬
ಒಮಿಯ್ಯಾ ೪೦
ಒಮ್ಮಾನ ೩೫
ಒರಿಜಾ ೨೪
ಒರ್‌ಮರ್ಝು ೩೫
ಒಸ್ಮಾನ ೪೫

## ಓ

ಓಕ್ಸಸ್ ೪೫
ಓಗಾದಿ ೪೩
ಓರಿಸ್ಸಾ ೧೩೬
ಓರ್ಮುರ್ಝ್ ೮೯
ಓಲ್ಗಾ ೪೩, ೪೪, ೪೫, ೫೮

## ಔ

ಔಂಧ ೭೪
ಔಧ್ ೧೩

## ಕ

ಕಥಲಮಿಷ್ ೪೨
ಕನೋಜ ೬೨
ಕನ್ನನೈಟ್ ೧೯
ಕನ್ನಿಂಗ್‌ಹ್ಯಾಮ ೪೮
ಕಪ್ಪಾ ೮೯
ಕಫಿರ್ ೨೧
ಕಬಜಿದಾರ ೩೪೦
ಕರವಾ ೨೪
ಕರಾಕೋರಮ್ ೯
ಕರಾರು ೩೦೩
ಕರಾವಳಿ ೧೬, ೨೨, ೨೬, ೮೯, ೯೦
ಕರೋಜಾ ೪೫
ಕರ್ಜನ್ ೯೨
ಕರ್ಟಸ್ ೩೧
ಕರ್ತಾ ೩೯೮
ಕರ್ನಾಟಕ ೬೮, ೧೫೪
ಕರ್‌ನಾಲ್ ೬೨
ಕಲ್ಕತ್ತಾ ೭೪, ೭೯, ೧೨೨, ೧೩೧, ೩೧೪, ೩೩೧, ೩೩೮, ೩೯೨, ೩೯೭
ಕಲ್ನಾರು ೩೦
ಕಲ್ಲಿಯನ್ ೩೨
ಕವಿರಿ ೩೩
ಕಷ್ಗರ್ ೮೯
ಕಸಿನ್ಸ್ ೨೨೯
ಕಾಂಗ ೮
ಕಾಂಗ್ರೆಸ್ ೧೪೬, ೨೦೨
ಕಾಂಪಾಜ್ಞ ೫೨
ಕಾಂಬೇ ೬೩

ಕಾಠೇವಾಡ ೧೨೦
ಕಾಡರೇಥಾ ೩೧
ಕಾನ್‌ಸ್ಟಂಟೈನ್ ೭, ೩೦, ೪೦
ಕಾನ್‌ಸ್ಟೆಂಟಿನೋಪಲ್ ೩೪, ೩೪, ೪೧, ೪೨, ೪೬, ೪೭, ೪೮, ೫೦, ೫೧, ೯೧
ಕಾಬಾ ೩೭, ೩೮
ಕಾಮ್‌ಪೋಮಿಯಾ ೭೪
ಕಾರಜಾ ೪೩, ೪೪
ಕಾರ್ಥೇಜ್ ೨೭
ಕಾರ್‌ಪಿಯೊನ್ ೨೪
ಕಾರ್ಸ್ ೪೩
ಕಾವೇರಿ ೩೩
ಕಾಶಿನಾಥ ೧೦೧
ಕಾಳಿಘಟ್ಟ ೧೫೧
ಕಿಂಗ್‌ಡಮ್ ೨೬೩, ೨೬೬, ೨೬೭, ೨೭೦
ಕಿನ್‌ಸೀ ೪೫
ಕಿಯು ೪೩
ಕಿಲೆನ್ ೪೩
ಕಿಲ್ಲಾ ೩೮೫
ಕೀತನ ೩೭೬
ಕುಂತಿತ್ ೧೨೪
ಕುಗೇಟ್ ೩೧
ಕುಡ್ಡುವನ್ ೩೩
ಕುನ್ನಿಫಾರ್ಮ್ ೧೮
ಕುರ್ಡಿಸ್ತಾನ ೯೦
ಕುಸಾನ್ ೩೧
ಕೂರ್ ೧೨೯
ಕೂರ್ಗ್ ೧೫೪
ಕೂರ್ಡ್ಸ್ ೧೨೪, ೧೨೬, ೧೨೭, ೧೨೮, ೧೨೯, ೧೩೦, ೧೩೧
ಕೆಥೊಲಿಕ್ ೧೫೫
ಕೆನಡಾ ೨೦೩, ೨೦೪
ಕೆನಡಿ ೨೨
ಕೆಯಾಂಗ್ ೪೩
ಕೆರ್ತ್ ೨೭೪
ಕೇಕಯ ೧೩
ಕೇಪ್ ಆಫ್ ಗುಡ್ ಹೋಪ್ ೭೪, ೮೭, ೮೯
ಕೇಲ್ ೨೩೦
ಕೈಕೋಬಾ ೪೩, ೪೪, ೪೫
ಕೈಮಾರಾ ೩೩
ಕೊಂಟಿ ೬೩
ಕೊಜೆಲ್‌ಸ್ಕೆ ೪೩, ೪೪
ಕೊಡಗದ ೧೫೪
ಕೊಮೋಡಸ್ ೨೯
ಕೊರಿಯ ೪೩
ಕೊರೀ ೧೫೨
ಕೊರೀಂಥ ೫೨
ಕೊರೆಗಾಂವ ೯೩
ಕೊಲಂಬಸ್ ೨೮, ೫೯, ೮೭, ೯೨
ಕೊಲಕ್ಯೂಲಸ್ ೭೧
ಕೋರೆಗಾಂವ ೯೫
ಕೋರೆಶ್ ೩೮
ಕೋರ್‌ಫಸ್ ೫೨
ಕೋಸ್ ೩೫
ಕೌನಗಾರಾ ೩೨
ಕ್ಯಾಂಡಿ ೧೦೩
ಕ್ಯಾಥರೀನ್ ೧೭೩
ಕ್ಯಾಥೋಲಿಕ್ ೫೪, ೫೫, ೭೫
ಕ್ಯಾಲಿಕೊ ೭೨
ಕ್ಯಾಸಿಬಡ್ ೭೧
ಕ್ಯಾಸಿಯಾ ೭೧
ಕ್ಯಾಸ್ಪಿಯನ್ ೩೪, ೫೮, ೮೯
ಕ್ಯೂಬೆಟ್ಸ್ ೭೧
ಕ್ರಿಶ್ಚಿಯನ್ ೨೬, ೨೭, ೩೭, ೪೧, ೪೬, ೪೮, ೫೦, ೫೪,೫೫,೫೬, ೫೭, ೫೮, ೭೩, ೧೧೨, ೧೮೨
ಕ್ರಿಸೊಪೊಲಿಸ್ ೫೨

ಕ್ರುಸೇಡ್ ೨೧೮
ಕ್ರೇಗ್ಸ್ ೨೩೭
ಕ್ರೈಸ್ತ ೩೧, ೫೦, ೫೪, ೧೧೧, ೧೧೨, ೧೫೧, ೧೫೨
ಕ್ರೋ ೨೬೮
ಕ್ರೌನ್ ೨೬೯
ಕ್ರ್ಯಾಡೊಕ್ ೧೪೬, ೧೪೯
ಕ್ಲಾಡಿಯಸ್ ೨೯
ಕ್ಲಾರೆನ್ಸ್ ೧೭೩
ಕ್ಲಾಸೆಸ್ ೯೫
ಕ್ಲೈವ್ ೬೪, ೭೩, ೭೪, ೭೫, ೮೦, ೯೪, ೯೫

ಖ

ಖಟ್ಲೆಯ ೧೮೭
ಖಬೇರಿಸ್ ೩೩
ಖಲೀಫ ೩೯, ೪೦, ೪೨, ೪೫, ೫೫
ಖಾನ್ ಬಹದ್ದೂರ್ ಕಾಜಿ ಶಹಬುದ್ಧೀನ್ ೧೧೯
ಖುರಾನ್ ೩೮, ೪೦
ಖೈರಮೋಡೆ ೮೫
ಖೈರಾಪೂರ ೧೧೯
ಖೊರೊಸಾನ್ ೫೫, ೫೬
ಖೋತಾನ್ ೮೯
ಖೋರಿಷ್ ೩೯

ಗ

ಗಂಗಾ ೧೭, ೨೫, ೬೩
ಗಂಗಾನದಿ ೩೨, ೧೩೬
ಗಜ್ ೪೨
ಗಜನ್ ೪೫
ಗಜನಿ ೪೨, ೬೨
ಗಲೋಸೆಸ್ಟರ್ ೧೭೩
ಗಾಡ್‌ವಿನ್ ೧೯೩
ಗಾಲೆನ್ ೬
ಗಾವುಲ್ ೭
ಗಿಬ್ಬನ್ ೩೬
ಗುಜರಾತ್ ೨೧, ೩೨, ೬೩
ಗುರ್ಖ ೯೭
ಗುಲಾಮದೇಶ ೮೧
ಗುಸ್ತಾವ್ ೧೮
ಗೆರಾ ೨೩
ಗೆರ್ರಾಹ ೨೮
ಗೋಥರು ೪೮
ಗೋಸಟ್ಟೆ ೧೯೪
ಗೋಸೆಟ್ ೧೯೩, ೧೯೪
ಗೌತಮ ೧೪
ಗೌಲ ೪೯
ಗ್ಯಾಂಬೇಜ್ ೭೧
ಗ್ಯಾಲಿ ೮೮
ಗ್ರಾಸಿಯೊ ೨೬
ಗ್ರೀಕ್ ೫, ೧೩, ೨೪, ೨೪, ೨೬, ೨೮, ೩೧, ೪೨, ೪೫, ೫೬, ೬೦
ಗ್ರೀಸ್ ೮, ೨೪, ೨೫, ೨೬, ೨೭
ಗ್ರೆಗರಿ ೩೬

ಘ

ಘಸನೈಡ್ ೨೮
ಘೋಣೆ ೧೫೪

ಚ

ಚಂಗೇಜಖಾನ್ ೪೩, ೪೫, ೪೬
ಚಂದ್ರ ೫೮
ಚಂದ್ರಗುಪ್ತ ೨೬
ಚಂದ್ರಮುಖ ೨೯
ಚಕ್ಕಡಿ ೧೨
ಚಾನ್ಸೆರಿ ೨೧೩, ೨೩೫, ೨೪೦

ಚಾಪ್ಲಿನ್ ೭೮
ಚಾರ್ಲಮೆನ್ ೪೦
ಚಾರ್ಲ್ಸ್ ೪೯, ೫೧, ೬೬
ಚಾಲ್ಡಿಯನ್ ೨೨, ೨೩, ೫೩
ಚಾಲ್ಡಿಯಾ ೧೯
ಚೀನಿಯ ೧೫೭
ಚೆಂಬೂರ್ ೩೨
ಚೆಯೋಸ್ ೫೨
ಚೆರಾಕ್ಸ ೨೮
ಚೆರಿಲಾ ೩೨
ಚೆಲಿಯನ್ ೩೧
ಚೇರಾ ೩೩
ಚೈನಾ ೯, ೧೫, ೧೯, ೨೨, ೨೬, ೩೦, ೪೩, ೪೫, ೫೫, ೫೭, ೮೯
ಚೈನೆ ೮೭
ಚೈನೇ ೯೦
ಚೌಗಢ ೧೩೬

**ಛ**

ಛಾನ್ಸೆರಿ ೧೯೩
ಛಾಲ್ಡಿಯಾ ೮೯

**ಜ**

ಜಕಾರಿಯ ೨೩೯
ಜಟ್ಟಾ ೫೮
ಜಫ್ರಿ ೧೦೦
ಜಬರ್ ೪೩, ೪೪
ಜಮಾದಾರ್ ೯೮, ೧೩೮
ಜಮುನಾ ೬೨
ಜರ್ಬಿನ್ ೫೮
ಜರ್ಮನಿ ೫೭, ೫೮, ೮೮
ಜರ್ವಿಸ್ ೧೦೧
ಜಲೊಲ್ ೧೫೨
ಜವೊನಿಸ್ ೨೪
ಜಸ್ಟಿನಿಯನ್ ೨೯, ೩೧
ಜಾನ್‌ಗಾಂಟ ೧೭೩
ಜಾನ್ ಟೌಸೆ ೨೨೭
ಜಾನ್‌ಬಾಲ್ ೮೮
ಜಾನ್‌ಶೋರ ೮೧
ಜಾಫ್ನಾ ೯೦
ಜಾರ್ಜ್ ೬೯, ೮೦, ೧೦೧, ೧೦೩, ೧೫೩, ೧೭೬, ೧೮೪
ಜಾರ್ಜಿಯಾ ೪೩
ಜಾವಾ ೧೬, ೭೧
ಜಿಂಗಿಬೇರ್ ೨೪
ಜಿನೊವ ೫೨, ೫೩, ೫೪, ೫೮
ಜಿನೋಯಿಸ್ ೮೮
ಜಿನೋವ ೫೮
ಜಿಬ್ರಾಲ್ಟರ್ ೪೯, ೨೬೯
ಜೀಪಿ ೨೩
ಜುಡಾ ೩೮
ಜುಡಿಕೇಚರ್ ೨೩೫
ಜುಡೆ ೨೪
ಜುಡೆಯಾ ೧೯, ೨೭
ಜುಡೋದ ೨೧
ಜುನಾಗಡ್ ೧೧೯
ಜುನಾಪುರ ೧೨೫
ಜುಲಿಯನ್ ೨೯
ಜೂನಿಂಗ್ ೪೩
ಜೆಡ್ಡಾ ೩೫
ಜೆನೋಬಿಯಾ ೨೭
ಜೆಬರ್ಸ್ ೪೯
ಜೆರುಸಲೇಮ್ ೨೧, ೬೧
ಜೆಸಿಲ್ ೪೩, ೪೪
ಜೇಥಕ ೧೩
ಜೇಮ್ಸ್ ೧೮, ೧೭೯, ೧೯೩, ೨೨೪

ಜೇಮ್ಸ್ ಫರ್‌ಗ್ಯೂಸನ್ ೧೮
ಜೊರಾಸ್ಟಾನ್ ೩೭
ಜೊರೋಸ್ಟ್ರಿಯನ್ ೩೭
ಜೊಸಿಯಾ ೬೭
ಜೋನ್ ೧೭೩
ಜೋನ್ಸ್ ೨೨೪
ಜೋಸೆಫ್ ೧೮, ೨೩೯
ಜ್ಯಾಕ್ ೬೪
ಜ್ಯೂ ೨೦, ೩೭, ೫೦, ೧೧೧, ೧೧೨
ಜ್ಯೂರಿಸ್ಡಿಕ್ಷನ್ ೨೬೯

## ಝ

ಝುಂಝುಬಾರ್ ೧೬
ಝುಮ್‌ನ್‌ರನ್ ೧೬
ಝ್ಯೂರೆ ೨೦, ೨೪

## ಟ

ಟಕ್ಕರ್ ೬೯, ೭೦
ಟಗರಾ ೩೨
ಟರ್ಕರು ೪೨, ೪೬, ೪೭
ಟಾಡ್‌ಮೋರ್ ೨೭
ಟಾಯಾಸ್ ೯೦
ಟಾರ್ಪ್ ೧೮೦
ಟಾರ್ಪರ್ ೪೬
ಟಾರ್ಟರಿ ೪೫
ಟಾರ್ಟಾರರು ೨೬
ಟಾರ್‌ಸಸ್ ೫೨
ಟಾಲೆಮಿ ೩೧
ಟಾಲೋಮಿ ೬
ಟಿಗ್ರಿಸ್ ೫೫
ಟಿಪ್ಪು ೬೪, ೬೯
ಟಿಫ್ಲಿಸ್ ೪೩
ಟಿಬೇಟ್ ೯
ಟುಕಿ ೨೧
ಟುನಿಸ್ ೫೩
ಟುರ್ಕರು ೪೭
ಟುರ್ಕಿ ೪೩, ೪೪, ೪೬
ಟೂರ್ಸ್ ೪೮, ೪೯
ಟೆನ್ನಸ್ಸರಿಮ್ ೯
ಟೆಬರಿಜ್ ೩೪
ಟೈಂಡಿಸ್ ೩೨
ಟೈಗ್ರಿಸ್ ೨೧, ೩೫, ೪೦, ೯೦
ಟೈರೆಗೆ ೨೦
ಟೈರೆಯ ೨೧
ಟೋಲೆಮಿ ೨೫, ೨೬, ೩೨, ೩೩
ಟೋಕೆಯಿ ೨೧
ಟ್ಯಾಕ್ಲಾಟ್ರ್ಸ್ ೨೬
ಟ್ಯಾಬುಲ್ ೫೧
ಟ್ಯುಟನ್ ೫೬
ಟ್ಯೂಡರ ೨೧೩
ಟ್ರಾವನ್‌ಕೋರ್ ೨೦೧
ಟ್ರಿಪೋಲಿ ೯೦
ಟ್ರೆಬಿಜಾಂಡ್ ೩೪
ಟ್ರೋಜನ್ ೬, ೨೯, ೩೭, ೪೦
ಟ್ವೇಡ್ ೯೫

## ಡ

ಡಚ್ ೮೦, ೮೭
ಡಚ್ಚರು ೮೭, ೯೧
ಡನ್ ೨೩೮
ಡಮಾಸ್ಕಸ್ ೩೬, ೪೦, ೫೫, ೯೦
ಡಯಾಸಿಯಾನ್ ೧೮೯
ಡರ್ಲ್ ೨೩೯
ಡರ್‌ಹ್ಯಾಮ್ ೧೮೯
ಡಲ್ಲಾಸ್ ೨೪೦

ಡಾಕ್ಕಾ ೭೯
ಡಾನ್ ೫೮, ೮೯
ಡಾಮರು ೫೭
ಡಾಯ್‌ಮಚುಸ್ ೨೬
ಡಾಲ್ಮೈರಾ ೨೭
ಡಿಕನ್ಸ್ ೬೬
ಡಿಜಿ ೨೭೪
ಡಿಮಿಟ್ರಿಯಾಸ್ ೫೨
ಡಿಯೊಸ್ಕೋರ್ಡೀಸ್ ೬
ಡಿಲೋಮೆ ೧೭೧
ಡೀನ್ ೨೧
ಡೀನ್ ಸ್ಟ್ಯಾನ್‌ಲಿ ೨೧
ಡುರಾಜೂ ೫೧
ಡುರಾಜ್ಜೊ ೫೨
ಡೆಕನ್ ೧೪
ಡೆಡ್ಲೆ ೮೦
ಡೆನ್ನಿಸ್ ಪೆಪ್ಪರ್ ೨೩೦
ಡೇವಿಡರು ೨೩
ಡೇವಿಸ್ ೨೨೬
ಡೈಯೋಸಿಯಾನ್ ೧೮೯
ಡೈಲೀ ೨೨೮
ಡೈಸಿ ೧೬೭
ಡೊಮಿನಿ ೨೯೦, ೨೯೧
ಡೋಗ್ರಾ ೯೭
ಡ್ನೈಪರ್ ೪೩
ಡ್ಯಾಮೇಜಸ್ ೨೮೪
ಡ್ಯೂಕ್ ೧೭೩
ಡ್ರೇಕ್ ೨೩೦
ಡ್ರ್ಯಾಗನ್ ೭೧
ಡ್ರ್ಯೂರಿ ೨೩೨

## ತ

ತತ್‌ಸಿನ್ ೩೦
ತಬ್‌ರಿಜ್ ೪೫
ತಮಿಳುನಾಡು ೨೪
ತಮೂರಲೇನ ೪೬
ತಾನಾ ೫೮, ೮೯
ತಾನ್‌ಲಿನ್ ೩೦
ತಾಬ್ರಿಜ್ ೯೦
ತುಗಲಖ್ ೬೩
ತುರೇನಿಯನ್ ೧೮, ೧೯
ತುರ್ಕ ೪೨, ೪೨, ೪೩, ೪೪, ೪೫, ೪೬, ೪೮, ೯೧
ತುರ್ಕಿ ೩೭, ೪೨, ೪೩, ೪೪, ೪೫, ೪೬, ೪೭, ೪೮, ೫೩, ೫೯
ತೈಮೂರ ೪೬
ತೋಪಾ ೮೭
ತ್ಸಿನ್ ೩೦

## ಥ

ಥಾನೆ ೧೦೧
ಥಾಮಸ್ ೬೧, ೮೧, ೧೭೩
ಥಾಮಸ್ ಮನ್ರೋ ೬೧, ೮೧
ಥಾರನ್‌ಡೈಕ್ ೨೨೩, ೨೨೫
ಥಿಯೋಡೇಶಿಯಾ ೫೮
ಥಿಸಲ್‌ನೋಕಿಯಾ ೫೨
ಥೇಬ್ಸ್ ೧೮, ೩೫, ೩೬, ೫೨
ಥೇಬ್ಸರ ೧೮
ಥೇಮ್ಸ್ ೨೯
ಥೋಥ್ಮಸ್ ೧೮

## ದ

ದರಖಾಸ್ತ ೪೦೫
ದರಿಯಸ್ ೨೩, ೨೪

ದರೋಗಾ ೧೩೮, ೧೩೯
ದಶರಥ ೧೩
ದಸ್ತಕ್ ೧೨೮
ದಾದಾಭಾಯಿ ಮನೆಕಜಿ ಸರ್ ೧೪೩, ೧೪೪, ೧೪೫, ೧೪೬, ೧೪೯
ದೆಹಲಿ ೧೩, ೧೨೨
ದ್ರಾವಿಡ ೧೯, ೨೨
ದ್ರಾವಿಡಿಯನ್ ೧೯

## ಧ

ಧರಣಾ ೧೩೩, ೧೩೪, ೧೩೫
ಧರ್ಮಲಂಡ ೫೪
ಧಾರವಾಡ ೧೧೫, ೧೫೦, ೧೫೧
ಧೇಡ್ ೧೦೯

## ನ

ನರ್ಮದಾ ೧೪
ನವಾಬ ೭೪, ೯೧, ೯೩
ನಾಗಮಣಿ ೩೦
ನಾಟಿಂಗ್‌ಹ್ಯಾಮ್ ೨೧೩
ನಾಯಿಬರು ೧೩೮
ನಾರ್ತ್‌ಹ್ಯಾಂಟನ್ ೧೯೩
ನಾರ್ಮನ್ ೫೧, ೬೧, ೨೧೮
ನಿಗ್ರೊಪಾಂಟ್ ೫೨
ನಿಜರಾನ ೩೭
ನಿಝಾಮತ್ ೧೨೭, ೧೩೧, ೧೩೨, ೧೩೩, ೧೩೪, ೧೩೬, ೧೪೦
ನಿಯರಟಿಸ್ ೨೫
ನಿಶಿಫೊರಸ್ ೪೨
ನೆಟಾಲ್ ೧೭
ನೆಡುಂಜ ೩೧
ನೆಪೋಲಿಯನ್ ೯೩
ನೆಬುಛಾದ್ನೆಝಾರ ೨೨
ನೆಲ್‌ಕಿಂಡಾ ೩೨
ನೇಪಲ್ಸ್ ೫೧
ನೇರಸಮುದ್ರ ೮೯
ನೈನೆವಾ ೨೨
ನೈಲ್ ೮, ೨೦, ೨೨, ೨೬, ೩೫, ೩೬
ನೈಲ್‌ನದಿ ೯೦
ನೋಥಾರ್ಡ್ ೨೩೦
ನ್ಯಾಕ್ಸ್ ೭೧
ನ್ಯೂಜಿಲೆಂಡ್ ೨೬೫

## ಪ

ಪಂಕೆಲಾವೊಟಿಸ್ ೧೩
ಪಂಜಾಬ ೧೯, ೧೦೦, ೧೫೪
ಪಕ್ಕಮ್ ೩೩
ಪಗೋಡಾ ೧೮, ೧೫೨
ಪರೆರೊ ೮೨
ಪರ್ಸ್ಯೆಯ ೯೬
ಪರ್ಷಿಯನ್ ೧೯, ೨೧, ೩೫, ೩೭, ೪೦, ೪೮, ೫೭, ೮೯, ೯೦, ೧೨೬, ೧೨೯
ಪರ್ಷಿಯಾ ೧೫, ೧೯, ೨೩, ೨೫, ೪೦, ೪೧, ೪೨, ೪೫, ೫೫, ೫೭, ೯೦, ೯೧
ಪರ್ಸಿವಲ್ ಫಾರ್‌ಸ್ಟರ್ ೧೮೭೪ ಎಚ್ ಆರ್ ೧೯ ಇಡಿ ೭೪ ಈ ನಿರ್ದಿಷ್ಟ ನಿಧಿಯಿಂದ ಪಾವತಿ ಮಾಡಬೇಕೆಂದು ಸ್ಪಷ್ಟಪಡಿಸದೆ
ಪರ್ಸೊನಮ್ ೨೨೨
ಪಹರೋನಿಕೊ ೨೨
ಪಾಂಡ್ಯ ೩೧
ಪಾಂಪೇ ೩೭
ಪಾಟಲಿಪುರ ೧೩
ಪಾಟ್ನ ೧೩
ಪಾದ್ರಿ ೧೬
ಪಾಮೀರಾ ೩೦
ಪಾಮ್ಯೆರ್ಸ ೨೩

ಪಾರ್ಥಿಯನ್ ೨೭, ೨೮, ೫೩
ಪಾರ್ಸಿ ೧೪೩, ೧೪೬
ಪಾಲಿ ೧೪
ಪಾಲಿಮೊ ೫೧
ಪಾಲಿಸ್ಟಿನ್ ೨೧
ಪಾಲ್ಮಿರಾ ೨೮, ೨೯
ಪಾಲ್ಮೆರಾ ೨೭
ಪಿಗು ೪೨
ಪಿಟ್ಸ್ ಕಾಯಿದೆ ೬೮
ಪೀಟರ್ ಬ್ರೌನ್ ೨೩೯
ಪೀರ್ ೧೭೨
ಪೀಲ್ ಕಮೀಷನ್ ೯೫
ಪೀಸಾ ೫೩, ೫೪
ಪುಷ್ಕಲಾವತಿ ೧೩
ಪೆಂಬಾ ೧೭
ಪೆಟಿಯಾ ೨೮
ಪೆಟ್ರಾ ೩೬
ಪೆರಿಪ್ಲಸ್ ೩೧, ೩೨, ೩೩
ಪೆರ್ಲ್ ೭೧
ಪೆಸಿಫಿಕ್ ೨೭೨
ಪೇಗನ್ ೫೩
ಪೈರಿನೀಸ ೪೯
ಪೈಸ್‌ಲೇ ೭೮
ಪೊಯಿಟೂರ್ಸ್ ೪೯
ಪೊರಸ್ ೨೫
ಪೊಲೀಸ ೧೩೮, ೧೩೯
ಪೋಪ್ ೧೫೫, ೧೮೨
ಪೋರಸ್ ೨೫
ಪೋರ್ಚುಗಲ್ ೭೩, ೮೭, ೯೧
ಪೋರ್ಚುಗೀಸ್ ೨೨, ೮೦, ೮೭, ೮೮, ೯೧
ಪೋರ್ಡ್ ೧೭೩
ಪೋರ್‌ಫೆರಿ ೬
ಪೋರ್ವಿಸ್ಕೋ ೧೯೩
ಪೋಲನ್ ೨೨೮
ಪೋಲೆಂಡ್ ೪೩, ೪೪
ಪೌಲೆಸ್ ೨೨೪
ಪ್ಯಾರಿಸ್ ೬೪
ಪ್ಯಾಲೆಸ್ಟೈನರು ೫೪
ಪ್ರವಾದಿ ೩೭, ೩೮, ೩೯
ಪ್ರಷ್ಯಾ ೧೦೫
ಪ್ರಿವಿಕೌನ್ಸಿಲ್ ೨೦೪
ಪ್ರೀವಿ ೧೮೧, ೧೮೨, ೩೯೨, ೩೯೪
ಪ್ರೆಂಟಿಸ್ ೨೭೪
ಪ್ರೊಟೆಕ್ಟೊರೇಟ್ ೨೬೯
ಪ್ರೊಟೆಸ್ಟೆಂಟ್ ೧೭೧, ೧೭೯
ಪ್ರೊನೋಟು ೪೦೨
ಪ್ರೊಬೇಟ್ ೩೯೭
ಪ್ಲಾಟಿನಸ್ ೬
ಪ್ಲಾಸಿ ೭೩, ೭೩, ೯೧, ೯೪, ೯೫
ಪ್ಲಾಸಿಯ ೯೩
ಪ್ಲೂಮರ್ ೨೪೦
ಪ್ಲೆಮಿಷ್ ೫೭
ಪ್ಲೇ ೧೭೩
ಪ್ಲೈನಿ ೨೯

## ಫ

ಫಂಡಿಯಾ ೭
ಫತ್ವಾ ೧೩೬, ೧೩೭
ಫರಮಾನ್ ೨೦೪
ಫಲಿತಾ ೩೧೪
ಫಾತಿಮಾ ೪೨
ಫಾರ್‌ಸ್ಟರ್ ಎಚ್.ಆರ್. ೨೩೮
ಫಿಡ್ಡಿಸ್ ಜಿ.ವಿ. ೨೬೮
ಫಿನೋಕೊಲರಾ ೨೦
ಫಿನ್‌ಷ್ಟನ್ ೧೭೩
ಫಿರೋಜಶಹ ೬೨

ಫಿಲೊಟರಸ್ ೧೭
ಫೂನಿಸಿಯನ್ ೧೯
ಫೆಂಗ್ ೪೩
ಫೆಡ್ರಿಕ್ ೮೧
ಫೆಲಿಕ್ಸ್ ೧೯
ಫೈಡೀಸ್ ೩೦೭
ಫೊನಿಶಿಯನ್ ೨೦, ೨೧, ೨೨, ೨೪, ೫೬
ಫೊಯಕಿಯಾ ೫೨
ಫೌಂಡ್‌ಲ್ಯಾಂಡ್ ೨೬೬
ಫ್ರಾಂಕರು ೪೯
ಫ್ರಾನ್ಸ್ ೪೯, ೫೩, ೧೬೯
ಫ್ರಾಯಿಸಾರ್ಟ ೮೭
ಫ್ರೆಂಚ್ ೬೧, ೮೦, ೮೭, ೯೩, ೧೬೯, ೧೭೧
ಫ್ರೆಡ್‌ರಿಕ್ ೬೩, ೭೭
ಫ್ಲ್ಯಾಂಡರ್ಸ್ ೫೭, ೬೩

ಬ

ಬಂಗಾಳ ೬೪, ೬೯, ೭೧, ೭೩, ೭೪, ೭೯, ೯೩, ೯೬, ೧೦೫, ೧೦೮, ೧೦೯, ೧೧೬, ೧೨೪, ೧೩೫, ೧೩೬, ೧೩೭, ೧೪೦
ಬಕರೆಯಿ ೩೨
ಬಕಲ್ ೧೫
ಬಕಿಂಗ್‌ಹ್ಯಾಮ್ ೧೭೩
ಬಕ್ಸರ್ ೯೪
ಬಕ್ಸ್‌ಕೌಂಟಿ ೧೯೩
ಬಟುಟಾ ೬೩
ಬಟ್ಲರ ೨೦೬
ಬಡಿಗ ೧೨, ೧೩, ೩೩
ಬನಾರಸ ೧೨೪, ೧೨೮, ೧೩೧, ೧೩೨, ೧೩೩, ೧೩೪, ೧೩೫, ೧೩೬
ಬನ್ಸಬರ್ಯಹ ೧೩೬
ಬನ್ಸಿಯನ್ ೩೨
ಬಯಜಿನ್ ೪೬
ಬಯೇಜಿದ್ ೪೭
ಬರ್ರೈಗಾಜಾ ೩೨
ಬರೋಚ್ ೩೨, ೩೫
ಬರೋಡಾ ೧೧೯
ಬರ್ದವಾನ ೬೮
ಬರ್ನ್ ಕರ್ವಾಲೋ
ಬರ್ನಾರ್ಡ್ ೫೪
ಬರ್ಮಾ ೯
ಬಲ್ಗರು ೪೮
ಬಲ್‌ಗೆರ್ ೪೩, ೪೪
ಬಸುಟೋಲ್ಯಾಂಡ್ ೨೬೭, ೨೬೯
ಬಸ್ರಾ ೫೫
ಬಸ್ಸೊರಾ ೩೫
ಬಾಂಬೆ ೭೯, ೯೬, ೧೦೧, ೧೦೫, ೧೧೬, ೧೧೭, ೩೧೪, ೩೩೮, ೩೭೩, ೩೭೬, ೩೯೧, ೩೯೨, ೩೯೭, ೩೯೮
ಬಾಗ್ ೪೩, ೪೪
ಬಾಗ್ದಾದ್ ೪೨, ೯೦, ೯೧
ಬಾಜಪೈ ೧೪೭, ೧೫೦
ಬಾನ್‌ಬರಿ ೨೨೬
ಬಾಬರ ೬೩
ಬಾಬೆಲ್ ೩೫
ಬಾಯಿಜಿದ್ ೪೬, ೪೭
ಬಾರ್‌ಟೆಮಾ ೬೩
ಬಾರ್ನ್‌ಹಾಟ್ ೨೨೭
ಬಾರ್‌ಬೋರಾ ೬೩
ಬಾರ್ಸೋವಾ ೯೦
ಬಾಲ್ಬಾಷ್ ೮೯
ಬಾಲ್‌ಟಿಕ್ ೫೬
ಬಾಲ್ಬಿಕ ೫೭
ಬಾಸೋರ್ ೫೫
ಬಾಸೋರಾ ೮೯
ಬಾಹುಳ್ಯ ೬೩

ಬಿಯಾಸ್ ೧೩
ಬಿಲೇಜಿಕ್ ೪೫
ಬಿಶಪ್ ೧೫೨
ಬಿಷಪ್ ೭೯, ೮೦, ೧೭೧, ೧೮೨, ೧೮೯
ಬಿಸ್ಕೋ ೨೨೬
ಬುದ್ದೊ ೧೨೪
ಬುಯದ್ ೪೨
ಬುರ್ಕುಂದಾಜ ೧೩೮
ಬೆಂಗಾಲ್ ೮೧
ಬೆಂಜಾಮಿನ್ ೭೧
ಬೆಚುನಾಲ್ಯಾಂಡ್ ೨೬೮
ಬೆನಾರಸ್ ೭೪
ಬೆನ್ನೆಟ್ ೨೪೫
ಬೆಬಿಲೋನಿಯಾ ೨೧, ೨೨
ಬೆರನ್ಯೆಸ್ ೩೫
ಬೆಲ್ಗೆ ೨೬೮
ಬೇರೂಟ್ ೯೦
ಬೈಜಾಂಟೈನ್ ೪೬, ೪೮, ೫೨, ೫೩, ೭೪
ಬೈಬಲ್ ೧೯
ಬೈರನೈಸ್ ೩೫
ಬೈರಮಜೀ ೨೦೪
ಬೈರಿನೈಸ್ ೨೬
ಬೈರ್ಜಾಟೈನ್ ೫೦
ಬೊಟಾನಿಕೇಟಸ್ ೪೨
ಬೊರ್ಡೆಕ್ಸ್ ೪೯
ಬೊಲ್‌ಗರಿ ೪೩, ೪೪
ಬೊಸ್‌ಫೊರಸ್ ೫೦
ಬೋರ್ಝ್ ೩೧೨, ೩೧೩
ಬೋರ್ರ್ಯಾಕ್ಸ್ ೭೧
ಬೌಲಿ ೬೬
ಬೌಲೇ ೬೬
ಬ್ಯಾಕ್ಟ್ರಿಯಾ ೨೬, ೩೧
ಬ್ಯಾನರ್ಜಿ ೧೪೪, ೧೪೬, ೧೪೭
ಬ್ಯಾಬಿಲೋನಿಯಾ ೧೯, ೨೩, ೩೫
ಬ್ರಾಡ್ಲಾ ೧೯೩, ೧೯೪
ಬ್ರಿಂದಿಸಿ ೫೧
ಬ್ರಿಟನ್ ೭೦, ೭೬, ೭೮, ೯೩, ೯೪, ೧೭೧, ೧೮೮, ೨೦೫, ೨೬೯, ೨೭೪
ಬ್ರಿಟಿಷ ೬೦, ೬೧, ೬೨, ೭೫, ೭೭, ೭೮, ೮೨, ೯೧, ೯೨, ೯೩, ೯೪, ೯೫, ೯೬, ೯೭, ೯೮, ೧೦೩, ೧೧೩, ೧೨೪, ೧೩೫, ೧೫೫, ೧೫೭, ೧೫೮, ೨೦೧, ೨೦೬
ಬ್ರೂಸಾ ೪೭
ಬ್ರೈಯನ್ನಿಯಾಸ್ ೪೨
ಬ್ರೌನ್ ೨೩೯
ಬ್ಲಾಕ್‌ಸ್ಟೂನ್ ೧೭೦, ೧೭೧

## ಭ

ಭೋಖಾರಾ ೮೯
ಭೋಜಾ ೩೧೩, ೩೬೮

## ಮ

ಮಂಗೋಲ ೪೩, ೪೪, ೪೫, ೯೧
ಮಂಡಗೋರಾ ೩೨
ಮಂಡೆಬ್ ೩೫
ಮಗಯಾರ್ ೪೮
ಮಚಲಿ ೩೨
ಮಚುರಿ ೩೩
ಮಜಲಿಸ್ ೩೧
ಮಜಿರಿಸ್ ೩೨
ಮದನಮೋಹನ ಮಾಲವಿಯ, ಪಂಡಿತ ೧೪೪, ೧೪೬
ಮದಿನಾ ೩೭, ೩೮, ೩೯
ಮದ್ರಾಸ್ ೭೩, ೭೯, ೯೬, ೧೦೪, ೧೦೫, ೧೦೬, ೧೫೨, ೩೧೪, ೩೯೨, ೩೯೭, ೩೯೮
ಮರಾಖಿಯಾ ೬೩

ಮರಾಠ ೬೦, ೬೩, ೬೪, ೮೨, ೯೩
ಮರಾಠಿ ೮೫
ಮರುವರ್ ೩೩
ಮಲಬಾರಿ ೧೪೭, ೧೪೮
ಮಲಯ ೯೧
ಮಲಯಾಳಂ ೨೧
ಮಲ್ಲೊಟ್ಟ ೩೫೦
ಮಸಲಿಪಟ್ಟಣಮ್ ೩೨
ಮಸೀದಿ ೪೦
ಮಸ್ಕಟ್ ೧೬, ೩೫
ಮಸ್ಸಿನಾ ೫೧
ಮಹಮದ್ ೩೮
ಮಹಮ್ಮದೀಯ ೬೩, ೯೯, ೧೧೧, ೧೧೨, ೧೧೭, ೧೧೮, ೧೧೯, ೧೨೦, ೧೨೧, ೧೨೨, ೩೨೩, ೩೪೫, ೩೯
ಮಹರ್ ೧೫೦
ಮಹಾದೇವ ೧೨೩
ಮಹಾರ್ ೯೫, ೯೬, ೯೭, ೧೦೯, ೧೧೫
ಮಹಾರ ೧೪೯, ೧೫೧
ಮಾಂಟಿಕೊ ೫೫
ಮಾಂಟೆಸ್‌ಕ್ಯೂ ೧೫, ೧೬೯
ಮಾರ್ಕ್ಸ್ ೨೩
ಮಾಟಲ್ಡಾ ೮೮
ಮಾಡೆಸ್‌ಕ್ಯೂ ೧೬೯
ಮಾಡೇ ೬೬
ಮಾನಸ ೮
ಮಾರಾಥಿಯಾ ೬೩
ಮಾರ್ಕ್ ೩೧
ಮಾರ್ಕಂಡ್ ೮೯
ಮಾರ್ಕಸ್ ಟ್ವೇಡ್ ಡೇಲ್ ೯೫
ಮಾರ್ಟಿನ್ ೮೧
ಮಾರ್ಷಲ್ ೨೬೮
ಮಾರ್ಸೇಲೀಸ್ ೮೭
ಮಾಲಗುಜರಿ ೧೩೮
ಮಾಲ್ಕೀ ೩೦೯, ೩೧೪, ೩೧೫, ೩೮೫
ಮಾಲ್ಕೀಹಕ್ಕು ೩೬೭
ಮಾಲ್ಪೋಚ್ ೭೧
ಮಾಸ್ಕ್ಯರೆ ೯೧
ಮಾಸ್ಕೊ ೪೩, ೪೪
ಮಿಯೋಸ್ ೩೬
ಮಿರ್ಫ್ ೭೧
ಮಿಲ್ ೮೧, ೯೪
ಮಿಲೊ–ಡಿ–ಕೊಂಟಿ ೬೩
ಮುಂಬೈ ೧೦೦, ೧೦೧, ೧೦೨, ೧೦೩, ೧೦೮, ೧೦೯, ೧೧೦, ೧೧೪, ೧೧೫, ೧೧೮, ೧೧೯, ೩೭೧
ಮುರ್ಗಟ್ರಾಯ್ಡ್ ೨೬೮
ಮುಲ್ಲರ ೨೩
ಮುಸಲ್ಮಾನ ೬೪, ೧೫೪
ಮುಸ್ಲಿಂ ೩೭, ೫೩, ೬೧, ೬೨, ೧೧೯
ಮೂರ್ ೧೯೬
ಮೂರಿಷ್ ೪೯
ಮೂಸಾ ೪೭
ಮೆಕಾಲೆ ೬೪, ೭೪, ೯೩, ೯೪
ಮೆಕೆಲ್‌ವೇನ್ ೨೨೧
ಮೆಕ್ಕಾ ೩೭, ೩೮, ೩೯, ೪೦
ಮೆಕ್‌ಫೆರಸನ್ ೯೩
ಮೆಕ್‌ಲಿಜಿಗರಾ ೩೨
ಮೆಕ್ಸಿಕೊ ೭೪
ಮೆಗಸ್ಥನಿಸ್ ೨೬
ಮೆಡಿಟರೇನಿಯನ್ ೮, ೧೫, ೧೬, ೨೦, ೨೧, ೨೭, ೩೪, ೩೫, ೫೫, ೫೬, ೮೮, ೮೯, ೯೦
ಮೆರೆಡಿತ್ ೨೨೪
ಮೆರೊ ೪೨
ಮೆಸೆಪೊಟೇಮಿಯಾ ೪೫, ೮೯
ಮೆಸ್ಸಲಿನಾ ೨೯

ಮೇರಿ ೧೯೫
ಮೇಸ್ ೭೧
ಮೈನರ ೪೩, ೪೫
ಮೊಂಟ ೧೦೦
ಮೊಕರ ೨೨
ಮೊಗಲ್ ೪೬, ೬೦, ೬೩, ೮೨, ೧೫೭
ಮೊಝೂಂಬಿಕ್ ೧೬
ಮೊನೆಸಿಯಾ ೮೨
ಮೊನೊಗ್ಲೊಸೋನ್ ೩೨
ಮೊರೆನ್ಸಿ ೧೦೦
ಮೊರ್ಲೆ ೭೫
ಮೊವಾಯನ್ ೩೯
ಮೊಸುಲರ ೫೫
ಮೊಹಮದ್ ೩೬, ೩೭, ೩೮, ೩೯, ೪೦, ೪೧, ೪೨, ೪೫, ೪೭, ೪೮, ೪೯, ೫೭, ೬೨, ೬೩
ಮೊಹಮ್ಮದಿಯ ೪೯
ಮೊಹರಿರ್ ೧೩೮
ಮೋಹನ್ ೧೦೦
ಮ್ಯಾಂಚೆಸ್ಟರ್ ೭೮
ಮ್ಯಾಕೆಂಜಿ ೭೫
ಮ್ಯಾಕ್‌ಫರಸನ್ ೬೯
ಮ್ಯಾಟ್ರಿಕ್ ೧೨೦
ಮ್ಯಾಡ್ರಿಡ್ ೭೪
ಮ್ಯಾಥ್ಯೂ ೨೩೦
ಮ್ಯಾಸಿಡೋನಿಯಾ ೨೭

## ಯ

ಯಮನ್ ೩೭
ಯಮೆನ್ ೧೬, ೧೯, ೨೩
ಯಾಂಗ್ ೪೩
ಯಾಂಗಟ್ಸೆ ೮
ಯಾರ್ಕ್ ೧೮೯
ಯಾರ್‌ಹಿಸ್ಸಾರ್ ೪೫
ಯಿನ್‌ಚೂ ೩೦
ಯುಫ್ರೇಟಸ್ ೮, ೨೧, ೨೭, ೪೩, ೪೪, ೮೯
ಯುರೋಪ್ ೮, ೧೯, ೨೫, ೩೬, ೪೯, ೫೧
ಯೂನಿಯನ್ ಆಫ್ ಸೌತ್ ಆಫ್ರಿಕಾ ೨೬೫
ಯೂರೋಪ್ ೮, ೯, ೧೦, ೧೬, ೨೪, ೩೬, ೪೦, ೪೨, ೪೩, ೪೫, ೪೬, ೪೭, ೪೮, ೫೦, ೫೪,೫೫,೫೭,೬೮,೮೭, ೮೯, ೯೧, ೯೩, ೧೦೮
ಯೇಲ್ ೬೯

## ರ

ರಖಿಯಾ ೬೨
ರಮ್ ೭೧
ರಶಿಯನ್ ೪೮
ರಸೆಲ್ ೨೭೦
ರಾಕ್ಸ್‌ಬರ್ಗ್ ೨೪೧
ರಾಜಾ ಸರ್ ಮಾಧವರಾವ್ ೧೨೩
ರಾಜೇಂದ್ರ ೧೫೪
ರಾಟಝೆಲ್ ೧೬
ರಾನಡೆ ೧೨೩
ರಾಬರ್ಟ್ ೧೫೨, ೧೭೩
ರಾಬರ್ಟ್‌ಸನ್ ೨೦, ೨೧, ೨೫
ರಾಬಿನ್‌ಸನ್ ೪೯
ರಾಮಸೆಸ್ ೧೭
ರಾಮಾಯಣ ೧೩
ರಾಯಲ್ ಚಾರ್ಟರ್ ೧೪೧
ರಿಜಾನ್ ೪೩, ೪೪
ರುಬಾರ್ಬ್ ೭೧
ರೆಜಿನಾಲ್ಡ್ ೧೪೯
ರೆಮ್ ೨೨೨
ರೈನದ ೮೮
ರೈಸ್ ೨೩, ೨೩೨
ರೊಹಿಲ್ಲಾ ೭೫

ರೋಡಿಕ್ ೨೩೭
ರೋಮ್ ೬, ೭, ೮, ೧೨, ೨೭, ೨೮, ೨೯, ೩೦, ೩೧, ೩೬, ೩೭, ೫೧, ೨೭೫
ರೋಮನ್ ೫, ೬, ೭, ೨೭, ೨೮, ೨೯, ೩೦, ೩೧, ೩೬, ೪೦, ೪೧, ೪೨, ೪೯, ೫೦, ೫೧, ೬೦, ೭೪, ೭೫, ೮೨, ೧೫೬, ೨೭೫
ರೋಲ್ಯಾಂಡ್ ೬೧
ರ್‍ಯಾಮ್‌ಸೇ ೨೬೮
ರ್ಹಿನೋಕೋಲುರಾ ೨೦
ರ್ಹೋಡೀಸಿಯಾ ೨೬೭
ಲೀವೆಂಟ್ ೫೪
ಲೆಗುರಿಯನ್ ೫
ಲೆವಾಂಟ್ಸ್ ೫೫
ಲೆವೊಟ್ ೫೧
ಲೇಪಾಂಟ್ ೮೯
ಲೋಪ್ ೮೯
ಲ್ಯಾಟಿನ್ ೫, ೪೮, ೫೧
ಲ್ಯಾವೆಂಟೇನ್ ೫೨
ಲ್ಯೂನಸಿ ೨೪೪

## ಲ

ಲಂಕ್ಯಾಸ್ಟರ್ ೧೭೩
ಲಂಡನ್ ೫೭, ೬೪, ೮೫, ೧೮೯, ೧೯೨
ಲಖಿರಜ ೧೩೮
ಲಾಖರೇಜ್ ೧೩೦
ಲಾಖರ್ಜೆ ೧೨೮
ಲಾಗಸ್ ೨೬
ಲಾಟಿನರ್ ೮೮
ಲಾಯ್ಡ್ ೧೭೬, ೨೨೬
ಲಾರ್ಡ್ ನಾರ್ಥ್ ೬೯
ಲಾರ್ಡ್ಸ್ ೧೭೦, ೧೭೫, ೧೭೬, ೧೮೯
ಲಾಲಾ ಮೋಹನ್ ಲಾಲ್ ೧೦೦
ಲಾವೆಸ್ ೨೪೫
ಲಾವೊಡಿಕಾ ೫೫
ಲಾವೋದಿಸಿಯಾ ೯೦
ಲಾಸ್ ೨೬೬
ಲಾಸೆನ್ನರು ೨೧, ೨೪
ಲಾಹೋರ ೩೧೪
ಲಿಂಡ್ಸೆ ೧೫೨
ಲಿಬಿಯನ್ ೫೩
ಲಿಸಿರೆಮ್ ೩೧
ಲೀಮದಲ್ಲಿ ೭೪

## ವ

ವದ್ಧಕಿ ೧೨
ವರಾಕ್ಸ್ ೮೮
ವಾಂಡಿವಾಶ್ ೭೩, ೯೧
ವಾಟಣಿ ೩೮೫
ವಾಟರ್ಲೂ ೯೩
ವಾಟ್‌ಕಿನ್ಸ್ ೨೨೪
ವಾರೆನ್ಸ್ ೧೫೨
ವಾಸ್ಕೋಡಗಾಮ ೯೨
ವಿಂಧ್ಯಾ ೧೪
ವಿಕ್ಟೋರಿಯಾ ೧೮೪
ವಿಟೋ ೧೭೫
ವಿತ್ಸ್ ೨೨೯
ವಿನ್‌ಚೆಸ್ಟರ್ ೧೭೩, ೧೮೯
ವಿನ್‌ಸೆಂಟ್ ೩೦
ವಿಪಾಶಾ ೧೩
ವಿಲಿಯಂ ೧೭೭, ೧೮೪, ೧೯೫,
ವಿಲಿಯಂ ಬ್ಯಾಂಕ್ಸ್ ೨೩೦
ವಿಲಿಯಂ ರಿಚರ್ಡ್‌ಸನ್ ೨೩೦
ವಿಲಿಯಮ್ಸ್ ಕಸಿನ್ಸ್ ೨೨೯, ೨೩೦
ವಿಲ್ಕೆ ೧೯೩
ವಿಲ್ಲೋಬಿ ೧೦೫, ೧೦೬

ವಿಲ್ಸನ್ ೭೮, ೩೫೦
ವಿಶ್ವಸಂಸ್ಥೆ ೨೦೭
ವೀಟೋ ೨೬೬, ೨೭೧
ವೀಹೈವೀ ೨೬೯
ವೆನಿಸ್ ೪೮, ೫೧, ೫೨, ೫೪, ೫೬, ೫೮, ೭೪
ವೆನೇಷಿಯನ್ ೮೮
ವೆಬ್‌ಸ್ಟರ್ ೨೭೪
ವೆಲ್ತ್ ೬೫
ವೆಲ್ಲೋರ್ ೧೫೫
ವೆಸ್ಟ್‌ಮಿನಿಷ್ಟರ್ ೨೦೩
ವೇನ್ಸ್‌ಡೇಲ್ ೧೮೭
ವೋಮಿಕಾ ೭೧
ವೋಲ್ಗಾ ೮೯
ವ್ಯೂವುಸ್ಥಾ ೧೩೪
ವ್ಲಾಡಿಮೀರ್ ೪೩, ೪೪
ವ್ಹಿಪ್ ೨೩೧

**ಶ**

ಶಹಜಹಾನ ೬೩
ಶಹಬುದ್ಧೀನ್ ೧೧೯
ಶಾರ್ಕ್ ೧೩೬
ಶಿಯಾ ೪೨
ಶಿವ ೨೯
ಶಿವಾಸ್ ೪೬
ಶಿಶುಬಲಿ ೧೩೫, ೧೩೬, ೧೩೭
ಶಿಶೋಟ್ರಿಸ್ ೩೭
ಶೀರ ೨೭
ಶೀಲಿ ೯೫
ಶೆಣ್ಯೆ ೧೦೮
ಶೆನ್ಸಿ ೪೩
ಶೆರಿಡಾನ ೭೫
ಶೆರ್ರಿಂಗ್ ೨೩೯, ೨೪೦
ಶೆಲ್‌ಜೂಕ ೪೧, ೪೨, ೪೩, ೪೪, ೪೭
ಶೇರ್‌ಶಾ ೬೩

**ಷ**

ಷಿಲ್ಲಿಂಗು ೮೮
ಷೆರೀಫ ೨೧೮

**ಸ**

ಸಂತಾಚೆರಿಬ್ ೨೨
ಸಕ್ಲೇಡ್ಸ್ ೭೨
ಸಡ್ಡರ ೧೩೮
ಸತ್ರಾವಹಾ ೧೪
ಸದಾಶಿವ ೧೦೧
ಸನವುಟೊ ೫೬
ಸಮರಖಂಡ್ ೪೦
ಸರ್ವಿಯಸ್ ೨೯
ಸಲುಸಿಡಿಯನ್ ೩೦
ಸಸೆಕ್ಸ್ ೧೯೩
ಸಸ್ಸ್ಯಾನಿ ೩೧
ಸಾಂಡರ್ಡ್ ಆಂಬ್ಲರ್ ೨೪೬
ಸಾಂಡರ್ಸ್ ೨೪೬
ಸಾರ್ಕನ್ ೪೦, ೪೧, ೫೦, ೫೧, ೫೬, ೫೭
ಸಾರ್ಸನಿಕ್ ೯೧
ಸಾಲೆರ್‌ನೋ ೫೧
ಸಿಂಧ್ ೧೧೯
ಸಿಂಧೂ ೨೫
ಸಿಕ್ಸ್ ೯೭
ಸಿಥಿಯಾ ೩೭
ಸಿನೆಯ ೧೯೫
ಸಿರಾಜುದ್ದೌಲ್ ೯೩
ಸಿರಿಯಾ ೬, ೧೯, ೨೬, ೨೭, ೩೦, ೪೦, ೪೩, ೪೫, ೫೦, ೫೫, ೮೯, ೯೦
ಸಿಲೋನ್ ೨೯
ಸಿಲ್‌ಹೆಟ್ ೧೫೨
ಸಿಸಿರೋ ೭೫, ೨೭೫
ಸಿಸಿಲಿ ೭, ೨೭

ಸೀರ್ಖುರ್ ೬೩, ೧೫೬
ಸೀಲಿ ೯೪
ಸುಂಗ್ ೪೩
ಸುಂಗಾರಿಯಾ ೪೩, ೪೪
ಸುಂಗ್‌ಶೂ ೩೦
ಸುಂದಾ ೧೬
ಸುಗೂತ್ ೪೪
ಸುಜುಕಿಯನ್ ೪೩, ೪೪
ಸುಪಾರಾ ೩೨
ಸುಬೇದಾರ್ ೯೮
ಸುಮಾತ್ರಾ ೮೭
ಸುಮೇರಿಯನ್ನರು ೧೯
ಸುರೇಂದ್ರನಾಥ್ ೧೪೪, ೧೪೬
ಸುಲೆಮಾನ ೪೨
ಸುಲೇಮಾನ್ ೪೩, ೪೪
ಸೂರತ್ ೩೨, ೬೪, ೭೯, ೧೦೧
ಸೂರ್ಯ ೩೭
ಸೆನಾಯಿ ೨೧
ಸೆನಿಯೋ ೧೩
ಸೆಬಿಯನ್ ೫
ಸೆಮುಲ್ಲಾ ೩೨
ಸೆಲಜುಕಿಯನ್ ೪೫
ಸೆಲಿಂಬ್ರಿಯಾ ೫೨
ಸೆಲ್ಜೂಕ್ ೪೫
ಸೆಲ್ಡನ್ ೨೧೩
ಸೆಲ್ಯೂಕಸ್ ೨೫, ೨೬
ಸೆವಿಲ್ಲೆ ೪೦
ಸೆಸೊಸ್ಟ್ರಿಸ್ ೧೭
ಸೇಂಟ್ ೩೫
ಸೈಕಾಮೋರ್ ೨೧
ಸೈರಾಕ್ಯೂಸ್ ೫೧
ಸೈಸಐಪ್ರಸ್ ೨೬೯
ಸೊಲೊಮನ್ ೨೧, ೨೭
ಸೋಮನಾಥ ೬೨
ಸೋರಿಯ ೪೩, ೪೪
ಸೋಲಾಪೂರ ೧೧೯
ಸೌಗರ ೧೩೫, ೧೩೬
ಸೌಪಾರಾ ೩೨
ಸೌಪ್ಪೆರಾ ೩೨
ಸ್ಕಾಟ್ ೧೭೬
ಸ್ಕಾಟ್‌ಲ್ಯಾಂಡ್ ೬೧, ೧೭೧, ೧೮೮, ೧೮೯, ೨೭೦
ಸ್ಕ್ವಾಡ್ರನ್ ೯೬
ಸ್ಟಾಕಿನ ೬೮
ಸ್ಟಾಕ್ಸ್ ೨೩೯
ಸ್ಟೀಫನ್ಸ್ ೨೪೦
ಸ್ಟುಅರ್ಟ್ ೧೧೬
ಸ್ಟುವರ್ಟ್ ೧೦೧, ೧೧೦
ಸ್ಟೈನ್ ೪೦
ಸ್ಟೊಬಿಲೋಸ್ ೫೨
ಸ್ಟ್ರಹಾನ್ ೨೨೧
ಸ್ಟ್ರಾಬೋ ೩೬
ಸ್ನೆಲ್ಲ ೩೩೭
ಸ್ಪೇನ್ ೨೨, ೪೯, ೫೩, ೭೩, ೮೭
ಸ್ಪ್ಯಾನಿಷ್ ೭೪
ಸ್ಮಿತ್ ೩೦, ೬೫
ಸ್ಯಾಕ್ಸನರು ೬೧
ಸ್ಯಾಗೋ ೭೧
ಸ್ಲಾವರ ೪೮
ಸ್ವಾಜೀಲ್ಯಾಂಡ್ ೨೬೮
ಸ್ವೀಡಿಷ್ ೬೮

## ಹ

ಹಂಗರಿ ೪೩, ೪೪
ಹಂಟ್ ೨೨೪, ೨೨೫
ಹಂಟರ್ ೭೩
ಹನೀಫ ೩೭

ಹನ್ನರು ೪೮
ಹವಾತ್ ೫೫
ಹಸ್ತಿನಾಪುರ ೧೩
ಹಾಂಡೆಸ್ಕೂಕ್ಯ ೧೬೯
ಹಾಬ್‌ಹೌಸರು ೧೯೫
ಹಾಲ್ ೨೨೪, ೨೩೯, ೨೪೦
ಹಾಲೆಂಡ್ ೭೩
ಹಾಲ್‌ಬ್ರೂಕ್ ೨೨೪
ಹಾಲ್ಸರ ೨೦೫
ಹಾಲ್ಸ್‌ಬರಿ ೨೬೯, ೨೭೦
ಹಾಶಮ್ಮೈಟ್ ೩೮
ಹಾಸಮ್ಮೈಟ್ ೩೮
ಹಾಸಮ್ಮೈಟಿಸ್ ೩೮
ಹಿಂದು ೧೦, ೧೧, ೧೫, ೨೩, ೩೮, ೬೧, ೬೨, ೧೦೩, ೧೫೭
ಹಿಂದುಕುಷ್ ೯, ೧೫, ೮೯
ಹಿಂದುಸ್ಥಾನ ೩೧, ೩೨, ೪೫, ೭೯, ೯೦
ಹಿಂದೂ ೧೧, ೧೨, ೧೪, ೯೮, ೧೧೦, ೧೧೯, ೧೨೩, ೧೨೬, ೧೩೭, ೧೪೧, ೧೪೨, ೧೪೪, ೧೫೦, ೧೫೪, ೧೫೫
ಹಿಪೊಲಸ್ ೨೮
ಹಿಫಾಸಿಸ್ ೧೩
ಹಿರಾಕ್ಲಿಯಾ ೫೨
ಹಿರಾಮ ೨೧
ಹಿರೈನ್ ೨೦
ಹಿರೊಡೊಟಸ್ ೧೭
ಹಿರ್ತರು ೩೦
ಹಿರ್ದರ್ ೧೫
ಹೀದನ್ ೧೫೨, ೧೫೩
ಹೂಬಿ ೨೫೭
ಹೆನ್ರಿ ೮೭, ೧೭೧, ೧೭೩, ೧೮೪, ೧೯೨
ಹೆಬರ್ ೭೯, ೮೦
ಹೆಬ್ರೂ ೨೧
ಹೆಮ್ಸ್ ೫೫
ಹೆಲಿಸ್‌ಪಾಂಟ್ ೪೨, ೪೭
ಹೆಲೆನಾ ೨೬೯
ಹೇಸ್ಟಿಂಗ್ಸ್ ೭೫, ೧೫೨
ಹೈದರಾಬಾದ್ ೧೧೯, ೨೦೧
ಹೈಪಾಸಿಸ್ ೧೩
ಹೈಲ್ವೆ ೨೩೭
ಹೊನೆನ್ ೪೩
ಹೊರ್ಮಾ ೩೬
ಹೋಮೆರೈಟ ೨೮
ಹೋಲ್ಪ್ ೭೫
ಹೋಲ್ಡ್ಸ್‌ವರ್ತ್ ೨೦೨, ೨೦೪
ಹ್ಯಾಂಪ್‌ಶೈರ್ ೨೨೯
ಹ್ಯಾಟ್ಟನ್ ೨೫೭
ಹ್ಯಾಪ್ಕಿನ್‌ಸನ್ ೨೩೮
ಹ್ಯಾಮರ್ ೪೯
ಹ್ಯಾಮರು ೪೮
ಹ್ಯಾಲ್ಸ್‌ಬರಿ ೨೬೮, ೨೬೯, ೨೭೦